REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯರೇ ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ೮ ಆಣೆ ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೧೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧ನೇ ಜನವರಿ ೧೯೪೫ [ಸಂಚಿಕೆ ೩೬

ವೈರಾಗ್ಯದರ್ಪಣ

ಲೇ—ಮಲ್ಲಿಕಾರ್ಜುನಾರಾಧ್ಯ ರಾಣೇಬೆನ್ನೂರು ಮಠೀಪುರ ಮುದೇನೂರು

(ಕಳೆದ ಸಂಚಿಕೆಯಿಂದ ಮುಂದುವರಿದುದು)

ದರ್ಶನಮಾತ್ರದಿಂದಲೇ ಮದವನ್ನುಂಟುಮಾಡುವ ಪರಿಂದ ಮಧ್ಯಕ್ಕಿಂತಲೂ ಅಧಿಕರಾದ ಸುಂದರಿಯರಲ್ಲಾ ಸಕ್ತರಾದ ಪುರುಷರು, ಮದವೇರಿದ ಆನೆಗಳಂತೆ ಶಾಂತಿ ಕರವಾದ ವಿವೇಕವಚನಗಳೆಂಬ ಅಂಕುಶಗಳನ್ನೆಣಿಸದೆ ಮೆರೆಯುತ್ತಿರುವರು ಮದವನ್ನುಂಟುಮಾಡುವುದರಲ್ಲಿ ಮದ್ಯವೂ ಸ್ತ್ರೀಯೂ ಸಹ ಸಮವಾದಾಗ್ಯೂ ಮದ್ಯದ ಮದವು ಸ್ವಲ್ಪಕಾಲದಲ್ಲಿ ಶಮನವಾಗುವದರಿಂದ ಮದ್ಯಕ್ಕಿಂತಲೂ ಸ್ತ್ರೀಯರು ಅಧಿಕರೆಂದು ತಿಳಿಯಬೇಕು ಧನಧಾನ್ಯ, ವಸ್ತ್ರಾಭರಣ, ಗಂಧಮಾಲಿಕ ಸಮಸ್ತ ಭೋಗದ್ರವ್ಯಗಳೂ, ಸ್ತ್ರೀ ಭೋಗಕ್ಕೆ ಸಾಧನವಾದ್ದರಿಂದ ಸ್ತ್ರೀಯೇ ಸರ್ವಾಧಿಕಳಾಗಿರುವಳು ದುಷ್ಕೃತ್ಯವೆಂಬ ಅಗ್ನಿಗೆ ಶಿಖೆಯಾಗಿ, ನರಕವೆಂಬ ಅಗ್ನಿಗೆ ಕಾಷ್ಠವಾಗಿ, ದುಃಖವೆಂಬ ಅಗ್ನಿಗೆ ಕಿಡಿಯಾಗಿರುವ ನಾರಿಯು, ಅಗ್ನಿಮಯವಾದ ಪ್ರತಿಮೆಯಾದ್ದರಿಂದ ದರ್ಶನ ಸ್ಪರ್ಶನ ಸಂಭಾಷಣಾದಿ ಸಮಸ್ತ ವ್ಯಾಪಾರಗಳಲ್ಲೂ, ಸಂತಾಪಕಾರಕಳಾದ ಈ ನಾರಿಯಿಂದ ನರನು ನಿಸ್ಸಾರನಾಗುವನು ಇವಳಿಗೆ "ಸುಂದರಿ" ಎಂದು ಹೆಸರು ಎಂತು ಬಂದಿರುವುದೋ ತಿಳಿಯದು. ಇಂದ್ರಿಯಗಳೆಂಬ ಭ್ರಮರಗಳಿಗೆ ಪುಷ್ಪಮಂಜರಿಗಳಾಗಿ, ಮನವೆಂಬ ಮದ್ದಾನೆಗೆ ಬಂಧನ ಸ್ತಂಭಗಳಾಗಿ, ಶುಕ್ಲಪಕ್ಷದ ರಾತ್ರಿಗಳಂತೆ ಚಂದ್ರವದನೆಯರಾಗಿ, ವಿಷಲತೆಗಳಂತೆ ಮೋಹಪ್ರದರಾಗಿ, ವಿಚಿತ್ರವಾದ ನಾಟ್ಯವಿಲಾಸಗಳಿಗೆ ನರ್ತನಶಾಲೆಗಳಾಗಿ, ದೋಷಗಳೆಂಬ ರತ್ನಗಳಿಗೆ ಪೆಟ್ಟಿಗೆಗಳಾಗಿ, ಸಂಸಾರದುಃಖಗಳಿಗೆ ಜನ್ಮಭೂಮಿಗಳಾಗಿ, ನಾನಾರೂಪದಿಂ ಮೆರೆಯುವ ಈ ಸುಂದರಿಯರು ಪ್ರಾಣಿಗಳೆಂಬ ಪಕ್ಷಿಗಳಂ ಹಿಡಿಯಲೋಸುಗ ಕಾಮನೆಂಬ ಕಿರಾತನಿಂದ ಬೀಸಲ್ಪಟ್ಟ ಬಲೆಗಳಂತೆ ಕಾಣುತ್ತಿರುವರು ಕ್ರೂರವಾದ ಸಿಂಹವ್ಯಾಘ್ರಗಳ ಬಾಯಿಗೆ ಸಿಕ್ಕಿ ಹಿಂದಿರುಗಬಹುದು, ತೀಕ್ಷ್ಣವಾದ ಆಯುಧದ ಅಲುಗಿಗೆ ಸಿಕ್ಕಿ ತಪ್ಪಿಸಿಕೊಳ್ಳಬಹುದು, ಆದರೆ ಸ್ತ್ರೀಯರ ಸೌಂದರ್ಯವೆಂಬ ಜಾಳಿಗೆಗೊಳಗಾಗಿ ಹಿಂದಿರುಗುವುದು ಕಡುಕಷ್ಟ! ಕಾದ ಕಬ್ಬಿಣವು ಕಣ್ಣಿಗೆ ತಗುಲಿದಲ್ಲಿ ಕಣ್ಣು ಮಾತ್ರ ಇಂಗಿಹೋಗುವದು ಆದರೆ ಸ್ತ್ರೀಯನ್ನು ಒಂದಾವರ್ತಿ ಮೋಹದೃಷ್ಟಿಯಿಂದ ನೋಡಿದಲ್ಲಿ ಮನುಷ್ಯನೇ ಇಂಗಿಹೋಗುವನು

ಸ್ತ್ರೀಯರ ಅವಯವಗಳು ರಕ್ತ ಮಾಂಸ ಎಲಬು ನರಗಳಿಂದ ಕೂಡಿ ಚರ್ಮದಿಂದ ಆಚ್ಛಾದಿತಗಳಾಗಿರುವವೇ ಹೊರತು ಮತ್ತೆ ಬೇರೆಯಲ್ಲ ಆದಪ್ರಯುಕ್ತ ಮತಿವಂತರಾದವರು ಚರ್ಮದ ಸೌಂದರ್ಯಕ್ಕಾಗಿ ಮೋಹಗೊಂಡು ಮರುಳಾಗಬಾರದು ಶೃಂಗಾರಾದಿ ರಸಗಳಿಗೆ ಸ್ಥಾನವಾದ ಈ ಸ್ತ್ರೀಯು ಭೋಗಸ್ಥಾನವಾದ್ದರಿಂದ ಇವಳಂ ಪರಿಗ್ರಹಿಸುವವನಿಗೆ ಭೋಗೇಚ್ಛೆಯುಂಟಾಗಿ, ಜಗತ್ತಿನ ವ್ಯಾಪಾರಗಳೆಲ್ಲವೂ ಬೇಕಾಗುವವು, ಆದ್ದರಿಂದ ಇವಳಂ ಬಿಟ್ಟವನಿಗೆ ಜಗದ್ಭ್ರಾಂತಿಯು ತಪ್ಪುವದು ಇವಳು ದೈವಕೃಪೆಯಿಂದ ತನ್ನ ನೆರಳಿಗೆ ತಾನಂಜಿಕೊಳ್ಳುತ್ತ ಮನೆಯಲ್ಲಿದ್ದಾಗಿದ್ದರೆ ಇವಳಂ ಪರಿಗ್ರಹಿಸಿದ ಪುರುಷನು ಗೃಹಸ್ಥನೆನಿಸಿಕೊಳ್ಳುವನು, ಹಾಗಿಲ್ಲದಿದ್ದರೆ ಇವಳಿಗಿಂತ ಮೃತ್ಯುವು ಬೇರೆ ಇಲ್ಲವೆಂದು ತಿಳಿಯತಕ್ಕದ್ದು ಯಾವ ಯಾವ ವಿಧದಿಂದ ನೋಡಿದರೂ ಅಸ್ಥಿಪಂಜರವಾದ ಶರೀರದಲ್ಲಿ ಯಾವದೂ ಮನೋಹರವಾಗಿ ಕಾಣುವುದಿಲ್ಲವಾದ್ದರಿಂದಲೂ, ಜರಾಮೃತ್ಯುರೋಗಾದಿಗ ಭಯದಿಂದಲೂ, ಭೋಗಸ್ಥಾನವಾದ ಸ್ತ್ರೀಯಲ್ಲಿ ಮನವನ್ನಿಡದೆ ಪ್ರಶಾಂತನಾಗಿರಬೇಕೆಂದು ಅಪೇಕ್ಷಿಸುತಲಿದ್ದೇನೆ

ಎಲೈ ಮುನಿಶ್ರೇಷ್ಠನೇ! ಬಾಲ್ಯವು ನಡೆಯುತ್ತಿರುವಲ್ಲಿಯೇ ಅದನ್ನು ಯೌವನವಾಕ್ರಮಿಸುವದು ಅದು ಪ್ರಕಾಶಿಸುತ್ತಿರುವಲ್ಲಿಯೇ ವೃದ್ಧಾಪ್ಯವಾಕ್ರಮಿಸುವದು, ಶರೀರಾವಸ್ಥೆಗಳಿಗೂ ಸಹ ಈ ಪ್ರಕಾರ ಸ್ಪರ್ಧೆ ಇರುವಲ್ಲಿ ಹೇಳತಕ್ಕದ್ದೇನು ಬೆಕ್ಕು ಇಲಿಯಂ ಹಿಡಿವಂತೆ ಯೌವನವನ್ನಾಕ್ರಮಿಸಿ ಶರೀರದ ಸಾರವಂ ಕುಡಿಯುತ್ತಾ ಶ್ವಾಸೋಚ್ಛ್ವಾಸ ಅಧೋವಾಯುಗಳೆಂಬ ಮೃದಂಗ ಧ್ವನಿಗೆ ಸರಿಯಾಗಿ ಕುಣಿಯುವ ಜರೆಯೆಂಬ ನಟಿಯು ಶಿರವಂ ನಡುಗಿಸುತ್ತಲೂ, ಕೈಯಂ ಕುಣಿಸುತ್ತಲೂ, ದಂಡದೊಡನೆ ಮೂರು ಕಾಲುಗಳಿಂದ ಮೆಲ್ಲ ಮೆಲ್ಲನೆ ತಾಳವಂ ಹಾಕುತ್ತಲೂ, ಮದ್ಯಪಾನದಿಂ ಮದಿಸಿದವಂತೆ ಅರಳು ಮರುಳು ಮಾತುಗಳನ್ನಾಡುತ್ತಲೂ, ಹಣೆಯಲ್ಲಿ ಕೈಯನ್ನಿಟ್ಟುಕೊಂಡು ನೋಡುತ್ತಲೂ, ಬೆನ್ನಂ ಬಗ್ಗಿಸುತ್ತಲೂ ವಿಚಿತ್ರವಾದ ನರ್ತನ ಮಾಡುತ್ತಿರಲಾಗಿ, ಸ್ತ್ರೀ ಬಾಲರು ಮೊದಲಾಗಿ ಸರ್ವರೂ ನಗುತ್ತಿರುವರು ನರಗೂದಲುಗಳಿಂ ಮೃತ್ಯು ಮಹಾರಾಜನು ಪ್ರಾಣಿಯಂ ಕರತರಲೋಸುಗ ಕಳುಹಿದ ಚಾಮರಧಾರಿಣಿಯಂತೆ ತೋರುತ್ತಿರುವ ಈ ಜರೆಯು ಬಂದ ಕೂಡಲೆ, ಶರೀರವೆಲ್ಲವೂ ಶಿಥಿಲವಾಗುವದು ರೋಗಗಳೆಲ್ಲವೂ ಪ್ರಕಾಶಿಸುವವು, ತೈಲವಿಲ್ಲದ್ದರಿಂದ ಹೋಗುವ ದೀಪದಂತೆ ಕಾರ್ಯಸಾಧಕವಾಗದ ಆಹಾರ ವಿಹಾರ ಚಾಪಲ್ಯವು ಪ್ರಕಾಶಿಸುವದು, ಈ ಜರೆ ಹುಟ್ಟುವುದಕ್ಕೆ ಪೂರ್ವದಲ್ಲಿಯೇ ಪೂರವೃಷ್ಟಿಯು ಉದರಪ್ರವೃತ್ತಿಯು ಸಹ ಉಂಟಾಗುವದರಿಂದ, ಜರೆಯುಳ್ಳ ಪುರುಷನು ಮಹಾತ್ಮನಂತೆ ದೊಡ್ಡವನೆನಿಸಿಕೊಳ್ಳುವನು, ಪ್ರಜ್ಞಾಶಕ್ತಿ ತಪ್ಪುವುದರಿಂದಲೂ, ಇಂದ್ರಿಯಗಳಿಗೆ ಶಕ್ತಿ ಕಡಮೆಯಾಗುವುದರಿಂದಲೂ, ಸರ್ವಕಾರ್ಯಸಾಧಕವಾದ ಯೌವನದ ಕೊಬ್ಬಿನಲ್ಲಿ ಪರಲೋಕದ ದೃಷ್ಟಿಯೇ ಇಲ್ಲದ್ದರಿಂದಲೂ, ನಾನಾಪ್ರಕಾರವಾದ ಚಿಂತೆಗಳುಂಟಾಗುವವು, ಅದೆಂತೆಂದರೆ,—ಅಕಟಕಟಾ! ನಾನು ಸಕಲ ಸುಖಸಾಧನದಿಂದ ಇದುವಾಗ್ಯೆ ಯಾವ ಸತ್ಕರ್ಮಗಳನ್ನೂ ಆಚರಿಸದೆ, ಯಾರ ಮಾತನ್ನೂ ಗಮನಿಸದೆ, ಯಾವ ಶಾಸ್ತ್ರವನ್ನೂ ನೋಡದೆ ಕೇಳದೆ, ಘಾತಪಾತಗಳನ್ನು ಚಿಂತಿಸದೆ, ಹಿರಿಯರು ಸಂಪಾದಿಸಿದ ಕೀರ್ತಿಯನ್ನೂ, ಮೂಲಧನವನ್ನೂ, ಮನೆಯನ್ನೂ, ದೇಹವನ್ನೂ, ಮನವನ್ನೂ, ಇಂದ್ರಿಯಗಳನ್ನೂ ಸಹ ಹಾಳುಬೀದಿಗಳಲ್ಲಿ ಕೆಡಹಿ ಈ ದುರವಸ್ಥೆಗೊಳಗಾದೆನು. (ಸಶೇಷ)

ದುಃಖವಾರ್ತೆ

ಶಿವಪುರಮಠಾಧ್ಯಕ್ಷರಾದ ಶ್ರೀ ಹಾಲವಾಳ ಬಸವಲಿಂಗಸ್ವಾಮಿಗಳವರು ಇದೇ ಮಾರ್ಗಶೀರ್ಷ ಬಹುಳ ೧೨ ಸೋಮವಾರ ದಿವಸ ಹೊಸಪೇಟೆ ತಾಲ್ಲೂಕು ಚಿಲಕನಹಟ್ಟಿ ಪಂಚಾಶ್ರಮದಲ್ಲಿ ಶಿವಾಧೀನರಾದರೆಂಬ ವಿಷಯವನ್ನು ತಿಳಿಸಲು ಅತ್ಯಂತ ವಿಷಾದವೆನಿಸುತ್ತದೆ ಇವರು ಒಳ್ಳೇ ಗುರುಪೀಠಾಭಿಮಾನಿಗಳಾಗಿದ್ದು ತಾವು ಹೋದ ಕಡೆಯಲೆಲ್ಲಾ ಪಂಚಪೀಠಗಳ ಪ್ರಭಾವವನ್ನು ಜನರಿಗೆ ಬೋಧಿಸಿ ಸರ್ವರನ್ನೂ ಗುರುಭಕ್ತಿಯುಕ್ತರನ್ನಾಗಿ ಮಾಡುತ್ತಿದ್ದರು ಗುರುವರ್ಗಾಭಿಮಾನವು ಇವರ ಪ್ರತಿಯೊಂದು ರಕ್ತನಾಳದಲ್ಲಿಯೂ ಪ್ರವಹಿಸುತ್ತಿತ್ತು ಇಂತಹ ಗುರುಪುತ್ರರನ್ನು ಕಳೆದುಕೊಂಡುದು ಗುರುವರ್ಗದ ದುರ್ದೈವವೆಂದೇ ಹೇಳಬೇಕಾಗಿದೆ ಈ ಮಹನೀಯರು ಕಾಲುತೊಡಕಿಬಿದ್ದ ನೆವವಾಗಿಯೇ ಮರಣಹೊಂದಿದರು ಸದರಿ ಗ್ರಾಮದ ಮೇಲ್ಕಂಡ ಮಠಾಧ್ಯಕ್ಷರಾದ ವೇ॥ ಸಣ್ಣಕೊಟ್ರಪ್ಪಯ್ಯಶಾಸ್ತ್ರಿಗಳು ತಮ್ಮ ಭೂಮಿಯಲ್ಲಿ ಇವರ ಸಮಾಧಿಯನ್ನು ವಿಧ್ಯುಕ್ತವಾಗಿ ಮಾಡಿಸಿದರು ಶ್ರೀ ಪರಮೇಶ್ವರನು ಇವರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಪ್ರಾರ್ಥಿಸುವ

ಓರ್ವ ಗುರುಭಕ್ತ

ಸ್ವೀಕಾರ

ಹುಬ್ಬಳ್ಳಿ ಹಿರಿಯಪುರದ ವೇ॥ ಸೋಮನಾಥಯ್ಯನವರ ತಂದೆಯವರಾದ ವೇ॥ ರೇವಯ್ಯನವರು ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ವೇ॥ ಜಿ ವಿ ನಂದಿಕೇಶ್ವರಮಠ ಇವರ ದ್ವಾರಾ ತಲ್ಪಿರುತ್ತವೆ

ಶಿವಪುರಮಠಾಧ್ಯಕ್ಷರಾದ ಶ್ರೀ ಹಾಲವಾಳ ಬಸವಲಿಂಗಸ್ವಾಮಿಗಳವರು ಶಿವಾಧೀನರಾದ ಸಮಯದಲ್ಲಿ ಚಿಲಕನಹಟ್ಟಿ ಗ್ರಾಮದ ವೇ॥ ಪಿ ಎಂ ಸಣ್ಣಕೊಟ್ರಪ್ಪಯ್ಯಶಾಸ್ತ್ರಿಗಳು ಪ್ರಭಾಪೋಷಣಕ್ಕಾಗಿ 1 ರೂಪಾಯಿಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ

ಧಾರವಾಡ ಜಿ॥ ಲಕ್ಷ್ಮೇಶ್ವರ ಗ್ರಾಮದಲ್ಲಿರುವ ಮ॥ ರಾ॥ ಶಿವಯೋಗಪ್ಪ ಮಹಾಜನಶೆಟ್ಟರ ಇವರ ಅಮ್ಮಂದಿರಾದ ಸಿದ್ದಮ್ಮನವರು ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂಪಾಯಿಯು ವೇ॥ ಗದ್ದಿದೇವರಮಠದ ಶಿವಮೂರ್ತಯ್ಯನವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ.

ಪಂಚಾಚಾರ್ಯಪ್ರಭಾ.

೧೯೪೫ನೆಯ ಜನವರಿ ತಾ|| ೧ನೇ ಸೋಮವಾರ

ಪಲ್ಲವವಂಶದ ಪ್ರಾಚೀನ ರಾಜರು ಲಿಂಗಧಾರಿಗಳು

ಲಿಂಗಧಾರಣವು ಬಹು ಸನಾತನವಾದುದು ಲಿಂಗಧಾರಣದ ಮಹಿಮೆಯನ್ನು ವೇದಗಳೂ ಉಪನಿಷತ್ತುಗಳೂ, ಪುರಾಣಗಳೂ, ಇತಿಹಾಸಗಳೂ ಮುಕ್ತಕಂಠದಿಂದ ಸಾರುತ್ತಿರುವವು

ವಿಷ್ಣುಬ್ರಹ್ಮಾದಯೋ ದೇವಾ ಮುನಯೋ ಗೌತಮಾದಯ
ಧಾರಯಂತಿ ಸದಾ ಲಿಂಗಮುತ್ತಮಾಂಗೇ ವಿಶೇಷತಃ ॥

ಅಂದರೆ ವಿಷ್ಣು ಬ್ರಹ್ಮಾದಿದೇವತೆಗಳೂ ಗೌತಮಾದಿ ಮಹರ್ಷಿಗಳೂ ತಮ್ಮ ಮಸ್ತಕದಲ್ಲಿ ಯಾವಾಗಲೂ ಲಿಂಗವನ್ನು ಧರಿಸಿಕೊಂಡಿರುವರೆಂದು ಲಿಂಗಪುರಾಣವೂ ಸಿದ್ಧಾಂತಶಿಖಾಮಣಿಯೂ ಸಾರುತ್ತಿರುವವು ಈ ಶ್ಲೋಕದಭಿಪ್ರಾಯದಂತೆಯೇ ಪೂರ್ವದಲ್ಲಿ ಅತ್ಯಂತ ಪ್ರಾಚೀನಮೂರ್ತಿಗಳೆನಿಸಿರುವ ಪಂಡಿತರ ಶಿರೋಭಾಗದ ಮಸ್ತಕದಲ್ಲಿಯೂ ಬಾಗಿಲ ತೋರಣದ ಮಸ್ತಕದಲ್ಲಿಯೂ, ತಿರುವಾಂಕೂರು ಮಹಾರಾಜರ ಅಧೀನದಲ್ಲಿರುವ ಅನಂತಶಯನದ ದೇವಸ್ಥಾನದ ಮೂರ್ತಿಯ ಹಸ್ತದಲ್ಲಿಯೂ ಲಿಂಗವನ್ನು ಸರ್ವರೂ ನೋಡಬಹುದು

ಇವರಂತೆಯೇ ಕೊಲ್ಲಾಪುರದ ಮಹಾಲಕ್ಷ್ಮಿಯ ಮಸ್ತಕದಲ್ಲಿಯೂ ರಾಮೇಶ್ವರದ ಮೂರ್ತಿಯ ಮಸ್ತಕದಲ್ಲಿಯೂ, ಕಂಚಿ ಕಾಮಾಕ್ಷಿಯ ಮಸ್ತಕದಲ್ಲಿಯೂ ಲಿಂಗಧಾರಣೆಯಿರುವ ವಿಷಯವು ಪ್ರಸಿದ್ಧವೇ ಆದೆ ಉತ್ತಮಾಂಗದಲ್ಲಿ ಲಿಂಗಧಾರಣವು ಶ್ರೇಷ್ಠವೂ ಅತ್ಯಂತ ಶ್ರೇಷ್ಠವಾದುದೂ ಆಗಿರುವುದರಿಂದ ಪಲ್ಲವರಾಜರು ಉತ್ತಮಾಂಗದಲ್ಲಿ ಲಿಂಗಧಾರಣಮಾಡಿರುವ ಶಿಲಾಶಾಸನಗಳು ಪ್ರಾಚೀನಕಾಲದ ಮಹರ್ಷಿಗಳ ಧರ್ಮಶಾಸ್ತ್ರಾನುಸಾರವಾಗಿ ಮಸ್ತಕದಲ್ಲಿಯೇ ಲಿಂಗಧಾರಣವನ್ನು ಮಾಡಿಕೊಳ್ಳುತ್ತಿದ್ದರು ಈ ವಿಷಯವು ಪಲ್ಲವವಂಶದ ರಾಜರ ವಿಷಯಕವಾಗಿರುವ ಪ್ರಾಚೀನ ಶಿಲಾಶಾಸನಗಳಿಂದ ತಿಳಿದುಬರುತ್ತದೆ

ಪಲ್ಲವವಂಶದ ರಾಜರು ಪರಮಶಿವಭಕ್ತರೆಂಬುದು ಇತಿಹಾಸಪ್ರಸಿದ್ಧವು! ಇವರೆಲ್ಲರ ಶಿವಭಕ್ತಿಯು ಅಸಾಧಾರಣವಾದುದು ಈ ವಂಶದ ರಾಜರು ಮಹಾಶೂರರಾಗಿದ್ದು ಕ್ರಿಸ್ತಶಕದ ಆದಿಯಿಂದಲೂ ದಕ್ಷಿಣ ದೇಶವನ್ನು ಏಕಚ್ಛತ್ರಾಧಿಪತ್ಯದಿಂದ ಆಳುತ್ತಿದ್ದರು ಇವರಿಗೆ ಕಾಂಚೀನಗರವು ಮುಖ್ಯ ರಾಜಧಾನಿಯಾಗಿತ್ತು ಇವರ ಕಾಲದಲ್ಲಿ ದಕ್ಷಿಣ ದೇಶದಲ್ಲಿ ಅನೇಕ ಶಿವದೇವಾಲಯಗಳು ನಿರ್ಮಿತವಾದವು ಪರಮಶಿವೋಪಾಸಕರಾದ ಈ ರಾಜರ ಸಂತತಿಯಲ್ಲಿ ಅತ್ಯಂತ ಪ್ರಸಿದ್ಧರಾಗಿರುವ **ಅತ್ಯಂತಕಾಮ, ರಾಜಸಿಂಹ, ಗುಣಭರ** ಎಂಬ ಮೂರು ಜನ ಚಕ್ರವರ್ತಿಗಳು ಧರ್ಮಶಾಸ್ತ್ರಾನುಸಾರವಾಗಿ ಉತ್ತಮಾಂಗದಲ್ಲಿ (ಮಸ್ತಕದಲ್ಲಿ) ಲಿಂಗವನ್ನು ಧರಿಸಿಕೊಂಡಿದ್ದರೆಂಬ ವಿಷಯವು ತಮಿಳುದೇಶದಲ್ಲಿ ದೊರೆಯುವ ಶಿಲಾಶಾಸನಗಳಿಂದ ಸ್ಪಷ್ಟವಾಗುತ್ತದೆ. ಈ ರಾಜರು ಕ್ರಿ ಶ ೭ನೆಯ ಶತಮಾನದಲ್ಲಿ ದಕ್ಷಿಣದೇಶವನ್ನಾಳುತ್ತಿದ್ದರು

ಮದ್ರಾಸಿಗೆ 32 ಮೈಲು ದೂರದಲ್ಲಿರುವ **ಮಾಮಲ್ಲಪುರಂ** ಮತ್ತು **ಸಾಲುವಂಕುಪ್ಪಂ** ಎಂಬ ಗ್ರಾಮಗಳಲ್ಲಿ **ಅತ್ಯಂತಕಾಮ**ನ ಶಾಸನಗಳೂ, ತ್ರಿಚನಾಪಳ್ಳಿಯಲ್ಲಿ **ಗುಣಭರನ** ಶಾಸನವೂ, **ಕಾಂಚೀ** ಮತ್ತು **ವಾಯಲೂರು** ಗ್ರಾಮಗಳಲ್ಲಿ **ರಾಜಸಿಂಹನ** ಶಾಸನಗಳೂ ವಿರಾಜಿಸುತ್ತಿರುವವು ಈ ಶಾಸನಗಳು 1886 ನೆಯ ಇಸವಿಯಲ್ಲಿ ದೊರೆತಿದ್ದು (South Indian Inscriptions) **ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್** ವಾಲ್ಯೂಂ ೧ರಲ್ಲಿ ಮದ್ರಾಸ್ ಪ್ರೆಸಿಡೆನ್ಸಿ ಶಾಸನ ಇಲಾಖೆಯ ಮುಖ್ಯಾಧಿಕಾರಿಗಳಾದ (E. Hultzsch, P HD) **ಡಾಕ್ಟರ್ ಹುಲ್ಷ್,** ಪಿ ಎಚ್ ಡಿ ಇವರಿಂದ ಪರಿಶೋಧಿಸಲ್ಪಟ್ಟು 1890 ನೆಯ ಇಸವಿಯಲ್ಲಿ ಇಂಗ್ಲಿಷ್ ವ್ಯಾಖ್ಯಾನದೊಡನೆ ಮುದ್ರಿಸಲ್ಪಟ್ಟಿರುವವು

ಮಾಮಲ್ಲಪುರದಲ್ಲಿರುವ ಗಣೇಶದೇವಸ್ಥಾನದಲ್ಲಿ ಅತ್ಯಂತಕಾಮನ ಬಗ್ಗೆ ಒಂದು ಶಾಸನವಿರುವದು ಮೇಲ್ಕಂಡ ಪುಸ್ತಕದಲ್ಲಿ ಇದು ೧೮ನೆಯ ನಂಬರಿನ ಶಾಸನವಾಗಿರುವುದು ಆ ಶಾಸನದಲ್ಲಿ ಹನ್ನೊಂದು ಶ್ಲೋಕಗಳಿರುವವು ಅವುಗಳಲ್ಲಿ ೩ ಮತ್ತು ೯ನೆಯ ಶ್ಲೋಕಗಳು ಅತ್ಯಂತಕ ಮಹಾರಾಜನು ಮಸ್ತಕದಲ್ಲಿ ಲಿಂಗವನ್ನು ಧರಿಸಿಕೊಂಡಿದ್ದನೆಂಬುದನ್ನು ಸ್ಫುಟವಾಗಿ ಪ್ರತಿಪಾದಿಸುತ್ತಿರುವವು

ಶ್ರೀಮತೋತ್ಯಂತಕಾಮಸ್ಯ ದ್ವಿಷದ್ದರ್ಪಾಪಹಾರಿಣಃ ।
ಶ್ರೀನಿಧೇಃ ಕಾಮರಾಗಸ್ಯ ಹರಾರಾಧನಸಂಗಿನಃ ॥೨॥

ಅಭಿಷೇಕಜಲಾಪೂರ್ಣೇ ಚಿತ್ರರತ್ನಾಂಬುಜಾಕರೇ ।
ಆಸ್ತೇ ವಿಶಾಲೇ ಸುಮುಖಃ ಶಿರಸ್ಸರಸಿ ಶಂಕರಃ ॥೯॥

ಅತ್ಯಂತಕಮಹಾರಾಜನು ವೈರಿಗಳ ಅಹಂಕಾರವನ್ನು ನಾಶಮಾಡುವವನೂ ಐಶ್ವರ್ಯಕ್ಕೆ ನಿಧಿಸ್ವರೂಪನೂ, ಮನ್ಮಥನಂತೆ ಸುಂದರನೂ ಶಿವಪೂಜೆಯಲ್ಲಿ ಆಸಕ್ತನೂ ಆಗಿರುವನೆಂಬುದು ಎರಡನೆ ಶ್ಲೋಕದ ಅಭಿಪ್ರಾಯವಾಗಿ ಮತ್ತು ೯ನೆಯ ಶ್ಲೋಕದಲ್ಲಿ ಈ ರಾಜನ ಮಸ್ತಕವು ಸರೋವರಕ್ಕೆ ಹೋಲಿಸಲ್ಪಟ್ಟು ವರ್ಣಿಸಲ್ಪಟ್ಟಿದೆ ಸರೋವರವು ಜಲದಿಂದ ಪೂರ್ಣವಾಗಿರುವಂತೆ, ಈ ರಾಜನ ಮಸ್ತಕವು ಲಿಂಗಾಭಿಷೇಕಜಲದಿಂದ ಪೂರ್ಣವಾಗಿರುವದೆಂದೂ ಸರೋವರವು ಚಿತ್ರವಿಚಿತ್ರವಾದ ಕಮಲಗಳಿಂದ ಕೂಡಿರುವಂತೆ, ಈ ರಾಜನ ಮಸ್ತಕವು ಚಿತ್ರವಿಚಿತ್ರವಾದ ರತ್ನಗಳಿಂದ ಕೂಡಿರುವುದಂದೂ ಅನೇಕ ರತ್ನಖಚಿತವಾದ ಕಿರೀಟದಿಂದ ಯುಕ್ತವಾಗಿರುವದೆಂದೂ ಸರೋವರವು ವಿಶಾಲವಾಗಿರುವಂತೆ ಈ ರಾಜನ ಮಸ್ತಕವು ವಿಶಾಲವಾಗಿರುವವಂದೂ, ಇಂತಹ ಶಿರಸ್ಸರೋವರದಲ್ಲಿ ಉತ್ತಮವಾದ ಮುಖವುಳ್ಳ ಶಂಕರನೆಂಬ ಶಿವನು ವಾಸವಾಗಿದ್ದಾನೆಂದೂ ಶ್ಲೇಷದಿಂದ ಒಂದು ಸರೋವರವಾಗಿ ವರ್ಣಿತವಾಗಿದೆ 'ಶಂಕರ' ಎಂದರೆ ಶಿವ ಮತ್ತು ಶಂಖ ಎಂದು ಎರಡು ಅರ್ಥವಾಗುವದು ಸರೋವರದಲ್ಲಿ ಶಂಖವಿರುವಂತೆ, ಈ ರಾಜನ ಮಸ್ತಕದಲ್ಲಿ ಶಿವನು ಇರುವನು ಅಂದರೆ 'ಮುಖೇ ಮಂತ್ರೋ ಹೃದಿ ಧ್ಯಾನಂ ಮಸ್ತಕೇ ಲಿಂಗಧಾರಣಂ" ಎಂಬ ಧರ್ಮಶಾಸ್ತ್ರೋಕ್ತಿಯಂತೆ, ಈ ರಾಜನು ತನ್ನ ಮಸ್ತಕದಲ್ಲಿ ಲಿಂಗವನ್ನು ಧರಿಸಿಕೊಂಡಿದ್ದನೆಂದು ತಾತ್ಪರ್ಯವು ೯ನೆಯ ಶ್ಲೋಕಕ್ಕೆ ಡಾ|| ಹುಲ್ಷ್‌ರವರು ಈ ಕೆಳಗೆ ಕಂಡಂತೆ ಇಂಗ್ಲಿಷಿನಲ್ಲಿ ಟಿಪ್ಪಣಿಯನ್ನು ಬರೆದಿರುತ್ತಾರೆ

"Siva abides on the head of Atyantakama" means the same as "he bears Siva on his head" (verse 3) viz., "he is a devotee of Siva."

"ಶಿವನು ಅತ್ಯಂತಕಾಮನ ಮಸ್ತಕದ ಮೇಲೆ ನೆಲಸಿದ್ದಾನೆ, ಎಂಬುದು ಅವನು ಶಿವನನ್ನು ತನ್ನ ಮಸ್ತಕದಲ್ಲಿ ಧರಿಸಿಕೊಂಡಿದ್ದಾನೆಂಬರ್ಥವೇ ಆಗಿದೆ (ಶ್ಲೋಕ 3) ಅಂದರೆ ಅವನು ಮಹಾಶಿವಭಕ್ತ" ಇದು ಮೇಲಿನ ಇಂಗ್ಲಿಷ್ ವಾಕ್ಯಗಳ ಅಭಿಪ್ರಾಯ.

ಯಸ್ಯಾಂಗುಷ್ಠಭರಾಕ್ರಾಂತಃ ಕೈಲಾಸಃ ಸದಶಾನನಃ ।
ಪಾತಾಲಮಗಮನ್ಮೂರ್ಧ್ನಾ ಶ್ರೀನಿಧಿಸ್ತಂ ಬಿಭರ್ತ್ಯಜಂ ॥೩॥

ಈ ಶಾಸನದಲ್ಲಿ ಇದು ೩ ನೆಯ ಶ್ಲೋಕವು

ರಾವಣನಿಂದ ಯುಕ್ತವಾದ ಕೈಲಾಸಪರ್ವತವು ಯಾವನ ಅಂಗುಷ್ಠದಿಂದ ತುಳಿಯಲ್ಪಟ್ಟುದಾಗಿ ಪಾತಾಲಲೋಕವನ್ನು ಸೇರಿತೋ, ಅಂತಹ ಉತ್ಪತ್ತಿರಹಿತನಾದ ಶಿವನನ್ನು ಶ್ರೀನಿಧಿಯು ಅಂದರೆ ಅತ್ಯಂತಕಾಮನು ಮಸ್ತಕದಲ್ಲಿ ಧರಿಸಿರುತ್ತಾನೆ ಎಂದು ಈ ಶ್ಲೋಕದ ಅಭಿಪ್ರಾಯವು. ಈ ಶ್ಲೋಕವೂ ಮತ್ತು ೯ ನೆಯ ಶ್ಲೋಕವೂ, ಅತ್ಯಂತಕಾಮಮಹಾರಾಜನು ಮಸ್ತಕದಲ್ಲಿ ಲಿಂಗವನ್ನು ಧರಿಸಿಕೊಂಡಿದ್ದನೆಂಬುದನ್ನು ಬಹು ಸ್ಫುಟವಾಗಿ ಪ್ರತಿಪಾದಿಸುತ್ತಿರುವವು

ಧಿಕ್ ತೇಷಾಂ ಧಿಕ್ ತೇಷಾಂ ಪುನರಪಿ ಧಿಗ್ಧಿಗ್ಧಿಗಸ್ತು
ಧಿಕ್ತೇಷಾಂ । ಯೇಷಾಂ ನ ವಸತಿ ಹೃದಯೇ ಕುಪಥಗತಿ
ವಿಮೋಕ್ಷಕೋ ರುದ್ರಃ ॥೧೧॥

ಈ ಶಾಸನದಲ್ಲಿ ಇದು ಹನ್ನೊಂದನೆಯ ಶ್ಲೋಕವು.

ಯಮಲೋಕಗಮನವನ್ನು ತಪ್ಪಿಸತಕ್ಕ ಶಿವನು ಯಾರ ಹೃದಯದಲ್ಲಿ ವಾಸವಾಗಿರುವದಿಲ್ಲವೋ, ಅವರಿಗೆ ಧಿಕ್ಕಾರವಿರಲಿ, ಧಿಕ್ಕಾರವಿರಲಿ, ಧಿಕ್ಕಾರವಿರಲಿ, ಧಿಕ್ಕಾರವಿರಲಿ, ಧಿಕ್ಕಾರವಿರಲಿ, ಧಿಕ್ಕಾರವಿರಲಿ ಎಂಬುದು ಈ ಶ್ಲೋಕದ ಅಭಿಪ್ರಾಯವು ಶಿವನನ್ನು ಧ್ಯಾನಿಸದೆ ಇರುವವನ ಜನ್ಮಕ್ಕೆ ಧಿಕ್ಕಾರವಿರಲಿ, ಧಿಕ್ಕಾರವಿರಲಿ ಎಂದು ೬ ಸಾರೆ ಪ್ರಯೋಗಿಸಿರುವದನ್ನು ನೋಡಿದರೆ, ಈ ಮಹಾರಾಜನು ಶೈವಶಿಖಾಮಣಿಯಾದ ವೀರಶೈವನೆಂಬುದರಲ್ಲಿ ಯಾವ ಸಂದೇಹವೂ ಇರುವದಿಲ್ಲ ಇಂತಹ ವೀರಶಿವಭಕ್ತಿಯು ವೀರಶೈವರಲ್ಲಲ್ಲದೆ ಅನ್ಯರಲ್ಲಿ ಎಂದಿಗೂ ಇರುವದಿಲ್ಲವೆಂಬುದು ಶಾಸ್ತ್ರಪ್ರಸಿದ್ಧವೂ ಲೋಕಪ್ರಸಿದ್ಧವೂ ಆಗಿರುವ ವಿಷಯವಾಗಿದೆ

ಮಾಮಲ್ಲಪುರಶಾಸನದಲ್ಲಿರುವ "**ಶ್ರೀಮತೋತ್ಯಂತಕಾಮಸ್ಯ**" ಮತ್ತು "**ಅಭಿಷೇಕಜಲಾಪೂರ್ಣೇ**" ಎಂಬೀ ಎರಡು ಶ್ಲೋಕಗಳು ಸಾಲುವಂಕುಪ್ಪಂ ಗ್ರಾಮದ ಅತಿರಣಚಂಡೇಶ್ವರದೇವಾಲಯದಲ್ಲಿರುವ ೨೧ ನೆಯ ನಂಬರಿನ ಶಾಸನದಲ್ಲಿಯೂ ಸಹ ಕೆತ್ತಲ್ಪಟ್ಟಿರುವವು ಈ ಅತ್ಯಂತಕಾಮಮಹಾರಾಜನು ಮಾಮಲ್ಲಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಅಲ್ಲಿ ವಾಸವಾಗಿದ್ದನು

ಈಗ್ಗೆ **೧೩೦೦** ವರ್ಷಗಳ ಪೂರ್ವದಲ್ಲಿದ್ದ ಚಕ್ರವರ್ತಿಗಳು ಲಿಂಗಧಾರಿಗಳಾಗಿದ್ದರೆಂದಮೇಲೆ, ಆ ಕಾಲದಲ್ಲಿ ವೀರಶೈವರ ವೈಭವವು ಎಷ್ಟುಮಟ್ಟಿಗಿರಬಹುದೆಂಬುದನ್ನು ವಾಚಕರೇ ಊಹಿಸಬಹುದಾಗಿದೆ ಅಸ್ತು! **ಗುಣಭರ** ಮತ್ತು **ರಾಜಸಿಂಹನ** ವಿಷಯಕವಾಗಿರುವ ಶಾಸನಗಳ ವಿಷಯವನ್ನು ಮುಂದೆ ವಿಮರ್ಶಿಸುವುದಾಗುವುದು

ಶ್ರೀಗುರುರೇಣುಕೇಶ್ವರ ವಚನಗಳು

ಲೇ|| ಶ್ರೀಗಂಗಾಧರಶಿವಾಚಾರ್ಯರು, ಮೊರಬ

೧ ಮಹಾಗುರುವೇ ಪ್ರೇಮವೇ ನಿನ್ನ ನೈವೇದ್ಯವಾಗಿದೆ ನೋಡಾ । ಪ್ರೇಮವೇ ನಿನ್ನೊಲುಮೆಯ ಶೆಳೆದು ತರುವ ಜಾಲಗಾರನು ನೋಡಾ । ಪ್ರಭುವೇ ಪುರಾತನರು ನಿನ್ನನು ಪ್ರೇಮಪಾಶದಿ ಬಿಗಿದು ಪರಮ ಪುರುಷಾರ್ಥವನು ಪಡೆದರು ನೋಡಾ । ಅದು ಕಾರಣ ಪ್ರೇಮದಿಂ ಪೂಜಿಸುವ ಧ್ಯಾನಿಸುವೆನಗೆ ಪರಮಪದವಿಯ ನಿತ್ತು ಪೊರೆಯಯ್ಯ ಗುರುರೇಣುಕೇಶ್ವರಾ ॥

೨ ಅಯ್ಯಾ, ನೀನು ದಯಾಮಯನೆಂದು ಜ್ಞಾನಿಗಳು ಪೇಳುವರು ನೋಡಾ । ಸದ್ಭಕ್ತಬಂಧುವೆಂದು ಶ್ರುತಿವೀಣೆ ಮಿಡಿಯುತಿದೆ ನೋಡಾ । ಶರಣಜನರಕ್ಷಣೆಯು ನಿನಗೆ ವಿಲಾಸಲು ದೇವಾ । ಭಕ್ತವತ್ಸಲನೆಂಬ ಬಿರುದು ನಿನ್ನದಲ್ಲವೆ ಗುರುವೇ ? । ಅದಕೆ ಕುಂದು ತರುವುದು ತರವೇ ? । ನೆರೆನಂಬಿ ಬಂದಿರುವೆ ಕರಪಿಡಿದು ಸಲಹಯ್ಯ ಗುರುರೇಣುಕೇಶ್ವರಾ ॥

೩. ಸಕಲಕೂ ಗುರುವೇ ಕಾರಣ ನೋಡಾ । ಗುರುವಿಲ್ಲದಂಗೆ ಮರವೆ ಹರಿಯದು ನೋಡಾ । ಗುರುವೆ ತಾಯಿ, ಗುರುವೇ ತಂದೆ, ಗುರುವೇ ಬಂಧುಬಳಗವಯ್ಯಾ । "ನಗುರೋರಧಿಕ"ವೆಂದು ಶ್ರುತಿಯು ಸಾರುತಿಹುದಯ್ಯಾ । ಅದುಕಾರಣ ಗುರುಸಾರ್ವಭೌಮ ಪಂಚಾಚಾರ್ಯರ ಪರಮಪಾವನಪಾದಭಕ್ತಿಯ ಕರುಣಿಸೆನ್ನನುದ್ಧರಿಸಯ್ಯ ಗುರುರೇಣುಕೇಶ್ವರಾ ॥

೪ ತತ್ತ್ವಂಗಳಲಿ ಶಿವತತ್ತ್ವವೇ ಮಿಗಿಲು | ಲೋಕಂಗಳಲಿ ಶಿವಲೋಕವೇ ಮಿಗಿಲು | ದೇವರಲಿ ಶಿವದೇವನೇ ಮಿಗಿಲು | ಗಿರಿಗಳಲಿ ಮೇರುವೇ ಮಿಗಿಲು| ನದಿಗಳಲಿ ಗಂಗೆಯೇ ಮಿಗಿಲು | ಕ್ಷೇತ್ರಗಳಲಿ ಕಾಶಿಯೇ ಮಿಗಿಲು | ಕವಿಗಳಲಿ ಕಾಳಿದಾಸನೇ ಮಿಗಿಲು | ರಾಜರಲಿ ರಾಮಚಂದ್ರನೇ ಮಿಗಿಲು | ಗುರುಗಳಲಿ ಎನ್ನ ಕುಲಸ್ವಾಮಿ ಪಂಚಾಚಾರ್ಯರೇ ಮಿಗಿಲು ನೋಡಾ ಗುರುರೇಣುಕೇಶ್ವರಾ ||

೫. ಗಗನಕ್ಕೆ ಚಂದ್ರಮನೇ ಚಂದ | ನೀರಿಗೆ ನೀರಜವೇ ಚಂದ | ವಂಶಕ್ಕೆ ಕುವರನೇ ಚಂದ | ಕಮಲಕ್ಕೆ ಭೃಂಗವೇ ಚಂದ | ಸತಿಗೆ ಶೀಲವೇ ಚಂದ | ಮುಖಕ್ಕೆ ಮಂತ್ರವೇ ಚಂದ | ಫಾಲಕ್ಕೆ ಭಸಿತವೇ ಚಂದ | ಮನುಜರಿಗೆ ಪಂಚಾಚಾರ್ಯರ ಪಾದಭಕ್ತಿಯೇ ಚಂದವಯ್ಯಾ ಗುರುರೇಣುಕೇಶ್ವರಾ ||

೬. ಲೀಯತೇ ಗಮ್ಯತೇ ಯತ್ರ ಜಗದೇತಚ್ಚರಾಚರಂ | ತಲ್ಲಿಂಗಮಿತಿ ವಿಖ್ಯಾತಂ ಲಿಂಗತತ್ತ್ವಪರಾಯಣೈಃ || ಏತೇ ಯುಗಚತುಷ್ಕೇ ತು ಪಂಚಾರಾಧ್ಯ ಯಥಾವಿಧಿ | ಶಿವಲಿಂಗಮುಖೋದ್ಭೂತಾ ಲೋಕವಿಶ್ರುತಕೀರ್ತಯಃ || ಎಂಬ ಶಿವಾಗಮವಚನದಂತೆ ಸಮಸ್ತ ಚರಾಚರಪ್ರಪಂಚವು ಆವ ವಸ್ತುವಿನಲ್ಲಿ ಪುಟ್ಟಿ ಅಲ್ಲಿಯೇ ಲಯವಾಗುವುದೋ ಅದುವೇ ಲಿಂಗ, ಅದುವೇ ಪರಾತ್ಪರ ಪರಬ್ರಹ್ಮ ಪರಂಜ್ಯೋತಿ | ಜ್ಯೋತಿಯಿಂದ ಜ್ಯೋತಿಯುದಯಿಸುವಂತೆ ರೇಣುಕ, ದಾರುಕ, ಏಕೋರಾಮ, ಪಂಡಿತ, ವಿಶ್ವಾರಾಧ್ಯರೆಂಬ ಪ್ರಮಥಪುಂಗವರು, ಸೋಮೇಶ, ಸಿದ್ಧೇಶ, ಭೀಮೇಶ ಮಲ್ಲಿಕಾರ್ಜುನ, ವಿಶ್ವೇಶ ಲಿಂಗಗಳಿಂ ಉದಯಿಸಿ, ಲಿಂಗಜೀವಿಗಳಾಗಿ, ಲಿಂಗಧರ್ಮವನೂರಿ, ಲಿಂಗದಲಿ ಅಡಗಿರುವ ನಿಗಮಾಗಮಸಿದ್ಧವಿದು ನೋಡಾ | ಇದನರಿಯದೆ ಮನಬಂದ ತೆರದಿ ನುಡಿಯುವ ಮೂಢರಿಗೆ ಸದ್ಬುದ್ಧಿಯನಿತ್ತು ಪೊರೆಯಯ್ಯಾ ಗುರುರೇಣುಕೇಶ್ವರಾ ||

೭ ಜಂಗಮನೇ ಪ್ರತ್ಯಕ್ಷಪರಮೇಶ್ವರನು ನೋಡಾ| ಜಂಗಮನೇ ಜಗದ್ಭರಿತ ಶಿವಚೈತನ್ಯ ನೋಡಾ | ಆನು ಜಂಗಮ ತಾನು ಜಂಗಮನೆಂದು ಜಾತಿತಾರತಮ್ಯವನರಿ ಬರಿದೆ ಹಮ್ಮುಗೇಡಾಗಿ ನರಕದಿ ಬಿದ್ದು ಬೆಂದು ಬೆಂಡಾಗುತಿಹರಯ್ಯಾ ಜನರು | ಗುರುವಂಶ ಯರೇ ನಿಜ ಜಂಗಮರು ನೋಡಾ | ಆದುಕಾರಣ ಜಂಗಮಕುಲಸಾರ್ವಭೌಮ ಪಂಚಾಚಾರ್ಯರ ಪಾದಭಕ್ತಿಯನು ಸರ್ವರಲಿ ಕರುಣಿಸಯ್ಯಾ ಗುರುರೇಣುಕೇಶ್ವರಾ ||

೮ ಲಂಕಾಧಿಪತಿ ರಾವಣನ ಸತ್ಯಸಂಕಲ್ಪ ಪೂರ್ತಿಗೋಸುಗ, ತತ್ಸಹೋದರ ವಿಭೀಷಣನ ದೀನಪ್ರಾರ್ಥನೆಯ ಲಾಲಿಸಿ, ಏಕಕಾಲದೊಳ್ ತ್ರಿಕೋಟಿ ಗುರುರೂಪವಂ ಧರಿಸಿ, ತ್ರಿಕೋಟಿ ಲಿಂಗಸ್ಥಾಪನೆಗೆಯ್ದ ಅದ್ಭುತ ಮಹಿಮಾಕರನು ನೀ ನೋಡಾ ಗುರುರೇಣುಕೇಶ್ವರಾ ||

೯. ಅಯ್ಯಾ! ಕುಂಭಸಂಭವನು ಸಪ್ತಸಮುದ್ರಗಳ ಒಕ್ಕುಡಿತೆಯಾಗಿ ಪಾನಮಾಡಿದುದು ನಿನ್ನ ಕೃಪಾಬಲದಿಂದಲ್ಲವೇ ? | ಶಿವಲಿಂಗಾಂಕಿತಮಸ್ತಕೆ ಕೊಲ್ಲಾಪುರದ ಮಹಾಲಕ್ಷ್ಮಿಯ ಖಡ್ಗಬಾಧೆಯಿಂ ಬಳಲಿದ ದುರುಳ ಗೋರಕ್ಷನಂ ರಕ್ಷಿಸಿದುದು ನಿನ್ನ ಕೃಪಾಬಲದಿಂದಲ್ಲವೇ ? | ಗುರುದೇವಾ, ತರಳೆ ರೇವಣಾಂಬೆಯ ಮನಕರಗುವ ಆಲಾಪಕ್ಕೆ ಮನಸೋಲ್ದು ಪನ್ನೆರಡು ಸಾವಿರ ಕನ್ನೆಯರ ಪ್ರಾಣಭೀತಿಯಿಂ ಪಾರುಗಾಣಿಸಿದ ಘನಕರುಣಿ ನೀನಲ್ಲವೇ ? | ಆದುಕಾರಣ ಶರಣು ಬಂದಿರುವೆನ್ನ ಕರುಣದಿಂದುದ್ಧರಿಸಯ್ಯಾ ಸಿದ್ಧಕುಲಸಾರ್ವಭೌಮ ಗುರುರೇಣುಕೇಶ್ವರಾ ||

೧೦. ಕಲಿಪುರುಷನಾಗಿರ್ದ ವಿಕ್ರಮನರೇಶಗೆ ಏರುವೆಡೆ ದಿವ್ಯಕೇಜಯಪ್ಪ, ಹಸಿವಾದೆಡೆ ಅಮೃತಾನ್ನವಪ್ಪ, ಸಮರದೊಳು ಶತ್ರುಸಂಹಾರಕ್ಕೆ ಕಾಳಕರಾಳಖಡ್ಗವಪ್ಪ, ಇಂತಪ್ಪ ಸಕಲೇಷ್ಟಾರ್ಥಗಳನೀವ ಖಡ್ಗಚಿಂತಾಮಣಿಯನುಗ್ರಹಿಸಿ ಮೆರೆದ ಘನಮಹಿಮ ನೀನು | ನಿನ್ನ ಗಣಿತಲೀಲೆಗಳ ಗಣಿಸಲ್ಕೆ ಎನ್ನಳವೇ ? | ದೇವಾ, ಶರಣಾಗತನಾದೀ ದೀನನಲಿ ದಯೆದೋರಿ ಪೊರೆಯಯ್ಯಾ ಗುರುರೇಣುಕೇಶ್ವರಾ ||

೧೧ ಕಾಂಚಿಯಲಿ ವರದರಾಜನ ಶಿರಃಕಂಪನವ ನಿಲಿಸಿ | ಏಕಾಮ್ರೇಶ್ವರನ ಪುರೋಭಾಗದಲಿ ಶ್ರೀರುದ್ರಮುನೀಶ್ವರ ಮಹಾಗುರುಚಂದ್ರಮನ ಉದಯಂಗೈಸಿ | ಶಿವಧರ್ಮಸಾಮ್ರಾಜ್ಯಮಂ ಪಾಲಿಸಲು ರಂಭಾಪುರೀ ವೀರಸಿಂಹಾಸನಕೆ ಪಟ್ಟಮಂ ಕಟ್ಟಿ ಮೆರೆದ ಮಹಾಮಹಿಮ ನೀ ನೋಡಾ ಗುರುರೇಣುಕೇಶ್ವರಾ ||

೧೨ ಲೋಕಕಂಟಕವಾಗಿರ್ದ ಯಕ್ಷಮಿಥುನವ ಫಾಲನೇತ್ರದಿ ದಹಿಸಿ ಪೊರೆದೆ ಧರೆಯಂ ದೇವಾ | ಶಿವಾದ್ವೈತಸಿದ್ಧಾಂತಸುಧೆಯನೆರೆದು ಕುಂಭಸಂಭವನ ಧನ್ಯನಂ ಮಾಡಿದೆ ದೇವಾ | ಗಗನಮಾರ್ಗದಿ ಚರಿಸಿ ಸಕಲದೇಶಕೋಶಂಗಳ ಪಾದವಿನ್ಯಾಸದಿಂ ಪಾವನಗೊಳಿಸಿ, ಕೊನೆಗೆ ಸೋಮನಾಥನಲಿ ಬೆರೆದೆ ದೇವಾ | ನಿನ್ನ ಚರಣಕಮಲವ ನಂಬಿರುವೆನ್ನ ಕರಪಿಡಿದು ಪೊರೆಯಯ್ಯಾ ಗುರುರೇಣುಕೇಶ್ವರಾ ||

೧೩ ಕಿವಿಗಳ್ಗೆ ಗುರುವಚನಶ್ರವಣವೇ ಭೂಷಣವಯ್ಯಾ | ಪದಗಳಿಗೆ ಗುರುತೀರ್ಥಯಾತ್ರೆಯೇ ಭೂಷಣವಯ್ಯಾ | ಕರಗಳಿಗೆ ಗುರುಪೂಜಾಕರ್ಮವೇ ಭೂಷಣವಯ್ಯಾ | ನಾಲಗೆಗೆ ಗುರುನಾಮಭಜನವೇ ಭೂಷಣವಯ್ಯಾ | ಮನಕ್ಕೆ ನಿನ್ನ ನೆನಹೇ ಭೂಷಣವಯ್ಯಾ | ಅದರಿಂದ ನಿರಂತರ ನಿನ್ನ ಪಾದಕಮಲದಲಿ ಮಗ್ನವಾಗಿರಿಸೆನ್ನ ಮನವ ಗುರುರೇಣುಕೇಶ್ವರಾ ||

೧೪ ಜಗದಾದಿದೇವ ಮಹಾದೇವ ಶಿವದೇವನೊಲಿಯಲು ಸದ್ಗುರುಸಮಾಗಮ ತಚ್ಚರಣಸೇವೆಯೇ ಮೂಲವಯ್ಯಾ | ಆದುಕಾರಣವೇ 'ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್ ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಂ' ಎಂದಿತ್ತು ನೋಡಾ ವೇದ | ಅದರಿಂದೆ ಶ್ರೀಗುರುವರೇಣ್ಯರ ಪದಕಮಲವ ನೇಹದಿ ಸೇವಿಸುವ ಸದ್ಬುದ್ಧಿಯನಿತ್ತು ಸಲಹಯ್ಯಾ ಗುರುರೇಣುಕೇಶ್ವರಾ ||

೧೫ ಸತ್ಯವೇ ಸದ್ಗುರುಪ್ರಸಾದಪ್ರಾಪ್ತಿಗೆ ಸಾಧನವು ನೋಡಾ | ಸತ್ಯವೇ ಸದಾಶಿವನ ಸಾಕಾರ ಮೂರ್ತಿಯು ನೋಡಾ | ಸತ್ಯ ನುಡಿದವನ ಭಕ್ತನ ಯೋಗಿ ತಲೆಗೆ ಕಡೆಯಯ್ಯಾ | ಸತ್ಯದಿಂದಲೇ ಜಗವು ನಿಂತಿಹುದಯ್ಯಾ | ಸಟೆಯಾಡಿ ಬ್ರಹ್ಮನು ಅಪೂಜ್ಯನಾದನು ನೋಡಾ | ದಿಟವಾಡಿ ಹರಿಯು ಪೂಜ್ಯನಾದನು ನೋಡಾ | ಸತ್ಯಶೀಲದಿ ಹರಿಶ್ಚಂದ್ರ ಆಚಂದ್ರಾರ್ಕವಾಗಿ ಧವಳಕೀರ್ತಿಯ ಪಡೆದ ನೋಡಾ | ಅದರಿಂದೆ ಸತ್ಯಶೀಲನ ಮಾಡಿ ಸಲಹಯ್ಯಾ ಗುರುರೇಣುಕೇಶ್ವರಾ ||

೧೬ ಮನುಮುನಿಗಳ ಮನೋಂಬುಜದಲ್ಲಿ ದುಂಬಿಯಾಗಿ ಚರಿಸಿತ್ತಯ್ಯಾ ನಿನ್ನ ನಾಮ | ಶ್ರುತಿದೇವಿಯ ಶಿರೋಭೂಷಣವೆನಿಸಿ ಮೆರೆದಿತ್ತಯ್ಯಾ ನಿನ್ನ ನಾಮ | ಭವಬಂಧನವ ಬಿಡಿಸಿ ಮೋಕ್ಷಸುಧೆಯನುಣಿಸಿತ್ತಯ್ಯಾ ನಿನ್ನ ನಾಮ | ಆದುಕಾರಣ ಎನ್ನ ಮನವ ನಿನ್ನ ನಾಮಸ್ಮರಣದ ಬೀಡಾಗುವಂತೆ ಮಾಡಯ್ಯಾ ಗುರುರೇಣುಕೇಶ್ವರಾ ||

೧೭ ದಯವೇ ದಯಾಮಯನ ತವರೂರು ನೋಡಾ | ದಯವೇ ಸದ್ಗತಿಯ ಸೋಪಾನ ನೋಡಾ | ದಯವೇ ಸಕಲಸೌಭಾಗ್ಯಗಳ ಬೀಡು ನೋಡಾ | ಗುರುದೇವಾ! ಎನ್ನ ಜೀವನದ ಪರಿಯೇ ನಿನ್ನ ದಯಗೋಸುಗ ನೋಡಾ | ದಯಾಮಯನೇ! ದೀನನಾದೆನ್ನೊಳು ದಯೆದೋರಿ ಸಲಹಯ್ಯಾ ಗುರುರೇಣುಕೇಶ್ವರಾ ||

೧೮ ಕಾಡಿನಲಿ ದಾರಿದಪ್ಪಿ ಅಯ್ಯಾ! ಅಯ್ಯಾ! ಎಂದು ಕೂಗುತ್ತಲಿರುವೆ | ಅಯ್ಯಾ! ಅಯ್ಯಾ! ಎಂದು ಕರೆಯುತ್ತಲಿರುವೆ | ಬಾ, ಎನ್ನಲಾಗದೇ ತಂದೇ ? | ಮಂದಮತಿಯಾದೀ ಕಂದನ ಬಂಧನವ ಬಿಡಿಸಿ ಪೊರೆಯಯ್ಯಾ ಗುರುರೇಣುಕೇಶ್ವರಾ ||

೧೯ ಹಸರು ಕಂಡ ಹಸುವಿನಂತೆ ವಿಷಯಂಗಳತ್ತ ಸೆಳೆಯುತ್ತಿಹುದಯ್ಯಾ ಈ ಕೇಡಿಮನವು | ನಿಂತಲ್ಲಿ ನಿಲದ ಈ ಕುಂಟಕೋಣನ ಚೇಷ್ಟೆಯನೆಂತು ತಾಳಲಿ ದೇವಾ ! | ಆದುಕಾರಣ ಎನ್ನೀ ಚಪಲಮನವು ನಿನ್ನ ಪಾದಪದ್ಮವ ನಂಬಿಕೊಂಡಿರುವಂತೆ ಕರುಣಿಸಯ್ಯಾ ಗುರುರೇಣುಕೇಶ್ವರಾ ||

೨೦. ಸುಖವೆಂದಡೆ ಹಿಗ್ಗುವರು ಕೆಲರು | ದುಃಖವೆಂದಡೆ ಕುಗ್ಗುವರು ಕೆಲರು | ಹಿಗ್ಗಲೇತಕೋ ಕುಗ್ಗಲೇತಕೋ | ಸುಖದುಃಖಸಮತೆಯೇ ನಿಜಯೋಗವಯ್ಯಾ | ಆದುಕಾರಣ ಸುಖದುಃಖಗಳ ಸಮವಾಗಿ ಭಾವಿಸುವ ಘನತರಶಕ್ತಿಯನ್ನೆನಗೆ ದಯಪಾಲಿಸಯ್ಯಾ ಗುರುರೇಣುಕೇಶ್ವರಾ ||

೨೧. ವಿನಯವು ಸಜ್ಜನಸಮಾಗಮಕ್ಕೆ ಸಹಕಾರಿಯೆನಿಸಿತ್ತು | ವಿನಯವು ಮಾನವನ ಘನತೆಗೆ ಚಿನ್ನದ ಮಿರುಗು ಹಾಕಿತ್ತು | ವಿನಯವು ವಿದ್ಯಾಧಿದೇವತೆಯ ಮಣಿಖಚಿತಮುಕುಟವಾಗಿತ್ತು | ವಿನಯರಹಿತಂಗೆ ಗುರುಕರುಣ ಬಟ್ಟಬಯಲಾಗಿತ್ತು | ಆದುಕಾರಣ ನೆರೆಗೊಡ್ಡಿ ಬೇಡಿಕೊಂಬೆ ವಿನಯಶಾಲಿಯನು ಮಾಡೆನ್ನ ಗುರುರೇಣುಕೇಶ್ವರಾ ||

೨೨ ಗಣಿಕೆ ಮೆಚ್ಚುವುದು ಹಣಕ್ಕಲ್ಲದೆ ನೆಣಕ್ಕಲ್ಲವಯ್ಯಾ | ಗುಣಿ ಮೆಚ್ಚುವುದು ಗುಣಕ್ಕಲ್ಲದೆ ಅವಗುಣಕ್ಕಲ್ಲವಯ್ಯಾ | ಅಣುಗ ಮೆಚ್ಚುವುದು ಆಟಕ್ಕಲ್ಲದೆ ಕೂಟಕ್ಕಲ್ಲವಯ್ಯಾ | ಗುರುನಾಥಾ, ನೀ ಮೆಚ್ಚುವುದು ಭಕ್ತಿಗಲ್ಲದೆ ಯುಕ್ತಿಗಲ್ಲವಯ್ಯಾ ಗುರುರೇಣುಕೇಶ್ವರಾ ||

೨೩ "ಮುಖೇ ಮಂತ್ರೋ ಹೃದಿ ಧ್ಯಾನಂ ಮಸ್ತಕೇ ಲಿಂಗಧಾರಣಂ | ಶಿವೋಪವೀತ ಭಸ್ಮಾನಿ ಇತಿ ಬ್ರಾಹ್ಮಣಲಕ್ಷಣಂ ||" ಎಂಬ ಗೌತಮಸ್ಮೃತಿವಚನದಂತೆ ಮುಖದಲ್ಲಿ ಮಂತ್ರ, ಮನದಲ್ಲಿ ಧ್ಯಾನ, ಶಿರದಲ್ಲಿ ಲಿಂಗಧಾರಣ, ಶಿವೋಪವೀತ ಭಸ್ಮಾದಿಶಿವಲಾಂಛನದಿಂ ಮೊಪ್ಪುವ ವೀರಶೈವಬ್ರಾಹ್ಮಣಸಂತತಿಗೆ ಸಕಲಸೌಭಾಗ್ಯವನಿತ್ತು ಸಲಹಯ್ಯಾ ಗುರುರೇಣುಕೇಶ್ವರಾ ||

೨೪ ಗುರುನಿಂದೆಗೆಡೆಗೊಟ್ಟು ಹರಪೂಜೆ ಮಾಡುವ ನರಗೆ ನಿರಯ ಹಿಂದಪ್ಪುದಯ್ಯಾ | ಗುರುನಿಂದಕರ ಮುಖ ಕಂಡಡೆ ಸರ್ವಸ್ವ ಹಾನಿಯಪ್ಪುದು ತಪ್ಪದಯ್ಯಾ| ಆದುಕಾರಣ ಜಗದಲಿ ಗುರುನಿಂದಕರ ಸುಳುವಿಲ್ಲದಂತೆ ಮಾಡೆಂದು ಬೇಡುವೆನಯ್ಯಾ ಗುರುರೇಣುಕೇಶ್ವರಾ ||

೨೫ ಲಿಂಗ ಲಿಂಗವೆಂದು ಭಂಗಗೊಂಡರು ನೋಡಾ ಲಿಂಗಸ್ಥಲದ ಮರ್ಮವನರಿಯದ ಮಂದಮನುಜರು | ಲಿಂಗವೆಂದೊಡೆ ಸರ್ವಜ್ಞ ಸರ್ವಕರ್ತ ಸರ್ವಶಕ್ತಿಯುಕ್ತ ಪರವಸ್ತು ನೋಡಾ | ಅಂಗವೆಂದೊಡೆ ಕಿಂಚಿಜ್ಞ ಕಿಂಚಿತ್ಕರ್ತನಪ್ಪ ಜೀವಾತ್ಮ ನೋಡಾ | "ಜಲೇ ಜಲಮಿವ ನ್ಯಸ್ತಂ ವಹ್ನೌ ವಹ್ನಿರಿವಾರ್ಪಿತಃ | ಪರೇ ಬ್ರಹ್ಮಣಿ ಲೀನಾತ್ಮಾ ವಿಭಾಗೇನ ನ ದೃಶ್ಯತೇ ||' ನೀರಿನಲಿ ನೀರು, ಬೆಂಕಿಯಲಿ ಬೆಂಕಿ ಬೆರೆವಂತೆ, ಲಿಂಗದಲಿ ಅಂಗ ಬೆರೆವುದೇ ಲಿಂಗಾಂಗ ಸಾಮರಸ್ಯವೆಂದಿತ್ತು ನಿನ್ನ ವಚನ | ಆದುಕಾರಣ ಇಂತಪ್ಪ ಲಿಂಗಾಂಗಸಾಮರಸ್ಯ ಸಿದ್ಧಿಯನನುಗ್ರಹಿಸೆನ್ನನುದ್ಧರಿಸಯ್ಯಾ ಗುರುರೇಣುಕೇಶ್ವರಾ ||

ಶ್ರೀಕಾಶೀನಾಥಪಂಡಿತಸ್ತುತಿಪಂಚಕಂ

ನಮಿಪೆ ಗುರುಕುಲಕಾಶಾ | ಕಾಶೀನಾಥೇಶಾ |
ನಾಗನೂರಿನ ವರ | ಬೃಹನ್ಮಠೇಶಾ ||೧||

ಪರತರಪಾವನ | ವೀರಶೈವತತ್ತ್ವ |
ಶಾಸ್ತ್ರವ ಶೋಧಿಸಿ | ಬೋಧಿಸಿ ಮೆರೆದೆ ||೨||

" ದುರ್ವಾದಮೂರ್ತಿ | ಕರಣ "ದಿಂದಿಳೆಯೊಳು |
ವೀರಶೈವಮತದ | ಹಿರಿಮೆಯನರುಹಿದೆ ||೩||

ಗುರುವಿನ ಲೋಪವು | ವರವೀರಪೀಠಕೆ |
ಬರಲುರುಧೈರ್ಯದಿ | ಗುರುವನು ತೋರಿದೆ ||೪||

ಪಂಚಪೀಠಗಳ | ಹಂಚಿಕೆಯಿಂದಲಿ |
ಮಿಂಚಿನಪರಿಯಲಿ | ಸಂಚಯಗೊಳಿಸಿದೆ ||೫||

ವರಕಾಶೀಕ್ಷೇತ್ರದಿ | ಗುರುಗಳ್ಗೈವರನು |
ಗುರುದೇವ ತೋರಿಸಿ | ಗುರುವೆಂಬ ಬಿರುದಿಗೆ ||೬||

M. Somasekharaiah
Birur

ಕಾಗದದ ಬೆಲೆಯು ವಿಶೇಷವಾಗಿ ಏರಿರುವುದರಿಂದ ಕೆಲವು ಗ್ರಂಥಗಳ ಮತ್ತು ಫೋಟೋಗಳ ಬೆಲೆಯನ್ನು ಸ್ವಲ್ಪ ಹೆಚ್ಚಿಸಿದ್ದೇವೆ.

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಸ್ಮರಣೀಯವಾಗಿರುವದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯ ಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು. ವೀರಶೈವಮತದಲ್ಲಿ ಸದ್ಯಃ ದೊರೆಯುತ್ತಿರುವ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು. ಈ ಗ್ರಂಥವು ಸುಮಾರು **ಆರುಸಾವಿರ** ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು. ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭವಾಗಿರುವದರಿಂದ, ಇದಕ್ಕೆ ಈ ದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ. ಈ ಕೊರತೆಯನ್ನು ಪೂರಮಾಡುವದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಸುಸರಳವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿದರೆ [illegible] ಬಹುಶ್ರಮದಿಂದ [illegible] ವಿಷಯಾನುಕ್ರಮಣಿಕೆಯೂ ಶ್ಲೋಕಸೂಚನಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು [illegible] ಪುಟಗಳಿಂದ ಕೂಡಿದ್ದು ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂಪೂರ್ಣವಾಗಿ ಶ್ರೀಜಗದ್ಗುರು ರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಚಿತ್ರಗಳು ಜೋಡಿಸಲ್ಪಟ್ಟಿರುವದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. [illegible] ಇರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೨ ರೂಪಾಯಿ**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ **ಫೋಟೋ ಸೈಜು** ೨೦×೧೪ ಬೆಲೆ ಒಂದಕ್ಕೆ	೨—೬—೦
ಶ್ರೀರೇಣುಕಾಚಾರ್ಯರ ಲಿಂಗಜನನದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪×೧೦ ಬೆಲೆ	೦—೬—೦
[illegible] ಐವರ ಆಚಾರ್ಯರು ಒಂದರಲ್ಲಿಯೇ ಇರುವ **ಫೋಟೋ ಸೈಜು** ೧೪×೧೦ ಬೆಲೆ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ **ಫೋಟೋ** ಸೈಜು ೧೪×೧೦ ಬೆಲೆ ಒಂದಕ್ಕೆ	—೩—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ **ಫೋಟೋ**	—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ **ಫೋಟೋ**	೦—೧—
ಶ್ರೀಕಾಶೀಕ್ಷೇತ್ರದಲ್ಲಿರುವ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರುಗಳ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪×೧೦	೨—೪—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ **ಫೋಟೋ**	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ಒಂದಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ಒಂದಕ್ಕೆ	೦—೪—
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ **ಫೋಟೋ** ಒಂದಕ್ಕೆ	೦—೧—
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ **ಫೋಟೋ** ಒಂದಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ **ಗೋಪುರದ ಫೋಟೋ**	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ **ಫೋಟೋ**	೦—೧—೬

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೨ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೭ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿಸಿದ್ಧಾಂತತತ್ತ್ವದರ್ಪಣ (೮ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಸಂಶಯ[illegible] ಪ್ರಕಾಶ	೩ ಆಣೆ
ಪಂಚಾಚಾರಪ್ರದೀಪಿಕಾ	೩ ಆಣೆ
ವೀರಶೈವಾಚಾರ[illegible] (೨ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
[illegible] (೨ನೆಯ ಆವೃತ್ತಿ)	೪ ಆಣೆ
ಶ್ರೀ[illegible]ನಿರ್ಣಯ	೪ ಆಣೆ
ಶೈವ[illegible]ಸಂಗ್ರಹ (ಸಂಸ್ಕೃತ)	೪ ಆಣೆ
ವೀರಶೈವ[illegible]ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕ[illegible]ರಹಸ್ಯ	೬ ಆಣೆ
ಸನ್ಯಾಸಾಶ್ರಮವಿಮರ್ಶ ತತ್ತ್ವಸ್ಥಿರೀಕರಣ (೨ನೆಯ ಆವೃತ್ತಿ)	೬ ಆಣೆ
ವೀರಶೈವ ಅಂತ್ಯೇಷ್ಟಿ–ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೮ ಆಣೆ
ವೀರಶೈವಮಹಾತ್ಮರು	೮ ಆಣೆ
[illegible]ದ್ಧಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು ೨ನೆಯ ಆವೃತ್ತಿ)	೧। ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧॥ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧॥ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳ ಸಹಿತ)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಟಿಪ್ಪಣಿ)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*)	8 As
Speeches by Pandit Shri Kashinatha Shastriji (*English*)	12 As
लिंगधारणचंद्रिका (संस्कृत)	३ क
वीरशैवरत्न (मराठी)	१ रु.
महानारायणोपनिषद् (वीरशैवभाष्य-संस्कृत)	१ रु.
सिद्धांतशिखामणि (मूल)	८ आ
नंदिकेश्वरकारिका (संस्कृत)	२ आ

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯರ್ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚ ಸ್ವಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ೪ ಆಣೆ | ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೧೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೮ನೇ ಜನವರಿ ೧೯೪೫ [ಸಂಚಿಕೆ ೩೭

ವೈರಾಗ್ಯದರ್ಪಣ

ಲೇ :- ಮಲ್ಲಿಕಾರ್ಜುನಾರಾಧ್ಯ, ರಾಣೇಬೆನ್ನೂರು ಮಳೇಮಠ ಮುದೇನೂರು

(ಕಳೆದ ಸಂಚಿಕೆಯಿಂದ ಮುಂದುವರಿಯುವುದು)

ಹೊಟ್ಟೆಗೂ ಬಟ್ಟೆಗೂ ಸಹ ಕಷ್ಟಪಡುವ ಈ ಅವಸ್ಥೆಯಲ್ಲಿ ನಾನು ಮಾಡತಕ್ಕದ್ದೇನು, ಹಾಳಾದ ಊರಿಗಿಂತಲೂ, ವೃಷ್ಟಿ ಇಲ್ಲದ ದೇಶಕ್ಕಿಂತಲೂ, ಫಲಪರ್ಣಶಾಖೆಗಳಿಲ್ಲದ ವೃಕ್ಷಕ್ಕಿಂತಲೂ, ಕಡೆಯಾದ ಈ ನನ್ನ ದೇಹವು ಈಗ ಅಂತರ್ದಾಹದಿಂದಲೇ ಭಸ್ಮವಾಗುವದೆಂದು ತೋರುತ್ತಲಿದೆ, ಹೀಗಿರುವಲ್ಲಿ ನಾನು ಮಕ್ಕಳಿಗೆ ಪ್ರಸ್ತುತಗಳಂ ಮಾಡುವದು ಹೇಗೆ? ಮನೆಗೆ ನನ್ನ ಮೂಲಧನವಾಗಿರಿಸಲೆಂತಲೂ, ಇದುವರೆಗೆ ನಾನು ಕೆಟ್ಟನಡತೆಗಳಲ್ಲಿದ್ದುದರಿಂದ ಈ ಹೊಗ್ಗೆಗಾಗಿ ರೋಗಗಳಂ ಸಂಪಾದಿಸಿಕೊಂಡೆನಲ್ಲದೆ ಮತ್ತೊಂದಿಲ್ಲ ನನಗೆ ಯಾವ ನರಕ ಬರುವದೋ ಯಾವ ಯಾತನೆಗಳಂ ನಾನನುಭವಿಸಬೇಕೋ ಎಂತಲೂ, ಕೃಷ್ಣಪಕ್ಷದಲ್ಲಿ ಸಾಯಂಕಾಲದ ಸಂಧ್ಯಾರಾಗವಂ ನೋಡಿದ ತಮಸ್ಸಿನಂತೆ, ನರೆಗೂದಲುಗಳಂ ನೋಡಿದ ಮೃತ್ಯುವು, ಅತಿ ಸಂತೋಷದಿಂದೋಡಿಬರುವದಾದ್ದರಿಂದ, ಈಗಲಾದರೂ ಪರಮೇಶ್ವರನ ನಾಮಸಂಕೀರ್ತನೆಯಿಂ ಕೃತಾರ್ಥನಾಗಬೇಕೆಂತಲೂ, ದುರ್ಮಾರ್ಗದಿಂ ದೌರ್ಭಾಗ್ಯ ದೌರ್ಜನ್ಯ, ದಾರಿದ್ರ್ಯ, ದುರ್ವ್ಯಾಧಿಗಳಂ ಸಂಪಾದಿಸಿಕೊಂಡಿರುವ ನಾನು ಈಗ ಯಾರಿಗೇನು ಕೊಡಲಿ? ಒಂದು ದಾನವನ್ನಾದರೂ ಕೊಡುವುದಕ್ಕೆ ನನಗೆ ಗತಿಯಿಲ್ಲದೆ ಹೋಯಿತೆಂತಲೂ ವ್ಯರ್ಥವಾಗಿ ಈ ಮಾನವ ಜನ್ಮವಂ ಹಾಳುಮಾಡಿಕೊಂಡೆನಲ್ಲವೆ? ಮುಂದೆ ನನಗೆ ಯಾವ ಜನ್ಮ ಬರುವದೋ ಎಂತಲೂ ಬಗೆಬಗೆಯಾದ ಚಿಂತೆಗಳುಂಟಾಗುವಲ್ಲಿ ತಾನು ಮಾಡಿದ ಪಾಪಗಳಂ ನೆನೆಯುತ್ತಲೂ, ಕಣ್ಣೀರುಗಳಿಂದ ಉಟ್ಟ ಬಟ್ಟೆಯಂ ನೆನೆಸುತ್ತಲೂ, ಹಾ ಮಹಾದೇವ! ನನಗೆ ಇಂತಹ ಬುದ್ಧಿಯಂ ನೀನು ಯಾಕೆ ಕೊಟ್ಟೆ ಎಂದು ಕೂಗುತ್ತಲೂ, ಏನಾದರೂ ಆಗಲಿ, ಈ ಪದಾರ್ಥವನ್ನಾನು ಮಾಡಿಸಿಕೊಂಡು ತಿನ್ನುವೆನು ಈ ವಸ್ತ್ರವಂ ನಾನು ಕೊಂಡು ಹೊದಿಯುವೆನು ಜಾತಿ ಕೆಟ್ಟರೂ ಕೆಡಲಿ, ಇವಳ ಬಳಿಯಲ್ಲೊಂದುಕ್ಷಣ ಕುಳಿತಿದ್ದು ಬರುವೆನೆಂದು ಚಪಲಪಡುತ್ತಲೂ ಎದ್ದು ಕುಳಿತುಕೊಳ್ಳುವುದಕ್ಕೆ ಯೋಗ್ಯತೆಯಿಲ್ಲದ್ದರಿಂದ ತನಗೆ ಯಾರೂ ಉಪಚಾರವಂ ಮಾಡುವರಿಲ್ಲವೆಂದು ಜನರೆಲ್ಲರನ್ನೂ ಶಪಿಸುತ್ತಲೂ, ದಂತವಿಲ್ಲದ್ದರಿಂ ಕಟ್ಟಿಲ್ಲದಂತಿರುವ ನಾಲಿಗೆಯನ್ನಲ್ಲಾಡಿಸುತ್ತಲೂ ನಾನಾ ದುಃಖಗಳನ್ನನುಭವಿಸುವನು ಆಧಿವ್ಯಾಧಿ ಅಶಕ್ತಿ ಚಿಂತಾಪರಿತಾಪಕ್ಕೆ ವಿಲಾಸ ಗೃಹವಾದ ವೃದ್ಧಭಾವಕ್ಕಿಂತಲೂ ದುಃಖಪಡುವುದಕ್ಕೆ ಯೋಗ್ಯವಾದದ್ದು ಮತ್ತೊಂದೂ ಕಾಣುವುದಿಲ್ಲ, ಸಂಪಾದನೆಯ ಕಾಲದಲ್ಲಿ ಚಾಕರರಿಗಿಂತಲೂ ಅಧಿಕವಾಗಿ ಸೇವಿಸುತ್ತಿದ್ದ ಪತ್ನೀಪುತ್ರಾದಿಗಳೂ ಜರೆ ಎಂಬ ಅಕಾಲಮೃತ್ಯುವಿನಿಂದ ಕಾಲತಪ್ಪಿ ಬರುವಲ್ಲಿ ತೃಣಕ್ಕಿಂತಲೂ ನಿಕೃಷ್ಟವಾಗಿ ಎಣಿಸುವರು ಆದ್ದರಿಂದ ಇದಕ್ಕಿಂತಲೂ ಶತ್ರುವಾದದ್ದು ಮತ್ತೊಂದಿಲ್ಲವೆಂದು ತಿಳಿಯುತ್ತೇನೆ

ಎಲೈ ತಪೋನಿಧಿಯೆ! ಇಂತಹ ದುರವಸ್ಥೆಗಳಲ್ಲಿ ಭೋಗಿಸುವವನು ನಾನು ಇವು ಭೋಗಸಾಧನಗಳು, ಇವು ಭೋಗ್ಯವಸ್ತುಗಳು, ಇದಂ ನಾನು ಭೋಗಿಸಿದೆನು ಇದಂ ಮುಂದಕ್ಕೆ ಭೋಗಿಸುವೆನೆಂದು ಮನಸ್ಸಿನ ಕಲ್ಪನಾ ವಿಶೇಷಗಳಿಂದ ಮರುಭೂಮಿಯಲ್ಲಿ ಪ್ರವಾಹದಂತೆ ಈ ಸಂಸಾರದಲ್ಲಿ ಸುಖ ತೋರುವದು ಕನ್ನಡಿಯಲ್ಲಿ ಕಾಣುವ ಫಲವನ್ನಿಚ್ಛಿಸುವವರು ಬಾಲಕರಲ್ಲದೆ ದೊಡ್ಡವರಲ್ಲವಾದ್ದರಿಂದ ತಿಳಿದವರು ಇದರಲ್ಲಿ ಆಶಿಪಡರು ಈ ಸಂಸಾರ ಸುಖವಂ ಬಯಸುವ ದೇಹಾತ್ಮವಾದಿಯ ಆಸೆಯನ್ನು ಸೂತ್ರವನ್ನಿಲಿಯಂತೆ ಕಾಲಪುರುಷನು ಕತ್ತರಿಸುವನು ಸಮುದ್ರವಂ ಬಡಬಾಗ್ನಿಯಂತೆ, ದೃಶ್ಯವಾದ ಪ್ರಪಂಚದ ಸಾರವಂ ಹೀರುವ ಕಾಲನಿಗೆ ಯಾವುದು ಅಸಾಧ್ಯವಾಗಿರುವದು! ತ ಭಕರವೆಂತಲೂ ಮನೋಹರವೆಂತಲೂ ದೊಡ್ಡದೆಂತಲೂ ಯಾವುದನ್ನೂ ನೋಡದೆ ಅಗ್ನಿಯಂತೆ ಸರ್ವವನ್ನೂ ಭಕ್ಷಿಸುವ ಈ ಕಾಲನು ಪ್ರಪಂಚವೆಲ್ಲವನ್ನೂ ನುಂಗಿರುವದ್ದರಿಂದ ವಿಶ್ವಾತ್ಮಕನೆನಿಸಿಕೊಳ್ಳುವನೆಂದು ತೋರುತ್ತಲಿದೆ ಘಳಿಗೆ, ದಿವಸ, ವಯಸ್ಸು, ವರ್ಷ, ಯುಗಮನ್ವಂತರಾದಿಯಾದ ರೂಪಗಳಂ ಪ್ರಕಾಶಿಸುವ ಈ ಕಾಲನು ದಾಳಿಂಬದ ಬೀಜಗಳಂ ಶುಕದಂತೆ ಬ್ರಹ್ಮಸೃಷ್ಟಿವ ದ ಪ್ರಾಣಿಗಳನ್ನುಂಗುವಲ್ಲಿ "ಕುಂಬಾರನಿಗೆ ವರ್ಷ ದೊಣ್ಣೆಗೆ ನಿಮಿಷ" ವೆಂಬ ಲೋಕೋಕ್ತಿಯಂತೆ ಸರಿಯಾಗುವದು ಶುಭಾಶುಭಕರ್ಮಗಳೆಂಬ ದಂತಗಳಿಂದೆಸೆವ ಈ ಕಾಲನೆಂಬ ಮದ್ದಾನೆಯು ಬ್ರಹ್ಮನೇ ಮೂಲವಾಗಿ ಪುಟ್ಟಿರುವ ಬ್ರಹ್ಮಾಂಡವೆಂಬ ಕಮಲಗಳಲ್ಲಿ ಆಡುತ್ತಿರುವದು ಚಿತ್ರಗಾರನಂತೆ ರಾತ್ರಿಗಳೆಂಬ ಭ್ರಮರಗಳಂ ಕೂಡಿದ ದಿವಸಗಳೆಂಬ ಪುಷ್ಪಗುಚ್ಛಗಳಂ ರಚಿಸುವ ಈ ಕಾಲನು ಎಂದಿಗೂ ಮನೋರಾಜ್ಯವನ್ನಾಳುವ ದರಿದ್ರನಂತೆ ಭೋಗಪಡುತ್ತಿರುವನು ಕಾಲನೆಂಬ ಈ ಬಾಲಕನು ಸೂರ್ಯಚಂದ್ರಮಂಡಲಗಳೆಂಬ ಚೆಂಡುಗಳಿಂದಲೂ, ನಕ್ಷತ್ರಗಳೆಂಬ ಗೋಲಿಗಳಿಂದಲೂ, ಆಡುತ್ತಾ ಮಹೇಂದ್ರರನ್ನು ತೃಣವಾಗಿಯೂ, ಭೂಮಿಗಳನ್ನು ಜೀರ್ಣಪರ್ಣವಾಗಿಯೂ, ಮೇರುಪರ್ವತಗಳನ್ನು ರೇಣುಕಣವಾಗಿಯೂ, ಸಮುದ್ರವನ್ನು ಜಲಕಣವಾಗಿಯೂ, ಎಣಿಸುತ್ತಿರುವನು ಕಲ್ಪಾಂತರದಲ್ಲಿ ಇವನ ವೇಗದಿಂದ ಕುಲಗಿರಿಗಳು ಭುಜಪಕ್ಷಿಯ ಚೂರುಗಳಂತೆ ಹಾರಾಡುತ್ತಿರುವವು ಬ್ರಹ್ಮ ವಿಷ್ಣು ರುದ್ರಾದಿಗಳಿಂದಾಡುತ್ತಿರುವ ಈ ಕಾಲನ ಮಹಿಮೆಯಲ್ಲಿ ಸಮುದ್ರದಲ್ಲಿ ಅಲೆಗಳಂತೆ ಸೃಷ್ಟಿ ಸ್ಥಿತಿ ಸಂಹಾರ ಲೀಲೆಗಳು ಕಾಣುತ್ತಿರುವವು ಈ ಕಾಲವೆಂಬ ಅತ್ತೀಮರದಲ್ಲಿ ಪ್ರಾಣಿಗಳೆಂಬ ಸೊಳ್ಳೆಗಳಿಂದ ತುಂಬಿರುವ ಬ್ರಹ್ಮಾಂಡಗಳೆಂಬ ಕಾಯಿಗಳು ತೂಗಾಡುತ್ತಿರುವವು ಕ್ರಿಯಾಶಕ್ತಿಸಹಾಯಕನಾದ ಈ ಕಾಲಪುರುಷನು ಸೂರ್ಯಚಂದ್ರರೆಂಬ ದೀಪಗಳಂ ಹಚ್ಚಿಕೊಂಡು ಗ್ರಾಸಯೋಗ್ಯವಾದ ಪದಾರ್ಥವು ಎಲ್ಲಿ ಏನು ಇದೆಯೋ ಎಂದು ಕ್ರಮವಾಗಿ ಭಕ್ಷಿಸುತ್ತಿದ್ದಾಗ್ಯೂ ನಿರಹಂಕಾರನಾದ್ದರಿಂದ ಯಾವ ದೋಷದ ಸಂಬಂಧವೂ ಇಲ್ಲದೆ ನಿತ್ಯಾನಂದನಾಗಿರುವನು ಉನ್ಮತ್ತನಾದ ಬಾಲಕನಂತೆ ತಾನು ಭಕ್ಷ್ಯಗಳಂತೆ ಮಾಡಿಕೊಂಡ ಸರ್ವ ಪ್ರಾಣಿಗಳನ್ನೂ ಶುಭಾಶುಭಕರ್ಮಗಳೆಂಬ ಸೂತ್ರಗಳಿಂದ ಬಂಧಿಸಿ ಆಭರಣವಾಗಿ ವಹಿಸಿಕೊಂಡು ಯಥೇಚ್ಛವಾಗಿ ಭಕ್ಷಿಸುತ್ತಾ ಉದಯಾಸ್ತಗಳಿಲ್ಲದವನಾದಾಗ್ಯೂ ಉದಯಾಸ್ತಸ್ಥಿರೂಪದಿಂ ಗೋಚರವಾಗುತ್ತಾ ಕ್ರಿಯಾಶಕ್ತಿಯೊಡನೆ ಕುಣಿಯುತ್ತಿರುವನು (ಸಶೇಷ)

॥ ಶ್ರೀಜಗದ್ಗುರುಪಂಚಾಚಾರ್ಯಾಃ ಪ್ರಸೀದಂತು ॥

ಶ್ರೀಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಪುಣ್ಯದಿನ

ಬೆಳಗಾಂವ

ಬೆಳಗಾಂವ ನಗರದಲ್ಲಿ ತಾ|| ೨ ೧ ೧೯೪೫ ನೆಯ ಮಂಗಳವಾರ ದಿವಸ ಶ್ರೀ ಸಿದ್ಧಲಿಂಗಾಶ್ರಮದಲ್ಲಿ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಪುಣ್ಯದಿನಾಚರಣೆಯು ಒಳ್ಳೇ ವೈಭವದಿಂದ ನೆರವೇರಿತು ಆ ದಿವಸ ಪ್ರಾತಃಕಾಲ ಲಿಂಗೋದ್ಭವಮೂರ್ತಿಗೆ ರುದ್ರಾಭಿಷೇಕವಾಗಿ ಗಣಾರಾಧನೆಯಾಯಿತು ಸಾಯಂಕಾಲ ೪ ಘಂಟೆಗೆ ಆಶ್ರಮದಲ್ಲಿ ಸಭೆಸೇರಿತು ಭಕ್ತಮಂಡಳಿಯು ವಿಶೇಷವಾಗಿ ಕೂಡಿತ್ತು ಶ್ರೀಜಗದ್ಗುರು ಸಿದ್ಧಲಿಂಗ ಶಿವಾಚಾರ್ಯರ ಭಾವಪಟಕ್ಕೆ ಪೂಜೆಯಾದಮೇಲೆ ವೇ|| ರುದ್ರಯ್ಯನವರ ಸೂಚನೆಯ ಮೇರೆಗೆ ಸುತ್ತಗಟ್ಟಿ ಶ್ರೀಗಳವರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದರು ಆಮೇಲೆ ಶಿವರುದ್ರಯ್ಯನವರು, ಗುರುವಿನ ಮಹತ್ವದ ಬಗ್ಗೆ ಭಾಷಣ ಮಾಡಿದರು ಅನಂತರ ಸುತ್ತಗಟ್ಟಿ ಶ್ರೀಗಳು ಮಹಾಸನ್ನಿಧಿಯವರ ಚರಿತ್ರವನ್ನು ಒಳ್ಳೇ ಮನೋಹರವಾಗಿ ಹೇಳಿದರು ಆಮೇಲೆ ಮಂಗಲವಾಗಿ ಸಭೆಯು ಸಮಾಪ್ತಿಗೊಂಡಿತು

ವ್ಯವಸ್ಥಾಪಕ ಶ್ರೀ ಸಿದ್ಧಲಿಂಗಾಶ್ರಮ

ಹಾರನಹಳ್ಳಿ

ಶಿವಮೊಗ್ಗಾ ಜಿ|| ಹಾರನಹಳ್ಳಿಯಲ್ಲಿರುವ ವೇ|| ಗುಬ್ಬೀ ಶಿವಕಥಾಪಂಡಿತ ಶಿವರುದ್ರಶಾಸ್ತ್ರಿಗಳವರು ತಮ್ಮ ವಾಸಗೃಹದಲ್ಲಿ ಇದೇ ಪುಷ್ಯ ಬಹುಳ ೪ ಮಂಗಳವಾರ ಶ್ರೀಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ಭಾವಚಿತ್ರವನ್ನು ಭವ್ಯಮಂಟಪದಲ್ಲಿರಿಸಿ ಅಷ್ಟವಿಧಾರ್ಚನೆಗಳಿಂದ ಪೂಜಿಸಿ ವಂದಿಸಿ ನುತಿಸಿ ಮಹಾಗುರುಪುಂಗವರ ಅಷ್ಟೋತ್ತರ ಶತನಾಮಾವಳಿಯನ್ನು ಪಠಿಸಿ ಪ್ರಸಾದ ವಿನಿಯೋಗವಾದ ಬಳಿಕ ಮಧ್ಯಾಹ್ನ ಗಣಸಂತರ್ಪಣೆಯನ್ನು ನಡೆಯಿಸಿ ಸಾಯಂಕಾಲ ಭಗವತ್ಪಾದರವರ ಜೀವನ ಚರಿತಾಮೃತವನ್ನು ಶ್ರವಣೇಚ್ಛುಗಳಿಗೆ ಪಾನಮಾಡಿಸಿ ಸರ್ವರನ್ನೂ ಧನ್ಯರನ್ನಾಗಿ ಮಾಡಿದರು

ಓರ್ವ ಗುರುಭಕ್ತ

ಪಂಚಾಚಾರ್ಯಪ್ರಭಾ.

೧೯೩೪ನೆಯ ಜನವರಿ ತಾ|| ೮ನೇ ಸೋಮವಾರ

ಪಲ್ಲವವಂಶದ ಪ್ರಾಚೀನರಾಜರು ಲಿಂಗಧಾರಿಗಳು

ಕಳೆದವಾರದ ನಮ್ಮ ಪತ್ರಿಕೆಯಲ್ಲಿ ಕ್ರಿ ಶ ೭ನೆಯ ಶತಮಾನದಲ್ಲಿದ್ದ ಪಲ್ಲವವಂಶದ **ಅತ್ಯಂತಕಾಮ** ಮಹಾರಾಜನು ಲಿಂಗಧಾರಿಯಾಗಿದ್ದನೆಂಬ ವಿಷಯವು ಮಾಮಲ್ಲಪುರದಲ್ಲಿ ದೊರೆತಿರುವ ಶಿಲಾಶಾಸನದಿಂದ ಪ್ರತಿಪಾದಿಸಲ್ಪಟ್ಟಿರುವ ವಿಷಯವನ್ನು ವಾಚಕಮಹಾಶಯರು ಓದಿನೋಡಿರಬಹುದು ಈಗ ಅದೇ ವಂಶದ **ಗುಣಭರ** ಮತ್ತು **ರಾಜಸಿಂಹ** ಈ ಉಭಯ ಮಹಾರಾಜರು ಲಿಂಗಧಾರಿಗಳಾಗಿದ್ದರೆಂಬ ವಿಷಯವನ್ನು ವಿಮರ್ಶಿಸುವದಾಗುವದು

ಮದ್ರಾಸ ಇಲಾಖೆಯಲ್ಲಿ ಸುಪ್ರಸಿದ್ಧ ಪಟ್ಟಣವೆನಿಸಿರುವ **ತ್ರಿಚನಾಪಳ್ಳಿಯ** ಸಮೀಪದಲ್ಲಿ ಕಾವೇರಿ ನದಿಯ ದಂಡೆಯ ಮೇಲೆ ಒಂದು ಬೆಟ್ಟವಿದ್ದು, ಆ ಬೆಟ್ಟದ ಮೇಲೆ **ಗುಣಭರಮಹಾರಾಜನು** ಒಂದು ಶಿವಲಿಂಗಮೂರ್ತಿಯನ್ನು ಸ್ಥಾಪಿಸಿರುವ ವಿಷಯವು ಆ ಬೆಟ್ಟದಲ್ಲಿರುವ ಗವಿಯ ಎರಡು ಕಂಬಗಳಮೇಲೆ ಕೆತ್ತಲ್ಪಟ್ಟಿರುವ ಶಾಸನಗಳಿಂದ ತಿಳಿದುಬರುತ್ತದೆ ಪ್ರತಿಯೊಂದ ಕಂಬದಲ್ಲಿಯೂ ನಾಲ್ಕು ನಾಲ್ಕು ಶ್ಲೋಕಗಳು ಕೆತ್ತಲ್ಪಟ್ಟಿರುವವು ಡಾ| ಹುಲ್ಷ್‌ರವರು ಮುದ್ರಿಸಿ ಪ್ರಕಟಿಸಿರುವ **ಸೌತ್ ಇಂಡಿಯನ ಇನ್‌ಸ್ಕ್ರಿಪ್ಷನ್ಸ್** ವಾಲ್ಯೂಂ ೧ ರಲ್ಲಿ ಇವು ೩೩ ಮತ್ತು ೩೪ನೆಯ ನಂಬರಿನ ಶಾಸನಗಳಾಗಿರುವವು ಈ ಎರಡೂ ಶಾಸನಗಳಲ್ಲಿ ಗುಣಭರರಾಜನು ಲಿಂಗಧಾರಿಯಾಗಿದ್ದನೆಂಬ ವಿಷಯವು ಬಹು ಸ್ಫುಟವಾಗಿ ಪ್ರತಿಪಾದಿಸಲ್ಪಟ್ಟಿದ್ದು ೩೩ನೆಯ ನಂಬರು ಶಾಸನದಲ್ಲಿರುವ ಶ್ಲೋಕವು ಈ ಕೆಳಗೆ ಉದಾಹರಿಸಲ್ಪಟ್ಟಿರುವದು

> ಗುಣಭರನಾಮನಿ ರಾಜನ್ಯನೇನ ಲಿಂಗೇನ ಲಿಂಗಿನಿ ಜ್ಞಾನಂ |
> ಪ್ರಥತಾಂ ಚಿರಾಯ ಲೋಕೇ ವಿಪಕ್ಷವೃತ್ತೇಃ ಪರಾವೃತ್ತಂ ||

ಈ ಶ್ಲೋಕದಲ್ಲಿ "ಸವಿತರ್ಕೋ ವಹ್ನಿಮಾನ್ ಧೂಮಾತ್" ಎಂಬ ತರ್ಕಶಾಸ್ತ್ರಪ್ರಕ್ರಿಯಾನುಸಾರವಾಗಿ ಧೂಮರೂಪವಾದ ಲಿಂಗದಿಂದ ವಹ್ನಿರೂಪವಾದ ಲಿಂಗಿಯಲ್ಲಿ ಉಂಟಾಗುವ ಜ್ಞಾನವು ವಿಪಕ್ಷವೃತ್ತಿಯಿಂದ ಅಂದರೆ ಜಲ ತೀಕರಸ್ವಾನವೃತ್ತಿಯಿಂದ ಪರಾವೃತ್ತವು ಇರುವಂತೆ ಲಿಂಗಧಾರಿಯಾಗಿರುವ ಗುಣಭರರಾಜನಲ್ಲಿ ಲಿಂಗಸಂಬಂಧದಿಂದ ಉಂಟಾಗಿರುವ ಶಿವಜ್ಞಾನವು ಶಿವೇತರ ದೇವತಾಸಂಬಂಧದಿಂದ ದೂರವಾಗಿ ಲೋಕದಲ್ಲಿ ಬಹುಕಾಲ ಪ್ರಸಿದ್ಧವಾಗಲಿ, ಎಂಬುದು ಈ ಶ್ಲೋಕದ ಅಭಿಪ್ರಾಯವಾಗಿರುವದು ಈ ಶ್ಲೋಕದಲ್ಲಿ ಗುಣಭರರಾಜನಲ್ಲಿದ್ದ ಶಿವಜ್ಞಾನವು ಶ್ಲೇಷದಿಂದ ಬಹು ಹೃದಯಂಗಮವಾಗಿ ವರ್ಣಿಸಲ್ಪಟ್ಟಿರುವದು

೩೪ನೆಯ ನಂಬರಿನ ಶಾಸನದಲ್ಲಿ ಈ ಕೆಳಗೆ ಉದಾಹರಿಸಿರುವ ಶ್ಲೋಕವು ಕೆತ್ತಲ್ಪಟ್ಟಿರುವುದು

> ಶಿಲಾಮಯಿತಾಮಕೃತಮುದಾ ಪುರುಷೋತ್ತಮೇನ
> ಶೈಲೀಂ ಹರಸ್ಯ ತನುಮಪ್ರತಿಮಾಮನೇನ |
> ಕೃತ್ವಾ ಶಿವಂ ಶಿರಸಿ ಧಾರಯತಾತ್ಮಸಂಸ್ಥ
> ಮುಚ್ಚೈಃ ಶಿರಸ್ತ್ವಮಚಲಸ್ಯ ಕೃತಂ ಕೃತಾರ್ಥಂ ||

ಶಿವಲಿಂಗವನ್ನು ಶಿರಸ್ಸಿನಲ್ಲಿ ಧರಿಸಿಕೊಂಡಿರುವ ಪುರುಷಶ್ರೇಷ್ಠನಾದ ಗುಣಭರರಾಜನು ಪ್ರತಿಮಾಕಾರವಿಲ್ಲದ ಶಿಲಾಮಯ ಶಿವಲಿಂಗಮೂರ್ತಿಯನ್ನು ಪರ್ವತಾಗ್ರದಲ್ಲಿ ಸಂತೋಷದಿಂದ ಸ್ಥಾಪಿಸಿ, ಆ ಪರ್ವತದ ಉನ್ನತಶಿಖರವನ್ನು ಕೃತಾರ್ಥವನ್ನಾಗಿ ಮಾಡಿದನು ಎಂಬುದು ಈ ಶ್ಲೋಕದ ಅಭಿಪ್ರಾಯವಾಗಿರುವದು ಈ ಶ್ಲೋಕದಲ್ಲಿ ಗುಣಭರರಾಜನಿಗೆ **"ಶಿವಂ ಶಿರಸಿ ಧಾರಯತಾ"** ಎಂದು ಉಲ್ಲೇಖಿಸಿರುವುದರಿಂದಲೂ, ಮೇಲಿನ ಶ್ಲೋಕದಲ್ಲಿ ಈ ರಾಜನಿಗೆ **"ಲಿಂಗಿನಿ"** ಎಂಬ ವಿಶೇಷಣವು ಕೊಡಲ್ಪಟ್ಟಿರುವದರಿಂದಲೂ, ಈ ರಾಜನು ಲಿಂಗಧಾರಿಯಾದ **ಶಿವಭಕ್ತನಾಗಿದ್ದನೆಂದು** ಸ್ಪಷ್ಟವಾಗುತ್ತದೆ "ಲಿಂಗಿನ್" ಎಂಬ ಶಬ್ದವು ಲಿಂಗಧಾರಿಗಳಾದ ವೀರಶೈವರಲ್ಲಿ ಅನ್ವಯಿಸುವದಲ್ಲದೆ, ಇನ್ನಾರಲ್ಲಿಯೂ ಅನ್ವಯಿಸುವದಿಲ್ಲವೆಂಬುದು ಲೋಕಪ್ರಸಿದ್ಧವಾದ ವಿಷಯವಾಗಿದೆ ಶಿವಾಗಮಗಳಲ್ಲಿಯೂ ಮಹಾಭಾರತಾದಿಗಳಲ್ಲಿಯೂ, ವ್ಯಾಸೋಕ್ತಪುರಾಣಗಳಲ್ಲಿಯೂ, ವೀರಶೈವಧರ್ಮಗ್ರಂಥಗಳಲ್ಲಿಯೂ, ಈ 'ಲಿಂಗಿನ್' ಶಬ್ದವು ಲಿಂಗಧಾರಿಗಳಾದ ವೀರಶೈವರ ವಿಷಯದಲ್ಲಿಯೇ ಪ್ರಯೋಗಿಸಲ್ಪಟ್ಟಿರುವದು ಇದರಿಂದ **ಗುಣಭರ** ಮಹಾರಾಜನು ಲಿಂಗಧಾರಿಯಾಗಿದ್ದನೆಂಬುದರಲ್ಲಿ ಯಾವ ಸಂಶಯವೂ ಇರುವದಿಲ್ಲ

ಇನ್ನು ಇದೇ ಪಲ್ಲವ ವಂಶದಲ್ಲಿ ಅತ್ಯಂತ ಪ್ರಸಿದ್ಧನಾಗಿರುವ **ರಾಜಸಿಂಹ**ಮಹಾರಾಜನೂ ಸಹ ಲಿಂಗಧಾರಿಯಾಗಿದ್ದನೆಂಬ ವಿಷಯವು **ಕಾಂಚೀ** ಕ್ಷೇತ್ರದಲ್ಲಿರುವ **ರಾಜಸಿಂಹೇಶ್ವರ** ದೇವಸ್ಥಾನದ ಗೋಡೆಯಮೇಲೆ ಕೆತ್ತಲ್ಪಟ್ಟಿರುವ ಶಾಸನದಿಂದ ತಿಳಿದುಬರುತ್ತದೆ ಇದು ಮೇಲ್ಕಂಡ ಶಾಸನ ಪುಸ್ತಕದಲ್ಲಿ ೨೪ನೆಯ ನಂಬರಿನ ಶಾಸನವಾಗಿರುವದು ಈ ಶಾಸನದಲ್ಲಿ ೧೨ ಶ್ಲೋಕಗಳಿದ್ದು, ಕೊನೆಯ ಶ್ಲೋಕವು ಈ ಕೆಳಗೆ ಉದಾಹರಿಸಲ್ಪಟ್ಟಿರುವದು

> ರಾಜಸಿಂಹೋ ರಣಜಯಃ ಶ್ರೀಭರಶ್ಚಿತ್ರಕಾರ್ಮುಕಃ |
> ಏಕವೀರಶ್ಚಿರಂ ಪಾತು ಶಿವಚೂಡಾಮಣಿರ್ಮಹೀಂ ೧೨||

ಯುದ್ಧದಲ್ಲಿ ಜಯಶಾಲಿಯಾಗಿರುವವನೂ, ರಾಜ್ಯಲಕ್ಷ್ಮಿಯಿಂದ ಕೂಡಿರುವವನೂ, ವಿಚಿತ್ರವಾದ ಧನುಸ್ಸುಳ್ಳವನೂ, ಲೋಕೈಕವೀರನೂ, ಶಿವನೇ ಚೂಡಾಮಣಿಯಾಗಿ ಉಳ್ಳವನೂ ಅಂದರೆ ಶಿವನನ್ನು ಮಸ್ತಕದಲ್ಲಿ ಧರಿಸಿರುವವನೂ ಆದ ರಾಜಸಿಂಹನು ಭೂಮಿಯನ್ನು ಬಹುಕಾಲ ಆಳಲಿ, ಎಂಬುದು ಈ ಶ್ಲೋಕದ ಅಭಿಪ್ರಾಯವಾಗಿರುವದು ಈ ಶ್ಲೋಕದಲ್ಲಿ ರಾಜಸಿಂಹಮಹಾರಾಜನಿಗೆ **"ಶಿವಚೂಡಾಮಣಿಃ"** ಎಂಬ ವಿಶೇಷಣವು ಕೊಡಲ್ಪಟ್ಟಿರುವದರಿಂದ, ಇವನು ಮಸ್ತಕದಲ್ಲಿ ಶಿವಲಿಂಗವನ್ನು ಧರಿಸಿಕೊಂಡಿದ್ದನೆಂದು ಸ್ಪಷ್ಟವಾಗುವದು

ಮೇಲ್ಕಂಡ ರಾಜಸಿಂಹೇಶ್ವರ ದೇವಸ್ಥಾನದ ಪ್ರಾಕಾರದ ಗೋಡೆಯಮೇಲೆ, ಈ ರಾಜಸಿಂಹರಾಜನಿಗೆ ಶ್ರೀಪೂರ್ವಕವಾಗಿ ೨೩೪ ವಿಶೇಷಣಗಳು ಬರೆಯಲ್ಪಟ್ಟಿರುವವು ಅವುಗಳಲ್ಲಿ **"ಶ್ರೀ ವೃಷಭಲಾಂಛನಃ"** **"ಶ್ರೀ ಆಗಮಪ್ರಮಾಣಃ"**, ಮತ್ತು **"ಶ್ರೀ ಆಗಮಾನುಸಾರೀ"** ಎಂಬ ಮೂರು ವಿಶೇಷಣಗಳು ವಿರಾಜಿಸುತ್ತಿರುವವು ಈ ಮೂರು ವಿಶೇಷಣಗಳನ್ನು ವಿಮರ್ಶಿಸಿನೋಡಿದರೆ, ವೀರಶೈವ ಸಿದ್ಧಾಂತದಂತೆ ಈ ಮಹಾರಾಜನು ಆಗಮಗಳನ್ನು ಪ್ರಮಾಣವನ್ನಾಗಿಟ್ಟುಕೊಂಡಿದ್ದನೆಂದೂ, ಆಗಮಗಳಿಗೆ ಅನುಸಾರವಾಗಿ ವರ್ತಿಸುತ್ತಿದ್ದನೆಂದೂ, ನಂದಿಯನ್ನೇ ಮುಖ್ಯವಾಗಿ ರಾಜಚಿಹ್ನವಾಗಿ ಇಟ್ಟುಕೊಂಡಿದ್ದನೆಂದೂ ಸ್ಪಷ್ಟವಾಗಿ ತಿಳಿದುಬರುತ್ತದೆ ಇದರಿಂದ ಈ ಮಹಾರಾಜನು ಲಿಂಗಧಾರಿಯಾದ ಮಹಾಶಿವಭಕ್ತನಾಗಿದ್ದನೆಂಬುದರಲ್ಲಿ ಯಾವ ಸಂಶಯವೂ ಇರುವದಿಲ್ಲ.

ಈ **ರಾಜಸಿಂಹ**ಮಹಾರಾಜನ ಬಗ್ಗೆ ಮದ್ರಾಸಿಗೆ ೪೩ ಮೈಲು ದೂರದಲ್ಲಿರುವ ಚಂಗಲಪೇಟೆ ಡಿಸ್ಟ್ರಿಕ್ಟ **ವಾಯಲೂರು** ಗ್ರಾಮದಲ್ಲಿ ಮತ್ತೊಂದು ಶಾಸನವು ದೊರೆತಿರುವದು ಈ ಶಾಸನವು ೧೯೦೮ ನೆಯ ಇಸವಿಯಲ್ಲಿ ಮದರಾಸು ಗೌರ್ನಮೆಂಟಿನವರಿಂದ ಶೋಧಿಸಲ್ಪಟ್ಟು ಪ್ರಕಟಿಸಲ್ಪಟ್ಟಿರುವದು ಈ ಶಾಸನವು ವಾಯಲೂರು ಗ್ರಾಮದಲ್ಲಿರುವ ವ್ಯಾಘ್ರಪುರೀಶ್ವರ ದೇವಸ್ಥಾನದ ಎರಡು ಕಂಬಗಳಮೇಲೆ ಕೆತ್ತಲ್ಪಟ್ಟಿರುವದು. ಈ ಶಾಸನದ ಪ್ರಾರಂಭದಲ್ಲಿ ರಾಜಸಿಂಹ ಮಹಾರಾಜನ ವಂಶಾವಳಿಯು ವರ್ಣಿಸಲ್ಪಟ್ಟಿದ್ದು, ಅದರಲ್ಲಿ ೫೪ ಜನರ ಹೆಸರುಗಳು ಉಲ್ಲೇಖಿಸಲ್ಪಟ್ಟಿರುವವು ಬಳಿಕ ರಾಜಸಿಂಹನ ವರ್ಣನಾತ್ಮಕವಾಗಿ ಈ ಕೆಳಗೆ ಉದಾಹರಿಸಲ್ಪಟ್ಟಿರುವ ಎರಡು ಶ್ಲೋಕಗಳು ಕೆತ್ತಲ್ಪಟ್ಟಿರುವವು

> ಶ್ರೀಪಲ್ಲವಾನ್ವಯಕುಲಾಚಲರಾಜಸಿಂಹೋ
> ಯಃ ಕ್ಷತ್ರಸಿಂಹ ಇತಿ ವಿಶ್ರುತಪುಣ್ಯಕೀರ್ತಿಃ |
> ಶೈವಸಿದ್ಧಾಂತಶೇಖರಶಿಖಾಮಣಿದೀಪ್ತಮೌಲಿ
> ರ್ಯುದ್ಧಾರ್ಜುನೋ ನ ಖಲು ಲೋಕನರೇಂದ್ರಸಿಂಹಃ ||
>
> ಶಂಭೋಃ ಪಾದಾರವಿಂದದ್ವಯಪರಿಚರಣೇ
> ನಿತ್ಯಮತ್ಯಂತಕಾಮಃ | ಶ್ರೀಮೇಘೋ ವಿಪ್ರಸಾತ್ಕೃತ
> ವಿಭವಕರೋ ವೈರಿನಿರ್ಭಿನ್ನವಕ್ಷಾಃ ರತ್ನೋಘಚಂದ್ರಃ | ರಾಜ್ಯಾಂತಾ
> ರಾವಗಾಹವಿದಿತಮಹಾಮಲ್ಲಶಬ್ದಃ ಪ್ರಕಾಶಾಂ | ರಕ್ಷಾದೀಕ್ಷಾ
> ಧುರಾಂ ವಹತು ರಣಜಯಃ ಶ್ರೀನಿಧಿರ್ದ್ವೀಪಲಕ್ಷ್ಮಿಂ ||

ಈ ಎರಡು ಶ್ಲೋಕಗಳಲ್ಲಿ ರಾಜಸಿಂಹನ ಶೌರ್ಯಧೈರ್ಯಾದಿ ಗುಣಗಳು ವರ್ಣಿಸಲ್ಪಟ್ಟಿರುವವು. ಮೇಲಿನ ಶ್ಲೋಕದಲ್ಲಿ ಈ ಮಹಾರಾಜನಿಗೆ **"ಮಹೇಶ್ವರಶಿಖಾಮಣಿದೀಪ್ತಮೌಲಿಃ"** ಎಂಬ ವಿಶೇಷಣವು ಕೊಡಲ್ಪಟ್ಟಿರುವದು ಇದರಿಂದ ಈ ಮಹಾರಾಜನು ತನ್ನ ಮಸ್ತಕದಲ್ಲಿ ಯಾವಾಗಲೂ ಶಿವನನ್ನು ಧರಿಸಿಕೊಂಡಿರುತ್ತಿದ್ದನೆಂಬುದು ಸ್ಪಷ್ಟವಾಗುವದು ಕಾಂಚಿಯಲ್ಲಿರುವ ಶಾಸನದಲ್ಲಿ ಈ ಮಹಾರಾಜನಿಗೆ **"ಶಿವಚೂಡಾಮಣಿಃ"** ಎಂಬ ವಿಶೇಷಣವು ಕೊಡಲ್ಪಟ್ಟಿರುವದರಿಂದಲೂ, ವಾಯಲೂರು ಶಾಸನದಲ್ಲಿ **"ಮಹೇಶ್ವರಶಿಖಾಮಣಿದೀಪ್ತಮೌಲಿಃ"** ಎಂಬ ವಿಶೇಷಣವು ಕೊಡಲ್ಪಟ್ಟಿರುವದರಿಂದಲೂ, ಅತ್ಯಂತಕಾಮ ಮತ್ತು ಗುಣಭರ ಈ ಮಹಾರಾಜರಂತೆ ರಾಜಸಿಂಹನೂ ಸಹ ಮಸ್ತಕದಲ್ಲಿ ಶಿವಲಿಂಗವನ್ನು ಧರಿಸಿಕೊಂಡಿದ್ದನೆಂದು ಸ್ಪಷ್ಟವಾಗಿ ತೋರಿಬರುತ್ತದೆ

ಇಂಡಿಯಾ ದೇಶದ ಶಾಸನ ಇಲಾಖೆಯ ಮುಖ್ಯಾಧಿಕಾರಿಗಳಾಗಿದ್ದ **ಡಾ|| ಟಿ|| ಎಚ್. ಕೃಷ್ಣಶಾಸ್ತ್ರಿಗಳವರು** ವಾಯಲೂರಿನಲ್ಲಿ ದೊರೆತಿರುವ ರಾಜಸಿಂಹ ಮಹಾರಾಜನ ಶಾಸನವನ್ನು **"ಎಪಿಗ್ರಾಫಿಯಾ ಇಂಡಿಕಾ"** ವಾಲ್ಯೂಂ ೧೮ ರಲ್ಲಿ ಪೂರ್ಣವಾಗಿ ವಿಮರ್ಶಿಸಿ, ಪಲ್ಲವವಂಶದ ಅತ್ಯಂತಕಾಮ, ರಾಜಸಿಂಹ, ಗುಣಭರ ಎಂಬ ಹೆಸರಿನ ಮಹಾರಾಜರು ತಮ್ಮ ಮಸ್ತಕದಲ್ಲಿ ಶಿವಲಿಂಗವನ್ನು ಧರಿಸಿಕೊಂಡಿದ್ದರಿಂದೂ, ವೀರಶೈವ ಮತದಲ್ಲಿ ಕಂಡುಬರುವ ಲಿಂಗಧಾರಣವು ಬಹು ಪುರಾತನವಾದುದೆಂದೂ ತಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸಿದ್ದಾರೆ **ಡಾ|| ಇ ಹುಲ್ಷ್‌ರವರು** ಈ ರಾಜರ ಕಾಲವನ್ನು ಈ ಕೆಳಗೆ ಉದಾಹರಿಸಿರುವಂತೆ ನಿರ್ಣಯಿಸಿದ್ದಾರೆ

The date of the Foundation of the Rajasimheswara and Mahendra varmeswara Temples would fall some time before 557 A D, the date of the end of the first Kirtivarma's reign, say about 550 A.D, This would also be the time of Atyantakama s inscriptions at Mamalla puram

ರಾಜಸಿಂಹೇಶ್ವರ ಮತ್ತು ಮಹೇಂದ್ರವರ್ಮೇಶ್ವರ ದೇವಸ್ಥಾನಗಳ ಸ್ಥಾಪನಕಾಲವು ಕ್ರಿ ಶ ೫೫೭ಕ್ಕೆ ಹಿಂದೆ ಅಂದರೆ ಮೊದಲನೆಯ ಕೀರ್ತಿವರ್ಮಮಹಾರಾಜನ ಆಳ್ವಿಕೆಯ ಕೊನೆ ಅಂದರೆ ಸುಮಾರು ಕ್ರಿ ಶ ೫೫೦ ಆಗುವುದು ಮಾಮಲ್ಲಪುರದ ಅತ್ಯಂತಕಾಮ ಮಹಾರಾಜನ ಶಾಸನದ ಕಾಲವೂ ಇದೇ ಆಗಿರುವದು ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ

ಈ ರೀತಿ ಲಿಂಗಧಾರಣದ ಪ್ರಾಚೀನತ್ವವನ್ನು ಸ್ಪಷ್ಟವಾಗಿ ಪ್ರತಿಪಾದಿಸುತ್ತಿರುವ ಶಿಲಾಶಾಸನಗಳು ಈ ವರೆಗೆ ಎಲ್ಲಿಯೂ ದೊರತಿದ್ದಿಲ್ಲ ಈಗ ದೊರೆತಿರುವುದು ವೀರಶೈವರ ಸುದೈವವೆಂದೇ ಹೇಳಬೇಕಾಗಿದೆ ಲಿಂಗಧಾರಣವು ಇತ್ತೀಚಿನದೆಂದು ಬಡಬಡಿಸುತ್ತಿರುವ ಮಹಾಶಯರು ಈ ಶಾಸನಗಳನ್ನು ಕೂಲಂಕಷವಾಗಿ ವಿಮರ್ಶಿಸಿ ಬಡಬಡಿಕೆಯಿಂದ ದೂರರಾಗಿ, ವೀರಶೈವಮತಕ್ಕೆ ಹೆಗ್ಗುರುತಾಗಿರುವ ಲಿಂಗಧಾರಣವು ಅನಾದಿಸಂಸಿದ್ಧವಾಗುದೆಂದು ನಂಬಿ ಧನ್ಯಾತ್ಮರಾಗಬೇಕೆಂದಾಶಿಸುತ್ತೇವೆ

ಯುದ್ಧವಾರ್ತೆ.

ಜರ್ಮನರ ಪ್ರತಿಭಟನೆ ಇನ್ನೂ ತೀವ್ರವಾಗಿದೆ

ಆರ್ಡೆನೆಸ್ಸ್ ಕ್ಷೇತ್ರದಲ್ಲಿ ಜರ್ಮನ್ ಸೇನಾವ್ಯೂಹದ ಉತ್ತರ ಪಾರ್ಶ್ವದ ಮೇಲೆ ಅಮೇರಿಕನ್ ಮೊದಲನೆಯ ಸೈನ್ಯ ಮುತ್ತಿಗೆ ಹಾಕಿ ಮೂರೂವರೆ ಮೈಲಿ ದೂರ ಆಕ್ರಮಣ ನಡೆಸಿದೆ ಕಳೆದ ಬುಧವಾರ ಬೆಳಗ್ಗೆ ಅಮೆರಿಕನ್ ಸೈನಿಕರು ಈ ಹೊಸ ಮುತ್ತಿಗೆಯನ್ನು ಹಾಕಿದರು. ಹವ ಪ್ರತಿಕೂಲವಾಗಿತ್ತು ಮಂಜು ಮಳೆಯಿಂದ ವಿಮಾನ ಸಹಾಯ ಲಭಿಸಲು ಸಾಧ್ಯವಿರಲಿಲ್ಲ ಹೀಗಿದ್ದರೂ ಅಮೆರಿಕನ್ ಸೈನಿಕರು ಯಶಸ್ವಿಗಳಾದರು ಜರ್ಮನರಿಗೆ ದಿಗ್ಭ್ರಾಂತಿಯಾಯಿತು ಮುತ್ತಿಗೆ ಹಾಕಿದ ರಭಸದಲ್ಲೇ ಜರ್ಮನರ ಅನೇಕ ಠಾಣ್ಯಗಳು ಅಮೆರಿಕನ್ನರ ಹಸ್ತಗತವಾದವು ಅನಂತರ ಅಮೆರಿಕನ್ನರು ಜರ್ಮನರನ್ನು ಎದುರಿಸಿ ಉಗ್ರ ಹೋರಾಟ ನಡೆಸಬೇಕಾಯಿತು ಶತ್ರುರಕ್ಷಣಾ ಸಾಲಿನಲ್ಲಿ ಪ್ರತಿಧಾಳಿಗಳು ನಡೆಯಲು ಮೊದಲಾಯಿತು ಎರಡು ಪ್ರತಿ ಧಾಳಿಗಳಲ್ಲಿ ಅಮೆರಿಕನ್ನರು ಶತ್ರುವನ್ನು ಸೋಲಿಸಿದರು ಆದರೆ ಜರ್ಮನರ ಮುಖ್ಯ ಪಾಂಜೀರ್ ಸೈನ್ಯವಿನ್ನೂ ರಣಕ್ಷೇತ್ರಕ್ಕೆ ಬಂದಿಲ್ಲವೆಂದು ಗೊತ್ತಾಗಿದೆ ವ್ಯವಹಾರಕೇಂದ್ರವಾದ ಹ್ಯಾಫ್ಫ್ಯಾಲಿಜ್ ನಗರವನ್ನು ರಕ್ಷಿಸಿಕೊಳ್ಳಲು ಜರ್ಮನರು ವಿಶ್ವಪ್ರಯತ್ನ ಮಾಡುತ್ತಿದ್ದಾರೆ ಜರ್ಮನರ ಸೇನಾನಿ ಫಾನ್‌ರುನ್ ಸ್ಟೇಟ್ ಅಲ್ಲಿ 10 ಡಿವಿಜನ್ ಸೈನ್ಯ ಶೇಖರಿಸಿ ಕಾರ್ಯಾಚರಣೆ ನಡೆಸುತ್ತಿದ್ದಾನೆ ಅಲ್ಲದೆ 3 ಅಮೆರಿಕನ್ ಸೈನ್ಯಗಳ ಮೇಲೂ ಒಂದಾದ ಮೇಲೊಂದರಂತೆ ಜರ್ಮನರು ಪ್ರತಿದಾಳಿ ಮಾಡುತ್ತಿದ್ದಾರೆ ಆದರೆ ಅಮೆರಿಕನ್ನರು ಇಲ್ಲೂ ಪ್ರಬಲರಾಗಿ ಶತ್ರುವನ್ನು ಪ್ರತಿಸಲವೂ ಸೋಲಿಸುತ್ತಿದ್ದಾರೆ ಅಮೆರಿಕನ್ ಪಡೆಗಳು ಕಳೆದುಕೊಂಡ ಸ್ಥಾನಗಳನ್ನು ಪುನಃ ಆಕ್ರಮಿಸಿಕೊಂಡು ಚುರುಕಾಗಿ ಕಾರ್ಯಾಚರಣೆ ನಡೆಸುತ್ತಿವೆ

ಇನ್ನೊಂದು ಮುತ್ತಿಗೆ ಹಾಕಲು ಜರ್ಮನರ ಸನ್ನಾಹ

೧೯೪೫ ನೆ ಹೊಸ ವರ್ಷ ಪ್ರಾರಂಭವಾದ ಎರಡು ದಿನಗಳಲ್ಲಿ ಜರ್ಮನರು ಸ್ವಲ್ಪ ಸ್ಥಳವನ್ನು ಆಕ್ರಮಿಸಿದ್ದಾರಲ್ಲದೆ, ಮುತ್ತಿಗೆಯನ್ನು ಇನ್ನಷ್ಟು ಬಲಪಡಿಸುತ್ತಾ ಮುಂದೆ ನುಗ್ಗಲು ಪ್ರಯತ್ನಿಸುತ್ತಿದ್ದಾರೆ ಮಿತ್ರ ಫಿರಂಗಿ ಪಡೆಗಳು ಜರ್ಮನ್ ಸೈನಿಕರ ಮೇಲೆ ಎಡಬಿಡದೆ ದಾಳಿ ಮಾಡುತ್ತಿವೆ ಜರ್ಮನ್ ಫಿರಂಗಿಗಳೂ ಬಿರುಸಾಗಿ ಕಾರ್ಯಾಚರಣೆ ನಡೆಸುತ್ತಿವೆ ಅಲ್ಸೇಸ್ ಕ್ಷೇತ್ರದಲ್ಲಿರುವ ಕೆಲವು ಮಿತ್ರ ಸ್ಥಾನಗಳ ಮೇಲೆ ಜರ್ಮನ್ ತೋಪುಗಳು ಭಾರಿ ಅಗ್ನಿವರ್ಷ ಮಾಡಿದವೆಂದು ಮಿತ್ರ ಪ್ರಕಟಣೆ ತಿಳಿಸಿದೆ ರೈನ್ ಕ್ಷೇತ್ರಕ್ಕೆ ಆಗ್ನೇಯದಲ್ಲಿ ೧೮ ಮೈಲಿ ದೂರದಲ್ಲಿರುವ ೭ ನೆಯ ಸೇನಾಕ್ಷೇತ್ರದಲ್ಲಿ ಉಗ್ರ ಕಾರ್ಯಾಚರಣೆ ನಡೆಯುತ್ತಿದೆ

ಜರ್ಮನರ ಮೇಲೆ ಪ್ರತಿದಾಳಿ ಮಾಡಲು ಪ್ರಾರಂಭಿಸಲಾಗಿಯಿತು ಅಮೆರಿಕನ್ನರು ಇದುವರೆಗೆ 13 ಮೈಲಿ ದೂರ ಆಕ್ರಮಣನಡೆಸಿದಂತಾಗಿದೆ ಜರ್ಮನರೂ ಅಮೆರಿಕನ್ ಸೈನಿಕರ ಪ್ರಗತಿಗೆ ಆತಂಕವುಂಟುಮಾಡಲು ಪ್ರಯತ್ನಿಸುತ್ತಿದ್ದಾರೆ ಶತ್ರುದಳಗಳನ್ನೆಲ್ಲಾ ಪುನಃ ವ್ಯವಸ್ಥೆಗೊಳಿಸಲಾಗುತ್ತಿದೆ ಇದರಿಂದ ಜರ್ಮನರು ಪುನಃ ದಂಡೆತ್ತಿ ಬರಲು ಸನ್ನಾಹಮಾಡಿಕೊಳ್ಳುತ್ತಿದ್ದಾರೆಂದೂ ಇದೇ ಅಂತಹ ಚಿಕ್ಕ ಅಥವಾ ದೊಡ್ಡ ಮುತ್ತಿಗೆಗೆ ಪೀಠಿಕೆಯಾಗಬಹುದೆಂದೂ ಹೇಳಲ್ಪಡುತ್ತಿದೆ ಉತ್ತರ ಕ್ಷೇತ್ರದಲ್ಲಿ ಮಿತ್ರಸೈನಿಕರು ಒಂದುವರೆ ಮೈಲಿ ಇರುವ ಸ್ಥಳಗಳನ್ನಾಕ್ರಮಿಸಿದ್ದಾರೆ ಸಾರ್‌ಕ್ಷೇತ್ರದಲ್ಲಿರುವ ಜರ್ಮನ್ ಸ್ಥಾನಗಳ ಮೇಲೆ ಹಗಲಲ್ಲೆ ಒಂದು ಸಾವಿರಕ್ಕಿಂತ ಹೆಚ್ಚು ಮಿತ್ರವಿಮಾನಗಳು ದಾಳಿಮಾಡಿ ಶತ್ರುಟ್ಯಾಂಕುಗಳನ್ನು ನಾಶಮಾಡಿದ್ದಲ್ಲದೆ ರೈಲ್ವೆ ವ್ಯವಸ್ಥೆಯ ಮೇಲೂ ಬಾಂಬುಗಳನ್ನು ಸುರಿಸಿದವು

ಬ್ಯುಡಾಪೆಸ್ಟ್ ಕದನದ ತೀವ್ರತೆ ಹೆಚ್ಚಿದೆ

ಹಂಗೇರಿಯ ರಾಜಧಾನಿ ಬ್ಯುಡಾಪೆಸ್ಟಿಗಾಗಿ ಆಗುತ್ತಿರುವ ಕದನವು ಉಗ್ರತೆಯಲ್ಲೂ ಕಾಠಿಣ್ಯದಲ್ಲೂ ಸ್ಟಾಲಿನ್‌ಗ್ರಾಡ್ ಕದನವನ್ನೂ ಸಹ ಮೀರಿಸುತ್ತಿದೆ. ಜರ್ಮನ್ ಸೇನೆಯು ಬ್ಯುಡಾಪೆಸ್ಟ್ ನಗರವನ್ನು ಒಂದೊಂದು ಬೀದಿಯಂತೆ ನಾಶಪಡಿಸುತ್ತಿರುವುದಾಗಿ ಹೇಳಲಾಗಿದೆ ರಾಜಧಾನಿಯ ಪಶ್ಚಿಮ ದಿಗ್ಭಾಗದ ಬಡಾವಣೆಯಾದ ಬ್ಯುಡಾ ಭಾಗಕ್ಕೆ ರಷ್ಯನರು ಪ್ರವೇಶಿಸಿ, ಅನೇಕ ಪ್ರದೇಶಗಳಲ್ಲಿ ಡಾನ್ಯೂಬ್ ನದಿಯನ್ನು ದಾಟಿ, 300 ಕ್ಕಿಂತ ಹೆಚ್ಚು ಪ್ರಧಾನ ಕಟ್ಟಡಗಳನ್ನು ಆಕ್ರಮಿಸಿಕೊಂಡಿದ್ದಾರೆ ಜರ್ಮನರು ಆಚರಿಸುತ್ತಿರುವ ವಿನಾಶ ಕೃತ್ಯಗಳಿಗೆ ಪ್ರತೀಕಾರವಾಗಿ ರಷ್ಯನರು ಯುದ್ಧದಲ್ಲಿ ಹೆಚ್ಚು ಹೆಚ್ಚಾಗಿ ತೋಪುಗಳನ್ನೂ, ಪದಾತಿ ಪಡೆಗಳನ್ನೂ ವಿಮಾನಗಳನ್ನೂ ಉಪಯೋಗಿಸುತ್ತಿದ್ದಾರೆ ಜರ್ಮನರ ಪ್ರತಿಭಟನೆ ಬ್ಯುಡಾಪೆಸ್ಟಿನ ಪೂರ್ವಾರ್ಧದಲ್ಲಿ ಬಹಳ ಉಗ್ರವಾಗಿದೆ ಬ್ಯುಡಾಪೆಸ್ಟಿಗೆ ವಾಯುವ್ಯದಲ್ಲಿ ಸುತ್ತುವರಿಯಲ್ಪಟ್ಟಿದ್ದ ಜರ್ಮನ್ ಸೇನೆ ನಿರ್ನಾಮವಾಗಿದೆ 5300 ಜರ್ಮನ್ ಸೈನಿಕರು ಸೆರೆ ಸಿಕ್ಕಿದ್ದಾರೆ 52 ಟ್ಯಾಂಕುಗಳೂ ಅಗಾಧ ಶಸ್ತ್ರಾಸ್ತ್ರಗಳೂ ರಷ್ಯನರ ಪಾಲಾಗಿವೆ

ನಾಜಿ ಗೂಢಚಾರರ ಬಂಧನ

ನವೆಂಬರ್ ೨೯ನೆಯ ತಾರೀಖು ಮೈನ ತೀರದಲ್ಲಿ ಯೂಬೋಟಿನಲ್ಲಿ ಬಂದಿಳಿದ ನಾಜಿ ಗೂಢಚಾರರು ಇಬ್ಬರನ್ನು ಬಂಧಿಸಲಾಗಿದೆಯೆಂದು ಸಂಯುಕ್ತ ಸಂಸ್ಥಾನಗಳ ಪತ್ತೆ ಇಲಾಖಾಧಿಕಾರಿಗಳಾದ ಶ್ರೀ ಎಡ್ಗರ್ ಹೂವರು ಪ್ರಕಟಿಸಿದ್ದಾರೆ ಬಂಧಿತರ ಬಳಿಯಲ್ಲಿ ೫೭೦೦೦೦ ಡಾಲರ್ ಷಾರ್ಟ್‌ವೇವ್ ರೇಡಿಯೋ ಸುದ್ದಿ ವಿಸರಣೆಗೆ ವಿಶೇಷ ಬಗೆಯ ಸಾಧನ ಮತ್ತು ಕೆಲವು ಮೋಸದ ಕಾಗದ ಪತ್ರಗಳೂ ಇದ್ದವು ಇಬ್ಬರಲ್ಲೊಬ್ಬನು ಅಮೇರಿಕದ ಪ್ರಜೆ ಇನ್ನೊಬ್ಬನು ಜರ್ಮನಿಯವನು ಇಬ್ಬರೂ ಯೂಬೋಟಿನಿಂದ ರಬ್ಬರ್ ಬೋಟಿಗೆ ಹತ್ತಿ ತೀರದಲ್ಲಿಳಿದು ಬಾಸ್ಟನ್ನಿಗೆ ಬಂದು ಕೆಲದಿನಗಳಿದ್ದು ನ್ಯೂಯಾರ್ಕಿಗೆ ಬಂದರಂತೆ ಇಬ್ಬರ ಬಳಿಯೂ ಮದ್ದು ತುಂಬಿದ ರಿವಾಲ್ವರುಗಳಿದ್ದುವು ಈ ಹಿಂದೆಯೂ ಇಂತಹ ಅಮೇರಿಕದ ಒಳರಕ್ಷಣೆಯನ್ನು ಭಂಗಪಡಿಸುವ ಪ್ರಯತ್ನಗಳು ನಡೆದಿವೆಯೆಂದೂ 1942ರಲ್ಲಿ 8 ಮಂದಿ ನಾಜಿಗಳು ಯೂಬೋಟಿನಲ್ಲಿ ಬಂದಿಳಿದಿದ್ದರೆಂದೂ ಹೂವರರು ತಿಳಿಸಿದ್ದಾರೆ

ಜರ್ಮನರ ನೂತನ ಭಾರಿ ಟ್ಯಾಂಕು

ಪಶ್ಚಿಮ ರಂಗದಲ್ಲಿ ಫಾನ್ ರುನ್ ಸ್ಟಟ್ ಹೊಸ ನಮೂನೆಯ ಭಾರಿ ಟ್ಯಾಂಕುಗಳನ್ನು ಉಪಯೋಗಿಸುತ್ತಿದ್ದಾರಷ್ಟೆ ಈ ಟ್ಯಾಂಕುಗಳಿಗೆ ' ರಾಯಲ್ ಟೈಗರ್ ಟ್ಯಾಂಕುಗಳು ಎಂದು ಹೆಸರು ಬಂದಿದೆ ೨೫೦೦ ಗಜ ದೂರದಲ್ಲಿರುವ ವಸ್ತುಗಳ ಮೇಲೆ ಇದು ಷೆಲ್ ಹಾರಿಸಬಲ್ಲದು ಇದರ ಚಲನೆಯ ವೇಗ ಗಂಟೆಗೆ ೨೦ ಮೈಲಿ ಇದು ಪ್ರಯೋಗಿಸುವ ಷೆಲ್‌ಗಳು ಸಾಮಾನ್ಯ ತರಹೆಯ ಷೆಲ್‌ಗಳಿಗಿಂತ ಒಂದು ಅಡಿ ಹೆಚ್ಚು ಉದ್ದವಿರುತ್ತದೆ ಈ ಟ್ಯಾಂಕುಗಳನ್ನು ನಾಶಪಡಿಸುವ ಕೆಲಸ ಬಹಳ ಕಷ್ಟನೆಂದು ಮಿತ್ರಪಕ್ಷದವರೇ ಒಪ್ಪಿಕೊಂಡಿದ್ದಾರೆ

ವಿಯೆನ್ನಾಕ್ಕೆ ೯೦ ಮೈಲಿಯಲ್ಲಿ ಉಗ್ರಕಾಳಗ

ಆಸ್ಟ್ರಿಯದ ರಾಜಧಾನಿಯಾದ ವಿಯೆನ್ನಾಕ್ಕೆ ೯೦ ಮೈಲಿ ಒಳಗೆ ಈಗ ರಷ್ಯ ಜರ್ಮನಿ ಪಡೆಗಳಿಗೆ ಮಹಾ ಹೋರಾಟ ನಡೆಯುತ್ತಿದೆ ರಷ್ಯನರನ್ನು ತಡೆಗಟ್ಟಲು ಜರ್ಮನರು ತಮ್ಮ ಅತ್ಯಂತ ಭಾರಿ ಟ್ಯಾಂಕುಗಳನ್ನು ಯುದ್ಧದಲ್ಲಿ ದೂಡಿರುವುದಾಗಿ ಹೇಳಲಾಗಿದೆ ಬುಡಾಪೆಸ್ಟ್ ಮಾರ್ಗವಾಗಿ ಒಂದು ಓಣೀಮಾರ್ಗವನ್ನೇರ್ಪಡಿಸಲು ಜರ್ಮನರು ಮಾಡಿದ ಪ್ರಯತ್ನಗಳೆಲ್ಲ ಸಂಪೂರ್ಣವಾಗಿ ನಿಷ್ಫಲವಾದುವು ಬ್ಯುಡಾಪೆಸ್ಟ್‌ನಲ್ಲಿ ಈಗ ಪೂರ್ವಾರ್ಧವಾದ ಪೆಸ್ಟ್ ಭಾಗದಲ್ಲಿ ಬೀದಿಬೀದಿಗಳಲ್ಲೂ ಕದನ ನಡೆಯುತ್ತಿದೆ ಅನೇಕ ಕಟ್ಟಡಗಳೂ ಬೀದಿಗಳೂ ರಷ್ಯನರ ವಶವಾಗುತ್ತಲಿವೆ ಬ್ಯುಡಾಪೆಸ್ಟಿಗೆ ಈಶಾನ್ಯದಲ್ಲಿ ಜೆಕೋಸ್ಲೋವಾಕಿಯದಲ್ಲಿ ಲ್ಯೂಸೆ ನಗರದ ಆಕ್ರಮಣಕ್ಕಾಗಿ ನುಗ್ಗಿ ಬರುತ್ತಿರುವ ರಷ್ಯನರು ಅನೇಕ ಪ್ರದೇಶಗಳನ್ನು ಗೆದ್ದುಕೊಂಡಿದ್ದಾರೆ,

ಅಮೆರಿಕನ್ ಸೈನ್ಯಗಳು ಸಂಧಿಸದಂತೆ ತಡೆಯಲು ಶತ್ರುಪ್ರಯತ್ನ

ಬಾಸ್ಟೋನ್ ಕ್ಷೇತ್ರದಲ್ಲಿ ಅಮೆರಿಕನ್ 3 ನೆಯ ಮತ್ತು 1ನೆಯ ಸೈನ್ಯಗಳು ಸಂಧಿಸುವ ಸಂಭವವಿರುವುದರಿಂದ ಅದನ್ನು ತಡೆಗಟ್ಟುವ ಸಲುವಾಗಿ ಜರ್ಮನ್ ಸೇನಾನಿ ಫಾನ್‌ರುನ್‌ಸ್ಟೇಟ್ 8 ತೋಪು ಮತ್ತು ಪದಾತಿ ಡಿವಿಜನ್ನುಗಳನ್ನು ಆ ಕ್ಷೇತ್ರಕ್ಕೆ ದೂಡಿದ್ದಾರೆ. ಜರ್ಮನ್ ಸೈನ್ಯವು ವಾಪಸಾಗುವುದಕ್ಕೆ ಮೊದಲೇ ಅಮೆರಿಕನ್ ಸೇನೆಗಳು ಸಂಧಿಸುವಂತೆ ಆಗಬಾರದೆಂಬ ಉದ್ದೇಶದಿಂದಲೇ ಜರ್ಮನ್ ಸೇನಾನಿ ಈ ಕಾರ್ಯಾಚರಣೆ ನಡೆಸುತ್ತಿರುವುದು ಇತರ ಅಮೆರಿಕನ್ ಪಡೆಗಳು ಹೌಫಾಲಿಜ್ ಕಡೆ ಒಂದೇ ಸಮನಾಗಿ ಮುನ್ನುಗ್ಗುತ್ತಿವೆ

ಜಪಾನರ ಪ್ರತಿಭಟನೆ ಬಿರುಸಾಗಿದೆ

ಮಧ್ಯ ಬರ್ಮದಲ್ಲಿಯೂ ಸುತ್ತಮುತ್ತಲೂ ಉಗ್ರ ಕಾಳಗವಾಗುತ್ತಿದೆ. ಜಪಾನೀಯರು ಬಲವಾದ ಪ್ರತಿಭಟನೆ ಕೈಗೊಂಡಿದ್ದಾರೆ ಮು ನದಿಯ ಪೂರ್ವ ತೀರದಲ್ಲಿರುವ ಜಪಾನಿ ಫಿರಂಗಿ ಪಡೆ ಅಗ್ನಿವರ್ಷ ಕರೆಯುತ್ತಿವೆ ಈ ಕ್ಷೇತ್ರದಿಂದ ಕೆಲ ಮೈಲಿ ಉತ್ತರದಲ್ಲಿ ೨೬ನೇ ಬ್ರಿಟಿಷ್ ದಳದವರು ಆ ಕ್ಷೇತ್ರದ ನೀರು ಸರಬರಾಯಿ ಕ್ಷೇತ್ರವನ್ನು ಹಿಡಿದಿದ್ದಾರೆ ಕನ್ಬಾಲೂಗೆ ಉತ್ತರದಲ್ಲೂ ಪೂರ್ವಕ್ಕೆ 8 ಮೈಲಿಯಲ್ಲೂ ಕೆಲವು ಗ್ರಾಮಗಳನ್ನು ಮಿತ್ರ ದಳಗಳು ಹಿಡಿದಿವೆ ಉತ್ತರ ಕಾಳಗ ಕ್ಷೇತ್ರದಲ್ಲಿ ಚೀಣೀ ದಳಗಳು ನಾಮ್ಖಾನ್ ರಸ್ತೆಯಲ್ಲಿ ಇನ್ನೂ ಒಂದು ಮೈಲಿ ಮುಂದೆ ಸಾಗಿದವು ಕಲಡಾನ್ ಬಯಲಿನಲ್ಲಿ ಪಶ್ಚಿಮ ಆಫ್ರಿಕಾ ದಳಗಳು ಪರಿಶೀಲನಾ ಚಟುವಟಿಕೆ ನಡೆಸುತ್ತಿವೆ

ಶ್ರೀಮನ್ಮಹಾರಾಜರ ತಿರುಪತಿ ಯಾತ್ರೆ

ಶ್ರೀಮನ್ಮಹಾರಾಜರವರು ಮೈಸೂರಿನಿಂದ ಮಿತ್ರಪರಿವಾರದೊಡನೆ ತಿರುಪತಿ ಕ್ಷೇತ್ರಕ್ಕೆ ಪ್ರಯಾಣ ಬೆಳೆಸಿದ್ದಾರೆ ಪ್ರಭುಗಳು ಅಲ್ಲಿಂದ ಶ್ರೀಶೈಲಕ್ಷೇತ್ರಕ್ಕೆ ಸಂದರ್ಶನವಿತ್ತು ಈ ತಿಂಗಳು ೧೦ನೇ ತಾ|| ವಾಪಸು ಬರುವರು ಎಂದು ಗೊತ್ತಾಗಿದೆ

ಸಿಡಿತದಿಂದ ಒಬ್ಬನ ಮರಣ

ಬಾಳೆಹೊನ್ನೂರಿನ ಒಂದು ಸ್ಥಳದಲ್ಲಿ ಕೆಲವು ಕೂಲಿಗಳು ಸಾಮಾನುಗಳನ್ನು ಸಾಗಿಸುತ್ತಿದ್ದಾಗ ಯಾವುದೋ ಒಂದು ಪದಾರ್ಥವು ಸಿಡಿದಂತಾಯಿತೆಂದೂ ತತ್ಪರಿಣಾಮವಾಗಿ ಕೆಲವರಿಗೆ ಗಾಯಗಳಾಯಿತೆಂದೂ, ಗಾಯಗೊಂಡವರನ್ನೆಲ್ಲಾ ಚಿಕ್ಕಮಗಳೂರು ಜನರಲ್ ಆಸ್ಪತ್ರೆಗೆ ಸೇರಿಸಲಾಯಿತೆಂದೂ ಆ ಪೈಕಿ ಒಬ್ಬನು ಮೃತನಾದನೆಂದೂ ಉಳಿದವರೆಲ್ಲಾ ಗುಣಮುಖರಾಗುತ್ತಿದ್ದಾರೆಂದೂ ತಿಳಿದುಬರುತ್ತದೆ

ಸ್ವೀಕಾರ

ಹುಬ್ಬಳ್ಳಿ ನಗರದಲ್ಲಿರುವ ಮ|| ರಾ|| ಬಾಳೇಕಾಯಿ ವೀರಭದ್ರಪ್ಪನವರ ಮನೆಯಲ್ಲಿ ಪುಷ್ಯ ಬ|| ೮ ಮಂಗಳವಾರ ದಿವಸ ಕೈ|| ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯವ ಸ್ವಾಮಿಗಳವರ ಪುಣ್ಯ ದಿನೋತ್ಸವವನ್ನು ವಿಶೇಷ ವೈಭವದಿಂದ ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ವೇ|| ಜಿ ವಿ ನಂದಿಕೇಶ್ವರಮಠ ಇವರ ದ್ವಾರಾ ತಲ್ಪಿರುತ್ತವೆ

ಈ ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಲವನ್ನೀಯಲೆಂದು ಹಾರೈಸುತ್ತೇವೆ

ಕಾಗದದ ಬೆಲೆಯು ವಿಶೇಷವಾಗಿ ಏರಿರುವುದರಿಂದ ಕೆಲವು ಗ್ರಂಥಗಳ ಮತ್ತು ಫೋಟೋಗಳ ಬೆಲೆಯನ್ನು ಸ್ವಲ್ಪ ಹೆಚ್ಚಿಸಿದ್ದೇವೆ.

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬರಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು. ವೀರಶೈವಮತದಲ್ಲಿ ಸದ್ಯಃ ದೊರೆಯತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು. ಈ ಗ್ರಂಥವು ಈಗ್ಗೆ ಸುಮಾರು **೨ ಸಾವಿರ** ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು. ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭವಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡುವದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿನೋಡಿದವರಿಗೆ ಪಂಡಿತರ ವ್ಯಾಖ್ಯಾನದ ಮಹತ್ವವು [illegible] ವೇದ್ಯವಾಗುವದು. ವಾಚಕರ ಅನುಕೂಲಕ್ಕಾಗಿ ಬಹು ಕ್ರಮವಾಗಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಸೂಚಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೬೬೨ ಪುಟಗಳಿಂದ ಕೂಡಿದ್ದು, ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರವಾದ ಚಿತ್ರಗಳು ಜೋಡಿಸಲ್ಪಟ್ಟಿರುವದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೨ ರೂಪಾಯಿ.**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಎಂಭತ್ತು ಅದ್ಭುತಲೀಲೆಗಳುಳ್ಳ ಕಾಗದದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೨—೬—೦
ಶ್ರೀರೇಣುಕಾಚಾರ್ಯರ ಲಿಂಗ [illegible]ದ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪×೧೦ ಬೆಲೆ	೦—೬—೦
ಸರ್ವ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	—೩—
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಕುಂಭದಿಂದ ಅವತರಿಸಿರುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೬
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮ[illegible]ಪೀಠದ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರುಗಳ ಫೋಟೋ (ನಾನಾ ವಿಧ ಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪×೧೦	—೪—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದ ಶಿವಾಚಾರ್ಯರ ಹಾಸ್ಯಮುಖದ ಫೋಟೋ	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾ ವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
ಬೆಂಗಳೂರು [illegible]ನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೬

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೮ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೮ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ, ಚಿಕ್ಕಸೈಜು)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆ
ಸಿದ್ಧಾಂತರತ್ನಾವಳಿ	೮ ಆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯ ಕೃತ)	೧೨ ಆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆ
ಶಿವಾದ್ವೈತಸೂತ್ರಸಿದ್ಧಾಂತದರ್ಪಣ	೧೨ ಆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು ೨ನೆಯ ಆವೃತ್ತಿ)	೧। ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧॥ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧॥ ರೂ
ವೀರಶೈವರತ್ನ (೩ನೆಯ ಆವೃತ್ತಿ, ೫೦ ಮಹತ್ವದ ಫೋಟೋಗಳಿರುವುವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	**4 A**
The Philosophical Aspect of Virasaivism (*English*)	**8 A**
Speeches by Pandit Shri Kashinatha Shastriji (*English*)	**12 A**
लिंगधारणचंद्रिका (संस्कृत)	३
वीरशैवरत्न (मराठी)	१
महानारायणोपनिषत् (वीरशैवभाष्य-संस्कृत)	१
सिद्धांतशिखामणि (मूल)	८ आ
[illegible]कारिका (संस्कृत)	२ आ

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯರ್ಗೆ ಶರಣೆಂಬೆನು ॥ REGISTERED No M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ೪ ಆಣೆ

ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ.

ಸಂಪುಟ ೧೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೫ನೇ ಜನವರಿ ೧೯೪೫ [ಸಂಚಿಕೆ ೩೮

ವೈರಾಗ್ಯದರ್ಪಣ

ಲೇ—ಮಲ್ಲಿಕಾರ್ಜುನಾರಾಧ್ಯ ರಾಣೇಬೆನ್ನೂರ ತಾಲೂಕ ಮುದೇನೂರು

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಚಿತ್ರಕಾರನಂತೆ ಸಮಸ್ತವಸ್ತುಗಳನ್ನೂ ನಿಮಿಷಕ್ಕೊಂದು ರೀತಿಯಾಗಿ ಮಾಡುವಂಥ ವಿಚಿತ್ರರೀತಿಯಾದ ಈ ಕಾಲನ ವಿಲಾಸದಲ್ಲಿ ಒಳ್ಳೆಯದೆಂತಲೂ, ಕೆಟ್ಟದೆಂತಲೂ, ಕೆಲವುದಿನವಿರತಕ್ಕವೆಂತಲೂ, ಈಗಲೇ ಹೋಗತಕ್ಕವೆಂತಲೂ, ಯಾವುದನ್ನು ನಂಬುವುದು! ಈ ಕಾಲನೆಂಬ ರಾಜಪುತ್ರನು ನೃಸಿಂಹನನ್ನು ಹೃದಯರಕ್ಷವಾಗಿಯೂ ಕಾಲರುದ್ರನನ್ನು ಲೀಲಾಶುಕವಾಗಿಯೂ, ಭೂಮಂಡಲವನ್ನು ಪಾನಪಾತ್ರವಾಗಿಯೂ, ಬಡಬಾಗ್ನಿಯೆಂಬ ಕನಕಕಮಲದಿಂ ಪ್ರಕಾಶಿಸುವ ಸಮುದ್ರವಂ ಕ್ರೀಡಾಸರೋವರವಾಗಿಯೂ, ಮಾಡಿಕೊಂಡು ಸಂಹಾರಶಕ್ತಿಮಯವಾದ, ಧನುರ್ಬಾಣಗಳನ್ನು ಧರಿಸಿ "ಚಂಡಿ' ಯೆಂಬ ಪ್ರಾಣಕಾಂತೆಯೊಡನೆ ವಿನೋದವಾಡುತ್ತಾ ಪ್ರಪಂಚವೆಂಬ ಮಹಾರಣ್ಯದಲ್ಲಿ ಬೇಟೆಯಾಡುತ್ತಿರುವನು ಈ ಮಹಾಕಾಲನೇ ಘಟಿಕಾಮುಹೂರ್ತಾದಿ ರೂಪದಿಂ ಕಾಲನೆಂತಲೂ, ಶುಭಾಶುಭಕರ್ಮರೂಪದಿಂ ದೈವವೆಂತಲೂ, ಹೇಳಲ್ಪಡುವನು ಜನ್ಮಾಂತರ ಕರ್ಮರೂಪವಾದ ದೈವದಲ್ಲಿ ಈ ಕರ್ಮಕ್ಕೆ ಈ ಪ್ರಕಾರ ಫಲವಾಗತಕ್ಕದೆಂಬ ಪರಮೇಶ್ವರ ಕ್ಲುಪ್ತಿಯೇ "ನಿಯತಿ' ಯೆನಿಸಿಕೊಳ್ಳುವದು ಫಲದಾನೋದ್ಯತವಾದ ಕರ್ಮಪರಿಪಾಕವೇ "ಕೃತಾಂತ" ನೆಂದು ಹೇಳಲ್ಪಡುವದು ಕೃತಾಂತನಿಗೆ ಅತಿಪ್ರಿಯಳಾದ ತ್ರಿಲೋಕವ್ಯಾಪಿಯಾದ ಈ ನಿಯತಿಯು ಶಿವನಂತೆ ಆದಿಶೇಷನನ್ನೇ ಕಾಲ್ಗಡಗವಾಗಿಯೂ, ಚಂದ್ರಕಲೆಯನ್ನೇ ಶಿರೋಮಣಿಯಾಗಿಯೂ, ಧರಿಸಿ ನರ್ತನವಂ ಮಾಡುವ ಕೃತಾಂತನಿಗೆ ಸಹಚಾರಿಣಿಯಾಗಿ ನರಕಗಳಂ ಕಾಲ್ಗೆಜ್ಜೆಯಾಗಿಯೂ, ನಕ್ಷತ್ರಮಾಲೆಯಂ ಕೇಶಭೂಷಣವಾಗಿಯೂ, ಚತುರ್ದಶಲೋಕಗಳನ್ನಾಭರಣವಾಗಿಯೂ, ಧರಿಸಿ ನಾಟ್ಯವಾಡುತ್ತಿರುವಳು ಎಲೈ ಜ್ಞಾನನಿಧಿಯೇ, ಈ ಪ್ರಕಾರವಾದ ಸಂಸಾರಮಾರ್ಗದಲ್ಲಿ ಮಾರಲ್ಪಟ್ಟವರಂತೆ ನಾವು ಪರಾಧೀನರಾಗಿರುವೆವು ಇಲ್ಲಿ ಕಾಲನು ತನ್ನಹೊಟ್ಟೆಯಂ ಹೊರಕೊಳ್ಳುವುದರಲ್ಲಿಯೇ ನಿತ್ಯಾಸಕ್ತನಾದ ಪ ಸಿ ಯಂತೆ ದುರಾಚಾರಪರಾಯಣನಾಗಿ ಲೋಕಗಳನ್ನು ಆಪತ್ತೆಂಬ ಸಮುದ್ರದಲ್ಲಿ ಕೆಡವುತ್ತಾ, ಬಡಬಾಗ್ನಿಯು ಜ್ವಾಲೆಗಳಿಂದಹಿಸುವಂತೆ ದುರಾಶೆಗಳಿಂದ ಅಂತಸ್ಸಂತಾಪವನ್ನುಂಟುಮಾಡುವನು ಸ್ತ್ರೀ ಸ್ವಭಾವದಿಂದತಿಕಠಿಣಳಾದ ನಿಯತಿಯು ವೃದ್ಧನಾದ ಗಂಡನಿಗೆ ತಾಂಬೂಲವನ್ನರೆದುಕೊಡುವ ಮಾನಿನಿಯಂತೆ ಪ್ರಾಣಿಗಳಂ ಮರ್ದಿಸಿ ಪ್ರವಾಹನನಾದ ಕೃತಾಂತನೆಂಬ ನಾಯಕನಿಗೆ ಸಮರ್ಪಿಸುವಳು ಕೃತಾಂತನಾದರೋ ನುಂಗುವದೆಂಬ ಒಂದು ವ್ಯಾಪಾರವನ್ನೇ ಬಲ್ಲವನಾದ್ದರಿಂದ ಜನಗಳ ಕಷ್ಟ ಸುಖ ಸಮಯವಂ ನೋಡುವುದಿಲ್ಲ ಸರ್ವಭೂತಗಳಲ್ಲಿಯೂ ಉಪಕಾರನಾದ ಪುರುಷನು ದುರ್ಲಭನಾಗಿರುವನು ಸಮಸ್ತ ಪ್ರಾಣಿಗಳೂ ತುಚ್ಛವಾದ ಸೌಖ್ಯವಂ ನೋಡುವರಲ್ಲದ ಆಮುಷ್ಮಿಕಸ್ವರ್ಗವಂ ನೋಡುವದಿಲ್ಲ ಭೋಗಸ್ಥಾನಾದಿ ವಿಷಯಗಳು ಸುಖಪ್ರಾಯವಾದ್ದರಿಂದ ಭಯಂಕರವಾಗಿರುವವು ಆಯುಸ್ಸಿಗಿಂತಲೂ ಕ್ಷಣಿಕವಾದ ವಸ್ತುವು ಮತ್ತೊಂದಿಲ್ಲ ಪ್ರೌಢ್ಯವಾದರೋ ಕರ್ಪೂರರಸದ ಗಂಧವನ್ನೇ ಅರಿಯದು ಅತಿಚಾಪಲ್ಯದಿಂದದುಃಖವುಳ್ಳದಾಗಿ ಪಾತನಾಡುವ ವೃದ್ಧಾಪ್ಯಕ್ಕೆ ಸ್ಥಿತಿಯ ಯೋಗ್ಯತೆ ಹೇಗೆ ಬಂದೀತು? ತಾರುಣ್ಯವು ಮಿಂಚುಬಳ್ಳಿಗಳಂತೆಸವ ಚಂಚಲಾಕ್ಷಿಯರ ಸಹವಾಸದಿಂದತಿಚಂಚಲವಾಗಿರುವದು ಜಾಡ್ಯಗಳಿಗೆ ಆಶ್ರಯವಾದ ಬಾಲ್ಯವು ಮೂಢಭಾವದಿಂದಾಕ್ರಮಿಸಲ್ಪಟ್ಟಿರುವದು ಲೋಕವೆಲ್ಲವೂ ಮನೋರಥಕಲ್ಪನೆಗಳಿಂದ ಮಲಿನವಾಗಿರುವದು ಸಂಸಾರದಲ್ಲಿ ಬಂಧನರಜ್ಜು (ಹಗ್ಗ) ಗಳಂತೆ ಕಾಣುತ್ತಿರುವರು ಭೋಗಗಳಿಗೂ "ಭರ' ವೆಂಬ ವರ್ಣಭೇದವಿರುವುದಲ್ಲದೆ ಹೆಚ್ಚು ಕಡಮೆ ಏನೂ ಇಲ್ಲವು ಆಶೆಗಳು ಬಿಸಿಲುದೊರೆಗಳಿಗಿಂತಲೂ ಅಧಿಕವಾಗಿ ಕೆಳೆಯುವವು, ಇಂದ್ರಿಯಗಳು ವಿಷಯಗಳೆಂಬ ಹಳ್ಳಗಳಿಗೆ ಜಗ್ಗುತ್ತಾ ರಥಿಕನಿಗೆ ಮದ್ಯಾಶ್ವಗಳಂತೆ ಪುರುಷನಿಗೆ ಶತ್ರುಗಳಾಗಿರುವವು ಸತ್ಯದ ಪ್ರಸ್ತಾಪವೂ ಸಹ ಅಶಕ್ಯವಾಗಿ ಕಾಣುತ್ತಿರುವದು ತೆರಳೆ ಹುಳವು ತನಗೆ ಸುತ್ತಲೂ ಗೂಡನ್ನು ಕಟ್ಟಿಕೊಂಡು ಆ ಗೂಡಿನ ಬಾಯನ್ನು ಬಿಗಿದುಕೊಂಡು ಹೊರ ಹೊರಡಲಾರದೆ ಒಳಗೆ ದುಃಖಪಡುವಂತೆ ಆತ್ಮನು ಸ್ವೇಚ್ಛೆಯಿಂ ಮಾಡಿಕೊಂಡ ಈ ಪರಿವಾರದಲ್ಲಿ ಸಿಕ್ಕಿ ಕಷ್ಟಪಡುತ್ತಿರುವನು ಆಕಾಶವಾಯುಗಳೆರಡರ ಮಧ್ಯದೋಳ್ ಜನಿಸಿ, ಆಕಾಶದಂತೆ ಬಯಲಾಗಿಯೂ ವಾಯುವಿನಂತೆ ಚಂಚಲಮಾಗಿಯೂ ಇರುವ ಮನಸ್ಸಾದರೋ ಇಂದ್ರಿಯವರ್ಗಗಳನ್ನನುಸರಿಸಿ ತನ್ನಿಂದ ತಾನೇ ಕೆಡುವದು ಅಹಂಕಾರವೆಂಬುದು ಉತ್ಪಾತದಂತೆ ಜನಗಳ ನಾಶಕ್ಕೋಸುಗವೇ ಹುಟ್ಟುವದು ಬುದ್ಧಿಯ ದುರಾಲೋಚನೆಯಿಂದ ಸನ್ಮಾರ್ಗದಿಂ ವಿಮುಖವಾಗುವದು ಕಾಯವಾಙ್ಮನಸ್ಸುಗಳ ರೀತಿ ನೀತಿಗಳು ಸೂಳೆಯರಂತೆ ದುಃಖಾಂತವಾದ ಸುಖವನ್ನೇ ಕೋರುವವು ವಿಷಯ ಸಮೂಹದಲ್ಲಿರುವ ಅಪೇಕ್ಷೆಗಳು ರಂಗಭೂಮಿಯಲ್ಲಿರುವ ನಟಿಯರಂತೆ ಅತಿ ಚಮತ್ಕಾರದಿಂ ಕುಣಿಯುತ್ತಿರುವವು ನಾಯಿಯರು ದುಷ್ಟ ಸೇನೆಗಳಂತೆ ತಮ್ಮ ಕೈ ಹಿಡಿದವನನ್ನೇ ಕೆಡಿಸುವರು ಬಿಸಲು ದೊರೆಯಂ ನೋಡಿ ಓಡುವ ಮೃಗಗಳಂತೆ ಅನುರಾಗಗಳು ವಿಷಯಾಭಿಮುಖವಾಗಿರುವವು ತನ್ನ ನೆರಳನೊಡನೆ ಆಡುವ ಬಾಲಕನಂತೆ ಚಿತ್ತವು ಅಹಂಕಾರವಂ ಹಿಡಿದಿರುವದು ಇರುವ ವಸ್ತುಗಳೆಲ್ಲವೂ ನಾಶಗ್ರಸ್ತವಾಗಿರುವವು ಸಮುದ್ರ ಆಕಾಶಗಳಂತೆ ಸಂಸಾರಕ್ಕೆ ಪಾರವೇ ಕಾಣುವದಿಲ್ಲ ದುಷ್ಪುತ್ರರಂ ಹೆತ್ತ ನಾರಿಯಂತೆ ಬುದ್ಧಿಯು ಸ್ವದೋಷಗಳಿಂ ದುಃಖಪಡುತ್ತಿರುವದು ರಾಗದ ಪ್ರಾಬಲ್ಯದಿಂ ವಿರಾಗವು ಓಡಿಹೋಯಿತು ದೃಷ್ಟಿಯು ಧೂಳಿಯಿಂ ವ್ಯಥೆಪಡುವಂತೆ ರಜೋಗುಣದಿಂ ವ್ಯಾಕುಲವಾಗಿರುವದು ತಮಸ್ಸಿನ ಆಧಿಕ್ಯದಿಂ ಸತ್ವದ ಪ್ರಕಾಶವು ಅಡಗಿರುವುದರಿಂದ ತತ್ವದ ಮಾರ್ಗವೇ ಗೋಚರವಾಗುವುದಿಲ್ಲ ಸ್ಥಿತಿಗೆ ಸ್ಥಿತಿಯೇಯಿಲ್ಲದ್ದರಿಂದ ಮೃತ್ಯುವೇ ಎದುರಾಗಿರುವದು ಧೈರ್ಯವು ಪಲಾಯನವಾದ್ದರಿಂದ ತುಚ್ಛ ವಿಷಯದಲ್ಲಿಯೇ ರತಿಯುಂಟಾಗುವದು ಶರೀರವು ಬಾಲ್ಯದಿಂದಲೂ, ಅಭ್ಯಾಸವಾಗಿಬಂದ ಬೀಳುವ ರೀತಿಯನ್ನೇ ನೋಡುತ್ತಿರುವದು ಮೋಹಾಕುಲವಾದ ಬುದ್ಧಿಯು ಧೂಮಾವೃತವಾದ ಅಗ್ನಿಜ್ವಾಲೆಯಂತಿರುವದು ಜರಯೆಂಬುದು ಜ್ವರದಂತೆ ಸಂತಾಪಪಡಿಸುವದು ತಾರುಣ್ಯವು ತಿರುಣ್ಯವೇಷವಿಲ್ಲದೆ ಪುರುಷರಿಂದ ಕಡಿಸಲ್ಪಡುವದು ಅಸತ್ಯವೇ ಸತ್ಯವಾಗಿ ಕಾಣುವದಲ್ಲದೆ ಸತ್ಯದ ವಾರ್ತೆಯೇ ಕೇಳ್ಪಡುವುದಿಲ್ಲ ಮನಸ್ಸಿನ ಮನನವು ನಶ್ವರ ಪದಾರ್ಥಗಳಲ್ಲಿ ನೆಲೆಸಿದ್ದರಿಂದ ಮೈತ್ರಿಯೆಂಬುವದು ಓಡಿಹೋಯಿತು ಕರುಣೆಯ ಋಣಾನುಬಂಧವೇ ತೀರಿತು ಮುದಿತೆಗೆ ಉದಯವೇ ಇಲ್ಲವು, ಉಪೇಕ್ಷೆಯು ಅಪೇಕ್ಷೆಯಾಗಿರುವದು ಧೈರ್ಯಕ್ಕೆ ಅಧೈರ್ಯವುಂಟಾಗಿರುವದ್ದರಿಂದ ಜನಗಳು ಸ್ವರ್ಗನರಕಗಳಲ್ಲಿ ಹಾರಿ ಹಾರಿ ಬೀಳುತ್ತಿರುವರು ದುರ್ಜನರ ಪ್ರಾಬಲ್ಯದಿಂದ ಸಜ್ಜನರ ಸಂಗತಿಯೇ ದುರ್ಲಭವಾಯಿತು ವಸ್ತುಗಳೆಲ್ಲವೂ ಬಂದು ಹೋಗತಕ್ಕಂಥವುಗಳಾದ್ದರಿಂದ ನಶ್ವರವಾದ ಆ ವಸ್ತುಗಳಲ್ಲಿ ಸೇರಿದ ಭಾವನೆಯು ಸಂಸಾರ ಬಂಧನಕ್ಕೆ ಸಾಧನವಾಗಿರುವದು ಪ್ರಾಣಿಗಳ ಪರಂಪರೆಯು ಪುಂಪುಂಯಾಗಿ ಎಲ್ಲಿಗೋ ಹೋಗುವದು ದಿಕ್ಕುಗಳು ದಿಕ್ಕಿಲ್ಲದೆ ಓಡುವವು ಶೈಲಗಳು ಶೀಳಿಹೋಗುವವು ಆಕಾಶಕ್ಕೆ ಪ್ರಕಾಶ ತಪ್ಪುವದು ವಾಯುವಿನ ಆಯುಸ್ಸೇ ಕೊಡೆದುಹೋಗುವದು ಸಮುದ್ರಗಳಿಗೆ ನೀರಿನ ದರಿದ್ರ ದೋಷ ಬರುವದು ಉರಿಯುವ ಅಗ್ನಿಯೇ ಉರಿದು ಬೀಳುವದು ಧರಣಿಗೆ ಧೈರ್ಯ ತಪ್ಪುವದು ಸಿದ್ಧರು ಅಸಿದ್ಧರೂಪರಾಗುವರು ಇಂದ್ರರು ಇಂದ್ರಜಾಲ ಪದಾರ್ಥವಾಗುವರು ಯಮನಿಗೆ ಸ್ಥಿತಿನಿಯಮ ತಪ್ಪುವದು ಸೋಮನು ಶಾಮನಾಗಿ ವ್ಯೋಮದ ಕಪ್ಪಿನಲ್ಲಿ ಸೇರಿಕೊಳ್ಳುವನು ಮಾರ್ತಾಂಡನ ಮಂಡಲವು ಖಂಡ ಖಂಡವಾಗುವದು ವಿಧಿಗೆ ವಿಧಿಲಿಪಿ ತಪ್ಪುವದು ಹರಿಹರರು ಹಾರಿಹೋಗುವರು ಕಾಲನಿಗೆ ನ ಕಾಲ ಬರುವದು ಹೀಗಿರುವಲ್ಲಿ ನಮ್ಮ ಸ್ಥಿತಿಯನ್ನು ನಾವು ಹ್ಯಾಗೆ ನಂಬಬೇಕು ವಾಙ್ಮನಸ್ಸುಗಳಿಗೂ ಇಂದ್ರಿಯಗಳಿಗೂ ಅಗೋಚರವಾದ ಬ್ರಹ್ಮವೆಂಬ ಒಂದಾನೊಂದು ವಸ್ತುವಿನಿಂದ ಈ ಪ್ರಕಾರವಾಗಿ ಪ್ರಪಂಚವೆಲ್ಲವೂ ಮಾಯೆಯಾಗಿ ಮಾಡಲ್ಪಡುವದು ಅಹಂಕಾರಗಳಲ್ಲಿ ಕಾಲರೂಪವಾದ ಈ ಬ್ರಹ್ಮದಿಂ ಬಾಧಿಸಲ್ಪಡದಿರುವವನು ಯಾವನೂ ಇಲ್ಲ ಇದರಿಂದ ಸೂರ್ಯಚಂದ್ರಾದಿಗಳು ಗಿರಿಯ ಕಲ್ಲುಗಳಂತೆ ಸೆಳೆಯಲ್ಪಡುವರು ಸುರಾಸುರರಿಗೆ ಆಸ್ಪದವಾದ ಭೂಗೋಳವು ಜ್ಯೋತಿಶ್ಚಕ್ರದಿಂದಾವರಿಸಲ್ಪಡುವದು ಸ್ವರ್ಗದಲ್ಲಿ ದೇವತೆಗಳು ಭೂಲೋಕದಲ್ಲಿ ಮರ್ತ್ಯರು. ಪಾತಾಳದಲ್ಲಿ ಸರ್ಪಗಳೂ ಸಹ ಸಂಕಲ್ಪಮಾತ್ರದಿಂ ಕಲ್ಪಿತವಾಗಿ ಹಾಳುಮಾಡಲ್ಪಡುವವು ಪರಮೇಶ್ವರನಿಂದ ಶರೀರವು ಭಸ್ಮವಾಗಿ ಮಾಡಲ್ಪಟ್ಟಾಗ್ಯೂ ಅನಂಗನಾಗಿಯೇ ಅವನಿಗೆ ಸರ್ವಮಂಗಳೆಯ ಸಂಗವನ್ನುಂಟುಮಾಡಿದ ಕಾಮನು ಪರಾಕ್ರಮದಿಂ ಲೋಕವೆಲ್ಲವನ್ನೂ ಆಕ್ರಮಿಸಿಕೊಂಡಿರುವನು. (ಸಶೇಷ)

ಪಂಚಾಚಾರ್ಯಪ್ರಭಾ.

೧೯೪೫ನೆಯ ಜನವರಿ ತಾ|| ೧೫ನೇ ಸೋಮವಾರ

ಮಾನವಧರ್ಮ

ಸಮಸ್ತ ಜನ್ಮಗಳಲ್ಲಿ ಮಾನವಜನ್ಮವೇ ಶ್ರೇಷ್ಠವಾದ ಜನ್ಮವಾಗಿರುತ್ತದೆ. ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಪುರುಷಾರ್ಥಗಳನ್ನು ಪಡೆಯುವ ಸಾಮರ್ಥ್ಯವು ಈ ಮಾನವನಿಗಲ್ಲದೆ ಇತರ ಯಾವ ಪ್ರಾಣಿವರ್ಗಕ್ಕೂ ಇರುವುದಿಲ್ಲ. ಈ ಪುರುಷಾರ್ಥಗಳು ವಿವೇಕಿಗಳಿಗೆ ಸಿದ್ಧಿಸುವುವಲ್ಲದೆ ವಿವೇಕಶೂನ್ಯರಿಗೆಂದೂ ಸಿದ್ಧಿಸಲಾರವು. ಸೃಷ್ಟಿಕರ್ತನಾದ ಈಶ್ವರನು ಪ್ರತಿಯೊಬ್ಬ ಮಾನವನ ಹೃದಯದಲ್ಲಿಯೂ ಸುಖಸಾಧಕವಾದ ವಿವೇಕವೆಂಬ ರತ್ನವನ್ನು ಇಟ್ಟಿರುತ್ತಾನೆ. ಮುಖ್ಯವಾಗಿ ಮನುಷ್ಯನು ಅನ್ಯಾಯಮಾರ್ಗದಲ್ಲಿ ಕಾಲಿಡದೆ ನ್ಯಾಯವಾದ ಮಾರ್ಗದಲ್ಲಿ ಹೋಗಬೇಕೆಂಬುದೇ ಭಗವಂತನ ಇಚ್ಛೆಯಾಗಿರುವುದರಿಂದ ಆತನ ಸಂಕಲ್ಪದಂತೆ ಪ್ರತಿಯೊಬ್ಬ ಮನುಷ್ಯನೂ ತ್ರಿಕರಣದಲ್ಲಿಯೂ ಹಿಂಸಾ, ಕ್ರೌರ್ಯ, ಅಪಕಾರ ಮುಂತಾದ ಅಧರ್ಮಗಳನ್ನು ಸ್ಮರಿಸದೆ ಅಹಿಂಸಾ, ಸತ್ಯ, ಅಸ್ತೇಯಾದಿ ಧರ್ಮಗಳನ್ನು ಪರಿಪಾಲಿಸುತ್ತ ಬಂದರೆ, ಅವನು ಪರಮ ಅನುಗ್ರಹಕ್ಕೆ ಪಾತ್ರನಾಗುವನು.

> ಯಾಂತಿ ನ್ಯಾಯಪ್ರವೃತ್ತಸ್ಯ ತಿರ್ಯಂಚೋಪಿ ಸಹಾಯತಾಂ |
> ಅಪಂಥಾನಂ ತು ಗಚ್ಛಂತಂ ಸೋದರೋಪಿ ವಿಮುಂಚತಿ ||

ನ್ಯಾಯಮಾರ್ಗವನ್ನು ಅನುಸರಿಸಿದವನಿಗೆ ವಿವೇಕವಿಲ್ಲದ ಪಶುಪಕ್ಷ್ಯಾದಿಗಳೂ ಸಹ ಸಹಾಯವಮಾಡುತ್ತವೆ. ನ್ಯಾಯಮಾರ್ಗವನ್ನು ಬಿಟ್ಟು ಅಮಾರ್ಗದಲ್ಲಿ ಹೋಗುವವನಿಗೆ ಅವನ ಸಹೋದರರೂ ಸಹ ಶತ್ರುಗಳಾಗುತ್ತಾರೆ, ಎಂಬ ನೀತಿವಾಕ್ಯವನ್ನು ಪರ್ಯಾಲೋಚಿಸಿದರೆ ಅನ್ಯಾಯವಮಾಡುವ ಮನುಷ್ಯನಿಗೆ ಪರ್ವತದಂಥ ಕಷ್ಟಗಳು ಒದಗಿದರೂ ಆ ಕಷ್ಟಪರಂಪರೆಯಲ್ಲಿಯೂ ಇಂದ್ರಜಿತುವಿನಂತೆ ಉತ್ತರಕ್ಷಣದಲ್ಲಿಯೇ ನಾಶವಾಗುವನು.

ಇದಕ್ಕೆ ರಾಮಚಂದ್ರನೇ ಉದಾಹರಣೆಯಾಗಿರುತ್ತಾನೆ. ರಾಮನ ಸಚ್ಚರಿತ್ರೆಗೆ ಮೆಚ್ಚಿ ಕಾಡಿನಲ್ಲಿ ಸ್ವೇಚ್ಛಾವಿಹಾರಿಗಳಾದ ಕಪಿಗಳೂ ಸಹ ಧೃಢಪ್ರೇರಿತರಾಗಿ ರಾಮನ ಕಷ್ಟಪರಿಹಾರದಲ್ಲಿ ಬಾಗಿಯಾದುವು. ಸತ್ಯಶೀಲನಾದ ರಾಮನ ಬಗ್ಗೆ ಅನ್ಯಾಯವನ್ನು ಮಾಡಿದ ರಾವಣನಿಗೆ ಆತನ ತಮ್ಮನಾದ ವಿಭೀಷಣನೂ ಸಹ ವಿರೋಧಿಯಾಗಿ ರಾಮನಿಗೆ ಸಹಾಯವಮಾಡಬೇಕಾಯಿತು. ಇದರಂತೆ ಪರಿಕ್ಷಿತ್ತು, ಪಾಂಡವಾದಿ ಮಹಾರಾಜರೂ ನ್ಯಾಯವನ್ನು ಪರಿಪಾಲಿಸುವದಕ್ಕಾಗಿ ಎಷ್ಟೋ ಕಷ್ಟಗಳನ್ನನುಭವಿಸಿದರು. ಕೊನೆಗೆ ಅವರಿಗೆ ದೇವತೆಗಳು ಸಹ ಪ್ರತ್ಯಕ್ಷರಾಗಿ ಬೇಡಿದ ವರಗಳನ್ನು ದಯಪಾಲಿಸಿದರೆಂಬುದು ಜಗತ್ಪ್ರಸಿದ್ಧವೇ ಅಹ. ಅಧರ್ಮವನ್ನಾಚರಿಸುವದರಿಂದ ಸುಖವು ದೊರೆಯುತ್ತದೆಂದು ಒಂದುವೇಳೆ ತೋರಿದರೂ ಅಂಥ ಅಧರ್ಮದಲ್ಲಿ ಪ್ರವರ್ತಿಸದಿರುವುದೇ ಮನುಷ್ಯನ ಕರ್ತವ್ಯವು. ಮಾಂಸವನ್ನು ತಿನ್ನುವ ಆಶೆಯಿಂದ ಹೋಗಿ ಜಾಲದಲ್ಲಿ ಸಿಕ್ಕು ಪ್ರಾಣವನ್ನು ಒಪ್ಪಿಸುವ ಮೀನಿನಂತೆ, ಸುಖವೆಂದು ಭ್ರಮಿಸಿ ಅಧರ್ಮದಲ್ಲಿ ಮನಗೊಟ್ಟರೆ ನಿಶ್ಚಯವಾಗಿಯೂ ಪರಿಣಾಮದಲ್ಲಿ ದುಃಖವುಂಟಾಗುವುದಲ್ಲದೆ ಸುಖವು ಮಾತ್ರ ಎಂದೂ ಉಂಟಾಗಲಾರದು. ಮನಸ್ಸೆಂಬುದು ಬಹು ಚಂಚಲಸ್ವಭಾವವುಳ್ಳದ್ದರಿಂದ ಸಂಸರ್ಗದೋಷದಿಂದ ಒಂದೊಂದು ಕಾಲದಲ್ಲಿ ಅಧರ್ಮವು ಧರ್ಮವಾಗಿಯೂ ಧರ್ಮವು ಅಧರ್ಮವಾಗಿಯೂ ತೋರುವುದುಂಟು. ಇಂಥ ತಪ್ಪುತಿಳಿವಳಿಕೆಯನ್ನು ತಿದ್ದಿ ಧರ್ಮಾಧರ್ಮಸ್ವರೂಪವನ್ನು ಸ್ಥಾಪಿಸುವದಕ್ಕಾಗಿಯೇ ಭಗವಂತನು ರಾಜರನ್ನೂ ಗುರುಗಳನ್ನೂ ನಿರ್ಮಿಸಿರುತ್ತಾನೆ. ರಾಜರು ಪ್ರಜೆಗಳನ್ನೂ, ಗುರುಗಳು ಶಿಷ್ಯರನ್ನೂ ತಿದ್ದಿ ನ್ಯಾಯವಾದಿಗಳನ್ನಾಗಿಯೂ, ಪಾಪಭೀರುಗಳನ್ನಾಗಿಯೂ ಮಾಡುತ್ತಿರಬೇಕು. ರಾಜರು ಬಹಿರಂಗವಾಗಿ ಮಾಡುವ ಪ್ರಜೆಗಳ ಅನ್ಯಾಯವನ್ನು ತಪ್ಪಿಸಬೇಕು. ಗುರುಗಳು ಅಂತರಂಗದಲ್ಲಿ ಶಿಷ್ಯರು ಮಾಡುವ ಅನ್ಯಾಯಗಳನ್ನು ತಪ್ಪಿಸಬೇಕು. ಹೀಗೆ ರಾಜಶಿಕ್ಷಣದಿಂದಲೂ ಗುರುವಿನ ಹಿತೋಪದೇಶದಿಂದಲೂ ಮಾನವರ ಬಹಿರಂಗ ಅಂತರಂಗಗಳೆರಡೂ ಪರಿಶುದ್ಧಗಳಾಗುತ್ತ ಹೋದರೆ ಅವರು ಪುಟಕ್ಕೆ ಹಾಕಿದ ಚಿನ್ನದಂತೆ ಸರ್ವತ್ರ ಮಾನ್ಯರಾಗುವರು. ಮಾವುತನು ಮದಿಸಿದ ಆನೆಯನ್ನು ಅಂಕುಶಪ್ರಹಾರದಿಂದ ತಿದ್ದುವಂತೆ ರಾಜರು ತಮ್ಮ ಅಧಿಕಾರದರ್ಪದಿಂದ ಪ್ರಜೆಗಳನ್ನು ಚೌರ್ಯಾದ್ಯಧರ್ಮಮಾರ್ಗದಲ್ಲಿ ಕಾಲಿಡದಂತೆ ಮಾಡಬೇಕಾಗುವದು. ಅದರಂತೆ ಗುರುಗಳು ಶಿಷ್ಯರ ಡೊಂಕಾದ ಮನಸ್ಸನ್ನು ತಿದ್ದಿ ಸನ್ಮಾರ್ಗದಲ್ಲಿ ಪ್ರವರ್ತಿಸುವಂತೆ ಮಾಡಬೇಕಾದರೆ ಮೂಲಗುರುಗಳು ಬರೆದಿಟ್ಟ ಧರ್ಮಶಾಸ್ತ್ರವನ್ನು ಚೆನ್ನಾಗಿ ಓದಬೇಕು. ಅದರಲ್ಲಿ ಹೇಳಿದಂತೆ ತಾವು ಮೊದಲು ಅನುಷ್ಠಾನಮಾಡಬೇಕು. ಇಂದ್ರಿಯದಮನವನ್ನು ಮಾಡಿ ವಾಕ್ಸಿದ್ಧಿಯನ್ನು ಹೊಂದಬೇಕು. ಕಾಯವಾಙ್ಮನಸ್ಸುಗಳಲ್ಲಿ ಏಕಾಕಾರವಾದ ವೃತ್ತಿಯನ್ನು ಅವಲಂಬಿಸಬೇಕು. ಶರಣಾಗತರಾಗಿ ಬಂದ ಶಿಷ್ಯರಿಗೆ ನಿಜತತ್ವವನ್ನು ಬೋಧಿಸಬೇಕು. ಹೀಗೆ ಮಾಡುವುದರಿಂದ ಶಿಷ್ಯರ ಆತ್ಮವು ಪರಿಶುದ್ಧವಾಗಿ ಬಾಹ್ಯರಾಜ್ಯದಲ್ಲಿ ರಾಜನಿಂದ ಪ್ರಜೆಗಳು ಅಭಿವೃದ್ಧಿ ಹೊಂದುವಂತೆ ಆತ್ಮೀಯರಾಜ್ಯದಲ್ಲಿ ಗುರುಗಳಿಂದ ಶಿಷ್ಯರು ಸೌಖ್ಯವನ್ನನುಭವಿಸುತ್ತಾರೆ. ಹಾಗಿಲ್ಲದೆ ಗುರುಗಳು ಶಿಷ್ಯರ ಮನೆಯಲ್ಲಿ ಕಾಣಿಕೆಯನ್ನು ಮಾತ್ರ ತೆಗದುಕೊಂಡು ಅವರಿಗೆ ಧರ್ಮಾಧರ್ಮಗಳನ್ನು ಬೋಧಿಸದಿದ್ದಲ್ಲಿ ಪಾಠವನ್ನು ಹೇಳದೆ ನಿದ್ರಿಸುತ್ತಿರುವ ಉಪಾಧ್ಯಾಯನಿಂದ ವಿದ್ಯಾರ್ಥಿಗಳೆಲ್ಲರೂ ಮೂಢರಾಗುವಂತೆ ಉದಾಸೀನರಾದ ಗುರುಗಳಿಂದ ಶಿಷ್ಯರೆಲ್ಲರೂ ಮೂಢರಾಗುತ್ತಾರೆ. ಹೀಗೆ ಮಾನವರು ಮೂಢಾತ್ಮರಾಗುತ್ತ ಒಂದರೆ ಪಾಪಪುಣ್ಯವಿಚಾರಶೂನ್ಯರಾಗಿ ಈಶ್ವರನು ಅನುಗ್ರಹಿಸಿದ ವಿವೇಕದಿಂದೊಡಗೂಡಿದ ಮಾನವಜನ್ಮಕ್ಕೆ ಫಲವೇ ಇಲ್ಲದಂತಾಗುತ್ತದೆ. ಪಾಪಕರ್ಮದಿಂದ ದುಃಖವೂ, ಪುಣ್ಯಕರ್ಮದಿಂದ ಸುಖವೂ ಉಂಟಾಗುವವೆಂದು ಧರ್ಮಶಾಸ್ತ್ರವು ಮಾನವನಿಗೆ ಮಾತ್ರ ಬೋಧಿಸಲ್ಪಟ್ಟಿರುವುದೇ ಹೊರತು ಪಶುಪಕ್ಷ್ಯಾದಿಗಳಿಗೆ ಬೋಧಿಸಲ್ಪಟ್ಟಿಲ್ಲ. ಮಾನವರು ದೇಹವಾಕ್ಮನಸ್ಸುಗಳಲ್ಲಿ ಬಹುಮಟ್ಟಿಗೆ ಪರಿಶುದ್ಧರಾಗಿರಬೇಕು. ಅಂದರೆ ನಮ್ಮ ಆತ್ಮವು ಸ್ಥೂಲದೇಹದಲ್ಲಿ ಕಳ್ಳತನ, ಜಾರತನ, ಹಿಂಸಾ ಮುಂತಾದ ಅಧರ್ಮಗಳನ್ನು ಮಾಡದಂತೆ ನೋಡಿಕೊಳ್ಳಬೇಕು. ವಾಕ್ಯದಲ್ಲಿ ಯಾರಿಗೂ ಕಠಿಣೋಕ್ತಿಗಳನ್ನೂ, ಅಸತ್ಯವನ್ನೂ ಆಡದಂತೆ ನೋಡಿಕೊಳ್ಳಬೇಕು. ಮನಸ್ಸನ್ನು ಯಾರಿಗೂ ವಂಚಿಸದಂತೆಯೂ ಸನ್ಮಾರ್ಗದಲ್ಲಿ ಪ್ರವೇಶಿಸುವಂತೆಯೂ ಮಾಡಿಕೊಂಡು ಅಧರ್ಮಚಿಂತನೆಯನ್ನು ಮಾಡದೆ ಧರ್ಮಚಿಂತನೆಯಲ್ಲಿಯೇ ಆಸಕ್ತವಾಗಿರುವಂತೆ ನೋಡಿಕೊಳ್ಳಬೇಕು. ಹೀಗೆ ಜೀವಾತ್ಮರು ತಮ್ಮ ಅಧೀನದಲ್ಲಿರುವ ಮನಸ್ಸನ್ನೂ, ವಾಕ್ಯವನ್ನೂ, ದೇಹವನ್ನೂ ಅಧರ್ಮಮಾರ್ಗದಲ್ಲಿ ಹೋಗದಂತೆ ಮಾಡಿಕೊಂಡಲ್ಲಿ ಪರಮಾತ್ಮನು ಅಂತಹ ಜೀವಾತ್ಮರಲ್ಲಿ ಪರಮಪ್ರೀತಿಯುಳ್ಳವನಾಗಿ ಮೋಕ್ಷವೆಂಬ ಮಹಾಸುಖವನ್ನು ಅನುಗ್ರಹಿಸುತ್ತಾನೆ. ಅದಿಲ್ಲದೆ ಈಶ್ವರಸಂಕಲ್ಪಕ್ಕೆ ವಿರುದ್ಧವಾಗಿ ಚೌರ್ಯಪ್ರಾಣಿಹಿಂಸಾದಿ ದುಷ್ಕರ್ಮಗಳನ್ನೂ ಮುಖದಲ್ಲಿ ಅಪವಿತ್ರ ವಾಕ್ಯಗಳನ್ನೂ ಮನಸ್ಸಿನಲ್ಲಿ ಧರ್ಮವಿರುದ್ಧವಾದ ದುರಾಲೋಚನೆಯನ್ನೂ ಮಾಡುತ್ತ ಬಂದಲ್ಲಿ ಈಶ್ವರನು ಕುಪಿತನಾಗಿ ಕಷ್ಟಕ್ಕೀಡುಮಾಡುವನು. ಇದರಿಂದ ಈಶ್ವರನಿಂದ ಬಂದ ಸವಿಶ್ರಾಂತಿಕಾರವನ್ನು ಮಾನವನೇ ಕಳೆದುಕೊಂಡು ಯಾವಾಗಲೂ ನರಕಕೂಪದಲ್ಲಿ ನರಳಬೇಕಾಗುವುದು. ಈ ಪಾಪಪುಣ್ಯರೂಪವಾದ ಸಾಮಾನ್ಯಧರ್ಮವನ್ನು ಪ್ರಥಮತಃ ಪ್ರತಿಯೊಬ್ಬನೂ ಪಾಲಿಸುತ್ತ ಮುಂದೆ ತನ್ನ ಮತದ ವಿಶೇಷಧರ್ಮವನ್ನು ಅನುಷ್ಠಿಸಬೇಕು. ಆದ್ದರಿಂದ ಪ್ರತಿಯೊಬ್ಬ ಮಾನವನೂ ನೀತಿಗರ್ಭಿತವಾದ ಮನುಷ್ಯಸಾಮಾನ್ಯಧರ್ಮವನ್ನು ಪಾಲಿಸುತ್ತ ಉತ್ತಮವಾದ ಮಾನವಜನ್ಮವನ್ನು ಸಫಲಗೊಳಿಸುವಂತೆ ಪರಮೇಶ್ವರನು ಸರ್ವರಿಗೂ ಸದ್ಬುದ್ಧಿಯನ್ನೀಯಲಿ.

ಇಟಲಿ ರಂಗದಲ್ಲಿ ಹಿಮ ಅಡ್ಡಿಯಾಗಿದೆ

ಇಟಲಿ ರಂಗದಲ್ಲಿ ವಿಪರೀತ ಹಿಮ ಸುರಿದು ಐದು ಮತ್ತು ಆರನೇ ಸೈನ್ಯಗಳ ಮುನ್ನಡೆಗೆ ಬಹಳ ಅಡ್ಡಿಯಾಗಿದೆ. ಕೆಲವು ಕಡೆ ಹೆಚ್ಚೆ ಮುಳುಗುವಷ್ಟು ಹಿಮ ಬಿದ್ದಿದೆ ಎಂಬುದಾಗಿ ಅಲ್ಲಿನ ವರದಿ ತಿಳಿಸುತ್ತದೆ.

ಯುದ್ಧವಾರ್ತೆ.

ಮಲಯದ ಮೇಲೆ ದಾಳಿ

ಭಾರತದಲ್ಲಿರುವ ನೆಲೆಗಳಿಂದ ಅಮೆರಿಕನ್ ಸೂಪರ್ ಫಾರ್ಟ್ರೆಸ್ ವಿಮಾನಗಳು ಹೊರಟು ಮಲಯದಲ್ಲಿರುವ ಮಿಲಿಟರಿ ಸಾಧನಗಳ ಮೇಲೆ ದಾಳಿ ಮಾಡಿದವು. ಈ ದಾಳಿ ಹಗಲಲ್ಲೇ ನಡೆಯಿತು. ದಾಳಿಗೆ ಹೊರಟ ವಿಮಾನಗಳ ಸಂಖ್ಯೆಯನ್ನು ತಿಳಿಸಿಲ್ಲ. ಸಿಂಗಪುರದ ಮೇಲೆಯೂ ದಾಳಿ ನಡೆದಿರಬೇಕೆಂದು ಹೇಳಲಾಗುತ್ತಿದೆ.

ಸಿಮ್ಲಾ-ಭಾರತ ಸಂಬಂಧ ತಪ್ಪಿದೆ

ಪ್ರಚಂಡ ಹಿಮದ ಬಿರುಗಾಳಿ ಬೀಸಿದುದರ ಪರಿಣಾಮವಾಗಿ ಸಿಮ್ಲಾ ನಗರವು ಉಳಿದ ಭಾರತದ ಸಂಬಂಧವನ್ನೆಲ್ಲ ಕಳೆದುಕೊಂಡಿದೆ. ಜನವರಿ ಐದರಿಂದಲೇ ಟೆಲಿಫೋನ್ ಸಂಬಂಧ ತಪ್ಪಿತು. ೧೦ ನೆಯ ತಾರೀಖು ಬೆಳಗಿನವರೆಗೆ ಕೆಲಸಮಾಡುತ್ತಿದ್ದ ಟೆಲಿಗ್ರಾಫ್ ವ್ಯವಸ್ಥೆ ಕೂಡ ಈಗ ತಪ್ಪಿಹೋಗಿದೆ. ಕಾಲ್ಕಾ ಸಿಮ್ಲಾ ರೈಲ್ವೆ ಗಾಡಿ ನಿಂತಿದೆ. ಸಂಪರ್ಕಸೌಕರ್ಯವನ್ನು ಪುನರುಜ್ಜೀವನಗೊಳಿಸಲು ಪ್ರಯತ್ನಗಳಾಗುತ್ತಿವೆ.

ಬರ್ಮಾರಂಗದ ಜಯಕ್ಕೆ ಕಾರಣ

ಕಳೆದ ವರ್ಷ ಮಳೆಗಾಲ ಆರಂಭವಾದಾಗ ನಾವು ನಮ್ಮ ಯುದ್ಧ ನೀತಿಯಲ್ಲಿ ಮಾಡಿದ ಮಾರ್ಪಾಡೇ ಇಂದು ಬರ್ಮಾ ರಂಗದ ದೆಸೆ ತಿರುಗಲು ಕಾರಣ ಎಂಬುದಾಗಿ ಲಂಡನ್ನಿಗೆ ಬಂದಿರುವ ಬರ್ಮಾ ರಂಗದ ಸೇನಾಧಿಕಾರಿಯೋರ್ವರು ಪತ್ರಿಕೋದ್ಯೋಗಿಗಳೊಡನೆ ಮಾತನಾಡುತ್ತ ತಿಳಿಸಿದರು. "ಮಳೆಗಾಲ ಆರಂಭವಾದೊಡನೆ ಕಾಳಗ ನಿಲ್ಲಿಸಬೇಕೆಂಬ ಹಿಂದಿನ ವರ್ಷಗಳ ಸಂಪ್ರದಾಯವನ್ನು ಮುರಿದು ಈಸಾರಿ ಯುದ್ಧವನ್ನು ಮುಂದುವರಿಸಿದುದರಿಂದಲೇ ಭಾರತದೊಳಕ್ಕೆ ನುಗ್ಗಿ ಬಂದು ಇಂಫಾಲ್‌ನಲ್ಲಿ ಬೀಡು ಬಿಟ್ಟಿದ್ದ ಜಪಾನರನ್ನು ಹೊಡೆದೋಡಿಸಲು ಸಾಧ್ಯವಾಯಿತು. ಎಷ್ಟೋ ದಳಗಳು ಮಳೆಯಲ್ಲಿ ನನೆಯುತ್ತ ಪ್ರವಾಹದಲ್ಲಿ ಈಜುತ್ತ ಕಾಳಗ ಮುಂದುವರಿಸಿದವು. ಸುಮಾರು ೨೦೦ ಮೈಲಿಗಳ ಆಚೆಯವರೆಗೆ ಜಪಾನ್ ಸೇನೆಗಳನ್ನು ಬೆನ್ನಟ್ಟಿಕೊಂಡು ಹೋಗಿವೆ. ಘೋರಾರಣ್ಯಗಳಲ್ಲಿ ಉಳಿಯಬೇಕಾಗಿದ್ದ ನಮ್ಮ ಸೇನೆಗಳು ಈಗ ಮಧ್ಯ ಬರ್ಮಾದ ಬಯಲಿನಲ್ಲಿ ಬೀಡು ಬಿಟ್ಟಿವೆ" ಎಂದು ವಿವರಿಸಿದರು.

ಅಕ್ಯಾಬ್ ಬಂದರಿನ ಮೇಲೆ ಶತ್ರು ದಾಳಿ

ಕಳೆದ ಮಂಗಳವಾರ ಅಕ್ಯಾಬ್ ಬಂದರಿನ ಮೇಲೆ ೬ ಜಪಾನಿ ವಿಮಾನಗಳು ದಾಳಿ ನಡೆಸಿದವು ಎಂದು ಆಗ್ನೇಯ ಏಷ್ಯಾ ಕಮ್ಯಾಂಡ್ ಪ್ರಕಟನೆ ತಿಳಿಸಿದೆ. ದಾಳಿ ಮಾಡಲು ಬಂದ ಶತ್ರು ವಿಮಾನಗಳ ಪೈಕಿ ೫ ವಿಮಾನಗಳನ್ನು ಮಿತ್ರ ವಿಮಾನಗಳು ಹೊಡೆದುರುಳಿಸಿದವು. ಜಪಾನಿ ವಿಮಾನ ದಾಳಿಯು ಅಂತಹ ವಿಪತ್ತನ್ನೇನೂ ಉಂಟುಮಾಡಿಲ್ಲ. ಸಾವು ನೋವಾಗಲಿ ಅಥವಾ ನಷ್ಟವಾಗಲಿ ಸಂಭವಿಸಿಲ್ಲವೆಂದು ಹೇಳಲಾಗಿದೆ.

ಬರ್ಮಾರಂಗದಲ್ಲಿ ಮಿತ್ರರ ಮುನ್ನಡೆ

ಶ್ವೇಬೊ ಪೂರ್ಣವಾಗಿ ಮಿತ್ರ ದಳಗಳ ವಶವಾಗಿದೆ. ಕೆಲ ದಳಗಳು ಆ ನಗರದ ದಕ್ಷಿಣಾಭಿಮುಖವಾಗಿ ನುಗ್ಗಿ ಹೊನ್ಸವಾಕ್ಕೆ ೧೯ ಮೈಲಿ ಉತ್ತರದಲ್ಲಿ ಯೇ-ಯು ರೈಲ್ವೆಯ ಮೇಲಿರುವ ಬುಡಾಲಿನ್ ನಗರಕ್ಕೆ ಮುತ್ತಿಗೆ ಹಾಕಿವೆ. ಕುರುಚಲು ಗಿಡಗಳ ಮಧ್ಯೆ ಬಚ್ಚಿಟ್ಟ ಬಂಕರುಗಳಿಂದ ಶತ್ರುಗಳು ಪ್ರತಿಭಟಿಸುತ್ತಿದ್ದಾರೆ. ಅಕ್ಯಾಬಿನ ಈಶಾನ್ಯದಲ್ಲಿ ೧೪ ಮೈಲಿ ದೂರದಲ್ಲಿ ಕಲದಾನ್ ಪಶ್ಚಿಮ ತೀರದ ಮೇಲಿರುವ ಪೆನ್ನಗಾಯನ್ ಜಹಜು ನಿಲ್ದಾಣವನ್ನು ಭಾರತೀಯ ದಳಗಳು ಪ್ರವೇಶಿಸಿವೆ.

ಮಣಿಲಾ ಕಡೆ ಪ್ರಗತಿ

ಮೆಕ್ ಆರ್ಥರರ ಸೇನೆಗಳು ೨೦ ಮೈಲಿ ದೂರ ಒಳಪ್ರಾಂತಕ್ಕೆ ನುಗ್ಗಿ ಬಂದು ಲಿಂಗಾಯೆನ್ ನಗರವನ್ನು ಬಳಸಿಕೊಂಡು ಮುಂದರಿದು ಖಾರಿಗೆ ಬಂದು ಬೀಳುವ ನದಿಯ ದಡವನ್ನು ತಲುಪಿವೆ. ಜಪಾನಿಗಳಿಗೂ ಮಿತ್ರ ಮುಂಚೂಣಿ ಪಡೆಗಳಿಗೂ ಒಂದೆರಡು ಘರ್ಷಣೆಗಳು ಸಂಭವಿಸಿದವಾದರೂ ಜಪಾನಿ ಪ್ರತಿಭಟನೆ ಇನ್ನೂ ದುರ್ಬಲವಾಗಿಯೇ ಇದೆ. ಶತ್ರುವಿನ ಪ್ರತಿಭಟನೆ ಇಲ್ಲದೆ ಅನೇಕ ನಗರಗಳು ಮಿತ್ರ ವಶವಾಗಿವೆ. ಲ್ಯೂಸಾನಿನ ಮಧ್ಯಭಾಗದಲ್ಲಿರುವ ಮೈದಾನ ಪ್ರದೇಶದಲ್ಲೇ ಲ್ಯೂಸಾನ್ ಕದನ ಇತ್ಯರ್ಥವಾಗಬೇಕಾದದ್ದು. ಆ ಪ್ರದೇಶಕ್ಕೆ ಜಪಾನಿಗಳು ಮಣಿಲಾ ಕೊಲ್ಲಿಯಿಂದ ಸೇನೆಗಳನ್ನು ಆತುರಾತುರದಲ್ಲಿ ಕಳಿಸುತ್ತಿದ್ದಾರೆ. ಲ್ಯೂಸಾನಿನಲ್ಲೂ, ಮಣಿಲಾ ಕ್ಷೇತ್ರದಲ್ಲೂ ಛಿದ್ರವಾಗದೆ ಉಳಿದಿರುವ ವಿಮಾನ ಬೀಡುಗಳನ್ನು ಅಮೆರಿಕನ್ ವಿಮಾನಗಳು ಸಂಪೂರ್ಣವಾಗಿ ನಾಶಪಡಿಸುವ ಕಾರ್ಯದಲ್ಲಿ ತೊಡಗಿವೆ. ಲ್ಯೂಸಾನ್ ದಂಡಯಾತ್ರೆಗೆ ಮುಂಚೆಯೇ ಅಮೆರಿಕನ್ ವಿಮಾನಗಳು ದಾಳಿಗಳಿಗಾರಂಭಿಸಿ ಮಣಿಲಾ ಕ್ಷೇತ್ರವನ್ನು ಧ್ವಂಸಮಾಡಿದವು. ಜಪಾನಿಗಳು ಉಪಯೋಗಿಸಬೇಕಾಗಿರುವ ಸೇತುವೆಗಳನ್ನೂ ಇತರ ಮಾರ್ಗಗಳನ್ನೂ ಮಿತ್ರ ವಿಮಾನಗಳು ಪುಡಿ ಪುಡಿ ಮಾಡುತ್ತಿವೆ. ಜಪಾನಿ ನೌಕೆಗಳು ಲಿಂಗಾಯೆನ್ ಕೊಲ್ಲಿಯಲ್ಲಿ ಲಂಗರು ಹಾಕಿರುವ ಮಿತ್ರ ನೌಕೆಗಳ ಮೇಲೆ ಕತ್ತಲಲ್ಲಿ ಮುತ್ತಿಗೆ ಹಾಕಿದವು. ಮಿತ್ರ ಪಡೆಗೆ ಕೊಂಚ ನಷ್ಟವೂ ಆಗಿದೆ

ಜಪಾನಿಗಳಿಗೆ ವಾಹನಗಳ ಮತ್ತು ಸೈನಿಕರ ನಷ್ಟ

ಲ್ಯೂಸಾನಿನ ಪಶ್ಚಿಮತೀರದಲ್ಲಿ ನಾಲ್ಕು ಕಡೆಗಳಲ್ಲಿ ಬಂದಿಳಿದ ಅಮೆರಿಕನ್ ಸೇನೆಗಳು ಪರಸ್ಪರ ಸಂಬಂಧವನ್ನೇರ್ಪಡಿಸಿಕೊಂಡು ಈಗ ೧೫ ಮೈಲಿ ವಿಸ್ತಾರವಾದ ತೀರಪ್ರದೇಶವನ್ನು ತಮ್ಮ ಅಧೀನಪಡಿಸಿಕೊಂಡಿವೆ. ಅಲ್ಲದೆ ಲಿಂಗಾಯೆನ್ ಕೊಲ್ಲಿ ಪ್ರದೇಶದಲ್ಲಿ ಒಂದು ಪಟ್ಟಣವನ್ನೂ ಒಂದು ವಿಮಾನಾಶ್ರಯವನ್ನೂ ತಮ್ಮ ವಶಪಡಿಸಿಕೊಂಡು ನೆರೆಯ ಊರನ್ನೂ ಸಹ ಆಕ್ರಮಿಸಿಕೊಂಡಿವೆ. ಈಗ ಅಮೇರಿಕನ್ನರು ಫಿಲಿಫೈನ್ಸ್ ರಾಜಧಾನಿಯಾದ ಮಣಿಲಾಕ್ಕೆ ಇರುವ ರೈಲ್ವೆ ಮಾರ್ಗಕ್ಕೆ ಪ್ರವೇಶಿಸಿ ನೈರುತ್ಯಾಭಿಮುಖವಾಗಿ ನುಗ್ಗಿ ಬರುತ್ತಿದ್ದಾರೆ. ಈ ಮುನ್ನಡೆಯನ್ನು ತಡೆಗಟ್ಟಲು ಜಪಾನಿಗಳು ಸೇನೆಗಳನ್ನು ರವಾನಿಸುತ್ತಿರುವರಾದರೂ ಅವರ ಮೇಲೆ ಅಮೇರಿಕನ್ ವಿಮಾನಗಳು ಧಾರಾಕಾರವಾಗಿ ಬಾಂಬು ಸುರಿಸುತ್ತಾ ಕಿರುಕುಳ ಕೊಡುತ್ತಿವೆ. ಅಮೆರಿಕನ್ ಸೇನೆಯ ಮುನ್ನುಗ್ಗುವಿಕೆಯಿಂದ ಅಚ್ಚರಿಗೊಂಡು ಭ್ರಮಿಸಿ ಹೋಗಿದ್ದ ಜಪಾನಿಗಳು ಈಗ ಚೇತರಿಸಿಕೊಂಡು ಪ್ರಬಲವಾಗಿ ಪ್ರತಿಭಟಿಸುತ್ತಿದ್ದಾರೆ

ಜರ್ಮನರ ಪ್ರಗತಿ ತಗ್ಗಿದೆ

ಜರ್ಮನ್ ಸೇನಾವ್ಯೂಹದಲ್ಲಿಯ ಸಂಚಾರ ಕೇಂದ್ರವಾದ ಲ್ಯಾರೋಚ್ ನಗರವನ್ನು ಮಿತ್ರ ಸೈನಿಕರು ಈಗ ಸಂಪೂರ್ಣವಾಗಿ ಆಕ್ರಮಿಸಿಕೊಂಡಿದ್ದಾರೆ. ಶತ್ರು ಸೇನಾವ್ಯೂಹದ ಮಧ್ಯಭಾಗಕ್ಕೆ ಹೋಗುವ ರಸ್ತೆಗಳಲ್ಲಿ ಆ ಸೈನಿಕರು ಮುನ್ನುಗ್ಗುತ್ತಿದ್ದಾರೆ. ಶತ್ರು ಸೇನಾನಿ ಫೀ|| ಮಾ|| ಫಾನ್‌ರುನ್‌ಸ್ಟೆಟ್‌ರವರ ಪಡೆಗಳು ಪಶ್ಚಿಮ ಪಾರ್ಶ್ವದ ಅಗ್ರದಿಂದ ಜಯಪ್ರದವಾಗಿ ವಾಪಸಾಗುತ್ತಿವೆ. ಉತ್ತರ ಪಾರ್ಶ್ವದಲ್ಲಿ ಜರ್ಮನರ ಪ್ರತಿಭಟನೆ ಬಿರುಸಾಗಿಯೇ ಇದೆ. ಆದರೂ ಅಮೆರಿಕನ್ ಮೊದಲನೆಯ ಸೈನ್ಯದ ಪಡೆಗಳು ಪ್ರತಿಭಟನೆಯನ್ನು ಎದುರಿಸಿ ಪುನಃ ಅರ್ಧದಿಂದ ಮುಕ್ಕಾಲು ಮೈಲಿ ದೂರ ಆಕ್ರಮಣ ಮಾಡಿವೆ. ಪಶ್ಚಿಮಸೇನಾಪಾರ್ಶ್ವದಲ್ಲಿ ಪರಿಸ್ಥಿತಿ ತೊಡಕಾಗಿದೆ. ಜರ್ಮನರು ಇಲ್ಲಿ ಇಷ್ಟು ದೀರ್ಘಕಾಲ ಪ್ರತಿಭಟಿಸಲು ಅವರಿಗೆ ಸಾಧ್ಯವಿರಲಿಲ್ಲ. ಆದರೆ ಪಶ್ಚಿಮಾಗ್ರದಿಂದ ಪಡೆಗಳನ್ನು ಅವರು ವಾಪಸು ಕರೆಸಿಕೊಂಡಿದ್ದರಿಂದ ಪ್ರತಿಭಟಿಸಲು ಅವರಿಗೆ ಸ್ವಲ್ಪ ಅವಕಾಶ ಸಂಭವಿಸಿತು. ಆಲ್ಸಾಸ್ ಕ್ಷೇತ್ರದಲ್ಲಿ ಜರ್ಮನ್ ಪಡೆಗಳು ಪ್ರತಿಮುತ್ತಿಗೆ ಹಾಕುತ್ತಲೇ ಇವೆ. ಸ್ಟ್ರಾಸ್‌ಬೋರ್ಗ್ ನಗರಕ್ಕೆ ದಕ್ಷಿಣದಲ್ಲಿ ಅವರು ಕೆಲವು ಸ್ಥಳಗಳಿಂದ ಮುಂದೆಹೋಗಿದ್ದಾರೆ. ಆದರೆ ಅಮೆರಿಕನ್ನರು ಜರ್ಮನರನ್ನು ವೀರಾವೇಶದಿಂದ ಎದುರಿಸುತ್ತಿರುವುದರಿಂದ ಜರ್ಮನರ ಪ್ರಗತಿ ಸದ್ಯಕ್ಕೆ ನಿಂತಿದೆ. ರೈನ್-ರೋನ್ ಕಾಲುವೆಯ ಇಕ್ಕಡೆಗಳಲ್ಲೂ ಜರ್ಮನರನ್ನು ಅಮೆರಿಕನ್ ಸೈನಿಕರು ಬೆನ್ನಟ್ಟಿಕೊಂಡು ಹೋಗಿ ಕದನ ಮಾಡಿ ಸೋಲಿಸುತ್ತಿದ್ದಾರೆ.

ಒಬ್ಬನಿಗೆ ದಿನವೊಂದಕ್ಕೆ ೨ ಆಣೆ ಆಹಾರ

ಜಪಾನಿ ಸರ್ಕಾರ ಆಜ್ಞೆ ಮಾಡಿರುವ ರೀತ್ಯಾ ಜಪಾನಿನಲ್ಲಿರುವ ಪ್ರತಿಯೊಬ್ಬ ಪ್ರಜೆಯೂ ದಿನಕ್ಕೆ ೨ ಆಣೆಯಷ್ಟರಲ್ಲೇ ಅವನಿಗೆ ಬೇಕಾಗುವ ಆಹಾರ ಪಡೆಯಲು ತಕ್ಕ ಏರ್ಪಾಡುಗಳನ್ನು ಜಪಾನೀ ವಿಜ್ಞಾನಿಗಳು ಮಾಡುತ್ತಿದ್ದಾರೆ. ಮಿತ್ರರನ್ನೆದುರಿಸಲು ಇದೊಂದು ಸಾಧನವೆಂದು ಗೊತ್ತಾಗಿದೆ. ಈ ನೂತನ ಆಹಾರ ಪರಿಸ್ಥಿತಿ ರೀತ್ಯಾ ಎಲ್ಲ ಪೋಷಕಾಂಗಗಳನ್ನು ಒಳಗೊಂಡ ಆಹಾರ ಎರಡಾಣೆಗೆ ದೊರೆಯುತ್ತದೆ. ಈ ಆಹಾರ ಇನ್ನೂ ಪ್ರಾಯೋಗಿಕ ಅವಸ್ಥೆಯಲ್ಲೇ ಇದೆ. ಇದರಲ್ಲಿ ಹುಳು, ಹುಪ್ಪಟೆ, ನಾಯಿ, ಬೆಕ್ಕು, ಇಲಿ, ಹಾವು ಇವುಗಳ ಮಾಂಸ ಮತ್ತು ಕೆಲವು ಗಿಡಗಳ ಎಲೆ ಮತ್ತು ಬೇರು ಸೇರಿವೆ ಎಂದು ಹೇಳಲಾಗಿದೆ

ಸ್ವೀಕಾರ

ಬಿಜಾಪುರ ಡಿ|| ಅರ್ಜುಣಗಿ ಗ್ರಾಮದಲ್ಲಿರುವ ಮ|| ರಾ|| ಅಂಬಲಿ ಗುರುಲಿಂಗಪ್ಪನವರು ವಿಜಯದಶಮಿಯ ದಿನ ನೆರವೇರಿಸಿದ ಶಮೀ ಪೂಜೆಯ ಕಾಲದಲ್ಲಿಯೂ ಕಾರ್ತಿಕ ಶುದ್ಧ ೧ರಲ್ಲಿ ನಡೆದ ಲಕ್ಷ್ಮೀಪೂಜೆಯ ಕಾಲದಲ್ಲಿಯೂ ಪ್ರಭಾ ಪೋಷಣಕ್ಕಾಗಿ ಸಮರ್ಪಿಸಿದ 2 ರೂಪಾಯಿಗಳು ಮ|| ರಾ|| ಯಮನಪ್ಪ ಸಜ್ಜನ ಹೆಡ್‌ಮಾಸ್ಟರ್ ಅರ್ಜುಣಗಿ ಇವರ ದ್ವಾರಾ ತಲ್ಪಿರುತ್ತವೆ.

— ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ

ಉಜ್ಜಯಿನೀ ಜಗದ್ಗುರುಗಳ ಪುಣ್ಯದಿನೋತ್ಸವ

ಕೊಟ್ಟೂರು

ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ ಶ್ರೈ|| ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯಮಹಾಸ್ವಾಮಿಗಳವರ ಪುಣ್ಯತಿಥಿಯನ್ನು ಇಲ್ಲಿಯ ಬೃಹನ್ಮಠಾಧ್ಯಕ್ಷ ಶ್ರೀ ಭುಜಂಗಭೂಷಣಸ್ವಾಮಿಗಳು ವಿಜೃಂಭಣೆಯಿಂದ ನೆರವೇರಿಸಬೇಕೆಂದು ಡಂಗುರ ಸಾರಿಸಿದ್ದರಿಂದ ಆ ಪ್ರಕಾರ ನಗರ ನಿವಾಸಿಗಳು ಬಹು ಭಕ್ತಿಯಿಂದ ಆಚರಿಸಿದರು. ಉಜ್ಜಯಿನೀ ರೋಡಿನಲ್ಲಿರುವ ಶ್ರೀ ಸೋಮನಾಥ ದೇವಾಲಯದಲ್ಲಿ ಸುವರ್ಣ ಪಂಚಕಲಶಾದಿಗಳಿಂದ ಅಲಂಕರಿಸಿದ ಪಲ್ಲಕ್ಕಿಯಲ್ಲಿ ಶ್ರೀ ಸಿದ್ಧಲಿಂಗ ಶಿವಾಚಾರ್ಯಮಹಾಸ್ವಾಮಿಗಳವರ ಭಾವಪಟವನ್ನು ಮೂರ್ತಗೊಳಿಸಿದ ಮೇಲೆ ಮಹೋತ್ಸವವು ನಾನಾ ವಾದ್ಯ ವೈಭವದಿಂದಲೂ ಕಲಶಕನ್ನಡಿಗಳನ್ನು ಹಿಡಿದ ಸುವಾಸಿನಿಯರಿಂದಲೂ ಪಂಚಾಚಾರ್ಯ ಭಜನ ಸಂಘದವರಿಂದಲೂ ಸಕಲ ಮತದ ಮಹಾಶಯರಿಂದಲೂ ಶ್ರೀ ದಾರುಕಾಶ್ರಮಕ್ಕೂ ಶ್ರೀ ಕೊಟ್ಟೂರೇಶ್ವರನ ೩ ಮಠಗಳಿಗೂ ಹೋಗಿ ಪುನಃ ಶ್ರೀ ಸೋಮನಾಥನ ದೇವಾಲಯಕ್ಕೆ ತಲ್ಪಿತು. ಅನಂತರ ಶ್ರೀ ಭುಜಂಗಭೂಷಣಸ್ವಾಮಿಗಳ ಅಧ್ಯಕ್ಷತೆಯಲ್ಲಿ ಸಭೆಕೂಡಿ ವೇ|| ಕೆ ಎಂ ಚನ್ನಬಸವಶಾಸ್ತ್ರಿಗಳು, ಪಿ ಎಂ ಮರುಳಾರಾಧ್ಯರು ಮೊದಲಾದವರು ಈ ಮಹಾತ್ಮರು ಮಾಡಿದ ಮಹಿಮಾಸಮೂಹವನ್ನು ಕುರಿತು ಭಾಷಣಮಾಡಿದರು. ಅನಂತರ ಪಂಚಾಚಾರ್ಯ ಭಜನ ಸಂಘಕ್ಕೆ ಶ್ರೀ ಭುಜಂಗಭೂಷಣಸ್ವಾಮಿಗಳು ರಜತಪದಕವನ್ನು ಆಶೀರ್ವದಿಸಿದರು. ಬಳಿಕ ಮಹಾ ಮಂಗಲಾರತಿಯಾಗಿ ಸಭೆಯು ವಿಸರ್ಜಿಸಲ್ಪಟ್ಟಿತು.

ಪ್ರತ್ಯಕ್ಷದರ್ಶಿ

ವೀರಶೈವ ತರುಣರ ಪ್ರಭಾತಸ್ತುತಿ

ವೀರಶೈವರಾದ ನಾವು | ವೀರಭಕ್ತರಾಗುವಾ ||
ವೀರಶೈವರೇಳ್ಗೆಗಾಗಿ | ಧೈರ್ಯದಿಂದ ಕಾದುವಾ ||ಪ||

ಗುರುವು ಧರೆಯೊಳಧಿಕನೆಂದು |
ಶರವನೆತ್ತಿ ಸಾರುವಾ ||
ಗುರುಗಳೈವರನ್ನು ನುತಿಸಿ |
ಪರಮಪದವ ಪಡೆಯುವಾ ||೧||

ಮೌನದಿಂದ ಪರಮಗುರುವ |
ಧ್ಯಾನವನ್ನು ಮಾಡುವಾ ||
ಜ್ಞಾನವನ್ನು ಗಳಿಸಿ ಬೆಳೆಸಿ |
ದೀನರನ್ನು ಸಲಹುವಾ ||೨||

ಜ್ಞಾನಯೋಗಮಹಿಮೆಯಿಂದ |
ಜ್ಞಾನಬಲರು ಎನಿಸುವಾ ||
ಧ್ಯಾನಪೂರ್ಣ ಭಕ್ತಿಯಿಂದ |
ದೈವಭಕ್ತರೆನಿಸುವಾ ||೩||

ಕ್ರಾಂತಿಯನ್ನು ಹೂಡಿ ಜಗದಿ |
ಪ್ರಗತಿಯನ್ನು ಹೊಂದುವಾ ||
ಶಾಂತಿಯಿಂದ ಲೋಕದಲ್ಲಿ |
ಜ್ಞಾನಜ್ಯೋತಿ ಬೆಳಗುವಾ ||೪||

ವೀರಶೈವರತ್ನವನ್ನು |
ಭಾರತಿಯ ಕಿರೀಟದಲ್ಲಿ ||
ಧರಿಸಿ ನಲಿದು ನಲಿದು ಜವದಿ |
ಜಗದಿ ಬೆಳಕ ಬೀರುವಾ ||೫||

ರವಿಯು ತಮವ ದೂಡುವಂತೆ |
ಮೌಢ್ಯತಮವ ದೂಡುವಾ ||
ಶಿವನ ಧರಿಸಿ ಯಜಿಸಿ ಭಜಿಸಿ |
ಮೋಕ್ಷವನ್ನು ಪಡೆಯುವಾ ||೬||

M. Somasekharayya, Birur.

ವೀರಶೈವ ಸಮಾಜ ಸೇವಾಸಂಘಸ್ಥಾಪನೆ

ಕೋಡಿಹಳ್ಳಿ

ಕಾನಕಾನಹಳ್ಳಿ ತಾಲ್ಲೂಕು ಕೋಡಿಹಳ್ಳಿ ಗ್ರಾಮದಲ್ಲಿ ವೀರಶೈವರು ವಿಶೇಷವಾಗಿದ್ದರೂ ಒಂದಾದರೂ ಸಂಘಸ್ಥಾಪನೆಯಾಗದಿದ್ದುದು ತುಂಬ ಶೋಚನೀಯವಾಗಿತ್ತು. ಈ ವಿಷಯವನ್ನು ಇಲ್ಲಿಯ ಪ್ರಮುಖರು ಯೋಚಿಸಿ ತಾ|| ೧೧-೧೨-೪೪ನೆಯ ಸೋಮವಾರ ದಿವಸ ಈ ಗ್ರಾಮದ ಪಟ್ಟದ ಶ್ರೀ ಚನ್ನಬಸವರಾಜೇಂದ್ರಸ್ವಾಮಿಗಳವರ ಅಮೃತಹಸ್ತದಿಂದ ಮೇಲ್ಕಂಡ ಸಂಘವನ್ನು ಸ್ಥಾಪಿಸಿದರೆಂಬ ವಿಷಯವನ್ನು ತಿಳಿಸಲು ಅತ್ಯಂತ ಸಂತೋಷವೆನಿಸುತ್ತದೆ. ಈ ಸಂಘಸ್ಥಾಪನೆಗಾಗಿ ಗಣೇಶನ ದೇವಸ್ಥಾನದಲ್ಲಿ ಮೇಲ್ಕಂಡ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸಭೆಗೂಡಿತ್ತು. ಅನೇಕರು ಉಪನ್ಯಾಸಗಳನ್ನು ಮಾಡಿದರು. ಅನಂತರ ಮಹಾಮಂಗಳಾರತಿಯಾಗಿ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯೊಡನೆ ಸಭೆಯು ಮುಕ್ತಾಯವಾಯಿತು

ಎ ಎಂ ಕೆಂಪಯ್ಯ, ಅರ್ಜುನಹಳ್ಳಿ.

ಶ್ರೀ ಕೊಟ್ಟೂರೇಶ್ವರನ ರಥೋತ್ಸವ

ಕೊಟ್ಟೂರು

ಬಳ್ಳಾರಿ ಡಿ|| ಕೊಟ್ಟೂರು ನಗರದಲ್ಲಿ ಶ್ರೀ ಕೊಟ್ಟೂರೇಶ್ವರನ ರಥೋತ್ಸವವು ಇದೇ ಮಾಘ ಬಹುಳ ೧೧ ಗುರುವಾರ (ತಾ ೮-೨ ೪೫) ಪದ್ಧತಿ ಪ್ರಕಾರ ಬಹು ವಿಜೃಂಭಣೆಯಿಂದ ನಡೆಯುತ್ತದೆ. ಆ ಕಾಲಕ್ಕೆ ಭಕ್ತರು ಆಗಮಿಸಿ ಕೃತಾರ್ಥರಾಗಬೇಕೆಂದು ಆಶಿಸುತ್ತೇನೆ

ಪಿ ಎಂ. ಮರುಳಾರಾಧ್ಯ.

ಕಾಗದದ ಬೆಲೆಯು ವಿಶೇಷವಾಗಿ ಏರಿರುವುದರಿಂದ ಕೆಲವು ಗ್ರಂಥಗಳ ಮತ್ತು ಫೋಟೋಗಳ ಬೆಲೆಯನ್ನು ಸ್ವಲ್ಪ ಹೆಚ್ಚಿಸಿದ್ದೇವೆ.

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಲಿಂಗಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು. ವೀರಶೈವಮತದಲ್ಲಿ ಸದ್ಯಃ ದೊರೆಯತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು. ಈ ಗ್ರಂಥವು ಈಗ್ಗೆ ಸುಮಾರು **೨ಸಾವಿರ** ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು. ಈ ಮಹಾ ಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ವವು ವಾಚಕರಿಗೆ ವೇದ್ಯವಾಗುವದು. ವಾಚಕರ ಅನುಕೂಲಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೬೬೨ ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರವಾದ ಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೨ ರೂಪಾಯಿ.**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಬತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ಒಕ್ಕೆ	೨—೬—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦ ಬೆಲೆ	೦—೬—೦
ಸದ್ಯಃ ಪಟ್ಟಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ಒಕ್ಕೆ ...	೨—೩—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘೂಗರ್ಭದಿಂದ ಅವತರಿಸಿರುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦ ೧—೬
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರುಗಳ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦	೦—೪—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ಒಕ್ಕೆ	೦—೩—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ಒಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ಒಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ಒಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೬

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೭ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೭ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ) ..	೨ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಪಂಚಾಚಾರ್ಯಪ್ರಕಾಶ ..	೩ ಆಣೆ
ಪಂಚಾಚಾರ ಪ್ರಕಾಶಿಕಾ ..	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ ..	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ) ..	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ ..	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ) ..	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ ...	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು ೨ನೆಯ ಆವೃತ್ತಿ)	೧। ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ) ..	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ) ...	೧ ರೂ
ಶ್ರೀಕರಭಾಷ್ಯಂ (ಚತುಸ್ಸೂತ್ರೀ) ...	೧॥ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ) ...	೧॥ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ) ...	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ) ..	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ವೀರಶೈವಸಿದ್ಧಾಂತಸುಧಾಕರ ..	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*)	8 As
Speeches by Pandit Shri Kashinatha Shastriji (*English*)	12 As
लिंगधारणचन्द्रिका (संस्कृत)	३ रु
वीरशैवरत्न (मराठी)	१ रु
महानारायणोपनिषद् (वीरशैवभाष्य-संस्कृत)	१ रु
सिद्धांतशिखामणि (मूल) ..	८ आ.
[illegible]कारिका (संस्कृत)	२ आ.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಸಕಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ೪ ಆಣೆ

ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೧೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೨ನೇ ಜನವರಿ ೧೯೪೫ [ಸಂಚಿಕೆ ೩೯

ಸ್ವೀಕಾರದ್ರವ್ಯವನ್ನು ಸಮರ್ಪಿಸು ವವರಿಗೆ ಸೂಚನೆ

ತಿಪ್ಟೂರು ತಾ|| ಗುರುಗದ ಹಳ್ಳಿಯಲ್ಲಿರುವ ನೊಣ ಸಿದ್ದಪ್ಪನವರ ಮನೆಯಲ್ಲಿ ತಾ|| 17 2 1944ನೆಯ ದಿವಸ ಒಂದು ಲಗ್ನವು ನಡೆದು ಅಗ್ಗೆ ವರನ ಕಡೆಯವರು ರಂಭಾಪುರೀ ಸಂಸ್ಥಾನಕ್ಕೆ 5 ರೂಪಾಯಿ ಮತ್ತು ಪ್ರಭಾ ಪ್ರೋತ್ಸಾಹಣಕ್ಕೆ ೩ ರೂಪಾಯಿಗಳನ್ನು ತೆಗೆಯಿಸಿ ತಿಪಟೂರ ಲ್ಲಿರುವ ಒಬ್ಬರ ಕೈಯ್ಯಲ್ಲಿ ಕಳುಹಿಸಲು ಕೊಟ್ಟರೆಂದೂ ಅವರು ಈವರೆಗೂ ಆ ಹಣವನ್ನು ಆಯಾ ಸ್ಥಳಗಳಿಗೆ ಕಳುಹಿಸಿರುವದಿಲ್ಲವೆಂದೂ ತಿಳಿದುಬರುತ್ತದೆ ಹಣವನ್ನು ತೆಗೆದುಕೊಂಡವರು ಈರೀತಿ ಮಾಡುವದು ಎಷ್ಟೂ ಸರಿ ಯಾದುದಲ್ಲ ಇನ್ನೂ ಮುಂದಾದರೂ ಅವರು ಆ ಹಣ ವನ್ನು ಆಯಾ ಸ್ಥಳಗಳಿಗೆ ತಲಪುವಂತೆ ಮಾಡಬೇಕೆಂದು ತಿಳಿಸುತ್ತೇವೆ ಯಾರು ಪ್ರಭಾಪ್ರೋತ್ಸಾಹಣಕ್ಕೋಸ್ಕರ ಹಣವನ್ನು ಸಮರ್ಪಿಸುವರೋ ಅವರ ಹಣವು ನಮಗೆ ತಲಪಿದ ಕೂಡಲೆ ಆ ವಿಷಯವನ್ನು ನಮ್ಮ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿ ಹಣವನ್ನು ಕಳಿಸಿದವರಿಗೆ ಒಂದು ಪ್ರಕಟವಾದ ಪತ್ರಿಕೆಯನ್ನು ಕಳಿಸುವ ಸಂಪ್ರದಾಯವನ್ನು ಇಟ್ಟುಕೊಂಡಿರುತ್ತೇವೆ ಪ್ರಭಾಪ್ರೋತ್ಸಾಹಣಕ್ಕೋಸ್ಕರ ಹಣ ವನ್ನು ಕೊಟ್ಟವರಿಗೆ ನಮ್ಮ ಪತ್ರಿಕೆಯು ಬಾರದಿದ್ದಲ್ಲಿ, ಅವರು ಕೂಡಲೆ ತಾವು ಯಾರ ಕೈಯ್ಯಲ್ಲಿ ಹಣವನ್ನು ಕೊಟ್ಟಿರುವರೋ ಅವರನ್ನು 'ನಾವು ಕೊಟ್ಟಿರುವ ಹಣದ ವಿಷಯವು ಪ್ರಭಾಪತ್ರಿಕೆಯಲ್ಲಿ ಏಕೆ ಬರಲಿಲ್ಲ?' ಎಂದು ಪ್ರಶ್ನೆ ಮಾಡಬೇಕು ಅವರು ಸರಿಯಾದ ಉತ್ತರವನ್ನು ಕೊಡದೆ ಇದ್ದರೆ ಅವರಿಂದ ತಾವು ಕೊಟ್ಟ ಹಣವನ್ನು ತಿರುಗಿ ತೆಗೆದುಕೊಂಡು ಪ್ರಭಾ ಆಫೀಸಿಗೆ ಮನಿಯಾರ್ಡರ್ ಮಾಡಿಸಬೇಕು ಹೀಗೆ ಮಾಡಿದರೆ ತಾವು ಕೊಟ್ಟ ಹಣವು ಸಾರ್ಥಕವಾಗುವದು ಈ ವಿಷಯವನ್ನು ಸರ್ವರೂ ಗ್ರಹಿಸಿ ಅದರಂತೆ ಆಚರಿಸ ಬೇಕೆಂದು ಕೋರುತ್ತೇವೆ

ಮ್ಯಾನೇಜರ್

ಪುಣ್ಯದಿನೋತ್ಸವ ಅರ್ಜುನಹಳ್ಳಿ

ಚನ್ನರಾಯಪಟ್ಟಣ ತಾ|| ಅರ್ಜುನಹಳ್ಳಿ ಮ|| ರಾ|| ಎ ಮಂ. ಕೆಂಪಯ್ಯನವರು ತಮ್ಮ ವಾಸಗೃಹದಲ್ಲಿ ಇದೇ ಪುಷ್ಯ ಬಹುಳ || ೪ ಮಂಗಳವಾರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯಮಹಾಸ್ವಾಮಿಗಳವರ ಭಾವಚಿತ್ರವನ್ನು ಭವ್ಯಮಂಟಪದಲ್ಲಿರಿಸಿ ಅಷ್ಟವಿಧಾ ರ್ಚನೆಗಳಿಂದ ಪೂಜಿಸಿ ವಂದಿಸಿ ಅಷ್ಟೋತ್ತರ ಶತನಾಮಾವಳಿಯನ್ನು ಪಠಿಸಿದರು ಪ್ರಸಾದವಿನಿ ಯೋಗವಾದ ಬಳಿಕ ಭೀಮಗೊಂಡನಹಳ್ಳಿಮಠದ ಶ್ರೀ ಪರ್ವತಾರಾಧ್ಯಸ್ವಾಮಿಗಳವರು ಭಗವತ್ಪಾದರ ಜೀವನಚರಿತ್ರೆಯನ್ನು ಮನೋಹರವಾಗಿ ಭಾಷಣ ಮಾಡಿದರು ಆಮೇಲೆ ಮಹಾಮಂಗಳಾರತಿಯಾಗಿ ಶ್ರೀಪಂಚಾಚಾರ್ಯರ ಜಯಘೋಷದೊಡನೆ ಕಾರ್ಯವು ಮುಕ್ತಾಯಗೊಂಡಿತು.

ಪರ್ವತಾರಾಧ್ಯಸ್ವಾಮಿ

॥ ಶ್ರೀಜಗದ್ಗುರುಪಂಚಾಚಾರ್ಯಾಃ ಪ್ರಸೀದಂತು ॥

ಪದವೀಪ್ರದಾನ

ಕರ್ಮಜ್ಞಾನಗಳೆರಡೂ ಮೋಕ್ಷಕ್ಕೆ ಸಾಧನಗಳೆಂದು ವೇದಾಗಮೋಪನಿಷತ್ತುಗಳಲ್ಲಿ ಹೇಳಲ್ಪಟ್ಟಿರುವ್ರದು ಆದುದರಿಂದ ವೈದಿಕಮತೀಯರಲ್ಲರೂ ಮೊದಲು ಕರ್ಮಕಲಾಪವನ್ನು ಆಚರಿಸಿ ತರುವಾಯ ಉಪನಿಷ ದ ದಿನಗಳಲ್ಲಿ ಹೇಳಲ್ಪಟ್ಟಿರುವ ಜ್ಞಾನವನ್ನವಲಂಬಿಸಿ ಮುಕ್ತಿಭಾಗಿಗಳಾಗುತ್ತಿರುವರು. ಪರಮವೈದಿಕರಾದ ವೀರಶೈವರಲ್ಲಿ ವೈದಿಕಕರ್ಮಕಲಾಪವನ್ನು ಸ್ವರಯುಕ್ತ ವಾಗಿ ವೈದಿಕಪದ್ಧತಿಯಂತೆ ನೆರವೇರಿಸುವವರಲ್ಲಿ ಬೆಂಗ ಳೂರು ನಗರದಲ್ಲಿರುವ ಆವಾಸಿ ಘಂಟಾಪುರದ ವೇ|| ಗುರುಲಿಂಗಶಾಸ್ತ್ರಿಗಳವರು ಅದ್ವಿತೀಯರಾಗಿರುವರು ಸದರಿ ಶಾಸ್ತ್ರಿಗಳವರು ಈಗ್ಯೆ ಸುಮಾರು ಐವತ್ತು ವರ್ಷ ಗಳಿಂದಲೂ ವೀರಶೈವರಲ್ಲಿ ನಡೆಯುವ ವೈದಿಕಕರ್ಮ ಕಲಾಪವನ್ನು ನೆರವೇರಿಸಿ ಸುಪ್ರಸಿದ್ಧ ಪುರೋಹಿತರೆಂದು ಪ್ರಖ್ಯಾತಿಯನ್ನು ಪಡೆದಿರುವರು

ಶ್ರೀಮದ್ರಂಭಾಪುರೀ ಜಗದ್ಗುರುಗಳವರು ಇವರಲ್ಲಿ ರುವ ವೈದಿಕವಿದ್ವತ್ತೆಯನ್ನು ಕಂಡು ಇವರಿಗೆ "ವೈದಿಕ ಭೂಷಣ" ವೆಂಬ ಪದವಿಯನ್ನು ದಯಪಾಲಿಸಿರುವರು ಕಳೆದ ಆಶ್ವಯುಜ ಶು|| ವಿಜಯದಶಮಿ ಶುಭ ಮುಹೂರ್ತದಲ್ಲಿ ಶ್ರೀಕಾಶೀಕ್ಷೇತ್ರದಲ್ಲಿ ನೆರವೇರಿದ ಶ್ರೀ ಜಗದ್ಗುರು ಮಹಾಪಟ್ಟಾಭಿಷೇಕ ಮಹೋತ್ಸವವು ಸದರಿ ಶಾಸ್ತ್ರಿಗಳವರ ವೈದಿಕತ್ವದಿಂದ ಸಕ್ರಮವಾಗಿ ನೆರವೇರಿತು ಇವರು ನಡೆಸಿದ ವೈದಿಕವಿಧಿಯನ್ನು ನೋಡಿ ಪರಮಾನಂದಭರಿತರಾದ ಕಾಶೀ ಜ್ಞಾನ ಪೀಠಾಧೀಶ್ವರ ಶ್ರೀ ಜಗದ್ಗುರು ವೀರಭದ್ರಶಿವಾಚಾರ್ಯ ಮಹಾಸ್ವಾಮಿಗಳವರು ಇವರಿಗೆ 'ಪೂರ್ಣ ಪುರೋ ಹಿತ'' ವೆಂಬ ಪದವಿಯನ್ನು ದಯಪಾಲಿಸಿರುವರು ಈ ಪ್ರಕಾರ ಅನೇಕಾನೇಕ ಪದವಿಗಳನ್ನು ಪಡೆದವರೂ, ಜ್ಞಾನವಯೋವೃದ್ಧರೂ, ಆದ ಸದರಿ ಶಾಸ್ತ್ರಿಗಳವರಿಗೆ ಆಯುರಾರೋಗ್ಯೈಶ್ವರ್ಯಾಭಿವೃದ್ಧಿಯನ್ನುಂಟುಮಾಡ ಲೆಂದು ಶ್ರೀ ಜಗದಾಚಾರ್ಯರನ್ನು ಪ್ರಾರ್ಥಿಸುತ್ತೇನೆ

ಎಚ್ ಸಿದ್ಧರಾಮಯ್ಯ
ಹಿರೇಮಠ ಯಾಳೆಮೂಳೆ

ವೈರಾಗ್ಯದರ್ಪಣ

ಲೇ ಮಲ್ಲಿಕಾರ್ಜುನಾರಾಧ್ಯ ರಾಣೇಬೆನ್ನೂರು ವ ಕೀಲರು ಮುದೇನೂರು

(ಕಳೆದ ಸಂಚಿಕೆಯಿಂದ ಮುಂದುವರಿದುದು)

ವಸಂತವೆಂಬ ಇವನ ಪಟ್ಟದಾನೆಯು ಪುಷ್ಪಗಳ ಮಕರಂದವೆಂಬ ಮದೋದಕದ ಪರಿಮಳದಿಂದ ದಿಙ್ಮಂಡಲವಂ ತುಂಬುತ್ತಾ ಸಕಲರ ಮನಸ್ಸನ್ನೂ ಚಪಲಪಡಿಸುವದು. ಕಾಮಿನಿಗಳ ಕಟಾಕ್ಷದಿಂ ನಿಸ್ಸಾರ ವಾಗಿ ಮಾಡಲ್ಪಟ್ಟ ವಿವೇಕವು ಮನಹಂ ಪಡೆಯುವ ದಕ್ಕೆ ಸಮರ್ಥವಾಗುವುದಿಲ್ಲ ದ್ವಿತೀಯ ಪದಾರ್ಥಜ್ಞಾನ ವಿರುವ ಪರ್ಯಂತ ದುಃಖ ತಪ್ಪದಾದ್ದರಿಂದ ಪರಮಾರ್ಥ ಜ್ಞಾನದಿಂದ ಅದ್ವಿತೀಯನಾಗಿರುವನೇ "ಸುಖಿ" ಯೆಂದು ತಿಳಿಯುತ್ತೇನೆ ದ್ವಿತೀಯ ಪದಾರ್ಥಜ್ಞಾನದಿಂ ಸಂಸಾರಿಗಳಾಗಿ ಕಾಲನೆಂಬ ಬಡಬಾಗ್ನಿಯಲ್ಲಿ ಬೀಳುವ ಜೀವರ ದುರ್ದೆಸೆಯು ಯಾರಿಂದಲಾದರೂ ಸ್ಮರಿಸಲು ಶಕ್ಯವಾದೀತೆ? ಇದೇ ಮೊದಲುತ್ಸವವು ಇದು ವಸಂತ ಋತುವು, ಈಗ ಸ್ವದೇಶ ಪ್ರಯಾಣವು, ಇವರು ಬಂಧುಗಳು, ಇದು ಸುಖವು, ಇವು ಭೋಗಗಳು, ಎಂದು ವ್ಯರ್ಥವಾಗಿ ಕಲ್ಪನಮಾಡುತ್ತಾ ಜನಗಳು ಶಿಥಿಲರಾಗುವರು ಎಲೈ ಮುನಿಪೋತ್ತಮನೇ! ಘೋರ ವಾದ ಸಂಸಾರದಲ್ಲಿ ಮನಸ್ಸು ಭ್ರಮಿಸದಂತ ಹೊಸ ದಾದ ಒಂದು ಪದಾರ್ಥವೂ ಇರುವುದಿಲ್ಲ ಆದಾಗ್ಯೂ ಹೊಸ ಹೊಸದಾಗಿ ಆಟಗಳಿಂದ ಬಾಲ್ಯವು ಕಳೆಯು ವದು, ಸುಂದರಿಯರೆಂಬ ದರಿಗಳಲ್ಲಿ ಮನಸ್ಸು ಬೀಳು ವದರಿಂದ ಯೌವನವು ಭಗ್ನವಾಗುವದು ಬಳಿಕ ವೃದ್ಧಾಪ್ಯದಿಂದ ಶರೀರಕ್ಕೆ ಭಂಗಬರುವದು ಸಂಸಾರ ಸಮುದ್ರದಲ್ಲಿ ಶರೀರಗಳೆಂಬ ಹರಿಗೋಲುಗಳಲ್ಲಿ ಕುಳಿ ತಿರುವ ಇಂದ್ರಿಯಗಳೆಂಬ ಅಂಬಿಗರು ಮನಸ್ಸೆಂಬ ನಾಯಕನೊಡನೆ ಆಡುತ್ತಿರುವರು ತುರಂಗ, ಮಾತಂಗ ಪತಂಗಗಳಿಂದ ತುಂಗಯುಕ್ತವಾದ ರಣಾಂಗವೆಂಬ ಸಮುದ್ರವಂ ಯಾರು ದಾಟುವರೋ, ಅವರು ಕಾಮ, ಕ್ರೋಧ ಮೊದಲಾದ ಅಂತಃಶತ್ರುಗಳಂ ಜಯಿಸಲಿಲ್ಲ ವಾದ್ದರಿಂದ ಸತ್ಪುರುಷರಿಂ ಶೂರರೆನಿಸಿಕೊಳ್ಳುವದಿಲ್ಲ ಯಾರು ಅಂತಃಶತ್ರುಗಳಂ ನಿಗ್ರಹಿಸಿ ಮನೋಮಯ ವಾದ ತರಂಗಗಳುಳ್ಳ ದೇಹೇಂದ್ರಿಯಾತ್ಮಕವಾದ ಸಂಸಾರ ಸಮುದ್ರವಂ ದಾಟುವರೋ ಅವರು ಮಹಾತ್ಮ ರಿಂದ ಹೊಗಳಿಸಿಕೊಳ್ಳುವರು ಸಂಸಾರ ಶ್ರಮಕ್ಕೆ ಶಾಂತಿ ಯನ್ನುಂಟುಮಾಡಿ ದುಃಖ ಲೇಶ ಸಂಬಂಧವಿಲ್ಲದ ಅಖಂಡ ಸುಖವಂ ಕೊಡುವ ಕರ್ಮವು ಯಾವದೂ ಇಲ್ಲ ತತ್ವಾರ್ಥ ಜ್ಞಾನಬಲದಿಂದ ಧೈರ್ಯಚ್ಯುತಿಯಿಲ್ಲದೆ ಕೀರ್ತಿಯಿಂದ ಜಗತ್ತನ್ನೂ ಪ್ರತಾಪದಿಂದ ದಿಕ್ಕುಗಳನ್ನೂ ಸಂಪತ್ತಿನಿಂದ ಅರ್ಥಿಗಳ ಮನೆಗಳನ್ನೂ ತುಂಬುತ್ತಾ ಸಾತ್ವಿಕವಾದ ಲಕ್ಷ್ಮಿಯಿಂದ ನಿತ್ಯಾನಂದರಾಗಿರುವ ಮಹಾತ್ಮರು ಲೋಕದಲ್ಲಿ ದುರ್ಲಭರಾಗಿರುವರು ಜನ್ಮಾಂತರ ಕರ್ಮವುಳ್ಳ ಪುರುಷನು ಗಿರಿದುರ್ಗದಲ್ಲಿ ದ್ದಾಗ್ಯೂ ವಜ್ರಮಯವಾದ ಗೃಹದಲ್ಲಿದ್ದಾಗ್ಯೂ ಅವನಿಗೆ ಬರತಕ್ಕ ಸಂಪತ್ತುಗಳು ವಿಪತ್ತುಗಳು ಸಹ ಅಲ್ಲಲ್ಲಿಯೆ ಸಿದ್ಧವಾಗುವವು ಧರ್ಮಾರ್ಥಕಾಮಪ್ರಧಾನವಾದ ಕರ್ಮಗಳಿಂದ ವಯಸ್ಸಂ ಕಳೆದುಕೊಂಡ ಪುರುಷನ ಮನವು ಬಿರುಗಾಳಿಯಲ್ಲಿರುವ ನವಿಲ ಗರಿಯಂತೆ ಚಂಚಲವಾಗಿರುವದಲ್ಲದೆ ಯಾವ ಕರ್ಮದಿಂದಲೂ ಶಾಂತಿ ಹೊಂದಲಾರದು ದೈವಬಲದಿಂದಿಷ್ಟಾರ್ಥಗಳು ಸಿದ್ಧವಾದಾಗ್ಯೂ ತತ್ವಜ್ಞಾನವಿಲ್ಲದ ಪುರುಷನು ಗಾಳದ ಮಾಂಸವಂ ಗ್ರಹಿಸಿದ ಮತ್ಸ್ಯದಂತೆ ದುಃಖಿಸುವನು ಮಕ್ಕಳು, ಹೆಂಗಸು, ಹಣವು ಸಹ ರಸಾಯನದಂತೆ

(ಆನೇ ಪುಟವನ್ನು ನೋಡಿ)

॥ ಶ್ರೀಜಗದ್ಗುರು ವಿಶ್ವಾರಾಧ್ಯೋ ವಿಜಯತೇ ॥

ಶ್ರೀಕಾಶೀಪೀಠದ ಋಣಪರಿಹಾರದ ಬಗ್ಗೆ

ವೀರಶೈವಮಹಾಜನರ ಕರ್ತವ್ಯ

ಕಳೆದ ವಿಜಯದಶಮಿಯ ಸುಮುಹೂರ್ತದಲ್ಲಿ ಕಾಶೀಜಗದ್ಗುರು ವಿಶ್ವಾರಾಧ್ಯಜ್ಞಾನಸಿಂಹಾಸನಮಹಾಪೀಠದ ಪಟ್ಟಾಭಿಷೇಕ ಮಹೋತ್ಸವವು ಮಹಾವೈಭವದಿಂದ ನೆರವೇರಿ ಅಲ್ಲಿ ಸರ್ವಸಮರ್ಥರಾದ ಶ್ರೀಜಗದ್ಗುರು ವೀರಭದ್ರಶಿವಾಚಾರ್ಯ ಮಹಾಸ್ವಾಮಿಗಳು ವಿರಾಜಿಸುತ್ತಿರುವುದು ಸರ್ವರಿಗೂ ವಿದಿತವಾದ ವಿಷಯವೇ ಆಗಿದೆ. ಶ್ರೀಸನ್ನಿಧಿಯವರು ಈಗ ಮಠದ ವ್ಯವಸ್ಥೆಯನ್ನು ಬಹಳ ಸಮರ್ಪಕವಾಗಿರಿಸಿರುವರಲ್ಲದೆ ಶಾಸ್ತ್ರಾಧ್ಯಯನಮಾಡುವ ಪ್ರೌಢವಿದ್ಯಾರ್ಥಿಗಳ ಭೋಜನವಸತಿಗಳಿಗೂ ಬಹಳ ಅನುಕೂಲತೆಯನ್ನುಂಟುಮಾಡಿರುವರು. ಪೀಠದಲ್ಲಿ ವಿವಿಧಶಾಸ್ತ್ರ ವಿವಿಧಭಾಷಾಗ್ರಂಥಗಳಿಂದ ತುಂಬಿದ 'ಜ್ಞಾನಮಂದಿರ'ವೆಂಬ ಮಹಾಭಾಂಡಾರವು ವಿರಾಜಿಸುತ್ತಿರುವುದರಿಂದ ಮಹಾಪೀಠವೀಗ ವಿದ್ಯಾರ್ಜನೆಗೆ ಕಲ್ಪವೃಕ್ಷಸದೃಶವಾಗಿರುವದು. ಮೇಲಾಗಿ ಸರ್ವಶಾಸ್ತ್ರನಿಧಿಯಂತಿರುವ ಮಹಾಸನ್ನಿಧಾನದವರು ಆಗಾಗ್ಗೆ ಅಮೋಘವಾದ ಭಾಷಣಗಳಿಂದ ಅನರ್ಘಜ್ಞಾನರತ್ನಗಳನ್ನು ಅನುಗ್ರಹಿಸುತ್ತಿರುವರು. ಸ್ವಲ್ಪಾವಧಿಯಲ್ಲಿಯೇ ಮಹಾವಿದ್ಯಾಲಯವನ್ನು ದೃಢಗೊಳಿಸಿ "ಜ್ಞಾನಪೀಠ" ವೆಂಬ ಉನ್ನತಶ್ರೇಣಿಯ ಪತ್ರಿಕೆಯನ್ನು ಪ್ರಕಾಶಪಡಿಸುವ ಆಲೋಚನೆಯಿದೆ. ಜ್ಞಾನಸಿಂಹಾಸನದ ಈ ಅಘನಾಶ ಜ್ಞಾನವಾಹಿನಿಯು ಸರ್ವ ವೀರಶೈವಲೋಕವನ್ನು ಪಾವನಮಾಡಿ ಪರಮಾನಂದವನ್ನು ಅನುಗ್ರಹಿಸುವದಾಗಿದೆ.

ಈ ಮಹಾಪೀಠದಲ್ಲಿ ಕೆಲಕಾಲದಿಂದಲೂ ನಡೆದುಬಂದ ಬ್ಯಾಂಕಿನ ಬಗ್ಗೆ ಕೆಲವು ವ್ಯವಸ್ಥಾಪಕರ ಅಜಾಗರೂಕತೆಯಿಂದ ಬಹಳ ನಷ್ಟವುಂಟಾಗಿತ್ತು. ಇವರ ಮಹಾಭಾರವನ್ನು ಕೈ॥ ವಾ॥ ಉಭಯ ಜಗದ್ಗುರುಗಳೂ ಬಹಳಮಟ್ಟಿಗೆ ಕಡಿಮೆಮಾಡಿದ್ದಾರೆ. ಸದ್ಯ ೪೦-೫೦ ಸಹಸ್ರ ರೂಪಾಯಿ ದ್ರವ್ಯದಿಂದ ಈ ಸಮಸ್ತ ಋಣವನ್ನು ಪರಿಹಾರಮಾಡಬಹುದಾಗಿದೆ. ೬೦ ಲಕ್ಷ ಜನಸಂಖ್ಯೆಯುಳ್ಳ ವೀರಶೈವಸಮಾಜಕ್ಕೆ ಇದು ಬಹಳ ಸುಲಭಕಾರ್ಯವೇ ಸರಿ! ಪಟ್ಟಾಭಿಷೇಕಸಮಯದಲ್ಲಿ ಶ್ರೀರಂಭಾಪುರೀ ಜಗದ್ಗುರು ಮಹಾಸ್ವಾಮಿಗಳವರ ಸಮಕ್ಷ ಕಾಶೀಪೀಠದ ಋಣಪರಿಹಾರಮಾಡುವ ಕಾರ್ಯಕ್ರಮವನ್ನು ವೀರಶೈವಮಹಾಜನರು ಕೈಕೊಂಡಿದ್ದಾರೆ. ಶ್ರೀರಂಭಾಪುರೀ ಜಗದ್ಗುರುಗಳವರು ಸ್ವತಃ ವಿಶೇಷ ಸಹಾಯಮಾಡುವುದಲ್ಲದೆ, ಸೊಲ್ಲಾಪುರದ ರಾ॥ ಬ॥ ಅಬ್ದುಲ್‌ಪೂರಕರ್ ನಾಗಪ್ಪನವರು, ಶ್ರೀಮಂತ ಗಂಭೀರೆ ಮಲ್ಲಿಕಾರ್ಜುನಪ್ಪನವರು ಅತ್ಯದ್ಭುತವಾದ ಸಹಾಯವನ್ನು ಮಾಡಿ ಕಟಿಬದ್ಧರಾಗಿ ಋಣಪರಿಹಾರದ ಮಾರ್ಗವನ್ನು ಹಾಕುತ್ತಿರುವರು. ಇನ್ನೂ ಕೆಲವು ಮಹನೀಯರೂ ತಮ್ಮ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಬಡ್ಡಿಯಿಲ್ಲದ ಸಾಲವನ್ನು ಕೊಟ್ಟು ಮೊದಲು ಪರಾಧೀನವಾದ ಆದಾಯವನ್ನು ಸ್ವಾಧೀನಮಾಡಿಕೊಂಡು ಅದರಿಂದ ಈ ಸಾಲವನ್ನು ತೀರಿಸುವ ಪ್ರಯತ್ನ ನಡೆದಿದೆ. ಗುರುಭಕ್ತರು ಮಾಡುತ್ತಿರುವ ಈ ಕಾರ್ಯವು ಬಹಳ ಸ್ತುತ್ಯವಾಗಿದೆ. ಇಂತಹ ಗುರುಭಕ್ತರಿಗೆ ಪರಶಿವನು ಅತುಲೈಶ್ವರ್ಯವನ್ನನುಗ್ರಹಿಸುವುದರಲ್ಲಿ ಸಂದೇಹವಿಲ್ಲ.

ಇಂತಹ ಪ್ರಸಂಗದಲ್ಲಿಯೂ ಕೂಡ ಮಹಾಪೀಠದಲ್ಲಿ ಧರ್ಮದೃಷ್ಟಿಯಿಂದ ವಿದ್ಯಾರ್ಥಿಗಳಿಗಾಗಿ ಭೋಜನವ್ಯವಸ್ಥೆಯೂ ಕಟ್ಟಡದ ಜೀರ್ಣೋದ್ಧಾರ ಮುಂತಾದ ಆವಶ್ಯಕ ಕಾರ್ಯಗಳೂ ನಡೆಯುತ್ತಲೇ ಇವೆ. ಎಂದಿನಂತೆ ಸಾವಿರಾರು ರೂಪಾಯಿಗಳ ವ್ಯಯವಿದೆ. ರಿಸೀವರನಿಂದ ಸಿಗತಕ್ಕ ಹಣವು ಬಹಳ ಸ್ವಲ್ಪವಾಗಿರುವದರಿಂದ ಅನಿವಾರ್ಯವಾಗಿ ಮತ್ತು ಸಾಲವು ಬೆಳೆಯಬಹುದಾಗಿದೆ. ಅನಂತಕಾಲದಿಂದಲೂ ವೀರಶೈವಸಮಾಜಕ್ಕೆ ಮಹಾಮಹಾ ಜ್ಞಾನಿಗಳನ್ನು ಅನುಗ್ರಹಿಸಿದ ಜ್ಞಾನಪೀಠಕ್ಕೆ ಸದ್ಯಃ ಆರ್ಥಿಕಕಷ್ಟವುಂಟಾಗಿರುವುದರಿಂದ ಸಮಾಜದವರು ಇದನ್ನು ಪರಿಹರಿಸುವುದು ಪರಮಾವಶ್ಯಕವಾಗಿದೆ.

ನಮ್ಮ ಸಮಾಜದ ಎಲ್ಲ ಪಟ್ಟಾಚರಾಧಿಕಾರಿಗಳೂ, ಮಠಸ್ಥರೂ, ಶ್ರೀಮಂತರೂ, ಪ್ರಮುಖರೂ, ವಕೀಲರೂ, ಸ್ಕಂದಗೋತ್ರೀಯರೂ ಮುಂತಾದ ಸರ್ವರೂ ಪ್ರತ್ಯೇಕವಾಗಿ ಒಬ್ಬೊಬ್ಬರು ೧೧೦ರ ರೂಪಾಯಿಗಳ ಗುರುದಕ್ಷಿಣೆಯನ್ನು ಸಲ್ಲಿಸಬೇಕು. ಅಷ್ಟು ಶಕ್ತಿಯಿಲ್ಲದವರು ತಮ್ಮ ಶಕ್ತ್ಯನುಸಾರವಾಗಿ ಸಲ್ಲಿಸಬಹುದು. ಗುರುಭಕ್ತರೆಲ್ಲರೂ ಆಯಾ ಗ್ರಾಮಗಳಲ್ಲಿ ಕಮಿಟಿಗಳನ್ನು ಮಾಡಿ ಹಣವನ್ನೆಲ್ಲ ಒಟ್ಟುಗೂಡಿಸಿ **"ಶ್ರೀಜಗದ್ಗುರು ವೀರಭದ್ರಶಿವಾಚಾರ್ಯ ಮಹಾಸ್ವಾಮಿಗಳವರು ಜಂಗಮವಾಡಿಮಠ ಬನಾರಸ್ ಸಿಟಿ"** ಈ ಅಡ್ರೆಸ್ಸಿಗೆ ರವಾನಿಸಬೇಕು. ಸೇವೆಸಲ್ಲಿಸಿದ ಮಹನೀಯರ ನಾಮಗಳನ್ನು ಪ್ರಭೆಯಲ್ಲಿಯೂ, ಮುಂದೆ ಹೊರಡುವ ಕಾಶೀಪೀಠದ ಚರಿತ್ರೆಯಲ್ಲಿಯೂ ಪ್ರಕಟಿಸಲಾಗುವುದು. ಶುಭಕಾರ್ಯಾದಿಗಳಲ್ಲಿಯೂ ಕಾಶೀಪೀಠನಿಧಿಗಾಗಿ ದಕ್ಷಿಣೆಯನ್ನು ತೆಗೆಯಿಸಬೇಕು. ಮನಿಯಾರ್ಡರು ಕೂಪನ್ನಿನಲ್ಲಿ "ಶ್ರೀಕಾಶೀಪೀಠದ ನಿಧಿಗೆ" ಎಂಬುದನ್ನೂ ತಮ್ಮ ವಿಳಾಸವನ್ನೂ ಸ್ಪಷ್ಟವಾಗಿ ಬರೆಯಬೇಕು.

ಎಲ್ಲರೂ ಮನಃಪೂರ್ವಕವಾಗಿ ಪ್ರಯತ್ನಿಸಿದರೆ ಈ ಯೋಜನೆಯು ಬಹಳ ಸುಲಭವಾಗಿ ಸಿದ್ಧಿಸುವದಾಗಿದೆ. ಗುರುಭಕ್ತರು ತಮ್ಮ ಸೇವೆಯನ್ನು ಸಾರ್ಥಕಪಡಿಸುವ ಸುಸಂಧಿಬಂದಿದೆ. ಆದುದರಿಂದ ಗುರುಭಕ್ತರು ಈ ಕಾರ್ಯವನ್ನು ಬಹಳ ಬೇಗನೆ ಕೈಕೊಂಡು ಶ್ರೀಜಗದ್ಗುರು ವಿಶ್ವಾರಾಧ್ಯನ ಕೃಪೆಗೆ ಪಾತ್ರರಾಗಬೇಕಾಗಿ ಕೋರಿಕೆ.

ಏಜಂಟ್,

ಶ್ರೀಜಗದ್ಗುರು ವಿಶ್ವಾರಾಧ್ಯ ಮಹಾಸಂಸ್ಥಾನ ಜಂಗಮವಾಡೀ ಮಠ,

ಬನಾರಸ್ ಸಿಟಿ.

ಶ್ರೀ ಕಾಶೀಪೀಠದ ಏಜಂಟರು ಪ್ರಕಟಿಸಿರುವ ವಿಷಯಗಳೆಲ್ಲವೂ ಯಥಾರ್ಥವಾಗಿರುವುದರಿಂದ ಗುರುಭಕ್ತರು ತಮ್ಮ ಶಕ್ತ್ಯನುಸಾರ ಸಹಾಯಮಾಡಿ ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದಾಶಿಸುತ್ತೇವೆ. — ಸಂಪಾದಕರು.

ಶ್ರೀರಂಭಾಪುರೀ ಜಗದ್ಗುರುಗಳವರು ಶ್ರೀಕಾಶಿ ಜಗದ್ಗುರುಗಳವರಿಗೆ ಪಟ್ಟಾಭಿಷೇಕಮಹೋತ್ಸವ ಸಮಯದಲ್ಲಿ ಕಿರೀಟಧಾರಣವನ್ನು ಮಾಡುತ್ತಿರುವರು.

ಶ್ರೀಕಾಶೀ ಜ್ಞಾನಸಿಂಹಾಸನಾಧೀಶ್ವರ ಶ್ರೀಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರು

ಶ್ರೀಮದುಜ್ಜಯಿನೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯಮಹಾಸ್ವಾಮಿಗಳವರ ಪುಣ್ಯತಿಥಿಮಹೋತ್ಸವ ಕಾಶೀಕ್ಷೇತ್ರ

ಶ್ರೀ ಕಾಶೀಕ್ಷೇತ್ರ ವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯ ಮಹಾಪೀಠದಲ್ಲಿ ತಾ|| ೨೧ ೧೯೪೫ನೆಯ ದಿವಸ ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಸಿದ್ಧಲಿಂಗಶಿವಾಚಾರ್ಯಮಹಾಸ್ವಾಮಿಗಳವರ ಪುಣ್ಯತಿಥಿ ಮಹೋತ್ಸವವು ಅತ್ಯಂತ ವೈಭವದಿಂದ ಆಚರಿಸಲ್ಪಟ್ಟಿತು ತನ್ನಿಮಿತ್ತವಾಗಿ ಅಭಿಷೇಕಾದಿ ಕಾರ್ಯಕ್ರಮಗಳು ನಡೆದನಂತರ ಸಾಯಂಕಾಲ ೬ ಘಂಟೆಗೆ ಸಭಾಕಾರ್ಯಕ್ಕೆ ಪ್ರಾರಂಭವಾಯಿತು ಶ್ರೀ ಜ್ಞಾನಪೀಠಾಧೀಶ್ವರ ಶ್ರೀಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರು ವಿದ್ಯಾವೃಂದದ ವೇದಘೋಷದೊಡನೆ ದರ್ಬಾರ್ ಶಾಲಿಗೆ ದಯಮಾಡಿಸಿ ಪೀಠವನ್ನಲಂಕರಿಸಿದರು ಪುಷ್ಪಹಾರಾದಿಗಳಿಂದ ಅಲಂಕರಿಸಲ್ಪಟ್ಟ ಮತ್ತೊಂದು ಉನ್ನತ ಪೀಠದಲ್ಲಿ ಮೂರ್ತಗೊಳಿಸಿದ ಶ್ರೀಮದುಜ್ಜಯಿನೀ ಜಗದ್ಗುರುಗಳವರ ಭಾವಪಟಕ್ಕೆ ವಿಧ್ಯುಕ್ತವಾಗಿ ಪೂಜೆ ನಡೆದಮೇಲೆ ಸಭಾ ಕಾರ್ಯಕ್ರಮವು ಪ್ರಾರಂಭವಾಯಿತು ರೌಡಕುಂದಿ ಶ್ರೀ ಸಿದ್ಧರಾಮಶಿವಾಚಾರ್ಯರು ತಾವು ರಚಿಸಿದ ಸಂಸ್ಕೃತ ಶ್ಲೋಕಗಳನ್ನು ಓದಿದರು ಬಳಿಕ ರಾಯಚೂರು ಶ್ರೀ ಗುರುಲಿಂಗಶಿವಾಚಾರ್ಯರು ಜಗದ್ಗುರುಗಳವರ “ ತಪಸ್ಸಾಮರ್ಥ್ಯ ’ ಎಂಬ ವಿಷಯವಾಗಿಯೂ, ವೈರಾಗ ಶ್ರೀ ಪಂಚಾಕ್ಷರಶಿವಾಚಾರ್ಯರು “ ಬಾರ್ಶಿಯಲ್ಲಿ ನಡೆದ ಘಟನೆಗಳು ” ಎಂಬ ವಿಷಯವಾಗಿಯೂ, ಮುಳ್ಳೂರು ಶ್ರೀ ಗುರುಪಾದಶಿವಾಚಾರ್ಯರು “ ಜಗದ್ಗುರುಗಳ ಮಹಿಮೆ ’ ಎಂಬ ವಿಷಯವಾಗಿಯೂ, ವೇ|| ಗಂಗಾಧರಶಾಸ್ತ್ರಿಗಳು “ ಜಗದ್ಗುರುಗಳ ತಪಃ ಪ್ರಭೆ ” ಎಂಬ ವಿಷಯವಾಗಿಯೂ, ವೇ|| ಗೊಡಚಿ ಕಾಶೀನಾಥ ಶಾಸ್ತ್ರಿಗಳು “ ಜಗದ್ಗುರುಗಳವರ ತಪಸ್ಸಿದ್ಧಿ ” ಎಂಬ ವಿಷಯವಾಗಿಯೂ ವೆ ಮುಗಸಂಪದ ಪ್ರರದಯ್ಯನವರು ‘ ಜಗದ್ಗುರುಗಳವರ ಬಾಲ್ಯಚರಿತ್ರೆ ’ ಎಂಬ ವಿಷಯವಾಗಿಯೂ ಮ ರಾ| ಎಳ್ಳೆಂಬಳಸೆ ಗಂಗಾಧರಪ್ಪನವರು ‘ ಮಹಾಪುರುಷರ ಜೀವನವನ್ನು ಕಾಣುವ ಬಗೆ ’ ಎಂಬ ವಿಷಯವಾಗಿಯೂ ಭಾಷಣ ಮಾಡಿದರು ಆಮೇಲೆ ಶ್ರೀ ಜಗದ್ಗುರುಗಳವರು ಸರ್ವರೂ ಆನಂದತುಂದಿಲರಾಗುವಂತೆ ೧|| ಘಂಟೆಯವರೆಗೆ ಅಮೋಘವಾಗಿ ಅಪ್ಪಣೆಕೊಡಿಸಿದರು ‘ ನೋದಯೇ ಯನ್ನ ನಶ್ಯತಿ ’ ಎಂದು ತಾವು ಹೇಳಿದ ಮಂಗಳ ಶ್ಲೋಕವನ್ನೇ ಸಿದ್ಧಲಿಂಗ ಜಗದ್ಗುರುಗಳಲ್ಲಿ ಸಮನ್ವಯಿಸಿದರು ಭೋಜಪೇವನ ತತ್ತ್ವಪ್ರಕಾಶವು ‘ ಜ್ಞಾನ ಕ್ರಿಯಾತ್ಮಕ ’ ವಾದ ವೀರಶೈವ ಸಿದ್ಧಾಂತದ ರಹಸ್ಯವೇ ಆಗಿದೆ ಆದ್ದರಿಂದ ನಮ್ಮವರು ಶಕ್ತಿವಿಶಿಷ್ಟಾದ್ವೈತವೆಂದು ಕರೆಯುತ್ತಲಿದ್ದಾರೆ ಕ್ರಿಯಾಜ್ಞಾನವಾದವಲ್ಲಿ ಅನ್ಯಾನ್ಯ ಶಾಸ್ತ್ರಗಳು ಪ್ರಬಲವಾದ ಭಿನ್ನಾಭಿಪ್ರಾಯವನ್ನು ತಳೆದಿವೆ ಮೀಮಾಂಸಕರ ಕ್ರಿಯಾವಾದವೂ, ವೇದಾಂತಿಗಳ ಜ್ಞಾನವಾದವೂ ಒಂದನ್ನೊಂದು ಹೇಗೆ ಅವಲಂಬಿಸಿರುತ್ತವೆಂಬುದನ್ನು ಅನೇಕ ಉದಾಹರಣೆಗಳಿಂದ ಸ್ಪಷ್ಟಪಡಿಸಿದರು ಕ್ರಿಯಾಜ್ಞಾನಸಮುಚ್ಚಯದಿಂದಲೇ ಪರಪ್ರಾಪ್ತಿ ದೇವರು ಕ್ರಿಯಾಜ್ಞಾನರೂಪಿಯು ಜ್ಞಾನಕ್ರಿಯಾತ್ಮಕ ಶಾಂಭವ ತೇಜಃಸ್ವರೂಪವನ್ನು ಶ್ರೀ ಸಿದ್ಧಲಿಂಗ ಜಗದ್ಗುರುಗಳು ಹೊಂದಿದ್ದರು ಅವರು ದೊಡ್ಡ ಶಿವಯೋಗಿಗಳಾಗಿದ್ದರು ಲೀಲಾಮೂರ್ತಿಗಳಾಗಿದ್ದರು ಅವರ ಹೃದಯ ಬಹು ಕೋಮಲವಾಗಿತ್ತು ಒಮ್ಮೊಮ್ಮೆ ಅವರ ಹೃದಯವು ಗಂಭೀರ ಸ್ವರೂಪವನ್ನು ಧಾರಣ ಮಾಡುತ್ತಿತ್ತು “ ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ ” ಎಂಬ ಭವಭೂತಿಯ ವಚನವು ಅವರಲ್ಲಿ ಸರ್ವಥಾ ಅನ್ವಯಿಸುತ್ತಿತ್ತು ಅವರಿಂದ ಕೇದಾರ ಪೀಠವೂ ರಂಭಾಪುರೀ ಪೀಠವೂ ಉದ್ಧಾರವಾದವು ಶ್ರೀಶೈಲ ಪೀಠವು ಸುಧಾರಿಸಿತು ಅವರ ಅಭ್ಯಾಸ ಕ್ರಮವು ಅನುಮಾನುಷೀಯವಾಗಿತ್ತು ಆ ಮಹಾಮಹಿಮರು ಜ್ಞಾನದಿಂದಲೂ ತಪಃಕ್ರಿಯೆಯಿಂದಲೂ ಅದ್ಭುತ ಶಕ್ತಿಯುಳ್ಳವರಾಗಿದ್ದರು ಇತ್ಯಾದ್ಯನಂತಾನಂತ ವಿಷಯಗಳನ್ನು ಅಪ್ಪಣೆ ಕೊಡಿಸಿ ಎಲ್ಲರನ್ನೂ ಆನಂದಗೊಳಿಸಿದರು ಆಮೇಲೆ ಉಜ್ಜಯಿನೀ ಜಗದ್ಗುರುಗಳವರ ಭಾವಪಟಕ್ಕೆ ಮಂಗಳಾರತಿಯಾಗಿ ಪ್ರಸಾದ ವಿನಿಯೋಗವಾದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು

ಸಕ್ರೆಟರಿ

ವೀರಶೈವ ವಿದ್ವತ್ಸಂಘ ಕಾಶೀ

ಕಾಶೀಯಾತ್ರಿಕರಿಗೆ ಸೂಚನೆ

ಈ ಸಲದ ಶಿವರಾತ್ರಿಯು ವಿಶೇಷವಾಗಿ ಮಹಾಪರ್ವವಾಗಿರುವದರಿಂದಲೂ, ಶ್ರೀ ಜಗದ್ಗುರುಗಳವರ ಜ್ಞಾನೋಪದೇಶವನ್ನು ಪಡೆಯಬೇಕೆಂತಲೂ ಅನೇಕ ಜನ ಯಾತ್ರಿಕರು ಕಾಶಿಗೆ ಬರುವವರಾಗಿದ್ದಾರೆ. ತಾವು ಎಷ್ಟು ಜನರು ಬರುವರೆಂಬುದನ್ನೂ, ಏನೇನು ಏರ್ಪಾಟು ಮಾಡಬೇಕೆಂಬುದನ್ನೂ ೧೫ ದಿನ ಮುಂಚಿತವಾಗಿಯೇ ನಮಗೆ ತಿಳಿಸಬೇಕು

ಶ್ರೀ ಪೀಠದಲ್ಲಿ ಈಗ ವಿಶೇಷ ಸೌಕರ್ಯಗಳಿರುವದರಿಂದ ಅನೇಕ ವಿದ್ಯಾರ್ಥಿಗಳು ಬರುತ್ತಲಿದ್ದಾರೆ ಇನ್ನು ಮುಂದೆ ಯಾರು ಬರಬೇಕಾದರೂ ಶ್ರೀ ಮಹಾಸನ್ನಿಧಿಯ ಅಪ್ಪಣೆಯನ್ನು ಲಿಖಿತ ಪೂರ್ವಕವಾಗಿ ಪಡೆಯಬೇಕು

ರಾಮಚಂದ್ರ ಪ್ರಸಾದ,

ಏಜೆಂಟ್ ಜಂಗಮವಾಡೀಮಠ ಕಾಶೀ

ಕಾಗದದ ಬೆಲೆಯು ವಿಶೇಷವಾಗಿ ಏರಿರುವುದರಿಂದ ಕೆಲವು ಗ್ರಂಥಗಳ ಮತ್ತು ಫೋಟೋಗಳ ಬೆಲೆಯನ್ನು ಸ್ವಲ್ಪ ಹೆಚ್ಚಿಸಿದ್ದೇವೆ.

೧ನೆಯ ಪುಟದಿಂದ ಮುಂದುವರೆದುದು

ಸಂಪಾದಿಸಲ್ಪಟ್ಟಾಗ್ಯೂ ಕೊನೆಗೆ ಅವರಿಂದ ಮೋಹವುಂಟಾಗುವದಲ್ಲದೆ ಅಖಂಡವಾದ ಸುಖವು ಎಂದಿಗೂ ಸಂಭವಿಸಲಾರದು ಇವು ಅನ್ನಗಳೆಂದು ಭಾವಿಸಲ್ಪಟ್ಟ ಕಾರ್ಯಗಳು ಜರೆಯಿಂದ ಜರ್ಝರವಾದ ಶರೀರವುಳ್ಳವನಿಗೆ ಪಶ್ಚಾತ್ತಾಪವನ್ನೇ ಉಂಟುಮಾಡುವವು ವಿವೇಕವಿಲ್ಲದವರು ಮರಗಳ ಎಲೆಗಳಂತೆ ಹುಟ್ಟಿ ಕೆಳಕ್ಕೆ ಬೀಳುವರಲ್ಲದೆ ಸನ್ಮಾರ್ಗವಂ ಹೊಂದುವದಿಲ್ಲ ಮನೋರಥಗಳಿಂದತ್ತಿತ್ತಲಾಡಿ ಓಡಾಡುತ್ತಾ ಶ್ರಮಪಡುವ ಅವಿವೇಕಿಯು ಮನೆಯಂ ಸೇರಿದಾಗ್ಯೂ ದುಃಖಾಧಿಕ್ಯದಿಂ ಸುಖವಾಗಿ ನಿದ್ರೆಯಂ ಪಡೆಯುವದಿಲ್ಲ ಈ ವಸ್ತುಗಳನ್ನು ಪಡೆಬಹುದೆನು ಈ ಲಕ್ಷ್ಮಿಯು ಸಿದ್ಧವಾಗಿರುವಳು, ಈ ಸುಖಗಳನ್ನನುಭವಿಸುವೆನೆಂದು ಯೋಚಿಸುವಲ್ಲಿಯೇ ಅಕಾಂಡತಾಂಡವವಾದ ಮೃತ್ಯುವು ಅವನಂ ಕೊಂಡುಪೋಗುವದು. ಅವಿವೇಕಿಯಾದವನಿಗೆ ಪ್ರಯತ್ನದಿಂ ಸಂಪಾದಿಸಲ್ಪಟ್ಟವರಾಗಲೀ, ತಾವಾಗಿ ಬಂದವರಾಗಲೀ ಸೇರಿದ ಜನರು ದುಃಖಸಾಧಕರಾಗುವರಲ್ಲದೆ ಸುಖಸಾಧಕರಾಗುವದಿಲ್ಲ ದೈವವಶದಿಂ ಒಂದು ಬಹುಕಾಲದಿಂ ಪೋಷಿಸಲ್ಪಟ್ಟ ದೇಹವೇ ಅಪಕಾರವಂ ಮಾಡುವಲ್ಲಿ ಕಡೆಮೆಯವರು ಅಪಕಾರವಂ ಮಾಡುವುದರಲ್ಲಿ ಆಶ್ಚರ್ಯವೇನು? ಕೊಡಲಿಯಿಂದ ಕತ್ತರಿಸಲ್ಪಡುವ ಅರಣ್ಯದಲ್ಲಿರುವನಂತೆ, ಮೃತ್ಯುಮುಖದಲ್ಲಿರುವ ಸಂಸಾರವಂ ಹೊಂದುವ ಪುರುಷನು ಎಂದಿಗೂ ಸುಖಪಡುವದಿಲ್ಲ (ಸಶೇಷ)

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅವತಾರಲೀಲೆಗಳಿಂದ ಕೂಡಿದ **ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ**	೦—೩—೦
ಶ್ರೀರೇಣುಕಾಚಾರ್ಯರ ಲಿಂಗ ನಿರ್ಗಮನದ ಫೋಟೋ (ನಾನಾವರ್ಣಗಳಿಂದ ಮುದ್ರಿತವಾದುದು) **ಸೈಜು ೧೪ × ೧೦ ಬೆಲೆ**	೦—೩—೦
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ **ಫೋಟೋ ಸೈಜು ೧೪ × ೧೦ ಬೆಲೆ**	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗ ಪ್ರತಿಷ್ಠೆಯ **ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ**	೦—೩—೦
ಶ್ರೀ ಜಗದ್ಗುರು ಮರುಳಸಿದ್ಧೇಶ್ವರ ಶಿವಾಚಾರ್ಯರು ಭೂಗರ್ಭದಿಂದ **ಅವತರಿಸಿರುವ ಫೋಟೋ**	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ **ಪಟ್ಟಾಭಿಷೇಕ ಮಾಡುವ ಫೋಟೋ**	೦—೧—೬
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ **ಮೂಲಧರ್ಮಪೀಠದ ಫೋಟೋ**	೦—೧—೬
ಶ್ರೀ ಕಾಶೀ ಜಗದ್ಗುರುಗಳ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) **ಸೈಜು ೧೪ × ೧೦**	೦—೪—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ **ಫೋಟೋ**	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶರ ಜಗದ್ಗುರು ಶಿವಾನಂದಶಿವಾಚಾರ್ಯ **ಮಹಾಸ್ವಾಮಿಗಳವರ ಫೋಟೋ**	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ **ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ**	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) **ಚಿಕ್ಕ ಸೈಜು ೧ಕ್ಕೆ**	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) **ದೊಡ್ಡ ಸೈಜು ೧ಕ್ಕೆ**	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ **ಫೋಟೋ ೧ಕ್ಕೆ**	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಶಿಲ್ಪದ **ಸುಂದರ ಫೋಟೋ ೧ಕ್ಕೆ**	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ **ಫೋಟೋ**	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು **ವಿರಾಜಿಸುತ್ತಿರುವ ಫೋಟೋ**	೦—೧—೬
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ **ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ**	೦—೧—೬

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೭ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶೆ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೭ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿಪ್ರಜತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯ ಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರಪದ್ಧತಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೭ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶೆತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು. ೨ನೆಯ ಆವೃತ್ತಿ)	೧। ರೂ.
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧॥ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧॥ ರೂ.
ವೀರಶೈವರತ್ನ (೩ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿಂದೊಡಗೂಡಿದ್ದು)	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಟೀಕಾಸಹಿತ)	೨ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ.
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಪಾರಮೇಶ್ವರಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ.
A brief life-sketch of Pandit Sri Kashinatha Shastriji (*English*)	4 As.
The Philosophical Aspect of Virashaivism (*English*)	8 As.
Speeches by Pandit Shri Kashinatha Shastriji (*English*)	12 As
क्रियासारसंग्रहिका (संस्कृत)	१ रु
वीरशैवरत्न (मराठी)	१ रु.
महानारायणोपनिषद् (वीरशैवभाष्य-संस्कृत)	१ रु.
सिद्धांतशिखामणि (मूल)	८ आ.
संक्षिप्तभावकारिका (संस्कृत)	२ आ.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾಸನಪಂಕಜಾತಜನಿತರ್ ಪಂಚಾಸ್ಯಪೀಠ ಧರರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ೪ ಆಣೆ

ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ.

ಸಂಪುಟ ೧೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೯ನೇ ಜನವರಿ ೧೯೪೫ [ಸಂಚಿಕೆ ೪೦

ವೈರಾಗ್ಯದರ್ಪಣ

ಲೇ—ಮಲ್ಲಿಕಾರ್ಜುನಾರಾಧ್ಯ ರಾಗೇವೆನಿಂರು ಪ ಸೀವಾಪ,
ಮುದೇನೂರು

(ಕಳೆದ ಸಂಚಿಕೆಯ ನ ನ ೦ಪ ಪರಿಗುವ)

ಎಲೈ ಮಹಾನುಭಾವನೆ! ಸ್ಥಾವರಜಂಗಮಾತ್ಮಕವಾದ ಈ ಪ್ರಪಂಚವೆಲ್ಲವೂ ಸ್ವಪ್ನದಲಿ ಕಾಣುವ ಜನಸಮೂಹದಂತೆ ಕ್ಷಣಿಕವಾಗಿರುವುದು ಸಮಸ್ತಪದಾರ್ಥಗಳೂ ಕಾಲಭೇದದಿಂ ಭೇದವಂ ಪಡೆಯುತ್ತಿರುವಲ್ಲಿ ಯಾವುದು ಏಕರೀತಿಯಾದದ್ದೆಂದು ನಂಬತಕ್ಕದ್ದು? ಶುಷ್ಕವಾದ ಸಮುದ್ರದಂತೆ ಹಳ್ಳವಾಗಿದ್ದ ಭೂಮಿಯು ಕೆಲವು ಕಾಲದಲ್ಲಿ ಬೆಟ್ಟಕ್ಕೆ ಸಮಾನವಾದ ತಿಟ್ಟವಾಗುವದು ಹೀಗೆ ತಿಟ್ಟಾಗಿದ್ದ ಭೂಮಿಯು ಹಳ್ಳವಾಗುವದು ನಗರವು ಹಾಳಾಗಿಯೂ, ಹಾಳುನಗರವಾಗಿಯೂ, ಮರುಭೂಮಿ ಉದ್ಯಾನವಾಗಿಯೂ, ಉದ್ಯಾನವು ಮರುವಾಗಿಯೂ, ಜಲಸ್ಥಲವು ಶುಷ್ಕವಾಗಿಯೂ, ಶುಷ್ಕವಾದ್ದು ಜಲಮಯವಾಗಿಯೂ, ದರಿದ್ರನು ಶ್ರೀಮಂತನಾಗಿಯೂ, ಶ್ರೀಮಂತನು ದರಿದ್ರನಾಗಿಯೂ, ಯೋಗಿಯು ಭೋಗಿಯಾಗಿಯೂ, ಭೋಗಿಯು ಯೋಗಿಯಾಗಿಯೂ, ಕಲ್ಲು ದೇವರಾಗಿಯೂ, ದೇವರು ಕಲ್ಲಾಗಿಯೂ ಕಾಣಲ್ಪಡುವದು ಹೀಗೆ ಮಾಯಾಮಯವಾಗಿ ನಟಿಸುವ ಸಂಸಾರವೆಂಬ ನಟನ ವಿಲಾಸದಲ್ಲಿ ಆ ದಿವಸಗಳು ಹೋದವು, ಆ ಸಂಪತ್ತುಗಳು ಸ್ಮರಣಯೋಗ್ಯವಾದವು, ಆ ಕ್ರಿಯೆಗಳು ಮರೆತು ಹೋದವು, ಇಲ್ಲಿಯ ಹಳಬರುಯಮಲೋಕಕ್ಕೆ ಹೊಸಬರಾದರು. ಚಿಕ್ಕವರು ದೊಡ್ಡವರಾದರು ದೊಡ್ಡವರು ಭಸ್ಮವಾದರು ಹೊಸಬರು ಪ್ರತಿದಿನದಲ್ಲಿಯು ಹುಟ್ಟುತ್ತಿರುವರು, ಪ್ರಕಾಶಕಾಲವು ಕಳೆದುಹೋಯಿತು, ಕತ್ತಲೆಗಾಲವು ಸಿದ್ಧವಾಗಿರುವದು, ಎಂದು ಜನರೆಲ್ಲರೂ ದುಃಖಪಡುತ್ತಿರುವರಲ್ಲದೆ ಯಾರೂ ಸಂತೋಷಪಡುವುದಿಲ್ಲ, ದರಿದ್ರನಿಗೆ ಇಲ್ಲವೆಂಬ ದುಃಖ ಒಂದೇ ಇರುವದು, ಶ್ರೀಮಂತನಿಗಾದರೋ ಯಾವದು ಎಲ್ಲಿ ಹೋಗುವದೋ ಎಂಬ ದುಃಖವು ಸಹಸ್ರಪ್ರಕಾರವಾಗುವದು ಇದ್ದವನಿಗೆ ದುಃಖವಲ್ಲದೆ ಇಲ್ಲದವನಿಗೆ ನಾಶ ದುಃಖವಿಲ್ಲವಾದ್ದರಿಂದ ದರಿದ್ರನ ಮನೋರಥಗಳು ಶ್ರೀಮಂತನ ದುಃಖಗಳು ಸಹ ಫಲಿಸುವಂತೆ ತೋರುವದು, ದರಿದ್ರನು ನಿರೋಗದೃಢಗಾತ್ರನಾಗಿ ಬೀಸಣಿಗೆಯಂತೆ ತಿರುಗುತ್ತಾ ಕೊಡದವನಿಗೆ ದರಿದ್ರತೆಯುಂಟಾಗುವದೆಂಬ ಭಯದಿಂದ ಕೈಲಾದಮಟ್ಟಿಗೆ ಅರ್ಥಿಗಳಂ ಸಂತೋಷಪಡಿಸುವನು ರಾಗ, ಭೋಗ, ರೋಗಗಳಂ ದೇಳಲು ಹಸ್ತಲಾಘವವನ್ನಪೇಕ್ಷಿಸುವ ಶ್ರೀಮಂತನು ಕೊಟ್ಟರೆ ತನಗೆ ಕಡಮೆಯಾಗುವದೆಂಬ ಲೋಭದಿಂದ ಯಾಚಕರಂ ನಿರಾಕರಿಸುತ್ತಾ ಆ ದೋಷಗಳಿಂದಲೇ ದರಿದ್ರನಾಗುವನು ಧಾರ್ಮಿಕನಧನವು ಯಾಚಕರ ಮನವಂ ಸಂತೋಷಪಡಿಸಿದ್ದರಿಂದ ಅಕ್ಷಯವಾಗಿ ಇಲ್ಲಿಯ ಶ್ರಮವನ್ನುಂಟುಮಾಡಿ ಜನ್ಮಾಂತರಕ್ಕೆ ಸ್ಥಿತಿಯಾಗುವದು ಲೋಭಿಯ ಧನವು ಹ್ಯಾಗೆ ಹ್ಯಾಗೆ ರಕ್ಷಿಸಲ್ಪಟ್ಟಾಗ್ಯೂ ಸಾಧುಸಂತರ ಕೃಪಾದೃಷ್ಟಿಯಿಲ್ಲದ್ದರಿಂದ ದೋಷಕಗುಲಿ ಆನೆಸುಂಗಿದ ಬೇವಲ ಹಣ್ಣಿನಂತೆ ಇದ್ದಲ್ಲಿಯೇ ಅದೃಶ್ಯವಾಗಿ ಹೋಗುವದು ಹೀಗೆ ಏನಾದರೂ ಒಂದು ನಿಮಿತ್ತದಿಂದ ಪದಾರ್ಥವೆಲ್ಲವು ವ್ಯತ್ಯಾಸವಾಗುವದು ಪುತ್ರ, ಮಿತ್ರ, ಭ್ರಾತೃ, ಕಳತ್ರ, ಭೃತ್ಯ ಬಂಧುಗಳು, ಗೃಹ ಕ್ಷೇತ್ರಗಳು ಧನಧಾನ್ಯಗಳು ಸಹ ಸಿದ್ಧವಾಗಿದ್ದಾಗ್ಯೂ, ನಾಶವಾದೀತೆಂದು ದಿಗಿಲು ಬೀಳುವವನಿಗೆ ಯಾವದೂ ಇದ್ದಂತೆ ಕಾಣುವದಿಲ್ಲ ಯಾವದೂ ಇಲ್ಲದ ದರಿದ್ರನಿಗೆ ಮನೋರಥಗಳಿಂದಲೇ ಅಖಂಡ ಸಾಮ್ರಾಜ್ಯವುಂಟಾಗುವದು ವೃಕ್ಷೋತ್ಪತ್ತಿ ಪುಷ್ಪಫಲ ಕಾಲಗಳೂ ಸಹ ನಾಶ, ವೃಥಾ ಸಂಚಿತಿಸುವನಿಗೆ ಸುಖದುಃಖಪ್ರಾಯವಾಗುವದು ಸ್ಥಿರಚರಪ್ರಾಣಿಗಳಿಗೂ ಪಶು ಮನುಷ್ಯ ಪ್ರಾಣಿಗಳಿಗೂ ಸಹ ವೇಷಧಾರಿಗಳ ರೀತಿಯಿಂ ವ್ಯತ್ಯಾಸವಾಗುವಲ್ಲಿ ಏಕರೀತಿ ಯೆಂದು ಯಾವುದಂ ನಂಬುವುದು! ಶೂನ್ಯರೂಪದ ಆ ಆಕಾಶವು ಸಹ ಕ್ಷಣಕ್ಕೊಂದೊಂದು ಬಗೆಯಾಗುವಲ್ಲಿ ರೂಪಯುಕ್ತವಾದ ವಸ್ತುಗಳಿಗೆ ವ್ಯತ್ಯಾಸವಾಗುವದರಲ್ಲಿ ಆಶ್ಚರ್ಯವೇನು? ಈ ಜಗತ್ಪ್ರಪಂಚಯಿಂದ ಮೋಹಗೊಳ್ಳದವರು ಯಾರೂ ಇಲ್ಲವೆಂತಲೇ ತೋರುತಲಿದೆ ಹೀಗೆ ದೋಷಗಳನ್ನಾಲೋಚಿಸುವನ ಹೃದಯವಲ್ಲಿ ಮರುಭೂಮಿಯಲ್ಲಿ ಸರೋವರದಂತೆ, ಭೋಗಾಪೇಕ್ಷೆಯು ಹುಟ್ಟುವದಿಲ್ಲ ನನಗೆ ಅಹಂಕಾರವೇ ಭಗ್ನವಾಗಿರುವದ್ದರಿಂದ ಅಹಂಕಾರಕಾರಣವಾದ ರಾಜ್ಯಸಂಪತ್ತುಗಳೆಲ್ಲವೂ ಇಲ್ಲದಿರುವಂತೆ ತೋರುತ್ತಿರುವವು, ಜನ್ಮಾಂತರಗಳಲ್ಲೂ ದುಃಖವನ್ನುಂಟುಮಾಡುವ ಇಂದ್ರಿಯ ವೈಷಮ್ಯಕ್ಕಿಂತ ಒಂದು ಜನ್ಮದಲ್ಲಿದುಃಖಪಡಿಸುವ ವಿಷಯವು ಅಧಿಕವಲ್ಲವಾದ್ದರಿಂದ ವಿಷಯಾಸಕ್ತವಾದ ಇಂದ್ರಿಯ ವೈಷಮ್ಯವೇ ವಿಷವೆನಿಸಿಕೊಳ್ಳುವದು, ವಿಷಯಗಳು ಇಂದ್ರಿಯಗಳನ್ನೂ ಮನ್ಮಥನು ಮನವನ್ನೂ, ಸಳಕೂಳ್ಳುವುದಕ್ಕೆ ಪೂರ್ವದಲ್ಲೇ ಮಹಾತ್ಮನಾದ ನೀನು ತತ್ವೋಪದೇಶದಿಂ ಚಿಕಿತ್ಸೆಯಂ ಮಾಡಿದರೆ ನಾನು ಸ್ವಸ್ಥನಾಗುವೆನು ಸುಖದುಃಖಗಳೂ, ಜನನಮರಣಗಳೂ, ಸಹ ಜ್ಞಾನಿಗೆ ಬಂಧಕವಾಗುವದಿಲ್ಲವಾದ್ದರಿಂದ ಅಂತಹ ಜ್ಞಾನವು ನನಗೆ ಉಂಟಾಗುವಂತ ಉಪದೇಶವಂ ಮಾಡುವನಾಗು, ನನ್ನ ಹೃದಯವೆಂಬ ಗುಹೆಯಲ್ಲಿ ಸೇರಿಕೊಂಡಿರುವ ಅಜ್ಞಾನವೆಂಬ ಅಂಧಕಾರವು ನಿಶ್ಶೇಷವಾಗಿ ಪೋಗುವಂತೆ ಜ್ಞಾನವೆಂಬ ರತ್ನದೀಪವಂ ಸ್ಥಾಪಿಸುವನಾಗು, ಪ್ರತಿ ಕ್ಷಣದಲ್ಲೂ ಹುಟ್ಟುತಲಿರುವ ಅನರ್ಥಪರಂಪರೆಗಳಿಂದ ದಾಟಲಶಕ್ಯವಾದ ಸಂಸಾರಸಾಗರದಲ್ಲಿ ಮುಳುಗುವ ಜನವಂ ನೋಡುವ ನನ್ನ ಮನವು ಈಗ ಆಲೋಚನೆಯೆಂಬ ಕೆಸರಿನಲ್ಲಿ ಬಿದ್ದಿರುವದು ಬಿರುಗಾಳಿಯಿಂ ಸಮುದ್ರದಲ್ಲಿ ಹೊಡೆಯಲ್ಪಟ್ಟ ನಾವೆಯಂತೆ ನನ್ನ ಮನವು ಗುಣವ್ಯತ್ಯಾಸದಿಂ ಭ್ರಮೆಪಡುತ್ತಿರುವದು ಜೀರ್ಣವಾದ ವೃಕ್ಷದ ಎಲೆಗಳಂತೆ ನನ್ನ ಇಂದ್ರಿಯಗಳು ಕಂಪಿಸುತಿರುವವು, ದಾರಿದ್ರ್ಯದೋಷದಿಂ ವಿಟನ ಮನೆಯಲ್ಲಿ ಚಾಕರಿಗೆ ಸೇರಿ ಮೊದಲೇ ಸಂಬಳವಂ ತೆಗೆದುಕೊಂಡಿರುವ ಪತಿವ್ರತೆಯಂತೆ ದುರ್ವಿಷಯ ಸಮೂಹವಂ ಹೊಂದಿರುವ ನನ್ನ ಚಿಂತೆಯು ತನಗೆ ಅವಲಂಬನವಾದ ಆತ್ಮನನ್ನು ಹೊಂದಲಾರದೆ ವಿಷಯಸಮೂಹವಂ ಬಿಡಲಾರದೆ ಮಂಕಾಗಿರುವದು ಇದೇ ಪ್ರಕಾರವಾಗಿರುವ ನನ್ನ ಧೃತಿಯು ಹಿಮಗಾಲದಲ್ಲಿ ಕಲವು ಎಲೆಗಳಂ ವಹಿಸಿರುವ ಬಳ್ಳಿಯಂತಿರುವದು ನನ್ನ ಸಂಸಾರ ಸ್ಥಿತಿಯು ನಡುವೆಯ ದೀಪದಂತೆ ಮಧ್ಯಸ್ಥವಾಗಿರುವದು ನನ್ನ ಬುದ್ಧಿಯು ಅರ್ಧ ಕತ್ತರಿಸಲ್ಪಟ್ಟ ವೃಕ್ಷದ ಮೂಲದಂತೆ ನಿಸ್ಸಾರವಾಗಿರುವದು ಹೀಗಿರುವದ್ದರಿಂ ಸತ್ಯವಾಗಿ ಆಯಾಸಭ್ರಮೋಪಾಧಿಗಳಿಲ್ಲದ ಸರ್ವೋತ್ತಮವಾದ ಪದವಂ ಹೊಂದಿ ಲೋಕಹಿತನಾಗಿರಬೇಕೆಂದು ಪ್ರಾರ್ಥಿಸುತಲಿದ್ದೇನೆ ನಿಮ್ಮಂತೆ ನವ ಕಾರ್ಯಗಳನ್ನು ಮಾಡುವ ವ್ಯವಹಾರಾಸಕ್ತರಾಗಿದ್ದ ಜನಕಾದಿಗಳು ಹ್ಯಾಗೆ ಕೃತಾರ್ಥರಾದರು ಅಭಿಮಾನಿಸಿದ ಕಲ್ಲೂ ಸಹ ಮೋಹಪಡಿಸುವದಷ್ಟೆ? ಹೀಗಿರುವಲ್ಲಿ ಯಾವ ದೃಷ್ಟಿಯಿಂದ ತಾವು ಜೀವನ್ಮುಕ್ತರಾಗಿ ವಿಹರಿಸುತ್ತೀರಿ! ಸರ್ಪಗಳಂತೆ ಭಯಂಕರಗಳಾದ ವಿಷಯಗಳು ಹ್ಯಾಗೆ ತಮಗೆ ಕ್ಷೇಮಕರವಾಗಿರುವವು? ತಮ್ಮ ಬುದ್ಧಿ ಎಂಬ ಸರೋವರವು ಮೋಹವೆಂಬ ಮಾತಂಗದಿಂ ಕಲಕದೆ ನಿರ್ಮಲವಾಗಿರುವುದಕ್ಕೆ ಕಾರಣವೇನು? ಸಂಸಾರದಲ್ಲಿರುವ ತಾವು ಪದ್ಮಪತ್ರದಂತೆ ನಿರ್ಲೇಪವಾಗಿರುವದು ಹೇಗೆ? ಪರರ ದುಃಖವಂ ಪರಿಹರಿಸುವಲ್ಲಿ ಆತ್ಮ ಸಮವಾಗಿ ಲೋಕವಂ ತಿಳಿಯುವ ತಾವು ಸುಖದುಃಖಾದಿಗಳಲ್ಲಿ ಈ ಲೋಕವನ್ನು ತೃಣವಾಗಿ ಹ್ಯಾಗೆ ತಿಳಿಯುತ್ತೀರಿ! ತಮ್ಮ ಮನವು ಮನ್ಮಥನಿಗೆ ಹ್ಯಾಗೆ ಸ್ವಾಧೀನವಾಗದೆ ಇರುವದು? ಯಾವ ಪುರುಷನನ್ನನುಸರಿಸಿ ನಡೆಯುವ ಜನರು ದುಃಖಹೀನರಾಗುವರು? ಯಾವದು ಉತ್ತಮವಾದ ಶ್ರೇಯಸ್ಸೋ, ಯಾವದರಿಂದ ಉತ್ತಮವಾದ ಪ್ರಯೋಜನವಾಗುವದೋ, ಯಾವದು ಉತ್ತಮವಾದ ಫಲವೋ ಇದನ್ನು ಸತ್ಯವಾಗಿ ಅಪ್ಪಣೆಕೊಡಿಸಬೇಕು ನಿಧಿವ್ಯಾಪಾರಕ್ಕೆ ವಿಷಯವಾದ ಈ ಜಗದ ಸ್ವರೂಪವನ್ನೆನಗೆ ಬೋಧಿಸಬೇಕು ಹೃದಯಾಕಾಶಕ್ಕೆ ಚಂದ್ರನಂತಿರುವ ಮನಸ್ಸಿನ ಕಳಂಕವು ಹೋಗುವಂತೆ ಅನುಗ್ರಹಿಸಬೇಕು ಇಲ್ಲಿ ಹಿಡಿಯತಕ್ಕದ್ದು ಯಾವದು, ಬಿಡತಕ್ಕದ್ದು ಯಾವದು, ಚಪಲವಾದ ಮನವು ಪರ್ವತದಂತೆ ಹ್ಯಾಗೆ ಸ್ಥಿರವಾಗುವದು, ಯಾವ ಮಂತ್ರದಿಂದ ಈ ಸಂಸೃತಿಯೆಂಬ ವಿಷೂಚಿಕೆ ಶಾಂತವಾಗುವದು ಪರಮಾನಂದವೃಕ್ಷಕ್ಕೆ ಮಂಜರಿಯಾದ ಶಾಂತಿಯಂ ಹೊಂದಿ ಕಳಂಕವಿಲ್ಲದ ಚಂದ್ರನಂತೆ ಹ್ಯಾಗೆ ನಾನು ಪೂರ್ಣನಾಗುವೆನೋ! ಪ್ರಾಣಶೇಷವಾದ ಶವವಂ ನರಿನಾಯಿಗಳು ಸೆಳೆವಂತೆ ಕಾಮಾದಿವಿಕಾರಗಳು ನನ್ನಂ ಹ್ಯಾಗೆ ಸೆಳೆಯಲಾರವೋ, ಹ್ಯಾಗೆ ಮೂಢತೆ ಇಲ್ಲದೆ ಅರಣ್ಯದಂತಿರುವ ಸಂಸಾರವೆನನಗೆ ಲೀಲೋದ್ಯಾನವಾಗುವದೋ, ರಾಗ ರೋಗಮಯವಾದ ಈ ಭೋಗಗಳು ಹ್ಯಾಗೆ ನನ್ನಂ ಬಾಧಿಸಲಾರವೋ ಹಾಗೆ ಅನುಗ್ರಹಿಸಬೇಕು ಕಟಾಕ್ಷಮಾತ್ರದಿಂ ಸಮಸ್ತವನ್ನು ಪವಿತ್ರವಾಗಿ ಮಾಡುವ ತಮ್ಮಂತಹ ಮಹಾಪುರುಷರಿಗೆ ಅಸಾಧ್ಯವಾದದ್ದು ಸ್ವರ್ಗದಲ್ಲಾಗಲೀ ಭೂಮಿಯಲ್ಲಾಗಲೀ ಎಲ್ಲಿಯೂ ಇಲ್ಲವಾದ್ದರಿಂದ ಕರುಣೆಯಿಂದ ನನ್ನಂ ಕಟಾಕ್ಷಿಸಬೇಕು. ಎಲೈ ಮುನಿಪುಂಗವನೆ! ಜ್ಞಾನದೃಷ್ಟಿಯುಳ್ಳದ ನನಗೆ ದೃಶ್ಯಪದಾರ್ಥವೆಲ್ಲವು

(ಮುಂದಿನ ಪುಟವನ್ನು ನೋಡಿ)

ಪಂಚಾಚಾರ್ಯಪ್ರಭಾ.

೧೯೪೫ನೆಯ ಜನವರಿ ತಾ|| ೨೯ನೇ ಸೋಮವಾರ

ನವೀನಜನಗಳ ಸ್ವೇಚ್ಛಾಚಾರ

ನಮ್ಮ ಭರತಖಂಡವಾಸಿಗಳಾದ ಜನಗಳ ಹೃದಯದಲ್ಲಿ ಸ್ವಭಾವಸಿದ್ಧವಾಗಿ ಅನಾದಿಕಾಲದಿಂದ ನೆಲೆಗೊಂಡಿರುವ ಆಸ್ತಿಕ್ಯವು ಬರಬರುತ್ತ ಮಾಯವಾಗುತ್ತ ಬರುತ್ತಿದೆ. ಎಲ್ಲಿಯವರೆಗೂ ನಮ್ಮ ಹೃದಯಮಂದಿರವು ಆಸ್ತಿಕ್ಯವೆಂಬ ಭಿತ್ತಿಯಿಂದ ರಚಿಸಲ್ಪಟ್ಟಿರುವುದೋ ಅಲ್ಲಿಯವರೆಗೂ ಸ್ವೇಚ್ಛಾಚಾರಗಳೆಂಬ ದುಷ್ಟ ಪ್ರಾಣಿಗಳು ನುಗ್ಗಲು ಅವಕಾಶವು ದೊರೆಯಲಾರದು. ಈ ಜಗತ್ತನ್ನು ನಿರ್ಮಿಸಿದ ಒಬ್ಬ ದೇವರುಂಟು, ಪರಲೋಕವುಂಟು, ದೇವರ ಆಜ್ಞೆಗೆ ವಿರುದ್ಧವಾಗಿ ನಡೆಯಬಾರದು, ಪರಲೋಕಸಾಧನಗಳಾದ ಸತ್ಕರ್ಮಗಳನ್ನು ಮಾಡಬೇಕಲ್ಲದೆ ನರಕಸಾಧನವಾದ ದುಷ್ಕರ್ಮಗಳನ್ನು ಮಾಡಬಾರದೆಂಬ ಬುದ್ಧಿಯುಳ್ಳವನೇ ಆಸ್ತಿಕನೆನಿಸಿಕೊಳ್ಳುತ್ತಾನೆ. ದೇವರಿಲ್ಲ, ಪರಲೋಕವಿಲ್ಲ, ಎಲ್ಲಿಬೇಕಾದರೂ ತಿಂದುಂಡು ಎಲ್ಲಿಬೇಕಾದರೂ ವಿಹರಿಸುತ್ತ ಎಲ್ಲಿಬೇಕಾದರೂ ನಿದ್ರಿಸುತ್ತ ಹಣವನ್ನು ಗಳಿಸಿ ಇರುವವರೆಗೆ ಸುಖಪಡುವುದೊಂದೇ ಮಾರ್ಗವೆಂದು ತಿಳಿಯುವವನು ನಾಸ್ತಿಕನೆನಿಸಿಕೊಳ್ಳುತ್ತಾನೆ. ಹೀಗೆ ಆಸ್ತಿಕ ನಾಸ್ತಿಕ ಎಂಬ ವ್ಯವಹಾರವು ಬರಬೇಕಾದರೆ ಅವರವರು ಮಾಡುವ ಸದಾಚಾರ ದುರಾಚಾರಗಳೇ ಕಾರಣವು. ಈ ಸದಾಚಾರ ದುರಾಚಾರಗಳೆಂಬವು ಹಿಂದೆ ಕೃತಯುಗದಲ್ಲಿ ಪರಮಾತ್ಮನು ಎಂದು ಪ್ರಪಂಚವನ್ನು ನಿರ್ಮಿಸಿದನೋ ಅಂದಿನಿಂದಲೂ ಅನಾದಿಸಿದ್ಧಗಳಾಗಿ ಬಂದಿರುತ್ತವೆ. ಇಂಥ ದುರಾಚಾರಿಗಳಾದ ನಾಸ್ತಿಕರನ್ನು ಖಂಡಿಸುವವರು ಬಹಳ ಕಡಿಮೆ ಕಂಡುಬರುತ್ತಾರೆ.

ಈ ದೇಹವು ಎಂದಾದರೂ ಒಂದು ದಿವಸ ಸುಟ್ಟು ಬೂದಿಯಾಗುತ್ತದೆ. ಆದ್ದರಿಂದ ಈ ದೇಹವು ಹುಟ್ಟಿದ್ದು ಮಾತ್ರ ಸುಳ್ಳೇ ಸುಳ್ಳು. ಆದ್ದರಿಂದ ಈ ದೇಹವಿರುವವರೆಗೆ ಸುಖವಾಗಿದ್ದರೆ ಸಾಕು. ಎಲ್ಲಿ ಬೇಕಲ್ಲಿ ಸುಖಭೋಜನವನ್ನು ಮಾಡುತ್ತ ಪರಲೋಕದ ಚಿಂತೆಯಿಲ್ಲದೆ ಇರಬೇಕು ... ಇಂಥವರು ... ಸುಳ್ಳು ... ಎಂಬುದಾಗಿ ... ಪ್ರಾಚೀನಗ್ರಂಥಗಳಿಂದ ಗೊತ್ತಾಗುವುದು. ಇವರಿಂದ ನಾಸ್ತಿಕಮಾರ್ಗಗಳಲ್ಲಿ ಆಸ್ತಿಕಮಾರ್ಗಗಳಾಗಲಿ ಸ್ವಾಭಾವಿಕವಾಗಿ ಒಂದು ಧರ್ಮಗಳಾಗಿರುತ್ತವೆ. ಆದರೆ ಅಂದು ನಮ್ಮಲ್ಲಿ ಆಸ್ತಿಕಮಾರ್ಗಗಳೇ ಹೆಚ್ಚುತ್ತವೆ. ಮತ್ತೊಂದು ಕಾಲದಲ್ಲಿ ನಾಸ್ತಿಕಮಾರ್ಗಗಳೇ ಹೆಚ್ಚುತ್ತವೆ "ಅತ್ಯುನ್ನತಿಃ ಪತನಹೇತುಃ" ಎಂಬಂತೆ ಯಾವುದು ಬಹಳ ಹೆಚ್ಚುವುದೋ ಅದು ಒಂದು ಕಾಲದಲ್ಲಿ ನಾಶವಾಗಲೇಬೇಕು ಎಂಬ ಈಶ್ವರನ ನಿಯಮವಿರುವುದರಿಂದ ಕೃತತ್ರೇತಾದಿ ಯುಗಗಳಲ್ಲಿ ಧರ್ಮವೆಂಬ ಗೋವು ನಾಲ್ಕು ಪಾದಗಳನ್ನೂರಿ ನಿಂತಿರುವಾಗ ಎಲ್ಲರೂ ಧರ್ಮಮಾರ್ಗದಲ್ಲಿ ನಡೆದು ಯಮಲೋಕವನ್ನು ಬರಿದು ಮಾಡಿದರು. ಈಗ ಕಲಿಯುಗವು ಪ್ರಾಪ್ತವಾಗಲು ಮೆಲ್ಲ ಮೆಲ್ಲನೆ ಅಧರ್ಮವೆಂಬ ವಿಷದ ಬಳ್ಳಿಯು ಹಬ್ಬುತ್ತ ನಡೆದಿರುವದರಿಂದ ಜನಗಳು ನಾಸ್ತಿಕಮಾರ್ಗವನ್ನು ಹಿಡಿಯುತ್ತ ಬಂದಿರುತ್ತಾರೆ.

ಯುಗಧರ್ಮಾನುಸಾರವಾಗಿ ಪೂರ್ವಾಚಾರಗಳು ಬದಲಾವಣೆಹೊಂದಿದವು. ಅನೇಕಜನರು ಅಂಗದಲ್ಲಿ ಲಿಂಗವನ್ನೂ ಯಜ್ಞೋಪವೀತವನ್ನೂ ಹಾಕುವುದರಿಂದ ಪ್ರಯೋಜನವೇನೆಂದು ವಿತಂಡವಾದವನ್ನು ಮಾಡಹತ್ತಿ ಮಂಗಲಮೂರ್ತಿಯಾದ ಶಿವಲಿಂಗವನ್ನೂ ಯಜ್ಞೋಪವೀತವನ್ನೂ ಕಿತ್ತೊಗೆಯಹತ್ತಿರುವರು. ಇದು ಕಲಿಕಾಲಪ್ರಭಾವವೆಂದೇ ಹೇಳಬೇಕಾಗಿದೆ.

> ಅಟ್ಟಶೂಲಾ ಜನಪದಾಃ ಶಿವಶೂಲಾಶ್ಚತುಷ್ಪಥಾಃ |
> ಪ್ರಮದಾಃ ಕೇಶಶೂಲಿನ್ಯೋ ಭವಿಷ್ಯಂತಿ ಕಲೌಯುಗೇ ||

ಕಲಿಯುಗದಲ್ಲಿ ಜನಗಳು ಅನ್ನವನ್ನು ವಿಕ್ರಯಿಸುವರು ಮತ್ತು ಬೀದಿ ಬೀದಿಗಳಲ್ಲಿ ಶಾಸ್ತ್ರವನ್ನು ಮಾರಾಟಮಾಡುವರು. ಹೆಂಗಸರು ತಮ್ಮ ಪಾತಿವ್ರತ್ಯಧರ್ಮಕ್ಕೆ ತಿಲಾಂಜಲಿ ಕೊಡುವರು ಎಂದು ಮಹರ್ಷಿಗಳ ಭವಿಷ್ಯವಾಣಿಯು ಈಗ ಎಲ್ಲರಿಗೂ ಪ್ರತ್ಯಕ್ಷವಾಗಿ ತೋರುವದು. ಹೆಜ್ಜೆಹೆಜ್ಜೆಗೂ ಅನ್ನವನ್ನು ವಿಕ್ರಯಿಸುವ ಅಂಗಡಿಗಳು ಕಂಡುಬರುತ್ತವೆ. ವೇದಾಧ್ಯಯನ ಶಾಸ್ತ್ರಾಧ್ಯಯನಗಳು ಅರಣ್ಯಪಾಲಾಗಿವೆ.

> ಕಲೌ ವೇದಾಂತಿನಸ್ಸರ್ವೇ ಫಾಲ್ಗುನೇ ಬಾಲಕಾ ಇವ ||

ಕಾಮನಹಬ್ಬದಲ್ಲಿ ಎಲ್ಲಿನೋಡಿದರೂ ಬಾಯಿಬಡಿದುಕೊಳ್ಳುವ ಹುಡುಗರ ಸಂಖ್ಯೆಯೇ ಕಾಣುತ್ತಿರುವಂತೆ ಯಾವ ಹೋಟೆಲ್ಲುಗಳಲ್ಲಿ ನೋಡಿದರೂ, ಯಾವ ಅಂಗಡಿಗಳಲ್ಲಿ ನೋಡಿದರೂ, ಯಾವ ಬೀದಿಗಳಲ್ಲಿ ನೋಡಿದರೂ, ಯಾವ ಪಾರ್ಕುಗಳಲ್ಲಿ ನೋಡಿದರೂ, ಯಾವ ನಾಟಕಗಳಲ್ಲಿ ನೋಡಿದರೂ ನಾನೇ ಬ್ರಹ್ಮವೆಂಬ ಮರುಳ ವೇದಾಂತಿಗಳ ಅಹಂಕಾರವಾಣಿಯೇ ಕೇಳಿಬರುತ್ತಲಿದೆ.

> ಕಲೌ ಲೋಕಪಿಶಾಚಾಃ ಸ್ಯುಃ ಜಾತೇಷು ವರ್ಣಸಂಕರಃ |

ಎಂಬ ಧರ್ಮಶಾಸ್ತ್ರದ ಭವಿಷ್ಯವಾಣಿಯಂತೆ ಎಲ್ಲಿ ನೋಡಿದರೂ ವರ್ಣಸಾಂಕರ್ಯವೆಂಬ ಪಿಶಾಚಿಯು ತಾಂಡವವಾಡುತ್ತಿದೆ. ಹೀಗೆ ಜಗತ್ತಿನಲ್ಲಿ ವಿಪರೀತವಾಗಿ ನಡೆಯುವುದನ್ನು ನೋಡಿದರೆ ಇದೊಂದು ಅಧರ್ಮದ ಏಳಿಗೆಯ ಸಮಯವೆಂದೇ ಹೇಳಬೇಕಾಗಿದೆ.

ಹೀಗಿರುವಲ್ಲಿ 'ಅಪಿಚ ಪಿಶಾಚಗ್ರಸ್ತಃ' ಎಂಬುವಂತೆ ಈಗಿನ ವಿದ್ಯಾಸಂಸ್ಕಾರವುಳ್ಳವರೂ ಇಂಥ ವಿಪರೀತ ವರ್ತನೆಗಳಿಗೆ ಅನುಕೂಲತೆಗಳನ್ನು ಕಲ್ಪಿಸಿಕೊಟ್ಟಿವೆ. ಸಾಧಾರಣ ಸ್ಕೂಲುಗಳಲ್ಲಿ ಓದುವವರು ಮಾತ್ರ ... ಸ್ವಲ್ಪವೂ ... ದಂತೆ ... ಪ್ರವೇಶಿಸಿದರೆ ತೀರಿತು! ಶುದ್ಧ ಪರಂಗಿಯವರಂತೆಯೇ ತಾವಾಗಬೇಕೆಂದು ಹವಣಿಸಹತ್ತುವರು. ಆ ಫರಂಗಿಯವರ ಬುದ್ಧಿಕೌಶಲ ಚಮತ್ಕಾರ ಚಾಕಚಕ್ಯಾದಿಗಳನ್ನು ಕಲಿತು ದೇಶಕ್ಕೆ ಉಪಕಾರ ಮಾಡಬೇಕೆಂಬುದನ್ನು ಮರೆತು ಅವರಂತೆ ... , ಬೋಳಿಸುತ್ತು ಇಟ್ಟುಕೊಳ್ಳಬೇಕು, ... ಗುರು ... ಬಿಡಿಸಬೇಕು, ಹೋಟೆಲ್ಲಿಗೆ ಹೋಗಿ ದುಶ್ಯರ್ಶಿಸಿಯವುಗಳನ್ನು ತೊರೆದು ನಾನಾಜಾತಿಜನಗಳೊಡಗೂಡಿ ತಿನ್ನಬೇಕೆಂದು ನುಡಿದು ಅವರಂತೆಯೇ ನಡೆಯುತ್ತಿದ್ದಾರೆ. ಪ್ರಾಯ ಬಂದವರೇ ಬ್ರಾಹ್ಮ ಆರ್ಷ ವಿವಾಹಪದ್ಧತಿಗಳನ್ನು ತ್ಯಜಿಸಿ ವಿಧವೆಯೋ ಸಧವೆಯೋ ಎಂಬುದಾವುದನ್ನು ವಿಚಾರಿಸದೆ ಪೈಶಾಚ ಆಸುರಾದಿ ವಿವಾಹಗಳಲ್ಲಿ ಮನಗೊಡುತ್ತ ತಾಯಿತಂದೆಗಳಿಗೆ ದುಃಖವನ್ನುಂಟುಮಾಡುವವರು ಅನೇಕರು ಹೆಚ್ಚುತ್ತಿರುವರು. ಹೀಗೆ ಹೆಚ್ಚುತ್ತಿರುವ ನಾಸ್ತಿಕಮಾರ್ಗಗಳು ಎಂದು ಕುಗ್ಗುವುವೋ ಅಂದೇ ದೇಶೋದ್ಧಾರವಾಗುವದು. ಆದುದರಿಂದ ಪರಮೇಶ್ವರನು ಭಾರತೀಯರಲ್ಲಿ ಹಬ್ಬುತ್ತಿರುವ ನಾಸ್ತಿಕಭಾವವನ್ನು ಪರಿಹರಿಸಿ ಆಸ್ತಿಕಭಾವವನ್ನು ಅನುಗ್ರಹಿಸಿ ಭಾರತದೇಶವನ್ನು ರಕ್ಷಿಸಲೆಂದು ಆ ಜಗನ್ನಿಯಾಮಕನನ್ನು ಪ್ರಾರ್ಥಿಸುತ್ತೇವೆ.

ಶ್ರೀ ಎಂ. ಎ. ಶ್ರೀನಿವಾಸನ್‌ರವರು ಕಳೆದವಾರ ಚಿತ್ರದುರ್ಗಕ್ಕೆ ಸಂಚಾರ ಹೋಗಿದ್ದಾಗ್ಗೆ ಹತ್ತಿ ಸಮಿತಿಯವರು ಅವರನ್ನು ಕಂಡು ಮಾತನಾಡಿದರು. ಚಿತ್ರದುರ್ಗ ದಾವಣಗೆರೆ ಪ್ರಾಂತಗಳಲ್ಲಿ ಬೆಳೆಯುವ ಹತ್ತಿಯು ಬಹಳ ಉತ್ತಮವಾದುದೆಂದೂ, ಆದ್ದರಿಂದ ಈ ಪ್ರಾಂತದ ಹತ್ತಿಗೆ ಹೆಚ್ಚು ಬೆಲೆ ಬರುವಂತೆ ಮಾಡಿಕೊಡಬೇಕೆಂದೂ ಕೇಳಿಕೊಂಡರು.

ಜೋಗದ ವಿದ್ಯುಚ್ಛಕ್ತಿ ಯೋಜನೆಯು ಪೂರೈಸಿದ ಮೇಲೆ ಭದ್ರಾವತಿ ಕಬ್ಬಿಣ ಕಾರ್ಖಾನೆಯ ಉತ್ಪತ್ತಿಯನ್ನು ೩ರಷ್ಟು ಹೆಚ್ಚಿಸಬಹುದೆಂದೂ, ಯುದ್ಧ ಮುಗಿದ ಮೇಲೆ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯನ್ನು ಇಮ್ಮಡಿಯಾಗಿ ಮಾಡುವ ವಿಚಾರವು ಸರಕಾರದವರ ಯೋಚನೆಯಲ್ಲಿದೆಯೆಂದೂ ಮಂತ್ರಿಗಳಾದ ಶ್ರೀ ಮಹಮದ್ ಇಮಾಂರವರು ತಿಳಿಸಿದರು.

ಯುದ್ಧವಾರ್ತೆ.

ಪಾಲಂಬಾಗಿನ ಮೇಲೆ ವಿಮಾನದಾಳಿ

ಡಚ್ ಈಸ್ಟ್ ಇಂಡೀಸ್ ದ್ವೀಪಗಳಲ್ಲಿ ಪ್ರಧಾನ ತೈಲಕ್ಷೇತ್ರವಾಗಿರುವ ಪಾಲಂಬಾಗಿನ ಮೇಲೆ ಬ್ರಿಟಿಷ ವಿಮಾನಗಳು ದಾಳಿ ಮಾಡಿದುವೆಂದೂ ವಿಮಾನ ಕದನಗಳಾದುವೆಂದೂ ಜಪಾನಿ ವಾರ್ತಾಸಂಸ್ಥೆ ಪ್ರಕಟಿಸಿದೆ. ಆದರ ಈಸುದ್ದಿ ಈ ತನಕ ದೃಢಪಟ್ಟಿಲ್ಲ. ಈ ಪಾಲಂಬಾನಲ್ಲಿ ಡಚ್ ಇಂಡೀಸಿನ ತೈಲ ಸಂಪತ್ತಿನ ಅರ್ಧಭಾಗ ಉತ್ಪತ್ತಿಯಾಗುತ್ತಿದೆ.

ಮಣಿಲಾ ಪತನ ಸಮೀಪಿಸಿದೆ

ಲ್ಯೂಸಾನಿನಲ್ಲಿ ಬಂದಿಳಿದ ಅಮೇರಿಕನ್ ಸೇನೆಗಳಿಗೂ ಫಿಲಿಪೈನ್ ರಾಜಧಾನಿ ಮಣಿಲಾ ನಗರಕ್ಕೂ ಈಗ ಕೇವಲ ೪೫ ಮೈಲಿ ಅಂತರ ಮಾತ್ರ ಇದೆ. ಬಾಲ್ವಾಕನ್ನು ಆಕ್ರಮಿಸಿಕೊಂಡ ಅಮೇರಿಕನ್ ಸೇನೆ ಅಲ್ಲಿಗೆ ೧೫ ಮೈಲಿಗಳ ದೂರದಲ್ಲಿರುವ ಬಾನ್ ನಗರವನ್ನು ಪ್ರವೇಶಿಸಿವೆ. ಕ್ಲಾರ್ಕ ವಿಮಾನ ನೆಲೆಯ ೧೩ ಆಶ್ರಯಗಳ ಪೈಕಿ ಒಂದು ವಿಮಾನಾಶ್ರಯವನ್ನು ಅಮೇರಿಕನ್ ಸೇನೆಗಳು ಆಕ್ರಮಿಸಿಕೊಂಡಿವೆ. ಮಣಿಲಾ ಕೊಲ್ಲಿಯ ಮುಖಭಾಗದಲ್ಲಿರುವ ಕಾರ್‍ರಿಗಿಡಾರ್ ದ್ವೀಪದ ಮೇಲೆ ಅಮೇರಿಕನ್ ವಿಮಾನಗಳು ದಾಳಿ ನಡೆಸಿವೆ.

ಪೋಲೆಂಡಿನಲ್ಲಿ ಸ್ವತಂತ್ರ ಸರಕಾರ

ಪೋಲೆಂಡ್ ದೇಶದ ಮೇಲೆ ಜರ್ಮನರು ಯುದ್ಧ ಪ್ರಾರಂಭಿಸಿದಾಗ ಈಗಿನ ಮಹಾಯುದ್ಧವು ಆರಂಭವಾಯಿತು. ಪೋಲೆಂಡು ಆಗ್ಗೆ ಪೂರ್ಣವಾಗಿ ಜರ್ಮನರ ವಶವಾಗಿತ್ತು. ಈಗ ಐದೂವರೆ ವರ್ಷಗಳ ಮೇಲೆ ಪೋಲೆಂಡು ರಷ್ಯನರ ಸಹಾಯದಿಂದ ಬಿಡುಗಡೆ ಹೊಂದಿದೆ. ಪೋಲೆಂಡಿನ ಮುಖ್ಯಪಟ್ಟಣವಾದ ವಾರ್ಸಾದಲ್ಲಿ ಈಗ ಸ್ವತಂತ್ರಸರಕಾರವೇರ್ಪಟ್ಟಿದೆ.

ಪ್ರಷ್ಯದಲ್ಲಿ ರಷ್ಯರ ಆಕ್ರಮಣ

ಉತ್ತರ (ಪ್ರೋಲಿಷ್) ಸೈಲೆಷಿಯದ ಮುಖ್ಯ ಪಟ್ಟಣವಾದ ಓಪ್ಪೆಲ್ನ (ಓಪೇಲಿಂ) ಮಾರ್ಷಲ್ ಕೋನೀವ ಸೇನೆಗಳ ವಶವಾಗಿದೆ. ಈ ನಗರ ಓಡರ್ ನದಿಯ ಬಲಭಾಗದ ದಡದಲ್ಲಿದ್ದ ಬ್ರೆಸ್ಲೋ-ಬರ್ಲಿನ ಪ್ರಧಾನರೈಲ್ವೆ ಮಾರ್ಗದಲ್ಲಿದೆ. ಅಲ್ಲದೆ ಪೋಲೆಂಡ್ ಆಸ್ಟ್ರಿಯಾಗಳಿಗೆ ಓಡರ್ ನದಿಮೂಲಕ ನಡೆಯುವ ವ್ಯಾಪಾರ ವಾಣಿಜ್ಯಗಳ ಮೇಲೆ ಹತೋಟಿ ಇರುವ ಕ್ಷೇತ್ರವಾಗಿದೆ. ಇದು ೧೦೦ ಮೈಲಿಗಳಿಗಿಂತ ವಿಸ್ತಾರವಾದ ರಣಕ್ಷೇತ್ರದಲ್ಲಿ ಜರ್ಮನ ಸೈಲೇಷಿಯಾ ಪ್ರಾಂತಕ್ಕೆ ನುಗ್ಗಿರುವ ಮಾರ್ಷಲ್ ಕೋನೀವ್‌ರವರ ಸೇನೆಗಳು ಒಂದು ನಗರವನ್ನಾಕ್ರಮಿಸಿಕೊಂಡು, ಓಡರ್ ನದಿ ದಡದಲ್ಲಿ ರಾಜ್ಯವನ್ನೇರ್ಪಡಿಸಿಕೊಂಡಿವೆ. ಇದೇ ಸೇನೆಗಳು ಜರ್ಮನ ಸೈಲೇಷಿಯದ ರಾಜಧಾನಿ ಬ್ರೆಸ್ಲೋ ನಗರವನ್ನು ಬಳಸಿಕೊಂಡು ಬಂದು ಆ ನಗರಕ್ಕೆ ಈಶಾನ್ಯದಲ್ಲಿ ೪ ಮೈಲಿಯಲ್ಲಿರುವ ಒಂದು ನಗರವನ್ನೂ, ೨೬ ಮೈಲಿಗಳ ದೂರದಲ್ಲಿರುವ ಇನ್ನೊಂದು ನಗರವನ್ನೂ ವಶಪಡಿಸಿಕೊಂಡಿವೆ. ಬ್ರೆಸ್ಲೋವಿಗೆ ಆಗ್ನೇಯದಲ್ಲಿ ರಷ್ಯನರು ಒಂದು ಜರ್ಮನ ಸೇನೆಯನ್ನು ಸುತ್ತುಗಟ್ಟಿ ೬೦೦೦ ಮಂದಿ ಶತ್ರು ಸೈನಿಕರನ್ನು ಸಂಹರಿಸಿ ೩೦೦೦ ಮಂದಿಯನ್ನು ಸೆರೆಹಿಡಿದ್ದಾರೆ. ಬಾಲ್ಟಿಕ್ ಕ್ಷೇತ್ರದಲ್ಲಿ, ರಷ್ಯನರು ವಿಶ್ಚುಲಾ ನದಿ ಮುಖವನ್ನು ತಲುಪಿರುವುದಾಗಿ ಜರ್ಮನ ವರದಿ ತಿಳಿಸುತ್ತವೆ. ಮಾರ್ಷಲ್ ರೊಕೋಸೋಫ್‌ಸ್ಕಿ ಹೂಡಿದ ಮುತ್ತಿಗೆ ಫಲಿಸಿ, ಪೂರ್ವ ಪ್ರಷ್ಯದಲ್ಲಿರುವ ಜರ್ಮನ ಸೇನೆ ಜರ್ಮನಿಯ ಬೇರೆ ಸೇನೆಗಳಿಂದ ಪ್ರತ್ಯೇಕಿಸಲ್ಪಟ್ಟಿದೆ. ಪೂರ್ವ ಪ್ರಷ್ಯದ ಆಗ್ನೇಯ ಗಡಿಗೆ ಕೊಂಚ ಒಳಭಾಗದಲ್ಲಿರುವ ಒಂದು ನಗರವನ್ನು ವಿಶ್ಚುಲಾ ನದಿಯ ಉತ್ತರ ದಡದಲ್ಲಿರುವ ಒಂದು ನಗರವನ್ನು ರಷ್ಯನರು ಆಕ್ರಮಿಸಿಕೊಂಡು ಬ್ರಾಂಬರ್ಗ್-ಪೋಸ್ನಾನಿಗಳ ಮಧ್ಯೆ ಏರ್ಪಡಿಸಿಕೊಂಡ ಕ್ಷೇತ್ರವನ್ನು ವಿಸ್ತಾರಗೊಳಿಸುತ್ತಿದ್ದಾರೆಂದು ಹೇಳಲಾಗಿದೆ.

ಜರ್ಮನಿಗಡಿಗೆ ೩ ಮೈಲಿಯಲ್ಲಿ ಮಿತ್ರಸೇನೆ

ಅಮೆರಿಕ್ ೭ನೇಸೇನೆ ಅರ್ಡೆನೆ ಕ್ಷೇತ್ರದಲ್ಲಿ ಮುನ್ನುಗ್ಗಿ
ಜರ್ಮನಿಗಡಿಗೆ ೩ಮೈಲಿ ಹತ್ತಿರಕ್ಕೆ ಬಂದಿದೆ ಹಿನ್ನಟ್ಟು
ತ್ತಿರುವ ಜರ್ಮನಿ ಸೇನೆಯನ್ನು ಅಮೆರಿಕ್ ಸೇನೆ ಎರಡು
ಕಡೆಗಳಲ್ಲಿ ಛಿದ್ರಿಸಿರುವುದಾಗಿ ಹೇಳಲಾಗುತ್ತದೆ ಅರ್ಡೆನೆ
ಕಾಡಿನಿಂದ ಹಿಮ್ಮೆಟ್ಟುತ್ತಿರುವ ಜರ್ಮನಿ ಸೇನೆಗೆ ಹಾಫ
ಲೈಸಿಗೆ ಈಶಾನ್ಯದಲ್ಲಿ ೧೧ ಮೈಲಿ ದೂರದಲ್ಲಿ ಇನ್ನೊಂದು
ಜರ್ಮನಿ ಸೇನೆ ರಕ್ಷಣೆ ಒದಗಿಸುತ್ತಿದೆ ಉತ್ತರ ಅಲ್ಸಾ
ಸಿನಲ್ಲಿ ಅಮೇರಿಕ್ ೭ನೇ ಸೇನೆ ಟ್ಯಾಂಕುಗಳ ನೆರವು
ಪಡೆದು ಮೋಡರ್ ನದಿ ದಡದಲ್ಲಿ ಜರ್ಮನರು ಏರ್ಪಡಿ
ಸಿಕೊಂಡಿರುವ ರಾಣ್ಯದ ಮೇಲೆ ಮುತ್ತಿಗೆ ಹಾಕಿ
ಜರ್ಮನರೂ ಇಲ್ಲಿ ಪ್ರತಿಭಟಿಸುತ್ತಿದ್ದಾರೆ ಹ್ಯಾಗನೌ
ನಿಂದ ವಾಯುವ್ಯಾಭಿಮುಖವಾಗಿ ಮೋಸ್ಟೆ ನದಿ ಕ್ಷೇತ್ರದ
ವರೆಗೆ ೨೦ ಮೈಲಿ ವಿಸ್ತಾರವಾದ ಕ್ಷೇತ್ರದಲ್ಲಿ ಜರ್ಮನಿ
ಮುತ್ತಿಗೆ ನಡೆದಿದೆ ಇಲ್ಲಿ ಜರ್ಮನರು ಕೊಂಚ ಲಾಭ
ಗಳಿಸಿದ್ದಾರೆ

ಪೂರ್ವ ರಂಗಕ್ಕೆ ಸೈನ್ಯ ಕಳುಹಲು ಜರ್ಮನ್ ಸೇನಾನಿಯ ನಿರಾಕರಣೆ

ರಷ್ಯನ್ ಸೈನ್ಯ ಜರ್ಮನಿಯ ಮೇಲೆ ದಂಡೆತ್ತಿ ಬರು
ತ್ತಿರುವುದರಿಂದ ಅವನ್ನು ತಡೆಗಟ್ಟುವುದಕ್ಕೆ ಫ್ರಾನ್ಸಿನ
ಲ್ಲಿರುವ ಜರ್ಮನ್ ಸೈನ್ಯವನ್ನು ಕಳುಹಿಸುವಂತೆ ಹೆರ್
ಹಿಟ್ಲರ್ ತನ್ನ ಸೇನಾನಿ ಫಾನ್‌ರುನ್‌ಸ್ಟೆಟ್‌ರಿಗೆ ತಿಳಿಸಿದ
ರಂತೆ, ಆದರೆ ರುನ್‌ಸ್ಟೆಟ್‌ರು ನಿರ್ದಾಕ್ಷಿಣ್ಯದಿಂದ
ಸಾಧ್ಯವಿಲ್ಲ' ಎಂದೆಂದೂ ಹೇಳಲಾಗುತ್ತಿದೆ ರಷ್ಯದ
ಪಡೆಗಳು ಜರ್ಮನಿಯೊಳಕ್ಕೆ ನುಗ್ಗಿ ಭಯಂಕರ ದಾಳಿ
ಮಾಡುತ್ತಿರುವುದರಿಂದ ಪ್ರತಿಕ್ಷಣವೂ ಆ ಕ್ಷೇತ್ರದಿಂದ
ಹೆಚ್ಚು ಸೈನ್ಯವನ್ನೂ ಸಾಮಗ್ರಿಗಳನ್ನೂ ಕಳುಹಿಸುವಂತ
ಮನವಿ ಬರುತ್ತಲೇ ಇದೆ ಇಷ್ಟಾದರೂ ಪಶ್ಚಿಮ ರಣ
ರಂಗದಲ್ಲಿರುವ ಜರ್ಮನ್ ಸೇನಾನಿ ರುನ್‌ಸ್ಟೆಟ್
ಸ್ವಲ್ಪವೂ ಜಗ್ಗದೆ, ಪಡೆಗಳನ್ನು ಕಳುಹಿಸಲು ಸಾಧ್ಯವೇ
ಇಲ್ಲವೆಂದು ಜರ್ಮನ್ ಹೈಕಮ್ಯಾಂಡಿಗೆ ತಿಳಿಸುತ್ತಲೇ
ಇದ್ದಾರಂತೆ! ಪಶ್ಚಿಮ ರಂಗದಲ್ಲಿ ಅತ್ಯಧಿಕ ನಷ್ಟಕ್ಕೆ
ಜರ್ಮನ್ ಸೇನೆ ಈಡಾಗಿದ್ದರೂ ಇನ್ನೂ ಆ ಸೇನೆಯಲ್ಲಿ
ಮೊದಲಿನಂತೆ ೮೦ ಡಿವಿಜನ್ನುಗಳು ಇದ್ದೇ ಇವೆ
ಯೆಂದೂ ಫಾನ್‌ರುನ್‌ಸ್ಟೇಟ್ ದಂಡಯಾತ್ರೆ ಆರಂಭಿಸಿ
ದಾಗಲೂ ಇಷ್ಟೇ ಡಿವಿಜನ್ ಸೇನೆ ಇತ್ತೆಂದೂ ಹೇಳ
ಲ್ಪಡುತ್ತಿದೆ ಪೂರ್ವರಂಗದಲ್ಲಿ ಜರ್ಮನರಿಗೆ ಗಂಡಾಂ
ತರ ಪ್ರಾಪ್ತವಾಗಿದ್ದರೂ ಅಲ್ಲಿಗೆ ರುನ್‌ಸ್ಟೇಟ್ ಪಡೆ
ಗಳನ್ನು ಕಳುಹಿಸಲು ನಿರಾಕರಿಸುತ್ತಿರುವುದನ್ನು ನೋಡಿ
ದರೆ ಪ್ರಾಯಶಃ ಅವರು ಮತ್ತೊಮ್ಮೆ ಮುತ್ತಿಗೆ ಹಾಕಲು
ಪ್ರಯತ್ನಿಸಬಹುದೆಂದು ಊಹಿಸಲಾಗಿದೆ

ಸೆಂಟ್ ವಿತ್‌ಬಳಿ ಜರ್ಮನರ ತೀವ್ರ ಪ್ರತಿಭಟನೆ

ಸಿಟಾರ್ಡ್ ನಗರದಿಂದ ಅಲ್ಸಾಸ್ ಕಡೆ ಮಿತ್ರ ಪಡೆ
ಗಳು ಮುನ್ನುಗ್ಗಿ ಜರ್ಮನ್ ರಕ್ಷಣಾ ವ್ಯೂಹದಲ್ಲಿ
ಮೂರು ಮುಖ್ಯ ಬಿರುಕುಗಳನ್ನು ಮಾಡಿವೆ. ರೂರ್
ನಗರಕ್ಕೆ ಪಶ್ಚಿಮದಲ್ಲಿ ೩ ಮೈಲಿ ದೂರದಲ್ಲೂ ಸಿಟಾರ್ಡ್
ನಗರಕ್ಕೆ ಉತ್ತರದಲ್ಲಿ ೧೩ ಮೈಲಿ ದೂರದಲ್ಲೂ ಇರುವ
ಐಂಡ್‌ಬರ್ಗ್ ನಗರವನ್ನು ಬ್ರಿಟಿಷ್ ಸೈನಿಕರು ಆಕ್ರಮಿಸಿ
ಕೊಂಡಿದ್ದಾರೆ ಪ್ರಮುಖ ಸಂಚಾರ ಕೇಂದ್ರವಾದ
ಐಂಡಬರ್ಗ್ ಪತನವಾದ್ದರಿಂದ ಜರ್ಮನರಿಗೆ ತುಂಬಾ
ತೊಂದರೆಯುಂಟಾಗಿದೆ ಇಲ್ಲಿ ಜರ್ಮನ್ ಸೈನ್ಯದ ಪ್ರತಿ
ಭಟನೆ ಬಿರುಸಾಗಿದೆ ಜರ್ಮನ್ ಮಿಷನ್ ಗನ್ನುಗಳೂ
ತೋಪುಗಳೂ ಮುನ್ನುಗ್ಗುತ್ತಿರುವ ಮಿತ್ರ ಸೈನ್ಯದಮೇಲೆ
ಎಡಬಿಡದೆ ದಾಳಿಮಾಡುತ್ತಿವೆ. ಅರ್ಡೆನೆ ಕ್ಷೇತ್ರದಲ್ಲಿ
ಅಮೆರಿಕನ್ನರು ಅಳಿದುಳಿದಿರುವ ಜರ್ಮನ್ ಸ್ಥಾನವ
ನ್ನೆಲ್ಲಾ ಆಕ್ರಮಿಸುತ್ತಿದ್ದಾರೆ ಸೆಂಟ್ ವಿತ್‌ನಿಂದ
ಜರ್ಮನ್ ಗಡಿ ಕಡೆ ಹೋಗುವ ಬಾಟಂ ಮಾರ್ಗದಲ್ಲಿ
ಮುನುಗ್ಗುತ್ತಿದ್ದಾರೆ; ಅಲ್ಲೂ ಶತ್ರು ಪ್ರತಿಭಟನೆ ಬಲವಾ
ಗಿಯೇ ಇದೆ ಜರ್ಮನರ ವಾಹನಗಳ ಮೇಲೂ ಶಿಬಿರ
ಗಳ ಮೇಲೂ ಒಂದೇ ಸಮನಾಗಿ ಮಿತ್ರ ವಿಮಾನಗಳು
ಮುತ್ತಿಗೆ ಹಾಕುತ್ತಿವೆ ಜರ್ಮನ್ ಸೈನಿಕರನ್ನು ತುಂಬಿ
ಕೊಂಡು ಹೋಗುತ್ತಿದ್ದ ೧೬೦ ಟ್ರೈನುಗಳನ್ನು ನಾಶ
ಮಾಡಿವೆ ಮಂಜು ಮತ್ತು ಮೋಡ ಜರ್ಮನರ ಚಲನ
ವಲನಕ್ಕೆ ಸ್ವಲ್ಪ ಅವಕಾಶ ಕೊಟ್ಟಿವೆ. ಉತ್ತರ ಅಲ್ಸಾಸಿ
ನಲ್ಲಿ ಜರ್ಮನರು ಅಮೆರಿಕನ್ ೭ನೆಯ ಸೈನ್ಯದ
ದುರ್ಬಲ ಸ್ಥಾನಗಳನ್ನು ಹುಡುಕಲು ಪ್ರಯತ್ನಿಸು
ತ್ತಿದ್ದಾರೆ ದಕ್ಷಿಣ ಅಲ್ಸಾಸಿನಲ್ಲಿ ಫ್ರೆಂಚರ ಮೊದಲ
ನೆಯ ಸೈನ್ಯ ಕೋಲ್ಮಾರ್ ಕ್ಷೇತ್ರದ ದಕ್ಷಿಣ ಮತ್ತು
ಉತ್ತರ ಪಾರ್ಶ್ವದಲ್ಲಿ ದಾಳಿ ಮಾಡುತ್ತಿವೆ ಈ ಕ್ಷೇತ್ರ
೪೦ ಮೈಲಿ ವಿಸ್ತಾರವಾಗಿದೆ ಕೊಲ್ಮಾರಿನಿಂದ ಸ್ಟ್ರಾಸ್
ಬೋರ್ಗಿಗೆ ಹೋಗುವ ರೈಲ್ವೆಯನ್ನು ಮಿತ್ರ ಸೈನಿಕರು
ಕತ್ತರಿಸಿ ಹಾಕಿದ್ದರಿಂದ ಉತ್ತರ ಅಲ್ಸಾಸಿನಲ್ಲಿರುವ
ಜರ್ಮನ್ ಪಡೆಗಳಿಗೂ ಕೊಲ್ಮಾರ್ ಕ್ಷೇತ್ರದಲ್ಲಿರುವ
ಜರ್ಮನ್ ಪಡೆಗಳಿಗೂ ಸಂಬಂಧ ತಪ್ಪಿಹೋಗಿದೆ

೧೦೦೦ ಮೈಲಿ ಉದ್ದ ಎಣ್ಣೆಕೊಳಾಯಿ

ಬ್ರಿಟನ್ನಿನಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ
ಎಣ್ಣೆ ಮತ್ತು ಪೆಟ್ರೋಲ್‌ಗಳನ್ನು ಸಾಗಿಸಲು ಹಾಕಿರುವ
ಕೊಳಾಯಿಯು ಒಟ್ಟು ೧೦೦೦ ಮೈಲಿಗಳಷ್ಟು
ಉದ್ದವಿದೆಯೆಂದೂ, ಇದರ ಮೂಲಕ ಪ್ರತಿದಿನವೂ
ಸುಮಾರು ೫೦ ಲಕ್ಷ ಗ್ಯಾಲನ್ ಎಣ್ಣೆ ಮತ್ತು ಪೆಟ್ರೋಲ್
ಸ್ಥಳದಿಂದ ಸ್ಥಳಕ್ಕೆ ಹರಿದುಹೋಗುವದೆಂದೂ ಹೇಳಲಾ
ಗಿದೆ

ದೇಸಾಯಿಯವರ ನೂತನಯೋಜನೆ

ಶ್ರೀ ಭೂಲಾಭಾಯಿ ದೇಸಾಯಿಯವರು ಹೊಸ ಸರಕಾರ
ಸ್ಥಾಪನೆಯ ವಿಚಾರವಾಗಿ ವೈಸರಾಯರೊಡನೆ ಸಂಭಾಷಿ
ಸಿದರೆಂದೂ, ಹೊಸ ಸರಕಾರದ ಚೌಕಟ್ಟಿನಲ್ಲಿ ಕಾಂಗ್ರೆಸ್,
ಮುಸ್ಲಿಂಲೀಗ್ ಮತ್ತು ಇತರ ಸಣ್ಣ ಸಂಗಡಗಳು
ಸೇರುವಂತೆ ಪ್ರವೇಶ ಮಾಡಲಾಗಿದೆಯೆಂದೂ ಹೇಳಲಾ
ಗಿದೆ

ಸಾರ್ವಜನಿಕರಿಗೆ ಹೆಚ್ಚು ಕಾಗದ

ಕಾಗದ ಉಪಯೋಗದ ಪರಿಮಿತಿಯನ್ನು ನಿರ್ದೇಶಿಸಿದ
೧೯೪೪ನೇ ಆಜ್ಞೆಯ ಪ್ರಕಾರ ನಾನಾ ವರ್ಗದವರಿಗೆಲ್ಲ
ಈಗ ಲಭಿಸುತ್ತಿರುವ ಕಾಗದದ ಪ್ರಮಾಣವನ್ನು ಶೇಕಡಾ
೧೦ ರಷ್ಟು ಅಧಿಕಗೊಳಿಸಲು ಇಂಡಿಯಾ ಸರ್ಕಾರ
ನಿರ್ಧರಿಸಿದೆ ಈ ತ್ರೈಮಾಸಿಕದಲ್ಲಿ ಎಲ್ಲಾ ಮುದ್ರಣಾ
ಲಯಗಳವರೂ ಕಾಗದದ ವ್ಯಾಪಾರಿಗಳೂ ೧೯೪೩ರಲ್ಲಿ
ಉಪಯೋಗಿಸುತ್ತಿದ್ದ ಕಾಗದದ ಶೇಕಡಾ ೮೦ರಷ್ಟು
ಪ್ರಮಾಣದಲ್ಲಿ ಕಾಗದವನ್ನು ಈಗ ಉಪಯೋಗಿಸಿ
ಕೊಳ್ಳಬಹುದು ಪತ್ರಪುಸ್ತಕಗಳ ಪ್ರಕಟನಕಾರರು
೧೯೩೯ರಲ್ಲಿ ಉಪಯೋಗಿಸುತ್ತಿದ್ದ ಪ್ರಮಾಣದ ಶೇಕಡಾ
೭೦ರಷ್ಟು ಪ್ರಮಾಣದಲ್ಲೂ, ಇತರ ಗ್ರಂಥಗಳ ಪ್ರಕಟನ
ಕಾರರು ೧೯೪೩ರಲ್ಲಿ ಉಪಯೋಗಿಸುತ್ತಿದ್ದ ಪ್ರಮಾಣದ
ಶೇಕಡಾ ೪೦ ರಷ್ಟು ಪ್ರಮಾಣದಲ್ಲೂ ಕಾಗದವನ್ನು
ಈ ತ್ರೈಮಾಸಿಕದಲ್ಲಿ ಉಪಯೋಗಿಸಬಹುದು ಪತ್ರಿಕೆ
ಗಳವರು ಅವರಿಗೆ ಅನ್ವಯವಾದ ಮೂಲ ಅವಧಿಯಲ್ಲಿ
ಉಪಯೋಗಿಸುತ್ತಿದ್ದ ಕಾಗದದ ಪ್ರಮಾಣದ ಶೇಕಡಾ
೪೦ ರಷ್ಟು ಪ್ರಮಾಣದ ಕಾಗದವನ್ನು ವೃತ್ತಪತ್ರಿಕಾ
ಕಂಟ್ರೋಲ್ ಶಾಸನಕ್ಕನುಗುಣವಾಗಿ ಉಪಯೋಗಿಸಿ
ಕೊಳ್ಳಬಹುದು. ಮೇಲ್ಕಂಡ ರಿಯಾಯಿತಿಗಳ ಜತೆಗೆ,
ಒಟ್ಟೊಬ್ಬರಿಗೂ ಕೊಡಲ್ಪಡುತ್ತಿದ್ದ ಕಾಗದದ ಪ್ರಮಾಣ
ವನ್ನು ೧೯೪೫ನೆಯ ಜನವರಿ ೨೪ನೇ ತಾ|| ಗೆ ಮುಂಚೆ
ದೊರೆಯುತ್ತಿದ್ದ ಪ್ರಮಾಣಕ್ಕೆ ಶೇಕಡಾ ೧೦ ರಷ್ಟು
ಪ್ರಮಾಣದಲ್ಲಿ ಹೆಚ್ಚಿಸಲು ಇಂಡಿಯಾ ಸರ್ಕಾರ ನಿರ್ಧರಿ
ಸಿದೆ

ಹಾವು ಕಡಿತಕ್ಕೆ ಔಷಧಿ

ತೀವ್ರ ವಿಷಪೂರಿತವಾದ ಹಾವುಗಳು ಕಚ್ಚಿದಾಗ
ಪ್ರಾಣಹಾನಿಯಾಗುವದನ್ನು ತಡೆಯಲು ಹ್ಯಾಫ್‌ಕಿನ್
ಇನ್ಸ್‌ಟಿಟ್ಯೂಟಿನವರು ಹೊಸಬಗೆಯ ಸೀರಂ ಕಂಡು ಹಿಡಿ
ದಿದ್ದಾರೆಂದೂ. ಈ ಔಷಧಿ ತಯಾರಾದಂದಿನಿಂದ ಹತ್ತು
ವರ್ಷಕಾಲ ಕೆಡದೆ ಇರುವದೆಂದೂ ಹೇಳಲಾಗುತ್ತಿದೆ.

೧ನೆಯ ಪುಟದಿಂದ ಮುಂದುವರಿದುದು

ಮೃತ್ಯುಮುಖದಂತೆ ಭಯಂಕರವಾಗಿರುವದ್ದರಿಂದ ಸ್ನಾನ
ಪಾನಾದಿಗಳೊಂದೂ ರುಚಿಸದೆ ದುಃಖಪಡುತ್ತಿರುವೆನು.
ನನಗೆ ದೇಹವಂ ಬಿಡುವದು ಒಂದೇ ಬೇಕಾಗಿದೆಯಲ್ಲದೆ
ಮತ್ತೊಂದಿಲ್ಲ, ಈ ಪ್ರಕಾರವಾಗಿ ಘೋರವಾದ ಸಂಸಾರ
ದಲ್ಲಿ ಬಿದ್ದಿರುವ ನನ್ನನ್ನು ಪಾತಾಳದಲ್ಲಿ ಬಿದ್ದಿರುವ
ಭೂಮಿಯಂ ವರಾಹಸ್ವಾಮಿಯಂತೆ ಉದ್ಧರಿಸಬೇಕೆಂದು
ಶ್ರೀ ರಾಮಚಂದ್ರನು ಪ್ರಾರ್ಥಿಸಿದನು.

ವಾಚಕಮಹಾಶಯರೆ, ಶ್ರೀ ರಾಮಚಂದ್ರನ ವಾಕ್ಯ
ಗಳು ಜಗತ್ತಿಗೆ ಶ್ರೇಯಸ್ಕರಗಳಾಗಿಯೂ, ವೈರಾಗ್ಯ
ಸಂಪೂರ್ಣವಾದುವುಗಳಾಗಿಯೂ, ನಿಶ್ಚಿತಾರ್ಥವಾ
ಗಿಯೂ, ತತ್ವಜ್ಞಾನಗರ್ಭವಾಗಿಯೂ, ಪೂಜ್ಯವಾ
ಗಿಯೂ, ಸ್ಫುಟಾಕ್ಷರವಾಗಿಯೂ, ಉತ್ಕೃಷ್ಟವಾಗಿಯೂ,
ಸಂತೋಷಕರವಾಗಿಯೂ, ಸಂಗ್ರಹಯೋಗ್ಯವಾಗಿಯೂ,
ನಿಸ್ಸಂದೇಹವಾಗಿಯೂ, ಗಂಭೀರವಾಗಿಯೂ, ಸ್ಫುಟಾಭಿ
ಪ್ರಾಯವಾಗಿಯೂ, ಶ್ರುತಿಮನೋಹರವಾಗಿಯೂ,
ದೋಷರಹಿತವಾಗಿಯೂ, ಮೃದುವಾಗಿಯೂ, ಪ್ರಕಾಶಿ
ಸುತ್ತಿರುವವು ಈ ರಾಮಭದ್ರನ ಬುದ್ಧಿ ಪ್ರಜ್ಞೆಗಳಂತೆ
ಯಾವನ ಬುದ್ಧಿಯೂ, ಪ್ರಜ್ಞೆಯೂ ಸಾಧಾರಣವಲ್ಲದ
ಪ್ರಕಾಶವಿಂ ಮಣಿದೀಪದಂತೆ ಪ್ರಕಾಶಿಸುವವೋ ಅವನೇ
ಪುರುಷನೆನಿಸಿಕೊಳ್ಳುವನು, ರಕ್ತಮಾಂಸಾಸ್ಥಿಮಯ
ವಾದ ದೇಹವನ್ನೇ ತಾನೆಂದು ನಿಶ್ಚಯಿಸಿ ಅಂತಹ
ವಸ್ತುಗಳನ್ನೇ ಸೆಳೆದಾಡುತ್ತಿರುವ ಜನರಿಗೆ ಚೈತನ್ಯವೆಂಬು
ವದು ಎಲ್ಲಿರುವದು!

ಜನ್ಮ ಮೃತ್ಯು ಜರಾದುಃಖಮಯವಾದ ಸಂಸಾರ
ದಲ್ಲಿ ನೆಲೆಸಿರುವ ಅವರಿಗೂ ಪಶುಗಳಿಗೂ ಹೆಚ್ಚು ಕಡಿಮೆ
ಏನಿರುವದು! ಶ್ರೀ ರಾಮನಂತೆ ಪೂರ್ವಾಪರವಿಚಾರವಂ
ಮಾಡುವ ಸುಮತಿಯು ಸಾಧಾರಣವಲ್ಲದ ಸೀಮಾವಿನ
ಮರನಂತೆಯೂ ಅತಿ ಸುರಭಿಯಾದ ಗಂಧದ ಮರದಂ
ತೆಯೂ, ಮನೋಹರವಾದ ಲವಂಗದ ಮರದಂತೆಯೂ,
ಹುಡುಕುವುದಕ್ಕೆ ಯೋಗ್ಯನಾಗಿರುವನು, ಚಂದ್ರನಲ್ಲಿ
ಚಂದ್ರಿಕೆಯಂತೆಯೂ ಸೀಮಾವಿನಮರದಲ್ಲಿ ಗೊಂಚಲಿ
ನಂತೆಯೂ, ಮಲ್ಲಿಗೆ ಹುವ್ವಿನಲ್ಲಿ ಪರಿಮಳ ಪ್ರವಾಹದಂ
ತೆಯೂ, ಮನೋಹರವಾದ ಜ್ಞಾನಚಮತ್ಕಾರವು
ಯಾರಲ್ಲಿ ಸ್ಪಷ್ಟವಾಗುವದೋ, ಸಹಿಸಲಶಕ್ಯವಾದ
ದೋಷಗಳುಳ್ಳ ಜನ್ಮಾಂತರ ಕರ್ಮ ಪರಿಣಾಮದಿಂ
ಬ್ರಹ್ಮನಿಂ ನಿರ್ಮಿತವಾದ ಈ ಸಂಸಾರದಲ್ಲಿ ಸಾರಭೂತ
ಸ್ವರೂಪ ಜ್ಞಾನಕ್ಕೋಸುಗ ಯಾರು ಪ್ರಯತ್ನ ಪಡು
ವರೋ ಅವರೇ ಸತ್ಪುರುಷರ ಸಮ್ಮುಖದಲ್ಲಿ ಗಣನೆಗೆ
ಯೋಗ್ಯರಾಗುವರು ಮತ್ತು ಈ ಲೇಖನದ ವಿಚಾರದಿಂ
ತೀಕ್ಷ್ಣವಾಗಿ ನಿರ್ಮಲವಾದ ಪ್ರಜ್ಞೆಯುಳ್ಳವನಿಗೆ ಅಜ್ಞಾ
ನಿಗೆ ಮೋಹಕವಾದ ಈ ಪ್ರಪಂಚವು ಶರತ್ಕಾಲದ
ಪೂರ್ಣಚಂದ್ರನ ಚಂದ್ರಿಕೆಯಿಂದ ಸಾಂದ್ರವಾಗಿರುವಂತೆ
ಆನಂದಕರವಾಗುವದು ಮತ್ತು ಇಂದ್ರಜಾಲದಂತೆ
ವಿನೋದಸ್ಥಾನವಾಗುವದು. ಗರುಡಮಂತ್ರದಿಂ ವಿಷ
ವಿಳಿಯುವಂತೆ ಮೋಹವಳಿಯುವುದು ಸೂರ್ಯಕಿರಣ
ಪ್ರಸಾರದಿಂ ಜಾರೆಯರಡಗುವಂತೆ ಇದರ ವಿಚಾರದಿಂ
ದುರಾಲೋಚನೆಗಳು ಮರೆಯಾಗುವವು; ಪೂರ್ಣ
ಚಂದ್ರೋದಯದಿಂ ತಾಪರೋಗದಂತೆ ಇವರಲ್ಲಿ
ಜ್ಞಾನೋದಯದಿಂ ಸಂಸಾರದುಃಖವಡಗಿ ಪರಮಾನಂದ
ಉಂಟಾಗುವದು

ಯಾದೃಶೀ ಭಾವನಾ ಯತ್ರ ಸಿದ್ಧಿರ್ಭವತಿ ತಾದೃಶೀ

ಸ್ವೀಕಾರ

ತಿಪಟೂರು ನಿವಾಸಿಗಳಾದ ಅಥಣಿ ಮ|| ರಾ||
ಮರುಳಸಿದ್ದಪ್ಪನವರು ಸಿಂದಗಿ ಇವರ ಪುತ್ರಿಗೆ ಇದೇ
ತಿಂಗಳು ೮ ನೆಯ ತಾರೀಖಿನ ದಿವಸ "ಸೂರ್ಯಪ್ರಭಾ"
ಎಂದು ನಾಮಕರಣ ಮಾಡಿದ ಸಮಯದಲ್ಲಿ ಪ್ರಭಾ
ಪೋಷಣಕ್ಕೋಸ್ಕರ ಸಮರ್ಪಿಸಿದ ೧ ರೂಪಾಯಿಯು
ವೇ|| ಆರ್ ಎಂ ಮಲ್ಲಿಕಾರ್ಜುನಾರಾಧ್ಯರ ದ್ವಾರಾ
ತಲ್ಪಿಯತ್ತದೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು
ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು
ಹಾರೈಸುತ್ತೇವೆ.

ಕಾಗದದ ಬೆಲೆಯು ವಿಶೇಷವಾಗಿ ಏರಿರುವುದರಿಂದ ಕೆಲವು ಗ್ರಂಥಗಳ ಮತ್ತು ಫೋಟೋಗಳ ಬೆಲೆಯನ್ನು ಸ್ವಲ್ಪ ಹೆಚ್ಚಿಸಿದ್ದೇವೆ.

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು. ವೀರಶೈವಮತದಲ್ಲಿ ನಮಗೆ ದೊರೆಯುತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು. ಈ ಗ್ರಂಥವು ಈಗ್ಗೆ ಸುಮಾರು **೩ಸಾವಿರ** ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವುದು. ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿದ್ದಾರೆ. ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡುವದಕ್ಕಾಗಿ **ಪಂಡಿತ ಶ್ರೀಕಾಶೀನಾಥ ಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ವಾಚಕರಿಗೆ ವೇದ್ಯವಾಗುವುದು. ವಾಚಕರ ಅನುಕೂಲಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೩೩೩ ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಛಾಯಾಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಕೈವಲ್ಯಕಲ್ಪತರುವಿನಂತಿರುವ ಈ ಅನುಪಮಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೨ ರೂಪಾಯಿ.**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ	೦—೬—೦
ಶ್ರೀ ರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦ ಬೆಲೆ	೦—೬—೦
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ	೦—೪—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ ...	೦—೪—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೬
ಶ್ರೀ ಕಾಶೀಕ್ಷೇತ್ರ ವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ [illegible] ಪೀಠದ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರುಗಳ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦	೦—೪—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ...	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
ಬೆಂಗಳೂರು ಕಾನ್ಫರೆನ್ಸಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೬

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶೆ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ) ..	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿಸಿಜತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೮ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಸತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ **ಭಾಷಣಮು** (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು. ೨ನೆಯ ಆವೃತ್ತಿ)	೧। ರೂ.
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ) . ..	೧ ರೂ.
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ.
ಶ್ರೀಕರಭಾಷ್ಯಂ (ಜಟಾಸ್ತ್ರೀ)	೧॥ ರೂ.
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧॥ ರೂ.
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುವು)	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೨ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ.
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ.
ವೀರಶೈವಸಿದ್ಧಾಂತಸುಧಾಕರ	೩ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ.
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*) ...	8 As
Speeches by Pandit Shri Kashinatha Shastriji (*English*)	12 As
लिंगधारणचंद्रिका (संस्कृत)	३ रु.
वीरशैवरत्न (मराठी)	१ रु.
महानारायणोपनिषत् (वीरशैवभाष्य—संस्कृत) . ..	१ रु.
सिद्धांतशिखामणि (मूल)	८ आ.
नंदिकेश्वरकारिका (संस्कृत)	२ आ.

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚ ಸ್ವಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ೪ ಆಣೆ — ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ.

ಸಂಪುಟ ೧೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೫ನೇ ಫೆಬ್ರವರಿ ೧೯೪೫ [ಸಂಚಿಕೆ ೪೧

ಮಾನಸಿಕಯಜ್ಞ

ಲೇ — ಪುಷ್ಪಿಕಾರ್ಜುನಾರಾಧ್ಯ, ರಾಜೇಂದ್ರಸ್ವಾಮಿ ವ ಶೀಮಠ, ಮುದೇನೂರು

ಮನ ಏವ ಮನುಷ್ಯಾಣಾಂ । ಕಾರಣಂ ಬಂಧಮೋಕ್ಷಯೋಃ ॥
ಬಂಧಾಯ ವಿಷಯಾಸಕ್ತಂ । ಮುಕ್ತ್ಯೈ ನಿರ್ವಿಷಯಂ ಸ್ಮೃತಂ ॥

ಸೃಷ್ಟಪದಾರ್ಥಗಳಲ್ಲಿ ಮನಸ್ಸೆಂಬ ತತ್ವವು ಮಹತ್ತರವಾದುದು ಮೇಲಿನ ಅಮೃತಬಿಂದೂಪನಿಷದ್ವಾಕ್ಯದಂತೆ ಅದು ಮಾನವನ ಉನ್ನತ್ಯವನತಿಗಳಿಗೆ ಕಾರಣವಾಗಿರುವುದರಿಂದ ಅದರ ಗೌರವವು ಚನ್ನಾಗಿ ವ್ಯಕ್ತವಾಗುವುದು ಮನುಷ್ಯಮಾತ್ರರಲ್ಲಿ ಮನೋವ್ಯಾಪಾರದ ಪ್ರಭಾವವನ್ನರಿಯದವರು ಯಾರೂ ಇಲ್ಲ ಆದರೆ ಮನಸ್ಸು ತನ್ನ ಶತ್ರುವೆಂದು ತಿಳಿದು, ಉಪಾಯಾಂತರದಿಂದ ಅದನ್ನು ನಾಶಗೊಳಿಸಿ, ಇಲ್ಲವೆ ತನ್ನಧೀನದಲ್ಲಿಟ್ಟುಕೊಂಡು ಭವಬಂಧನವನ್ನು ತಪ್ಪಿಸಿಕೊಳ್ಳುವದೇ, ಮಾನಸಿಕಯಜ್ಞವೆನಿಸುವದು ಮನಸ್ಸಿನ ಏಳ್ಗೆಯಿಂದ ಸಂಸಾರದ ಏಳ್ಗೆಯೂ, ಮನಸ್ಸಿನ ನಾಶದಿಂದ ಭವದ ನಾಶವೂ ಆಗುತ್ತವೆ ನಿರ್ಮನಸ್ಕನಾದವನಿಗೆ ಬ್ರಹ್ಮಸಾಕ್ಷಾತ್ಕಾರವಾಗುವುದು ಮನಸ್ಸಿನ ಯೋಗದಿಂದಲೇ ಜೀವಾತ್ಮನಿಗೆ ವಿಧವಿಧವಾದ ದುಃಖಗಳುಂಟಾಗುತ್ತವೆ ಮನಸ್ಸು ನಾಶವಾಗುತ್ತಲೇ ಮೋಕ್ಷವು ಲಭಿಸುವುದು ದೇಹವು ಮನಸ್ಸಿನಿಂದ ಕಲ್ಪಿತವಾಗಿದ್ದು, ಜೀವವು ಭ್ರಾಂತಿಯಿಂದ ಅದೇ ತಾನೆಂದು ಭಾವಿಸುವುದು ಅದರಿಂದ ಅದು ಜನನಮರಣಾದಿ ದುಃಖಗಳನ್ನು ಹೊಂದುವದು ಇವಳು ನನ್ನ ಹೆಂಡತಿಯು, ಇವರು ನನ್ನ ಮಕ್ಕಳು, ಇವು ನನ್ನ ಗೃಹಕ್ಷೇತ್ರಗಳು, ಇವರು ನನ್ನ ಬಂಧುಬಳಗದವರು, ಇದು ನಾನು ಗಳಿಸಿದ ಧನವು, ಮೊದಲಾದ ಕಲ್ಪನೆಗಳನ್ನು ಮನಸ್ಸೇ ಕಲ್ಪಿಸುವುದು ಈ ಎಲ್ಲ ಕಲ್ಪಿತ ವಸ್ತುಗಳಲ್ಲಿ ಮಮತ್ವವು (ನನ್ನದೆಂಬ ಭಾವವು) ದೃಢವಾಗಿ ನೆಲೆಗೊಂಡಿರುವುದರಿಂದ ಜೀವವು ಪರಿಪರಿಯ ಯಾತನೆಗಳನ್ನನುಭವಿಸುವುದು ಆದಪ್ರಯುಕ್ತ ಸರ್ವದುಃಖಗಳಿಗೂ ಕಾರಣೀಭೂತವಾದ ಮನಸ್ಸನ್ನು ಗೆಲ್ಲಬೇಕು. ಮನಸ್ಸನ್ನು ಜಯಿಸುವ ಉಪಾಯವು ಯಾವುದೆಂದರೆ —ವೈರಾಗ್ಯರೂಪಿಯಾದ ದೀಕ್ಷೆಯನ್ನು ತಾಳಿ, ಹೃದಯವೆಂಬ ಹೋಮಕುಂಡದಲ್ಲಿ ಜ್ಞಾನಾಗ್ನಿಯನ್ನು ಪ್ರಜ್ವಲಿಸಿ, ಧ್ಯಾನರೂಪವಾದ ಯೂಪಸ್ತಂಭವನ್ನು ಬಲವಾಗಿ ನಿಲ್ಲಿಸಿ ಅದಕ್ಕೆ ಮನಸ್ಸೆಂಬ ಪಶುವನ್ನು ವಿಚಾರವೆಂಬ ಹಗ್ಗದಿಂದ ಭದ್ರವಾಗಿ ಕಟ್ಟಿ, ಮಹಾವಾಕ್ಯಮಂತ್ರಗಳಿಂದ ಅದನ್ನು ಸಂಸ್ಕಾರಗೊಳಿಸಿ ನಿರಂಜನವೆಂಬ ಶಾಮಿತಗೃಹಕ್ಕೆ ಅದನ್ನೊಯ್ದು, ನಿರ್ಮಮತೆಸ್ವರೂಪಿಯಾದ ಶಸ್ತ್ರದಿಂದ ಸಾಕ್ಷೀಭೂತನಾಗಿ ಸಂಹರಿಸಿ, ಜ್ಞಾನಾಗ್ನಿಯಲ್ಲಿ ಅದನ್ನು ದಹಿಸಬೇಕು ಅಂದರೆ ಸಾಂಬಶಿವನು ಒಲಿದು, ಅಕ್ಷಯವಾದ ಸ್ವರ್ಗಸುಖವನ್ನು ದಯಪಾಲಿಸುವನು!

ವಾಚಕಮಹಾಶಯರೆ, ಹೆಂಡಿರು-ಮಕ್ಕಳು, ಬಂಧುಬಳಗದವರು, ಆಪ್ತೇಷ್ಟರು ಯಾರವರು? ನಾವು ಅವರಿಗಾಗಿ ಹಂಬಲಿಸುವದೇಕೆ? ಈ ಮಾಯಾಮಯ ಸಂಸಾರದಲ್ಲಿ ವಿಶ್ವಾಸಕ್ಕೆ ಪಾತ್ರವಾದ ವಸ್ತುವು ಒಂದೂ ಇಲ್ಲ ಯಾವತ್ತೂ ಭೋಗಗಳು ನಶ್ವರವಾಗಿರುವವು ನಮ್ಮ ಆಯುಷ್ಯವಂತೂ ಕಾದಕಬ್ಬಿಣದ ಮೇಲೆ ಬಿದ್ದ ನೀರಿನಂತಿರುವುದು ಸರ್ಪದ ಬಾಯಿಯಲ್ಲಿ ಸಿಕ್ಕ ಕಪ್ಪೆಯು ನೊಣವನ್ನು ಹಿಡಿಯಲು ಹವಣಿಸಿದಂತೆ, ಸಂಸಾರವೆಂಬ ಸರ್ಪದ ಬಾಯಲ್ಲಿ ಸಿಕ್ಕ ನಾವು ಸುಖೋಪಭೋಗಗಳನ್ನು ಇಚ್ಛಿಸುತ್ತಿರುವೆವು ಅದು ಉತ್ತರಕ್ಷಣದಲ್ಲಿ ನಮ್ಮನ್ನೇ ನುಂಗಿಬಿಡುವುದೆಂಬುದರ ಅರಿವೇ ನಮಗಿಲ್ಲ ನಾವು ಸುಖಕ್ಕಾಗಿ ಮಾಡುವ ಯತ್ನಗಳಿಂದ ನಮಗೆ ಸುಖವು ದೊರೆಯದೆ ಆ ಯತ್ನಗಳೆಲ್ಲ ದುಃಖಕ್ಕೆ ಕಾರಣಗಳಾಗುತ್ತವೆ ಈ ಮಾತು ವಿಚಾರಪರನಾದ ಪ್ರತಿಯೊಬ್ಬನಿಗೂ ತಿಳಿಯುವಂತಿದೆ ರಾತ್ರಿಯಲ್ಲಿ ಪಕ್ಷಿಸಮೂಹವು ಒಂದು ಕಡೆ ಸೇರಿ, ಬೆಳಗಾಗುತ್ತಲೆ ಒಂದನ್ನೊಂದಗಲಿ ಹೋಗುವಂತೆ, ಈ ಸಂಸಾರದೊಳಗಿನ ಹೆಂಡಿರ ಮಕ್ಕಳ ಸಂಬಂಧವಿರುವುದು ಸಂಪತ್ತು ಮಿಂಚಿನಂತೆ ಚಂಚಲವಾಗಿರುವದು ತಾರುಣ್ಯವು ತೆರೆಗಳಂತಿರುವುದು ಶರೀರವು ರೋಗದ ಮೂಲಸ್ಥಾನವಾಗಿರುವುದು ಅಂದಮೇಲೆ ಸುಖವೆಲ್ಲಿಯದು? ವಾಚಕರೇ, ಯಾವ ದೇಹದ ಸಲುವಾಗಿ ಸುಖವನ್ನು ಸಂಪಾದಿಸಲು ಹೆಣಗುವೆವೋ, ಆ ದೇಹವು ಆರೆಕ್ಷಣದಲ್ಲಿ ಮಣ್ಣುಗೂಡಿ ಹೋಗುವುದು ಹೀಗೆ ಮೂರುಗಳಿಗೆಗಳಲ್ಲಿ ಮಣ್ಣುಪಾಲಾಗುವ ಈ ದೇಹವು ಪರಾಧೀನವಾದದ್ದೂ, ಈಶ್ವರನ ಸೂತ್ರದಂತೆ ಆಡುವಂಥಾದ್ದೆಂದು ತಿಳಿದು, ದೇಹಾಭಿಮಾನವನ್ನು ಬಿಡಬೇಕು ನಿಜವಾಗಿ ವಿಚಾರಮಾಡಿ ನೋಡಿದರೆ, ದೇಹಕ್ಕೂ ನಮಗೂ ಯಾವಬಗೆಯ ಸಂಬಂಧವೂ ಇರುವದಿಲ್ಲ ಜಗತ್ತಿಗೆ ಮುಖ್ಯಾಧಾರನಾಗಿರುವವನು ಪರಶಿವನು ಜಗದಾಕಾರವಾಗಿ ತೋರುವ ಪ್ರಕೃತಿಯೇ ಎರಡನೆಯ ಆಧಾರವು ಹೀಗಿದ್ದು ಮೂರನೆಯವನಾದ ನಾನು ಎಲ್ಲಿಯವನು? ಅಲ್ಲದೆ ಪ್ರಪಂಚವೆಂಬ ಸಂಕೋಲೆಗಳನ್ನು ಕಾಲಲ್ಲಿ ಹಾಕಿಕೊಂಡವರಿಗೆ ಧನಾಸೆಯು ತಪ್ಪುವುದಿಲ್ಲ ಧನಾಸೆಯಿಂದ ಅಧರ್ಮವು ಘಟಿಸುವುದು. ಅಧರ್ಮಗಳಿಗೆ ಜನನ ಮರಣಗಳು ತಪ್ಪುವುದಿಲ್ಲ ಆದುದರಿಂದ ಧನಾಭಿಮಾನವನ್ನು ಬಿಡುವುದೊ ಮುಖ್ಯವಾಗಿರುವುದು ಈ ಎಲ್ಲಸಂಗತಿಗಳನ್ನು ಸಾವಧಾನವಾಗಿ ವಿಚಾರಮಾಡಿ, ಅಜ್ಞಾನವನ್ನು ಹೊರದೂಡಿ, ಜ್ಞಾನಾರ್ಜನೆಯನ್ನು ಮಾಡಿಕೊಂಡು ಕೃತಕೃತ್ಯರಾಗುವುದು ನಮ್ಮಗಳ ಪ್ರಥಮ ಕರ್ತವ್ಯವು ಜ್ಞಾನಾರ್ಜನೆಯ ಸಾಧನಗಳು ಯಾವವೆಂದರೆ —ಪರಮಾತ್ಮನು ಹೊರತು ಅನ್ಯವಿಷಯಗಳನ್ನು ವಮನವೆಂದು ತಿಳಿಯುವಿಕೆ, ಭೂತಮಾತ್ರಗಳಲ್ಲಿ ಬ್ರಹ್ಮಭಾವನೆಯನ್ನಿಡುವಿಕೆ, ಎಂತಹ ಕಠಿನ ಪ್ರಸಂಗ ಬಂದರೂ ದುಃಖವನ್ನೆಣಿಸದಿರುವಿಕೆ, ಪರಸ್ತ್ರೀಸಂಗದಲ್ಲಿ ನಿರಪೇಕ್ಷೆ, ಒಳಗೂ ಹೊರಗೂ ನಿರ್ಮಲವಾಗುವಿಕೆ, ಸತ್ಯವು ಉತ್ತಮ ವ್ರತವಾಗಿರುವುದರಿಂದ ಅದನ್ನು ಪಾಲಿಸುವಿಕೆ, ಪರರತಿಶಯವನ್ನೈರಿಸದ ಪಿಸುಣತ್ವವನ್ನು ಬಿಡುವಿಕೆ, ವಿಷಯದಲ್ಲಿ ವೈರಾಗ್ಯ, ಪ್ರಾಣಗಳನ್ನು ಜಯಿಸುವಿಕೆ, ಇಂದ್ರಿಯಗಳನ್ನು ತಡೆಯುವಿಕೆ, ದ್ವಂದ್ವಅಂದರೆ ಸುಖ-ದುಃಖದಂಥ ವಿರುದ್ಧ ಧರ್ಮಗಳುಳ್ಳ ಪ್ರಸಂಗಗಳನ್ನು ತಾಳಿಕೊಳ್ಳುವಿಕೆ, ಗುರುವಚನದಲ್ಲಿ ನಂಬಿಗೆಯನ್ನಿಡುವಿಕೆ, ದೃಢತರವಾದ ಅಭ್ಯಾಸಮಾಡುವಿಕೆ, ಸಾಧುಸಮಾಗಮವನ್ನು ಮಾಡುವಿಕೆ, ಅಹಂಕಾರತ್ಯಾಗ, ವಾಸನಾಕ್ಷಯ ಇತ್ಯಾದಿ ಸದ್ಗುಣಗಳನ್ನು ಸಾಧಿಸುತ್ತಾ, ಪ್ರಪಂಚ ಸೃಷ್ಟಿಸ್ಥಿತ್ಯಂತಕಾರಣನಾಗಿಯೂ ಅನಂತಕಲ್ಯಾಣಗುಣಮಹೋದಧಿಯಾಗಿಯೂ ಷಡ್ಗುಣೈಶ್ವರ್ಯಸಂಪನ್ನನಾಗಿಯೂ ಇರುವ ಪರಶಿವನಲ್ಲಿ ತೈಲಧಾರೆಯಂತೆ ಪ್ರೇಮವನ್ನಿಟ್ಟಿದ್ದಾದರೆ ಆ ಕರುಣಾಳುವು ತನ್ನ ನಿತ್ಯನಿರತಿಶಯ ಕೃಪೌದಾರ್ಯಗಳಿಂದ ನಮ್ಮನ್ನುದ್ಧಾರಮಾಡುವುದರಲ್ಲಿ ಸಂಶಯವಿಲ್ಲ.

ಯಾದೃಶೀ ಭಾವನಾ ಯತ್ರ ಸಿದ್ಧಿರ್ಭವತಿ ತಾದೃಶೀ

ಪುಣ್ಯತಿಥಿಮಹೋತ್ಸವ ನಂದೂರು

ನಿಜಾಮ ಇಲಾಖಾ ಗುಲ್ಬರ್ಗಾ ಜಿ॥ ನಂದೂರು ಗ್ರಾಮದಲ್ಲಿ ಪ್ರತಿವರ್ಷ ಪದ್ಧತಿಯಂತೆ ಈ ವರ್ಷವೂ ಮಾಘ ಶುದ್ಧ ೫ ಗುರುವಾರ ದಿವಸ ಶ್ರೀ ಮಲೆಯ ಶಾಂತೇಶ್ವರಸ್ವಾಮಿಗಳವರ ಪುಣ್ಯತಿಥಿಯು ವಿಶೇಷ ವೈಭವದೊಡನೆ ನೆರವೇರಿತು ಅದೇ ದಿನ ರಾತ್ರಿ ರೇಣುಕ ವಿಜಯ ನಾಟಕವು ಅಭಿನಯಿಸಲ್ಪಟ್ಟಿತು ಮರುದಿವಸ ಸಾಯಂಕಾಲ ೫ ಘಂಟೆಗೆ ದುಬಲಗುಂಡಿಯ ಧರ್ಮವೀರ ಪತ್ತೆಪುರ ಶರಣಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಗೂಡಿತು ಅಗ್ಗೆ ಉಭಯನಂದೂರು ತೋಪಕಟ್ಟಿ ಹಿರಿಯಮಠದ ಶ್ರೀ ಸದಾಶಿವಸ್ವಾಮಿಗಳವರಿಂದ ಸದರಿ ಧರ್ಮವೀರರಿಗೆ ಸನ್ಮಾನ ಪತ್ರವು ಆಶೀರ್ವದಿಸಲ್ಪಟ್ಟಿತು ಆ ಸಮಯದಲ್ಲಿ ಮುಸ್ತಿ ಶಾಲಾಮಠದ ವೇ॥ ಬಸವಪ್ಪಶಾಸ್ತ್ರಿಗಳು ನಾಯಕಲ್ ಗೋಡ್ಯಾಳಮಠದ ವೇ॥ ಶಾಮ್ಯತೀರ್ಥ ಗುರುಸಿದ್ಧಶಾಸ್ತ್ರಿಗಳು ವೇ॥ ಪಲ್ಲಾಪುರಮಠದ ಷಡಕ್ಷರಯ್ಯನವರೇ ಮೊದಲಾದವರು ಧರ್ಮವೀರರ ಬಗ್ಗೆ ಪ್ರಶಂಸಾಪರವಾದ ಭಾಷಣಗಳನ್ನು ಮಾಡಿದರು ಬಳಿಕ ಶ್ರೀ ಜಗದ್ಗುರು ಪಂಚಾಚಾರ್ಯರ ಮಂಗಳದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು

ಸರ್ವಾಧಿಕಾರಿ
ಉಭಯನಂದೂರು ತೋಪಕಟ್ಟಿ ಹಿರಿಯಮಠ

ವಿವಾಹಮಹೋತ್ಸವ ನ್ಯಾಮತಿ

ಶಿವಮೊಗ್ಗಾ ಜಿ॥ ನ್ಯಾಮತಿ ಗ್ರಾಮದಲ್ಲಿರುವ ಸಾಹುಕಾರ ನುಚ್ಚಿನ ದೊಡ್ಡನಾಗಪ್ಪನವರು ತಮ್ಮ ಗೃಹದಲ್ಲಿ ತಾ॥ 18-1-45 ನೆಯ ದಿವಸ 6 ಜನರ ವಿವಾಹಮಹೋತ್ಸವವನ್ನು ಬಹು ವೈಭವದಿಂದ ನಡೆಯಿಸಿದರು ಈ ಶುಭ ಸಮಯದಲ್ಲಿ ನ್ಯಾಮತಿಯಲ್ಲಿರುವ ಎಲ್ಲ ಮತದವರಿಗೂ ಮಿಷ್ಟಾನ್ನಭೋಜನವನ್ನು ಮಾಡಿಸಿದರು ಆಗ್ಗೆ ಪ್ರಭಾಪೋಷಣಕ್ಕೋಸ್ಕರ ೮ ರೂಪಾಯಿಗಳನ್ನು ಸಮರ್ಪಿಸಿದರು. ಶ್ರೀ ಜಗದಾಚಾರ್ಯರು ನೂತನ ವಧೂವರರಿಗೂ ಮ॥ ರಾ॥ ದೊಡ್ಡನಾಗಪ್ಪನವರ ಕುಟುಂಬದವರಿಗೂ ಆಯುರಾರೋಗ್ಯಭಾಗ್ಯಾದಿಗಳನ್ನು ಅನುಗ್ರಹಿಸಲೆಂದು ಪ್ರಾರ್ಥಿಸುವ

ಗುರುಕಿಂಕರ ಎನ್. ಡಿ. ಶೇಖರಪ್ಪ, ನ್ಯಾಮತಿ

ಶ್ರೀಜಗದ್ಗುರು ಪಂಡಿತಾರಾಧ್ಯ ವಿಶ್ವಾರಾಧ್ಯರ ಜಯಂತೀಮಹೋತ್ಸವ

ಮಹಾಶಿವರಾತ್ರಿ

ಭರತಖಂಡದಲ್ಲಿರುವ ಸಮಸ್ತವೀರಶೈವರು ಮಹಾಶಿವರಾತ್ರಿಯ ದಿವಸ ಶ್ರೀಜಗದ್ಗುರು ಪಂಡಿತಾರಾಧ್ಯರ ಹಾಗೂ ಶ್ರೀಜಗದ್ಗುರು ವಿಶ್ವಾರಾಧ್ಯರ ಜಯಂತೀಮಹೋತ್ಸವವನ್ನು ಅತ್ಯಂತ ವೈಭವದಿಂದ ನೆರವೇರಿಸಿ ಧನ್ಯರಾಗಬೇಕು. ಮತಸ್ಥಾಪನಾಚಾರ್ಯರ ಜಯಂತಿಗಳನ್ನು ಮಾಡುವದೇ ಆಸ್ತಿಕಮತಾನುಯಾಯಿಗಳ ಮುಖ್ಯ ಧರ್ಮವಾಗಿದೆ. ಮತಸ್ಥಾಪನಾಚಾರ್ಯರ ಜಯಂತಿಯನ್ನು ದೊಡ್ಡ ಹಬ್ಬದಂತೆ ಅತ್ಯಂತ ವೈಭವದಿಂದ ಆಚರಿಸಬೇಕು. ಪ್ರತಿಯೊಂದು ಗ್ರಾಮದಲ್ಲಿಯೂ ಮಹಾಶಿವರಾತ್ರಿಯ ದಿವಸ ಈ ಮಹಾಚಾರ್ಯರ ಭಾವಚಿತ್ರಗಳನ್ನು ಪೀಠದಲ್ಲಿರಿಸಿ ಷೋಡಶೋಪಚಾರಗಳಿಂದ ಪೂಜಿಸಿ ಮಾಹೇಶ್ವರಾರಾಧನೆಯನ್ನು ಮಾಡಬೇಕು. ಈ ದಿವಸವೇ ಈ ಪೂಜ್ಯಪಾದರ ಭಾವಚಿತ್ರಗಳನ್ನು ಪಲ್ಲಕ್ಕಿಯಲ್ಲಿರಿಸಿ ಸಕಲ ವಾದ್ಯ ವೈಭವದೊಡನೆ ಮಹೋತ್ಸವವನ್ನು ನೆರವೇರಿಸಬೇಕು. ಇದೇ ಲಿಂಗಾಂಗಿಗಳ ಮೂಲಧರ್ಮವು! ಗುರುಗಳ ಜಯಂತಿಗಳನ್ನು ಭಕ್ತಿಯಿಂದ ಆಚರಿಸುವವರೇ ನಿಜವಾದ ವೀರಶೈವರು.

ಸೂಚನೆ

ಪ್ರತಿವರ್ಷ ಪದ್ಧತಿಯಂತೆ ಮಹಾಶಿವರಾತ್ರಿ ನಿಮಿತ್ತವಾಗಿ ಮುಂದಿನ (ತಾ|| ೧೨-೨-೪೫) ವಾರದ ಪತ್ರಿಕೆಯು ಹೊರಡುವುದಿಲ್ಲ.

ಮ್ಯಾ.

ಯುದ್ಧವಾರ್ತೆ.

ಬರ್ಲಿನ್ ಮುತ್ತಿಗೆಯ ಸಿದ್ಧತೆ

ಮಾರ್ಷಲ್ ಜ್ಯುಕಾಫರ ಸೇನೆಗಳು ಫ್ರಾಂಕ್‌ಫರ್ಟಿನ ಉತ್ತರದಲ್ಲಿ ಓಡರ್ ನದಿ ದಡವನ್ನು ತಲುಪಿ, ಬರ್ಲಿನಿಗೆ ತೀರ ೪೫ ಮೈಲಿಗಳ ಹತ್ತಿರಕ್ಕೆ ಬಂದಿವೆ. ರಷ್ಯನರು ತಮ್ಮ ಮುಂಚೂಣಿ ಆರ್ಮರ್ಡ್ ಪಡೆಗಳನ್ನು ಸಂಘಟಿಸಿ, ಬರ್ಲಿನಿನ ಮೇಲೆ ನೇರವಾದ ಮುತ್ತಿಗೆ ಹಾಕಲು ನದಿ ದಡದಲ್ಲಿ ವ್ಯವಸ್ಥೆ ಮಾಡಿಕೊಳ್ಳುತ್ತಿರುವುದಾಗಿ ಹೇಳಲಾಗುತ್ತಿದೆ. ಮಾರ್ಷಲ್ ಜ್ಯುಕಾಫರು ಏರ್ಪಡಿಸಿರುವ ರಣಕ್ಷೇತ್ರ ಈ ೧೬೦ ಮೈಲಿ ವಿಶಾಲವಾಗಿದೆ. ಈ ಕ್ಷೇತ್ರದ ದಕ್ಷಿಣಾಗ್ರ ಬರ್ಲಿನ್ನಿಗೆ ಅಭಿಮುಖವಾಗಿದೆ. ಉತ್ತರಾಗ್ರ ಬಾಲ್ಟಿಕ್ ತೀರದ ಎದುರಿಗಿದೆ. ಈ ಸಾಧನೆಯನ್ನು ರಷ್ಯನ್ ಸೇನೆಗಳು ೧೭ ದಿನಗಳಲ್ಲಿ ೨೫೦ ಮೈಲಿ ದೂರ ನಡೆದು ಬಂದು ಸಾದಿಸಿದವು. ಮಾರ್ಷಲ್ ಜ್ಯುಕಫರ ಸೇನೆಯ ಬಲಪಾರ್ಶ್ವದಲ್ಲಿ ಮಾರ್ಷಲ್ ರೊಕೊಸೋಫ್‌ಸ್ಕಿಯವರು ಡ್ಯಾನ್‌ಸಿಗ್ ಬರ್ಲಿನ್ ಮಾರ್ಗದಲ್ಲೂ ಡ್ಯಾನ್‌ಸಿಗ-ಸ್ಟೆಟಿನ್ ರೈಲ್ವೆ ಮಾರ್ಗದಲ್ಲೂ ಇರುವ ಒಂದು ನಗರವನ್ನು ಆಕ್ರಮಿಸಿಕೊಂಡಿದ್ದಾರೆ. ಅವರ ಸೇನೆಗೂ ಮಾರ್ಷಲ್ ಚೆರ್ನಿಗೋಫ್‌ಸ್ಕಿ ಸೇನೆಗೂ ಈಗ ಸುಮಾರು ೧೯ ೨೦ ಮೈಲಿ ಅಂತರ ಮಾತ್ರ ಇದೆ. ಇತ್ತ ದಕ್ಷಿಣಾಗ್ರದಲ್ಲಿ ಮಾರ್ಷಲ್ ಕೋನಿವ್‌ರವರು ಜರ್ಮನ್ ಸೈಲೇಷಿಯದಲ್ಲಿ ಅನೇಕ ನಗರಗಳನ್ನು ಆಕ್ರಮಿಸಿಕೊಂಡಿದ್ದಾರೆ. ಇಲ್ಲಿ ರಷ್ಯನ್ ಸೇನೆಗಳು ನದಿ ಭಾಗದಲ್ಲಿ ಏರ್ಪಡಿಸಿಕೊಂಡಿರುವ ಠಾಣ್ಯ ೧೨ ಮೈಲಿ ವಿಸ್ತಾರವಾಗಿರುವುದಾಗಿಯೂ ಬರ್ಲಿನ್ನಿಗೆ ಮುತ್ತಿಗೆ ಹಾಕಲು ಸರ್ವಸಿದ್ಧತೆಗಳೂ ನಡೆದಿರುವುದಾಗಿಯೂ ಹೇಳಲಾಗುತ್ತಿದೆ.

ಬರ್ಲಿನ್ ರಷ್ಯನರಿಗೆ ಶರಣಾಗುವುದು

ರಷ್ಯನರು ಬರ್ಲಿನ್ನಿನ ಮೇಲೆ ಫಿರಂಗಿ ಹಾರಿಸುವಷ್ಟು ದೂರಕ್ಕೆ ಬಂದ ಕೂಡಲೇ ಬರ್ಲಿನ್ನಿನಿಂದ ಮ್ಯೂನಿಕ್‌ಗೆ ನಾಜಿ ಸರ್ಕಾರವನ್ನು ವರ್ಗಾಯಿಸಲು ನಾಜಿಗಳು ಯೋಜನೆ ಮಾಡಿದ್ದಾರೆ. "ಬರ್ಲಿನ್ ನಗರವನ್ನು ರಷ್ಯನರಿಗೆ ಒಪ್ಪಿಸಬೇಕಾದ ಸಂಭವ ಬರಬಹುದೆಂದು ಈಗಾಗಲೇ ಜರ್ಮನ್ ಕಾರ್ಮಿಕ ಮಂತ್ರಿ ಡಾ|| ರಾಬರ್ಟ್ ಲೇ ರವರು ಜರ್ಮನರಿಗೆ ಎಚ್ಚರಿಸಿದ್ದಾರೆ. ಬರ್ಲಿನ್ ಅಷ್ಟೇನೂ ಮುಖ್ಯವಾದ ನಗರವಲ್ಲವೆಂಬ ಭಾವನೆ ಜರ್ಮನರಲ್ಲಿ ಮೂಡುವಂತೆ ನಾಜಿಗಳು ಪ್ರಚಾರಕಾರ್ಯಾರಂಭ ಮಾಡಿದ್ದಾರೆ. "ಮಿಲಿಟರಿ ಪರಿಸ್ಥಿತಿ ನಮ್ಮ ಕೈ ತಪ್ಪಿ ಹೋಗಿದೆ. ಇನ್ನು ಯುದ್ಧ ನಡೆಸಲು ಸಾಧ್ಯವಿಲ್ಲ. ಆದ್ದರಿಂದ ಶಾಂತಿಭಿಕ್ಷೆ ಬೇಡಿ" ಎಂದು ಹಿಟ್ಲರನಿಗೆ ಆತನ ಸೇನಾನಿಗಳು ಸೂಚಿಸಿದರೆಂದೂ, ಆದರೆ ಆತನು ಆ ಮಾತಿಗೆ ಕಿವಿಗೊಡದೆ ಡ್ರೆಸ್ಡೆನ್ ಉತ್ತರದಲ್ಲಿ ಇರುವ ಗುಡ್ಡನಾಡಿಗೆ ಸೇನೆಗಳು ವಾಪಸಾಗಲು ನಿರ್ದೇಶವಂತೆ ಸೂಚಿಸಿದನೆಂದೂ ಸ್ಟಾಕ್‌ಹೋಮಿನಲ್ಲಿ ವದಂತಿ ಹರಡಿದೆ. ಈ ಗುಡ್ಡನಾಡಿನಲ್ಲಿ ನಿಂತು ಮಿತ್ರ ಸೇನೆಗಳನ್ನೆದುರಿಸಲು ಸಾಧ್ಯವಾಗುವುದಾಗಿ ಹಿಟ್ಲರನ ಅಭಿಪ್ರಾಯವೆಂದೂ ಆಂಗ್ಲ ಅಮೇರಿಕ ಪ್ರಮುಖರೊಡನೆ ಶಾಂತಿ ಸಾಧನೆಗಾಗಿ ವ್ಯವಹರಿಸಲು ಬರ್ಲಿನ್ನಿನಿಂದ ಒಬ್ಬರು ಸ್ಟಾಕ್‌ಹೋಮಿಗೆ ಬಂದಿದ್ದರೆಂದೂ ಆದರೆ ಜರ್ಮನಿ ಯಾವ ಷರತ್ತೂ ಇಲ್ಲದೆ ಶರಣಾಗಬೇಕೆಂಬ ಮಿತ್ರರ ಛಲವನ್ನು ನೋಡಿ ಆತನು ವಾಪಸು ಹೋದನೆಂದೂ ಹೇಳಲಾಗಿದೆ.

ಬರ್ಲಿನ್ನಿನಲ್ಲಿ ಜರ್ಮನರ ರಕ್ಷಣ ಸಿದ್ಧತೆ

ಬರ್ಲಿನ್ನನ್ನು ಉಳಿಸಿಕೊಳ್ಳುವ ಸಲುವಾಗಿ ಜರ್ಮನರು ಹೋರಾಡಲು ಸಂಕಲ್ಪಿಸಿದ್ದಾರೆ ನಗರದ ಪೂರ್ವ ದಿಗ್ಭಾಗದಲ್ಲಿ ಅವರು ವಿಶೇಷವಾಗಿ ಸೈನ್ಯ ಪ್ರಯೋಗಿಸಿದ್ದಾರೆ ರೈಲುಗಳಲ್ಲಿ ಜನರು ತಂಡತಂಡವಾಗಿ ಬೇರೆ ಕಡೆಗೆ ಹೋಗುತ್ತಿದ್ದಾರೆ ನಗರದಲ್ಲೂ ಹೊರಗೂ ಜರ್ಮನರು ಟ್ರೆಂಚ್‌ಗಳನ್ನು ವಿಶೇಷವಾಗಿ ತೋಡುತ್ತಿದ್ದಾರೆ ಓಡರ್ ನದಿ ದಡದಲ್ಲಿ ಮೂಲಬಲವನ್ನೇ ಪ್ರಯೋಗಿಸುತ್ತಿದ್ದಾರೆ ಎಂದು ಹೇಳಲಾಗಿದೆ

ಬರ್ಲಿನ್ ಬಿಡುವಂತೆ ರಾಯಭಾರಿ ವರ್ಗದವರಿಗೆ ಜರ್ಮನ್ ಸೂಚನೆ

ಬರ್ಲಿನ್ ಕಡೆ ಎರಡು ಕಡೆಗಳಿಂದ ನುಗ್ಗಿ ಬರುತ್ತಿರುವ ಜ್ಯುಕಾವರ ಸೇನೆ ಜರ್ಮನರನ್ನು ಇನ್ನೂ ೧೩ ಮೈಲಿ ಹಿಂದಕ್ಕಟ್ಟಿದೆ ಬರ್ಲಿನ್ನಿನಲ್ಲಿರುವ ವಿದೇಶೀ ರಾಯಭಾರಿ ವರ್ಗದವರೆಲ್ಲ ಬರ್ಲಿನ್ನಿನಿಂದ ಮ್ಯೂನಿಚ್‌ಗೆ ಹೋಗುವಂತೆ ಸೂಚಿಸಲ್ಪಟ್ಟಿರುವುದಾಗಿ ಮಾಸ್ಕೋ ವರದಿ ಬಂದಿದೆ ಓಡರ್ ನದಿ ದಡವನ್ನು ಪೂರ್ತಿ ಆಕ್ರಮಿಸಿಕೊಂಡ ಹೊರತು ರಷ್ಯನರು ಬರ್ಲಿನ್ನಿಗ ಸೇರುವ ದಾರಿ ಹತ್ತಿರಕ್ಕೆ ಹಾಕುವುದಿಲ್ಲವೆಂದು ಹೇಳಲಾಗುತ್ತಿದೆ

ಸೀಗ್‌ಫ್ರೀಡ್ ಕೋಟೆಗೆ ಲಗ್ಗೆ

ಅಮೆರಿಕ್ ೧ನೇ ಸೇನೆ ೧೩ ಮೈಲಿ ವಿಸ್ತಾರವಾದ ಕ್ಷೇತ್ರದಲ್ಲಿ ಜರ್ಮನ್ ಗಡಿಯನ್ನು ದಾಟಿ ಸೀಗ್‌ಫ್ರೀಡ್ ಕೋಟೆ ಭಾಗಗಳ ಮೇಲೆ ೧ ಮೈಲಿ ಹತ್ತಿರದಿಂದ ಫಿರಂಗಿ ಹಾರಿಸುತ್ತಿದೆ ಅಮೇರಿಕ್ ಒಂದನೇ ಮತ್ತು ೩ನೇ ಸೇನೆಗಳೆರಡೂ ಜರ್ಮನರನ್ನು ಸೀಗ್‌ಫ್ರೀಡ್ ಕೋಟೆಗೆ ಅಟ್ಟುತ್ತಿವೆ ಅಮೇರಿಕ್ ಒಂದನೇ ಸೇನೆ ಮಾನ್‌ಜೋ ಎಂಬ ಪ್ರದೇಶದ ಎರಡು ಪಾರ್ಶ್ವಗಳಲ್ಲೂ ವಿಶಾಲವಾದ ಕ್ಷೇತ್ರದಲ್ಲಿ ಮುನ್ನುಗ್ಗುತ್ತಿದೆ ಗೋಲಂದಾಜು ಪಡೆಗಳನ್ನು ಮುಂದಿಟ್ಟುಕೊಂಡು ಫಿರಂಗಿ ಹಾರಿಸುತ್ತಾ ಟ್ಯಾಂಕುಗಳನ್ನು ಉಪಯೋಗಿಸುತ್ತಾ ಈ ಸೇನೆ ನುಗ್ಗಿ ಬರುತ್ತಿರುವುದಾಗಿ ಹೇಳಲಾಗಿದೆ ಅಮೇರಿಕ್ ೩ನೇ ಸೇನೆ ಓವರ್ ನದಿಯ ಪೂರ್ವ ದಡದಲ್ಲಿ ಏರ್ಪಡಿಸಿಕೊಂಡಿರುವ ಠಾಣ್ಯವನ್ನು ವಿಸ್ತರಿಸಿಕೊಂಡು ೫ ಮೈಲಿ ಅಗಲ ಒಂದೂವರೆ ಮೈಲಿ ಆಳವಿರುವನ್ನು ವ್ಯೂಹವನ್ನು ರಚಿಸಿಕೊಂಡು ಮುಂದುವರಿಯುತ್ತಿದೆ ಈ ಪ್ರದೇಶದಲ್ಲಿ ಜರ್ಮನರ ಪ್ರತಿಭಟನೆ ಉಗ್ರವಾಗಿಯೇ ಇದೆ ಎಂದು ತಿಳಿದುಬರುತ್ತದೆ

ಏಕಕಾಲದಲ್ಲೇ ನೌಕೆ ಮತ್ತು ವಿಮಾನಗಳ ದಾಳಿ

ಲಾರ್ಡ್ ಲೂಯಿ ಮೌಂಟ್‌ಬ್ಯಾಟನ್‌ರವರು ಕೊಟ್ಟಿರುವ ಸಂದೇಶದಲ್ಲಿ ಇತ್ತೀಚೆಗೆ ಅರಕಾನ್ ತೀರದಲ್ಲಿ ನಡೆದ ಮಿತ್ರ ನೌಕೆಗಳ ಮತ್ತು ವಿಮಾನಗಳ ಸಂಯುಕ್ತ ಕಾರ್ಯಾಚರಣೆ ವಿಷಯ ತಿಳಿಸಲಾಗಿದೆ "ಅರಕಾನ್ ತೀರದಲ್ಲಿ ಭಾರತೀಯ ನೌಕಾ ಪಡೆಗಳು ಅನೇಕ ಸಲ ಧಾಳಿ ನಡೆಸಿದವು ಅಕ್ಯಾಬ್, ಮ್ಯೆಬಾನ್, ರಾಮ್ರೀ ಮತ್ತು ಚೆಡುಬಾದಲ್ಲಿ ಮಿತ್ರ ಸೈನಿಕರು ಬಂದಿಳಿದಾಗ ಮಿತ್ರ ನೌಕೆಗಳೂ ಮತ್ತು ವಿಮಾನಗಳೂ ಏಕಕಾಲದಲ್ಲಿ ಮೊದಲೇ ಕಾರ್ಯಾಚರಣೆ ನಡೆಸಿ ಸೈನಿಕರಿಗೆ ಸಹಾಯ ಮಾಡಿದವು ಯುದ್ಧ ನೌಕೆಗಳು, ವಿಮಾನ ವಾಹಕಗಳು, ಕ್ರೂಸರ್ ಮತ್ತು ಡಿಸ್ಟ್ರಾಯರುಗಳು ಸಂಪೂರ್ಣ ಬೆಂಬಲವನ್ನು ನೀಡಿ, ಸೈನಿಕರ ರಕ್ಷಣೆಯಲ್ಲಿ ತೊಡಗಿದ್ದವು ಶತ್ರುವಿನ ಸಂಚಾರ ವ್ಯವಸ್ಥೆಗಳನೇಕವು ನಾಶವಾದವು ಚೆಡುಬಾ ಆಕ್ರಮಣಕ್ಕಾಗಿ ನಡೆದ ಕಾರ್ಯಾಚರಣೆ ಬಹು ಚೆನ್ನಾಗಿತ್ತು" ಎಂದು ವಿವರಿಸಲಾಗಿದೆ

ಮಣಿಲಾಕ್ಕೆ ೨೫ ಮೈಲಿ ಮಾತ್ರ ಅಂತರವಿದೆ

ಲ್ಯೂಜಾನ್ ಕೊಲ್ಲಿಯ ಒಳಭಾಗದಲ್ಲಿರುವ ಓಲಂಗಾಪೋ ಎಂಬ ನಗರವನ್ನಾಕ್ರಮಿಸಿಕೊಂಡ ಅಮೆರಿಕ್ ಸೇನೆಗಳು ಕೊಲ್ಲಿಯ ಹಿಂಬದಿಯಲ್ಲಿರುವ ಎರಡು ಸಂಚಾರ ಕೇಂದ್ರಗಳನ್ನಾಕ್ರಮಿಸಿಕೊಂಡು ಮಣಿಲಾಕ್ಕೆ ೨೮ ಮೈಲಿ ಯೊಳಗಿರುವ ನಗರವನ್ನು ತಲುಪಿದವು ಸ್ಯೂಬಿಕ್ ಕೊಲ್ಲಿಯ ಮುಖಭಾಗದಲ್ಲಿರುವ ಒಂದು ದ್ವೀಪಕ್ಕೆ ಅಮೇರಿಕನ್ ಸೇನೆಗಳು ಈಗ ಹೊಸದಾಗಿ ಬಂದಿಳಿದಿವೆ ಬಾಟಾನ್ ಪರ್ಯಾಯ ದ್ವೀಪಕ್ಕ ಉತ್ತರದಲ್ಲಿ ಬಂದಿಳಿಯಲು ಅಮೇರಿಕನ್ ಸೇನೆಗಳು ೬೩೦ ಮೈಲಿ ದೂರ ಪ್ರಯಾಣಮಾಡಿ ಬಂದುವೆಂದೂ ಮಾರ್ಗ ಮಧ್ಯದಲ್ಲಿ ಯಾರೂ ಇವನ್ನು ತಡೆಗಟ್ಟಲಿಲ್ಲವೆಂದೂ ಹೇಳಲಾಗಿದೆ ಗೆರಿಲ್ಲಾ ಪಡೆಗಳು ಜಪಾನಿ ಚಲನವಲನಗಳ ಬಗ್ಗೆ ಸಮಾಚಾರಗಳನ್ನು ತಿಳಿಸುತ್ತಾ ತುಂಬಾ ಸಹಾಯ ಮಾಡಿದವು ಇದರ ಪರಿಣಾಮವಾಗಿ ಪೂರ್ವಭಾವಿಯಾಗಿ ಜಪಾನಿ ಠಾಣ್ಯಗಳ ಮೇಲೆ ವಿಮಾನ ಧಾಳಿ ನಡೆಸಬೇಕಾದ ಪ್ರಮೇಯವು ಸಂಭವಿಸಲಿಲ್ಲವೆಂದು ಹೇಳಲಾಗಿದೆ

ಜಪಾನಿಗೆ ಸೇನೆ ಇನ್ನೂ ೪೦-೫೦ ಲಕ್ಷ ಇದೆ

ಜಪಾನಿನ ಭೂಬಲ ಏನೂ ಕಡಿಮೆಯಾಗಿಲ್ಲ ೪೦-೫೦ ಲಕ್ಷ ಸೇನೆಯನ್ನು ಜಪಾನ್ ಈಗಲೂ ಯುದ್ಧ ಕ್ಷೇತ್ರದಲ್ಲಿ ನಿಲ್ಲಿಸುವ ಶಕ್ತಿ ಪಡೆದಿದೆ,' ಎಂದು ಜನರಲ್ ಸ್ಟಿಲ್‌ವೆಲ್‌ರು ವಾಷಿಂಗ್ಟನ್ನಿನಲ್ಲಿ ಹೇಳಿ ಜಪಾನಿ ಭೂಬಲವನ್ನು ಪೆಸಿಫಿಕ್ ಕ್ಷೇತ್ರದಲ್ಲಿ ಎದುರಿಸಿ ನಿಂತು ಹೋರಾಡ ಬೇಕಾಗುವುದೆಂದು ಎಚ್ಚರಿಸಿದ್ದಾರೆ

ಬೆಂಗಳೂರಿಗೊಂದು ಸೈನ್ಸ್ ಇಂಟರ್ ಕಾಲೇಜ್

ವೀರಶೈವ ಎಜುಕೇಷನ್ ಸೊಸೈಟಿಯ ಉದ್ಯಮ

ಈ ... ... ಎಂ ... ... ಯುತ್ತಾರೆ —

ಈ ಹೆಸರಿನ ಒಂದು ವಿದ್ಯಾ ಸಂಸ್ಥೆಯು ಬೆಂಗಳೂರಿನಲ್ಲಿ ಸ್ಥಾಪನೆಯಾಗಿ ಕೇವಲ ವಿದ್ಯಾ ಪ್ರೋತ್ಸಾಹ ಮತ್ತು ವಿದ್ಯಾ ಪ್ರಚಾರವನ್ನೇ ತನ್ನ ಧ್ಯೇಯವನ್ನಾಗಿಟ್ಟುಕೊಂಡು ಕೆಲಸ ಮಾಡುತ್ತಿದೆ ವಿದ್ಯಾಭಿಮಾನಿಗಳಾದ ನಿವೃತ್ತ ಪ್ರಧಾನ್ಯಾಯಾಧೀಶ ರಾಜಧರ್ಮಪ್ರವೀಣ ದಿವಾನ್ ಬಹದ್ದೂರ್ ಶ್ರೀಮಾನ್ ಪಿ ಮಹದೇವಯ್ಯನವರು ಅಧ್ಯಕ್ಷರಾಗಿದ್ದಾರೆ ವಿಶ್ವವಿದ್ಯಾನಿಲಯದ ಶಾಸ್ತ್ರಜ್ಞರು ಮತ್ತು ಉದಾರ ಚರಿತರಾದ, ವಿದ್ಯಾಭಿಮಾನಿಗಳಾದ ಹಲವರು ಮಹನೀಯರು ಕಾರ್ಯಕಾರಿ ಸಮಿತಿಯಲ್ಲಿದ್ದಾರೆ

ಈ ಸಂಘವು ೧೯೪೫ನೇ ಜೂನ್ ತಿಂಗಳಿಂದ ಬೆಂಗಳೂರಿನಲ್ಲಿ ಒಂದು ಸೈನ್ಸ್ ಇಂಟರ್ ಮೀಡಿಯೆಟ್ ಕಾಲೇಜನ್ನು ಆರಂಭಿಸುತ್ತದೆ ಇದಕ್ಕೆ ಸರ್ಕಾರದ ಸಹಕಾರವೂ ವಿಶ್ವವಿದ್ಯಾನಿಲಯದ ಪ್ರೋತ್ಸಾಹವೂ ದೊರೆತಿದೆ ಕೆಲವು ಮಹನೀಯರ ಉದಾರ ದಾನದ ಫಲವಾಗಿ ಹಲವು ಸಹಸ್ರ ರೂಪಾಯಿಗಳು ಈಗ ಈ ನಿಧಿಗೆ ಸಂಗ್ರಹವಾಗಿವೆ ವಿದ್ಯಾಪ್ರೇಮಿಗಳಾದ ಶ್ರೀಮದ್ರಂಭಾಪುರೀ ಜಗದ್ಗುರುಗಳವರು ತಮ್ಮ ಪ್ರಶಸ್ತವಾದ ಭವನವೊಂದನ್ನು ಈ ಸಂಸ್ಥೆಗೆ ಬಿಟ್ಟುಕೊಟ್ಟು, ಸಂಸ್ಥೆಯ ಉದ್ಯಮಕ್ಕಾಗಿ ಹರ್ಷಿಸಿ, ಹರಸಿ ಅನುಗ್ರಹಿಸಿದ್ದಾರೆ

ಈ ಕೆಳಗೆ ಕಂಡ ಮಹನೀಯರು ಇದಕ್ಕಾಗಿ ಧನ ದಾನಮಾಡಿದ್ದಾರೆ

ಶ್ರೀ ಬಿ ಸರಾಫ ಬಸಪ್ಪನವರು, ಬೆಂಗಳೂರು ೬೦,೦೦೦ ರೂ ಶ್ರೀ ಎ ರುದ್ರಯ್ಯನವರು, ೧೦,೦೦೦ ರೂ ಶ್ರೀ ಯಜಮಾನ್ ಕೆಂಚಪ್ಪನವರು, ೫,೦೦೦ ರೂ ವಾಗ್ದಾನಮಾಡಿರುವರು — ರಾಜಧರ್ಮ ಪ್ರವೀಣ ದಿವಾನ್ ಬಹದ್ದೂರ್ ಶ್ರೀಮಾನ್ ಪಿ ಮಹದೇವಯ್ಯನವರು, ೨,೦೦೦ ರೂ ಶ್ರೀಮಾನ್ ದೇಶಪಟ್ಟಣ ರುದ್ರಪ್ಪಶೆಟ್ಟರು ಅರಳೇಪೇಟೆ ೩,೦೦೦ ರೂ ಶ್ರೀಮಾನ್ ಬುಳ್ಳಪ್ಪನವರ ಶಿವನಂಜಪ್ಪನವರು ಮತ್ತು ಶ್ರೀ ಕೆ ಎಸ್ ಗುಬ್ಬಣ್ಣನವರು, ೩,೦೦೦ ರೂ ಈ ಸಂಸ್ಥೆಗೆ ವಿದ್ಯಾಭಿಮಾನಿಗಳು ಉದಾರಚಿತ್ತರಾಗಿ ಸಹಾಯ ಮಾಡಬೇಕೆಂದೂ, ಪ್ರೋತ್ಸಾಹಿಸಬೇಕೆಂದೂ ಕೋರಲಾಗಿದೆ.

ಲೇಡಿ ಮಿರ್ಜಾರವರಿಗೆ ೧ ಲಕ್ಷ ರೂ. ಆಭರಣ ನಷ್ಟ

ಲೇಡಿ ಮಿರ್ಜಾ ಇಸ್ಮಾಯಿಲ್‌ರವರು ಬೆಂಗಳೂರಿನಿಂದ ಬೊಂಬಾಯಿಗೆ ಆಗಮಿಸಿದಾಗ, ಅವರು ತಮ್ಮ ಕೈ ಚೀಲವನ್ನು ತಮ್ಮ ಆಳಿನ ವಶಕ್ಕೆ ಕೊಟ್ಟಿದ್ದರು ಆಗ ಯಾವನೋ ಒಬ್ಬ ಆಗಂತುಕನು ಸೊಗಸಾಗಿ ಡ್ರೆಸ್ ಹಾಕಿಕೊಂಡು ಬಂದು, ಆ ಆಳಿನಿಂದ ಕೈ ಚೀಲವನ್ನು ಲೇಡಿ ಮಿರ್ಜಾರವರು ತರಹೇಳಿದ್ದಾರೆಂದು ಹೇಳಿ ತೆಗೆದುಕೊಂಡು ಪರಾರಿಯಾದನು ಆ ಚೀಲದಲ್ಲಿ ೧ ಲಕ್ಷ ರೂ ಬೆಲೆ ಬಾಳುವ ಆಭರಣಗಳು ಇದ್ದುವೆಂದು ಹೇಳಲಾಗಿದೆ

ಇಲಿ ಶಿಕಾರಿಗೆ ಇನಾಮು —ಬೆಂಗಳೂರಲ್ಲಿ ಪ್ಲೇಗು ಕಾಣಿಸಿಕೊಂಡಿರುವುದರಿಂದ ಆರೋಗ್ಯ ಇಲಾಖೆಯವರು ಇಲಿ ಹಿಡಿದು ಕೊಡುವವರಿಗೆ ಇಲಿ ಒಂದಕ್ಕೆ ಅರ್ಧಾಣೆಯಂತೆಯೂ ಹೆಗ್ಗಣ ಒಂದಕ್ಕೆ ಒಂದಾಣೆಯಂತೆಯೂ ಇನಾಮು ಕೊಡುತ್ತಾರೆ

ಸ್ವೀಕಾರ

ಶಿವಮೊಗ್ಗಾ ಡಿ|| ನ್ಯಾಮತಿಯಲ್ಲಿರುವ ಸಾಹುಕಾರ ನುಚ್ಚಿನ ದೊಡ್ಡನಾಗಪ್ಪನವರ ಪುತ್ರಿ ಚಿ| ಸೌ|| ಶಾರದಮ್ಮನಿಗೂ ದಾವಣಗೆರೆ ಹೊಸಮನೆ ಬಸಪ್ಪನವರ ಪುತ್ರ ಚಿ|| ವೀರಪ್ಪನಿಗೂ, ಮೇಲ್ಕಂಡ ದೊಡ್ಡನಾಗಪ್ಪನವರ ಪುತ್ರ ಚಿ|| ಷಡಕ್ಷರಪ್ಪನಿಗೂ ದಾವಣಗೆರೆ ಜೇತೂರು ಶರಣಪ್ಪನವರ ಪುತ್ರಿ ಚಿ|| ಸೌ|| ಶಾಂತವೀರಮ್ಮನಿಗೂ, ದೊಡ್ಡನಾಗಪ್ಪನವರ ಜ್ಯೇಷ್ಠಪುತ್ರ ವೀರಬಸಪ್ಪನವರ ಪುತ್ರಿ ಚಿ|| ಸೌ|| ಗೌರಮ್ಮನಿಗೂ ದಾವಣಗೆರೆ ಬ್ಯಾಡಗಿ ಜಯದೇವಪ್ಪನವರ ಪುತ್ರ ಚಿ|| ಗಂಗಾಧರಪ್ಪನಿಗೂ, ಮೇಲ್ಕಂಡ ವೀರಬಸಪ್ಪನವರ ಪುತ್ರಿ ಚಿ|| ಸೌ|| ಗಿರಿಜಮ್ಮನಿಗೂ ದಾವಣಗೆರೆ ಸೋಮನಹಳ್ಳಿ ಸಿದ್ಧಪ್ಪನವರ ಪುತ್ರ ಚಿ|| ಬಸವರಾಜಪ್ಪನಿಗೂ, ಹಲಗೇರಿ ಲೋಕೇಶಪ್ಪನವರ ಪುತ್ರ ಚಿ|| ಷಡಕ್ಷರಪ್ಪನಿಗೂ ದಾವಣಗೆರೆ ಯಜಮಾನ ಬೆಳ್ಳೂಡಿ ವೀರಪ್ಪನವರ ಪುತ್ರಿ ಚಿ|| ಸೌ|| ಶರಣಮ್ಮನಿಗೂ, ನುಚ್ಚಿನ ಚಂದ್ರಪ್ಪನವರ ಪುತ್ರ ಚಿ|| ವೀರಬಸಪ್ಪನಿಗೂ ಬೆಳಗೇರಿ ನಲ್ಲೂರು ನಾಗಪ್ಪನವರ ಪುತ್ರಿ ಚಿ| ಸೌ|| ಸರ್ವಮ್ಮನಿಗೂ ನಡೆದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 5 ರೂಪಾಯಿಗಳು ಮ|| ರಾ|| ಎಸ್ ಡಿ ಶೇಖರಪ್ಪನವರ ದ್ವಾರಾ ತಲ್ಪಿರುತ್ತವೆ

ಧಾರವಾಡ ಡಿ|| ಹುಬ್ಬಳ್ಳಿ ಟವನ್ನಿನಲ್ಲಿರುವ ಬೊಮ್ಮಾಪುರ ಹಿರಿಯಮಠದ ವೇ|| ಗುರುಪಾದಯ್ಯನವರ ಪುತ್ರಿ ಚಿ| ಸೌ|| ವೀರಾಂಬೆಯನ್ನು ಕ್ಯಾಲಕೊಂಡ ಹಿರಿಯಮಠದ ವೇ|| ಗದಿಗಯ್ಯನವರ ಪುತ್ರ ಚಿ| ಅಡವಯ್ಯನಿಗೆ ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವಧೂವರರಿಂದ ತೆಗೆಯಿಸಿದ 2 ರೂಪಾಯಿಗಳು ಮತ್ತು ಹುಬ್ಬಳ್ಳಿಯಲ್ಲಿರುವ ವೇ|| ನಂದಿಕೇಶ್ವರಮಠದ ವಿರೂಪಾಕ್ಷಯ್ಯನವರ ಪುತ್ರ ಚಿ|| ಗಂಗಾಧರಯ್ಯನಿಗೆ ಪುತ್ರರತ್ನವು ಜನಿಸಿದ್ದು ವಿಶ್ವಾರಾಧ್ಯನೆಂದು ನಾಮಕರಣಮಾಡಿದ ಸಮಯದಲ್ಲಿ ವೇ|| ಹುಬ್ಬಳ್ಳಿ ಹಿರಿಯಮಠದ ಸೋಮನಾಥಯ್ಯನವರು ಪ್ರಭಾಪೋಷಣಕ್ಕಾಗಿ ತೆಗೆಯಿಸಿದ 2 ರೂಪಾಯಿ ಒಟ್ಟು 4 ರೂಪಾಯಿಗಳು ವೇ|| ಜಿ ವಿ ನಂದಿಕೇಶ್ವರಮಠ ಇವರ ದ್ವಾರಾ ತಲ್ಪಿರುತ್ತವೆ

ಗುಲ್ಬರ್ಗಾ ಡಿ|| ನಂದೂರು ಗ್ರಾಮದಲ್ಲಿ ಸರ್ಗಸ್ಥರಾದ ಶ್ರೀ ಮಲಯಶಾಂತೇಶ್ವರಸ್ವಾಮಿಗಳವರ ಪುಣ್ಯತಿಥಿ ಸಮಾರಂಭ ಸಮಯದಲ್ಲಿ ಶ್ರೀ ಉಭಯ ನಂದೂರು ಚೋಳಕಪ್ಪ ಹಿರಿಯಮಠದ ಪಟ್ಟದಸ್ವಾಮಿಗಳವರು ಪ್ರಭಾಪೋಷಣಕ್ಕೋಸ್ಕರ 1 ರೂಪಾಯಿಯನ್ನು ತೆಗೆಯಿಸಿ ಕಳುಹಿಸಿರುತ್ತಾರೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಹಾರೈಸುತ್ತೇವೆ

ಕಾಗದದ ಬೆಲೆಯು ವಿಶೇಷವಾಗಿ ಏರಿರುವುದರಿಂದ ಕೆಲವು ಗ್ರಂಥಗಳ ಮತ್ತು ಫೋಟೋಗಳ ಬೆಲೆಯನ್ನು ಸ್ವಲ್ಪ ಹೆಚ್ಚಿಸಿದ್ದೇವೆ.

ಸಿದ್ಧಾಂತಶಿಖಾಮಣಿ

ವೀರಶೈವರ ಶಕ್ತಿ ಜನ್ಮಧಾರಣವಾಗಿದೆ ಪ್ರತಿಯೊಬ್ಬ ವೀರ ಸಿದ್ಧಾಂತಶಿಖಾಮಣಿ ಗ್ರಂಥವು ಪ್ರಾಣದಂತಿರುವುದು ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯ ಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ವೀರಶೈವಮತದಲ್ಲಿ ಸದ್ಯಃ ದೊರೆಯತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವದು ಈ ಗ್ರಂಥವು ಈಗ್ಗೆ ಸುಮಾರು **೩ಸಾವಿರ** ವರ್ಷಗಳ ಪೂರ್ವದಲ್ಲಿ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭವಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಆನೆ ಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಆದರ ಒಂದು ವ್ಯಾಖ್ಯಾನವಲಿಯೂದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳ ಸರಿಯಾದ ಅರ್ಥವು ಬಯಲ್ಪಟ್ಟಿಲ್ಲ ಈ ಕೊರತೆಯನ್ನು ನೀಗಿಸಬೇಕೆಂದು **ಪಂಡಿತ ಶ್ರೀಕಾಶೀನಾಥ ಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಓದಿನೋಡಿದವರಿಗೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ಪೂರ್ಣ ತಿಳಿಯಬರುವುದು. ವಾಚಕರ ಅನುಕೂಲಕ್ಕಾಗಿ ಬಹು ಶ್ರಮವಹಿಸಿ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ ಈ ಗ್ರಂಥವು ಒಟ್ಟು ೯೩೨ ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಭಾವಾತ್ಮಕವಾದ ಮನೋಹರಚಿತ್ರಗಳು ಜೋಡಿಸಲ್ಪಟ್ಟಿರುವದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ ಸ್ವಲ್ಪಕಾಲದಲ್ಲಿಯೇ ವಿನಂತಿ ಯುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು **ಬೆಲೆ ೨ ರೂಪಾಯಿ.**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅವತಾರದ ಚಿತ್ರಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ	೦—೬—೦
ಶ್ರೀರೇಣುಕಾಚಾರ್ಯರ ಲಿಂಗೋದ್ಭವದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦ ಬೆಲೆ	೦—೬—೦
ಶದ್ಯಃ ಶಿವಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದೇಕಡೆಯಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ	೦—೪—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ	೦—೩—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೬
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರುಗಳ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦	೦—೪—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀ ರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
ಬೆಂಗಳೂರ ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೬

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೭ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೮ನೆಯ ಆವೃತ್ತಿ)	೬ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ- ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಹುಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ವೇದ್ಯೋದರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ೩ನೆಯ ಆವೃತ್ತಿ)	೧। ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧॥ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧॥। ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ತ್ವದ ಫೋಟೋಗಳಿರುವುವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರಪದ್ಯ)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	4 A
The Philosophical Aspect of Virasaivism (*English*)	8 A
Speeches by Pandit Shri Kashinatha Shastriji (*English*)	12 A
लिंगधारणचंद्रिका (संस्कृत)	३
वीरशैवरत्न (मराठी)	१
महानारायणोपनिषत् (वीरशैवभाष्य–संस्कृत)	१
सिद्धांतशिखामणि (मूल)	८ आ
नंदिकेश्वरकारिका (संस्कृत)	२ आ

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಸ್ಥಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ೪ ಆಣೆ ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ.

ಸಂಪುಟ ೧೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೯ನೇ ಫೆಬ್ರುವರಿ ೧೯೪೫ [ಸಂಚಿಕೆ ೪೩

ಸ್ವೀಕಾರ

ಧಾರವಾಡ ಡಿ|| ಹುಬ್ಬಳ್ಳಿ ನಗರದ ಶಾಖಾ ಬೊಮ್ಮಾಪುರದಲ್ಲಿರುವ ಹಿರಿಯಮಠದ ಪಟ್ಟಾಭಿಷೇಕ ಮಹೋತ್ಸವವು ಇದೇ ಮಾಘ ಬ|| ೫ ಶುಕ್ರವಾರ ದಿವಸ ಮಹಾವೈಭವದಿಂದ ನೆರವೇರಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 5 ರೂಪಾಯಿಗಳು ಧಾರವಾಡ ಹೊಸಮಠದ ವೇ|| ವೀರಭದ್ರಯ್ಯನವರ ದ್ವಾರಾ ತಲ್ಪಿರುತ್ತವೆ

ಧಾರವಾಡ ಡಿ|| ರಾಣಿಬೆನ್ನೂರು ಮುನಿಸಿಪಾಲಿಟಿ ಚೀಫ್ ಆಫೀಸರ್‌ರವರಾದ ವೇ ಬಸವಲಿಂಗಯ್ಯನವರು ಅರಳೆಲೆಮಠ ಬಿ ಎ ಇವರ ಪುತ್ರಿ ಚಿ ಸೌ|| ಅನ್ನಪೂರ್ಣಾದೇವಿಯನ್ನು ಬಂಕಾಪುರ ಗಬ್ಬೂರಮಠದ ವೇ|| ಚನ್ನಬಸವಯ್ಯನವರ ಪುತ್ರ ಚಿ|| ಬಸವರಾಜ ಬಿ ಇ ಅಸಿಸ್ಟೆಂಟ್ ಕಂಟ್ರೋಲರ್ ಆಫ್ ಸ್ಟೋರ್ಸ್ ಎಂ ಎಸ್ ಎಂ ರೈಲ್ವೆ ಇವರಿಗೆ ಕೊಟ್ಟು ವಿಶೇಷ ವೈಭವದೊಡನೆ ನೆರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 5 ರೂಪಾಯಿಗಳು ರಾಣಿಬೆನ್ನೂರು ವೇ|| ಗದ್ದಿಗಿಮಠದ ಸೋಮಯ್ಯನವರ ದ್ವಾರಾ ತಲ್ಪಿರುತ್ತವೆ

ಚಿತ್ರದುರ್ಗ ಡಿ|| ದಾವಣಗೆರೆಯಲ್ಲಿರುವ ಮ|| ರಾ|| ಮಾಗಾನಹಳ್ಳಿ ನಂಜುಂಡಪ್ಪನವರ ಪುತ್ರಿ ಚಿ|| ಸೌ|| ಸುಶೀಲಮ್ಮನಿಗೂ ಬನವಾಸಿ ಉಗ್ರಾಣಕರ್ ಮ|| ರಾ|| ಗುರುಶಾಂತಪ್ಪನವರ ಪುತ್ರ ಚಿ|| ಶಂಕರಪ್ಪ ಎಂ ಎ ಇವರಿಗೂ ಮತ್ತು ಮ|| ರಾ|| ಬೀಜೋಡು ಶೆಟ್ಟರ ಕಲಿವೀರಪ್ಪನವರ ಪುತ್ರ ಚಿ|| ರಾಜಶೇಖರಪ್ಪನಿಗೂ ಬನವಾಸಿ ಗ್ರಾಮದ ಮ|| ರಾ|| ಶೆಟ್ಟರ ಗಣಪತಿಯಪ್ಪನವರ ಪುತ್ರಿ ಚಿ|| ಸೌ|| ಬಸವಣ್ಣೆಮ್ಮನಿಗೂ, ಹೊಳಗುಂದಿ ಹಿರೇಮಠದ ವೇ|| ಶಿವರುದ್ರಶಾಸ್ತ್ರಿಗಳ ಮತ್ತು ವೇ|| ಗುರುಶಾಂತಶಾಸ್ತ್ರಿಗಳ ಪೌರೋಹಿತ್ಯದಲ್ಲಿ ವಿವಾಹ ಮಹೋತ್ಸವವು ವಿಧ್ಯುಕ್ತವಾಗಿ ನೆರವೇರಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 5 ರೂಪಾಯಿಗಳು ಮ|| ರಾ|| ಮಾಗಾನಹಳ್ಳಿ ನಂಜುಂಡಪ್ಪನವರ ದ್ವಾರಾ ತಲ್ಪಿರುತ್ತವೆ.

ಲಕ್ಷ್ಮೇಶ್ವರ ತಾಲೂಕು ಶಿಗ್ಲಿಗ್ರಾಮದಲ್ಲಿರುವ ವೇ|| ದೊಡ್ಡ ಮುರಿಗಯ್ಯನವರು ಸಿದ್ಧಯ್ಯನವರು ಕೂಡ್ಲಮಠ ಇವರ ಪುತ್ರಿ ಚಿ|| ಸೌ|| ಅನ್ನಪೂರ್ಣಾದೇವಿಯನ್ನು ಹಾವೇರಿ ತಾ|| ಹಾವನೂರು ಗ್ರಾಮದಲ್ಲಿರುವ ವೇ|| ಗವಿಗಯ್ಯನವರು ಕರಸ್ಥಲಮಠ ಇವರ ಪುತ್ರ ಚಿ|| ಪರಮೇಶ್ವರಯ್ಯನಿಗೆ ಕೊಟ್ಟು ನೆರವೇರಿಸಿದ ನಿಶ್ಚಯ ಕಾರ್ಯದಲ್ಲಿ ಮೂದಾಪುರ ಬೃಹನ್ಮಠದ ಶ್ರೀ|| ಷ|| ಬ್ರ|| ಪಟ್ಟದಸ್ವಾಮಿಗಳವರು ಪ್ರಭಾಪೋಷಣಕ್ಕೋಸ್ಕರ ವಧೂವರರ ಕಡೆಯಿಂದ ತೆಗೆಯಿಸಿದ 4 ರೂಪಾಯಿಗಳು ವೇ|| ಕೂಡ್ಲಮಠದ ಸಿದ್ಧಯ್ಯನವರ ದ್ವಾರಾ ತಲ್ಪಿರುತ್ತವೆ

ಒಳ್ಳಾರಿ ತಾ|| ಶಿಡಗಿನಮೊಳೆ ಗ್ರಾಮದಲ್ಲಿರುವ ವೇ|| ಕುರುಗೋಡು ಮೇಲುಮಠದ ಬಸವಲಿಂಗಯ್ಯನವರ ಪುತ್ರಿ ಚಿ|| ಸೌ|| ಅನ್ನಪೂರ್ಣೆಯನ್ನು ಹಂ|| ಮ|| ವೇ|| ಕೆಂಗೋಟಯ್ಯನವರ ಪುತ್ರ ಚಿ|| ಓಂಕಾರಯ್ಯನಿಗೆ ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿಯೂ ಮತ್ತು ಇದೇ ಸಮಯದಲ್ಲಿ ನೆರವೇರಿದ ವೀರ ಮಾಹೇಶ್ವರ ದೀಕ್ಷಾ ಸಮಯದಲ್ಲಿಯೂ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು, ಮೆಟ್ರಿ ಗ್ರಾಮದಲ್ಲಿರುವ ವೇ|| ಹಂ|| ಮ|| ಮಹಾದೇವಯ್ಯನವರ ದ್ವಾರಾ ತಲ್ಪಿರುತ್ತವೆ

... ಂಪ ಶಹಪುರದಲ್ಲಿರುವ ಶ್ರೀ ದುಂಡಯ್ಯನವರು ಕೊಂಕಾಳ ಇವರ ಪುತ್ರ ವಿರೂಪಾಕ್ಷಯ್ಯನವರು ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 2 ರೂಪಾಯಿಗಳು ವೇ|| ಗುರುಲಿಂಗಯ್ಯನವರು ಹಿರೇಮಠ ಶಹಪುರ ಇವರ ದ್ವಾರಾ ತಲ್ಪಿರುತ್ತವೆ

ನಿಜಾಮು ಇಲಾಖಾ ಹುಮನಾಬಾದದಲ್ಲಿರುವ ವೇ|| ಒಂಗಿ ಸಿದ್ಧರಾಮಯ್ಯನವರು ಶಿವರಾತ್ರಿಮಹೋತ್ಸವ ನಿಮಿತ್ತವಾಗಿ ಪ್ರಭಾಪೋಷಣಕ್ಕೋಸ್ಕರ 1 ರೂಪಾಯಿಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ

ಶಿವಮೊಗ್ಗಾ ಡಿ|| ಸಾಗರ ತಾಲೂಕು ತಡಗಳಲೆ ಗ್ರಾಮದಲ್ಲಿರುವ ಮ|| ರಾ|| ಬಿ ಚನ್ನಬಸಪ್ಪಗೌಡರು ಶಿವರಾತ್ರಿಮಹೋತ್ಸವ ನಿಮಿತ್ತವಾಗಿ ಪ್ರಭಾಪೋಷಣಕ್ಕೋಸ್ಕರ 1 ರೂಪಾಯಿಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ

ಧಾರವಾಡ ಡಿ|| ಲಕ್ಷ್ಮೇಶ್ವರ ಗ್ರಾಮದಲ್ಲಿರುವ ಮ|| ರಾ|| ಶಂಕರಪ್ಪ ಪಶುಪತಿಹಾಳ ಇವರ ಧರ್ಮಪತ್ನಿ ಶ್ರೀಮತಿ ಅಂದಾನಮ್ಮನವರು ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 1 ರೂಪಾಯಿಯು ಮ|| ರಾ|| ಹೂವಿನ ಶಾಂತಪ್ಪನವರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಪಟ್ಟಾಭಿಷೇಕಮಹೋತ್ಸವ, ಹುಬ್ಬಳ್ಳಿ

ಧಾರವಾಡ ಡಿ|| ಹುಬ್ಬಳ್ಳಿ ಶಹರ ಪೈಕಿ ಬೊಮ್ಮಾಪುರದಲ್ಲಿರುವ ಬೃಹನ್ಮಠ (ಹಿರೇಮಠ)ದ ಪಟ್ಟಾಭಿಷೇಕವು ಇದೇ ತಾರಣನಾಮ ಸಂವತ್ಸರದ ಮಾಘ ಬ|| ೫ ಶುಕ್ರವಾರ ದಿವಸ ಅತ್ಯಂತ ವೈಭವದಿಂದ ನೆರವೇರಿತು ಈ ಮಠವು ಅತ್ಯಂತ ಪ್ರಾಚೀನ ಹಾಗು ಗೌರವವುಳ್ಳದ್ದಾಗಿರುವದು ಯೋಗ್ಯಮೂರ್ತಿಗಳಿಲ್ಲದ್ದರಿಂದ ಈವರೆಗೂ ದೇವರಿಲ್ಲದ ದೇಗುಲದಂತೆ ಅನಾಯಕವಾಗಿತ್ತು ಅದು ಈಗ ಮೂರ್ತಿಯನ್ನು ಹೊಂದಿದ್ದರಿಂದ ಅದಕ್ಕೆ ಬಂದ ಕಳೆಯು ಉತ್ಸವದಲ್ಲಿ ಭಾಗಿಯಾದವರಿಗೆ ಭಾಸವಾಗುತ್ತಿತ್ತು ಮೂರ್ತಿಯು ಚಿಕ್ಕದಾದರೂ ಗುರುತ್ವಕಳೆಯು ವರ್ಣನಾತೀತವಾಗಿರುವದು ಸದರಿ ಮಠದ ಶಿಷ್ಯರಾದ ಬೊಮ್ಮಾಪುರ ವೀರಾಪುರ ಪಾಟೀಲರೇ ಮೊದಲಾದವರು ಶ್ರೀ ಗುರು ಪಟ್ಟಾಧಿಕಾರವನ್ನು ತಾ|| ೨ ೨ ೪೫ನೆಯ ದಿವಸ ಶ್ರೀ|| ಷ|| ಬ್ರ|| ಪಟ್ಟಾಧ್ಯಕ್ಷರು ಹಿರೇಮಠ ಧಾರವಾಡ ಇವರ ಗುರುತ್ವದಲ್ಲಿಯೂ ಹಾಗೂ ಶ್ರೀ|| ಷ|| ಬ್ರ|| ತಪೋನಿಧಿ ಚರಪಟ್ಟಾಧ್ಯಕ್ಷರು ಹನ್ನೆರಡುಮಠ ಹುಬ್ಬಳ್ಳಿ, ಶ್ರೀ|| ಷ|| ಬ್ರ|| ಕಬ್ಬಿಣಕಂಥಿಮಠದ ಪಟ್ಟಾಧ್ಯಕ್ಷರು ರಟ್ಟಿಹಳ್ಳಿ, ಶ್ರೀ|| ಷ|| ಬ್ರ|| ಪಟ್ಟಾಧ್ಯಕ್ಷರು ಹಿರೇಮಠ ನೆಗಳೂರು ಮುಂತಾದ ಗುರುಗಳ ಸಾಕ್ಷಿತ್ವದಲ್ಲಿಯೂ ಹಾಗೂ ವೇ|| ಪಂ|| ಪರಮೇಶ್ವರಶಾಸ್ತ್ರಿಗಳು ಆರಾಧ್ಯಮಠ ಇವರ ವೈದಿಕತ್ವದಲ್ಲಿಯೂ ಅತ್ಯಂತ ವಿಜೃಂಭಣೆಯಿಂದ ನೆರವೇರಿಸಿದರು ಮಾರನೆ ದಿವಸ ಪ್ರಾತಃಕಾಲ ನೂತನ ಶ್ರೀಗಳವರಾದ ಶ್ರೀ|| ಷ|| ಬ್ರ|| ಶಿವಾನಂದರಾಜೇಂದ್ರಶಿವಾಚಾರ್ಯಸ್ವಾಮಿಗಳವರ ಆಂದೋಲಿಕೋತ್ಸವವು ೧೦ ಘಂಟೆಗೆ ಮಠದಿಂದ ಹೊರಟು ನಗರದ ಪ್ರಮುಖ ಬೀದಿಗಳಲ್ಲಿ ಭಕ್ತರ ಭಕ್ತಿಯನ್ನು ಸ್ವೀಕರಿಸುತ್ತ ಸಾಯಂಕಾಲ ನಾಲ್ಕು ಘಂಟೆಗೆ ಮಠಕ್ಕೆ ತಲ್ಪಿತು ಅನಂತರ ಸಭೆ ಗೂಡಿತು ಬಳಿಕ ರಂಭಾಪುರೀ ಜಗದ್ಗುರುಗಳಿಂದ ಕಳಿಸಲ್ಪಟ್ಟ ಶುಭಾಶೀರ್ವಾದ ಸಂದೇಶವನ್ನೂ ಬೆಂಗಳೂರು ಮಹಂತಿನಮಠಾಧೀಶರಿಂದ ಬಂದ ಸಂದೇಶವನ್ನೂ ಓದಲಾಯಿತು ತರುವಾಯ ಸರ್ವರೂ ಗುರುಕಾಣಿಕೆಯನ್ನು ಸಮರ್ಪಿಸಿದರು ಬಳಿಕ ನೆಗಳೂರ ಶ್ರೀಗಳವರ ಪ್ರಾಸ್ತಾವಿಕ ಭಾಷಣವಾಯಿತು ಅನಂತರ ಕ್ಯಾಲ್‌ಕೊಂಡ ಹಿರೇಮಠದ ವೇ|| ಅಡಿವಯ್ಯನವರು "ಗುರುವಿನ ಅವಶ್ಯಕತೆ" ಧಾರವಾಡ ವೇ|| ಹೊಸಮಠ ವೀರಭದ್ರಯ್ಯನವರು "ಗುರುಭಕ್ತಿ" ಹನ್ನೆರಡು ಮಠದ ಶ್ರೀಗಳವರು "ಗುರುಭಕ್ತಿಯಿಂದಾಗತಕ್ಕ ಪರಿಣಾಮ" ಈ ವಿಷಯವಾಗಿ ಸರ್ವರಿಗೂ ಬೋಧವಾಗುವಂತೆ ಭಾಷಣ ಮಾಡಿದರು. ಅನಂತರ ಮಹಾಮಂಗಳಾರತಿಯಾಗಿ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು ಈ ಮಹೋತ್ಸವ ಸಮಾರಂಭದಲ್ಲಿ ವೇ|| ಗುರುಪಾದಯ್ಯನವರು ಬೊಮ್ಮಾಪುರ ಹಿರೇಮಠ ಇವರು ತಮ್ಮ ಚಿ|| ಸೌ|| ವೀರಾಂಬೆಯನ್ನು ಕ್ಯಾಲ್‌ಕೊಂಡ ಹಿರೇಮಠದ ವೇ|| ಅಡಿವಯ್ಯನವರಿಗೆ ಕನ್ಯಾದಾನ ಮಾಡಿದರು ಈ ಮಹಾಕಾರ್ಯದಲ್ಲಿ ತನುಮನೋಧನಗಳಿಂದ ವಿಶೇಷ ಶ್ರಮವಹಿಸಿದ ಮ|| ರಾ|| ಶಿವನಗೌಡರು ಹಾಗೂ ಚನ್ನಬಸವನಗೌಡರು ಪಾಟೀಲರೇ ಮೊದಲಾದ ಭಕ್ತಮಂಡಲಿಯವರಿಗೂ ನೂತನ ಶ್ರೀಗಳವರಿಗೂ ಮತ್ತು ನೂತನದಂಪತಿಗಳಿಗೂ ಶ್ರೀ ಜಗದಾಚಾರ್ಯರು ಆಯುರಾರೋಗ್ಯಾದಿ ಸಕಲೈಶ್ವರ್ಯವನ್ನು ಅನುಗ್ರಹಿಸಲೆಂದು ಪ್ರಾರ್ಥಿಸುವೆನು

ಗುರುಲಿಂಗಶರ್ಮಾ ಸಿಗ್ಗಾವಿ

ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವ

ಫಾಲ್ಗುನ ಶುದ್ಧ ೧೫ (26—2—45) ಸೋಮವಾರ

ಶ್ರೀ ಕುಲ್ಯಪಾಕ ಸೋಮನಾಥಲಿಂಗದಿಂದ ಶ್ರೀಜಗದ್ಗುರು ರೇಣುಕಾಚಾರ್ಯರ ಅವತಾರ

ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ಫಾಲ್ಗುನ ಶುದ್ಧ ೧೫ **ಸೋಮವಾರ (ತಾ|| ೨೬-೨-೪೫)** ದಿವಸ ಭರತಖಂಡದಲ್ಲಿರುವ ಸಮಸ್ತ ವೀರಶೈವರು ಅತ್ಯಂತಭಕ್ತಿಯಿಂದ ನೆರವೇರಿಸಬೇಕು. ಶ್ರೀರೇಣುಕಾಚಾರ್ಯರು ಸಾಧಾರಣ ಗುರುಗಳಲ್ಲ! ಸಪ್ತಸಮುದ್ರಗಳನ್ನೇ ಒಂದು ಹನಿಯಂತೆ ಪಾನಮಾಡಿ ಲೋಕವಿಖ್ಯಾತರಾದ ಅಗಸ್ತ್ಯಮಹರ್ಷಿಗಳನ್ನುದ್ಧರಿಸಿದವರು. ಲೋಕಚಕ್ರವರ್ತಿಯಾದ ವಿಭೀಷಣನ ಇಷ್ಟಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧರಿಸಿ ಮೂರುಕೋಟಿ ಶಿವಲಿಂಗಗಳನ್ನು ಸ್ಥಾಪಿಸಿ ರಾವಣನನ್ನೂ ವಿಭೀಷಣನನ್ನೂ ಉದ್ಧರಿಸಿದವರು. ಗರ್ವಾಂಧನಾದ ಗೋರಕ್ಷನ ಗರ್ವವನ್ನು ತಮ್ಮ ಮಹಿಮಾತಿಶಯದಿಂದ ನಾಶಮಾಡಿ ಶಿವಸಿದ್ಧಾಂತೋಪದೇಶದ್ವಾರಾ ಅವನನ್ನು ಉದ್ಧರಿಸಿದವರು. ಲೋಕಕಂಟಕರಾಗಿದ್ದ ಯಕ್ಷದಂಪತಿಗಳನ್ನು ತಮ್ಮ ಫಾಲನೇತ್ರದಿಂದ ಸುಟ್ಟು ಬೂದಿಮಾಡಿ ಸಮಸ್ತ ಪ್ರಪಂಚಕ್ಕೆ ಕಲ್ಯಾಣವನ್ನುಂಟುಮಾಡಿದವರು. ನೀಲಗಲಚಕ್ರವರ್ತಿಯ ಭಕ್ತಿಯನ್ನು ಪರೀಕ್ಷಿಸುವುದಕ್ಕೋಸ್ಕರ ಕೋಟ್ಯನುಕೋಟಿ ಪ್ರಮಥಸ್ವರೂಪವನ್ನು ಧರಿಸಿ, ಅವನ ನೈಜವಾದ ಭಕ್ತಿಯನ್ನು ನಾನಾರೀತಿಯಿಂದ ಪರೀಕ್ಷಿಸಿ ಅಂತ್ಯದಲ್ಲಿ ಅವನಿಗೆ ಪ್ರಸನ್ನರಾಗಿ ಅವನನ್ನುದ್ಧರಿಸಿದವರು. ಕಾಂಚೀ ಕ್ಷೇತ್ರದಲ್ಲಿರುವ ವಿಷ್ಣುಮೂರ್ತಿಯ ಚಲಿಸುತ್ತಿದ್ದ ಮಸ್ತಕವನ್ನು ತಮ್ಮ ಮಹಿಮಾತಿಶಯದಿಂದ ಸ್ಥಿರಗೊಳಿಸಿ ಚೋಳಭೂಪಾಲನಿಗೆ ಗುರುಗಳಾದವರು. ಇವೇ ಮೊದಲಾದ ಅನಂತಾನಂತ ಲೀಲೆಗಳನ್ನು ಮಾಡಿ ಸಮಸ್ತಪ್ರಪಂಚವಂದ್ಯರಾದ ಈ ಜಗದ್ಗುರುಗಳವರ ಜಯಂತಿಯನ್ನು **ಸರ್ವರೂ ಅತಿಭಕ್ತಿಯಿಂದ ನೆರವೇರಿಸಿ ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಹಾರೈಸುತ್ತೇವೆ.**

ಮೈಸೂರು ಆಕಾಶವಾಣಿ (ರೇಡಿಯೋ) ಯಲ್ಲಿ

ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತೀನಿಮಿತ್ತವಾಗಿ

ಪಂ|| ಶ್ರೀಕಾಶೀನಾಥಶಾಸ್ತ್ರಿಗಳವರ ಭಾಷಣ

ತಾ|| ೨೬-೨-೧೯೪೫ನೆಯ ಸೋಮವಾರ ದಿವಸ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತಿಯಿರುವುದರಿಂದ ಆ ದಿವಸ ರಾತ್ರಿ ೯|| ಘಂಟೆಗೆ ಮೈಸೂರು ರೇಡಿಯೋ ಸ್ಟೇಷನ್ನಿನಲ್ಲಿ ಆ ಮಹಾತ್ಮರ ಪವಿತ್ರಚರಿತ್ರವನ್ನೊಳಗೊಂಡ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಭಾಷಣವು ಬ್ರಾಡ್‌ಕಾಸ್ಟ್ ಮಾಡಲ್ಪಡುವದು. ಭರತಖಂಡದಲ್ಲಿರುವ ಸರ್ವಗುರುಭಕ್ತರೂ ಆ ದಿವಸ ತಮ್ಮ ತಮ್ಮ ಪಟ್ಟಣಗಳಲ್ಲಿರುವ ರೇಡಿಯೋಗಳ ಮೂಲಕ ಜಗದಾಚಾರ್ಯರ ಪವಿತ್ರಚರಿತ್ರವನ್ನು ಕೇಳಿ ಧನ್ಯರಾಗಬೇಕು.

ಇದೇ ದಿವಸ ಸಾಯಂಕಾಲ ೭|| ಘಂಟೆಯಿಂದ ೮ ಘಂಟೆಯ ವರೆಗೆ ಸುಪ್ರಸಿದ್ಧ ಸಂಗೀತವಿದ್ವಾಂಸರಾದ ಶ್ರೀ ಕೊಟ್ಟೂರು ಬಸವಯ್ಯನವರಿಂದ ಜಗದಾಚಾರ್ಯರ ಕೀರ್ತನೆಗಳು ಮನೋಹರವಾಗಿ ಹಾಡಲ್ಪಡುವವು.

"ರೇಡಿಯೋ" ಇರತಕ್ಕ ಪ್ರತಿಯೊಂದು ನಗರದ ಗುರುಭಕ್ತರು ಜಗದಾಚಾರ್ಯರ ಜಯಂತೀನಿಮಿತ್ತವಾಗಿ ನೆರವೇರುವ ಪಂಡಿತರ ರೇಡಿಯೋಭಾಷಣದ ಮತ್ತು ಗಾಯನ ವಿಷಯವನ್ನು ಎಲ್ಲರಿಗೂ ತಿಳಿಯುವಂತೆ ಏರ್ಪಡಿಸಿ ಗುರುಕೃಪೆಗೆ ಪಾತ್ರರಾಗಬೇಕೆಂದಾಶಿಸುತ್ತೇವೆ.

ಕಾಶೀಪೀಠದ ಋಣ ಪರಿಹಾರ ಧನಸಂಗ್ರಹವಾಗುತ್ತ ನಡೆದಿದೆ

ನೂತನ ಜಗದ್ಗುರು ಪಟ್ಟಾಭಿಷೇಕಮಹೋತ್ಸವ ಸಮಯದಲ್ಲಿ ನಿರ್ಧಾರವಾದಂತೆ ಕೆಳಗೆ ಕಂಡ ಮಹನೀಯರು ತಮ್ಮ ವಾಗ್ದಾನವನ್ನು ಪೂರ್ತಿ ಮಾಡಿದ್ದಾರೆ. ಈಗ ಸಂಗ್ರಹವಾಗಿರುವ ಧನದ ವಿವರ ಹೀಗಿದೆ:—

೬೦೦೦ ಶ್ರೀ ರಂಭಾಪುರೀಜಗದ್ಗುರು ಮಹಾಸನ್ನಿಧಿಯವರು.

೬೦೦೦ ರಾ. ಬ. ಶ್ರೀ ಅಬ್ದುಲ್ ಪುರಕರ್ ನಾಗಪ್ಪನವರು ಸೊಲ್ಲಾಪುರ.

೬೦೦೦ ಶ್ರೀಮಂತ ಮಲ್ಲಿಕಾರ್ಜುನಪ್ಪನವರು ಗಂಭೀರೆ ಸೊಲ್ಲಾಪುರ.

೨೦೦೦ ಶ್ರೀ ಗಂದಿ ಚನ್ನಬಸವಪ್ಪನವರ ಧರ್ಮಪತ್ನಿ ರೇವಮ್ಮನವರು ಶ್ರೀ ಕ್ರಿಷ್ಟಪ್ಪನವರು ನಾರಾಯಣಪೇಟೆ.

೧೦೦೦ ಶ್ರೀಮಂತ ಗಂದಿ ಸಿದ್ಧಪ್ಪನವರು ನಾರಾಯಣಪೇಟೆ.

೧೨೦೦ ನವಲಗುಂದ ಹಿರೇಮಠದ ಶ್ರೀ ಪಟ್ಟಾಧ್ಯಕ್ಷರು.

೧೦೦೦ ಶ್ರೀಮಂತ ಅಪ್ಪಲ್ಲಿ ವೀರಭದ್ರಪ್ಪನವರು ಸೈದಾಪುರ.

ಈ ಹಣವೆಲ್ಲವೂ ಸೊಲ್ಲಾಪುರದಲ್ಲಿರುವ ಶ್ರೀಮಂತ ಗಂಭೀರೆ ಮಲ್ಲಿಕಾರ್ಜುನಪ್ಪನವರಲ್ಲಿ ಜಮೆಯಾಗಿದೆ. ಇವೆಲ್ಲವೂ ಬಡ್ಡಿಯಿಲ್ಲದ ಸಾಲವಾಗಿ ಕೊಡಲ್ಪಟ್ಟಿವೆ. ವ್ಯವಹಾರದಕ್ಷರೂ ಗುರುಪೀಠಾಭಿಮಾನಿಗಳೂ ಆದ ಶ್ರೀ ಗಂಭೀರೆಯವರು ಈ ಭಾರವನ್ನು ವಹಿಸಿಕೊಂಡು ಕೆಲಸ ನಡೆಯಿಸುತ್ತಿದ್ದಾರೆ. ಈಗಾಗಲೇ ಕಾಶೀಪೀಠದ ಋಣವನ್ನು ೪೫ ಸಾವಿರದಷ್ಟು ಬಗೆಹರಿಸಲಾಗಿದೆ. ಅಂದರೆ ಪೀಠದ ಹೆಸರಿಗೆ ಇರುವ ಡಿಕ್ರಿಗಳನ್ನು ಕಡಮೆ ಬೆಲೆಗೆ ತೆಗೆದುಕೊಂಡು, ಆಮೇಲೆ ಪೀಠದ ಆದಾಯದಿಂದಲೇ ಈ ಚಿಕ್ಕ ಸಾಲವನ್ನು ತೀರಿಸಬಹುದಾಗಿದೆ. ಯಾರ ಹಣಕ್ಕೂ ಎಷ್ಟೂ ತೊಂದರೆಯಿಲ್ಲ. ಒಂದೆರಡು ವರ್ಷಗಳಲ್ಲಿಯೇ ಕೊಟ್ಟವರ ಹಣವನ್ನು ಪುನಃ ಅವರಿಗೆ ಕೊಡಲಾಗುವುದು. ಅಥವಾ ಇನ್ನೂ ಶೀಘ್ರವಾಗಿಯೇ ದೊರೆಯಬಹುದು. ಹಿಂದೆ ವಾಗ್ದಾನಮಾಡಿದವರಲ್ಲಿ ಇನ್ನೂ ಕೆಲವರು ತಮ್ಮ ಹಣವನ್ನು ಕಳುಹಿಸಬೇಕಾಗಿದೆ. ಗುರುಪೀಠಾಭಿಮಾನಿಗಳಾದ ಶ್ರೀಮಂತರು ಒಂದು ಸಾವಿರಕ್ಕಿಂತಲೂ ಹೆಚ್ಚಾಗಿ ಬಡ್ಡಿಯಿಲ್ಲದೆ ಹಣವನ್ನು ಶ್ರೀಮಂತ ಮಲ್ಲಿಕಾರ್ಜುನಪ್ಪನವರು ಗಂಭೀರ ಮಂಗಳವಾರಪೇಠ ಸೊಲ್ಲಾಪುರ ಇವರ ಹೆಸರಿಗೆ ಕೂಡಲೇ ರವಾನಿಸಿ ಗುರುಕಾರ್ಯಕ್ಕೆ ಸಹಾಯ ಮಾಡಬೇಕು. ಈಗಾಗಲೇ ಅನೇಕ ದಾನಗಳು ಶ್ರೀ ಕಾಶೀಜಗದ್ಗುರು ಮಹಾಸನ್ನಿಧಿಗೆ ಬರುತ್ತಿವೆ. ಅವುಗಳ ವಿವರವನ್ನು ಮುಂದೆ ಪ್ರಕಟಿಸಲಾಗುವುದು.

ವೀರಭದ್ರದೇವರ ಜಾತ್ರೆ, ಹುಮನಾಬಾದ

ಪ್ರತಿವರ್ಷ ಪದ್ಧತಿಯಂತೆ ಈ ವರ್ಷವೂ ಸಹ ವೀರಭದ್ರದೇವರ ಜಾತ್ರೆಯು ವೈಭವದೊಡನೆ ನೆರವೇರಿತು. ಈ ದೇವರ ಉತ್ಸವದ ಕಾರ್ಯಗಳು ಒಟ್ಟು 21 ದಿವಸಗಳವರೆಗೆ ನೆರವೇರುವವು. ಮುಖ್ಯರಥೋತ್ಸವವು, ಮಾಘ ಶು||೧೨ ದಿವಸ ನೆರವೇರುವದು. ಈ ಜಾತ್ರೆಗೆ ಸುಮಾರು 20-25 ಸಹಸ್ರ ಜನರು ಕೂಡುತ್ತಿರುವರು. ದಯಾಳುಗಳಾದ ನಿಜಾಂ ಸರ್ಕಾರದವರು, ಶ್ರೀಸ್ವಾಮಿಯ ಮಹಿಮಾತಿಶಯವನ್ನು ತಿಳಿದು ಬಹುಕಾಲದಿಂದಲೂ ಸರಿಯಾದ ವ್ಯವಸ್ಥೆಯನ್ನಿಟ್ಟಿರುವರು. ಉತ್ಸವದ ಸಂಗಡ ಹಿರೇಮಠದ ಶ್ರೀಗಳು ಮತ್ತು ಸರಕಾರಿ ಅಧಿಕಾರಿಗಳು ಪೋಲೀಸರು, ಗ್ರಾಮಪ್ರಮುಖರು ಇವು ಸರಿಯಾದ ವ್ಯವಸ್ಥೆಯನ್ನು ಮಾಡುವರು. ಮ|| ರಾ|| ಭೀಮರಾವ ವಕೀಲರು, ಮ|| ರಾ|| ಮಡಿವಾಳಪ್ಪ ವಕೀಲರು, ದಾಮಶೆಟ್ಟೆಪ್ಪ ಮಾಳಶೆಟ್ಟಿ, ಗುರುಪಾದಪ್ಪ ಕಾರಂಜಿ, ಮಡಿವಾಳಪ್ಪಶೆಟ್ಟಿ, ಶರಣಪ್ಪಶೆಟ್ಟಿ, ಬಸವಣ್ಣಪ್ಪ ಅಂಗಡಿ ಮೊದಲಾದವರು ಬಹಳ ಶ್ರದ್ಧೆಯಿಂದ ಕಾರ್ಯಮಾಡಿದರು. ಈಗಿರುವ ತಹಸಿಲ್‌ದಾರ್ ಸಾಹೇಬರವರಾದ ಮ|| ಸೈಯದ್ ಅಹಮದ್ ಬಿ.ಎ., ಎಲ್‌ಎಲ್.ಬಿ., ಈ ಮಹನೀಯರು ಬಹಳ ದಯಾಳುಗಳಾಗಿದ್ದು ಜಾತ್ರೆಯ ವ್ಯವಸ್ಥೆಯನ್ನು ಬಹಳ ಸಮರ್ಪಕವಾಗಿ ಇಟ್ಟಿದ್ದರು. ಇವರಿಗೂ ಈ ಕಾರ್ಯದಲ್ಲಿ ಮುತುವರ್ಜಿಯನ್ನು ವಹಿಸಿದ್ದ ವೀರಶೈವ ಭಕ್ತಮಂಡಲಿಗೂ ಶ್ರೀವೀರಭದ್ರದೇವರು ಸಕಲಸಂಪತ್ತನ್ನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ.

ಸಿದ್ಧರಾಮಯ್ಯ ಬಂಗಿ

॥ ಓಂ ನಮೋ ಭಗವತೇ ಜಗದ್ಗುರು ರೇಣುಕಾಚಾರ್ಯಾಯ ॥

ಜೀಯಾಚ್ಛ್ರೀ ರೇಣುಕಾಚಾರ್ಯಃ ಶಿವಾಚಾರ್ಯಶಿಖಾಮಣಿಃ ।
ಯೋ ವೀರಶೈವ ಸಿದ್ಧಾಂತಂ ಸ್ಥಾಪಯಾಮಾಸ ಭೂತಲೇ ॥

ಶ್ರೀ ಮಹಾರಥೋತ್ಸವಾಹ್ವಾನ ಪತ್ರಿಕಾ

ಸ್ವಸ್ತಿ ಶ್ರೀಮನ್ನೃಪಶಾಲಿವಾಹನ ಶಕ ೧೮೬೬ನೇ ತಾರಣನಾಮ ಸಂವತ್ಸರದ ಫಾಲ್ಗುಣ ಶುದ್ಧ ೧೫ ಸೋಮವಾರ (ತಾ|| 26 2-1945) ಮಘಾ ನಕ್ಷತ್ರ ಶುಭಮುಹೂರ್ತದಲ್ಲಿ ಶ್ರೀ ಜಗದ್ಗುರು ರಂಭಾಪುರೀ ವೀರಸಿಂಹಾಸನ ಮಠದಲ್ಲಿ ಅನಾದಿಕಾಲದಿಂದಲೂ ಜರುಗುತ್ತ ಬಂದಂತೆ ಈ ಸಂವತ್ಸರದಲ್ಲಿಯೂ

ಶ್ರೀ ಮಹಾರಥೋತ್ಸವವು ನೆರವೇರುವುದು

ಇದಕ್ಕಂಗಭೂತಗಳಾದ ವೃಷಭೋತ್ಸವ, ಪುಷ್ಪೋತ್ಸವ ಆಂದೋಲಿಕೋತ್ಸವ, ಶಯನೋತ್ಸವ, ಕುಂಕುಮೋತ್ಸವ, ವಸಂತೋತ್ಸವ ಅವಭೃತಸ್ನಾನ, ಭದ್ರಾನದಿ ವಿಹಾರೋತ್ಸವ ಮೊದಲಾದ ನಿತ್ಯೋತ್ಸವಗಳು ಪದ್ಧತಿಯಂತೆ ಫಾಲ್ಗುಣ ಶುದ್ಧ ೭ರಿಂದ ಫಾಲ್ಗುಣ ಬಹುಳ ೬ರ ವರೆಗೆ ವಿಜೃಂಭಣೆಯಿಂದ ನಡೆಯಿಸಲ್ಪಡುವವು ಈ ವರ್ಷ ಜಗದ್ಗುರು ಮಹಾ ಸನ್ನಿಧಿಯವರ ಸವಾರಿಯು ಶ್ರೀ ಮಠದಲ್ಲಿಯೇ ಇರುತ್ತದೆ ಶ್ರೀ ಗುರುದೇವತಾ ಭಕ್ತಶಿಷ್ಯರೆಲ್ಲರೂ ಸರ್ವರೂ ಕಳತ್ರ ಪುತ್ರ ಮಿತ್ರಮಂಡಲಿಯೊಡನೆ ಬಂದು ಉತ್ಸವದ ಕಾಲಕ್ಕೆ [illegible] ಶ್ರೀ [illegible] ದರ್ಶನವನ್ನೂ, ಶ್ರೀ ಮಹಾಗುರು ಜಗದಾಚಾರ್ಯರ ಪವಿತ್ರಶ್ರೀಪಾದದರ್ಶನ [illegible] ವಾದಗಳನ್ನೂ ಪಡೆದು, ಶ್ರೀ [illegible] ನಡೆಯುತ್ತಿರುವ ಜೀರ್ಣೋದ್ಧಾರದ ಕಾರ್ಯಗಳನ್ನು ನೋಡಿ ಮಾನ್ಯರು ಅವಶ್ಯವಾಗಿ ಕಾಣಿಕೆ ಸಹಾಯವನ್ನು ಕೊಟ್ಟು ಧನ್ಯರಾಗತಕ್ಕದ್ದು ನಿರಂತರ ಗುರುಚರಣಾರವಿಂದಮಿಲಿಂದಾಯಮಾನ ಮಾನಸರಿಗೆ ವಿಶೇಷವಾಗಿ ಸೂಚಿಸಬೇಕೆನಿಸಿದೆ ?

ಶ್ರೀ ಜಗದ್ಗುರು ರಂಭಾಪುರೀಮಠಾ ಸಂಸ್ಥಾನದ
ಏಜೆಂಟ್

ಶ್ರೀ ಜಗದ್ಗುರು ಪಂಡಿತಾರಾಧ್ಯ ವಿಶ್ವಾರಾಧ್ಯ ಜಯಂತೀಮಹೋತ್ಸವಗಳು
ಬೆಂಗಳೂರು ಸಿಟಿ

ವೀರಶೈವ ಮಹಾಮತಸ್ಥಾಪನಾಚಾರ್ಯರಾದ ಶ್ರೀ ಜಗದ್ಗುರು ಪಂಡಿತಾರಾಧ್ಯ ಮತ್ತು ವಿಶ್ವಾರಾಧ್ಯರ ಜಯಂತೀಮಹೋತ್ಸವವು ಪ್ರತಿವರ್ಷದಂತೆ ಮಹಾಶಿವರಾತ್ರಿ ಶುಭದಿವಸ ಬೆಂಗಳೂರು ಸಿಟಿ ಚಿಕ್ಕಪೇಟೆಯಲ್ಲಿರುವ ಶ್ರೀ ಮಹಾಂತಿನ ಮಠದಲ್ಲಿ ಅತಿ ವೈಭವದಿಂದಾಚರಿಸಲ್ಪಟ್ಟಿತು ಆ ದಿನ ಪ್ರಾತಃಕಾಲ ೬ ಘಂಟೆಯಿಂದ ೧೨ರ ವರೆಗೆ ಶ್ರೀ ಜಗದ್ಗುರು ಪಂಡಿತಾರಾಧ್ಯ ವಿಶ್ವಾರಾಧ್ಯರವರ ಲಿಂಗೋದ್ಭವ ರಜತಮೂರ್ತಿಗಳಿಗೆ ಏಕಾದಶವಾರ ರುದ್ರಾಭಿಷೇಕ ಸಹಸ್ರ ಬಿಲ್ವಾರ್ಚನಾದಿಗಳು ಶ್ರೀ ಜಗದ್ಗುರು ಪಂಚಾಚಾರ್ಯ ಕೃಪಾಪೋಷಿತ ಸಂಸ್ಕೃತ ಮತ್ತು ವೇದ ಪಾಠಶಾಲಾ ವಿದ್ಯಾರ್ಥಿಗಳಿಂದ ವಿಧ್ಯುಕ್ತವಾಗಿ ನೆರವೇರಿಸಲ್ಪಟ್ಟವು. ರಾತ್ರಿ ಪೂಜಾದಿಗಳು ನೆರವೇರಿದ ಬಳಿಕ ಶ್ರೀ ಜಗದಾಚಾರ್ಯರ ಲಿಂಗೋದ್ಭವ ರಜತಮೂರ್ತಿಯ ಪುಷ್ಪರಥೋತ್ಸವವು ರಾತ್ರಿ ೯ ಘಂಟೆಗೆ ಶ್ರೀ ಮಹಾಂತಿನ ಮಠದಿಂದ ಹೊರಟು ಸಮಸ್ತ ರಾಜಬೀದಿಗಳಲ್ಲಿಯೂ ಸಂಚರಿಸಿ ಪ್ರಾತಃಕಾಲ ೬ ಘಂಟೆಗೆ ಶ್ರೀ ಮಹಾಂತಿನ ಮಠಕ್ಕೆ ತಲ್ಪಿತು ಬೆಂಗಳೂರು ನಗರ ನಿವಾಸಿಗಳು ರಾಜಬೀದಿಗಳಲ್ಲಿ ಜಗದಾಚಾರ್ಯರಿಗೆ ಫಲಪುಷ್ಪಾದಿಗಳನ್ನು ಸಮರ್ಪಿಸಿ ಜಗದಾಚಾರ್ಯರ ಕೃಪೆಗೆ ಪಾತ್ರರಾಗುತ್ತಿದ್ದರು. ಈ ಮಹೋತ್ಸವಕ್ಕೆ ಪುರಪ್ರಮುಖರೆಲ್ಲರೂ ಬಂದಿದ್ದರು ಉತ್ಸವವು ಮಠಕ್ಕೆ ತಲ್ಪಿದ ಮೇಲೆ ಮಹಾಮಂಗಳಾರತಿಯಾಗಿ ಜಗದಾಚಾರ್ಯರ ಜಯಘೋಷದೊಡನೆ ಕಾರ್ಯವು ಸಮಾಪ್ತವಾಯಿತು

ಓರ್ವ ಗುರುಭಕ್ತ

ಕುಂದಗೋಳ

ಪ್ರತಿವರ್ಷದ ಪದ್ಧತಿಯಂತೆ ಈಸಲವೂ ಸಹ ಇಲ್ಲಿಯ ಪಂಚಗೃಹ ಹಿರೇಮಠದಲ್ಲಿ ಶ್ರೀ|| ಷ|| ಬ್ರ|| ಗುರುಪಾದ ಶಿವಾಚಾರ್ಯಸ್ವಾಮಿಗಳವರ ನೇತೃತ್ವದಲ್ಲಿ ಜಯಂತೀ ಮಹೋತ್ಸವವು ಬಹು ವೈಭವದಿಂದ ಶ್ರೀ ಶಿವರಾತ್ರಿಯ ದಿವಸ ಆಚರಿಸಲ್ಪಟ್ಟಿತು ಸಾಯಂಕಾಲ ೭ ಘಂಟೆಗೆ ಸರಿಯಾಗಿ ಶ್ರೀ ಶಿತಿಕಂಠೇಶ್ವರಮೂರ್ತಿಗೆ ರುದ್ರಾಭಿಷೇಕವೂ ಆಚಾರ್ಯರ ಭಾವಪಟಕ್ಕೆ ಮಹಾಮಂಗಳಾರತಿಯೂ ನೆರವೇರಿದಮೇಲೆ ಆಚಾರ್ಯಚಿತ್ರಾಲಂಕೃತ ಪಲ್ಲಕ್ಕಿಯ ಉತ್ಸವವು ಗ್ರಾಮದಲ್ಲಿ ಮಹಾವೈಭವದಿಂದ ನೆರವೇರಿತು ಹಿರೇಕೆರೂರು ಮೊದಲಾದ ಗ್ರಾಮಗಳ ಜನರೂ ಗ್ರಾಮದ ಪ್ರಮುಖರೂ ಸೇರಿದ್ದರಿಂದ ಶೋಭೆಯುಂಟಾಗಿದ್ದಿತು. ರಾತ್ರಿ ೧೦|| ಘಂಟೆಗೆ ಸಭೆ ಸೇರಿತು ಆಗ್ಗೆ ಶ್ರೀ ಮೊರಬದ ಷ|| ಬ್ರ|| ಗಂಗಾಧರ ಶಿವಾಚಾರ್ಯರು ಶಿವರಾತ್ರಿ, ಜಯಂತಿ, ಈಗಿನ ಜನಜೀವನ ಮೊದಲಾದ ವಿಷಯಗಳಮೇಲೆ ೧|| ಘಂಟೆಯವರೆಗೆ ಎಲ್ಲರಿಗೂ ಮನದಟ್ಟಾಗುವಂತೆ ಭಾಷಣ ಮಾಡಿದರು ಆಮೇಲೆ ಮಂಗಳಾರತಿಯಾಗಿ ಸಭೆಯು ವಿಸರ್ಜಿಸಲ್ಪಟ್ಟಿತು ಮರುದಿನ ಮಹಾಗಣಾರಾಧನೆಯು ಜರುಗಿತು ಇದೇ ರೀತಿಯಾಗಿ ಪ್ರತಿಯೊಬ್ಬ ಮಠಾಧಿಕಾರಿಗಳೂ ತಮ್ಮ ತಮ್ಮ ಗ್ರಾಮಗಳಲ್ಲಿ ಶ್ರೀ ಭಗವತ್ಪಾದರ ಜಯಂತಿಗಳನ್ನಾಚರಿಸುತ್ತ ಭಕ್ತಮಂಡಳಿಯನ್ನು ಸನ್ಮಾರ್ಗಕ್ಕೆ ತರಲೆಂದು ಶ್ರೀ ಜಗನ್ನಿಯಾಮಕನನ್ನು ಏಕಭಾವದಿಂದ ಭಜಿಸುವ

ಓರ್ವ ಗುರುಭಕ್ತ

ವಿವಾಹಸಮಾರಂಭ ರಾಣಿಬೆನ್ನೂರು

ಮೊದಲೇ ಗೊತ್ತುಪಡಿಸಿದಂತೆ ಮಾಘ ಬ|| ೫ (ತಾರೀಖು ೨ ೨-೧೯೪೫) ದಿವಸ ಬಂಕಾಪುರ ಗಚ್ಚಿನ ಮಠದ ಬಸವರಾಜ ಬಿ ಇ ಐ ಆರ್ ಎಸ್ ಇ ಇವರ ವಿವಾಹಸಮಾರಂಭವು ರಾಣಿಬೆನ್ನೂರ ಮುನಿಸಿಪಾಲಿಟಿಯ ಚೀಫ್ ಆಫೀಸರರಾದ ವೇ|| ಬಸವಲಿಂಗಯ್ಯನವರು ಮಂಗಳೂರು ಅರಳೆಲೆಮಠ, ಬಿ ಎ, ಇವರ ಪುತ್ರಿ ಚಿ|| ಸೌ|| ಅನ್ನಪೂರ್ಣಾದೇವಿಯೊಡನೆ ರಾಣಿಬೆನ್ನೂರಿನಲ್ಲಿ ಬಹು ವಿಜೃಂಭಣೆಯಿಂದ ಜರುಗಿತು ಬಸವರಾಜರು ಮುಂಬಯಿ ವಿಶ್ವವಿದ್ಯಾಲಯದ ಬಿ ಇ, ಪರೀಕ್ಷೆಯ (Electrical ಮತ್ತು Mechanical ಭಾಗಗಳಲ್ಲಿ) ೧ನೆಯ ವರ್ಗದಲ್ಲಿ ಉತ್ತೀರ್ಣರಾಗಿ ಅನಂತರ ಅವರು ಅಖಿಲ ಭಾರತದ ಎಂಜಿನೀಯರರ ಕಾಂಪಿಟೇಟಿವ್ ಪರೀಕ್ಷೆಯಲ್ಲಿ ಮೇಲ್ತರಗತಿಯಲ್ಲಿ ತೇರ್ಗಡೆಯಾದುದರಿಂದ ಇಂಡಿಯಾ ರೇಲ್ವೆ ಬೋರ್ಡಿನವರು ಇವರನ್ನು ರೇಲ್ವೆ ಎಂಜಿನೀಯರರ ಉನ್ನತಾಧಿಕಾರದ ಮೇಲೆ ನೇಮಿಸಿದ್ದಾರೆ. ಈಗ ಇವರು ಮದ್ರಾಸಿನಲ್ಲಿ ಅಸಿಸ್ಟೆಂಟ್ ಕಂಟ್ರೋಲರ್ ಆಫ್ ಸ್ಟೋರ್ಸ್ ಅಧಿಕಾರದಲ್ಲಿದ್ದಾರೆ ಇಂಥ ದೊಡ್ಡ ಅಧಿಕಾರಕ್ಕೆ ಈವರೆಗೆ ಕನ್ನಡಿಗರಾರೂ ಬಂದಿದ್ದಿಲ್ಲ. ಈಗ ಇವರು ನೇಮಕವಾಗಿರುವುದು ಕರ್ನಾಟಕ ದೇಶಕ್ಕೂ ವೀರಶೈವ ಸಮಾಜಕ್ಕೂ ಭೂಷಣವೆಂದು ಅತ್ಯಾನಂದದಿಂದ ಹೇಳಬೇಕಾಗಿದೆ. ಅಸ್ತು! ವಿವಾಹಕ್ಕೆ ಸಂಬಂಧಪಟ್ಟ ವೈದಿಕ ಕಾರ್ಯಗಳು ಮಂಗಳೂರು-ಅರಳೆಲೆಮಠದ ಪಟ್ಟಾಧ್ಯಕ್ಷರಾದ ಶ್ರೀ|| ಷ|| ಬ್ರ|| ಷಡಕ್ಷರಶಿವಾಚಾರ್ಯಸ್ವಾಮಿಗಳವರ ಸನ್ನಿಧಿಯಲ್ಲಿ ರಾಣಿಬೆನ್ನೂರಿನ ವೇ|| ದುಗ್ಗತ್ತಿಮಠದ ಬಸವಲಿಂಗಶಾಸ್ತ್ರಿಗಳಿಂದಲೂ ಹಾಗೂ ವೇ|| ಷಡಕ್ಷರಿಮಠದ ಬಸವಣ್ಣಯ್ಯನವರಿಂದಲೂ ವಿಧ್ಯುಕ್ತವಾಗಿ ನೆರವೇರಿಸಲ್ಪಟ್ಟವು. ವಿವಾಹಕ್ಕೆ ಪೂರ್ವದಲ್ಲಿ ಗುರುವಾರ ತಾ|| ೧-೨-೧೯೪೫ ನೇ ದಿವಸ ವೇ|| ಅರಳೆಲೆಮಠದ ಬಸವಲಿಂಗಯ್ಯನವರ (ಚೀಫ್ ಆಫೀಸರರ) ಬಂಧುಗಳ ಮಕ್ಕಳು ಹಾಗೂ ಇತರ ಮಾಹೇಶ್ವರ ವಟುಗಳು ಒಟ್ಟು ೧೧೦ ಜನ ವಟುಗಳ ಮಾಹೇಶ್ವರ ದೀಕ್ಷಾಸಂಸ್ಕಾರವು ವೈದಿಕ ಪದ್ಧತಿಯಂತೆ ಮೇಲ್ಕಂಡ ಶ್ರೀ|| ಪಟ್ಟಾಧ್ಯಕ್ಷರವರಿಂದಲೇ ನೆರವೇರಿತು ಶುಕ್ರವಾರ ಮಾಂಗಲ್ಯಧಾರಣ ಸಮಯಕ್ಕೆ ರಾಣಿಬೆನ್ನೂರು ಮತ್ತು ಇತರ ಗ್ರಾಮಗಳ ಪ್ರಮುಖರೂ, ಸರಕಾರಿ ಹಾಗೂ ಮುನಸಿಪಾಲಿಟಿ ಮೊದಲಾದ ಸಂಸ್ಥೆಗಳ ಅಧಿಕಾರಿಗಳೂ ಮತ್ತು ವರ ಹಾಗೂ ವಧು ಪಕ್ಷದ ಆಪ್ತ ಬಂಧುಗಳೂ ವಿಶೇಷವಾಗಿ ಆಗಮಿಸಿದ್ದುದರಿಂದ ವಿವಾಹಕ್ಕೆ ಘನತರವಾದ ಶೋಭೆಯುಂಟಾಗಿತ್ತು. ರಂಭಾಪುರೀ ಮತ್ತು ಕಾಶೀ ಪೀಠಾಧೀಶ್ವರ ಶ್ರೀ ಜಗದ್ಗುರು ಮಹಾಸನ್ನಿಧಿಯವರಿಂದ ಆಶೀರ್ವಾದ ಸಂದೇಶಗಳೂ ನೂತನಾಂಬರಾದಿಗಳೂ ದಯಪಾಲಿಸಲ್ಪಟ್ಟಿದ್ದವು. ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು, ಮೈಸೂರು ಹೈಕೋರ್ಟಿನ ರಿ|| ಚೀಫ್ ಜಸ್ಟೀಸ್ ದಿವಾನ್‌ಬಹದ್ದೂರ್ ಪಿ. ಮಹಾದೇವಯ್ಯನವರು, ಧಾರವಾಡ ಜಿಲ್ಲೆಯ ನಿವೃತ್ತ ಕಲೆಕ್ಟರರಾದ ದಿವಾನ್ ಬಹದ್ದೂರ್. ಆರ್ ಎಸ್. ಹಿರೇಮಠ ಸಾಹೇಬರು, ಇತರ ಮಾನ್ಯ ಮಹನೀಯರಿಂದ ನೂತನ ವಧೂವರರಿಗೆ ಮಂಗಲವನ್ನು ಕೋರಿ ಅನೇಕ ಶುಭ ಸಂದೇಶಗಳೂ, ತಂತಿಗಳೂ ಬಂದಿದ್ದವು. ಅವುಗಳನ್ನು ಹಾವೇರಿಯ ಸುಪ್ರಸಿದ್ಧ ವಕೀಲರಾದ ವೇ|| ಶಿವಮೂರ್ತಿಸ್ವಾಮಿ ಹಿರೇಮಠ, ಬಿ. ಎ ಎಲ್. ಎಲ್. ಬಿ ಇವರು ಓದಿ ಹೇಳಿ ಗೃಹಸ್ಥಾಶ್ರಮ ಧರ್ಮವನ್ನು ಕುರಿತು ಬೋಧಪ್ರದವಾದ ಭಾಷಣವನ್ನು ಮಾಡಿದರು ಅನಂತರ ಹಾವೇರಿಯ ಶ್ರೀ|| ಕವಲಿ ಚನ್ನಬಸವಪ್ಪನವರಿಂದ ವಿರಚಿತವಾದ "ಮದುಮಕ್ಕಳಿಗೆ ಮುಡಿಸಿದ ಮಣಿಮಾಲೆ" ಎಂಬ ಪದ್ಯಗಳನ್ನು ರಾಣಿಬೆನ್ನೂರಿನ ಪ್ರಸಿದ್ಧ ಸಂಗೀತ ವಿದ್ವಾನ್ ವೇ|| ಷಡಕ್ಷರಿ ಮಠದ ಸದಾಶಿವಯ್ಯನವರು ತಮ್ಮ ಕರ್ನಾಟಕ ಸಂಗೀತ ಸಮಾಜದವರೊಡನೆ ಇಂಪಾದ ಪಕ್ಕವಾದ್ಯಗಳೊಂದಿಗೆ ಬಹು ಮನೋಹರವಾಗಿ ಹಾಡಿ ಸರ್ವರಿಗೂ ಪರಮಾನಂದವನ್ನುಂಟುಮಾಡಿದರು ವಧೂವರರಿಗೆ ವಿವಾಹ ಸಮಯದಲ್ಲಿ ಬೆಳ್ಳಿಯಪಾತ್ರೆಗಳೂ, ಜರತಾರಿ ವಸ್ತ್ರಾದಿಗಳೂ ನಗನಾಣ್ಯಗಳೂ ಆಹೇರ ರೂಪವಾಗಿ ಬಹುಜನರಿಂದ ಪ್ರೀತಿಪೂರ್ವಕವಾಗಿ ಅರ್ಪಿಸಲ್ಪಟ್ಟವು ಈ ನೂತನ ದಂಪತಿಗಳಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ಆಯುರಾರೋಗ್ಯ ಪುತ್ರಪೌತ್ರಾದಿ ಸಕಲಸಂಪತ್ಸಮೃದ್ಧಿಯನ್ನು ದಯಪಾಲಿಸಿ ಅವರ ಜೀವನವು ಸುಖಮಯವಾಗಿ ನಡೆಯುವಂತೆ ಅನುಗ್ರಹಿಸಲೆಂದು ಪ್ರಾರ್ಥಿಸುವ

ಓರ್ವ ಉತ್ಸವಭಾಗಿ
ರಾಣಿಬೆನ್ನೂರು

ಮಾಹೇಶ್ವರದೀಕ್ಷಾ ಮತ್ತು ವಿವಾಹ ಮಹೋತ್ಸವ ಶಿಡಿಗಿನಮೋಳೆ

ಬಳ್ಳಾರಿ ತಾ|| ಶಿಡಿಗಿನಮೋಳೆ ಗ್ರಾಮದಲ್ಲಿರುವ ವೇ|| ಕುರುಗೋಡು ಮೇಲುಮಠದ ಬಸವಲಿಂಗಯ್ಯನವರ ಮಠದಲ್ಲಿ ಮಾಘ ಬ|| ೫ ಶುಕ್ರವಾರ ವೀರಮಾಹೇಶ್ವರ ದೀಕ್ಷೆಯೂ ಅನಂತರ ವಿವಾಹಮಹೋತ್ಸವವೂ ಕಾಮಲಾಪುರ ಹಾಳು ಶ್ರೀಚರಪಟ್ಟಾಧ್ಯಕ್ಷರ ಅಧ್ಯಕ್ಷತೆಯಲ್ಲಿಯೂ ಹಂದಿಹಾಳುಮಠದ ವೇ|| ಶಿವಲಿಂಗಶರ್ಮರ ಪೌರೋಹಿತ್ಯದಲ್ಲಿಯೂ ವಿಶೇಷ ಸಂಭ್ರಮದೊಡನೆ ನೆರವೇರಿದವು. ಆ ಸಮಯದಲ್ಲಿ ಮೇಲುಮಠದ ವೇ|| ಬಸವಲಿಂಗಯ್ಯನವರ ಪುತ್ರ ಚಿ|| ಮಲ್ಲಿಕಾರ್ಜುನಸ್ವಾಮಿ ಮೆಟ್ರಿಯಲ್ಲಿರುವ ಹಂದಿಹಾಳುಮಠದ ವೇ|| ಮಹಾದೇವಯ್ಯನವರ ಪುತ್ರ ಚಿ|| ಮರುಳಾರಾಧ್ಯ, ಎತ್ತಿನಬೂದಿಹಾಳು ಸಬ್ಬೆಮಠದ ಶಂಕರಯ್ಯನವರ ಪುತ್ರರಾದ ಚಿ|| ಚನ್ನವೀರಯ್ಯ ಮತ್ತು ತಿಪ್ಪೆ ರುದ್ರಯ್ಯ ಇವರೆಲ್ಲರಿಗೂ ಮಾಹೇಶ್ವರದೀಕ್ಷೆಯು ಕೊಡಲ್ಪಟ್ಟಿತು. ಇದೇ ಸಮಯದಲ್ಲಿ ಮೇಲುಮಠದ ಬಸವಲಿಂಗಯ್ಯನವರ ಪುತ್ರಿ ಚಿ|| ಸೌ|| ಅನ್ನಪೂರ್ಣಮ್ಮನಿಗೂ ವೇ|| ಪಂ|| ಮು|| ಕೆ[illegible] ಗೋಟಯ್ಯನವರ ಪುತ್ರ ಚಿ|| ಓಂಕಾರಯ್ಯನಿಗೂ ವಿವಾಹ ಮಹೋತ್ಸವವು ವೈಭವದಿಂದ ನೆರವೇರಿತು ಜಗದಾಚಾರ್ಯರು ವಟುಗಳಿಗೂ ನೂತನ ವಧೂವರರಿಗೂ ಮಂಗಲಪರಂಪರೆಯನ್ನನುಗ್ರಹಿಸಲೆಂದು ಪ್ರಾರ್ಥಿಸುವ

ಬಿ. ಬಸವಲಿಂಗನಗೌ[illegible]

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರಶರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರಪ್ರಿಯಾಮುಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ. ೪ ಆಣೆ. ಪರಸ್ಥಳದವರಿಗೆ ೩ ರೂ. ವಿ ಪಿ ಖರ್ಚು ಸೇರಿ ೩ ರೂ. ೪ ಆಣೆ.

ಸಂಪುಟ ೧೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೬ನೇ ಫೆಬ್ರವರಿ ೧೯೪೫ [ಸಂಚಿಕೆ ೪೪

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವ, ಬೆಂಗಳೂರು

ಯಾವ ಜಗದ್ಗುರುವು ತ್ರೇತಾಯುಗದ ಸದ್ಯೋಜಾತ ಮುಖದಿಂ ಪ್ರಾವಿರ್ಭವಿಸಿ, ಭೂಮಂಡಲದಲ್ಲಿ ರಾರಾಜಿಸುವ ಶ್ರೀಮತ್ಕೊಲ್ಲಿಪಾಕಕ್ಷೇತ್ರ ವಿರಾಜಮಾನ ಶ್ರೀಸೋಮನಾಥಲಿಂಗದಿಂದವತರಿಸಿ ಪರಮಪವಿತ್ರವಾದ ವೀರಶೈವ ಮತವನ್ನು ಸ್ಥಾಪಿಸಿದನೋ, ಯಾವ ಜಗದಾಚಾರ್ಯನು ಸಪ್ತಸಮುದ್ರಗಳನ್ನೇ ಒಂದು ಹನಿಯಂತೆ ಪಾನಮಾಡಿ ಲೋಕವಿಖ್ಯಾತನಾದ ಅಗಸ್ತ್ಯಮಹರ್ಷಿಗೆ ಶಿವಸಿದ್ಧಾಂತೋಪದೇಶವನ್ನು ಮಾಡಿ ಉದ್ಧರಿಸಿದನೋ, ಯಾವ ಮಹಿಮಾಶಾಲಿಯು ಲೋಕಚಕ್ರವರ್ತಿಯಾದ ವಿಭೀಷಣನ ಇಷ್ಟಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧರಿಸಿ ಮೂರುಕೋಟಿ ಶಿವಲಿಂಗಗಳನ್ನು ಸ್ಥಾಪಿಸಿ ರಾವಣನನ್ನೂ ವಿಭೀಷಣನನ್ನೂ ಉದ್ಧರಿಸಿದನೋ, ಯಾವ ಮಹಾತ್ಮನು ತನ್ನ ಮಹಿಮೆಯ ಪ್ರಭಾವದಿಂದ, ಗರ್ವಾಂಧನಾದ ಗೋರಕ್ಷನ ಗರ್ವವನ್ನು ನಾಶಮಾಡಿ ಶಿವತತ್ತ್ವೋಪದೇಶದ್ವಾರ ಉದ್ಧರಿಸಿದನೋ, ಯಾವ ಆಚಾರ್ಯಪುಂಗವನು ಲೋಕಕಂಟಕರಾಗಿದ್ದ ಯಕ್ಷ ದಂಪತಿಗಳನ್ನು ಫಾಲನೇತ್ರದಿಂದ ಸುಟ್ಟು ಬೂದಿಮಾಡಿ ಸಮಸ್ತ ಪ್ರಪಂಚಕ್ಕೆ ಕಲ್ಯಾಣವನ್ನುಂಟುಮಾಡಿದನೋ, ಯಾವ ಜಂಗಮಸಾರ್ವಭೌಮನು ನೀಲಗಲ ಚಕ್ರವರ್ತಿಯ ಭಕ್ತಿಯನ್ನು ಪರೀಕ್ಷಿಸುವದಕ್ಕೋಸ್ಕರ ಕೋಟ್ಯನುಕೋಟಿ ಶ್ರಮಣರೂಪವನ್ನು ಧರಿಸಿ ಅವನ ನೈಜವಾದ ಭಕ್ತಿಯನ್ನು ನಾನಾರೀತಿಯಿಂದ ಪರೀಕ್ಷಿಸಿ ಅವನನ್ನುದ್ಧರಿಸಿದನೋ, ಯಾವ ಗುರುಸಾರ್ವಭೌಮನು ಅದ್ವೈತಮತಸ್ಥಾಪನಾಚಾರ್ಯರಾದ ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನನುಗ್ರಹಿಸಿದನೋ, ಯಾವ ಗುರು ಚಕ್ರೇಶ್ವರನು ಕಾಂಚೀ ಕ್ಷೇತ್ರದಲ್ಲಿರುವ ವರದರಾಜಸ್ವಾಮಿಯು ಚಲಿಸುತ್ತಿದ್ದ ಮಸ್ತಕವನ್ನು ತನ್ನ ಮಹಿಮಾತಿಶಯದಿಂದ ಸ್ಥಿರಗೊಳಿಸಿ ಚೋಳಭೂಪಾಲನಿಗೆ ಗುರುವಾದನೋ, ಇವೇ ಮೊದಲಾದ ಅನಂತಾನಂತ ಅದ್ಭುತ ಲೀಲೆಗಳನ್ನು ಮಾಡಿ ಯಾವ ಮಹಾತ್ಮನು ಜಗದ್ವಂದ್ಯನಾದನೋ, ಅಂತಹ ಜಗದ್ಗುರುವಿನ ಜಯಂತೀ ಮಹೋತ್ಸವವನ್ನು ಆಚರಿಸುವುದು ಪ್ರತಿಯೊಬ್ಬ ವೀರಶೈವನ ಆದ್ಯ ಕರ್ತವ್ಯವಾಗಿರುವುದರಿಂದ ಪದ್ಧತಿಪ್ರಕಾರ ಇದೇ ತಾರಣನಾಮ ಸಂವತ್ಸರದ ಫಾಲ್ಗುನ ಶುದ್ಧ ಪೂರ್ಣಿಮಾ ಸೋಮವಾರ (ತಾ|| 26—2—45) ದಿವಸ ಈ ಕೆಳಗೆ ನಮೂದಿಸಿರುವ ಕಾರ್ಯಕ್ರಮದ ಪ್ರಕಾರ ಬೆಂಗಳೂರು ನಗರದಲ್ಲಿ ನಡೆಯಿಸಲು ನಿರ್ಧರಿಸಿರುತ್ತಾರೆ.

ಕಾರ್ಯಕ್ರಮ

ತಾ|| 26—2—45 ಸೋಮವಾರ ಪ್ರಾತಃಕಾಲ ೬ ಗಂಟೆಯಿಂದ ಶ್ರೀಮದುಜ್ಜಯಿನಿಮಠದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರ ಲಿಂಗೋದ್ಭವಮೂರ್ತಿಗೆ ಏಕಾದಶವಾರ ರುದ್ರಾಭಿಷೇಕ ಸಹಸ್ರಬಿಲ್ವಾರ್ಚನೆ.

ಮಧ್ಯಾಹ್ನ ೧೨ ಘಂಟೆಗೆ ಭಕ್ತಮಾಹೇಶ್ವರರ ಸಮಾರಾಧನೆ.

ಸಾಯಂಕಾಲ ೬ ಘಂಟೆಗೆ; ರಾಜಧರ್ಮಪ್ರವೀಣ ದಿವಾನ್ ಬಹದ್ದೂರ್ ರಿಟೈರ್ಡ್ ಚೀಫ್ ಜಸ್ಟಿಸ್ ಪಿ ಮಹಾದೇವಯ್ಯನವರ ಅಧ್ಯಕ್ಷತೆಯಲ್ಲಿ.

(೧) ವಿದ್ಯಾರ್ಥಿಗಳಿಂದ ಸ್ತೋತ್ರ ಮತ್ತು ವೇದಘೋಷ.

(೨) ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತೀ ಫಂಡಿನ ವಾರ್ಷಿಕ ವರದಿಯನ್ನೋದುವುದು.

(೩) ಶ್ರೀರೇಣುಕಾದಿ ಪಂಚಾಚಾರ್ಯ ಧರ್ಮಗ್ರಂಥ ಭಂಡಾರದ ಮತ್ತು ಶ್ರೀಜಗದ್ಗುರು ರೇಣುಕಾದಿ ಪಂಚಾಚಾರ್ಯ ಕೃಪಾಪೋಷಿತ ಪಾಠಶಾಲಾ ಫ್ರೀ ಬೋರ್ಡಿಂಗು ವರದಿಯನ್ನೋದುವುದು.

(೪) ಮೈಸೂರು ರೇಡಿಯೋದಲ್ಲಿ ಶ್ರೀಮಾನ್ ಕೊಟ್ಟೂರು ಬಸವಯ್ಯನವರಿಂದ ಜಗದಾಚಾರ್ಯರ ಕೀರ್ತನೆಗಳು.

(೫) ಶ್ರೀ|| ಷ|| ಬ್ರ|| ಶ|| ಗಂಗಾಧರಶಿವಾಚಾರ್ಯಸ್ವಾಮಿಗಳವರಿಂದ 'ಧರ್ಮದ ದೃಷ್ಟಿ' ಎಂಬ ವಿಷಯದಲ್ಲಿ ಭಾಷಣ.

(೬) ಮೈಸೂರು ರೇಡಿಯೋದಲ್ಲಿ ವೇ|| ಪಂ|| ಶ್ರೀಕಾಶೀನಾಥ ಶಾಸ್ತ್ರಿಗಳವರಿಂದ ಶ್ರೀಜಗದ್ಗುರು ರೇಣುಕಾಚಾರ್ಯರ ಮಹಿಮೆಯನ್ನು ಕುರಿತು ಭಾಷಣ.

(೭) ಅಧ್ಯಕ್ಷರ ಭಾಷಣ.

ಸಾಯಂಕಾಲ ೧೦ ಘಂಟೆಯಿಂದ ರಾಜಬೀದಿಗಳಲ್ಲಿ ನಂದಿಧ್ವಜ ಸಹಿತ ಪೂಜ್ಯರಾದ ಜಗದಾಚಾರ್ಯರ ಪುಷ್ಪಕೋತ್ಸವ.

ಆಚಾರ್ಯರ ಉತ್ಸವಮೂರ್ತಿಯು ಮಠಕ್ಕೆ ಬಿಜಯಂಗೈಸಿದ ನಂತರ ಷೋಡಶೋಪಚಾರ ರಾಜೋಪಚಾರ ಪೂಜಾಪೂರ್ವಕ ಪ್ರಸಾದ ವಿನಿಯೋಗ. ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆ. ಮುಂದೆ ನಡೆಯುವ ವಿದ್ವಾಂಸರ ಭಾಷಣಗಳನ್ನು ಆಗಾಗ್ಗೆ ತಿಳಿಸುವದಾಗುವುದು.

ಬೆಂಗಳೂರು,
ತಾ|| 26-2-45 } ದೇಶದ ಶೆಟ್ಟರು, ಯಜಮಾನರು

ಶ್ರೀಜಗದ್ಗುರು ರೇಣುಕಾಚಾರ್ಯ ಜಯಂತೀ ಮಹೋತ್ಸವ, ಮೈಸೂರು

ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತೀ ಮಹೋತ್ಸವವು 26-2-45 ನೆಯ ತಾರೀಖು ಮೊದಲುಗೊಂಡು 4-3-45 ನೆಯ ತಾರೀಖಿನ ವರೆಗೆ ರಾಜಧಾನಿಯಲ್ಲಿ ಅತಿ ವೈಭವದಿಂದ ನೆರವೇರುವದು. ತಾರೀಖು 26-2-45ನೆಯ ಸಾಯಂಕಾಲ ಮೈಸೂರು ಟವನ್‌ಹಾಲಿನಲ್ಲಿ 6-30 ರಿಂದ 9 ರ ವರೆಗೆ ಸಿಟಿ ಮುನಿಸಿಪಲ್ ಪ್ರೆಸಿಡೆಂಟ್ ಶ್ರೀಮಾನ್ ರಾಮಚಂದ್ರರಾವ್ ಬೊಂಬೋರೆಯವರ ಅಧ್ಯಕ್ಷತೆಯಲ್ಲಿ ಶ್ರೀಭಗವತ್ಪಾದರವರ "ಅವತಾರ ಮತ್ತು ಉಪದೇಶ" ವಿಷಯದಲ್ಲಿ ಮೈಸೂರಿನಲ್ಲಿರುವ ಆತ್ಮವಿಚಾರಮಂದಿರದ ವ್ಯವಸ್ಥಾಪಕರಾದ ಶ್ರೀಮಾನ್ ಎಂ. ಎಲ್. ನಾಗಣ್ಣನವರ ಭಾಷಣವು ನಡೆಯುವುದು.

ಡಾ|| ಟಿ. ಎಸ್. ಸಿದ್ದಪ್ಪ, ಅಧ್ಯಕ್ಷರು.
ಎಂ ಎಲ್ ನಾಗಣ್ಣ, ಕಾರ್ಯದರ್ಶಿ.

ಶಿವಯೋಗಸಮಾರಂಭ

ಧಾರವಾಡ ಡಿ|| ಹೊಳೆ ಆಲೂರುಗ್ರಾಮದ ಪೂರ್ವಭಾಗದಲ್ಲಿ ಮಲಪ್ರಭಾನದೀತೀರದಲ್ಲಿ ಪರಿಶೋಭಿಸುತ್ತಿರುವ ಉಮಾಮಹೇಶ್ವರಮೂರ್ತಿಗಳಿಗೆ ಮಾಘ ಬ|| ೧೩ ದಿವಸ ಹರಿದ್ರಾಲೇಪನಾದಿ ಕಾರ್ಯಗಳೂ ಮಾಹೇಶ್ವರ ವಟುಗಳಿಗೆ ದೀಕ್ಷಾಸಂಸ್ಕಾರವೂ ಶ್ರೀ|| ಷ|| ಬ್ರ|| ಯಾದವಾಡ ಪಟ್ಟದಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ನೆರವೇರಿದವು. ಬ|| ೧೪ ರವಿವಾರ ದಿವಸ ಅಕ್ಷತಾರೋಪಣ ಮತ್ತು ಬಡಜನರ ಲಗ್ನಗಳು, ದೇವರಿಗೆ ರುದ್ರಾಭಿಷೇಕ ಸಹಸ್ರಬಿಲ್ವಾರ್ಚನೆ ಶಿವಕೀರ್ತನೆ ಮೊದಲಾದವು ನೆರವೇರಿದವು. ಅಮಾವಾಸ್ಯೆಯ ದಿವಸ ಶ್ರೀ ಚಂದ್ರಶೇಖರಸ್ವಾಮಿಗಳಿಂದ ದೇವಾಲಯಕ್ಕೆ ಸಹಾಯಮಾಡಿದವರಿಗೆ ಬೆಳ್ಳಿ ಬಂಗಾರದ ಟೋಪಣಹಾಕಿದ ರುದ್ರಾಕ್ಷಿಗಳು ಆಶೀರ್ವದಿಸಲ್ಪಟ್ಟವು. ದೇವಾಲಯಕ್ಕೆ ೧೦೦೦ ರೂಪಾಯಿಗಳನ್ನು ಕೊಟ್ಟ ಮ|| ರಾ|| ಸೂಡಿ ಸಂಗಪ್ಪನವರಿಗೂ ೫೦೦ ರೂಪಾಯಿಗಳನ್ನು ಕೊಟ್ಟ ಯಾವಗಲ್ಲು ಗುರಪ್ಪನವರಿಗೂ ಮಿಕ್ಕ ಕೆಲವರಿಗೂ ಧರ್ಮಾತ್ಮ, ಧರ್ಮಭೂಷಣ, ಧರ್ಮಜ್ಯೋತಿ ಇತ್ಯಾದಿ ಅಭಿಧಾನಗಳಿಂದ ಮಾನಪತ್ರಗಳು ಕೊಡಲ್ಪಟ್ಟವು. ಈ ದೇವಕಾರ್ಯದಲ್ಲಿ ನಿರತರಾದ ವೀರಶೈವ ಸಮಾಜದವರಿಗೆಲ್ಲ ಪರಮಾತ್ಮನು ಸಂಪತ್ತನ್ನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ

ಉಮಾಮಹೇಶ್ವರಮಂದಿರದ ವ್ಯವಸ್ಥಾಪಕ.

ಸೊಗಲದ ಸೋಮೇಶ್ವರಯಾತ್ರೆ

ಸೊಗಲ ಗ್ರಾಮವು ಬೆಳಗಾಂವ ಡಿ|| ಸವದತ್ತಿ ತಾಲೂಕಿಗೆ ಸೇರಿದ್ದು ಈಗ ನಾಮಾವಶೇಷವಾಗಿದೆ. ಪ್ರಾಚೀನ ಕಟ್ಟಡಗಳು ಆ ಗ್ರಾಮದ ಗತವೈಭವವನ್ನು ತೋರಿಸುತ್ತವೆ. ಕೋಟೆಯು ಮಾತ್ರ ಚನ್ನಾಗಿದೆ. ಈ ಗ್ರಾಮದಿಂದ ಒಂದುಮೈಲು ದೂರದಲ್ಲಿ ಗುಡ್ಡದೊಳಗೆ ಶ್ರೀ ಸೋಮೇಶ್ವರನ ವಿಶಾಲವಾದ ದೇವಾಲಯವು ಇರುತ್ತದೆ, ಕಟ್ಟಡವು ಬಹಳ ಪ್ರಾಚೀನವಾದುದು ಲಿಂಗಮೂರ್ತಿಯು ಎರಡು ಫೂಟು ಎತ್ತರವಾಗಿರುವದು. ನಂದಿಯ ವಿಗ್ರಹವು ಬಹು ಸುಂದರವಾಗಿರುವದು ಇಲ್ಲಿ ಭ್ರಮರಾಂಬೆಯ ಗುಡಿಯಿದ್ದು ಭ್ರಮರಾಂಬೆಯ ಎಡ ಹಸ್ತದಲ್ಲಿ ಶಿವಲಿಂಗವು ಶೋಭಿಸುತ್ತಿರುವದು. ದೇವಾಲಯದ ಎಡಭಾಗದಲ್ಲಿ ವೀರಭದ್ರನ ಗುಡಿಯು ಭವ್ಯವಾಗಿರುವದು. ಸೋಮೇಶ್ವರನ ಮುಂಭಾಗದಲ್ಲಿ ೨೫ ಅಡಿ ಎತ್ತರದಿಂದ ನೀರು ಒಳ್ಳೆ ಭರದಿಂದ ಬೀಳುತ್ತದೆ ಜನರು ಅಲ್ಲಿ ಸ್ನಾನಮಾಡುತ್ತಾರೆ. ಅದೇ ನೀರು ಹರಿದು ಮುಂದೆ ೨-೩ ಫರ್ಲಾಂಗಿನ ಮೇಲೆ ೧೦೦ ಅಡಿ ಎತ್ತರದಿಂದ ಭೂಮಿಗೆ ಬೀಳುತ್ತದೆ. ಶ್ರೀಶೈಲ ಪರ್ವತದ ನೀರಿನಂತೆ ಜನರಿಗೆ ಈ ನೀರಾವರೂ ಬಾಧೆಮಾಡುತ್ತದೆ ಈ ಸೋಮನಾಥನ ದೇವಾಲಯವು ಈ ಭಾಗದಲ್ಲಿ ದೊಡ್ಡ ಕ್ಷೇತ್ರವಾಗಿ ಪರಿಣಮಿಸಿದೆ. ಪ್ರತಿ ಅಮಾವಾಸ್ಯೆಯ ದಿವಸ ಜನರು ವಿಶೇಷವಾಗಿ ಕೂಡುತ್ತಾರೆ. ಶಿವರಾತ್ರಿಗೆ ಸಣ್ಣ ಜಾತ್ರೆಯಂತೆ ಸೇರುತ್ತಾರೆ ಮುಂದೆ ಫಾಲ್ಗುನಮಾಸದಲ್ಲಿ ಜಾತ್ರೆಯು ದೊಡ್ಡ ಪ್ರಮಾಣದಲ್ಲಿ ಕೂಡುತ್ತದೆ ಸಾಧಾರಣ ೨೦ ಸಾವಿರದವರೆಗೆ ಜನರು ಕೂಡುತ್ತಾರೆ. ತಲೆಪಟ್ಟಿಯು ೧ ಆಣೆಯಂತೆ ಇರುತ್ತದೆ. ಯಾತ್ರೆಯ ಕಮಿಟಿ ಜನರು ಒಳ್ಳೇ ವ್ಯವಸ್ಥೆಯನ್ನು ಇಟ್ಟಿರುತ್ತಾರೆ. ಗುಡ್ಡದ ಕೊಳಕುನೀರು ಜನರಿಗೆ ಹತ್ತಬಾರದೆಂದು ತಿಳಿದು

(೩ನೆಯ ಪುಟವನ್ನು ನೋಡಿ)

ಪಂಚಾಚಾರ್ಯಪ್ರಭಾ.

೧೯೪೫ನೆಯ ಫೆಬ್ರವರಿ ತಾ ೨೬ನೇ ಸೋಮವಾರ

ಶ್ರೀಜಗದ್ಗುರುರೇಣುಕಾಚಾರ್ಯರ ಲಿಂಗಾವತಾರ

ವೀರಶೈವಮತಸ್ಥಾಪನಾಚಾರ್ಯರಾದ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತೀ ಮಹೋತ್ಸವವು ಈ ದಿವಸ ಭರತಖಂಡದ ನಾನಾ ಭಾಗಗಳಲ್ಲಿ ಬಹು ಆಟ್ಟಹಾಸದಿಂದ ನೆರವೇರುತ್ತಿರುವ ವಿಷಯವು ಸರ್ವರಿಗೂ ತಿಳಿದುದಾಗಿದೆ ಆದುದರಿಂದ ಆ ಮಹಾತ್ಮರ ಲಿಂಗಾವತಾರ ವಿಷಯವನ್ನು ಸರ್ವರೂ ಓದಿ ಧನ್ಯರಾಗಲೆಂಬ ಉದ್ದೇಶದಿಂದ ಜಯಂತೀರೂಪವಾದ ಇಂದಿನ ಪವಿತ್ರ ದಿವಸದ ಪತ್ರಿಕೆಯಲ್ಲಿ ಪ್ರಕಟಿಸಿದ್ದೇವೆ

ಶ್ರೀಪರಮೇಶ್ವರನು ಕೈಲಾಸದಲ್ಲಿ ಬ್ರಹ್ಮ ವಿಷ್ಣು ಮೊದಲಾದ ಸಮಸ್ತದೇವತೆಗಳಿಂದಲೂ, ವೀರ ನಂದಿ ಭೃಂಗಿ ವೃಷಭ ಸ್ಕಂದ-ರೇಣುಕ ದಾರುಕ ಘಂಟಾಕರ್ಣ ಧೇನುಕರ್ಣ ವಿಶ್ವಕರ್ಣ ಮೊದಲಾದ ಪ್ರಮಥರಿಂದಲೂ ಪರಿಶೋಭಿತವಾದ ಸಭೆಯಲ್ಲಿ ದಿವ್ಯಪೀಠವನ್ನಲಂಕರಿಸಿ ಪರಮಾನಂದದಿಂದ ಸಮಸ್ತಲೋಕಗಳ ವಿಷಯವನ್ನು ವಿಚಾರಿಸುತ್ತಿರುವ ಸಮಯದಲ್ಲಿ, ಪ್ರಮಥಪುಂಗವನಾದ ಶ್ರೀರೇಣುಕಗಣಾಧೀಶ್ವರನನ್ನು ಕರೆದು—“ ಎಲೈ ರೇಣುಕಗಣಾಧೀಶನೇ ! ನೀನು ಭೂಲೋಕದಲ್ಲಿ ವೇದ ಮಾರ್ಗಾನುಸಾರವಾಗಿ ಶಿವಭಕ್ತಿಯನ್ನು ಪ್ರತಿಷ್ಠಿಸುವುದಕ್ಕೋಸ್ಕರ, ಕುಲ್ಯಪಾಕಕ್ಷೇತ್ರದಲ್ಲಿ ವಿರಾಜಿಸುತ್ತಿರುವ ಶ್ರೀಸೋಮನಾಥಲಿಂಗದಿಂದ ತೇಜೋಮಯಶರೀರಧಾರಿಯಾಗಿ ಅವತರಿಸಿ, ಸಕಲಮಾನವರಿಗೂ ಶಿವಾದ್ವೈತಸಿದ್ಧಾಂತವನ್ನು ಉಪದೇಶಿಸಿ, ಸಮಸ್ತ ಭೂಮಂಡಲವನ್ನು ಶಿವಭಕ್ತಿಮಯವನ್ನಾಗಿ ಮಾಡಿ ಪುನಃ ನನ್ನ ಸನ್ನಿಧಿಗೆ ಬಾ” ಎಂದು ಅಪ್ಪಣೆಮಾಡಿದನು ಪರಮೇಶ್ವರನ ಅಪ್ಪಣೆಯಂತೆ ಶ್ರೀರೇಣುಕಗಣಾಧೀಶ್ವರನು ಶಿವಾದ್ವೈತಸಿದ್ಧಾಂತವನ್ನು ಪ್ರತಿಷ್ಠಾಪಿಸುವುದಕ್ಕೋಸ್ಕರ ಭೂಲೋಕದಲ್ಲಿ ಅವತರಿಸಿದನು ಈ ವಿಷಯವು ಸಿದ್ಧಾಂತಶಿಖಾಮಣಿಯಲ್ಲಿ ಈ ಕೆಳಗೆ ಉದಾಹರಿಸಿರುವಂತೆ ಉಲ್ಲೇಖಿಸಲ್ಪಟ್ಟಿರುವುದು

ಅಥ ತ್ರಿಲಿಂಗವಿಷಯೇ ಕೊಲ್ಲಿಪಾಕ್ಯಭಿಧೇ ಸ್ಥಲೇ |
ಸೋಮೇಶ್ವರಮಹಾಲಿಂಗಾತ್ ಪ್ರಾದುರಾಸೀತ್ಸ ರೇಣುಕಃ ||೧||

ಪ್ರಾದುರ್ಭೂತಂ ತಮಾಲೋಕ್ಯ ಶಿವಲಿಂಗಾತ್ತ್ರಿಲಿಂಗಜಾಃ |
ವಿಸ್ಮಿತಾಃ ಪ್ರಾಣಿನಃ ಸರ್ವೇ ಬಭೂವುರತಿತೇಜಸಂ ||೨||

ಭಸ್ಮೋದ್ಧೂಳಿತಸರ್ವಾಂಗಂ ಸಾರರುದ್ರಾಕ್ಷಭೂಷಣಂ |
ಜಟಾಮುಕುಟಸಂಯುಕ್ತಂ ತ್ರಿಪುಂಡ್ರಾಂಕಿತಮಸ್ತಕಂ ||೩||

ಕಟೀತಟೀಪಟೀಭೂತಕಂಥಾಪಟಲಬಂಧುರಂ |
ದಧಾನಂ ಯೋಗದಂಡಂ ಚ ಭಸ್ಮಾಧಾರಂ ಕಮಂಡಲುಂ ||೪||

ಶಿವಾದ್ವೈತಪರಿಜ್ಞಾನಪರಮಾನಂದಮೋದಿತಂ |
ನಿರ್ಧೂತಸರ್ವಸಂಸಾರವಾಸನಾದೋಷಪಂಜರಂ ||೫||

ಶಿವಾಗಮಸುಧಾಸಿಂಧುಸಮುನ್ಮೇಷಸುಧಾಕರಂ |
ಚಿತ್ತಾರವಿಂದಸಂಗೂಢಶಿವಪಾದಾಂಬುಜದ್ವಯಂ ||೬||

ಯಮಾದಿಯೋಗತಂತ್ರಜ್ಞಂ ಸ್ವತಂತ್ರಂ ಸರ್ವಕರ್ಮಸು |
ಸಮಸ್ತಸಿದ್ಧಸಂತಾನಸಮುದಾಯಶಿಖಾಮಣಿಂ ||೭||

ವೀರಸಿದ್ಧಾಂತನಿರ್ವಾಹಕೃತಪಟ್ಟನಿಬಂಧನಂ |
ಆಲೋಕಮಾತ್ರನಿರ್ಭಿನ್ನಸಮಸ್ತಪ್ರಾಣಿಪಾತಕಂ ||೮||

ತಮಪೃಚ್ಛನ್ ಜನಾಃ ಸರ್ವೇ ನಮಂತಃ ಕೋ ಭವಾನಿತಿ |
ಇತಿ ಪೃಷ್ಟೋ ಮಹಾಯೋಗೀ ಜನೈರ್ವಿಸ್ಮಿತಮಾನಸೈಃ ||೯||

ಪ್ರತ್ಯುವಾಚ ಶಿವಾದ್ವೈತಮಹಾನಂದಪರಾಯಣಃ |
ಪಿನಾಕಿನಃ ಪಾರ್ಶ್ವವರ್ತೀ ರೇಣುಕಾಖ್ಯೋ ಗಣೇಶ್ವರಃ ||೧೦||

ಶಿವಾದೇಶಾನುಸಾರೇಣ ಶಿವಲಿಂಗಾದಿಹಾಭವಂ |
ನಾಮ್ನಾ ರೇಣುಕಸಿದ್ಧೋಽಹಂ ಸಿದ್ಧಸಂತಾನನಾಯಕಃ ||
ಸ್ವಚ್ಛಂದಚಾರೀ ಲೋಕೇಽಸ್ಮಿನ್ ಶಿವಸಿದ್ಧಾಂತಪಾಲಕಃ ||೧೧||

ಇತ್ಯುಕ್ತ್ವಾ ಪಶ್ಯತಾಂ ತೇಷಾಂ ವಿಸ್ಮಯಸ್ಥಿರಚಕ್ಷುಷಾಂ |
ಉತ್ಪಾಯ ವ್ಯೋಮಮಾರ್ಗೇಣ ಮಲಯಾದ್ರಿಮುಪಾಗಮತ್ ||

(ಸಿದ್ಧಾಂತಶಿಖಾಮಣಿ, ಪರಿ ೪)

ಪರಮೇಶ್ವರನ ಅಪ್ಪಣೆಯಮೇರೆಗೆ ಶ್ರೀರೇಣುಕಗಣಾಧೀಶ್ವರನು ತ್ರಿಲಿಂಗ (ತೆಲುಗು) ದೇಶದಲ್ಲಿ ಸುಪ್ರಸಿದ್ಧ ಶಿವಕ್ಷೇತ್ರವಾದ ಶ್ರೀಕುಲ್ಯಪಾಕಕ್ಷೇತ್ರದಲ್ಲಿ ವಿರಾಜಿಸುತ್ತಿರುವ ಶ್ರೀಸೋಮೇಶ್ವರನಾಮಕಮಹಾಲಿಂಗದಿಂದ ಅವತರಿಸಿದನು. ತ್ರಿಲಿಂಗದೇಶದ ಜನರೆಲ್ಲರೂ, ಶಿವಲಿಂಗದಿಂದ ಅವತರಿಸಿದ ಮಹಾತೇಜಶ್ಶಾಲಿಯಾದ ಶ್ರೀರೇಣುಕಗಣಾಧೀಶ್ವರನನ್ನು ನೋಡಿ, ಆಶ್ಚರ್ಯದಿಂದ ಕೂಡಿದವರಾದರು ಭಸ್ಮಲಿಪ್ತವಾದ ಶರೀರವುಳ್ಳವನೂ, ರುದ್ರಾಕ್ಷಾಲಂಕೃತನೂ, ಜಟಾಮುಕುಟಮಂಡಿತನೂ, ತ್ರಿಪುಂಡ್ರಾಂಕಿತಮಸ್ತಕನೂ, ನಡುವಿನಲ್ಲಿ ವಸ್ತ್ರದಂತಿದ್ದ ಕಂಥೆಯಿಂದ ಮನೋಹರನಾದವನೂ, ಯೋಗದಂಡ ಕಮಂಡಲು ಭಸ್ಮಘುಂಟಿಕೆಗಳನ್ನು ಧರಿಸಿದವನೂ, ಶಿವಾದ್ವೈತ ಸಿದ್ಧಾಂತಜ್ಞಾನದಿಂದುಂಟಾದ ಪರಮಾನಂದದಲ್ಲಿ ಲೀನನಾದವನೂ, ಸಮಸ್ತ ಸಂಸಾರವಾಸನಾದೋಷಗಳ ಸಮೂಹದಿಂದ ದೂರನಾದವನೂ, ಶಿವಾಗಮರೂಪವಾದ ಅಮೃತಸಮುದ್ರದ ಅಭಿವೃದ್ಧಿಗೆ ಚಂದ್ರಸ್ವರೂಪನೂ, ತನ್ನ ಹೃದಯಕಮಲದಲ್ಲಿ ಪರಶಿವನ ಪಾದಕಮಲಗಳನ್ನು ಸದಾಸಂಬಂಧಿಸಿಕೊಂಡಿರುವವನೂ, ಯಮನಿಯಮಾದ್ಯಷ್ಟಾಂಗಯೋಗಸ್ವರೂಪವನ್ನು ತಿಳಿದವನೂ, ಸಮಸ್ತಸಿದ್ಧಕುಲ ಸಮುದಾಯಕ್ಕೆ ಶಿಖಾರತ್ನಸ್ವರೂಪನೂ, ವೀರಶೈವಸಿದ್ಧಾಂತವನ್ನು ನೆಲೆಗೊಳಿಸುವುದರಲ್ಲಿ ಪಟ್ಟವನ್ನು ಕಟ್ಟಿಕೊಂಡವನೂ, ದರ್ಶನಮಾತ್ರದಿಂದ ಸಮಸ್ತಪ್ರಾಣಿಗಳ ಪಾಪವನ್ನು ನಾಶಮಾಡತಕ್ಕವನೂ ಆದ ಶ್ರೀರೇಣುಕಾಚಾರ್ಯನನ್ನು ಕುರಿತು—ಆ ದೇವಾಲಯದಲ್ಲಿದ್ದ ಸಮಸ್ತಜನರು ಆಶ್ಚರ್ಯದಿಂದೊಡಗೂಡಿ ನಮಸ್ಕರಿಸುವಂಥವರಾಗಿ, ಎಲೈ ಮಹನೀಯನೇ ! ನೀನು ಯಾರು ? ಎಂದು ಪ್ರಶ್ನೆಮಾಡಿದರು ಶಿವಾದ್ವೈತಮಹಾನಂದದಲ್ಲಿ ಲೀನನಾದವನೂ ಪರಮೇಶ್ವರನ ಪಾರ್ಶ್ವವರ್ತಿಯೂ ಆದ ಶ್ರೀರೇಣುಕಗಣೇಶ್ವರನು ಆ ಜನರನ್ನು ಕುರಿತು, ಈ ರೀತಿಯಾಗಿ ನುಡಿದನು ಎಲೈ, ಜನಗಳಿರಾ! ನಾನು ಶ್ರೀಪರಮೇಶ್ವರನ ಅಪ್ಪಣೆಯ ಮೇರೆಗೆ ಪರಮಪವಿತ್ರವಾದೀ ಶಿವಕ್ಷೇತ್ರದಲ್ಲಿ ವಿರಾಜಿಸುತ್ತಿರುವ ಈ ಶಿವಲಿಂಗದಿಂದ ಅವತರಿಸಿದೆನು ನನ್ನ ಹೆಸರು “ರೇಣುಕಸಿದ್ಧ” ಎಂದಿರುವುದು ನಾನು ಸಿದ್ಧರ ಸಮುದಾಯಕ್ಕೆಲ್ಲ ಅಧಿಪತಿಯಾಗಿದ್ದೇನೆ ನಾನು ಈ ಲೋಕದಲ್ಲಿ ಸ್ವತಂತ್ರನಾಗಿದ್ದೇನೆ, ಮತ್ತು ಶಿವಾದ್ವೈತಸಿದ್ಧಾಂತವನ್ನು ರಕ್ಷಿಸುವವನಾಗಿದ್ದೇನೆ ಎಂದು ನುಡಿದು, ಆ ಜನರು ಅನಿಮಿಷದೃಷ್ಟಿಯಿಂದ ನೋಡುತ್ತಿರಲು, ಗಗನಮಾರ್ಗದಿಂದ ಮಲಯಪರ್ವತವನ್ನು ಕುರಿತು ಪ್ರಯಾಣ ಮಾಡಿದನು

ಶ್ರೀರೇಣುಕಾಚಾರ್ಯರು ಕುಲ್ಯಪಾಕಕ್ಷೇತ್ರದಿಂದ ಮಲಯಪರ್ವತದಲ್ಲಿ ರಾರಾಜಿಸುತ್ತಿದ್ದ ಅಗಸ್ತ್ಯಾಶ್ರಮಕ್ಕೆ ದಯಮಾಡಿಸಿದ ಕೂಡಲೆ, ಅಗಸ್ತ್ಯಮಹರ್ಷಿಗಳು ಅಸಾಧಾರಣಭಕ್ತಿವಿಶೇಷದಿಂದ ಆ ಪ್ರಮಥಪುಂಗವರನ್ನು ಎದುರ್ಗೊಂಡು, ದರ್ಭಾಸನದಲ್ಲಿ ಕುಳ್ಳಿರಿಸಿ, ಷೋಡಶೋಪಚಾರಗಳಿಂದ ಪೂಜಿಸಿ—

ಸ್ಥಿರಮದ್ಯ ಶಿವಜ್ಞಾನಂ ಸ್ಥಿರಾ ಮೇ ತಾಪಸಕ್ರಿಯಾ |
ಭವದ್ದರ್ಶನಪುಣ್ಯೇನ ಸ್ಥಿರಾ ಮೇ ಮುನಿರಾಜತಾ ||೪೬||

ಸಂಸಾರಸರ್ಪದಷ್ಟಾನಾಂ ಮೂರ್ಛಿತಾನಾಂ ಶರೀರಿಣಾಂ |
ಕಟಾಕ್ಷಸ್ತವ ಕಲ್ಯಾಣಂ ಸಮುಜ್ಜೀವನಭೇಷಜಂ ||೪೭||

ಸಮಸ್ತಲೋಕಸಂದಾಹತಾಪತ್ರಯಮಹಾನಲಃ |
ತ್ವತ್ಪಾದಾಂಬುಕಣಾಸ್ವಾದಾದುಪಶಾಮ್ಯತಿ ದೇಹಿನಾಂ ||೪೮||

ರೇಣುಕಂ ತ್ವಾಂ ವಿಜಾನಾಮಿ ಗಣನಾಥಂ ಶಿವಪ್ರಿಯಂ |
ಅವತೀರ್ಣಮಿಮಾಂ ಭೂಮಿಂ ಮದನುಗ್ರಹಕಾಂಕ್ಷಯಾ ||೪೯||

ಭವಾದೃಶಾನಾಂ ಸಿದ್ಧಾನಾಂ ಪ್ರಬೋಧಧ್ವಸ್ತಜನ್ಮನಾಂ |
ಪ್ರವೃತ್ತಿರೀದೃಶೀ ಲೋಕೇ ಪರಾನುಗ್ರಹಕಾರಿಣೀ ||೫೦||

ತ್ವನ್ಮುಖಾಚ್ಛ್ರೋತುಮಿಚ್ಛಾಮಿ ಸಿದ್ಧಾಂತಂ ಶ್ರುತಿಸಮ್ಮತಂ |
ಸರ್ವಜ್ಞ ವದ ಮೇ ಸಾಕ್ಷಾಚ್ಛೈವಂ ಸರ್ವಾರ್ಥಸಾಧಕಂ ||

ಸದ್ಯಃ ಸಿದ್ಧಿಕರಂ ಪುಂಸಾಂ ಸರ್ವಯೋಗೀಂದ್ರಸೇವಿತಂ |
ದುರಾಚಾರೈರನಾಘ್ರಾತಂ ಸ್ವೀಕೃತಂ ವೇದವೇದಿಭಿಃ ||
ಶಿವಾತ್ಮೈಕ್ಯಮಹಾಬೋಧಸಂಪ್ರದಾಯಪ್ರವರ್ತಕಂ ||೫೨||

(ಸಿ. ಶಿ. ಪರಿ. ೪)

ಎಲೈ ಮಹಾತ್ಮನೇ, ನಿನ್ನ ದರ್ಶನದಿಂದೊದಗಿದ ಪುಣ್ಯವಿಶೇಷದಿಂದ ಇಂದಿಗೆ ನನ್ನ ಶಿವಜ್ಞಾನವು ಸ್ಥಿರವಾಯಿತು. ಇಂದಿಗೆ ನನ್ನ ತಪಃಕ್ರಿಯೆಯು ಸ್ಥಿರವಾಯಿತು ಇಂದಿಗೆ ನನ್ನ ಮುನಿಸಾರ್ವಭೌಮತ್ವವು ಸ್ಥಿರವಾಯಿತು. ಸಂಸಾರರೂಪವಾದ ಸರ್ಪದಿಂದ ಕಡಿಸಿಕೊಂಡು ಮೂರ್ಛಿತರಾಗಿರುವ ಮಾನವರಿಗೆ ನಿನ್ನ ಕಲ್ಯಾಣಕಟಾಕ್ಷವೇ ಸಂಜೀವನೌಷಧವಾಗಿದೆ. ಸಮಸ್ತ ಲೋಕಗಳನ್ನು ಸುಡತಕ್ಕ ಆಧ್ಯಾತ್ಮಿಕ-ಆಧಿಭೌತಿಕ-ಆಧಿದೈವಿಕತಾಪರೂಪವಾದ ಪ್ರಚಂಡಾಗ್ನಿಯು ನಿನ್ನ ಪಾದೋದಕದ ಒಂದು ಬಿಂದು ಮಾತ್ರ ಸೇವನೆಯಿಂದಲೇ ಶಾಂತವಾಗುತ್ತದೆ. ಶಿವಪ್ರೀತಿಪಾತ್ರನೂ ಪ್ರಮಥಾಧಿಪತಿಯೂ ಆದ ಎಲೈ ರೇಣುಕಗಣಾಧೀಶ್ವರನೇ, ನನ್ನನ್ನು ಅನುಗ್ರಹಿಸಬೇಕೆಂಬ ಅಭಿಲಾಷೆಯಿಂದ ನೀನು ಈ ಭೂಮಂಡಲದಲ್ಲಿ ಅವತರಿಸಿರುವೆ, ಎಂಬುದನ್ನು ಬಲ್ಲೆನು. ಶಿವಜ್ಞಾನದಿಂದ ಜನನ ಮರಣಗಳನ್ನು ನಾಶಮಾಡಿದ ನಿನ್ನಂಥ ಸಿದ್ಧಾಗ್ರೇಸರರ ಈ ರೀತಿಯಾದ ಸಂಚಾರವೇ ಮಾನವಪ್ರಾಣಿಗಳಿಗೆ ಅನುಗ್ರಹವನ್ನುಂಟುಮಾಡತಕ್ಕದಾಗಿರುತ್ತದೆ. ಎಲೈ, ರೇಣುಕಾಚಾರ್ಯನೇ ! ವೇದಸಮ್ಮತವಾದ ಸಿದ್ಧಾಂತಶಾಸ್ತ್ರವನ್ನು ನಿನ್ನ ಮುಖದಿಂದ ಕೇಳಬೇಕೆಂಬ ಇಚ್ಛೆಯುಳ್ಳವನಾಗಿದ್ದೇನೆ; ಆದುದರಿಂದ ಸರ್ವಜ್ಞಮೂರ್ತಿಯೇ, ಸರ್ವಾರ್ಥಸಾಧಕವಾದುದೂ, ಶಿವಸಂಬಂಧವಾದುದೂ, ತತ್‌ಕ್ಷಣದಲ್ಲಿ ಸಿದ್ಧಿಯನ್ನುಂಟುಮಾಡತಕ್ಕುದೂ, ಸಮಸ್ತ ಯೋಗೀಂದ್ರರಿಂದ ಸೇವಿತವಾದುದೂ, ದುರಾಚಾರಗಳಿಂದ ಅನಾಘ್ರಾತವಾದುದೂ, ವೇದಜ್ಞರಿಂದ ಸ್ವೀಕೃತವಾದುದೂ, ಶಿವಜೀವೈಕ್ಯಮಹಾಜ್ಞಾನಸಂಪ್ರವರ್ತಕವಾದುದೂ ಆದ ಸಿದ್ಧಾಂತಶಾಸ್ತ್ರವನ್ನು ನನಗೆ ಉಪದೇಶಮಾಡು.

ಈ ರೀತಿಯಾಗಿ ಅಗಸ್ತ್ಯರು ಶ್ರೀರೇಣುಕಾಚಾರ್ಯರ ಮಹಿಮೆಯನ್ನು ನಾನಾವಿಧವಾಗಿ ಕೊಂಡಾಡಿ, ಶ್ರುತಿಸಮ್ಮತವಾದ ಶಿವಾದ್ವೈತ ಸಿದ್ಧಾಂತವನ್ನು ಉಪದೇಶಿಸಬೇಕೆಂದು ಪ್ರಾರ್ಥಿಸಲು, ಆಗ್ಗೆ ಶ್ರೀರೇಣುಕಾಚಾರ್ಯರು ಅಗಸ್ತ್ಯಮಹರ್ಷಿಗಳಿಗೆ ಶಿವಾದ್ವೈತಸಿದ್ಧಾಂತವನ್ನು ವಿಶದವಾಗಿ ಉಪದೇಶಿಸಿದರು ಶ್ರೀರೇಣುಕಾಚಾರ್ಯರ ಉಪದೇಶರೂಪವಾದೀ ಗ್ರಂಥವು “ಸಿದ್ಧಾಂತಶಿಖಾಮಣಿ” ಅಥವಾ “ರೇಣುಕಾಗಸ್ತ್ಯಸಂವಾದ” ಎಂಬ ಹೆಸರಿನಿಂದ ಲೋಕವಿಖ್ಯಾತವಾಗಿರುವುದು. ಈ ಮಹಾಗ್ರಂಥವನ್ನು ಈಗ್ಗೆ ೨೦೦೦ ವರ್ಷಗಳ ಪೂರ್ವದಲ್ಲಿದ್ದ ಶ್ರೀಶಿವಯೋಗಿ ಶಿವಾಚಾರ್ಯರೆಂಬ ಮಹನೀಯರು ರಚಿಸಿರುವರು. ಈ ಗ್ರಂಥದ ಕೊನೆಯ ಭಾಗದಲ್ಲಿ ಶ್ರೀರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ೩ ಕೋಟಿ ಜನ ಗುರುರೂಪವನ್ನು ಧರಿಸಿ, ೩ ಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸಿದ ವಿಷಯವು ಬರೆಯಲ್ಪಟ್ಟಿರುವುದು. ಶ್ರೀರೇಣುಕಾಚಾರ್ಯರು ಕೃತ-ತ್ರೇತಾಯುಗಗಳಲ್ಲಿ ಶಿವಲಿಂಗಮುಖದಿಂದ ಅವತರಿಸಿ ಲೋಕಪ್ರಸಿದ್ಧ ವ್ಯಕ್ತಿಗಳನ್ನು ಉದ್ಧರಿಸಿದ ವಿಷಯವು ಈ ಮಹಾಗ್ರಂಥದಲ್ಲಿ ಉಲ್ಲಿಖಿತವಾಗಿರುವುದು. ಇದರಂತೆಯೇ ಈ ಮಹಾಚಾರ್ಯರು ದ್ವಾಪರ-ಕಲಿಯುಗಗಳಲ್ಲಿ ಅವತರಿಸಿ, ಅನೇಕಾನೇಕಾದ್ಭುತಲೀಲೆಗಳನ್ನು ಆಚರಿಸಿ ಹೋಗಿರುವರು. ಈ ವಿಷಯಗಳೆಲ್ಲವೂ ಆ ಮಹಾತ್ಮರ ವಿಷಯಕವಾಗಿರುವ ಸಮಸ್ತಗ್ರಂಥಗಳಲ್ಲಿಯೂ ಉಲ್ಲೇಖಿಸಲ್ಪಟ್ಟಿರುವವು. ಶ್ರೀಜಗದ್ಗುರು ರೇಣುಕಾಚಾರ್ಯರ ಶಿವಲಿಂಗಾವತಾರವಿಷಯವನ್ನು ಸಕಲ ಶಿವಾಗಮಗಳೂ, ಪ್ರಾಚೀನವೀರಶೈವಮತಗ್ರಂಥಗಳೂ ಮುಕ್ತಕಂಠದಿಂದ ಸಾರುತ್ತಿದ್ದರೂ, ಅಪ್ರಬುದ್ಧರಾದ ಕೆಲಜನ ವಿರಕ್ತರು ಮತ್ತು ಅವರ ಅಭಿಮಾನಿಗಳು ಈ ವಿಷಯವನ್ನು ಮರೆಮಾಚಿ, ಶ್ರೀರೇಣುಕಾಚಾರ್ಯರು ಲಿಂಗಾವತಾರಿಗಳಲ್ಲವೆಂದೂ, ಅವರು ೧೨ನೆಯ ಶತಮಾನದಲ್ಲಿದ್ದವರೆಂದೂ ಮನಸ್ಸಿಗೆ ಬಂದಂತೆ ಅಪಲಪಿಸುತ್ತ, ಸಮಾಜದಲ್ಲಿ ಗೊಂದಲವನ್ನೆಬ್ಬಿಸುತ್ತಿರುವರು ಪೂರ್ವಾಪರವಿಚಾರಮಾಡದೆ ಕೇವಲ ಅಸೂಯಾಬುದ್ಧಿಯಿಂದ ಈ ರೀತಿ ವಕ್ರಮಾರ್ಗವನ್ನು ಹಿಡಿದು ನಡೆಯುತ್ತಿರುವುದು ಅವರಿಗೆ ಎಷ್ಟು ಭೂಷಣವಾದುದಲ್ಲ

ವಿರಕ್ತವರ್ಗಕ್ಕೆಲ್ಲಾ ಪರಮಪೂಜ್ಯರೂ, ಮಹಾತಪಸ್ವಿಗಳೂ, ಜಗದ್ವಿಖ್ಯಾತರೂ ಆಗಿಹೋಗಿರುವ

ಅನಾದಿಕೋಂಟೆದ ಸಿದ್ಧಲಿಂಗೇಶ್ವರರು ತಮ್ಮಿಂದ ವಿರಚಿತವಾಗಿರುವ **ಸಿದ್ಧೇಶ್ವರವಚನದಲ್ಲಿ**—

“ಆದಿಯಲ್ಲಿ ಶಿವತತ್ತ್ವದಲ್ಲಿ ರೇಣುಕನುದಯವಾಗಿದ್ದರೆ ಇಲ್ಲಿ ಶಿವಲಿಂಗದಲ್ಲಿ ಉದಯವಾದ ಪರಿಯೆಂತು? ಆ ಶಿವಲಿಂಗದಲ್ಲಿಯೇ ಹುಟ್ಟಿ ಶಿವಲಿಂಗದಲ್ಲಿಯೇ ಲಯವಾದ ರೇವಣಸಿದ್ಧೇಶ್ವರನು ಅನಾದಿಮುಕ್ತನಲ್ಲ ಆದಿಮುಕ್ತನೆಂದು ನುಡುವ ಅಜ್ಞಾನಿಗಳಿಗೆ ನಾಯಕನರಕ ತಪ್ಪದು.”

ಎಂದು ಉಲ್ಲೇಖಿಸಿದ್ದಾರೆ ಈ ಮಹಾನುಭಾವರ ವಚನದಲ್ಲಿ ಶ್ರೀರೇಣುಕಾಚಾರ್ಯರ ಲಿಂಗಾವತಾರ ವಿಷಯವೂ, ಆ ಮಹಾತ್ಮರ ಅನಾದಿತ್ವವೂ, ಪೂಜ್ಯತ್ವವೂ ಎಷ್ಟು ಭಕ್ತಿಯಿಂದ ವರ್ಣಿತವಾಗಿರುವುದೆಂಬುದನ್ನು ವಿರಕ್ತರು ಮತ್ತು ಬಸವಪಂಥಿಗಳು ಶಾಂತಮನಸ್ಸಿನಿಂದ ವಿಚಾರಮಾಡಿಕೊಳ್ಳಬೇಕು ವಿರಕ್ತರ ಮೂಲಪುರುಷರೇ ಈ ರೀತಿಯಾಗಿ ಅಸಾಧಾರಣವಾದ ಪೂಜ್ಯಬುದ್ಧಿಯಿಂದ ಶ್ರೀರೇಣುಕಭಗವತ್ಪಾದರನ್ನು ಕೊಂಡಾಡಿರುವಾಗ, ಅವರ ಅನುಯಾಯಿಗಳು ಅದಕ್ಕೆ ವಿರುದ್ಧವಾಗಿ ವರ್ತಿಸುವುದು ಅಧರ್ಮವಲ್ಲವೇ? ಆದುದರಿಂದ ವಿರಕ್ತರು ಮೇಲುದಾಹರಿಸಿರುವ ಶ್ರೀಸಿದ್ಧಲಿಂಗೇಶ್ವರರ ವಚನವನ್ನು ಪಂಚಾಕ್ಷರಮಹಾಮಂತ್ರದಂತೆ ಸದಾ ಜಪಿಸುತ್ತ, ಶ್ರೀರೇಣುಕಾದಿ ಪಂಚಾಚಾರ್ಯರಲ್ಲಿ ಶ್ರೀಕೋಂಟೆದಸಿದ್ಧೇಶ್ವರರಂತೆ ನಿರ್ಮಲವಾದ ಭಕ್ತಿಯನ್ನಿಟ್ಟು ಮುಕ್ತಿಭಾಗಿಗಳಾಗಬೇಕು.

ಶ್ರೀರೇಣುಕಾದಿ ಪಂಚಾಚಾರ್ಯರು ಕಲ್ಲಿನಿಂದ ಎಂದಾದರೂ ಅವತರಿಸುವುದುಂಟೇ? ಇದು ಶುದ್ಧ ಸುಳ್ಳೆಂದು ಬಸವಪಂಥಿಗಳು ನಾಸ್ತಿಕವಾದವನ್ನು ಮಾಡುತ್ತಿರುವರು ಹೀಗೆ ವಾದಿಸುವದು ಅಜ್ಞಾನಪ್ರಭಾವವಲ್ಲದೆ ಬೇರೆಯಲ್ಲ ಏಕೆಂದರೆ—ಯೋಗಸಿದ್ಧರು ಶಿಲೆಯಲ್ಲೇಕೆ? ವಜ್ರಾದಿಗಳಲ್ಲಿಯೂ ಸಹ ಪ್ರವೇಶಿಸಬಹುದೆಂದು ಯೋಗಶಾಸ್ತ್ರವು ಘಂಟಾಘೋಷವಾಗಿ ಸಾರುತ್ತಿರುವದು ಯೋಗಶಾಸ್ತ್ರಪ್ರವರ್ತಕನಾದ ಪತಂಜಲಿ ಮಹರ್ಷಿಯು——

“ತತೋಽಣಿಮಾದಿವತ್ ಪ್ರಾದುರ್ಭಾವಃ ಕಾಯಸಂಪತ್ತದ್ಧರ್ಮಾನಭಿಘಾತಶ್ಚ”

ಇತ್ಯಾದಿ ಸೂತ್ರಗಳಿಂದ ಯೋಗಿಯಲ್ಲಿ ಅಣಿಮಾದ್ಯಷ್ಟಸಿದ್ಧಿಗಳ ಮಹಿಮೆಯನ್ನು ಹೇಳಿರುವನು ಈ ಸೂತ್ರಗಳಿಗೆ ವೃತ್ತಿಯನ್ನು ಬರೆದ ಭೋಜದೇವನು ತನ್ನ ವೃತ್ತಿಯಲ್ಲಿ —

“ಪರಮಾಣುತ್ವಂ ಪ್ರಾಪ್ತೋ ವಜ್ರಾದೀನಾಮಪ್ಯಂತಃ ಪ್ರವಿಶತಿ”

ಅಂದರೆ ಪರಮಾಣುತ್ವಸಿದ್ಧಿಯನ್ನು ಪಡೆದ ಯೋಗಿಯು ವಜ್ರಾದಿಗಳಲ್ಲಿಯೂ ಸಹ ಪ್ರವೇಶಮಾಡುವನು ಎಂದು ಬರೆದಿದ್ದಾನೆ ಅಂದಮೇಲೆ ಶಿವಯೋಗಿಶಿಖಾಮಣಿಗಳೆನಿಸಿಕೊಂಡು ಅಘಟನಘಟನಸಾಮರ್ಥ್ಯಶಾಲಿಗಳಾಗಿದ್ದ ಶ್ರೀಜಗದ್ಗುರುರೇಣುಕಾದಿಪಂಚಾಚಾರ್ಯರು ಯೋಗಮಹಿಮೆಯ ದ್ವಾರಾ ಶಿವಲಿಂಗಮುಖದಿಂದ ಅವತರಿಸುವದರಲ್ಲೇನಾಶ್ಚರ್ಯವು? ಸಾಕ್ಷಾತ್ ಪರಮೇಶ್ವರನ ಚಿತ್ಕಲಾಸ್ವರೂಪರಾಗಿದ್ದು ತೇಜೋಮಯಶರೀರಧಾರಿಗಳಾಗಿರುವ ಆ ಪ್ರಮಥಪುಂಗವರನ್ನು ಈಗಿನ ಮಾನವರಂತೆ ಭಾವಿಸುವುದು ಬಹುಜನ್ಮಕೃತಪಾಪಪ್ರಭಾವವಲ್ಲದೆ ಬೇರೆಯಲ್ಲ. ಅಸ್ತು! ಬಸವಪಂಥಿಗಳು ಅಸೂಯಾಭರದಲ್ಲಿ ಜ್ಯೋತಿರ್ಲಿಂಗಮೂರ್ತಿಗಳಿಗೆ ಶಿಲೆಯೆಂದು ನುಡಿಯುವದು ಶುದ್ಧ ನಾಸ್ತಿಕತನ! ಶಿವಲಿಂಗಕ್ಕೆ ಕಲ್ಲೆಂದು ನುಡಿಯುವವರು. ತಮ್ಮ ಎದೆಯ ಮೇಲೆ ಧರಿಸಿಕೊಂಡಿರುವದನ್ನು ಸಹ ಕಲ್ಲೆಂದೇ ಭಾವಿಸಬೇಕಾಗುವದಲ್ಲವೇ? ಅವರು ಹೀಗೆ ಭಾವಿಸುವರೋ? ಪೂರ್ವಾಪರ ವಿಚಾರಮಾಡದೆ ಪ್ರಾಣಪ್ರತಿಷ್ಠಾಯುಕ್ತವಾದ ಶಿವಲಿಂಗಮೂರ್ತಿಗಳಿಗೆ ಕಲ್ಲೆಂದು ನುಡಿಯುವದು ಮಹಾಪಾಪವು! ಶ್ರೀಪರಮೇಶ್ವರನು ಮಾರ್ಕಂಡೇಯನನ್ನುದ್ಧರಿಸುವದಕ್ಕೋಸ್ಕರ ಶಿವಲಿಂಗಮುಖದಿಂದ ಅವತರಿಸಲಿಲ್ಲವೇ? ವಿಷ್ಣುವು ಪ್ರಹ್ಲಾದನನ್ನುದ್ಧರಿಸುವದಕ್ಕೋಸ್ಕರ ಸ್ತಂಭದಿಂದ ಅವತರಿಸಲಿಲ್ಲವೇ? ಜಗದ್ವಿಖ್ಯಾತನಾಗಿರುವ ಅಗಸ್ತ್ಯಮಹರ್ಷಿಯು ಕುಂಭದಿಂದ ಅವತರಿಸಲಿಲ್ಲವೇ? ಸೀತಾದೇವಿಯು ಭೂಗರ್ಭದಿಂದ ಅವತರಿಸಲಿಲ್ಲವೇ? ಲೋಕಪ್ರಸಿದ್ಧವಾದ ಈ ವಿಷಯಗಳೆಲ್ಲವನ್ನೂ ಸುಳ್ಳು ಎನ್ನಲಿಕ್ಕೆ ಬರುತ್ತದೆಯೇ? ಪ್ರಾಚೀನಗ್ರಂಥಕಾರರು ಈಗಿನವರಂತೆ ದುರಭಿಮಾನಿಗಳಾಗಿದ್ದಿಲ್ಲ, ಪಕ್ಷಪಾತಿಗಳಾಗಿದ್ದಿಲ್ಲ, ನಾಸ್ತಿಕರಾಗಿದ್ದಿಲ್ಲ, ಅವರು ಇದ್ದಕ್ಕಿದ್ದಹಾಗೆ ಯಥಾರ್ಥವಿಷಯಗಳನ್ನು ತಮ್ಮ ಗ್ರಂಥಗಳಲ್ಲಿ ಉಲ್ಲೇಖಿಸಿದ್ದಾರೆ ಎಲ್ಲ ಮಹರ್ಷಿಗಳಿಗೂ ತಂದೆತಾಯಿಗಳ ಹೆಸರನ್ನು ಬರೆದ ಗ್ರಂಥಕಾರರು ಅಗಸ್ತ್ಯರಿಗೇಕೆ ಬರೆಯಲಿಲ್ಲ? ವಿಷ್ಣುವಿನ ಅವತಾರಿಯೆಂದು ಪ್ರಸಿದ್ಧನಾಗಿರುವ ಶ್ರೀರಾಮಚಂದ್ರನಿಗೆ ತಂದೆತಾಯಿಗಳ ಹೆಸರನ್ನು ಬರೆದು, ಸೀತಾದೇವಿಗೇಕೆ ಬರೆಯಲಿಲ್ಲ? ಅವರಿಗೆ ನಿಜವಾಗಿಯೂ ತಂದೆತಾಯಿಗಳಿದ್ದರೆ, ಅದನ್ನು ಮರೆಮಾಚುವದರಿಂದ ಗ್ರಂಥಕಾರರಿಗೆ ಬರುವ ಪ್ರಯೋಜನವೇನಿತ್ತು? ಅವರು ಅಗಸ್ತ್ಯ-ಸೀತಾದೇವಿಯವರಿಂದ ಲಂಚವನ್ನೇನಾದರೂ ತೆಗೆದುಕೊಂಡಿದ್ದರೇ? ಇದೆಂತಹ ಮೂರ್ಖತನ? ಜಗದ್ವಿಖ್ಯಾತನಾಗಿರುವ ವ್ಯಾಸ ಮತ್ತು ಪಾಂಡವರ ಉತ್ಪತ್ತಿಯು ಅತ್ಯಂತ ಹೇಯವಾಗಿದ್ದರೂ, ಅವನ್ನು ಇದ್ದಕ್ಕಿದ್ದಹಾಗೆಯೇ ಬರೆದಿರುವರಲ್ಲವೇ? ಇದರಿಂದ ಪ್ರಾಚೀನಗ್ರಂಥಕಾರರು ಎಲ್ಲ ವಿಷಯಗಳನ್ನೂ ಇದ್ದಕ್ಕಿದ್ದಂತೆಯೇ ಬರೆದಿರುವರೆಂದು ಸ್ಪಷ್ಟವಾಗುವದಿಲ್ಲವೇ? ಆದುದರಿಂದ ಆ ಮಹಾತ್ಮರು ಬರೆದಿರುವ ವಿಷಯಗಳನ್ನು ನಂಬಬೇಕು. ಅವರ ವಾಕ್ಯಗಳೇ ನಮಗೆ ಆಪ್ತವಾಕ್ಯಗಳು ಆಸ್ತಿಕರಿಗೆ ಆಪ್ತವಾಕ್ಯವೇ ಮುಖ್ಯಪ್ರಮಾಣವು ತಮ್ಮ ಉತ್ಪತ್ತಿಯ ವಿಷಯದಲ್ಲಿ ತಾಯಿಯ ವಾಕ್ಯವು ಹೇಗೆ ಆಪ್ತವಾಕ್ಯವೆನಿಸುವುದೋ, ಹಾಗೆಯೇ ಪೂರ್ವಾಚಾರ್ಯರ ಅವತಾರವಿಷಯದಲ್ಲಿಯೂ ಪ್ರಾಚೀನಗ್ರಂಥಕಾರರ ವಾಕ್ಯಗಳು ಆಪ್ತವಾಕ್ಯಗಳೆಂದು ಭಾವಿಸಬೇಕು. ಆದುದರಿಂದ ಆಪ್ತವಾಕ್ಯವನ್ನು ಸರ್ವರೂ ನಂಬಲೇಬೇಕು ಇಲ್ಲದಿದ್ದರೆ ಪ್ರಪಂಚವೇ ತಲೆಕೆಳಗಾಗುವ ಪ್ರಸಂಗವು ಬರುವುದು. ಆದುದರಿಂದ ಪ್ರಾಚೀನಗ್ರಂಥಗಳಲ್ಲಿ ಮುಖ್ಯವಾಗಿ ನಂಬಿಗೆಯನ್ನಿಡಬೇಕು ಆ ಮಹಾತ್ಮರು ಹೇಳಿದ ವಾಕ್ಯಗಳು ಸತ್ಯವೆಂದು ಭಾವಿಸಬೇಕು ಅಂದರೆ ಸರ್ವವೂ ಸಮಂಜಸವಾಗುವದು ಪೂರ್ವಾದಿಗಳು ಈ ವಿಷಯಗಳನ್ನೆಲ್ಲ ನಿರ್ಮಲಮನಸ್ಸಿನಿಂದ ಆಲೋಚಿಸಿ, ಅಘಟನಘಟನಸಾಮರ್ಥ್ಯಶಾಲಿಗಳಾದ ಶ್ರೀಜಗದ್ಗುರುರೇಣುಕಾದಿಪೂರ್ವಾಚಾರ್ಯರಲ್ಲಿ ಅನಿತರಸಾಧಾರಣವಾದ ಪೂಜ್ಯಭಾವನೆಯನ್ನಿಟ್ಟು ಧನ್ಯರಾಗಬೇಕೆಂದಾಶಿಸುತ್ತೇವೆ

ಸ್ವೀಕಾರ

ಧಾರವಾಡ ಡಿ|| ಹೊಳೆಆಲೂರು ಗ್ರಾಮದಲ್ಲಿರುವ ವೇ|| ಭಿಕ್ಷಾವೃತ್ತಿ ಹಿರೇಮಠದ ರೇವಣಸಿದ್ಧಯ್ಯನವರು ತಮ್ಮ ಪುತ್ರಿ ಚಿ|| ಸೌ|| ಪಾರ್ವತೀಬಾಯಿಯನ್ನು ಬಾಗಲಕೋಟೆಯಲ್ಲಿರುವ ವೇ|| ಗದಿಗಯ್ಯನಮಠದ ಗದಿಗಯ್ಯನವರ ಪುತ್ರ ಚಿ|| ಮಹಾಂತಯ್ಯನಿಗೆ ಕೊಟ್ಟು ನೆರವೇರಿಸಿದ ವಿವಾಹ ಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 2 ರೂಪಾಯಿಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ

ಬಳ್ಳಾರಿ ಡಿ|| ಹಡಗಲಿ ತಾ|| ನವಲಿ ಗ್ರಾಮದ ಹಿರೇಮಠದಲ್ಲಿ ನೆರವೇರಿದ ಮಾಹೇಶ್ವರ ದೀಕ್ಷಾಸಮಯದಲ್ಲಿ ವೇ|| ಹಂಚಿನಾಳ ಹಿರೇಮಠದ ರುದ್ರಯ್ಯನವರು ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 2 ರೂಪಾಯಿಗಳು ಹುವಿನಹಡಗಲಿಯಲ್ಲಿರುವ ಮ|| ರಾ|| ಗುಗ್ರಿ ಹುಚ್ಚಪ್ಪನವರ ದ್ವಾರಾ ತಲ್ಪಿರುತ್ತವೆ

ಸಾಂಗ್ಲಿ ಸಂಸ್ಥಾನಕ್ಕೆ ಸೇರಿದ ದೊಡವಾಡ ಗ್ರಾಮದ ವೇ|| ಚರಂತಿಮಠದ ಗುರುಸಿದ್ಧಯ್ಯನವರು ಸೊಗಲದ ಸೋಮನಾಥನ ದೇವಾಲಯದಲ್ಲಿ ಶಿವರಾತ್ರಿ ಪೂಜೆಯನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂಪಾಯಿಯು ಶ್ರೀ|| ಷ|| ಬ್ರ|| ಸುತ್ತಗಟ್ಟಿ ಹಿರಿಯಮಠದ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತದೆ

ಬಳ್ಳಾರಿ ಡಿ|| ಕೊಟ್ಟೂರಲ್ಲಿರುವ ಶ್ರೀ ಜಗದ್ಗುರು ದಾರುಕಾಶ್ರಮದಲ್ಲಿ ನೆರವೇರಿದ ಸಂಕ್ರಾಂತಿಮಹೋತ್ಸವ ಸಮಯದಲ್ಲಿ ಹನಸಿ ಗಂಗವ್ವನು ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂಪಾಯಿಯು ವೇ|| ಪಿ. ಎಂ. ಮರುಳಾರಾಧ್ಯರ ದ್ವಾರಾ ತಲ್ಪಿರುತ್ತದೆ

೧ನೆಯ ಪುಟದಿಂದ ಮುಂದುವರೆದುದು

ಅಲ್ಲಲ್ಲಿ ಸಣ್ಣ ಸಣ್ಣ ಬಾವಿಗಳನ್ನು ಕಟ್ಟಿಸಿ ನೀರಿನಲ್ಲಿ ಔಷಧವನ್ನು ಹಾಕಿಸುತ್ತಾರೆ ಈ ವರ್ಷ ಮಹಾ ಶಿವರಾತ್ರಿಗೆ ಸಾಂಗಲಿ ಸ್ಟೇಟಿಗೆ ಸೇರಿದ ದೊಡ್ಡವಾಡವೆಂಬ ಗ್ರಾಮದ ಚರಂತಿಮಠದ ವೇ|| ಗುರುಸಿದ್ಧಯ್ಯನವರು ಮತ್ತು ವೇ|| ಗುರುಬಸಯ್ಯನವರು ಲಿಂಗಪ್ಪ ಹತ್ತಿಕಟ್ಟಿಗಿ ಬಸಪ್ಪ ಧಾರವಾಡ ಇವರೇ ಮೊದಲಾದ ವೀರಶೈವ ಪ್ರಮುಖರು ಶ್ರೀ ಸೋಮನಾಥ ಕ್ಷೇತ್ರಕ್ಕೆ ನಮ್ಮನ್ನು ಕರೆದುಕೊಂಡುಹೋಗಿದ್ದರು. ಅಲ್ಲಿ ಶ್ರೀ ಸೋಮನಾಥನಿಗೆ ಮಹಾ ಶಿವರಾತ್ರಿಯ ದಿವಸ ಏಕಾದಶ ರುದ್ರಾಭಿಷೇಕವನ್ನು ಮಾಡಿಸಿದರು. ಇವರೆಲ್ಲರೂ ತರುಣರಾಗಿದ್ದು ಧರ್ಮದ ಕಳಕಳಿಯುಳ್ಳವರೂ ಆಚಾರ್ಯಸೇವಾಧುರೀಣರೂ ಆಗಿದ್ದಾರೆ. ಈ ಗ್ರಾಮದೇವರಾದ ಶ್ರೀ ರಾಮಲಿಂಗೇಶ್ವರ ದೇವಾಲಯದಲ್ಲಿ ಪ್ರತಿವರ್ಷ ತಪ್ಪದೆ ಭಾದ್ರಪದ ಮಾಸದ ಕೊನೆಯಲ್ಲಿ ಒಂದು ಸಪ್ತಾಹ ರುದ್ರಾಭಿಷೇಕ ಭಜನೆಯನ್ನು ಅವಿಚ್ಛಿನ್ನವಾಗಿಟ್ಟು ಅದರ ಜೊತೆಗೆ ಧರ್ಮಜಾಗೃತಿಯನ್ನು ಮಾಡುತ್ತಾರೆ. ಇವರ ಧರ್ಮಕಾರ್ಯವು ಸ್ತುತ್ಯವಾಗಿದೆ. ಈ ಮಹಾಶಯರಿಗೆಲ್ಲಾ ಪರಮೇಶ್ವರನು ಆಯುರಾರೋಗ್ಯಭಾಗ್ಯಗಳನ್ನು ಕೊಡಲೆಂದು ಹಾರೈಸುತ್ತೇನೆ.

ಶ್ರೀ ಗುರುವರ್ಯಶಿವಾಚಾರ್ಯರು
ಹಿರೇಮಠ ಸುತ್ತಗಟ್ಟಿ

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಮಕರಸಂಕ್ರಾಂತಿಮಹೋತ್ಸವ, ಕೊಟ್ಟೂರು

ಈ ನಗರದಲ್ಲಿರುವ ಶ್ರೀದಾರುಕಾಶ್ರಮದಲ್ಲಿ ಸಂಕ್ರಾಂತಿಮಹೋತ್ಸವವು ಪ್ರತಿವರ್ಷವೂ ಅತಿ ವಿಜೃಂಭಣೆಯಿಂದ ನಡೆಯುತ್ತ ಬಂದಿದ್ದು ಇತ್ತೀಚೆಗೆ ನಿಂತುಹೋದ ಸಂಗತಿಯನ್ನು ಕೇಳಿ ಇಲ್ಲಿಯ ಬೃಹನ್ಮಠಾಧ್ಯಕ್ಷ ಶ್ರೀ|| ಷ|| ಬ್ರ|| ಭೂತಭುಜಂಗಸ್ವಾಮಿಗಳು ಕೆಲವು ಪ್ರಮುಖರನ್ನು ಬರಮಾಡಿಕೊಂಡು ಈ ಮಹೋತ್ಸವವನ್ನು ಮೊದಲಿನಂತೆ ಆಚರಿಸಬೇಕೆಂದು ಬೋಧಿಸಿದರು. ಅದರಂತೆ ಸರ್ವರೂ ದಾರುಕತೀರ್ಥದಲ್ಲಿ ಸ್ನಾನಮಾಡಿ ಶಿವಪೂಜಾದಿ ನಿತ್ಯಕರ್ಮಗಳನ್ನು ತೀರಿಸಿಕೊಂಡು ಜಗದ್ಗುರು ಗುರುಸಿದ್ಧಮಹಾಸ್ವಾಮಿಗಳ ಗದ್ದುಗೆಗೆ ರುದ್ರಾಭಿಷೇಕವನ್ನು ಮಾಡಿದರು ತಿಲಶರ್ಕರಾಮಿಶ್ರಿತ ಮಿಷ್ಟಾನ್ನದಿಂದ ಗಣಸಂತರ್ಪಣೆಯಾಯಿತು ಹನಸಿ ಗಂಗಾಮತೀಯ ಗಂಗವ್ವನು ಸಕಲಸಾಹಿತ್ಯಗಳನ್ನು ಒದಗಿಸಿಕೊಟ್ಟು ಈ ಸರ್ವಕಾಲದಲ್ಲಾದ ಎಲ್ಲಾ ಖರ್ಚನ್ನು ಕೊಟ್ಟದ್ದಲ್ಲದೆ ಶ್ರೀ ಭುಜಂಗಸ್ವಾಮಿಗಳವರಿಗೆ ಶಿವಪೂಜೆಗಾಗಿ ಒಂದು ಬೆಳ್ಳಿಯ ಕರಕಮಲವನ್ನು ಅರ್ಪಿಸಿದಳು ಮತ್ತು ಶ್ರೀ ಹಸುಗೋಡು ಸ್ವಾಮಿಗಳಿಗೂ ಇನ್ನಿತರ ಮಾಹೇಶ್ವರವರ್ಗಕ್ಕೂ ಭೂರಿದಕ್ಷಿಣೆಯನ್ನು ಕೊಟ್ಟಳು. ಅಷ್ಟರಲ್ಲಿಯೇ ಶ್ರೀಜಗದ್ಗುರು ಸಿದ್ಧೇಶ್ವರ ಶಿವಾಚಾರ್ಯಮಹಾಸ್ವಾಮಿಗಳು ದಯಮಾಡಿಸಿದರು. ಆಮೇಲೆ ಮಹಾಮಂಗಲಾರತಿಯಾಗಿ ಜಗದಾಚಾರ್ಯರ ಜಯಘೋಷದೊಡನೆ ಕಾರ್ಯವು ಸಮಾಪ್ತಿಗೊಂಡಿತು

ಪಿ. ಎಂ. ಮರುಳಾರಾಧ್ಯ

ವಿವಾಹಮಹೋತ್ಸವ, ಹುಬ್ಬಳ್ಳಿ

ಹುಬ್ಬಳ್ಳಿಯಲ್ಲಿ ಮಜೀತಪುರ ಹಿರೇಪೇಟೆಯ ಮ|| ರಾ|| ಬಿ. ಎ. ಶೆಟ್ಟರ ಮನೆಯಲ್ಲಿ ತಾ|| ೮-೩-೪೫ನೆಯ ದಿವಸ ಅವರ ಚಿರಂಜೀವಿಗಳಿಗೆ ವಿವಾಹಮಹೋತ್ಸವವು ಅಭೂತಪೂರ್ವ ವೈಭವದೊಡನೆ ನೆರವೇರಿತು. ವಿವಾಹಾಂಗಭೂತವಾದ ಸಕಲ ಕರ್ಮಗಳೂ ವೇ|| ಹಿರೇಮಠದ ಸೋಮನಾಥಯ್ಯನವರಿಂದ ವಿಧ್ಯುಕ್ತವಾಗಿ ನೆರವೇರಿಸಲ್ಪಟ್ಟವು ಅನ್ನಸಂತರ್ಪಣವು ವಿಶೇಷವಾಗಿ ನೆರವೇರಿತು. ಈ ಮಹೋತ್ಸವಕ್ಕೆ ಡಿ|| ಡೆ|| ಕಲೆಕ್ಟರ್ ಮೆ|| ನಿರಡಿ ಸಾಹೇಬರೂ ಸರ್ಕಾರಿ ಪ್ರಮುಖ ಅಧಿಕಾರಿಗಳೂ, ದೊಡ್ಡ ದೊಡ್ಡ ವ್ಯಾಪಾರಿಗಳೂ ಎಲ್ಲ ಜಾತಿಯ ಮುಖಂಡರೂ ಆಗಮಿಸಿದ್ದರು ಶೆಟ್ಟರು ಮಹಾಗುರುಪೀಠಾಭಿಮಾನಿಗಳಾಗಿದ್ದು ಹಿಂದಕ್ಕೆ ಇಲ್ಲಿಗೆ ರಂಭಾಪುರೀ ಜಗದ್ಗುರುಗಳು ಆಗಮಿಸಿದ್ದ ಸಮಯದಲ್ಲಿ ಬಹಳ ದಕ್ಷತೆಯಿಂದ ಕೆಲಸ ಮಾಡಿದರು. ಈ ವಿವಾಹ

ಸಮಯದಲ್ಲಿ ಶ್ರೀ ಜಗದ್ಗುರು ಕಾಶಿಜ್ಞಾನಪೀಠ ನಿಧಿಗೆ ೧೧ ರೂಪಾಯಿಗಳನ್ನು ಸಮರ್ಪಿಸಿದರು ಮತ್ತು ಹುಬ್ಬಳ್ಳಿಯಲ್ಲಿರುವ ಮ||ರಾ|| ಇಂಡಿ ಶಿವರುದ್ರಪ್ಪನವರು ತಮ್ಮ ಮನೆಯಲ್ಲಿ ನೆರವೇರಿದ ವಿವಾಹ ಸಮಯದಲ್ಲಿ ಮೇಲ್ಕಂಡ ನಿಧಿಗೆ ೧೦ ರೂಪಾಯಿಗಳನ್ನು ಸಮರ್ಪಿಸಿ ಪರು ಈ ರೂಪಾಯಿಗಳನ್ನು ವೇ|| ಸೋಮನಾದಯ್ಯನವರು ಕ್ಷಾಶೀಪೀಠಕ್ಕೆ ಕಳುಹಿಸಿಕೊಟ್ಟರು ಶ್ರೀ ಜಗದಾಚಾರ್ಯರುನೂತನ ವಧೂವರರಿಗೆ ಸಕಲ ಸನ್ಮಂಗಲಗಳನ್ನೀಯಲೆಂದು ಪ್ರಾರ್ಥಿಸುತ್ತೇನೆ

ಓರ್ವ ಗುರುಭಕ್ತ

ಅಶೋಕ

ಅಶೋಕನು ಸುಮಾರು 2 ಸಾವಿರ ವರ್ಷಗಳ ಕೆಳಗೆ ನಮ್ಮ ದೇಶವನ್ನು ಆಳಿದನು ಬಹುವಟ್ಟಿಗೆ ಇಂಡಿಯಾ ದೇಶವೆಲ್ಲವೂ ಆತನಿಗೆ ಸೇರಿತ್ತು ಕಳಿಂಗದೇಶವನ್ನು ಜಯಿಸಬೇಕೆಂದು ಅವನು ಒನ್ನೆ ಹೊರಟನು ಬಹು ಜನರ ವಧೆಯಿಂದಲೂ, ಪ್ರಾಣಿಗಳ ನಾಶದಿಂದಲೂ ಅವನಿಗೆ ಗಲುಪ್ತ ದೊರಯಿತು ಆದರ ಚಕ್ರವರ್ತಿಯ ಅಂತಃಕರಣ ಮಾತ್ರ ಕರಗಿತು

ಯುದ್ಧದ ಹೆಸರಿನಲ್ಲಿ ಅನೇಕುದುರಗಳೂ ಜನವೂ ನಾಶವಾಗವುದು ಅನ್ಯಾಯವೆಂದು ಅವನಿಗೆ ತೋರಿತು ಸರ್ವ ಪ್ರಾಣಿಗಳಲ್ಲೂ ದಯೆಯೇ ಧರ್ಮ ಎಂಬ ಬುದ್ಧನ ಧರ್ಮ ಅವನಿಗ ಸರಿಯಾಗಿ ತೋರಿತು ಅಂದಿನಿಂದ ಯುದ್ಧವನ್ನು ಬಿಟ್ಟನು ಬುದ್ಧನ ದರ್ಮವನ್ನೂ ನೀತಿಯನ್ನೂ ಜನರು ಅರಿಯಲಿ ಆದರಂತೆ ನಡೆದು ಬದುಕನ್ನ ತಿದಿ ಕೊಳ್ಳಲಿ ಎಂದು ಊರೂರಲ್ಲೂ ನಡತೆಯನ್ನು ಬೋಧಿಸುವ ಶಾಸನಗಳನ್ನು ಕೆತ್ತಿಸಿ ನೆಡಿಸಿದನು ಕಳಗಿನ ಶಾಸನವು ಮೈಸೂರುಸೀಮೆಯ ಮೊಳಕಲ್ಮರು ತಾಲ್ಲೂಕು ಬ್ರಹ್ಮಗಿರಿಯಲ್ಲಿರುವದು

ಅಶೋಕ ಚಕ್ರವರ್ತಿಯ ಶಾಸನ

ದೇವಪ್ರಿಯನಾದ ಅಶೋಕ ಚಕ್ರವರ್ತಿಯ ಅಪ್ಪಣೆ ಏನಂದರೆ

ನಾನು ಉಪಾಸಕನಾಗಿ ಎರಡೂವರ ವರ್ಷಗಳಿಗಿಂತ ಹಚ್ಚಾಯಿತು ಆದರೆ ನಿಜವಾಗಿಯೂ ನಾನು ಒಂದು ವರ್ಷದವರೆಗೂ ಹೆಚ್ಚು ಪ್ರಯತ್ನ ಮಾಡಲಿಲ್ಲ ಬೌದ್ಧರ ಸಂಘವನ್ನು ಸೇರಿ ಈಗ್ಗೆ ಒಂದುವರ್ಷದ ಮೇಲಾಯಿತು ಆಗಿನಿಂದಲೂ ಹೆಚ್ಚಾದ ಶ್ರದ್ಧೆಯನ್ನು ವಹಿಸಿರುವೆನು ದೇವತೆಗಳೊಡನೆ ಬೆರೆಯದೆ ಇದ್ದ ಜಂಬೂ ದ್ವೀಪದ ಜನರು ಇಷ್ಟುಕಾಲದಲ್ಲಿ ಅವರೊಂದಿಗೆ ಕಲೆತರು ಇದೆಲ್ಲಾ ಶ್ರದ್ಧೆಯ ಫಲವು **ಇದು ಸತ್ಯವಾಗಿಯೂ ಮಹಾತ್ಮರಿಗೆ ಮಾತ್ರವೇ ಲಭ್ಯವಲ್ಲ. ಅಲ್ಪ ಮನುಷ್ಯನಿಗೂ ಪ್ರಯತ್ನದಿಂದ ವಿಪುಲವಾದ ಸ್ವರ್ಗವು ಹೊಂದಲು ಸಾಧ್ಯವು** ಅಲ್ಪರೂ ದೊಡ್ಡವರೂ ಈ ರೀತಿಯಾಗಿ ಪ್ರಯತ್ನ ಪಡಬೇಕೆಂದೂ ಈ ಶ್ರದ್ಧೆಯು ಚಿರಸ್ಥಾಯಿಯಾಗಬೇಕೆಂದೂ ಈ ಪ್ರಕಟನೆಯನ್ನು ಪ್ರಸಿದ್ಧಿಪಡಿಸಿದೆ ಈ ವಿಷಯವನ್ನು ಇನ್ನೂ ವೃದ್ಧಿಪಡಿಸುವೆನು ಅಧಿಕವಾಗಿ ವಿಸ್ತರಿಸುವೆನು ಈಗಿರುವುದಕ್ಕಿಂತ ಒಂದೂವರೆಯಷ್ಟಾದರೂ ಹೆಚ್ಚಿಸುವೆನು ಈ ಪ್ರಕಟನೆಯು ನನ್ನ ಸಂಚಾರದಲ್ಲಿ 256 ರಾತ್ರಿಗಳು ಕಳೆದ ಒಳಿಕ ಹೊರಟಿರುವುದು

(ದೇವಾನಾಂ ಪ್ರಿಯನು ಹೀಗೆಂದು ಹೇಳಿರುವನು)

ತಾಯಿತಂದೆಗಳ ಸೇವೆಯನ್ನು ಮಾಡಬೇಕು ಹಾಗೆಯೇ ಹಿರಿಯರಲ್ಲಿಯೂ ನಡೆದುಕೊಳ್ಳಬೇಕು ಪ್ರಾಣಿಗಳಲ್ಲಿ ದಯೆ ಇಡಬೇಕು, ಸತ್ಯವನ್ನು ನುಡಿಯಬೇಕು, ಈ ದರ್ಮಗುಣಗಳನ್ನು ಆಚರಿಸಬೇಕು ಹೀಗೆಯೇ ಶಿಷ್ಯರು ಆಚಾರ್ಯರನ್ನು ಪೂಜಿಸಬೇಕು ನೆಂಟರಲ್ಲಿ ಸರಿಯಾಗಿ ನಡೆದುಕೊಳ್ಳಬೇಕು ಇದು ಪೂರ್ವದಿಂದ ನಡೆದು ಬಂದಿರುವ ಮಾರ್ಗವು ಹೀಗೆ ಆಚರಿಸಬೇಕು ಹೀಗೆ ಆಚರಿಸುವುದರಿಂದ ಆಯುಸ್ಸು ಹೆಚ್ಚುವುದು ಈರೀತಿಯಲ್ಲಿಯೇ ಇದನ್ನು ನಡೆಸಬೇಕು

ಲಿಪಿಕಾರನಾದ ಚಪುಡನು ಬರೆದದ್ದು

ಹಿರಿದಾದ ನಡತೆಯೂ, ಬದುಕೂ ದೊಡ್ಡವರಿಗೆ ಮಾತ್ರವೇ ಸಾಧ್ಯ ಸಾಮಾನ್ಯಜನಕ್ಕೆ ಅದು ಅಸಾಧ್ಯ, ಎಂದು ಜನ ಹೇಳುವುದುಂಟು ಹೀಗೆ ಹೇಳಿ ಸೊಟ್ಟ ದಾರಿಯಲ್ಲೇ ನಡೆಯುತ್ತಾರೆ ಇದು ಸರಿಯಲ್ಲ ಒಳ್ಳೆಯ ಕಲಸವನ್ನು ಮಾಡುವುದು, ಒಳ್ಳೆಯ ಮನಸ್ಸಿನಿಂದ ಇರುವುದು– ಇವೆಲ್ಲ ಯಾರಾದರೂ ನಡೆಸಬಹುದು, ಎಂದು ಶಾಸನ ಒತ್ತಿ ಹೇಳುತ್ತದೆ

(ಬೆಳಕು)

ಕ್ಷಯಕ್ಕೆ ಮದ್ದು ಜೇನುತುಪ್ಪ

ರಷ್ಯದ ಬಿರುಡೇ ಮರ ಒಂದರ ಹೂವಿನಿಂದ ಜೇನು ದೊರೆಯುತ್ತದೆ ಅದು ಬಹುಕಾಲದಿಂದ ಕ್ಷಯರೋಗಕ್ಕೆ ಮದ್ದಾಗಿ ಉಪಯೋಗ ಆಗುತ್ತಿತ್ತು ಈಚಿನ ಪರೀಕ್ಷೆಗಳಿಂದ ಜೇನುತುಪ್ಪ ಕ್ಷಯಕ್ಕೆ ಉತ್ತಮ ಔಷಧ ಎಂದು ಗೊತ್ತಾಗಿದೆ ಆದ್ದರಿಂದ ಅದನ್ನು ಹೆಚ್ಚುಪ್ರಮಾಣದಲ್ಲಿ ತಯಾರಿಸಲು ಪರೀಕ್ಷೆ ನಡೆಯುತ್ತಿದೆ

—ಸುಗ್ಗಿಯ ಮೈಸೂರು

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೭ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ, ಚಿಕ್ಕಸೈಜು)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಆಗಮಪಂಜ್ಞಾನ	೮ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧ (ವೈದಿಕಸ್ವರಯುಕ್ತವಾದುದು. ೨ನೆಯ ಆವೃತ್ತಿ)	೧| ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧|| ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧|| ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	4 A
The Philosophical Aspect of Virasaivism (*English*)	8 A
Speeches by Pandit Shri Kashinatha Shastriji (*English*)	12 A
लिंगधारणचन्द्रिका (संस्कृत)	३
वीरशैवरत्न (मराठी)	१
महानारायणोपनिषत् (वीरशैवभाष्य–संस्कृत)	१
सिद्धांतशिखामणि (मूल)	८
नंदिकेश्वरकारिका (संस्कृत)	२

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಜೋ ಧರರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ೪ ಆಣೆ

ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ.

ಸಂಪುಟ ೧೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೫ನೇ ಮಾರ್ಚಿ ೧೯೪೫ [ಸಂಚಿಕೆ ೪೫

ಸ್ವೀಕಾರ

ಬೆಂಗಳೂರು ಡಿ॥ ಕಾನಕಾನಹಳ್ಳಿ ತಾ॥ ಕೋಡಿಹಳ್ಳಿಯಲ್ಲಿರುವ ಶ್ರೀ ವೀರಶೈವಸಮಾಜಸೇವಾಸಂಘದವರು ಶ್ರೀ ಜಗದ್ಗುರು ರೇಣುಕಾರ್ಯರ ಜಯಂತೀ ಮಹೋತ್ಸವವನ್ನು ವಿಶೇಷ ವೈಭವದಿಂದ ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ಮ॥ ರಾ॥ ಕೆ ಎ ರಾಜಶೇಖರಯ್ಯನವರ ದ್ವಾರಾ ತಲ್ಪಿರುತ್ತವೆ

ಶಿವಮೊಗ್ಗಾ ಡಿ॥ ತೀರ್ಥಹಳ್ಳಿ ತಾ॥ ಉದ್ಭಾವೆ ವರಮಠದ ಚಿ॥ ಪಿ ಸಿ ಪ್ರಭಯ್ಯನಿಗೆ ದವಣಗೆರೆ ಮೈಸೂರು ಮಠದ ವೇ॥ ಚನ್ನವೀರಯ್ಯನವರ ಪುತ್ರಿ ಚಿ॥ ಸೌ॥ ಸಾವಿತ್ರಮ್ಮನನ್ನು ತಂದು ಉದ್ಭಾವೆ ವರಮಠದಲ್ಲಿ ನೆರವೇರಿಸಿದ ವಿವಾಹಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ವರನ ಅಣ್ಣಂದಿರಾದ ವೇ॥ ಪಿ ಸಿ ಶಿವಲಿಂಗಯ್ಯನವರ ದ್ವಾರಾ ತಲ್ಪಿರುತ್ತವೆ

ಬಳ್ಳಾರಿ ಡಿ॥ ಕೂಡ್ಲಿಗಿ ತಾಲ್ಲೂಕು ಹರಿಗೊಂಡನಹಳ್ಳಿ ಮ॥ ರಾ॥ ಮರುಳನಗೌಡರ ಲಿಂಗಪ್ಪನವರ ಅನುಜರಾದ ಮಹಾಲಿಂಗಪ್ಪನವರ ಪುತ್ರಿ ಚಿ॥ ಶಾಂಭವಿ ಅವ್ವನನ್ನು ಕೊಟ್ಟೂರುಗ್ರಾಮದ ಮ॥ ರಾ॥ ಕಡ್ಲಿ ಬಸವಲಿಂಗಪ್ಪನವರ ಪುತ್ರ ಚಿ॥ ಚಂದ್ರಪ್ಪನಿಗೆ ಕೊಟ್ಟು ನಿಶ್ಚಯಕಾರ್ಯವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವಧೂವರರಿಂದ ತೆಗೆಯಿಸಿದ 2 ರೂಪಾಯಿಗಳು ವೇ॥ ಹರಿಗೊಂಡನಹಳ್ಳಿ ಮಠದ ಪರಪ್ಪಯ್ಯನವರು ಮತ್ತು ಕೊಟ್ಟೂರುಮಠದ ವೇ॥ ಪಿ ಎಂ ಮರುಲಾರಾಧ್ಯರು ಇವರ ದ್ವಾರಾ ತಲ್ಪಿರುತ್ತವೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಜಗದಾಚಾರ್ಯರ ಜಯಂತೀ ಮಹೋತ್ಸವಗಳು

ಶ್ರೀಕ್ಷೇತ್ರ ಕಾಶಿ

ಭೂಕೈಲಾಸ ವಾರಣಸೀಕ್ಷೇತ್ರ ವಿರಾಜಮಾನ ಶ್ರೀಮಜ್ಜಗದ್ಗುರು ವಿಶ್ವಾರಾಧ್ಯ ಪೀಠದಲ್ಲಿ ಮಹಾಶಿವರಾತ್ರಿ ಮಹೋತ್ಸವವೂ ಮತ್ತು ಜಗದ್ಗುರು ಪಂಡಿತಾರಾಧ್ಯ ವಿಶ್ವಾರಾಧ್ಯರ ಜಯಂತೀಮಹೋತ್ಸವಗಳೂ ಅಭೂತಪೂರ್ವ ವೈಭವದಿಂದ ನೆರವೇರಿದವು ಅಂದು ಜಗದ್ಗುರುಗಳು ಬ್ರಾಹ್ಮಮೂಹೂರ್ತದಲ್ಲಿ ಗುರುಕುಲ ಪರಿವಾರದಿಂದ ಕೂಡಿದವರಾಗಿ ಮಠದಿಂದ ಗಂಗಾಸ್ನಾನಕ್ಕಾಗಿ ದಯಮಾಡಿಸಿದರು. ಕೆಲವರು ಮಂಜುಲ ಧ್ವನಿಯಿಂದ ವೇದಘೋಷಮಾಡುತ್ತಿದ್ದರು ಕೆಲವರು ಮಂಗಲ ಗೀತೆಗಳನ್ನು ಹಾಡುತ್ತಿದ್ದರು ಮತ್ತೆ ಕೆಲವರು ಜಗದಾಚಾರ್ಯರ ಜಯಘೋಷವನ್ನು ಮಾಡುತ್ತಿದ್ದರು ಇಂದ ಸನ್ನಿವೇಶದೊಡನೆ ಶ್ರೀ ಜಗದ್ಗುರುಗಳ ಮೆರವಣಿಗೆಯು ಗಂಗಾ ನದಿಗೆ ತಲುಪಿತು ದಶಾಶ್ವಮೇಧ ಘಾಟಿನಲ್ಲಿ ಶ್ರೀ ಸನ್ನಿಧಾನದವರು ವಿಧ್ಯುಕ್ತವಾಗಿ ಸ್ನಾನಾನುಷ್ಠಾನಗಳನ್ನು ಪೂರೈಸಿಕೊಂಡು ವಿದ್ಯಾರ್ಥಿವೃಂದದೊಡನೆ ಶ್ರೀಮಠಕ್ಕೆ ದಯಮಾಡಿಸಿದರು ಆಮೇಲೆ ವಿಶ್ವಾರಾಧ್ಯ ಮೂರ್ತಿಗೆ ಏಕಾದಶವಾರಾರುದ್ರಾಭಿಷೇಕ, ಜ್ಞಾನಪೀಠಕ್ಕೂ ಶ್ರೀ ಹರೀಶ್ವರ ಸ್ವಾಮಿಗಳ ಗದ್ದುಗೆಗೂ ರುದ್ರಾಭಿಷೇಕ ಇತ್ತ ಶ್ರೀಮದನ್ನಪೂರ್ಣಾ ಮಂದಿರದಲ್ಲಿ ಶ್ರೀ ಸನ್ನಿಧಾನದವರ ಲಿಂಗರುದ್ರಾಭಿಷೇಕಾದಿಗಳು ಏಕಕಾಲದಲ್ಲಿಯೇ ಪ್ರಾರಂಭವಾಗಿ ಎಲ್ಲಿನೋಡಿದಲ್ಲಿ ವೇದಘೋಷವೇ ಘೋಷ! ಮಠವೆಲ್ಲವೂ ಮಂತ್ರಮಯವಾಗಿತ್ತು ಅಂದು ಕೈಲಾಸ ಮಂಟಪವು ಸಾಕ್ಷಾತ್ ಶಿವನ ಕೈಲಾಸಮಂಟಪವೇ ಆಗಿತ್ತು ಮಧ್ಯಾಹ್ನ ಶ್ರೀ ಸನ್ನಿಧಾನದವರ ಮಹಾಪಾದಪೂಜೆಯು ನಡೆಯಿತು ಆ ಸಮಯದಲ್ಲಿ ಎಮ್ಮಿಗನೂರು ವಜ್ರಗಿರಿ ರಾಚೋಟಪ್ಪನವರ ಪುತ್ರರಾದ ಬಸವಂಣಪ್ಪ, ತಿಪ್ಪಂಣ ಇವರು ಶ್ರೀ ಜಗದ್ಗುರು ಮಹಾಸನ್ನಿಧಿಗೆ ಹದಿನಾಲ್ಕು ತೊಲೆಯ ಸುವರ್ಣ ಕರಕಮಲವನ್ನು ಭಕ್ತಿಪೂರ್ವಕ ಅರ್ಪಿಸಿದರು ಆಮೇಲೆ ಪುಷ್ಪಹಾರಗಳಿಂದ ಅಲಂಕೃತವಾದ ರಥದ ರಜತಮಂಟಪದಲ್ಲಿ ಜಗದ್ಗುರು ವಿಶ್ವಾರಾಧ್ಯಮೂರ್ತಿಯ ಉತ್ಸವವು ಯಾತ್ರಿಕಮಂಡಳಿಯಿಂದಲೂ ಆರತಿಹಿಡಿದ ಸುಮಂಗಲೆಯರಿಂದಲೂ, ಗುರುಕುಲ ವಿದ್ವದ್ವೃಂದದಿಂದಲೂ, ನಾನಾ ವಾದ್ಯವೈಭವದಿಂದಲೂ ಹೊರಟಿತು ಶ್ರೀ ವಿಶ್ವಾರಾಧ್ಯನ ಮಹಿಮೆಯನ್ನು ಬಲ್ಲವರಾರು? ಉತ್ಸವವು ಸ್ವಲ್ಪದೂರ ಹೋಗುವದರೊಳಗೆ ದಾರಿಯಲ್ಲಿ ಮಿಲಿಟರಿ ಜನರದೊಂದು ದೊಡ್ಡ ಗುಂಪು ರಭಸದಿಂದ ಎದುರಾಗಿ ಬಂದಿತು ಪಂಚಾಚಾರ್ಯರ ಜಯಘೋಷವನ್ನು ಕೇಳುತ್ತಲೇ ಆ ಜನರು ಉತ್ಸವದಲ್ಲಿ ತಂಡೋಪತಂಡವಾಗಿ ನುಗ್ಗಿದರು ಆದರೆ ಅವರೆಲ್ಲರೂ ವೀರಶೈವ ಸೈನಿಕರಾಗಿದ್ದರು ಸೈನಿಕರೆಲ್ಲರೂ ಅತ್ಯಂತ ಭಕ್ತಿಯಿಂದ ಸೇವೆ ಸಲ್ಲಿಸಿದರು ಉತ್ಸವದ ಲಾಭದಿಂದ ಉತ್ಸಾಹಿತರಾದ ಸೈನಿಕರು ಗಗನಭೇದಿ ಧ್ವನಿಯಿಂದ ಜಯಘೋಷವನ್ನು ಮಾಡುತ್ತಿದ್ದರು ಸೈನಿಕರಿಂದ ಉತ್ಸವಕ್ಕೆ ವಿಶೇಷ ಕಳೆಯೇರಿತು ಈ ರೀತಿ ಉತ್ಸವವು ನಗರದ ಮುಖ್ಯ ಮುಖ್ಯ ಬೀದಿಗಳಲ್ಲಿ ಹಾಯ್ದು ಗಂಗಾತೀರಕ್ಕೆ ಬಂದು ಅಲ್ಲಿ ಸಂಪ್ರದಾಯದಂತೆ ಪೂಜಾದಿಗಳಾಗಿ ಪುನಃ ಶ್ರೀಮಠಕ್ಕೆ ಐದು ಘಂಟೆಗೆ ತಲುಪಿತು ಸೈನಿಕರೆಲ್ಲರೂ ಜಗದ್ಗುರುಗಳ ದರ್ಶನಮಾಡಿಕೊಂಡರು ಶ್ರೀ ಸನ್ನಿಧಿಯವರು ಧರ್ಮದಲ್ಲಿಯೂ ದೇಶದಲ್ಲಿಯೂ ಪ್ರೇಮವಿರಬೇಕೆಂದು ಸೈನಿಕರಿಗೆ ಉಪದೇಶ ಮಾಡಿದರು ವಿದ್ವತ್ ಸಂಘದ ವತಿಯಿಂದಲೂ ಸೈನಿಕರಿಗಾಗಿ ಉಪದೇಶಪರ ವ್ಯಾಖ್ಯಾನಗಳಾದವು

ಸಾಯಂಕಾಲ ಕ್ಷೀರಫಲಾದ್ಯಾಹಾರ ವ್ಯವಸ್ಥೆಯನ್ನು ರಾವ್ ಬಹಾದ್ದೂರ ಶಿವಸಿದ್ಧಪ್ಪನವರು ಸರನಾಯಕರು ಹಲಗಲಿ, ಯಾದಗಿರಿ ಎಕ್ಕೆಳ್ಳಿ ಶರಣಪ್ಪನವರು, ಹಾಗೂ ಮುಳಗುಂದದ ವೇ॥ ಪುರದಯ್ಯನವರು ಬಹು ಶ್ರದ್ಧೆವಹಿಸಿ ಮಾಡಿಸಿದರು ರಾತ್ರಿ ಕೈಲಾಸ ಮಂಟಪದಲ್ಲಿ ಪ್ರಾತಃಕಾಲದವರೆಗೂ ಭಜನೆ ಕೀರ್ತನೆ ಪ್ರವಚನಗಳಾದವು ಮಧ್ಯದಲ್ಲಿ ಜಯಂತೀ ನಿಮಿತ್ತ ಪಂಡಿತರ ಉಪದೇಶಪರ ಭಾಷಣಗಳಾದವು ಮರುದಿನ ಯಾದಗಿರಿ ಎಕ್ಕೆಳ್ಳಿ ಶರಣಪ್ಪನವರು ಮಾಡಿಸಿದ ಆರಾಧನೆಯು ಬಹಳ ತೃಪ್ತಿಕರವಾಗಿತ್ತು ಸಾಯಂಕಾಲ ಐದು ಘಂಟೆಗೆ ಜಗದ್ಗುರುಗಳು ಸಭಾ ಭವನಕ್ಕೆ ದಯಮಾಡಿಸಿ ಸಿಂಹಾಸನವನ್ನಲಂಕರಿಸಿದರು ಗಂಗಾಧರಶಾಸ್ತ್ರಿಗಳು ಮಂಗಲಗೀತೆಯನ್ನು ಹಾಡಿದನಂತರ ಕ್ಯಾಸನೂರು ಪಟ್ಟಾಧ್ಯಕ್ಷರ ಪ್ರಾರಂಭಿಕ ಭಾಷಣವಾದಮೇಲೆ ಮುಕ್ತ್ಯಾರ ಪಟ್ಟಾಧ್ಯಕ್ಷರು "ಗುರು ರಾಯಚೂರ ಪಟ್ಟಾಧ್ಯಕ್ಷರು "ಭಕ್ತಿ ವೈರಾಗಕರ ಪಟ್ಟಾಧ್ಯಕ್ಷರು 'ವೀರಶೈವ ಮತದ ಪ್ರಾಚೀನತ್ವ' ಪಂ॥ ಚನ್ನಬಸವಶಾಸ್ತ್ರಿಗಳು "ಇಷ್ಟಲಿಂಗದಾವಶ್ಯಕತೆ" ಗಂಗಾಧರಶಾಸ್ತ್ರಿಗಳು 'ಜನ್ಮಸಾಫಲ್ಯ" ಜಿ ಬಿ ಹಿರೇಮಠ 'ಆತ್ಮಚಿಂತನ' ಎಂಬ ವಿಷಯಗಳ ಮೇಲೆ ಭಾಷಣ ಮಾಡಿದರು ಯಾದಗಿರಿ ಶರಣಪ್ಪನವರ ಪುತ್ರಿ ಹತ್ತುವರುಷದ ಬಾಲಿಕೆಯಾದ ರಾಚಮ್ಮನು "ಸ್ತ್ರೀಶಿಕ್ಷಣ' ಎಂಬ ವಿಷಯದ ಮೇಲೆ ಮುದ್ದಾಗಿ ಮಾತನಾಡಿ ಎಲ್ಲರನ್ನೂ ಆನಂದ ಗೊಳಿಸಿದಳು ಅನಂತರ ಸನ್ನಿಧಾನದವರು ಬೇರೆ ಬೇರೆ ಭಾಷೆಗಳಲ್ಲಿ ಶಿವರಾತ್ರಿಯ ಮಹತ್ವ, ಯಾತ್ರೆಯ ಮಹತ್ವ, ಜಯಂತಿಯ ಮಹತ್ವ, ಮೊದಲಾದ ಅನೇಕ ವಿಷಯಗಳನ್ನು ಭಕ್ತವೃಂದವು ಆನಂದತುಂದಿಲವಾಗುವಂತೆ ಬಹು ಸ್ವಾರಸ್ಯವಾಗಿ ಅಪ್ಪಣೆ ಕೊಡಿಸಿದರು ಆಮೇಲೆ ಜಗದಾಚಾರ್ಯರ ಜಯಜಯಕಾರದೊಡನೆ ಸಭೆಯು ಮುಕ್ತಾಯವಾಯಿತು.

ವಿದ್ವತ್ ಸಂಘದ ಸೆಕ್ರೆಟರಿ, ಪಟ್ಟಾಧ್ಯಕ್ಷ ಕ್ಯಾಸನೂರು

ಕೋಡಿಹಳ್ಳಿ

ಕಾನಕಾನಹಳ್ಳಿ ತಾ॥ ಕೋಡಿಹಳ್ಳಿ ವೀರಶೈವ ಸಮಾಜ ಸೇವಾಸಂಘದವರು ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತ್ಯುತ್ಸವವನ್ನು 3 ದಿನಗಳವರೆಗೆ ಅತ್ಯಂತ ವಿಜೃಂಭಣೆಯಿಂದ ನಡೆಯಿಸಿದರು

26ನೇ ತಾರೀಖು ಸಾಯಂಕಾಲ 5 ಘಂಟೆಯ ಲಾಗಾಯ್ತು ರಾತ್ರಿ 11 ಘಂಟೆಯವರೆಗೆ ಶ್ರೀ ರೇಣುಕಾಚಾರ್ಯರ ಭಾವಚಿತ್ರವನ್ನು ರಮಣೀಯವಾಗಿ ಅಲಂಕೃತವಾದ ಮಂಟಪದಲ್ಲಿರಿಸಿ ಜಗದ್ಗುರುಗಳ ಜಯಘೋಷದೊಡನೆ, ಊರಿನ ಎಲ್ಲಾ ರಾಜಬೀದಿಗಳಲ್ಲೂ, ನಂದಿಧ್ವಜದೊಡನೆ ಮೆರವಣಿಗೆ ಮಾಡಲಾಯಿತು ಮೆರವಣಿಗೆಯಲ್ಲಿ ಬಹುಜನರು ಭಾಗಿಗಳಾಗಿದ್ದರು. ಮೆರವಣಿಗೆಯಾದಮೇಲೆ, ಸಂಘದಲ್ಲಿ ಶ್ರೀ ರೇಣುಕಾಚಾರ್ಯರ ಲೀಲೆಗಳ ಬಗ್ಗೆ ಭಾಷಣಗಳಾದವು. ಬಳಿಕ ಶ್ರೀಮನ್ಮಹಾರಾಜರವರ ಶ್ರೇಯಃ ಪ್ರಾರ್ಥನೆಯೊಡನೆ ಸಭೆಯು ಮುಕ್ತಾಯವಾಯಿತು. ಈ ಮಂಗಳಸಮಯದಲ್ಲಿ ಪ್ರಭಾಪೋಷಣಕ್ಕಾಗಿ ೨ ರೂಪಾಯಿಗಳು ಸಮರ್ಪಿಸಲ್ಪಟ್ಟಿವೆ. ಕೆ ಎ. ರಾಜಶೇಖರಯ್ಯ

ಪಂಚಾಚಾರ್ಯಪ್ರಭಾ.

೧೯೪೫ನೆಯ ಮಾರ್ಚಿ ತಾ|| ೫ನೇ ಸೋಮವಾರ

ಶ್ರೀಜಗದ್ಗುರು ರೇಣುಕಾಚಾರ್ಯರ
ಜಯಂತೀಮಹೋತ್ಸವ ನಿಮಿತ್ತವಾಗಿ
ತಾ|| ೨೬-೨-೧೯೪೫ನೆಯ ದಿವಸ

ಮೈಸೂರು ಆಕಾಶವಾಣಿಯಲ್ಲಿ

ಪಂ|| ಶ್ರೀಕಾಶೀನಾಥಶಾಸ್ತ್ರಿಗಳವರು ಮಾಡಿದ

ಭಾಷಣ

ಶ್ರೀಸೋಮೇಶ್ವರಲಿಂಗಾದುದ್ಭೂತಾಯ ಶ್ರೀಮತೇ ಮಹಾ
ಸಿದ್ಧಿದಾಯ [illegible] ಶಿವಭಕ್ತಾಯ
ಧೀಮತೇ [illegible] ಸದ್ಭಾವಂದಕಾಯ
ಪ್ರಶಸ್ತಗುಣಾಯ [illegible] ನಮೋ [illegible]
ಸತತಂ ಜಗದ್ಗುರವೇ ಶ್ರೀರೇಣುಕಾಯ ನಮಃ

ಶ್ರೀಪರಮೇಶ್ವರನು ಕೈಲಾಸದಲ್ಲಿ ಬ್ರಹ್ಮ ವಿಷ್ಣು ಮೊದಲಾದ ಸಮಸ್ತ ದೇವತೆಗಳಿಂದಲೂ, ವೀರ ನಂದಿ ಭೃಂಗಿ ವೃಷಭ ಸ್ಕಂದ ರೇಣುಕ ದಾರುಕ ಘಂಟಾಕರ್ಣ ಘಣ್ಟಕರ್ಣ ವಿಶ್ವಕರ್ಣ ಮೊದಲಾದ ಪ್ರಮಥರಿಂದಲೂ ಪರಿಶೋಭಿತವಾದ ಸಭೆಯಲ್ಲಿ ದಿವ್ಯಪೀಠವನ್ನಲಂಕರಿಸಿ ಪರಮಾನಂದದಿಂದ ಸಮಸ್ತ ಲೋಕಗಳ ವಿಷಯವನ್ನು ವಿಚಾರಿಸುತ್ತಿರುವ ಸಮಯದಲ್ಲಿ, ಪ್ರಮಥಪುಂಗವನಾದ ಶ್ರೀರೇಣುಕಗಣಾಧೀಶ್ವರನನ್ನು ಕರೆದು—"ಎಲೈ ರೇಣುಕಗಣಾಧೀಶನೇ! ನೀನು ಭೂಲೋಕದಲ್ಲಿ ವೇದ ಮಾರ್ಗಾನುಸಾರವಾಗಿ ಶಿವಭಕ್ತಿಯನ್ನು ಪ್ರತಿಷ್ಠಿಸುವುದಕ್ಕೋಸ್ಕರ, ಕುಲ್ಯಪಾಕಕ್ಷೇತ್ರದಲ್ಲಿ ವಿರಾಜಿಸುತ್ತಿರುವ ಶ್ರೀಸೋಮನಾಥಲಿಂಗದಿಂದ ತೇಜೋಮಯಶರೀರ ಧಾರಿಯಾಗಿ ಅವತರಿಸಿ, ಸಕಲಮಾನವರಿಗೂ ಶಿವಾದ್ವೈತಸಿದ್ಧಾಂತವನ್ನು ಉಪದೇಶಿಸಿ, ಸಮಸ್ತಭೂಮಂಡಲವನ್ನು ಶಿವಭಕ್ತಿಮಯವನ್ನಾಗಿ ಮಾಡಿ ಪುನಃ ನನ್ನ ಸನ್ನಿಧಿಗೆ ಬಾ" ಎಂದು ಅಪ್ಪಣೆಮಾಡಿದನು. ಪರಮೇಶ್ವರನ ಅಪ್ಪಣೆಯಂತೆ ಶ್ರೀರೇಣುಕಗಣಾಧೀಶ್ವರನು ಶಿವಾದ್ವೈತಸಿದ್ಧಾಂತವನ್ನು ಸ್ಥಾಪಿಸುವುದಕ್ಕೋಸ್ಕರ ಭೂಲೋಕದಲ್ಲಿ ಅವತರಿಸಿದನು ಈ ವಿಷಯವು ಸಿದ್ಧಾಂತಶಿಖಾಮಣಿಯಲ್ಲಿ ಈ ಕೆಳಗೆ ಉದಾಹರಿಸಿರುವಂತೆ ಉಲ್ಲೇಖಿಸಲ್ಪಟ್ಟಿರುವುದು

ಶ್ರೀಭಗವತ್ಪಾದರ ಲಿಂಗಾವತಾರ

ಅಥ ತ್ರಿಲಿಂಗವಿಷಯೇ ಕುಲ್ಯಪಾಕಾಭಿಧೇ ಸ್ಥಲೇ |
ಸೋಮೇಶ್ವರಮಹಾಲಿಂಗಾತ್ ಪ್ರಾದುರಾಸೀತ್ಸ ರೇಣುಕಃ ||೧||
ಪ್ರಾದುರ್ಭೂತಂ ತಮಾಲೋಕ್ಯ ಶಿವಲಿಂಗಾತ್ತ್ರಿಲಿಂಗಜಾಃ |
ವಿಸ್ಮಿತಾಃ ಪ್ರಾಣಿನಃ ಸರ್ವೇ ಬಭೂವುರತಿತೇಜಸಂ ||೨||
ಭಸ್ಮೋದ್ಧೂಲಿತಸರ್ವಾಂಗಂ ಸಿತರುದ್ರಾಕ್ಷಭೂಷಣಂ |
ಜಟಾಮುಕುಟಸಂಯುಕ್ತಂ ತ್ರಿಪುಂಡ್ರಾಂಕಿತಮಸ್ತಕಂ ||೩||
ಕಟೀತಟೀಪಟೀಭೂತಕಂಥಾಪಟಲಬಂಧುರಂ |
ದಧಾನಂ ಯೋಗದಂಡಂ ಚ ಭಸ್ಮಾಧಾರಂ ಕಮಂಡಲುಂ ||೪||
ಶಿವಾದ್ವೈತಪರಿಜ್ಞಾನಪರಮಾನಂದಮೋದಿತಂ |
ನಿಧೂತಸರ್ವಸಂಸಾರವಾಸನಾದೋಷಸಂಚಯಂ ||೫||
ಶಿವಾಗಮಸಧರ್ಮಸಮನ್ವೇಷಣಧಾರಕಂ |
ಚಿತ್ತಾರವಿಂದಸಂಗೋಪಿತಶಿವಪಾದಾಂಬುಜದ್ವಯಂ ||೬||
ಯಮನಿಯಮಯೋಗಶಾಸ್ತ್ರಜ್ಞಂ ಸ್ವತಂತ್ರಂ ಸರ್ವಕರ್ಮಸು |
ಸಮಸ್ತಸಿದ್ಧಸಂತಾನಮುಖ್ಯಶಿಖಾಮಣಿಂ ||೭||
ವೀರಸಿದ್ಧಾಂತನಿರ್ವಾಹಕೃತಪಟ್ಟನಿಬಂಧನಂ |
ಆಲೋಕಮಾತ್ರನಿರ್ಭಿನ್ನಸಮಸ್ತಪ್ರಾಣಿಪಾತಕಂ ||೮||
ತಮುಪೇತ್ಯ ಜನಾಃ ಸರ್ವೇ ನಮಂತಃ ಕೋ ಭವಾನಿತಿ |
ಇತಿ ಪಪ್ರಚ್ಛುರೇವ ಹರ್ಷಯುಕ್ತಾ ವಿಸ್ಮಿತಮಾನಸಾಃ ||೯||
ಪ್ರತ್ಯಾಹ ಶಿವಾದ್ವೈತಪರಮಾನಂದಪರಾಯಣಃ |
ಸಿದ್ಧಾಂತಿನಃ ಪಾರ್ಶ್ವವರ್ತೀ ರೇಣುಕಃ ಶಿವೋ ಗಣೇಶ್ವರಃ ||೧೦||
ಶಿವಕ್ಷೇತ್ರಮುತ್ತಮೇ ಶಿವಲಿಂಗ ಸಮುದ್ಭವಂ |
ನಾಮ್ನಾ ರೇಣುಕಸಿದ್ಧೋಽಹಂ ಸಿದ್ಧಸಂತಾನನಾಯಕಃ ||
ಸ್ವತಂತ್ರವಿಚಾರೀ ಲೋಕೇಽಸ್ಮಿನ್ ಶಿವಸಿದ್ಧಾಂತಪಾಲಕಃ ||೧೧||
ಇತ್ಯುಕ್ತ್ವಾ ಪಶ್ಯತಾಂ ತೇಷಾಂ ವಿಹಾಯ ಸ್ಥಿರಶಕ್ತಿಮಾಂ |
ಉತ್ಪತ್ಯ ವ್ಯೋಮಮಾರ್ಗೇಣ ಮಲಯಾದ್ರಿಮುಪಾಗಮತ್ ||

(ಸಿದ್ಧಾಂತಶಿಖಾಮಣಿ, ಪರಿ ೪)

ಪರಮೇಶ್ವರನ ಅಪ್ಪಣೆಯ ಮೇರೆಗೆ ಶ್ರೀರೇಣುಕಗಣಾಧೀಶ್ವರನು ತ್ರಿಲಿಂಗ (ತೆಲುಗು)ದೇಶದಲ್ಲಿ ಸುಪ್ರಸಿದ್ಧ ಶಿವಕ್ಷೇತ್ರವಾದ ಶ್ರೀಕೊಲ್ಲಿಪಾಕಿಕ್ಷೇತ್ರದಲ್ಲಿ ವಿರಾಜಿಸುತ್ತಿರುವ ಶ್ರೀಸೋಮೇಶ್ವರನೆಂಬ ಮಹಾಲಿಂಗದಿಂದ ಅವತರಿಸಿದನು. ತ್ರಿಲಿಂಗದೇಶದ ಜನರೆಲ್ಲರೂ, ಶಿವಲಿಂಗದಿಂದ ಅವತರಿಸಿದ ಮಹಾತೇಜಃಶಾಲಿಯಾದ ಶ್ರೀರೇಣುಕಗಣಾಧೀಶ್ವರನನ್ನು ನೋಡಿ ಆಶ್ಚರ್ಯದಿಂದ ಕೂಡಿದವರಾದರು. ಭಸ್ಮಲಿಪ್ತವಾದ ಶರೀರವುಳ್ಳವನೂ, ರುದ್ರಾಕ್ಷಾಲಂಕೃತನೂ, ಜಟಾಮುಕುಟಮಂಡಿತನೂ, ತ್ರಿಪುಂಡ್ರಾಂಕಿತಮಸ್ತಕನೂ, ನಡುವಿನಲ್ಲಿ ವಸ್ತ್ರದಂತಿದ್ದ ಕಂಥೆಯಿಂದ ಮನೋಹರನಾದವನೂ, ಯೋಗದಂಡ ಕಮಂಡಲು ಭಸ್ಮಘುಂಟಿಕೆಗಳನ್ನು ಧರಿಸಿದವನೂ, ಶಿವಾದ್ವೈತ ಸಿದ್ಧಾಂತಜ್ಞಾನದಿಂದುಂಟಾದ ಪರಮಾನಂದದಲ್ಲಿ ಲೀನನಾದವನೂ, ಸಮಸ್ತ ಸಂಸಾರವಾಸನಾದೋಷಗಳ ಸಮೂಹದಿಂದ ದೂರನಾದವನೂ, ಶಿವಾಗಮರೂಪವಾದ ಅಮೃತಸಮುದ್ರದ ಅಭಿವೃದ್ಧಿಗೆ ಚಂದ್ರಸ್ವರೂಪನೂ, ತನ್ನ ಹೃದಯಕಮಲದಲ್ಲಿ ಪರಶಿವನ ಪಾದಕಮಲಗಳನ್ನು ಸದಾಸಂಬಂಧಿಸಿಕೊಂಡಿರುವವನೂ, ಯಮನಿಯಮಾದ್ಯಷ್ಟಾಂಗಯೋಗಸ್ವರೂಪವನ್ನು ತಿಳಿದವನೂ, ಸಮಸ್ತಸಿದ್ಧಕುಲ ಸಮುದಾಯಕ್ಕೆ ಶಿಖಾರತ್ನಸ್ವರೂಪನೂ, ವೀರಶೈವಸಿದ್ಧಾಂತವನ್ನು ನೆಲೆಗೊಳಿಸುವುದರಲ್ಲಿ ಪಟ್ಟವನ್ನು ಕಟ್ಟಿಕೊಂಡವನೂ, ದರ್ಶನಮಾತ್ರದಿಂದ ಸಮಸ್ತಪ್ರಾಣಿಗಳ ಪಾಪವನ್ನು ನಾಶಮಾಡತಕ್ಕವನೂ ಆದ ಶ್ರೀರೇಣುಕಾಚಾರ್ಯನನ್ನು ಕುರಿತು—ಆ ದೇವಾಲಯದಲ್ಲಿದ್ದ ಸಮಸ್ತಜನರು ಆಶ್ಚರ್ಯದಿಂದೊಡಗೂಡಿ ನಮಸ್ಕರಿಸುವಂಥವರಾಗಿ, ಎಲೈ ಮಹನೀಯನೇ! ನೀನು ಯಾರು? ಎಂದು ಪ್ರಶ್ನೆಮಾಡಿದರು ಶಿವಾದ್ವೈತಮಹಾನಂದದಲ್ಲಿ ಲೀನನಾದವನೂ, ಪರಮೇಶ್ವರನ ಪಾರ್ಶ್ವವರ್ತಿಯೂ ಆದ ಶ್ರೀರೇಣುಕಗಣೇಶ್ವರನು ಆ ಜನರನ್ನು ಕುರಿತು, ಈ ರೀತಿಯಾಗಿ ನುಡಿದನು. ಎಲೈ, ಜನಗಳಿರಾ! ನಾನು ಶ್ರೀಪರಮೇಶ್ವರನ ಅಪ್ಪಣೆಯ ಮೇರೆಗೆ ಪರಮಪವಿತ್ರವಾದೀ ಶಿವಕ್ಷೇತ್ರದಲ್ಲಿ ವಿರಾಜಿಸುತ್ತಿರುವ ಈ ಶಿವಲಿಂಗದಿಂದ ಅವತರಿಸಿದೆನು. ನನ್ನ ಹೆಸರು "ರೇಣುಕಸಿದ್ಧ" ಎಂದಿರುವುದು ನಾನು ಸಿದ್ಧರ ಸಮುದಾಯಕ್ಕೆಲ್ಲ ಅಧಿಪತಿಯಾಗಿದ್ದೇನೆ. ನಾನು ಈ ಲೋಕದಲ್ಲಿ ಸ್ವತಂತ್ರನಾಗಿದ್ದೇನೆ; ಮತ್ತು ಶಿವಾದ್ವೈತಸಿದ್ಧಾಂತವನ್ನು ರಕ್ಷಿಸುವವನಾಗಿದ್ದೇನೆ. ಎಂದು ನುಡಿದು, ಆ ಜನರು ಅನಿಮಿಷದೃಷ್ಟಿಯಿಂದ ನೋಡುತ್ತಿರಲು, ಗಗನಮಾರ್ಗದಿಂದ ಮಲಯಪರ್ವತವನ್ನು ಕುರಿತು ಪ್ರಯಾಣ ಮಾಡಿದನು.

ಅಗಸ್ತ್ಯಮಹರ್ಷಿಗಳಿಗೆ ಉಪದೇಶ

ಶ್ರೀರೇಣುಕಾಚಾರ್ಯರು ಕುಲ್ಯಪಾಕಕ್ಷೇತ್ರದಿಂದ ಮಲಯಪರ್ವತದಲ್ಲಿ ರಾರಾಜಿಸುತ್ತಿದ್ದ ಅಗಸ್ತ್ಯಾಶ್ರಮಕ್ಕೆ ದಯಮಾಡಿಸಿದ ಕೂಡಲೆ, ಅಗಸ್ತ್ಯಮಹರ್ಷಿಗಳು ಅಸಾಧಾರಣಭಕ್ತಿವಿಶೇಷದಿಂದ ಆ ಪ್ರಮಥಪುಂಗವರನ್ನು ಎದುರ್ಗೊಂಡು, ದರ್ಭಾಸನದಲ್ಲಿ ಕುಳ್ಳಿರಿಸಿ, ಷೋಡಶೋಪಚಾರಗಳಿಂದ ಪೂಜಿಸಿ—

ಸ್ಥಿರಮದ್ಯ ಶಿವಜ್ಞಾನಂ ಸ್ಥಿರಾ ಮೇ ತಾಪಸಕ್ರಿಯಾ |
ಭವದ್ದರ್ಶನಪುಣ್ಯೇನ ಸ್ಥಿರಾ ಮೇ ಮುನಿರಾಜತಾ ||೪೬||
ಸಂಸಾರಸರ್ಪದಷ್ಟಾನಾಂ ಮೂರ್ಛಿತಾನಾಂ ಶರೀರಿಣಾಂ |
ಕಟಾಕ್ಷಸ್ತವ ಕಲ್ಯಾಣಂ ಸಮುಜ್ಜೀವನಭೇಷಜಂ ||೪೭||
ಸಮಸ್ತಲೋಕಸಂದಾಹತಾಪತ್ರಯಮಹಾನಲಃ ;
ತ್ವತ್ಪದಾಂಬುಕಣಾಸ್ವಾದಾದುಪಶಾಮ್ಯತಿ ದೇಹಿನಾಂ ||೪೮||
ರೇಣುಕಂ ತ್ವಾಂ ವಿಜಾನಾಮಿ ಗಣನಾಥಂ ಶಿವಪ್ರಿಯಂ |
ಅವತೀರ್ಣಮಿಮಾಂ ಭೂಮಿಂ ಮದನುಗ್ರಹಕಾಂಕ್ಷಯಾ ||೪೯||
ಭವಾದೃಶಾನಾಂ ಸಿದ್ಧಾನಾಂ ಪ್ರಬೋಧಧ್ವಸ್ತಜನ್ಮನಾಂ |
ಪ್ರವೃತ್ತಿರೀದೃಶೀ ಲೋಕೇ ಪರಾನುಗ್ರಹಕಾರಿಣೀ ||೫೦||
ತ್ವನ್ಮುಖಾಚ್ಛ್ರೋತುಮಿಚ್ಛಾಮಿ ಸಿದ್ಧಾಂತಂ ಶ್ರುತಿಸಮ್ಮತಂ |
ಸರ್ವಜ್ಞ ವದ ಮೇ ಸಾಕ್ಷಾಚ್ಛೈವಂ ಸರ್ವಾರ್ಥಸಾಧಕಂ ||
ಸದ್ಯಃ ಸಿದ್ಧಿಕರಂ ಪುಂಸಾಂ ಸರ್ವಯೋಗೀಂದ್ರಸೇವಿತಂ |
ದುರಾಚಾರೈರನಾಘ್ರಾತಂ ಸ್ವೀಕೃತಂ ವೇದವೇದಿಭಿಃ ||
ಶಿವಾತ್ಮೈಕ್ಯಮಹಾಬೋಧಸಂಪ್ರದಾಯಪ್ರವರ್ತಕಂ ||೫೨||

(ಸಿ. ಶಿ ಪರಿ. ೪)

ಎಲೈ ಮಹಾತ್ಮನೇ, ನಿನ್ನ ದರ್ಶನದಿಂದೊದಗಿದ ಪುಣ್ಯವಿಶೇಷದಿಂದ ಇಂದಿಗೆ ನನ್ನ ಶಿವಜ್ಞಾನವು ಸ್ಥಿರವಾಯಿತು. ಇಂದಿಗೆ ನನ್ನ ತಪಃಕ್ರಿಯೆಯು ಸ್ಥಿರವಾಯಿತು ಇಂದಿಗೆ ನನ್ನ ಮುನಿಸಾರ್ವಭೌಮತ್ವವು ಸ್ಥಿರವಾಯಿತು ಸಂಸಾರರೂಪವಾದ ಸರ್ಪದಿಂದ ಕಡಿಸಿಕೊಂಡು ಮೂರ್ಛಿತರಾಗಿರುವ ಮಾನವರಿಗೆ ನಿನ್ನ ಕಲ್ಯಾಣಕಟಾಕ್ಷವೇ ಸಂಜೀವನೌಷಧವಾಗಿದೆ. ಸಮಸ್ತ ಲೋಕಗಳನ್ನು ಸುಡತಕ್ಕ ಆಧ್ಯಾತ್ಮಿಕ-ಆಧಿಭೌತಿಕ ಆಧಿದೈವಿಕತಾಪರೂಪವಾದ ಪ್ರಚಂಡಾಗ್ನಿಯು ನಿನ್ನ ಪಾದೋದಕದ ಒಂದು ಬಿಂದು ಮಾತ್ರ ಸೇವನೆಯಿಂದಲೇ ಶಾಂತವಾಗುತ್ತದೆ. ಶಿವಪ್ರೀತಿಪಾತ್ರನೂ ಪ್ರಮಥಾಧಿಪತಿಯೂ ಆದ ಎಲೈ ರೇಣುಕಗಣಾಧೀಶ್ವರನೇ, ನನ್ನನ್ನು ಅನುಗ್ರಹಿಸಬೇಕೆಂಬ ಅಭಿಲಾಷೆಯಿಂದ ನೀನು ಈ ಭೂಮಂಡಲದಲ್ಲಿ ಅವತರಿಸಿರುವೆ, ಎಂಬುದನ್ನು ಬಲ್ಲೆನು ಶಿವಜ್ಞಾನದಿಂದ ಜನನ ಮರಣಗಳನ್ನು ನಾಶಮಾಡಿದ ನಿನ್ನಂಥ ಸಿದ್ಧಾಗ್ರೇಸರರ ಈ ರೀತಿಯಾದ ಸಂಚಾರವೇ ಮಾನವಪ್ರಾಣಿಗಳಿಗೆ ಅನುಗ್ರಹವನ್ನುಂಟುಮಾಡತಕ್ಕುದಾಗಿರುತ್ತದೆ. ಎಲೈ, ರೇಣುಕಾಚಾರ್ಯನೇ! ವೇದಸಮ್ಮತವಾದ ಸಿದ್ಧಾಂತಶಾಸ್ತ್ರವನ್ನು ನಿನ್ನ ಮುಖದಿಂದ ಕೇಳಬೇಕೆಂಬ ಇಚ್ಛೆಯುಳ್ಳವನಾಗಿದ್ದೇನೆ; ಆದುದರಿಂದ ಸರ್ವಜ್ಞಮೂರ್ತಿಯೇ, ಸರ್ವಾರ್ಥಸಾಧಕವಾದುದೂ, ಶಿವಸಂಬಂಧವಾದುದೂ, ತತ್ಕ್ಷಣದಲ್ಲಿಯೇ ಸಿದ್ಧಿಯನ್ನುಂಟುಮಾಡತಕ್ಕುದೂ, ಸಮಸ್ತ ಯೋಗೀಂದ್ರರಿಂದ ಸೇವಿತವಾದುದೂ, ದುರಾಚಾರಿಗಳಿಂದ ಅನಾಘ್ರಾತವಾದುದೂ, ವೇದಜ್ಞರಿಂದ ಸ್ವೀಕೃತವಾದುದೂ, ಶಿವಜೀವೈಕ್ಯಮಹಾಜ್ಞಾನಸಂಪ್ರವರ್ತಕವಾದುದೂ ಆದ ಸಿದ್ಧಾಂತಶಾಸ್ತ್ರವನ್ನು ನನಗೆ ಉಪದೇಶಮಾಡು.

ಈ ರೀತಿಯಾಗಿ ಅಗಸ್ತ್ಯರು ಶ್ರೀರೇಣುಕಾಚಾರ್ಯರ ಮಹಿಮೆಯನ್ನು ನಾನಾವಿಧವಾಗಿ ಕೊಂಡಾಡಿ, ಶ್ರುತಿಸಮ್ಮತವಾದ ಶಿವಾದ್ವೈತ ಸಿದ್ಧಾಂತವನ್ನು ಉಪದೇಶಿಸಬೇಕೆಂದು ಪ್ರಾರ್ಥಿಸಲು, ಆಗ್ಗೆ ಶ್ರೀರೇಣುಕಾಚಾರ್ಯರು ಅಗಸ್ತ್ಯಮಹರ್ಷಿಗಳಿಗೆ ಶಿವಾದ್ವೈತ ಸಿದ್ಧಾಂತವನ್ನು ವಿಶದವಾಗಿ ಉಪದೇಶಿಸಿದರು

ವಿಭೀಷಣನ ಉದ್ಧಾರ

ಶ್ರೀ ರೇಣುಕಾಚಾರ್ಯರು ಅಗಸ್ತ್ಯಮಹರ್ಷಿಗಳಿಗೆ ಶಿವಾದ್ವೈತ ಸಿದ್ಧಾಂತವನ್ನು ಉಪದೇಶಿಸಿದ ಮೇಲೆ, ಲಂಕಾಧಿಪತಿಯಾದ ವಿಭೀಷಣನನ್ನು ಉದ್ಧರಿಸುವದ

ಕ್ಕೋಸ್ಕರ ಮಲಯಾಚಲದಿಂದ ಗಗನಮಾರ್ಗವಾಗಿ ಲಂಕಾಪುರಿಗೆ ದಯಮಾಡಿಸಿದರು ವಿಭೀಷಣನು ತನ್ನ ಪಟ್ಟಣಕ್ಕಾಗಮಿಸಿದ ಶ್ರೀ ರೇಣುಕಾಚಾರ್ಯರನ್ನು ತನ್ನ ಅರಮನೆಗೆ ಬಿಜಯಮಾಡಿಸಿಕೊಂಡು ಹೋಗಿ ರತ್ನ ಖಚಿತವಾದ ಸುವರ್ಣ ಸಿಂಹಾಸನದಲ್ಲಿ ಮೂರ್ತ ಮಾಡಿಸಿ, ಅರ್ಘ್ಯಪಾದ್ಯಾದಿಗಳಿಂದ ಪೂಜಿಸಿ, ತನ್ನ ಮನೋಭೀಷ್ಟವನ್ನು ಈರೀತಿಯಾಗಿ ವಿಜ್ಞಾಪಿಸಿಕೊಂಡನು "ಎಲೈ, ಗುರುಸಾರ್ವಭೌಮನೇ, ನನ್ನ ಅಣ್ಣನಾದ ರಾವಣನು ತನ್ನ ದುಶ್ಚರಿತ್ರದಿಂದ ಶ್ರೀ ರಾಮಚಂದ್ರನ ಬಾಣಕ್ಕೆ ಆಹುತಿಯಾದನು ಆ ಕಾಲಕ್ಕೆ ನಮ್ಮ ರಾಕ್ಷಸವಂಶವೆಲ್ಲವೂ ನಾಶವಾಯಿತು ಆದರೆ ಪೂರ್ವಪುಣ್ಯ ಪರಿಪಾಕವಿಶೇಷದಿಂದ ನಾನೊಬ್ಬನು ಮಾತ್ರ ಜೀವಿಸಿಕೊಂಡೆನು. ನನ್ನ ಅಣ್ಣನು ಯುದ್ಧ ಭೂಮಿಯಲ್ಲಿ ಪ್ರಾಣವನ್ನು ಬಿಡುವ ಕಾಲಕ್ಕೆ ನನ್ನನ್ನು ನೋಡಿ—

"ಎಲೈ ವಿಭೀಷಣನೇ, ನಾನು ಈ ಲಂಕಾಪಟ್ಟಣದಲ್ಲಿ ಒಂಬತ್ತು ಕೋಟಿ ಶಿವಲಿಂಗಗಳನ್ನು ಸ್ಥಾಪಿಸಬೇಕೆಂದು ಸಂಕಲ್ಪವನ್ನು ಮಾಡಿದ್ದೆನು ಈವರೆಗೆ ಆರು ಕೋಟಿ ಶಿವಲಿಂಗಗಳನ್ನು ಮಾತ್ರ ಸ್ಥಾಪಿಸಿರುವೆನು. ಇನ್ನು ಮೂರು ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವದು ಹಾಗೆಯೇ ಉಳಿದಿರುವದು ಆದುದರಿಂದ ನೀನು ಮಿಕ್ಕ ಮೂರು ಕೋಟಿ ಶಿವಲಿಂಗಗಳನ್ನು ನನ್ನ ಹೆಸರಿನಿಂದ ಸ್ಥಾಪಿಸಿ ನನ್ನ ಸಂಕಲ್ಪವನ್ನು ಪೂರ್ತಿಗೊಳಿಸು" ಎಂದು ನುಡಿದು ನನ್ನಿಂದ ವಚನವನ್ನು ತೆಗೆದುಕೊಂಡು ಪ್ರಾಣವನ್ನು ಬಿಟ್ಟನು ಆಮೇಲೆ ನಾನು ಈ ಮೂರು ಕೋಟಿ ಶಿವಲಿಂಗಗಳನ್ನು ಒಂದೇ ಮುಹೂರ್ತದಲ್ಲಿಯೇ ಸ್ಥಾಪಿಸಬೇಕೆಂದು ನಿಶ್ಚಯಿಸಿಕೊಂಡೆನು ಆದರೆ ಮೂರು ಕೋಟಿ ಶಿವಲಿಂಗಗಳ ಸ್ಥಾಪನೆಗೆ ಮೂರು ಕೋಟಿ ಜನ ಆಚಾರ್ಯರು ದೊರೆಯುವದು ದುರ್ಲಭವಾಯಿತು ಎಷ್ಟು ಪ್ರಯತ್ನಪಟ್ಟರೂ ಈ ಕಾರ್ಯವು ನೆರವೇರಲಿಲ್ಲ ನನ್ನ ಈ ಪ್ರತಿಜ್ಞೆಯು ಬಹುಕಾಲದಿಂದಲೂ ನೆರವೇರದ ಹಾಗೆಯೇ ಉಳಿದಿರುವದರಿಂದ ಯಾವಾಗಲೂ ಈ ಯೋಚನೆಯು ನನ್ನನ್ನು ಬಲವಾಗಿ ಬಾಧಿಸುತ್ತಿರುವದು. ನನ್ನೀಮಹಾಸಂಕಲ್ಪವನ್ನು ಪೂರೈಸಲು ಇಂದಿನವರೆಗೆ ಈ ಪ್ರಪಂಚದಲ್ಲಿ ಯಾರೂ ಸಮರ್ಥರಾಗಲಿಲ್ಲ ನನ್ನ ದೀನಪ್ರಾರ್ಥನೆಯನ್ನು ಪರಮೇಶ್ವರನು ಚಿತ್ತದಲ್ಲಿ ತಂದುಕೊಂಡು ನನ್ನ ಉದ್ಧಾರಕ್ಕಾಗಿಯೇ ನಿನ್ನನ್ನು ಇಲ್ಲಿಗೆ ಕಳುಹಿಸಿರುವನೆಂದು ಭಾವಿಸಿದ್ದೇನೆ, ಆದುದರಿಂದ ಎಲೈ ಗುರುಸಾರ್ವಭೌಮನೇ, ನನ್ನೀಮಹಾಸಂಕಲ್ಪವನ್ನು ಪೂರ್ತಿಗೊಳಿಸಿ ನನ್ನನ್ನು ಧನ್ಯನನ್ನಾಗಿ ಮಾಡಬೇಕು" ಎಂದು ಅಸಾಧಾರಣ ಭಕ್ತಿವಿಶೇಷದಿಂದ ಬೇಡಿಕೊಂಡನು ಅಣಿಮಾದ್ಯಷ್ಟಸಿದ್ಧಿಗಳಿಂದೊಪ್ಪುತ್ತಿರುವ ಶ್ರೀ ರೇಣುಕಾಚಾರ್ಯನು ವಿಭೀಷಣನ ಪ್ರಾರ್ಥನೆಯನ್ನು ಚಿತ್ತದಲ್ಲಿ ತಂದುಕೊಂಡು, ಅವನ ಮಹಾಸಂಕಲ್ಪವನ್ನು ನೆರವೇರಿಸುವದಕ್ಕಾಗಿ ಏಕಕಾಲದಲ್ಲಿಯೇ ಮೂರು ಕೋಟಿ ಗುರುರೂಪವನ್ನು ತಾಳಿ ಮೂರು ಕೋಟಿ ಶಿವಲಿಂಗಗಳನ್ನು ಸ್ಥಾಪಿಸಿದನು. ವಿಭೀಷಣನು ಗುರುಚಕ್ರವರ್ತಿಯ ಈ ವಿಧವಾದ ಅದ್ಭುತ ಮಹಿಮೆಯನ್ನು ನೋಡಿ ವಿಸ್ಮಿತನಾಗಿ, ಸಾಷ್ಟಾಂಗ ನಮಸ್ಕಾರವನ್ನು ಮಾಡಿ ತನಗೆ ಶಿವತತ್ತ್ವವನ್ನುಪದೇಶಿಸಬೇಕೆಂದು ಬೇಡಿಕೊಂಡನು ಆಗ್ಗೆ ಶ್ರೀ ರೇಣುಕಾಚಾರ್ಯನು ವಿಭೀಷಣನಿಗೆ ಶಿವತತ್ತ್ವವನ್ನುಪದೇಶಿಸಿ, ಅವನು ನೋಡುನೋಡುತ್ತಿರುವಲ್ಲಿಯೇ ಮರೆಯಾದನು. ಬಳಿಕ ವಿಭೀಷಣನು ಶ್ರೀ ರೇಣುಕನ ಅನುಗ್ರಹದಿಂದ ಮಹಾಶಿವಭಕ್ತನಾಗಿ ಚಿರಕಾಲ ರಾಜ್ಯವನ್ನಾಳಿದನು

ಅಗಸ್ತ್ಯ ಮತ್ತು ವಿಭೀಷಣರನ್ನುದ್ಧರಿಸಿದ ಈ ಎರಡು ಚರಿತ್ರೆಗಳೂ ತ್ರೇತಾಯುಗಕ್ಕೆ ಸಂಬಂಧಪಟ್ಟವುಗಳಾಗಿದ್ದು, ಸಿದ್ಧಾಂತ ಶಿಖಾಮಣಿಯಲ್ಲಿ ವರ್ಣಿಸಲ್ಪಟ್ಟಿರುವವು. ಆನಂತರ ಈ ಮಹನೀಯರು ಕಲಿಯುಗದಲ್ಲಿ ಅವತರಿಸಿ ೧೪೦೦ ವರ್ಷಗಳವರೆಗೆ ಭೂಮಂಡಲದಲ್ಲಿದ್ದು ಅಲ್ಲಲ್ಲಿ ತೋರ್ಪಡಿಸಿದ ಅನೇಕ ಲೀಲೆಗಳು, ರೇಣುಕವಿಜಯಾದಿ ಗ್ರಂಥಗಳಲ್ಲಿ ವಿಶದವಾಗಿ ವರ್ಣಿಸಲ್ಪಟ್ಟಿರುವವು ಅವುಗಳಲ್ಲಿ ಕೆಲವನ್ನು ಸಂಕ್ಷೇಪವಾಗಿ ಇಲ್ಲಿ ವಿವರಿಸುವದಾಗುವದು.

ಉಜ್ಜಯಿನೀ ವಿಕ್ರಮಮಹಾರಾಜನಿಗೆ ಅನುಗ್ರಹ

ವಿಕ್ರಮಮಹಾರಾಜನು ಈಗ್ಗೆ ೨೦೦೦ ವರ್ಷಗಳ ಪೂರ್ವದಲ್ಲಿ ಮಹಾಕಾಲೇಶ್ವರನಾಮಕಜ್ಯೋತಿರ್ಲಿಂಗದಿಂದ ವಿರಾಜಿಸುತ್ತಿರುವ ಉಜ್ಜಯಿನೀ ಪಟ್ಟಣವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಆಳುತ್ತಿದ್ದ ವಿಷಯವು ಸರ್ವರಿಗೂ ವಿದಿತವೇ ಆದೆ ಆ ಮಹಾರಾಜನು ಅತ್ಯಂತ ಧರ್ಮಬುದ್ಧಿಯಿಂದ ರಾಜ್ಯವನ್ನಾಳುತ್ತ ಪ್ರಜೆಗಳಿಗೆ ಸಾಕ್ಷಾತ್ ದೇವತಾಸ್ವರೂಪನಾಗಿದ್ದುದರಿಂದ ಶಕಪುರುಷನೆನಿಸಿಕೊಂಡನು. ಉತ್ತರ ಹಿಂದುಸ್ಥಾನದಲ್ಲಿ ಇಂದಿನವರೆಗೂ ಆ ಮಹಾರಾಜನ ಶಕವೇ "ವಿಕ್ರಮ ಸಂವತ್" ಎಂಬ ಹೆಸರಿನಿಂದ ವಿಶೇಷ ಪ್ರಚಾರದಲ್ಲಿರುವದು ಈ ಶಕವು ಪ್ರಾರಂಭವಾಗಿ ಇಂದಿಗೆ ೨೦೦೦ ವರ್ಷಗಳಾಗಿರುವವು. ಇಂತಹ ಜಗದ್ವಿಖ್ಯಾತ ಮಹಾರಾಜನು ರಾಜ್ಯವಾಳುತ್ತಿರುವಾಗ, ಶ್ರೀ ರೇಣುಕಾಚಾರ್ಯನು ಆ ಮಹಾರಾಜನ ರಾಜಧಾನಿಗೆ ದಯಮಾಡಿಸಿ, ಅವನಿಂದ ಪೂಜೆಗೊಂಡು, ಅವನಿಗೆ ಶಿವತತ್ತ್ವವನ್ನುಪದೇಶಿಸಿದನಲ್ಲದೆ, ಆ ಮಹಾರಾಜನಿಗೆ ಸದಾ ವಿಜಯವು ಪ್ರಾಪ್ತವಾಗಲೆಂಬ ಉದ್ದೇಶದಿಂದ ಮಹಿಮಾನ್ವಿತವಾದ ಒಂದು ಖಡ್ಗವನ್ನಾಶೀರ್ವದಿಸಿದನು ಆ ಖಡ್ಗದ ಪ್ರಭಾವದಿಂದ ವಿಕ್ರಮರಾಜನು ತನ್ನ ರಾಜ್ಯವನ್ನು ಶತ್ರುಬಾಧಾಶೂನ್ಯವನ್ನಾಗಿ ಆಳುತ್ತ ಜಗದ್ವಿಖ್ಯಾತನಾದನು

ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗಪ್ರದಾನ

ಶ್ರೀಶಂಕರಾಚಾರ್ಯರು ಈಗ್ಗೆ ೨ ಸಾವಿರ ವರ್ಷಗಳ ಪೂರ್ವದಲ್ಲಿ ಅವತರಿಸಿ ಸನಾತನವೈದಿಕಧರ್ಮವನ್ನುದ್ಧರಿಸಿದರೆಂಬ ವಿಷಯವು ಸುಪ್ರಸಿದ್ಧವಷ್ಟೆ! ಈ ಮಹನೀಯರು ಪರಮೇಶ್ವರನನ್ನು ಸಾಕ್ಷಾತ್ಕರಿಸಿಕೊಳ್ಳಬೇಕೆಂಬ ಉದ್ದೇಶದಿಂದ ಶ್ರೀಶೈಲಕ್ಷೇತ್ರದಲ್ಲಿ ತಪಸ್ಸನ್ನಾರಂಭಿಸಿದರು ಪರಮೇಶ್ವರನು ಇವರ ತಪಸ್ಸಿಗೆ ಮೆಚ್ಚಿ "ಎಲೈ, ಶಂಕರಾಚಾರ್ಯನೇ! ನಿನ್ನ ತಪಸ್ಸಿಗೆ ಮೆಚ್ಚಿರುವೆನು ಮಲಯಾಚಲದಲ್ಲಿ ವಾಸವಾಗಿರುವ ರೇಣುಕಾಚಾರ್ಯನ ಹತ್ತಿರ ಚಂದ್ರಮೌಳೀಶ್ವರನೆಂಬ ಹೆಸರಿನ ಶಿವಲಿಂಗವಿರುವದು, ನೀನು ಆ ಶಿವಲಿಂಗವನ್ನು ಆ ಆಚಾರ್ಯನಿಂದ ಪಡೆದು ಪೂಜಿಸು ಆಗ್ಗೆ ನಿನ್ನ ಮನೋಭೀಷ್ಟವು ಸಿದ್ಧಿಸುವದು ಎಂದು ಆಕಾಶವಾಣೀರೂಪದಿಂದ ನುಡಿಯಲು, ಶ್ರೀಶಂಕರಾಚಾರ್ಯರು ಆ ದಿವ್ಯವಾಣಿಯನ್ನು ಕೇಳಿ ಆನಂದತುಂದಿಲಹೃದಯರಾಗಿ, ಕೂಡಲೆ ಮಲಯಾಚಲಕ್ಕೆ ಹೋಗಿ ಅಲ್ಲಿದ್ದ ಶ್ರೀರೇಣುಕಾಚಾರ್ಯರನ್ನು ಸಂದರ್ಶಿಸಿ, ಅವರ ಅನುಗ್ರಹದಿಂದ ಶ್ರೀಚಂದ್ರಮೌಳೀಶ್ವರಲಿಂಗವನ್ನು ಪಡೆದು, ಆ ಲಿಂಗವನ್ನು ಪೂಜಿಸಿ ಶಿವಸಾಕ್ಷಾತ್ಕಾರವನ್ನು ಹೊಂದಿದರು ಇಂದಿನವರೆಗೂ ಶ್ರೀಶಂಕರಾಚಾರ್ಯರ ಪೀಠದಲ್ಲಿ ಶ್ರೀರೇಣುಕಾಚಾರ್ಯರಿಂದ ಅನುಗೃಹೀತವಾದ ಶ್ರೀಚಂದ್ರಮೌಳೀಶ್ವರಲಿಂಗದ ಪೂಜೆಯೇ ಮುಖ್ಯವಾಗಿ ನೆರವೇರುತ್ತಿರುವದು. ಈ ದಿವ್ಯಲಿಂಗವು ಶ್ರೀಶಂಕರಾಚಾರ್ಯರಿಗೆ ಶ್ರೀರೇಣುಕಾಚಾರ್ಯರಿಂದ ಪ್ರಾಪ್ತವಾಯಿತೆಂಬ ವಿಷಯವನ್ನು ರೇಣುಕವಿಜಯ ಶಿವತತ್ತ್ವರತ್ನಾಕರ-ವೇದಾಂತಸಾರವೀರಶೈವಚಿಂತಾಮಣಿ-ಪಿತಾಮಹಸಂಹಿತೆ — ವಿದ್ಯಾರಣ್ಯಕೃತಿ ಮೊದಲಾದ ಅನೇಕಗ್ರಂಥಗಳು ಪ್ರತಿಪಾದಿಸುತ್ತಿರುವವು. ಅಲ್ಲದೆ ಪೂರ್ವದ ಶೃಂಗೇರಿಪೀಠಾಧಿಪತಿಗಳಿಂದ ತಮ್ಮ ಪೀಠದ ಗುರುಪರಂಪರೆಯನ್ನು ಕುರಿತು ಬರಯಿಸಲ್ಪಟ್ಟು ಮೈಸೂರು ಶ್ರೀಮನ್ಮಹಾರಾಜಾಧಿರಾಜ ಶ್ರೀಮನ್ನಾಲ್ವಡಿ ಕೃಷ್ಣರಾಜಮಹಾಪ್ರಭುಗಳವರ ಉದಾರಾಶ್ರಯದಿಂದ ಶ್ರೀರಂಗದಲ್ಲಿ ಮುದ್ರಿತವಾಗಿರುವ "ಗುರುವಂಶಕಾವ್ಯ"ದ ೩ನೆಯ ಸರ್ಗದಲ್ಲಿಯೂ ಈ ವಿಷಯವು ಸ್ಫುಟವಾಗಿ ಪ್ರತಿಪಾದಿಸಲ್ಪಟ್ಟಿರುವದು

ಗೋರಕ್ಷನಾಥ ಗರ್ವಹರಣ

ಬೊಂಬಾಯಿ ಇಲಾಖೆಗೆ ಸೇರಿದ ಕೊಲ್ಹಾಪುರವೆಂಬ ಪಟ್ಟಣದಲ್ಲಿ ಹಿಂಗಳ್ಗೆ ಗೋರಕ್ಷನಾಥನೆಂಬ ಕುಟಿಲಸಿದ್ಧನಿದ್ದನು ಅವನು ಕುಟಿಲ ತಂತ್ರ ಮಂತ್ರ ಯಂತ್ರಗಳನ್ನು ಕಲಿತುಕೊಂಡು, ಅವುಗಳ ಪ್ರಭಾವದಿಂದ ಸರ್ವರಿಗೂ ಮಹಾಭೀತಿಯನ್ನುಂಟುಮಾಡುತ್ತ, ಕುಟಿಲ ತಂತ್ರ ನಿಷ್ಣಾತರಾದ ಅಸಂಖ್ಯಜನ ಶಿಷ್ಯರಿಂದೊಡಗೂಡಿ ಆ ಪ್ರಾಂತವನ್ನು ಏಕಚ್ಛತ್ರಾಧಿಪತ್ಯದಿಂದ ಆಳುತ್ತಿದ್ದನು. ಇವನ ಆಳ್ವಿಕೆಯಲ್ಲಿ ಪ್ರಜೆಗಳಿಗೆ ಸೌಖ್ಯವೆನ್ನುವದೇ ಇದ್ದಿಲ್ಲ ಸತ್ಪುರುಷರಂತೂ ಇವನ ಉಪದ್ರವವನ್ನು ತಡೆಯಲಾರದೆ ಬೇಸತ್ತು ಹೋಗಿದ್ದರು. ಭಿಕ್ಷುಕರಂತೂ ಇವನ ರಾಜಧಾನಿಯಲ್ಲಿ ಬಂದು ಭಿಕ್ಷೆಯನ್ನು ಬೇಡುವಂತೆಯೇ ಇರಲಿಲ್ಲ ಈ ರೀತಿ ಅಸಾಧಾರಣ ದುರ್ವರ್ತನೆದಿಂದ ಮೆರೆಯುತ್ತಿದ್ದ ಗೋರಕ್ಷನಾಥನ ಗರ್ವವನ್ನು ಹರಣಮಾಡಿ, ಅವನನ್ನು ಸನ್ಮಾರ್ಗದಲ್ಲಿ ತರಬೇಕೆಂಬ ಉದ್ದೇಶದಿಂದ ಶ್ರೀರೇಣುಕಾಚಾರ್ಯನು, ಕೊಲ್ಹಾಪುರಕ್ಕೆ ಬಂದು ಭಿಕ್ಷುಕವೇಷವನ್ನು ತಾಳಿ, ಅವನ ಮನೆಯ ಮುಂದೆ ಹೋಗಿ "ಭಿಕ್ಷಾಂ ದೇಹಿ" ಎಂದು ಗಟ್ಟಿಯಾಗಿ ಕೂಗಿದನು ಈ ಭಿಕ್ಷಾನಾದವನ್ನು ಕೇಳಿದ ಕೂಡಲೇ ಗೋರಕ್ಷನಾಥನ ಕೋಪವು ಮಿತಿಮೀರಿತು. ಆಗ್ಗೆ ಅವನು ತನ್ನ ಹೆಂಡತಿಯನ್ನು ಕರೆದು "ಎಲೆ ಸತಿಯೇ! ಅತ್ಯದ್ಭುತವಾದ ಮಂತ್ರ ತಂತ್ರ ಸಿದ್ಧಿಯನ್ನು ಪಡೆದಿರುವ ನನ್ನ ಪಟ್ಟಣದಲ್ಲಿ ಇಂದಿನವರೆಗೂ ಯಾವ ಭಿಕ್ಷುಕನೂ ಕಾಲಿಟ್ಟಿರಲಿಲ್ಲ ಇಂದು ಮಾತ್ರ ಯಾವನೋ ಒಬ್ಬ ನೀಚನು ಕುಟಿಲ ಮಂತ್ರ ತಂತ್ರಗಳಲ್ಲಿ ನಿಸ್ಸೀಮರಾಗಿರುವ ನನ್ನ ಶಿಷ್ಯರ ಸಮೂಹಕ್ಕೆಲ್ಲ ಮಂಕುಬೂದಿಯನ್ನು ಚೆಲ್ಲಿ, ನನ್ನ ಅರಮನೆಯವರೆಗೆ ಬಂದು ಭಿಕ್ಷೆಯನ್ನು ಬೇಡುವದೆಂದರೆ ಆ ದುರಾತ್ಮನ ಧೈರ್ಯವು ಎಷ್ಟಿರಬಹುದು? ಈ ಪ್ರಾಯಶ್ಚಿತ್ತಕ್ಕಾಗಿ ಭಿಕ್ಷೆಗೋಸುಗ ಕೈನೀಡಿರುವ ಅವನ ಕೈಯನ್ನು ಈ ಖಡ್ಗದಿಂದ ಕತ್ತರಿಸಿ, ಇದೇ ನಿನಗೆ ಭಿಕ್ಷೆಯೆಂದು ಹೇಳು" ಎಂದು ಆಜ್ಞೆಮಾಡಿದನು. ಗಂಡನ ಆಜ್ಞೆಯಂತೆ ಹೆಂಡತಿಯು ಖಡ್ಗವನ್ನು ತೆಗೆದುಕೊಂಡು ಭಿಕ್ಷುಕನ ಹತ್ತಿರ ಬರಲು, ಆ ಮಹಾತ್ಮನ ಮುಖದರ್ಶನಮಾತ್ರದಿಂದಲೇ ಅವಳಲ್ಲಿ ಭಕ್ತಿಯುಂಟಾಯಿತು ಆಗ ಅವಳು ಪತಿಯ ಹತ್ತಿರ ಹೋಗಿ "ಎಲೈ ಪತಿಯೇ, ಅವನು ಭಿಕ್ಷುಕನಲ್ಲ! ಸಾಕ್ಷಾತ್ ಪರಮಾತ್ಮನೇ ಭಿಕ್ಷುಕವೇಷವನ್ನು ಧರಿಸಿಕೊಂಡು ಬಂದಂತೆ ಕಾಣುತ್ತದೆ ಆದುದರಿಂದ ನೀನು ಇಂತಹ ಅಧರ್ಮಕಾರ್ಯದಲ್ಲಿ ತೊಡಗಬೇಡ" ಎಂದು ನಾನಾವಿಧವಾಗಿ ಬೇಡಿಕೊಂಡಳು ಆದಾಗ್ಯೂ ಗರ್ವಾಂಧನಾದ ಗೋರಕ್ಷನಿಗೆ ಬುದ್ಧಿಯು ಬರಲಿಲ್ಲ. ಆಗ ಗೋರಕ್ಷನು "ಎಲೆ ಸತಿಯೇ, ಪತಿಯ ಆಜ್ಞೆಯನ್ನು ತಿರಸ್ಕರಿಸುವದು ಪತಿವ್ರತಾಸ್ತ್ರೀಯರ ಧರ್ಮವಲ್ಲ, ನೀನು ನಿಜವಾಗಿಯೂ ಪತಿವ್ರತೆಯಾಗಿದ್ದಪಕ್ಷದಲ್ಲಿ ಕೂಡಲೇ ನನ್ನ ಆಜ್ಞೆಯನ್ನು ನೆರವೇರಿಸು" ಎಂದು ಕೋಪಾವೇಶದಿಂದ ನುಡಿದನು. ಆಗ್ಗೆ ಅವಳು ಉಪಾಯಗಾಣದೆ ದುಃಖಾಕ್ರಾಂತಳಾಗಿ, ಭಿಕ್ಷುಕವೇಷಧಾರಿಯಾಗಿದ್ದ ಶ್ರೀರೇಣುಕಾಚಾರ್ಯನ ಹಸ್ತಕ್ಕೆ ವೇಗದಿಂದ ಖಡ್ಗವನ್ನಿಟ್ಟಳು ಆಗ್ಗೆ ಶ್ರೀರೇಣುಕಾಚಾರ್ಯನು ಹಸ್ತಗತವಾದ ಆ ಖಡ್ಗದ ಮೇಲೆ ತನ್ನ ಹಣೆಯಲ್ಲಿದ್ದ ಅಗ್ನಿನೇತ್ರವನ್ನು ಬಿಡಲು, ಕೂಡಲೆ ಖಡ್ಗವು ಕರಗಿ ನೀರಾಯಿತು ಆಗ ಶ್ರೀರೇಣುಕಾಚಾರ್ಯನು ಆ ಉಕ್ಕಿನ ನೀರೇ ಗೋರಕ್ಷನ ಭಿಕ್ಷೆಯೆಂದು ಭಾವಿಸಿ ಅದನ್ನು ಪಾನಮಾಡಲು, ಆ ಉಕ್ಕಿನ ನೀರು ಖಡ್ಗಾಕಾರವನ್ನು ಹೊಂದಿ ಘುಡಿಘುಡಿಸುತ್ತ, ಅಂತಃಪುರದಲ್ಲಿದ್ದ ಗೋರಕ್ಷನಾಥನ ಉದರವನ್ನು ಮಹಾವೇಗದಿಂದ ಪ್ರವೇಶಿಸಿತು ಆಗ್ಗೆ ಗೋರಕ್ಷನಾಥನು ಆ ಆಯುಧದ ಬಾಧೆಯನ್ನು ತಡೆಯಲಾರದೆ ಒದ್ದಾಡಹತ್ತಿದನು ಪತಿಯ ಈ ವಿಧವಾದ ಸಂಕಟವನ್ನು ನೋಡಲಾರದೆ ಅವನ ಹೆಂಡತಿಯು ಮಹಾಮಹಿಮಶಾಲಿಯಾದ ಶ್ರೀ ರೇಣುಕಾಚಾರ್ಯನ ಪಾದಕಮಲಗಳಲ್ಲಿ ಬಿದ್ದು ತನ್ನ ಪತಿಯ ಸರ್ವಾಪರಾಧಗಳನ್ನು ಕ್ಷಮಿಸಿ ಅವನನ್ನು ಉದ್ಧರಿಸಬೇಕೆಂದು ಬಹುವಿಧವಾಗಿ ಬೇಡಿಕೊಂಡಳು. ಆಗ್ಗೆ ಶ್ರೀರೇಣುಕನು ಕರುಣಾನ್ವಿತನಾಗಿ ಗೋರಕ್ಷನಿದ್ದೆಡೆಗೆ ಹೋಗಿ, ಅವನ ಉದರದಲ್ಲಿ ಸೇರಿದ್ದ ಖಡ್ಗಕ್ಕೆ ಹಸ್ತವನ್ನು ಸ್ಪರ್ಶಮಾಡಲು, ಆ ಖಡ್ಗವು ಕೂಡಲೇ ಅವನ ದೇಹದಿಂದ ಕಳಚಿಬಿದ್ದಿತು ಆಗ ಗೋರಕ್ಷನಾಥನಿಗೆ ಬುದ್ಧಿಯು ಬಂದು ಗರ್ವದಿಂದ ದೂರನಾಗಿ, "ಮಹಾಸ್ವಾಮಿಯೇ! ನನ್ನ ಅಪರಾಧಗಳೆಲ್ಲವನ್ನೂ ಕ್ಷಮಿಸಿ ನನ್ನನ್ನು ಧನ್ಯನನ್ನಾಗಿ ಮಾಡು" ಎಂದು ಬಹು ದೈನ್ಯದಿಂದ ಬೇಡಿಕೊಂಡನು. ಆಗ್ಗೆ ಶ್ರೀರೇಣುಕಾಚಾರ್ಯನು ಅವನಿಗೆ ನಾನಾವಿಧವಾಗಿ ಸದುಪದೇಶ

ವನ್ನು ಮಾಡಿ ಶಿವಾದ್ವೈತಸಿದ್ಧಾಂತವನ್ನುಪದೇಶಿಸಿ, ಆವನನ್ನು ಧನ್ಯನನ್ನಾಗಿ ಮಾಡಿದನು

ಶ್ರೀ ಸೋಮನಾಥ ಲಿಂಗೈಕ್ಯ

ಇದೇ ರೀತಿಯಾಗಿ ಶ್ರೀ ರೇಣುಕಾಚಾರ್ಯರು ಅನಂತಾನಂತ ಲೀಲೆಗಳನ್ನಾಚರಿಸುತ್ತ ಈ ಭೂಮಂಡಲದಲ್ಲಿ ೭೦೦ ವರ್ಷ ಗುಪ್ತವಾಗಿಯೂ, ೭೦೦ ವರ್ಷ ಪ್ರಕಟವಾಗಿಯೂ ಇದ್ದು [illegible] ಕಾಂಚೀಕ್ಷೇತ್ರಕ್ಕೆ ಬಂದು ಅಲ್ಲಿಯೇ ಕೆಲವು ಕಾಲ ವಾಸವಾಗಿದ್ದರು ಹೀಗಿರುತ್ತಿರಲೊಂದು ದಿನ ಪರಮೇಶ್ವರನ ಅಜ್ಞಾನುಸಾರವಾಗಿ ಕಾಂಚೀ ಏಕಾಮ್ರೇಶ್ವರಲಿಂಗಮೂರ್ತಿಯ ಮಧ್ಯಭಾಗದ ಗರ್ಭದಿಂದ ಅವತರಿಸಿದ ಶ್ರೀ ರುದ್ರಮುನಿಶಿವಾಚಾರ್ಯರಿಗೆ ವೀರಶೈವ ಮತ ಸಾಮ್ರಾಜ್ಯ ಪಾಲನೆಗಾಗಿ ಶ್ರೀ ರಂಭಾಪುರೀ ಮಹಾಕ್ಷೇತ್ರದಲ್ಲಿ ತಮ್ಮ [illegible] ಸಿಂಹಾಸನಕ್ಕೆ ಪಟ್ಟವನ್ನು ಕಟ್ಟಿ ಅಲ್ಲಿಂದ ಗಗನಮಾರ್ಗವಾಗಿ ಕೊಲ್ಲಿಪಾಕ [illegible] ಕೊನೆಗೆ ತಾವು ಅವತರಿಸಿದ ಶ್ರೀ ಸೋಮೇಶ್ವರಲಿಂಗದಲ್ಲಿಯೇ ದಿವ್ಯದೇಹಧಾರಿಗಳಾಗಿ [illegible]

ಲೋಕಾ ಸಮಸ್ತಾ ಸುಖಿನೋ ಭವಂತು

ಜಮಖಂಡಿ

[illegible] ಶ್ರೀ [illegible] ಹಿರೇಮಠದಲ್ಲಿ ಶ್ರೀ ಜಗದ್ಗುರು ರೇಣುಕರ ಜಯಂತಿಯು ವೇ|| [illegible] ಕಾಶಪ್ಪಣ್ಣ [illegible] ವೈಭವದಿಂದ ಆಚರಿಸಲ್ಪಟ್ಟಿತು [illegible] ಪ್ರಾತಃಕಾಲ ಶ್ರೀ ರೇಣುಕರ [illegible] ಶ್ರೀ|| ಷ|| ಬ್ರ|| ಪಟ್ಟದ [illegible] ಶಿವಾಚಾರ್ಯರಿಂದ ವಿಧ್ಯುಕ್ತವಾಗಿ ನಡೆಸಲ್ಪಟ್ಟವು [illegible] ಸಭೆಯು ಪ್ರಾರಂಭವಾಯಿತು [illegible] ಸರ್ವಮಂಗಳ [illegible] ಶ್ರೀ ರೇಣುಕರ ಗೀತೆಯನ್ನು ಹಾಡಿದಳು ಅಧ್ಯಕ್ಷ ಪದಾಧಿಕಾರಿಗಳಾದ ಶ್ರೀ ಷ|| ಬ್ರ|| ಅನ್ನದಾನ ಶಿವಾಚಾರ್ಯರು ಶ್ರೀ ಜಗದ್ಗುರು ರೇಣುಕರ ಭೂಲೋಕಾವತಾರ ಅಗಸ್ತ್ಯಮುನಿಗಳಿಗೆ ಬೋಧಿಸಿದ ವೀರಶೈವ ಸಿದ್ಧಾಂತ ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗಪ್ರದಾನ, ಗೋರಕ್ಷಗರ್ವಹರಣ ಮೊದಲಾದ ಲೀಲೆಗಳನ್ನು [illegible] ಪಂಟಿವರಗೆ ಸರಸವಾಗಿ ಬೋಧಿಸಿದರು. ಅನಂತರ ಚರಂತಿ ಶರ್ಮರು, ಲಿಂಗಪ್ಪ ಮಾಸ್ತರ ಕಡಪಟ್ಟಿ ಈ ಉಭಯರು ಜಯಂತಿ ಗುರುಭಕ್ತಿ ವಿಷಯವಾಗಿ ಮಾತನಾಡಿದರು ಮಾಸ್ತರರು ಇದುವರೆಗೆ ಆಚಾರ್ಯರ ಮಹಿಮೆಯೇ ಗೊತ್ತಿರಲಿಲ್ಲವೆಂದೂ, ಇನ್ನು ಮುಂದೆ ನಾವು ತಪ್ಪದೆ ಪ್ರತಿವರುಷ ಬಿದುಜನ ಆಚಾರ್ಯರ ಜಯಂತಿಯನ್ನು ಅವಶ್ಯವಾಗಿ ಆಚರಿಸಲೇಬೇಕೆಂದೂ, ಜಗದಾಚಾರ್ಯರ ಮಹಿಮೆಯನ್ನು ಜಗತ್ತಿಗೆಲ್ಲಾ ತಿಳುಹಿಸಿ ವೀರಶೈವ ಸಮಾಜಕ್ಕೆ ಕಲ್ಯಾಣವನ್ನುಂಟುಮಾಡಿದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಗೆ ಎಷ್ಟು ಧನ್ಯವಾದಗಳನ್ನರ್ಪಿಸಿದರೂ ತೀರದೆಂದೂ ಬಹುಕಳಕಳಿಯಿಂದ ಹೇಳಿದರು ಬಳಿಕ ಮಂಗಳಾರತಿಯಾಗಿ ಶ್ರೀ ರೇಣುಕರ ಜಯಘೋಷದೊಡನೆ ಸಭೆಯು ಸಮಾಪ್ತಿಗೊಂಡಿತು ಪುನಃ ರೇಡಿಯೋದಲ್ಲಿ ಜಯಂತಿ ಬಗ್ಗೆ ಆದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣವನ್ನು ಕೇಳಿ ಸರ್ವರೂ ಸಂತೋಷಭರಿತರಾದರು. ಈ ಉತ್ಸವಕ್ಕೆ ಮ|| ರಾ|| ವಿರೂಪಾಕ್ಷಪ್ಪಂಣ ಜಿರ್ಲಿ, ಮಲಕಪ್ಪಮಾಸ್ತರರು, ವೀರಭದ್ರಪ್ಪ ಆಲಗೂರ, ಬಶೆಟ್ಟೆಪ್ಪ ಕರಣಿ ವಸ್ತ್ರೈರಿ ಜಮಖಂಡಿ, ಕಡಪಟ್ಟಿ ಭಕ್ತ ಮಾಹೇಶ್ವರರೂ, ವಿದ್ಯಾರ್ಥಿಗಳೂ ಹೆಣ್ಣುಮಕ್ಕಳೂ ವಿಶೇಷವಾಗಿ ಸೇರಿದ್ದರು. ಸರ್ವರಿಗೂ ಇದೇಪ್ರಕಾರ ಸದ್ಬುದ್ಧಿಯನ್ನು ಅನುಗ್ರಹಿಸಲೆಂದು ಜಗದಾಚಾರ್ಯರನ್ನು ಪ್ರಾರ್ಥಿಸುವೆನು.

ಓರ್ವ ಗುರುಭಕ್ತ

ಕಲಬುರ್ಗಿ

ನಿಜಾಂ ಇಲಾಖಾ ಗುಲ್ಬುರ್ಗಾ ಟವನ್ನಿನಲ್ಲಿರುವ ಗದ್ದುಗೆ ಮಠದಲ್ಲಿ ವೀರಶೈವ ಬಂಧು ಸಮಾಜದ ವತಿಯಿಂದ ಶ್ರೀಮಾನ್ ದೊಡ್ಡಪ್ಪ ಅಪ್ಪಾ ಶರಣಬಸವೇಶ್ವರ ಸಂಸ್ಥಾನ ಇವರ ಅಧ್ಯಕ್ಷತೆಯಲ್ಲಿ ಜಯಂತೀ ನಿಮಿತ್ತವಾಗಿ ಸಭೆ ಸೇರಿತು. ಕೊಟ್ಟೂರು ಬಸವಯ್ಯನವರು ರೇಣುಕರ ವಚನಗಳನ್ನು ಒಳ್ಳೇ ಮಧುರವಾಗಿ ಸಂಗೀತರೂಪದಿಂದ ಹಾಡಿ ಜನರ ಮನಸ್ಸನ್ನು ಆನಂದಗೊಳಿಸಿದರು ಕು|| ದಾಕ್ಷಾಯಣಿಯು 'ವೀರಶೈವಮಾತಾ' ಈ ಪ್ರಯೋಗವನ್ನು ಅಭಿನಯಿಸಿ ತೋರಿಸಿದರು ಶ್ರೀ ಪಡಕ್ಷರಯ್ಯನವರು ಪಲ್ಲಾಪೂರಮಠ ಇವರು ರೇಣುಕರ ಜಯಂತಿಯ ಮಹತ್ವವನ್ನು ವಿವರಿಸುತ್ತ ೧೨ನೇ ಶತಮಾನಕ್ಕಿಂತಲೂ ಪೂರ್ವದ ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿಗಳನ್ನು ತಿಳಿದುಕೊಳ್ಳಲು ಆಚಾರ್ಯರ ಜಯಂತಿಯಿಂದಲೇ ನಮಗೆ ಸಾಧ್ಯವೆಂಬುದನ್ನು ವಿವರಿಸಿದರು. ಶ್ರೀ ನಾಗಭೂಷಣರಾಯರು ರೇಣುಕರ ಚರಿತ್ರೆಯನ್ನು ಐತಿಹಾಸಕರೂಪವಾಗಿ ಹೇಳಿ ಸನಾತನ ವೀರಶೈವ ತತ್ವವು ಬೆಳಗಬೇಕಾದರೆ ಆಚಾರ್ಯರ ಜಯಂತಿಗಳೇ ನಮಗೆ ಸಾಧನವೆಂಬುದನ್ನು ಸಿದ್ಧಮಾಡಿದರು ಶ್ರೀ ಶಾಂತವೀರಸ್ವಾಮಿಗಳು ಹಿರೇಮಠ ಇವರು ಆಚಾರ್ಯರ ಯುಗ ಯುಗಾಂತರ ಅವತಾರಗಳನ್ನು ಹೇಳಿ ವೀರಶೈವಮತದ ಸನಾತನತ್ವವನ್ನು ಸಿದ್ಧಮಾಡಿದರು. ಶಾಲಾಮರೀಯ ವೇ|| ಬಸವಪ್ಪ ಶಾಸ್ತ್ರಿಗಳು ಮಸ್ಕಿ ಇವರು ಶ್ರೀ ರೇಣುಕರಿಂದ ಉಪದೇಶಿಸಲ್ಪಟ್ಟ ಸಿದ್ಧಾಂತ ಶಿಖಾಮಣಿಯ ಗೂಢತತ್ವಗಳನ್ನು ಎರಡು ಘಂಟೆಯವರೆಗೆ ಒಳ್ಳೇ ಪರಿಣಾಮಕರವಾಗಿ ಬೋಧಿಸಿದರು. ಸರ್ವಸಿದ್ಧಾಂತಗಳಿಗಿಂತಲೂ ವೀರಶೈವ ಸಿದ್ಧಾಂತವು ಹೇಗೆ ಜಗತ್ಪೂಜ್ಯವಾಗಿರುವದೆಂಬುದನ್ನು ಒಳ್ಳೇ ಸಮಂಜಸವಾಗಿ ಹೇಳಿದರು ಅಧ್ಯಕ್ಷರು ತಮ್ಮ ಆನಂದವನ್ನು ವ್ಯಕ್ತಮಾಡಿ ಶಾಸ್ತ್ರಿಗಳು ನಮಗೆ ಹೋದವರ್ಷ ಒಂದು ತಿಂಗಳಿಂದ ಹೇಳಿದ ಸಿದ್ಧಾಂತವನ್ನು ಈ ಹೊತ್ತು ಎರಡು ತಾಸುಗಳಲ್ಲಿಯೇ ನಮಗೆ ತಿಳಿಸಿಕೊಟ್ಟರೆಂದು ಉದ್ಗಾರ ತೆಗೆದರು ಲಿಂಗಾಂಗ ಸಾಮರಸ್ಯದ ಸಾರವು ಶ್ರೀ ಶಾಸ್ತ್ರಿಗಳಿಂದ ಸುಲಭವಾಗಿ ತಿಳಿದಷ್ಟು ಆದು ಇನ್ನೊಬ್ಬರಿಂದ ಕಷ್ಟ ಸಾಧ್ಯವೆನ್ನುವನ್ನು ಸಭೆಯನ್ನು ಅಚ್ಚರಿಗೊಳಿಸಿದರು. ಶ್ರೀಮಾನ್ ಬಸವಣ್ಣಪ್ಪ ಅಣ್ಣಾಖುಬಾ, ಶ್ರೀ ಶಿವರಾಚಪ್ಪ ಪೇಮಶೆಟ್ಟಿ, ವೀರಂತಪ್ಪ ಚವಧಂ ಮೊದಲಾದ ಮಹನೀಯರು ಜಯಂತೀ ಮಹೋತ್ಸವದಲ್ಲಿ ಭಾಗಿಗಳಾಗಿ ಒಳ್ಳೆ ಶೋಭೆಯನ್ನುಂಟುಮಾಡಿದರು. ಕೊನೆಯಲ್ಲಿ ಶ್ರೀ ರೇಣುಕರ ಮಂಗಲಗೀತೆಯೊಡನೆ ಸಭೆ ವಿಸರ್ಜಿಸಲ್ಪಟ್ಟಿತು.

ಪಂಚಮಂಡಳಿ ಗದ್ದಿಗಿಮಠ

ಕೊಟ್ಟೂರು

ಬಳ್ಳಾರಿ ಡಿ|| ಕೊಟ್ಟೂರುಟವನ್ನಿನಲ್ಲಿ ತಾ|| 26-2-45ನೆಯ ಸೋಮವಾರ ದಿವಸ ಇಲ್ಲಿಯ ಹಿರೇಮಠದ ಶ್ರೀ ||ಷ|| ಬ್ರ|| ಭುಜಂಗಭೂಷಣ ಸ್ವಾಮಿಗಳವರ ಮಠದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತೀ ಮಹೋತ್ಸವವು ವಿಶೇಷ ಸಂಭ್ರಮದೊಡನೆ ನೆರವೇರಿಸಲ್ಪಟ್ಟಿತು ಈ ಕಾರ್ಯದಲ್ಲಿ ಗ್ರಾಮದ ಪ್ರಮುಖರೆಲ್ಲರೂ ಭಾಗವಹಿಸಿದ್ದರು ಅಂದು ಪ್ರಾತಃಕಾಲ ಜಗದಾಚಾರ್ಯರ ಮೂರ್ತಿಗೆ ರುದ್ರಾಭಿಷೇಕಾದಿಗಳು ನೆರವೇರಿದವು. ಸಾಯಂಕಾಲ ಪಂಚಕಲಶಯುಕ್ತವಾದ ಪಲ್ಲಕ್ಕಿಯಲ್ಲಿ ಆಚಾರ್ಯರ ವಿಗ್ರಹವನ್ನು ಮೂರ್ತಮಾಡಿಸಿ ಅನೇಕವಾದ್ಯವೈಭವದಿಂದಲೂ ಪಂಚಾಚಾರ್ಯರ ಭಜನಾದಿಗಳಿಂದಲೂ ಉತ್ಸವವು ನೆರವೇರಿಸಲ್ಪಟ್ಟಿತು ಉತ್ಸವವು ಮಠಕ್ಕೆ ಬಂದು ತಲಪಿದಮೇಲೆ ಜಗದಾಚಾರ್ಯರ ಲೀಲೆಗಳನ್ನು ಕುರಿತು, ಕೆಲವರು ಭಾಷಣಗಳನ್ನು ಮಾಡಿದರು ಬಳಿಕ ಮಹಾಮಂಗಳಾರತಿಯಾಗಿ ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಆ ದಿವಸ ಸಾಯಂಕಾಲ ಪಂಚಾಯತಿ ಬೋರ್ಡ್ ಆಫೀಸಿನಲ್ಲಿರುವ ಪಬ್ಲಿಕ್ ರೇಡಿಯೋದಲ್ಲಿ ಸಂಗೀತವಿದ್ವಾನ್ ಶ್ರೀ ಕೊಟ್ಟೂರುಬಸವಯ್ಯನವರು ರೇಣುಕರ ವಿಷಯದಲ್ಲಿ ಬಹು ಮನೋಹರವಾಗಿ ಹಾಡಿದ ಹಾಡುಗಳನ್ನೂ ವೇ||ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣವನ್ನೂ ಕೇಳಿ ಸರ್ವರೂ ಪರಮಾನಂದಭರಿತರಾದರು ಬಳಿಕ ಸರ್ವರೂ ಆಚಾರ್ಯರ ಜಯಘೋಷವನ್ನು ಮಾಡುತ್ತಾ ತಮ್ಮ ತಮ್ಮ ಮನೆಗಳಿಗೆ ತೆರಳಿದರು

ಪ್ರತ್ಯಕ್ಷದರ್ಶಿ

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ	೦—೬—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು.)ಸೈಜು ೧೪ × ೧೦ ಬೆಲೆ	೦—೬—೦
ಸಪ್ತ ಪೀಠಾರೋಹಣಮಾಡಿದತಕ್ಷ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ .	೦—೩—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ .	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ .	೦—೧—೬
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ ...	೦—೧—೬
ಶ್ರೀ ಕಾಶೀ ಜಗದ್ಗುರುಗಳ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦	೦—೪—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ ...	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ ...	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೬

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266

॥ ಶ್ರೀಜಗದ್ಗುರು ಪಂಚಾಚಾರ್ಯರೀ ಪ್ರಸೀದಂತು ॥

REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ೪ ಆಣೆ

ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ.

ಸಂಪುಟ ೧೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೨ನೇ ಮಾರ್ಚಿ ೧೯೪೫ [ಸಂಚಿಕೆ ೪೬

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವಗಳು

ಶ್ರೀಕ್ಷೇತ್ರ ಕಾಶೀ

ಶ್ರೀಮದ್ಭೂಕೈಲಾಸ ವಾರಾಣಸೀಕ್ಷೇತ್ರ ವಿರಾಜಮಾನ ಜಗದ್ಗುರು ವಿಶ್ವಾರಾಧ್ಯ ಜ್ಞಾನಸಿಂಹಾಸನ ಮಹಾ ಮಠದಲ್ಲಿ ಪ್ರತಿವರ್ಷದ ಪದ್ಧತಿಯಂತೆ, ವೀರಶೈವ ಮತಸ್ಥಾಪನಾಚಾರ್ಯರಾದ ಶ್ರೀ ಜಗದ್ಗುರು ರೇಣುಕಭಗವತ್ಪಾದರ ಜಯಂತೀಮಹೋತ್ಸವವು ಅತ್ಯಂತ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು ಅಂದು ಪ್ರಾತಃಕಾಲ ೮ ಘಂಟೆಗೆ ಶ್ರೀ ಜಗದ್ಗುರು ರೇಣುಕ ಮತ್ತು ವಿಶ್ವಾರಾಧ್ಯರ ಸುವರ್ಣ ಲಿಂಗೋದ್ಭವ ಮೂರ್ತಿಗಳಿಗೆ ರುದ್ರಾಭಿಷೇಕವೂ, ಜ್ಞಾನಪೀಠದ ಸಮರ್ಚನೆಯೂ ವಿಧ್ಯುಕ್ತವಾಗಿ ಜರುಗಿದ ನಂತರ ಮಧ್ಯಾಹ್ನ ಗಣಸಂತರ್ಪಣೆಯು ವಿಶೇಷವಾಗಿ ನೆರವೇರಿತು. ಆದಿನ ಮೈಸೂರು ಆಕಾಶವಾಣಿಯಲ್ಲಿ, ಸುಪ್ರಸಿದ್ಧ ಸಂಗೀತ ವಿದ್ವಾಂಸರಾದ ಶ್ರೀಯುತ ಕೊಟ್ಟೂರಪ್ಪನವರಿಂದ ರೇಣುಕಾಚಾರ್ಯರ ಕೀರ್ತನೆಗಳೂ, ವೇ॥ ಪಂ॥ ಶ್ರೀಕಾಶೀನಾಥಶಾಸ್ತ್ರಿಗಳವರ ಭಾಷಣವೂ ಇದ್ದುದರಿಂದ, ಯಾತ್ರೆಗಾಗಿ ಬಂದು ಮಹಾ ಮಠದಲ್ಲಿ ತಂಗಿರುವ ಕರ್ಣಾಟಕ ಆಂಧ್ರ ಮಹಾರಾಷ್ಟ್ರ ಮುಂತಾದ ಪ್ರಾಂತಗಳ ಭಕ್ತಮಾಹೇಶ್ವರ ಸಮುದಾಯವು ಆ ಶುಭಸಮಯವನ್ನು ಅತ್ಯಂತ ಉತ್ಸುಕತೆಯಿಂದ ನಿರೀಕ್ಷಿಸುತ್ತಿದ್ದಿತು

ಸಾಯಂಕಾಲ ೬ ಘಂಟೆಗೆ ಸಭಾಭವನದಲ್ಲಿ ಶ್ರೀ ೧೦೮ ಜಗದ್ಗುರು "ಅಭಿನವ ವಿಶ್ವಾರಾಧ್ಯ" ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸಭೆಸೇರಿತು. ನಾನಾ ಪ್ರಾಂತಗಳ ಭಕ್ತ ಸಮುದಾಯವು ನೆರೆದಿತ್ತು ವಿಶ್ವವಿದ್ಯಾಲಯದ ಇಂಗ್ಲಿಷ್ ಪ್ರೊಫೆಸರರಾದ ಶ್ರೀ॥ ಆಸುಂಡಿಯವರು ಮತ್ತು ನಂದಲಾಲಜಿಯವರು ರಾವ್‌ಬಹದ್ದೂರ್ ಸರ್ ನಾಯಕ, ಏನಸಿದ್ಧಪ್ಪನವರು, ಹಲಗಲಿ ದೇಸಾಯರು, ಸ್ಥಳೀಯ ಪ್ರಮುಖರೂ ಆಗಮಿಸಿದ್ದರು

ಮೊದಲು ಜಗದ್ಗುರು ರೇಣುಕಾಚಾರ್ಯರ ಭಾವಚಿತ್ರಕ್ಕೆ ಪೂಜೆಯಾದಮೇಲೆ ಗುರುಕುಲದ ವೈದಿಕರಿಂದ ವೇದಘೋಷವೂ, ಶಿವಸ್ತುತಿಯೂ ಶ್ರಾವ್ಯವಾಗಿ ಮಾಡಲ್ಪಟ್ಟನಂತರ, ಕ್ಯಾಸನೂರು ಪಟ್ಟಾಧ್ಯಕ್ಷರಿಂದ ಜಯಂತೀ ವಿಷಯವಾಗಿ ಪ್ರಾರಂಭಿಕ ಭಾಷಣವಾಯಿತು. ವೇ॥ ಪಂ॥ ಗಂಗಾಧರಶಾಸ್ತ್ರಿಗಳು ಅನುಗೊಂಡ, ವೇ॥ ಪಂ॥ ಚನ್ನಬಸವಶಾಸ್ತ್ರಿಗಳು ಇಟಗಿ ವೈರಾಗಕರ ಪಟ್ಟಾಧ್ಯಕ್ಷರು, ರೋಣಕುಂದಿ ಪಟ್ಟಾಧ್ಯಕ್ಷರು, ಸೋಮಶೇಖರಶರ್ಮ ಇವರೂ ಮೊದಲಾದ ಅನೇಕ ಪಂಡಿತರು, ರೇಣುಕರ ಅಗಾಧಲೀಲೆಗಳ ಬಗ್ಗೆ ಮಾತನಾಡಿ ಸಭಿಕರನ್ನು ಆನಂದಗೊಳಿಸಿದರು. ರೇಡಿಯೋ ಮೂಲಕ ೭॥ ಘಂಟೆಗೆ ಶ್ರೀಯುತ ಕೊಟ್ಟೂರಪ್ಪನವರ ಗಾಯನವು ಸರ್ವರ ಮನವನ್ನೆಳೆಯಿತು ಆ ಗಾಯನದ ಮಾಧುರ್ಯಕ್ಕೆ ಶ್ರೀ ರೇಣುಕ ಭಗವತ್ಪಾದರ ಸ್ತೋತ್ರವೂ ಮತ್ತು ಲಲಿತಸಾಹಿತ್ಯವೂ ಸಮ್ಮಿಲಿತವಾಗಿದ್ದುದರಿಂದ ಸಭಿಕರೆಲ್ಲರೂ ಆನಂದ ಪರವಶರಾದರು

ಅನಂತರ ಜ॥ ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರು ಸಂಸ್ಕೃತ, ಹಿಂದೀಭಾಷೆಗಳಲ್ಲಿ ಗಂಭೀರವಾಗಿ, ರೇಣುಕಾಚಾರ್ಯರ ಚರಿತ್ರೆಯ ಬಗ್ಗೆ ಐತಿಹಾಸಿಕವಾಗಿಯೂ, ಶಾಸ್ತ್ರೀಯವಾಗಿಯೂ ೧॥ ಘಂಟೆಗಳಕಾಲ ಅಪ್ಪಣೆಕೊಡಿಸಿದರು ಸನ್ನಿಧಿಯವರ ವಾಣಿಯ ನಯ ನೈಪುಣ್ಯ ವೇದ ವೇದಾಂತಾದಿ ಶಾಸ್ತ್ರಗಳಲ್ಲಿರುವ ಆಳವಾದ ಪಾಂಡಿತ್ಯ, ಅತ್ಯದ್ಭುತವಾದ ಇತಿಹಾಸಜ್ಞಾನ ಮುಂತಾದುವುಗಳಿಂದ ಆಶ್ಚರ್ಯಯುಕ್ತರಾದ ಸಭಿಕರೆಲ್ಲರೂ ತಮಗಾದ ಆನಂದವನ್ನು ಕರತಾಡನಗಳ ಮೂಲಕ ವ್ಯಕ್ತಪಡಿಸುತ್ತಿದ್ದರು ಜಗದ್ಗುರುಗಳ ವ್ಯಾಖ್ಯಾನವು ಅಚುಂಬಿತ ವಿಷಯಗಳಿಂದ ಕೂಡಿದ್ದಿತಲ್ಲದೆ ರೇಣುಕರ ಚರಿತ್ರೆಯ ಬಗ್ಗೆ ಹೊಸ ಬೆಳಕನ್ನು ಉಂಟುಮಾಡಿತು ಸನ್ನಿಧಿಯವರು ರೇಣುಕಾಚಾರ್ಯರ ಚರಿತ್ರೆಯನ್ನೊಳಗೊಂಡ ಸಂಸ್ಕೃತ ಕನ್ನಡ, ತೆಲುಗು, ತಮಿಳು, ಮರಾಠಿ, ಹಿಂದೀ, ಇಂಗ್ಲೀಷ್ ಭಾಷೆಗಳ ಅನೇಕ ಪುಸ್ತಕಗಳ ಹೆಸರುಗಳನ್ನು ತಿಳಿಸಿದರಲ್ಲದೆ, ಬೌದ್ಧ ಧರ್ಮಗ್ರಂಥಗಳಲ್ಲಿಯೂ ರೇಣುಕರ ಪವಿತ್ರಾಭಿಧಾನವು ಅಲ್ಲಲ್ಲಿ ಕಂಡುಬರುವದೆಂದು ಪ್ರಮಾಣಪುರಸ್ಸರವಾಗಿ ಪ್ರತಿಪಾದಿಸಿದರು ಹಾಗೆಯೇ ಶಿಲಾಶಾಸನಗಳ ವಿಷಯವೆತ್ತಿ ಖಂಡನ ಮಂಡನಾತ್ಮಕವಾಗಿ ಅಪ್ಪಣೆಕೊಡಿಸುತ್ತ ಜ॥ ರೇಣುಕರ ಕಾಲಮಾನವು ಹನ್ನೆರಡನೆಯ ಶತಮಾನದ್ದೆಂದು ಹೇಳುವುದು ಪ್ರಮಾದವೆಂದೂ, ಈಗ್ಗೆ ಸಾವಿರಾರು ವರ್ಷಗಳ ಪೂರ್ವದಲ್ಲಿಯೇ ರೇಣುಕರು ಅವತರಿಸಿದ್ದರೆಂದೂ, ರೇಣುಕರು ಪರಶಿವನ ಪ್ರೀತಿಪಾತ್ರ ಪ್ರಮಥ ಶ್ರೇಷ್ಠರೆಂದೂ, ಆ ಮಹಾತ್ಮರ ಹೆಸರಿನ ಅನಂತ ಪುಣ್ಯಕ್ಷೇತ್ರಗಳು ಭರತಖಂಡದ ನಾನಾ ಭಾಗಗಳಲ್ಲಿ ರಾರಾಜಿಸುತ್ತಿರುವವೆಂದೂ, ಇವೇ ಮೊದಲಾದ ವಿಷಯಗಳನ್ನು ಪ್ರತಿಪಾದಿಸಿದರು

ಅನಂತರ ಮೈಸೂರು ಆಕಾಶವಾಣಿಯಲ್ಲಿ ಪಂ॥ ಶ್ರೀಕಾಶೀನಾಥಶಾಸ್ತ್ರಿಗಳವರ ಹೃದಯಂಗಮವಾದ ವ್ಯಾಖ್ಯಾನವು ಪ್ರಾರಂಭವಾಯಿತು. ಜಗದ್ಗುರುಗಳು ತಮ್ಮ ವಿಮರ್ಶಾತ್ಮಕ ಭಾಷಣದಲ್ಲಿ ಪ್ರತಿಪಾದಿಸಿದ "ಶ್ರೀಮಚ್ಛಿವಾಚಾರ ವಿಚಾರದೀಕ್ಷಂ" "ವೀರ ಸಿದ್ಧಾಂತ ನಿರ್ವಾಹಕ್ಕ ಶಪಟ್ಟನಿಬಂಧನಂ" ಎಂಬ ಶ್ಲೋಕಗಳು ಪಂ॥ ಶ್ರೀಕಾಶೀನಾಥಶಾಸ್ತ್ರಿಗಳವರ ಭಾಷಣದಾದಿಯಲ್ಲಿ ಸ್ತೋತ್ರರೂಪವಾಗಿ ಹೊರಹೊಂಟುದರಿಂದ ಉಭಯ ಭಾಷಣಗಳ ಏಕಸೂತ್ರತೆಯು ಸಭಿಕರೆಲ್ಲರನ್ನೂ ಹರ್ಷಿತರನ್ನಾಗಿ ಮಾಡಿತು.

ಪ್ರೊಫೆಸರ್ ಆಸುಂಡಿಯವರು, ರಾ॥ ಬ॥ ಹಲಗಲಿ ದೇಶಾಯರು ಮುಂತಾದ ಸಭಿಕರೆಲ್ಲರ ಅಭಿನಂದನೆಗಳ ಸ್ವೀಕರಿಸುವದಾದಮೇಲೆ ಮಹಾ ಮಂಗಳಾರತಿಯಾಗಿ ಜಗದ್ಗುರು ರೇಣುಕಾಚಾರ್ಯರ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು.

ಪಟ್ಟಾಧ್ಯಕ್ಷ ಕ್ಯಾಸನೂರುಮಠ,
ಕಾ॥ ವೀ॥ ವಿ॥ ಸಂಘದ ಸೆಕ್ರೆಟರಿ.

ಕುರಡಿ

ರಾಯಚೂರುಜಿಲ್ಲಾ ಕುರಡಿ ಗ್ರಾಮದಲ್ಲಿ ಪದ್ಧತಿಯಂತೆ ಈ ಸಲವೂ ಶ್ರೀ ಜಗದ್ಗುರು ಭಗವತ್ಪಾದ ರೇಣುಕಾಚಾರ್ಯರ ಜಯಂತೀಮಹೋತ್ಸವವು ಸಾವಿರದೇವರು ಮಠದಲ್ಲಿ ಶ್ರೀ ಷ॥ ಬ್ರ॥ ಚನ್ನವೀರಶಿವಾಚಾರ್ಯಸ್ವಾಮಿಗಳವರ ನೇತೃತ್ವದಲ್ಲಿ ಬಹು ವಿಜೃಂಭಣೆಯಿಂದ ನೆರವೇರಿತು ಫಾ॥ ಶ॥ ೧೫ ಸೋಮವಾರ ಮಧ್ಯಾಹ್ನ ೧೨ ಘಂಟೆಗೆ ಶ್ರೀಮಾನ್ ಗುಂಡಪ್ಪ ಸ್ಕೂಲ್‌ಮಾಸ್ಟರ್ ಇವರ ಭಕ್ತಿಯಿಂದ ಶ್ರೀ ಭಗವತ್ಪಾದರ ಭಾವಚಿತ್ರಕ್ಕೆ ಷೋಡಶೋಪಚಾರ ಪೂಜೆಯೂ, ಮಹಾಮಂಗಲಾರತಿಯೂ, ಗುರುಪಾದಪೂಜೆಯೂ, ಗಣಾರಾಧನೆಯೂ ಸಾಂಗವಾಗಿ ಜರುಗಿದವು ಅದೇದಿವಸ ಸಾಯಂಕಾಲ ಸದರಿ ಶ್ರೀಗಳವರ ಅಧ್ಯಕ್ಷತೆಯಲ್ಲಿ ದೊಡ್ಡ ಸಭೆ ಸೇರಿತು. ಅಗ್ಗೆ ಗೊರಕಲ್ಲು ಮಠಾಧ್ಯಕ್ಷ ವೇ॥ ಕರಿಬಸವಶಾಸ್ತ್ರಿಗಳವರು "ಗುರುಮಾಹಾತ್ಮ್ಯ" ವಿರೂಪಾಕ್ಷಗೌಡರು "ಭಗವತ್ಪಾದರ ಅವತಾರ' ವನ್ನು ಕುರಿತು ಗಂಭೀರವಾಗಿ ಭಾಷಣಗಳನ್ನು ಮಾಡಿದರು ಆಮೇಲೆ ಅಧ್ಯಕ್ಷರು ಶ್ರೀ ಭಗವತ್ಪಾದರ ಸಮಗ್ರ ಚರಿತ್ರವನ್ನು ಅಮೃತವಾಣಿಯಿಂದ ಬೋಧಿಸಿ ಪ್ರೇಕ್ಷಕವರ್ಗಕ್ಕೆ ಮಹಾನಂದವನ್ನುಂಟುಮಾಡಿದರು ಸದರಿ ಗ್ರಾಮಾಧಿಕಾರಿಗಳಾದ ಪೊ॥ ಪಾ॥ ವೀರನಗೌಡರು ಮಾಲಿ ಪಾ॥ ಬಸವನಗೌಡರು, ಭದ್ರಪ್ಪನವರು, ನಾಗಣ್ಣನವರು ಮೊದಲಾದ ಪ್ರಮುಖರು ಹೃತ್ಪೂರ್ವಕ ಸೇವೆ ಸಲ್ಲಿಸಿರುವುದಕ್ಕಾಗಿ ಭಗವತ್ಪಾದರು ಶುಭಾಶೀರ್ವಾದಗಳನ್ನು ಅನುಗ್ರಹಿಸಲಿ.

ಓರ್ವ ಗುರುಭಕ್ತ

ಮುದಗಲ್

ನಿಜಾಂಸ್ಟೇಟ್ ರಾಯಚೂರ ಜಿಲ್ಲಾ ಲಿಂಗಸೂಗೂರ ತಾಲ್ಲೂಕು ಪೈಕಿ ಕಸಬಾ ಮುದಗಲ್ಲ ಗ್ರಾಮದ ಗಂಗಾಧರ ಮಠಾಧ್ಯಕ್ಷರಾದ ವೇ॥ ಸಿದ್ಧರಾಮಯ್ಯನವರು ತಮ್ಮ ಮಠದಲ್ಲಿ ವಾರ್ಷಿಕಪದ್ಧತಿಯಂತೆ ಈ ವರ್ಷವಾದರೂ ಮಾಘ ಬ॥ ೧೪ ಮಹಾಶಿವರಾತ್ರಿ ದಿವಸ ಶ್ರೀ ಜಗದ್ಗುರು ವಿಶ್ವಾರಾಧ್ಯರ ಜಯಂತಿಯನ್ನು ಆಚರಿಸಿ ಮತ್ತು ಫಾಲ್ಗುಣ ಶು॥ ೧೫ ದಿವಸ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ವಿಧ್ಯುಕ್ತವಾಗಿ ಆಚರಿಸಿ ಸದರಿ ಶ್ರೀ ಜಗದ್ಗುರುಗಳವರ ಕೃಪಾಶೀರ್ವಾದಗಳಿಗೆ ಪಾತ್ರರಾದರು

ಓರ್ವ ಗುರುಪ್ರೇಮಿ

ಪಂಚಾಚಾರ್ಯಪ್ರಭಾ.

೧೯೪೫ನೆಯ ಮಾರ್ಚಿ ತಾ|| ೧೨ನೇ ಸೋಮವಾರ

ಮುಕ್ತಿಸಾಧನೆ

ಪ್ರತಿಯೊಬ್ಬ ಲಿಂಗಧಾರಿಯೂ ಸಾಮಾನ್ಯವೀರಶೈವ ತರಗತಿಯಲ್ಲಿ ಲಿಂಗಾಂಗಸಾಮರಸ್ಯವಿದ್ಯೆಯನ್ನು ಅಭ್ಯಾಸ ಮಾಡುತ್ತ ಚಿತ್ರವು ಹೇಗೆಹೇಗೆ ಮಾಗಿದ ಹಣ್ಣಿನಂತೆ ಕೋಮಲಭಾವವನ್ನು ಪಡೆಯುತ್ತ ಹೋಗುವದೋ ಹಾಗಹಾಗೆ ಹಿಂದಿನ ಸಾಮಾನ್ಯತರಗತಿಯಿಂದ ಮುಂದು ಮುಂದಣ ತರಗತಿಯು ಲಭಿಸುತ್ತ ಬರುವದು ಪ್ರದ ಮತಃ ಅಕ್ಷರಾಭ್ಯಾಸವಾದ ತರುವಾಯ ಗ್ರಂಥವನ್ನೋದುವ ಚಾತುರ್ಯವು ಹೇಗೆ ಲಭಿಸುವದೋ ಹಾಗೆ ಪ್ರಥಮತಃ ವೀರಶೈವ ಸಾಮಾನ್ಯಧರ್ಮಾನುಷ್ಠಾನ ಮಾಡಿದವನು ವಿಶೇಷಧರ್ಮಾನುಷ್ಠಾನಶಕ್ತಿಯನ್ನು ಪಡೆಯಬಲ್ಲನೆಂಬುದು ಸರ್ವಾನುಭವಸಿದ್ಧವಾಗಿದೆ ಒಂದು ವೇಳೆ ಜ್ಞಾನ ಪರಿಪಾಕವೈಲಕ್ಷಣ್ಯದಿಂದ ಮುಂದುಮುಂದಣ ವಿಶೇಷ ನಿರಾಭಾರ್ಯಾವಸ್ಥೆಗಳನ್ನು ಮುಟ್ಟದ ಸಾಮಾನ್ಯ ವೀರಶೈವ ಧರ್ಮದಲ್ಲಿಯೇ ಪಾಣವನ್ನು ಬಿಡುವದಾದರೆ ಅವಕ್ಕೆ ತಕ್ಕಷ್ಟು ಮುಕ್ತಿಫಲವು ದೊರೆಯುದಿರದು ಹೇಗಂದರೆ—

ವೀರಶೈವಸಿದ್ಧಾಂತವು ಇತರ ಸಿದ್ಧಾಂತಗಳಂತೆ ಇಪ್ಪತ್ತನಾಲ್ಕು ತತ್ತ್ವಗಳನ್ನವಲಂಬಿಸಿರದೆ ಮುವತ್ತಾರು ತತ್ತ್ವಗಳನ್ನವಲಂಬಿಸುವದು ಪೃಥಿವ್ಯಾದಿ ಶಿವಾಂತವಾದ ಆ ತತ್ತ್ವಗಳಲ್ಲಿ ಈಶ್ವರ ಸದಾಶಿವ ಶಕ್ತಿ ಶಿವ ಎಂಬ ನಾಲ್ಕು ಶುದ್ಧತತ್ತ್ವಗಳೊಳಗ ಸಾಮಾನ್ಯವೀರಶೈವನ ಸ್ಥಾನವು ಈಶ್ವರತತ್ತ್ವವೆ ಮುಖ್ಯ [illegible]

ಯಮಾನ್ಯಸ್ಯ, [illegible]

ಎಂಬ ಮುಂಡಕೋಪ ನಿಷತ್ತಿನಲ್ಲಿ ಹೇಳಿರುವಂತೆ ನದಿಗಳು ಸಮುದ್ರಗರ್ಭಪ್ರವಿಷ್ಟವಾದರೂ ಉಪ್ಪಾಗಿ ಸಮುದ್ರಕ್ಕೆ ಸೇರಿದಮೇಲೆ ಆ ನದಿಗಳು ತಮ್ಮ ರೂಪವನ್ನು ಬಿಟ್ಟು ಸಮುದ್ರಾಕಾರವನ್ನು ಹೊಂದುವಂತೆ ಸಾಮಾನ್ಯ ಧರ್ಮಾನುಷ್ಠಾನದಿಂದ ಜೀವನು ತನ್ನ ಕಿಂಚಿಜ್ಞತ್ವಾದಿ ಸ್ವಭಾವವನ್ನು ಬಿಟ್ಟು ಈಶ್ವರಾಕಾರವನ್ನು ಪಡೆಯುವುದೇ ಸ್ವರೂಪೈಕ್ಯವು ಈ ಈಶ್ವರತತ್ತ್ವವಾಸಿಗಳಾದ ಸಾಮಾನ್ಯವೀರಶೈವನು ಮುಂದಣ ತರಗತಿಗೇರಿ ಸದಾಶಿವತತ್ತ್ವದಲ್ಲಿ ವ್ಯವಹರಿಸುವ ಶಕ್ತಿಯನ್ನು ಪಡೆದರೆ ಆ ಸದಾಶಿವತತ್ತ್ವದಲ್ಲಿ ಬೆರೆಯುವನು ಇವನಿಗೆ ವೀರಶೈವ ಎಂಬ ಹೆಸರುಂಟಾಗುವದು ಈತನಿಗೆ ಧರ್ಮೈಕ್ಯವೇ ಫಲವು

ಅದಾಮುಖೋಽಗ್ನಿರಗ್ನಾ ಹಾ ಸ್ಯಾದಗ್ನಿ ವ್ಯೋಮೇವ ಲಕ್ಷಯೇತ್ ।

ಎಂದು ಮೈತ್ರೇಯೋಪನಿಷತ್ತಿನಲ್ಲಿ ಹೇಳಿದಂತೆ ಹಾಲಿನಲ್ಲಿ ಹಾಲೂ, ನೀರಲ್ಲಿ ನೀರೂ ಅಗ್ನಿಯಲ್ಲಿ ಅಗ್ನಿಯೂ ಆಕಾಶದಲ್ಲಿ ಆಕಾಶವೂ ಸೇರುವಂತೆ ಜೀವಾತ್ಮನು (ಅಂಗವು) ಶಿವೋಪಾಸನೆಮಾಡುತ್ತ ಕಿಂಚಿಜ್ಞತ್ವಾದಿ ಧರ್ಮಗಳಿಂದ ದೂರನಾಗಿ ಸರ್ವಜ್ಞತ್ವಾದಿ ಧರ್ಮಗಳನ್ನು ಪಡೆಯುವನು

ಇಂತು ಸದಾಶಿವತತ್ತ್ವದಿಂದ ಮುಂದುವರೆದು ಶಕ್ತಿತತ್ತ್ವದಲ್ಲಿ ವ್ಯವಹಾರವುಳ್ಳವನಾದರೆ ಆತನು ಶಕ್ತಿತತ್ತ್ವದಲ್ಲಿಯೇ ಬೆರೆಯುವನು ಅವನಿಗೆ ವಿಶೇಷವೀರಶೈವನೆಂದು ಹೆಸರುಂಟಾಯಿತು "ದೇಹೋ ಬ್ರಹ್ಮತ್ವಮಾಯಾತಿ ಜಲತಾಂ ಸೈಂಧವೋ ಯಥಾ" ಎಂಬ ಪ್ರಮಾಣದಂತೆ ಉಪ್ಪು ಹೊಡಲು ನೀರಿನಿಂದಾಗಿ ಪುನಃ ಆ ನೀರಲ್ಲಿಯೇ ಸೇರಿ ತನ್ನ ಕಾಠಿಣ್ಯಸ್ವಭಾವವನ್ನು ತ್ಯಜಿಸಿ ನೀರಿನ ಆಕಾರವನ್ನೇ ಹೊಂದುವಂತೆ ಪರಮಾತ್ಮನಲ್ಲಿ ಅಪೃಥಕ್ ಸಿದ್ಧವಾಗಿರುವ ಧರ್ಮರೂಪವಾದ ಶಕ್ತಿಯ ಒಂದು ಸ್ಫುಲಿಂಗಾಂಶವೆನಿಸಿರುವ ಜೀವನು (ಅಂಗವು) ಶಿವೋಪಾಸನೆಯಿಂದ ಜೀವಧರ್ಮಗಳು ನಷ್ಟವಾಗಿ ಶಕ್ತಿಯಲ್ಲಿ ಸಮರಸವಾಗಿ ಬಿಡುವದು ಈ ಶಕ್ತಿತತ್ತ್ವದ ಮುಂದಿರುವ ಶಿವತತ್ತ್ವದಲ್ಲಿ ವ್ಯವಹಾರವುಳ್ಳವನಾಗಿದ್ದರೆ ನಿರಾಭಾರಿವೀರಶೈವನೆನಿಸುವನು ಈ ಸ್ಥಲವೇ ಮಹಾಮುಕ್ತಿಯ ಸ್ಥಲವು ಈ ಸ್ಥಲವನ್ನವಲಂಬಿಸಲಾಗಿ ದೇಹಧಾರಿಯಾಗಿದ್ದರೂ ಸಾಕ್ಷಾತ್ ಪರಶಿವಸ್ವರೂಪನಾಗಿಯೇ ಕಾಣುತ್ತಾನೆ ಈತನಿಗೆ ಪ್ರಾಪಂಚಿಕ ವ್ಯವಹಾರವೊಂದೂ ಇರುವುದಿಲ್ಲ

ಭಕ್ತಿರ್ಮಾತಾ ಸದಾಚಾರಃ ಪಿತಾ ಸತ್ಯಂ ಸುತಾಃ ಮತಾಃ ।
ಸ್ನುಷಾ ಶ್ರದ್ಧಾ ವಸುಶ್ರೋಶಾಂತಿಃ ಪೌತ್ರಾ ಮೈತ್ರ್ಯಾದಿಸದ್ಗುಣಾಃ ॥

ಎಂಬುವಂತೆ ಈ ನಿರಾಭಾರಿಗೆ ಗುರುಭಕ್ತಿಯೇ ತಾಯಿಯು, ಸದಾಚಾರವೇ ತಂದೆಯು, ಸತ್ಯವೇ ಮಕ್ಕಳು, ಶ್ರದ್ಧೆಯೇ ಸೊಸೆಯು, ಮೈತ್ರೀಮುದಿತಾದಿಚಿತ್ತಪರಿಕರ್ಮಗಳೇ ಮೊಮ್ಮಕ್ಕಳು, ಲಿಂಗಾಂಗಸಾಮರಸ್ಯವೇ ಆನಂದ ಈ ನಿರಾಭಾರಿಯವರೆಗೂ ಯಾವನು ಏರುವನೋ ಅವನು ಸಂಪೂರ್ಣ ವೀರಶೈವಧರ್ಮವನ್ನನುಷ್ಠಿಸಿ ಉತ್ತೀರ್ಣನಾದವನೆಂದು ಹೇಳಿಸಿಕೊಳ್ಳುತ್ತಾನೆ. ವೀರಶೈವಸಿದ್ಧಾಂತಸ್ಥಾಪಕರಾದ ಶ್ರೀಪಂಚಾಚಾರ್ಯರಿಂದ ಪಡೆದ ಶಿವದೀಕ್ಷೆಯ ಪ್ರಭಾವದಿಂದ ಸಾಮಾನ್ಯ, ವೀರ, ವಿಶೇಷ, ನಿರಾಭಾರಿಯೆಂಬ ನಾಲ್ಕು ವಿಧಗಳಾದ ತರಗತಿಗಳನ್ನು ಕ್ರಮದಿಂದ ಪ್ರವೇಶಮಾಡಬೇಕು ಮುಂದುಮುಂದಣ ಸ್ಥಲವನ್ನು ಪ್ರವೇಶಮಾಡಿದಂತೆಲ್ಲಾ ಮೂಲ ಚಾರ್ಯರು ನಿರೂಪಿಸಿರುವ ಪಿಂಡಾದಿಜ್ಞಾನಶೂನ್ಯಾಂತವಾದ ೧೦೧ ನಿಗೂಢತತ್ತ್ವಗಳೆಲ್ಲ ಕರತಲಾಮಲಕದಂತೆ ಪರಿಸ್ಫುಟವಾಗಿ ದೇಹಧಾರಿಯಾಗಿರುವವರೆಗೂ ಪರ್ಯಲಬ್ರಹ್ಮ ಎಂಬ ಮಹಾಪದವಿಯನ್ನು ಪಡೆದವನಾಗಿ ಸ್ವೇಚ್ಛಾಕಲ್ಪಿತವಿಗ್ರಹಧಾರಿಯಾಗಿ ಕಾರಣಾಂತರಾಪೇಕ್ಷೆಯಿಲ್ಲದ ಇಚ್ಛಾಮಾತ್ರದಿಂದ ಕಾಮಧೇನು ಚಿಂತಾಮಣಿಗಳಂತೆ ನಾನಾವಿಧ ವಿಚಿತ್ರ ವಸ್ತುನಿರ್ಮಾಣಶಕ್ತಿಯುಳ್ಳವನಾಗಿದ್ದರೂ ಮಹಾವೈರಾಗ್ಯಶೀಲನೆನ್ನಿಸಿ ಪಟ್ಟಪಟದಂತೆ ಪ್ರತೀತಿಮಾತ್ರದಿಂದ ಸದಾವಿಹಾರಿಯಾಗಿ ಸಂಚರಿಸುತ್ತಿರುವನು ಇಂಥ ಮಹಾತ್ಮನು ದೇಹಾವಸಾನದಲ್ಲಿ ಭ್ರಮರಕೀಟನ್ಯಾಯಾನುಸಾರವಾಗಿ ಸರ್ವಜ್ಞತ್ವಾದ್ಯನಂತಕಲ್ಯಾಣಗುಣವಿಶಿಷ್ಟನಾದ ಶಿವನೊಡನೆ ಸಮರಸನಾಗಿ ಬಿಡುವನು ಗುರುವಿನಿಂದ ಲಿಂಗಧಾರಣರೂಪದೀಕ್ಷೆಯನ್ನು ಪಡೆಯದಾತನಿಗೆ ಸಾಮಾನ್ಯ ವೀರ, ವಿಶೇಷ, ನಿರಾಭಾರಿ ಎಂಬ ಉತ್ತರೋತ್ತರ ಉತ್ತಮಗಳಾದ ಜ್ಞಾನಪರಿಪಾಕಾವಸ್ಥೆಗಳು ದಯಿಸುವುದಿಲ್ಲ ಆದುದರಿಂದ ಗುರುದೀಕ್ಷೆಯಿಂದ ಪವಿತ್ರನಾದ ವೀರಶೈವನು ಸಾಮಾನ್ಯಾದಿ ನಿರಾಭಾರ್ಯಂತ ಸೋಪಾನಗಳನ್ನೇರಿ ಲಿಂಗಾಂಗಸಾಮರಸ್ಯವೆಂಬ ಮಹಾಫಲವನ್ನು ಪಡೆಯಲೆಂದು ಹಾರೈಸುವೆವು

ಯುದ್ಧವಾರ್ತೆ.

ಜರ್ಮನ್ ಮುತ್ತಿಗೆ ವಿಫಲವಾಯ್ತು

ಜರ್ಮನಿಯ ಕೈಗಾರಿಕಾ ಕೇಂದ್ರಕ್ಕೆ ಸ್ವಾಭಾವಿಕವಾದ ಕೋಟೆಯಂತಿರುವ ರೈನ್ ನದಿಯನ್ನು ಅಮೇರಿಕ ಮೊದಲನೆಯ ಸೈನ್ಯದ ಸೈನಿಕರು ದಾಟಿ ಬಹುದೂರ ಆಕ್ರಮಣ ನಡೆಸಿದ್ದಾರೆ ಕೊಲೋನ್ ನಗರಕ್ಕೆ ದಕ್ಷಿಣದಲ್ಲಿರುವ ಒಂದು ಸ್ಥಳದಲ್ಲಿ ಅಮೇರಿಕರು ನದಿಯನ್ನು ದಾಟಿ ಶತ್ರು ಸ್ಥಾನಗಳ ಮೇಲೆ ಮುತ್ತಿಗೆ ಹಾಕಿದ್ದಾರೆ. ರೈನ್ ನದಿಯ ಪೂರ್ವದಲ್ಲಿ ಜರ್ಮನರು ದಂಡೆತ್ತಿ ಬಂದು ಆಕ್ರಮಣ ನಡೆಸಲು ಪ್ರಯತ್ನಿಸಿದ್ದು ಈ ಮಿತ್ರ ಸೈನ್ಯಗಳ ಮಹಾ ಮುತ್ತಿಗೆಯ ಮುಂದೆ ಮುರಿದುಬಿತ್ತು ಅಮೆರಿಕನ್ನರು ರೈನ್ ನದಿಯನ್ನು ದಾಟಿದ ಮೇಲೆ ಆ ನದಿ ಮೂಲಕ ಮಿತ್ರ ಸೈನ್ಯಕ್ಕೆ ಈಗ ಒಂದೇ ಸಮನಾಗಿ ಶಸ್ತ್ರಾಸ್ತ್ರಗಳೂ ಪಡೆಗಳೂ ಒದಗುತ್ತಿವೆ ಅಮೇರಿಕನ್ ಮೊದಲನೆಯ ಸೈನ್ಯಕ್ಕೂ ಮೂರನೆಯ ಸೈನ್ಯಕ್ಕೂ ಇರುವ ಅಂತರ ದಿನದಿನಕ್ಕೆ ಕಡಿಮೆ ಆಗುತ್ತಿದೆ ದೋಣಿಗಳ ಮೂಲಕ ಪರಾರಿಯಾಗುತ್ತಿರುವ ಜರ್ಮನರ ಮೇಲೆ ಮಿತ್ರವಿಮಾನಗಳು ಎಡಬಿಡದೆ ಧಾಳಿಮಾಡುತ್ತಿವೆ.

ಶತ್ರು ವಿ-ಬಾಂಬುಗಳ ಸಾಮರ್ಥ್ಯ ಹೆಚ್ಚಿದೆ

ಜರ್ಮನರು ಬ್ರಿಟನ್ನಿನ ಮೇಲೆ ಪ್ರಯೋಗಿಸುತ್ತಿರುವ ಹೊಸ ವಿಮಾನಬಾಂಬುಗಳು ಹಳೇ ಬಾಂಬುಗಳಿಗಿಂತ ಇನ್ನೂ ಹೆಚ್ಚು ದೂರ ಹಾರಿಬಂದು ದಾಳಿ ಮಾಡಬಲ್ಲವಂತಾಗಿವೆಯೆಂದು ವಿಮಾನ ಖಾತಾ ಸಚಿವರಾದ ಸರ್ ಆರ್ಕಿಬಾಲ್ಡ್ ಸಿಂಕ್ಲೇರರು ಕಾಮನ್ಸ್ ಸಭೆಯಲ್ಲಿ ತಿಳಿಸಿ ಆ ಬಾಂಬುಗಳನ್ನು ನಾಮಾವಶೇಷಮಾಡಲು ಬ್ರಿಟಿಷ್ ವಿಮಾನಗಳು ಪ್ರಯತ್ನಿಸಿರುವುದಾಗಿ ತಿಳಿಸಿದ್ದಲ್ಲದೆ ಜರ್ಮನ್ ವಿಮಾನ ಬಲವು ಅಡಗಿಸಲ್ಪಟ್ಟಿರುವುದಾದರೂ, ಅವರು ಹೆಚ್ಚು ನಷ್ಟವನ್ನು ಅನುಭವಿಸಿಯಾದರೂ ಬ್ರಿಟನ್ನಿನ ಮೇಲೆ ವಿಮಾನ ದಾಳಿ ನಡೆಸಬಲ್ಲವರಾಗಿದ್ದಾರೆಂದು ಸರ್ ಆರ್ಕಿಬಾಲ್‌ರವರು ಹೇಳಿ, ಶನಿವಾರ ಬ್ರಿಟನ್ನಿನ ಮೇಲೆ ದಾಳಿ ಮಾಡಲು ಬಂದ ೭೦ ವಿಮಾನಗಳ ಪೈಕಿ ಏಳೆಂಟು ನಾಶವಾದ ನಿದರ್ಶನವನ್ನಿತ್ತರು

ಭಾರತೀಯರಿಗೆ ಅಮೇರಿಕನ್ ಪೌರ ಹಕ್ಕು

ಅಮೇರಿಕ ಸಂಯುಕ್ತ ಸಂಸ್ಥಾನಕ್ಕೆ ಭಾರತೀಯರು ನಿರ್ದಿಷ್ಟ ಸಂಖ್ಯೆಯಲ್ಲಿ ವಲಸೆ ಬಂದು ನೆಲಸುವ ಮಸೂದೆಗೆ ಸಮ್ಮತಿಕೊಡಬೇಕೆಂದೂ, ಈಗಾಗಲೇ ಅಮೇರಿಕದಲ್ಲಿದ್ದು ಪೌರತ್ವಹಕ್ಕನ್ನು ಪಡೆಯಲು ಅರ್ಹರಾಗಿರುವ ಮೂವರನ್ನು ಅಮೇರಿಕ ಪ್ರಜೆಗಳೆಂದು ಪರಿಗಣಿಸಬೇಕೆಂದೂ, ಅಮೇರಿಕ ಅಧ್ಯಕ್ಷ ರೂಸ್ವೆಲ್ಟರು ಪ್ರಜಾಪ್ರತಿನಿಧಿ ಸಭೆಯ ಇಮಿಗ್ರೇಷನ್ ಸಮಿತಿಯ ಅಧ್ಯಕ್ಷರಿಗೆ ಪತ್ರ ಬರೆದಿದ್ದಾರೆ

ಮುಖಂಡರನ್ನೆಲ್ಲಾ ಬಿಡುಗಡೆ ಮಾಡಲು ಚರ್ಚಿಲರ ಒಪ್ಪಿಗೆ

ಭಾರತ ಬಿಕ್ಕಟ್ಟನ್ನು ಪರಿಹರಿಸಲು ಸಂಧಾನ ನಡೆಸಬೇಕೆಂಬುವಕ್ಕೆ ಯಾವಾಗಲೂ ವಿರೋಧಿಸುತ್ತಿದ್ದ ಬ್ರಿಟಿಷ್ ಪ್ರಧಾನಿ ಚರ್ಚಿಲರು ಈಗ ಭಾರತದಲ್ಲಿ ಸೆರೆಯಲ್ಲಿರುವ ಮುಖಂಡರನ್ನೆಲ್ಲಾ, ಬ್ರಿಟನ್ನಿನಲ್ಲಿ ನಡೆಯಲಿರುವ ಸಾರ್ವತ್ರಿಕ ಚುನಾವಣೆಗಳಿಗೆ ಮುಂಚೆಯೇ ಬಿಡುಗಡೆಮಾಡಲು ನಿರ್ಧರಿಸಿದ್ದಾರೆಂದು ಗೊತ್ತಾಗಿದೆ ಬ್ರಿಟನ್ನಿನ ನಾಯಕರಾದ ಪ್ರೊ|| ಲಾಸ್ಕಿ ಸರ್ ಸ್ಟಾಫರ್ಡ್ ಕ್ರಿಪ್ಸ್, ಲಾರ್ಡ್ ಲಿಸ್ಟೋವೆಲ್, ಪೆಟ್ರಿಕ್‌ಲಾರೆನ್ಸ್ ಮೊದಲಾದವರ ಒತ್ತಾಯವೇ ಇದಕ್ಕೆ ಕಾರಣವೆಂದು ಹೇಳಲ್ಪಟ್ಟಿದೆ

ಕಾಗದದ ಬೆಲೆ ಕಡಮೆ ಆಯಿತು

ಕಳೆದ ೮ನೆಯ ತಾರೀಖು ಪತ್ರಿಕಾ ಸಂಪಾದಕರಾದ ಶ್ರೀ ಎಲ್ ವೆಂಕೋಬರಾವ್ ಶ್ರೀ ಬಿ ಎಲ್ ಗುಪ್ತ ಶ್ರೀ ಗೌಸ್‌ಮೊಹಿಯುದ್ದೀನ್ ಮತ್ತು ಶ್ರೀ ಕೆ ಜೀವಣ್ಣ ರಾಯರು ಮೈಸೂರು ಕಾಗದದ ಕಾರ್ಖಾನೆ ಅಧ್ಯಕ್ಷರನ್ನು ಕಂಡು ಈಗ ಸರಬರಾಜು ಆಗುತ್ತಿರುವ ಮುದ್ರಣ ಕಾಗದದಿಂದ ಆಗುತ್ತಿರುವ ತೊಂದರೆಗಳನ್ನು ತಿಳಿಸಿದರು ಅಧ್ಯಕ್ಷರು ನಿಯೋಗದವರು ಹೇಳಿದುದನ್ನೆಲ್ಲಾ ಸಾವಧಾನವಾಗಿ ಕೇಳಿ ಕಾಗದದ ಬೆಲೆಯನ್ನು ಪೌಂಡಿಗೆ ೮ ಆಣೆಯಿಂದ ೭|| ಆಣೆಗೆ ಈ ತಿಂಗಳು ೧೦ನೆ ತಾ|| ನಿಂದ ಇಳಿಸಿರುವುದಾಗಿಯೂ ಇನ್ನೂ ಚೆನ್ನಾಗಿರುವ ಕಾಗದವನ್ನು ಒದಗಿಸುವುದಾಗಿಯೂ ಭರವಸೆ ಕೊಟ್ಟರು

ರಾಜಧಾನಿಯಲ್ಲಿರುವ ಒಂಟಿಕೊಪ್ಪಲ್ ಪಂಚಾಂಗ ಮಂದಿರದ "ಮೈಸೂರು ಪಂಚಾಂಗ" ಕರ್ತರಾದ ಶ್ರೀಮಾನ್ ಟಿ ಎ. ಕೃಷ್ಣಶಾಸ್ತ್ರಿಗಳವರು ಪಾರ್ಥಿವ ಸಂವತ್ಸರದ ಪಂಚಾಂಗವನ್ನು ನಮ್ಮ ಕಡೆಗೆ ಕಳುಹಿಸಿದ್ದಾರೆ ಈ ಪಂಚಾಂಗದಲ್ಲಿ ಲೋಕೋಪಯುಕ್ತವಾದ ಸರ್ವವಿಷಯಗಳೂ ಬರೆಯಲ್ಪಟ್ಟಿರುವದರಿಂದ ಸರ್ವ ಸಂಗ್ರಾಹ್ಯವಾಗಿದೆ ಕಾಗದದ ಅಭಾವಕಾಲದಲ್ಲಿಯೂ ಸಹ ಇವರು ಪೂರ್ವದಂತೆಯೇ ಪಂಚಾಂಗವನ್ನು ಪ್ರಕಾಶಪಡಿಸಿರುವದು ಸ್ತುತ್ಯವಾಗಿದೆ.

ರಂಭಾಪುರೀ ಮಹಾಕ್ಷೇತ್ರ

ಇದೇ ಫಾಲ್ಗುಣ ಶುದ್ಧ ೧೫ ಸೋಮವಾರ ಪದ್ಧತಿ ಪ್ರಕಾರ ಮಹಾರಥೋತ್ಸವವು ವಿಶೇಷ ವೈಭವದಿಂದ ನೆರವೇರಲ್ಪಟ್ಟಿತು. ಅಂಗಭೂತವಾದ ಕಾರ್ಯಗಳು ಸಹ ಆಯಾಯ ದಿವಸಗಳಲ್ಲಿ ಸುಲಲಿತವಾಗಿ ನಡೆದವು. ಕೀರ್ತನಕೇಸರಿ ವೇ|| ಗುಬ್ಬಿ ಶಿವರುದ್ರಶಾಸ್ತ್ರಿಗಳವರು ನಿಯಮಿತ ದಿವಸಗಳಲ್ಲಿ ಶಿವಗುರುಸಂಕೀರ್ತನೆಗಳನ್ನು ಸರಸವಾಗಿ ಅನುವಾದ ಮಾಡಿದರು ಅಜ್ಜಂಪುರದ ಸ್ಕೂಲ್ ಮಾ|| ಮರುಳಸಿದ್ಧಯ್ಯನವರು ಮತ್ತು ತ್ರಿಲಬ್ಧರು ಮ|| ರಾ|| ಬಿ. ಟಿ ಬಸವಪ್ಪಶೆಟ್ಟರವರ ಶ್ಲಾಘನೀಯವಾದ ಭಾಷಣಗಳಾದವು. ಶ್ರೀ ಜಗದ್ಗುರು ಮಹಾಸನ್ನಿಧಿಯ ಸವಾರಿಯು ಶ್ರೀ ಮಠದಲ್ಲಿಯೇ ಮೊಕ್ಕಾಂ ಆಗಿದ್ದುದರಿಂದ ಮಹೋತ್ಸವಕ್ಕೆ ವಿಶೇಷ ಶೋಭೆಯುಂಟಾಗಿತ್ತು ಈ ವರ್ಷ ಶ್ರೀ ಜಗದ್ಗುರು ರೇಣುಕಜಯಂತಿಯ ಪವಿತ್ರ ದಿವಸವೇ ಮೈಸೂರು ಶ್ರೀಮನ್ ಮಹಾರಾಜ ಸರ್ಕಾರದ ಮರಾಮತ್ ಹಾಗೂ ಕೈಗಾರಿಕೆ ಮಂತ್ರಿಗಳಾದ ಮುಷೀರ್ ಉಲ್-ಮುಲ್ಕ-ಹೆ ಮಹಮ್ಮದ್ ಇಮಾಂ ಬಿ ಎ ಬಿ. ಎಲ್ ರವರು ಜಿಲ್ಲಾಧಿಕಾರಿಗಳೊಡನೆ ಶ್ರೀ ಮಠಕ್ಕೆ ಆಗಮಿಸಿ, ಆಶ್ರಮಸಂದರ್ಶನದಿಂದ ತಮಗುಂಟಾದ ಆನಂದವನ್ನು ವ್ಯಕ್ತಗೊಳಿಸಿದರು. ಸಚಿವರು ದೇವತಾ ಪ್ರಸಾದವನ್ನು ಸ್ವೀಕರಿಸಿ ಶ್ರೀ ಜಗದ್ಗುರುಗಳವರ ದರ್ಶನವನ್ನು ಹೊಂದಿ ಸಂಭಾಷಣೆಯನ್ನು ಮಾಡಿ, ತರುವಾಯ ಮಹಾಪೀಠದ ನೂತನ ಕಟ್ಟಡವನ್ನು ಪರಾಮರ್ಶಿಸಿ ಬಹು ಸಂತೋಷಪಟ್ಟರು ಹೊರಡುವ ಸಮಯದಲ್ಲಿ ಶ್ರೀ ಮಹಾರಥಾಲಂಕೃತ ಶ್ರೀ|| ಜ|| ರೇಣುಕ ನವಲೀಲಾ ಭಾವಚಿತ್ರಗಳನ್ನೀಕ್ಷಿಸಿ ಇದರ ಚರಿತ್ರೆಯನ್ನು ಗುಬ್ಬಿ ಶಿವರುದ್ರಶಾಸ್ತ್ರಿಗಳವರಿಂದ ಕೇಳಿ ರೇಣುಕರ ಮಹಿಮೆಯನ್ನು ಕೊಂಡಾಡಿ ಪ್ರಯಾಣ ಬೆಳಸಿದರು ಈ ಮಹಾರಥೋತ್ಸವಕ್ಕೆ ಸಹಸ್ರಾರು ಜನರು ಆಗಮಿಸಿ ಪವಿತ್ರಾಶ್ರಮ ಸಂದರ್ಶನವನ್ನು ಹೊಂದಿ ಶ್ರೀಗುರು ಸಾರ್ವಭೌಮರ ಕೃಪಾಶೀರ್ವಾದಕ್ಕೆ ಪಾತ್ರರಾಗಿ ಧನ್ಯರಾದರು ಶ್ರೀ ಮಹಾಪೀಠದ ಜೀರ್ಣೋದ್ಧಾರಕ್ಕಾಗಿ ಧನಸಹಾಯವನ್ನು ನೀಡಲು ವಾಗ್ದಾನಮಾಡಿದ ಮಹಾಶಯರಲ್ಲಿ ಕೆಲವರು ಹಣವನ್ನು ಮಹಾಸನ್ನಿಧಿಗೆ ಸಮರ್ಪಿಸಿದರು ಮತ್ತೆ ಕೆಲವರು ಯಥಾಶಕ್ತಿ ಧನವನ್ನು ಸಮರ್ಪಿಸಲು ಒಪ್ಪಿಗೆಯನ್ನಿತ್ತರು ಮಹಾಪೀಠದ ಜೀರ್ಣೋದ್ಧಾರಕ್ಕಾಗಿ ಯಾರು ಸಹಾಯವನ್ನು ನೀಡುವರೋ ಅವರೇ ನಿಜವಾದ ಪುಣ್ಯಾತ್ಮರು

ಓರ್ವ ಮಹೋತ್ಸವ ಬಗಿ

ಹರಲಾಪುರ

ಶ್ರೀ ಜಗದ್ಗುರು ಪಂಡಿತಾರಾಧ್ಯ ವಿಶ್ವಾರಾಧ್ಯರ ಜಯಂತೀಮಹೋತ್ಸವವನ್ನು ಗುಡಗೇರಿ ತಾಲ್ಲೂಕು ಹರಲಾಪುರಗ್ರಾಮದ ಸಕಲ ಮತೀಯರೂ ಪ್ರತಿವರುಷ ಪದ್ಧತಿಯಂತೆ ಈ ವರುಷವೂ ಮಹಾಶಿವರಾತ್ರಿ ದಿವಸ ಮಹಾವೈಭವದಿಂದ ಜರುಗಿಸಿದರು ಹಿರಿಯಮಠದಲ್ಲಿ ಉಭಯ ಜಗದ್ಗುರುಗಳ ಲಿಂಗೋದ್ಭವಮೂರ್ತಿಗಳಿಗೆ ಶಾಸ್ತ್ರೋಕ್ತ ಪೂಜೆಯಾಗಿ ತೀರ್ಥಪ್ರಸಾದಗಳನ್ನು ಪಡೆದು ಸರ್ವರೂ ಧನ್ಯರಾದರು ಅನಂತರ ಆಚಾರ್ಯರ ಲಿಂಗೋದ್ಭವ ಚಿತ್ರಪಟವನ್ನು ಅಂದವಾಗಿ ಸಿಂಗರಿಸಿದ ಪುಷ್ಪಪಲ್ಲಕ್ಕಿಯಲ್ಲಿಟ್ಟು ವಾದ್ಯವೈಭವದೊಂದಿಗೆ ಉತ್ಸವವು ಮಠದಿಂದ ಸಾಯಂಕಾಲ ೫ ಘಂಟೆಗೆ ಹೊರಟು ಗ್ರಾಮದ ಪ್ರಮುಖ ಬೀದಿಗಳಲ್ಲಿ ಹಾಯ್ದು ೮ ಘಂಟೆಗೆ ಹಿಂದಿರುಗಿತು ಬಳಿಕ ಸರ್ವರೂ ಧರ್ಮಸುಧಾರಣೆಗಾಗಿ ಅಹೋರಾತ್ರಿಗಳಲ್ಲಿಯೂ ಶ್ರಮಿಸುತ್ತಿರುವ ಬೆಂಗಳೂರು ಶ್ರೀ ಮಹಂತಿನ ಮಠಾಧ್ಯಕ್ಷ ಶ್ರೀ|| ಷ|| ಬ್ರ|| ಗಂಗಾಧರಶಿವಾಚಾರ್ಯ ಸ್ವಾಮಿಗಳವರ ಆಶೀರ್ವಾದಗಳನ್ನು ಪಡೆದು ತಮ್ಮ ತಮ್ಮ ಮನೆಗಳಿಗೆ ತೆರಳಿದರು ಇದೇ ಪ್ರಕಾರ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವವನ್ನು ಇದೇ ಫಾಲ್ಗುನ ಶುದ್ಧ ಪೌರ್ಣಿಮೆ ಸೋಮವಾರ ದಿವಸ ಅತಿ ವೈಭವದಿಂದ ನೆರವೇರಿಸಿದರು ಮಠದಲ್ಲಿ ಶ್ರೀ ರೇಣುಕಾಚಾರ್ಯರ ಲಿಂಗೋದ್ಭವ ಮೂರ್ತಿಗೆ ಶಾಸ್ತ್ರೋಕ್ತ ಪೂಜೆಯಾಗಿ ಸರ್ವರಿಗೂ ಪ್ರಸಾದ ವಿನಿಯೋಗವಾದ ಬಳಿಕ ಜಗದಾಚಾರ್ಯರ ಜಯಘೋಷದೊಡನೆ ಕಾರ್ಯವು ಸಮಾಪ್ತಿಗೊಂಡಿತು. ಹರಲಾಪುರದಲ್ಲಿ ಬರಬರುತ್ತ ಆಚಾರ್ಯತತ್ತ್ವಪ್ರಭೆಯು ವಿಶೇಷವಾಗಿ ಬೆಳಗುತ್ತಿರುವದನ್ನು ನೋಡಿದರೆ ಆತ್ಮಾನಂದವೆನಿಸುತ್ತದೆ ಹರಲಾಪುರದ ಭಕ್ತರೇ ಧನ್ಯರು!

ಪುಟ್ಟಯ್ಯಸ್ವಾಮಿ ಹಿರೇಮಠ

ಶಿಗ್ಗಾಂವಿ

ಧಾರವಾಡ ಡಿ|| ಶಿಗ್ಗಾಂವಿಯಲ್ಲಿ ಪ್ರತಿವರ್ಷದ ಪದ್ಧತಿಯಂತೆ ಶ್ರೀ ಜಗದ್ಗುರು ರೇಣುಕಶಿವಾಚಾರ್ಯರ ಜಯಂತೀಮಹೋತ್ಸವವು ತಾರೀಖು ೨೬ ೨ ೧೯೪೫ ನೇ ಸೋಮವಾರ ದಿವಸ ಒಳ್ಳೇ ವೈಭವದಿಂದ ಜರುಗಿಸಲ್ಪಟ್ಟಿತು ಆ ದಿವಸ ಪ್ರಾತಃಕಾಲ ಶ್ರೀ ಗುರುಧ್ವಜ ವಂದನೆಯಾಯಿತು ಮಧ್ಯಾಹ್ನ ಶ್ರೀಗುರು ರೇವಣಸಿದ್ಧೇಶ್ವರ ಗದ್ದುಗೆಗೂ ಉತ್ಸವಮೂರ್ತಿಗೂ ಪೂಜೋಪಚಾರಗಳು ನಡೆದವು ಸಾಯಂಕಾಲ ೪ ಘಂಟೆಗೆ ಶ್ರೀ ರೇಣುಕಾಚಾರ್ಯರ ಭಾವಚಿತ್ರದ ಪಲ್ಲಕ್ಕಿಮಹೋತ್ಸವವು ಹಿರೇಮಠದಿಂದ ಹೊರಟು ಪ್ರಮುಖ ಬೀದಿಗಳಲ್ಲೆಲ್ಲಾ ಹಾಯ್ದು ರಾತ್ರಿ ೯ ಘಂಟೆಗೆ ಹಿರೇಮಠಕ್ಕೆ ತಲ್ಪಿತು ಬೀದಿಗಳು ತಳಿರುತೋರಣಗಳಿಂದ ಶೃಂಗರಿಸಲ್ಪಟ್ಟಿದ್ದವು ಗುರುಭಕ್ತಾದಿಗಳು ಫಲ ಪುಷ್ಪಗಳನ್ನರ್ಪಿಸಿ ದರ್ಶನಾಶೀರ್ವಾದ ಪಡೆದರು ಭಜನೆ, ಡೊಳ್ಳು, ಭಜಂತ್ರಿ, ಬ್ಯಾಂಡ್ ವಗೈರೆ ವಾದ್ಯಗಳಿಂದ ಉತ್ಸವವು ಒಳ್ಳೆ ವೈಭವದಿಂದ ಜರುಗಿಸಲ್ಪಟ್ಟಿತು ಆಮೇಲೆ ಇಂಗಳಗಿ ಹಿರೇಮಠದ ವೇ|| ವಿರುಪಾಕ್ಷಯ್ಯನವರ ಕೀರ್ತನೆಯಾಯಿತು ಹಂದಿಗನೂರು ಸಂಸ್ಥಾನದ ಶ್ರೀಮಂತ ಸರದಾರ ಬುಳ್ಳಪ್ಪದೇಸಾಯರು, ಇಲ್ಲಿಯ ರೆಸಿಡೆಂಟ್‌ಮ್ಯಾಜಿಸ್ಟ್ರೇಟ್ ಪಾಲಿಮಠ ಸಾಹೇಬರು, ಈಊರ ದೇಶಪಾಂಡೆಯವರು, ವಕೀಲರೂ, ಗ್ರಾಮಪಂಚಾಯತಿ ಸರಪಂಚರು, ಪೋಲೀಸ ಪಾಟೀಲರು, ದೊಡ್ಡ ದೊಡ್ಡ ವ್ಯಕ್ತಿಗಳು ಜನರು ಬಂದಿದ್ದರು ಜಯಂತಿಯು ವೈಭವದಿಂದ ಜರುಗಿದುದಕ್ಕೆ ಗುರುಕೃಪೆಯೇ ಮೂಲಕಾರಣವು ಇದರಂತೆ ಸರ್ವರಿಗೂ ಸಮೃದ್ಧಿಯನ್ನು ಕೊಟ್ಟು ರಕ್ಷಿಸಬೆಂದು ಗಯಾಘನನಾದ ಪರಮಾತ್ಮನನ್ನು ಪ್ರಾರ್ಥಿಸುತ್ತೇನೆ

ಎಸ್ ಜಿ ಬರ್ಮರ,
ಸ್ಟಾಂಪ್‌ವೆಂಡರ್ ಶಿಗ್ಗಾಂವಿ

ಶ್ರೀ ಜಗದ್ಗುರು ಕಾಶೀ ವಿಶ್ವಾರಾಧ್ಯ ಜ್ಞಾನಪೀಠದಿಂದ ಹಿಂದೂಕೋಡ್ ವಿರೋಧ

ಹಿಂದೂಕೋಡ್ ವಿರೋಧವು ಭಾರತದ ಮೂಲೆ ಮೂಲೆಗಳಿಂದಲೂ ನಡೆದಿರುವುದು! ಧಾರ್ಮಿಕ ಸಂಸ್ಥೆಗಳಿಂದ ಹಿಡಿದು ಧರ್ಮಪೀಠಗಳವರೆಗೂ ಏಕಮುಖವಾದ ವಿರೋಧವು ಪ್ರಬಲವಾಗಿ ಕಂಡುಬರುತ್ತದೆ ಹಿಂದೂ ಲಾ ಕಮಿಟಿಯವರು--" ಅಲ್ಲಾಬಾದಿನಲ್ಲಿ ಕಳೆದ ಫೆಬ್ರುವರಿ ತಾ|| 17--18--19 ದಿನಗಳಲ್ಲಿ ಸಾಕ್ಷಿ ತೆಗೆದುಕೊಳ್ಳಲಾಗುವದೆಂದೂ ಅದಕ್ಕಾಗಿ ನಾನಾ ಧರ್ಮ ಸಂಪ್ರದಾಯದವರು ತಮ್ಮ ತಮ್ಮ ಪ್ರತಿನಿಧಿಗಳನ್ನು ಕಳಿಸಬೇಕೆಂದೂ, ಪ್ರತಿನಿಧಿಗಳನ್ನು ಕಳಿಸುವವರು ಅಧಿಕೃತವಾಗಿ ಮೊದಲು ಸಮ್ಮತಿಯನ್ನು ಹೊಂದಬೇಕೆಂದೂ" ತಿಳಿಸಿದ್ದರು ಅದರಂತೆ ವೀರಶೈವ ಮತಸ್ಥಾಪನಾಚಾರ್ಯ ಶ್ರೀಮದ್ವಿಶ್ವಾರಾಧ್ಯ ಜ್ಞಾನಪೀಠಾಧೀಶ್ವರ ಶ್ರೀ ಜಗದ್ಗುರು ವೀರಭದ್ರಶಿವಾಚಾರ್ಯ ಮಹಾಸ್ವಾಮಿಗಳವರು ತಮ್ಮ ಪ್ರತಿನಿಧಿಯನ್ನು ಕಳಿಸಲು ಸಮ್ಮತಿಯನ್ನು ತರಿಸಿಕೊಂಡರು ವೀರಶೈವ ಧರ್ಮವು ಹಿಂದೂ ಧರ್ಮದಲ್ಲಿ ಒಂದು ಶ್ರೇಷ್ಠವಾದ ಸಂಪ್ರದಾಯವೆಂತಲೂ ಈ ಧರ್ಮಕ್ಕೆ ' ಕೋಡಿ" ನಿಂದ ದೊಡ್ಡ ಹಾನಿಯಾಗುವದರಿಂದ ಕೋಡು ಆಗಬಾರದೆಂತಲೂ ತಮ್ಮ ವಿರೋಧಾಭಿಪ್ರಾಯವನ್ನು ತಿಳಿಸಲು ವೀರಶೈವ ಧರ್ಮಶಾಸ್ತ್ರದ ಸಕಲಸಾಮಗ್ರಿಗಳೊಡನೆ ರಾಯಚೂರು ಶ್ರೀ ಗುರುಲಿಂಗಶಿವಾಚಾರ್ಯರನ್ನು ಪ್ರತಿನಿಧಿಯನ್ನಾಗಿ ಕಳಿಸಿದ್ದರು ತಾ|| 19 2 45 ನೆಯ ದಿವಸ ಅಲ್ಲಾಬಾದಿನಲ್ಲಿ ಜಗದ್ಗುರು ಕಾಶೀಪೀಠ ಪ್ರತಿನಿಧಿಯ ಸಾಕ್ಷಿಯಾಗಿ "ಹಿಂದೂ ಕೋಡ್" ಸಂಪೂರ್ಣವಾಗಿ ವಿರೋಧಿಸಲ್ಪಟ್ಟಿತು

ಸ್ವೀಕಾರ

ಹುಬ್ಬಳ್ಳಿ ಟವನ್ ದೇಸಾಯಿ ಓಣಿಯಲ್ಲಿರುವ ಮ|| ರಾ|| ಹಳೇ ಊರ ಶೆಟ್ಟೆಪ್ಪನವರ ಜ್ಯೇಷ್ಠ ಪುತ್ರ ಚಿ|| ವೀರಪ್ಪನಿಗೂ, ಧಾರವಾಡ ಡಿ|| ಪಾಲಿಕೊಪ್ಪಗ್ರಾಮದ ಮ|| ರಾ|| ವೀರಪ್ಪನವರ ಪುತ್ರಿ ಚಿ|| ಸೌ|| ಗೌರವ್ವನಿಗೂ ಮತ್ತು ತೃತೀಯ ಪುತ್ರ ಚಿ|| ಚನ್ನಪ್ಪನಿಗೂ ಹುಬ್ಬಳ್ಳಿಯಲ್ಲಿರುವ ಮ|| ರಾ|| ಊವನೂರ ಬಸಪ್ಪನವರ ಪುತ್ರಿ ಚಿ|| ಸೌ|| ನಾಗವ್ವನಿಗೂ ಇದೇ ಫಾಲ್ಗುನ ಬ|| ೯ ಗುರುವಾರ ದಿವಸ ವಿಶೇಷ ವೈಭವದೊಡನೆ ನೆರವೇರಿದ ವಿವಾಹ ಸಮಯದಲ್ಲಿ ಸದರಿಯವರ ಗುರುಗಳಾದ ಸೊಲ್ಲಾಪುರ ಹುಬ್ಬಳ್ಳಿ ಮಠದ ಶ್ರೀ|| ಷ|| ಬ್ರ|| ಧೇನುಕರ್ಣಶಿವಾಚಾರ್ಯಸ್ವಾಮಿಗಳವರ ಅಪ್ಪಣೆಯ ಮೇರೆಗೆ ಪ್ರಭಾಪೋಷಣೆಗೋಸ್ಕರ ತೆಗೆಯಿಸಿದ 4 ರೂಪಾಯಿಗಳು ವೇ|| ಜಿ ವಿ ನಂದಿಕೇಶ್ವರಮಠ ಇವರ ದ್ವಾರಾ ತಲ್ಪಿರುತ್ತವೆ

ಬೆಳಗಾಂವ ಡಿ|| ಮುತ್ತನಾಳಗ್ರಾಮದಲ್ಲಿರುವ ಮ|| ರಾ|| ಪಾಟೀಲ ಗೌಡಪ್ಪಗೌಡರ ಪುತ್ರ ಚಿ|| ಬಸವನಗೌಡನಿಗೆ ಧಾರವಾಡ ಹೊಸ ಯಲ್ಲಾಪುರದಲ್ಲಿರುವ ಮ|| ರಾ|| ಪಾಟೀಲ ಶಿವನಗೌಡರ ಪುತ್ರಿ ಚಿ|| ಸೌ|| ಸುಲೋಚನಾದೇವಿಯನ್ನು ಕೊಟ್ಟು ಹೂಲಿ ಮತ್ತು ಮುತ್ತನಾಳು ಶ್ರೀಗಳವರ ಅಧ್ಯಕ್ಷತೆಯಲ್ಲಿ ವಿವಾಹ ಮಹೋತ್ಸವವು ವಿಧ್ಯುಕ್ತವಾಗಿ ನೆರವೇರಿದ ಸಮಯದಲ್ಲಿ ಮೇಲ್ಕಂಡ ಶ್ರೀಗಳವರ ಅಪ್ಪಣೆಯ ಮೇರೆಗೆ ಪ್ರಭಾಪೋಷಣಕ್ಕೋಸ್ಕರ ವಧೂವರರಿಂದ ಸಮರ್ಪಿಸಲ್ಪಟ್ಟ 4 ರೂಪಾಯಿಗಳು ಮ|| ರಾ|| ಮುತ್ತನಾಳ ಪಾಟೀಲ ಗೋವಿಂದಗೌಡರ ದ್ವಾರಾ ತಲ್ಪಿರುತ್ತವೆ

ಧಾರವಾಡ ಡಿ|| ಗದಗ ಬೆಟಗೇರಿಯಲ್ಲಿರುವ ಮ|| ರಾ|| ಗದಗಿನ ಮಲ್ಲಪ್ಪನವರ ಪುತ್ರಿ ಚಿ|| ಸೌ|| ವೀರವ್ವನನ್ನು ಗದಗಿನಲ್ಲಿರುವ ಮ|| ರಾ|| ಶಿವಪ್ಪಾ ಕನ್ನೂರು ಇವರಿಗೆ ಕೊಟ್ಟು ನಿಶ್ಚಯ ಮಾಡಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವರನಕಡೆಯಿಂದ ತೆಗೆಯಿಸಿದ 2 ರೂಪಾಯಿ ಕನ್ಯೆಯ ಕಡೆಯಿಂದ ತೆಗೆಯಿಸಿದ 1 ರೂಪಾಯಿ ಒಟ್ಟು 3 ರೂಪಾಯಿಗಳು ಗದಗ ಬೆಟಗೇರಿಯಲ್ಲಿರುವ ಮ|| ರಾ|| ಹಿರೇಮನಿ ಪಾಟೀಲ ನೀಲಪ್ಪಗೌಡರ ದ್ವಾರಾ ತಲ್ಪಿರುತ್ತವೆ

ಮೈಸೂರು ರಾಜಧಾನಿಯಲ್ಲಿರುವ ಡಾ|| ಟಿ ಎಸ್. ಸಿದ್ದಪ್ಪನವರು ತಾ|| 26 2 45ರಿಂದ 4 3 45ರ ವರೆಗೆ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತೀ ಮಹೋತ್ಸವವನ್ನು ವಿಶೇಷ ವೈಭವದೊಡನೆ ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ 2 ರೂಪಾಯಿಗಳನ್ನು ತೆಗೆಯಿಸಿ ಕಳುಹಿಸಿರುತ್ತಾರೆ

ಹುಬ್ಬಳ್ಳಿ ಟವನ್ ತಬಿಬಲ್ಯಾಂಡಿನಲ್ಲಿರುವ ಮ|| ರಾ|| ಶಂಕರಗೌಡ ಶಿವನಗೌಡ ಪಾಟೀಲ ದೇವನೂರು ಇವರಿಗೆ ಪುತ್ರನು ಜನಿಸಿದ್ದು ಶಿವಪುತ್ರಗೌಡನೆಂದು ನಾಮಕರಣಮಾಡಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳ ವೇ|| ಜಿ ವಿ ನಂದಿಕೇಶ್ವರಮಠ ಇವರ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಕಾಶೀಪೀಠಕ್ಕೆ ದಾನಗಳು

ಪ್ರಭಾಪತ್ರಿಕೆಯಲ್ಲಿ ಸೂಚನೆಯು ಹೊರಟಂದಿನಿಂದ ಅನೇಕ ಜನ ಗುರುಪೀಠಾಭಿಮಾನಿಗಳು ಕಾಶೀ ಜಗದ್ಗುರು ಸನ್ನಿಧಿಗೆ ದಾನ ದಕ್ಷಿಣೆಗಳನ್ನು ಕಳುಹಿಸುತ್ತಿರುವುದು ಸ್ತುತ್ಯವಾಗಿದೆ ಇದಕ್ಕೆ ಸಂಬಂಧಿಸಿದ ವಿಷಯಗಳನ್ನು ನಮ್ಮ ಆಫೀಸಿಗೂ ಕಳುಹಿಸುತ್ತಿರುವರು. ಈ ಬಗ್ಗೆ ಎಲ್ಲರ ಹೆಸರುಗಳನ್ನೂ ಮುಂದೆ ಒಂದೇಸಾರೆ ಪ್ರಕಟಿಸುವೆವು ಆದುದರಿಂದ ಯಾರೂ ಬೇರೆ ಭಾವಿಸಬಾರದು ಇದೇ ರೀತಿ ಸರ್ವ ಗುರುಭಕ್ತರೂ ಶುಭಕಾರ್ಯಗಳಲ್ಲಿ ಶ್ರೀ ಕಾಶೀಪೀಠಕ್ಕೆ ಕಾಣಿಕೆಯನ್ನು ತೆಗೆಯಿಸಿ ಅಲ್ಲಿಗೆ ಕಳಿಸುತ್ತಹೋಗಬೇಕೆಂದಾಶಿಸುತ್ತೇನೆ. —ಸಂ

ಕಾಗದದ ಬೆಲೆಯು ವಿಶೇಷವಾಗಿ ಏರಿರುವುದರಿಂದ ಕೆಲವು ಗ್ರಂಥಗಳ ಮತ್ತು ಫೋಟೋಗಳ ಬೆಲೆಯನ್ನು ಸ್ವಲ್ಪ ಹೆಚ್ಚಿಸಿದ್ದೇವೆ.

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ವೀರಶೈವಮತದಲ್ಲಿ ಸದ್ಯಃ ದೊರೆಯತಕ್ಕ ಗ್ರಂಥಗಳೆಲ್ಲ ಇದೇ ಬಹು ಪ್ರಾಚೀನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು ಈ ಗ್ರಂಥವು ಈಗ್ಗೆ ಸುಮಾರು **೨ ಸಾವಿರ** ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯರೆಂಬ** ಆಚಾರ್ಯರಿಂದ ರಚಿಸಲ್ಪಟ್ಟಿರುವದು ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ ಈ ಕೊರತೆಯನ್ನು ಪೂರಮಾಡುವದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ವಾಚಕರಿಗೆ ವೇದ್ಯವಾಗುವುದು ವಾಚಕರ ಅನುಕೂಲಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ ಈ ಗ್ರಂಥವು ಒಟ್ಟು ೩೩೨ ಪುಟಗಳಿಂದ ಕೂಡಿದ್ದು, ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಛಾಯಾಚಿತ್ರಗಳು ಜೋಡಿಸಲ್ಪಟ್ಟಿರುವದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ಪ್ರತಿ ವೀರಶೈವನೂ ಅವಶ್ಯವಾಗಿ ಓದಬೇಕು **ಬೆಲೆ ೨ ರೂಪಾಯಿ**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಬಂಥತ್ತು ಅದ್ಭುತಲೀಲೆಗಳಿಂದ ಕೂಡಿದ **ಫೋಟೋ** ಸೈಜು ೨೦ × ೧೪ ಬೆಲೆ ೧ಕ್ಕೆ	೦—೬—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು.) ಸೈಜು ೧೪ × ೧೦ ಬೆಲೆ	೦—೬—೦
ಸರ್ವ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ **ಫೋಟೋ** ಸೈಜು ೧೪ × ೧೦ ಬೆಲೆ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ **ಫೋಟೋ** ಸೈಜು ೧೪ × ೧೦ ಬೆಲೆ ೧ಕ್ಕೆ	೦—೩—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ **ಫೋಟೋ**	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ **ಫೋಟೋ**	೦—೧—೬
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ **ಫೋಟೋ**	೦—೧—೬
ಶ್ರೀ ಕಾಶೀ ಜಗದ್ಗುರುಗಳ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦	೦—೪—೦
ಶ್ರೀ ಮಹುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ **ಫೋಟೋ**	೦—೧—೬
ಶ್ರೀ ಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ **ಫೋಟೋ**	೦—೧—೬
ಶ್ರೀ ಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ **ಫೋಟೋ**	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ **ಫೋಟೋ** (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ **ಫೋಟೋ** ೧ಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ **ಫೋಟೋ** ೧ಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ **ಗೋಪುರದ ಫೋಟೋ**	೦—೧—೬
ಶ್ರೀ ರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ **ಫೋಟೋ**	೦—೧—೬
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ **ಫೋಟೋ**	೦—೧—

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿಸಿಜತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನಯ ಆವೃತ್ತಿ)	೪ ಆಣೆ
ಶ್ರೀಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೬ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು. ೨ನೆಯ ಆವೃತ್ತಿ)	೧। ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧॥ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧। ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರಸಹಿತ)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*)	8 As
Speeches by Pandit Shri Kashinatha Shastriji (*English*)	12 As
लिंगधारणचंद्रिका (संस्कृत)	३
वीरशैवरत्न (मराठी)	१
महानारायणोपनिषद् (वीरशैवभाष्य—संस्कृत)	१
सिद्धांतशिखामणि (मूल)	८
नंदिकेश्वरकारिका (संस्कृत)	२

ಮ್ಯಾನೇಜರ್— **ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No M. 2266

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ।

ಸ್ಥಳದವರಿಗೆ ೨ ರೂ ೪ ಆಣೆ

ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೧೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೯ನೇ ಮಾರ್ಚಿ ೧೯೪೫ [ಸಂಚಿಕೆ ೪೭

ಲಿಂಗೋದ್ಭವ ಲಾಕೆಟ್ಸ್

ಈಗ ಹೊಸದಾಗಿ ಜಗದಾಚಾರ್ಯರ ಲಿಂಗೋದ್ಭವ ಲಾಕೆಟ್ಟು ಮತ್ತು ಕೋಟಿನ ಗುಂಡಿಗಳನ್ನು ಶುದ್ಧವಾದ ಬೆಳ್ಳಿಯಲ್ಲಿ ಬಹು ಸುಂದರವಾಗಿ ತಯಾರು ಮಾಡಿಸಿದ್ದೇವೆ

ಲಾಕೆಟ್ಟುಗಳು ದೊಡ್ಡವರಿಗೆ ಕೋಟಿನ ಮೇಲೆ ಹಾಕಿಕೊಳ್ಳುವಂತೆಯೂ, ಮಕ್ಕಳಿಗೆ ಕೊರಳಿನಲ್ಲಿ ಧರಿಸುವಂತೆಯೂ ತಯಾರಿಸಲ್ಪಟ್ಟಿವೆ. ಗುರುಭಕ್ತರೆಲ್ಲರೂ ಇವುಗಳನ್ನು ತರಿಸಿ ತಮ್ಮ ಶರೀರದ ಮೇಲೆ ಧರಿಸಿಕೊಂಡು ಪ್ರತಿದಿವಸವೂ ಆ ಮಂಗಲಮೂರ್ತಿಯ ದರ್ಶನ ಸ್ಪರ್ಶನಾದಿಗಳಿಂದ ಧನ್ಯರಾಗಬೇಕೆಂದು ಕೋರಿಕೆ.

ಬೆಳ್ಳಿ ಲಾಕೆಟ್ ಬೆಲೆ ೧ ಕ್ಕೆ ೧ ರೂ.

ಬೆಳ್ಳಿ ಕೋಟಿನ ಗುಂಡಿ ೧ ಕ್ಕೆ ೧ ರೂ

೬ ಕ್ಕಿಂತಲೂ ಕಡಿಮೆಯಾಗಿ ವಿ ಪಿ ಕಳಿಸುವದಿಲ್ಲ

ಮ್ಯಾನೇಜರ್

ಪಂಚಾಚಾರ್ಯಪ್ರಭಾ, ಮೈಸೂರು.

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವಗಳು

ಬೆಳಗಾಂವ

ತಾ॥ 26 2 45, ಸೋಮವಾರ ದಿವಸ ಮ॥ ರಾ॥ ಲಿಂಗಪ್ಪನವರು ಅಂಕಲಗಿ ಗಣಪತಿಗಲ್ಲಿ ಇವರ ಮನೆಯಲ್ಲಿ ಶ್ರೀ ಜಗದ್ಗುರು ರೇಣುಕ ಜಯಂತಿಯು ಒಳ್ಳೆ ವೈಭವದಿಂದ ನೆರವೇರಿತು ಆ ದಿವಸ ಬೆಳಗ್ಗೆ ಲಿಂಗೋದ್ಭವಮೂರ್ತಿಗೆ ರುದ್ರಾಭಿಷೇಕವಾಗಿ ಅನ್ನಸಂತರ್ಪಣೆಯಾಯಿತು ಸಾಯಂಕಾಲ ಭಾವಪಟಕ್ಕೆ ಪೂಜೆಯಾಯಿತು ಆ ಸಮಯದಲ್ಲಿ ಹೂಲಿ ಸಂಗಮೇಶ್ವರ ಬೋರ್ಡಿಂಗಿನ ವಿದ್ಯಾರ್ಥಿಗಳು ಬಂದಿದ್ದರು ಪೂಜೆ ಆದನಂತರ ಸಭೆಯು ಪ್ರಾರಂಭವಾಯಿತು ಶ್ರೀ॥ ಷ॥ ಬ್ರ॥ ಸುತ್ತಗಟ್ಟಿ ಶ್ರೀ ಇವರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದರು ಅನಂತರ ಬೋರ್ಡಿಂಗಿನ ವಿದ್ಯಾರ್ಥಿಗಳ ಮತ್ತು ವೇ॥ ಬೆಳವಣಿಕಿ ಬಸವರಾಜ ಶಾಸ್ತ್ರಿಗಳ ಭಾಷಣಗಳಾದವು ಬಳಿಕ ಅಧ್ಯಕ್ಷರ ಸಮಾರೋಪಣಭಾಷಣವಾದ ಮೇಲೆ ಮಂಗಲವಾಗಿ ಸಭೆಯು ಮುಗಿಯಿತು ಅಷ್ಟರಲ್ಲಿ ವೇ॥ ಪಂ॥ ಶ್ರೀಕಾಶೀನಾಥಶಾಸ್ತ್ರಿಗಳವರ ಭಾಷಣವನ್ನು ಕೇಳುವ ರೇಡಿಯೋ ವ್ಯವಸ್ಥೆಯನ್ನು ಶ್ರೀಮಂತ ಲಿಂಗಪ್ಪನವರ ಆಪ್ತರಿಂದಿರಾದ ರಾವ್‌ಬಹದ್ದೂರ್ ಕೆಂಚಪ್ಪನವರು ಆಗಾಗ ಇವರ ಲಿಂಗಪ್ಪನವರ ಮಹಡಿಯ ಮೇಲೆ ಮಾಡಿದ್ದರು ಅಗ್ಗ ಪ್ರಮುಖರೂ, ವಿದ್ಯಾರ್ಥಿಗಳೂ ಶ್ರೀ ಶಾಸ್ತ್ರಿಗಳವರ ಭಾಷಣವನ್ನು ಕೇಳಿ ಆನಂದಭರಿತರಾದರು ಆ ದಿವಸ ಊರಲ್ಲಿ ಎಲ್ಲಾ ಕಡೆಯಲ್ಲಿಯೂ ಭಾಷಣ ಕೇಳುವ ಸಲುವಾಗಿ ರೇಡಿಯೋ ವ್ಯವಸ್ಥೆ ಮಾಡಿತ್ತು ಬಹುಜನರು ಪಂಡಿತರ ಭಾಷಣವನ್ನು ಶ್ರೀಮಾನ್ ಕೊಟ್ಟೂರಪ್ಪಯ್ಯನವರು ಬಹು ಮನೋಹರವಾಗಿ ಹಾಡಿದ ಆಚಾರ್ಯರ ಕೀರ್ತನೆಗಳನ್ನು ಕೇಳಿ ಆನಂದಭರಿತರಾದರು ಈ ಬಗ್ಗೆ ವೇ॥ ಮುರಿಗಯ್ಯನವರು ಆನಿಮಠ ಸಂಗೊಳ್ಳಿ ಇವರು ಬಹಳ ಶ್ರಮಪಟ್ಟು ಗುರುಕೃಪೆಗೆ ಪಾತ್ರರಾದರು ಗುರು ಸಾರ್ವಭೌಮನಾದ ರೇಣುಕನು ಸರ್ವರಿಗೂ ಸಕಲ ಮನೋರಥಗಳನ್ನು ಕೊಟ್ಟು ರಕ್ಷಿಸಲೆಂದು ಹಾರೈಸುತ್ತೇನೆ

ವಿಶ್ವನಾಥ ಮಂಡಯ್ಯ, ಸುತ್ತಗಟ್ಟಿ

ಬಿಡದಿ

ತಾ॥ 26 2 1945 ನೇ ಸೋಮವಾರ ಬಿಡದಿ ಗ್ರಾಮದಲ್ಲಿರುವ "ಆಚಾರ್ಯತತ್ವಪ್ರಕಾಶಕ' ಬಿ ಸಿ ರೇವಣ್ಣಶಾಸ್ತ್ರಿಗಳವರು ತಮ್ಮ ಶಿವಾನಂದ ಹಾಲ್‌ನಲ್ಲಿ ಶ್ರೀಜಗದಾಚಾರ್ಯರ ಜಯಂತೀಮಹೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ನೆರವೇರಿಸಿದರು ಆದಿನ ಪ್ರಾತಃಕಾಲ ಅತ್ಯಂತ ಮನೋಹರವಾಗಿ ಶೃಂಗರಿಸಲ್ಪಟ್ಟ ಮಣಿಮಯ ಮಂಟಪಾಸನದಲ್ಲಿ ಶ್ರೀರೇಣುಕಾಚಾರ್ಯರ ಲಿಂಗೋದ್ಭವಮೂರ್ತಿಯನ್ನು ಮೂರ್ತಗೊಳಿಸಿ ಷೋಡಶೋಪಚಾರಗಳಿಂದ ವಿಧ್ಯುಕ್ತಪೂಜೆಯನ್ನು ನೆರವೇರಿಸಿ ಸಾಯಂಕಾಲ ಗ್ರಾಮಸ್ಥರನ್ನು ಆಹ್ವಾನಿಸಿ ರೇಡಿಯೋ ಮೂಲಕ ಲೋಕಮಾನ್ಯ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮತ್ತು ಸಂಗೀತವಿದ್ವಾನ್ ಕೊಟ್ಟೂರ ಬಸವಯ್ಯನವರಿಂದ ಬ್ರಾಡ್‌ಕಾಸ್ಟು ಮಾಡಲ್ಪಟ್ಟ ಜಗದಾಚಾರ್ಯರ ಪವಿತ್ರಚರಿತ್ರೆಯನ್ನೂ ಕೀರ್ತನೆಯನ್ನೂ ಸರ್ವರೂ ಕೇಳಿ ಆನಂದಿಸಿದ ನಂತರ ಮಹಾ ಮಂಗಳಾರತಿಯನ್ನು ನೆರವೇರಿಸಿ ಸರ್ವರಿಗೂ ಗಂಧ, ಪುಷ್ಪ, ತಾಂಬೂಲ ಪ್ರಸಾದವನ್ನು ವಿನಿಯೋಗಿಸಿ ಆನಂದಪಡಿಸಿದರು ಇವರಿಗೆ ಜಗದ್ಗುರುಸಾರ್ವಭೌಮರು ಸನ್ಮಂಗಳಗಳನ್ನೀಯಲೆಂದು ಕೋರುವ,

ಒರ್ವ ಪ್ರತ್ಯಕ್ಷದರ್ಶಿ

ವಿವಾಹಮಹೋತ್ಸವ

ತಾ॥ 6 3 1945 ನೇ ಫಾಲ್ಗುಣ ಬ॥ ೭ ದಿವಸ ಶ್ರೀಕ್ಷೇತ್ರ ಸೊಗಲದಲ್ಲಿ ವೇ॥ ಗುರುವಯ್ಯನವರು ಪುರಾಣಮಠ ಮತ್ತು ವೇ॥ ಮುರಿಗಯ್ಯನವರು ಚರಂತಿ ಮಠ ಇವರ ವಿವಾಹವು ವಿಜೃಂಭಣೆಯಿಂದ ನೆರವೇರಿತು ಗುರುವಯ್ಯನವರಿಗೆ ವೇ ಮರ್ಚಯ್ಯನವರು ವಿರಕ್ತಮಠ ತಿಗಡಿ ಇವರ ಪುತ್ರಿ ಚಿ॥ ಸೌ॥ ನೀಲಗಂಗವ್ವನನ್ನೂ, ಮುರಿಗಯ್ಯನವರಿಗೆ ವೇ॥ ಶಿವಲಿಂಗಯ್ಯನವರು ಹಿರೇಮಠ ಒಡ್ಡೋಲಿ ಇವರ ಪುತ್ರಿ ಚಿ॥ ಸೌ॥ ಕಾಶವ್ವನನ್ನೂ ಕೊಟ್ಟು ಲಗ್ನವಾಯಿತು ಈ ಸಮಯದಲ್ಲಿ ವೇ॥ ಶಿವರುದ್ರಯ್ಯನವರ ಹಿರೇಮಠ, ಉಡಕೇರಿ, ವೇ॥ ಗುರುಸಿದ್ಧಯ್ಯನವರು, ಚರಂತಿಮಠ, ವೇ॥ ಗುರುಬಸಯ್ಯನವರು ಚರಂತಿಮಠ ದೊಡವಾಡ ಇವರೇ ಮೊದಲಾದವರು ಒಳ್ಳೇ ಶ್ರಮವಹಿಸಿ ಕಾರ್ಯವನ್ನು ಪೂರೈಸಿದರು ಈ ಸಮಯದಲ್ಲಿ ಪ್ರಭಾಪೋಷಕೆಗೆ ೨ ರೂಪಾಯಿಗಳನ್ನು ಸಮರ್ಪಿಸಿದರು ನೂತನ ದಂಪತಿಗಳಿಗೆ ಜಗದ್ಗುರು ಪಂಚಾಚಾರ್ಯರು ಸನ್ಮಂಗಲಗಳನ್ನು ಕೊಡಲೆಂದ ಹಾರೈಸುತ್ತೇನೆ

ಮಂಡಯ್ಯ ಚರಂತಿಮಠ

ದುಃಖವಾರ್ತೆ

ಧಾರವಾಡ ಜಿ॥ ಕೋಣ ಗ್ರಾಮದ ವೇ॥ ಮುರಗಯ್ಯನವರು ಸೋಮನಕಟ್ಟಿ ಹಿರೇಮಠ ಇವರು ತಮ್ಮ ಶಿಷ್ಯಮಂಡಳಿಗೆ ಧರ್ಮನೀತಿಬೋಧಕರಾಗಿ ಬಹುಜನಗಳಲ್ಲಿ ಪ್ರೇಮಾತಿಶಯವುಳ್ಳವರಾಗಿದ್ದರು ಶ್ರೀಜಗದ್ಗುರು ಉಜ್ಜಯಿನೀಪೀಠಕ್ಕೆ ಸೇರಿದವರಾದಕಾರಣ ಪೀಠಾಚಾರ್ಯರಲ್ಲಿ ಅಸಾಧಾರಣ ಭಕ್ತಿಯುಳ್ಳವರಾಗಿ ಕೇವಲ ಶಿವಪೂಜಾನಿಷ್ಠರಾಗಿ ಬಂದ ಅತಿಥಿಗಳಿಗೆ ಅನ್ನೋದಕವನ್ನು ಕೊಡುತ್ತ ತಮ್ಮ ಮಠದಲ್ಲಿ ೨೦ ವರ್ಷ ಪುರಾಣವನ್ನು ಅವಿಚ್ಛಿನ್ನವಾಗಿ ನಡೆಸಿದ್ದರು ಇವರ ಪುತ್ರರಾದ ವೇ॥ ಬಸವರಾಜಶಾಸ್ತ್ರಿಗಳವರು ಗುರುಸ್ಥಲಾಭಿಮಾನಿಗಳಾಗಿ ಪುರಾಣಪ್ರವಚನವನ್ನು ಹೇಳುತ್ತಿರುವದು ಬಹು ಸ್ತುತ್ಯವಾದುದು ವೇ॥ ಮುರಿಗಯ್ಯನವರು ಇದೇ ವರ್ಷ ಶ್ರೀಶೈಲ ಮಹಾಕ್ಷೇತ್ರದ ದರ್ಶನಮಾಡಿಕೊಂಡು ಬಂದು ತಾ॥ 5 3 45 ಸೋಮವಾರ ಪರಂಧಾಮವನ್ನು ಹೊಂದಿದರು ಕೋಣಕ್ಕೆ ಸಮೀಪದಲ್ಲಿರುವ ಶ್ರೀರೇವಣಸಿದ್ಧ ಶಿವಾಚಾರ್ಯ ಪಟ್ಟದಸ್ವಾಮಿಗಳು ಚಿಕ್ಕಮಣ್ಣೂರು ಇವರನ್ನು ಕರೆದುಕೊಂಡು ಬಂದು ಇವರಿಂದ ಅಂತ್ಯೇಷ್ಟಿ ಕ್ರಿಯೆಯನ್ನು ಶಾಸ್ತ್ರವಿಧಿಗನುಸರಿಸಿ ಮಾಡಿಸಿದರು ಗುರುನಾಥನು ಮೃತರ ಆತ್ಮಕ್ಕೆ ಶಾಂತಿಯನ್ನುಂಟುಮಾಡಲೆಂದು ಪ್ರಾರ್ಥಿಸುತ್ತೇನೆ

ಸಂಗೀತವಿದ್ವಾನ್ ಶಿವಯ್ಯ,
ಥಡೆಸೂರಮಠ, ಜಕ್ಕಲಿ

ಪಂಚಾಚಾರ್ಯಪ್ರಭಾ.

೧೯೪೫ನೆಯ ಮಾರ್ಚಿ ತಾ|| ೧೯ನೇ ಸೋಮವಾರ

ಸ್ವಧರ್ಮಾಚರಣೆಯ ಶ್ರೇಷ್ಠತೆ

ಈ ಕಾಲದಲ್ಲಿ ಪ್ರಾಯಶಃ ಎಲ್ಲಿ ನೋಡಿದರೂ ಜನಗಳು ತಮ್ಮ ತಮ್ಮ ಜೀವನೋಪಾಯವನ್ನೂ ಧನಾರ್ಜನೆಯನ್ನೂ ಖ್ಯಾತಿಯನ್ನೂ ಪಡೆಯುವುದರಲ್ಲಿ ನಿರತರಾಗಿದ್ದಾರೆಯೇ ಹೊರತು ಆತ್ಮೋದ್ಧಾರಸಾಧನವಾದ ಧರ್ಮಾನುಷ್ಠಾನಗಳಲ್ಲಿ ನಿರತರಾಗಿರುವುದಿಲ್ಲ ಮುಂದೆ ಏನಾದರೂ ಆಗಲಿ ಇರುವವರೆಗೂ ಮಾತ್ರ ಪ್ರತಿಷ್ಠಾವಂತರಾಗಿಯೂ ದ್ರವ್ಯವಂತರಾಗಿಯೂ ಸ್ವೇಚ್ಛಾವಿಹಾರಿಗಳಾಗಿಯೂ ಇದ್ದರೆ ಸಾಕೆಂಬ ಭಾವನೆಯು ಜನಗಳಲ್ಲಿ ಬೇರೂರುತ್ತ ಬಂದಿರುತ್ತದೆ ಕೆಲವರು ತಮ್ಮ ಧನಾರ್ಜನೆಗೂ, ಪ್ರತಿಷ್ಠೆಗೂ ಸ್ವೇಚ್ಛಾವಿಹಾರಕ್ಕೂ ಯಾವುದು ಅಡ್ಡಿಮಾಡುವುದೋ ಅದೆಲ್ಲವೂ ಅಧರ್ಮವೆಂದೂ, ಯಾವುದು ಅನುಕೂಲವಾಗಿರುವುದೋ ಅದೆಲ್ಲವೂ ಧರ್ಮವೆಂದೂ [illegible] ಅದರ ಮಾನವನಿಗೆ [illegible] ವಿಹಾರ ಮುಂತಾದ [illegible] ಪ್ರಾಯಶಃ ಮನುಷ್ಯನಿಗೂ [illegible] ಗುಣಗಳಲ್ಲಿ [illegible] ರುವುದೋ [illegible] ವನ ಮನಸ್ಸು [illegible] ಖ್ಯಾತನಾಗಬೇಕ [illegible] ಬಯಸಲೇ [illegible] ವರೂ ಈ ಸ್ವಭಾವ [illegible] ರಲ್ಲಿಯೇ [illegible] ವಾದ [illegible] [illegible] ಮಾಡಿ [illegible] ಬರ [illegible] ಮಾಡ [illegible] ಸಂಬಂ [illegible] ಣಾದಿ ಮಹಾ ಮಹಾ [illegible] ಪ್ರತಿಷ್ಠಾವಂತರಾಗಿಯೂ [illegible] ಸ್ವೇಚ್ಛಾವಿಹಾರಿಗಳಾಗಿ [illegible] ಇದ್ದರು ಅವರ ಅವರೆಲ್ಲರೂ ನಿಂದ್ಯರಾಗಿರುವುದರಿಂದ [illegible] ತ್ರ [illegible] ಹೊಟ್ಟೆಗೆ ಅನ್ನಾಹಾರ ದೊರಕಿಲ್ಲದ ಕಾಡಿನಲ್ಲಿ ಅಲೆಯುತ್ತಿದ್ದರೂ ಮಹಾತ್ಮರೆನಿಸಿ ಪೂಜ್ಯರಾಗಿದ್ದಾರೆ [illegible] ರಾವಣಾದಿ ರಾಕ್ಷಸರೂ, ರಾವಣಾದಿಮಹಾ ರಾಜರೂ ಪ್ರತಿಷ್ಠೆ ಅಖಂಡೈಶ್ವರ್ಯ ಸಾಮ್ರಾಜ್ಯ ಸ್ವೇಚ್ಛಾವಿಹಾರತ್ವಾದಿ ಗುಣಗಳಲ್ಲಿ ಸಮಾನರಾಗಿದ್ದರೂ ರಾವಣಾದಿಗಳು ಯಾವಾಗಲೂ ಅಧರ್ಮಮಾರ್ಗದಲ್ಲಿಯೇ ಇದ್ದುದರಿಂದ ಅಪವಿತ್ರಾತ್ಮರೆಂದೂ, ರಾಮಾದಿಗಳು ಕಷ್ಟದಶೆಯಲ್ಲೂ ಸಹ ಧರ್ಮಮಾರ್ಗವನ್ನು ಬಿಡದೆ ಇದ್ದುದರಿಂದ ಪವಿತ್ರಾತ್ಮರೆಂದೂ ಪ್ರಸಿದ್ಧರಾಗಿದ್ದಾರೆ ಇದರಿಂದ ಮನುಷ್ಯನು ಎಷ್ಟು ಖ್ಯಾತಿಯನ್ನು ಪಡೆಯಬೇಕಾಗಿದ್ದರೂ, ದ್ರವ್ಯಾರ್ಜನೆ ಮಾಡಬೇಕಾಗಿದ್ದರೂ, ಸ್ವಾತಂತ್ರ್ಯವನ್ನು ಗಳಿಸಬೇಕಾಗಿದ್ದರೂ ಧರ್ಮಮಾರ್ಗವನ್ನತಿಕ್ರಮಿಸಬಾರದೆಂದು ಸ್ಪಷ್ಟವಾಗುತ್ತದೆ

ಈಗಿನ ನೂತನ ವಾತಾವರಣದಲ್ಲಿ ಧರ್ಮವೊಂದು ಗೋಸುಂಬೆಯಂತೆ ನಾನಾರೂಪವನ್ನು ಹೊಂದುತ್ತ ಬರುತ್ತಲಿದೆ ಹೀಗೆ ನಾನಾರೂಪವನ್ನು ಹೊಂದುವುದಕ್ಕೆ ಜನರ ಚಾಂಚಲ್ಯವೃತ್ತಿಯೇ ಕಾರಣವಾಗಿರುವದು ಜಗದಾದಿಯಲ್ಲಿ ಪರಮೇಶ್ವರನು ಜಗತ್ತನ್ನು ಸೃಷ್ಟಿಸಿ ಅವರ ಉದ್ಧಾರಕ್ಕಾಗಿ ವೇದಗಳನ್ನು ಸೃಷ್ಟಿಸಿದನು ವೇದಗಳಲ್ಲಿ ಯಾವುದು ಧರ್ಮವೆಂದು ಹೇಳಲ್ಪಟ್ಟಿದೆಯೋ ಅದೇ ಧರ್ಮವೆಂದೂ, ಯಾವುದು ಅಧರ್ಮವೆಂದು ಹೇಳಲ್ಪಟ್ಟಿದೆಯೋ ಅದೇ ಅಧರ್ಮವೆಂದೂ ಪೂರ್ವಾಚಾರ್ಯರಾಗಲಿ, ಮಹರ್ಷಿಗಳಾಗಲಿ ಎಲ್ಲರೂ "ವೇದೇನ ಪ್ರಯೋಜನಮುದ್ದಿಶ್ಯ ವಿಧೀಯಮಾನೋ ಧರ್ಮಃ' ಎಂದು ಏಕಮುಖದಿಂದ ಒಪ್ಪಿಕೊಂಡಿರುತ್ತಾರೆ ಗೀತೆಯಲ್ಲಿ ಶ್ರೀಕೃಷ್ಣನು ಅರ್ಜುನನನ್ನು ಸಂಬೋಧಿಸಿ—

ತಸ್ಮಾಚ್ಛಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯವ್ಯವಸ್ಥಿತೌ |
ಜ್ಞಾತ್ವಾ ಶಾಸ್ತ್ರವಿಧಾನೋಕ್ತಂ ಕರ್ಮ ಕರ್ತುಮಿಹಾರ್ಹಸಿ ||

ಯಾವ ಕಾರ್ಯವನ್ನು ಮಾಡಬೇಕು, ಯಾವ ಕಾರ್ಯವನ್ನು ಮಾಡಬಾರದು ಎಂಬ ವ್ಯವಸ್ಥೆಯನ್ನು ವೇದಾಧಾರದಿಂದಲೇ ಮಾಡಿಕೊಳ್ಳಬೇಕು ಯಾವ ಕರ್ಮವು ವೇದದಲ್ಲಿ ವಿಧಿಸಲ್ಪಟ್ಟಿರುತ್ತದೆಯೋ ಅಂಥ ಕರ್ಮವನ್ನೇ ಮಾಡಬೇಕೆಂದೂ, ವೇದದಲ್ಲಿ ವಿಧಿಸಲ್ಪಡದಿರುವುದನ್ನು ಮಾಡಬಾರದೆಂದೂ ಬೋಧಿಸಿರುತ್ತಾನೆ ಆದುದರಿಂದ ಧರ್ಮಾಧರ್ಮನಿರ್ಣಯವು ವೇದದಿಂದಲೂ ವೇದಾನುಸಾರಿಗಳಾದ ಸ್ಮೃತ್ಯಾದಿಗಳಿಂದಲೂ ಆಗಬೇಕಾಗಿದೆಯಲ್ಲದೆ ಕಾಲಾನುಗುಣವಾಗಿ ತಮ್ಮ ಮನಸ್ಸಿಗೆ ಬಂದಹಾಗಲ್ಲ ಧರ್ಮನಿರ್ಣಯವನ್ನು ಮಾಡಿಕೊಳ್ಳಬಾರದು

ಪ್ರಕೃತದಲ್ಲಿ ಅನೇಕರು ತಮ್ಮ ಕಾರ್ಯಸಾಧನೆಗಾಗಿ ಅಸಂಬದ್ಧ ಕಾರ್ಯಕಾರಣಗಳನ್ನು ಮನಸ್ಸಿನಲ್ಲಿ ಕಲ್ಪಿಸಿಕೊಂಡ [illegible] ನಿರ್ಣಯ ಮಾಡಲು ಪ್ರಾರಂಭಿಸು [illegible] ಇದ [illegible] ಧಾರ್ಮಿಕಜನಗಳಿಗೂ ಇವರಿಗೂ [illegible] ಪ್ರಾರಂಭವಾಗುವುದು

ಏಕೆಂದರೆ—ವೇದಶಾಸ್ತ್ರಪುರಾಣಗಳನ್ನು ತಿಳಿದ ಪ್ರಾಚೀನಸಂಪ್ರದಾಯದ ಗುರುಜನಗಳು ಪ್ರಾಚೀನಕಾಲದಿಂದ [illegible] ವಾಗಿ [illegible] ಧರ್ಮಾದರ್ಮಗಳ ನಿಬಂಧನೆಯ [illegible] ಒಪ್ಪುವದಿಲ್ಲ ಧರ್ಮೋಲ್ಲಂಘನವಾದ [illegible] ಎರಡೂ ಒಂದೇ [illegible] ಸ್ವಾತಂತ್ರ್ಯಸಾಧನೆ [illegible] ಸ್ವಾಭ್ಯುದಯವಾಗಲಿ [illegible] ಬಹಳ ಸುಖ [illegible] ಆದರ [illegible] ಸ್ವಾತಂತ್ರ್ಯವನ್ನಾಗಲಿ [illegible] ವನ್ನಾಗಲಿ ಉಪೇಕ್ಷಿಸುವದಿಲ್ಲ [illegible] ಸ್ವಾತಂತ್ರ್ಯಾದಿಗಳೆಲ್ಲ [illegible] (ಪಣ್ಣ) ಅಲಂಕಾರವಾದಿವಂತೆ [illegible] ಮೊದಲಾದ [illegible] ಐಹಿಕಸೌಖ್ಯವನ್ನು [illegible] ಸನಾತನಿಗಳ ಕರ್ತವ್ಯವು ಧರ್ಮ [illegible] ವಾದ ಆಧ್ಯಾತ್ಮಸೌಖ್ಯವನ್ನೇ ಮರೆತು ಕೇವಲ ಬಾಹ್ಯಾಡಂಬರಸೌಖ್ಯದಲ್ಲಿ ಮಗ್ನನಾದವನು [illegible] ಧರ್ಮದೇವತೆಯನ್ನು ತಳ್ಳಿ [illegible] ಸ್ತ್ರೀಯರಾಗಲಿ ಪುರುಷರಾಗಲಿ ಎಲ್ಲರೂ [illegible] ಸ್ವಾತಂತ್ರ್ಯವನ್ನು ಬಯಸುತ್ತ ಬಂದಲ್ಲಿ ಅದರಿಂದಾಗುವ ಅನರ್ಥಪರಂಪರೆಯು ಎಷ್ಟೆಂಬುದು ಎಲ್ಲರಿಗೂ ಪ್ರತ್ಯಕ್ಷವಾಗಿ ತಿಳಿಯದೆ ಹೋಗುವುದಿಲ್ಲ ಆದ್ದರಿಂದ ಯಾರೂ ಧರ್ಮವಿರುದ್ಧಕಾರ್ಯದಲ್ಲಿ ಕೈಹಾಕಬಾರದು ಸರ್ವರೂ ತಮ್ಮ ತಮ್ಮ ಧರ್ಮದಂತೆ ನಡೆದು ಈಶ್ವರಾನುಗ್ರಹಕ್ಕೆ ಪಾತ್ರರಾಗಬೇಕೆಂದಾಶಿಸುತ್ತೇವೆ

ಯುದ್ಧವಾರ್ತೆ.

ಹಿಟ್ಲರನ ಶಾಂತಿ ಭಿಕ್ಷೆ

ಸ್ಟಾಕೋಮಿನಲ್ಲಿರುವ ಸ್ವೀಡಿಷ್ ಮಧ್ಯಸ್ಥಗಾರರ ಮುಖೇನ ಜರ್ಮನಿಯು ಶಾಂತಿ ಭಿಕ್ಷೆ ಬೇಡಿತೆಂದೂ ಮಿತ್ರವರ್ಗವು ಇದನ್ನು ನಿರಾಕರಿಸಿತೆಂದೂ ಹೇಳಲಾಗಿದೆ ಶಾಂತಿ ಭಿಕ್ಷೆ ಬೇಡಬೇಕೆಂಬ ಸಲಹೆಗೆ ಹಿಟ್ಲರನು ಮೊದಮೊದಲು ಅಸಾಧ್ಯ ಪ್ರತಿಭಟನೆ ಸೂಚಿಸಿದನೆಂದೂ, ಆದರೆ ಸ್ಟಾಕೋಮಿನಲ್ಲಿ ಬ್ರಿಟಿಷ್ ಮತ್ತು ಅಮೆರಿಕನ್ ಪ್ರಮುಖರೊಡನೆ ಭೇಟಿ ಮಾಡಲು ತನ್ನ ಪರರಾಷ್ಟ್ರ ಅಧಿಕಾರಿಗಳಿಗೆ ಅನುಮತಿ ಇತ್ತನೆಂದೂ ಜರ್ಮನ್ ಷರತ್ತುಗಳಿಗೆ ಮಿತ್ರವರ್ಗ ಒಪ್ಪಿಕೊಳ್ಳುವಂತೆ ಮಾಡಲು "ನೀವು ಈ ಸಲಹೆಯನ್ನು ನಿರಾಕರಿಸಿದರೆ, ಜರ್ಮನ್ ಸೇನೆ ರಷ್ಯನರನ್ನು ಎದುರಿಸುವುದನ್ನು ನಿಲ್ಲಿಸಿ ಜರ್ಮನಿಯನ್ನು ರಷ್ಯನರು ಆಕ್ರಮಿಸಿಕೊಳ್ಳಲು ಅವಕಾಶ ಮಾಡಿಕೊಡಲಾಗುವುದು, ಅಂದರೆ ಜರ್ಮನಿ ಸಂಪೂರ್ಣವಾಗಿ ಬೋಲ್ಷೆವಿಕ್ ರಾಷ್ಟ್ರವಾಗಿ ಆಂಗ್ಲೋ-ಅಮೆರಿಕನ್ ಹಿತಗಳಿಗೆ ತೊಂದರೆ ಆಗುತ್ತದೆ" ಎಂದು ಬೆದರಿಕೆ ಹಾಕಿದ್ದನೆಂದೂ ತಿಳಿಸಿದೆ.

ವಿಶ್ವಶಾಂತಿ

ಈ ಯುದ್ಧವು ಪ್ರಪಂಚದಲ್ಲೆಲ್ಲ ಬೇಸರಿಕೆ ತಂದಿದೆ. ಜನರೆಲ್ಲ ಎಂದಿಗೆ ಯುದ್ಧ ನಿಲ್ಲುವುದೋ ಎನ್ನುತ್ತಿದ್ದಾರೆ ಮತ್ತೆ ಯುದ್ಧವಾಗದಂತೆ ಆಗಬೇಕೆಂದು ಮಹಾ ವ್ಯಕ್ತಿಗಳು ಸಾಹಸ ಪಡುತ್ತಿದ್ದಾರೆ ಇನ್ನೆಂದಿಗೂ ಪ್ರಪಂಚದಲ್ಲಿ ಯುದ್ಧವಾಗಬಾರದು ಎಂಬುದು ಅವರ ಆಶೆ. ಆದರೆ ಈ ಯುದ್ಧದ ರೀತಿಯನ್ನು ನೋಡಿದರೆ, ಈ ಯುದ್ಧ ನಿಂತಮೇಲೆ ಗೆದ್ದವರು ಅನುಸರಿಸಬಹುದಾದ ನೀತಿಯನ್ನು ಊಹಿಸಿದರೆ ಈ ಯುದ್ಧ ನಿಂತರೂ ಕೂಡಲೆ ಮತ್ತೊಂದು ಯುದ್ಧ ಒದಗೀತು ಎಂದು ಹಲವರು ಯೋಚಿಸುತ್ತಿದ್ದಾರೆ

ಬರ್ಲಿನ್ನಿನ ರಕ್ಷಣ ಸಿದ್ಧತೆ

ಬರ್ಲಿನ್ನಿನ ನೆರೆಯಲ್ಲಿ ಹಿಟ್ಲರ್ ತನ್ನ ಶಿಬಿರವನ್ನೇರ್ಪಡಿಸಿಕೊಂಡು ಈಗ ಅಲ್ಲಿ ನೆಲೆಯೂರಿ ನಿಂತಿದ್ದಾನಂತೆ ಬರ್ಲಿನ್ ರಕ್ಷಣೆಗಾಗಿ ಸಿದ್ಧತೆಮಾಡಿಕೊಳ್ಳಲು ಆತ ಅನೇಕ ಇಂಜನಿಯರಿಂಗ್ ಮತ್ತು ಕೈಗಾರಿಕಾ ಪ್ರಮುಖರನ್ನು ಕೂಡಿಸಿಕೊಂಡಿರುವುದಾಗಿ ಹೇಳಲಾಗಿದೆ ಜರ್ಮನಿಯ ಉತ್ತರ ಭಾಗವು ಮುತ್ತಿಗೆಗೆ ಗುರಿಯಾಗಬಹುದೆಂಬ ಭೀತಿ ಇರುವುದರಿಂದ ಆ ಪ್ರದೇಶದಿಂದ ಜನರು ಡೆನ್‌ಮಾರ್ಕಿಗೆ ಬರುತ್ತಿರುವುದಾಗಿ ಹೇಳಲಾಗಿದೆ

ಜರ್ಮನಿಯಮೇಲೆ ಬಾಂಬಿನ ಸುರಿಮಳೆ

ಜರ್ಮನಿಯ ಮೇಲೆ ಅಮೇರಿಕದ ವಿಮಾನಗಳು ಸಾವಿರಗಟ್ಟಲೆ ಹಾರಿಹೋಗುತ್ತವೆ ದಿನವೂ ಟನ್ನುಗಟ್ಟಲೆ ಬಾಂಬು ಸುರಿಸುತ್ತವೆ ಜರ್ಮನಿಯ ರಾಜಧಾನಿ ಬರ್ಲಿನ್ನಿನಮೇಲೆಯೇ ಬಾಂಬಿನ ಸುರಿಮಳೆ ದೊಡ್ಡ ದೊಡ್ಡ ಭವನಗಳೆಲ್ಲ ದೂಳೀಪಟವಾಗಿವೆ ಊರು ಸ್ಮಶಾನವಾಗುತ್ತಿದೆ ಆದರೂ ಜರ್ಮನರ ದೇಶಭಕ್ತಿ ಕುಂದಿಲ್ಲ ಗೆಲ್ಲಲೇಬೇಕೆಂಬ ಅಭಿಮಾನದಿಂದ ಜರ್ಮನರು ಯುದ್ಧ ಮಾಡುತ್ತಿದ್ದಾರೆ

ಜರ್ಮನಿಯಲ್ಲಿ ಸತ್ತ ವೀರರ ದಿನ

ಯುದ್ಧದಲ್ಲಿ ಸತ್ತ ವೀರರ ದಿನವನ್ನು ಜರ್ಮನಿಯಲ್ಲಿ ಆಚರಿಸಲಾಯಿತು ದೇಶಕ್ಕಾಗಿ ಪ್ರಾಣತೆತ್ತ ವೀರರನ್ನು ಸ್ಮರಿಸಲು ಮತ್ತು ಅವರಿಗೆ ತಮ್ಮ ಮರ್ಯಾದೆ ಸಲ್ಲಿಸಲು ಅವರ ಸ್ಮಾರಕಸ್ತಂಭದ ಸುತ್ತ ಜನರೆಲ್ಲರೂ ನೆರೆದಿದ್ದರು ಹಿಟ್ಲರರು ಆ ಸಮಯಕ್ಕೆ ಬರಲಾಗಲಿಲ್ಲ ಅವರು ಒಂದು ಸಂದೇಶ ಕಳುಹಿಸಿದ್ದರು ಆ ಸಂದೇಶದಲ್ಲಿ ಶತ್ರುಗಳು ನಮ್ಮ ನಾಡಿಗೆ ನುಗ್ಗಿ ಬಂದಿದ್ದಾರೆ ಅಪಾರ ಹಾವಳಿ ಕೂಡ ಮಾಡಿದ್ದಾರೆ, ಆದರೆ ಜಯ ಮಾತ್ರ ನಮಗೇ ಸರಿ ಯುದ್ಧ ಮುಗಿಯುವ ಒಂದು ವಾರದ ಮೊದಲು ಶತ್ರುಗಳು ನಮ್ಮ ಕೈವಾಡ ನೋಡುವರು ಎಂದು ತಿಳಿಸಿದ್ದರು

ಉತ್ತರ ಇಟಲಿಯಲ್ಲಿ ನಾಜಿ ಅಂತ್ಯ ಕದನ

ದಕ್ಷಿಣ ಜರ್ಮನಿಯನ್ನು ರಕ್ಷಿಸಲು ತಮಗೆ ಬೇಕಾದ ಯುದ್ಧ ಸಾಮಗ್ರಿಗಳನ್ನು ಉತ್ತರ ಇಟಲಿಯಲ್ಲಿ ತಯಾರುಮಾಡಿ ನಾಜಿಗಳು ಅಲ್ಲಿ ಅಂತ್ಯಕದನ ನಡೆಸುವರೆಂದು ಹೇಳಲಾಗಿದೆ ನಾಜಿಗಳಿಗೆ ಟ್ಯಾಂಕು, ಗನ್ನುಗಳು, ಮದ್ದು ಗುಂಡುಗಳು ಮತ್ತು ವಿಮಾನ ಯಂತ್ರಗಳ ಅಭಾವ ಹೆಚ್ಚಾಗಿದೆ ಇವುಗಳನ್ನು ಉತ್ತರ ಇಟಲಿಯಲ್ಲಿ ತಯಾರು ಮಾಡಲು ಸಿದ್ಧತೆ ನಡೆಯುತ್ತಿದೆ ದಕ್ಷಿಣ ಜರ್ಮನಿ ಮತ್ತು ಆಸ್ಟ್ರೇಲಿಯದಲ್ಲಿ ಕಾದಾಡಲು ಜರ್ಮನರಿಗೆ ಉತ್ತರ ಇಟಲಿಯು ರಕ್ಷಣಾ ಠಾಣ್ಯವಾಗಿರುವುದು ಇದರಿಂದ ಅಲ್ಲಿ ಅಂತ್ಯ ಕದನ ನಡೆಸಲು ಕೆಸಲ್‌ರಿಂಗ್‌ರವರು ಸಿದ್ಧತೆ ನಡೆಸುತ್ತಿದ್ದಾರಂತೆ

ಮಿತ್ರ ವಿಮಾನಗಳಿಂದ ಜರ್ಮನಿಗಾಗಿರುವ ನಷ್ಟ

ಮಿತ್ರ ವಿಮಾನಗಳು ನಡೆಸಿದ ದಾಳಿಗಳಿಂದ ರ್‍ಹೂರ್ ಕ್ಷೇತ್ರದಲ್ಲಿರುವ ೪೫೦ ಚದುರ ಮೈಲಿ ಪ್ರದೇಶ ನಾಶವಾಗಿದೆ ರ್‍ಹೂರ್ ಕಣಿವೆ ಪ್ರದೇಶದಲ್ಲಿದ್ದ ಮುಖ್ಯ ಕೈಗಾರಿಕೆಗಳೊಂದೂ ಈಗಿಲ್ಲ ಒಟ್ಟು ನಾಶವಾಗಿರುವುದರ ಸ್ಥಿತಿ ಶೇ॥ ೫೦ ರಷ್ಟು ಎಸ್ಸನ್ ನಗರಕ್ಕೂ, ಶೇ॥ ೮೩ ರಷ್ಟು ಜೋರ್ಸ್ನಂಗೂ, ಶೇ॥ ೬೫ ರಷ್ಟು ಡ್ಯೂಸೆಲ್ ಡಾರ್ಫ್ ಉಕ್ಕಿನ ಕೈಗಾರಿಕೆಗೂ, ಶೇ॥ ೪೬ ರಷ್ಟು ಡಾರ್ಟ್‌ಮಂಡ್ ಕೈಗಾರಿಕಾ ಕೇಂದ್ರಕ್ಕೂ ನಷ್ಟವಾಗಿದೆ ಬರ್ಲಿನ್ ನಗರದ ಐದನೆ ಒಂದು ಭಾಗ ಹಾಳಾಗಿದೆ ಹ್ಯಾಂಬರ್ಗಿನ ಮುಕ್ಕಾಲು ಭಾಗ ಹಾಳುಬಿದ್ದಿದೆ ಇದೇ ರೀತಿ ಜರ್ಮನಿಯಲ್ಲಿರುವ ಇನ್ನೂ ೬೦ ನಗರಗಳು ಸ್ಮಶಾನ ಸದೃಶವಾಗಿವೆ ಎಂದು ಹೇಳಲಾಗಿದೆ

ವಿಷಗಾಳಿ

ಜರ್ಮನಿಯ ಆಟ ನಡೆಯುವಂತಿಲ್ಲ ಎಷ್ಟೇ ಪ್ರತಿಭಟಿಸಿದರೂ ಮಿತ್ರಸೇನೆ ಮುಂದೆ ಮುಂದೆ ನುಗ್ಗುತ್ತಲೇ ಇದೆ ಜರ್ಮನ್ ಸೇನೆಯನ್ನು ಸದೆಬಡಿಯುತ್ತಲಿದೆ ಇನ್ನು ಜರ್ಮನಿಗೆ ಉಳಿದಿರುವದು ಒಂದೇ ಮಾರ್ಗ ಅದು ಮಿತ್ರಸೈನಿಕರ ಮೇಲೆ ವಿಷಗಾಳಿ ಉಪಯೋಗಿಸುವುದು ಹಿಟ್ಲರನು ಅದಕ್ಕೂ ಸಿದ್ಧನಿರುವಂತೆ ಕಾಣುತ್ತದೆ ಒಂದಲ್ಲ ಒಂದುದಿನ ವಿಷಗಾಳಿ ಪ್ರಯೋಗವು ಆದೀತು ಎಂದು ವದಂತಿ ಹರಡಿದೆ ಅದರ ಪಿಡುಗಿನಿಂದ ತಪ್ಪಿಸಿಕೊಳ್ಳಲು ಮಿತ್ರರೂ ಸಿದ್ಧರಾಗಿದ್ದಾರೆ

ಇವೋಜಿಮಾ ಪೂರ್ಣವಾಗಿ ಮಿತ್ರ ವಶವಾಯಿತು

ಇವೋಜಿಮದ ಮೇಲೆ ಅಧಿಕೃತವಾಗಿ ಅಮೇರಿಕನ್ ಧ್ವಜವನ್ನೇರಿಸಲಾಯಿತು ಅಲ್ಲಿ ಜಪಾನಿ ಪ್ರತಿಭಟನೆಯು ಅಲ್ಪವಾಗಿದೆ ನೈರುತ್ಯ ಪೆಸಿಫಿಕ್ಕಿನಲ್ಲಿ ಮುಂದಿನ ಯುದ್ಧ ಕಾರ್ಯಗಳ ನಿರ್ಧರಿಸಲು ಜನರಲ್ ಮ್ಯಾಕ್ ಆರ್ಥರರೊಡನೆ ಸಮಾಲೋಚಿಸಲು ಮಿತ್ರ ಬಲಪಡೆಗಳ ಪ್ರಧಾನ ಸೇನಾನಿ ಜನರಲ್ ಸರ್ ಥಾಮಸ್ ಬ್ಲಾಮಿ ಲ್ಯೂಜಾನಿಗೆ ಬಂದಿದ್ದರು ಮನಿಲ ನಗರದಲ್ಲಿ ಇರುವ ರೈಲ್ವೆ ಮಾರ್ಗಗಳನ್ನು ಸರಿಪಡಿಸಿ ಮನಿಲ ಕ್ಕೆ ಬಂದ ಪ್ರಥಮ ರೈಲಿನಲ್ಲೇ ಮ್ಯಾಕ್ ಆರ್ಥರ್ ಪ್ರಯಾಣ ಮಾಡಿ ಬಂದರು ಮಿಂಡನಾವೋದಲ್ಲಿ ಅಮೇರಿಕನ್ನರು ತೀರಪ್ರದೇಶದ 28 ಮೈಲಿ ಉದ್ದದ ಭಾಗವನ್ನು ತಮ್ಮ ರಕ್ಷಣೆಗೆ ಒಳಪಡಿಸಿಕೊಂಡಿದ್ದಾರೆ

ಜಪಾನಿನ ಅದೃಷ್ಟವು ಚೆನ್ನಾಗಿಲ್ಲ

ಜಪಾನು ಎಲ್ಲಿಯೂ ಬಲವಾಗಿ ಯುದ್ಧ ನಡೆಸುತ್ತಿಲ್ಲ ಅದರ ಅದೃಷ್ಟವೂ ಚೆನ್ನಾಗಿಲ್ಲ ಅಮೇರಿಕದ ವಿಮಾನಗಳು ಜಪಾನಿನ ದೊಡ್ಡದೊಡ್ಡ ಪಟ್ಟಣಗಳ ಮೇಲೆ ಬಾಂಬು ಸುರಿದವು ರಾಜಧಾನಿ ಟೋಕಿಯೋ ಮೇಲೂ ಬಾಂಬುಗಳು ಬಿದ್ದವು ಅರಮನೆಗೆ ಬಾಂಬು ಬಿದ್ದು ಬೆಂಕಿಹತ್ತಿತು ಹದಿನೇಳು ಗಂಟೆಗಳ ಕಾಲ ಒಂದೇಸಮನೆ ಉರಿಯಿತು

ಜಪಾನು ರಷ್ಯ ಯುದ್ಧ

ಇದುವರೆಗೂ ಜಪಾನ್ ದೇಶಕ್ಕೂ ರಷ್ಯದೇಶಕ್ಕೂ ಸ್ನೇಹವಿದ್ದಂತೆ ಇತ್ತು ಆದರೆ ಈಗ ಅದು ಹಳಸುವಂತಿದೆ ರಷ್ಯ ಜಪಾನಿನ ಮೇಲೆ ಯುದ್ಧ ಹೂಡುವುದೆಂದು ವದಂತಿ ಹರಡಿದೆ ಹಾಗಾದರೆ ಜಪಾನವೂ ಜರ್ಮನಿಯಂತೆ ಸುತ್ತಲೂ ವೈರಿಗಳನ್ನು ಎದುರಿಸಬೇಕಾಗುತ್ತದೆ

ವಿಯೆನ್ನಾಕ್ಕೆ ೧೧೦ ಮೈಲಿಯಲ್ಲಿ ಉಗ್ರ ಕದನ

ಆಸ್ಟ್ರಿಯದ ರಾಜಧಾನಿ ವಿಯೆನ್ನಾಕ್ಕೆ ಪೂರ್ವದಲ್ಲಿ ೧೧೦ ಮೈಲಿಯಲ್ಲಿ ಡಾನ್ಯೂಬ್ ನದಿಯ ಉಭಯ ಪಾರ್ಶ್ವಗಳಲ್ಲೂ ಉಗ್ರ ಕದನಗಳಾಗುತ್ತಿವೆ ಬ್ಯುಡಾಪೆಸ್ಟಿಗೆ ಪಶ್ಚಿಮದಲ್ಲಿ ಜರ್ಮನ್ ಪ್ರತಿದಾಳಿಗಳನ್ನು ಮಾರ್ಷಲ್ ಟೋಲ್‌ಬೂಖಿನ್ ನಿರರ್ಥಕಗೊಳಿಸುತ್ತಿದ್ದಾರೆ ಮ್ಯಾಲಿನೋಫ್‌ಸ್ಕಿ ಸೇನೆ ರಭಸದಿಂದ ಮುನ್ನುಗ್ಗುತ್ತಲೇ ಬಂದಿದೆ ಪೂರ್ವ ಪ್ರಷ್ಯದಲ್ಲಿ ಕೋನಿಗ್ಸ್‌ಬರ್ಗಿಗೆ ೫ ಮೈಲಿಯಲ್ಲಿರುವ ಗ್ರಾಮ ರಷ್ಯನರ ವಶವಾಗಿ ಜರ್ಮನ್ ಕೋಟೆಗಳೂ ಸೇನೆಗಳೂ ಈಗ ಪ್ರಬಲ ಮುತ್ತಿಗೆಗಳಿಗೆ ಗುರಿಯಾಗಿವೆ ಪೂರ್ವ ಪ್ರಷ್ಯದಲ್ಲಿ ಜರ್ಮನರ ಗತಿ ಮುಗಿದಂತೆಯೇ ಎಂದು ಹೇಳಲಾಗಿದೆ

ಮೊದಲು ವಿದ್ಯೋನ್ನತಿ ಕೈಗಾರಿಕೋನ್ನತಿ ಅನಂತರ ಸೇನಾಧಿಕಾರ

"ಪ್ರಸ್ತುತದಲ್ಲಿ ಭಾರತೀಯ ಸೇನೆಯಲ್ಲಿ 100 ಅಧಿಕಾರಿಗಳ ಪೈಕಿ ಆರು ಮಂದಿ ಮಾತ್ರ ಭಾರತೀಯರು ಸೇನಾಧಿಕಾರಿಗಳೆಲ್ಲ ಭಾರತೀಯರೇ ಆಗಬೇಕಾದರೆ ವಿದ್ಯಾಭ್ಯಾಸ ಸುಧಾರಣೆ ಆಗಬೇಕು, ಕೈಗಾರಿಕೋನ್ನತಿ ಸಾಧಿತವಾಗಬೇಕು " ಎಂದು ಭಾರತ ಸೇನಾ ಪುನರ್ವ್ಯವಸ್ಥಾ ಸಲಹಾ ಸಮಿತಿಯ ಅಧ್ಯಕ್ಷ ಜ॥ ವಿಲ್ ಕಾಕ್ಸರವರು ಶಾಸನಸಭಾ ಸದಸ್ಯರ ಸಭೆಯಲ್ಲಿ ತಿಳಿಸಿದರು

ದೊಡ್ಡ ವಜ್ರ

ಪೂರ್ವ ಆಫ್ರಿಕಾದಲ್ಲಿಯೇ ದೊರಕದಂಥ ಒಂದು ದೊಡ್ಡ ವಜ್ರವು ಟ್ಯಾಂಗನೀಕ ಜಿಲ್ಲೆಯ ಶಿನ್ಯಂಗ ವಜ್ರದ ಗಣಿಯಲ್ಲಿ ಸಿಕ್ಕಿದೆ ಈ ವಜ್ರವು ಗುಲಾಬಿ ಬಣ್ಣದ ಆಕಾರವುಳ್ಳ 120 ಕ್ಯಾರಟ್ ತೂಕವುಳ್ಳದ್ದು ಅದನ್ನು ಸಾಣೆ ಹಿಡಿದರೆ ಶೇಕಡ 10 ರಷ್ಟು ತೂಕ ಕಡಿಮೆಯಾಗುವುದು ಆದರೆ ಈಗಿನ ಬೆಲೆಯು ಸುಮಾರು 15000 ಪೌಂಡುಗಳು ವಜ್ರವನ್ನು ಪತ್ತೆ ಮಾಡಿದ ಮನುಷ್ಯನಿಗೆ 20 ಪೌಂಡುಗಳನ್ನೂ 15 ದಿನ ರಜವನ್ನೂ ಬಹುಮಾನವನ್ನಾಗಿ ಕೊಡಲಾಗುವುದಂತೆ

ಚಿನ್ನದ ಸಾಗರಿಕೆಗಳ ಪತ್ತೆ

ಎಂಬ ಓರಿಯೆಂಟಲ್ ದೇಶೀಯ ಹಡಗು ೧೮೦೦ ರ ಮಾರ್ಚ್ ದಲ್ಲಿ ಮುಳುಗಿ ಹೋಗಿತ್ತು ಅದನ್ನು ಪತ್ತೆ ಮಾಡಲು ಅವಕಾಶವಿಲ್ಲದಂತೆ ಜನ ತ್ವಾರಿಯಾಗಿ ಬೆಟ್ಟದಲ್ಲಿ ಹೊಲಿದ ಚೀಲಗಳಲ್ಲಿಟ್ಟು ಅನುಮಾನಕ್ಕೆ ಎಡೆಯಿಲ್ಲದಿರುವ ಒಂದು ಬಿರ್ಲ ರದ ಒಟ್ಟಿಗೆ ಹೂಳಲಾಗಿದ್ದಿತಂತೆ ಅದರಲ್ಲಿ ಕೆಲವು ವಜ್ರ ಕಂಪಿನ ಸಾಗರಿಕೆ ಇದ್ದವಂತೆ ಇವುಗಳನ್ನು ಕೆಲವು ಅರಬ್ಬಿಯವರು ಪತ್ತೆ ಮಾಡಿ ಕೊಲ್ಲಿಯಲ್ಲಿರುವ ಯಾವುದೋ ಒಂದು ಬಂದರಿಗೆ ಸಾಗಿಸಬೇಕೆಂದಿದ್ದರು ಆದರೆ ಬೊಂಬಾಯಿ ಕಸ್ಟಮ್ಸ್ ಅಧಿಕಾರಿಗಳು ಅದನ್ನು ಪತ್ತೆ ಹಚ್ಚಿ ತನಿಖೆ ನಡೆಸುತ್ತಿದ್ದಾರೆ

ಪಾರ್ಥಿವನಾಮಸಂವತ್ಸರದ ಫಲ

ಈ ಪಾರ್ಥಿವಸಂವತ್ಸರದಲ್ಲಿ ಗುರುವು ರಾಜ, ಸೇನಾಧಿಪತಿ ಅರ್ಘಾಧಿಪತಿ, ಮೇಘಾಧಿಪತಿ, ಮಂತ್ರಿ ಶುಕ್ರನು ಸಸ್ಯಾಧಿಪತಿ ಚಂದ್ರನು ರಸಾಧಿಪತಿ ಬುಧನು ಧಾನ್ಯಾಧಿಪತಿ ಶನಿಯು, ನೀರಸಾಧಿಪತಿ ರವಿಯು ಆಗಿದ್ದಾನೆ ಶುಭಗ್ರಹಗಳ ಅಧಿಕಾರ ಹೆಚ್ಚಿರುವದರಿಂದ ಪ್ರಪಂಚದಲ್ಲಿ ವೃಷ್ಟಿಯೂ ಸುಭಿಕ್ಷೆಯೂ, ಗೋಬ್ರಾಹ್ಮಣರಿಗೆ ಉತ್ಕರ್ಷವೂ ಉಂಟಾಗುವದು

ಈ ವರುಷ ಯುದ್ಧಭೀತಿ ತಪ್ಪಿದ್ದಲ್ಲ ಜನರು ಯುದ್ಧದಿಂದ ಬಳಲುತ್ತಿರುವವರ ಕಡೆ ಗಮನಕೊಡುತ್ತಾರೆ ಆಡಳಿತದಲ್ಲಿ ಒಂದು ವ್ಯವಸ್ಥೆ ಬರುತ್ತದೆ ರೋಗಬಾಧೆ ಕಡಿಮೆ ಮಳೆ ಬೆಳೆಗಳು ಚೆನ್ನಾಗಿ ಆಗುತ್ತದೆ ಧಾನ್ಯಗಳು ಸ್ವಲ್ಪ ಅಗ್ಗವಾಗುತ್ತವೆ

ಗೋವುಗಳು ವೃದ್ಧಿಯಾಗುತ್ತವೆ ಅವುಗಳಿಗೆ ಮೇವು ನೀರು ಸಮೃದ್ಧಿಯಾಗಿ ದೊರಕುತ್ತವೆ ಗೋವುಗಳು ಹೆಚ್ಚು ಹಾಲು ಕೊಡುತ್ತವೆ ಮರಗಳು ಚೆನ್ನಾಗಿ ಫಲಿಸುತ್ತವೆ

ಭೂಮಿಯು ಚನ್ನಾಗಿ ಬೆಳೆಯುತ್ತದೆ ಎಳ್ಳು, ರಾಗಿ, ಸಾಸಿವೆ, ಉದ್ದು ಮೊದಲಾದ ಕಪ್ಪುಧಾನ್ಯಗಳು ಹೆಚ್ಚಾಗಿ ಬೆಳೆಯುತ್ತವೆ ಹಿಪ್ಪಲಿ, ಶುಂಠಿ, ಇಂಗು, ಬೆಳ್ಳುಳ್ಳಿ, ಎಣ್ಣೆ, ಬೆಲ್ಲ, ಸಕ್ಕರೆ ಇವುಗಳ ಬೆಲೆ ಹೆಚ್ಚು. ತಾಮ್ರ, ಶ್ರೀಗಂಧ, ರತ್ನ ಮಾಣಿಕ್ಯ, ಮುತ್ತು ಹೇರಳವಾಗಿ ದೊರಕುತ್ತವೆ

ಮೊದಮೊದಲು ಸ್ವಾರ್ಥಿಗಳು ಹೆಚ್ಚಿ ಇತರರಿಗೆ ನಾನಾವಿಧದಲ್ಲಿ ತೊಂದರೆಗಳು ಉಂಟಾಗುತ್ತವೆ ಆದರೆ ಕೊನೆಯಲ್ಲಿ ಸ್ವಾರ್ಥಿಗಳ ಆಶೆ ತಪ್ಪಿ ಜನರಿಗೆ ನೆಮ್ಮದಿ ದೊರಕುತ್ತದೆ

ಈ ವರುಷ ಶುಭಗ್ರಹಗಳ ಆಧಿಪತ್ಯವು ಹೆಚ್ಚಾಗಿರುವುದರಿಂದ ಯಾರು ಸತ್ಯವಾಗಿ ನಡೆಯುವರೋ ಅವರಿಗೆ ಒಳ್ಳೆಯದಾಗುವುದು ಕಡುಕರಿಗೆ ಹಾನಿಯಾಗುವುದು.

ಸ್ವೀಕಾರ

ಬಳ್ಳಾರಿಯಲ್ಲಿರುವ ಮ॥ ರಾ॥ ಪಂಡ್ರಾಕಿ ರುದ್ರಪ್ಪನವರ ಪುತ್ರ ಚಿ॥ ಮರಿಯಪ್ಪನಿಗೆ ಗದಗ ಸಿಟಿಯಲ್ಲಿರುವ ಮ॥ ರಾ॥ ಮುಧೋಳ ಅಡವಪ್ಪನವರ ಪುತ್ರಿ ಚಿ॥ ಸೌ॥ ಅನುಸೂಯಾದೇವಿಯನ್ನು ಕೊಟ್ಟು ಕಳೆದ ಫಾಲ್ಗುನ ಬ॥ ೮ ಗುರುವಾರ ದಿವಸ ವಿವಾಹಮಹೋತ್ಸವವು ನೆರವೇರಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವರನಕಡೆಯಿಂದ ತೆಗೆಯಿಸಿದ 4 ರೂಪಾಯಿ ವಧುವಿನ ಕಡೆಯಿಂದ ತೆಗೆಯಿಸಿದ 2 ರೂಪಾಯಿ ಮತ್ತು ಕಲ್ಲಕೇರಿಯಲ್ಲಿರುವ ಮ॥ ರಾ॥ ಗದ್ದಿಗಿ ವೆಂಕಪ್ಪನವರ ಪುತ್ರ ಚಿ॥ ಬಸಪ್ಪನಿಗೆ ಗದಗ ಬೆಟಗೇರಿಯಲ್ಲಿರುವ ಮ॥ ರಾ॥ ವೀರಪ್ಪ ಮುದಗಲ್ಲ (ಶಿಗ್ಲಿ) ಇವರ ಪುತ್ರಿ ಚಿ॥ ಸೌ॥ ಗಂಗವ್ವನನ್ನು ಕೊಟ್ಟು ಮಾಘಶುದ್ಧ ತಿಥಿಯ ದಿವಸ ವಿವಾಹಮಹೋತ್ಸವವು ನೆರವೇರಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವಧೂವರರಕಡೆಯಿಂದ ತೆಗೆಯಿಸಿದ 4 ರೂಪಾಯಿ ಒಟ್ಟು 10 ರೂಪಾಯಿಗಳು ಗದಗ ಬೆಟಗೇರಿಯಲ್ಲಿರುವ ಮ॥ರಾ॥ ಬೇಲೇರಿ ಸಂಗನ ಬಸಪ್ಪನವರ ದ್ವಾರಾ ತಲ್ಪಿರುತ್ತವೆ

ಸಾಂಗ್ಲಿ ಸಂಸ್ಥಾನಕ್ಕೆ ಸೇರಿದ ದೂಡವಾಡಗ್ರಾಮದಲ್ಲಿರುವ ವೇ॥ ಪುರಾಣಮಠದ ಗುರುಪಯ್ಯನವರಿಗೆ ವೇ॥ ಆಗಡಿ ನಿರಕ್ತಮಠದ ಮಾರ್ಚಯ್ಯನವರ ಪುತ್ರಿ ಚಿ॥ ಸೌ॥ ನೀಲಗಂಗವ್ವನನ್ನೂ ಮತ್ತು ವೇ॥ ಚರಂತಿಮಠದ ಮರಿಗಯ್ಯನವರಿಗ ವೇ॥ ಎಡಾಲ ಹಿರೇಮಠದ ಶಿವಲಿಂಗಯ್ಯನವರ ಪುತ್ರಿ ಚಿ॥ ಸೌ॥ ಕಾಶವ್ವನನ್ನೂ ಕೊಟ್ಟು ಸೂಗಲ ಕ್ಷೇತ್ರದಲ್ಲಿ ನೆರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ಶ್ರೀ॥ ಷ॥ ಬ್ರ॥ ಸುತ್ತಗಟ್ಟಿ ಪಟ್ಟದ ಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ

ಪೂನಾಸಿಟಿಯಲ್ಲಿರುವ ಮ॥ ರಾ॥ ಚಂದ್ರಶೇಖರ ಔಟಗೇಕರ್ ಇವರ ಧರ್ಮಪತ್ನಿಯವರಾದ ಸೌ॥ ಇಂದುಕಲಾಬಾಯಿಯವರು ಕಳೆದ ಫಾಲ್ಗುನ ಶು॥ ೪ ಶುಕ್ರವಾರ ದಿವಸ ವಾಘೆ ಗ್ರಾಮದಲ್ಲಿ ಪುತ್ರರತ್ನವನ್ನು ಪ್ರಸವಿಸಿ 'ಸುರೇಂದ್ರನಾಥ" ನೆಂದು ನಾಮಕರಣ ಮಾಡಿದ ಸಮಯದಲ್ಲಿ ಶ್ರೀಪತಾಂಡಕರ್ ಶ್ರೀಶೈಲನಾಥಪುರ, ಶ್ರೀಭೂಸನೂರಪ್ಪನವರವರ ಅಪ್ಪಣೆಯಿಂದಿಗೆ ಪ್ರಭಾಪೋಷಣಕ್ಕೋಸ್ಕರ 2 ರೂಪಾಯಿಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ

ಧಾರವಾಡ ಜಿ॥ ರೋಣದಲ್ಲಿರುವ ಸೋಮನಕಟ್ಟಿ ಹಿರೇಮಠದ ವೇ॥ ಮುರಿಗಯ್ಯನವರು ಶಿವಾಧೀನರಾದ ಸಮಯದಲ್ಲಿ ಅವರ ಪುತ್ರರಾದ ವೇ॥ ಬಸವರಾಜಶಾಸ್ತ್ರಿಗಳು ಪ್ರಭಾಪೋಷಣಕ್ಕೋಸ್ಕರ 2 ರೂಪಾಯಿಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ

ಈ ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಹಾರೈಸುತ್ತೇವೆ

ಕಾಗದದ ಬೆಲೆಯು ವಿಶೇಷವಾಗಿ ಏರಿರುವುದರಿಂದ ಕೆಲವು ಗ್ರಂಥಗಳ ಮತ್ತು ಫೋಟೋಗಳ
ಬೆಲೆಯನ್ನು ಸ್ವಲ್ಪ ಹೆಚ್ಚಿಸಿದ್ದೇವೆ.

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣವಂತಿರುವುದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು. ವೀರಶೈವಮತದಲ್ಲಿ ಸದ್ಯ ದೊರೆಯತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು. ಈ ಗ್ರಂಥವು ಈಗ್ಗೆ ಸುಮಾರು **೨ ಸಾವಿರ ವರ್ಷಗಳ** ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವುದು. ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಅವರ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ. ಈ ಕೊರತೆಯನ್ನು ಹೋಗಲಾಡಿಸುವದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡಭಾಷೆಯಲ್ಲಿ ಟೀಕಾ ಸಹಿತವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತ ವೀರಶೈವ ಬಾಂಧವರಿಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿನೋಡಿದರೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ಪಾಠಕರಿಗೆ ಗೊತ್ತಾಗದಿರದು. ಪಾಠಕರ ಅನುಕೂಲಕ್ಕಾಗಿ ಬಹು ಶ್ರಮವಹಿಸಿ ಸಿದ್ಧಗೊಳಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಳ್ಳೇ ಕಾಗದದ ಮೇಲೆ ಮುದ್ರಿತವಾಗಿದ್ದು, ಸರ್ವಾಂಗಸುಂದರವಾಗಿ ಬೈಂಡು ಮಾಡಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರು ರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರವಾದ ಚಿತ್ರಗಳು ಸೇರಿಸಲ್ಪಟ್ಟಿದ್ದರಿಂದ ಗ್ರಂಥದ ಸೌಂದರ್ಯವು ಇಮ್ಮಡಿಯಾಗಿದೆ. ಶೈವಸಿದ್ಧಾಂತರಹಸ್ಯವನ್ನರಿಯಲಿಚ್ಛಿಸುವ ಈ ಅಪೂರ್ವಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೨ ರೂಪಾಯಿ.**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ	೦—೬—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦ ಬೆಲೆ	೦—೬—೦
ಪಂಚ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೨ ಬೆಲೆ	೦—೪—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ ..	೦—೪—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೬
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—೬
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೬

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ) ..	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ) ...	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ತ್ವದರ್ಪಣ (೪ನೆಯ ಆವೃತ್ತಿ) ..	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ) ...	೨ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ) ..	೪ ಆಣೆ
ಶ್ರೀಪಂಚಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ ..	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ) ..	೬ ಆಣೆ
ವೀರಶೈವ ಅಂತ್ಯೇಷ್ಟಿ—ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಸಿದ್ಧಾಂತದಿವಾಕರ (೨ನೆಯ ಆವೃತ್ತಿ) ..	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ ...	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು. ೨ನೆಯ ಆವೃತ್ತಿ)	೧। ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ) ..	೧ ರೂ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧॥ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧॥ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ) ..	೨ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ) ..	೮ ರೂ
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*) .	8 As
Speeches by Pandit Shri Kashinatha Shastriji (*English*)	12 As
लिंगधारणचंद्रिका (संस्कृत)	३ रु
वीरशैवरत्न (मराठी)	१ रु
महानारायणोपनिषद् (वीरशैवभाष्य-संस्कृत)	१ रु
सिद्धांतशिखामणि (मूल)	८ आ
नंदिकेश्वरकारिका (संस्कृत) ...... -	२ आ

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಶಿಷ್ಟಪಂಚಾಕ್ಷರೀಬೋಧಕರ್ ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ೪ ಆಣೆ ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ.

ಸಂಪುಟ ೧೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨ನೇ ಏಪ್ರಿಲ್ ೧೯೪೫ [ಸಂಚಿಕೆ ೪೯

ಲಿಂಗೋದ್ಭವ ಲಾಕೆಟ್ಸ್

ಈಗ ಹೊಸದಾಗಿ ಜಗದಾಚಾರ್ಯರ ಲಿಂಗೋದ್ಭವ ಲಾಕೆಟ್ಟು ಮತ್ತು ಕೋಟಿನ ಗುಂಡಿಗಳನ್ನು ಶುದ್ಧವಾದ ಬೆಳ್ಳಿಯಲ್ಲಿ ಬಹು ಸುಂದರವಾಗಿ ತಯಾರು ಮಾಡಿಸಿದ್ದೇವೆ.

ಲಾಕೆಟ್ಟುಗಳು ದೊಡ್ಡವರಿಗೆ ಕೋಟಿನ ಮೇಲೆ ಹಾಕಿಕೊಳ್ಳುವಂತೆಯೂ, ಮಕ್ಕಳಿಗೆ ಕೊರಳಿನಲ್ಲಿ ಧರಿಸುವಂತೆಯೂ ತಯಾರಿಸಲ್ಪಟ್ಟಿವೆ. ಗುರುಭಕ್ತರೆಲ್ಲರೂ ಇವುಗಳನ್ನು ತರಿಸಿ ತಮ್ಮ ಶರೀರದ ಮೇಲೆ ಧರಿಸಿಕೊಂಡು ಪ್ರತಿದಿವಸವೂ ಆ ಮಂಗಲಮೂರ್ತಿಯ ದರ್ಶನ ಸ್ಪರ್ಶನಾದಿಗಳಿಂದ ಧನ್ಯರಾಗಬೇಕೆಂದು ಕೋರಿಕೆ.

ಬೆಳ್ಳಿ ಲಾಕೆಟ್ ಬೆಲೆ ೧ ಕ್ಕೆ ೧ ರೂ.
ಬೆಳ್ಳಿ ಕೋಟಿನ ಗುಂಡಿ ೧ ಕ್ಕೆ ೧ ರೂ.

೬ ಕ್ಕಿಂತಲೂ ಕಡಿಮೆಯಾಗಿ ವಿ ಪಿ ಕಳಿಸುವದಿಲ್ಲ

ಮ್ಯಾನೇಜರ್
ಪಂಚಾಚಾರ್ಯಪ್ರಭಾ, ಮೈಸೂರು

ಸ್ವೀಕಾರ

ಬೆಳಗಾಂವ ಡಿ|| ಸತ್ತಿಗೇರಿ ಗ್ರಾಮದಲ್ಲಿರುವ ಮ|| ರಾ|| ಹೊಸಮನಿ ಬಾಳಪ್ಪನವರ ತಮ್ಮನ ಲಗ್ನದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 1 ರೂ, ಶ್ರೀಮತಿ ಹರಳಿ ನೀಲಗಂಗವ್ವನ ಮಗನ ಲಗ್ನದಲ್ಲಿ ತೆಗೆಯಿಸಿದ 1 ರೂ, ಮ|| ರಾ|| ನಂದಿ ಸಿದ್ಧಲಿಂಗಪ್ಪನವರ ಮಕ್ಕಳ ಲಗ್ನದಲ್ಲಿ ತೆಗೆಯಿಸಿದ 1 ರೂ, ಮ|| ರಾ|| ಪಟ್ಟಣಶೆಟ್ಟಿ ಮಹಾರುದ್ರಪ್ಪನವರ ಮಕ್ಕಳ ಲಗ್ನದಲ್ಲಿ ತೆಗೆಯಿಸಿದ 1 ರೂ, ಶ್ರೀಮತಿ ಕಂಲಿಂಗಪ್ಪನವರ ನೀಲವ್ವನ ಮಗನ ಲಗ್ನದಲ್ಲಿ ತೆಗೆಯಿಸಿದ 1 ರೂ ಒಟ್ಟು 5 ರೂಪಾಯಿಗಳು ಸತ್ತಿಗೇರಿ ಹಿರಿಯಮಠದ ಶ್ರೀ|| ಷ|| ಬ್ರ|| ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಬೆಂಗಳೂರುಸಿಟಿಯಲ್ಲಿರುವ ಮೈಸೂರು ಹೈಕೋರ್ಟಿನ ರಿ|| ಚೀಫ್‌ಜಸ್ಟಿಸ್ ರಾಜಧರ್ಮಪ್ರವೀಣ ದಿವಾನ್ ಬಹದ್ದೂರ್ ಪಿ. ಮಹದೇವಯ್ಯನವರ ಪುತ್ರಿ ಚಿ|| ಸೌ|| ಪುಟ್ಟತಾಯಮ್ಮನನ್ನು ಮಾಲೂರಿನಲ್ಲಿರುವ ಮ|| ರಾ|| ಭದ್ರಶೆಟ್ಟರ ಪುತ್ರ ಚಿ|| ರಾಜಪ್ಪ ಬಿ ಇ ಇವರಿಗೆ ಕೊಟ್ಟು ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವಧೂವರರಿಂದ ಸಮರ್ಪಿಸಲ್ಪಟ್ಟ 4 ರೂಪಾಯಿಗಳು, ಮ|| ರಾ|| ಸರಾಪ್ ಬಿ ಬಸಪ್ಪನವರ ದ್ವಾರಾ ತಲ್ಪಿರುತ್ತವೆ

ಸೊಲ್ಲಾಪುರ ನಗರದಲ್ಲಿರುವ ಶ್ರೀಮಂತ ಹನುಮಂತಪ್ಪಚಾರಿ ಇವರ ಪುತ್ರ ಚಿ|| ಅಣ್ಣಾಸಾಹೇಬನಿಗೆ ಮೋಹೋಳದಲ್ಲಿರುವ ಶ್ರೀನು ತ ಶುಕಾಂರಾಮಪ್ಪ ಅಡಂಗೆ ಇವರ ಪುತ್ರಿ ಚಿ ಸೌ| ಸರಸ್ವತೀಬಾಯಿಯನ್ನು ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಲ್ಪಟ್ಟ 2 ರೂಪಾಯಿಗಳು ಶ್ರೀ|| ಷ|| ಬ್ರ|| ಜೈನಾಪುರ ಚರಮೂರ್ತಿಸ್ವಾಮಿಗಳ ದ್ವಾರಾ ತಲ್ಪಿರುತ್ತವೆ

ರಾಯಚೂರು ಡಿ|| ರೌಡಕುಂದಿ ಹಿರೇಮಠದಲ್ಲಿ ನೆರವೇರಿಸಿದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಲ್ಪಟ್ಟ 2 ರೂಪಾಯಿಗಳು ವೇ|| ಹಿರೇಮಠದ ಪಂಚಾಕ್ಷರ ಶರ್ಮರ ದ್ವಾರಾ ತಲ್ಪಿರುತ್ತವೆ

ಮಂಗಳೂರು ಡಿ|| ಉಡುಪಿ ಜಂಗಮಮಠದಲ್ಲಿ ನೆರವೇರಿದ ಉಪ್ಪಾರಜಾತಿಯ ಧಾರ್ಮಿಕ ಸಭೆಯಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಲ್ಪಟ್ಟ 2 ರೂಗಳು ಶ್ರೀ ಷ ಬ್ರ|| ಹೊಟ್ಯಾಪುರಪಟ್ಟದ ಸ್ವಾಮಿಗಳ ದ್ವಾರಾ ತಲ್ಪಿರುತ್ತವೆ

ಕೊಪ್ಪಳ ಡಿ|| ಮಂಗಳೂರಲ್ಲಿರುವ ಅರಳೆಲೆ ಮಠದ ಶ್ರೀ ಪಟ್ಟದಸ್ವಾಮಿಗಳವರು ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಲ್ಪಟ್ಟ 2 ರೂಗಳು ವೇ|| ಬಸವಲಿಂಗಯ್ಯನವರು ಬಿ ಎ, ಮುನಿಸಿಪಾಲಿಟಿ ಚೀಫ್ ಆಫೀಸರ್ ರಾಣಿಬೆನ್ನೂರು ಇವರ ದ್ವಾರಾ ತಲ್ಪಿರುತ್ತವೆ

ಕಾನಕಾನಹಳ್ಳಿ ತಾ| ಗುರುವಿನಪುರ ಮಠದ ಪಟ್ಟಾಧಿಕಾರಿ ಶ್ರೀ ಸಿದ್ಧಲಿಂಗಸ್ವಾಮಿಗಳವರು ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಲ್ಪಟ್ಟ 2 ರೂಪಾಯಿಗಳು ಶ್ರೀ ಎಡಯೂರಯ್ಯನವರ ದ್ವಾರಾ ತಲ್ಪಿರುತ್ತವೆ

ಬೆಳಗಾಂವ ಡಿ|| ಸತ್ತಿಗೇರಿಯಲ್ಲಿರುವ ಮ|| ರಾ|| ಬಸವಂತಪ್ಪನು ಶಿವಾಧೀನನಾದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ 1 ರೂಪಾಯಿ ಮತ್ತು ಶ್ರೀಮತಿ ಗೌರವ್ವನು ಶಿವಾಧೀನಳಾದ ಸಮಯದಲ್ಲಿ ತೆಗೆಯಿಸಿದ 1 ರೂಪಾಯಿ ಒಟ್ಟು 2 ರೂಪಾಯಿಗಳು ಶ್ರೀ ಸತ್ತಿಗೇರಿ ಹಿರಿಯಮಠದ ಪಟ್ಟದ ಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ

ಹುಬ್ಬಳ್ಳಿ ನಗರದಲ್ಲಿರುವ ಹನ್ನೆರಡು ಮಠದ ಚರಮೂರ್ತಿಸ್ವಾಮಿಗಳವರ ಮಾತೃಶ್ರೀಯವರಾದ ಸೌ|| ಗಂಗಮ್ಮನವರು ಶಿವಾಧೀನರಾದ ಸಮಯದಲ್ಲಿ ವೇ|| ಹಿರಿಯಮಠದ ಸೋಮನಾಥಯ್ಯನವರು ಪ್ರಭಾಪೋಷಣಕ್ಕಾಗಿ ತೆಗೆಯಿಸಿದ 1 ರೂಪಾಯಿಯು ವೇ|| ಜಿ. ವಿ ನಂದಿಕೇಶ್ವರಮಠ ಇವರ ದ್ವಾರಾ ತಲ್ಪಿರುತ್ತದೆ.

ಸೊಲ್ಲಾಪುರ ನಗರದಲ್ಲಿರುವ ಮ|| ರಾ|| ಶಿವಶಂಕರಪ್ಪ ಚವ್ಹಾಣ ಇವರ ಅಕ್ಕಂದಿರಾದ ಸೌ|| ಸಿದ್ದವ್ವಬಾಯಿ ರಾಜೂರೆ ಇವರು ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂಯು ಶ್ರೀ ಜೈನಾಪುರ ಚರಮೂರ್ತಿಸ್ವಾಮಿಗಳವರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಶ್ರೀ ಜಗದ್ಗುರು ರೇಣುಕ ಜಯಂತೀ ಮಹೋತ್ಸವಗಳು
ರೌಡಕುಂದಿ

ರಾಯಚೂರು ಜಿಲ್ಲಾ ಶಿಂಧನೂರು ತಾಲೂಕು ರೌಡಕುಂದಿ ಹಿರೇಮಠದಲ್ಲಿ ವಾರ್ಷಿಕ ಪದ್ಧತಿಯಂತೆ ಈ ಸಲವೂ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವವು ಬಹು ಸಮಾರಂಭದಿಂದ ನೆರವೇರಿತು ತಾ|| ೨೩ ೨ ೪೫ನೇ ಶುಕ್ರವಾರ ಪ್ರಾತಃಕಾಲ ೫ ಘಂಟೆಯಿಂದ ೧೦ ಘಂಟೆಯವರೆಗೆ ಶ್ರೀ ಜಗದ್ಗುರು ರೇಣುಕಾಚಾರ್ಯರ ರಜತ ಲಿಂಗೋದ್ಭವ ಮೂರ್ತಿಗೆ ಪಂಚಾಕ್ಷರಶರ್ಮ ಹಿರೇಮಠ ಇವರಿಂದ ಏಕಾದಶ ರುದ್ರಾಭಿಷೇಕವು ಸಹಸ್ರ ಬಿಲ್ವಾರ್ಚನೆಗಳು ನಡೆದು ಗಣಾರಾಧನೆಯು ಸಮಾಪ್ತಿಗೊಂಡಿತು ಮಧ್ಯಾಹ್ನ ೫ ಘಂಟೆಗೆ ವೇ|| ರುದ್ರಾರಾಧ್ಯಶಾಸ್ತ್ರಿಗಳು ಬಳಗೇರಿ ಬೃಹನ್ಮಠ ಇವರ ಅಧ್ಯಕ್ಷತೆಯಲ್ಲಿ ಸಭೆಯು ಕೂಡಿತು ಸಭೆಗೆ ಗ್ರಾಮಾಧಿಕಾರಿಗಳಾದ ಮಾಲಿಪಾಟೀಲ ಬಸವನಗೌಡರು, ಪೋಲೀಸ್ ಪಾಟೀಲ ವಿರೂಪಾಕ್ಷಗೌಡರು, ಪಟವಾರಿ ಜನಾರ್ಧನರಾಯರು, ಬೆಣಕಲ್ಲು ಮಠದ ಮಲ್ಲಯ್ಯನವರು, ಬೆಣಕಲ್ಲು ಒಜ್ಜರೆಡ್ಡಿಗೌಡ, ಸಾಹುಕಾರ ಹನುಮಪ್ಪನವರು ಹಂಚಿನಾಳು ರಿಲೀಫ್ ಕಂಟ್ರಾಕ್ಟರ್ ಅಂದಪ್ಪನವರು ಜವಳಗೇರಿ ಸಾಹುಕಾರ ಇಮಾಮಸಾಹೇಬ ಪಾಠಶಾಲೆಯ ಸ್ಕೂಲ್ ಮಾಸ್ತರುಗಳು ಕೆ ವೀರಣ್ಣ ಮೊದಲಾದ ಪ್ರಮುಖ ಜನಗಳು ಆಗಮಿಸಿದ್ದರು ಪ್ರಾರಂಭದಲ್ಲಿ ಬಾಲ ಬಾಲಿಕೆಯರಿಂದ ರೇಣುಕಾಚಾರ್ಯರ ಮಂಗಲಗೀತೆಯಾದನಂತರ ವೀರರುದ್ರಶಾಸ್ತ್ರಿಗಳು ಕಾವ್ಯತೀರ್ಥ ಇವರು "ಆಚಾರ್ಯರ ಅವತಾರ" ದ ಬಗ್ಗೆ ೯ ಘಂಟೆಯವರೆಗೆ ಭಾಷಣವನ್ನು ಮಾಡಿದರು. ಆಮೇಲೆ ಅಧ್ಯಕ್ಷರು "ಸಿದ್ಧಾಂತಶಿಖಾಮಣಿಯ ತತ್ವಾನುಭವ"ದ ಬಗ್ಗೆ ಸರ್ವರಿಗೂ ಹೃದಯಂಗಮವಾಗುವಂತೆ ಬೋಧಿಸಿದರು ಅನಂತರ ಪಂಪನಗೌಡ ಪೋಲೀಸ್ ಪಾಟೀಲ ಇವರು "ಜಯಂತಿಯೆಂದರೇನು" ಎಂಬ ವಿಷಯವನ್ನು ಸರ್ವರಿಗೂ ತಿಳಿಸಿ ನೀವುಗಳೆಲ್ಲರೂ ಇದೇ ಪ್ರಕಾರ ನಿಮ್ಮ ನಿಮ್ಮ ಗ್ರಾಮಗಳಲ್ಲಿ ಆಯಾ ಶುಭದಿನಗಳಲ್ಲಿ ಬರುವ ಜಗದಾಚಾರ್ಯರ ಜಯಂತಿಗಳನ್ನು

[೩ನೆಯ ಪುಟವನ್ನು ನೋಡಿ]

ಪಂಚಾಚಾರ್ಯಪ್ರಭಾ.

೧೯೪೫ನೆಯ ಏಪ್ರಿಲ್ ತಾ॥ ೨ನೇ ಸೋಮವಾರ

ಧರ್ಮ

"ಚೋದನಾಲಕ್ಷಣಾರ್ಥೋಧರ್ಮಃ" ಲಿಂಗ್ ಲೋಟ್ ತವ್ಯಪ್ರತ್ಯಯಗಳಿಂದ ವಿಧಿರೂಪವಾದ ಅರ್ಥವನ್ನು ಬೋಧಿಸುವುದೇ ಧರ್ಮದ ಲಕ್ಷಣವು ವೇದವು ಇಂಥ ಕರ್ಮಗಳನ್ನೇ ಮಾಡಬೇಕು ಇಂಥ ಕರ್ಮಗಳನ್ನು ಮಾಡಬಾರದೆಂದು ವಿಧಿಸುತ್ತದೆ ವೇದದಲ್ಲಿ ಮಾಡಬಾರದೆಂದು ವಿಧಿಸುವ ನಿಷಿದ್ಧ ಕರ್ಮಗಳೇ ಅಧರ್ಮವೆಂದೂ ಮಾಡಬೇಕೆಂದು ವಿಧಿಸುವ ಕರ್ಮಗಳೇ ಧರ್ಮವೆಂದೂ ಹೇಳಿಸಿಕೊಳ್ಳಲ್ಪಡುವುವು ಇಂಥ ವೇದನಿಷಿದ್ಧಗಳಾದ ದುಷ್ಟವರ್ಮಾಚರಣೆಯಿಂದ ಆತ್ಮನು ಶಕ್ತಿಕುಂಠಿತನಾಗಿ ಕಲುಷಿತನಾಗುವದರಿಂದ ಅಧಃಪತನವು ಸಂಭವಿಸಿ ಹೀನಜನ್ಮಗಳನ್ನು ಧರಿಸಬೇಕಾಗುವನು ವೇದವಿಹಿತಗಳಾದ ಸತ್ಕರ್ಮಗಳನ್ನು ಆಚರಿಸುವುದರಿಂದ ಶೋಧಿತಗಳಾದ ಪಾತ್ರೆಗಳು ಪರಿಶುದ್ಧಗಳಾಗುವಂತೆ ಆತ್ಮರುಗಳು ಅನಾದಿಕಾಲದಿ ದಲೂ ತಗಲಿಕೊಂಡಿರುವ ಮಲಗಳಿಂದ ಬಿಡಲ್ಪಟ್ಟು ಶುದ್ಧರಾಗಿ ಊರ್ಧ್ವಗಮನೇಚ್ಛೆಯಿಂದ ಉತ್ತಮೋತ್ತಮಜನ್ಮಗಳನ್ನು ಪಡೆಯಲುದ್ಯುಕ್ತರಾಗುವರು ಮುಖ್ಯವಾಗಿ ಆತ್ಮರಿಗೆ ಅಧೋಗತಿಯುಂಟಾಗಲು ಅವರವರು ಮಾಡಿದ ಅಧರ್ಮಗಳೇ ಕಾರಣವು ಸದ್ಗತಿಯುಂಟಾಗಲು ಧರ್ಮವೇ ಕಾರಣವು ಧರ್ಮವದ ಸಹಾಯವಿಲ್ಲದಿದ್ದರೆ ಅಣುರೂಪರಾದ ಜೀವಾತ್ಮರುಗಳಿಗೆ ನಿಃಶ್ರೇಯಸ ಮಾರ್ಗಗತಿಗಳನ್ನು ಹೊಂದುವುದಕ್ಕಾಗುವುದಿಲ್ಲ ವೇದವಿಹಿತ ಧರ್ಮವನ್ನಾಶ್ರಯಿಸುವ ಮನುಷ್ಯನು ಧಾರ್ಮಿಕನೆನಿಸುವನು ವೇದನಿಷಿದ್ಧಗಳಾದ ಅಧರ್ಮಗಳನ್ನಾಶ್ರಯಿಸುವ ಮನುಷ್ಯನು ಪಾಪಿಯೆನಿಸುವನು ಧಾರ್ಮಿಕನು ಮೋಕ್ಷಮಾರ್ಗವನ್ನು ಪಡೆದು ಉತ್ತಮಲೋಕವನ್ನು ಹೊಂದುವನು. ಪಾಪಿಯಾದವನು ಮೋಹಜಾಲದಿಂದ ಅಧೋಗತಿಯನ್ನು ಹೊಂದುವನು ಧರ್ಮ ಎಂಬ ಶಬ್ದದಲ್ಲಿಯೂ ಇದೇ ಅರ್ಥವು ಸ್ಪಷ್ಟವಾಗಿರುತ್ತದೆ ಅಂದರೆ 'ಧರತಿ ಅಧಃಪತನಾತ್ ಪ್ರಾಣಿನಃ ಇತಿ ಧರ್ಮಃ' ಎಂಬ ವ್ಯುತ್ಪತ್ತಿಯಿಂದ ಯಾವ ವೇದವಿಹಿತಧರ್ಮವನ್ನು ಅನುಷ್ಠಿಸುತ್ತಾರೆಯೋ ಅವರನ್ನು ಕೆಳಕ್ಕೆ ಬೀಳದಂತೆ ಮೇಲಕ್ಕೆ ಎತ್ತುವುದರಿಂದ ಇದಕ್ಕೆ ಧರ್ಮವೆಂದು ಹೆಸರುಂಟಾಗಿರುವದು ಯಾವ ಆತ್ಮನಿಗೆ ಪಾಪಸಂಬಂಧವಿರುವುದೋ ಆ ಆತ್ಮನು ಕೆಳಕ್ಕೆ ಬೀಳುವನು ಯಾವ ಆತ್ಮನಿಗೆ ಪಾಪಸಂಬಂಧವಿಲ್ಲದೆ ಧರ್ಮಸಂಬಂಧವಿರುತ್ತದೆಯೋ ಆ ಆತ್ಮನು ಪರಿಶುದ್ಧನಾಗಿ ಪರಮಸನ್ನಿಧಿಯನ್ನು ಪಡೆಯುವನು ಆದ್ದರಿಂದ ಪರಮೇಶ್ವರನ ಉಚ್ಛ್ವಾಸರೂಪಗಳಾದ ವೇದಗಳಲ್ಲಿ ಹೇಳಲ್ಪಟ್ಟದ್ದಾಗಿಯೂ ಪರಲೋಕಸಾಧಕವಾಗಿಯೂ ಇರುವ ಧರ್ಮಗಳನ್ನಾಚರಿಸುವ ಆತ್ಮನು ದಿನೇ ದಿನೇ ಪರಿಶುದ್ಧನಾಗುತ್ತ ತನಗೆ ಪ್ರಾಪ್ತವಾಗಿದ್ದ ಅಲ್ಪಜ್ಞತ್ವಾದಿಗಳನ್ನು ಕಳೆದುಕೊಂಡು ಪರಮಾತ್ಮಸಾಯುಜ್ಯವನ್ನು ಹೊಂದುವನು ಲೋಕದಲ್ಲಿ ಒಂದು ರತ್ನವು ಸ್ವಭಾವಸಿದ್ಧ ತೇಜಸ್ಸುಳ್ಳದಾಗಿದ್ದರೂ ಸಾಣೆಯೆಂಬ ಸಂಸ್ಕಾರವಿಲ್ಲದಿದ್ದರೆ ಅದರ ಬೆಲೆಯು ಹೆಚ್ಚುವುದೇ ಇಲ್ಲವು. ಆ ರತ್ನವನ್ನು ಸಾಣೆಯಿಂದ ಸಂಸ್ಕರಿಸಿದರೆ ಮಾಲಿನ್ಯವು ನಷ್ಟವಾಗಿ ಅದರೊಳಗಿದ್ದ ಸಹಜಪ್ರಕಾಶವೆಲ್ಲಾ ಹೊರಗೆ ಬಂದು ಸರ್ವಮಾನ್ಯವಾಗುವದೆಂಬಂಶವು ಸರ್ವಜನಸಿದ್ಧವಾಗಿರುವುದು ನಮ್ಮ ದೇಹದೊಳಗೆ ಇರುವ ಆತ್ಮನನ್ನು ಒಂದು ರತ್ನಕ್ಕೆ ಹೋಲಿಸಬಹುದಾಗಿದೆ ರತ್ನದಲ್ಲಿ ಪ್ರಕಾಶಗುಣವು ಸ್ವಭಾವವಾಗಿರುವಂತೆ ಆತ್ಮನಲ್ಲಿಯೂ ಪರಮೇಶ್ವರನಿಗೆ ಸರ್ವಜ್ಞತ್ವಾದಿ ಗುಣಗಳಲ್ಲವೂ ಪೂರ್ಣವಾಗಿರುವುವು ಮಾಲಿನ್ಯದೋಷದಿಂದ ರತ್ನದಲ್ಲಿ ಪ್ರಕಾಶವು ಕಡಿಮೆಯಾಗುವಂತೆ ಅನಾದಿಯಾದ ಆಣವ, ಮಾಯಿಕ, ಕಾರ್ಮಿಕಗಳೆಂಬ ಮಲಗಳ ಆವರಣದಿಂದ ಆತ್ಮನ ಸ್ವಭಾವಗುಣಗಳು ಮರೆಯಾಗಿ ಕಿಂಚಿಜ್ಞತ್ವ ಮೊದಲಾದ ಅಲ್ಪ ಶಕ್ತಿಗಳೇ ತೋರುತ್ತಿರುವವು ಈ ಅಲ್ಪಶಕ್ತಿಯು ನಷ್ಟವಾಗಿ ಸ್ವಭಾವಸಿದ್ಧವಾದ ಪರಮಾತ್ಮನ ಗುಣಗಳು ಈ ಆತ್ಮಕ್ಕುಂಟಾಗಬೇಕಾದರೆ ಶ್ರುತ್ಯುಕ್ತಧರ್ಮಾಚರಣೆಯೆಂಬ ಸಂಸ್ಕಾರವು ಆಗಲೇಬೇಕು ಧರ್ಮದಿಂದ ಸಂಸ್ಕರಿಸಲ್ಪಡದ ಆತ್ಮರು ಸಾಣೆಯಿಲ್ಲದ ರತ್ನದಂತೆ ಆಗಿ ತಾವು ಪರಮಾತ್ಮನ ಸಂಪೂರ್ಣಗುಣಗಳನ್ನು ಹೊಂದಿದ್ದರೂ ಆ ಗುಣಗಳಿಂದ ಯಾವ ಪ್ರಯೋಜನವನ್ನೂ ಹೊಂದದೆ ಪಶುಪಕ್ಷಿಗಳಂತೆ ಆಹಾರ ನಿದ್ರಾಮೈಥುನಾದಿಗಳನ್ನು ಅನುಭವಿಸುವದೊಂದೇ ಅವರಿಗೆ ಪುರುಷಾರ್ಥವಾಗಿ ತೋರುವದು ಮಾನವಜನ್ಮವನ್ನಾಶ್ರಯಿಸಿದ ಆತ್ಮನು ಅಂಥ ಸ್ಥಿತಿಯನ್ನು ತಂದುಕೊಂಡರೆ, "ಕ್ರಿಮಿಕೀಟಪತಂಗೇಭ್ಯಃ ಪಶವಃ ಪ್ರಜ್ಞಯಾಧಿಕಾಃ । ಪಶುಭ್ಯೋಽಪಿನರಾಶ್ರೇಷ್ಠಾಃ" ಕ್ರಿಮಿಗಳಿಗಿಂತಲೂ ಕೀಟಗಳು, ಕೀಟಗಳಿಗಿಂತಲೂ ಪತಂಗಗಳೂ, ಪತಂಗಗಳಿಗಿಂತಲೂ ಪಶುಗಳು, ಪಶುಗಳಿಗಿಂತ ಮನುಷ್ಯರು ಪ್ರಜ್ಞಾಶಕ್ತಿಯಲ್ಲಿ ಶ್ರೇಷ್ಠರು ಎಂದು ಹೇಳುವ ಆರ್ಯೋಕ್ತಿಗೆ ವಿಷಯರಾಗರು ಮುಖ್ಯವಾಗಿ ಮಾನವತ್ವವು ಕೇವಲ ಧರ್ಮದ ಆಧಾರದಲ್ಲಿರುವದರಿಂದ ಇಂಥ ಧರ್ಮವನ್ನು ತ್ಯಜಿಸಿ ಅಧರ್ಮದಲ್ಲಿ ನಿರತನಾದವನು ಕನ್ನ ಮಾನವಧರ್ಮದ ಎಲ್ಲೆಯನ್ನು ಮೀರಿದಂತಾಗುವನು ಆದ್ದರಿಂದ ಮಾನವತ್ವವನ್ನು ಸಾಫಲ್ಯವನ್ನಾಗಿ ಮಾಡುವುದಕ್ಕೆ ಮುಖ್ಯಸಾಧನಗಳಾದ ಧರ್ಮಗಳ ಗೂಢಾರ್ಥವನ್ನು ಜಗತ್ತಿನಲ್ಲಿ ಬೋಧಿಸಿ ಆತ್ಮರನ್ನುದ್ಧರಿಸುವುದಕ್ಕಾಗಿ ಈಶ್ವರಾಜ್ಞೆಯಿಂದ ಒಂದೊಂದು ಮತದಲ್ಲಿ ಒಂದೊಂದು ಸಾಮದಿಂದ ಒಬ್ಬೊಬ್ಬ ಆಚಾರ್ಯಭಗವತ್ಪಾದರು ಅವತರಿಸಿ ಖಿಲವಾದ ಧರ್ಮಗಳನ್ನು ಪುನಃ ಸ್ಥಾಪಿಸಿದರು ಆದ್ದರಿಂದ ಆಯಾಯಮತಸ್ಥಾಪಕರಾದ ಆಚಾರರಿಂದ ಸ್ಥಾಪಿತವಾದ ಸಕಲ ಧರ್ಮಗಳನ್ನು ಆಯಾಯ ಮತೀಯರು ತಪ್ಪದೆ ನಡೆಯಿಸುತ್ತಾ ಇಹದಲ್ಲಿ ಧಾರ್ಮಿಕರೆಂಬ ಹೆಸರನ್ನು ಪಡೆದು ಶಿವಕೃಪಾಪಾತ್ರರಾಗಿ ಪರದಲ್ಲಿ ಸದ್ಗತಿಯನ್ನು ಪಡೆಯಲೆಂದು ಹಾರೈಸುತ್ತೇವೆ

ಯುದ್ಧವಾರ್ತೆ.

ಪೂರ್ವಪ್ರಷ್ಯದಲ್ಲಿ ಜರ್ಮನರಿಗಾದ ಅಪಾರ ನಷ್ಟ

ರಷ್ಯನ್ ಸೇನೆಗಳು ಉತ್ತರ ಮತ್ತು ದಕ್ಷಿಣ ಮುಖಗಳಿಂದ ಜರ್ಮನಿಯೊಳಕ್ಕೆ ನುಗ್ಗುತ್ತಿವೆ ಮಾರ್ಷಲ್ ಟಾಲ್ ಬುಕಿನ್ನರ ದಳಗಳು ಆಸ್ಟ್ರಿಯಾ ಗಡಿಯನ್ನು ಮುಟ್ಟಿವೆ ೧೦ ಮೈಲಿ ದಕ್ಷಿಣದಲ್ಲಿರುವ ಬುಡಾಪೆಸ್ಟ್ ಸ್ಟೈಕ್ರ ಮಾರ್ಗದಲ್ಲಿರುವ ಪ್ರಧಾನ ಸಂಚಾರ ಕೇಂದ್ರವೊಂದನ್ನು ಹಿಡಿದಿವೆ ಇತರ ಸೋವಿಯಟ್ ದಳಗಳು ಬ್ರಟಿಸ್ಲಾವಾ ಅಂತರವೆಡೆಗೆ ನುಗ್ಗಿ ಹೋಗಲು ಖಡಾಖಡಿ ಕಾಳಗ ಮಾಡುತ್ತಿರುವುದಾಗಿ ಹೇಳಲಾಗುತ್ತಿದೆ ಈ ಅಂತರವೇನಾದರೂ ೩೫ ಮೈಲಿಗಳಷ್ಟು ಅಗಲ ಕತ್ತರಿಸಿ ಹೋಯಿತೆಂದರೆ ಆಮೇಲೆ ವಿಯನ್ನಾ ನಗರವನ್ನು ರಕ್ಷಿಸಲು ಸಾಧ್ಯವಾಗುವುದಿಲ್ಲ ಉತ್ತರಾಗ್ರದಲ್ಲಿ ಪೂರ್ವಪ್ರಷ್ಯದಲ್ಲಿ ಕೋನಿನ್ಸ್ ಬರ್ಗಿಗೆ ದಕ್ಷಿಣದಲ್ಲಿ ಒಂದು ಜರ್ಮನ್ ಪಾಳಯವನ್ನು ನಾಶಮಾಡಲಾಗಿದೆ ಕಳೆದ ೧೭ ದಿನಗಳಿಂದ ಇಲ್ಲಿ ನಡೆದ ಘೋರಕಾಳಗಗಳ ಪರಿಣಾಮವಾಗಿ ೫೦,೦೦೦ ಮಂದಿಯನ್ನು ಕೈಸೆರೆ ಹಿಡಿಯಲಾಗಿದೆ. ಇದೇ ಕಾಲದಲ್ಲಿ ೮೦,೦೦೦ ಕ್ಕೂ ಹೆಚ್ಚು ಜರ್ಮನರು ಸತ್ತರೆಂದು ಹೇಳಲಾಗಿದೆ

ಜರ್ಮನಿಯಲ್ಲಿ ಭಾರತೀಯ ಬಂದಿಗಳು

ಜರ್ಮನಿಯಲ್ಲಿನ್ನೂ ೯೯೧೯ ಮಂದಿ ಭಾರತೀಯ ಯೋಧಬಂದಿಗಳಿದ್ದಾರೆ ರಷ್ಯನರು ಪಾರು ಮಾಡಿದ ೩೫ ಮಂದಿ ಬಂದಿಗಳನ್ನೂ ಭಾರತಕ್ಕೆ ಬಂದಿಲ್ಲ ಈ ಅಂಶವನ್ನೂ ಡಿಫೆನ್ಸ್ ಸಚಿವರಾದ ಸರ್ ಫಿರೋಜ್ ಖಾನ್‌ನೂನ್‌ರವರು ತಿಳಿಸುತ್ತ ರಷ್ಯನರು ಪಾರು ಮಾಡುವ ಭಾರತೀಯ ಬಂದಿಗಳ ಯೋಗಕ್ಷೇಮವನ್ನು ರಷ್ಯನರೇ ನೋಡಿಕೊಳ್ಳುವುದಾಗಿಯೂ ಕಾಲವಿಳಂಬ ಮಾಡದೆ ಅವರನ್ನು ಕಳುಹಿಸುವುದಾಗಿಯೂ ಹೇಳಿ ಅವರಿಗೆ ಸಾಕಷ್ಟು ಅನ್ನಬಟ್ಟೆಬರೆಗಳು ಒದಗುತ್ತಿವೆ ಎಂದು ತಿಳಿಸಿದ್ದಾರೆ.

ಬ್ರಿಟನ್ನಿಗೆ ೫೦ ಲಕ್ಷ ಟನ್ ನೌಕಾ ನಷ್ಟ

ಲಿವರ್‌ಪೂಲ್ ಸ್ಟೀಮ್‌ಷಿಪ್ ಮಾಲೀಕರ ಸಂಘದವರು ಒಂದು ವಾರ್ಷಿಕ ವರದಿಯನ್ನು ಪ್ರಕಟಿಸಿರುವರು. ಅದರಲ್ಲಿ ಬ್ರಿಟನ್ನು ತನ್ನ ೧೬೦೦ ಟನ್ ಲೈನರ್ ಹಡಗುಗಳ ಪೈಕಿ ಸುಮಾರು ಅರ್ಧವನ್ನು ಕಳೆದುಕೊಂಡಿದೆಯೆಂದು ತಿಳಿಸಲಾಗಿದೆ. ಇದುವರೆವಿಗೂ ಆಗಿರುವ ಒಟ್ಟು ನೌಕಾ ನಷ್ಟ ೫೦ ಲಕ್ಷ ಟನ್ನುಗಳೆಂದು ಅಂದಾಜು ಮಾಡಲಾಗಿದೆ ಸಂಯುಕ್ತ ಸಂಸ್ಥಾನಗಳೊಂದಿಗೆ ಬ್ರಿಟನ್ನು ೨೫೦೦ ಹಡಗುಗಳನ್ನು ಹಂಚಿಕೊಳ್ಳುತ್ತದೆ ಎಂದು ಹೇಳಲಾಗಿದೆ

ರಷ್ಯಾಕ್ಕೆ ಬ್ರಿಟನ್ನಿನಿಂದ ಸಂಗ್ರಾಮ ವಸ್ತುಗಳು

ಉತ್ತರ ಸಮುದ್ರದ ಮೂಲಕ ರಷ್ಯನ್ ಬಂದರುಗಳಿಗೆ ಬ್ರಿಟನ್ನಿನಿಂದ ಒಟ್ಟು ೭೩೯ ಹಡಗುಗಳು ತೆರಳಿದವೆಂದೂ ಶತ್ರು ವಿಮಾನಗಳ, ಸಬ್ ಮೆರಿನ್‌ಗಳ ಮತ್ತು ಸಂಗ್ರಾಮನೌಕೆಗಳ ಅಪಾಂತರ ಹೋರಾಗಿದ್ದರೂ ೭೭೭ ಹಡಗುಗಳು ರಷ್ಯ ಬಂದರುಗಳನ್ನು ತಲುಪಿದವೆಂದೂ ಶ್ರೀ ಅಲೆಗ್ಸಾಂಡರ್‌ರವರು ತಿಳಿಸಿದ್ದಾರೆ. ಎರಡು ಕ್ರೂಯಿಜರುಗಳು, ೫ ಡಿಸ್ಟ್ರಾಯರುಗಳು, ೮ ಕಾವಲು ನೌಕೆಗಳು, ಒಂದು ಎಣ್ಣೆ ಹಡಗು ಇಷ್ಟನ್ನು ಬ್ರಿಟನ್ನು ಕಳೆದುಕೊಂಡಿತು ಒಂದು ವಿಮಾನ ವಾಹಕ ನೌಕೆಗೂ ಏಳು ಡಿಸ್ಟ್ರಾಯರುಗಳಿಗೂ ಹಾನಿಯಾಯಿತು. ನೌಕಾಪಡೆಗೆ ಸೇರಿದ ೯೫ ಅಧಿಕಾರಿಗಳೂ ೧೦೬೧ ಮಂದಿ ನೌಕಾದಳದ ನೌಕರರೂ ಸತ್ತರು. ಇವರ ಜೊತೆಗೆ ನೂರಾರು ಮಂದಿ ನಾವಿಕರು ಸಹ ಪ್ರಾಣಬಿಟ್ಟರು ಎಂದು ವಿವರಿಸಿದರು.

ಜರ್ಮನ್ ಸರ್ಕಾರ ಬರ್ಲಿನ್ ಬಿಟ್ಟಿತು

ಜರ್ಮನಿ ಸರ್ಕಾರವನ್ನು ರಾಜಧಾನಿಯಾದ ಬರ್ಲಿನ್ ನಗರದಿಂದ ರಹಸ್ಯವಾದ ಸ್ಥಳಕ್ಕೆ ವರ್ಗಾಯಿಸಲಾಗಿದೆ. ಎಂದು ರಾಜಕೀಯ ವಲಯಗಳಲ್ಲಿ ಹೇಳಲ್ಪಡುತ್ತಿದೆ ಗೆಸ್ಟಪೊ ಕೇಂದ್ರ ಕಛೇರಿಯನ್ನು ಸಹ ಬರ್ಲಿನ್ನಿಂದ ಸ್ವಿಸ್ ಗಡಿ ಬಳಿ ಇರುವ ಒಂದು ಸ್ಥಳಕ್ಕೆ ಸಾಗಿಸಲಾಗಿದೆಯೆಂದೂ ಗೊತ್ತಾಗಿದೆ

ಶಾಂತಿಕರಾರುಗಳು ಅನುಮೋದಿಸಲ್ಪಡುವುದೆಲ್ಲಿ?

ಜರ್ಮನಿಯ ಸುತ್ತಲು ದಿಗ್ಬಂಧನದ ಹಿಡಿತ ಬಿಗಿಯಾಗುತ್ತಿದೆ. ಇನ್ನು ಕೆಲವು ದಿವಸಗಳಲ್ಲಿ ಅಲ್ಲದಿದ್ದರೂ ಕೆಲವು ವಾರಗಳಲ್ಲಿ ಜರ್ಮನಿಯು ಪತನವಾಗುವದು ಖಂಡಿತ ಆದಾದನಂತರ ಶಾಂತಿ ಒಪ್ಪಂದವನ್ನು ಎಲ್ಲಿ ಬರೆಯಿಸಿಕೊಳ್ಳಲಾಗುವುದೆಂಬ ಪ್ರಶ್ನೆಯು ಎಲ್ಲಕಡೆಯಿಂದಲೂ ಕೇಳಬರುತ್ತಿದೆ. ಅಮೆರಿಕನ್ ಸೆನೆಟರುಗಳು ವಾಷಿಂಗ್‌ಟನ್ನಿನಲ್ಲೆಂದೂ, ಫ್ರೆಂಚರು ಪ್ಯಾರಿಸ್ ನಗರದಲ್ಲೆಂದೂ, ರಷ್ಯನ್ ರಾಜಕೀಯ ತಂತ್ರಜ್ಞರು ಮಾಸ್ಕೋವಿನಲ್ಲಿ ಒಪ್ಪಂದವಾಗಬೇಕೆಂದೂ ಒತ್ತಾಯಪಡಿಸುತ್ತಿರುವರು ಬ್ರಿಟನ್ ಮೌನವಹಿಸಿದೆ ಡೊಮಿನಿಯನ್‌ಗಳವರು ಲಂಡನ್ನಿನಲ್ಲಿ ಶಾಂತಿಕರಾರಾಗಬೇಕೆನ್ನುತ್ತಾರೆ. ಎರಡು ವರ್ಷಗಳಷ್ಟು ದೀರ್ಘಕಾಲ ಲಂಡನ್ ನಗರವು ಶತ್ರುಗಳ ಹೊಡೆತಕ್ಕೆ ಸಿಕ್ಕಿ ಕಷ್ಟನಷ್ಟಗಳಿಗೆ ಗುರಿಯಾಗಿರುವುವೇ ಈ ಸಲಹೆಗೆ ಕಾರಣ. ಜಪಾನು ಸೋತನಂತರ ಅದು ವಾಷಿಂಗ್‌ಟನ್ನಿನಲ್ಲಿ ತಮ್ಮ ಸೋಲನ್ನು ಒಪ್ಪಿಕೊಂಡು ಒಪ್ಪಂದಕ್ಕೆ ಬರಬೇಕೆಂಬ ಅಭಿಲಾಷೆಯನ್ನು ನೆರವೇರಿಸಬಹುದೆಂದು ಹೇಳಲಾಗುತ್ತಿದೆ

ಜಪಾನಿಗೆ ೪೦೦ ಮೈಲಿಯೊಳಗೇ ಮಿತ್ರಸೇನೆ ಇದೆ

ಜಪಾನ್ ಮೂಲಭೂಮಿಯಿಂದ ೪೦೦ ಮೈಲಿಗಳೊಳಗೇ ಇರುವ ಕೊರಮಾ ದ್ವೀಪವಲ್ಲಿ ಅಮೆರಿಕನರು ಬಂದಿಳಿದಿದ್ದಾರೆಂದು ಜಪಾನ್ ದಂಡನಾಯಕರ ಕಚೇ

ಯಿಂದ ಹೊರಟ ಸುದ್ದಿಯು ತಿಳಿಸುತ್ತದೆ ಫಿಲಿಫೈನ್ಸ್ ದ್ವೀಪಸ್ತೋಮಕ್ಕೆ ಸೇರಿದ ಸೆಬೂ ದ್ವೀಪದಲ್ಲಿ ಅಮೆರಿಕನರು ಬಂದಿಳಿದಿದ್ದಾರೆಂದು ಈ ಮೊದಲೇ ಜಪಾನರು ಕೊಟ್ಟಿದ್ದ ವರದಿಯು ಜ|| ಮೆಕಾರ್ಥರ್‌ರವರಿಂದ ಪುಷ್ಟೀಕರಿಸಲ್ಪಟ್ಟಿದೆ. ದ್ವೀಪದ ರಾಜಧಾನಿಯಾದ ಸೆಬೂ ನಗರದಿಂದ ದಕ್ಷಿಣಕ್ಕೆ ಕೇವಲ ೫ಮೈಲಿ ದೂರದಲ್ಲಿ ಮಿತ್ರ ಸೈನಿಕರು ಬಂದಿಳಿದಿದ್ದಾರೆ ಜಪಾನರು ಈ ಮುತ್ತಿಗೆಯನ್ನು ನಿರೀಕ್ಷಿಸಿಯೇ ಇರಲಿಲ್ಲ ಆದ್ದರಿಂದ ಅವರಿಂದ ಹೆಚ್ಚು ಪ್ರತಿಭಟನೆಯೇನೂ ಕಾಣಬರಲಿಲ್ಲ. ರ್ಯೂಕ್ಯೂ ದ್ವೀಪಗಳ ಮೇಲೆ ವಿಮಾನಮುತ್ತಿಗೆ ನಡೆಸಲಾಗಿದೆ

೧೦೦ ರೂಗೆ ೧ ರೇಡಿಯೋ ಯಂತ್ರ

ಭಾರತದಲ್ಲಿ ರೇಡಿಯೋ ತಯಾರಿಸುವ ಒಂದು ಕಂಪನಿ ಸ್ಥಾಪಿಸಲಾಗಿದೆ. ಈಗ ತಾನೆ ರಿಜಿಸ್ಟರಾಗಿರುವ ಈ ಕಂಪೆನಿಯ ಡೈರೆಕ್ಟರುಗಳ ಪೈಕಿ ಶ್ರೀ ವಿ ಜಿ ಮೋಟ್‌ವಾನಿಯವರೊಬ್ಬರಾಗಿರುತ್ತಾರೆ ಅವರು ಪತ್ರಿಕಾ ಪ್ರತಿನಿಧಿಗಳಿಗಿತ್ತ ಭೇಟಿಯಲ್ಲಿ ತಮ್ಮ ಸಂಸ್ಥೆಯ ಉದ್ದೇಶಗಳನ್ನು ತಿಳಿಸಿದರು ರೇಡಿಯೋವಿಗೆ ಬೇಕಾಗಿರುವ ಉಪಕರಣಗಳಲ್ಲಿ ಅನೇಕವನ್ನು ಭಾರತ ದೇಶದಲ್ಲೇ ತಯಾರುಮಾಡಿ ಕೆಲವನ್ನು ಮಾತ್ರ ಪರದೇಶಗಳಿಂದ ತರಿಸಿಕೊಳ್ಳಲಾಗುವುದೆಂದೂ ಇಲ್ಲಿ ತಯಾರಾದ ರೇಡಿಯೋ ಸೆಟ್ಟುಗಳಿಗೆ ಆಮದು ತೆರಿಗೆಯಿಲ್ಲವಾಗುವುದಾಗಿ ೧೦೦ ರೂಗೆ ಒಂದು ಸೆಟ್ಟನ್ನು ಒದಗಿಸಲಾಗುವುದೆಂದೂ ಅದರ ಮಾಹೆಯಾನ ವೆಚ್ಚ ತಿಂಗಳಿಗೆ ೨ ರೂ ಆಗಬಹುದೆಂದೂ ವಿವರಿಸಿದರು ಈ ಯುದ್ಧಾನಂತರ ಆದಷ್ಟು ಬೇಗ ಈ ನೂತನ ಕಂಪನಿ ರೇಡಿಯೋಗಳನ್ನು ತಯಾರಿಸಿ ಜನರಿಗೆ ಸರಬರಾಜು ಮಾಡುತ್ತದೆಂದು ಹೇಳಲಾಗಿದೆ

ಉಪ್ಪಾರ ಜಾತಿಯವರ ಸಭೆ

ದಕ್ಷಿಣ ಕನ್ನಡ ಜಿಲ್ಲಾ ಉಡುಪಿಯಲ್ಲಿರುವ ಜಂಗಮ ಮಠದಲ್ಲಿ ತಾ|| ೧೧-೩ ೪೫ ನೆಯ ದಿವಸ ಸದರಿ ಮಠದ ನಾಗಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಉಪ್ಪಾರ ಜಾತಿಯ ಜನರ ಸಭೆಕೂಡಿತು ಸದರಿ ಸಭೆಗೆ ಸುಮಾರು ೨೦೦ ಜನರು ಆಗಮಿಸಿದ್ದರಲ್ಲದೆ ಈ ಸಭೆಗೆ ಹೊನ್ನಾಳಿ ತಾ|| ಹೊಟ್ಯಾಪುರ ಮಠದ ಶ್ರೀ ಪಟ್ಟದಸ್ವಾಮಿಗಳವರು ಸಹ ಆಗಮಿಸಿದ್ದರು ಸದರಿ ಸ್ವಾಮಿಗಳವರು ಶ್ರೀ ಜಗದ್ಗುರು ಪಂಚಾಚಾರ್ಯರ ಲೀಲೆಯ ವಿಷಯವನ್ನೂ ಅವರಿಗಿರುವ ಧರ್ಮಾಧಿಕಾರ ವಿಷಯವನ್ನೂ ಶಾಸ್ತ್ರರೀತಿಯಂತೆ ವಿವರಿಸಿದರು ಸಾಗರ ತಾಲ್ಲೂಕು ಕೂಡ್ಲಿ ವಿರಕ್ತಮಠದಸ್ವಾಮಿಗಳು ಉಪ್ಪಾರ ಜಾತಿಯವರಿಗೂ ಮತ್ತು ಮಡಿವಾಳರಿಗೂ ತಾವೇ ಗುರುಗಳೆಂದು ಹೇಳಿಕೊಳ್ಳುತ್ತಾ ಕಾಣಿಕೆ ವಸೂಲು ಮಾಡುತ್ತಿರುವದನ್ನು ಖಂಡಿಸುತ್ತ, ವಿರಕ್ತರೆಂಬುವರು ಯಾರಿಗೂ ಗುರುಗಳಾಗುವದಿಲ್ಲವೆಂದೂ ಅವರಿಗೆ ಗುರುತ್ವಾಧಿಕಾರವಿರುವದಿಲ್ಲವೆಂದೂ ಧಾರ್ಮಿಕ ಕ್ರಿಯೆಗಳಲ್ಲಿ ಅವರು ಕೈಹಾಕಬಾರದೆಂದೂ ಸಪ್ರಮಾಣವಾಗಿ ವಿವರಿಸಿದರು ಆಚಾರವಿಚಾರಣಾದಿ ಹಕ್ಕು ಪಂಚಸಿಂಹಾಸನದವರಿಗಲ್ಲದೆ ವಿರಕ್ತರಿಗೆ ಇರುವದಿಲ್ಲವೆಂದು ಪ್ರತಿಪಾದಿಸಿದರು. ಗುರುಪುರ ಮಠದ ಪೂಜ್ಯದ ಸ್ವಾಮಿಗಳವರು ಆ ಗ್ರಾಮಕ್ಕೆ ೬ ಮೈಲು ದೂರದಲ್ಲಿರುವ ಕಂಚುಗಾರನಹಳ್ಳಿ ಸಮೀಪದಲ್ಲಿರುವ ಗುಡ್ಡದ ಮೇಲೆ ಐಕ್ಯವಾಗಿದ್ದಾರೆಂದೂ ಅಲ್ಲಿನ ವಂಶಪರಂಪರೆಯಿಂದ ಉಪ್ಪಾರಜಾತಿಯವರೂ ಮತ್ತು ಮಡಿವಾಳರೂ ಪ್ರತಿ ಸೋಮವಾರ ಹೋಗುತ್ತಿರುವರೆಂದೂ ಈ ಎರಡೂ ಜಾತಿಯವರಿಗೂ ಆ ಮಠದವರೇ ಗುರುಗಳೆಂದೂ, ನಿದರ್ಶನವನ್ನು ಕೊಟ್ಟು ಸಭಿಕರಿಗೆ ತಿಳಿಯಪಡಿಸಿದರು ಆಮೇಲೆ ಜಗದ್ಗುರುಗಳ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು

ಪ್ರತ್ಯಕ್ಷದರ್ಶಿ

ಚಂದಾದಾರಲ್ಲಿ ವಿಜ್ಞಾಪನೆ

ಕಾರ್ಯಬಾಹುಳ್ಯದಿಂದ ಕಳೆದವಾರದ ಪತ್ರಿಕೆಯು ಹೊರಡಲು ಅವಕಾಶವಾಗಲಿಲ್ಲವೆಂಬ ವಿಷಯವನ್ನು ಚಂದಾದಾರರು ಗಮನಿಸಬೇಕು. —ವ್ಯಾ

[೧ನೆಯ. ಪುಟದಿಂದ ಮುಂದುವರಿದುದು]

ತಪ್ಪದೆ ಆಚರಿಸಬೇಕೆಂದು ಬಹಳ ಕಳಕಳಿಯಿಂದ ಹೇಳಿ ಆಚಾರ್ಯತತ್ವಪ್ರಚಾರಕ್ಕಾಗಿ ಜನ್ಮವೆತ್ತಿರುವ ಪ್ರಭಾ ಪೋಷಣಕ್ಕಾಗಿ ೨ ರೂಪಾಯಿಗಳನ್ನು ಸಮರ್ಪಿಸಿದರು. ಬಳಿಕ ರೇಣುಕಾಚಾರ್ಯರ ಭಾವಚಿತ್ರಕ್ಕೂ ಹಿರೇಮಠಾಧಿ ದೈವತವಾದ ಮರುಳಸಿದ್ಧೇಶ್ವರಸ್ವಾಮಿಗೂ ಮಂಗಳಾರತಿಯಾಗಿ ಪ್ರಸಾದವಿನಿಯೋಗವಾದ ನಂತರ ಸಭೆಯು ವಿಸರ್ಜನವಾಯಿತು ಈ ಕೆಲಸದಲ್ಲಿ ಹೃತ್ಪೂರ್ವಕ ಸೇವೆ ಸಲ್ಲಿಸಿರುವ ರೌತಕುಂದಿ ಗ್ರಾಮದ ಸಮಸ್ತ ಸದ್ಭಕ್ತರುಗಳಿಗೆ ಜಗದಾಚಾರ್ಯರು ಮಂಗಲವನ್ನೀಯಲೆಂದು ಹಾರೈಸುತ್ತೇನೆ

ದೊಡ್ಡನಗೌಡ ಪೋಲೀಸ್ ಪಾಟೀಲ ಗೊರಾಬಾಳು

ಸುಲೇಪೇಟೆ

ಇದೇ ಫಾಲ್ಗುಣ ಶುದ್ಧ ೧೫ ತಾ| 26-2 45 ಸೋಮವಾರ ಶುಭದಿವಸ ನಿಜಾಂ ಇಲಾಖಾ ಸುಲೇಪೇಟೆ ಗ್ರಾಮದಲ್ಲಿ ಶ್ರೀ ರೇಣುಕಜಯಂತಿಯು ಬಹು ಅಟ್ಟಹಾಸದಿಂದಲೂ, ವೈಭವದಿಂದಲೂ ಆಚರಿಸಲಾಯಿತು ತಳಿರುತೋರಣಗಳಿಂದ ಅಲಂಕೃತವಾದ ಮಂಟಪದಲ್ಲಿ ಶ್ರೀಜಗದ್ಗುರು ರೇಣುಕರ ಲಿಂಗೋದ್ಭವಮೂರ್ತಿಯನ್ನು ಮಂಡಿಸಿ ಹಿರೇಮಠಾಧ್ಯಕ್ಷರಾದ ಪೌರಾಣಿಕ ವೇ| ಶರಣಯ್ಯನವರು ಶಾಸ್ತ್ರೋಕ್ತವಿಧಿಗನುಸಾರ, ಅರ್ಘ್ಯ ಪಾದ್ಯಾದಿಗಳಿಂದಲೂ, ಬಿಲ್ವಪುಷ್ಪಾದಿಗಳಿಂದಲೂ ಭಸ್ಮಗಂಧ ಅಕ್ಷತಾದಿಗಳಿಂದಲೂ, ವೇ|| ಶಿವಲಿಂಗಯ್ಯಸಾಲಿ ಇವರ ಮತಿಯಿಂದ ಪೂಜೆಯನ್ನು ವಿಜೃಂಭಣೆಯಿಂದ ಮಾಡಿಸಿದರು ಅನಂತರ ಇಲ್ಲಿಯ "ಶ್ರೀ ಮದ್ವೀರಶೈವ ಗುರುಕುಲ' ದ ಬಾಲಕರು ೧| ಪಂಚಾಚಾರ್ಯರ ಸ್ತುತಿ ಪದ್ಯಗಳನ್ನು ಹಾಡಿ ಸಭಿಕರನ್ನು ಆನಂದ ಬಿಂದಿಲ ಹೃದಯರನ್ನಾಗಿ ಮಾಡಿದರು ಹಿರೇಮಠಾಧ್ಯಕ್ಷರಾದ ವೇ|| ಶಂಕರಯ್ಯನವರು ತಮ್ಮ ಮಂಜುಳವಾದ ಧ್ವನಿಯಿಂದ ಆಚಾರ್ಯರ ಸ್ತುತಿಪದ್ಯಗಳನ್ನು ಹಾಡಿ ಸಭಿಕರನ್ನು ಸಂತೋಷಗೊಳಿಸಿದರು ಬಳಿಕ ಮಹಾಮಂಗಳಾರತಿಯಾಗಿ ಜಗದಾಚಾರ್ಯರ ಜಯಘೋಷಗಳೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು

ಜರ್ಗಿ ಗುರುಭಕ್ತ

ಯುಗಾದಿ ಸಮಾರಂಭ ಶ್ರೀಕ್ಷೇತ್ರ ಕಾಶಿ

ಶ್ರೀ ಭೂಕೈಲಾಸ ವಾರಣಾಸೀಕ್ಷೇತ್ರ ಸಿಂಹಾಸನಾಧೀಶ ಶ್ರೀ ವಿಶ್ವಾರಾಧ್ಯ ಜ್ಞಾನಸಿಂಹಾಸನಮಠದಲ್ಲಿ ತಾ|| ೧೪ ೩ ೪೫ ನೆ ಮಂಗಳವಾರ ಯುಗಾದಿಯ ವರ್ಷಾರಂಭೋತ್ಸವವನ್ನು ಬಹು ವಿಜೃಂಭಣೆಯಿಂದ ಆಚರಿಸಲಾಯಿತು ಪ್ರಾತಃಕಾಲ ಶ್ರೀ ವಿಶ್ವಾರಾಧ್ಯಮೂರ್ತಿಗೆ ಅಭಿಷೇಕ ಪೂಜಾದಿಗಳಾದಮೇಲೆ, ಮಧ್ಯಾಹ್ನ ಮೃಷ್ಟಾನ್ನ ಭೋಜನಾದಿ ವಿಶೇಷ ಗಣಸಂತರ್ಪಣೆಯು ಸಂತೃಪ್ತಿಕರವಾಗಿ ನಡೆದು, ಸಾಯಂಕಾಲ ವಿಶ್ವಶಾಂತಿ ಸಭಾ ಭವನದಲ್ಲಿ ಸಭೆ ನೆರೆಯಿತು

ಶ್ರೀ ೧೦೮ ಜಗದ್ಗುರು ವೀರಭದ್ರಶಿವಾಚಾರ್ಯ ಮಹಾಸ್ವಾಮಿಗಳವರು ವಿದ್ವಜ್ಜನರ ವೇದಘೋಷದೊಡನೆ ಸಭೆಗೆ ದಯಮಾಡಿಸಿ ಪೀಠವನ್ನಲಂಕರಿಸಿದರು ಸಭೆಗೆ, ನಾನಾ ಪ್ರಾಂತಗಳಿಂದ ಬಂದ ಯಾತ್ರಿಕ ಮಹನೀಯರೂ, ಮಹಿಳೆಯರೂ ಬಂದಿದ್ದರು ಮಂಗಲಸ್ತವಾನಂತರ ಶ್ರೀ ಕ್ಯಾಸನೂರು ಪಟ್ಟಾಧ್ಯಕ್ಷರು ಪ್ರಾರಂಭಭಾಷಣಮಾಡಿ ಪಂಚಾಂಗ ಶ್ರವಣಾದಿ ಕಾರ್ಯಕ್ರಮವನ್ನು ಸೂಚಿಸಿದರು ಕಾರ್ಯಕ್ರಮದಂತೆ ಶಿಖರಮಠ ಶ್ರೀ ಗುರುಲಿಂಗಶಿವಾಚಾರ್ಯರು ಪಂಚಾಂಗ ಶ್ರವಣ ಮಾಡಿದರು ಭೂತಭವಿಷ್ಯದ್ವರ್ತಮಾನಕಾಲಗಳ ದರ್ಮಾದರ್ಮಾದಿ ಸಕಲ ವಿಚಾರಗಳನ್ನು ಬಹು ಸ್ವಾರಸ್ಯವಾಗಿ ತಿಳಿಸಿ ಸಭಿಕರನ್ನು ಆನಂದಗೊಳಿಸಿದರು ಆಮೇಲೆ ವಿಶ್ವನಾಥ, ವಿಶ್ವಾರಾಧ್ಯ, ವೀರಭದ್ರ ಜಗದ್ಗುರು ಮಹಾಸನ್ನಿಧಾನದವರ ಬಲಾಬಲವ ನೋಡುವುದಾಯಿತು 'ಗುರು' ಚೆನ್ನಾಗಿರಬೇಕೆಂದು ಪ್ರಮಾಣವಿರುವುದರಿಂದಲೂ, ಈ ವರ್ಷ 'ರಾಜನು' ಗುರುವಾಗಿರುವುದರಿಂದಲೂ, ರಾಜನಾದ ಗುರುವು, ಗುರುಸಾರ್ವಭೌಮರಿಗೆ ಶುಭಕರನಾಗಿರುವುದರಿಂದ, ಶ್ರೀ|| ಜ|| ಮಹಾಸನ್ನಿಧಾನದವರ ಅನುಷ್ಠಾನ, ಭಕ್ತೋದ್ಧಾರಾದಿ ಕಾರ್ಯಗಳು ಇಕಿಲೋಕ್ಕೃತಿಶಯವಾದ ವೈಭವದಿಂದ ನಡೆದು, ಜಯಭೇರೀನಿನಾದವು ದಿಗಂತಗಳಲ್ಲಿ ಪ್ರತಿಧ್ವನಿಸಿ, ತನ್ಮೂಲಕ ಗುರುಕುಲಕ್ಕೆ ಸುಖ ಸಂತೋಷಗಳುಂಟಾಗುತ್ತವೆಂದು ಜ್ಯೋತಿಷ್ಕರು ಹೇಳಿದ ಕೂಡಲೇ ಸಭಿಕರೆಲ್ಲಾ ಹರ್ಷಾನ್ವಿತರಾಗಿ ಕರತಾಡನ ಮಾಡಿದರು

ಬಳಿಕ ಶ್ರೀ ಮಹಾಸನ್ನಿಧಾನದವರು ತಮ್ಮ ಅಮೃತವಾಣಿಯಿಂದ ಸಂಸ್ಕೃತ, ಹಿಂದೀ, ಕನ್ನಡ ಭಾಷೆಗಳಲ್ಲಿ ಅಪ್ಪಣೆಕೊಡಿಸಿದರು ಯುಗಾದಿ, ಯುಗಾದಿಯಲ್ಲಿಯ ಬೇವು, ಬೇವಿನಲ್ಲಿಯ ಆಮ್ಲ, ಮಧುರ, ವಿಷರಸಗಳಿಗೂ ಜೀವನದ ಮೂರು ಅವಸ್ಥೆಗಳಿಗೂ ಇರುವ ಸೂಕ್ಷ್ಮ ತುಲನಾತ್ಮಕ ವಿವೇಕ, ಇವುಗಳನ್ನು ವೇದಾಂತ ದೃಷ್ಟಿಯಿಂದ ವಿವೇಚಿಸಿ, ಈ ವರ್ಷದ ವಿಶೇಷ ಗ್ರಹಗಳಿಂದ ಭೌತಿಕ ಶರೀರಕ್ಕಾಗುವ ಪರಿಣಾಮ, ಅಧಿಕ ಚೈತ್ರಸಂವತ್ಸರಾದಿ ನಿಮಿತ್ತ ಪ್ರಮಾಣ ವಿದ್ಯಾರಣ್ಯಾದಿ ಗ್ರಂಥಕಾರರ ಮತ ಇವುಗಳನ್ನು ವಿಜ್ಞಾನಮಯವಾಗಿ ಅಪ್ಪಣೆಕೊಡಿಸಿ, ವರ್ಷಾದಿ ಇದೇ ಚೈತ್ರ ಎಂದು ಮೊದಲಾಗಿ ಭಕ್ತವೃಂದವು ಆನಂದ ತುಂದಿಲವಾಗುವಂತೆ ಅಪ್ಪಣೆ ಕೊಡಿಸಿದರು

ಆಮೇಲೆ ಮಹಾಮಂಗಲ ಪ್ರಸಾದ ವಿನಿಯೋಗವಾಗಿ ಜಯ ಜಯಕಾರದೊಡನೆ ಸಭೆಯು ವಿಸರ್ಜನವಾಯಿತು

ಪಟ್ಟಾಧ್ಯಕ್ಷ ಕ್ಯಾಸನೂರ
ಸೆಕ್ರೆಟರಿ ಕಾ|| ವೀ|| ವಿದ್ವತ್ಸಂಘ

ಬೆಂಗಳೂರು ವೀರಶೈವ ವಿದ್ಯಾಭಿವೃದ್ಧಿ ಫಂಡಿನ ಸ್ವೀಕಾರ

ಬೆಂಗಳೂರು ಸಿಟಿ ವಿಶ್ವೇಶ್ವರ ಪುರದಲ್ಲಿರುವ ಎಸ್. ರುದ್ರಪ್ಪನವರ ದ್ವಿತೀಯ ಪುತ್ರಿ ಚಿ|| ಸೌ|| ಸುನಂದಾಂಬನನ್ನು ಕೆಂಗೇರಿಯಲ್ಲಿರುವ ಸಾವಂದಪ್ಪನವರ ದ್ವಿತೀಯ ಪುತ್ರ ಚಿ|| ಮುದ್ದಪ್ಪನೆಂಬ ವರನಿಗೆ ಕೊಟ್ಟು ನಡೆದ ವಿವಾಹಸಮಾರಂಭದಲ್ಲಿ ವಧೂವರರಿಂದ ಸಂಘದ ಫಂಡಿಗಾಗಿ ೫ ರೂಪಾಯಿಗಳು ಬಂದಿರುತ್ತೆ

ಬೆಂಗಳೂರು ಸಿಟಿ ಚಾಮರಾಜಪೇಟೆಯಲ್ಲಿರುವ ರಿಟೈರ್ಡ್ ಚೀಫ್ ಜಡ್ಜಿಗಳಾದ ರಾಜಧರ್ಮಪ್ರವೀಣ ದಿವಾನ್ ಬಹದ್ದೂರ್ ಸಿ ಮಹದೇವಯ್ಯನವರ ಪುತ್ರಿ ಚಿ|| ಸೌ|| ಪುಟ್ಟತಾಯಮ್ಮ ಮತ್ತು ಮೊಳೂರಿನಲ್ಲಿರುವ ಮ|| ರಾ|| ಭದ್ರಶೆಟ್ಟರವರ ಪುತ್ರ ಚಿ|| ರಾಜಪ್ಪ ಬಿ ಇ. ಇವರುಗಳ ವಿವಾಹಮಹೋತ್ಸವ ಸಮಾರಂಭದಲ್ಲಿ ಸಂಘದ ಫಂಡಿಗಾಗಿ ವಧುವಿನ ಕಡೆಯಿಂದ ೧೦ ರೂಪಾಯಿಗಳು, ವರನ ಕಡೆಯಿಂದ ೫ ರೂಪಾಯಿಗಳು ಬಂದಿರುತ್ತೆ.

ಬೆಂಗಳೂರು ಚಾಮರಾಜಪೇಟೆಯಲ್ಲಿರುವ ಹಾಸನದ ಮ|| ರಾ|| ಕೇಣಿಮಲ್ಲಪ್ಪನವರು ಅಸಿಸ್ಟೆಂಟ್ ಸೆಕ್ರೆಟರಿ ಮೈಸೂರು ಸಕ್ಕರೆ ಕಂಪನಿ ಇವರು ಮೈಸೂರು ಮೆಡಿಕಲ್ ಸರ್ವೀಸಿನಲ್ಲಿರುವ ಮ|| ರಾ|| ಎನ್ ಅಪ್ಪಾಜಪ್ಪ ಎಂ ಬಿ ಬಿ ಎಸ್ ಇವರ ದ್ವಿತೀಯ ಪುತ್ರ ಚಿ|| ಜಗದೀಶ ಪ್ರಸಾದರನ್ನು ದತ್ತುಸ್ವೀಕಾರ ಮಾಡಿಕೊಂಡ ಕಾಲದಲ್ಲಿ ಸಂಘದ ಫಂಡಿಗಾಗಿ ೨ ರೂಪಾಯಿ ಬಂದಿರುತ್ತೆ

ಮ|| ರಾ|| ಶೂಲಕುಂಟೆ ಶ್ರೀಕಂಠಪ್ಪನವರ ವೀರಭದ್ರಪ್ಪನವರ ಪುತ್ರಿ ಚಿ|| ಸೌ|| ಸರ್ವಮಂಗಳಮ್ಮ ಮತ್ತು ಕೊಂಡಹಳ್ಳಿ, ಬಸಪ್ಪನವರ ದ್ವಿತೀಯಪುತ್ರ ಚಿ|| ನಂದಿಕೇಶ್ವರ ಇವರುಗಳ ವಿವಾಹಕಾಲದಲ್ಲಿ ಸಂಘದ ಫಂಡಿಗಾಗಿ ವರನ ಕಡೆಯಿಂದ ೩ ರೂಪಾಯಿಗಳು, ವಧುವಿನ ಕಡೆಯಿಂದ ೨ ರೂಪಾಯಿಗಳು ಮ|| ರಾ|| ಕೆ ಬಿ ದೊಡ್ಡರಾಚಪ್ಪನವರ ಮೂಲಕ ಬಂದಿರುತ್ತೆ.

ದೊಡ್ಡಪೇಟೆ ದೇಶದ ಶಿದ್ಧಬಸಪ್ಪಶೆಟ್ಟರ ಮೊಮ್ಮಕ್ಕಳು ದೇಶದ ಬಿ ಎಸ್ ರೇವಣ್ಣಶೆಟ್ಟರು ಮತ್ತು ತುಮಕೂರು ಬೂಸಾಅಂಗಡಿ ಜಿ ಬಿ ಮಲ್ಲಿಕಾರ್ಜುನಪ್ಪನವರ ಪುತ್ರಿ ಚಿ|| ಸೌ|| ಮಹದೇವಮ್ಮ ಇವರುಗಳ ವಿವಾಹ ಸಮಾರಂಭದಲ್ಲಿ ವೀರಶೈವ ವಿದ್ಯಾಭಿವೃದ್ಧಿ ಫಂಡಿಗಾಗಿ ೧೦ ರೂಪಾಯಿಗಳು ಜಿ ಎಂ ಸಿದ್ಧರಾಮಣ್ಣನವರಿಂದ ಬಂದಿಯತ್ತೆ.

ಆಕ್ಟಿಂಗ್ ಸೆಕ್ರೆಟರಿ, ಸರಾಫ್ ಬಿ ಬಸಪ್ಪ

ವಿವಾಹಮಹೋತ್ಸವ

ಸೊಲ್ಲಾಪುರ ನಗರದಲ್ಲಿರುವ ಶ್ರೀಮಂತ ಹನುಮಂತಪ್ಪ ಬಸಪ್ಪಾ ಚಾರಿ ಇವರ ಪುತ್ರರಾದ ಚಿ॥ ಅಣ್ಣಾಸಾಹೇಬ ಚಾರಿ ಇವರಿಗೆ ಪೋಹ-ದಲ್ಲಿರುವ ಶ್ರೀಮಂತ ತುಕಾರಾಂ ಶೇವಣಸಿದ್ಧಪ್ಪಾ ಅಡಂಗೆ ಇವರ ಪುತ್ರಿ ಚಿ॥ ಸೌ॥ ಸರಸ್ವತಿಬಾಯಿಯನ್ನು ಕೊಟ್ಟು ತಮ್ಮ ವಂಶಗುರುಗಳಾದ ಶ್ರೀ॥ ಷ॥ ಬ್ರ॥ ಚರಪಟ್ಟಾಧ್ಯಕ್ಷ ಸದ್ಯೋಜಾತಸ್ವಾಮಿಗಳು ಬೃಹನ್ಮಠ, ರೇಕುಣಗಿ ಇವರ ಸಮ್ಮುಖದಲ್ಲಿ ವಿವಾಹಮಹೋತ್ಸವವು ವಿಧ್ಯುಕ್ತವಾಗಿ ವಿಶೇಷ ವೈಭವದೊಡನೆ ನೆರವೇರಿತು ಈ ವಿವಾಹ ಮಹೋತ್ಸವಕ್ಕೆ ಬಂಧುಬಾಂಧವರೂ ಪುರಸ್ಥರೂ ವಿಶೇಷವಾಗಿ ಆಗಮಿಸಿದುದರಿಂದ ಅಸಾಧಾರಣವಾದ ಶೋಭೆಯುಂಟಾಗಿತ್ತು. ವಧೂವರರಿಬ್ಬರೂ ಸುಶಿಕ್ಷಿತರಾಗಿದ್ದು ಗುರುಭಕ್ತಿಯುತರಾಗಿದ್ದಾರೆ ಜಗದಾಚಾರ್ಯರು ನೂತನ ವಧೂವರರಿಗೆ ಸಕಲ ಸನ್ಮಂಗಲಗಳನ್ನೀಯಲೆಂದು ಹಾರೈಸುವ

ಗುರುಭಕ್ತ

ದುಃಖವಾರ್ತೆ

ನೈಜಾಮ ಇಲಾಖಾ ಕೊಪ್ಪಳ ಜಹಾಗೀರಿನಲ್ಲಿರುವ ಮಂಗಳೂರಿನಲ್ಲಿ ಅರಳೆಲೆ ಮಠದ ಮೂಪ್ಪಿನ ಪಟ್ಟಾಧ್ಯಕ್ಷ ಸ್ವಾಮಿಗಳವರು ತಮ್ಮ ವಯಸ್ಸಿನ [illegible] ವರ್ಷದಲ್ಲಿ ಯುಗಾದಿ ಗುರುವಾರದಿವಸ ಶಿವೈಕ್ಯರಾದರು ಇವರು ಪರಮ ತಪಸ್ವಿಗಳೂ, ಸದಾಚಾರ ನಿಷ್ಠರೂ, ವೀರಶೈವ ಮತ ಸಿದ್ಧಾಂತವನ್ನು ಆಳವಾಗಿ ಅಭ್ಯಾಸಮಾಡಿ, ಆಚರಿಸಿ ಬೋಧಿಸಿ ಸಾವಿರಾರು ಶಿಷ್ಯರನ್ನು ಅನುಗ್ರಹಿಸಿ ಪ್ರಸಿದ್ಧರನ್ನಾಗಿ ಮಾಡಿದ ಗುರುವರ್ಯರೂ ಆಗಿದ್ದು, ಬಳ್ಳಾರಿ, ಧಾರವಾಡ ವಿಜಾಪುರ ಜಿಲ್ಲೆಗಳಲ್ಲಿಯೂ ನೈಜಾಮ ಇಲಾಖೆಯಲ್ಲಿಯೂ ಇವರು ತಮ್ಮ ಪ್ರೌಢ ವಯಸ್ಸಿನಿಂದಲೂ ಸಂಚರಿಸುತ್ತ ನೂರಾರು ಚಿಕ್ಕದೊಡ್ಡ ಗ್ರಾಮಗಳಲ್ಲಿ ಅನೇಕಜನ ಮಾಹೇಶ್ವರ ಹಾಗೂ ಭಕ್ತರಿಗೆ ಜ್ಞಾನೋಪದೇಶ ದೀಕ್ಷೆ ಮೊದಲಾದವುಗಳನ್ನು ಅನುಗ್ರಹಿಸಿ ಪರಮ ಪೂಜ್ಯರಾಗಿದ್ದರು ಅವರು ಶಾಂತ ಹಾಗೂ ಪ್ರೇಮಸ್ವಭಾವ, ಅನ್ಯಾದೃಶ ಆಚಾರನಿಷ್ಠೆ, ಲಿಂಗಪೂಜಾ ಗರಿಷ್ಠೆ, ಹಾಗೂ ಚೂತವಯಾದಿಗಳಿಂದ ಲೋಕಪ್ರಿಯರಾಗಿದ್ದರು ಈ ಗುಣಗಳಿಗೆ ಒಪ್ಪುವಂತೆ ಅವರ ವ್ಯಕ್ತಿತ್ವವೂ ಆಕರ್ಷಣೀಯವಾಗಿತ್ತು. ಗುರೂಚಿತವಾದ ಜಟಾ, ಭಸ್ಮ, ರುದ್ರಾಕ್ಷಕಾಷಾಯಾಂಬರಾದಿಗಳಿಂದ ಕೂಡಿ ಸದಾ ಶುಚಿರ್ಭೂತರೂ ಹಸನ್ಮುಖಿಗಳೂ ಆಗಿ ಪ್ರಾಚೀನ ಮಹರ್ಷಿಗಳಂತೆ ವಿರಾಜಿಸುತ್ತಿದ್ದರು ಇವರನ್ನು ಕಂಡಕೂಡಲೆ ಎಂಥವರಿಗೂ ಇವರಲ್ಲಿ ಭಕ್ತಿಯುಂಟಾಗುತ್ತಲಿತ್ತು. ಪಂಚ ಜಗದ್ಗುರು ಪೀಠಗಳಲ್ಲಿ ಶ್ರೀಕ್ಷೇತ್ರ ಕಾಶಿ, ರಂಭಾಪುರಿ ಉಜ್ಜಯಿನಿ, ಶ್ರೀ ಶೈಲಗಳನ್ನು ಇವರು ಸಂದರ್ಶಿಸಿದ್ದರು ಎಲ್ಲ ಪೀಠಗಳ ಜಗದ್ಗುರು ಪೂಜ್ಯಪಾದರೂ ಇವರನ್ನು ಬಹು ಪ್ರೀತಿಸುತ್ತಿದ್ದರು ಕಾಶಿಯಿಂದ ರಾಮೇಶ್ವರದ ವರೆಗಿನ ಮುಖ್ಯ ಶಿವಕ್ಷೇತ್ರಗಳ ಯಾತ್ರೆಯನ್ನು ಮಾಡಿದ್ದರು ಎಷ್ಟೋ ಬಡ ವಿದ್ಯಾರ್ಥಿಗಳಿಗೆ ಹಾಗೂ ಬಡ ಸಂಸಾರಿಗಳಿಗೆ ಸಹಾಯ ಮಾಡುತ್ತಲೂ ಮಾಡಿಸುತ್ತಲೂ ಇದ್ದರು ಒಟ್ಟಿನಲ್ಲಿ ಇಂದ ಗುರೂತ್ತಮರು ದುರ್ಲಭರೆಂದೇ ಹೇಳಬಹುದು ವೀರಶೈವ ಗುರುವರ್ಗದಲ್ಲಿ ಶ್ರೀ ರೇಣುಕಶಾಖಾನುವರ್ತಿಯಾದ ಅರಳೆಲೆ ಮಠದ ಸುಪ್ರಸಿದ್ಧ ಸದ್ವಂಶದಲ್ಲಿ ಇವರು ಜನಿಸಿ ಪಟ್ಟಾಧಿಕಾರಿಗಳಾಗಿದ್ದರು ಈ ಅರಳೆಲೆ ಮಠದ ಮತವು ಶಾಖೋಪಶಾಖೆಗಳಿಂದ ದೇಶವ್ಯಾಪ್ತದಲ್ಲಿ ಪ್ರಸರಿಸಿ ಕೊಪ್ಪಳ ಜಿಲ್ಲಾ ಮಂಗಳೂರು, ಕುಕನೂರು, ಕುಷ್ಟಗಿ, ತಳಕಲ್ಲು, ಇಟಗಿಗಳಲ್ಲದೆ ಬ್ರಿಟಿಷ್ ಪ್ರಾಂತದಲ್ಲಿ ವಿಜಾಪುರ, ಹೊರ್ತಿ, ಚಿಮ್ಮಲಗಿ, ಬಂಕಾಪುರ, ಹಾನಗಲ್ಲು, ಹಂಪಸಾಗರ, ಅಬ್ಬಿಗೇರಿ ಮೊದಲಾದ ಗ್ರಾಮಗಳಲ್ಲಿ ನೆಲೆಸಿರುತ್ತದೆ. ಮೇಲ್ಕಂಡ ಗ್ರಾಮಗಳಲ್ಲಿ ಮಠ ಮಾನ್ಯತೆ ಇನಾಮು ಭೂಮಿಗಳನ್ನು ಸಂಪಾದಿಸಿ, ಅಸಂಖ್ಯ ಶಿಷ್ಯ ಪ್ರಶಿಷ್ಯರಿಂದ ಗಣ್ಯವೆನಿಸಿರುತ್ತದೆ ಸದರಿ ಗ್ರಾಮಗಳಲ್ಲಿ ಕಾಲಕಾಲಕ್ಕೆ ಮಹಾತ್ಮರಾದ ಗುರುಪುಂಗವರೂ ಪಂಡಿತರೂ, ಶಿವಾನುಭವಿಗಳೂ ಜನಿಸಿ ಸುಪ್ರಸಿದ್ಧರಾಗಿದ್ದಾರೆ ಇಂತಹ ಸದ್ವಂಶದಲ್ಲಿ ಜನಿಸಿ ವಂಶಕ್ಕೂ ಸಮಾಜಕ್ಕೂ ಭೂಷಣಪ್ರಾಯರಾಗಿ, ಮಹಿಮಾತಿಶಯಗಳಿಂದ ಮೆರೆದು, ವರ್ಷಾರಂಭದ ಪ್ರತಿಪದಿ ಗುರುವಾರ ಶುಭಮುಹೂರ್ತದಲ್ಲಿ ಶಿವಸಾಯುಜ್ಯವನ್ನು ಪಡೆದು ಈ ಮಹಾತ್ಮರ ಮಹತ್ವವನ್ನು ವ್ಯಕ್ತಗೊಳಿಸುತ್ತದೆ ಇವರ ಅಂತ್ಯೇಷ್ಟಿ ಸಮಾರಂಭಕ್ಕೆ ಕುಕನೂರ ಅರಳೆಲೆ ಮಠದ ಶ್ರೀ ಚರಮೂರ್ತಿಸ್ವಾಮಿಗಳೂ, ಬಿನವಕ್ಕಿ, ಮ್ಯಾಗೇರಿ ಗ್ರಾಮಗಳ ಪಟ್ಟದ ಸ್ವಾಮಿಗಳೂ ಚರಮೂರ್ತಿ ಸ್ವಾಮಿಗಳೂ ಆಗಮಿಸಿದ್ದರು ಹಾಗೂ ಮಂಗಳೂರು ಸುತ್ತಮುತ್ತಲಿನ ಗ್ರಾಮಗಳ ಸಾವಿರಾರು ಶಿಷ್ಯಸಮೂಹವೂ ಗದಗ ಹುಬ್ಬಳ್ಳಿ ಮೊದಲಾದ ಗ್ರಾಮಗಳಲ್ಲಿ ನೆಲೆಸಿರುವ ಅರಳೆಲೆಮಠ ವಂಶೀಯರೂ ಕೂಡಿ ಅತ್ಯಂತ ವೈಭವದಿಂದ ಸಮಾಧಿಕಾರ್ಯವು ಜರುಗಿತು ಮಠದ ಭೂಮಿಯಲ್ಲಿಯೇ ಸಮಾಧಿಯಾಗಿದ್ದು, ಪೂಜೆಗೆ ಯೋಗ್ಯವಾಗುವಂತೆ ಸಮಾಧಿ ರಚನೆಯನ್ನು ಮಾಡಿಸಲು ಅಭಿಮಾನಿಗಳಾದ ಶಿಷ್ಯರು ಮುಂದೆ ಬಂದಿದ್ದಾರೆ ಇವರು ಈಗ ೭-೮ ವರ್ಷಗಳ ಪೂರ್ವದಲ್ಲಿ ತಮ್ಮ ವಂಶದ ಶ್ರೀ ಷಡಕ್ಷರ ಶಿವಾಚಾರ್ಯರೆಂಬ ವಟುಗಳಿಗೆ ಗುರುಪಟ್ಟಾಧಿಕಾರವನ್ನು ವಹಿಸಿಕೊಟ್ಟಿದ್ದಾರೆ. ಶ್ರೀ ಷಡಕ್ಷರ ಶಿವಾಚಾರ್ಯ ಸ್ವಾಮಿಗಳು ಸದ್ಯಃ ಸೊಲ್ಲಾಪುರದಲ್ಲಿ ಸಂಸ್ಕೃತ ಅಭ್ಯಾಸ ಮಾಡುತ್ತಲಿದ್ದಾರೆ ಇವರಾದರೂ ತಮ್ಮ ಪೂಜ್ಯ ಗುರುಗಳಂತೆ ಮಹಿಮಶಾಲಿಗಳಾಗಿ ಮೆರೆದು ಶಿಷ್ಯರನ್ನು ಉದ್ಧರಿಸುವಂತಾಗಲೆಂದು ಆಶಿಸುವ

ಓರ್ವ ಗುರುಭಕ್ತ, ಮಂಗಳೂರು

ದುಃಖವಾರ್ತೆ

ಕಾನಕಾನಹಳ್ಳಿ ತಾಲ್ಲೂಕು ಗುರವಿನಪುರ ಮಠದ ಶ್ರೀ ಶೈಲಶಾಖಾನುವರ್ತಿಗಳಾದ ಪಟ್ಟಾಧಿಕಾರಿ ಶ್ರೀ ಸಿದ್ಧಲಿಂಗಸ್ವಾಮಿಗಳವರು ತಾ॥ 1-2-45 ಗುರುವಾರ ದಿವಸ ಶಿವಾಧೀನರಾದರು. ಇವರ ಅಂತ್ಯ ಸಂಸ್ಕಾರ ಸಮಯದಲ್ಲಿ ಬೆಂಗಳೂರು ಬೇಲಿ ಮಠ, ದೊಡ್ಡಬೆಲೆ ಮಠ, ದೇವಪಟ್ಟಣದ ಮಠ, ಮಧುವನಹಳ್ಳಿ ಚಿಕ್ಕಮಠ ಇತ್ಯಾದಿ ಮಠಗಳ ಸ್ವಾಮಿಗಳವರು ಮತ್ತು ಅನೇಕ ಜನ ಭಕ್ತಮಂಡಲಿಯವರೂ ಆಗಮಿಸಿದ್ದರು ಅಂತ್ಯಸಂಸ್ಕಾರವು ವಿಧ್ಯುಕ್ತವಾಗಿ ನೆರವೇರಿತು ಶಿವೈಕ್ಯರಾದ ಸ್ವಾಮಿಗಳು ತಮ್ಮ ಅಣ್ಣಂದಿರ ಮಕ್ಕಳಾದ ಗುರುಸ್ವಾಮಿಯವರಿಗೆ ತಮ್ಮ ಅಧಿಕಾರವನ್ನು ಮೊದಲೇ ವಹಿಸಿದ್ದರು ಸದರಿ ಚಿಕ್ಕಸ್ವಾಮಿಯವರು ಬಹಳ ಬುದ್ಧಿವಂತರಾಗಿದ್ದು ಶಿಷ್ಯರಿಗೂ ಮತ್ತು ಭಕ್ತರಿಗೂ ಬೇಕಾದವರಾಗಿದ್ದಾರೆ ಶ್ರೀ ಮದ್ರಂಭಾಪುರಿ ಜಗದ್ಗುರುಗಳವರು ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಿ ಆಶೀರ್ವಾದ ಪತ್ರವನ್ನು ದಯಪಾಲಿಸಿದ್ದಾರೆ ಶ್ರೀ ಜಗದೀಶ್ವರನು ಶಿವೈಕ್ಯ ಸ್ವಾಮಿಗಳ ಆತ್ಮಕ್ಕೆ ಶಾಂತಿಯನ್ನೀಯಲೆಂದು ಪ್ರಾರ್ಥಿಸುತ್ತೇನೆ

ಗುರುಭಕ್ತ

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ವೀರಶೈವಮತದಲ್ಲಿ ಸದ್ಯ ದೊರೆಯುತ್ತಿರುವ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು ಈ ಗ್ರಂಥವು ಈಗ್ಗೆ ಸುಮಾರು ೨ಸಾವಿರ ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ ಈ ಕೊರತೆಯನ್ನು ಪೂರಯಿಸುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥ ಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ವಾಚಕರಿಗೆ ವೇದ್ಯವಾಗುವುದು. ವಾಚಕರ ಅನುಕೂಲಕ್ಕಾಗಿ ಬಹುಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೬೬೨ ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೨ ರೂಪಾಯಿ.**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅವತಾರ ಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ		೦—[illegible]
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦ ಬೆಲೆ		೦—೬—[illegible]
ಸಪ್ತ ಋಷಿಗಳಿಗೆ ಉಪದೇಶಮಾಡಿದ ಪಂಚಾಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ		೦—೩—[illegible]
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ	....	೦—೩—[illegible]
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	.	೦—೧—[illegible]
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ		೦—೧—[illegible]
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	...	೦—೧—[illegible]
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	..	೦—೧—[illegible]
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	....	೦—೧—[illegible]
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	....	೦—೧—[illegible]
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	....	೦—೧—[illegible]
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ		೦—೧—[illegible]
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕ ಸೈಜು ೧ಕ್ಕೆ		೦—೨—[illegible]
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡ ಸೈಜು ೧ಕ್ಕೆ		೦—೪—[illegible]
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	....	೦—೧—[illegible]
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	....	೦—೧—[illegible]
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	....	೦—೧—[illegible]
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	....	೦—೧—[illegible]
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ		೦—೧—[illegible]

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೩ ರೂ ೪ ಆಣೆ. ಪರಸ್ಥಳದವರಿಗೆ ೩ ರೂ. ವಿ. ಪಿ. ಖರ್ಚು ಸೇರಿ ೩ ರೂ. ೪ ಆಣೆ.

ಸಂಪುಟ ೧೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೯ನೇ ಏಪ್ರಿಲ್ ೧೯೪೫ [ಸಂಚಿಕೆ ೫೦

ಶ್ರೀ ಜಗದ್ಗುರು ರೇಣುಕ ಜಯಂತೀ ಮಹೋತ್ಸವ, ತಿಪ್ಪೂರು.

ಇಲ್ಲಿಯ ವೀರಶೈವ ಮಂಡಲಿಯವರು ಪದ್ಧತಿ ಪ್ರಕಾರ ಶ್ರೀ ವೃಷಭೇಶ್ವರಾಲಯದಲ್ಲಿ ಜಗದಾಚಾರ್ಯರ ಜಯಂತೀ ಮಹೋತ್ಸವವನ್ನು ಅತ್ಯಂತ ವೈಭವದೊಡನೆ ನೆರವೇರಿಸಿದರು. ಪ್ರಾತಃಕಾಲ ವೃಷಭೇಶ್ವರನಿಗೆ ರುದ್ರಾಭಿಷೇಕವೂ ರೇಣುಕರ ಭಾವಚಿತ್ರಪಟಕ್ಕೆ ಷೋಡಶೋಪಚಾರ ಪೂಜೆಯೂ ನಡೆದವು ಸಾಯಂಕಾಲ ೯ ಘಂಟೆಗೆ ಶೃಂಗರಿಸಿದ ಪುಷ್ಪಮಂಟಪದಲ್ಲಿ ನಂದಿಧ್ವಜ ವಾದ್ಯವೈಭವದೊಡನೆ ಜಗದಾಚಾರ್ಯ ಮೂರ್ತಿಯ ಉತ್ಸವವು ಹೊರಟಿತು ಸ್ವಪರಮತೀಯರನೇಕರು ಕಾಯಿಕರ್ಪೂರಗಳನ್ನರ್ಪಿಸಿ ಆಶೀರ್ವಾದಗಳನ್ನು ಪಡೆದರು ಹೀಗೆ ಉತ್ಸವವು ನೋಟಕರ ಕಣ್ಮನಂಗಳಿಗೆ ಆನಂದವನ್ನೀಯುತ್ತಾ ಸಮಸ್ತ ಬೀದಿಗಳಲ್ಲಿಯೂ ಹಾಯ್ದು ೧ ಘಂಟೆಗೆ ಸ್ವಸ್ಥಾನವನ್ನು ಸೇರಿತು ಬಳಿಕ ಮಹಾಮಂಗಳಾರತಿಯಾಗಿ ಸಕಲರಿಗೂ ಪ್ರಸಾದ ವಿನಿಯೋಗವಾಗಿ ಆಚಾರ್ಯರ ಜಯಘೋಷದೊಡನೆ ಜಯಂತಿ ಕಾರ್ಯವು ಸಮಾಪ್ತಿಯಾಯಿತು ವೇ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ರೇಡಿಯೋ ಭಾಷಣವನ್ನು ಕೇಳುವುದಕ್ಕಾಗಿ ಮುನಿಸಿಫಲ್ ಪ್ರೆಸಿಡೆಂಟ್ ಶ್ರೀಮಾನ್ ಪಲ್ಲಾಗಟ್ಟೆ ಆಡವಪ್ಪನವರ ಮಹಡಿಯಮೇಲೆ ಏರ್ಪಾಡು ಮಾಡಲಾಗಿತ್ತು. ಅನೇಕ ಜನರು ಪಂಡಿತರ ಭಾಷಣವನ್ನೂ ಶ್ರೀ ಕೊಟ್ಟೂರಪ್ಪಯ್ಯನವರ ಸಂಗೀತವನ್ನೂ ಕೇಳಿ ಸಂತೋಷಭರಿತರಾದರು. ಪಂಡಿತರು ಈ ಸಾರೆ ರೇಡಿಯೋಭಾಷಣದ ವ್ಯವಸ್ಥೆ ಮಾಡಿದ್ದು ಅನೇಕ ನಗರಗಳಲ್ಲಿ ಬಹುಜನರು ಏಕಕಾಲದಲ್ಲಿಯೇ ಕೇಳುವುದಕ್ಕೆ ಅನುಕೂಲವಾಯಿತು. ಜಗದಾಚಾರ್ಯರು ಜಗತ್ತಿಗೆ ಸುಖ ಶಾಂತಿಯನ್ನೀಯಲಿ.

ಪ್ರತ್ಯಕ್ಷದರ್ಶಿ

ಸತ್ಕಥಾ ಪ್ರವಚನ, ಸವಣೂರು.

ಪರಮಾತ್ಮನು ನಮಗೆ ಅನುಗ್ರಹಿಸಿರುವ ಇಂದ್ರಿಯಗಳಲ್ಲೆಲ್ಲಾ ಕರ್ಣೇಂದ್ರಿಯವು ಮುಖ್ಯವಾದುದು ಯಾವ ಮನುಷ್ಯನ ಕರ್ಣೇಂದ್ರಿಯವು ಪರಮಾತ್ಮನ ಹಾಗೂ ಗುರುವಿನ ಚರಿತ್ರ ಲೀಲಾದಿಗಳನ್ನು ಕೇಳುವುದಿಲ್ಲವೋ ಅಂಥವನ ಕಿವಿಗಳು ಇಲಿ ಹೆಗ್ಗಣಗಳು ವಾಸ ಮಾಡುವ ಬಿಲಕ್ಕೆ ಸಮಾನವಾದಂಥವುಗಳಾಗುತ್ತವೆ. ಸುಗಂಧ ಪುಷ್ಪವು ವಾಯುಮೂಲಕ ಎಲ್ಲಾ ಕಡೆಗೆ ತನ್ನ ಸೌರಭ್ಯವನ್ನು ಬೀರಿ ಭ್ರಮರವನ್ನು ಆಕರ್ಷಿಸುವಂತೆ ಪರಮಾತ್ಮನ ಹಾಗೂ ಮಹಾತ್ಮರ ಉಪದೇಶವು ಒಂದು ಸ್ಥಾನದಲ್ಲಿ ನಡೆಯುತ್ತಿದ್ದರೆ ಶ್ರವಣದ್ವಾರಾ ಭಕ್ತರ ಹೃದಯವನ್ನು ಆಕರ್ಷಿಸಿ ಅವರನ್ನು ಎಳೆದು ತಂದು ಆನಂದಕಂದಿಲ ಹೃದಯರನ್ನಾಗಿ ಮಾಡುವಗು ಇಂಥ ಸುಯೋಗವು ಸವಣೂರು ಗ್ರಾಮಕ್ಕೆ ಲಭಿಸಿತು. ಸವಣೂರು ಸಂಸ್ಥಾನಕ್ಕೆ ಸೇರಿದ ಜೇಕಿನಕಟ್ಟೆ ಗ್ರಾಮದಲ್ಲಿರುವ ವೈದಿಕ ಜ್ಯೋತಿಷ ಸಂಸ್ಕೃತ ಪಾಠಶಾಲಾಧ್ಯಾಪಕರಾದ ವೇ॥ ಪಂ॥ ಧರ್ಮಭೂಷಣ ಹರೀಶ್ವರ ಶಾಸ್ತ್ರಿಗಳು ಇಲ್ಲಿಯ ಕಸಬಾ ಪೇಟೆಯಲ್ಲಿರುವ ಈಶ್ವರ ದೇವಸ್ಥಾನದಲ್ಲಿ ಸೋಮವಾರ ತಾ॥ ೨೬-೩-೪೫ ನೇ ದಿವಸ ರಾತ್ರಿ ೯ ಘಂಟೆಯಿಂದ ರಾತ್ರಿ ೧೨ ಘಂಟೆಯವರೆಗೆ ಪರೋಪಕಾರ ಹಾಗೂ ಪಾತಿವ್ರತ್ಯದ ಬಗ್ಗೆ ಪ್ರವಚನವನ್ನು ಗಂಭೀರವಾಣಿಯಿಂದ ಹೇಳಿ ಸಭಿಕರನ್ನು ಆನಂದಗೊಳಿಸಿದರು ಈ ಸತ್ಕಥಾ ಶ್ರವಣಕ್ಕೆ ಸರಕಾರಿ ಅಧಿಕಾರಸ್ಥರೂ ಮತ್ತು ವೀರಶೈವ ಪ್ರಮುಖರೂ ಸ್ತ್ರೀ ಪುರುಷರೂ ಸಕಲ ಮತೀಯರೂ ಆಗಮಿಸಿದ್ದರು ಮೊದಲನೇ ದಿವಸ ಶಾಸ್ತ್ರಿಗಳು ಒಳ್ಳೆ ಮನೋಹರವಾಗಿ ಹೇಳಿದ್ದರಿಂದ ಅಷ್ಟಕ್ಕೆ ತೃಪ್ತರಾಗದ್ದರಿಂದ ಭಕ್ತರ ಅಪೇಕ್ಷೆಯಂತೆ ಎರಡನೇ ದಿವಸವೂ ಹೇಳಿ ಭಕ್ತರ ಹೃದಯವನ್ನು ಆನಂದಗೊಳಿಸಿದರು ಈ ಕಾರ್ಯವನ್ನು ಚನ್ನಪ್ಪಗೌಡ್ರು, ಪಾಟೀಲ್ ಟಾಕನ ಗೌಡ್ರು, ಚನ್ನಪ್ಪ ಆಸುಂಡಿ, ಲಿಂಗಪ್ಪನವರು ಕುಲಕರ್ಣಿ, ತಿರಕಪ್ಪನವರು ಕುಲಕರ್ಣಿ, ವೀರಭದ್ರಪ್ಪ ಚಿಕ್ಕಣ್ಣನವರು, ಬಸನಗೌಡ್ರು ಪಾಟೀಲ್, ಪಕ್ಕೀರಗೌಡ್ರು, ಮುದಿಗೌಡ್ರು, ಶಂಕರಗೌಡ್ರು, ಹನುಮಂತಗೌಡ್ರು, ಮಹಾರುದ್ರಪ್ಪ ಮಲ್ಲೂರ ಇವರೇ ಮೊದಲಾದವರು ದಕ್ಷತೆಯಿಂದ ಕೆಲಸಮಾಡಿ ಶಿವನ ಕೃಪೆಗೆ ಪಾತ್ರರಾದರು ಈ ಸತ್ಕಾರ್ಯದಲ್ಲಿ ಸೇವೆಯನ್ನು ಸಲ್ಲಿಸಿದ ಮಹಾಶಯರಿಗೆ ಪರಮೇಶ್ವರನು ಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇನೆ.

ವೀರಭದ್ರಪ್ಪ ಚಿಕ್ಕಣ್ಣನವರು

ಶ್ರೀ ಜಗದ್ಗುರುಪಂಚಾಚಾರ್ಯಾಯನಮಃ

" ಇತ್ಯಾದಿ " ಯ ಆತ್ಮವೃತ್ತ

ಲೇ—ಮಲ್ಲಿಕಾರ್ಜುನಾರಾಧ್ಯ ರಾಣೇಬೆನ್ನೂರು ಮಳೀಮಠ, ಮುದೇನೂರು

ಶಬ್ದ ಸಮಾಜದಲ್ಲಿ ನನಗಿದ್ದಷ್ಟು ಗೌರವಾದರಗಳು ಮತ್ತಾರಿಗೂ ಇಲ್ಲ. ಭಾಷಣಕಾರರೂ ಬರಹಗಾರರೂ, ನನ್ನನ್ನು ಬಹು ಪ್ರೀತಿಸುತ್ತಾರೆ. ಅವರು ನನ್ನನ್ನು ಬಿಟ್ಟು ಎಂದೂ ತಮ್ಮ ಕಾರ್ಯಾರಂಭ ಮಾಡುವುದಿಲ್ಲ. ಅವರು ಅತ್ಯಾಗ್ರಹದಿಂದ ನನ್ನನ್ನು ಕರೆದುಕೊಂಡು ಹೋಗುವರು. ಪ್ರತ್ಯಹವೂ ನನಗೆ ಸಹಸ್ರಾರು ಆಮಂತ್ರಣಗಳು ಬರುವುವು. ಆದಾಗ್ಯೂ ನಾನು ಯಾರಿಗೂ ನಹಿ ಎನ್ನುವುದಿಲ್ಲ. ಸಭೆಗಳೂ, ಪರಿಷತ್ತುಗಳೂ, ಆಗುವ ಕಾಲದಲ್ಲಿ ಸ್ವಸ್ಥ ಚಿತ್ತದಿಂದ ನಿದ್ರೆಮಾಡುವುದಕ್ಕೆ ಸಹ ಅವಕಾಶ ದೊರೆಯುವುದಿಲ್ಲ. ಆಮಂತ್ರಣವಿಲ್ಲದೆ ನಾನು ಹೋದಾಗ್ಯೂ ನನಗೆ ಉಚಿತವಾದ ಆದರಾತಿಥ್ಯಗಳು ನಡೆಯುವುವು ಶಬ್ದಸಮಾಜದಲ್ಲಿ ನಾನಿಲ್ಲದೆ ಹೋಗಿದ್ದರೆ ಈ ಭಾಷಣಕಾರರ ಬರಹಗಾರರ ಅವಸ್ಥೆಯು ಏನಾಗುತ್ತಿತ್ತೆಂಬುದಕ್ಕೆ ಅವರವರ ಆತ್ಮವೇ ಸಾಕ್ಷಿ. ಪರಿಸ್ಥಿತಿಯು ಹೀಗಿದ್ದಾಗ್ಯೂ ಇವರು ಎಂತಹ ಕೃತಘ್ನರು! ಜಗತ್ತಿನಲ್ಲಿ ಯಾವನಾದರೂ ಸ್ವಲ್ಪ ಲೋಕೋಪಕಾರದ ಕೆಲಸ ಮಾಡಿದರೆ, ಆ ಕೂಡಲೇ ಇವರು ಅವನ ಪೂರ್ವೋತ್ತರ ಚರಿತ್ರೆಯನ್ನು ಭಾಷಣದಲ್ಲಿಯೂ ಬರವಣಿಗೆಯಲ್ಲಿಯೂ ಮುಂದುವರಿಸುವರು. ಆದರೆ ಅವರಲ್ಲಿ ಒಬ್ಬನಾದರೂ ನನ್ನ ಚರಿತ್ರೆಯನ್ನು ಈವರೆಗೂ ಬರೆದಿಲ್ಲ.

ಇನ್ನೊಂದು ದೃಷ್ಟಿಯಿಂದ ವಿಚಾರಮಾಡಿದರೆ, ಅವರು ನನ್ನ ಗುಣಗಳನ್ನು ಸರ್ವಸಾಧಾರಣ ಜನರಿಗೆ ತಿಳಿಸಿದರೆ ತಮ್ಮ ಶಬ್ದದಾರಿದ್ರ್ಯವನ್ನೇ ಬೈಲಿಗಿಟ್ಟಂತೆ ಆಗುವುದೆಂದು ಅಂಜಿ ಬಿಟ್ಟಿರಬಹುದೆಂದು ಕಾಣುತ್ತದೆ. ಹೇಗಾದರೂ ಆಗಲಿ, ನಾನೇ ಈ ದಿವಸ ನನ್ನ ಚರಿತ್ರವನ್ನು ಹೇಳಿಕೊಳ್ಳುವೆನು ವಾಚಕರು ಕೃಪೆಯಿಟ್ಟು ನನ್ನ ಮೇಲೆ ಆತ್ಮಸ್ತುತಿಯ ತಪ್ಪು ಹೊರಿಸದೆ ಶಾಂತಚಿತ್ತರಾಗಿ ಓದಬೇಕೆಂದು ಪ್ರಾರ್ಥಿಸುತ್ತೇನೆ

ನನ್ನ ಜನ್ಮಕಾಲದ ಇಸವಿ, ಶಕೆ, ಸಂವತ್ಸರ, ಮಾಸ, ಪಕ್ಷ, ತಿಥಿ, ವಾರ, ನಕ್ಷತ್ರ, ಚರಣ, ಲಗ್ನ ಮೊದಲಾದುವನ್ನು ನನ್ನ ಜನನೀಜನಕರು ಬರೆದಿಟ್ಟಿಲ್ಲ. ಆದುದರಿಂದ ನನ್ನ ಜನ್ಮ ದಿವಸವನ್ನು ಯಾರೂ ಪಾಲಿಸುವುದಿಲ್ಲ. ಆದಾಗ್ಗೂ ಜನರಲ್ಲಿ ಶಬ್ದದಾರಿದ್ರ್ಯವು ವಿಶೇಷವಾದ ಕಾಲದಲ್ಲಿ ನನ್ನ ಜನ್ಮವಾಗಿರಬಹುದೆಂಬಂತೆ ತೋರುತ್ತದೆ ನನ್ನ ತಾಯಿಯ ಹೆಸರು "ಇತಿ' ನನ್ನ ತಂದೆಯ ಹೆಸರು "ಆದಿ" ನನ್ನ ತಾಯಿಯು "ಅನ್ವಯ" ವೆಂಬ ಪ್ರಸಿದ್ಧವಾದ ಕುಲಸಂಭೂತಳು. ನಮ್ಮ ಸಮಾಜದಲ್ಲಿ "ಅನ್ವಯ" ಮನೆತನದೊಡನೆ ಶರೀರಸಂಬಂಧ ಮಾಡುವುದು ಬಹು ಗೌರವವಾದುದೆಂದು ಎಣಿಸಲ್ಪಡುತ್ತದೆ ಏಕೆಂದರೆ, ಪರಶಿವನ ಕೃಪೆಯಿಂದ "ಅನ್ವಯ" ವಂಶಸ್ಥರು ಮಹಾಶೂರರು. ಅವರು "ಪ್ರತ್ಯಯ" ರಾಜನಿಗೆ ಎಂದೂ ಅಂಕಿತರಾಗಲಿಲ್ಲ ಈವರೆಗೆ ಆ ವಂಶಜರು ಯಾರಿಗೂ ಅಧೀನವಾಗದೆ ಸ್ವತಂತ್ರತೆಯಿಂದಿರುತ್ತಾರೆ.

ನನ್ನ ಬಾಲ್ಯಾವಸ್ಥೆಯಲ್ಲಿ ನನ್ನ ತಂದೆಯು ಒಬ್ಬ ಪ್ರಸಿದ್ಧ ಜ್ಯೋತಿಷಿಯಿಂದ ನನ್ನ ಜಾತಕವನ್ನು ಬರೆಯಿಸಿದನು. ಆ ಜ್ಯೋತಿಷಿಯು ಗಣಿತದಿಂದ ನನ್ನ ವಿಷಯವನ್ನು ಕುರಿತು ಕೆಲವು ಸಂಗತಿಗಳನ್ನು ಹೇಳಿದನು. ಅವು ಯಾವುವೆಂದರೆ :—

"ಈ ಹುಡುಗನು ಮುಂದೆ ಬಹು ಪ್ರಖ್ಯಾತನೂ ಪರೋಪಕಾರಿಯೂ ಆಗಿ ಬಹುಜನರ ಮರ್ಯಾದೆಯನ್ನು ಕಾಯುವನಲ್ಲದೆ ಸಮಾಜದಲ್ಲಿ ಸರ್ವಜನಪ್ರಿಯನಾಗುವನು. ಆದರೆ ಇವನಿಗೆ ಭಾರ್ಯಾಯೋಗಮಾತ್ರವಿಲ್ಲ. ಲಗ್ನವೇ ಇಲ್ಲವೆಂದ ಮೇಲೆ ಸಂತತಿಯಿಲ್ಲದಿರುವುದು ಸಹಜವೇ ಈ ಮಾತು ಕೇಳಿ ನನ್ನ ತಾಯಿತಂದೆಗಳಿಗೆ ಕಡುಖೇದವಾಯಿತು. ಆದರೆ ಮಾಡುವುದೇನು? ದೈವದ ಮುಂದೆ ಯಾರ ಆಟವೂ ಸಾಗುವುದಿಲ್ಲ. "ಭವಿತವ್ಯತಾ ಬಲೀಯಸೀ" ಎಂಬ ಉಕ್ತಿಯನ್ನು ಲಕ್ಷ್ಯಕ್ಕೆ ತಂದು ನನ್ನ ಮಾತಾಪಿತರು ಸಮಾಧಾನ ಹೊಂದಿದರು. ಆದರೆ ತಮ್ಮ ಪಶ್ಚಾತ್ ತಮ್ಮ ವಂಶವು ಹುಲವಾದರೆ ತಮ್ಮ ಹೆಸರುಗಳಾದರೂ ಸ್ಥಿರವಾಗಿ ಉಳಿಯಬೇಕೆಂದು ಆಲೋಚಿಸಿ, ಅವರು ನನಗೆ ಬೇರೊಂದು ಹೆಸರಿಡದೆ ತಮ್ಮಿಬ್ಬರ ಹೆಸರುಗಳನ್ನೇ

[೩ನೆಯ ಪುಟವನ್ನು ನೋಡಿ]

ವಿವಾಹಮಹೋತ್ಸವ

ಸೊಲ್ಲಾಪುರ ನಗರದಲ್ಲಿರುವ ಶ್ರೀಮಂತ ಹನುಮಂತಪ್ಪ ಬಸಪ್ಪಾ ಚಾರಿ ಇವರ ಪುತ್ರರಾದ ಚಿ|| ಅಣ್ಣಾಸಾಹೇಬ ಚಾರಿ ಇವರಿಗೆ ಮೋಹೋಳದಲ್ಲಿರುವ ಶ್ರೀಮಂತ ತುಕಾರಾಂ ರೇವಣಸಿದ್ಧಪ್ಪಾ ಅತಂಗೆ ಇವರ ಪುತ್ರಿ ಚಿ|| ಸೌ|| ಸರಸ್ವತಿಬಾಯಿಯನ್ನು ಕೊಟ್ಟು ತಮ್ಮ ವಂಶಗುರುಗಳಾದ ಶ್ರೀ|| ಷ|| ಬ್ರ|| ಚರಪಟ್ಟಾಧ್ಯಕ್ಷ ಸದ್ಯೋಜಾತಸ್ವಾಮಿಗಳು ಬೃಹನ್ಮಠ, ರೇಕುಣಗಿ, ಇವರ ಸಮ್ಮುಖದಲ್ಲಿ ವಿವಾಹಮಹೋತ್ಸವವು ವಿಧ್ಯುಕ್ತವಾಗಿ ವಿಶೇಷ ವೈಭವದೊಡನೆ ನೆರವೇರಿತು. ಈ ವಿವಾಹ ಮಹೋತ್ಸವಕ್ಕೆ ಬಂಧುಬಾಂಧವರೂ ಪುರಪ್ರಮುಖರೂ ವಿಶೇಷವಾಗಿ ಆಗಮಿಸಿದುದರಿಂದ ಅಸಾಧಾರಣವಾದ ಶೋಭೆಯುಂಟಾಗಿತ್ತು. ವಧೂವರರಿಬ್ಬರೂ ಸುಶಿಕ್ಷಿತರಾಗಿದ್ದು ಗುರುಭಕ್ತಿಯುತರಾಗಿದ್ದಾರೆ. ಜಗದಾಚಾರ್ಯರು ನೂತನ ವಧೂವರರಿಗೆ ಸಕಲ ಸನ್ಮಂಗಲಗಳನ್ನೀಯಲೆಂದು ಹಾರೈಸುವ ಗುರುಭಕ್ತ

ದುಃಖವಾರ್ತೆ

ನೈಜಾಮು ಇಲಾಖಾ ಕೊಪ್ಪಳ ಜಹಾಗೀರಿನಲ್ಲಿರುವ ಮಂಗಳೂರಿನಲ್ಲಿ ಅರಳೆಲೆ ಮಠದ ಮಹಿಮಾನ್ವಿತ ಪಟ್ಟಾಧ್ಯಕ್ಷ ಸ್ವಾಮಿಗಳವರು ತಮ್ಮ ವಯಸ್ಸಿನ ೮೦ನೆಯ ವರ್ಷದಲ್ಲಿ ಯುಗಾದಿ ಗುರುವಾರದಿವಸ ಶಿವೈಕ್ಯರಾದರು. ಇವರು ಪರಮ ತಪಸ್ವಿಗಳೂ, ಸದಾಚಾರ ನಿಷ್ಠರೂ ವೀರಶೈವ ಮತ ಸಿದ್ಧಾಂತವನ್ನು ಆಳವಾಗಿ ಅಭ್ಯಾಸಮಾಡಿ, ಆಚರಿಸಿ, ಬೋಧಿಸಿ ಸಾವಿರಾರು ಶಿಷ್ಯರನ್ನು ಅನುಗ್ರಹಿಸಿ ಪುನೀತರನ್ನಾಗಿ ಮಾಡಿದ ಗುರುವರ್ಯರೂ ಆಗಿದ್ದರು. ಬಳ್ಳಾರಿ, ಧಾರವಾಡ ವಿಜಾಪುರ ಜಿಲ್ಲೆಗಳಲ್ಲಿಯೂ ನೈಜಾಮು ಇಲಾಖೆಯಲ್ಲಿಯೂ ಇವರು ತಮ್ಮ ಪ್ರೌಢ ವಯಸ್ಸಿನಿಂದಲೂ ಸಂಚರಿಸುತ್ತ ನೂರಾರು ಚಿಕ್ಕದೊಡ್ಡ ಗ್ರಾಮಗಳಲ್ಲಿ ಅನೇಕಜನ ಮಾಹೇಶ್ವರ ಹಾಗೂ ಭಕ್ತರಿಗೆ ಜ್ಞಾನೋಪದೇಶ ದೀಕ್ಷೆ ಮೊದಲಾದವುಗಳನ್ನು ಅನುಗ್ರಹಿಸಿ ಪರಮಪೂಜ್ಯರಾಗಿದ್ದರು. ಅವರು ಶಾಂತ ಹಾಗೂ ಪ್ರೇಮಸ್ವಭಾವ, ಅನ್ಯಾದೃಶ ಆಚಾರನಿಷ್ಠೆ, ಲಿಂಗಪೂಜಾಗರಿಷ್ಠೆ, ಹಾಗೂ ಭೂತದಯಾದಿಗಳಿಂದ ಲೋಕಪ್ರಿಯರಾಗಿದ್ದರು. ಈ ಗುಣಗಳಿಗೆ ಒಪ್ಪುವಂತೆ ಅವರ ವ್ಯಕ್ತಿತ್ವವೂ ಆಕರ್ಷಣೀಯವಾಗಿತ್ತು. ಗುರೂಚಿತವಾದ ಜಟಾ, ಭಸ್ಮ, ರುದ್ರಾಕ್ಷಕಾಷಾಯಾಂಬರಾದಿಗಳಿಂದ ಕೂಡಿ ಸದಾ ಶುಚಿರ್ಭೂತರೂ ಹಸನ್ಮುಖಿಗಳೂ ಆಗಿ ಪ್ರಾಚೀನ ಮಹರ್ಷಿಗಳಂತೆ ವಿರಾಜಿಸುತ್ತಿದ್ದರು. ಇವರನ್ನು ಕಂಡಕೂಡಲೆ ಎಂಥವರಿಗೂ ಇವರಲ್ಲಿ ಭಕ್ತಿಯು ಹುಟ್ಟುತ್ತಲಿತ್ತು. ಪಂಚ ಜಗದ್ಗುರು ಪೀಠಗಳಲ್ಲಿ ಶ್ರೀ ಕ್ಷೇತ್ರ ಕಾಶಿ ರಂಭಾಪುರಿ ಉಜ್ಜಯಿನಿ, ಶ್ರೀ ಶೈಲಗಳನ್ನು ಇವರು ಸಂದರ್ಶಿಸಿದ್ದರು. ಎಲ್ಲ ಪೀಠಗಳ ಜಗದ್ಗುರು ಪೂಜ್ಯಪಾದರೂ ಇವರನ್ನು ಬಹು ಪ್ರೀತಿಸುತ್ತಿದ್ದರು. ಕಾಶಿಯಿಂದ ರಾಮೇಶ್ವರದ ವರೆಗಿನ ಮುಖ್ಯ ಶಿವಕ್ಷೇತ್ರಗಳ ಯಾತ್ರೆಯನ್ನು ಮಾಡಿದ್ದರು. ಎಷ್ಟೋ ಬಡ ವಿದ್ಯಾರ್ಥಿಗಳಿಗೆ ಹಾಗೂ ಬಡ ಸಂಸಾರಿಗಳಿಗೆ ಸಹಾಯ ಮಾಡುತ್ತಲೂ ಮಾಡಿಸುತ್ತಲೂ ಇದ್ದರು. ಒಟ್ಟಿನಲ್ಲಿ ಇಂಥ ಗುರೂತ್ತಮರು ದುರ್ಲಭರೆಂದೇ ಹೇಳಬಹುದು. ವೀರಶೈವ ಗುರುವರ್ಗದಲ್ಲಿ ಶ್ರೀ ರೇಣುಕ ಶಾಖಾನುವರ್ತಿಯಾದ ಅರಳೆಲೆ ಮಠದ ಸುಪ್ರಸಿದ್ಧ ಸದ್ವಂಶದಲ್ಲಿ ಇವರು ಜನಿಸಿ ಪಟ್ಟಾಧಿಕಾರಿಗಳಾಗಿದ್ದರು. ಈ ಅರಳೆಲೆ ಮಠದ ಮನೆತನವು ಶಾಖೋಪಶಾಖೆಗಳಿಂದ ದೇಶಮಧ್ಯದಲ್ಲಿ ಪ್ರಸರಿಸಿ ಕೊಪ್ಪಳ ಜಿಲ್ಲಾ ಮಂಗಳೂರು, ಕನಕನೂರು, ಕುಷ್ಟಗಿ, ತಳಕಲ್ಲು, ಇಟಗಿಗಳಲ್ಲದೆ ಬ್ರಿಟಿಷ್ ಪ್ರಾಂತದಲ್ಲಿ ವಿಜಾಪುರ, ಹೊರ್ತಿ, ಚಿಮ್ಮಲಗಿ, ಬಂಕಾಪುರ, ಹಾನಗಲ್ಲು, ಹಂಪಸಾಗರ, ಅಬ್ಬಿಗೇರಿ ಮೊದಲಾದ ಗ್ರಾಮಗಳಲ್ಲಿ ನೆಲೆಸಿರುತ್ತದೆ. ಮೇಲ್ಕಂಡ ಗ್ರಾಮಗಳಲ್ಲಿ ಮಠ ಮಾನ್ಯತೆ ಇನಾಮು ಭೂಮಿಗಳನ್ನು ಸಂಪಾದಿಸಿ, ಅಸಂಖ್ಯ ಶಿಷ್ಯ ಪ್ರಶಿಷ್ಯರಿಂದ ಗಣ್ಯವೆನಿಸಿರುತ್ತದೆ. ಸದರಿ ಗ್ರಾಮಗಳಲ್ಲಿ ಕಾಲಕಾಲಕ್ಕೆ ಮಹಾತ್ಮರಾದ ಗುರುಪುಂಗವರೂ ಪಂಡಿತರೂ, ಶಿವಾನುಭವಿಗಳೂ ಜನಿಸಿ ಸುಪ್ರಸಿದ್ಧರಾಗಿದ್ದಾರೆ. ಇಂತಹ ಸದ್ವಂಶದಲ್ಲಿ ಜನಿಸಿ ವಂಶಕ್ಕೂ ಸಮಾಜಕ್ಕೂ ಭೂಷಣಪ್ರಾಯರಾಗಿ, ಮಹಿಮಾತಿಶಯಗಳಿಂದ ಮೆರೆದು ಸಂವತ್ಸರಾರಂಭದ ಪ್ರತಿಪದಿ ಗುರುವಾರ ಶುಭಮುಹೂರ್ತದಲ್ಲಿ ಶಿವಸಾಯುಜ್ಯವನ್ನೈದಿದರು. ಈ ಮಹಾತ್ಮರ ಮಹತ್ವವನ್ನು ವ್ಯಕ್ತಗೊಳಿಸುತ್ತದೆ. ಇವರ ಅಂತ್ಯೇಷ್ಟಿ ಸಮಾರಂಭಕ್ಕೆ ಕುಕನೂರ ಅರಳೆಲೆ ಮಠದ ಶ್ರೀ ಚರಮೂರ್ತಿಸ್ವಾಮಿಗಳೂ, ಬೆದವಟ್ಟಿ, ಮ್ಯಾಗೇರಿ ಗ್ರಾಮಗಳ ಪಟ್ಟದ ಸ್ವಾಮಿಗಳೂ ಚರಮೂರ್ತಿ ಸ್ವಾಮಿಗಳೂ ಆಗಮಿಸಿದ್ದರು. ಹಾಗೂ ಮಂಗಳೂರು ಸುತ್ತಮುತ್ತಲಿನ ಗ್ರಾಮಗಳ ಸಾವಿರಾರು ಶಿಷ್ಯಸಮೂಹವೂ ಗದಗ ಹುಬ್ಬಳ್ಳಿ ಮೊದಲಾದ ಗ್ರಾಮಗಳಲ್ಲಿ ನೆಲೆಸಿರುವ ಅರಳೆಲೆಮಠ ವಂಶೀಯರೂ ಕೂಡಿ ಅತ್ಯಂತ ವೈಭವದಿಂದ ಸಮಾಧಿಕಾರ್ಯವು ಜರುಗಿತು. ಮಠದ ಭೂಮಿಯಲ್ಲಿಯೇ ಸಮಾಧಿಯಾಗಿದ್ದು, ಪೂಜೆಗೆ ಯೋಗ್ಯವಾಗುವಂತೆ ಸಮಾಧಿ ರಚನೆಯನ್ನು ಮಾಡಿಸಲು ಅಭಿಮಾನಿಗಳಾದ ಶಿಷ್ಯರು ಮುಂದೆ ಬಂದಿದ್ದಾರೆ. ಇವರು ಈಗ ೭–೮ ವರ್ಷಗಳ ಪೂರ್ವದಲ್ಲಿ ತಮ್ಮ ವಂಶದ ಶ್ರೀ ಷಡಕ್ಷರ ಶಿವಾಚಾರ್ಯರೆಂಬ ವಟುಗಳಿಗೆ ಗುರುಪಟ್ಟಾಧಿಕಾರವನ್ನು ವಹಿಸಿಕೊಟ್ಟಿದ್ದಾರೆ. ಶ್ರೀ ಷಡಕ್ಷರ ಶಿವಾಚಾರ್ಯ ಸ್ವಾಮಿಗಳು ಸದ್ಯಃ ಸೊಲ್ಲಾಪುರದಲ್ಲಿ ಸಂಸ್ಕೃತ ಅಭ್ಯಾಸ ಮಾಡುತ್ತಲಿದ್ದಾರೆ. ಇವರಾದರೂ ತಮ್ಮ ಪೂಜ್ಯ ಗುರುಗಳಂತೆ ಮಹಿಮಶಾಲಿಗಳಾಗಿ ಮೆರೆದು ಶಿಷ್ಯರನ್ನು ಉದ್ಧರಿಸುವಂತಾಗಲೆಂದು ಆಶಿಸುವ

ಓರ್ವ ಗುರುಭಕ್ತ, ಮಂಗಳೂರು

ದುಃಖವಾರ್ತೆ

ಕಾನಕಾನಹಳ್ಳಿ ತಾಲ್ಲೂಕು ಗುರವಿನಪುರ ಮಠದ ಶ್ರೀ ಶೈಲಶಾಖಾನುವರ್ತಿಗಳಾದ ಪಟ್ಟಾಧಿಕಾರಿ ಶ್ರೀ ಸಿದ್ಧಲಿಂಗಸ್ವಾಮಿಗಳವರು ತಾ|| 1-2-45 ಗುರುವಾರ ದಿವಸ ಶಿವಾಧೀನರಾದರು. ಇವರ ಅಂತ್ಯ ಸಂಸ್ಕಾರ ಸಮಯದಲ್ಲಿ ಬೆಂಗಳೂರು ಬೇಲಿ ಮಠ, ದೊಡ್ಡಬೆಲೆ ಮಠ, ದೇವಪಟ್ಟಣದ ಮಠ, ಮಧುವನಹಳ್ಳಿ ಚಿಕ್ಕಮಠ ಇತ್ಯಾದಿ ಮಠಗಳ ಸ್ವಾಮಿಗಳವರು ಮತ್ತು ಅನೇಕ ಜನ ಭಕ್ತಮಂಡಲಿಯವರೂ ಆಗಮಿಸಿದ್ದರು. ಅಂತ್ಯ ಸಂಸ್ಕಾರವು ವಿಧ್ಯುಕ್ತವಾಗಿ ನೆರವೇರಿತು. ಶಿವೈಕ್ಯರಾದ ಸ್ವಾಮಿಗಳು ತಮ್ಮ ಅಣ್ಣಂದಿರ ಮಕ್ಕಳಾದ ಗುರುಸ್ವಾಮಿಯವರಿಗೆ ತಮ್ಮ ಅಧಿಕಾರವನ್ನು ಮೊದಲೇ ವಹಿಸಿದ್ದರು. ಸದರಿ ಚಿಕ್ಕಸ್ವಾಮಿಯವರು ಬಹಳ ಬುದ್ಧಿವಂತರಾಗಿದ್ದು ಶಿಷ್ಯರಿಗೂ ಮತ್ತು ಭಕ್ತರಿಗೂ ಬೇಕಾದವರಾಗಿದ್ದಾರೆ. ಶ್ರೀ ಮದ್ರಂಭಾಪುರಿ ಜಗದ್ಗುರುಗಳವರು ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಿ ಆಶೀರ್ವಾದ ಪತ್ರವನ್ನು ದಯಪಾಲಿಸಿದ್ದಾರೆ. ಶ್ರೀ ಜಗದೀಶ್ವರನು ಶಿವೈಕ್ಯ ಸ್ವಾಮಿಗಳ ಆತ್ಮಕ್ಕೆ ಶಾಂತಿಯನ್ನೀಯಲೆಂದು ಪ್ರಾರ್ಥಿಸುತ್ತೇನೆ.

ಗುರುಭಕ್ತ

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬರಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು. ವೀರಶೈವಮತದಲ್ಲಿ ಸದ್ಯಃ ದೊರೆಯತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು. ಈ ಗ್ರಂಥವು ಈಗ್ಗೆ ಸುಮಾರು ೨ಸಾವಿರ ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು. ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ. ಈ ಕೊರತೆಯನ್ನು ಹೋಗಲಾಡಿಸುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ವಾಚಕರಿಗೆ ವೇದ್ಯವಾಗುವುದು. ವಾಚಕರ ಅನುಕೂಲಕ್ಕಾಗಿ ಬಹುಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೬೬೩ ಪುಟಗಳಿಂದ ಕೂಡಿದ್ದು, ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೨ ರೂಪಾಯಿ.**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅವತಾರಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ		೦—೬
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು.) ಸೈಜು ೧೪ × ೧೦ ಬೆಲೆ		೦—೬—
ಶ್ರೀ ಓಂಕಾರೋಪದೇಶಮಾಡತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ		೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ		೦—೩—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ		೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	.	೦—೧—೬
ಶ್ರೀ ಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	...	೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	....	೦—೧—೬
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	...	೦—೧—೬
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	....	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	....	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ		೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ		೦—೩—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ		೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	...	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	....	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	....	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	....	೦—೧—೬
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ		೦—೧—೬

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯರಿಗಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ. ೪ ಆಣೆ ಪರಸ್ಥಳದವರಿಗೆ ೩ ರೂ. ವಿ ಪಿ ಖರ್ಚು ಸೇರಿ ೩ ರೂ. ೪ ಆಣೆ.

ಸಂಪುಟ ೧೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೯ನೇ ಏಪ್ರಿಲ್ ೧೯೪೫ [ಸಂಚಿಕೆ ೫೦

ಶ್ರೀ ಜಗದ್ಗುರು ರೇಣುಕ ಜಯಂತೀ ಮಹೋತ್ಸವ, ತಿಪ್ಟೂರು.

ಇಲ್ಲಿಯ ವೀರಶೈವ ಮಂಡಲಿಯವರು ಪದ್ಧತಿ ಪ್ರಕಾರ ಶ್ರೀ ವೃಷಭೇಶ್ವರಾಲಯದಲ್ಲಿ ಜಗದಾಚಾರ್ಯರ ಜಯಂತೀ ಮಹೋತ್ಸವವನ್ನು ಅತ್ಯಂತ ವೈಭವದೊಡನೆ ನೆರವೇರಿಸಿದರು ಪ್ರಾತಃಕಾಲ ವೃಷಭೇಶ್ವರನಿಗೆ ರುದ್ರಾಭಿಷೇಕವೂ ರೇಣುಕರ ಭಾವಚಿತ್ರಪಟಕ್ಕೆ ಷೋಡಶೋಪಚಾರ ಪೂಜೆಯೂ ನಡೆದವು ಸಾಯಂಕಾಲ ೯ ಘಂಟೆಗೆ ಶೃಂಗರಿಸಿದ ಪುಷ್ಪಮಂಟಪದಲ್ಲಿ ನಂದಿಧ್ವಜ ವಾದ್ಯವೈಭವದೊಡನೆ ಜಗದಾಚಾರ್ಯ ಮೂರ್ತಿಯ ಉತ್ಸವವು ಹೊರಟಿತು ಸ್ವಪರಮತೀಯರನೇಕರು ಕಾಯಿಕರ್ಪೂರಗಳನ್ನರ್ಪಿಸಿ ಆಶೀರ್ವಾದಗಳನ್ನು ಪಡೆದರು ಹೀಗೆ ಉತ್ಸವವು ನೋಟಕರ ಕಣ್ಮನಂಗಳಿಗೆ ಆನಂದವನ್ನೀಯುತ್ತಾ ಸಮಸ್ತ ಬೀದಿಗಳಲ್ಲಿಯೂ ಹಾಯ್ದು ೧ ಘಂಟೆಗೆ ಸ್ವಸ್ಥಾನವನ್ನು ಸೇರಿತು ಬಳಿಕ ಮಹಾಮಂಗಳಾರತಿಯಾಗಿ ಸಕಲರಿಗೂ ಪ್ರಸಾದ ವಿನಿಯೋಗವಾಗಿ ಆಚಾರ್ಯರ ಜಯಘೋಷದೊಡನೆ ಜಯಂತಿ ಕಾರ್ಯವು ಸಮಾಪ್ತಿಯಾಯಿತು ವೇ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ರೇಡಿಯೋ ಭಾಷಣವನ್ನು ಕೇಳುವುದಕ್ಕಾಗಿ ಮುನಿಸಿಫಲ್ ಪ್ರೆಸಿಡೆಂಟ್ ಶ್ರೀಮಾನ್ ಪಲ್ಲಾಗಟ್ಟಿ ಅಡವಪ್ಪನವರ ಮಹಡಿಯಮೇಲೆ ಏರ್ಪಾಡು ಮಾಡಲಾಗಿತ್ತು. ಅನೇಕ ಜನರು ಪಂಡಿತರ ಭಾಷಣವನ್ನೂ ಶ್ರೀ ಕೊಟ್ಟೂರಪ್ಪಯ್ಯನವರ ಸಂಗೀತವನ್ನೂ ಕೇಳಿ ಸಂತೋಷಭರಿತರಾದರು. ಪಂಡಿತರು ಈ ಸಾರೆ ರೇಡಿಯೋಭಾಷಣದ ವ್ಯವಸ್ಥೆ ಮಾಡಿದ್ದು ಅನೇಕ ನಗರಗಳಲ್ಲಿ ಬಹುಜನರು ಏಕಕಾಲದಲ್ಲಿಯೇ ಕೇಳುವುದಕ್ಕೆ ಅನುಕೂಲವಾಯಿತು. ಜಗದಾಚಾರ್ಯರು ಜಗತ್ತಿಗೆ ಸುಖ ಶಾಂತಿಯನ್ನೀಯಲಿ.

ಪ್ರತ್ಯಕ್ಷದರ್ಶಿ

ಸತ್ಕಥಾ ಪ್ರವಚನ, ಸವಣೂರು.

ಪರಮಾತ್ಮನು ನಮಗೆ ಅನುಗ್ರಹಿಸಿರುವ ಇಂದ್ರಿಯಗಳಲ್ಲೆಲ್ಲಾ ಕರ್ಣೇಂದ್ರಿಯವು ಮುಖ್ಯವಾದುದು ಯಾವ ಮನುಷ್ಯನ ಕರ್ಣೇಂದ್ರಿಯವು ಪರಮಾತ್ಮನ ಹಾಗೂ ಗುರುವಿನ ಚರಿತ್ರ ಲೀಲಾದಿಗಳನ್ನು ಕೇಳುವುದಿಲ್ಲವೋ ಅಂಥವನ ಕಿವಿಗಳು ಇಲಿ ಹೆಗ್ಗಣಗಳು ವಾಸ ಮಾಡುವ ಬಿಲಕ್ಕೆ ಸಮಾನವಾದಂಥವುಗಳಾಗುತ್ತವೆ. ಸುಗಂಧ ಪುಷ್ಪವು ವಾಯುಮೂಲಕ ಎಲ್ಲಾ ಕಡೆಗೆ ತನ್ನ ಸೌಂಧ್ಯವನ್ನು ಬೀರಿ ಭ್ರಮರವನ್ನು ಆಕರ್ಷಿಸುವಂತೆ ಪರಮಾತ್ಮನ ಹಾಗೂ ಮಹಾತ್ಮರ ಉಪದೇಶವು ಒಂದು ಸ್ಥಾನದಲ್ಲಿ ನಡೆಯುತ್ತಿದ್ದರೆ ಶ್ರವಣದ್ವಾರಾ ಭಕ್ತರ ಹೃದಯವನ್ನು ಆಕರ್ಷಿಸಿ ಅವರನ್ನು ಎಳೆದು ತಂದು ಆನಂದಭರಿತ ಹೃದಯರನ್ನಾಗಿ ಮಾಡುವದು. ಇಂಥ ಪ್ರಯೋಗವು ಸವಣೂರು ಗ್ರಾಮಕ್ಕೆ ಲಭಿಸಿತು. ಸವಣೂರು ಸಂಸ್ಥಾನಕ್ಕೆ ಸೇರಿದ ಚೀಲಿನಕಟ್ಟಿ ಗ್ರಾಮದಲ್ಲಿರುವ ವೈದಿಕ ಜ್ಯೋತಿಷ ಸಂಸ್ಕೃತ ಪಾಠಶಾಲಾಧ್ಯಾಪಕರಾದ ವೇ॥ ಪಂ॥ ಧರ್ಮಭೂಷಣ ಹರೀಶ್ವರ ಶಾಸ್ತ್ರಿಗಳು ಇಲ್ಲಿಯ ಕಸಬಾ ಪೇಟೆಯಲ್ಲಿರುವ ಈಶ್ವರ ದೇವಸ್ಥಾನದಲ್ಲಿ ಸೋಮವಾರ ತಾ॥ ೨೬-೩-೪೫ ನೇ ದಿವಸ ರಾತ್ರಿ ೯ ಘಂಟೆಯಿಂದ ರಾತ್ರಿ ೧೨ ಘಂಟೆಯವರೆಗೆ ಪರೋಪಕಾರ ಹಾಗೂ ಪಾತಿವ್ರತ್ಯದ ಬಗ್ಗೆ ಪ್ರವಚನವನ್ನು ಗಂಭೀರವಾಣಿಯಿಂದ ಹೇಳಿ ಸಭಿಕರನ್ನು ಆನಂದಗೊಳಿಸಿದರು ಈ ಸತ್ಕಥಾ ಶ್ರವಣಕ್ಕೆ ಸರಕಾರಿ ಅಧಿಕಾರಸ್ಥರೂ ಮತ್ತು ವೀರಶೈವ ಪ್ರಮುಖರೂ ಸ್ತ್ರೀ ಪುರುಷರೂ ಸಕಲ ಮತೀಯರೂ ಆಗಮಿಸಿದ್ದರು ಮೊದಲನೇ ದಿವಸ ಶಾಸ್ತ್ರಿಗಳು ಒಳ್ಳೆ ಮನೋಹರವಾಗಿ ಹೇಳಿದ್ದರಿಂದ ಅಷ್ಟಕ್ಕೆ ತೃಪ್ತರಾಗದ್ದರಿಂದ ಭಕ್ತರ ಅಪೇಕ್ಷೆಯಂತೆ ಎರಡನೇ ದಿವಸವೂ ಹೇಳಿ ಭಕ್ತರ ಹೃದಯವನ್ನು ಆನಂದಗೊಳಿಸಿದರು ಈ ಕಾರ್ಯವನ್ನು ಚನ್ನಪ್ಪಗೌಡ್ರು, ಪಾಟೀಲ್ ಟಾಕನ ಗೌಡ್ರು, ಚನ್ನಪ್ಪ ಆಸುಂಡಿ, ಲಿಂಗಪ್ಪನವರು ಕುಲಕರ್ಣಿ, ತಿರಕಪ್ಪನವರು ಕುಲಕರ್ಣಿ ವೀರಭದ್ರಪ್ಪ ಚಿಕ್ಕಣ್ಣನವರು, ಬಸನಗೌಡ್ರು ಪಾಟೀಲ್, ಪಕ್ಕೀರಗೌಡ್ರು, ಮುದಿಗೌಡ್ರು, ಶಂಕರಗೌಡ್ರು, ಹನುಮಂತಗೌಡ್ರು, ಮಹಾದೇವಪ್ಪ ಮಲ್ಲೂರ ಇವರೇ ಮೊದಲಾದವರು ದಕ್ಷತೆಯಿಂದ ಕೆಲಸಮಾಡಿ ಶಿವನ ಕೃಪೆಗೆ ಪಾತ್ರರಾದರು ಈ ಸತ್ಕಾರ್ಯದಲ್ಲಿ ಸೇವೆಯನ್ನು ಸಲ್ಲಿಸಿದ ಮಹಾಶಯರಿಗೆ ಪರಮೇಶ್ವರನು ಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇನೆ

ವೀರಭದ್ರಪ್ಪ ಚಿಕ್ಕಣ್ಣನವರು

ಶ್ರೀ ಜಗದ್ಗುರುರೇಣುಕಾಚಾರ್ಯಾಯನಮಃ

"ಇತ್ಯಾದಿ" ಯ ಆತ್ಮವೃತ್ತ

ಲೇ—ಮಲ್ಲಿಕಾರ್ಜುನಾರಾಧ್ಯ ರಾಣೀಬೆನ್ನೂರು ಮಳೇಮಠ, ಮುದೇನೂರು

ಶಬ್ದಸಮಾಜದಲ್ಲಿ ನನಗಿದ್ದಷ್ಟು ಗೌರವಾದರಗಳು ಮತ್ತಾರಿಗೂ ಇಲ್ಲ. ಭಾಷಣಕಾರರೂ ಬರಹಗಾರರೂ, ನನ್ನನ್ನು ಬಹು ಪ್ರೀತಿಸುತ್ತಾರೆ ಅವರು ನನ್ನನ್ನು ಬಿಟ್ಟು ಎಂದೂ ತಮ್ಮ ಕಾರ್ಯಾರಂಭ ಮಾಡುವುದಿಲ್ಲ. ಅವರು ಅತ್ಯಾಗ್ರಹದಿಂದ ನನ್ನನ್ನು ಕರೆದುಕೊಂಡು ಹೋಗುವರು. ಪ್ರತ್ಯಹವೂ ನನಗೆ ಸಹಸ್ರಾರು ಆಮಂತ್ರಣಗಳು ಬರುವುವು. ಆದಾಗ್ಯೂ ನಾನು ಯಾರಿಗೂ ನಹಿ ಎನ್ನುವುದಿಲ್ಲ. ಸಭೆಗಳೂ, ಪರಿಷತ್ತುಗಳೂ, ಆಗುವ ಕಾಲದಲ್ಲಿ ಸ್ವಸ್ಥಚಿತ್ತದಿಂದ ನಿದ್ರೆಮಾಡುವುದಕ್ಕೆ ಸಹ ಅವಕಾಶ ದೊರೆಯುವುದಿಲ್ಲ. ಆಮಂತ್ರಣವಿಲ್ಲದೆ ನಾನು ಹೋದಾಗ್ಯೂ ನನಗೆ ಉಚಿತವಾದ ಆದರಾತಿಥ್ಯಗಳು ನಡೆಯುವುವು. ಶಬ್ದಸಮಾಜದಲ್ಲಿ ನಾನಿಲ್ಲದೆ ಹೋಗಿದ್ದರೆ ಈ ಭಾಷಣಕಾರರ ಬರಹಗಾರರ ಅವಸ್ಥೆಯು ಏನಾಗುತ್ತಿತ್ತೆಂಬುದಕ್ಕೆ ಅವರವರ ಆತ್ಮವೇ ಸಾಕ್ಷಿ. ಪರಿಸ್ಥಿತಿಯು ಹೀಗಿದ್ದಾಗ್ಯೂ ಇವರು ಎಂತಹ ಕೃತಘ್ನರು! ಜಗತ್ತಿನಲ್ಲಿ ಯಾವನಾದರೂ ಸ್ವಲ್ಪ ಲೋಕೋಪಕಾರದ ಕೆಲಸ ಮಾಡಿದರೆ, ಆ ಕೂಡಲೇ ಇವರು ಅವನ ಪೂರ್ವೋತ್ತರ ಚರಿತ್ರೆಯನ್ನು ಭಾಷಣದಲ್ಲಿಯೂ ಬರವಣಿಗೆಯಲ್ಲಿಯೂ ಮುಂದುವರಿಸುವರು. ಆದರೆ ಅವರಲ್ಲಿ ಒಬ್ಬನಾದರೂ ನನ್ನ ಚರಿತ್ರೆಯನ್ನು ಈವರೆಗೂ ಬರೆದಿಲ್ಲ.

ಇನ್ನೊಂದು ದೃಷ್ಟಿಯಿಂದ ವಿಚಾರಮಾಡಿದರೆ, ಅವರು ನನ್ನ ಗುಣಗಳನ್ನು ಸರ್ವಸಾಧಾರಣ ಜನರಿಗೆ ತಿಳಿಸಿದರೆ ತಮ್ಮ ಶಬ್ದದಾರಿದ್ರ್ಯವನ್ನೇ ಬೈಲಿಗಿಟ್ಟಂತೆ ಆಗುವುದೆಂದು ಅಂಜಿ ಬಿಟ್ಟಿರಬಹುದೆಂದು ಕಾಣುತ್ತದೆ. ಹೇಗಾದರೂ ಆಗಲಿ, ನಾನೇ ಈ ದಿವಸ ನನ್ನ ಚರಿತ್ರವನ್ನು ಹೇಳಿಕೊಳ್ಳುವೆನು ವಾಚಕರು ಕೃಪೆಯಿಟ್ಟು ನನ್ನ ಮೇಲೆ ಆತ್ಮಸ್ತುತಿಯ ತಪ್ಪು ಹೊರಿಸದೆ ಶಾಂತಚಿತ್ತರಾಗಿ ಓದಬೇಕೆಂದು ಪ್ರಾರ್ಥಿಸುತ್ತೇನೆ.

ನನ್ನ ಜನ್ಮಕಾಲದ ಇಸವಿ, ಶಕೆ, ಸಂವತ್ಸರ, ಮಾಸ, ಪಕ್ಷ, ತಿಥಿ, ವಾರ, ನಕ್ಷತ್ರ, ಚರಣ, ಲಗ್ನ ಮೊದಲಾದುವನ್ನು ನನ್ನ ಜನನೀಜನಕರು ಬರೆದಿಟ್ಟಿಲ್ಲ. ಆದುದರಿಂದ ನನ್ನ ಜನ್ಮ ದಿವಸವನ್ನು ಯಾರೂ ಪಾಲಿಸುವುದಿಲ್ಲ ಆದಾಗ್ಗೂ ಜನರಲ್ಲಿ ಶಬ್ದದಾರಿದ್ರ್ಯವು ವಿಶೇಷವಾದ ಕಾಲದಲ್ಲಿ ನನ್ನ ಜನ್ಮವಾಗಿರಬಹುದೆಂಬಂತೆ ತೋರುತ್ತದೆ. ನನ್ನ ತಾಯಿಯ ಹೆಸರು "ಇತಿ" ನನ್ನ ತಂದೆಯ ಹೆಸರು "ಆದಿ" ನನ್ನ ತಾಯಿಯು "ಅನ್ವಯ" ವೆಂಬ ಪ್ರಸಿದ್ಧವಾದ ಕುಲಸಂಭೂತಳು ನಮ್ಮ ಸಮಾಜದಲ್ಲಿ "ಅನ್ವಯ" ಮನೆತನದೊಡನೆ ಶರೀರಸಂಬಂಧ ಮಾಡುವುದು ಬಹು ಗೌರವವಾದುದೆಂದು ಎಣಿಸಲ್ಪಡುತ್ತದೆ. ಏಕೆಂದರೆ, ಪರಶಿವನ ಕೃಪೆಯಿಂದ "ಅನ್ವಯ" ವಂಶಸ್ಥರು ಮಹಾಶೂರರು. ಅವರು "ಪ್ರತ್ಯಯ" ರಾಜನಿಗೆ ಎಂದೂ ಅಂಕಿತರಾಗಲಿಲ್ಲ ಈವರೆಗೆ ಆ ವಂಶಜರು ಯಾರಿಗೂ ಅಧೀನವಾಗದೆ ಸ್ವತಂತ್ರತೆಯಿಂದಿರುತ್ತಾರೆ.

ನನ್ನ ಬಾಲ್ಯಾವಸ್ಥೆಯಲ್ಲಿ ನನ್ನ ತಂದೆಯು ಒಬ್ಬ ಪ್ರಸಿದ್ಧ ಜ್ಯೋತಿಷಿಯಿಂದ ನನ್ನ ಜಾತಕವನ್ನು ಬರೆಯಿಸಿದನು. ಆ ಜ್ಯೋತಿಷಿಯು ಗಣಿತದಿಂದ ನನ್ನ ವಿಷಯವನ್ನು ಕುರಿತು ಕೆಲವು ಸಂಗತಿಗಳನ್ನು ಹೇಳಿದನು. ಅವು ಯಾವುವೆಂದರೆ :—

"ಈ ಹುಡುಗನು ಮುಂದೆ ಬಹು ಪ್ರಖ್ಯಾತನೂ ಪರೋಪಕಾರಿಯೂ ಆಗಿ ಬಹುಜನರ ಮರ್ಯಾದೆಯನ್ನು ಕಾಯುವನಲ್ಲದೆ ಸಮಾಜದಲ್ಲಿ ಸರ್ವಜನಪ್ರಿಯನಾಗುವನು. ಆದರೆ ಇವನಿಗೆ ಭಾರ್ಯಾಯೋಗಮಾತ್ರವಿಲ್ಲ. ಲಗ್ನವೇ ಇಲ್ಲವೆಂದ ಮೇಲೆ ಸಂತತಿಯಿಲ್ಲದಿರುವುದು ಸಹಜವೇ. ಈ ಮಾತು ಕೇಳಿ ನನ್ನ ತಾಯಿತಂದೆಗಳಿಗೆ ಕಳವಳವಾಯಿತು. ಆದರೆ ಮಾಡುವುದೇನು? ದೈವದ ಮುಂದೆ ಯಾರ ಆಟವೂ ಸಾಗುವುದಿಲ್ಲ. "ಭವಿತವ್ಯತಾ ಬಲೀಯಸೀ" ಎಂಬ ಉಕ್ತಿಯನ್ನು ಲಕ್ಷ್ಯಕ್ಕೆ ತಂದು ನನ್ನ ಮಾತಾಪಿತರು ಸಮಾಧಾನ ಹೊಂದಿದರು. ಆದರೆ ತಮ್ಮ ಪಶ್ಚಾತ್ ತಮ್ಮ ವಂಶವು ಹಾಳಾದರೆ ತಮ್ಮ ಹೆಸರುಗಳಾದರೂ ಸ್ಥಿರವಾಗಿ ಉಳಿಯಬೇಕೆಂದು ಆಲೋಚಿಸಿ, ಅವರು ನನಗೆ ಬೇರೊಂದು ಹೆಸರಿಡದೆ ತಮ್ಮೀರ್ವರ ಹೆಸರುಗಳನ್ನೇ

[೩ನೆಯ ಪುಟವನ್ನು ನೋಡಿ]

ಕಾಗದದ ಬೆಲೆಯು ವಿಶೇಷವಾಗಿ ಏರಿರುವುದರಿಂದ ಕೆಲವು ಗ್ರಂಥಗಳ ಮತ್ತು ಫೋಟೋಗಳ ಬೆಲೆಯನ್ನು ಸ್ವಲ್ಪ ಹೆಚ್ಚಿಸಿದ್ದೇವೆ.

ಲಿಂಗೋದ್ಭವ ಲಾಕೆಟ್ಸ್

ಈಗ ಹೊಸದಾಗಿ ಜಗದಾಚಾರ್ಯರ ಲಿಂಗೋದ್ಭವ ಲಾಕೆಟ್ಟು ಮತ್ತು ಕೋಟಿನ ಗುಂಡಿಗಳನ್ನು ಶುದ್ಧವಾದ ಬೆಳ್ಳಿಯಲ್ಲಿ ಬಹು ಸುಂದರವಾಗಿ ತಯಾರು ಮಾಡಿಸಿದ್ದೇವೆ

ಲಾಕೆಟ್ಟುಗಳು ದೊಡ್ಡವರಿಗೆ ಕೋಟಿನ ಮೇಲೆ ಹಾಕಿಕೊಳ್ಳುವಂತೆಯೂ, ಮಕ್ಕಳಿಗೆ ಕೊರಳಿನಲ್ಲಿ ಧರಿಸುವಂತೆಯೂ ತಯಾರಿಸಲ್ಪಟ್ಟಿವೆ ಗುರುಭಕ್ತರೆಲ್ಲರೂ ಇವುಗಳನ್ನು ತರಿಸಿ ತಮ್ಮ ಶರೀರದ ಮೇಲೆ ಧರಿಸಿಕೊಂಡು ಪ್ರತಿದಿವಸವೂ ಆ ಮಂಗಲಮೂರ್ತಿಯ ದರ್ಶನ ಸ್ಪರ್ಶನಾದಿಗಳಿಂದ ಧನ್ಯರಾಗಬೇಕೆಂದು ಕೋರಿಕೆ

ಬೆಳ್ಳಿ ಲಾಕೆಟ್ ಬೆಲೆ ೧ ಕ್ಕೆ ೧ ರೂ
ಬೆಳ್ಳಿ ಕೋಟಿನ ಗುಂಡಿ ೧ ಕ್ಕೆ ೧ ರೂ

೬ ಕ್ಕಿಂತಲೂ ಕಡಿಮೆಯಾಗಿ ವಿ ಪಿ ಕಳಿಸುವದಿಲ್ಲ

ಮ್ಯಾನೇಜರ್
ಪಂಚಾಚಾರ್ಯ ಪ್ರಭಾ, ಮೈಸೂರು

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ **ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ**	೦—೬—
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು.)**ಸೈಜು ೧೪×೧೦ ಬೆಲೆ**	೦—೬—
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ **ಫೋಟೋ ಸೈಜು ೧೪×೧೦ ಬೆಲೆ**	೦—೪—
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ **ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ**	೦—೪—
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ **ಫೋಟೋ**	೦—೧—
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ **ಪಟ್ಟಾಭಿಷೇಕ ಮಾಡುವ ಫೋಟೋ**	೦—೧—
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ **ಮೂಲಧರ್ಮಪೀಠದ ಫೋಟೋ**	೦—೧—
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ **ಫೋಟೋ**	೦—೧—
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ **ಫೋಟೋ**	೦—೧—
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ **ಫೋಟೋ**	೦—೧—
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ **ಫೋಟೋ**	೦—೧—
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ **ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ**	೦—೧—
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) **ಚಿಕ್ಕಸೈಜು ೧ಕ್ಕೆ**	೦—೨—
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) **ದೊಡ್ಡಸೈಜು ೧ಕ್ಕೆ**	೦—೪—
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ **ಅತ್ಯಂತ ಸುಂದರವಾದ ಫೋಟೋ ೧ಕ್ಕೆ**	೦—೧—
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ **ಕಟ್ಟಡದ ಸುಂದರ ಫೋಟೋ ೧ಕ್ಕೆ**	೦—೧—
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ **ಗೋಪುರದ ಫೋಟೋ**	೦—೧—
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ **ಫೋಟೋ**	೦—೧—
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ **ಫೋಟೋ**	೦—೧—

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೬ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೭ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ)	೩ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)	೩ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಕ್ಷರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು. ೨ನೆಯ ಆವೃತ್ತಿ)	೧। ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧॥ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧॥ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ [ಕನ್ನಡವ್ಯಾಖ್ಯಾನ ೧೩೪೪ ಪುಟ]	೮ ರೂ
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*)	8 As
Speeches by Pandit Shri Kashinatha Shastriji (*English*)	12 As
लिंगधारणचंद्रिका (संस्कृत)	३ रु
वीरशैवरत्न (मराठी)	१ रु
महानारायणोपनिषत् (वीरशैवभाष्य-संस्कृत)	१ रु
सिद्धांतशिखामणि (मूल)	८ आ.
नंदिकेश्वरकारिका (संस्कृत)	२ आ.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M 2266 ॥ ಶ್ರೀಜಗದ್ಗುರು ಪಂಚಾಚಾರ್ಯರ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪ ಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೩ ರೂ ೪ ಆಣೆ — ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ.

ಸಂಪುಟ ೧೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೬ನೇ ಏಪ್ರಿಲ್ ೧೯೪೫ [ಸಂಚಿಕೆ ೫೧

॥ ಓಂ ॥

ದೇಹವು ಆತ್ಮನಲ್ಲ

(ಮೈಸೂರಿನಲ್ಲಿರುವ ಆತ್ಮವಿಚಾರವು ದೀನ ಪ್ರಕಾಶ್ಯ ಪಕರ ವ ಶ್ರೀಮಾನ್ ಎಂ ಎಲ್ ನಾಗಂಣಪ್ಪನವರಿಂದ)

ಈ ಲೋಕದಲ್ಲಿ ಆಶ್ಚರ್ಯದಲ್ಲಿ ಆಶ್ಚರ್ಯ ವ ಸ್ತುವು ಏನೆಂದರೆ ಪ್ರತಿಯೊಬ್ಬನೂ ತನಗಿಂತ ಅನ್ಯವಾಗಿರುವ ಪದಾರ್ಥಗಳ ವಿಷಯವನ್ನು ತಿಳಿಯಬೇಕೆಂದು ಕುತೂಹಲಪಡುತ್ತಾನೆಯೇ ಹೊರತು ತನ್ನ ವಿಷಯವನ್ನು ಅಂದರೆ "ನಾನು ಯಾರು, ನಾನು ಹುಟ್ಟುವದಕ್ಕೆ (ತಾಯಿಯ ಗರ್ಭಕ್ಕೆ ಬರುವುದಕ್ಕೆ) ಮುಂಚೆ ನಾನು ಎಲ್ಲಿದ್ದೆನು, ನಾನು ಗತಿಸಿದನಂತರ (ಈ ದೇಹವನ್ನು ಬಿಟ್ಟನಂತರ) ನಾನು ಎಲ್ಲಿಗೆ ಹೋಗುತ್ತೇನೆ" ಎಂಬುದನ್ನು ತಿಳಿಯಲು ಕುತೂಹಲಪಡುವುದೇ ಇಲ್ಲ. ಅಲ್ಲದೆ ಪ್ರತಿಯೊಬ್ಬನೂ ತನಗೆ ವಾರ್ಧಕ್ಯ ಬಂದ ಕಾಲಕ್ಕೆ ಸುಖಿಯಾಗಿರುವುದಕ್ಕೂ, ತಾನು ಅಕಾಲದಲ್ಲಿ ಗತಿಸಿದರೂ ತನ್ನ ಸತೀಪುತ್ರಾದಿಗಳು ಸುಖವಾಗಿರುವುದಕ್ಕೂ ತಕ್ಕ ಏರ್ಪಾಡನ್ನು ಮಾಡುವುದಕ್ಕೆ ಯೋಚಿಸುತ್ತಾನೆಯೇ ಹೊರತು ಎಷ್ಟು ವರ್ಷಗಳಾದಾಗ್ಯೂ ತಾನು ಈ ಲೋಕವನ್ನು ಬಿಡುವುದು ನಿಶ್ಚಯವಾಗಿದ್ದರೂ ಈ ಲೋಕವನ್ನು ಬಿಟ್ಟನಂತರ ತಾನು ಸುಖವಾಗಿರುವುದಕ್ಕೆ ತಕ್ಕ ಏರ್ಪಾಡನ್ನು ಮಾಡಲು ಪ್ರಯತ್ನಪಡುವುದೇ ಇಲ್ಲ. ಇದರಿಂದ ಪ್ರತಿಯೊಬ್ಬನೂ ದೇಹವೇ ತಾನೆಂದು, ವಿಷಯಸುಖಗಳನ್ನು ಅನುಭವಿಸತಕ್ಕದ್ದೇ ತನ್ನ ಜೀವನದ ಮುಖ್ಯಗುರಿಯೆಂದು ತಿಳಿದಿರುತ್ತಾನೆಂಬುದು ಸ್ಪಷ್ಟವಾಗುತ್ತದೆ. ಆದರೆ, ಈ ಕೆಳಗೆ ಹೇಳುವ ಕಾರಣಗಳಿಂದ ತಾನು ದೇಹಕ್ಕಿಂತ ಬೇರೆಯಾಗಿರತಕ್ಕ ಆತ್ಮನೇ ಹೊರತು ದೇಹವಲ್ಲವೆಂಬುದು ಸ್ಥಿರಪಡುವುದು.

ಆತ್ಮನು ಬಾಲ್ಯ, ಯೌವನ, ವಾರ್ಧಕ್ಯಗಳಲ್ಲಿರುವ ದೇಹಗಳಿಗಿಂತ ಅತಿರಿಕ್ತನು

(1) ಭೌತಿಕಶಾಸ್ತ್ರಜ್ಞರು (Scientists) ನಮ್ಮ ಸ್ಥೂಲದೇಹಗಳು ಪ್ರತಿಕ್ಷಣದಲ್ಲಿಯೂ ಬದಲಾವಣೆಯನ್ನು ಹೊಂದುತ್ತವೆಂದು ಪರೀಕ್ಷೆಮಾಡಿ ಸಿದ್ಧಾಂತ ಮಾಡಿರುತ್ತಾರೆ. ಆದುದರಿಂದ ಬಾಲ್ಯ, ಯೌವನ, ವಾರ್ಧಕ್ಯಗಳಲ್ಲಿರತಕ್ಕ ನಮ್ಮ ದೇಹಗಳು ಬೇರೆ ಬೇರೆಯಾಗಿರುತ್ತವೆ. ಅಂದರೆ, ಬಾಲ್ಯದಲ್ಲಿದ್ದ ದೇಹವು ಯೌವನದಲ್ಲಾಗಲಿ, ಯೌವನದಲ್ಲಿದ್ದ ದೇಹವು ವಾರ್ಧಕ್ಯದಲ್ಲಾಗಲಿ ಇರುವುದಿಲ್ಲ. ಹೀಗಿದ್ದರೂ ನಾವು ಬಾಲ್ಯದಲ್ಲಿಯು ಮತ್ತು ಯೌವನದಲ್ಲಿಯು ಅನುಭವಿಸಿರತಕ್ಕ ವಿಷಯಗಳನ್ನು ನಮ್ಮ ವಾರ್ಧಕ್ಯದಲ್ಲಿ ನಾವು ಸ್ಮರಣೆಯನ್ನು ಮಾಡುತ್ತೇವೆ. ದೇಹವೇ ನಾವಾಗಿದ್ದರೆ ಬಾಲ್ಯದಲ್ಲಿ ಮಾಡಿದ್ದು ಯೌವನದಲ್ಲಾಗಲಿ, ಯೌವನದಲ್ಲಿ ಮಾಡಿದ್ದು ವಾರ್ಧಕ್ಯದಲ್ಲಾಗಲಿ ನಮ್ಮ ಸ್ಮರಣೆಗೆ ಬರುತ್ತಿರಲಿಲ್ಲ. ಮೂರು ದೇಹಗಳಲ್ಲಿಯೂ ಅನುಭವಿಸಿದ್ದನ್ನು ನಾವು ಸ್ಮರಣೆಮಾಡುವುದರಿಂದ ಮೂರು ದೇಹಗಳಿಗಿಂತಲೂ ಅತಿರಿಕ್ತನಾಗಿ ನಮ್ಮ ಆತ್ಮವಿರುವುದೆಂದು ಸಿದ್ಧಪಡುವುದು.

ಆತ್ಮನು ಮೂರು ಅವಸ್ಥೆಗಳಿಗಿಂತಲೂ ಅತಿರಿಕ್ತನು

(2) ನಮಗೆ ಜಾಗ್ರತ್ (ಎಚ್ಚರ), ಸ್ವಪ್ನ (ಕನಸು), ಸುಷುಪ್ತಿ (ಗಾಢನಿದ್ರೆ) ಎಂಬುದಾಗಿ ಮೂರು ಅವಸ್ಥೆಗಳುಂಟು. ಪ್ರತಿದಿನವೂ ನಾವು ಈ ಮೂರು ಅವಸ್ಥೆಗಳನ್ನು ಅನುಭವಿಸುತ್ತಲೇ ಇದ್ದೇವೆ. ಒಂದು ಅವಸ್ಥೆಯಲ್ಲಿ ಉಳಿದ ಎರಡು ಅವಸ್ಥೆಗಳಿರುವುದಿಲ್ಲ. ಆದರೆ, ನಾವು ಮೂರು ಅವಸ್ಥೆಗಳಲ್ಲಿಯೂ ಇದ್ದು ಆಯಾಯ ಅವಸ್ಥೆಗಳಲ್ಲಿರತಕ್ಕ ವಿಷಯಗಳನ್ನು ಅನುಭವಿಸುತ್ತೇವೆ. ಅಂದರೆ ಜಾಗ್ರದವಸ್ಥೆಯಲ್ಲಿ ಸ್ಥೂಲ ಮತ್ತು ಸೂಕ್ಷ್ಮ ದೇಹಗಳಿಂದ ಜಾಗ್ರತ್ಪ್ರಪಂಚವನ್ನು ಅನುಭವಿಸುತ್ತೇವೆ. ಸ್ವಪ್ನಾವಸ್ಥೆಯಲ್ಲಿ ಸೂಕ್ಷ್ಮದೇಹದಿಂದ ಸ್ವಪ್ನಪ್ರಪಂಚವನ್ನು ಅನುಭವಿಸುತ್ತೇವೆ. ಸುಷುಪ್ತ್ಯವಸ್ಥೆಯಲ್ಲಿ ಸ್ಥೂಲ ಸೂಕ್ಷ್ಮ ದೇಹಗಳಿಗೆ ಕಾರಣವಾದ ಅಜ್ಞಾನವೆಂಬ ಕಾರಣ ದೇಹದಿಂದ ಆನಂದವನ್ನು ಮತ್ತು ಅಜ್ಞಾನವನ್ನು (ಏನನ್ನೂ ತಿಳಿಯದೇ ಇರುವುದನ್ನು) ಅನುಭವಿಸುತ್ತೇವೆ. ಅಂದರೆ ಸುಷುಪ್ತ್ಯವಸ್ಥೆಯಲ್ಲಿ ಇಂದ್ರಿಯಗಳು ಅಜ್ಞಾನದಿಂದ ಆವರಿಸಲ್ಪಡುವುದರಿಂದ ನಾವು ಇಲ್ಲವೇ ಇರುವ ಹಾಗೆ ತೋರುತ್ತದೆ. ಆದರೆ, "ಯಾಸ್ಮೃತಿಸ್ಸಾನುಭವಪೂರ್ವಿಕಾ" ಎಂಬಂತೆ ಪೂರ್ವಾನುಭೂತವಾದ ವಿಷಯವೇ ಸ್ಮರಣೆಗೆ ಬರುವುದು. ಇದರ ಅನುಭವವಾಗಿರುವುದರಿಂದ ಸುಷುಪ್ತ್ಯವಸ್ಥೆ (ಗಾಢನಿದ್ರೆ) ಯಿಂದ ಎಚ್ಚೆತ್ತ ವೇಳೆ ನಾವು ಸುಖವಾಗಿ ಮಲಗಿದ್ದೆವು ಮತ್ತು ನಾವು ಏನನ್ನೂ ತಿಳಿಯಲಿಲ್ಲ ಎಂಬುದಾಗಿ ನಾವು ಸ್ಮರಣೆಯನ್ನು ಮಾಡುವುದರಿಂದ ನಾವು ಸುಷುಪ್ತ್ಯವಸ್ಥೆಯಲ್ಲಿದ್ದುಕೊಂಡು ಸುಖವನ್ನು ಮತ್ತು ಅಜ್ಞಾನವನ್ನು (ಏನನ್ನೂ ತಿಳಿಯದೇ ಇರುವುದನ್ನು) ಅನುಭವಿಸಿದೆವು ಎಂಬುದು ಸಿದ್ಧವಾಗುವುದು. ಒಂದು ಕೊಠಡಿಯಲ್ಲಿ ಅನೇಕ ಪದಾರ್ಥಗಳಿದ್ದರೆ ಬೆಳಕಿದ್ದ ಕಾಲದಲ್ಲಿ ಅವುಗಳನ್ನು ನಾವು ನೋಡುತ್ತೇವೆ. ಬೆಳಕಿಲ್ಲದೆ ಕತ್ತಲೆಯು ಅವುಗಳನ್ನು ಆವರಿಸಿಕೊಂಡಿರುವ ಕಾಲದಲ್ಲಿ ಕತ್ತಲೆಯನ್ನು ನಾವು ನೋಡುತ್ತೇವೆ. ಆದರೆ, ಕೊಠಡಿಯಲ್ಲಿ ಕತ್ತಲೆಯನ್ನು ಕಂಡರೂ ಕತ್ತಲೆಯನ್ನು ಕಂಡೆವು ಎಂಬುದಾಗಿ ನಾವು ಹೇಳದೆ ಕೊಠಡಿಯಲ್ಲಿ ಏನನ್ನೂ ಕಾಣಲಿಲ್ಲವೆಂದು ಹೇಳುತ್ತೇವೆ. ಕೊಠಡಿಯಲ್ಲಿ ಬೆಳಕಿರುವ ಕಾಲದಲ್ಲಿ ಪದಾರ್ಥಗಳನ್ನು ಮತ್ತು ಬೆಳಕಿಲ್ಲದ ಕಾಲದಲ್ಲಿ ಪದಾರ್ಥಗಳನ್ನು ಆವರಿಸಿರುವ ಕತ್ತಲೆಯನ್ನು ನಾವು ಕಾಣುವಂತೆ ಜಾಗ್ರತ್ಸ್ವಪ್ನಗಳಲ್ಲಿ ಜಾಗ್ರತ್ಸ್ವಪ್ನಪ್ರಪಂಚಗಳನ್ನು ಮತ್ತು ಸುಷುಪ್ತ್ಯವಸ್ಥೆಯಲ್ಲಿ ನಮ್ಮನ್ನು ಆವರಿಸಿರತಕ್ಕ ಅಜ್ಞಾನವನ್ನು (ಏನನ್ನೂ ತಿಳಿಯದಿರುವುದನ್ನು) ತಿಳಿಯುತ್ತೇವೆ. ಆದುದರಿಂದ ಮೂರು ಅವಸ್ಥೆಗಳಲ್ಲಿರುವ ಮೂರು ದೇಹಗಳಿಗಿಂತ ಅತಿರಿಕ್ತವಾಗಿ ನಮ್ಮ ಆತ್ಮವಿರುವುದೆಂದು ಸಿದ್ಧಪಡುವುದು.

ಆತ್ಮನು ಪಂಚಕೋಶಗಳಿಗಿಂತಲೂ ಅತಿರಿಕ್ತನು

(3) ಪರಮೇಶ್ವರನು ತನ್ನಲ್ಲಿರತಕ್ಕ ಮಾಯಾಶಕ್ತಿಯಿಂದ ಸೃಷ್ಟ್ಯಾರಂಭದಲ್ಲಿ ಶಬ್ದತನ್ಮಾತ್ರ (ಸೂಕ್ಷ್ಮ ಆಕಾಶ), ಸ್ಪರ್ಶತನ್ಮಾತ್ರ (ಸೂಕ್ಷ್ಮವಾಯು), ರೂಪತನ್ಮಾತ್ರ (ಸೂಕ್ಷ್ಮತೇಜಸ್ಸು), ರಸತನ್ಮಾತ್ರ (ಸೂಕ್ಷ್ಮಜಲ), ಗಂಧತನ್ಮಾತ್ರ (ಸೂಕ್ಷ್ಮಪೃಥಿವೀ) ಎಂಬ ಐದು ಸೂಕ್ಷ್ಮ ಭೂತಗಳನ್ನು ಸೃಷ್ಟಿಸಿದನು. ಈ ಸೂಕ್ಷ್ಮಭೂತಗಳು ತ್ರಿಗುಣಾತ್ಮ (ಸತ್ವ ರಜಸ್ತಮೋಗುಣಾತ್ಮ) ಕವಾದ್ದರಿಂದ ಇವುಗಳ ಸಮಷ್ಟಿ (ಎಲ್ಲದರ ಒಟ್ಟು) ಸತ್ವಗುಣಾಂಶದಿಂದ ಅಂತಃಕರಣವು (ಮನಸ್ಸು ಮತ್ತು ಬುದ್ಧಿ) ಉಂಟಾಯಿತು. ಈ ಸೂಕ್ಷ್ಮಭೂತಗಳ ವ್ಯಷ್ಟಿ (ಒಂದೊಂದರ) ಸತ್ವಗುಣಾಂಶದಿಂದ ಅನುಕ್ರಮವಾಗಿ ಶ್ರೋತ್ರ (ಕೇಳುವ) ಸ್ಪರ್ಶ (ಮುಟ್ಟುವ), ನೇತ್ರ (ನೋಡುವ), ಜಿಹ್ವಾ (ರುಚಿನೋಡುವ), ಘ್ರಾಣ (ಮೂಸುವ) ಎಂಬ ಐದು ಜ್ಞಾನೇಂದ್ರಿಯಗಳಾದವು. ಈ ಸೂಕ್ಷ್ಮಭೂತಗಳ ಸಮಷ್ಟಿ (ಎಲ್ಲದರ ಒಟ್ಟು) ರಜೋಗುಣಾಂಶದಿಂದ (ಹೃದಯಸ್ಥಾನದಲ್ಲಿದ್ದುಕೊಂಡು ಉಚ್ಛ್ವಾಸ ನಿಶ್ವಾಸಗಳನ್ನುಂಟುಮಾಡುವ) ಪ್ರಾಣ, (ಗುದಸ್ಥಾನದಲ್ಲಿದ್ದುಕೊಂಡು ಮಲಮೂತ್ರಗಳನ್ನು ವಿಸರ್ಜನಮಾಡುವ) ಅಪಾನ, (ನಾಭಿಸ್ಥಾನದಲ್ಲಿದ್ದುಕೊಂಡು ಭುಂಜಿಸಿದ ಪದಾರ್ಥಗಳ ರಸವನ್ನು ದೇಹದ ಎಲ್ಲಾ ಕಡೆಗೂ ಹಂಚುವ) ಸಮಾನ, (ಕಂಠಸ್ಥಾನದಲ್ಲಿದ್ದುಕೊಂಡು ವಮನವನ್ನು ಮತ್ತು ತೇಗನ್ನು ಉಂಟುಮಾಡುವ) ಉದಾನ, (ಶರೀರದಲ್ಲೆಲ್ಲಾ ವ್ಯಾಪಿಸಿ ಶರೀರವನ್ನು ಧರಿಸಿರುವ) ವ್ಯಾನ ಎಂಬ ಪಂಚವಾಯುಗಳು ಉಂಟಾದವು. ಈ ಸೂಕ್ಷ್ಮಭೂತಗಳ ವ್ಯಷ್ಟಿ (ಒಂದೊಂದರ) ರಜೋಗುಣಾಂಶದಿಂದ ಅನುಕ್ರಮವಾಗಿ ವಾಕ್ (ಮಾತನಾಡುವ), ಪಾಣಿ (ಕೆಲಸ ಮಾಡುವ), ಪಾದ (ನಡೆಯುವ), ಗುಹ್ಯ (ಮೂತ್ರ ವಿಸರ್ಜನೆಮಾಡುವ), ಗುದ (ಮಲವಿಸರ್ಜನೆ ಮಾಡುವ) ಎಂಬ ಐದು ಕರ್ಮೇಂದ್ರಿಯಗಳುಂಟಾದವು. ಈ ರೀತಿಯಾಗಿ ಸೂಕ್ಷ್ಮಭೂತಗಳ ಸತ್ವರಜೋಗುಣಾಂಶಗಳಿಂದುಂಟಾದ ಮನಸ್ಸು, ಬುದ್ಧಿ, ಐದು ಜ್ಞಾನೇಂದ್ರಿಯಗಳು, ಐದು ವಾಯುಗಳು, ಐದು ಕರ್ಮೇಂದ್ರಿಯಗಳು ಎಂಬ ಹದಿನೇಳು ತತ್ವಗಳು ಸೇರಿ ಅಪಂಚೀಕೃತವಾದ ಸೂಕ್ಷ್ಮದೇಹವುಂಟಾಯಿತು. ಈ ಸೂಕ್ಷ್ಮದೇಹವಿರುವವರೆಗೂ ಸ್ಥೂಲದೇಹವು ವ್ಯವಹಾರ ಮಾಡುವುದರಿಂದಲೂ, ಈ ಸೂಕ್ಷ್ಮದೇಹದಲ್ಲಿ ಜೀವಾತ್ಮನು ಇರುವುದರಿಂದಲೂ ಸ್ಥೂಲದೇಹದಲ್ಲಿ ಸೂಕ್ಷ್ಮದೇಹದ ಇರುವಿಕೆಯು ಆತ್ಮನ ಇರುವಿಕೆಗೆ ಗುರುತಾಗಿರುತ್ತದೆ. ಆದುದರಿಂದ ಸೂಕ್ಷ್ಮದೇಹಕ್ಕೆ ಲಿಂಗದೇಹವೆಂಬುದಾಗಿಯೂ ಹೆಸರುಂಟು. ಲಿಂಗ ಅಂದರೆ ಗುರುತು. ಸೂಕ್ಷ್ಮಭೂತಗಳಲ್ಲಿ ಉಳಿದ ತಮೋಗುಣಾಂಶವನ್ನು (ತಮೋಗುಣ ಪ್ರಧಾನಗಳಾದ ಐದು ಸೂಕ್ಷ್ಮಭೂತಗಳನ್ನು) ಪಂಚೀಕರಿಸಿ (ಬೆರಸಿ) ಮನುಷ್ಯರೇ ಆದಿಯಾಗಿ ಸರ್ವಪ್ರಾಣಿಗಳ ಭೋಗಕ್ಕಾಗಿ ಸ್ಥೂಲಶರೀರಗಳನ್ನು ಮತ್ತು ಬ್ರಹ್ಮಾಂಡ (ಪ್ರಪಂಚ) ವನ್ನು ಪರಮೇಶ್ವರನು ಸೃಷ್ಟಿಮಾಡಿದನು. ಸ್ಥೂಲ ದೇಹದ ಪಂಚೀಕರಣವು ಮುಂದೆ ವಿವರಿಸಲ್ಪಡುವುದು.

[೨ನೆಯ ಪುಟವನ್ನು ನೋಡಿ]

ಪಂಚಾಚಾರ್ಯಪ್ರಭಾ.

೧೯೪೫ನೆಯ ಏಪ್ರಿಲ್ ತಾ॥ ೧೬ನೇ ಸೋಮವಾರ

ಅಮೆರಿಕದ ಅಧ್ಯಕ್ಷ ರೂಜ್ವೆಲ್ಟರ ನಿಧನ

ಕಳೆದ ೧೨ನೆಯ ತಾರೀಖಿನ ದಿವಸ ಅಮೇರಿಕದ ರಾಷ್ಟ್ರಾಧ್ಯಕ್ಷರಾದ ಫ್ರ್ಯಾಂಕ್‌ಲಿನ್ ಡಿಲಾನೋ ರೂಜ್‌ವೆಲ್ಟ್‌ರವರು ವರ್ಜಿನಿಯಾದಲ್ಲಿರುವ ವಾರ್ಮ್ಸ್ ಸರ್‌ನಲ್ಲಿ ಮೆದುಳಿನ ರೋಗದಿಂದ ನಿಧನರಾದರು. ಇವರಿಗೆ ೬೩ ವರ್ಷ ವಯಸ್ಸಾಗಿತ್ತು. ಇವರು ನ್ಯೂಯಾರ್ಕ್‌ನಲ್ಲಿ ೧೮೮೨ ಜನವರಿ ೩೦ರಲ್ಲಿ ಜನಿಸಿದರು. ಹರ್ವಾರ್ಡ್ ವಿಶ್ವವಿದ್ಯಾನಿಲಯ ಮತ್ತು ಕೊಲಂಬಿಯಾ ಲಾ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡಿದರು. ೧೯೦೭ ರಲ್ಲಿ ಬ್ಯಾರಿಸ್ಟರ್ ಆಗಿ ನ್ಯೂಯಾರ್ಕ್‌ನಲ್ಲಿ ಕೆಲಸ ಮಾಡಿದರು. ೧೯೧೦ [illegible] ರಲ್ಲಿ ನ್ಯೂಯಾರ್ಕ್ ಸೆನೆಟಿನ ಸದಸ್ಯರಾದರು. ೧೯೧೩ ರಿಂದ ೨೦ ರವರೆಗೆ ನೌಕಾಪಳದ ಉಪಕಾರ್ಯದರ್ಶಿಯಾಗಿದ್ದರು. ೧೯೩೨ರಲ್ಲಿ ಎಂ. ಹೂವರ್‌ರವರನ್ನು ಸೋಲಿಸಿ ಅಮೇರಿಕದ ಅಧ್ಯಕ್ಷಸ್ಥಾನಕ್ಕೆ ಏರಿದರು. ಅಂದಿನಿಂದ ಇಂದಿನವರೆಗೂ ಅಧ್ಯಕ್ಷರಾಗಿ, ಅಮೇರಿಕೆಯ ಪ್ರಜಾಸತ್ತೆಯ ನಾವೆಯನ್ನು ಸುಗಮವಾಗಿ ನಡೆಸಿದ್ದರು. ಅಮೇರಿಕೆಯ ಆರ್ಥಿಕ ಮುಗ್ಗಟ್ಟಿನ ಕಾಲದಲ್ಲಿ ವಿವಿಧ ಯೋಜನೆಗಳನ್ನು ಸಿದ್ಧಪಡಿಸಿ ದೇಶವನ್ನು [illegible]. ೧೯೩೬ರಲ್ಲಿ ಪುನಃ ಅಧ್ಯಕ್ಷರಾದರು. [illegible] ೧೯೪೦ ಮತ್ತು ೧೯೪೪ರಲ್ಲಿ ಅಧ್ಯಕ್ಷಸ್ಥಾನಕ್ಕೆ [illegible] [illegible] ಮುಸಲಿನಿಗ [illegible] ಆದರೆ [illegible] ಮಾಡಿ [illegible] ಯುದ್ಧ [illegible] ಸಮರಕ್ಕೆ [illegible] ನಡೆದರು. ಬ್ರಿಟನ್ನಿಗೆ ಎಲ್ಲಾ ಬಗೆಯ ಸಹಾಯ ನೀಡಿದರು. ಜಪಾನ್ ಆಕ್ರಮಣ ನಡೆಸಿ ಅಮೇರಿಕೆಯನ್ನು ಯುದ್ಧರಂಗಕ್ಕೆಳೆಯಿತು.

ಹಿಟ್ಲರನ ಔದ್ಧತ್ಯವನ್ನು ತಡೆಯುವದಕ್ಕೆ ಇವರೇ ಮೂಲಕಾರಣರಾದರು. ಇವರ ಸಹಾಯ ವಿಲ್ಲದಿದ್ದರೆ ಈವರೆಗೆ ಯಾವ ರಾಷ್ಟ್ರವು ಜೀವಿಸಿಕೊಂಡಿರುತ್ತಿರಲಿಲ್ಲ ವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಇವರ ಸಹಾಯದಿಂದಲೇ ಬ್ರಿಟನ್ನು ಮತ್ತು ರಷ್ಯದೇಶಗಳು ಚೇತರಿಸಿಕೊಂಡವು. ಮುಸ್ಸೊಲಿನಿಯ [illegible] ಕಾರ್ಯವನ್ನು ಮಾಡುತ್ತಿದ್ದರು. ಜರ್ಮನಿಗಿಂತಲೂ ಜಪಾನಿನಮೇಲೆ ಇವರ ಕೋಪವು ವಿಶೇಷವಾಗಿತ್ತು. ಜಪಾನನ್ನು ಮೊದಲು ಸದೆಬಡಿಯಬೇಕೆಂಬುದೇ ಇವರ ಮೂಲ ಮಂತ್ರವಾಗಿತ್ತು. ಜರ್ಮನ್ ದೇಶವನ್ನೆಲ್ಲಾ ಪ್ರೋಕ್ಷಿಸಿ ಇಷ್ಟರಲ್ಲಿಯೇ ಜಪಾನಿನಮೇಲೆ ಮಹಾದಂಡಯಾತ್ರೆಯನ್ನು ನಡೆಯಿಸುವವರಾಗಿದ್ದರು. ಇಂತಹ ಸುಸಮಯಗಳಲ್ಲಿಯೇ ಕ್ರೂರನಿಧಿಯು ಇವರನ್ನು ತನ್ನ ಕಡೆಗೆ ಸೆಳೆದು ಒಯ್ದುದನ್ನು ನೋಡಿದರೆ ಇನ್ನೂ ಕೆಲಕಾಲ ಲೋಕಕ್ಕೆ ಶಾಂತಿಯಿಲ್ಲವೆಂದೇ ಹೇಳಬೇಕಾಗಿದೆ. ಇವರ ವಿಯೋಗದಿಂದ ಸಮಸ್ತ ಪ್ರಪಂಚಕ್ಕೇ ಒಂದು ದೊಡ್ಡ ಆಘಾತವೆಂದು ಹೇಳಬಹುದು.

ಇವರಿಗೆ ಒಬ್ಬ ಹೆಣ್ಣುಮಗಳೂ ನಾಲ್ವರು ಗಂಡುಮಕ್ಕಳೂ ಇದ್ದಾರೆ. ಗಂಡುಮಕ್ಕಳೆಲ್ಲರೂ ಯುದ್ಧಭೂಮಿಯಲ್ಲಿ ಹೋರಾಡುತ್ತಿದ್ದಾರೆ. ಇವರು ಭಾರತದಬಗ್ಗೆ ಅಪಾರ ಸೌಹಾರ್ದವನ್ನು ವ್ಯಕ್ತಪಡಿಸಿದ್ದರು. ಇವರ ಮರಣದಿಂದ ಭಾರತವು ತನ್ನ ಸ್ನೇಹಿತನನ್ನು ಕಳೆದುಕೊಂಡಿತು. ರಾಜ್ಯಾಂಗ ಘಟನೆಯ ಸೂತ್ರಗಳಿಗೆ ಅನುಸಾರವಾಗಿ ಉಪಾಧ್ಯಕ್ಷ ಟ್ರೂಮನ್‌ರವರು ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದಾರೆ. ಜಗದೀಶ್ವರನು ಮೃತರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಪ್ರಾರ್ಥಿಸುತ್ತೇವೆ.

[೧ನೆಯ ಪುಟದಿಂದ ಮುಂದುವರಿದುದು]

ಈಗ ನಮ್ಮ ದೇಹದಲ್ಲಿ ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ ಎಂಬ ಐದು ಕೋಶಗಳಿವೆ. ನಮ್ಮ ಸ್ಥೂಲದೇಹವು ಮಾತಾಪಿತೃಗಳಿಂದ ಭುಂಜಿಸಲ್ಪಟ್ಟ ಅನ್ನದ ದೆಸೆಯಿಂದುಂಟಾದ ಶುಕ್ಲ ಶೋಣಿತಗಳಿಂದ ಹುಟ್ಟಿದ್ದಲ್ಲದೆ ಅನ್ನದಿಂದಲೇ ಬೆಳೆಯುತ್ತಿರುವುದರಿಂದ ಇದಕ್ಕೆ ಅನ್ನಮಯ ಕೋಶವೆಂದು ಹೆಸರುಬಂದಿತು. ಯಾವ ಪ್ರಾಣಾದಿ ಪಂಚವಾಯುಗಳು ದೇಹದಲ್ಲಿ ಪಾದ ಮೊದಲುಗೊಂಡು ಮಸ್ತಕಪರಿಯಂತರವಾಗಿ [?] ತುಂಬಿ ದೇಹಕ್ಕೆ ಬಲವನ್ನು ಕೊಡುತ್ತಾ ಇಂದ್ರಿಯಗಳನ್ನು ಪ್ರೇರಿಸುತ್ತಲಿರುವವೋ ಆ ವಾಯುಗಳ ಸಮೂಹವೇ ಪ್ರಾಣಮಯಕೋಶವೆನಿಸುವುದು. ಈ ಪ್ರಾಣಮಯಕೋಶಕ್ಕೆ ಹಸಿವು ಬಾಯಾರಿಕೆ ಮುಂತಾದವುಗಳನ್ನು ಉಂಟುಮಾಡುವದೇ ಧರ್ಮವಾಗಿದೆ. ಅಂತಃಕರಣವು ಅಂದರೆ ಬುದ್ಧಿಯು ಮತ್ತು ಮನಸ್ಸು ಕರ್ತೃ ಕರಣಭಾವಗಳನ್ನು ಹೊಂದುವುದರಿಂದ ಬುದ್ಧಿಯು ಪಂಚಜ್ಞಾನೇಂದ್ರಿಯ ಸಹಿತ ವಿಜ್ಞಾನಮಯಕೋಶವೆಂಬುದಾಗಿಯೂ, ಮನಸ್ಸು ಪಂಚಜ್ಞಾನೇಂದ್ರಿಯಗಳ ಸಹಿತ ಮನೋಮಯಕೋಶವೆಂಬುದಾಗಿಯೂ ಕರೆಯಲ್ಪಡುತ್ತವೆ. ವಿಜ್ಞಾನಮಯಕೋಶವು ದೇಹದಲ್ಲಿ ನಾನು ಎಂಬ ಅಹಂಭಾವದಿಂದ ವರ್ತಿಸುತ್ತಲಿರುವುದು. ಮನೋಮಯಕೋಶವು ದೇಹದ ಹೊರಗೆ ಗೃಹಾದಿಗಳಲ್ಲಿ ನನ್ನದೆಂಬ ಮಮತೆಯಿಂದ ವರ್ತಿಸುತ್ತಲಿರುವುದು. ಪುಣ್ಯಕರ್ಮಫಲಾನುಭವದ ಒಂದಾನೊಂದು ಸಮಯದಲ್ಲಿ ಬುದ್ಧಿವೃತ್ತಿಯು ಇತರ ಪದಾರ್ಥ ವಾಸನೆಯನ್ನೆಲ್ಲಾ ಅಂತರ್ಮುಖವುಳ್ಳದ್ದಾದಾಗ ಅದರಲ್ಲಿ ಆತ್ಮಸ್ವರೂಪವಾದ ಆನಂದದ ಪ್ರತಿಬಿಂಬವು ಬೀಳುವುದು. ಇಂತಪ್ಪ ವೃತ್ತಿಯು ಪುಣ್ಯಕರ್ಮಫಲಭೋಗವು ನಾಶವಾದ ಮೇಲೆ ನಿದ್ರಾ (ಅಜ್ಞಾನ) ರೂಪವಾಗಿ ಪರಿಣಮಿಸುವುದು. ಈ ಆನಂದದ ಪ್ರತಿಬಿಂಬಸಹಿತವಾದ [illegible] ವೃತ್ತಿಗೆ ಅಂದರೆ ಅಜ್ಞಾನಕ್ಕೆ ಆನಂದಮಯಕೋಶವೆಂದು ಹೆಸರು. ಸಮುದ್ರದಲ್ಲಿ ವಾಯುವಿನ ಚಲನೆಯಿಂದ ಸಮುದ್ರದ ಜಲವೇ ಅಲೆಗಳಾಗಿ ಪರಿಣಮಿಸುವಂತೆ ಬುದ್ಧಿಯು ವಿಷಯಗಳ ಭಾವನೆಯಿಂದ ತದಾಕಾರವಾಗಿ ಪರಿಣಮಿಸುತ್ತದೆ. ಈ ಬುದ್ಧಿಯ ಪರಿಣಾಮಕ್ಕೆ ವೃತ್ತಿಯೆಂದು ಹೆಸರು. ಈ ಪಂಚಕೋಶಗಳಲ್ಲೈಕೆ ಅನ್ನಮಯಕೋಶವೇ ಸ್ಥೂಲದೇಹವಾಗಿರುತ್ತದೆ. ಪ್ರಾಣಮಯ, ಮನೋಮಯ, ವಿಜ್ಞಾನಮಯಗಳೆಂಬ ೩ ಕೋಶಗಳೂ ಸೇರಿ ಸೂಕ್ಷ್ಮಶರೀರವಾಗಿರುತ್ತವೆ. ಆನಂದಮಯಕೋಶವೇ ಕಾರಣಶರೀರವಾಗಿರುತ್ತದೆ. ಆದುದರಿಂದ ಜಾಗ್ರದವಸ್ಥೆಯಲ್ಲಿರತಕ್ಕ ಅನ್ನಮಯಕೋಶವು ಸ್ವಪ್ನಾವಸ್ಥೆಯಲ್ಲಿಯೂ ಮತ್ತು ಸ್ವಪ್ನಾವಸ್ಥೆಯಲ್ಲಿರತಕ್ಕ ಪ್ರಾಣಮಯ, ಮನೋಮಯ, ವಿಜ್ಞಾನಮಯಕೋಶಗಳು ಸುಷುಪ್ತ್ಯವಸ್ಥೆಯಲ್ಲಿಯೂ ಇರುವುದಿಲ್ಲ. ಆನಂದಮಯಕೋಶವು ಸದಾ ಇಲ್ಲದೆ ಒಂದಾನೊಂದು ಸಮಯದಲ್ಲಿ ಮಾತ್ರ ತೋರುವುದು. ಎಲ್ಲಾ ಕೋಶಗಳು ಎಲ್ಲಾ ಅವಸ್ಥೆಗಳಲ್ಲಿ ಇಲ್ಲದೆ ಇದ್ದರೂ ನಮ್ಮ ಆತ್ಮವು ಎಲ್ಲಾ ಅವಸ್ಥೆಗಳಲ್ಲಿರುವುದರಿಂದ ಅದು ಪಂಚಕೋಶಗಳಿಗಿಂತ ಅತಿರಿಕ್ತವಾಗಿರುವುದು.

ಆತ್ಮನು ಹಿಂದಿನ, ಈಗಿನ ಮತ್ತು ಮುಂದಿನ ದೇಹಗಳಿಗಿಂತ ಅತಿರಿಕ್ತನು

(4) ನಾವು ನೋಡಿದ ಹಾಗೆ ಈ ಲೋಕದಲ್ಲಿ ಕೆಲವರು ಸುಖಿಗಳಾಗಿಯೂ, ಮತ್ತೆ ಕೆಲವರು ದುಃಖಿಗಳಾಗಿಯೂ ಇರುತ್ತಾರೆ. ಈ ವಿಧವಾದ ವ್ಯತ್ಯಾಸಕ್ಕೆ ಕಾರಣವೇನೆಂದು ನಾವು ವಿಚಾರಮಾಡಿನೋಡಿದರೆ ಹಿಂದಿನ ಜನ್ಮಗಳಲ್ಲಿ ಮಾಡಿದ ಪುಣ್ಯಪಾಪಗಳೇ ಕಾರಣವೆಂದು ಹೇಳಬೇಕಾಗುತ್ತದೆ. ಒಂದುವೇಳೆ ನಾವು ಹಿಂದಿನ ಜನ್ಮಗಳನ್ನು ಒಪ್ಪದೇಹೋದರೆ ಈ ಜನ್ಮಕ್ಕೆ ಬರುವುದಕ್ಕೆ ಮುಂಚೆ ನಾವು ಇರಲಿಲ್ಲವೆಂದೂ, ಇದರಿಂದ ನಾವು ಯಾವ ಕರ್ಮಗಳನ್ನೂ ಮಾಡಿರಲಿಲ್ಲವೆಂದೂ ಹೇಳಬೇಕಾಗುತ್ತದೆ. ಇದರಿಂದ ಕರ್ಮವೆಂಬ ಕಾರಣವಿಲ್ಲದೆ ನಮಗೆ ಈ ಜನ್ಮವು ಬಂದಿರುತ್ತದೆಂದು ಹೇಳಿದಹಾಗಾಗುವುದು. ಲೋಕದಲ್ಲಿ ಕಾರಣವಿಲ್ಲದ ಕಾರ್ಯವನ್ನು ಯಾರೂ ನೋಡಿಲ್ಲವಾದ್ದುದರಿಂದ ಕರ್ಮವೆಂಬ ಕಾರಣವಿಲ್ಲದೆ ನಮಗೆ ಈ ಜನ್ಮವು ಬಂದಿರುವುದು ಸಂಭವವಲ್ಲ. ಒಂದು ವೇಳೆ ನಮ್ಮ ಜನ್ಮಕ್ಕೆ ನಮ್ಮ ತಂದೆಯ ವೀರ್ಯವೇ ಕಾರಣವೆಂದು ಕೆಲವರು ಹೇಳಬಹುದು. ಹಾಗಿದ್ದರೆ ಪುರುಷನು ಸ್ತ್ರೀಯಲ್ಲಿ ಸಂಭೋಗ ಮಾಡಿದಾಗಲೆಲ್ಲ ಅವಳು ಗರ್ಭವನ್ನು ಧರಿಸಬೇಕಾಗುತ್ತದೆ. ಆದರೆ ಅನುಭವದಲ್ಲಿ ಹಾಗಿಲ್ಲ. ಆದುದರಿಂದ ಈ ಜನ್ಮಕ್ಕೆ ತಂದೆಯ ವೀರ್ಯವೇ ಮುಂತಾದವು ಸಹಕಾರಿಕಾರಣಗಳಾಗಿ ಹಿಂದಿನ ಕರ್ಮಗಳೇ ಮುಖ್ಯಕಾರಣವಾಗಿವೆ.

“ ಅಯುಖಲುವಿಷಮಃ ಪುರಾಕೃತಾನಾಂ ಭವತಿಹಿ ಜಂತುಷು ಕರ್ಮಣಾಂ ವಿಪಾಕಃ । ಶಿವಶಿರಸಿ ಶಿರಾಂಸಿ ಯಾನಿರೇಜುಃ ಶಿವಶಿವತಾನಿಲುಠಂತಿ ಗೃಧ್ರಪಾದೈಃ ॥ ”
ಅಂದರೆ ರಾವಣನು ಅತ್ಯಂತ ಭಕ್ತಿಯಿಂದ ತನ್ನ ಹತ್ತು ತಲೆಗಳನ್ನು ಶಿವನಿಗೆ ಅಗ್ನಿಮುಖದಿಂದ ಅರ್ಪಿಸಿದ್ದರಿಂದ ಶಿವನು ಭಕ್ತಿಗೆ ಮೆಚ್ಚಿ ಅವನ ತಲೆಗಳನ್ನು ತನ್ನ ಶಿರಸ್ಸಿನಲ್ಲಿ ಧರಿಸಿದ್ದನು. ಜಗದೀಶ್ವರನಿಂದ ಧರಿಸಲ್ಪಟ್ಟಿದ್ದ ಈ ತಲೆಗಳೂ ಕೂಡ ರಾವಣನು ಮಾಡಿದ ಸೀತಾಪಹರಣ ಎಂಬ ಮಹಾಪಾಪಕಾರ್ಯದಿಂದ ಶ್ರೀರಾಮನಿಂದ ಸಂಹರಿಸಲ್ಪಟ್ಟು ಮಾಂಸವನ್ನು ತಿನ್ನುವದಕ್ಕೆ ಬಂದ ಹದ್ದುಗಳ ಕಾಲುಗಳ ಕೆಳಗೆ ಉರುಳಾಡುತ್ತಿದ್ದುವು ಎಂದು ಹೇಳಿರುವಂತೆ ನಾವು ಯಾವ ಕರ್ಮವನ್ನು ಮಾಡಿದರೂ ಅದು ಫಲವನ್ನು ಕೊಟ್ಟೇಕೊಡುತ್ತದೆ. ಅದನ್ನು ತಪ್ಪಿಸುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ. ಆದುದರಿಂದ ನನ್ನ ಕರ್ಮಗಳ ಫಲವನ್ನು ನಾವು ಅನುಭವಿಸಲೇ ಬೇಕು. ಅಂದರೆ ಮಾವಿನ ಬೀಜವನ್ನು ಬಿತ್ತಿದವನು ಮಾವಿನ ಫಲವನ್ನೂ, ಬೇವಿನ ಬೀಜವನ್ನು ಬಿತ್ತಿದವನು ಬೇವಿನ ಫಲವನ್ನೂ ಹೇಗೆ ಪಡೆಯುತ್ತಾನೆಯೋ ಹಾಗೆ ಒಳ್ಳೇ ಕರ್ಮವನ್ನು ಮಾಡಿದವನು ಒಳ್ಳೇಫಲ (ಸುಖ) ವನ್ನೂ, ಕೆಟ್ಟಕರ್ಮವನ್ನು ಮಾಡಿದವನು ಕೆಟ್ಟ ಫಲ (ದುಃಖ)ವನ್ನೂ ಹೊಂದುತ್ತಾನೆ. ಹಾಗಲ್ಲದೇ ಹೋದರೆ ಅಕೃತಾಭ್ಯಾಗಮ (ಹಿಂದಿನ ಜನ್ಮದಲ್ಲಿ ಕರ್ಮಗಳನ್ನು ಮಾಡದೇ ಇದ್ದರೂ ಈ ಜನ್ಮದಲ್ಲಿ ಸುಖದುಃಖಗಳನ್ನು ಅನುಭವಿಸುವದು) ಮತ್ತು ಕೃತವಿಪ್ರಣಾಶ (ಈ ಜನ್ಮದಲ್ಲಿ ಮಾಡಿದ ಕರ್ಮಗಳು ಮುಂದಿನ ಜನ್ಮದಲ್ಲಿ ಸುಖದುಃಖಗಳನ್ನು ಕೊಡದೇ ಇರುವುದು) ಎಂಬ ದೋಷಗಳು ಉಂಟಾಗುವುವು.

ಪೂರ್ವ ಜನ್ಮಗಳಲ್ಲಿ ನಾವು ಮಾಡಿದ ಅಭ್ಯಾಸ ಅಂದರೆ ಅನುಭವವು ಈ ಜನ್ಮದಲ್ಲಿ ಸ್ವಭಾವವಾಗುತ್ತದೆ. ಈಗತಾನೆ ಹುಟ್ಟಿದ ಮಗುವಾಗಲಿ ಅಥವಾ ಕರುವಾಗಲಿ ಇತರರಿಂದ ಕಲಿಸಲ್ಪಡದೆ ತಾನಾಗಿಯೇ ಸ್ತನ್ಯಪಾನವನ್ನು ಮಾಡುತ್ತದೆ. ಇದರಂತೆ ಈಗತಾನೇ ಮೊಟ್ಟೆಯಿಂದ ಈಚೆಗೆ ಬಂದ ಕೋಳೀಮರಿಯು ಕಾಳುಗಳನ್ನು ಆರಿಸಿಕೊಳ್ಳುತ್ತದೆ ಮತ್ತು ಆಕಾಶದಲ್ಲಿ ಹಾರಾಡುತ್ತಿರುವ ಹದ್ದನ್ನು ನೋಡಿ ಹೆದರುತ್ತದೆ. ಈಗತಾನೇ ಮೊಟ್ಟೆಯಿಂದ ಈಚೆಗೆ ಬಂದ ಬಾತುವಿನ ಮರಿಯು ನೀರನ್ನು ಕಂಡರೆ ಧುಮುಕುತ್ತದೆ. ಕೋಳೀಮರಿಯು ಹದ್ದಿಗೆ ಹೆದರುವುದು, ಬಾತುವಿನ ಮರಿಯು ನೀರನ್ನು ಪ್ರೀತಿಸುವದು ಹಿಂದಿನ ಜನ್ಮಗಳ ಅನುಭವದ ಫಲವಾಗಿದೆ. ‘ ಈ ವಿಧವಾದ ಅನುಭವಗಳು ಹಿಂದಿನ ಜನ್ಮದ್ದಲ್ಲ ಅವರೆ ಇವುಗಳು ತಾಯಿತಂದೆಗಳಿಂದ ಬಂದದ್ದು ’ ಎಂಬುದಾಗಿ ಕೆಲವರು ಹೇಳಬಹುದು. ಇದು ಲೋಕಾನುಭವಕ್ಕೆ ವಿರೋಧವಾಗಿದೆ. ಏತಕ್ಕೆಂದರೆ, ತಾಯಿತಂದೆಗಳು ದಡ್ಡರಾಗಿದ್ದರೂ ಮಕ್ಕಳು ಬಹಳ ಬುದ್ಧಿಶಾಲಿಗಳಾಗಿರುವುದುಂಟು. ತಾಯಿತಂದೆಗಳು ಬುದ್ಧಿಶಾಲಿಗಳಾಗಿದ್ದರೂ ಮಕ್ಕಳು ದಡ್ಡರಾಗಿರುವುದುಂಟು. ಶ್ರೀ ರಾಮಕೃಷ್ಣಪರಮಹಂಸರ ಭಕ್ತಿ ಜ್ಞಾನ ವೈರಾಗ್ಯಗಳು ಅವರ ತಾಯಿತಂದೆಗಳಿಗಿರಲಿಲ್ಲ. ಗೌತಮಬುದ್ಧನಲ್ಲಿದ್ದ ಭೂತದಯಾ ಮತ್ತು ವೈರಾಗ್ಯ ಅವನ ತಾಯಿತಂದೆಗಳಿಗಿರಲಿಲ್ಲ. ಏಸು ಕ್ರಿಸ್ತನ ಜ್ಞಾನ ಮತ್ತು ಅಮಾನುಷ ಶಕ್ತಿ ಅವನ ತಾಯಿತಂದೆಗಳಿಗಿರಲಿಲ್ಲ. ಮಹಮ್ಮದನಿಗಿದ್ದ ಅಂತಜ್ಞಾನವು ಅವನ ತಾಯಿತಂದೆಗಳಿಗಿರಲಿಲ್ಲ. ಅನೇಕರು ಒಂದೇ ಕಾಲದಲ್ಲಿ ವಿದ್ಯಾಭ್ಯಾಸವನ್ನು ಮಾಡಿದರೆ ಅವರಲ್ಲಿ ಒಬ್ಬನು ಪೂರ್ವದ ಅಭ್ಯಾಸದ ಬಲದಿಂದ ತನ್ನ ತಂದೆಯು ಅವಿದ್ಯಾವಂತನಾಗಿದ್ದರೂ ತನ್ನ ಬಾಲ್ಯದಲ್ಲಿಯೇ ಕವಿತ್ವ ಮಾಡುವ ಶಕ್ತಿಯುಳ್ಳವನಾಗುತ್ತಾನೆ. ಆದುದರಿಂದ, ನಮಗೆ ಈ ಜನ್ಮದಲ್ಲಿ ಸ್ವಭಾವವಾಗಿರುವುದು ನಮ್ಮ ಹಿಂದಿನ ಜನ್ಮಗಳ ಅನುಭವದ ಫಲವೇ ಹೊರತು ಇದಕ್ಕೆ ನಮ್ಮ ತಾಯಿತಂದೆಗಳು ಕಾರಣರಲ್ಲ. ಹಿಂದಿನ

ಜನ್ಮ ಅಂದರೆ ಈ ಜನ್ಮದ ಹಿಂದಿನ ಜನ್ಮವೆಂದೇ ಅರ್ಥ ಮಾಡಕೂಡದು. ಏತಕ್ಕೆಂದರೆ, ಒಬ್ಬನು ನಾಟಕದಲ್ಲಿ ಸಂದರ್ಭಾನುಸಾರ ಅನೇಕ ಪಾರ್ಟುಗಳನ್ನು ಅನೇಕಾವರ್ತಿ ಮಾಡಿರುವುದರಿಂದ ತಾನು ಯಾವ ಪಾರ್ಟಿನ ವೇಷವನ್ನು ಹಾಕುತ್ತಾನೊ ಆ ಪಾರ್ಟಿಗೆ ತಕ್ಕಹಾಗೆ ನಟಿಸುತ್ತಾನೆ. ಇದರಂತೆ ನಮ್ಮಲ್ಲಿ ಪ್ರತಿಯೊಬ್ಬರಿಗು ೮೪ ಲಕ್ಷ ತರಹ ಜನ್ಮಗಳು ಅಂದರೆ ದೇಹಗಳು ಅನೇಕಾವರ್ತಿ ಬಂದಿರುವುದರಿಂದ ಎಲ್ಲಾ ತರಹ ದೇಹಗಳಿಂದ ವ್ಯವಹಾರವನ್ನು ಮಾಡಿರುವ ಅಭ್ಯಾಸವು ನಮಗೆ ಉಂಟು. ಆದುದರಿಂದ ನಮಗೆ ನಮ್ಮ ಕರ್ಮಗಳಿಗನುಸಾರವಾಗಿ ಯಾವ ಯಾವ ದೇಹವು ಪ್ರಾಪ್ತವಾಗುತ್ತದೊ ಆಯಾಯ ದೇಹಕ್ಕೆ ತಕ್ಕಂತೆ ವ್ಯವಹಾರವನ್ನು ನಾವು ಮಾಡುತ್ತೇವೆ ಅಂದರೆ ನಮಗೆ ಗೋವಿನ ದೇಹವು ಪ್ರಾಪ್ತವಾದರೆ ಹುಲ್ಲನ್ನು ತಿನ್ನುತ್ತೇವೆ ಹುಲಿಯ ದೇಹವು ಪ್ರಾಪ್ತವಾದರೆ ಪ್ರಾಣಿಗಳನ್ನು ಕೊಂದು ಅವುಗಳ ಮಾಂಸವನ್ನು ತಿನ್ನುತ್ತೇವೆ ಹಂದಿಯ ಜನ್ಮವು ಬಂದರೆ ಅಮೇಧ್ಯವನ್ನು ಬಹಳ ಇಚ್ಛೆಯಿಂದ ತಿನ್ನುತ್ತೇವೆ ಈ ಕಾರಣಗಳಿಂದ ನಮಗೆ ಹಿಂದಿನ ಜನ್ಮವಿತ್ತು ಮತ್ತು ಮುಂದಿನ ಜನ್ಮವು ಬರುತ್ತದೆ ಎಂಬುವದು ಮತ್ತು ಹಿಂದಿನ ಶರೀರ, ಈಗಿನ ಶರೀರ, ಮುಂದಿನ ಶರೀರ ಬೇರೆ ಬೇರೆಯಾದರೂ ಇವುಗಳಿಗೆ ಅತಿರಿಕ್ತವಾಗಿ ನಮ್ಮ ಆತ್ಮವಿರುವದೆಂಬುದು ಸಿದ್ಧವಾಗುವುದು.

ಪೈಶಾಚಜನ್ಮದಿಂದ ಆತ್ಮನಿಗೆ ಪುನರ್ಜನ್ಮಸಿದ್ಧಿ

(೬) ಪಿಶಾಚಿಗಳಿಂದ ಹಿಡಿಯಲ್ಪಟ್ಟಿರತಕ್ಕವರಲ್ಲಿ ಅನೇಕರನ್ನು ನಾವು ನೋಡಿದ್ದೇವೆ ಅಂತಹವರುಗಳು ತಮಗೆ ಬಾರದೆ ಇರತಕ್ಕ ಭಾಷೆಗಳಲ್ಲಿ ಮಾತನಾಡುವರಲ್ಲದೆ ಅಮಾನುಷಕೃತ್ಯಗಳನ್ನು ಮಾಡುತ್ತಾರೆ ಪಿಶಾಚಗ್ರಸ್ತರ ಮೇಲೆ ಪಿಶಾಚಿಗಳ ಆವೇಶವು ಬಂದಾಗ ಅವುಗಳು ತಮ್ಮ ಪೂರ್ವಜನ್ಮಗಳ ವೃತ್ತಾಂತಗಳನ್ನು ಹೇಳುತ್ತವೆ ಸಾಮಾನ್ಯವಾಗಿ ದುರ್ಮರಣವನ್ನು ಹೊಂದಿದವರಿಗೂ ಮತ್ತು ವನಾದಿಗಳಲ್ಲಿ ಅನ್ಯಾಯವಾಗಿ ದುರ್ಮತಿಯುಳ್ಳವರಾಗಿ ಪ್ರಾಣವನ್ನು ಬಿಡುವವರಿಗೂ ಪೈಶಾಚಜನ್ಮವು ಪ್ರಾಪ್ತವಾಗುವುದೆಂದು ನಮ್ಮ ಶಾಸ್ತ್ರವಲ್ಲಿ ಹೇಳಿರುತ್ತವೆ. ಅಲ್ಲದೆ ಏಸುಕ್ರಿಸ್ತನು ಅನೇಕ ಪಿಶಾಚಗ್ರಸ್ತರನ್ನು ಪಿಶಾಚಿಗಳಿಂದ ಬಿಡಿಸಿದನೆಂದು ಬೈಬಲ್ಲಿನಲ್ಲಿ ಹೇಳಿದೆ ಪಿಶಾಚಿಗಳ ಇರುವಿಕೆಯ ವಿಷಯದಲ್ಲಿ ಒಬ್ಬ ಶಿಷ್ಯನು ಪ್ರಶ್ನೆ ಮಾಡಿದಾಗ ಸ್ವಾಮಿ ವಿವೇಕಾನಂದರು ತಮ್ಮ ಬಂಧುಗಳ ಪೈಕಿ ಒಬ್ಬನು ಪೈಶಾಚಜನ್ಮವನ್ನೆತ್ತಿ ಆಗಾಗ್ಗೆ ಅವರಲ್ಲಿಗೆ ಬಂದು ಮುಂದೆ ನಡೆಯತಕ್ಕ ವಿಷಯಗಳನ್ನು ಹೇಳುತ್ತಿದ್ದನೆಂತಲೂ, ಅದರ ಅನೇಕ ಕಡೆಗಳಲ್ಲಿ ಅನೇಕ ಹೇಳಿಕೆಗಳು ನಿಜವಾಗಲಿಲ್ಲವೆಂತಲೂ, ಅವರು ಪುಣ್ಯಕ್ಷೇತ್ರಗಳ ಯಾತ್ರೆಗೆ ಹೋಗಿದ್ದಾಗ ಅಲ್ಲಿ ಅವನಿಗೆ ಪೈಶಾಚಜನ್ಮವು ಹೋಗಲೆಂದು ಈಶ್ವರನನ್ನು ಪ್ರಾರ್ಥಿಸಿದ್ದರಮೇಲೆ ಅಂದಿನಿಂದ ಅವನು ಬಳಿಗೆ ಬರಲಿಲ್ಲವೆಂತಲೂ ಹೇಳಿರುವರು (ಸ್ವಾಮಿ ವಿವೇಕಾನಂದರ ಗ್ರಂಥಮಾಲೆಯ 7ನೆಯ ವಾಲ್ಯೂಂ 129ನೆಯ ಪುಟವನ್ನು ನೋಡಿ). ಪಿಶಾಚಿಗಳಿಗೆ ವಾಯುವಿನ ಅಂಶವೇ ಪ್ರಧಾನವಾಗುಳ್ಳ ವಾಯವೀಯ ಶರೀರಗಳಿರುವುದರಿಂದ ತಾವು ಎಲ್ಲಿಗೆ ಬೇಕಾದರೂ ಸಂಚಾರವನ್ನು ಮತ್ತು ಯಾರ ದೇಹದಲ್ಲಾದರೂ ಪ್ರವೇಶವನ್ನು ಮಾಡಬಹುದು. ಅಲ್ಲದೆ ಪಿಶಾಚಿಗಳು ತಮಗೆ ಇಷ್ಟಬಂದ ಆಕಾರಗಳನ್ನು ಧರಿಸುವುವು ಇದರಿಂದ ದೇಹಾತಿರಿಕ್ತವಾಗಿ ನಮ್ಮ ಆತ್ಮವಿರುವುದೆಂಬುದು, ಪೂರ್ವಾಪರ ಜನ್ಮಗಳುಂಟೆಂಬುದು ಸಿದ್ಧವಾಗುವುದು

ಕರ್ಮಜಾಡ್ಯಗಳಿಂದ ಆತ್ಮನಿಗೆ ಪುನರ್ಜನ್ಮದ ಸಿದ್ಧಿ

(೬) ಕರ್ಮವಿಪಾಕವೆಂಬ ಶಾಸ್ತ್ರದಲ್ಲಿ ಈಗ ಕುಷ್ಠಾದಿ ಕರ್ಮಜಾಡ್ಯಗಳನ್ನು ಅನುಭವಿಸುವವರು ಅವರ ಹಿಂದಿನ ಜನ್ಮಗಳಲ್ಲಿ ಯಾವ ಯಾವ ದುಷ್ಕರ್ಮವನ್ನು ಮಾಡಿದ್ದರು ಎಂಬುವುದು ಮತ್ತು ಯಾವ ಯಾವ ಶಾಂತಿಗಳನ್ನು ಮಾಡಿದರೆ ಆ ಜಾಡ್ಯಗಳು ನಿವಾರಣೆಯಾಗುತ್ತವೆ ಎಂಬುವುದು ಹೇಳಲ್ಪಟ್ಟಿವೆ. ಆ ಶಾಸ್ತ್ರದಲ್ಲಿ ಹೇಳಿದಂತೆ ಆ ಶಾಂತಿಗಳನ್ನು ಮಾಡಿದವರನೇಕರು ರೋಗಗಳಿಂದ ಬಿಡುಗಡೆ ಹೊಂದಿ ಸುಖವಾಗಿದ್ದಾರೆ. ಆದ್ದುದರಿಂದ ದೇಹಾತಿರಿಕ್ತವಾಗಿ ನಮ್ಮ ಆತ್ಮವಿರುವುದೆಂಬುದೂ, ನಾವು ಹಿಂದಿನ ಜನ್ಮಗಳಲ್ಲಿ ಮಾಡಿದ ಕರ್ಮಗಳ ಫಲವನ್ನು ಈ ಜನ್ಮದಲ್ಲಿ ಅನುಭವಿಸುತ್ತಿದ್ದೇವೆಂಬುದೂ, ಈ ಜನ್ಮದಲ್ಲಿ ಅಥವಾ ಹಿಂದಿನ ಜನ್ಮಗಳಲ್ಲಿ ನಾವು ಮಾಡಿದ ಕರ್ಮಗಳ ಫಲವನ್ನು ಮುಂದಿನ ಜನ್ಮಗಳಲ್ಲಿ ಅನುಭವಿಸುತ್ತೇವೆಂಬುದೂ ಸಿದ್ಧವಾಗುವುದು.

ಆತ್ಮನಿಗೆ ದೇಹವಿಯೋಗಾನಂತರ ಪರಲೋಕಗಮನ

(೭) ಕೆಲವು ಕಡೆಗಳಲ್ಲಿ ಕೆಲವರು ಗತಿಸಿದನಂತರ ಪುನಃ ಬದುಕಿರುವವನ್ನು ನಾವು ಕೇಳಿದ್ದೇವೆ ಅಂದರೆ, ಯಮದೂತರು ಅಚಾತುರ್ಯದಿಂದ ಒಬ್ಬನ ಪ್ರಾಣವನ್ನು ಅಂದರೆ ಪ್ರಾಣಸಹಿತ ಆತ್ಮನನ್ನು ತೆಗೆದುಕೊಂಡು ಹೋಗುವವಕ್ಕೆ ಬದಲಾಗಿ ಇನ್ನೊಬ್ಬನ ಪ್ರಾಣವನ್ನು ತೆಗೆದುಕೊಂಡು ಯಮಧರ್ಮನ ಸವಿಾಪಕ್ಕೆ ಹೋಗುತ್ತಾರೆ ಅಲ್ಲಿ ಅವರು ಮಾಡಿದ ತಪ್ಪು ಗೊತ್ತಾಗುವುದರಿಂದ ಪ್ರಾಣಸಹಿತ ಆತ್ಮನು ಹಿಂದಕ್ಕೆ ಕಳುಹಿಸಲ್ಪಡುತ್ತಾನೆ ಇದರಿಂದ ಪುನಃ ದೇಹದಲ್ಲಿ ಪ್ರಾಣವು ಸೇರಿ ಅವನು ಬದುಕಿದ ಹಾಗಾಗುತ್ತದೆ. ಹಾಗೆ ಅವನನ್ನು ಹಿಂದಕ್ಕೆ ಕಳುಹಿಸುವಾಗ ನೆನಪಿಗಾಗಿ ಅವನು ಪಾಪಿಯಾಗಿದ್ದರೆ ಅವನಿಗೆ ಎರಡು ಪೆಟ್ಟುಗಳನ್ನೂ, ಪುಣ್ಯಶಾಲಿಯಾಗಿದ್ದರೆ ಸ್ವಲ್ಪ ಆಹಾರವನ್ನೂ ಕೊಡುತ್ತಾರೆ ಈ ರೀತಿಯಾಗಿ ಗತಿಸಿ ಹಿಂದಕ್ಕೆ ಬಂದವರು ತಮ್ಮ ಬಂಧುಮಿತ್ರರಿಗೆ ತಿಳುಹಿಸಿರುತ್ತಾರೆ ಇದರಿಂದ ದೇಹಾತಿರಿಕ್ತವಾಗಿ ನಮ್ಮ ಆತ್ಮವಿರುವುದಲ್ಲದೆ ಪರಲೋಕ ಅಂದರೆ ಸ್ವರ್ಗನರಕಗಳುಂಟೆಂಬುದು ಸಿದ್ಧವಾಗುವದು

ಪೂರ್ವಜನ್ಮಗಳ ಸ್ಮರಣ

(೮) ಯೋಗಿಗಳಾಗಿರತಕ್ಕವರು ತಮ್ಮ ಅಂತಃಕರಣವನ್ನು ನಿರೋಧ (ಏಕಾಗ್ರ) ಮಾಡಿ ತಮ್ಮ ಹಿಂದಿನ ಜನ್ಮಗಳಲ್ಲಿ ತಾವು ಅನುಭವಿಸಿದ ವಿಷಯಗಳನ್ನು ಸ್ಮರಿಸುತ್ತಾರೆ ಯೋಗಿಗಳಲ್ಲದವರು ತಮಗೆ ಹಿಂದಿನ ಜನ್ಮಗಳಲ್ಲಿ ತಾವು ಆ ಜನ್ಮಗಳಲ್ಲಿ ಅನುಭವಿಸಿದ ವಿಷಯಗಳನ್ನು ಸ್ಮರಿಸಲಾರರು ಏತಕ್ಕೆಂದರೆ, ಪ್ರತಿಯೊಬ್ಬನಿಗೂ ಸೂಕ್ಷ್ಮ ಮತ್ತು ಸ್ಥೂಲ ಎಂಬ ಎರಡು ದೇಹಗಳುಂಟು ಸೂಕ್ಷ್ಮದೇಹವು ಪ್ರವಾಹರೂಪವಾಗಿ ಸೃಷ್ಟಿಯಿಂದ ಪ್ರಳಯವಾಗುವವರೆಗೆ ನಾಶವಾಗದೇ ಇರುವದು ಈ ಸೂಕ್ಷ್ಮಶರೀರವು ವಿದ್ಯುಚ್ಛಕ್ತಿಯಂತೆಯು ಮತ್ತು ಸ್ಥೂಲದೇಹವು ಒಂದು ಯಂತ್ರದಂತೆಯು ಇರುವವು ಕೇವಲ ವಿದ್ಯುಚ್ಛಕ್ತಿಯಲ್ಲಾಗಲಿ ಅಥವಾ ಕೇವಲ ಯಂತ್ರದಲ್ಲಾಗಲಿ ಕ್ರಿಯೆಯಿಲ್ಲದೆ ಅವೆರಡರ ಸಂಬಂಧದಲ್ಲಿ ಹೇಗೆ ಕ್ರಿಯೆಯುಂಟಾಗುವದೋ, ಹಾಗೆ ಕೇವಲ ಸೂಕ್ಷ್ಮದೇಹದಲ್ಲಾಗಲಿ ಅಥವಾ ಕೇವಲ ಸ್ಥೂಲದೇಹದಲ್ಲಾಗಲಿ ಯಾವ ಕ್ರಿಯೆಯೂ ಇಲ್ಲದೆ ಇವೆರಡು ದೇಹಗಳ ಸಂಬಂಧದಲ್ಲೇ ಕ್ರಿಯೆಯು ಇರುತ್ತದೆ ಸೂಕ್ಷ್ಮದೇಹದಲ್ಲಿರತಕ್ಕ ಅಪಂಚೀಕೃತವಾದ ಅಂತಃಕರಣ, ಜ್ಞಾನೇಂದ್ರಿಯ, ಕರ್ಮೇಂದ್ರಿಯ ಮತ್ತು ಪಂಚಪ್ರಾಣಗಳಿಗೆ ಸ್ಥೂಲದೇಹದಲ್ಲಿರತಕ್ಕ ಪಂಚೀಕೃತವಾದ ಅಂತಃಕರಣ, ಜ್ಞಾನೇಂದ್ರಿಯ, ಕರ್ಮೇಂದ್ರಿಯ ಮತ್ತು ಪಂಚಪ್ರಾಣಗಳು ಅನುಕ್ರಮವಾಗಿ ಗೋಳಕಗಳಾಗಿರುತ್ತವೆ ಫೋಟೋವನ್ನು ತಗೆಯುವ ಕ್ಯಾಮರಾದಲ್ಲಿ ಮನುಷ್ಯರ ಛಾಯೆಯು ಬೀಳುವಂತೆ ನಾವು ದೇಹದಿಂದಲೂ, ವಾಕ್ಕಿನಿಂದಲೂ, ಮನಸ್ಸಿನಿಂದಲೂ ಮಾಡತಕ್ಕ ಕರ್ಮಗಳು ನಾಶವಾದರೂ ಅವುಗಳ ಸಂಸ್ಕಾರಗಳು ಅಂದರೆ ವಾಸನೆಗಳು ಸ್ಥೂಲದೇಹದ ಅಂತಃಕರಣದಲ್ಲಿ ಸ್ಥೂಲ ಅಂದರೆ ಸ್ಪಷ್ಟವಾಗಿಯು, ಸೂಕ್ಷ್ಮದೇಹದ ಅಂತಃಕರಣದಲ್ಲಿ ಸೂಕ್ಷ್ಮ ಅಂದರೆ ಅಸ್ಪಷ್ಟವಾಗಿಯು ಅಚ್ಚುಬೀಳುತ್ತವೆ ಈ ಸಂಸ್ಕಾರಗಳಿಗೇನೆ ನಮಗೆ ಜ್ಞಾಪಕವನ್ನು ಕೊಡತಕ್ಕ ಶಕ್ತಿಯಿರುವುದು ಆದುದರಿಂದಲೇ ನಾವು ಅನೇಕವರ್ಷಗಳ ಹಿಂದೆ ಮಾಡಿದ ಕೆಲಸಗಳು ನಮಗೆ ಈಗ ಜ್ಞಾಪಕಕ್ಕೆ ಬರುತ್ತವೆ ಆದರೆ ನಾವು ಮಾಡತಕ್ಕ ಕೆಲಸಗಳಲ್ಲಿ ಕೆಲವನ್ನು ಬಹಳ ಶ್ರದ್ಧೆಯಿಂದ ಮಾಡುತ್ತೇವೆ ಆ ಕೆಲಸಗಳ ಸಂಸ್ಕಾರವು ಅಂತಃಕರಣದಲ್ಲಿ ಇರುತ್ತವೆ. ದೃಢಸಂಸ್ಕಾರವುಳ್ಳ ಕೆಲಸಗಳೇ ನಮ್ಮ ಜ್ಞಾಪಕಕ್ಕೆ ಬರುತ್ತವೆ ಅದೃಢಸಂಸ್ಕಾರವುಳ್ಳ ಕೆಲಸಗಳು ನಮ್ಮ ಜ್ಞಾಪಕಕ್ಕೆ ಬರುವುದಿಲ್ಲ.

ಅಲ್ಲದೆ, ನಾವು ಜಾಗ್ರದವಸ್ಥೆಯಲ್ಲಿ ಮಾಡಿದ ಕೆಲಸಗಳು ಎಷ್ಟು ವರ್ಷಗಳಾದರೂ ನಮಗೆ ಜ್ಞಾಪಕಕ್ಕೆ ಬರುತ್ತವೆ ಆದರೆ, ನಿನ್ನೆರಾತ್ರಿ ನಮ್ಮ ಸ್ವಪ್ನದಲ್ಲಿ ಕಂಡ ವಿಷಯಗಳಲ್ಲಿ ಬಹುಭಾಗ ಈ ದಿವಸ ನಮ್ಮ ಜಾಗ್ರದವಸ್ಥೆಯಲ್ಲಿ ಜ್ಞಾಪಕಕ್ಕೆ ಬರುವುದಿಲ್ಲ. ಅಂದಮೇಲೆ ಹಿಂದಿನ ಸ್ವಪ್ನಗಳ ಅನುಭವವು ನಮಗೆ ಜ್ಞಾಪಕಬರುವ ಸಂಭವವೇ ಇಲ್ಲ. ಏತಕ್ಕೆಂದರೆ ಜಾಗ್ರದವಸ್ಥೆಯಲ್ಲಿ ಸ್ಥೂಲದೇಹದ ಅಂತಃಕರಣವು ವ್ಯವಹಾರವನ್ನು ಮಾಡುವುದರಿಂದಲೂ, ಸ್ಥೂಲದೇಹದ ಅಂತಃಕರಣದಲ್ಲಿ ನಾವು ಹಿಂದೆಮಾಡಿದ ಕೆಲಸಗಳ ಸಂಸ್ಕಾರವು ಸ್ಪಷ್ಟವಾಗಿರುವುದರಿಂದಲೂ, ಆ ಕೆಲಸಗಳ ಸ್ಮರಣೆಯು ನಮಗೆ ಉಂಟಾಗುತ್ತದೆ. ಸ್ವಪ್ನದಲ್ಲಿ ಸ್ಥೂಲದೇಹದ ಅಂತಃಕರಣವಿಲ್ಲದೆ ಸೂಕ್ಷ್ಮದೇಹದ ಅಂತಃಕರಣಮಾತ್ರವಿರುವುದರಿಂದಲೂ, ಸೂಕ್ಷ್ಮದೇಹದ ಅಂತಃಕರಣದಿಂದ ಅನುಭವಿಸಿದ ವಿಷಯಗಳ ಸಂಸ್ಕಾರವು ಅಸ್ಪಷ್ಟವಾಗಿರುವುದರಿಂದಲೂ, ಜಾಗ್ರದವಸ್ಥೆಯಲ್ಲಿ ಸ್ಮರಣೆಯನ್ನು ಮಾಡತಕ್ಕದ್ದು ಸ್ಥೂಲದೇಹದ ಅಂತಃಕರಣವಾದುದರಿಂದಲೂ ಸ್ವಪ್ನಗಳ ಅನುಭವವು ಜಾಗ್ರದವಸ್ಥೆಯಲ್ಲಿ ಸ್ಮರಣೆಗೆ ಬರುವುದಿಲ್ಲ ಈಗ ಪ್ರತಿಜನ್ಮದಲ್ಲಿಯೂ ಸ್ಥೂಲದೇಹವು ಬದಲಾಯಿಸುತ್ತದೆಯೇ ಹೊರತು ಪ್ರಪಂಚದ ಸೃಷ್ಟಿ ಮೊದಲುಗೊಂಡು ಪ್ರಳಯದವರೆಗೆ ನಮಗೆ ಬರತಕ್ಕ ಎಲ್ಲಾ ಜನ್ಮಗಳಲ್ಲಿಯೂ ಸೂಕ್ಷ್ಮದೇಹವು ಒಂದೇ ಆದುದರಿಂದ ನಮ್ಮ ಹಿಂದಿನ ಜನ್ಮಗಳಲ್ಲಿ ನಾವು ಮಾಡಿರತಕ್ಕ ಕೆಲಸಗಳ ಸಂಸ್ಕಾರವು ಈಗ ನಮ್ಮ ಸೂಕ್ಷ್ಮಶರೀರದಲ್ಲಿ ಸೂಕ್ಷ್ಮವಾಗಿರುತ್ತದೆಯೇ ಹೊರತು ಈ ಜನ್ಮದ ಸ್ಥೂಲದೇಹದ ಅಂತಃಕರಣದಲ್ಲಿ ಇರುವುದಿಲ್ಲ ಸ್ವಪ್ನಗಳ ಅನುಭವವು ಸೂಕ್ಷ್ಮದೇಹದ ಅಂತಃಕರಣದಲ್ಲಿದ್ದರೂ ಸ್ಥೂಲದೇಹದ ಅಂತಃಕರಣದಲ್ಲಿ ಸ್ಮರಣೆಗೆ ಹೇಗೆ ಬರುವುದಿಲ್ಲವೋ ಹಾಗೆ ಹಿಂದಿನ ಜನ್ಮಗಳಲ್ಲಿ ನಾವು ಮಾಡಿದ ಕರ್ಮಗಳ ಸಂಸ್ಕಾರವು ನಮ್ಮ ಸೂಕ್ಷ್ಮಶರೀರದ ಅಂತಃಕರಣದಲ್ಲಿದ್ದರೂ ನಮ್ಮ ಈಗಿನ ಸ್ಥೂಲದೇಹದ ಅಂತಃಕರಣದಲ್ಲಿ ಸ್ಮರಣೆಗೆ ಬರುವುದಿಲ್ಲ ಯೋಗಿಗಳಾದರೋ ಸ್ಥೂಲ ಮತ್ತು ಸೂಕ್ಷ್ಮದೇಹಗಳ ಅಂತಃಕರಣಗಳನ್ನು ನಿರೋಧಿಸಿ ಸೂಕ್ಷ್ಮದೇಹದ ಅಂತಃಕರಣದಲ್ಲಿರತಕ್ಕ ಪೂರ್ವಕರ್ಮಗಳ ಸಂಸ್ಕಾರಗಳನ್ನು ತಿಳಿದು ತಮ್ಮ ಹಿಂದಿನ ಜನ್ಮಗಳಲ್ಲಿ ತಾವು ಮಾಡಿದ್ದೆಲ್ಲವನ್ನೂ ಸ್ಮರಣೆಮಾಡಲು ಶಕ್ತಿಯುಳ್ಳವರಾಗುತ್ತಾರೆ ಈ ಕಾರಣದಿಂದ ದೇಹಾತಿರಿಕ್ತವಾಗಿ ನಮ್ಮ ಆತ್ಮವಿರುವುದೆಂಬುದು ಮತ್ತು ನಮಗೆ ಹಿಂದೆ ಜನ್ಮಗಳಿದ್ದವೆಂಬುದು ಸಿದ್ಧವಾಗುವುದು.

ಅಂತಃಕರಣ, ಪ್ರಾಣ ಮತ್ತು ಇಂದ್ರಿಯಗಳು ಸೂಕ್ಷ್ಮದೇಹದಲ್ಲಿ ಮಾತ್ರ ಇರುತ್ತವೆಯೇ ಹೊರತು ಇವುಗಳಿಗಿಂತ ಪ್ರತ್ಯೇಕವಾಗಿ ಸ್ಥೂಲದೇಹದಲ್ಲಿ ಬೇರೇ ಅಂತಃಕರಣ, ಪ್ರಾಣ ಮತ್ತು ಇಂದ್ರಿಯಗಳು ಇರುವುದಿಲ್ಲವೆಂದು ಕೆಲವು ಪಂಡಿತರುಗಳು ಅಭಿಪ್ರಾಯಪಡುತ್ತಾರೆ ಒಂದುವೇಳೆ ಅವರು ಅಭಿಪ್ರಾಯಪಡುವಂತೆ ಸ್ಥೂಲದೇಹದಲ್ಲಿ ಅಂತಃಕರಣವಿಲ್ಲದೆ ಸೂಕ್ಷ್ಮದೇಹದ ಅಂತಃಕರಣ ಒಂದೇ ಇರುವ ಪಕ್ಷಕ್ಕೆ ಇದು ಸೃಷ್ಟಿಯಿಂದ ಪ್ರಳಯದವರೆಗೂ ನಾಶವಾಗದೆ ಇದ್ದು ಜಾಗ್ರತ್ಸ್ವಪ್ನಗಳಲ್ಲಿ ವ್ಯವಹಾರ ಮಾಡುವುದರಿಂದ ಸೃಷ್ಟಿಯಿಂದ ಇದುವರೆಗೂ ನಮಗೆ ಉಂಟಾಗಿರುವ ಜನ್ಮಗಳ ಮತ್ತು ಸ್ವಪ್ನಗಳ ಅನುಭವವು ಜಾಗ್ರದವಸ್ಥೆಯ ಅನುಭವದಂತೆ ನಮ್ಮ ಸ್ಮರಣೆಗೆ ಬರಬೇಕಾಗಿತ್ತು. ಆದರೆ, ನಮ್ಮ ಅನುಭವದಲ್ಲಿ ನಮ್ಮ ಹಿಂದಿನ ಜನ್ಮದಲ್ಲಿ ನಾವುಮಾಡಿದ್ದಾಗಲಿ ಅಥವಾ ನಿನ್ನೇರಾತ್ರಿಯ ಸ್ವಪ್ನದ ಅನುಭವವಾಗಲಿ ನಮ್ಮ ಸ್ಮರಣೆಯಲ್ಲಿರುವುದಿಲ್ಲ ಇಷ್ಟೇ ಅಲ್ಲದೆ ಸೂಕ್ಷ್ಮದೇಹದ ಅಂತಃಕರಣವು ಒಂದೇ ಇದ್ದು ಅದೇ ವ್ಯವಹಾರವನ್ನು ಮಾಡುವ ಪಕ್ಷಕ್ಕೆ ಅದಕ್ಕೆ ಶೈಶವ ಬಾಲ್ಯಾದಿ ಅವಸ್ಥೆಗಳಿಲ್ಲದ್ದರಿಂದ ಯೌವನದಲ್ಲಿರತಕ್ಕ ಅಂತಃಕರಣಕ್ಕೆ ಎಷ್ಟು ಗ್ರಹಣ ಮತ್ತು ಸ್ಮರಣಶಕ್ತಿ ಇರುವದೋ ಅಷ್ಟು ಶಕ್ತಿ ಆಗ ಹುಟ್ಟಿದ ಶಿಶುವಿಗೂ ಕೂಡ ಇರಬೇಕಾಗಿತ್ತು ಹಾಗಿಲ್ಲದೆ ಸ್ಥೂಲದೇಹವು ಬೆಳೆದ ಹಾಗೆಲ್ಲ ಅಂತಃಕರಣಕ್ಕೆ ಗ್ರಹಣ ಮತ್ತು ಸ್ಮರಣಾಶಕ್ತಿಯು ಹೆಚ್ಚುತ್ತದೆ. ಆದುದರಿಂದ ವ್ಯವಹಾರವನ್ನು ಮಾಡತಕ್ಕ ಅಂತಃಕರಣವು ಸ್ಥೂಲದೇಹದಲ್ಲಿರಲೇ ಬೇಕೆಂಬುದು ಸಿದ್ಧವಾಗುತ್ತದೆ ಆದುದರಿಂದಲೇ ಶ್ರೀ ಅಭಿನವಸದಾಶಿವ ಬ್ರಹ್ಮೇಂದ್ರರು ತಮ್ಮಿಂದ ರಚಿತ

ವಾಗಿರುವ ಪಂಚೀಕರಣ ಎಂಬುವ ಗ್ರಂಥದಲ್ಲಿ "ಪೂರ್ವಂ ಅಪಂಚೀಕೃತ ಅಂತಃಕರಣಾದಿ ಪಾಯ್ವಿಂದ್ರಿಯಾಂತಸ್ಯ ಸೃಷ್ಟಿರುಕ್ತಾ। ತಸ್ಯ ಸೃಷ್ಟೇಃ ಪಂಚೀಕೃತ ಪಂಚಮಹಾಭೂತ ಜನ್ಯ ಗೋಳಕ ಸಂಯೋಜನಂ ವಿನಾವ್ಯವಹಾರಾ ಕ್ಷಮತ್ವಾತ್ತದರ್ಥಂ ಪುನರಂತಃಕರಣಾದಿ ಸೃಷ್ಟಿರುಚ್ಯತೇ। ಸೇಯಂ ಸೃಷ್ಟಿಃ ತತ್ತದಿಂದ್ರಿಯ ಗೋಳಕ ಸಂಯೋಜನಾರ್ಥಾ। ಅತಃ ಪುನರುಕ್ತಿರ್ನ ಮಂತವ್ಯಾ"॥ ಅಂದರೆ ಇದರ ಹಿಂದೆ ಅಪಂಚೀಕೃತ ಭೂತಗಳಿಂದ (ಸೂಕ್ಷ್ಮಭೂತಗಳ ಸತ್ವರಜೋಗುಣಾಂಶದಿಂದ) ಅಂತಃಕರಣವೇ ಆದಿಯಾಗಿ ಗುದೇಂದ್ರಿಯವೇ ಕೊನೆಯಾಗಿ ಸೃಷ್ಟಿಸಲ್ಪಟ್ಟಿರುತ್ತವೆಂದು ಹೇಳಿದೆ ಇವುಗಳಿಗೆ ಪಂಚೀಕೃತವಾದ ಪಂಚಮಹಾಭೂತಗಳಿಂದ (ಸೂಕ್ಷ್ಮಭೂತಗಳ ತಮೋಗುಣಾಂಶದಿಂದ) ಉಂಟಾದ ಗೋಳಕಗಳ ಸಂಬಂಧವ ವಿನಹ ವ್ಯವಹಾರವಿಲ್ಲದೇ ಇರುವುದರಿಂದ ಅಂತಃಕರಣಾದಿಗಳ ಸೃಷ್ಟಿಯು ಪುನಃ ಹೇಳಲ್ಪಟ್ಟಿರುತ್ತವೆ ಎಂಬುವಾಗಿ ಹೇಳಿರುತ್ತಾರೆ ಅಂದರೆ ಅಪಂಚೀಕೃತ ಸೂಕ್ಷ್ಮಭೂತಗಳಿಂದ ಆದ ಅಂತಃಕರಣಾದಿಗಳಿಗೆ ಪಂಚೀಕೃತವಾದ ಭೂತಗಳಿಂದ ಆದ ಅಂತಃಕರಣಾದಿಗಳು ಗೋಳಕಗಳಾಗಿರುತ್ತವೆ

ಪಂಚಸೂಕ್ಷ್ಮಭೂತಗಳ ತಮೋಗುಣಾಂಶಗಳ್ ಆಕಾಶ, ವಾಯು, ಅಗ್ನಿ, ನೀರು, ಭೂಮಿ ಎಂಬ ಪಂಚಮಹಾಭೂತಗಳೆಂದು ಕರೆಯಲ್ಪಡುತ್ತವೆ ಪಂಚೀಕರಣವೆಂದರೆ, ಒಂದೊಂದು ಭೂತವನ್ನು ಎರಡುಭಾಗಗಳನ್ನಾಗಿ ಮಾಡಿ ಪುನ ಮೊದಲನೇ ಭಾಗವನ್ನು ನಾಲ್ಕು ಭಾಗಗಳನ್ನಾಗಿ ಮಾಡಿ ತನಗಿನಗಿಂತಲೂ ಬೇರೆಯಾದ ನಾಲ್ಕು ಭೂತಗಳ ಎರಡನೆಯ ಭಾಗದೊಡನೆ ಮೊದಮೊದಲನೆಯ ಭಾಗಾಂಶಗಳಾದ ನಾಲ್ಕುನಾಲ್ಕರಲ್ಲಿ ಒಂದೊಂದನ್ನು ಸೇರಿಸಿದ ಪಕ್ಷಿಯಿಂದ ಆಕಾಶಾದಿ ಭೂತಗಳೈದು ಒಂದೊಂದು ಐದೈದರ ಭಾಗವುಳ್ಳವುಗಳಾಗುವವು ಇವೆಲ್ಲವು ಒಟ್ಟುಗೂಡಿ 25 ತತ್ವಗಳಾಗುವುವ ಹೇಗೆಂದರೆ, ಆಕಾಶದ ಅರ್ಧಾಂಶವೆ ಜ್ಞಾತೃ ಈ ಅರ್ಧಾಂಶಕ್ಕೆ ವಾಯು, ಅಗ್ನಿ, ಜಲ ಮತ್ತು ಪೃಥ್ವಿ ಇವುಗಳ ಪಾದಾಂಶವು ಸೇರಿ ಅನುಕ್ರಮವಾಗಿ ಮನಸ್ಸು, ಬುದ್ಧಿ ಚಿತ್ತ, ಅಹಂಕಾರ ಎಂಬ ಅಂತಃಕರಣಗಳಾದವು ವಾಯುವಿನ ಅರ್ಧಾಂಶವೆ ವ್ಯಾನವಾಯು ಮತ್ತು ಈ ಅರ್ಧಾಂಶಕ್ಕೆ ಆಕಾಶ, ಅಗ್ನಿ, ಜಲ, ಪೃಥ್ವಿ ಇವುಗಳ ಪಾದಾಂಶಗಳು ಸೇರಿ ಅನುಕ್ರಮವಾಗಿ ಸಮಾನ, ಉದಾನ, ಅಪಾನ, ಪ್ರಾಣ ಎಂಬ ಪಂಚಪ್ರಾಣಗಳಾದವು ಅಗ್ನಿಯ ಅರ್ಧಾಂಶವೇ ನೇತ್ರ ಮತ್ತು ಈ ಅರ್ಧಾಂಶಕ್ಕೆ ಆಕಾಶ, ವಾಯು, ಜಲ ಮತ್ತು ಪೃಥ್ವಿ ಇವುಗಳ ಪಾದಾಂಶಗಳು ಸೇರಿ ಅನುಕ್ರಮವಾಗಿ ಶ್ರೋತ್ರ, ತ್ವಕ್ಕು, ಜಿಹ್ವಾ, ನಾಸಿಕ ಎಂಬ ಪಂಚಜ್ಞಾನೇಂದ್ರಿಯಗಳಾದವು ಜಲದ ಅರ್ಧಾಂಶವೇ ರಸ ಮತ್ತು ಈ ಅರ್ಧಾಂಶಕ್ಕೆ ಆಕಾಶ, ವಾಯು, ಅಗ್ನಿ ಮತ್ತು ಪೃಥ್ವಿಯ ಪಾದಾಂಶಗಳು ಸೇರಿ ಅನುಕ್ರಮವಾಗಿ ಶಬ್ದ, ಸ್ಪರ್ಶ, ರೂಪ, ಗಂಧ ಎಂಬ ಪಂಚವಿಷಯಗಳಾದವು ಪೃಥ್ವಿಯ ಅರ್ಧಾಂಶವೇ ಗುದೇಂದ್ರಿಯ ಮತ್ತು ಈ ಅರ್ಧಾಂಶಕ್ಕೆ ಆಕಾಶ, ವಾಯು, ಅಗ್ನಿ ಮತ್ತು ಜಲದ ಪಾದಾಂಶಗಳು ಸೇರಿ ಅನುಕ್ರಮವಾಗಿ ವಾಕ್ಕು, ಪಾಣಿ, ಪಾದ, ಉಪಸ್ಥ ಅಥವಾ ಗುಹ್ಯ ಎಂಬ ಪಂಚಕರ್ಮೇಂದ್ರಿಯಗಳಾದವು

ಮೇಲ್ಕಂಡ ಪಂಚೀಕರಣವನ್ನು ಶ್ರೀ ಅಭಿನವ ಸದಾಶಿವಬ್ರಹ್ಮೇಂದ್ರರು ಹೇಳಿರುವರಲ್ಲದೆ ಸರ್ವಜ್ಞರಾದ ಶ್ರೀವಿದ್ಯಾರಣ್ಯಸ್ವಾಮಿಗಳು ತಮ್ಮಿಂದ ರಚಿತವಾದ ಶ್ರೀಮದ್ವೇದಾಂತಪಂಚದಶಿ ಎಂಬ ಗ್ರಂಥದ ಪ್ರತ್ಯಕ್ತತ್ವವಿವೇಕವೆಂಬ ಮೊದಲನೇ ಭಾಗದಲ್ಲಿ ಹೇಳಿರತಕ್ಕ 'ದ್ವಿಧಾ ವಿಧಾಯಚೈಕೈಕಂ ಚತುರ್ಧಾ ಪ್ರಥಮಂ ಪುನಃ। ಸ್ವಸ್ವೇತರದ್ವಿತೀಯಾಂಶೈರ್ಯೋಜನಾತ್ಪಂಚ ಪಂಚತೇ॥' ಎಂಬ ಶ್ಲೋಕಕ್ಕೆ ಶ್ರೋತ್ರಿಯಬ್ರಹ್ಮನಿಷ್ಠರಾದ ಶ್ರೀಮದ್ಭಾರತೀ ಸಚ್ಚಿದಾನಂದ ಸಹಜಾನಂದಸ್ವಾಮಿಗಳವರು ಮಾಡಿರತಕ್ಕ ವ್ಯಾಖ್ಯಾನದಲ್ಲಿಯು ಮತ್ತು ಸಕಲಶಾಸ್ತ್ರಜ್ಞರಾದ ಶ್ರೀಮನ್ನಿಜಗುಣಶಿವಯೋಗಿಗಳು ರಚಿಸಿರತಕ್ಕ ವಿವೇಕಚಿಂತಾಮಣಿ, ಪರಮಾರ್ಥಗೀತೆ ಎಂಬ ಗ್ರಂಥಗಳಲ್ಲಿಯು ಇದೇ ರೀತಿಯಾಗಿ ಪಂಚೀಕರಣವು ಹೇಳಲ್ಪಟ್ಟಿವೆ

ಆತ್ಮವು ಸಚ್ಚಿದಾನಂದಸ್ವರೂಪವು

ಮೇಲೆ ಹೇಳಿದ ಕಾರಣಗಳಿಂದ ನಾವು ದೇಹಗಳಲ್ಲವೆಂಬುದೂ, ದೇಹಾತಿರಿಕ್ತವಾದ ಆತ್ಮವೇ ನಾವೆಂಬುದೂ, ನಮ್ಮ ಈಗಿನ ಜನ್ಮಕ್ಕೆ ನಮ್ಮ ಹಿಂದಿನ ಜನ್ಮಗಳಲ್ಲಿ ನಾವು ಮಾಡಿದ ಕರ್ಮಗಳೇ ಕಾರಣವೆಂಬುದೂ, ನಮ್ಮ ಮುಂದಿನ ಜನ್ಮಗಳಿಗೆ ಈ ಜನ್ಮದಲ್ಲಿಯೂ ಮತ್ತು ಹಿಂದಿನ ಜನ್ಮಗಳಲ್ಲಿಯೂ ನಾವು ಮಾಡಿದ ಕರ್ಮಗಳೇ ಕಾರಣವೆಂಬುದೂ ನಿರ್ವಿವಾದವಾಗಿ ಸಿದ್ಧವಾಯಿತು ನಮ್ಮ ಈಗಿನ ಜನ್ಮಕ್ಕೆ ನಮ್ಮ ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮಗಳು ಕಾರಣವಾಗಿರುವಂತೆ ನಮ್ಮ ಹಿಂದಿನ ಜನ್ಮಕ್ಕೆ ಅದರ ಹಿಂದಿನ ಜನ್ಮಗಳ ಕರ್ಮಗಳು ಕಾರಣವಾಗಿರುತ್ತವೆ ಅಂದರೆ ನಮ್ಮ ಪೂರ್ವ ಪೂರ್ವ ಕರ್ಮಗಳು ನಮ್ಮ ಉತ್ತರೋತ್ತರ ಜನ್ಮಗಳಿಗೆ ಕಾರಣವಾಗಿವೆ ಇದರಿಂದ ಪೂರ್ವ ಕರ್ಮವಿಲ್ಲದೇ ಇರತಕ್ಕ ಪ್ರಥಮ ಜನ್ಮವು ನಮಗೆ ಇಲ್ಲವೇ ಇಲ್ಲ ಆದಕಾರಣ ನಾವು ಅನಾದಿ ಅಂದರೆ ನಾವು ಯಾವಾಗಲೂ ಹುಟ್ಟಿದವರಲ್ಲವೆಂಬುದು, ನಾವು ಹುಟ್ಟುವುದು (ಹೊಸದೇಹವನ್ನು ಪಡೆಯುವುದು) ಮತ್ತು ಮರಣವನ್ನು ಹೊಂದುವುದು (ಹಳೇ ದೇಹವನ್ನು ಬಿಡುವುದು) ಪ್ರವಾಹತಃ ಅನಾದಿಯೆಂಬುದು ಸಿದ್ಧವಾಗುತ್ತದೆ ನಮ್ಮ ಆತ್ಮವು ಎಲ್ಲಾ ಕಾಲಗಳಲ್ಲಿಯೂ ಮತ್ತು ಎಲ್ಲಾ ಅವಸ್ಥೆಗಳಲ್ಲಿಯೂ ಇರುವುದರಿಂದ ಸತ್ಯಸ್ವರೂಪವಾಗಿಯೂ, ಎಲ್ಲಾ ಅವಸ್ಥೆಗಳಲ್ಲಿಯೂ ಆಯಾಯ ಅವಸ್ಥೆಗಳಲ್ಲಿರತಕ್ಕ ವಿಷಯಗಳನ್ನು ತಿಳಿಯುವದರಿಂದ ಜ್ಞಾನಸ್ವರೂಪವಾಗಿಯೂ, ನಮ್ಮ ಸುಷುಪ್ತ್ಯವಸ್ಥೆಯಲ್ಲಿ ಆನಂದಕ್ಕೆ ಸಾಧಕಗಳಾದ ವಿಷಯ, ಇಂದ್ರಿಯ, ಮನಸ್ಸು ಇಲ್ಲದೆ ನಮ್ಮ ಆತ್ಮ ಒಂದೇ ಇದ್ದು ನಮಗ ಆನಂದವು ಅನುಭವವಾಗುವದರಿಂದ ನಮ್ಮ ಆತ್ಮವು ಆನಂದಸ್ವರೂಪವಾಗಿಯೂ ಇರುತ್ತದೆ ನಮ್ಮ ದೇಹವು ಎಲ್ಲಾ ಕಾಲದಲ್ಲಿಯು ಮತ್ತು ಎಲ್ಲಾ ಅವಸ್ಥೆಗಳಲ್ಲಿಯು ಇಲ್ಲದೆ ಇರುವುದರಿಂದ ಅಸತ್ಯವಾಗಿಯೂ, ತಾನು ಇನ್ನೊಂದನ್ನು ತಿಳಿಯುವ ಶಕ್ತಿ ಇಲ್ಲದೆ ತಾನು ಆತ್ಮನಿಂದ ತಿಳಿಯಲ್ಪಡುವುದರಿಂದ ಜಡವಾಗಿಯೂ, ನಮ್ಮ ಆತ್ಮಾನಂದವನ್ನು ಅನುಭವಿಸುವುದಕ್ಕೆ ಪ್ರತಿಬಂಧಕವಾಗಿ ಜನನ ಮರಣವೇ ಮುಂತಾದ ದುಃಖಕ್ಕೆ ಸಾಧಕವಾದ್ದರಿಂದ ದುಃಖವಾಗಿಯೂ ಇರುತ್ತದೆ ಆದುದರಿಂದ ಅಸತ್ಯ, ಜಡ ಮತ್ತು ದುಃಖಸ್ವರೂಪವಾಗಿರುವ ದೇಹವು ನಾವಾಗದೆ ನಾವು ಸತ್ಯಜ್ಞಾನಾನಂದ (ಸಚ್ಚಿದಾನಂದ) ಸ್ವರೂಪವಾದ ಆತ್ಮವೇ ನಾವಾಗಿರುತ್ತೇವೆ ಹೀಗಿರುವಾಗ ಅತ್ಯಂತ ಹೇಯವು, ಅಸತ್ಯವು, ದುಃಖಸ್ವರೂಪವು ಆದ ದೇಹವು ನಾನೆಂಬ ಭ್ರಾಂತಿಯನ್ನು ಬಿಟ್ಟು ನಶ್ವರವಾದ ಪ್ರಾಪಂಚಿಕವಿಷಯಗಳನ್ನು ಇಚ್ಛಿಸದೆ ಪವಿತ್ರತಮವು, ಸತ್ಯವು, ಆನಂದಸ್ವರೂಪವು ಆದ ಆತ್ಮವನ್ನು ಸಾಕ್ಷಾತ್ಕಾರಮಾಡಿಕೊಂಡು ದುಃಖರಹಿತವಾದ ನಿತ್ಯಾನಂದದಲ್ಲಿರುವದಕ್ಕೆ ಪ್ರಯತ್ನಪಡುವುದು ಪ್ರತಿಯೊಬ್ಬ ಮನುಷ್ಯನ ಮುಖ್ಯ ಕರ್ತವ್ಯವಲ್ಲವೇ?

(ಸಶೇಷ)

ಸಂಪತ್ತಿನ ಸದುಪಯೋಗ

ಸಚ್ಚಿದಾನಂದ ಸ್ವರೂಪನಾದ ಶಿವನಿಂದ ನಿರ್ಮಿತವಾದ ಸನಾತನ ಧರ್ಮಗಳನ್ನು ಆಚರಿಸುವುದೇ ಮಾನವರ ಮುಖ್ಯ ಕರ್ತವ್ಯವು ಅಂತೆಯೇ ಪೂರ್ವಿಕರು "ಆಚಾರಃ ಪ್ರಥಮೋ ಧರ್ಮಃ" ಎಂಬುಕ್ತಿಯಂತೆ ಅಷ್ಟಾವರಣ, ಪಂಚಾಚಾರ ಭಕ್ತಿಯುತರಾಗಿ ನಮ್ಮಗಳಿಗೆ ಮಾರ್ಗದರ್ಶಕರಾಗಿದ್ದಾರೆ. ನಾವು ಸದಾಕಾಲದಲ್ಲಿ ನಶ್ವರವಾದ ಈ ದೇಹ, ಸಂಪತ್ತು, ಸತಿ, ಪುತ್ರಾದಿಗಳ ಕಡೆಗೆ ಲಕ್ಷ್ಯಕೊಡದೆ "ಶರೀರಮಾದ್ಯಂ ಖಲು ಧರ್ಮಸಾಧನಂ" ಎಂಬಂತೆ ಶಂಕರನ ಸದ್ಯೋಜಾತಾದಿ ಮುಖಗಳಿಂದವತರಿಸಿದ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರಿಂದ ಬೋಧಿಸಲ್ಪಟ್ಟ ದೀಕ್ಷಾಸಂಸ್ಕಾರವನ್ನು ವಂಶಪಾರಂಪರ್ಯವಾಗಿ ಬಂದಿರತಕ್ಕ ಶ್ರೀ ಗುರುವರ್ಯ ಚರಪಟ್ಟಾಧಿಕಾರಿಗಳಿಂದ ಹೊಂದಿ ತಮ್ಮ ಗೃಹಸ್ಥಾಶ್ರಮಕ್ಕನುಸರಿಸಿ ಯಾವಾಗಲೂ ಮೋಕ್ಷಕ್ಕೆ ಸಾಧನಗಳಾದ ಸತ್ಕಥಾಶ್ರವಣಾದಿಗಳನ್ನು ನಡೆಸುತ್ತ, ಮನೆ ಬರತಕ್ಕ ಅತಿಥಿಅಭ್ಯಾಗತರಿಗೆ ಆದರ, ಸತ್ಕಾರಗಳನ್ನು ಮಾಡಬೇಕು ಸದ್ಯಃ ಸನ್ಮಾರ್ಗನಿರತರಾದ ಶ್ರೀಯುತ ಸಂಗನಬಸಪ್ಪನವರು ಬೇಲೇರಿ ಗದಗ ಬೆಟಗೇರಿ ಇವರು ಚಿಕ್ಕವಯಸ್ಕರಾದಾಗ್ಯೂ ಇವರಲ್ಲಿ—

ಸನ್ಮಿತ್ರಂ ಸಧನಂ ಸ್ವಯೋಷಿತಿ ರತಿಶ್ಚಾಜ್ಞಾಪರಾಃ ಸೇವಕಾಃ। ಸಾನಂದಂ ಸದನಂ ಸುತಾಶ್ಚ ಸುಧಿಯಃ ಕಾಂತಾ ಮನೋಹಾರಿಣೀ। ಆತಿಥ್ಯಂ ಶಿವಪೂಜನಂ ಪ್ರತಿದಿನಂ ಮಿಷ್ಟಾನ್ನಪಾನಂ ಗೃಹೇ। ಸಾಧೋಸ್ಸಂಗಮುಪಾಸತೇ ಹಿ ಸತತಂ ಧನ್ಯೋ ಗೃಹಸ್ಥಾಶ್ರಮಃ॥ ಈಶ್ಲೋಕಕ್ಕನುಸಾರವಾಗಿ ಸಮಸ್ತವೂ ಅನುಕೂಲವಾಗಿರುತ್ತವೆ ಇವರು ಸಮಯಾನುಸಾರವಾಗಿ ಶ್ರೀಶೈಲಕ್ಷೇತ್ರದಲ್ಲಿ ಸಭಾಮಂಟಪವನ್ನು ಕಟ್ಟಿಸಲಿಕ್ಕೆ ೧೦೦೧ ರೂಪಾಯಿಗಳನ್ನು ಸಲ್ಲಿಸಿರುವರು ಶ್ರೀ॥ಷ॥ಬ್ರ॥ ಪಟ್ಟಾಧ್ಯಕ್ಷರು ಜುಕ್ತಿ ಹಿರೇಮಠ ಸೂಡಿ ಇವರಿಗೆ ಸಾಲ್ಕೈದು ಸಹಸ್ರ ರೂಪಾಯಿಬೆಲೆಯುಳ್ಳ ಜಮೀನನ್ನು ಗುರುಕುಲಸ್ಥಾಪನೆಗಾಗಿ ಕೊಟ್ಟಿದ್ದಾರೆ. ಇದೇರೀತಿ ಇವರು ಇನ್ನೂ ಅನೇಕ ದಾನಧರ್ಮಗಳನ್ನು ಮಾಡಿ ಕೀರ್ತಿಶಾಲಿಗಳಾಗಿರುತ್ತಾರೆ ಸದಾ ಸತ್ಕರ್ಮಾದಿಗಳನ್ನು ಮಾಡಲಿಕ್ಕೆ ಇವರ ಧರ್ಮಪತ್ನಿಯವರಾದ ಶ್ರೀ ಕು॥ ಸೌ॥ ಸಿದ್ಧಲಿಂಗಮ್ಮನವರು ತಮ್ಮ ಪತಿಗೆ ಪ್ರೋತ್ಸಾಹವನ್ನುಂಟು ಮಾಡುತ್ತಿರುವರು ಇದೇ ಸ್ತ್ರೀಯರ ಶೀಲಸ್ವಭಾವವು ಅಂತೆಯೇ "ಪರೋಪಕಾರಾಯ ಸತಾಂವಿಭೂತಯಃ" ಎಂಬುದನ್ನು ತಿಳಿದುಕೊಂಡು ಮಾರ್ಗದರ್ಶಕರಾದ ಮಹನೀಯರಂತೆ ಹಿಂದೆ ಮಾಡಿದ ಸುಕೃತಫಲದಿಂದ ಪ್ರಾಪ್ತವಾದ ಸಂಪತ್ತನ್ನು ಶ್ರೀ ಸಂಗನಬಸಪ್ಪನವರಂತೆ ಸತ್ಕಾರ್ಯಾದಿಗಳಲ್ಲಿ ಸರ್ವರೂ ವಿನಿಯೋಗಿಸಬೇಕು ಇದೇ ಸಂಪತ್ತಿನ ಸದುಪಯೋಗವು ಸದಾ ಧರ್ಮಬುದ್ಧಿಯಿಂದ ವರ್ತಿಸುತ್ತಿರುವ ಶ್ರೀಮಂತ ಸಂಗನಬಸಪ್ಪನವರಿಗೆ ಶ್ರೀ ಜಗದಾಚಾರ್ಯರು ಇತೋಪ್ಯತಿಶಯವಾದ ಆಯುರಾರೋಗ್ಯ ಭಾಗ್ಯಾದಿಗಳನ್ನು ಕೊಟ್ಟು ರಕ್ಷಿಸಲೆಂದು ಕೋರುತ್ತೇವೆ

ಬೃಹನ್ಮಠಾಧ್ಯಕ್ಷ, ದಿಗ್ಗಾವಿ

ಲಿಂಗೋದ್ಭವ ಲಾಕೆಟ್ಸ್

ಈಗ ಹೊಸದಾಗಿ ಜಗದಾಚಾರ್ಯರ ಲಿಂಗೋದ್ಭವ ಲಾಕೆಟ್ಟು ಮತ್ತು ಕೋಟಿನ ಗುಂಡಿಗಳನ್ನು ಶುದ್ಧವಾದ ಬೆಳ್ಳಿಯಲ್ಲಿ ಬಹು ಸುಂದರವಾಗಿ ತಯಾರು ಮಾಡಿಸಿದ್ದೇವೆ.

ಲಾಕೆಟ್ಟುಗಳು ದೊಡ್ಡವರಿಗೆ ಕೋಟಿನ ಮೇಲೆ ಹಾಕಿಕೊಳ್ಳುವಂತೆಯೂ, ಮಕ್ಕಳಿಗೆ ಕೊರಳಿನಲ್ಲಿ ಧರಿಸುವಂತೆಯೂ ತಯಾರಿಸಲ್ಪಟ್ಟಿವೆ. ಗುರುಭಕ್ತರೆಲ್ಲರೂ ಇವುಗಳನ್ನು ತರಿಸಿ ತಮ್ಮ ಶರೀರದ ಮೇಲೆ ಧರಿಸಿಕೊಂಡು ಪ್ರತಿದಿವಸವೂ ಆ ಮಂಗಲಮೂರ್ತಿಯ ದರ್ಶನ ಸ್ಪರ್ಶನಾದಿಗಳಿಂದ ಧನ್ಯರಾಗಬೇಕೆಂದು ಕೋರಿಕೆ.

ಬೆಳ್ಳಿ ಲಾಕೆಟ್ ಬೆಲೆ ೧ ಕ್ಕೆ ೧ ರೂ.

ಬೆಳ್ಳಿ ಕೋಟಿನ ಗುಂಡಿ ೧ ಕ್ಕೆ ೧ ರೂ.

೬ ಕ್ಕಿಂತಲೂ ಕಡಿಮೆಯಾಗಿ ವಿ. ಪಿ. ಕಳಿಸುವದಿಲ್ಲ.

ಮ್ಯಾನೇಜರ್
ಪಂಚಾಚಾರ್ಯಪ್ರಭಾ, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀ ... ಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರಶರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ೪ ಆಣೆ

ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ.

ಸಂಪುಟ ೧೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೩ನೇ ಏಪ್ರಿಲ್ ೧೯೪೫ [ಸಂಚಿಕೆ ೫೨

ಲಿಂಗೋದ್ಭವ ಲಾಕೆಟ್ಸ್

ಈಗ ಹೊಸದಾಗಿ ಜಗದಾಚಾರ್ಯರ ಲಿಂಗೋದ್ಭವ ಲಾಕೆಟ್ಟು ಮತ್ತು ಕೋಟಿನ ಗುಂಡಿಗಳನ್ನು ಶುದ್ಧವಾದ ಬೆಳ್ಳಿಯಲ್ಲಿ ಬಹು ಸುಂದರವಾಗಿ ತಯಾರು ಮಾಡಿಸಿದ್ದೇವೆ.

ಲಾಕೆಟ್ಟುಗಳು ದೊಡ್ಡವರಿಗೆ ಕೋಟಿನ ಮೇಲೆ ಹಾಕಿಕೊಳ್ಳುವಂತೆಯೂ, ಮಕ್ಕಳಿಗೆ ಕೊರಳಿನಲ್ಲಿ ಧರಿಸುವಂತೆಯೂ ತಯಾರಿಸಲ್ಪಟ್ಟಿವೆ. ಗುರುಭಕ್ತರೆಲ್ಲರೂ ಇವುಗಳನ್ನು ತರಿಸಿ ತಮ್ಮ ಶರೀರದ ಮೇಲೆ ಧರಿಸಿಕೊಂಡು ಪ್ರತಿದಿವಸವೂ ಆ ಮಂಗಲಮೂರ್ತಿಯ ದರ್ಶನ ಸ್ಪರ್ಶನಾದಿಗಳಿಂದ ಧನ್ಯರಾಗಬೇಕೆಂದು ಕೋರಿಕೆ.

ಬೆಳ್ಳಿ ಲಾಕೆಟ್ ಬೆಲೆ ೧ ಕ್ಕೆ ೧ ರೂ.

ಬೆಳ್ಳಿ ಕೋಟಿನ ಗುಂಡಿ ೧ ಕ್ಕೆ ೧ ರೂ.

೬ ಕ್ಕಿಂತಲೂ ಕಡಿಮೆಯಾಗಿ ವಿ ಪಿ ಕಳಿಸುವದಿಲ್ಲ

ಮ್ಯಾನೇಜರ್

ಪಂಚಾಚಾರ್ಯಪ್ರಭಾ, ಮೈಸೂರು.

ಶ್ರೀ ಜಗದ್ಗುರು ಕಾಶೀಪೀಠಕ್ಕೆ ಕಾಣಿಕೆ

ಪ್ರಭೆಯಲ್ಲಿ ಕಾಶೀಪೀಠದ ಸಮಾಚಾರವೆಲ್ಲವೂ ಈ ಹಿಂದೆ ಪ್ರಕಾಶಿತವಾಗಿದೆ. ಅದರಂತೆ ಗುರುಭಕ್ತರು ಗುರುದಕ್ಷಿಣೆಯನ್ನು ಪೀಠಕ್ಕೆ ಸಲ್ಲಿಸುತ್ತಿದ್ದಾರೆ. ಈ ಕೆಲಸವು ಇನ್ನೂ ವಿಶೇಷವಾಗಿ ಸಾಗಬೇಕಾಗಿದೆ. ಆಯಾ ಸ್ಥಳಗಳಲ್ಲಿಯ ಪ್ರಮುಖರು ವೀರಶೈವ ಮಹಾಜನರಿಂದ ವಿವಾಹಾದಿ ಶುಭಕಾರ್ಯಗಳಲ್ಲಿ ದಾನ ದಕ್ಷಿಣೆಗಳನ್ನು ಸಮರ್ಪಿಸಿ ಕಾಶೀ ಜಗದ್ಗುರು ಮಹಾಸನ್ನಿಧಿಗೆ ಕಳುಹಿಸುತ್ತಿರಬೇಕು. ಈ ಬಗ್ಗೆ ಸರಿಯಾದ ಸೇವೆಯನ್ನು ಸಲ್ಲಿಸುವುದು ಸರ್ವ ಗುರುಭಕ್ತರ ಮುಖ್ಯ ಕರ್ತವ್ಯವಾಗಿದೆ ಎಂಬುದನ್ನು ತಿಳಿದು ಎಲ್ಲರೂ ಪ್ರಯತ್ನಿಸಬೇಕು.

ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತೀ ಮಹೋತ್ಸವ, ಬೆಂಗಳೂರು ನಗರ

'ಆಚಾರ್ಯ ಏವ ಸರ್ವೇಷಾಂ ಮೋಕ್ಷದಾಯಕ ಉಚ್ಯತೇ' ಎಂಬ ಪ್ರಮಾಣಾನುಸಾರವಾಗಿ ಸಮಸ್ತ ಮಾನವರಿಗೂ ಆಚಾರ್ಯರೇ ಮೋಕ್ಷದಾಯಕರು ಮತ್ತು "ಆಚಾರ್ಯವಾನ್ ಪುರುಷೋವೇದ" ಎಂಬುಕ್ತಿಯಂತೆ ಆಚಾರ್ಯ ಸೇವೆಯಿಂದಲೇ ಜ್ಞಾನಕರ್ಮಗಳ ಬೋಧೆಯಾಗುವುದು. ಆದುದರಿಂದ ಆಚಾರ್ಯೋಪಾಸನೆಯು ಅತ್ಯಾವಶ್ಯಕವಾಗಿದೆ. ಸಮಸ್ತ ಮತೀಯರ ಮೋಕ್ಷಸಾಧನ ಸೂತ್ರಗಳು ಆಚಾರ್ಯಾಧೀನಗಳಾಗಿವೆ. ಗರ್ಭಾಧಾನಾದಿ ಅಂತ್ಯೇಷ್ಟಿಯವರೆಗೆ ಸಮಸ್ತಾವಸ್ಥೆಗಳೂ ಜೀವನನ್ನು ಪೂರ್ಣನನ್ನಾಗಿ ಮಾಡತಕ್ಕವುಗಳಾಗಿವೆ. ಕೇವಲ ಸಂಸ್ಕಾರಗಳಿಂದಷ್ಟೇ ಅಂತಿಮಧ್ಯೇಯವು ಸಾಧಿಸದು. ಆಚಾರ್ಯೋಪಾಸನೆಯಿಂದ ಜೀವನ ಸಾಫಲ್ಯದ ಸಮುಜ್ಜ್ವಲೋಪಾಯಗಳೂ ವಿದಿತಗಳಾಗುವವು. ಈ ಕಾರಣದಿಂದಲೇ ಸಮಸ್ತ ಮಾನವರು ಸ್ವಮತಾಚಾರ್ಯರನ್ನು ಪ್ರಾಣಾಧಿಕವಾಗಿ ಸೇವಿಸುತ್ತಾ ಬಂದಿರುವರು. ಶ್ರೀ ಮಹಾಚಾರ್ಯರ ಜಯಂತೀ ಮಹೋತ್ಸವಗಳನ್ನಾಚರಿಸುವುದೂ ಒಂದು ಬಗೆಯ ಸೇವೆಯೇ ಆಗಿರುವುದು. ನಮ್ಮ ಭರತಖಂಡದಲ್ಲಿ ಅನೇಕ ಯಾತ್ರೆ ರಥೋತ್ಸವ ಸಮ್ಮೇಲನಾದಿಗಳು ನಡೆಯುತ್ತಿರುವವಷ್ಟೆ? ಈ ಮಹಾಕಾರ್ಯಗಳಿಂದ ಭಾರತೀಯ ಅಮರ ಸಂಸ್ಕೃತಿಗೆ ಒಂದು ಬಗೆಯ ಹೊಸ ಕಳೆಯು ಬರುವುದಾಗಿದೆ. ಇದರಂತೆಯೇ ಮತಸ್ಥಾಪನಾಚಾರ್ಯರ ಜಯಂತೀ ಮಹೋತ್ಸವಗಳನ್ನಾಚರಿಸುವುದರಿಂದ ಆಚಾರ್ಯ ಭಕ್ತಿ ಮತಾಚಾರಗಳು ಜಾಜ್ವಲ್ಯಮಾನಗಳಾಗುವುದರಲ್ಲಿ ಸಂದೇಹವಿಲ್ಲ. ವೀರಶೈವ ಮಹಾಮತಸ್ಥಾಪನಾಚಾರ್ಯರಾದ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರ ಜಯಂತೀ ಮಹೋತ್ಸವಗಳನ್ನು ಸಮಸ್ತ ವೀರಶೈವರು ಆ ಆ ದಿನಗಳಲ್ಲಿ ಮಹಾವೈಭವದೊಡನೆ ನೆರವೇರಿಸುತ್ತಾ ಬರುವುದು ಸುಪ್ರಸಿದ್ಧವಾದ ಸಂಗತಿಯಾಗಿದೆ. ಪದ್ಧತಿಯಂತೆ ಬೆಂಗಳೂರು ನಗರದಲ್ಲಿಯೂ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಂತೀ ಮಹೋತ್ಸವಗಳು ತಕ್ಕ ದಿನಗಳಲ್ಲಿ ನಡೆಯುತ್ತಲಿವೆ. ಮಹಾಶಿವರಾತ್ರಿಯ ದಿನದಲ್ಲಿ ಶ್ರೀ ಜಗದ್ಗುರು ಪಂಡಿತಾರಾಧ್ಯ ಮತ್ತು ವಿಶ್ವಾರಾಧ್ಯರ ಜಯಂತೀ ನಿಮಿತ್ತವಾಗಿ ಪುಷ್ಪರಥೋತ್ಸವವು ಮಹಾವೈಭವದೊಡನೆ ನೆರವೇರಿತು. ಶ್ರೀ ಜಗದ್ಗುರು ರೇಣುಕ ಜಯಂತೀ ಮಹೋತ್ಸವವು ಬೆಂಗಳೂರು ನಗರದಲ್ಲಿ ನಡೆಯುವಂತೆ ಭರತಖಂಡದ ಯಾವ ನಗರದಲ್ಲಿಯೂ ನಡೆಯಲಾರದೆಂದರೆ ಅತಿಶಯೋಕ್ತಿಯಾಗಲಾರದು. ಪ್ರತಿವರ್ಷಕ್ಕೂ ಶ್ರೀ ರೇಣುಕಜಯಂತೀ ವೈಭವವು ಅಭಿವೃದ್ಧಿಗೊಳ್ಳುತ್ತಲೇ ಇದೆ. ಈ ವರ್ಷದ ರೇಣುಕ ಜಯಂತಿಯ ವೈಭವವು ವರ್ಣನಾತೀತವಾಗಿದೆ. ತಾ ೨೬-೨-೪೫ ನೆಯ ದಿವಸ ಶ್ರೀ|| ಷ|| ಬ್ರ|| ಶ|| ಗಂಗಾಧರಶಿವಾಚಾರ್ಯರವರ ನೇತೃತ್ವದಲ್ಲಿ ರಾಜಧರ್ಮಪ್ರವೀಣ ದಿವಾನ್‌ಬಹದ್ದೂರ್ ರಿಟೈರ್ಡ್ ಚೀಫ್ ಜಸ್ಟೀಸ್ ಶ್ರೀಮಾನ್ ಪಿ ಮಹದೇವಯ್ಯನವರ ಅಧ್ಯಕ್ಷತೆಯಲ್ಲಿ ಪ್ರಾರಂಭಿಸಲ್ಪಟ್ಟ ಶ್ರೀ ಜಗದ್ಗುರು ರೇಣುಕಜಯಂತೀ ಮಹೋತ್ಸವವು ತಾ|| ೧೩-೪-೪೫ ನೆಯ ಶುಕ್ರವಾರ ನಿಜಚೈತ್ರ ಶುದ್ಧ ೧ ರ ವರೆಗೆ ಅಂದರೆ ೪೨ ದಿನಗಳ (ಸುಮಾರು ಒಂದು ಮಂಡಲದ) ವರೆಗೆ ಅವಿಚ್ಛಿನ್ನವಾಗಿ ಅತಿ ವೈಭವದೊಡನೆ ನೆರವೇರಿತು. ಪ್ರಥಮ ದಿನದಲ್ಲಿ ಪುಷ್ಪರಥೋತ್ಸವ, ರುದ್ರಾಭಿಷೇಕ, ಶ್ರೀಮಾನ್ ಕೊಟ್ಟೂರು ಬಸವಯ್ಯನವರ ಆಚಾರ್ಯಸ್ತೋತ್ರ, ವೇ|| ಪಂ|| ಶ್ರೀಕಾಶೀನಾಥಶಾಸ್ತ್ರಿಗಳವರ ರೇಡಿಯೋ ಭಾಷಣಾದಿ ಸಭಾಕಾರ್ಯಗಳು ಅತ್ಯುತ್ಸಾಹದಿಂದ ಜರುಗಿದವು. ೬ ದಿನಗಳವರೆಗೆ ವೇದಪೂಜಾ ಮಹೋತ್ಸವವು ನಡೆದು ಅನೇಕ ಪಂಡಿತರು ವೇದಗಳ ವಿಷಯದಲ್ಲಿ ಮಹೋಪನ್ಯಾಸಗಳನ್ನು ಮಾಡಿದರು. ಅಲ್ಲದೆ ಈ ದೀರ್ಘಾವಧಿಯಲ್ಲಿ ಅನೇಕ ಪಂಡಿತರು, ಪ್ರಿನ್ಸಿಪಾಲರು, ಪ್ರೊಫೆಸರರು, ಪದವೀಧರರು ಸ್ತ್ರೀಯರು ಅನೇಕ ವಿಷಯಗಳನ್ನು ಕುರಿತು ಆಮೋಘೋಪನ್ಯಾಸಗಳನ್ನು ಮಾಡಿದರು. ಕೀರ್ತನ ಕಲಾ ನಿಪುಣರಾದ ಕೀರ್ತನಕಾರರು ಕೀರ್ತನಾನುವಾದದಿಂದ ಸಭಿಕರನ್ನಾನಂದಗೊಳಿಸಿದರು. ಬಾಲಬಾಲಿಕೆಯರ ಸಂವಾದಗಳೂ ನಾಟಕಗಳೂ ಮನೋರಂಜಕಗಳಾಗಿದ್ದವು. ಆಸನ ಪ್ರದರ್ಶನವು ಹೃದಯಂಗಮವಾಗಿದ್ದಿತು. ಶ್ರೀ ಮಹಾಂತಿನಮಠದ ವಿಶಾಲ ಸಭಾಮಂಟಪವು ಜನಸಂದಣಿಯಿಂದ ಕಿಕ್ಕಿರಿದು ಸ್ಥಲಾಭಾವದಿಂದ ಅನೇಕರು ಹತಾಶರಾಗುತ್ತಿದ್ದರು. ಸಮಸ್ತ ಮತೀಯರ ಕುತೂಹಲಕ್ಕೆ ಪಾರವಿರಲಿಲ್ಲ. ಮಧ್ಯ, ಮಧ್ಯದಲ್ಲಿ ಜರುಗುತ್ತಲಿದ್ದ ಸುಪ್ರಸಿದ್ಧ ಸಂಗೀತಗಾರರ ವಾದ್ಯಗಾರರ ಸಂಗೀತ ವಾದನಾದಿಗಳು ಜನಾನಂದವನ್ನು ನೂರ್ಮಡಿಗೊಳಿಸುತ್ತಿದ್ದವು. ಈ ಮಹೋತ್ಸವವು ಎಲ್ಲರ ಕಣ್ಮನಂಗಳ ಮನೆಯ ಹಬ್ಬವಾಗಿದ್ದಿತು. ನೂತನ ಪಾರ್ಥಿವ ಸಂವತ್ಸರದ ಯುಗಾದಿಯ ಶುಭದಿನದಲ್ಲಿ ಶ್ರೀಗಳವರ ಶುಭಸಂದೇಶ ಭಾಷಣವಾಯಿತು. ಸಾಯಂಕಾಲ ೬|| ಘಂಟೆಯಿಂದ ೧೨ ಘಂಟೆಯಾದರೂ ಯಾರಿಗೂ ಬೇಸರವೇ ಇರುತ್ತಿರಲಿಲ್ಲ. ಪ್ರತಿದಿನದಲ್ಲಿಯೂ ಶ್ರೀ ಗಂಗಾಧರಶಿವಾಚಾರ್ಯರವರ ಸಮಾರೋಪ ಭಾಷಣವಾಗುತ್ತಿದ್ದಿತು. ಇವರ ಭಾಷಣದಲ್ಲಿಯ ಮಾಧುರ್ಯ, ಸಮತೆ, ಸ್ವಮತನಿಷ್ಠೆ, ಪರಮತ ಸಹಿಷ್ಣುತೆ, ವಿಶ್ವಪ್ರೇಮಗಳು, ಸರ್ವರನ್ನೂ ಮುಗ್ಧರನ್ನಾಗಿ ಮಾಡುತ್ತಿದ್ದವು. ಅನೇಕ ಮುಖ್ಯ ಪ್ರಸಂಗಗಳಲ್ಲಿ ಲೌಡ್‌ಸ್ಪೀಕರ್ ಯಂತ್ರಗಳ ವ್ಯವಸ್ಥೆಯಾಗಿದ್ದಿತು. ಸಭೆಗೆ ಬರುವ ಜನರನ್ನು ಆದರಿಸಿ ಸ್ವಾಗತಿಸಿ ಸಮ್ಮಾನಿಸುವುದು ವ್ಯವಸ್ಥಾಪಕರಿಗೊಂದು ಸಂತೋಷ ಸಂಭ್ರಮವಾಗಿದ್ದಿತು. ಈ ಮಹೋತ್ಸವದಲ್ಲಿ ಶ್ರೀಗಳವರು ಮೂವರು ಕೀರ್ತನಕಾರರಿಗೆ ಅನುಕ್ರಮವಾಗಿ "ಕೀರ್ತನ ಚಿಂತಾಮಣಿ" "ಕೀರ್ತನ ಶಿರೋಮಣಿ" "ಕೀರ್ತನಾಚಾರ್ಯ" ಪದವೀವಿಭೂಷಿತ ಸುವರ್ಣಪದಕ ಪ್ರಶಸ್ತಿ ಪತ್ರಗಳನ್ನೂ, ಒರ್ವ ೧೨ ವರ್ಷದ

[೩ನೆಯ ಪುಟವನ್ನು ನೋಡಿ]

ಪಂಚಾಚಾರ್ಯಪ್ರಭಾ

೧೯೪೫ನೆಯ ಏಪ್ರಿಲ್ ತಾ ೨೩ನೇ ಸೋಮವಾರ

ಗರ್ಭಸಂಸ್ಕಾರ

ಯಾವ ಮಾನವರು ಯಾವ ದೇವತಾಸಂಬಂಧವಾದ ಭಕ್ತಿಯನ್ನು ಹೊಂದಿರುವರೋ ಅವರು ಆ ದೇವರ ಭಕ್ತರೆನಿಸುವರು ಶಿವನೇ ಸರ್ವಾತ್ಮನೂ ಸಕಲ ಜಗತ್ಕಾರಣನೂ ಮೋಕ್ಷದಾಯಕನೂ [illegible] ಅವನಲ್ಲಿ ಭಕ್ತಿಯನ್ನಿಟ್ಟವರು ಶಿವಭಕ್ತರೆನಿಸು[illegible]ವರು ಶಿವಭಕ್ತಿಯು ಎಲ್ಲರಿಗೂ [illegible] ಶಕ್ಯವಲ್ಲ ' ಅನೇಕಜನ್ಮಸಿದ್ಧಾನಾಂ [illegible] ವರ್ತಿನಾಂ । ನರಣಾಂ [illegible] ಪ್ರಜಾಯತೇ ' ಎಂದು [illegible] ಅನೇಕ ಜನ್ಮಗಳಲ್ಲಿ [illegible] ಆ ಮಾನವ [illegible] ತ್ತವೆ ಅವರು ತಮ್ಮ [illegible] ಶ್ವರ ಶಿವಭಕ್ತ [illegible] ತೋಕ್ತ [illegible] ಮಾಡ [illegible] ಶಿವ [illegible] ತ್ಯವನ್ನು [illegible]

ಆ ಸಂಸ್ಕಾರ [illegible] ಲಿಂಗವನ್ನು [illegible] ದುರ್ಲ[illegible] ಗರ್ಭ [illegible] ಕ್ರಮದಿಂದ ಪಿಂಡವಾಗಿ [illegible] ಹೊಂದಿ ವಿಳನಾ[illegible] ಜೀವನ[illegible] ಂತೆ [illegible] ಲ್ಲಿ ಸರ್ವಸಂಪೂರ್ಣವಾಗಿ ಶಿಸುವೆನಿ[illegible] ವದು [illegible] ಶಿವಭಕ್ತಿಯನ್ನು ಹೊಂದಿ ಶಿವನನ್ನು ಉಪಾಸನೆಮಾಡುವದಕ್ಕೋಸ್ಕರವೇ ಶಿವಭಕ್ತ[illegible] ಜೀವನು ತನ್ನ ಉದ್ಧಾರಕ್ಕಾಗಿ ಗರ್ಭದಲ್ಲಿರುವಾಗಲೇ ಶಿವಲಿಂಗಸಂಬಂಧವನ್ನು ಹೊಂದಿ ಆ ಗುಣವನ್ನು ಹೆಚ್ಚಿಸಿಕೊಳ್ಳಬೇಕಾದುದು ಅವಶ್ಯವಾದುದರಿಂದಲೂ ತಾನು ಲಿಂಗಸಂಬಂಧವನ್ನು ಪಡೆಯದಿದ್ದರೆ " ಮದ್ಯಪಾನೀ ಮಾಂಸಭಕ್ಷೀ ಚ ಸ್ವದೇವಸ್ಯ ಪೂಜಕಃ। ಅಲಿಂಗೀ ಚ ದುರಾಚಾರೀ ಪಂಕ್ತಿಬಾಹ್ಯೋ ಭವಿಷ್ಯತಿ ' ಎಂಬ ವಚನದಂತೆ ಭವಿಯೆನಿಸಿಕೊಳ್ಳುವನಾದ್ದರಿಂದಲೂ ಭವಿಸಂಬಂಧವನ್ನು ಹೊಂದಿದ ತಾಯಿಗೆ " ಭವಿಸಂಗಾ ಲ್ಲಭೇಲ್ಲಿಂತು: ಕೋಟಿಜನ್ಮತಪಃಕ್ಷಯಂ । ಏಹಿಕೇ ನಿಂದಿತಶ್ಚೈವ ಪರತ್ರನರಕಂವ್ರಜೇತ್ " ಎಂಬ ಪ್ರಮಾಣದಂತೆ ತಪೋನಾಶವೂ, ಇಹಲೋಕದಲ್ಲಿ ನಿಂದೆಯೂ, ಪರಲೋಕದಲ್ಲಿ ನರಕವೂ ಸಂಭವಿಸುವದರಿಂದಲೂ, ಲಿಂಗಸಂಬಂಧವನ್ನು ಪಡೆದ ಜೀವನೇ ಶಿವೋಪಾಸನೆಯನ್ನು ಮಾಡುವದರಲ್ಲಿ ಯೋಗ್ಯತೆಯನ್ನು ಪಡೆಯುವವನಾಗುವದರಿಂದಲೂ, ಗರ್ಭಸ್ಥನಾದ ಶಿಶುವಿಗೆ ಗರ್ಭದೀಕ್ಷೆಯು ಅತ್ಯಾವಶ್ಯಕವೆನಿಸಿರುವದು ಶಿವಭಕ್ತಕುಲದಲ್ಲಿ ಹುಟ್ಟಿದ್ದರೂ ಈ ಸಂಸ್ಕಾರವನ್ನು ಪಡೆಯದ ಜೀವರು ಪ್ರಾತ್ಯಕರೆನಿಸಿಕೊಂಡು ಭ್ರಷ್ಟರಾಗುವರು ಗರ್ಭದೀಕ್ಷೆಯನ್ನು ಹೊಂದಿದ ಶಿಶುವು ಮಾತೃಗರ್ಭವನ್ನು ಬಿಟ್ಟು ಹೊರಗೆ ಬಂದಾಗ ಗರ್ಭದೀಕ್ಷಾಕಾಲದಲ್ಲಿ ಜನನಿಯ ದೇಹದಲ್ಲಿ ಶಿಶುವಿಗೋಸ್ಕರ ಧಾರಣೆ ಮಾಡಿದ್ದ ಲಿಂಗವನ್ನೇ ಗುರುವು ಪುನಃ ಸಂಸ್ಕರಿಸಿ ಧಾರಣೆಮಾಡುವದು ಜಾತಕರ್ಮವೆನಿಸಿರುತ್ತದೆ ಶಿಶುವು ಹೊರಗೆ ಬಂದ ಕೂಡಲೆ ಜಾತಕರ್ಮವು ಮಾಡಲ್ಪಡಬೇಕೆಂದು ಸಿದ್ಧಾಂತದಲ್ಲಿ ಹೇಳಲ್ಪಟ್ಟಿದೆ ಗರ್ಭದೀಕ್ಷೆಯನ್ನು ಹೊಂದದ ಶಿಶುವು ಆಗಲೇ ದುರ್ನಿವಾರ್ಯವಾದ ಅಪವಿತ್ರವನ್ನು ಪಡೆದು ಅಶುದ್ಧಸಂಪ್ರದಾಯವನ್ನು ಪ್ರವೇಶಿಸಿತಾದ್ದರಿಂದ ಅದಕ್ಕೆ ಜಾತಕರ್ಮವು ಅನವಶ್ಯಕವಾಗುವದು ಆ ಶಿಶು ಜೀವನು ಅಲಿಂಗಿಯೆನಿಸಿಕೊಂಡನಾದ್ದರಿಂದ ವೇಧಾ ಮನು ಕ್ರಿಯಾರೂಪವಾದ ಶಿವದೀಕ್ಷೆಯೆಂಬ ವಿಶೇಷ ಸಂಸ್ಕಾರವನ್ನು ಹೊಂದುವದಕ್ಕೂ ಅನಂತರ ಲಿಂಗಪೂಜೆಯನ್ನು ಮಾಡುವದಕ್ಕೆ ಯೋಗ್ಯನಾಯಿಲ್ಲದವನ[illegible] ಪತಿತನಾಗುವನು ಆದುದರಿಂದ ಗರ್ಭದೀಕ್ಷೆ ಜಾತಕರ್ಮ ಎಂಬ ಸಂಸ್ಕಾರಗಳನ್ನು ಯಾರು ತಮ್ಮ ಶಿಶುಗಳಿಗೆ ಕ್ರಮದಿಂದ ಮಾಡಿಸುವರೋ ಅವರು ತಮ್ಮ ಶಿಶುಗಳನ್ನು ವೀರಶೈವಮಾರ್ಗದಲ್ಲಿ ಪ್ರವೇಶ ಮಾಡಿಸುತ್ತಾರೆ ಮುಂದೆ ಆಗುವ ವಿಶೇಷ ಪುಣ್ಯಗಳನ್ನು ಹೊಂದುವರಲ್ಲದೆ ಸ್ವಧರ್ಮಪಾಲಕರೆನಿಸಿಕೊಂಡು [illegible] ಯನ್ನು ಹೊಂದುವರು ಲಿಂಗಾಂಗಿಗಳಲ್ಲಿ ಕೆಲವ[illegible] ತಮ್ಮ [illegible] ಯರ[illegible]ಲಗಳಲ್ಲಿ ಗರ್ಭ[illegible] ಗಳನ್ನು ನೆರವೇರಿಸುವುದರಲ್ಲಿ ಉದಾ[illegible] ವರಿಂದ ಗುರುವರ್ಗದವರು ಅವ[illegible] ಶಿವ[illegible]ವನ್ನು ತಿಳುಹಿಸಿ ಅವರ ಶಿಶು[illegible] ಸಂಸ್ಕಾರಗಳನ್ನಾಗಿ ಮಾಡಿ ಭಕ್ತೋದ್ಧಾರಕ[illegible] ಕಾಗಿ ಹಾರೈಸುತ್ತೇವೆ

ಯುದ್ಧವಾರ್ತೆ.

ಡುಹರ್ ಆಕ್ರಮಣ ಮುಗಿಯಿತು

[illegible] ಬಿತ್ತು ಸುಮಾರು [illegible] ಜರ್ಮನರ ಸರ ನಡೆಯುತ್ತಿದೆ ಎಂದು [illegible] ತ್ತದೆ ಬ್ರಿಟಿಷ್ ಸೇನೆ [illegible] ಮೈಲಿಗಳು ಮತ್ತು ಎಲ್ಬ [illegible] ಮೈಲಿಗಳ ದೂರದಲ್ಲಿದೆ ಜರ್ಮನ್ ಪ್ರತಿಭಟನೆ ಕುಂದುತ್ತಿದ್ದ [illegible] ಹ್ಯಾಂಬರ್ಗ್ ಕಡೆ ನಡೆಯಬಹುದೆಂದು ಹೇಳಲಾಗಿದೆ ಇನ್ನೊಂದು ದಳ ಬ್ರೆಮನ್ನಿಗೆ ಕೇವಲ ೩ ಮೈಲಿಗಳ ಅಂತರದಲ್ಲಿದೆ ಅಮೇರಿಕನ್ ೯ನೇ ಸೇನೆ ಮೆಗ್ಡೆಬರ್ಗ್ ಮೇಲಿನ ದಾಳಿಯನ್ನು ತೀವ್ರಗೊಳಿಸಿದೆ ಜರ್ಮನರು ಅತ್ಯಂತ ಉಗ್ರರೀತಿಯಿಂದ ಹೋರಾಡುತ್ತಿದ್ದಾರೆ ರೂರ್ [illegible] ದಲ್ಲಿ ಇದುವರೆಗೆ ದೊರತ ಕೈದಿಗಳ ಸಂಖ್ಯೆ ೩,೦೯೦೦೦

ಜರ್ಮನರ ಪ್ರತಿಮುತ್ತಿಗೆ

ಪಶ್ಚಿಮ ರಂಗದಲ್ಲಿ ಅಮೇರಿಕನ್ ೩ನೇ ಸೇನೆ ಈಗ ಜರ್ಮನರೊಂದಿಗೆ ಉಗ್ರವಾಗಿ ಕಾದುತ್ತಿದೆ ಅಮೇರಿಕನ್ ೭ನೇ ಸೇನೆ ನ್ಯೂರೆಂಬರ್ಗಿನಲ್ಲಿ ಪ್ರತಿಮನೆಯಲ್ಲೂ ಶತ್ರುಗಳೊಂದಿಗೆ ಹೋರಾಡುತ್ತಿದೆ ನ್ಯೂರೆಂಬರ್ಗ್ ಈಗ ಸುತ್ತುವರಿಯಲ್ಪಟ್ಟಿದೆ ಜರ್ಮನರು ಉಗ್ರವಾಗಿ ವಿರೋಧಿಸುತ್ತಿದ್ದಾರೆ ಅಮೇರಿಕದ ಮೊದಲನೇ ಸೇನೆ ಲೀಪ್ಜಿಗ್ ಆಕ್ರಮಣವನ್ನು ಮುಗಿಸಿದೆ ನಗರ ಭವನದ ಸುತ್ತ ಕೊಂಚ ಕ್ಷೇತ್ರದಲ್ಲಿ ಮಾತ್ರ ಪ್ರತಿಭಟನೆ ಇದೆ ಅಲ್ಲಿನ ನಾಜಿ ಕಮ್ಯಾಂಡರು ಶರಣಾಗತರಾಗುವುದಿಲ್ಲವೆಂದು ತಿಳಿಸಿಬಿಟ್ಟಿದ್ದಾರೆ ಅಮೇರಿಕನ್ ಒಂಬತ್ತನೇ ಸೇನೆ ಮ್ಯಾಗ್ಡೆಬರ್ಗ್ ಆಗ್ನೇಯದಲ್ಲಿ ಸೇತುವೆ ಕ್ಷೇತ್ರವನ್ನು ವಿಸ್ತರಿಸಿಕೊಂಡಿದೆ ಜರ್ಮನರು ಉಗ್ರವಾಗಿ ಪ್ರತಿಭಟಿಸುತ್ತಿದ್ದಾರೆ ಎಲ್ಬ್ ನದಿ ಪಶ್ಚಿಮದಲ್ಲಿ ಬುಧವಾರ ಜರ್ಮನರು ಪ್ರತಿಮುತ್ತಿಗೆಯನ್ನು ಆರಂಭಿಸಿ, ಅಮೇರಿಕನ್ ವ್ಯೂಹದ ಹಿಂದಕ್ಕೆ ೧೫ ಮೈಲಿ ದೂರ ನುಗ್ಗಿ ಹೋದರು ಮಿತ್ರ ಕಾಲಾಳುದಳದವರೂ ಟ್ಯಾಂಕ್ ದಳದವರೂ ಅಲ್ಲಿಗೆ ಓಡಿದರು ಶತ್ರುಗಳು ಉಂಟು ಮಾಡಿದ ಈ ಉಗ್ರಪರಿಸ್ಥಿತಿಯನ್ನು ನಿವಾರಿಸುವುದರಲ್ಲಿ ಮಿತ್ರಯೋಧರು ತೊಡಗಿದ್ದಾರೆ ಹ್ಯಾಂಬರ್ಗ್ ಮತ್ತು ಬ್ರೆಮನ್‌ಗಳನ್ನು ಗೆಲ್ಲಲು ಮಾಂಟ್ಗೋಮರಿಯವರ ಸೇನೆಗಳು ತಕ್ಕ ಕಾರ್ಯಕ್ರಮವನ್ನು ಕೈಗೊಂಡಿವೆ

ಬ್ರಿಟನ್ನಿನಲ್ಲಿ ಅಕ್ಕಿಗೆ ಅಭಾವ

ಇನ್ನು ಮುಂದೆ ಬ್ರಿಟನ್ನಿಗೆ ಅಕ್ಕಿಯನ್ನು ಆಮ[illegible] ಮಾಡಲಾಗದೆಂದು ನಿರ್ಧರಿಸಿರುವುದರಿಂದ ಬ್ರಿಟನ್ನಿನ[illegible] ರುವ ಸಾವಿರಾರು ಭಾರತೀಯ ಮತ್ತು ಚೈನ[illegible] ಹೋಟಲುಗಳಲ್ಲಿ ಅನ್ನದ ಕ್ಷಾಮ ಒದಗಿದೆ ಹೇ[illegible] ಚೈನಾ ಹೋಟಲುಗಳಲ್ಲಿ ಇನ್ನೂ ಅಲ್ಪಸ್ವಲ್ಪ ಅ[illegible] ಸಿಗುತ್ತಿದೆ ಒಂದು ಹಿಡಿ ಅನ್ನಕ್ಕೆ ೩ ರೂ ಕೊಡಬೇ[illegible]ಕೆಂದು ಹೇಳಲಾಗುತ್ತಿದೆ

ರೂಜ್‌ವೆಲ್ಟರ ಅಂತ್ಯಕ್ರಿಯೆ

ಕಳದ ೧೪ನೆಯ ತಾರೀಖು ಅಧ್ಯಕ್ಷ ರೂಜ್‌ವೆಲ್ಟ[illegible] ಕಳೇಬರವನ್ನು ವರ್ಜನಿಯಾದಲ್ಲಿರುವ ವಾರ್ಮ್‌ಸ[illegible] ಪರ್‌ನಿಂದ ಸ್ಪೆಷಲ್ ರೈಲಿನಲ್ಲಿ ವಾಷಿಂಗ್‌ಟನ್ನಿಗೆ ತ[illegible] ಲಾಯಿತು ಸತಿ ರೂಜ್‌ವೆಲ್ಟರು ರೈಲಿನಿಂದ ಹೊರ[illegible] ಕಾಲಿಡುತ್ತಿದ್ದಂತೆಯೇ ಅವರ ಮಗನೂ ಮಗಳೂ ಎದ[illegible] ಗೊಂಡರು ಬೀದಿಯುದ್ದಕ್ಕೂ ಜನರು ನಿಂತು ಗೌರ[illegible] ಸಲ್ಲಿಸಿದರು ಅಧ್ಯಕ್ಷ ಟ್ರೂಮನ್‌ರೂ ಶ್ರೀ ಹೆನ್ರಿವಾ[illegible] ಲೆಸ್‌ರವರೂ ಹಾಜರಿದ್ದರು ರೂಜ್‌ವೆಲ್ಟರ ಕಳೇಬ[illegible] ವನ್ನು ನ್ಯೂಯಾರ್ಕಿನ ಹೈಡ್ ಪಾರ್ಕಿನಲ್ಲಿರುವ ಅವ[illegible] ಮನೆಯ ಆವರಣದಲ್ಲಿ ಸಮಾಧಿ ಮಾಡಲಾಯಿತು ಸಂಸ್ಕಾರ ಕಾಲದಲ್ಲಿ ಅಧ್ಯಕ್ಷ ಟ್ರೂಮನ್ನರೂ ಅಮೇರಿ[illegible] ಸಂಯುಕ್ತಸಂಸ್ಥಾನಗಳ ಸರ್ಕಾರಿ ಅಧಿಕಾರಿಗಳೂ ಹಾ[illegible] ರಿದ್ದರು ಬ್ರಿಟಿಷ್ ಚಕ್ರವರ್ತಿಗಳ ಪರವಾಗಿ ಅಲ್[illegible] ಆಫ್ ಅತ್ಲೋನರೂ ಬ್ರಿಟಿಷ್ ಸರ್ಕಾರದ ಪರವಾ[illegible] ಶ್ರೀ ಅಂಥೋನಿ ಈಡನ್ನರೂ ಇಂಡಿಯಾ ಪರವಾ[illegible] ಸರ್ ಗಿರಿಜಾಶಂಕರ ಬಾಜಪಾಯಿಯವರೂ ಹಾ[illegible] ರಿದ್ದರು ಲಕ್ಷಾಂತರ ಪ್ರಜೆಗಳು ಸಮಾಧಿಯ ಬ[illegible] ನೆರೆದು ಮೃತರಲ್ಲಿ ತಮಗಿದ್ದ ಪ್ರೀತಿಗೌರವಗಳ[illegible] ಪ್ರದರ್ಶಿಸಿದರು

ಚರ್ಚಿಲ್ಲರು ಅಮೇರಿಕಕ್ಕೆ ಹೊರಡಲಾಗಲಿಲ್ಲ

ರೂಜ್‌ವೆಲ್ಟರ ಅಂತ್ಯ ಕ್ರಿಯೆಗಳು ನಡೆಯುವಾ[illegible] ಹಾಜರಿರಲೋಸುಗ ವಿಮಾನದಲ್ಲಿ ಅಮೇರಿಕಕ್ಕೆ ತೆರಳಬೇ[illegible]ಕೆಂದು ಶ್ರೀ ಚರ್ಚಿಲ್ಲರು ಸಿದ್ಧತೆಗಳನ್ನೆಲ್ಲ ಮಾಡಿಕೊಂ[illegible]ಡಿದ್ದರು ವಿಮಾನ ಸಿದ್ಧವಾಗಿತ್ತು ಸರ್ವಸಿದ್ಧತೆಗಳೂ ನ[illegible]ಡೆದಿತ್ತು ಆದರೆ ಪಶ್ಚಿಮ ರಂಗದಿಂದ ಬಹಳ ಮುಖ್ಯ[illegible] ವರ್ತಮಾನ ಬಂದದ್ದರಿಂದ ಪ್ರಯಾಣವನ್ನು ನಿಲ್ಲಿಸಿ[illegible] ರೆಂದು ಹೇಳಲಾಗಿದೆ

ನಾಜಿಗಳಿಗೆ ಸಹಾಯ ಮಾಡಿದವರಿ[illegible] ದಂಡನೆಗಳು

ನಾಜಿಗಳಿಗೆ ನೆರವಿತ್ತವರನ್ನು ಕೋರ್ಟಿನ ಮುಂ[illegible] ನಿಲ್ಲಿಸಿ ವಿಚಾರಣೆ ಮಾಡುವುದಕ್ಕಾಗಿ ಫ್ರಾನ್ಸ್ ಅದ್ಯಂ[illegible] ೧೨೦ ನ್ಯಾಯಶಾಲೆಗಳು ಸ್ಥಾಪಿತವಾಗಿವೆ ಲಕ್ಷ[illegible] ಮಂದಿ ನ್ಯಾಯಾಧೀಶರು ೬೦೦೦೦೦ ವ್ಯವಹಾರ[illegible] ವಿಚಾರಣೆ ಮಾಡಬೇಕಾಗಿದೆ ದೇಶದ್ರೋಹ ಮಾಡಿ[illegible] ಪಾಪಿಗಳಿಗೆ ಪ್ರಾಯಶ್ಚಿತ್ತಮಾಡಬೇಕೆಂದು ಫ್ರಾನ್[illegible] ನಿರ್ಧರಿಸಿದೆ. ೮೯೦೦ ಮೊಕದ್ದಮೆಗಳು ವಿಚಾರಣೆಯ[illegible] ಗುತ್ತಿವೆ ೮೧೫೦ ನಿರ್ಣೀತವಾಗಿವೆ ೬೭೯ ಮಂ[illegible] ನೇಣುಗಂಬಗಳಿಗೆ ತಲೆಕೊಡಬೇಕಾಯಿತು ಉಳಿದವರಿ[illegible] ನಾನಾಮಟ್ಟದ ಶಿಕ್ಷೆಯಾಗಿವೆ ೧೧೭೩ ಮಂದಿ ಬಿಡುಗಡೆಯಾಗಿದೆ ೩೧೫೮೦ ಮೊಕದ್ದಮೆಗ[illegible] ಇನ್ನೂ ಪ್ರಥಮ ವಿಚಾರಣಾಘಟ್ಟದಲ್ಲೇ ಇವೆ ಪ್ರಥ[illegible] ವಿಚಾರಣಾ ಘಟ್ಟದಲ್ಲೇ ಭಾಗವಹಿಸಿದ ೬೦ ಮಂ[illegible] ವಾರಂಟುಗಳನ್ನು ಹೊರಡಿಸಲಾಗಿದೆ

ಸ್ಯಾನ್‌ಫ್ರಾನ್ಸಿಸ್ಕೊ ಸಮ್ಮೇಳನದ ಸಿದ್ಧತೆಗಳು

ಸ್ಯಾನ್‌ಫ್ರಾನ್ಸಿಸ್ಕೋ ಸಮ್ಮೇಳನದ ಪ್ರತಿನಿಧಿಗಳು ಉಳಿದು ಕೊಳ್ಳಲಿಕ್ಕಾಗಿ ಅಲ್ಲಿನ ೧೩ ಹೋಟೆಲುಗಳಲ್ಲಿ ೩೪೦೦ ಕೋಣೆಗಳನ್ನು ಅಮೇರಿಕ ಸರಕಾರದವರು "ರಿಜರ್ವ್" ಮಾಡಿದ್ದಾರೆ ಸಮ್ಮೇಳನಕ್ಕೆ ಬರಲು ೧೦೦೦ ಪತ್ರಿಕಾ ಸುದ್ದಿಗಾರರಿಗೂ ರೇಡಿಯೋ ಪ್ರತಿನಿಧಿಗಳಿಗೂ ಅವಕಾಶ ಕೊಡಬಹುದು ಸಮ್ಮೇಳನದ ಮುಖ್ಯ ಕಛೇರಿಯಲ್ಲಿ ೧೫೦೦ ಟೆಲಿಫೋನ್‌ಗಳನ್ನು ಸ್ಥಾಪಿಸಲಾಗಿದೆ ಪ್ರತಿನಿಧಿಗಳಿಗೆ ಸಹಾಯ ಮಾಡಲು ಫ್ರೆಂಚ್, ರಷ್ಯನ್ ಸ್ಪಾನಿಷ್, ಚೈನೀಸ್ ಮತ್ತು ಪೋರ್ಚುಗೀಸ್ ಭಾಷೆಗಳನ್ನು ಕಲಿತಂತಹ ತರುಣಿಯರನ್ನು ನೇಮಿಸಲಾಗಿದೆ ಈ ಮಹಾ ಸಮ್ಮೇಳನದ ಕಾರ್ಯಕ್ರಮಗಳು ಯಾವ ಭಾಷೆಯಲ್ಲಿ ನಡೆಯಬೇಕೆಂಬ ಸಮಸ್ಯೆ ಎದ್ದಿದೆ ಮೂರು ಶತಮಾನಗಳಿಂದ ಅಂತರರಾಷ್ಟ್ರೀಯ ರಾಜಕೀಯ ವ್ಯವಹಾರಕ್ಕೆ ಫ್ರೆಂಚ್ ಭಾಷೆಯನ್ನೇ ಅಂಗೀಕರಿಸಿರುವುದರಿಂದ ಅದನ್ನು ಈಗಲೂ ಬಳಸಬೇಕೆಂದು ಫ್ರೆಂಚರು ಒತ್ತಾಯ ಪಡಿಸುತ್ತಿದ್ದಾರೆ ಬಹುಮಟ್ಟಿಗೆ ಇಂಗ್ಲಿಷ್ ಭಾಷೆಯನ್ನೇ ಬಳಸಬಹುದೆಂದು ತೋರುತ್ತದೆ ಕಾರ್ಯಕ್ರಮದ ಪಟ್ಟಿಯನ್ನು ಇಂಗ್ಲೀಷ್, ಫ್ರೆಂಚ್ ಮತ್ತು ಸ್ಪೇನಿಷ್ ಭಾಷೆಗಳಲ್ಲಿ ಅಚ್ಚು ಹಾಕಿಸಲಾಗುವುದೆಂದು ಹೇಳಲಾಗುತ್ತಿದೆ

ಮೂವರು ಭಾರತೀಯ ಸಂಪಾದಕರಿಗೆ ಅವಕಾಶ

ಅಮೃತಲಾಲ್ ಸೇಠ್ [ಜನ್ಮಭೂಮಿ] ಶ್ರೀ ಎ. ಎನ್ ಶಿವರಾಮನ್ [ದಿನಮಣಿ] ಮತ್ತು ಶ್ರೀ ಸ ಭ ವ ಲ [ಬಾಂಬೆಸೆಂಟಿನಲ್] ಈ ಮೂರು ಮಂದಿ ಭಾರತೀಯ ಪತ್ರಿಕೋದ್ಯೋಗಿಗಳಿಗೂ ಸ್ಯಾನ್‌ಫ್ರಾನ್ಸಿಸ್ಕೋ ಸಮ್ಮೇಳನಕ್ಕೆ ತೆರಳಲು ಸೌಕರ್ಯ ಕಲ್ಪಿಸಲಾಗಿದೆಯೆಂದು ಇಂಡಿಯಾ ಸರಕಾರ ತಿಳಿಸಿದೆ ಒಸಿ... ಅಖಿಲ ಭಾರತ ಪತ್ರಿಕಾ ಸಂಪಾದಕರ ಸಮ್ಮೇಳನದವರ ... ರು ಈ ಮೂವರಲ್ಲದೆ ಇನ್ನು ಒಬ್ಬರಿಗೆ ಸಕ... ಸೌಕರ್ಯ ಒದಗಿಸಬಹುದೆಂದು ಹೇಳಲಾಗಿದೆ

ಬರ್ಲಿನ್ ಪರಿಸ್ಥಿತಿ

ಬರ್ಲಿನ್ ಸಮರ ಅತ್ಯುಗ್ರಸ್ಥಿತಿಗೆ ಏರುತ್ತಿದೆ ಈಶಾನ್ಯಕ್ಕೆ ೪೦ ಮೈಲಿಗಳಷ್ಟು ದೂರದ ಜರ್ಮನ್ ರಕ್ಷಣಾ ವ್ಯವಸ್ಥೆಗಳು ರಷ್ಯನರ ವಶವಾಗಿವೆ ... ಪ್ರವೇಶ ಓಡರ್ ನದಿಯ ಪಶ್ಚಿಮಕ್ಕೆ ೭ ಮೈಲಿಗಳ ದೂರದಲ್ಲಿವೆ ಫ್ರಾಂಕ್‌ಫರ್ಟ್ ಬಳಿ ಓಡರ್ ನದಿಯ ಪೂರ್ವದಂಡೆಯ ಕಾವಲನ್ನು ಬಿಟ್ಟು ಸೇತುವೆಗಳನ್ನೆಲ್ಲ ಒಡೆದು ಹಾಕಿ ಜರ್ಮನರು ಕಾಲ್ತೆಗೆದಿದ್ದಾರೆ ರಷ್ಯನರ ಆಕ್ರಮಣ ಬಲವಾಗಿದೆಯೆಂದೂ ಜರ್ಮನರು ಉಗ್ರವಾಗಿ ಪ್ರತಿಭಟಿಸುತ್ತಿದ್ದಾರೆಂದೂ ಜರ್ಮನ್ ವಾರ್ತೆ ತಿಳಿಸುತ್ತದೆ

ವಿಜಯೋತ್ಸವ ನಡೆಸಲು ಲಂಡನ್ನಿನಲ್ಲಿ ಸಿದ್ಧತೆ

ಲಂಡನ್ನಿನಲ್ಲಿ ವಿಜಯೋತ್ಸವ ನಡೆಸಲು ಸಿದ್ಧತೆಗಳು ಚುರುಕಿನಿಂದ ನಡೆಯುತ್ತಿವೆ ಧ್ವಜಗಳನ್ನು ಹಾರಿಸಲು ಸ್ತಂಭಗಳನ್ನು ನಿಲ್ಲಿಸುತ್ತಿರಲಾಗಿದೆ ಲಂಡನ್ನಿನಲ್ಲಿ ಎಲ್ಲ ಕಡೆಗಳಲ್ಲೂ ಬ್ರಿಟಿಷ್ ಧ್ವಜ ಮಾರಲ್ಪಡುತ್ತಿವೆ ಆದಷ್ಟು ಮಟ್ಟಿಗೆ ಪಟ್ಟಣವನ್ನು ಅಲಂಕರಿಸಲು ಸರ್ವ ಪ್ರಯತ್ನಗಳೂ ನಡೆಸಲ್ಪಡುವವಾಗಿ ತಿಳಿದು ಬರುತ್ತದೆ

ಬರ್ಲಿನ್ ಆಕ್ರಮಣ ಸುಲಭವಲ್ಲ

"ನಮ್ಮ ಸೇನೆಗಳು ಸುಲಭವಾಗಿ ಬರ್ಲಿನ್ ಪ್ರವೇಶ ಮಾಡುವುವೆಂದು ನಂಬುವುದು ಶುದ್ಧ ಹುಚ್ಚುತನ ಅದು ಹೇಗೇ ಇರಲಿ, ಬರ್ಲಿನ್ನಿನ ಪತನದಿಂದ ಈ ಯುದ್ಧ ಅಂತ್ಯವಾಯಿತೆಂದು ಹೇಳಲು ಸಾಧ್ಯವಿಲ್ಲ" ಎಂದು ಮಿತ್ರಸೇನೆಯೊಡನೆ ಇರುವ ಸುದ್ದಿಗಾರರೊಬ್ಬರು ತಿಳಿಸಿದ್ದಾರೆ

ಬರ್ಮಾರಣರಂಗ

ಉತ್ತರದಿಂದ ನುಗ್ಗುತ್ತಿರುವ ಮಿತ್ರ ಸೈನಿಕರು ಕ್ಯಾಕ ಡಾಂಗ್ ಟರ್ಮಿನಸ್ಸನ್ನು ಹಿಡಿದಿದ್ದಾರೆ ಥಾಂಜಿ ಪೂರ್ವಕ್ಕೆ ೮ ಮೈಲಿ ದೂರದಲ್ಲಿ ಶತ್ರುಗಳ ಪ್ರತಿಭಟನೆ ಜೋರಾಗಿಯೇ ಇದೆ ಮಾಕ್ಟಿಲಾ ದಕ್ಷಿಣದಲ್ಲಿ ಮಿತ್ರ ಬಲದ ಓಟ ತ್ವರಿತಕರವಾಗಿದೆ ರಂಗೂನಿನ ವಾಯುವ್ಯಕ್ಕೆ ೪೦ ಮೈಲಿ ದೂರದಲ್ಲಿರುವ ಟಂಗೀ ವಸ್ತು ಸಂಗ್ರಹಾಲಯದ ಬಳಿ ಇರುವ ರೇಡಿಯೋ ಯಂತ್ರದ ಮೇಲೆ ಮುತ್ತಿಗೆ ನಡೆಸಲಾಗಿದೆ

ಸ್ವೀಕಾರ

ಮೈಂದರಗಿಯಲ್ಲಿರುವ ಭೀಮರಾವ್ ಪೂಜಾರಿ ಇವರು ಅನುಷ್ಠಾನವನ್ನು ಸಮಾಪ್ತಿಗೊಳಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 1 ರೂಪಾಯಿ ಮತ್ತು ಗುಲ್ಬರ್ಗಾ ಜಿ|| ಜಹಗೀರು ಜೇವರಗಿ ಗ್ರಾಮದಲ್ಲಿರುವ ಮ|| ರಾ|| ಸೀರಪ್ಪ ತಳವಾರ ಇವರ ೫ ವರುಷದ ಶಾಂತಾ ಎಂಬ ಪ್ರೇಮ ಪುತ್ರಿಯು ಶಿವಾಧೀನಳಾಗ ಸಮಯದಲ್ಲಿ ಸಮರ್ಪಿಸಿದ 1 ರೂಪಾಯಿ ಒಟ್ಟು 2 ರೂಪಾಯಿಗಳು ಕಾಶೀನಾದ ಮಾಸ್ತರ್ ಇವರ ದ್ವಾರಾ ತಲ್ಪಿರುತ್ತವೆ

ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರು ಟವನ್ನಿನಲ್ಲಿ ಇದೇ ತಿಂಗಳು ೧ ನೆಯ ತಾರೀಖಿನ ದಿವಸ, ಉಪ್ಪಾರ ... ಸಮಾಜದವರ ಸಭೆಯು ನೆರವೇರಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ... ಮಾಸ್ತೈಪರ ಹಿರೇಮಠದ ಪಟ್ಟದ ಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ

... ತಾ ... ಮ ... ಉಪ್ಪಾರಪ್ಪ ... ದಿನವಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಲ್ಪಟ್ಟ 1 ರೂಪಾಯಿ ... ದುಂಡಲಿಂಗಪ್ಪ ಮಾಸ್ತರ ಇವರ ದ್ವಾರಾ ತಲ್ಪಿರುತ್ತದೆ

ಸಿಂಧನೂರು ತಾಲೂಕು ... ಹಿರೇಮಠದಲ್ಲಿ ... ದಿವಸ ನೆರವೇರಿದ ಗಣಾರಾಧನೆಯ ಸಮಯದಲ್ಲಿ ... ಪ್ರಭಾಪೋಷಣಕ್ಕೋಸ್ಕರ ... ಪಾಟೀಲ ... ಸಮರ್ಪಿಸಿದ 1 ರೂಪಾಯಿಯು ... ಪಂಚಾಕ್ಷರಿ ಶರ್ಮಾ ... ಇವರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಹಾರೈಸುತ್ತೇವೆ

ದುಃಖವಾರ್ತೆ

ಆಳಂದ ತಾಲೂಕಿಗೆ ಸೇರಿರುವ ಜಹಗೀರು ಕೇರಾಪುರ ಗ್ರಾಮದ ಮ|| ರಾ|| ಈಶ್ವರಪ್ಪ ಮಾಲಿ ಗೌಡರು ಮಾಘ ಶುದ್ಧ ೮ ದಿವಸ ಶಿವಾಧೀನರಾದರೆಂಬ ವಿಷಯವನ್ನು ಬರೆಯಲು ಅತ್ಯಂತ ವಿಷಾದವೆನಿಸುತ್ತದೆ ಇವರು ಶಿವಾಧೀನರಾಗುವ ದಿವಸ ಸ್ನಾನ ಪೂಜಾದಿಗಳನ್ನು ತೀರಿಸಿಕೊಂಡು ಪಂಚಾಕ್ಷರೀ ಮಂತ್ರವನ್ನುಚ್ಚರಿಸುತ್ತ ಪಂಚಾಚಾರ್ಯರ ಜಯಘೋಷವಗುತ್ತಿರಲು ಪ್ರಾಣವನ್ನು ತ್ಯಜಿಸಿದರು ಇಂತಹ ಮರಣವು, ಪುಣ್ಯಾತ್ಮರಿಗಲ್ಲದೆ ಬೇರೆಯವರಿಗೆ ಎಂದಿಗೂ ಆಗದು ಇವರ ಅಂತ್ಯೇಷ್ಟಿ ಕ್ರಿಯೆಯು ವಿಧ್ಯುಕ್ತವಾಗಿ ನೆರವೇರಿತು ಆ ಕಾಲದಲ್ಲಿ ಮಾಹೇಶ್ವರರಿಗೆ ದಾನ ಧರ್ಮಗಳು ಮಾಡಲ್ಪಟ್ಟವು ಇವರಿಗೆ ಇಬ್ಬರು ಗಂಡು ಮಕ್ಕಳೂ ಒಬ್ಬ ಹೆಣ್ಣುಮಗಳೂ ಇದ್ದಾರೆ ಶ್ರೀ ಜಗದಾಚಾರ್ಯರು ಮೃತರ ಆತ್ಮಕ್ಕೆ ಶಾಂತಿಯನ್ನೂ ಪುತ್ರಾದಿಗಳಿಗೆ ದುಃಖಶಮನವನ್ನೂ ಉಂಟುಮಾಡಲೆಂದು ಪ್ರಾರ್ಥಿಸುವ

ದುಂಡಲಿಂಗಪ್ಪ ಮಾಸ್ತರ ಬಳೂರಗಿಕರ್

[೧೯ನೆಯ ಪುಟದಿಂದ ಮುಂದುವರಿದುದು]

ಬಾಲಿಕೆಗೆ "ಸಂಗೀತ ಚಂದ್ರಿಕಾ" ಎಂಬ ಪದವೀ ಶೋಭಿತ ಪದಕ ಪ್ರಶಸ್ತಿಪತ್ರವನ್ನೂ ಅನುಗ್ರಹಿಸಿದರು. ಈ ಪದವೀಪ್ರಧಾನದ ಅಭಿನಂದನ ಮಹೋತ್ಸವವು ತಾ|| ೧೨ ೪ ೪೫ ನೆಯ ಗುರುವಾರ ದಿವಸ ಶ್ರೀಮಾನ್ ಪಿ ಮಹದೇವಯ್ಯನವರ ಅಧ್ಯಕ್ಷತೆಯಲ್ಲಿ ಹೃದಯಂಗಮವಾಗಿ ನಡೆಯಿತು ತಾ|| ೧೩ ೪ ೪೫ ನೆಯ ನಿಜಚೈತ್ರ ಶು|| ೧ ಶುಕ್ರವಾರ ದಿವಸ "ಶ್ರೀ ಜಗದ್ಗುರು ರೇಣುಕ ಸಂದೇಶ" ವೆಂಬ ಬಗ್ಗೆ ಶ್ರೀಗಳವರ ಭಾಷಣವಾದ ಮೇಲೆ ಗಂಧ, ಪುಷ್ಪ, ಕುಂಕುಮ, ಪ್ರಸಾದವಿನಿಯೋಗ, ಮಹಾಮಂಗಳಾರತಿ, ರಾಜಾಶೀರ್ವಾದ, ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಗಳಾದವು ಈ ರೀತಿ ಈ ವರ್ಷದ ಜಯಂತೀ ಮಹೋತ್ಸವವು ಅಭೂತಪೂರ್ವವೈಭವದೊಡನೆ ಸಮಾಪ್ತಿಯಾಯಿತು ಅನೇಕ ಪರಮತೀಯರು ಈ ಕಾರ್ಯದಲ್ಲಿ ಭಾಗಿಗಳಾಗಿದ್ದರು ಬೆಂಗಳೂರು ಗುರುಭಕ್ತರ ಭಕ್ತ್ಯುತ್ಸಾಹಗಳು ಪ್ರಶಂಸನೀಯಗಳಾಗಿವೆ ಶ್ರೀ ಜಯಂತೀ ಸಮಿತಿಯವರು ಶ್ರೀ ಮಹಾಂತಿನಮಠದಲ್ಲಿ ಪ್ರತಿದಿನವೂ ಇಂಗ್ಲೀಷ್, ಸಂಸ್ಕೃತ ಇತ್ಯಾದಿಗಳನ್ನು ಕಲಿಯುವ ೬೦ ೭೦ ವಿದ್ಯಾರ್ಥಿಗಳಿಗೆ ಅಶನವಸತಿಗಳನ್ನು ಕಲ್ಪಿಸಿರುವರು ವೇ|| ಎನ್ ರುದ್ರಯ್ಯನವರು ಶ್ರೀಮಾನ್ ಸರಾಫ್ ಬಸಪ್ಪನವರು, ಶ್ರೀ ಯಜಮಾನ್ ಕಂಚಪ್ಪನವರು ವೇ|| ಚಿಂತಾಮಣಿ ಲಿಂಗಾರಾಧ್ಯರು, ಶ್ರೀಮಾನ್ ಗ್ರಂದಿಗೆ ಅಂಗಡಿ ಗುರುಶಿದ್ದಪ್ಪನವರು ಶ್ರೀಮಾನ್ ಡಿ ಬಿ ಗುರುಶಿದ್ದಪ್ಪನವರು ಶ್ರೀಮಾನ್ ಅಡಿಕೆ ಅಂಗಡಿ ಅಪ್ಪಾಜಪ್ಪನವರು, ಶ್ರೀಮಾನ್ ಬಾಳಪ್ಪನವರ ಗುಬ್ಬಣ್ಣನವರು, ಶಿವನಂಜಪ್ಪನವರು ಮತ್ತು ಅರಳೇಪೇಟೆ ದೇಶವಶೆಟ್ರು ರುದ್ರಪ್ಪಶೆಟ್ರು, ದೊಡ್ಡಪೇಟೆ ವೇಶದಶೆಟ್ರು, ರೇವಣ್ಣಶೆಟ್ರು ಅರಳೇಪೇಟೆ ಯಜಮಾನ್ ಗಂಗಪ್ಪನವರೇ ಮೊದಲಾದ ಅನೇಕ ಮುಂದಾಳುಗಳು ವ ಹಿ ಕ ಪದ್ಧತಿಯಂತೆ ಶ್ರಮವಹಿಸಿ ಸಮಸ್ತ ಕಾರ್ಯಕಲಾಪಗಳನ್ನು ಸರ್ವಾಂಗಸುಂದರವಾಗಿ ನೆರವೇರಿಸಿದರು ಶ್ರೀ ಗಂಗಾಧರಶಿವಾಚಾರ್ಯರವರ ತಪಶ್ಚಂದ್ರಿಕಾಪ್ರಭಾವದಿಂದ ಜಯಂತೀ ಮಹೋತ್ಸವ ಸಮುದ್ರವು ಉಕ್ಕೇರುತ್ತಿರುವುದು ಸರ್ವ ಶುಭೋದಯ ಸಾಧನವಾಗಿದೆ ಶ್ರೀ ಗುರುದೇವತಾಭಕ್ತಿನಿಷ್ಠರಾದ ಸಮಸ್ತ ಧರ್ಮಾತ್ಮರಿಗೂ ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಸಮಸ್ತ ಸನ್ಮಂಗಳಗಳನ್ನಿತ್ತು ಕಾಪಾಡಲೆಂದು ಹಾರೈಸುತ್ತೇನೆ ಬೋಲೋ ಶ್ರೀ ಜಗದ್ಗುರು ಪಂಚಾಚಾರ್ಯ ಮಹಾರಾಜಕೀ ಜೈ

ಗುರುಭಕ್ತ

ಅನುಷ್ಠಾನಸಮಾಪ್ತಿ

ಮೈಂದರಗಿಯಲ್ಲಿರುವ ಪಂಚಾಳವಂಶದ ಭೀಮರಾವ್ ಪೂಜಾರಿ ಎಂಬುವರು ಅಧಿಕ ಚೈತ್ರ ಶುದ್ಧ ೧೫ ದಿವಸ ದೇವಿಯ ಅನುಷ್ಠಾನಕ್ಕೆ ಕುಳಿತು, ಕೃಷ್ಣಪಕ್ಷ ಚತುರ್ದಶಿ ದಿವಸ ಸಮಾಪ್ತಿಗೊಳಿಸಿದರು. ಸಂಗೋಳಗಿ, ನಾಗೂರು, ಮುಗಳಿ, ರುದ್ರೋಡಗಿ ಈ ಗ್ರಾಮಗಳ ಮಧ್ಯದಲ್ಲಿ ವಿರಾಜಿಸುವ ಗುಡ್ಡದ ಮೇಲೆ ಕಾಳಿಕಾಭವಾನಿಯ ದೇವಸ್ಥಾನವಿರುವದು ಆ ದೇವಿಯಲ್ಲಿ ಇವರಿಗೆ ಅಪಾರ ಭಕ್ತಿಯಿರುವದು ಈ ವರ್ಷ ಆ ದೇವಿಯ ಸ್ಥಾನದಲ್ಲಿಯೇ ಇವರು ಅನುಷ್ಠಾನವನ್ನು ಮಾಡಿದರು ಈಗ್ಗೆ ೧೦ ೧೨ ವರುಷಗಳಿಂದಲೂ, ಜೇವರಗಿ ಬೃಹನ್ಮಠಾಧ್ಯಕ್ಷರಾದ ಶ್ರೀ ಗುರುಶಾಂತ ಶಿವಾಚಾರ್ಯರನ್ನು ಅಲ್ಲಿ ರಥದಮೇಲೆ ಕುಳ್ಳಿರಿಸಿ ಜಾತ್ರೆಯನ್ನು ಮಾಡುತ್ತಿರುವರು ಈ ಅನುಷ್ಠಾನ ಸಮಾಪ್ತಿ ಸಮಯದಲ್ಲಿ ಜೇವರಗಿ ಶ್ರೀಗಳವರ ಪಾದಪೂಜೆಯೂ, ಗಣಾರಾಧನೆಯೂ ನೆರವೇರಿದವು ಈ ಕಾರ್ಯದಲ್ಲಿ ಸಂಗೋಳಗಿ, ಅಂದೇವಾಡಿ, ಉದ್ದೇವಾಡಿ, ಬೋರೋಟಿ ಮೊದಲಾದ ಗ್ರಾಮಗಳ ಜನರು ಸರಿಯಾದ ವ್ಯವಸ್ಥೆಯನ್ನು ಮಾಡಿದ್ದರು. ಮ|| ರಾ|| ಶಿವಶಂಕರಪ್ಪ ಪಾಟೀಲ ಇವರು ಈ ಕಾರ್ಯದಲ್ಲಿ ವಿಶೇಷ ದಕ್ಷತೆಯನ್ನು ತೋರಿಸಿದರು ಈ ಕಾರ್ಯದಲ್ಲಿ ಭಾಗಿಗಳಾದ ಸರ್ವರಿಗೂ ಶ್ರೀ ಜಗದಾಚಾರ್ಯರು ಸನ್ಮಂಗಲಗಳನ್ನೀಯಲೆಂದು ಪ್ರಾರ್ಥಿಸುತ್ತೇನೆ

ಕಾಶೀನಾಥ ಮಾಸ್ತರ, ಅಂಜುಟಗಿ

ಧ್ವಜಾರೋಹಣಸಮಾರಂಭ, ರೌಡಕುಂದಿ

ರಾಯಚೂರು ಡಿ|| ಸಿಂಧನೂರ ತಾ|| ರೌಡಕುಂದಿ ಹಿರೇಮಠದಲ್ಲಿ ಧ್ವಜಾರೋಹಣ ಕಾರ್ಯವು ಪೋ|| ಪಾ|| ವಿರೂಪಾಕ್ಷಗೌಡರಿಂದ ನೆರವೇರಿಸಲ್ಪಟ್ಟಿತು ಯುಗಾದಿ ಪ್ರತಿಪದ ಶುಕ್ರವಾರ ದಿವಸ ಮಠದ ಪೂರ್ವದ ಪಟ್ಟಾಧಿಕಾರಿ ಸ್ವಾಮಿಗಳವರ ಗದ್ದುಗೆಗಳಿಗೆ ರುದ್ರಾಭಿಷೇಕ ಸಹಸ್ರ ಬಿಲ್ವಾರ್ಚನೆಗಳು ಪಂಚಾಕ್ಷರಶರ್ಮರ ವೈದಿಕತ್ವದಲ್ಲಿ ನೆರವೇರಿದವು ಅನಂತರ ಗಣಾರಾಧನೆಯು ಪೋ|| ಪಾ|| ವಿರೂಪಾಕ್ಷಗೌಡರಿಂದ ಜರುಗಿಸಲ್ಪಟ್ಟಿತಲ್ಲದೆ ಕಾಶೀಕ್ಷೇತ್ರದಲ್ಲಿ ಅಧ್ಯಯನ ಮಾಡುತ್ತಿರುವ ಮಠದ ಪಟ್ಟಾಧಿಕಾರಿಗಳಿಗೆ ೨೫ ರೂಪಾಯಿಗಳು ಸಮರ್ಪಿಸಲ್ಪಟ್ಟವು ಅದೇ ದಿವಸ ವೀರಶೈವ ತತ್ವಶಾಸ್ತ್ರ ಪ್ರವಚನಕುಶಲರೂ ದೇವರಗುಡ್ಡ, ಸೊಂಡೂರು ಗದ್ವಾಲ್, ಸುಳುಬಾಯಿ, ತಾಳೂರು ಬೆಣಕಲ್ಲು ಇತ್ಯಾದಿ ಸ್ಥಲಗಳಲ್ಲಿ ಶಿವಯೋಗಾನುಷ್ಠಾನ ಮತ್ತು ಮಹಾಪುರಾಣಗಳನ್ನು ಜರುಗಿಸಿ ಪ್ರಸಿದ್ಧರಾದವರೂ ಪರಮ ತಪಸ್ವಿಗಳೂ ಆದ ಸದರಿ ಹಿರೇಮಠದ ಶ್ರೀ|| ಷ|| ಬ್ರ|| ಪಂ|| ಶ್ರೀ ಶಿವಯೋಗಿಶಿವಾಚಾರ್ಯಸ್ವಾಮಿಗಳವರ ಪಾದಪೂಜಾ ಗಣಾರಾಧನೆಯು ಜರುಗಿದನಂತರ ಸಾಯಂಕಾಲ ೫ ಘಂಟೆಗೆ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸಭೆಯು ಕೂಡಿತು ಸಭೆಗೆ ಮಾಲೀಪಾಟೀಲ ಬಸವನಗೌಡರು, ಪೋಲೀಸ ಪಾಟೀಲ ವಿರೂಪಾಕ್ಷಗೌಡರು, ಪಟವಾರಿ ಜನಾರ್ಧನರಾಯರು, ಶೀಲವಂತ ಮಠದ ಅಮರಯ್ಯನವರು ತಾಲೂಕಾ ಸ್ಕೂಲ್ ಮಾಸ್ತರುಗಳು, ಸಾಹುಕಾರ ಹೊನ್ನೂರು ನಾಯಿಕ ಸಾಹೇಬರು ಶಿಂದನೂರು ಲಾಳೇಸಾಹೇಬರು, ಅಂಗಡಿ ಬಸವನಗೌಡರು ಅರಳಿ ಅಮರಗೌಡರು, ಕಂಗಲ್ಲು ಶರಭಂಣ, ಅಯ್ಯಪ್ಪ ಪುಗ್ರಾಣದ, ಅಯ್ಯನಗೌಡ ದಾನಗೌಡರ ಮೊದಲಾದ ಮಹಾಜನಗಳು ಆಗಮಿಸಿದ್ದರು. ಬಳಿಗೇರಿ ಬೃಹನ್ಮಠದ ರಾಷ್ಟ್ರಭಾಷಾವಿಶಾರದ ಪಂಡಿತ ವೀರೇಶ್ವರಶಾಸ್ತ್ರಿಗಳು ಯುಗಾದಿಯ ಬಗ್ಗೆ ೧ ಘಂಟೆಯವರಗ ಮನೋಹರವಾದ ಭಾಷಣವನ್ನು ಮಾಡಿದರು ಬಳಿಕ ನೂತನ ವರ್ಷದ ಪಂಚಾಂಗ ಶ್ರವಣವನ್ನು ಮಾಡಿದರು ಅನಂತರ ಸಮಸ್ತರೂ ಊರಲ್ಲಿಯ ಸಮಸ್ತ ದೇವಾಲಯಗಳಿಗೆ ಹೋಗಿ ಕಾಯಿ ಕರ್ಪೂರ ಮಂಗಲಾರತಿಗಳನ್ನು ಮಾಡಿಸಿಕೊಂಡು ರಾತ್ರಿ ೧೦ ಘಂಟೆಗೆ ಶ್ರೀ ಮಠಕ್ಕೆ ಬಂದನಂತರ ಸಭೆಯು ವಿಸರ್ಜಿಸಲ್ಪಟ್ಟಿತು ಇಲ್ಲಿಯ ಸಮಸ್ತ ಸದ್ಭಕ್ತರಿಗ ಶ್ರೀ ಜಗದ್ಗುರು ಮರುಳಸಿದ್ಧೇಶ್ವರನು ನಿತ್ಯಮಂಗಲವನ್ನಿತ್ತು ಕಾಪಾಡಲೆಂದು ಅನನ್ಯಭಾವದಿಂದ ಪ್ರಾರ್ಥಿಸುತ್ತೇನೆ

ಪಿ ಜಿ ಪಾಟೀಲ ರೌಡಕುಂದಿ

ಬ್ರಿಟಿಷ್ ಹಡಗುಗಳ ಮೇಲೆ ಜಪಾನಿನ ವ್ಯರ್ಥ ಮುತ್ತಿಗೆ

ಸಾವರ್ ಒಳಿ ಜಪಾನ್ ವಿಮಾನಗಳು ಸಣ್ಣ ಸಣ್ಣ ಗುಂಪುಗಳಾಗಿ ಬಂದು ಬ್ರಿಟಿಷ್ ಸಂಗ್ರಾಮ ನೌಕೆಗಳ ಮೇಲೆ ಮುತ್ತಿಗೆ ನಡೆಸಿದರೆಂದು ಅ|| ನಿಮಿಟ್ಜರವರು ಪ್ರಕಟಿಸಿದ್ದಾರೆ ಒಂದು ಹಡಗಿಗೂ ನಷ್ಟವಾಗಲಿಲ್ಲ ಮುತ್ತಿಗೆ ನಡೆಸಿದ ಮೂರು ವಿಮಾನಗಳನ್ನು ಹೊಡೆದು ಸಮುದ್ರಕ್ಕೆ ಕಡವಲಾಯಿತೆಂದು ಹೇಳಲಾಗಿದೆ

ಸಿದ್ಧಾಂತಶಿಖಾಮಣಿ

ವೀರಶೈವಮತವನ್ನೆ ಜನ್ಮಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು ಈ ದಿವ್ಯಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ವೀರಶೈವಮತದಲ್ಲಿ ಸದ್ಯಃ ದೊರೆಯತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು ಈ ಗ್ರಂಥವು ಈಗ್ಗೆ ಸುಮಾರು ೩ಸಾವಿರ ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭವಂತಿರುವುದರಿಂದ, ಇದಕ್ಕೆ ಇಂದಿನವರಿಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಓದಿನೋಡಿದನಂತರ ಪಂಡಿತರ ವ್ಯಾಖ್ಯಾನದ ಮಹತ್ತ್ವವು ವಾಚಕರಿಗೆ ವೇದ್ಯವಾಗುವುದು. ವಾಚಕರ ಅನುಕೂಲಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೬೬೨ ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ ಶೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು **ಬೆಲೆ ೨ ರೂಪಾಯಿ.**

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೭ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ ...	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ ..	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ. ..	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ ..	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ) ...	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸಮ್ಮೋದರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು ೨ನೆಯ ಆವೃತ್ತಿ)	೧। ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಶ್ರೀಕರಭಾಷ್ಯಂ (ಚತುಃಸೂತ್ರೀ)	೧|| ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ) ..	೧|| ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ) ..	೨ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ.
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ಶಿವಾದ್ವೈತಮಂಜರಿ [ಕನ್ನಡವ್ಯಾಖ್ಯಾನ ೧೩೪೪ ಪುಟ]	೮ ರೂ.
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*) ..	8 As
Speeches by Pandit Shri Kashinatha Shastriji (*English*)	12 As
लिंगधारणचंद्रिका (संस्कृत) ..	२ रु.
वीरशैवरत्न (मराठी)	१ रु
महानारायणोपनिषत् (वीरशैवभाष्य-संस्कृत)	१ रु.
सिद्धांतशिखामणि (मूल) ..	८ आ.
वीरशैवाचारकारिका (संस्कृत)	२ आ.

ಮ್ಯಾನೇಜರ್— ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯರ ಕೃಪೆಯಿಂದ ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೩ ರೂ ೪ ಆಣೆ ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ.

ಸಂಪುಟ ೧೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೦ನೇ ಏಪ್ರಿಲ್ ೧೯೪೨ [ಸಂಚಿಕೆ ೫೩

ಲಿಂಗೋದ್ಭವ ಲಾಕೆಟ್ಸ್

ಈಗ ಹೊಸದಾಗಿ ಜಗದಾಚಾರ್ಯರ ಲಿಂಗೋದ್ಭವ ಲಾಕೆಟ್ಟು ಮತ್ತು ಕೋಟಿನ ಗುಂಡಿಗಳನ್ನು ಶುದ್ಧವಾದ ಬೆಳ್ಳಿಯಲ್ಲಿ ಬಹು ಸುಂದರವಾಗಿ ತಯಾರು ಮಾಡಿಸಿದ್ದೇವೆ.

ಲಾಕೆಟ್ಟುಗಳು ದೊಡ್ಡವರಿಗೆ ಕೋಟಿನ ಮೇಲೆ ಹಾಕಿಕೊಳ್ಳುವಂತೆಯೂ, ಮಕ್ಕಳಿಗೆ ಕೊರಳಿನಲ್ಲಿ ಧರಿಸುವಂತೆಯೂ ತಯಾರಿಸಲ್ಪಟ್ಟಿವೆ. ಗುರುಭಕ್ತರೆಲ್ಲರೂ ಇವುಗಳನ್ನು ತರಿಸಿ ತಮ್ಮ ಶರೀರದ ಮೇಲೆ ಧರಿಸಿಕೊಂಡು ಪ್ರತಿದಿವಸವೂ ಆ ಮಂಗಲಮೂರ್ತಿಯ ದರ್ಶನ ಸ್ಪರ್ಶನಾದಿಗಳಿಂದ ಧನ್ಯರಾಗಬೇಕೆಂದು ಕೋರಿಕೆ

ಬೆಳ್ಳಿ ಲಾಕೆಟ್ ಬೆಲೆ ೧ ಕ್ಕೆ ೧ ರೂ

ಬೆಳ್ಳಿ ಕೋಟಿನ ಗುಂಡಿ ೧ ಕ್ಕೆ ೧ ರೂ

೬ ಕ್ಕಿಂತಲೂ ಕಡಿಮೆಯಾಗಿ ವಿ ಪಿ ಕಳಿಸುವದಿಲ್ಲ

ಮ್ಯಾನೇಜರ್

ಪಂಚಾಚಾರ್ಯಪ್ರಭಾ, ಮೈಸೂರು.

ಶ್ರೀ ಜಗದ್ಗುರು ಕಾಶೀಪೀಠಕ್ಕೆ ಕಾಣಿಕೆ

ಪ್ರಭೆಯಲ್ಲಿ ಕಾಶೀಪೀಠದ ಸಮಾಚಾರವೆಲ್ಲವೂ ಈ ಹಿಂದೆ ಪ್ರಕಾಶಿತವಾಗಿದೆ. ಅದರಂತೆ ಗುರುಭಕ್ತರು ಗುರುದಕ್ಷಿಣೆಯನ್ನು ಪೀಠಕ್ಕೆ ಸಲ್ಲಿಸುತ್ತಿದ್ದಾರೆ. ಈ ಕೆಲಸವು ಇನ್ನೂ ವಿಶೇಷವಾಗಿ ಸಾಗಬೇಕಾಗಿದೆ ಆಯಾ ಸ್ಥಳಗಳಲ್ಲಿಯ ಪ್ರಮುಖರು ವೀರಶೈವ ಮಹಾಜನರಿಂದ ವಿವಾಹಾದಿ ಶುಭಕಾರ್ಯಗಳಲ್ಲಿ ದಾನ ದಕ್ಷಿಣೆಗಳನ್ನು ಸಮರ್ಪಿಸಿ ಕಾಶೀ ಜಗದ್ಗುರು ಮಹಾಸನ್ನಿಧಿಗೆ ಕಳುಹಿಸುತ್ತಿರಬೇಕು ಈ ಬಗ್ಗೆ ಸರಿಯಾದ ಸೇವೆಯನ್ನು ಸಲ್ಲಿಸುವುದು ಸರ್ವ ಗುರುಭಕ್ತರ ಮುಖ್ಯ ಕರ್ತವ್ಯವಾಗಿದೆ ಎಂಬುದನ್ನು ತಿಳಿದು ಎಲ್ಲರೂ ಪ್ರಯತ್ನಿಸಬೇಕು.

ಶ್ರೀ ಜಗದ್ಗುರುವಿನ ರೇಣುಕಾಚಾರ್ಯ ಯತಿವರ್ಯರ

ಸೂಕ್ತಿಮಾಲೆ

ಲೇ— ಮಲ್ಲಿಕಾರ್ಜುನಾರಾಧ್ಯ ರಾಣೇಬೆನ್ನೂರ ಪ ಶೇಷರ್, ಮುದೇನೂರು

೧) ಅಹಿಂಸಾ, ಸತ್ಯ, ಅಸ್ತೇಯ, ಅಸಂಗ, ಲಜ್ಜಾ, ಅಸಂಚಯ, ಆಸ್ತಿಕ್ಯ, ಬ್ರಹ್ಮಚರ್ಯ, ಮೌನ, ಸ್ಥೈರ್ಯ, ಕ್ಷಮಾ, ಅಭಯ ಈ ಹನ್ನೆರಡು ಯಮಗಳು, ಅಂತಶ್ಶುದ್ಧಿ, ಬಹಿಶ್ಶುದ್ಧಿ, ಜಪ ತಪಶ್ಚರ್ಯ, ಹೋಮ, ಶ್ರದ್ಧಾ, ಆತಿಥ್ಯ, ಈಶ್ವರಭಕ್ತಿ ತೀರ್ಥಾಟನ, ಪರಹಿತಬುದ್ಧಿ ಸಂತೋಷ ಗುರುಸೇವಾ ಇವು ಹನ್ನೆರಡು ನಿಯಮಗಳು ಇವುಗಳ ಆಚರಣೆಯಿಂದ ಸಕಾಮ ಪುರುಷನಿಗೆ ವೈಭವವು, ನಿಷ್ಕಾಮಪುರುಷನಿಗೆ ಸಾಯುಜ್ಯವು ದೊರೆಯುವುವು

೩) ಶಮವೆಂದರೆ ಪರಮಾತ್ಮನಲ್ಲಿ ಬುದ್ಧಿಯ ನಿಷ್ಠೆಗೊಳ್ಳಿಸುವುದು ಆದರೆ ಶಾಂತಿಯನ್ನು ತಾಳುವುದು ಶಮವಲ್ಲ ದಮವೆಂದರೆ ಇಂದ್ರಿಯಗಳ ಆಕಲನ ಮಾಡುವುದು, ಆದರೆ ಶತ್ರು ಮೊದಲಾದವರನ್ನು ಜರ್ಝರ ಮಾಡುವುದು ದಮವಲ್ಲ ತಿತಿಕ್ಷೆಯೆಂದರೆ ವಿಹಿತ ಕರ್ಮವನ್ನಾಚರಿಸುವಾಗ ಪ್ರಾಪ್ತವಾಗುವ ಕ್ಲೇಶವನ್ನು ಸಹಿಸುವುದು ಆದರೆ ಅವಮಾನಾದಿಗಳನ್ನು ಸಹಿಸುವುದು ತಿತಿಕ್ಷೆಯಲ್ಲ (ಅವಮಾನವನ್ನು ಸಹಿಸುವುದು ಹೇಡಿತನವೇ ಸರಿ. "ಏತಾವಾನೇವ ಪುರುಷೋಯದಮರ್ಷಿಯದಕ್ಷಮೀ। ಕ್ಷಮಾವಾನ್ನಿರಮರ್ಷಶ್ಚ ನೈವ ಸ್ತ್ರೀನ ಪುನಃ ಪುಮಾನ್॥" ಎಂಬ ಭಾರತ ವಾಕ್ಯದಂತೆ ಯಾವನು ಅನ್ಯಾಯವನ್ನು ಕಂಡು ಕೋಪಗೊಳ್ಳುವನೋ ಯಾವನು ಅಪಮಾನವನ್ನು ತಾಳಿಕೊಳ್ಳುವುದಿಲ್ಲವೋ ಆತನೇ ಗಂಡಸು ಅತಿರಿಕ್ತವಾದ ತಾಳ್ಮೆಯುಳ್ಳ ಹೇವವಿಲ್ಲದ ವ್ಯಕ್ತಿಯು ಗಂಡಸೂ ಅಲ್ಲ, ಹೆಂಗಸೂ ಅಲ್ಲ ಎಂದು ಹೇಳಿರುವುದು) ಧೃತಿಯೆಂದರೆ ಜಿಹ್ವಾ, ಉಪಸ್ಥಗಳ ಆವೇಶವನ್ನು ಬಿಗಿಹಿಡಿಯುವುದು, ಆದರೆ ಆಪತ್ತಿನೊಳಗಿಂದ ಪಾರಾಗುವುದಕ್ಕಾಗಿ ಯತ್ನಿಸುವುದು ಧೃತಿಯಲ್ಲ

೩) ಪ್ರಾಣಿಮಾತ್ರಗಳೊಡನೆ ಪ್ರೇಮದಿಂದ ನಡೆಯುವುದೇ ದಾನವು, ವಿಷಯಸುಖದಲ್ಲಿ ವೈರಾಗ್ಯತಾಳುವುದೇ ತಪಶ್ಚರ್ಯವು, ವಾಸನೆಗಳ ಸಂಯಮನ ಮಾಡುವುದೇ ಶೌರ್ಯವು, ಬ್ರಹ್ಮವಿಚಾರವೇ ಸತ್ಯವು, ಸತ್ಯವೂ ಪ್ರಿಯವೂ ಆದ ಮಾತನ್ನು ಆಡುವುದೇ ಋತವು

೪) ಕಾಮ್ಯಕರ್ಮದಲ್ಲಿ ಆಸಕ್ತಿಯನ್ನಿಡದಿರುವುದೇ ಶುದ್ಧಿಯು, ಸಕಾಮ ಕರ್ಮಗಳನ್ನು ಬಿಟ್ಟುಬಿಡುವುದೇ ತ್ಯಾಗವು, ಸ್ವಧರ್ಮಾಚರಣೆಯೇ ಧನಸಂಗ್ರಹವು, ಪರಮೇಶ್ವರ ಧ್ಯಾನವೇ ಯಜ್ಞವು, ಜ್ಞಾನೋಪದೇಶವೇ ದಕ್ಷಿಣೆಯು

೫) ಪ್ರಾಣಾಯಾಮದಿಂದ ಮನಸ್ಸಿನ ಆಕಲನ ಮಾಡಲಿಕ್ಕೆ ಬರುತ್ತದಾದ್ದರಿಂದ ಪ್ರಾಣಾಯಾಮವೇ ಪುರುಷನ ಬಲವು, ಯೋಗಾಭ್ಯಾಸದಿಂದ ಈಶ್ವರರೂಪವು ಪ್ರಾಪ್ತವಾಗುವುದರಿಂದ, ಆ ಯೋಗಾಭ್ಯಾಸವೇ ಉತ್ತಮ ಭಾಗ್ಯವು, ಭಗವದ್ಭಕ್ತಿಯಿಂದ ಸಾಯುಜ್ಯ ಪ್ರಾಪ್ತಿಯಾಗುವುದರಿಂದ, ಆ ಭಗವದ್ಭಕ್ತಿಯೇ ಉತ್ಕೃಷ್ಟ ಲಾಭವು

೬) ಅಯೋಗ್ಯಕೃತ್ಯಗಳಂ ಮಾಡುವ ವಿಷಯದಲ್ಲಿ ಪರಾಙ್ಮುಖವಾಗಿರುವುದೇ ಲಜ್ಜೆಯು ನಿರಪೇಕ್ಷತೆಯಂ ಧರಿಸುವುದೇ ಭೂಷಣವು

೭) ಸುಖವೆಂದರೆ ಅನುಕೂಲ ಅಥವಾ ಪ್ರತಿಕೂಲ ವೇದನೆಗಳಿಂದ ಅಲಿಪ್ತವಾಗಿರುವುದು ದುಃಖವೆಂದರೆ ವಿಷಯೋಪಭೋಗಗಳನ್ನು ಇಚ್ಛಿಸುವುದು

೮) ಸಂಸಾರಬಂಧದ ಹಾಗು ಸಂಸಾರ ಮೋಕ್ಷದ ಮಾರ್ಗವನ್ನು ತಿಳಿದುಕೊಳ್ಳುವವನೇ ಸುಜ್ಞನು, ದೇಹ, ಪತಿ, ಸುತ, ಗೃಹ, ಕ್ಷೇತ್ರಾದಿಗಳಲ್ಲಿ ಮಮಕಾರತ್ವವಂ ತಾಳುವವನೇ ಅಜ್ಞನು

೯) ಮಾರ್ಗವೆಂದರೆ ಪರಶಿವನ ಸಾನ್ನಿಧ್ಯಕ್ಕೆ ಮುಟ್ಟಿಸುವ ಉಪಾಯವು (ನಿವೃತ್ತಿ ಮಾರ್ಗ), ಅಪಮಾರ್ಗವೆಂದರೆ ಭೋಗಪ್ರಾಪ್ತಿಯ ಅಭಿಲಾಷೆಯು (ಪ್ರವೃತ್ತಿಮಾರ್ಗ) ಸ್ವರ್ಗವೆಂದರೆ ಸತ್ವಗುಣದ ಉತ್ಕರ್ಷವು, ನರಕವೆಂದರೆ ತಮೋಗುಣದ ವೃದ್ಧಿಯು।

೧೦) ಜೀವನಿಗೆ ಸದ್ಗತಿಯನ್ನು ಒದಗಿಸಿಕೊಡುವ ಸದ್ಗುರುವೇ ಬಂಧುವು, ಪರಮಾರ್ಥ ಪ್ರಾಪ್ತಿಯ ಸಾಧನೆಗಳಿಂದ ಯುಕ್ತವಾದ ಮನುಷ್ಯ ದೇಹವೇ ಗೃಹವು, ಗುಣ ಸಂಗ್ರಹಪೂರ್ಣನೇ ಸಂಪನ್ನನು, ಅಸಂತುಷ್ಟ ಚಿತ್ತವುಳ್ಳವನೇ ದರಿದ್ರನು ಇಂದ್ರಿಯಗಳ ಆಕಲನ ಮಾಡಲಾರದವನೇ ದುರ್ಬಲನು, ಇಂದ್ರಿಯಗಳ ಆಕಲನ ಮಾಡುವವನೇ ಸಬಲನು

೧೧) ಅಧಿಕಾರಿಯಾದ ಶಿಷ್ಯನು ತ್ರಯಾಗ್ನಿಯಿಂದ ಬೆಂದು ವ್ಯಾಕುಲಚಿತ್ತನಾಗಿ ನಾನು ಯಾರು? ನನಗೆ ಈ ಸಂಸಾರವು ಏನುಕಾರಣದಿಂದ ಬಂದಿತು? ಇದು ಯಾರ ಮೂಲಕದಿಂದ ನಿವೃತ್ತಿಯಾದೀತು? ಎಂಬುದನ್ನು ವಿಚಾರಿಸಿ ನೋಡಿ ಪತ್ರ, ಪುಷ್ಪ, ಫಲ, ಸಮಿಧಾದ್ಯುಪಹಾರಕಾಣಿಕೆಯಾಗಿ, ವಿದ್ಯಾ, ವಿನಯ, ವೈರಾಗ್ಯಗಳೊಡನೆ ಷಡ್ಗುಣೈಶ್ವರ್ಯಸಂಪನ್ನನಾದ ಶ್ರೋತ್ರೀಯ ಬ್ರಹ್ಮನಿಷ್ಠ ಸದ್ಗುರುವನ್ನು ಹೊಂದಿ, ಚೈತನ್ಯ ಶಾಶ್ವತ ಶಾಂತ ಎಂಬಿವೇ ಮೊದಲಾದ ಮಂತ್ರಾಷ್ಟಕ ಪಠಣಪೂರ್ವಕವಾಗಿ, ಪದದ್ವಯ ಭುಜದ್ವಯ ಹಸ್ತದ್ವಯ ವಕ್ಷೋಲಲಾಟಗಳೆಂಬ ಅಷ್ಟಾಂಗಗಳೂ ನೆಲಮುಟ್ಟುವಂತೆ ಪ್ರಣತನಾಗಿ, ಆಮೇಲೆ ಎದ್ದು ಭಕ್ತಿಭಾವದಿಂದ ಕರಕಮಲವನ್ನು ಮುಗಿದು ಕಿಂಕರಭಾವವನ್ನೂ, ಕಾರ್ಪಣ್ಯವನ್ನೂ ತೋರಿಸಿ, ಊರ್ಮಿಯಿಂದ ಕೊಂಡಾಡಿ "ಎಶ್ಯ, ಜ್ಞಾನ, ವೈರಾಗ್ಯ, ಕೀರ್ತಿ, ಶ್ರೀ, ಬಲ, ಐಶ್ವರ್ಯಗಳೆಂಬ ಷಡ್ಗುಣ ಸಮಗ್ರತೆಯಿಂದ ಭಗವಂತನಾದ ಸದ್ಗುರುವೇ, ಆಯಾಸವಿಲ್ಲದೆ ಯಾರ ವಿಧದಿಂದಾದರೂ ನನ್ನ ಈ ಭವಬಂಧನವನ್ನು ಬಿಡಿಸಬೇಕು, ಎಂದು ವಿಜ್ಞಾಪಿಸುವುದೇ ಶಿಷ್ಯನ ಕರ್ತವ್ಯವು, ಇಷ್ಟಾದರೆ ಗುರುವು ಪ್ರಸನ್ನನಾಗುವನು. ಅರ್ಥಾತ್ ಅನುಗ್ರಹಿಸುವನು.

ಪಂಚಾಚಾರ್ಯಪ್ರಭಾ.

೧೯೪೫ನೆಯ ಏಪ್ರಿಲ್ ತಾ|| ೩೦ನೇ ಸೋಮವಾರ

ಶಿವಲಿಂಗಧಾರಣ

ವಿಷ್ಣುಬ್ರಹ್ಮಾದಯೋ ದೇವಾ ವಸವೋ ಗೌತಮಾದಯಃ ।
ಧಾರಯಂತಿ ಸದಾ ಲಿಂಗಮುತ್ತಮಾಂಗೇ ವಿಶೇಷತಃ ।

ಈ ರೀತಿಯಾಗಿ ಲಿಂಗಪುರಾಣಸ್ಕಾಂದಪುರಾಣಾದಿಗಳಲ್ಲಿಯೂ ಶ್ರೀಭಗವತ್ಪಾದರೇಣುಕೋಪದಿಷ್ಟಸಿದ್ಧಾಂತಶಿಖಾಮಣ್ಯಾದಿಗಳಲ್ಲಿಯೂ ಬ್ರಹ್ಮಾದಿದೇವತೆಗಳೂ ಲಕ್ಷ್ಮ್ಯಾದಿಶಕ್ತಿಯರೂ ವಿರಸ್ಸು ಕಂಠ ಮುಂತಾದ ಅವಯವಗಳಲ್ಲಿ ಶಿವಲಿಂಗವನ್ನು ಯಾವಾಗಲೂ ಧರಿಸಿ ಪೂಜಿಸುತ್ತಿರುವರೆಂದು ಸ್ಪಷ್ಟವಾಗುವದು 'ರೌದ್ರಂ ಸಮಭ್ಯರ್ಚ್ಯ ಹಿ ಲಿಂಗಮಾಪ' 'ಬ್ರಹ್ಮಾ ಪೂಜಯತೇ ನಿತ್ಯಂ ಲಿಂಗಂ ಶೈಲಮಯಂ ತಥಾ ಲಿಂಗೇಽರ್ಚಯತಿ ತಂ ಪ್ರಭುಂ' ಮೊದಲಾದ ಬ್ರಹ್ಮವೈವರ್ತ ಆದಿತ್ಯಪುರಾಣ ಮಹಾಭಾರತಾದಿ ಪ್ರಮಾಣಗಳ ಆಧಾರದಿಂದ ಶಿವಲಿಂಗವನ್ನು ಪೂಜಿಸಬೇಕೆಂಬುದು ಮಾತ್ರ ಸಿದ್ಧವಾಗುವದು ಇದರಿಂದ ಭೂಮಿಯಲ್ಲಿ ಸ್ಥಾಪಿತವಾದ ಶಿವಲಿಂಗವನ್ನಾಗಲಿ, ಅಥವಾ ದೇಹದಲ್ಲಿ ಶಿವದೀಕ್ಷಾಪೂರ್ವಕವಾಗಿ ಧರಿಸಲ್ಪಟ್ಟ ಇಷ್ಟಲಿಂಗವನ್ನಾಗಲಿ ಪೂಜಿಸಬಹುದೆಂದು ಸಿದ್ಧವಾಗುವುದಲ್ಲದೆ ದೇಹದಲ್ಲಿ ಧರಿಸಲ್ಪಟ್ಟಿರುವ ಶಿವಲಿಂಗವನ್ನೇ ಹಸ್ತಪೀಠದಲ್ಲಿರಿಸಿ ನಿತ್ಯವೂ ಪೂಜಿಸಬೇಕೆಂಬ ಅರ್ಥವು ಸಿದ್ಧವಾಗುವದಿಲ್ಲ ಸ್ಕಾಂದಲಿಂಗಾದಿಪುರಾಣವಾಕ್ಯಗಳು ದೇಹದಲ್ಲಿ ಧರಿಸಲ್ಪಟ್ಟಿರುವ ಶಿವಲಿಂಗದ ಮಹತ್ವವನ್ನೂ ಬ್ರಹ್ಮವೈವರ್ತ ಮಹಾಭಾರತಾದಿ ಪ್ರಮಾಣಗಳು ಭೂಮಿಪ್ರತಿಷ್ಠಿತಗಳಾದ ಲಿಂಗಗಳ ಮಹತ್ವವನ್ನೂ ಹೇಳುತ್ತವೆಯಲ್ಲದೆ ಇವೆಲ್ಲಾ ವಾಕ್ಯಗಳು ಒಂದುಗೂಡಿ ಕರಪೀಠಾರ್ಚನಯೋಗ್ಯವಾದ ಇಷ್ಟಲಿಂಗಧಾರಣವೊಂದನ್ನೇ ಹೇಳುವುದಿಲ್ಲವೆಂದು ತೋರುವದು

ಉತ್ತಮಾಂಗೇ ಲಲಾಟೇ ವಾ ಹೃದಿ ವಾ ಬಾಹುಮೂಲಕೇ ।
ಧಾರಯಂತಿ ಸದಾ ಲಿಂಗಮುತ್ತಮಾಂಗೇ ವಿಶೇಷತಃ

ಮೊದಲಾದ ಸ್ಕಾಂದ ಲೈಂಗಾದಿ ಪುರಾಣವಾಕ್ಯಗಳು ಇಷ್ಟಲಿಂಗಧಾರಣವನ್ನು ಮಾತ್ರ ವಿಧಿಸುವಂತೆ

ಬ್ರಹ್ಮಾ ಪೂಜಯತೇ ನಿತ್ಯಂ ಲಿಂಗಂ ಶೈಲಮಯಂ ತಥಾ ।

ಇತ್ಯಾದಿ ವಾಕ್ಯಗಳು ಲಿಂಗಧಾರಣವನ್ನು ವಿಧಿಸುವುದಿಲ್ಲವೆಂಬ ಸಂಶಯವು ಉತ್ಪನ್ನವಾಗಬಹುದು ಆದರೆ ಸೂಕ್ಷ್ಮದೃಷ್ಟಿಯಿಂದ ವಿಚಾರಮಾಡಿ ನೋಡಿದರೆ ಇಂಥ ಆಕ್ಷೇಪಗಳಿಗವಕಾಶವಿಲ್ಲವು ಏಕೆಂದರೆ, ಈ ವಾಕ್ಯಗಳು ದೇಹದಲ್ಲಿ ಶಿವಲಿಂಗಧಾರಣವನ್ನೂ ಹಸ್ತಪೀಠದಲ್ಲಿ ಆ ಶಿವಲಿಂಗದ ಪೂಜೆಯನ್ನೂ ಪ್ರತಿಪಾದಿಸುವ ಲಿಂಗಧಾರಣಪ್ರಕರಣದಲ್ಲಿ ಹೇಳಲ್ಪಟ್ಟಿರುವದರಿಂದ ಸಮಸ್ತ ದೇವತೆಗಳು ಉತ್ತಮಾಂಗಲ್ಲಿ ಶಿವಲಿಂಗವನ್ನು ಧರಿಸಿ ಪೂಜಿಸುತ್ತಿದ್ದರೆಂದೂ ಲಿಂಗಪೂಜೆಯ ಮತ್ತು ಲಿಂಗಧಾರಣದ ಮಹತ್ವವನ್ನು ಕೊಂಡಾಡುವುದಕ್ಕಾಗಿ ಆ ಪ್ರಕರಣವು ಹೊರಟಿರುವುದರಿಂದ ಪ್ರಕರಣಾನುಸಾರವಾಗಿ ಕೇವಲ ಶಿವಲಿಂಗಪೂಜೆಯನ್ನು ವಿಧಿಸುವ ಬ್ರಹ್ಮವೈವರ್ತ ಮಹಾಭಾರತಾದಿ ವಚನಗಳು ಸಹ ಕರಪೀಠಾರ್ಚನಪರಗಳೆಂದೇ ನಿರ್ಧರಿಸಬೇಕು ಸಾಮಾನ್ಯವಾಗಿ ಲಿಂಗಪೂಜಾಪರಗಳಾದ ವಾಕ್ಯಗಳು ಸ್ಥಾವರಲಿಂಗಪರಗಳೆಂದೇ ಅರ್ಥಮಾಡುವುದಾದರೆ, ಪ್ರಾರಂಭಿಸಿದ ಲಿಂಗಧಾರಣಪ್ರಕರಣಕ್ಕೆ ವಿರೋಧವುಂಟಾಗುವದು. ಆದುದರಿಂದ ಇವೆಲ್ಲ ವಾಕ್ಯಗಳೂ ಇಷ್ಟಲಿಂಗಧಾರಣಸಾಧಕಗಳೆಂದು ಹೇಳುವುದೇ ನ್ಯಾಯವಾದುದು

ಈಶ್ವರಂ ತಮಹಂ ವಂದೇ ಯಸ್ಯ ಲಿಂಗಮಹರ್ನಿಶಂ ।
ಯಜಂತೇ ಸಹ ಭಾರ್ಯಾಭಿರಿಂದ್ರಜ್ಯೇಷ್ಠಾ ಮರುದ್ಗಣಾಃ ॥

ಅಂದರೆ—ಇಂದ್ರಜ್ಯೇಷ್ಠಾಃ-ಇಂದ್ರನೇ ಮೊದಲಾದ, ಮರುದ್ಗಣಾಃ-ದೇವತೆಗಳೆಲ್ಲರೂ, ಯಸ್ಯ ಯಾವ ಶಿವನಿಗೆ ನಿತ್ಯಶರೀರವಾಗಿರುವ, ಲಿಂಗಂ-ಶಿವಲಿಂಗವನ್ನು, ಭಾರ್ಯಾಭಿಸ್ಸಹ- ತಮ್ಮ ತಮ್ಮ ಪತ್ನಿಯರೊಡನೆ ಅಹರ್ನಿಶಂ-ಹಗಲುರಾತ್ರಿಗಳಲ್ಲಿ ಎಡಬಿಡದೆ ಯಜಂತೇ-ದೇಹದಲ್ಲಿ ಧರಿಸಿರುತ್ತಾರೆಯೋ, ತಂ-ಅಂಥ ಈಶ್ವರನನ್ನು ಅಹಂ-ನಾನು, ವಂದೇ-ನಮಸ್ಕರಿಸುವೆನು ಎಂದು ಬ್ರಹ್ಮಾಂಡಪುರಾಣದ ಚಿದಂಬರ ಸಂಹಿತೆಯಲ್ಲಿ ಹೇಳಲ್ಪಟ್ಟಿರುತ್ತದೆ. ಈ ವಾಕ್ಯದಿಂದ ಇಂದ್ರಾದಿ ದೇವತೆಗಳು ದೇಹದಲ್ಲಿ ಶಿವಲಿಂಗವನ್ನು ಧರಿಸಿದ್ದರೆಂಬ ಅರ್ಥವು ಸಿದ್ಧವಾಗುತ್ತದೆ. ಆದರೆ ಈ ಶ್ಲೋಕದಲ್ಲಿ "ಯಜಂತೇ" ಎಂಬ ಕ್ರಿಯಾಪದವಿರುತ್ತದ ಈ ಕ್ರಿಯಾಪದವು ಪೂಜಿಸುವರೆಂಬ ಅರ್ಥವನ್ನು ಕೊಡುತ್ತದಲ್ಲದೆ ಧರಿಸಿರುತ್ತಾರೆಂದು ಅರ್ಥ ಕೊಡುವುದಿಲ್ಲನೆಂಬ ಶಂಕೆಯನ್ನು ಅನೇಕರು ಮಾಡಬಹುದು "ಯಜ ದೇವಪೂಜಾಸಂಗತಿಕರಣದಾನೇಷು" ಎಂದು ವ್ಯಾಕರಣಸೂತ್ರದಲ್ಲಿ ಯಜಧಾತುವಿಗೆ ಪೂಜೆಯೆಂಬ ಅರ್ಥವನ್ನು ಅಂಗೀಕರಿಸಿರುವಂತೆ ಸಂಬಂಧ (ಸಂಗತಿಕರಣ)ಎಂಬ ಅರ್ಥವನ್ನೂ ಸಹ ಅಂಗೀಕಾರಮಾಡಿರುವದರಿಂದ ಇಂದ್ರಾದಿದೇವತೆಗಳೆಲ್ಲರೂ ಶಿವಲಿಂಗವನ್ನು ಧರಿಸಿದ್ದರೆಂದು ಹೇಳುವ ವೀರಶೈವಾಚಾರ್ಯರ ಅರ್ಥವು ಸಮಂಜಸವಾದುದು ಏಕೆಂದರೆ—"ಈಶ್ವರಂ ತಮಹಂ ವಂದೇ ಯಸ್ಯ ಲಿಂಗಮಹರ್ನಿಶಂ" ಎಂಬ ಪೂರ್ವಾರ್ಧದಲ್ಲಿ "ಅಹರ್ನಿಶಂ" ಎಂಬ ಪದವಿರುತ್ತದೆ ಇಲ್ಲಿ ಅಹಶ್ಶಬ್ದವು ಹಗಲನ್ನೆಲ್ಲಾ ತೋರಿಸುತ್ತದೆಯೇ ಹೊರತು ಹಗಲಿನ ಅಲ್ಪ ಸ್ವಲ್ಪ ಭಾಗವನ್ನು ತೋರಿಸುವುದಿಲ್ಲ ಅದರಂತೆಯೇ ನಿಶಾಶಬ್ದಕ್ಕೂ ಎಲ್ಲಾ ರಾತ್ರಿಯೆಂದು ಅರ್ಥವಾಗುವುದಲ್ಲದೆ ರಾತ್ರಿಯ ಕೆಲವಂಶವೆಂದರ್ಥವಾಗುವುದಿಲ್ಲ ಹೀಗೆ ಅಹೋರಾತ್ರರೂಪವಾದ ಸಾರ್ವಕಾಲಿಕ ಸಂಬಂಧವನ್ನು ತೋರಿಸುವ ಅಹರ್ನಿಶ ಎಂಬ ಶಬ್ದವು ಆ ಶ್ಲೋಕದಲ್ಲಿರುವುದರಿಂದ ದೇಹದಲ್ಲಿ ಯಾವಾಗಲೂ ದೇವತೆಗಳು ಶಿವಲಿಂಗವನ್ನು ಧರಿಸಿರುರೆಂಬ ಅರ್ಥವೇ ಬಲಪಡುತ್ತದೆ. ಹಾಗಲ್ಲದೆ ಯಾವುದೋ ಒಂದುಕಾಲದಲ್ಲಿ ಶಿವಲಿಂಗ ಸಂಬಂಧವುಳ್ಳವರಾಗಿದ್ದರೆಂಬರ್ಥವನ್ನು ಒಪ್ಪುವುದಾದರೆ "ಯಸ್ಯಲಿಂಗಮಹರ್ನಿಶಂ" ಎಂಬಲ್ಲಿರುವ 'ಅಹರ್ನಿಶ' ಎಂಬ ಪದವೇ ವ್ಯರ್ಥವಾಗಬೇಕಾಗುತ್ತದ. ಆದುದರಿಂದ ಮೇಲಣವಾಕ್ಯಗಳೆಲ್ಲವೂ ಲಿಂಗಧಾರಣವಿಧಾಯಕವಾಕ್ಯಗಳೆಂದೂ, ವ್ಯಾಸೋಕ್ತಪುರಾಣಾದಿಗಳಲ್ಲಿ ಲಿಂಗಧಾರಣವು ವಿಶದವಾಗಿ ಹೇಳಲ್ಪಟ್ಟಿರುವುದೆಂದೂ ಭಾವಿಸಬೇಕು

ಯುದ್ಧವಾರ್ತೆ.

ಬರ್ಮಾರಂಗ

ಮಿತ್ರಯೋಧರು ಪಿನ್ಮನಾದಿಂದ ದಕ್ಷಿಣಕ್ಕೆ ೧೬೩ ಮೈಲಿ ಮುಂದುವರಿದು ಜಪಾನರ ಮುಖ್ಯ ಮೂಲವಾದ ಟಾಂಗೂ ಎಂಬುದನ್ನು ಮತ್ತು ಸುತ್ತಮುತ್ತಲ ವಿಮಾನ ನಿಲ್ದಾಣಗಳನ್ನು ಹಿಡಿದಿದ್ದಾರೆ ಟಾಂಗೂವಿನಿಂದ ದಕ್ಷಿಣಕ್ಕೆ ಮಿತ್ರಸೇನೆ ಸಾಗುತ್ತಿದೆ ಥಾಜಿ ಪೂರ್ವದಲ್ಲಿ ಹಾರ್ಸಂಪ್ರಾನಗಳಿಗೆ ಹೋಗುವ ಮಾರ್ಗದಲ್ಲಿ ಶತ್ರುಗಳ ಪ್ರತಿಭಟನೆ ತೋರಿಬಂದಿದೆ.

ಜಪಾನರು ಅಪಾರಸೈನ್ಯ ತರುತ್ತಿದಾರೆ

ಈಗ್ಗೆ ೮ ವರ್ಷಗಳ ಹಿಂದೆ ಜಪಾನ್ ಸೈನ್ಯ ಚೀಣದ ಮೇಲೆ ದಂಡೆತ್ತಿ ಬಂದಲಾಗಾಯ್ತು ಇದುವರೆಗೆ ನಡೆದಿರುವ ಯುದ್ಧದಲ್ಲಿ ೩೦ ಲಕ್ಷ ಚೀಣಿ ಸೈನಿಕರಿಗೆ ಸಾವು ನೋವು ಸಂಭವಿಸಿದೆಯೆಂದು ಚೀಣರ ಯುದ್ಧಮಂತ್ರಿ ಚೆಂಗ್‌ಚೆ ಪ್ರಕಟಿಸಿದ್ದಾರೆ. ಮಧ್ಯ ಚೀಣದಲ್ಲಿ ಜಪಾನರು ತಮ್ಮ ನಷ್ಟಗಳನ್ನು ಸರಿಪಡಿಸಿಕೊಂಡು ಮುತ್ತಿಗೆಯನ್ನು ಮುಂದುವರಿಸಬೇಕೆಂಬ ಉದ್ದೇಶದಿಂದ ಅಪಾರ ಪಡೆಗಳನ್ನೂ ಸಲಕರಣೆಗಳನ್ನೂ ತರುತ್ತಿದ್ದಾರೆಂದೂ ಅವರು ಹೇಳಿದರು.

ಇಟಲಿರಂಗ

ಇಟಲಿ ರಂಗದಲ್ಲಿ ಐದು ಮತ್ತು ಎಂಟನೇ ಸೇನೆಗಳು ಬಹಳ ಪ್ರಗತಿಯನ್ನು ಸಾಧಿಸಿವೆ ಸುಮಾರು ೪೫ ಮೈಲಿ ಅಗಲದಲ್ಲಿ ಆ ಸೇನೆಗಳ ಯೋಧರು ಪೋ ನದಿಯನ್ನು ದಾಟಿದ್ದಾರೆ. ಅನೇಕ ನಗರಗಳೂ ಊರುಗಳೂ ಮಿತ್ರರ ವಶವಾದವು. ೪೦೦೦೦ ಕ್ಕಿಂತ ಹೆಚ್ಚು ಜರ್ಮನರು ಸೆರೆಸಿಕ್ಕಿದ್ದಾರೆ. ಸ್ಪೆಜಿಯಾ, ಮೋಡೇನಾ ಮತ್ತು ಫೆರಾರಾ ಎಂಬುವು ವಶವಾದ ನಗರಗಳಲ್ಲಿ ಹಲವು. ಸ್ಪೆಜಿಯಾ ನೌಕಾ ನಿಲ್ದಾಣವು ಲೆಗ್‌ಹಾರ್ನ್ ಉತ್ತರಕ್ಕೆ ೪೫ ಮೈಲಿ ದೂರದಲ್ಲಿ ಜಿನೋವಾ ಜಲಸಂಧಿಯಲ್ಲಿದೆ. ಸ್ಪೆಜಿಯಾ ಮತ್ತು ಮೋಡೇನಾಗಳು ಐದನೇ ಸೇನೆಗೆ ದೊರೆತವು. ಫೆರಾರಾವನ್ನು ಎಂಟನೇ ಸೇನೆ ಹಿಡಿಯಿತು. ಎಂಟನೇ ಸೇನೆಯೊಡನೆ ಇರುವ ಸೈನಿಕರು ಸಹ ಈ ವಿಜಯದಲ್ಲಿ ಭಾಗವಹಿಸಿದ್ದರೆಂದು ಹೇಳಲಾಗಿದೆ.

ಟೋಕಿಯೊ ಅರ್ಧ ಹಾಳಾಗಿದೆ

ಮಿತ್ರ ವಿಮಾನದಾಳಿಯ ಫಲವಾಗಿ ಜಪಾನಿನ ರಾಜಧಾನಿಯಾದ ಟೋಕಿಯೋ ನಗರದ ಅರ್ಧಭಾಗ ಹಾಳಾಗಿದೆ. ಈ ಪ್ರದೇಶ ಸುಮಾರು ೨೩.೭ ಚದರ ಮೈಲಿಯಷ್ಟಾಗುತ್ತದೆ. ಎಂದು ನ್ಯೂಯಾರ್ಕ್ ಸುದ್ದಿ ತಿಳಿಸುತ್ತದೆ ಸೈನಿಕ ವಿಮಾನಗಳು ತೆಗೆದುಕೊಂಡಿರುವ ಫೋಟೋಗಳಿಂದ ವಿಮಾನ ದಾಳಿಗಳನ್ನು ತಡೆಯುವುದಕ್ಕಾಗಿಯೇ ಕಟ್ಟಲ್ಪಟ್ಟಿದ್ದ ಕಟ್ಟಡಗಳೆಲ್ಲವೂ ಮುರಿದು ಬಿದ್ದಿರುವುದು ಗೊತ್ತಾಗುತ್ತದೆ. ಫೆಸಿಫಿಕ್ ಯುದ್ಧ ಮುಗಿಯುವ ವೇಳೆಗೆ ಟೋಕಿಯೋ ನಗರದ ಗುರುತೇ ಇರುವುದಿಲ್ಲವೆಂಬುದು ಅಮೆರಿಕನ್ ವಿಮಾನಾಧಿಕಾರಿಗಳ ನಂಬಿಕೆಯಾಗಿದೆ

ಫೆಸಿಫಿಕ್‌ನಲ್ಲಿ ಅಮೆರಿಕನರ ಕಾರ್ಯಕ್ರಮ

ಫೆಸಿಫಿಕ್‌ನಲ್ಲಿ ಅಮೆರಿಕನರು ಓಕಿನಾವಾ ಆಚೆ ಮತ್ತೆ ಮೂರು ದ್ವೀಪಗಳಲ್ಲಿ ಬಂದಿಳಿದಿದ್ದಾರೆ. ಎರಡು ದ್ವೀಪಗಳಲ್ಲಿ ಪ್ರತಿಭಟನೆಯೇ ಇರಲಿಲ್ಲ. ಓಕಿನಾವಾ ದಕ್ಷಿಣದಲ್ಲಿ ಅಮೆರಿಕನ್ ಕಾಲಾಳು ದಳದವರು ಪಶ್ಚಿಮ ತೀರದಲ್ಲಿರುವ ಬಹು ಮುಖ್ಯ ಗುಡ್ಡಪ್ರದೇಶವನ್ನು ಹಿಡಿದಿದ್ದಾರೆ ಓಕಿನಾವಾದಲ್ಲಿರುವ ಶತ್ರುಸ್ಥಾನಗಳ ಮೇಲೆ ಮಿತ್ರ ಫಿರಂಗಿಗಳು ಉಗ್ರವಾಗಿ ಗುಂಡು ಹಾರಿಸುತ್ತಿವೆ. ಮಿಂಡನೋವೊ ದ್ವೀಪದಲ್ಲಿ ಜ|| ಮೆಕಾರ್ಥರ್‌ರವರ ಸೈನಿಕರು ಡಾವೋ ನಗರದ ಕಡೆ ಮತ್ತಷ್ಟುದೂರ ಮುಂದೆ ತೆರಳಿದ್ದಾರೆ

ಬರ್ಲಿನ್ ಯುದ್ಧ

ರಷ್ಯದ ಕೆಂಪುಸೇನೆಗಳು ಬರ್ಲಿನ್ ನಗರದ ಪ್ರಾಕಾರವನ್ನೂ ಸುತ್ತಲು ಪ್ರದೇಶಗಳನ್ನೂ ಹಿಡಿದ್ದಾರೆ. ಆದರೂ ನಗರದೊಳಗೆ ಭೀಷಣ ಕಾಳಗವಾಗುತ್ತಿದೆ ಪ್ರತಿಯೊಂದು ಹೆಜ್ಜೆಗೂ ತೀಕ್ಷ್ಣ ಹೋರಾಟ ಸಾಗುತ್ತಿದೆ. ಪ್ರತಿಯೊಂದು ಮನೆಯೂ ಕೋಟೆಯಾಗಿ ಮಾರ್ಪಟ್ಟಿದೆ ಅಂಗಳಗಳಲ್ಲಿ ಮೈನ್‌ಗಳನ್ನು ತುಂಬಿದ್ದಾರೆ. ಅಥವಾ ಅಡ್ಡಿ ತಡೆಗಳನ್ನು ನಿರ್ಮಿಸಿದ್ದಾರೆ. ವಿದ್ಯಾರ್ಥಿಗಳು, ಪೋಲೀಸ್ ಗುಮಾಸ್ತರು, ಅಂಚೆ ಜವಾನರು, ವೀರರಾದ ರಕ್ಷಣಾ ಸೈನಿಕರು ಎಲ್ಲ ಜಾತಿಯ ಆಯುಧಗಳನ್ನು ಕೈಗೆ ಸಿಕ್ಕ ಅಸ್ತ್ರಗಳನ್ನು ಹಿಡಿದು ರಷ್ಯನರನ್ನು ಇದಿರಿಸುತ್ತಿದ್ದಾರೆ. ಪ್ರತಿಯೊಬ್ಬ ಜರ್ಮನನೂ ನಗರಕ್ಕಾಗಿ ಹೋರಾಡುವ ಪಣತೊಟ್ಟಂತಿದೆ. ರಷ್ಯನರ ತುಪಾಕಿಗಳು ಒಂದೇ ಸಮನೆ ನಗರದ ಮೇಲೆ ಗುಂಡು ಹಾರಿಸುತ್ತಲೇ ಇವೆ. ಕಟ್ಟಡಗಳ ಹಾಗೂ ರೈಲ್ವೆ ಸ್ಟೇಷನ್‌ಗಳ ಉರಿಯಿಂದ ಎದ್ದ ಹೊಗೆಯಿಂದಾಗಿ ರಷ್ಯನ್ ವಿಮಾನಗಳಿಗೆ ಬಾಂಬೆಸೆಯುವುದೂ ಕಷ್ಟವಾಗಿದೆ. ತುಂಡಾದ ನಲ್ಲಿಗಳು ನಗರದ ಬೀದಿಗಳಲ್ಲಿ ನೀರು ತುಂಬಿ ಅದನ್ನು ವೈತರಣಿ ನದಿಯಾಗಿ ಮಾಡಿವೆ. ಗ್ಯಾಸ್ ಮತ್ತು ವಿದ್ಯುತ್ ಕಾರ್ಖಾನೆಗಳೂ ಉರಿಯುತ್ತಿವೆ. ಹೆಚ್ಚು ಹೆಚ್ಚಾಗಿ ಬಿಳಿ ಪತಾಕೆಗಳು ಕಾಣಿಸಿಕೊಳ್ಳುತ್ತಿವೆ. ತಾವಾಗಿಯೇ ಶರಣಾಗುವ ಜರ್ಮನರ ಸಂಖ್ಯೆ ದಿನೇ ದಿನೇ ಬೆಳೆಯುತ್ತಿದೆ. ಶರಣಾಗಬಯಸುವ ಅಥವಾ ಹಿಮ್ಮೆಟ್ಟಲೆಳಸುವವರನ್ನು ನಾಜಿ ಅಧಿಕಾರಿಗಳೇ ಅನೇಕವೇಳೆ ಗುಂಡಿಟ್ಟು ಕೊಂದಿದ್ದಾರೆ.

ಹಿಟ್ಲರನ ಅಂತ್ಯಕಾಲದ ಕೋಟೆ

ಹಿಟ್ಲರನ ಏಕಾಂತವಾಸವಾದ ಬರ್ಚ್‌ಟೆಸ್ ಗೇಡನ್ನಿಗೆ ಸಮೀಪದಲ್ಲಿರುವ ಒಬರ್‌ಸಾಲ್ಜ್‌ಬರ್ಗ್‌ನಲ್ಲಿ ನಾಜಿಗಳು ಕಟ್ಟಕಡೆಯ ಕೋಟೆಯನ್ನು ಕಟ್ಟಿಕೊಂಡಿದ್ದಾರೆ.

ಕೋಟೆಯಲ್ಲಿ ಸಾಕಷ್ಟು ಆಹಾರ ವಸ್ತುಗಳು, ಮದ್ದುಂಡುಗಳು ತೋಫುಗಳೇ ಮೊದಲಾದ ಸಕಲ ಸಮಯೋಪಯುಕ್ತ ವಸ್ತುಗಳನ್ನೂ ಸಂಗ್ರಹಿಸಿಟ್ಟುಕೊಂಡಿದ್ದಾರೆ. ಭೂಮ್ಯಂತರ್ಗತ ಗುಹೆಯೊಳಗೆ ಯುದ್ಧವಸ್ತು ತಯಾರಿಕಾ ಕಾರ್ಖಾನೆಗಳಿವೆ. ಆ ಕೋಟೆಯ ಸುತ್ತಲೂ ವಿದ್ಯುಚ್ಛಕ್ತಿಮಯವಾದ ತಂತೀಬೇಲಿಯನ್ನು ಹಾಕಲಾಗಿದೆ. ಆ ಕೋಟೆಯ ಪ್ರಾಂತವೆಲ್ಲಾ ಗುಡ್ಡ ಗಾಡು ಪ್ರದೇಶ. ಇದೇ ತರಹದ ಸಣ್ಣ ಪುಟ್ಟ ಕೋಟೆ ಕೊತ್ತಲಗಳನ್ನು ಜರ್ಮನರು ಬೊಹೇಮಿಯಾ ಪರ್ವತ ಶ್ರೇಣಿಗಳಲ್ಲಿಯೂ ಇಟ್ಟಿರುವರೆಂದು ಹೇಳಲಾಗಿದೆ

ಗೋರಿಂಗರು ಎಲ್ಲಿಗೋ ಹೊರಟು ಹೋದರು

ಬರ್ಲಿನ್ನಿನ ಈಶಾನ್ಯಕ್ಕೆ ಸುಮಾರು ೪೦ ಮೈಲಿ ದೂರದಲ್ಲಿರುವ ತಮ್ಮ ಎಸ್ಟೇಟನ್ನು ತ್ಯಜಿಸಿ ಮಾ|| ಗೋರಿಂಗರು ಎಲ್ಲಿಗೋ ಹೊರಟುಹೋದರು ತಮ್ಮ ಪತ್ನಿ ಮತ್ತು ಎಂಟು ವರ್ಷದ ಪುತ್ರಿಯನ್ನು ಕರೆದುಕೊಂಡು, ಮನೆಯಲ್ಲಿದ್ದ ಸುಮಾರು ೨೦ ಮಿಲಿಯನ್ ಡಾಲರುಗಳಷ್ಟು ಬೆಲೆ ಬಾಳುವ ಆಭರಣಗಳೊಡನೆ ಹೊರಟುಹೋಗಿದ್ದಾರೆ. ಅವುಗಳೆಲ್ಲ ಫ್ರಾನ್ಸ್, ಹಾಲೆಂಡುಗಳಿಂದ ಸೂರೆಮಾಡಿ ತಂದವೆಂದು ಹೇಳಲಾಗಿದೆ

ನಾಜಿಗಳಿಗೆ ಸೈನ್ಯ ಸಹಾಯ ಬರುತ್ತಿದೆ

ರಷ್ಯನ್ ಸೇನೆಗಳು ಬರ್ಲಿನ್ನಿನೊಳಕ್ಕೆ ಬಹಳ ದೂರದ ವರೆಗೆ ನುಗ್ಗಿವೆ ರಾಜಧಾನಿಯ ಉತ್ತರ ಮತ್ತು ಪೂರ್ವ ಭಾಗಗಳಲ್ಲಿ ಮತ್ತಷ್ಟು ಸ್ಥಳಗಳನ್ನು ಕೆಂಪು ಯೋಧರು ಹಿಡಿದಿದ್ದಾರೆ ಇವುಗಳಲ್ಲಿ ಹಲವು ರೈಲ್ವೆ ಟರ್ಮಿನಸ್‌ಗಳೂ ಇವೆ. ಬರ್ಲಿನ್ನಿನ ವಾಯುವ್ಯದಲ್ಲಿ ರಷ್ಯನರು ಬರ್ಲಿನ್ ಮಧ್ಯಭಾಗದಿಂದ ೭೦ ಮೈಲಿ ದೂರದಲ್ಲಿರುವ ಎರಡು ನಗರಗಳನ್ನು ಹಿಡಿದಿದ್ದಾರೆ ಬರ್ಲಿನ್ನಿನ ಆಗ್ನೇಯದಲ್ಲಿ ಮಾ|| ಝುಕೋವ್‌ರವರ ಪಡೆಗಳು ಮಾ|| ಕೋನೀವ್‌ರವರ ಸೇನೆಯೊಂದಿಗೆ ಒಂದುಗೂಡಿದೆ ಬರ್ಲಿನ್ ದಕ್ಷಿಣದಲ್ಲಿ ಸಹ ಅನೇಕ ನಗರಗಳು ರಷ್ಯನರ ವಶವಾಗಿವೆ ಇಲ್ಲಿ ೬೦೦೦ ಜರ್ಮನರನ್ನು ಸೆರೆ ಹಿಡಿಯಲಾಗಿದೆ ಅಲ್ಲದೆ ೩೦ ಟ್ಯಾಂಕುಗಳನ್ನೂ ಫಿರಂಗಿಗಳನ್ನೂ ವಶಪಡಿಸಿಕೊಳ್ಳಲಾಗಿದೆ ಬರ್ಲಿನ್ ಕದನವು ಬಹಳ ಬಿರುಸಿನಿಂದ ನಡೆಯುತ್ತಿದೆ ಅದು ದೀರ್ಘಕಾಲ ಎಳೆಯುವಂತೆ ಕಾಣುವುದೆಂದು ಮಾಸ್ಕೋ ವರದಿ ತಿಳಿಸುತ್ತಿದೆ ಜರ್ಮನ್ ಸೈನ್ಯ ಸಹಾಯ ಬರ್ಲಿನಿಗೆ ಬರುತ್ತಲೇ ಇದೆ ನಗರ ಪ್ರವೇಶಕ್ಕೆ ಹೋಗುವ ಮುಖ್ಯ ಮಾರ್ಗಗಳ ಮೇಲೆ ರಷ್ಯನರು ಎಡೆಬಿಡದೆ ಷೆಲ್ ಹಾರಿಸುತ್ತಿದ್ದಾರೆ ಭೂಗರ್ಭದ ರೈಲ್ವೆ ಆಕ್ರಮಣಕ್ಕಾಗಿ ಅತ್ಯುಗ್ರ ಹೋರಾಟ ನಡೆಯುತ್ತಿದೆ

ಬಿಕ್ಕಟ್ಟು ನಿವಾರಣೆಗೆ ವೈಸರಾಯರ ಪ್ರಯತ್ನ

ಕಾಂಗ್ರೆಸ್ ನಾಯಕರೊಡನೆ ಸಂಧಾನ ಆರಂಭಿಸಿ, ವರ್ಕಿಂಗ್‌ಕಮಿಟಿ ಸದಸ್ಯರ ಬಿಡುಗಡೆ ಮಾಡುವ ಅವಕಾಶ ಕೊಟ್ಟು ಬಿಕ್ಕಟ್ಟು ನಿವಾರಣೆಯ ಅಧಿಕಾರ ಕೊಡದಿದ್ದರೆ ತಾನು ವೈಸರಾಯಾಗಿರಲಾರೆನೆಂದು ಮಿ|| ಚರ್ಚಿಲರಿಗೆ ತಿಳಿಯಹೇಳಲು ಲಾ|| ವೇವಲ್‌ರವರು ಲಂಡನ್ನಿಗೆ ತೆರಳಿದರೆಂದೂ ಮಿ|| ಅಮೆರಿ ಮತ್ತು ಲಾ|| ವೇವೆಲ್‌ರಲ್ಲಿ ತೀಕ್ಷ್ಣ ಭಿನ್ನಾಭಿಪ್ರಾಯ ಬಂದಿದೆ ಎಂತಲೂ ಹೇಳಲಾಗಿದೆ. ಲಾರ್ಡ್ ವೇವೆಲ್‌ರವರು ಪ್ರಗತಿಪರ ಭಾವನೆಯ ವ್ಯಕ್ತಿ ಮತ್ತು ಪ್ರಗತಿಗಾಮಿ ರಾಜಕಾರಣಿಯಾದ್ದರಿಂದ ಇಂಡಿಯಾ ಕಚೇರಿಯ ನೀತಿಯಂತೆ ಆಡಳಿತ ನಡೆಸುವುದು ಅವರಿಗೆ ಕಷ್ಟವಾಗಿರಬೇಕು ಮಿ|| ಅಮೆರಿ ಜಗತ್ತಿನ ಜನತೆಯಲ್ಲಿ ತುಂಬಿದ ಪ್ರಜಾಸತ್ತಾ ಭಾವನೆಯನ್ನು ತಿಳಿಯಲು ಯೋಗ್ಯತೆ ಇಲ್ಲದವರು ಎಂತಲೇ ಲಾ|| ವೇವೆಲ್‌ರ ಮನೋಭಾವದ ಕತ್ತು ಹಿಸುಕಲು ಯತ್ನಿಸುತ್ತಿದ್ದಾರೆ ಎಂದು ಬ್ರಿಟಿಷ್ ಕಮ್ಯುನಿಸ್ಟ್ ಪಾರ್ಲಿಮೆಂಟ್ ಸದಸ್ಯರು ಮೇಲಿನ ಸುದ್ದಿಯ ವಿಚಾರದಲ್ಲಿ ತಮ್ಮ ಅಭಿಪ್ರಾಯ ತಿಳಿಸಿದ್ದಾರೆಂದು ಹೇಳಲಾಗಿದೆ.

ಪಿನ್‌ಮಾನಾ ಆಕ್ರಮಣ

ರಂಗೂನ್ ಕಡೆ ಸಾಗುತ್ತಿರುವ ೧೪ನೇ ಸೇನೆ ರೈಲ್ವೆ ಮತ್ತು ಮಾರ್ಗಗಳ ಕೇಂದ್ರವಾದ ಪಿನ್‌ಮಾನಾ ಪಟ್ಟಣವನ್ನು ಆಕ್ರಮಿಸಿದೆ. ಇದರ ಬಳಿಯ ಪಟ್ಟಣವೊಂದು ಮತ್ತು ನಾಲ್ಕು ವಿಮಾನ ನೆಲೆಗಳು ಆಕ್ರಮಿಸಲ್ಪಟ್ಟಿವೆ ಅರಕಾನ್ನಲ್ಲಿರುವ ದಳಗಳು ಮುನ್ನಡೆಯುತ್ತಿವೆ.

ಸ್ವೀಕಾರ

ಬಳ್ಳಾರಿ ಡಿ|| ಕೊಟ್ಟೂರು ಗ್ರಾಮದಲ್ಲಿರುವ ಮ|| ರಾ|| ಕೆ ಗುರುಸಿದ್ಧನಗೌಡರು ತಮ್ಮ ಗ್ರಾಮದ ಯೂನಿಯನ್ ಬೋರ್ಡ್ ೫ನೇ ವಾರ್ಡಿನ ಚುನಾವಣೆಯಲ್ಲಿ ಜಯಶಾಲಿಗಳಾಗಿ ಬಂದ ಸಂತೋಷಕ್ಕೋಸ್ಕರ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 2 ರೂಪಾಯಿಗಳು ಮ|| ರಾ|| ರಾಯದುರ್ಗದ ಸೋಮಪ್ಪನವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ|| ಶಿಗ್ಗಾಂವ ತಾ|| ಮಡ್ಲಿಗ್ರಾಮದ ಮ|| ರಾ|| ಎಲ್ಲಕ್ಕನವರ ಬಸಪ್ಪನವರ ಜ್ಯೇಷ್ಠಪುತ್ರ ಚಂದ್ರಶೇಖರಪ್ಪನು ಶಿವಾಧೀನನಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1-4-0 ರೂ ವೇ|| ಸೋಮನಾಥಯ್ಯನವರು ಹಿರೇಮಠ ಹುಬ್ಬಳ್ಳಿ ಇವರ ದ್ವಾರಾ ತಲ್ಪಿರುತ್ತದೆ.

ಕುಷ್ಟಗಿ ತಾ|| ಹಿರೇವಂಕಲಕುಂಟೆ ಹಿರೇಮಠದ ಶ್ರೀಮತಿ ಕಳಕಮ್ಮನವರು ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಅವರ ಪುತ್ರರಾದ ವೇ|| ಶಾಸ್ತ್ರಿ ಪಂಚಾಕ್ಷರಯ್ಯನವರು ! ರೂಪಾಯಿಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ದುಃಖವಾರ್ತೆ

ರಾಯಚೂರು ಡಿ| ಕುಷ್ಟಗಿ ತಾ|| ಹಿರೇವಂಕಲಕುಂಟೆ ಹಿರೇಮಠದ ಶಾಸ್ತ್ರಿ ರುದ್ರಯ್ಯನವರ ಧರ್ಮಪತ್ನಿಯವರಾದ ಕಳಕಮ್ಮನವರು ತಾ| ೯-೩-1944 ನೆಯ ದಿವಸ ಶಿವಾಧೀನರಾದರು. ಇವರು ಮಹಾ ಪರೋಪಕಾರಿಣಿಯರೂ ಸದಾಚಾರಸಂಪನ್ನೆಯರೂ ಆಗಿದ್ದು ಸರ್ವರ ಪ್ರೀತಿಗೂ ಪಾತ್ರರಾಗಿದ್ದರು ಇವರ ಅಂತ್ಯೇಷ್ಟಿಕ್ರಿಯೆಯು ಬಹು ವಿಜೃಂಭಣೆಯಿಂದ ನೆರವೇರಿತು ಇವರ ಪುತ್ರರಾದ ವೇ ಶಾಸ್ತ್ರಿ ಶಿವಬಸವಯ್ಯ, ಲಿಂಗಯ್ಯ, ಪಂಚಾಕ್ಷರಯ್ಯ ಇವರು ತಮ್ಮ ಮಾತಾಯತ್ಯಗಳಿಗೆ ಶಿವಲೋಕ ಪ್ರಾಪ್ತಿಯಾಗಲೆಂಬ ಸದುದ್ದೇಶದಿಂದ ತಮ್ಮ ವಂಶಗುರುಗಳಾದ ಕೊಟ್ಟೂರು ಕಟ್ಟಿಮನಿ ಹಿರಿಯಮಠದ ಶ್ರೀ ಪಟ್ಟದ ಭೂತಳುಜಂಗಭೂಷಣಸ್ವಾಮಿಗಳವರನ್ನು ದಯಮಾಡಿಸಿಕೊಂಡು ೩ ದಿವಸಗಳವರೆಗೆ ರುದ್ರಾಭಿಷೇಕ ಲಕ್ಷಬಿಲ್ವಾರ್ಚನಾದಿಗಳನ್ನು ಮಾಡಿ ಕೊನೆಯ ದಿವಸ ಕೈಲಾಸ ಗಣಾರಾಧನೆಯನ್ನು ಮಾಡಿದರು ಜಗದಾಚಾರ್ಯರು ಮೃತರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಪ್ರಾರ್ಥಿಸುವ, ದುಃಖಭಾಗಿ

ದುಃಖವಾರ್ತೆ

ಧಾರವಾಡ ಡಿ|| ಸಿಗ್ಗಾಂವ ತಾ|| ಮಡ್ಲಿಗ್ರಾಮದ ಮ|| ರಾ|| ಎಲ್ಲಕ್ಕನವರ ಬಸಪ್ಪನವರ ಜ್ಯೇಷ್ಠಪುತ್ರ ಚಂದ್ರಶೇಖರಪ್ಪನು ತಾ|| 22-4-1945 ನೆಯ ದಿವಸ ಹುಬ್ಬಳ್ಳಿಯಲ್ಲಿ ಶಿವಾಧೀನನಾದನು. ಆ ಸಮಯದಲ್ಲಿ ಮಾಹೇಶ್ವರರಿಗೆ ವಿಶೇಷ ದಾನಧರ್ಮಗಳು ಮಾಡಲ್ಪಟ್ಟವು. ಅಲ್ಲದೆ ತಮ್ಮ ವಂಶಗುರುಗಳಾದ ಲಕ್ಷ್ಮೇಶ್ವರ ಹಿರಿಯಮಠದ ವೇ|| ಕಾಶಪ್ಪಯ್ಯಸ್ವಾಮಿಗಳವರಿಗೆ ತಮ್ಮ ಗ್ರಾಮದಲ್ಲಿರುವ ವರ್ಷಕ್ಕೆ ನೂರಾರು ರೂಪಾಯಿ ಉತ್ಪನ್ನವುಳ್ಳ ಬತ್ತದ ಗದ್ದೆಯನ್ನು ಮೃತನ ಆತ್ಮಶಾಂತ್ಯರ್ಥವಾಗಿ ದಾನಮಾಡಿ ಧನ್ಯರಾದರು ಶ್ರೀಜಗದೀಶ್ವರನು ಮೃತನ ಆತ್ಮಕ್ಕೆ ಶಾಂತಿಯನ್ನೀಯಲೆಂದು ಕೋರುವ,

ಸೋಮನಾಥಯ್ಯ, ಹಿರೇಮಠ.

ಕಾಶೀಪೀಠದಲ್ಲಿ ಪುಣ್ಯತಿಥಿ ಆಹ್ವಾನ

ಶ್ರೀಕಾಶೀಕ್ಷೇತ್ರ ವಿರಾಜಮಾನ ಜಗದ್ಗುರು ವಿಶ್ವಾರಾಧ್ಯ ಜ್ಞಾನಸಿಂಹಾಸನ ಜಂಗಮವಾಡಿಮಠ ಮಹಾಸಂಸ್ಥಾನದಲ್ಲಿ ಕೈ|| ವಾ|| ಶ್ರೀ ೧೦೮ ಜಗದ್ಗುರು ಪಂಚಾಕ್ಷರಶಿವಾಚಾರ್ಯ ಮಹಾಸ್ವಾಮಿಗಳವರ ಪ್ರಥಮವಾರ್ಷಿಕ ಪುಣ್ಯತಿಥಿ ಮಹೋತ್ಸವವು ತದಂಗಭೂತಗಳಾದ ಸಮಾಧಿಲಿಂಗಸ್ಥಾಪನ ರುದ್ರಾಭಿಷೇಕಾದಿಗಳೂ ಇದೇ ವೈಶಾಖ ಶುದ್ಧ ೪ ಮಂಗಳವಾರದಿವಸ ವಿಧ್ಯುಕ್ತವಾಗಿ ನೆರವೇರಲಿವೆ. ಆಮೇಲೆ ಕೆಲದಿನಗಳಲ್ಲಿಯೇ ಜ್ಞಾನಮಂದಿರ(ಗ್ರಂಥಾಲಯ)ದ ಶಂಕುಸ್ಥಾಪನೆಯೂ ಮಾಹೇಶ್ವರ ವಟುಗಳ ಶಿವದೀಕ್ಷಾ ಸಂಸ್ಕಾರವೂ ಮಹಾ ವಿಜೃಂಭಣೆಯಿಂದ ನೆರವೇರತಕ್ಕವಾಗಿವೆ ಈ ಮಹೋತ್ಸವಕ್ಕೆ ವೀರಶೈವ ಮಹಾಜನರು ಬಂದು ಭಾಗವಹಿಸಿ ಶ್ರೀ ಮಹಾಪೀಠದ ದರ್ಶನಾಶೀರ್ವಾದಗಳಿಗೆ ಪಾತ್ರರಾಗಬೇಕೆಂದು ಕೋರಿಕೆ. ತಮ್ಮ ತಮ್ಮ ಬರುವಿಕೆಯನ್ನು ಮೊದಲೇ ಸೂಚಿಸಿದರೆ ಅನುಕೂಲವಾಗುವುದು.

ಮ್ಯಾನೇಜರ್, ರಾಮಚಂದ್ರಪ್ರಸಾದ್
ಜಂಗಮವಾಡಿಮಠ, ಬನಾರಸ್ ಸಿಟಿ

ಅನುಷ್ಠಾನಸಮಾಪ್ತಿ

ಶ್ರೀ ಗೋಕರ್ಣಕ್ಷೇತ್ರದಲ್ಲಿ ಬಾಲಯೋಗಿ ಶ್ರೀ|| ಷ|| ಬ್ರ|| ಪಟ್ಟಾಧ್ಯಕ್ಷ ಶ್ರೀ ಶಿವಯೋಗಿಶಿವಾಚಾರ್ಯರು ಹಿರೇಮಠ ನೆಗಳೂರು ಇವರು ಅಲ್ಲಿಯ ವೀರಶೈವಮಠದ ಜಾಗೆಯ ಮೇಲೆ ರಚಿಸಿದ ಪರ್ಣಕುಟೀರದಲ್ಲಿ ೬೧ ದಿನಗಳ ವರೆಗೆ ಒಂದು ಎಳೆನಾಯಿ ನೀರಿನ ಮೇಲೆ ಇದ್ದು ಅನುಷ್ಠಾನ ಮಾಡಿ ನಿಜಚೈತ್ರ ಶುದ್ಧ ಪ್ರತಿಪದೆಗೆ ಸಮಾಪ್ತಿಗೊಳಿಸಿದರು ಬಳಿಕ ಆದರಗುಂಚಿ ಗ್ರಾಮಕ್ಕೆ ದಯಮಾಡಿಸಿ ಅಲ್ಲಿ ಪರಮ ತಪಸ್ವಿಗಳೂ, ವೈರಾಗ್ಯಶೀಲರೂ ಆದ ಶ್ರೀ|| ಷ|| ಬ್ರ|| ಹನ್ನೆರಡು ಮಠದ ಚರಪಟ್ಟಾಧ್ಯಕ್ಷ ಸ್ವಾಮಿಗಳವರ ದರ್ಶನ ಮಾಡಿಕೊಂಡು, ಹುಬ್ಬಳ್ಳಿ ಶಹರವಾಸಿಗಳಾದ ಬಮ್ಮಾಪುರ ಪಾಟೀಲ ಶಿವನಗೌಡರ ಆಮಂತ್ರಣದ ಮೇರೆಗೆ ಉತ್ಸವಪೂರ್ವಕವಾಗಿ ದಯಮಾಡಿಸಿದರು ಶ್ರೀಯುತ ಶಿವನಗೌಡರು ಶ್ರೀ ಬಾಲಯೋಗಿಗಳನ್ನೂ ತಮ್ಮ ವಂಶಗುರುಗಳಾದ ಬಮ್ಮಾಪುರ ಹಿರೇಮಠದ ಶ್ರೀ ಶಿವಾನಂದರಾಜೇಂದ್ರ ಸ್ವಾಮಿಗಳನ್ನೂ ಉತ್ಸವಪೂರ್ವಕವಾಗಿ ದಯಮಾಡಿಸಿಕೊಂಡು ಬಂದು ಶ್ರೀಗಳವರ ಪಾದಪೂಜಾನುಷ್ಠಾನಾದಿಗಳನ್ನೂ ಅನ್ನಸಂತರ್ಪಣೆಯನ್ನೂ ಮಾಡಿ ಧನ್ಯರಾದರು

ಶ್ರೀ ಸಿದ್ಧೇಶ್ವರ ಅಡವಿಮಠ, ಹುಬ್ಬಳ್ಳಿ.

ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತೀ ಮಹೋತ್ಸವ, ಶ್ರೀ ಕ್ಷೇತ್ರ ರೇವಣಗಿರಿ

ನಿಜಾಮ ಇಲಾಖಾ ಚಿತಾಪುರ ತಾಲೂಕಿಗೆ ಸೇರಿದ ಶ್ರೀ ಭೂಕೈಲಾಸ ರೇವಣಗಿರಿ (ರೇವಗಿ) ಕ್ಷೇತ್ರದಲ್ಲಿ ಪ್ರತಿವರ್ಷ ಪದ್ಧತಿಯಂತೆ ಜಗದಾಚಾರ್ಯರ ಜಯಂತಿಮಹೋತ್ಸವವು ಬಹು ಅಟ್ಟಹಾಸದಿಂದ ನೆರವೇರಿತು ಪ್ರಾತಃಕಾಲ ಶ್ರೀ ಜಗದಾಚಾರ್ಯರ ವಿಗ್ರಹಕ್ಕೆ ರುದ್ರಾಭಿಷೇಕಾದಿಗಳು ನೆರವೇರಿದವು ಮಧ್ಯಾಹ್ನ ಕೊರವಿಗ್ರಾಮದ ಮಠಪತಿ ರಾಮಯ್ಯನವರು ಬಹುಜನರಿಗೆ ಅನ್ನಸಂತರ್ಪಣೆಯನ್ನು ಮಾಡಿದರು. ಸಾಯಂಕಾಲ ಶ್ರೀ ಜಗದಾಚಾರ್ಯರ ವಿಗ್ರಹವನ್ನು ಪುಷ್ಪಮಾಲಾಲಂಕೃತವಾದ ಪಲ್ಲಕ್ಕಿಯಲ್ಲಿ ಮೂರ್ತಗೊಳಿಸಿ ಉತ್ಸವದೊಡನೆ ಕಮರಿಮಠಕ್ಕೆ ಹೋಗಿ ಅಲ್ಲಿ ಫಲಾದಿಗಳನ್ನು ಅರ್ಪಿಸಿ ಪುನಃ ದೇವಸ್ಥಾನಕ್ಕೆ ಬಂದಮೇಲೆ ಆಚಾರ್ಯರ ವಿಗ್ರಹವನ್ನು ಪುಷ್ಪರಥದಲ್ಲಿ ಮೂರ್ತಮಾಡಿಸಿ ಉತ್ಸವವನ್ನು ನೆರವೇರಿಸಲಾಯಿತು. ಈ ಮಹೋತ್ಸವಕ್ಕೆ ಸುತ್ತಮುತ್ತಲ ಗ್ರಾಮಗಳ ಜನಗಳು ವಿಶೇಷವಾಗಿ ಸೇರಿದ್ದರು ಉತ್ಸವದ ವ್ಯವಸ್ಥೆಗಾಗಿ ಪೋಲೀಸ್ ಅಧಿಕಾರಿಗಳಾದ ಮುಂತೇಜಂ ಸಾಹೇಬರು ಮತ್ತು ಡಾಕ್ಟರರು ಆಗಮಿಸಿ ಸರಿಯಾದ ವ್ಯವಸ್ಥೆಯನ್ನಿಟ್ಟಿದ್ದರು. ಈ ಉತ್ಸವದಲ್ಲಿ ಭಾಗಿಗಳಾದ ಸರ್ವರಿಗೂ ಜಗದಾಚಾರ್ಯರು ಸಕಲಸನ್ಮಂಗಲಗಳನ್ನೀಯಲೆಂದು ಪ್ರಾರ್ಥಿಸುತ್ತೇನೆ.

ಗುರುಭಕ್ತ

ಕಾಗದದ ಬೆಲೆಯು ವಿಶೇಷವಾಗಿ ಏರಿರುವುದರಿಂದ ಕೆಲವು ಗ್ರಂಥಗಳ ಮತ್ತು ಫೋಟೋಗಳ ಬೆಲೆಯನ್ನು ಸ್ವಲ್ಪ ಹೆಚ್ಚಿಸಿದ್ದೇವೆ.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೨—೬—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದ) ಸೈಜು ೧೪×೧೦ ಬೆಲೆ	೦—೬—೦
ಪಟ್ಟಾಭಿಷೇಕಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ	೦—೬—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೨—೬—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೨—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೬
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರು ಪೀ ಧವ್ರಶಿವಾಚಾರ್ಯರ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀ ಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಶಿವದೀಕ್ಷಾಧಾರಣಮಾಡುವ ಫೋಟೋ	೦—೧—೬
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
ಮೈಸೂರು ಕಾನ್ಫರೆನ್ಸಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿಯ ಮಹೋತ್ಸವದ ಫೋಟೋ	೦—೧—೬

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊ
ಬ್ಬಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು
ವ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು
ದ್ವಿಪ್ರಾಂತದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ
ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು
ಶೈವಮತದಲ್ಲಿ ಸದ್ಯ ದೊರೆಯತಕ್ಕ ಗ್ರಂಥಗಳಲ್ಲೆಲ್ಲ
ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು
ಗ್ರಂಥವು ಈಗ್ಗೆ ಸುಮಾರು **೩ಸಾವಿರ** ವರ್ಷಗಳ ಪೂರ್ವದಲ್ಲಿ
ಶ್ರೀಶಿವಯೋಗಿಶಿವಾಚಾರ್ಯರೆಂಬ ಆಚಾರ್ಯರಿಂ
ರಚಿಸಲ್ಪಟ್ಟಿರುವನು ಈ ಮಹಾಗ್ರಂಥವು ವೀರಶೈವಮತ
ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರ
ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಆದರ
ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ
ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ ಈ ಕೊರತೆ
ಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥ**
ಶಾಸ್ತ್ರಿಗಳವರು ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ
ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ
ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು
ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ವಾಚ
ಕರಿಗೆ ವೇದ್ಯವಾಗುವುದು. ವಾಚಕರ ಅನುಕೂಲಕ್ಕಾಗಿ ಬಹು
ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ,
ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ
ಈ ಗ್ರಂಥವು ಒಟ್ಟು ೬೬೨ ಪುಟಗಳಿಂದ ಕೂಡಿದ್ದು, ಸರ್ವಾಂಗ
ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನು
ಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ
ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ
ಸೌಂದರ್ಯವು ವರ್ಣನಾತೀತವಾಗಿದೆ ಕೈವಲ್ಯಕಲ್ಪತರುವಿನಂತಿ
ರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ
ಓದಬೇಕು **ಬೆಲೆ ೩ ರೂಪಾಯಿ.**

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮ ವಿಮರ್ಶೆ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕರಣ (೩ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೭ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿಸಿದ್ಧಾಂತದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಪ್ರದೀಪ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ೨ನೆಯ ಆವೃತ್ತಿ)	೧। ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧॥ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧॥ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರಿಸಲ್ಪಟ್ಟುದು)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೩ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ ಸೂಕ್ಷ್ಮಾಗಮಗಳಿಂದ ಕೂಡಿರುವುದು)	೩ ರೂ
ವೀರಶೈವಸಿದ್ಧಾಂತಸುಧಾಕರ	೩ ರೂ
ಶಿವಾದ್ವೈತಮಂಜರಿ [ಕನ್ನಡವ್ಯಾಖ್ಯಾನ ೧೩೪೪ ಪುಟ]	೮ ರೂ
A brief life-sketch of Pandit Sri Kashinatha Shastriji (*English*)	**4 A**
The Philosophical Aspect of Virasaivism (*English*)	**8 A**
Speeches by Pandit Shri Kashinatha Shastriji (*English*)	**12 A**
लिंगधारणचंद्रिका (संस्कृत)	३
वीरशैवरत्न (मराठी)	१
महानारायणोपनिषद् (वीरशैवभाष्य–संस्कृत)	१
सिद्धांतशिखामणि (मूल)	८
नंदिकेश्वरकारिका (संस्कृत)	२

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No M. 2266 ॥ ಶ್ರೀಜಗದ್ಗುರು ಪಂಚಾಚಾರ್ಯರ ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರಪರಾಯಣರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ।

ಸ್ಥಳದವರಿಗೆ ೩ ರೂ ೪ ಆಣೆ

ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೧೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೭ನೇ ಮೇ ೧೯೪೪ [ಸಂಚಿಕೆ ೫೪

ಮೈಸೂರಿನ ಕೈಗಾರಿಕೆಗಳು

ಚಿನ್ನ

ಚಿನ್ನವನ್ನು ತೆಗೆಯುವ ಕೈಗಾರಿಕೆಯು ಮೈಸೂರಿಗೆ ಹೊಸದಲ್ಲ ಸಂಸ್ಥಾನದ ಹಲವು ಭಾಗಗಳಲ್ಲಿ ನೂರಾರು ವರ್ಷಗಳ ಹಿಂದೆಯೇ ಚಿನ್ನವನ್ನು ತೆಗೆಯುತ್ತಿದ್ದ ಕೈಗಾರಿಕೆಗಳ ಅವಶೇಷಗಳಿವೆ ಸದ್ಯದಲ್ಲಿ ನಾಲ್ಕು ಕಂಪೆನಿಗಳವರು (ಇಂಗ್ಲೆಂಡಿನಲ್ಲಿ ಸ್ಥಾಪಿತವಾದುವು) ಸಂಸ್ಥಾನದಲ್ಲಿ ಚಿನ್ನವನ್ನು ತೆಗೆಯುವ ಉದ್ಯಮವನ್ನು ಕೈಗೊಂಡಿರುತ್ತಾರೆ ಇವರು ಬಹಳ ಆಳದವರೆಗೂ ಭೂಮಿಯನ್ನು ಅಗೆದು ಚಿನ್ನವನ್ನು ತೆಗೆದಿರುತ್ತಾರೆ ಒಂದು ಕಡೆ ನೇರವಾಗಿ 9091 ಅಡಿಗಳಷ್ಟು ಆಳದವರೆಗೂ ಅಗೆದಿರುತ್ತಾರೆ ಗಣಿಗಳಲ್ಲಿ 20,000 ಮಂದಿ ಕೆಲಸಗಾರರು ಸಾಮಾನ್ಯವಾಗಿರುತ್ತಾರೆ ಇವರೆಲ್ಲರೂ ಸುಖವಾಗಿರುತ್ತಾರೆ 1940 ರಿಂದ ಇನ್ನೂ ಮೂವತ್ತು ವರ್ಷಗಳವರೆಗೂ ಚಿನ್ನವನ್ನು ತೆಗೆಯಲು ಈ ಕಂಪನಿಗಳಿಗೆ ಸರ್ಕಾರದವರು ಅನುಮತಿಯನ್ನಿತ್ತಿರುತ್ತಾರೆ

ಮೈಸೂರಿನಲ್ಲಿ ಚಿನ್ನ ತೆಗೆಯುವ ಕೈಗಾರಿಕೆಯು ಬಹಳ ದಿನಗಳಿಂದಲೂ ನಡೆಯುತ್ತಿದ್ದಿತು ಇದರ ಈ ಸಂಬಂಧದಲ್ಲಿ ಮೊಟ್ಟ ಮೊದಲನೆಯ ವಿಸ್ತಾರವಾದ ವರದಿ 1802 ರಲ್ಲಿ ಬ್ರಿಟಿಷರ 33 ನೆಯ ರೆಜಿಮೆಂಟಿನ ನಾಯಕರಾದ ಲೆ ಜಾನ್‌ವಾರನ್‌ರವರು ನಾಡಿನ ಪಶ್ಚಿಮದಿಯಲ್ಲಿ ಚಿನ್ನ ಸಿಕ್ಕುವ ಸ್ಥಳಗಳಾವುವೆಂದು ಪರಿಶೀಲಿಸಿದವರೆಂದು ವರದಿಯಾಗಿದೆ ಇದಾಗಿ 70 ವರ್ಷಗಳನಂತರ ಎ ಎಫ್ ಲಾವಲ್‌ರವರು ಚಿನ್ನವಿರುವ ಸ್ಥಳಗಳನ್ನು ಪರಿಶೀಲಿಸಲೂ ಮತ್ತು ಚಿನ್ನವನ್ನು ತೆಗೆಯಲೂ ಸರಕಾರದವರಿಂದ ಪರವಾನಗಿಯನ್ನು ಪಡೆದರು 1876ರಲ್ಲಿ ಇವರು ಕೋಲಾರದ ಚಿನ್ನದ ಗಣಿಯಲ್ಲಿ ತೆಗೆಯಲು ಅನುಮತಿ ಪಡೆದಿರುವವರಿಗೆ ಈ ಹಕ್ಕನ್ನು ಕೊಟ್ಟುಬಿಟ್ಟರು

ಭೂಗರ್ಭದಿಂದ ಅಗೆಯುವುದು

1880 ರಿಂದ 1884ರ ವರೆಗಿನ ಅವಧಿಯಲ್ಲಿ ನಾಲ್ಕು ಕಂಪೆನಿಗಳವರು ಈ ಪ್ರದೇಶದಲ್ಲಿ ಭೂಗರ್ಭದಿಂದ ಚಿನ್ನವನ್ನು ತೆಗೆಯುವ ಉದ್ಯಮವನ್ನು ಕೈಗೊಂಡರು ಕೆಲವೆಡೆ 200 ಅಡಿಗಳವರೆಗೂ ಅಗದರೂ ಯಾವ ಪ್ರಯೋಜನವೂ ಆಗಲಿಲ್ಲ ಆದರೆ ಶ್ರೀ ಜಾನ್ ಟೆಯಿಲರವರ ಪ್ರಯತ್ನಗಳ ಫಲವಾಗಿ ಇರುವ ಬಂಡವಾಳವನ್ನೆಲ್ಲಾ ವೆಚ್ಚಮಾಡುವುದಾಗಿ ನಿರ್ಧರಿಸಿದರು ಕಡೆಯಲ್ಲಿ 1880ನೇ ಇಸವಿಯಲ್ಲಿ ಈಗ ಕಂಪೆನಿಯವರಿಗೆ 30,000,000 ಪವನುಗಳ ಬೆಲೆಬಾಳುವ ಚಿನ್ನವನ್ನು ಕೊಟ್ಟಿರುವ ಒಂಪಿಯರ್ ಗಣಿಯು ದೊರಕಿತು ಇದರಿಂದ ಅವರಿಗೆ ಒಳ್ಳೆಯ ಪ್ರೋತ್ಸಾಹವು ದೊರೆತಂತಾಗಿ, ಇತರ ಗಣಿಗಳಲ್ಲೂ ಕೆಲಸ ಮಾಡಲಾರಂಭಿಸಿ ಒಂದೇ ಸಮನಾಗಿ ಚಿನ್ನವನ್ನು ತೆಗೆಯುತ್ತಿದ್ದಾರೆ ಪ್ರಪಂಚದ ಚಿನ್ನದ ಗಣಿಗಳಲ್ಲಿ ಚಿನ್ನದ ಉತ್ಪತ್ತಿಯು ಕಡಿಮೆಯಾಗಿದ್ದ ಕಾಲದಲ್ಲಿ ಈ ಗಣಿಗಳಲ್ಲಿ ಚಿನ್ನವನ್ನು ತೆಗೆಯಲು ಆರಂಭವಾಯಿತು 1887ರಲ್ಲಿ ಮೈಸೂರಿನಲ್ಲಿ 15 ಕಂಪೆನಿಗಳು ಈ ಉದ್ಯಮದಲ್ಲಿ ನಿರತವಾಗಿದ್ದುವು ಇವುಗಳಲ್ಲಿ ಐದು ಕಂಪೆನಿಗಳು ಷೇರುಗಳಮೇಲೆ ಡಿವಿಡೆಂಡನ್ನು ಕೊಡುತ್ತಿದ್ದುವು 10ಡಿವಿಡೆಂಡನ್ನು ಕೊಡುತ್ತಿರಲಿಲ್ಲ ಉಳಿದವರು ಚಿನ್ನವನ್ನು ತೆಗೆಯುತ್ತಿರಲಿಲ್ಲ ಕ್ರಮೇಣ ಇವೆಲ್ಲವೂ ನಿಂತುಹೋಗಿ ಐದು ಕಂಪೆನಿಗಳು ಮಾತ್ರ 50 ವರ್ಷಗಳವರೆಗೂ ಚಿನ್ನವನ್ನು ತೆಗೆದುವು ಈಗ ನಾಲ್ಕು ಕಂಪೆನಿಗಳು ಕೆಲಸ ಮಾಡುತ್ತಿವೆ ಬಂಡವಾಳದ ಮೇಲೆ ಡಿವಿಡೆಂಡನ್ನು ಸಹ ಕೊಡುತ್ತಿವೆ ಚಿನ್ನದ ಗಣಿಗಳಲ್ಲಿ ಚಿನ್ನವು ಮೇಲೆ ದೊರೆತು ಆಳದಲ್ಲಿ ದೊರೆಯುವುದಿಲ್ಲವೆಂದು ಕೆಲವರಲ್ಲಿ ಭಾವನೆಯಿತ್ತು ಆದರೆ ಈಗ ಆ ಭಾವನೆಯು ಅಳಿಸಿಹೋಗಿದೆ ಈಗ 9991 ಅಡಿಗಳಷ್ಟು ಕೆಳಗಿರುವ ಪ್ರದೇಶದಲ್ಲಿಯೂ ಸಹ ಚಿನ್ನವನ್ನು ತೆಗೆಯುತ್ತಿದೆ 1882ರಲ್ಲಿ ಈ ಪ್ರದೇಶದಲ್ಲಿ 37 13 5 ಪವನುಗಳು ಬಾಳುವ ಓನ್ಸುಗಳಷ್ಟು ಚಿನ್ನವನ್ನು ತೆಗೆಯಲಾಯಿತು ಆದರೆ 1905ರಲ್ಲಿ 2,3,,45 ಪವನುಗಳಷ್ಟು ಬಾಳುವ ,06 ,, ಓನ್ಸುಗಳಷ್ಟು ಚಿನ್ನವನ್ನು ತೆಗೆಯಲಾಯಿತ 1943ರಲ್ಲಿ 3 03 30, 8, ರೂಪಾಯಿ ಬೆಲೆ ಬಾಳುವ 19 ,405 ಫೈನು ಓನ್ಸು ಚಿನ್ನವನ್ನು ತೆಗೆಯಲಾಯಿತು ಸರ್ಕಾರದವರಿಗೆ ಈ ವಿಷಯದಲ್ಲಿ 1,92,13 2,, ರೂಪಾಯಿಯ ಸುಂಕವನ್ನು 21 06,807 ರೂಪಾಯಿ ಕರ ರೂಪದಲ್ಲಿಯನ್ನೂ ಕಂಪೆನಿಯವರು ಸರ್ಕಾರದವರಿಗೆ ಕೊಟ್ಟಿರುತ್ತಾರೆ ಎಲ್ಲಾ ಕಂಪೆನಿಗಳವರು ಶೇಕಡ 50ರ ದ 40ರ ವರೆಗೆ ಡಿವಿಡೆಂಡನ್ನು ಕೊಟ್ಟಿರುತ್ತಾರೆ ಡಿವಿಡೆಂಡುಗಳ ಒಟ್ಟು ಮೊತ್ತವು 99963 12 0 ಪವನುಗಳಾಗುತ್ತವೆ ಪ್ರಾರಂಭದಿಂದಲೂ 1943ನೇ ಇಸವಿಯವರೆಗೂ, ಈ ಚಿನ್ನದ ಗಣಿಯಿಂದ 20 620, 916 154 ಓನ್ಸುಗಳಷ್ಟು ಎಂದರೆ, 102,793,876 ಪೌನುಗಳು ಬೆಲೆಬಾಳುವಷ್ಟು ಚಿನ್ನವನ್ನು ತೆಗೆದಿದೆ

ಚಿನ್ನವನ್ನು ತೆಗೆಯುವ ವಿಧಾನ

ಚಿನ್ನದ ಅದಿರು ಕ್ವಾರ್ಟ್ಸ್ ಎಂಬ ಶಿಲೆಯ ನಡುವೆ ಇರುತ್ತದೆ ಈ ಕಲ್ಲುಗಳ ಪ್ರಮಾಣವು ಇಷ್ಟೇ ಇರುತ್ತದೆಂದು ಹೇಳುವುದಕ್ಕಾಗುವುದಿಲ್ಲ ಈ ಕಲ್ಲುಗಳನ್ನು ಯಂತ್ರಗಳ ಮೂಲಕ ಪುಡಿಪುಡಿ ಮಾಡಲಾಗುವುದು ಪುಡಿಪುಡಿಯಾದ ಈ ಕಲ್ಲನ್ನು ಟ್ರಕ್ಕುಗಳ ಮೂಲಕ ಮೇಲಕ್ಕೆ ತರಲಾಗುವುದು ಈ ಗಣಿಗಳಲ್ಲಿ ಕೆಳಗೆ ಕೆಲಸಗಾರರು ಹೋಗಲು ಯಂತ್ರಸೌಕರ್ಯವೂ, ಅಲ್ಲಿ ಅವರು ಕೆಲಸಮಾಡುವಾಗ ಅವರಿಗೆ ಬೇಕಾದಷ್ಟು ಗಾಳಿಯನ್ನು ಬಿಡಲೂ ಏರ್ಪಾಡುಮಾಡಿದೆ ಗಾಳಿಯನ್ನು ಬಿಡಲು ವಿದ್ಯುಚ್ಛಕ್ತಿಯ ಫ್ಯಾನುಗಳನ್ನು ಇಟ್ಟಿದೆ. ಅಲ್ಲದೆ ನೆಲದ ಕೆಳಗೆ ಕೆಲಸಮಾಡುವವರಿಗೆ ವಾತಾವರಣವು ತಣ್ಣಗಿರುವಂತೆ ವಿದ್ಯುಚ್ಛಕ್ತಿಯ ಕೂಲರುಗಳನ್ನು ಇಟ್ಟಿದೆ ಈ ಗಣಿಗಳು ಎಷ್ಟು ಆಳವಾಗಿವೆ ಎನ್ನುವುದಕ್ಕೆ 1943ನೇ ಇಸವಿಯವರೆಗೂ 525½ ಮೈಲಿಗಳ ಉದ್ದದ ಟನಲುಗಳನ್ನು ತೆಗೆದಿದೆ 34 ಮೈಲಿಗಳಷ್ಟು ಉದ್ದದವರೆಗೂ ಸುರಂಗವನ್ನು ಹಾಕಿದೆ ಗಣಿಯ ಒಂದು ಕಡೆ ನೇರವಾಗಿ 9091 ಅಡಿಗಳಷ್ಟು ಆಳವಾಗಿದೆ

ಲೋಹ

ನೆಲದ ಮೇಲೆ ತಂದ ಅದಿರನ್ನು ಪುಡಿಮಾಡುವ ಯಂತ್ರಗಳಿಗೆ ಕಳುಹಿಸುತ್ತದೆ ಇಲ್ಲಿ ಕಲ್ಲಿನ ಕೆಲವು ಭಾಗವನ್ನು ಬಿಟ್ಟು ಉಳಿದ ಭಾಗವನ್ನು ಸಣ್ಣಗೆ ಪುಡಿ ಮಾಡಲಾಗುವುದು ಜರಡಿಯನ್ನು ಹಿಡಿಯುವುದರ ಮೂಲಕ ಸಣ್ಣ ಪುಡಿಯನ್ನು ಮತ್ತಷ್ಟು ಪ್ರತ್ಯೇಕಗೊಳಿಸಲಾಗುವುದು. ಬದನ್ನು ದಪ್ಪಪುಡಿಯನ್ನು ಸ್ಟಾಂಪು ಮಿಲ್ಲು ಎಂಬ ಯಂತ್ರಕ್ಕೆ ಕಳುಹಿಸಲಾಗುವುದು ಇಲ್ಲಿ ಈ ಪುಡಿಯನ್ನು ಸಣ್ಣಸಣ್ಣ ರಂಧ್ರಗಳ ಮೂಲಕ ಹಾಯಿಸಿ ಚಿನ್ನವನ್ನು ಪ್ರತ್ಯೇಕಗೊಳಿಸಲಾಗುವುದು ಇದನ್ನು ಟ್ಯೂಬುಮಿಲ್ಲುಗಳ ಮೂಲಕ ಹಾಯಿಸಿ ಅನಂತರ ಸುಮಾರು 9×5 ಅಡಿಗಳಷ್ಟು ಉದ್ದವಿರುವ ತಾಮ್ರದ ತಗಡುಗಳಮೇಲೆ ಹಾಯಿಸಲಾಗುವುದು ಈ ತಾಮ್ರದ ತಗಡುಗಳ ಮೇಲೆ ಪಾದರಸವನ್ನು ಹಾಕಿಸುವುದರಿಂದ ಅದರೊಡನೆ ಚಿನ್ನವು ಸೇರಿಸಿಕೊಳ್ಳುತ್ತದೆ ಅನಂತರ ಈ ಮಿಶ್ರಣವನ್ನು ಇನ್ನೊಂದು ಯಂತ್ರದ ಮೂಲಕ ಬಿಟ್ಟು ಚಿನ್ನವನ್ನು ಪ್ರತ್ಯೇಕಿಸಲಾಗುವುದು ಚಿನ್ನವನ್ನು ಕರಗಿಸಿ ಚಿನ್ನದ ಇಟ್ಟಿಗೆಗಳನ್ನಾಗಿ ಮಾಡಿ ಪಾದರಸವನ್ನು ಪುನಃ ಇದಕ್ಕೆ ಉಪಯೋಗಿಸುತ್ತಾರೆ

ಸೆಯುನೈಡು ಯಂತ್ರ

ಈ ಯಂತ್ರದಲ್ಲಿ ಸೋಡಿಯಂ ಸೈನೈಡು ಮತ್ತು ಸುಣ್ಣವನ್ನು ನೀರಿಗೆ ಸೇರಿಸಿ ಇವರ ಮೂಲಕ ಚಿನ್ನದ ಪುಡಿಯನ್ನು ಹಾಯಿಸಿ ರಸಾಯನಿಕ ಶಾಸ್ತ್ರದ ಮೇರೆಗೆ ಬುಲಿಯಾನ್ ಚಿನ್ನವನ್ನು ತಯಾರಿಸಲಾಗುವುದು ಇವರಲ್ಲಿ 900 ಭಾಗ ಚಿನ್ನ 90 ಭಾಗ ಬೆಳ್ಳಿ ಮತ್ತು ಇತರ ಲೋಹಗಳಿರುತ್ತವೆ

ಕೂಲಿಗಾರರು

ಈ ಗಣಿಗಳಲ್ಲಿ 20717 ಮಂದಿ ಕೆಲಸಗಾರರಿರುತ್ತಾರೆ ಇವರ ಪೈಕಿ 218 ಮಂದಿ ಯೂರೋಪಿಯನರು, 406 ಮಂದಿ ಆಂಗ್ಲೋ ಇಂಡಿಯನರು ಉಳಿದವರು ಭಾರತೀಯರು

ಕೆಲಸಗಾರರಿಗೆ ಮುಫತ್ತಾಗಿ ವೈದ್ಯಸಹಾಯವನ್ನೊದಗಿಸುತ್ತವೆ ವೈದ್ಯಶಾಲೆಯಲ್ಲಿ ಸುಶಿಕ್ಷಿತರಾದ ಯೂರೋಪಿಯನರು ಮತ್ತು ಭಾರತೀಯ ವೈದ್ಯರಿರುತ್ತಾರೆ ರಾಬರ್ಟ್‌ಸನ್ ಪೇಟೆಯಲ್ಲಿ ಹೆಂಗೆ ಆಸ್ಪತ್ರೆಯೊಂದಿದೆ ಕಂಪನಿಗೆ 92 ಮೈಲಿ ದೂರದ ಶಿವಸಮುದ್ರದಿಂದ ವಿದ್ಯುಚ್ಛಕ್ತಿಯನ್ನು ತರುತ್ತಿದೆ ಗಣಿಗೆ 7 ಮೈಲಿ ದೂರವಿರುವ ಬೇತಮಂಗಲದ ಕೆರೆಯಿಂದ ಕೆಲಸಗಾರರಿಗೆ ಕುಡಿಯುವ ನೀರನ್ನೊದಗಿಸುತ್ತಿದೆ. ಕೆಲಸಗಾರರಿಗೆ ಕಂಪೆನಿಯವರು ವಾಸಕ್ಕೆ ಮನೆಗಳನ್ನು ಕಟ್ಟಿಕೊಟ್ಟಿರುತ್ತಾರೆ. ಅವರಿಗೆ ಸಾಮಾಜಿಕ ಸೌಕರ್ಯಗಳನ್ನು ಒದಗಿಸಲು ಒಂದು ಕೇಂದ್ರ ಸಮಿತಿಯಿರುತ್ತದೆ. ಕೆಲಸಗಾರರ ಮಕ್ಕಳಿಗಾಗಿ ಶಾಲೆಗಳೂ ಆಟದ ಮೈದಾನಗಳೂ ಇವೆ

ಒಂದಾನೊಂದು ಕಾಲದಲ್ಲಿ ನಿರ್ಜನವಾಗಿದ್ದ ಪ್ರದೇಶದಲ್ಲಿ ಈಗ 134000 ಮಂದಿ ಪ್ರಜೆಗಳು ವಾಸಿಸುತ್ತಿದ್ದಾರೆ.

ಮೈಸೂರು ಇನ್‌ಫರ್ಮೇಷನ್ ಬುಲೆಟಿನ್

ಶ್ರೀಮಜ್ಜಗದ್ಗುರು ಏಕೋರಾಮಾರಾಧ್ಯರ

ಹಾಗೂ

ಶ್ರೀಜಗದ್ಗುರು ದಾರುಕಾಚಾರ್ಯರ

ಜಯಂತೀಮಹೋತ್ಸವಗಳು

ವೈಶಾಖ ಶು॥ ೩ ಸೋಮವಾರ ವೈಶಾಖ ಶು॥ ೫ ಬುಧವಾರ



ಯಾವ ಮಹಾತ್ಮರು ಭರತಖಂಡದಲ್ಲಿರತಕ್ಕ ಸಮಸ್ತಪವಿತ್ರಕ್ಷೇತ್ರ ಮಸ್ತಕಮಣೀಭೂತಗಳಾದ ಶ್ರೀದ್ರಾಕ್ಷಾರಾಮ, ಉಜ್ಜಯಿನೀಕ್ಷೇತ್ರಗಳಲ್ಲಿ ವಿರಾಜಿಸುವ ಶ್ರೀಭೀಮನಾಥ, ಶ್ರೀಸಿದ್ಧೇಶ್ವರ ಮಹಾಲಿಂಗಗಳಿಂದವತರಿಸಿ, ಪರಮಪವಿತ್ರವಾದ ವೀರಶೈವಸಿದ್ಧಾಂತವನ್ನು ಭೂಮಂಡಲದಲ್ಲಿ ನೆಲೆಗೊಳಿಸಿ, ವ್ಯಾಸ, ದಧೀಚಿ ಮೊದಲಾದ ಅನಂತಜನ ಮಹರ್ಷಿಗಳನ್ನೂ ಗೌತಮೇಂದ್ರ, ದೇವನಂದನ ಮೊದಲಾದ ಚಕ್ರವರ್ತಿಗಳನ್ನೂ ಶಿವಸಿದ್ಧಾಂತೋಪದೇಶದ್ವಾರಾ ಉದ್ಧರಿಸಿ ಲೋಕೈಕಪೂಜ್ಯರಾಗಿರುವರೋ, ಅಂಥ ಶ್ರೀಜಗದ್ಗುರು ಏಕೋರಾಮಾರಾಧ್ಯರ ಹಾಗೂ ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತೀಮಹೋತ್ಸವಗಳು ಇದೇ ವೈಶಾಖ ಶುಕ್ಲಪಕ್ಷದಲ್ಲಿ ಪ್ರಾಪ್ತವಾಗುವುದರಿಂದ ಸರ್ವ ಗುರುಭಕ್ತರೂ ಈ ಜಯಂತೀಮಹೋತ್ಸವಗಳನ್ನು ಅತ್ಯಂತ ವೈಭವದಿಂದ ನೆರವೇರಿಸಬೇಕು. **ವೈಶಾಖ ಶು॥ ೩ ಸೋಮವಾರ ತಾ॥ ೧೪—೫—೧೯೪೫** ನೆಯ ದಿವಸ ಶ್ರೀಜಗದ್ಗುರು ಏಕೋರಾಮಾರಾಧ್ಯರ ಜಯಂತೀಮಹೋತ್ಸವವನ್ನೂ, **ವೈಶಾಖ ಶು॥ ೫ ಬುಧವಾರ ತಾ॥ ೧೬—೫—೧೯೪೫** ನೆಯ ದಿವಸ ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತೀಮಹೋತ್ಸವವನ್ನೂ ನೆರವೇರಿಸಬೇಕು. ಈ ಮೊದಲು ಈ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿದಂತೆ ಭರತಖಂಡದಲ್ಲಿರುವ ಲಕ್ಷೋಪಲಕ್ಷ ಜನ ಶುದ್ಧಸಂಪ್ರದಾಯದ ವೀರಶೈವರು ಶ್ರೀಜಗದ್ಗುರು ರೇಣುಕಾಚಾರ್ಯರ ಹಾಗೂ ಪಂಡಿತಾರಾಧ್ಯ, ವಿಶ್ವಾರಾಧ್ಯರ ಜಯಂತೀಮಹೋತ್ಸವಗಳನ್ನು ಆಯಾಯ ಪವಿತ್ರದಿನಗಳಲ್ಲಿ ಅತ್ಯಂತಭಕ್ತಿಯಿಂದಲೂ, ವೈಭವದಿಂದಲೂ ನೆರವೇರಿಸಿದ ವಿಷಯವು ಈ ಪತ್ರಿಕೆಯಿಂದ ಸರ್ವರಿಗೂ ವೇದ್ಯವೇ ಆಗಿದೆ. ಶುದ್ಧಸಂಪ್ರದಾಯದ ವೀರಶೈವರು ಸದ್ಯಃ ಪ್ರಾಪ್ತವಾಗಿರುವ ಆಚಾರ್ಯರ ಜಯಂತೀಮಹೋತ್ಸವಗಳನ್ನು ಅತ್ಯಂತ ಭಕ್ತಿಯಿಂದಲೂ, ಉತ್ಸಾಹದಿಂದಲೂ, ವೈಭವದಿಂದಲೂ ನೆರವೇರಿಸಿ, ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಹಾರೈಸುತ್ತೇವೆ.

ಯುದ್ಧವಾರ್ತೆ:

ಹಿಟ್ಲರನ ಮರಣ

ಸಮಸ್ತ ಪ್ರಪಂಚವನ್ನೂ ತನ್ನ ಅಧೀನದಲ್ಲಿಟ್ಟುಕೊಂಡು ಆಳಬೇಕೆಂಬ ದುರಹಂಕಾರದಿಂದ ಪ್ರಪಂಚದಲ್ಲಿ ಘೋರಯುದ್ಧವನ್ನು ಪ್ರಾರಂಭಮಾಡಿ ಕೋಟ್ಯಂತರ ಜನರ ಪ್ರಾಣಹಾನಿಗೆ ಮೂಲ ಕಾರಣೀಭೂತನಾದ ಜರ್ಮನಿಯ ಸರ್ವಾಧಿಕಾರಿ, ಹರ್ ಹಿಟ್ಲರನು ಬರ್ಲಿನ್ ರಣರಂಗದಲ್ಲಿ ಹತನಾದನೆಂದು ಪ್ರಕಟವಾಗಿದೆ. ಈತನ ಮರಣದಿಂದ ಜರ್ಮನಿಯು ಪತನವಾದಂತಾಯಿತು. ಜರ್ಮನ್ ದೇಶದ ಸೈನಿಕರೆಲ್ಲರೂ ಲಕ್ಷಗಟ್ಟಲೆಯಾಗಿ ಬ್ರಿಟಿಷ್ ಮತ್ತು ಅಮೆರಿಕನರಿಗೆ ಶರಣಾಗತರಾಗುತ್ತಿದ್ದಾರೆ ಈ ವಾರದಲ್ಲಿಯೇ ಯೂರೋಪುಖಂಡದ ಯುದ್ಧವು ಮುಗಿಯಬಹುದೆಂದು ತೋರಬರುತ್ತದೆ "ಅತ್ಯುನ್ನತಿಃ ಪತನಹೇತುಃ" ಎಂಬಂತೆ ಬಹಳ ಉದ್ದವಾಗಿ ಬೆಳೆದದ್ದು ಎಂದಾದರೂ ಒಮ್ಮೆ ಮುರಿಯುವದೆಂಬ ಗಾದೆಯನ್ನಾತು ಅಕ್ಷರಶಃ ನಿಜವಾದುದೆಂಬುದಕ್ಕೆ ಹಿಟ್ಲರನ ಇತಿಹಾಸವೇ ಬಲವಾದ ಸಾಕ್ಷಿ. ಹಿಟ್ಲರನ ಪರಮ ಮಿತ್ರನಾದ ಇಟಲಿ ಸರ್ವಾಧಿಕಾರಿ ಮುಸಲೋನಿಯನ್ನು ಸಹ ಆ ದೇಶಭಕ್ತರು ಗುಂಡಿಟ್ಟು ಕೊಂದು ಹಾಕಿದರು. ಇನ್ನಾದರೂ ಜಗತ್ತಿನಲ್ಲಿ ಶಾಂತಿಯು ನೆಲಸಬಹುದೆಂದು ಬಹುಜನರು ನಂಬಿರುತ್ತಾರೆ

ಜರ್ಮನಿಯ ನೂತನನಾಯಕ ಡೋನಿಡ್ಜನ ಹೇಳಿಕೆ

ನಮ್ಮ ನಾಯಕ ಹಿಟ್ಲರನು ತನ್ನ ಜೀವನದ ಆದರ್ಶವಾದ ಬೋಲ್ಷಿವಿಜಂ ನಾಶಕ್ಕಾಗಿ ಕಡೆತನಕ ಹೋರಾಡಿ ವೀರನಂತೆ ಮಡಿದನು. ಜರ್ಮನ್ ಜನರ ಸೇವೆಯೇ ಆತನ ಸಾರ. ಬೋಲ್ಷಿವಿಜಂ ವಿನಾಶನಾದರ್ಶದ ಯುದ್ಧದಿಂದ ಜರ್ಮನಿಗೆ ಮಾತ್ರವಲ್ಲ, ಇಡೀ ಯೂರೋಪಿಗೆ ಲಾಭವಾಗಿದೆ ಬೋಲ್ಷೆವಿಜಂ ನಾಶಮಾಡಬೇಕೆಂಬುದೇ ನಮ್ಮ ಯುದ್ಧವಗುರಿ. ಹಿಟ್ಲರ್ ನನ್ನನ್ನು ತನ್ನ ಅನಂತರದ ಅಧಿಕಾರಿಯನ್ನಾಗಿ ಪಟ್ಟಕಟ್ಟಿದ್ದಾನೆ. ಈ ಪರ್ವಕಾಲದ ಜವಾಬ್ದಾರಿ ಎಂತಹದೆಂಬುದನ್ನು ಚನ್ನಾಗಿ ಮನವರಿಕೆ ಮಾಡಿಕೊಂಡೇ ನಮ್ಮ ರಾಷ್ಟ್ರದ ನಾಯಕಸೂತ್ರಗಳನ್ನು ಕೈಗೆ ತೆಗೆದುಕೊಳ್ಳುತ್ತಿದ್ದೇನೆ. ತಮ್ಮ ದೇಶದ ಹಿತಕ್ಕಾಗಿ ಆಂಗ್ಲೋ ಅಮೆರಿಕನ್ನರು ಹೋರಾಡುತ್ತಿಲ್ಲ. ಬೋಲ್ಷಿವಿಜಂ ಪ್ರಚಾರಕ್ಕಾಗಿ ಕಾದುತ್ತಿದ್ದಾರೆ. ಜರ್ಮನರ ತ್ಯಾಗ ಸಾಧನೆಗಳು ಇತಿಹಾಸ ಪ್ರಸಿದ್ಧವಾಗುವಂಥವು. ಮುಂದೆ ಬರಲಿರುವ ವಿಪತ್ಕಾಲದಲ್ಲಿ ನಮ್ಮ ಜನ ತಾಳಿ ಬಾಳುವುದಕ್ಕೆ ಅಗತ್ಯವೆನಿಸುವ ಎಲ್ಲಾ ಸಾಧನೋಪಾಯಗಳನ್ನೂ ನಾನು ಕೈಗೊಳ್ಳುವೆ. ಈ ಎಲ್ಲ ಸಾಧನೆಗೆ ನಿಮ್ಮ ನೆರವುಬೇಕು, ನಗರಗಳಲ್ಲೂ ಗ್ರಾಮಗಳಲ್ಲೂ ಶಿಸ್ತಿನಿಂದಲೂ ವ್ಯವಸ್ಥೆಯಿಂದಲೂ ಜೀವನ ಸಾಗಿಸಿ. ಹೀಗಾದರೆ ಬರಲಿರುವ ವಿಪತ್ತಿನಲ್ಲಿ ಬಾಳಿ ಉಳಿಯಲು ಸಾಧ್ಯ. ನಮ್ಮ ಕೈಯಿಂದಾಗುವುದನ್ನೆಲ್ಲ ನಾವು ಮಾಡಿದೆವೆಂದರೆ ದೇವರೆಂದಿಗೂ ನಮ್ಮ ಕೈಬಿಡನು. ಬೋಲ್ಷಿವಿಜಂ ಪ್ರಳಯದಿಂದ ಜಗತ್ತನ್ನು ರಕ್ಷಿಸುವುದಕ್ಕಾಗಿ ಹಿಟ್ಲರನು ಉಸಿರು ನಿಲ್ಲುವವರೆಗೂ ಹೋರಾಡಿ ವೀರಸ್ವರ್ಗವನ್ನು ಸೇರಿದನು ಆತನ ಅಪ್ಪಣೆಯಂತೆ ನಾನಿಂದು ಜರ್ಮನಿಯ ಸರ್ವಾಧಿಕಾರ ಸೂತ್ರಗಳನ್ನು ವಹಿಸಿಕೊಂಡು ಆತನ ಉದ್ದೇಶ ಸಾಧನೆಗಾಗಿ ಯುದ್ಧವನ್ನು ಮುಂದುವರಿಸುತ್ತೇನೆ. ಯುದ್ಧ ಮುಗಿಯಲೆಂದು ಬಯಸುತ್ತಿರುವ ನಿಮ್ಮನ್ನು ಇನ್ನಷ್ಟು ತ್ಯಾಗಕ್ಕೆ ಬಲಿಕೆಗೆ ಸಿದ್ಧರಾಗಿರೆಂದು ಕೇಳುತ್ತಿದ್ದೇನೆ.

ಜರ್ಮನ್ ದಂಡನಾಯಕರು ತಾವಾಗಿಯೇ ಶರಣಾಗುತ್ತಿದ್ದಾರೆ

ಜರ್ಮನ್ ದಂಡನಾಯಕರು ತಾವಾಗಿಯೇ ಬ್ರಿಟಿಷ್ ಮತ್ತು ಅಮೇರಿಕನ್ ಸೇನಾಶಿಬಿರಗಳಿಗೆಬಂದು ಶರಣಾಗತರಾಗುತ್ತಿದ್ದಾರೆ. ತಮ್ಮ ಸೇನೆಗಳನ್ನು ಶರಣು ಒಪ್ಪಿಸಲು ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದಾರೆ.

೧೦ ಲಕ್ಷ ಜರ್ಮನರ ಕೈಸೆರೆ

ಜರ್ಮನಿಯ ಕಂಗಾಲ ಪರಿಸ್ಥಿತಿಯನ್ನು ವಿವರಿಸಿ ಸುದ್ದಿಗಳು ತಂಡತಂಡವಾಗಿ ಬರುತ್ತವೆ ಎಲ್ಲೆಲ್ಲೂ ಜರ್ಮನರು ಕುಸಿದುಬೀಳುತ್ತಿದ್ದಾರೆ ಶರಣೆನ್ನುತ್ತಿದ್ದಾರೆ. ಹಿಮ್ಮೆಟ್ಟುತ್ತಿದ್ದಾರೆ ಈಗಾಗಲೆ ೫ ಲಕ್ಷ ಮಂದಿ ಜರ್ಮನ್ ಸೈನಿಕರು ಶಿಬಿರ ಪಂಜರದಲ್ಲಿ ಬಂದಿಗಳಾಗಿ ಕುಳಿತಿದ್ದಾರೆ. ಇನ್ನೈದು ಲಕ್ಷ ಬಂದಿಗಳಿಗೆ ಶಿಬಿರಗಳ ಸೃಷ್ಟಿಯಾಗಬೇಕಾಗಿದೆ

ಬರ್ಲಿನ್‌ನಲ್ಲಿರುವ ಜರ್ಮನ್ ಸೇನೆ ಶರಣೆಂದಿತು

ಜರ್ಮನ್ ರಾಷ್ಟ್ರದ ರಾಜಧಾನಿಯಾದ ಬರ್ಲಿನ್ ನಗರ ಸಂಪೂರ್ಣವಾಗಿ ರಷ್ಯನರ ವಶವಾಗಿದೆ ೧ ನೇ ತಾ ಮಧ್ಯಾಹ್ನ ಮೂರು ಗಂಟೆಯ ಸಮಯದಲ್ಲಿ ಬರ್ಲಿನ್‌ನಲ್ಲಿದ್ದ ಜರ್ಮನ್ ದಳವು ಶಸ್ತ್ರಾಸ್ತ್ರಗಳನ್ನು ಕೆಳಗಿಟ್ಟಿತು ಮಾ|| ಸ್ಟಾಲಿನ್‌ರವರು ಈ ಮಹಾ ವಿಜಯಕ್ಕಾಗಿ ಒಂದು ಪ್ರಕಟನೆ ಹೊರಡಿಸಿ ಮಾ| ಝುಕೋವರ್‌ರವರ ಸೈನಿಕರೆಲ್ಲರನ್ನೂ ೧೪೫ ಮಂದಿ ದಳಾಧಿಪತಿಗಳನ್ನೂ ಪ್ರಶಂಸಿದ್ದಾರೆ. ಜರ್ಮನ್ ಸೇನಾಕೇಂದ್ರವಾದ ಬರ್ಲಿನ್ ವಶವಾದುದರ ನೆನಪಿಗಾಗಿ ಮಾಸ್ಕೋದಲ್ಲಿ ೩೨೪ ಫಿರಂಗಿಗಳು ಇಪ್ಪತ್ತೈದಾವರ್ತಿ ಗರ್ಜಿಸಿದುವು ಬರ್ಲಿನ್ ನಗರದಲ್ಲಿ ಶತ್ರುಗಳನ್ನು ಬಂಧಿಸುವ ಕಡೆಯ ಪ್ರಯತ್ನದಲ್ಲಿ ರಷ್ಯನರು ೭೦೦೦೦ ಜನರನ್ನು ಕೈಸೆರೆ ಹಿಡಿದರು

ಬರ್ಲಿನ್ ಧ್ವಂಸವಾಗಿದೆ

ಬರ್ಲಿನ್ ನಗರವು ಧ್ವಂಸವಾಗಿದೆ ಅದು ರಿಪೇರಿಯಾಗಬೇಕಾದರೆ ಒಹಳ ವರ್ಷಗಳು ಬೇಕು. ಎಂಬುದಾಗಿ ಮಾಸ್ಕೋ ಸುದ್ದಿಯು ತಿಳಿಸುತ್ತದೆ

ಹ್ಯಾಂಬರ್ಗ್ ಬಂದರಿಗೆ ಮಿತ್ರರ ಪ್ರವೇಶ

ಬ್ರಿಟಿಷ್ ಮತ್ತು ರಷ್ಯನ ಸೇನೆಗಳು ಸಂಧಿಸಿದುವೆಂಬ ಸುದ್ದಿ ಪ್ರಕಟವಾದ ೭ ಘಂಟೆಗಳೊಳಗೇ ಬ್ರಿಟಿಷ್ ಪಡೆಗಳು ಹ್ಯಾಂಬರ್ಗ್‌ಬಂದರನ್ನು ಪ್ರವೇಶಿಸಿವವು ನಗರದಲ್ಲಿನ ಸಂಚಾರವನ್ನು ತಡೆದು ಕರ್ಫ್ಯೂ ಆಜ್ಞೆಯನ್ನು ಜಾರಿಗೆ ತರಲಾಗಿದೆ ಲಕ್ಷಗಟ್ಟಲೆ ಸಂಖ್ಯೆಯಲ್ಲಿ ಜರ್ಮನ್ ಸೈನಿಕರು ಶರಣಾಗತರಾಗುತ್ತಿದ್ದಾರೆ

ಸೇನಾತ್ರಯವು ಒಂದುಗೂಡಿತು

ಹ್ಯಾಂಬರ್ಗಿನ ಬಲಪಾರ್ಶ್ವದಲ್ಲಿ ಅಮೆರಿಕನ್ ರಷ್ಯನ್ ಮತ್ತು ಬ್ರಿಟಿಷ್ ಸೇನೆಗಳು ಸಂಧಿಸಿವೆ ಜರ್ಮನ್ ಸೈನಿಕರುಗಳು ಸಹಸ್ರ ಸಂಖ್ಯೆಯಲ್ಲಿ ಅಮೆರಿಕನ್ ಮತ್ತು ಬ್ರಿಟಿಷ್ ಸೇನೆಗಳಿಗೆ ಶರಣಾಗುತ್ತಿದ್ದಾರೆ

ರಷ್ಯನ್ ಬ್ರಿಟಿಷ್ ಸೇನೆಗಳು ಕೈಕೈ ಕುಲುಕಲಿವೆ

ರಣರಂಗದ ಉತ್ತರದ ತುತ್ತ ತುದಿಯಲ್ಲಿ ರಷ್ಯನ್ ದಂಡನಾಯಕ ರೋಕೊಸೊವಿಸ್ಕಿಯವರ ಸೈನ್ಯಗಳಿಗೂ ಬ್ರಿಟಿಷ್ ದಂಡನಾಯಕ ಮಾಂಟ್ಗೊಮರಿಯವರ ಸೈನ್ಯಗಳಿಗೂ ಇರುವ ಅಂತರ ಬಹು ಚಿಕ್ಕದಾಗಿದೆ ದಕ್ಷಿಣದಲ್ಲಿ ನೂರರಲ್ಲಿ ಒಂದು ಪಾಲು ಜರ್ಮನ್ ಕ್ಷೇತ್ರವೂ ಜರ್ಮನರ ಕೈಯಲ್ಲಿ ಉಳಿದಿಲ್ಲ ಬ್ರಿಟಿಷ್ ಎರಡನೇ ಸೇನೆ ಕೀಲ್ ಕಾಲುವೆಯನ್ನು ದಾಟಿವೆ. ಎಂಬುದಾಗಿ ಒಂದು ಸುದ್ದಿ ತಿಳಿಸುತ್ತದೆ

ಬ್ರಿಟನ್ನಿನಲ್ಲಿ ವಿಮಾನದಾಳಿ ಸೂಚನೆ ವ್ಯವಸ್ಥೆ ರದ್ದಾಯಿತು

ವಿಮಾನದಾಳಿ ಸೂಚನೆ ವ್ಯವಸ್ಥೆಯನ್ನು ಬ್ರಿಟನ್ನಿನಲ್ಲಿ ಇಂದಿನಿಂದ ರದ್ದುಗೊಳಿಸಲಾಗಿದೆಯೆಂಬುದಾಗಿ ಅಧಿಕೃತ ಪ್ರಕಟನೆ ಹೊರಟಿದೆ. ಇಂಗ್ಲೆಂಡಿನಲ್ಲಿ ಮೊಟ್ಟಮೊದಲಿಗೆ ವಿಮಾನದಾಳಿ ಸೂಚನೆಯ ಶಬ್ದ ಕೇಳಿಬಂದದ್ದು ೧೯೩೯ ರ ಸೆಪ್ಟಂಬರ್ ೩ ನೇ ತಾ|| ಲಂಡನ್ನಿನಲ್ಲಿ ಕಟ್ಟಕಡೆಯ ಸೂಚನೆ ಕೇಳಿಸಿದ್ದು ೧೯೪೫ ರ ಮಾರ್ಚಿ ೨೮ ನೇ ತಾ| ಲಂಡನ್ನಿನಲ್ಲಿ ಇದುವರೆಗೆ ಒಟ್ಟು ೧೨೨೪ ಸಾರಿ ಸೂಚನೆ ಕೇಳಿ ಬಂತು

ಇಟಲಿ ಯುದ್ಧ ಮುಗಿಯಿತು ! ಎಲ್ಲ ಜರ್ಮನ್ ಸೇನೆಗಳೂ ಶರಣಾಗತವಾದವು

ಇಟಲಿಯಲ್ಲಿ ಯುದ್ಧವು ಕೊನೆಗಂಡಿತು ಜರ್ಮನಿಯ ಮೇಲೆ ಯುದ್ಧ ಹೂಡಿ ನಾಲ್ಕು ವರ್ಷ ತುಂಬಿದ ದಿನ—ಅಂದರೆ ೩-೯-೧೯೪೪ ನೇ ತಾರೀಖು ಮಿತ್ರಸೇನೆ ಇಟಲಿಯ ಮೇಲೆ ದಂಡಯಾತ್ರೆಯನ್ನು ಆರಂಭಿಸಿತು ಫೀಲ್ಡ್ ಮಾರ್ಷಲ್ ಮಾಂಟ್ಗೊಮರಿಯವರ ಸೇನೆ ಆರಂಭಿಸಿದ ದಂಡಯಾತ್ರೆಯು, ಅಲ್ಲಿನ ಎಲ್ಲ ಜರ್ಮನ್ ಸೇನೆಗಳೂ ಶರಣಾಗತವಾದುದರ ಫಲವಾಗಿ ಕೊನೆಗೊಂಡಿತು ಮಿತ್ರರು ಕೈಕೊಂಡ ಕಾರ್ಯ ಮಾರ್ಗವು ಜಯಪ್ರದವಾಗಿದೆ ಈ ಸಂಗ್ರಾಮದಲ್ಲಿ ಜರ್ಮನರು ಯಾವ ಷರತ್ತೂ ಇಲ್ಲದೆ ಶರಣಾಗತರಾಗಿರುವುದು ಇದೇ ಮೊದಲು ಸುಮಾರು ೧೦ ಲಕ್ಷ ಜರ್ಮನ್ ಯೋಧರು ತಮ್ಮ ಅಸ್ತ್ರಗಳನ್ನು ಕೆಳಗಿಟ್ಟರು ಜರ್ಮನರು ಶರಣಾಗತರಾದ ಪ್ರಥಮ ವಾರ್ತೆ ಮೆಡಿಟರೇನಿಯನ್‌ನಲ್ಲಿರುವ ಫೀಲ್ಡ್ ಮಾರ್ಷಲ್ ಅಲೆಗ್ಸಾಂಡರ್‌ರವರ ಮುಖ್ಯ ಕಚೇರಿಯಿಂದ ಹೊರಟ ಪ್ರಕಟನೆಯ ಮೂಲಕ ಬಂತು ಶತ್ರುಗಳ ಭೂ, ಜಲ, ವಿಮಾನ ಬಲದವರೆಲ್ಲ ಒಂದು ಒಪ್ಪಂದಕ್ಕೆ ಬಂದು ಫಿ| ಮಾ ಅಲೆಗ್ಸಾಂಡರ್‌ರವರಿಗೆ ಶರಣಾಗತರಾಗಿರುವರೆಂದೂ ಮೇ ೨ ನೇ ತಾ| ದಿನ ಮಧ್ಯಾಹ್ನ ಹೊಡೆದಾಟವು ಕೊನೆಗಂಡಿತೆಂದೂ ತಿಳಿಸುತ್ತದೆ ಇಟಲಿಯಲ್ಲಿ ನಡೆದ ಈ ಘಟನೆಯನ್ನು ಮಹಾಪ್ರಧಾನ ಚರ್ಚಿಲ್ಲರು ಕಾಮನ್ಸ್ ಸಭೆಗೆ ತಿಳಿಸಿದರು ಈ ವಿಚಾರದಲ್ಲಿ ಮಿ. ಚರ್ಚಿಲ್ಲರು 'ಜರ್ಮನರ ಈ ಶರಣಾಗತಿಯು ಈ ಸಂಗ್ರಾಮದಲ್ಲಿ ಅತ್ಯಪೂರ್ವವಾದ ಘಟನೆಯೆಂದು ಹೇಳಬೇಕಾಗಿದೆ ಮುಂದೆ ನಾವು ನಿರೀಕ್ಷಿಸುತ್ತಿರುವ ಸಂತೋಷದ ಸುದ್ದಿಗೆ ಇಟಲಿಯ ಘಟನೆ ಹೆಚ್ಚು ಬೆಂಬಲ ನೀಡಿದ' ಎಂದರು. ಫೀಲ್ಡ್ ಮಾರ್ಷಲ್ ಅಲೆಗ್ಸಾಂಡರ್‌ರವರಿಗೂ ಮತ್ತು ಜ ಕ್ಲೇರ್ಕ್‌ರವರಿಗೂ ಅಮೆರಿಕದ ಅಧ್ಯಕ್ಷರಾದ ಟ್ರೂಮನ್ನರು ಅಭಿನಂದನೆಗಳನ್ನು ಕಳುಹಿದ್ದಾರೆ

ಬರ್ಮಾದಲ್ಲಿ ಮಿತ್ರರ ಮುನ್ನಡೆ

ಬರ್ಮಾದ ಇರವಾಡಿ ರಂಗದಲ್ಲಿ ಮಿತ್ರ ಯೋಧರು, ರಂಗೂನಿನ ವಾಯುವ್ಯಕ್ಕೆ ೧೨೦ ಮೈಲಿ ದೂರವಿರುವ ಪ್ರೋಂ ನಗರವನ್ನು ಪ್ರವೇಶಿಸಿದ್ದಾರೆ ಅಲ್ಲದೆ ರೈಲ್ವೆ ಸ್ಟೇಷನ್‌ವರೆಗೂ ನುಗ್ಗಿದ್ದಾರೆ ಇರವಾಡಿ ಪಶ್ಚಿಮಕ್ಕಿರುವ ಪ್ಯಾಚ್ಚಿ ಎಂಬ ನಗರವನ್ನು ಹಿಡಿಯಲಾಯಿತು ಪೆಗೂ ನಗರ ಸಹ ಮಿತ್ರ ಯೋಧರ ವಶವಾಯಿತು

ರಂಗೂನಿನಿಂದ ಸಾಮಾನನ್ನು ಸಾಗಿಸಲು ಜಪಾನರ ಪ್ರಯತ್ನ

ರಂಗೂನಿನಲ್ಲಿ ಸಂಗ್ರಹಿಸಲಾಗಿರುವ ಸಾಮಾನುಗಳನ್ನು ಲಾರಿ ಮೂಲಕ ಆತುರವಾಗಿ ಸಾಗಿಸಿಕೊಂಡು ಹೋಗಲು ಜಪಾನರು ಯತ್ನಿಸುತ್ತಿದ್ದಾರೆ. ಆದರೆ ಮಿತ್ರ ವಿಮಾನಗಳು ಅವುಗಳನ್ನು ನಾಶಮಾಡುತ್ತಿವೆ. ಪೆಗೂ ಕ್ಷೇತ್ರದಲ್ಲಿ ಒಂದೇ ದಿನ ೫೭ ಜಪಾನು ಲಾರಿಗಳನ್ನು ಸುಡಲಾಯಿತು ರಸ್ತೆಯ ಒಂದುಕಡೆ ಐದು ಮಿತ್ರ ವಿಮಾನಗಳು ಉಗ್ರವಾಗಿ ಗುಂಡು ಹಾರಿಸಿದ್ದರಿಂದ ೨೦ ಲಾರಿಗಳು ಬೆಂದುಹೋದವು.

ರಂಗೂನ್ ಆಕ್ರಮಣ

ಮಿತ್ರರು ರಂಗೂನ್ ಆಕ್ರಮಿಸಿದರು. ರಂಗೂನ್ ಮಿತ್ರರ ಕೈಬಿಟ್ಟು ೩ ವರ್ಷ ೨೭ ದಿನಗಳ ನಂತರ ಮತ್ತೆ ಮಿತ್ರರು ಆ ನಗರವನ್ನು ಪ್ರವೇಶಿಸಿದ್ದಾರೆ. ಈ ವಿಜಯಕ್ಕಾಗಿ ಚಕ್ರವರ್ತಿಗಳು ಲಾರ್ಡ್ ಮೌಂಟ್‌ಬ್ಯಾಟನ್ನರಿಗೆ "ರಂಗೂನ್ ಆಕ್ರಮಣದಲ್ಲಿ ಭಾಗವಹಿಸಿದ ಎಲ್ಲರಿಗೂ ಅವರ ಮಹಾಸಾಧನೆಯನ್ನು ನೆನೆದು ಅಭಿನಂದಿಸುತ್ತೇನೆ" ಎಂಬುದಾಗಿ ಸಂದೇಶ ಕಳಿಸಿದಾರೆ. ೧೯೪೨ನೇ ಮಾರ್ಚಿ ೭ನೇ ತಾ|| ಮಿತ್ರರು ರಂಗೂನ್ ನಗರದಿಂದ ಹಿಮ್ಮೆಟ್ಟಿದರು. ಅನಂತರ ಸಕಲ ಸಿದ್ಧತೆಗಳನ್ನು ಮಾಡಿಕೊಂಡು ೧೯೪೩ರಲ್ಲಿ ಬರ್ಮಾದೊಳಕ್ಕೆ ನುಗ್ಗಿ ಅದನ್ನು ವಶಪಡಿಸಿಕೊಂಡರು.

ಲಕ್ಷ್ಮೀಕಾಂತಂ ಕೊಲೆಮೊಕದ್ದಮೆಯ ತೀರ್ಪು

ಲಕ್ಷ್ಮೀಕಾಂತಂ ಕೊಲೆ ಮೊಕದ್ದಮೆಯಲ್ಲಿ ನ್ಯಾಯಮೂರ್ತಿ ಸರ್ ವೆಲಮಾಕೆಟ್‌ರವರು ತೀರ್ಪು ಕೊಡುತ್ತ ಆರ್ಮುಗಂ ನಿರ್ದೋಷಿಯೆಂದು ಆತನ ಬಿಡುಗಡೆಗೆ ಆಜ್ಞೆಯಿತ್ತರು ಉಳಿದವರೆಲ್ಲ ತಪ್ಪಿತಸ್ಥರೆಂದು ತೀರ್ಮಾನಿಸಿ ಅವರಿಗೆಲ್ಲ ಆಜೀವಶಿಕ್ಷೆ ವಿಧಿಸಿದರು. ಆಜೀವಶಿಕ್ಷೆಗೆ ಗುರಿಯಾದವರು—೧ ಎಂ. ವಡಿವೇಲು, ೨ ಎ ನಾಗಲಿಂಗಂ, ೩ ಎಂ. ಕೆ. ತ್ಯಾಗರಾಜಭಾಗವತರ್, ೪ ಎನ್. ಎಸ್ ಕೃಷ್ಣನ್, ೫ ಆರ್ಯವೀರ ಸೇನನ್. ೬ ಆರ್. ರಾಜಬಾದರ್.

ಸ್ವೀಕಾರ

ನಿಜಾಂ ಇಲಾಖಾ ದುಬಲಗುಂಡಿ ತಾ| ಗೋರಟ ಗ್ರಾಮದಲ್ಲಿ ಸದಾ ಗುರುನಾಮಸಂಕೀರ್ತನೆಯಲ್ಲಿ ಕಾಲವನ್ನು ಕಳೆಯುತ್ತಿರುವ ಮರಪತ್ತಿ ಸಿದ್ಧರಾಮಯ್ಯನವರ ಪುತ್ರ ಶಿವಬಸವಯ್ಯನವರು ಗುರುಸ್ಮರಣಪೂರ್ವಕ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 1 ರೂಪಾಯಿಯು ಮರಪತ್ತಿ ರಾಚಯ್ಯನವರ ದ್ವಾರಾ ತಲ್ಪಿರುತ್ತದೆ

ಚಿಕ್ಕಮಗಳೂರು ತಾ|| ಎಳಗೊಡಿಗೆ ಗ್ರಾಮದ ಮ|| ರಾ|| ನಿರ್ವಾಣೇಗೌಡರು ಶಿವಾಧೀನರಾದ ಸಮಯದಲ್ಲಿ ಅವರ ಪುತ್ರರಾದ ಹಂಡಿಗ್ರಾಮದ ಸ್ಕೂಲ್ ಮಾಸ್ಟರ್ ಮ| ರಾ| ಎ ಎನ್ ರುದ್ರಗೌಡರು ಪ್ರಭಾಪೋಷಣಕ್ಕೋಸ್ಕರ 1 ರೂಪಾಯಿಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ

ಹಿಮಾಲಯ ಪ್ರಾಂತದ ಸಮಾಚಾರ

ಈ ವರ್ಷ ಶ್ರೀ ಕೇದಾರನಾಥಸ್ವಾಮಿಯ ಬಾಗಿಲವು ತಾ ೨೭-೪-೪೫ಕ್ಕೆ ತೆಗೆದಿರುವದು ಮಳೆಯಾದ ಮೂಲಕ ಪರ್ವತಗಳ ಮೇಲೆ ಘರ್ಷದ ರಾಶಿಗಳು ಬಿದ್ದಿರುವವು ಚಳಿಯು ವಿಶೇಷವಾಗಿರುವದು ವರ್ಷವಕ್ಕೆ ಬರತಕ್ಕ ಜನರು ತಾ ೧೫ ೫-೪೫ಕ್ಕೆ ಹೊರಡಬಹುದು. ಶ್ರೀ ಕೇದಾರದಲ್ಲಿ ಹಿಟ್ಟು, ಅಕ್ಕಿ ೧ ರೂಪಾಯಿಗೆ ಒಂದು ಶೇರು (ಪಕ್ಕಾಶೇರು) ೪೦ ತೊಲ ಸಿಗುವದು ತುಪ್ಪವು ೫ ರೂಪಾಯಿಗಳಿಗೆ ೪೦ ತೊಲ ಪಕ್ಕಾಶೇರು ಸಿಗುವದು ಇದರಂತೆ ಬಾಕಿ ಸಾಮಾನುಗಳ ಬೆಲೆಯೂ ಕೂಡ ಹೆಚ್ಚಿರುವವು.

ಬಡಬಗ್ಗರಿಗೆ ಮಾತ್ರ ಯಾತ್ರೆಯನ್ನು ಮಾಡಲು ಸಾಧ್ಯವಿಲ್ಲ. ಮೋಟಾರುಗಳಿಂದ ಪ್ರಯಾಣ ಮಾಡಲು ೨ ಮಾರ್ಗಗಳುಂಟು ಒಂದು ಕೋಟದ್ವಾರದಿಂದ, ಮತ್ತೊಂದು ಋಷಿಕೇಶದಿಂದ. ರುದ್ರಪ್ರಯಾಗದವರೆಗೂ ಮೋಟಾರುಗಳು ಸಿಗುತ್ತವೆ. ರುದ್ರಪ್ರಯಾಗದಿಂದ ಮುಂದೆ ಶ್ರೀ ಕೇದಾರನಾಥಸ್ವಾಮಿಯ ಮಂದಿರವು ೪೪ ಮೈಲಿನ ಮೇಲೆ ಇರುವದು ರುದ್ರಪ್ರಯಾಗದಿಂದ ಯಾತ್ರಿಕರಿಗೆ ಕುದುರೆಗಳೂ ದಾಂಡಿಗಳೂ ಸಿಗುತ್ತವೆ ಯಾತ್ರಿಕರ ವ್ಯವಸ್ಥೆಗಾಗಿ ಸರಕಾರದವರು ಸರಿಯಾದ ಏರ್ಪಾಡು ಮಾಡಿರುವರು ಯಾತ್ರೆಗೆ ಬರತಕ್ಕವರು ಹೆಚ್ಚಿನ ಮಾಹಿತಿಗಾಗಿ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬೇಕು.

ಮ್ಯಾನೇಜರ್ ಕೇದಾರನಾಥ
ಮು ಪೋ|| ಗುಪ್ತಕಾಶೀ, ಡಿ|| ಗಢವಾಲ,
ಯು. ಪಿ ಹಿಮಾಲಯ.

ಶ್ರೀ ಜಗದ್ಗುರು ಕಾಶೀಪೀಠಕ್ಕೆ ಕಾಣಿಕೆ

ಪ್ರಭೆಯಲ್ಲಿ ಕಾಶೀಪೀಠದ ಸಮಾಚಾರವೆಲ್ಲವೂ ಈ ಹಿಂದೆ ಪ್ರಕಾಶಿತವಾಗಿದೆ. ಅದರಂತೆ ಗುರು ಭಕ್ತರು ಗುರುದಕ್ಷಿಣೆಯನ್ನು ಪೀಠಕ್ಕೆ ಸಲ್ಲಿಸುತ್ತಿದ್ದಾರೆ. ಈ ಕೆಲಸವು ಇನ್ನೂ ವಿಶೇಷವಾಗಿ ಸಾಗಬೇಕಾಗಿದೆ. ಆಯಾ ಸ್ಥಳಗಳಲ್ಲಿಯ ಪ್ರಮುಖರು ವೀರಶೈವ ಮಹಾಜನರಿಂದ ವಿವಾಹಾದಿ ಶುಭಕಾರ್ಯಗಳಲ್ಲಿ ದಾನ ದಕ್ಷಿಣೆಗಳನ್ನು ಸಮರ್ಪಿಸಿ ಕಾಶೀ ಜಗದ್ಗುರು ಮಹಾಸನ್ನಿಧಿಗೆ ಕಳುಹಿಸುತ್ತಿರಬೇಕು. ಈ ಬಗ್ಗೆ ಸರಿಯಾದ ಸೇವೆಯನ್ನು ಸಲ್ಲಿಸುವುದು ಸರ್ವ ಗುರುಭಕ್ತರ ಮುಖ್ಯ ಕರ್ತವ್ಯವಾಗಿದೆ ಎಂಬುದನ್ನು ತಿಳಿದು ಎಲ್ಲರೂ ಪ್ರಯತ್ನಿಸಬೇಕು.

ಗೋಕರ್ಣಕ್ಷೇತ್ರದಲ್ಲಿ ವೀರಶೈವ ಮಠದ ಆವಶ್ಯಕತೆ

ಮಾನ್ಯರೆ,

ಭರತಖಂಡದ ಪುಣ್ಯಕ್ಷೇತ್ರಗಳಲ್ಲಿ ಭುವನಪಾವನವಾದ ಗೋಕರ್ಣಕ್ಷೇತ್ರವು ಭೂಕೈಲಾಸವೆಂಬ ವಿಶೇಷ ಕೀರ್ತಿಗೆ ಪಾತ್ರವಾಗಿ ಕಂಗೊಳಿಸುತ್ತಿದೆ. ಗೋಕರ್ಣ ಕ್ಷೇತ್ರಕ್ಕೂ ವೀರಶೈವರ ಇತಿಹಾಸಕ್ಕೂ ನಿಕಟ ಸಂಬಂಧವಿದೆ. ಅಲ್ಲಿ ಅನೇಕ ವೀರಶೈವ ರಾಜರೂ, ಶಿವಯೋಗಿಗಳೂ ನೆಲೆಸಿ ನಮ್ಮ ಧರ್ಮದ ಇತಿಹಾಸವನ್ನು ಉಜ್ವಲಗೊಳಿಸಿ ವೀರಶೈವರ ಧವಲಕೀರ್ತಿಧ್ವಜವನ್ನು ಮೆರೆಸಿ ಹೋಗಿದ್ದಾರೆ. ಅಂತೆಯೇ ಪ್ರತಿವರ್ಷ ಅಲ್ಲಿಗೆ ಅನೇಕ ಜನ ವೀರಶೈವ ಯಾತ್ರಿಕರು ನಾಡಿನ ನಾನಾ ಭಾಗಗಳಿಂದ ಬರುತ್ತಾರೆ. ಆದರೆ ಇಂಥ ಪ್ರಸಿದ್ಧ ಶಿವಕ್ಷೇತ್ರದಲ್ಲಿ ವೀರಶೈವ ಯಾತ್ರಿಕರಿಗಾಗಿ ಯಾವ ಸೌಕರ್ಯ ಸೌಲಭ್ಯಗಳೂ ಇಲ್ಲದಿದ್ದುದು ಸೋಜಿಗವೇ ಸರಿ. ಇದರಿಂದ ಇಂಥ ಮಹತ್ವದ ಸ್ಥಳದಲ್ಲಿ ನಮ್ಮ ಅನೇಕ ಧಾರ್ಮಿಕ ಕಾರ್ಯಗಳು ನಿಂತುಹೋಗಿವೆ ಮಲ್ಲದೆ ನಮ್ಮ ಯಾತ್ರಿಕರು ಅಲ್ಲಿ ಅನಂತ ತೊಂದರೆಗಳಿಗೆ ಗುರಿಯಾಗಿ ಉದಾಸೀನರಾಗಿ ಬರಬೇಕಾಗುತ್ತದೆ.

ಈ ಪರಿಸ್ಥಿತಿಯನ್ನು ನೋಡಲಾರದೆ ಇದ್ದುದರಿಂದ ಸಟುವಾಗಿ ವೈರಾಗ್ಯಮೂರ್ತಿಗಳೂ ತಪೋನಿಧಿಗಳೂ ಆದ ಹುಬ್ಬಳ್ಳಿ ಹನ್ನೆರಡುಮಠದ ಶ್ರೀ ಮ ನಿ ಪ್ರ ಚರಮೂರ್ತಿ ಸ್ವಾಮಿಗಳವರು ಅತ್ಯಂತ ಪ್ರಯಾಸದಿಂದ ಅಲ್ಲಿ ಒಂದು ಎಕರೆ ಸ್ಥಳವನ್ನು ಸರಕಾರದಿಂದ ಪಡೆದಿದ್ದಾರೆ. ಈ ಸ್ಥಳದಲ್ಲಿ ವೀರಶೈವ ಯಾತ್ರಿಕರ ಅನುಕೂಲಕ್ಕಾಗಿಯೂ ಹಾಗೂ ವೀರಶೈವರ ಧಾರ್ಮಿಕ, ಸಾಮಾಜಿಕ ಕಾರ್ಯ ಕಲಾಪಗಳ ಕೇಂದ್ರಕ್ಕಾಗಿಯೂ "ವೀರಶೈವಮಠ"ವನ್ನು ಕಟ್ಟಬೇಕೆಂದು ಸಂಕಲ್ಪಮಾಡಿ ಅದಕ್ಕಾಗಿ ತಪ್ಪೋನಿರತರಾಗಿದ್ದಾರೆ. ಅವರ ಈ ಮಹತ್ಕಾರ್ಯದಲ್ಲಿ ಎಲ್ಲ ರೀತಿಯಿಂದ ನೆರವಾಗಿ ಈ ಧರ್ಮಕಾರ್ಯವನ್ನು ಪೂರ್ಣಮಾಡಲು "ಸಹಕಾರ ಮಂಡಲ" ವೆಂಬ ಸಂಸ್ಥೆಯು ಹುಬ್ಬಳ್ಳಿಯಲ್ಲಿ ಸ್ಥಾಪಿಸಲ್ಪಟ್ಟಿದೆ. ಈ ಮಂಡಲಕ್ಕೆ ಧರ್ಮಾಭಿಮಾನಿಗಳು ಸದಸ್ಯರಾಗಿ ತಮ್ಮ ಒಪ್ಪಿಗೆಯನ್ನು ತೀವ್ರ ತಿಳಿಸಬೇಕಾಗಿ ಕೋರಿಕೆ.

ಗುರುಸಿದ್ಧಸ್ವಾಮಿ ನರೇಂದ್ರಮಠ,
ಹುಬ್ಬಳ್ಳಿ ಮ್ಯುನ್ಸಿಪಲ್ ಕೌನ್ಸಿಲರ್,
ಮಂಡಲದ ಸಭೆಯ ಚಾಲಕರು.

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊ[ಬ್ಬರಿ]ಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು. [ಈ] ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು [ಪ್ರಸಿ]ದ್ಧ ಬ್ರಹ್ಮರ್ಷಿ ಆಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು. ವೀರ[ಶೈ]ವಮತದಲ್ಲಿ ಸದ್ಯಃ ದೊರೆಯುತ್ತಿರುವ ಗ್ರಂಥಗಳಲ್ಲೆಲ್ಲ ಇದು ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು. [ಈ] ಗ್ರಂಥವು ಈಗ್ಗೆ ಸುಮಾರು **೩ಸಾವಿರ** ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂ[ದ] ರಚಿಸಲ್ಪಟ್ಟಿರುವುದು. ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಅವ[ರ] ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ. ಈ ಕೊರತೆ[ಯ]ನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥ[ಶಾ]ಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ವವು ವಾಚಕರಿಗೆ ವೇದ್ಯವಾಗುವುದು. ವಾಚಕರ ಅನುಕೂಲಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೬೬೨ ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೨ ರೂಪಾಯಿ.**

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೭ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೭ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ–ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಆಗಮಪರಿಜ್ಞಾನ	೮ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿವಾಗಮಪ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು. ೨ನೆಯ ಆವೃತ್ತಿ)	೧। ರೂ.
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ.
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ.
ಶ್ರೀಕರಭಾಷ್ಯಂ (ಶಾಸ್ತ್ರಿ)	೧॥ ರೂ.
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧॥ ರೂ.
ವೀರಶೈವರತ್ನ (೫ನೆಯ ಆವೃತ್ತಿ, ೨೦ ಮಹತ್ವದ ಫೋಟೋಗಳಿರುವುವು)	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರಿಸಲ್ಪಟ್ಟದ್ದು)	೩ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ.
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ.
ವೀರಶೈವಸಿದ್ಧಾಂತಸುಧಾಕರ	೩ ರೂ.
ಶಿವಾದ್ವೈತಮಂಜರಿ [ಕನ್ನಡವ್ಯಾಖ್ಯಾನ ೧೩೪೪ ಪುಟ]	೮ ರೂ.
A brief life-sketch of Pandit Sri Kashinatha Shastriji (*English*)	**4 As**
The Philosophical Aspect of Virasaivism (*English*)	**8 As**
Speeches by Pandit Shri Kashinatha Shastriji (*English*)	**12 As**
लिंगधारणचंद्रिका (संस्कृत)	**३ रु**
वीरशैवरत्न (मराठी)	**१ रु**
महानारायणोपनिषत् (वीरशैवभाष्य-संस्कृत)	**१ रु**
सिद्धांतशिखामणि (मूल)	**८ आ**
नंदिकेश्वरकारिका (संस्कृत)	**२ आ**

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಚಕಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಸಕಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ. ೪ ಆಣೆ. ಪರಸ್ಥಳದವರಿಗೆ ೩ ರೂ. ವಿ. ಪಿ. ಖರ್ಚು ಸೇರಿ ೩ ರೂ. ೪ ಆಣೆ.

ಸಂಪುಟ ೧೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೪ನೇ ಮೇ ೧೯೪೫ [ಸಂಚಿಕೆ ೫೫

ಕೈ॥ ಕೇದಾರ ಜಗದ್ಗುರುಗಳವರ ಜೀವನ ಚರಿತ್ರ

ಶ್ರೀ ಹಿಮವತ್ಕೇದಾರಕ್ಷೇತ್ರವಿರಾಜಮಾನ ಶ್ರೀಜಗದ್ಗುರು ಏಕೋರಾಮಪೀಠಾಧೀಶ್ವರ ಶ್ರೀನೀಲಕಂಠಲಿಂಗ ಶಿವಾಚಾರ್ಯಮಹಾಸ್ವಾಮಿಗಳವರು ಕಳೆದ ತಿಂಗಳು 23 ನೆಯ ತಾರೀಖಿನ ದಿವಸ ಶಿವಾಧೀನರಾದರೆಂಬ ವಿಷಯವನ್ನು ತಿಳಿಸಲು ಅತ್ಯಂತ ವಿಷಾದವೆನಿಸುತ್ತದೆ. ಈ ಮಹನೀಯರು ಕರ್ನಾಟಕದೇಶದಲ್ಲಿರುವ ಧಾರವಾಡ ಜಿ॥ ಹಾವೇರಿ ತಾ॥ ಕಲ್ಲೇದೇವೂರು ಎಂಬ ಗ್ರಾಮದಲ್ಲಿರುವ ವೀರಮಾಹೇಶ್ವರ ವಂಶದಲ್ಲಿ 1889 ನೆಯ ಇಸವಿಯಲ್ಲಿ ಜನ್ಮವೆತ್ತಿದರು. ಇವರು ಮೂಲಾ ನಕ್ಷತ್ರದಲ್ಲಿ ಜನಿಸಿದ ಕಾರಣ ಮಾತಾಪಿತೃಗಳನ್ನು ಬಾಲ್ಯದಲ್ಲಿಯೇ ಕಳೆದುಕೊಂಡರು. ಮೂಲಾ ನಕ್ಷತ್ರದಲ್ಲಿ ಹುಟ್ಟಿದ ಮಗುವು ಮನೆಯಲ್ಲಿದ್ದರೆ ಮನೆಗೆ ಕೇಡುಂಟಾಗುವುದೆಂದು ಭಾವಿಸಿ ತಂದೆತಾಯಿಗಳಿಲ್ಲದ ಈ ಬಾಲಕನಿಗೆ ಮನೆಯವರೇ ವಿಷಪ್ರಯೋಗವನ್ನು ಮಾಡಿದರು. ಆದರೂ ಈ ಬಾಲಕನು ಈಶ್ವರಾನುಗ್ರಹದಿಂದ ರಕ್ಷಿತನಾಗಿ ಇನ್ನು ತಮ್ಮ ಊರಲ್ಲಿರಕೂಡದೆಂದು ಭಾವಿಸಿ ದೇಶಾಂತರಪ್ರಯಾಣಮಾಡಿದನು. ವಿಜಾಪುರ ಡಿಸ್ಟ್ರಿಕ್ಟ್ ಬಾಗಲಕೋಟೆಯಲ್ಲಿ ಕೆಲವು ದಿವಸಗಳವರೆಗಿದ್ದು, ಆಮೇಲೆ ಸೊಲ್ಲಾಪುರ ಡಿಸ್ಟ್ರಿಕ್ಟ್ ಬಾರ್ಸಿಗೆ ಬಂದು ಅಲ್ಲಿ ಶ್ರೀಮಂತ ಕಥಲೆಯವರು ಮನೆಯಲ್ಲಿ ವಾಸಿಸುತ್ತಿದ್ದನು. ಆಗ್ಗೆ ಈ ಬಾಲಕನಿಗೆ 10 ವರ್ಷವಾಗಿತ್ತು. ಅತ್ಯಂತ ಸುಂದರನೂ ಮಹಾ ಕುಶಲನೂ ಆದ ಈ ಬಾಲಕನನ್ನು ನೋಡಿ ಕಥಲೆ ಶಂಭುಅಪ್ಪನವರು ವಿಶೇಷ ಪ್ರೀತಿಸುತ್ತಿದ್ದರು. ಅಷ್ಟರಲ್ಲಿಯೇ ಅವರು ಕಾಶೀಕ್ಷೇತ್ರ ಯಾತ್ರೆಗೆ ಹೊರಡಲು ಸಿದ್ಧರಾದರು. ಆಗ್ಗೆ ಈ ಬಾಲಕನನ್ನು ಸಹ ತಮ್ಮ ಸಂಗಡ ಕರೆದುಕೊಂಡು ಹೋದರು. ಆ ಸಮಯದಲ್ಲಿ ಕಾಶೀ ಜಂಗಮವಾಡೀ ಮಠಕ್ಕೆ ಶ್ರೀ ಜಗದ್ಗುರು ರಾಜೇಶ್ವರಶಿವಾಚಾರ್ಯಮಹಾಸ್ವಾಮಿಯವರು ಅಧಿಪತಿಗಳಾಗಿದ್ದರು. ಜಗದ್ಗುರುಗಳವರು ಈ ಹುಡುಗನನ್ನು ನೋಡಿ ತಮ್ಮ ಸನ್ನಿಧಿಯಲ್ಲೇ ಇಟ್ಟುಕೊಂಡು ದೀಕ್ಷೋಪನಯನಾದಿಗಳನ್ನು ಮಾಡಿಸಿ, ಸಂಸ್ಕೃತ ಶಿಕ್ಷಣವನ್ನು ಕೊಡಿಸಿದರಲ್ಲದೆ, ಇಂಗ್ಲೀಷು ವಿದ್ಯಾಭ್ಯಾಸವನ್ನು ಸಹ ಮಾಡಿಸಿದರು. ಆ ಸಮಯದಲ್ಲಿಯೇ ಆಯುರ್ವೇದ ಶಿಕ್ಷಣವನ್ನು ಸಹ ಕೊಡಿಸಿದರು. ಇವರು ಅಲ್ಲಿರುವಾಗಲೇ ಪೂರ್ವದ ಶ್ರೀಗಳು ಗತಿಸಿ ಶ್ರೀಜಗದ್ಗುರು ಶಿವಲಿಂಗಶಿವಾಚಾರ್ಯಮಹಾಸ್ವಾಮಿಗಳವರು ಕಾಶೀ ಪೀಠಕ್ಕೆ ಅಧಿಪತಿಗಳಾದರು. ಅಷ್ಟರಲ್ಲಿ ಇವರಿಗೆ ತಾರುಣ್ಯವು ಪ್ರಾಪ್ತವಾಗಿತ್ತು. ಕಾಶೀ ಕ್ಷೇತ್ರದಲ್ಲಿ ಇವರಿಗೆ ಗಂಗಾಧರಶಾಸ್ತ್ರಿಗಳೆಂದು ಕರೆಯುತ್ತಿದ್ದರು. ಕಾಶೀ ಪೀಠದ ಜಗದ್ಗುರುಗಳು ಇವರಿಗೆ ಕೆಲವು ದಿವಸ ಕೋಶಾಧಿಕಾರ ಪದವಿಯನ್ನು ಕೊಟ್ಟಿದ್ದರು. ಸ್ವಭಾವತಃ ಇವರು ವೈರಾಗ್ಯಶೀಲರಾದುದರಿಂದ ಆ ಪದವಿಗೆ ರಾಜೀನಾಮೆಯನ್ನಿತ್ತು ಕಾಶಿಯಿಂದ ಅಲಹಾಬಾದಿಗೆ ಪ್ರಯಾಣಮಾಡಿ ಅಲ್ಲಿ ಮ್ಯಾಟ್ರಿಕ್‌ವರೆಗೆ ಇಂಗ್ಲೀಷ್ ಅಭ್ಯಾಸವನ್ನು ಮಾಡಿದರು. ಬಳಿಕ ಅಲ್ಲಿಂದ ಹರದ್ವಾರ ಹೃಷೀಕೇಶ ಮೊದಲಾದ ಕ್ಷೇತ್ರಗಳಲ್ಲಿ ವಾಸಮಾಡಹತ್ತಿದರು. ಹೃಷೀಕೇಶದ ಹತ್ತಿರ ಒಂದು ಉನ್ನತ ಪರ್ವತದ ಮೇಲಿರುವ ನೀಲಕಂಠೇಶ್ವರ ದೇವಸ್ಥಾನದಲ್ಲಿ ಒಂದು ದಿವಸ ಇವರು ಮಲಗಿರಲು, ಮಹಾದೇವನು ಇವರ ಸ್ವಪ್ನದಲ್ಲಿ ಬಂದು "ನಾನು ಹಿಮಾಲಯದಲ್ಲಿ ವಾಸಿಸುತ್ತಿದ್ದೇನೆ. ನನ್ನ ಪೀಠವು ಅಲ್ಲಿ ಇರುವದು ನೀನು ಅಲ್ಲಿಗೆ ಹೋಗಿ ಆ ಪೀಠದ ಸೇವೆಯನ್ನು ಮಾಡಿ ಧನ್ಯನಾಗು" ಎಂದು ಆಶೀರ್ವದಿಸಿ ಒಂದು ಪುಷ್ಪಮಾಲಿಕೆಯನ್ನು ಕಂಠದಲ್ಲಿ ಹಾಕಿದಂತಾಯಿತು. ಇವರು ಕೂಡಲೆ ಎಚ್ಚತ್ತು ಅಲ್ಲಿಂದ ಕೇದಾರ ಕ್ಷೇತ್ರಕ್ಕೆ ಪ್ರಯಾಣಮಾಡಿ, ಶ್ರೀ ಕೇದಾರೇಶ್ವರನ ದರ್ಶನವನ್ನು ಮಾಡಿಕೊಂಡು ಅಲ್ಲಿಂದ ವೀರಶೈವ ಮತಾಚಾರ್ಯರ ಪೀಠವಾದ ಓಖೀಮಠಕ್ಕೆ ಬಂದರು. ಆಗ್ಗೆ ಆ ಪೀಠಕ್ಕೆ ಶ್ರೀ ಜಗದ್ಗುರು ವಿಶ್ವಲಿಂಗಶಿವಾಚಾರ್ಯರೆಂಬವರು ಅಧಿಪತಿಗಳಾಗಿದ್ದರು. ಅವರು ದಿವ್ಯತೇಜಃಪುಂಜಭರಿತರಾದ ಇವರನ್ನು ನೋಡಿ ಇವರು ತಮ್ಮ ಶಿಷ್ಯಕೋಟಿಯಲ್ಲಿರಲು ಅರ್ಹರಿರುವರೆಂಬುದನ್ನು ಭಾವಿಸಿ ಇವರಿಗೆ ನೀಲಕಂಠಲಿಂಗರೆಂಬ ಅಭಿಧಾನವನ್ನಿಟ್ಟು 1911 ನೆಯ ಇಸವಿಯಲ್ಲಿ ತಮ್ಮ ಶಿಷ್ಯರನ್ನಾಗಿಮಾಡಿಕೊಂಡರು. ಶ್ರೀನೀಲಕಂಠಲಿಂಗರು ಗುರುಗಳ ಸೇವೆಯನ್ನು ಅತ್ಯಂತ ನಿರ್ಮಲಮನಸ್ಸಿನಿಂದ ಮಾಡುತ್ತ ಬಂದದ್ದರಿಂದ ಅವರ ಪ್ರೀತಿಯು ಇವರ ಮೇಲೆ ಹೆಚ್ಚುತ್ತಾ ಹೋಯಿತು. ಶ್ರೀ ವಿಶ್ವಲಿಂಗಶಿವಾಚಾರ್ಯರು ಬಹು ಕೋಮಲ ಹೃದಯದವರಾಗಿದ್ದರು. ಅವರ ಪೀಠಾರೋಹಣ ಕಾಲದಲ್ಲಿ ಆಗಿನ ಮಠದ ಕಾರಭಾರಿಗಳು ಮಠಕ್ಕೆ ಇಬ್ಬರನ್ನು ನಿಲ್ಲಿಸಿ ವ್ಯಾಜ್ಯವನ್ನು ಹಚ್ಚಿಬಿಟ್ಟದ್ದರಿಂದ ಮಠಕ್ಕೆ ವಿಶೇಷ ಸಾಲವುಂಟಾಯಿತು. ಟೆಹರಿ ಸರ್ಕಾರದವರಲ್ಲಿ ಸಹ ಸಾಲವನ್ನು ತೆಗೆದರು. ಈರೀತಿ ಸಾಲವು ವಿಶೇಷವಾಗಿ ಬೆಳೆಯಲು ಜಗದ್ಗುರುಗಳವರು ಚಿಂತಾಕ್ರಾಂತರಾದರು. ಆ ಸಮಯದಲ್ಲಿ ಶ್ರೀ ನೀಲಕಂಠಲಿಂಗರು ಮತ್ತು ಅವರ ಸ್ನೇಹಿತರಾದ ಶಾಮಸಿಂಹರು ಜಗದ್ಗುರುಗಳಿಗೆ ಉತ್ತಮವಾದ ಸಲಹೆಗಳನ್ನು ಕೊಟ್ಟು ಬೇರೊಬ್ಬರಿಗೆ ಮಠದ ಕೋಶಾಧ್ಯಕ್ಷತೆಯನ್ನು ಕೊಡಿಸಿದರು. ಅಲ್ಲದೆ ಶ್ರೀ ನೀಲಕಂಠಲಿಂಗರು ದಕ್ಷಿಣದೇಶಕ್ಕೆ ಹೋಗಿ ಶಿಷ್ಯರ ಮೇಲೆ ಸಂಚಾರಮಾಡಿ ಋಣಪರಿಹಾರ ಮಾಡೋಣವೆಂದು ಗುರುಗಳಿಗೆ ಧೈರ್ಯವನ್ನು ಕೊಟ್ಟರು. 1919 ನೆಯ ಇಸವಿಯಲ್ಲಿ ವೇ॥ ಪಂ॥ ಶ್ರೀಕಾಶೀನಾಥಶಾಸ್ತ್ರಿಗಳವರು, ಧಾರವಾಡ ಜಿ॥ ಕುಂದಗೋಳ ನಗರದಲ್ಲಿ, ಅಖಿಲ ಭಾರತೀಯ ಪಟ್ಟಚರಾಧಿಕಾರಿಗಳ ಸಮ್ಮೇಲನವನ್ನು ನೆರವೇರಿಸಿದರು. ಆ ಸಮಯದಲ್ಲಿಯೇ ಬೀರೂರಲ್ಲಿ ವೀರಶೈವ ಮಹಾಸಭೆಯು ಕೂಡುವದಿತ್ತು. ಸದರಿ ಸಭೆಗೆ ಶ್ರೀ ನೀಲಕಂಠಲಿಂಗರು ತಮ್ಮ ಗುರುಗಳನ್ನು ಕೇದಾರದಿಂದ ಕರೆದುಕೊಂಡು ಬಂದರು. ಪಂ॥ ಶ್ರೀಕಾಶೀನಾಥಶಾಸ್ತ್ರಿಗಳವರು ಕೇದಾರ ಜಗದ್ಗುರುಗಳವರನ್ನು ಕುಂದಗೋಳ ನಗರದಲ್ಲಿ ಮಹಾ ವೈಭವದಿಂದ ಮೆರೆಯಿಸಿ, ಪಟ್ಟಚರಾಧಿಕಾರಿಗಳ ಸಮ್ಮೇಲನವನ್ನು ಶ್ರೀ ಜಗದ್ಗುರುಗಳವರ ಸನ್ನಿಧಿಯಲ್ಲಿಯೇ ನಡೆಯಿಸಿದರು. ಇದೇ ಗುರುವರ್ಗದ ಮೊದಲನೆಯ ಜಯಭೇರಿಯು. ಬಳಿಕ ಶ್ರೀ ನೀಲಕಂಠಲಿಂಗರು ಮತ್ತು ಶ್ರೀಕಾಶೀನಾಥಶಾಸ್ತ್ರಿಗಳವರು ಕೇದಾರ ಜಗದ್ಗುರುಗಳವರಿಗೆ ವಿಶೇಷ ಧೈರ್ಯವನ್ನು ಕೊಟ್ಟು ಬೀರೂರಿನಲ್ಲಿ ನೆರವೇರಿದ ವೀರಶೈವ ಮಹಾಸಭೆಗೆ ಕರೆದುಕೊಂಡು ಬಂದರು. ಅಷ್ಟರಲ್ಲಿ ಅಲ್ಲಿಗೆ ಶ್ರೀ ಜಗದ್ಗುರು ರಂಭಾಪುರೀ ವೀರಸಿಂಹಾಸನಾಧೀಶ್ವರ ಪಂಚಾಕ್ಷರಶಿವಾಚಾರ್ಯಮಹಾಸ್ವಾಮಿಗಳವರೂ ಮತ್ತು ಉಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯಮಹಾಸ್ವಾಮಿಗಳವರೂ ಆಗಮಿಸಿದ್ದರು.

ಈ ಉಭಯಜಗದ್ಗುರುಗಳವರು ಕೇದಾರಜಗದ್ಗುರುಗಳನ್ನು ಅಸಾಧಾರಣ ಪ್ರೇಮದೊಡನೆ ಬರಮಾಡಿಕೊಂಡು ಸತ್ಕರಿಸಿದರು. ಉಜ್ಜಯಿನೀಜಗದ್ಗುರುಗಳವರು ಕೇದಾರಪೀಠದ ಋಣಪರಿಹಾರಕ್ಕಾಗಿ ತಮ್ಮ ಪೀಠದ ಆನೆ, ಒಂಟೆ, ಕುದುರೆ ಇತರ ಶಿಬ್ಬಂದಿ ಜನಗಳನ್ನು ಸಹ ಕೊಟ್ಟು ಕೇದಾರಪೀಠಾಧಿಪತಿಗಳ ಸಂಚಾರವು ಬಳ್ಳಾರಿ ಪ್ರಾಂತದಲ್ಲಿ ಸುಲಲಿತವಾಗಿ ಸಾಗುವಂತೆ ಏರ್ಪಡಿಸಿದರು. ಶ್ರೀನೀಲಕಂಠಲಿಂಗರು ಯಾವಾಗಲೂ ಅವರ ಸಂಗಡವೇ ಇರುತ್ತಿದ್ದರು. ಬಳ್ಳಾರಿ ಪ್ರಾಂತದ ಉಷ್ಣ ಹವೆಯು ಕೇವಲ ಶೀತವಲಯದಲ್ಲಿದ್ದ ಕೇದಾರ ಜಗದ್ಗುರುಗಳವರಿಗೆ ಸಹಿಸದೆಹೋದುದರಿಂದ ಉಜ್ಜಯಿನಿ ಪೀಠಕ್ಕಾಗಮಿಸಿ ಅಲ್ಲಿಯೇ ಶಿವಾಧೀನರಾದರು. ಶ್ರೀ ನೀಲಕಂಠಲಿಂಗರು ಗುರುವಿಯೋಗದುಃಖದಲ್ಲಿ ಮುಳುಗಿಹೋದರು. ಆ ಸಮಯದಲ್ಲಿ ಉಜ್ಜಯಿನೀ ಜಗದ್ಗುರುಗಳು ಅವರಿಗೆ ವಿಶೇಷ ಧೈರ್ಯವನ್ನು ಹೇಳಿ ದ್ರವ್ಯವನ್ನುಕೊಟ್ಟು ಅವರನ್ನು ಹಿಮಾಲಯಕ್ಕೆ ಕಳುಹಿಸಿಕೊಟ್ಟರು. ಶ್ರೀನೀಲಕಂಠಲಿಂಗರು ಕೇದಾರಪೀಠಕ್ಕೆ ಇನಾಮು ಇರುವ 143 ಹಳ್ಳಿಗಳ ಜನರಿಗೆ ಬಹಳ ಬೇಕಾಗಿದ್ದವರಾದ್ದರಿಂದ ಆ ಪ್ರಜೆಗಳೆಲ್ಲರೂ ಇವರೇ ನಮ್ಮ ಪೀಠಕ್ಕೆ ಗುರುಗಳಾಗಬೇಕೆಂದು ಇವರನ್ನೇ ಆರಿಸಿ ಗುರುಪೀಠಾರೋಹಣ ಮಾಡಿಸಿದರು. ಶ್ರೀಜಗದ್ಗುರು ನೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರು 1921 ರಲ್ಲಿ ಕೇದಾರಪೀಠವನ್ನಲಂಕರಿಸಿದರು. ಪೀಠಕ್ಕೆ ಋಣಬಾಧೆಯು ಹಾಗೆಯೇ ಇತ್ತು. ಆ ಋಣಬಾಧೆಯನ್ನು ಕೂಡಲೇ ಪರಿಹರಿಸಬೇಕೆಂಬ ಉದ್ದೇಶದಿಂದ ಈ ಮಹನೀಯರು ಶ್ರೀಕೇದಾರಕ್ಷೇತ್ರದಿಂದ ಹೊರಟು ಕಾಶೀಕ್ಷೇತ್ರಕ್ಕೆ ಬಂದು ಅಲ್ಲಿ ಕಾಶೀಪೀಠಾಧೀಶ್ವರರೊಡನೆ ಆಲೋಚನಾದಿಗಳನ್ನು ಮಾಡಿಕೊಂಡು ಅಲ್ಲಿಂದ ದಕ್ಷಿಣದೇಶಕ್ಕೆ ಬಿಜಯಂಗೈಸಿದರು.

ಪ್ರತ್ಯಕ್ಷ ಪರಮೇಶ್ವರನ ಅವತಾರಿಗಳಾಗಿದ್ದ ಕೈ॥ ಉಜ್ಜಯಿನೀ ಸಿಂಹಾಸನಾಧೀಶ್ವರ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯಮಹಾಸ್ವಾಮಿಗಳವರು ನೂತನ ಕೇದಾರ ಪೀಠಾಧಿಪತಿಗಳನ್ನು ತಮ್ಮಲ್ಲಿಗೆ ಬರಮಾಡಿಕೊಂಡು ಅವರ ಸಂಚಾರಕ್ಕಾಗಿ ತಮ್ಮ ಸಂಸ್ಥಾನದ ಸಕಲ

[೪ನೆಯ ಪುಟವನ್ನು ನೋಡಿ]

ಪಂಚಾಚಾರ್ಯಪ್ರಭಾ

೧೯೪೫ನೆಯ ಮೇ ತಾ|| ೧೪ನೇ ಸೋಮವಾರ

ಶ್ರೀಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಶಿವೈಕ್ಯರಾದರು

ಶ್ರೀಹಿಮವತ್ಕೇದಾರಕ್ಷೇತ್ರದಲ್ಲಿ [illegible] ರುವ ವೀರಶೈವಮಠಪರಂಪರೆ [illegible] ಶ್ರೀಜಗದ್ಗುರು ಏಕೋರಾಮಾರಾಧ್ಯ [illegible] ದ [illegible] ಅಧಿಪತಿಗಳಾಗಿದ್ದ ಶ್ರೀಜಗದ್ಗುರು ನೀಲಕಂಠಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರು ತಾ|| ೨೩-೪-೪೫ ನೆಯ ಸೋಮವಾರ ದಿವಸ ಓಖೀಮಠದಲ್ಲಿ ಶಿವಾಧೀನರಾದರೆಂಬ ವಿಷಯವನ್ನು ತಿಳಿಸಲು ಅತ್ಯಂತ ವಿಷಾದವೆನಿಸುತ್ತದೆ. ಇವರು ಸಂಸ್ಕೃತ ಇಂಗ್ಲಿಷ್, ಹಿಂದಿ, ಮರಾಠಿ ಮೊದಲಾದ ಭಾಷೆಗಳನ್ನು ಚನ್ನಾಗಿ [illegible] ಬಲ್ಲ [illegible] ಬುದ್ಧಿಶಾಲಿಗಳೆನಿಸಿಕೊಂಡಿದ್ದರು. ಇವರು ಚಿಕ್ಕಂದಿನಲ್ಲಿಯೇ ಹಿಮಾಲಯಪ್ರಾಂತಕ್ಕೆ ಹೋಗಿ ಆ ಪೀಠದ ಪೂರ್ವದ ಗುರುಗಳಿಗೆ ಶಿಷ್ಯರಾಗಿ ಅವರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿದ್ದರು. ಪೂರ್ವದ ಗುರುಗಳು ತಮ್ಮ ಅವಸಾನಕಾಲದಲ್ಲಿ ಆ ಪೀಠದ ಉತ್ತರಾಧಿಕಾರವನ್ನು ವಿಲ್ಲುಮೂಲಕ ಇವರಿಗೆ ವಹಿಸಿದರು. ಅದರಂತೆ 19[illegible]1ರಲ್ಲಿ ಇವರು ಆ ಪೀಠವನ್ನು ಆರೋಹಣಮಾಡಿದರು.

ಇವರು ಅಧಿಕಾರವನ್ನು ವಹಿಸಿಕೊಂಡ ಸಮಯದಲ್ಲಿ ಆ ಪೀಠಕ್ಕೆ ಲಕ್ಷಾಂತರ ರೂಪಾಯಿಗಳ ಸಾಲವಿತ್ತು. ಆದರೂ ಎದೆಗುಂದದ ದಕ್ಷಿಣದೇಶಕ್ಕಾಗಮಿಸಿ ಶ್ರೀ| ಉಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ಆಶ್ರಯವನ್ನು ಪಡೆದು, ಬಳ್ಳಾರಿ ಪ್ರಾಂತದಲ್ಲಿಯೂ ಮತ್ತು ನಿಜಾಂ ಪ್ರಾಂತದಲ್ಲಿಯೂ 3-4 ವರ್ಷಗಳವರೆಗೆ ಸಂಚರಿಸಿ, ಅಪಾರ ದ್ರವ್ಯವನ್ನು ಸಂಗ್ರಹಿಸಿ ಆ ಪೀಠದ ಋಣಬಾಧೆಯನ್ನು ದೂರಮಾಡಿದರು. ಉಜ್ಜಯಿನೀ ಜಗದ್ಗುರುಗಳವರು ಕೇದಾರಪೀಠದ ಉದ್ಧಾರಕ್ಕಾಗಿ ತಮ್ಮ ಪೀಠದ ಸರ್ವಸ್ವವನ್ನೆಲ್ಲಾ ಸೂರೆಮಾಡಿದರು. ಕೇದಾರ ಪೀಠವನ್ನು ಉದ್ಧರಿಸಿ ಆ ಮಹಾಪೀಠದ ಪ್ರಕಾಶವನ್ನು ಸರ್ವತ್ರ ಬೆಳಗಿಸಿದ ಕೀರ್ತಿಯು ಆ ಪೂಜ್ಯಪಾದರಿಗೆ ಸಲುವದಂತೆ [illegible] [illegible] [illegible] ವಾಗಿದೆ.

ಆ [illegible] ಪ್ರಭಾವದಿಂದಲೂ ತಮ್ಮ [illegible] ಪ್ರತಿಭೆಯಿಂದಲೂ ಶ್ರೀ ನೀಲಕಂಠಲಿಂಗ [illegible] ಮಹಾಸ್ವಾಮಿಗಳವರು ಕೇದಾರ ಪೀಠ [illegible] ವನ್ನು ಅತ್ಯುಜ್ವಲಗೊಳಿಸಿದರು. ಇವರು ಅತ್ಯಂತ ವಿಶ್ವಾಸಪಾತ್ರರೂ, ಉದಾರಿಗಳೂ ಆಗಿದ್ದುದರಿಂದ ತಮ್ಮ ಕಾಲದಲ್ಲಿ ವಿದ್ಯಾ [illegible] ಧರ್ಮಪ್ರಚಾರಕ್ಕಾಗಿಯೂ ಲಕ್ಷಾಂತರ [illegible] ದಾನವನ್ನು ಮಾಡಿ [illegible] ಹಿಂದುಳಿದಿದ್ದ ಹಿಮಾ[illegible] ಇವರ ಉದಾರಾಶ್ರಯ [illegible] ಮೆರೆಯುತ್ತಿರು[illegible] ಹಿಂದಿ, ಸಂಸ್ಕೃತ, [illegible] ಜನ ಸಂಸ್ಕೃತ [illegible] ಬಿ. ಎ. ಎಂ. ಎ., [illegible] ದುವವು. ಇಂತಹ [illegible] ಆ ಪೀಠದ [illegible] ಮುಂದೆ ಆ [illegible] ಅಧಿಕಾರಿಗಳು [illegible] ಅನುಗ್ರಹಿಸ[illegible] ತತ್ವಕ್ಕೆ ಶಾಂತಿಯನ್ನೀಯ[illegible] ಜನ್ನಿಯಮ[illegible]ವನ್ನು ವೃದ್ಧಿಸುತ್ತೇವೆ.

ಯುದ್ಧವಾರ್ತೆ.

ಚಕ್ರವರ್ತಿಗಳ ಸಂದೇಶ

ಸಾರ್ವಭೌಮರು ಪಶ್ಚಿಮ ಯೂರೋಪಿನಲ್ಲಿ ಮಿತ್ರಸೇನೆಗಳ ಮಹಾದಂಡನಾಯಕರಾದ ಜ|| ಐಸನ್ ಹೋವರ್ ಸೈನ್ಯಗಳಿಗೆ ಅಭಿನಂದನಾಪೂರ್ವಕವಾದ ಸಂದೇಶವನ್ನು ಈರೀತಿ ಕಳುಹಿಸಿದ್ದಾರೆ. ಪಶ್ಚಿಮದಲ್ಲಿ ಜರ್ಮನ್ ಸೇನೆಗಳನ್ನು ಸದೆಬಡಿದು, ನಾಜಿಗಳಿಂದ ತುಳಿಯಲ್ಪಟ್ಟಿರುವ ಜನರಿಗೆ ಮುಕ್ತಿಕಾಣಿಸಲೋಸುಗ ೧೧ ತಿಂಗಳ ಹಿಂದೆ ಹೊರಟ ಮಿತ್ರ ಸೇನೆಯೊಡನೆ ಜ|| ಐಸೆನ್ ಹೋವರ್‌ರವರು ಇಂಗ್ಲಿಷ್ ಕಡಲ್ಗಾಲುವೆಯನ್ನು ದಾಟಿದ ಅಂಶವನ್ನು ದೊರೆಗಳು ನೆನೆದು, ಒಂದು ವರ್ಷಕಾಲ ಉಗ್ರವಾಗಿ ಹೋರಾಡಿದ ಮೇಲೆ ಈ ಸೇನೆ ತನ್ನ ಕಾರ್ಯವನ್ನು ಸಾಧಿಸಿತು. ಇತಿಹಾಸದಲ್ಲಿ ಇಂತಹ ವಿಜಯ ಸಾಧನೆಯ ಉದಾಹರಣೆ ಮತ್ತಾವುದೂ ಇಲ್ಲ ' ಎಂದು ತಿಳಿಸಿದ್ದಾರೆ.

ಚರ್ಚಿಲ್ಲರ ಅಖಂಡ ಧೈರ್ಯ

೧೯೪೦ ನೇ ವರ್ಷದ ಮೇ ತಿಂಗಳಲ್ಲಿ ಇಂಗ್ಲೆಂಡ್ ದೇಶವು ಎಲ್ಲೆಡೆಯಲ್ಲೂ ಸೋತು ಜರ್ಮನ್ ದಂಡಯಾತ್ರೆಯ ಭಯದ ಕಗ್ಗತ್ತಲೆಯಿಂದ ಆವರಿಸಲ್ಪಟ್ಟಾಗ ಮಹಾ ಪ್ರಧಾನಾಧಿಕಾರವನ್ನು ಸ್ವೀಕರಿಸಿದ ಧೀರ ಚರ್ಚಿಲ್ ತಮ್ಮ ರಾಷ್ಟ್ರಕ್ಕೆ ಒದಗಿದ್ದ ವಿಪತ್ತನ್ನು ಮುಚ್ಚುಮರೆಯಿಲ್ಲದೆ ಜನಸಾಮಾನ್ಯಕ್ಕೆ ತಿಳಿಸಿ ಅವರಿಂದ ದೇಶರಕ್ಷಣೆಗಾಗಿ ತಾನು ನಿರೀಕ್ಷಿಸಿದ್ದ ತ್ಯಾಗವನ್ನು ಯಾಚಿಸಿದ ಮಹಾಶೂರ. ಕಷ್ಟಸಹಿಷ್ಣುತೆ, ಕಹಿಯಾದರೆ ಕಹಿ, ಸಿಹಿಯಾದರೆ ಸಿಹಿ, ಎಂದು ಬಿಚ್ಚಿ ಹೇಳುವ ಸರಳತೆಯೇ ಆತನ ಶುದ್ಧ ಮನೋಭಾವ. ಆತನಿಗೆ ಇಂಗ್ಲೆಂಡಿನ ಸಂಪೂರ್ಣ ಸಹಕಾರ ದೊರೆಯಿತು. ಇಂಗ್ಲೆಂಡಿಗೆ ಜರ್ಮನ್ ದಂಡಯಾತ್ರೆಯ ಭಯ ೧೯೪೦ರ ಅಂತ್ಯದಲ್ಲಿಯೇ ದೂರವಾಯಿತು. ಫ್ರಾನ್ಸನ್ನು ಜಯಿಸಿದ ಹಿಟ್ಲರನು ಪೂರ್ವದ ಕಡೆ ತನ್ನ ದೃಷ್ಟಿಯನ್ನು ತಿರುಗಿಸಿದ. ಚರ್ಚಿಲ್ ಇತ್ತಕಡೆ ಅಮೇರಿಕದ ಸಹಾಯ ಪಡೆಯಲು ತನ್ನ ಚಾತುರ್ಯವನ್ನೆಲ್ಲಾ ಉಪಯೋಗಿಸಿ ಕೊನೆಗೆ ಜಯಭೇರಿ ಹೊಡೆದನು. ಅಮೇರಿಕದ "ಲೆಂಡ್-ಲೀಸ್" ಆಚರಣೆಗೆ ಬಂದುದೇ ಅಲ್ಲದೆ ಜಪಾನೀ "ಪರ್ಲ್‌ಹಾರ್ಬರ್" ಘಟನೆಯಾದ ನಂತರ ಅಮೇರಿಕವು ಯುದ್ಧ ಘೋಷಿಸಿತು. ಈ ಸಂಗ್ರಾಮ ಪ್ರಾರಂಭವಾದ ಮೇಲೆ, ಚರ್ಚಿಲರು, ರೂಸ್‌ವೆಲ್ಟರನ್ನು ಐದುಸಾರಿಯೂ ರಷ್ಯದ ಸರ್ವಾಧಿಕಾರಿ ಸ್ಟಾಲಿನರನ್ನು ಮೂರುಸಾರಿಯೂ ಕಂಡು ಮಾತನಾಡಿದರು. ಇಂಗ್ಲೆಂಡಿನ ಪ್ರತಿವ್ಯಕ್ತಿಯೂ ಚರ್ಚಿಲ್ಲರಿಗೆ ಚಿರಋಣಿ. ನಾಜೀ ಕ್ರೌರ್ಯಕ್ಕೆ ತುತ್ತಾಗುತ್ತಿದ್ದ ಬ್ರಿಟನ್ನನ್ನು ರಕ್ಷಿಸಿದ ಮಹಾಶೂರನೀತನ.

ಸ್ಟಾಲಿನ್ನರ ಸಂದೇಶ

ರಷ್ಯದ ರಾಜಧಾನಿಯಾದ ಮಾಸ್ಕೋ ನಗರದಲ್ಲಿ ವಿಜಯ ಸೂಚನಾರ್ಥವಾಗಿ ೨೧೨ ಫಿರಂಗಿಗಳು ೩೦ ಸಾರಿ ಭೋರ್ಗರೆದವು. ದಂಡನಾಯಕರಾದ ಸ್ಟಾಲಿನ್ನನು ಜನಸ್ತೋಮಕ್ಕೆ ವಿಜಯ ಸಂದೇಶವನ್ನು ಈರೀತಿ ಸಾರಿದನು —"ಜರ್ಮನರು ಶರಣೆಂದರು. ಇತರ ಮಿತ್ರ ರಾಷ್ಟ್ರಗಳ ಸೈನಿಕರು ನಮ್ಮ ಕೆಂಪುಸೇನೆಯೊಂದಿಗೆ ಕೈಗೂಡಿಸಿ ನಾಜಿ ಜರ್ಮನಿಯನ್ನು ಶರಣು ಹೊಡೆಯುವಂತೆ ಮಾಡಿದರು. ಇಂದು ಜರ್ಮನಿ ಜರ್ಝರಿತವಾಗಿದೆ. ಸೋವಿಯಟ್ ರಷ್ಯವು ವಿಜಯ ಶಿಖರದಲ್ಲಿ ನಿಂತು ಆನಂದ ಪಡುತ್ತಿದೆ. ಹಿಂದೊಮ್ಮೆ ಹಿಟ್ಲರನು ರಷ್ಯವನ್ನು ಚಿಕ್ಕಿ ಹಾಕುವೆನೆಂಬುದಾಗಿ ಘಂಟಾಘೋಷವಾಗಿ ಗರ್ಜಿಸಿದ್ದನು. ಇಂದು ಅದಕ್ಕೆ ವಿರುದ್ಧ ಪರಿಸ್ಥಿತಿ ಬಂದಿದೆ. ಆದರೆ ರಷ್ಯವು ಜರ್ಮನಿಯನ್ನು ನಾಶ ಮಾಡಬೇಕೆಂದು ಎಂದೂ ಬಯಸಲಿಲ್ಲ '

ಸ್ಟಾಲಿನ್ನನ ಅದ್ಭುತ ಸಾಹಸ

ರಷ್ಯದ ಸರ್ವಾಧಿಕಾರಿ ಸ್ಟಾಲಿನ್ ಮಿತಭಾಷಿಯಾದರೂ ಕಾರ್ಯವೀರ. ರಷ್ಯದ ಮುಖ್ಯ ನಗರಗಳೆಲ್ಲಾ ಜರ್ಮನರ ಕೈಸೇರಿ ಇಂಗ್ಲೆಂಡ್ ಅಮೇರಿಕಾದಿಂದ ಯಾವ ವಿಧವಾದ ಸಹಾಯವೂ ಬರದೆ ಅಡಚಣೆಯಾಗಿದ್ದಾಗ ತನ್ನ ರಾಷ್ಟ್ರದ ಸ್ವಶಕ್ತಿಯಿಂದಲೇ ಕಾದಾಡಿ ಅದುವರೆಗೂ ಅಜೇಯವೆನಿಸಿದ್ದ ನಾಜೀ ಸೇನೆಯನ್ನು ಮೊದಲು ಬಾರಿಗೆ ಸ್ಟಾಲಿನ್‌ಗ್ರಾಡ್ ಬಳಿ ಸೋಲಿಸಿದ ಮಹಾಶೂರ. ರಷ್ಯಾ ಜರ್ಮನಿಯ ಸ್ನೇಹದ ಕೌಲು ೧೯೪೧ ನೇ ಜನವರಿಯಲ್ಲಿ ರುಜುವಾತಾಯಿತು. ಆರು ತಿಂಗಳಲ್ಲಿಯೇ ಮುರಿದು ಬಿತ್ತು. ರಷ್ಯದ ಮೇಲೆ ಜರ್ಮನ್ ಸೇನೆಗಳು ತಂಡ ತಂಡವಾಗಿ ಬಿದ್ದು ಸದೆಬಡಿದರು. ರಷ್ಯದ ಧೈರುಧಾನ್ಯಗಳನ್ನೆಲ್ಲಾ ನಾಶಮಾಡಿದರು. ಮುಖ್ಯ ನಗರಗಳನ್ನೆಲ್ಲಾ ಹಿಡಿದು ರಷ್ಯನರಿಗೆ ಆಹಾರ ಕೂಡ ಸಿಗದಂತೆ ಜರ್ಮನರು ಮಾಡಿದ್ದರು. ಸ್ಟಾಲಿನ್ನರಿಗೆ ಯಾವ ಸೋಲೂ ಹೆಚ್ಚಿನವಾಗಿ ತೋರಲಿಲ್ಲ. ಅವರ ಧೈರ್ಯ ಶಕ್ತಿಗಳು ಸಾಗರದಂಥವುಗಳು. ಇವರು ತಮ್ಮ ಶಕ್ತಿಯಿಂದಲೇ ಕಾದಾಡಿ ಜರ್ಮನ್ ಸೈನ್ಯಗಳನ್ನು ಮೂರು ವರ್ಷಗಳ ಕಾಲದಲ್ಲಿ ಮಾಸ್ಕೋವಿನಿಂದ ಬರ್ಲಿನ್ ವರೆಗೂ ಓಡಿಸಿಕೊಂಡು ಬಂದರು. ಉಕ್ಕಿಗೆ ಸಮಾನವಾದ ಜರ್ಮನ್ ಸೈನ್ಯದ ಶಕ್ತಿ ಮುರಿದು ಬಿದ್ದುದು ಸ್ಟಾಲಿನ್ನರ ಶೌರ್ಯದಿಂದಲೇ.

ಐವತ್ತು ವರ್ಷಗಳಲ್ಲಿ ಮತ್ತೊಂದು ಯುದ್ಧ

ಅಮೇರಿಕದ ರಾಷ್ಟ್ರೀಯ ಅಭಿಪ್ರಾಯ ಸಂಶೋಧನ ಕೇಂದ್ರದ ವರದಿಯಂತೆ ಮುಂದಿನ ಯುದ್ಧ ವಿಚಾರದಲ್ಲಿ ಅಭಿಪ್ರಾಯ ಸಂಗ್ರಹಣ ಮಾಡಿದಾಗ ಈ ರೀತಿ ಅಭಿಪ್ರಾಯ ದೊರೆಯಿತು. ಶೇಕಡ ೫೦ ಜನ ಇನ್ನೈವತ್ತು ವರ್ಷಗಳೊಳಗೆ ಅಮೇರಿಕ ಮತ್ತೊಂದು ಯುದ್ಧದಲ್ಲಿ ಭಾಗವಹಿಸಬೇಕಾಗುತ್ತದೆಂದು. ೧೦ ಭಾಗ ಮಾತ್ರ ಶಾಂತಿಯೊಪ್ಪಂದ ಮುಂದಿನ ಯುದ್ಧ ನಿವಾರಕವೆಂದೂ ೨೦ ಜನ ಯುದ್ಧ ಅಸಂಭವವೆಂದೂ ೨೦ ಜನ ತಮಗೆ ಗೊತ್ತಿಲ್ಲವೆಂದೂ ನುಡಿದಿರುವರು.

ಒಂದು ಕೋಟಿ ಜರ್ಮನರ ಸೆರೆ

ಆರುವರ್ಷಗಳ ಘೋರ ಯುದ್ಧ ಮುಗಿಯಿತು ಜರ್ಮನರು ಶರಣು ಬಂದರು ಒಂದು ಕೋಟಿ ಜರ್ಮನ್ ಯೋಧರು ಸೆರೆಯಾದಂತಾಯಿತು ಒಂದೆಂದೂ ಇಷ್ಟೊಂದು ಮಂದಿ ಸೆರೆಯಾಗಿರಲಿಲ್ಲ ಯೂರೋಪಿನಲ್ಲಿರು ಮಿತ್ರರ ಸೇನಾಸಂಖ್ಯೆಗಿಂತ ಹೆಚ್ಚು ಮಂದಿ ಜರ್ಮನರು ಕೈಸೆರೆಯಾದಂತಾಗಿದೆಯೆಂದು ಪ್ರಕಟವಾಗಿದೆ

೩೦೦ ಜರ್ಮನ್ ದಳಗಳು ಶರಣಾಗದೆ ಉಳಿದಿವೆ

ಜೆಕೋಸ್ಲೋವೇಕಿಯಾದಲ್ಲಿ ಅಮೆರಿಕನ್ ಮತ್ತು ರಷ್ಯನ್ ಸೇನೆಗಳ ನಡುವೆ ಇನ್ನೂ ಶತ್ರು ಮರ್ದನ ಮಾಡಬೇಕಾದ ಕಿಬ್ಬದಿಯೊಂದು ಇವೆ ಈ ಕಿಬ್ಬದಿಯಲ್ಲಿ ಜರ್ಮನರು ಚಟುವಟಿಕೆಯನ್ನು ಮುಂದುವರಿಸುತ್ತಿದ್ದಾರೆ ರಷ್ಯನರು ಅಮೆರಿಕನರು ಸಂಧಿಸಲು ಮುನ್ನುಗ್ಗುತ್ತಿದ್ದಾರೆ ಜರ್ಮನ್ ದಳಗಳು ರಷ್ಯನರ ಕಣ್ಣು ತಪ್ಪಿಸಿಕೊಂಡು ಬಂದು ಅಮೇರಿಕನರಿಗೆ ಶರಣು ಹೊಡೆಯಬೇಕೆಂದು ಪ್ರಯತ್ನಿಸುತ್ತಿವೆ ರಷ್ಯನರು ಅಮೆರಿಕನರನ್ನು ಸಂಧಿಸುವವರೆಗೂ ಜರ್ಮನರಿಗೆ ಅಮೆರಿಕನರ ಬಳಿಗೆ ಬರಲು ಸಾಧ್ಯವಾಗುವುದಿಲ್ಲವೆಂದು ಭಾವಿಸಲಾಗಿದೆ ಪ್ರೇಗ್ ನಗರದ ಮೇಲೆ ಜರ್ಮನರು ವಿಮಾನಧಾಳಿ ಮಾಡಿದರಷ್ಟೆ ಆಂದಿನಿಂದೀಚೆಗೆ ಎಲ್ಲಾ ಶಾಂತವಾಗಿದೆ ಎಂಬುದಾಗಿ ಪ್ರೇಗ್ ರೇಡಿಯೋ ಸಾರಿದೆ ದೇಶದ ಕೆಲವು ಕಡೆಗಳಲ್ಲಿ ಜರ್ಮನ್ ದಳಗಳು ಪ್ರತಿಭಟಿಸುತ್ತಿವೆಯೆಂದೂ ಎಲ್ಲಾ ಜರ್ಮನರು ಶರಣಾಗತರಾಗುವಂತೆ ಮಾಡುವ ಕೆಲಸವನ್ನು ಅಮೆರಿಕನ್ ವಿಮಾನಗಳು ಮಾಡುತ್ತಿವೆಯೆಂದೂ ವರದಿಯಾಗಿದೆ ಶತ್ರುಗಳ ನೌಕೆಗಳೆಲ್ಲ ಶರಣಾಗತವಾದುವೇ ಇಲ್ಲವೇ ಎಂಬುದನ್ನು ಬ್ರಿಟಿಷ್ ವಿಮಾನ ಪಡೆ ಪರಿಶೀಲಿಸುತ್ತಿದೆ ಇದುವರೆಗೆ ಶರಣಾಗತಿ ಸೂಚಕ ಕಪ್ಪು ಧ್ವಜವಿಂದ ಕೂಡಿದ ೩ ಯೂಬೋಟುಗಳು ಕಣ್ಣಿಗೆ ಬಿದ್ದಿವೆ ಒಂದು ಯೂಬೋಟು ನೌಕಾಪಡೆಗೆ ಶರಣಾಗತವಾಗಿದೆ ನೂರಾರು ಮುನ್ನೂರು ಜರ್ಮನ್ ಜಲದಳಗಳು ಶರಣಾಗತವಾಗುವುದಿಲ್ಲವೆಂದು ನಿರಾಕರಿಸಿವೆ ಅವುಗಳ ಮೇಲೆ ಸೂಕ್ತ ಕ್ರಿಯಾ ಕ್ರಮ ಕೈಗೊಳ್ಳಲಾಗಿದೆ

ಒಕಿನಾವಾದಲ್ಲಿ ಅಮೆರಿಕನ್ನರಿಗೆ ಆಗಿರುವ ನಷ್ಟ

ಅಮೆರಿಕನರಿಗೆ ಓಕಿನಾವಾ ದ್ವೀಪದಲ್ಲಿ ಇದುವರೆಗೆ ೧೬೦೦೦ ಸಾವು ನೋವುಗಳಾಗಿವೆಯೆಂಬುದಾಗಿ ನೌಕಾಧಿಪತಿ ನಿಮಿಟ್ಜ್‌ರವರು ಅಂದಾಜುಮಾಡಿದ್ದಾರೆ

ಇಂಗ್ಲೆಂಡಿಗೆ ಬಾಂಬುದಾಳಿಯಿಂದಾಗಿರುವ ನಷ್ಟ

ಬಾಂಬು ದಾಳಿಯಿಂದ ಬ್ರಿಟನ್ನಿಗೆ ಒಟ್ಟು ನೂರು ಕೋಟಿ ಪೌಂಡು ನಷ್ಟವಾಗಿದೆಯೆಂಬುದಾಗಿ ಎಕ್ಸ್‌ಚೆಕರ್ ಛಾನ್ಸಲರು ಅಂದಾಜು ಮಾಡಿದ್ದಾರೆ

ಬ್ರಿಟನ್ನಿನ ಪುನರ್ರಚನೆಗೆ ಜರ್ಮನರು ದುಡಿಯುವರು

ಬ್ರಿಟನ್ನಿನಲ್ಲಿ ಮನೆಗಳನ್ನು ಕಟ್ಟುವುದಕ್ಕೂ ಬಾಂಬಿನೇಟಿಗೆ ಸಿಕ್ಕಿರುವ ಪ್ರದೇಶಗಳನ್ನು ಶುದ್ಧಿ ಮಾಡುವುದಕ್ಕೂ ಸೆರೆ ಸಿಕ್ಕಿರುವ ಜರ್ಮನರನ್ನು ಸಾಕಷ್ಟು ಸಂಖ್ಯೆಯಲ್ಲಿ ಉಪಯೋಗಿಸಿಕೊಳ್ಳುವುದಾಗಿ ಬ್ರಿಟಿಷ್ ಸರ್ಕಾರದವರು ಕಾಮನ್ಸ್ ಸಭೆಯಲ್ಲಿ ನುಡಿದರು

ಬ್ರಿಟನ್ನಿನಲ್ಲಿ ರಕ್ಷಣೆ ಶಾಸನ ರದ್ದಾಯಿತು

೧೮ ಬಿ. ಎಂಬ ಸುಪ್ರಸಿದ್ಧ ರಕ್ಷಣೆ ಶಾಸನವನ್ನು ಮತ್ತು ಇನ್ನೂ ಅನೇಕ ಕಾನೂನುಗಳನ್ನು ರದ್ದುಗೊಳಿಸಿರುವುದಾಗಿ ಗೃಹ ಕಾರ್ಯದರ್ಶಿಗಳು ಕಾಮನ್ಸ್ ಸಭೆಯಲ್ಲಿ ಪ್ರಕಟಿಸಿದಾಗ ಸದಸ್ಯರು ಆನಂದವನ್ನು ಪ್ರಕಟಿಸಿದರು ಆ ಶಾಸನಗಳೆಲ್ಲ ಸಂಗ್ರಾಮಕಾಲದಲ್ಲಿ ಬ್ರಿಟಿಷ್ ಜನರ ಪೌರ ಹಕ್ಕುಗಳನ್ನು ಮೊಟಕುಮಾಡಿದ್ದವು

ರಷ್ಯಾಕ್ಕೂ ಬ್ರಿಟನ್ನಿಗೂ ಭಿನ್ನಾಭಿಪ್ರಾಯ ಬರುವುದೆ?

'ಜಪಾನರಿಗೆ ಜರ್ಮನರಿಗಿಂತ ಶಕ್ತಿ ಹೆಚ್ಚಾಗಿದೆ ಜಪಾನಿನಲ್ಲಿ ಈಗಾಗಲೇ ಸೈನ್ಯ ಕಮ್ಯಾಂಡಿನ ಬದಲಾವಣೆಯಾಗಿ, ಸರ್ವಸಿದ್ಧತೆ ನಡೆಯುತ್ತಿದೆ ಜರ್ಮನಿಯು ಪತನವಾಗುವುದೆಂದು ಸ್ಪಷ್ಟವಾದ ಮೇಲೆ ಜಪಾನು ರಷ್ಯಾದ ಮೈತ್ರೀಭಾವವನ್ನು ಳಿಸಿಕೊಳ್ಳಲು ಪ್ರಚಾರ ಆರಂಭಿಸಿದೆ ಬ್ರಿಟನ್ ಮತ್ತು ಅಮೆರಿಕಗಳಮೇಲೆ ಯುದ್ಧ ನಡೆಸುತ್ತಿದ್ದರೂ ಜಪಾನು ರಷ್ಯಾದ ಮೇಲೆ ಅತ್ಯಂತ ಮೈತ್ರಿಯಿಂದ ಇದೆ ಪೂರ್ವ ಯೂರೋಪಿನ ವ್ಯವಸ್ಥೆಯ ಸಂಬಂಧದಲ್ಲಿ ರಷ್ಯವು ತನ್ನ ಪಾಶ್ಚಾತ್ಯ ಮಿತ್ರರಾಷ್ಟ್ರಗಳೊಡನೆ ವ್ಯಾಜ್ಯವನ್ನೇನಾದರೂ ಹೊಂದಿದ್ದಾದರೆ, ಆಗ್ಗೆ ಜಪಾನಿನ ಮೈತ್ರೀ ಹಸ್ತವು ಬಹಳ ಸಹಕಾರಿಯಾಗಿರುವುದು ಎಂದು ಜಪಾನು ಭಾವಿಸಿದೆ ಯೂರೋಪಿನ ಸಮಸ್ಯೆ ಸಂಪೂರ್ಣವಾಗಿ ಇತ್ಯರ್ಥವಾದ ಹೊರತು ರಷ್ಯವು ಜಪಾನಿನ ಮೇಲೆ ಯುದ್ಧಕ್ಕೆ ಪ್ರವೇಶಿಸುವುದಿಲ್ಲವೆಂದು ಜಪಾನು ಭಾವಿಸಿದೆ ಎಂದು ರಾಯಟರ್ ವಿಲಿಟರಿ ಬಾತ್ಮೀದಾರರು ತಿಳಿಸುತ್ತಾರೆ

ಚೀಣಕ್ಕೆ ಅಮೆರಿಕನ್ ಸೈನಿಕರು

ಪರ್ಷಿಯಾ ಕೊಲ್ಲಿಯಿಂದ ಚೀಣಾಕ್ಕೆ ಹೆಚ್ಚು ಅಮೆರಿಕ ಸೈನ್ಯವನ್ನು ಕಳುಹಿಸಲಾಗಿದೆಯೆಂದು ಅಮೆರಿಕ ಯುದ್ಧ ಕಛೇರಿಯವರು ತಿಳಿಸಿದ್ದಾರೆ ಅಸಂಖ್ಯಾತ ಲಾರಿಗಳಲ್ಲಿ ತುಂಬಲ್ಪಟ್ಟ ಸೈನಿಕರು ೬ ಸಾವಿರ ಮೈಲಿ ದೂರವಿರುವ ಚೀಣಾ ಮುಖ್ಯ ಸರಬರಾಜು ಕೇಂದ್ರವಾದ ಕುನ್‌ಮಿಂಗಿಗೆ ಸುರಕ್ಷಿತವಾಗಿ ಬಂದು ತಲಪಿದರೆಂದು ಹೇಳಲಾಗಿದೆ

ಬರ್ಮಾ ರಣರಂಗ

ಅರಕಾನ್ ಯೋಮಾಸ ನಲ್ಲಿ ಕೆಲಸ ಮಾಡುತ್ತಿರುವ ಸೈನಿಕರು ಇರಾವಾಡಿ ಪಶ್ಚಿಮದಲ್ಲಿರುವ ಮಿತ್ರ ಯೋಧರನ್ನು ಸಂಧಿಸಿದ್ದಾರೆ ಪ್ರೋಮಿನ ದಕ್ಷಿಣ ಹೆದ್ದಾರಿ ಮಾರ್ಗದಲ್ಲಿ ಮುಂದುವರಿಯುತ್ತಿರುವ ಮಿತ್ರ ಸೇನೆ ರಂಗೂನಿಂದ ೭೫ ಮೈಲಿ ದೂರದಲ್ಲಿ ಶತ್ರುವನ್ನು ಎದುರಿಸುತ್ತಿದೆ ಇರಾವಾಡಿ ಕ್ಷೇತ್ರದಿಂದ ಜಪಾನರಿಗೆ ಓಡಿ ಹೋಗಲು ಇರುವ ಮುಖ್ಯ ಮಾರ್ಗದಲ್ಲಿ ಒಂದು ಹಳ್ಳಿಯನ್ನು ವಶಪಡಿಸಿಕೊಳ್ಳಲಾಗಿದೆ

ಜಪಾನಿನಮೇಲೆ ಅಮೆರಿಕನರ ಯುದ್ಧ ಸಿದ್ಧತೆ

ಯೂರೋಪಿನಲ್ಲಿ ಜರ್ಮನರ ಪತನವಾದಮೇಲೆ ಜಪಾನ್ ತತ್ತರಿಸಲಾರಂಭಿಸಿದೆ ಮಿತ್ರರ ಅಗಾಧ ಯೋಧಬಲ ವಸ್ತು ಬಲದ ಮುಂದೆ ಅದರ ಆಟ ಏನೂ ಸಾಗಲಾರದು ಸ್ವಲ್ಪ ಹೆಚ್ಚು ಕಡಿಮೆ ಇಡೀ ಜಗತ್ತನ್ನೇ ಎದುರಿಸುವ ಪರಿಸ್ಥಿತಿ ಅದಕ್ಕೆ ಬಂದಿದೆ ಈಗ ಮಿತ್ರರಲ್ಲಿ ೨೦೦೦ ಯುದ್ಧ ನೌಕೆಗಳಿವೆ ೩೦ ಲಕ್ಷ ಮಂದಿ ಯೂರೋಪಿನಲ್ಲಿ ಜರ್ಮನರನ್ನು ಸದೆ ಬಡಿದ ಅನುಭವಿ ಯೋಧರಿದ್ದಾರೆ ಐದು ಸಾವಿರ ಯುದ್ಧ ಪರೀಕ್ಷೆಯಲ್ಲಿ ಯಶಸ್ಸುಗಳಿಸಿರುವ ಭಾರಿ ಬಾಂಬರು ವಿಮಾನಗಳಿವೆ ಅದಕ್ಕೆ ಮೂರರಷ್ಟು ಬೇರೆ ವಿಮಾನಗಳಿವೆ ಜೊತೆಗೆ ಜರ್ಮನಿಯ ಯೂಬೋಟುಗಳಿವೆ ಯುದ್ಧ ಸಲಕರಣೆಗಳಿವೆ ಜನ ಬಲ ಸಾಮಗ್ರಿ ಬಲವಂತೂ ಅಪಾರವಾಗಿದೆ ಅಂದ ಮೇಲೆ ಜಪಾನು ತತ್ತರಿಸದೆ ಏನು? ಅದು ಒಪ್ಪಂದ ಬಯಸಿ ಕೈ ಚಾಚುತ್ತಿದೆ ಯೆಂಬ ವಾರ್ತೆ ನ್ಯೂಯಾರ್ಕಿನಲ್ಲಿ ಹರಡಿದೆ ಜಪಾನ್ ಸಂಗ್ರಾಮವನ್ನು ಮುಂದುವರಿಸುವುದಕ್ಕಾಗಿ ಅಮೆರಿಕವು ಎಪ್ಪತ್ತು ಲಕ್ಷ ಜನ ಅಮೆರಿಕನ್ ಯೋಧರನ್ನು ಪೆಸಿಫಿಕ್ ರಣಾಂಗಣಕ್ಕೆ ಕಳಿಸಲಿದೆ. ಎಂಬುದಾಗಿ ಅಮೆರಿಕನ್ ರೇಡಿಯೋಗಳು ಸಾರಿವೆ.

ಜಪಾನಿನ ಶಾಂತಿಸಂಧಾನ

ರಷ್ಯವನ್ನು ಬಿಟ್ಟರೆ ಇಡೀ ವಿಶ್ವವನ್ನೇ ಜಪಾನ್ ಈಗ ಎದುರಿಸಬೇಕಾಗಿದೆ ಒಂಟಿಯಾಗಿರುವ ಜಪಾನಿಗೆ ಈಗ ಮಿತ್ರರಾಷ್ಟ್ರಗಳ ಮಹಾಸೈನ್ಯಗಳನ್ನೆದುರಿಸಿ ಗೆಲ್ಲುವುದು ಅಸಾಧ್ಯ ಇದನ್ನರಿತಿರುವ ಜಪಾನ್ ಇಷ್ಟರಲ್ಲೇ ಶಾಂತಿಭಿಕ್ಷೆಬೇಡಿ ಅಮೆರಿಕ ಮತ್ತು ಬ್ರಿಟನ್ನುಗಳೊಡನೆ ಸಂಧಾನಕ್ಕೆ ಪ್ರಾರಂಭಿಸಲಿದೆ ಎಂದು ನಿರೀಕ್ಷಿಸಲಾಗಿದೆ "ಯಾವ ಷರತ್ತೂ ಇಲ್ಲದೆ ಜಪಾನ್ ಶರಣಾಗತವಾಗಲು ಒಪ್ಪಿಲ್ಲ, ಶರಣಾಗತವಾಗಲು ಅದೂ ಕೆಲವು ಷರತ್ತುಗಳನ್ನು ಹಾಕಿರುವುದರಿಂದ ಶಾಂತಿಸಂಧಾನ ನಡೆಯುವಂತಿಲ್ಲ ಎಂದು ಹೇಳಲಾಗುತ್ತಿದೆ ಜಪಾನ್ ಸೂಚಿಸಿರುವ ಶಾಂತಿ ಷರತ್ತುಗಳಿಗೆ ಒಪ್ಪುವುದಾದರೆ ಅದು ಮಂಚೂರಿಯವನ್ನು ಬಿಟ್ಟುಕೊಡಲೂ ಸಿದ್ಧವಾಗಿದೆಯೆಂದೂ ಆದರೆ ಕೊರಿಯ ಮತ್ತು ಫಾರ್ಮೋಸಗಳು ಮಾತ್ರ ಜಪಾನಿಗೇ ಇರಬೇಕೆಂದೂ ಷರತ್ತು ಹಾಕಲಾಗಿದೆಯೆಂದು ವಾಷಿಂಗ್ಟನ್ನಿನಲ್ಲಿ ಸುದ್ದಿ ಹರಡಿದೆ.

ವಿಜಯೋತ್ಸವ

ಈ ದಿವಸ ರಾಜಧಾನಿಯಲ್ಲಿ ಮಿತ್ರರಿಗೆ ಯೂರೋಪಿನಲ್ಲಿ ಜರ್ಮನ್ ಯುದ್ಧದಲ್ಲಾದ ವಿಜಯೋತ್ಸವ ಸಮಾರಂಭವು ಅತ್ಯಂತ ವೈಭವದಿಂದ ನಡೆಯಿತು ಪ್ರಾತಃಕಾಲ 31 ಕುಶಾಲ ತೋಪುಗಳು ಹಾರಿಸಲ್ಪಟ್ಟವು ಟವನ್‌ಹಾಲ್ ಮೈದಾನದಲ್ಲಿ ಧ್ವಜವಂದನಾದಿ ಕಾರ್ಯಗಳು ನಡೆದವು

ಸ್ವೀಕಾರ

ಬೆಂಗಳೂರು ಸಿಟಿ ಚಾಮರಾಜಪೇಟೆಯಲ್ಲಿರುವ ಮ|| ರಾ|| ಕಂಟ್ರಾಕ್ಟರ್ ಕೆ ಎಂ ಗುಬ್ಬಣ್ಣನವರ ಗೃಹದಲ್ಲಿ ಮ|| ರಾ|| ಕೋಳಾನದ ವೀರಪ್ಪನವರ ಪುತ್ರಿ ಚಿ|| ಸೌ|| ರೇವಮ್ಮನಿಗೂ ಮ|| ರಾ|| ಅಂಬೂರು ಹೇರುಂಡೆ ಶಿವಲಿಂಗಪ್ಪನವರ ಪುತ್ರ ಚಿ|| ಬಸಪ್ಪನಿಗೂ ಮತ್ತು ಮ|| ರಾ|| ಕ ... ಅಯ್ಯಣ್ಣಶೆಟ್ಟರ ಜ್ಯೇಷ್ಠ ಪುತ್ರಿ ಚಿ|| ಸೌ|| ಗೌರಮ್ಮನಿಗೂ ದಾವಣಗೆರೆಯಲ್ಲಿರುವ ಮ|| ರಾ| ಗಾಜಿ ಈಶ್ವರಪ್ಪನವರ ಪುತ್ರ ಚಿ| ಮುರುಗೇಂದ್ರಪ್ಪನಿಗೂ ನೆರವೇರಿದ ವಿವಾಹ ಮಹೋತ್ಸವ ಸಮಯದಲ್ಲಿ ಪ್ರಭಾಪ್ರೋತ್ಸಾಹಕ್ಕಾಗಿ ಸಮರ್ಪಿಸಿದ 5 ರೂಪಾಯಿಗಳು ವೇ|| ರಾವಲುಡ್ಡಿ ಬೃಹನ್ಮಠದ ಸದಾಶಿವಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತವೆ

ಈ ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ

ಚಂದಾದಾರರಲ್ಲಿ ವಿಜ್ಞಾಪನೆ

ಈ ಪತ್ರಿಕೆಯು ಜನ್ಮನೆತ್ತಿ ವೈಶಾಖ ಶು|| ಪಂಚಮಿಗೆ ೧೪ ವರ್ಷಗಳು ತುಂಬಿ ೧೫ ನೆಯ ವರ್ಷವು ಪ್ರಾರಂಭವಾಗುವುದು ವರ್ಷಾರಂಭದಿಂದ ಚಂದಾದಾರರಾಗಿರುವ ಸರ್ವರಿಗೂ ಇನ್ನು ಮುಂದೆ ಪತ್ರಿಕೆಯನ್ನು ವಿ. ಪಿ. ಮಾಡಬೇಕಾಗುತ್ತದೆ ವಿ. ಪಿ. ಮಾಡುವುದರಿಂದ ನಮಗೂ ತೊಂದರೆಯಾಗುವುದು ಹಾಗೂ ಚಂದಾದಾರರಿಗೂ ೩ ಆಣೆ ಹೆಚ್ಚಿಗೆ ಬೀಳುವುದು. ಆದುದರಿಂದ ಚಂದಾದಾರರೆಲ್ಲರೂ ಕೂಡಲೆ ೩ ರೂ ಗಳನ್ನು ಮನಿಯಾರ್ಡರ್ ದ್ವಾರಾ ಕಳುಹಿಸಬೇಕು ಯಾವ ಗ್ರಾಮದಲ್ಲಿ ವಿಶೇಷ ಚಂದಾದಾರರಿರುವರೋ ಆ ಗ್ರಾಮದಲ್ಲಿರುವ ಅಭಿಮಾನಿಗಳು ಚಂದಾದಾರರ ಹಣವನ್ನೆಲ್ಲ ಒಟ್ಟು ಕೂಡಿಸಿ ಒಂದೇ ಸಾರೆ ಮನಿಯಾರ್ಡರ್ ಮಾಡಿಸಬೇಕು ಹೀಗೆ ಮಾಡುವುದರಿಂದ ಸರ್ವರಿಗೂ ಹಿತವಾಗುತ್ತದೆ ಮನಿಯಾರ್ಡರ್ ಮಾಡುವ ಚಂದಾದಾರರು ತಮ್ಮ ಹೆಸರಿನ ಪಕ್ಕದಲ್ಲಿರುವ ನಂಬರನ್ನು ಮಾತ್ರ ದಯೆಯಿಟ್ಟು ಮರೆಯದೆ ತಿಳಿಸಬೇಕು

ಮ್ಯಾ —

[೧ನೆಯ ಪುಟದಿಂದ ಮುಂದುವರಿದುದು]

ಸರ್ವಸ್ವವನ್ನೂ ಧಾರೆಯೆರೆದು ಆ ಪೀಠವನ್ನು ಉದ್ಧರಿಸಿದರು. ಉಜ್ಜಯಿನಿ ಜಗದ್ಗುರುಗಳವರ ತಪಃ ಪ್ರಭಾವದಿಂದಲೂ ಆ ಮಹಾತ್ಮರ ಪ್ರಬಲವಾದ ಆಶ್ರಯದಿಂದಲೂ ಕೇದಾರ ಪೀಠಾಧಿಪತಿಗಳು ಬಳ್ಳಾರಿ ಜಿಲ್ಲೆಯಲ್ಲಿ ಸಂಚರಿಸಲುಪಕ್ರಮಿಸಿದರು. ಬಳ್ಳಾರಿ ಜಿಲ್ಲೆಯ ಮುಖ್ಯ ಮುಖ್ಯ ಪಟ್ಟಣಗಳಲ್ಲಿ 72 ಬಿರುದಾವಳಿಗಳೊಡನೆ ಅಭೂತಪೂರ್ವವಾದ ಮಹೋತ್ಸವಗಳು ಅನೇಕವಾಗಿ ನೆರವೇರಿದವು. ಮಹಾದಾನಿ ಪುರುಷರೆನಿಸಿದ ಶ್ರೀ ನೀಲಕಂಠಶಿವಾಚಾರ್ಯಮಹಾಸ್ವಾಮಿಗಳವರಿಗೆ ಬಳ್ಳಾರಿ ಜಿಲ್ಲೆಯ ಭಕ್ತರು ಧನರಾಶಿಯನ್ನೇ ಧಾರೆ ಎರೆದುಬಿಟ್ಟರು. ಶ್ರೀಗಳವರು ಒಂದೆರಡು ವರುಷಗಳಲ್ಲಿಯೇ ಲಕ್ಷಾಂತರ ರೂಪಾಯಿಗಳನ್ನು ಸಂಗ್ರಹಿಸಿ ಋಣಪೀಡಿತವಾಗಿದ್ದ ಕೇದಾರ ಪೀಠವನ್ನು ಋಣಮುಕ್ತವನ್ನಾಗಿ ಮಾಡಿದರು. ಇದರಿಂದ ಇವರ ಮೇಲೆ ಆ ಪ್ರಾಂತದ ಜನರ ಭಕ್ತಿಯು ಇಮ್ಮಡಿಯಾಗಿ ಬೆಳೆಯಿತು. ಹಿಮಾಲಯ ಪ್ರಾಂತದ ಜನರು ಬಹು ಅಶಿಕ್ಷಿತರಾಗಿದ್ದು ಅವರಲ್ಲಿ ವಿದ್ಯೆಯು ಪ್ರಚಾರವಾಗಲೆಂಬ ಉದ್ದೇಶದಿಂದ ಶ್ರೀ ಜಗದ್ಗುರುಗಳವರು ಹಿಂದೀ ಸ್ಕೂಲನ್ನು ಸ್ಥಾಪಿಸಿದರು. ಒಂದು ಸಂಸ್ಕೃತ ಮಹಾಪಾಠಶಾಲೆಯನ್ನೂ ಒಂದು ಆಯುರ್ವೇದ ಪಾಠಶಾಲೆಯನ್ನೂ ಸ್ಥಾಪಿಸಿದರು. ಇದಲ್ಲದೆ ತಮ್ಮ ಹೆಸರಿನಿಂದ ಒಂದು ಇಂಗ್ಲಿಷ್ ಮಿಡಲ್ ಸ್ಕೂಲನ್ನು ಸ್ಥಾಪಿಸಿದ್ದಲ್ಲದೆ ಕಳೆದ ವರ್ಷ ಒಂದು ಹೈಸ್ಕೂಲನ್ನು ಸಹ ಸ್ಥಾಪಿಸಿದರು. ಈ ವಿದ್ಯಾಲಯಗಳಿಗೆಲ್ಲಾ ನೂತನ ಕಟ್ಟಡಗಳನ್ನು ಕಟ್ಟಿಸಿಕೊಟ್ಟರು. ಇದರಂತೆಯೇ ದಕ್ಷಿಣ ದೇಶದಲ್ಲಿಯೂ ಸಹ ವಿದ್ಯಾಪ್ರಚಾರಕ್ಕಾಗಿಯೂ ಧರ್ಮಪ್ರಚಾರಕ್ಕಾಗಿಯೂ ಅನೇಕ ಸಹಸ್ರ ರೂಪಾಯಿಗಳನ್ನು ದಾನರೂಪವಾಗಿ ಆಶೀರ್ವದಿಸಿದರು. ಇದರಿಂದ ಉತ್ತರ ಹಿಂದೂಸ್ಥಾನದಲ್ಲಿ ಇವರ ಕೀರ್ತಿಯು ವಿಶೇಷವಾಗಿ ಬೆಳೆಯಿತು. ಇಂತಹ ಮಹನೀಯರು ತಾ|| 23-4-45 ನೆಯ ದಿನ ಇಹಲೋಕಯಾತ್ರೆಯನ್ನು ಪೂರೈಸಿ, ಶಿವಸನ್ನಿಧಿಯನ್ನು ಸೇರಿದರು. ಗಢವಾಲ ಪ್ರಾಂತ್ಯದ ಪ್ರಮುಖರು 25-4-45 ನೆಯ ದಿವಸ ಓಖೀಮಠದಲ್ಲಿ ದುಃಖ ಪ್ರದರ್ಶನ ಸಭೆಯನ್ನು ನೆರವೇರಿಸಿದರು. ಕೇದಾರ ಪೀಠದ ಯಶಸ್ಸನ್ನು ಸರ್ವತ್ರ ಬೆಳಗಿದ ಶ್ರೀ ಜಗದ್ಗುರು ನೀಲಕಂಠಶಿವಾಚಾರ್ಯರ ಆತ್ಮಕ್ಕೆ ಪರಮೇಶ್ವರನು ಶಾಂತಿಯನ್ನೀಯಲೆಂದು ಪ್ರಾರ್ಥಿಸುತ್ತೇನೆ

ಶ್ರೀಗಳವರ ಶಿಷ್ಯ
ಶ್ರೀ ಕೈಲಾಸಲಿಂಗಶಿವಾಚಾರ್ಯ
ಕೇದಾರಸಂಸ್ಥಾನಮಠ.

ರಂಗೂನ್ ಬಂದರನ್ನು ಸರಿಪಡಿಸಲಾಗಿದೆ

ರಂಗೂನ್ ಬಂದರನ್ನು ಸರಿಪಡಿಸಲಾಗಿದೆ. ಅಲ್ಲಿ ರಾಶಿರಾಶಿಯಾಗಿ ಬಿದ್ದಿದ್ದ ವಸ್ತುಗಳನ್ನೆಲ್ಲ ಬೇರೆ ಕಡೆಗೆ ಸಾಗಿಸಲಾಗಿದೆ. ಸೈನಿಕರನ್ನೂ ಸಂಗ್ರಾಮ ವಸ್ತುಗಳನ್ನೂ ಹೊತ್ತು ೪೦೦೦ ಟನ್ ತೂಕದ ಎರಡು ಹಡಗುಗಳು ಆಗಲೇ ಬಂದರಿಗೆ ಬಂದಿವೆ. ನಗರದ ನೀರು ಸರಬರಾಯಿ ವ್ಯವಸ್ಥೆಯನ್ನು ಸರಿಪಡಿಸುವ ಕಾರ್ಯಾರಂಭವಾಗಿದೆ. ಎಂದಿನಂತೆ ನಾಗರಿಕ ಜೀವನವನ್ನೂ ಏರ್ಪಡಿಸಲು ಸರ್ವ ಪ್ರಯತ್ನವನ್ನೂ ಮಾಡುತ್ತಿರಲಾಗಿದೆ. ಬ್ರಿಟಿಷ್ ಸೇನೆಯ ಮುಖ್ಯಾಧಿಕಾರಿಗಳು ರಂಗೂನಿನ ಗವರ್ನರರಾಗಿದ್ದಾರೆ.

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊ[ಬ್ಬರಿ]ಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು [illegible] ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು. ವೀರಶೈವಮತದಲ್ಲಿ ಸದ್ಯಃ ದೊರೆಯತಕ್ಕ ಗ್ರಂಥಗಳಲ್ಲೆಲ್ಲ ಇದು ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು. ಈ ಗ್ರಂಥವು ಈಗ್ಗೆ ಸುಮಾರು ೩ ಸಾವಿರ ವರ್ಷಗಳ ಪೂರ್ವದಲ್ಲಿ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು. ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ಪಾಠಕರಿಗೆ ವೇದ್ಯವಾಗುವುದು. ಪಾಠಕರ ಅನುಕೂಲ್ಯಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು [illegible] ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೨ ರೂಪಾಯಿ.**

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೭ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೭ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೮ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ, ಚಿಕ್ಕಸೈಜು)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಆಗಮಪರಿಜ್ಞಾನ	೮ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸಮ್ಬೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು. ೨ನೆಯ ಆವೃತ್ತಿ)	೧| ರೂ.
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ.
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ.
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧|| ರೂ.
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧|| ರೂ.
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುವು)	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೨ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ.
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ಶಿವಾದ್ವೈತಮಂಜರಿ [ಕನ್ನಡವ್ಯಾಖ್ಯಾನ ೧೩೪೪ ಪುಟ]	೮ ರೂ.
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*)	8 As
Speeches by Pandit Shri Kashinatha Shastriji (*English*)	12 As
लिंगधारणचंद्रिका (संस्कृत)	३ रु
वीरशैवरत्न (मराठी)	१ रु
महानारायणोपनिषत् (वीरशैवभाष्य-संस्कृत)	१ रु
सिद्धांतशिखामणि (मूल)	८ आ
नंदिकेश्वरकारिका (संस्कृत)	२ आ

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿದೆ.

19

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ. ೪ ಆಣೆ. ಪರಸ್ಥಳದವರಿಗೆ ೩ ರೂ. ವಿ. ಪಿ. ಖರ್ಚು ಸೇರಿ ೩ ರೂ. ೪ ಆಣೆ.

ಸಂಪುಟ ೧೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೧ನೇ ಮೇ ೧೯೪೫ [ಸಂಚಿಕೆ ೧

॥ ಶ್ರೀಜಗದ್ಗುರು ದಾರುಕಾಚಾರ್ಯಾಯ ನಮಃ ॥

ಪ್ರಭಾವತಾರ

(ಲೇ:—ವೇ|| ಮಲ್ಲಿಕಾರ್ಜುನಾರಾಧ್ಯ, ರಾಣೇಬೆನ್ನೂರು ಮಳೇಮಠ, ಮುದೇನೂರು)

ಯಾವನು ಚರಾಚರಾತ್ಮಕವಾದೀ ಜಗತ್ತಿಗೆ ಮೂಲ ಕಾರಣೀಭೂತನಾಗಿಯೂ, ಪ್ರಾಣಿಗಳ ಅಜ್ಞಾನಾಂಧಕಾರನಾಗಿಯೂ ಇರುವನೋ, ಯಾವನು ಸರ್ವಭೂತಗಳಲ್ಲಿಯೂ ಅಂತರಾತ್ಮನಾಗಿ ಏಕನಾಗಿದ್ದರೂ ಪ್ರತಿರೂಪದಲ್ಲಿಯೂ ಭಿನ್ನಾತ್ಮನಾಗಿ ತೋರುವನೋ, ಯಾವನ ದಿವ್ಯಪ್ರಕಾಶದ ಸಹಸ್ರಾಂಶದಲ್ಲೊಂದಂಶವನ್ನಾದರೂ ಸೂರ್ಯಚಂದ್ರರು ಪ್ರದರ್ಶಿಸಲಾರದೆ ದಿವಾರಾತ್ರಿಗಳಲ್ಲಿ ದಣಿದು ಧೈರ್ಯಗೆಡುತ್ತಿರುವರೋ, ಯಾವನ ಅವ್ಯಕ್ತನಾಮವನ್ನು ವಿಹಂಗಮಗಣವೂ, ನದ ನದೀ ನಿರ್ಝರಿಣಿಗಳೂ ತಮ್ಮ ತಮ್ಮ ಕಲಕಲ ಧ್ವನಿಯಿಂದ ಕೀರ್ತಿಸುತ್ತಿವೆಯೋ, ಯಾವನ ದಿವ್ಯದರ್ಶನವನ್ನು ಹೊಂದುವುದಕ್ಕಾಗಿ ಮೇಘಗಳು ಆಕಾಶದಲ್ಲಿ ಅಲೆದಲೆದು ಕೊನೆಗದು ಲಭ್ಯವಾಗದೆ ಗದ್ಗದ ಕಂಠದಿಂದ ಅಶ್ರುಜಲವನ್ನು ವರ್ಷಿಸುವವೋ, ಯಾವನ ಚರಣಾರ್ಚನೆಗೆ ಹರಿದ್ವರ್ಣ ವಸನಗಳಿಂದ ಸಮಾವೃತವಾದ ತರುಲತಾದಿಗಳು ಫಲಪುಷ್ಪಗಳನ್ನರ್ಪಿಸುತ್ತಿವೆಯೋ ಆ ಮಹಾಪುರುಷನ ಕೃಪಾಕಟಾಕ್ಷದಿಂದ ಈ ನಮ್ಮ ಪ್ರಭಾಮಾತೆಗೆ ಇದೇ ವೈಶಾಖ ಶು|| ೫ ಗೆ ಹತ್ತೊಂಬತ್ತನೆಯ ವರ್ಷವು ಪ್ರಾರಂಭವಾಗಿರುವುದು. ಈರ್ಷ್ಯಾಸೂಯೆಗಳಿಂದ ಪೂರ್ಣವಾದ ಜಗತ್ತಿನ ಸದ್ಯದ ಪರಿಸ್ಥಿತಿಯಲ್ಲಿ ಪ್ರಭೆಯು ಶುಕ್ಲಪಕ್ಷದ ಚಂದ್ರನಂತೆ ವೃದ್ಧಿಯನ್ನೈದುತ್ತ ಬಂದಿರುವುದು ಜಗದಾಚಾರ್ಯರ ಕೃಪಾಶೀರ್ವಾದವೂ, ಪ್ರಭಾಜನ್ಮದಾತರೂ. ಧರ್ಮಾವತಾರಿಗಳೂ, ಗುರುಕುಲತಿಲಕರೂ, ವಿದ್ವನ್ಮಣಿಗಳೂ ಆದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರೀಜಿಯವರ ಆತ್ಮಶಕ್ತಿಯ ತೇಜಸ್ಸಿನ ಪ್ರಭಾವವೂ ಮತ್ತು ಲೇಖಕರ ಗ್ರಾಹಕರ ಸನಾತನಧರ್ಮಾಭಿಮಾನಿಗಳ ಅಭಿಮಾನೌದಾರ್ಯಗಳೂ ಕಾರಣಗಳೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಿಕ್ಕಿಲ್ಲ. ಅಸ್ತು!

ಈ ಭರತಖಂಡದಲ್ಲಿರುವ ಸನಾತನಮತಗಳಲ್ಲಿ ಒಂದಾದ ನಮ್ಮ ವೀರಶೈವಮತವು ಪರಮಶ್ರೇಷ್ಠವೂ ಮೋಕ್ಷದಾಯಕವೂ ಆಗಿರುವುದು. ಇಂತಹ ಮತಕ್ಕೆ ಕಲಿಪ್ರಾಬಲ್ಯದಿಂದ ಉಚ್ಚನೀಚತಾರತಮ್ಯವಿಲ್ಲದ ಸೋಂಕು ವಜ್ರಲೇಪದಂತೆ ಬಲವಾಗಿ ಅಂಟಿಕೊಂಡು ಬಂದಿತ್ತು. ಜನಗಳಾದರೂ ಬೋಧಕರಿಲ್ಲದೆ ನಿಜತತ್ವವನ್ನು ಮರೆತು ಗಾಢಾಂಧಕಾರದಲ್ಲಿ ಮುಳುಗಿ ಗಾಢನಿದ್ರೆಯಲ್ಲಿದ್ದರು. ಜನಪರಿಗಣತಿಯಲ್ಲಿ ಈ ವಿಧವಾದ ಜನರೇ ಬಹಳವಾಗಿದ್ದರು. ಆದರೆ ನಿಜತತ್ವವನ್ನರಿತ ಒಬ್ಬಿಬ್ಬರು ನಿಜತತ್ವವನ್ನು ಬೋಧಿಸಲು ಅವರ ನಾಲಗೆಯು ಕುಂಠಿತವಾಗಿತ್ತು. ಧರ್ಮದ ಗ್ಲಾನಿಯೂ ಅಧರ್ಮದ ಏಳಿಗೆಯೂ ಆದ ಕಾಲದಲ್ಲಿ ಮಹಾಪುರುಷರ ಅವತಾರವು ಈಶ್ವರೀಸಂಕೇತವಾಗಿರುವಂತೆ ಇಂತಹ ವಿಷಮ ಸನ್ನಿವೇಶದಲ್ಲಿ ಶ್ರೀಕಾಶೀನಾಥಪಂಡಿತರು ಪ್ರಭಾದೇವಿಯನ್ನು ಆವಿರ್ಭವಿಸುವಂತೆ ಮಾಡಿ ಸ್ವಧರ್ಮಾನುರಾಗಿಗಳಾದ ಜನರ ಗೃಹಗಳಿಗೆ ಪ್ರತಿವಾರವೂ ಪ್ರವೇಶಿಸಿ ಬೋಧಿಸಿ ಜಗತ್ತಿಗೆ ನಿಜತತ್ವಾಮೃತಪಾನವನ್ನು ಮಾಡಿಸಿ ಎಚ್ಚರಗೊಳಿಸುವಂತೆ ಮಾಡಿದರು. ಪ್ರಭಾದೇವಿಯು ಈ ಮತದ ಪ್ರಾಚೀನತೆಯನ್ನೂ, ಶ್ರೇಷ್ಠತೆಯನ್ನೂ, ಮೂಲಮತಸ್ಥಾಪನಾಚಾರ್ಯರ ಅಗಾಧಮಹಿಮೆಗಳನ್ನೂ, ನೈತಿಕ, ಧಾರ್ಮಿಕ, ಪಾರಮಾರ್ಥಿಕ ಬೋಧೆಗಳನ್ನೂ ಪ್ರಕಾಶಪಡಿಸುತ್ತ ಬಂದುದರಿಂದ ಸೂರ್ಯೋದಯದಿಂದ ಅಂಧಕಾರವು ನಾಶವಾಗುವಂತೆ ಈ ಮತದಲ್ಲಿದ್ದ ಅಜ್ಞಾನವು ಮೆಲ್ಲಮೆಲ್ಲನೆ ಮರೆಯಾಗುತ್ತ ಬಂತು. ಈ ರೀತಿಯಲ್ಲಿ ವೀರಶೈವಮತಕ್ಕೆ ಮಹೋಪಕಾರವನ್ನು ಮಾಡಿರುವ ಮತ್ತು ಮಾಡುತ್ತಿರುವ ಪ್ರಭಾಮಾತೆಗೆ ಎಷ್ಟು ಧನ್ಯವಾದಗಳನ್ನರ್ಪಿಸಿದರೂ ತೀರದಾಗಿದೆ. ಅಲ್ಲದೆ ಪ್ರತಿವಾರವೂ ನಮ್ಮ ಮನೆಗೆ ಬಂದು ಬೋಧಿಸುತ್ತಿರುವ ಮತ್ತು ಅಹೋರಾತ್ರಿ ಈ ಮತದ ಏಳಿಗೆಗಾಗಿ ಶ್ರಮಪಡುತ್ತಿರುವ ಬೋಧಕಗುರುರೂಪವಾದ ಈ ಪತ್ರಿಕೆಗೆ ಚಂದಾದಾರರಾಗುವುದೂ ಶುಭಾಶುಭಕಾರ್ಯಗಳಲ್ಲಿ ಇದರ ಪೋಷಣಕ್ಕಾಗಿ ಧನಸಹಾಯ ಮಾಡುವುದೂ ಪ್ರತಿಯೊಬ್ಬ ವೀರಶೈವನ ಆದ್ಯಕರ್ತವ್ಯವಾಗಿರುವುದು.

ಜಯವಾಗಲಿ, ಜಯವಾಗಲಿ, ಜಗದಾಚಾರ್ಯರ ಪವಿತ್ರನಾಮದಿಂದ ಪ್ರಕಾಶಿಸುವ ಪ್ರಭೆಗೆ ಜಯವಾಗಲಿ; ಸನಾತನತತ್ವಕ್ಕೆ ಜಯವಾಗಲಿ; ಸತ್ಯಕ್ಕೆ ಜಯವಾಗಲಿ, ಪಂಡಿತ ಶ್ರೀಕಾಶೀನಾಥಶಾಸ್ತ್ರೀಜಿಯವರ ಆಯುರಾರೋಗ್ಯಭಾಗ್ಯವೃದ್ಧಿಯಾಗಲಿ; ಜಾತಿಸಾಂಕರ್ಯವೆಂಬ ನೀಚಪದ್ಧತಿಯು ನಾಶವಾಗಲಿ; ಅಪಸಿದ್ಧಾಂತಗಳು ಅಡವಿಪಾಲಾಗಲಿ; ವರ್ಣಾಶ್ರಮಧರ್ಮಗಳು ಸರ್ವತ್ರ ಪ್ರಕಾಶಿಸಲಿ; ಜಗತ್ತಿನ ಘೋರವಿಪತ್ತು ಹರಿಯಲಿ; ರೋಗರುಜಿನಗಳು ಅಡಗಲಿ; ಗುರುವರ್ಗದವರು ಸ್ವಕರ್ತವ್ಯನಿಷ್ಠರಾಗಲಿ; ಪ್ರಭಾಮಾತೆಯು ಸರ್ವತ್ರ ನಲಿದಾಡಲಿ; ಮಳೆಗಳು ಸುರಿಯಲಿ; ಭೂಮಿಗಳು ಬೆಳೆಯಲಿ; ಲೋಕದ ಬಡತನವು ಬಯಲಾಗಲಿ; ಸಿರಿತನವು ಹಿರಿದಾಗಲಿ; ಸರ್ವತ್ರಸುಖಶಾಂತಿಗಳು ನೆಲಸಲಿ.

ಲೋಕಾಃ ಸಮಸ್ತಾ ಸ್ಸುಖಿನೋಭವಂತು.

ಶ್ರೀ ಮಹಂತೇಶ್ವರ ರಥೋತ್ಸವ, ಬಿಚ್ಚಾಲಿ

ರಾಯಚೂರ ಜಿಲ್ಲಾ ಬಿಚ್ಚಾಲಿಗ್ರಾಮದ ಸಾವಿರದೇವರ ಷ|| ಬ್ರ|| ಚನ್ನವೀರಶಿವಾಚಾರ್ಯಸ್ವಾಮಿಗಳವರ ಮಠದಲ್ಲಿ ಪರಮತಪೋನಿಧಿ ಶ್ರೀ ಮಹಾಂತೇಶ ಗುರುವರ್ಯರ ರಥೋತ್ಸವವು ಪಾರ್ಥಿವಸಂವತ್ಸರದ ಚೈತ್ರ ಬ|| ೫ ಬುಧವಾರ ಅತಿ ವಿಜೃಂಭಣೆಯಿಂದ ನೆರವೇರಿತು. ಪದ್ಧತಿಯಂತೆ ದಿನತ್ರಯದಲ್ಲಿ ಕಾರ್ಯಕ್ರಮವು ಸಾಂಗವಾಗಿ ಆಚರಿಸಲ್ಪಟ್ಟಿತು. ಮರುದಿನ ಗುರುವಾರ ಮುಕ್ತಲ್ ಮಠಾಧ್ಯಕ್ಷ ಷ|| ಬ್ರ|| ಸಿದ್ಧಲಿಂಗ ಶಿವಾಚಾರ್ಯಸ್ವಾಮಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಉದಯ ೭ ರಿಂದ ೧೧ ಘಂಟೆಯ ವರೆಗೆ ಸುಪ್ರಸಿದ್ಧ ಸಂಗೀತವಿದ್ವಾಂಸರ ಸುಶ್ರಾವ್ಯಗಾನವೂ ಪಂಡಿತರ ಉಪನ್ಯಾಸಗಳೂ ಜರುಗಿದವು. ಮಠದ ಶ್ರೀಗಳವರು ಸರ್ವರಿಗೂ ತಮ್ಮ ಉಪದೇಶಾಮೃತವನ್ನು ಪಾನಮಾಡಿಸಿ ಧನ್ಯರನ್ನಾಗಿ ಮಾಡಿದರು. ಆಮೇಲೆ ಅಧ್ಯಕ್ಷಮಹಾಶಯರ ಭಾಷಣವು ಜರುಗಿ ಮೇಲ್ಕಂಡ ವಿದ್ವನ್ಮಂಡಳಿಗೆ ಯಥೋಚಿತ ಸಂಭಾವನೆಯು ಕೊಡಲ್ಪಟ್ಟು ಆಚಾರ್ಯರ ಜಯಘೋಷದೊಡನೆ ಸಭೆಯು ಸಮಾಪ್ತಿಗೊಂಡಿತು. ಓರ್ವ ಗುರುಭಕ್ತ.

ಸತ್ಕಾಲಕ್ಷೇಪ ತಿಪಟೂರು

ತಾ|| 4-5-1945 ರಲ್ಲಿ ಇಲ್ಲಿಯ ಆರ್ಯಬಾಲಿಕಾ ಪಾಠಶಾಲೆಯಲ್ಲಿ ಸಾಯಂಕಾಲ 7½ ಘಂಟೆಗೆ ಬೆಂಗಳೂರಿಂದ ದಯಮಾಡಿಸಿದ್ದ ಮಹಾಂತಿನ ಮಠಾಧ್ಯಕ್ಷರೂ, ತಪೋನುಷ್ಠಾನನಿಷ್ಠರೂ, ವೈರಾಗ್ಯಸಂಪನ್ನರೂ, ಶಿವಪೂಜಾಲೋಲರೂ, ಬ್ರಹ್ಮಚರ್ಯವ್ರತಶೀಲರೂ ಆದ ಷ|| ಬ್ರ|| ಶ್ರೀ|| ಗಂಗಾಧರಶಿವಾಚಾರ್ಯ ಮಹಾಸ್ವಾಮಿಗಳವರು "ಧರ್ಮರಹಸ್ಯ" ಎಂಬ ವಿಷಯವಾಗಿ ಅನೇಕ ನೈತಿಕ ಧಾರ್ಮಿಕ ಪಾರಮಾರ್ಥಿಕೋಕ್ತಿಗಳಿಂದಲೂ, ಅನೇಕ ಉಪಮಾನೋಪಮೇಯಗಳಿಂದಲೂ, ಶಾಸ್ತ್ರಸಮ್ಮತವಾಗಿಯೂ, ಯುಕ್ತಿಯುಕ್ತವಾಗಿಯೂ 2½ ಘಂಟೆಗಳ ಕಾಲ ಅವಿಶ್ರಾಂತವಾಗಿ ಅಮೋಘವಾದ ಭಾಷಣವನ್ನು ಮಾಡಿದರು. ಸಭೆಗೆ ನೂರಾರು ಜನರು ಕಿಕ್ಕಿರಿದು ಸೇರಿದ್ದರು. ಸಭಿಕರೆಲ್ಲರೂ ಶ್ರೀ ಸ್ವಾಮೀಜಿಯವರ ಭಾಷಣವನ್ನು ಕೇಳಿ ಆನಂದತುಂದಿಲ ಹೃದಯರಾದರು. ಸಾಕ್ಷಾತ್ ಶಿವಸ್ವರೂಪಿಗಳಾದ ಗುರೂಜಿಯವರು ಇದೇ ರೀತಿಯಾಗಿ ಪದೇ ಪದೇ ದೇಶಮಧ್ಯದಲ್ಲಿ ಸಂಚರಿಸಿ ಅಲ್ಲಲ್ಲಿ ಧರ್ಮೋಪದೇಶವನ್ನು ಮಾಡುತ್ತಾ ಜನಸಾಮಾನ್ಯರಲ್ಲಿ ಬೇರೂರಿರುವ ಅಜ್ಞಾನಾಂಧಕಾರವನ್ನು ತೊಡೆದು ತನ್ಮೂಲಕ ಧರ್ಮಜಾಗೃತಿಯನ್ನುಂಟುಮಾಡಬೇಕೆಂದು ಪೂಜ್ಯಪಾದರಲ್ಲಿ ಬಿನ್ನೈಸಿಕೊಳ್ಳುತ್ತೇನೆ. ಧರ್ಮಾಭಿಮಾನಿ.

ಶ್ರೀಮದುಜ್ಜಯಿನಿ ಜಗದ್ಗುರುಗಳವರ ಸಂಸ್ಕೃತ ಪಾಠಶಾಲಾ, ಹೊಳಲಗುಂದಿ

ಜಾಹಿರಾತು

೮ ಸಂವತ್ಸರಗಳಿಂದ ಶಾಲಾ ನಡೆಯುತ್ತಾ ಇದ್ದು, ಹಿಂದಿನ ಸಂವತ್ಸರ ಅಧ್ಯಾಪಕರ ಅನಾನುಕೂಲತೆಯಿಂದ ಶಾಲ ಬಂದುಮಾಡಿದ ವಿಷಯ ಸರ್ವರಿಗೂ ತಿಳಿದ ವಿಷಯವಾಗಿದೆ. ಈ ಸಂವತ್ಸರ ಬೇರೆ ಅಧ್ಯಾಪಕರನ್ನು ನೇಮಿಸಲಾಗಿದೆ. ತಾ|| 12-6-1945 ರಿಂದ ಶಾಲ ಪ್ರಾರಂಭಮಾಡಲಾಗುವುದು. ವಿದ್ಯಾರ್ಥಿಗಳು ಶಾಲಾ ಪ್ರಾರಂಭದ ತೇದಿಗೆ ಮೂರು ದಿನ ಮುಂಚಿತವಾಗಿ ಬಂದು ಸೇರತಕ್ಕದ್ದು.

ಹೊಳಲಗುಂದಿ, 15-5-45. ಗೌಡ್ರ ಬಸವನಗೌಡ, ವ್ಯವಸ್ಥಾಪಕ.

ಚಂದಾದಾರರಲ್ಲಿ ವಿಜ್ಞಾಪನೆ

ಈ ಪತ್ರಿಕೆಯು ಜನ್ಮವೆತ್ತಿ ವೈಶಾಖ ಶು|| ಪಂಚಮಿಗೆ ೧೮ ವರ್ಷಗಳು ತುಂಬಿ ೧೯ ನೆಯ ವರ್ಷವು ಪ್ರಾರಂಭ ವಾಗಿರುವುದು ವರ್ಷಾರಂಭದಿಂದ ಚಂದಾದಾರರಾಗಿ **ರುವ ಸರ್ವರಿಗೂ ಇನ್ನು ಮುಂದೆ ಪತ್ರಿಕೆಯನ್ನು ವಿ. ಪಿ. ಮಾಡಬೇಕಾಗುತ್ತದೆ ವಿ ಪಿ** ಮಾಡುವುದರಿಂದ **ನಮಗೂ ತೊಂದರೆಯಾಗುವುದು** ಹಾಗೂ ಚಂದಾ **ದಾರರಿಗೂ ೫ ಆಣೆ ಹೆಚ್ಚಿಗೆ** ಬೀಳುವುದು ಆದುದರಿಂದ **ಚಂದಾದಾರರೆಲ್ಲರೂ ಕೂಡಲೆ** ೩ ರೂ ಗಳನ್ನು **ಮನಿಯಾರ್ಡರ್** ದ್ವಾರಾ ಕಳುಹಿಸಬೇಕು ಯಾವ **ಗ್ರಾಮದಲ್ಲಿ ವಿಶೇಷ** ಚಂದಾದಾರರಿರುವರೋ ಆ ಗ್ರಾಮ **ದಲ್ಲಿರುವ ಅಭಿಮಾನಿಗಳು** ಚಂದಾದಾರರ ಹಣವನ್ನೆಲ್ಲ **ಒಟ್ಟು** ಕೂಡಿಸಿ ಒಂದೇ ಸಾರೆ ಮನಿಯಾರ್ಡರ್ ಮಾಡಿ **ಸಬೇಕು ಹೀಗೆ ಮಾಡುವುದರಿಂದ** ಸರ್ವರಿಗೂ ಹಿತ ವಾಗುತ್ತದೆ **ಮನಿಯಾರ್ಡರ್** ಮಾಡುವ ಚಂದಾದಾ ರರು ತಮ್ಮ ಹೆಸರಿನ ಪಕ್ಕದಲ್ಲಿರುವ **ನಂಬರನ್ನು ಮಾತ್ರ ದಯೆಯಿಟ್ಟು** ಮರೆಯದೆ ತಿಳಿಸಬೇಕು

ವ್ಯಾ —

ಪಂಚಾಚಾರ್ಯಪ್ರಭಾ.

೧೯೪೫ನೆಯ ಮೇ ತಾ|| ೨೧ನೇ ಸೋಮವಾರ

೧೯ನೆಯ ವರ್ಷದ ಪ್ರಾರಂಭ

ಸನಾತನ ಮತಾನುಯಾಯಿಗಳಿಗೆ ಪರಮಮಾನ್ಯ ಗಳಾದ ಅರವತ್ತು ಸಂವತ್ಸರಗಳಲ್ಲಿ ಪ್ರಥಮನೆನಿಸಿರುವ ಪ್ರಭವನಾಮಸಂವತ್ಸರದ ವೈಶಾಖ ಶುದ್ಧ ೫ ದಿವಸ ಪ್ರಾಪ್ತವಾಗುವ ಶ್ರೀಜಗದ್ಗುರು ಪಂಚಾಚಾರ್ಯರ ಜಯಂತೀರೂಪವಾದ ಪುಣ್ಯದಿವಸದಲ್ಲಿ ವೀರಶೈವ ಮತೋದ್ಧಾರಕ್ಕಾಗಿ ಅವತಾರವೆತ್ತಿರುವ ಪಂಚಾಚಾರ್ಯ ಪ್ರಭಾನಾಮಕವಾದೀಪತ್ರಿಕೆಗೆ ೧೮ ವರುಷ ಗಳು ತುಂಬಿ ಈ ದಿವಸ ೧೯ ನೆಯ ವರ್ಷ ಪ್ರಾರಂಭ ವಾಗಿರುವುದು

ಶ್ರೀಜಗದ್ಗುರು ಪಂಚಾಚಾರ್ಯರ ಕೃಪಾಫಲಸ್ವರೂಪ ವಾಗಿರುವೀಪತ್ರಿಕೆಯು ಆ ಮಹಾತ್ಮರ ಅನುಗ್ರಹಬಲ ದಿಂದ ಯಾವ ತೊಂದರೆಯೂ ಇಲ್ಲದೆ ಅವಿಚ್ಛಿನ್ನವಾಗಿ ಪ್ರಕಟವಾಗುತ್ತಿರುವುದನ್ನು ಕಂಡು ಭರತಖಂಡದಲ್ಲಿರುವ ಸಮಸ್ತ ಗುರುಭಕ್ತರೂ ಆನಂದೋದ್ಗಾರವನ್ನು ಮಾಡು ತ್ತಿರುವುದನ್ನು ನೋಡಿ ಸಂತೋಷಪಡಬೇಕಾಗಿದೆ

ಜಗದ್ವಿಖ್ಯಾತರಾದ ಶ್ರೀಜಗದ್ಗುರು ಪಂಚಾಚಾರ್ಯರ ನಾಮಸಂಕೀರ್ತನವು ನಾಸ್ತಿಕಮಯವಾದ ಈ ಕಾಲ ದಲ್ಲಿ ಲುಪ್ತಪ್ರಾಯವಾಗಿದ್ದುದನ್ನು ಕಂಡು ಅವರ ಪವಿತ್ರಾಭಿಧಾನದಿಂದ ಪ್ರಕಾಶಿಸುತ್ತಿರುವೀಪತ್ರಿಕೆಯು ತನ್ನ ಅತ್ಯುಜ್ವಲಲೇಖಗಳ ದ್ವಾರಾ ಆ ಮಹಿಮರ ಪವಿತ್ರನಾಮಸಂಕೀರ್ತನವು ದಶದಿಕ್ಕುಗಳಲ್ಲಿ ಹರಡು **ವಂತೆ ಮಾಡಿತು ಜಾತಿಸಾಂಕರ್ಯ ಪ್ರಘಾತದಿಂದ ಜರ್ಝರಿತವಾಗುತ್ತಿರುವ ಸನಾತನಧರ್ಮದ ರಕ್ಷಣೆಯ ವಿಷಯದಲ್ಲಿ ಅನೇಕಾನೇಕ ಲೇಖಗಳನ್ನು ಪ್ರಕಟಪಡಿಸಿ, ಜಾತಿಸಾಂಕರ್ಯವಾದಿಗಳ ದುರಭಿಪ್ರಾಯವನ್ನು ಆಮೂ ಲಾಗ್ರವಾಗಿ ಖಂಡಿಸಿ ನಮ್ಮೀ ಭರತಭೂಮಿಯಲ್ಲಿ ವರ್ಣಾಶ್ರಮವಿಭಾಗವು ಅನಾದಿಕಾಲದಿಂದಲೂ ರೂಢ ಮೂಲವಾಗಿರುವದೆಂಬ ಅಭಿಪ್ರಾಯವನ್ನು ನಿಗಮಾಗ ಮಾದಿ ಪ್ರಮಾಣಗಳ ದ್ವಾರಾ ಬೋಧಿಸಿ ಮಹಾಜನ ಗಳ ಮನಸ್ಸನ್ನು ಸನಾತನಧರ್ಮದ ವಿಷಯದಲ್ಲಿ ಪ್ರೇಮ ಭರಿತವಾದುದನ್ನಾಗಿಮಾಡಿತು ಪ್ರತಿಯೊಬ್ಬರ ಹೃದಯ ಭೂಮಿಯಲ್ಲಿ ಗುರುದೇವತಾಭಕ್ತಿರೂಪವಾದ ಬೀಜ ವನ್ನು ಬಿತ್ತಿ, ಅಂಕುರಿಸಿ, ಪಲ್ಲವಿಸಿ, ಫಲಿಸುವಂತೆ ಮಾಡಿತು ಅತ್ಯಂತ ಕಠಿಣವಾಗಿರುವ ವೀರಶೈವ ಸಿದ್ಧಾಂತರಹಸ್ಯವನ್ನು ಸರ್ವರಿಗೂ ತಿಳಿಯುವಂತಹ ಸುಗಮವಾದ ಭಾಷಾಶೈಲಿಯಿಂದ ಬೋಧಿಸಿ ಅನೇಕ ರನ್ನು ಸ್ವಸಿದ್ಧಾಂತತತ್ವಜ್ಞರನ್ನಾಗಿಮಾಡಿತು**

ಈ ರೀತಿಯಾಗಿ ಈ ಪತ್ರಿಕೆಯು ತಾನು ಜನ್ಮವೆತ್ತಿ ದಂದಿನಿಂದ ಇಲ್ಲಿಯವರೆಗೆ ಸನಾತನಧರ್ಮೋದ್ಧಾರ ಕಾರ್ಯಗಳನ್ನು ಮಾಡುತ್ತ ಸಮಸ್ತ ಸನಾತನಮತಾನು ಯಾಯಿಗಳ ಪರಮಪ್ರೇಮಕ್ಕೆ ಕಾರಣವಾಗಿರುವುದು ಮತೋದ್ಧಾರಕ್ಕಾಗಿ ಮತಾಚಾರ್ಯರ ಪವಿತ್ರಾಭಿಧಾನ ದಿಂದ ಪ್ರಕಾಶಿಸುತ್ತಿರುವ ಈ ಪತ್ರಿಕೆಯು ಚಿರಕಾಲ ಬಾಳಲೆಂಬ ಸದುದ್ದೇಶದಿಂದ ಅನೇಕ ಜನ ಗುರುಭಕ್ತಿ ಧುರೀಣರು ಈ ಪತ್ರಿಕೆಯ ಅಭಿವೃದ್ಧಿಗಾಗಿ ಲಿಂಗ ಧಾರಣ, ದೀಕ್ಷಾ, ವಿವಾಹಾದಿ ಶುಭಕಾರ್ಯಗಳಲ್ಲಿ ತಮ್ಮ ತಮ್ಮ ಶಕ್ತ್ಯನುಸಾರವಾಗಿ ದ್ರವ್ಯವನ್ನು ಸಮರ್ಪಿ ಸುತ್ತಿರುವುದು ಪ್ರತಿಯೊಬ್ಬರಿಗೂ ತಿಳಿದ ವಿಷಯವಾಗಿದೆ ಇದೇ ರೀತಿಯಾಗಿ ಸಮಸ್ತ ಗುರುಭಕ್ತರೂ ಈ ಪತ್ರಿ ಕೆಯ ಅಭಿವೃದ್ಧಿ ವಿಷಯದಲ್ಲಿ ಕಾಯ ವಾಙ್ಮನಸ್ಸುಗಳಿಂದ ಸಹಾಯಮಾಡಿ, ಶ್ರೀಜಗದಾಚಾರ್ಯರ ಕೃಪಾಕಟಾ ಕ್ಷಕ್ಕೆ ಪಾತ್ರರಾಗಬೇಕೆಂದಾಶಿಸುತ್ತೇವೆ ಈಗ ಪ್ರಾಪ್ತ ವಾಗಿರುವ ಘೋರಯುದ್ಧದಿಂದ ಕಾಗದ ಮೊದಲಾದವು ಗಳ ಬೆಲೆಯು ವಿಪರೀತವಾಗಿ ಏರಿಹೋಗಿದೆ ಇದರಿಂದ ಪತ್ರಿಕೆಗೆ ವಿಶೇಷ ನಷ್ಟವಾಗುವುದೆಂಬುದು ಪ್ರತಿಯೊಬ್ಬ ರಿಗೂ ತಿಳಿಯತಕ್ಕ ವಿಷಯವೇ ಆಗಿದೆ ಇಂತಹ ಕಠಿನ ಸಮಯದಲ್ಲಿ ಅಭಿಮಾನಿಗಳು ನಾನಾರೀತಿಯಿಂದ ಹೆಚ್ಚು ಸಹಾಯಮಾಡಿದರೆ ಪತ್ರಿಕೆಯು ನಿರಾತಂಕ ವಾಗಿ ನಡೆಯುವದು ಈ ವಿಷಯವನ್ನು ಅಭಿಮಾನಿ ಗಳಾದವರು ಮುಖ್ಯವಾಗಿ ಗಮನದಲ್ಲಿಡಬೇಕು ಅಸ್ತು! ಶ್ರೀ ಜಗದಾಚಾರ್ಯರು ಸದಾ ತಮ್ಮ ಸೇವೆಯಲ್ಲೇ ನಿರತವಾಗಿರುವ ಈ ಪತ್ರಿಕೆಗೆ ಜಯಾಶೀರ್ವಾದಗಳನ್ನ ನುಗ್ರಹಿಸಿ, ಇದರ ವೈಭವವು ಸರ್ವತ್ರ ವ್ಯಾಪಿಸುವಂತೆ ಮಾಡಲೆಂದು ಆ ಪೂಜ್ಯಪಾದರನ್ನು ಅನನ್ಯಸಾಧಾರಣ ವಾದ ಭಕ್ತಿಭಾವದಿಂದ ಪ್ರಾರ್ಥಿಸುತ್ತೇವೆ

ಯುದ್ಧವಾರ್ತೆ.

ಮಿತ್ರರ ಆಶ್ರಯದಲ್ಲಿ ಜರ್ಮನ್ ಸರಕಾರ ಚರ್ಚಿಲ್‌ರ ವಿವರಣೆ

ಬ್ರಿಟಿಷ ಪ್ರಧಾನಿ ಚರ್ಚಿಲ್ಲರು ಕಾಮನ್ಸ್ ಸಭೆಯಲ್ಲಿ ಮಾತನಾಡುತ್ತ ಜರ್ಮನಿಯಲ್ಲಿ ಮಿತ್ರರಾಷ್ಟ್ರಗಳಿಗೆ ಅಧೀನವಾದ ಜರ್ಮನರಿಂದ ಕೂಡಿದ ಸರಕಾರ ಏರ್ಪಡುವುದು ಜರ್ಮನ್ ಸ್ವಂತ ವ್ಯವಸ್ಥೆಯನ್ನು ಸಮಗ್ರವಾಗಿ ಶಿಸ್ತಿನವಾಗಿ ನೆಲಸಮ ಮಾಡಲಾಗು ವುದು ಜರ್ಮನಿಯ ಆಡಳಿತವನ್ನು ನಾವೇ ನೇರವಾಗಿ ನಿರ್ವಹಿಸುವ ಹೊಣೆ ಹೊರುವುದಕ್ಕಿಂತ ನಮ್ಮ (ಮಿತ್ರರ) ಹತೋಟಿಯಲ್ಲಿ ಜರ್ಮನರೇ ಆಡಳಿತ ನಡೆಸುವಂತ ಏರ್ಪಡಿಸುವುದು ಉತ್ತಮ ಎಂದು ಹೇಳಿದರು ಮುಂದು ವರಿದ ಪ್ರಸ್ತುತ ಡೊನಿಟ್ಜನ ಸರ್ಕಾರವೆಂಬುದಾಗಿ ಕರೆಯುತ್ತಿರುವ ಡೊನಿಟ್ಜ್ ಮಂಡಲದ ವಿಚಾರದಲ್ಲಿ ಬ್ರಿಟಿಷ್ ಮತ್ತು ಮಿತ್ರರ ಅಭಿಪ್ರಾಯ ಏನೆಂಬು ದನ್ನು ಸ್ಪಷ್ಟಪಡಿಸಿದರು ಡೊನಿಟ್ಜ್‌ನ ಮಂಡಳವನ್ನು ಸರ್ಕಾರವೆಂಬುದಾಗಿ ಮಿತ್ರರು ಒಪ್ಪಿಕೊಂಡಿಲ್ಲ ಆತನ ಯುದ್ಧೋದ್ಯಮ ಚರಿತ್ರೆಯನ್ನು ಇನ್ನೂ ಪರಿಶೀಲಿಸ ಲಾಗುತ್ತಿದೆ ಯುದ್ಧ ಪಾತಕದ ಆರೋಪ ಹೊರಿಸಿ ಡೊನಿಟ್ಜನನ್ನು ವಿಚಾರಣೆಗೆ ಗುರಿಪಡಿಸಬೇಕೆ ಬೇಡವೆ ಎಂಬುದು ಇನ್ನೂ ನಿಶ್ಚಿತವಾಗಿಲ್ಲ ಆದುದರಿಂದ ನಮ್ಮ ಅನುಮತಿ ಇನ್ನೂ ಲಭಿಸುವಂತಿಲ್ಲ ಜರ್ಮನ್ ಸೇನಾ ರಚನೆಯನ್ನು ಸಂಪೂರ್ಣವಾಗಿ ನಾಶಮಾಡ ಬೇಕೆಂದು ಯಾಲ್ಟಾ ಸಮ್ಮೇಳನ ಕಾಲದಲ್ಲಿ ಮಿತ್ರರಲ್ಲಿ ಒಪ್ಪಂದವಾಯಿತು ನೌಕಾಧಿಪತಿ ಡೊನಿಟ್ಜ್‌ನು ಜರ್ಮ ನ್‌ಸೇನಾಮಂಡಲದ ಪ್ರಧಾನಸದಸ್ಯರಲ್ಲೊಬ್ಬ ಆದ್ದ ರಿಂದ ಆತನ ಸರ್ಕಾರವನ್ನು ಒಪ್ಪುವ ಬಿಡುವ ಮಾತು ಯೋಚನಾರ್ಹವಾದದ್ದು' ಎಂದು ವಿವರಿಸಿದರು

ನಾಜಿ ನಾಯಕರ ಶೋಧನೆ

ವಾಯುವ್ಯ ಜರ್ಮನಿಯಲ್ಲಿ ಗೆಸ್ಟಪೋ ಮುಖಾಧಿ ಕಾರಿಗಳನ್ನೂ ಮತ್ತು ನಾಜಿ ಪಕ್ಷದ ನಾಯಕರನ್ನೂ ಹಿಡಿಯಲು ಅಸಾಧ್ಯ ಶೋಧನೆ ನಡೆಯುತ್ತಿದೆ ಹಿಟ್ಲ ರನು ಬಂದಿಯಾಗಿರಿಸಿದ್ದ ಅನೇಕರನ್ನು ಬಿಡುಗಡೆಮಾಡಿ ಸೆರೆಗೆ ಕಾವಲಿದ್ದವರನ್ನು ಈಗ ಒಳಕ್ಕೆ ದೂಡಲಾಗಿದೆ! ಜರ್ಮನ್ ಪೋಲೀಸ್ ದಳದ ಪುನರ್ವ್ಯವಸ್ಥೆ ನಡೆದಿದೆ ಮಿತ್ರ ಮಿಲಿಟರಿ ಸರಕಾರದವರು ಮಾಡಿದ ಆಜ್ಞೆ ಯನ್ನು ಮುರಿದುದಕ್ಕಾಗಿ ಜರ್ಮನ್ ಪೋಲೀಸ್ ಅಧಿ ಕಾರಿಗಳು ತಮ್ಮ ದೇಶ ಬಾಂಧವರನ್ನೂ ಬಂಧಿಸಿದ್ದಾರೆ.

ಆಕ್ರಮಿತ ಸೇನೆಯು ಉಪಯೋಗಿಸಿ ಉಳಿದಿದ್ದು ಜರ್ಮನಿಯ ಬಳಕೆಗೆ

ಜರ್ಮನಿಯಲ್ಲಿ ನೆಲೆಯಾಗಿ ಉಳಿಯುವ ಮಿತ್ರರ ಆಕ್ರಮಣ ಸೇನೆಯ **ಊಟೋಪಚಾರಾದಿಗಳಿಗೂ** ಅದಕ್ಕೆ ಬೇಕಾದ ಸಾಮಗ್ರಿಗಳನ್ನೂ ಒದಗಿಸುವುದಕ್ಕಾ ಗಿಯೂ **ಜರ್ಮನಿಯ ವ್ಯಾಪಾರ, ಕೈಗಾರಿಕೆ, ಜನಬಲ** ಆಹಾರ ಸಂಪತ್ತಿಗಳನ್ನು ರೂಢಿಸುವ **ಯೋಜನೆಯು** ಕಾರ್ಯರೂಪಕ್ಕೆ ಬಂದಿದೆ **ಮಿತ್ರರ ಆವಶ್ಯಕತೆಗಳೆಲ್ಲ ಪೂರೈಸುವವರೆಗೂ ಜರ್ಮನಿಗೆ ಅವರ ತಯಾರಿಕೆಯಲ್ಲಿ ಏನೊಂದು ಪದಾರ್ಥವನ್ನು ಕೊಡುವುದಿಲ್ಲ ಈ ಅವಶ್ಯ ಕತೆಗಳು ಪೂರೈಸಿದ ನೇಲೆ ಉಳಿಯುವ ವಸ್ತುಗಳನ್ನು ಮಾತ್ರ ಜರ್ಮನಿಯು ಬಳಸಿಕೊಳ್ಳಬಹುದು ಇದುವರೆಗೆ** ಜರ್ಮನರು ಬೇರೆ ದೇಶಗಳಿಂದ ಜನರನ್ನು ಹಿಡಿದು ಕೊಂಡು ಬಂದು ಬಲಾತ್ಕಾರವಾಗಿ **ಗುಲಾಮರಂತೆ** ದುಡಿಸಿಕೊಳ್ಳುತ್ತಿದ್ದರು **ಈಗ ಅವರನ್ನೆಲ್ಲಾ ಅವರವರ** ದೇಶಗಳಿಗೆ ಕಳಿಸಿದೆ **ಜರ್ಮನ್ ಯುದ್ಧ ಬಂಧಿಗಳು** ಇನ್ನು ಮುಂದೆ ಈ ಜಾಗದಲ್ಲಿದ್ದುಕೊಂಡು ದುಡಿಯ ಬೇಕಾಗಿದೆ ಮತ್ತೆ ಕೆಲವರನ್ನು ಹೆಚ್ಚಿಗೆ ಆಹಾರ ಬೆಳೆ ಯಲು ಉಪಯೋಗಿಸಿಕೊಳ್ಳಲಾಗುವುದು

ಡಾನೆಟ್ಸ್ ಗೋರಿಂಗ್ ಇಬ್ಬರೂ ಯುದ್ಧ ಖೈದಿಗಳು

ಜರ್ಮನಿಯ ಪ್ರಧಾನಾಧಿಕಾರಿ ಗ್ರಾಂಡ್ ಅಡ್ಮಿರಲ್ ಡಾನಟ್ಸ್ ಫೀಲ್ಡ್ ಮಾರ್ಷಲ್ ಗೋರಿಂಗ್ ಇಬ್ಬರೂ ಯುದ್ಧ ಖೈದಿಗಳಾಗಿದ್ದಾರೆಂದೂ, **ಡಾನೆಟ್ಸ್** ಮತ್ತು ಇತರ ಹಲವು ಜರ್ಮನ್ ಅಧಿಕಾರಿಗಳನ್ನು ಹಂಗಾಮಿ ಯಾಗಿ ಕೆಲವು ಕೆಲಸಗಳನ್ನು ನಿರ್ವಹಿಸಲು ಉಪಯೋ ಗಿಸಿಕೊಳ್ಳುತ್ತಿರುವುದಾಗಿಯೂ ಲೆ|| ಜನರಲ್ ಕ್ಲೇರವರು ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದರು ಗೋರಿಂಗರನ್ನು ಬೇರೆ ಕಡೆಗೆ ಸಾಗಿಸಿ ಅವರನ್ನು ಬಂಧನದಲ್ಲಿಟ್ಟಿರುವದಾಗಿ ತಿಳಿಸಿದರು ಹಿಟ್ಲರ್ ಕಾಲದಲ್ಲಿ ಜರ್ಮನ್ ಕಾರ್ಮಿಕ ಸಚಿವರಾಗಿದ್ದ **ಡಾ||** ರಾಬರ್ಟ್‌ಲೇಯವರು **ಅಮೇರಿ** ಕನ್ ೭ನೇ ಸೇನೆಗೆ ಬರ್ಕೆಟ್ಸ್ ಗ್ಯಾಡೆನ್ನಿಗೆ ೨೫ **ಮೈಲಿ** ದೂರದಲ್ಲಿ ಸರ ಸಿಕ್ಕಿರುವರು

ಭಾರತೀಯ ನಾವಿಕನಿಗೆ ಸಮ್ರಾಟರಿಂದ ಪ್ರಶಸ್ತಿ

ಮಹಮದ್ ಕಾಕಾ ಎಂಬ ಭಾರತೀಯ ನಾವಿಕನಿಗೆ ಬಕಿಂಗ್ಹಾಂ ಅರಮನೆಯಲ್ಲಿ ಸಮ್ರಾಟರು ಬ್ರಿಟೀಷ್ ಸಾಮ್ರಾಜ್ಯ ಪದಕವನ್ನು ಬಹುಮಾನಿಸಿದರು ಭಾರ ತೀಯ ನಾವಿಕರು ಈ ರೀತಿ ಉನ್ನತಗೌರವ ಪಡೆದದ್ದು ಇದೇ ಮೊದಲ ಸಲ

ಚರ್ಚಿಲರಿಗೆ ಡಿವ್ಯಾಲೆರಾರವರ ಉತ್ತರ

“ ಕೆಲವು ಸಂದರ್ಭಗಳಲ್ಲಿ ಐರ್ಲೆಂಡಿನ ತಾಟಸ್ಥ್ಯ ವನ್ನು ಮುರಿದುಹಾಕಿಬಿಡಬಹುದಾಗಿತ್ತೆಂದೂ ಆ ರೀತಿ ಮಾಡಬೇಕಾದ್ದು ಬ್ರಿಟನ್ನಿಗೆ ಅವಶ್ಯಕವಾಗಿತ್ತೆಂದೂ ಆದರೆ ಬ್ರಿಟನ್ನು ಉದಾರ ನೀತಿ ಅನುಸರಿಸಿ ಆ ರೀತಿ ಮಾಡಲಿಲ್ಲವೆಂದೂ ಚರ್ಚಿಲರು ಹೇಳಿದ್ದಕ್ಕೆ ಐರ್ಲೆಂ ಡಿನ ಪ್ರಧಾನಿ ಎಮ್ ಡಿ ವೇಲರಾರವರು ಉತ್ತರ ಕೊಡುತ್ತ “ ಬ್ರಿಟನ್ನಿಗೆ ಅವಶ್ಯಕತೆ ಒದಗಿದಾಗ ಆ ರೀತಿ ವರ್ತಿಸುವುದು ನ್ಯಾಯಸಮ್ಮತವಾಗುವುದಾದರೆ, ಅದೊಂದೇ ಅದರ ನೈತಿಕ ತತ್ವವಾದರೆ ಇತರ ರಾಷ್ಟ್ರ ಗಳ ಹಕ್ಕುಬಾಧ್ಯತೆಗಳನ್ನು ಚರ್ಚಿಲರು ಮೂಲೆ ಪಾಲು ಮಾಡಬೇಕೇನು, ಇದು ಸರಿಯಾದ ನೀತಿಯೆ? ಸ್ವದೇ ಶದ ಹಿತರಕ್ಷಣೆಗಾಗಿ ಇತರ ರಾಷ್ಟ್ರಗಳ ಹಕ್ಕುಬಾಧ್ಯತೆ ಗಳಿಗೆ ಚ್ಯುತಿ ತರುವುದು ನ್ಯಾಯಸಮ್ಮತವಲ್ಲ. ಈ

ಧೋರಣೆಯಿಂದಲೇ ಒಂದನೆಯ ವಿಶ್ವ ಸಂಗ್ರಾಮ ನಡೆಯಿತು; ಎರಡನೆಯ ವಿಶ್ವ ಸಂಗ್ರಾಮವು ಪ್ರಾರಂಭವಾಗಿ ಪೂರ್ವಾರ್ಧಾಂಕ ಮುಗಿದಿದೆ, ಮುಂದೆಯೂ ಇದೇ ಧೋರಣೆಯನ್ನು ಅನುಸರಿಸಿದರೆ ಮೂರನೆಯ ವಿಶ್ವ ಸಂಗ್ರಾಮವಾಗುವುದೂ ಖಂಡಿತ" ಎಂದರು

ರಷ್ಯದಮೇಲೆ ಯುದ್ಧ ಮಾಡಬಾರದು

ಚರ್ಚಿಲರ ಭಾಷಣದ ಮೇಲೆ ನ್ಯೂಯಾರ್ಕ್ ಡೈಲಿ ನ್ಯೂಸ್ ಪತ್ರಿಕೆ ಅಗ್ರಲೇಖನ ಬರೆದು, "ಯೂರೋಪಿನಲ್ಲಿ ರಷ್ಯದ ಬಲವನ್ನು ಕಡಿಮೆಮಾಡಲು ರಷ್ಯದಮೇಲೆ ಯುದ್ಧ ಹೂಡುವ ಆಲೋಚನೆಯನ್ನು ಚರ್ಚಿಲರು ಮಾಡುತ್ತಿರುವಂತಿದೆ ಯೂರೋಪಿನಲ್ಲಾಗಲಿ ಏಷ್ಯಾದಲ್ಲಾಗಲಿ ರಷ್ಯನರಮೇಲೆ ಯುದ್ಧ ಮಾಡುವುದು ನಮ್ಮ ಕರ್ತವ್ಯವಲ್ಲ" ಎಂದು ತಿಳಿಸಿದೆ

ಅಲ್ಜೀರಿಯಾದಲ್ಲಿ ದಂಗೆ

ಅಲ್ಜೀರಿಯದ ಟೌನ್‌ನಲ್ಲಿ ಮೇ ೧ರಲ್ಲಿ ನಡೆದ ದಂಗೆಯ ವಿವರ ಈಗ ತಿಳಿಯುತ್ತಿದೆ ಅಂದು ಕೆಲಸಗಾರರ ದಿನಾಚರಣೆಯ ನಿಮಿತ್ತ ಮೆರವಣಿಗೆ ನಡೆಯಿತು ಆಗ ದಂಗೆಯು ಪ್ರಾರಂಭವಾಗಿ ಕೊನೆಗೆ ಪೋಲೀಸರು ಹೋಗಿ ದಂಗೆಯನ್ನಡಗಿಸಬೇಕಾಯಿತು ಯೂರೋಪಿಯನ್ನರ ಮೇಲೆ ದಂಗೆ ನಡೆದು ನೂರಾರು ಜನರು ಕೊಲೆ ಮಾಡಲ್ಪಟ್ಟರು ದಂಗೆಯನ್ನಡಗಿಸಲು ಸೈನ್ಯವನ್ನು ಕರೆಸಿ ಶಸ್ತ್ರಾಸ್ತ್ರಗಳನ್ನು ಉಪಯೋಗಿಸಬೇಕಾಯಿತು ಈಗ ದಂಗೆ ನಿಂತು ಶಾಂತಿ ನೆಲೆಸಿದ್ದರೂ ಇದಕ್ಕೆ ಮುಖ್ಯ ಕಾರಣವಾದ ಕ್ಷಾಮ ಇನ್ನೂ ಇದ್ದೇ ಇದೆ ಆಹಾರ ಸರಬರಾಜು ಅಧಿಕಾರಿಯೊಬ್ಬರು ತಿಳಿಸುವಂತೆ ಪ್ರತಿದಿನ ೧೦ ಸಾವಿರ ಟನ್ ಆಹಾರವನ್ನು ಅಲ್ಲಿಗೆ ಒಂದು ತಿಂಗಳ ಕಾಲ ಒದಗಿಸಿದರೆ ಅಲ್ಲಿಯ ಕ್ಷಾಮ ಸ್ವಲ್ಪ ಕಡಿಮೆಯಾದೀತು ಇಲ್ಲದಿದ್ದರೆ ಕ್ಷಾಮ ಭಯಂಕರವಾಗುವುದು ಎಂದು ಹೇಳಿದ್ದಾರೆ

ರಷ್ಯನ್ ಪ್ರತಿನಿಧಿಗಳ ಮೂಲಕ ಜಪಾನರ ಶಾಂತಿ ಸಲಹೆ

ಜಪಾನು ಬ್ರಿಟನ್ನು ಮತ್ತು ಅಮೆರಿಕಗಳಿಗೆ ಶಾಂತಿ ಸಲಹೆಯೊಂದನ್ನು ಕಳುಹಿಸಿದೆಯೆಂದು ಅಧಿಕೃತವಾಗಿ ಗೊತ್ತಾಗಿದೆ ಜಪಾನು ಯಾವಷರತ್ತೂ ಇಲ್ಲದ ಶರಣಾಗಬೇಕೆಂದು ಮಿತ್ರದೇಶಗಳು ತಿಳಿಸಿವೆಯಷ್ಟೆ ಜಪಾನರ ಸಲಹೆ ಅದಕ್ಕೆ ಅನುಗುಣವಾಗಿ ಇಲ್ಲದ್ದರಿಂದ ಅದನ್ನು ಮಿತ್ರ ದೇಶಗಳು ತಳ್ಳಿಹಾಕಿವೆ ಅನೇಕ ಮಂದಿ ಜಪಾನರು ಒಂದು ಮೆಮೊರ್ಯಾಂಡಂನಲ್ಲಿ ಶಾಂತಿ ಸಲಹೆಯನ್ನು ಅಡಕಗೊಳಿಸಿ, ಮಾಸ್ಕೋವಿಗೆ ತೆರಳಿ ರಷ್ಯಾ ಸರ್ಕಾರಕ್ಕೆ ಒಪ್ಪಿಸಿದರೆಂದು ರಷ್ಯ ರಾಯಭಾರಿಗಳ ಮೂಲಕ ಈ ಶಾಂತಿ ಸಲಹೆ ಸಾನ್ ಫ್ರಾನ್ಸಿಸ್ಕೋವನ್ನು ಮುಟ್ಟಿತೆಂದು ಹೇಳಲಾಗಿದೆ

ಬರ್ಮಾದಲ್ಲಿ ಸುಮಾರು ೨ ಲಕ್ಷ ಜಪಾನೀಯರ ನಾಶ

ಬರ್ಮಾ ಯುದ್ಧದಲ್ಲಿ ಬಹಳ ಮಂದಿ ಜಪಾನೀಯರು ರಣರಂಗಕ್ಕೆ ಬಲಿಯಾದರೆಂದು ಭಾವಿಸಲಾಗಿದೆ ೧೯೪೪ನೇ ಫೆಬ್ರವರಿ ೧ ರಿಂದ ೧೯೪೫ನೇ ಮೇ ೧೪ರ ವರೆಗೆ ಕನಿಷ್ಠಪಕ್ಷ ೧೯೫೩೨೮ ಮಂದಿ ಜಪಾನೀಯರು ಮಡಿದಿರಬೇಕೆಂಬುದಾಗಿ ಅಧಿಕೃತ ಪ್ರಕಟಣೆ ಹೊರಟಿದೆ

ಓಕಿನಾವಾದಲ್ಲಿ ೪೭೦೦೦ ಜಪಾನರ ನಾಶ

ಓಕಿನಾವಾದಲ್ಲಿ ರಾಜಧಾನಿ ನಾಹರ್ ಸುತ್ತ ಅಮೆರಿಕನ್ ದಳಗಳು ಸ್ವಲ್ಪ ಮುಂದುವರಿದಿವೆ ಈ ದ್ವೀಪದಲ್ಲಿ ಜಪಾನರ ಕೈಯಲ್ಲಿ ಉಳಿದಿರುವ ಕಟ್ಟಕಡೆಯ ವಿಮಾನ ನಿಲ್ದಾಣಕ್ಕೆ ೫ ಮೈಲಿ ಸಮೀಪಕ್ಕೆ ಅಮೆರಿಕನರು ಬಂದಿದ್ದಾರೆಂಬುದಾಗಿ ಹೇಳಲಾಗುತ್ತಿದೆ ಈ ದ್ವೀಪದ ಯುದ್ಧದಲ್ಲಿ ಇದುವರೆಗೆ ೪೭ ಸಾವಿರ ಜಪಾನರಿಗೆ ಸಾವುನೋವು ಉಂಟಾಗಿದೆಯೆಂದೂ ಅವರ ಸಂಖ್ಯೆಯ ಅರ್ಧದಷ್ಟು ಸಂಖ್ಯೆಯ ಅಮೆರಿಕನರು ಸಾವುನೋವಿಗೆ ಗುರಿಯಾಗಿರುವರೆಂದೂ ನೌಕಾಧಿಪತಿ ನಿಮಿಟ್ಜರ ಕಛೇರಿಯ ಪ್ರಕಟನೆಯು ತಿಳಿಸುತ್ತದೆ

ಬರ್ಮಾದ ಭಾವೀ ರಾಜ್ಯಾಂಗ

ಬರ್ಮಾದಲ್ಲಿ ಘಟನಾತ್ಮಕ ಸರ್ಕಾರವನ್ನು ಸ್ಥಾಪಿಸುವ ಸಂಬಂಧವಾಗಿ ಬ್ರಿಟಿಷ್ ನೀತಿಯನ್ನು ವಿವರಿಸುವ ಶ್ವೇತ ಪತ್ರವೊಂದನ್ನು ಭಾರತದ ಕಾರ್ಯದರ್ಶಿ ಶ್ರೀ ಎಲ್ ಎಸ್ ಅಮೆರಿಯವರು ಪಾರ್ಲಿಮೆಂಟಿನ ಮುಂದಿಟ್ಟರು ಬ್ರಿಟಿಷ್ ಸಾಮ್ರಾಜ್ಯದಲ್ಲಿದ್ದುಕೊಂಡು ಸಂಪೂರ್ಣ ಸ್ವರಾಜ್ಯವನ್ನು ಅನುಭವಿಸುವಂತಹ ರಾಜ್ಯಾಂಗವನ್ನು ಬರ್ಮಾಕ್ಕೆ ನೀಡುವುದೇ ಈ ಸಲಹೆಗಳ ಅಂತಿಮ ಗುರಿಯೆಂದು ಹೇಳಲಾಗಿದೆ

ಐ. ಟಿ ಎಲ್ ಲ್ಯಾಬರೇಟರಿಯಲ್ಲಿ ಬೆಂಕಿ ಅನಾಹುತ

17ನೆಯ ತಾರೀಖು ಸಾಯಂಕಾಲ 5 ಘಂಟೆಸಮಯದಲ್ಲಿ ಬೆಂಗಳೂರು ಮಲ್ಲೇಶ್ವರದಲ್ಲಿರುವ ಇಂಡಸ್ಟ್ರಿಯಲ್ ಮತ್ತು ಟೆಸ್ಟಿಂಗ್ ಲ್ಯಾಬರೇಟರಿಯಲ್ಲಿ ಆಕಸ್ಮಾತ್ ಬೆಂಕಿ ಕಾಣಿಸಿಕೊಂಡು ಕೂಡಲೇ ಲ್ಯಾಬರೇಟರಿಯನ್ನೆಲ್ಲಾ ಆವರಿಸಿಕೊಂಡಿತು. ಪಕ್ಕದಲ್ಲೇ ಇದ್ದ ಅಲ್ಲಿನ ಸ್ಟೋರ್ಸ್ ಅಧಿಕಾರಿ ಶ್ರೀ|| ಶಾಮಣ್ಣ ಎಂಬುವರು ಬಾಗಿಲು ಹಾಕಿಕೊಂಡು ಹೊರಗೆ ಬರುತ್ತಿದ್ದಾಗ ಲ್ಯಾಬರೇಟರಿ (ಅದಕ್ಕೆ ಬೀಗ ಹಾಕಿತ್ತು) ಯೊಳಗೆ ಆಸ್ಫೋಟನೆಯಾಗಿ ಬೆಂಕಿ ಹತ್ತಿಕೊಂಡಿತೆಂದು ಗೊತ್ತಾಗಿದೆ ಕೂಡಲೆ ಎ ಆರ್ ಪಿ ಬೆಂಕಿ ಆರಿಸುವ ದಳದವರನ್ನು ಕರೆಸಲಾಯಿತು ಮಲ್ಲೇಶ್ವರಂ ಪೋಲಿಸರೂ ಬೆಂಕಿ ಆರಿಸುವ ದಳದವರೂ ರಾತ್ರಿ ೭ ೩೦ ಗಂಟೆ ವರೆಗೆ ಶ್ರಮವಹಿಸಿ ಬೆಂಕಿಯನ್ನು ಆರಿಸಿ ಇತರ ಭಾಗಗಳಿಗೆ ಹರಡದಂತೆ ಮಾಡಿದರು ಸುಮಾರು ೧೦೦೦೦ ರೂ ವರೆಗೆ ನಷ್ಟ ಉಂಟಾಗಿದೆ ಎಂದು ಅಂದಾಜಾಗಿದ ಬೆಂಕಿ ಆರಿಸುವವರ ದಕ್ಷತೆಯಿಂದ ಸ್ಟೋರ್ಸ್‌ನಲ್ಲಿದ್ದ ಲಕ್ಷಾಂತರ ರೂಪಾಯಿಗಳ ಸಾಮಾನುಗಳು ನಷ್ಟವಾಗುವುದು ತಪ್ಪಿತು ಎಂದು ಹೇಳಲಾಗಿದೆ

ಶ್ರೀ ಜಗದ್ಗುರು ಕಾಶೀಪೀಠಕ್ಕೆ ಕಾಣಿಕೆ

ಪ್ರಭೆಯಲ್ಲಿ ಕಾಶೀಪೀಠದ ಸಮಾಚಾರವೆಲ್ಲವೂ ಈ ಹಿಂದೆ ಪ್ರಕಾಶಿತವಾಗಿದೆ ಅದರಂತೆ ಗುರುಭಕ್ತರು ಗುರುದಕ್ಷಿಣೆಯನ್ನು ಪೀಠಕ್ಕೆ ಸಲ್ಲಿಸುತ್ತಿದ್ದಾರೆ ಈ ಕೆಲಸವು ಇನ್ನೂ ವಿಶೇಷವಾಗಿ ಸಾಗಬೇಕಾಗಿದೆ ಆಯಾ ಸ್ಥಳಗಳಲ್ಲಿಯ ಪ್ರಮುಖರು ವೀರಶೈವ ಮಹಾಜನರಿಂದ ವಿವಾಹಾದಿ ಶುಭಕಾರ್ಯಗಳಲ್ಲಿ ದಾನ ದಕ್ಷಿಣಗಳನ್ನು ಸಮರ್ಪಿಸಿ ಕಾಶೀ ಜಗದ್ಗುರು ಮಹಾಸನ್ನಿಧಿಗೆ ಕಳುಹಿಸುತ್ತಿರಬೇಕು ಈ ಬಗ್ಗೆ ಸರಿಯಾದ ಸೇವೆಯನ್ನು ಸಲ್ಲಿಸುವುದು ಸರ್ವ ಗುರುಭಕ್ತರ ಮುಖ್ಯ ಕರ್ತವ್ಯವಾಗಿದೆ ಎಂಬುದನ್ನು ತಿಳಿದು ಎಲ್ಲರೂ ಪ್ರಯತ್ನಿಸಬೇಕು.

ಕೇದಾರಪೀಠದ ಉತ್ತರಾಧಿಕಾರಕ್ಕಾಗಿ ಸಾವಿರಗಟ್ಟಲೆ ತಾರುಗಳು

ಶ್ರೀ ಜಗದ್ಗುರು ಕೇದಾರಪೀಠದ ಉತ್ತರಾಧಿಕಾರಕ್ಕಾಗಿ ಇಂತಹ ಗುರುಲಕ್ಷಣಗಳಿಂದ ಯುಕ್ತರಾದವರನ್ನೇ ಆರಿಸಬೇಕೆಂದು ಟೆಹರಿ ಮಹಾರಾಜರಿಗೂ, ಅಲ್ಲಿಯ ಡೆಪ್ಯುಟಿಕಮೀಷನರ್‌ರವರಿಗೂ ಇಂಡಿಯಾ ದೇಶದ ಎಲ್ಲ ಭಾಗಗಳಿಂದಲೂ ವೀರಶೈವ ಮಹಾಜನಗಳಿಂದ ಒಂದು ಸಾವಿರಕ್ಕೆ ಮೇಲ್ಪಟ್ಟು ತಾರುಗಳು ಹೋಗಿವೆ ಮತ್ತು ಮುಂದಿನ ಕಾರ್ಯಕ್ರಮದಬಗ್ಗೆ ಆಲೋಚನೆಯು ನಡೆದಿರುವದು.

ಸ್ವೀಕಾರ

ಹಾಸನ ಡಿ|| ಬೇಲೂರು ತಾ|| ಕೋಗೋಡು ಗ್ರಾಮದ ಪಟೇಲ್ ಮತ್ತು ಕಾಫಿಪ್ಲಾಂಟರ್ ಮ|| ರಾ|| ಮಲ್ಲೇಗೌಡರ ಪುತ್ರಿ ಚಿ|| ಸೌ|| ಲಲಿತಾದೇವಿಯನ್ನು ಚಿಕ್ಕಮಗಳೂರು ತಾ|| ಅರಸಿನಗುಪ್ಪೆಗ್ರಾಮದ ಕಾಫಿಪ್ಲಾಂಟರ್ ಮ|| ರಾ|| ದೇವೀರೆಗೌಡರ ಪುತ್ರ ಚಿ|| ವೀರಭದ್ರೇಗೌಡರಿಗೆ ಕೊಟ್ಟು ತಾ|| 13 5 45 ಭಾನುವಾರದ ದಿವಸ ಅತ್ಯಂತ ವೈಭವದಿಂದ ನೆರವೇರಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ವಧುವಿನ ಕಡೆಯಿಂದ ಸಮರ್ಪಿಸಲ್ಪಟ್ಟ 5 ರೂ ಗಳು ವರನ ಕಡೆಯಿಂದ ಸಮರ್ಪಿಸಲ್ಪಟ್ಟ 5 ರೂ ಗಳು ಒಟ್ಟು 10 ರೂಪಾಯಿಗಳು ವಸ್ತಾರೆ ಪಟೇಲ ಮ|| ರಾ|| ಗೌಡೇಗೌಡರ ದ್ವಾರಾ ತಲ್ಪಿರುತ್ತವೆ

ಬೆಂಗಳೂರು ಸಿಟಿ ಚಾಮರಾಜಪೇಟೆಯಲ್ಲಿರುವ ವೇ|| ನಂದಿಗುಡಿ ಮಹಾಂತಮಠದ ಎಸ್ ರುದ್ರಯ್ಯನವರ ಜ್ಯೇಷ್ಠ ಪುತ್ರ ಚಿ|| ರೇಣುಕಾರಾಧ್ಯನಿಗೂ ದ್ವಿತೀಯ ಪುತ್ರ ಚಿ|| ಸೋಮಶೇಖರಾರಾಧ್ಯನಿಗೂ ವೈಶಾಖ ಶು|| ೬ (ತಾ|| 17 5 45) ಗುರುವಾರ ದಿವಸ ಬೆಂಗಳೂರು ಸಿಟಿಯಲ್ಲಿರುವ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯ ಸಂಸ್ಕೃತ ಕಾಲೇಜ್ ಮಂದಿರದಲ್ಲಿ ಶ್ರೀ ರಂಭಾಪುರೀಜಗದ್ಗುರುಗಳವರಸನ್ನಿಧಿಯಲ್ಲಿ ಮಾಹೇಶ್ವರದೀಕ್ಷೋಪನಯನಗಳು ನೆರವೇರಿದ ಸಮಯದಲ್ಲಿ ವೇ|| ರುದ್ರಯ್ಯನವರು ಪ್ರಭಾಪೋಷಣಕ್ಕೋಸ್ಕರ 5 ರೂ ಗಳನ್ನು ಕಳುಹಿಸಿರುತ್ತಾರೆ

ತಿಪಟೂರು ಟವನ್ನಿನಲ್ಲಿರುವ ಮ|| ರಾ|| ಹಾಲಪ್ಪನವರ ಪುತ್ರಿ ಚಿ|| ಸೌ|| ಸರ್ವಮಂಗಳಮ್ಮನನ್ನು ಮ|| ರಾ|| ಬೆಂಗಳೂರು ಎಲೆ ಸಿದ್ಧಲಿಂಗಶೆಟ್ಟರ ಪುತ್ರ ಚಿ|| ನಿಜಗುಣಪ್ಪನಿಗೆ ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ವಧೂವರರ ಕಡೆಯಿಂದ ಪ್ರಭಾಪೋಷಣಕ್ಕಾಗಿ ಸಮರ್ಪಿಸಲ್ಪಟ್ಟ 3 ರೂಪಾಯಿಗಳು ತಿಪಟೂರು ಟೌನ್ ಕೋ ಅಪರೇಟಿವ್ ಸೊಸೈಟಿ ಆನರರಿ ಸೆಕ್ರಿಟರಿಗಳಾದ ಮ|| ರಾ|| ಸಿ ಕೆ ಕಪ್ಪಣ್ಣನವರ ದ್ವಾರಾ ತಲ್ಪಿರುತ್ತವೆ

ರಾಯಚೂರು ಡಿ|| ಬಿಚ್ಚಾಲಿಗ್ರಾಮದಲ್ಲಿ ಶ್ರೀ ಮಹಾಂತೇಶಗುರುವರ್ಯರ ರಥೋತ್ಸವವು ಪ್ರತಿವರ್ಷ ಪದ್ಧತಿಯಂತೆ ನೆರವೇರಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 2 ರೂಪಾಯಿಗಳು ವೇ|| ಬಸವರಾಜಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತವೆ

ಧಾರವಾಡ ಡಿ|| ಗದಗಸಿಟಿಯಲ್ಲಿಯ ವೇ|| ಕಲ್ಲಮಠದ ಕರಿಬಸವಯ್ಯನವರು ದಲಾಲಿ ಅಸೋಸಿಯೇಷನ್ನಿಗೆ ಮೆಂಬರಾಗಿ ಬಂದ ಸಂತೋಷಕ್ಕಾಗಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ಮ|| ರಾ|| ಗುಗ್ರಿ ಹುಚ್ಚಪ್ಪನವರ ದ್ವಾರಾ ತಲ್ಪಿರುತ್ತವೆ

ಶಿವಮೊಗ್ಗ ಡಿ ಕುಂಸಿಯಲ್ಲಿರುವ ಮ|| ರಾ|| ಹತ್ತಿ ರಾಚಪ್ಪನವರ ಪುತ್ರ ಚಿ|| ಸಂಗಪ್ಪನಿಗೆ ನ್ಯಾಮತಿ ಹವೇದ ಬಸವಣ್ಣಪ್ಪನವರ ಪುತ್ರಿ ಚಿ|| ಸೌ|| ಚೆನ್ನಮ್ಮನನ್ನು ಕೊಟ್ಟು ತಾ|| 6 5 45 ಶುಕ್ರವಾರ ದಿವಸ ನಡೆದ ವಿವಾಹನಿಶ್ಚಯ ಸಮಾರಂಭಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 2 ರೂ ಗಳು ನ್ಯಾಮತಿ ಜೀರಗಿ ವೀರಭದ್ರಪ್ಪ ಮುರಿಗಪ್ಪನವರ ದ್ವಾರಾ ತಲ್ಪಿರುತ್ತವೆ

ಬೆಂಗಳೂರು ತಾ|| ಬೇಗೂರು ಗ್ರಾಮದ ವೇ|| ಗುರುಬಸವಾರಾಧ್ಯರ ಪುತ್ರ ಚಿ|| ಸ|| ನಂಜುಂಡಾರಾಧ್ಯರಿಗೆ ಅದೇ ಗ್ರಾಮದ ವೇ|| ರೇವಣಾರಾಧ್ಯರ ಪುತ್ರಿ ಚಿ|| ಸೌ|| ವೀರಮ್ಮನನ್ನು ಕೊಟ್ಟು ನಡೆಸಿದ ವಿವಾಹ ಸಮಾರಂಭದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಲ್ಪಟ್ಟ 2 ರೂ ಗಳು ಕೆಂಗೇರಿ ಹೋ|| ಚಿಕ್ಕನಹಳ್ಳಿ, ಸಿ ಎಂ ರೇವಣಾರಾಧ್ಯರ ದ್ವಾರಾ ತಲ್ಪಿರುತ್ತವೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಕಾಗದದ ಬೆಲೆಯು ವಿಶೇಷವಾಗಿ ಏರಿರುವುದರಿಂದ ಕೆಲವು ಗ್ರಂಥಗಳ ಮತ್ತು ಫೋಟೋಗಳ ಬೆಲೆಯನ್ನು ಸ್ವಲ್ಪ ಹೆಚ್ಚಿಸಿದ್ದೇವೆ.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ	೨—೬—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದ) ಸೈಜು ೧೪ × ೧೦ ಬೆಲೆ	೦—೬—೦
ಸದ್ಯಃ ಶ್ರೀ ಕಾಶೀಕ್ಷೇತ್ರದಲ್ಲಿ ವಿರಾಜಮಾನರಾದ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ	೦—೫—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ	೦—೩—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೬
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—೬
ಶ್ರೀಉಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಉಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೬

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು. ವೀರಶೈವಮತದಲ್ಲಿ ಸದ್ಯಃ ದೊರೆಯತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು. ಈ ಗ್ರಂಥವು ಈಗ್ಗೆ ಸುಮಾರು **೩ಸಾವಿರ** ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು. ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ಪಾಠಕರಿಗೆ ವೇದ್ಯವಾಗುವುದು. ಪಾಠಕರ ಅನುಕೂಲಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೩೩೨ ಪುಟಗಳಿಂದ ಕೂಡಿದ್ದು, ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೨ ರೂಪಾಯಿ.**

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೭ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೭ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ–ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ, ಚಿಕ್ಕಸೈಜು)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸಮ್ಯೋದರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿವಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು. ೨ನೆಯ ಆವೃತ್ತಿ)	೧। ರೂ.
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ.
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧॥ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧॥ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರ)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ.
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ಶಿವಾದ್ವೈತಮಂಜರಿ [ಕನ್ನಡವ್ಯಾಖ್ಯಾನ ೧೩೪೪ ಪುಟ]	೮ ರೂ
A brief life-sketch of Pandit Sri Kashinatha Shastriji (*English*)	**4 As.**
The Philosophical Aspect of Virasaivism (*English*)	**8 As**
Speeches by Pandit Shri Kashinatha Shastriji (*English*)	**12 As**
लिंगधारणचंद्रिका (संस्कृत)	**३ रु.**
वीरशैवरत्न (मराठी)	**१ रु.**
महानारायणोपनिषत् (वीरशैवभाष्य-संस्कृत)	**१ रु.**
सिद्धांतशिखामणि (मूल)	**८ आ.**
चंद्रिकेश्वरकारिका (संस्कृत)	**२ आ.**

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ೪ ಆಣೆ. ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ.

ಸಂಪುಟ ೧೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೮ನೇ ಮೇ ೧೯೪೫ [ಸಂಚಿಕೆ ೨

ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಹಾಗೂ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತೀಮಹೋತ್ಸವಗಳು

ಬೆಂಗಳೂರು ಸಿಟಿ

ಶ್ರೀಮದ್ವೀರಶೈವಮಹಾಮತಸ್ಥಾಪನಾಚಾರ್ಯವರ್ಯರಾದ ಶ್ರೀಮಜ್ಜಗದ್ಗುರು ಏಕೋರಾಮಾರಾಧ್ಯರ ಹಾಗೂ ಶ್ರೀಮಜ್ಜಗದ್ಗುರು ದಾರುಕಾಚಾರ್ಯರ ಜಯಂತೀಮಹೋತ್ಸವಗಳು ಬೆಂಗಳೂರು ಸಿಟಿ ಚಿಕ್ಕಪೇಟೆ ಶ್ರೀ ಮಹಾಂತಿನಮಠದಲ್ಲಿ ವೈಶಾಖ ಶು॥ ೩ ಸೋಮವಾರ ಮತ್ತು ಶು॥ ೫ ಬುಧವಾರ ಅತಿ ವೈಭವದಿಂದ ನೆರವೇರಿಸಲ್ಪಟ್ಟವು ಆ ದಿವಸಗಳಲ್ಲಿ ಪ್ರಾತಃಕಾಲ ೪ ಘಂಟೆಯಿಂದ ೧೧ ಘಂಟೆವರೆಗೆ ಶ್ರೀ ಲಿಂಗೋದ್ಭವ ಜಗದಾಚಾರ್ಯರ ಮೂರ್ತಿಗಳಿಗೆ ರುದ್ರಾಭಿಷೇಕ ಬಿಲ್ವಾರ್ಚನಾದಿಗಳು ಮಧ್ಯಾಹ್ನ ವಿಜಯಮಹೋತ್ಸವ ನಿಮಿತ್ತವಾಗಿ ಮೈಸೂರು ಗವರ್ನಮೆಂಟಿನವರಿಂದ ವೀರಶೈವ ಜನ ಸಂತರ್ಪಣೆಯೂ ಆಚರಿಸಲ್ಪಟ್ಟವು ಸಾಯಂಕಾಲ ೭ ಘಂಟೆಯಿಂದ ೧೧ ಘಂಟೆವರೆಗೆ ಪರಮ ತಪೋನಿಧಿಗಳಾದ ಶ್ರೀ॥ ಷ॥ ಬ್ರ॥ ಗಂಗಾಧರ ಶಿವಾಚಾರ್ಯಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಕೀರ್ತನ ಕಂಠೀರವ ಕೀರ್ತನ ಶಿರೋಮಣಿ ಪದವೀಭೂಷಿತರಾದ ಪಂ॥ ಎಸ್ ಜಿ ರೇಣುಕಾರಾಧ್ಯರಿಂದ "ಭದ್ರಾಯು" ಚರಿತ್ರವು ಹೇಳಲ್ಪಟ್ಟಿತು. ಅನಂತರ ಶ್ರೀಗಳು ಜಯಂತೀ ಮಹೋತ್ಸವ ವಿಜಯಮಹೋತ್ಸವಗಳನ್ನು ಕುರಿತು ಭಾಷಣ ಮಾಡಿದರು. ತರುವಾಯ ಜಗದಾಚಾರ್ಯರ ಜಯ ಜಯಕಾರಗಳೊಡನೆ ಜಯಂತೀಮಹೋತ್ಸವಗಳು ಸಮಾಪ್ತಿಗೊಂಡವು

ಓರ್ವ ಉತ್ಸವಭಾಗಿ

ಗೌಡಕುಂದಿ

ರಾಯಚೂರು ಡಿ॥ ಸಿಂಧನೂರು ತಾಲೂಕು ಗೌಡಕುಂದಿ ಹಿರೇಮಠದಲ್ಲಿ ಪ್ರತಿವರ್ಷದ ಪದ್ಧತಿಯಂತೆ ತಾ॥ ೧೪-೫-೪೫ ಮತ್ತು ತಾ॥ ೧೬-೫-೪೫ ನೇ ದಿವಸಗಳಲ್ಲಿ ಜಗದ್ಗುರುಗಳ ಜಯಂತಿಯು ಮಹಾವೈಭವದಿಂದ ನೆರವೇರಿಸಲ್ಪಟ್ಟಿತು ಪ್ರಾತಃಕಾಲ ೬ ಘಂಟೆಯಿಂದ ೧೦ ಘಂಟೆ ಪರಿಯಂತರ ಶ್ರೀಜಗದ್ಗುರು ಏಕೋರಾಮಶಿವಾಚಾರ್ಯರ ರಜತಲಿಂಗೋದ್ಭವಮೂರ್ತಿಗೆ ರುದ್ರಾಭಿಷೇಕ ಸಹಸ್ರಬಿಲ್ವಾರ್ಚನೆಗಳು ಭೂರಿ ಗಣಾರಾಧನೆಯು ಗ್ರಾಮದ ಭಕ್ತಜನಗಳಿಂದ ನೆರವೇರಿಸಲ್ಪಟ್ಟವು. ಇದೇ ಸಮಯಕ್ಕೆ ಸೋಮಲಾಪುರ ಸಂಸ್ಥಾನದ ಮಂತ್ರಿಗಳಾದ ವೇ॥ ಗುರುಸಿದ್ಧಯ್ಯನವರು ಸದ್ರಿ ಸಂಸ್ಥಾನದಿಂದ ಪಲ್ಲಕ್ಕಿ, ಛತ್ರಚಾಮರ, ಮೊದಲಾದವುಗಳನ್ನು ಸದ್ರಿ ಹಿರೇಮಠದ ಶ್ರೀ॥ ಷ॥ ಬ್ರ॥ ಪಂಡಿತ ಬಾಲಶಿವಯೋಗಿ ಶ್ರೀಶಿವಯೋಗಿ ಶಿವಾಚಾರ್ಯಸ್ವಾಮಿಗಳಿಗೆ ದಾನವಾಗಿ ಕಳಿಸಿದ್ದರು ಸಾಯಂಕಾಲ ೫ ಘಂಟೆಯಿಂದ ರಾತ್ರಿ ೮ ಘಂಟೆ ಪರಿಯಂತರ ಮಾಲೀಪಾಟೀಲ ಬಸವನಗೌಡರೇ ಮೊದಲಾದ ಭಕ್ತರು ಕೂಡಿ ಶ್ರೀಜಗದ್ಗುರುಗಳ ಭಾವಚಿತ್ರವನ್ನು ಪಲ್ಲಕ್ಕಿಯಲ್ಲಿಟ್ಟು ಸಕಲವಿಧ ದೇಶ ವಿದೇಶ ವಾದ್ಯಗಳ ವೈಭವದಿಂದ ಉತ್ಸವವನ್ನು ಮಾಡಿಸಿದರು ತರುವಾಯ ರಾತ್ರಿ ೧೦ ಘಂಟೆಗೆ ಮಠದಲ್ಲಿ ಶ್ರೀ॥ ಷ॥ ಬ್ರ॥ ಶಿವಯೋಗಿ ಶಿವಾಚಾರ್ಯಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸಭೆಕೂಡಿತು ಅಧ್ಯಕ್ಷರು "ವೀರಶೈವ ಮತದ ಪ್ರಾಚೀನತ್ವ" ಎಂಬ ಬಗ್ಗೆ ಸಪ್ರಮಾಣವಾಗಿ ಒಂದೂವರೆ ತಾಸಿನ ಪರಿಯಂತರ ಭಾಷಣ ಮಾಡಿದರು ಅನಂತರ ವೇ॥ ವೀರೇಶ್ವರ ಶಾಸ್ತ್ರಿಗಳು ಕಾವ್ಯತೀರ್ಥ, ಬಳಗೇರಿ ಬೃಹನ್ಮಠ ಇವರು ಶ್ರೀಗಳವರು ಹೇಳಿದ ವಿಷಯಗಳೆಲ್ಲವು ಸತ್ಯವಾಗಿರುವವೆಂತಲೂ ಈ ಬಗ್ಗ ಸ್ವಮತ ಪರಮತೀಯ ಧರ್ಮಗ್ರಂಥಗಳಲ್ಲಿ ಅನೇಕಾನೇಕ ಪ್ರಮಾಣಗಳು ಇರುತ್ತವೆಂತಲೂ ವಿವರಿಸಿ ಈ ಬಗ್ಗೆ ಹೆಚ್ಚು ನೀವುಗಳು ತಿಳಿದುಕೊಳ್ಳಬೇಕೆಂದಿದ್ದರೆ ಪಂ॥ ಶ್ರೀಕಾಶೀನಾಥಶಾಸ್ತ್ರಿಗಳಿಂದ ರಚಿತವಾದ "ವೀರಶೈವರತ್ನ" ಎಂಬ ಗ್ರಂಥವನ್ನು ನೋಡಬಹುದೆಂದು ಹೇಳಿ ತಮ್ಮ ಭಾಷಣವನ್ನು ಮುಗಿಸಿದರು ಅನಂತರ ಮಹಾಮಂಗಳಾರತಿಯಾಗಿ ಸಭಾ ವಿಸರ್ಜನವಾಯಿತು

ಪಂಪನಗೌಡ ಪೋಲಿಸ್ ಪಾಟೀಲ
ಗೌಡಕುಂದಿ

ಜಯಂತೀಮಹೋತ್ಸವ ಮತ್ತು ಪುಣ್ಯತಿಥಿ

ಶ್ರೀ ಭೂಕೈಲಾಸ ಕಾಶೀಕ್ಷೇತ್ರವಿರಾಜಮಾನ ಶ್ರೀಮಜ್ಜಗದ್ಗುರು ವಿಶ್ವಾರಾಧ್ಯಪೀಠದಲ್ಲಿ ಪದ್ಧತಿಯಂತೆ ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಹಾಗೂ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತೀ ಮಹೋತ್ಸವಗಳೂ, ಲಿಂಗೈಕ್ಯ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯಮಹಾಸ್ವಾಮಿಗಳವರ ಪ್ರಥಮ ವಾರ್ಷಿಕ ಪುಣ್ಯತಿಥಿ ಮಹೋತ್ಸವವೂ, ತದಂಗಭೂತವಾದ ಸಮಾಧಿಲಿಂಗಸ್ಥಾಪನೆಯೂ ಅತ್ಯಂತ ವಿಜೃಂಭಣೆಯಿಂದ ನೆರವೇರಿದವು ಕರ್ಣಾಟಕ ಮಹಾರಾಷ್ಟ್ರಾದಿ ಪ್ರಾಂತಗಳಿಂದ ಬಂದ ಅನೇಕ ಜನ ಸದ್ಭಕ್ತರು ಈ ಮಹೋತ್ಸವಗಳಲ್ಲಿ ಭಾಗವಹಿಸಿದ್ದರು.

ವೈಶಾಖ ಶು॥ ಅಕ್ಷಯತೃತೀಯಾ ದಿವಸ ಶ್ರೀಮದೇಕೋರಾಮಾರಾಧ್ಯ ಭಗವತ್ಪಾದರ ಜಯಂತ್ಯುತ್ಸವವು ನೆರವೇರಿತು. ಪ್ರಾತಃಕಾಲ ಎಂಟು ಘಂಟೆಗೆ ಏಕೋರಾಮಾರಾಧ್ಯರ ಹಾಗೂ ವಿಶ್ವಾರಾಧ್ಯರ ಸ್ವರ್ಣ-ಲಿಂಗೋದ್ಭವ ಮೂರ್ತಿಗಳಿಗೆ ಏಕಾದಶ ರುದ್ರಾಭಿಷೇಕವೂ ಅಷ್ಟೋತ್ತರ ಶತಬಿಲ್ವಾರ್ಚನೆಯೂ ಹನ್ನೆರಡು ಘಂಟೆಗೆ ಗಣಸಂತರ್ಪಣೆಯೂ, ಐದುಘಂಟೆಗೆ ವಿದ್ವತ್ಸಭಾ ಭವನದಲ್ಲಿ ಪಂಡಿತರ ವ್ಯಾಖ್ಯಾನಗಳೂ ಜರುಗಿ ಅಂದಿನ ಕಾರ್ಯಕ್ರಮವು ಪೂರ್ತಿಗೊಂಡಿತು. ಮರುದಿನ ಬ್ರಾಹ್ಮ ಮುಹೂರ್ತದಲ್ಲಿಯೇ ಸಮಾಧಿಗೆ ಆಚಾರ್ಯಲಿಂಗೋದ್ಭವಮೂರ್ತಿಸ್ಥಾಪನೆಯ ಕಾರ್ಯವು ಪ್ರಾರಂಭವಾಯಿತು ಶ್ರೀಮದಭಿನವವಿಶ್ವಾರಾಧ್ಯ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಸನ್ನಿಧಿಯಲ್ಲಿ ಮೂರ್ತಿಸಂಸ್ಕಾರವೂ, ಪ್ರಾಣಪ್ರತಿಷ್ಠೆಯೂ ಆಗಿ ಮಹಾರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನಾದಿಗಳು ಜರುಗಿದವು ನಯನಮನೋ[illegible] ಹರವಾದ ಲಿಂಗೋದ್ಭವ ಮೂರ್ತಿಯ ಪ್ರೋ[illegible] ತಿಗೆಯುವದಾದಮೇಲೆ ಮಹಾಗಣಾರಾಧನೆಯು [illegible] ನೇರಿ ಭೂರಿದಕ್ಷಿಣೆಯನ್ನು ಕೊಡಲಾಯಿತು

ಮರುದಿನ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತ್ಯುತ್ಸವವು ನೆರವೇರಿತು ದಾರುಕಾಚಾರ್ಯ ಲಿಂಗೋದ್ಭವ ಮೂರ್ತಿಗೆ ರುದ್ರಾಭಿಷೇಕವೂ ಗಣಾರಾಧನೆಯೂ ಜರುಗಿದಮೇಲೆ ಐದು ಘಂಟೆಗೆ ಶ್ರೀ ಮಹಾಸನ್ನಿಧಾನದವರ ಅಧ್ಯಕ್ಷತೆಯಲ್ಲಿ ಸಭೆಗೂಡಿತು. ಯಾತ್ರಿಕ ಸ್ತ್ರೀ ಪುರುಷ ಮಹಾಜನರೆಲ್ಲರೂ ಸಭೆಗೆ ಬಂದಿದ್ದರು ಮೊದಲು ಮಂಗಲಗೀತೆಯಾದನಂತರ ಪಂಚಾಚಾರ್ಯರ ಮಹಿಮೆಯ ಬಗ್ಗೆ ಶ್ರೀ ಗುರುಪಾದ ಶಿವಾಚಾರ್ಯರು ಮುಳ್ಳೂರು, ಪಂ॥ ಗಂಗಾಧರಶಾಸ್ತ್ರಿಗಳು ಅನುಗೊಂಡ, ಶ್ರೀ ಗುರುಲಿಂಗಶಿವಾಚಾರ್ಯರು ರಾಯಚೂರು ಮೊದಲಾದವರ ಸುಶ್ರಾವ್ಯ ಭಾಷಣಗಳಾದವು

ಗೌಡಕುಂದಿ ಶ್ರೀ ಸಿದ್ಧರಾಮಶಿವಾಚಾರ್ಯರು ದಾರುಕರ ಲೀಲೆಗಳ ಬಗ್ಗೆ ಮಾತನಾಡಿ ಶಿವೈಕ್ಯ ಶ್ರೀಜಗದ್ಗುರು ಪಂಚಾಕ್ಷರಶಿವಾಚಾರ್ಯಮಹಾಸ್ವಾಮಿಗಳವರ ವಿಷಯದಲ್ಲಿ ತಾವು ರಚಿಸಿದ ಕವನವನ್ನು ಓದಿ ಸರ್ವರನ್ನೂ ಆನಂದಗೊಳಿಸಿದರು ಆಮೇಲೆ ಶ್ರೀಮಜ್ಜಗದ್ಗುರು ಮಹಾಸನ್ನಿಧಾನದವರ ಅಮೂಲ್ಯ ಭಾಷಣವು ಪ್ರಾರಂಭವಾಯಿತು ಗುರುವಿನ ಮಹತ್ತ್ವವೇನು? ಗುರುಗಳಿಗೂ ವೀರಶೈವ ಮತಕ್ಕೂ ಇರುವ ಸಂಬಂಧವೆಷ್ಟು? ವೀರಶೈವ ಮತಕ್ಕೆ ಐದು ಜನ ಆಚಾರ್ಯರೇಕೆ? ಹೀಗೆ ಅನೇಕ ಪ್ರಶ್ನೆಗಳನ್ನೆತ್ತಿ ಮಾರ್ಮಿಕವಾಗಿ ಉತ್ತರವನ್ನೀಯುತ್ತ ಪಂಚ ಜಗದಾಚಾರ್ಯರೆಂಬ ಪಂಚರಿಂದ ನಿರ್ಣೈಸಲ್ಪಟ್ಟು ನಿಗಮಾಗಮಗಳ ಸಿದ್ಧಾಂತಾನುಸಾರವಾಗಿ ಸ್ಥಾಪಿಸಲ್ಪಟ್ಟಿರುವ ವೀರಶೈವ ಮತವು ತ್ರಿಕಾಲಾಬಾಧಿತವೆಂದು ಬಹು ಸ್ವಾರಸ್ಯವಾಗಿ ಅಪ್ಪಣೆಕೊಡಿಸಿದರಲ್ಲದೆ ಪಂಚಾಚಾರ್ಯರ ಲೀಲಾವೈಭವಾದಿಗಳನ್ನು ಸರಸವಾಗಿ ಬೋಧಿಸಿದರು. ಬಳಿಕ ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ಸಮಾಪ್ತಿಗೊಂಡಿತು

ಪ್ರತ್ಯಕ್ಷದರ್ಶಿ

ವಾಯುವೇಗದ ವಿಮಾನ

ಶೂಟಿಂಗ್ ಸ್ಟಾರ್ ಎಂಬ ಹೆಸರಿನ ವಾಯುವೇಗದ ವಿಮಾನಗಳನ್ನೇ ಅಮೆರಿಕದ ಕಾರ್ಖಾನೆಗಳು ಈಗ ತಯಾರಿಸುತ್ತಿವೆ. ಇವುಗಳ ವೇಗ ಘಂಟೆಗೆ ೬೦೦ ನಾಟುಗಳು. ಇದುವರೆಗೆ ಇಂತಹ ವೇಗದ ವಿಮಾನಗಳು ನಿರ್ಮಿತವಾಗಿರಲಿಲ್ಲವೆಂದು ಹೇಳಲಾಗಿದೆ.

ಪಂಚಾಚಾರ್ಯಪ್ರಭಾ.

೧೯೪೫ನೆಯ ಮೇ ತಾ|| ೨೮ನೇ ಸೋಮವಾರ

ನಮ್ಮ ಮಹಾಪ್ರಭುಗಳವರ ಅದ್ಭುತಕಾರ್ಯ

ಶ್ರೀಮತ್ಕರ್ನಾಟಕ ರತ್ನಸಿಂಹಾಸನಾಧೀಶ್ವರ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು ಮೈಸೂರು ದೇಶದ ಪ್ರಜೆಗಳನ್ನು ಪುತ್ರಭಾವದಿಂದ ಪರಿಪಾಲಿಸುತ್ತಿರುವ ವಿಷಯವು ಸರ್ವರಿಗೂ ತಿಳಿದುದೇ ಆಗಿದೆ. ಮಹಾಪ್ರಭುಗಳವರಲ್ಲಿ ಅಸಾಧಾರಣವಾದ ದೈವಭಕ್ತಿ, ಪೂಜಾನಿಷ್ಠೆ, ಶಾಂತಸ್ವಭಾವ, ಉದಾರಭಾವ, ಪ್ರಾಣಿದಯೆ, ವಿವೇಕ, ರಾಜಕಾರಣಪಟುತ್ವ, ಧೀರೋದಾತ್ತತೆ ಮೊದಲಾದ ಸದ್ಗುಣಗಳು ಸ್ವಭಾವಸಿದ್ಧವಾಗಿ ನೆಲೆಗೊಂಡಿರುವವು. ಈಗಿನ ನೂತನ ವಾತಾವರಣದಲ್ಲಿ ಈ ವಿಧವಾದ ಸದ್ಗುಣರಾಶಿಯಿಂದ ರಾರಾಜಿಸುತ್ತಿರುವ ಮಹಾಪ್ರಭುಗಳನ್ನು ಪಡೆದಿರುವ ಮೈಸೂರು ದೇಶದ ಪ್ರಜೆಗಳ ಪುಣ್ಯಕ್ಕೆ ಎಣೆಯೇ ಇಲ್ಲವೆಂದು ಸಾರಿ ಸಾರಿ ಹೇಳಬಹುದಾಗಿದೆ.

ಸದ್ಯಃ ಮಹಾಪ್ರಭುಗಳು ಸನಾತನ ಹಿಂದೂಧರ್ಮದ ಉದ್ಧಾರಕ್ಕಾಗಿ ಹಿಂದುಗಳಿಗೆ ಪ್ರಾಣವಾಗಿರುವ ನಾಲ್ಕು ವೇದಗಳನ್ನೂ, ವ್ಯಾಸಮಹರ್ಷಿಗಳಿಂದ ರಚಿತವಾಗಿರುವ ಹದಿನೆಂಟು ಮಹಾಪುರಾಣಗಳನ್ನೂ ಉಪಪುರಾಣಗಳನ್ನೂ, ದಶೋಪನಿಷತ್ತುಗಳನ್ನೂ ಭಗವದ್ಗೀತಾ ಶಿವಗೀತಾದಿ ಗೀತಾಗ್ರಂಥಗಳನ್ನೂ ಸೂತಸಂಹಿತಾದಿ ಸಂಹಿತಾಗ್ರಂಥಗಳನ್ನೂ ಕರ್ನಾಟಕ ಭಾಷೆಗೆ ಪರಿವರ್ತಿಸಿ ಮುದ್ರಣಮಾಡಿಸುವ ಅದ್ಭುತಕಾರ್ಯವನ್ನು ಕೈಗೊಂಡಿರುವರು. ಈ ಮಹಾಕಾರ್ಯಕ್ಕಾಗಿ ಅನೇಕಜನ ಪಂಡಿತರನ್ನು ನಿಯಮಿಸಿರುವರು. ಈಗಾಗಲೇ ಅನೇಕಗ್ರಂಥಗಳು ಮುದ್ರಿತವಾಗಿವೆ. ಇದಕ್ಕಾಗಿ ಲಕ್ಷಾಂತರ ರೂಪಾಯಿಗಳನ್ನು ಮಂಜೂರುಮಾಡಿರುವರು. ಇಂತಹ ಮಹಾಕಾರ್ಯವನ್ನು ಇಂದಿನವರೆಗೂ ಇಂಡಿಯಾದೇಶದಲ್ಲಿರುವ ಯಾವ ಹಿಂದೂರಾಜರೂ ಕೈಕೊಂಡಿರುವದಿಲ್ಲ. ನಮ್ಮ ಮಹಾಪ್ರಭುಗಳವರು ಈ ಕಾರ್ಯವನ್ನು ಕೈಕೊಂಡು ಸರ್ವಹಿಂದೂರಾಜರಿಗೂ ಮಾರ್ಗದರ್ಶಕರಾಗಿರುವರೆಂಬ ವಿಷಯವನ್ನು ಬರೆಯಲು ಆನಂದವು ಉಕ್ಕೇರುತ್ತಿರುವದು. ಕೆಲಜನ ರಾಜರ ಆಶ್ರಯದಿಂದ ಕೆಲಕೆಲವು ಗ್ರಂಥಗಳು ಅಲ್ಲಲ್ಲಿ ಪ್ರಿಂಟಾಗಿರುವವು. ಆದರೆ ಆ ರಾಜರು ಆ ಗ್ರಂಥಗಳನ್ನು ದುಡ್ಡುಕೊಟ್ಟು ಮುದ್ರಣಮಾಡಿಸುವರೇ ಹೊರತು ಅದರಲ್ಲಿ ಯಾವ ವಿಷಯವು ಪ್ರತಿಪಾದಿತವಾಗಿದೆಯೆಂಬುದನ್ನು ಓದಿನೋಡುವದಿಲ್ಲ. ಆದರೆ ನಮ್ಮ ಮಹಾಪ್ರಭುಗಳು ಹಾಗಲ್ಲ. ತಾವು ಮುದ್ರಣಮಾಡಿಸುತ್ತಿರುವ ಸಮಸ್ತ ಗ್ರಂಥಗಳನ್ನೂ ಓದಿನೋಡುವರು. ಅವುಗಳ ಇಂಗಿತವನ್ನು ತಿಳಿದುಕೊಳ್ಳುವರು. ಅದರಂತೆ ಆಚರಿಸುವರು. ಇದೊಂದು ಪ್ರಭುಗಳಲ್ಲಿ ಲೋಕವಿಲಕ್ಷಣವಾದ ಗುಣವಿರುವದು. ಇದು ಪೂರ್ವಜನ್ಮಕೃತಪುಣ್ಯಪ್ರಭಾವದ ಫಲವೆಂದೇ ಹೇಳಬೇಕಾಗಿದೆ.

ಮಹಾಪ್ರಭುಗಳವರು ನಾಲ್ಕು ವೇದಗಳಿಗೆ ಕನ್ನಡ ಟೀಕೆಯನ್ನು ಬರೆಯಿಸಿ ಮುದ್ರಣಮಾಡಿಸುವದು ಅತ್ಯಂತ ಸ್ತೋತ್ರಾರ್ಹವಾದ ವಿಷಯವಾಗಿದೆ. ಆದರೆ ವೇದ ಮುದ್ರಣಕ್ಕಾಗಿ, ಚನ್ನಾಗಿ ವೇದಾರ್ಥವನ್ನು ಬಲ್ಲ ನಾಲ್ಕಾರು ಜನ ಪಂಡಿತರನ್ನು ನಿಯಮಿಸಿ ಸರ್ವಸಮ್ಮತದಿಂದ ವ್ಯಾಖ್ಯಾನವು ಸಿದ್ಧವಾದಮೇಲೆ ಒಂದಕ್ಷರವೂ ಸಹ ಅಶುದ್ಧಿ ಇಲ್ಲದಂತೆ ಮುದ್ರಣವಾಗಬೇಕು. ಅಂದರೆ ಲೋಕಕ್ಕೆ ಮಹೋಪಕಾರವಾಗುವದು.

ಈ ವಿಷಯವನ್ನು ಮಹಾಪ್ರಭುಗಳವರು ದಿವ್ಯಚಿತ್ತದಲ್ಲಿ ತಂದುಕೊಂಡು ಇದರಂತೆ ವ್ಯವಸ್ಥೆಮಾಡಿಸಬೇಕೆಂದು ಪ್ರಾರ್ಥನೆ. ಇದರಂತೆಯೇ ಮಹಾಪ್ರಭುಗಳವರ ಕಾಲದಲ್ಲಿ ೨೮ ಶಿವಾಗಮಗಳು ಸಹ ಮುದ್ರಿತವಾದರೆ ಸಮಸ್ತ ಶೈವಪ್ರಪಂಚವೇ ಉದ್ಧಾರವಾಗುವದು.

ಈ ರೀತಿ ಪ್ರಾಚೀನ ಹಿಂದೂಧರ್ಮಗ್ರಂಥಗಳನ್ನು ಮುದ್ರಿಸಿ ಸನಾತನ ಹಿಂದೂಧರ್ಮವನ್ನು ಉದ್ಧಾರಮಾಡುತ್ತಿರುವ ನಮ್ಮ ಮಹಾಪ್ರಭುಗಳವರಿಗೆ ಶ್ರೀ ಚಾಮುಂಡೇಶ್ವರೀ ಮಹಾದೇವಿಯು ಸಂಪೂರ್ಣಾಯುರಾರೋಗ್ಯಭಾಗ್ಯಾದಿಗಳನ್ನು ಅನುಗ್ರಹಿಸಲೆಂದೂ, ಯದುವಂಶವು ಚಿರಕಾಲ ಧರಾತಲದಲ್ಲಿ ಬೆಳಗಲೆಂದೂ ಆ ಜಗನ್ಮಾತೆಯನ್ನು ಪ್ರಾರ್ಥಿಸುತ್ತೇವೆ.

ಕೇದಾರಪೀಠದ ಬಗ್ಗೆ ಸೇವೆಯನ್ನು ಸಲ್ಲಿಸಿದ ಗುರುಪೀಠಾಭಿಮಾನಿಗಳಲ್ಲಿ ಕೃತಜ್ಞತಾಸಮರ್ಪಣ

ಕೇದಾರಪೀಠದ ಜಗದ್ಗುರುಗಳವರು ಶಿವಾಧೀನರಾದ ಮೇಲೆ ಆ ಪೀಠದ ಉತ್ತರಾಧಿಕಾರದ ಬಗ್ಗೆ ಸ್ವಲ್ಪ ತೊಂದರೆಯುಂಟಾಗಿರುವ ವಿಷಯವು ನಮಗೆ ತಿಳಿಯಿತು. ಆ ತೊಂದರೆಯನ್ನು ನಿವಾರಣೆಮಾಡಲೋಸುಗ ಹಿಮಾಲಯಪ್ರಾಂತದಲ್ಲಿರುವ ಟಿಹರಿ ಮಹಾರಾಜರವರಿಗೂ ಮತ್ತು ಪೌರಿ ಡೆಪ್ಯುಟಿಕಮಿಷನರ್ ಸಾಹೇಬರವರಿಗೂ ಕೆಲವು ವಿಷಯಗಳನ್ನು ಟೆಲಿಗ್ರಾಮಿನ ಮೂಲಕ ತಿಳಿಸುವ ಪ್ರಸಂಗವೊದಗಿತು. ಇದಕ್ಕಾಗಿ ನಾವು ಇಂಡಿಯಾದೇಶದಲ್ಲಿರುವ ಗುರುಪೀಠಾಭಿಮಾನಿಗಳೆಲ್ಲರಿಗೂ ಈ ವಿಷಯವನ್ನು ಪತ್ರಮೂಲಕವಾಗಿ ಸೂಚಿಸಿದೆವು. ಒಂದು ಸವಿವರವಾಗಿ ಟೆಲಿಗ್ರಾಂ(ತಾರು)ಗಳನ್ನು ಕಳುಹಿಸಬೇಕೆಂಬುದು ನಮ್ಮ ಅಭಿಪ್ರಾಯವಾಗಿತ್ತು. ಅದರಂತೆ ಅನೇಕ ಮಹನೀಯರುಗಳು ಈ ಬಗ್ಗೆ ಬಹು ಪಕ್ಷಪಾತದಿಂದ ಕೆಲಸ ಮಾಡಿ ಆಯಾ ದಿವಸಗಳಲ್ಲಿಯೇ ತಾರುಗಳನ್ನು ಕಳಿಸಿಕೊಟ್ಟು ತಾವು ಅಲ್ಲಿಗೆ ಹೋಗಿರುವವು. ಇವರುಗಳು ಕಳಿಸಿದ ತಾರುಗಳ ಪ್ರತಿಗಳನ್ನೂ ತರಿಸಿಕೊಟ್ಟವರಲ್ಲಿ ಕೆಲವರು ನಮಗೆ ಪತ್ರಗಳನ್ನು ಬರೆಯುತ್ತಿರುವರು. ಆ ಪತ್ರಗಳನ್ನು ಓದುವದೇ ನಮಗೆ ಅಸಾಧ್ಯವಾಗಿಬಿಟ್ಟಿದೆ. ಇನ್ನು ಮುಂದೆ ಯಾರೂ ತಾರು ಕೊಡಬಾರದೆಂದು ಈ ಮೂಲಕ ತಿಳಿಸಲಪೇಕ್ಷಿಸುತ್ತೇವೆ. ನಮ್ಮಲ್ಲಿ ವಿಶೇಷ ಗೌರವಬುದ್ಧಿಯನ್ನಿಟ್ಟು ತಾರು ಕೊಟ್ಟವರೆಲ್ಲರಿಗೂ ಪತ್ರಮೂಲಕವಾಗಿ ಕೃತಜ್ಞತಾಸಮರ್ಪಣೆಯನ್ನು ಮಾಡುವದು ನಮ್ಮ ಕರ್ತವ್ಯವಾಗಿರುವದು. ಆದರೆ ಪ್ರತಿಯೊಬ್ಬ ಜನರಿಗೆ ಪತ್ರಗಳನ್ನು ಬರೆಯುವದು ಸಾಧ್ಯವಾಗದೆ ಇರುವದರಿಂದ ಈ ಮೂಲಕ ಸರ್ವರಿಗೂ ನಮ್ಮ ಕೃತಜ್ಞತೆಯನ್ನು ಸಮರ್ಪಿಸುತ್ತೇವೆ. ಆ ಮಹಾಪೀಠದ ಬಗ್ಗೆ ಇನ್ನೂ ಅನೇಕ ವಿಧವಾಗಿ ಕೆಲಸಮಾಡಬೇಕಾಗಿದೆ. ಆಗಾಗ್ಗೆ ಆ ವಿಷಯವನ್ನು ಗುರುಪೀಠಾಭಿಮಾನಿಗಳಿಗೆ ತಿಳಿಸುತ್ತೇವೆ. ಇದರಂತೆಯೇ ಮುಂದೆಯೂ ಸಹ ಉತ್ಸಾಹದಿಂದ ಕಾರ್ಯವನ್ನು ಮಾಡಬೇಕೆಂದು ಆಶಿಸುತ್ತೇವೆ.

ವೀರಶೈವರು ಹಿಂದುಗಳಲ್ಲವೇ ?

ಇಂಡಿಯಾ ಗೌರ್ನಮೆಂಟಿನಿಂದ ಹಿಂದೂ ಕಾಯಿದೆ ಸುಧಾರಣೆಗಾಗಿ ನಿಯಮಿಸಲ್ಪಟ್ಟಿರುವ ರಾವ್ ಕಮಿಟಿಯವರು ಮದ್ರಾಸಿಗೆ ಬಂದ ಸಮಯದಲ್ಲಿ ಮೈಸೂರು ನ್ಯಾಯವಿಧಾಯಕ ಸಭೆಯ ಅಧ್ಯಕ್ಷರಾಗಿರುವ ಶ್ರೀ|| ಡಿ ಎಚ್ ಚಂದ್ರಶೇಖರಯ್ಯನವರು ಆ ಕಮಿಟಿಯ ಮುಂದೆ ಸಾಕ್ಷ್ಯವನ್ನಿತ್ತು, ತಮ್ಮ ಸಾಕ್ಷ್ಯದಲ್ಲಿ ವೀರಶೈವರು ಹಿಂದುಗಳಲ್ಲವೆಂದು ಹೇಳಿರುವರಂತೆ! ಈ ವಿಷಯವು ಮದ್ರಾಸಿನಲ್ಲಿ ಹೊರಡುತ್ತಿರುವ "ಹಿಂದೂ" ಪತ್ರಿಕೆಯಲ್ಲಿ ಪ್ರಕಟವಾಗಿರುವದರಿಂದ ವೀರಶೈವ ಸಮಾಜದಲ್ಲಿ ದೊಡ್ಡ ಗೊಂದಲವೆದ್ದುಹೋಗಿರುವದು. ಎಲ್ಲಿ ನೋಡಿದರೂ ಇದೇ ಚರ್ಚೆಯೇ! ಎಲ್ಲಿ ನೋಡಿದರೂ ಇವರ ಗುಣಗಾನವೇ ನಡೆದಿರುವದು. ರಾವ್ ಕಮಿಟಿಗೂ ಮೈಸೂರು ದೇಶಕ್ಕೂ ಯಾವ ಸಂಬಂಧವೂ ಇರುವದಿಲ್ಲ. ಆ ಕಮಿಟಿಯು ಬ್ರಿಟಿಷ್ ರಾಜ್ಯದ ಕಾಯಿದೆ ಸುಧಾರಣೆಗಾಗಿ ನಿಯಮಿಸಲ್ಪಟ್ಟಿರುವದು. ಆ ಸುಧಾರಣೆಯನ್ನು ಮೈಸೂರು ಸರ್ಕಾರದವರು ಅಂಗೀಕರಿಸಿದರೆ ಅಂಗೀಕರಿಸಬಹುದು, ಬಿಟ್ಟರೆ ಬಿಡಬಹುದು. ಹೀಗಿರುವಲ್ಲಿ ತಾವು ಮೈಸೂರು ನ್ಯಾಯವಿಧಾಯಕ ಸಭೆಯ ಅಧ್ಯಕ್ಷರೆಂದು ಹೇಳಿಕೊಂಡು ಈ ಸಾಕ್ಷ್ಯವನ್ನು ನುಡಿಯುವ ಉದ್ದೇಶವೇನೆಂಬುದು ಯಾರಿಗೂ ತಿಳಿಯದಾಗಿದೆ.

ಇತ್ತೀಚಿಗೆ ಶ್ರೀ ಚಂದ್ರಶೇಖರಯ್ಯನವರು ತಾವು ಆ ರೀತಿ ಸಾಕ್ಷ್ಯವನ್ನು ಹೇಳಿರುವದಿಲ್ಲವೆಂದು ಜನರ ಮುಂದೆ ಹೇಳುತ್ತಿರುವರಂತೆ! ಅದು ನಿಜವಾಗಿದ್ದ ಪಕ್ಷದಲ್ಲಿ ಅವರು ಅದೇ "ಹಿಂದೂ" ಪತ್ರಿಕೆಯಲ್ಲಿ ನಾವು ಆರೀತಿ ಸಾಕ್ಷ್ಯ ನುಡಿದಿರುವದಿಲ್ಲವೆಂದು ಪ್ರಸಿದ್ಧಪಡಿಸಿದರೆ ಈ ಗೊಂದಲವು ಕೂಡಲೇ ಶಾಂತವಾಗಿ ಹೋಗುವದು. ಅಗ್ಗೆ ವೀರಶೈವ ಸಮಾಜದವರ ಮನಸ್ಸಿಗೆ ಪರಮಾನಂದವುಂಟಾಗುವದು. ಈರೀತಿ ಅವರು ಮಾಡಿ ವೀರಶೈವ ಸಮಾಜದವರ ಪ್ರೀತಿಗೆ ಪಾತ್ರರಾಗಬೇಕು.

ಇಂಡಿಯಾ ಗೌರ್ನಮೆಂಟಿನವರಿಂದ ನಿಯಮಿತವಾಗಿರುವ ರಾವ್ ಕಮಿಟಿಯು ಸಾಮಾನ್ಯವಾದುದಲ್ಲ. ಆ ಕಮಿಟಿಯಲ್ಲಿ ಲೋಕಪ್ರಸಿದ್ಧ ವ್ಯಕ್ತಿಗಳು ಭಾಗವಹಿಸಿ ಕಾರ್ಯಮಾಡುತ್ತಿರುವರು. ಇವರೊಬ್ಬರು ಹೀಗೆ ಹೇಳಿದ ಮಾತ್ರದಿಂದಲೇ ಆ ಕಮಿಟಿಯವರು ವೀರಶೈವರು ಹಿಂದುಗಳಲ್ಲವೆಂದು ಕಣ್ಣು ಮುಚ್ಚಿಕೊಂಡು ತೀರ್ಮಾನಿಸುವರೇ ? ಯಾರಾದರೂ ಹಾಗೆ ತಿಳಿದುಕೊಂಡಿದ್ದರೆ ಅದು ಭ್ರಾಂತಿಯಲ್ಲದೆ ಬೇರೆಯಲ್ಲ. ಇದಕ್ಕೆ ವಿರುದ್ಧವಾಗಿ ಇಂಡಿಯಾ ದೇಶದಲ್ಲಿರುವ ಅನೇಕ ಜನ ವೀರಶೈವಮಹಾಜನಗಳು ರಾವ್ ಕಮಿಟಿಯವರಿಗೆ ಸಭೆಗಳ ಮೂಲಕವೂ ತಾರುಗಳ ಮೂಲಕವೂ ತಿಳುಹಿಸುತ್ತಿದ್ದಾರೆ. ಶ್ರೀ ಚಂದ್ರಶೇಖರಯ್ಯನವರು ಮಾಡಿರುವ ಪ್ರಯತ್ನವು ಗುಡ್ಡಕ್ಕೆ ಕಲ್ಲು ಹೊತ್ತಂತೆ ವ್ಯರ್ಥವೆಂದೇ ಹೇಳಬೇಕಾಗಿದೆ.

ಈಗ್ಗೆ ಸಾವಿರಾರು ವರ್ಷಗಳಿಂದ ಅನೇಕ ಜನ ಹಿಂದೂ ರಾಜರೂ, ಮುಸಲ್ಮಾನ್ ರಾಜರೂ ವೀರಶೈವಮತದ ಮೂಲ ಧರ್ಮಪೀಠಗಳಿಗೂ ಅನೇಕ ಶಾಖಾಮಠಗಳಿಗೂ ಇವರು ಹಿಂದೂಜನಾಂಗದ ಮಠಾಧಿಪತಿಗಳೆಂದು ಭಾವಿಸಿ ಅನೇಕ ಭೂಮಿಗಳನ್ನು ದಾನಮಾಡಿರುವ ವಿಷಯವು ಸರ್ವರಿಗೂ ತಿಳಿದೇ ಇದೆ. ೧೯೪೦ನೆಯ ಇಸ್ವಿಯಲ್ಲಿ ಕಾಶೀ ಜಂಗಮವಾಡೀಮಠದ ಒಂದು ಕೇಸಿನಲ್ಲಿ ಅಲಹಾಬಾದ್ ಹೈಕೋರ್ಟಿನವರು ತೀರ್ಮಾನವನ್ನೀಯುತ್ತ ಔರಂಗಜೇಬನ ತಂದೆಯಾದ ಷಹಜಹಾನನು ಬರೆದುಕೊಟ್ಟಿರುವ ಒಂದು ದಾನಶಾಸನದಲ್ಲಿ— ಜಂಗಮವಾಡೀ ಮಠಾಧಿಪತಿಗಳಿಗೆ "ಮುಜವೀರ್" ಎಂಬ ಶಬ್ದವು ಪ್ರಯೋಗಿಸಲ್ಪಟ್ಟಿರುವುದೆಂದೂ, ಈ ಶಬ್ದವು ಪರ್ಷಿಯನ್ ಭಾಷೆಯದಾಗಿದ್ದು "ಹಿಂದೂ ಮಠಾಧಿಪತಿ" ಎಂದು ಇದರ ಅರ್ಥವಾಗುವದೆಂದೂ ವಿವರಣೆಯನ್ನು ಮಾಡಿ, ಇಂಡಿಯಾ ದೇಶದಲ್ಲಿಂತಹ ವೀರಶೈವ ಜನಾಂಗವು ಹಿಂದೂ ಸಮಾಜದಲ್ಲಿ ಒಂದು ದೊಡ್ಡ ಪಂಗಡವಾಗಿರುವುದೆಂದು ಉಲ್ಲೇಖಿಸಿರುವರು. ಇದರಂತೆಯೇ ಇಂದಿನವರೆಗೆ ಎಲ್ಲಾ ಹೈಕೋರ್ಟು ತೀರ್ಮಾನಗಳಲ್ಲಿಯೂ ಗ್ಯಾಝೆಟಿಯರುಗಳಲ್ಲಿಯೂ ಇವರು ಹಿಂದುಗಳೆಂದು ಉಲ್ಲೇಖಿಸಲ್ಪಟ್ಟಿರುವುದು. ಇವುಗಳನ್ನೆಲ್ಲಾ ವಿಚಾರಮಾಡದೆ ಸುಮ್ಮ ಸುಮ್ಮನೆ ನಾವು ಹಿಂದುಗಳಲ್ಲವೆಂದು ಹೇಳಿದರೆ ಇಂಡಿಯಾ ಗವರ್ನಮೆಂಟಿನವರು ಒಪ್ಪುವರೇ ?

ವೀರಶೈವ ಮತವು ಶ್ರೀ ಜಗದ್ಗುರು ಪಂಚಾಚಾರ್ಯರಿಂದ ಕೇವಲ ವೇದಾಗಮಗಳ ಆಧಾರದ ಮೇಲೆ ಸ್ಥಾಪಿಸಲ್ಪಟ್ಟಿರುವದು. ಈ ವಿಷಯವನ್ನು ವೀರಶೈವ ಮತದ ಸಾವಿರಾರು ಪ್ರಾಚೀನ ಗ್ರಂಥಗಳು ಸಾರುತ್ತಿರುವವು. ಶಿವನು ಹಿಂದುಗಳಿಗೆ ಮುಖ್ಯೋಪಾಸ್ಯದೇವರು. ಇಂತಹ ಶಿವನನ್ನು ಎಡೆಬಿಡದೆ ದೇಹದಲ್ಲಿ ಧರಿಸಿಕೊಂಡು ಹಿಂದುಗಳಲ್ಲವೆಂದು ನುಡಿಯುವದು ಹಾಸ್ಯಾಸ್ಪದವಲ್ಲವೇ ? ವೀರಶೈವರಲ್ಲಿ ವರ್ಣಾಶ್ರಮಧರ್ಮಗಳುಂಟೆಂಬುದನ್ನು ಅನೇಕ ಧರ್ಮಗ್ರಂಥಗಳು ಸಾರುತ್ತಿರುವವು. ಅದರಂತೆಯೇ ಈ ಮತದಲ್ಲಿ ಅನಾದಿಕಾಲದಿಂದ ಇಂದಿನವರೆಗೂ ಉಚ್ಚವರ್ಣದವರೂ ಇದ್ದಾರೆ, ಕನಿಷ್ಠವರ್ಣದವರೂ ಇದ್ದಾರೆ. ಈ ಮತದ ನಿಜಸ್ಥಿತಿಯನ್ನೆಲ್ಲಾ ಅರಿತುಕೊಂಡು ಲೋಕಪ್ರಸಿದ್ಧರಾದ ಡಾ|| ಭಾಂಡಾರಕರವರು "ವೈಷ್ಣವೀಜಂ ಅಂಡ್ ಶೈವೀಜಂ" ಎಂಬ ಗ್ರಂಥದಲ್ಲಿ, ಇವರಲ್ಲಿ ವರ್ಣಾಶ್ರಮಗಳುಂಟೆಂದೂ ಇಂಥ ಪಂಗಡದವರು ಇಂಥ ವರ್ಣಕ್ಕೆ ಸೇರಿದವರೆಂದೂ ಸ್ಪಷ್ಟಪಡಿಸಿದ್ದಾರೆ. 1940 ನೆಯ ಇಸವಿ ಅಕ್ಟೋಬರ್ ತಿಂಗಳಲ್ಲಿ ಮೈಸೂರ ಹೈಕೋರ್ಟಿನವರು ಈ ಮತ

ಸಂಬಂಧವಾದ ಒಂದು ವ್ಯಾಖ್ಯದಲ್ಲಿ ತೀರ್ಪನ್ನೀಯುತ್ತಾ, ವೀರಶೈವರಲ್ಲಿ ವರ್ಣಾಶ್ರಮಗಳುಂಟೆಂದೂ, ಇಂಥಿಂಥವರು ಇಂಥಿಂಥ ವರ್ಣಗಳಿಗೇ ಸೇರಿದವರೆಂದೂ ಸ್ಪಷ್ಟವಾಗಿ ತಮ್ಮ ತೀರ್ಪಿನಲ್ಲಿ ನಮೂದಿಸಿರುತ್ತಾರೆ

ಜಗತ್ಪ್ರಸಿದ್ಧರಾದ ಕಾಶೀಕ್ಷೇತ್ರನಿವಾಸಿ ಶ್ರೀ॥ ರಾಮದಾಸಗೌಡ, ಎಂ ಎ ಎಂಬವರು "ಹಿಂದುತ್ವ" ವೆಂಬ ಮಹಾಗ್ರಂಥವನ್ನು ರಚಿಸಿರುತ್ತಾರೆ ಆ ಮಹಾಗ್ರಂಥದಲ್ಲಿ ವೀರಶೈವಮತದ ವಿಷಯವನ್ನೆತ್ತಿಕೊಂಡು, ಈ ಮತವು ಬಹು ಅನಾದಿಕಾಲದಿಂದ ಬಂದುದೆಂದೂ, ಶ್ರೀಮತ್ಪಂಚಾಚಾರ್ಯರಿಂದ ವೇದಾಗಮಗಳ ಆಧಾರದ ಮೇಲೆ ಸ್ಥಾಪಿಸಲ್ಪಟ್ಟಿರುವದೆಂದೂ, ಈ ಮತದಲ್ಲಿ ವರ್ಣಾಶ್ರಮಧರ್ಮಗಳುಂಟೆಂದೂ, ಇವೇ ಮೊದಲಾದ ವಿಷಯಗಳನ್ನು 694 95 96 ನೆಯ ಪುಟಗಳಲ್ಲಿ ಬಹು ವಿಶದವಾಗಿ ಬರೆದಿರುವರು

೧೯೩೧ ನೆಯ ಇಸ್ವಿಯಲ್ಲಿ ಸೆನ್ಸಸ್ ನಡೆದ ಕಾಲಕ್ಕೆ ಇಂಡಿಯಾದೇಶದ ವೀರಶೈವರೆಲ್ಲರೂ ಕೂಡಿ "ನಮ್ಮಲ್ಲಿ ಉಚ್ಚವರ್ಣದವರೂ ಇದ್ದಾರೆ, ಕನಿಷ್ಠವರ್ಣದವರೂ ಇದ್ದಾರೆ ಅವರವರ ವರ್ಣಕ್ಕನುಸರಿಸಿ ರಿಪೋರ್ಟಿನಲ್ಲಿ ನಮೂದಿಸಬೇಕೆಂದು' ಇಂಡಿಯಾ ಗವರ್ನಮೆಂಟಿಗೆ ತಿಳಿಸಿದ್ದಾರೆ ಈ ವಿಷಯವು "ಇಂಪೀರಿಯಲ್ ಗ್ಯಾಝೀಟಿನಲ್ಲಿ ಪ್ರಕಟವಾಗಿದೆ

ಇವೇ ಮೊದಲಾದ ವಿಷಯಗಳನ್ನು ರಾವ್ ಕಮಿಟಿಯವರ ಮುಂದಿಟ್ಟು ನಮ್ಮ ಮತದ ಉಚ್ಚವರ್ಣದವರಿಗೆ ಉಚ್ಚವರ್ಣಕ್ಕೆ ಅನ್ವಯಿಸುವ ಕಾಯಿದೆಯನ್ನೂ ಕನಿಷ್ಠವರ್ಣದವರಿಗೆ ಕನಿಷ್ಠವರ್ಣಕ್ಕೆ ಅನ್ವಯಿಸುವ ಕಾಯಿದೆಯನ್ನೂ ಮಂಜೂರು ಮಾಡಬೇಕೆಂದು ಹೇಳಿಕೆಯನ್ನಿತ್ತಿದ್ದರೆ ವಿಶೇಷ ಗೌರವವು ಬರುತ್ತಿತ್ತು ಈ ಮಾರ್ಗವನ್ನು ಬಿಟ್ಟು 'ಮೂಲೇ ಕುಠಾರಃ' ಎಂಬಂತೆ ಹಿಂದುಗಳೇ ಅಲ್ಲವೆಂದು ಹೇಳಿರುವುದು ಅತ್ಯಂತ ಆಭಾಸಕರವಾದ ವಿಷಯವಾಗಿದೆ

ಈ ಹಿಂದೂ ಶಬ್ದದ ಗೊಂದಲವನ್ನು ಬೊಂಬಾಯಿ ಪ್ರಾಂತದ ೪ ೫ ಜನರು ಕೂಡಿ ಈಗ್ಗೆ ೩ ೪ ವರ್ಷಗಳಿಂದ ಎಬ್ಬಿಸಿರುವರು ಅದು ಈ ವರ್ಷ ಮೈಸೂರು ಪ್ರವೇಶ ಕಾಲಿಟ್ಟಿರುವುದು ಇವರು ಈ ವಿಧವಾದ ಗೊಂದಲವನ್ನೆಬ್ಬಿಸಿ ಯಾವ ಸಾಮ್ರಾಜ್ಯವನ್ನು ಗಳಿಸುವರೋ ತಿಳಿಯದಾಗಿದೆ ಒಟ್ಟಿಗೆ ವಿಚಾರಮಾಡಿ ನೋಡಿದರೆ ಇವರು ಕೈಕೊಂಡಿರುವ ಈ ಕಾರ್ಯವು ಅತಿ ಹೇಯವಾದುದೆಂದು ಹೇಳಬೇಕಾಗಿದೆ

ತುಮಕೂರಿನಲ್ಲಿ ನೆರವೇರಿದ ಸಭೆಯಲ್ಲಿ ಕೆಲಜನರು ವೀರಶೈವರು ಹಿಂದುಗಳಲ್ಲವೆಂಬ ಠರಾವನ್ನು ಮಾಡಿಸಬೇಕೆಂದು ಬಹಳ ಪ್ರಯತ್ನಪಟ್ಟರಂತೆ! ಕೂಡಲೇ ಸನಾತನ ವೀರಶೈವಧರ್ಮಾಭಿಮಾನಿಗಳು ಪ್ರತಿಬಟಿಸಿದ್ದರಿಂದಲೂ ಇದರಿಂದ ಘೋರ ಅನಾಹುತಕ್ಕೆ ಕಾರಣವಾಗುವದೆಂಬ ಭೀತಿಯಿಂದಲೂ ಮಹಾಕುಶಲರಾದ ಅಧ್ಯಕ್ಷರು ಆ ವಿಷಯವನ್ನು ಹಿಂದಕ್ಕೆ ತಳ್ಳಿಹಾಕಿದರೆಂದು ತಿಳಿದುಬರುತ್ತದೆ ಇದು ಅತ್ಯಂತ ಸ್ತೋತ್ರಾರ್ಹವಾದುದೆಂಬುದರಲ್ಲಿ ಯಾವ ಸಂಶಯವೂ ಇಲ್ಲ

ಮೇಲ್ಕಂಡ ಸಭೆಯಲ್ಲಿ ಇನ್ನೊಬ್ಬ ಮಹಾಪುರುಷರು ಈ ಕಾಲಕ್ಕೆ ವೀರಶೈವರು ಹಿಂದುಗಳಲ್ಲವೆಂದು ಸಾಧಿಸಬೇಕು ಅಂದರೆ ನಮ್ಮ ಸಮಾಜಕ್ಕೆ ಸರ್ಕಾರದಲ್ಲಿ ದೊಡ್ಡ ದೊಡ್ಡ ಅಧಿಕಾರಗಳು ಸಿಗುತ್ತವೆ ಎಂದು ಹೇಳಿದರಂತೆ! ಬುದ್ಧಿಪ್ರತಿಭೆಯೆಂದರೆ ಇವರಿಗನ್ನಬೇಕು ಹೀಗೆ ಹೇಳುವದಕ್ಕಿಂತಲೂ ಇಂಡಿಯಾದೇಶದಲ್ಲಿ ಬಹಳ ಹಿಂದುಳಿದ ಒಂದು ವರ್ಗವುಂಟಷ್ಟೆ! ಆ ವರ್ಗಕ್ಕೆ ಸೇರಿದವರೆಂದು ಸಾಧಿಸಹತ್ತಿದರೆ ಸರ್ಕಾರದಲ್ಲಿ ಇನ್ನೂ ದೊಡ್ಡ ದೊಡ್ಡ ಕೆಲಸಗಳು ಸಿಗುವವು ಆ ಮಹಾತ್ಮರಿಗೆ ಈ ಯೋಚನೆಯು ಏಕೆ ಹೊಳೆಯಲಿಲ್ಲವೋ ತಿಳಿಯದಾಗಿದೆ ಈ ರೀತಿ ಮನಸ್ಸಿಗೆ ಬಂದಂತೆ ನುಡಿಯುತ್ತಿರುವದು ಲೋಕದಲ್ಲಿ ಅತ್ಯಂತ ಹಾಸ್ಯಾಸ್ಪದವಾಗಿರುವದಲ್ಲದೆ ಈ ಮತಕ್ಕೆ ದೊಡ್ಡ ಕಳಂಕವನ್ನು ತಂದಂತಾಗುವದು ದೇವರು ಈ ಜನರಿಗೆ ಈ ವಿಧವಾದ ಬುದ್ಧಿಯನ್ನು ಏಕೆ ಕೊಟ್ಟಿರುವನೋ ಎಂಬುದು ಯಾರಿಗೂ ತಿಳಿಯದಾಗಿದೆ ಇನ್ನು ಮೇಲಾದರೂ ಈ ಜನರು ಜಗತ್ತಿನ ಜನರೆಲ್ಲರೂ ನಗುವ ಇಂತಹ ಅಸಹ್ಯಕಾರ್ಯದಲ್ಲಿ ತೊಡಗುವದನ್ನು ಬಿಟ್ಟು ತಮ್ಮ ಪೂರ್ವಜರಂತೆ ತಾವು ವೇದಾಗಮಾವಲಂಬಿಗಳಾದ ಮಹಾಹಿಂದುಗಳೆಂದು ಸಾರುತ್ತ ಹಿಂದುಗಳಿಗೆ ಪರಮ ಪೂಜ್ಯನಾಗಿರುವ ಶಿವನ ಕೃಪೆಗೆ ಪಾತ್ರರಾಗಬೇಕೆಂದು ಆಶಿಸುತ್ತೇನೆ

ಸನಾತನ ವೀರಶೈವಮತಾಭಿಮಾನಿ

ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಕೃಪಾಪೋಷಿತ ಧರ್ಮಾರ್ಥ ಸಂಗೀತ ಪಾಠಶಾಲಾ ಕೊಟ್ಟೂರು

ಶ್ರೀಮನ್ನೃಪಶಾಲಿವಾಹನಶಕೆ ೧೮೬೭ ನೆ ಪಾರ್ಥಿವ ಸಂವತ್ಸರ ವೈಶಾಖ ಶುದ್ಧ ಅಕ್ಷಯತೃತೀಯ ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಜಯಂತೀ ಪುಣ್ಯದಿನ (ತಾ॥ 14 5-45) ನೆ ಸೋಮವಾರ ಸುಮುಹೂರ್ತದಲ್ಲಿ ಕೊಟ್ಟೂರು ಕಟ್ಟಿಮನೆ ಬೃಹನ್ಮಠಾಧ್ಯಕ್ಷ ಶ್ರೀ॥ ಷ॥ ಬ್ರ॥ ಭೂತಭುಜಂಗಸ್ವಾಮಿಗಳವರ ಹಸ್ತದಿಂದ, ಸೂಡಿಜುಕ್ತಿ ಬೃಹನ್ಮಠಾಧ್ಯಕ್ಷ ಶ್ರೀ॥ ಉಮಾಪತಿ ಶಿವಾಚಾರ್ಯರ ಮತ್ತು ಸದರಿ ಗ್ರಾಮದ ವರ್ತಕ ಮಂಡಲಿಯ ಸಮಕ್ಷದಲ್ಲಿ ಸದರಿ ಪಾಠಶಾಲೆಯ ಶಂಕುಸ್ಥಾಪನೆಯು ಮಾಡಲ್ಪಟ್ಟಿತು ಈ ಶಾಲಾ ರಚನಾ ಕಾರ್ಯವನ್ನು ವೇ॥ ಸಂಗೀತ ವಿದ್ವಾನ್ ಚನ್ನಬಸವಶಾಸ್ತ್ರಿಗಳು ಕೈಕೊಂಡಿರುವರು ಈ ಘನ ಕಾರ್ಯಕ್ಕಾಗಿ ದೇಶ ಮಧ್ಯದಲ್ಲಿರುವ ವಿದ್ಯಾಭಿಮಾನಿಗಳು ಗುರುವಾಂಛಾಶೀಲರು ಧನಸಹಾಯವನ್ನು ಮಾಡಿ ಗುರುಕೃಪೆಗೆ ಪಾತ್ರರಾಗಬೇಕೆಂದು ಪ್ರಾರ್ಥಿಸುವ,

ಒರ್ವ ಗಾನಕಲಾಭಿಲಾಷಿ

ಶ್ರೀ ಜಗದ್ಗುರು ಕಾಶೀಪೀಠಕ್ಕೆ ಕಾಣಿಕೆ

ಪ್ರಭೆಯಲ್ಲಿ ಕಾಶೀಪೀಠದ ಸಮಾಚಾರನೆಲ್ಲವೂ ಈ ಹಿಂದೆ ಪ್ರಕಾಶಿತವಾಗಿವೆ ಅದರಂತೆ ಗುರುಭಕ್ತರು ಗುರುದಕ್ಷಿಣೆಯನ್ನು ಪೀಠಕ್ಕೆ ಸಲ್ಲಿಸುತ್ತಿದ್ದಾರೆ. ಈ ಕೆಲಸವು ಇನ್ನೂ ವಿಶೇಷವಾಗಿ ಸಾಗಬೇಕಾಗಿದೆ ಆಯಾ ಸ್ಥಳಗಳಲ್ಲಿಯ ಪ್ರಮುಖರು ವೀರಶೈವ ಮಹಾಜನರಿಂದ ವಿವಾಹಾದಿ ಶುಭಕಾರ್ಯಗಳಲ್ಲಿ ದಾನ ದಕ್ಷಿಣಗಳನ್ನು ಸಮರ್ಪಿಸಿ ಕಾಶೀ ಜಗದ್ಗುರು ಮಹಾಸನ್ನಿಧಿಗೆ ಕಳುಹಿಸುತ್ತಿರಬೇಕು ಈ ಬಗ್ಗೆ ಸರಿಯಾದ ಸೇವೆಯನ್ನು ಸಲ್ಲಿಸುವುದು ಸರ್ವ ಗುರುಭಕ್ತರ ಮುಖ್ಯ ಕರ್ತವ್ಯವಾಗಿದೆ ಎಂಬುದನ್ನು ತಿಳಿದು ಎಲ್ಲರೂ ಪ್ರಯತ್ನಿಸಬೇಕು.

ಚಂದಾದಾರರಲ್ಲಿ ವಿಜ್ಞಾಪನೆ

ಈ ಪತ್ರಿಕೆಯು ಜನ್ಮನೆತ್ತಿ ವೈಶಾಖ ಶು॥ ಪಂಚಮಿಗೆ ೧೮ ವರ್ಷಗಳು ತುಂಬಿ ೧೯ ನೆಯ ವರ್ಷವು ಪ್ರಾರಂಭವಾಗಿರುವುದು ವರ್ಷಾರಂಭದಿಂದ ಚಂದಾದಾರರಾಗಿರುವ ಸರ್ವರಿಗೂ ಇನ್ನು ಮುಂದೆ ಪತ್ರಿಕೆಯನು ವಿ ಪಿ. ಮಾಡಬೇಕಾಗುತ್ತದೆ ವಿ. ಪಿ. ಮಾಡುವುದರಿಂದ ನಮಗೂ ತೊಂದರೆಯಾಗುವುದು ಹಾಗೂ ಚಂದಾದಾರರಿಗೂ ೨ ಆಣೆ ಹೆಚ್ಚಿಗೆ ಬೀಳುವುದು ಆದುದರಿಂದ ಚಂದಾದಾರರೆಲ್ಲರೂ ಕೂಡಲೆ ೩ ರೂ ಗಳನ್ನು ಮನಿಯಾರ್ಡರ್ ದ್ವಾರಾ ಕಳುಹಿಸಬೇಕು ಯಾವ ಗ್ರಾಮದಲ್ಲಿ ವಿಶೇಷ ಚಂದಾದಾರರಿರುವರೋ ಆ ಗ್ರಾಮದಲ್ಲಿರುವ ಅಭಿಮಾನಿಗಳು ಚಂದಾದಾರರ ಹಣವನ್ನಲ್ಲ ಒಟ್ಟು ಕೂಡಿಸಿ ಒಂದೇ ಸಾರ ಮನಿಯಾರ್ಡರ್ ಮಾಡಿಸಬೇಕು ಹೀಗೆ ಮಾಡುವುದರಿಂದ ಸರ್ವರಿಗೂ ಹಿತವಾಗುತ್ತದೆ ಮನಿಯಾರ್ಡರ್ ಮಾಡುವ ಚಂದಾದಾರರು ತಮ್ಮ ಹೆಸರಿನ ಪಕ್ಕದಲ್ಲಿರುವ ನಂಬರನ್ನು ಮಾತ್ರ ದಯೆಯಿಟ್ಟು ಮರೆಯದೆ ತಿಳಿಸಬೇಕು

ಮ್ಯಾ—

ಸ್ವೀಕಾರ

ಬೆಂಗಳೂರು ಸಿಟಿ ಚಾಮರಾಜಪೇಟೆಯಲ್ಲಿರುವ ವೇ॥ ಎನ್ ರುದ್ರಯ್ಯನವರ ಪುತ್ರಿ ಚಿ॥ ಸೌ॥ ಶಾರದಾಂಬೆಗೂ ವೇ॥ ಸಿ ಶಿವಶಂಕರಾರಾಧ್ಯರ ಪುತ್ರ ಚಿ॥ ಕೆ ಎಸ್ ಸದಾನಂದಾರಾಧ್ಯರಿಗೂ ಮತ್ತು ವೇ॥ ರುದ್ರಯ್ಯನವರ ಸಹೋದರರಾದ ಶ್ರೀ॥ ಅಪ್ಪಣ್ಣದೇವರ ಪುತ್ರ ಚಿ॥ ಶಿವಾರಾಧ್ಯನಿಗೂ ವೇ॥ ಸಿ ಕೊಂಟಗೆರೆ ಪೇಟೆ ಮಠದ ಸಿ ಶಿವಶಂಕರಾರಾಧ್ಯರ ಪುತ್ರಿ ಚಿ॥ ಸೌ॥ ಜ್ಞಾನಪೂರ್ಣಮ್ಮನಿಗೂ ನೆರವೇರಿದ ವಿವಾಹ ಸಮಯದಲ್ಲಿ ವೇ॥ ಎನ್ ರುದ್ರಯ್ಯನವರು ಪ್ರಭಾಪೋಷಣಕ್ಕೋಸ್ಕರ 10 ರೂಪಾಯಿಗಳನ್ನು ಕಳುಹಿಸಿರುತ್ತಾರೆ

ಧಾರವಾಡ ಡಿ॥ ಗದಗ ಬೆಟಗೇರಿಯಲ್ಲಿರುವ ಮ॥ ರಾ॥ ಚಿಕ್ಕಣ್ಣನವರ ಮೈಲಾರಪ್ಪನವರ ದ್ವಿತೀಯ ಪುತ್ರ ಚಿ॥ ಅಡಿವೆಪ್ಪನಿಗೂ ಹಿರೇಕೊಪ್ಪದಲ್ಲಿರುವ ಮ॥ ಗಿಡ್ಡಮಲ್ಲಪ್ಪನವರ ಲಿಂಗಪ್ಪನವರ ಪುತ್ರಿ ಚಿ॥ ಸೌ॥ ಬಸವ್ವನಿಗೂ ಮೈಲಾರಪ್ಪನವರ ತೃತೀಯ ಪುತ್ರ ಚಿ॥ ವೀರಪ್ಪನಿಗೂ ಗದಗಿನಲ್ಲಿರುವ ಮ॥ ರಾ॥ ವೀರಭದ್ರಪ್ಪ ಆಲೂರು ಉರ್ಫ ಹುಯಿಲಗೋಳ ಇವರ ಪುತ್ರಿ ಚಿ॥ ಸೌ॥ ಪಾರ್ವತವ್ವನಿಗೂ ನೆರವೇರಿದ ವಿವಾಹ ಸಮಯದಲ್ಲಿ ವರನ ಕಡೆಯವರು ಸಮರ್ಪಿಸಿದ 4 ರೂ ಗಳು, ವಧುವಿನ ಕಡೆಯವರು ಸಮರ್ಪಿಸಿದ 2 ರೂ ಗಳು ಮತ್ತು ಗದಗ ಬೆಟಗೇರಿಯಲ್ಲಿರುವ ಮ॥ ರಾ॥ ಚನ್ನಬಸಪ್ಪ ಕಲ್ಯಾಣಿಯವರ ಉರ್ಫ ಗದಗಿನ ಇವರ ಪುತ್ರಿ ಮಲ್ಲವ್ವನಿಗೂ ನವಲಗುಂದ ತಾ॥ ಬೆನ್ನೂರು ಗ್ರಾಮದ ಮ॥ ರಾ॥ ಬಳಗಲಿ ಉರ್ಫ ಕಣ್ವಿ ಬಸಪ್ಪನವರ ಪುತ್ರಕ ಪುತ್ರ ಚಿ॥ ಲಿಂಗಪ್ಪನಿಗೂ ನೆರವೇರಿದ ವಿವಾಹಸಮಯದಲ್ಲಿ ವರನ ಕಡೆಯವರು ಸಮರ್ಪಿಸಿದ 2 ರೂ ಗಳು, ವಧುವಿನ ಕಡೆಯವರು ಸಮರ್ಪಿಸಿದ 1 ರೂಪಾಯಿ ಒಟ್ಟು 9 ರೂಪಾಯಿಗಳು ಗದಗ ಬೆಟಗೇರಿ ಹಿರೇಮನಿ ಪಾಟೀಲ ನೀಲಪ್ಪಗೌಡರ ದ್ವಾರಾ ತಲ್ಪಿರುತ್ತವೆ

ತರೀಕೆರೆ ತಾ॥ ಬುಕ್ಕಾಂಬುಧಿಯಲ್ಲಿರುವ ಮ॥ ರಾ॥ ಶಿವಣ್ಣನವರ ವಿರೂಪಾಕ್ಷಪ್ಪನವರ ಪುತ್ರಿ ಚಿ॥ ಸೌ॥ ಗಿರಿಜಮ್ಮನಿಗೂ ಚಿಕ್ಕಮಗಳೂರು ಮ॥ ರಾ॥ ಎಂ ಸಿ ರುದ್ರಪ್ಪನವರ ಪುತ್ರ ಚಿ॥ ನಾಗಪ್ಪನಿಗೂ ನೆರವೇರಿದ ವಿವಾಹಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 4 ರೂ ಗಳು ಮತ್ತು ಶಿವಮೊಗ್ಗ ಡಿ॥ ಹಾರನಹಳ್ಳಿಯಲ್ಲಿರುವ ಮ॥ ರಾ॥ ತಿಪ್ಪಳ್ಳಿ ಮಲ್ಲೇಶಪ್ಪನವರ ಗೃಹದಲ್ಲಿ ಹೊಳೆಹೊನ್ನೂರು?

ಹೋದಿಗೆರೆ ಲಕ್ಷ್ಮೀಶ್ವರದ ಮ॥ ರಾ॥ ಚನ್ನಬಸಪ್ಪನವರ ಪುತ್ರಿ ಚಿ॥ ಸೌ॥ ಮಲ್ಲಮ್ಮನಿಗೂ ಹರಳಕಟ್ಟೆದ ಗುರುಪಾದಪ್ಪನವರ ಪುತ್ರ ಚಿ॥ ಮಲ್ಲಪ್ಪನಿಗೂ ನೆರವೇರಿದ ವಿವಾಹಸಮಯದಲ್ಲಿ ಸಮರ್ಪಿಸಿದ 1 ರೂಪಾಯಿ ಒಟ್ಟು 5 ರೂ ಗಳು ವೇ॥ ಗುಬ್ಬಿ ಶಿವಕಥಾಪಂಡಿತ ಶಿವರುದ್ರಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತವೆ

ರಾಯಚೂರು ಡಿ॥ ಸೋಮಲಾಪುರ ಸಂಸ್ಥಾನದ ಶ್ರೀಮತಿ ರಾಣಿ ಮಲ್ಲಮ್ಮನವರು ಶಿವಾಧೀನರಾದ ನಿಮಿತ್ತ ನಡೆದ ಕೈಲಾಸಗಣಾರಾಧನೆಯ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 3 ರೂಪಾಯಿ ಮತ್ತು ಗೌಡಕುಂದಿ ಹಿರೇಮಠದಲ್ಲಿ ನೆರವೇರಿದ ಜಯಂತಿ ಮಹೋತ್ಸವ ಸಮಯದಲ್ಲಿ ಪೋ॥ ಪಾ॥ ವಿರೂಪಾಕ್ಷಗೌಡರು ಸಮರ್ಪಿಸಿದ 1 ರೂಪಾಯಿ ಒಟ್ಟು 4 ರೂ ಗಳು ಮ॥ ರಾ॥ ವಿರೂಪಾಕ್ಷಗೌಡರ ದ್ವಾರಾ ತಲ್ಪಿರುತ್ತವೆ

ಶಿವಮೊಗ್ಗ ಡಿ॥ ನ್ಯಾಮತಿ ಗ್ರಾಮದಲ್ಲಿರುವ ಮ॥ ರಾ॥ ಸುಚ್ಚಿನ ಸಣ್ಣನಾಗಪ್ಪನವರು ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 2 ರೂಪಾಯಿಗಳು ಮ॥ ರಾ॥ ಎನ್ ಡಿ ಶೇಖರಪ್ಪನವರ ದ್ವಾರಾ ತಲ್ಪಿರುತ್ತವೆ

ಬೆಳಗಾಂವ ಡಿ॥ ಬೈಲಹೊಂಗಲದಲ್ಲಿರುವ ವೇ॥ ಚನ್ನವೀರಸ್ವಾಮಿ ಯರಗಂಬಳಿಮಠ ಇವರ ಪುತ್ರ ಚಿ॥ ಗಂಗಾಧರಯ್ಯನ ಮಾಹೇಶ್ವರದೀಕ್ಷೆಯು ಸತ್ತಿಗೇರಿ ಹಿರೇಮಠದ ಪಟ್ಟಾಧಿಕಾರ ಸಮಯದಲ್ಲಿ ನೆರವೇರಿದಾಗ್ಗೆ ಸದರಿಯವರು ಪ್ರಭಾಪೋಷಣಕ್ಕೋಸ್ಕರ 2 ರೂಪಾಯಿಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಶ್ರೀಮಾನ್ ಎಚ್. ಕೆ ವೀರಬಸವಯ್ಯನವರ ನಿಧನ.

ಬೆಂಗಳೂರು ಸಿಟಿ ವಿಶ್ವೇಶ್ವರಪುರದಲ್ಲಿರುವ ರಿಟೈರ್ಡ್ ಡಿಸ್ಟ್ರಿಕ್ಟ್ ಜಡ್ಜರವರಾದ ಎಚ್ ಕೆ ವೀರಬಸವಯ್ಯನವರು ತಾ|| 25 5 1945 ನೆಯ ಶುಕ್ರವಾರ ದಿವಸ ಶಿವಾಧೀನರಾದರೆಂಬ ವಿಷಯವನ್ನು ತಿಳುಹಿಸಲು ಅತ್ಯಂತ ವಿಷಾದವೆನಿಸುತ್ತದೆ ಇವರು ಒಳ್ಳೆ ಧರ್ಮಾಭಿಮಾನಿಗಳೂ ಗುರುಪೀಠಾಭಿಮಾನಿಗಳೂ ಪೂಜಾನಿಷ್ಠರೂ ಆಗಿದ್ದರು ಈ ಕಾಲದಲ್ಲಿ ಇಂತಹ ಧರ್ಮಾಭಿಮಾನಿಗಳನ್ನು ಕಾಣುವದು ದುರ್ಲಭವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು ಇವರ ವಿಯೋಗದಿಂದ ವೀರಶೈವಸಮಾಜಕ್ಕೆ ದೊಡ್ಡ ಹಾನಿಯೆಂದೇ ಹೇಳಬೇಕಾಗಿದೆ ಜಗದೀಶ್ವರನು ಮೃತರ ಆತ್ಮಕ್ಕೆ ಶಾಂತಿಯನ್ನೀಯಲೆಂದೂ ಇವರ ಕುಟುಂಬದವರಿಗೂ ಮತ್ತು ಪುತ್ರಪೌತ್ರಾದಿಗಳಿಗೂ ಉಂಟಾಗಿರುವ ದುಃಖವನ್ನು ಶಮನಮಾಡಲೆಂದೂ ಆ ಜಗನ್ನಿಯಾಮಕನನ್ನು ಪ್ರಾರ್ಥಿಸುತ್ತೇವೆ

ಶ್ರೀಜಗದ್ಗುರು ದಾರುಕಾಚಾರ್ಯಾಃ ಪ್ರಸೀದಂತು

ಶೋಚನೀಯ ನಿಧನ

ರಾಯಚೂರು ಡಿಸ್ಟ್ರಿಕ್ಟಿಗೆ ಸೇರಿದ ಸೋಮಲಾಪುರ ಸಂಸ್ಥಾನದ ರಾಣಿಯವರಾದ ಶ್ರೀಮಂತ ರಾಜಾಸಾಹೇಬ ಮಲ್ಲಮ್ಮನವರು ತಾ|| ೯ ೫ ೪೫ ಬುಧವಾರ ಶಿವಾಧೀನರಾದರು ಇವರು ಮಹಾಪರೋಪಕಾರಿಣಿಯರಾಗಿದ್ದರು ಇವರ ಪತಿವರ್ಯರು ಇವರ ಬಾಲ್ಯವಯಸ್ಸಿನಲ್ಲಿಯೇ ಶಿವಾಧೀನರಾದ್ದರಿಂದ ತಮ್ಮ ಬಾಲ್ಯವಯಸ್ಸಿನಿಂದ ೯೫ ವರುಷಗಳವರೆಗೆ ಬ್ರಹ್ಮಚಾರಿಣಿಯರಾಗಿದ್ದು ಸದಾಶಿವಲಿಂಗಪೂಜಾದಿಗಳಲ್ಲಿಯೇ ಕಾಲಹರಣಮಾಡುತ್ತ ಸರ್ವರ ಪ್ರೀತಿಗೂ ಪಾತ್ರರಾಗಿದ್ದರು ಪತಿವಿಯೋಗಾನಂತರ ಇವರು ಸಂಸ್ಥಾನಕ್ಕೆ ಅಧಿಪತಿಗಳಾದರು ಇವರಿಗೆ ಜಿಲ್ಲೇದ ಅದಿಕಾರವೂ, ಹಗಲು ದೀವಟಿಗೆ ಒಂಬತ್ತು ತೋಪುಗಳ ಸಲ್ಲಾಮಿನ ಮರ್ಯಾದೆ ಮೊದಲಾದ ರಾಜಮರ್ಯಾದೆಗಳು ಯದಾವತ್ತಾಗಿ ೩೦೦ ವರುಷಗಳಿಂದಲೂ ನಡೆಯುತ್ತ ಬಂದಿದ್ದವು ಈ ಸಂಸ್ಥಾನದ ಮುಖ್ಯ ರಾಜಧಾನಿಯು ಬಳ್ಳಾರಿ ಡಿ|| ಶಿರುಗುಪ್ಪ ತಾಲೂಕು ಕೆಂಚನದುರ್ಗ ಅಥವಾ ಕೆಂಚನಗುಡ್ಡವೆಂಬುದು, ಈ ಸಂಸ್ಥಾನದ ಮೂಲಪುರುಷನಾದ ಇಬರಾಮಪುರದ ಗೌಡ ಮಲ್ಲಣ್ಣನೆಂಬಾತನು ವಿಜಯನಗರದ ಮಹಾರಾಜರ ಪ್ರಾಂತಾದಿಕಾರಿಯಾದ ಅಬ್ದುಲ್‌ವಹಬ ಹಜರತ್ ಎಂಬ ಮುಖ್ಯಾಧಿಕಾರಿಯಿಂದ ಈ ಸಂಸ್ಥಾನವನ್ನು ಸಂಪಾದಿಸಿದನೆಂದು ಹಳೇಕೆಂಚನಗುಡ್ಡದ ಗಂಗಾಧರಸ್ವಾಮಿ ದೇವಾಲಯದದಲ್ಲಿರುವ ಶಿಲಾಲೇಖದಿಂದ ತಿಳಿದುಬರುತ್ತದೆ ಅನಂತರ ಈ ಸಂಸ್ಥಾನದ ರಾಜಾ ಕಂಚನಗೌಡನೆಂಬಾತನು ಆ ಕಾಲದಲ್ಲಿ ವಿಜಯನಗರದ ಅರಸರ ಪರವಾಗಿ ಯುದ್ಧಮಾಡಿ ತನ್ನ ರಾಜ್ಯವನ್ನು ಮತ್ತಷ್ಟು ಬೆಳಸಿದನು ಇದಾದನಂತರ ನೂರಾರು ವರ್ಷಗಳಮೇಲೆ "ಮಹಾರಾಣಿ ತಂಗಮ್ಮ" ಎಂಬ ರೌಡಕುಂದಿ ಸಂಸ್ಥಾನದ ನಾಡಗೌಡ ಚನ್ನಪ್ಪಗೌಡರ ಮಗಳಾದ ಮತ್ತೊಬ್ಬ ಧೀರಳಾದ ಸರ್ ನಾಡಗೌಡಣಿಯು ಕೆಂಚನ ದುರ್ಗದ ಸಂಸ್ಥಾನಕ್ಕೆ ರಾಣಿಯಾಗಿ ಬಂದಳು ಈಕೆಯು ಟೀಪುಸುಲ್ತಾನನ ಸೈನ್ಯವನ್ನು ಮೂರುಸಾರೆ ಸೋಲಿಸಿ ಓಡಿಸಿದಳಲ್ಲದೆ ರೌಡಕುಂದಸಂಸ್ಥಾನದಲ್ಲಿ ಅರಕಲ್ಲಿ ಒಂದು ಭಾಗ ದತ್ತಿಯನ್ನು ಉಂಬಳಿಯಾಗಿ ಸಂಪಾದಿಸಿದ್ದಳು ಕಡೆಗೆ ಸೇನಾಧಿಪತಿಗಳ ಫಿತೂರಿಯಿಂದ ಟೀಪುಸುಲ್ತಾನನಿಂದ ಸೋಲಿಸಲ್ಪಟ್ಟಿದ್ದರಿಂದ ಕೆಂಚನ ದುರ್ಗವನ್ನು ಬಿಟ್ಟುಕೊಟ್ಟು ರೌಡಕುಂದ ಪರಗಣೆಗೆ ಸೇರಿದ ತನ್ನ ಉಂಬಳಿಗ್ರಾಮವಾದ ಸೋಮಲಾಪುರದಲ್ಲಿಯೇ ತನ್ನ ರಾಜ್ಯಕಾರಭಾರವನ್ನು ನಡೆಸಿದಳೆಂಬದಾಗಿ ಕೆಂಚನ ದುರ್ಗದ ಶಿಲಾಲೇಖದಿಂದಲೂ, ರವಡಕುಂದ ಸಂಸ್ಥಾನ್ ಮಠದಲ್ಲಿ ದೊರೆಯುವ ರಿಕಾರ್ಡುಗಳಿಂದಲೂ ತಿಳಿದುಬರುತ್ತದೆ. ಹೀಗೆ ಈ ಸಂಸ್ಥಾನವು ವೀರರಾದ ರಾಜರಿಂದಲೂ, ರಣಧೀರೆಯರಾದ ರಾಣಿಯರಿಂದಲೂ ಆಳುತ್ತ ಬಂದು ಕಡೆಗೆ ೬೦ ವರುಷದ ಪರಿಯಂತರ ಸದ್ಯ ಶಿವಾಧೀನರಾದ ರಾಣಿ ಮಲ್ಲಮ್ಮನವರಿಂದ ಆಳುತ್ತ ಬಂದಿತ್ತು ಇರಲಿ ರಾಣಿಯವರ ಅಂತ್ಯೇಷ್ಟಿಕ್ರಿಯೆಯು ಸಮಸ್ತವಿಧ ರಾಜಮರ್ಯಾದೆಗಳಿಂದ ನೆರವೇರಿತು ಸಂಸ್ಥಾನದ ಮಂತ್ರಿಗಳಾದ ವೇ ಗುರುಸಿದ್ಧಯ್ಯನವರು ವಿರಕ್ತಮಠ ಸಿಂಧನೂರು ಮ ದರೋಗ ಸಾಹಾಬಹಾದ್ದೂರ್ ಜಹಾಗೀರದಾರ ಪನ್ನೂರು ಆಡೀತ ಮಂತ್ರಿ ಸೋಮಲಾಪುರ ಇವರುಗಳು ರಾಣಿಯವರಿಗೆ ಶಿವಲೋಕಪ್ರಾಪ್ತಿಯಾಗಲೆಂಬ ಸದುದ್ದೇಶದಿಂದ ರೌಡಕುಂದಿ ಹಿರಿಯಮಠದ ಶ್ರೀ| ಷ| ಬ್ರ|| ಶಿವಯೋಗಿ ಶಿವಾಚಾರ್ಯಸ್ವಾಮಿಗಳನ್ನು ಉತ್ಸವಪೂರ್ವಕವಾಗಿ ದಯಮಾಡಿಸಿಕೊಂಡು ೫ ದಿವಸಗಳವರೆಗೆ ರುದ್ರಾಭಿಷೇಕ ಲಕ್ಷಬಿಲ್ವಾರ್ಚನಾದಿಗಳನ್ನು ಮಾಡಿಸಿ ತಾ| ೧೩ ೫ ೪೫ನೇ ದಿವಸ ಕೈಲಾಸ ಗಣಾರಾದನೆಯನ್ನು ಮಾಡಿದರು ಮಹಾರಾಣಿಯವರು ಶಿವಾದೀನರಾಗುವದಕ್ಕಿಂತ ಮೊದಲೇ ಮೇಲ್ಕಂಡ ಸ್ವಾಮಿಗಳವರ ಶಿವಲಿಂಗಾರಾಧನೆಗಾಗಿ ೫ ಎಕರೆ ಉತ್ತಮವಾದ ಭೂಮಿಯನ್ನು ತನ್ನ ಮೊಮ್ಮಕ್ಕಳಾದ ಶ್ರೀಮತಿ ಬಸಮ್ಮ ಮತ್ತು ಶ್ರೀಮತಿ ಶಿದ್ದಮ್ಮ ಇವರ ಒಪ್ಪಿಗೆಯಿಂದ ದಾನವಾಗಿ ಅರ್ಪಿಸಿದ್ದರು ಶ್ರೀಜಗದಾಚಾರ್ಯರು ರಾಣಿಯವರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಪ್ರಾರ್ಥಿಸುವ

ದುಃಖಭಾಗಿ

ಸಾಲಿಮಠದ ವೀರಭದ್ರಯ್ಯ ಸಿಂಧನೂರು

ವಿವಾಹಮಹೋತ್ಸವ

ತರೀಕೆರೆ ತಾಲೂಕು ಬುಕ್ಕಾಂಬುಧಿ ಗ್ರಾಮದಲ್ಲಿ ಮ|| ರಾ| ಶಿವರ್ಣನವರ ವಿರೂಪಾಕ್ಷಪ್ಪನವರು ತಮ್ಮ ಪುತ್ರಿ ಚಿ ಸೌ|| ಗಿರಿಜಮ್ಮನನ್ನು ಚಿಕ್ಕಮಗಳೂರು ಎಂ ಸಿ ರುದ್ರಪ್ಪನವರ ಪುತ್ರ ಚಿ| ರಾ|| ನಾಗಪ್ಪನಿಗೆ ಕೊಟ್ಟು ವೈಶಾಖ ಶುದ್ಧ ೫ ಬುಧವಾರ ಸ್ವಗೃಹದಲ್ಲಿ ಕನ್ಯಾದಾನರೂಪವಾಗಿ ವಿವಾಹಮಹೋತ್ಸವವನ್ನು ಶೋಭಕೃತಿ ಅಜ್ಞೆ ಶ್ರೀಗುರು ಚರಪಟ್ಟಾದಿಕಾರಿಗಳ ಸಾನ್ನಿಧ್ಯದಲ್ಲಿ ವಿದ್ಯುಕ್ತವಾಗಿ ನೆರವೇರಿಸಿದರು ಈ ಶುಭಸಮಯದಲ್ಲಿ ಶ್ರೀ ಜಗದ್ಗುರು ರಂಭಾಪುರೀಮಹಾಸ್ವಾಮಿಗಳವರು, ಬೆಂಗಳೂರು ಮಹಾಂತಿನಮಠಾಧ್ಯಕ್ಷರಾದ ಶ್ರೀ| ಷ|| ಬ್ರ| ಗಂಗಾಧರಶಿವಾಚಾರ್ಯಸ್ವಾಮಿಗಳವರು ವೇ| ಬ್ರ| ಶ್ರೀ| ಪಂಡಿತ ಕಾಶೀನಾಥಶಾಸ್ತ್ರಿಗಳವರು ನೂತನ ವಧೂವರರ ಶ್ರೇಯೋಭಿವೃದ್ಧ್ಯರ್ಥವಾಗಿ ಪಲ ಮಂತ್ರಾಕ್ಷತಾಪೂರ್ವಕ ಕಳುಹಿಸೋಣವಾದ ಆಶೀರ್ವಚನ ಪತ್ರಗಳನ್ನು ಕೀರ್ತನಕೇಸರಿ ಕವಿಭೂಷಣ ಇತ್ಯಾದಿ ಬಿರುದಾಂಕಿತರಾದ ವೇ|| ಗುಬ್ಬಿ ಶಿವರುದ್ರಶಾಸ್ತ್ರಿಗಳವರು ಓದಿ ಹೇಳಿದರು ಸಾಯಂಕಾಲ ೬ ಘಂಟೆಯಿಂದ ಶಾಸ್ತ್ರಿಗಳವರು ಗಿರಿಜಾಕಲ್ಯಾಣ ಎಂಬ ಶಿವಸಂಕೀರ್ತನೆಯನ್ನು ಬಹು ಸರಸವಾಗಿ ಅನುವಾದ ಮಾಡಿದರು ಈ ಸಮಾರಂಭಕ್ಕೆ ಅನೇಕ ಜನ ಲೌಕಿಕ ವೈದಿಕ ಪದವೀಪ್ರತಿಷ್ಠಿತರೂ ಬಂಧುಮಿತ್ರರೂ ಸಹ ಆಗಮಿಸಿದ್ದರು ಇಂತಹ ಕಠಿಣ ಕಾಲದಲ್ಲಿಯೂ ಉದಾರತೆಯಿಂದ ಸಮರ್ಪಕವಾಗಿ ಕಾರ್ಯಮಾಡಿದುದು ಸ್ತೋತ್ರಾರ್ಹವೇಸರಿ

ಪ್ರತ್ಯಕ್ಷದರ್ಶಿ

ಟೊಂಗೊ ಬಳಿ ಜಪಾನರ ತೀವ್ರ ಪ್ರತಿಭಟನೆ

ಈಗ್ಗೆ ಎರಡು ತಿಂಗಳ ಹಿಂದೆಯೇ ಜಪಾನರು ಬರ್ಮಾದಲ್ಲಿ ಹಿಮ್ಮೆಟ್ಟಲಾರಂಭಿಸಿದರು ಎಲ್ಲೂ ಅವರು ನಿಂತು ಪ್ರತಿಭಟಿಸಲಿಲ್ಲ ಇಂದು ಟೊಂಗೂ ಪೂರ್ವದಲ್ಲಿ ನಿಂತು ಹೋರಾಡುತ್ತಿದ್ದಾರೆ ಆಗಲೆ ಶತ್ರುಗಳ ಜನನಾಶ ವಸ್ತುನಾಶ ಮಹತ್ತರವಾಗಿ ಬೆಳೆಯುತ್ತಿದೆ ಆದರೂ ಹಿಮ್ಮೆಟ್ಟುವ ಸೂಚನೆ ಕಂಡುಬಂದಿಲ್ಲ ಈ ರೀತಿ ಅವರು ಕಾದುತ್ತಿರುವುದರಿಂದಲೇ ಉಳಿದ ಜಪಾನಿದಳಗಳಿಗೆ ಗುಡ್ಡಗಾಡುಗಳ ಮೂಲಕ ಸಯಾಮಿಗೂ ಮೌಲ್ಮೈನ್ ಆಗ್ನೇಯಕ್ಕೆ (ಅಂದರೆ ಬರ್ಮಾ-ಸಯಾಂ ರೈಲ್ವೆಯ ತುದಿಗೆ) ಪಾರಾಗಿ ಹೋಗಲು ಅವಕಾಶವಾಗುತ್ತಿದೆ

ಯುದ್ಧವಾರ್ತೆ.

ಜಪಾನು ಶಾಂತಿಗಾಗಿ ಬೇಡಿಲ್ಲ

ಜಪಾನು ಟೋಕಿಯೋ ರೇಡಿಯೋದಲ್ಲಿ ಫ್ರಿಸ್ಕೊ ಪ್ರತಿನಿಧಿಗಳನ್ನುದ್ದೇಶಿಸುತ್ತಾ ಈ ರೀತಿ ತಿಳಿಸಿದೆ 'ಜಪಾನ್ ಶತ್ರುವಿನ ಬಳಿ ಶರಣಾಗತಿಯ ಷರತ್ತುಗಳನ್ನು ಮಂಡಿಸಿತೆಂದು ಬ್ರಿಟಿಷ್ ಅಮೆರಿಕಾ ಸರಕಾರಗಳು ಅಪಪ್ರಚಾರ ಮಾಡುತ್ತಿರುವ ರೀತಿನೋಡಿದರೆ ಶತ್ರುಗಳು ಯುದ್ಧದಿಂದ ನಿವೃತ್ತರಾಗಲು ಎಷ್ಟು ಆತುರವಾಗಿದ್ದಾರೆಂಬುದನ್ನು ಸೂಚಿಸುತ್ತದೆ ಜಪಾನು ಇಂತಹ ಷರತ್ತಾವುಗಳನ್ನೂ ಸೂಚಿಸಿಲ್ಲ ಇದು ಕೇವಲ ಕಲ್ಪನೆ ಬ್ರಿಟನ್ನಿಗೆ ಯುದ್ಧ ಬೇಸರವಾಗಿದೆ ಜಪಾನ್ ಜಯಪಡೆಯುವವರೆಗೂ ಹೋರಾಡುವುದು" ಎಂದು ತಿಳಿಸಿದೆ

ಜಪಾನೀಯರ ಯುದ್ಧೋದ್ಯಮ ಹೆಚ್ಚಿಸುವ ಪ್ರಯತ್ನ

'ಜಪಾನ್ ಯುದ್ಧೋದ್ಯಮವನ್ನು ಹೆಚ್ಚಿಸಬೇಕು ಅದಕ್ಕಾಗಿ ಹೊಸ ಹೊಸ ಪ್ರಯತ್ನವೇರ್ಪಡಿಸಬೇಕು ಮಂಚುಕೋ ಮತ್ತು ಚೀಣಾಗಳಲ್ಲಿರುವ ಜಪಾನೀ ಬಲವನ್ನಲ್ಲಿ ಭದ್ರಗೊಳಿಸಿ ಅದನ್ನು ಆಗ್ನೇಯ ಏಷ್ಯಾದ ಬೀಜ ಬಲವಾಗಿ ಮಾಡಬೇಕು ಎಂಬುದಾಗಿ ಜಪಾನೀ ನಾಯಕರ ವಾರಾಂತ್ಯದ ಸಭೆ ನಿರ್ಣಯಿಸಿತು. ಎಂಬುದಾಗಿ ಜಪಾನಿ ಸಂಸ್ಥೆ ತಿಳಿಸಿದೆ

ಓಕಿನಾವಾದಲ್ಲಿ ೪೩ ಸಾವಿರ ಜಪಾನರು ಮಡಿದರು

ಓಕಿನಾವಾದಲ್ಲಿ ಅಮೇರಿಕನ್ನರು ಇನ್ನೂ ಜಪಾನರ ಬಲವಾದ ಪ್ರತಿಭಟನೆಯನ್ನು ನಿವಾರಿಸುವುದರಲ್ಲ ನಿರತರಾಗಿದ್ದಾರ ಷೂರಿಯ ಮಧ್ಯ ಪ್ರದೇಶಕ್ಕೆ ಅಮೇರಿಕನರು ನುಗ್ಗಿದ್ದಾರ ಓಕಿನಾವಾದಲ್ಲಿ ಸುಮಾರು ೪೩,೦೦೦ ಜಪಾನರು ಸತ್ತಿರುವರು ರ್ಯೂಕ್ಯೂ ಇತ್ಯಾದಿ ದ್ವೀಪಗಳ ಉಪದಂಡಯಾತ್ರೆಗಳಲ್ಲಿ ಅಮೇರಿಕನ್ನರ ಕಡೆ ೮೦೦೦ ಮಂದಿ ಮಡಿದರು ೨೬೦೦೦ ಮಂದಿ ಗಾಯಗೊಂಡರೆಂದು ಅಡ್ಮಿರಲ್ ನಿಮಿಟ್ಜ್‌ರ ಪ್ರಕಟನೆ ತಿಳಿಸುತ್ತದೆ

ಆಸ್ಟ್ರಿಯಾದಲ್ಲಿ ಮಿತ್ರರ ಆಜ್ಞೆಗಳ ಉಲ್ಲಂಘಕರಿಗೆ ಉಗ್ರ ಶಿಕ್ಷೆ

ಆಸ್ಟ್ರಿಯಾದವರೆಲ್ಲ ಮಿತ್ರರ ಆಜ್ಞೆಗಳನ್ನು ಪೂರ್ಣವಾಗಿ ಪಾಲಿಸಬೇಕು ಉಲ್ಲಂಘಿಸಿದವರಿಗೆ ಕೂಡಲೇ ಉಗ್ರ ಶಿಕ್ಷೆ ವಿಧಿಸಲಾಗುವುದೆಂಬ ಎರಡು ಆಜ್ಞೆಗಳನ್ನು ಫೀ ಮಾ ಅಲೆಕ್ಸಾಂಡರ್‌ರವರು ಜಾರಿ ಮಾಡಿದ್ದಾರೆ ೧೯೪೩ ರಿಂದಲೂ ಆಸ್ಟ್ರಿಯಾಕ್ಕೆ ಸ್ವಾತಂತ್ರ್ಯ ಗಳಿಸಿಕೊಡಬೇಕೆಂದು ಆಂಗ್ಲೋ ಅಮೆರಿಕನರು ಬರೆದಿದ್ದಾರೆ ಎಂಬುದಾಗಿ ಅವರು ಪ್ರಕಟಿಸಿದ್ದಾರೆ

ಹಿಮ್ಲರ್ ಆತ್ಮಹತ್ಯ ಮಾಡಿಕೊಂಡ

ಹಿಟ್ಲರ್ ಸತ್ತ ಮೇಲೆ ಹಿಮ್ಲರ್ ಅಧಿಕಾರಕ್ಕೆ ಬಂದನೆಂದು ಸುದ್ದಿ ಹರಡಿತ್ತು ಆದರೆ ಡೊನಿಟ್ಜ್ ಅಧಿಕಾರಕ್ಕೆ ಬಂದನೆಂಬ ಅಧಿಕೃತ ಸುದ್ದಿ ಪ್ರಕಟವಾಯಿತು. ಅಂದಿನಿಂದ ಹಿಮ್ಲರನ ಹೆಸರೆ ಪತ್ತೆಯಿರಲಿಲ್ಲ ಮಾಡಬಾರದ ಪಾತಕಗಳನ್ನು ಮಾಡಿದನೆಂಬ ಮತ್ತು ಘೋರ ಹತ್ಯಾಕಾಂಡಕ್ಕೆ ಕಾರಣನೆಂಬ ಅಪವಾದನೆಯ ಮೇಲೆ ಈತನನ್ನು ವಿಚಾರಣೆಗೆ ಗುರಿಪಡಿಸಬೇಕೆಂಬುದಾಗಿ ಮಿತ್ರರು ನಿಶ್ಚಯಿಸಿ ಜರ್ಮನಿಯನ್ನೆಲ್ಲ ಹುಡುಕಿದರು. ಕೆಲ ದಿನಗಳ ಕೆಳಗೆ ಹಿಮ್ಲರ್ ಸೆರೆ ಸಿಕ್ಕನೆಂಬುದಾಗಿಯೂ ಸುದ್ದಿ ಬಂದಿತ್ತು ಈಗ ಆತ್ಮಹತ್ಯ ಮಾಡಿಕೊಂಡನೆಂಬುದಾಗಿ ಖಚಿತ ಸುದ್ದಿ ಬಂದಿದೆ.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No M 2266 ॥ ಶ್ರೀಜಗದ್ಗುರು ಪಂಚಾಚಾರ್ಯರಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಸ್ಥಾನಸಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚ ಚಾರಸಿಯಾವಾಕಲ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ವದೇಶದವರಿಗೆ ೨ ರೂ ೪ ಆಣೆ — ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ.

ಸಂಪುಟ ೧೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೪ನೇ ಜೂನ್ ೧೯೪೫ [ಸಂಚಿಕೆ ೩

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಪಟ್ಟಾಭಿಷೇಕ ಮಹೋತ್ಸವ ಸತ್ತಿಗೇರಿ

ಬೆಳಗಾಂವ ಡಿ॥ ಪರಸಗಡ ತಾಲೂಕು ಪೈಕಿ ಸತ್ತಿಗೇರಿ ಗ್ರಾಮದಲ್ಲಿ ಶ್ರೀ॥ ಷ॥ ಬ್ರ॥ ಶಿವಲಿಂಗಶಿವಾಚಾರ್ಯರು ಹಿರೇಮಠ ಇವರು ವೇ॥ ರಾಚಯ್ಯ ಹಿರೇಮಠ ಮುರಗೋಡ ಇವರ ಪುತ್ರ ಶಿವಲಿಂಗಯ್ಯ ನೆಂಬ ವಟುವಿಗೆ ತಮ್ಮ ಉತ್ತರಾಧಿಕಾರವನ್ನು ತಾ॥ ೨೧ ೫ ೧೯೪೫ ನೇ ದಿವಸ ಕೊಟ್ಟರು ಸದರಿ ಅಧಿಕಾರಕ್ಕೆ ಬೀಳಗಿ, ರಾಮದುರ್ಗ, ರುಣಶೀಕಟ್ಟಿ, ಸುತಗಟ್ಟಿ ಬೆ ಗಾಂವಿ, ಒನ್ನೂರು, ಕಪಕೋಳ ಮೊದಲಾದ ಪಟ್ಟಾಧಿಕಾರಿಗಳೂ ಕೆರೂರು ಗೌಡರು ದೇಶಿಕರೂ ಹೂಲಿ ಶ್ರೀಗಳವರೂ ಆಗಮಿಸಿದ್ದರು ಸೋಮವಾರ ಸೂರ್ಯೋದಯಕ್ಕೆ ಅಭಿಷೇಕವು ಒಳ್ಳೆ ವಿಜೃಂಭಣೆಯಿಂದ ಜರಗಿದನಂತರ ಗದ್ದಿಗಾರೋಹಣವು ಮಾಡಲ್ಪಟ್ಟಿತು ಉತ್ಸವಕ್ಕೆ ಸೋಲಾಪುರ ಬೆಳಗಾಂವ ಧಾರವಾಡ ಜಿಲ್ಲೆಗಳ ಮತ್ತು ನಿಜಾಮಸ್ಟೇಟಿನಿಂದ ಈ ಮಠದ ಶಿಷ್ಯರು ಒಂದಿದ್ದರು ಅಧಿಕಾರಸಮಯದಲ್ಲಿ ವಟುವಿಗೆ ಸಿದ್ಧಲಿಂಗಶಿವಾಚಾರ್ಯ ಎಂಬ ನಾಮಕರಣವು ಮಾಡಲ್ಪಟ್ಟಿತು ಆಮೇಲೆ ಸಾಯಂಕಾಲ ಪಲ್ಲಕ್ಕಿಯ ಉತ್ಸವವು ಅತಿ ವೈಭವದಿಂದ ಜರಗಿತು ಈ ಕಾರ್ಯಕ್ರಮದಲ್ಲಿ ವಿರೂಪಾಕ್ಷಪ್ಪ ಗೊಂದಿ ನಾ॥ ಬೆಳವಲಪೇಟೆ ಬಸನಗೌಡ ಪೋಲೀಸ ಪಾಟೀಲ ಗೌಡಪ್ಪಗೌಡ ಪೋಲೀಸ ಪಾಟೀಲ ಬಸವಣ್ಣಯ್ಯ, ವೀರಪ್ಪ ರಾಯರ, ವೀರಪ್ಪ ನಾರಗೊಂಡ, ವೀರಪ್ಪ ಹರಳಿ, ಬಸಲಿಂಗಪ್ಪ ಯತಗಾಣವಿ, ಮಹಾದೇವಪ್ಪ ನರಸಾಪುರ, ಸಿದ್ದಪ್ಪ ಹೆಗ್ಗಡಿ ಇವರೇ ಮೊದಲಾದವರು ಅತಿ ಭಕ್ತಿಯಿಂದ ಭಾಗವಹಿಸಿ ಗುರುಸೇವೆಯನ್ನು ಮಾಡಿದರು ತತ್ಸಮಯದಲ್ಲಿ ಪ್ರಭಂಪೋಷಣಕ್ಕೆಂದು ೫ ರೂಪಾಯಿಗಳು ಕಳುಹಿಲ್ಪಟ್ಟಿರುತ್ತವೆ ಈ ಕಾರ್ಯದಲ್ಲಿ ಭಾಗವಹಿಸಿದ ಭಕ್ತಮಂಡಳಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಲವನ್ನೀಯಲೆಂದು ಹಾರೈಸುತ್ತೇನೆ

ಎಂ ವಿ ಆನೇಮಠ ಟ್ರೇನಿಂಗ ಕಾಲೇಜ
ಬೆಳಗಾಂವ

ಬ್ರಹ್ಮೋಪದೇಶ ಸಮಾರಂಭ, ಗರಗ

ಧಾರವಾಡ ತಾ॥ ಗರಗ ಗ್ರಾಮದಲ್ಲಿ ವಿರಾಜಿಸುತ್ತಿರುವ ಯಾದವಾಡ ಮಳೇಮಠದ ಪಟ್ಟಾಧಿಕಾರಿಗಳಿಗೆ ಇದೇ ಸಂವತ್ಸರದ ವೈ॥ ಶು॥ ೧೦ ಸೋಮವಾರ ದಿವಸ ಶ್ರೀ ಹೂಲಿ ಬೃಹನ್ಮಠಾಧ್ಯಕ್ಷ ತರ್ಕತೀರ್ಥ ಶ್ರೀ ನೀಲಕಂಠ ಶಿವಾಚಾರ್ಯರು ಬ್ರಹ್ಮೋಪದೇಶ ವಿಧಾನವನ್ನು ಶಾಸ್ತ್ರೋಕ್ತಪ್ರಕಾರವಾಗಿ ನೆರವೇರಿಸಿದರು ಈ ಪವಿತ್ರ ಸಮಾರಂಭಕ್ಕೆ ಇಲ್ಲಿಯ ಪ್ರಸಿದ್ಧ ಮನೆತನದವರಾದ ಶ್ರೀಮಾನ್ ಲಿಂಗನಗೌಡರು ಪಾಟೀಲ ಮತ್ತು ಮಠದ ಪಂಚಜನರು ಒಳ್ಳೆ ಭಕ್ತಿಯಿಂದ ನೆರವಾದರು ಇವರೆಲ್ಲರಿಗೂ ಜಗದಾಚಾರ್ಯರು ಮಂಗಲವನ್ನೀಯಲೆಂದು ಹಾರೈಸುವ,

ಮಠದ ಸದ್ಭಕ್ತ

ವಿವಾಹಮಹೋತ್ಸವ, ಸಾಲಗುಂದ

ರಾಯಚೂರು ಡಿ ಸಿಂಧನೂರು ತಾಲೂಕ ಜಹಗೀರ ಸಾಲಗುಂದ ಗ್ರಾಮದ ಶ್ರೀ ದೊಡ್ಡಬಸಪ್ಪನವರು ತಮ್ಮ ಮಕ್ಕಳಾದ ಚಿ॥ ವೀರಭದ್ರಪ್ಪ ಅಮರಪ್ಪ, ಮತ್ತು ಆಳಿಯಂದಿರಾದ ರೌಡಕುಂದಿ ಕಲ್ಲಪ್ಪನ ನೆ ವೀರಂಣ ಉಟಕನೂರು ವಿರೂಪಾಕ್ಷಪ್ಪ ಮೊದಲಾದವರ ವಿವಾಹವನ್ನು ತಾ॥ ೨೧ ೫ ೪೫ ನೇ ಸೋಮವಾರ ದಿವಸ ಅತಿ ಸಂಭ್ರಮದಿಂದ ನೆರವೇರಿಸಿದರು ವೈಶಾಖ ಶು ೯ ದಿವಸ ಕುಲಗುರುಗಳಾದ ರೌಡಕುಂದಿ ಹಿರೇಮಠದ ಪಟ್ಟದಸ್ವಾಮಿಗಳವರ ಪಾದಪೂಜಾದಿಗಳು ಜರುಗಿದವು ದಶಮಿ ಸೋಮವಾರ ಪ್ರಾತಃಕಾಲ ವೇ॥ ಪಿ ಆರ್ ಹಿರೇಮಠ ಇವರಿಂದ ಮಾಂಗಲ್ಯಧಾರಣಾದಿ ಕಾರ್ಯಗಳು ಜರಗಿದವು ಈ ವಿವಾಹಮಹೋತ್ಸವಕ್ಕೆ ಜಹಗೀರದಾರ ಸಾಹೇಬರು ಒಂದು ಬಾಂಧವರೇ ಮೊದಲಾದ ಸಹಸ್ರಾರು ಜನರು ಆಗಮಿಸಿದ್ದರು ನೂತನ ವಧೂವರರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ಆಯುರಾರೋಗ್ಯಸಂತತಿಯನ್ನಿತ್ತು ಕಾಪಾಡಲೆಂದು ಪ್ರಾರ್ಥಿಸುತ್ತೇನೆ

ಶಿವಪೂಜಾಮಠದ ಚನ್ನಯ
ಜಹಗೀರ ಸಾಲಗುಂದ

ವೀರಶೈವ ಎಜ್ಯುಕೇಷನ್ ಸೊಸೈಟಿ ಸ್ವೀಕಾರ

ಬೆಂಗಳೂರು ಸಿಟಿ, ಮೈಸೂರು ರೋಡಿನಲ್ಲಿರುವ, ಹೆಂಚಿನಕಾರ್ಖಾನೆ ಶ್ರೀ ಬುಳ್ಳಪ್ಪನವರ ಮನೆಯಲ್ಲಿ ತಾ॥ 6 5-45 ರಲ್ಲಿ ಶ್ರೀ ಕೆ ಎಸ್ ಅಯ್ಯಣ್ಣಶೆಟ್ಟರ ಕುಮಾರಿ ಶ್ರೀ ಸೌ॥ ಗೌರಮ್ಮ ಇವರನ್ನು, ಶ್ರೀ ಗಾಂಜಿ ಈಶ್ವರಪ್ಪನವರ ಮಕ್ಕಳು ಶ್ರೀ ಮುರುಗಪ್ಪನವರಿಗೆ ಕೊಟ್ಟು ವಿವಾಹ ನಡೆಸಿದ ಸಂದರ್ಭದಲ್ಲೂ, ಮತ್ತು ಶ್ರೀ ಶೋಭಾನದ ವೀರಪ್ಪನವರ ಪುತ್ರಿ ಶ್ರೀ ಸೌ॥ ಶಿವಮ್ಮ ಇವರನ್ನು ಶ್ರೀ ಹೇರುಂಡೆ ಶಿವಲಿಂಗಪ್ಪನವರ ಕುಮಾರ ಶ್ರೀ ಬಸಪ್ಪ ಇವರಿಗೆ ಕೊಟ್ಟು ವಿವಾಹ ನಡೆಸಿದ ಸಂದರ್ಭದಲ್ಲೂ, ವೀರಶೈವ ಎಜುಕೇಷನ್ ಸೊಸೈಟಿಯ ಫಂಡಿಗೆ ಶ್ರೀ ಕೆ ಎಸ್ ಸುಬ್ಬಣ್ಣನವರು 25 ರೂ ದಯವಿಟ್ಟು ಪಾವತಿ ಮಾಡಿರುತ್ತಾರೆ

ಬೆಂಗಳೂರಿನ ಪ್ರಸಿದ್ಧ ಮಂಡಿ ವರ್ತಕರಾದ ವೇ॥ ಎನ್ ರುದ್ರಯ್ಯನವರು, ಚಾಮರಾಜಪೇಟೆ ಮೂರನೆ ಬೀದಿಯಲ್ಲಿರುವ ತಮ್ಮ ಮನೆಯಲ್ಲಿ, ತಮ್ಮ ಕುಮಾರಿ ಶ್ರೀ ಸೌ॥ ಶಾರದಾಂಬೆಯವರನ್ನು, ವೇ॥ ಶಿವಶಂಕರಾರಾಧ್ಯರ ಪುತ್ರ ಶ್ರೀ ಸದಾನಂದಾರಾಧ್ಯರಿಗೆ ಕೊಟ್ಟು ವಿವಾಹ ನಡೆಸಿದ ಸಂದರ್ಭದಲ್ಲೂ ಮತ್ತು ತಮ್ಮ ಅಣ್ಣಂದಿರ ಮಕ್ಕಳು ಶ್ರೀ ಶಿವಾರಾಧ್ಯರಿಗೆ ವೇ॥ ಶಿವಶಂಕರಾರಾಧ್ಯರ ಕುಮಾರಿ ಶ್ರೀ ಸೌ॥ ಜ್ಞಾನಪೂರ್ಣ ಎಂಬುವರನ್ನು ಕೊಟ್ಟು ವಿವಾಹ ನಡೆಸಿದ ಸಂದರ್ಭದಲ್ಲೂ, ವೀರಶೈವ ಎಜುಕೇಷನ್ ಸೊಸೈಟಿ ಫಂಡಿಗೆ ರೂ 25 ದಯವಿಟ್ಟು ಪಾವತಿಮಾಡಿರುತ್ತಾರೆ

ಈ ಧರ್ಮಸಹಾಯಕ್ಕಾಗಿ ಸೊಸೈಟಿಯವರ ಮೇಲ್ಕಂಡ ಮಹಾಶಯರಿಗೆ ಕೃತಜ್ಞರಾಗಿದ್ದಾರೆ

ವೈ ಎಂ ಸಣ್ಣಸ್ವಾಮಿಯ್ಯ,
ಕಾರ್ಯದರ್ಶಿ

ಪ್ರಕಟಣೆ

ರಾವ್ ಬಹದ್ದೂರ್ ಧರ್ಮಪ್ರವರ್ತ ಗುಬ್ಬಿ ತೋಟದಪ್ಪನವರ ಧರ್ಮ ಸಂಸ್ಥೆಯ ವಿದ್ಯಾರ್ಥಿನಿಲಯಕ್ಕೆ ಸೇರಲು ಇಚ್ಛೆಯುಳ್ಳ ಪ್ರೌಢ ವಿದ್ಯಾಭ್ಯಾಸ ಮಾಡಲಿರುವ ಮತ್ತು ಕೈಗಾರಿಕಾ, ಸಂಸ್ಕೃತ ಕಾಲೇಜುಗಳಲ್ಲಿ ವ್ಯಾಸಂಗಮಾಡುವ ವೀರಶೈವ ಬಡವಿದ್ಯಾರ್ಥಿಗಳು ತಾ॥ 10 6 45 ರೊಳಗೆ ನಿಯಮಿತ ಅಪ್ಲಿಕೇಷನ್ ಫಾರಂನಲ್ಲಿ ಈ ಕೆಳಗಿನ ವಿಳಾಸಕ್ಕೆ ಅರ್ಜಿ ಹಾಕಿಕೊಳ್ಳತಕ್ಕದ್ದು ಕಾಲಾವಧಿ ಮೀರಿ ಬರುವ ಅರ್ಜಿಗಳನ್ನು ಅಂಗೀಕರಿಸುವುದಿಲ್ಲ

ಜಿ ಕೆ ರುದ್ರಾರ್ಯ ಆ ಸೆಕ್ರೆಟರಿ
ರಾ ಬ ಧ ಪ್ರ ಗುಬ್ಬಿತೋಟದಪ್ಪನವರ
ಧರ್ಮಸಂಸ್ಥೆ ಬೆಂಗಳೂರು

ವಿದ್ಯಾರ್ಥಿಗಳಿಗೆ ಸೂಚನೆ

ಬೆಂಗಳೂರು ಸಿಟಿ ಚಿಕ್ಕಪೇಟೆಯಲ್ಲಿರುವ ಶ್ರೀಜಗದ್ಗುರು ರೇಣುಕಾದಿ ಪಂಚಾಚಾರ್ಯ ಸಂಸ್ಕೃತ ಮತ್ತು ವೇದಪಾಠಶಾಲೆಯ ಫ್ರೀಬೋರ್ಡಿಂಗಿಗೆ ಸೇರಲು ಅಪೇಕ್ಷೆಯುಳ್ಳ ಸತ್ಕುಲಪ್ರಸೂತರಾದ ವೀರಶೈವ ವಿದ್ಯಾರ್ಥಿಗಳು ಜೂನ್ 15 ನೇ ತಾರೀಖಿನ ಒಳಗಾಗಿ ತಮ್ಮ ಅಪ್ಲಿಕೇಷನ್‌ಗಳನ್ನು ಸೆಕ್ರೆಟರಿಯವರಿಗೆ ಹಾಕಿಕೊಳ್ಳತಕ್ಕದ್ದು ಅಪ್ಲಿಕೇಷನ್ ಬೇಕಾಗಿರುವ ವಿದ್ಯಾರ್ಥಿಗಳು 2 ಆಣೆ ಸ್ಟಾಂಪನ್ನು ಕವರಿನಲ್ಲಿ ಇಟ್ಟು ಸೆಕ್ರೆಟರಿಯವರಿಗೆ ಬರೆದುಕೊಂಡರೆ ಉಚಿತವಾಗಿ ರವಾನಿಸಲಾಗುವದು

ಎನ್. ರುದ್ರಯ್ಯನವರು ಸೆಕ್ರೆಟರಿ
ಮಹಂತಿನಮಠ ಚಿಕ್ಕಪೇಟೆ
ಬೆಂಗಳೂರು ಸಿಟಿ

ಪಂಚಾಚಾರ್ಯಪ್ರಭಾ.

೧೯೪೫ನೆಯ ಜೂನ್ ತಾ| ೪ನೇ ಸೋಮವಾರ

ಶ್ರೀಕೇದಾರಪೀಠಕ್ಕೆ ಉತ್ತರಾಧಿಕಾರಿಗಳನ್ನು ನಿಯಮಿಸುವ ರೀತಿ

ವೀರಶೈವಮತಸ್ಥಾಪಕ ಶ್ರೀಜಗದ್ಗುರು ಪಂಚಾಚಾರ್ಯರಲ್ಲೊಬ್ಬರಾದ ಶ್ರೀಮದೇಕೋರಾಮಾರಾಧ್ಯರು ಚತುರ್ಯುಗಗಳಲ್ಲಿಯೂ ಮದ್ರಾಸ್ ಇಲಾಖಾ ಕಾಕಿನಾಡ ಡಿ| ದ್ರಾಕ್ಷಾರಾಮಕ್ಷೇತ್ರದಲ್ಲಿರುವ ಶ್ರೀಭೀಮೇಶ್ವರ (ಭೀಮನಾಥ) ಲಿಂಗದಿಂದ ಅವತರಿಸಿ ಹಿಮಾಲಯದಲ್ಲಿ ಧರ್ಮಪೀಠವನ್ನು ಸ್ಥಾಪಿಸಿದರ ಈವಿಷಯವನ್ನು ಸ್ವಾಯಂಭುವಾಗಮವು—

ದ್ರಾಕ್ಷಾರಾಮೇ ಭೀಮನಾಥಲಿಂಗಾದ್ಯುಗಜಾತ ಸ್ವಯಂ।
ಏಕೋರಾಮಸ್ಯ ಜನನಮಾವಾಸಸ್ತು ಹಿಮಾಲಯೇ

ಇತ್ಯಾದಿ ಶ್ಲೋಕಗಳಿಂದ ಸಾರುತ್ತಿರುವದ ಈ ಮಹಾಚಾರ್ಯರಿಂದ ಸ್ಥಾಪಿಸಲ್ಪಟ್ಟ ಧರ್ಮಪೀಠವನ್ನು ಬಾಣಾಸುರನ ಮಗಳಾದ ಉಷಾದೇವಿಯು ಕಟ್ಟಿಸಿರುವದರಿಂದ ಆ ಪೀಠಕ್ಕೆ ಅಂದಿನಿಂದ "ಉಷಾಮಠ" ಎಂಬ ನಾಮವು ಪ್ರಾಪ್ತವಾಗಿರುವದ

ಜಗತ್ಪ್ರಸಿದ್ಧ ದ್ವಾದಶಜ್ಯೋತಿರ್ಲಿಂಗಗಳಲ್ಲೊಂದಾದ ಕೇದಾರನಾಥ ದೇವಸ್ಥಾನದ ಸರ್ವಾಧಿಕಾರವು ಅನಾದಿಕಾಲದಿಂದ ಇಂದಿನವರೆಗೂ ಈ ಪೀಠಾಧಿಪತಿಗಳಿಗೇ ಸೇರಿರುವದು ಈ ಪೀಠದ ಅಧಿಪತಿಗಳಿಗೆ ಕೇದಾರನಾಥ ದೇವಸ್ಥಾನವಲ್ಲದೆ ಗುಪ್ತಕಾಶಿ ಮಧ್ಯಮಹೇಶ್ವರ ಉದಕಕುಂಡ, ಉಖೀಮಠ ಕಾಲೀಮಠ ತ್ರಿಜುಗಿನಾರಾಯಣ ತುಂಗನಾಥ ಗೌರಿಮಾಯಿ ಮೊದಲಾದ ೨೨ ದೇವಸ್ಥಾನಗಳು ಒಳಪಟ್ಟಿರುವವು ಇವೆಲ್ಲವುಗಳ ವ್ಯವಸ್ಥೆಯನ್ನೂ ಈ ಪೀಠಾಧಿಪತಿಗಳೇ ಮಾಡಬೇಕ ಇದಲ್ಲದೆ ಈ ಪೀಠಕ್ಕೆ—

ಗಢವಾಲ ಡಿಸ್ಟ್ರಿಕ್ಟಿನಲ್ಲಿ 70 ಗ್ರಾಮಗಳು
ಆಲ್ಮೋರಾ ಡಿಸ್ಟ್ರಿಕ್ಟಿನಲ್ಲಿ 13 ಗ್ರಾಮಗಳು
ಟಿಹರಿ ರಾಜ್ಯದಲ್ಲಿ 2? ಗ್ರಾಮಗಳು
ಡೆಹರಾಡೂನ್ ಡಿ| ನಲ್ಲಿ 2 ಗ್ರಾಮಗಳು
ನೈನಿಟಾಲ್ ಡಿಸ್ಟ್ರಿಕ್ಟಿನಲ್ಲಿ 1 ಗ್ರಾಮವು

ಹೀಗೆ ಒಟ್ಟು 143 ಇನಾಂ ಗ್ರಾಮಗಳು ಸೇರಿರುವವು ಮೇಲ್ಕಂಡ ಎಲ್ಲ ದೇವಸ್ಥಾನಗಳ ಮತ್ತು ಈ ಎಲ್ಲ ಇನಾಂ ಗ್ರಾಮಗಳ ಉತ್ಪತ್ತಿಯೆಲ್ಲವೂ ಈ ಪೀಠಾಧಿಪತಿಗಳಿಗೇ ಸೇರಿರುವುದು ಇವೆಲ್ಲವುಗಳಲ್ಲಿ ಶ್ರೀ ಕೇದಾರನಾಥ ದೇವಸ್ಥಾನದ ಉತ್ಪತ್ತಿಯೇ ಬಹು ದೊಡ್ಡದು ಪ್ರತಿವರ್ಷ ಭಕ್ತಾದಿಗಳಿಂದ ಆ ಒಂದು ದೇವಸ್ಥಾನಕ್ಕೆ 20-30 ಸಾವಿರರೂಪಾಯಿಗಳ ವರಮಾನವು ಬರುವುದು

ಉತ್ತರಹಿಂಡಿಯಾ ದೇಶದಲ್ಲಿ ಕೇದಾರಮಠಾಧಿಪತಿಗಳಿಗೂ ಮತ್ತು ಬದರೀನಾಥ ಮಠಾಧಿಪತಿಗಳಿಗೂ ಬಹು ದೊಡ್ಡ ಗೌರವವಿರುತ್ತದೆ. "ರಾವಲ್" ಎಂಬ ಮಹಾ ಪದವಿಯು ಬ್ರಿಟಿಷ್ ಸರ್ಕಾರದಿಂದ ಈ ಎರಡು ಮಠಗಳಿಗೆ ಮಾತ್ರ ದೊರೆತಿರುವದಲ್ಲದೆ, ಇಂಡಿಯಾ ದೇಶದಲ್ಲಿ ಇನ್ನಾವ ಮಠಗಳಿಗೂ ದೊರೆತಿರುವದಿಲ್ಲ ಈರೀತಿ ಈ ಪೀಠವು ರಾಜವೈಭವದೊಡನೆ ಅನಾದಿಕಾಲದಿಂದ ಮೆರೆಯುತ್ತ ಬಂದಿರುವುದು ಆದರೆ ಈಗ್ಗೆ 40 50 ವರ್ಷಗಳ ಪೂರ್ವದಲ್ಲಿ ಈ ಪೀಠಾಧಿಪತಿಗಳಾಗಿದ್ದ ಇಬ್ಬರು ಸ್ವಾಮಿಗಳ ಕಾಲದಲ್ಲಿ ಪ್ರತಿವರ್ಷ ಮಠಕ್ಕೆ ಸಲ್ಲುವ ಆದಾಯವೆಲ್ಲವೂ ವೆಚ್ಚವಾಗಿ, ಮೇಲೆ ಲಕ್ಷಾಂತರ ರೂಪಾಯಿಗಳ ಸಾಲವಾಯಿತು ಈ ರೀತಿ ಸಾಲವಾಗಲು ಆ ಸ್ವಾಮಿಗಳು ಮಾಡಿದ ದುಂದುವೆಚ್ಚವೇ ಕಾರಣ ಈ ವಿಷಯವನ್ನೆಲ್ಲಾ ಆ ಕಾಲದ ಸರ್ಕಾರಿ ಅಧಿಕಾರಿಗಳು ವಿಮರ್ಶಿಸಿ ಇದನ್ನು ಹೀಗೆಯೇ ಬಿಟ್ಟರೆ ಈ ಪೀಠವು ಎಂದೂ ಉದ್ಧಾರವಾಗುವುದಿಲ್ಲವೆಂದು ಭಾವಿಸಿ ಆ ಕಾಲದ ಸ್ವಾಮಿಗಳನ್ನು ಪ್ರತಿವಾದಿಸ್ಥಾನಕ್ಕೆ ಸೇರಿಸಿ, ಸ್ವತಃ ಸರ್ಕಾರದವರೇ ವಾದಿಗಳಾಗಿ ನಿಂತು ಕೋರ್ಟಿನಲ್ಲಿ ವ್ಯಾಜ್ಯವನ್ನು ತಂದರು ಈ ವಿಷಯವು ಕೋರ್ಟಿನಲ್ಲಿ ವಿಮರ್ಶಿಸಲ್ಪಟ್ಟಿತು ಆಗ್ಗೆ ಕೋರ್ಟಿನವರು ಈ ಪೀಠದ ಬಗ್ಗೆ ಒಂದು ಸ್ಕೀಮನ್ನು ತಯಾರಿಸಿದರು ಅಂದಿನಿಂದ ಇಂದಿನವರೆಗೂ ಈ ಮಠದ ಆಡಳಿತವೆಲ್ಲವೂ ಆ ಸ್ಕೀಮಿನಂತೆಯೇ ನಡೆಯುತ್ತಿರುವುದು ಆ ಸ್ಕೀಮಿನಿಂದ ಪೀಠಕ್ಕೆ ಬಹಳ ಸುಖವಾಯಿತೆಂದೇ ಹೇಳಬಹುದಾಗಿದೆ ಆದರೆ ಆ ಪೀಠಾಧಿಪತಿಗಳಿಗಿದ್ದ ಸ್ವಾತಂತ್ರ್ಯವೆಲ್ಲವೂ ಕಳೆದು ಹೋಯಿತು ಆ ಸ್ಕೀಮಿನಲ್ಲಿ ಮುಖ್ಯಸ್ವಾಮಿಗಳಾದವರಿಗ ಪ್ರತಿ ತಿಂಗಳು ಇಷ್ಟೇ ರೂಪಾಯಿಗಳು ಸಲ್ಲಬೇಕೆಂದೂ ಅವರಿಗೆ ಇಷ್ಟೇ ಜನ ಶಿಷ್ಯರಿರಬೇಕೆಂದೂ, ಆ ಶಿಷ್ಯರಿಗ ಪ್ರತಿ ತಿಂಗಳು ಇಷ್ಟಿಷ್ಟೇ ರೂಪಾಯಿಗಳು ಸಲ್ಲಬೇಕೆಂದೂ ನಿರ್ಣಯವಾಗಿ ಬಿಟ್ಟಿದೆ ಅಲ್ಲದೆ ಆ ಪೀಠಾಧಿಪತಿಗಳು ತಾವು ಜೀವಂತರಿರುವಾಗ ಉತ್ತರಾಧಿಕಾರಿಗಳನ್ನು ಮಾಡಲಿಕ್ಕೆ ಆ ಸ್ಕೀಮಿನಲ್ಲಿ ಅವರಿಗೆ ಅವಕಾಶವನ್ನು ಸಹ ಕೊಟ್ಟಿಲ್ಲ ತಮ್ಮ ಉತ್ತರಾಧಿಕಾರಕ್ಕಾಗಿ ಯಾರಾದರೊಬ್ಬ ಶಿಷ್ಯರ ಹೆಸರನ್ನು ಸೂಚಿಸಿ ಮೃತ್ಯುಪತ್ರವನ್ನು ಬರದಿಡಲು ಮಾತ್ರ ಸಮ್ಮತಿಯನ್ನು ಕೊಟ್ಟಿದ್ದಾರೆ ಆದರೆ ಆ ಮೃತ್ಯುಪತ್ರಕ್ಕೂ ಸಹ ಬೆಲೆಯಿಲ್ಲದಂತೆ ಮಾಡಿದ್ದಾರ ಗತಿಸಿದ ಶ್ರೀಗಳವರು ಸೂಚಿಸಿದ ಹೆಸರಿಗೆ ಒಪ್ಪದ ಬೇರೊಬ್ಬ ಶಿಷ್ಯನು ಪ್ರತಿಸ್ಪರ್ಧಿಯಾಗಿ ನಿಂತರೆ, ಆಗ ಎಲೆಕ್ಷನ್ ಮೂಲಕ ಸ್ವಾಮಿಗಳನ್ನು ನಿಯಮಿಸಬೇಕೆಂದು ಆ ಸ್ಕೀಮಿನಲ್ಲಿ ನಮೂದಿಸಿದ್ದಾರ ಮುಖ್ಯವಾಗಿ ಹೆಚ್ಚು ಓಟುಗಳು ಯಾರಿಗೆ ಬರುವವೋ ಅವರೇ ಅಲ್ಲಿಗೆ ಸ್ವಾಮಿಗಳಾಗುವರು

ಆ ಸ್ಕೀಮಿನಲ್ಲಿ ಉತ್ತರಾಧಿಕಾರಿಗಳನ್ನು ನಿಯಮಿಸುವ ರೀತಿಯು ಈ ಕೆಳಗೆ ಉದಾಹರಿಸಿದಂತಿರುವದು

11 The late Rawal during his lifetime nominates a successor After the Rawal's decease a panchayat is held at Ukhimath at which the pujaries and chelas of the math, the officials of establishments of Kedarnath and attached shrines referred to in para 1, and the Malguzars and co-sharers of the assigned (143) villages referred to in para 2, have a right to attend such panchayat as hitherto been held on the 11th day after the Rawal's death, but shall in future be held on a date to be fixed as prescribed in para 12, below at this panchayat the nomination of the late Rawal is declared and a Rawal is elected by those present The result of the election is reported to the Commissioner of Kumaun for approval and confirmation The Rawal may nominate a successor from among the chelas of the math The nominee must be jangam Gosain from the Deccan The nomination must be in writing and may be deposited in a sealed cover with the District Registrar

12 On the death of Rawal, the District Judge shall appoint a special officer (who shall not be a Government official) to proceed to Ukhimath and superintend the election of a successor The special officer so appointed shall receive from the temple funds such travelling and other expenses as may be allowed by the District Judge The election shall take place as soon as possible after the death of the late Rawal on a date to be fixed by the District Judge and notified to the electors The nomination made by the late Rawal shall be declared by the special officer to the electors assembled at Ukhimath, who will then proceed to elect a successor in cases where the succession is disputed by opposing candidates. The votes of the electors shall be recorded In case of equality of votes preference shall be given to the nominee of the late Rawal

13 The result of the election shall be reported to the commissioner for confirmation Unless the commissioner is satisfied that the election was vitiated by substantial irregularity, the nominee of the electors shall be approved by him If however, he is so satisfied he shall record a declaration to this effect and inform the District Judge, who shall thereupon proceed to notify and have it carried out in the manner here in before prescribed by a second election

ಮೇಲ್ಕಂಡ ಸ್ಕೀಮಿನ ಅಭಿಪ್ರಾಯವು ಈ ಕೆಳಗೆ ಕೊಡಲ್ಪಟ್ಟಿರುವದು—

11 ಗತಿಸಿದ ರಾವಲರು ತಮ್ಮ ಜೀವಿತಕಾಲದಲ್ಲಿ ತಮ್ಮ ಉತ್ತರಾಧಿಕಾರಿಯ ಹೆಸರನ್ನು ಗೊತ್ತುಪಡಿಸಬೇಕು ರಾವಲರು ಮೃತರಾದ ಮೇಲೆ ಉಖೀಮಠದಲ್ಲಿರುವ ಶಿಷ್ಯರು, ಪೂಜಾರಿಗಳು, ಕೇದಾರನಾಥದೇವಸ್ಥಾನ ಮತ್ತು ಅದಕ್ಕೆ ಸಂಬಂಧಪಟ್ಟ (ಉದಕಕುಂಡ, ಓಖೀಮಠ ಗುಪ್ತಕಾಶಿ, ಮಧ್ಯಮಹೇಶ್ವರ, ಕಾಳೀಮಠ, ತ್ರಿಜುಗಿನಾರಾಯಣ ತುಂಗನಾಥ, ಗೌರಿಮಾಯಿ) ದೇವಸ್ಥಾನಗಳ ಪೂಜಾರಿಗಳು, ಕೆಲಸಗಾರರು ಮತ್ತು ಕೇದಾರಮಠಕ್ಕೆ ಸೇರಿದ ೧೪೩ ಇನಾಂ ಗ್ರಾಮಗಳ ಕಂದಾಯ ಕೊಡುವ ಜಮೀನದಾರರು ಮತ್ತು ಭಾಗದಾರರು ಇವರುಗಳಿಂದ ಕೂಡಿದ ಒಂದು ಪಂಚಾಯತಿ ಸಭೆಯು ಓಖೀಮಠದಲ್ಲಿ ಕೂಡಬೇಕು ಈ ಪಂಚಾಯತಿಸಭೆಯು ಇಲ್ಲಿಯವರೆಗೆ ರಾವಲರು ಗತಿಸಿದ ೧೧ನೆಯ ದಿವಸ ಕೂಡುತ್ತಿತ್ತು ಇನ್ನುಮುಂದೆ ೧೨ನೆಯ ಪ್ಯಾರಾದಲ್ಲಿ ವಿವರಿಸಿರುವಂತೆ ಡಿಸ್ಟ್ರಿಕ್ಟ್ ಜಡ್ಜರು ಗೊತ್ತುಮಾಡಿದ ದಿವಸ ಸೇರುವದು ಈ ಪಂಚಾಯತಿ ಸಭೆಯಮುಂದೆ ಗತಿಸಿದ ರಾವಲರು ಮೃತ್ಯುಪತ್ರದಲ್ಲಿ ಬರೆದಿಟ್ಟಿರುವ ಉತ್ತರಾಧಿಕಾರಿಯ ಹೆಸರನ್ನು ತಿಳಿಸಿ, ಹೊಸ ರಾವಲರನ್ನು ಆರಿಸಬೇಕು ಈ ಚುನಾವಣೆಯ ಫಲಿತಾಂಶವನ್ನು ಕುಮಾವು ಕಮಿಷನರ್ ಸಾಹೇಬರ ಒಪ್ಪಿಗೆಯ ಬಗ್ಗೆ ಅವರಿಗೆ ತಿಳಿಸಬೇಕು

ರಾವಲರು ತಮ್ಮ ಮಠದಲ್ಲಿರುವ ಶಿಷ್ಯರಲ್ಲಿ ಒಬ್ಬರನ್ನು ತಮ್ಮ ಉತ್ತರಾಧಿಕಾರಿಯನ್ನಾಗಿ ಸೂಚಿಸಬಹುದು ಹೀಗೆ ಸೂಚಿಸಲ್ಪಟ್ಟವರು ದಕ್ಷಿಣದೇಶದ ಜಂಗಮರೇ ಆಗಿರಬೇಕು ಹೀಗೆ ಸೂಚಿತವಾದ ಹೆಸರು ಬರವಣಿಗೆಯಲ್ಲಿದ್ದು, ಅದನ್ನು ಸೀಲುಮಾಡಿದ ಕವರಿನಲ್ಲಿಟ್ಟು ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್‌ರವರಲ್ಲಿ ಇಡಬೇಕು

12 ರಾವಲರು ಗತಿಸಿದ ಮೇಲೆ ಉಖೀಮಠದಲ್ಲಿ ನಡೆಯಬೇಕಾದ ಉತ್ತರಾಧಿಕಾರಿಯ ಚುನಾವಣೆಯ ಮೇಲ್ವಿಚಾರಣೆಗಾಗಿ ಡಿಸ್ಟ್ರಿಕ್ಟ್ ಜಡ್ಜರು (ಸರಕಾರಿ ಅಧಿಕಾರಿಯಲ್ಲದ) ಒಬ್ಬ ಸ್ಪೆಷಲ್ ಅಧಿಕಾರಿಯನ್ನು ನಿಯಮಿಸಬೇಕು ಈ ಅಧಿಕಾರಿಗಳು ತಮ್ಮ ಪ್ರಯಾಣದ ಮತ್ತು ಇತರ ವೆಚ್ಚಗಳನ್ನು ಡಿಸ್ಟ್ರಿಕ್ಟ್ ಜಡ್ಜರು ಗೊತ್ತುಮಾಡಿದಂತೆ ದೇವಸ್ಥಾನದ ಹಣದಿಂದ ಪಡೆಯಬೇಕು ಈ ಚುನಾವಣೆಯು ರಾವಲರ ಮರಣಾನಂತರ ಆದಷ್ಟು

ಶೀಘ್ರವಾಗಿ ನಡೆಯುವಂತೆ ಡಿಸ್ಟ್ರಿಕ್ಟ ಜಡ್ಜರು ಒಂದು ದಿನವನ್ನು ಗೊತ್ತುಮಾಡಿದ ದಿವಸ ಓಟೀಮಠದಲ್ಲಿ ಸೇರಿದ ಓಟುದಾರರಿಗೆ ಸ್ಪೆಷಲ್ ಅಧಿಕಾರಿಗಳು, ಗತಿಸಿದ ರಾವಲರು ಬರೆದಿಟ್ಟಿರುವ ಉತ್ತರಾಧಿಕಾರಿಯ ಹೆಸರನ್ನು ತಿಳಿಸಬೇಕು ಆಗ್ಗೆ ಶಿಷ್ಯರಲ್ಲಿ ಯಾರಾದರೂ ಉಮೇದು ವಾರರಾಗಿ ನಿಂತು ರಾವಲರು ಬರೆದಿಟ್ಟಿರುವ ಸೂಚನೆಗೆ ವಿರೋಧಿಸಿದರೆ, ಆಗ್ಗೆ ಸ್ಪೆಷಲ್ ಅಧಿಕಾರಿಗಳು ಓಟಿನ ಮೂಲಕ ಚುನಾವಣೆಯನ್ನು ನಡೆಸಬೇಕು ಓಟುಗಳು ಎರಡು ಕಡೆಗೂ ಸಮವಾದ ಪಕ್ಷದಲ್ಲಿ, ಗತಿಸಿದ ರಾವಲರು ಬರೆದಿಟ್ಟಿರುವ ಹೆಸರಿಗೆ ಒಪ್ಪಿಗೆಯನ್ನು ಕೊಡಬೇಕು

13 ಈ ಚುನಾವಣೆಯ ಫಲಿತಾಂಶವನ್ನು ಕಮೀಷನರ್ ಸಾಹೇಬರವರ ಒಪ್ಪಿಗೆಗಾಗಿ ಅವರಿಗೆ ತಿಳಿಸಬೇಕು ಚುನಾವಣೆಯು ಸರಿಯಾದ ಕ್ರಮದಲ್ಲಿ ನಡೆದಿರುವದೆಂದು ಕಮೀಷನರವರಿಗೆ ಮನವರಿಕೆಯಾದ ಪಕ್ಷದಲ್ಲಿ ಎಲೆಕ್ಷನ್ ಮೂಲಕ ಆರಿಸಲ್ಪಟ್ಟವರ ಹೆಸರು ಅಂಗೀಕರಿಸಲ್ಪಡುವುದು. ಅವರಿಗೆ ಮನವರಿಕೆಯಾಗದಿದ್ದ ಪಕ್ಷದಲ್ಲಿ ಅವರು ಆ ರೀತಿ ರಿಕಾರ್ಡು ಮಾಡಿ ಡಿಸ್ಟ್ರಿಕ್ಟ್ ಜಡ್ಜರಿಗೆ ತಿಳಿಸಬೇಕು ಆಗ ಡಿಸ್ಟ್ರಿಕ್ಟ ಜಡ್ಜರು ಈ ವಿಷಯವನ್ನು ಪ್ರಸಿದ್ಧಪಡಿಸಿ, ಮೊದಲಿನಂತೆಯೇ ಎರಡನೆಯ ಸಾರೆ ಎಲೆಕ್ಷನ್ ನಡೆಯಿಸಬೇಕು ಈ ರೀತಿ ಸ್ಕೀಮ್ ಮಾಡಿರುವದರಿಂದ ಮುಂದೆ ಸ್ವಾಮಿಗಳಾಗುವವರು ಓಟಿನ ಮೂಲಕವಾಗಿ ಆರಿಸಲ್ಪಡಬೇಕಾಗುವ ಪ್ರಸಂಗವು ಪ್ರಾಪ್ತವಾಗಿರುವದು ಸ್ಕೀಮು ಈರೀತಿಯಾಗಿದ್ದರೆ ಇಂಡಿಯಾದೇಶದ ಮೂಲೆ ಮೂಲೆಗಳಿಂದ ೨೩ ಸಾವಿರ ತಾರುಗಳು ಹೋದುದಕ್ಕೆ ಫಲವೇನು ? ಎಂದು ಕೆಲವರು ಪ್ರಶ್ನಿಸಬಹುದು ಆ ತಾರುಗಳು ಹೋಗಿರುವ ಉದ್ದೇಶವೇ ಬೇರೆಯಾಗಿದೆ ಅದನ್ನು ಸದ್ಯಃ ಬಹಿರಂಗಪಡಿಸುವಂತಿಲ್ಲ ಇಷ್ಟು ತಾರುಗಳು ಹೋದ ಫಲವಾಗಿ ಗುರುಭಕ್ತರ ಸದುದ್ದೇಶವು ಸಾರ್ಥಕವಾಗುವ ಶುಭಲಕ್ಷಣಗಳು ತೋರಹತ್ತಿವೆ ಈ ತಾರಿನ ರಾಶಿಯನ್ನು ಕಂಡು ಅಲ್ಲಿಯ ಅಧಿಕಾರಿಗಳು ಈ ಬಗ್ಗೆ ಪೂರ್ಣ ಆಲೋಚನೆಯನ್ನು ಮಾಡಹತ್ತಿರುವರು ಇಲ್ಲದಿದ್ದರೆ ಇಷ್ಟರಲ್ಲಿ ಯಾರಾದರೊಬ್ಬರು ಅಧಿಕಾರಿಗಳಾಗಿ ಬಿಡುತ್ತಿದ್ದರು ಈ ವಿಷಯವು ದೀರ್ಘವಿಚಾರಕ್ಕೆ ಬಿದ್ದಿರುವುದು ಗುರುಭಕ್ತರ ತಾರಿನ ಸುರಿಮಳೆಯ ಫಲವೆಂದೇ ಹೇಳಬೇಕಾಗಿದೆ ಈ ರೀತಿ ತಾರಿನ ಪ್ರವಾಹವು ಮಿತಿ ಮೀರಿಹೋದುದರಿಂದ ಸರಕಾರದವರು ಇದಕ್ಕಾಗಿ ಒಬ್ಬ ಸ್ಪೆಷಲ್ ಅಧಿಕಾರಿಯನ್ನೇ ನಿಯಮಿಸಿದ್ದಾರೆಂದು ಈ ದಿವಸ ಅಲ್ಲಿಂದ ಬಂದ ಪತ್ರದಿಂದ ತಿಳಿಯುತ್ತದೆ ಇದರಿಂದ ಟೆಲಿಗ್ರಾಂಗಳ ಪ್ರಭಾವವು ಸರ್ವರಿಗೂ ಕಂಡು ಬರುವದು ಇದಲ್ಲದೆ ಯಾವ ಮಾರ್ಗದಲ್ಲಿ ಹೋದರೆ ಈ ಸ್ಕೀಮಿನ ಬದಲಾವಣೆಯಾದೀತೆಂಬ ಆಲೋಚನೆಯನ್ನು ಸಹ ಮಾಡುತ್ತಿರಲಾಗಿದೆ ಅಸ್ತು !

ಈಗ ಆ ಮಠದಲ್ಲಿರುವ ೫೬ ಜನ ಶಿಷ್ಯರೆಲ್ಲರೂ ಈ ಸ್ಥಾನವು ತಮಗೆ ದೊರೆಯಬೇಕೆಂದು ಅರ್ಜಿಗಳನ್ನು ಹಾಕಿಕೊಂಡಿದ್ದಾರೆ ಈ ಜನರಲ್ಲಿ ಒಬ್ಬರು ದೊಡ್ಡ ಪಂಡಿತರಾಗಿದ್ದಾರೆ ಇನ್ನೊಬ್ಬರು ಸಾಧಾರಣ ವಿದ್ಯಾವಂತರಾಗಿದ್ದಾರೆ ಮಿಕ್ಕವರಿಗೆ ಸರಿಯಾದ ವಿದ್ಯೆಯು ಇರುವದಿಲ್ಲವೆಂದು ತಿಳಿದುಬರುತ್ತದೆ ಮುಖ್ಯವಾಗಿ ಆ ಮಹಾಪೀಠಕ್ಕೆ ಸದ್ವಂಶೀಯರೂ ಮಹಾಪಂಡಿತರೂ, ಶುದ್ಧ ಬ್ರಹ್ಮಚಾರಿಗಳೂ ಆದವರು ಬರುವದೇ ಭೂಷಣವು ! ಇಂಥವರನ್ನೇ ಮಾಡಬೇಕೆಂಬ ಉದ್ದೇಶದಿಂದ ಗುರುಭಕ್ತರು ಟೆಹರಿಮಹಾರಾಜರವರಿಗೂ ಮತ್ತು ಪೌರಿ ಡೆಪ್ಯುಟಿ ಕಮಿಷನರ್ ಸಾಹೇಬರವರಿಗೂ ೨೦೦೦ಕ್ಕಿಂತ ಮೇಲ್ಪಟ್ಟು ತಾರುಗಳನ್ನು ಕಳಿಸಿರುತ್ತಾರೆ ಅನೇಕರು ಧರ್ಮಶಾಸ್ತ್ರಾಭಿಪ್ರಾಯವನ್ನು ವಿಶದವಾಗಿ ಬರೆದು ರಿಜಿಸ್ಟರ್ ಪತ್ರಗಳನ್ನು ಕಳುಹಿಸಿದ್ದಾರೆ

ಈ ಪೀಠದ ಬಗ್ಗೆ ತಯಾರಾಗಿರುವ ಸ್ಕೀಮನ್ನು ನಾವು ಇಲ್ಲಿಗೆ ತರಿಸಿಕೊಂಡು ಅದರಲ್ಲಿರುವ ಪ್ರತಿಯೊಂದು ವಿಷಯವನ್ನೂ ಬಹು ಸೂಕ್ಷ್ಮದೃಷ್ಟಿಯಿಂದ ವಿಮರ್ಶಿಸಿದೆವು ದಯಾಳುಗಳಾದ ಬ್ರಿಟಿಷ್ ಸರ್ಕಾರದವರು ಆ ಮಠದ ಪ್ರಾಚೀನ ರಿಕಾರ್ಡುಗಳನ್ನೆಲ್ಲ ಪರಿಶೀಲಿಸಿ ಆ ಸ್ಕೀಮಿನಲ್ಲಿ ಒಂದು ಅತಿ ಮಹತ್ವದ ಶಬ್ದವನ್ನು ಉಲ್ಲೇಖಿಸಿದ್ದಾರೆ ಆ ಶಬ್ದವು ಆ ಪೀಠದ ಪ್ರಾಚೀನ ಸಂಪ್ರದಾಯವನ್ನು ರಕ್ಷಿಸಲು ಪ್ರಾಣದಂತಿರುವದು ಆ ಒಂದು ಶಬ್ದದ ಆಧಾರದಿಂದಲೇ ನಾವು ಆ ಮಹಾಪೀಠದ ಗೌರವವನ್ನು ಕಾಪಾಡಬೇಕಾಗಿದೆ ಆ ಶಬ್ದದ ಸ್ವರೂಪವು ಇಂಥದೆಂದು ವೀರಶೈವ ಮಠದಲ್ಲಿರುವ ಮಹಾ ಮಹಾ ವ್ಯಕ್ತಿಗಳೂ ಮತ್ತು ಮೈಸೂರು ಅರಮನೆಯ ಪಂಡಿತರೂ ಅಲ್ಲಿಯ ಸರ್ಕಾರಕ್ಕೆ ತಿಳಿಸಿದ್ದಾರೆ ಅಲ್ಲದೆ ಆ ಶಬ್ದದ ಅರ್ಥವಿವರಣೆಯನ್ನು ಮಾಡಿ ಪ್ರಾಚೀನ ಹಿಂದೂ ರಾಜರ ಮತ್ತು ಮುಸಲ್ಮಾನ ಚಕ್ರವರ್ತಿಗಳ ದಾನಶಾಸನಗಳ ಅಭಿಪ್ರಾಯವನ್ನು ಸರ್ಕಾರಿ ಅಧಿಕಾರಿಗಳ ಗಮನಕ್ಕೆ ತರಲಾಗಿದೆ ಇದಲ್ಲದೆ ಆ ಪೀಠದ ಬಗ್ಗೆ ಡಾ|| ಜೆ ಎನ್ ಫಾರ್ಕ್ಯುಹಾರ್ ಮತ್ತು ಸಿ ಪಿ. ಬ್ರೌನ್, ಥರ್ಸ್ಟನ್, ಡಾ| ಬಾಂಡಾರಕರ್, ಡಾ|| ರಮಣಶಾಸ್ತ್ರಿ ಮೊದಲಾದ ಸುಪ್ರಸಿದ್ಧ ವ್ಯಕ್ತಿಗಳು ತಮ್ಮ ಗ್ರಂಥಗಳಲ್ಲಿ ಬರೆದಿರುವ ಅಭಿಪ್ರಾಯವನ್ನು ಸಹ ಅವರ ಗಮನಕ್ಕೆ ಬರುವಂತೆ ಮಾಡಿದೆ ಆ ಪೀಠದ ವಿಷಯವನ್ನು ಪ್ರತಿಪಾದಿಸುತ್ತಿರುವ ಕೆಲವು ಇಂಗ್ಲೀಷ್ ಪುಸ್ತಕಗಳನ್ನು ಸಹ ಅಲ್ಲಿಗೆ ಕಳಿಸಿಕೊಟ್ಟಿದೆ

ಈರೀತಿ ನಾನಾರೀತಿಯಿಂದ ಆ ಪೀಠದ ಸೇವೆಯನ್ನು ಗುರುಪೀಠಾಭಿಮಾನಿಗಳೆಲ್ಲರೂ ಮಾಡಹತ್ತಿರುವರು ಮುಖ್ಯವಾಗಿ ಅಲ್ಲಿರುವವರು ಧೈರ್ಯದಿಂದಲೂ ಯುಕ್ತಿಯಿಂದಲೂ ಕಾರ್ಯವನ್ನು ಮಾಡಬೇಕಾಗಿದೆ ಆ ಪೀಠದ ಬಗ್ಗೆ ಗುರುಪೀಠಾಭಿಮಾನಿಗಳೆಲ್ಲರೂ ಇನ್ನು ಮುಂದೆ ಹೆಚ್ಚಿನ ಸೇವೆಯನ್ನು ಸಲ್ಲಿಸುವ ಪ್ರಸಂಗವು ಒದಗಬಹುದು ಆಗ್ಗೆ ಎಲ್ಲರಿಗೂ ಪುನಃ ತಿಳಿಸುತ್ತೇವೆ ಅದರಂತೆ ಸರ್ವರೂ ಕಾರ್ಯವನ್ನು ಮಾಡಿ ಗುರುಕೃಪೆಗೆ ಪಾತ್ರರಾಗಬೇಕೆಂದು ಹಾರೈಸುತ್ತೇವೆ

ಗುರುಪೀಠಾಭಿಮಾನಿಗಳಲ್ಲಿ ನಿವೇದನ

ಹಿಮಾಲಯದಿಂದ ನಮಗೆ ಪತ್ರಗಳು ಬರಬೇಕಾದರೆ ೧೦ ದಿವಸಗಳಾಗುತ್ತವೆ ಇಲ್ಲಿಂದ ಅಲ್ಲಿಗೆ ಪತ್ರಗಳು ಹೋಗಬೇಕಾದರೆ ೧೦ ದಿವಸಗಳಾಗುವವು ಇದರಿಂದ ಕೂಡಲೆ ಅಲ್ಲಿಯ ಸಮಾಚಾರಗಳನ್ನು ತಿಳಿಯಲು ನಮಗೆ ತೊಂದರೆಯಾಗಿರುವದು ಇದಕ್ಕಾಗಿ ದೊಡ್ಡ ದೊಡ್ಡ ಪತ್ರಗಳನ್ನೇ ತಾರಿನ (ಟೆಲಿಗ್ರಾಂ) ಮೂಲಕ ಕಳಿಸುತ್ತಿರುವೆವು ಅಲ್ಲಿಯ ವಿಷಯಗಳನ್ನು ತಾರಿನಮೂಲಕ ಸಂಗ್ರಹಿಸುತ್ತಿರುವೆವು ಇತ್ತೀಚೆಗೆ ಕೆಲವು ಅತಿ ಮಹತ್ವದ ವಿಷಯಗಳು ತಿಳಿದುಬಂದುದರಿಂದ ಆ ವಿಷಯವನ್ನು ಅಲ್ಲಿಯ ಸರಕಾರಿ ಅಧಿಕಾರಿಗಳ ಗಮನಕ್ಕೆ ತರಬೇಕಾಗಿದೆ ಇನ್ನು ಒಂದೆರಡು ದಿವಸಗಳಲ್ಲಿ ಆ ಅಭಿಪ್ರಾಯವನ್ನು ಪತ್ರಮೂಲಕ ಗುರುಪೀಠಾಭಿಮಾನಿಗಳಿಗೆ ತಿಳಿಸುತ್ತೇವೆ ಈಸಾರೆ ಮೊದಲಿನಂತೆ ಹೆಚ್ಚು ಜನರಿಗೆ ಸೂಚನೆಯನ್ನು ಕೊಡುವದಿಲ್ಲ ನೂರಾರು ಜನರಿಗೆ ಮಾತ್ರ ತಿಳಿಸುತ್ತೇವೆ

ಚಿಕ್ಕಚಿಕ್ಕ ಗ್ರಾಮಗಳಲ್ಲಿರುವ ಕೆಲಜನವೀರಗುರುಭಕ್ತರು ನಮಗೇಕೆ ತಾರುಕೊಡುವ ವಿಷಯವನ್ನು ತಿಳಿಸಲಿಲ್ಲ? ನಾವೇನು ಗುರುಪೀಠಾಭಿಮಾನಿಗಳಲ್ಲವೇ ? ಎಂದು ನಮ್ಮನ್ನು ಪತ್ರಮೂಲಕ ವಿಚಾರಿಸುತ್ತಿರುವರು ಆದರೆ ಚಿಕ್ಕಗ್ರಾಮಗಳ ಜನರಿಗೆ ತಿಳಿಸಿದರೆ ಅವರು ೧೫ ೨೦ ಮೈಲುದೂರದಲ್ಲಿ ಟೆಲಿಗ್ರಾಫ್ ಆಫೀಸು ಇರುವ ಗ್ರಾಮಗಳಿಗೆ ಹೋಗಿ ತಾರು ಕೊಡಬೇಕಾಗುವದು ಇದರಿಂದ ಅವರಿಗೆ ಬಹಳ ತೊಂದರೆಯಾಗುವದೆಂದು ಯೋಚಿಸಿ ತಿಳಿಸಲಾಗಲಿಲ್ಲವೆಂಬ ವಿಷಯವನ್ನು ಈ ಮೂಲಕ ಅವರಿಗೆ ತಿಳಿಸಲಿಚ್ಛಿಸುತ್ತೇವೆ

ಇಂಡಿಯಾದೇಶದ ಎಲ್ಲಾ ಭಾಗಗಳಲ್ಲಿಯೂ ಗುರುಪೀಠಾಭಿಮಾನಿಗಳ ಗುಂಪು ದೊಡ್ಡ ಸೈನ್ಯದಂತಿರುವುದು ಇವರಿಗೆ ಇಲ್ಲಿಂದ ಸೂಚನೆ ಹೋಗುವುದೊಂದೇ ತಡ! ವಾಯುವೇಗ ಮನೋವೇಗದಂತೆ ತತ್‌ಕ್ಷಣವೇ ಕೆಲಸ ಮಾಡಿಬಿಡುವರೆಂಬ ವಿಷಯವನ್ನು ತಿಳಿಸಲು ನಮಗೆ ಪರಮಾನಂದವೆನಿಸುತ್ತದೆ

ಈಗ್ಗೆ ೨೦ ವರ್ಷಗಳ ಪೂರ್ವದಲ್ಲಿ ಶ್ರೀಜಗದ್ಗುರು ರಂಭಾಪುರೀ ಪೀಠದ ವ್ಯಾಜ್ಯವು ಬಿದ್ದ ಕಾಲದಲ್ಲಿ ಮೈಸೂರು ಶ್ರೀಮನ್ಮಹಾರಾಜರವರು ಹಿಮಾಲಯ ಪ್ರಾಂತದಲ್ಲಿರುವ ಡೆಹರಾಡೂನ್ ಎಂಬ ಪಟ್ಟಣದಲ್ಲಿದ್ದರು ಆಗ್ಗೆ ಇಂಡಿಯಾದೇಶದಲ್ಲಿರುವ ವೀರಗುರುಭಕ್ತರೆಲ್ಲರಿಗೂ ಸೂಚನೆಯನ್ನು ಕೊಡಲು ಅವರು ಒಂದೇ ದಿವಸ ಮಹಾಪ್ರಭುಗಳಿಗೆ ೧೨೦೦ ಟೆಲಿಗ್ರಾಂಗಳನ್ನು ಕಳಿಸಿದ್ದರು ಪುನಃ ಈಗ ಅದೇ ಸ್ಥಿತಿಯುಂಟಾಗಿರುವದನ್ನು ಸೂಚಿಸಲು ೨೩ ದಿವಸಗಳಲ್ಲಿಯೇ ೨ ಸಾವಿರಕ್ಕೆ ಮೇಲ್ಪಟ್ಟು ತಾರುಗಳನ್ನು ಕೊಟ್ಟರು ಈ ಮಹಾಶಯರಿಗೆ ಎಷ್ಟು ಧನ್ಯವಾದಗಳನ್ನರ್ಪಿಸಿದರೂ ಸ್ವಲ್ಪವೆಂದೇ ಹೇಳಬೇಕಾಗಿದೆ

ಗುರುಭಕ್ತರ ತಾರುಗಳಿಗೂ ಹಿಮಾಲಯಪ್ರಾಂತಕ್ಕೂ ಅತಿನಿಕಟಸಂಬಂಧ ವಿದ್ದಂತೆತೋರುತ್ತದೆ ೧೯೨೪ ನೆಯ ಇಸ್ವಿಯಲ್ಲಿ ಇಂಡಿಯಾದೇಶದ ಗುರುಭಕ್ತರು ಹಿಮಾಲಯ ಪ್ರಾಂತದಲ್ಲಿ ತಾರಿನ ಸುರಿಮಳೆಯನ್ನು ಸುರಿಸಿದ್ದರಿಂದ ಆಗ್ಗೆ ಮೈಸೂರು ಮಹಾಪ್ರಭುಗಳು ಅವರ ಸದುದ್ದೇಶವನ್ನು ನೆರವೇರಿಸಿ ಶ್ರೀರಂಭಾಪುರೀ ಪೀಠಕ್ಕೆ ಯೋಗ್ಯಮೂರ್ತಿಗಳನ್ನು ಆರಿಸಿದರು ಅದರಂತೆ ೧೯೪೫ ನೆಯ ಇಸ್ವಿಯಲ್ಲಿ ಅದೇ ಹಿಮಾಲಯ ಪ್ರಾಂತದಲ್ಲಿ ಪುನಃ ತಾರಿನ ಮಳೆಯನ್ನು ಸುರಿಸಿರುವರು ಈಗಲೂ ಸಹ ಟೆಹರಿ ಮಹಾರಾಜರು ಮತ್ತು ಬ್ರಿಟಿಷ್ ಸರಕಾರದವರು ಅವರ ಸದುದ್ದೇಶವನ್ನು ಸಫಲಗೊಳಿಸಿ ಯೋಗ್ಯಮೂರ್ತಿಗಳನ್ನು ಕೇದಾರ ಪೀಠಕ್ಕೆ ಆರಿಸುವರೆಂಬುದರಲ್ಲಿ ಯಾವ ಸಂಶಯವೂ ಇರುವುದಿಲ್ಲ ಅಸ್ತು !

ಈ ಕಾರ್ಯವು ಮುಗಿಯುವವರೆಗೆ ಸರ್ವ ಗುರುಭಕ್ತರೂ ತನುಮನೋಧನಗಳಿಂದ ಗುರುಪೀಠ ಸೇವೆಯನ್ನು ಮಾಡಿ ಧನ್ಯರಾಗಬೇಕೆಂದಾಶಿಸುತ್ತೇವೆ

ಸ್ವೀಕಾರ

ಬೆಳಗಾಂವ ಡಿ| ಸತ್ತಿಗೇರಿ ಗ್ರಾಮದ ಹಿರೇಮಠದ ಶ್ರೀ ಪಟ್ಟದಸ್ವಾಮಿಗಳವರು ತಮ್ಮ ಉತ್ತರಾಧಿಕಾರವನ್ನು ಮುರಗೋಡು ಹಿರೇಮಠದ ವೇ|| ರಾಚಯ್ಯನವರ ಪುತ್ರ ಶಿವಲಿಂಗಯ್ಯನೆಂಬ ವಟುವಿಗೆ ವಹಿಸಿ ತಾ|| 21 5-45 ನೆಯ ದಿವಸ ಪಟ್ಟಾಭಿಷೇಕ ಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 5 ರೂಪಾಯಿಗಳನ್ನು ತೆಗೆಯಿಸಿ ಕಳುಹಿಸಿರುತ್ತಾರೆ

ಸಿಂಧನೂರು ತಾ|| ಜಹಗೀರು ಸಾಲಗೊಂದ ಗ್ರಾಮದ ಮ|| ರಾ| ಕೆ ದೊಡ್ಡಬಸಪ್ಪನವರು ತಮ್ಮ ಮಕ್ಕಳ ಮತ್ತು ಅಳಿಯಂದಿರ ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ ಗಳು ವೇ|| ಪಂಚಾಕ್ಷರಶರ್ಮ ಹಿರೇಮಠ ಗೌಡಕುಂದಿ ಇವರ ದ್ವಾರಾ ತಲ್ಪಿರುತ್ತವೆ

ಕೃಷ್ಣರಾಜನಗರ ತಾ| ಹೊಸಅಗ್ರಹಾರದಲ್ಲಿರುವ ಪಟೇಲ ಚಿಕ್ಕವೀರಪ್ಪನವರ ಪುತ್ರಿ ಚಿ| ಸೌ|| ಪುಟ್ಟತಾಯಮ್ಮನನ್ನು ಇದೇ ತಾಲೂಕು ಚನ್ನಪ್ಪನ ಕೊಪ್ಪಲಿನಲ್ಲಿರುವ ಮ|| ರಾ| ದೇವಪ್ಪನವರ ಪುತ್ರ ಚಿ| ಮರಿಬಸಪ್ಪನಿಗೆ ಕೊಟ್ಟು, ನೆರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ ಗಳು ಹೊಸಕಾರುಗಳ್ಳಿಕೊಪ್ಪಲಿನಲ್ಲಿರುವ ಮ|| ರಾ|| ಹೆಂಚಿನಹಟ್ಟಿ ಹಲಗಪ್ಪನವರ ದ್ವಾರಾ ತಲ್ಪಿರುತ್ತವೆ

ಗುಲ್ಬರ್ಗಾ ಡಿ| ರೇವಗಿ ರೇವಣಸಿದ್ಧೇಶ್ವರ ದೇವಸ್ಥಾನದಲ್ಲಿ ಶ್ರೀ ಬೇಲೂರು ಕಟ್ಟೆಮನೆ ಹಿರೇಮಠದ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳವರು ಮ|| ರಾ| ವೀರಭಟ್ಟಪ್ಪ ಪೋ|| ಪಾಟೀಲ ಇವರಿಗೆ ದೀಕ್ಷೆಯನ್ನು ಮತ್ತು ವೇ| ಶಿವಲಿಂಗಶರ್ಮ ಪುರೋಹಿತ ಇವರಿಗೆ ಜ್ಞಾನೋಪದೇಶವನ್ನು ಮಾಡಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 2 ರೂಗಳು ವೇ| ಶಿವಲಿಂಗಶರ್ಮರವರ ದ್ವಾರಾ ತಲ್ಪಿರುತ್ತವೆ

ಧಾರವಾಡ ಡಿ| ಗದಗ ಗ್ರಾಮದ ಯಾದವಾಡ ಮಳೆಮಠದ ಶ್ರೀ ಪಟ್ಟಾಧ್ಯಕ್ಷರಿಗೆ ಬ್ರಹ್ಮೋಪದೇಶವು ನೆರವೇರಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಗಳು ಶ್ರೀ ಹೂಲಿ ಬೃಹನ್ಮಠದ ಚರಮೂರ್ತಿ ಸ್ವಾಮಿಗಳ ದ್ವಾರಾ ತಲ್ಪಿರುತ್ತವೆ

ಚಿಕ್ಕಮಗಳೂರು ತಾಲ್ಲೂಕು ನಂದೀಕೆರೆ ಪಟೇಲ್ ಮಲ್ಲೇಗೌಡರ ಚಿಕ್ಕತಂದೆ ಮ|| ರಾ| ಬಸವೇಗೌಡರ ಪುತ್ರ ಚಿ| ಕೆ ಪುಟ್ಟೇಗೌಡನಿಗೆ ಹೆಡಪಾಪವೇಲ್ ಮ|| ರಾ| ಅಣ್ಣೇಗೌಡರ ಪುತ್ರಿ ಚಿ| ಸೌ| ಚನ್ನಮ್ಮ

ನನ್ನು ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ವಧುವಿನ ಕಡೆಯವರು ಸಮರ್ಪಿಸಿದ 2 ರೂ ವರನ ಕಡೆಯವರು ಸಮರ್ಪಿಸಿದ 1 ರೂ ಒಟ್ಟು 3 ರೂಪಾಯಿಗಳು ಮ॥ ರಾ॥ ವಸ್ತಾರೆಪಟೇಲ್ ಚೌಡೇಗೌಡರ ದ್ವಾರಾ ತಲ್ಪಿರುತ್ತವೆ

ಬಳ್ಳಾರಿ ಡಿ॥ ಕೊಟ್ಟೂರು ಕಟ್ಟಿಮನೆ ಹಿರೇಮಠದ ಶ್ರೀ ಭೂತಭುಜಂಗ ಸ್ವಾಮಿಗಳವರು ತಮ್ಮ ಉತ್ತರಾಧಿಕಾರದ ಬಗ್ಗೆ ತಮ್ಮ ಪೂರ್ವಾಶ್ರಮದ ತಕ್ಕಂದಿರಾದ ವೇ॥ ಕೊಟ್ರಯ್ಯನವರ ಪುತ್ರ ಮಹಂತಯ್ಯನನ್ನು ಶಿಷ್ಯನನ್ನಾಗಿ ಸ್ವೀಕರಿಸಿದ ಸಮಯದಲ್ಲಿ ಸಮರ್ಪಿಸಿದ 1 ರೂ ವೇ॥ ಪಿ ಎ ಮರುಳಾರಾಧ್ಯರ ದ್ವಾರಾ ತಲ್ಪಿರುತ್ತದೆ

ಚನ್ನಗಿರಿ ತಾ॥ ಸೋಮಲಾಪುರದಲ್ಲಿರುವ ವೇ॥ ಚರಂತಿಮಠದ ಸಿದ್ಧಪ್ಪಯ್ಯನವರ ಪುತ್ರಿ ಚಿ॥ಸೌ॥ ಸಿದ್ಧಮ್ಮನನ್ನು ಬಸವಾಪಟ್ಟಣದ ಹಾಲಸ್ವಾಮಿ ಮಠದ ಕೈ॥ ಎಂ ಹಾಲಪ್ಪಯ್ಯನವರ ಪುತ್ರ ಚಿ॥ ಶಿವಲಿಂಗಾರಾಧ್ಯನಿಗೆ ಕೊಟ್ಟು ವಿವಾಹವನ್ನು ನೆರವೇರಿಸಿದ ಸಮಯದಲ್ಲಿ ಸಮರ್ಪಿಸಿದ 1 ರೂ ಯು ವೇ॥ ಎ ಎಂ ಹಾಲಸಿದ್ಧಯ್ಯನವರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಹಾರೈಸುತ್ತೇವೆ

ಹಣದ ಆಶೆಯ ಫಲ

ರಂಗೇಗೌಡನಿಗೆ ಯಾವಾಗಲೂ ಹಣದ ಚಿಂತೆ! ಒಂದು ದಿನ ಯಾರೋ ಒಬ್ಬ ಮಾಯಗಾರ ರಂಗೇಗೌಡನ ಬಳಿ ಒಂದು 'ರಂಗೇಗೌಡರೇ ನಿಮಗ ಧನ ಬರುವುದಿದೆ, ಯಾರು ತಾನೇ ತಡೆದಾರು? ಎಂದನು ನಿನಗೆ ಹೇಗೆ ತಿಳಿಯಿತು ಅದು? ಎಂದು ರಂಗೇಗೌಡ ಕೇಳಿದ ನನಗೆ ತಿಳಿಯದ ಯಾರಿಗೆ ತಿಳಿಯಬೇಕು? ನೆಲದಂಜನ ಎರಡು ಕಣ್ಣುಗಳಿಗೆ ಹಾಕಿಕೊಂಡರೆ ಭೂಮಿಯೊಳಗೆ ಏನಿದೆ ಎಂಬುದು ಸೀಸೆಯೊಳಗಿರುವ ಮಾತ್ರೆಯಂತೆ ಕಾಣುವುದು ನಿಮ್ಮ ಮನೆ ಹಿಂದಿನ ತೋಟದೊಳಗೆ ಬೇವಿನ ಮರದಡಿ ಹಣದ ಬಿಂದಿಗೆ ಇರುವುದು ಈ ಕಡೆ ಒಂದು ಬಲಗೈ ನೀಡಿ ಎಂದು ಮಾಯಗಾರನು ಹೇಳಿದನು ರಂಗೇಗೌಡನು ನಸುನಗೆಯಿಂದಲೇ ಕೈ ನೀಡಿದನು ನೀಡಿದ ಕೈ ಹಿಂದು ಮುಂದು ತಿರುಗಿಸಿ ನೋಡಿದ ಮಾಯಗಾರ ಅವನ ಮುಖದ ಮೇಲೆ ನಗೆ ಮೂಡಿತು ಏನು ಗೌಡರೇ ನಿಮಗಾಗಿ ಕಾದುಕುಳಿತಿದೆ ಬಿಂದಿಗೆ ಹಣ ಬೇಕೆ ಬೇಡವೇ ಹೇಳಿ ಕಾಲಕಳೆಯುವುದೇಕೆ? ಪೂಜೆಗೆ ತಯಾರಾಗಿ ಬೇಡವೆ ದರೆ ಮುಂದ ಹೋಗುವೆ ಎಂದ ಸರ್ವವೂ ತಯಾರಾಯಿತು ಮಾಯಗಾರ ಸಂಜೆಗೆ ಬಂದ ಪೂಜೆ ಮುಗಿಯಿತು ಗೌಡ ಮಾಯಗಾರ ಗೌಡನ ನಂಬಿಗೆ ಸಂಪಾದಿಸಿದ ಆಳು ಈ ಮೂವರು ಹಾರೆ ಮಮಟಿ ಹಿಡಿದರು ಬೇವಿನ ಮರದಡಿ ಎರಡು ಮೂರಡಿ ಆಳ ಅಗೆದರು ಮಾಯಗಾರ ಅಗಯುವದು ಸಾಕು ಎಂದ ಗುಂಡಿಯೊಳಗ ಇಳಿದು ಗೌಡನನ್ನು ಕರೆದ ಬಿಂದಿಗೆ ಕಂಡು ಗೌಡನಿಗೆ ಸಂತೋಷವೋ ಸಂತೋಷ ಗೌಡರೇ, ಕಲಸ ಕೈಗೂಡಿತು ಈ ಮಹಾಪೂಜೆ ನಡೆಯಬೇಕು ಅಪಾರ ಹಣ ಸಿಗುವಾಗ ಮನೆಯೊಳಗಿರುವ ಒಡವೆ ವಸ್ತು ಎಲ್ಲವೂ ಈ ಬಿಂದಿಗೆಯ ಮುಂದ ಬೀಳಬೇಕು ಮುಂದ ನೀವು ಕುಬೇರನಿಗೆ ಸಮ ಆಗುವಿರಿ, ಎಂದು ಮಾಯಗಾರನು ಹೇಳಿದನು ಗೌಡ ಹಿಂದು ಮುಂದು ನೋಡದ ಮನೆಯೊಳಗ ಹೋಗಿ, ಹಣ ಎಲ್ಲವನ್ನೂ ಸಂಚಿಯಲ್ಲಿ ಮುದುರಿ ತಂದು ಗುಂಡಿಯೊಳಗಿರಿಸಿದನು ಗೌಡರೇ ಹೋಗಿ ಸ್ನಾನ ಮಡಿಯಿಂದ ಬೇಗ ಬರಬೇಕು ನೀವೇ ಮಂಗಳಾರತಿ ಮಾಡಬೇಕು ಎಂದ ಮಾಯಗಾರ ಗೌಡ ತಿರುಗಿ ಮನೆಯೊಳಗೆ ಹೋದ ಮಾಯಗಾರ ಸಂಚಿಗಂಟು ತೆಗೆದುಕೊಂಡು ಓಡಿದ ಗೌಡ ಸ್ನಾನಮಾಡಿ ಒಂದು ಮಾಯಗಾರ ಒಡವೆಗಂಟು ನೋಡನ ಮಾಯವಾಗಿರುವುದನ್ನು ಕಂಡ ದಿಗಿಲಾಗಿ ಕೂಗಿಕೊಂಡ ಮನೆಯವರು ಓಡಿಬಂದರು ಮೋಸವಾಯಿತೆಂದು ಅದರು ಅವರೂ ಆಸೆಯಿಂದ ಗುಂಡಿಯೊಳಗಿದ್ದ ಬಿಂದಿಗೆಯನ್ನು ಹೊರಗೆ ತೆಗೆದರು ಅದರೆ ಅದು ಮಾಯಗಾರನು ಹಿಂದಿನ ದಿನ ಹೂತಿದ್ದ ಒರಿ ಬಿಂದಿಗೆ ಗೌಡ ಎದೆ ಎದೆ ಒಡಕೊಂಡ ಮನೆಯವರೂ ಬಾಯಿ ಬಾಯಿ ಒಡಕೊಂಡರು ಊರವರು 'ಹಣದ ಆಶೆಯ ಫಲ ಇದು' ಎಂದು ಆಡಿಕೊಂಡರು

(ಬೆಳಕು)

ಚಂದಾದಾರರಲ್ಲಿ ವಿಜ್ಞಾಪನೆ

ಈ ಪತ್ರಿಕೆಯು ಜನ್ಮವೆತ್ತಿ ವೈಶಾಖ ಶು॥ ಪಂಚಮಿಗೆ ೧೦ ವರ್ಷಗಳು ತುಂಬಿ ೧೧ನೆಯ ವರ್ಷವು ಪ್ರಾರಂಭವಾಗಿರುವುದು ವರ್ಷಾರಂಭದಿಂದ ಚಂದಾದಾರರಾಗಿರುವ ಸರ್ವರಿಗೂ ಇನ್ನು ಮುಂದೆ ಪತ್ರಿಕೆಯನು ವಿ. ಪಿ. ಮಾಡಬೇಕಾಗುತ್ತದೆ ವಿ. ಪಿ. ಮಾಡುವುದರಿಂದ ನಮಗೂ ತೊಂದರೆಯಾಗುವುದು ಹಾಗೂ ಚಂದಾದಾರರಿಗೂ ೬ ಆಣೆ ಹೆಚ್ಚಿಗೆ ಬೀಳುವುದು ಆದುದರಿಂದ ಚಂದಾದಾರರೆಲ್ಲರೂ ಕೂಡಲೆ ೩ ರೂ ಗಳನ್ನು ಮನಿಯಾರ್ಡರ್ ದ್ವಾರಾ ಕಳುಹಿಸಬೇಕು ಯಾವ ಗ್ರಾಮದಲ್ಲಿ ವಿಶೇಷ ಚಂದಾದಾರರಿರುವರೋ ಆ ಗ್ರಾಮದಲ್ಲಿರುವ ಅಭಿಮಾನಿಗಳು ಚಂದಾದಾರರ ಹಣವನ್ನೆಲ್ಲ ಒಟ್ಟು ಕೂಡಿಸಿ ಒಂದೇ ಸಾರಿ ಮನಿಯಾರ್ಡರ್ ಮಾಡಿಸಬೇಕು ಹೀಗೆ ಮಾಡುವುದರಿಂದ ಸರ್ವರಿಗೂ ಹಿತವಾಗುತ್ತದೆ ಮನಿಯಾರ್ಡರ್ ಮಾಡುವ ಚಂದಾದಾರರು ತಮ್ಮ ಹೆಸರಿನ ಪಕ್ಕದಲ್ಲಿರುವ ನಂಬರನ್ನು ಮಾತ್ರ ದಯೆಯಿಟ್ಟು ಮರೆಯದೆ ತಿಳಿಸಬೇಕು

ಮ್ಯಾ—

ಶ್ರೀ ಜಗದ್ಗುರು ಕಾಶೀಪೀಠಕ್ಕೆ ಕಾಣಿಕೆ

ಪ್ರಭೆಯಲ್ಲಿ ಕಾಶೀಪೀಠದ ಸಮಾಚಾರವೆಲ್ಲವೂ ಈ ಹಿಂದೆ ಪ್ರಕಾಶಿತವಾಗಿದೆ ಅದರಂತೆ ಗುರುಭಕ್ತರು ಗುರುದಕ್ಷಿಣೆಯನ್ನು ಪೀಠಕ್ಕೆ ಸಲ್ಲಿಸುತ್ತಿದ್ದಾರೆ ಈ ಕೆಲಸವು ಇನ್ನೂ ವಿಶೇಷವಾಗಿ ಸಾಗಬೇಕಾಗಿದೆ ಆಯಾ ಸ್ಥಳಗಳಲ್ಲಿಯ ಪ್ರಮುಖರು ವೀರಶೈವ ಮಹಾಜನರಿಂದ ವಿವಾಹಾದಿ ಶುಭಕಾರ್ಯಗಳಲ್ಲಿ ದಾನ ದಕ್ಷಿಣೆಗಳನ್ನು ಸಮರ್ಪಿಸಿ ಕಾಶೀ ಜಗದ್ಗುರು ಮಹಾಸನ್ನಿಧಿಗೆ ಕಳುಹಿಸುತ್ತಿರಬೇಕು ಈ ಬಗ್ಗೆ ಸರಿಯಾದ ಸೇವೆಯನ್ನು ಸಲ್ಲಿಸುವುದು ಸರ್ವ ಗುರುಭಕ್ತರ ಮುಖ್ಯ ಕರ್ತವ್ಯವಾಗಿದೆ ಎಂಬುದನ್ನು ತಿಳಿದು ಎಲ್ಲರೂ ಪ್ರಯತ್ನಿಸಬೇಕು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಬಂಗಾರದ ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೬ ಬೆಲೆ ೧ಕ್ಕೆ	೦—೬—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦ ಬೆಲೆ	೦—೬—೦
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ	೦—೩—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦ ೧ ೬
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—೬
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೩—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಯುತ ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೬

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬನೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರು ಜಗತ್ಪ್ರಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ವೀರಶೈವಮತದಲ್ಲಿ ಸದ್ಯಃ ದೊರೆಯತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು. ಈ ಗ್ರಂಥವು ಈಗ್ಗೆ ಸುಮಾರು ೩ ಸಾವಿರ ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ವಾಚಕರಿಗೆ ವೇದ್ಯವಾಗುವುದು ವಾಚಕರ ಅನುಕೂಲಕ್ಕಾಗಿ ಬಹುಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೬೬೨ ಪುಟಗಳಿಂದ ಕೂಡಿದ್ದು, ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಛಾಯಾಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೩ ರೂಪಾಯಿ.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಖ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚ ಚಾರಣಯಾವ್ಯಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪ ಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೩ ರೂ ೪ ಆಣೆ ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೧೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೧ನೇ ಜೂನ್ ೧೯೪೫ [ಸಂಚಿಕೆ ೪

ಸ್ವೀಕಾರ

ಕಡೂರು ಡಿ। ಕೊಪ್ಪ ತಾ॥ ಬಂಡೀಗಡಿ ಗ್ರಾಮದ ಮ। ರಾ॥ ವೀರಪ್ಪಶೆಟ್ಟರ ಪುತ್ರಿ ಚಿ ಸೌ। ಸುಶೀಲಮ್ಮನಿಗೂ ಶಿವಮೊಗ್ಗಾ ಡಿ॥ ಹಾರನಹಳ್ಳಿ ಗ್ರಾಮದ ಮ॥ ರಾ। ದುಮ್ಮಿ ಶಿವಲಿಂಗಪ್ಪಶೆಟ್ಟರ ಪುತ್ರ ಚಿ॥ ಮಹಾಲಿಂಗಪ್ಪನಿಗೂ ಹಾರನಹಳ್ಳಿ ಮ॥ ರಾ॥ ದುಮ್ಮಿ ಗುರುಶಾಂತಪ್ಪಶೆಟ್ಟರ ಪುತ್ರಿ ಚಿ॥ ಸೌ ಪುಟ್ಟಮ್ಮನಿಗೂ ಬಂಡೀಗಡಿ ಮ॥ ರಾ। ಶಾಂತಪ್ಪಶೆಟ್ಟರ ಪುತ್ರ ಚಿ ರಾಚಪ್ಪನಿಗೂ ನಡೆದ ವಿವಾಹಮಹೋತ್ಸವ ಸಮಯದಲ್ಲಿ ಕಾರ್ಯದರ್ಶಿಗಳಾದ ಮ ರಾ' ಬಂಡೀಗಡಿ ನಾಗಪ್ಪಶೆಟ್ಟರು ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 5 ರೂ ಗಳು ಮತ್ತು ಹಾರನಹಳ್ಳಿ ದುಮ್ಮಿ ನಂದ್ಯಪ್ಪಶೆಟ್ಟರ ಪುತ್ರ ಚಿ ಪರಮೇಶ್ವರಪ್ಪನಿಗೂ ಮ। ರಾ। ಸಾಸಿವೆಹಳ್ಳಿ ದೊ ವೀರಭದ್ರಪ್ಪಶೆಟ್ಟರ ಪುತ್ರಿ ಚಿ॥ ಸೌ॥ ಪಾರ್ವತಮ್ಮನಿಗೂ ನೆರವೇರಿದ ವಿವಾಹ ಸಮಯದಲ್ಲಿ ವಧೂವರರು ಸಮರ್ಪಿಸಿದ 2 ರೂ ಗಳು ಒಟ್ಟು 7 ರೂಪಾಯಿಗಳು ಗುಬ್ಬಿ ಶಿವಕವಾ ಪಂಡಿತ ಶಿವರುದ್ರಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತವೆ

ಬಳ್ಳಾರಿ ಡಿ। ಹೊಸಪೇಟೆ ತಾ॥ ಸೋಮಲಾಪುರದಲ್ಲಿ ನೆರವೇರಿದ ವೀರಮಾಹೇಶ್ವರ ದೀಕ್ಷಾಸಮಯದಲ್ಲಿ ನಾಲ್ಕು ಜನ ವಟುಗಳು ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 4 ರೂಪಾಯಿಗಳು ಮೆಟ್ರಿ ಸ್ಕೂಲ್ ಮಾಸ್ಟರ್ ವೇ॥ ಎಚ್ ಎಂ ಮಹದೇವಯ್ಯನವರ ದ್ವಾರಾ ತಲ್ಪಿರುತ್ತವೆ

ಚಿಕ್ಕಮಗಳೂರು ತಾಲೂಕು ವಸ್ತಾರೆ ಹೋಬಳಿ ಶುಕ್ರವಾರಪೇಟೆ ಮಠದ ಲೇ॥ ನಂಜಪ್ಪಯ್ಯನವರ ದತ್ತಪುತ್ರ ಚಿ॥ ಬಸವಲಿಂಗಯ್ಯನಿಗೆ ಇದೇ ತಾಲೂಕು ಮಾವಿನಕೆರೆ ಲೇ॥ ರುದ್ರಪ್ಪನವರ ಪುತ್ರಿ ಚಿ॥ ಸೌ। ರುದ್ರಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 3 ರೂಪಾಯಿಗಳು ವೇ॥ ಶುಕ್ರವಾರಪೇಟೆ ಮಠದ ಬಸಪ್ಪಯ್ಯನವರ ದ್ವಾರಾ ತಲ್ಪಿರುತ್ತವೆ

ಬೀರೂರು ನಿವಾಸಿಗಳಾದ ವೇ॥ ಮಾಳಿಗೆ ಮೊಡ್ಡ ಮರುಳಯ್ಯನವರ ರುದ್ರಯ್ಯನವರ ವೀರಭದ್ರಯ್ಯನವರ ಪುತ್ರಿ ಚಿ॥ ಸೌ॥ ಅನ್ನಪೂರ್ಣಮ್ಮನನ್ನು ಇದೇ ಗ್ರಾಮದ ಪೇಟೆ ವೀರಕ್ತಯ್ಯನವರ ಚನ್ನಬಸವಯ್ಯನವರ ಪುತ್ರ ಚಿ॥ ಮರುಳಸಿದ್ಧಾರಾಧ್ಯನಿಗೆ ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 3 ರೂ ಗಳು ವೇ॥ ಯಂ ವಿ ಮುದ್ವೀರಯ್ಯನವರ ದ್ವಾರಾ ತಲ್ಪಿರುತ್ತವೆ

ಧಾರವಾಡ ಡಿ॥ ನಾಗೇಂದ್ರಗಡ ಗ್ರಾಮದ ವೇ॥ ಕಲ್ಲಯ್ಯನವರ ಮಠದ ಅಂಬಾನಯ್ಯನವರ ಒಹಳ ಬೆಲೆಯುಳ್ಳ ಓದು ದನವು ಮನೆ ಬಿಟ್ಟುಹೋಗಿ ಎಷ್ಟು ಹುಡುಕಿದರೂ ಸಿಗದೇ ಇದ್ದು ಶ್ರೀ ಜಗದ್ಗುರು ದಾರುಕರನ್ನು ಸ್ಮರಿಸಿದ ದಿವಸವೇ ತಾನಾಗಿಯೇ ಬಂದ ಸಂತೋಷಕ್ಕೋಸ್ಕರ ಸದರಿಯವರು ಪ್ರಭಾಪೋಷಣಕ್ಕಾಗಿ 2 ರೂಪಾಯಿಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ

ಕಲಘಟಗಿ ತಾ ಬೆಲವಂತರ ಹಿರೇಮಠದ ವೇ॥ ಸಿದ್ಧರಾಮೇಶ್ವರಸ್ವಾಮಿಯವರು ತಮ್ಮ ಪುತ್ರರ ಮಾಹೇಶ್ವರ ದೀಕ್ಷೆಯನ್ನು ನೆರವೇರಿಸಿದ ಸಮಯದಲ್ಲಿ ಶ್ರೀ ಷ। ಬ್ರ ಶಿವಶಂಕರಶಿವಾಚಾರ್ಯಸ್ವಾಮಿಗಳು ಬಾದವಾಡ ಮಳೆಮಠ ಗರಗ ಇವರು ಪ್ರಭಾಪೋಷಣಕ್ಕಾಗಿ ತೆಗೆಯಿಸಿದ 2 ರೂ ಗಳು ವೇ ಶಿವಮೂರ್ತಿಸ್ವಾಮಿ ಹಿರೇಮಠ ಬೆಲವಂತರ ಇವರ ದ್ವಾರಾ ತಲ್ಪಿರುತ್ತವೆ

ಬಳ್ಳಾರಿ ಡಿ। ಹರಪನಹಳ್ಳಿ ತಾ ರಾಮಘಟ್ಟಗ್ರಾಮದಲ್ಲಿರುವ ಪುರವರ್ಗಮಠದ ಚರಪಟ್ಟಾಧಿಕಾರಮಹೋತ್ಸವವು ನೆರವೇರಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ ಗಳು ವೇ ಕೆ ಎಂ ಕಲಿವೀರಯ್ಯನವರು ಉಚ್ಚಂಗಿದುರ್ಗ ಇವರ ದ್ವಾರಾ ತಲ್ಪಿರುತ್ತವೆ

ಈ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ

ಚರಪಟ್ಟಾಧಿಕಾರಮಹೋತ್ಸವ

ಬಳ್ಳಾರಿ ಜಿಲ್ಲಾ ಹರಪನಹಳ್ಳಿ ತಾಲೂಕು ರಾಮಘಟ್ಟಗ್ರಾಮದ ಪುರವರ್ಗಮಠದ ಶಿವೈಕ್ಯರಾದ ಶ್ರೀ॥ ಚರಪಟ್ಟಾಧ್ಯಕ್ಷಸ್ವಾಮಿಗಳವರು ಅಪ್ಪಣೆಕೊಡಿಸಿದ್ದ ಪ್ರಕಾರ ವಂಶಪಾರಂಪರ್ಯದಿಂದ ಬಂದ ವೇ॥ ವೀರಪ್ಪಯ್ಯನವರ ಜ್ಯೇಷ್ಠ ಪುತ್ರರಾದ ಶ್ರೀ ಶಿವರುದ್ರಶಿವಾಚಾರ್ಯರಿಗೆ ಶ್ರೀ ಅಸಗೋಡು ಪಟ್ಟದಸ್ವಾಮಿಗಳವರು ಇದೇ ಪಾರ್ಥಿವಸಂ॥ ವೈಶಾಖ ಶು॥ ೧೩ (24 5 45) ಗುರುವಾರ ಚರಪಟ್ಟಾಧಿಕಾರವನ್ನು ಅನುಗ್ರಹಿಸಿದರು ಈ ಮಹೋತ್ಸವವನ್ನು ಸಮಸ್ತ ಭಕ್ತಮಾಹೇಶ್ವರರು ಅತ್ಯಂತ ವೈಭವದಿಂದ ನೆರವೇರಿಸಿದರು ನೂತನ ಸ್ವಾಮಿಗಳ ಉತ್ಸವವು ಅತ್ಯಂತ ವೈಭವದಿಂದಲೂ, ಮಂಗಲವಾದ್ಯ, ಭಜನಾಸಂಘಗಳಿಂದಲೂ ನಡೆಯಿತು ಉತ್ಸವಾನಂತರ ಭವ್ಯವಾದ ಮಂಟಪದಲ್ಲಿ ವೀರಶೈವ ಮತತತ್ತ್ವಗಳ ವಿಷಯವಾಗಿ ಭಾಷಣಗಳಾದವು ತರುವಾಯ ಸಮಸ್ತ ದೈವದವರಿಗೂ, ಮತ್ತು ಮಹೋತ್ಸವಕ್ಕಾಗಿ ಬಂದಿದ್ದ ಸಾವಿರಾರು ಜನರಿಗೂ ಫಲಾಶೀರ್ವಾದಗಳು ಆಶೀರ್ವದಿಸಲ್ಪಟ್ಟು, ಕಾರ್ಯವು ಮುಕ್ತಾಯವಾಯಿತು ಜಗದಾಚಾರ್ಯರ ಆಶೀರ್ವಾದ ಬಲದಿಂದ ನೂತನಾಧಿಕಾರಿಗಳು ಕೀರ್ತಿಶಾಲಿಗಳಾಗಲೆಂದು ಹಾರೈಸುತ್ತೇನೆ

ಕೆ ಯಂ ಕಲಿವೀರಯ್ಯ,
ಉಚ್ಚಂಗಿದುರ್ಗ.

ಬೀರೂರು

ಇಲ್ಲಿ ಈಗ 10 12 ದಿವಸಗಳಿಂದಲೂ ಉತ್ತಮವಾದ ಮಳೆ ಆಗುತ್ತಿದೆ ರೋಗಾದ್ಯುಪದ್ರವಗಳೇನೂ ಇರುವುದಿಲ್ಲ

ಈ ಊರಿನ ವೇ॥ ಮಾಳಿಗೆ ಮೊಡ್ಡ ಮರುಳಯ್ಯನವರ ರುದ್ರಯ್ಯನವರ ವೀರಭದ್ರಯ್ಯನವರ ಪುತ್ರಿ ಚಿ। ಸೌ ಅನ್ನಪೂರ್ಣಮ್ಮನಿಗೂ ಇದೇ ಊರು ಪೇಟೆ ವೀರಕ್ತಯ್ಯನವರ ಚನ್ನಬಸವಯ್ಯನವರ ಪುತ್ರ ಚಿ॥ ಮರುಳಸಿದ್ಧಾರಾಧ್ಯನಂಬುವರನಿಗೂ ಇದೇ ವೈಶಾಖ ಶುದ್ಧ ೮ ಭಾನುವಾರ ಜರುಗಿದ ವಿವಾಹ ಮಹೋತ್ಸವಕಾಲದಲ್ಲಿ ಶ್ರೀ ಜಗದ್ಗುರು ರಂಭಾಪುರೀ ಪೀಠದ ಅಗ್ರತಾಂಬೂಲಕ್ಕಾಗಿ 10 0 0 ಶ್ರೀ ಜಗದ್ಗುರು ಕಾಶೀ ವಿಶ್ವಾರಾಧ್ಯ ಪೀಠದ ಅಗ್ರತಾಂಬೂಲಕ್ಕಾಗಿ 7 0 0 ಶ್ರೀ ಪಂಚಾಚಾರ್ಯ ಪ್ರಭಾ ಪೋಷಣಕ್ಕಾಗಿ ೩ 0 0 ಒಟ್ಟು 20 ರೂಪಾಯಿಗಳು ವಧೂವರರಿಂದ ತೆಗೆದು ಆಯಾಯ ಸ್ಥಳಕ್ಕೆ ಮನಿಯಾರ್ಡರ್ ಮೂಲಕ ರವಾನಿಸಿದ್ದಲ್ಲದೆ ನೆರೆದಿದ್ದ ಭಕ್ತಮಾಹೇಶ್ವರ ವರ್ಗಕ್ಕೆ ಯಥೋಚಿತ ಸತ್ಕಾರಗಳಿಂದ ಉಪಚರಿಸಿದನಂತರ ವಧೂವರರ ಶ್ರೇಯಸ್ಸನ್ನು ಕೋರಿ ಬಂದಿದ್ದ ಭಕ್ತಮಾಹೇಶ್ವರರೂ ಬಂಧು ಜನರೂ ತಮ್ಮ ತಮ್ಮ ಗ್ರಾಮಗಳಿಗೆ ತೆರಳಿದರು

ಪ್ರತ್ಯಕ್ಷದರ್ಶಿ

NOTICE

Under the auspices of the Veerasaiva Education Society, Bangalore, a new Intermediate College with Physics, Chemistry and Mathematics as optional subjects will be opened from 2nd July 1945

Students seeking admission may kindly apply to the undersigned on or before 20th June 1945 with all necessary particulars enclosing the Leaving certificate

Y M Shanmukhaiya,
Secretary,
Veerasaiva Education Society
146, Chamarajapet, IV Main,
BANGALORE CITY

ಪಂಚಾಚಾರ್ಯಪ್ರಭಾ.

೧೯೪೫ನೆಯ ಜೂನ್ ತಾ|| ೧೧ನೇ ಸೋಮವಾರ

ಕೇದಾರಪೀಠದ ಬಗ್ಗೆ ಪುನಃ ತಾರುಗಳು

ಬ್ರಿಟಿಷ್ ಸರಕಾರದವರು ಶ್ರೀಕೇದಾರಪೀಠದ ಬಗ್ಗೆ ರಚಿಸಿರುವ ಸ್ಕೀಮನ್ನು ತರಿಸಿ ನೋಡಿದ ಮೇಲೆ, ಇನ್ನಿಬ್ಬರು ದೊಡ್ಡ ಅಧಿಕಾರಿಗಳು ಆ ಪೀಠಕ್ಕೆ ಉತ್ತರಾಧಿಕಾರಿಗಳನ್ನು ನಿಯಮಿಸುವ ವಿಷಯವಲ್ಲಿ ಮುಖ್ಯರಾಗಿರುವರೆಂದು ತಿಳಿದು ಬಂದಿತು. ಆ ಇಬ್ಬರು ಮುಖ್ಯಾಧಿಕಾರಿಗಳಿಗೆ ಕೆಲವು ಶಾಸ್ತ್ರೀಯವಿಷಯಗಳನ್ನು ತಿಳಿಸಬೇಕಾದ ಸಂದರ್ಭವೊದಗಿದುದರಿಂದ ಪುನಃ ನೂರಾರು ಜನರಿಗೆ ಪತ್ರಗಳನ್ನು ಬರದವು. ನಾವು ಯಾರು ಯಾರಿಗೆ ಬರೆದೆವೋ ಅವರೆಲ್ಲರೂ ಆ ಕೂಡಲೇ ಆ ಇಬ್ಬರು ಅಧಿಕಾರಿಗಳಿಗೆ ತಾರುಗಳನ್ನು ಕಳಿಸಿರುವರು. ದುಡ್ಡಿನ ಕಡೆಗೆ ಲಕ್ಷ್ಯಗೊಡದ ಅಸಾಧಾರಣ ಪೂಜ್ಯಭಾವದಿಂದ ಗುರುಪೀಠಸೇವೆಯನ್ನು ಸಲ್ಲಿಸುತ್ತಿರುವ ಗುರುಪೀಠಾಭಿಮಾನಿಗಳೆಲ್ಲರಿಗೂ ಈ ಮೂಲಕ ನಾವು ಅನಂತ ಧನ್ಯವಾದಗಳನ್ನು ಸಮರ್ಪಿಸುತ್ತೇವೆ.

ವೀರಶೈವ ಜನಾಂಗದಲ್ಲಿ ಅತ್ಯುನ್ನತಪದವನ್ನಲಂಕರಿಸಿ ನಿವೃತ್ತರಾಗಿರುವ ಮೈಸೂರು ಹೈಕೋರ್ಟಿನ ರಿ|| ಚೀಫ್‌ಜಸ್ಟಿಸ್ ರಾಜಧರ್ಮಪ್ರವೀಣ ದಿವಾನ್ ಬಹದ್ದೂರ್ ಶ್ರೀಮಾನ್ ಪಿ ಮಹಾದೇವಯ್ಯನವರು ಅಲ್ಲಿಯ ಮುಖ್ಯಾಧಿಕಾರಿಗಳಿಗೂ ಮತ್ತು ಟೆಹರಿ ಮಹಾರಾಜರವರಿಗೂ ಪಂಚಪೀಠಗಳ ಸ್ವರೂಪ, ಆ ಪೀಠಗಳಿಗೆ ಅಧಿಕಾರವಾಗತಕ್ಕ ರೀತಿ ಇವೇ ಮೊದಲಾದ ಶಾಸ್ತ್ರೀಯವಿಷಯಗಳಿಂದೊಡಗೂಡಿದ ದೀರ್ಘಪತ್ರವನ್ನು ಬರೆದು ವೀರಶೈವ ಧರ್ಮಪೀಠಗಳ ನಿಜವಾದ ಸ್ವರೂಪವು ಸರಕಾರಿ ಅಧಿಕಾರಿಗಳ ಮನಸ್ಸಿನಲ್ಲಿ ಪ್ರತಿಬಿಂಬಿಸುವಂತೆ ಮಾಡಿರುವುದು ಅತ್ಯಂತ ಸ್ತೋತ್ರಾರ್ಹವಾಗಿರುವುದು. ಕೇವಲ ಧರ್ಮಶಾಸ್ತ್ರವಿಷಯಗಳಿಂದೊಡಗೂಡಿರುವ ಈ ಮಹೋದಯರ ಪತ್ರದಿಂದ ಅಲ್ಲಿಯ ಅಧಿಕಾರಿಗಳು ಆ ಮಹಾಪೀಠದ ವಿಷಯವನ್ನು ಪೂರ್ಣವಾಗಿ ಪರ್ಯಾಲೋಚಿಸುವರೆಂಬುದರಲ್ಲಿ ಯಾವ ಸಂಶಯವೂ ಇರುವುದಿಲ್ಲ.

ಇದಲ್ಲದೆ ಸದ್ಯಃ ವೀರಶೈವ ಮಹಾಸಭಾಧ್ಯಕ್ಷರಾಗಿರುವ ರಿ|| ಡಿಸ್ಟ್ರಿಕ್ಟ್ ಜಡ್ಜ್ ಶ್ರೀಮಾನ್ ಸಿ.ಸಿ. ಹುಲಕೋಟಿಯವರು ಮತ್ತು ಈ ಮೊದಲು ಅಧ್ಯಕ್ಷರಾಗಿದ್ದ ಶ್ರೀಮಾನ್ ಎಂ. ಎಸ್. ಸರದಾರ ಬ್ಯಾರಿಸ್ಟರ್ ಇವರೇ ಮೊದಲಾದವರು ಆ ಜಗದ್ಗುರು ಪೀಠಕ್ಕೆ ಇಂಥವರನ್ನೇ ಅಧಿಕಾರಿಗಳನ್ನಾಗಿ ಮಾಡಬೇಕೆಂದು ತಾರುಮಾಡಿರುವರೆಂಬ ವಿಷಯವನ್ನು ತಿಳಿದು ಪರಮಾನಂದವೆನಿಸುತ್ತದೆ.

ಆ ಮಹಾಪೀಠದ ಪೂರ್ವಾಚಾರ್ಯರ ಸೂಕ್ಷ್ಮ ಪರಿಚಯ, ದಕ್ಷಿಣದೇಶದಲ್ಲಿರುವ ಜಂಗಮರಿಗೂ ಉತ್ತರದೇಶದಲ್ಲಿರುವ ಆ ಜಗದ್ಗುರು ಪೀಠಕ್ಕೂ ಇರತಕ್ಕ ನಿಕಟ ಸಂಬಂಧ, ಆ ಪೀಠದ ಪ್ರಾಚೀನ ಸಂಪ್ರದಾಯ, ಮಧ್ಯದಲ್ಲಿ ಆ ಪೀಠಕ್ಕೊದಗಿದ ವಿಪತ್ತು, ಆ ಪೀಠದ ಉದ್ಧಾರಕ್ಕಾಗಿ ಬ್ರಿಟಿಷ್ ಸರಕಾರದವರು ಮಾಡಿರುವ ಸ್ಕೀಮು, ಆ ಸ್ಕೀಮಿನಲ್ಲಿ ಉತ್ತರಾಧಿಕಾರಿಗಳು ಇಂದವರೇ ಆಗಿರಬೇಕೆಂದು ಉಲ್ಲೇಖಿಸಿರುವ ವಾಕ್ಯದ ಅರ್ಥವಿವರಣೆ ಇತ್ಯಾದಿ ವಿಷಯಗಳನ್ನು ಗರ್ಭೀಕರಿಸಿರುವ ಬಹು ದೀರ್ಘವಾದ ಪತ್ರವೊಂದು ನಮ್ಮ ಹೆಸರಿನಿಂದ ಅಲ್ಲಿಯ ಅಧಿಕಾರಿಗಳ ಕಡೆಗೆ ಹೋಗತಕ್ಕದ್ದಾಗಿದೆ. ಆ ಪತ್ರವು ಒಂದು ದೊಡ್ಡ ಆರ್ಗ್ಯುಮೆಂಟಿನಂತಿರುವುದರಿಂದ ಅದನ್ನು ಇಂಗ್ಲೀಷ್ ಭಾಷೆಯಲ್ಲಿ ಪ್ರಿಂಟುಮಾಡಿಸಿ ಕಳಿಸಬೇಕಾಗಿದೆ. ಇನ್ನು ಒಂದೆರಡು ದಿವಸಗಳಲ್ಲಿಯೇ ಪ್ರಿಂಟಾಗಿ ಅಲ್ಲಿಗೆ ಹೋಗುವದು.

ಇದೇ ರೀತಿಯಾಗಿ ಇಂಡಿಯಾ ದೇಶದಲ್ಲಿರುವ ಗುರುಪೀಠಾಭಿಮಾನಿಗಳೆಲ್ಲರೂ ಆ ಮಹಾ ಪೀಠದ ಬಗ್ಗೆ ಸರ್ವತೋಮುಖವಾಗಿ ಕೆಲಸ ಮಾಡಬೇಕಾಗಿದೆ. ಅದರಂತೆ ಕಾರ್ಯವು ನಡೆದಿರುವುದು ಅತ್ಯಂತ ಸ್ತುತ್ಯವಾಗಿದೆ. ಶ್ರೀ ಕೇದಾರನಾಥನು ಅನಾಯಕವಾಗಿರುವ ಆ ಮಹಾ ಪೀಠವು ಶೀಘ್ರವಾಗಿ ಸನಾಯಕವಾಗುವಂತೆ ಅನುಗ್ರಹಿಸಲೆಂದು ಆ ಜಗನ್ನಿಯಾಮಕನನ್ನು ಪ್ರಾರ್ಥಿಸುತ್ತೇವೆ.

ಮೈಸೂರು ಸಂಸ್ಥಾನದ ದಿವಾನರವರು ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ಅಪ್ಪಣೆ ಕೊಡಿಸಿದ

ಭಾಷಣದ ಸಾರ

ಆಹಾರ ಪದಾರ್ಥಗಳ ಸರಬರಾಯಿ

ಹಿಂದಿನ ವರ್ಷದಲ್ಲಿ ಆಹಾರ ಧಾನ್ಯಗಳನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಸಂಬಂಧಪಟ್ಟ ತಿಪ್ಪು ಪಟ್ಟಣ ಹೊಸ ಏರ್ಪಾಡನ್ನು ಕಳೆದ ನವಂಬರ್ ತಿಂಗಳಲ್ಲಿ ಜಾರಿಗೆ ತಂದಿದ್ದಾಯಿತಷ್ಟೆ. ಅದರ ಪ್ರಕಾರ 17,3[illegible] 000 ಪಲ್ಲ ಬತ್ತವನ್ನು 5,00 000 ಪಲ್ಲ ರಾಗಿಯನ್ನೂ 50,000 ಪಲ್ಲ ಜೋಳವನ್ನೂ ಮತ್ತು 17,000 ಪಲ್ಲ ಇತರ ಆಹಾರ ಧಾನ್ಯಗಳನ್ನೂ ಸಂಗ್ರಹಿಸಲಾಗಿದೆ. ಅವುಗಳ ಒಟ್ಟು ಮೌಲ್ಯವು ಸುಮಾರು 291 ಲಕ್ಷ ರೂಪಾಯಿಗಳು. ಇಂಡಿಯಾ ಸರ್ಕಾರದವರು, 33,000 ಟನ್ನುಗಳ ಅಕ್ಕಿಯೂ, ಮತ್ತು 12,000 ಟನ್ನುಗಳ ಗೋಧಿ ಮತ್ತು ಗೋಧಿಯಿಂದ ತಯಾರಾದ ರವೆ ಮೊದಲಾದುವೂ, ಸಂಸ್ಥಾನಕ್ಕೆ ಹೊರಗಿನಿಂದ ದೊರೆಯುವಂತೆ ಅನುಮತಿ ಕೊಟ್ಟಿದ್ದಾರೆ. ಅಲ್ಲದೆ ಇನ್ನೂ 16 000 ಟನ್ನುಗಳ ಅಕ್ಕಿಯು ಸಂಸ್ಥಾನಕ್ಕೆ ಆಮದಾಗಬಹುದೆಂದು ಅನುಮತಿ ಕೊಡುವುದಾಗಿಯೂ ವಾಗ್ದಾನ ಮಾಡಿದ್ದಾರೆ. ನಮ್ಮ ಸಂಸ್ಥಾನಕ್ಕೆ ಬೇಕಾದ ಆಹಾರ ಧಾನ್ಯಗಳ ಆವಶ್ಯಕತೆಗಳ ವಿಷಯದಲ್ಲಿ ಸಹಾನುಭೂತಿಯಿಂದ ಗಮನಕೊಟ್ಟು ಸಂಸ್ಥಾನಕ್ಕೆ ಉಪಕಾರಮಾಡಿರುವ ಇಂಡಿಯಾ ಸರ್ಕಾರದ ಆಹಾರ ಸರಬರಾಯಿ ಶಾಖೆಯ ಸಚಿವರಾದ ಸರ್ ಜ್ವಾಲಾಪ್ರಸಾದ್ ಶ್ರೀವಾಸ್ತವ ಅವರಿಗೂ, ಆಹಾರ ಸರಬರಾಯಿ ಇಲಾಖೆಯ ಡೈರೆಕ್ಟರ್ ಜನರಲ್‌ರವರಾದ ಶ್ರೀಮಾನ್ ಬಿ ಆರ್ ಸೇನ್‌ರವರಿಗೂ ಮತ್ತು ಆಹಾರ ಸರಬರಾಯಿ ಇಲಾಖೆಯ ಇತರ ಆಫೀಸರುಗಳಿಗೂ, ನಮ್ಮ ಕೃತಜ್ಞತೆಯನ್ನು ಸೂಚಿಸಲಿಚ್ಛಿಸುತ್ತೇನೆ. ಸಂಸ್ಥಾನದಲ್ಲಿಯೇ ದೊರೆಯುವ ಆಹಾರ ಧಾನ್ಯಗಳೂ ಮತ್ತು ಇಂಡಿಯಾ ಸರ್ಕಾರದವರ ಅನುಮತಿಯ ಮೇರೆಗೆ ಸಂಸ್ಥಾನದ ಹೊರಗಿನಿಂದ ಆಮದಾಗಿ ದೊರೆಯುವ ಆಹಾರ ಧಾನ್ಯಗಳೂ ಸೇರಿದರೆ, ಈಗ ಸರಬರಾಯಿ ಮಾಡುತ್ತಿರುವ ಅಕ್ಕಿಯ ಕ್ಲಪ್ತ ಪರಿಮಾಣವನ್ನು (ಎಂದರೆ, "ರೇಷನ್" ಪರಿಮಾಣವನ್ನು) ಇನ್ನೂ ಸ್ವಲ್ಪಮಟ್ಟಿಗೆ ಹೆಚ್ಚಿಸಲು ಸಾಧ್ಯವಾದೀತೆಂದು ತೋರುತ್ತದೆ.

ಆಹಾರ ಧಾನ್ಯಗಳ ಸರಬರಾಯಿ ವಿಷಯದಲ್ಲಿ ನಮಗಿದ್ದ ಶಂಕಾತಂಕಗಳು ಸದ್ಯಕ್ಕೇನೋ ಕಡಮೆಯಾಗಿವೆಯೆಂದು ನಿಸ್ಸಂದೇಹವಾಗಿ ಹೇಳಬಹುದಾಗಿದೆ. ಆದರೆ ಮುಂದೆ ಹೇಗೋ ಏನೋ ಎಂಬ ಆತಂಕವು ಮಾತ್ರ ತಪ್ಪಿಲ್ಲ. ಒಟ್ಟಿನ ಮೇಲೆ ಸಂಸ್ಥಾನದಲ್ಲಿ ಮಳೆಯೂ ಸರಿಯಾಗಿ ಬಿದ್ದಿಲ್ಲ. ಅಲ್ಲದೆ ಕೃಷ್ಣರಾಜಸಾಗರದ ಜಲಾಶಯದಲ್ಲಿ ಕೂಡ ನೀರಿನ ಮಟ್ಟವು ಕಡಮೆಯಾಗಿದೆ. ಹೀಗೆ ನೀರು ಕೆಳಗೆ ಇಳಿದುಹೋಗಿರುವುದರಿಂದ, ಸಂಸ್ಥಾನದಲ್ಲಿರುವ ಬತ್ತ ಬೆಳೆಯುವ ಪ್ರದೇಶಗಳ ಪೈಕಿ ಅತ್ಯಂತ ಪ್ರಾಮುಖ್ಯವಾದವುಗಳಲ್ಲೊಂದಾದ ಕೃಷ್ಣರಾಜಸಾಗರದ ನಾಲಾ ಬಯಲಿನ ಪ್ರದೇಶದಲ್ಲಿ ಸಕಾಲದಲ್ಲಿ ನೀರಾವರಿ ಸಾಗುವಳಿಯಾಗಿ ಫಸಲು ಬೆಳೆಯುವುದಕ್ಕೆ ಸ್ವಲ್ಪಮಟ್ಟಿಗೆ ತೊಂದರೆಯಾದರೂ ಆಗಬಹುದು. ಜಪಾನಿನವರೊಡನೆ ಯುದ್ಧ ಮಾಡುವುದಕ್ಕೆ ಸಂಬಂಧಪಟ್ಟ ಕಾರ್ಯಕಲಾಪಗಳು ಹೆಚ್ಚುತ್ತಿವೆ, ಇಡೀ ಪ್ರಪಂಚದಲ್ಲೇ ಆಹಾರ ಧಾನ್ಯಗಳು ಸಾಲದೆ ಹೋಗುವ ಕೊರತೆಯುಂಟಾಗಬಹುದೆಂಬ ಶಂಕೆಯು ತೋರಿಬಂದಿದೆ, ನಮ್ಮ ಸಂಸ್ಥಾನದಲ್ಲಿ ಆಹಾರ ಧಾನ್ಯಗಳು ದೊರೆಯುವ ಪ್ರದೇಶಗಳನ್ನು ರಕ್ಷಿಸಿ ನೋಡಿಕೊಳ್ಳುವುದೂ, ಮತ್ತು ದೊರೆಯುವಷ್ಟು ಧಾನ್ಯಗಳ ದಾಸ್ತಾನನ್ನು ಹಂಚುವ ವಿಷಯದಲ್ಲಿ ಅತ್ಯಂತ ಜಾಗರೂಕತೆಯಿಂದ ಕಟ್ಟುನಿಟ್ಟಾಗಿ ವರ್ತಿಸುವುದೂ ಅತ್ಯಗತ್ಯವಾಗಿದೆ. ಈ ಅಂಶವನ್ನೇ ದೃಷ್ಟಿಯಲ್ಲಿಟ್ಟುಕೊಂಡು, ಕ್ಲಪ್ತ ಪರಿಮಾಣಗಳಲ್ಲಿ ಆಹಾರ ಧಾನ್ಯಗಳನ್ನು ಸರಬರಾಯಿ ಮಾಡುವ 'ರೇಷನ್" ಪದ್ಧತಿಯನ್ನು ಈಗಾಗಲೇ ಜಾರಿಗೆ ತಂದಿರುವ ಸಿಟಿಗಳಲ್ಲಿಯೂ ಮತ್ತು ಪಟ್ಟಣಗಳಲ್ಲಿಯೂ ಅದನ್ನು ಮುಂದುವರಿಸಿಕೊಂಡು ಬರಬೇಕೆಂದೂ ಇದ್ದೇವೆ. ಅಲ್ಲದೆ ಇತರ ದೊಡ್ಡ ಪಟ್ಟಣಗಳಲ್ಲಿಯೂ ಸಹ ಅದನ್ನು ಜಾರಿಗೆ ತರಬೇಕೆಂದು ಉದ್ದೇಶಿಸಿಯೂ ಇದ್ದೇವೆ.

ಈ ಸಂಬಂಧದಲ್ಲಿ ಒಂದು ಅಂಶವನ್ನು ಗಮನಿಸುವುದು ಯುಕ್ತವಾಗಿದೆ. ಮೈಸೂರು ಸಂಸ್ಥಾನದಲ್ಲಿ ಅಕ್ಕಿಯ (ಮತ್ತು ರಾಗಿ, ಜೋಳ ಮುಂತಾದ ಇತರ ಧಾನ್ಯಗಳ) ಮಾರಾಟದ ಧಾರಣೆಯು, ಪ್ರಾಯಶಃ ಮದರಾಸು ಪ್ರಾಂತದಲ್ಲಿಯೂ ಮತ್ತು ಇತರ ಒಂದೆರಡು ಪ್ರಾಂತಗಳಲ್ಲಿಯೂ ಹೆಚ್ಚಾಗಿ ಧಾನ್ಯ ಬೆಳೆಯುತಕ್ಕ ಕೆಲವು ಪ್ರದೇಶಗಳನ್ನು ಬಿಟ್ಟರೆ, ಭರತಖಂಡದ ಇತರ ಭಾಗಗಳಲ್ಲಿ ಮತ್ತೆಲ್ಲಿಯೂ ಇಲ್ಲದಷ್ಟು ಕಡಮೆಯಾಗಿದೆಯೆಂದು ಹೇಳಬಹುದು. ಆಹಾರ ಧಾನ್ಯಗಳನ್ನು ತಮಗೆ ಬೀಳುವ ಅಸಲು ಬೆಲೆಗೆ ಮಾರುವ ಕಾರ್ಯನೀತಿಯನ್ನು ಸರ್ಕಾರದವರು ಮೊದಲಿನಿಂದಲೂ ಒಂದೇ ಸಮನಾಗಿ ಅನುಸರಿಸಿಕೊಂಡು ಬಂದಿದ್ದಾರೆ. ಅಷ್ಟೇ ಅಲ್ಲ ಗೋಧಿಯ ವಿಷಯದಲ್ಲಿಯೂ ಮತ್ತು ಸಂಸ್ಥಾನದ ಹೊರಗಡೆಯಿಂದ ತರಿಸತಕ್ಕ ಅಕ್ಕಿಗಳ ವಿಷಯದಲ್ಲಿಯೂ ಅವುಗಳ ಅಸಲು ಬೆಲೆಗಿಂತಲೂ ಕಡಮೆ ಬೆಲೆಗೆ ಮಾರುವ ಕಾರ್ಯನೀತಿಯನ್ನೂ ಸರ್ಕಾರದವರು ಏಕಪ್ರಕಾರವಾಗಿ ಅನುಸರಿಸಿಕೊಂಡು ಬಂದಿದ್ದಾರೆ. ಹೀಗೆ ಆಹಾರ ಧಾನ್ಯಗಳನ್ನು ಅವುಗಳ ಅಸಲು ಬೆಲೆಗಿಂತಲೂ ಕಡಮೆ ಬೆಲೆಗೆ ಮಾರಾಟ ಮಾಡಿದುದರ ದೆಸೆಯಿಂದ ಚಾಲ್ತಿ ವರ್ಷದಲ್ಲಿ ಸರ್ಕಾರದವರಿಗೆ ಸುಮಾರು 25 ಲಕ್ಷ ರೂಪಾಯಿಗಳ ವೆಚ್ಚವು ತಗಲಿರುತ್ತದೆ. ಆಹಾರ ಸರಬರಾಯಿಗೆ ಸಂಬಂಧಪಟ್ಟ ಕಾರ್ಯಗಳಿಗಾಗಿ ನೇಮಕವಾಗಿರತಕ್ಕ ಸಿಬ್ಬಂದಿಗಳ ವೆಚ್ಚವು ಇದರಲ್ಲಿ ಸೇರಿಲ್ಲ. ಸರ್ಕಾರದವರಿಗೆ ಆ ವೆಚ್ಚ ಬೇರೆ ತಗಲಿದೆ. ಮುಂದಿನ ವರ್ಷದಲ್ಲಿ ಸಹ, ಎಂದರೆ 1945-46ನೆಯ ಸಾಲಿನಲ್ಲಿ ಸಹ, ಸರ್ಕಾರದವರು ಇದೇ ಕಾರ್ಯನೀತಿಯನ್ನೇ ಅನುಸರಿಸಬೇಕೆಂದು ಉದ್ದೇಶಿಸಿರುತ್ತಾರೆ. ಇದಕ್ಕಾಗಿ ಮುಂದಿನ ವರ್ಷದ ಬಡ್ಜೆಟ್ಟಿನಲ್ಲಿ 25 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ.

ಕಳೆದ ದಸರಾ ಅಧಿವೇಶನದಲ್ಲಿ ಈ ಸಭೆಯಲ್ಲಿ ನಾನು ಮಾಡಿದ ಭಾಷಣದಲ್ಲಿ ಸೂಚಿತವಾಗಿದ್ದಂತೆ, ಬೆಲ್ಲ, ಹುಣಸೆಹಣ್ಣು, ಆಲೂಗೆಡ್ಡೆ, ಕಡಲೆಕಾಯಿ ಮತ್ತು ಎಳ್ಳು—ಇವೇ ಮುಂತಾದ ಕೆಲವು ಆಹಾರ ಪದಾರ್ಥಗಳ ಮೇಲೆ ವಿಧಾಯಕವಾಗಿದ್ದ ಹತೋಟಿಯನ್ನು ಕಡಮೆ ಮಾಡಿ ಆ ಪದಾರ್ಥಗಳ ಸಂಬಂಧದಲ್ಲಿ ಸಂಸ್ಥಾನದ ಬಳಕೆಗೆ ಸಾಕಾಗಿ ಉಳಿಯುವ ಪರಿಮಾಣಗಳನ್ನು ಸಂಸ್ಥಾನದಿಂದ ಹೊರಕ್ಕೆ ಕಳುಹಿಸಿಕೊಡುವುದಕ್ಕೆ ಅವಕಾಶ ದೊರೆಯುವಂತೆ ಮಾಡಲಾಯಿತು.

ವಿದ್ಯುಚ್ಛಕ್ತಿಯ ಉತ್ಪತ್ತಿಯನ್ನು ಹೆಚ್ಚಿಸುವ ಕೆಲಸ

ಜೋಗದಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡುವ ಯೋಜನೆಗೆ ಸಂಬಂಧಪಟ್ಟ ಕಾಮಗಾರಿಗಳು ಬಹಳ ಸಮರ್ಪಕವಾಗಿ ಮುಂದುವರಿದಿವೆ. ಇಂತಹ ದೊಡ್ಡ ಯೋಜನೆಗಳನ್ನು ನಡೆಯಿಸುವಾಗ ಸಂಭವಿಸಬಹುದಾದ ತೊಂದರೆಗಳೂ ಮತ್ತು ಅಡ್ಡಿ ಆತಂಕಗಳೂ ಇದ್ದೇ ಇರುತ್ತವೆ, ಹಾಗಿದ್ದೂ ಕೂಡ, ಈ ಕಾಮಗಾರಿಗಳು ಬಹಳ ಸಮರ್ಪಕವಾಗಿ ಮುಂದುವರಿದಿವೆ. ಈ ಯೋಜನೆಯ ಸಂಬಂಧದಲ್ಲಿ ಸಿವಿಲ್ ಕಾಮಗಾರಿಗಳಿಗಾಗಿ ತಿದ್ದುಪಡಿ ಅಂದಾಜಿನಲ್ಲಿ ಒದಗಿಸಿದ್ದ ಮೊಬಲಗು 264 ಲಕ್ಷ ರೂಪಾಯಿಗಳು. ಈ ಕಾಮಗಾರಿಗಳಿಗೆ ಈವರೆಗೆ ಅದರಲ್ಲಿ 179 ಲಕ್ಷ ರೂಪಾಯಿಗಳು ವೆಚ್ಚವಾಗಿವೆ. ಕಾರ್ಗಲ್ ಅಣೆಕಟ್ಟು, ಟರ್ಬೈನ್ ಯಂತ್ರಗಳಿಗೆ ಬಿಡುವ ನೀರು ಒಂದೇ ಮಟ್ಟದಲ್ಲಿ ಸದಾ ಇರುವಂತೆ ಮಾಡುವ ಮತ್ತು ನೀರಿನಲ್ಲಿರುವ ಕಸ ಕಡ್ಡಿ ಮುಂತಾದುವನ್ನು ತಡೆದು ಹೊರಗಿಡುವ ಯಂತ್ರಸಾಧನಗಳಿಂದ ಕೂಡಿದ "ಫೋರಬೇ" ಜಲಸಂಗ್ರಹ ಸಾಧನ, ಮತ್ತು ಸಾಮಾನುಗಳನ್ನು ಸಾಗಿಸುವ "ಟ್ರಾಲಿ" ಮಾರ್ಗಗಳು—ಇವುಗಳ ಕೆಲಸಗಳು ಪೂರೈಸಿಯಾಗಿವೆ, ಅಲ್ಲದೆ, ಮುಖ್ಯವಾದ ಶರಾವತಿ ಅಣೆಕಟ್ಟೆಯನ್ನು ('ಮೇಯ್ನ್ ಡ್ಯಾಮ್') ನಿರ್ಮಿಸುವ ಕಾಮಗಾರಿಗಳೂ, ವಿದ್ಯುಚ್ಛಕ್ತಿ ಉತ್ಪತ್ತಿಯ ಯಂತ್ರಶಾಲೆಗೆ ನೀರನ್ನು ಹರಿಸುವ ನಾಲೆಯ ಕಾಮಗಾರಿಯೂ 'ಟರ್ಬೈನ್' ಯಂತ್ರಗಳಿಗೆ ರಭಸದಿಂದ ನೀರನ್ನು ಬಿಡುವ ಉಕ್ಕಿನ "ಪೆನ್‌ಸ್ಟಾಕ್ಸ್" ಕೊಳಾಯಿಗಳ ಸ್ಥಾಪನೆಯ ಕಾಮಗಾರಿಯೂ, ತೃಪ್ತಿಕರವಾಗಿ ಮುಂದುವರಿಯುತ್ತಿವೆ. ಈ ಯೋಜನೆಗೆ ಬೇಕಾದ ಯಂತ್ರಗಳಲ್ಲಿ ಕೆಲವು ಯಂತ್ರಗಳು ಬಂದಿವೆ, ಮತ್ತು ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡುವ 'ಜನರೇಟಿಂಗ್ ಸ್ಟೇಷನ್' ಯಂತ್ರಶಾಲೆಯ ಕಟ್ಟಡವು ಪೂರೈಸಿದ ಕೂಡಲೆ ಈಗ ಬಂದಿರುವ ಯಂತ್ರಗಳನ್ನು ಜೋಡಿಸುವ ಕೆಲಸವು ಪ್ರಾರಂಭವಾಗುತ್ತದೆ.

ಪ್ರಾರಂಭದಲ್ಲಿ ಜೋಗದ ಯಂತ್ರಶಾಲೆಯಲ್ಲಿ ವಿದ್ಯುಚ್ಛಕ್ತಿಯ ಉತ್ಪತ್ತಿಯ ಪ್ರಮಾಣವು 49,000 ಕಿಲೋವ್ಯಾಟ್‌ಗಳೆಂದು ಗೊತ್ತುಮಾಡಲಾಗಿದೆ. ಆದರೆ, ಪರಿಣಾಮದಲ್ಲಿ ವಿದ್ಯುಚ್ಛಕ್ತಿಯ ಉತ್ಪತ್ತಿಯ ಸಾಮರ್ಥ್ಯವನ್ನು 1,20,000 ಕಿಲೋವ್ಯಾಟ್ ಪ್ರಮಾಣದವರೆಗೆ ಹೆಚ್ಚಿಸುವುದಕ್ಕೆ ತಕ್ಕಷ್ಟು "ಜನರೇಟರ್" ಯಂತ್ರಗಳನ್ನೂ ಮತ್ತು "ಪೆನ್‌ಸ್ಟಾಕ್" ಕೊಳಾಯಿಗಳನ್ನೂ ಸ್ಥಾಪಿಸುವುದಕ್ಕೆ ಏರ್ಪಾಡುಮಾಡಲಾಗಿದೆ. ಇಲ್ಲಿ ಉತ್ಪತ್ತಿಯಾಗುವ ಎಲ್ಲ ವಿದ್ಯುಚ್ಛಕ್ತಿಯನ್ನೂ ಲಾಭದಾಯಕವಾಗಿ ವಿನಿಯೋಗಿಸಬೇಕಾದರೆ, ವಿದ್ಯುಚ್ಛಕ್ತಿಯನ್ನು ಸಾಗಿಸುವ ('ಟ್ರಾನ್ಸ್‌ಮಿಷನ್') ಏರ್ಪಾಡುಗಳನ್ನು ಪುನರ್ವ್ಯವಸ್ಥೆಗೊಳಿಸಿ ಬಡಾವಣೆಗೊಳಿಸುವುದೂ ಮತ್ತು ವಿದ್ಯುಚ್ಛಕ್ತಿಯನ್ನು ನಾನಾ ಕಡೆಗೆ ಸಾಗಿಸುವುದಕ್ಕೆ ಅಲ್ಲಲ್ಲಿ ಅನೇಕ ಹೊಸ ಯಂತ್ರಾಲಯಗಳನ್ನು (ಎಂದರೆ, "ಡಿಸ್ಟ್ರಿಬ್ಯೂಷನ್" ಸ್ಟೇಷನ್ನುಗಳನ್ನು) ಸ್ಥಾಪಿಸುವುದೂ ಅವಶ್ಯಕವಾಗುತ್ತದೆ. ಈ ಬಡಾವಣೆ ಕೆಲಸಗಳಿಗೆ ಸುಮಾರು 5 ಕೋಟಿ ರೂಪಾಯಿಗಳು ವೆಚ್ಚವಾಗುತ್ತವೆ, ಮತ್ತು ಈ ಹಣವನ್ನು ಕೆಲವು ವರ್ಷಗಳ ಅವಧಿಗೆ ಹಂಚಿಹಾಕಿ ವರ್ಷವರ್ಷವೂ ಬಡಾವಣೆ ಕಾಮಗಾರಿಗಳನ್ನು ಕ್ರಮಕ್ರಮವಾಗಿ ಮುಂದುವರಿಸಿಕೊಂಡು ಹೋಗಬೇಕಾಗುತ್ತದೆ. ಹೀಗೆ ಸಂಸ್ಥಾನದಲ್ಲಿ ಕೈಕೊಂಡಿರುವ ವಿದ್ಯುಚ್ಛಕ್ತಿಯ ಉತ್ಪತ್ತಿಯ ಕಾಮಗಾರಿಗಳಿಗಾಗಿ ವಿನಿಯೋಗಿಸತಕ್ಕ ಬಂಡವಾಳದ ಒಟ್ಟು ಮೊಬಲಗು ಹದಿನಾರುಕೋಟಿ ರೂಪಾಯಿಗಳಾಗುತ್ತವೆ. ಹೊಸ ಯೋಜನೆಗಳಿಗೆ ವೆಚ್ಚವಾಗುವ ಹಣವನ್ನು ಐದು ವರ್ಷಗಳ ಅವಧಿಗೆ ಹಂಚಿಹಾಕಿ ಕೆಲಸ ನಡೆಯಿಸಿದರೂ ಕೂಡ, ಆ ಅವಧಿಯಲ್ಲಿ ಪ್ರತಿ ವರ್ಷವೂ ವೆಚ್ಚವಾಗಬೇಕಾದ ಮೊತ್ತವು ಬಹಳ ಭಾರಿಯಾಗಿರುವಂತೆಯೇ ತೋರಬಹುದು. ಈ ಯೋಜನೆಗಳಿಂದ ಒಟ್ಟು ಬಂಡವಾಳದ ಮೇಲೆ ಬರತಕ್ಕ ಪ್ರತಿಫಲದ ಸೇಕಡಾವಾರೂ ಕೂಡ, ಈಗಿನಷ್ಟು ಬರದೆ ಸ್ವಲ್ಪಕಾಲದವರೆಗೂ, ಕಡಿಮೆಯಾಗಿಯೇ ಇರಬಹುದು. ಆದರೆ, ಈ ವೆಚ್ಚವು ಇಂದಲ್ಲ ನಾಳೆ ಕೈಕೊಳ್ಳಲೇಬೇಕಾದ ವೆಚ್ಚ. ವಿದ್ಯುಚ್ಛಕ್ತಿಯ ಸಂಬಂಧವಾದ ಯೋಜನೆಗಳ ವಿಷಯಕವಾದ ಅನೇಕ ಸಂದರ್ಭಗಳಲ್ಲಿ, ಮುನ್ನಡೆಯಿಂದ ಮುಂದುವರಿದು ವಿದ್ಯುಚ್ಛಕ್ತಿಗೆ ಆವಶ್ಯಕತೆ ಒದಗುವುದಕ್ಕೆ ಮೊದಲೇ ನಿರೀಕ್ಷಿಸಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡಿ ಸಿದ್ಧಪಡಿಸಿಟ್ಟುಕೊಂಡಿರುವುದೇ, ಆವಶ್ಯಕತೆ ಬಂದಮೇಲೆ ವಿದ್ಯುಚ್ಛಕ್ತಿಯ ಉತ್ಪತ್ತಿಗೆ ನಿಧಾನವಾಗಿ ಏರ್ಪಾಡುಮಾಡುವ ಪ್ರಯತ್ನ ಮಾಡುವುದಕ್ಕಿಂತಲೂ ಹೆಚ್ಚಿನ ವಿವೇಕವೇ ಸರಿ. "ಟೆನೆಸ್ಸೀ ವ್ಯಾಲಿ ಅಥಾರಿಟಿ" ವ್ಯವಸ್ಥೆಯ ಅಧ್ಯಕ್ಷರು ಹೇಳಿರುವುದನ್ನು ಇಲ್ಲಿ ಸೂಚಿಸಬಹುದಾಗಿದೆ, ಅವರು ಹೇಳಿರುವುದೇನೆಂದರೆ "ಒಂದು ಜನಾಂಗದವರು ತಮ್ಮ ಸಾಧನ ಸಂಪತ್ತುಗಳನ್ನು ಉಪಯೋಗಿಸಿಕೊಂಡು ಲಾಭ ಹೊಂದುವ ಸಾಮರ್ಥ್ಯವನ್ನು ಎಷ್ಟುಮಟ್ಟಿಗೆ ಪಡೆದಿದ್ದಾರೆಂಬುದನ್ನು ಈಗಿನ ಕಾಲದಲ್ಲಿ ನಿಷ್ಕರ್ಷೆ ಮಾಡುವ ಸಾಧನವೆಂದರೆ, ಅವರಿಗೆ ದೊರೆಯುವುದಾಗಿರುವ ವಿದ್ಯುಚ್ಛಕ್ತಿಯ ಪರಿಮಾಣವೇ ಆಗಿರುತ್ತದೆ. ಈಗಿನ ಕಾಲದಲ್ಲಿ, ಒಂದು ಜನಾಂಗದವರ ವಸ್ತು ತಯಾರಿಯ ಸಾಮರ್ಥ್ಯವೆಷ್ಟು, ಅವರಲ್ಲಿ ಹೊಸಹೊಸ ಕೈಗಾರಿಕೆಗಳು ಏರ್ಪಟ್ಟು ವೃದ್ಧಿಯಾಗುವ ಅವಕಾಶವೆಷ್ಟುಮಟ್ಟಿಗಿದೆ, ಮುಂದೆ ದೇಶಾಭ್ಯುದಯದ ಕಾರ್ಯಗಳು ನಡೆಯುವ ವಿಚಾರದಲ್ಲಿ ಅವರ ಶಕ್ತಿಸಾಮರ್ಥ್ಯಗಳೆಷ್ಟುಮಟ್ಟಿಗೆ ಪರಿಸ್ಫುಟವಾಗುವ ಸಂಭವವಿದೆ—ಎಂಬೀ ಸಂಗತಿಗಳನ್ನು ಖಚಿತವಾಗಿ ನಿರ್ಧರಿಸುವ ಒಂದೇ ಒಂದು ಅತ್ಯುತ್ತಮ ಸಾಧನವೆಂದರೆ, ಅದು ಅವರಿಗೆ ಒದಗತಕ್ಕ ವಿದ್ಯುಚ್ಛಕ್ತಿಯ ಪರಿಮಾಣವೇ ಸರಿ. ಈಗಿನ ವಿದ್ಯುಚ್ಛಕ್ತಿ ಯುಗದಲ್ಲಿ, ಮನುಷ್ಯನ ದುಡಿಮೆಗಿಂತಲೂ ಅನೇಕ ಮಡಿಯಾಗಿ ವಿದ್ಯುಚ್ಛಕ್ತಿಯ ಸಹಾಯದಿಂದ ಕೆಲಸ ನಡೆಯುವುದು ಸಾಧ್ಯವಿದೆ."

ಕೈಗಾರಿಕೆಗಳು

ಮೈಸೂರು ಸಂಸ್ಥಾನದ ಭೂಗರ್ಭ ಶೋಧನೆಯ ಇಲಾಖೆಯು 1894 ನೆಯ ಇಸವಿಯಲ್ಲಿ ಏರ್ಪಟ್ಟಿತು. ಆಗಿನಿಂದ ಇಲ್ಲಿಯವರೆಗೆ ಸುಮಾರು ಅರ್ಧ ಶತಮಾನದಷ್ಟು ಕಾಲ ಕೆಲಸಮಾಡಿ ಸಂಸ್ಥಾನದ ಖನಿಜ ಸಂಪತ್ತಿನ ವಿಚಾರದಲ್ಲಿ ಆ ಇಲಾಖೆಯವರು ಯಥೇಷ್ಟವಾಗಿ ಅನೇಕ ಉಪಯುಕ್ತ ಸಂಗತಿಗಳನ್ನು ಸಂಗ್ರಹಿಸಿಟ್ಟಿದ್ದಾರೆ. ಆದರೆ ಅವುಗಳನ್ನು ಕಾರ್ಯಮುಖದಲ್ಲಿ ನಿಯೋಜಿಸಿ ಪ್ರಯೋಜನ ಪಡೆಯುವ ವಿಚಾರದಲ್ಲಿ ಅಲ್ಲೊಂದು ಇಲ್ಲೊಂದು ಎಂಬಂತೆ ತೀರ ಅಲ್ಪ ಸಂಖ್ಯೆಯ ಕೆಲವರು ಪ್ರವರ್ತಿಸಿರುವುದು ಹೊರತು, ಒಟ್ಟಿನ ಮೇಲೆ ಸಾರ್ವಜನಿಕರು ಅಷ್ಟೇನೂ ಹೆಚ್ಚಿನ ಆಸಕ್ತಿಯನ್ನೇ ತೋರಿಸಿಲ್ಲ. ಈ ಕಾರಣದಿಂದ, ಕೂಲಂಕಷವಾದ ಖನಿಜ ಶೋಧನೆಯ ಕೆಲಸಗಳನ್ನು ಅನೇಕ ಸಂದರ್ಭಗಳಲ್ಲಿ ಇಲಾಖೆಯವರೇ ಕೈಕೊಳ್ಳಬೇಕಾಯಿತು, ಅಷ್ಟೇ ಅಲ್ಲ, ಗಣಿಯ ಕೆಲಸಗಳನ್ನು ಕೂಡ ಅನೇಕ ಸಂದರ್ಭಗಳಲ್ಲಿ ಇಲಾಖೆಯವರೇ ಕೈಕೊಳ್ಳಬೇಕಾಯಿತು. ಈ ಕೆಲಸಗಳನ್ನು ಕೈಕೊಂಡು ನಿರ್ವಹಿಸಲು ಇಲಾಖೆಯವರಿಗೆ ಹೆಚ್ಚಿನ ಸೌಕರ್ಯಗಳನ್ನು ಉಂಟುಮಾಡಿಕೊಡುವ ಉದ್ದೇಶದಿಂದ ಇಲಾಖೆಯನ್ನು ಪುನರ್ವ್ಯವಸ್ಥೆಗೊಳಿಸಲಾಗಿದೆ, ಮತ್ತು ಇಲಾಖೆಯ ಕೆಲಸಗಳಿಗಾಗಿ ಸಂಸ್ಥಾನದಲ್ಲಿ ಮೂರು ಡಿವಿಜನ್ನುಗಳನ್ನು ಸ್ಥಾಪಿಸುವ ಯೋಜನೆ ನಡೆದಿದೆ, ಪ್ರತಿಯೊಂದು ಡಿವಿಜನನ್ನೂ ಒಬ್ಬೊಬ್ಬರು ಸೀನಿಯರ್ ಆಫೀಸರ ಕೈಕೆಳಗೆ ಇಡಲಾಗುತ್ತದೆ. ಪ್ರತಿಯೊಬ್ಬರು ಸೀನಿಯರ್ ಆಫೀಸರೂ ಇಲಾಖೆಯ ಡೈರೆಕ್ಟರವರ ಸಲಹೆಯ ಮೇರೆಗೆ ತಮ್ಮ ತಮ್ಮ ಡಿವಿಜನ್ನಿಗೆ ಸಂಬಂಧಪಟ್ಟ ಖನಿಜ ಪರಿಶೀಲನೆಯ ಕೆಲಸವನ್ನು ಅವಿಚ್ಛಿನ್ನವಾಗಿಯೂ ಮತ್ತು ಕೂಲಂಕಷವಾಗಿಯೂ ನೋಡಿಕೊಳ್ಳುವುದಕ್ಕೆ ಇದರಿಂದ ಅನುಕೂಲವಾಗುತ್ತದೆ.

ಬಾಗೇಶಪುರದ ಬಳಿಯಲ್ಲಿ "ಕೇವಲಿನ್" ಬಿಳಿಯ ಮಣ್ಣನ್ನು ಅಗೆದು ತೆಗೆಯುವ ಮತ್ತು ಅದನ್ನು ಪುಡಿಮಾಡಿ ಶುದ್ಧೀಕರಿಸಿ ಸಿದ್ಧಪಡಿಸುವ ಕೆಲಸವು ತಕ್ಕಮಟ್ಟಿಗೆ ಹೆಚ್ಚಿನ ಪ್ರಮಾಣದಲ್ಲಿ ನಡೆಯುತ್ತಿದೆ. ತುಮಕೂರು ಡಿಸ್ಟ್ರಿಕ್ಟು ಬೆಳ್ಳಾರದ ಬಳಿ ಚಿನ್ನವು ದೊರೆಯುವ ಪ್ರದೇಶದಲ್ಲಿ ಭೂಮಿಯನ್ನು ಅಗೆದು ಪರಿಶೀಲನೆಮಾಡುವ ಅನ್ವೇಷಣ ಕಾರ್ಯಗಳು ನಡೆಯುತ್ತಿವೆ. ಅಲ್ಲಿ ಹಿಂದೆ ಕೆಲಸ ನಡೆಯುತ್ತಿದ್ದ ಚಿನ್ನದ ಗಣಿ ಪ್ರದೇಶಗಳನ್ನು ಮತ್ತೆ ತೋಡಿ ಚಿನ್ನದ ಅದುರನ್ನು ಪರೀಕ್ಷಿಸುವ ಕೆಲಸವನ್ನು ಕೈಕೊಳ್ಳಲಾಗಿದೆ. ಹೊಳೆನರಸೀಪುರದ ಬಳಿಯಲ್ಲಿ ಕಲ್ನಾರು ದೊರೆಯುತ್ತಿರುವುದು ಸರಿಯಷ್ಟೆ. ಅಲ್ಲಿ ದೊರೆಯುವ ಕಲ್ನಾರು ಯಾವ ಬಗೆಯದೆಂಬುದನ್ನೂ, ಸಿಮೆಂಟಿನೊಡನೆ ಅದನ್ನು ಸೇರಿಸಿ ನಾನಾ ಸಾಮಾನುಗಳನ್ನು ತಯಾರಿಸುವುದಕ್ಕೆ ಬೇಕಾದ ಗುಣವು ಅದರಲ್ಲುಂಟೆ–ಎಂಬುದನ್ನೂ, ನಿರ್ಧರಿಸಲು ಮತ್ತಷ್ಟು ಪರಿಶೀಲನ ಕಾರ್ಯಗಳನ್ನು ನಡೆಯಿಸಲಾಗುವುದು.

ತುಕ್ಕು ಹಿಡಿಯದ ಉಕ್ಕನ್ನು ತಯಾರಿಸುವುದರ ಸಾಧಕ ಬಾಧಕಗಳನ್ನು ಪರಿಶೀಲಿಸಲಾಗುತ್ತಿದೆ. ಶೀಘ್ರದಲ್ಲಿಯೇ ರೇಡಿಯೋ ಧ್ವನಿ ಗ್ರಾಹಕ ಉಪಕರಣಗಳನ್ನು (ರಿಸೀವಿಂಗ್ ಸೆಟ್ಟು)ಗಳನ್ನು ತಯಾರಿಸುವ ಕೆಲಸವನ್ನು ಪ್ರಾರಂಭಿಸುವ ಭರವಸೆ ಇದೆ. ಸಂಸ್ಥಾನದಲ್ಲಿ ಕ್ಷಾರ ವಸ್ತುಗಳನ್ನು ತಯಾರಿಸುವ ("ಆಲ್ಕಲಿ") ಕೈಗಾರಿಕೆಯನ್ನು ಪ್ರಾರಂಭಿಸಲು ಸೌಕರ್ಯಗಳನ್ನೊದಗಿಸಿಕೊಡಬೇಕೆಂದು ಇಷ್ಟರಲ್ಲೇ ಏರ್ಪಡುವುದಾಗಿರುವ ಒಂದು ಕಂಪೆನಿಯ ಪರವಾಗಿ ಮನವಿಯು ಬಂದಿದೆ.

ಭದ್ರಾವತಿ ಕಬ್ಬಿಣದ ಮತ್ತು ಉಕ್ಕಿನ ಕಾರ್ಖಾನೆಯಲ್ಲಿ ರೇಲು ಪಟ್ಟಿಗಳನ್ನೂ ಮತ್ತು ಸರಳುಗಳನ್ನೂ ತಯಾರಿಸುವ ಯಂತ್ರಗಳ ಜೋಡಣೆಯು ಪೂರೈಸಿದೆ. ಸುಮಾರು 2½ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಉಕ್ಕಿನ ಎರಕ ಶಾಲೆಯನ್ನು ಬಡಾವಣೆಗೊಳಿಸುವ ಕೆಲಸಗಳು ನಡೆಯುತ್ತಿವೆ. ಭದ್ರಾವತಿಯಲ್ಲಿ ಬೀಡು ಕಬ್ಬಿಣದ ತಯಾರಿಗಾಗಿ ವಿದ್ಯುಚ್ಛಕ್ತಿಯಿಂದ ಕೆಲಸಮಾಡುವ ಕುಲುಮೆ ಯಂತ್ರವನ್ನು ಸ್ಥಾಪಿಸುವ ವಿಚಾರಕ್ಕೆ ವಿಶೇಷ ರೀತಿಯಲ್ಲಿ ಗಮನಕೊಡುತ್ತಿದ್ದಾರೆ, ಮತ್ತು ಇದಕ್ಕಾಗಿ ಮುಂದಿನ ಸಾಲಿನ ಬಡ್ಜೆಟ್ಟಿನಲ್ಲಿ 4 ಲಕ್ಷ ರೂಪಾಯಿಗಳ ಗ್ರಾಂಟನ್ನು ಸದ್ಯಕ್ಕೆ ಒದಗಿಸಲಾಗಿದೆ. ಸಿಮೆಂಟು ತಯಾರಿಯ ಯಂತ್ರವನ್ನು ಬಡಾವಣೆಗೊಳಿಸುವುದಕ್ಕೂ ಮತ್ತು ಅದುರನ್ನು ಸಾಗಿಸುವ "ಟ್ರಾಂವೇ" ದಾರಿಗಳನ್ನೂ ಮತ್ತು "ರೋಪ್‌ವೇ" ಸಾಧನವನ್ನೂ ಒದಗಿಸುವುದಕ್ಕೂ ಸಹ, ಪ್ರಾರಂಭದ "ಸರ್ವೇ" ಕೆಲಸಗಳು ನಡೆಯುತ್ತಿವೆ. ಹತ್ಯಾರುಗಳನ್ನು ತಯಾರಿಸುವುದಕ್ಕಾಗಿ ಹಾಸನದಲ್ಲಿ ಏರ್ಪಟ್ಟಿರುವ ಸರ್ಕಾರಿ ಕಾರ್ಖಾನೆಯಲ್ಲಿ ಹೆಚ್ಚಿನ ಯಂತ್ರೋಪಕರಣಗಳನ್ನು ತರಿಸಿ ಜೋಡಣೆಗೊಳಿಸುವುದಕ್ಕಾಗಿ, 1 ಲಕ್ಷ ರೂಪಾಯಿಗಳ ಬಂಡವಾಳದ ಗ್ರಾಂಟನ್ನೂ ಸಹ, ಮಂಜೂರುಮಾಡಲಾಗಿದೆ. ಬೆಳಗೊಳದಲ್ಲಿರುವ "ಮೈಸೂರ್ ಕೆಮಿಕಲ್ಸ್ ಅಂಡ್ ಫರ್ಟಿಲೈಜರ್ಸ್ ಲಿಮಿಟೆಡ್" ಎಂಬ ರಾಸಾಯನಿಕ ಗೊಬ್ಬರ ತಯಾರಿಕೆಯ ಕಾರ್ಖಾನೆಯಲ್ಲಿ "ಅಮೋನಿಯಾ" ತಯಾರಿಯನ್ನು ಹೆಚ್ಚಿಸುವುದಕ್ಕಾಗಿ 11 ಲಕ್ಷ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ಮತ್ತೊಂದು ತಂಡದ ಯಂತ್ರೋಪಕರಣವನ್ನು ಸ್ಥಾಪಿಸಬೇಕೆಂದು ಉದ್ದೇಶಿಸಲಾಗಿದೆ. ಮೈಸೂರು ಸಂಸ್ಥಾನದ ಕಾಫಿ ಹದಮಾಡುವ ಕಾರ್ಖಾನೆಯಲ್ಲಿ ಗೊಬ್ಬರಕ್ಕಾಗಿ ಮೂಳೆ ಪುಡಿಯನ್ನು ತಯಾರಿಸುವ ಒಂದು ಯಂತ್ರೋಪಕರಣವನ್ನು ಸೇರಿಸಲಾಗಿದೆ.

ವಿದ್ಯಾಭ್ಯಾಸ

ಪ್ರಾಥಮಿಕ ವಿದ್ಯಾಭ್ಯಾಸ ಪ್ರಸಾರಣೆಯ ಸಂಬಂಧವಾಗಿ ನಾಲ್ಕು ವರ್ಷಗಳ ಅವಧಿಯಲ್ಲಿ ವರ್ಷವರ್ಷವೂ ಹೊಸದಾಗಿ ಪ್ರೈಮರಿ ಸ್ಕೂಲುಗಳನ್ನು ಏರ್ಪಡಿಸುತ್ತಾ ಬರುವ ಒಂದು ಕಾರ್ಯಕ್ರಮವನ್ನು 1941-42ನೆಯ ಸಾಲಿನಲ್ಲಿ ಮಂಜೂರುಮಾಡಿ ಪ್ರಾರಂಭಿಸಲಾಯಿತಷ್ಟೆ. ನಾವು ವಿಧಾಯಕಮಾಡಿದ್ದ ಕಾರ್ಯಕ್ರಮದ ಪ್ರಕಾರ ನಾಲ್ಕುವರ್ಷಗಳ ಅವಧಿಯಲ್ಲಿ 1,000 ಪ್ರೈಮರಿ ಸ್ಕೂಲುಗಳು ಹೊಸದಾಗಿ ಏರ್ಪಡಬೇಕೆಂದು ಗೊತ್ತುಮಾಡಿದ್ದೆವು. ಈ ನಾಲ್ಕು ವರ್ಷಗಳಲ್ಲಿ ವಾಸ್ತವಿಕವಾಗಿ 1,566 ಪ್ರೈಮರಿ ಸ್ಕೂಲುಗಳು ಹೊಸದಾಗಿ ಏರ್ಪಟ್ಟಿವೆ. ಮುಂದಿನ ಸಾಲಿನಲ್ಲಿ ಇನ್ನೂ 400 ಪ್ರೈಮರಿ ಸ್ಕೂಲುಗಳನ್ನು ಹೊಸದಾಗಿ ಏರ್ಪಡಿಸಬೇಕೆಂದು ಉದ್ದೇಶಿಸಲಾಗಿದೆ. ಹಿಂದಿನಿಂದಲೂ ಇದ್ದ ಪ್ರೈಮರಿ ಸ್ಕೂಲುಗಳಿಗಾಗಿಯೂ ಒಟ್ಟು 2,300 ಮಂದಿ ಹೆಚ್ಚಿಗೆ ಉಪಾಧ್ಯಾಯರುಗಳನ್ನು ಹೊಸದಾಗಿ ನೇಮಕಮಾಡಿ ಆ ಮೂಲಕ ಪ್ರೈಮರಿ ಸ್ಕೂಲುಗಳ ಉಪಾಧ್ಯಾಯ ಸಿಬ್ಬಂದಿಯನ್ನು ಹೆಚ್ಚಿಸಿ ಬಲಪಡಿಸಲಾಗಿದೆ. ಪ್ರೈಮರಿ ಸ್ಕೂಲುಗಳ ಸಂಖ್ಯೆಯನ್ನು ಹೆಚ್ಚಿಸಿ ಪ್ರೈಮರಿ ವಿದ್ಯಾಭ್ಯಾಸ ಪ್ರಸಾರಣೆಮಾಡಿದುದರ ಫಲಿತಾಂಶವಾಗಿ ಮಿಡ್ಲ್ ಸ್ಕೂಲುಗಳ ಸಂಖ್ಯೆಯನ್ನೂ ಗಣನೀಯವಾಗಿ ಹೆಚ್ಚಿಸ

ಬೇಕಾಯಿತು ಅಲ್ಲದೆ, ಇಂಗ್ಲಿಷ್ ಭಾಷೆಯನ್ನು ಕಲಿಸುವುದಕ್ಕಾಗಿ ಉಪಾಧ್ಯಾಯರುಗಳನ್ನು ನೇಮಕಮಾಡಿ 305 ಅಪ್ಪರ್ ಪ್ರೈಮರಿ ಸ್ಕೂಲುಗಳನ್ನು ಹೊಸ ಮಾದರಿಯ ಮಿಡ್ಲ್ ಸ್ಕೂಲುಗಳನ್ನಾಗಿ ಮಾರ್ಪಡಿಸಲಾಯಿತು 1941ನೆಯ ಸಾಲಿನ ಆಖೈರಾಯಿತು 10 ಹೈಸ್ಕೂಲುಗಳನ್ನು ಹೊಸದಾಗಿ ಏರ್ಪಡಿಸಲಾಗಿದೆ ಅವುಗಳ ಪೈಕಿ 4 ಹೈಸ್ಕೂಲುಗಳಲ್ಲಿ ಬಾಲಕಿಯರ ವ್ಯಾಸಂಗಕ್ಕಾಗಿ ಮಾತ್ರವೇ ಅವಕಾಶವನ್ನು ಕಲ್ಪಿಸಲಾಗಿದೆ

1943-44 ನೆಯ ಸಾಲಿನ ಆಯವ್ಯಯಗಳ ಲೆಕ್ಕ

ಇನ್ನು ಸಂಸ್ಥಾನದ ಆಯವ್ಯಯಗಳ ವಿಚಾರವಾಗಿ ಪ್ರಸ್ತಾಪಿಸಲಿಚ್ಛಿಸುತ್ತೇನೆ

1943-44ನೆಯ ಸಾಲಿನಲ್ಲಿ ಒಟ್ಟು 357 29 ಲಕ್ಷ ರೂಪಾಯಿಗಳು ಹುಟ್ಟುವಳಿಯಾದವು ಒಟ್ಟು 354 49 ಲಕ್ಷ ರೂಪಾಯಿಗಳು ವೆಚ್ಚವಾದುವು ವೆಚ್ಚಗಳು ಕಳೆದು 2 80 ಲಕ್ಷ ರೂಪಾಯಿಗಳು ಉಳಿತಾಯವು ಕಂಡುಬಂದಿತು

1944-45ನೆಯ ಸಾಲಿನ ತಿದ್ದುಪಡಿ ಅಂದಾಜುಗಳು

1943ನೆಯ ಇಸವಿಯಲ್ಲಿ ನಡೆದ ಬಜೆಟ್ ಅಧಿವೇಶನದಲ್ಲಿ 1944-45ನೆಯ ಸಾಲಿನ ಬಜೆಟ್ ಅಂದಾಜುಗಳನ್ನು ಸಭಿಕರಿಗೆ ಒಪ್ಪಿಸಿದಾಗ ಯುದ್ಧದ ದೆಸೆಯಿಂದ ಒದಗಿದ್ದ ಆಗಿನ ಅನಿಶ್ಚಿತ ಪರಿಸ್ಥಿತಿಗಳ ದೆಸೆಯಿಂದ ಆಯವ್ಯಯಗಳು ಇಷ್ಟೇ ಸರಿಯೆಂದು ಗೊತ್ತುಮಾಡುವುದು ಸಾಧ್ಯವಿರಲಿಲ್ಲವೆಂದೂ ಆದುದರಿಂದ ಕೆಲಕೆಲವು ಬಾಬುಗಳ ಆಯವ್ಯಯಗಳಲ್ಲಿ ಬಜೆಟ್ಟಿನ ಮೇರೆಗೆ ಅಂದಾಜು ಮಾಡಿದ್ದುದಕ್ಕಿಂತಲೂ ಭಾರಿ ಭಾರಿ ವ್ಯತ್ಯಾಸಗಳು ಕಂಡುಬಂದರೂ ಬರಬಹುದೆಂದೂ ಸೂಚಿಸಿದ್ದೆನಷ್ಟೆ. ಅನಂತರ ಭಾರಿ ಭಾರಿ ವ್ಯತ್ಯಾಸಗಳೇನೂ ಕಂಡುಬಂದಿವೆ, ಆದರೆ ಅವುಗಳಲ್ಲಿ ವ್ಯತ್ಯಾಸವಾದವುಗಳೆಲ್ಲ ನಮಗೆ ಅನುಕೂಲವಾಗಿವೆ ಬಜೆಟ್ ಅಂದಾಜಿನ ಮೇರೆಗೆ ಒಟ್ಟು 919 ಲಕ್ಷ ರೂಪಾಯಿಗಳು ಹುಟ್ಟುವಳಿಯು ಬರುವುದಾಗಿ ಅಂದಾಜು ಮಾಡಲಾಗಿದ್ದಿತು ಆದರೆ ತಿದ್ದುಪಡಿ ಅಂದಾಜಿನ ಪ್ರಕಾರ ಆ ಹುಟ್ಟುವಳಿಯು 848 66 ಲಕ್ಷ ರೂಪಾಯಿಗಳಾಗುವುದಾಗಿ ಕಂಡುಬಂದಿದೆ ಆಬ್ಕಾರಿ ಬಾಬಿನಲ್ಲಿ 45 58 ಲಕ್ಷ ರೂಪಾಯಿಗಳು ಹುಟ್ಟುವಳಿಯಾಗಬಹುದೆಂದು ಬಜೆಟ್ ಮೇರೆಗೆ ಅಂದಾಜು ಮಾಡಿದ್ದೆವು ಆದರೆ, ವಾಸ್ತವವಾಗಿ ನೋಡಿದರೆ, ಆ ಅಂದಾಜಿಗಿಂತಲೂ ಹೆಚ್ಚಾಗಿ 28 11 ಲಕ್ಷ ರೂಪಾಯಿಗಳು ಬರುವಂತೆ ತಿದ್ದುಪಡಿ ಅಂದಾಜಿನ ಮೇರೆಗೆ ಗೊತ್ತಾಗಿದೆ ಈ ಬಾಬಿನ ಹುಟ್ಟುವಳಿಯು ಹೀಗೆ ಹೆಚ್ಚುವುದಕ್ಕೆ, ಗಂಧದ ಎಣ್ಣೆಯ ಬೆಲೆಯು ಏರಿದುದೂ ಮತ್ತು ಅದು ಹೆಚ್ಚು ಹೆಚ್ಚಾಗಿ ಮಾರಾಟವಾದುದೂ, ಮತ್ತು ಇಲಾಖೆಯವರು, ಯುದ್ಧಸಂಬಂಧವಾಗಿ ಬೇಕಾದ ಕೆಲವು ವಸ್ತುಗಳನ್ನು ಸರಬರಾಯಿಮಾಡುವ ಜವಾಬ್ದಾರಿಯನ್ನು ವಹಿಸಿಕೊಂಡುದೂ ಕಾರಣಗಳಾಗಿವೆ ವರಮಾನದ ತೆರಿಗೆಯ ಬಾಬಿನಲ್ಲಿ ಹುಟ್ಟುವಳಿಯು 93 72 ಲಕ್ಷ ರೂಪಾಯಿಗಳೆಂದು ಬಜೆಟ್ಟು ಅಂದಾಜಿನಲ್ಲಿ ಅಂದಾಜು ಮಾಡಲಾಗಿದ್ದಿತು ಆದರೆ, ಆ ಅಂದಾಜಿಗಿಂತಲೂ 58 86 ಲಕ್ಷ ರೂಪಾಯಿಗಳಷ್ಟು ಹೆಚ್ಚಾಗಿ ಹುಟ್ಟುವಳಿ ಬರುವಂತೆ ತಿದ್ದುಪಡಿ ಅಂದಾಜಿನ ಮೇರೆಗೆ ಗೊತ್ತಾಗಿದೆ ಒಟ್ಟಿನಲ್ಲಿ ಮತ್ತು ಇತರ ಕೈಗಾರಿಕೆ ಉದ್ಯಮಗಳು ಬಹು ಚೆನ್ನಾಗಿ ನಡೆದು ಹೆಚ್ಚು ಹೆಚ್ಚಾಗಿ ಲಾಭಗಳನ್ನು ಸಂಪಾದಿಸಿದುದೇ ಈ ಬಾಬಿನಲ್ಲಿ ಇಷ್ಟು ಹೆಚ್ಚಾಗಿ ಹುಟ್ಟುವಳಿ ಬಂದಿರುವುದಕ್ಕೆ ಕಾರಣ ಬಜೆಟ್ ಅಂದಾಜಿನ ಪ್ರಕಾರ ರೈಲ್ವೆಗಳ ಬಾಬಿನಲ್ಲಿ ನಿರೀಕ್ಷಿಸಿದ್ದ 35 21 ಲಕ್ಷ ರೂಪಾಯಿಗಳಿಗಿಂತಲೂ ಹೆಚ್ಚಾಗಿ 7 55 ಲಕ್ಷ ರೂಪಾಯಿಗಳು ಬಂದಿವೆ ವಿವಿಧ ತೆರಿಗೆಗಳ ಬಾಬಿನ ಹುಟ್ಟುವಳಿಯೂ ಬಜೆಟ್ ಅಂದಾಜಿಗಿಂತ 20 19 ಲಕ್ಷ ರೂಪಾಯಿಗಳು ಹೆಚ್ಚಾಗಿದೆ, ಈ ಮೊತ್ತದಲ್ಲಿ, ಬೆಂಕಿಕಡ್ಡಿ, ಸಕ್ಕರೆ, ಹೊಗೆಸೊಪ್ಪು, ಅಡಿಕೆ, ಕಾಫಿ ಮತ್ತು ಶೇಂದಿ-ಇವುಗಳ ಮೇಲೆ ವಿಧಿಸಿರುವ ಎಕ್ಸೈಜು ಸುಂಕದಿಂದ ಬಂದ ಮೊಬಲಗುಗಳೂ ಸೇರಿರುತ್ತವೆ

ವಿದ್ಯುಚ್ಛಕ್ತಿ ಕಾಮಗಾರಿಗಳಿಂದ ನಿವ್ವಳವಾಗಿ 63 88 ಲಕ್ಷ ರೂಪಾಯಿಗಳ ವರಮಾನವು ಬರುವುದಾಗಿ ಬಜೆಟ್ ಮೇರೆಗೆ ಅಂದಾಜು ಮಾಡಿದ್ದೆವು ಆದರೆ ತಿದ್ದುಪಡಿ ಅಂದಾಜಿನ ಲೆಕ್ಕಗಳ ಪ್ರಕಾರ ಹುಟ್ಟುವಳಿಯು ಸುಮಾರು 11 ಲಕ್ಷ ರೂಪಾಯಿಗಳಷ್ಟು ಕಡಮೆ [illegible] ಕಡಮೆ ಬೀಳುವುದಕ್ಕೆ, ಶಿವನಸಮುದ್ರ [illegible] ದುರ್ಘಟನೆಯೂ ಮತ್ತು [illegible] ಕೆಲಸ ನಡೆಯದೆ ವೆಚ್ಚವು ಹೆಚ್ಚಾದುದೂ ಮುಖ್ಯ ಕಾರಣಗಳಾಗಿವೆ

ಚಿನ್ನದ ಮೇಲಿನ ಸುಂಕ

[illegible] ವಿಧಿಸಿರುವ ಸುಂಕದ ಬಾಬಿನಲ್ಲಿ, 100 ಲಕ್ಷ ರೂಪಾಯಿಗಳ ಹುಟ್ಟುವಳಿಯು ಬರುವುದೆಂದು ಬಜೆಟ್ ಮೇರೆಗೆ ಅಂದಾಜು ಮಾಡಿದ್ದೆವು ಆದರೆ ಈ ಬಾಬಿನಲ್ಲಿ ಅಂದಾಜು ಮಾಡಿದ್ದ ಮೊಬಲಗಿಗಿಂತಲೂ ಒಟ್ಟಿನಲ್ಲಿ ಸುಮಾರು 10 ಲಕ್ಷ ರೂಪಾಯಿಗಳು ಹೆಚ್ಚಾಗಿ ಬಂದಿವೆ ಚಿನ್ನದ ಗಣಿ ಕಂಪೆನಿಗಳವರಿಗೆ ಸಹಾಯ ಮಾಡಲು ಸ್ವಲ್ಪ ಪರಿಹಾರವನ್ನು ಕೊಡತಕ್ಕದ್ದು ಅವಶ್ಯಕವೆಂದು [illegible] ಕಡಮೆ ದಾಮಾಷಾ ಪ್ರಮಾಣದಲ್ಲಿ [illegible] ದೊರೆಯುವ ಅದುರಿನಿಂದ ಚಿನ್ನವನ್ನು [illegible] ಕೆಲಸವನ್ನು ನಡೆಯಿಸುವುದಕ್ಕೂ ಮತ್ತು ಗಣಿ ತೋಡುವ ಕೆಲಸಗಳನ್ನು ಇನ್ನೂ ಹೆಚ್ಚು ಹೆಚ್ಚಾಗಿ ಮಾಡಿಸಿ ಅಭಿವೃದ್ಧಿ ಕಾರ್ಯಗಳನ್ನು ನಡೆಯಿಸುವುದಕ್ಕೂ ಆದರಿಂದ ಗಣಿ ಕಂಪೆನಿಗಳಿಗೆ ಅನುಕೂಲಮಾಡಿಕೊಟ್ಟ ಹಾಗಾಗುತ್ತದೆ ತಮ್ಮೆಲ್ಲರಿಗೂ [illegible] ಇರುವಂತೆ 1940ನೆಯ ಇಸವಿಯಲ್ಲಿ ವಿಧಿಸಲಾದ ಚಿನ್ನದ ಮೇಲಿನ ಸುಂಕವು ಪ್ರತಿ ಔನ್ಸಿನ ಚಿನ್ನದ ಮಾರಾಟದ ಬೆಲೆ ಒಂದುನೂರು ರೂಪಾಯಿಗಳಿಗಿಂತಲೂ ಹೆಚ್ಚು [illegible] ಆ ಹೆಚ್ಚು [illegible] ಮಾರಾಟವಾದ ಪ್ರತಿಯೊಂದು ಔನ್ಸಿನ [illegible] ಸುಂಕದ ಪ್ರಮಾಣವು [illegible] ಒಂದು [illegible] ಹೆಚ್ಚಾಗಿ [illegible] ಸರ್ಕಾರದವರಿಗೂ [illegible] 25 [illegible] ಗಣಿಗಳ [illegible] ಈ [illegible] ಅಂದಾಜು [illegible] ಚಿನ್ನದ ಗಣಿ ಕಂಪೆನಿಗಳವರು ಈ ಸುಂಕದ ಸಂಬಂಧದಲ್ಲಿ ಪರಿಹಾರ [illegible] ಬೇಕೆಂದು [illegible] ಸರ್ಕಾರದವರಿಗೆ ಅರಿಕೆ ಮಾಡಿಕೊಂಡಿದ್ದರು [illegible] ಅವರ [illegible] ಕಾರಣಗಳೇನೆಂದರೆ ಯುದ್ಧದ ಪರಿಸ್ಥಿತಿಯಿಂದಲೂ ಮತ್ತು ನಮ್ಮ ಹತೋಟಿಗೆ ಮೀರಿರುವ ಸನ್ನಿವೇಶಗಳಿಂದಲೂ ಅಭಿವೃದ್ಧಿ ಕಾರ್ಯಗಳಿಗೆ ಅಡಚಣೆಯುಂಟಾಗಿ [illegible] ವನ್ನು [illegible] ನಡೆಯಿಸಬೇಕೆಂದು ತಯಾರಿಸಿದ ಕಾರ್ಯಕ್ರಮಗಳ ಪ್ರಕಾರ, ಕೆಲಸಗಳು ನಡೆಯದೆ ಹಣದ ಅಭಾವದಿಂದ [illegible] ಹೋಗಿವೆ ಈ ಸುಂಕದ ಸಂಬಂಧದಲ್ಲಿ ಸ್ವಲ್ಪವಾದರೂ ಪರಿಹಾರವನ್ನು ಕೊಟ್ಟಹೊರತು, ಪ್ರಾಯಶಃ ಚಿನ್ನದ ಗಣಿಯ ಕಂಪೆನಿಗಳಿಗೆ, ಚಿನ್ನದ ಅನ್ವೇಷಣದ ಕೆಲಸಗಳನ್ನು ಇನ್ನು ಮೇಲೆ, ಮುಂದುವರಿಸಿಕೊಂಡು ಬರುವುದು ಸಾಧ್ಯವಿಲ್ಲದಂತೆಯೇ ಆಗುವುದು ತತ್ರಾಪಿ ಒಂದು ಕಂಪೆನಿಯ ವಿಷಯದಲ್ಲಂತೂ ಅದು ಸುತರಾಂ ಸಾಧ್ಯವಿಲ್ಲದಂತಾಗುವುದು ಖಂಡಿತ ಹಣವು ದೊರೆಯುವುದಾಗಿದ್ದಲ್ಲಿ, ಈಗ ಚಿನ್ನದ ಬೆಲೆಯು, ಹೆಚ್ಚಾಗಿರುವುದರಿಂದ, ಕಡಮೆ ದಾಮಾಷಾ ಪ್ರಮಾಣದಲ್ಲಿ ಚಿನ್ನವು ಸಿಕ್ಕುವ ಲಕ್ಷಾಂತರ ಟನ್ನುಗಳ ಅದುರುಗಳನ್ನು ಗಣಿಗಳಿಂದ ಅಗೆದು ಅದರಿಂದ ಬಂದ ಚಿನ್ನವನ್ನು ತೆಗೆಯುವುದಕ್ಕೆ ಇದೇ ತಕ್ಕ ಸಮಯ ಈಗ ಅಂಥ ಅದುರಿನಿಂದ ಚಿನ್ನವನ್ನು ತೆಗೆಯಬೇಕಾದ ಈ ಸುಸಮಯವನ್ನು ಹಣದ ಅಭಾವದಿಂದ ಬಿಟ್ಟುಬಿಟ್ಟು, ಹೆಚ್ಚು ಹೆಚ್ಚು ಪರಿಮಾಣದಲ್ಲಿ ಚಿನ್ನವು ದೊರೆಯುವಂಥ ಅದುರಿನಿಂದ ಮಾತ್ರವೇ ಚಿನ್ನವನ್ನು ತೆಗೆಯಬೇಕಾದ ಸ್ಥಿತಿಯು ಒದಗಿದೆ ಪರಿಹಾರ ದೊರೆಯದೆ ಹೋದಲ್ಲಿ ಅದೇ ರೀತಿ ಮಾಡಬೇಕಾಗುತ್ತದೆ—ಹೀಗೆಂದು ಒತ್ತಿ ಹೇಳಿ ಚಿನ್ನದ ಗಣಿ ಕಂಪೆನಿಗಳವರು ಪದೇ ಪದೇ ಸರ್ಕಾರದವರಿಗೆ ಅರಿಕೆ ಮಾಡಿ ಬರೆದುಕೊಂಡಿರುತ್ತಾರೆ ಈ ಅರಿಕೆಗಳನ್ನು ಸಾವಧಾನವಾಗಿ ಜಾಗರೂಕತೆಯಿಂದ ಪರಿಶೀಲಿಸಿ, ಗಣಿ ಕಂಪೆನಿಗಳಿಗೆ ಸ್ವಲ್ಪ ಪರಿಹಾರವನ್ನು ಕೊಡಬೇಕೆಂದು ತೀರ್ಮಾನಿಸಲಾಯಿತು ಚಿನ್ನದ ಮೇಲೆ ತೆರಿಗೆಯನ್ನು ವಿಧಿಸಿದಾಗ, ಈ ಸಭೆಯಲ್ಲಿಯೂ ಮತ್ತು ನ್ಯಾಯವಿಧಾಯಕ ಸಭೆಯಲ್ಲಿಯೂ ಕೂಡ ಅವಶ್ಯಕವಿದ್ದಲ್ಲಿ ಸರ್ಕಾರದವರು ಈ ವಿಚಾರವನ್ನು ಪುನರಾಲೋಚನೆಯಿಂದ ಪರಿಶೀಲಿಸುವುದಾಗಿ ಭರವಸ ಕೊಟ್ಟಿದ್ದರು ಆ ಭರವಸೆಯನ್ನು ನೆರವೇರಿಸಿಕೊಡುವುದಕ್ಕಾಗಿಯೇ, ಈ ಪರಿಹಾರದ ಯೋಜನೆಯನ್ನು ಜಾರಿಗೆ ತಂದಿರುವುದು ಇದೂ ಅಲ್ಲದೆ, ಬಹಳ ಆಳವಾದ ಗಣಿಗಳನ್ನು ತೋಡುವುದಕ್ಕೆ ಅನುಕೂಲವಾಗುವಂತೆ ಕಂಪೆನಿಗಳು ದೀರ್ಘಕಾಲಾವಧಿಯ ಅಭಿವೃದ್ಧಿ ಕಾರ್ಯಕ್ರಮವನ್ನು ರಚಿಸಿ ಕೈಕೊಳ್ಳಲು ಅವಕಾಶ ಕಲ್ಪಿಸಬೇಕೆಂದೂ ಉದ್ದೇಶಿಸಲಾಗಿದೆ ಈ ಯೋಜನೆಯ ಮುಖ್ಯಾಂಶಗಳು ಯಾವುವೆಂದರೆ ಚಿನ್ನದ ಗಣಿ ಕಂಪೆನಿಗಳಲ್ಲಿ ಯಾವುದೊಂದು ಕಂಪೆನಿಯವರಾಗಲಿ ಗಣಿಯನ್ನು ತೋಡಿ ನಡೆಯಿಸಿರುವ ಕೆಲಸವು ಸರ್ಕಾರದವರು ಈ ಸಂಬಂಧದಲ್ಲಿ ವಿಧಾಯಕ ಮಾಡಿರುವ ಸಲಾನಾ ಅಡಿಗಳಷ್ಟು ಪ್ರಮಾಣಕ್ಕೆ ಕಡಮೆಯಿರಕೂಡದು, ಕಂಪೆನಿಗಳವರು ಗಣಿಗಳಿಂದ ತೆಗೆದು ಉಪಯೋಗಿಸುವ ಸರಾಸರಿ ಬಗೆಯ ಅದುರು ಅದಷ್ಟು ಕಡಮೆ ದಾಮಾಷಾ ಪ್ರಮಾಣದಲ್ಲಿ ಚಿನ್ನವಿರುವಂಥ ಅದುರೇ ಆಗಿರಬೇಕು ಯಾವುದೊಂದು ಚಿನ್ನದಗಣಿ ಕಂಪೆನಿಯಾಗಲಿ ಪರಿಹಾರವನ್ನು ಕೇಳಲು ಅರ್ಹವಾಗಿರಬೇಕಾದರೆ, ಆ ಕಂಪೆನಿಯವರು ಗೊತ್ತುಮಾಡಿರುವ “ಡಿವಿಡೆಂಡು” ಮೊಬಲಗು ಈ ಸಂಬಂಧದಲ್ಲಿ ವಿಧಾಯಕಮಾಡಲ್ಪಟ್ಟಿರತಕ್ಕ ಪರಮಾವಧಿ ನೇಕಡಾವಾರು ಪರಿಮಿತಿಗಳಿಗೆ ಹೆಚ್ಚಾಗಿರತಕ್ಕದ್ದಲ್ಲ ಒಂದೊಂದು ಕಂಪೆನಿಗೂ ಪರಿಹಾರ ದೊರೆಯುವುದಕ್ಕಿರತಕ್ಕ ಅರ್ಹತೆಯನ್ನೂ ಮತ್ತು ಅದಕ್ಕೆ ಕೊಡಬೇಕಾದ ಪರಿಹಾರದ ಮೊಬಲಗೆಷ್ಟೆಂಬುದನ್ನೂ ಸರ್ಕಾರದವರು, ಆವಶ್ಯಕತೆಯಿದ್ದಲ್ಲಿ ಒಂದು ಸಮಿತಿಯವರ ಸಹಾಯದಿಂದ ಆಯಾ ಕಂಪೆನಿಯು ನಡೆಯಿಸಿರುವ ಕೆಲಸವನ್ನು ವಿಮರ್ಶಿಸಿ ನೋಡಿ ಅನಂತರ ತೀರ್ಮಾನಿಸಬೇಕು— ಈ ಷರತ್ತುಗಳೆಲ್ಲ ಸೇರಿದ್ದ ಪಕ್ಷಕ್ಕೆ ಪರಿಹಾರವು ದೊರೆಯುತ್ತದೆ 1944ನೆಯ ಸಾಲಿನಲ್ಲಿ 16 33 ಲಕ್ಷ ರೂಪಾಯಿಗಳನ್ನು ಮೈಸೂರು ಉರಿಗಾಂ, ಮತ್ತು ನಂದೀದುರ್ಗ ಗಣಿಗಳಿಗೆ ರಿಯಾಯತಿ ಪರಿಹಾರವಾಗಿ ಮಂಜೂರು ಮಾಡಲಾಯಿತು ಈ ಮೊಬಲಗಿನ ಬಾಪತಿಯನ್ನೂ ಲೆಕ್ಕಕ್ಕೆ ಸೇರಿಸಿಕೊಂಡರೆ, 1944 45ನೆಯ ಸಾಲಿಗೆ ಚಿನ್ನದ ಮೇಲಿನ ಸುಂಕದಿಂದ ಬಜೆಟ್ಟಿನಲ್ಲಿ ಅಂದಾಜು ಮಾಡಿದ್ದಂತೆ 100 ಲಕ್ಷ ರೂಪಾಯಿಗಳ ನಿವ್ವಳ ಹುಟ್ಟುವಳಿಯು ಬರುವುದಿಲ್ಲ, ಅದು ಬಜೆಟ್ ಅಂದಾಜಿಗಿಂತಲೂ 6 33 ಲಕ್ಷ ರೂಪಾಯಿಗಳು ಕಡಮೆ ಬೀಳುವ ಸಂಭವವಿದೆ

ಶ್ರೀ ವೀರಮಾಹೇಶ್ವರ ದೀಕ್ಷಾ ಸಮಾರಂಭ

ಬೆಲವಂತರ

ಶ್ರೀಮದುಜ್ಜಯಿನಿ ಸದ್ಧರ್ಮಸಿಂಹಾಸನ ಶಾಖಾನುವರ್ತಿ ಶ್ರೀ॥ ಷ॥ ಬ್ರ॥ ಪಟ್ಟದ ಶಿವಶಂಕರಶಿವಾಚಾರ್ಯಸ್ವಾಮಿಗಳು ಯಾನವಾಡ ಗರಗ ರೊಣಕುಂದಿ ಮಳೇಮಠ ಇವರಿಂದ ಬೆಲವಂತರ ಹಿರೇಮಠಾಧ್ಯಕ್ಷ ಶ್ರೀ ಸಿದ್ಧರಾಮೇಶ್ವರಸ್ವಾಮಿಗಳ ಮಕ್ಕಳು ಮತ್ತು ಅವರ ಪೈಕಿ ವಟುಗಳು, ಪರಸ್ಥಳದ ವಟುಗಳು ಒಟ್ಟು ೧೩ ವಟುಗಳಿಗೆ ವೀರಮಾಹೇಶ್ವರ ದೀಕ್ಷೆಯೂ ಸದರಿ ಮಠದ ಬಾಲಿಕೆಯರು ೫, ಸದ್ಭಕ್ತಶಿರೋಮಣಿಗಳಾದ ಎಲ್ಲಪ್ಪ, ಗಂಗಪ್ಪ ಬಸನಕೊಪ್ಪ ಇವರೇ ಮೊದಲಾದ ಏಳುಜನರಿಗೆ ಶಿವದೀಕ್ಷಾಸಂಸ್ಕಾರಗಳು ವಿಧ್ಯುಕ್ತವಾಗಿ ತಾರೀಖು ೧-೬-೧೯೪೪ ನೆಯ ದಿವಸ ಪ್ರಾತಃಕಾಲ ನೆರವೇರಿಸಲ್ಪಟ್ಟವು ಸ್ವಾಮಿಗಳವರು ಪ್ರತಿಯೊಬ್ಬ ವೀರಶೈವ ಸ್ತ್ರೀ ಪುರುಷನೂ ದೀಕ್ಷಾಸಂಸ್ಕಾರವನ್ನು ಹೊಂದುವುದವಶ್ಯವೆಂದು ಸ್ಫೂರ್ತಿಯುಕ್ತ ವಾಣಿಯಿಂದ ಸರ್ವಜನರಿಗೆ ಬೋಧೆಮಾಡಿದರು. ಈ ಸಮಯದಲ್ಲಿ ಶ್ರೀ ಕಾಶೀಜಗದ್ಗುರು ಪೀಠಕ್ಕೆ ೧೧ ರೂಪಾಯಿಗಳ ಕಾಣಿಕೆಯು ಕಳುಹಿಸಲ್ಪಟ್ಟಿತು

ಗುರುಪಾದಪ್ಪ ಹಂಚಿನಾಳ ಬಬಲೇಶ್ವರ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯರು ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ೪ ಆಣೆ ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೧೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೮ನೇ ಜೂನ್ ೧೯೪೫ [ಸಂಚಿಕೆ ೫

ಶ್ರೀಜಗದ್ಗುರು ದಾರುಕಾಚಾರ್ಯ ಏಕೋರಾಮಾರಾಧ್ಯರ ಜಯಂತೀಮಹೋತ್ಸವ

ಕಡೂರು ತಾ॥ ವಡೇರಹಳ್ಳಿ ಗ್ರಾಮದಲ್ಲಿ ಮೇಲ್ಕಂಡ ಪೂಜ್ಯಪಾದರ ಜಯಂತೀಮಹೋತ್ಸವವು ವೇ॥ ಮಠದ ವೀರಭದ್ರಾರಾಧ್ಯರು ಶ್ರೀಶಿವಗಂಗಾಧರೇಶ್ವರಸ್ವಾಮಿ ದೇವಸ್ಥಾನದ ಪೈವಾಟ್ ದಾರ್ ಇವರ ಗೃಹದಲ್ಲಿ ಅತ್ಯಂತ ವೈಭವದಿಂದ ನೆರವೇರಿಸಲ್ಪಟ್ಟಿತು ವೈಶಾಖ ಶುದ್ಧ ೩ ತಾ। ೧೪-೫-೪೫ನೇ ಸೋಮವಾರ ಶ್ರೀಜಗದ್ಗುರು ಏಕೋರಾಮಾರಾಧ್ಯರ ಜಯಂತಿಯೂ, ತಾ॥೧೬ ೫ ೪೫ ನೇ ಬುಧವಾರ ದಾರುಕಾಚಾರ್ಯರ ಜಯಂತಿಯೂ ಸದರಿಯವರ ಗೃಹದಲ್ಲಿ ನಿಜಾಮಸ್ಟೇಟ್ ನಾಂದೇಡ ಜಿಲ್ಲಾ ಮುಖೇಡ ಗ್ರಾಮದ ಶ್ರೀಜಗದ್ಗುರು ಉಜ್ಜಯಿನೀ ಶಾಖಾಮಠದ ಪಟ್ಟಾಧ್ಯಕ್ಷ ವಿರೂಪಾಕ್ಷಶಿವಾಚಾರ್ಯರ ಅಮೃತಹಸ್ತದಿಂದ ಶ್ರೀಜಗದ್ಗುರು ಲಿಂಗೋದ್ಭವಮೂರ್ತಿಗೆ ರುದ್ರಾಭಿಷೇಕಾದಿ ಪೂಜೆಯೂ ಸಹಸ್ರ ಬಿಲ್ವಾರ್ಚನೆಯೂ ಶ್ರೀಪಂಚಾಚಾರ್ಯರ ಅಷ್ಟೋತ್ತರ ಶತನಾಮಪಠನವೂ ನಡೆದವು. ಆಗ್ಯೆ ಇಲ್ಲಿ ನೆರೆದ ಪ್ರತಿಯೊಬ್ಬ ಭಕ್ತಮಾಹೇಶ್ವರ ಸ್ತ್ರೀಪುರುಷರ ಮುಖದಲ್ಲಿ ಶ್ರೀಪಂಚಾಚಾರ್ಯರ ಜಯಘೋಷವು ನರ್ತನಮಾಡುತ್ತಿತ್ತು ಶ್ರೀಶಿವಗಂಗಾಧರೇಶ್ವರಸ್ವಾಮಿಗೆ ರುದ್ರಾಭಿಷೇಕ ಸಹಸ್ರಬಿಲ್ವಾರ್ಚನೆ ಸಹ ವೇ॥ ವೀರಭದ್ರಾರಾಧ್ಯರ ಮಕ್ಕಳು ಬಸವಾರಾಧ್ಯರ ವೈದಿಕತ್ವದಲ್ಲಿ ನೆರವೇರಿದುವು ಈ ಗುರುಕಾರ್ಯಕ್ಕಾಗಿ ಈ ಗ್ರಾಮದ ಸುಂಕದ ವೀರೇಗೌಡರ ಮಗ ಚನ್ನವೀರೇಗೌಡ ಮೊದಲಾದ ಭಕ್ತರು ತಮ್ಮ ಸೇವೆಯನ್ನು ಸಲ್ಲಿಸಿದರು ಬಳಿಕ ಶ್ರೀಶಿವಗಂಗಾಧರೇಶ್ವರಸ್ವಾಮಿಯ ಮತ್ತು ಶ್ರೀಲಿಂಗೋದ್ಭವಮೂರ್ತಿಗಳನ್ನು ಪಲ್ಲಕ್ಕಿಯಲ್ಲಿರಿಸಿ ತಳಿರುತೋರಣಗಳಿಂದಲಂಕೃತವಾದ ಬೀದಿಗಳಲ್ಲಿ ಉತ್ಸವವು ನೆರವೇರಿತು ಆಮೇಲೆ ದೇವಸ್ಥಾನದ ಮುಂಭಾಗದಲ್ಲಿ ಮೇಲ್ಕಂಡ ಪಟ್ಟಾಧ್ಯಕ್ಷ ವಿರೂಪಾಕ್ಷ ಶಿವಾಚಾರ್ಯರ ಅಧ್ಯಕ್ಷತೆಯಲ್ಲಿ ಸಭೆಸೇರಿತು ಶ್ರೀಗಳು ಧರ್ಮಬೋಧೆಯನ್ನು ಮಾಡಿ ಸರ್ವರಿಗೂ ಆಶೀರ್ವಾದ ದಯಪಾಲಿಸಿದ ಮೇಲೆ ಸಭೆ ಮುಕ್ತಾಯವಾಯಿತು

ಗುರುಭಕ್ತ

ವೀರಮಾಹೇಶ್ವರದೀಕ್ಷಾಮಹೋತ್ಸವ ಸೋಮಲಾಪುರ

ಬಳ್ಳಾರಿ ಡಿ॥ ಹೊಸಪೇಟೆ ತಾ॥ ಸೋಮಲಾಪುರ ಗ್ರಾಮದಲ್ಲಿರುವ ಬಳಗಾನೂರು ಮಠದ ಬಸವಣ್ಣಯ್ಯನವರ ಮಠದಲ್ಲಿ ಇದೇ ವೈಶಾಖ ಬ॥ ೧೧ ಬುಧವಾರ ಶಿರಗುಪ್ಪ ತಾ॥ ಹಚ್ಚೊಳ್ಳಿ ಚರಂತಿಮಠದ ಚರಪಟ್ಟಾಧ್ಯಕ್ಷ ಶ್ರೀಶರಿವೃಷಭೇಂದ್ರಸ್ವಾಮಿಗಳ ಅಧ್ಯಕ್ಷತೆಯಲ್ಲಿಯೂ, ಎತ್ತಿನಟ್ಟಿ ಮಳೆಮಠದ ವೀರಭದ್ರಶಾಸ್ತ್ರಿಗಳು ಮತ್ತು ಮೆಟ್ಟಿ ಹಿರೇಮಠದ ರುದ್ರಾರಾಧ್ಯರ ಪೌರೋಹಿತ್ಯದಲ್ಲಿಯೂ ದೀಕ್ಷಾಮಹೋತ್ಸವವು ಶಾಸ್ತ್ರೋಕ್ತವಾಗಿ ನೆರವೇರಿತು ಬಳಗಾನೂರು ಮಠದ ಬಸವಣ್ಣಯ್ಯನವರ ಪುತ್ರ ಚಿ ಸಿದ್ಧಲಿಂಗಯ್ಯನಿಗೂ, ವರೋಜಿ ವಿರೂಪಾಕ್ಷಯ್ಯನ ಪುತ್ರ ಚಿ ಅಮರೇಶನಿಗೂ, ವೆಂಕಟಾಪುರದ ಆನೆಗೊಂದಿಮಠದ ಜಂಬಯ್ಯನ ಪುತ್ರ ಕೊಟ್ರಯ್ಯನಿಗೂ, ಉಪ್ಪಾರ ಹೊಸಳ್ಳಿಮಠದ ಕೊಮಾರಯ್ಯನ ಪುತ್ರ ಚಿ॥ ತ್ರಿಲೋಚನನಿಗೂ, ಮಾದಾಪುರ ಕುರುಗೋಡು ಮೇಲುಮಠದ ಪಂಪಯ್ಯನ ಪುತ್ರ ಚಿ॥ ವೀರಯ್ಯನಿಗೂ ವೀರಮಾಹೇಶ್ವರ ದೀಕ್ಷೆಯು ನಡೆದನಂತರ ಪಂಚಾಚಾರ್ಯ ಪ್ರಭಾಪೋಷಣೆಗಾಗಿ 4 ರೂ ಗಳು ಸಮರ್ಪಿಸಲ್ಪಟ್ಟವು ಜಗದಾಚಾರ್ಯರು ಈ ನೂತನ ವಟುಗಳಿಗೆ ಮಂಗಲವನ್ನುಂಟುಮಾಡಲೆಂದು ಪ್ರಾರ್ಥಿಸುವ,

ರೆಡ್ಡಿ ಶರಭನಗೌಡ, ಸೋಮಲಾಪುರ

ಶ್ರೀಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಕೃಪಾಪೋಷಿತ ಧರ್ಮಾರ್ಥ ಸಂಗೀತ ಪಾಠಶಾಲಾ, ಕೊಟ್ಟೂರು

ಈ ಪಾಠಶಾಲೆಗೆ ಕಟ್ಟಡವನ್ನು ಮಾಡುವುದಕ್ಕಾಗಿ ಮು॥ ರಾ॥ ಬಳ್ಳಾರಿ ಡಿ॥ ಹಿರೆಹಡಗಲಿಯಲ್ಲಿರುವ ಶ್ರೀಮಂತ ಸೊಂಡೂರು ಮಲ್ಲಪ್ಪನವರು ಒಂದು ರೂಮು ಕಟ್ಟಿಸುತ್ತೇನೆಂದು ವಾಗ್ದಾನಮಾಡಿರುತ್ತಾರೆ ಮತ್ತು ಮು॥ ರಾ। ಹರಪನಹಳ್ಳಿ ತಾಲೂಕು ಮೂಸ್ಯರಮಸಲವಾಡದಲ್ಲಿರುವ ಯಜಮಾನಿ ತಂಬ್ರಹಳ್ಳಿ ಫಕೀರವ್ವ ಎಂಬ ಶರಣೆಯು ತ್ರಿಕರಣಶುದ್ಧಿಯಿಂದ ಒಂದು ರೂಮು ಕಟ್ಟಿಸಿಕೊಡುತ್ತೇನೆಂದು ಒಪ್ಪಿರುತ್ತಾರೆ ಇದೇಪ್ರಕಾರವಾಗಿ ಈ ಮೇಲ್ಕಂಡ ಕಾರ್ಯಾಧ್ಯಕ್ಷರಾಗಿರುವ ಸಂಗೀತ ವಿದ್ವಾನ್ ಕೆ ಯಂ ಚನ್ನಬಸವಶಾಸ್ತ್ರಿಗಳವರಿಗೆ ಸರ್ವರೂ ಧನಸಹಾಯಮಾಡಿ ಕೀರ್ತಿಭಾಗಿಗಳಾಗುವರೆಂದು ಹಾರೈಸುವ,

ಪಿ ಎಂ ಮರುಳಾರಾಧ್ಯ

ವಿವಾಹಮಹೋತ್ಸವ

ನಿಜಾಂ ಇಲಾಖಾ ಗೊಂಟಿ ಗ್ರಾಮದಲ್ಲಿರುವ ಶ್ರೀಮತಿ ಶಿವಮ್ಮ ಡುಮಣೆ ಇವರ ಮೊಮ್ಮಗ ಚಿ॥ ಬಸವಣ್ಣಪ್ಪನಿಗೆ ಇದೇ ಗ್ರಾಮದ ಮ॥ ರಾ॥ ಅಪ್ಪಾರಾವ್ ವಂಕೆ ಇವರ ಪುತ್ರಿ ಚಿ॥ ಸೌ॥ ಸರಸ್ವತೀಬಾಯಿಯನ್ನು ಕೊಟ್ಟು ವೈಶಾಖ ಬಹುಳ ಗುರುವಾರ ದಿವಸ ವಿವಾಹವು ಬಹು ವಿಜೃಂಭಣೆಯಿಂದ ನೆರವೇರಿತು ಈ ಸಮಯದಲ್ಲಿ ಗ್ರಾಮದಲ್ಲಿರತಕ್ಕ ಎಲ್ಲ ಜನರಿಗೂ ಅನ್ನಸಂತರ್ಪಣೆಯಾಯಿತು ಈ ವಿವಾಹಕ್ಕಾಗಿ ಸುಮಾರು 1000 ಜನಗಳು ಆಗಮಿಸಿದ್ದರು ಮ॥ ರಾ॥ ಚನ್ನಪ್ಪ ಮುಸ್ತಾಪುರೆ ಇವರು ಈ ಕಾರ್ಯವನ್ನು ಬಹು ದಕ್ಷತೆಯಿಂದ ನೆರವೇರಿಸಿದರು ಶ್ರೀಜಗದಾಚಾರ್ಯರು ನೂತನ ವಧೂವರರಿಗೆ ಆಯುರಾರೋಗ್ಯಭಾಗ್ಯವನ್ನೀಯಲೆಂದು ಪ್ರಾರ್ಥಿಸುತ್ತೇನೆ

ಪ್ರತ್ಯಕ್ಷದರ್ಶಿ

ಶ್ರೀ ಜಗದ್ಗುರು ಕಾಶೀಪೀಠಕ್ಕೆ ಕಾಣಿಕೆ

ಸಭೆಯಲ್ಲಿ ಕಾಶೀಪೀಠದ ಸಮಾಚಾರವೆಲ್ಲವೂ ಈ ಹಿಂದೆ ಪ್ರಕಾಶಿತವಾಗಿದೆ. ಅದರಂತೆ ಗುರುಭಕ್ತರು ಗುರುದಕ್ಷಿಣೆಯನ್ನು ಪೀಠಕ್ಕೆ ಸಲ್ಲಿಸುತ್ತಿದ್ದಾರೆ ಈ ಕೆಲಸವು ಇನ್ನೂ ವಿಶೇಷವಾಗಿ ಸಾಗಬೇಕಾಗಿದೆ. ಆಯಾ ಸ್ಥಳಗಳಲ್ಲಿಯ ಪ್ರಮುಖರು ವೀರಶೈವ ಮಹಾಜನರಿಂದ ವಿವಾಹಾದಿ ಶುಭಕಾರ್ಯಗಳಲ್ಲಿ ದಾನ ದಕ್ಷಿಣಗಳನ್ನು ಸಮರ್ಪಿಸಿ ಕಾಶೀ ಜಗದ್ಗುರು ಮಹಾಸನ್ನಿಧಿಗೆ ಕಳುಹಿಸುತ್ತಿರಬೇಕು ಈ ಬಗ್ಗೆ ಸರಿಯಾದ ಸೇವೆಯನ್ನು ಸಲ್ಲಿಸುವುದು ಸರ್ವ ಗುರುಭಕ್ತರ ಮುಖ್ಯ ಕರ್ತವ್ಯವಾಗಿದೆ ಎಂಬುದನ್ನು ತಿಳಿದು ಎಲ್ಲರೂ ಪ್ರಯತ್ನಿಸಬೇಕು.

NOTICE

Under the auspices of the Veerasaiva Education Society, Bangalore, a new Intermediate College with Physics, Chemistry and Mathematics as optional subjects will be opened from 2nd July 1945.

Students seeking admission may kindly apply to the undersigned on or before 20th June 1945 with all necessary particulars enclosing the Leaving certificate

Y. M Shanmukhaiya,
Secretary,
Veerasaiva Education Society
146, Chamarajapet, IV Main,
BANGALORE CITY.

೧೧ನೆಯ ಮಹಾಸಮ್ಮೇಳನ

ತಾ|| ೧೫-೬-೪೫ರಲ್ಲಿ ಮೈಸೂರ್ ಶ್ರೀಮನ್ಮಹಾರಾಜರವರ ಸಂಸ್ಕೃತ ಮಹಾಪಾಠಶಾಲೆಯಲ್ಲಿ ನಡೆದ ಮೈಸೂರ ದೇಶದ ವಿದ್ಯಾಶಾಲಾ ಪಂಡಿತ ಮಂಡಲದ ೧೧ನೆಯ ಮಹಾಸಮ್ಮೇಳನದಲ್ಲಿ ಶ್ರೀ ಜಿ ಆರ್ ಜೋಸ್ಯರ್ ಎಂ ಎ, ಅವರ ಮಾಡಿದ ಸ್ವಾಗತಸಮಿತಿಯ ಅಧ್ಯಕ್ಷಭಾಷಣ

ನಿತ್ಯಾನಂದಂ ಪರಮಸುಖದಂ ಕೇವಲಂ ಜ್ಞಾನಮೂರ್ತಿಂ
ವಿಶ್ವಾತೀತಂ ಗಗನಸದೃಶಂ ತತ್ತ್ವಮಸ್ಯಾದಿಲಕ್ಷ್ಯಂ |
ಏಕಂ ನಿತ್ಯಂ ವಿಮಲಮಚಲಂ ಸರ್ವಧೀಸಾಕ್ಷಿಭೂತಂ
ಭಾವಾತೀತಂ ತ್ರಿಗುಣರಹಿತಂ ಸದ್ಗುರುಂ ತಂ ನಮಾಮಿ ||

ಮಹಾಶಯರೆ, ತಮಗೆ ಬಂದಿರುವ ಆಹ್ವಾನಪತ್ರಿಕೆಯಲ್ಲಿರುವ ಕಾರ್ಯಕ್ರಮದಲ್ಲಿ ನನ್ನ ಹೆಸರು ಇಲ್ಲದಿದ್ದರೂ ನಾನು ಇಲ್ಲಿ ಬಂದು ನಿಂತಿರುವದು ತಮಗೆ ಅನುಚಿತವಾಗಿ ಕಾಣಬಹುದು ಆದರೆ ತಮ್ಮ ಉದ್ದಿಷ್ಟ ಅಧ್ಯಕ್ಷರಾದ ಶ್ರೀಮಾನ್ ಟಿ ರಾಮಯ್ಯನವರು ಕಾರ್ಯಾಂತರದಿಂದ ಬರಲು ಅಸಾಧ್ಯವಾದುದರಿಂದ ನನಗೆ ಗೌರವ್ಯರೂ ಹಿತೈಷಿಗಳೂ ಆದ ಶ್ರೀಮಾನ್ ರಾಜಸೇವಾಪ್ರಸಕ್ತ ಎ ಸುಬ್ರಹ್ಮಣ್ಯ ಅಯ್ಯರವರೂ ಶ್ರೀಮಾನ್ ವಿಟ್ಠಲಶಾಸ್ತ್ರಿಗಳವರೂ ಮೂರು ದಿನಗಳ ಕೆಳಗೆ ನನ್ನನ್ನು ಆಕ್ಟಿಂಗ್ ರಿಸೆಪ್ಷನ್ ಚೇರ್ಮನ್ ಸ್ಥಾನವನ್ನು ವಹಿಸಬೇಕೆಂದು ನಿಯಮಿಸಿದರು

ಒಂದು ದಿನ ಪ್ಯಾರಿಸ್ಸಿನಲ್ಲಿ ಒಂದು ಅಂಗಡಿಗೆ ಒಬ್ಬ ವ್ಯಕ್ತಿಯು ಹೋಗಿ ಮಾತನಾಡಲು ಆ ಅಂಗಡಿಯವನು ಇವನ ಮಾತು ತಿಳಿಯದೆ 'ಸ್ವಾಮಿ ನೀವು ಫ್ರೆಂಚಿನಲ್ಲಿ ಮಾತನಾಡಿದರೆ ನೀವು ಇಂಗ್ಲಿಷಿನವರೆಂದು ಊಹಿಸಬೇಕಾಗಿದೆ ಇಂಗ್ಲಿಷಿನಲ್ಲಿ ಮಾತನಾಡಿದರೆ ನೀವು ಏರಿ ಪರಿರಚಿಸುವಂದು ತೋರುತ್ತದೆ ಎಂದು ಹೇಳಿದನಂತೆ ಪ್ರಕೃತ ನನಗೆ ವೈದಿಕ ಲೌಕಿಕ ಸಂಸರ್ಗವೆರಡೂ ಇರುವುದರಿಂದ ಲೌಕಿಕ ಗೋಷ್ಠಿಗೆ ಹೋದಾಗ ನಾನು ವೈದಿಕ ಇವರಲ್ಲಿ ಸೇರಿ ಒಂದೆ ಹೋಗುವದು ಎಂದು ಮನಸ್ಸು ಹಿಂಜರಿಯುತ್ತದೆ ವೈದಿಕ ಗೋಷ್ಠಿಯಲ್ಲಿ ಸೇರಿದಾಗ, 'ನಾನು ಲೌಕಿಕ ಇವರಲ್ಲಿ ಹ್ಯಾಗೆ ಮುಂದುವರಿಯುವದು ಎಂದು ಮನಸ್ಸು ಹಿಂಜರಿಯುತ್ತದೆ ಇದರಿಂದ ಎರಡು ಗೋಷ್ಠಿಗಳಿಗೂ ಮಧ್ಯೆ ತ್ರಿಶಂಕುವಿನಂತೆ ನಿಲ್ಲುವುದಾಗಿದೆ

ಆದರಿಂದ ಅವರುಗಳ ಆಜ್ಞೆಯನ್ನು ಕೇಳಿ ಚಕಿತನಾಗಿ ವಿಶ್ವಾಮಿತ್ರರಿಗೆ ದಶರಥನು ಹೇಳಿದ ವಾಕ್ಯವನ್ನು ಹೇಳಿದೆ

ಊನಷೋಡಶವರ್ಷೋ ಮೇ ರಾಮೋ ರಾಜೀವಲೋಚನಃ |
ನ ಯುದ್ಧಯೋಗ್ಯತಾಮಸ್ಯ ಪಶ್ಯಾಮಿ ಸಹ ರಾಕ್ಷಸೈಃ ||

ಶ್ರೀಮಾನ್ ಸುಬ್ರಹ್ಮಣ್ಯ ಅಯ್ಯರವರು ಶ್ರೀಮಾನ್ ಟಿ ರಾಮಯ್ಯನವರ ಸ್ಥಾನದಲ್ಲಿ ಸಮ್ಮೇಳನಾಧ್ಯಕ್ಷರಾಗುವದು ಸಹಜವಾಗಿದ್ದರೂ, ಅವರು ಅಲಂಕರಿಸಿದ ಸ್ಥಾನದಲ್ಲಿ ನಾನು ಪ್ರವೇಶಿಸುವದು ಸ್ವಲ್ಪ ಉದ್ವರ್ತನೆಯಂತೆ ಕಂಡಿತು

ಆದರೆ ಈ ಮಹಾಸಮ್ಮೇಳನದಲ್ಲಿ ರಾಕ್ಷಸಯುದ್ಧಭಯವು ಇಲ್ಲದ್ದರಿಂದಲೂ, ನಾನೂ ಸಮ್ಮೇಳನದ ಉದ್ದಿಷ್ಟ ಅಧ್ಯಕ್ಷರೂ ಕುಚೇಲನೂ ಕೃಷ್ಣನೂ ಸಹಪಾಠಿಗಳಾಗಿದ್ದಂತೆ ಸಹಪಾಠಿಗಳಾಗಿದುದರಿಂದಲೂ, ತಮ್ಮ ಮಂಡಲಿಯ ಅಧ್ಯಕ್ಷರೂ ಉಪಾಧ್ಯಕ್ಷರೂ ನನಗೆ ಚಿರಪರಿಚಿತರಾಗಿ ಅಭಿಮಾನಿಗಳಾಗಿರುವದರಿಂದಲೂ, ಸಮ್ಮೇಳನದ ಸಮಿತಿಯವರೂ ಸ್ವಾಗತಾಧ್ಯಕ್ಷರೂ ನನ್ನಲ್ಲಿ ಅನುಗ್ರಹಿಸಿ ಮಾಡಿದ ನಿಯಮವನ್ನು ನಡೆಸಿಕೊಡುವದು ನನ್ನ ಕರ್ತವ್ಯವಾದ್ದರಿಂದಲೂ, ಇವೆಲ್ಲಕ್ಕಿಂತಲೂ ಮೇಲಾಗಿ ಒಂದೆರಡು ದಿವಸಗಳಾದರೂ ಈ ಮಹಾಸಭೆಯಲ್ಲಿ ನೆರೆದಿರುವ ತಮ್ಮಗಳ ತೇಜೋರಾಶಿಯ ಅಭಿಮುಖ್ಯದಿಂದ, ಎಕ್ಸ್‌ರೆ ಯಂತ್ರದಲ್ಲಿರುವ ವಿದ್ಯುಚ್ಛಕ್ತಿಯು ಅದರ ಎದುರಿಗೆ ನಿಲ್ಲುವವರ ದೇಹದಲ್ಲಿ ಅಂಕುರಿಸುವಂತೆ, ತಮ್ಮ ತೇಜಸ್ಸು ನನ್ನಲ್ಲೂ ಸ್ವಲ್ಪ ಅಂಕುರಿಸಲೆಂಬ ಅಭಿಲಾಷೆಯಿಂದಲೂ ತಮ್ಮಗಳೆಲ್ಲರನ್ನೂ ಈ ಮಹಾಸಮ್ಮೇಳನಕ್ಕೆ ಸ್ವಾಗತಿಸುವ ಕೈಂಕರ್ಯವನ್ನು ಅಂಗೀಕರಿಸಿ ಇಲ್ಲಿ ನಿಂತಿರುವೆನು ಇದನ್ನು ತಾವುಗಳು ರಾಮರ ಸೇತುಬಂಧನಕಾಲದಲ್ಲಿ ಆಂಜನೇಯನು ಬೆಟ್ಟಗಳನ್ನು ತಂದಂತಲ್ಲ ಅಳಿಲುಗಳು ಮರಳು ಕಣಗಳನ್ನು ತಂದು ಸಹಾಯಮಾಡಿದಂತೆ ಎಂದು ಭಾವಿಸುತ್ತೀರೆಂದು ನಂಬುತ್ತೇನೆ

ಈ ವಿದ್ವಾಂಸ ಮಹಾಸಮ್ಮೇಳನವು ಇಂಡಿಯಾದ ಬೇರೆ ಯಾವ ಪ್ರಾಂತದಲ್ಲೂ ನಡೆಯುವುದನ್ನು ನಾನು ಕೇಳಿಲ್ಲ ಆದ್ದರಿಂದ ಇದನ್ನು ಅದ್ವಿತೀಯವೆಂದು ಹೇಳಬಹುದು

ಮತ್ತು ಇಲ್ಲಿ ನೆರೆದಿರುವ ಪಂಡಿತರುಗಳು ಸಂಸ್ಕೃತ ಅಥವಾ ಕನ್ನಡ ಒಂದು ಭಾಷಾಪಂಡಿತರಲ್ಲದೆ ಸಂಸ್ಕೃತ, ಕನ್ನಡ ಉರ್ದು ತೆಲುಗು ತಮಿಳು, ಹಿಂದಿ ಈ ವಿವಿಧ ಭಾಷೆಯವರಾಗಿದ್ದರೂ ಎಲ್ಲರೂ ಸೌಹಾರ್ದದಿಂದಲೂ ಏಕಮತ್ಯದಿಂದಲೂ ಸಮ್ಮೇಳನವನ್ನು ನಿರ್ವಹಿಸುವದು ಇತರರಿಗೆ ಮೇಲ್ಪಂಕ್ತಿಯಾಗಿದೆ

ಇನ್ನು ೨೦ ದಿವಸಗಳಿಗೆ ಸಂಸ್ಥಾನದ ಹಿಂದೂ ಮಹಾಸಭೆಯ ಸಮ್ಮೇಳನವು ನಡೆಯುತ್ತದೆ ಈಗ ನಾಲ್ಕೈದು ದಿವಸಗಳ ಕೆಳಗೆ ಅದರ ಅಧ್ಯಕ್ಷರು ನನ್ನನ್ನು ಮಾರ್ಗದಲ್ಲಿ ಕಂಡು "ಜೋಯಿಸರೆ, ನಾನು ನನ್ನ ಭಾಷಣದಲ್ಲಿ ಜಾತಿಗಳನ್ನು ತೆಗೆದುಹಾಕಿಬಿಡಬೇಕೆಂದು ಹೇಳುತ್ತೇನೆ, ಎಂದು ಹೇಳಿದರು ಅದನ್ನು ಕೇಳಿ, ನೀವು ಹೇಳಿದರೆ ಅದೇನೂ ಹೊಸದಲ್ಲ ೨೦೦೦ ವರ್ಷಗಳ ಹಿಂದೆ ಮಹಾಪುರುಷನಾದ ಬುದ್ಧದೇವನೂ ಅದನ್ನು ಹೇಳಿದನು ಆದರೂ ಇನ್ನೂ ಜಾತಿಗಳು ಹೊರಟುಹೋಗಿಲ್ಲ ಮನುಷ್ಯರೆಲ್ಲರೂ ಒಂದೇ ಜಾತಿಯಾದರೆ ಏಕಮತ್ಯ ಉತ್ಪನ್ನವಾಗುವುದು ಭ್ರಾಂತಿ ಜಪಾನಿಯರೂ ಚೀಣರೂ ಬೌದ್ಧರಾದರೂ ಯುದ್ಧಮಾಡುತ್ತಿದ್ದಾರೆ ಕ್ರೈಸ್ತಜನಾಂಗದವರ ಒಬ್ಬರಿಗೊಬ್ಬರು ಯುದ್ಧಮಾಡುತ್ತಾರೆ ಮನುಷ್ಯರನ್ನೆಲ್ಲ ಒಂದೇ ಜಾತಿಯವರನ್ನಾಗಿ ಮಾಡುತ್ತೇನೆನ್ನುವದಾಗಲಿ, ಹಾಗೆ ಮಾಡಿದರೆ ಅದು ಎಂದೆಂದಿಗೂ ಒಂದಾಗಿಯೆ ಇರುತ್ತದೆನ್ನುವದಾಗಲಿ ಅಸಾಧ್ಯ ಬ್ರಾಹ್ಮಣವೃಂದದಲ್ಲಿ ಮೂರುಜನ ಮಹಾಪ್ರಭಾವಿಗಳು ಶಾಸ್ತ್ರಾಧಾರದ ಮೇಲೆ ಮೂರು ಪಂಗಡಗಳನ್ನು ಕಲ್ಪಿಸಿರುವರು ಶ್ರೀ ಮಹಮ್ಮದ್ ಪೈಗಂಬರರ ಮತದಲ್ಲಿ ಅನೇಕ ಪಂಗಡಗಳಾಗಿವೆ ಕ್ರೈಸ್ತರಲ್ಲಿ ಅನೇಕ ವಿಭಾಗಗಳಾಗಿವೆ ವೀರಶೈವರಲ್ಲಿ ಪಂಗಡಗಳಿವೆ ಆಯಾಯ ಜಾತಿಗೆ ಸೇರಿದವರು ಅವರವರ ಧರ್ಮಗಳನ್ನು ಶ್ರದ್ಧೆಯಿಂದ ಪಾಲಿಸಿಕೊಂಡು ಇತರರೊಡನೆ ಮೈತ್ರಿಯಿಂದ ಇರುವಂತೆ ಮಾಡುವುದು ನಮ್ಮ ಕರ್ತವ್ಯ ಕರ್ತವ್ಯವಾಗಿದೆ ಹಾಗಿಲ್ಲದೆ ಎಲ್ಲವನ್ನೂ ತೊಡೆದು ಬಿಟ್ಟು ಎಲ್ಲರೂ ಸುಖಿಗಳಾಗಿರಿ ಎಂದು ಹೇಳುವುದು ಬ್ಯಾಂಕನ್ನು ಬಜಾರ್ ಗೋಡೆಗಳನ್ನೆಲ್ಲಾ ಒಡೆದು ಬಿಟ್ಟು ಎಲ್ಲರೂ ಒಟ್ಟಾಗಿ ವ್ಯಾಪಾರಮಾಡಿ ಎಂದು ಹೇಳುವಂತೆ ಆಭಾಸವಾಗುವದು ಜಾತಿಗಳ ಗುಣಾವಗುಣಗಳನ್ನು ಕೂಲಂಕಷವಾಗಿ ಮನಸ್ಸಿನಲ್ಲಿ ಯೋಚಿಸಿ ಏನು ಮಾಡಿದರೆ ಹಿಂದೂಧರ್ಮಕ್ಕೆ ಚ್ಯುತಿಯಿಲ್ಲದೆ ಮನುಷ್ಯಪ್ರಕೃತಿಗೂ ಅನುಗುಣವಾಗಿರುತ್ತದೆಯೋ ಅದನ್ನು ಹೇಳುವುದು ಅಧ್ಯಕ್ಷರ ಭಾಷಣಕ್ಕೆ ಯುಕ್ತವಾಗಿ ಕಾಣುತ್ತದೆ" ಎಂದು ಹೇಳಿದೆ.

ಅನೇಕ ಭಾಷೆಗಳ ಪಂಡಿತರುಗಳಿಂದ ಕೂಡಿ ಏಕಮನಸ್ಕವಾಗಿ ನಡೆಯುತ್ತಿರುವ ಈ ಮಹಾಸಮ್ಮೇಳನವು ಅದಕ್ಕೆ ನಿದರ್ಶನವಾಗಿದೆ

ತಮ್ಮ ಮಂಡಲಿಯ ಹೆಸರಿನಿಂದ ಇದು ವಿದ್ಯಾಶಾಲೆಗಳಿಗೆ ಸಂಬಂಧಪಟ್ಟ ಪಂಡಿತರುಗಳ ಮಂಡಲಿಯೆಂದು ಅರ್ಥವಾಗುತ್ತದೆ. ತಮ್ಮ ಕಾರ್ಯಕಲಾಪಗಳಲ್ಲಿ ಶಾಲಾಸಂಬಂಧವಿಲ್ಲದ ಪಂಡಿತರುಗಳೂ ಭಾಗಿಗಳಾಗಿರುವದನ್ನು ನೋಡಿದರೆ ಪಂಡಿತಸಾಮಾನ್ಯಕ್ಕೆ ಇದರಲ್ಲಿ ವ್ಯಾಪ್ತಿ ಉಂಟೆಂದು ಕಾಣುತ್ತದೆ.

ಇದನ್ನೇ ಸ್ವಲ್ಪ ವಿಸ್ತರಿಸಿಕೊಂಡು ಹೋದರೆ "ಯಸ್ಯಾಸ್ತಿ ವಿತ್ತಂ ಸ ನರಃ ಕುಲೀನಃ ಸ ಪಂಡಿತಃ" ಎಂದಿರುವದರಿಂದ ಧನಿಕರೂ ಪಂಡಿತಶಬ್ದವಾಚ್ಯರಾಗಿ ತಮ್ಮ ಮಂಡಲಿಗೆ ಸೇರಲು ಅರ್ಹರಾಗಿರುವಂತೆ ಕಾಣುತ್ತದೆ ಪ್ರಕೃತ ಮಂಡಲಿಯ ಸಭಿಕರುಗಳೆಷ್ಟು ಜನ ಇರುವರೆನ್ನುವದು ತಿಳಿಯಲಿಲ್ಲ "ಶತೇಷು ಜಾಯತೇ ಶೂರಃ ಸಹಸ್ರೇಷು ಚ ಪಂಡಿತಃ" ಎಂಬಂತೆ ಸಾವಿರಕ್ಕೆ ಒಬ್ಬರು ಪಂಡಿತರೆಂದೆನಿಸುವದರಿಂದ ಸಂಸ್ಥಾನದ ೭೩ ಲಕ್ಷ ಪ್ರಜೆಗಳಲ್ಲಿ ೭೩೦ ಜನವಾದರೂ ಪಂಡಿತರಾಗಿರಬೇಕು ಅವರುಗಳೆಲ್ಲರೂ ಸಭಿಕರಾಗಿ ತಿಂಗಳಿಗೆ ಪ್ರತಿ ಒಬ್ಬರೂ ನಾಲ್ಕಾಣೆಯಂತೆ ಶುಲ್ಕವನ್ನು ಕೊಟ್ಟರೆ ಮಂಡಲಿಗೆ ವರ್ಷಕ್ಕೆ ೨೨೦೦ ರೂಪಾಯಿಗಳ ವರಮಾನವು ಸ್ಥಿರವಾಗಿ ಸರ್ವತೋಮುಖವಾದ ಅಭಿವೃದ್ಧಿಗೆ ಸಹಾಯಕವಾಗುತ್ತದೆ

ಸಾಮಾನ್ಯವಾಗಿ ಪಂಡಿತರುಗಳನ್ನು ಸಂಬೋಧಿಸುವ ಲೌಕಿಕ ಮಹನೀಯರು ನೀವು ಗೊಡ್ಡು ವೈದಿಕರೆಂಬ ಅಭಿಪ್ರಾಯದಿಂದ ನಿಮ್ಮ ವಿದ್ಯಾಭ್ಯಾಸವೂ ಮನೋವೃತ್ತಿಯೂ ಪ್ರಾಚೀನಗಳೆಂದೂ ನೀವು ಆಧುನಿಕ ಮಾರ್ಗವನ್ನು ಸ್ವಲ್ಪ ಅನುಸರಿಸಬೇಕೆಂದೂ ಹೇಳುವದು ಪದ್ಧತಿಯಾಗಿದೆ ಇದು ಅವರ ಅಜ್ಞತೆಯನ್ನು ತೋರಿಸುತ್ತದೆ. ನೆನ್ನೆ ಈವತ್ತಿಗೆ ಪ್ರಾಚೀನ, ಈವತ್ತು ನೆನ್ನೆಗೆ ಆಧುನಿಕ. ಇವತ್ತು ನಾಳೆಗೆ ಪ್ರಾಚೀನ ನಾಳೆ ಇವತ್ತಿಗೆ ಆಧುನಿಕ. ಕೃತಯುಗದಿಂದ ಇಲ್ಲಿಯವರೆಗೂ ಮನುಷ್ಯರೆಲ್ಲರೂ ಪ್ರಾಚೀನವೆಂಬ ಅಜ್ಞಾನಮಾರ್ಗದಲ್ಲಿ ಮುಳುಗಿದ್ದರೆಂತಲೂ ಈಗ ಹಠಾತ್ತಾಗಿ ಆಧುನಿಕವೆಂಬ ಉಪ್ಪರಿಗೆಯನ್ನೇರಿ ಜಗಚ್ಚಕ್ಷುಗಳೂ, ಸರ್ವಶಕ್ತರೂ, ಸರ್ವವ್ಯಾಪಿಗಳೂ ಆಗಿರುವರೆಂದು ಭಾವಿಸುವದು ಮೌಢ್ಯ

ಈಗ ನಾಲ್ಕು ದಿನಗಳಕೆಳಗೆ ಇಂಡಿಯಾಸರ್ಕಾರದ ಶಾಸನದ ಇಲಾಖೆಯ ಡೈರೆಕ್ಟರ್ ಜನರಲ್‌ರವರು ನಮ್ಮ ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಮಾತನಾಡುತ್ತಾ "ಈಗ್ಗೆ ಕೆಲವುವರ್ಷಗಳ ಹಿಂದೆ ಮನುಷ್ಯ ಜನಾಂಗಗಳ ವಿಭಾಗಗಳನ್ನು ನಿರ್ಣಯಿಸಲು ಶಾಸ್ತ್ರಜ್ಞರು ಅವರ ಮೂಗು ಕಣ್ಣು ಕೇಶ ಇವುಗಳ ವರ್ಣಗಳನ್ನು ಪರಿಶೀಲಿಸುತ್ತಿದ್ದರು ಈಗ ಅದೆಲ್ಲ ವ್ಯರ್ಥವೆಂದು ನಿರ್ಣಯವಾಗಿ, ಬೇರೆ ಬೇರೆ ಜನಾಂಗಗಳ ದೇಹದೊಳಗಿನ ರಕ್ತಗಳ ವೈವಿಧ್ಯದಿಂದ ಅವರ ಜನಾಂಗವನ್ನು ತಿಳಿಯತಕ್ಕದ್ದೆಂದು ಹೇಳುತ್ತಿದ್ದಾರೆ' ಎಂದು ಹೇಳಿದರು.

ಹಾಗೆಯೇ ಇದುವರೆವಿಗೂ Finger-print ಅಥವಾ ಹೆಬ್ಬೆಟ್ಟಿನ ಗುರ್ತಿನಿಂದ ವ್ಯಕ್ತಿಗಳನ್ನು ನಿರ್ಧರಿಸಬಹುದೆಂದು ಶಾಸ್ತ್ರಜ್ಞರು ಹೇಳುತ್ತಿದ್ದರು ಈಗ ಅದು ವ್ಯರ್ಥವೆಂದು ನಿಷ್ಕರ್ಷೆಯಾಗಿ ಹಲ್ಲಿನ ಸರಣಿ ಮುಂತಾದುವುಗಳಿಂದ ನಿಷ್ಕರ್ಷಿಸಲು ಯತ್ನಿಸುತ್ತಿದ್ದಾರೆ ಹೀಗೆ ಸೈಂಟಿಫಿಕ್ ಎನ್ನುವ ಆಧುನಿಕ ಶಾಸ್ತ್ರಗಳಲ್ಲಿ ಮಿಥ್ಯಾಜ್ಞಾನವು ಬೇಕಾದಷ್ಟಿದೆ ಈವತ್ತು ನಿಜವೆಂದು ಉದ್ಘೋಷಿಸುವದು ನಾಳೆ ಸುಳ್ಳಾಗುತ್ತದೆ ಆದರೆ ಈವತ್ತೂ ಅದು ಸುಳ್ಳೇ ಆಗಿತ್ತು ಅದನ್ನು ನಿಜವೆಂದು ಮೋಸಹೋಗಿದ್ದೆವು ಎಂದು ಗೊತ್ತಾಗುತ್ತಿದೆ

ಪ್ರಾಚೀನವೆಂದು ಹೀಯಾಳಿಸಲ್ಪಡುವ ಯಾವ ಶಾಸ್ತ್ರವಾಗಲಿ ಯಾವ ಪದ್ಧತಿಯಾಗಲಿ, ತತ್ತ್ವಜ್ಞಾನದಲ್ಲಾಗಲಿ ಧರ್ಮನಿರ್ಣಯಗಳಲ್ಲಾಗಲಿ ಜೀವನ ನಿಯಮಗಳಲ್ಲಾಗಲಿ ಇದಕ್ಕಿಂತ ಕೀಳಾಗಿಲ್ಲ ತ್ರಿಕಾಲಗಳಲ್ಲಿ ಪ್ರಾಣಾಯಾಮ ಮಾಡಬೇಕೆಂಬುದು ದೇಹದಾರ್ಢ್ಯಕ್ಕೋಸ್ಕರವೇ ವಿನಾ ಮೌಢ್ಯದಿಂದಲ್ಲ ಏಕಾದಶಿಯದಿನ ಶುದ್ಧೋಪವಾಸಮಾಡಿ ದ್ವಾದಶಿ ಕೆಲವು ಉಕ್ತವಾದ ಕಾಯಿಪಲ್ಯಗಳನ್ನು ಸೇವಿಸಬೇಕೆನ್ನುವ ನಿಯಮವು ದೇಹಶುದ್ಧಿಗೋಸ್ಕರವೇ ವಿನಾ ಮೂಢಭಕ್ತಿಗೋಸ್ಕರವಲ್ಲ ಏಕಾದಶಿ ಬೇಡ ನಾವು ಪಂಚಮಿ ದಿವಸ ಉಪವಾಸ ಮಾಡುತ್ತೇವೆನ್ನುವದಾದರೆ ಹಾಗೆಯೇ ಮಾಡಿ. ಭಾನುವಾರ ರಜಾ ಬೇಡ, ನಮಗೆ ಶುಕ್ರವಾರ ಬೇಕು ಎನ್ನುವವರಿಗೆ ಹಾಗೇ ಜಗಬಹುದು

ಈಗಿನ ಕಾಲದವರಿಗೆ "ಮಾತೃದೇವೋ ಭವ, ಪಿತೃದೇವೋ ಭವ" ಎನ್ನುವ ಧರ್ಮವು ಇಷ್ಟವಿಲ್ಲದಿರಬಹುದು. ಅದು ಅವರ ಮೌಢ್ಯ ಆದರೆ "ನಾಪ್ಸು ಮೂತ್ರಪುರೀಷಂ ಕುರ್ಯಾತ್ | ನ ನಿಷ್ಠೀವೇತ್ | ನ ವಿವಸನಸ್ಸ್ನಾಯಾತ್ |" "ನೀರಿನಲ್ಲಿ ಮಲಮೂತ್ರ ವಿಸರ್ಜನೆ ಮಾಡಬಾರದು. ಉಗುಳಬಾರದು. ಬಟ್ಟೆ ಇಲ್ಲದೆ ಸ್ನಾನಮಾಡಬಾರದು," ಎಂದು ಉಪನಿಷತ್ತಿನಲ್ಲಿ ಹೇಳಿರುವದು ಪ್ರಾಚೀನಧರ್ಮವೋ, ಪ್ರತಿ ಒಬ್ಬ ಡಾಕ್ಟರೂ ಹೇಳುವ ನವೀನ ಧರ್ಮವೋ ?

ಹೀಗೆ ಧರ್ಮಶಾಸ್ತ್ರಗಳ ಆಹ್ನಿಕಕಾಂಡಗಳಲ್ಲೂ ಆಚಾರಕಾಂಡಗಳಲ್ಲೂ ಸಹಸ್ರಾರು ನಿಯಮಗಳು ಮನುಷ್ಯನ ಕ್ಷೇಮಕ್ಕಾಗಿ ಹೇಳಲ್ಪಟ್ಟಿವೆ. ಅವು ಕೃತಯುಗಕ್ಕೆ ಮಾತ್ರವಲ್ಲ, ಕಲಿಯುಗದಲ್ಲಿ ಪೂರ್ವಾರ್ಧಕ್ಕೆ ಮಾತ್ರವಲ್ಲ, ಅಪರಾರ್ಧಕ್ಕೂ ಅನ್ವಯಿಸುತ್ತವೆ ಅವು ಜನಕ

ಜನಮೇಜಯ ಮಹಾರಾಯರ ಕಾಲದಲ್ಲಿ ಹೇಗೋ ಶ್ರೀ ಜಯಚಾಮರಾಜೇಂದ್ರ ಮಹಾರಾಜರ ಕಾಲದಲ್ಲೂ ಹಾಗೆಯೇ, ೨೦ ನೇ ಶತಮಾನದಲ್ಲಿ ಹೇಗೋ ೩೦೦ನೇ ಶತಮಾನದಲ್ಲೂ ಹಾಗೆಯೆ, ಮನುಷ್ಯರ ಕ್ಷೇಮಕ್ಕೆ ಅವಶ್ಯಕವಾದ ಧರ್ಮಗಳು ತಾವುಗಳು ಭಸ್ಮಚ್ಛನ್ನವಾದ ಇಂಧನಗಳ ಹಾಗೆ ಇರದೆ ಅವುಗಳನ್ನೆಲ್ಲಾ ಪರಿಶೀಲಿಸಿ ಲೋಕಕ್ಕೆ ಪ್ರಚಾರಪಡಿಸುವದು ತಮ್ಮಗಳ ಕರ್ತವ್ಯವೆಂದು ಸೂಚಿಸುವುದಕ್ಕೆ ಬದಲಾಗಿ, ಪ್ರಾಚೀನವನ್ನು ಬಿಟ್ಟುಬಿಡಿ. ಈಗಿನ ಸ್ವಲ್ಪ ಎ.ಬಿ ಸಿ ಡಿ ಸ್ವಲ್ಪ ಕಾಫಿ, ಸ್ವಲ್ಪ ಮುಖಕ್ಷೌರ, ಸ್ವಲ್ಪ ಒಂದು ಕೋಟು ಇವುಗಳನ್ನು ಅವಲಂಬಿಸಿ," ಎಂದು ಉಪದೇಶ ಮಾಡುವವರು ಮಾರ್ಗದರ್ಶಿಗಳೆಂದು ನಾನು ಹೇಳಲಾರೆ

ಅಧುನಿಕರು ಮೇಲೆಂದೂ ಪ್ರಾಚೀನರು ಕೀಳೆಂದೂ ಯಾವ ಧೈರ್ಯದಮೇಲೆ ಹೇಳಬಹುದು? ಪಾಣಿನಿಯ ವ್ಯಾಕರಣದಂತೆ ಲೋಕದಲ್ಲಿ ಬೇರೆ ಯಾವ ಭಾಷೆಗಾದರೂ ಒಂದು ವ್ಯಾಕರಣವಿದೆಯೇನು? ಮನುಧರ್ಮಶಾಸ್ತ್ರದಂತೆ ಧರ್ಮಸೂಕ್ಷ್ಮಗಳನ್ನು ಪರಿಶೀಲಿಸಿ ಮನುಷ್ಯನಿಗೆ ಬೋಧಿಸುವ ಗ್ರಂಥವು ಬೇರೆ ಯಾವ ಜನಾಂಗದಲ್ಲಾದರೂ ಇದೆಯೇನು? ಕಾರ್ಲ್‌ಮಾರ್ಕ್ಸನ ಪುಸ್ತಕವಾಗಲಿ, ಲೆನಿನ್‌ನ ಪುಸ್ತಕವಾಗಲಿ ಇದಕ್ಕೆ ಸಮವೇನು? ಸಾಯಣಭಾಷ್ಯದಂತೆ ಸಮುದ್ರಸದೃಶವಾದ ಪಾಂಡಿತ್ಯದಿಂದ ಪ್ರಪಂಚವನ್ನು ಆಶ್ಚರ್ಯಗೊಳಿಸುವ ಗ್ರಂಥವು ಬೇರೆ ಎಲ್ಲಾದರೂ ಉಂಟೇನು?

ಭೌತಿಕಶಾಸ್ತ್ರ, ಸಸ್ಯಶಾಸ್ತ್ರ, ವೈದ್ಯಶಾಸ್ತ್ರ, ಯೋಗಶಾಸ್ತ್ರ ನ್ಯಾಯಶಾಸ್ತ್ರ, ಅಲಂಕಾರಶಾಸ್ತ್ರ, ಖಗೋಳಶಾಸ್ತ್ರ, ಜ್ಯೋತಿಷಶಾಸ್ತ್ರ, ಯಾವ ಶಾಸ್ತ್ರದಲ್ಲಿ ಪ್ರಾಚೀನರು ನಮಗೆ ಬಿಟ್ಟಿರುವ ಆಸ್ತಿಗಳು ಅವಹೇಳನೆಗೆ ಅರ್ಹವು? ಈ ಸಂಪತ್ಸಮೃದ್ಧಿಯು ಅಧುನಿಕರಿಗೆ ಇನ್ನೂ ತಿಳಿಯದು ಅದು ಅವರಿಗೆ ತಿಳಿಯುವಂತೆ ಮಾಡುವುದು ಪಂಡಿತಮಂಡಲಿಯ ಸದಸ್ಯರ ಕರ್ತವ್ಯ ಒಂದು ವಿದ್ವತ್ಪರೀಕ್ಷೆಯಾದಮಾತ್ರಕ್ಕೆ, ವಿದ್ವತ್ಸಂಬಳವಾದಮಾತ್ರಕ್ಕೆ, ಪಂಡಿತಕೆಲಸ ಸಿಕ್ಕಿದಮಾತ್ರಕ್ಕೆ, ಕೃತಕೃತ್ಯರಾದೆವೆಂದು ತಿಳಿದುಕೊಳ್ಳದೆ ಶ್ರೀಮಚ್ಛಂಕರಾಚಾರ್ಯರು ತಮ್ಮ ಅತ್ಯಲ್ಪ ಜೀವಮಾನದಲ್ಲಿ, ಶ್ರೀಮದ್ರಾಮಾನುಜಾಚಾರ್ಯರೂ ಶ್ರೀ ಮನ್ಮಧ್ವಾಚಾರ್ಯರೂ, ಶ್ರೀವೇದಾಂತದೇಶಿಕರೂ ಇತರ ಪೂರ್ವಿಕರೂ ಅಮರುಶತಕ ಸತ್ರ್ಯಹಾರಿ ಗೀತಗೋವಿಂದ, ಇವುಗಳಂತೆ ಒಂದ ಗ್ರಂಥವನ್ನು ರಚಿಸಿ ಶತಶ್ಲೋಕೇನಪಂಡಿತಃ' ಎಂಬಂತೆ ಪಂಡಿತರಾಗಿರಲು ತೃಪ್ತರಾಗದ ಎಷ್ಟು ಅಪಾರವಾದ ವಿಸ್ತಾರವಾದ ಅಪ್ರತಿಹತವಾದ ಪಾಂಡಿತ್ಯವನ್ನು ಸಂಪಾದಿಸಿ ಎಷ್ಟು ಜ್ಞಾನಪ್ರಸಾರಮಾಡಿ ಲೋಕೋಪಕಾರಿಗಳೂ ಕೀರ್ತಿಭಾಗಿಗಳೂ ಆಗಿರುವರೆನ್ನುವದನ್ನು ಸ್ಮರಿಸಿಕೊಂಡು, ತಮ್ಮಲ್ಲಿ ಪ್ರತಿ ಒಬ್ಬರೂ ಯಥಾಶಕ್ತಿ ಗಣಿಗಳಲ್ಲಿ ಅಡಗಿರುವ ವಜ್ರವೈಡೂರ್ಯಗಳಂತೆ ಪ್ರಾಚೀನವಿದ್ಯೆಯಲ್ಲಿ ಅಡಗಿರುವ ಲೌಕಿಕ ವೈದಿಕ ತತ್ವಗಳನ್ನು ಜನಸಾಮಾನ್ಯಕ್ಕೆ ತಿಳಿಯಪಡಿಸಲು ಯತ್ನಿಸಬೇಕೆಂದು ಪ್ರಾರ್ಥಿಸುತ್ತೇನೆ

ಹಿಂದೆ ದ್ರೌಪದಿಯು ವನವಾಸದಲ್ಲಿ ಧರ್ಮರಾಯನನ್ನು ಸಂಬೋಧಿಸಿ

'' ಭವಾದೃಶೇಷು ಪ್ರಮದಾಜನೋದಿತಂ ಭವತ್ಯಧಿಕ್ಷೇಪ ಇವಾನುಶಾಸನಂ ।
ತಥಾಪಿ ವಕ್ತುಂ ವ್ಯವಸಾಯಯಂತಿ ಮಾಂ ನಿರಸ್ತನಾರೀಸಮಯಾ ದುರಾಧಯಃ ॥',

ಎಂದು ಹೇಳಿದ ಮಾತುಗಳನ್ನು ಧರ್ಮರಾಯನು ಅಂಗೀಕರಿಸಿದಂತೆ ತಾವುಗಳು ನಾನು ಮೇಲೆ ಹೇಳಿರುವ ಮಾತುಗಳನ್ನು ಅಂಗೀಕರಿಸುವಿರೆಂದು ನಂಬುತ್ತೇನೆ

ತಮ್ಮಗಳೆಲ್ಲರಿಗೂ ಈ ಮಹಾಸಮ್ಮೇಳನಕ್ಕೆ ಆದರಪುರಸ್ಸರವಾಗಿ ಸುಸ್ವಾಗತವನ್ನು ಬಯಸುತ್ತೇನೆ ಇದರ ಆರಂಭೋತ್ಸವವನ್ನು ನೆರವೇರಿಸಲು ಶ್ರೀಯುತ ರಾಜಧರ್ಮಪ್ರಸಕ್ತ ಶೃಂಗಾರವೇಲು ಮೊದಲಿಯಾರ್ರವರು ಕೃಪೆಮಾಡಿ ಒಪ್ಪಿರುವರು ಅವರು ಅನೇಕ ವರ್ಷಗಳಿಂದ ಮೈಸೂರಿನ ಪ್ರಜೆಗಳ ಗೌರವಕ್ಕೂ ಪ್ರೀತಿವಿಶ್ವಾಸಗಳಿಗೂ ಪಾತ್ರರಾಗಿರುವರು ದಿವಾನ್ ಸರ್ ಮಿರ್ಜಾರವರ ಆಪ್ತಕಾರ್ಯದರ್ಶಿಗಳಾಗಿದ್ದು ಜನರಿಗೆ ಹಿತಕಾರಿಗಳಾಗಿದ್ದುದಲ್ಲದೆ ಈಚೆಗೆ ಶ್ರೇಷ್ಠನ್ಯಾಯಾಧೀಶರಾಗಿ ರಾಜಧರ್ಮವನ್ನು ಪ್ರಜೆಗಳಿಗೆ ನಿಷ್ಪಕ್ಷಪಾತವಾಗಿ ಬೀರುತ್ತಿದ್ದರು ಪ್ರಕೃತ ರಾಜಪ್ರತಿನಿಧಿಗಳಾಗಿ ಸಂಸ್ಥಾನದ ವಿಶ್ವವಿದ್ಯಾನಿಲಯದ ಆಳ್ವಿಕೆಯನ್ನು ನಡೆಸುತ್ತಿರುವರು ಅವರು ಸೌಜನ್ಯ ಸೌಶೀಲ್ಯಾದ್ಯನೇಕ ಸದ್ಗುಣಗಳಿಂದ ಭೂಷಿತರಾಗಿ ಎಲ್ಲರಿಗೂ ಮಾನನೀಯರಾಗಿರುವರು ಅವರು ಈ ಆರಂಭೋತ್ಸವವನ್ನು ನಡೆಸುವದೆನ್ನುವದು ಮಹಾಸಮ್ಮೇಳನದ ಗೌರವಕ್ಕೆ ತಕ್ಕದ್ದಾಗಿರುವದು

ಮಹಾಸಮ್ಮೇಳನದ ಅಧ್ಯಕ್ಷಸ್ಥಾನವನ್ನು ವಹಿಸುವ ಶ್ರೀ। ರಾಜಸೇವಾಪ್ರಸಕ್ತ ಎ ಸುಬ್ರಹ್ಮಣ್ಯ ಅಯ್ಯರವರು ದೇವರಂಥಾ ಪುರುಷರು ' ಅಣೋರಣೀಯಾನ್ ಮಹತೋ ಮಹೀಯಾನ್," ಚಿಕ್ಕವರಿಗೆ ಚಿಕ್ಕವರು ದೊಡ್ಡವರಿಗೆ ದೊಡ್ಡವರು ಅವರು ಸದ್ವಂಶಜರೂ ಶಾಸ್ತ್ರಜ್ಞರೂ ದೈವನಿಷ್ಠರೂ ಸರಳಹೃದಯರೂ ಅತಿಸುಲಭರೂ ಪ್ರಜೋಪಕಾರಿಗಳೂ ಆಗಿ ಜನಗಳ ಆದರಕ್ಕೂ ಗೌರವಕ್ಕೂ ಪಾತ್ರರಾಗಿರುವರು ಈ ರಾಜಧಾನಿಯಲ್ಲಿ ನಾನಾ ಸಂಸ್ಥೆಗಳು ಅವರ ಆಶ್ರಯವನ್ನೂ ನಾಯಕತ್ವವನ್ನೂ ಹೊಂದಿ ಮುಂದಕ್ಕೆ ಬರುತ್ತಿರುವವು

ಗುಣವದ್ವಸ್ತು ಸಂಸರ್ಗಾದ್ಯಾತಿ ಸ್ವಲ್ಪೋಽಪಿ ಗೌರವಂ ।
ಪುಷ್ಪಮಾಲಾನುಷಂಗೇಣ ಸೂತ್ರಂ ಶಿರಸಿ ಧಾರ್ಯತೇ ॥

" ಹೂವಿನೊಂದಿಗೆ ನಾರು " ಎಂಬಂತೆ ನಾನು ಈ ಸ್ಥಾನದಲ್ಲಿ ನಿಲ್ಲುವದಕ್ಕೇ ಅವರು ಕಾರಣರಾದ್ದರಿಂದ ಅವರು ಎಂಥ ಗುಣವದ್ವಸ್ತು ಎನ್ನುವದು ಗೊತ್ತಾಗುತ್ತದೆ

ಅವರ ಅಧ್ಯಕ್ಷತೆಯಲ್ಲಿ ಈ ಮಹಾಸಮ್ಮೇಳನವು ಯಶಸ್ವಿಯಾಗಿ ನಡೆದು ತಮ್ಮಗಳೆಲ್ಲರಲ್ಲೂ ಇತೋಽಪ್ಯತಿಶಯವಾದ ಉತ್ಸಾಹವೂ ವಿದ್ಯಾಧಿಕ್ಯವೂ ನೆಲೆಸಿ ತಮ್ಮಗಳಿಂದ ಲೋಕೋಪಕಾರವಾಗಲೆಂದು ಭಗವಂತನನ್ನು ಪ್ರಾರ್ಥಿಸಿ ತಮ್ಮೆಲ್ಲರಿಗೂ ಪುನಃ ಸುಸ್ವಾಗತವನ್ನು ಬಯಸುತ್ತೇನೆ

ಮೈಸೂರು ಜಿ ಆರ್ ಜೋಸ್ಯರ್,
15 6–1945 ಸ್ವಾಗತ ಸಮಿತಿಯ ಅಧ್ಯಕ್ಷ

ಸ್ವೀಕಾರ

ಶಿವಮೊಗ್ಗಾ ಟವನ್ನಿನಲ್ಲಿರುವ ಗವರ್ನ್‌ಮೆಂಟ್ ಹೈಸ್ಕೂಲ್ ಕನ್ನಡ ಪಂಡಿತರಾದ ಶ್ರೀ। ಎಸ್ ಎಂ ಬಸವಯ್ಯನವರು ತಮ್ಮ ಪುತ್ರ ಚಿ। ಶಿವಾನಂದಶರ್ಮನ ದೀಕ್ಷಾ ಸಂಬಂಧವಾಗಿಯೂ ಸದರಿ ಬಾಲಕನು ಮಿಡಲ್ ಸ್ಕೂಲ್ ಪರೀಕ್ಷೆಯಲ್ಲಿ ತೇರ್ಗಡೆಯಾದ ಸಂತೋಷಕ್ಕಾಗಿಯೂ ಪ್ರಭಾಪೋಷಣಕ್ಕೋಸ್ಕರ 2 ರೂಪಾಯಿಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ

ಅರಸೀಕೆರೆ ತಾ|| ಹಾರನಹಳ್ಳಿಯಲ್ಲಿರುವ ಹೊರಗಲಮನೆ ಸಿದ್ಧರಾಮಯ್ಯನವರ ಮಕ್ಕಳು ಪುಟ್ಟಯ್ಯನವರು ತಮ್ಮ ಮನೆಯಲ್ಲಿ ಎರಡು ಸಾರೆ ಶಿವಪುರಾಣವನ್ನು ಪಾರಾಯಣಮಾಡಿಸಿದ್ದಕ್ಕಾಗಿ ಪ್ರಭಾಪೋಷಣಕ್ಕೋಸ್ಕರ 2 ರೂಪಾಯಿಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ

ಧಾರವಾಡ ಡಿ। ಲಕ್ಷ್ಮೇಶ್ವರ ಗ್ರಾಮದಲ್ಲಿರುವ ಮ|| ರಾ|| ಶಿವಜೋಗಪ್ಪ ಗುರಿಕಾರ ಮಾಸ್ತರ್ ಇವರು ತಮ್ಮ ಮಕ್ಕಳ ನಿಶ್ಚಯ ವೀಳೆಯ ಕಾಲಕ್ಕೆ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ 2 ರೂಪಾಯಿಗಳು ಡಾ|| ಎಲ್. ಸಿ. ಹಾಲೇವಾಡಿಮಠ ಇವರ ದ್ವಾರಾ ತಲ್ಪಿರುತ್ತವೆ

ಬೆಂಗಳೂರು ಸಿಟಿ ಅಕ್ಕಿಪೇಟೆ ಯಜಮಾನ್ ಸೊಲ್ಲಪ್ಪನವರ ಮನೆಯಲ್ಲಿ ನೆರವೇರಿದ ವೈಣಿಕ ವಿದ್ವಾನ್ ಶ್ರೀ|| ಸಿ ಸಿದ್ಧನಂಜಾರಾಧ್ಯರು ಮತ್ತು ಚಿ|| ಸೌ|| ರೇಣುಕಾಂಬಾ ಇವರ ವಿವಾಹಮಹೋತ್ಸವದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂಪಾಯಿಯು ಶ್ರೀ ಎಂ ಜಿ ನಂಜುಂಡಾರಾಧ್ಯರ ದ್ವಾರಾ ತಲ್ಪಿರುತ್ತದೆ

ನಿಜಾಂ ಇಲಾಖಾ ಗೊರಟ ಗ್ರಾಮದಲ್ಲಿರುವ ಶ್ರೀಮತಿ ಡುಮಣೆ ಶಿವಮ್ಮನವರ ಮೊಮ್ಮಗ ಚಿ|| ಬಸವಣ್ಣಪ್ಪನಿಗೆ ಇದೇ ಗ್ರಾಮದ ಮ|| ರಾ|| ಅಪ್ಪಾರಾವ್‌ವಂಕೆ ಇವರ ಪುತ್ರಿ ಚಿ|| ಸೌ|| ಸರಸ್ವತೀಬಾಯಿಯನ್ನು ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂಪಾಯಿಯು ಮ|| ರಾ|| ಕಾಶೀನಾಥಪಟವಾದಿ ಇವರ ದ್ವಾರಾ ತಪ್ಪಿರುತ್ತದೆ

ಯುದ್ಧವಾರ್ತೆ.

ಜರ್ಮನಿ ದೇಶದ ಆಡಳಿತ

ಜರ್ಮನಿಯನ್ನು ಈಗ ನಾಲ್ಕುಭಾಗ ಮಾಡಿ ಆಳಲಾಗುತ್ತಿದೆ. ಆ ದೇಶದ ಅರ್ಧಭಾಗ ರಷಿಯನ್ನರ ಆಡಳಿತದಲ್ಲಿದೆ ಮಿಕ್ಕರ್ಧಭಾಗದಲ್ಲಿ ಫ್ರೆಂಚರು, ಅಮೆರಿಕನ್ನರು ಮತ್ತು ಬ್ರಿಟಿಷರು ಆಳುತ್ತಿದ್ದಾರೆ

ಓಕಿನಾವಾದಲ್ಲಿ ಜಪಾನರ ರಕ್ಷಣಸಾಲು ಒಡೆಯಿತು

ಓಕಿನಾವಾ ದ್ವೀಪದಲ್ಲಿ ಅಮೆರಿಕನ್ ದಳಗಳು ಜಪಾನಿ ಕೊತ್ತಳದ ಆಗ್ನೇಯ ಭಾಗದ ಕಂದಕ ಪ್ರದೇಶದಲ್ಲಿ ಸ್ವಲ್ಪ ದೂರ ಮುನ್ನುಗ್ಗಿವೆ ಮಧ್ಯ ರಣರಂಗದಲ್ಲಿ ಮತ್ತೊಂದು ನಗರದ ಹೊರವಳಯವನ್ನು ಸಮೀಪಿಸಲಾಗಿದೆ

ಬೋರ್ನಿಯೋದಲ್ಲಿ ಜಪಾನರು ಎಣ್ಣೆ ಬಾವಿಗಳನ್ನು ನಾಶಮಾಡುತ್ತಿದ್ದಾರೆ

ಬೋರ್ನಿಯೋದಲ್ಲಿರುವ ಬ್ರುನೈ ನಗರದೆಡೆಯಿಂದ ಆ ಕಡೆಗೆ ನುಗ್ಗುತ್ತಿರುವ ಆಸ್ಟ್ರೇಲಿಯನ್ ದಳಗಳಿಗೆ ಭಯಂಕರ ಆಸ್ಫೋಟನ ಶಬ್ದ ಕೇಳಿಬಂತು ಬೂದಾಕಾಶಗಳನ್ನು ಸೇರಿಸಿದಂತೆ ಹೊಗೆಯ ಪರದೆ ಕಾಣಿಸಿಕೊಂಡಿತು ಪ್ರಾಯಶಃ ಜಪಾನರು ಎಲ್ಲ ಎಣ್ಣೆ ಗಣಿಗಳನ್ನೂ ನಾಶಗೊಳಿಸಿ ಹಿಮ್ಮೆಟ್ಟುವರೆಂದು ಇದರಿಂದ ಊಹಿಸಲಾಗಿದೆ

ಜಪಾನಿಗೆ ಇನ್ನೂ ಶರಣೆನ್ನಬೇಕಾದ ಸಂದರ್ಭ ಬಂದಿಲ್ಲ

'ನಮ್ಮ ದೇಶ ಇಂದು ವಿಷಮ ದ್ವಾರದಲ್ಲಿ ನಿಂತಿದೆ. ಪಾರ್ಲಿಮೆಂಟು ನಮಗಿತ್ತಿರುವ ವಿಶೇಷಾಧಿಕಾರವನ್ನೆಲ್ಲ ಬಳಸಿಕೊಂಡು ಈಗ ಇಡೀ ರಾಷ್ಟ್ರವನ್ನೆಲ್ಲ ಯುದ್ಧಪ್ರವೃತ್ತವಾಗಿಸಬೇಕಾಗಿದೆ' ಎಂಬುದಾಗಿ ಜಪಾನೀ ಪ್ರಧಾನಿ ಸುಜುಕಿಯವರು ಪಾರ್ಲಿಮೆಂಟಿನ ಸದಸ್ಯರನ್ನು ಕುರಿತು ಮಾತನಾಡುತ್ತ ನುಡಿದರು ಎಂದು ವರಿಸುತ್ತ 'ಬಿನ್ ಕರಾರು ಶರಣಾಗತಿ ಹೇಳಬೇಕಾದ ಸಂದರ್ಭವೇನೂ ಜಪಾನಿನ ಪಾಲಿಗೆ ಇನ್ನೂ ಬಂದಿಲ್ಲ ಆದರೆ ಈಗ ವಿಶೇಷಾಧಿಕಾರ ಒಳಸಿಕೊಂಡು ಯುದ್ಧಕಾಲದಲ್ಲಿ ಹೊಸ ಹೊಸ ಕಾರ್ಯ ಕ್ರಮಗಳನ್ನು ಕೈಕೊಳ್ಳಬೇಕಾಗಿದೆ ಎಂದು ತಿಳಿಸಿದರು

ಭಾರತಕ್ಕೆ ಲಾರ್ಡ್ ವೇವೆಲ್ಲರ ಸಲಹೆಗಳು!

ಕೇಂದ್ರದಲ್ಲಿ ಹೊಸ ಸರಕಾರ ರಚನೆಯಾಗುವುದು, ಸಂಗ್ರಾಮಖಾತೆಯೊಂದು ಹೊರತು ಉಳಿದೆಲ್ಲ ಅಧಿಕಾರಗಳೂ ಭಾರತೀಯರಿಗೆ ಕೊಡಲ್ಪಡುವದು. ರಾಜಕೀಯ ನಾಯಕರ ಸಲಹೆ ಪಡೆದ ಗವರ್ನರ್ ಜನರಲ್ಲರು ಮಂತ್ರಿಗಳನ್ನು ಆರಿಸುವರು ಹೊಸ ಸರಕಾರವು ಈಗಿನ ಆಡಳಿತ ಶಾಸನದ ಚೌಕಟ್ಟಿನೊಳಗೇ ಕೆಲಸ ಮಾಡಬೇಕು. ವೈಸರಾಯರಿಗೆ ಪರಮಾಧಿಕಾರ ಇದ್ದರೂ ಅಕಾರಣವಾಗಿ ಅವರು ಅದನ್ನು ಬಳಸುವುದಿಲ್ಲ ಇದು ಕೇವಲ ತಾತ್ಕಾಲಿಕ ಸರಕಾರ ಚಿರಸ್ಥಾಯಿಯಾದ ಸರ್ಕಾರರೂಪುಗೊಳ್ಳುವವರೆಗೆ ಇದು ಅಧಿಕಾರದಲ್ಲಿರುವುದು ಸಿಮ್ಲಾದಲ್ಲಿ ಜೂನ್ ೨೫ನೇ ತಾ|| ನಾಯಕರ ಸಮ್ಮೇಳನ ನಡೆಯುವದು; ಅದುಯಶಸ್ವಿಯಾದರೆ ಕೇಂದ್ರದಲ್ಲಿ ಹೊಸ ಸರಕಾರರಚನೆಯಾಗುವದು ವಿಫಲವಾದರೆ ಈಗಿನ ಪ್ರಭುತ್ವವೇ ಮುಂದುವರಿಯುವುದು ಎಂಬುದು ವೈಸರಾಯರು ರೇಡಿಯೋಮೂಲಕ ಭಾರತದ ಮುಂದಿನ ರಾಜಕೀಯ ವ್ಯವಸ್ಥೆ ಕುರಿತು ಮಾಡಿದ ಭಾಷಣದ ಸಾರವಾಗಿದೆ

ಕಾಗದದ ಬೆಲೆಯು ವಿಶೇಷವಾಗಿ ಏರಿರುವುದರಿಂದ ಕೆಲವು ಗ್ರಂಥಗಳ ಮತ್ತು ಫೋಟೋಗಳ ಬೆಲೆಯನ್ನು ಸ್ವಲ್ಪ ಹೆಚ್ಚಿಸಿದ್ದೇವೆ.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ	೦—೬—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುವ) ಸೈಜು ೧೪ × ೧೦ ಬೆಲೆ	೦—೬—೦
ಸಪ್ತ ಪೀಠಾರೋಹಣಮಾಡಿದತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ	೦—೩—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೬
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—೬
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೨—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೨—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದ) ಚಿಕ್ಕಸೈಜು ೧ಕ್ಕೆ	೦—೫—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೨—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಉತ್ಸವದ ಫೋಟೋ	೦—೨—೬

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು. ವೀರಶೈವಮತದಲ್ಲಿ ಸದ್ಯ ದೊರೆಯತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು. ಈ ಗ್ರಂಥವು ಈಗ್ಗೆ ಸುಮಾರು **ಐಸಾವಿರ** ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು. ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭವಾಗಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಅವರ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ವಾಚಕರಿಗೆ ವೇದ್ಯವಾಗುವುದು. ವಾಚಕರ ಅನುಕೂಲಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೫೫೨ ಪುಟಗಳಿಂದ ಕೂಡಿದ್ದು, ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೩ ರೂಪಾಯಿ.**

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ)	೩ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೩ನೆಯ ಆವೃತ್ತಿ)	೩ ಆಣೆ
ಶ್ರೀಗುರುತತ್ತ್ವಪದಗಳು (೩ನೆಯ ಆವೃತ್ತಿ)	೩ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೩ ಆಣೆ
ಶಿವಶಕ್ತಿವಿಲಾಸ	೩ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (-ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೩ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ದು. ೩ನೆಯ ಆವೃತ್ತಿ)	೧। ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ.
ಶ್ರೀಕರಭಾಷ್ಯಂ (ಚಿಕ್ಕ ಸ್ಪ್ರತಿ)	೧' ರೂ
ಸಚಿತ್ರ ರೇಣುಕವಿಜಯ (೩ನೆಯ ಆವೃತ್ತಿ)	೧॥ ರೂ
ವೀರಶೈವರತ್ನ (೫ನೆಯ ಆವೃತ್ತಿ, ೨೦ ಮಹತ್ವದ ಫೋಟೋಗಳಿರುವುದು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರ)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೩ ರೂ
ಶಿವಾಗಮಸಂಗ್ರಹ. (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೩ ರೂ
ವೀರಶೈವಸಿದ್ಧಾಂತಸುಧಾಕರ	೩ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೮೪ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	**4 As.**
The Philosophical Aspect of Virasaivism (*English*)	**8 As.**
Speeches by Pandit Shri Kashinatha Shastriji (*English*)	**12 As**
लिंगधारणचंद्रिका (संस्कृत)	३ रु.
वीरशैवरत्न (मराठी)	१ रु
महानारायणोपनिषत् (वीरशैवभाष्य–संस्कृत)	१ रु.
सिद्धांतशिखामणि (मूल)	८ आ.
नंदिकेश्वरकारिका (संस्कृत)	२ आ.

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರ ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No M 2266 ॥ ಶ್ರೀಜಗದ್ಗುರು ಪಂಚಾಚಾರ್ಯರ ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು. ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೩ ರೂ ೪ ಆಣೆ — ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೧೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೫ನೇ ಜೂನ್ ೧೯೪೫ [ಸಂಚಿಕೆ ೬

ವೀರಶೈವ ಸಿದ್ಧಾಂತ

(ಮೈಸೂರು ದೇಶದ ವಿದ್ಯಾಶಾಲಾ ಪಂಡಿತಮಂಡಲದ ಹನ್ನೊಂದನೆಯ ಮಹಾ ಸಮ್ಮೇಳನದಲ್ಲಿ ಮೈಸೂರಿನಲ್ಲಿರುವ ಆತ್ಮವಿಚಾರಮಂದಿರದ ಅಧ್ಯಕ್ಷರಾದ ಶ್ರೀಮಾನ್ ಎ ಎಚ್ ನಾಗಣ್ಣನವರು ಮಾಡಿದ ಭಾಷಣ)

ಮಾನ್ಯ ಅಧ್ಯಕ್ಷರೇ ಮತ್ತು ಪಂಡಿತವರ್ಯರೇ!

ವೀರಶೈವ ಮತವು ಬಹಳ ಪ್ರಾಚೀನವಾದುದು. ಸ್ವಾಯಂಭುವಾಗಮದಲ್ಲಿ ಹೇಳಿರುವಂತೆ ಪಂಚಜ್ಯೋತಿರ್ಲಿಂಗಗಳಿಂದ ಉತ್ಪನ್ನರಾದ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರಿಂದ ಈ ಮತವು ಸ್ಥಾಪಿಸಲ್ಪಟ್ಟಿರುತ್ತದೆ. ಶಿವನಿಂದ ಶೈವ, ಪಾಶುಪತ, ಸೋಮ, ಲಾಕುಲ ಎಂಬ ಭೇದದಿಂದ ಆಗಮಗಳು ಅನೇಕ ಪ್ರಕಾರವಾಗಿ ಹೇಳಲ್ಪಟ್ಟಿವೆ. ಇವುಗಳಲ್ಲಿ ಶೈವಾಗಮಗಳು ವಾಮ, ದಕ್ಷಿಣ, ಮಿಶ್ರ, ಸಿದ್ಧಾಂತ ಎಂಬುದಾಗಿ ನಾಲ್ಕು ಭಾಗಗಳಾಗಿವೆ. ಕಾಮಿಕಾದಿಯಾಗಿ ವಾತುಲಾಂತವಾದ ಸಿದ್ಧಾಂತನಾಮಕ ಆಗಮಗಳ ಉತ್ತರಭಾಗಗಳಲ್ಲಿ ವೀರಶೈವಮತವು ಪ್ರತಿಪಾದಿಸಲ್ಪಟ್ಟಿರುವುದು. ಈ ಆಗಮಗಳು ವೇದಕ್ಕೆ ಅಂದರೆ ಉಪನಿಷತ್ತುಗಳಿಗನುಸಾರವಾಗಿರುವುದರಿಂದ ವೇದದಂತೆ ಪ್ರಮಾಣಗಳಾಗಿರುವುವು. ಈ ಮತವು ಆಗಮಗಳು ಮತ್ತು ಉಪನಿಷತ್ತುಗಳು ಪ್ರಮಾಣಗಳಾದ್ದರಿಂದ ಇದು ತಾಂತ್ರಿಕ ವೈದಿಕಮತವಾಗಿದೆ. ಶ್ರೀ ರೇಣುಕಾಚಾರ್ಯರು ಶ್ರೀ ಅಗಸ್ತ್ಯಮಹಾಮುನಿಗಳಿಗೆ ಬೋಧಿಸಿದ ವೀರಶೈವ ಸಿದ್ಧಾಂತವನ್ನು ಶ್ರೀ ಶಿವಯೋಗಿ ಶಿವಾಚಾರ್ಯರೆಂಬವರು ತಮ್ಮಿಂದ ರಚಿತವಾದ ಸಿದ್ಧಾಂತ ಶಿಖಾಮಣಿಯೆಂಬ ಗ್ರಂಥದಲ್ಲಿ ಪ್ರತಿಪಾದಿಸಿರುವುದರಿಂದ ಈ ಗ್ರಂಥವು ವೀರಶೈವ ಮತೀಯರಿಗೆ ಪರಮ ಪ್ರಮಾಣವಾಗಿದೆ. ವೀರಶೈವಮತವು ಶಿವಾದ್ವೈತ ಮತ್ತು ಶಕ್ತಿವಿಶಿಷ್ಟಾದ್ವೈತ ಎಂಬುದಾಗಿಯೂ ಕರೆಯಲ್ಪಡುತ್ತದೆ.

ವೇದಾಂತಿಗಳು ಅಂದರೆ ಬ್ರಹ್ಮಾದ್ವೈತಿಗಳು "ಸರ್ವಂ ಖಲ್ವಿದಂ ಬ್ರಹ್ಮ" ಎಂಬ ಶ್ರುತಿಯ ಆಧಾರದಮೇಲೆ ಚರಾಚರಾತ್ಮಕ ಪ್ರಪಂಚವೆಲ್ಲವೂ ಬ್ರಹ್ಮವೆಂದು ಹೇಳುವರು. ವೀರಶೈವ ಮತೀಯರು "ಸರ್ವಂ ಶಿವಮಯಂ ಜಗತ್" ಎಂಬ ಆಗಮ ವಾಕ್ಯದ ಆಧಾರದ ಮೇಲೆ ಚರಾಚರಾತ್ಮಕ ಪ್ರಪಂಚವೆಲ್ಲವೂ ಶಿವನೆಂದು ಹೇಳುವರು. "ಶ್ರುತಿತತಿ ನಿಷ್ಕಲಬ್ರಹ್ಮವೆಯೆಂದು | ಮತತಾಂತ್ರಿಕರಿದ ಪರಶಿವನೆಂದು | ಮತ್ತೆ ಕೆಲರು ನಿಜಲಿಂಗವಿದೆಂದು | ಮತ್ತೆ ಕೆಲರು ನಾರಾಯಣನೆಂದು | ಆ ಸಾಂಖ್ಯರುಗಳ ಪುರುಷನಿದೆಂದು | ವೈಶೇಷಿಕರಿದನೀಶ್ವರನೆಂದು | ಕೆಲಬರು ಬೌದ್ಧರು ಶೂನ್ಯಮಿದೆಂದು | ಕೆಲಬರೊಲಿದು ವಿಜ್ಞಾನವಿದೆಂದು | ಸಾಕಲ್ಪದ ಒಗೆಯಾಳ್ವಂತೆ | ಶಂಕಿಸದುಸುರುವರವರಿದನಂತೆ | ಒಗೆದೆರೆಲಿಂತೆನಲಲ್ಲವೆಯೊಂದು | ಮಿಗುತೆಯನಂ ಚಿನ್ಮಾತ್ರವಿದೊಂದು ||" ಎಂಬುದಾಗಿ ಶ್ರೀಮನ್ನಿಜಗುಣ ಶಿವಯೋಗಿಗಳು ಅಪ್ಪಣೆಮಾಡಿರುವಂತೆ ಶುದ್ಧಜ್ಞಾನ ಸ್ವರೂಪನಾಗಿರತಕ್ಕ ಪರಮಾತ್ಮನೊಬ್ಬನೇ ಬ್ರಹ್ಮ, ಶಿವ, ನಾರಾಯಣ ಮುಂತಾದ ಹೆಸರುಗಳಿಂದ ಕರೆಯಲ್ಪಡುವನಾದ್ದರಿಂದ ಬ್ರಹ್ಮಾದ್ವೈತ ಮತ್ತು ಶಿವಾದ್ವೈತ ಶಬ್ದಗಳಿಗೆ ಯಾವ ವ್ಯತ್ಯಾಸವೂ ಇರುವುದಿಲ್ಲ.

"ಪರಮಾತ್ಮಾದ್ವಯಾನಂದಃ ಪೂರ್ಣಃ ಪೂರ್ವಂ ಸ್ವಮಾಯಯಾ | ಸ್ವಯಮೇವ ಜಗದ್ಭೂತ್ವಾ ಪ್ರಾವಿಶಜ್ಜೀವರೂಪತಃ ||" ಎಂಬುದಾಗಿ ಶ್ರೀ ವಿದ್ಯಾರಣ್ಯಸ್ವಾಮಿಗಳು ತಮ್ಮಿಂದ ರಚಿತವಾದ ವೇದಾಂತ ಪಂಚದಶಿ ಎಂಬ ಗ್ರಂಥದಲ್ಲಿ ಹೇಳಿರುವಂತೆ ಅದ್ವಿತೀಯನೂ (ಎರಡನೇ ಪದಾರ್ಥವೇ ಇಲ್ಲದವನು), ಆನಂದಸ್ವರೂಪನೂ, ಪರಿಪೂರ್ಣನೂ ಆದ ಪರಮಾತ್ಮನು ತನ್ನಲ್ಲಿರತಕ್ಕ ಮಾಯಾಶಕ್ತಿಯ ಸಾಮರ್ಥ್ಯದಿಂದ ತಾನೇ ಜಗತ್ತಾಗಿ ತಾನೇ ಜೀವರೂಪದಿಂದ ಅದರಲ್ಲಿ ಪ್ರವೇಶಮಾಡಿರುತ್ತಾನೆ. ಅಂದರೆ ಪರಮಾತ್ಮನೇ ಪ್ರಪಂಚ ಮತ್ತು ಜೀವರುಗಳ ರೂಪವಾಗಿ ತೋರುತ್ತಿದ್ದಾನೆ ಎಂಬುದಾಗಿ ಬ್ರಹ್ಮಾದ್ವೈತಿಗಳು ಹೇಳುವರು. "ಏಕ ಏವ ಶಿವಸ್ಸಾಕ್ಷಾತ್ ಚಿದಾನಂದ ಮಯೋ ವಿಭುಃ | ನಿರ್ವಿಕಲ್ಪೋ ನಿರಾಕಾರೋ ನಿರ್ಗುಣೋ ನಿಷ್ಪ್ರಪಂಚಕಃ || ತಚ್ಛಕ್ತ್ಯುಪಮಾತ್ಮಾತ್ಮಾ ಭಿನ್ನಾತ್ಮಾನ ವಸ್ತುತ್ರಯಾಭಿಧಃ | ಕಿಂಚಿತ್ಸತ್ತ್ವ ರಜೋರೂಪಂ ಭೋಕ್ತೃಸಂಜ್ಞ ಇವಾಜ್ಞತೇ | ಅತ್ಯಂತ ತಮಸೋಪಾಧಿ ಬ್ರಹ್ಮಚೈತನ್ಯಮೀಶ್ವರ | ಭೋಕ್ತಾ ಭೋಗ್ಯಂ ಪ್ರೇರಯಿತಾ ವಸ್ತುತ್ರಯ ಮಿದ ಸ್ಮೃತಂ || ಗುಣತ್ರಯ ವಿಭೇದೇನ ಪರತತ್ತ್ವೇ ಚಿದಾತ್ಮನಿ | ಭೋಕ್ತೃತ್ವಂ ಚೈವ ಭೋಗ್ಯತ್ವಂ ಪ್ರೇರಕತ್ವಂ ಚ ಕಲ್ಪಿತಂ || ಅಖಂಡೇ ಬ್ರಹ್ಮಚೈತನ್ಯೇ ಕಲ್ಪಿತಂ ಗುಣಭೇದತಃ || ತಸ್ಮಾಚ್ಛಿವಮಯಂ ಸರ್ವಂ ಜಗದೇತಚ್ಚರಾಚರಂ | ತದಭಿನ್ನತಯಾಭಾತಿ ಸರ್ಪತ್ವಮಿವ ರಜ್ಜುತಃ" ಎಂಬುದಾಗಿ ಸಿದ್ಧಾಂತ ಶಿಖಾಮಣಿಯಲ್ಲಿ ಹೇಳಿರುವಂತೆ ಅದ್ವಿತೀಯನೂ, ಜ್ಞಾನಾನಂದ ಸ್ವರೂಪನೂ ಪರಿಪೂರ್ಣನೂ ನಿರ್ಗುಣನೂ, ನಿರಾಕಾರನೂ ಆದ ಶಿವನಲ್ಲಿ ಸತ್ತ್ವರಜಸ್ತಮೋಗುಣಾತ್ಮಕವಾದ ಶಕ್ತಿಯಿರುವುದರಿಂದ ಆ ಶಕ್ತಿಯ ಶುದ್ಧ ಸತ್ತ್ವಗುಣದ ಉಪಾಧಿಯಿಂದ ಪ್ರೇರಕತ್ವ ಅಂದರೆ ಈಶ್ವರತ್ವವು, ಕಿಂಚಿತ್ ಸತ್ವರಜೋಗುಣದ ಉಪಾಧಿಯಿಂದ ಭೋಕ್ತೃತ್ವ ಅಂದರೆ ಜೀವತ್ವವು, ಅತ್ಯಂತ ತಮೋಗುಣದ ಉಪಾಧಿಯಿಂದ ಭೋಗ್ಯತ್ವವು ಅಂದರೆ ಪ್ರಪಂಚತ್ವವು ಶಿವನಲ್ಲಿ ಕಲ್ಪಿತವಾಗಿರುತ್ತದೆ. ಅಂದರೆ ಶಿವನೇ ತನ್ನಲ್ಲಿರತಕ್ಕ ಶಕ್ತಿಯ ಸಾಮರ್ಥ್ಯದಿಂದ ತಾನೇ ಈಶ್ವರರೂಪದಿಂದಲೂ, ಜೀವರೂಪದಿಂದಲೂ ಮತ್ತು ಜಗತ್ತಿನ ರೂಪದಿಂದಲೂ ತೋರುತ್ತಾನೆ. ಆದುದರಿಂದ ಹಗ್ಗದಲ್ಲಿ ತೋರುವ ಹಾವು ಹಗ್ಗಕ್ಕೆ ಭಿನ್ನವಾಗಿಲ್ಲದೇ ಇರುವಂತೆ ಜೀವರು, ಈಶ್ವರ ಮತ್ತು ಜಗತ್ತು ಈಶ್ವರನಿಗೆ ಅಭಿನ್ನವಾಗಿವೆ. ಅಂದರೆ ಎಲ್ಲವೂ ಶಿವಸ್ವರೂಪವೇ ಆಗಿರುತ್ತವೆ ಎಂಬುದಾಗಿ ಶಿವಾದ್ವೈತಿಗಳು ಹೇಳುತ್ತಾರೆ. ಈ ಕಾರಣಗಳಿಂದ ಬ್ರಹ್ಮಾದ್ವೈತಕ್ಕೂ ಶಿವಾದ್ವೈತಕ್ಕೂ ಪ್ರಕ್ರಿಯೆಯಲ್ಲಿ ಭೇದವಿರುವುದಿಲ್ಲ.

ಆದರೆ ಪರಮಾತ್ಮನಲ್ಲಿರತಕ್ಕ ಶಕ್ತಿಯ ಸ್ವರೂಪದಲ್ಲಿ ಬ್ರಹ್ಮಾದ್ವೈತಿಗಳಿಗು ಮತ್ತು ಶಿವಾದ್ವೈತಿಗಳಿಗು ಭಿನ್ನಾಭಿಪ್ರಾಯವಿರುತ್ತದೆ. ಏತಕ್ಕೆಂದರೆ "ನಾಸದಾಸೀನ್ನೋ ಸದಾಸೀತ್ತದಾನೀಂ ತಮ ಆಸೀತ್ತಮಸಾ ಗೂಢಮಗ್ರೇ |" ಎಂಬ ಶ್ರುತಿಯನ್ನು ಪ್ರಮಾಣವನ್ನಾಗಿಟ್ಟುಕೊಂಡು ಶಕ್ತಿಯು ಅನಿರ್ವಚನೀಯವಾಗಿದೆ ಎಂದು ಬ್ರಹ್ಮಾದ್ವೈತಿಗಳು ಹೇಳುವರು. ಅಂದರೆ ಮುಮುಕ್ಷುಗಳಿಗೆ ಅವರ ಪರಮಾತ್ಮಸ್ವರೂಪದ ಜ್ಞಾನಾನಂತರ ಶಕ್ತಿಯು ಕಾರ್ಯಸಹಿತ ಬಾಧೆಯಾಗುವುದರಿಂದ ಅಂದರೆ ಅವರ ಸ್ವರೂಪದಲ್ಲಿ ತೋರದೇ ಇರುವುದರಿಂದ ಪರಮಾತ್ಮನಲ್ಲಿ ಶಕ್ತಿಯು ಇದೆ ಎಂಬುದಾಗಿ ಹೇಳುವುದಕ್ಕಾಗುವುದಿಲ್ಲವೆಂದೂ, ಶಕ್ತಿಯು ತನ್ನ ಕಾರ್ಯವಾದ ಪ್ರಪಂಚರೂಪದಿಂದ ತೋರುತ್ತಿರುವುದರಿಂದ ಶಕ್ತಿಯು ಇಲ್ಲ ಎಂಬುದಾಗಿ ಹೇಳುವುದಕ್ಕಾಗುವುದಿಲ್ಲವೆಂದೂ ಹೇಳುವರು. ಆದರೆ ಶಿವಾದ್ವೈತಿಗಳು "ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ ಸ್ವಾಭಾವಿಕೀ ಜ್ಞಾನಬಲಕ್ರಿಯಾ ಚ" ಎಂಬ ಶ್ರುತಿಯನ್ನು ಪ್ರಮಾಣವನ್ನಾಗಿಟ್ಟುಕೊಂಡು "ಯಥಾ ಚಂದ್ರೇ ಸ್ಥಿರಾ ಜ್ಯೋತ್ಸ್ನಾ ವಿಶ್ವಮಸ್ತು ಪ್ರಕಾಶಿನೀ | ತಥಾ ಶಕ್ತಿರ್ವಿಮರ್ಶಾಖ್ಯಾ ಪ್ರಕಾಶೇ ಬ್ರಹ್ಮಣಿ ಸ್ಥಿರಾ" ಎಂಬುದಾಗಿ ಸಿದ್ಧಾಂತ ಶಿಖಾಮಣಿಯಲ್ಲಿ ಹೇಳಿರುವಂತೆ ಚಂದ್ರನಲ್ಲಿ ಚಂದ್ರಿಕೆಯು ಸ್ವಭಾವವಾಗಿಯು ಮತ್ತು ನಿತ್ಯವಾಗಿಯು ಇರುವಂತೆ ಇಚ್ಛಾಜ್ಞಾನಕ್ರಿಯಾತ್ಮಕವಾದ ವಿಮರ್ಶಾಶಕ್ತಿಯು ಪರಮಾತ್ಮನಲ್ಲಿ ಸ್ವಭಾವವಾಗಿಯು ಮತ್ತು ನಿತ್ಯವಾಗಿಯು ಇರುತ್ತದೆಂದು ಹೇಳುವರು. ಬ್ರಹ್ಮಾದ್ವೈತಿಗಳು ಜ್ಞಾನಾನಂತರ ಶಕ್ತಿಯನ್ನು ಮತ್ತು ಅದರ ಕಾರ್ಯವಾದ ಪ್ರಪಂಚವನ್ನು ಬಾಧೆಮಾಡಿ ಹೇಗೆ ನಿರ್ಗುಣಸ್ವರೂಪದಲ್ಲಿ ನಿಲ್ಲುವರೋ ಹಾಗೆ ಶಿವಾದ್ವೈತಿಗಳು ಜ್ಞಾನಾನಂತರ "ದೇವಾತ್ಮಶಕ್ತಿಂ ಸ್ವಗುಣೈರ್ನಿಗೂಢಾಂ ಅಭಿನ್ನಾಂ ಜ್ಞಾತ್ವಾ ವಿದ್ವಾನ್ ಅಮೃತತ್ವಮೇತಿ" ಎಂಬ ಶ್ರುತಿಯಂತೆಯು ಮತ್ತು "ಶಿವೇನೈಕ್ಯಂ ಸಮಾಪನ್ನಃ ಚಿದಾನಂದಸ್ವರೂಪಿಣಃ | ನ ಪಶ್ಯತಿ ಜಗಜ್ಜಾಲಂ ಮಾಯಾಕಲ್ಪಿತವೈಭವಂ || ಮಾಯಾಶಕ್ತಿತಿರೋಧಾನಾಚ್ಛಿವೇ ಭೇದವಿಕಲ್ಪನಾ | ಆತ್ಮನಸ್ತದ್ವಿನಾಶೇತು ನಾದ್ವೈತಾತ್ ಕಿಂಚಿದಿಷ್ಯತೇ ||" ಎಂಬುದಾಗಿ ಸಿದ್ಧಾಂತ ಶಿಖಾಮಣಿಯಲ್ಲಿ ಹೇಳಿರುವಂತೆ ಶಕ್ತಿಯನ್ನು ಪರಮಾತ್ಮಸ್ವರೂಪವಾಗಿ ತಿಳಿದು ನಿರ್ಗುಣಸ್ವರೂಪದಲ್ಲಿ ನಿಲ್ಲುವರು. ಆದ್ದರಿಂದ ಜೀವನ್ಮುಕ್ತಿಸ್ಥಿತಿಯಲ್ಲಿಯು ಮತ್ತು ಮೋಕ್ಷದಲ್ಲಿಯು ಬ್ರಹ್ಮಾದ್ವೈತಿಗಳಿಗು ಮತ್ತು ಶಿವಾದ್ವೈತಿಗಳಿಗು ಯಾವ ವ್ಯತ್ಯಾಸವೂ ಇರುವುದಿಲ್ಲ. "ವಿಸಬ್ದೇನೋಚ್ಯತೇ ವಿದ್ಯಾ ಶಿವಜೀವೈಕ್ಯಬೋಧಿನೀ | ತಸ್ಯಾಂ ರಮಂತೇ ಯೇ ಶೈವಾಃ ವೀರಶೈವಾಸ್ತು ತೇ ಮತಾಃ |" ಎಂಬುದಾಗಿ ಸಿದ್ಧಾಂತ ಶಿಖಾಮಣಿಯಲ್ಲಿ ಹೇಳಿರುವಂತೆ ಸಮುದ್ರದಲ್ಲಿರತಕ್ಕ ಅಲೆಯು ತನ್ನ ಸ್ವರೂಪವು ಮತ್ತು ಸಮುದ್ರದ ಸ್ವರೂಪವು ನೀರು ಎಂಬುದಾಗಿ ತಿಳಿದು ಸಮುದ್ರದಲ್ಲಿ ಹೇಗೆ ಐಕ್ಯವನ್ನು ಹೊಂದಿ ಸಮುದ್ರಸ್ವರೂಪವಾಗಿಯೇ ಇರುತ್ತದೋ ಹಾಗೆ ಜೀವಾತ್ಮನಾದ ತಾನು ಜ್ಞಾನಸ್ವರೂಪ ಮತ್ತು ಪರಮಾತ್ಮನು ಆದರೆ ಶಿವನು ಜ್ಞಾನಸ್ವರೂಪ ಎಂಬುದಾಗಿ ವಿಚಾರದಿಂದ ತಿಳಿದು ಅನುಭವಕ್ಕೆ ತಂದುಕೊಂಡು ಶಿವಜೀವೈಕ್ಯವನ್ನು ಅಂದರೆ ಶಿವನಲ್ಲಿ ಏಕತ್ವವನ್ನು ಹೊಂದಿ ಶಿವಸ್ವರೂಪದಲ್ಲೇ ನಿಂತಿರುವನೋ ಅವನೇ ವೀರಶೈವನು. ಹಾಗಲ್ಲದೇ ಇದ್ದರೆ ವೀರಶೈವ ಮತದಲ್ಲಿ ಹುಟ್ಟಿದ ಮಾತ್ರಕ್ಕೆ ಹೆಸರಿಗೆ ವೀರಶೈವನೇ ಹೊರತು ನಿಜವಾದ ವೀರಶೈವನಾಗುವುದಿಲ್ಲ.

ಬ್ರಹ್ಮಾದ್ವೈತಕ್ಕು ಮತ್ತು ಶಿವಾದ್ವೈತಕ್ಕು ಪ್ರಕ್ರಿಯೆಯಲ್ಲಿಯು ಮತ್ತು ಫಲದಲ್ಲಿಯು ಯಾವ ವ್ಯತ್ಯಾಸವೂ ಇಲ್ಲದೇ ಇರುವಾಗ ಶಿವಾದ್ವೈತವ ಮತವು ಪ್ರತ್ಯೇಕವಾಗಿ ಏತಕ್ಕೆ ಉಂಟಾಯಿತು ಎಂಬುದಾಗಿ ಕೆಲವರು ಕೇಳಬಹುದು. ಇದಕ್ಕೆ ಸಮಾಧಾನವೇನೆಂದರೆ, ಬ್ರಹ್ಮಾದ್ವೈತಿಗಳಿಗೆ ಆತ್ಮಜ್ಞಾನಕ್ಕೆ ಸಾಧಕವಾದ ವಿಚಾರವೇ ಪ್ರಧಾನವಾಗಿರುವಂತೆ ಶಿವಾದ್ವೈತಿಗಳಿಗೆ ವಿಚಾರದ ಜೊತೆಗೆ ಜ್ಞಾನಕ್ಕೆ ಸಾಧಕವಾದ ಆಚಾರ, ಭಕ್ತಿ ಮತ್ತು ಯೋಗಗಳೂ ಕೂಡ ಪ್ರಧಾನವಾಗಿವೆ. ಏತಕ್ಕೆಂದರೆ, ಶಿವಾದ್ವೈತಿಗಳಿಗೆ ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರ ಎಂಬ ಅಷ್ಟಾವರಣಗಳು, ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ, ಭೃತ್ಯಾಚಾರ ಎಂಬ ಪಂಚಾಚಾರಗಳು ಮತ್ತು ಭಕ್ತ, ಮಾಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಷಟ್‌ಸ್ಥಲಗಳು ಆಚರಣೆಯಲ್ಲಿ ಇರುತ್ತವೆ.

ಅಷ್ಟಾವರಣ

"ಕರುಣೆ ಸತ್ಕಲೆ ಶಾಸ್ತ್ರಪರಿಣತಿ ನಿರಾಶೆ ಸುಂದರತೆ ಸುಮುಖತ್ವ ಸುಗುಣ ಸಜ್ಞಾನಾಗರಲವನೇ ಸೇವ್ಯ ಗುರುವಕ್ಕು" ಮತ್ತು "ಶಿವನ ಚಿತ್ಕಳೆಯಾದ ನಿನ್ನನು ಶುಭುಲಿಂಗವನೊದವಿಪಿದ ಗುರುಚರಣವನು" ಎಂಬುದಾಗಿ ಶ್ರೀಮನ್ನಿಜಗುಣ ಶಿವಯೋಗಿಗಳು ಅಪ್ಪಣೆಕೊಟ್ಟಿರುವಂತೆ ದಾಖಿಗಳಲ್ಲಿ ಕರುಣೆ, ಸದ್ವಿದ್ಯೆ ಮತ್ತು ಸಚ್ಛಾಸ್ತ್ರಗಳಲ್ಲಿ ಪಾಂಡಿತ್ಯ, ಖ್ಯಾತಿ ಲಾಭಗಳಲ್ಲಿ ಆಶೆಯಿಲ್ಲದಿರುವುದು ಅಂಗವೈಕಲ್ಯವಿಲ್ಲದೆ ಮನೋಹರವಾಗಿರತಕ್ಕ ರೂಪ, ಹಸನ್ಮುಖ, ಉತ್ತಮವಾದ ಗುಣಗಳು, ಬ್ರಹ್ಮಜ್ಞಾನ ಇವುಗಳುಳ್ಳವನು ಮತ್ತು ಶಿಷ್ಯನ ದೇಹದಲ್ಲಿ ಶಿವಲಿಂಗವನ್ನು ಧರಿಸಿ ಕ್ರಿಯಾದೀಕ್ಷೆಯನ್ನೂ, ಶಿಷ್ಯನ ಕರ್ಣದಲ್ಲಿ ಪಂಚಾಕ್ಷರಮಹಾಮಂತ್ರವನ್ನು ಉಪದೇಶಿಸಿ ಮಂತ್ರದೀಕ್ಷೆಯನ್ನೂ, ಶಿಷ್ಯನನ್ನು ಕೃಪಾಕಟಾಕ್ಷದಿಂದ ನೋಡಿ ಅವನ ಮಸ್ತಕದ ಮೇಲೆ ತನ್ನ ಹಸ್ತವನ್ನಿಟ್ಟು ಶಿವನೇ ನೀನು ಎಂಬುದಾಗಿ ಬೋಧಿಸಿ ಶಿವತತ್ತ್ವಸಮಾವೇಶದಿಂದ ವೇಧಾದೀಕ್ಷೆಯನ್ನೂ ಮಾಡುವವನು "ಗುರು" ಎಂಬುದಾಗಿ ಕರೆಯಲ್ಪಡುತ್ತಾನೆ. "ಲಯಂ ಗಚ್ಛತಿ ಯತ್ರೈವ ಜಗದೇತಚ್ಚರಾಚರಂ | ಪುನಃ ಪುನಸ್ಸಮುತ್ಪತ್ತಿಂ ತಲ್ಲಿಂಗಂ ಬ್ರಹ್ಮ ಶಾಶ್ವತಂ ||" ಎಂಬುದಾಗಿ ಸಿದ್ಧಾಂತ ಶಿಖಾಮಣಿಯಲ್ಲಿ ಹೇಳಿರುವಂತೆ ಚರಾಚರಾತ್ಮಕವಾದ ಈ ಪ್ರಪಂಚವು ಯಾವುದರಲ್ಲಿ ಲಯವನ್ನು ಹೊಂದುತ್ತದೆಯೋ ಮತ್ತು ಯಾವುದರಲ್ಲಿ ಮರಳಿ ಮರಳಿ ಉತ್ಪತ್ತಿಯನ್ನು ಹೊಂದುತ್ತದೆಯೋ ಅದೇ ನಿತ್ಯವೂ, ಪರಬ್ರಹ್ಮ

[೩ನೆಯ ಪುಟವನ್ನು ನೋಡಿ]

ಪಂಚಾಚಾರ್ಯಪ್ರಭಾ.

೧೯೪೫ನೆಯ ಜೂನ್ ತಾ॥ ೨೫ನೇ ಸೋಮವಾರ

ಶ್ರೀಜಗದ್ಗುರು ಕೇದಾರಪೀಠದ ಸಮಾಚಾರ

ಕೇದಾರಪೀಠಾಧಿಪತಿಗಳಾದ ಶ್ರೀಜಗದ್ಗುರು ನೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರು ಶಿವಾಧೀನರಾದ ಮೇಲೆ ಆ ಪೀಠದ ವ್ಯವಸ್ಥೆಗಾಗಿ ಸರ್ಕಾರದವರು ಈವರೆಗೆ ಚಮೋಲಿ ತಾಲೂಕಿನ ತಹಸೀಲ್‌ದಾರರನ್ನು ರಿಸೀವರನ್ನಾಗಿ ನಿಯಮಿಸಿದ್ದರು. ಇತ್ತೀಚೆಗೆ ಡಿಸ್ಟ್ರಿಕ್ಟ್ ಜಡ್ಜರ ಅಪ್ಪಣೆಯ ಮೇರೆಗೆ ಮುಂದಿನ ಉತ್ತರಾಧಿಕಾರಿಗಳನ್ನು ನಿಯಮಿಸುವ ಕಾರ್ಯಕ್ಕಾಗಿ ಒಬ್ಬ ಸ್ಪೆಷಲ್ ಆಫೀಸರರು ನಿಯಮಿಸಲ್ಪಟ್ಟಿದ್ದಾರೆಂದೂ ಮುಂದೆ ಸ್ವಾಮಿಗಳಾಗುವವರೆಗೂ ಸ್ಪೆಷಲ್ ಆಫೀಸರರೇ ರಿಸೀವರರಾಗಿ ಮಠದ ವ್ಯವಸ್ಥೆಯನ್ನು ಮಾಡುವರೆಂದೂ ತಿಳಿದುಬರುತ್ತದೆ ಪೀಠದ ಮತ್ತು ಎಲ್ಲ ದೇವಸ್ಥಾನಗಳ ವ್ಯವಸ್ಥೆಯೂ ರಿಸೀವರರ ನೇತೃತ್ವದಲ್ಲಿ ಮೊದಲಿನಂತೆಯೇ ಸಮರ್ಪಕವಾಗಿ ನಡೆದಿರುವದೆಂದೂ ಈ ವರ್ಷ ಯಾತ್ರಿಕರ ಸಂಖ್ಯೆಯು ಬಹಳ ಹೆಚ್ಚಾಗಿರುವದೆಂದೂ, ಗೊತ್ತಾಗುತ್ತದೆ

ಪಟ್ಟಚುನಾವಣೆಯ ತಾರೀಖು ಇನ್ನೂ ನಿಶ್ಚಯವಾಗಿಲ್ಲ ಇದಕ್ಕೆ ದಕ್ಷಿಣದೇಶದಿಂದ ಸಾವಿರಾರು ತಾರುಗಳೂ ಮಹಾಮಹಾ ವ್ಯಕ್ತಿಗಳ ಪತ್ರಗಳೂ ಅಲ್ಲಿಯ ಅಧಿಕಾರಿಗಳಿಗೆ ಹೋದುದೇ ಕಾರಣವಾಗಿರುವದು. ಅಲ್ಲಿಯ ಅಧಿಕಾರಿಗಳೂ ಸಹ ಇದಕ್ಕೆ ಏನು ಮಾಡಬೇಕೆಂಬ ಯೋಚನೆಯಲ್ಲಿ ತೊಡಗಿರುವಂತೆ ತೋರಿಬರುತ್ತದೆ ಇಂದಿಲ್ಲ ನಾಳೆಯಾದರೂ ಸ್ಕೀಮಿನಂತೆ ಓಟುಗಳ ಮೂಲಕ ಚುನಾವಣೆಯು ಆಗಲೇಬೇಕು ಅದು ಎಂದೂ ತಪ್ಪಿದ್ದಲ್ಲ

ಈ ಪೀಠಕ್ಕಾಗಿ ಸದ್ಯಃ ೯ ಜನರು ಕ್ಯಾಂಡಿಡೇಟಾಗಿ ನಿಂತು ಸರ್ಕಾರಕ್ಕೆ ಅರ್ಜಿಗಳನ್ನು ಹಾಕಿಕೊಂಡಿದ್ದಾರೆ ಇವರಲ್ಲಿ ಕೆಲವರು ಸ್ಕೀಮಿಗೆ ವಿರುದ್ಧವಾಗಿ ಅರ್ಜಿಗಳನ್ನು ಹಾಕಿಕೊಂಡಿರುವರೆಂದೂ ಆದುದರಿಂದ ಅವರ ಅರ್ಜಿಗಳನ್ನು ಸರ್ಕಾರದವರು ವಜಾಮಾಡಬೇಕೆಂದೂ ಸರ್ಕಾರದಲ್ಲಿ ಬೇರೆ ಶಿಷ್ಯರಿಂದ ಅರ್ಜಿಯು ಹಾಕಿಕೊಳ್ಳಲ್ಪಟ್ಟಿರುವದೆಂದು ತಿಳಿದುಬರುತ್ತದೆ ಈ ತಕರಾರು ಅರ್ಜಿಯ ಫಲಿತಾಂಶವು ಇನ್ನೂ ಗೊತ್ತಾಗಿಲ್ಲ. ಸರಕಾರದವರು ಅರ್ಜಿಯಲ್ಲಿ ಕಾಣಿಸಿರುವ ವಿಷಯವನ್ನು ಸರಿಯಾಗಿ ವಿಮರ್ಶೆಮಾಡದಿದ್ದರೆ ಇದು ಕೋರ್ಟಿನವರೆಗೆ ಹೋಗುವ ಸಂಭವವಿದೆಯೆಂದು ಗೊತ್ತಾಗುತ್ತದೆ. ಒಂದುವೇಳೆ ಕೋರ್ಟಿಗೆ ಹೋದರೆ ಎಲೆಕ್ಷನ್ ನಿಂತುಹೋಗುವದಲ್ಲದೆ, ಆ ಪೀಠಕ್ಕೆ ಸ್ವಾಮಿಗಳಾಗುವುದು ಬಹು ದೀರ್ಘಕಾಲ ಹಿಡಿಯುವುದೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಆದುದರಿಂದ ಸ್ಕೀಮಿಗೆ ವಿರೋಧವಾಗಿ ಅರ್ಜಿಯನ್ನು ಹಾಕಿಕೊಂಡಿರುವ ಮಹಾಶಯರು ತಮ್ಮ ತಮ್ಮ ಅರ್ಜಿಗಳನ್ನು ಹಿಂತೆಗೆದುಕೊಂಡರೆ ಆ ಪೀಠಕ್ಕೆ ಮಹೋಪಕಾರವನ್ನು ಮಾಡಿದಂತಾಗುವುದು ಶ್ರೀಕೇದಾರನಾಥನು ಆ ಮಹಾಶಯರಿಗೆ ಸದ್ಬುದ್ಧಿಯನ್ನೀಯಲೆಂದೂ, ಶ್ರೀಕೇದಾರನಾಥನ ಅನುಗ್ರಹದಿಂದ ಆದಷ್ಟುಬೇಗ ಆ ಪೀಠಕ್ಕೆ ಯೋಗ್ಯ ಗುರುಮೂರ್ತಿಗಳು ಬಂದು, ಆ ಪೀಠದ ಪ್ರಕಾಶವು ಸರ್ವತ್ರ ಬೆಳಗಲೆಂದೂ ಆ ಜಗನ್ನಿಯಾಮಕನನ್ನು ಪ್ರಾರ್ಥಿಸುತ್ತೇವೆ

ಯುದ್ಧವಾರ್ತೆ.

ಉತ್ತರ ಬೋರ್ನಿಯೋದಲ್ಲಿ ಆಸ್ಟ್ರೇಲಿಯನ್ ಯೋಧರು ಇಳಿದರು

ಆಸ್ಟ್ರೇಲಿಯನ್ ಸೇನೆಯ ೯ ನೇ ಡಿವಿಜನ್ನಿನ ಸೈನಿಕರು ಬೋರ್ನಿಯೋದ ಉತ್ತರ ಭಾಗದಲ್ಲಿಳಿದರು ವಿರೋಧಗಳು ಕಂಡುಬರಲಿಲ್ಲ ಇದು ಎಣ್ಣೆ ಕೇಂದ್ರವಾಗಿದ್ದು ಹಿಂದೆಯೇ ಜಪಾನೀಯರು ಎಣ್ಣೆ ಭಾವಿಗಳಿಗೆ ಬೆಂಕಿ ಹತ್ತಿಸಿದ್ದರು

ಓಕಿನಾವಾ ಪರಿಸ್ಥಿತಿ

ಓಕಿನಾವಾದಲ್ಲಿ ಒಂದು ಭಾಗದಲ್ಲಿ ಇನ್ನೂ ಜಪಾನೀ ಪ್ರತಿಭಟನೆ ಇದೆ ಜಪಾನೀ ಸೈನ್ಯಾಧಿಕಾರಿಯು ಅಡಗಿರಬಹುದೆಂದು ಹೇಳಲಾಗಿದೆ ಅಮೆರಿಕನ್ ಸೇನೆಗಳು ಮುಂದೊತ್ತುತ್ತಿವೆ ಕಳೆದ ೨ ದಿವಸಗಳಲ್ಲಿ ಶರಣಾದ ಜಪಾನೀಯರು ಸುಮಾರು ೧೭ ಇರಬಹುದೆಂದೂ ಒಟ್ಟು ಶರಣಾದವರ ಸಂಖ್ಯೆ ಈಗ ನಾಲ್ಕು ಸಾವಿರವಾಗಿದೆಯೆಂದೂ ಅಡ್ಮಿರಲ್ ನಿಮಿಟ್ಸ್ ತಿಳಿಸಿದಾರೆ

ಓಕಿನಾವಾದಲ್ಲಿ ಮಿತ್ರರ ವಿಮಾನ ನಿಲ್ದಾಣ

ಓಕಿನಾವಾ ರಣಕ್ಷೇತ್ರದಲ್ಲಿ ಈಗ ಮಿತ್ರರಿಗೆ ೧೦ ವಿಮಾನ ನಿಲ್ದಾಣಗಳಿವೆ ಮತ್ತು ೧೦ ೦೧೦ ವಿಮಾನಗಳು ಇಲ್ಲಿ ನೆಲಯೂರಿವೆ ಎಂದು ಟೋಕಿಯೋ ರೇಡಿಯೋ ಸಾರಿದ

ಓಕಿನಾವಾ ಯುದ್ಧ ಮುಗಿಯಿತು

ಓಕಿನಾವಾದಲ್ಲಿನ ಘೋರವಾದ ರಕ್ತಪಾತದ ಸಂಗ್ರಾಮವು ಮುಕ್ತಾಯವಾಯಿತು ಅಖಂಡ ೮೨ ದಿನಗಳ ಸಾವು—ಬದುಕಿನ ಹೋರಾಟದನಂತರ ಈ ಯುದ್ಧವು ಕೊನೆಗೊಂಡಿತು ಜಯವನ್ನು ತಂದಿತು ಎಂದು ಅ. ನಿಮಿಟ್ಸರವರು ಪ್ರಕಟಿಸಿದ್ದಾರೆ

ಜಪಾನಿನಲ್ಲಿ ಬಾಂಬು ಬೀಳದ ಸ್ಥಳವೇ ಇಲ್ಲ

ಮೇಜರ್ ಜನರಲ್ ಲಿಮಯೆಯವರು ಈಗ ವಾಷಿಂಗ್‌ಟನ್ನಿನಲ್ಲಿ ಬಂದಿಳಿದಿದ್ದಾರೆ ಇವರು ೨೦ ನೇ ಬಾಂಬರ್ ದಳದ ನಾಯಕರಲ್ಲಿ ಗಣ್ಯನಾಗಿ ಇದ್ದರು ಪತ್ರಿಕಾ ಸುದ್ದಿಗಾರರು ಇವರನ್ನು ಕಂಡಾಗ ಹೀಗೆ ಹೇಳಿದರು “ ಬೃಹತಶಕ್ತಿಯ ಬಾಂಬರ್ ವಿಮಾನಗಳು ದಾಳಿ ನಡೆಸದ ಸ್ಥಳವೇ ಜಪಾನಿನಲ್ಲಿ ಉಳಿದಿಲ್ಲ ಮಿತ್ರ ವೈಮಾನಿಕರು ಸಾವಿರಗಟ್ಟಲೆಯಾಗಿ ಬಾಂಬು ದಾಳಿ ನಡೆಯಿಸುತ್ತಿದ್ದಾರೆ ಯೂರೋಪಿನಲ್ಲಿ ನಡೆದ ಬಾಂಬು ದಾಳಿಯ ಪುನರಾವರ್ತನೆಯೇ ಪೂರ್ವದಲ್ಲಿ ನಡೆಯುತ್ತಿದೆ ” ಎಂದು ತಿಳಿಸಿದರು

ಸಿರಿಯಾದಲ್ಲಿ ಗಲಭೆ

ಸಿರಿಯಾದಲ್ಲಿ ಬ್ರಿಟಿಷ್ ದಳಗಳು ಟರ್ಕಿ ಗಡಿಯಲ್ಲಿರುವ ಪಟ್ಟಣವನ್ನು ಪ್ರವೇಶಿಸಿವೆ ಬೀರಟ್‌ನಲ್ಲಿ ಗೊಂದಲವುಂಟಾಯಿತೆಂದೂ, ಫ್ರೆಂಚ್ ಸೈನಿಕರು ತಲೆ ತಪ್ಪಿಸಿಕೊಳ್ಳುತ್ತಿರುವ ಸ್ಥಳೀಯ ಲೇಪಿಗಳ ಮೇಲೆ ಗುಂಡು ಹಾರಿಸಿದರೆಂದೂ ಗೊತ್ತಾಗಿದೆ ಲೂಟಿ ನಡೆಯುತ್ತಿತ್ತೆಂದೂ, ಬ್ರಿಟಿಷ್ ಸೈನ್ಯಗಳು ಆಸ್ತಿಗಳ ರಕ್ಷಣಾ ಕಾರ್ಯನಿರ್ವಹಿಸಿವೆಯೆಂದೂ ಹೇಳಲಾಗಿದೆ.

ಚೀನೀ ಸೇನೆಗಳ ಮುನ್ನಡೆ

ಲ್ಯೂಚೋ ದಕ್ಷಿಣ ಭಾಗದೆಡೆ ಮುನ್ನಡೆಯುತ್ತಿರುವ ಚೀನೀ ದಳಗಳು ಅಮೆರಿಕನ್ ವಿಮಾನ ನೆಲೆಗಳ ಸಾಲುಗಳನ್ನು ಕಾಣುವಷ್ಟು ದೂರ ಬಂದಿವೆ ಅಮೆರಿಕನ್ ೧೪ ನೇ ಸೇನೆಯ ವಿಮಾನ ಪಡೆಗಳು ಜಪಾನೀ ಸರಬರಾಜು ದಾರಿಗಳ ಮೇಲೆ ದಾಳಿ ನಡೆಸಿ ೨೮ ವಾಹನಗಳನ್ನು ನಾಶಪಡಿಸಿವೆ ಚೀನಾದಲ್ಲಿರುವ ಅಮೆರಿಕನ್ ದಳಗಳು ಬೇಗನೆ ಕೇಂದ್ರವೊಂದನ್ನು ಸ್ಥಾಪಿಸಿಕೊಳ್ಳಬಹುದೆಂದು ಹೇಳಲಾಗಿದೆ

ಜಪಾನ್ ಸಂಧಾನಪ್ರಯತ್ನ

ಕೆಲವು ಜಪಾನೀ ಕೈಗಾರಿಕಾ ನಾಯಕರೂ, ಬಂಡವಲಶಾಹಿಗಳೂ, ದೂರಪೂರ್ವದ ಸಂಬಂಧವನ್ನು ಇನ್ನೂ ಇರಿಸಿಕೊಂಡಿರುವ ಬ್ರಿಟಿಷರನ್ನೂ , ಮತ್ತು ಜಪಾನೀ ಚಕ್ರವರ್ತಿಯನ್ನೂ ಆತನ ಸಾಮ್ರಾಜ್ಯವನ್ನೂ ಉಳಿಸಬೇಕೆಂದು ಬಯಸುವ ಅಮೆರಿಕನರನ್ನೂ ಭೆಟ್ಟಿಮಾಡಿ ಸಂಧಾನಯತ್ನ ನಡೆಸುತ್ತಿದ್ದಾರೆ ಈ ವ್ಯಕ್ತಿಗಳಾರೆಂದು ಇನ್ನೂ ಪೂರ್ಣ ತಿಳಿದಿಲ್ಲ ಈ ವಿಚಾರ ಫ್ರಿಸ್ಕೋದಲ್ಲಿನ ನಮ್ಮ ಪ್ರತಿನಿಧಿಗೆ ತಿಳಿದುಬಂದಿದೆ ಎಂದು ಟಾ ಕುಂಗ್ ಪೋ ಪತ್ರಿಕೆಯು ಬರೆದು ಎಚ್ಚರಿಕೆಕೊಟ್ಟಿದೆ

ಪೋಲೆಂಡ್ ನಾಯಕರಿಗೆ ಶಿಕ್ಷೆ ಆಯಿತು

ರಷ್ಯನರು ವಸ್ತಗಿರಿ ಮಾಡಿದ್ದ ೧೬ ಮಂದಿ ಪೋಲೆಂಡ್ ನಾಯಕರ ವಿಚಾರಣೆ ಮಾಸ್ಕೋದಲ್ಲಿ ನಡೆದು ಅವರಿಗೆ ಸರೆಮನೆ ಶಿಕ್ಷೆ ವಿಧಿಸಲಾಯಿತು ಪೋಲೆಂಡಿನ ಸೇನೆಯ ದಂಡನಾಯಕರಿಗೆ ೧೦ ವರ್ಷ, ಲಂಡನ್ನಿನಲ್ಲಿದ್ದ ಪೋಲಿಷ್ ಸರಕಾರದ ಉಪ ಮಹಾಪ್ರಧಾನರಿಗೆ ಎಂಟು ವರ್ಷ ಮತ್ತಿಬ್ಬರಿಗೆ ತಲಾ ಐದು ವರ್ಷ ಉಳಿದ ೮ ಮಂದಿಗೆ ೪ ರಿಂದ ೧೮ ತಿಂಗಳವರೆಗೆ ಶಿಕ್ಷೆ ವಿಧಿಸಲಾಯಿತು ಉಳಿದ ಮೂವರ ಮೇಲಿನ ಆಪಾದನೆ ಹಿಂತೆಗೆದುಕೊಳ್ಳಲಾಗಿದೆ ಉಳಿದ ಒಬ್ಬನ ವಿಚಾರಣೆಯನ್ನು ಮುಂದಹಾಕಲಾಯಿತು

ಸ್ತ್ರೀಯರಿಗೂ ಓಟಿನ ಅಧಿಕಾರ

ಯುಗೋಸ್ಲಾವಿಯದಲ್ಲಿ ಸಾರ್ವಜನಿಕ ಚುನಾವಣೆ ಬೇಗನೇ ನಡೆಯಲಿದೆ ದೇಶದ ಇತಿಹಾಸದಲ್ಲಿ ಮೊದಲ ಬಾರಿಗ ಸ್ತ್ರೀಯರಿಗೂ ಓಟುಕೊಡುವ ಅಧಿಕಾರ ದೊರೆತಿದೆ ಎಲ್ಲ ಸೈನಿಕರಿಗೂ ಮತವಿದೆ ಯುದ್ಧಪೂರ್ವ ಯುಗೊಸ್ಲಾವಿಯದ ಜನಸಂಖ್ಯೆ 150 ಲಕ್ಷ ಈಗ ಇದರಲ್ಲಿ 17 ಲಕ್ಷ ನಷ್ಟವಾಗಿದ ಇತಿಹಾಸದಲ್ಲಿ ಮೊದಲ ಬಾರಿಗೆ ಯುಗೋಸ್ಲಾವ್ ಜನತೆ ಸಂಘಟಿತರಾಗಿದಾರೆ ಎಂದು ಹೇಳಲಾಗಿದೆ

ಬರ್ಲಿನ್ನಿನ ರಷ್ಯನ್ ಗವರ್ನರ್ ಅಪಘಾತಕ್ಕೊಳಗಾದರು

ಬರ್ಲಿನ್ನಿನ ರಷ್ಯನ್ ಮಿಲಿಟರಿ ಗವರ್ನರರು ಮೋಟರ್ ಕಾರ್ ಅಪಘಾತಕ್ಕೆ ತುತ್ತಾಗಿ ಮರಣ ಹೊಂದಿದರೆಂದು ಮಾರ್ಷಲ್ ಜುಕಾಫ್‌ರವರು ತಿಳಿಸಿದ್ದಾರೆ ಬರ್ಲಿನ್ ಶರಣಾಗತಿಯನ್ನೊಪ್ಪಿ ಸಹಿ ಮಾಡಿದವರಲ್ಲಿ ಇವರೂ ಒಬ್ಬರಾಗಿದ್ದರು

ಬ್ರಿಟಿಷ್ ಸೈನ್ಯವು ಜರ್ಮನಿಯನ್ನು ಆಕ್ರಮಿಸಲಿದೆ

ಆಫ್ರಿಕಾ ಸಂಗ್ರಾಮದಲ್ಲಿ ಅಮರ ಖ್ಯಾತಿ ಪಡೆದು ಮರುಭೂಮಿಯ ಇಲಿಗಳೆಂದು ಹೆಸರು ಪಡೆದ ಬ್ರಿಟಿಷ್ ಸಶಸ್ತ್ರ ೭ನೇ ಡಿವಿಜನ್ ಸೈನ್ಯವು ಬ್ರಿಟನ್ನಿಗೆ ಸೇರಿದ ಜರ್ಮನಿಯ ಭಾಗದ ರಕ್ಷಣೆ ವಹಿಸಿಕೊಳ್ಳಲಿದೆಯೆಂದು ತಿಳಿದು ಬಂದಿದೆ ಈ ವಿಚಾರ ತಿಳಿಸಿದ ಜನರಲ್ ಮಾಂಟ್ಗೋಮರಿಯವರು ‘ಜರ್ಮನಿ ಮೊಣಕಾಲೂರಿದೆ ಇನ್ನೂ ನೆಲದ ಮೇಲೆ ಬಿದ್ದಿಲ್ಲವೆಂದು” ಎಚ್ಚರಿಕೆ ಕೊಟ್ಟಿದ್ದಾರೆ

ಜಪಾನರಿಗೆ ೮೦೦೦೦ ಜನ ನಷ್ಟ

ಓಕಿನಾವಾ ಯುದ್ಧ ಪ್ರಾರಂಭದಿಂದ ಈವರೆಗೆ ಜಪಾನಿಗಳು ೮೦,೦೦೦ ಜನ ಸೈನಿಕರನ್ನು ಆಹುತಿಕೊಟ್ಟರೆಂದು ಹೇಳಲಾಗಿದೆ

ಅಮೇರಿಕನರಿಗಾಗಿರುವ ನಷ್ಟ

ಬಾಟಾನ್ ಮತ್ತು ಕೊರೊಜಡೊರ್‌ಗಳಲ್ಲಿ ಜಪಾನರು ಸೆರೆ ಹಿಡಿದ ಸುಮಾರು 18 ಸಾವಿರ ಅಮೇರಿಕನ್ ಸೈನಿಕರಲ್ಲಿ ಬಿಡುಗಡೆಯಾದವರು ಕೇವಲ 1447 ಸುಮಾರು 3260 ಮಂದಿ ಮಡಿದಿದ್ದಾರೆ ಎಂದು ಅಧಿಕಾರಯುತವಾಗಿ ಹೇಳಲಾಗಿದೆ ಉಳಿದ 13 ಸಾವಿರದಲ್ಲಿ ಅತ್ಯಧಿಕ ಮಂದಿ ಜಪಾನ್, ಚೀನಾ ಮತ್ತು ಫ್ಮೊರ್ ಮೋಸಾಗಳಲ್ಲಿ ಜಪಾನೀ ಸೆರೆಮನೆಗಳಲ್ಲಿರಬಹುದೆಂದು ಊಹಿಸಲಾಗಿದೆ ಎಂದು ಜ|| ಮೆಕಾರ್ಥರ್ ತಿಳಿಸಿದ್ದಾರೆ

ಫ್ರಿಸ್ಕೋ ಸಮ್ಮೇಳನ

ಫ್ರಿಸ್ಕೋದಲ್ಲಿ ನಡೆಯುತ್ತಿರುವ ಜಗಚ್ಛಾಂತಿ ಸಮ್ಮೇಳನವು ನಾಳೆ ಮಂಗಳವಾರ ಅಮೇರಿಕಾ ರಾಷ್ಟ್ರಾಧ್ಯಕ್ಷ ಟ್ರೂಮನ್ನರ ಭಾಷಣದೊಂದಿಗೆ ಮುಕ್ತಾಯಗೊಳ್ಳಲಿದೆ ಎಂದು ಹೇಳಲಾಗಿದೆ

ವೈಸರಾಯರ ಘೋಷಣೆಯ ಸಾರಾಂಶ

(೧) ಹಿಂದೂ ದೇಶದ ಸ್ವರಾಜ್ಯಕ್ಕೆ ಬ್ರಿಟಿಷ್ ಸಾರ್ವಭೌಮ ಸರಕಾರದ ಸಹಾನುಭೂತಿಯಿದೆ (೨) ಹಿಂದೀ ಮುಖಂಡರು ಒಪ್ಪಿಗೆಯಿಂದ ಸಾದರಪಡಿಸುವ ರಾಜ್ಯ ಘಟನೆಯನ್ನು ಬ್ರಿಟಿಷ್ ಸರಕಾರವು ತಪ್ಪದೆ ಒಪ್ಪುವುದು (೩) ತಾತ್ಕಾಲಿಕವಾಗಿ ವೈಸ್ರಾಯರು ಮತ್ತು ಸೇನಾಧಿಪತಿ ಹೊರತು ಮಿಕ್ಕವರೆಲ್ಲರೂ ಹಿಂದೀಯರು ಇರಬೇಕು (೪) ಈ ಸದಸ್ಯರಲ್ಲಿ ೪೦% ಮುಸ್ಲಿಂಲೀಗಿನವರು ೪೦% ಸವರ್ಣ ಹಿಂದುಗಳು ೨೦% ಮಿಕ್ಕ ಅಲ್ಪ ಸಂಖ್ಯಾಂಕ ಸಂಘಡವನರಿರತಕ್ಕದ್ದು (೫) ಸದಸ್ಯರ ಸಂಖ್ಯೆಯನ್ನು ಆಹ್ವಾನಿಸಲ್ಪಟ್ಟ ೨೩ ಸದಸ್ಯರನ್ನೊಳಗೊಂಡ ಸಮಿತಿಯು ಕೊಡತಕ್ಕದ್ದು (೬) ಮೂಲ ವಿಷಯಗಳಿಗೆ ವಿರೋಧವಾಗದಂತಹ ಇತರ ವಿಷಯಗಳ ಒಗ್ಗೆ ಈ ಸಮಿತಿಯು ಶಿಫಾರಸ ಮಾಡಬಹುದು (೭) ೯೩ನೇ ಸೆಕ್ಷನ್ನಿನ ಪ್ರಾಂತಗಳಲ್ಲಿ ಸಮ್ಮಿಶ್ರ ಮಂತ್ರಿಮಂಡಲಗಳ ನಿರ್ಮಾಣ (೮) ಹಿಂದೀ ಮುಖಂಡರ ಬಿಡುಗಡೆ (೯) ಜಪಾನ ವಿರುದ್ಧ ಹಿಂದೂದೇಶವು ಸರ್ವತೋಮುಖವಾಗಿ ಯುದ್ಧ ಕಾರ್ಯದಲ್ಲಿ ಸಹಕರಿಸತಕ್ಕದ್ದು (೧೦) ವೈಸ್ರಾಯರಿಗ ವಿಟೋ ಅಧಿಕಾರವಿರಬೇಕು ಇವೇ ಹತ್ತು ಅಂಶಗಳನ್ನು ವೈಸ್ರಾಯರು ೧೪ ೬-೪೫ ಸಾಯಂಕಾಲ ಘೋಷಿಸಿದರು ೨೩ ಜನ ಮುಖಂಡರಿಗೆ ಆಮಂತ್ರಣವು ಹೋಗಿದೆ ೨೫ ೬-೪೫ರಲ್ಲಿ ಸಿಮ್ಲಾದಲ್ಲಿ ಈ ಸಮಿತಿಯ ಅಧಿವೇಶನವು ನಡೆಯುವದು ಇದನ್ನು ಮುಂದು ವರಿಸಬೇಕೆಂದು ಮಾಡಿದ ಜಿನ್ನಾರವರ ಬೇಡಿಕೆಯು ವ್ಯರ್ಥವಾಯಿತು ೨೪ ೬-೪೫ರಲ್ಲಿ ವೈಸ್ರಾಯರೊಡನೆ ಪ್ರತ್ಯೇಕ ಭೆಟ್ಟಿ ಆಗುವದು ಈ ಘೋಷಣೆಯಿಂದ ಜಿನ್ನಾರವರ ದಿಗ್ವಿಜಯವಾಗಿದೆ ಈ ಘೋಷಣೆಯಿಂದ ಕಾಂಗ್ರೆಸ್ಸು ಸವರ್ಣ ಹಿಂದೂ ಸಂಸ್ಥೆಯಾಯಿತು ಹಿಂದೂ ಮಹಾಸಭೆಯು ಹೇಳಹೆಸರಿಲ್ಲದೆ ಹೋಯಿತು ರಾಷ್ಟ್ರೀಯ ಮುಸಲ್ಮಾನರು ಅದೃಶ್ಯರಾದರು.

ಲಾರ್ಡ್ ವೇವೆಲ್ಲರು ಗವರ್ನರ್ ಜನರಲ್‌ರಾಗಿ ಮಾತ್ರ ಇರುವರು

ವೇವೆಲ್ ಸಲಹೆಗಳನ್ನು ಭಾರತೀಯ ಮುಖಂಡರುಗಳು ಅಂಗೀಕರಿಸುವುದಾದರೆ ಮತ್ತು ಆ ಸಲಹೆಗಳು ಫಲಿತವಾದಲ್ಲಿ ಭಾರತದಲ್ಲಿ ಬ್ರಿಟಿಷ್ ಹೈಕಮಿಷನರಾಗಿ ಸರ್ ಆರ್ಕಿಬಾಲ್ಡ್ ರೋಲೆಂಡ್ಸ್‌ರವರನ್ನು ನೇಮಿಸಲಾಗುವುದು ಲಾರ್ಡ್ ವೇವೆಲ್‌ರು ಕ್ರಮೇಣ ಭಾರತದ ವೈಸರಾಯ್ ಸ್ಥಾನವನ್ನು ಬಿಟ್ಟು, ಕೇವಲ ಗವರ್ನರ್ ಜನರಲ್‌ರಾಗಿ ಮಾತ್ರ ಇರಲು ಪ್ರಯತ್ನ ಪಡುತ್ತಿದ್ದಾರೆ ಬ್ರಿಟಿಷ್ ಹೈಕಮಿಷನರು ಇಂಡಿಯಾ ಆಫೀಸಿಗೆ ಜವಾಬ್ದಾರರಾಗಿರುವಂತೆ ಮಾಡಿ ತಾವು ಗವರ್ನರ್ ಜನರಲ್‌ರಾಗಿಸ್ಸುಕೊಂಡು ಇತರ ಡೊಮಿನಿಯನ್‌ಗಳಲ್ಲಿರುವಂತೆ ವ್ಯವಸ್ಥೆ ಮಾಡಲು ವೇವೆಲ್ಲರು ಪ್ರಯತ್ನಿಸುತ್ತಿದ್ದಾರೆಂದು ಹೇಳಲಾಗಿದೆ

[೧ನೆಯ ಪುಟದಿಂದ ಮುಂದುವರೆದುದು]

ಸ್ವರೂಪವೂ ಅದೆ "ಲಿಂಗ" ಎಂಬ ದಾಗಿ ಹೇಳಲ್ಪಡುತ್ತದೆ ಇದು ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗ ಎಂಬುದಾಗಿ ಮೂರು ಪ್ರಕಾರವಾಗಿದೆ. ಶಿಷ್ಯನ ಮಸ್ತಕದಲ್ಲಿರುವ ಅಖಂಡವಾಗಿರತಕ್ಕ ಶಿವಕಳೆಯನ್ನು ಗುರುವು ಆಕರ್ಷಣಪೂರ್ವಕವಾಗಿ ಶಿಲೆಯಲ್ಲಿ ಆವಾಹಿಸಿ ಶಿಷ್ಯನು ಹಸ್ತಕಮಲವಲ್ಲಿಟ್ಟುಕೊಂಡು ಪೂಜಿಸುವುದಕ್ಕಾಗಿ ಕೊಡತಕ್ಕ ಶಿವಲಿಂಗವೇ ಇಷ್ಟಲಿಂಗವು ಇದು ಅನಿಷ್ಟವನ್ನು ಪರಿಹಾರವನಾಡಿ ಇಷ್ಟಾರ್ಥವನ್ನು ಅಂದರೆ ಮೋಕ್ಷವನ್ನು ಕೊಡುವುದರಿಂದ ಇದು ಇಷ್ಟಲಿಂಗವೆಂದು ಕರೆಯಲ್ಪಡುತ್ತದೆ ನಮ್ಮ ಸ್ಥೂಲದೇಹಕ್ಕೆ ಪ್ರಾಣವು ಹೇಗೆ ಆಧಾರವಾಗಿದೆಯೋ ಹಾಗೆ ಪರಶಿವನು ಪ್ರಾಣಕ್ಕೆ ಆಧಾರವಾಗಿದ್ದಾನೆ ಆದುದರಿಂದ ಶಿಷ್ಯನ ದೇಹದೊಳಗೆ ಪ್ರಾಣಕ್ಕೆ ಪ್ರಾಣವಾಗಿರತಕ್ಕ ಅಖಂಡಪರಶಿವನೇ ಪ್ರಾಣಲಿಂಗವೆಂದು ಕರೆಯಲ್ಪಡುತ್ತಾನೆ. ಅಂದರೆ ಶಿಷ್ಯನ ದೇಹದ ಒಳಗೂ ಹೊರಗೂ ಅಖಂಡವಾಗಿರುವ ಪರಶಿವನೇ ಹೊರಗಡೆ ಸ್ಥೂಲದೇಹದಿಂದ ಇಷ್ಟಲಿಂಗರೂಪದಿಂದ ಪೂಜಿಸಲ್ಪಡುತ್ತಾನೆ ದೇಹದ ಒಳಗಡೆ ಮನಸ್ಸಿನಿಂದ ಪ್ರಾಣಲಿಂಗರೂಪವಾಗಿ ಧ್ಯಾನಿಸಲ್ಪಡುತ್ತಾನೆ ಇಷ್ಟಲಿಂಗದಲ್ಲಿರತಕ್ಕ ಶಿಲಾಭಾವವನ್ನು ತಳ್ಳಿ ಜ್ಞಾನಾಕಾರವಾಗಿರತಕ್ಕ ಶಿವಕಳೆಯಲ್ಲಿ ಲಕ್ಷ್ಯವನ್ನಿಟ್ಟು ಅದನ್ನು ಅನನ್ಯವಾಗಿ ಪೂಜಿಸಬೇಕು ಮತ್ತು ದೃಷ್ಟಿ, ಮನಸ್ಸು, ಭಾವ ಇವುಗಳನ್ನು ಇಷ್ಟಲಿಂಗದಲ್ಲಿ ಸಂಯೋಗವಾಗಿ ಉಪಮೆಯಾದ ಆಚಿಂತ್ಯ ಶಿವಸ್ವರೂಪಸ್ಥಿತಿಯಲ್ಲಿ ನಿಲ್ಲಬೇಕು ಪ್ರಾಣಲಿಂಗವನ್ನೂ ಕೂಡ ಜ್ಞಾನಾಕಾರದಿಂದ ಧ್ಯಾನಿಸಬೇಕು. ಒಂದೇ ಪರಬ್ರಹ್ಮವಸ್ತುವು ಹೊರಗೆ ಪೂಜಿಸಲ್ಪಟ್ಟಾಗ ಇಷ್ಟಲಿಂಗವೆಂಬುದಾಗಿಯೂ, ಒಳಗಡೆ ಧ್ಯಾನಿಸಲ್ಪಟ್ಟಾಗ ಪ್ರಾಣಲಿಂಗವೆಂಬುದಾಗಿಯೂ, ಒಳಗೆ ಹೊರಗೆ ಎಂಬ ಭಾವವು ಹೋಗಿ ಅಖಂಡವಾದ ಸ್ಥಿತಿಯಲ್ಲಿ ನಿಂತರೆ ಭಾವಲಿಂಗವೆಂಬ ದಾಗಿಯೂ ಹೇಳಲ್ಪಡುತ್ತದೆ

ಸ್ವರೂಪಜ್ಞಾನಸಂಪನ್ನೋ ಧ್ವಸ್ತಾಹಂ ಮಮತಾಕೃತಿಃ । ಸ್ವಯಮೇವ ಸ್ವಯಂ ಭೂತ್ವಾ ಚರತೀತಿ ಚರಾಭಿಧಃ ॥ ಕಾಮಕ್ರೋಧಾದಿನಿರ್ಮುಕ್ತ ಶಾಂತಿದಾಂತಿ ಸಮನ್ವಿತಃ । ಸಮಬುದ್ಧ್ಯಾ ಚರೇದ್ಯೋಗೀ ಸರ್ವತ್ರ ಶಿವಬುದ್ಧಿಮಾನ್ ॥ ಇದಂ ಮುಖ್ಯಮಿದಂ ಹೀನಮಿತಿ ಚಿಂತಾಮಕಲ್ಪಯನ್ । ಸರ್ವತ್ರ ಸಂಚರೇದ್ಯೋಗೀ ಸರ್ವಂ ಬ್ರಹ್ಮೇತಿ ಭಾವಯನ್ । ನಸ್ತ್ರಾನೇಷು ಸಂಪ್ರೀತಿಂ ನಾವಮಾನೇಷು ಚ ವ್ಯಥಾಂ । ಕುರ್ವಾಣಸ್ಸಂಚರೇದ್ಯೋಗೀ ಕೂಟಸ್ಥೋ ನಾತ್ಮನಿ ಸ್ಥಿತಃ । ಎಂಬ ಸಿದ್ಧಾಂತ ಶಿಖಾಮಣಿಯ ವಚನಗಳಂತೆ ಸ್ವಸ್ವರೂಪಜ್ಞಾನವನ್ನು ಪಡೆದು, ಅಹಂಕಾರಮಮಕಾರಗಳನ್ನು ಬಿಟ್ಟು ಕಾಮಕ್ರೋಧಗಳಿಲ್ಲದೆ, ಶಾಂತಿದಾಂತಿಗಳಿಂದ ಕೂಡಿ, ಇದು ಉತ್ತಮ ಇದು ಕನಿಷ್ಠವೆಂದು ಯೋಚಿಸದೆ, ಸರ್ವವೂ ಬ್ರಹ್ಮವೆಂದು ಭಾವಿಸುತ್ತಾ, ಮಾನಾವಮಾನಗಳಲ್ಲಿ ಹರ್ಷವಿಷಾದಗಳನ್ನು ಹೊಂದದೆ, ಪರಮಾತ್ಮನಲ್ಲಿ ಏಕತ್ವವನ್ನು ಹೊಂದಿ ಸ್ವೇಚ್ಛೆಯಿಂದ ಸಂಚರಿಸುವವನೇ 'ಜಂಗಮ' ಎಂಬುದಾಗಿ ಕರೆಯಲ್ಪಡುತ್ತಾನೆ ಇವನು ಸದಾ ಸಂಚರಿಸುತ್ತಿರುವುದರಿಂದ ಇವನಿಗೆ ಚರ ಎಂಬುದಾಗಿ ಹೆಸರುಂಟು ಈ ಬ್ರಹ್ಮಜ್ಞಾನಿಯಾದ ಜಂಗಮನು ಸಂಚಾರ ಮಾಡತಕ್ಕ ಸ್ಥಳಗಳಲ್ಲಿರತಕ್ಕ ಶಿವಭಕ್ತರುಗಳು ಇವನ ಸೇವೆಯನ್ನು ಮಾಡಿ ತಮ್ಮ ಪಾಪಗಳನ್ನು ಕಳೆದುಕೊಂಡು ಬ್ರಹ್ಮಜ್ಞಾನಕ್ಕೆ ಕಾರಣವಾದ ಮನಸ್ಸಿನ ನಿರ್ಮಲತ್ವವನ್ನು ಹೊಂದುತ್ತಾರೆ "ಭಸ್ಮೋದ್ಧೂಳಿತ ಸರ್ವಾಂಗಾ ಧೃತರುದ್ರಾಕ್ಷಮಾಲಿಕಾಃ । ಯೇ ಭವಂತಿ ಮಹಾತ್ಮಾನೋ ರುದ್ರಾಸ್ತೇ ನಾತ್ರ ಸಂಶಯಃ ॥ ಎಂಬುದಾಗಿ ಸಿದ್ಧಾಂತ ಶಿಖಾಮಣಿಯಲ್ಲಿ ಹೇಳಿರುವಂತೆ ಪರಶಿವನ ಚಿಹ್ನೆಗಳಾದ ವಿಭೂತಿ ರುದ್ರಾಕ್ಷಿಗಳನ್ನು ಧರಿಸುವದರಿಂದ ಅಂತಃಕರಣವು ಪರಿಶುದ್ಧವಾಗಿ ಶಿವಜ್ಞಾನಕ್ಕೆ ಸಾಧಕವಾಗುವುದು. "ಶಿವೇತಿ ಮಂತ್ರಮುಕ್ತಿ ಮಂತ್ರಮೇನಂ ಮಹಾತ್ಮಾ ಪ್ರಣವಸಹಿತಮಾದೌ ಯಸ್ತು ಪಂಚಾಕ್ಷರಾಖ್ಯಂ ॥ ಜಪತಿ ಪರಮಭಕ್ತ್ಯಾ ಪೂಜಯನ್ ದೇವ ದೇವಂ । ಸ ಗತದುರಿತ ಬಂಧೋ ಯಾತಿ ಮೋಕ್ಷಲಕ್ಷ್ಮೀಂ ಪ್ರಯಾತಿ ॥" ಎಂಬುದಾಗಿ ಸಿದ್ಧಾಂತ ಶಿಖಾಮಣಿಯಲ್ಲಿ ಹೇಳಿರುವಂತೆ ಶಿವನೊಬ್ಬನೇ ಪಂಚಾಕ್ಷರೀ ಮಂತ್ರವನ್ನು ಪ್ರಣವಸಹಿತವಾಗಿ ಅಸಾಧಾರಣವಾದ ಭಕ್ತಿಯಿಂದ ಯಾವನು ಜಪಿಸುತ್ತಾನೋ ಅವನು ಸರ್ವಪಾಪಗಳಿಂದ ಬಿಡುಗಡೆಯನ್ನು ಹೊಂದಿ ಮೋಕ್ಷಕ್ಕೆ ಸಾಧಕವಾದ ಮನಸ್ಸಿನ ನಿರ್ಮಲತ್ವವನ್ನು ಹೊಂದುತ್ತಾನೆ ಗುರು ಮತ್ತು ಜಂಗಮರುಗಳು ಆತ್ಮಜ್ಞಾನಿಗಳಾಗಿ ಶಿವನಲ್ಲಿ ಏಕತ್ವವನ್ನು ಪಡೆದಿರುವುದರಿಂದ ಅವರು ಶಿವಸ್ವರೂಪರಾಗಿರುತ್ತಾರೆ. ಅಂದರೆ 'ಏಕ ಏವ ಶಿವಸ್ಸಾಕ್ಷಾತ್ ಸರ್ವಾನುಗ್ರಹಕಾರಕಃ । ಗುರುಜಂಗಮಲಿಂಗಾತ್ಮಾ ವರ್ತತೇ ಭುಕ್ತಿಮುಕ್ತಿದಃ ॥' ಎಂಬುದಾಗಿ ಸಿದ್ಧಾಂತ ಶಿಖಾಮಣಿಯಲ್ಲಿ ಹೇಳಿರುವಂತೆ ಶಿವನೊಬ್ಬನೇ ಭಕ್ತರಿಗೆ ಭೋಗಮೋಕ್ಷಗಳನ್ನು ಕೊಡುವುದಕ್ಕಾಗಿ ಗುರು, ಜಂಗಮ, ಲಿಂಗರೂಪನಾಗಿರುತ್ತಾನೆ. ಆದುದರಿಂದ ಗುರು ಲಿಂಗ ಜಂಗಮರ ಪಾದೋದಕ ಪ್ರಸಾದಗಳನ್ನು ಸ್ವೀಕರಿಸುವುದರಿಂದ ಜ್ಞಾನಕ್ಕೆ ಕಾರಣವಾದ ಮನಸ್ಸಿನ ನಿರ್ಮಲತ್ವವು ಉಂಟಾಗುತ್ತದೆ ಆದರೆ, ಮೇಲೆ ಹೇಳಿದ ಲಕ್ಷಣಗಳುಳ್ಳ ಗುರು ಜಂಗಮರ ಪಾದೋದಕ ಪ್ರಸಾದಗಳನ್ನು ಸ್ವೀಕರಿಸಿದರೇನೇ ಮೇಲೆ ಹೇಳಿದ ಫಲವಾಗುತ್ತದೆಯೋ ಹೊರತು ವೇಷಧಾರಿಗಳಾದ ಗುರು ಜಂಗಮರ ಪಾದೋದಕ ಪ್ರಸಾದಗಳನ್ನು ತೆಗೆದುಕೊಂಡರೆ ಕೊಟ್ಟವರಿಗು ಮತ್ತು ತೆಗೆದುಕೊಂಡವರಿಗು ವಿಪರೀತವಾದ ಫಲವಾಗುತ್ತದೆ

ಪಂಚಾಚಾರಗಳು

ಶ್ರೀ ಗುರುವಿನಿಂದ ಅನುಗ್ರಹಿಸಲ್ಪಟ್ಟ ಇಷ್ಟಲಿಂಗಕ್ಕಿಂತಲೂ ಶ್ರೇಷ್ಠವಾದ ದೈವವು ಈ ಪ್ರಪಂಚದಲ್ಲಿ ಬೇರೆ ಯಾವುದೂ ಇಲ್ಲವೆಂದು ತಿಳಿಯುವುದೇ ಲಿಂಗಾಚಾರವೆನಿಸುವುದು ಧರ್ಮಬುದ್ಧಿಯಿಂದ ಗಳಿಸಿದ ದ್ರವ್ಯದಿಂದ ಯಾವಾಗಲೂ ಗುರು ಲಿಂಗ ಜಂಗಮರನ್ನು ತೃಪ್ತಿಪಡಿಸುವುದೇ ಸದಾಚಾರವೆನಿಸುವುದು ಸೃಷ್ಟಿ ಸ್ಥಿತಿ-ಸಂಹಾರ-ತಿರೋಧಾನ-ಅನುಗ್ರಹರೂಪ ಪಂಚಕೃತ್ಯಪರಾಯಣನಾದ ಶಿವನೇ ಪರಬ್ರಹ್ಮವೆಂದೂ, ಆ ಶಿವನ ಹೊರತು ಬೇರೆ ಗತಿಯೇ ಇಲ್ಲವೆಂದೂ ತಿಳಿಯುವುದೇ ಶಿವಾಚಾರವೆನಿಸುವುದು. ಶಿವನ, ಶಿವಭಕ್ತರ ಮತ್ತು ಶಿವಧರ್ಮಾದಿಗಳ ನಿಂದೆಯನ್ನು ಕಿವಿಯಿಂದ ಕೇಳದಿರುವುದೇ ಗಣಾಚಾರವೆನಿಸುವುದು. ಈ ಭೂಮಂಡಲದಲ್ಲಿರುವ ಶಿವಭಕ್ತರೆಲ್ಲರೂ ಶ್ರೇಷ್ಠರೆಂದೂ, ನಾನು ಅವರ ಸೇವಕನೆಂದೂ ಭಾವಿಸುವುದೇ ಭೃತ್ಯಾಚಾರವೆನಿಸುವುದು.

ಶ್ರೀ ಜಗದ್ಗುರು ಕಾಶೀಪೀಠಕ್ಕೆ ಕಾಣಿಕೆ

ಪ್ರಭೆಯಲ್ಲಿ ಕಾಶೀಪೀಠದ ಸಮಾಚಾರವೆಲ್ಲವೂ ಈ ಹಿಂದೆ ಪ್ರಕಾಶಿತವಾಗಿದೆ ಅದರಂತೆ ಗುರುಭಕ್ತರು ಗುರುದಕ್ಷಿಣೆಯನ್ನು ಪೀಠಕ್ಕೆ ಸಲ್ಲಿಸುತ್ತಿದ್ದಾರೆ ಈ ಕೆಲಸವು ಇನ್ನೂ ವಿಶೇಷವಾಗಿ ಸಾಗಬೇಕಾಗಿದೆ ಆಯಾ ಸ್ಥಳಗಳಲ್ಲಿಯ ಪ್ರಮುಖರು ವೀರಶೈವ ಮಹಾಜನರಿಂದ ವಿವಾಹಾದಿ ಶುಭಕಾರ್ಯಗಳಲ್ಲಿ ದಾನ ದಕ್ಷಿಣೆಗಳನ್ನು ಸಮರ್ಪಿಸಿ ಕಾಶೀ ಜಗದ್ಗುರು ಮಹಾಸನ್ನಿಧಿಗೆ ಕಳುಹಿಸುತ್ತಿರಬೇಕು ಈ ಬಗ್ಗೆ ಸರಿಯಾದ ಸೇವೆಯನ್ನು ಸಲ್ಲಿಸುವುದು ಸರ್ವ ಗುರುಭಕ್ತರ ಮುಖ್ಯ ಕರ್ತವ್ಯವಾಗಿದೆ ಎಂಬುದನ್ನು ತಿಳಿದು ಎಲ್ಲರೂ ಪ್ರಯತ್ನಿಸಬೇಕು

ಸ್ವೀಕಾರ

ಬೆಳಗಾಂವ ಡಿ|| ಪರಸಗಡ ತಾ| ಸತ್ತಿಗೇರಿಗ್ರಾಮದ ಹಿರೇಮಠದ ಶ್ರೀ ಪಟ್ಟದಸ್ವಾಮಿಗಳವರು ತಮ್ಮ ಉತ್ತರಾಧಿಕಾರವನ್ನು ಮುರಗೋಡು ಹಿರೇಮಠದ ವೇ| ರಾಚಯ್ಯನವರ ಪುತ್ರ ಶಿವಲಿಂಗಯ್ಯನೆಂಬ ವಟುವಿಗೆ ವಹಿಸಿ ತಾ| 21 ೫ ೪೫ ನೆಯ ದಿವಸ ಪಟ್ಟಾಭಿಷೇಕ ಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 5 ರೂಪಾಯಿಗಳು ಮ|| ರಾ|| ಹುಬ್ಬಳ್ಳಿ ಬೊಮ್ಮಾಪುರ ಪಾಟೀಲ ಶಿವನಗೌಡರ ದ್ವಾರಾ ತಲ್ಪಿರುತ್ತವೆ.

ಚಳ್ಳಕೆರೆ ತಾ|| ಪರಶುರಾಮಪುರದ ಪಟೇಲ ದೊಡ್ಡಪ್ಪನವರ ಪುತ್ರಿ ಚಿ|| ಸೌ|| ಈಶ್ವರಮ್ಮನಿಗೂ ಕಲ್ಲೇದೇವರಪುರದ ಮ|| ರಾ| ಒಳೆಶೆಟ್ಟರ ಕಲ್ಲಪ್ಪನವರ ಪುತ್ರ ಚಿ|| ಚನ್ನಬಸಪ್ಪನಿಗೂ ಮತ್ತು ಕೊರ್ಲಕುಂಟೆ ಗ್ರಾಮದ ಕೈ|| ಜಿ ಶಾಂತವೀರಪ್ಪನವರ ಪುತ್ರಿ ಚಿ|| ಸೌ|| ಸಿದ್ಧಲಿಂಗಮ್ಮನಿಗೂ ಕಲ್ಲೇದೇವರಪುರದ ನಂದೀಕೋಲು ಕಲ್ಲಪ್ಪನವರ ಪುತ್ರ ಚಿ|| ತಿಪ್ಪೇಸ್ವಾಮಪ್ಪನಿಗೂ ಪರಶುರಾಮಪುರದ ಪಟೇಲ್ ದೊಡ್ಡಪ್ಪನವರ ಗೃಹದಲ್ಲಿ ನೆರವೇರಿದ ವಿವಾಹಸಮಯದಲ್ಲಿ ಮ|| ರಾ|| ಪಿ ಯರಗುಂಟಪ್ಪನವರು ಪ್ರಭಾಪೋಷಣಕ್ಕಾಗಿ 2 ರೂಪಾಯಿಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ.

ಕಾಗದದ ಬೆಲೆಯು ವಿಶೇಷವಾಗಿ ಏರಿರುವುದರಿಂದ ಕೆಲವು ಗ್ರಂಥಗಳ ಮತ್ತು ಫೋಟೋಗಳ ಬೆಲೆಯನ್ನು ಸ್ವಲ್ಪ ಹೆಚ್ಚಿಸಿದ್ದೇವೆ.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ	೦—೬—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦ ಬೆಲೆ	೦—೬—೦
ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ	೦—೪—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ	೦—೪—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೬
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೨—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—೬
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೨—೬

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು. ವೀರಶೈವಮತದಲ್ಲಿ ಸದ್ಯಃ ದೊರೆಯುತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು. ಈ ಗ್ರಂಥವು ಈಗ್ಗೆ ಸುಮಾರು **ಎರಡುಸಾವಿರ** ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು. ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಅದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ಪಾಠಕರಿಗೆ ವೇದ್ಯವಾಗುವುದು. ಪಾಠಕರ ಅನುಕೂಲಕ್ಕಾಗಿ ಬಹುಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೬೬೨ ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೩ ರೂಪಾಯಿ.**

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಶಾಸ್ತ್ರಮುವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೨ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ)	೩ ಆಣೆ
ಬಸವಾದಿನಿಜತತ್ತ್ವದರ್ಶನ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೩ನೆಯ ಆವೃತ್ತಿ)	೩ ಆಣೆ
ಶ್ರೀಗುರುತತ್ತ್ವಪದಗಳು (೩ನೆಯ ಆವೃತ್ತಿ)	೩ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೩ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಶಾಸ್ತ್ರಮುವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ- ಚಿಕ್ಕಸೈಜು)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೩ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ಸ್ವರಯುಕ್ತವಾದುದು. ೩ನೆಯ ಆವೃತ್ತಿ)	೧। ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಶ್ರೀಕರಭಾಷ್ಯಂ (ಚತುಸ್ಸೂತ್ರಿ)	೧॥ ರೂ
ಸಚಿತ್ರ ರೇಣುಕವಿಜಯ (೩ನೆಯ ಆವೃತ್ತಿ)	೧॥ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವದು)	೩ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರ ಪಟ್ಟದ)	೩ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೩ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೩ ರೂ
ವೀರಶೈವಸಿದ್ಧಾಂತಸುಧಾಕರ	೩ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	**4 As**
The Philosophical Aspect of Virasaivism (*English*)	**8 As**
Speeches by Pandit Shri Kashinatha Shastriji (*English*)	**12 As**
लिंगधारणचन्द्रिका (संस्कृत)	३ रु.
वीरशैवरत्न (मराठी)	१ रु.
महानारायणोपनिषत् (वीरशैवभाष्य–संस्कृत)	१ रु.
सिद्धांतशिखामणि (मूल)	८ आ.
नंदिकेश्वरकारिका (संस्कृत)	२ आ.

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರಪಿಯೂಷಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ. ೪ ಆಣೆ ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೧೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೩ನೇ ಜುಲೈ ೧೯೪೫ [ಸಂಚಿಕೆ ೭

॥ ಓಂ ॥

ವೀರಶೈವ ಸಿದ್ಧಾಂತ

(ಮೈಸೂರು ದೇಶದ ವಿದ್ವಾಂಸರ ಪಂಡಿತಮಂಡಲಿಯ ಹನ್ನೊಂದನೆಯ ಮಹಾ ಸಮ್ಮೇಳನದಲ್ಲಿ ಮೈಸೂರಿನಲ್ಲಿರುವ ಅತ್ಮವಿಚಾರಮಂದಿರದ ಅಧ್ಯಕ್ಷರಾದ ಶ್ರೀಮಾನ್ ಎಂ. ಎಲ್. ನಾಗಣ್ಣನವರು ಮಾಡಿದ ಭಾಷಣ)

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಷಟ್ಸ್ಥಲ

ಬ್ರಹ್ಮಾದ್ವೈತಿಗಳಲ್ಲಿ ಶುಭೇಚ್ಛಾ, ಸದಾತ್ಮವಿಚಾರ, ಸತ್ಸಂಗ, ವಾಸನಾಕ್ಷಯ, ಅಸಂಸಕ್ತಿ, ತುರ್ಯ, ತುರ್ಯಾತೀತ ಎಂಬುದಾಗಿ ಮೋಕ್ಷಕ್ಕೆ ಏಳು ಭೂಮಿಕೆಗಳು ಅಂದರೆ ಸೋಪಾನಗಳು ಹೇಗೆ ಇವೆಯೋ ಹಾಗೆ ಶಿವಾದ್ವೈತಿಗಳಲ್ಲಿ ಹಿಂದೆ ಹೇಳಿದಂತೆ ಭಕ್ತ, ಮಾಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಷಟ್ಸ್ಥಲಗಳು ಮೋಕ್ಷಕ್ಕೆ ಆರು ಸೋಪಾನಗಳಾಗಿವೆ.

1. ಭಕ್ತಸ್ಥಲ.—ಈಗ ನಾವು ನೋಡಿದ ಹಾಗೆ ಈ ಲೋಕದಲ್ಲಿ ಭಿಕ್ಷುಕನಿಂದಿಯಾಗಿ ಚಕ್ರವರ್ತಿಯವರೆಗೆ ದುಃಖವಿಲ್ಲದೆ ಸುಖವಾಗಿರುವವರು ಯಾರೂ ಇಲ್ಲ. ಏಕೆಂದರೆ ನಮ್ಮ ದೇಹವು ಮಲ, ಮೂತ್ರ, ಮಾಂಸ ಮುಂತಾದ ಅತ್ಯಂತ ಅಸಹ್ಯವಾದ ಪದಾರ್ಥಗಳಿಂದ ಕೂಡಿದ್ದಾಗಿರುವುದಲ್ಲದೆ ಲೋಕದಲ್ಲಿರತಕ್ಕ ಸರ್ವ ರೋಗಗಳಿಗೂ ತವರುಮನೆಯಾದ್ದರಿಂದ ನಮ್ಮ ದೇಹದಲ್ಲಿ ಏನಾದರೂ ಒಂದು ರೋಗವಿದ್ದು ನಾವು ದುಃಖವನ್ನು ಅನುಭವಿಸುತ್ತೇವೆ. ನಮ್ಮ ಕುಟುಂಬದಲ್ಲಿ ಏನಾದರೂ ದುಃಖವಿರುವುದರಿಂದಲು ಮತ್ತು ಪ್ರಪಂಚದಲ್ಲಿ ನಾವು ನಡಸತಕ್ಕ ವ್ಯವಹಾರಗಳಲ್ಲಿ ಯಾವವಿಧದಲ್ಲಾದರೂ ಕಷ್ಟವಿರುವುದರಿಂದಲು ಯಾವಾಗಲೂ ನಮ್ಮ ಮನಸ್ಸಿನಲ್ಲಿ ಏನಾದರೂ ಚಿಂತೆಯಿದ್ದು ಅದರಿಂದ ನಾವು ದುಃಖಪಡುತ್ತೇವೆ. ಇದರ ಜೊತೆಗೆ ನಮಗೆ ಮರಣಭೀತಿಯಿರುವುದಲ್ಲದೆ ಮರಣವಾಗುವಾಗ ನಿರತಿಶಯವಾದ ದುಃಖವನ್ನು ನಾವು ಅನುಭವಿಸಬೇಕಾಗುತ್ತದೆ. ನಮ್ಮ ಮರಣಾನಂತರ ನಮ್ಮ ಪಾಪಕರ್ಮಗಳಿಗನುಸಾರವಾಗಿ ನರಕದಲ್ಲಿ ಸಹಿಸಲಶಕ್ಯವಾದ ಶಿಕ್ಷೆಯನ್ನು ನಾವು ಅನುಭವಿಸಿ ಪುನಃ ಗರ್ಭನರಕಕ್ಕೆ ಬಂದು ತಾಯಿಯ ಗರ್ಭದಿಂದ ಹೊರಗೆ ಬರುವಾಗ ಹೇಳಲಶಕ್ಯವಾದ ದುಃಖವನ್ನು ನಾವು ಅನುಭವಿಸಬೇಕಾಗುತ್ತದೆ. ಇದಲ್ಲದೆ ನಮಗೆ ಮುಂದಕ್ಕೆ ಮನುಷ್ಯಜನ್ಮವೇ ಬರುತ್ತದೆಂಬ ನಂಬಿಕೆಯೂ ಇಲ್ಲದ್ದರಿಂದ ನಮ್ಮ ಕರ್ಮಗಳಿಗನುಸಾರವಾಗಿ ನಾಯಿ, ಹಂದಿ ಮುಂತಾದ ಹೀನಜನ್ಮಗಳು ನಮಗೆ ಬರಬಹುದು. ನಾವು ವಿಷಯಗಳನ್ನು ಅನುಭವಿಸುವಾಗ ಅವು ಒಂದು ಕ್ಷಣ ಸುಖವನ್ನು ಕೊಟ್ಟು ಅಧ್ಯಂತಗಳಲ್ಲಿ ದುಃಖವನ್ನೇ ಕೊಡುವುದರಿಂದ ವಿಷಯಗಳು ದುಃಖಸ್ವರೂಪವೇ ಆಗಿರುತ್ತವೆ. ಇಂತಹ ದುಃಖದಲ್ಲೇ ನಾವು ಮುಳುಗಿದ್ದರೂ ಬಚ್ಚಲಿನಲ್ಲಿರತಕ್ಕ ಹುಳುವಿಗೆ ಬಚ್ಚಲಿನ ದುರ್ಗಂಧವೇ ಅದಕ್ಕೆ ಹಿತವಾಗಿ ತೋರುವಂತೆ ನಮಗೆ ಬಹುಕಾಲದ ಅಭ್ಯಾಸದಿಂದ ದುಃಖವೇ ನಮಗೆ ಸುಖವಾಗಿ ತೋರಿ ಅದರಿಂದ ಬಿಡುಗಡೆಯನ್ನು ಹೊಂದಬೇಕೆಂಬ ಇಚ್ಛೆಯೇ ನಮಗೆ ತೋರುವದಿಲ್ಲ. "ಜನ್ಮಾಂತರಸಹಸ್ರೇಷು ಕೃತೈಃ ಪುಣ್ಯೈಃ ಪ್ರಕ್ಷೀಣಪಾಪಸಂಚಯೇ । ಶುದ್ಧಾಂತಃಕರಣೋ ದೇಹೀ ಶಿವೇ ಭಕ್ತಿಂ ಪ್ರಯಾತಿ ಸಃ ॥" ಎಂಬ ಸಿದ್ಧಾಂತಶಿಖಾಮಣಿಯ ವಚನದಂತೆ ಅನೇಕ ಜನ್ಮಗಳಲ್ಲಿ ಸತ್ಕರ್ಮಗಳನ್ನು ಮಾಡಿ ಯಾವನು ಶುದ್ಧಾಂತಃಕರಣವುಳ್ಳವನಾಗುತ್ತಾನೋ ಅವನಿಗೆ ದುಃಖದಲ್ಲಿ ಜಿಗುಪ್ಸೆ ತೋರಿ, ಸರ್ವದುಃಖಗಳಿಂದಲೂ ಬಿಡುಗಡೆಯನ್ನು ಹೊಂದಿ ದುಃಖವಿಲ್ಲದ ಮತ್ತು ನಿತ್ಯವಾದ ಸುಖವನ್ನು ಅಂದರೆ ಮೋಕ್ಷವನ್ನು ಪಡೆಯಬೇಕೆಂಬ ಇಚ್ಛೆಯುಂಟಾಗಿ, ದುಃಖದಿಂದ ಬಿಡುಗಡೆಯು ಮತ್ತು ಸುಖದ ಪ್ರಾಪ್ತಿಯು ಶಿವನ ಅನುಗ್ರಹದಿಂದಲೇ ಆಗತಕ್ಕದ್ದೆಂದು ತಿಳಿದು ಶಿವನಲ್ಲಿ ಅತ್ಯಂತ ಪ್ರೇಮದಿಂದ ನೆರೆ ಇರುತ್ತಾನೆ. ಇದಕ್ಕೇ ಭಕ್ತಿ ಎಂದು ಹೆಸರು. "ಶಿವೇ ಭಕ್ತಿಃ ಸಮುತ್ಪನ್ನಾ ಯಸ್ಯಾಸೌ ಭಕ್ತ ಉಚ್ಯತೇ ।" ಎಂಬ ಸಿದ್ಧಾಂತಶಿಖಾಮಣಿಯ ವಚನದಂತೆ ಈವಿಧವಾದ ಭಕ್ತಿಯುಳ್ಳವನನ್ನು ಶಿವಾದ್ವೈತಿಗಳು "ಭಕ್ತಸ್ಥಲ" ದವನೆಂದು, ಬ್ರಹ್ಮಾದ್ವೈತಿಗಳು "ಶುಭೇಚ್ಛಾ" ಎಂಬ ಮೊದಲನೇ ಭೂಮಿಕೆಯವನೆಂದು ಹೇಳುವರು. "ಪ್ರಪನ್ನಾನಾಂ ಮಹಾದೇವಂ ಪರಿಪಕ್ವಾಂತರಾತ್ಮನಾಂ । ಜನ್ಮೈವ ಜನ್ಮ ನಾನ್ಯೇಷಾಂ ವೃಥಾ ಜನನಸಂಗಿನಾಂ ॥" ಎಂಬ ಸಿದ್ಧಾಂತಶಿಖಾಮಣಿಯ ವಚನದಂತೆ ಶಿವನನ್ನು ಮರೆಹೊಕ್ಕ ಶುದ್ಧಾಂತಃಕರಣಗಳ ಜನ್ಮವೇ ಜನ್ಮವು. ಶಿವನನ್ನು ಮರೆಹೊಂದಿರುವ ಮಾನವರ ಜನ್ಮವು ವ್ಯರ್ಥವು.

2 ಮಾಹೇಶಸ್ಥಲ :—ಇಂತಹ ಭಕ್ತನ ಮೊರೆಯನ್ನು ಆಲಿಸಿ ಶಿವನು ಅವನಿಗೆ ಸದ್ಗುರುವನ್ನು ಪ್ರಾಪ್ತಿಗೊಳಿಸುವನು. ಭಕ್ತನು ಈ ಸದ್ಗುರುವನ್ನು ಸೇವಿಸಿ ಅವನಿಂದ ಈ ಕೆಳಗೆ ಹೇಳುವಂತೆ ಬೋಧೆಯನ್ನು ಪಡೆಯುವನು.

ಸದ್ಗುರುವಿನ ಬೋಧೆ

ಅದ್ವಿತೀಯನು (ಎರಡನೇ ಪದಾರ್ಥವೇ ಇಲ್ಲದವನು), ಸಚ್ಚಿದಾನಂದ ಸ್ವರೂಪನು ಮತ್ತು ಪರಿಪೂರ್ಣನು ಆದ ಶಿವನೊಬ್ಬನು ಇರುತ್ತಾನೆ. ನಮ್ಮಲ್ಲಿರತಕ್ಕ ಶಕ್ತಿಯು ನಮಗೆ ಅಭಿನ್ನವಾಗಿರುವಂತೆ ಶಿವನಲ್ಲಿರತಕ್ಕ ಅಘಟಿತಘಟನ ಶಕ್ತಿಯು ಅವನಿಗೆ ಅಭಿನ್ನವಾಗಿದೆ. "ಆತ್ಮಶಕ್ತಿವಿಕಾಸೇನ ಶಿವೋ ವಿಶ್ವಾತ್ಮನಾ ಸ್ಥಿತಃ । ಕುಟೀಭಾವಾದ್ಯಥಾ ಭಾತಿ ಪಟಃ ಸ್ವಸ್ಯ ಪ್ರಸಾರಣಾತ್ ॥" ಎಂಬ ಸಿದ್ಧಾಂತ ಶಿಖಾಮಣಿಯ ವಚನದಂತೆ ವಸ್ತ್ರವು ತನ್ನ ಪ್ರಸಾರಣದಿಂದ ವಸ್ತ್ರಮಂದಿರ (ಡೇರಾ) ವಾಗಿ ಹೇಗೆ ತೋರುತ್ತದೆಯೋ, ಹಾಗೆಯೇ ಶಿವನು ತನ್ನಲ್ಲಿರತಕ್ಕ ಶಕ್ತಿಯ ವಿಕಾಸದಿಂದ ತಾನೇ ಜಗದ್ರೂಪನಾಗಿ ತೋರುತ್ತಾನೆ. ಜಗತ್ತಿನಲ್ಲಿ ದೇಹವೂ ಸೇರಿರುವುದರಿಂದ ಶಿವನು ಸ್ಥೂಲದೇಹರೂಪನಾಗಿಯೂ, ಪ್ರಾಣಗಳರೂಪನಾಗಿಯೂ, ಇಂದ್ರಿಯಗಳ ರೂಪನಾಗಿಯೂ, ಅಂತಃಕರಣರೂಪನಾಗಿಯೂ ಇರುತ್ತಾನೆ. ಅಂದರೆ ವಸ್ತ್ರವು ತಾನು ಇದ್ದ ಹಾಗೆ ಇದ್ದುಕೊಂಡು ಡೇರಾವಾಗಿ ಹೇಗೆ ತೋರುತ್ತದೋ ಹಾಗೆ ಶಿವನು ತಾನು ಸಚ್ಚಿದಾನಂದ ಸ್ವರೂಪನಾಗಿಯೇ ಇದ್ದುಕೊಂಡು ತನ್ನಲ್ಲಿರತಕ್ಕ ಶಕ್ತಿಯ ಸಾಮರ್ಥ್ಯದಿಂದ ತನ್ನ ಸಚ್ಚಿದಾನಂದ ಸ್ವರೂಪಕ್ಕೆ ಯಾವ ಹಾನಿಯೂ ಇಲ್ಲದೆ ತಾನೇ ಜಡವಾದ ಪ್ರಪಂಚರೂಪವಾಗಿ ತೋರುತ್ತಾನೆ. "ಶಿವ ಏವ ಪರಂ ತತ್ತ್ವಂ ಚಿದಾನಂದಸದಾಕೃತಿಃ । ನಿಯಥಾರ್ಥಸ್ತದನ್ಯಸ್ಯ ಜಗತೋ ನಾಸ್ತಿ ನಿತ್ಯತಾ ॥" ಎಂಬ ಸಿದ್ಧಾಂತ ಶಿಖಾಮಣಿಯ ವಚನದಂತೆ ಸಚ್ಚಿದಾನಂದರೂಪನಾದ ಶಿವನೇ ಶ್ರೇಷ್ಠವಾದ ತತ್ವವು ಮತ್ತು ಯಥಾರ್ಥವು. ಶಿವನಿಗೆ ಅನ್ಯವಾಗಿ ತೋರುವ ಪ್ರಪಂಚವು ನಿತ್ಯವಲ್ಲ ಅಂದರೆ ಯಥಾರ್ಥವಲ್ಲ.

ಶಿವನು ಪ್ರಪಂಚರೂಪದಿಂದ ಹೇಗೆ ತೋರುತ್ತಾನೋ ಅದರಂತೆ ತಾನು ಸರ್ವಜೀವರುಗಳ ಅಂದರೆ ಪ್ರಾಣಿಗಳ ರೂಪವಾಗಿಯೂ ತೋರುತ್ತಾನೆ. ಅದು ಹೇಗೆಂದರೆ "ಅನಾದ್ಯವಿದ್ಯಾಸಂಬಂಧಾತ್ತದಂಶೋ ಜೀವನಾಮಕಃ । ದೇವತಿರ್ಯಙ್ಮನುಷ್ಯಾದಿಜಾತಿಭೇದೇ ವ್ಯವಸ್ಥಿತಃ ॥ ಅತ್ಮಕರ್ಮಫಲಂ ಸರ್ವಮಾತ್ಮಸ್ಫುರತಿ ದೀಪವತ್ ॥" ಎಂಬ ಸಿದ್ಧಾಂತ ಶಿಖಾಮಣಿಯ ವಚನದಂತೆ ಜೀವಾತ್ಮನು ಶಿವನ ಅಂಶವಾಗಿರುತ್ತಾನೆ. ಇವನು ಬಹಳ ಸೂಕ್ಷ್ಮರೂಪದಿಂದ ಅಂತಃಕರಣದಲ್ಲಿದ್ದುಕೊಂಡು ಅನಾದಿಯಾದ ಅವಿದ್ಯೆಯಿಂದ ತಾನು ಶಿವಸ್ವರೂಪನೆಂಬುದನ್ನು ಮರೆತು "ನೇಂದ್ರಿಯಾಣಾಂ ನ ದೇಹಸ್ಯ ನ ಬುದ್ಧೇರಾತ್ಮತಾ ಭವೇತ್ । ಅಹಂಪ್ರತ್ಯಯವೇದ್ಯತ್ವಾದನುಭೋಕ್ತೃತ್ವತೇರಪಿ ॥" ಎಂಬ ಸಿದ್ಧಾಂತ ಶಿಖಾಮಣಿಯ ವಚನದಂತೆ ತಾನಲ್ಲದೇ ಇರತಕ್ಕ ದೇಹ, ಇಂದ್ರಿಯ, ಅಂತಃಕರಣಗಳೇ ತಾನೆಂದು ಅಭಿಮಾನಿಸಿ ಇವುಗಳು ಮಾಡುವ ಒಳ್ಳೆ ಮತ್ತು ಕೆಟ್ಟ ಕೆಲಸಗಳನ್ನು ತಾನು ಮಾಡಿದ್ದಾಗಿ ತಿಳಿದು ಅವುಗಳ ಫಲವಾದ ಸುಖದುಃಖಗಳನ್ನು ಅನುಭವಿಸುವುದಕ್ಕಾಗಿ ಹುಟ್ಟುತ್ತಲೂ ಸಾಯುತ್ತಲೂ ಇದ್ದಾನೆ. ಜೀವಾತ್ಮನು ಶಿವನಂತೆ ಹುಟ್ಟು ಸಾವುಗಳಿಲ್ಲದೆ ಯಾವಾಗಲೂ ಇರುವವನಾದ್ದರಿಂದ ಸತ್ಸ್ವರೂಪನಾಗಿಯೂ, ಎಲ್ಲವನ್ನೂ ತಿಳಿಯುತ್ತಿರುವವನಾದ್ದರಿಂದ ಜ್ಞಾನಸ್ವರೂಪನಾಗಿಯೂ, ಸುಷುಪ್ತ್ಯವಸ್ಥೆಯಲ್ಲಿ ವಿಷಯ, ಇಂದ್ರಿಯ, ಮನಸ್ಸು ಇಲ್ಲದೇ ತಾನೊಬ್ಬನೇ ಇದ್ದು ಆನಂದವನ್ನು ಅನುಭವಿಸುವುದರಿಂದ ತಾನೇ ಆನಂದ ಸ್ವರೂಪನಾಗಿಯೂ ಇರುವುದರಿಂದ ತಾನು ಶಿವಸ್ವರೂಪನೇ ಆಗಿರುತ್ತಾನೆ. "ಶಿವೋಹಮಿತಿ ಭಾವೇನ ಶಿವೇ ಸಾಕ್ಷಾತ್ಕೃತೇ ಸ್ಥಿರಂ । ಮುಕ್ತೋ ಭವತಿ ಸಂಸಾರಮೋಹಗ್ರಂಥಿವಿಭೇದತಃ ॥ ಶಿವಂ ಭಾವಯ ಚಾತ್ಮಾನಂ ಶಿವಾದನ್ಯನ್ನ ಚಿಂತಯ । ಏವಂ ಸ್ಥಿರೇ ಶಿವಾದ್ವೈತೇ ಜೀವನ್ಮುಕ್ತೋ ಭವಿಷ್ಯಸಿ ॥" ಎಂಬುದಾಗಿ ಸಿದ್ಧಾಂತಶಿಖಾಮಣಿಯಲ್ಲಿ ಹೇಳಿರುವಂತೆ ತನ್ನ ಶುದ್ಧ ಜ್ಞಾನಸ್ವರೂಪವನ್ನು ಸಾಕ್ಷಾತ್ಕರಿಸಿಕೊಂಡು ಅಂದರೆ ಅನುಭವಕ್ಕೆ ತಂದುಕೊಂಡು ಸದಾ "ನಾನೇ ಶಿವನು" ಎಂಬ ದೃಢವಾದ ಭಾವನೆಯಿಂದ ಇರುತ್ತಾ ಇನ್ನೊಂದರ ಚಿಂತೆಯನ್ನು ಮಾಡದೇ ಇದ್ದರೆ ತನ್ನಲ್ಲಿ ಶಿವಾದ್ವೈತವು ಸ್ಥಿರವಾಗಿ ಸಂಸಾರವೆಂಬ ಮೋಹಗ್ರಂಥಿ (ಗಂಟು) ಭೇದಿಸಲ್ಪಟ್ಟು ಜೀವತ್ವದಿಂದ ಮುಕ್ತನಾಗುತ್ತಾನೆ.

"ಕೇವಲಂ ಸಹಜೇ ದಾನೇ ನಿಷ್ಠಾ ಶಕ್ತಿ ವಶತ್ತರಃ । ಬ್ರಹ್ಮಾದಿಸ್ಥಾನವಿಮುಖೋ ಭಕ್ತೋ ಮಾಹೇಶ್ವರಃ ಸ್ಮೃತಃ ॥ ಭಕ್ತೇರ್ಯದಾ ಸಮುತ್ಕರ್ಷೋ ಭವೇದ್ವೈರಾಗ್ಯಗೌರವಾತ್ । ತದಾ ಮಾಹೇಶ್ವರಪ್ರೋಕ್ತೋ ಭಕ್ತಃ ಸ್ಥಿರವಿವೇಕವಾನ್ ॥" ಎಂಬ ಸಿದ್ಧಾಂತಶಿಖಾಮಣಿಯ ವಚನದಂತೆ ಮೇಲೆ ಹೇಳಿದ ಸದ್ಗುರುವಿನ ಬೋಧೆಯನ್ನು ಕೇಳಿ ಶಿವನೇ ನಿತ್ಯನು, ಪ್ರಪಂಚವು ಅನಿತ್ಯವು ಎಂಬ ಆತ್ಮಾನಾತ್ಮ ವಿವೇಕವುಳ್ಳವನಾಗಿ ಇಹಪರಭೋಗಗಳಲ್ಲಿ ತೀವ್ರವಾದ ವೈರಾಗ್ಯವನ್ನು ಹೊಂದಿ ಶಿವನೇ ಸರ್ವಸ್ವರೂಪನಾಗಿದ್ದಾನೆಂದು ತಿಳಿದು, ನಿರಹಂಕಾರನಾಗಿ ಅಂದರೆ ನಾನು ಕರ್ತೃವೆಂಬ ಅಭಿಮಾನವಿಲ್ಲದೆ, ಫಲದಲ್ಲಿ ಅಪೇಕ್ಷೆಯಿಲ್ಲದವನಾಗಿ ಕೇವಲ ಕರುಣೆಯಿಂದ ಪರೋಪಕಾರ ಮುಂತಾದ ಸತ್ಕರ್ಮಗಳನ್ನು ಮಾಡುತ್ತಾ ಶಿವನಲ್ಲಿ ನಿಶ್ಚಲವಾದ ಭಕ್ತಿಯಿಟ್ಟಿರತಕ್ಕ ಭಕ್ತನನ್ನು ಶಿವಾದ್ವೈತಿಗಳು 'ಮಾಹೇಶ್ವರಸ್ಥಲ' ದವನೆಂದು ಮತ್ತು ಬ್ರಹ್ಮಾದ್ವೈತಿಗಳು 'ಸದಾತ್ಮವಿಚಾರ' ಎಂಬ ಎರಡನೆಯ ಭೂಮಿಕೆಯವನೆಂದು ಹೇಳುವರು.

3. ಪ್ರಸಾದಿಸ್ಥಲ:—"ನೈರ್ಮಲ್ಯಂ ಮನಸೋ ಲಿಂಗಂ ಪ್ರಸಾದ ಇತಿ ಕಥ್ಯತೇ । ಶಿವಸ್ಯ ಲಿಂಗರೂಪಸ್ಯ ಪ್ರಸಾದಾದೇವ ಸಿದ್ಧ್ಯತಿ ॥ ಮನಃಪ್ರಸಾದಸಿದ್ಧ್ಯರ್ಥಂ ನಿರ್ಮಲಜ್ಞಾನಕಾರಣಂ । ಶಿವಪ್ರಸಾದಂ ಸ್ವೀಕುರ್ವನ್ ಪ್ರಸಾದೀತ್ಯೇಷ ಕಥ್ಯತೇ ॥" ಎಂಬ ಸಿದ್ಧಾಂತಶಿಖಾಮಣಿಯ ವಚನದಂತೆ ಜ್ಞಾನಸ್ವರೂಪನಾದ ತನಗೂ, ಜಡರೂಪವಾದ ದೇಹೇಂದ್ರಿಯಾಂತಃಕರಣಗಳಿಗೂ ಪ್ರಕಾಶಾಂಧಕಾರಗಳಂತೆ ಸಂಗವಿಲ್ಲವೆಂದು ತಿಳಿದು, ಶಬ್ದಾದಿವಿಷಯಗಳನ್ನು ತಾನು ಅನುಭವಿಸದೆ ಅವುಗಳನ್ನು ಇಂದ್ರಿಯಗಳ ಮೂಲಕ ಮನಸ್ಸಿನಿಂದ ತನ್ನ ಹೃದಯಕಮಲದಲ್ಲಿರುವ ಪ್ರಾಣಲಿಂಗಕ್ಕೆ (ಶಿವನಿಗೆ) ಸಾವಧಾನದಿಂದ ಅಂದರೆ ಮನಸ್ಸು ಅತ್ತ ಇತ್ತ ಹೋಗಗೊಡದೆ ಅರ್ಪಿಸಿ ಅದರಿಂದ ಉಂಟಾದ ಆನಂದವನ್ನು ಸ್ವೀಕರಿಸುವ ಮಾಹೇಶನನ್ನು ಶಿವಾದ್ವೈತಿಗಳು "ಪ್ರಸಾದಿಸ್ಥಲ" ದವನೆಂದು ಮತ್ತು ಬ್ರಹ್ಮಾದ್ವೈತಿಗಳು "ಸತ್ಸಂಗ" ಎಂಬ ಮೂರನೇ ಭೂಮಿಕೆಯವನೆಂದು ಹೇಳುವರು. ವಿಷಯಗಳನ್ನು ಮನಸ್ಸಿನಿಂದ ಶಿವನಿಗೆ ಅರ್ಪಿಸುವಾಗ ಮನಸ್ಸು ಸ್ಥಿರವಾಗಿರುವುದರಿಂದ ಅದರಲ್ಲಿ ಶಿವನ ಆನಂದವು ಪ್ರತಿಫಲಿಸುತ್ತದೆ. ಈ ಆನಂದವೇ ಶಿವಪ್ರಸಾದ. ಇಂತಹ ಪ್ರಸಾದವನ್ನು ಅನುಭವಿಸುವದರಿಂದ ಶಿವಜ್ಞಾನಕ್ಕೆ ಸಾಧಕವಾದ ಮನೋನೈರ್ಮಲ್ಯವು ಉಂಟಾಗುತ್ತದೆ.

4. ಪ್ರಾಣಲಿಂಗಿಸ್ಥಲ :—"ಪ್ರಾಣಾಪಾನಸಮಾಘಾತಾತ್ ಕಂದಮಧ್ಯಾದ್ಯದುತ್ಥಿತಂ । ಪ್ರಾಣಲಿಂಗಂ ತದಾಖ್ಯಾತಂ

[೩ನೆಯ ಪುಟವನ್ನು ನೋಡಿ]

ಪಂಚಾಚಾರ್ಯಪ್ರಭಾ.

೧೯೪೫ನೆಯ ಜುಲೈ ತಾ॥ ೨ನೇ ಸೋಮವಾರ

ಶ್ರೀ ಕೇದಾರಪೀಠದ ಬಗ್ಗೆ ಸರಕಾರಕ್ಕೆ ಪ್ರಾರ್ಥನಾ ಪತ್ರಿಕೆ

ಶ್ರೀ ಜಗದ್ಗುರು ಕೇದಾರ ಪೀಠದ ಬಗ್ಗೆ ಬ್ರಿಟಿಶ್ ಸರ್ಕಾರದವರು ಮಾಡಿರುವ ಸ್ಕೀಮಿನಲ್ಲಿ ಉತ್ತರಾಧಿಕಾರಿಗಳು ಇಂಥವರೇ ಆಗಬೇಕೆಂಬ ಒಂದು ವಾಕ್ಯವನ್ನು ಸೇರಿಸಿದ್ದಾರೆ ಆ ವಾಕ್ಯದ ಮೇಲೆ ಈಗ ಸರಕಾರದಲ್ಲಿ ವಿಶೇಷ ಚರ್ಚೆಯು ನಡೆದಿರುವುದು.

ಧಾರವಾಡ ಡಿಸ್ಟ್ರಿಕ್ಟ ಟವನ್ನಿನಲ್ಲಿರುವ ಸುಮಾರು ೨೦ ಜನ ವಕೀಲರು ಆ ಪೀಠದ ಸನದು ವಿಷಯಗಳನ್ನೊಳಗೊಂಡ ಒಂದು ಅತ್ಯಂತ ಮಹತ್ವದ ಪ್ರಾರ್ಥನಾ ಪತ್ರಿಕೆಯನ್ನು ಬರೆದು ಅದಕ್ಕೆ ತಮ್ಮ ಸಹಿಮಾಡಿ ಅಲ್ಲಿಗೆ ಕಳುಹಿಸಿದ್ದಾರೆ ಆ ಪತ್ರಿಕೆಯಲ್ಲಿ ಪಂಚಪೀಠಗಳ ಸ್ವರೂಪ, ಆ ಪೀಠಗಳ ವಿಷಯದಲ್ಲಿ ಡಾ ಜೆ ಎನ್ ಫಾರ್ಕ್ಯೂಹಾರ್, ಪಿ. ಇ ಪರ್ಸ್ಸನ್, ಪಿ ಸಿ ಪಿ ಬ್ರೌನ್ ಮೊದಲಾದ ಸುಪ್ರಸಿದ್ಧ ಗ್ರಂಥಕಾರರು ಪಂಚಪೀಠಗಳ ಬಗ್ಗೆ ತಮ್ಮ ಗ್ರಂಥಗಳಲ್ಲಿ ಬರೆದಿರುವ ವಾಕ್ಯ ವಿವರಣೆ, ಶ್ರೀ ಜಗದ್ಗುರು ಕಾಶೀಪೀಠದ ಪುರಾತನ ದಾನ ಪತ್ರದ ಬಗ್ಗೆ ಬನಾರಸ್ ಸಬ್ ಜಡ್ ಕೋರ್ಟಿನ ಅಭಿಪ್ರಾಯ, ಆ ಬಗ್ಗೆ ಅಲಹಾಬಾದ್ ಹೈಕೋರ್ಟಿನ ಅಭಿಪ್ರಾಯ, ಸ್ಕೀಮಿನಲ್ಲಿರುವ ಶಬ್ದದ ಅರ್ಥದ ಸ್ಪಷ್ಟೀಕರಣ ಇವೇ ಮೊದಲಾದ ವಿಷಯಗಳು ಅಡಕವಾಗಿದ್ದು, ಅದಕ್ಕೆ ಈ ಕೆಳಗೆ ಕಂಡ ಮಹಾಶಯರು ರುಜು ಮಾಡಿರುವರು

ಶ್ರೀಮಾನ್ ಜಿ ಸಿ ಹಿರೇಮಠ, ಬಿ ಎ ಎಲ್ ಎಲ್ ಬಿ
,, ಎಂ ಆರ್ ಪಾಟೀಲ
,, ಎಸ್ ಎಲ್ ಗಾವಡೆ ,
,, ಎಸ್ ಎಸ್ ಕಂಬಳಿ
,, ಜಿ ಬಿ ಬಾಗೇವಾಡಿ
,, ಆರ್ ಸಿ ಪಾಟೀಲ
,, ಎಸ್ ಎಸ್ ಯಾವಗಲ್ಲ ,
,, ಜಿ ಎಂ ಮಿರ್ಜಿ ,,
ಎಕ್ಸ್ ಗೌರ್ನಮೆಂಟ್ ಪ್ಲೀಡರ್ ಮತ್ತು ಪಬ್ಲಿಕ್ ಪ್ರಾಸಿಕ್ಯೂಟರ್
,, ಪಿ ಆಯ್ ಹಿರೇಮಠ ವಕೀಲ್ ಮೆಂಬರ್ ಸ್ಕೂಲ್ಸ್ ಬೋರ್ಡ್, ಧಾರವಾಡ
,, ರಾವ್ ಸಾಹೇಬ್ ಬಿ ಸಿ ತಂಬದ ಬಿ ಎ, ಎಲ್ ಎಲ್ ಬಿ
,, ಬಿ ಎಸ್ ಪಾಟೀಲ ,,
,, ಎಂ ಬಿ ಹುರಳಿಕುಪ್ಪಿ ,
,, ಬಿ ಆರ್ ಮರೂರ ,,
,, ಬಿ ಎನ್ ಬೆಂಡಿಗೇರಿ ,,
,, ಪಿ ಎಸ್ ಮೂಳಗಿ ವಕೀಲ
,, ವಿ ಡಿ ಹೆಬಸೂರ ವಕೀಲ
,, ಬಿ ಎನ್ ಮುನವಳ್ಳಿ ವಕೀಲ
,, ಕೆ. ಎಸ್ ಪಾಟೀಲ ವಕೀಲ
,, ಬಿ ಎಸ್. ಸಿದ್ದನಗೌಡರ ವಕೀಲ ಗುಡಿಗೇರಿ
,, ಜಿ. ಬಿ ನರೇಂದ್ರಮಠ, ಮುನಿಸಿಪಲ್ ಕೌನ್ಸಿಲರ್.

ಇವರು ಕಳುಹಿಸಿರುವ ಪ್ರಾರ್ಥನಾಪತ್ರಿಕೆಯು ಬಹಳ ಬೆಲೆಯುಳ್ಳದ್ದಾಗಿರುವುದರಿಂದ ಸರ್ಕಾರದವರ ಮನಸ್ಸಿನ ಮೇಲೆ ವಿಶೇಷ ಪರಿಣಾಮವನ್ನುಂಟುಮಾಡಬಹುದೆಂಬ ನಂಬಿಗೆಯಿದೆ. ಸರಕಾರದವರು ಆಗಸ್ಟ ೧೬ ನೆಯ ತಾರೀಖಿನ ದಿವಸ ಎಲೆಕ್ಷನ್ ನಡೆಯಬೇಕೆಂದು ಆರ್ಡರ್ ಮಾಡಿದ್ದಾರೆ. ಇದರಮೇಲೆ ಕೆಲಜನ ಕ್ಯಾಂಡಿಡೇಟರು ಮತ್ತು ಓಟು ಕೊಡುವ ಜನರು ತಾರೀಖನ್ನು ಮುಂದಕ್ಕೆ ಹಾಕಬೇಕೆಂದು ಅರ್ಜಿಗಳನ್ನು ಕಳಿಸಿದ್ದಾರೆ.

ನಾವು ನಮ್ಮ ಹೆಸರಿನಿಂದ ಅನೇಕ ವಿಷಯಗಳಿಂದೊಡಗೂಡಿರುವ ಒಂದು ದೊಡ್ಡ ಪ್ರಾರ್ಥನಾ ಪತ್ರಿಕೆಯನ್ನು ಅಲ್ಲಿಯ ಸರಕಾರಕ್ಕೆ ಕಳುಹಿಸಿದ್ದೆವು ಅದಕ್ಕೆ ಅಲ್ಲಿಯ ಮುಖ್ಯಾಧಿಕಾರಿಗಳಾದ ಶ್ರೀಮಾನ್ W W Finlay I C S ಮಹೋದಯರು ತಾ॥ 23-6-45 ನೆಯ ದಿವಸ ನಮಗೆ ಡಿಸ್ಟ್ರಿಕ್ಟ ಜಡ್ಜರ ಆರ್ಡರಿನಂತೆ ಸ್ಪೆಷಲ್ ಆಫೀಸರವರ ನೇತೃತ್ವದಲ್ಲಿ ಸ್ಕೀಮಿನ ಪ್ರಕಾರವೇ ಕ್ಯಾಂಡಿಡೇಟರ ಚುನಾವಣೆಯು ನಡೆಯುವದೆಂದು ಸಂತೋಷದಾಯಕವಾದ ಪತ್ರವನ್ನು ಬರೆದಿದ್ದಾರೆ ಶ್ರೀ ಕೇದಾರನಾಥನ ಅನುಗ್ರಹದಿಂದ ಈ ಮಹಾಕಾರ್ಯವು ಸುಮುಖವಾಗಿ ನೆರವೇರಲೆಂದು ಪ್ರಾರ್ಥಿಸುತ್ತೇವೆ

ಯುದ್ಧವಾರ್ತೆ.

ಜಪಾನರಿಗೆ ದಂಡಯಾತ್ರೆಯ ಭೀತಿ

ಜಪಾನರಿಗೆ ದಂಡಯಾತ್ರೆಯ ಬೀತಿ ಹತ್ತಿದೆ ಪ್ರತಿನಿಮಿಷದಲ್ಲೂ ಅವರು ಮಿತ್ರರ ಆಗಮನವನ್ನು ನಿರೀಕ್ಷಿಸುತ್ತಿದ್ದಾರೆ ಆದುದರಿಂದ ತುರ್ತಿನ ಆಜ್ಞಾವಳಿಗಳ ಪ್ರಕಟನೆಯಾಗುತ್ತಿದೆ ಎಂತಹ ಪರಿಸ್ಥಿತಿ ಒದಗಿದರೂ, ಅಂಚೆ, ತಂತಿ, ರೇಡಿಯೋ ಮತ್ತು ಟೆಲಿಫೋನ್ ವ್ಯವಸ್ಥೆಗಳನ್ನು ನಡೆಸಿಕೊಂಡು ಬರಲೇಬೇಕೆಂಬುದಾಗಿ ಆ ಇಲಾಖೆಗಳಲ್ಲಿರುವ ನೌಕರರಿಗೆಲ್ಲ ವಿಧಿಸಲಾಗಿದೆ ಮಿತ್ರರು, ದಂಡಯಾತ್ರೆಯಲ್ಲಿ ನಾರ್ಮಂಡಿಯಲ್ಲಿ ಇಳಿದಾಗ ಎಷ್ಟರಮಟ್ಟಿನ ಸಿದ್ಧತೆ ಮಾಡಿಕೊಂಡಿದ್ದರೊ ಅಷ್ಟೇ ಭಾರಿ ಪ್ರಮಾಣದಲ್ಲಿ ಈಗಲೂ ಸಿದ್ಧತೆಮಾಡಿಕೊಂಡಿದ್ದಾರೆಂಬುದಾಗಿ ಜಪಾನಿನ ಪ್ರಕಟನೆಯೊಂದು ತಿಳಿಸುತ್ತದೆ

ಲೂಜಾನ್ ಸಂಪೂರ್ಣ ಅಮೆರಿಕನ್ ವಶ

ಫಿಲಿಪ್ಪೈನ್ಸ್ ದ್ವೀಪಸ್ತೋಮದ ಲೂಜಾನ್ ಪರ್ಯಾಯ ದ್ವೀಪವನ್ನು ಈಗ ಸಂಪೂರ್ಣವಾಗಿ ಶತ್ರುಜನದಿಂದ ವಿಮೋಚಿಸಲಾಗಿದೆಯೆಂದು ಜ ಮೆಕಾರ್ಥರ್‌ರವರು ಪ್ರಕಟಿಸಿದ್ದಾರೆ ಫಿಲಿಪೈನ್ಸ್ ರಾಜಧಾನಿ ಮನಿಲಾ ನಗರವನ್ನು ಜಪಾನರು ೧೯೪೨ರ ಜನವರಿಯಲ್ಲಿ ಆಕ್ರಮಿಸಿದರು ೧೯೪೫ರ ಜನವರಿಯಲ್ಲಿ ಅಮೆರಿಕನರು ಲೂಜಾನಿನಲ್ಲಿ ಮತ್ತೆ ಕಾಲಿಟ್ಟರು ಫಿಲಿಪೈನ್ಸ್ ಯುದ್ಧಕ್ಕೆ ಜಪಾನರು ಲಕ್ಷದ ಹದಿಮೂರು ಸಾವಿರ ಮಂದಿಯನ್ನು ಬಲಿಕೊಟ್ಟಿದ್ದಾರೆಂದು ಪ್ರಕಟವಾಗಿದೆ

ಮತ್ತೆ ಸಿರಿಯಾದಲ್ಲಿ ಗುಂಡು ಹಾರಿತು

ಸಿರಿಯಾದಲ್ಲಿ ಮತ್ತೆ ಗುಂಡುಗಳು ಹಾರಿದಸುದ್ದಿ ವರದಿಯಾಗಿದೆ ಅಲೆಪ್ಪೊ ನಗರದಲ್ಲಿ ಕಳೆದ ಸೋಮವಾರ ಸಂಜೆ ೮ರ ಸಮಯದಲ್ಲಿ ಫ್ರೆಂಚ್ ಯೋಧರು ಸಿರಿಯಾದ ಕಮಿಷನರನ ಮನೆಯ ಮೇಲೆ ಗುಂಡು ಹಾರಿಸಿದರು. ಬ್ರಿಟಿಷ್ ಸೇನಾನಿಗಳ ಕೇಳಿಕೆಗೆ ಅನುಸಾರವಾಗಿ ಫ್ರೆಂಚರು ಶಸ್ತ್ರಪ್ರಯೋಗವನ್ನು ನಿಲ್ಲಿಸಿದರು ಮತ್ತೊಂದೆಡೆ ಫ್ರೆಂಚರಗಡಂಗುಗಳ ಮೇಲೆ ಸಿರಿಯನರು ಗುಂಡು ಹಾರಿಸಿದಾಗ ಇಬ್ಬರು ಬ್ರಿಟಿಷ್ ಯೋಧರಿಗೆ ಪೆಟ್ಟು ಬಿತ್ತು

ಜಗದ್ರಕ್ಷಣ ಸಂಸ್ಥೆಯಲ್ಲಿ ಅಮೆರಿಕದ ಪ್ರತಿನಿಧಿ

ಅಮೆರಿಕದ ಕಾರ್ಯದಲ್ಲಿ ಎಡ್ವರ್ಡ್ ಆರ್ ಸ್ಟೆಟಿನಸ್‌ರವರು ತಮ್ಮ ಕಾರ್ಯದರ್ಶಿ ಸ್ಥಾನಕ್ಕೆ ರಾಜಿನಾಮೆ ಇತ್ತಿದ್ದಾರೆ ಅವರನ್ನು ಈಗ ಜಗದ್ರಕ್ಷಣ ಸಂಸ್ಥೆಗೆ ಅಮೆರಿಕದ ಪ್ರತಿನಿಧಿಯಾಗಿಯೂ ಆ ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯ ಅಮೇರಿಕ ನಿಯೋಗದ ಅಧ್ಯಕ್ಷರನ್ನಾಗಿಯೂ ನಿಯಮಿಸಲಾಗಿದೆ .ಇದು ಅಮೇರಿಕದ ಸಂಯುಕ್ತ ಸಂಸ್ಥಾನದ ಸರಕಾರೀ ಅಧಿಕಾರಿಯು ಪಡೆಯಬಹುದಾದ ಅತ್ಯಂತ ದೊಡ್ಡ ಪದವಿಯೆಂಬುದಾಗಿ ಸ್ಯಾನ್‌ಫ್ರಾನ್ಸಿಸ್ಕೋವಿನಿಂದ ವಾಸಿಂಗ್‌ಟನ್ನಿಗೆ ಹಿಂತಿರುಗುತ್ತಿರುವ ಅಮೆರಿಕಾಧ್ಯಕ್ಷ ಟ್ರೂಮನ್ನರು ನುಡಿದರು. ಅಧ್ಯಕ್ಷ ರೂಜ್‌ವೆಲ್ಟರು ಮೃತರಾದಾಗಲೇ ಶ್ರೀ ಸ್ಟೆಟಿನಸ್ ರಾಜೀನಾಮೆಕೊಡಬೇಕೆಂದಿದ್ದರು ಆದರೆ ಫ್ರಿಸ್ಕೋ ಸಮ್ಮೇಳನದ ಅಮೆರಿಕಾ ನಿಯೋಗದ ಅಧ್ಯಕ್ಷರಾದ ನೀವು ಮಾಡಬೇಕಾದ ಕೆಲಸವನ್ನು ಮುಗಿಸಬೇಕೆಂಬುದಾಗಿ ನಾನು ಕೇಳಿಕೊಂಡೆನೆಂಬುದಾಗಿ ಟ್ರೂಮನ್‌ರವರು ಅವರನ್ನು ತಡೆದಿದ್ದರು.

ಕಾಂಗ್ರೆಸ್ ಲೀಗ್‌ ಸಂಧಾನ ಫಲಿಸಲಿಲ್ಲ

ಭಾರತದ ಮುಂದಿನ ರಾಜ್ಯಾಡಳಿತದಲ್ಲಿ ಭಾಗವಹಿಸಲು ವೈಸರಾಯರು ಮುಂದಿಟ್ಟ ಸಲಹೆಗಳಿಗೆ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗು ಒಪ್ಪಿತಾದರೂ ವೈಸರಾಯ್ ಕೌನ್ಸಿಲ್ಲಿನಲ್ಲಿರಬೇಕಾದ ಮುಸ್ಲಿಂ ಸದಸ್ಯರೆಲ್ಲರೂ ಲೀಗಿನವರೇ ಆಗಿರಬೇಕೆಂಬ ಶ್ರೀಜಿನ್ನಾರವರ ಹಟವನ್ನು ಬದಲಾಯಿಸಲು ಕಾಂಗ್ರೆಸ್ ಕಡೆಯಿಂದ ನಡೆದ ಪ್ರಯತ್ನವೆಲ್ಲವೂ ನಿಷ್ಫಲವಾದ್ದರಿಂದ ೨೯ನೆಯ ತಾರೀಖು ಸಮ್ಮೇಳನವು ಸೇರಿದಾಗ ಕಾಂಗ್ರೆಸ್ಸೂ, ಲೀಗೂ ಒಂದು ಒಪ್ಪಂದಕ್ಕೆ ಬರಲು ಸಾಧ್ಯವಾಗಲಿಲ್ಲವೆಂದು ಶ್ರೀ ಆಜಾದರೂ ಮತ್ತು ಜಿನ್ನಾರವರೂ ತಿಳಿಸಿಬಿಟ್ಟರು ಅನಂತರ ವೈಸರಾಯರು ನೂತನಮಂತ್ರಿಮಂಡಲಕ್ಕೆ ನೇಮಿಸಲ್ಪಡಬೇಕಾದ ಮಂತ್ರಿಗಳ ಹೆಸರುಗಳನ್ನು ಕಾಂಗ್ರೆಸು ಮತ್ತು ಲೀಗು ಪ್ರತ್ಯೇಕವಾಗಿ ತಿಳಿಸಬೇಕೆಂದು ಕೇಳಿದರೆಂದು ಹೇಳಲಾಗಿದೆ

ಸ್ವೀಕಾರ

ಚಿಕ್ಕಮಗಳೂರು ತಾ॥ ಡಿಟೊಹೋಬಳಿ ಹಲಸುಮನೆ ಪಟೇಲ್ ವಿರೇಗೌಡರ ಪುತ್ರಿ ಚಿ॥ ಸೌ॥ ಲಿಂಗಮ್ಮನಿಗೂ ಮೂಡಿಗೆರೆ ತಾ॥ ಜಿ ಹೊಸಹಳ್ಳಿ ಗ್ರಾಮದ ಮ॥ ರಾ॥ ದೇವೇಗೌಡರ ಪುತ್ರ ಚಿ॥ ಪುಟ್ಟಸ್ವಾಮೀಗೌಡನಿಗೂ ನೆರವೇರಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವರನ ಕಡೆಯಿಂದ ಸಮರ್ಪಿಸಿದ 2 ರೂ ವಧುವಿನ ಕಡೆಯಿಂದ ಸಮರ್ಪಿಸಿದ 1 ರೂ, ಚಿಕ್ಕಮಗಳೂರು ತಾಲ್ಲೂಕು ವಸ್ತಾರೆ ಹೋಬಳಿ ಹಲಸುಮನೆ ಪಟೇಲ್ ವೀರೇಗೌಡರ ಪುತ್ರಿ ಚಿ॥ ಸೌ॥ ಕಾಳಮ್ಮನಿಗೂ ಆಲ್ದೂರು ಹೋಬಳಿ ಹಾದಿ ಬಿಳಿಯಪ್ಪ ಗೌಡರ ಪುತ್ರ ಚಿ॥ ತಿಮ್ಮೇಗೌಡನಿಗೂ ನಡೆದ ವಿವಾಹ ಸಮಯದಲ್ಲಿ ವರನ ಕಡೆಯಿಂದ ಸಮರ್ಪಿಸಿದ 2 ರೂ ವಧುವಿನ ಕಡೆಯಿಂದ ಸಮರ್ಪಿಸಿದ 2 ರೂ, ಚಿಕ್ಕಮಗಳೂರು ತಾಲ್ಲೂಕು ವಸ್ತಾರೆ ಹೋಬಳಿ ಕಲ್ಲಹಳ್ಳಿ, ಮಠದಲ್ಲಿ ವೇ॥ ಇಳೇಕಾನು ಮಲ್ಲಿಕಾರ್ಜುನಯ್ಯನಿಗೂ, ಕಲ್ಲಹಳ್ಳಿ ಮಠದ ವೇ॥ ರುದ್ರಯ್ಯನವರ ಪುತ್ರಿ ಚಿ॥ ಸೌ॥ ಜಯದೇವಮ್ಮನಿಗೂ ನಡೆದ ವಿವಾಹ ಸಮಯದಲ್ಲಿ ವರನ ಕಡೆಯಿಂದ ಸಮರ್ಪಿಸಿದ 2 ರೂ ವಧುವಿನ ಕಡೆಯಿಂದ ಸಮರ್ಪಿಸಿದ 1 ರೂ, ಇಳೇಕಾನು ವೇ॥ ರುದ್ರಯ್ಯನವರ ಪುತ್ರ ಚಿ॥ ರುದ್ರಯ್ಯನಿಗೂ ನಂದೀಕೆರೆಮಠದ ವೇ॥ ಮಹಾಂತಯ್ಯನವರ ಪುತ್ರಿ ಚಿ॥ ಸೌ॥ ಪುಟ್ಟಮ್ಮನಿಗೂ ನಡೆದ ವಿವಾಹಸಮಯದಲ್ಲಿ ವಧೂವರರು ಸಮರ್ಪಿಸಿದ 2 ರೂಪಾಯಿ, ಚಿಕ್ಕಮಗಳೂರು ತಾ॥ ಚಿಕ್ಕನಾಗರವಳ್ಳಿ ಮ॥ ರಾ॥ ವೀರೇಗೌಡರ ಪುತ್ರ ಚಿ॥ ದೇವೇಗೌಡನಿಗೂ ಗೌತಮೇಶ್ವರದ ಮ॥ ರಾ॥ ದೇವೇಗೌಡರ ಪುತ್ರಿ ಚಿ॥ ಸೌ॥ ನಾಗಮ್ಮನಿಗೂ ನಡೆದ ವಿವಾಹ ಸಮಯದಲ್ಲಿ ವಧೂವರರು ಸಮರ್ಪಿಸಿದ 1 ರೂಪಾಯಿ ಒಟ್ಟು 14 ರೂಪಾಯಿಗಳು ಮ॥ ರಾ॥ ವಸ್ತಾರೆ ಪಟೇಲ್ ಚೌಡೇಗೌಡರ ದ್ವಾರಾ ತಲ್ಪಿರುತ್ತವೆ.

ಶಿವಮೊಗ್ಗಾ ಡಿ॥ ಸಾಗರ ತಾ॥ ತಡಗಳಲೆ ಗ್ರಾಮದಲ್ಲಿರುವ ಗುರುಭಕ್ತ ಶಿಖಾಮಣಿಗಳಾದ ಮ॥ ರಾ॥ ಬಿ. ಚನ್ನಬಸವಪ್ಪನವರು ಶಿವಾರ್ಪಣ ಬುದ್ಧಿಯಿಂದ ಪ್ರಭಾಪೋಷಣಕ್ಕೋಸ್ಕರ 10 ರೂಪಾಯಿಗಳನ್ನು ಸಮರ್ಪಿಸಿ ಕಳುಹಿಸಿದ್ದಾರೆ.

ಬಳ್ಳಾರಿ ಡಿ॥ ಹರಪನಹಳ್ಳಿ ತಾ॥ ಉಚ್ಚಂಗಿದುರ್ಗದಲ್ಲಿರುವ ಮ॥ ರಾ॥ ಎಂ. ಮರುಳಸಿದ್ಧನಗೌಡರು ೧೧ ದಿವಸ ಮಹಾಮೃತ್ಯುಂಜಯಜಪವನ್ನು ಕೊನೆಯ ದಿವಸ 20 ಜನ ಮಾಹೇಶ್ವರ ವಟುಗಳಿಗೆ ದೀಕ್ಷಾ ಸಮಾರಂಭವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣೆಕ್ಕೋಸ್ಕರ 5 ರೂಪಾಯಿಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಬೀರೂರು ಟವನ್ನಿನಲ್ಲಿರುವ ವೇ|| ಎಂ. ಏ. ಮರುಳಸಿದ್ಧಯ್ಯನವರ ಸಹೋದರರಾದ ವೇ|| ಮುದ್ವೀರಯ್ಯನವರ ಪುತ್ರಿ ಚಿ|| ಸೌ|| ಅನ್ನಪೂರ್ಣಮ್ಮನನ್ನು ಬೀರೂರು ತಿಮ್ಮನಹಳ್ಳಿ ಮಠದ ವೇ| ಸೋಮಯ್ಯನವರ ಪುತ್ರ ಚಿ|| ಹಾಲಾರಾಧ್ಯನಿಗೆ ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವಧೂವರರಿಂದ ಸಮರ್ಪಿಸಲ್ಪಟ್ಟ 4 ರೂಪಾಯಿಗಳು ತಿಪಟೂರು ವೇ|| ಎ. ಎಂ. ಶಿವಲಿಂಗಾರಾಧ್ಯರ ದ್ವಾರಾ ತಲ್ಪಿರುತ್ತದೆ.

ತಿಪಟೂರು ಟವನ್ ನಿವಾಸಿಗಳಾದ ವೇ|| ಆರ್. ಎಂ ಮಲ್ಲಿಕಾರ್ಜುನಾರಾಧ್ಯರು ತಮ್ಮ ಪುತ್ರಿ ಚಿ' ಸೌ|| ಶಾಂಭವಿಯನ್ನು ಗುರುಗದಹಳ್ಳಿ ಯಜಮಾನ ವೇ|| ದೊಡ್ಡಸಿದ್ಧಯ್ಯನವರ ಪುತ್ರ ಚಿ| ಉಮಾಪತಿಗೆ ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 1 ರೂಪಾಯಿಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ

೧೪ ನೇಯ ವೀರಶೈವ ಮಹಾಸಭೆ

ಮೇಲ್ಕಂಡ ಸಭೆಯ ಅಧಿವೇಶನವು ಮೇ ತಿಂಗಳು ೨೦ ನೆಯ ತಾರೀಖಿನ ದಿವಸ ಮುಕ್ತಾಯವಾಯಿತು ಈ ಸಭೆಗೆ ಅನೇಕ ಜನ ಪ್ರತಿನಿಧಿಗಳು ಬಂದಿದ್ದರು. ಸಭೆಯಲ್ಲಿ ಅನೇಕ ಉಪಯುಕ್ತ ಠರಾವುಗಳು ಪಾಸಾದವು ಅನೇಕ ಠರಾವುಗಳನ್ನು ಜಾರಿಗೆ ತರಲು ಸಹಾಯವಾಗುವದಕ್ಕಾಗಿ ಚಂದಾ ಎತ್ತಲ್ಪಟ್ಟು ಪ್ರೆಸಿಡೆಂಟರ ವಶಕ್ಕೆ ಕೊಡಲ್ಪಟ್ಟಿತು ಮುಂದಿನ ಅಧಿವೇಶನಗಳಲ್ಲಿ ಕೆಲವು ವಿಷಯಗಳು ಮತ್ತೆ ಸಂಭವಿಸದಂತೆ ಸಮಾಜವು ಎಚ್ಚತ್ತುಕೊಳ್ಳುವ ಸಲುವಾಗಿ ಅಲ್ಲಿ ನಡೆದ ಎರಡು ಘಟನೆಗಳನ್ನು ಇಲ್ಲಿ ಸೂಚಿಸಬಹುದಾಗಿದೆ

(1) ಒಂದನೆಯದು-ಅಲ್ಲಿ ಬಂದಿದ್ದ ಡೆಲಿಗೇಟುಗಳಿಂದಲೇ ಇಪ್ಪತ್ತು ಜನರನ್ನು ವಿಷಯನಿಯಾಮಕ ಕಮಿಟಿಯ ಸದಸ್ಯರನ್ನಾಗಿ ಆರಿಸಿ ನಿಯಮಿಸಿದುದು ಈ ನಿಯಾಮಕವು ರೂಲಿಗೆ ಅನುಸಾರವಾಗಿ ನಡೆಯಲಿಲ್ಲ ಅವರು ಸಮಾಜದ ಒಹು ಮುಖ್ಯವಾದ ಆಶೋತ್ತರಗಳನ್ನು ಇಷ್ಟಗಳನ್ನು ಕೂಡ ಪ್ರತಿಪಾದಿಸುವವರಾಗಿರಲಿಲ್ಲ. ಸಭೆಯಲ್ಲಿ ಅವರ ನಿಯಾಮಕದ ಬಗ್ಗೆ ಪ್ರತಿಭಟನೆಗಳು ಬಂದವು ಇದಕ್ಕಾಗಿ ಇಬ್ಬರು ಸದಸ್ಯರು ರಾಜೀನಾಮೆಯಿತ್ತರು, ಮತ್ತು ಅವರ ಪ್ರತಿಯಾಗಿ ಸಭೆಗೆ ಹೆಚ್ಚು ಪ್ರಾತಿನಿಧ್ಯಸ್ವರೂಪವನ್ನು ಕೊಡುವಂತೆ ಬೇರೆಯವರನ್ನು ನಿಯಮಿಸಲಾಯಿತು. ಹೀಗಿದ್ದರೂ ಅಕ್ರಮವಾಗಿ ಮನಸ್ಸಿಗೆ ಒಂದಂತೆ ವಿಷಯನಿಯಾಮಕ ಕಮಿಟಿಯನ್ನು ನಿಯಮಿಸಿದ ಒಗ್ಗೆ ಗೊಣಗಾಟ ವಿದ್ದೇ ಇತ್ತು

(2) ಸ್ವಾಗತ ಕಮಿಟಿಯು ಸಭೆಯಲ್ಲಿ ಮತಸಂಬಂಧವಾದ ವಿಷಯವನ್ನು ತರಲೇ ಕೂಡದೆಂದು ಮೊದಲೇ ಕೇಳಿಕೊಂಡಿತ್ತು ಆದರೆ ವಿಷಯನಿಯಾಮಕ ಕಮಿಟಿಯ ಕೆಲಜನ ಸದಸ್ಯರು ವೀರಶೈವ ಮತದ ವಿಷಯವಾಗಿ ಮದ್ರಾಸ್ ಹಿಂದೂ ಲಾ ರಿಫಾರ್ಮು ಕಮಿಟಿಯ ಮುಂದೆ ಕೊಡಲಾಗಿದ್ದ ಒಂದು ಹೇಳಿಕೆಗೆ ಬೆಂಬಲ ಕೊಡುವ ವಿಷಯವನ್ನು ಕಮಿಟಿಯ ಮುಂದೆ ತಂದರು ಈ ವಿಷಯದಲ್ಲಿ ಪ್ರಬಲ ಪ್ರತಿಭಟನೆಗಳಿದ್ದಾಗ್ಯೂ ಮೇಲಿನ ವಿಚಾರಕ್ಕೆ ಬೆಂಬಲ ಕೊಡುವವರು ವಿಷಯನಿಯಾಮಕ ಕಮಿಟಿಯಲ್ಲಿ ಅದಕ್ಕೆ ಒಪ್ಪಿಗೆ ಸಿಗುವಂತೆ ಮಾಡುವ ಪ್ರಯತ್ನದಲ್ಲಿ ಸಭೆಯ ಅನುಕೂಲ್ಯವಾದ ಕಾಲದ ಬಹುಭಾಗವನ್ನು ಕಳೆದುಬಿಟ್ಟರು ಆದರಿಂದ ೨೦ ನೆಯ ತಾರೀಖಿಗೆ ಮುಗಿಯಬೇಕಾಗಿದ್ದ ಸಭೆಯ ಕಾರ್ಯಕಲಾಪಗಳು ೩೦ ನೆಯ ತಾರೀಖಿನವರೆಗೆ ಮುಂದುವರೆಯಬೇಕಾಯಿತು. ಇತರ ವಿಷಯಗಳಿಗೆ ನಿಷಯನಿಯಾಮಕ ಕಮಿಟಿಯಲ್ಲಿ ವಿಶೇಷ ಗಮನವನ್ನೇ ಕೊಡಲಿಲ್ಲ ಈ ಕಮಿಟಿಯು ಹೆಚ್ಚು ಕಾಲವನ್ನು ಉಪಯೋಗಿಸಿಕೊಂಡಿದ್ದರಿಂದ ಮಿಕ್ಕ ಸಮ್ಮೇಳನಗಳ ಕಾಲವು ಬಹಳ ಕಡಮೆಯಾಯಿತು ವಿಷಯಗಳು ವಿಶೇಷ ಚರ್ಚೆ ಮತ್ತು ವಿಮರ್ಶೆ ಇಲ್ಲದೆ ಅವಸರವಾಗಿ ಮುಂದೆ ಸಾಗಿದವು. ವಿಷಯನಿಯಾಮಕ ಕಮಿಟಿಯು ಹಿಂದೂ ಲಾ ರಿಫಾರ್ಮು ಕಮಿಟಿಯ ಮುಂದೆ ಕೊಡಲಾದ ಸಾಕ್ಷ್ಯಕ್ಕೆ ಸಂಬಂಧಪಟ್ಟ ವಿಷಯವನ್ನು ಒಪ್ಪಲು ಸಮ್ಮತಿಸದ ಕಾರಣ ಅದರ ಬೆಂಬಲಗಾರರು ಆ ವಿಷಯವನ್ನು ನೇರವಾಗಿ ಸಮ್ಮೇಳನದ ಮುಂದೆ ತರುವರೆಂದು ಎಲ್ಲರೂ ತಿಳಿದಿದ್ದರು. ಆದರೆ ಅಧ್ಯಕ್ಷರು ಆ ವಿಧವಾದ ವಿಚಾರವು ಸಭೆಯ ಮುಂದೆ ಬರುವದಕ್ಕೆ ಮುಂಚಿತವಾಗಿಯೇ ಅಧಿವೇಶನವನ್ನು ಮುಕ್ತಾಯಗೊಳಿಸಿದರು ಅದರಿಂದ ಅಧಿವೇಶನವು ಅದರ ಕಾರ್ಯಕಲಾಪಗಳಿಗೆ ಕಳಂಕತರುವ ಯಾವ ವಿಧವಾದ ದುರ್ಘಟನೆಗಳೂ ಇಲ್ಲದೆ ಸಮುಖವಾಗಿ ಕೊನೆಗಂಡಿತು

ಇದರಿಂದ ಈ ಸಭೆಯಲ್ಲಿ ನಡೆದ ಘಟನೆಗಳಿಂದ ಕಲಿತ ಸಾರವನ್ನು ಸಮಾಜವು ಮರೆಯುವದಿಲ್ಲವೆಂದೂ ಇನ್ನು ಮುಂದೆ ಮತಸಂಬಂಧವಾದ ವಿಚಾರಗಳು ವಿಷಯನಿಯಾಮಕ ಸಮಿತಿಯ ಮತ್ತು ಮಹಾಸಭೆಯ ಮುಂದೆ ಬರುವದಕ್ಕೆ ಅವಕಾಶಕೊಡುವದಿಲ್ಲವೆಂದೂ ಮತ್ತು ಸಮಾಜದ ಆಧ್ಯಾತ್ಮಿಕ ಏಳಿಗೆಗೆ ಬೇಕಾದ ವಿಷಯಗಳ ಚರ್ಚೆಗೂ ಮತ್ತು ತೀರ್ಮಾನಕ್ಕೂ ಸಾಕಷ್ಟು ಕಾಲಾವಕಾಶವನ್ನು ಮಾಡಿಕೊಡುವರೆಂದೂ ಹಾರೈಸುತ್ತೇನೆ.

ಒಬ್ಬ ಪ್ರತಿನಿಧಿ

ಮಾಹೇಶ್ವರ ದೀಕ್ಷಾಸಮಾರಂಭ

ಉಚ್ಚಂಗಿದುರ್ಗ

ಹರಪನಹಳ್ಳಿ, ತಾ| ಉಚ್ಚಂಗಿದುರ್ಗ ಗ್ರಾಮದಲ್ಲಿರುವ ಶ್ರೀ|| ಎಂ ಸಿದ್ಧನಗೌಡರ ಪುತ್ರರಾದ ಮ| ರಾ| ಎಂ ಮರುಳಸಿದ್ಧನಗೌಡರು, ತಮ್ಮ ಧರ್ಮಛತ್ರದಲ್ಲಿ ಶ್ರೀ ಹಡಗಲಿ ಪಟ್ಟದಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಇದೇ ಜೇಷ್ಠ ಶುದ್ಧ ೧೦ (ತಾ|| 20-6-45)ನೇ ದಿವಸ ಸುತ್ತುಮುತ್ತಿನ ಗ್ರಾಮಗಳಲ್ಲಿರುವ ೭೦ ಜನ ಮಾಹೇಶ್ವರ ವಟುಗಳಿಗೆ ದೀಕ್ಷಾಸಮಾರಂಭವನ್ನು ವಿಶೇಷ ವೈಭವದೊಡನೆ ನೆರವೇರಿಸಿದರು ಈ ಸಮಾರಂಭಕ್ಕೆ ತೌಡೂರು ಸೀಲಗುಂದ, ಮತ್ತೂರು ಮೊದಲಾದ ಗ್ರಾಮಗಳ ಶ್ರೀಪಟ್ಟ ಚರಮೂರ್ತಿ ಸ್ವಾಮಿಗಳವರು ಆಗಮಿಸಿದ್ದರು ಈ ಶುಭಸಮಯದಲ್ಲಿ ಗ್ರಾಮದಜನರೆಲ್ಲರಿಗೂ ಅನ್ನಸಂತರ್ಪಣೆಯು ನೆರವೇರಿತು ಇಂತಹ ಕಠಿಣ ಕಾಲದಲ್ಲಿಯೂ ಸದರಿ ಮ| ರಾ| ಎಂ ಮರುಳಸಿದ್ಧನಗೌಡರವರು, ಉದಾರವಾದ ಬುದ್ಧಿಯಿಂದ ಈ ಮಹಾಕಾರ್ಯವನ್ನು ನೆರವೇರಿಸಿದುದನ್ನು ಕಂಡು ಸರ್ವರೂ ಇವರ ಗುಣಗಾನವನ್ನು ಮಾಡಿದರು. ಯಾವಾಗಲೂ ಧರ್ಮಕಾರ್ಯದಲ್ಲಿ ನಿರತರಾಗಿರುವ ಶ್ರೀಮರುಳಸಿದ್ಧನಗೌಡರಿಗೆ ಶ್ರೀಜಗದಾಚಾರ್ಯರು ಆಯುರಾರೋಗ್ಯಭಾಗ್ಯಾದಿಗಳನ್ನು ಕೊಟ್ಟು ಕಾಪಾಡಲೆಂದು ಪ್ರಾರ್ಥಿಸುತ್ತೇನೆ

ಗುರುಭಕ್ತ

ವಿವಾಹಮಹೋತ್ಸವ ಬೀರೂರು

ತಾ| 21-6-45 ರಲ್ಲಿ ಬೀರೂರು ಸಾಹುಕಾರ ವೇ|| ಎಂ ವಿ ಮರುಳಸಿದ್ಧಯ್ಯನವರು ತಮ್ಮ ಸಹೋದರರಾದ ವೇ| ಮುದ್ವೀರಯ್ಯನವರ ಪುತ್ರಿ ಹ ಕುಂ| ಶೋಭಿತೆಯಾದ ಅನ್ನಪೂರ್ಣಮ್ಮನನ್ನು ಬೀರೂರು ತಿಮ್ಮನಹಳ್ಳಿ ಮಠದ ಸೋಮಯ್ಯನವರ ಪುತ್ರ ಚಿ| ಹಾಲಾರಾಧ್ಯನಿಗೆ ಕೊಟ್ಟು ವಿವಾಹ ಮಹೋತ್ಸವವನ್ನು ವಿಶೇಷ ವೈಭವದೊಡನೆ ನೆರವೇರಿಸಿದರು ಅವರ ಬಂಧು ಬಾಂಧವರು ವಿಶೇಷವಾಗಿ ಸೇರಿದ್ದರು ಈ ಸಮಾರಂಭದಲ್ಲಿ ಶ್ರೀಜಗದ್ಗುರು ರಂಭಾಪುರೀಸಂಸ್ಥಾನದ ಅಗ್ರತಾಂಬೂಲ ಕಾಣಿಕೆಗಾಗಿ 15 ರೂಪಾಯಿಗಳು, ಶ್ರೀಜಗದ್ಗುರು ಕಾಶೀವಿಶ್ವಾರಾಧ್ಯ ಸಿಂಹಾಸನದ ಅಗ್ರತಾಂಬೂಲ ಕಾಣಿಕೆಗಾಗಿ 14 ರೂಪಾಯಿಗಳು, ಬೆಂಗಳೂರು ವೀರಶೈವ ಎಜ್ಯುಕೇಷನ್ ಸೊಸೈಟಿ ಫಂಡಿಗಾಗಿ 5 ರೂಪಾಯಿಗಳು ಶ್ರೀಪಂಚಾಚಾರ್ಯ ಪ್ರಭಾಪೋಷಣಕ್ಕಾಗಿ 4 ರೂಪಾಯಿಗಳು ವಧೂವರರಿಂದ ತೆಗೆಯಲ್ಪಟ್ಟು ತಿಪ್ಟೂರು ವೇ|| ಎ. ಎಂ. ಶಿವಲಿಂಗಾರಾಧ್ಯರ ವಶಕ್ಕೆ ಕೊಡಲ್ಪಟ್ಟವು ನೂತನ ವಧೂವರರಿಗೆ ಜಗದಾಚಾರ್ಯರು ಆಯುರಾರೋಗ್ಯೈಶ್ವರ್ಯ ಸತ್ಸಂತಾನಾದಿ ಸಕಲ ಸಂಪತ್ತನ್ನು ಅನುಗ್ರಹಿಸಲೆಂದು ಹಾರೈಸುತ್ತೇನೆ

ಪ್ರತ್ಯಕ್ಷದರ್ಶಿ

[೧ನೆಯ ಪುಟದಿಂದ ಮುಂದುವರೆದುದು]

ಪ್ರಾಣಾಪಾನನಿರೋಧಿಭಿಃ || ಪ್ರಾಣೋ ಯತ್ರ ಲಯಂ ಯಾತಿ ಭಾಸ್ಕರೇಂದುವಿಘಟ್ಟನಾತ್ | ತತ್ಪ್ರಾಣಲಿಂಗಮುದ್ದಿಷ್ಟಂ ತದ್ಧಾರೀ ಸ್ಯಾತ್ತದಾತ್ಮಕಃ || ಸಂವಿಲ್ಲಿಂಗಪರಾಮರ್ಶೀ ಬಾಹ್ಯವಸ್ತುಪರಾಙ್ಮುಖಃ | ಯಸ್ತಿಷ್ಠತಿ ಸದಾ ಯೋಗೀ ಪ್ರಾಣಲಿಂಗೀ ಸ ಉಚ್ಯತೇ ||" ಎಂಬ ಸಿದ್ಧಾಂತಶಿಖಾಮಣಿಯ ವಚನದಂತೆ ಪ್ರಾಣಾಪಾನ ಅಂದರೆ ಶ್ವಾಸೋಚ್ಛ್ವಾಸಗಳನ್ನು ಹೃದಯದಲ್ಲಿ ನಿರೋಧಮಾಡುವುದರಿಂದ ಈ ಪ್ರಾಣಾಪಾನಗಳಿಗೆ ಆಧಾರವಾಗಿ ಹೃದಯಕಮಲದಲ್ಲಿರತಕ್ಕ ಪ್ರಾಣಲಿಂಗವು (ಶಿವನು) ಸಾಕ್ಷಾತ್ಕಾರವಾಗುವದು ಅಂದರೆ ಅನುಭವಕ್ಕೆ ಒರುವುದು. ಒಳಗಿನಿಂದ ಹೊರಕ್ಕೆ ಬಿಡುವ ಉಸುರಿಗೆ ಪ್ರಾಣವೆಂಬುದಾಗಿಯೂ, ಹೊರಗಿನಿಂದ ಒಳಕ್ಕೆ ತೆಗೆದುಕೊಳ್ಳುವ ಉಸುರಿಗೆ ಅಪಾನವೆಂಬುದಾಗಿಯೂ ಹೆಸರು. ಒಳಕ್ಕೆ ಉಸುರನ್ನು ತೆಗೆದುಕೊಂಡು ಒಳಗಿನಿಂದ ಉಸುರನ್ನು ಹೊರಗೆ ಬಿಡದೆ ತಡೆಯುವುದಕ್ಕೆ ಪ್ರಾಣಾಪಾನನಿರೋಧ ಅಥವಾ ಕುಂಭಕವೆಂದು ಹೆಸರು. ಪ್ರತಿಯೊಬ್ಬರೂ ದಿನ ಒಂದಕ್ಕೆ 21600 ಆವರ್ತಿ ಉಸುರನ್ನು ಒಳಕ್ಕೆ ತೆಗೆದುಕೊಳ್ಳುವದರಿಂದ 21600 ಆವರ್ತಿ ಪ್ರಾಣಾಪಾನನಿರೋಧ ಅಂದರೆ ಕುಂಭಕವಾಗುವುದು. ಪ್ರಾಣಾಪಾನನಿರೋಧವಾದಾಗಲೆಲ್ಲಾ ಜ್ಞಾನಸ್ವರೂಪವಾದ ಪ್ರಾಣಲಿಂಗವನ್ನೇ ಸದಾ ಲಕ್ಷಿಸುತ್ತಾ ಬಾಹ್ಯವಿಷಯಗಳಲ್ಲಿ ದೃಷ್ಟಿಯಿಲ್ಲದವನಾಗಿ ಇರುವ ಪ್ರಸಾದಿಯನ್ನು ಶಿವಾದ್ವೈತಿಗಳು 'ಪ್ರಾಣಲಿಂಗಿಸ್ಥಲ''ದವನು ಎಂಬುದಾಗಿ ಕರೆಯುವರು. ಈ ಪ್ರಾಣಲಿಂಗಿಯ ಚಿತ್ತವು ಶಿವನಲ್ಲೇ ರಮಿಸುವುದರಿಂದ ಇವನ ಚಿತ್ತದಲ್ಲಿರತಕ್ಕ ವಿಷಯವಾಸನೆಗಳು ಕ್ಷಯಿಸಿಬಿಡುತ್ತವೆ ಆದುದರಿಂದ ಈ ಪ್ರಾಣಲಿಂಗಿಸ್ಥಲದವನನ್ನು ಬ್ರಹ್ಮಾದ್ವೈತಿಗಳು 'ವಾಸನಾಕ್ಷಯ'' ಎಂಬ ನಾಲ್ಕನೇ ಭೂಮಿಕೆಯವನೆಂದು ಹೇಳುವರು "ಮೂಲಪಂಚಾಕ್ಷರಿಯ ಶಿಖೆಲಿ ಪ್ರಾಣದೊಳಿರಿಸಿ ಕೀಲಿಸಿದ ಲಿಂಗದೊಳು ನೇತ್ರಮನಘಾವಣೀ ಗೆಯುನಿತ್ತ ಗುರುಲಿಂಗ'' ಎಂಬ ಗುರುಲಿಂಗವಚನದ ಪ್ರಕಾರ ಶಿವಯೋಗಿಗಳು ತಾವು ಕುಂಭಕವನ್ನು ಮಾಡುವಾಗ ಮನಸ್ಸನ್ನೂ, ದೃಷ್ಟಿಯನ್ನೂ ನಿರೋಧಮಾಡುವರಲ್ಲದೆ ಪ್ರತಿಸಾರಿ ಶ್ವಾಸವನ್ನು ಒಳಕ್ಕೆ ತೆಗೆದುಕೊಂಡು ಕುಂಭಕವನ್ನು ಮಾಡುವಾಗ ಪ್ರಣವವನ್ನೂ, ಶ್ವಾಸವನ್ನು ಹೊರಕ್ಕೆ ಬಿಡುವಾಗ ಪಂಚಾಕ್ಷರೀ ಮಂತ್ರವನ್ನೂ ಮನಸ್ಸಿನಲ್ಲಿ ಜಪಿಸುತ್ತಾರೆ.

5. ಶರಣಸ್ಥಲ :— "ಸತೀವ ರಮಣೇಯಸ್ತು ಶಿವೇ ಶಕ್ತಿಂ ವಿಭಾವಯನ್ | ತದನ್ಯವಿಮುಖಸ್ಸೋಯಂ ಜ್ಞಾತಶ್ಶರಣನಾಮವಾನ್ ||'' ಎಂಬ ಸಿದ್ಧಾಂತಶಿಖಾಮಣಿಯ ವಚನದಂತೆ ಪತಿವ್ರತೆಯಾದ ಸ್ತ್ರೀಯು ತನ್ನ ಪತಿಯಲ್ಲಿ ಹೇಗೆ ಅತ್ಯಂತ ಪ್ರೀತಿಯನ್ನಿಟ್ಟು ಅವನನ್ನು ಸೇರಿ ಆನಂದದಿಂದಿರುತ್ತಾಳೋ ಹಾಗೆ ಶಿವನಲ್ಲಿ ಅತ್ಯಂತ ಪ್ರೀತಿಯನ್ನಿಟ್ಟು ಅದರಿಂದ ಉಂಟಾದ ಆನಂದದಿಂದಿರುವ ಮತ್ತು "ತಾನು ತನ್ನಸು ತನು ಗುಣ ಕರ್ಮ ವಿಷಯ ಸಂತಾನ ಕರಣ ಭೋಗ ಭುವನಾದಿಗಳನು | ತಾನುಹಾಗದೆ ಶಂಭುಲಿಂಗನೆಂದರಿದಭಿಮಾನವಿಲ್ಲದುದೆ ಮುಕ್ತಿಯುಸೀವ ಭಕ್ತಿ ಕಾಂಡ ||" ಎಂಬ ಶ್ರೀಮನ್ನಿಜಗುಣ ಶಿವಯೋಗಿಗಳ ವಚನದಂತೆ ತಾನು, ತನ್ನ ಪ್ರಾಣ, ದೇಹ, ಕರ್ಮ, ವಿಷಯಗಳು, ಭೋಗ, ಪ್ರಪಂಚಗಳು ಎಲ್ಲವೂ ಶಿವನೆಂದು ತಿಳಿದು, ನಾನು ನನ್ನದು ಎಂಬ ಅಭಿಮಾನವು ಸ್ವಲ್ಪವೂ ಇಲ್ಲದೇ ಇರುವ ಪ್ರಾಣಲಿಂಗಿಯನ್ನು "ಶರಣಸ್ಥಲ''ದವನೆಂದು ಶಿವಾದ್ವೈತಿಗಳು ಮತ್ತು "ಅಸಂಸಕ್ತಿ'' ಎಂಬ ಐದನೇ ಭೂಮಿಕೆಯವನು ಎಂಬುದಾಗಿ ಬ್ರಹ್ಮಾದ್ವೈತಿಗಳು ಹೇಳುವರು. "ಸತ್ಯಪಿ ಭೇದಾಪಗಮೇ ನಾಥ ತವಾಹಂ ನ ಮಾಮಕೀನಸ್ತ್ವಂ | ಸಾಮುದ್ರೋ ಹಿ ತರಂಗಃ ಕ್ವಚನ ಸಮುದ್ರೋ ನ ತಾರಂಗಃ ||' ಅಂದರೆ ಸಮುದ್ರಕ್ಕೆ ಸಮುದ್ರದಲ್ಲಿರುವ ಅಲೆಯು ಭಿನ್ನವಾಗಿಲ್ಲದಿದ್ದರೂ ಅಲೆಯು ಸಮುದ್ರದ್ದು ಎಂಬುದಾಗಿ ಹೇಳಬಹುದೇ ಹೊರತು ಸಮುದ್ರವು ಅಲೆಯದು ಎಂಬುದಾಗಿ ಹೇಗೆ ಹೇಳುವುದಕ್ಕಾಗುವುದಿಲ್ಲವೋ ಹಾಗೆ ಶಿವನಿಗೂ ಮತ್ತು ತನಗೂ ಅಭೇದವಿದ್ದರೂ ಶಿವನನ್ನು ತನ್ನವನು ಎಂಬುದಾಗಿ ಹೇಳದೆ ತಾನು ಶಿವನವನು ಎಂಬುದಾಗಿ ತಿಳಿದು ಶರಣನು ಶಿವನಿಗೆ ತನ್ನ ಆತ್ಮವನ್ನು ನಿವೇದನ ಮಾಡುತ್ತಾನೆ ಇದೇ ನವವಿಧ ಭಕ್ತಿಗಳಲ್ಲಿ ಶ್ರೇಷ್ಠವಾದ "ಆತ್ಮನಿವೇದನ'' ಎಂಬ ಭಕ್ತಿಯು.

6. ಐಕ್ಯಸ್ಥಲ :— "ಪ್ರಾಣಲಿಂಗಾದಿಯೋಗೇನ ಸುಖಾತಿಶಯಮೇಯಿವಾನ್ | ಶರಣಾಖ್ಯಃ ಶಿವೇನೈಕ್ಯಭಾವನಾದೈಕ್ಯವಾನ್ ಭವೇತ್ " ವಿಷಯಾನಂದಕಣಿಕಾ ನಿಸ್ಪೃಹೋ ನಿರ್ಮಲಾಶಯಃ | ಶಿವಾನಂದಮಹಾಸಿಂಧೌ ಮಜ್ಜನಾದೈಕ್ಯಮುಚ್ಯತೇ || ಜಲೇ ಜಲಮಿವ ನ್ಯಸ್ತಂ ವಹ್ನೌ ವಹ್ನಿರಿವಾರ್ಪಿತಃ | ಪರಬ್ರಹ್ಮಣಿ ಲೀನಾತ್ಮಾ ವಿಭಾಗೇನ ನ ದೃಶ್ಯತೇ ||'' ಎಂಬ ಸಿದ್ಧಾಂತ ಶಿಖಾಮಣಿಯ ವಚನದಂತೆ ಪ್ರಾಣಲಿಂಗದ ಸಾಕ್ಷಾತ್ಕಾರದಿಂದ ಆನಂದಾನುಭವವನ್ನು ಹೊಂದಿ, ಶಿವನೇ ತಾನು ತಾನೇ ಶಿವನು ಎಂಬ ಐಕ್ಯಭಾವನೆಯಿಂದ, ಜಲವು ಜಲದಲ್ಲಿಯೂ, ಅಗ್ನಿಯು ಅಗ್ನಿಯಲ್ಲಿಯೂ, ಬೆರೆಯುವಂತೆ ಶಿವಾನಂದವೆಂಬ ಸಮುದ್ರದಲ್ಲಿ ಮುಳುಗಿರತಕ್ಕ ಶರಣನನ್ನು 'ಐಕ್ಯಸ್ಥಲ' ದವನೆಂದು ಶಿವಾದ್ವೈತಿಗಳು ಕರೆಯುತ್ತಾರೆ. ಈ ಐಕ್ಯಸ್ಥಲದವನಲ್ಲಿ 'ಶಿವನೇ ನಾನು' ಎಂಬ ಅಂತಃಕರಣ ವೃತ್ತಿಯು ಇರುವವರೆಗೆ ಇವನು 'ತುರ್ಯ' ಎಂಬ ಆರನೇ ಭೂಮಿಕೆಯವನೆಂಬುದಾಗಿಯು. 'ಶಿವನೇ ನಾನು' ಎಂಬ ಅಂತಃಕರಣವೃತ್ತಿಯೂ ಸಹಿತ ಹೋಗಿ ತಾನೇತಾನಾಗಿದ್ದರೆ 'ತುರ್ಯಾತೀತ' ಎಂಬ ಏಳನೇ ಭೂಮಿಕೆಯವನೆಂಬುದಾಗಿಯು ಬ್ರಹ್ಮಾದ್ವೈತಿಗಳು ಹೇಳುತ್ತಾರೆ

ಶಿವಾದ್ವೈತದ ವೈಶಿಷ್ಟ್ಯ

ಬ್ರಹ್ಮಾದ್ವೈತಿಗಳಿಗೆ ವಿಚಾರವೇ ಪ್ರಧಾನವಾದ್ದರಿಂದ ವಿಚಾರಾಂಕುರವೇ "ಮುನ್ನವೆ ಭಕ್ತಿ ಕ್ರಿಯೆಯಿಂದಂ ನೆರೆ ಪರಿಶುದ್ಧನಾದ ಒಬ್ಬಿಯನಲ್ಲಿ ಸನವಂಸ್ಥಿತ ಸದ್ಗುಣಗಣ ಸಂಪನ್ನಗೆ ನಿಜಸ್ವರೂಪವಿಮರ್ಶಂ ಸಾಧ್ಯಂ" ಎಂಬುದಾಗಿ ಶ್ರೀಮನ್ನಿಜಗುಣಶಿವಯೋಗಿಗಳು ಹೇಳಿರುವಂತ ನಿಷ್ಕಾಮವಾದ ಸತ್ಕರ್ಮಗಳನ್ನು ಮತ್ತು ಶಿವನ ಉಪಾಸನೆಯನ್ನು ಯಾರ ಮಾಡಿ ಪರಿಶುದ್ಧಾಂತಃಕರಣವುಳ್ಳವರಾಗಿರುವರೋ ಅವರಿಗೆ ವಿಚಾರದಿಂದ ತಮ್ಮ ಶಿವಸ್ವರೂಪದ ಸಾಕ್ಷಾತ್ಕಾರ (ಅನುಭವ) ವಾಗುವುದು. ಹಾಗೆ ಕರ್ಮೋಪಾಸನೆಗಳನ್ನು ಮಾಡದೇ ಜ್ಞಾನವನ್ನು ಪಡೆಯುವದಕ್ಕೋಸ್ಕರ ಯಾವನಾದರೂ ವಿಚಾರವನ್ನು ಮಾಡತೊಡಗಿದರೆ ಅವನಿಗೆ ತನ್ನ ಶಿವಸ್ವರೂಪವು ಸಾಕ್ಷಾತ್ಕಾರವಾಗದೆಯೂ, ಕರ್ಮೋಪಾಸನೆಗಳ ಫಲವು ಸಿಕ್ಕದೆಯೂ ಅವನು ಉಭಯಭ್ರಷ್ಟತ್ವವನ್ನು ಹೊಂದುತ್ತಾನೆ. ಶಿವಾದ್ವೈತಿಗಳಲ್ಲಾದರೋ ಮುಮುಕ್ಷುವಾಗಿರುವವನು ಪೂರ್ವದಲ್ಲಿಯೇ ಕರ್ಮೋಪಾಸನೆಗಳನ್ನು ಮಾಡದೇ ಇದ್ದರೂ ಅವನು ವಿಚಾರ ಮಾಡುವ ಸಮಾಲದಲ್ಲೇ ಕರ್ಮ, ಭಕ್ತಿ ಮತ್ತು ಯೋಗ ಇವುಗಳನ್ನು ಆಚರಿಸುವುದರಿಂದ ಅವನ ಅಂತಃಕರಣವು ಪರಿಶುದ್ಧವಾಗಿ ಅವನಿಗೆ ತನ್ನ ಶಿವಸ್ವರೂಪಸಾಕ್ಷಾತ್ಕಾರ ಉಂಟಾಗುವುದು.

ಅದು ಹೇಗೆಂದರೆ, ಮಂಗಳಕ್ಕದ ಭಕ್ತಸ್ಥಲದಿಂದ ಇಷ್ಟಲಿಂಗಪೂಜೆ, ಪರೋಪಕಾರ ಇವೇ ಮೊದಲಾದ ಸತ್ಕರ್ಮಗಳನ್ನು ಮಾಡುವಲ್ಲದೆ ಪ್ರಾಣಲಿಂಗಿಸ್ಥಲದಿಂದ ಯೋಗಾಭ್ಯಾಸವನ್ನು ಸಹ ಮಾಡುತ್ತಾನೆ. ಇವರ ಜೊತೆಗೆ ಆರು ಸ್ಥಲಗಳಲ್ಲಿಯೂ ಭಕ್ತಿಯು ನಡೆಯುವದು ಪ್ರತಿಷ್ಠಿತವಿದ್ದರೆ ಅದು ಹೆಚ್ಚುತ್ತಾ ಹೋಗುತ್ತದೆ. ಹೇಗೆಂದರೆ ಭಕ್ತಸ್ಥಲದಲ್ಲಿ ಶಿವನೊಬ್ಬನಿದ್ದಾನೆ ಅವನಿಂದ ಸರ್ವದುಃಖಗಳ ಪರಿಹಾರವಾಗಿ ಸತ್ಯಾನಂದವನ್ನು ಹೊಂದುತ್ತೇವೆ ಎಂಬ ನಂಬಿಕೆಯಿಂದ ಶಿವನಲ್ಲಿ ನೆಲೆ ಇಡತಕ್ಕದ್ದಕ್ಕೆ ಶ್ರದ್ಧಾಭಕ್ತಿಯೆಂದು ಹೆಸರು. ಮಾಹೇಶಸ್ಥಲದಲ್ಲಿ ವಿಚಾರದಿಂದ ಶಿವನೇ ಬ್ರಹ್ಮ, ನಿತ್ಯ ಎಂಬ ವಿವೇಕವುಂಟಾಗುವದರಿಂದ ಅವನಲ್ಲಿ ನಿಶ್ಚಲವಾದ ಭಕ್ತಿಯುಂಟಾಗುತ್ತದೆ. ಇದಕ್ಕೆ "ನಿಷ್ಠಾಭಕ್ತಿ" ಯೆಂದು ಹೆಸರು. ಪ್ರಸಾದಿಸ್ಥಲದಲ್ಲಿ ವಿಷಯಗಳನ್ನು ಶಿವನಿಗೆ ಬಹು ಎಚ್ಚರಿಕೆಯಿಂದ ಮನಸ್ಸು ಅರ್ಪಿತ್ತ ಹೋಗಗೊಡದೆ ಅವನ ದಯದಿಂದ ಪ್ರಸಾದಿಯ ಸ್ಥಿರತಕ್ಕ ಭಕ್ತಿಗೆ "ಅವಧಾನಭಕ್ತಿ" ಎಂದು ಹೆಸರು. ಪ್ರಾಣಲಿಂಗಿಸ್ಥಲದಲ್ಲಿ ಪ್ರಾಣಾಪಾನನಿರೋಧವೆಂಬ ಯೋಗದಿಂದ ಶಿವಸ್ವರೂಪವು ಅನುಭವಕ್ಕೆ ಬರುವದರಿಂದ ಪ್ರಾಣಲಿಂಗಿಯಲ್ಲಿರತಕ್ಕ ಭಕ್ತಿಗೆ "ಅನುಭವಭಕ್ತಿ" ಯೆಂದು ಹೆಸರು. ಶರಣಸ್ಥಲದಲ್ಲಿ ಶಿವನ ಆನಂದವನ್ನನುಭವಿಸುವವರಿಂದ ಶರಣನಲ್ಲಿರತಕ್ಕ ಭಕ್ತಿಗೆ "ಆನಂದಭಕ್ತಿ" ಎಂದು ಹೆಸರು. ಐಕ್ಯಸ್ಥಲದಲ್ಲಿ ಶರಣನು ತನಗೂ ಮತ್ತು ಶಿವನಿಗೂ ಇರತಕ್ಕ ಸಾಮರಸ್ಯವನ್ನು ತಿಳಿದು ಐಕ್ಯತ್ವವನ್ನು ಹೊಂದುವದರಿಂದ ಐಕ್ಯಸ್ಥಲವನ್ನು ಹೊಂದಿದವನಲ್ಲಿರುವ ಭಕ್ತಿಗೆ "ಸಮರಸಭಕ್ತಿ" ಎಂದು ಹೆಸರು. ಇದೇ ವೀರಶೈವಸಿದ್ಧಾಂತದ ವೈಶಿಷ್ಟ್ಯ.

ಶ್ರೀ ಜಗದ್ಗುರು ಕಾಶೀಪೀಠಕ್ಕೆ ಕಾಣಿಕೆ

— —

ಪ್ರಭೆಯಲ್ಲಿ ಕಾಶೀಪೀಠದ ಸಮಾಚಾರವೆಲ್ಲವೂ ಈ ಹಿಂದೆ ಪ್ರಕಾಶಿತವಾಗಿದೆ. ಅದರಂತೆ ಗುರುಭಕ್ತರು ಗುರುದಕ್ಷಿಣೆಯನ್ನು ಪೀಠಕ್ಕೆ ಸಲ್ಲಿಸುತ್ತಿದ್ದಾರೆ. ಈ ಕೆಲಸವು ಇನ್ನೂ ವಿಶೇಷವಾಗಿ ಸಾಗಬೇಕಾಗಿದೆ. ಆಯಾ ಸ್ಥಳಗಳಲ್ಲಿಯ ಪ್ರಮುಖರು ವೀರಶೈವ ಮಹಾಜನರಿಂದ ವಿವಾಹಾದಿ ಶುಭಕಾರ್ಯಗಳಲ್ಲಿ ದಾನ ದಕ್ಷಿಣೆಗಳನ್ನು ಸಮರ್ಪಿಸಿ ಕಾಶೀ ಜಗದ್ಗುರು ಮಹಾಸನ್ನಿಧಿಗೆ ಕಳುಹಿಸುತ್ತಿರಬೇಕು. ಈ ಬಗ್ಗೆ ಸರಿಯಾದ ಸೇವೆಯನ್ನು ಸಲ್ಲಿಸುವುದು ಸರ್ವ ಗುರುಭಕ್ತರ ಮುಖ್ಯ ಕರ್ತವ್ಯವಾಗಿದೆ ಎಂಬುದನ್ನು ತಿಳಿದು ಎಲ್ಲರೂ ಪ್ರಯತ್ನಿಸಬೇಕು.

ಸಿದ್ಧಾಂತಶಿಖಾಮಣಿ

—

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು. ವೀರಶೈವಮತದಲ್ಲಿ ಸದ್ಯಃ ದೊರೆಯತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು. ಈ ಗ್ರಂಥವು ಈಗ್ಗೆ ಸುಮಾರು **ಒಂದು ಸಾವಿರ** ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವನು. ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ವಾಚಕರಿಗೆ ವೇದ್ಯವಾಗುವುದು. ವಾಚಕರ ಅನುಕೂಲ್ಯಕ್ಕಾಗಿ ಬಹುಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೬೬೨ ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೨ ರೂಪಾಯಿ.**

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾತ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನ ಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೭ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಪಂಚಾಚಾರ್ಯ ಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾತ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಟಿಪ್ಪಣಿ)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಭಾಷಣವು (ತೆಲುಗು)	೮ ಆಣೆ
ಸಪ್ಯೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು. ೨ನೆಯ ಆವೃತ್ತಿ)	೧| ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧| ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧|| ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹನೀಯರ ಫೋಟೋಗಳಿರುವುವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರಿಸಲ್ಪಟ್ಟದ್ದು)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*)	8 As
Speeches by Pandit Shri Kashinatha Shastriji (*English*)	12 As
लिंगधारणचंद्रिका (संस्कृत)	३ रु.
वीरशैवरत्न (मराठी)	१ रु.
महानारायणोपनिषत् (वीरशैवभाष्य-संस्कृत)	१ रु.
सिद्धांतशिखामणि (मूल)	८ आ.
नंदिकेश्वरकारिका (संस्कृत)	२ आ.

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266.

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಸಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೩ ರೂ ೮ ಆಣೆ — ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೧೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೯ನೇ ಜುಲೈ ೧೯೩೫ [ಸಂಚಿಕೆ ೮

॥ಓಂ॥

ಸರ್ವಜ್ಞನು ಮತ್ತು ಸರ್ವಶಕ್ತನು ಆದ ಒಬ್ಬ ಈಶ್ವರನುಂಟು

[ಮೈಸೂರಿನಲ್ಲಿರುವ ಆತ್ಮವಿಚಾರ ಮಂದಿರದ ಅಧ್ಯಕ್ಷರಾದ ಶ್ರೀಯುತ ಎಂ ಎಲ್ ನಾಗಣ್ಣನವರಿಂದ]

ಈಶ್ವರನೆಂಬುವನು ಒಬ್ಬನಿದ್ದರೆ ಅವನು ಎಲ್ಲರಿಗೂ ಕಾಣಬೇಕಾಗಿತ್ತು, ಹಾಗೆ ಕಾಣದೇ ಇರುವುದರಿಂದ ಈಶ್ವರನಿಲ್ಲವೆಂದು ಕೆಲವರು ಹೇಳಬಹುದು ಹಗಲಿನಲ್ಲಿ ನಕ್ಷತ್ರಗಳು ಆಕಾಶದಲ್ಲಿದ್ದರೂ ಸೂರ್ಯನ ಪ್ರಕಾಶದಿಂದ ಅವುಗಳು ಕಣ್ಣಿಗೆ ಕಾಣಿಸದೇ ಇದ್ದ ಮಾತ್ರಕ್ಕೆ ಅವುಗಳು ಇಲ್ಲವೆಂದು ಹೇಗೆ ಹೇಳುವುದಕ್ಕಾಗುವುದಿಲ್ಲವೋ ಹಾಗೆ ಈಶ್ವರನು ನಮ್ಮ ಅಜ್ಞಾನದಿಂದ ನಮಗೆ ತೋರದಿದ್ದ ಮಾತ್ರಕ್ಕೆ ಅವನು ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ ಅಲ್ಲದೆ, ಈ ಕೆಳಗೆ ಹೇಳುವ ಕಾರಣಗಳಿಂದ ಪ್ರಪಂಚವನ್ನು ಸೃಷ್ಟಿಸುವ ಮತ್ತು ಸರ್ವ ಜೀವರುಗಳನ್ನು ನಿಯಮಿಸುವ ಆದ್ಯಂತರಹಿತನಾದ ಸರ್ವಜ್ಞನು ಮತ್ತು ಸರ್ವಶಕ್ತನು ಆದ ಒಬ್ಬ ಈಶ್ವರನು ಉಂಟೆಂಬುದು ನಿರ್ವಿವಾದವಾಗಿ ಸಿದ್ಧವಾಗುತ್ತದೆ

ಜೀವರಿಗೆ ಅವರ ಕರ್ಮಗಳ ಫಲವನ್ನು ಕೊಡುವವನು ಈಶ್ವರನು

1 ಒಬ್ಬನು ಕಳ್ಳತನವನ್ನು ಮಾಡಿದರೆ ಶಿಕ್ಷೆಯನ್ನು ಹೊಂದುತ್ತಾನೆ ಅವನು ಹೊಂದತಕ್ಕ ಶಿಕ್ಷೆಗೆ ಅವನ ಕಳ್ಳತನವೇ ಕಾರಣವಾದರೂ ಅವನ ಕಳ್ಳತನವು ಜಡವಾದುದರಿಂದ ಅವನಿಗೆ ಶಿಕ್ಷೆಯನ್ನು ಕೊಡುವುದಕ್ಕೆ ಒಬ್ಬ ಮ್ಯಾಜಿಸ್ಟ್ರೇಟನ ಆವಶ್ಯಕತೆ ಇರುತ್ತದೆ ಆದುದರಿಂದ ನಾವು ಈ ಜನ್ಮದಲ್ಲಿ ಅನುಭವಿಸುತ್ತಿರುವ ಸುಖದುಃಖಗಳಿಗೆ ನಮ್ಮ ಹಿಂದಿನ ಜನ್ಮಗಳ ಪುಣ್ಯ ಪಾಪ ಕರ್ಮಗಳೇ ಕಾರಣವಾದರೂ ಪುಣ್ಯಪಾಪಗಳು ಜಡವಾದುದರಿಂದ ಅವುಗಳ ಫಲವಾದ ಸುಖದುಃಖಗಳನ್ನು ನಮಗೆ ಒಬ್ಬ ಚೇತನನೇ ಕೊಟ್ಟಿರಬೇಕು ಅವನೇ ಈಶ್ವರನು

ಅಲ್ಲದೆ 16 ಜನಗಳುಳ್ಳ ಒಂದು ಕುಟುಂಬಕ್ಕೆ ಒಬ್ಬ ಯಜಮಾನನು 8-10 ಜನಗಳಿಂದ ಕೂಡಿದ ಒಂದು ಕಮಿಟಿಯ ಮೀಟಿಂಗಿಗೆ ಒಬ್ಬ ಅಧ್ಯಕ್ಷನು, ನೂರಾರು ಅಥವಾ ಸಹಸ್ರಾರು ಜನಗಳು ಸೇರತಕ್ಕ ಒಂದು ಸಭೆಗೆ ಒಬ್ಬ ಸಭಾನಾಯಕನು, ಲಕ್ಷಾಂತರ ಜನಗಳುಳ್ಳ ಒಂದು ರಾಜ್ಯಕ್ಕೆ ಒಬ್ಬ ರಾಜನು, ಅನೇಕ ರಾಜ್ಯಗಳಿಗೆ ಒಬ್ಬ ಚಕ್ರವರ್ತಿಯು ಇರಲೇಬೇಕು ಹಾಗಿಲ್ಲದಿದ್ದರೆ ಕಾರ್ಯಕ್ರಮಗಳ ವ್ಯವಸ್ಥೆಯು ಕೆಟ್ಟು ಹೋಗುವುದು ಒಂದೊಂದು ಜೀವರಾಶಿ (ಜಾತಿ)ಯಲ್ಲಿ ಕೋಟ್ಯಂತರ ಪ್ರಾಣಿಗಳ ಪ್ರಕಾರ ಅಂಡಜ, ಪಿಂಡಜ, ಸ್ವೇದಜ, ಉದ್ಭಿಜ್ಜ ಎಂಬ ಎಂಭತ್ತು ನಾಲ್ಕು ಲಕ್ಷ ಜೀವರಾಶಿಗಳನ್ನೊಳಗೊಂಡಿರತಕ್ಕ ಪ್ರಪಂಚದಲ್ಲಿ ಅಸಂಖ್ಯಾತ ಪ್ರಾಣಿಗಳಿರುವುದರಿಂದ ಈ ಪ್ರಾಣಿಗಳಿಗೆಲ್ಲಕ್ಕೂ ಒಂದು ಕ್ಷಣ ವ್ಯತ್ಯಾಸವಿಲ್ಲದೆ ಅವರವರ ಕರ್ಮಾನುಸಾರ ಫಲವನ್ನು ಕೊಟ್ಟು ಅವರುಗಳನ್ನು ನಿಯಮಿಸತಕ್ಕ ಸರ್ವಜ್ಞನೂ, ಸರ್ವಶಕ್ತನೂ ಆದ ಈಶ್ವರನೊಬ್ಬನು ಇರಲೇಬೇಕು

ಪೂರ್ವಮೀಮಾಂಸಕರು ಅಂದರೆ ಕರ್ಮಕಾಂಡಿಗಳು 'ಕರ್ಮವೇ ಫಲವನ್ನು ಕೊಡುತ್ತದೆ ಈಶ್ವರನು ಆವಶ್ಯಕವಿಲ್ಲ' ಎಂಬುದಾಗಿ ಹೇಳಿ ಈಶ್ವರನನ್ನು ನಿರಾಕರಿಸುವರು ಹಿಂದೆ ಹೇಳಿದಂತೆ ಕರ್ಮವು ಜಡವಾದುದರಿಂದ ಕೂಲಿಗೋಸ್ಕರ ಕೆಲಸವನ್ನು ಮಾಡತಕ್ಕವನಿಗೆ ತಾನು ಮಾಡಿದ ಕೆಲಸವು ತನಗೆ ಕೂಲಿಯನ್ನು ಕೊಡದೆ ಕೆಲಸವನ್ನು ಮಾಡುವುದಕ್ಕೆ ನಿಯಮಿಸಿದ ಯಜಮಾನನು ಹೇಗೆ ಕೊಡುತ್ತಾನೋ ಹಾಗೆ ಕರ್ಮಗಳನ್ನು ಮಾಡಬೇಕೆಂದು ವಿಧಿಸಿದತಕ್ಕ ಈಶ್ವರನೇ ಅವುಗಳ ಫಲವನ್ನು ಕೊಡಬೇಕಾಗಿರುತ್ತದೆ ಆದುದರಿಂದ ಕುಮಾರಿಲಗ್ರಂಥದ ಶ್ಲೋಕವಾರ್ತಿಕವೆಂಬ ಪೂರ್ವಭಾಗದಲ್ಲಿ ಈಶ್ವರನಿರಾಕರಣವಿದ್ದರೂ ತಂತ್ರವಾರ್ತಿಕವೆಂಬ ಉತ್ತರಭಾಗದ ಗೃಹಸಂಮಾರ್ಜನಾಧಿಕರಣದಲ್ಲಿ ಸಕಲವೇದಾಭಿಮಾನಿಯಾಗಿರುವ ವೇದಪುರುಷನೆಂಬ ಪರಮಾತ್ಮನು ಅಂಗೀಕರಿಸಲ್ಪಟ್ಟಿದ್ದಾನೆ ಇದರಿಂದ ಪೂರ್ವಮೀಮಾಂಸಕರು ವೇದಪ್ರಾಮಾಣ್ಯಸ್ಥಾಪನೆಗಾಗಿ ಈಶ್ವರನನ್ನು ನಿರಾಕರಿಸುವರೇ ಹೊರತು ದ್ವೇಷಬುದ್ಧಿಯಿಂದಲ್ಲ ವೇದಕ್ಕೆ ಪ್ರಾಮಾಣ್ಯವು ಸಿದ್ಧಿಸಿದ ಮುಂದಕ್ಕೆ ಈಶ್ವರನು ಸಿದ್ಧಿಸುತ್ತಾನೆಂದು ಅವರ ಅಭಿಪ್ರಾಯ

ಪ್ರಪಂಚದ ಸೃಷ್ಟಿ ಪ್ರಳಯಗಳನ್ನು ಮಾಡುವವನು ಈಶ್ವರನು

2 ಯಥಾ ಘಟಪಟಾದಿಕಾರ್ಯಂ ಕರ್ತೃಜನ್ಯಂ ತಥಾ ಕ್ಷಿತ್ಯಂಕುರಾದಿಕಮಪಿ । ನ ಚ ಕರ್ತೃತ್ವಮಸ್ಮದಾದೀನಾಂ ಸಂಭವತೀತ್ಯತ ಸ್ತತ್ಕರ್ತೃತ್ವೇನೇಶ್ವರಸಿದ್ಧಿಃ ' ಎಂಬುದಾಗಿ ತಾರ್ಕಿಕರು ಹೇಳುವಂತೆ ಘಟಪಟಾದಿ ಕಾರ್ಯಗಳಿಗೆ ಕುಂಬಾರನೇ ಮುಂತಾದ ಕರ್ತೃಗಳಿರುವಂತೆ ನಮ್ಮ ಎದುರಿಗೆ ತೋರತಕ್ಕ ಭೂಮಿ, ಅಂಕುರ ಮುಂತಾದ ನಾನಾ ವಿಧವಾದ ಪ್ರಪಂಚ ಸೃಷ್ಟಿಗೂ ಒಬ್ಬ ಕರ್ತನಿರಲೇಬೇಕಾಗುತ್ತದೆ ಇಲ್ಲವಾದರೆ ಘಟವು ತನ್ನಷ್ಟಕ್ಕೆ ತಾನೇ ಆಗದಿರುವಂತೆ ಪ್ರಪಂಚವು ತನ್ನಷ್ಟಕ್ಕೆ ತಾನೇ ಸೃಷ್ಟಿಯಾಗುವುದಿಲ್ಲ ಮತ್ತು ಮನುಷ್ಯರಾದ ನಮ್ಮಿಂದ ಇಂತಹ ಅಗಾಧ ಸೃಷ್ಟಿಯ ರಚನೆಯು ಸಾಧ್ಯವಿಲ್ಲ ಆದುದರಿಂದ ಪ್ರಪಂಚದ ಸೃಷ್ಟಿಯು ಸರ್ವಶಕ್ತನಾದ ಈಶ್ವರನಿಂದಲೇ ಆಗಿರಬೇಕು

ನಿರೀಶ್ವರವಾದಿಗಳಾದ ಸಾಂಖ್ಯರು ಹೇಳುವಂತೆ ಈಶ್ವರನ ಸಂಬಂಧವಿಲ್ಲದೆ ಕೇವಲ ಜಡವಾದ ಪ್ರಕೃತಿಯಿಂದಲೇ ಪ್ರಪಂಚವು ಸೃಷ್ಟಿಯಾಗಲಾರದು ಸ್ವಭಾವವಾದಿಗಳು ಪ್ರಪಂಚದ ಸೃಷ್ಟಿಗೆ ಪರಮಾಣುಗಳ ಒಟ್ಟಿಗೆ ಸೇರುವಿಕೆಯೇ ಕಾರಣವೆಂದು ಮತ್ತು ಪ್ರಪಂಚದ ಪ್ರಳಯಕ್ಕೆ ಅವುಗಳ ಅಗಲುವಿಕೆಯೇ ಕಾರಣವೆಂದು ಹೇಳುತ್ತಾರೆ ಈ ಪರಮಾಣುಗಳಿಗೆ ಒಟ್ಟಿಗೆ ಸೇರತಕ್ಕದ್ದೇ ಸ್ವಭಾವವೆಂದರೆ ಪ್ರಳಯವೆಂಬುವದಿಲ್ಲದೇನೆ ಪ್ರಪಂಚವು ಯಾವಾಗಲೂ ಸೃಷ್ಟಿಯಾಗುತ್ತಲೇ ಇರಬೇಕು ಒಂದು ವೇಳೆ ಪರಮಾಣುಗಳಿಗೆ ಬೇರೆ ಬೇರೆಯಾಗತಕ್ಕದ್ದೇ ಸ್ವಭಾವವೆಂದರೆ ಸೃಷ್ಟಿಯೆಂಬುವದಿಲ್ಲದೆ ಯಾವಾಗಲೂ ಪ್ರಳಯವಾಗುತ್ತಲೇ ಇರಬೇಕು ಪರಮಾಣುಗಳಿಗೆ ಒಟ್ಟಿಗೆ ಸೇರುವದು ಮತ್ತು ಬೇರೆ ಬೇರೆಯಾಗುವುದು ಸ್ವಭಾವವೆಂದರೆ ಸೃಷ್ಟಿಪ್ರಳಯಗಳು ಸಮಕಾಲದಲ್ಲಿ ಆಗುವದರಿಂದ ಜಗತ್ತೇ ಗೋಚರವಾಗದೇ ಇರಬೇಕು ಅಲ್ಲದೆ ಒಂದು ಪಾಕಗೃಹದಲ್ಲಿ (ಅಡಿಗೆಮನೆಯಲ್ಲಿ) ಅನೇಕ ಅಡಿಗೆ ಸಾಮಗ್ರಿಗಳಿದ್ದರೂ ಅವುಗಳು ತಾವಾಗಿಯೇ ಸೇರಿ ಭೋಜ್ಯ (ತಿನ್ನುವ) ಪದಾರ್ಥಗಳಾಗದೆ ಯಾವ ಯಾವ ಸಾಮಗ್ರಿಗಳನ್ನು ಎಷ್ಟೆಷ್ಟು ಹಾಕಬೇಕೋ ಅಷ್ಟಷ್ಟು ಹಾಕಿ ಭೋಜ್ಯಪದಾರ್ಥಗಳನ್ನು ಮಾಡುವ ಒಬ್ಬ ಪಾಚಕನು (ಅಡಿಗೆ ಮಾಡುವವನು) ಹೇಗೆ ಆವಶ್ಯಕವೋ ಹಾಗೆ ಪರಮಾಣುಗಳನ್ನು ಸೇರಿಸಿ ಸೃಷ್ಟಿಯನ್ನೂ, ಅವುಗಳನ್ನು ಬೇರೆ ಬೇರೆ ಮಾಡಿ ಪ್ರಳಯವನ್ನೂ ಮಾಡುವ ಸರ್ವಜ್ಞನಾದ ಮತ್ತು ಸರ್ವಶಕ್ತನಾದ ಈಶ್ವರನು ಇರಲೇಬೇಕು ಈ ಕಾರಣಗಳಿಂದಲೇ ಪ್ರಪಂಚದ ಸೃಷ್ಟಿಪ್ರಳಯಗಳು ಸ್ವಭಾವದಿಂದಲೇ ಆಗುತ್ತವೆಂದು ಇದುವರೆಗೆ ವಾದಿಸುತ್ತಿದ್ದ ಭೌತಿಕಶಾಸ್ತ್ರಜ್ಞರೂ ಕೂಡ ಈ ಪ್ರಪಂಚದ ಸೃಷ್ಟಿಪ್ರಳಯಗಳನ್ನು ಮಾಡತಕ್ಕ ಒಬ್ಬ ಈಶ್ವರನಿರಬೇಕೆಂಬ ತೀರ್ಮಾನಕ್ಕೆ ಬಂದಿರುತ್ತಾರೆ ಆದುದರಿಂದ ಭೂಮಿ ಅಂಕುರಾದಿ ಪಾಂಚಭೌತಿಕ ಸೃಷ್ಟಿರಚನೆಗು ಮತ್ತು ಅಸಂಖ್ಯಾತರಾದ ಜೀವರುಗಳನ್ನು ನಿಯಮಿಸುವುದಕ್ಕೂ ಸರ್ವಜ್ಞನು ಮತ್ತು ಸರ್ವಶಕ್ತನು ಆದ ಈಶ್ವರನು ಇರಲೇ ಬೇಕೆಂಬುದು ನಿರ್ವಿವಾದವಾಗಿ ಸಿದ್ಧವಾಗುತ್ತದೆ

ಪ್ರಪಂಚದ ಸೃಷ್ಟಿಪ್ರಳಯಗಳು ಪ್ರವಾಹತಃ ಅನಾದಿಯಾಗಿವೆ

3 ಹಿಂದೆ ಹೇಳಿದಂತೆ ಜೀವರುಗಳಿಗೆ ಅಂದರೆ ಮನುಷ್ಯರಾದಿಯಾಗಿ ಸರ್ವಪ್ರಾಣಿಗಳಿಗೆ ಹೇಗೆ ಪ್ರಥಮ ಜನ್ಮವಿಲ್ಲವೋ ಅದರಂತೆ ಪ್ರಪಂಚಕ್ಕೂ ಪ್ರಥಮಸೃಷ್ಟಿಯೆಂಬುದಿಲ್ಲ ಏತಕ್ಕೆಂದರೆ ಒಂದುವೇಳೆ ಪ್ರಥಮ ಸೃಷ್ಟಿಯನ್ನು ಒಪ್ಪುವನಾದರೆ ಪ್ರಥಮಸೃಷ್ಟಿಯ ಹಿಂದೆ ಪ್ರಪಂಚವಿರಲಿಲ್ಲವೆಂದೂ, ಪ್ರಥಮಸೃಷ್ಟಿಯಲ್ಲಿ ಜೀವರುಗಳನ್ನು ಈಶ್ವರನು ಸೃಷ್ಟಿಸಿದನೆಂದೂ, ಪ್ರಥಮಸೃಷ್ಟಿಯಲ್ಲಿದ್ದ ಜೀವರು ಹಿಂದೆ ಯಾವ ಕರ್ಮಗಳನ್ನೂ ಮಾಡಿರಲಿಲ್ಲವೆಂದೂ ಹೇಳಬೇಕಾಗುತ್ತದೆ ಈಶ್ವರನು ಪ್ರಪಂಚವನ್ನು ಸೃಷ್ಟಿಮಾಡುವಾಗ ಕೆಲವು ಜೀವರನ್ನು ಮನುಷ್ಯರನ್ನಾಗಿಯು, ಇನ್ನು ಕೆಲವು ಜೀವರನ್ನು ಮೃಗಪಕ್ಷಿಗಳನ್ನಾಗಿಯು, ಮತ್ತೆ ಕೆಲವು ಜೀವರನ್ನು ಕ್ರಿಮಿಕೀಟಗಳನ್ನಾಗಿಯು ಮಾಡಿ ಇವರಲ್ಲಿ ಕೆಲವರನ್ನು ಸುಖಿಗಳನ್ನಾಗಿಯೂ, ಕೆಲವರನ್ನು ದುಃಖಿಗಳನ್ನಾಗಿಯೂ ಮಾಡಿರಲೇಬೇಕು ಪ್ರಥಮಸೃಷ್ಟಿಯಾದ್ದರಿಂದ ಹಿಂದೆ ಜೀವರು ಯಾವ ಕರ್ಮಗಳನ್ನೂ ಮಾಡದೇ ಇದ್ದರೂ ಅವರಿಗೆ ತನಗೆ ಇಷ್ಟಬಂದಂತೆ ಉತ್ತಮಾಧಮ

[೩ನೆಯ ಪುಟವನ್ನು ನೋಡಿ]

ಪಂಚಾಚಾರ್ಯಪ್ರಭಾ.

೧೯೪೫ನೆಯ ಜುಲೈ ತಾ॥ ೯ನೇ ಸೋಮವಾರ

ಶ್ರೀ ಜಗದ್ಗುರು ಕೇದಾರಪೀಠದ ಸಮಾಚಾರ

ಶ್ರೀ ಜಗದ್ಗುರು ಕೇದಾರಪೀಠದ ಒಳೆ ಈಗ ಎರಡು ತಿಂಗಳುಗಳಿಂದಲೂ ವಿಶೇಷವಾದ ಚಳವಳಿಯು ನಡೆಯುತ್ತಿರುವುದು ಸರಿಯಷ್ಟೆ! ದಕ್ಷಿಣ ದೇಶದ ಗುರುಭಕ್ತರಿಂದ ಹೋಗಿರುವ ಸಾವಿರ ಗಟ್ಟಲೆ ತಾರುಗಳನ್ನೂ ಅಸಂಖ್ಯ ರಿಜಿಸ್ಟರು ಪತ್ರಗಳನ್ನೂ ನೋಡಿ, ಅಲ್ಲಿಯ ಯೂರೋಪಿಯನ್ ಮುಖ್ಯಾಧಿಕಾರಿಗಳು ಪೀಠದ ವಿಷಯದಲ್ಲಿ ಈಗ ವಿಶೇಷ ಲಕ್ಷ್ಯಕೊಟ್ಟಿದ್ದಾರೆ ದಕ್ಷಿಣ ದೇಶದಿಂದ ಹೋಗಿರುವ ತಾರುಗಳ ಮತ್ತು ಪ್ರಾರ್ಥನಾಪತ್ರಗಳ ಅಭಿಪ್ರಾಯಗಳನ್ನು ವಿಮರ್ಶಿಸುವ ಮತ್ತು ಈಗ ಕ್ಯಾಂಡಿಡೇಟರಾಗಿ ಅರ್ಜಿ ಹಾಕಿಕೊಂಡಿರುವವರಲ್ಲಿ ಅನಧಿಕಾರಿಗಳಾಗಿರುವವರ ಅರ್ಜಿಗಳನ್ನು ವಜಾ ಮಾಡುವ ಅಧಿಕಾರವನ್ನು ಸ್ಪೆಷಲ್ ಆಫೀಸರರಿಗೆ ವಹಿಸಿರುವರೆಂದು ತಿಳಿದು ಬರುತ್ತದೆ. ಈ ತಿಂಗಳು ೧೨ನೆಯ ತಾರೀಖಿನ ದಿವಸ ಓಖೀಮಠದಲ್ಲಿ ಸ್ಪೆಷಲ್ ಆಫೀಸರರ ಮುಂದೆ ಈ ವಿಚಾರದ ಬಗ್ಗೆ ಕೂಲಂಕಷವಾಗಿ ಚರ್ಚೆ ನಡೆಯುವದು ಆ ದಿವಸ ಆ ಪೀಠಕ್ಕೆ ಇಂಥವರು ಅಧಿಕಾರಿಗಳು ಇಂಥವರು ಅನಧಿಕಾರಿಗಳು ಎಂಬುವನ್ನು ಗ್ರಂಥಾಧಾರಗಳ ಮೂಲಕ ಸಿದ್ಧಪಡಿಸಲಾಗುವದು. ಆ ಪ್ರಮಾಣಗಳೆಲ್ಲವನ್ನೂ ನೋಡಿ ಸ್ಪೆಷಲ್ ಆಫೀಸರರು ತೀರ್ಮಾನವನ್ನು ಹೇಳುವರು.

ಇಂಡಿಯಾ ದೇಶದಲ್ಲಿರುವ ಗುರುಪೀಠಾಭಿಮಾನಿಗಳು ತಾರುಗಳ ಸುರಿಮಳೆಯನ್ನು ಸುರಿಸದಿದ್ದರೆ ಉತ್ತರಾಧಿಕಾರದ ವಿಷಯವು, ಈರೀತಿ ವಿಚಾರಕ್ಕೆ ಬರುತ್ತಲೇ ಇರಲಿಲ್ಲ ಇಷ್ಟುಹೊತ್ತಿಗೆ ಯಾರಾದರೊಬ್ಬ ಅನಾಥ ದೇಯುರು ಸ್ವಾಮಿಗಳಾಗಿಬಿಡುತ್ತಿದ್ದರು ಅಂದವರು ಬಾರದಿಡುವವಕ್ಕೆ ಗುರುಪೀಠಾಭಿಮಾನಿಗಳ ಭಯಂಕರ ಪ್ರತಿಭಟನೆಯೇ ಮೂಲಕಾರಣವಾಯಿತು ಇದು ಶುಭಸೂಚನೆಯೆಂದೇ ಹೇಳಬೇಕಾಗಿದೆ ಶ್ರೀ ಕೇದಾರೇಶ್ವರನ ಅನುಗ್ರಹದಿಂದ ಈಗೊದಗಿರುವ ತೊಂದರೆಯು ಶೀಘ್ರವಲ್ಲಿಯೇ ನಿವಾರಣೆಯಾಗಲೆಂದು ಆ ಜಗನ್ನಿಯಾಮಕನನ್ನು ಪ್ರಾರ್ಥಿಸುತ್ತೇನೆ.

ಅಮೆರಿಕ ಸೈನಿಕರು ಬರ್ಲಿನ್ನಿನಲ್ಲಿ

ಅಮೆರಿಕ ಸೈನಿಕರು ಬರ್ಲಿನ ನಗರದ ದಕ್ಷಿಣ ಭಾಗವನ್ನು ಆಕ್ರಮಿಸಿಕೊಂಡು ಅಲ್ಲಿ ಪ್ರವೇಶಿಸುತ್ತಿದ್ದಾರೆ. ಈ ವಿಭಾಗ ಅಮೆರಿಕನ್ನರ ವಶದಲ್ಲಿರಬೇಕೆಂದಾದ ತೀರ್ಮಾನದ ಮೇರೆಗೆ ಈ ಸೈನ್ಯ ಪ್ರವೇಶಮಾಡಿದೆ ಅಮೆರಿಕದ ೨ನೇ ದಳವು ಲೆನ್ಸ್ಬರ್ಗ್ ವಿಭಾಗದಲ್ಲಿ ಬಂದಿಳಿಯುತ್ತಿದೆ ಸೈನಿಕರು ನಗರವನ್ನು ಪ್ರವೇಶಿಸುವಾಗ ಬ್ಯಾಂಡ್ ಮೊದಲಾದ ವಾದ್ಯಗಳ ಧ್ವನಿ ಇಲ್ಲ. ಬ್ರಿಟಿಷ್ ೭ನೇ ಸೈನ್ಯವು ಬರ್ಲಿನ್ನಿನ ಪೂರ್ವಭಾಗವನ್ನು ಆಕ್ರಮಿಸಿಕೊಳ್ಳುವುದು. ನಾಲ್ಕು ಮಹಾರಾಷ್ಟ್ರಗಳೂ ಬರ್ಲಿನ್ನಿನ ಒಂದೊಂದು ಭಾಗವನ್ನು ಆಳಬೇಕೆಂದು ಗೊತ್ತಾದಂತೆ ಈ ಆಕ್ರಮಣವು ನಡೆದಿದೆ.

ಯುದ್ಧವಾರ್ತೆ.

ಜಪಾನರು ಭಾರಿ ಮುತ್ತಿಗೆಯನ್ನು ಆರಂಭಿಸಿದ್ದಾರೆ

ಪೆಗುವಿನ ಈಶಾನ್ಯಕ್ಕೆ ೨೫ ಮೈಲಿ ದೂರದಲ್ಲಿ ಸಿಟ್ಟಾಂಗ್ ನದಿ ತಿರುವಿನಲ್ಲಿರುವ ನಮ್ಮ ಸ್ಥಾನಗಳ ಮೇಲೆ ಜಪಾನರು ಉಗ್ರ ಮುತ್ತಿಗೆಗಳನ್ನು ಆರಂಭಿಸಿದ್ದಾರೆ ಹೊಡೆದಾಟ ನಡೆಯುತ್ತಿದೆ

ಆತ್ಮಹತ್ಯೆಗೆ ಮುಂಚೆ ಸಿಗರೇಟು ಬಹುಮಾನ

ಪ್ರತಿಯೊಬ್ಬ ಜಪಾನಿ ಯೋಧನಿಗೂ ಅವನನ್ನು ಆತ್ಮಹತ್ಯಾ ಕಾರ್ಯಕ್ಕೆ ನಿಯೋಜಿಸುವ ಮುಂಚೆ ಆತನಿಗೆ ೧೦ ಸಿಗರೇಟುಗಳ ಅಮೌಲ್ಯ ಬಹುಮಾನ ಕೊಡಲಾಗುವುದೆಂದು ಎ ಪಿ ಐ ಸುದ್ದಿಗಾರರು ಬರೆದಿದ್ದಾರೆ ಈ ಬಹುಮಾನ ಚಕ್ರವರ್ತಿಗಳಿಂದ ಒಂದಷ್ಟು ಒಂದೊಂದು ಸಿಗರೇಟಿಗೂ ಪ್ರತ್ಯೇಕ ಪೆಟ್ಟಿಗೆ ಇರುವುದು ಪ್ರತಿ ಪೆಟ್ಟಿಗೆಯ ಮೇಲೂ ಚಿನ್ನದಲ್ಲಿ ಜಪಾನೀ ಅಂಕಿತ ಮುದ್ರಿತವಾಗಿರುವುದು ಪ್ರಾಣತ್ಯಾಗ ಮಾಡುವ ಪ್ರತಿಜ್ಞೆ ಕೈಕೊಳ್ಳದ ಕೆಲವರ ಬಳಿಯಲ್ಲಿ ಇಂತಹ ಮಾದರಿಗಳು ಸಿಕ್ಕಿವೆಯೆಂದು ತಿಳಿದುಬರುತ್ತದೆ

'ಟ್ಯಾಂಜಿಯರ್ ನ ಭವಿಷ್ಯದಲ್ಲಿ? ರಷ್ಯಕ್ಕೂ ಆಸಕ್ತಿ ಉದಯ

ಟ್ಯಾಂಜಿಯರ್ಸ್ನ ಅಂತರರಾಷ್ಟ್ರೀಯ ಕ್ಷೇತ್ರದ ಸ್ಥಾನಮಾನಗಳನ್ನು ನಿರ್ಧರಿಸುವ ಸಲುವಾಗಿ ಸಧ್ಯದಲ್ಲೇ ಆರಂಭವಾಗಲಿರುವ ಸಂಭಾಷಣೆಗಳಲ್ಲಿ ತಾನೂ ಭಾಗವಹಿಸುವುದಕ್ಕೆ ಅವಕಾಶಕೊಡಬೇಕೆಂಬುದಾಗಿ ರಷ್ಯಾ ಕೇಳಿದ ಈ ಕೇಳಿಕೆಯು ವಿಚಾರ ಪರಿಶೀಲನೆಯಲ್ಲಿದೆ ಸಧ್ಯ ಪ್ಯಾರಿಸ್ಸಿನಲ್ಲಿ ಫ್ರಾನ್ಸ್ ಬ್ರಿಟನ್ ಮತ್ತು ಅಮೆರಿಕನರು ಮಾತುಕತೆ ನಡೆಸುತ್ತಿದ್ದಾರೆ ೧೯೪೦ರಲ್ಲಿ ಸ್ಪೈನ್ ಟ್ಯಾಂಜಿಯರ್ಸ್ನ ಅಂತರರಾಷ್ಟ್ರೀಯ ಕ್ಷೇತ್ರವನ್ನು ಆಕ್ರಮಿಸಿತು ಆಗ ಬ್ರಿಟಿಷ್ ಮತ್ತು ಅಮೆರಿಕಾ ಸರಕಾರಗಳು ಈ ಪ್ರಶ್ನೆಯನ್ನು ಮತ್ತೊಮ್ಮೆ ಪರಿಶೀಲಿಸುವುದಾಗಿ ಪ್ರಕಟಿಸಿದ್ದವು

ಉತ್ತರ ಬೋರ್ನಿಯೋದಲ್ಲಿ ಮಿತ್ರರ ಮುಂದೋಟ

ಉತ್ತರ ಬೋರ್ನಿಯೋದಲ್ಲಿ ಬಾಲಿಕ್ ಪಾರ್ಪ ಕ್ಷೇತ್ರದಲ್ಲಿ ಮಿತ್ರ ಯೋಧರು ತಮ್ಮ ಸ್ಥಾನವನ್ನು ೧೩ ಮೈಲಿ ಅಗಲದವರೆಗೆ ವಿಸ್ತರಿಸಿಕೊಂಡಿದ್ದಾರೆ ಉತ್ತರದ ಕಡೆ ೧೦ ಮೈಲಿ ಕಾಲು ಚಾಚಿದ್ದಾರೆ ಅಲ್ಲಿರುವ ಮುಖ್ಯ ವಿಮಾನ ನಿಲ್ದಾಣಗಳಲ್ಲಿ ಎರಡನೆಯದನ್ನು ಮಿತ್ರರು ಹಿಡಿದರು ಅದನ್ನು ಉಳಿಸಿಕೊಳ್ಳಲು ಜಪಾನರು ತಂಬಾ ಸಾಹಸ ಮಾಡಿದರು ಆದರೆ ಅಮೆರಿಕನ್ ಮತ್ತು ಬ್ರಿಟಿಷ್ ವಿಮಾನಗಳು ಶತ್ರು ಸ್ಥಾನಗಳ ಮೇಲೆ ಮುತ್ತಿಗೆ ನಡೆಸಿ, ಧ್ವಂಸ ಮಾಡಿದವು ಹಲವು ಕಡೆ ಜಪಾನ ಫಿರಂಗಿಗಳು ಯೋಧರೊಂದಿಗೆ ಅಂತರಿಕ್ಷಕ್ಕೆ ಹಾರಿಸಲ್ಪಟ್ಟವು! ಬಾಲಿಕ್ ಪಾಪರ್ನಲ್ಲಿ ಇನ್ನೂ ಜಪಾನರ ಕೈಲಿರುವ ಕಟ್ಟಕಡೇ ತೈಲಶೋಧನ ಯಂತ್ರವನ್ನು ಆಕ್ರಮಿಸಲು ಮಿತ್ರಸೇನೆ ಧಾವಿಸುತ್ತಿದೆ ಸಮುದ್ರ ತೀರದಲ್ಲಿ ಸಹ ಜಪಾನರು ಹಿಂದೋಡುತ್ತಿದ್ದಾರೆ ಅಮೆರಿಕ ವಿಮಾನಗಳು ಹೊಸ ಮೂಲಗಳಿಂದ ಜಪಾನರ ಸ್ಥಾನಗಳನ್ನು ಧ್ವಂಸಮಾಡುತ್ತಿವೆ ಫಿಲಿಪೈನ್ಸ್ ಕದನ ಮುಗಿದುದರಿಂದ ಅಲ್ಲಿನ ವಿಮಾನಗಳನ್ನೆಲ್ಲ ಕ್ಯುಷು ಪಶ್ಚಿಮ ತೀರದಲ್ಲಿ ಮುತ್ತಿಗೆ ನಡೆಸಲು ಕಳಿಸಲಾಗುತ್ತಿದೆ

ಪೋಲೆಂಡಿನ ತಾತ್ಕಾಲಿಕ ಸರಕಾರ

ಇತ್ತೀಚೆಗೆ ವಾರ್ಸಾದಲ್ಲಿ ಸ್ಥಾಪಿತವಾಗಿದ್ದ ಪೋಲೆಂಡ್ ತಾತ್ಕಾಲಿಕ ರಾಷ್ಟ್ರೀಯ ಸರಕಾರವನ್ನು ಬ್ರಿಟನ್ ಮತ್ತು ಅಮೆರಿಕ ಸರ್ಕಾರಗಳು ಒಪ್ಪಿವೆ ಕ್ರೀಮಿಯಾ ಸಮ್ಮೇಳನದಲ್ಲಿ ಪೋಲೆಂಡಿನ ವಿಚಾರ ಕುರಿತು ಆದ ತೀರ್ಮಾನಗಳನ್ನೆಲ್ಲ ಪೋಲೆಂಡ್ ಸರಕಾರ ಅಂಗೀಕರಿಸುವುದಾಗಿ ಪ್ರಕಟವಾದಮೇಲೆ ಮಿತ್ರ ಸರಕಾರಗಳು ಮೇಲ್ಕಂಡಂತೆ ಆ ಸರಕಾರವನ್ನು ಒಪ್ಪಿದವು ಆದಷ್ಟು ಬೇಗ ಯಾವ ನಿರ್ಬಂಧವೂ ಇಲ್ಲದ ಮಹಾಚುನಾವಣೆಗಳನ್ನು ನಡೆಸುವುದಾಗಿ ಪೋಲೆಂಡ್ ಸರಕಾರ ಒಪ್ಪಿದೆ ಬೇಗನೆ ವಾರ್ಸಾದಲ್ಲಿ ಬ್ರಿಟಿಷ್ ರಾಯಭಾರಿಗಳೊಬ್ಬರನ್ನು ನೇಮಿಸಲಾಗಬಹುದೆಂದು ತಿಳಿದುಬಂದಿದೆ

ಬ್ರಿಟನ್ನಿನ ಮಹಾಚುನಾವಣೆ

ಬ್ರಿಟನಿನ ಮಹಾಚುನಾವಣೆಯಲ್ಲಿ ಕಳೆದ 5 ನೆಯ ತಾರೀಖು ಓಟುಗಳನ್ನು ಕೊಟ್ಟವರ ಸಂಖ್ಯೆ ಅಧಿಕವಾಗಿದ್ದಿತೆಂದು ಭಾವಿಸಲಾಗಿದೆ ಓಟುದಾರರಲ್ಲಿ ಶೇಕಡ 70 ರಿಂದ 80 ರ ವರೆಗೆ ಬಂದು ಓಟುಕೊಟ್ಟು ಹೋಗಿದ್ದಾರೆ ಎಂದು ನಿರೀಕ್ಷಿಸಲಾಗಿದೆ 10 ವರ್ಷ ಚುನಾವಣೆಯೇ ನಡೆಯದ ಇಂದು ತಾನೇ ಬ್ರಿಟನಿನಲ್ಲಿ ಮಹಾಚುನಾವಣೆ ನಡೆಯಿತು ಬೆಳಗ್ಗೆ 7 ಗಂಟೆಯಿಂದಲೇ ಓಟುದಾರರು ಓಟು ಕೊಡಲು ಹೊರಡಲಾರಂಭಿಸಿದರು ಸೈನಿಕರೂ ಸೇರಿ ಒಟ್ಟು ಓಟುಕೊಡುವಂತಹವರ ಸಂಖ್ಯೆ ೩೦ ಲಕ್ಷ ಎಂದು ಅಂದಾಜುಮಾಡಲಾಗಿದೆ

ಚರ್ಚಿಲರು ವಿಶ್ರಾಂತಿಗೆ ತೆರಳುವರು

ಚರ್ಚಿಲ್ಲರು ವಿಶ್ರಾಂತಿಗಾಗಿ ಸಧ್ಯದಲ್ಲಿಯೇ ಬೇರೆ ದೇಶಕ್ಕೆ ತೆರಳುವರೆಂದು ತಿಳಿದುಬಂದಿದೆ ಅವರು ಇಲ್ಲದಾಗ ಈಡನ್ನರು ಮಂತ್ರಿಮಂಡಲದ ಸಭೆಗಳಲ್ಲಿ ಅಧ್ಯಕ್ಷತೆ ವಹಿಸುವರು ಹೊರದೇಶಕ್ಕೆ ಹೋಗಲು ಚರ್ಚಿಲ್ಲರು ಈಗ ಕೊಂಚಕಾಲದಿಂದ ಯೋಚಿಸುತ್ತಿದ್ದರೆಂದೂ ಆದರೆ ಮಹಾ ಚುನಾವಣೆಗಳಿಂದ ಅಡ್ಡಿಬಂದಿತೆಂದೂ ಪ್ರಕಟನೆ ಹೊರಟಿದೆ ಆದರೂ ಅವರು ಬ್ರಿಟನ್ನಿನಲ್ಲಿ ನಡೆಯುವ ಘಟನಾವಳಿಗಳೊಂದಿಗೆ ಸಂಬಂಧ ಇಟ್ಟುಕೊಂಡೇ ಇರುವರು ಅಲ್ಲದೆ ಮುಖ್ಯ ವಿಚಾರಗಳಿಗೆ ಸ್ವತಃ ಗಮನ ಕೊಡುವರು

ವೈಸರಾಯ್ ಮಂತ್ರಿಮಂಡಲಕ್ಕೆ ಹೆಸರುಗಳ ಸೂಚನೆ

ನಾಯಕರ ಸಮ್ಮೇಳನಕ್ಕೆ ಆಹ್ವಾನಿಸಲ್ಪಟ್ಟಿರುವ ಭಾರತದ ನಾನಾ ಪಕ್ಷಗಳ ನಾಯಕರೂ ಮತ್ತು ಇತರ ಪ್ರತಿನಿಧಿಗಳೂ ಒಂದು ತೀರ್ಮಾನಕ್ಕೆ ಬಂದು ಮಂತ್ರಿಮಂಡಲಕ್ಕೆ ಹೆಸರುಗಳನ್ನು ಸೂಚಿಸುವ ಕಾಲ ಬೇಗನೆ ಹತ್ತಿರ ಬರುತ್ತಿದೆ ಈ ವಾರದ ಅಂತ್ಯದೊಳಗಾಗಿ ಹೆಸರುಗಳನ್ನು ಸೂಚಿಸಬೇಕಾಗಿದೆ ಹಾಗೆ ಮಾಡದಿದ್ದರೆ ಈ ವಾರಾಂತ್ಯದಲ್ಲಿ ಸಮ್ಮೇಳನ ಸೇರುವ ವೇಳೆಗೆ ವೈಸರಾಯರು ಹೆಸರುಗಳನ್ನು ಕಟ್ಟಕಡೆಯದಾಗಿ ಆರಿಸಲು ಕಾಲಾವಕಾಶ ದೊರಕದಂತಾಗುತ್ತದೆ

ಕಾಂಗ್ರೆಸ್ಸಿನ ಮುಂದಿನ ವ್ಯವಸ್ಥೆ

ಕಾಂಗ್ರೆಸ್ಸು ಮಂತ್ರಿಗಳ ಹೆಸರುಗಳನ್ನು ಸೂಚಿಸುವ ಮುನ್ನ ಅನೇಕ ವಿಚಾರಗಳನ್ನು ನಿರ್ಧರಿಸಬೇಕಾಗಿದೆ ಮೌಲಾನಾ ಅಜಾದ್, ಪಂಡಿತ ನೆಹರೂ, ಸರದಾರ್ ಪಟೇಲ್ ಮುಂತಾದ ಅಗ್ರಗಣ್ಯರು ಮಂತ್ರಿಮಂಡಲಕ್ಕೆ ಸೇರಿಬಿಟ್ಟರೆ, ಕಾಂಗ್ರೆಸ್ಸಿನ ಗತಿಯೇನು? ಕಾಂಗ್ರೆಸ್ಸಿನ ಸೂತ್ರಗಳನ್ನು ಆಡಿಸುವವರು ಯಾರು? ಭಾರತದ ಬೇರೆ ಬೇರೆ ಭಾಗಗಳಲ್ಲಿರುವ ಕಾಂಗ್ರೆಸ್ ಪಕ್ಷಗಳಿಗೂ ಮತ್ತು ಸಂಸ್ಥೆಗಳಿಗೂ ತಕ್ಕ ಸೂಚನೆಗಳನ್ನು ಕೊಡುವವರು ಯಾರು? ಕೇಂದ್ರಕ್ಕೂ ಪ್ರಾಂತ್ಯಗಳಿಗೂ ಸರಿಯಾದ ಸಹಕಾರವಿರುವಂತೆ ಮಾಡಲು ಏನು ವ್ಯವಸ್ಥೆ ಮಾಡಬೇಕು ಇದಲ್ಲದೆ ಕೇಂದ್ರ ಮತ್ತು ಪ್ರಾಂತ್ಯ ಸರಕಾರಗಳ ಸಾಧನ ಸಂಪತ್ತನ್ನು ಎಲ್ಲ ಜನರ ಕ್ಷೇಮ ಲಾಭಕ್ಕಾಗಿ ಉಪಯೋಗಿಸುವುದು ಹೇಗೆಂಬ ಸಮಸ್ಯೆ ಇದೆ ಈ ಸಮಸ್ಯೆಗಳು ಬಗೆಹರಿದುವೆಂದರೆ, ಮಂತ್ರಿಗಳ ಹೆಸರುಗಳನ್ನು ಸೂಚಿಸಲು ಕಾಲವೇನೂ ಹಿಡಿಯದು.

ಸ್ವೀಕಾರ

ಧಾರವಾಡ ಜಿ|| ಶಿರೋಳಗ್ರಾಮದಲ್ಲಿರುವ ವೇ|| ಹಿರೇಮಠದ ಷಡಯ್ಯನವರು ತಮ್ಮ ಮಠದಲ್ಲಿರುವ ಗುರುಗಳ ಗದ್ದಿಗೆಗೆ ರುದ್ರಾಭಿಷೇಕವನ್ನು ಮಾಡಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ ೭ ರೂಪಾಯಿಗಳು ಶ್ರೀ ಷ|| ಬ್ರ|| ಕೊಣ್ಣೂರ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ

ಶಿವಮೊಗ್ಗಾ ಡಿ| ಗೂಳೀಹಳ್ಳಿ ಮ|| ರಾ| ಎಚ್ ಬಿ ಚನ್ನಬಸಪ್ಪಗೌಡರಿಗೆ ಶಿರಗಳಲೆ ಗ್ರಾಮದ ಮ|| ರಾ|| ನಾಗಸಾಲಿ ಹಾಲಪ್ಪಗೌಡರ ಪುತ್ರಿ ಚನ್ನಬಸಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ಮ| ರಾ|| ಚನ್ನಬಸಪ್ಪಗೌಡರು ಪ್ರಭಾಪೋಷಣಕ್ಕೋಸ್ಕರ ೧ ರೂಪಾಯಿಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ

ಸೊಲ್ಲಾಪುರದಲ್ಲಿರುವ ಮ| ರಾ|| ತೊಗ್ಗೆ ರಾಮಪ್ಪನವರ ಪುತ್ರಿ ಚಿ|| ಸೌ|| ಸರೋಜನಿಬಾಯಿಯನ್ನು ಮ ರಾ|| ತಮ್ಮಣ್ಣಪ್ಪ ಉಟಗೆ ಇವರಿಗೆ ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ ೧ ರೂಪಾಯಿಯು ಶ್ರೀ| ಷ| ಬ್ರ|| ಶೈಲಾಪುರ ಚರಮೂರ್ತಿಸ್ವಾಮಿಗಳವರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ

ವಿವಾಹಮಹೋತ್ಸವ

ಶಿವಮೊಗ್ಗ ಡಿ| ಸಾಗರ ತಾ ಗೂಳೀಹಳ್ಳಿ ಮ|| ರಾ|| ಎಚ್ ಬಿ ಚನ್ನಬಸಪ್ಪಗೌಡರಿಗೆ ಆನಂದಪುರ ಹೋಬಳಿ ಶಿರಗಳಲೆ ಗ್ರಾಮದ ನಾಗಸಾಲೆ ಮ| ರಾ| ಹಾಲಪ್ಪಗೌಡರ ಪುತ್ರಿ ಚಿ| ಸೌ ಚನ್ನಬಸಮ್ಮನನ್ನು ಕೊಟ್ಟು ಇದೇ ವೈಶಾಖ ಶು| ೧೫ (ತಾ| ೭ 5-45) ದಿವಸ ಶಿರಗಳಲೆ ಮ| ರಾ|| ನಾಗಪ್ಪಗೌಡರ ಗೃಹದಲ್ಲಿ ಷ ಬ್ರ| ಸಾಲೂರು ಹಿರೇಮಠದ ಶ್ರೀ ಚನ್ನವೀರಶಿವಾಚಾರ್ಯಸ್ವಾಮಿಗಳವರ ಗುರುತ್ವದಲ್ಲಿ ವಿವಾಹಮಹೋತ್ಸವವು ವಿಶೇಷ ವೈಭವದಿಂದ ನೆರವೇರಿತು. ಈ ಶುಭ ಕಾರ್ಯಕ್ಕೆ ಅನೇಕ ಜನ ಬಂಧು ಮಿತ್ರರು ಆಗಮಿಸಿದ್ದರು ನೂತನ ವಧೂವರರಿಗೆ ಶ್ರೀ ಪಾರ್ವತೀಪರಮೇಶ್ವರರು ಮತ್ತು ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇನೆ

ಕಾರ್ಯಭಾಗಿ

ದೀಕ್ಷಾ ಮತ್ತು ವಿವಾಹಮಹೋತ್ಸವ ಸಮಾರಂಭ

ಧಾರವಾಡ ಡಿ| ನರಗುಂದಪೇಟಾ ಪೈಕಿ ಶಿರೋಳ ಗ್ರಾಮದಲ್ಲಿರುವ ವೇ|| ಷಡಯ್ಯ ರುದ್ರಯ್ಯನವರು ಹಿರೇಮಠ ಇವರು ಇದೇ ಪಾರ್ಥಿವನಾಮಸಂವತ್ಸರ ಜ್ಯೇಷ್ಠ ಶು|| ೧೧ ಗುರುವಾರ ದಿವಸ ತಮ್ಮ ಮಠದಲ್ಲಿರುವ ಮತ್ತು ಕಪ್ಪಲಿಮಠದಲ್ಲಿರುವ ಶ್ರೀಗುರುಗದ್ದುಗೆಗೆ ಮಹಾರುದ್ರಾಭಿಷೇಕವನ್ನು ಮಾಡಿಸಿದರು ಜ್ಯೇಷ್ಠ ಶು|| ೧೩ ದಿವಸ ರಂಭಾಸ್ತಂಭಗಳಿಂದಲೂ ತಳಿರುತೋರಣಗಳಿಂದಲೂ ಅಲಂಕರಿಸಲ್ಪಟ್ಟ ಭವ್ಯವಾದ ಮಂಟಪದಲ್ಲಿ ಸದರಿಯವರ ಧರ್ಮಪತ್ನಿಯಾದ ಪಂಪಾದೇವಿಗೆ ವೀರಶೈವ ಧರ್ಮ ಪದ್ಧತಿಪ್ರಕಾರ ಶಾಸ್ತ್ರೋಕ್ತವಾಗಿ ಶಿವದೀಕ್ಷಾ ಸಂಸ್ಕಾರವೂ, ಅದೇ ಮಂಟಪದಲ್ಲಿ ಅದೇ ದಿವಸ ವೈಭವದೊಡನೆ ಲಗ್ನ ಸಂಸ್ಕಾರವೂ, ಶ್ರೀ|| ಷ|| ಬ್ರ|| ಪಟ್ಟದಸ್ವಾಮಿಗಳವರು ಹಿರೇಮಠ ಕೊಣ್ಣೂರು ಇವರ ನೇತೃತ್ವದಲ್ಲಿಯೂ, ವೇ|| ಗುರುಲಿಂಗಶಾಸ್ತ್ರಿಗಳು ನಾಗನೂರ ಹಿರೇಮಠ ಇವರ ಪೌರೋಹಿತ್ಯದಲ್ಲಿಯೂ, ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು ತನಂತರ ಸದರಿ ಸ್ವಾಮಿಗಳವರ ಪಾದಪೂಜೆಯಾಗಿ ವಧೂವರರು ತೀರ್ಥಪ್ರಸಾದವನ್ನು ಸ್ವೀಕರಿಸಿದನಂತರ ಭಕ್ತಮಾಹೇಶ್ವರರಿಗೂ, ಬಡಬಗ್ಗರಿಗೂ, ಮೃಷ್ಟಾನ್ನ ಭೋಜನವು ಮಾಡಿಸಲ್ಪಟ್ಟಿತು ಈ ವಿವಾಹ ಕಾರ್ಯಕ್ಕೆ ಅಜುಬಾಜು ಗ್ರಾಮಗಳಿಂದ ಅವರ ಶಿಷ್ಯ ಭಕ್ತಮಂಡಳಿಯವರು ಕೂಡಿದ್ದರು ಈ ಧರ್ಮಕಾರ್ಯದಲ್ಲಿ ಶಿರೋಳದ ಕೆಲವು ಪ್ರಮುಖ ಸದ್ಭಕ್ತಮಂಡಲಿಯವರು ಕಂಕಣಬದ್ಧರಾಗಿ ಒಳ್ಳೇ ದಕ್ಷತೆಯಿಂದ ಕಾರ್ಯವನ್ನು ಮಾಡಿ ಗುರುಕೃಪೆಗೆ ಪಾತ್ರರಾದರು ಈ ಕಾರ್ಯದಲ್ಲಿ ಶ್ರೀ ಕಾಶೀಪೀಠಕ್ಕೆ ೫ ರೂ ಕಾಣಿಕೆಯೂ, ಪಂಚಾಚಾರ್ಯ ಪ್ರಭಾ ಪತ್ರಿಕೆಯ ಪೋಷಣಕ್ಕಾಗಿ ೭ ರೂಪಾಯಿಗಳೂ, ಸದರಿ ಪಟ್ಟದಸ್ವಾಮಿಗಳವರಿಂದ ತೆಗೆಯಿಸಲ್ಪಟ್ಟವು ಈ ಧರ್ಮಕಾರ್ಯದಲ್ಲಿ ಸಹಾಯಕರಾದ ಸಮಸ್ತ ಭಕ್ತಮಾಹೇಶ್ವರರಿಗೂ, ಈ ನೂತನ ದಂಪತಿಗಳಿಗೂ ಭಗವಂತನು ಆಯುರಾರೋಗ್ಯಾದಿ ಸಕಲ ಸಂಪತ್ಸಮೃದ್ಧಿಯನ್ನುಂಟುಮಾಡಲೆಂದು ಪ್ರಾರ್ಥಿಸುತ್ತೇನೆ

ಜಿ ೧ ವಸ್ತ್ರದ ಶಿರೋಳ

ಹೂವಿನಹಡಗಲಿ ರತ್ನವೊಂದು ಮಾಯವಾಯಿತು

(ವರದಿಗಾರ.—ಗುರುಸೇವಾಕಿಂಕರ, ಹೂವಿನಹಡಗಲಿ)

ಬಳ್ಳಾರಿ ಜಿಲ್ಲಾ ಹೂವಿನ ಹಡಗಲಿ ನಿವಾಸಿಗಳಾದ ಶ್ರೀ ಕರೆಯೆತ್ತಿನ ಶಾಂತಪ್ಪನವರು ತಾ|| 28 6 45ನೆಯ ಗುರುವಾರ ರಾತ್ರಿ ಹನ್ನೆರಡು ಘಂಟೆಗೆ, ಹಾವುಕಡಿತದಿಂದ ತಮ್ಮ ೭೫ನೆಯ ವಯಸ್ಸಿನಲ್ಲಿ ಶಿವಾಧೀನರಾದರು ಆದಿನ ರಾತ್ರಿ ಮಲಗಿರುವಾಗ್ಗೆ ಜಂತಿಯಲ್ಲಿಂದ ಘಟಸರ್ಪವೊಂದು ಬಿದ್ದು, ಇವರನ್ನು ಕಟ್ಟೆತಲ್ಲದ ಮನೆಯಲ್ಲಿಯ ಗೋವನ್ನೂ ಸಹ ಕಚ್ಚಿದ್ದರಿಂದ ಎರಡು ಜೀವಾತ್ಮಗಳೂ ಶಿವನಲ್ಲಿ ಐಕ್ಯವಾದವು ಗ್ರಾಮದಲ್ಲಿ ಇವರು ಯಜಮಾನರೂ ಸುಪ್ರಸಿದ್ಧ ಮುಂದಾಳುಗಳೂ ಆಗಿದ್ದರಲ್ಲದೆ ಬಹುಜನ ಪ್ರಿಯರೂ ಆಗಿದ್ದರು ಬಾಲ್ಯದಿಂದಲೂ, ನಾಟಕ ಸಂಗೀತಸಂಘ ಸಂಸ್ಥೆ ಮೊದಲಾದ ಜನಸಮೂಹದ ಮನರಂಜಿತ ಕಾರ್ಯದಲ್ಲಿಯೇ ಇದ್ದು ಜನಪ್ರಿಯರಾಗಿದ್ದರು ಮನೆಯಲ್ಲಿ ಅತಿಥಿ ಅಭ್ಯಾಗತರಿಗೆ ದಾಸೋಹ ಮಠದಂತೆ ಯಾವಾಗಲೂ ನಡೆದಿರುತ್ತಿತ್ತು ಬಂದ ಅತಿಥಿಗಳಿಗೆ ತಾವೇ ಸ್ವತ ಸೇವಕರಾಗಿ ಉಣಬಡಿಸಿದರೇನೇ ಇವರಿಗೆ ತೃಪ್ತಿ ಹೀಗೆ ಇವರು ಕಿಂಕರತ್ವದಿಂದ ಶಂಕರತ್ವವನ್ನು ಸಂಪಾದಿಸಿ ಕೀರ್ತಿಕಾಯರಾಗಿದ್ದರು ಈ ಪ್ರಕಾರ ಸರ್ವಕಾರ್ಯಗಳಲ್ಲಿಯೂ ಮುಂದಾಳುಗಳಾಗಿ ಈ ಗ್ರಾಮದ ನಗರಸಭೆಯ ಅಧ್ಯಕ್ಷಸ್ಥಾನವನ್ನು ೧೨ ವರ್ಷ ಅವ್ಯಾಹತವಾಗಿ ಅಲಂಕರಿಸಿದ್ದರು ಹಲವು ವರ್ಷ ಸಂಯುಕ್ತ ತಾಲ್ಲೂಕ ಬೋರ್ಡ ಅಧ್ಯಕ್ಷರಾಗಿಯೂ, ಕೆಲವು ವರ್ಷ ಜಿಲ್ಲಾ ಬೋರ್ಡ ಮೆಂಬರರಾಗಿಯೂ ಇದ್ದು ರಾಜಕೀಯವರ್ಗದಲ್ಲಿ ಹೆಸರುವಾಸಿಗಳಾಗಿದ್ದರು ಅಲ್ಲದೆ ಈ ವರ್ಷವೂ ಕೂಡ ಸುಯೋಗದಿಂದ ಕಳೆದ ತಾ 25 6-1೫ನೆಯ ತೇದಿ ಪುನ. ನಗರ ಸಭೆಯ ಅಧ್ಯಕ್ಷ ಗದ್ದುಗೆಯನ್ನು ಏರಿದ್ದರು ಆದರೇನಮಾಡು ವುದು? ಕರಾಳವಿಧಿಯು ನುಂಗಿತು ಇವರ ಮರಣ ವಾರ್ತೆಯು ಮೆಲ್ಲಮೆಲ್ಲನೆ ಊರಲ್ಲೆಲ್ಲಾ ಹರಡಿತು ವಾಯುವೇಗದಂತೆ ಪರಸ್ಥಳಗಳಿಗೂ ಹಬ್ಬಿತು ಕೂಡಲೇ ಆಪ್ತ ಮಿತ್ರರೂ ಬಂಧುಬಾಂಧವರೂ ತಂಡೋಪತಂಡವಾಗಿ ಕೂಡಿದರು ಇವರ ಸ್ಮಶಾನಯಾತ್ರೆಯು ತಾ|| 30 6 45 ನೆಯ ದಿನ ಸಾಂಗವಾಗಿ ಜರುಗಿತು ಅಂದು ದಾರಿಯುದ್ದಕ್ಕೂ ಇಕ್ಕಡೆಗಳಲ್ಲಿಯೂ ಮಾಳಿಗೆಗಳ ಮೇಲೂ ಮತಭೇದವಿಲ್ಲದೆ ಎಲ್ಲಾ ಜಾತಿಯ ಸ್ತ್ರೀ ಪುರುಷರೂ ದೊಡ್ಡ ಜಾತ್ರೆಯಂತೆ ನೆರೆದಿದ್ದರು ಊರಲ್ಲೆಲ್ಲಾ ನೋಡಿದತ್ತೆಲ್ಲ ಜನಮಯವಾಗಿದ್ದುದನ್ನು ನೋಡಿದರೆ ಇವರಲ್ಲಿರುವ ಜನಪ್ರೇಮವೂ ಆದರ ಬುದ್ಧಿಯೂ ಸ್ಫುಟವಾಗಿ ವ್ಯಕ್ತವಾಗುತ್ತಿತ್ತು ಯಾರ ಮುಖದಮೇಲೆ ನೋಡಿದರೂ ದುಃಖದ ಚಿಹ್ನೆಯು ತಾಂಡವವಾಡುತ್ತಿತ್ತು ಅಸ್ತು! ಇಂತಹ ರತ್ನವನ್ನು ಕಳೆದುಕೊಂಡ ಹೂವಿನಹಡಗಲಿಯ ದೌರ್ಭಾಗ್ಯವನ್ನು ಎಷ್ಟು ಹೇಳಿದರೂ ತೀರದಾಗಿದೆ. ಜಗದೀಶನು ಮೃತರಾತ್ಮಕ್ಕೆ ಚಿರಶಾಂತಿಯನ್ನೀಯಲೆಂದು ಹಾರೈಸುತ್ತೇನೆ.

[೧ನೆಯ ಪುಟದಿಂದ ಮುಂದುವರೆದುದು]

ಜನ್ಮಗಳನ್ನೂ, ಸುಖದುಃಖಗಳನ್ನೂ ಕೊಟ್ಟಂತಾಗುತ್ತದೆ ಈ ರೀತಿಯಾಗಿ ಈಶ್ವರನು ಅನ್ಯಾಯವನ್ನು ಮಾಡತಕ್ಕವನಲ್ಲ. ಆದುದರಿಂದ ಪ್ರತಿಯೊಂದು ಸೃಷ್ಟಿಯ ಹಿಂದೆ ಜೀವರು ಮಾಡಿದತಕ್ಕ ಕರ್ಮಗಳನ್ನು ನಿಮಿತ್ತಮಾಡಿಕೊಂಡು ಈಶ್ವರನು ಪ್ರಪಂಚವನ್ನು ಸೃಷ್ಟಿಮಾಡಿ ಅವರವರ ಕರ್ಮಗಳಿಗನುಸಾರವಾಗಿ ಉತ್ತಮಾಧಮಜನ್ಮಗಳನ್ನೂ, ಸುಖದುಃಖಗಳನ್ನೂ ಕೊಡುತ್ತಾನೆ ಅಂದರೆ ಪೂರ್ವಪೂರ್ವಪ್ರಳಯದ ಹಿಂದೆ ಜೀವರು ಮಾಡಿದತಕ್ಕ ಕರ್ಮಗಳಿಗನುಸಾರವಾಗಿ ಉತ್ತರೋತ್ತರ ಸೃಷ್ಟಿಯು ಮಾಡಲ್ಪಡುತ್ತದೆ ಇದರಿಂದ ಪ್ರಪಂಚದ ಸೃಷ್ಟಿಪ್ರಳಯಗಳು ಜೀವರ ಜನನಮರಣಗಳಂತೆ ಪ್ರವಾಹತಃ ಅನಾದಿಯಾಗಿವೆ

ಈಶ್ವರನು ಅನಾದಿಯಾಗಿಯು ಮತ್ತು ಒಬ್ಬನಾಗಿಯು ಇರುತ್ತಾನೆ,

4 ಪ್ರಪಂಚದ ಸೃಷ್ಟಿ ಪ್ರಳಯಗಳು ಮತ್ತು ಜೀವರು ಅನಾದಿಯಾದುದರಿಂದ ಪ್ರಪಂಚವನ್ನು ಸೃಷ್ಟಿಸುವ ಮತ್ತು ಜೀವರಿಗೆ ಜನ್ಮವನ್ನು ಕೊಡುವ ಈಶ್ವರನು ಅನಾದಿಯಾಗಿರಲೇಬೇಕೆಂಬುದು ಸಿದ್ಧವಾಗುತ್ತದೆ ಈಶ್ವರನು ಒಬ್ಬನಿದ್ದರೂ ಅನೇಕ ಮತೀಯರು ತಮ್ಮ ಉಪಾಸನೆಗೋಸ್ಕರ ಈ ಒಬ್ಬ ಈಶ್ವರನಿಗೇನೇ ಬೇರೆ ಬೇರೆ ನಾಮಗಳನ್ನೂ, ರೂಪಗಳನ್ನೂ ಕಲ್ಪಿಸಿರುತ್ತಾರೆ ಒಂದು ಕುಟುಂಬಕ್ಕೆ ಒಬ್ಬ ಯಜಮಾನನು, ಒಂದು ರಾಜ್ಯಕ್ಕೆ ಒಬ್ಬ ರಾಜನು ಹೇಗೆ ಇರುವನೋ ಹಾಗೆ ಈ ಪ್ರಪಂಚಕ್ಕೆ ಒಬ್ಬ ಈಶ್ವರನೇ ಇರಬೇಕು ಒಂದುವೇಳೆ ಒಬ್ಬನಿಗಿಂತ ಹೆಚ್ಚಾಗಿ ಈಶ್ವರರಿದ್ದರೆ ಅವರಲ್ಲಿ ಪರಸ್ಪರ ಕಲಹವುಂಟಾಗಿ ಒಬ್ಬನು ಪ್ರಪಂಚವನ್ನು ಸೃಷ್ಟಿಮಾಡಿದರೆ ಇನ್ನೊಬ್ಬನು ಪ್ರಳಯವನ್ನು ಮಾಡುವ ಪ್ರಸಂಗ ಬಂದು ಲೋಕದಲ್ಲಿ ಅನರ್ಥವುಂಟಾಗುತ್ತದೆ ಅಲ್ಲದೆ ನಾವು ನೋಡಿದಂತೆ ಈ ಲೋಕದಲ್ಲಿ ಖಂಡವಾದ ಪದಾರ್ಥವು ಆಕಾರವುಳ್ಳದ್ದಾಗಿಯು ಮತ್ತು ನಾಶವುಳ್ಳದ್ದಾಗಿಯು ಇರುತ್ತದೆ ಆದುದರಿಂದ ಒಬ್ಬ ಈಶ್ವರನಿದ್ದರೆ ಅವನು ಅಖಂಡ (ಪೂರ್ಣ) ವಾಗಿಯು, ನಿರಾಕಾರನಾಗಿಯು, ನಾಶವಿಲ್ಲದವನಾಗಿಯು ಇರುತ್ತಾನೆ ಹೆಚ್ಚು ಈಶ್ವರರುಗಳಿದ್ದರೆ ಎಲ್ಲರೂ ಖಂಡರಾಗಿಯು, ಆಕಾರವುಳ್ಳವರಾಗಿಯು, ನಾಶವುಳ್ಳವರಾಗಿಯು ಇರಬೇಕಾಗುತ್ತಿತ್ತು ಆದುದರಿಂದ ಈಶ್ವರನು ಒಬ್ಬನಾಗಿಯು ಅಖಂಡನಾಗಿಯು, ನಿರಾಕಾರನಾಗಿಯು, ಶಾಶ್ವತನಾಗಿಯು ಇರುತ್ತಾನೆ

ಈಶ್ವರನು ನಿರಾಕಾರನಾಗಿದ್ದರೂ ಭಕ್ತರ ಭಾವನಾನುಸಾರ ಆಕಾರವನ್ನು ಹೊಂದಿ ಅವರವರ ಇಷ್ಟಾರ್ಥಗಳನ್ನು ಪೂರ್ಣಗೊಳಿಸುತ್ತಾನೆ

೫ ಭಕ್ತರುಗಳು ಪ್ರಾರಂಭದಲ್ಲಿ ಈಶ್ವರನ ನಿರಾಕಾರ ಸ್ವರೂಪದಲ್ಲಿ ತಮ್ಮ ಮನಸ್ಸನ್ನು ನಿಲ್ಲಿಸುವುದಕ್ಕೆ ಸಾಧ್ಯವಿಲ್ಲದ್ದರಿಂದ ಅವರುಗಳು ತಮ್ಮ ತಮ್ಮ ಮನಸ್ಸಿಗೆ ಯಾವ ಯಾವ ಆಕಾರ ಇಷ್ಟವಾಗಿದೆಯೋ ಆಯಾಯ ಆಕಾರದಿಂದ ಈಶ್ವರನನ್ನು ಉಪಾಸನೆ ಮಾಡುತ್ತಾರೆ ಹತ್ತು ಜನಗಳು ಹತ್ತು ವಿಧವಾದ ಆಕಾರಗಳುಳ್ಳ ಪಾತ್ರೆಗಳನ್ನು ನೀರನ್ನು ತರುವುದಕ್ಕೆ ನದಿಗೆ ತೆಗೆದುಕೊಂಡು ಹೋದರೆ ನದಿಯಲ್ಲಿರತಕ್ಕ ನೀರಿಗೆ ಯಾವ ಆಕಾರವೂ ಇಲ್ಲದಿದ್ದರೂ ಅದು ಅವರವರ ಪಾತ್ರೆಗಳ ಆಕಾರವನ್ನು ಹೊಂದಿ ಹೇಗೆ ಅವರವರ ಕೆಲಸಕ್ಕೆ ಉಪಯೋಗವಾಗುತ್ತದೆಯೋ ಹಾಗೆ ಈಶ್ವರನು ತಾನು ನಿರಾಕಾರನಾಗಿದ್ದರೂ ಭಕ್ತರುಗಳು ಭಾವಿಸತಕ್ಕ ಆಕಾರವನ್ನು ಹೊಂದಿ ಅವರವರ ಇಷ್ಟಾರ್ಥಗಳನ್ನು ಪೂರ್ಣಗೊಳಿಸುತ್ತಾನೆ

ಭಾರತೀಯ ಮುಸ್ಲಿಮರಿಗೆ ಅಜಾದರ ಸಂದೇಶ

ಭಾರತದ ಮುಸ್ಲಿಮರ ನಿಜವಾದ ಕುಂದುಕೊರತೆಗಳ ವಿಚಾರದಲ್ಲಿ ಕಾಂಗ್ರೆಸ್ಸಿನಲ್ಲಿರುವ ಮುಸ್ಲಿಮರು ಕಣ್ಣು ಮುಚ್ಚಿಕೊಂಡಿದ್ದಾರೆಂದು ಮುಸ್ಲಿಮರು ಯಾರೂ ಬಗೆಯಬಾರದೆಂಬುದಾಗಿ ಕಾಂಗ್ರೆಸ್ ಅಧ್ಯಕ್ಷ ಅಜಾದರು ಭಾರತೀಯ ಮುಸ್ಲಿಮರಿಗೆ ಸಂದೇಶ ನೀಡುತ್ತ ತಿಳಿಸಿದ್ದಾರೆ

ಕಾಗದದ ಬೆಲೆಯು ವಿಶೇಷವಾಗಿ ಏರಿರುವುದರಿಂದ ಕೆಲವು ಗ್ರಂಥಗಳ ಮತ್ತು ಫೋಟೋಗಳ ಬೆಲೆಯನ್ನು ಸ್ವಲ್ಪ ಹೆಚ್ಚಿಸಿದ್ದೇವೆ.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೩೦ × ೧೪ ಬೆಲೆ ೧ಕ್ಕೆ	೦—೬—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦ ಬೆಲೆ	೦—೬—೦
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ	೦—೪—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೧ ಬೆಲೆ ೧ಕ್ಕೆ	೦—೪—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೬
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—೬
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೬

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ವೀರಶೈವಮತದಲ್ಲಿ ಸದ್ಯಃ ದೊರೆಯತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು ಈ ಗ್ರಂಥವು ಈಗ್ಗೆ ಸುಮಾರು **೩ಸಾವಿರ** ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ವವು ಪಾಠಕರಿಗೆ ವೇದ್ಯವಾಗುವುದು. ಪಾಠಕರ ಅನುಕೂಲಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೬೬೩ ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಆವಶ್ಯವಾಗಿ ಓದಬೇಕು **ಬೆಲೆ ೩ ರೂಪಾಯಿ.**

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೭ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೭ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ)	೩ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೩ ಆಣೆ
ಶ್ರೀಗುರುತತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೩ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸನ್ಮೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೩ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೩ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು. ೩ನೆಯ ಆವೃತ್ತಿ)	೧। ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಶ್ರೀಕರಭಾಷ್ಯಂ (ಚತುಸ್ಸೂತ್ರಿ)	೧॥ ರೂ
ಸಚಿತ್ರ ರೇಣುಕವಿಜಯ (೩ನೆಯ ಆವೃತ್ತಿ)	೧॥ ರೂ
ವೀರಶೈವರತ್ನ (೨ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುವು)	೩ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರಸಹಿತ)	೩ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೩ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೩ ರೂ
ವೀರಶೈವಸಿದ್ಧಾಂತಸುಧಾಕರ	೩ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೯ ರೂ
A brief life sketch of Pandit Sri Kashinatha Shastriji (*English*)	4 As
The Philosophical Aspect of Viresaivism (*English*)	8 As
Speeches by Pandit Shri Kashinatha Shastriji (*English*)	12 As
लिंगधारणचन्द्रिका (संस्कृत)	३ रु.
वीरशैवरत्न (मराठी)	१ रु.
महानारायणोपनिषत् (वीरशैवभाष्य–संस्कृत)	१ रु.
सिद्धांतशिखामणि (मूल)	८ आ.
नंदिकेश्वरकारिका (संस्कृत)	२ आ.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯರ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೩ ರೂ ೪ ಆಣೆ | ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೧೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೬ನೇ ಜುಲೈ ೧೯೪೫ [ಸಂಚಿಕೆ ೯

ಈಶ್ವರನು ವೇದಕ್ಕೆ ಕರ್ತೃ

(ಮೈಸೂರಿನಲ್ಲಿರುವ ಆತ್ಮವಿದ್ಯಾಮಂದಿರದ ವ್ಯವಸ್ಥಾಪಕರಾದ ಶ್ರೀ ವಿ. ಎನ್. ಎಂ. ಎ. ನಾಗನಾಸ್ವಾಮಿಗಳು)

ನಾವು ಹುಟ್ಟಿದ್ದನ್ನು ನಮ್ಮ ತಾಯಿತಂದೆಗಳು ಒಲ್ಲರೇ ಹೊರತು ನಾವು ಹುಟ್ಟುವದಕ್ಕಿಂತ ಮುಂಚೆ ಅಂದರೆ ತಾಯಿಯ ಗರ್ಭಕ್ಕೆ ಬರುವದಕ್ಕೆ ಮುಂಚ ನಾವು ಎಲ್ಲಿದ್ದೆವು ನಾವು ಏನಾಗಿದ್ದೆವು ಎಂಬುದನ್ನು ಅವರು ತಿಳಿಯರು ನಾವು ಮರಣಹೊಂದುವದನ್ನು ಎಲ್ಲರೂ ತಿಳಿಯುವರೇ ಹೊರತು ನಾವು ಮರಣವನ್ನು ಹೊಂದಿದ ನಂತರ ಅಂದರೆ ನಮ್ಮ ದೇಹವಿಯೋಗಾನಂತರ ನಾವು ಎಲ್ಲಿಗೆ ಹೋಗುತ್ತೇವೆ, ಏನಾಗುತ್ತೇವೆ ಎಂಬುದನ್ನು ಯಾರೂ ತಿಳಿಯರು ಇದರಂತೆಯೇ ನಾವು ಅನುಭವಿಸುತ್ತಿರುವಾಗ ಪ್ರಪಂಚವು ಹೇಗಿದೆ ಎಂಬುದನ್ನು ತಿಳಿಯುತ್ತೇವೆಯೇ ಹೊರತು ಪ್ರಪಂಚವು ಹಿಂದೆ ಹೇಗಿತ್ತು, ಮುಂದ ಹೇಗಿರುತ್ತದೆ ಎಂಬುದನ್ನು ನಾವು ತಿಳಿಯಲಾರೆವು ನಮ್ಮ ವಿಷಯವೇ ನಮಗೆ ತಿಳಿಯದೇ ಇರುವಾಗ ಈಶ್ವರನ ವಿಷಯವನ್ನು ತಿಳಿಯುವ ಸಂಭವವೇ ಇಲ್ಲ ಆದುದರಿಂದ ನಮ್ಮ ಅಂದರೆ ಜೀವರ ಸ್ವರೂಪವನ್ನೂ, ಪ್ರಪಂಚದ ಸ್ವರೂಪವನ್ನೂ, ತನ್ನ ಸ್ವರೂಪವನ್ನೂ ಈಶ್ವರನು ಒಲ್ಲನೇ ಹೊರತು ಇವುಗಳನ್ನು ತಿಳಿಯಲು ಇನ್ನಾರೂ ಸಮರ್ಥರಲ್ಲ ಅಲ್ಲದೆ, ಒಂದು ದೇಶದಲ್ಲಿ ಹೊಸದಾಗಿ ಸರ್ಕಾರವು ಸ್ಥಾಪಿಸಲ್ಪಡಬೇಕಾದರೆ ಅದು ಸ್ಥಾಪಿಸಲ್ಪಡುವಾಗಲೇ ಸರ್ಕಾರವು ಯಾವ ರೀತಿಯಾಗಿ ಪ್ರಜೆಗಳನ್ನು ಸಂರಕ್ಷಿಸತಕ್ಕದ್ದು, ಪ್ರಜೆಗಳು ಸರ್ಕಾರದ ವಿಷಯದಲ್ಲಿ ಯಾವ ರೀತಿಯಾಗಿ ನಡೆದುಕೊಳ್ಳತಕ್ಕದ್ದು, ಪ್ರಜೆಗಳಲ್ಲಿ ಯಾರ್ಯಾರಿಗೆ ಯಾವ್ಯಾವ ಯೋಗ್ಯತೆ ಇದ್ದರೆ ಅವರಿಗೆ ಯಾವ ಯಾವ ಅಧಿಕಾರವನ್ನು ಕೊಡತಕ್ಕದ್ದು, ಪ್ರಜೆಗಳು ಯಾವರೀತಿ ನಡೆದರೆ ತಪ್ಪು, ಯಾವ ಯಾವ ತಪ್ಪಿಗೆ ಯಾವ ಯಾವ ಶಿಕ್ಷೆಯನ್ನು ಕೊಡತಕ್ಕದ್ದು, ಇವೇ ಮುಂತಾದ ವಿಷಯಗಳನ್ನೊಳಗೊಂಡಿರತಕ್ಕ ಒಂದು ಕಾನೂನು ಏರ್ಪಡಿಸಲ್ಪಡುತ್ತದೆ ಈ ಸಂದರ್ಭದಲ್ಲಿ ಈಶ್ವರನೇ ಸರ್ಕಾರವು, ಪ್ರಪಂಚವೇ ಈಶ್ವರನು ಆಳುವ ದೇಶವು, ಜೀವರೇ ಪ್ರಜೆಗಳು ಈಶ್ವರನು ಈ ಪ್ರಪಂಚವನ್ನು ಸೃಷ್ಟಿಸುವ ಕಾಲದಲ್ಲೇ ತನ್ನ ಸ್ವರೂಪವೇನು, ಪ್ರಪಂಚದ ಸ್ವರೂಪವೇನು, ಜೀವರ ಸ್ವರೂಪವೇನು, ಅವರು ಎಲ್ಲಿಂದ ಬಂದರು ಅವರಿಗೂ ತನಗೂ ಏನು ಸಂಬಂಧ, ತಾನು ಯಾವರೀತಿ ಜೀವರನ್ನು ಕಾಪಾಡುವದು, ಜೀವರು ಏನನ್ನು ಮಾಡತಕ್ಕದ್ದು ಮತ್ತು ಅವರು ಏನನ್ನು ಮಾಡಕೂಡದು, ಜೀವರು ಏತರಿಂದ ದುಃಖವನ್ನು ಹೊಂದಿದ್ದಾರೆ, ಯಾವ ರೀತಿಯಿಂದ ಜೀವರು ದುಃಖದಿಂದ ಬಿಡುಗಡೆ ಹೊಂದಿ ಸುಖವನ್ನು ಹೊಂದುವರೆ, ಇವೇ ಮೊದಲಾದ ಆಧ್ಯಾತ್ಮಿಕವಿಷಯಗಳನ್ನೊಳಗೊಂಡಿರತಕ್ಕ ಒಂದು ಕಾನೂನನ್ನು ಮಾಡಿರಬೇಕು ಈ ಕಾನೂನಿಗೇನೇ "ವೇದ" ಎಂದು ಹೆಸರು 'ಶ್ರುತಿಸ್ಮೃತೀ ಮಮೈವಾಜ್ಞೆ" ಎಂಬ ಶ್ರುತಿಯಂತೆ ವೇದವು ಈಶ್ವರನ ಆಜ್ಞೆಯಾಗಿದೆ.

ವೇದವು ಅನಾದಿ ಮತ್ತು ಅಪೌರುಷೇಯ

'ಅಸ್ಯ ಮಹತೋ ಭೂತಸ್ಯ ನಿಶ್ವಸಿತಮೇತದೃಗ್ವೇದೋ ಯಜುರ್ವೇದ ಸ್ಸಾಮವೇದೋಽಥರ್ವಾಂಗಿರಸಃ ಮತ್ತು 'ನಿಶ್ವಾಸ ಭೂತಾಮೇ ವಿಷ್ಣೋರ್ಜಾತಾ ವೇದಾಸ್ಸುವಿಸ್ತರಾಃ' ಎಂಬ ಬೃಹದಾರಣ್ಯಕಾದಿ ಶ್ರುತಿಗಳು ಈಶ್ವರನ ನಿಶ್ವಾಸದಿಂದ ಋಗ್ವೇದ ಯಜುರ್ವೇದ, ಸಾಮವೇದ ಅಥರ್ವಣವೇದ ಎಂಬ ನಾಲ್ಕು ವೇದಗಳು ಲೋಕೋದ್ಧಾರಕ್ಕೋಸ್ಕರ ಆವಿರ್ಭವಿಸಿದವು ಎಂದು ಹೇಳಿವೆ ಅಂದರೆ ನಿಶ್ವಾಸವು (ಉಸುರುಬಿಡುವಿಕೆಯು) ಪುರುಷನ ಪ್ರಯತ್ನಾಪೇಕ್ಷೆಯಿಲ್ಲದಯೇ ಅನಾಯಾಸ ಸಿದ್ಧವಾಗಿ ಹೇಗೆ ನಡೆಯುತ್ತದೋ ಹಾಗೆ ಋಗ್ವೇದಾದಿ ನಿಖಿಲಶಬ್ದರಾಶಿಗಳು ಈಶ್ವರನ ಪ್ರಯತ್ನಾಪೇಕ್ಷೆಯಿಲ್ಲದೆಯೇ ಅವನ ಮುಖದಿಂದ ಹೊರಡುವವು 'ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ" ಮತ್ತು 'ಧಾತಾ ಯಥಾಪೂರ್ವಮಕಲ್ಪಯತ್' ಎಂಬ ಶ್ರುತಿಪ್ರಮಾಣಗಳಿಂದ ಅನಾದ್ಯನಂತವಾಗಿರುವ ಅಖಂಡಕಾಲ ಪ್ರವಾಹದೊಳಗೆ ಸೃಷ್ಟ್ಯಾರಂಭರೂಪವಾದ ಪ್ರತಿಯೊಂದು ಖಂಡದಲ್ಲಿಯೂ ಸರ್ವಜ್ಞನಾದ ಈಶ್ವರನು ಪೂರ್ವಪೂರ್ವ ಕಲ್ಪಗಳಲ್ಲಿದ್ದ ಋಗ್ವೇದಾದಿ ಶಬ್ದರಾಶಿಗಳಿಗೆ ಅತ್ಯಂತ ಸಮಾನಾಕಾರವಾಗಿ ಸ್ವರ, ವರ್ಣ, ಮಾತ್ರೆ, ಲಘು ಗುರು, ಪದ, ವಾಕ್ಯ, ಕಾಂಡ, ಪ್ರಶ್ನ, ಪ್ರಪಾಠಕ, ಅಧ್ಯಾಯ, ಸಂಹಿತೆ, ಬ್ರಾಹ್ಮಣ, ವಲ್ಲಿ, ಮಂಡಲ, ಪಟಲ ಅನುವಾಕ, ವರ್ಗ, ಸೂಕ್ತ, ಖಂಡ ಮತ್ತು ಇವುಗಳ ಆನುಪೂರ್ವಿ (ಕ್ರಮ) ಎಂಬುವೇ ಮೊದಲಾದವುಗಳೊಳಗೆ ಒಂದು ಭಾಗದಲ್ಲಿಯೂ ಲೇಶಮಾತ್ರವೂ ವ್ಯತ್ಯಾಸ ಬರದಂತೆ ಅತ್ಯಂತ ಸಾದೃಶ್ಯವನ್ನು ಪಡೆದಿರುವ ಶಬ್ದರಾಶಿಗಳೆಲ್ಲವನ್ನೂ ಅಂದರೆ ಸೃಷ್ಟ್ಯುಪಕರಣಗಳಾದ ಆ ಸಮಸ್ತ ವೇದಗಳನ್ನೂ ತನ್ನ ಮುಖದಿಂದ ಚತುರ್ಮುಖಬ್ರಹ್ಮನಿಗೆ ಉಪದೇಶಮಾಡಿ ಅವನು ಜಗತ್ಸೃಷ್ಟಿಯನ್ನು ಮಾಡುವಂತೆ ನಿಯಮಿಸುತ್ತಾನೆ "ಸರ್ವಸ್ಯಚಾಹಂ ಹೃದಿಸನ್ನಿವಿಷ್ಟೋ ಮತ್ತಃ ಸ್ಮೃತಿರ್ಜ್ಞಾನಮಪೋಹನಂ ಚ । ವೇದೈಶ್ಚ ಸರ್ವೈರಹಮೇವ ವೇದ್ಯೋ ವೇದಾಂತಕೃತ್ ವೇದವಿದೇವ ಚಾಹಂ' ಎಂಬ ಶ್ರೀಮದ್ಭಗವದ್ಗೀತಾ ವಚನದಂತೆ ಈಶ್ವರನು ವೇದಕರ್ತೃವು ಮತ್ತು ವೇದದಿಂದ ತಿಳಿಯಲ್ಪಡತಕ್ಕವನು ಎಂಬುವದು ಸಿದ್ಧವಾಗುತ್ತದೆ. ಈಶ್ವರನಿಂದ ಉಪದೇಶಿಸಲ್ಪಟ್ಟ ವೇದಗಳು ಸಕಲವಿಧ ಲೌಕಿಕ ಪಾರಮಾರ್ಥಿಕ ವ್ಯವಹಾರಗಳಿಗೆ ಆಧಾರಸ್ತಂಭವಾಗಿವೆ ಈ ವೇದಗಳಲ್ಲಿ ಸಕಲ ವಿದ್ಯೆಗಳು, ಸಕಲ ಕಲೆಗಳು, ಸಕಲವಿಧ ಜ್ಞಾನವಿಜ್ಞಾನಗಳು ಅಡಕವಾಗಿರುತ್ತವೆ ಇಷ್ಟೇ ಅಲ್ಲದೆ ಅನಂತಾನಂತ ಭೂತಭವಿಷ್ಯದ್ವರ್ತಮಾನವಿಷಯಗಳೆಲ್ಲವೂ ಇವುಗಳಲ್ಲಿ ತುಂಬಿಕೊಂಡಿರುತ್ತವೆ ಈ ಕಾರಣದಿಂದಲೇ ಶ್ರೀಮನು ಭಗವಂತನು "ಭೂತಂ ಭವ್ಯಂ ಭವಿಷ್ಯಚ್ಚ ಸರ್ವಂ ವೇದಾತ್ಪ್ರಸಿಧ್ಯತಿ" ಎಂಬುದಾಗಿ ವೇದದ ವೈಭವವನ್ನು ವರ್ಣಿಸಿರುತ್ತಾನೆ ಆದುದರಿಂದ ವೇದಗಳು ಯಾರಿಂದಲೋ ಒಂದುಕಾಲದಲ್ಲಿ ಬರೆಯಲ್ಪಟ್ಟ ಪುಸ್ತಕಗಳಾಗದೆ ಅಪೌರುಷೇಯವಾಗಿಯೂ, ಈಶ್ವರನು, ಜೀವರು, ಪ್ರಪಂಚ ಸೃಷ್ಟಿಪ್ರಳಯಗಳು ಹೇಗೆ ಅನಾದಿಯೋ ಹಾಗೆ ಅನಾದಿಯಾಗಿಯೂ ಇರುತ್ತವೆ "ತೇ ಧ್ಯಾನಯೋಗಾನುಗತಾಃ ಅಪಶ್ಯನ್" ಎಂಬ ಶ್ವೇತಾಶ್ವತರೋಪನಿಷತ್ತಿನ ಮಂತ್ರದ ಪ್ರಕಾರ ಋಷಿಗಳು ತಮ್ಮ ಧ್ಯಾನಯೋಗಬಲದಿಂದ ವೇದವಾಕ್ಯ (ಮಂತ್ರ) ಗಳನ್ನು ಸಾಕ್ಷಾತ್ಕರಿಸಿಕೊಂಡು ಅಂದರೆ ಕಂಡುಹಿಡಿದು ಜೀವರುಗಳ ಉದ್ಧಾರಕ್ಕೋಸ್ಕರ ಲೋಕದಲ್ಲಿ ಪ್ರಚಾರ ಮಾಡಿದರು

ವೇದದ ವಿಭಾಗ

ವೇದವು ವಿಂಗಡಿಸಲ್ಪಡದೆ ಅಖಂಡವಾಗಿದ್ದದ್ದರಿಂದ ಶ್ರೀ ಬಾದರಾಯಣ (ಕೃಷ್ಣದ್ವೈಪಾಯನ) ಮಹರ್ಷಿಗಳು ಇದನ್ನು ಋಗಾದಿ ನಾಲ್ಕು ವೇದಗಳಾಗಿ ವಿಂಗಡಿಸಿದರು ಆದುದರಿಂದಲೇ ಇವರಿಗೆ ವೇದವ್ಯಾಸರು (ವೇದವನ್ನು ವಿಭಾಗಿಸಿದವರು) ಎಂಬ ಹೆಸರು ಬಂದಿತು ಒಬ್ಬ ತಾಯಿಗೆ ಮೂರು ಜನ ಮಕ್ಕಳಿದ್ದು ಅವರಲ್ಲಿ ಒಬ್ಬನು ದೃಢಕಾಯನಾಗಿಯೂ, ಇನ್ನೊಬ್ಬನು ರೋಗಿಯಾಗಿಯೂ ಮತ್ತೊಬ್ಬನು ಎಳೇ ಮಗುವಾಗಿಯೂ ಇದ್ದರೆ ಈ ಮೂರು ಜನ ಮಕ್ಕಳಲ್ಲಿ ತಾಯಿಗೆ ಸಮಾನವಾದ ಪ್ರೀತಿಯಿದ್ದರೂ ಅವರವರ ದೇಹಪ್ರಕೃತಿಗನುಸಾರವಾಗಿ ಮೊದಲನೇಯವನಿಗೆ ರೊಟ್ಟಿ, ತುಪ್ಪ, ಸಕ್ಕರೆ ಇವುಗಳನ್ನೂ, ಎರಡನೆಯವನಿಗೆ ಗಂಜಿ ಮತ್ತು ಮೆಣಸಿನ ಸಾರು ಅನ್ನವನ್ನೂ, ಮೂರನೇಯವನಿಗೆ ಹಾಲನ್ನೂ ಕೊಡುತ್ತಾಳೆ ಇದರಂತೆ ಜೀವರು ತಮ್ಮ ತಮ್ಮ ಅಧಿಕಾರಕ್ಕನುಸಾರವಾಗಿ ಫಲಗಳನ್ನು ಹೊಂದುವದಕ್ಕಾಗಿ ಈಶ್ವರನು ವೇದಗಳನ್ನು ಕರ್ಮಕಾಂಡ, ಉಪಾಸನಾಕಾಂಡ, ಜ್ಞಾನಕಾಂಡ ಎಂಬುದಾಗಿ ಮೂರು ಭಾಗಗಳನ್ನಾಗಿ ಮಾಡಿರುತ್ತಾನೆ ಯಾರು ಸ್ವರ್ಗಲೋಕದ ಸುಖವನ್ನು ಅಪೇಕ್ಷಿಸುತ್ತಾರೋ ಅವರು ಕರ್ಮಕಾಂಡದಲ್ಲಿ ಹೇಳಿರುವಂತೆ ಕರ್ಮಗಳನ್ನು ಮಾಡತಕ್ಕದ್ದು ಯಾರು ಬ್ರಹ್ಮಲೋಕವನ್ನು ಹೊಂದಿ ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ ಎಂಬ ಪದವಿಗಳನ್ನು ಪಡೆಯಲಿಚ್ಛಿಸುತ್ತಾರೋ ಅವರು ಉಪಾಸನಾಕಾಂಡದಲ್ಲಿ ಹೇಳಿರುವಂತೆ ಈಶ್ವರನ ಉಪಾಸನೆಯನ್ನು ಮಾಡತಕ್ಕದ್ದು ಯಾರು ಸ್ವರ್ಗಲೋಕದ ಸುಖವನ್ನಾಗಲಿ ಅಥವಾ ಬ್ರಹ್ಮಲೋಕದ ಪದವಿಯನ್ನಾಗಲಿ ಅಪೇಕ್ಷಿಸದೆ ಸಾಯುಜ್ಯ (ಮೋಕ್ಷ) ಪದವಿಯನ್ನು ಅಂದರೆ ಈಶ್ವರನಲ್ಲಿ ಏಕತ್ವವನ್ನು ಹೊಂದಿ ನಿರತಿಶಯವಾದ ಆನಂದವನ್ನು ಪಡೆಯಲು ಇಚ್ಛಿಸುತ್ತಾರೋ ಅವರು ಜ್ಞಾನಕಾಂಡದಲ್ಲಿ ಹೇಳಿರುವಂತೆ ಬ್ರಹ್ಮಜ್ಞಾನವನ್ನು ಸಂಪಾದಿಸತಕ್ಕದ್ದು ವೇದಪುರುಷನಿಗೆ ಕರ್ಮಕಾಂಡವು ಪಾದಗಳಂತೆಯೂ, ಉಪಾಸನಾಕಾಂಡವು ಹೃದಯದಂತೆಯೂ, ಜ್ಞಾನಕಾಂಡವು ಶಿರಸ್ಸಿನಂತೆಯೂ ಇರುವದರಿಂದ ಮನುಷ್ಯನಿಗೆ ಶಿರಸ್ಸು ಹೇಗೆ ಪ್ರಧಾನವೋ ಹಾಗೆ ಮೂರು ಕಾಂಡಗಳಲ್ಲಿ ಜ್ಞಾನಕಾಂಡವು ಪ್ರಧಾನವಾಗಿದೆ. ಆದುದರಿಂದಲೇನೇ ಇದಕ್ಕೆ ವೇದಶಿರವೆಂದು ಹೆಸರು.

[ಆನೆಯ ಪುಟವನ್ನು ನೋಡಿ]

ಪಂಚಾಚಾರ್ಯಪ್ರಭಾ.

೧೯೪೫ನೆಯ ಜುಲೈ ತಾ|| ೧೬ನೇ ಸೋಮವಾರ

ಧರ್ಮಮಾರ್ಗವನ್ನು ಬಿಡಬಾರದು.

ಈಗಿನಕಾಲದಲ್ಲಿ ಪ್ರಾಯಶಃ ಎಲ್ಲಿ ನೋಡಿದರೂ ಜನಗಳು ತಮ್ಮ ತಮ್ಮ ಜೀವನೋಪಾಯವನ್ನೂ ಧನಾರ್ಜನೆಯನ್ನೂ ಖ್ಯಾತಿಯನ್ನೂ ಪಡೆಯುವುದರಲ್ಲಿ ಆಸಕ್ತರಾಗಿದ್ದಾರೆಯೇ ಹೊರತು, ಆತ್ಮೋದ್ಧಾರಸಾಧನವಾದ ಧರ್ಮಾನುಷ್ಠಾನದಲ್ಲಿ ಆಸಕ್ತರಾಗಿರುವುದಿಲ್ಲ ಮುಂದೆ ಏನಾದರೂ ಆಗಲಿ, ಇರುವವರೆಗೆ ಪ್ರತಿಷ್ಠಾವಂತರಾಗಿಯೂ ದ್ರವ್ಯವಂತರಾಗಿಯೂ ಸ್ವೇಚ್ಛಾವಿಹಾರಿಗಳಾಗಿಯೂ ಇದ್ದರೆ ಸಾಕೆಂಬ ಭಾವನೆಯು ಜನಗಳಲ್ಲಿ ಬೇರೂರುತ್ತ ನಡೆದಿರುತ್ತದೆ ತಮ್ಮ ಧನಾರ್ಜನೆಗೂ, ಪ್ರತಿಷ್ಠೆಗೂ, ಸ್ವೇಚ್ಛಾವಿಹಾರಕ್ಕೂ ಯಾವುದು ಅನುಕೂಲವಾಗಿರುವುದೋ ಅದಲ್ಲವೂ ಧರ್ಮವೆಂದು ಹೇಳಲು ಇವರು ಹಿಂಜರಿಯುವುದಿಲ್ಲ ಆದರೆ ಮಾನವನಿಗೆ ಪ್ರತಿಷ್ಠೆ ಧನಾರ್ಜನ ಸ್ವೇಚ್ಛಾವಿಹಾರ ಮುಂತಾದವು ತಾವಾಗಿಯೇ ಹುಟ್ಟುವ ಗುಣಗಳಾಗಿರುವವು ಪ್ರತಿಯೊಬ್ಬ ಮನುಷ್ಯನೂ ಧನಾರ್ಜನೆ ಮಾಡಬೇಕು ಖ್ಯಾತನಾಗಬೇಕು, ಸ್ವತಂತ್ರತೆಯನ್ನು ಗಳಿಸಬೇಕೆಂದು ಬಯಸುತ್ತಾನೆ ರಾಜನಾದಿಯಾಗಿ ಭಿಕ್ಷುಕನವರೆಗೂ ಈ ಚಾಪಲ್ಯವು ಇದ್ದೇ ಇರುತ್ತದೆ ಇವುಗಳಲ್ಲಿಯೇ ಆಸಕ್ತನಾಗಿದ್ದರೆ ಮಾನವನ ಕರ್ತವ್ಯವು ಪೂರ್ಣವಾದಂತಾಗಲಿಲ್ಲ ಮಾನವನು ಯಾವುದನ್ನು ಮಾಡಿದರೂ ಧರ್ಮಮಾರ್ಗವನ್ನು ಮಾತ್ರ ಬಿಡಬಾರದು

ಹಿಂದೆ ರಾವಣಾದಿರಾಕ್ಷಸರೂ ಬಹಳ ಪ್ರತಿಷ್ಠಾವಂತರಾಗಿಯೂ ಅಖಂಡೈಶ್ವರ್ಯವಂತರಾಗಿಯೂ ಸ್ವೇಚ್ಛಾವಿಹಾರಿಗಳಾಗಿಯೂ ಇದ್ದರೆ ಅವರ ಹೆಸರನ್ನು ಕೇವಲಮಾತ್ರದಿಂದ ಪ್ರತಿಯೊಬ್ಬನೂ ಕೋಪದಿಂದ ತನ್ನ ನಿರ್ಯೋಗ ಸ್ಮರಣೆ ಮಾಡಿದ್ದನ್ನೂ ಪವಿತ್ರರೆನಿಸಿಕೊಳ್ಳುವರು ರಾವಣನಿಗೆ ಹೊಟ್ಟೆಗೆ ಅನ್ನಾಹಾರ ಇಲ್ಲದ ಕಾಲದಲ್ಲಿ ಹುಟ್ಟಿದ್ದರೂ ಪವಿತ್ರರೆನಿಸಿಕೊಂಡ ಶ್ರೀರಾಮ ಪ್ರಪಂಚವಿರ ನವರಗೂ ಸಂತ ಕೋಟಿಯಲ್ಲಿ ಸೇರಿದ್ದಾರೆ ಹೀಗೆ ರಾವಣಾದಿರಾಕ್ಷಸರೂ ರಾಮನಿಗಿಂತ ರಾಜರೂ ಪ್ರತಿಷ್ಠೆ ಅಖಂಡೈಶ್ವರ್ಯ ಸಾಮ್ರಾಜ್ಯ ಸ್ವೇಚ್ಛಾವಿಹಾರಿತ್ವಾದಿಗಳಲ್ಲಿ ಸಮಾನರಾಗಿದ್ದರೂ ರಾವಣಾದಿಗಳು ಯಾವಾಗಲೂ ಅಧರ್ಮಮಾರ್ಗದಲ್ಲಿಯೇ ಇದ್ದುದರಿಂದ ಅಪವಿತ್ರಾತ್ಮರೆಂದೂ, ಶ್ರೀರಾಮಾದಿಗಳು ಆಪತ್ತಿನಲ್ಲಿಯಲ್ಲೂ ಧರ್ಮಮಾರ್ಗವನ್ನು ಬಿಡದ ಇದುದರಿಂದ ಪವಿತ್ರಾತ್ಮರೆಂದೂ ಹೇಳಿಸಿಕೊಳ್ಳುವರು ಇದರಿಂದ ಮನುಷ್ಯನು ಎಷ್ಟು ಖ್ಯಾತಿಯನ್ನು ಪಡೆಯಬೇಕಾಗಿದ್ದರೂ, ದ್ರವ್ಯಾರ್ಜನೆ ಮಾಡಬೇಕಾಗಿದ್ದರೂ, ಸ್ವಾತಂತ್ರ್ಯವನ್ನು ಗಳಿಸಬೇಕಾಗಿದ್ದರೂ ಧರ್ಮಮಾರ್ಗವನ್ನು ಅನುಸರಿಸಬೇಕಲ್ಲದ ಅದನ್ನು ಅತಿಕ್ರಮಿಸಲಾಗದೆಂದು ಸ್ಪಷ್ಟವಾಗುತ್ತದೆ

ಈಗಿನ ನೂತನ ವಾತಾವರಣದಲ್ಲಿ ಧರ್ಮವೆಂಬುದು ಗೋಸುಂಬೆಯಂತೆ ನಾನಾರೂಪವನ್ನು ಹೊಂದುತ್ತ ಬರುತ್ತಲಿದೆ ಹೀಗೆ ನಾನಾರೂಪವನ್ನು ಹೊಂದುವುದಕ್ಕೆ ಜನಗಳ ಚಾಂಚಲ್ಯವೃತ್ತಿಯೇ ಕಾರಣವಾಗಿವೆಯಲ್ಲದೆ ವಾಸ್ತವವಾಗಿ ಧರ್ಮವು ನಾನಾಕಾರವನ್ನು ಹೊಂದುವುದಿಲ್ಲ ಜಗದಾದಿಯಲ್ಲಿ ಪರಮೇಶ್ವರನು ಜಗತ್ತನ್ನು ಸೃಷ್ಟಿಸಿ ಜಗದುದ್ಧಾರಕ್ಕಾಗಿ ವೇದಗಳನ್ನು ಸೃಷ್ಟಿಸಿದನು ವೇದಗಳಲ್ಲಿ ಯಾವುದು ಧರ್ಮವೆಂದು ಹೇಳಲ್ಪಟ್ಟಿದೆಯೋ ಅದೇ ಧರ್ಮವೆಂದೂ, ಯಾವುದು ಅಧರ್ಮವೆಂದು ಹೇಳಲ್ಪಟ್ಟಿದೆಯೋ ಅದೇ ಅಧರ್ಮವೆಂದೂ ಪೂರ್ವಾಚಾರ್ಯರಾಗಲಿ, ಮಹರ್ಷಿಗಳಾಗಲಿ ಎಲ್ಲರೂ ಒಪ್ಪಿಕೊಂಡಿರುತ್ತಾರೆ. ಗೀತೆಯಲ್ಲಿ ಶ್ರೀಕೃಷ್ಣನು ಅರ್ಜುನನನ್ನು ಕುರಿತು—

ತಸ್ಮಾಚ್ಛಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯವ್ಯವಸ್ಥಿತೌ |
ಜ್ಞಾತ್ವಾ ಶಾಸ್ತ್ರವಿಧಾನೋಕ್ತಂ ಕರ್ಮ ಕರ್ತುಮಿಹಾರ್ಹಸಿ ||

ಯಾವ ಕಾರ್ಯವನ್ನು ಮಾಡಬೇಕು, ಯಾವ ಕಾರ್ಯವನ್ನು ಮಾಡಬಾರದು ಎಂಬ ವ್ಯವಸ್ಥೆಯನ್ನು ವೇದಾಧಾರದಿಂದಲೇ ತಿಳಿದುಕೊಳ್ಳಬೇಕು ಯಾವ ಕರ್ಮವು ವೇದದಲ್ಲಿ ವಿಧಿಸಲ್ಪಟ್ಟಿರುತ್ತದೆಯೋ ಅಂಥ ಕರ್ಮವನ್ನೇ ಮಾಡಬೇಕೆಂದೂ, ವೇದದಲ್ಲಿ ವಿಧಿಸಲ್ಪಡದಿರುವುದನ್ನು ಮಾಡಬಾರದೆಂದೂ ಹೇಳಿರುತ್ತಾನೆ ಆದುದರಿಂದ ಧರ್ಮಾಧರ್ಮನಿರ್ಣಯವು ವೇದದಿಂದಲೂ ಆ ವೇದಾನುಸಾರಿಗಳಾದ ಸ್ಮೃತ್ಯಾದಿಗಳಿಂದಲೂ ಆಗಬೇಕಾಗಿದೆಯಲ್ಲದೆ ಕಾಲಾನುಗುಣವಾಗಿ ತಮ್ಮ ಮನಸ್ಸಿಗೆ ಬಂದಂತೆ ಆಗುವಂತಿಲ್ಲ

ಪ್ರಕೃತದಲ್ಲಿ ಅನೇಕರು ಒಂದೊಂದು ರಾಜ್ಯಕಾರ್ಯದಲ್ಲೋ ಬೇರೆ ಇತರ ಕಾರ್ಯಗಳಲ್ಲೋ ಹೊರಟು ತಮ್ಮ ಕಾರ್ಯವನ್ನು ಸಾಧಿಸುವದಕ್ಕಾಗಿ ಧರ್ಮವನ್ನು ಹಾಳು ಮಾಡಲು ಹೊರಡುತ್ತಾರ ಇದರಿಂದ ಧರ್ಮಾಭಿಮಾನಿಗಳಿಗೂ ಇವರಿಗೂ ಕಲಹಕ್ಕೆ ಪ್ರಾರಂಭವಾಗುವುದು

ಏಕೆಂದರೆ—ವೇದಶಾಸ್ತ್ರಪುರಾಣಗಳನ್ನು ತಿಳಿದ ಪ್ರಾಚೀನಸಂಪ್ರದಾಯದ ಗುರುಜನಗಳು ಪ್ರಾಚೀನ ಕಾಲದಿಂದ ರೂಢವಾಗಿ ಬಂದ ಧರ್ಮಾಧರ್ಮಗಳ ನಿಬಂಧನೆಯ ಮೂಲೋತ್ಪಾಟನೆಗೆ ಒಪ್ಪುವುದಿಲ್ಲ ಧರ್ಮೋತ್ಪಾಟನಮಾಡುವುದೂ, ಪ್ರಾಣಬಿಡುವುದೂ ಎರಡೂ ಒಂದೇ ಎಂಬುದು ಅವರ ಭಾವನೆ ಸ್ವಾತಂತ್ರ್ಯಸಂಧನೆಯಾಗಲಿ ದೇಶಾಭ್ಯುದಯವಾಗಲಿ, ಸ್ವಾಭ್ಯುದಯವಾಗಲಿ ಎಲ್ಲವನ್ನೂ ಸನಾತನಧರ್ಮದವರು ಬಹಳ ಕುತೂಹಲದಿಂದ ಸಾಧಿಸಲು ಅಪೇಕ್ಷಿಸುತ್ತಾರೆ ಆದರೆ ಸನಾತನಧರ್ಮಕ್ಕೆ ವಿರೋಧವಾದ ಸ್ವಾತಂತ್ರ್ಯವನ್ನಾಗಲಿ ದೇಶಾಭ್ಯುದಯವನ್ನಾಗಲಿ ಅಪೇಕ್ಷಿಸುವುದಿಲ್ಲ ಧರ್ಮವೇ ಹಾಳಾದ ಮೇಲೆ ಉಳಿದ ಸ್ವಾತಂತ್ರ್ಯಾದಿಗಳೆಲ್ಲ ಆತ್ಮವಿಲ್ಲದ ಶರೀರಕ್ಕೆ (ಹೆಣಕ್ಕೆ) ಅಲಂಕಾರಮಾಡಿದಂತೆ ವ್ಯರ್ಥವಾಗುವುವು ಗುರುಜನತಾಭಕ್ತಿ ಮೊದಲಾದ ಆಸ್ತಿಕದ ಸ್ವಭಾವಗಳಿಂದ ಕೂಡಿದ ಐಹಿಕಸೌಖ್ಯವನ್ನನು ಬಿಡದ ಸ್ತ್ರೀ ಪುರುಷ ಸನಾತನಿಗ ಕರ್ತವ್ಯವು ಧರ್ಮ ಸಾವ ಪಾಪ ಅಧ ತ್ರಸೌಖ್ಯವನ್ನೇ ಸುರಿತು ಕೇವಲ ಬಾಹ್ಯ ಭೋಗಸೌಖ್ಯದಲ್ಲಿ ಮಗ್ನನಾದವನು ಚಾರ್ವಾಕನೆನಿಸುವ ಮದದೇವತೆಯನ್ನು ತಳೆ ವಿದೇಶೀಯ ರಂತೆ ಸ್ತ್ರೀಯರಾಗಲಿ ಪುರುಷರಾಗಲಿ ಎಲ್ಲರೂ ಎಲ್ಲಾ ವಿಷಯಗಳಲ್ಲಿಯೂ ಸ್ವಾತಂತ್ರ್ಯವನ್ನು ಬಯಸುತ್ತ ಹೋದಲ್ಲಿ ಅವಿವೇಕವಾಗಿ ಅನರ್ಥ ಪರಂಪರೆಯು ಎಷ್ಟೆಂಬುದ ಎಲ್ಲರಿಗೂ ತಿಳಿದುದಾಗಿದೆ ಆದ್ದರಿಂದ ಯಾರೂ ಧರ್ಮಾಧರ್ಮ ವ್ಯವಸಾಯದಲ್ಲಿ ಕೆಟ್ಟ ದೋಷಬಾರಿಗೆ ಗಾಗದೆ ಧರ್ಮಮಾರ್ಗವನ್ನಿಡಿದು ನಡೆದು ಶ್ರೀಪರಮೇಶ್ವರನ ಕರುಣೆಗೆ ಪಾತ್ರರಾಗಬೇಕೆಂದಾಶಿಸುತ್ತೇವೆ

ಯುದ್ಧವಾರ್ತೆ.

ನಿಕೋಬಾರ್ ಆಕ್ರಮಣ

ಆಂಡಮಾನ್ ದ್ವೀಪಸ್ತೋಮಗಳಿಂದ ನಿಕೋಬಾರ್ ದ್ವೀಪದ ಆಕ್ರಮಣವನ್ನು ಬ್ರಿಟಿಷ್ ಸೇನೆಗಳು ನಡೆಸಬಹುದೆಂದೂ, ಅಲ್ಲಿಂದ ಸುಮಾತ್ರಾ ಅಥವಾ ಮಲಯಾಗಳ ಮೇಲೆ ಆಕ್ರಮಣ ಆರಂಭವಾಗಲಿದೆ ಎಂದೂ ನ್ಯೂಯಾರ್ಕ್‌ಟೈಂಸ್ ಪತ್ರಿಕೆ ತಿಳಿಸಿದೆ

ಸಿಟ್ಟಾಂಗ್ ನದಿಯ ಪೂರ್ವ ಮುಖದಲ್ಲಿ ಮಿತ್ರರ ಪ್ರಗತಿ

ಸಿಟಾಂಗ್ ನದಿಯ ಪೂರ್ವ ಮುಖದಲ್ಲಿ ಮಿತ್ರರ ಸೈನ್ಯದ ಚಟುವಟಿಕೆ ಜೋರಾಗಿಯೇ ಇದೆ ಪೇಗೂ ವಿಭಾಗದಲ್ಲಿ ಜಪಾನಿಗಳ ಪ್ರತಿಭಟನೆಯನ್ನು ತಡೆಯಲಾಗಿದೆ ನಿಯಾಂಗ್ಲಾ, ಮಿಸ್ತಿಕೋ ವಿಭಾಗದಲ್ಲಿ ಮಿತ್ರರ ವಿಮಾನ ದಾಳಿ ನಡೆಯುತ್ತಿದೆ ಜಪಾನಿಗಳ ಸೈನ್ಯದಳಗಳಿಗೂ ಸ್ಥಾನಗಳಿಗೂ ದಾಳಿಯ ಏಟು ತಗಲಿದೆ

ಜಪಾನರ ವಿಮಾನ ತಯಾರಿಕೆ ಮುಂದುವರೆಯುತ್ತಿದೆ

ನೈರುತ್ಯ ಶಾಂತಿಸಾಗರದಲ್ಲಿ ಓಕಿನಾವಾವನ್ನು ಅತ್ಯಂತ ದೊಡ್ಡ ನೆಲೆಯಾಗಿ ಮಾರ್ಪಡಿಸಲು ವ್ಯವಸ್ಥೆಯಾಗುತ್ತಿದೆ ಪದೇ ಪದೇ ಫಾರ್ಟ್ರೆಸ್ ವಿಮಾನಗಳು ದಾಳಿ ನಡೆಸಿದ ಪರಿಣಾಮವಾಗಿ ಜಪಾನಿನ ವಿಮಾನ ತಯಾರಿಕೆ ಕುಸಿದು ಹಿಂದೆಬಿದ್ದಿದೆ. ಆದರೆ ನೆಲದಡಿಯಲ್ಲಿ ಕೆಲಸ ಮಾಡುತ್ತಿರುವ ಜಪಾನೀ ಕಾರ್ಖಾನೆಗಳು ಯುದ್ಧವನ್ನು ಮುನ್ನಡೆಸಲು ಬೇಕಾದಷ್ಟು ವಿಮಾನಗಳನ್ನು ತಯಾರಿಸುತ್ತಲೇ ಇವೆ ಎಂದು ಸಮರ ಸುದ್ದಿ ವಿಮರ್ಶಕರು ತಿಳಿಸುತ್ತಿದ್ದಾರೆ

ಮುಂದಿನ ವರ್ಷ ಜಪಾನ್ ಯುದ್ಧ ಮುಕ್ತಾಯ

ನೈರುತ್ಯ ಪೆಸಿಫಿಕ್ಕಿನ ಕಮ್ಯಾಂಡರ್-ಇನ್-ಚೀಫ್ ರಾದ ಜ|| ಮೆಕಾರ್ಥರರು ಜಪಾನಿನ ಯುದ್ಧ ಮುಂದಿನ ವರ್ಷ ಮುಕ್ತಾಯ ಹೊಂದುವುದೆಂದು ತಿಳಿಸಿದ್ದಾರೆ.

ರಷ್ಯಾ-ಚೀಣಾ ಸಂಧಾನ ಆಶಾದಾಯಕವಾಗಬಹುದು

ಮಾ|| ಸ್ಟಾಲಿನ್ ಮೂರನೇ ಬಾರಿಗೆ ಚೀಣಾದ ಪ್ರಧಾನರಾದ ಡಾ|| ಟಿ ವಿ ಸೂಂಗ್‌ರವರನ್ನು ಭೇಟಿ ಮಾಡಿದರು ಡಾ|| ಸೂಂಗ್ ಅಮೆರಿಕರು ಪ್ರತಿನಿಧಿ ಮಿ|| ಹೆಮರಿನ್‌ರನ್ನೂ ಭೇಟಿಮಾಡಿದರು ರಷ್ಯಾ ಚೀನಾ ಮಾತುಕತೆ ಇನ್ನೊಂದು ಹೆಜ್ಜೆ ಮುಂದುವರಿದಿದೆ ಎನ್ನಲಾಗಿದೆ ವಿಚಾರಗಳು ಇತ್ಯರ್ಥವಾಗಿವೆ ಎನ್ನಲಾಗದಿದ್ದರೂ ಒಂದು ಸ್ಥಿತಿಗೆ ಮುಟ್ಟಿವೆ ಎನ್ನಬಹುದು

ಬರ್ಲಿನ್ನಿನಲ್ಲಿ ಆಹಾರದ ಬಿಕ್ಕಟ್ಟು

ಜರ್ಮನಿ ರಾಜಧಾನಿ ಬರ್ಲಿನ್ ನಗರವನ್ನು ಬ್ರಿಟನ್, ಅಮೇರಿಕ ಫ್ರಾನ್ಸ್, ರಷ್ಯ ಆಕ್ರಮಿಸಿವೆಯಷ್ಟೆ! ಈಗ ಅಮೆರಿಕ ಬ್ರಿಟನ್ ಆಕ್ರಮಿಸಿರುವ ಪ್ರದೇಶದಲ್ಲಿ ಆಹಾರವಿಲ್ಲದೆ ತುಂಬಾ ತೊಂದರೆಯಾಗಿದೆ ಇದುವರೆಗೂ ರಷ್ಯಾದಿಂದ ಆಹಾರ ಬರುತ್ತಿತ್ತು ಈಗ ರಷ್ಯಾ ಆಹಾರ ಒದಗಿಸಲಾಗುವುದಿಲ್ಲವೆಂದು ಹೇಳಿರುವುದರಿಂದ ಆಹಾರ ಕಷ್ಟ ಸಂಭವಿಸಿದೆ ಬ್ರಿಟಿಷರು ಅಮೇರಿಕನ್ನರು ಈ ಆಹಾರದ ಬಿಕ್ಕಟ್ಟನ್ನು ಬಗೆಹರಿಸಲು ರಷ್ಯದೊಡನೆ ಸಂಧಾನ ನಡೆಸುತ್ತಿದ್ದಾರೆ

ಗಂಟೆಗೆ ೪೫೦ ಮೈಲಿ ಹಾರುವ ವಿಮಾನ ನಿರ್ಮಾಣ

ಫ್ರೆಂಚರು ಸಿದ್ಧಪಡಿಸಿರುವ ಹೊಸ ಯುದ್ಧವಿಮಾನವು ೪೫೦ ಮೈಲಿ ವೇಗದಲ್ಲಿ ಹಾರುವುದು ಫ್ರಾನ್ಸ್ ಜರ್ಮನಿಯಿಂದ ಆಕ್ರಾಂತವಾದಾಗಲೇ ಈ ವಿಮಾನದ ಸೃಷ್ಟಿ ಮೊದಲಾಗಿತ್ತು ಈಗ ಈ ವಿಮಾನದ ಸಿದ್ಧತೆಯಾಗಿ ಆದರ ವೇಗದ ಪರೀಕ್ಷೆಯಾಗಿದೆಯೆಂದು ಫ್ರೆಂಚ್ ಮಂತ್ರಿಮಂಡಲ ತಿಳಿಸಿದೆ

ಕಾಂಗ್ರೆಸ್ ಅಧಿಕಾರ ಸ್ವೀಕರಿಸಲು ಸಿದ್ಧವಾಗಿದೆ

"ವಾವೆಲ್ ಸಲಹೆಯಮೇರೆಗೆ ಕೇಂದ್ರದಲ್ಲಿ ಅಧಿಕಾರ ಸ್ವೀಕರಿಸಲು ಕಾಂಗ್ರೆಸ್ ಸಿದ್ಧವಾಗಿದೆ ಮುಸ್ಲಿಂಲೀಗು ಈ ಬಗೆಯ ಸರಕಾರದಲ್ಲಿ ಸಹಕರಿಸಲು ಒಪ್ಪದಿದ್ದಾಗ್ಯೂ ಕೂಡ ಕಾಂಗ್ರೆಸು ಮುಂದೆ ಬಂದಿದೆ ಆದರೂ ಮುಸ್ಲಿಂಲೀಗಿಗೆ 'ಇನ್ನೂ ಬಾಗಿಲು ತೆರೆದೇ ಇರಲಿ' ಎಂಬುದೇ ಕಾಂಗ್ರೆಸ್ಸಿನ ಅಭಿಮತ ಎಲ್ಲವೂ ನಮ್ಮ ಕೈಯ್ಯಲ್ಲಿಲ್ಲ ಅತ್ತ ಬ್ರಿಟಿಷ್ ಸರ್ಕಾರ ಜಾಗ್ರತವಾಗಿಯೇ ಇದೆ ಜೊತೆಗೆ ಅನೇಕ ಗುಂಪುಗಳು ಬೇರೆ ಇವೆ ಒಂದುವೇಳೆ ಈಗ ಮುಸ್ಲಿಂಲೀಗ್ ಒಪ್ಪದ, ಅಧಿಕಾರ ವರ್ಗದಲ್ಲಿ ಬಾರದೆ ಹೋದರೆ ತಾತ್ಕಾಲಿಕ ರೂಪ ಒಂದಾಗಬಹುದು. ಅನಂತರ ಲೀಗ್ ತನ್ನ ಯೋಚನೆ ಬದಲಾಯಿಸಿ ಪುನಃ ಬಂದು ಸಹಕರಿಸಲೂ ಬಹುದು" ಎಂದು ಪಂಡಿತ್ ಜವಾಹರಲಾಲ್ ನೆಹರೂರವರು ಹೇಳಿದ್ದಾರೆ.

ಆಸ್ಟ್ರೇಲಿಯಕ್ಕೆ ಹೊಸಮಂತ್ರಿ

ಇತ್ತೀಚೆಗೆ ಮೃತರಾದ ಮಿ|| ಕರ್ಟೆನ್ನರ ಸ್ಥಳಕ್ಕೆ ಮಿ|| ಜೋಸೆಫ್ ಚೀಫ್ಲೇರವರನ್ನು ಆಸ್ಟ್ರೇಲಿಯನ್ ಮುಖ್ಯ ಮಂತ್ರಿಗಳಾಗಿ ನೇಮಿಸಲಾಗಿದೆ ಇವರು ಕಾಮನ್‌ವೆಲ್ತ್‌ನ ಖಜಾಂಚಿಗಳಾಗಿದ್ದರು ಕರ್ಟೆನ್ನರ ಅಸ್ವಸ್ಥತೆಯ ಕಾಲದಲ್ಲಿ ಪ್ರಧಾನಾಮಾತ್ಯರಾಗಿದ್ದ ಮಿ|| ಫೋರ್ಡರು ಸಾನ್‌ಫ್ರಾನ್ಸಿಸ್ಕೋ ಸಮ್ಮೇಳನಕ್ಕೆ ಹೋಗಿದ್ದ ಕಾಲದಲ್ಲಿ ಮಿ|| ಜೋಸೆಫರವರೇ ಮುಖ್ಯಮಂತ್ರಿಯಾಗಿ ಕೆಲಸ ನಡೆಸಿದ್ದರು

ಬಯಲಾಟದ ಹಬ್ಬ

ಈ ತಿಂಗಳು ೭, ೯, ೧೦, ೧೧, ಈ ನಾಲ್ಕು ದಿನಗಳು ಮೈಸೂರಿನಲ್ಲಿ ಬಯಲಾಟದ ಹಬ್ಬ ನಡೆಯಿತು ಸಂಸ್ಥಾನದ ಅಕ್ಷರ ಪ್ರಚಾರ ಸಮಿತಿಯ ಬಯಲಾಟದ ಬಳಗವು ಈ ಹಬ್ಬವನ್ನು ಏರ್ಪಡಿಸಿತ್ತು ಈ ಹಬ್ಬಕ್ಕೆ ಮೈಸೂರು ದೇಶದ ನಾನಾಕಡೆಯಿಂದ ಆಟಗಾರರು ಬಂದಿದ್ದರು ಲಾವಣಿ ಕೋಲಾಟ, ತೊಗಲುಗೊಂಬೆಯಾಟ, ಸಾಮಾಜಿಕ ನಾಟಕ, ದಾಸರಪದ, ಯಕ್ಷಗಾನ, ಲಿಂಗ ವೀರಕುಣಿತ, ಕಂಸಾಳ ಕುಣಿತ, ಸೂತ್ರದಬೊಂಬೆ—ಈ ಆಟಗಳನ್ನು ಪ್ರದರ್ಶಿಸಲಾಯಿತು

ಸ್ವೀಕಾರ

ನಿಜಾಂ ಇಲಾಖಾ ಕಂದಾರ ತಾಲೂಕು ಮುಖೇಡ ಗ್ರಾಮದ ಬೃಹನ್ಮಠಾಧ್ಯಕ್ಷರಾದ ಶ್ರೀ|| ಷ ಬ್ರ|| ವಿರೂಪಾಕ್ಷ ಶಿವಾಚಾರ್ಯ ಸ್ವಾಮಿಗಳವರು ಪ್ರಭಾಪೋಷಣಕ್ಕೋಸ್ಕರ ೭ ರೂಪಾಯಿಗಳನ್ನು ಕಳುಹಿಸಿದ್ದಾರೆ

ತುಮಕೂರು ಟವನ್ನಿನಲ್ಲಿರುವ ಒಡಗೂರು ಸಿದ್ದಪ್ಪನವರ ಪುತ್ರ ಚಿ|| ಕೋಡಿ ಬಸಪ್ಪನವರಿಗೆ ಗೂಳೂರು ವಾಸ ರಾ ಚನ್ನಬಸವಶೆಟ್ಟರ ಮಗ ನಂಜಪ್ಪನವರ ಪುತ್ರಿ ಚಿ ಸೌ ಸುವರ್ಣಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ ೭ ರೂ ಗಳು ಮ ರಾ ಬೆಂಗಳೂರು ಸರಾಫ್ ಬಿ ಬಸಪ್ಪನವರ ದ್ವಾರಾ ತಲ್ಪಿರುತ್ತವೆ

ಧಾರವಾಡ ಡಿ|| ಬೆಲವಂತರ ಗ್ರಾಮದಲ್ಲಿ ನೆರವೇರಿದ ಶ್ರೀ ಚನ್ನಬಸವೇಶ್ವರ ಶಿವಯೋಗಿಗಳ ಸ್ಮಾರಕೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ ೧ ರೂಪಾಯಿಯು ಮ|| ರಾ|| ಮೂರುಸಾವಿರಪ್ಪ ಹತ್ತಿ ಕಾಳ ಹುಬ್ಬಳ್ಳಿ ಇವರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರುಗಳಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯವ ಂಗಲವನ್ನೀಯಲೆಂದು ಹಾರೈಸುತ್ತೇವೆ

ಮಾಹೇಶ್ವರ ಏಕೀಕರಣಸಂಘ ಧಾರವಾಡ

ನಮ್ಮ ವೀರಶೈವ ಸಮಾಜವು ಧಾರ್ಮಿಕ ಹಾಗೂ ನೈತಿಕ ವಿಚಾರಗಳಲ್ಲಿ ಭಿನ್ನಾಭಿಪ್ರಾಯದಿಂದ ದಿನೇ ದಿನೇ ಹೀನಾವಸ್ಥೆಗೆ ಬರಲಿಕ್ಕೆ ಹತ್ತಿದೆ ಮುಖ್ಯವಾಗಿ ನಮ್ಮ ಸಮಾಜದ ಅಗ್ರಗಣ್ಯರಾದ ಗುರುವರ್ಗದವರು ತಮ್ಮ ಮೇಲಿದ್ದ ಸಮಾಜದ ಜವಾಬ್ದಾರಿಯನ್ನು ತೋರಿಸದೆ ಬಂದುದರಿಂದ ಹೀಗಾಯಿತೆಂದು ಹೇಳಬಹುದು ಈಗ ಆ ಜವಾಬ್ದಾರಿಯು ತಿಳಿದದ್ದರಿಂದ ಮಾಹೇಶ್ವರರ ಏಕೀಕರಣವಿಲ್ಲದೆ ಸಮಾಜ ಸುಧಾರಣೆಯಾಗಲಾರದೆಂದು ತಿಳಿದು ಧಾರವಾಡದಲ್ಲಿದ್ದ ಪ್ರಮುಖ ವೀರಶೈವ ಮಾಹೇಶ್ವರರು ತಾ|| ೨೬ ೬ ೪೫ ನೇ ಮಂಗಳವಾರ ದಿವಸ ೫ ಘಂಟೆಗೆ ಸದರ್ನಮರಾಠಾ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಬಿಲ್ಡಿಂಗಿನಲ್ಲಿ ಇಲ್ಲಿಯ ಎಲ್ಲ ಮಾಹೇಶ್ವರರ ಸಭೆಯನ್ನು ಕರೆದಿದ್ದರು ಸದರಿ ಸಭೆಗೆ ಸರ್ವಾನುಮತದಿಂದ ವೇ|| ಸಿ. ಕೆ. ಒಡೆಯರ ವಕೀಲ ಧಾರವಾಡ ಇವರನ್ನು ಆರಿಸಿ ಅವರ ಅಧ್ಯಕ್ಷತೆಯಲ್ಲಿ ವಿವಿಧ ರೀತಿ ಆಲೋಚನೆಮಾಡಿ ಕಡೆಗೆ ಒಂದು ವೀರಶೈವ ಮಾಹೇಶ್ವರ ಸಂಘಟನ ಸಮಿತಿ ಇರತಕ್ಕದ್ದೆಂದು ಸರ್ವಾನುಮತದಿಂದ ನಿರ್ಣಯಿಸಲ್ಪಟ್ಟಿತು ಅದರ ಕಾರ್ಯಕಲಾಪಗಳನ್ನು ಜರುಗಿಸುವದರ ದೆಸೆಯಿಂದ ಚಾಲಕರನ್ನು ನೇಮಿಸಲಾಯಿತು

ಸಮಿತಿಯ ಉದ್ದೇಶ

೧ ಮಾಹೇಶ್ವರ ವರ್ಗದಲ್ಲಿ ಐಕ್ಯವನ್ನುಂಟು ಮಾಡುವದು

೨ ಅವರ ಧಾರ್ಮಿಕ ಆರ್ಥಿಕ ಸಾಮಾಜಿಕ ಸುಧಾರಣೆಗಳನ್ನು ಕೈಕೊಳ್ಳುವದು

೩ ಮಾಹೇಶ್ವರ ವರ್ಗದವರ ವೈದಿಕ ಶಿಕ್ಷಣ ಪ್ರಗತಿಗೆ ತಕ್ಕ ಏರ್ಪಾಟುಗಳನ್ನು ಮಾಡುವದು

೪ ಈ ಉದ್ದೇಶಗಳನ್ನು ನೆರವೇರಿಸುವದರ ದೆಸೆಯಿಂದ ಕಾಯಂ ನಿಧಿ ಕೂಡಿಸತಕ್ಕದ್ದು

ಅಧ್ಯಕ್ಷರು

ವೇ|| ಚನ್ನವೀರಸ್ವಾಮಿ ಕೆ ಒಡೆಯರ ಬಿ ಎ ಎಲ್ ಎಲ್ ಬಿ ಅಡ್ವೋಕೇಟ್ ಧಾರವಾಡ.

ಉಪಾಧ್ಯಕ್ಷರು

ವೇ|| ವೀರಯ್ಯಸ್ವಾಮಿ ವ್ಹಿ ಶಿವಳ್ಳಿ ವಕೀಲರು

ಕಾರ್ಯನಿರ್ವಾಹಕ ಕಮಿಟಿ

ವೇ|| ಚನ್ನವೀರಸ್ವಾಮಿ ಕೆ ಒಡೆಯರ್ ಚೇರಮನ್, ವೇ ಶಿವಲಿಂಗಶಾಸ್ತ್ರಿಗಳು ಎಸ್ ಕನವಳ್ಳಿ ಹಿರೇಮಠ, ವೇ ಗದಿಗಯ್ಯಸ್ವಾಮಿ ಎ ಹಿರೇಮಠ ಕವಲಾಪುರ ಧಾರವಾಡ ವೇ ರುದ್ರಯ್ಯಸ್ವಾಮಿ ಹಿರೇಮಠ, ವೇ|| ಸಿ ಎಂ ಪಾಟೀಲ (ಅಳವಾಡ ಹಿರೇಮಠ), ವೇ ವೀರಯ್ಯಸ್ವಾಮಿ ಶಿವಳ್ಳಿ, ವೇ ಗುರುಲಿಂಗಶಾಸ್ತ್ರಿಗಳು ಹಿರೇಮಠ, ವೇ ಚಂದ್ರಶೇಖರಸ್ವಾಮಿ ಚಿಕ್ಕಮಠ, ವೇ|| ಚನ್ನಬಸವಯ್ಯ ಗುರುಸ್ಥಳಮಠ ವೇ ಶಾಂತವೀರಸ್ವಾಮಿ ಕಲ್ಮೇಠ

ಗೌರವ ಕಾರ್ಯದರ್ಶಿಗಳು

ವೇ ಚಂದ್ರಶೇಖರಸ್ವಾಮಿ ಚಿಕ್ಕಮಠ, ವೇ ಚನ್ನಬಸವಸ್ವಾಮಿ ಗುರುಸ್ಥಳಮಠ ವೇ ಗುರುಲಿಂಗಯ್ಯನವರು ಹಿರೇಮಠ ಕೋಶಾಧ್ಯಕ್ಷರು (ಪ್ರೆಸಿಡೆಂಟರು ವೇ|| ಚನ್ನಬಸವಸ್ವಾಮಿ ಗುರುಸ್ಥಳಮಠ

ಕೇದಾರಪೀಠದ ಶ್ರೀ ಜಗದ್ಗುರುಗಳು ಲಿಂಗೈಕ್ಯರಾದ್ದರಿಂದ ಅವರ ತರುವಾಯ ವೀರಶೈವ ಮಾಹೇಶ್ವರ ಗುರುಸ್ಥಳದ ಬ್ರಹ್ಮಚಾರಿ ವಿದ್ಯಾವಂತ ವಟುವನ್ನು ಆರಿಸತಕ್ಕದ್ದೆಂದು ಮೈಸೂರು ಮಹಾರಾಜರಿಗೆ ವಿನಂತಿ ಪತ್ರವನ್ನು ಠರಾವನ್ನು ಪಾಸುಮಾಡಿತು

ಇದಾದನಂತರ ವೇ ಶಿವಲಿಂಗಶಾಸ್ತ್ರಿಗಳು ಉಪನ್ಯಾಸ ಮಾಡುತ್ತ—ಹಿಂದಕ್ಕೆ ಸಮಾಜ ಸುಧಾರಣೆಯ ಬಗ್ಗೆ ಸಮಾಜದ ಎಲ್ಲ ಜನರೂ ಕೂಡಿ ಸಭೆಯನ್ನು ಮಾಡುತ್ತಿದ್ದರು ಆದರೆ ಈಗ ಈ ಒಗ್ಗಿಯಾದ ಸಭೆ ಜರುಗಿಸುತ್ತಿರುವದು ಇದೇ ಮೊದಲನೆಯದೆಂದೂ ಇದನ್ನು ಶಾಶ್ವತವಾಗಿ ನಡೆಸಬೇಕೆಂದೂ ಹೇಳಿ ಕಡೆಗೆ ಇದು ಜಯವಾಗಿ ಬೆಳೆಯುತ್ತ ಸರ್ವತ್ರ ಬೆಳಗಲೆಂದ ಹೇಳಿದರು ಆನಂತರ ವೇ|| ವೀರಯ್ಯಸ್ವಾಮಿ ಶಿವಳ್ಳಿ ವಕೀಲರು ಇದೇ ವಿಷಯದಲ್ಲಿ ಭಾಷಣಮಾಡಿ ಬಹು ದಿವಸಗಳಿಂದ ಮಾಹೇಶ್ವರ ಸಂಘವನ್ನು ನಿಯಮಿಸಬೇಕೆಂದಿದ್ದ ನಮ್ಮ ಆಕಾಂಕ್ಷೆಗಳು ಈದಿನ ಈಡೇರಿದವೆಂದು ಹೇಳಿದರು ಕೊನೆಗೆ ಸಭೆಯ ಪ್ರೆಸಿಡೆಂಟರಾದ ವೇ|| ಚನ್ನವೀರಸ್ವಾಮಿ ಒಡೆಯರ ಇವರು ಮಾಹೇಶ್ವರರು ತಮ್ಮ ಆಚಾರ ವಿಚಾರ ನಡೆನುಡಿಗಳನ್ನು ತಿದ್ದಿಕೊಳ್ಳದೆ ಸುಧಾರಣೆಯಾಗಲಾರದೆಂದು ಸಮಯೋಚಿತ ಭಾಷಣಮಾಡಿದರು ಅನಂತರ ಸಭೆಯು ವಿಸರ್ಜಿಸಲ್ಪಟ್ಟಿತು

ಗುರುಲಿಂಗಶಾಸ್ತ್ರಿಗಳು ಹಿರೇಮಠ.

[ಅನಾದಿ ಸಂಸಿದ್ಧ ವೀರಶೈವ ಗುರುವಂಶೀಯ ಶುದ್ಧ ರಕ್ತವನ್ನು ರಕ್ಷಿಸುವದಕ್ಕಾಗಿ ಜನ್ಮವೆತ್ತಿರುವ ಈ ಮಾಹೇಶ್ವರ ಸಂಘವು ತನ್ನ ಧ್ಯೇಯಕ್ಕನುಸಾರವಾಗಿ ಕಾರ್ಯನಿರತವಾಗಲೆಂದು ಹಾರೈಸುತ್ತೇವೆ ಸಂ —]

ಗೋಕರ್ಣ ಕ್ಷೇತ್ರದಲ್ಲಿ ಮಠಸ್ಥಾಪನೆ

ಗೋಕರ್ಣ ಕ್ಷೇತ್ರವು ಪರಮಾತ್ಮನ ಪ್ರಾಣಲಿಂಗವೆಂದು ಪ್ರಸಿದ್ಧವಾದ ಶ್ರೀ ಮಹಾಬಲೇಶ್ವರ ಲಿಂಗದಿಂದ ವಿರಾಜಿಸುತ್ತಿರುವ ವಿಷಯವು ಎಲ್ಲರಿಗೂ ತಿಳಿದೇ ಇದೆ. ಆ ಕ್ಷೇತ್ರದಲ್ಲಿ ವೀರಶೈವ ಯಾತ್ರಿಕರಿಗೆ ಯಾವ ಸೌಕರ್ಯವೂ ಇಲ್ಲದೇ ತೊಂದರೆ ಪಡುತ್ತಿರುವದನ್ನು ಕಂಡು ವೈರಾಗ್ಯಶೀಲರೂ ತಪೋನಿಧಿಗಳೂ ಆದ ಹುಬ್ಬಳ್ಳಿ ಹನ್ನೆರಡು ಮಠದ ಶ್ರೀ ಚರಮೂರ್ತಿಸ್ವಾಮಿಗಳವರು ಅಲ್ಲಿ ಒಂದು ಎಕರೆ ಭೂಮಿಯನ್ನು ಖರೀದಿಗೆ ತೆಗೆದುಕೊಂಡಿರುವರು ಆ ಭೂಮಿಯಲ್ಲಿ ಒಂದು ಮಠ ಮತ್ತು ವಸತಿ ಗೃಹಗಳನ್ನು ಕಟ್ಟಿಸುವದಕ್ಕಾಗಿ ಹುಬ್ಬಳ್ಳಿಯ ಜನರು ಒಂದು ಕಮಿಟಿಯನ್ನು ಮಾಡಿ ಆ ಕಾರ್ಯವನ್ನು ನಡೆಸಿರುವರು ಇದಕ್ಕೆ "ಶ್ರೀ ಗೋಕರ್ಣ ವೀರಶೈವ ಮಠದ ನಿಧಿ" ಎಂಬ ಹೆಸರು ಕೊಡಲ್ಪಟ್ಟಿರುವದು ವೀರಶೈವ ಮತಾಭಿಮಾನಿಗಳೆಲ್ಲರೂ ಇದಕ್ಕೆ ಸಹಾಯ ಮಾಡಬೇಕೆಂದು ಪ್ರಾರ್ಥನೆ ಈಗ ಸಹಾಯಮಾಡಿದ ಮಹನೀಯರ ಹೆಸರುಗಳು—

ಮ|| ರಾ|| ವೀರಭದ್ರಪ್ಪ ವಾಲಿಸೆಟ್ಟರ ಹುಬ್ಬಳ್ಳಿ ೫ ರೂ, ಶ್ರೀಮತಿ ಶಿವಕ್ಕ ಹುಬ್ಬಳ್ಳಿ ೫ ರೂ, ವಿರೂಪಾಕ್ಷಪ್ಪ ಭೂಸದ ೨೦ ರೂ, ಮಲ್ಲಿಕಾರ್ಜುನಯ್ಯ ಗಂಜೀಗಟ್ಟಿ ಹಿರೇಮಠ ೫ ರೂ, ಶ್ರೀಮತಿ ಬಸವಲಿಂಗವ್ವ ಗೋಣಿ ೫ ರೂ, ಗುರುಸಿದ್ದವ್ವ ಶೆಟ್ಟರ ೫ ರೂ, ನಾಗಪ್ಪ ಶಿಗ್ಗಾವಿ ಆದರಗುಂಚಿ ೩ ರೂ, ಕಲ್ಲಪ್ಪ ಆಲಕಟ್ಟಿ ಸಾ|| ಮುಡಿಕಿ ಹೊನ್ನಳ್ಳಿ ೯ ರೂ, ಮುಡಿಕಿ ಹೊನ್ನಳ್ಳಿಯ ಕೆಲವು ಭಕ್ತರು ೫೬-೦ ಗಳು, ಲಿಂಗಪ್ಪ ಕೊಪ್ಪಾಳ ೩ ರೂ, ನಾಗನಗೌಡ ಧೂಳನಗೌಡರ ಕ್ಯಾಲಕೊಂಡ ೩ ರೂ, ಅಡವಯ್ಯ ಹಿರೇಮಠ ಕ್ಯಾಲಕೊಂಡ ೨೫ ರೂ, ದಾವಣಗೆರೆ ಮಹಿಳಾಸಮಾಜದ ಪರಿಯಿಂದ ಶ್ರೀಮತಿ ಗೌರವ್ವನವರು ಹುರಕಡ್ಲಿ ಇವರಿಂದ ೫೮-೩-೦ ಗಳು, ವಿಶ್ವನಾಥಗೌಡ ಉಗರಗೋಳ ೫ ರೂ, ವೇ|| ಚನ್ನಯ್ಯ ಹಿರೇಮಠ ಸವದತ್ತಿ ೫ ರೂ, ಶ್ರೀಮತಿ ಮಧವ್ವ ವೊಡ ಲಾದ ಭಕ್ತರಿಂದ ೨೫ ೧೨ ೦ ಗಳು, ಟಿ ಎಂ ರುದ್ರಯ್ಯ ದಾವಣಗೆರೆ ೧೦ ರೂ, ಮಹಲಿಂಗಯ್ಯ ಹಿರೇಮಠ ದಾವಣಗೆರೆ ೩ ರೂ, ಫಕೀರಪ್ಪ ಕೋಣನ ೧೦ ರೂ, ಶಿವಾನಂದಯ್ಯ ಹಿರೇಮಠ ಶಿಗ್ಗಾವಿ ೫ ರೂ, ಮಹರುದ್ರಪ್ಪ ಕೊಲ್ಹಾಪುರ ೨೫ ರೂ, ಪಕೀರಪ್ಪ ಕೂಲಿ ೨೫ ರೂ, ಪಕೀರಯ್ಯನವರು ಹಿರೇಮಠ ೨೫ ರೂ, ವೀರಪ್ಪ ೫ ರೂ, ಕೊಟ್ರಪ್ಪ ಆರಳಿ ೧೦ ರೂ, ಚನ್ನಬಸಪ್ಪ ಸೊಪ್ಪಣ್ಣನವರ ೩ ರೂ, ಕಲ್ಲಪ್ಪ ಚಿಟಗೇರಿ ಬೀಡನಾಳ ೩ ರೂ, ಚನ್ನಮಲ್ಲಪ್ಪ ಅಸುಂಡಿ ೨೫ ರೂ, ರಾಮಣ್ಣ ಹೆಗ್ಗೂರು, ೭ ರೂ, ಮುದುಕನ್ನ ದೊಣಗನವರ ೧೦ ರೂ, ಚನ್ನಪ್ಪ ಮುಗದ ೫ ರೂ, ಮಲ್ಲಪ್ಪ ಅಡವಿ ೧೦ ರೂ ಗುರಪ್ಪ ಅಸುಂಡಿ ೧೦ ರೂ, ಬಸನಗೌಡ ಜಂಬನಗೌಡರ ೧೦ ರೂ, ಪರವ್ವ ಚಿಂಗೇರಿ ೫ ರೂ ಶಿವಬಸಪ್ಪ ಹಂಚಿನಾಳ ೫ ರೂ, ಇನ್ನುಳಿದ ಭಕ್ತರಿಂದ ಚಿಲ್ಲರೆವಸೂಲಿ ೭ ರೂ

ಈ ನಿಧಿಗೆ ಹಣವನ್ನು ಕಳಿಸತಕ್ಕವರು ಶ್ರೀಗುರುಸಿದ್ಧಯ್ಯನವರು ನರೇಂದ್ರಮಠ ಮುನಿಸಿಪಲ್ ಕೌನ್ಸಿಲರ್ ಹುಬ್ಬಳ್ಳಿ ಇವರ ಹೆಸರಿಗೆ ಕಳಿಸಬೇಕು

ಕಮಿಟಿ ಸೆಕ್ರೆಟರಿ.

ಪುಣ್ಯತಿಥಿ ಸ್ಮಾರಕೋತ್ಸವ

ಧಾರವಾಡ ಡಿ|| ರಾಣೆಬೆನ್ನೂರ ತಾಲ್ಲೂಕು ಬೆಲವಂತರ ಹಿರೇಮಠದ ಲಿಂಗೈಕ್ಯ ಶ್ರೀ ಚೆನ್ನಬಸವೇಶ್ವರ ಶಿವಯೋಗಿಗಳವರ ೧೧ನೇ ಪುಣ್ಯತಿಥಿ ಸ್ಮಾರಕೋತ್ಸವವು ತಾ|| ೭ ೭ ೪೫ನೇ ಶನಿವಾರ ವಾರ್ಷಿಕ ಪದ್ಧತಿಯಂತೆ ಜರುಗಿಸಲ್ಪಟ್ಟಿತು ಅಸಂಖ್ಯ ಜನರಿಗೆ ಅನ್ನಸಂತರ್ಪಣೆ ನಡೆಯಿತು ಆ ದಿವಸ ರಾತ್ರಿ ಕೀರ್ತನಪ್ರವೀಣ ವಿರೂಪಾಕ್ಷಶಾಸ್ತ್ರಿಗಳು ಇಂಗಳಗಿ ಇವರ ಕೀರ್ತನವೂ, ಸುಪ್ರಸಿದ್ಧ ಮಲೆತ್‌ಭಾಯಿ ಬ್ಯಾಡಿಗಿ ಇವರ ಲಾವಣಿ ಪದಗಳೂ, ಮರುದಿವಸ ಸಂಗನಗೌಡರು ಶೀಲವಂತ ಆಲದಕಟ್ಟಿ ಇವರ ಕೀರ್ತನವು ನಡೆದವು. ಸದರಿ ಮಹೋತ್ಸವಕ್ಕೆ ತೊನಿಶಾಳ, ಬಾಡಿಗಿ, ಹುಬ್ಬಳ್ಳಿ, ಹಾವೇರಿ, ಬ್ಯಾಡಿಗಿ,

ತರ್ಲಘಟ್ಟ, ನರಗುಂದ, ಕೂಡಲಗಿ, ಕಲಘಟಗಿ ವಗೈರೆ ಊರುಗಳಿಂದ ಸದ್ಭಕ್ತ ಮಹಾಶಯರು ಆಗಮಿಸಿದ್ದರು ಪುಣ್ಯತಿಥಿಯು ಮಳೆಗಾಲದಲ್ಲಿ ಒರುವದರಿಂದ ಸ್ಮಾರಕ ಮಹೋತ್ಸವಕ್ಕೆ ಆಗಮಿಸುವ ಜನರಿಗೆ ಗೈರಸೋಯಿ ಆಗುವದರಿಂದ ಪುಣ್ಯತಿಥಿ ದಿವಸ ನಡೆಯತಕ್ಕ ಸ್ಮಾರಕೋತ್ಸವವನ್ನು ಇನ್ನುಮುಂದೆ ಪ್ರತಿವರ್ಷ ಚೈತ್ರ ಶುದ್ಧ ಪೌರ್ಣಿಮೆ ದಿನಕ ಜರಗಿಸಬೇಕೆಂದು ಉತ್ಸವಕ್ಕೆ ಆಗಮಿಸಿದ ಸರ್ವಸದ್ಭಕ್ತರಿಂದಲೂ ಸಿದ್ಧರಾಮೇಶ್ವರ ಸ್ವಾಮಿಗಳವರಿಂದಲೂ ನಿರ್ಧರಿಸಲ್ಪಟ್ಟಿತು ಪ್ರತಿವರ್ಷ ಚೈತ್ರ ಶುದ್ಧ ಪೌರ್ಣಿಮೆ ದಿವಸ ಜರಗುವ ಮಹೋತ್ಸವಕ್ಕೆ ಸರ್ವಸದ್ಭಕ್ತ ಮಹಾಶಯರು ಆಗಮಿಸಿ ಸದ್ಗುರು ಸೇವೆಯನ್ನು ಮಾಡಿ ಪುನೀತರಾಗಬೇಕೆಂದು ಕೋರುವ

ಮೂರುಸಾವಿರಪ್ಪ ಹತ್ತಿಕಾಳ
ಹುಬ್ಬಳ್ಳಿ

[೧ನೆಯ ಪುಟದಿಂದ ಮುಂದುವರಿದುದು]

ಜ್ಞಾನಕಾಂಡವು ವೇದದ ಕೊನೆಯಭಾಗವಾಗಿ 'ತಿಲೇಷು ತೈಲವದ್ವೇದೇ ವೇದಾಂತಸ್ಸು ಪ್ರತಿಷ್ಠಿತಃ ಎಂಬ ಮುಕ್ತಿಕೋಪನಿಷತ್ತಿನ ಪ್ರಕಾರ ಎಳ್ಳುಗಳಲ್ಲಿ ಎಣ್ಣೆಯು ಇರುವಂತೆ ವೇದಗಳ ಸಾರವಾದ ಬ್ರಹ್ಮಜ್ಞಾನವನ್ನು ದೃಢವಾಗಿ ಬೋಧಿಸುವದರಿಂದ ವೇದಾಂತವೆಂತಲೂ ಮತ್ತು ಉಪನೀಯ ಮಹಾತ್ಮಾನಂ ಬ್ರಹ್ಮೋಪಾಸ್ತಿ ದ್ವಯಂ ತತಃ ನಿಹಂತ್ಯವಿದ್ಯಾಂತಜ್ಞಾಂ ಚ ತಸ್ಮಾದುಪನಿಷನ್ಮತಂ' ಎಂಬಂತೆ ಬ್ರಹ್ಮನಿಂದಾದುದೆಂದು ತಿಳಿಯಪಡಿಸಿ ಅಜ್ಞಾನವನ್ನು ಆಚೆಗೆ ಓಡಿಸಿ ಬ್ರಹ್ಮತತ್ವವನ್ನು ಬೋಧಿಸುವದರಿಂದ ಉಪನಿಷತ್ತೆಂತಲೂ ಕರೆಯಲ್ಪಡುವದು

ಪ್ರತಿಯೊಂದು ವೇದದ ಹೆಚ್ಚು ಭಾಗವೆಲ್ಲವು ಕರ್ಮವನ್ನೇ ಪ್ರತಿಪಾದಿಸುತ್ತದೆ ಯಜುರ್ವೇದವು ಯಜ್ಞಗಳನ್ನು ಮಾಡುವ ವಿಧಾನಗಳನ್ನೂ, ಋಗ್ವೇದವು ಯಜ್ಞಕಾಲದಲ್ಲಿ ಮಾಡತಕ್ಕ ದೇವತಾಸ್ತೋತ್ರಗಳನ್ನೂ, ಸಾಮವೇದವು ರಾಗದಿಂದ ದೇವತಾಸ್ತೋತ್ರವನ್ನು ಮಾಡುವುದನ್ನೂ ಹೇಳುತ್ತವೆ ಅಥರ್ವಣವೇದವು ಅಭಿಚಾರಿಕ ಕರ್ಮಗಳನ್ನೂ, ಆಯುರ್ವೇದ ಧನುರ್ವೇದ ಮುಂತಾದ ವಿದ್ಯೆಗಳನ್ನೂ, ಅನೇಕ ಕಲೆಗಳನ್ನೂ, ಇನ್ನೂ ಅನೇಕ ವಿಷಯಗಳನ್ನೂ ಹೇಳುತ್ತದೆ ಪ್ರತಿಯೊಂದು ವೇದದಲ್ಲಿಯೂ ಸಂಹಿತೆ, ಬ್ರಾಹ್ಮಣ, ಆರಣ್ಯಕ ಎಂಬ ಮೂರು ಭಾಗಗಳಿವೆ ಇವುಗಳಲ್ಲಿ ಸಂಹಿತೆಯೆಂಬುದು ಯಜ್ಞದೇವತೆಗಳ ಸ್ತೋತ್ರರೂಪವಾದ ಮಂತ್ರಗಳನ್ನು ಹೇಳುತ್ತದೆ ಬ್ರಾಹ್ಮಣ ಎಂಬುವದು ಈ ಮಂತ್ರಗಳ ವಿನಿಯೋಗ ಅಂದರೆ ಉಪಯೋಗವನ್ನು ಹೇಳುತ್ತದೆ ಆರಣ್ಯಕವು ಋಷಿಗಳು ನಿಯಮಪೂರ್ವಕವಾಗಿ ಅರಣ್ಯದಲ್ಲಿ ರಹಸ್ಯವಾಗಿ ಕಲಿಯುತ್ತಿದ್ದ ವೇದದ ಭಾಗವನ್ನು ಹೇಳುತ್ತದೆ ವೇದಗಳ ಕೊನೇ ಭಾಗವಾದ ಉಪನಿಷತ್ತುಗಳಲ್ಲಿ ಕೆಲವು ಸಂಹಿತಾಭಾಗದಲ್ಲಿಯು ಕೆಲವು ಬ್ರಾಹ್ಮಣಭಾಗದಲ್ಲಿಯು, ಕೆಲವು ಆರಣ್ಯಕಭಾಗದಲ್ಲಿಯು ಇರುತ್ತವೆ ಋಗ್ವೇದವು 21 ಶಾಖೆಗಳಾಗಿಯು, ಯಜುರ್ವೇದವು 101 ಶಾಖೆಗಳಾಗಿಯು, ಸಾಮವೇದವು 1000 ಶಾಖೆಗಳಾಗಿಯು ಮತ್ತು ಅಥರ್ವಣವೇದವು 50 ಶಾಖೆಗಳಾಗಿಯು ವಿಭಾಗಿಸಲ್ಪಟ್ಟು ಪ್ರತಿಯೊಂದು ಶಾಖೆಯಲ್ಲಿಯೂ ಒಂದೊಂದು ಉಪನಿಷತ್ತಿರುತ್ತದೆ ಅವುಗಳಲ್ಲಿ ಮುಖ್ಯವಾಗಿ 108 ಉಪನಿಷತ್ತುಗಳು ಶ್ರೇಷ್ಠವಾಗಿವೆ ಇವುಗಳಲ್ಲಿ ಈಶ, ಕೇನ, ಕಠ, ಪ್ರಶ್ನ, ಮುಂಡಕ, ಮಾಂಡೂಕ್ಯ ಐತರೇಯ ತೈತ್ತರೇಯ, ಬೃಹದಾರಣ್ಯ, ಛಾಂದೋಗ್ಯ ಎಂಬ ಹತ್ತು ಉಪನಿಷತ್ತುಗಳು ಪ್ರಧಾನವಾಗಿವೆ

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬರೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ವೀರಶೈವಮತದಲ್ಲಿ ಸದ್ಯಃ ದೊರಿಯತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು ಈ ಗ್ರಂಥವು ಈಗ್ಗೆ ಸುಮಾರು **೫ಸಾವಿರ** ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿದವದು ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಅದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ ಈ ಕೊರತೆಯನ್ನು ಪೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥ ಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ವಾಚಕರಿಗೆ ವೇದ್ಯವಾಗುವುದು. ವಾಚಕರ ಅನುಕೂಲಕ್ಕಾಗಿ ಬಹುಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ ಈ ಗ್ರಂಥವು ಒಟ್ಟು ೩೩೨ ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೨ ರೂಪಾಯಿ.**

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾರ (೩ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ–ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ, ಚಿಕ್ಕಸೈಜು)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು ೨ನೆಯ ಆವೃತ್ತಿ)	೧| ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧|| ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧|| ರೂ
ವೀರಶೈವರತ್ನ (೫ನೆಯ ಆವೃತ್ತಿ ೬೦ ಮಹತ್ವದ ಫೋಟೋಗಳಿರುವುವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾನುವಾದ)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	4 As.
The Philosophical Aspect of Virasaivism (*English*)	8 As
Speeches by Pandit Shri Kashinatha Shastriji (*English*)	12 As
लिंगधारणचंद्रिका (संस्कृत)	३ रु
वीरशैवरत्न (मराठी)	१ रु.
महानारायणोपनिषत् (वीरशैवभाष्य-संस्कृत)	१ रु.
सिद्धांतशिखामणि (मूल)	८ आ.
नंदिकेश्वरकारिका (संस्कृत)	२ आ

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

EGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ॥

ಳದವರಿಗೆ ೨ ರೂ ೪ ಆಣೆ ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೧೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೩ನೇ ಜುಲೈ ೧೯೪೫ [ಸಂಚಿಕೆ ೧೦

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಪ್ರಾತಃಪಠನೀಯ ಶ್ರೀಜಗದ್ಗುರು ಪಂಚಾಚಾರ್ಯ ಪದ್ಯರತ್ನಪಂಚದಶೀ

ತರ್ನಮಾಮಿ ಸತತಂ ಶಿವತತ್ತ್ವರೂಪಂ ।
ಮಜ್ಜಗದ್ಗುರುದಯಾನಿಧಿರೇಣುಕಾರ್ಯಂ ॥
ವೀರಶೈವಮತಮೂಲಮನೇಕಲೀಲಂ ।
ಮೇಶಲಿಂಗಜನುಷಂ ಶ್ರಿತಶಿಷ್ಯಪಾಲಂ ॥೧॥

ತರ್ಭಜಾಮಿ ಸತತಂ ಶ್ರಿತಪಾಪನಾಶಂ ।
ಶಸಂಭವಜಗದ್ಗುರುದಾರುಕೇಶಂ ॥
ಸಾರಸಾಗರಮಹಾಪ್ಲವಸನ್ನಿಕಾಶಂ ।
ಗಾಂಗಸಂಗವಿಧಿಬೋಧಕಮಾಶಕಾಶಂ ॥೨॥

ತಃ ಸ್ತವೀಮಿ ಸತತಂ ಶಿವಕಾಯಮೇಕೋ ।
ಮಂ ಜಗದ್ಗುರುಮುದಾರಗುಣಾಭಿರಾಮಂ ॥
ಭೀಮನಾಥ ಶಿವಲಿಂಗಸಮುದ್ಭವಂ ಶ್ರೀ ।
ರಾಗ್ಯಪೀಠಪತಿಮಾನತಭೀತಿನಾಶಂ ॥೩॥

ತಃ ಸ್ಮರಾಮಿ ಹೃದಿ ಸಂತತಮಾತರೂಪಂ ।
ಮಜ್ಜಗದ್ಗುರುಮಹಾಗಿರಿಪಂಡಿತಾರ್ಯಂ ॥
ಮಲ್ಲಿಕಾರ್ಜುನಭವಂ ಭವತಾಪಶಾಂತ್ಯೈ ।
ಪನ್ನೈಕನಿರತಂ ಭುವನಪ್ರಸಿದ್ಧಂ ॥೪॥

ತಃ ಸದೈವ ವಿಬುಧಾನತಪಾದವಿಶ್ವಾ ।
ಮ್ಯಂ ಜಗದ್ಗುರುಮಪಾರದಯಾಸಮುದ್ರಂ ॥
ಯೇಽಖಿಲಾಮಯಹರಂ ಧೃತದಿವ್ಯದೇಹಂ ।
ಶಲಿಂಗಭವಮಾರ್ತಜನಾರ್ತಿನಾಶಂ ॥೫॥

ತಃ ಪಠಾಮಿ ಶುಭನಾಮ ಜಗದ್ಗುರೂಣಾಂ ।
ಂದಮುಖ್ಯಮುನಿಪುಂಗವಗೀಯಮಾನಂ ॥
ಪ್ರಾತಕೋ ದಿವಿಜದಾನವಮಾನವಾನಾಂ ।
ರ್ಪದಾವಲಿರಲಂ ಪ್ರಶಮಂ ಪ್ರಯಾತಿ ॥೬॥

ಪ್ರಾತಃ ಶೃಣೋಮಿ ಚರಿತಂ ನಿಗಮಾಗಮೋಕ್ತಂ ।
ವ್ಯಾಸಾದಿಯೋಗಿವಿನುತಂ ಚ ಜಗದ್ಗುರೂಣಾಂ ॥
ಶ್ರುತ್ವಾ ಹಿ ಯದ್ದುರಿತರಾಶಿಮಪೋಹ್ಯ ಲೋಕಾಃ ।
ಸಂಶೇರತೇ ಶಿವಪುರಂ ಸಹ ಬಂಧುವರ್ಗೈಃ ॥೭॥

ಪ್ರಾತರ್ಯಜಾಮಿ ಜಗತೀಗುರುಪಾದಪದ್ಮಂ ।
ಸಂಸಾರತಾಪಶಮನಂ ನಿಜಶಾಂತಿಸದ್ಮ ॥
ಪದ್ಮೋದ್ಭವಾದ್ಯಮರವಾರಕಿರೀಟರತ್ನ
ದಿವ್ಯಪ್ರಭಾಪಟಲಭಾಸುರಮಾತ್ತಶೋಭಂ ॥೮॥

ಪ್ರಾತಃ ಪಿಬಾಮಿ ಭವರೋಗಮಹೌಷಧಂ ಶ್ರೀ ।
ಪಾದೋದಕಂ ಪ್ರಥಿತಪಂಚಜಗದ್ಗುರೂಣಾಂ ॥
ಯತ್ಪಾನತೋ ನಿಖಿಲಜನ್ಮಸಮರ್ಜಿತಾನಿ
ತ್ರೈಕಾಲಿಕಾನಿ ದುರಿತಾನಿ ಶಮಂ ಪ್ರಯಾಂತಿ ॥೯॥

ಸೇವೇಽನಿಶಂ ಸಕಲಶುದ್ಧಿವಿಶುದ್ಧಿಹೇತುಂ ।
ಶುದ್ಧಾತಿಶುದ್ಧಿಕರಪಂಚಜಗದ್ಗುರೂಣಾಂ ॥
ಶುದ್ಧಂ ಪ್ರಸಾದಮಪಿ ಸಿದ್ಧಮಥ ಪ್ರಸಿದ್ಧಂ ।
ಶುದ್ಧಾತ್ಮನಾಂ ಸುಲಭಮುನ್ನತಪುಣ್ಯಭೂತಿಂ ॥೧೦॥

ಜಿಘ್ರಾಮಿ ಸಂತತಮಹಂ ನಿಜಭಕ್ತಿಭಾವಾತ್ ।
ನಿರ್ಮಾಲ್ಯಪುಷ್ಪಮಪಿ ಪಂಚಜಗದ್ಗುರೂಣಾಂ ॥
ಚಿಂತಾಮಣೇಃ ಸುರತರೋಃ ಸುರಧಾಮಧೇನೋಃ ।
ಯದ್ದಾತುಮರ್ಹತಿ ಫಲಂ ಪರಮಂ ಪ್ರಶಾಂತಂ ॥೧೧॥

ಪಶ್ಯಾಮಿ ಸಂತತಮಹಂ ಪರಮಪ್ರಕಾಶಂ ।
ರುದ್ರಾಕ್ಷಭಸ್ಮ ಶಿವಲಾಂಛನಶೋಭಮಾನಂ ॥
ಬ್ರಹ್ಮಾಂಡಮೋಹನಕರಂ ಶಿವಭಾವಪೂರ್ಣಂ ।
ರೂಪಂ ತ್ರಿತಾಪಹರಪಂಚಜಗದ್ಗುರೂಣಾಂ ॥೧೨॥

ನಿತ್ಯಂ ವಸಾಮಿ ನಿರಘೇ ನಿಜದಿವ್ಯಧಾಮ್ನಿ ।
ಸಚ್ಚಿತ್ಸುಖಾತ್ಮನಿ ಜಗದ್ಗುರುಸನ್ನಿಧಾನೇ ॥
ಯತ್ಸೇವನೇನ ಸುಧಿಯೋಽಧಿಕಮಾವಹಂತಿ ।
ಕೈವಲ್ಯತಃ ಸುಖಮನಂತಗುಣಪ್ರಧಾನಂ ॥೧೩॥

ಸರ್ವಾರ್ಥಸಿದ್ಧಿಕರಪಂಚಜಗದ್ಗುರೂಣಾಂ ।
ಸುಸೇವನಂ ಸಕಲಜನ್ಮಸು ಸರ್ವಕಾಲಂ ॥
ಸರ್ವತ್ರ ಸಂವಸತು ಮೇ ಹೃದಿ ವಾಚಿ ಕಾಯೇ ।
ಸದ್ಭಾವನಾಪರವಶಸ್ಯ ವಿಮೂಢಬುದ್ಧೇಃ ॥೧೪॥

ಯೈಃ ಸ್ಥಾಪಿತಂ ಭುವಿ ಮತಂ ವರವೀರಶೈವಂ ।
ಯೇಷಾಮಪಾರಮಹಿಮಾಬ್ಧಿರಲಂಘನೀಯಃ ॥
ತೇಷಾಮನುಗ್ರಹವಶಾತ್ಸಕಲೇಷ್ಟಸಿದ್ಧಿ ।
ರ್ಭೂಯಾದಿತಿ ಪ್ರಥಿತಮೇವ ಧರಾತಲೇಽಸ್ಮಿನ್ ॥೧೫॥

ಶ್ರೀಮುಕ್ತಿಮಂದಿರನಿವಾಸಪರೇಣ ಭಕ್ತ್ಯಾ ।
ಗಂಗಾಧರೇಣ ಗುಣರತ್ನಗಣೋಜ್ಜ್ವಲೇನ ॥
ನವ್ಯಾಂತರೇಣ ನುತಿಪಂಚದಶೀಯಮುಕ್ತಾ ।
ಪಠ್ಯಾಂತರೇಣ ಪರತಾಂ ಪ್ರದದಾತಿ ಪುಣ್ಯಾಂ ॥೧೬॥

ಪದ್ಯಾನಿ ಹೃದ್ಯಾನಿ ಜಗದ್ಗುರೂಣಾಂ ।
ಯೇ ಭಕ್ತಿಭಾವೇನ ಪಠಂತ್ಯನನ್ಯಾಃ ॥
ತೇ ಯಾಂತಿ ಭುಕ್ತಿಂ ಭುವಿ ಸತ್ಯಮೇವ ।
ಸಾಯುಜ್ಯಮಂತೇ ಶ್ರುತಿಸಿದ್ಧಮೇತತ್ ॥೧೭॥

ಪ್ರಕಾಶಕಃ
ಪಿ ಯಂ ಗಂಗಾಧರಶರ್ಮಾ.

ಮಾಪನೂರಿನ ಶ್ರೀ ರೇವಣಸಿದ್ಧೇಶ್ವರ ದೇವಾಲಯ

ಭೀಮಾನದಿಯ ತೀರದ ರಮ್ಯ ಕ್ಷೇತ್ರಗಳಲ್ಲಿ ಪಂಢರಪುರದಂತೆ ಮಾಪನೂರಿನ ಶ್ರೀ ರೇವಣಸಿದ್ಧೇಶ್ವರ ದೇವಾಲಯವೂ ಒಂದಾಗಿರುವದು ಈ ಕ್ಷೇತ್ರವು ಪಂಢರಪುರಕ್ಕೆ ಸಮೀಪವಾಗಿರುವದು ನೂರಾರು ಮೈಲಿಗಳ ದೂರದಿಂದ ಭಕ್ತಾದಿಗಳು ಸೇವೆಗಾಗಿ ಅಲ್ಲಿಗೆ ಬರುತ್ತಿರುವರು ಶ್ರೀ ರೇವಣಸಿದ್ಧರು ಲೋಕಕಂಟಕವೆನಿಸಿದ ಯಕ್ಷಮಿಥುನವನ್ನು ತಮ್ಮ ಫಾಲನೇತ್ರದಿಂದ ದಹಿಸಿದ್ದೂ, ಅಯಃಪಿಂಡಗಳಾದ ಅವೆರಡರಿಂದ ಎರಡು ಖಡ್ಗಗಳನ್ನು ಮಾಡಿಸಿ ಮಡುವಿನಲ್ಲಿಟ್ಟದ್ದೂ, ಖಡ್ಗದ ದೆಸೆಯಿಂದ ಸಂಭವಿಸಿದ ೧೨ ಸಾವಿರ ಕನ್ಯೆಯರನ್ನು ಪ್ರಾಣಸಂಕಟದಿಂದ ಮುಕ್ತಗೊಳಿಸಿ ಖರ್ಪರಜೋಗಿಯ ಗರ್ವಹರಣವನ್ನು ಮಾಡಿದ್ದೂ ಈ ಸ್ಥಲದಲ್ಲಿಯೇ! ಖಡ್ಗವನ್ನಿಟ್ಟ ಮಡುವಿನಲ್ಲಿ ಈಗ ಜಟಾಶಂಕರಲಿಂಗನ ಚಿಕ್ಕ ಗುಡಿಯಿರುತ್ತದೆ ವಿವೇಚಿಸಿ ನೋಡಿದರೆ ಈ ಭಾಗದ ಪ್ರದೇಶವು ಸಿದ್ಧಸಾರ್ವಭೌಮನ ಲೀಲಾರಂಗಭೂಮಿಯೆಂದೇ ಹೇಳಬಹುದು ಏಕೆಂದರೆ ಅವರು ಲೀಲೆ ನಡೆಸಿದ ಸ್ಥಾನಗಳಾದ ಮಂಗಳವೇಢೆ, ಸಿದ್ಧನಕೆರೆ, ಸೋಲಾಪುರ, ಉಂಬರಜೆ ಮೊದಲಾದವುಗಳು ಸುತ್ತಲೂ ಸಮೀಪವಾಗಿ ಸುತ್ತಿಕೊಂಡಿರುವದೇ ಸಾಕ್ಷಿಯಾಗಿರುವದು. ದೇವಾಲಯದ ಕಟ್ಟಡವು ರಾಜಮಂದಿರದಂತೆ ಬಹು ವಿಶಾಲವೂ ಭವ್ಯವೂ ಆಗಿದೆಯಲ್ಲದೆ

[೩ನೆಯ ಪುಟವನ್ನು ನೋಡಿ]

ಪಂಚಾಚಾರ್ಯಪ್ರಭಾ.

೧೯೪೫ನೆಯ ಜುಲೈ ತಾ|| ೨೩ ನೇ ಸೋಮವಾರ

ಶಿವದೀಕ್ಷಾ

ವೀರಶೈವಮತದಲ್ಲಿ ಜನ್ಮಧಾರಣಮಾಡಿದವನು ಶಿವದೀಕ್ಷೆಯನ್ನು ಪಡೆದು ಶಿವಲಿಂಗವನ್ನು ಧರಿಸಿಕೊಂಡು ಅಷ್ಟಾವರಣ ಪಂಚಾಚಾರ ಷಟ್‌ಸ್ಥಲಗಳೆಂಬ ನಿಯಮಿತಾಚಾರಗಳಲ್ಲಿ ನಿಷ್ಠನಾಗಿರಬೇಕು. ವೀರಶೈವ ಎಂಬ ಮಹಾವೃಕ್ಷಕ್ಕೆ ಬೀಜಭೂತವಾದ ಶಿವದೀಕ್ಷೆಯನ್ನು ಯಾರು ಹೊಂದುವುದಿಲ್ಲವೋ ಅವರು ತಮ್ಮ ದೇಹದಲ್ಲಿ ಶಿವಲಿಂಗವನ್ನು ಧರಿಸಲು ಯೋಗ್ಯರಾಗವುದಿಲ್ಲ. ಭೂಮಿಯು ಹಸನಾಗಬೇಕಾದರೆ ಹದವರಿತು ಉತ್ತು ಸ್ವಚ್ಛಗೊಳಿಸಬೇಕು. ಕಸಕಡ್ಡಿಗಳಿಂದ ದೂಷಿತವಾದ ಭೂಮಿಯಲ್ಲಿ ಬೀಜವನ್ನು ಬಿತ್ತಿ ಪೈರು ತೆಗೆಯುವುದು ಸಾಧ್ಯವಿಲ್ಲ. ಈ ದೇಹವೆಂಬ ಭೂಮಿಯು ಅನೇಕ ದೋಷಗಳಿಂದ ಕಶ್ಮಲವಾಗಿಹೋಗಿರುತ್ತದೆ. ಈ ದೋಷಗಳು ಎಲ್ಲಿಯವರೆಗೆ ಇರುತ್ತವೆಯೋ ಅಲ್ಲಿಯವರೆಗೂ ಭಗವತ್ಸ್ವರೂಪಿಯಾದ ಶಿವಲಿಂಗವನ್ನು ಧರಿಸುವುದಕ್ಕಾಗಲಿ ಪೂಜಿಸುವುದಕ್ಕಾಗಲಿ ಈ ದೇಹಕ್ಕೆ ಅರ್ಹತೆ ಇಲ್ಲ. ಆದುದರಿಂದಲೇ ವೀರಶೈವ ತತ್ವಾನುಸಾರಿಗಳು ದೇಹಶುದ್ಧಿಗಾಗಿಯೂ ಆ ದೇಹದಲ್ಲಿರುವ ಆತ್ಮಶುದ್ಧಿಗಾಗಿಯೂ ಕಾಲನಿಯಮವನ್ನನುಸರಿಸಿ ತಮ್ಮ ತಮ್ಮ ಗೋತ್ರಗುರುಗಳಿಂದ ಶಾಸ್ತ್ರೀಯವಾದ ದೀಕ್ಷಾಸಂಸ್ಕಾರವನ್ನು ಪಡೆಯಬೇಕೆಂದು ಹೇಳಿರುವರು.

> ಗರ್ಭಾಷ್ಟಮೇ ಕೃತಾ ದೀಕ್ಷಾ ವರ್ಷೇ ಷೋಡಶ ವಾ ಪುನಃ |
> ಗೌಣೇ ತದೂರ್ಧ್ವಮಧಮಾ ದೀಕ್ಷಾ ... ||

ಹುಟ್ಟಿದ ಎಂಟನೆಯ ವರ್ಷದಲ್ಲಿ ದೀಕ್ಷೆಯನ್ನು ಮಾಡುವದು ಉತ್ತಮಪಕ್ಷವು. ಹದಿನಾರು ವರ್ಷದೊಳಗಾಗಿ ಮಾಡುವುದು ಮಧ್ಯಮಪಕ್ಷವು. ಅದನ್ನತಿಕ್ರಮಿಸಿ ಮಾಡುವದು ಅಧಮಪಕ್ಷವು ಎಂದು ಕಾಲನಿಯಮ ಮಾಡಿರುವರು.

> ಯೋ ಹಸ್ತಪೀಠೇ ನಿಜಮಿಷ್ಟಲಿಂಗಂ ವಿನ್ಯಸ್ಯ ತಲ್ಲೀನಮನಃಪ್ರಚಾರಃ | ಬಾಹ್ಯಕ್ರಿಯಾಸಂಕುಲನಿಸ್ಪೃಹಾತ್ಮಾ ಯಃ ಪೂಜಯತ್ಯಂಗ ಸ ವೀರಶೈವಃ ||

ಎಂಬ ಶಂಕರಸಂಹಿತಾವಚನವೂ ಸಹ ಹಸ್ತದಲ್ಲಿ ಶಿವಲಿಂಗವನ್ನಿರಿಸಿ ಯಾವಾಗಲೂ ಪೂಜಿಸುತ್ತಿರುವವನೇ ವೀರಶೈವನೆಂದು ಹೇಳುತ್ತದೆ. ಇಂಥ ಲಿಂಗಧಾರಣಾತ್ಮಕವಾದ ಶಿವದೀಕ್ಷೆಯನ್ನು ಮಾಡಿಕೊಳ್ಳದೆ ಕೆಲವರು ಸುಮ್ಮಸುಮ್ಮನೆ ವೀರಶೈವರೆಂದು ಹೇಳಿಕೊಳ್ಳುತ್ತಲಿದ್ದಾರೆ. ಇನ್ನು ಕೆಲವರು ಹುಟ್ಟಿದಾಗಲೇ ಗುರುಗಳು ಲಿಂಗಧಾರಣರೂಪವಾದ ಗರ್ಭದೀಕ್ಷೆಯನ್ನು ಮಾಡಿರುತ್ತಾರೆ, ಅದರ ಮೇಲೆ ಪುನಃ ದೀಕ್ಷೆಮಾಡಿಕೊಳ್ಳುವುದೇಕೆಂದು ವಾದಿಸುತ್ತಿರುವರು. ಈ ವಾದವು ಶಾಸ್ತ್ರಕ್ಕೂ ಯುಕ್ತಿಗೂ ಅನುಭವಕ್ಕೂ ಅತ್ಯಂತ ವಿರೋಧವಾಗುತ್ತದೆ. ಗರ್ಭದಲ್ಲಿರುವಾಗ ಶಿಶುವಿಗೆ ಮಾಡಲ್ಪಡುವ ದೀಕ್ಷೆಯಾದರೋ ಅಸ್ಪಷ್ಟದೀಕ್ಷೆಯೇ ಹೊರತು ಸ್ಪಷ್ಟದೀಕ್ಷೆಯಲ್ಲ. ಪಿಂಡದಲ್ಲಿ ಆತ್ಮನು ಎಂದು ಉದ್ಬೋಧವಾಗುವನೋ ಅಂದಿನಿಂದಲೂ ಪಿಂಡದಲ್ಲಿ ಉದಯಿಸಿದ ಆತ್ಮನು ಈ ಲಿಂಗವನ್ನಾರಾಧಿಸಿಯೇ ಮುಕ್ತಿಯನ್ನು ಪಡೆಯಬೇಕಲ್ಲದೆ ಇನ್ನೊಂದನ್ನಾರಾಧಿಸಲಾಗದೆಂದು ನಿಯಮಗೊಳಿಸುವುದಕ್ಕಾಗಿ ಗುರುವು ಶಾಸ್ತ್ರನಿಯಮಾನುಸಾರ ಪಂಚಸೂತ್ರಘಟಿತವಾದ ಶಿವಲಿಂಗವನ್ನು ಶಿಶುವಿನ ತಾಯಿಯ ಅಧೀನದಲ್ಲಿ ಕೊಟ್ಟಿರುತ್ತಾನೆ. ಈ ಲಿಂಗವು ಸಂಪೂರ್ಣ ಕಲೆಗಳಿಂದ ಕೂಡದಿರುವುದರಿಂದಲೂ ಆ ಲಿಂಗವು ಕೇವಲ ಸುಷುಪ್ತಾವಸ್ಥೆಯಲ್ಲಿರುವುದರಿಂದಲೂ ಶಿಶುವು ಅಜ್ಞಾನಾವಸ್ಥೆಯಲ್ಲಿರುವುದರಿಂದಲೂ ಗರ್ಭದೀಕ್ಷೆಯು ಮತದ ಒಂದು ಸೂಚನೆಯನ್ನು ಮಾತ್ರ ತೋರಿಸತಕ್ಕದ್ದಾಗಿರುವದು. ಮುಂದೆ ಶಿಶುವಿಗೆ ಎಂಟು ವರ್ಷಗಳು ತುಂಬಿ ಜ್ಞಾನೋದಯವಾದ ಮೇಲೆ ಗುರುವು ಸುಷುಪ್ತಾವಸ್ಥೆಯಲ್ಲಿರುವ ಅದೇ ಲಿಂಗಕ್ಕೆ ಸಂಪೂರ್ಣ ಸಂಸ್ಕಾರಾದಿಗಳನ್ನು ಮಾಡಿ ವೇಧಾದಿತ್ರಿವಿಧದೀಕ್ಷೆಗಳಿಂದ ಆ ಶಿಷ್ಯನ ಅಂಗವನ್ನು ಸಂಸ್ಕರಿಸಿ ಅಂಗವೆಂಬ ದೇವಾಲಯದಲ್ಲಿ ಲಿಂಗವನ್ನು ಸ್ಥಿರಗೊಳಿಸಿ ಆ ಲಿಂಗದ ನೆಲೆಕಲೆಗಳನ್ನರುಹಿ ಶಿಷ್ಯನನ್ನು ನಿಯಮಬದ್ಧನನ್ನಾಗಿ ಮಾಡುವನು. ಆಗ ಈ ಸಂಸ್ಕಾರಬಲದಿಂದ ಶಾಣೋಲ್ಲೀಢವಾದ ವಜ್ರದಲ್ಲಿ ಪ್ರಕಾಶವು ವ್ಯಕ್ತವಾಗುವಂತೆ ಅವ್ಯಕ್ತವಾಗಿದ್ದ ಬ್ರಹ್ಮತೇಜಸ್ಸು ಆತನ ಮುಖದಲ್ಲಿ ಮೆಲ್ಲಮೆಲ್ಲಗೆ ಪ್ರಕಾಶಿಸುತ್ತ ಬರುವದು. ಪ್ರಪಂಚದಲ್ಲಿ ಪ್ರತಿಯೊಂದು ವಸ್ತುವೂ ಒಂದೊಂದು ವಿಧವಾದ ಸಂಸ್ಕಾರದಿಂದ ಪ್ರಕಾಶವನ್ನು ಹೊಂದಿ ಕಾರ್ಯೋಪಯೋಗಿಯಾಗುವುದನ್ನು ನಾವು ಪ್ರತ್ಯಕ್ಷವಾಗಿ ನೋಡುತ್ತಲಿದ್ದೇವೆ. ಇನ್ನು ದೇಹಕ್ಕೂ ದೇಹದಲ್ಲಿರುವ ಆತ್ಮಕ್ಕೂ ಸಂಸ್ಕಾರವಿಲ್ಲವೆಂದು ಹೇಳುವುದಕ್ಕೆ ಹೇಗೆತಾನೆ ಆದೀತು? ಪ್ರತಿಯೊಬ್ಬ ಆಸ್ತಿಕಮತೀಯನೂ ದೇಹಶುದ್ಧಿಸಾಧನವೂ ಆತ್ಮಶುದ್ಧಿಸಾಧನವೂ ಆದ ಸಂಸ್ಕಾರವನ್ನು ಅವರವರ ಗುರುಗಳಿಂದ ಪಡೆಯಲೇಬೇಕು. ಈ ಸಂಸ್ಕಾರವು ಅವರವರ ಮತಾನುಸಾರವಾಗಿ ಉಪಾಸ್ಯದೇವತಾಭೇದದಿಂದ ಸ್ವಲ್ಪ ಸ್ವಲ್ಪ ಭೇದವನ್ನು ಹೊಂದಿರುತ್ತದೆ. ಬ್ರಾಹ್ಮಣನಾಗಲಿ, ಕ್ಷತ್ರಿಯನಾಗಲಿ, ವೈಶ್ಯನಾಗಲಿ ಈ ಸಂಸ್ಕಾರವನ್ನು ಪಡೆಯಬೇಕೆಂದೂ, ಶೂದ್ರನಿಗೆ ಮಾತ್ರ ಸಂಸ್ಕಾರವಿಲ್ಲವೆಂದೂ ಹೇಳುವುದೇ ಇತರ ಮತಗಳ ಸ್ವಭಾವವಾಗಿದೆ. ಆದರೆ ವೀರಶೈವಮತದಲ್ಲಿ ನಾಲ್ಕು ವರ್ಣದವರಿಗೂ ಅವರವರ ವರ್ಣಾನುಸಾರವಾಗಿ ದೀಕ್ಷೆಯು ಹೇಳಲ್ಪಟ್ಟಿದೆ. ದ್ವಿಜನಿಗೆ ಷಡಧ್ವಶೋಧನಪೂರ್ವಕವಾದ ದೀಕ್ಷೆಯು ಉಕ್ತವಾಗಿದೆ. ಶೂದ್ರನಿಗೆ ಅದು ಹೇಳಲ್ಪಟ್ಟಿರುವುದಿಲ್ಲ.

> ಶ್ವೇತಂ ರಕ್ತಂ ತಥಾ ಪೀತಂ ಕೃಷ್ಣಂ ಚೇತಿ ಚತುರ್ವಿಧಂ |
> ವಿಪ್ರಾದಿ ನಾಂ ... ಯಥಾಕ್ರಮಂ ||

ಬ್ರಾಹ್ಮಣನಿಗೆ ಶ್ವೇತಲಿಂಗಧಾರಣವೂ, ಕ್ಷತ್ರಿಯನಿಗೆ ರಕ್ತಲಿಂಗಧಾರಣವೂ ವೈಶ್ಯನಿಗೆ ಪೀತಲಿಂಗಧಾರಣವೂ ಶೂದ್ರನಿಗೆ ಕೃಷ್ಣಲಿಂಗಧಾರಣವೂ ಹೀಗೆ ಆಯಾಯ ವರ್ಣದವರು ಆಯಾ ವರ್ಣದ ಲಿಂಗಗಳನ್ನೇ ಧರಿಸಬೇಕೆಂದು ಕ್ರಿಯಾಸಾರಾದಿ ಗ್ರಂಥಗಳಲ್ಲಿ ಹೇಳಲ್ಪಟ್ಟಿರುವುದು. ಈ ರೀತಿ ಧರ್ಮಗ್ರಂಥಗಳಲ್ಲಿ ವರ್ಣವಿಭಾಗವು ನಾನಾ ರೀತಿಯಿಂದ ಉಕ್ತವಾಗಿದ್ದರೂ ಈ ಕಾಲದ ಜನರು ಅದನ್ನು ಅಲ್ಲಗಳೆಯುತ್ತ ನಾಸ್ತಿಕರಿಗಿಂತಲೂ ನಾಸ್ತಿಕರಾಗಿ ವರ್ತಿಸಹತ್ತಿರುವದನ್ನು ನೋಡಿದರೆ ಈ ಮತದ ದುರ್ದೈವಕ್ಕೆ ಎಣೆಯೇ ಇಲ್ಲವೆಂದು ಹೇಳಬೇಕಾಗುತ್ತದೆ. ಈ ಜನರ ಸಮಾವೇಶದಿಂದ ಉತ್ತಮ ವರ್ಣದವರಿಗೂ ಸಹ ಗೌರವವಿಲ್ಲದಾಗಿದೆ. ಜಗದೀಶ್ವರನು ಈ ವಿಧವಾದ ಜನರಿಗೆ ಸದ್ಬುದ್ಧಿಯನ್ನನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ.

ಯುದ್ಧವಾರ್ತೆ.

ಆಗ್ನ್ಯುತ್ಪಾದಕ ಬಾಂಬಿನ ಮಳೆ

ಕಳೆದ ೧೭ ನೆಯ ತಾರೀಖು ಅಮೆರಿಕನ್ ಸೂಪರ್ ಫೋರ್‍ಟ್ರೆಸ್ ವಿಮಾನಗಳು ಜಪಾನಿನ ಹೊನ್ಷು ವಿಭಾಗದ ಮೂರು ನಗರಗಳ ಮೇಲೆ ಭೀಕರ ದಾಳಿ ನಡೆಯಿಸಿದುವು. ಕ್ಯೂಷ್ಯೂದಲ್ಲಿರುವ ಒಂದು ಪಟ್ಟಣದ ಮೇಲೂ ದಾಳಿ ನಡೆಯಿತು. ಸುಮಾರು ೫೦೦ ವಿಮಾನಗಳು ಈ ದಾಳಿಯಲ್ಲಿ ಭಾಗವಹಿಸಿದ್ದುವು. ಭಾರಿ ಆಗ್ನ್ಯುತ್ಪಾದಕ ಬಾಂಬುಗಳು ಬಿದ್ದವು. ಸುಮಾರು ೩೫೦೦ ಟನ್ನಿನಷ್ಟು ಬಾಂಬು ವೃಷ್ಟಿಯಾಯಿತೆಂದು ಹೇಳಲಾಗಿದೆ.

ಜಪಾನ್ ಶರಣಾಗತಿಯ ವಿಚಾರ ವಿಮರ್ಶೆ

ಈಗ ಜರ್ಮನಿಯಲ್ಲಿ ತ್ರಿಮೂರ್ತಿಗಳ ಸಮ್ಮೇಳನವು ಬಹಳ ತ್ವರಿತದಿಂದ ನಡೆಯುತ್ತಿದೆ. ಜಪಾನು ಪೂರ್ಣ ಶರಣಾಗುವುದಾಗಿ ತಿಳಿಸಿದ ವಿಚಾರವನ್ನೂ ರಷ್ಯವು ಜಪಾನಿನ ವಿರುದ್ಧ ಯುದ್ಧ ಹೂಡುವ ವಿಷಯವನ್ನೂ ಚರ್ಚಿಸುವರೆಂಬ ಸುದ್ದಿ ಬಲವಾಗಿದೆ. ಜಪಾನು ಶರಣಾಗುವ ವಿಚಾರವಾದ ಕರಾರು ಮಾ|| ಸ್ಟಾಲಿನ್‌ರ ಕೈಗೆ ಆಗಲೇ ಮುಟ್ಟಿರಬೇಕೆಂದೂ, ಇದರ ಬಗ್ಗೆ ಬೇಗನೆ ಇತ್ಯರ್ಥವಾಗಬಹುದೆಂದೂ ಹೇಳಲಾಗಿದೆ. ಈ ಸಮ್ಮೇಳನ ಮುಗಿದೊಡನೆಯೇ ರಷ್ಯವು ಜಪಾನಿನ ವಿರುದ್ಧ ಸಮರ ಹೂಡಬಹುದೆಂಗೂ ಬಳಿಕ ಬರ್ಲಿನ್ ಅಥವಾ ಮಾಸ್ಕೋದಲ್ಲಿ ಪಂಚಮಹಾರಾಷ್ಟ್ರಗಳ ಸಮ್ಮೇಳನ ನಡೆಯಬಹುದೆಂದೂ ವದಂತಿ ಹರಡಿದೆ.

ಜಪಾನೀಯರ ಹೊಸ ಫೈಟರ್‌ಗಳು

ಜಪಾನೀಯರು ಅಮೆರಿಕ ವಿಮಾನಗಳನ್ನೆದುರಿಸಲು ಹೊಸ ಮಾದರಿಯ ಫೈಟರ್ ವಿಮಾನಗಳನ್ನು ಉಪಯೋಗಿಸುತ್ತಿದ್ದಾರೆ. ಕ್ಯೂಷೂ ಮೇಲೆ ನಡೆದ ದಾಳಿಯಲ್ಲಿ ಇವು ವೈರಿಯನ್ನೆದುರಿಸಿ ೮ ವಿಮಾನಗಳನ್ನು ಕೆಡವಿದುವು ಎಂದು ಟೋಕಿಯೋ ರೇಡಿಯೋ ತಿಳಿಸಿದೆ. ಹೊಸ ವಿಮಾನಗಳ ಬಗ್ಗೆ ಹೆಚ್ಚಿನ ವಿವರಗಳನ್ನು ಕೊಟ್ಟಿಲ್ಲ.

ಟೋಕಿಯೋಮೇಲೆ ಬ್ರಿಟಿಷ್ ನೌಕಾಪಡೆಗಳ ಮುತ್ತಿಗೆ

ಜಪಾನಿನ ಮೇಲೆ ಅಮೆರಿಕನ್ ನೌಕೆಗಳು ನಡೆಸುತ್ತಿರುವ ದಾಳಿಗೆ ಬ್ರಿಟಿಷ್ ನೌಕೆಗಳೂ ಬೆಂಬಲ ಕೊಡುತ್ತಿವೆ. ಅಮೆರಿಕನ್ ೩ನೆಯ ನೌಕಾಪಡೆಯೊಡನೆ ಬ್ರಿಟಿಷ್ ನೌಕೆಗಳು ಸೇರಿಕೊಂಡು ಟೋಕಿಯೋವನ್ನು ಧ್ವಂಸ ಮಾಡಲಾರಂಭಿಸಿವೆ. ಮಿತ್ರ ಸೇನೆ ಜಪಾನಿನಲ್ಲೇ ಇಳಿದು ಆಕ್ರಮಣ ನಡೆಸಲು ಅನುಕೂಲವಾಗುವಂತೆ ಮಾಡುವುದಕ್ಕೆ ಈ ಪೀಠಿಕಾ ಕಾರ್ಯಾಚರಣೆ ನಡೆದಿದೆ. ಈ ಎರಡು ನೌಕಾ ಪಡೆಗಳ ಕಾರ್ಯಾಚರಣೆಯ ಮೇಲ್ವಿಚಾರಣೆಯನ್ನೂ ಅಡ್ಮಿರಲ್ ಹ್ಯಾಲ್ಸಿ ನೋಡಿಕೊಳ್ಳುತ್ತಿರುವರು. ಈ ಸೇನಾನಿ ಸಮಯವರಿತು ದಾಳಿಗಾರಂಭಿಸಿದ್ದಾರೆ. ಪೆಸಿಫಿಕ್ ಕ್ಷೇತ್ರದಲ್ಲಿ ಇಷ್ಟು ಬಲಯುತವಾದ ಸಂಯುಕ್ತ ನೌಕಾ ಸೈನ್ಯ ಹಿಂದೆಂದೂ ಕಾರ್ಯಾಚರಣೆ ನಡೆಸಲಿಲ್ಲವೆಂದು ಹೇಳಲ್ಪಟ್ಟಿದೆ.

ಜಪಾನಿನಲ್ಲಿ ರಾಜಕೀಯ ಕ್ರಾಂತಿಯಾಗಬಹುದು

ಜಪಾನಿನ ರಾಜಕೀಯ ಸ್ಥಿತಿ ಹದಗೆಟ್ಟಿದೆ. ಅಲ್ಲಿ ಅದ್ಭುತ ಕ್ರಾಂತಿಯಾಗಬಹುದು. ಈ ಕ್ರಾಂತಿಯ ಮುಂದೆ ಫ್ರಾನ್ಸಿನ ಮಹಾಕ್ರಾಂತಿಯೂ ಸಹ ಅತ್ಯಲ್ಪವಾಗಿ ಕಂಡುಬರಬಹುದು ಎಂದು ೩೦ ಸಾವಿರ ಮೈಲಿಗಳ ಸಂಚಾರ ಮಾಡಿದ ಅಮೆರಿಕನ್ ಕಾಂಗ್ರೆಸ್ ಪ್ರತಿನಿಧಿಗಳು ಹೇಳಿದ್ದಾರೆ. ಜಪಾನೀ ಯುದ್ಧನಾಯಕರಿಗೂ, ಕೈಗಾರಿಕೆಯ ನಾಯಕರಿಗೂ ಹೊಡೆದಾಟ ನಡೆಯುತ್ತಿದೆ. ಈ ಕೈಗಾರಿಕೆಯ ನಾಯಕರು ಯುದ್ಧವನ್ನು ಬೇಗ ನಿಲ್ಲಿಸಬಹುದು. ಪೂರ್ಣ ಶರಣಾಗತಿಯೇ ಈ ವಿಧದ ಭೀಕರ ಕ್ರಾಂತಿಗೆ ಆಸ್ಪದಕಾರಭಾಗಬಹುದು ಎಂದು ತಿಳಿಸಿದ್ದಾರೆ.

ತ್ರಿಮೂರ್ತಿಗಳ ಸಮ್ಮೇಳನ

ಪ್ರಪಂಚದ ಮುಂದಿನ ವರ್ತನೆಯನ್ನು ನಿರ್ಧರಿಸುವ ಸಮ್ಮೇಳನವು ಈಗ ಜರ್ಮನಿಯ ರಾಜಧಾನಿಯಾದ ಬರ್ಲಿನ್ ಮಹಾ ನಗರದಲ್ಲಿ ನಡೆಯುತ್ತಿದೆ. ಇದರಲ್ಲಿ ಭಾಗವಹಿಸಲು ಅಮೆರಿಕದ ರಾಷ್ಟ್ರಾಧ್ಯಕ್ಷ ಟ್ರೂಮನ್ನರೂ ಬ್ರಿಟಿಷ್ ಪ್ರಧಾನಮಂತ್ರಿ ಚರ್ಚಿಲ್ಲರೂ ಬಹಳ ಬಲವಾದ ಕಾವಲಿನೊಡನೆ ೧೫ ನೆಯ ತಾರೀಖು ಬರ್ಲಿನ್ನಿಗೆ ಆಗಮಿಸಿದರು. ೧೭ ನೆಯ ತಾರೀಖು ಬರ್ಲಿನ್ ನಗರದ ಬಳಿಯ ಪೋಟ್ಸ್‌ಡಾಂ ಪ್ರದೇಶದಲ್ಲಿ ಸಮ್ಮೇಳನವಾರಂಭವಾಯಿತು. ಟ್ರೂಮನ್ನರವರು ಅಧ್ಯಕ್ಷತೆ ವಹಿಸಿದ್ದರು. ಈ ಸಮ್ಮೇಳನದಲ್ಲಿ ಇತ್ಯರ್ಥವಾಗಬೇಕಾಗಿರುವ ಮುಖ್ಯ ವಿಷಯಗಳು ಯಾವುವೆಂದರೆ—ಹಂಗೇರಿಯ ವಿಚಾರ, ಪೋಲೆಂಡಿನಲ್ಲಿ ಚುನಾವಣೆಗಳನ್ನು ನಡೆಸುವ ವಿಚಾರ, ಇಟಲಿ, ಆಸ್ಟ್ರಿಯಾ, ಗ್ರೀಸಿನಿಂದ ತನಗೆ ಸೇರಬೇಕಾಗಿದೆಯೆಂದು ಟಿಟೋ ಕೇಳಿರುವ ಪ್ರದೇಶಗಳ ಭವಿಷ್ಯ, ರುಮೇನಿಯಾ ಬಲ್ಗೇರಿಯಾಗಳ ಒಳಪರಿಸ್ಥಿತಿ ಇಟಲಿಯ ರಾಜಪ್ರಭುತ್ವ ಪ್ರಶ್ನೆ, ಸ್ಪೇನಿನ ಸಮಸ್ಯೆ. ಈ ವಿಚಾರಗಳ ಜತೆಗೆ ಚರ್ಚೆಗೆ ಬರಲಿರುವ ಅತ್ಯಂತ ಪ್ರಧಾನ ಸಮಸ್ಯೆಗಳೆಂದರೆ —೧ ಜರ್ಮ

ನಿಯ ಭವಿಷ್ಯ ೨ ಆಗ್ನೇಯ ಯೂರೋಪಿನ ಮುಂದಿನ ಸ್ಥಾನಮಾನ ೩. ಡಾರ್ಡನೆಲ್ಸ್ ಜಲಸಂಧಿ ಪ್ರಶ್ನೆ ೪ ಪರ್ಷಿಯದ ಸಮಸ್ಯೆ ತುರ್ಕಿಯ ವಿದೇಶಾಂಗ ಸಚಿವರು ಸ್ಯಾನ್‌ಫ್ರಾನ್‌ಸಿಸ್ಕೋದಿಂದ ನೇರವಾಗಿ ಲಂಡನ್ನಿಗೆ ಬಂದಿದ್ದಾಗ, ಡಾರ್ಡನೆಲ್ಸ್ ಬಗ್ಗೆ ತುರ್ಕಿಯ ಮನೋಗತವನ್ನು ಈಡನ್ನರು ಅರಿತುಕೊಂಡರೆಂದು ಹೇಳಲಾಗಿದೆ ಈ ಪ್ರಶ್ನೆ ಯಾಲ್ಟಾ ಸಮ್ಮೇಳನಾನಂತರ ಅತ್ಯಂತ ಉಲ್ಬಣವಾದ ಪೋಲೆಂಡ್ ಸಮಸ್ಯೆಯಷ್ಟೇ ಕಠಿಣವಾಗಬಹುದಾಗಿಯೂ ನಿರೀಕ್ಷಿಸಲಾಗಿದೆ ಪರ್ಷಿಯದಲ್ಲಿ ಹೊರದೇಶಗಳ ಸೇನೆಗಳು ಇರುವುದರಿಂದ ಅದಕ್ಕೆ ಒಳನಾಡಿನಲ್ಲೇ ಅಗೌರವ ಹೆಚ್ಚುತ್ತಿರುವುದಾಗಿ ಬ್ರಿಟನ್ ಕಂಡುಕೊಂಡು, ಪರ್ಷಿಯದಿಂದ ತನ್ನ ಸೇನೆಗಳನ್ನು ವಾಪಸು ಕರೆಸಿಕೊಳ್ಳಲು ಸಿದ್ಧವಾಗಿದೆ ರಷ್ಯನ್ ಸೇನೆಗಳು ವಾಪಸಾಗುತ್ತವೆಯೋ ಇಲ್ಲವೇ ಎಂಬುದನ್ನು ಅರಿಯಲೂ ಸಹ ಬ್ರಿಟನ್ ಆಸಕ್ತಿಗೊಂಡಿದೆ

ರಷ್ಯಾ ಎಂದರೆ ಜಪಾನಿಗೆ ಅಸಾಧ್ಯ ಭಯ

ಎರಡು ಕಡೆಯಿಂದಲೂ ವೈರಿಯನ್ನು ಎದುರಿಸುವ ಸಂದರ್ಭ ಉಂಟಾಗಿ, ಜರ್ಮನಿಯಂತೆ ಚಡಪಡಿಸುವ ಪರಿಸ್ಥಿತಿಗೆ ಜಪಾನು ಇಳಿಯಬಾರದೆಂಬ ಅರ್ಥದ ಲೇಖನವನ್ನು ಜಪಾನಿನ ಯೋಮ್ಯುರಿ ಹೋಚಿ ಪತ್ರಿಕೆ ಬರೆದಿರುವದಾಗಿ ಟೋಕಿಯೋ ರೇಡಿಯೋ ತಿಳಿಸಿದೆ ರಷ್ಯವು ರಣರಂಗಕ್ಕೆ ಕಾಲಿಡುವ ಮೊದಲೇ ಬ್ರಿಟನ್ ಅಥವಾ ಅಮೆರಿಕೆಯೊಡನೆ ಸಂಧಾನ ಮಾಡಿಕೊಂಡರೆ ತನ್ನ ನೀತಿ ರೀತಿ ಉಳಿಸಿಕೊಳ್ಳಬಹುದೆಂದು ಜಪಾನ್ ತಿಳಿದಿದೆ ರಷ್ಯವು ಎಲ್ಲಿ ಯುದ್ಧ ಹೂಡುವದೋ ಎಂಬ ಭಯ ಅದಕ್ಕೆ ಆರಂಭವಾಗಿದೆಯೆಂದು ಹೇಳಲಾಗಿದೆ

ಭಾರತೀಯ ಸೈನಿಕರ ನಷ್ಟ

೧೯೩೯ನೇ ಸೆಪ್ಟಂಬರ್ ಮೊದಲ್ಗೊಂಡು ಈ ವರ್ಷ ಫೆಬ್ರವರಿ ತಿಂಗಳವರೆಗೆ ಭಾರತೀಯ ಸೇನೆಗೆ ಉಂಟಾದ ನಷ್ಟ ೧ ಲಕ್ಷ ೫೦ ಸಾವಿರ ಇದರಲ್ಲಿ ಹಾಂಗ್‌ಕಾಂಗ್ ಮತ್ತು ಸಿಂಗಪುರಗಳಲ್ಲಿದ್ದ ಇತರ ವರ್ಗದ ೧೭೩೧೯ ಸೈನಿಕರು ಸೇರಿಲ್ಲ ಇವರಲ್ಲಿ ಮಡಿದವರು ೨೪ ಸಾವಿರ ಗಾಯಗೊಂಡವರು ೫೦೭೦೫, ಕಾಣದಾದವರು ೧೦೩೭೧ ಇದರಲ್ಲಿ ಹೆಚ್ಚಿನ ನಷ್ಟವಾದುದು ಪೂರ್ವರಂಗದ ಜಪಾನೀ ಹೋರಾಟದಲ್ಲಿ ಈ ಸಮರದಲ್ಲಿ ಮಲಯದಲ್ಲಿ ಮರಣ ಹೊಂದಿದವರು ಗಾಯಗೊಂಡವರು ಹಾಗೂ ಕಾಣದಾದವರು ೬೨ ಸಾವಿರ ಬರ್ಮಾದಲ್ಲಿ ೪೦೪೫೩ ಇವರಲ್ಲಿ ೧೯ ಸಾವಿರಕ್ಕೂ ಹೆಚ್ಚು ಜನರು ವೈರಿಗೆ ಸಿಕ್ಕಿರಬಹುದೆಂದು ಊಹಿಸಲಾಗಿದೆ

ಇಟಲಿಯ ಪ್ರಾಚೀನ ವಸ್ತುಗಳು ಸಿಕ್ಕಿದವು

ಬ್ರೆನ್ನರ್ ಕಣಿವೆ ಬಳಿ ಮಿತ್ರ ಸೇನೆಗಳು, ಜರ್ಮನರಿಂದ ಲೂಟಿಮಾಡಲ್ಪಟ್ಟಿದ್ದ ಇಟಲಿಯ ಪ್ರಾಚೀನ ಕಲಾವಸ್ತುಗಳ ಎರಡು ಪೆಟ್ಟಿಗೆಗಳನ್ನು ವಶಪಡಿಸಿಕೊಂಡಿವೆ ಇವುಗಳಲ್ಲಿ ೫೦೦ ಚಿತ್ರಗಳೂ ೧೫೦ ರೋಮನ್ ಪುರಾತನ ಕಾಲದ ವಿಗ್ರಹಗಳೂ ಇವೆ ಇವುಗಳ ಬೆಲೆ ೩ ಕೋಟಿ ರೂಪಾಯಿಗಳು! ಇವಲ್ಲದೆ ಇನ್ನೂ ಟಸ್ಕನಿಯಿಂದ ಕೊಂಡೊಯ್ದಿದ್ದ ೯ ಚಿತ್ರಗಳೂ, ಮೌಂಟ್ ಕಸ್ಸಿನೋದಿಂದೊಯ್ದ ೧೪ ಕಂಚುವಿಗ್ರಹಗಳೂ ಪತ್ತೆ[illegible]ಲ್ಲ ಇಟಲಿಯ ವೈಭವಯುತ ಕಲೆಗಳನ್ನು ಅದರ ಕೈ ತಪ್ಪಿಸಬೇಕೆಂದು ಜರ್ಮನರು ಹೀಗೆ ಮಾಡಿದ್ದಾರೆಂದು ಹೇಳಲಾಗಿದೆ

ಫ್ರೆಂಚರಿಗೆ ನಿರಾಶೆ

ಫ್ರೆಂಚ್ ಪ್ರತಿನಿಧಿಗೆ ತ್ರಿರಾಷ್ಟ್ರ ಸಮ್ಮೇಳನಕ್ಕೆ ಆಹ್ವಾನ ಒದಗದಿರುವದರಿಂದ ಫ್ರಾನ್ಸಿನಲ್ಲಿ ನಿರಾಶೆ ಹರಡಿದೆ ಇದರಿಂದ ಜರ್ಮನಿಗೆ ಮಾತ್ರವೇ ಅಲ್ಲ, ಮೆಡಿಟರೇನಿಯನ್‌ನಲ್ಲಿನ ಫ್ರೆಂಚ್ ಹಿತಗಳಿಗೂ ತೊಡಕು ಬರಬಹುದೆಂಬ ಭೀತಿಯನ್ನು "ರೆಸಿಸ್ಟೆನ್ಸ್" ಪತ್ರಿಕೆ ವ್ಯಕ್ತಪಡಿಸಿದೆ

ಮಜ್ಜಿಗೆ ಕುಡಿದು ಇಬ್ಬರ ಮರಣ

ಹಳೇ ಡೆಲ್ಲಿಯಲ್ಲಿ ಮಜ್ಜಿಗೆ ಕುಡಿದು ೨ ಜನ ಮರಣ ಹೊಂದಿದರು ಮಜ್ಜಿಗೆ ತಳದಲ್ಲಿ ೨ ಸತ್ತ ಹಲ್ಲಿಗಳಿದ್ದವೆಂದು ಗೊತ್ತಾಯಿತು ವಿಷದ ಪರಿಣಾಮವಾಗಿಯೇ ಮರಣ ಸಂಭವಿಸಿತೆಂದು ತಿಳಿದುಬರುತ್ತದೆ ಇದರಿಂದ ಪ್ರತಿಯೊಬ್ಬರೂ ಅಡಿಗೆಯ ಪಾತ್ರೆಗಳನ್ನು ಪೂರ್ಣವಾಗಿ ಬಾಯಿಮುಚ್ಚಿಡಬೇಕೆಂಬುದನ್ನು ಬೇರೆ ಬೇಳಬೇಕಾಗಿಲ್ಲ

ಸ್ವೀಕಾರ

ಧಾರವಾಡ ಡಿ| ಸವಣೂರ ಗ್ರಾಮದಲ್ಲಿರುವ ಮ| ರಾ| ಅಸುಂಡಿ ಗುರುಶಾಂತಪ್ಪನವರ ಮನೆಯಲ್ಲಿ ಶ್ರೀ ವರದಶಂಕರಪೂಜೆಯು ನೆರವೇರಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ಮ|| ರಾ|| ವೀರಭದ್ರಪ್ಪ ಬಿಕ್ಕಣ್ಣನವರ ಇವರ ದ್ವಾರಾ ತಲ್ಪಿರುತ್ತವೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

|| ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ||

ಶ್ರೀವರದಶಂಕರಪೂಜಾ ಮತ್ತು ದೇವೀ ಪೂಜಾಸಮಾರಂಭ ಸವಣೂರು

ಧಾರವಾಡ ಜಿ ಸವಣೂರು ಟವನ್ ಕಸಬಾಪೇಟೆಯಲ್ಲಿರುವ ಶ್ರೀಮಾನ್ ಗುರುಶಾಂತಪ್ಪನವರು ಅಸುಂಡಿ ಇವರು ತಮ್ಮ ಗೃಹದಲ್ಲಿ ಇದೇ ಜ್ಯೇಷ್ಠ ಬ ೧೩ ದಿವಸ ಶ್ರೀವರದಶಂಕರಪೂಜೆಯನ್ನು ಅತಿವಿಜೃಂಭಣೆಯಿಂದ ನೆರವೇರಿಸಿದರು ಗುರುಶಾಂತಪ್ಪನವರ ಪುತ್ರರಾದ ಚನ್ನಪ್ಪನವರ ಧರ್ಮಪತ್ನಿ ಸೌ| ಲಿಂಗವ್ವನವರು ಗರ್ಭವತಿಯಾಗಿರುವದರಿಂದ ವೀರಶೈವ ಪದ್ಧತಿಯಂತೆ ೮ನೇ ತಿಂಗಳಲ್ಲಿ ಆ ದಿವಸ ಪ್ರಾತಃಕಾಲ ವೇ| ಮುಪ್ಪಯ್ಯನವರು ಚರಂತಿಮಠ ಇವರ ಪೌರೋಹಿತ್ಯದಲ್ಲಿ ಲಿಂಗಧಾರಣವು ಶಾಸ್ತ್ರೋಕ್ತವಾಗಿ ನೆರವೇರಿತು ಬಳಿಕ ಮಹಾಗಣಾರಾಧನೆಯನ್ನು ಮಾಡಿಸಿ ಮಾಹೇಶ್ವರರಿಗೆ ಶಕ್ತ್ಯನುಸಾರ ದಾನವನ್ನು ಮಾಡಿದರು ಸಾಯಂಕಾಲ ೪ ಘಂಟೆಯಿಂದ ವರದಶಂಕರಪೂಜೆಗೆ ಪ್ರಾರಂಭವಾಯಿತು ರಜತ ಈಶ್ವರಮೂರ್ತಿಗೆ ಶ್ರೀರುದ್ರಾಭಿಷೇಕ ಮತ್ತು ಅಷ್ಟವಿಧಾರ್ಚನೆಗಳು ವೇ| ಬಸವಣ್ಣಯ್ಯನವರು ಚರಂತಿಮಠ ಇವರ ಪೌರೋಹಿತ್ಯದಿಂದ ನೆರವೇರಿದವು ಪೂಜೆಯು ಸಮಾಪ್ತಿಗೊಂಡಮೇಲೆ ವೇ| ಮುಪ್ಪಯ್ಯನವರು ಚರಂತಿಮಠ ಇವರು ಶ್ರೀವರದಶಂಕರವ್ರತದ ಕಥೆಯನ್ನು ಪ್ರಾರಂಭಿಸಿ ೧೧ ಘಂಟೆಯವರೆಗೂ ಒಳ್ಳೆ ಸೊಗಸಾಗಿ ಹೇಳಿ ಜನರನ್ನು ಸಂತೋಷಗೊಳಿಸಿದರು ಅಂದಿನ ದಿವಸ ಜನರು ಅಪಾರವಾಗಿ ನೆರೆದಿದ್ದರು ಮಹಾಮಂಗಳಾರತಿ ಆದ ಮೇಲೆ ಪ್ರಸಾದವು ಸರ್ವರಿಗೂ ಹಂಚಲ್ಪಟ್ಟು ಈಶ್ವರನ ಸ್ತೋತ್ರದೊಡನೆ ಪೂಜೆಯು ಸಮಾಪ್ತಿಗೊಂಡಿತು ಈ ಪೂಜಾಸಮಯದಲ್ಲಿ ವೇ| ಮುಪ್ಪಯ್ಯನವರ ಹೇಳಿಕೆಯ ಪ್ರಕಾರ ಧರ್ಮಜಾಗೃತಿ ಮಾಡುತ್ತಿರುವ ಪ್ರಭಾಪೋಷಣಕ್ಕೆ ೨ ರೂಪಾಯಿಗಳು ಚನ್ನಪ್ಪನ ಕಡೆಯಿಂದ ಸಮರ್ಪಿಸಲ್ಪಟ್ಟವು ತಾರೀಖು ೯-೭-೪೫ನೇ ಸೋಮವಾರ ಪ್ರಾತಃಕಾಲ ದೇವೀಮೂರ್ತಿಗೆ ಅಷ್ಟವಿಧಾರ್ಚನೆಯಿಂದ ಪೂಜೆಯಾದನಂತರ ಮಹೇಶ್ವರರಿಗೂ ಬಡಬಗ್ಗರಿಗೂ ಐದುನೂರು ಜನರವರೆಗೆ ಅನ್ನಸಂತರ್ಪಣೆಯಾಯಿತು ರಾತ್ರಿ ೮ ಘಂಟೆಯಿಂದ ೧೧ ಘಂಟೆಯವರೆಗೆ ದೇವಿಯ ಪುರಾಣವನ್ನು ವೀರಭದ್ರಪ್ಪ ಬಿಕ್ಕಣ್ಣನವರ ಇವರು ಜನರಿಗೆ ಸಂತೋಷವಾಗುವಂತೆ ಹೇಳಿದರು ಪೂಜೆಯ ಕಾಲದಲ್ಲಿ ೨೫ ರೂಪಾಯಿಗಳು ಧರ್ಮಸ್ಥಳಕ್ಕೆ ಸಮರ್ಪಿಸಲ್ಪಟ್ಟವು ಧರ್ಮಾಭಿಮಾನಿಗಳಾದ ಈ ದಂಪತಿಗಳಿಗೆ ಶ್ರೀವರದಶಂಕರನು ಆಯುರಾರೋಗ್ಯವನ್ನೂ ಐಶ್ವರ್ಯವನ್ನೂ ಪುತ್ರಾದಿಗಳನ್ನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ

ವೀರಭದ್ರಪ್ಪ ಬಿಕ್ಕಣ್ಣನವರ

[೧ನೆಯ ಪುಟದಿಂದ ಮುಂದುವರೆದುದು]

ಪರಮಮಹಿಮೆಯ ನಿಕೇತನವೂ ಎನಿಸಿದೆ ದೇಗುಲವು ಸರ್ಕಾರದ ಸ್ವಾಧೀನವಿದ್ದು ಭಕ್ತಾದಿಗಳಿಂದಲೇ ಎಲ್ಲಾ ಸೇವಾದಿಗಳು ನಡೆಯುವವು ಶ್ರಾವಣಮಾಸದ ಪೂಜೆಗೆ ಮಾತ್ರ ಬ್ರಿಟಿಷ್ ಸರಕಾರದಿಂದ ೪೫೦ ರೂ ಗಳು ಸಲ್ಲುತ್ತವೆ ನಾನು ಕಂಡ ಅನೇಕ ದೇವಾಲಯಗಳಲ್ಲಿ ಇದರಷ್ಟು ಶಾಂತಿಮಯವಾದುದನ್ನು ಇದುವರೆಗೆ ಎಲ್ಲಿಯೂ ಕಂಡಿಲ್ಲ ಮೂಲಮಂದಿರವು ಬಹಳ ಪ್ರಾಚೀನವಾದುದು ಭೀಮೆಯ ರಂಗತ್ತರಂಗಗಳು ಉತ್ತರಭಾಗದ ಪ್ರಾಕಾರಕ್ಕೆ ಮುದ್ದಿಡುವದನ್ನು ನೋಡಿದರೆ ಆಕೆಯು ತೆರೆಗೈಗಳಿಂದ ಆ ಮಹಾಸಿದ್ಧರನ್ನು ಸೇವಿಸುವಂತೆ ಭಾಸವಾಗುತ್ತಿರುವದು ಸುತ್ತಮುತ್ತಲೂ ಬಿಲ್ವ, ಬೇವು ಮೊದಲಾದ ಮರಗಳಿದ್ದು ವಿವಿಧ ಪಕ್ಷಿಸಂತತಿಗೆ ಆಶ್ರಯವಾಗಿರುವವು ನದಿಯ ಮೇಲಿನಿಂದ ಬರುವ ಮಂದಮಾರುತವು ಮನೋಮೋಹಕವಾಗಿರುವದು ಪ್ರಾಕಾರವಂತೂ ಪಕ್ಷಿಗಳ ಗೂಡುಗಳಿಂದ ತುಂಬಿ ಯಾವಾಗಲೂ ಅವುಗಳ ಇಂಚರದಿಂದ ಝೇಂಕರಿಸುವಂತೆ ತೋರುತ್ತಲಿರುವದು. ಒಳದೇಗುಲದ ಒದಿಯಲ್ಲಿ ಬೇವಿನದೊಂದು ಗಿಡವಿದ್ದು ಬುಡದಿಂದ ತುದಿಯವರೆಗೆ ಕಾಮನ ಮಲ್ಲನಂತೆ ಸಿಳ್ಳು ಹಾಕುತ್ತ ನಲಿದಾಡುವ ಸ್ವಚ್ಛಂದಚಾರಿಗಳಾದ ಗಿಣಿಗಳಿಂದಲೂ, ಸವಿಸರದ ಗೊರವಂಕಗಳಿಂದಲೂ, ಪರಿಪುಷ್ಟವಾಗಿ ಮಿನುಗುವ ಪಾರಿವಾಳಗಳಿಂದಲೂ, ರಾತ್ರಿಕಾಲದಲ್ಲಿ ಕಲಕಲ ಧ್ವನಿಯನ್ನು ಮಾಡುತ್ತ ಹಗಲು ಸಮಾಧಿಸ್ಥರಾದ ಮುನಿಗಳಂತೆ ಕಣ್ಮುಚ್ಚಿಕೊಂಡು ಕುಳಿತ ಯಾರನ್ನಾದರೂ ಕಂಡರೆ ಗರಿಗೆದರಿ ಹುಬ್ಬಿಕ್ಕಿ ಹೆದರಿಸುತ್ತ ತನ್ಮೂಲಕ ರಸಿಕರ ಮನಾನಂದಗೊಳಿಸುವ ವಾಲ್ಕಿಗಳಿಂದಲೂ ತುಂಬಿರುತ್ತದೆ ಶ್ರೀ ರಂಭಾಪುರೀ ಜಗದ್ಗುರುಗಳು ಈಗ್ಗೆ ೪ ವರ್ಷಗಳ ಹಿಂದೆ ಇಲ್ಲಿಗೆ ದಯಮಾಡಿಸಿದ್ದಾಗ್ಗೆ ಅವರ ಸಂಗಡ ನಾನೂ ಇದ್ದುದರಿಂದ ಕಾಣುವ ಯೋಗವು ಒದಗಿತು ಅಂದಿನಿಂದಲೂ ಕೆಲದಿನವಿಲ್ಲಿ ಇದ್ದರೆ ಮನಶ್ಶಾಂತಿಯು ಕೊಂಚವಾದರೂ ಸಿಕ್ಕಬಹುದೆಂದು ಆಶಿಸಿದ್ದೆ ಅದೂ ಅಕಸ್ಮಾತ್ತಾಗಿ ಒದಗಿಬಂತು ಶ್ರೀ ರೇವಣಸಿದ್ಧರ ಉಜ್ವಲಭಕ್ತರೂ ಉದಾರಹೃದಯರೂ ಆದ ಶ್ರೀಮಂತ ರೇವಣಸಿದ್ಧಪ್ಪ ಗೋಟೆ ನಿಂಬರಗಿ ಇವರ ವ್ಯವಸ್ಥೆಯಿಂದ ೩೯ ದಿನಗಳವರೆಗೆ ಶ್ರೀ ರೇಣುಕ ಭಗವತ್ಪಾದರ ಪಾದವಿನ್ಯಾಸದಿಂದ ಪೂತವಾದ ಆ ದಿವ್ಯ ಸ್ಥಾನದಲ್ಲಿ ನಿಸರ್ಗ-ಶಾಂತಿಜನ್ಯವಾದ ಅನುಪಮಾನಂದ ಸಂದೋಹವನ್ನು ಅನುಭವಿಸಬೇಕಾಯಿತು ಸಂಸಾರ ಸಂತಾಪದಿಂದ ಬೆಂದು ಬೆಂಡಾಗಿ ಶಾಂತಿಯ ಸವಿಗೆ ಬಾಯ್ದೆರೆದು ಹಾರೈಸುವ ಮಹನೀಯರು ಈ ಮಹಾಸ್ಥಾನಕ್ಕೆ ಒಂದು ಶ್ರೀ ಜಗದ್ಗುರು ರೇವಣಸಿದ್ಧರ ಮಂಗಲ ದರ್ಶನದಿಂದ ಧನ್ಯರಾಗಬೇಕೆಂದು ಅಪೇಕ್ಷಿಸುವ,

ಶ್ರೀ ಗಂಗಾಧರ ಶಿವಾಚಾರ್ಯ,
ಮೊರಬ

ಶ್ರೀಮನ್ಮಹಾರಾಜರವರ ವರ್ಧಂತೀ ಮಹೋತ್ಸವ

ನಮ್ಮ ಶ್ರೀಮನ್ಮಹಾರಾಜರವರ ೨೭ ನೆಯ ವರ್ಷ ವರ್ಧಂತ್ಯುತ್ಸವವು ಇದೇ ತಿಂಗಳು ೩೦ನೆಯ ತಾರೀಖು ರಾಜಧಾನಿಯಲ್ಲಿ ಅತ್ಯಂತ ವೈಭವದಿಂದ ನಡೆಯುತ್ತದೆ ಆ ದಿವಸ ಪ್ರಾತಃಕಾಲ ಶ್ರೀಮನ್ಮಹಾರಾಜರವರು ಅಭ್ಯಂಜನ ದೇವಬ್ರಾಹ್ಮಣ ಪೂಜಾ ಶಾಂತಿಹೋಮಾದಿ ಕಾರ್ಯಗಳನ್ನು ಪದ್ಧತಿಯಂತೆ ನೆರವೇರಿಸಿ ಸಾಯಂಕಾಲ ೪ ೩೦ ಘಂಟೆಗೆ ಮೆರವಣಿಗೆಯಿಂದ ಹೊರಟು ಗೌರ್ನ್‌ಮೆಂಟ್ ಹೌಸಿಗೆ ಹೋಗಿ ಅಲ್ಲಿ ವಿಶ್ರಾಂತಿಯನ್ನು ತೆಗೆದುಕೊಂಡು ಬಳಿಕ ಉತ್ಸವದೊಡನೆ ಅರಮನೆಗೆ ಹಿಂದಿರುಗುವರು

ಕಾಗದದ ಬೆಲೆಯು ವಿಶೇಷವಾಗಿ ಏರಿರುವುದರಿಂದ ಕೆಲವು ಗ್ರಂಥಗಳ ಮತ್ತು ಫೋಟೋಗಳ ಬೆಲೆಯನ್ನು ಸ್ವಲ್ಪ ಹೆಚ್ಚಿಸಿದ್ದೇವೆ

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೬—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದ) ಸೈಜು ೧೪×೧೦ ಬೆಲೆ	೦—೬—೦
ಸದ್ಯಃ ಸೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೩—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦ ೧ ೬
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—೬
ಶ್ರೀಉಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧ ೬
ಶ್ರೀಉಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೬

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು. ವೀರಶೈವಮತದಲ್ಲಿ ಸದ್ಯಃ ದೊರೆಯತಕ್ಕ ಗ್ರಂಥಗಳೆಲ್ಲಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರವುದು. ಈ ಗ್ರಂಥವು ಈಗ್ಗೆ ಸುಮಾರು **೨ಸಾವಿರ** ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು. ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ವವು ಪಾಠಕರಿಗೆ ವೇದ್ಯವಾಗುವುದು. ಪಾಠಕರ ಅನುಕೂಲ್ಯಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೩೩೨ ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ **ಲೀಲಾತ್ಮಕ**ವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೨ ರೂಪಾಯಿ.**

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ ...	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ) ...	೪ ಆಣೆ
ಲಿಂಗಧಾರಣವಿಧಿ ...	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ ...	೪ ಆಣೆ
ವೈದಿಕವಾಙ್ಮಯರಹಸ್ಯ ...	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ) ...	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ ...	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ, ಚಿಕ್ಕಸೈಜು)	೮ ಆಣೆ
ವೀರಶೈವಮಹಾತ್ಮರು ...	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ) ...	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ) ...	೮ ಆಣೆ
ಆಗಮಪರಿಜ್ಞಾನ ...	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ಸ್ವೈದಿಕಸ್ವರಯುಕ್ತವಾದುದು ೨ನೆಯ ಆವೃತ್ತಿ)	೧। ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧॥ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧॥ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಟೀಕಾಸಹಿತ)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	**4 As**
The Philosophical Aspect of Virasaivism (*English*)	**8 As**
Speeches by Pandit Shri Kashinatha Shastriji (*English*)	**12 As**
लिंगधारणचंद्रिका (संस्कृत)	३ रु.
वीरशैवरत्न (मराठी)	१ रु
महानारायणोपनिषद् (वीरशैवभाष्य-संस्कृत)	१ रु
सिद्धांतशिखामणि (मूल)	८ आ
नंदिकेश्वरकारिका (संस्कृत)	२ आ

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

EGISTERED No. M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಮುಂಗಡವಾಗಿ ಕೊಡುವವರಿಗೆ ೨ ರೂ ೮ ಆಣೆ ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೮ ಆಣೆ

ಸಂಪುಟ ೧೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೩೦ನೇ ಜುಲೈ ೧೯೪೫ [ಸಂಚಿಕೆ ೧೧

ಶಿವಯೋಗಾನುಷ್ಠಾನಸಮಾಪ್ತಿ, ಗರಗ

ಶ್ರೀಜಗದ್ಗುರು ಉಜ್ಜಯಿನೀ ಸದ್ಧರ್ಮ ಸಿಂಹಾಸನ ...ಖಾನುವರ್ತಿ ಶ್ರೀ॥ ಷ॥ ಬ್ರ॥ ಪಟ್ಟದ ಬಾಲಲೀಲ ...ದಶಂಕರ ಶಿವಾಚಾರ್ಯಸ್ವಾಮಿ ರೌಡಕುಂದಿ, ಕುರು...ೋಡು, ಉಗುರುಕೋಡು, ಯಾದವಾಡ, ಗರಗ ...ಹಿರೇಮಠ ಇವರು ತರ್ಕತೀರ್ಥ ಹೂಲಿ ಬೃಹನ್ಮಠದ ...ೀಲಕಂಠಶಿವಾಚಾರ್ಯ ಸ್ವಾಮಿಗಳವರ ಆಜ್ಞಾನುಸಾರ ...ಾಯಾಪಂಚಾಕ್ಷರೀಮಂತ್ರವನ್ನು ಪ್ರತಿನಿತ್ಯ ಪಂಚಸಹ...ದಂತೆ ತಾ॥ ೧೮ ೬ ೧೯೪೫ ರಿಂದ ಪ್ರಾರಂಭಿಸಿ ಇದೇ ...ಾಢ ಶುಕ್ಲ ದಶಮಿ ಗುರುವಾರ ಒಂದುವರೆ ಲಕ್ಷ ...ಪಗಳನ್ನು ಪ್ರಾತಃಕಾಲ ೯ ಘಂಟೆಗೆ ಮುಕ್ತಾಯಗೋ...ದರು ಅನಂತರ ಸದ್ಭಕ್ತಶಿರೋಮಣಿ ವೀರಪ್ಪ ಬಳಿ...ರ ಸಾ॥ ಗರಗ ಇವರ ಭಕ್ತಿಯಿಂದ ಗುರುಪಾದ...ೂಜೆಯೂ ಸಹಸ್ರಬಿಲ್ವಾರ್ಚನೆಗಳೂ ಗಣಾರಾಧ...ಯೂ ಸಾಂಗವಾಗಿ ಜರುಗಿದವು ಸಾಯಂಕಾಲ ೫ ...ಂಟೆಗೆ ಸಭೆ ಸೇರಿತು ಆಗ್ಗೆ ಶಿವಬಸವಶರ್ಮಾ ಹಿರೇ...ಮಠ ಉಗುರುಕೋಡು, ಶ್ರೀಮಾನ್ ಶಂಕರಯ್ಯಾ ...ುಪ್ಪಯ್ಯನಮಠ, ಗಂಗಯ್ಯ ವಸ್ತ್ರದ, ಗರಗದ ಹಿರೇ...ಮಠದ ಮಾಹೇಶ್ವರರು, ಮಠಪತ್ತಿ ಮಡಿವಾಳಯ್ಯಾ, ...ಚ್ ಬಿ ಪಾಟೀಲ, ಹನುಮಂತಗೌಡ ಪಾಟೀಲ, ...ಡಿವಾಳಪ್ಪಾ ಜಕ್ಕಣ್ಣನವರ, ಬಸಪ್ಪಾ ಉಜ್ಜನಿ, ...ುಪಾಕ್ಷಪ್ಪಾ ಬುದ್ರಕಟ್ಟಿ, ಗಂಗಾಧರ ನಲವಡಿ, ...ಸನಿಶೆಪ್ಪಾ ಅಂಗಡಿ, ನಾಗಪ್ಪಾ ಕೊಟಬಾಗಿ, ...ರಪ್ಪಾ ಉಗುರುಕೋಡು, ರುದ್ರಪ್ಪಾ, ಮಹ...ೇವಪ್ಪಾ ಬಳಿಗಾರ, ಮಠದ ಪಂಚಜನರು ಮೊದಲಾದ ...ಭಕ್ತರು ಆಗಮಿಸಿದ್ದರು ಶ್ರೀಸ್ವಾಮಿಗಳು ಅನುಷ್ಠಾನ...ಮಾಪ್ತಿ ಎಂಬ ವಿಷಯವನ್ನು ಕುರಿತು ಅನೇಕ ...ದಾಹರಣೆಗಳ ಪೂರ್ವಕ ಅಮೃತವಾಣಿಯಿಂದ ...ೋಧಿಸಿ ಶ್ರೋತೃವರ್ಗಕ್ಕೆ ಮಹಾನಂದವನ್ನುಂಟು ...ಾಡಿದರು ಆ ಮೇಲೆ ಮಹಾಮಂಗಲವಾಗಿ ಶ್ರೀಜಗ...ರು ಪಂಚಾಚಾರ್ಯರ ಜಯಘೋಷದೊಡನೆ ...ಯು ಸಮಾಪ್ತಿಗೊಂಡಿತು.

ಎಲ್ ಬಿ ಪೋಲೀಸ ಪಾಟೀಲ, ಗರಗ

ಶ್ರೀಜಗದ್ಗುರು ಸಿದ್ಧಲಿಂಗರಾಜೋ ವಿಜಯತೇ ॥

ಶ್ರೀರೇವಣಸಾಂಗತ್ಯ ಪುರಾಣಸಮಾಪ್ತಿ ಮಹೋತ್ಸವ, ಹೊಳಗುಂದಿ

ಬಳ್ಳಾರಿಜಿಲ್ಲಾ ಹೂವಿನಹಡಗಲಿ ತಾಲೂಕು ಹೊಳ...ಂದಿ ಗ್ರಾಮದಲ್ಲಿ ಬಹುದಿವಸಗಳಿಂದಲೂ ಮಳೆಯಾ...ದ ಇದ್ದುದರಿಂದ ಭಕ್ತಾದಿಗಳೆಲ್ಲರೂ ಕೂಡಿ ಗ್ರಾಮದಲ್ಲಿ ...ಾಣ ಪ್ರಾರಂಭಮಾಡಬೇಕೆಂದು ನಿರ್ಧರಿಸಿದವರು...ರಂತೆ ಶ್ರೀಬಳ್ಳನಾಥ ದೇವಸ್ಥಾನದಲ್ಲಿ ತಾರೀಖು ...-೬೫ ನೆಯ ಸೋಮವಾರ ಬ್ರಾಹ್ಮ ಮುಹೂರ್ತದಲ್ಲಿ ...ಗಳ್ಳಿ ಏಕಾದಶವಾರ ರುದ್ರಾಭಿಷೇಕ ಸಹಸ್ರಬಿಲ್ವಾರ್ಚನಾದಿಗಳು ನಡೆದು ಪ್ರಾತಃಕಾಲ ೮ ಘಂಟೆಯಿಂದ ಶ್ರೀರೇವಣಸಾಂಗತ್ಯ ಪುರಾಣಪ್ರವಚನವು ಪ್ರಾರಂಭವಾಗಿ ಮಧ್ಯಾಹ್ನ ೧೨ ಘಂಟೆಗೆ ಮಂಗಲದೊಡನೆ ಪರಿಸಮಾಪ್ತಿಯಾಯಿತು ತರುವಾಯ ಮಹಾಗಣಾರಾಧನೆಯಾಯಿತು ಸಾಯಂಕಾಲ ೫ ಘಂಟೆಯಿಂದ ಶ್ರೀ ಸೋಮನಾಥ ದೇವಸ್ಥಾನದಿಂದ ಶ್ರೀರೇವಣಸಾಂಗತ್ಯ ಪುರಾಣಸಮೇತ ಚರಪಟ್ಟಾಧ್ಯಕ್ಷ ಶ್ರೀ ಉಜ್ಜಯಿನೀ ಒಡೆಯರ ಮಠದ ಶ್ರೀಸಿದ್ಧಲಿಂಗಸ್ವಾಮಿಗಳವರ ಪಂಚಕಲಶಯುಕ್ತ ಪಲ್ಲಕ್ಕಿ ಮಹೋತ್ಸವವು ತಳಿರು ತೋರಣ ರಂಭಾಸ್ತಂಭಗಳಿಂದಲಂಕೃತವಾದ ರಾಜವೀಥಿಯಲ್ಲಿ ಪ್ರಾರಂಭವಾಯಿತು ದೇಶವಿದೇಶೀಯ ವಾದ್ಯಗಳಿಂದಲೂ ವೇದಪಾಠಕರ ವೇದಘೋಷದಿಂದಲೂ ಜಗದಾಚಾರ್ಯರ ಜಯಘೋಷಗಳಿಂದಲೂ ನಭೋಮಂಡಲವು ಮಾರ್ದನಿಗೊಂಡಿತು ಉತ್ಸವದಲ್ಲಿ ಮತಭೇದವಿಲ್ಲದ ಎಲ್ಲಾ ಜಾತಿಪಂಗಡದವರೂ ಭಾಗಿಗಳಾಗಿ ನ ಭೂತೋ ನ ಭವಿಷ್ಯತಿ ಎಂಬಂತೆ ನೆರವೇರಿಸಿದರು ಉತ್ಸವವು ತಮ್ಮ ತಮ್ಮ ಮನೆಯ ಮುಂಭಾಗಕ್ಕೆ ಬಂದ ಕೂಡಲೇ ಸುವಾಸಿನಿಯರು ಕಲಶಯುಕ್ತರಾಗಿ ಆರತಿಯನ್ನು ಬೆಳಗಿ ತಮ್ಮ ಅಚಲವಾದ ಗುರುಭಕ್ತಿಯನ್ನು ತೋರ್ಪಡಿಸುತ್ತಿದ್ದರು ಉತ್ಸವಕ್ಕೆ ಸಹಸ್ರಾವಧಿ ಜನಸಂದಣಿಯು ಕೂಡಿತ್ತು ಅಕಸ್ಮಾತ್ ಆಗಮಿಸಿದ್ದ ಸಬ್ ಇನಾಸ್ಪೆಕ್ಟರ್ ಮತ್ತು ಸರ್ಕಲ್ ಇನ್‌ಸ್ಪೆಕ್ಟರ್ ಸಾಹೇಬರವರ ಯೋಗ್ಯ ವ್ಯವಸ್ಥೆಯಿಂದ ಉತ್ಸವಕ್ಕೆ ದಿವ್ಯವಾದ ಶೋಭೆಯುಂಟಾಗಿತ್ತು ಮೋರಗೇರಿ ಶ್ರೀ ಭಾವಿಲಿಂಗಪ್ಪನವರು (ಜಿಲ್ಲಾ ಬೋರ್ಡುಮೆಂಬರು) ಉತ್ಸವದ ಶೋಭೆಯನ್ನು ವರ್ಣಿಸುತ್ತ ಸಾಗಿದ್ದರು ವೇ॥ ಹಿರೇಮಠದ ಹೆಡ್ ಮಾಸ್ಟರ್ ಕೊಟ್ರ ಬಸವಯ್ಯನವರು ಹಿರೇಮಠದ ಮಹಾಲಿಂಗಯ್ಯನವರು, ಅರಳೆಲೆಮಠದ ಗುರುಸಿದ್ಧಯ್ಯನವರು, ಕಬ್ಬಿಣಕಂಥಿ ಮಠದ ಸಿದ್ಧಾಂತಿ ಶರಣಪ್ಪಯ್ಯನವರು, ಯರ್ಬಕಟ್ಟೆ ಮಠದ ವೀರಯ್ಯನವರು, ಯಜಮಾನ ಪಾಟೀಲ ಲಿಂಗನಗೌಡರು, ಕರಣಂ ಹೇಮಣ್ಣನವರು, ಮುದೇನೂರು ವಿರೂಪಾಕ್ಷಗೌಡರು, ಶ್ಯಾ॥ ಭೀ॥ ಸಿದ್ಧಲಿಂಗಪ್ಪನವರು, ತೋಟಪ್ಪನವರು, ಸಣ್ಣಹಾಲಪ್ಪನವರು, ಪಾಟೀಲು ಗುರುಬಸವನಗೌಡರ ಪುತ್ರ ವೀರನಗೌಡರು, ಭಾವಿಹಳ್ಳಿ ವೀರಾಪುರದ ಕರಿಬಸಪ್ಪನವರು, ಹೊಸಪೇಟೆ ಮುದಿಮಲ್ಲಪ್ಪನವರು, ಮರಿಯಣ್ಣನವರ ಗುಡ್ಡದ ಸಿದ್ಧಪ್ಪನವರು, ಉತ್ತಂಗಿಶ್ಯಾನುಭೋಗರ ಮುದುಕಪ್ಪನವರು, ನಂದಿಹಳ್ಳಿ ಶೆಟ್ರ ಮಹದೇವಪ್ಪನವರು, ಪಾಟೀಲ್ ವೀರಭದ್ರಗೌಡರು, ಮುಸುಕಿನ ಕಲ್ಲಹಳ್ಳಿ ಸಿದ್ಧಲಿಂಗನಗೌಡರು—ಮುತಾದ ವೀರಗುರುಭಕ್ತರು ಉತ್ಸವದಲ್ಲಿ ಭಾಗಿಗಳಾಗಿದ್ದರು ಮಹೋತ್ಸವವು ಈರೀತಿ ಅಸಾಧಾರಣ ವೈಭವದೊಡನೆ ಬಳ್ಳನಾಥದೇವಸ್ಥಾನಕ್ಕೆ ತಲುಪಿದೊಡನೆ ಸ್ವಾಮಿಗಳು ಪಲ್ಲಕ್ಕಿಯಿಂದ ಇಳಿದು ನೆರೆದ ಭಕ್ತವೃಂದಕ್ಕೆ ಸಮಯೋಚಿತ ಸದ್ಬೋಧೆಯನ್ನು ಮಾಡಿದರು ಈ ಸಮಾರಂಭದಲ್ಲಿ ಹಗಲಿರುಳೂ ಅತಿ ದಕ್ಷತೆಯಿಂದ ಕೆಲಸ ಮಾಡಿದ ಬುಕ್ಕಶೆಟ್ಟಿ ಗುರುಸಿದ್ಧಪ್ಪನವರ ಮತ್ತು ಶ್ಯಾನುಭೋಗರ ಪರಮೇಶ್ವರಪ್ಪನವರ ಕಾರ್ಯತತ್ಪರತೆಯು ಅವರ್ಣನೀಯವಾದುದು ಈ ಸಂದರ್ಭದಲ್ಲಿ ಕಾಶೀ ಪೀಠಕ್ಕೂ ಪ್ರಭಾಪೋಷಣಕ್ಕೂ ಐದೈದು ರೂಪಾಯಿಗಳು ಚರಪಟ್ಟಾಧ್ಯಕ್ಷರ ಅಪ್ಪಣೆಯ ಮೇರೆಗೆ ತೆಗೆಯಿಸಲ್ಪಟ್ಟವು ಶ್ರೀಜಗದ್ಗುರು ರೇವಣಸಿದ್ಧನ ಅನುಗ್ರಹದಿಂದ ಮರುದಿನವೇ ಮೇಘರಾಜನು ಸಮೃದ್ಧವಾಗಿ ವೃಷ್ಟಿಗರೆದದ್ದರಿಂದ ಜನರ ಆನಂದಕ್ಕೆ ಪಾರವೇ ಇಲ್ಲದಂತಾಯಿತು ನಿಸ್ಸೀಮಭಕ್ತಿಯಿಂದ ಸೇವೆಮಾಡಿದ ಸರ್ವ ಗುರುಭಕ್ತರಿಗೂ ಜಗದಾಚಾರ್ಯರು ಆಯುರಾರೋಗ್ಯಭಾಗ್ಯಾದಿಗಳನ್ನಿತ್ತು ಕಾಪಾಡಲೆಂದು ಹಾರೈಸುವ

ಗುರುಭಕ್ತ

ಶ್ರೀಕೇದಾರಪೀಠದಬಗ್ಗೆ ನಿವೇದನ

ಅಖಿಲಭಾರತ ವೀರಶೈವ ಐಕ್ಯಸಂಘದಿಂದ ಶ್ರೀ ಟೆಹರಿ ಮಹಾರಾಜರು, ಡೆಪ್ಯುಟಿ ಕಮೀಷನರ್ ಸಾಹೇಬರು ಗಢವಾಲ ಮತ್ತು ಸ್ಪೆಷಲ್ ಆಫೀಸರು ಓಖೀಮಠ ಇವರುಗಳಿಗೆಲ್ಲಾ ತಾ॥ ೨೬ನೆಯ ದಿವಸ ಈ ಕೆಳಗೆ ಕಂಡ ಅಭಿಪ್ರಾಯಗರ್ಭಿತ ವಿಷಯವನ್ನು ತಿಳಿಸಲಾಗಿದ್ದೆಯೆಂದು ಸದರಿ ಸಂಘದ ಅಧ್ಯಕ್ಷರಾದ ಶ್ರೀಮಾನ್ ಎಸ್ ಕೆ ವಡೆಯರ್ ರಿ॥ ಕಲೆಕ್ಟರ್ ರಾಣೆಬೆನ್ನೂರು ಇವರು ತಿಳಿಸುತ್ತಾರೆ

' ಹಿಂದೂಸ್ಥಾನದಲ್ಲಿರುವ ಒಂದುಕೋಟಿ ಜನ ವೀರಶೈವರಿಗೆ ಪರಮಪೂಜ್ಯವಾಗಿರುವ ಶ್ರೀಜಗದ್ಗುರು ಕೇದಾರಪೀಠಕ್ಕೆ ರಾವಲರನ್ನು ಆರಿಸುವಾಗ್ಗೆ ವೀರಶೈವರ ಧಾರ್ಮಿಕ, ಶಾಸ್ತ್ರೀಯ, ಆಧ್ಯಾತ್ಮಿಕರೀತಿಗನುಸಾರವಾಗಿ, ದಕ್ಷಿಣ ಹಿಂದೂಸ್ಥಾನದ ವೀರಶೈವಜಂಗಮ ಮಠಾಧಿಪತಿಗಳ ಉದರದಲ್ಲಿ ಜನಿಸಿದ ಪಂಡಿತರಾದ ಬ್ರಹ್ಮಚಾರಿಗಳನ್ನೇ ಆರಿಸಲು ಮನ್ನಣೆಯನ್ನಿತ್ತಲ್ಲಿ ಅಖಿಲವೀರಶೈವಸಮಾಜಕ್ಕೆ ಒಪ್ಪಿಗೆಯಾಗುವದು ಮತ್ತು ಅಬಾಧಿತವಾಗಿ ನಡೆಯುವದು ಎಂದು ತಮ್ಮಗಳ ಗಮನಕ್ಕೆ ತರಲಾಗಿದೆಯೆಂದು ಈ ಅಖಿಲಭಾರತ ವೀರಶೈವ ಐಕ್ಯಸಂಘವು ತಮ್ಮಗಳಿಗೆ ಶ್ರುತಪಡಿಸಿದೆ

ಜಪಾನ್ ಯುದ್ಧ ನಿಲ್ಲಿಸಿ ಪೂರ್ಣ ಶರಣಾಗಬೇಕು

ಯಾವ ಕರಾರೂ ಇಲ್ಲದೆ ಜಪಾನು ಶರಣಾಗಬೇಕು, ಇಲ್ಲವಾದರೆ ಸಂಪೂರ್ಣವಾಗಿ ನಾಶಪಡಿಸಲಾಗುವುದು ಎಂಬ ಘೋಷಣೆಯನ್ನು ಪೋಟ್ಸ್‌ಡಾಮ್‌ನಲ್ಲಿ ಅಧ್ಯಕ್ಷ ಟ್ರೂಮನ್, ಮಿ॥ ಚರ್ಚಿಲ್ ಮತ್ತು ಜ॥ ಚಿಯಾಂಗ್ ಕೈಶೇಕ್‌ರವರ ಸಹಿಯಿಂದ ಹೊರಡಿಸಲಾಗಿದೆ ಮಿತ್ರ ವಿಮಾನ, ನೌಕಾ ಮತ್ತು ಮಿಲಿಟರಿ ಶಕ್ತಿಗಳು ಜಪಾನನ್ನು ಸುತ್ತುಗಟ್ಟುವ ಮೊದಲೇ ಶರಣಾಗಿ ಕೂಡಲೇ ಯುದ್ಧವನ್ನು ಕೊನೆಗಾಣಿಸಲು ಆಸ್ಪದ ಕೊಡಬೇಕೆಂದು ಈ ಮೂವರು ನಾಯಕರು ನಿರ್ಧರಿಸಿದರು.

ಶ್ರೀಮನ್ಮಹಾರಾಜರವರ ೨೭ನೆಯ ವರ್ಧಂತೀಮಹೋತ್ಸವವು

ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ ಸಿ ಎಸ್ ಐ ಮಹಾಪ್ರಭುಗಳವರು

ಕರ್ಣಾಟಕರತ್ನಸಿಂಹಾಸನಾಧೀಶ್ವರ ಶ್ರೀಜಯಚಾಮರಾಜೇಂದ್ರ ಒಡೆಯರ್ ಮಹಾಪ್ರಭುಗಳವರ ೨೭ನೇ ವರ್ಷದ ವರ್ಧಂತ್ಯುತ್ಸವವು ಈ ದಿವಸ ರಾಜಧಾನಿಯಲ್ಲಿ ಬಹು ವೈಭವದಿಂದ ನೆರವೇರಿತು ಪ್ರಾತಃಕಾಲ ಮಂಗಲ ಸ್ನಾನಾನಂತರ ಮಹಾಪ್ರಭುಗಳವರು ನಿತ್ಯಕರ್ಮಾನುಷ್ಠಾನವನ್ನಾಚರಿಸಿ ಆಯುಷ್ಯಹೋಮಾದಿಗಳು ನಡೆದನಂತರ ಶ್ರೀಗುರುದೇವತಾಪೂಜೆ ಮಾಡಿ ಆಶೀರ್ವಾದಗಳನ್ನು ಪಡೆದು ದಿವ್ಯವಸ್ತ್ರಾಲಂಕಾರಭೂಷಿತರಾಗಿ ಆಯುರ್ವರ್ಷಸೂಚಕಗಳಾದ ೨೭ ಕುಶಾಲುತೋಪುಗಳು ಮೊಳಗುತ್ತಿರಲು ೧೨ ಘಂಟೆಗೆ ಸಜ್ಜಿಗೆ ದಯಮಾಡಿಸಿ ಭದ್ರಪೀಠವನ್ನಲಂಕರಿಸಿದರು ಅಖಿಲ ರಾಜಬಂಧುಗಳೂ ಸಚಿವೋಪಸಚಿವರೂ ಸರ್ಕಾರಿ ಅಧಿಕಾರಿಗಳೂ ನಗರ ಪ್ರಮುಖರೂ ಮಹಾಪ್ರಭುಗಳಿಗೆ ಕ್ರಮದಿಂದ ಮುಜರೆಯನ್ನು ಮಾಡಿ ಅವರವರ ನಿಯಮಿತ ಸ್ಥಳಗಳಲ್ಲಿ ಕುಳಿತರು ಸುಶ್ರಾವ್ಯಗಳಾದ ವಾದ್ಯಧ್ವನಿಗಳೂ, ಗಾನಾಲಾಪಗಳೂ, ಜಯಧ್ವನಿಗಳೂ ಭೂಮ್ಯಂತರಿಕ್ಷಗಳನ್ನು ವ್ಯಾಪಿಸಿದ್ದುವು ಕ್ರಮದಿಂದ ಮಠಾಧಿಕಾರಿಗಳ ಮತ್ತು ವೈದಿಕೋತ್ತಮರ ಆಶೀರ್ವಾದಗಳು ನಡೆದ ಮೇಲೆ ಸಭಿಕರಿಗೆ ಪುಷ್ಪಹಾರಾದಿಗಳ ವಿನಿಯೋಗವಾಗಿ ಸಭೆಯು ಉಪಸಂಹೃತವಾಯಿತು

ಇಂದು ಸಾಯಂಕಾಲ ಮಹಾಪ್ರಭುಗಳವರು ದರ್ಶನೋತ್ಸುಕರಾಗಿ ನೆರೆದ ಪ್ರಜೆಗಳನ್ನು ತೃಪ್ತಿಪಡಿಸಲು ಚತುರಂಗಬಲದಿಂದೊಡಗೂಡಿ ೨೧ ಕುಶಾಲುತೋಪುಗಳು ಹಾರುತ್ತಿರಲು ಸರ್ವಾಲಂಕಾರಭೂಷಿತರಾಗಿ ಉತ್ಸವದೊಡನೆ ಹೊರಡುವರು ಮಹೋತ್ಸವವು ಕೋಟೆಯ [illegible] ಚತುರಂಗಬಲ ಸೈನ್ಯ [illegible] ಮುವರೆಯುವದು [illegible] ದಾರಿಯುದ್ದಕ್ಕೂ ತಮ್ಮ ತಮ್ಮ [illegible] ಪ್ರಸಂಗದಲ್ಲಿ ಹಾರತುರಾಯಿಗಳನ್ನು ಒಪ್ಪಿಸುವದರ ಮೂಲಕ ತಮ್ಮ ರಾಜಭಕ್ತಿಯನ್ನು ಪ್ರದರ್ಶಿಸುವರು. ಉತ್ಸವವು ಸಯ್ಯಾಜಿರಾವ್ ರೋಡ್ ಇರ್ವಿನ್ ರೋಡ್ ಮೂಲಕ ಗೌರ್ನಮೆಂಟ್ ಹೌಸನ್ನು ತಲ್ಪುವದು ಪ್ರಭುಗಳು ಅಲ್ಲಿ ಸೈನಿಕರಿಂದ ಪ್ರದರ್ಶಿಸಲ್ಪಟ್ಟ ಮರ್ಯಾದೆಯನ್ನು ಸ್ವೀಕರಿಸಿದನಂತರ ವಿಶ್ರಾಂತಿಯನ್ನು ತೆಗೆದುಕೊಳ್ಳುವರು ಅನಂತರ ಮಹಾಪ್ರಭುಗಳವರು ಲಕ್ಷಾಂತರ ಎಲೆಕ್ಟ್ರಿಕ್ ದೀಪಗಳಿಂದ ರಚಿತವಾಗಿರುವ ತೋರಣಗಳಿಂದಲಂಕೃತವಾದ ದೊಡ್ಡಪೇಟೆಯ ಮೂಲಕ ಉತ್ಸವದೊಡನೆ ಹೊರಡುವರು ರಾತ್ರಿಯ ಉತ್ಸವವು ಕಣ್ಮನಂಗಳಿಗೆ ಪರಮಾನಂದವನ್ನೀಯುವದು ಇಂತಹ ವೈಭವಯುತವಾದ ವರ್ಧಂತೀಮಹೋತ್ಸವವು ಇಂಡಿಯಾದೇಶದಲ್ಲಿ ಎಲ್ಲಿಯೂ ನಡೆಯುವದಿಲ್ಲವೆಂದು ಬರೆದರೆ ಅತಿಶಯೋಕ್ತಿಯೆನಿಸದು

ಯದುಕುಲಸಂಭೂತರಾದ ನಮ್ಮ ಮಹಾಪ್ರಭುಗಳವರಿಗೆ ಇಂತಹ ವರ್ಧಂತೀಮಹೋತ್ಸವಗಳು ಅನೇಕಾನೇಕವಾಗಿ ನೆರವೇರಿ, ಮೈಸೂರು ದೇಶದ ಪ್ರಜೆಗಳಿಗೆ ಮಹಾಪ್ರಭುಗಳಿಂದ ಅನೇಕವಿಧವಾದ ಸುಖಗಳುಂಟಾಗುವಂತೆ ಅನುಗ್ರಹಿಸಲೆಂದು ಜಗನ್ನಿಯಾಮಕನಾದ ಆ ಪರಮೇಶ್ವರನನ್ನು ಅನನ್ಯಸಾಧಾರಣಭಕ್ತಿಭಾವದಿಂದ ಭಜಿಸುತ್ತೇವೆ

ಶ್ರೀ ಕೇದಾರಪೀಠದ ಸಮಾಚಾರ

ನಾವು ಈ ಮೊದಲು ತಿಳಿಸಿದಂತೆ ಈ ತಿಂಗಳು ೧೮ ನೆಯ ತಾರೀಖಿನ ದಿವಸ ಓಖೀ ಮಠದಲ್ಲಿ ಸ್ಪೆಷಲ್ ಆಫೀಸರರ ಮುಂದೆ ವಾದ ಪ್ರತಿವಾದಗಳು ನಡೆದವು ಉಭಯ ಪಕ್ಷದವರ ವಾದ ಸಮರ್ಥನಕ್ಕಾಗಿ ವಕೀಲರು ಬಂದಿದ್ದರು. ಇದನ್ನು ಕೇಳುವದಕ್ಕಾಗಿ ಆ ಪ್ರಾಂತದ ಸಾವಿರಾರು ಜನರು ಆಗಮಿಸಿದ್ದರು ಸ್ಪೆಷಲ್ ಆಫೀಸರರು ಎಲ್ಲ ವಿಷಯಗಳನ್ನೂ ಸಾವಧಾನದಿಂದ ಕೇಳಿದರು. ಆದರೆ ಕೂಡಲೆ ತೀರ್ಮಾನವನ್ನು ಹೇಳಲಿಲ್ಲ ಅವರು ತಮ್ಮ ರಿಪೋರ್ಟನ್ನು ಡಿಸ್ಟ್ರಿಕ್ಟ್ ಜಡ್ಜರ ಕಡೆಗೆ ಕಳಿಸಿ ಅವರ ಅಭಿಪ್ರಾಯವನ್ನು ತೆಗೆದುಕೊಂಡು ತೀರ್ಮಾನವನ್ನು ಹೇಳುವಂತೆ ತೋರುತ್ತದೆ ಬಹುಶಃ ಇನ್ನು ೭ ೮ ದಿವಸಗಳಲ್ಲಿ ತೀರ್ಮಾನವನ್ನು ಹೇಳಬಹುದು.

ಸರಕಾರದವರು ತಾ|| ೫ ೯ ೧೯೪೫ ನೆಯ ದಿವಸ ಎಲೆಕ್ಷನ್ ನಡೆಯಬೇಕೆಂದು ಆರ್ಡರಾ ಮಾಡಿದ್ದಾರೆ ಸ್ಪೆಷಲ್ ಆಫೀಸರರು ಅನಧಿಕಾರಿಗಳ ಅರ್ಜಿಗಳನ್ನು ವಜಾಮಾಡಿದರೆ ಈ ಕಾರ್ಯವು ಸುಗಮವಾಗಿ ನಡೆಯುವದು ಹಾಗೆ ಮಾಡದಿದ್ದರೆ ಇದರ ನಿರ್ಣಯಕ್ಕಾಗಿ ಸಿವಿಲ್ ಕೋರ್ಟಿಗೆ ಹೋಗಬೇಕಾಗುವ ಪ್ರಸಂಗವು ಪ್ರಾಪ್ತವಾಗಬಹುದು ಶ್ರೀ ಕೇದಾರನಾಥನು ಅಂತಹ ಪ್ರಸಂಗವುಂಟಾಗದಂತೆ ಅನುಗ್ರಹಿಸಲೆಂದು ಆ ಜಗನ್ನಿಯಾಮಕನನ್ನು ಪ್ರಾರ್ಥಿಸುತ್ತೇವೆ.

ಯುದ್ಧವಾರ್ತೆ.

ಪೆಸಿಫಿಕ್ ದ್ವೀಪಗಳು ಅಮೆರಿಕಕ್ಕೆ ಬೇಕೆ ?

'ನಮಗೆ ಒಂದು ತುಂಡು ನೆಲವೂ ಬೇಡ ಎಂದು ಹೇಳಿದ ಟ್ರೂಮನ್ನರ ಮಾತಿನ ಅರ್ಥವು ಶಾಂತ ಸಾಗರಕ್ಕೆ ಅನ್ವಯಿಸುವುದಿಲ್ಲ ಶಾಂತ ಸಾಗರದಲ್ಲಿ ಜಪಾನಿನಿಂದ ಸೆಳೆದುಕೊಳ್ಳಲಾದ ದ್ವೀಪಗಳು ಬೇಕು' ಎಂದು ಅಮೆರಿಕೆಯ ಸೆನೆಟರುಗಳು ವಾದಿಸಲು ಆರಂಭಿಸಿದ್ದಾರೆ

ಒಸಾಕಾ, ನಗೋಯಾ ಮೇಲೆ ಹಗಲಿನಲ್ಲೇ ಘೋರ ದಾಳಿ

೬೦೦ ಅಮೆರಿಕನ್ ಸೂಪರ್ ಫಾರ್ಟ್‌ರೆಸ್ ವಿಮಾನಗಳು ಜಪಾನಿನ ಒಸಾಕಾ, ನಗೋಯಾ ನಗರಗಳ ಮೇಲೆ ಹಗಲಿನಲ್ಲೇ ಭೀಕರ ದಾಳಿ ನಡೆಸಿದುವು ಸುಮಾರು ೬೦೦ ಸೂಪರ್ ಫಾರ್ಟ್ರೆಸ್ ವಿಮಾನಗಳು ಜಪಾನ್ ದಾಳಿಯಲ್ಲಿ ಭಾಗವಹಿಸಿದ್ದು ಇದು ಮೊದಲ ಸಲ ಸುಮಾರು ೪೦೦೦ ಟನ್ ಬಾಂಬು ಹಾಕಲಾಗಿವೆ ಎಂದು ವರದಿಯಾಗಿದೆ

ಪೂರ್ವ ರಣರಂಗಕ್ಕೆ ಹೆಚ್ಚಿನ ಸೇನೆ

ಚೀನೀ ಸೇನೆಯ ನಾಲ್ಕು ದಳಗಳು ಕ್ವಾಲಿನ್ ಕಡೆಗೆ ಮುನ್ನಡೆದು, ನಗರದ ಹೊರ ಪ್ರಾಕಾರದ ರಕ್ಷಣೆಗಳನ್ನು ಭೇದಿಸಿವೆ ಕ್ವಾಲಿನ್‌ನಿಂದ ೯ ಮೈಲಿಗಳ ದೂರದ ಪ್ರದೇಶಕ್ಕೆ ಅವು ಮುಟ್ಟಿವೆ ಜರ್ಮನ್ ರಣರಂಗದಿಂದ ಶಾಂತಸಾಗರಕ್ಕೆ ಕಳುಹಲಾದ ಮೊದಲನೆಯ ಅಮೆರಿಕನ್ ದಳಗಳು ಮನಿಲಾವನ್ನು ತಲುಪಿದುವು ಇದರಲ್ಲಿ ಹೆಚ್ಚಿನವರು ಅಮೆರಿಕನ್ ಎಂಜಿನಿಯರುಗಳು ಮುಂದೆ ಸಾವಿರಾರು ಸೈನಿಕರು ಪಶ್ಚಿಮದಿಂದ ಇಲ್ಲಿಗೆ ಬರಬಹುದೆಂದು ಭಾವಿಸಲಾಗಿದೆ

ಭಾರತೀಯ ಸೈನ್ಯಶಕ್ತಿ ಬೆಳೆದಿದೆ

ಇಂಡಿಯಾ ಆಫೀಸಿನ ಸೈನ್ಯ ಶಾಖೆಯ ಕಾರ್ಯದರ್ಶಿ ...ಸ್ಟ್ ಇಂಡಿಯನ್ ಅಸೋಸಿಯೇಷನ್ನಿಗೆ ವಾರ್ತೆ ...ಡುತ್ತ ಭಾರತೀಯ ಸೈನ್ಯಶಕ್ತಿ ಅಪಾರವಾಗಿ ಬೆಳೆ...ದೆ ಯುದ್ಧ ಪೂರ್ವದಲ್ಲಿದ್ದ ಸಂಖ್ಯೆಗಿಂತ ಇಂದು ಭಾರ...ೀಯದಳ ೧೧ ರಷ್ಟು ಹೆಚ್ಚಾಗಿದೆ ಹಡಗುಪಡೆ ಮೊದ...ಗಿಂತ ೧೫ ರಷ್ಟು ವಾಯುದಳವು ೧೦ ರಷ್ಟು ಹೆಚ್ಚಾ...ದೆ ಎಂದು ತಿಳಿಸಿದರು

...ಮಲಯಾ ಆಕ್ರಮಣ ಸಾಗುತ್ತಿದೆ

ಮಿತ್ರ ಸೈನ್ಯಗಳು ಮಲಯಾ ಭೂಶಿರದ ತುದಿಯ ...ವಾಯುವ್ಯಕ್ಕಿರುವ ದ್ವೀಪದ ಮೇಲೆ ಇಳಿದಿದ್ದಾರೆ ಎಂದು ...ಟೋಕಿಯೋ ರೇಡಿಯೋ ತಿಳಿಸಿದ ಈ ದಾಳಿಯಲ್ಲಿ ...ಸುಮಾರು ೫೦೦ ಸೈನಿಕರು ಭಾಗವಹಿಸಿದ್ದಾರೆಂದೂ ... ದೋಣಿಗಳಲ್ಲಿ ಈ ಸೈನಿಕರು ಒಂದರ...ದ ಹೋಗಿಲ್ಲಾ...ದೆ ಕಾದಾಟವು ಕರಾವಳಿಯಲ್ಲಿ ನಡೆಯುತ್ತಲಿದೆ ...ಈ ದ್ವೀಪವು ರಂಗೂನಿನಿಂದ ೬೦೦ ಮೈಲಿಗಳ ದಕ್ಷಿಣ...ದೆ ಎಂದು ತಿಳಿದುಬರುತ್ತದ

ಗ್ರೀಕ್ ಸೈನ್ಯದ ಸಿದ್ಧತೆ

ಬ್ರಿಟಿಷರು ಬಲವಾದ ಗ್ರೀಕ್ ಸೇನೆಯ ತಬೇತು ...ಡುತ್ತಿದ್ದಾರೆ ಅದನ್ನು ಸಶಸ್ತ್ರಗೊಳಿಸುತ್ತಿದ್ದಾರೆ ...ಗಿನ ಯೋಜನೆಯಂತೆ ೨॥ ಲಕ್ಷ ಸೈನಿಕರ ಸೈನ್ಯವನ್ನು ...ದ್ಧಪಡಿಸಲಾಗುವುದು ೩ ನೇ ಮಹಾಯುದ್ಧದ ಪ್ರತಿ...ಮಿನೀತಿಯ ಅಸ್ತಿಭಾರ ಇದು ಎಂದು ಸುದ್ದಿ ಹೊರಟಿದೆ

ಜಪಾನ್ ಪರ್ವತಾವಳಿಯಲ್ಲಿ ಫ್ಯಾಕ್ಟರಿಗಳು

...ಜಪಾನಿಗಳು ಜಪಾನಿನ ಪರ್ವತಾವಳಿಯಲ್ಲಿ ಭದ್ರ...ವಾಗಿ ಅನೇಕ ಫ್ಯಾಕ್ಟರಿಗಳನ್ನು ನಿರ್ಮಿಸಿದ್ದಾರೆಂದೂ ...ವೆಲ್ಲಕ್ಕೂ ಹೈಡ್ರೋಲಿಕ್ ಪವರ್ ಉಂಟೆಂದೂ, ಅವು...ಗಳ ಬಾಗಿಲುಗಳು ತೀರ ಸಣ್ಣವಿದ್ದು ಕೇವಲ ಒಂದು ...ಸಾರಿಗೆ ಇಬ್ಬರು ಮಾತ್ರ ಪ್ರವೇಶಿಸಬಹುದೆಂದೂ ಟೋಕಿ...ಯೋ ರೇಡಿಯೋ ತಿಳಿಸಿದ

...ಬರ್ಮಾದಲ್ಲಿ ಜಪಾನೀಯರ ದುರ್ಗತಿ

ರಂಗೂನ್-ಮಾಂಡಲೆ ದಾರಿಯಲ್ಲಿ ಭತ್ತದ ಹೊಲ...ಗಳಲ್ಲಿ ಕೊನೆಯ ಹೋರಾಟ ನಡೆಯುತ್ತಿದೆ ಸಿಟ್ಟಾಂಗ್ ...ಕಡೆ ತಪ್ಪಿಸಿಕೊಂಡು ಹೋಗಲು ಯತ್ನಿಸುತ್ತಿರುವ ...ಸುಮಾರು ೫೦೦೦ ಜಪಾನೀ ಸೈನಿಕರು ಅಪಾಯಕ್ಕೆ ...ಗುರಿಯಾಗಿದ್ದಾರೆ ಆಗಲೇ ಸುಮಾರು ೫೦೦ ಜಪಾನೀ...ಯರು ಅಳಿದಿದ್ದಾರೆ ಆದರೆ ಸಿಟ್ಟಾಂಗ್ ನದಿಯು ...ಸುಮಾರು ಸಾವಿರ ಅಡಿ ಅಗಲವಿದೆ, ಅದನ್ನು ದಾಟಿ ...ಹೋಗುವುದು ಅತಿ ಕಠಿಣ ಕಾರ್ಯ ಪ್ರಾಣ ...ಉಳಿಸಿಕೊಳ್ಳಲು ಯತ್ನಿಸುತ್ತಿರುವ ಈ ಸೈನಿಕರ ...ಯನ್ನು ನೋಡುತ್ತ ಇನ್ನೂ ಸುಮಾರು ೩೫೦೦ ...ಸೈನಿಕರು ಬೆಟ್ಟದ ಮರೆಯಲ್ಲಿ ಅಡಗಿ ಕುಳಿತಿದ್ದಾರೆ ...ಎಂದು ತಿಳಿದು ಬಂದಿದೆ

ಚೀನ ನಾಶದ ಆರಂಭ?

...ಚಿಯಾಂಗರ ಕೊಮಿಂಗ್‌ಟಂಗ್ ಸರಕಾರದ ಸೈನ್ಯ...ವು ಜಪಾನೀ ರಣರಂಗವನ್ನು ಬಿಟ್ಟು ಸಿಯಾನ್‌ನ ೫ ...ಮೈಲಿಗಳ ಉತ್ತರದಲ್ಲಿ ಚೀನಾದ ಕಮ್ಯುನಿಸ್ಟ ಸೈನ್ಯಗಳ ...ಮೇಲೆ ತಿರುಗಿ ಬಿದ್ದಿವೆ ಎಂದು ಯೆನಾನ್ ರೇಡಿಯೋ ...ತಿಳಿಸಿದೆ ಚುಂಗ್‌ಕಿಂಗ್‌ನಿಂದ ೩೦೦ ಮೈಲಿಗಳ ...ದೂರದ ಸಿಯಾನ್‌ನಿಂದ ಈ ಬಗ್ಗೆ ತಂತಿ ಬಂದಿದೆ ...ಎಂದೂ, ಮಾ|| ಚಿಯಾಂಗರಿಗೂ ತಂತಿ ಹೋಗಿದೆ ...ಎಂದೂ ಹೇಳಲಾಗಿದೆ ೯ ಡಿವಿಜನ್‌ಗಳನ್ನು ರಣರಂಗ...ದ ಹಿಂತಿರುಗಿಸಲಾಗಿದ ಸೈನ್ಯ ಸಾಗಿಸುವುದಕ್ಕಾಗಿ ...ನಾಗರಿಕರ ಸಂಚಾರ ನಿಲ್ಲಿಸಲಾಗಿದೆ ಈ ಸೈನ್ಯಗಳಿಗೆ ...ಕಮ್ಯುನಿಸ್ಟ್ ಪಾರ್ಟಿಯನ್ನು ಎದುರಿಸುವುದು ಮೊದಲ ...ಕೆಲಸ, ಜಪಾನನ್ನಿದಿರಿಸುವುದು ಎರಡನೆಯ ಕೆಲಸ ವಾಗಿದೆ ಚೀಣೀ ಕಮ್ಯುನಿಸ್ಟರ ನೆಲೆಯನ್ನು ಹುಡಿಗೂಡಿ ಸಲು ನಿರ್ಧರಿಸಲಾಗಿದೆ ಕಳೆದ ೨೧ ನೆಯ ತಾ|| ಚೀನೀ ಸರಕಾರದ ಸೇನೆಯು ೫೯ ನೇ ಡಿವಿಜನ್ ಪಕ್ಕಕ್ಕೆ ತಿರುಗಿ ಕಮ್ಯುನಿಸ್ಟರ ಮೇಲೆ ಬಿತ್ತು ಸಿಯಾನಿ ನಿಂದ ೬೫ ಮೈಲಿಗಳ ಅಂತರದ ಚುಂಗೋ ಗಡಿಯನ್ನು ಭೇದಿಸಲೆತ್ನಿಸಿತು ಈ ಸುದ್ದಿ ಮುಟ್ಟುವ ಕಾಲದವರೆಗೆ ಮೂರು ದಿನಗಳ ಭೀಷಣ ಹೋರಾಟ ಆಗಲೇ ನಡೆದಿದೆ ಈ ಕಾದಾಟ ನಿಲ್ಲುವಂತೆ ಕಂಡುಬರುವುದಿಲ್ಲ

ಬರ್ಲಿನ್ನಿನಲ್ಲಿ ಅನ್ನವೇ ಇಲ್ಲ

ಬ್ರಿಟನ್ನಿನ ಬೇಸಾಯ ಆಹಾರ ಶಾಖೆಯ ಮಂತ್ರಿಗಳು ಜರ್ಮನಿಯಲ್ಲಿ ಪ್ರವಾಸಮಾಡಿ ಅಲ್ಲಿನ ಆಹಾರ ಪರಿಸ್ಥಿತಿ ಯನ್ನು ಪರಿಶೀಲಿಸುತ್ತಿದ್ದಾರೆ ಬ್ರಿಟಿಷ್ ಆಕ್ರಾಂತ ಜರ್ಮನಿಯಲ್ಲಿ ಯುದ್ಧ ಕೈದಿಗಳನ್ನು ಬಿಟ್ಟರೆ ಉಳಿದ ಜರ್ಮನರಿಗೆ ಅನ್ನ ಸಿಗದ ಸ್ಥಿತಿಯಾಗಿದೆ ಜನವೆಲ್ಲ ಅರೆಹೊಟ್ಟೆಗಾಗುವಷ್ಟು ಮಾತ್ರ ಆಹಾರ ದೊರಕಿಸು ತ್ತಿದ್ದಾರೆಂದು ಹೇಳಲಾಗಿದೆ

ಇಂಗ್ಲೆಂಡಿನ ಚುನಾವಣೆಯಲ್ಲಿ ಲೇಬರ್ ಪಕ್ಷಕ್ಕೆ ಜಯ

ಇಂಗ್ಲೆಂಡಿನಲ್ಲಿ ನಡೆದ ಮಹಾ ಚುನಾವಣೆಯಲ್ಲಿ ಈವರೆಗೆ ಗೊತ್ತಾದಂತೆ ಲೇಬರ್ ಪಾರ್ಟಿಗೆ ೪೧೨ ಮತ್ತು ಕನ್‌ಸರ್ವೇಟಿವ್ ಪಕ್ಷಕ್ಕೆ ೨೧೦ ಸ್ಥಾನಗಳು ದೊರೆತಿವೆ ಚರ್ಚಿಲ್ಲರವರ ಮಂತ್ರಿಮಂಡಲದ ೧೫ ಮಂದಿ ಮಂತ್ರಿ ಗಳು ಸೋತರು ಈಗಿನ ಬ್ರಿಟಿಷ್ ಮಹಾ ಚುನಾವಣೆ ಯಲ್ಲಿ ಲೇಬರ್ ಪಕ್ಷಕ್ಕೆ ಅದ್ಭುತ ವಿಜಯವಾಗಿದೆ ಇಂಡಿಯಾ ಸೆಕ್ರೆಟರಿ ಮಿ|| ಲಿಯೋಪೋಲ್ಡ್ ಅಮೆರಿ ಯವರು ಯುದ್ಧ ಮಂತ್ರಿ ಸರ್ ಜೇಮ್ಸ್ ಗ್ರಿಗ್ ಫಸ್ಟ್ ಲಾರ್ಡ್ ಆಫ್ ಅಡ್ಮಿರಾಲಿಟಿ ಮಿ|| ಬ್ರೆಂಡನ್ ಬ್ರೇಕನ್ ಮಿ|| ಹೋರ್ ಬೆಲಿಷಾ, ವಿಮಾನ ಕಾರ್ಯದರ್ಶಿ ಮಿ|| ಹೆರಾಲ್ಡ್ ಮಿಕ್‌ಮಿಲನ್ ವಿದ್ಯಾಮಂತ್ರಿ ಮಿ|| ರಿಚರ್ಡ್ ಲಾ, ಸರ್ ವಿಲಿಯಂ ಬೆವರಿಜ್, ಸುದ್ದಿಖಾತೆಯ ಮಂತ್ರಿ ಬ್ರಾಕೆನ್ ಬ್ರಾಯ್ಡ್ ಪಿನನ್ ಮಂತ್ರಿ ಸರ್ ವಾಲ್ಟರ್ ಸ್ಮಿತ್ ... ಇವರೆಲ್ಲ ಪರಾಜಿತರಾದರು ಮಿ|| ಚರ್ಚಿಲ್, ಮಿ|| ಅಂತೋನಿ ಈಡನ್, ಸರ್ ಸ್ಟಾಫರ್ಡ್ ಕ್ರಿಪ್ಸ್, ಮಿ|| ಆರ್ಥರ್ ಗ್ರೀನ್‌ವುಡ್ ಇವರೆಲ್ಲ ತಮ್ಮ ಸ್ಥಾನಗಳನ್ನು ಉಳಿಸಿಕೊಂಡರು ಲೇಬರ್ ಪಾರ್ಟಿಯ ನಾಯಕರಾದ ಮಿ|| ಅಟ್ಲಿಯವರು ಚುನಾಯಿತರಾದರು ಮಹಾಪ್ರಧಾನ ವಿನ್‌ಸ್ಟನ್ ಚರ್ಚಿಲರು ರಾಜಿನಾಮೆ ಯಿತ್ತರು ಒಡನೆಯೇ ಮಿ|| ಅಟ್ಲಿ ಯವರು ಚಕ್ರವರ್ತಿಗಳ ಆಹ್ವಾನದಂತೆ, ಹೊಸ ಸರಕಾರ ರಚಿಸಲು ಒಪ್ಪಿಕೊಂಡರು

ದೇಶದ್ರೋಹದ ಆಪಾದನೆಗೆ ಗುರಿಯಾಗಿರುವ ಫ್ರಾನ್ಸಿನ ಮಹಾ ಪ್ರಧಾನಿ ಮಾ|| ಪೀಟೆನ್ನರ ಹೇಳಿಕೆ

ಮಾ|| ಪೀಟೆನ್‌ರವರಿಗೆ ದೇಶದ್ರೋಹದ ಆಪಾದ ನೆಯ ಮೇಲೆ ಮರಣದಂಡನೆಯು ವಿಧಿಸಲ್ಪಡಬೇಕೆಂದು ನಡೆಯುತ್ತಿರುವ ವಿಚಾರಣೆಯ ಕಾಲಕ್ಕೆ ಕೋರ್ಟನ್ನು ಸಂಬೋಧಿಸಿ—'ನನ್ನ ಪ್ರಾಣವು ಮಹತ್ವವಲ್ಲ ಆದರೆ ಇಡೀ ಜಗತ್ತಿನ ಮುಂದೆ ನಾನು ಸಾರಿ ಹೇಳುತ್ತೇನೆ— 'ನೀವು ನನ್ನನ್ನು ದಂಡಿಸುವುದಾದರೆ—ಕೇವಲ ನಿರ ಪರಾಧಿಯನ್ನು ಶಿಕ್ಷಿಸಿದಂತಾಗುತ್ತದೆ ತಲೆತಲಾಂತರ ವಾಗಿ ದೇವರೇ ನಿಮ್ಮ ತೀರ್ಮಾನಕ್ಕೆ ಉತ್ತರ ಕೊಡು ವನು ಫ್ರಾನ್ಸಿನ ಜನತೆ ನನಗೆ ಅಧಿಕಾರ ಕೊಟ್ಟಿತು ನಾನು ಜನತೆಗೆ ನನ್ನ ವರದಿಯನ್ನು ಒಪ್ಪಿಸಿದ್ದೇನೆ ಈ ಕೋರ್ಟು ಫ್ರೆಂಚ್ ಜನರ ಪ್ರಾತಿನಿಧ್ಯವನ್ನು ಪಡೆ ದಿಲ್ಲ ನಾನು ನಿಮ್ಮ ಪ್ರಶ್ನೆಗಳಿಗೆ ಉತ್ತರವೀಯಲಾರೆ ಜನರಲ್ ಡಿ ಗಾಲೆ ಹೋರಾಟವನ್ನು ಮುಂದುವರಿಸು ತ್ತಿದ್ದಾಗ, ಗಾಯಗೊಂಡರೂ ಬದುಕಿದ್ದ ಫ್ರಾನ್ಸನ್ನು ಜತೆಗೂಡಿಸಿ ನಾನು ಬಿಡುಗಡೆಗೆ ಸಿದ್ಧತೆ ಮಾಡಿದೆ ನನ್ನ ವಯಸ್ಸು, ಅಶಕ್ತಿ ಎಷ್ಟೇ ಇರಲಿ, ಫ್ರಾನ್ಸಿನ ಎಲ್ಲ ಬಿನ್ನ ಹಗಳನ್ನು ನಾನು ಪಾಲಿಸಿದ್ದೇನೆ ದೇಶದ ಇತಿಹಾಸದ ಅತ್ಯಂತ ದುರಂತ ಸಂದರ್ಭದಲ್ಲಿ ದೇಶವು ಪುನಃ ತಿರುಗಿ ದುದು ನನ್ನ ಕಡೆಗೆ ಆದರಿಂದಲೇ ಈ ದುರಂತಕ್ಕೆ ನಾನು ಕಾರಣನಾದೆನಲ್ಲದೆ ನಾನು ಅದರ ಕರ್ತೃವಲ್ಲ. ನಿಜವಾದ ಕಾರಣ ಕರ್ತೃಗಳು ಮಹಾ ಜನಸಮು ದಾಯದ ಉಗ್ರ ಆಕ್ರೋಶವನ್ನು ತಪ್ಪಿಸಿಕೊಳ್ಳಲು ಅಡ ಗಿಕೊಂಡಿದ್ದಾರೆ ಶಸ್ತ್ರ ಸನ್ಯಾಸ ಫ್ರಾನ್ಸಿನ ಮೇಲೆ ಸೇಡು ತೀರಿಸಿಕೊಂಡಿತು ಆದರೆ ಭೂಮಧ್ಯ ಸಾಗರದಲ್ಲಿ ಸ್ವಾತಂತ್ರ್ಯವಿತ್ತು ಸಾಮ್ರಾಜ್ಯ ಉಳಿಸಿಕೊಂಡು ಮಿತ್ರರ ವಿಜಯಕ್ಕೆ ಸಹಕಾರಿಯಾಯಿತು ನನಗೆ ಅಧಿಕಾರ ನ್ಯಾಯವಾಗಿಯೇ ದೊರೆಯಿತು ಕ್ರೈಸ್ತ ಧರ್ಮ ಗುರು ಗಳಾದಿಯಾಗಿ ಸೋವಿಯೆಟ್ ಯೂನಿಯನ್ ವರೆಗೆ ಎಲ್ಲರೂ ಇದನ್ನೊಪ್ಪಿದ್ದಾರೆ ನಾನು ಆ ಅಧಿಕಾರವನ್ನು ಫ್ರೆಂಚ್ ಜನತೆಯನ್ನು ರಕ್ಷಿಸಲು ಉಪಯೋಗಿಸಿದೆನು ಪ್ರತಿದಿನ ವೈರಿಯ ಕತ್ತಿ ನನ್ನ ಕತ್ತನ್ನು ಕಡಿಯಲು ನಿಂತಿದ್ದರೂ ನಾನು ವೈರಿಯನ್ನೆದುರಿಸಿ ನಿಮ್ಮನ್ನುಳಿಸಲು ಎಷ್ಟು ಯತ್ನಿಸಿದ್ದೇನೆ ಎಂಬುದನ್ನು ಇತಿಹಾಸ ಹೇಳೀತು' ಎಂದು ಹೇಳಿದರು

ವಧುವಿನ ಧೈರ್ಯದಿಂದ ವೃದ್ಧ ವಿವಾಹ ತಪ್ಪಿತು

ಝಾಂಸಿ ಡಿ|| ಉಜಯಿ ನಗರದ ೧೬ ವರ್ಷದ ಯುವತಿಯನ್ನು ೬೦ ವರ್ಷದ ಮುದುಕನಿಗೆ ಕೊಡಬೇ ಕೆಂದು ನಿಶ್ಚಯವಾಗಿ ಮದುವೆಯ ಸಕಲ ಸಿದ್ಧತೆಗಳೂ ಮುಗಿದವು ಆದರೆ ಅಕ್ಷತಾರೋಪಣೆಗಿಂತ ಮೊದಲು ಮದುಮಗಳು ಮುಖದ ಮೇಲಿನ ಮುಸುಕನ್ನು ತೆಗೆ ದೊಗೆದು ಧೈರ್ಯದಿಂದ ಮುಂದೆಬಂದು— ಅಯ್ಯಾ! ನೀನು ನನ್ನ ತಂದೆಗಿಂತ ಹಿರಿಯನು ಈ ನಿನ್ನ ಕೃತಿ ಯಿಂದ ನಿನ್ನ ಮತ್ತು ನನ್ನ ಜೀವನವನ್ನು ಏಕೆ ಹಾಳು ಮಾಡಿಕೊಳ್ಳುತ್ತಿರುವೆ? ನಾನು ನಿನ್ನನ್ನು ಪ್ರೀತಿಸು ವುದು ಸಾಧ್ಯವಿಲ್ಲ ನನ್ನ ದೇಹದ ಮೇಲೆ ನಿನಗೆ ಅಧಿ ಕಾರ ದೊರೆಯಬಹುದಲ್ಲದೆ ನನ್ನ ಹೃದಯದ ಮೇಲೆ ಶಕ್ಯವಿಲ್ಲ ಆದುದರಿಂದ ನೀನು ನನ್ನನ್ನು ಮಗಳೆಂದು ಭಾವಿಸಿ ಆಶೀರ್ವದಿಸು ಎಂದು ಬೇಡಿಕೊಂಡಳು ಮುದುಕನು ವಧುವಿನ ಮುಖದಿಂದ ಹೊರಟ ಕರುಣಾ ಜನಕವಾದ ಮಾತುಗಳನ್ನು ಕೇಳಿ 'ಅಮ್ಮಾ! ಇಂದಿ ನಿಂದ ನೀನು ನನ್ನ ಮಗಳೆಂದು ಭಾವಿಸುವೆ ಪರಮಾ ತ್ಮನು ನಿನಗೆ ಕಲ್ಯಾಣಮಾಡಲಿ ಎಂದು ಹೇಳಿ ಮದು ವೆಯ ಮಂಟಪವನ್ನು ಬಿಟ್ಟು ಹೊರಟುಹೋದನು

ಸ್ವೀಕಾರ

ಬಳ್ಳಾರಿ ಡಿ|| ಹೂವಿನ ಹಡಗಲಿ ತಾ|| ಹೊಳಗುಂದಿ ಗ್ರಾಮದಲ್ಲಿ ನೆರವೇರಿದ ಪುರಾಣಸಮಾಪ್ತಿ ಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಉಜ್ಜಯಿನೀ ಒಡೆಯರ ಮಠದ ಶ್ರೀ ಚರಪಟ್ಟಾಧ್ಯಕ್ಷರ ಅಪ್ಪಣೆ ಮೇರೆಗೆ ತೆಗೆಯಿಸಿದ 5 ರೂ ಗಳು, ಸದರಿ ಗ್ರಾಮ ನಿವಾಸಿಗಳಾದ ಶ್ರೀ ಪಾಟೀಲ ಗುರುಬಸವನಗೌಡರಿಗೆ ವಿಷಪ್ರಯೋಗದಿಂದುಂಟಾಗಿದ್ದ ಕಾಯಿಲೆಯು ಶ್ರೀ|| ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ದಿವ್ಯನಾಮಸ್ಮರಣೆ ಯಿಂದ ಪೂರ್ಣ ಗುಣಮುಖವಾದ ಸಂತೋಷಕ್ಕಾಗಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂ ಒಟ್ಟು 6 ರೂ ಗಳು ಹೂವಿನ ಹಡಗಲಿ ಗುರುಚರಣಕಿಂಕರ ಶ್ರೀಯುತ ನೆಲ್ಲಿನ ಗುರುಲಿಂಗಪ್ಪನವರ ದ್ವಾರಾ ತಲ್ಪಿರುತ್ತವೆ

ಧಾರವಾಡ ಡಿ|| ಗದಗ ಗ್ರಾಮದ ಮಳೆಮಠಾಧ್ಯಕ್ಷ ರಾದ ಶ್ರೀಶಿವಶಂಕರಶಿವಾಚಾರ್ಯಸ್ವಾಮಿಗಳವರು ಶಿವ ಯೋಗಾನುಷ್ಠಾನವನ್ನು ಸಮಾಪ್ತಿಗೊಳಿಸಿದ ಸಮಯ ದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ. ಗಳು ಮ|| ರಾ|| ವೀರಪ್ಪ ಒಳಗಾರ ಇವರದ್ವಾರಾ ತಲ್ಪಿರು ತ್ತವೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ

ಕಾಗದದ ಬೆಲೆಯು ವಿಶೇಷವಾಗಿ ಏರಿರುವುದರಿಂದ ಕೆಲವು ಗ್ರಂಥಗಳ ಮತ್ತು ಫೋಟೋಗಳ ಬೆಲೆಯನ್ನು ಸ್ವಲ್ಪ ಹೆಚ್ಚಿಸಿದ್ದೇವೆ

ಮನೋಹರವಾದ ಫೋಟೋಗಳು

ಶ್ರೀ ರೇಣುಕಾಚಾರ್ಯರ ಒಂಭತ್ತು ಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೨—೬—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುವು) ಸೈಜು ೧೪×೧೦ ಬೆಲೆ	೦—೬—೦
ಪಂಚ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೨—೩—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೨—೧—೬
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೨—೬
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೨—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ತಳೆತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೨—೨—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೨—೧—೬
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೨—೧—೬

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿಪ್ಪದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು. ವೀರಶೈವಮತದಲ್ಲಿ ಸದ್ಯಃ ದೊರೆಯುತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು. ಈ ಗ್ರಂಥವು ಈಗ್ಗೆ ಸುಮಾರು **೨ಸಾವಿರ** ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವುದು. ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ವಾಚಕರಿಗೆ ವೇದ್ಯವಾಗುವುದು. ವಾಚಕರ ಅನುಕೂಲಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೩೩೨ ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೨ ರೂಪಾಯಿ.**

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು ೨ನೆಯ ಆವೃತ್ತಿ)	೧| ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಶ್ರೀಕರಭಾಷ್ಯಂ (ಮೊದಲ ಸೂತ್ರ)	೧| ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧|| ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	**4 As**
The Philosophical Aspect of Virasaivism (*English*)	**8 As**
Speeches by Pandit Shri Kashinatha Shastriji (*English*)	**12 As**
लिंगधारणचंद्रिका (संस्कृत)	३ रु
वीरशैवरत्न (मराठी)	१ रु
महानारायणोपनिषत् (वीरशैवभाष्य-संस्कृत)	१ रु
सिद्धांतशिखामणिः (मूल)	८ आ
नंदिकेश्वरकारिका (संस्कृत)	२ आ

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ೪ ಆಣೆ ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೧೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೬ನೇ ಆಗಸ್ಟ್ ೧೯೪೫ [ಸಂಚಿಕೆ ೧೨

ಕೆಲವು ಸಮಸ್ಯೆಗಳಿಗೆ ಸಮಾಧಾನ

— —

ಲೇ—ಶ್ರೀ ಸದಾಶಿವಮೂರ್ತಿ

. ಲಿಂಗಾಯತ ಶಬ್ದದ ವಾದ —

ಈ ಕಾಲದಲ್ಲಿ ಕಲವರು ' ಲಿಂಗಾಯತ ಶಬ್ದವು ಸಂಸ್ಕೃತವೆಂದು ಸಮರ್ಥಿಸುತ್ತಿರುವುದು ಆಶ್ಚರ್ಯಕರವಾಗಿದೆ ಕನ್ನಡಕ್ಷರಗಳನ್ನೂ ಸಹ ತಿದ್ದಿಕೊಳ್ಳಲು ಬಾರದವರೆಲ್ಲ ಈಗ ಬರೆಯುವ ಲೇಖಗಳನ್ನು ಕಣ್ಣು ಮುಚ್ಚಿಕೊಂಡು ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದಾರೆ ಅಂತಹವರಿಗೆಲ್ಲ ಉತ್ತರ ಬರೆಯುವುದು ಸಾಧ್ಯವೇ ?— ಅವರೆಲ್ಲ ಮೊದಲನೆಯ ತರಗತಿಯಿಂದ ಮತ್ತೆ ಓದಬೇಕು

ಶಿವದೀಕ್ಷೆಯಲ್ಲಿ " ಭೂತಿಪಟ್ಟ ...... ಲಿಂಗಾಯತ್ತ ಲಿಂಗಸ್ವಾಯತ್ತ ' ಎಂಬ ಸಪ್ತವಿಧ ಭೇದಗಳವೆ ಇವು "ಲಿಂಗವು ತನಗೆ ಸ್ವಾಧೀನ, ತಾನು ಲಿಂಗಕ್ಕೆ ಅಧೀನ ' ಎಂಬ ಅರ್ಥವುಳ್ಳವಾಗಿವೆ ಲಿಂಗಾಯತ್ತವು ದೀಕ್ಷಾಭೇದದ ಒಂದು ಹೆಸರು ಇದು ವೀರಶೈವ ಧರ್ಮಬೋಧಕವೂ ಅಲ್ಲ, **" ಲಿಂಗಾಯತ್ "** ಶಬ್ದವೂ ಅಲ್ಲ ಸಂಸ್ಕೃತ ಭಾಷಾ ಪರಿಚಯವಿಲ್ಲದವರು 'ಲಿಂಗಾಯತ್ತ' ದೀಕ್ಷೆಯನ್ನು ' ಲಿಂಗಾಯತ ದೀಕ್ಷೆಯೆಂದು ಕೆಲವೆಡೆ ಬರೆದಿದ್ದಾರೆ ಕೆಲವು ಕಡೆ ಲಿಂಗಾಯತ್ತ ನೆಂದು ಸ್ಪಷ್ಟವಾಗಿಯೇ ಮುದ್ರಿತವಾಗಿದೆ ವಾರಪವರ ಸಬಾರ ಸಂಗ್ರಹ ' ವನ್ನಾದರೂ ನೋಡಬೇಕು ಹಾಲವಿಯವರುದಾಹರಿಸಿದ ಕನ್ನಡ ವಚನಗಳಲ್ಲಿಯೂ ತ ' ಮಾತ್ರಯೆಂದರೆ ' ತ ಎಂಬ ಒತ್ತಕ್ಷರವು ಬಿಟ್ಟು ಹೋಗಿವೆ ಆದರೂ ಅದು ದೀಕ್ಷಾಸಮಾಚಾರವೆಂದು ಸಹಜವಾಗಿಯೇ ತಿಳಿಯುವುದು ಅದು ಧರ್ಮಬೋಧಕ ಶಬ್ದವೇ ಅಲ್ಲ ಹಾಗಾದರೆ ' ಲಿಂಗಸ್ವಾಯತ್ತ ಭೂತಿಪಟ್ಟಾಯತ್ತ " ಎಂಬ ಶಬ್ದಗಳೂ ವೀರಶೈವ ಧರ್ಮಬೋಧಕವಾಗಬೇಕಲ್ಲವೆ ? ಈಚಿಗೆ ವೇಶವಾಲಂತಾದವರ ಅನುಯಾಯಿಗಳು ಇವರಿಗೆ **" ಲಿಂಗಾಯತ್ "** ಎಂದು ಹೆಸರಿಟ್ಟರು ಅದೀಗ ಲಿಂಗಾಯತ ಎಂದು ಬರೆಯಲಾಗುತ್ತಿದೆ ಲಿಂಗಧಾರಿಗಳಿಗೆ **" ವೀರಶೈವ "** ಎಂಬುದೇ ನಿಜವಾದ ನಾಮ ಶಾಸ್ತ್ರ, ಲೋಕ ಎರಡರಲ್ಲಿಯೂ " ಲಿಂಗಾಯತ " ಎಂಬ ವ್ಯವಹಾರವು ಪೂರ್ವಕಾಲದಲ್ಲಿ ಇವರಿಗಿತ್ತೆಂದು ಸಪ್ರಮಾಣವಾಗಿ ರೂಪಿಸಿದರೆ ಸಾವಿರ ರೂಪಾಯಿ ಬಹುಮಾನ ಕೊಡಬಹುದು ದುರ್ವಾದಿಗಳ ಅಜ್ಞಾನಿಗಳ ಸಂಖ್ಯೆಯು ಹೆಚ್ಚಿರುವುದರಿಂದ ಓಟಿನ ಬಲ ವಿಪಕ್ಷಿಗಳಿಗೆ ಸಿಕ್ಕಬಹುದು

. ವೇದಮೂರ್ತಿ ; ವೈದಿಕತ್ವ :—

ಇನ್ನು ಕೆಲವರು " ವೇದಮೂರ್ತಿ " ಶಬ್ದವನ್ನು ಪ್ರಯೋಗಿಸಕೂಡದೆಂದು ಬರೆಯುತ್ತಿದ್ದಾರೆ ಪಂಚಾಕ್ಷರೀ ಮಹಾಮಂತ್ರವು ವೇದಪ್ರೋಕ್ತವಾಗಿದ್ದು ಅದನ್ನು ವಂಶಪರಂಪರೆಯಿಂದ ಶಿಷ್ಯಕೋಟಿಗೆ ಉಪದೇಶಿಸುತ್ತಿರುವ ಗುರುವಂಶೀಯರು ವೇದಮೂರ್ತಿಗಳಾಗಿರುವುದು ಸಪ್ರಮಾಣವೂ ಸಯುಕ್ತಿಕವೂ ಆಗಿದೆ ವೇದಪಠನ ಪಾರನಾಧಿಕಾರವಿಲ್ಲದವರಿಗೆ ಇದು ಸಲ್ಲದು ವೈದಿಕ ಎಂದರೆ ವೇದಸಂಬಂಧವುಳ್ಳವನೆಂದರ್ಥ ಆ ಸಂಬಂಧವು ಕೊಂಚವಾಗಿಯೋ ಬಹಳವಾಗಿಯೋ ಇರಬಹುದು ವೇದೋಕ್ತ ಯಜ್ಞಾದಿಗಳನ್ನು ಮಾಡಿದವನೇ ವೈದಿಕನೆಂದು ಯಾರಾದರೂ ಹೇಳಿದರೆ ಅದು ಅಶಾಸ್ತ್ರೀಯವೇ ಸರಿ ! ಸ್ಮಾರ್ತಾದಿ ಬ್ರಾಹ್ಮಣರಿಗೂ ಇದು ಸಂಭವಿಸಲಾರದು ವೈಷ್ಣವಾದಿಗಳ ಮಾತು ದೂರವೇ ಉಳಿಯಿತು ಎಲ್ಲರೂ ಯಜ್ಞ (ವಾಜಪೇಯಾದಿ)ಗಳನ್ನು ಮಾಡಬೇಕೆಂದು ವೇದವು ಹೇಳಿಲ್ಲ ಎಲ್ಲ ಬ್ರಾಹ್ಮಣರೂ ಮಾಡುತ್ತಲೂ ಬಂದಿಲ್ಲ ಆಯಾ ಫಲಗಳ ಇಚ್ಛೆಯುಳ್ಳವರು ಮಾತ್ರ ಆಯಾ ಯಜ್ಞಗಳನ್ನು ಮಾಡಬಹುದು ಇಲ್ಲದವರಿಗೆ ಆ ಕಾಮ್ಯಯಜ್ಞಗಳ ಸಂಬಂಧವಿಲ್ಲ ಬ್ರಹ್ಮಚರ್ಯಾದಿ ಆಶ್ರಮಸ್ಥರಿಗೂ ಬ್ರಾಹ್ಮಣಾದಿ ವರ್ಣಗಳಿಗೂ ಬೇರೆ ಬೇರೆ ಧರ್ಮಗಳೂ ಮಾರ್ಗಗಳೂ ಉಪದಿಷ್ಟವಾಗಿವೆ ಒಬ್ಬರ ಕರ್ಮ ಬೇರೊಬ್ಬರಿಗೆ ಬದ್ಧವಾಗಿಲ್ಲ ಆದರೂ ಅವರವರು ವೈದಿಕರಾಗಿಯೇ ಇದ್ದಾರೆ ವೇದೋಕ್ತವಾದ ಸರ್ವಕರ್ಮಾನುಷ್ಠಾನವು ಒಬ್ಬನಿಗೆ ಹೇಳಿಯೂ ಇಲ್ಲ ಮಾಡುವುದು ಶಕ್ಯವೂ ಇಲ್ಲ ಅಂತೆಯೇ ಭಕ್ತಿ, ಭಗವದುಪಾಸನೆ ಜಪ, ಯಜ್ಞ ವೇದಮಂತ್ರಗಳನ್ನು ಅವಲಂಬಿಸಿ ಶೈವ ವೀರಶೈವರೂ, ವೈಷ್ಣವ ಶ್ರೀವೈಷ್ಣವರೂ ವೈದಿಕರಾಗಿಯೇ ಉಳಿದಿದ್ದಾರೆ ವೇದದ ಸ್ವರೂಪವೇ ಆಗಿರುವ ಶಿವನಿಗೂ, ಶಿವಾಚಾರ್ಯನಿಗೂ ವೇದಮೂರ್ತಿ ಎಂಬ ಬಿರುದು ಅನೂಚಾನವಾಗಿ ಸಲ್ಲುತ್ತಾ ಬಂದಿದೆ ಇವರು ಅವೇದಮೂರ್ತಿ ಆಗಲಾರರು ದೀಕ್ಷಾದಿಸಂಸ್ಕಾರಗಳಲ್ಲಿಯೂ, ಪಟ್ಟಾದಿವಿಶೇಷ ವಿಧಾನಗಳಲ್ಲಿಯೂ ವೇದಮಂತ್ರೋಪಯೋಗವು ವೀರಮಾಹೇಶ್ವರರಿಗೆ ಮುಖ್ಯಸ್ಥಾನವಾಗಿದೆ ಚಂದ್ರಜ್ಞಾನಾಗಮದಂತೆ ಚತುಸ್ಸಿಂಹಾಸನಗಳಲ್ಲಿ ವೇದಾಧ್ಯಯನವೂ ಒಂದು ವ್ರತ.

ಇನ್ನು ಕಾಲಾರಿ, ಮಖಾರಿ, ಕಾಮಾರಿ, ಪುರಾರಿ, ವೇದಾರಿ ಎಂಬ ನಾಮಗಳು ಕೆಲವರಿಗೆ ಮೂಲವಾಗಿರುವವೆಂದು ಭ್ರಮಿಸಬಾರದು ಶಿವಧ್ಯಾನೈಕಲೀನರಾದ ಶಿವಭಕ್ತರನ್ನು ಬಂಧಿಸಿದುದರಿಂದ ಶಿವನು ಕಾಲನನ್ನು ಸಂಹರಿಸಿದನು ಅಷ್ಟೇ ಹೊರತು ಪಾಪಿಗಳನ್ನು ಶಿಕ್ಷಿಸುವ ಯಮನಿಗೆ ಪ್ರತಿಬಂಧವಿಲ್ಲ ಮಹಾದೇವನ ಮಾನ್ಯತೆಯಿಲ್ಲದ ದಕ್ಷನ ಮಖವನ್ನು ಧ್ವಂಸಮಾಡಿದುದಕ್ಕೆ ಮಖಾರಿಯಾದನು ಶಿವಸಾಕ್ಷಿಯಾಗಿ ನಡೆಯುವ ಮಖಗಳಿಗೆ ಶಿವನು ಮಂಗಳಪ್ರದನೇ ಆಗಿದ್ದಾನೆ ಶಿವನು ಸರ್ವಮಖಾರಿಯೆಂದು ತಿಳಿದುಕೊಂಡಿರುವುದು ಅಜ್ಞಾನ ಅದರಂತೆ ತನಗೆ ವಿರೋಧಿಯಾದ ಕಾಮನನ್ನು ಸಂಹರಿಸಬೇಕಾಯಿತೇ ಹೊರತು ಲೋಕಸಾಮಾನ್ಯದ ಕಾಮವನ್ನಲ್ಲ ವೀರಶೈವರೆಲ್ಲರೂ ಕಾಮಾರಿಗಳಾಗಿದ್ದರೆ ಈ ಮೊದಲೇ ಇವರ ಜನಸಂಖ್ಯೆಯೇ ಮಾಯವಾಗಬೇಕಿತ್ತು ಶಿವನೇ ಪಾರ್ವತಿಯನ್ನು ಸ್ವೀಕರಿಸಿ ಕಾಮನನ್ನು ರಕ್ಷಿಸಿರುವಾಗ ಇತರರ ಪಾಡೇನು ? ತ್ರಿಪುರಾಸುರರ ಪುರಗಳಿಗೆ ಮಾತ್ರ ಶಿವನು ವಿರೋಧಿಯಾಗಿದ್ದನಲ್ಲದೆ, ಎಲ್ಲ ಪುರಗಳಿಗಲ್ಲ

ಅಶ್ವಮೇಧಯಾಗವನ್ನು ನೋಡಿ ಹೇಸಿಕೊಂಡ ಶಿವಭಕ್ತನೊರ್ವನು ಕ್ರುದ್ಧನಾಗಿ ಆ ವೇದಭಾಗಕ್ಕೂ ಆ ಯಾಗಕ್ಕೂ ವಿರುದ್ಧವಾಗಿ ಮಾರಣಕ್ರಿಯೆಯನ್ನು ಮಾಡಿದ ಕಾರಣ ವೇದಾರಿ ಎಂಬ ನಾಮವು ಬಂದಿತು ತನಗೆ ಅಭಿಮತವಲ್ಲದ ವೇದದ ಆ ಭಾಗಕ್ಕೆ ಮಾತ್ರ ತಾನು ಶತ್ರುವಾಗಿದ್ದನಲ್ಲದೆ ಎಲ್ಲ ವೇದಕ್ಕಲ್ಲ ರುದ್ರಾಧ್ಯಾಯ, ಪಂಚಬ್ರಹ್ಮ ಶಿವಸಂಕಲ್ಪಾದಿ ಮಂತ್ರಗಳಿಗೂ, ಸಾತ್ವಿಕ ಕರ್ಮಗಳಿಗೂ ಶಿವಭಕ್ತನು ಬಾಧ್ಯನಾಗುವುದರಿಂದ ಶಿವನೇ ಆಗಿರುವ ವೇದವು ಶಿರಸಾಮಾನ್ಯವು ಇಷ್ಟು ' ಕನ್ನಡ ವಚನಗಳಲ್ಲಿ ಕೆಲವೆಡೆ ವೇದವಿರುದ್ಧ ವಾಕ್ಯಗಳಿರುವುದರಿಂದ ನಮ್ಮ ಶರಣರು ವೇದವನ್ನು ಒಪ್ಪುವುದಿಲ್ಲ ಅದರಂತೆ ಲಿಂಗಾಯತರಾದ ನಾವೂ ಒಪ್ಪುವುದಿಲ್ಲ ವೆಂದು ಕೆಲವರೀಗ ಬಹಳ ಪ್ರಚಾರ ನಡೆಯಿಸಿದ್ದಾರೆ ಒಂದೆರಡು ಪತ್ರಿಕೆಗಳಿಗಂತೂ ಯಾವಾಗಲೂ ವೇದಗಳ ನಿಂದೆಮಾಡುವುದೇ ಮುಖ್ಯ ಕರ್ತವ್ಯವಾಗಿಬಿಟ್ಟಿದೆ ಇವರಿಗೆ ಪದ್ಧತಿ ಮೇರೆಗೆ ವೇದಗಳಾಗಲಿ ಕನ್ನಡ ವಚನವಾಗಲಿ ಅವಗತವಾಗಿಲ್ಲ ಅರ್ಥವಾದಗಳನ್ನೂ ಪ್ರರೋಚಕ ವಾಕ್ಯಗಳನ್ನೂ ಹೇಗೆ ಅರ್ಥಮಾಡಿಕೊಳ್ಳಬೇಕೆಂಬುದು ಗೊತ್ತಿಲ್ಲ ಕನ್ನಡ ವಚನಗಳಲ್ಲಿಯೇ ನೂರಾರು ಸಲ ವೇದವಾಕ್ಯಗಳೂ ಪಂಚಾಕ್ಷರೀ ಪ್ರಶಂಸೆಯೂ ಬಂದ ಸಮಾಚಾರವನ್ನು ಇವರು ತಿಳಿದಿದ್ದರೂ ಹಠವಾದಿಗಳಾಗಿಬಿಟ್ಟಿದ್ದಾರೆ ' ಬಸವೇಶ್ವರನು ವೇದಬಾಹಿರನೇ ? ' ಎಂಬ ಲೇಖದಲ್ಲಿ ಇವರ ಪಕ್ಷದವರೇ ವೇದಪ್ರಾಮಾಣ್ಯವನ್ನು ಸಮರ್ಥಿಸಿದ್ದಾರೆ ಈ ೧೫-೨೦ ವರ್ಷಗಳಲ್ಲಿ ಇವರ ಬುದ್ಧಿಯು ವಿವಿಧವಾಗಿ ಪರಿವರ್ತನೆಯಾಗಿದೆ ಮುಂದಾದರೂ ಒಂದು ನಿಶ್ಚಯಕ್ಕೆ ಬರುವ ನಂಬಿಗೆ ಇಲ್ಲ ಈಗಮಾತ್ರ ವೇದವಿರುದ್ಧವಾಗಿ ಕಂಕಣಬದ್ಧರಾಗಿದ್ದಾರೆ ಆದರೂ ಈ ಸನಾತನ ವೀರಶೈವ ಜಗತ್ತು ಎಂದಿನಂತೆ ಈಗಲೂ ವೇದವಾದಿಯೇ ಆಗಿದೆ ಶ್ರೀ ಜಗದ್ಗುರು ಪಂಚಾಚಾರ್ಯರೂ, ತದನುಯಾಯಿಗಳೂ, ಪಾರಂಪರ್ಯವಾಗಿ ವೀರಶೈವರ ವಂಶಾವಳಿಯಲ್ಲಿ ಹುಟ್ಟಿದವರೂ ತಮ್ಮ ಧರ್ಮಶಾಸ್ತ್ರಾನುಸಾರವಾಗಿ ವೇದಪ್ರಾಮಾಣ್ಯವನ್ನು ಸ್ಥಾಪಿಸುತ್ತಲೇ ಹೋಗುವರು ಶಿವಾಗಮಗಳೂ ತದನಂತರ ಬಂದ ಸಮಸ್ತ ಸಂಸ್ಕೃತ ಗ್ರಂಥಗಳೂ ವೇದಪ್ರಾಮಾಣ್ಯವನ್ನು ಸಾರಿಯೇ ಮುಂದುವರಿದಿವೆ ಒಂದು ಕ್ರಿಯಾಸಾರವನ್ನಾದರೂ ನೋಡಿಕೊಳ್ಳಬಹುದು ವೇದಕಂಠ, ಶ್ರುತಿನಾಥ, ಜಾತವೇದ ಮುಂತಾದ ಪೂರ್ವಪುರುಷರ ನಾಮಗಳನ್ನಾದರೂ ಸ್ಮರಿಸಬಹುದು. ಕೆಲವರು " ನಮಗೆ ಕನ್ನಡ ವಚನಗಳೇ ಪ್ರಮಾಣ, ಸಂಸ್ಕೃತಗ್ರಂಥಗಳಲ್ಲ" ಎಂತಲೂ ಹೇಳಬಹುದು ಇದೂ ಒಂದು ಸ್ಪಷ್ಟವಾದ ಅಭಿಪ್ರಾಯ ! ತೆಲುಗರು, ತಮಿಳರು, ಮರಾಟರು ಮುಂತಾದ ಇತರ ಪ್ರಾಂತದವರಿಗೂ ಅವರವರ ಭಾಷೆಗಳೇ ಪ್ರಮಾಣ ಅವರು ಕನ್ನಡಕ್ಕೆ ದಾಸರಾಗುವುದಿಲ್ಲ ಈ ವಿಧವಾಗಿ ಪರಸ್ಪರ ದುರಭಿಮಾನದ ದೊಂಬಿಯನ್ನು ಮಾಡಿಕೊಂಡರೆ ಸ್ವಸಂಸ್ಕೃತಿಯೇ ನಷ್ಟವಾಗುವುದು. ಇದನ್ನೆಲ್ಲ ಗಮ

[೩ನೆಯ ಪುಟವನ್ನು ನೋಡಿ]

ಕಾಶೀಪೀಠದ ಋಣಪರಿಹಾರದ ಒಗ್ಗ ಸತ್ಪದ ಕಾರ್ಯಕ್ರಮ

ಈ ಮೊದಲು ನಿಶ್ಚಯವಾದಂತೆ ಪೀಠದ ಮೇಲಿರುವ ಋಣಭಾರವನ್ನು ಪರಿಹಾರ ಮಾಡುವ ಕಾರ್ಯವು ಬಹಳ ದಕ್ಷತೆಯಿಂದ ನಡೆಯುತ್ತಿದೆ ಗೃಹಸ್ಥರು ಸರಿಪಡಿಸಬೇಕಾಗಿದ್ದುದರಿಂದ ಸ್ವಲ್ಪ ತಡವಾದರೂ ಎಲ್ಲ ಋಣ ತೀರಿ ಹೋಗಿ ಶಿಷ್ಯರ ಬಿಟ್ಟುಹೋಗಬಹುದೆಂಬ ವಿಶ್ವಾಸವಿದೆ ಈ ಒಗ್ಗ ಉದಾರ ಕೃಪೆಯುಳ್ಳ ಗುರುಪೀಠಾಧಿಪತಿಗಳು ಮುಕ್ತಹಸ್ತದಿಂದ ಸಹಾಯವನ್ನೂ ಒದಗಿಸಿದ್ದಾರೆ

ಬಡ್ಡಿಯಿಲ್ಲದ ಸಾಲ

ಈ ಮಹನೀಯರು ಇಷ್ಟು ದೊಡ್ಡ ಮೊತ್ತವನ್ನು ಬಡ್ಡಿಯಿಲ್ಲದಂತೆ ಕಡವಾಗಿ ಕೊಟ್ಟಿದ್ದಾರೆ ಮುಖ್ಯವಾಗಿ ಈ ಹಣದಿ ಪರ್ಲ ದೊಡ್ಡ ಕೆಲಸವಾಗುತ್ತಿದೆ

೬೦೦೦ ರೂ ಶ್ರೀ ರಂಭಾಪುರೀ ಜಗದ್ಗುರು ಮಹಾಸನ್ನಿಧಿಯವರ

೬೦೦೦ ರೂ ಡಾ|| ಒ ಶ್ರೀಮಂತ ನಾಗಪ್ಪಣ್ಣನವರ ಕಲ್ಲಾಪುರ

೨೦೦೦ ರೂ ಶ್ರೀ ಗಂದಿ ಚನ್ನಬಸವಪ್ಪನವರ ಧರ್ಮಪತ್ನಿ ರೇವವ್ವನವರು / ಶ್ರೀ ಕೃಷ್ಣಪ್ಪನವರು ನಾರಾಯಣಪೇಟ

೧೦೦೦ ರೂ ಶ್ರೀ ಗಂದಿ ಸಿದ್ದಪ್ಪನವರು ನಾರಾಯಣಪೇಟ

೧೨೦೦ ರೂ ಷ|| ಬ್ರ ಶ್ರೀ ಪಟ್ಟಾಧ್ಯಕ್ಷರ ಸಂಪಲಗಿ ದ ಹಿರೇಮಠ

೧೦೦೦ ರೂ ಶ್ರೀ ಆಪ್ಪಸಿ ಬಸವಪ್ರಪ್ಪನವರು ರಾಯಚೂರ

೧೦೦೦ ರೂ ಶ್ರೀ ಕುಂಕುಮ ಬಕೋಟಯ್ಯನವರ ದೇವರಪಲ್ಲಿ

(ಈ ಬಗ್ಗೆ ಶ್ರೀಮತ ಮಲ್ಲಿಕಾರ್ಜುನಪ್ಪನವರ ಗದಗ ಆಧ್ಯಕ್ಷರ ಇವರು ಬಹಳ ಪ್ರಯತ್ನಮಾಡಿ ಹಣಕೊಡಿಸುವರಲ್ಲದ ಕಾಶಿಗೆ ಬಂದು ಪ್ರತ್ಯಕ್ಷವಾಗಿ ಪೀಠದ ಪರಿಸ್ಥಿತಿ [illegible])

ಪಟ್ಟಾಭಿಷೇಕದ ಕಾಣಿಕೆ

ಕಾಶೀಪೀಠದಲ್ಲಿ ನಡೆದ [illegible] ಜಗದ್ಗುರು [illegible] ಲ್ಲಿರುವ ಗುರುಚಕ್ರರು [illegible] ಈ ಕಾಣಿಕೆಯಲ್ಲಿ [illegible] ನಲ್ಲ ವ್ಯಾಜ ಮಾಡಿದ್ದನ್ನು [illegible] ಈ ಕಾಣಿಕೆಯು [illegible] ವಿಶೇಷವಾದ ಆಯವ್ಯಯ [illegible] ಕೊಟ್ಟರು ಆದುದರಿಂದ ಇದೊಂದು ಮಹತ್ವದ ಕೆಲಸವಾಯಿತು ಪಟ್ಟಾಭಿಷೇಕ ಮುಗಿದ ಮೇಲೆಯೂ ಕೆಲ ಮಹನೀಯರು ಕಾಣಿಕೆಯನ್ನು ಸಮರ್ಪಿಸಿದ್ದಾರೆ

ಋಣ ಪರಿಹಾರದ ನಿಧಿ

ಪೀಠದ ಆದಾಯವೆಲ್ಲವೂ ಆರಿವರದ ಅಧೀನವಾಗಿರುವುದು ವ ಇದನ್ನು ಪರಿಹರಿಸುವುದಕ್ಕಾಗಿಯೂ ಪ್ರತಿದಿನ ನಡೆವ ಪವಿತ್ರ ದೀರ್ಘ ಬೋಧನ ಮುಂತಾದುವುಗಳಾಗಿಯೂ ಶ್ರೀರಾಜಿಮಾನಿಗಳು ವನವನ್ನು ಮಾಡಬೇಕೆಂದು ಪತ್ರಿಕೆಗಳಲ್ಲಿ ಪ್ರಕಾಶಪಡಿಸಿದ ಮೇಲೆ ಅನೇಕ ಮಹನೀಯರು ಮುಕ್ತಹಸ್ತದಿಂದ ದ್ರವ್ಯವನ್ನು ಕಳಿಸುತ್ತಿದ್ದಾರೆ ಇದು ಬಹಳ ಪ್ರಶಂಸನೀಯವಾದ ಪೀಠದ ಗೌರವಕ್ಕೂ ಸ್ವಯಕ್ಕೂ ತಮ್ಮ ಆಧಿಕಾರಕ್ಕೂ ತಕ್ಕಂತ ಕಾಣಿಕೆಯನ್ನು ಸಲ್ಲಿಸಬೇಕೇ ಹೊರತು ಸಲ್ಪ ಸ್ವಲ್ಪ ಮೊತ್ತವನ್ನು ಕಳುಹಿಸಬಾರದು

೧೦೪ ರೂ ಶ್ರೀಮಂತ ಪಟ್ಟಣಗಿ ರಾಚೋಟಪ್ಪನವರು ಪುತ್ರರು ಬಸಣ್ಣನವರು ಯಮ್ಮಿಗನೂರು (ಶ್ರೀಬಸಣ್ಣನವರು ಮಹಾಸನ್ನಿಧಿಗೆ ಮೊದಲು ಒಂದು ಬಂಗಾರದ ಕರಕಮಲವನ್ನೂ ಕಾಣಿಕೆಯನ್ನೂ ಸಮರ್ಪಿಸಿದ್ದಾರೆ ಒಟ್ಟಿಗೆ ೧೫೦೦ ರೂ ಗಳ ವರೆಗೂ ಇವರ ಕಾಣಿಕೆಯು ಸಲ್ಲಿದೆ ಅನೇಕ ಜನರನ್ನು ಪ್ರೋತ್ಸಾಹಗೊಳಿಸಿ ಪೀಠದ ಸೇವೆಯನ್ನು ಆತ್ಯಧಿಕವಾಗಿ ಮಾಡುತ್ತಿದ್ದಾರೆ ಇವರು ನಿರುಪಮ ಗುರುಭಕ್ತರು)

೧೧೬ ರೂ ಶ್ರೀಮಂತ ನವಲಿ ಕೈರುಪಳಪ್ಪನವರು, ಯಮ್ಮಿಗನೂರು

೧೧೮ ರೂ ಶ್ರೀಮಂತ ಜಿ ಎಂ ಶರಭಣ್ಣನವರು, ಯಮ್ಮಿಗನೂರು

೫೫ ರೂ ,, ವಜ್ರಗಿರಿ ಗುರುಲಿಂಗಪ್ಪಹಂಪಯ್ಯನವರು ಯಮ್ಮಿಗನೂರು

೫೫ ರೂ ,, ರುದ್ರಪ್ಪ ಮಲ್ಲಪ್ಪ ಉಳ್ಳೀಗಡ್ಡಿ, ದೇವೀಹೊಸೂರು

೧೦೦ ರೂ ಷ|| ಬ್ರ|| ಶ್ರೀ ಗುರುಪಾದ ಶಿವಾಚಾರ್ಯರು ಹಿರೇಮಠ ಕುಂದಗೋಳ

೫೧ ರೂ ಶ್ರೀ ತೂಲಹಳ್ಳಿ ಶೆಟ್ಟರ ಚನ್ನಬಸವಪ್ಪನವರು ಕೊಟ್ಟೂರು

೧೧ ರೂ ಶ್ರೀ|| ಬಿ ಎ ಶೆಟ್ಟರು ಹುಬ್ಬಳ್ಳಿ ಇವರ ಪುತ್ರ ಪುತ್ರಿಯರ ಲಗ್ನದಲ್ಲಿ

೫|| ರೂ ಶ್ರೀ|| ಗುರುಸಿದ್ದಪ್ಪ ಬೂದಿಬಡ್ಡಿ ಹುಬ್ಬಳ್ಳಿ ಇವರ ಪುತ್ರಿಯ ಲಗ್ನದಲ್ಲಿ

೧೦|| ರೂ ಶ್ರೀ|| ಶಿವರುದ್ರಪ್ಪ ರಾಚಪ್ಪ ಇಂಡಿ ಸೌ|| ನೀಲವ್ವನ ಲಗ್ನದಲ್ಲಿ

೧ ರೂ ಶ್ರೀ|| ಪರಪ್ಪ ಹೊಸಮನೆ ಇವರು ಶಿವಾಧೀನರಾದ ಕಾಲದಲ್ಲಿ

೬|| ರೂ ಡಾ|| ನಂಜಪ್ಪನವರ ಪುತ್ರ ಮತ್ತು ಬಿ ವಿ ಪಾಟೀಲರ ಪುತ್ರಿ ಲಗ್ನದಲ್ಲಿ

೫|| ರೂ ಬಿ ವಿ ಪಾಟೀಲರ ಪುತ್ರನ ನಿಶ್ಚಯಕಾರ್ಯದಲ್ಲಿ

೫ ರೂ ಶ್ರೀ|| ಒರ್ವ ಶ್ರೀಮಂತರ ನಿಶ್ಚಯಕಾರ್ಯದಲ್ಲಿ (ಈ ಏಳು ಜನರ ನಲವತ್ತು ಮೂರು ರೂಪಾಯಿಗಳು ಹುಬ್ಬಳ್ಳಿ ಹಿರೇಮಠದ ವೇ|| ಸೋಮನಾಥಯ್ಯನವರ ದ್ವಾರಾ ತಲಪಿರುತ್ತವೆ)

೨ ರೂ ಶ್ರೀ|| ಎತ್ತಿಕಲ್ಲು ಮುಚ್ಚಪ್ಪನವರ ಪುತ್ರನ ಲಗ್ನದಲ್ಲಿ

೨೫ ರೂ ಶ್ರೀ ವಿರೂಪಾಕ್ಷಗೌಡ ಸಂಪನಗೌಡರು ರೌಡಕುಂದಿ

೫೧ ರೂ ಶ್ರೀ|| ಷ|| ಬ್ರ|| ಪಂಚಾಕ್ಷರ ಶಿವಾಚಾರ್ಯರು ಮೂಳಕವತಿ

೫ ರೂ ಶ್ರೀ|| ಸಿದ್ದರಾಮಪ್ಪ ದೊಡ್ಯಾಳ

೨೯ ರೂ ಶ್ರೀ|| ಹನುಮಂತಪ್ಪ ಗಾಲಸಂಗ ವಿಶ್ವನಾಥಪ್ಪ ಬಿರಾಜದಾರ್, ಸಿದ್ದರಾಮಪ್ಪ ಬಿರಾಜದಾರ್, ಭರ್ಮಣ್ಣ ನೂಗಾರ್, ಗುರಪ್ಪ ಚಿಂಚೋಳಿ

೫ ರೂ ಶ್ರೀ|| ಬಸವಲಿಂಗ ಶಿವಾಚಾರ್ಯರ ಹತ್ತೂರು ಬೃಹನ್ಮಠ

೫ ರೂ ,, ವಿಠಪ್ಪ ಪರಪ್ಪ ಹಂಗರಿಕಿ ಬ್ಯಾಹಟ್ಟಿ

೫೧ ರೂ ,, ಆರ್ ಕೆ ಮಲಂಗೆ ವಕೀಲ್, ಬಿಜಾಪೂರ್

೫೧ ರೂ ಷ|| ಬ್ರ|| ಇಂಚಿಗೇರಿ ಪಟ್ಟಾಧ್ಯಕ್ಷರು

೫೫ ರೂ ಷ|| ಬ್ರ|| ಅನ್ನದಾನಶಿವಾಚಾರ್ಯರು ಬೃಹನ್ಮಠ, ಜಮಖಂಡಿ

೧೧ ರೂ ಸಿದ್ದರಾಮೇಶ್ವರಸ್ವಾಮಿ ಹಿರೇಮಠ, ಚಿಲವಂತರ (ದೀಕ್ಷೆಯಲ್ಲಿ)

೫ ರೂ ಶ್ರೀ ಮಲ್ಲಪ್ಪನವರು ಸೊಂಡೂರು ಹಿರೇಹಡಗಲಿ

೧೩ ರೂ ಶ್ರೀ|| ಗುಗ್ರಿ ಹುಚ್ಚಪ್ಪನವರು, ಹೂವಿನಹಡಗಲಿ

೧೨ ರೂ ಶ್ರೀ|| ಹೂವಿನಹಡಗಲಿ ವೀರಶೈವ ಸಮಾಜ

೫ ರೂ ಶ್ರೀ ಕೊಟ್ರಿ ಗಂಡೆಪ್ಪನವರ ಸೋದರನ ಲಗ್ನದಲ್ಲಿ ಹಂಪಸಾಗರ (ಈ ಮೂವರ ೩೦ ರೂಪಾಯಿಗಳು ಶ್ರೀ ಗುಗ್ರಿ ಹುಚ್ಚಪ್ಪನವರ ದ್ವಾರಾ)

೧೪ ರೂ ವೇ|| ಎಂ ವಿ ಮುದ್ದೀರಯ್ಯನವರ ಪುತ್ರಿ ಸೌ|| ಅನ್ನಪೂರ್ಣಮ್ಮ, ಬಿ ಮ ಸೋಮಯ್ಯನವರ ಪುತ್ರ ಚಿ|| ಹಾಲಾರಾಧ್ಯ ಇವರ ವಿವಾಹದಲ್ಲಿ (ವೇ|| ಅನಟೂರು ಎ ಎಂ ಶಿವಲಿಂಗಾರಾಧ್ಯರ ದ್ವಾರಾ)

೬ ರೂ ಶ್ರೀ|| ಬೀರೂರು ಮಾಳಿಗೆ ದೊಡ್ಡಮರುಳಯ್ಯನವರ ವೀರಭದ್ರಯ್ಯನವರ ಪುತ್ರಿ ಸೌ|| ಅನ್ನಪೂರ್ಣಮ್ಮ ಪ್ಯಾಟಿ ವಿ ಚನ್ನಬಸವಯ್ಯನವರ ಪುತ್ರ ಚಿ|| ಮರುಳಸಿದ್ದಯ್ಯ ಇವರ ಲಗ್ನಸಮಾರಂಭದಲ್ಲಿ (ಬೀರೂರು ವೇ|| ಎಂ ವಿ ಮುದ್ದೀರಯ್ಯನವರ ದ್ವಾರಾ)

[illegible] ಶ್ರೀ ರಡ್ಡೇರ ಹಣು ಮಪ್ಪನವರು, ಯೆಟ್ರಿ

[illegible] ಕೆ ಎಂ ಶಾರದಮ್ಮನವರು, ಬೀರೂರು

[illegible] ಶ್ರೀ ಮರಿಯ್ಯ ರ ಪ್ರಪ್ಪ ಹಿರೇಮಠ, ಶಿಗ್ಗೋಳ ಇವರ ಲಗ್ನದಲ್ಲಿ

[illegible] ಶ್ರೀ ಕರಿಬಸಪ್ಪ ನಾಗರಾಜ ನವಲಗುಂದ ಇವರ ಪುತ್ರನ ಲಗ್ನದಲ್ಲಿ (ಶ್ರೀ [illegible] ಪ ಬೃಹನ್ಮಠದ ದ್ವಾರಾ)

ಶ್ರೀ ಹಪ [illegible] ಚನ್ನಬಸಪ್ಪಗೌಡರು ಗುಳೆಹಳ್ಳಿ ಇವರ ಲಗ್ನದಲ್ಲಿ

[illegible] ರೂ ಶ್ರೀ ಷ|| ಬ್ರ|| ಒರಮೂರ್ತಿಸ್ವಾಮಿಗಳು ಹನ್ನೆರಡುಮಠ ಹುಬ್ಬಳ್ಳಿ ಇವರ ತಾತ್ರ [illegible] ವರ ಬಣಾಧಿ ಸಮಾಲದಲ್ಲಿ

[illegible] ರೂ ಶ್ರೀ ಗರ [illegible] ವರ ಪರಿವ ಹಾಲಸ್ವಾಮಿಗಳು ಹಿರೇಹಡಗಲಿ

[illegible] ರೂ [illegible] ವಿನಕ್ಷತ್ರ ರೇವಣಸಿದ್ದ ತ ಪುರಾಣಸಮಾಪ್ತಿ ಸಮಾರಂಭದ (ತ [illegible] ಸಹಡಗಲಿ ಹೊಸ್ಪೇಟೆ ಗುರುಲಿಂಗಪ್ಪನವರ ದ್ವಾರಾ)

[illegible] ಪರ [illegible] ನ [illegible] ಜನಸಮುದಾಯ (ಶ್ರೀಯುತ [illegible] ಕಾ ವೀರಣ್ಣ, ನಾಗಲಿಂಗಪ್ಪ [illegible] ಸಿದ್ದರಪ್ಪ ನಾಗಪ್ಪ ಚನ್ನಬಸಯ್ಯ, [illegible] ಇತ್ಯಾದಿ) ರ [illegible] ವಿ ಹಿರೇಮಠದ ಷ|| ಬ್ರ|| [illegible] ಪ್ರಸಾದದಿಂದ ಸಮರ್ಪಿತ

[illegible] ಕಾಣಿಕೆ [illegible] ಮುಹೂರ್ತ [illegible] ಶ್ರೀಜಗದ್ಗುರು ವಿಶ್ವಾರಾಧ್ಯನು ಆಹ ರಾಜರೋಗ [illegible] ತನ್ನ [illegible] ವನಿಂದಿರುವರಲ್ಲಿ ಸಂದೇಹವಿಲ್ಲ ಈಗ ಬಂದಿರುವ ದ್ರವ್ಯ ಒಂದು ಅಂಗದ ಪರಣಿಕ್ಕೆ ಸರಿಹೋಗುವಷ್ಟಿದೆ ಆದುದರಿಂದ ಇದ [illegible] ಶಿಕವಾಗಿ [illegible] ಸಲ್ಲಿ [illegible] ಗುರುಕುಲದ ವಿದ್ಯಾನ್ನದಾನಗಳನ್ನು ಸ್ಥಿರಪಡಿಸಲು ಗುರುಪೀಠಾಭಿಮಾನಿಗಳು ಅವಶ್ಯವಾಗಿ ಪ್ರಯತ್ನಿಸಬೇಕಾಗಿದೆ

ಜ್ಞಾನಮಂದಿರ

ಶ್ರೀಜಗದ್ಗುರು ವಿಶ್ವಾರಾಧ್ಯನ ಜ್ಞಾನಸಿಂಹಾಸನಕ್ಕೆ ತಕ್ಕಂತೆ ಅಮೂಲ್ಯವಾದ ಪುಸ್ತಕರಾಶಿಯು ಸಂಗ್ರಹಿತವಾಗಿದೆ ವೀರಶೈವರ ಯಾವ ಸಂಸ್ಥಾನದಲ್ಲಿಯೂ ಇಂತಹ ವಿವಿಧ ಭಾಷಾ ಮಹಾಗ್ರಂಥ ಸಂಗ್ರಹವಾಗಿಲ್ಲ ನಾಲ್ಕತ್ತು ಬೀರುವಾಗಳಿಗೆ ಸಂಹೋಗುವಷ್ಟು ಪುಸ್ತಕಗಳಿವೆ ಇವುಗಳನ್ನು ಪ್ರತ್ಯೇಕವಾಗಿರಿಸಿ ಪರಿಶೋಧನಾಲಯವನ್ನು ಏರ್ಪಡಿಸುವುದಕ್ಕಾಗಿ ಜ್ಞಾನಮಂದಿರ ವೆಂಬ ಉತ್ತಮಶ್ರೇಣಿಯ ಕಟ್ಟಡದ ಪ್ರಯತ್ನ ನಡೆಯುತ್ತಿದೆ ಇದಕ್ಕಾಗಿ ಎಂಟುಸಾವಿರ ರೂಪಾಯಿಗಳು ವ್ಯಯವಾಗಬಹುದು ಈಗಾಗಲೇ ಹಲಗಲಿ, ಖಾಸಪೂರ್, ಪುತ್ತೀಪಾಡು, ಯಮ್ಮಿಗನೂರು, ಹುಬ್ಬಳ್ಳಿ ಗಳಿಂದ ಕೆಲವು ಉದಾರಚರಿತರು ತಮ್ಮ ವಾಗ್ದಾನಗಳನ್ನು ತಿಳಿಸಿದ್ದಾರೆ ೧೦೧ ರೂಪಾಯಿಗಳಿಗಿಂತಲೂ ಮೇಲ್ಪಟ್ಟು ಕೊಡತಕ್ಕವರ ನಾಮಗಳು ಶಿಲಾಶಾಸನದಲ್ಲಿ ಬರೆಯಿಸಿ ಶಾಶ್ವತಗೊಳಿಸಲಾಗುವುವು ಈ ಮಂದಿರದಿಂದಲೇ ಮುಂದೆ ವೀರಶೈವ ಧರ್ಮಶಾಸ್ತ್ರ ಇತಿಹಾಸಗಳು ಪರಿಶೋಧಿಸಲ್ಪಟ್ಟು ಉತ್ತಮವಾದ ಗ್ರಂಥ ಪತ್ರಿಕೆಗಳ ಮೂಲಕ ಜ್ಞಾನಚಂದ್ರಿಕೆಯು ಹಬ್ಬಲಿದೆ ಆದುದರಿಂದ ಇಂತಹ ಮಹತ್ವವುಳ್ಳ ಕಾರ್ಯಕ್ಕಾಗಿ ವೀರಶೈವ ಮಹಾಜನರು ಬದ್ಧಕಂಕಣರಾಗಿ ಸ್ವಯಂಪ್ರೇರಣೆಯಿಂದಲೇ ತಮ್ಮ ತಮ್ಮ ದಾನಧರ್ಮಗಳನ್ನು ತಿಳಿಸಬೇಕು ಕಾಶೀಕ್ಷೇತ್ರ ಗುರುಪೀಠ, ಜ್ಞಾನಮಂದಿರ ಎಂಬ ತ್ರಿಕೂಟವು ಎಷ್ಟು ಪವಿತ್ರವಾಗಿದೆಯೋ ಇದಕ್ಕೆ ವಿನಿಯೋಗಿಸುವ ದ್ರವ್ಯವೂ ಅಷ್ಟು ಪರಿಪೂತವೆಂಬುದನ್ನು ಬೇರೆ ಹೇಳಬೇಕಾಗಿಲ್ಲ ಕಟ್ಟಡದ ಕೆಲಸವು ಬಹಳ ಬೇಗನೆ ಸಾಗಲಿದೆ ಪ್ರಾರಂಭಯತ್ನಗಳು ನಡೆದಿವೆ ಶ್ರೀಜಗದ್ಗುರು ಮಹಾಸನ್ನಿಧಿಗೆ ನಿವೇದಿಸಿ ಮನಿಯಾರ್ಡರು ಮಾಡಬಹುದು

ತಾಳದೋಲೆಯ ಗ್ರಂಥ

ನಮ್ಮ ಜ್ಞಾನಮಂದಿರದಲ್ಲಿ ಈಗಾಗಲೆ ಸಾವಿರಾರು ತಾಳದೋಲೆಯ ಮತ್ತು ಕಾಗದದ ಕೈಬರಹ ಪುಸ್ತಕಗಳು ಇವೆ ಈ ಗ್ರಂಥಗಳನ್ನು ಪರಿಶೋಧಿಸಲು ಇನ್ನೂ ಅನೇಕಪ್ರತಿಗಳು ಬೇಕು ದೇಶದ ನಾನಾ ಭಾಗದ ಅನೇಕ ಮಠ ಮಂದಿರಗಳಲ್ಲಿ ಕೈಬರಹದ ಗ್ರಂಥಗಳು ರಾಶಿಯಾಗಿ ಬಿದ್ದಿವೆ ಇವನ್ನೆಲ್ಲ ವ್ಯರ್ಥಮಾಡಿದರೆ ಅನ್ಯಾಯವೇ ಸರಿ! ಅವು ಪಂಡಿತರ ಅವಲೋಕನಕ್ಕೊಳಗಾದರೇನೇ ಸಾರ್ಥಕ! ಆದುದರಿಂದ ಇಂತಹ ಗ್ರಂಥಗಳು ಯಾವ ಭಾಷೆಯಲ್ಲಿದ್ದರೂ ಯಾವ ಲಿಪಿಯಲ್ಲಿದ್ದರೂ ದಯಾ ಮಹೋದಯರು ಶ್ರೀಜಗದ್ಗುರು ವೀರಭದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ಸನ್ನಿಧಿಗೆ ಕಳುಹಿಸಿ ಸಮಾಜಕ್ಕೆ ಹಿತವನ್ನುಂಟುಮಾಡಬೇಕು

ಏಜಂಟ್,

ಸಂಸ್ಥಾನ ಜಂಗಮವಾಡೀ ಮಠ, ಕಾಶೀ

ಕೇದಾರಪೀಠದ ಸಮಾಚಾರ

ಸ್ಪೇಶಲ್ ಆಫೀಸರರು ತಮ್ಮ ರಿಪೋರ್ಟನ್ನು ನೇಪಾಳ ಮಹಾರಾಜರವರ ಕಡೆಗೆ ಕಳಿಸಿರುವರೆಂದ ಇತ್ತೀಚೆಗೆ ತಿಳಿದುಬಂದಿದೆ ಮಹಾರಾಜರವರು ಯಾವ ರೀತಿ ನಿರ್ಣಯ ಮಾಡಿರುವರೆಂಬ ವಿಷಯವು ಇನ್ನೂವರೆಗೆ ನಮಗೆ ತಿಳಿದುಬಂದಿರುವದಿಲ್ಲ ಕಾಶೀ ಜಗದ್ಗುರುಗಳು ಹಿಮಾಲಯಪ್ರಾಂತದ ಎಲ್ಲ ವಿಷಯಗಳನ್ನು ತಿಳಿದುಕೊಂಡು ಬರುವುದಕ್ಕಾಗಿ ಶ್ರೀ ಯಂ ಜಿ ಲಿಂಗಾವರಪ್ಪ ಬಿ ಎ, ಎಲ್ಎಲ್ ಬಿ ವೇ| ಜಿ ಗುರುಸಿದ್ಧಸ್ವಾಮಿ ಎಂಬೀ ಇಬ್ಬರನ್ನು ಅಲ್ಲಿಗೆ ಕಳುಹಿಸಿದರ ಇವರು ಅಲ್ಲಿಯ ವಿಷಯವನ್ನೆಲ್ಲಾ ತಿಳಿದು ನಮ್ಮ ಕಡೆಗೆ ಒಂದು ಲೇಖನವನ್ನ ಬರೆದು ತಿಳಿಸಿದ್ದಾರೆ ಆ ಲೇಖದಲ್ಲಿ —

ದಕ್ಷಿಣದೇಶದವರ ಮಾಡುತ್ತಿರುವ ಅದ್ಭುತವಾದ ಹೋರಾಟವು ಅಲ್ಲಿಯ ಪ್ರಮುಖ ಜನರಿಗೆ ಸಂತೋಷವಾಗಿದ್ದರೂ ಓಟು ಕೊಡತಕ್ಕ ಸಾಮಾನ್ಯ ಜನರ ಮನಸ್ಸಿನ ಮೇಲೆ ವಿರುದ್ಧ ಪರಿಣಾಮವಾಗಿರುವದೆಂದೂ ದಕ್ಷಿಣದೇಶದವರು ಕೇದಾರಪೀಠವನ್ನು ಸಂಪೂರ್ಣವಾಗಿ ವಶಪಡಿಸಿಕೊಂಡು ತಮ್ಮ ದೇಶಕ್ಕೆ ಒಯ್ಯುವರೆಂದೂ ನಮ್ಮ ದೇಶದ ಜನರನ್ನು ನೋಡಿದ ಕೂಡಲೆ ಅಪಹಾಸ್ಯಕ್ಕೆ ಪ್ರಾರಂಭಿಸುವರೆಂದೂ, ಆದುದರಿಂದ ಅಲ್ಲಿಯ ಪ್ರಯತ್ನವನ್ನ ಬಹಳ ಯುಕ್ತಿಯಿಂದ ಮಾಡಬೇಕಾಗಿದೆಯೆಂದೂ ಅಲ್ಲಿ ಬ್ರಹ್ಮಚಾರಿಗಳಿಗೆ ಹೆಚ್ಚಿಗೆ ಬಲವಿಲ್ಲವೆಂದೂ, ಅನಧಿಕಾರಿಗಳಿಗೆ ಹೆಚ್ಚು ಬಲವಿರುವದೆಂದೂ ಇತ್ಯಾದಿಯಾಗಿ ಬರೆದಿದ್ದಾರೆ

ಅವರು ಬರೆದಿರುವದು ನಿಜವಾದ ವಿಷಯವೇ ಆಗಿರುವದ ಅಲ್ಲಿರುವ ಬ್ರಹ್ಮಚಾರಿಗಳು ಆ ದೇಶದ ಜನರ ಪ್ರೀತಿಯನ್ನು ಹೆಚ್ಚಾಗಿ ಗಳಿಸಿಕೊಂಡಿರುವದಿಲ್ಲ ಈಗ ಪ್ರೀತಿಯನ್ನು ಸಂಪಾದಿಸಲಿಕ್ಕೆ ಪ್ರಯತ್ನ ಮಾಡಹತ್ತಿದರೆ ಇದು ಸಾಧ್ಯವಾಗದ ವಿಷಯ! ಆದುದರಿಂದ ಬ್ರಹ್ಮಚಾರಿಗಳು ಎಲೆಕ್ಷನ್ನಿಗೆ ನಿಲ್ಲುವುದನ್ನು ಬಿಟ್ಟು ಸಿವಿಲ್ ಕೋರ್ಟಿಗೆ ಹೋಗಬೇಕು ಅಂದರೆ ಇವರಿಗೆ ಜಯವು ಸಿದ್ಧ!

ಸ್ವೀಕಾರ

ಬೆಳಗಾಂವ ಡಿ|| ಖಾನಾಪುರ ವೈಜನಾಥಪುರದ ವೇ| ಶಿವಬಸವಯ್ಯನವರ ಅಜ್ಜಿಯವರಾದ ಸಾತವ್ವನವರು ಶಿವಾಧೀನರಾದ ಸಮಯದಲ್ಲಿ ಸದರಿಯವರು ಜ್ಞಾನಪೋಷಣಕ್ಕೋಸ್ಕರ 2 ರೂ ಗಳನ್ನು ಸಮರ್ಪಿಸಿ ಕಳುಹಿಸಿದ್ದಾರೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ

[ಹಿಂದಿನ ಸಂಚಿಕೆಯಿಂದ ಮುಂದುವರಿದುದು]

ನಿಸಿಯೇ ನಮ್ಮ ಪೂರ್ವಪುರುಷರು ಯಾರ ಪ್ರಾಂತದವರ ಭಾಷೆಯೂ ಆಗದಿರುವ ಶಿವದೇವನ ಭಾಷೆಯೇ ಆಗಿರುವ ಸಂಸ್ಕೃತದಲ್ಲಿ ಧರ್ಮತತ್ವವನ್ನು ಬೋಧಿಸಿದ್ದಾರೆ ಎಲ್ಲ ಸಂಪ್ರದಾಯದವರ ಗುರುಮಂತ್ರಗಳೂ ಸಂಸ್ಕೃತದಲ್ಲಿವೆ ಇವೆಲ್ಲ ಶಿವನ ವಚನಗಳು ಶಿವನ ವಚನಗಳನ್ನು ಸರಿಯಾಗಿ ತಿಳಿಯದೆ ಆಕ್ಷೇಪಿಸುವುದರಿಂದ ಪಂಡಿತ ಮಹಾತ್ಮರ ಪರಿಹಾಸಕ್ಕೆ ಗುರಿಯಾಗುವರೇ ಹೊರತು ಪ್ರಯೋಜನವೇನೂ ಇಲ್ಲ ಕನ್ನಡ ಮುಂತಾದ ದೇಶಭಾಷೆಗಳಲ್ಲಿಯೂ ಪ್ರಮಾಣಬದ್ಧವಾಗಿ ರಚಿತವಾದ ಗ್ರಂಥಗಳು ಆದರಣೀಯವಾಗಿಯೇ ಉಳಿಯುವುವು ಹಾಗಲ್ಲದೆ ಸ್ವೇಚ್ಛಾವಿಹಾರಕ್ಕೆ ಅವಕಾಶ ಕೊಟ್ಟರೆ ಯಾರು ಏನು ಬರೆದರೂ ಪ್ರಮಾಣವಾಗಲಾರವು ವೀರಶೈವ ಧರ್ಮವು ಕನ್ನಡ ದೇಶದಲ್ಲಿ ಹುಟ್ಟಿದ್ದೆಂತಲೂ ವೀರಶೈವರ ಮಾತೃಭಾಷೆ ಕನ್ನಡವೆಂತಲೂ ಅಸತ್ಯವಾಗಿ ಬರೆದು ಇತರ ಪ್ರಾಂತದವರಿಗೆ ಅನ್ಯಾಯ ಮಾಡಲಾಗದು

೪. ಹಿಂದೂಗಳೂ, ವಿವಿಧಸಂಪ್ರದಾಯಗಳೂ

"ಹಿಂದುಗಳೆಂದರೆ ಯಾರು?" ಎಂಬ ಪ್ರಶ್ನೆಯು ಈಗ ಬಹಳ ವಿವಾದಾಸ್ಪದವಾಗಿಬಿಟ್ಟಿದೆ ಈ ರೀತಿ ಚರ್ಚಿಸತಕ್ಕವರಿಗೆ ಸಾಧಾರಣವಾಗಿ ಧರ್ಮಶಾಸ್ತ್ರದ ಕಡೆಗೆ ದೃಷ್ಟಿಯೇ ಇಲ್ಲದಿರುವುದರಿಂದ ಇದು ಇತ್ಯರ್ಥವಾಗುವುದೂ ಶಕ್ಯವಿಲ್ಲ ಪಾರಂಪರ್ಯವಾಗಿ ತಾವು ಹಿಂದುಗಳೆಂದು ಹೇಳುತ್ತಾ ಅದರಂತೆ ನಡೆಯುತ್ತ ಬಂದಿರುವ ವೀರಶೈವರಲ್ಲಿ ಈಗ ಕೆಲವರು ಕೇವಲದ ರಾಶೆಯಿಂದ ಅಥವಾ ಅಜ್ಞಾನದಿಂದ ಹಿಂದು ಮತದಿಂದ ತಪ್ಪಿಹೋಗಲು ಪ್ರಯತ್ನಿಸುತ್ತಿರುವುದು ವಿಷಾದಕರವಾಗಿದೆ ಈ ಮಾತು ಯುಕ್ತಿಗೂ ಶಾಸ್ತ್ರಶಿಷ್ಟಾಚಾರಗಳಿಗೂ ವಿರುದ್ಧವಾಗಿದೆ

ಧರ್ಮಪ್ರತಿಪಾದಕಗಳಾದ ಮನ್ವಾದಿ ಸ್ಮೃತಿಗಳು ಶಿವಾಗಮಗಳು ಪಾಂಚರಾತ್ರಾಗಮಗಳು ಮುಂತಾದ ಗ್ರಂಥಗಳಲ್ಲಿ ಹಿಂದೂ ಶಬ್ದವು ಬಂದಿಲ್ಲ ಮೇರುತಂತ್ರ ಭವಿಷ್ಯತ್ಪುರಾಣಗಳಲ್ಲಿ ಬಂದಿರುವ ಹಿಂದೂ ಶಬ್ದವೂ ವ್ಯುತ್ಪತ್ತಿಯೂ ವಿದ್ವಾಂಸರ ಮೆಚ್ಚುಗೆಗೆ ಪಾತ್ರವಾಗಿಲ್ಲ ಸಿಂಧುಪ್ರಾಂತನಿವಾಸಿಗಳಿಗೆ ಹಿಂದುಗಳೆಂಬ ವ್ಯವಹಾರವುಂಟಾಯಿತೆ ಎಂಬುದಕ್ಕೆ ಆಧಾರವೇನೂ ಸಿಕ್ಕಿಲ್ಲ ಸನಾತನಧರ್ಮಾನುಗಳಾಗಿ ಹುಟ್ಟಿದ ಜಾತಿಯು ಭಾರತದೇಶದಲ್ಲಿ ಇರಾಂ ಫಸ ವ ಸ್ಥಿತ ಎಂದೆನಿಸುವ ಹಿಂದುಗಳೆಂದು ಕರೆಸಿ ಬೇರೆಯವರು ವ್ಯವಹಾರ ಮಾಡುತ್ತಾರೆ ಆದರೆ ಇದಕ್ಕೆ ದೃಢಪ್ರಮಾಣಗಳು ದೊರೆತಿಲ್ಲ ಇದು ರಾಜಕೀಯ ದೃಷ್ಟಿಯಿಂದ ಕಲ್ಪಿಸಿದ ನಾಮವೆ ಸ್ಪಷ್ಟವೇ ಆಗಿದೆ ಬೌದ್ಧರೂ ಜೈನರೂ ತಾವು ಹಿಂದುಗಳೆಂದು ಹೇಳಿಕೊಂಡಂತೆ ಕಾಣುವುದಿಲ್ಲ ಇವರ ನೋಂದಾಯಿತ ದಸ್ತಾವೇಜು ಕಾಗದ ಪತ್ರಗಳನ್ನು (Registered deeds) ಪರಿಶೀಲಿಸಿದರೆ ಗೊತ್ತಾಗಬಹುದು ಬೌದ್ಧರ ನಿವಾಸವು ಸ್ವಲ್ಪಕಾಲದಿಂದೀಚೆಗೆ ನಮ್ಮ ದೇಶದಲ್ಲಿಲ್ಲದ ಮೂಲಕ ವ್ಯವಹಾರವನ್ನು ಹೇಳಬೇಕಾಗುವುದಿಲ್ಲ ಬಹಳ ಪ್ರಾಚೀನ ಕಾಲದಲ್ಲಿ ಮಾತ್ರ ಬ್ರಾಹ್ಮಣ ಸಂಘಗಳೂ ಬೌದ್ಧಾರಾಮಗಳೂ ಒತ್ತಟ್ಟಿಗೆ ನಿಷ್ಕಲಹವಾಗಿ ನಿವಾಸಮಾಡುತ್ತಿದ್ದುವು ಅದು ಶಾಸಕನ ವ್ಯವಸ್ಥಾಚಾತುರ್ಯವನ್ನು ಮಾತ್ರ ಹೇಳತಕ್ಕದ್ದಾಗಿದೆ

ಈ ದೇಶದಲ್ಲಿ ಅನಾದಿಕಾಲದಿಂದಲೂ ಅನೇಕ ಸಂಪ್ರದಾಯಗಳಿಂದ ಕೂಡಿ ವಾಸಮಾಡತಕ್ಕ ಈ ದೊಡ್ಡ ಗುಂಪಿಗೆ ಪ್ರಾಚೀನಕಾಲದಲ್ಲಿ ಒಂದು ಹೆಸರು ಇದ್ದಂತೆ ಕಾಣುವುದಿಲ್ಲ ಚಿಕ್ಕ ಚಿಕ್ಕ ಗುಂಪುಗಳಿಗೆ ಬೇರೆ ಬೇರೆ ಸಂಪ್ರದಾಯದ ಹೆಸರುಗಳಿರುವಾಗ ಈ ದೊಡ್ಡ ಸಮೂಹಕ್ಕೆ ಮತ್ತೊಂದು ಹೆಸರಿನ ಅವಕಾಶವೂ ಆಗಿಲ್ಲ ಪರದೇಶಿ ವಿದೇಶಿ ಜನರ ಪರಿಚಯ ಮತ್ತು ಪ್ರವೇಶ ತಮ್ಮಲ್ಲಾದ ಮೇಲೆಯೇ ಅವರಿಗೆ ಇವರು "ಯವನ, ಮ್ಲೇಚ್ಛ ನಾಮಗಳನ್ನೂ, ಇವರಿಗೆ ಅವರು ಹಿಂದೂ ನಾಮವನ್ನೂ ಇಟ್ಟಿರಬಹುದು ಈ ನಾಮ ಕರಣವು ಬಹಳ ಸಹಜವಾಗಿ ಜರುಗಿರಬಹುದೇ ಹೊರತು ಒಂದು ಸಭೆಸೇರಿ ಚರ್ಚಿಸಿ ವಿದ್ವಾಂಸರು ಇಟ್ಟ ಹೆಸರಲ್ಲ ಇದು ಆದುದರಿಂದಲೇ ಅವ್ಯಾಪ್ತ್ಯಾದಿದೋಷಗಳನ್ನಿಲ್ಲಿ ನೋಡಲಾಗದು.

ಪ್ರಾಚೀನಕಾಲದಲ್ಲಿ ಇದರ ಅರ್ಥವು ಹೇಗೇ ಇರಲಿ. ಪಾರಂಪರ್ಯವಾಗಿ ವೇದಾನುಯಾಯಿಗಳಾದವರೆಲ್ಲರೂ ಹಿಂದುಗಳೆಂದು ಹೆಸರಾಗಿದ್ದಾರೆ, ಅದರಂತೆ ಬರೆದುಕೊಳ್ಳುತ್ತಲೂ ಬಂದಿದ್ದಾರೆ ಹಿಂದುಗಳ ಗುಂಪು ಶೈವ, ವೈಷ್ಣವ, ಸ್ಮಾರ್ತ, ಸೌರ, ಶಾಕ್ತ, ಗಾಣಾಪತ್ಯ ಎಂದು ಆರು ತೆರನಾಗಿದೆ ಇವರಲ್ಲಿ ಸೌರ, ಶಾಕ್ತ, ಗಾಣಾಪತ್ಯರು ಈಗ ಪ್ರತ್ಯೇಕವಾಗಿ ವಂಶ ಕುಟುಂಬಪರಂಪರೆಯುಳ್ಳವರಾಗಿಲ್ಲ ಮೇಲ್ಕಂಡ ಶೈವಾದಿ ತ್ರಿಮತೀಯರಲ್ಲಿ ಸೇರ್ಪಡೆಯಾಗಿ ಹೋಗಿದ್ದಾರೆ ಶಕ್ತಿಪೂಜಾದಿಗುಣಗಳಿಂದ ಇವರನ್ನು ಅಲ್ಲಲ್ಲಿ ಕಾಣಬಹುದು ವೇದಾನುಯಾಯಿತ್ವವೆಂದರೆ ವೇದಮಂತ್ರವನ್ನು ಪಾರಂಪರ್ಯವಾಗಿ ಜಪಿಸುವ ಅಧಿಕಾರವಾಗಲಿ ವೇದದಲ್ಲುಕ್ತವಾದ ದೇವರನ್ನು ಉಪಾಸನೆಮಾಡುವ ಆಚಾರವಾಗಲಿ ಉಳ್ಳವರೆಂದರ್ಥ ಇದುವೇ ಹಿಂದುತ್ವದ ಸರಿಯಾದ ಲಕ್ಷಣ ಈ ವಿಧವಾದ ಲಕ್ಷಣವುಳ್ಳವರೆಲ್ಲರೂ ಚಿರಕಾಲದಿಂದ ಹಿಂದುಗಳೆಂತಲೇ ವ್ಯವಹೃತರಾಗಿದ್ದಾರೆ ಈ ಲಕ್ಷಣವು ಮಾತ್ರ ಯಾವ ಶಾಸ್ತ್ರದಲ್ಲಿದೆ? ಎಂದು ಪ್ರಶ್ನೆಮಾಡಬಹುದು ಯಾವ ಗ್ರಂಥದ ವಿರೋಧವೂ ಇದಕ್ಕುಂಟಾಗುವುದಿಲ್ಲವಾದುದರಿಂದ ಇದು ಸರಿಯಾದುದೆಂತಲೇ ಸಿದ್ಧಾಂತ ಏಕೆಂದರೆ ಇತರರು ಹೇಳುವ ಎಲ್ಲ ಲಕ್ಷಣಗಳನ್ನೂ ಖಂಡಿಸಬಹುದು ಇದು ಎಲ್ಲ ವಿಮರ್ಶನೆಗಳಿಗೂ ನಿಲ್ಲುವುದಾಗಿ "ಪಾರಂಪರ್ಯವಾಗಿ ವೈದಿಕ ದೇವತೋಪಾಸನೆಯುಳ್ಳವನೇ ಹಿಂದುವು" ಎಂದು ಭೇರೀ ನಿನಾದದಿಂದ ಹೇಳಬಹುದು ವೈಶಿಷ್ಟ್ಯಗಳನ್ನು ವಿಸ್ತರಿಸುವುದು ಬೇರೆ ಕೆಲಸವಾಗಿದೆ ಸಂಕ್ಷಿಪ್ತವಾಗಿಯೂ, ನಿಸ್ಪಷ್ಟವಾಗಿಯೂ ಇರಬೇಕೆಂದರೆ ಇದುವೇ ಸರ್ವಮಾನ್ಯವಾದ ಲಕ್ಷಣ! ಧರ್ಮಚ್ಯುತರನ್ನೂ ಪರಧರ್ಮಿಗಳನ್ನೂ ಶುದ್ಧಗೊಳಿಸುವವರು ಪಾರಂಪರ್ಯವಾಗಿ ಎಂಬ ಶಬ್ದವನ್ನು ಬಿಟ್ಟುಬಿಡಬಹುದು ಇದುದರಿಂದಲೇ ಈ ಲಕ್ಷಣವನ್ನು ನಾವು ಮೊದಲು ಎರಡು ಭಾಗವಾಗಿ ಬರೆದುದಾಯಿತು

ಸಂಪ್ರದಾಯಗಳ ಹಿಂದುತ್ವ

ಸ್ಮಾರ್ತರಿಗೆ ಸ್ಮೃತಿಗಳೂ ವೈಷ್ಣವರಿಗೆ ಪಾಂಚರಾತ್ರಾಗಮಗಳೂ ಶೈವ ವೀರಶೈವರಿಗೆ ಶಿವಾಗಮಗಳೂ ಧರ್ಮಶಾಸ್ತ್ರಗಳಾಗಿವೆ ಹೀಗಿದ್ದರೂ ಜಪತಪೋನುಷ್ಠಾನಾದಿ ಉಪಾಸನಾ ರಹಸ್ಯವನ್ನು ಆಗಮತಂತ್ರಗಳಿಂದಲೇ ಸ್ಮಾರ್ತರು ಗ್ರಹಿಸುವರು ಇದರಂತೆ ವಿವಾಹಾದಿ ಸಂಸ್ಕಾರಗಳನ್ನೂ ರಾಜವ್ಯವಹಾರವನ್ನೂ ಸ್ಮೃತಿಗ್ರಂಥಗಳಿಂದಲೇ ಶೈವ ವೈಷ್ಣವರು ಗ್ರಹಿಸುವರು ಇದರಿಂದ ಆಗಮಗಳೂ ಸ್ಮೃತಿಗಳೂ ಪರಸ್ಪರ ಪೂರಕವಾಗಿವೆಯೆಂಬುದು ಸ್ಪಷ್ಟವಾಗಿ ತಿಳಿಯಬಹುದು ಇವರಿಗೆಲ್ಲರಿಗೂ ವೇದವು ಮಾನ್ಯವಾಗಿಯೇ ಇದೆ ಧರ್ಮಶಾಸ್ತ್ರಗ್ರಂಥಗಳಲ್ಲಿ ಸಂಶಯ ಬಂದಾಗ ವೇದಕ್ಕೆ ವಿರೋಧವಿಲ್ಲದಂತೆ ನೋಡಿಕೊಳ್ಳಬೇಕಾಗುವುದು ಇದುವೇ "ವೇದಾವಿರೋಧತ್ವೇನ ಪ್ರಾಮಾಣ್ಯಂ" ಎಂದು ಪ್ರಸಿದ್ಧವಾಗಿದೆ ವೇದದಲ್ಲಿ ಹೇಳಲ್ಪಟ್ಟ ಕೆಲವು ಕೆಲವು ಅಂಶಗಳನ್ನು ಮಾತ್ರ ಈ ತ್ರಿಮತಸ್ಥರು ಅನುಸರಿಸಿ ಅದಕ್ಕೆ ವಿರೋಧವಿಲ್ಲದ ಸ್ಮೃತ್ಯಾಗಮಗಳನ್ನು ತಮ್ಮ ಧರ್ಮಶಾಸ್ತ್ರಗಳನ್ನಾಗಿರಿಸಿಕೊಂಡು ವ್ಯವಹಾರವನ್ನು ನಡೆಯಿಸುವರು ವೇದವು ಯಾರಿಗೂ ಕೇವಲ ಧರ್ಮಶಾಸ್ತ್ರವಲ್ಲ ಎಲ್ಲ ಶಾಸ್ತ್ರವೂ ಆಗಿರುವುದು

ಹೊಟ್ಟೆಶೂಲೆಯುಳ್ಳವನು ಆ ಔಷಧವನ್ನು ಬೋಧಿಸುವ ಆಯುರ್ವೇದದ ಭಾಗವನ್ನು ಪ್ರಮಾಣಿಸಿ ಉಳಿದ ಆಯುರ್ವೇದವನ್ನು ಅಪ್ರಮಾಣವೆಂದು ನಿಂದಿಸುವುದು ಅಸಂಗತವಾಗಿದೆ ಒಬ್ಬ ವ್ಯಕ್ತಿಯು ಒಂದೇ ಜನ್ಮದಲ್ಲಿ ಅನೇಕ ರೋಗಗಳಿಗೆ ಗುರಿಯಾಗಿ ಆಯುರ್ವೇದದ ಅನೇಕ ಔಷಧಗಳನ್ನು ಉಪಯೋಗಿಸುತ್ತಿರುವುದು ಪ್ರತ್ಯಕ್ಷವಾಗಿಯೇ ಇದೆ ಎಂದರೆ ಇಂತಹ ಸರ್ವರೋಗಗಳಿಗ ಕಲ್ಯಾಣಕರವಾದ ಎಲ್ಲ ಚಿಕಿತ್ಸೆಗಳನ್ನೂ ಆಯುರ್ವೇದವು ಸೂಚಿಸತಕ್ಕದಾಗಿದೆ ಅದರಂತೆಯೇ ವೇದವು ಸಮಸ್ತ ಸಂಸಾರಿಗಳಿಗೆ ಪುರುಷಾರ್ಥಗಳನ್ನು ಸಂಪಾದಿಸುವುದಕ್ಕಾಗಿ ಅನೇಕ ಮಾರ್ಗಗಳನ್ನು ಬೋಧಿಸಿದೆ ಆಯಾ ಸಂಪ್ರದಾಯ ವರ್ಣ ಆಶ್ರಮ ಅವಸ್ಥೆಗಳಿಗನುಸಾರವಾಗಿ ಆಯಾ ಉಪಾಸನೆಗಳನ್ನು ತಿಳಿದು ಆಚರಿಸಬೇಕು ಕರ್ಮಕಾಂಡಿಗಳು ಜ್ಞಾನಮಾರ್ಗವನ್ನಾಗಲಿ ಜ್ಞಾನಕಾಂಡಿಗಳು ಕರ್ಮಮಾರ್ಗವನ್ನಾಗಲಿ ನಿಂದಿಸುವುದಾದರೆ ಅದು ಅವರ ಅಜ್ಞಾನವೇ ಆಗಿದೆ ಜಗತ್ತಿನಲ್ಲಿರುವ

ಸರ್ವರೂ ಒಂದೇ ವಿಧವಾದ ಕರ್ಮವುಳ್ಳವರಾಗಿ ಒಂದೇ ಉಪಾಸನೆಯುಳ್ಳವರಾಗಬೇಕೆ ಒಂದೂ ಅಸಾಧ್ಯವಾದ ಕಾರ್ಯ ಶಾಸ್ತ್ರಜ್ಞಾನ ಲೋಕಜ್ಞಾನಗಳಿದ್ದೂ ಈ ವರು ಈ ಕಾರ್ಯದಲ್ಲಿ ಪ್ರವೃತ್ತರಾಗುವುದಿಲ್ಲ ನೀರಡಿಸಿದವನು ಬಾವಿಯಲ್ಲಿಯ ಸ್ವಲ್ಪ ಜಲವನ್ನು ಸ್ವೀಕರಿಸಿ ತೃಪ್ತನಾದಂತೆಯೇ ವೇದದಲ್ಲಿಯ ಕೆಲವಂಶಗಳನ್ನು ಮಾತ್ರ ತೆಗೆದುಕೊಂಡು ಶೈವ ವೈಷ್ಣವ ಸ್ಮಾರ್ತಾದಿಗಳು ಸ್ವಮತ ನಿರ್ವಹಣ ಮಾಡಿ ಧನ್ಯರಾಗುತ್ತಿದ್ದಾರೆ ಈ ಎಲ್ಲರಿಗೂ ವೇದವು ಶಿರಸಾ ಮಾನ್ಯವಾಗಿದೆ ಅದರಲ್ಲಿಯ ಒಂದು ಅಂಶವನ್ನು ಸ್ವೀಕರಿಸಿ ತಾನು ಧನ್ಯನಾದಂತೆಯೇ ಇತರ ಪ್ರಾಣಿಗಳೂ ಇತರಾಂಶಗಳನ್ನು ಅನುಷ್ಠಿಸಿ ಧನ್ಯರಾಗುತ್ತಿರುವುದರಿಂದ ವೇದವು ಸರ್ವಮೂರ್ಧನ್ಯವಾಗಿರುವದು

ವೇದದಲ್ಲಿರುವ ಸಾತ್ವಿಕವಾದ ಜ್ಞಾನಭಾಗವನ್ನು ಮಾತ್ರ ಸ್ವೀಕರಿಸಿ ತಾವು ಧನ್ಯರಾಗಬಹುದು ಕರ್ಮಭಾಗವನ್ನು ಎಂದರೆ ತಮ್ಮ ಆಶ್ರಮ ಸಂಪ್ರದಾಯಗಳಿಗೆ ಅನುಕೂಲವಲ್ಲದ ಭಾಗವನ್ನು ಬಿಡಬಹುದು ಇದರಿಂದ ವೇದಪ್ರಾಮಾಣ್ಯಕ್ಕೆ ಚ್ಯುತಿಇಲ್ಲ ವೇದದೊಳಗಿನ ಇತರ ಎಲ್ಲ ಭಾಗವನ್ನು ನಿಂದಿಸುವುದೂ ಹೇಯವೆಂದು ಸಾರುವುದೂ ಅಜ್ಞಾನವಾಗಿದೆ ರಾಜಸತಾಮಸಭಾಗಗಳು ಆಯಾ ಸ್ವಭಾವವುಳ್ಳ ಜನರಿಗೆ ಚಿತ್ತಶುದ್ಧಿದ್ವಾರಾ ಸಾತ್ವಿಕಮಾರ್ಗವನ್ನು ಬೋಧಿಸುವುವಾದದರಿಂದ ಅವು ನಿಂದ್ಯವೇನೂ ಅಲ್ಲ ಗೋವು ಹುಲ್ಲು ತಿನ್ನಬೇಕ ಎಂದು ವೇದವು ಹೇಳಿದರೆ ಅದು ಮನುಷ್ಯನಿಗೆ ವಿರೋಧವುಂಟು ಮಾಡತಕ್ಕ ವಿಷಯವೇ ಅಲ್ಲ ತಾಮಸಕರ್ಮಗಳನ್ನು ತಾಮಸರಿಗೆ ಹೇಳಿದರ ಸಾತ್ವಿಕನು ಅದನ್ನು ನಿಂದಿಸುವುದು ಹೇಗೆ?

ಸದಾಚಾರ ಸಂಪನ್ನನೂ ವಿದ್ವಾಂಸನೂ ಆದ ತನ್ನ ತಂದೆಯನ್ನು ಅಥವಾ ಗುರುವನ್ನು ಎಲ್ಲರೂ ಒರ್ದೇ ಪ್ರೇಮದಿಂದ ಭಕ್ತಿಯಿಂದ ನಮಸ್ಕರಿಸಿ ಅವರ ಪಾದಧೂಳಿಯನ್ನು ತಮ್ಮ ಮಸ್ತಕದಲ್ಲಿ ಚಲ್ಲಿಕೊಂಡು ಪರಿಪೂರ್ಣರಾಗುತ್ತಿರುವದು ಪ್ರಸಿದ್ಧವಾಗಿದೆ ಆದರೆ ಇಂತಹ ಪೂಜ್ಯ ವ್ಯಕ್ತಿಗಳ ಹೊಟ್ಟೆಯಲ್ಲಿ ಮಲವು ಇದೆ ಇದನ್ನು ಸ್ವೀಕರಿಸಿ ಸನ್ಮಾನಿಸುವುದಕ್ಕೆ ಶಾಸ್ತ್ರವಾಗಲಿ ಶಿಷ್ಟಾಚಾರವಾಗಲಿ ಹೇಳುವುದಿಲ್ಲ ಮಲವಿದ್ದ ವಸ್ತುಗಳನ್ನು ಪೂಜಿಸಬಾರದೆಂದು ತಿಳಿದು ಮಲಕ್ಕೆ ಕಾರಣವಾಗಿರುವ ಆಹಾರವನ್ನು ಗುರುವಿಗೆ ಕೊಡದೆ ಅವನ ಹೊಟ್ಟೆಯಲ್ಲಿರುವ ಮಲವನ್ನೆಲ್ಲಾ ವಿರೇಚನಮಾಡಿಸಿ ಪೂಜಿಸಬೇಕೆಂದು ವಿಪರೀತ ವ್ರತವನ್ನು ಮಾಡುವುದಾದರೆ ಆ ಗುರುವಿಗೆ ಮರಣವು ತಪ್ಪುವುದಿಲ್ಲ ಮಲವು ಬಲಕ್ಕೆ ಕಾರಣವಾಗಿದೆ ಬಲವನ್ನನುಸರಿಸಿಯೇ ಪ್ರಾಣಾದಿಗಳವೆ ಇದರಂತೆ ಕೆಲವರ ತಿಳುವಳಿಕೆಯನ್ನನುಸರಿಸಿ ವೇದದಲ್ಲಿ ತಾಮಸಾಂಶವಿದೆಯೆಂದು ಒಪ್ಪಿದರೂ ಅದು ಅಮಾನ್ಯವೆಂದಿಗೂ ಆಗಲಾರದು ತಾಮಸರಿಗಾಗಿ ತಾಮಸ ಮಾರ್ಗವಿರಬೇಕೆಂಬುದು ತನಗೆ ಮಾನ್ಯವೇ ಆಗಿದೆ ತನಗ ಬೇಕಾಗಿರುವ ಮಾರ್ಗವನ್ನು ವೇದವು ಮೊಟ್ಟ ಮೊದಲು ಬೋಧಿಸಿರುವುದನ್ನು ಮಾತ್ರ ನೋಡಿಕೊಳ್ಳಬೇಕು ಇದನ್ನೇ ಇತರ ಗ್ರಂಥಗಳು ಅನೇಕ ವಿಸ್ತರಿಸಿರುವವು

ಶೈವ ವೀರಶೈವ, ವೈಷ್ಣವ, ಶ್ರೀವೈಷ್ಣವ, ಸ್ಮಾರ್ತ ಶಾಕ್ತ ಗಾಣಾಪತ್ಯ ಮುಂತಾದ ಎಲ್ಲ ಸಂಪ್ರದಾಯಗಳು ಶಿವ ವಿಷ್ಣ್ವಾದಿಗಳಷ್ಟು ಪ್ರಾಚೀನವಾಗಿದ್ದು ಅವು ಮೊದಲು ವೇದವನ್ನು ಪುರಸ್ಕರಿಸಿಕೊಂಡು ಹೊರಟು ವಿಸ್ತೃತಗಳಾಗಿ ಇಂದಿನವರೆಗೂ ವೈದಿಕವಾಗಿಯೇ ಉಳಿದಿವೆ ಇವರಿಗೆಲ್ಲರಿಗೂ ವೇದವು ಪ್ರಮಾಣವಾಗಿದೆಯಲ್ಲದೆ ಹಿಂದುಗಳೆಂಬ ಸಾಮಾನ್ಯ ವ್ಯವಹಾರವೂ ಇವರಿಗಿದೆ

(ಸಶೇಷ)

ದುಃಖವಾರ್ತೆ

ಬೆಳಗಾಂವ ಡಿ|| ಖಾನಾಪೂರ ತಾ|| ವೈಜನಾಥಮಠದ ವೇ|| ಶಿವಬಸಯ್ಯನವರ ತಂದೆಯ ತಾಯಿಯವರಾದ ಸಾತವ್ವನವರು ತಾ|| ೨೨-೭-೧೯೪೫ ಇಸ್ವಿ ಗುರುವಾರ ದಿವಸ ಸಾಯಂಕಾಲ ಶಿವಾಧೀನರಾದರು ಇವರು ಮಹಾಪರೋಪಕಾರಿಣಿಯರೂ ಸದಾಚಾರಸಂಪನ್ನೆಯರೂ ಆಗಿದ್ದು ಸರ್ವರ ಪ್ರೀತಿಗೂ ಪಾತ್ರರಾಗಿದ್ದರು ಇವರ ಅಂತ್ಯೇಷ್ಟಿ ಸಮಯದಲ್ಲಿ ಮಾಹೇಶ್ವರರಿಗೆ ವಿಶೇಷದಾನಗಳು ಮಾಡಲ್ಪಟ್ಟವು ಇವರು ೯೦-೯೫ ವರ್ಷ ವಯಸ್ಸುಳ್ಳವರಾಗಿದ್ದರು ಶ್ರೀಮಜ್ಜಗದಾಚಾರ್ಯರು ಮೃತರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಪ್ರಾರ್ಥಿಸುವ,

ಮುರಗಯ್ಯ ಹಿರೇಮಠ, ಖಾನಾಪೂರ

ಹೊಸ ಭಾರತದ ಕಾರ್ಯದರ್ಶಿ

೭೩ ವರ್ಷ ಪ್ರಾಯದ ಫ್ರೆಡರಿಕ್ ವಿಲಿಯಮ್ ಪೆಥಿಕ್ ಲಾರೆನ್ಸ್‌ರವರ ಹೆಸರನ್ನು ಇಂಡಿಯಾ ಸೆಕ್ರೆಟರಿ ಸ್ಥಾನಕ್ಕೆ ಪ್ರಧಾನರಾದ ಮಿ|| ಅಟ್ಲಿಯವರು ಸೂಚಿಸಬಹುದೆಂದು ರಾಜಕೀಯವಾವರಣದಲ್ಲಿ ನಂಬಲಾಗಿದೆ

ವಿಷವಾಯು ಪ್ರಯೋಗಿಸಿ !

ಜಪಾನಿನ ಯುದ್ಧವನ್ನು ಬೇಗ ಕೊನೆಗಾಣಿಸಲು ಜಪಾನಿನ ಮೇಲೆ ವಿಷವಾಯುವನ್ನು ಪ್ರಯೋಗಿಸಬೇಕೆಂದೂ, ಜಪಾನರಿಗೆ ಅದರ ರುಚಿ ತೋರಿಸಬೇಕೆಂದೂ ಅಮೇರಿಕನ್ ಪತ್ರಿಕೆಗಳು ಕೇಳುತ್ತಿವೆ ಡೇಲಿ ನ್ಯೂಸ್ ಪತ್ರಿಕೆ ಈ ಬಗ್ಗೆ ಒಂದು ಲೇಖನ ಬರೆದು, ಇದರಿಂದ ಯುದ್ಧ ಬೇಗ ಮುಗಿದು ಎಷ್ಟೋ ಜನರ ಜೀವ ಉಳಿಯುತ್ತದೆ ಎಂದು ವಾದಿಸಿದೆ

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶೆ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕಸಾಮ್ರಾಜ್ಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಪಾಠ, ಚಿಕ್ಕಸೈಜು)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು, ೨ನೆಯ ಆವೃತ್ತಿ)	೧| ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಶ್ರೀಕರಭಾಷ್ಯಂ ([illegible])	೧|| ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧|| ರೂ
ವೀರಶೈವರತ್ನ (೩ನೆಯ ಆವೃತ್ತಿ, ೩೦ ಮಹತ್ತದ ಫೋಟೋಗಳಿರುವದು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾವಾರ್ಥಸಹಿತ)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿದುವುಗಳು)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shastriji (English)	4 As
The Philosophical Aspect of Virasaivism (English)	8 As
Speeches by Pandit Shri Kashinatha Shastriji (English)	12 As
लिंगधारणचंद्रिका (संस्कृत)	३ रु
वीरशैवरत्न (मराठी)	१ रु
महानारायणोपनिषत् (वीरशैवभाष्य-संस्कृत)	१ रु
सिद्धांतशिखामणि (मूल)	८ आ.
नंदिकेश्वरकारिका (संस्कृत)	२ आ

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ।
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸಾಲದವರಿಗೆ ೩ ರೂ ೮ ಆಣೆ — ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೮ ಆಣೆ

ಸಂಪುಟ ೧೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೩ನೇ ಆಗಸ್ಟ್ ೧೯೪೫ [ಸಂಚಿಕೆ ೧೩

॥ ಶ್ರೀಜಗದ್ಗುರು ಪಂಚಾಚಾರ್ಯೇಭ್ಯೋ ನಮಃ ।

ಕರ್ಮಯೋಗ

(—ವೇ॥ ಮಲ್ಲಿಕಾರ್ಜುನಾರಾಧ್ಯ, ರಾಣೇಬೆನ್ನೂರು ಪಿ ಪ ಶೀಮಠ, ಮುಷಿಗೇರಿ)

ಕರ್ಮಯೋಗವೆ ಪರೆ ಫಲಾಶಾರಹಿತವಾಗಿ ಕರ್ಮ ಮಾಡುವಿಕೆಯು ಅನೇಕ ಕೋಟಿ ಜನ್ಮಗಳಲ್ಲಿ ಸಂಪಾದಿಸಿದ ಸತ್ಕರ್ಮ ಫಲ ವಿಶೇಷದಿಂದ ಯಾರು ಸಂಸಾರದಲ್ಲಿ ಪೂರ್ಣ ವೈರಾಗ್ಯವನ್ನು ಹೊಂದಿ ಮೋಕ್ಷಾರ್ಥಿಗಳಾಗುವರೋ ಅಂತಹ ಜನಾತ್ಮರಿಗೆ ಸುಪ್ರಸಿದ್ಧಗಳೂ ವಿಸ್ತಾರಗಳೂ ಆದ ಮೂರು ರಾಜ ಮಾರ್ಗಗಳು ಪ್ರತ್ಯಕ್ಷವಾಗುವವು ಅವುಗಳೇ ಕರ್ಮ ಮಾರ್ಗ, ಜ್ಞಾನಮಾರ್ಗ, ಭಕ್ತಿಮಾರ್ಗಗಳೆನಿಸಿಕೊಳ್ಳುವವು ಈ ಮೂರೂ ಶ್ರೇಯಸ್ಸಾಧಕಗಳಾಗಿರುವವು

ಮನುಷ್ಯನು ಈ ಮೂರರಲ್ಲಿ ಯಾವುದನ್ನನುಸರಿಸಿದರೂ ಮೋಕ್ಷದ್ವಾರವನ್ನು ಸೇರಬಲ್ಲನು ಮಾರ್ಗಗಳು ಭಿನ್ನವಾದಾಗ್ಯೂ ಅಂತ್ಯದಲ್ಲಿ ಸೇರತಕ್ಕ ಸ್ಥಾನವು ಮಾತ್ರ ಒಂದೇ ಆಗಿರುವುದು ಯಾವ ಮಾರ್ಗದಿಂದ ಆ ಗುರಿಯನ್ನು ಸೇರಿದಾಗ್ಯೂ ಉಳಿದೆರಡು ಮಾರ್ಗಗಳ ಫಲವನ್ನು ಗ್ರಹಿಸಿದನಂತರದಲ್ಲಿಯೇ ಮೋಕ್ಷಪದವಿಯನ್ನು ಪ್ರವೇಶಿಸುವನು ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿಯೆಂದು ಜೀವನಲ್ಲಿ ಮೂರು ಶಕ್ತಿಗಳು ಸ್ವಾಭಾವಿಕವಾಗಿರುವವು ಆದಿಯಲ್ಲಿ ಇವುಗಳು ಅಭಿವ್ಯಕ್ತವಾಗದೆ ಬೀಜರೂಪದಿಂದಡಗಿರುವವು ಅನೇಕ ಕಾಲದ ಅಭ್ಯಾಸ ಬಲದಿಂದ ಇವು ಮೂರೂ ಸ್ವಲ್ಪ ಸ್ವಲ್ಪವಾಗಿ ಹೊರಟು ಪರಿಪೂರ್ಣಗಳಾಗಲು ಜೀವನು ಮುಕ್ತನಾಗುವನು ಕರ್ಮಮಾರ್ಗದಿಂದ ಕ್ರಿಯಾಶಕ್ತಿಯೂ, ಜ್ಞಾನಮಾರ್ಗದಿಂದ ಜ್ಞಾನಶಕ್ತಿಯೂ, ಭಕ್ತಿಮಾರ್ಗದಿಂದ ಇಚ್ಛಾಶಕ್ತಿಯೂ ಆದಿಯಲ್ಲಿ ವಿಕಸಿತಗಳಾಗುವುವು ಆ ಮಾರ್ಗದ ಕೊನೆಯಲ್ಲೂ ಉಳಿದ ಶಕ್ತಿಗಳೆರಡೂ ವಿಕಸಿತವಾಗಲು ಜೀವನು ಸರ್ವಶಕ್ತಿ ಪರಿಪೂರ್ಣನಾಗಿ ಮುಕ್ತನಾಗುವನು.

ಕರ್ಮಯೋಗವು ಕರ್ಮಾಚರಣೆಯಿಂದ ಈಶ್ವರನೊಡನೆ ಸಂಯೋಗವುಂಟಾಗುವ ಮಾರ್ಗವಾದುದರಿಂದ ಇದಕ್ಕೆ ಕರ್ಮಯೋಗವೆಂದು ಹೆಸರಾಯಿತು ಕರ್ಮವೆಂದರೆ ಕೆಲಸವು ಕರ್ಮವನ್ನಾಚರಿಸುವುದಕ್ಕಾಗಿ ಮನುಷ್ಯನಿಗೆ ಶರೀರ, ವಾಕ್ಕು, ಮನಸ್ಸುಗಳೆಂಬ ತ್ರಿಕರಣಗಳಿರುವುವು ಇವುಗಳಲ್ಲಿ ಯಾವುದರಿಂದ ಮಾಡಲ್ಪಟ್ಟದ್ದೂ ಕರ್ಮವಾಗುವುದು ಪ್ರತಿಯೊಬ್ಬ ಮನುಷ್ಯನೂ ಬಿಡುವಿಲ್ಲದೆ ಯಾವುದಾದರೊಂದು ಕಾರ್ಯವನ್ನು ಮಾಡುತ್ತಿರುವನೇ ಹೊರತು ವ್ಯಾಪಾರಶೂನ್ಯನಾಗಿ ಒಂದು ನಿಮಿಷವಾದರೂ ಇರಲಾರನು ಕೈಕಾಲುಗಳು ಸುಮ್ಮನಿರುವಾಗ ಬಾಯಿ ಮಾತನಾಡುತ್ತಿರುವುದು. ಇವೂ ವಿಶ್ರಾಂತಿ ಹೊಂದಿರುವ ಸಮಯದಲ್ಲಿ ಮನಸ್ಸು ಏನನ್ನಾದರೂ ಚಿಂತಿಸುತ್ತಿರುವದು ಈ ರೀತಿಯಲ್ಲಿ ಸರ್ವರೂ ಮಾಯೆಯಿಂದುತ್ಪನ್ನವಾದ ಗುಣಗಳಿಗಧೀನರಾಗಿ ಕರ್ಮವನ್ನು ಮಾಡುತ್ತಿರುವರು

ಜೀವನು ಕೇವಲ ಅಜ್ಞಾನಾವಸ್ಥೆಯಲ್ಲಿರುವ ಕಾಲದಲ್ಲಿ ಮನೋವ್ಯಾಪಾರವು ಬಹು ಕಿಂಚಿತ್ತಾಗಿರುವದು ಶರೀರ, ವಾಕ್ಕುಗಳಿಗೆ ಸಂಬಂಧಪಟ್ಟ ಕಾರ್ಯಗಳೂ ಸಹ ಅತ್ಯಲ್ಪಗಳಾಗಿಯೂ ದುರ್ಬಲಗಳಾಗಿಯೂ ಇರುವುವು ಇವು ತಮೋಗುಣ ಬಹಳವಾಗಿ ಅಂತಹವನಲ್ಲಿ ಮಾಂದ್ಯ ಸೋಮಾರಿತನ ತೂಕಡಿಕೆ ಇತ್ಯಾದಿ ಲಕ್ಷಣಗಳುಂಟಾಗಿರುವುವು ಅವನಿಗೆ ಪ್ರವೃತ್ತಿಯಲ್ಲಿಚ್ಛೆಯಿರದು ಯಾವ ಕಾರ್ಯದಲ್ಲಿ ಪ್ರವೇಶಿಸಲಿಕ್ಕೂ ಬುದ್ಧಿ ಹುಟ್ಟದು ಇದ್ದ ಸ್ಥಳವನ್ನು ಬಿಟ್ಟು ಕದಲದಿರುವಿಕೆಯೇ ಅವನಿಗೆ ಅತ್ಯಂತ ಸುಖವೆಂದು ತೋರುವುದು ಅಂಥವನಿಗೆ ತಮೋಗುಣವು ನಶಿಸಿ ಕರ್ಮದಲ್ಲಿ ಪ್ರವೃತ್ತಿಯುಂಟಾಗುವುದು ಹೇಗೆ? ಸ್ವಲ್ಪ ಸ್ವಲ್ಪವಾಗಿ ಬಾಹ್ಯ ವಿಷಯಗಳಿಂದ ಸುಖವೆಂಬುದನ್ನರಿತು ಸುಖಸಾಧನ ವಸ್ತುಗಳ ಸಂಪಾದನೆಗಾಗಿ ಕ್ರಮ ಕ್ರಮವಾಗಿ ಪ್ರಯತ್ನಿಸುವನು ಒಂದಾವೃತ್ತಿ ಅನುಭವಿಸಿದ ಇಂದ್ರಿಯ ಸುಖವನ್ನು ಪುನಃ ಹೊಂದಬಯಸುವನು ಸುಖವನ್ನನುಭವಿಸುತ್ತಾ ಒಂದುಸಲ ಆಹುತಿಯಿಂದಗ್ನಿಯಂತೆ ಅವುಗಳಲ್ಲಿ ಅಭಿಲಾಷೆ ಹೆಚ್ಚಾಗುವುದು

ಹೀಗೆ ಇಂದ್ರಿಯ ಸುಖಸಾಧನಗಳನ್ನು ಮನಸ್ಸಿನಲ್ಲಿ ಆಲೋಚಿಸುವದರಿಂದಲೂ ಅವಕ್ಕೆ ಬೇಕಾದ ಸಲಕರಣೆಗಳನ್ನು ಹೊಂದುವದಕ್ಕಾಗಿ ಪ್ರಯತ್ನ ಪಡುವುದರಿಂದಲೂ ತಮೋಗುಣವು ಸ್ವಲ್ಪಮಟ್ಟಿಗೆ ಕಡಿಮೆಯಾಗುತ್ತಾ ರಜೋಗುಣವು ಅಭಿವೃದ್ಧಿ ಹೊಂದುವುದು ರಜೋಗುಣ ಪ್ರಧಾನನಾಗಿರುವವನಲ್ಲಿ ಕಾಮಕ್ರೋಧಲೋಭಗಳು ಹೆಚ್ಚಾಗಿರುವುವು ಧನಸಂಪಾದನೆಗಾಗಿಯೂ ಅದನ್ನು ಕಾಪಾಡುವದಕ್ಕಾಗಿಯೂ ಅನೇಕವಿಧದಿಂದ ಪ್ರಯತ್ನಪಡುವನು ಎಷ್ಟುಕಾಲ ಕೆಲಸಮಾಡಿದರೂ ಬೇಸರಿಸನು ಎಷ್ಟು ಸಂಪಾದನೆ ಮಾಡಿದಾಗ್ಯೂ ತೃಪ್ತಿಪಡನು ಸಂಪಾದನೆ ಮಾಡುವುದರಲ್ಲಿ ನ್ಯಾಯಾನ್ಯಾಯಗಳನ್ನು ಲೆಕ್ಕಿಸನು ಯಾರನ್ನೂ ಗಣನೆಮಾಡದೆ ಎಂತಹ ಸಾಹಸಕಾರ್ಯಕ್ಕಾದರೂ ಹಿಂಜರಿಯದ ತನಗೆ ಯಾವುದೂ ಅಸಾಧ್ಯವೆಂದು ಹೇಳದೆ ನಾನಾವಿಧಕಾರ್ಯಗಳಲ್ಲಿ ಪ್ರವರ್ತಿಸುತ್ತಿರುವನು ಅಂತಹ ಮನುಷ್ಯನು ಯಾವ ಕಾರ್ಯಕ್ಕೆ ಕೈಹಾಕಿದರೂ ಅದರಿಂದ ತನಗೊಂದು ಪ್ರಯೋಜನವನ್ನೆದುರುನೋಡುತ್ತಿರುವನು ತನಗೆ ಲಾಭವುಂಟಾಗದಿರುವಂತಹ ಕಾರ್ಯಕ್ಕೆ ಪ್ರಯತ್ನಪಡನು "ಪ್ರಯೋಜನಮನುದ್ದಿಶ್ಯ ನ ಮಂದೋಪಿ ಪ್ರವರ್ತತೇ" (ಪ್ರಯೋಜನಾಪೇಕ್ಷೆಯಿಲ್ಲದೆ ಹುಚ್ಚನಾದರೂ ಒಂದು ಕಾರ್ಯಕ್ಕೆ ಕೈಹಾಕನು) ಎಂಬುಕ್ತಿಯನ್ನೇ ಪ್ರಮಾಣವನ್ನಾಗಿ ಅಂಗೀಕರಿಸಿ ಸ್ವಪ್ರಯೋಜನತತ್ಪರನಾಗಿ ಕರ್ಮಗಳನ್ನಾಚರಿಸುವನು ಬಹುಕಾಲಕ್ಕೆ ತುಚ್ಛಗಳಾದ ಇಂತಹ ಇಂದ್ರಿಯ ಸುಖಗಳಲ್ಲಿ ವಿರಕ್ತಿ ಹೊಂದಿ ವಿದ್ವಾಂಸನಾಗಬೇಕೆನುತಲೂ ಪ್ರತಿಷ್ಠಾವಂತನಾಗಬೇಕೆನುತಲೂ ಎಲ್ಲಾ ಸ್ಥಳಗಳಲ್ಲಿಯೂ ತಾನು ಪೂಜ್ಯತೆಯಂ ಪಡೆಯಬೇಕೆನುತಲೂ ಕೆಲವು ದಿನಗಳು ಪ್ರಯತ್ನಪಡುತ್ತಿರುವನು ಪೂರ್ವಕಾಲದಲ್ಲಿ ಬಹುಜನರು ಐಹಿಕಸುಖಕ್ಕೆ ತಿಲಾಂಜಲಿಯನ್ನು ಕೊಟ್ಟು ಆಮುಷ್ಮಿಕಸುಖಕ್ಕಾಗಿ ತಮ್ಮ ಯಾವ ಶಕ್ತಿಯನ್ನೂ ಕಾಲವನ್ನೂ ವಿನಿಯೋಗಿಸುತ್ತಿದ್ದರು ಈಗಿನ ಕಾಲದಲ್ಲಿ ಅಂತಹ ಮಹಾಪುರುಷರನ್ನು ಕಾಣುವದೇ ದುರ್ಲಭವಾಗಿದೆ ಕಲಿಕಾಲ!

ಈ ರೀತಿಯಲ್ಲಿ ಮನುಷ್ಯನು ಬಹುಕಾಲ ನಾನಾವಿಧಗಳಾದ ಆಶೆಗಳಿಂದ ಕೂಡಿ ಕರ್ಮಗಳನ್ನಾಚರಿಸುತ್ತಿರುವನು. ಆದರೂ ಅಂತಹ ಫಲಗಳೆಲ್ಲವೂ ಅನಿತ್ಯವಾದುವುಗಳಾಗಿ ಆದಿಯಲ್ಲಿ ಅಮೃತತುಲ್ಯಗಳಾಗಿದ್ದರೂ ಅಂತ್ಯದಲ್ಲಿ ವಿಷತುಲ್ಯವಂತೆ ಪರಿಣಮಿಸುವುವು ಆದಪ್ರಯುಕ್ತ ಕಾಲಾಂತರದಲ್ಲಿ ಅಂತಹ ಮನುಷ್ಯನಿಗೆ ಕರ್ಮಫಲದಲ್ಲಿ ನಿಸ್ಪೃಹತೆಯುಂಟಾಗುವುದು ಅನಂತರ ಅವನು ಕರ್ಮಗಳನ್ನು ದೂರಮಾಡುವನು ಕಾಮ್ಯಕರ್ಮಗಳಿಂದ ಶಾಂತಿಯುಂಟಾಗದನುತಲೂ ಅವು ಬಂಧಹೇತುಗಳೆನುತಲೂ ಮೋಕ್ಷಾಪೇಕ್ಷೆಯುಳ್ಳವನು ಕರ್ಮಗಳನ್ನು ತ್ಯಜಿಸಬೇಕೆನುತಲೂ ಭಾವಿಸಿ ಕರ್ಮಸನ್ಯಾಸವನ್ನು ಸ್ವೀಕರಿಸುವನು ಅಲ್ಲಿಗೂ ಅವನು ಶಾಂತಿಯನ್ನು ಪಡೆಯಲಾರನು ವಿಷಯಸುಖಗಳನ್ನು ಬಾಹ್ಯದಲ್ಲಿ ತ್ಯಾಗಮಾಡಿದ್ದರೂ ವಿಷಯಾಭಿಲಾಷೆಯೂ ವಾಸನೆಯು ಮನಸ್ಸನ್ನಂಟಿರುವುವು ಇಂದ್ರಿಯಸುಖಗಳನ್ನುಂಟುಮಾಡುವ ವಿಷಯಗಳನ್ನು ಮನಸ್ಸಿನಲ್ಲಿ ಧ್ಯಾನಿಸುತ್ತಲೇ ಇರುವನು ಇಂತಹವನಿಗೆ ಮಿಥ್ಯಾಚಾರಿಯೆಂದು ಹೆಸರು ಮನುಷ್ಯನಿಗೆ ಬಾಹ್ಯವೇಷವನ್ನು ಮರೆಮಾಡಲು ಸುಲಭಸಾಧ್ಯವಾದರೂ ಅಂತಸ್ಥಿತಿಯನ್ನು ಬದಲಾಯಿಸುವುದು ಸಾಧ್ಯವಲ್ಲವು

ಕರ್ಮವು ಬಂಧಹೇತುವೆಂಬುವುದೇನೋ ನಿಶ್ಚಯವು ಆದರೂ ಆ ಬಂಧವೆಂಬ ಶಕ್ತಿಯು ಮನುಷ್ಯನು ಮಾಡತಕ್ಕ ಕರ್ಮಗಳಲ್ಲಿರದೆ ಅವನ ಮನೋಭಾವದಲ್ಲಿರುವುದು ಕರ್ಮವನ್ನು ನಾನು ಮಾಡುತ್ತಿರುವೆನು (ಅಹಂಕಾರ) ಕರ್ಮಫಲವು ನನಗುಂಟಾಗಬೇಕು (ಮಮಕಾರ) ಎಂಬ ಮನೋಭಾವಗಳೇ ಬಂಧಹೇತುಗಳು ಹೀಗಿರುವುದರಿಂದ ಕರ್ಮಗಳನ್ನು ತ್ಯಜಿಸಿದ ಮಾತ್ರದಿಂದಲೇ ಆಗಲಿ, ಸನ್ಯಾಸವನ್ನು ಗ್ರಹಿಸಿದ ಮಾತ್ರದಿಂದಲೇ ಆಗಲಿ ಮೋಕ್ಷವು ಲಭಿಸುವುದಿಲ್ಲವು

ವಾಚಕರೇ, ಮನುಷ್ಯನು ತಾರತಮ್ಯವಿಲ್ಲದೆ ಇಷ್ಟಬಂದಂತೆ ಕಂಡ ಕಂಡ ಕಾರ್ಯಗಳಲ್ಲಿ ಪ್ರವೇಶಿಸಿ ಮಾಡಲು ಯತ್ನಿಸಲಾಗದು "ನಿಯತಂ ಕುರು ಕರ್ಮತ್ವಂ" ಎಂಬ ವಾಕ್ಯದಂತೆ ತನಗೆ ವಿಹಿತವಾಗಿರುವ ಕಾರ್ಯಗಳಲ್ಲಿ ಮಾತ್ರವೇ ಪ್ರಯತ್ನ ಮಾಡಬೇಕು ಈ ಕಾಲದಲ್ಲಿ ಜಗತ್ತಿನಲ್ಲಿ ಜನರು ಸಾಮಾನ್ಯವಾಗಿ ಸ್ವಕರ್ತವ್ಯ ವಿಮುಖರಾಗಿ ಪರರ ಕಾರ್ಯಗಳಲ್ಲಿ ಪಿತ್ನಿತರುವುದೂ ದೋಷಗಳನ್ನೆಣಿಸುವುದೂ ವಾಡಿಕೆಯಾಗಿರುವುದು. ಪ್ರತಿಯೊಬ್ಬನೂ ಸ್ವಕರ್ತವ್ಯನಿಷ್ಠನಾಗಿ ಪರರ ಕಾರ್ಯಗಳಲ್ಲಿ ಪ್ರವೇಶಿಸದಿದ್ದಲ್ಲಿ ಮಾತ್ರ ಜಗದ್ವ್ಯಾಪಾರಗಳು ಕ್ರಮವಾಗಿ ನಡೆಯುತ್ತವಲ್ಲದೆ ಒಬ್ಬರ ಕಾರ್ಯದಲ್ಲಿ ಮತ್ತೊಬ್ಬರು

[೩ನೆಯ ಪುಟವನ್ನು ನೋಡಿ]

ಪಂಚಾಚಾರ್ಯಪ್ರಭಾ.

೧೯೪೫ನೆಯ ಆಗಸ್ಟ್ ತಾ|| ೧೩ನೇ ಸೋಮವಾರ

ಕೇದಾರಪೀಠದ ಸಮಾಚಾರ

ಶ್ರೀ ಕೇದಾರಪೀಠದ ಉತ್ತರಾಧಿಕಾರಕ್ಕಾಗಿ ೭ ಜನರು ಉಮೇದುವಾರರಾಗಿ ನಿಂತಿರುವ ವಿಷಯವು ಸರ್ವರಿಗೂ ವೇದ್ಯವಿರುವದಷ್ಟೆ! ಇವರಲ್ಲಿ ೩ ಜನರು ಬ್ರಹ್ಮಚಾರಿಗಳಾಗಿದ್ದು ಮಿಕ್ಕ ೪ ಜನರು ಅನಧಿಕಾರಿಗಳಾಗಿರುವರು ಈ ಅನಧಿಕಾರಿಗಳು ಆ ಮಹಾಪೀಠವನ್ನಾರೋಹಿಸಲು ಧರ್ಮಶಾಸ್ತ್ರ ರೀತಿಯಂತೆ ಎಷ್ಟೂ ಅರ್ಹರಾಗಿರುವದಿಲ್ಲವೆಂಬ ವಿಷಯವನ್ನು ಈಗೇ ಭರತಖಂಡದಲ್ಲಿರುವ ವೀರಶೈವರು ಅಲ್ಲಿಯ ಬ್ರಿಟಿಷ್ ಅಧಿಕಾರಿಗಳಿಗೂ ಟೆಹರಿ ಮಹಾರಾಜರಿಗೂ ಅಸಂಖ್ಯ ಟೆಲಿಗ್ರಾಂಗಳ ಮೂಲಕವೂ ರಜಿಷ್ಟರ್ ಪತ್ರಗಳ ಮೂಲಕವೂ ವಿಜ್ಞಾಪಿಸಿಕೊಂಡಿರುವರು ಈ ನಾಲ್ಕು ಜನ ಅನಧಿಕಾರಿಗಳಲ್ಲಿ ಒಬ್ಬನಾದ ಸುಂದರಲಿಂಗನೆಂಬ ವೃದ್ಧನು ಮೃತನಾದನೆಂದು ನಮಗೆ ಈಗ ಸಮಾಚಾರವು ಬಂದಿರುವುದು. ಈ ಸುಂದರಲಿಂಗನು ಪರಮತೀಯನಾಗಿದ್ದು ಸುಮಾರು ೮೦ ವರ್ಷ ವಯಸ್ಸಿನ ಹಣ್ಣು ಹಣ್ಣು ಮುದುಕನಾಗಿದ್ದನು ಈಗ್ಗೆ ಸುಮಾರು ೬೦ ೭೦ ವರ್ಷಗಳ ಪೂರ್ವದಲ್ಲಿ ಹಿಮಾಲಯಕ್ಕೆ ಹೋಗಿ ಜಂಗಮನೆಂದು ಹೇಳಿಕೊಂಡು ಆ ಪೀಠದ ಶಿಷ್ಯನಾಗಿ ಹಕ್ಕುದಾರನಾಗಿ ಬಿಟ್ಟಿದ್ದನು ವೀರಶೈವ ಸಮಾಜದವರನ್ನು ಕಂಡರೆ ಆತನಿಗೆ ಎಷ್ಟೂ ಸೈರಣೆಯಿದ್ದಿಲ್ಲವಂತೆ! ಆತನು ಸಾಯುವದಕ್ಕೆ ಸ್ವಲ್ಪ ದಿವಸಗಳ ಪೂರ್ವದಲ್ಲಿ ತನ್ನ ಹೆಸರಿನಿಂದ ಒಂದು ಓಟಿಂಗ್ ಪತ್ರಿಕೆಯನ್ನು ಪ್ರಿಂಟುಮಾಡಿಸಿ ಅದರಲ್ಲಿ ಕೇದಾರ ಪೀಠವು ವೀರಶೈವ ಜನಾಂಗಕ್ಕೆ ಸೇರಿದ್ದಲ್ಲವೆಂದೂ, ನಾನು ಸ್ವಾತಂತ್ರಮತದವನಾಗಿರುವದರಿಂದ ಸರ್ವರೂ ನನಗೇ ಓಟುಕೊಡಬೇಕೆಂದೂ ಬರೆದುಕೊಂಡಿದ್ದನು. ಇವನ್ನು ತಿಳಿದು ಅಲ್ಲಿರುವ ಜಂಗಮವಂಶೀಯರೆಲ್ಲರೂ ಹಗಲೂ ಇರುಳೂ, ನಮ್ಮ ಮಹಾಪೀಠವು ಎಲ್ಲಿ ಪರಮತದವರ ವಶವಾಗುವದೋ ಎಂಬ ಆಲೋಚನೆಯಲ್ಲಿಯೇ ಮುಳುಗಿದ್ದು, ಸದಾ ಕೇದಾರನಾಥನ ಧ್ಯಾನದಲ್ಲಿಯೇ ಲೀನರಾಗಿದ್ದರು ಅಪಾರ ಕರುಣಾಮೂರ್ತಿಯಾದ ಶ್ರೀಕೇದಾರನಾಥನು ಅವರ ದೀನಪ್ರಾರ್ಥನೆಯನ್ನು ಲಾಲಿಸಿ ಆ ಪೀಠಕ್ಕೊದಗಿದ್ದ ದೊಡ್ಡ ವಿಪತ್ತನ್ನು ದೂರಮಾಡಿದುದನ್ನು ನೋಡಿದರೆ, ಆತನ ಮಹಿಮೆಯನ್ನು ಎಷ್ಟು ಕೊಂಡಾಡಿದರೂ ತೀರದಾಗಿದೆ.

ಆ ಪೀಠಕ್ಕೆ ಸ್ವಾಮಿಗಳಾಗುವವರು ಆ ಪೀಠಕ್ಕಿರುವ ೧೪೩ ಇನಾಂ ಗ್ರಾಮಗಳ ಜನರ ಓಟಿನ ಮೂಲಕ ಆರಿಸಿಬರಬೇಕಾಗಿರುವ ವಿಷಯವು ನಮ್ಮ ಪತ್ರಿಕಾವಾಚಕರಿಗೆಲ್ಲಾ ತಿಳಿದೇ ಇದೆ. ಓಟಿಗೆ ನಿಂತಿದ್ದರೆ, ಮೃತನಾದ ಸುಂದರಲಿಂಗನಿಗೇ ಆ ದೇಶದ ಜನರು ಓಟುಕೊಡುತ್ತಿದ್ದರೆಂದೂ, ಆತನೇ ರಾವಲ್ ಆಗಿ ಆರಿಸಿಬರುತ್ತಿದ್ದನೆಂದೂ ಅಲ್ಲಿಯ ಸಮಾಚಾರದಿಂದ ಗೊತ್ತಾಗುತ್ತದೆ. ಆತನು ಇಷ್ಟು ಹಣ್ಣು ಹಣ್ಣು ಮುದುಕನಾಗಿದ್ದರೂ ಒಂದು ದಿವಸವಾದರೂ ರಾವಲ್ ಪದವಿಯನ್ನು ಅನುಭವಿಸುವೆನೆಂದು ಯಾವಾಗಲೂ ನುಡಿಯುತ್ತಿದ್ದನಂತೆ! ಆದರೆ ಶ್ರೀಕೇದಾರನಾಥನು ಆತನ ಬಯಕೆಯನ್ನು ಸಫಲಗೊಳಿಸಲಿಲ್ಲ 'ಸತ್ಯಕ್ಕೆ ಸಾವಿಲ್ಲ" ಎಂಬ ಗಾದೆಯಮಾತಿನಂತೆ, ದೇವರು ಸತ್ಯವನ್ನು ಪಾಲಿಸಿದನು ಕೇದಾರನಾಥನ ಅನುಗ್ರಹದಿಂದ ಆ ಮಹಾಪೀಠವು ಜಂಗಮರ ಕೈಯಲ್ಲಿ ಉಳಿಯುವಂತಾಯಿತು ಇದು ವೀರಶೈವಮತದ ಭಾಗ್ಯೋದಯವೆಂದೇ ಹೇಳಬೇಕಾಗಿದೆ ಅಸ್ತು!

ಕೇದಾರನಾಥನ ಅನುಗ್ರಹದಿಂದ ಸದ್ಯಃ ಒಂದು ದೊಡ್ಡ ವಿಪತ್ತು ದೂರಾದರೂ ಮಿಕ್ಕ ಅನಧಿಕಾರಿಗಳಿಂದ ಇನ್ನೂ ಸ್ವಲ್ಪ ಸಣ್ಣ ವಿಪತ್ತುಗಳು ಆ ಪೀಠಕ್ಕೆ ಇದ್ದೇ ಇರುವುವು ಆ ವಿಪತ್ತುಗಳ ನಿವಾರಣೆಗಾಗಿ ಸ್ಪೆಷಲ್ ಆಫೀಸರರ ರಿಪೋರ್ಟು ಸದ್ಯಃ ಟೆಹರಿ ಮಹಾರಾಜರವರಲ್ಲಿ ಹೋಗಿರುವದು ಶ್ರೀ ಕೇದಾರೇಶ್ವರನು ಇದರಂತೆಯೇ ತನ್ನ ಮಹಿಮಾತಿಶಯದಿಂದ ಆ ವಿಪತ್ತುಗಳನ್ನೂ ಸಹ ದೂರಮಾಡುವನೆಂದು ಪೂರ್ಣ ನಂಬಿದ್ದೇವೆ

ಯುದ್ಧವಾರ್ತೆ.

ಜಪಾನ್ ರಷ್ಯಾ ಯುದ್ಧಾರಂಭ

ಕಳೆದ ೮ನೆಯ ತಾರೀಖು ರಷ್ಯವು ಜಪಾನ್ ವಿರುದ್ಧ ಯುದ್ಧ ಸಾರಿತು ಈ ಯುದ್ಧ ಘೋಷಣೆಯನ್ನು ಮಾಸ್ಕೋ ರೇಡಿಯೋ ಈರೀತಿ ಪ್ರಕಟಿಸಿದ: "ಎರಡು ಮಹಾ ಮಿತ್ರರಾಷ್ಟ್ರಗಳಾದ ಬ್ರಿಟನ್ ಮತ್ತು ಅಮೆರಿಕಗಳ ಪ್ರಾರ್ಥನೆಯಂತೆ ರಷ್ಯವು ಈ ಕಾರ್ಯವನ್ನು ಆರಂಭಿಸಿದ ಯುದ್ಧವನ್ನು ಮುಂದುವರಿಸುತ್ತಿರುವ ಮೂರನೆ ರಾಷ್ಟ್ರ ಈಗಿರುವುದು ಜಪಾನು ಒಂದೇ. ಪೋಟ್ಸ್‌ಡಾಮ್ ಸಮ್ಮೇಳನದಲ್ಲಿ ಜುಲೈ ೨೬ರ ಬ್ರಿಟನ್, ಅಮೆರಿಕ ಮತ್ತು ಚೈನಾ ಯುದ್ಧವನ್ನು ನಿಲ್ಲಿಸುವಂತೆ ಕೇಳಿಕೊಂಡ ಘೋಷಣೆಯನ್ನು ಜಪಾನು ನಿರಾಕರಿಸಿತು ಈ ನೀತಿಯಿಂದ ಮಿತ್ರರು ಯುದ್ಧ ಸಾರುವಂತೆ ರಷ್ಯವನ್ನೂ ಕೇಳಿಕೊಂಡರು ತನ್ನ ಕರ್ತವ್ಯಕ್ಕೆ ವಿಧೇಯವಾಗಿ ಮಿತ್ರರ ವಿನಂತಿಗೆ ಒಪ್ಪಿ, ರಷ್ಯವು ಪೋಟ್ಸ್‌ಡಾಮ್ ಘೋಷಣೆಯಲ್ಲಿ ಸೇರಿ, ಜಪಾನು ಶರಣಾಗಬೇಕೆಂದು ಸಾರಿತು ಈ ಸಹಕಾರದಿಂದ ಯುದ್ಧ ಬೇಗನೆ ಮುಗಿದು ಸಾವಿರಾರು ಮಂದಿಯ ನಾಶ ಆಗದಿರಲೆಂಬ ಆಶಯದಿಂದ ಹಾಗೆ ಮಾಡಿತು-ಜಪಾನು ಈ ಯಾವ ಪ್ರಯತ್ನಕ್ಕೂ ಬಗ್ಗದ ಹೋದಕಾರಣ ಯುದ್ಧವನ್ನು ಹೂಡಬೇಕಾಯಿತು" ಎಂದು ತಿಳಿಸಿದೆ

ಅಟಾಮಿಕ್ ಬಾಂಬುಗಳು

ಜಪಾನಿನ ಮೇಲೆ ಪ್ರಯೋಗಿಸಲು ಅಟಾಮಿಕ್ ಬಾಂಬ್ ಎಂಬ ಅತ್ಯಂತ ಭೀಕರ ಮತ್ತು ಬಲವಾದ ಬಾಂಬುಗಳನ್ನು ಅಮೇರಿಕಾ ದೇಶದಲ್ಲಿ ತಯಾರಿಸಲಾಗಿದೆ. ಇದರಿಂದ ಜಪಾನೀಯರ ಪ್ರತಿಯೊಂದು ಕೈಗಾರಿಕೆಯ ಬಂದರುಗಳನ್ನೂ ಇತರ ವಸ್ತುಗಳನ್ನೂ ಸರ್ವನಾಶ ಮಾಡಲಾಗುವುದು. ಈ ವಿಪತ್ತಿನಿಂದ ಉಳಿಸುವ ಸಲುವಾಗಿಯೇ ಜಪಾನಿಗೆ ಅಂತ್ಯ ಎಚ್ಚರಿಕೆಯನ್ನು ಕೊಡಲಾಯಿತು. ಆದರೆ ಅವರು ಆ ಎಚ್ಚರಿಕೆಯನ್ನು ತಿರಸ್ಕಾರ ಮಾಡಿದರು ಮಿತ್ರರ ಅಟಾಮಿಕ್ ಬಾಂಬುಗಳ ಪ್ರಯೋಗದಿಂದ ಅನೇಕ ಜಪಾನ್ ನಗರಗಳು ನಾಶವಾಗುತ್ತಿವೆ. ಈ ಬಾಂಬು ೨೦ ಟನ್ ಟಿ.ಎನ್.ಟಿ ಆಸ್ಫೋಟಕ ಬಾಂಬುಗಳಿಗಿಂತಲೂ ಹೆಚ್ಚಿನ ಶಕ್ತಿ ಹೊಂದಿದೆಯಂತೆ! ೧೦ ಟನ್ ಬ್ಲಾಸ್ಟ್‌ಶಕ್ತಿಗಿಂತಲೂ ೨ ಸಾವಿರದಷ್ಟು ಅಧಿಕ ರಭಸದಿಂದ ಸಿಡಿಯುವದಂತೆ! ಜಪಾನಿನ ಹಿರೋಷಿಯಾ ನಗರದ ಮೇಲೆ ಅಮೇರಿಕಾ ದೇಶದವರು ಅಟಾಮಿಕ್ ಬಾಂಬ್ ಹಾಕಿದರು ಅದರ ಭೀಷಣ ಪರಿಣಾಮದ ವರದಿಯು ಕಣ್ಣಾರೆ ಕಂಡವರೊಬ್ಬರಿಂದ ಈಗ ಗೊತ್ತಾಗಿದೆ — "ನಾನು ಹತ್ತುಮೈಲಿ ದೂರವಿದ್ದರೂ ಈ ಬಾಂಬಿನ ಘೋರ ಶಬ್ದವು ಕೇಳಿಬಂತು ಕೆಲವು ನಿಮಿಷಗಳ ಮೇಲೆ ಬಾಂಬಿಗೆ ಆಹುತಿಯಾದ ಸ್ಥಳದಿಂದ ಮೊದಲು ೧೦೦೦ ಅಡಿಯಷ್ಟು, ಅನಂತರ ೪೦,೦೦೦ ಅಡಿಯಷ್ಟು ಎತ್ತರವಾಗಿ ಹೊಗೆಯು ವ್ಯಾಪಿಸಿ ನಗರವನ್ನೆಲ್ಲಾ ಮುಸುಕಿತು" ಎಂದು ಹೇಳಿದ್ದಾರೆ

ಪ್ಯಾಲಸ್ಟೈನ್ ಯಹೂದಿಯರ ಪ್ರಶ್ನೆ

ಪ್ಯಾಲಸ್ಟೈನಿನ ಅರಬರ ಮತ್ತು ಯಹೂದಿಯರ ಕೇಳಿಕೆಗಳು ಬ್ರಿಟನ್ನಿನ ಹೊಸ ಮಂತ್ರಿಮಂಡಲಕ್ಕೆ ಬಿಡಿಸಲಾಗದ ಒಗಟಿಯಾಗಿವೆ ೧೯೩೯ರ ನಂತರ ಮೊದಲ ಬಾರಿಗೆ ಯಹೂದಿಯರ ಸಮ್ಮೇಳನವು ಲಂಡನ್ನಿನಲ್ಲಿ ನಡೆಯುತ್ತಿದೆ ಲಂಡನ್ ಅರಬ್ ಲೀಗಿನ ಪ್ರತಿನಿಧಿಯು ಅರಬರ ಕೇಳಿಕೆಯನ್ನು ಪಾರ್ಲಿಮೆಂಟ್ ಸದಸ್ಯರೆಲ್ಲರ ಮುಂದೆಯೂ ಇಡುತ್ತಿದ್ದಾನೆ ಪೆಲೆಸ್ಟೈನ್ ಅರಬರ ಕೇಳಿಕೆಗೆ ಅರಬ್ ಲೀಗಿನ ಬೆಂಬಲವಿದೆ ಎನ್ನುತ್ತಿದ್ದಾನೆ. ಪೆಲೆಸ್ಟೈನಿಗೆ ಬರುವ ಯಹೂದಿಯರನ್ನು ತಡೆಯಬೇಕೆಂದಿದ್ದಾನೆ ಅಮೆರಿಕೆಯ ಯಹೂದಿ ಪ್ರತಿನಿಧಿ ಡಾ|| ಅಬ್ಬಾ ಹಿಲ್ಲಾಲ್ ಸಿಲ್ವರ್-೧೯೩೯ರ ಪೆಲೆಸ್ಟೈನ್ ಶ್ವೇತಪತ್ರವನ್ನು ತಿದ್ದಬೇಕೆಂದೂ, ಪೆಲೆಸ್ಟೈನ್ ವಿಭಜನೆಯನ್ನು ತಾವು ವಿರೋಧಿಸುವದಾಗಿಯೂ ಹೇಳಿದ್ದಾನೆ

ರಾಜದ್ರೋಹದ ಆಪಾದನೆ

ಜನರಲ್ ಮಿಹಿಲೋವಿಚ್‌ರ ಪಡೆಗೆ ಸೇರಿದ ೨೫ ಜನ ಸದಸ್ಯರ ವಿಚಾರಣೆ ಆರಂಭವಾಗಿದೆ ಇವರೆಲ್ಲರ ಮೇಲೂ ರಾಜದ್ರೋಹದ ಆಪಾದನೆಯಿದೆ ಇವರ ಮೇಲೆ ಜರ್ಮನರಿಗೆ ಸಹಾಯಮಾಡಿದ, ಭಯೋತ್ಪಾದಕ ಚಳುವಳಿ ನಡೆಸಿದ ಆಪಾದನೆ ಸ್ಥಿರವಾದರೆ ಇವರೆಲ್ಲರಿಗೂ ಮರಣದಂಡನೆ ವಿಧಿಸಬೇಕೆಂದು ಸರಕಾರದವರ ಪ್ರಾಸಿಕ್ಯೂಟರು ೩ ಗಂಟೆಗಳ ಕಾಲ ವಾದಮಾಡಿದರು ಅಲ್ಲದೆ ಈ ಆಪಾದಿತರ ಮೇಲೆ ಬಲ್ಗೇರಿಯನ್ ಮತ್ತು ರಷ್ಯ ಸೇನೆಗಳ ಚಲನವಲನವನ್ನು ಜರ್ಮನರಿಗೆ ತಿಳಿಸಿದರೆಂಬ ಆಪಾದನೆಯೂ ಇದೆ

ಹೈದರಾಬಾದಿಗೆ ಹೊಸ ಮಂತ್ರಿ!

ನವಾಬ್ ಲಿಯಾಖತ್ ಜಂಗ್ ಬಹದ್ದೂರ್‌ರವರನ್ನು ಹೈದರಾಬಾದು ಮಂತ್ರಿಮಂಡಲದ ವಾಣಿಜ್ಯ ಮತ್ತು ಕೈಗಾರಿಕೆಯ ಸಚಿವರನ್ನಾಗಿ ನೇಮಿಸಲಾಗಿದೆ ಸಿಕಂದರಾಬಾದ ಕ್ಷೇತ್ರವನ್ನು ಹೈದರಾಬಾದಿಗೆ ಹಿಂದಿರುಗಿ ಕೊಡುವ ಪ್ರಶ್ನೆ ಇತ್ಯರ್ಥವಾಗಿದೆ ಅಕ್ಟೋಬರ್ ಮೊದಲ ವಾರದಲ್ಲಿ ಈ ಪುನರ್ದಾನ ಕಾರ್ಯವು ನಡೆಯಬಹುದು

ಜೋಧ್‌ಪುರದ ಪಡೆಗೆ ಸುಖಾಗಮನ

ಯುದ್ಧ ಪ್ರಾರಂಭವಾದಾಗ ಜೋಧ್‌ಪುರದಲ್ಲಿ ಪಡೆಯೊಂದನ್ನು ಕೂಡಿಸಲಾಯಿತು ಈ ಪಡೆ ಇರಾನ್, ಇರಾಕ್, ಸಿರಿಯಾ, ಇಟಲಿಗಳಲ್ಲಿ ಮಿತ್ರರೊಡನೆ ಸಹಕರಿಸಿತು ಇದು ಈಗ ನಾಲ್ಕು ವರ್ಷಗಳಿಂದಲೂ ವಿದೇಶಗಳಲ್ಲಿ ಬಹು ಸಮರ್ಪಕವಾಗಿ ಸೇವೆ ಸಲ್ಲಿಸಿ ಜೋಧ್‌ಪುರಕ್ಕೆ ಹಿಂದಿರುಗಿದೆ. ಇದಕ್ಕೆ ಸಂಸ್ಥಾನದ ಹಲವು ಉನ್ನತಾಧಿಕಾರಿಗಳು ಅಭೂತಪೂರ್ವವಾದ ಸುಖಾಗಮನ ಬಯಸಿದರು. ಜೋಧ್‌ಪುರದ ಮಹಾರಾಜರು ತಮ್ಮ ಅರಮನೆಯಲ್ಲಿ ಈ ಪಡೆಗೆ ಔತಣ ಮಾಡಿಸಿ, ಪ್ರತಿಯೊಬ್ಬ ಯೋಧನಿಗೂ ಹಸ್ತಲಾಘವ ಕೊಟ್ಟು ಹರಸಿದರು.

ಉಪಾಧ್ಯಾಯಿನಿಗೆ ಮಂತ್ರಿಪದವಿ

ಇಂಗ್ಲೆಂಡಿನ ಹೊಸ ರಾಜಕೀಯ ವ್ಯವಸ್ಥೆಯ ಪ್ರಕಾರ ಮಿಸ್ ಎಲೆನ್ ವಿಲ್ಕಿನ್‌ಸನ್ ಎಂಬ ಉಪಾಧ್ಯಾಯಿನಿಗೆ ಮಂತ್ರಿಪದವಿಯು ಲಭಿಸಿದೆ ಇದರಿಂದ ಈಗಲೇ ಉತ್ತಮಸ್ಥಿತಿಯಲ್ಲಿರುವ ಅಲ್ಲಿಯ ಉಪಾಧ್ಯಾಯರ ಸ್ಥಿತಿಯು ಇನ್ನೂ ಉತ್ತಮಗೊಳ್ಳುವುದರಲ್ಲಿ ಸಂದೇಹವಿಲ್ಲ

ಜಪಾನಿನ ಶರಣಾಗತಿ

ಜರ್ಮನಿಯಂತೆ ಮದಾಂಧವಾಗಿದ್ದ ಜಪಾನಿಯೂ ಈಡ ಈಗ ಯಾವ ಕರಾರೂ ಇಲ್ಲದೆ ಹೇಳಿದಂತೆ ಶರಣಾಗಲು ಸಿದ್ಧವಾಗಿರುವುದೆಂದು ಮಿತ್ರರಾಷ್ಟ್ರಗಳಿಗೆ ತಿಳಿಸಿವೆ ರಷ್ಯಾ ಸೈನಿಕರು ಜಪಾನಿನ ಮೇಲೆ ಯುದ್ಧವನ್ನು ಹೂಡಿ ಆ ದೇಶದಲ್ಲಿ ೩-೪ ದಿವಸಗಳಲ್ಲಿಯೇ ೧೦೦ ೩೦೦ ಮೈಲು ದೂರ ನುಗ್ಗಿದ್ದರಿಂದಲೂ, ಇತ್ತ ಬ್ರಿಟಿಷ್, ಅಮೇರಿಕಾ ವಿಮಾನಗಳು ಸಾವಿರಗಟ್ಟಲೆ ಹೋಗಿ ಜಪಾನಿನ ಮುಖ್ಯ ಮುಖ್ಯ ನಗರಗಳನ್ನೂ ಕಾರಖಾನೆಗಳನ್ನೂ ಧ್ವಂಸಮಾಡಲಿಕ್ಕೆ ಹತ್ತಿದ್ದರಿಂದಲೂ ಜಪಾನರು ಹೆಣ್ಣಾಗಿ ಶರಣಾಗಲು ಆತುರಪಡಹತ್ತಿದ್ದಾರೆ ಆದರೆ ಜಪಾನ್ ಚಕ್ರವರ್ತಿಯ ಅಧಿಕಾರವನ್ನು ಉಳಿಸಿಕೊಡಬೇಕೆಂದು ಬೇಡಿಕೊಳ್ಳುತ್ತಿದ್ದಾರೆ ಈ ಬಗ್ಗೆ ಮಿತ್ರರಾಷ್ಟ್ರದವರು ಆಲೋಚನೆಯನ್ನು ಮಾಡಹತ್ತಿದ್ದಾರೆ. ಇಷ್ಟರಲ್ಲಿ ಜಪಾನು ಶರಣಾಗಿರಬಹುದೆಂಬ ವಾರ್ತೆ ಬಂದಿದೆ ದುರಾಶೆಯಿಂದ ಮದಾಂಧರಾಗಿ ಮೇಲೆ ಬೀಳುವ ನೀಚರಿಗೆ ದೇವರು ತಕ್ಕ ಶಾಸನವನ್ನು ಮಾಡುವನೆಂಬುದಕ್ಕೆ ಜರ್ಮನಿ, ಜಪಾನ್, ಇಟಲಿದೇಶಗಳ ಚರಿತ್ರವೇ ನಿದರ್ಶನವಾಗಿದೆ

ಟೆಂಜಿಯರ್ ಸಮ್ಮೇಳನ

ಬ್ರಿಟಿಷ್ ಪ್ರತಿನಿಧಿಯ ವಿನಂತಿಯಂತೆ ಟೆಂಜಿಯರ್ ಸಮ್ಮೇಳನವು ಈ ವಾರಾಂತ್ಯದ ನಂತರ ಆರಂಭವಾಗಬಹುದು ರಷ್ಯಾ, ಅಮೇರಿಕ, ಫ್ರಾನ್ಸ್, ಬ್ರಿಟಿಷ್‌ಗಳ ಪ್ರತಿನಿಧಿಗಳು ಇದರಲ್ಲಿ ಭಾಗವಹಿಸುವರು ಟೆಂಜಿಯರನ್ನು ಅಂತರರಾಷ್ಟ್ರೀಯ ಪ್ರದೇಶದ ಸ್ಥಾನಕ್ಕೇರಿಸುವ ವಿಚಾರವನ್ನು ವಿವೇಚಿಸಲಾಗುವುದು

ಸ್ವೀಕಾರ

ಹೂವಿನಹಡಗಲಿ ತಾಲೂಕು ಹೊಳಗುಂದಿ ಗ್ರಾಮದಲ್ಲಿರುವ ಮ|| ರಾ|| ಗಡ್ಡದ ಸಿದ್ಧಪ್ಪನವರ ಪುತ್ರ ಚಿ|| ಉಮಾಪತಿಯಪ್ಪನಿಗೂ ಸವದಿ ತಾಲೂಕು ಗಜಾಪುರದ ಮ|| ರಾ|| ಬೂಮಪ್ಪನವರ ಪುತ್ರಿ ಚಿ|| ಸೌ|| ಚೆನ್ನಮ್ಮನಿಗೂ ಮತ್ತು ಹೊಳಗುಂದಿ ಗ್ರಾಮದ ಮ|| ರಾ|| ಉಜ್ಜನವರ ಸಣ್ಣ ಹಾಲಪ್ಪನವರ ಪುತ್ರ ಚಿ|| ಸಿದ್ಧಲಿಂಗನವನಿಗೂ ಸವದಗಲಿ ತಾಲೂಕು ಬೂದನೂರು ಗ್ರಾಮದ ಪಿರನಗೌಡರ ಪುತ್ರಿಗೂ ಶ್ರೀ ಉಜ್ಜಯಿನೀ ಒಡೆಯರ ಮಠದ ಪಟ್ಟಾಧ್ಯಕ್ಷ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳವರ ಗುರುತ್ವದಲ್ಲಿ ವಿವಾಹ ಮಹೋತ್ಸವವು ಯುಕ್ತವಾಗಿ ನೆರವೇರಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಪ್ರತಿಯೊಬ್ಬ ವರನ ಕಡೆಯಿಂದ ಸಮರ್ಪಿಸಲ್ಪಟ್ಟ ಮೂರು, ಮೂರು ರೂಪಾಯಿಗಳು, ಪ್ರತಿಯೊಬ್ಬ ವಧುವಿನಿಂದ ಸಮರ್ಪಿಸಲ್ಪಟ್ಟ ಎರಡು, ಎರಡು ರೂಪಾಯಿಗಳು ಒಟ್ಟು 10 ರೂಪಾಯಿಗಳು ದಾವಣಗೆರೆಯಲ್ಲಿರುವ ಮ|| ರಾ|| ಮಾಗಾನಹಳ್ಳಿ ಎಂ ನಂಜುಂಡಪ್ಪನವರ ದ್ವಾರಾ ತಲ್ಪಿರುತ್ತವೆ.

ಕಲಘಟಗಿ ತಾ|| ಬೆಲವಂತರ ಹಿರೇಮಠದ ವೇ|| ರಾಮೇಶ್ವರಸ್ವಾಮಿಯವರ ಧರ್ಮಪತ್ನಿಯವರು ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂ ಯು ವೇ|| ಶಿವಬಸವಸ್ವಾಮಿ ಹಿರೇಮಠ ಬೆಲವಂತರ ಇವರ ದ್ವಾರಾ ತಲ್ಪಿರುತ್ತದೆ

ರಾಯಚೂರು ಡಿ|| ಕನಕಗಿರಿಯಲ್ಲಿರುವ ಮ|| ರಾ|| ಗೌನಮನೆ ಕೊಟ್ರಪ್ಪನವರ ತಮ್ಮ ಚಿ|| ಬಾಳಪ್ಪನಿಗೆ ಅದೇ ಗ್ರಾಮದ ಮ|| ರಾ|| ಉಪ್ಪಳದ ಫಕೀರಪ್ಪನವರ ಪುತ್ರಿ ಚಿ|| ಸೌ|| ಅಮರಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂ ಯು ಶ್ರೀ|| ಷ|| ಬ್ರ|| ಹಿರೇಮಠದ ಚಂದ್ರಸ್ವಾಮಿಗಳವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲನನ್ನೀಯಲೆಂದು ಪ್ರಾರ್ಥೈಸುತ್ತೇವೆ

[ನಿಯುಕ್ತಟಿಬಿಂದ ಮುಂದುವರಿಸಿದ್ದು]

ಪ್ರವೇಶಿಸುವುದಾದರೆ ಲೋಕವು ಅರಾಜಕವಾಗಿ ನಾನಾ ಅನರ್ಥಗಳಿಗೆ ಕಾರಣವಾಗುವುದು ಪ್ರತಿ ಮನುಷ್ಯನೂ ಮಾಡಬೇಕಾಗಿರುವ ಕಾರ್ಯಗಳು ನಿರ್ಣಯಿಸಲ್ಪಟ್ಟಿರುವವು ಪ್ರತಿಯೊಬ್ಬ ಮನುಷ್ಯನ ಜ್ಞಾನವನ್ನೂ ಶಕ್ತಿಯನ್ನೂ ಪುರಾಕೃತ ಕರ್ಮಕ್ಕನುಸಾರವಾಗಿ ತಿಳಿದು ಜಗತ್ತೆಂಬ ನಾಟಕದಲ್ಲಿ ಯಾವ ಪಾತ್ರವನ್ನು ನಟಿಸುವುದಕ್ಕೆ ಅವನರ್ಹನೋ, ಎಂತಹ ಪಾತ್ರಕ್ಕೆ ಅವನನ್ನು ನಿಯಮಿಸಿದಲ್ಲಿ ಅವನ ಅಭಿವೃದ್ಧಿಗೂ ಜಗನ್ನಿರ್ವಾಹ ಕ್ರಿಯೆಗೂ ಅತ್ಯಂತ ಉಪಯುಕ್ತನಾಗಿರುವುದೋ, ಅಂತಹ ಕಾಲ ದೇಶ ಸನ್ನಿವೇಶಗಳಲ್ಲಿ ಪರಶಿವನು ಅವನನ್ನು ಸೃಷ್ಟಿಸುವನು ಆದರಿಂದ ಅವನ ಸ್ವಧರ್ಮ ವಿಂತಹುದೆಂದು ಗೊತ್ತಾಗಿ ತಿಳಿಯುವುದು ಆದುದರಿಂದ ಪ್ರತಿ ಮನುಷ್ಯನೂ ತನ್ನ ಜ್ಞಾನವನ್ನೂ, ಶಕ್ತಿಯನ್ನೂ, ವರ್ಣಾಶ್ರಮಗಳನ್ನೂ, ಸುತ್ತುಮುತ್ತಿನ ಸಂಬಂಧಗಳನ್ನೂ, ಯೋಚಿಸಿ ತನ್ನ ಕರ್ತವ್ಯ ಕರ್ಮವೆಂತಹುದೋ ಅದನ್ನು ಬುದ್ಧಿಯಿಂದ ಗ್ರಹಿಸಿ ಅದನ್ನಾಚರಿಸಬೇಕು ಸ್ವಧರ್ಮವು ಅಷ್ಟು ಉತ್ಕೃಷ್ಟವಾದುದಲ್ಲವೆಂದೂ ಬಹು ಕಷ್ಟಕರವಾದುದೆಂದೂ ತೋರಿದರೂ ಅದನ್ನು ಬಿಡಬಾರದು ಪರಧರ್ಮವು ಶ್ರೇಷ್ಠವಾಗಿಯೂ ಶ್ಲಾಘನೀಯವಾಗಿಯೂ ಕಂಡುಬಂದರೂ ಅದನ್ನು ಗ್ರಹಿಸಲಾಗದು. ಅಂತೂ ಸ್ವಧರ್ಮಾಚರಣೆಯಲ್ಲಿ ತಾನು ನಾಶಹೊಂದಿದರೂ ಒಳ್ಳೆಯದೇ ಮತ್ತು ಎಂತಹ ಯೋಗಿಯಾದರೂ "ಲೋಕಸಂಗ್ರಹಮೇವಾಪಿ ಸಂಪಶ್ಯನ್ಕರ್ತುಮರ್ಹಸಿ" ಎಂಬ ವಾಕ್ಯಾಭಿಪ್ರಾಯಾನುಸಾರವಾಗಿ ಸ್ವಧರ್ಮಕರ್ಮಾಚರಣೆಯಲ್ಲಿ ನಿರತನಾಗಿರಬೇಕು. ಏಕೆಂದರೆ ಜಗತ್ತಿನಲ್ಲಿ ಒಬ್ಬ ಪ್ರಸಿದ್ಧ ವ್ಯಕ್ತಿಯನ್ನು ಇತರರೆಲ್ಲರೂ ಅನುಕರಿಸುತ್ತಿರುತ್ತಾರೆ ಆ ವ್ಯಕ್ತಿಯು ತನಗೆ ಅಗತ್ಯವಿಲ್ಲದ್ದನ್ನು ಕಂಡು ಕರ್ಮವನ್ನು ಬಿಟ್ಟರೆ ಅನುಕರಣಶೀಲರಾದ ಇತರರು ಆ ವ್ಯಕ್ತಿಗೆ ಅಗತ್ಯವಿಲ್ಲದ ಸ್ಥಿತಿಯನ್ನು ತಿಳಿಯಲಾರದವರಾಗಿ ಕರ್ಮದ ತ್ಯಜಿಸುವಿಕೆಯನ್ನು ಮಾತ್ರ ಹಿಂಬಾಲಿಸುತ್ತಾರೆ ಇದರಿಂದ ಆ ವ್ಯಕ್ತಿಗೇನೂ ಹಾನಿಯಿಲ್ಲವಾದರೂ ಅಂಧಾನುಕರಣಶೀಲರಿಗೆ ಹಾನಿ ತಪ್ಪದು ಹೀಗೆ ತನ್ನಿಂದ ಇತರರಿಗೆ ಹಾನಿಯಾಗುವದು ಸರಿಯಲ್ಲವಾದ್ದರಿಂದ ಯಾರೂ ತಮ್ಮ ನಿತ್ಯ ಕರ್ಮಾಚರಣೆಯಂ ಬಿಡಬಾರದು ಅವಿವೇಕಿಗಳು ಫಲಾಪೇಕ್ಷೆಯುಳ್ಳವರಾಗಿ ಯಾವ ರೀತಿಯಲ್ಲಿ ಕರ್ಮಗಳನ್ನು ಮಾಡುವರೋ ಅವರಂತೆ ಜ್ಞಾನಿಯು ಫಲಾಪೇಕ್ಷೆಯಿಲ್ಲದ ಲೋಕೋಪಕಾರಕ್ಕಾಗಿ ಕರ್ಮವನ್ನು ಮಾಡುತ್ತಿರಬೇಕು.

ಇಂತಹ ನಿಷ್ಕಾಮಕರ್ಮಾಚರಣೆಯಿಂದ ಕ್ರಮಕ್ರಮವಾಗಿ ರಜೋಗುಣವು ನಾಶಹೊಂದಿ ಸತ್ವಗುಣವು ಉದ್ಭವಿಸುವುದು ತಮೋಗುಣದಿಂದಾವರಿಸಲ್ಪಟ್ಟಾಗ ಮನುಷ್ಯನು ಕರ್ಮರಹಿತನಾಗಿರುವನು ರಜೋಗುಣಾಧಿಕನಿದ್ದ ಸ್ವಲಾಭಾಪೇಕ್ಷೆಯುಳ್ಳವನಾಗಿ ನಾನಾವಿಧ ಕಾರ್ಯಗಳನ್ನು ಮಾಡುತ್ತಾ ಕರ್ಮಪಾಶದಿಂದ ಬದ್ಧನಾಗುವನು ಸತ್ವಗುಣವುಂಟಾಗಿರುವ ಸಮಯದಲ್ಲಿ ಲೋಕೋಪಕಾರಾರ್ಥವಾಗಿ ಸಮಸ್ತ ಕಾರ್ಯಗಳನ್ನು ಮಾಡುತ್ತಾ ಕರ್ಮಬಂಧದಲ್ಲಿ ಸಿಕ್ಕದಿರುವನು ಹೀಗೆ ತನಗೆ ನಿಯಮಿತವಾಗಿರುವ ಕಾರ್ಯವನ್ನು ಕರ್ತೃತ್ವಾಭಿಮಾನವಿಲ್ಲದೆಯೂ ಫಲಾಪೇಕ್ಷೆಯಿಲ್ಲದಯೂ ರಾಗದ್ವೇಷಗಳಿಗೊಳಗಾಗದೆಯೂ ಮನುಷ್ಯನು ಮಾಡಿದುದಾದರೆ ಅದು ಸಾತ್ವಿಕ ಕರ್ಮವೆನಿಸುವುದು

ರಜೋಗುಣಯುಕ್ತನಾಗಿ ಮಾಡುವ ಕರ್ಮವೂ ಸಹ ಕರ್ಮಯೋಗದಲ್ಲಿ ಸೇರಿದುದಾದರೂ ಅಂತಹುದು ಅಬುದ್ಧಿಪೂರ್ವಕವಾದುದು ಅದು ಕ್ರಮೇಣ ಪುರುಷನನ್ನು ಪಾರಮಾರ್ಥಿಕ ದೆಶೆಗೆ ಒಯ್ದು ಮೋಕ್ಷಸಾಧನವಾಗುವುದೆಂಬುದನ್ನು ಅವನು ತಿಳಿಯನು ಅಂಥವನಂತೆ ಕಾರ್ಯವನ್ನು ಮಾಡುತ್ತಿರುವನು ಸತ್ವಗುಣವುಂಟಾದುದು ಮೊದಲ್ಗೊಂಡು ಬುದ್ಧಿಪೂರ್ವಕವಾಗಿ ಕರ್ತವ್ಯವನ್ನನುಷ್ಠಿಸುವನು ಅವನು ಪ್ರಪಂಚವೆಲ್ಲವೂ ಒಂದೇ ಕುಟುಂಬವೆನುತಲೂ ಲಾಭಾಲಾಭಗಳು ಜನಗಳಿಗೆಲ್ಲಾ ಸಮಾನ್ಯವೆಂದೂ, ಯಾವುದು ಸಕಲಜನಗಳಿಗೂ ಲಾಭದಾಯಕವಾದುದೋ ಅದೇ ತನಗೆ ಲಾಭಕರವೆಂದೂ ಇತರರ ಶ್ರೇಯಸ್ಸಿಗೆ ಭಂಗಕರವಾದುದು ತನ್ನ ಶ್ರೇಯಸ್ಸಿಗೆ ಭಂಗಕರವಾದುದೆನುತಲೂ ತಿಳಿದಿರುವನು ಇವನು ನನ್ನವನು ಅವನು ಅನ್ಯನು ಎಂಬ ಭಾವವು ಅಲ್ಪಬುದ್ಧಿಯುಳ್ಳವರಿಗಿರುವುದೇ ಹೊರತು ಉದಾರಗುಣಸಂಪನ್ನರಿಗೆ ಪ್ರಪಂಚವೆಲ್ಲವೂ ಸ್ವಕುಟುಂಬವೇ ಆಗಿರುವುದು

ಒಂದು ಕುಟುಂಬದಲ್ಲಿ ಸ್ತ್ರೀಪುರುಷರು ಹತ್ತು ಮಂದಿಗಳಿದ್ದಲ್ಲಿ ಅವರೆಲ್ಲರೂ ಸ್ವಲಾಭವಂ ಮರೆತು ಕುಟುಂಬಾಧಿಪತಿಯ ಆಜ್ಞಾನುಸಾರ ಕುಟುಂಬ ಸಮುದಾಯದ ಕ್ಷೇಮಕ್ಕಾಗಿ ನಿಷ್ಕಪಟವಾಗಿ ಕೆಲಸಮಾಡುತ್ತಿದ್ದುದಾದರೆ ಅಂತಹ ಕುಟುಂಬವು ಅಭಿವೃದ್ಧಿಗೆ ಬರುವುದೇ ಹೊರತು ಅವರೊಬ್ಬೊಬ್ಬರೂ ದ್ರೋಹಬುದ್ಧಿಯುಳ್ಳವರಾಗಿ ಅನ್ಯೋನ್ಯ ಕ್ಷೇಮಲಾಭವನ್ನು ಯೋಚಿಸದೆ ಸ್ವೇಚ್ಛೆಯಾಗಿ ವರ್ತಿಸುತ್ತಲೂ ತಂತಮಗೆ ಸಿಕ್ಕಿದ ಧನಕನಕಗಳನ್ನು ಅಪಹರಿಸುತ್ತಲೂ ತಾವುತಾವು ಹಣವನ್ನು ಶೇಖರ ಮಾಡಲು ಯತ್ನಿಸಿದಲ್ಲಿ ಆ ಕುಟುಂಬವು ಸರಿಯಾಗಿರುವುದೇ ? ಆ ಗೃಹದಲ್ಲಿ ಯಾರಿಗಾದರೂ ಚಿತ್ತಶಾಂತಿಯೂ ನಿಜವಾದ ಸುಖವೂ ಲಭಿಸುವುದೇ ? ಈ ರೀತಿಯಲ್ಲಿಯೇ "ಪ್ರಪಂಚವೆಂಬ ಮಹಾಕುಟುಂಬದಲ್ಲಿ ಪ್ರತಿ ಮನುಷ್ಯನೂ ಜಗತ್ಪ್ರಭುವಾದ ಪರಶಿವನ ಆಜ್ಞೆಯನ್ನು ಶಿರಸಾವಹಿಸಿ ಪ್ರಪಂಚ ಸಮುದಾಯದ ಯೋಗಕ್ಷೇಮಕ್ಕಾಗಿ ಕೆಲಸಮಾಡುತ್ತಾ ತಾನು ಮಾಡತಕ್ಕ ಕಾರ್ಯಗಳಿಂದ ಪ್ರಯೋಜನ ಲೇಶವನ್ನೂ ಅಪೇಕ್ಷಿಸದೆ ಸಮಸ್ತ ಫಲವನ್ನೂ ಶಿವಾರ್ಪಣಮಾಡಿದಲ್ಲಿ ಧನ್ಯನಾಗುವನು ಅಂತಹವನು ತನ್ನ ಶಕ್ತಿಯನ್ನೆಲ್ಲಾ ವಿನಿಯೋಗಿಸಿ ವಿಶೇಷ ಭಯಭಕ್ತಿಯಿಂದ ಕೂಡಿ ಕಾರ್ಯವನ್ನು ಮಾಡುವವನಾದರೂ ಅದು ಸಫಲವಾದಲ್ಲಿ ಸಂತೋಷದಿಂದುಬ್ಬುವುದಿಲ್ಲ ಅದು ವಿಫಲವಾದಲ್ಲಿ ಖಿನ್ನನಾಗಿ ದುಃಖಿಸನು. ಜಯಾಪಜಯಗಳನ್ನು ಸಮವಾಗಿ ತಿಳಿಯುವನು. ಪುರುಷಪ್ರಯತ್ನವು ತನ್ನ ಕೈಯಲ್ಲಿರುವುದಾದರೂ ಜಯಾಪಜಯಗಳು ಭಗವದಧೀನಗಳೆಂದು ಅವನು ತಿಳಿಯುವನು. ಹೀಗೆ ಕರ್ತೃತ್ವಾಭಿಮಾನವನ್ನಾಗಲೀ ಫಲಾಪೇಕ್ಷೆಯನ್ನಾಗಲೀ ಹೊಂದದೆ ಯಜ್ಞಾರ್ಥವಾಗಿ ಕರ್ಮ ಮಾಡುವದರಿಂದ ಬಂಧವುಂಟಾಗುವುದಿಲ್ಲ ಯಜ್ಞವೆಂದರೆ ಇಲ್ಲಿ ಭಗವದಾರಾಧನೆ ಎಂದರ್ಥವು ಲೋಕೋಪಕಾರ ಬುದ್ಧಿಯಿಂದ ಕರ್ಮವನ್ನಾಚರಿಸಿ ಆ ಫಲವನ್ನು ತಾನಪೇಕ್ಷಿಸದೆ ಭಗವದರ್ಪಣ ಮಾಡುವಿಕೆಯೇ ಯಜ್ಞವು.

ನಮ್ಮಲ್ಲಿ ಯಾವುದನ್ನಾದರೂ ಕರ್ಮವನ್ನು ಪ್ರಾರಂಭಿಸುವ ಸಮಯದಲ್ಲಿ "ಶ್ರೀ ಪರಮೇಶ್ವರಮುದ್ದಿಶ್ಯ ಶ್ರೀ ಪಾರ್ವತೀಪರಮೇಶ್ವರ ಪ್ರೀತ್ಯರ್ಥಂ' ಎಂದು ಸಂಕಲ್ಪ ಮಾಡಿ ಪ್ರಾರಂಭಿಸುವಿಕೆಯೂ ಕಾರ್ಯಾಂತದಲ್ಲಿ "ಸರ್ವಂ ಶ್ರೀಶಿವಾರ್ಪಣಮಸ್ತು, ಎಂದಾಗಲೀ "ತತ್ಸತ್ ಬ್ರಹ್ಮಾರ್ಪಣಮಸ್ತು ಎಂದಾಗಲೀ ಫಲಸಮರ್ಪಣ ಮಾಡುವಿಕೆಯೂ ವಾಡಿಕೆಯಾಗಿ ಪ್ರತಿದಿನವೂ ಆಚರಿಸುತ್ತಿರುವೆನಲ್ಲವೇ ? ಈ ನಿಯಮಗಳು ವೈದಿಕಕರ್ಮಗಳಿಗೆ ಮಾತ್ರವೆ ವಿಧಿಸಲ್ಪಟ್ಟಿರುವುದೇ ? ಅಲ್ಲ ನಿತ್ಯ ನೈಮಿತ್ತಿಕ ವೈದಿಕ ಲೌಕಿಕ ಸಮಸ್ತ ಕಾರ್ಯಗಳಿಗೂ ವಿಧಿಸಲ್ಪಟ್ಟಿರುವುದು ಮತ್ತು

ಕಾಲೇವರ್ಷತು ಪರ್ಜನ್ಯಃ ಪೃಥಿವೀ ಸಸ್ಯಶಾಲಿನಿ ||
ದೇಶೋಯಂಕ್ಷೋಭರಹಿತಃ | ಸರ್ವೇಸಂತು ನಿರಾಮಯಾಃ ||

ಎಂದು ಪ್ರತಿದಿನವೂ ಹೇಳುತ್ತಿರುವೆವಲ್ಲವೆ ಈ ವಚನಗಳೆಲ್ಲವೂ ನಿರರ್ಥಕಗಳೂ ಮಿಥ್ಯಾರೂಪಗಳೂ ವೃಥಾಶಾಸ್ತ್ರಯಾಸಹೇತುಗಳೂ ಆಗದ ಸಾರ್ಥಕಗಳೂ ತ್ರಿಕರಣ ಶುದ್ಧಿಯುಕ್ತಭಾವ ನಿರ್ವಚನಗಳಾಗಿರಬೇಕು

ಹೀಗೆ ಕರ್ಮಯೋಗವನ್ನಾಚರಿಸುವುದರಿಂದ ನಿಸ್ಸಂಶಯವಾಗಿ ಮೋಕ್ಷವಾಗುವುದು ಪೂರ್ವಕಾಲದಲ್ಲಿ ಕರ್ತೃಯೋಗಾಚರಣೆಯಿಂದ ಯಾರಾವರೂ ಮೋಕ್ಷವಂ ಹೊಂದಿರುವರೇ ಎಂದರೆ, "ಕರ್ಮಣೈವಹಿ ಸಂಸಿದ್ಧಿಮಾಸ್ಥಿತಾ ಜನಕಾದಯಃ" (ಜನಕ ಮೊದಲಾದವರು ಕರ್ಮದಿಂದಲೇ ಸಿದ್ಧಿಹೊಂದಿರುವರು) ಆದುದರಿಂದ ಮನುಷ್ಯನು ಎಂತಹ ಜ್ಞಾನಿಯಾದರೂ ಎಷ್ಟು ಭಕ್ತಿವಂತನಾದರೂ ಲೋಕೋಪಕಾರ ಮಾಡುವುದರಲ್ಲಿ ಆಸಕ್ತಿಯುಳ್ಳವನಾಗಿ ಭಗವತ್ಸಂಕಲ್ಪದಂತೆ ವರ್ತಿಸುತ್ತಾ ಲೋಕಪರಿಪಾಲನಕಾರ್ಯದಲ್ಲಿ ಸಹಾಯಭೂತನಾಗಿರತಕ್ಕವನು ಮಾತ್ರವೇ ಪರಿಪೂರ್ಣನಾಗಿ ಮೋಕ್ಷಾರ್ಹನಾಗುವನು

ದುಃಖವಾರ್ತೆ

ಧಾರವಾಡ ಡಿಸ್ಟ್ರಿಕ್ಟ್ ಕಲಘಟಗಿ ತಾಲೂಕು ಬೆಲವಂತರ ಹಿರೇಮಠಾಧ್ಯಕ್ಷ ಸಿದ್ಧರಾಮೇಶ್ವರಸ್ವಾಮಿಯವರ ಧರ್ಮಪತ್ನಿ ಗೌರೀದೇವಿಯು ತಾ॥ ೩-೮-೪೫ ನೇ ದಿವಸ ೨೫ ನೇ ವರ್ಷ ಚಿಕ್ಕವಯಸ್ಸಿನಲ್ಲಿ ಶಿವಾಧೀನಳಾದಳು. ಈ ಸಾಧ್ವೀಶಿರೋಮಣಿಯು ಸದ್ಗುಣಶೀಲಳೂ ಪತಿಭಕ್ತಿಪರಾಯಣಳೂ ಆಗಿದ್ದಳಲ್ಲದೆ ಪ್ರತಿಯೊಂದು ವಿಷಯದಲ್ಲಿ ಪತಿಯನ್ನು ಅನುಸರಿಸುತ್ತಿದ್ದಳು ಲಗ್ನವಾಗಿ ಆರುವರ್ಷವಾಗಿತ್ತು. ಚಿಕ್ಕ ಮಕ್ಕಳಿರುವದರಿಂದ ಇವರ ಅಕಾಲಮರಣದಿಂದ ಪತಿಗೆ ಅಪಾರ ದುಃಖವಾಯಿತು. ಪರಮಾತ್ಮನು ಮೃತರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಪ್ರಾರ್ಥಿಸುತ್ತೇನೆ.

ದುಃಖಭಾಗಿ

ಜರ್ಮನಿಯು ವ್ಯವಸಾಯ ರಾಷ್ಟ್ರವಾಗುವದೇ ?

"ಜರ್ಮನಿಯ ಬಗ್ಗೆ ಆದ ಪೋಟ್ಸ್‌ಡಾಂ ತೀರ್ಮಾನವು ಯೂರೋಪಿನಲ್ಲಿ ಶಾಂತಿ ಸ್ಥಾಪಿಸಲೆಂದು ಮಾಡಿದುದಾದರೂ, ಆ ಪರಿಣಾಮವು ಅದರಿಂದ ಆಗದೆ ಹೋಗಬಹುದು. ಜರ್ಮನಿಯ ಸೇನಾಶಕ್ತಿ ನಾಶವಾಗಬೇಕಾದುದು ಆಗತ್ಯವಾದರೂ ಕೈಗಾರಿಕೆಗೆ ಹೆಸರಾದ ಜರ್ಮನಿಯು ಹಿಂದುಳಿದ ವ್ಯವಸಾಯ ರಾಷ್ಟ್ರವಾಗಲು ಒಪ್ಪದಿರಬಹುದು. ಈ ವ್ಯವಸ್ಥೆಯಲ್ಲಿ ಸಾಧಿಸಲಿಕ್ಕೆ ಸಾಧ್ಯವೇ? ಅಲ್ಲದೆ ಇದರಿಂದ ಯೂರೋಪಿನ ಆರ್ಥಿಕ ವ್ಯವಸ್ಥೆ ಸರಿಹೋಗಬಹುದೆಂದು ನಾನು ಊಹಿಸಲಾರೆ" ಎಂಬುದಾಗಿ ಪೋಟ್ಸ್‌ಡಾಂ ತೀರ್ಮಾನದ ಬಗ್ಗೆ ಪಂ ಜವಹರಲಾಲರು ಹೇಳಿಕೆ ಕೊಟ್ಟಿದ್ದಾರೆ.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಜೀವಿತ ಪ್ರಸಂಗ ಮೊದಲಾದವುಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ	೦—೬—೦
ಶ್ರೀ ರೇಣುಕಾಚಾರ್ಯರ ಲಿಂಗ ಪತ್ತರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦ ಬೆಲೆ	೦—೬—೦
ಪಂಚ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ	೦—೩—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಮೂಗರ್ಭದಿಂದ ಅವತರಿಸಿರುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೬
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—೬
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೬

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೭ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೭ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಲಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಲಿ (೨ನೆಯ ಆವೃತ್ತಿ)	೩ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೩ ಆಣೆ
ಶ್ರೀಗುರುತತ್ವಪದಗಳು (೨ನೆಯ ಆವೃತ್ತಿ)	೩ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಪಂಚಾಚಾರ್ಯಪ್ರಕಾಶ	೨ ಆಣೆ
ಪಂಚಾಚಾರ ಪ್ರಕಾಶಿಕಾ	೨ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ-ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಸಿದ್ಧಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಆಗಮವಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಧರ್ಮೋಪದೇಶತತ್ವ	೮ ಆಣೆ
ಸಿದ್ಧಾಂತಸಾರ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿವಾಗಮೋಕ್ತ ಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೇದಮಂತ್ರಯುಕ್ತವಾದ ೨ನೆಯ ಆವೃತ್ತಿ)	೧ ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾ ಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾ ಸಹಿತ)	೧ ರೂ
ಶ್ರೀಕರಭಾಷ್ಯಂ (ಸಂಸ್ಕೃತ)	೧। ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧।। ರೂ
ವೀರಶೈವತತ್ವ (ಅನೇಕ ಆವೃತ್ತಿ, ೫೦ ಮಹತ್ವದ ಫೋಟೋಗಳಿರುವವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರ ಸಹಿತ)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೫ ರೂ
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*)	8 As
Speeches by Pandit Shri Kashinatha Shastriji (*English*)	12 As
लिंगधारणचंद्रिका (संस्कृत)	३ रु
वीरशैवरत्न (मराठी)	१ रु
महानारायणोपनिषत् (वीरशैवभाष्य-संस्कृत)	१ रु
सिद्धांतशिखामणि (मूल)	८ आ.
नंदिकेश्वरकारिका (संस्कृत)	२ आ.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರ ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಸಿಂಹಾದಿಪರ್ ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪುದೀಲೋಕಮಂ

ದವರಿಗೆ ೨ ರೂ ೪ ಆಣೆ ... ಪರಸ್ಥಳದವರಿಗೆ ೩ ರೂ ... ಖರ್ಚು ಸೇರಿ ೩ ರೂ ... ಆಣೆ

ಸಂಪುಟ ೧೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೦ನೇ ಆಗಸ್ಟ್ ೧೯೪೫ [ಸಂಚಿಕೆ ೧೪

ಸ್ವೀಕಾರ

ಧಾರವಾಡ ಡಿ॥ ರಾಣೆಬೆನ್ನೂರು ಗ್ರಾಮದಲ್ಲಿರುವ ... ರೇವಣಪ್ಪಯ್ಯನವರು ಗುರುಶಾಂತಪ್ಪಯ್ಯನವರು ಒಡೆಯರ ಮಠ ಮತ್ತು ವೇ॥ ಯೋಗಿ ಮಠದ ಬಸವಯ್ಯನವರು ಮತ್ತು ವೇ॥ ಕದರಮಂಡಲಗಿ ಮಠದ ಮುರಿಗಯ್ಯನವರು ಇವರ ಮಕ್ಕಳ ಉಪನಯನ ದೀಕ್ಷಾಸಮಯದಲ್ಲಿ ಪ್ರಭಾಪ್ರೋತ್ಸಾಹಕ್ಕೋಸ್ಕರ ಸಮರ್ಪಿಸಿದ 5 ರೂಪಾಯಿಗಳು ವೇ॥ ಜಿ ವಿ ನಂದಿಕೇಶ್ವರ ಮಠ, ಹುಬ್ಬಳ್ಳಿ ಇವರ ದ್ವಾರಾ ತಲ್ಪಿರುತ್ತವೆ

ವಿಜಾಪುರ ಡಿ॥ ಕಲಾದಿಗಿ ಹಿರೇಮಠದಲ್ಲಿ ನೆರವೇರಿದ ಶ್ರೀ ಗುರುಲಿಂಗೇಶ್ವರಸ್ವಾಮಿ ಮಹೋತ್ಸವದಲ್ಲಿ ಪ್ರಭಾಪ್ರೋತ್ಸಾಹಕ್ಕೋಸ್ಕರ ಸಮರ್ಪಿಸಿದ 1 ರೂಪಾಯಿಯು ... ಸ॥ ಪ್ರ ಚಿಕ್ಕಮಣ್ಣೂರು ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತದ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ

ಶ್ರೀ ಗುರುಲಿಂಗೇಶ್ವರ ಸ್ಮಾರಕೋತ್ಸವ ಕಲಾದಿಗಿ

ವಿಜಾಪುರ ಡಿ॥ ಕಲಾದಿಗಿ ಹಿರೇಮಠದ ಶ್ರೀ ಪಟ್ಟದ ಸ್ವಾಮಿಗಳವರು ತಾ॥ ೬-೮-೪೫ ನೇ ದಿವಸ ಶ್ರೀ ಗುರುಲಿಂಗೇಶ್ವರ ಸ್ಮಾರಕಮಹೋತ್ಸವವನ್ನು ನೆರವೇರಿಸಿದರು ೧೫ ಸಾವಿರ ಜನರಿಗೆ ಅನ್ನಸಂತರ್ಪಣೆ ಆಯಿತು ಈ ಮಹೋತ್ಸವಕ್ಕೆ ಚಿಕ್ಕಮಣ್ಣೂರು, ...ಗಿ, ಸತ್ತಿಗೇರಿ, ರಾಮದುರ್ಗ, ಗಿರಿಸಾಗರ, ಜಂಬಗಿ, ...ದವಾಡ, ಜಮಖಂಡಿ, ಮುಧೋಳ ಮೊದಲಾದ ... ಮಗಳ ಪಟ್ಟಚರಮೂರ್ತಿಸ್ವಾಮಿಗಳವರು ದಯಮಾಡಿಸಿದ್ದರು ಶ್ರೀ ಯಾದವಾಡ ಪಟ್ಟದಸ್ವಾಮಿಗಳವರ ...ಕ್ಷಿ ಮಹೋತ್ಸವವು ಶ್ರೀ ಗುರುಲಿಂಗೇಶ್ವರರ ...ಟೊ ಇಟ್ಟು, ನಾನಾ ವಾದ್ಯವೈಭವಮೊಡನೆ ಬಹು ...ಂಭಣೆಯಿಂದ ನಡೆಯಿತು ಪಂಡಿತರು ವೇದ ...ಷವನ್ನು ಮಾಡುತ್ತಿದ್ದರು ಸುಮಂಗಲೆಯರು ... ಫಲಕಪೂರ್ಣಾದಿಗಳನ್ನು ಸಮರ್ಪಿಸುತ್ತ ಗುರು...ಯನ್ನು ವ್ಯಕ್ತಗೊಳಿಸುತ್ತಿದ್ದರು ಉತ್ಸವವು ...ಕ್ಕೆ ಬಂದಮೇಲೆ ಚಿಕ್ಕಮಣ್ಣೂರು ಬೀಳಗಿ ...ಳವರ ವ್ಯಾಖ್ಯಾನಗಳು ನಡೆದವು. ಬಳಿಕ ಜಗದಾ...ರ್ಯರ ಜಯಘೋಷಮೊಡನೆ ಸಭೆಯು ಸಮಾಪ್ತಿ...ಡಿತು

ಗುರುಭಕ್ತ

ಮಾಹೇಶ್ವರದೀಕ್ಷಾಸಮಾರಂಭ ರಾಣೆಬೆನ್ನೂರು

ಧಾರವಾಡ ಡಿ ರಾಣೆಬೆನ್ನೂರ ಗ್ರಾಮದಲ್ಲಿರುವ ವೇ॥ ರೇವಣಪ್ಪಯ್ಯನವರು ಗುರುಶಾಂತಪ್ಪಯ್ಯನವರು ಅಜ್ಜ ಒಡೆಯರ ಮಠ ಇವರು ತಮ್ಮ ಮಕ್ಕಳಾದ ಚಿ॥ ಗುರುಶಾಂತಯ್ಯ ಮತ್ತು ಶಿವಾನಂದಯ್ಯ ವೇ॥ ಯೋಗಿ ಮಠದ ಚನ್ನಬಸವಯ್ಯನವರ ಪುತ್ರ ಚಿ॥ ... ವಯ್ಯ, ವೇ॥ ಕದರಮಂಡಲಗಿ ಮಠದ ಮುರಿಗಯ್ಯನವರ ಪುತ್ರ ಚಿ॥ ರಾಜಶೇಖರಯ್ಯ ಈ ವಟುಗಳ ಮತ್ತು ಬೇರೆ ... ಜನ ಮಾಹೇಶ್ವರ ವಟುಗಳ ಉಪನಯನ ದೀಕ್ಷಾ ಸಂಸ್ಕಾರವನ್ನು ತಾ ... ಶ್ರಾವಣ ಶುದ್ಧ ಸಪ್ತಮಿ ಬುಧವಾರ ದಿವಸ ವಿಶೇಷ ವೈಭವದೊಡನೆ ನೆರವೇರಿಸಿದರು ಈ ಸಮಾರಂಭಕ್ಕೆ ಅನೇಕಜನರು ಆಗಮಿಸಿದ್ದರು ಈ ಸಮಯದಲ್ಲಿ ಪ್ರಭಾಪ್ರೋತ್ಸಾಹಕ್ಕೋಸ್ಕರ ರೂ ೫ ಸಮರ್ಪಿಸಲ್ಪಟ್ಟವು ಶ್ರೀಜಗದಾಚಾರ್ಯರು ವಟುಗಳಿಗೆ ಮಂಗಲಪರಂಪರೆಯನ್ನೀಯಲೆಂದು ಹಾರೈಸುವ

ಜಿ ವಿ ನಂದಿಕೇಶ್ವರಮಠ, ಹುಬ್ಬಳ್ಳಿ

ಆರೋಗ್ಯವಿಷಯದಲ್ಲಿ ಕೆಲವು ಉತ್ತಮ ನಿಯಮಗಳು

ನಿಮ್ಮ ಆರೋಗ್ಯಭಾಗ್ಯವೆಲ್ಲ ನಿಮ್ಮ ಅನ್ನಪಾನಗಳ ರೀತಿಯನ್ನನುಸರಿಸಿದೆ ಆ ವಿಷಯದಲ್ಲಿ ಪ್ರತಿಯೊಬ್ಬರೂ ಅನುಸರಿಸಬೇಕಾದ ಕೆಲವು ನಿಯಮಗಳನ್ನು ಈ ಕೆಳಗೆ ಕೊಟ್ಟಿದೆ

1 ಮಿತವಾಗಿ ಭುಂಜಿಸಿರಿ

2 ಹಸಿವಿದ್ದಾಗಮಾತ್ರ ಭೋಜನಮಾಡಿರಿ

3 ಭೋಜನವಲ್ಲದ ಇತರ ಕಾಲಗಳಲ್ಲಿ ಸಿಕ್ಕಿದ ಭಕ್ಷ್ಯಗಳನ್ನು ತಿನ್ನಬೇಡಿರಿ

4. ಭೋಜನಕಾಲದಲ್ಲಿ ನೀರನ್ನು ಕುಡಿಯಬೇಡಿರಿ

5 ಭೋಜನದ ಹೊತ್ತನ್ನು ಬಿಟ್ಟು ಮಧ್ಯಕಾಲಗಳಲ್ಲಿ ಧಾರಾಳವಾಗಿ ನೀರನ್ನು ಕುಡಿಯಿರಿ ಮುಖ್ಯವಾಗಿ ಬೆಳಿಗ್ಗೆ ಎದ್ದೊಡನೆ ಮತ್ತು ರಾತ್ರಿ ಮಲಗುವುದಕ್ಕೆ ಮೊದಲು ತಪ್ಪದೆ ನೀರನ್ನು ಧಾರಾಳವಾಗಿ ಕುಡಿಯಿರಿ.

6 ಟೀಯನ್ನು ಆಗಾಗ ಹೊಸದಾಗಿ ತಯಾರಿಸಿದೊಡನೆ ಕುಡಿಯಿರಿ ಟೀ ಕಷಾಯವು ಬಹಳ ತಿಳುವಾಗಿರಲಿ ಹಾಗಿಲ್ಲದೆ ಬಹಳ ಮಂದವಾಗಿ ಕಷಾಯ ಮಾಡಿ ಕುಡಿದರೆ, ಅದು ನರಗಳನ್ನು ದುರ್ಬಲಮಾಡಿ ಜೀರ್ಣಶಕ್ತಿಯನ್ನು ಕೆಡಿಸುವುದು.

7. ಪಿಷ್ಟಸಂಬಂಧವಾದ (ಸ್ಟಾರ್ಚ್) ಆಹಾರವು ಗಟ್ಟಿಯಾಗಿರಬೇಕು ಅಂತಹ ಪದಾರ್ಥವನ್ನು ಅದನ್ನು ಹೆಚ್ಚುಹೊತ್ತು ಬಾಯಿನೀರಿನಲ್ಲಿ ಇಟ್ಟಿದ್ದು ಆಮೇಲೆ ಅಗಿದು ನುಂಗಬೇಕು

8 ಮೈಕಟ್ಟನ್ನು ಬಲಪಡಿಸುವುದಕ್ಕೂ, ದೇಹದ ರಚನಾತಂತುಗಳನ್ನು ದೃಢಪಡಿಸುವುದಕ್ಕೂ ಆಹಾರವೇ ಮುಖ್ಯವಾದುದು ಇದು ಹಾಲಿನಕೆನೆ, ಹಾಲು, ಒಣಗಿಸಿಟ್ಟ ಹಾಲು ಬೀಳೆಯಪದಾರ್ಥಗಳು (ಎಂದರೆ ಬಟಾಣಿ, ಅವರೆ, ಲೆಂಟಿಲ್ಸ್ ಪಿನಟ್ಸ್) ಧಾನ್ಯಗಟ್ಟಿಗಳು ಹೊರತು ಬೇರೆ ಬೀಜಗಳೆಲ್ಲ ಇವುಗಳೊಳಗೆ ಸೇರಿದೆ ಧಾನ್ಯಜಾತಿಗಳಲ್ಲಿ ಮೈಕಟ್ಟನ್ನು ಬೆಳೆಸತಕ್ಕ ಪದಾರ್ಥಗಳು ಕಡಿಮೆ ಗೋಧಿಹಿಟ್ಟು ಅಕ್ಕಿ, ಬಿಳಿಧಾನ್ಯ ಬಾರ್ಲಿ, ಕಂಬು, ಜೋಳ ಮೊದಲಾದುವೆಲ್ಲ ಈ ಜಾತಿಗೆ ಸೇರುವುವು

9 ಕಾಯಿಪಲ್ಯಗಳನ್ನು ಬೇಯಿಸುವಾಗ ನೀರನ್ನು ಮಿತವಾಗಿಡಬೇಕು ಉಳಿದ ನೀರನ್ನು ಸಹ ಬೇರೆ ವಿಧವಾದ ಸಾರಿನ ರಸ ಮುಂತಾದುವಕ್ಕೆ ಉಪಯೋಗಿಸಬೇಕು

10 ಉಪ್ಪು, ಮೆಣಸು ಮೆಣಸಿನಕಾಯಿ, ಸಾಸುವೆ, ಹುಳಿ ಮೊದಲಾದವನ್ನು ಆಹಾರದಲ್ಲಿ ಮಿತವಾಗಿ ಉಪಯೋಗಿಸಬೇಕು.

11 ಬೇಯಿಸದ ಇರತಕ್ಕ ಕಾಯಿ, ಹಣ್ಣು, ಮುಂತಾದುವುಗಳಲ್ಲಿ ಯಾವುದನ್ನಾದರೂ ತಿಂದು ಕೊಳ್ಳದೆ ಒಂದು ದಿನವೂ ಇರಬಾರದು ಸಾಧ್ಯವಾದರೆ ಒಣ ಹಣ್ಣು ಜಾತಿಗಳಿಗಿಂತಲೂ, ಸಾಲಾಡ್ ಎಂಬ ಫಲಪಾಕಗಳನ್ನು ಭುಜಿಸುವುದೊಳ್ಳೆಯದು

12 ಸಕ್ಕರೆ, ಬೆಲ್ಲ ಚಾಕಲೆಟ್, ಜಾಮ್, ಮಾರ್ಮಲಾಡು ಮುಂತಾದ ಸೀ ಪದಾರ್ಥಗಳಿಗಿಂತಲೂ, ಜೇನು, ಹಣ್ಣು ಮುಂತಾದುವನ್ನು ಸೇವಿಸುವುದೊಳ್ಳೆಯದು

13 ಭೋಜನವಾದಕೂಡಲೆ, ಬಾಯನ್ನು ಶುದ್ಧಿಗೊಳಿಸುವುದಕ್ಕಾಗಿ, ಹಸೀಕಾಯಿ, ಹಣ್ಣಿನರಸ ಮುಂತಾದುವನ್ನು ತೆಗೆದುಕೊಳ್ಳಬೇಕು

ಬ್ರಹ್ಮಪುತ್ರದಲ್ಲಿ ನೆರೆ

ಬ್ರಹ್ಮಪುತ್ರ ನದಿಯ ಪ್ರವಾಹದಿಂದ ಸಿರಾಜ್ ಗಂಜ್ ನಗರದ ಬಹುಭಾಗ ಜಲಮಯವಾಗಿದೆ ಅನೇಕ ಸಂಸಾರಗಳು ಊರು ಬಿಟ್ಟಿವೆ ಅನೇಕ ಹಳ್ಳಿಗಳೂ ನೀರುಪಾಲಾಗಿವೆ ನೀರು ಇನ್ನೂ ಏರುತ್ತಲಿದೆಯೆಂದು ತಿಳಿದುಬರುತ್ತದೆ

ಅಷ್ಟಿ ಚೀಮೂರು ಕೈದಿಗಳಿಗೆ ಜೀವದಾನ

೭ ಮಂದಿ ಅಷ್ಟಿ, ಚೀಮೂರು ಕೈದಿಗಳಿಗೆ ಮರಣ ದಂಡನೆ ವಿಧಿಸಲಾಗಿದ್ದುದನ್ನು ವೈಸ್ರಾಯರು ಜೀವಾವಧಿ ಸಜೆಯಾಗಿ ಮಾರ್ಪಡಿಸಿದ್ದಾರೆ.

ಮಹಾಯುದ್ಧವು ಮುಗಿದು ಜಗತ್ತಿನಲ್ಲಿ ಶಾಂತಿಯು ಮೂಡಿತು

ಈಗ್ಗೆ ಸುಮಾರು ೧೪ ವರುಷಗಳಿಂದ ಒಂದೇ ಸಮನಾಗಿ ನಡೆಯುತ್ತಿದ್ದ ಜಪಾನಿನ ಮಹಾಯುದ್ಧವು, ಈ ತಿಂಗಳು ೧೪ನೆಯ ತಾರೀಖಿನ ದಿವಸ ಮುಕ್ತಾಯವಾಯಿತು ಆ ದಿವಸ ಜಪಾನು ಪೂರ್ಣ ಶರಣಾಗತವಾಗಿ ಮಿತ್ರರಾಷ್ಟ್ರಗಳು ಹೇಳುವ ಕರಾರಿಗೆ ಒಪ್ಪಿ ತನ್ನ ಶಸ್ತ್ರವನ್ನು ಕೆಳಗಿಟ್ಟಿತು ಇದು ಅತ್ಯಾನಂದದ ವಿಷಯವಾಗಿದೆ ಇಡೀ ಜಗತ್ತನ್ನೇ ಆಳಬೇಕೆಂಬ ದುರಾಶೆಯಿಂದ ಕೂಡಿದ ಜರ್ಮನ್ ರಾಷ್ಟ್ರವು ಪತನವಾದಂತೆ ಜಪಾನ್ ರಾಷ್ಟ್ರವು ಸಹ ಪತನವಾಯಿತು ಜಪಾನ ದೇಶದ ಚಕ್ರವರ್ತಿಯು ಮಿತ್ರರಿಗೆ ತಲೆಬಾಗಿ ಶರಣಾಗತನಾದನು ಆಟಂ ಬಾಂಬಿನ ಪ್ರಭಾವದಿಂದಲೂ ರಷ್ಯಾದೇಶದ ಕೆಂಪು ಸೇನೆಯು ಏದ [illegible] ಜಪಾನ್ ರಾಜ್ಯದಲ್ಲಿ ಪ್ರವೇಶಮಾಡಿದ್ದರಿಂದಲೂ ಇನ್ನು ತನಗೆ ಉಳಿಗಾಲವಿಲ್ಲವೆಂದು ಜಪಾನು [illegible] ಮಿತ್ರರ ಎಲ್ಲಾ ಕರಾರುಗಳಿಗೂ ಒಪ್ಪಿಕೊಂಡಿತು ಈಗ್ಗೆ [illegible] ವರುಷಗಳಿಂದಲೂ ಜಪಾನು, ಒಂದರಮೇಲೊಂದು ರಾಜ್ಯವನ್ನು ನುಂಗುತ್ತಾ ಈ ಭೂಮಂಡಲದಲ್ಲಿ ತನಗೆ ಸಮಾನರು ಯಾರೂ ಇರುವದಿಲ್ಲವೆಂದ ಕೊಬ್ಬಿ [illegible] ಯುತ್ತಿತ್ತು

ಈ ಜಗತ್ತೆಲ್ಲವೂ ತನ್ನ ಸ್ವಾಧೀನವಾಗಬೇಕೆಂಬ ದುರಾಶೆಯಿಂದ ಜಪಾನು ೧೯೪೧ನೆಯ ಇಸವಿ ಡಿಸೆಂಬರ್ ೭ ನೆಯ ತಾರೀಖಿನ ದಿವಸ ಮಹಾಘಾತಕ ಕೃತ್ಯವನ್ನು ಮಾಡಿತು ಆ ದುರ್ದಿನವನ್ನು [illegible] ವಂತಿಲ್ಲ ಜಪಾನು ಅವೇ [illegible] ಮೋಸದ ಇಚ್ಛೆಗೊಂಡಿದ್ದ ತನ್ನ [illegible] ವಾಷಿಂಗ್ಟನ್ನಿನಲ್ಲಿದ್ದ ತನ್ನ [illegible] ಅಮೇರಿಕೆಯ [illegible] ಪತ್ರವನ್ನು ಮುಟ್ಟಿಸಿದ ಕೂಡಲೆ ಶಾಂತಿಸಾಗರದಲ್ಲಿ ಜಪಾನಿನ ವಿಮಾನಪಡೆಯು, ಪರ್ಲ್ ಬಂದರಿನ ಮೇಲೆ ಬಾಂಬುಗಳನ್ನು ಸುರಿಸಹತ್ತಿತು ಜಪಾನರ ಈ ಮೋಸ ಕೃತ್ಯದಿಂದ ಅಮೇರಿಕನ್ ನೌಕಾಪಡೆಗೆ ವಿಶೇಷ ನಷ್ಟವಾಯಿತು

ಆಮೇಲೆ ಜಪಾನು ಮಲಯ, ಹಾಂಕಾಂಗ್ ಗ್ವಾಂ, ವೇಕ್, ಫಿಲಿಪೈನ್ಸ್ ಮೊದಲಾದ ಎಲ್ಲ ದ್ವೀಪಗಳ ಮೇಲೆಯೂ ಏಕಕಾಲದಲ್ಲಿ ಯುದ್ಧವನ್ನಾರಂಭಿಸಿತು ಈ ಯುದ್ಧದಿಂದ ಶಾಂತಿಸಾಗರದ ಎಲ್ಲ ದ್ವೀಪಗಳೂ ಜಪಾನರ ಕೈಸೇರಿದವು ಫಿಲಿಪೈನ್ಸ್, ಮಲೆಯ, ಡಚ್ ಈಸ್ಟ್ ಇಂಡೀಸ್ ಮೊದಲಾದ ಒಳ್ಳೇ ಫಲವತ್ತಾದ ದ್ವೀಪಗಳೆಲ್ಲವೂ, ಮಿತ್ರರ ಕೈಬಿಟ್ಟು ಹೋದವು ಪರ್ಲ್ ಬಂದರವು ೧೯೪೧ನೆಯ ಇಸವಿ ಡಿಸೆಂಬರ್ ೭ ನೆಯ ತಾರೀಖಿನ ದಿವಸ ಜಪಾನರ ವಶವಾಯಿತು ಅದು ವಶವಾದ ಒಂದುವಾರದಲ್ಲಿಯೇ ಗ್ವಾಂ ಮತ್ತು ಹಾಂಕಾಂಗ್ ದ್ವೀಪಗಳು ಅವರ ವಶವಾದವು ಮನಿಲಾ ಮತ್ತು ಕೈವೈಟ್ ದ್ವೀಪಗಳು ಸಹ ಅವರ ವಶವಾದವು. ೧೯೪೨ನೆಯ ಇಸವಿ ಫೆಬ್ರವರಿ ೧೫ ನೆಯ ತಾರೀಖಿನ ದಿವಸ, ಸುಪ್ರಸಿದ್ಧವಾದ ಸಿಂಗಪುರ ಬಂದರವು ಸಹ ಅವರ ಕೈಸೇರಿತು. ಅದೇ ವರ್ಷ ಮಾರ್ಚಿ ೯ ನೆಯ ತಾರೀಖಿನ ದಿವಸ ಬರ್ಮಾ ರಾಜಧಾನಿಯಾದ ರಂಗೂನ್ ಪಟ್ಟಣವೂ ಅವರ ವಶವಾಯಿತು ಅದೇ ತಿಂಗಳು ೨೩ ನೆಯ ತಾರೀಖಿನ ದಿವಸ ಅಂಡಮಾನ್ ದ್ವೀಪವು ಸಹ ಬ್ರಿಟಿಷರ ಕೈಬಿಟ್ಟಿತು. ಅದೇ ವರ್ಷದ ಮೇ ತಿಂಗಳಲ್ಲಿ ಲಾಸಿಯೋ, ಮಾಂಡಲೆ, ಮಿಕ್ಯಾಟ್ ಮೊದಲಾದವು ಜಪಾನರ ವಶವಾದವು ಈ ರೀತಿ ಜಪಾನು ವಿದ್ಯುದ್ವೇಗದಂತೆ ವಿಜಯವನ್ನು ಸಾಧಿಸಿ, ಅಜೇಯ ರಾಷ್ಟ್ರವೆನಿಸಿಕೊಂಡಿತು.

ಜಪಾನು ಬರ್ಮಾದೇಶವನ್ನು ನುಂಗಿದ ಮೇಲೆ ಮುಂದೆ ಆಕ್ರಮಣಕಾರ್ಯವನ್ನು ನಿಲ್ಲಿಸಿ, ತನ್ನ ಆತ್ಮರಕ್ಷಣೆಯ ಕಾರ್ಯದಲ್ಲಿ ತೊಡಗಿತು ಅಷ್ಟರಲ್ಲಿ ಮಿತ್ರರಾಷ್ಟ್ರದವರು ತಮ್ಮ ಸೈನ್ಯಬಲವನ್ನು ಹೆಚ್ಚಿಸಿಕೊಂಡು ಜಪಾನರ ಮೇಲೆ ತಿರುಗಿಬಿದ್ದರು ಅಲ್ಲಿಂದ ಜಪಾನರ ವಶವಾಗಿದ್ದ ವಿಜಯಲಕ್ಷ್ಮಿಯು ಅವರನ್ನು ದೂರೀಕರಿಸಲೆಂದೇ ಹೇಳಬಹುದು ಅದರಿಂದ ಎಲ್ಲ ನೋಡಿದರೂ ಜಪಾನರಿಗೆ ಸೋಲುಂಟಾಗಹತ್ತಿ ಮಿತ್ರರ ಕೈ ಮೇಲಾಗತೊಡಗಿತು ಅಮೇರಿಕನ್ ಸೈನಿಕರು ಮೊದಲು ಸಾರ್ಡಲ್ [illegible] ದ್ವೀಪವನ್ನು [illegible] ಅವನ್ನು ತಮ್ಮ ವಶಮಾಡಿಕೊಂಡರು [illegible] ಫಿಲಿಪೈನ್ಸ್ ಗ್ವಾಂ ಮೊದಲಾದ ದ್ವೀಪಗಳು [illegible] ಸ್ವಾಧೀನವಾದವು ಇದರಂತೆಯೇ ಮಿತ್ರರ ಅದ್ಭುತ ವಿಜಯದಿಂದ ಜಪಾನರು ಹಿಡಿದುಕೊಂಡಿದ್ದ [illegible] ದ್ವೀಪವೂ ಅವರ ಕೈಬಿಡಲಾರಂಭಿಸಿತು ಇತ್ತ [illegible] ವಶವೂ ಸಹ ಅವರ ಕೈಬಿಟ್ಟಿತು [illegible] ಮಿತ್ರರ ಹೊಡೆತವನ್ನು ತಾಳಲಾರದೆ ಜಪಾನಿ [illegible] ಓಡತೊಡಗಿದರು ಜರ್ಮನಿಯ [illegible] ವಾದ ಮೇಲೆ ಜಪಾನಿಗೆ [illegible] ಯುದ್ಧ [illegible] ಇತ್ತ ಬ್ರಿಟನ್ ಅಮೇರಿಕ [illegible] ದೇಶದ [illegible] ಒಮ್ಮತದಿಂದ, ಜಪಾನು ಯಾವ [illegible] ಶರಣಾಗಬೇಕೆಂದು ಪ್ರಸಿದ್ಧ ಪತ್ರಿಕೆಯ [illegible] ಘೋಷಿಸಿದರು ಆದರೆ ಜಪಾನು [illegible] ಈ ವಿಮಾನದ [illegible] ನಾಯಕರಾದ [illegible]

[illegible] ತನ್ನ ಅನುಗ್ರಹದಿಂದ [illegible]

ಈ ಘೋರಯುದ್ಧದ ಪರಿಣಾಮವಾಗಿ [illegible] ಎಲ್ಲ ರಾಷ್ಟ್ರಗಳ ದಲ್ಲಿ [illegible] ಕೋಟಿ ಜನರ ಮೃತರಾಗಿರಬಹುದೆಂದು ಊಹಿಸಲಾಗಿದೆ ಯುದ್ಧವು ಇನ್ನು ಮುಂದೆಯೂ ಹಾಗೆಯೇ ನಡೆದಿದ್ದರೆ, ಕೋಟಿಕೋಟಿ ಜನರು ಸಾಯುತ್ತಿದ್ದರಲ್ಲದೆ ಪ್ರಪಂಚಕ್ಕೆ ಎಂದೂ ಶಾಂತಿಯು ದೊರೆಯುತ್ತಿದ್ದಿಲ್ಲ ಈ ಯುದ್ಧ ಸಮಾಪ್ತಿಯಿಂದ ಪ್ರಪಂಚದ ಎಲ್ಲ ಜನರಿಗೂ ಪರಮಾನಂದವುಂಟಾಗಿರುವದು ಆ ಆನಂದವನ್ನು ಎಷ್ಟು ವರ್ಣಿಸಿದರೂ ತೀರದು ಈ ಆನಂದಕ್ಕೆ ಜಗನ್ನಿಯಾಮಕನಾದ ಶ್ರೀಪರಮೇಶ್ವರನ ಅನುಗ್ರಹವೇ ಮೂಲಕಾರಣವಲ್ಲದೆ ಮತ್ತೆ ಬೇರೆಯಿಲ್ಲ ಇನ್ನು ಮುಂದಾದರೂ ಜಗದೀಶ್ವರನ ಅನುಗ್ರಹದಿಂದ ಸುಖಶಾಂತಿಗಳು ನೆಲಸಿ ಜನರು ಮೊದಲಿನಂತೆ ಸುಖಿಗಳಾಗುವಂತೆ ಅನುಗ್ರಹಿಸಲೆಂದು, ಆ ಪರಮೇಶ್ವರನನ್ನು ಪ್ರಾರ್ಥಿಸುತ್ತೇನೆ

ಜಪಾನ್ ಮಂತ್ರಿಮಂಡಲ ರಾಜಿನಾಮೆ ಕೊಟ್ಟಿತು

ಜಪಾನ್ ಮಂತ್ರಿಮಂಡಲವು ರಾಜಿನಾಮೆ ಕೊಟ್ಟಿತು. ದೊರೆಗಳು ಅದನ್ನು ಸ್ವೀಕರಿಸಿ, ಪ್ರಧಾನಿ ಅಡ್ಮಿರಲ್ ಸೂಜಕಿಯವರು ತಾತ್ಕಾಲಿಕವಾಗಿ ಅಧಿಕಾರ ನಿರ್ವಹಿಸುವಂತೆ ಹೇಳಿದ್ದಾರೆ ಜಪಾನೀ ಶರಣಾಗತಿಯ ಸುದ್ದಿಯನ್ನು ಎಲ್ಲಾ ರಣಮುಖಗಳಿಗೂ ರೇಡಿಯೋ ಮೂಲಕ ತಿಳಿಸಲಾಯಿತು ಅದರಲ್ಲಿ ಈ ಶರಣಾಗತಿ ತಾತ್ಕಾಲಿಕವಾದುದೆಂದೂ ವಿಶ್ವಶಾಂತಿ ಮತ್ತು ಪ್ರಜೆಗಳ ಕ್ಷೇಮಕ್ಕಾಗಿ ದೊರೆಗಳು ಶಾಂತಿಭಿಕ್ಷೆ ಬೇಡಬೇಕಾಯಿತೆಂದೂ ಹೇಳಲಾಗಿದೆ

ಯುದ್ಧವಾರ್ತೆ.

ಜಪಾನಿ ರಾಯಭಾರಿಗಳು ಹೊರಟರು

ಜಪಾನಿನ ಶರಣಾಗತಿ ಪತ್ರಕ್ಕೆ ರುಜುಹಾಕಲು ಹಾಕಲು ಜಪಾನಿನ ಪರವಾಗಿ ಇಬ್ಬರು ರಾಯಭಾರಿಗಳು ಎರಡು ವಿಮಾನಗಳಲ್ಲಿ ಪ್ರಯಾಣಮಾಡಿದರು ಅವರು ಜ|| ಮೆಕಾರ್ಥರನ್ನು ಕಾಣುವರು ಅಲ್ಲಿ ಇತರ ಮಿತ್ರ ರಾಷ್ಟ್ರಗಳ ಪ್ರತಿನಿಧಿಗಳೂ ಬಂದು ಸೇರುವರು

ಜಪಾನಿ ಅಧಿಕಾರಿಗಳ ಆತ್ಮಹತ್ಯೆ

ಜರ್ಮನಿ ಪತನವಾದಾಗ ಹೇಗೆ ಅನೇಕ ಜರ್ಮನರು ಆತ್ಮಹತ್ಯೆ ಮಾಡಿಕೊಂಡರೋ, ಅದೇ ರೀತಿ ಜಪಾನು ಶರಣಾಗತಿಗೆ ಒಪ್ಪಿದಕೂಡಲೇ, ಅನೇಕ ಕಮ್ಯಾಂಡರುಗಳು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವರಂತೆ ಜಪಾನಿನ ಯುದ್ಧ ಮಂತ್ರಿಗಳಾದ ಅನಾಮಿಯವರು ಸಹ ಆತ್ಮಹತ್ಯೆ ಮಾಡಿಕೊಂಡರೆಂದು ಹೇಳಲಾಗಿದೆ

ಜಪಾನಿ ನೌಕಾಧಿಕಾರಿಯ ಆತ್ಮಹತ್ಯೆ

ಜಪಾನಿ ನೌಕಾಧಿಕಾರಿಯಾದ ಟಾಕಿಜರೋವನಿಷಿಯವರು ಮೊನ್ನೆ ಬೆಳಗ್ಗೆ ಆತ್ಮಹತ್ಯೆ ಮಾಡಿಕೊಂಡರೆಂದು ವರದಿಯಾಗಿದೆ ಅದರಂತೆಯೇ ಮಾಜಿ ರೋಮಿನ ಜಪಾನಿ ಪ್ರತಿನಿಧಿ ಲೆ|| ಜ|| ಒಕಾಮುಟೋರವರೂ ಸಹ ಆತ್ಮಹತ್ಯೆ ಮಾಡಿಕೊಂಡಿದ್ದಾರೆ

ಜಪಾನ್ ಚಕ್ರವರ್ತಿಗೂ ಶಿಕ್ಷೆ ತಪ್ಪಿದ್ದಲ್ಲ

ತನಿಖೆಗಾಗಿ ಜಪಾನಿ ಸಮ್ರಾಟ ಹಿರೋಹಿಟೋರ [illegible] ಕರ್ಮಗಳಿಗೆ ಜವಾಬುದಾರರಾಗಿರುವರೆಂದು ಗೊತ್ತಾದರೆ ಆಗ ಅವರನ್ನು ಯುದ್ಧ ಕ್ರೂರಕರ್ಮಿಗಳ [illegible] ಪರಿಗಣಿಸಲಾಗುವುದೆಂದೂ ಈಗ ಬೆನ ನರ [illegible] ರುವ ಜಪಾನಿನ ಯುವರಾಜರು ವಯಸ್ಸಿಗೆ ಬರುವ ತನಕ ಜಪಾನಿನಲ್ಲಿ ರೀಜೆನ್ಸಿ ಸ್ಥಾಪಿತವಾಗಲು ಅವಕಾಶ ಕೊಡಲ್ಪಡುವುದಾಗಿಯೂ ಗೊತ್ತಾಗಿದೆ

ಜಪಾನು ನಾಲ್ಕು ಭಾಗವಾಗಲಿದೆ

ಜಪಾನನ್ನು ವಿಭಾಗಿಸಿ ನಾಲ್ಕು ರಾಷ್ಟ್ರಗಳು ಆಡಳಿತ ನಡೆಸುವವೆಂದು ಅಧ್ಯಕ್ಷ ಟ್ರೂಮನ್‌ರವರು ತಿಳಿಸಿದ್ದಾರೆ ಮಂಚೂರಿಯದಲ್ಲಿ ಜಪಾನರು ಹೋರಾಟ ನಿಲ್ಲಿಸಿದ್ದಾರೆ ನಾನ್‌ಕಿಂಗ್‌ನಲ್ಲಿರುವ ಜಪಾನೀ ಕೈಗೊಂಬೆಯಾದ ಚೀನೀ ಸರಕಾರ ತಾನಾಗಿಯೇ ವಜಾ ಆಗಿದೆ ಬರ್ಮಾದಲ್ಲಿರುವ ಸುಮಾರು ೬೦ ಸಾವಿರ ಜಪಾನೀಯರನ್ನು ಸೆರೆಹಿಡಿದು ನಿಲ್ಲಿಸಿ ಸಲಹಲು ಎಲ್ಲ ವ್ಯವಸ್ಥೆ ಸಿದ್ಧವಾಗಿದೆ ಅವರ ಆಹಾರ ಅವರೇ ಬೆಳೆಯಬೇಕು ಬೇಕಾದ ಸಾಮಾಗ್ರಿ ಒದಗಿಸಲಾಗುವುದು

ಆಗ್ನೇಯ ಏಷ್ಯಾದಲ್ಲಿ ತತ್‌ಕ್ಷಣ ಯುದ್ಧ ನಿಲ್ಲದು

ಶರಣಾಗುವಂತೆ ಟೋಕಿಯೋದಿಂದ ಆಜ್ಞೆ ಬಂದರೂ ಆಗ್ನೇಯ ಏಷ್ಯಾ ಕ್ಷೇತ್ರದಲ್ಲಿರುವ ಅನೇಕ ಸಹಸ್ರ ಜಪಾನಿ ಸಿಪಾಯಿಗಳು ತತ್‌ಕ್ಷಣ ಯುದ್ಧ ನಿಲ್ಲಿಸುವ ಸಂಭವವಿಲ್ಲ. ತಂತಿಮೂಲಕ ಬರುವ ಆಜ್ಞೆಯನ್ನು ಜಪಾನಿಗಳು ಪಾಲಿಸಬಹುದಾದರೂ ಅವರು ಶರಣಾಗಬೇಕಾದರೆ ಜಪಾನಿ ಸಮ್ರಾಟ ಮುದ್ರೆಯೊತ್ತಿರುವ ರಾಜನಿರೂಪಗಳು ಬರಬೇಕು ಆ ನಿರೂಪಗಳನ್ನು ಟೋಕಿಯೋದಿಂದ ವಿಶೇಷ ರಾಯಭಾರಿಗಳು ತಂದು ತಲುಪಿಸಬೇಕಾದರೆ ಕೊಂಚಕಾಲ ವಿಳಂಬವಾಗಬಹುದು ಹೇಗೇ ಆಗಲಿ, ಎಂಥ ಪರಿಸ್ಥಿತಿಯನ್ನಾದರೂ ಎದುರಿಸಲು ಯೋಜನೆ ತಯಾರಾಗಿದೆಯೆಂದು ಮೌಂಟ್ ಬ್ಯಾಟೆನರ ಚೀಫ್ ಆಫ್ ಸ್ಟಾಫ್ ಜನರಲ್ ಬ್ರೌನಿಂಗ್‌ರು ತಿಳಿಸಿದ್ದಾರೆ.

೪೦ ಲಕ್ಷ ಜರ್ಮನರ ಬಲಿ

ಯೂರೋಪಿನ ಮಹಾ ಘೋರ ಯುದ್ಧದಲ್ಲಿ ೦,೬೪,೪೩೮ ಮಂದಿ ಜರ್ಮನರು ಬಲಿಯಾದರು ಮತ್ತು ೯೬೨೩ ಮಂದಿ ಗಲ್ಲಿಗೇರಿಸಲ್ಪಟ್ಟರು ರಷ್ಯಾ ಯುದ್ಧರಂಗವೊಂದರಲ್ಲೇ ತಿಂಗಳಿಗೆ ೪೦ ಸಾವಿರ ಜರ್ಮನರು ಬಲಿಯಾದರು ಕಳೆದ ನವೆಂಬರ್ ೩೦ರ ವರೆಗೆ ೯,೧೧,೩೦೦ ಮಂದಿ ಜರ್ಮನರು ಸತ್ತಿದ್ದಾರೆ ಇದರಲ್ಲಿ ರಷ್ಯಾ ರಣಕ್ಷೇತ್ರವೊಂದರಲ್ಲೇ ೧೪,೧೯,೮೮೦ ಮಂದಿ ...ರು ೬೭೮,೨೦೧ ಮಂದಿ ಬಂದಿಗಳಾಗಿದ್ದಾರೆ

ಪಿಟೇನರಿಗೆ ಮರಣ ದಂಡನೆ

ಫ್ರಾನ್ಸಿನ ೮೯ ವರ್ಷದ ಮಾರ್ಷಲ್ ಪಿಟೇನರಿಗೆ ಮರಣ ದಂಡನೆಯನ್ನು ವಿಧಿಸಲಾಗಿದೆ ಆದರೆ ಕೋರ್ಟಿನವರು ಮಾರ್ಷಲರ ವಯಸ್ಸನ್ನು ಮನಗಂಡು, ಆ ಶಿಕ್ಷೆಯನ್ನು ಜಾರಿಗೆ ತರಕೂಡದೆಂದು ಸೂಚನೆ ಇತ್ತಿದ್ದಾರೆ

ಹಿಟ್ಲರ್ ಪತ್ತೆಗೆ ೪೦ ಲಕ್ಷ ರೂಪಾಯಿ

ಹಿಟ್ಲರನು ಎಲ್ಲಿಯೋ ಅವಿತುಕೊಂಡಿದ್ದಾನೆ, ಅವನನ್ನು ಹಿಡಿದು ಗುಂಡಿನ ಬಾಯಿಗೆ ಕೊಡಬೇಕು ಅವನನ್ನು ಪತ್ತೆಮಾಡಿ ಕೊಟ್ಟವರಿಗೆ ೪೦ ಲಕ್ಷ ರೂ ಬಹುಮಾನ ಕೊಡುವದಾಗಿ ಅಮೇರಿಕದ ಸರ್ಕಾರವು ... ಪರವಾಗಿ ... ಸೆನೆಟ್ ಸಭಾ ... ಸದಸ್ಯರು ... ಹೇಳಿದ್ದಾರೆ

ಬಗ್ದಾದಿನಲ್ಲಿ ದಂಗೆ

ಇರಾಕಿನ ಉತ್ತರ ಕುರ್ದಿಸ್ತಾನ್ ಪ್ರಾಂತ್ಯದ ಅಧಿಕಾರಿಗಳ ವಿರುದ್ಧವಾಗಿ ಮುಲ್ಲಾ ಮುಸ್ತಫಾ ಅಲ್ ಬರ್ ... ದಂಗೆಯ ಹೂಡಿದ್ದಾನೆ ೧೯೪೩ರಲ್ಲೂ ದಂಗೆಯ ಹೂಡಿದ್ದಾಗ ಇವನ ಬೆಂಬಲಿಗರನ್ನೂ ಇವನ ... ಸರ್ಕಾರ ದಂಡಿಸಿತ್ತು

ಭಾರತಕ್ಕೆ ಸಾಮ್ರಾಟರ ಸಂದೇಶ

... ೧೫ ನೆಯ ತಾರೀಖಿನ ದಿನ ಸಮ್ರಾಟರು ... ನ ಶಾಂತಿಕಾಲದ ಪಾರ್ಲಿಮೆಂಟಿನ ಆರಂಭ ಮಾಡುತ್ತಾ ಭಾರತಕ್ಕೆ ಈ ರೀತಿ ವಿಶೇಷ ಸಂದೇಶವಿತ್ತಿರೆ—'ಭಾರತ ಸಮಸ್ಯೆಯನ್ನು ಆದಷ್ಟು ಬೇಗ ... ಸಲು ಭಾರತದ ನಾಯಕರ ಅಭಿಪ್ರಾಯವನ್ನು ... ದು ತೀವ್ರ ಪ್ರಯತ್ನ ಮಾಡಲಾಗುತ್ತದೆ, ಸಂಪೂರ್ಣ ... ಜ್ಯಕೊಡುವುದೇ ನಮ್ಮ ಸರ್ಕಾರದ ಗುರಿ ಎಂದು ... ಪಿಸಿದ್ದಾರೆ

ಡಾ|| ಚಿಯಾಂಗ್-ಕೈಷೇಕರ ಸಂದೇಶ

"ಎಂಟು ವರ್ಷದ ನಮ್ಮ ಘೋರ ಹೋರಾಟಕ್ಕಾಗಿ ... ಯಶಸ್ಸು ಮತ್ತು ಬಹುಮಾನ ಬಂದಿತು ಆದರೆ ... ನಮ್ಮ ಸಂಪೂರ್ಣ ಜಯವಲ್ಲ, ಮಾನವ ಇತಿಹಾಸದಲ್ಲಿ ಇದೇ ಕೊನೆಯ ಯುದ್ಧವಾದರೆ ನಮ್ಮ ... ಕಷ್ಟ ಸಹಿಷ್ಣುತೆಗಾಗಿ ನಾವು ಅಷ್ಟು ಮರುಗಲಾರೆವು ನಮ್ಮ ಮನಕ್ಕೆ ನೆಮ್ಮದಿಯನ್ನು ತರುವ ಒಂದೇ ಒಂದು ಸಾಧನವೆಂದರೆ ಜಗತ್ತಿನಲ್ಲೆಲ್ಲ ಶಾಂತಿ ಸ್ಥಿರವಾಗಿ ನೆಲಸಬೇಕೆಂದು ಬಯಸುವವರಲ್ಲಿ ವಿಶ್ವಾಸ ಬೆಳೆಯಬೇಕಾದುದೇ ಆಗಿದೆ" ಎಂದು ಮಾ|| ಚಿಯಾಂಗ್-ಕೈಷೇಕ್‌ರು ತಮ್ಮ ಜನರನ್ನುದ್ದೇಶಿಸಿ ಹೇಳಿದರು.

ಪರಮಾಣು ಶಕ್ತಿಯನ್ನು ತಿಳಿಯಲು ಜಪಾನು ಪಟ್ಟ ಕಷ್ಟ

ಜಪಾನು ಅಮೇರಿಕದ ಮೇಲೆ ಯುದ್ಧ ಘೋಷಿಸುವ ಮುನ್ನ, ಅಮೇರಿಕದ ಗುಪ್ತ ಪರಮಾಣು ಶಕ್ತಿಯನ್ನು ತಿಳಿಯಲು ಬಹಳ ಪ್ರಯತ್ನ ಮಾಡಿತು ಆದರೆ ಅದು ವಿಫಲವಾಯಿತು ಈ ಪರಮಾಣು ಶಕ್ತಿಯನ್ನು ತಿಳಿಯಲು ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯದ ಭೌತಶಾಸ್ತ್ರಜ್ಞರಾದ ಡಾ|| ಅರ್ನೆಸ್ಟ್ ಓಲಾರೆನ್ಸರವರು ಅನೇಕ ಪ್ರಯೋಗಗಳನ್ನು ನಡೆಸಿದರು ಇದೇ ವಿಜ್ಞಾನಿಗಳು ಸೈಕ್ಲೋಟ್ರಾನ್, ಪರಮಾಣು ವಿಚ್ಛೇದಕವನ್ನು ಕಂಡು ಹಿಡಿದು ೧೯೩೯ರ ನೋಬೆಲ್ ಬಹುಮಾನವನ್ನು ಪಡೆದರು ೧೯೩೬-೩೯ ರಲ್ಲಿ ಈ ಪರಮಾಣುವಿಚ್ಛೇದಕ ವಿಚಾರಗಳನ್ನು ತಿಳಿಯಲು ಜಪಾನಿನಿಂದ ಬಂದಿದ್ದ ಭೌತಶಾಸ್ತ್ರಜ್ಞರಿಗೆ ತಿಳಿಸಲಾಯಿತು ಅಲ್ಲದೆ ಟೋಕಿಯೋದ ಇಂಪೀರಿಯಲ್ ವಿಶ್ವವಿದ್ಯಾನಿಲಯದಲ್ಲಿ ಈ ಯಂತ್ರನಿರ್ಮಾಣದಲ್ಲಿ ಸಹಾಯವನ್ನೂ ಮಾಡಲಾಯಿತು ೧೯೪೦ ರಲ್ಲಿ ಜಪಾನಿನ ಮೂವರು ಭೌತಶಾಸ್ತ್ರಜ್ಞರಾದ ನಿಶೋರಿ, ಹುಸಾಕಿ ಮತ್ತು ವತನಾಬಿ ಎಂಬವರು ಅಮೇರಿಕಕ್ಕೆ ಪರಮಾಣು ಶಕ್ತಿ ವಿಚಾರ ತಿಳಿಯಲು ಬಂದರು, ಆದರೆ ಅವರಿಗೆ ಆ ವಿಜ್ಞಾನಾಲಯಕ್ಕೆ ಪ್ರವೇಶ ದೊರೆಯಲಿಲ್ಲ ಅವರಿಗೆ ಅಮೇರಿಕವು ಇದರ ವಿಚಾರದಲ್ಲಿ ಅನವಶ್ಯ ವಸ್ತುಗಳ ವಿಷಯವನ್ನು ತಿಳಿಸಿ, ಪರದೇಶದ ವಿಜ್ಞಾನಿಗಳಿಗೆ ನಮ್ಮ ವಿಜ್ಞಾನಾಲಯಕ್ಕೆ ಪ್ರವೇಶವಿಲ್ಲವೆಂಬ ಆಜ್ಞೆ ಇರುವುದರಿಂದ ನಿಮ್ಮನ್ನು ನಮ್ಮ ವಿಜ್ಞಾನಾಲಯ ಕ್ಕೊಯ್ಯಲಾಗಲಿಲ್ಲ ಎಂದು ಹೇಳಿ ಒಳ್ಳೆಯ ಮಾತಿನಿಂದ ಮರುಳುಮಾಡಿ ಮುಗುಳುನಗೆಯಿಂದ ಸ್ವದೇಶಕ್ಕೆ ಕಳುಹಿಸಿತು ಈಗಿರುವ ಅಮೇರಿಕದ ವಿಧ್ವಂಸಕ ಪರಮಾಣು ಬಾಂಬು ಬರ್ಕ್ಲೆ ಎ ಒಲ್ಲಿನ ರೇಡಿಏಶನ್ ವಿಜ್ಞಾನಾಲಯದಲ್ಲಿ ತಯಾರಾಗುತ್ತಿದೆ

ಆಟಂ ಬಾಂಬಿನ ಪ್ರಭಾವ

ಈ ತಿಂಗಳು ೬ನೆಯ ತಾರೀಖಿನ ದಿನ ಜಪಾನಿನ ಒಂದು ಪಟ್ಟಣದ ಮೇಲೆ ಅಮೇರಿಕನ್ನರು ಆಟಂ ಬಾಂಬನ್ನು ಹಾಕಿದರಷ್ಟೆ! ಒಂದು ಕಡೆ ಈ ಬಾಂಬು, ಇನ್ನೊಂದು ಕಡೆ ರಷ್ಯಾ ಯುದ್ಧಕ್ಕೆ ಕಾಲಿಟ್ಟುದು ಇವೆರಡರ ಫಲವಾಗಿ ಜಪಾನು ಶರಣು ಹೊಡೆಯಿತು

ಈ ಬಾಂಬನ್ನು ಮೆಕ್ಸಿಕೋ ದೇಶದ ಒಂದು ಮರುಭೂಮಿಯಲ್ಲಿ ಬಹುಕಾಲದಿಂದ ತಯಾರುಮಾಡುತ್ತಿದ್ದರು ಅದರ ಕೆಲಸವು ಜುಲೈ ೧೬ನೆಯ ತಾರೀಖಿನ ದಿವಸ ಮುಗಿಯಿತು ೧೬ ನೆಯ ತಾರೀಖಿನ ದಿವಸ ಅದನ್ನು ಪರೀಕ್ಷಿಸಿದಾಗ ೨೫೦ ಮೈಲಿ ದೂರದಲ್ಲಿ ಇದ್ದ ಜನಗಳಿಗೆ ಸೂರ್ಯನ ಹತ್ತರಷ್ಟು ಪ್ರಕಾಶ ಕಾಣಿಸಿತು

೧೨೦ ಮೈಲಿ ದೂರವಿರುವ ಒಂದು ಹಳ್ಳಿಯಲ್ಲಿ ಒಬ್ಬ ಹುಟ್ಟು ಕುರುಡಿ ಇದ್ದಳು ಆ ಕುರುಡಿಗೂ ಈ ಬೆಳಕು ಕಂಡಿತು ೬ ಮೈಲಿ ದೂರವಿದ್ದ ಒಬ್ಬ ಮನುಷ್ಯನು ಈ ಬೆಳಕನ್ನು ಕಂಡು ಕುರುಡನಾದನು ಇದರಿಂದ ಇದರ ಪ್ರಕಾಶವು ಎಷ್ಟು ಅದ್ಭುತವಾಗಿರಬಹುದೆಂಬುದು ಆಶ್ಚರ್ಯಕರವಾಗಿದೆ ಈ ಬಾಂಬಿಗೆ ೨೦,೦೦೦ ಸಾಮಾನ್ಯ ಬಾಂಬುಗಳ ಶಕ್ತಿಯಿರುತ್ತದೆ

ಇಂಥ ಬಾಂಬನ್ನು ತಯಾರಿಸಬಹುದು ಎಂದು ಅನೇಕರು ಊಹಿಸಿದ್ದರು. ಆದರೆ ಹೇಗೆ ತಯಾರಿಸ ಬೇಕೆಂಬುದು ಇದುವರೆಗೂ ಗೊತ್ತಿರಲಿಲ್ಲ

ಪ್ರಪಂಚದ ಎಲ್ಲ ವಸ್ತುಗಳೂ ಕೆಲವು ಮುಖ್ಯ ವಸ್ತುಗಳಿಂದ ಮಾಡಲ್ಪಟ್ಟಿವೆ ನಮ್ಮ ಪೂರ್ವಿಕರು ಅವನ್ನು ಪಂಚಭೂತಗಳು ಎಂದರೆ ಮಣ್ಣು, ನೀರು, ಬೆಂಕಿ ಗಾಳಿ, ಆಕಾಶ ಎಂದು ಕರೆದರು ಭೂತಗಳು ಐದಲ್ಲ, ಅವು ೯೭ ಎಂದು ಈಗ ಕಂಡುಹಿಡಿದಿದ್ದಾರೆ. ಇಂಥ ಭೂತಗಳಲ್ಲಿ ಕಬ್ಬಿಣ, ಚಿನ್ನ ಎಂಬ ಲೋಹಗಳೂ ಕೆಲವು ಗಾಳಿಗಳೂ ಇವೆ

ವಸ್ತುವಿನ ಕಣ್ಣಿಗೆ ಕಾಣಿಸದಷ್ಟು ಸಣ್ಣಭಾಗಕ್ಕೆ ಆಟಂ (ಪರಮಾಣು) ಎಂದು ಹೆಸರು ಕಿಂಡಿಯಲ್ಲಿ ಬಿಸಿಲು ಬಿದ್ದಾಗ ಕೋಲಿನ ಹಾಗೆ ಬೆಳಕು ಕಾಣುತ್ತದೆ ಅಲ್ಲವೆ? ಅದರಲ್ಲಿ ಧೂಳು ದಾರಾಡುತ್ತಿರುತ್ತದೆ ಆ ಧೂಳಿಯ ಕೋಟಿಯ ಅಂಶಕ್ಕಿಂತ ಸಣ್ಣದು—ಆಟಂ, ಪರಮಾಣು

ಎಲೆಕ್ಟ್ರಿಕ್ ದೀಪದ ಶಕ್ತಿಯ ಕಣಗಳು ಅಥವಾ ಮಿಂಚಿನ ಶಕ್ತಿಯ ಕಣಗಳು ಇವುಗಳನ್ನು ಒಂದು ರೀತಿ ಜೋಡಿಸಿದರೆ ಕಬ್ಬಿಣವಾಗುತ್ತದೆ ಬೇರೆ ರೀತಿ ಜೋಡಿಸಿದರೆ ಚಿನ್ನವಾಗುತ್ತದೆ. ಇದನ್ನು ಮಾಡಿತೋರಿಸಿದ್ದಾರೆ ಅಂದರೆ ಕಬ್ಬಿಣದ ಪರಮಾಣುವನ್ನು ಒಡೆದು ಬೇರೆ ರೀತಿಯಲ್ಲಿ ಕಣಗಳನ್ನು ಜೋಡಿಸಬೇಕು ಹೀಗೆ ಪರಮಾಣುವನ್ನು ಒಡೆಯಬೇಕಾದರೆ ಮಿಂಚಿನ ಶಕ್ತಿ ಬೇಕು. ಆಗ ಶಕ್ತಿ ಮಿಂಚಿನಂತೆ ಹೊರಗೆ ಬರುತ್ತದೆ

ಕಬ್ಬಿಣಕ್ಕಿಂತ ಬೆಳ್ಳಿ, ಹೆಚ್ಚು ತೂಕ, ಬೆಳ್ಳಿಗಿಂತ ಚಿನ್ನ ತೂಕ, ಎಲ್ಲಕ್ಕಿಂತ **ಯುರೇನಿಯಂ** ಎಂಬ ಲೋಹ ತೂಕ, ಈ ಯುರೇನಿಯಂನ್ನು ಒಡೆಯುವುದೇ ಈ ಬಾಂಬಿನಶಕ್ತಿ

ಒಂದು ಅಡಿ ಉದ್ದ, ಒಂದು ಅಡಿ ಅಗಲ ಮತ್ತು ಒಂದು ಅಡಿ ದಪ್ಪದ ಯುರೇನಿಯಂ ಲೋಹದ ಪರಮಾಣುಗಳನ್ನು ಒಂದೇಸಾರಿಗೆ ಒಡೆದರೆ ಆ ಶಕ್ತಿ ೨೦,೦೦೦ ಸಾಮಾನ್ಯ ಬಾಂಬುಗಳ ಶಕ್ತಿಯಷ್ಟು ಇರುತ್ತದೆ ಇಂಥ ಒಂದು ಬಾಂಬು ಸಿಡಿದರೆ ದೊಡ್ಡ ಭೂಕಂಪವಾದ ಹಾಗೆ ಆಗುತ್ತದೆ ಅಂದರೆ ವಸ್ತುವಿನಲ್ಲಿ ಅಡಗಿರುವ ಸೃಷ್ಟಿ ಶಕ್ತಿಯನ್ನು ಈ ಬಾಂಬಿನಲ್ಲಿ ಹೊರಗೆಡವಿ ಪ್ರಳಯಕ್ಕೆ ಉಪಯೋಗಿಸುತ್ತಾರೆ

ಆದರೆ ಈ ಶಕ್ತಿಯನ್ನು ಲೋಕಕಲ್ಯಾಣಕ್ಕೆ ಉಪಯೋಗಿಸಬಹುದು ಎಂದು ಈ ಶಾಸ್ತ್ರವನ್ನು ತಿಳಿದವರು ಹೇಳುತ್ತಾರೆ

ಜಪಾನ್ ಚಕ್ರವರ್ತಿಯ ಇತಿಹಾಸ

ಪೋಟ್ಸ್‌ಡಾಂ ಸಮ್ಮೇಳನದ ಷರತ್ತುಗಳಿಗೆ ಒಪ್ಪಿ ಶರಣಾಗತವಾದ ಜಪಾನ್ ಚಕ್ರವರ್ತಿಗಳಾದ ಹಿರೋಹಿಟೊರವರು ಚಕ್ರವರ್ತಿಯಾದರೂ ಪ್ರತ್ಯೇಕವಾಗಿ ಅವರು ಯಾವ ಅಧಿಕಾರವನ್ನೂ ನಡೆಯಿಸುವುದಿಲ್ಲವಂತೆ! ಜಪಾನ್ ಚಕ್ರವರ್ತಿಗಳು ಫೋಟೋಗ್ರಫಿ ತೆಗೆಯುವುದರಲ್ಲಿಯೇ ಅವರು ತಮ್ಮ ಬಹಳ ಕಾಲವನ್ನು ಕಳೆಯುತ್ತಾರೆ ತಮ್ಮ ೨೧ ನೇ ವರ್ಷದಲ್ಲಿ ಪ್ರಪಂಚ ಪರ್ಯಟನವನ್ನು ಮಾಡಿದರು ಚಕ್ರವರ್ತಿಯನ್ನು ಬಿಟ್ಟು ೨೬೦೦ ವರ್ಷಗಳ ಕಾಲದಲ್ಲಿ ಯಾವ ಜಪಾನಿನ ಚಕ್ರವರ್ತಿಗಳೂ ವಿದೇಶ ಪರ್ಯಟನವನ್ನು ಮಾಡಲಿಲ್ಲ ಈ ಪರ್ಯಟನದಲ್ಲಿ ಅವರು ಬ್ರಿಟನ್, ಅಮೇರಿಕಾ, ಯೂರೋಪ್ ಖಂಡಗಳಿಗೆ ಹೋಗಿದ್ದರು ಜಪಾನ್ ಚಕ್ರವರ್ತಿಯು ಚಕ್ರವರ್ತಿಗಳ ಸಂಪ್ರದಾಯದ ಪ್ರಕಾರ ಕೆಲವು ಧನಿಕರ ಕನ್ಯೆಯರನ್ನೇ ಮದುವೆ ಮಾಡಿಕೊಳ್ಳಬೇಕು ಆದರೆ ಈ ಪದ್ಧತಿಗೆ ವಿರುದ್ಧವಾಗಿ ಹಿರೋಹಿಟೊರವರು ತಾವು ಪ್ರೇಮಿಸಿದ ಹುಡುಗಿಯನ್ನೇ ಮದುವೆಯಾದರು ಅವರಿಗೆ ಈಗ ಆರು ಮಂದಿ ಮಕ್ಕಳು ೩ ಮಂದಿ ರಾಜಗೃಹದಲ್ಲಿಯೇ ಇರುತ್ತಾರೆ ಯುವರಾಜನಾದ ಟುಸುಗೂವಿಗೆ ಈಗ ೧೧ ವರ್ಷ ಆತನು ರಾಜಕುಟುಂಬದ ಪದ್ಧತಿ ಪ್ರಕಾರ ತನ್ನ ಮೂರನೆಯ ವಯಸ್ಸಿನಲ್ಲಿಯೇ ರಾಜಗೃಹವನ್ನು ಬಿಟ್ಟು ಬೇರೊಂದು ಕಡೆ ಇದ್ದಾನೆ ಜಪಾನ್ ಚಕ್ರವರ್ತಿಯು ದೈವಾಂಶ ಸಂಭೂತನೆಂದು ಭಾವಿಸಿ ಆತನಿಗೆ ಬೇರಾವ ದೇಶಗಳಲ್ಲೂ ಇಲ್ಲದ ಗೌರವವು ಜಪಾನಿನಲ್ಲಿ ಸಲ್ಲುತ್ತಿದೆ ಜಪಾನಿನ ಸಂಪ್ರದಾಯದ ಪ್ರಕಾರ, ಚಕ್ರವರ್ತಿಗಳು ಜನರ ಕಣ್ಣಿಗೆ ಬೀಳುವುದಿಲ್ಲ ರಸ್ತೆಗಳಲ್ಲಿ ಅವರ ಹೊರಟರೆ, ಜನಗಳು ಅವರನ್ನು ನೋಡದೆ ಕಿಟಕಿ ಬಾಗಿಲುಗಳನ್ನು ಮುಚ್ಚಿಕೊಳ್ಳಬೇಕು ಈ ೨ ಸಾವಿರ ವರ್ಷಗಳ ಜಪಾನಿ ಚರಿತ್ರೆಯಲ್ಲೇ, ಜನರ ಮುಂದೆ ಬಂದು ಜನಗಳಿಗೆ ಶರಣಾಗತಿ ಸಂದೇಶವನ್ನು ಸೂಚಿಸಿದ ಚಕ್ರವರ್ತಿಗಳಲ್ಲಿ ಹಿರೋಹಿಟೊರವರೇ ಮೊದಲನೆಯವರು ಆರ್ಥಿಕ ಸ್ಥಿತಿಯಲ್ಲಿ ಹಿರೋಹಿಟೊರವರು ಜಪಾನಿನಲ್ಲೇ ಅತಿ ಐಶ್ವರ್ಯವಂತರಂತೆ! ಜಪಾನ್ ಬ್ಯಾಂಕಿನಲ್ಲಿ ೧೪೧೦೦೦ ಷೇರುಗಳು, ಹೈಪೋಥಿಕ್ ಬ್ಯಾಂಕಿನಲ್ಲಿ ೧೦ ಸಾವಿರ ಷೇರುಗಳು, ಯೋಕಹಾಮಾ ಬ್ಯಾಂಕಿನಲ್ಲಿ ೫೪ ಸಾವಿರ, ಮಿಸ್ಸುಯಿಯಾ ಬ್ಯಾಂಕಿನಲ್ಲಿ ೪೫ ಸಾವಿರ, ಓಜೋವೇಪರ್ ಕಂಪನಿಯಲ್ಲಿ ೩೮ ಸಾವಿರ, ದಕ್ಷಿಣ ಮಂಚೂರಿಯಾ ರೈಲ್ವೆಯಲ್ಲಿ ೨೪ ಸಾವಿರ ಮತ್ತು ಟಾಲ್‌ವಾನ್ ಸಕ್ಕರೆ ಕಂಪನಿಯಲ್ಲಿ ೨೦ ಸಾವಿರ ಷೇರುಗಳು ಚಕ್ರವರ್ತಿಗೆ ಇವೆಯಂತೆ! ೧೯೩೧ರಲ್ಲೇ ಇಂಪೀರಿಯಲ್ ಸಮ್ಮೇಳನದಲ್ಲಿ ಹಿರೋಹಿಟೊರವರು ತಮ್ಮ ನಾಯಕತ್ವದಲ್ಲಿ ಪೂರ್ವ ಏಷ್ಯಾವನ್ನು ಗೆದ್ದು, ಜಪಾನಿ ಸಾರ್ವಭೌಮಪ್ರಭುತ್ವವನ್ನು ರಚಿಸಬೇಕೆಂದು ನಿರ್ಧರಿಸಿದ ಮೇಲೆ ಪರ್ಲ್‌ಹಾರ್ಬರಿನ ಮೇಲೆ ದಾಳಿ ಮಾಡಿಸಿದರು ಆದ್ದರಿಂದ ಜಪಾನ್ ಚಕ್ರವರ್ತಿಗಳು ಯುದ್ಧಾಪರಾಧಿ ಎಂದು ಪರಿಗಣಿಸಲಾಗಿದೆ

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಿಸಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು. ವೀರಶೈವಮತದಲ್ಲಿ ಸದ್ಯಃ ದೊರೆಯತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹು ಪ್ರಧಾನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು. ಈ ಗ್ರಂಥವು ಈಗ್ಗೆ ಸುಮಾರು **೩ಸಾವಿರ** ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿದೆ. ಈ ಶಾಸ್ತ್ರಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭವಾಗಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ **ಅರ್ಥ**ವು ಬರೆಯಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥ ಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಒಂದು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ [illegible] ಕ್ಕೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು [illegible] ಪಂಡಿತರ ವ್ಯಾಖ್ಯಾನದ ಮಹತ್ತ್ವವು [illegible] ವೇದ್ಯವಾಗುವುದು. ವಾಚಕರ ಅನುಕೂಲಕ್ಕಾಗಿ ಬಹುಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೩೩೩ ಪುಟಗಳಿಂದ ಕೂಡಿದ್ದು, ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರವಾದ ಚಿತ್ರಗಳು ಜೋಡಿಸಲ್ಪಟ್ಟಿರುವದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಕೈವಲ್ಯಕಲ್ಪತರುವಿನಂತಿರುವ ಈ ಅಪೂರ್ವಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೨ ರೂಪಾಯಿ.**

ಮನೋಹರವಾದ ಫೋಟೋಗಳು.

ಶ್ರೀ [illegible] ಫೋಟೋ ಸೈಜು ೨೦×೧೪ ಬೆಲೆ ಒಕ್ಕೆ	೦—೬—೦
ಶ್ರೀ [illegible] (ನಾನಾ [illegible] ವರ್ಣಗಳಿಂದ ಮುದ್ರಿತವಾದ) ಸೈಜು ೧೪×೧೦ ಬೆಲೆ	೦—೬—೦
[illegible] ಇರುವ ಫೋಟೋ ಸೈಜು ೧೪×೧೦ ಬೆಲೆ	೦—೩—೦
ಶ್ರೀ [illegible] ಸೈಜು ೧೪×೧೦ ಬೆಲೆ	೦—೩—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು [illegible] ದಿಂದ ಅವತರಿಸುವ ಫೋಟೋ	೦—೧—೬
ಶ್ರೀ [illegible] ಫೋಟೋ	೦—೧—೬
ಶ್ರೀ [illegible] ರಾಜ್ಯ [illegible] ದ ಫೋಟೋ	೦—೧—೬
[illegible] ಫೋಟೋ	೦—೧—೬
ಶ್ರೀ [illegible] ಫೋಟೋ	೦—೧—೬
ಶ್ರೀ [illegible] ಫೋಟೋ	೦—೧—೬
ಶ್ರೀ [illegible] ಫೋಟೋ	೦—೧—೬
ಶ್ರೀ [illegible] ಶಾಸ್ತ್ರಿಗಳವರ [illegible] ಫೋಟೋ	೦—೧—೬
[illegible] ಶ್ರೀ [illegible] (ನಾನಾ ವರ್ಣಗಳಿಂದ ಮುದ್ರಿತವಾದ) ಚಿಕ್ಕಸೈಜು ಒಕ್ಕೆ	೦—೩—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ಒಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ಒಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ಒಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
[illegible] ಮಹೋತ್ಸವದ ಫೋಟೋ	೦—೧—೬

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಸಟ (೬ನೆಯ ಆವೃತ್ತಿ)	೨ ಆ
ಸನ್ಯಾಸಾಶ್ರಮವಿಮರ್ಶೆ (೩ನೆಯ ಆವೃತ್ತಿ ಸಂಸ್ಕೃತ)	೨ ಆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೭ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ	೨ ಆಣೆ
ಬಸವಾದಿಸಿಜತತ್ತ್ವದರ್ಶನ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಆಗಮಪರಿಜ್ಞಾನ	೮ ಆಣೆ
[illegible] ಕಾಶೀನಾಥಶಾಸ್ತ್ರಿಗಳವರ ಭಾಷಣಗಳು ([illegible]	೨ ಆಣೆ
[illegible]	೨ ಆಣೆ
[illegible] (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀ [illegible] ಪಂಚಾಚಾರ್ಯ [illegible] ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ ([illegible])	೧ ರೂ
ಸಿದ್ಧಾಂತಶಿಖೋಪನಿಷತ್ ([illegible])	೧ ರೂ
ಕೇನೋಪನಿಷತ್ [illegible]	೧ ರೂ
ಶ್ರೀ ಕರಬಾಷ್ಯ ([illegible])	೧ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧॥ ರೂ
ವೀರಶೈವರತ್ನ ([illegible] ಮಹತ್ವದ [illegible])	೨ ರೂ
ರೇಣುಕವಿಜಯ ಮಹಾಪುರಾಣ ([illegible])	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನ-[illegible]-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*)	8 As
Speeches by Pandit Shri Kashinatha Shastriji (*English*)	12 As
लिंगधारणचंद्रिका (संस्कृत)	३ रु
वीरशैवरत्न (मराठी)	१ रु
महानारायणोपनिषत् (वीरशैवभाष्य—संस्कृत)	२ रु
सिद्धांतशिखामणि (मूल)	८ आ
नंदिकेश्वरकारिका (संस्कृत)	२ आ

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

GISTERED No M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪ ಒ ಸಾ ಸನಪಂಕ ತಜನಿತರ್ ಸಂಚಾ ದಾದಿಪರ್ ಸಂಚಕ್ಲೇಶಪನಾಶಕಃ ಪರತರಶ್ರೀಪಂಚಲಿಂಗೋದ್ಭವರ್ ।
ಪಂಚಂಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ ಪ ಚಾಚಾರ್ಯಜಗದ್ಗುರೂತ್ತಮರ್ ರವರ್ ಪಾಲಿಪ್ಪುದೀಲೋಕಮಂ ।

ದವರಿಗೆ ೩ ರೂ ೩ ಆಣೆ ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚ ಸೇರಿ ೩ ರೂ ೬ ಆಣೆ

ಸಂಪುಟ ೧೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೭ನೇ ಆಗಸ್ಟ್ ೧೯೪೫ [ಸಂಚಿಕೆ ೧೫

॥ ಶ್ರೀಜಗದ್ಗುರು ಪಂಚಾಚಾರ್ಯ ನಮಃ ॥

ಗದಾಯುದ್ಧವೂ ಭೀಮಸೇನನ ನೀತಿಯೂ

(ಭಾರತ)

(ಶ್ರೀ ಮಲ್ಲಿಕಾರ್ಜುನಸ್ವಾಮಿ ... ಮೈಸೂರು)

ಭೀಮಸೇನನು ಪಾಂಡವರಲ್ಲಿ ಎರಡನೆಯವನು ವಾಯುದೇವರ ಅನುಗ್ರಹದಿಂದ ಕುಂತಿದೇವಿಯಲ್ಲಿ ಜನಿಸಿದನು ಮಹಾ ಪರಾಕ್ರಮನು ಮಹಾ ಬಲಿಷ್ಠನು ... ಲ್ಲಿ ಸಾವಿರಾನೆಗಳ ಬಲವಿತ್ತೆಂಬುದನ್ನೂ ಈ ಬಲ ... ಪಾಂಡವರಿಗೆ ಬಹು ಪ್ರಯೋಜನವಾಯಿತೆಂಬು ... ಈತನ ಚರಿತ್ರೆಯನ್ನೋದಿದವರೆಲ್ಲ ಬಲ್ಲರು ... ಭೀಮಸೇನನ ನೀತಿಯು ಯಾವ ತರಹದ್ದೆಂಬು ... ದಲವರು ಅರಿಯರು

... ಯಾರು ಎಂತೋ ಅವರೊಡನೆ ಅಂತೆಯೆ ನಡೆಯ ... ಬುದೇ ಭೀಮಸೇನನು ಆಚರಿಸಿ ತೋರಿಸಿದ ... ಯು ಏಕಚಕ್ರನಗರದ ದುರ್ಬಲ ಪ್ರಜೆಗಳಮೇಲೆ ... ಪಾಶವಿ ಬಲದಿಂದ ಅನ್ಯಾಯದ ಬಲಾತ್ಕಾರವನ್ನು ... ಯಿಸುತ್ತಿದ್ದ ಬಕಾಸುರನನ್ನು ಭೀಮಸೇನನು ಮಲ್ಲ ... ದ್ಧದಲ್ಲಿ ಎದುರಿಸಿ ತನ್ನ ಬಲದಿಂದಲೇ ಮುರಿದನು ... ಟನಗರದಲ್ಲಿ ಅಜ್ಞಾತವಾಸದಲ್ಲಿರುವಾಗ ತನ್ನ ... ದಿಯಾದ ದ್ರೌಪದಿಯ ಮೇಲೆ ಬಲಾತ್ಕಾರ ಮಾಡ ... ದ ನೀಚ ಕೀಚಕನನ್ನು ವಧಿಸುವಲ್ಲಿ ಭೀಮ ... ನು ಸ್ವಲ್ಪ ಮರೆಮೋಸವನ್ನೂ ಪ್ರಯೋಗಿಸಿದನು ... ಕ್ಷೇತ್ರದಲ್ಲಿ ಮಾಡಿದ ಗದಾಯುದ್ಧದಲ್ಲಿ ದುರ್ಯೋ ... ನ ವಧೆಮಾಡಿ ಭೀಮಸೇನನು ಈ ಕಲಿಕಾಲದ ... ಯು ಯಾವುದೆಂಬುದನ್ನು ಸ್ಪಷ್ಟವಾಗಿ ತೋರಿ ... ನು

ಗದಾಯುದ್ಧವೆಂಬುದು ಗದೆಗಳನ್ನು ಹಿಡಿದು ಪರ ... ಎದುರಿಗೆ ನಿಂತು ಅವುಗಳಿಂದ ಹೊಡೆದಾಡಿ ... ವ ಯುದ್ಧವು ಈ ಯುದ್ಧದಲ್ಲಿ ಭೀಮಸೇನ ... ದುರ್ಯೋಧನನು ಎದುರಾಳು ದುರ್ಯೋಧನನೂ ... ಸಾಮಾನ್ಯವೀರನಲ್ಲ, ಗದಾಯುದ್ಧ ಮಾಡುವುದರಲ್ಲಿ ... ಪರಿಶ್ರಮಮಾಡಿದವನು, ಭೀಮಸೇನನಿಗಿಂತ ... ನೈಪುಣ್ಯವನ್ನು ಸಂಪಾದಿಸಿದವನು ಭಾರತ ... ದ್ಧದಲ್ಲಿ ದುರ್ಯೋಧನನೊಬ್ಬನನ್ನುಳಿದು ಎಲ್ಲ ... ವರೂ ಹತರಾಗಿಹೋದ ಬಳಿಕ ಪಾಂಡವರು ಜಯ ... ರಾದಂತೆಯೇ ಆದರೆ ದುರ್ಯೋಧನನೊಬ್ಬನು ... ಜೀವಂತನಾಗಿರುವವರೆಗೆ ಪೂರ್ಣ ಜಯವು ದೊರೆತಂತೆ ... ಲಿಲ್ಲ ಆಗ ಭೀಮಸೇನನು ದುರ್ಯೋಧನನನ್ನು ... ದ್ಧದಲ್ಲಿ ಮುರಿಯಬೇಕೆಂದು ಹವಣಿಸುತ್ತಿರಲು ... ದುರ್ಯೋಧನನು ವೈಶಂಪಾಯನವೆಂಬ ಸರೋವರದಲ್ಲಿ ... ಕೊಂಡಿದ್ದನು ಇನ್ನು ಸ್ವಲ್ಪಕಾಲವನ್ನು ತಳ್ಳಿದರೆ ... ಯಾತ್ರೆಗೆಹೋದ ಮಹಾ ಬಲಶಾಲಿಯಾದ ಬಲ ... ನು ಆತನಿಗೆ ಸಹಾಯಕನಾಗಿ ಬರುವನೆಂದು ... ರ ಸಲಹೆ, ದುರ್ಯೋಧನನ ಆಸೆ ಆದರೆ ಬಲರಾಮನು ಬರುವವರೆಗೆ ಅವನು ಸಹಾಯಕನಾಗಿ ಯುದ್ಧಮಾಡಲಿ ಎಂದು ಅವಕಾಶ ಕೊಡುವುದಕ್ಕೆ ದುಷ್ಟ ದುರ್ಯೋಧನನು ತಕ್ಕವನಾಗಿರಲಿಲ್ಲ ಆದುದರಿಂದ ಶ್ರೀ ಕೃಷ್ಣನ ಸೂಚನೆಯ ಮೇರೆಗೆ ಭೀಮಸೇನನು ಆ ಕೂಡಲೆ ದುರ್ಯೋಧನನನ್ನು ಹುಡುಕಿ, ಅಡಗಿರುವುದಕ್ಕೆ ಪರಿಹರಿಯಿಂದ ಮೂದಲಿಸಿ ಹಂಗಿಸಿ ಹುರಿಗೊಳಿಸಿ ಗದಾಯುದ್ಧಕ್ಕೆ ಬರಮಾಡಿಕೊಂಡನು

ದುರ್ಯೋಧನನೊಡನೆ ಧರ್ಮಯುದ್ಧವನ್ನು ಮಾಡಿಯೇ ಆತನನ್ನು ಸದೆಬಡಿಯಬೇಕೆಂದಿದ್ದ ಭೀಮಸೇನನು ಮೊದಲು ಗದಾಯುದ್ಧದ ನಿಯಮಗಳನ್ನನುಸರಿಸಿದ ಯುದ್ಧವನ್ನು ಆರಂಭಿಸಿದನು ಭೀಮಸೇನನು ಈವರೆಗೆ ಭಾರತ ಯುದ್ಧದಲ್ಲಿ ದೊರೆತ ಜಯದಿಂದ ಉಬ್ಬಿದವನು ಈಗಲೂ ಜಯಶ್ರೀಯು ತನ್ನ ಕಡೆಗೆ ಇರುವಳೆಂಬ ಹೆಮ್ಮೆ ಅವನಲ್ಲಿದೆ ಆದರೆ ದುರ್ಯೋಧನನ ಸೋದರರನ್ನೂ ಮಕ್ಕಳನ್ನೂ ಪ್ರಿಯ ಮಿತ್ರರನ್ನೂ ಕಳೆದುಕೊಂಡು ಏಕಾಂಗಿಯಾದವನು ಅವನಿಗೆ ಈಗ ಜೀವಿತಕ್ಕಿಂತಲೂ ಮರಣವೇ ಲೇಸೆನಿಸಿದ ಇಂತಹ ಶತ್ರುವು ಜೀವದ ಹಂಗಾಯಿಲ್ಲದೆ ಮೈಮೇಲೆ ಏರಿ ಬರುವುದರಿಂದ ಭಯಂಕರನು ಆದುದರಿಂದ ಭೀಮಸೇನನಿಗೆ ಸೋಲುವ ಪ್ರಸಂಗವು ಒಂದಷ್ಟು ಸಹಜವು ದುರ್ಯೋಧನನ ಹೊಡೆತದಿಂದ ಭೀಮಸೇನನು ಮೂರ್ಛೆಗೊಂಡನು ಭೀಮಸೇನನು ಚೇತರಿಸಿಕೊಂಡು ಎದ್ದ ಬಳಿಕ ಇನ್ನು ತಡಮಾಡುವುದು ಸರಿಯಲ್ಲವೆಂದು ದುರ್ಯೋಧನನ ತೊಡೆಗಳಿಗೆ ಗದೆಯಿಂದ ಬಲವಾಗಿ ಪ್ರಹರಿಸಲು ಆತನ ತೊಡೆಗಳು ಮುರಿದವು ಅವನು ದೊಪ್ಪನೆ ನೆಲಕ್ಕುರುಳಿದನು ಇನ್ನು ಬಹಳ ಹೊತ್ತು ಬದುಕುವ ಬಲವು ಆತನಲ್ಲಿ ಉಳಿಯಲಿಲ್ಲ ಆಗ ಭೀಮಸೇನನು ಗತಪ್ರಾಣನಾಗಿ ನೆಲದ ಮೇಲೆ ಬಿದ್ದಿರುವ ದುರ್ಯೋಧನನ ಮಸ್ತಕವನ್ನೂ ಕಿರೀಟವನ್ನೂ ಎಡಗಾಲಿನಿಂದ ಒದೆದು ತನ್ನ ಮೊದಲಿನ ಪ್ರತಿಜ್ಞೆಗಳನ್ನು ನೆರವೇರಿಸಿದನು ಹದಿನೆಂಟುದಿವಸಗಳಿಂದ ನಡೆದು ಬಂದ ಭಾರತ ಯುದ್ಧವು ಸಮಾಪ್ತಿಯಾಯಿತು ಭೀಮಸೇನನು ಕೊನೆಯ ಜಯವನ್ನು ಸಂಪಾದಿಸಿದನು

ಈ ಗದಾಯುದ್ಧದಲ್ಲಿ ಭೀಮಸೇನನು ದುರ್ಯೋಧನನ ತೊಡೆಗಳಿಗೆ ಹೊಡೆದದ್ದೂ, ಆತನು ಮೃತಪ್ರಾಯನಾಗಿ ನೆಲಕ್ಕುರುಳಿದ ಸಮಯದಲ್ಲಿ ಅವನ ಮಸ್ತಕವನ್ನೂ ಕಿರೀಟವನ್ನೂ ಒದೆದದ್ದೂ ಅನ್ಯಾಯಗಳಲ್ಲವೇ? ಗದಾಯುದ್ಧದಲ್ಲಿ ನಾಭಿಯ ಕೆಳಗೆ ಹೊಡೆಯಬಾರದೆಂಬ ನಿಯಮವುಂಟು ದುರ್ಯೋಧನನೂ ಸಹ ಭೀಮಸೇನನು ಮೂರ್ಛೆಗೊಂಡಾಗ ಸುಮ್ಮನಿದ್ದನು ಹೀಗಿರಲು ವಿಚಾರಶೀಲನಾದ ಭೀಮಸೇನನು ಧರ್ಮಯುದ್ಧದ ನಿಯಮವಿರುದ್ಧವಾಗಿ ಹೊಡೆಯಬಹುದೇ? ನೆಲಕ್ಕೆ ಬಿದ್ದ ಬಳಿಕ ಆತನ ಮಸ್ತಕವನ್ನೂ ಕಿರೀಟವನ್ನೂ ಒದೆಯುವುದು ನ್ಯಾಯವೇ? ದುರ್ಯೋಧನನು ಪಟ್ಟಾಭಿಷಿಕ್ತನಾದ ಚಕ್ರವರ್ತಿ ರಾಜನು, ಹನ್ನೊಂದು ಅಕ್ಷೋಹಿಣಿ ಸೇನೆ ಅವನ ವಶದಲ್ಲಿತ್ತು, ಅಸಂಖ್ಯ ಮಾಂಡಲಿಕ ರಾಜರೂ ಮಿತ್ರರಾಜರೂ ಭಾರತ ಯುದ್ಧದಲ್ಲಿ ಆತನ ಸಹಾಯಕ್ಕೆ ಒದಗಿದ್ದರು ಇಂತಹ ಮಹಾ ರಾಜಾಧಿರಾಜನ ಮಸ್ತಕವನ್ನೂ ಆತನ ಸಾಮ್ರಾಜ್ಯ ಸೂಚಕವಾದ ಮುಕುಟವನ್ನೂ ಒದೆಯುವುದು ಅದರಲ್ಲಿಯೂ ಆತನು ಸಾಯುವ ಸ್ಥಿತಿಯಲ್ಲಿದ್ದಾಗ ಒದೆಯುವುದು ಅದೆಂತಹ ನ್ಯಾಯವು? ಅದೆಂತಹ ಪೌರುಷವು? ಇವಲ್ಲದೆ ದುರ್ಯೋಧನನು ಭೀಮಸೇನನಿಗೆ ಅಣ್ಣನಾಗಬೇಕು ಅಣ್ಣನಿಗೆ ತೋರಿಸುವ ಗೌರವವು ಇದೇ ಏನು? ಗದಾಯುದ್ಧವನ್ನು ನೋಡಲು ಬಂದ ಕೆಲವರಿಗೆ ಇದು ಸರಿದೋರಲಿಲ್ಲ ಬಲರಾಮನು ಭೀಮಸೇನನ ಈ ಕೃತಿಗೆ ಹೇಸಿ ಕೋಪಗೊಂಡು ಕಿಡಿಕಿಡಿಯಾದನು ಭೀಮಸೇನನ ಪ್ರತ್ಯಕ್ಷ ಅಣ್ಣನಾದ ಧರ್ಮರಾಜನೂ ಈ ಕೃತಿಯು ಅನುಚಿತವೆಂದು ಮರುಗಿದನು ಹಾಗಾದರೆ ಇದೇ ಏನು ನಾವು ಹೇಳಲು ಪ್ರಯತ್ನಿಸಿದ ಭೀಮಸೇನನ ನೀತಿ ಎನ್ನುವಿರಾ?

ಭೀಮಸೇನನು ದುಃಶಾಸನನ ಎದೆಯ ರಕ್ತವನ್ನು ಹೀರುವೆನೆಂದೂ ದುರ್ಯೋಧನನ ತೊಡೆಗಳನ್ನು ಮುರಿಯುವೆನೆಂದೂ ಆತನ ತಲೆಯನ್ನೂ ಕಿರೀಟವನ್ನೂ ಒದೆಯುವೆನೆಂದೂ ಭಾರತ ಯುದ್ಧಕ್ಕಿಂತ ಬಹುಕಾಲ ಪೂರ್ವದಲ್ಲಿಯೇ ಪ್ರತಿಜ್ಞೆಮಾಡಿದ್ದನು ತಾವು ಮಾಡಿದ ಪ್ರತಿಜ್ಞೆಗಳನ್ನು ಪೂರೈಸುವುದು ಎಲ್ಲರ ಅದರಲ್ಲಿಯೂ ವಿಶೇಷವಾಗಿ ಕ್ಷತ್ರಿಯರ ಕರ್ತವ್ಯವು

'ಸತ್ಯಕ್ಕಾಗಿ ಪ್ರಯತ್ನ ಪಡುವ ತೇಜಸ್ವಿಗಳು ಹಿಂದು ಮುಂದು ನೋಡದೆ ಪ್ರಾಣವನ್ನಾದರೂ ಬಿಟ್ಟಾರಲ್ಲದೆ ಪ್ರತಿಜ್ಞೆಯನ್ನು ಬಿಡಲಾರರು' ಎಂದು ನೀತಿ ನಿಪುಣರು ಹೇಳುತ್ತಾರೆ ಪ್ರತಿಜ್ಞಾಪಾಲನವು ಸತ್ಯದಲ್ಲಿ ಸಮಾವೇಶವಾಗುವುದು ಅಂದಮೇಲೆ ಭೀಮಸೇನನು ತನ್ನ ಪ್ರತಿಜ್ಞೆಗಳನ್ನು ಪಾಲಿಸಿದರೆ ಎಂದರೆ ಸತ್ಯದಿಂದ ನಡೆದರೆ ಅದರಲ್ಲಿ ಅನೀತಿಯೇನು ಎಂದು ಸಮಾಧಾನ ಹೇಳಬಹುದು, ಆದರೆ ಅರಸನಾದ ಅಣ್ಣನ ತಲೆಯನ್ನೂ ಮುಕುಟವನ್ನೂ ಒದೆಯುವೆನೆಂಬುದೇ ಮೊದಲಾದ ಈ ಪ್ರತಿಜ್ಞೆಗಳು ಉಚಿತವೇ? ಪ್ರತಿಜ್ಞೆಗಳನ್ನು ನೆರವೇರಿಸುವುದಕ್ಕೆ ಮೋಸಗಾರಿಕೆಯನ್ನು ಅವಲಂಬಿಸಬಹುದೇ ಎಂಬುದು ವಿಚಾರಣೀಯವು

(ಸಶೇಷ)

ತೆರಿಗೆಗಳು ಹೋಗುವುದಿಲ್ಲ

ಯುದ್ಧದ ದೆಸೆಯಿಂದ ಭಾರತದಲ್ಲಿ ಹಾಕಲ್ಪಟ್ಟ ವಿಶೇಷ ತೆರಿಗೆಗಳನ್ನು ಈ ಕೂಡಲೆ ತೆಗೆದುಹಾಕಲಾಗುವುದಿಲ್ಲವಂತೆ ತೆರಿಗೆಗಳೆಲ್ಲವೂ ಕನಿಷ್ಠಪಕ್ಷ ಈ ವರ್ಷದ ಅಂತ್ಯದವರೆಗೂ ಇದ್ದೇ ಇರುವುವು. ದೇಶದಲ್ಲಿ ಶಾಂತಿ ಸಮಯದ ಸ್ಥಿತಿಗಳು ನೆಲಸಿವೆ ಎಂಬುದು ದೃಢಪಟ್ಟ ಮೇಲೆ ಬರುತ್ತಿರುವ ಲಾಭಾಂಶವು ಕಡಿಮೆಯಾಗುತ್ತಿರುವುದೆಂಬುದು ಸ್ಪಷ್ಟವಾದಮೇಲೆ ಈ ತೆರಿಗೆಗಳ ಭಾರವನ್ನು ಇಳಿಸುವ ವಿಚಾರವನ್ನು ಕೇಂದ್ರ ಸರ್ಕಾರದವರು ಪರಿಶೀಲಿಸುವರಂತೆ

ಪಂಚಾಚಾರ್ಯಪ್ರಭಾ.

೧೯೪೫ನೆಯ ಆಗಸ್ಟ ತಾ|| ೨೭ನೇ ಸೋಮವಾರ

ವೇದಾಜ್ಞಾಪಾಲನ.

ವೇದವೆಂಬುದು ಸೃಷ್ಟಿಪೂರ್ವದಿಂದಲೂ ಪರಮೇಶ್ವರನ ಮುಖದಿಂದಾವಿರ್ಭವಿಸಿರುವ ಆನುಪೂರ್ವಿಯಾದ ದಿವ್ಯವಾಣಿಯಾದುದರಿಂದ ಅದು ಅಪೌರುಷೇಯ ವಾಣಿಯೆನಿಸಿಕೊಂಡಿರುವುದು ಸಕಲ ಶಾಸ್ತ್ರಕಾರರೂ ಈ ವೇದವನ್ನು ನಿತ್ಯವೆಂದು ಒಪ್ಪಿಕೊಂಡಿರುವುದರಿಂದ, ವೇದವಿಹಿತ [illegible] ಪ್ರಮಾಣವೆಂದು ಸಿದ್ಧವಾಗುತ್ತದೆ ವೇದವು ಪರಮೇಶ್ವರನ [illegible]ವಾಗಿರುತ್ತದೆ ಈ ಪರಮೇಶ್ವರಾಜ್ಞೆಯನ್ನು ಯಾರೂ ಮೀರಬಾರದು ತಂದೆಯ ಆಜ್ಞೆಯನ್ನು [illegible] ಸತ್ಪುತ್ರನೆನಿಸು[illegible] ಭಾರತಭೂಮಿಯಲ್ಲಿ ಜನ್ಮವೆತ್ತಿದವರೆಲ್ಲರೂ ಲೋಕಜನಕನಾದ ಪರಮೇಶ್ವರನ [illegible]ವಾದ ವೇದವಾಣಿಯನ್ನು ಪಾಲಿಸಿ ಆತ್ಮಕರಸಿ ಕೊಳ್ಳಬೇಕು ಯಾವನು ವೇದವನ್ನು [illegible] ವನೋ ಅವನು ದೇವ[illegible] ಹೇಳು[illegible]ದಿಲ್ಲ ದೇವರನ್ನು ಪ್ರತ್ಯಕ್ಷವಾಗಿ ನೋಡಿ [illegible] ದೇವರುಂಟೆಂದು ಯಾರೂ ಹೇಳು[illegible] ಪುದನ್ನು ಆಪ್ತವಾಕ್ಯದಿಂದ [illegible] ಬೇಕಾಗಿದೆ

ಅಂಥ ಆಪ್ತವಾಕ್ಯವೆಂದರೆ ವೇದ[illegible] ವಾಣಿಯೇ ಹೊರತು ಇನ್ನಾವುದೂ ಆಗ[illegible] ಇದನ್ನೇ ಶಾಸ್ತ್ರಕಾರರು ಶಬ್ದಪ್ರಮಾಣವೆನ್ನುತ್ತಾರೆ ಲೋಕದಲ್ಲಿ ಆಪ್ತನಾದ ಪುರುಷನು ಏನು ಹೇಳಿದರೂ ಅದನ್ನು [illegible]ಬೇಕು ಅವನು ಹೇಳುವುದೆಲ್ಲವೂ ಹಿತಕ್ಕಾಗಿಯೇ ಹೊರತು [illegible]ತಕ್ಕಾಗಿ ಯಾವುದೂ ಇರುವುದಿಲ್ಲ ಆಪ್ತನೆಂದರೆ "ಯಥಾರ್ಥವಕ್ತಾ ಇದ್ದದ್ದು ಇದ್ದಂತೆ ಬೋಧಿಸುವವನು ಆಪ್ತನು ಶ್ರೀಪರಮೇಶ್ವರನಿಂದ ಸೃಷ್ಟಿಸಲ್ಪಟ್ಟ ಈ ಜಗತ್ತಿನಲ್ಲಿ ಪ್ರಾಣಿಗಳ ತಾರತಮ್ಯಾನುಸಾರವಾಗಿ ಹಿತಾನುಕೂಲವಾದ ಧರ್ಮಮಾರ್ಗವನ್ನೂ ಅಹಿತಾನುಕೂಲಗಳಾದ ಅಧರ್ಮಮಾರ್ಗಗಳನ್ನೂ ಸರ್ವತೋಭದ್ರವಾಗಿ ವೇದವು ಬೋಧಿಸುತ್ತದೆ ಈಶ್ವರನ ಮಕ್ಕಳಂತಿರುವ ಮಾನವರೆಲ್ಲರೂ ಪರಮಾಪ್ತನಾದ ಪರಮೇಶ್ವರನ ವೇದರೂಪವಾದ ಶಾಸನವನ್ನು ಶ್ರದ್ಧೆಯಿಂದ ಪಾಲಿಸುವುದರಿಂದ ಅವರಿಗೆಂದೂ ಹಾನಿಯು ತಟ್ಟುವುದಿಲ್ಲ ವೇದವು ಒಳ್ಳೆಯ ಕೆಲಸವನ್ನು ಮಾಡುವುದರಿಂದಾಗುವ ಸುಖವನ್ನೂ ಕೆಟ್ಟಕೆಲಸವನ್ನು ಮಾಡುವುದರಿಂದಾಗುವ ದುಃಖವನ್ನೂ ಬೋಧಿಸುತ್ತದೆ ಲೋಕದಲ್ಲಿ ಪ್ರತಿಯೊಬ್ಬ ಮನುಷ್ಯನೂ ತಾನು ಸುಖವನ್ನು ಪಡೆಯಬೇಕೆಂದು ಬಯಸುವನಲ್ಲದೆ ದುಃಖವನ್ನು ಬಯಸುವುದಿಲ್ಲ ಆದರೂ ಕೆಲವರು ದುಃಖಸಾಧನಗಳಾದ ಕೆಲಸಗಳನ್ನು ಸುಖಸಾಧನಗಳೆಂದು ಭ್ರಮಿಸಿ ವೇದಶಾಸನವನ್ನು ಮೀರಿ ತಾವು ಮಾಡುವುದೆಲ್ಲವೂ ನ್ಯಾಯವೆಂದು ಭ್ರಮಿಸಿರುತ್ತಾರೆ ಆಪ್ತವಾಕ್ಯವೆನಿಸಿದ ವೇದವು ಶ್ರೇಷ್ಠತತ್ತ್ವವನ್ನು ಬೋಧಿಸಿದರೂ ಅದನ್ನು ಲಕ್ಷ್ಯಮಾಡದೆ ಮಾಡಬಾರದ ಕಾರ್ಯವನ್ನು ಮಾಡಿ ದೈವದ್ರೋಹಿಗಳಾಗಿ ಅಲೆಯುವದು ಮಾನವಜನ್ಮಕ್ಕೆ ಅತ್ಯಂತ ಹೇಯವಾದ ಕಾರ್ಯವೆಂದೇ ಸ್ಪಷ್ಟವಾಗುತ್ತದೆ

ಪರಮೇಶ್ವರನು ಇಷ್ಟಮಾರ್ಗವೇ ಧರ್ಮವೆಂದೂ ಅನಿಷ್ಟಮಾರ್ಗವೇ ಅಧರ್ಮವೆಂದೂ ಒಂದು ನಿಯಮವನ್ನು ಮಾಡಿರುತ್ತಾನೆ "ವೇದಬೋಧಿತೇಷ್ಟಸಾಧನತಾಕೋಧರ್ಮಃ" 'ವೇದಬೋಧಿತಾನಿಷ್ಟಸಾಧನತಾಕೋ ಅಧರ್ಮಃ' ಎಂಬ ಆರ್ಯೋಕ್ತಿಯು ಸಹ ಇದನ್ನೇ ಬೋಧಿಸುತ್ತದೆ ಆದುದರಿಂದ ವೇದವು ಯಾವುದನ್ನು ಅನಿಷ್ಟವೆಂದು ಬೋಧಿಸುತ್ತದೆಯೋ ಅವನ್ನು ಅಧರ್ಮವೆಂತಲೂ, ಯಾವುದನ್ನು ಇಷ್ಟವಾದುದೆಂದು ಬೋಧಿಸುತ್ತದೆಯೋ ಅದನ್ನು ಧರ್ಮವೆಂತಲೂ ತಿಳಿದುಕೊಂಡು ಧರ್ಮಾಧರ್ಮಗಳನ್ನು ನಿಶ್ಚಯಗೊಳಿಸಿಕೊಳ್ಳಬೇಕಲ್ಲದೆ ತಮಗಿಷ್ಟವಾದುದೆಲ್ಲವೂ ಧರ್ಮವೆಂದೂ ತಮಗನಿಷ್ಟವಾದುದೆಲ್ಲವೂ ಅಧರ್ಮವೆಂದೂ ಯಾರೂ ತಿಳಿಯಬಾರದು ಇದೇ ಸನಾತನಧರ್ಮದ ರಹಸ್ಯವು

ಲೋಕದಲ್ಲಿ ಮಹಾರಾಜನು ತನ್ನ ಪ್ರಜಾಸುಖಕ್ಕಾಗಿ ಒಂದು ಶಾಸನವನ್ನು ಮಾಡಿ ಆ ಶಾಸನವನ್ನು ಯಾರು ಮುರಿಯುತ್ತಾರೆಯೋ ಅವರು ರಾಜದ್ರೋಹಿಗಳೆಂದು ಭಾವಿಸಿ ಅಂಥವರಿಗೆ ಶಾಸನಪ್ರಕಾರವಾಗಿ ಶಿಕ್ಷೆಯನ್ನು ವಿಧಿಸುತ್ತಾನೆ ಯಾರು ಆ ಶಾಸನವನ್ನು ಪಾಲಿಸುತ್ತಾರೆಯೋ ಅವರನ್ನು ಅನುಗ್ರಹಿಸುತ್ತಾನೆ [illegible] ಚತುರ್ದಶಭುವನಗಳನ್ನು [illegible] ರುವ ದೇವತಾಸಾರ್ವಭೌಮನ [illegible] ವೇದವೆಂಬ ಶಾಸನದ್ವಾರಾ ಈ [illegible] ವನು ಯಾವನು [illegible] [illegible] ಪ್ರವೇತಿ [illegible] [illegible] ಸಾಮ್ರಾಜ್ಯ [illegible] [illegible] ಶಾಸನ [illegible] ತ್ತಾನೆಯೋ [illegible] ಉತ್ತಮವಾದ [illegible]

ಯಾಗಿಷ್ಟರೂ ಕೆಲ[illegible] [illegible]ಶಾಸನವನ್ನು [illegible] ಒ[illegible]ವನ್ನು ನೋಡದ[illegible] [illegible] ಕೆಲ[illegible] ಪ್ರ[illegible] [illegible] [illegible] ಪ್ರಜಾ [illegible] ಪ್ರವರ್ತ[illegible] [illegible] ಸಾಧನಗಳನ್ನು [illegible] ಕರ್ಣಾ[illegible] ತ್ತಾ[illegible] [illegible]ವಣಿಕ[illegible] [illegible] ಇವ[illegible] ಪ್ರಸಂ[illegible] ಸಾಯಕತ್ವವನ್ನಾಗಲಿ [illegible] ಪರಂಪರೆಯನ್ನನುಸರಿಸ[illegible] ಫಲವ[illegible] ವುದೂ ಫಲವಿಲ್ಲ ಆದುದರಿಂದ ಜನರ [illegible] ವಿರುದ್ಧವಾಗಿ ವರ್ತಿಸಿದ [illegible] ಶಿರಸಾವಹಿಸಿ ಪಾಲಿಸುವಂತೆ ಬೇಕು ಇದೇ ಸನಾತನಧರ್ಮಾನುಯಾಯಿಗಳ ಮುಖ್ಯ ಧರ್ಮವಾದ

ವರ್ತಮಾನ ಸಂಗ್ರಹ

ಅಮೇರಿಕನ್ ಸಬ್‌ಮೆರಿನ್ನುಗ[illegible] [illegible]ದಲ್ಲಿ ಒಟ್ಟು [illegible] ಲಕ್ಷ ಟನ್ ಪತ್ರನೌಕೆಗಳನ್ನು ಮುಳುಗಿಸಿವೆಯಂತೆ! [illegible] ಲಕ್ಷ ಟನ್ನಿನಷ್ಟು [illegible] ಸಿವೆಯಂತೆ!

ಮಂಚೂರಿಯದಲ್ಲಿ ರಷ್ಯನರು ೫೭ ಸಾವಿರ ಜಪಾನಿ ಸೈನಿಕರನ್ನು ಬಂದಿಗಳಾಗಿ ಹಿಡಿದಿದ್ದಾರೆ ಮಂಚೂರಿಯಾದಲ್ಲಿರುವ ಮುಖ್ಯನಗರ ಮತ್ತು ಠಾಣ್ಯಗಳನ್ನು ರಷ್ಯನರು ಆಕ್ರಮಿಸಿದ್ದಾರೆ

ಜರ್ಮನಿಯಲ್ಲಿ ಈಗ ರಷ್ಯದ ಆಡಳಿತದಲ್ಲಿರುವ ಪ್ರದೇಶಗಳಲ್ಲಿದ್ದ ಜರ್ಮನ್ ವೈಜ್ಞಾನಿಕರನ್ನೂ ಲೆಬೊರೇಟರಿಯ ಸಾಧನಗಳನ್ನೂ ಮೊದಲು ಆ ಪ್ರದೇಶವನ್ನು ಆಕ್ರಮಿಸಿದ್ದ ಬ್ರಿಟಿಷರೂ ಅಮೆರಿಕನ್ನರೂ ಬೇರೆ ಕಡೆಗೆ ಸಾಗಿಸಿಬಿಟ್ಟರೆಂದು ರಷ್ಯನರು ಆಕ್ಷೇಪಣೆಯನ್ನೆತ್ತಿರುವರಂತೆ!

ಜಪಾನನ್ನು ಆಕ್ರಮಿಸಲು ೧೭ ಡಿವಿಜನ್ ಮಿತ್ರರ ಸೈನ್ಯವು ಸಿದ್ಧವಾಗಿದೆಯೆಂದು ಅಮೆರಿಕದ ಮಿಲಿಟರಿ ಅಧಿಕಾರಿಗಳೊಬ್ಬರು ತಿಳಿಸಿದ್ದಾರೆ

ಫ್ರಾನ್ಸಿನ ಡಿಗಾಲೆಯವರು ಅಧ್ಯಕ್ಷ ಟ್ರೂಮನ್ನರವರನ್ನು ಭೇಟಿ ಮಾಡಲು ಅಮೆರಿಕಾಕ್ಕೆ ಪ್ರಯಾಣಮಾಡಿದ್ದಾರೆ ಫ್ರಾನ್ಸಿನ ರಾಜಕೀಯ ಮತ್ತು ಆರ್ಥಿಕ ಅಭಿವೃದ್ಧಿಗೆ ಅಮೆರಿಕದ ಸಹಾಯವನ್ನು ಡಿಗಾಲೆಯವರು ಕೋರುವರಂತೆ!

ಟೋಕಿಯೋ ಕೊಲ್ಲಿಯಲ್ಲಿ ೩೧ನೇ ತಾ|| ಶುಕ್ರವಾರ ಅಮೇರಿಕದ ಮಿಸೋರಿ ಎಂಬ ಯುದ್ಧದ ಹಡಗಿನಲ್ಲಿ ಜಪಾನಿ ಶರಣಾಗತಿ ಪತ್ರಕ್ಕೆ ಸಹಿ ಹಾಕಲಾಗುವುದೆಂದು ಜನರಲ್ ಮ್ಯಾಕಾರ್ಥರವರು ತಿಳಿಸಿದ್ದಾರೆ

ಮಂಚೂರಿಯಾದಲ್ಲಿ ಶರಣಾಗತಿ

ಮಂಚೂರಿಯಾದಲ್ಲಿ ಜಪಾನಿಯರು ಶರಣಾಗುತ್ತಿದ್ದಾರೆ ಈವಾಗಲೆ ೧,೫೦,೦೦೦ ಜಪಾನಿ ಸೈನಿಕರು ರಷ್ಯನರ ವಶವಾಗಿದ್ದಾರೆ

ಜಪಾನಿನ ಮಂತ್ರಿಯ ಆತ್ಮಹತ್ಯೆ!

ಜಪಾನಿನಲ್ಲಿ ಒಂದು ವಿಚಿತ್ರವಾದ ಪದ್ಧತಿ ಇದೆ ಏನೆಂದರೆ ರಾಜನ ಪ್ರಜೆಗಳಾಗಲಿ ಅಧಿಕಾರಿಗಳಾಗಲಿ ಆತನ ಸೇವೆಯನ್ನು ಸಮರ್ಪಕವಾದ ರೀತಿಯಲ್ಲಿ ಮಾಡದಿದ್ದರೆ ತಮ್ಮ ಪ್ರಾಣವನ್ನು ಕಳೆದುಕೊಳ್ಳುತ್ತಾರೆ ತಮ್ಮ ಹೊಟ್ಟೆಯನ್ನು ಕತ್ತಿಯಿಂದ ಬಗಿದುಕೊಳ್ಳುತ್ತಾರೆ ಈ ಮಾರ್ಗಕ್ಕೆ 'ಹರಾಕಿರಿ' ಎನ್ನುತ್ತಾರೆ [illegible] ಜಪಾನಿನ ಯುದ್ಧಮಂತ್ರಿ ಹರಾಕಿರಿಯನ್ನು ಮಾಡಿಕೊಂಡನು

ಬರ್ಮಾದಲ್ಲಿ ಯುದ್ಧ ನಿಂತಿತು

ಬರ್ಮಾದಲ್ಲಿರುವ ಜಪಾನಿ ಕಮ್ಯಾಂಡರಾದ ಕವಾಬೋರವರು ಬರ್ಮಾದಲ್ಲಿ ಯುದ್ಧ ನಿಲ್ಲಿಸಲು ಆಜ್ಞೆ ಮಾಡಲಾಗಿದೆಯೆಂದು ಮಿತ್ರ ಸೈನ್ಯಾಧಿಕಾರಿಗಳಿಗೆ ತಿಳಿಸಿದ್ದಾರೆ ಆಗ್ನೇಯ ಏಷ್ಯಾದಲ್ಲಿ ಜಪಾನಿಯರ ಶರಣಾಗತಿಯನ್ನು ಸುಪ್ರೀಂ ಕಮ್ಯಾಂಡರ್ ಅಡ್ಮಿರಲ್ ಲಾರ್ಡ್ ಲೂಯಿ ಮೌಂಟ್‌ಬೇಟನ್‌ರವರೇ ಸಿಂಗಪುರದಲ್ಲಿ ಈ ತಿಂಗಳು ಮೊದಲನೇ ವಾರದಲ್ಲಿ ಸ್ವೀಕರಿಸುವರಂತೆ

ಅಟಾಮಿಕ್ ಬಾಂಬಿನಿಂದ ೬ ಲಕ್ಷ ಜನಕ್ಕೆ ನಷ್ಟ

ಜಪಾನಿನ ಮೇಲೆ ಪ್ರಯೋಗಿಸಿದ ಎರಡು ಅಟಾಮಿಕ್ [illegible] ಆಘಾತದಿಂದ ಸತ್ತವರ ಗಾಯಗೊಂಡ[illegible] [illegible] ಮನೆಮಠಗಳನ್ನು ಕಳೆದುಕೊಂಡವ[illegible] [illegible] ಜಪಾನಿ ವೈಜ್ಞಾನಿಯೊಬ್ಬನ [illegible]

ಜಪಾನನ್ನು ಆಕ್ರಮಿಸಲು ಸಿದ್ಧತೆ

ಜಪಾನಿನಲ್ಲಿ ಮಿತ್ರ ಸೈನ್ಯಗಳು ಬಂದಿಳಿಯುವ ಸಮಯದಲ್ಲಿ ಜಪಾನು ಅನುಸರಿಸಬೇಕಾದ ನೀತಿಯ ವಿಷಯದಲ್ಲಿ ಜನರಲ್ ಮ್ಯಾಕಾರ್ಥರವರು ಹಲವು ಆಜ್ಞೆಗಳನ್ನು ಹೊರಡಿಸಿದ್ದಾರೆ ಜಪಾನಿನ ಮಿಲಿಟರಿ, ನೌಕಾ ಮತ್ತು ವಿಮಾನದಳಗಳು ಈಗ ಎಲ್ಲಿ ಇರುವವೋ ಅಲ್ಲೇ ಇ[illegible] ಬೇಕು ಮಿತ್ರರ ಆಜ್ಞೆಯಿಲ್ಲದೆ ಯಾವ ಸೈನ್ಯವಾಗ[illegible] ಚಲಿಸಕೂಡದು ನೌಕೆಗಳಲ್ಲಿರುವ ಆಸ್ಫೋಟಕ ಸಾಮಗ್ರಿಗಳನ್ನೆಲ್ಲವನ್ನೂ ಸಮುದ್ರಕ್ಕೆ ಚೆಲ್ಲಬೇಕು ಜಪಾನಿ ಸಬ್‌ಮೆರಿನ್ನುಗಳು ನೀರಿನ ಮೇಲಿದ್ದು ಕಪ್ಪು ಬಾವುಟಗಳನ್ನು ಹಾರಿಸಬೇಕು ಮತ್ತು ತಮ್ಮ ಸಂಚಾರ ಕ್ರಮವನ್ನು ಮಿತ್ರರ ರೇಡಿಯೋ ಸ್ಟೇಷನ್ನಿಗೆ ತಿಳಿಸಿದ ನಂತರ ಬೋರ್ಗವಿಲೆ, ಸ್ಟ್ಯಾಂ ಅದರ ಸುಬೆಕ್ ಬಂದರಿಗೆ ಹೋ[illegible] ಬೇಕು ಆಗಸ್ಟ ೨೫ನೇ ತಾ|| ನಿಂದ ಜಪಾನಿನ ಸೈನಿ[illegible]ರೆಲ್ಲರೂ ತಮ್ಮ ಸ್ಥಾನಗಳನ್ನು ಖಾಲಿಮಾಡಿ, ಬ್ಯಾರೆಕ್‌ಗಳಲ್ಲಿ ಇರಬೇಕು ಟೋಕಿಯೋ ಕೊಲ್ಲಿಯಲ್ಲಿ ಮಿತ್ರ[illegible] ಬಂದಿಳಿಯುವ ಭದ್ರತೆಗಾಗಿ ಜಪಾನಿ ಹಡಗೊಂದು [illegible] ಮಾಕ್ಕೆ ೨೦ ಮೈಲಿ ಆಚೆಗ ಅಮೇರಿಕನ್ ನೌಕೆಯನ್ನು ಸಂದರ್ಶಿಸಿ, ಅದನ್ನು ಕರೆದುಕೊಂಡು ಹೋಗಬೇಕು ತೀರಪ್ರದೇಶಗಳನ್ನೆಲ್ಲಾ ಅಮೇರಿಕನ್ ನೌಕಾ ದ[illegible]ವರು ಆಕ್ರಮಿಸುವರು ರಕ್ಷಣೆಗಾಗಿ ಹಗಲಿರುಳು ಮಿತ್ರ ವಿಮಾನಗಳು ಜಪಾನಿನ ಮೇಲೆ ಹಾರಾಡುವುವು

ಟೋಕಿಯೋದಲ್ಲಿ ಜಪಾನಿನ ಶರಣಾಗತಿ ಸ್ವೀಕಾರ

ಟೋಕಿಯೋ ನಗರದಲ್ಲೇ ಜನರಲ್ ಮ್ಯಾಕಾರ್ಥರವರು ಜಪಾನಿ ಶರಣಾಗತಿ ಪತ್ರವನ್ನು ೩೧ನೇ ತಾ|| ಶುಕ್ರವಾರ ಸ್ವೀಕರಿಸುವರು ಜನರಲ್ ಮ್ಯಾಕಾರ್ಥರವರು ೨೮ನೇ ತಾ|| ಜಪಾನನ್ನು ಪ್ರವೇಶಿಸುವ[illegible]

ಜಪಾನಿನಲ್ಲಿ ಮಂಗಳವಾರ ವಿಮಾನಗಳ ಮೂಲಕ ಸೇನೆಗಳಿಳಿದು, ತೀರಪ್ರದೇಶಗಳಲ್ಲಿ ಠಾಣ್ಯಗಳನ್ನೇರ್ಪಡಿಸಿಕೊಳ್ಳುತ್ತವೆ ಪೂರ್ವಭಾವಿಯಾಗಿ ಮಿತ್ರ ಸೇನೆಗಳು ...ನುವಾರ ಟೋಕಿಯೋ ನಗರಕ್ಕೆ ಆಗಮಿಸುವವು ಟೋಕಿಯೋ ಕೊಲ್ಲಿ ಪ್ರವೇಶಕ್ಕಾಗಿ ಅಮೆರಿಕನ್ ಪಡೆಯ ಅಧೀನವಲ್ಲಿರುವ ಬ್ರಿಟಿಷ ನೌಕಾಪಡೆಯು ಈಗಾಗಲೇ ಮುಖ್ಯ ಸ್ಥಾನಗಳನ್ನು ಆಕ್ರಮಿಸಿವೆ ಮಿತ್ರಸೇನೆ ಬಂದಿಳಿಯುವಾಗ ಘರ್ಷಣೆ ಆಗದಿರುವಂತೆ ಅಲ್ಲಿದ್ದ ಜಪಾನಿಯರನ್ನು ದೂರಕ್ಕೆ ಕಳುಹಿಸಲಾಗುತ್ತಿದೆ ಟೋಕಿಯೋ ಕೊಲ್ಲಿಯಲ್ಲಿ ಅಮೆರಿಕನ್ ನೌಕೆಯೊಂದರಲ್ಲಿ ಜನರಲ್ ಮಾಕಾರ್ಥರವರು ಜಪಾನಿ ಶರಣಾಗತಿ ಪತ್ರಕ್ಕೆ ಸಹಿಯಿತ್ತು ಕೊಳ್ಳುವರು ಜ|| ಮ್ಯಾಕಾರ್ಥರರು ಜಪಾನನ್ನು ಆಕ್ರಮಿಸುವ ದಂಡಯಾತ್ರೆ ಪಡೆಯಲ್ಲಿ ಅಟಾಮಿಕ್ ಬಾಂಬುಳ್ಳ ವಿಮಾನಗಳನ್ನು ತೆಗೆದುಕೊಂಡು ಹೋಗಲು ಯೋಚನೆ ಮಾಡಿದ್ದಾರೆಂದೂ, ಇದು ಜಪಾನೀಯರ ಯಾವುದಾದರೂ ಪ್ರತೀಕಾರ ಚಟುವಟಿಕೆಗೆ ಮುಂಜಾಗ್ರತೆ ಸಿದ್ಧತೆ ಎಂದೂ ಅಮೆರಿಕನ್ ಪತ್ರಿಕೆಗಳು ಪ್ರಕಟಿಸಿವೆ

ಹಿರೋಹಿಟೋವಿನ ಜೀವನ ಪರಿಚಯ

ಇವರು ಜಪಾನಿನ ಚಕ್ರವರ್ತಿ ಜಪಾನರು ತಮ್ಮ ಚಕ್ರವರ್ತಿಯನ್ನು ದೇವರೆಂದೇ ತಿಳಿದಿರುತಾರೆ ಈ ಚಕ್ರವರ್ತಿಯು ಸೂರ್ಯದೇವನ ವಂಶದಲ್ಲಿ ಹುಟ್ಟಿದ ೧೨೪ನೆಯ ರಾಜ ಎಂದು ಅವರ ನಂಬಿಕೆ ಮೀಜಿ ಎಂಬ ರಾಜನ ಕಾಲದಿಂದ ಜಪಾನು ಪಶ್ಚಿಮ ದೇಶಗಳ ನಾಗರಿಕತೆಯನ್ನು ಅನುಸರಿಸಿತು ಅಂದಿನಿಂದ ಅದು ಕೈಗಾರಿಕೆಗಳಲ್ಲಿ ಬಹಳ ಹೆಸರು ಪಡೆಯಿತು ಮತ್ತು ಸೈನ್ಯರಚನೆಯಲ್ಲಿ ಪಶ್ಚಿಮ ದೇಶಗಳನ್ನೇ ಮಾದರಿಯನ್ನಾಗಿ ಇಟ್ಟುಕೊಂಡಿತು ಹಿರೋಹಿಟೋರವರು ಮೀಜಿ ದೊರೆಯ ಮೊಮ್ಮಕ್ಕಳು ಯುವರಾಜರಾಗಿದ್ದಾಗ ಇಂಗ್ಲೆಂಡಿಗೆ ಹೋಗಿ ಬಂದರು ಜಪಾನಿ ರಾಜ ... ಹೊರದೇಶಗಳಿಗೆ ಹೋಗಿ ಬರುವುದು ಇದೇ ಮೊದಲು ಇವರು ೧೯೨೬ರಲ್ಲಿ ಸಿಂಹಾಸನವನ್ನು ಏರಿದರು ರಾಜನೇ ಪ್ರತ್ಯಕ್ಷ ದೇವರಾದ್ದರಿಂದ ಅವರನ್ನು ಕಾಣಲು ಬಂದಾಗ ಮಂತ್ರಿಗಳೂ ಕೂಡ ಮೊಣಕಾಲಿನ ಮೇಲೆ ಕಾಲನ್ನಿಟ್ಟು ಬಗ್ಗಿ ಮಾತನಾಡಬೇಕು ಚಕ್ರವರ್ತಿಗಳು ಒಂದುಸಾರೆ ಉಪಯೋಗಿಸಿದ ಬಟ್ಟೆಗಳನ್ನು ಮತ್ತೊಂದುಸಾರ ಉಪಯೋಗಿಸುವುದಿಲ್ಲ ಅವನ್ನು ತಮ್ಮ ಪ್ರೀತಿಯ ಮಂತ್ರಿಗಳಿಗೂ ಇತರ ಅಧಿಕಾರಿಗಳಿಗೂ ಬಹುಮಾನವಾಗಿ ಕೊಡುತ್ತಾರೆ

೧ ಕೋಟಿ ಜಪಾನರ ನಾಶ

ಜಪಾನಿನ ಮೇಲೆ ಮಿತ್ರರು ನಡೆಸಿದ ವಿಮಾನ ದಾಳಿಯಲ್ಲಿ ಒಟ್ಟು ೧ ಕೋಟಿ ಜಪಾನರು ಸತ್ತರಂತೆ! ಜಪಾನಿನ ಆರನೇ ಒಂದು ಭಾಗದಷ್ಟು ಜನರು ಸತ್ತಂತಾಯಿತು ಜಪಾನಿನ ೨೦೬ ನಗರಗಳ ಪೈಕಿ, ೪೪ ನಗರಗಳು ಪೂರ್ಣವಾಗಿ ನಾಶವಾದವು ಟೋಕಿಯೋ ಮತ್ತು ಇತರ ೩೭ ನಗರಗಳಲ್ಲಿ ಶೇಕಡಾ ೩೦ ರಷ್ಟು ಪ್ರದೇಶ ನಾಶವಾಗಿದೆ

ಜಪಾನಿನಲ್ಲಿ ಪ್ರಚಂಡ ಬಿರುಗಾಳಿ

ಜಪಾನಿನಲ್ಲಿ ಕಳೆದ ಬುಧವಾರದಿಂದ ಪ್ರಚಂಡ ಬಿರುಗಾಳಿ ಎದ್ದು ಮಿತ್ರ ಸೈನಿಕರು ಜಪಾನನ್ನು ಆಕ್ರಮಿಸುವುದರ ಬಗ್ಗೆ ಸಹಾಯ ಮಾಡಲು ಜಪಾನಿ ಸರ್ಕಾರಕ್ಕೆ ಬಹಳ ತೊಂದರೆ ಉಂಟಾಗಿದೆಯೆಂದು ಜನರಲ್ ಮ್ಯಾಕಾರ್ಥರರಿಗೆ ಜಪಾನಿ ಸರ್ಕಾರದವರು ಸಮಾಚಾರ ಕಳಿಸಿದ್ದಾರೆ ಈ ಬಿರುಗಾಳಿಯಿಂದ ಸಂಚಾರಮಾರ್ಗಕ್ಕೆ ಬಹಳ ಅಡಚಣೆ ಉಂಟಾಗಿದೆಯಂತೆ!

ಸುಭಾಷ ಬೋಸರು ಸತ್ತರು

ಸುಭಾಷ್ ಚಂದ್ರಬೋಸರು ವಿಮಾನ ಅಪಾಯದಲ್ಲಿ ಗಾಯಗೊಂಡು ಜಪಾನಿ ಆಸ್ಪತ್ರೆಯೊಂದರಲ್ಲಿ ಮರಣ ಹೊಂದಿದರೆಂದು ಜಪಾನೀ ವಾರ್ತಾಸಂಸ್ಥೆ ವರದಿ ಮಾಡಿದೆ

ಚಕ್ರವರ್ತಿಗಳ ಭಾಷಣ

ಇಂಗ್ಲೆಂಡಿನಲ್ಲಿ ಮಹಾಚುನಾವಣೆ ಆದಮೇಲೆ, ೧೫ನೆಯ ತಾರೀಖಿನ ದಿನ ಹೊಸ ಪಾರ್ಲಿಮೆಂಟ್ ಸೇರಿತು ಕೆಳಗಿನ ಸಭೆಯಲ್ಲಿ ೬೪೦ ಜನ ಮೆಂಬರುಗಳು ಎಲ್ಲರೂ ನೆರೆದಿದ್ದರು ಮೊದಲನೆಸಾಲಿನಲ್ಲಿ ಮುಖ್ಯ ಮಂತ್ರಿಗಳಾದ ಅಟ್ಲೀ ಮೊದಲಾದವರು ಕುಳಿತಿದ್ದರು ಎದುರಿಗೆ ಹಿಂದೆ ಮುಖ್ಯ ಮಂತ್ರಿಗಳಾಗಿದ್ದ ಚರ್ಚಿಲ್ ಮೊದಲಾದವರು ಇದ್ದರು ಹೊಸ ಪಾರ್ಲಿಮೆಂಟನ್ನು ಚಕ್ರವರ್ತಿಗಳೇ ಆರಂಭಮಾಡುವ ಪದ್ಧತಿ ಅದರಂತೆ ಚಕ್ರವರ್ತಿಗಳು ಸಭೆಗೆ ದಯಮಾಡಿಸಿ ಭಾಷಣ ಮಾಡಿದರು ಅದು ೧೫ ನಿಮಿಷಗಳವರೆಗೆ ನಡೆಯಿತು ಅದರಲ್ಲಿ ಅವರು ಇಂಡಿಯಾದ ಬಗ್ಗೆ ಹೇಳಿದ ವಿಷಯವನ್ನು ಕೆಳಗೆ ಕೊಟ್ಟಿದೆ

ಆದಷ್ಟು ಶೀಘ್ರ ಇಂಡಿಯಾಕ್ಕೆ ಪೂರ್ಣ ಸ್ವರಾಜ್ಯವನ್ನು ಕೊಡುವುದೇ ನಮ್ಮ ಸರ್ಕಾರದ ಗುರಿಯಾಗಿದೆ ಈಗಾಗಲೇ ಮಾತುಕೊಟ್ಟಿರುವಂತೆ ಈ ಗುರಿಯನ್ನು ಮುಟ್ಟಲು ನಮ್ಮ ಸರ್ಕಾರವು ಹಿಂದೂಸ್ಥಾನದ ಮುಖಂಡರ ಸಹಾಯವನ್ನು ಪಡೆಯುತ್ತದೆ

ರಷಿಯನ್ ಮೋಟಾರ್ ಕಾರು

'ಹಾರುವ ಮೋಟಾರ್ ಕಾರುಗಳು' ಎಂಬ ಸಣ್ಣ ನೂತನ ಕಾರುಗಳನ್ನು ತಯಾರಿಸಲು ರಷ್ಯಾ ಪ್ರಾರಂಭಿಸಿದೆ ಯುದ್ಧ ಕಾಲದಲ್ಲಿ ಯೋಕಲವ್ ಎಂಬ ವೈಜ್ಞಾನಿಕನು ಇಂತಹ ಕಾರುಗಳನ್ನು ತಯಾರಿಸಲು ಪ್ರಾರಂಭಿಸಿದ್ದನು ನಾಗರಿಕರು ಸುಲಭ ಬೆಲೆಯಲ್ಲಿ ಕೊಳ್ಳಲು ಹೆಚ್ಚಿಗೆ ಕಾರುಗಳನ್ನು ಈಗ ತಯಾರಿಸಲಾಗುವುದಂತೆ!

ಜರ್ಮನ್ ಕೈಗಾರಿಕೆಯ ಅಭಿವೃದ್ಧಿ

ಜರ್ಮನಿಯ ಕೆಲಸಗಾರರು ಜರ್ಮನಿಯನ್ನು ಪುನಃ ಕೈಗಾರಿಕೆಯನ್ನು ರಚಿಸಲು ಬಹು ಕುತೂಹಲವುಳ್ಳವರಾಗಿದ್ದಾರಂತೆ! ಮಿತ್ರರ ಸಹಾಯದಿಂದ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸಲು ಯೋಜನೆ ತಯಾರುಮಾಡಿದ್ದಾರಂತೆ! ಜರ್ಮನ್ ಜನರು ... ನಪ ಮುನಿಸಿಪಲ್ ಮತ್ತು ಸರ್ಕಾರಿ ಸಂಸ್ಥೆಗಳಲ್ಲಿ ಹೆಚ್ಚು ಆಸಕ್ತಿ ವಹಿಸುತ್ತಿದ್ದಾರಂತೆ!

ವೈಸರಾಯರಿಗೆ ಆಹ್ವಾನ

ಜಪಾನು ಶರಣಾದುದರಿಂದ ಪರಿಸ್ಥಿತಿ ಬದಲಾಯಿಸಿದೆ ಆದ್ದರಿಂದ ಭಾರತಕ್ಕೆ ಸಂಬಂಧಪಟ್ಟ ವಿಷಯ ಸಮಸ್ಯೆಗಳನ್ನು ಪರಿಶೀಲಿಸಲು ವೈಸರಾಯರನ್ನು ಲಂಡನ್ನಿಗೆ ಆದಷ್ಟು ಜಾಗ್ರತೆ ಬರುವಂತೆ ಆಹ್ವಾನಿಸಿದೆ ಎಂದು ಇಂಡಿಯಾ ಸಕ್ರೆಟರಿ ಲಾರ್ಡ್ ಲಾರೆನ್ಸರವರು ಕಾಮನ್ಸ್ ಸಭೆಯಲ್ಲಿ ತಿಳಿಸಿದ್ದಾರೆ ಭಾರತದ ರಾಜಕೀಯ ಮತ್ತು ಆರ್ಥಿಕ ಸಮಸ್ಯೆಗಳು ಸಾಮಾನ್ಯವಾದುದಲ್ಲ ಲಾರ್ಡ ವೇವೆಲ್ಲರೊಡನೆ ಸಮಕ್ಷ ಸಂಭಾಷಿಸುವುದು ಶ್ರೇಷ್ಟ ಮಾರ್ಗ ಎಂದು ಅವರು ತಿಳಿಸಿದ್ದಾರೆ

ಬೀಹಾರಿನಲ್ಲಿ ಪ್ರವಾಹ

ಈ ವರ್ಷ ನೇಪಾಳ ಮತ್ತು ಟಿಬೆಟ್ಟುಗಳಲ್ಲಿ ಮುಂಗಾರು ಮಳೆ ಹೆಚ್ಚಾಗಿ ಬಿದ್ದುದರಿಂದ ಅಲ್ಲಿ ಹುಟ್ಟುವ ನದಿಗಳೆಲ್ಲಾ ವಿಶೇಷವಾದ ಪ್ರವಾಹದಿಂದ ಕೂಡಿವೆ ಇದರ ಫಲವಾಗಿ ಬೀಹಾರ ಪ್ರಾಂತದ ಅನೇಕ ಹಳ್ಳಿಗಳು ನೀರಿನಲ್ಲಿ ಮುಳುಗಿವೆ ಸಿರಾಜ್‌ಗಂಜ್ ನಗರದ ಬಹುಭಾಗ ಜಲಮಯವಾಗಿದೆ ಸರ್ಕಾರದವರು ಜನಗಳನ್ನು ಸುರಕ್ಷಿತವಾದ ಕಡೆಗಳಿಗೆ ಒಯ್ಯಲು ತಮ್ಮ ಕೈಲಾದುದನ್ನೆಲ್ಲಾ ಮಾಡುತ್ತಿದ್ದಾರೆ

೧೯೪೭ ರಲ್ಲಿ ರೇಷನಿಂಗ್ ರಜಾ

ಭಾರತದಲ್ಲಿ ಎಲ್ಲಾ ಆಹಾರ ಪದಾರ್ಥಗಳ ರೇಷನಿಂಗ್ ಪದ್ಧತಿಯನ್ನು ೧೯೪೭ರ ಅಂತ್ಯಕ್ಕೆ ರದ್ದುಮಾಡಲಾಗುವುದಂತೆ!

ಜಪಾನ್ ದ್ರೋಹವೆಸಗಿದರೆ ಮತ್ತೆ ಆಟಂ ಬಾಂಬ್!

ಜಪಾನಿಗಳೊಡನೆ ನಡೆಸುವ ಸಂಧಾನಗಳೇನಾದರೂ ಭಗ್ನವಾದಲ್ಲಿ ಮಿತ್ರ ಸೇನಾನಿಗಳು ಏನನ್ನೂ ಲಕ್ಷ್ಯ ಮಾಡದೆ ತಕ್ಷಣ ಕ್ರಮ ಜರುಗಿಸಬೇಕೆಂದೂ, ಅಗತ್ಯವಾದರೆ ಆಟಂ ಬಾಂಬುಗಳನ್ನು ಪ್ರಯೋಗಿಸಬಹುದಾಗಿಯೂ ಆಜ್ಞೆ ಆಗಿರುವುದಾಗಿ ಗೊತ್ತಾಗಿದೆ

ವಿಜಯೋತ್ಸವ ಸಮಾರಂಭ ಬೆಳಗಾಂವ

ಬೆಳಗಾಂವ ಶಹರದಲ್ಲಿರುವ ಶ್ರೀ ಜಗದ್ಗುರು ಸಿದ್ಧಲಿಂಗಾಶ್ರಮದಲ್ಲಿ ಬ್ರಿಟಿಶ್ ಸಾರ್ವಭೌಮರಿಗೆ ಮಹಾಯುದ್ಧದಲ್ಲಿ ವಿಜಯವು ಪ್ರಾಪ್ತವಾದ ನಿಮಿತ್ತವಾಗಿ ೧೭ ಮತ್ತು ೧೮ ನೆಯ ತಾರೀಖಿನ ದಿವಸ ವಿಜಯೋತ್ಸವವು ಬಹಳ ವೈಭವದಿಂದ ನೆರವೇರಿತು ಗೌರ್ನಮೆಂಟಿನವರು ಉತ್ಸವದ ಸಲುವಾಗಿ ಹತ್ತು ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿದ್ದರು ತಾ|| ೧೭ ನೇ ಶುಕ್ರವಾರ ದಿವಸ ಬಂದೀವಕೀಲರ ಅಧ್ಯಕ್ಷತೆಯಲ್ಲಿ ಸಭೆ ನೇರಿತು ಸಭೆಗೆ ವೀರಶೈವ ಸ್ತ್ರೀ ಪುರುಷರೂ ಇತರ ಜನರೂ ವಿಶೇಷವಾಗಿ ಸೇರಿದ್ದರು ಮೊದಲು ೬ ನೇ ಜಾರ್ಜ ಸಾರ್ವಭೌಮರ ಛಾಯಾಪಟಕ್ಕೆ ಪುಷ್ಪಮಾಲಿಕೆಯನ್ನು ಎಸ್ ಆರ್ ಪಾಟೀಲ ಇವರು ಕರತಾಡನದೊಡನೆ ಹಾಕಿದರು ಆಮೇಲೆ ಇಟಗಿ ವಕೀಲರು ಎಸ್ ಬಿ ಪಜ್ಜಾನ, ಶಾಂತವೀರಪ್ಪ ಬಿಲ್ಲೂರು, ಸರದಾರ ಹೈಸ್ಕೂಲ್ ಮಾಸ್ತರರಾದ ಮುತ್ತಗಿ ಮೊದಲಾದವರು ಭಾಷಣ ಮಾಡಿದರು ಅನಂತರ ಅಧ್ಯಕ್ಷರ ಭಾಷಣವಾಗಿ ಸಭೆಯ ಕಾರ್ಯಗಳು ಮುಗಿದವು ಎಲ್ಲರಿಗೂ ಫಲಾಹಾರವು ಹಂಚಲ್ಪಟ್ಟಿತು ಅನಂತರ ೧೦೧ ದೀಪೋತ್ಸವವು ಆಯಿತು ಈ ಕಾರ್ಯದಲ್ಲಿ ಮಿ|| ಆರ್ ಎಸ್ ಪಾಟೀಲ ಸುಲತಾನಪುರ ಶಿರಪ್ಪನವರು ಕಟ್ಟಿಮನಿ, ಮ|| ರಾ|| ಲಿಂಗಪ್ಪನವರು ಅಂಕಲಗಿ ವೇ|| ಮುರಿಗಯ್ಯನವರು ಹಿರೇಮಠ ಬಟ್ಟೂರು, ಇವರು ಈ ಕಾರ್ಯದಲ್ಲಿ ಮುಂದಾಳಾಗಿ ದಕ್ಷತೆಯಿಂದ ಕಾರ್ಯ ಮಾಡಿದರು ದೇವರು ಸರ್ವರಿಗೂ ಸುಖವನ್ನೀಯಲಿ

ಸಕ್ರೆಟರಿ ಸಿದ್ಧಲಿಂಗಾಶ್ರಮ

ಕರ್ನಾಟಕ ಆಯುರ್ವೇದ ವಿದ್ಯಾಪೀಠ

ಕಣ್ಣಿನ ಹಾಸ್ಪಿಟಲ

ಖಾಸಬಾಗ, ಬೆಳಗಾಂವ.

ಇದ್ದಿಯ ಹಾಸ್ಪಿಟಲದಲ್ಲಿ ೧೯೪೪ ೪೫ ರಲ್ಲಿ ಒಟ್ಟಿಗೆ ೨೦೩೦ ಕಣ್ಣಿನ ರೋಗಿಗಳು ಚಿಕಿತ್ಸೆ ಹೊಂದಿದ್ದು ಅವರಲ್ಲಿ ೩೯೨ ಆಪರೇಷನಗಳಾದವು ಈ ಆಪರೇಶನಗಳಲ್ಲಿ ಅನೇಕತರದ ಶಸ್ತ್ರಚಿಕಿತ್ಸೆಗಳಾದವು ಇದರಲ್ಲಿ ಮೋತೀಬಿಂದು ೨೮೦, ಕಾಚಬಿಂದು ೧೨, ಕುಣಕೀಹುಣ್ಣು ೧೫ ಮತ್ತು ಅರ್ಮ ೧೦ ಹೀಗೆ ಆಪರೇಶನಗಳಾದವು ಈ ವರ್ಷ ಕಣ್ಣಿನ ಹಾಸ್ಪಿಟಲದ ಹೊರಗಿನ ಕಾರ್ಯಕ್ರಮವೆಂದರೆ 'ನರೇಗಲ್ಲ ನೇತ್ರಯಜ್ಞ' ಅದರಲ್ಲಿ ३೦೦ ಕಣ್ಣಿನ ರೋಗಿಗಳ ಉಪಚಾರ ನಡೆದು ३೯ ಆಪರೇಶನಗಳಾದವು ಈ ಎಲ್ಲ ಕಾರ್ಯವೂ ಯಶಸ್ವಿಯಾಗಿ ಪಾರುಗಾಣಲು **ಡಾ|| ಎಂ ಸಿ ಮೋದಿ** ಸರ್ಜನ್ ಇವರೇ ಕಾರಣರೆಂದು ತಿಳಿಸಲು ಬಹಳ ಆನಂದಾಭಿಮಾನವೆನಿಸುತ್ತದೆ ದಿನೇದಿನೇ ಅಭಿವೃದ್ಧಿ ಹೊಂದುತ್ತಿರುವ ಈ ಹಾಸ್ಪಿಟಲದ ಉಪಯೋಗವನ್ನು ಕಣ್ಣಿನ ರೋಗಿಗಳು ಹೊಂದಿ ಸಾರ್ವಜನಿಕರ ಸಹಾಯ, ಸಹಾನುಭೂತಿ ಬೆಳೆಯುತ್ತ ಹೋಗಲೆಂದು ಆಶಿಸುತ್ತೇವೆ

ಜನರಲ್ ಸೆಕ್ರೆಟರಿ,
ಕರ್ನಾಟಕ ಆಯುರ್ವೇದ ವಿದ್ಯಾಪೀಠ,
ಬೆಳಗಾಂವ.

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು. ವೀರಶೈವಮತದಲ್ಲಿ ಸದ್ಯಃ ದೊರೆಯತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು. ಈ ಗ್ರಂಥವು ಈಗ್ಗೆ ಸುಮಾರು **ಎಂಟುನೂರು** ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು. ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥ ಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ವವು ವಾಚಕರಿಗೆ ವೇದ್ಯವಾಗುವುದು. ವಾಚಕರ ಅನುಕೂಲ್ಯಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೪೩೩ ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೨ ರೂಪಾಯಿ**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂದತ್ತು ಅವತಾರಲೀಲೆಗಳಿಂದ ಕೂಡಿದ ಫೋಟೋ ಸೈಜು ೩೦ X ೧೪ ಬೆಲೆ ೧ಕ್ಕೆ	೦—೬—೦
ಶ್ರೀರೇಣುಕಾಚಾರ್ಯರ ಲಿಂಗ ವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿಸಲ್ಪಟ್ಟದು) ಸೈಜು ೧೪ X ೧೦ ಬೆಲೆ	೦—೬—೦
ಸದ್ಯಃ ಸಿಕ್ಕಾರೋಹಣಮಾಡಿದ ತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ X ೧೦ ಬೆಲೆ	೦—೪—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತರಣ ಫೋಟೋ ಸೈಜು ೧೪ X ೧೦ ಬೆಲೆ ೧ಕ್ಕೆ	೦—೪—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ವಿಭೀಷಣ [illegible] ಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೬
ಶ್ರೀಕಾಶೀಕ್ಷೇತ್ರ ವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೨—೬
ಶ್ರೀ ಕಾಶೀ ಜಗದ್ಗುರು [illegible] ಫೋಟೋ	೦—೧—೬
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರಿ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—೬
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೨—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೩—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೨—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
ಬೆಂಗಳೂರ ಕಾನ್ಫರೆನ್ಸಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೬

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೩ನೆಯ ಆವೃತ್ತಿ)	೧ ಆಣೆ
ಸನ್ಯಾಸಶಾಸ್ತ್ರವಿಮರ್ಶೆ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೭ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ)	೩ ಆಣೆ
ಒಸವಾದಿಸಿಜತತ್ವದರ್ಪಣ (೨ನೆಯ ಆವೃತ್ತಿ)	೩ ಆಣೆ
ಶ್ರೀರೇಣುಕಾಚಾರ್ಯಶತಕ (೩ನೆಯ ಆವೃತ್ತಿ)	೩ ಆಣೆ
ಶ್ರೀಗುರುಶತಕ್ತುಪದಗಳು (೩ನೆಯ ಆವೃತ್ತಿ)	೩ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರನಿಧಿ (೫ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶಿವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕಸಾಮ್ರಾಜ್ಯರಹಸ್ಯ	೪ ಆಣೆ
ಸನ್ಯಾಸಶಾಸ್ತ್ರವಿಮರ್ಶತತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲ ಚಿಕ್ಕಸೈಜು)	೮ ಆಣೆ
ವೀರಶೈವಮಹಾತ್ಮ್ಯ	೮ ಆಣೆ
ಒಸವಸಿದ್ಧಾಂತದಿವಾಕರ (೩ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಭಾಷಣವು (ತೆಲುಗು)	೮ ಆಣೆ
ಸದ್ಭೋಧರತ್ನಾಕರ	೮ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿವಸೂತ್ರ ಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ಸ್ವಧಿಸ್ವರಯುಕ್ತವಾದ ೨ನೆಯ ಆವೃತ್ತಿ)	೧| ರೂ
ಸಿದ್ಧಾಂತಶಿಖೋಪನಿಷತ್ (ಸ್ವರ ಟೀಕಾ ಸಹಿತ)	೧ ರೂ
ವೇದೋಪನಿಷತ್ (ಸ್ವರ ಸಹಿತ)	೧ ರೂ
ಶ್ರೀಕರಭಾಷ್ಯಂ [illegible]	೧| ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ವೀರಶೈವರತ್ನ (೨ನೆಯ ಆವೃತ್ತಿ, ೪೦ ವರ್ಷದ [illegible])	೨ ರೂ
ರೇಣುಕವಿಜಯ ಮಹಾಪುರಾಣ ([illegible])	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ವಾತುಲ ಟೀಕಾ ಸೂಕ್ಷ್ಮಾಗಮಗಳಿಂದ ಕೂಡಿದ ಗ್ರಂಥ)	೩ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೫೪೪ ಪುಟ)	೮ ರೂ
A brief life sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*)	8 As
Speeches by Pandit Shri Kashinatha Shastriji (*English*)	12 As
लिंगधारणचन्द्रिका (संस्कृत)	३ रु
वीरशैवरत्न (मराठी)	१ रु
महानारायणोपनिषत् (वीरशैवभाष्य-संस्कृत)	[illegible] रु
सिद्धान्तशिखामणि (मूल)	८ आ
नंदिकेश्वरकारिका (संस्कृत)	२ आ

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M. 2266 || ಶ್ರೀಜಗದ್ಗುರು ಪಂಚಾಚಾರ್ಯರ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಸಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್
ಪಂಚಾಚಾರಪಿಯಾಮುಕರ್ ಪರಿಪಿಸತ್ಪಂಚಾಕ್ಷರೀಬೋಧಕರ್ ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ।

ವರ್ಷದವರಿಗೆ ೩ ರೂ ೪ ಆಣೆ — ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೨ ಆಣೆ

ಸಂಪುಟ ೧೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೩ನೇ ಸೆಪ್ಟೆಂಬರ್ ೧೯೪೫ [ಸಂಚಿಕೆ ೧೬

॥ ಶ್ರೀಜಗದ್ಗುರು ಪಂಚಾಚಾರ್ಯೇಭ್ಯೋ ನಮಃ ॥

ಗದಾಯುದ್ಧವೂ ಭೀಮಸೇನನ ನೀತಿಯೂ

(ಭಾರತ)

(—ನೇ| ವ ಶ್ರೀಕಾಂತರ್ಜುನಾರಾಧ್ಯ ಶಾಸ್ತ್ರಿ ... ಎಂಬುವರು)

(ಕಳೆದ ಸಂಚಿಕೆಯಿಂದ ಮುಂದುವರೆದುದು)

ಯಾವುದೊಂದು ವಿಷಯವು ನೀತಿಸಮ್ಮತವಹುದೋ ಅಲ್ಲವೋ ಎಂಬುದನ್ನು ನೋಡಬೇಕಾದರೆ ಮೊದಲು ಆ ವಿಷಯವು ನಡೆದ ಕಾಲವನ್ನು ಲಕ್ಷ್ಯದಲ್ಲಿ ತರಬೇಕಾಗುವುದು ಏಕೆಂದರೆ, ಯುಗ ಯುಗಕ್ಕೆ ನೀತಿಯ ತಕ್ಕಡಿಯ ತಟ್ಟಡಿಗೆಗಳು ಮೇಲೆ ಕೆಳಗೆ ಆಗುತ್ತಿರುತ್ತವೆ ಕೃತಯುಗದಲ್ಲಿ ಇನ್ನೊಬ್ಬನಿಗೆ ಕೇಡು ಮಾಡೈಸುವ ಬುದ್ಧಿಯೇ ಹುಟ್ಟುತ್ತಿರಲಿಲ್ಲವಾದುದರಿಂದ ದುಷ್ಟರಲ್ಲಿ ಹೇಗೆ ನಡೆಯಬೇಕೆಂಬ ವಿಚಾರವೇ ಆಗ ಇರಲಾರದು ತ್ರೇತಾಯುಗದಲ್ಲಿ ಒಬ್ಬನು ಒಂದು ಕೆನ್ನೆಗೆ ಹೊಡೆದರೆ ಇನ್ನೊಂದು ಕೆನ್ನೆಯನ್ನು ಅವನ ಮುಂದೆ ನೀಡುವುದೇ ನೀತಿಯಾಗಿರಬಹುದು ದ್ವಾಪರಯುಗದಲ್ಲಿ ಕೆನ್ನೆಯ ಮೇಲೆ ಹೊಡೆಯಬಂದವನ ಕೈಯನ್ನು ತಡೆದು ಹಿಡಿಯುವುದು ನೀತಿಯಾಗಿರಬಹುದು ಆದರೆ ಕಲಿಯುಗದಲ್ಲಿ ತನ್ನ ಕೆನ್ನೆಗೆ ಹೊಡೆಯಬಂದವನ ಕೈಯನ್ನು ತಡೆಯುವದಷ್ಟೇ ಅಲ್ಲದೆ ತಿರುಗಿ ಕಣ್ಣಿಗೆ ಕತ್ತಲೆ ಕವಿಯುವಂತೆ ಆತನ ಕೆನ್ನೆಗೆ ಹೊಡೆಯುವುದೇ ನೀತಿಯಾಗುವುದು

‘ ಯುಗಗಳು ಪರಿವರ್ತಿಸುತ್ತ ಬಂದಹಾಗೆ ಜನರು ಹ್ರಾಸ (ಅವನತಿ) ಹೊಂದುತ್ತ ನಡೆದುದರಿಂದ ಯುಗ ಯುಗಕ್ಕೆ ಧರ್ಮಗಳು ಅಥವಾ ನೀತಿಗಳು ಭಿನ್ನವಾಗುತ್ತಿರುವುವು ”

ಭೀಮಸೇನ ದುರ್ಯೋಧನರ ಗದಾಯುದ್ಧವು ನಡೆದ ಕಾಲದಲ್ಲಿ ಕಲಿಯುಗವು ಆರಂಭವಾಗಿತ್ತು ಭೀಮಸೇನನು ಯುಗಕ್ಕೆ ತಕ್ಕ ನೀತಿಯನ್ನು ಆಚರಿಸಿದನು

ಇನ್ನು ಕಲಿಯುಗದ ಮನುಷ್ಯನೂ ಸಹ ನಿಷಿದ್ಧವಲ್ಲದ ಕೆಲವು ಕೃತಯುಗದ ನೀತಿಗಳನ್ನಾಚರಿಸಬಹುದು ‘ ತುಷ್ಯತು ದುರ್ಜನಃ ’ ಎಂಬ ನ್ಯಾಯದಂತೆ ಒಬ್ಬ ಸಜ್ಜನನು, ಒಬ್ಬ ಧೂರ್ತನು ಬಂದು ನಿಷ್ಕಾರಣವಾಗಿ ಒಂದು ಕೆನ್ನೆಗೆ ಹೊಡೆದರೆ ಇನ್ನೊಂದು ಕೆನ್ನೆಯನ್ನು ಮುಂದೆ ನೀಡಬಹುದು ಅದು ಅವನ ಕ್ಷಮಾಗುಣದ ಸಾಧನದ ಮಹಿಮೆಯು ಆದರೆ ಹೇಡಿತನದಿಂದ ಅವನು ಹಾಗೆ ಆಚರಿಸುತ್ತಿದ್ದರೆ ಯಾವ ಕಾಲದಲ್ಲಾದರೂ ಅದು ಅನೀತಿಯೇ ಸರಿ ಹೇಡಿಯು ಪುರುಷನೂ ಅಲ್ಲ, ಸ್ತ್ರೀಯೂ ಅಲ್ಲವೆಂದು ದೊಡ್ಡವರು ಹೇಳುತ್ತಾರೆ ಮತ್ತು ಯಾವನು ಅನ್ಯಾಯವನ್ನು ಕಂಡು ಕೋಪಗೊಳ್ಳುವನೋ ಯಾವನು ಅಪಮಾನವನ್ನು ಸಹಿಸಿಕೊಳ್ಳುವುದಿಲ್ಲವೋ ಅವನೇ ಪುರುಷನು ಅತಿರಿಕ್ತವಾದ ಸ್ತ್ರೈಣ್ಯವುಳ್ಳ ಹೇವವಿಲ್ಲದ ವ್ಯಕ್ತಿಯು ಗಂಡಸೂ ಅಲ್ಲ, ಹೆಂಗಸೂ ಅಲ್ಲನೆಂಬುದು ಭಾರತವಾಕ್ಯವು ಅಪಮಾನದಿಂದ ಸಿಟ್ಟು ಬಾರದ ಮನುಷ್ಯನ ಗೆಳೆತನದಿಂದೇನು ? ಹಗೆತನದಿಂದೇನು ? ಎಂದು ಭಾರವಿ ಕವಿಯು ಕಿರಾತಾರ್ಜುನೀಯದಲ್ಲಿ ಹೇಳಿರುತ್ತಾನೆ ಅನ್ಯಾಯ ನಡೆದ ಕರ್ತವ್ಯಾಲಿ ಸಾ... ಹೋತಲಾಹೆ

ಭೀಮಸೇನನು ಮೊದಲಿನಿಂದಲೂ ಈ ತರದ ಪ್ರಕೃತಿಯ ಪುರುಷನು ಅನ್ಯಾಯಕ್ಕೆ ಕ್ಷಮೆಯೂ, ಅಪಮಾನಕ್ಕೆ ತಾಳ್ಮೆಯೂ ಅವನಿಗೆ ಸ್ವಪ್ನದಲ್ಲಿ ಸಹ ಬಾರವು ದುರ್ಯೋಧನನು ಸಮುದ್ರದಲ್ಲಿ ಮುಳುಗಿಸಿ ಮನೆಗೆ ಬೆಂಕಿ ಹಚ್ಚಿ ಪಾಂಡವರನ್ನು ನಿರ್ಮೂಲಗೊಳಿಸಬೇಕೆಂದಾಗಲೇ ಭೀಮಸೇನನು ಕೌರವರನ್ನು ಸದೆಬಡಿಯತಕ್ಕವನು ಆದರೆ ಅಗ್ರಜಭಕ್ತಿಯು ಆತನನ್ನು ಹಿಂದೆಳೆಯುತ್ತಿತ್ತು ಜೂಜಿನ ಮೋಸ, ದ್ರೌಪದೀ ವಸ್ತ್ರಾಪಹರಣ ಇವುಗಳಂತಹ ಘೋರ ಪ್ರಸಂಗಗಳಲ್ಲಂತೂ ಅಗ್ರಜಭಕ್ತಿಯ ತಂತುವು ಹರಿದು ಹೋಗುವುದರಲ್ಲಿತ್ತು ಜೂಜಿನಾಟದಲ್ಲಿ ದುರ್ಯೋಧನನು ಶಕುನಿಯ ಮೋಸಗಾರಿಕೆಯಿಂದ ಪಾಂಡವರ ಸರ್ವಸ್ವವನ್ನೂ ಕಿತ್ತುಕೊಂಡು ರಾಜ್ಯಾಧಿಪತ್ಯವನ್ನು ಸಂಪಾದಿಸಿದುದು ಶುದ್ಧ ಅನ್ಯಾಯವಲ್ಲವೇ ? ಮತ್ತು ಧರ್ಮರಾಜನು ಸೋತುದರಿಂದ ದ್ರೌಪದಿಯು ತನ್ನ ದಾಸಿಯಾದಳೋ ಇಲ್ಲವೋ ಆ ವಿಚಾರವಿರಲಿ, ತನ್ನ ಮನೆತನಕ್ಕೆ ಸೇರಿದವಳೂ, ರಾಜಪುತ್ರಿಯೂ, ರಾಜಪತ್ನಿಯೂ, ಪಟ್ಟಾಭಿಷಿಕ್ತಳೂ ಆದ ಕ್ಷತ್ರಿಯ ರಮಣಿಯು ರಜಸ್ವಲೆಯಾಗಿದ್ದಾಗ ವೀರಾಧಿವೀರರಾದ ಐದುಜನ ಪತಿಗಳ ಸಮ್ಮುಖದಲ್ಲಿ ಮೇಲುಡು ಇಲ್ಲದೆ ಏಕವಸ್ತ್ರಧಾರಿಣಿಯಾದ ಅವಳ ಹಳಿಲನ್ನು ಹಿಡಿದು ಎಳತರಿಸಿ ರಾಜಸಭೆಯಲ್ಲಿ ಅವಮಾನಗೊಳಿಸಿದುದು ಅನ್ಯಾಯದ ಪರಾಕಾಷ್ಠೆಯಲ್ಲವೇ ? ತನ್ನ ಬಂಧುಗಳ ಪತ್ನಿಯೂ, ಪತಿವ್ರತಾ ಶಿರೋಮಣಿಯೂ ಆದ ದ್ರೌಪದಿಗೆ “ ಎಲೇ, ಮೋಹನಾಂಗಿ ಬಾ ನನ್ನ ತೊಡೆಯ ಮೇಲೆ ಕುಳಿತುಕೋ ” ಎಂದು ತನ್ನ ತೊಡೆಗಳನ್ನು ಚಪ್ಪರಿಸಿ ತೋರಿಸಿದುದರಲ್ಲಿ ಅನ್ಯಾಯದ ಮೇರೆಯು ಸಹ ಮೀರಿಹೋದುದರಲ್ಲಿ ಏನಾದರೂ ಉಳಿಯಿತೇ ?

ಪರಸತಿಗೆ ಯಾವ ದುಷ್ಟನು ತೊಡೆಗಳನ್ನು ಚಪ್ಪರಿಸಿಕೊಂಡು ತೋರಿಸಿದನೋ ಆತನ ತೊಡೆಗಳನ್ನು ಪುಡಿಪುಡಿ ಮಾಡುವುದು, ಪುರುಷನಾದವನ ಕರ್ತವ್ಯವಲ್ಲವೇ ? ಯಾವ ತಲೆಯಲ್ಲಿ ಜೂಜಿನ ಮೋಸಗಾರಿಕೆಯ ದುರ್ವಿಚಾರವು ಹುಟ್ಟಿತೋ ಆ ತಲೆಯನ್ನು ಎಡಗಾಲಿನಿಂದ ಒದೆಯಬೇಕಾದುದು ನೀತಿವಂತ ಪುರುಷಶ್ರೇಷ್ಠನ ಕರ್ತವ್ಯವಲ್ಲವೇ ? ಯಾವ ಕಿರೀಟದ ಅರಸೊತ್ತಿಗೆಯ ಬಲದಿಂದ ದುಷ್ಟನು ತನ್ನ ಮಡದಿಯ ಉಟ್ಟ ಬಟ್ಟೆಯನ್ನು ಸೆಳೆಯುವಂತಹ, ನೀಚತನದ ಪರಮಸೀಮೆಯನ್ನು ಮುಟ್ಟಿದ ಅಪಮಾನಕಾರಕ ದುಷ್ಕೃತ್ಯವನ್ನೆಸಗಿದನೋ ಆ ಕಿರೀಟವನ್ನು ಎಡಗಾಲಿನಿಂದ ಒದೆಯುವುದು, ಅದು ರಾಜಮುಕುಟವಲ್ಲ, ಅದೊಂದು ಪತಿವ್ರತಾದ್ರೋಹಿಯ ತಲೆಯಮೇಲಿನ ಕೆಂಡದ ರಾಶಿಯೆಂದು ಜಗತ್ತಿಗೆ ತೋರಿಸಬೇಕಾದುದು ಸ್ತ್ರೀಯರ ಸನ್ಮಾನವನ್ನು ಕಾಯುವ ಗಂಡಸಿನ, ಹೆಂಡತಿಯ ಪಾತಿವ್ರತ್ಯದ ಗೌರವವನ್ನು ಕಾಯುವುದು ಪತಿಯ ಕರ್ತವ್ಯವಲ್ಲವೇ ?

ಈ ಕರ್ತವ್ಯಗಳನ್ನು ಭೀಮಸೇನನಂತಹ ಮಹಾ ಸತ್ತ್ವಶೀಲನಾದ ಪುರುಷಸಿಂಹನು ಆ ಅಪರಾಧಗಳು ನಡೆದಾಗಲೇ ಮಾಡುವನು ಆದರೆ ಕೃತಯುಗದ ನೀತಿಯ ಮೋಹವುಳ್ಳ ಅಗ್ರಜನಾದ ಧರ್ಮರಾಜನು ತಡೆದು ನಿಲ್ಲಿಸಿದುದರಿಂದ ಆತನ ಮರ್ಯಾದೆಯನ್ನು ಕಾಯುವುದಕ್ಕಾಗಿ ಆಗ್ಗೆ ಸುಮ್ಮನಿದ್ದು ಸಮಯ ಬಂದಾಗ ಈ ಕರ್ತವ್ಯಗಳನ್ನು ನೆರವೇರಿಸಿಯೇ ತೀರುವೆನೆಂದು ಪ್ರತಿಜ್ಞೆ ಮಾಡಿದುದೂ ಆ ಪ್ರತಿಜ್ಞೆಗಳನ್ನು ಪೂರೈಸಿದುದೂ ಭೀಮಸೇನನಿಗೆ ಅತ್ಯಂತ ಭೂಷಣವಾಗಿದೆ ಭೀಮಸೇನನು ಎಡಗಾಲಿನಿಂದ ಒದೆದ ಬಳಿಕ ರಣರಂಗದಲ್ಲಿ ಉರುಳಾಡುತ್ತಿದ್ದ ದುರ್ಯೋಧನನನ್ನು ತೋರಿಸಿ ಮಡದಿ ದ್ರೌಪದಿಯನ್ನು ಸಮಾಧಾನಗೊಳಿಸುವಾಗ ಭೀಮಸೇನನು ಆಡಿದ ಮಾತುಗಳನ್ನು ಕೇಳಿರಿ—

ಮುಳಿಸಿಂ ನಂಜಿಕ್ಕಿ ಕೆಂದಂದಿನ ಜತುಗೃಹದೊಳ್ ಸುಟ್ಟು ಕೌಟಿಲ್ಯದಿಂ ತಳ್ತಂ ಜೂಜಾಡಿ ಗೆಲ್ದಂದಿನ ನಿಜಕಬರೀ ನೀವಿಬಂಧಂಗಳಂ ದೋರ್ವಳದಿಂದ ತಮ್ಮನಿಂದಂ ತೆಗೆಯಿಸಿ ನಡೆದಾ ನೀಚನಾ ದ್ರೋಹನಾಸಂ ಖಳನಾ ಚಂಡಾಲನಾ ಪಾತಕನಿರವನಿದಂ ನೋಡು ಪಂಕಜವಕ್ತ್ರೇ ॥ ರನ್ನನ ಗದಾಯುದ್ಧ

(ಕಮಲಮುಖಿಯಾದ ಪ್ರಿಯೇ, ನನ್ನಮೇಲಿನ ಅಸಮಾಧಾನದಿಂದ ವಿಷವಿಕ್ಕಿ ಹಿಂಸಪಡಿಸಿದ, ಆ ದಿವಸ ಅರಗಿನ ಮನೆಯಲ್ಲಿ ನಮ್ಮನ್ನು ಸುಡಹೇಳಿದ, ಆ ದಿವಸ ಮೋಸಗಾರಿಕೆಯಿಂದ ಜೂಜಾಡಿ ರಾಜ್ಯವನ್ನು ಗೆದ್ದ, ತಮ್ಮನಿಂದ ಆ ದಿವಸ ನಿನ್ನ ಜಡೆಮುಡಿಯನ್ನು ಹಿಡಿದೆಳೆಯಿಸಿ ಸೀರೆಯನ್ನು ಸೆಳೆಯಿಸಿದ ಈ ನೀಚನ, ಈ ದ್ರೋಹಿಯ, ಈ ಚಂಡಾಲನ, ಈ ಪಾಪಿಯ ಈ ದುರವಸ್ಥೆಯನ್ನು ನೋಡು)

ಈ ಮಾತುಗಳಲ್ಲಿ ಭೀಮನಲ್ಲಿ ಬಹು ದಿವಸಗಳಿಂದ ಹೊತ್ತಿ ಹೊಗೆಯುತ್ತಿದ್ದ ರೋಷಾಗ್ನಿಯು ಭಗ್ಗನೆ ಉರಿದು ಹೇಗೆ ಶಾಂತವಾಗುತ್ತಿದೆಯೆಂಬುದು ಕಂಡುಬರುತ್ತದೆ ಇಷ್ಟೊಂದು ಅನರ್ಥಗಳನ್ನು ಮಾಡಿದ ದ್ರೋಹಿಗೆ ಶಿಕ್ಷೆಯೇನೋ ಅವಶ್ಯವಾಗಿ ಆಗಲೇ ಬೇಕು, ಆತನು ಬಲಿಷ್ಠನಾಗಿದ್ದು ನಾವು ಮಾಡುವ ಶಿಕ್ಷೆಯನ್ನು ಆತನು ತಪ್ಪಿಸಿಕೊಳ್ಳುವವನಾದರೆ ಆತನಿಗೆ ಮೋಸಗಾರಿಕೆಯಿಂದಲಾದರೂ ಶಿಕ್ಷೆಯನ್ನು ಮಾಡಲೇಬೇಕು, ಮೋಸಗಾರನಾದ ದುರ್ಯೋಧನನನ್ನು ಮೋಸಗಾರಿಕೆಯಿಂದಲೇ ಕೊಲ್ಲಬೇಕೆಂದು ನೀತಿವಿಶಾರದನಾದ ಶ್ರೀಕೃಷ್ಣನು ಭೀಮಸೇನನಿಗೆ ಗದಾಯುದ್ಧವು ಪ್ರಾರಂಭವಾಗುವುದಕ್ಕೆ ಮುಂಚಿತವಾಗಿಯೇ ಹೇಳಿದ್ದನು ಭೀಮಸೇನನು ಗದಾಯುದ್ಧದ ನಿಯಮವನ್ನು ಮೀರಿ ನಾಭಿಯ ಕೆಳಗೆ ಹೊಡೆದನು ತೀರ ಅನ್ಯಾಯವಾಯಿತೆಂದು ಬಲರಾಮನು ಭೀಮನ ಮೇಲೆ ಕೋಪಗೊಂಡು ಏರಿ ಹೋಗುವಾಗ ಶ್ರೀಕೃಷ್ಣನು ನಡುವೆ ಬಂದು ಅಣ್ಣಾ “ ಪ್ರಾಪ್ತಂಕಲಿಯುಗಂವಿದ್ಧಿ ” ಈಗ ಕಲಿಯುಗವು ಪ್ರಾಪ್ತವಾಗಿದೆ, ಮತ್ತು ಭೀಮಸೇನನ ಪ್ರತಿಜ್ಞೆಗಳನ್ನು ಅವುಗಳ ಕಾರಣಗಳನ್ನು ಲಕ್ಷ್ಯದಲ್ಲಿ ತಾ,

[೪ನೆಯ ಪುಟವನ್ನು ನೋಡಿ]

ಪಂಚಾಚಾರ್ಯಪ್ರಭಾ.

೧೯೪೫ನೆಯ ಸೆಪ್ಟೆಂಬರ್ ತಾ॥ ೩ನೇ ಸೋಮವಾರ

ವಿನಾಯಕ ವ್ರತಾಚರಣೆ

ನಮ್ಮ ಭರತಖಂಡವಾಸಿಗಳಾದ ಆಸ್ತಿಕಮಹಾಜನಗಳು ಆಚರಿಸುತ್ತಿರುವ ವ್ರತಾಚರಣೆಗಳಲ್ಲಿ ವಿನಾಯಕ ವ್ರತವೊಂದು ಶಾಸ್ತ್ರೀಯವ್ರತಾಚರಣೆಯಾಗಿರುತ್ತದೆ. ಈ ವ್ರತಾಚರಣೆಯ ದಿವಸವು ಭಾದ್ರಪದ ಶುದ್ಧ ಚತುರ್ದಿಯು. ಈ ಗಣೇಶಚತುರ್ಥಿಯ ವ್ರತಕ್ಕೆ ಅನೇಕ ದೃಷ್ಟಿಯಿಂದ ವೇದಮಾರ್ಗಾನುಯಾಯಿಗಳಾದ ಮಹರ್ಷಿಗಳೂ ಮತ್ತು ಪ್ರಾಚೀನ ಆರ್ಯರೂ ಅತಿಶಯವಾದ ಮಹತ್ವವನ್ನು ಕೊಟ್ಟಿದ್ದಾರೆ. ಈ ಭಾದ್ರಪದ ತಿಂಗಳಲ್ಲಿ ಸಸ್ಯಾದಿಗಳು ಸಂಪೂರ್ಣ ವೃದ್ಧಿಯಾಗಿ ಪೂರ್ಣವಾಗಿ ಮುಂದೆ ಯಾವವಿಧವಾದ ವಿಘ್ನಗಳಿಲ್ಲದೆ ಫಲಾವಳಿಯು ಕೈಸೇರಬೇಕೆಂದೂ ಮತ್ತು ನಾವು ಮಾಡುವ ಸಕಲೋದ್ಯೋಗಗಳೂ ನಿರ್ವಿಘ್ನವಾಗಿ ಫಲದಾಯಕಗಳಾಗಲೆಂದೂ ಸತ್ಸಂಕಲ್ಪದಿಂದ ವಿಘ್ನೇಶ್ವರಮೂರ್ತಿಯ ವ್ರತವನ್ನು ನಮ್ಮ ಪೂರ್ವಜರು ಇಟ್ಟಿದ್ದಾರೆ. "ಗಣಾನಾಂ ತ್ವಾ ಗಣಪತಿಂ" ಎಂಬ ಮಂತ್ರದಲ್ಲಿಯೂ ಗಣಪತ್ಯಥರ್ವಶೀರ್ಷ ... ಗಣಪತಿ ಸ್ವರೂಪವನ್ನು ವರ್ಣಿಸುವುದನ್ನು ... ಸಕಲಕ್ಕೂ ಗಣಪತಿಯೇ ಅಧಿನಾಯಕನೆಂಬ ಅರ್ಥವು ಸ್ಪಷ್ಟವಾಗುತ್ತದೆ. ಇಂಥ ಗಣಪತಿಯನ್ನು ... ವಿಷಯದಲ್ಲಿ ಸಕಲ ಆಸ್ತಿಕಮಹಾಜನರು ಭಕ್ತಿಯಿಂದ ಪ್ರಾರ್ಥಿಸುತ್ತ ತಮಗೆ ಒದಗಬಹುದಾದ ವಿಪತ್ತುಗಳಿಂದ ಬಿಡುಗಡೆಯನ್ನು ಹೊಂದುವರು. ಉದಾಹರಣೆಗಾಗಿ ಹಿಂದಿನವರು ಇಂಥ ವಿಘ್ನೇಶ್ವರ ವ್ರತವನ್ನಾಚರಿಸಿ ಕಷ್ಟಗಳಿಂದ ಬಿಡುಗಡೆಹೊಂದಿ ಸುಖಿಗಳಾಗಿದ್ದರೆಂಬುದಕ್ಕೆ ಅನೇಕ ಇತಿಹಾಸಗಳೇ ಪ್ರಮಾಣಗಳಾಗಿವೆ. ಅವುಗಳಲ್ಲಿ ಒಂದು ಇತಿಹಾಸವನ್ನು ಸಂಕ್ಷೇಪವಾಗಿ ತಿಳಿಸುತ್ತೇವೆ.

ಹಿಂದೆ ಗಜಾಸುರನೆಂಬ ರಾಕ್ಷಸನಿದ್ದನು. ಅವನು ಮದೋನ್ಮತ್ತನಾಗಿ ದೇವತೆಗಳಿಗೂ, ಋಷ್ಯಾಶ್ರಮಾದಿಗಳಿಗೂ ಇತರ ಪ್ರಾಣಿಗಳಿಗೂ ಒಹುವಿಧವಾಗಿ ಹಿಂಸೆ ಕೊಡುತ್ತಿದ್ದನು. ದೇವತೆಗಳು ಅವನ ಹಿಂಸೆಯನ್ನು ತಾಳಲಾರದೆ, ಒಟ್ಟುಗೂಡಿ ಆಲೋಚನಮಾಡಿ ಪರಮೇಶ್ವರನ ಬಳಿಗೆ ಹೋಗಿ ಪ್ರಪಂಚಕಂಟಕನಾದ ಗಜಾಸುರನ ಆಟೋಪವನ್ನೆಲ್ಲಾ ಅರಿಕೆಮಾಡಿಕೊಂಡರು. ಆಪದ್ಬಾಂಧವನಾದ ಪರಮೇಶ್ವರನು ಇವರ ಬಾಧೆಗೆ ಕನಿಕರಪಟ್ಟು ಅಭಯದಾನವನ್ನು ಮಾಡಿದನು. ಒರಒರುತ್ತ ಗಜಾಸುರನ ಬಾಧೆಯು ಮಿತಿಮೀರಿತು. ಅವನ ಸಹಾಯದಿಂದ ಅವನ ಅಧೀನರಾದ ರಾಕ್ಷಸರೆಲ್ಲರೂ ನಿರಂಕುಶ ಪ್ರಭುತ್ವವನ್ನು ಮಾಡಹತ್ತಿದರು. ಆಗ ಗಜಾಸುರನು ನಾನೇ ತ್ರಿಲೋಕಾಧಿಪತಿಯು, ನನ್ನ ಮೇಲೆ ಇನ್ನೊಬ್ಬರು ನಿಯಾಮಕರಿಲ್ಲವು ನನಗೆ ಮನುಷ್ಯರಿಂದಾಗಲಿ ದೇವತೆಗಳಿಂದಾಗಲಿ ಯಾರಿಂದಲೂ ಮರಣವಿಲ್ಲ. ಮನುಷ್ಯನ ದೇಹ, ಆನೆಯ ಮುಖ ಹೀಗೆ ವಿಜಾತೀಯ ಶರೀರವನ್ನು ಧರಿಸಿದವನಿಂದ ನನಗೆ ಮರಣವು ಸಂಭವಿಸಬಹುದಲ್ಲದೆ ಇನ್ನಾರಿಂದಲೂ ನನಗೆ ಮರಣವು ಸಂಭವಿಸದು. ಇಂಥ ವಿಜಾತೀಯ ಪ್ರಾಣಿಯು ಲೋಕದಲ್ಲಿ ಹುಟ್ಟುವುದಿಲ್ಲವಾದುದರಿಂದ ನಾನೇ ನಿತ್ಯನು ಅದ್ವಿತೀಯನು ಎಂದು ಅಹಂಕರಿಸುತ್ತ ಗರ್ವದ ಶಿಖರವನ್ನೇರಿದ್ದನು. ಪರಮಾತ್ಮನು ಇನ್ನು ಇವನನ್ನು ಸಂಹರಿಸದೆ ಬಿಟ್ಟರೆ ಜಗತ್ತುಳಿಯಲಾರದೆಂದು ಯೋಚಿಸಿ ಗಜಮನುಷ್ಯಾಕಾರದ ಅದ್ಭುತಸೃಷ್ಟಿಯನ್ನು ಮಾಡಬೇಕೆಂದು ಸಂಕಲ್ಪಿಸಿದನು.

ಈಶ್ವರಸಂಕಲ್ಪದಂತೆ ಪಾರ್ವತಿಯು ಗಜಾಸುರನನ್ನು ಸಂಹರಿಸಲು ಯೋಗ್ಯನಾದ ಪುತ್ರನನ್ನು ಪಡೆದಳು. ಆ ಶಿಶುವು ನಾಲ್ಕು ತೋಳುಗಳಿಂದ ಶೋಭಿಸುತ್ತಿದ್ದರೂ ಮನುಷ್ಯ ಶರೀರವುಳ್ಳದಾಗಿದ್ದಿತು. ಮುಖವು ಮಾತ್ರ ಆನೆಯದಾಗಿದ್ದಿತು. ಇವನು ಜನಿಸಿದೊಡನೆ ಪ್ರಪಂಚವೇ ಆನಂದಸಾಗರದಲ್ಲಿ ಮುಳುಗಿತು. ಈ ಶಿಶುವಿಗೆ "ಗಜಾನನ" ಎಂಬ ನಾಮಕರಣವನ್ನು ಮಾಡಿದರು. ಆಯಾಯ ಕಾಲಗಳಲ್ಲಿ ಉಪನಯನಾದಿಸಂಸ್ಕಾರಗಳೂ ಮಾಡಲ್ಪಟ್ಟವು. ಅಷ್ಟಸಿದ್ಧಿಯೇ ಗಜಾನನನ ಪಟ್ಟಮಹಿಷಿಯಾದಳು. ವಿವಾಹಮಹೋತ್ಸವವು ನಡೆಯುವ ಸಮಯದಲ್ಲಿ ಈತನ ವೈಭವವನ್ನು ಗಜಾಸುರನು ಕೇಳಿ ಮಾತ್ಸರ್ಯಯುತನಾಗಿ ತನ್ನ ಚತುರಂಗಸೈನ್ಯದೊಡನೆ ಯುದ್ಧಕ್ಕೆ ಸಿದ್ಧನಾದನು. ಪಾರ್ವತೀಪರಮೇಶ್ವರರಿಬ್ಬರೂ ವೃಷಭಾರೂಢರಾಗಿ ಮಗನ ವಿವಾಹವೈಭವವನ್ನು ನೋಡುತ್ತಿದ್ದರು. ಗಜಾನನನು ಮೂಷಕವಾಹನನಾಗಿದ್ದನು. ಉಭಯ ಸೈನ್ಯಗಳಿಗೂ ಘೋರಯುದ್ಧವು ನಡೆದು ಅನೇಕ ರಾಕ್ಷಸರು ಮೃತ್ಯುವಿನ ಬಾಯಿಗೆ ತುತ್ತಾದರು. ಆಮೇಲೆ ಗಜಾಸುರನಿಗೂ ಗಣಪತಿಗೂ ಭಯಂಕರವಾದ ಯುದ್ಧವು ನಡೆಯಿತು. ಗಣಪತಿಯು ತ್ರಿಶೂಲ ಪರಶು ಅಂಕುಶಾದಿ ನಾನಾವಿಧ ಆಯುಧಗಳನ್ನು ಪ್ರಯೋಗಿಸಿದರೂ ಗಜಾಸುರನು ಮಡಿಯಲಿಲ್ಲ. ಆಗ ಉಭಯರಿಗೂ ಮಲ್ಲಯುದ್ಧವು ಪ್ರಾರಂಭವಾಯಿತು. ಆಗ್ಗ ಗಣಪತಿಯು ಗಜಾಸುರನನ್ನು ಸೋಲಿಸಿ ಕೊಂದನು. ಗಣಪತಿಯು ಲೋಕಕಂಟಕನಾದ ಗಜಾಸುರನನ್ನು ಕೊಂದ ದಿವಸವೇ ಭಾದ್ರಪದ ಶುದ್ಧ ಚತುರ್ದಿಯು. ಅಂದಿನಿಂದಲೂ ಈ ದಿವಸವು ಗಜಾಸುರನ ವಧೆಯಿಂದ ಲೋಕಕ್ಕೆ ಕ್ಷೇಮವನ್ನು ಮಾಡಿದ ಶುಭದಿನವಾದುದರಿಂದ ಆಸ್ತಿಕ ಮಾನವರೆಲ್ಲರೂ ಈ ಗಣೇಶವ್ರತವನ್ನು ಆಚರಿಸುತ್ತ ಗಣನಾಯಕನನ್ನು ಪೂಜಿಸುತ್ತ ಬಂದಿರುತ್ತಾರೆ. ಈ ದಿವಸ ಮಣ್ಣಿನ ಗಣಪತಿಯನ್ನು ಮಾಡಿ ಪ್ರಾಣಪ್ರತಿಷ್ಠೆಯನ್ನು ಮಾಡಿ, ಪೂಜಿಸುವ ಸಂಪ್ರದಾಯವಿರುತ್ತದೆ. ಗರಿಕೆಯು ಮೋದಕವು ಈ ಗಣಪತಿಗೆ ಪ್ರಿಯವಾದ ವಸ್ತುಗಳು. ಈ ವಿನಾಯಕನನ್ನು ಪೂಜಿಸಿ ಇಟ್ಟುಕೊಂಡಿದ್ದು ಆ ದಿವಸವೇ ... ದಿವಸಗಳಲ್ಲಿ ... ಉತ್ಸವಮಾಡಿ ನೀರಿಗೆ ಬಿಡುವ ಸಂಪ್ರದಾಯವಿರುತ್ತದೆ. ಕೆಲವು ಪ್ರದೇಶಗಳಲ್ಲಿ ಈ ವ್ರತವನ್ನು ... ಒದಲು ಗಣಪತಿಯ ... ಪ್ರತಿವರ್ಷದ ಭಾದ್ರಪದ ಶುದ್ಧ ಚತುರ್ಥಿ ದಿವಸ ಇಷ್ಟಾರ್ಥಕಾಮಿಯವಾದ ಗಣಪತಿಯನ್ನು ಪ್ರತಿಷ್ಠಿಸಿ

> ವಕ್ರತುಂಡ ಮಹಾಕಾಯ ಸೂರ್ಯಕೋಟಿ ಸಮಪ್ರಭ।
> ನಿರ್ವಿಘ್ನಂ ಕುರು ಮೇ ದೇವ ಸರ್ವಕಾರ್ಯೇಷು ಸರ್ವದಾ॥

ಎಂದು ಸ್ತುತಿಸುತ್ತ ಶ್ರೀ ಗಣಪತಿಯ ಅನುಗ್ರಹಕ್ಕೆ ಭಾಗಿಗಳಾಗುವ ಮೂಲಕ ಇಷ್ಟಾರ್ಥಗಳನ್ನು ಪಡೆಯುವದು ಪ್ರತಿಯೊಬ್ಬ ಆಸ್ತಿಕ ಮಾನವನ ಕರ್ತವ್ಯವಾಗಿರುವುದು.

ವರ್ತಮಾನಸಂಗ್ರಹ

ಪ್ರಪಂಚದ ಕಲ್ಲಿದ್ದಲಿನ ಅಭಾವವನ್ನು ನಿವಾರಿಸಲು, ಅಮೇರಿಕದ ಸಹಾಯಕ ಸಮಿತಿಯವರು ಪೋಲೆಂಡ್, ಯುಗೋಸ್ಲವೇಕಿಯ ಮತ್ತು ಜಕೋಸ್ಲವೇಕಿಯಾ ದೇಶಗಳಿಗೆ ಮುಂದಿನ ತಿಂಗಳು ೧೨೦೦ ಟನ್ ಕಲ್ಲಿದ್ದಲನ್ನು ತೆಗೆಯಬಲ್ಲ ಯಂತ್ರಗಳನ್ನು ಕಳುಹಿಸಲಿದ್ದಾರೆ.

ಅಣು ಬಾಂಬಿನ ಪ್ರಯೋಜನ

ಅಣು ಬಾಂಬು ಎನ್ನುವುದು ರುದ್ರನ ಉರಿಗಣ್ಣಂತೆ ಇರುವದು. ಪ್ರಪಂಚವನ್ನೇ ಸುಡುವ ಶಕ್ತಿ ಅದಕ್ಕಿದೆ. ಆದರೆ ಅದರಿಂದ ಅನೇಕ ಪ್ರಯೋಜನಗಳನ್ನು ಪಡೆಯಬಹುದೆಂದು ವಿಜ್ಞಾನಿಗಳು ಹೇಳುತ್ತಿದ್ದಾರೆ.

ಈ ಬಾಂಬಿಗೆ ಉಪಯೋಗಿಸಿರುವ ಪರಮಾಣುಗಳನ್ನೇ ಮತ್ತೊಂದು ರೀತಿಯಲ್ಲಿ ಉಪಯೋಗಿಸಿದರೆ ರೈಲು, ಮೋಟಾರು, ವಿಮಾನಗಳನ್ನು ನೀರು ಬೆಂಕಿ ಪೆಟ್ರೋಲು ಇಲ್ಲದೇ ಇನ್ನೂ ವೇಗವಾಗಿ ಹೋಗುವಂತೆ ಮಾಡಬಹುದಂತೆ! ಮುದುಕರನ್ನು ಹುಡುಗರನ್ನಾಗಿ ಮಾಡಬಹುದಂತೆ! ಯಾರಾದರೂ ತನಗೆ ಬ್ರಹ್ಮನಂತೆ ನಾಲ್ಕು ತಲೆಯು ಇರುವ ಮಗ ಹುಟ್ಟಬೇಕೆಂದರೆ ಹಾಗೂ ಮಾಡುವುದು ಸಾಧ್ಯವಂತೆ! ರಾವಣನಂತೆ ಹತ್ತು ತಲೆ, ಇಪ್ಪತ್ತು ತೋಳುಗಳುಳ್ಳ ಮಕ್ಕಳನ್ನು ಪಡೆಯಲೂ ಬಹುದಂತೆ! ಹಕ್ಕಿಯಂತೆ ಆಕಾಶದಲ್ಲಿ ಹಾರಾಡಬಹುದಂತೆ! ಮೀನಿನಂತೆ ನೀರಿನಲ್ಲೇ ವಾಸಿಸಬಹುದಂತೆ!

ಜಪಾನರು ಎರಡು ಅಣು ಬಾಂಬುಗಳನ್ನು ತಡೆದು ಕೊಳ್ಳಲಾರದೆ ತಣ್ಣಗಾಗಿ ಶರಣು ಹೊಡೆದರು. ಇದರಿಂದ ೩ ಲಕ್ಷ ಜನರು ಸತ್ತರಂತೆ! ಇಷ್ಟು ಅವಾಂತರ ಮಾಡಿತು ಈ ಬಾಂಬು.

ಜಪಾನರ ಶರಣಾಗತಿ

ಜಪಾನರು ಶರಣಾಗುವೆನೆಂದು ಹೇಳಿ ಆಗಲೆ ಎರಡು ವಾರದ ಮೇಲಾಯಿತು. ಜರ್ಮನಿಯಂತೆ ಕೂಡಲೆ ಜಪಾನ್ ದೇಶವನ್ನು ಆಕ್ರಮಿಸಲು ಮಿತ್ರ ಸೈನಿಕರಿಗೆ ಆಗಲಿಲ್ಲ. ಏಕೆಂದರೆ ಜಪಾನ್ ಸೈನ್ಯವು ಹರಡಿರುವ ದೇಶಗಳು ಒಂದೇ ಕಡೆ ಇಲ್ಲ. ಸಾವಿರಾರು ಮೈಲಿಯಲ್ಲಿ ಹರಡಿವೆ. ಮಲಯ, ಸಿಂಗಪುರ ಒಂದುಕಡೆ ಇವೆ. ಮಂಚೂರಿಯ, ಕೊರಿಯ, ಚೈನಾದಲ್ಲಿ ಬೇರೆ ಕಡೆ ಇವೆ. ಇವುಗಳೆಲ್ಲ ಆಕ್ರಮಿಸಲ್ಪಟ್ಟ ದೇಶಗಳು. ಜಪಾನ್ ದೇಶವು ಶಾಂತಿಸಾಗರದಲ್ಲಿದೆ. ಅದಕ್ಕೆ ಸೇರಿದ ದ್ವೀಪಗಳು ಅಲ್ಲಲ್ಲೇ ಹರಡಿಹೋಗಿವೆ. ಈ ಸ್ಥಿತಿಯು ಒಂದು ಕಾರಣ.

ಇನ್ನೊಂದು ಕಾರಣ, ಜಪಾನರ ರಾಜನೀತಿಗೆ ಸಂಬಂಧಿಸಿದ್ದು. ಜಪಾನರು ಚಾಣಕ್ಯ ಬುದ್ಧಿಯವರು. ಅವರಲ್ಲಿ ನೇರವಾದ ವ್ಯವಹಾರವೇ ಇಲ್ಲ. ಅವರ ವ್ಯವಹಾರ ವಿಚಿತ್ರವಾದುದು. ಏನೋ ಒಂದು ಏರ್ಪಾಡಿಗಾಗಿ ರುಜು ಹಾಕಲು ಕಾಲಹರಣ ಮಾಡಿದರು. ಈಗ ಅದಾಯಿತು. ಅಮೇರಿಕ ಸೈನ್ಯವು ಜಪಾನನ್ನು ಆಕ್ರಮಿಸಿದೆ. ಎಲ್ಲಾ ಕಡೆಯೂ ಯುದ್ಧ ನಿಂತಿದೆ. ಆದರೂ ಜಪಾನರು ಮೋಸ ಮಾಡ್ಯಾರು ಎಂದು ಅಮೇರಿಕ, ರಷ್ಯ, ಬ್ರಿಟನ್ನಿನವರಿಗೆ ಅನುಮಾನ. ಆದರೆ ಅಣುಬಾಂಬಿನಂಥ ಭಯಂಕರ ಅಸ್ತ್ರವು ಜಪಾನರಿಗೆ ದೊರೆತ ಹೊರತು ಅವರು ಮತ್ತೆ ಮೋಸಮಾಡುವ ಹುಚ್ಚುತನಕ್ಕೆ ಹೋಗರು.

ಚೀನಾ-ರಷ್ಯಾ ಒಪ್ಪಂದ

ಚೀನಾ ದೇಶಕ್ಕೂ ರಷ್ಯಾ ದೇಶಕ್ಕೂ ಒಂದು ಒಪ್ಪಂದವಾಗಿದೆ. ಈ ಒಪ್ಪಂದ ಇನ್ನು ಮೂವತ್ತು ವರ್ಷಗಳ ಕಾಲ ಇರುವುದು. ಈ ಒಪ್ಪಂದದಂತೆ ಇನ್ನು ಮೇಲೆ ಚೀನಾ ರಷ್ಯಾ ದೇಶಗಳು ಆರ್ಥಿಕ ಅಭಿವೃದ್ಧಿ ಮತ್ತು ಭದ್ರತೆಯನ್ನು ಕಾಪಾಡಿಕೊಂಡು ಬರಲು ಒಂದರೊಡನೊಂದು ಸಹಕರಿಸುವುವು. ಇದುವರೆಗೂ ಜಪಾನರು ಆಕ್ರಮಿಸಿಕೊಂಡಿದ್ದ ಮಂಚೂರಿಯದಲ್ಲಿ ಚೀಣವು ತನ್ನ ಸರಕಾರವನ್ನು ಏರ್ಪಡಿಸಿಕೊಳ್ಳಲು ರಷ್ಯಾ ಅವಕಾಶ ಕೊಡುವುದು. ಈಗ ಮಂಚೂರಿಯಾ ದೇಶವನ್ನು ಜಪಾನರಿಂದ ರಷಿಯನರು ಆಕ್ರಮಿಸಿಕೊಂಡಿದ್ದಾರೆ. ಕರಾರಿಗೆ ಜಪಾನು ಸಹಿ ಹಾಕಿದೊಡನೆಯೇ ರಷ್ಯಾ ಸೈನ್ಯವು ಮಂಚೂರಿಯವನ್ನು ಬಿಡುವುದು. ಪೂರ್ವ ಚೀಣಾ ಮಂಚೂರಿಯ ರೈಲ್ವೆಯು ಮೂವತ್ತು ವರ್ಷಗಳ ಕಾಲ ಎರಡೂ ದೇಶಗಳ ಆಡಳಿತದಲ್ಲಿರುವದು.

ಈ ಒಪ್ಪಂದದಿಂದ ಚೀಣಾ-ರಷ್ಯಾ ಸಂಬಂಧದಲ್ಲಿ ತುಂಬಾ ಬದಲಾವಣೆಯನ್ನು ನಿರೀಕ್ಷಿಸಬಹುದು. ಈ ಒಪ್ಪಂದಕ್ಕೆ ಅಮೇರಿಕ ಮತ್ತು ಬ್ರಿಟನ್ನಿನ ಒಪ್ಪಿಗೆ ಇದೆಯೋ ಇಲ್ಲವೋ ಎಂಬುದು ಇನ್ನೂ ಗೊತ್ತಾಗಿಲ್ಲ.

ಸ್ವತಂತ್ರ ಭಾರತ ಸೈನ್ಯ

ಜಪಾನು ಮಲಯ ದೇಶವನ್ನು ಆಕ್ರಮಿಸಿದಾಗ ಅಲ್ಲಿ ಸುಮಾರು ಒಂದು ಲಕ್ಷ ಭಾರತದಸೇನೆಯು ಜಪಾನರೊಡನೆ ಯುದ್ಧ ಮಾಡುತಿತ್ತು. ಬ್ರಿಟಿಷರು ಜಪಾನರಿಗೆ ಅಲ್ಲಿ ಸೋತಮೇಲೆ ಬ್ರಿಟಿಷ್ ಸೇನೆಯು ಆ ದೇಶದಿಂದ ಹೇಗೋ ತಪ್ಪಿಸಿಕೊಂಡು ಹೋಯಿತು. ಆದರೆ ಭಾರತದ ಸೇನೆಯು ಜಪಾನರ ಕೈಸೆರೆಗೆ ಸಿಕ್ಕಿತು.

ಈ ಮಧ್ಯೆ ಸುಭಾಸ್ ಬೋಸರು ಜರ್ಮನಿಯಿಂದ ಅಲ್ಲಿಗೆ ಬಂದರು. ಅವರ ಮುಂದಾಳುತನದಲ್ಲಿ ಆ ಸೇನೆಯು ಭಾರತದ ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರ ವಿರುದ್ಧ ಹೋರಾಡಲು ಒಪ್ಪಿತು. ಜಪಾನರಿಂದ ಬಿಡುಗಡೆ ಹೊಂದಿ ಜಪಾನರ ಬೆಂಬಲವನ್ನು ಪಡೆಯಿತು. ಈಗ ಜಪಾನರಿಗೆ ಸೋಲಾದುದರಿಂದ ಈ ಸೇನೆಯು ಬ್ರಿಟಿಷರಿಗೆ ಸೈಸೆರೆ ಸಿಕ್ಕಿದೆ. ಈ ಸೈನ್ಯದಲ್ಲಿ ಈಗಿರುವ ೨೦ ಸಾವಿರ ಸೈನಿಕರನ್ನು ಬಂಡಾಯಗಾರರಂತೆ ನೋಡಿಕೊಳ್ಳಬಾರದೆಂದೂ, ಅವರು ಮಾತೃಭೂಮಿಗಾಗಿ ಆ ದಾರಿ

...ದರಿಂದೂ ಪಂಡಿತ ಜವಾಹರಲಾಲ್ ಮೊದಲಾದ ...ಂದಾಳುಗಳು ಹೇಳಿಕೆ ಹೊರಡಿಸಿದ್ದರು.

ಈ ಒಗ್ಗೆ ಇಂಡಿಯಾ ಸರಕಾರವು ಒಂದು ಹೇಳಿಕೆ ...ರಡಿಸಿ, ಆ ಸೈನಿಕರ ವಿಷಯದಲ್ಲಿ ಸಹಾನುಭೂತಿ ...ದ ವರ್ತಿಸುವುದಾಗಿ ಹೇಳಿದೆ

ಬ್ರಿಟಿಷ್ ಹಿಂದೂಸ್ಥಾನದಲ್ಲಿ ಚುನಾವಣೆ

ಬ್ರಿಟಿಷ್ ಹಿಂದೂಸ್ಥಾನದಲ್ಲಿ ನ್ಯಾಯನಿಧಾಯಕ ...ಗಳಿಗೆ ಚುನಾವಣೆ ನಡೆದು ಹತ್ತುವರ್ಷಗಳಾಗಿತ್ತು. ಆ ಚುನಾವಣೆ ನಡೆಯಬೇಕೆಂದು ಸರಕಾರ ನಿರ್ಧ...ದೆ ಅದರಂತೆ ಪ್ರಾಂತ ಸರಕಾರಗಳು ಚುನಾವಣೆಗೆ ...ಲ್ಲಾ ಸಿದ್ಧತೆಗಳನ್ನೂ ಮಾಡುತ್ತಿವೆ ಮತದಾರರ ಪಟ್ಟಿ ...ವಾಗುತ್ತಿದೆ ೧೯೪೬ ನೇ ಏಪ್ರಿಲ್ ಕೊನೆಯೊಳಗೆ ...ಲ್ಲಾ ಚುನಾವಣೆಗಳೂ ಮುಗಿಯಬೇಕೆಂದು ಏರ್ಪಾಡು ...ಯುತ್ತಿದೆ.

ಮೈಸೂರು ದೇಶದಲ್ಲಿ ಲಂಚಖೋರತನ ತಪ್ಪಿಸಲು ಸಮಿತಿ

ಲಂಚಖೋರತನದ ಒಗ್ಗೆ ವಿಚಾರಣೆ ನಡೆಸಿ ಈ ...ಪದ್ಧತಿಯು ಹೋಗುವಂತೆ ಮಾಡಲು ಸರಕಾರವು ...ಪ್ರತಿನಿಧಿ ಸಭೆಗಳಲ್ಲಿ ಭರವಸೆ ಕೊಟ್ಟಿತ್ತು ಅದ... ಈಗ ವಿಚಾರಣಾ ಸಮಿತಿಯನ್ನು ನೇಮಿಸಿದೆ ಆ ಸಮಿತಿಗೆ ಹಿಂದೆ ಈ ದೇಶದ ದಿವಾನರಾಗಿದ್ದ ...ಬ್ಯಾನರ್ಜಿಯವರು ಅಧ್ಯಕ್ಷರು ಆಹಾರ ಸರಬರಾಜು ...ಕಾರಿಗಳಾದ ಶ್ರೀ ಸುಂದರರಾಯರು, ಶಿಕ್ಷಣ ಶಾಖ... ಶ್ರೀ ಹಿರಣ್ಣಯ್ಯನವರು, ನ್ಯಾಯವಿಧಾಯಕ ...ಯ ಸದಸ್ಯರಾದ ಪ್ರಿ ಡಿ ಎಸ್ ಮಲ್ಲಪ್ಪನವರು ...ಪ್ರತಿನಿಧಿ ಸಭೆಯ ಸದಸ್ಯರಾದ ಶ್ರೀ ಭೂಪಾಲಂ ...ದ್ರಶೇಖರಯ್ಯನವರು, ಶ್ರೀ ಎ ಜಿ ಖಲೀಲ್‌ರವರು, ...ಎ ಪಿಡಲ್‌ಟನ್ ಇವರುಗಳು ಸದಸ್ಯರಾಗಿರುವರು. ...ಸಮಿತಿಯು ಇಷ್ಟರಲ್ಲೇ ವಿಚಾರಣೆಗೆ ಪ್ರಾರಂಭಿಸ...ದು.

ಗುಪ್ತಸಂಘದ ಭಯಂಕರ ಕಾರ್ಯಗಳು

ಬೊಂಬಾಯಿ ಪ್ರಾಂತ್ಯದ ಸಾತಾರಾ ಜಿಲ್ಲೆಯಲ್ಲಿ ...ಬಾಹಿರವಾದ ಸರ್ಕಾರದ ಕೈಗೆ ಸಿಕ್ಕದೆ ತಲೆ ...ಕೊಂಡಿರುವ ಕೆಲವರು ಒಟ್ಟಿಗೆ ಕೂಡಿ ಜನಗಳನ್ನು ...ಡಿಸುತ್ತ ತಮಗೆ ಅನುಕೂಲವಾಗಿ ನಡೆಯದವ... ವಿವಿಧ ಘೋರ ಶಿಕ್ಷೆಗಳಿಗೆ ಗುರಿಮಾಡುತ್ತಿರುವರು. ...ನಗಳು ಕೆಲವು ಪ್ರಕಟನೆಗಳನ್ನು ಅಲ್ಲಲ್ಲಿ ಅಂಟಿಸಿ, ...ಪ್ರಕಟನೆಗಳನ್ನು ಹರಿದವರಿಗೆ 2000 ರೂ ಗಳ ...ನೆ ಹಾಕುವದಲ್ಲದೆ ಕೈಕಾಲುಗಳನ್ನು ಕತ್ತರಿಸ...ತ್ತದೆ" ಎಂದು ಭಯೋತ್ಪಾದಕ ನೋಟೀಸು ... ಹಂಚಿರುವರು ಅಲ್ಪ ಅಪರಾಧಗಳಿಗೂ ಭಯಂ...ಕ್ಷೆಗಳು ಈ ಭಯೋತ್ಪಾದಕರಿಂದ ವಿಧಿಸಲ್ಪಡು...ಎಂದು ಬೊಂಬಾಯಿ ಸರ್ಕಾರದವರು ಪ್ರಕಟಿಸಿ... ಈ ವಿಧವಾದ ದುಷ್ಕೃತ್ಯವೊಂದನ್ನು ವಿಚಾರಿ...ಹೋದ ಪೋಲೀಸ್ ಸಬ್ ಇನ್ಸ್‌ಪೆಕ್ಟರನ್ನು ತನ್ನ ...ಯಲ್ಲಿ ಕೂಡಿಸಿಕೊಂಡದ್ದಕ್ಕಾಗಿ ಸಾಲ್ಪಾಗ್ರಾಮದ ...ರಾಯಣ ಅನಂತದೇಶಪಾಂಡೆ ಎಂಬವರ ಮೇಲೆ ...ಜನರು ಬಿದ್ದು ಅವರ ಬಲಗೈಯನ್ನೂ ಕಾಲನ್ನೂ ...ಯಿಂದ ಕಡಿದುಹಾಕಿದ್ದಾರೆ ಈ ನ್ಯಾಯಬಾಹಿರರ ...ಗೆ ವಿರುದ್ಧವಾಗಿ ನಡೆದರೆಂಬುದಕ್ಕಾಗಿ ಬಾರೆ ...ದ ಇಬ್ಬರ ಎಡಗಾಲುಗಳು ಕತ್ತರಿಸಲ್ಪಟ್ಟಿವೆ. ...ನೆಯನನೊಬ್ಬನ ಅಂಗಾಲನ್ನು ಬೆತ್ತದಿಂದ ...ದು ಗಾಯಗೊಳಿಸಿದ್ದಾರೆ ಈ ಕೇಡುಕರಿಗೆ ತಿಳಿಸದೆ ...ನ್ನು ಬಿಟ್ಟುಹೋದ ತಪ್ಪಿಗಾಗಿ ತಮ್ಮ ವಿರುದ್ಧ ...ಪೋಲೀಸರಿಗೆ ಸುದ್ದಿ ತಿಳಿಸಿದಬಹುದೆಂಬ ಅನು...ದಮೇಲೆ ಕೃಷ್ಣತಾತ್ಯಾನಂಗ, ಲಕ್ಷ್ಮಣಚಂದ್ರ ...ಎಂಬವರ ಮೇಲೆ ಬಿದ್ದರು ಹತ್ತಿರದಲ್ಲೇ ಕುರಿ ...ಯಿಸುತ್ತಿದ್ದ ಭಾನುಸಿಂಗ್ ಎಂಬವನು ಸಹಾಯಕೆ ಬಂದು ಆಕ್ರಮಣಕಾರರಲ್ಲೊಬ್ಬನಿಗೆ ಕೊಡಲಿಯಿಂದ ಹೊಡೆದನು ಆದರೆ ಕ್ರಮೇಣ ಆ ದುಷ್ಟರ ಕೈ ಮೇಲಾಗಿ ಕೃಷ್ಣ ಮತ್ತು ಭಾನುನಂಗರ ಕಾಲುಗಳು ಕತ್ತರಿಸಲ್ಪಟ್ಟವು. ದೂಧರಿ ಎಂಬ ಗ್ರಾಮದ ಪಟೇಲ್ ಸೀತಾರಾಮ ಕಾತ್ಯಾಜಿ ಎಂಬವನು ಪೋಲೀಸರ ಕಡೆ ಸುದ್ದಿಗಾರನೆಂಬ ಭಾವನೆಯಮೇಲೆ ಈ ಪುಂಡರು ಅವನ ಮನೆಗೆ ನುಗ್ಗಿ ಅವನ ಹೆಂಡತಿಯು ಗೋಳಿಡುತ್ತಿದ್ದರೂ ಅವನನ್ನು ಬಿಡದೆ ಊರು ಹೊರಕ್ಕೆ ಎಳೆದುಕೊಂಡು ಹೋಗಿ ಮೂಗು ಕಾಲುಗಳನ್ನು ಕಡಿದರು ಈ ಯಾತನೆಯಿಂದ ಅವನು ಮೃತನಾದನು ಈ ಕ್ರೂರ ಕರ್ಮಿಗಳು ತಮಗೆ ವಿರೋಧವಾಗಿ ನಡೆದವರು ಮತ್ತು ತಮ್ಮ ಮೇಲೆ ಬಿದ್ದವರು ಇವರುಗಳನ್ನು ಮಾತ್ರ ಶಿಕ್ಷಿಸುವದಿಲ್ಲದೆ, ತಮ್ಮವರು ಕೂಡಿ ಮಾಡಿದ ನ್ಯಾಯತೀರ್ಪಿಗೆ ಒಪ್ಪಿಕೊಳ್ಳದವರನ್ನೂ ಶಿಕ್ಷಿಸುತ್ತಿದ್ದಾರೆ ಈ ಅರಾಜಕ ಸಂಗಡದವರು ಒಂದು ಜಮೀನಿನ ವಿಷಯದಲ್ಲಿ ತಾವು ಮಾಡಿದ ತೀರ್ಪಿಗೆ ಒಪ್ಪಲಿಲ್ಲವೆಂಬುದಕ್ಕಾಗಿ ಕುಂಬಾರ್ ಗಾಂಗರಿರೋಜ, ಶಂಕರ ಮತ್ತು ಚಂಡಿಆ ಎಂಬ ಮೂವರಿಗೆ ಛಡಿಏಟು ಹೊಡೆದರು ಸಾತಾರಾ ಜಿಲ್ಲಾ ನ್ಯಾಯಾಧೀಶರ ಕೋರ್ಟಿನಲ್ಲಿ ಕೇಸುಹಾಕಿದ ಸೋಣಗಾಂಕ ಎಂಬವನನ್ನು ಹೊಡೆದು ಕೂಡಲೆ ಕೇಸನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಆಜ್ಞೆಮಾಡಿದ್ದಾರೆ ಯಾವುದಾದರೂ ಒಂದು ಹಳ್ಳಿಗೆ ರಾತ್ರಿಕಾಲದಲ್ಲಿ ಶಸ್ತ್ರಧಾರಿಯೊಬ್ಬನು ಬಂದನೆಂದರೆ ಅದು ಆ ದಿವಸ ಅಲ್ಲಿ ಈ ಬೀಕರ ಕರ್ಮಿಗಳ ನ್ಯಾಯತೀರ್ಮಾನಮಂಡಲವು ಸೇರುವುದೆಂಬುದರ ಗುರುತು ಕೆಲವು ವೇಳೆ ಗುರುತಿಗಾಗಿ ಗುಂಡುಹಾರಿಸುವುದೂ ಉಂಟೆಂದು ಹೇಳಲಾಗಿದೆ ಪ್ರತಿ ಹಳ್ಳಿಯಲ್ಲೂ 3 ಅಥವಾ 7 ಜನರ ನ್ಯಾಯಮಂಡಲನ್ನು ಸ್ಥಾಪಿಸಬೇಕೆಂಬ ಏರ್ಪಾಟು ಇವರಿಗಿರುವಂತಿದೆ ನ್ಯಾಯತೀರ್ಮಾನದ ನಡವಳಿಯಲ್ಲಾ ನಡೆದಮೇಲೆ ಅಪೀಲು ಮಾಡುವದಾದರೆ ಎದಕ್ಕೆ ಈ ಗುಂಪಿನ ನಾಯಕರ ತೀರ್ಮಾನವೇ ಕೊನೆಯದಾಗಿದ ಈ ತಂಡಕ್ಕೆ ಸೇರಿದವರು ಈ ನ್ಯಾಯಾಲಯದ ತೀರ್ಮಾನವನ್ನು ಹಾರಿಗೆ ತರುತ್ತಾರೆ ಸಾಮಾನ್ಯವಾಗಿ ಆ ತಂಡದ ನಾಯಕರು ಹಳ್ಳಿಗೆ ಬರುವ ಕಾಲಕ್ಕೆ ಸರಿಯಾಗಿ ಈ ನ್ಯಾಯಾಲಯಗಳು ಸೇರುತ್ತವೆ ಇಲ್ಲಿ ನಡೆಯುವ ವಿಚಾರಣೆ ಬಲು ಚುರುಕು ತೀರ್ಮಾನದ ಬಳಿಯೂ ಅಲ್ಲೇ ಕೂಡಲೆ ಆಗಿಹೋಗುತ್ತದೆ ಕೆಲವುವೇಳೆ ಹಳ್ಳಿಗರ ಎದುರಿನಲ್ಲೇ ಶಿಕ್ಷಾಕಾರ್ಯವು ನಡೆದುಹೋಗುತ್ತದೆ ಕಳೆದ ಮಾರ್ಚಿ 20ನೇ ತಾರೀಖು ಭಾವಲ್ವಾಡಿಯ ಪೋಲೀಸ್ ಪಟೇಲರನ್ನು ಭಾವಲ್ವಾಡಿ ಮತ್ತು ಅದರ ಪಕ್ಕದ ಹಳ್ಳಿಗರ ಎದುರಿನಲ್ಲೇ ಹಾವಟಿಯಿಂದ ಹೊಡೆದರು ಕೆಲವು ವೇಳೆ ವಿಚಾರಣೆ ಇಲ್ಲದೆಯೇ ಶಿಕ್ಷೆಯಾಗುತ್ತದೆ ಶಿಂದವಾಡಿಯ ಕೃಷ್ಣರಾಮಟಿಕೆ ಎಂಬವನಮೇಲೆ ಕಳ್ಳತನದ್ದು ಸಾರಾಯಿ ಒಟ್ಟಿ ಇಳಿಸುತ್ತಿದ್ದನೆಂಬ ಅಪವಾದನೆಗಾಗಿ ವಿಚಾರಣೆಯೇ ಇಲ್ಲದ ಜುಲೈ 27ನೆಯ ತಾರೀಖಿನ ರಾತ್ರಿ, ಮುವತ್ತೈದು ಜನ ಶಸ್ತ್ರಧಾರಿಗಳು ಅವನ ಮನೆಗೆ ನುಗ್ಗಿ ಅವನ ಮೇಲೆ ಗುಂಡುಹಾರಿಸಿದರು ಅವನ ಎಡಗೈಗೆ ಏಟು ಬಿತ್ತು ಬುಯಾಚಿವಾಡಿಯ ಮಾಧು ಕೃಷ್ಣ ರಾಮೋಷಿ ಎಂಬವನು ಮುಲ್ದಿ ಪಟೇಲನಲ್ಲಿ ಯಾರೋ ಸರ್ಕಾರಿ ನೌಕರ ಕಡಿದರೆಂದು ಮೂರು ಹೇಳಿದನೆಂಬುದಕ್ಕಾಗಿ 16 ಜನರು ರಾತ್ರಿ ಅವನ ಮೇಲೆ ಬಿದ್ದು ಹೊಲಕ್ಕೆ ಹೊತ್ತುಕೊಂಡುಹೋಗಿ ಅಂಗಾಲು ಚರ್ಮ ಸುಲಿದಿರುವರು ಇಂಥದೇ ಒಂದು ಅಪವಾದನೆಯ ಮೇಲೆ ಬಿರನವಾಡಿಯ ಮೂರು ಜನ ಹಳ್ಳಿಗರಿಗೆ ಊರಿನ ಶಾಲೆಯ ಎದುರಿಗೇ 50 ಜನ ದುಷ್ಕರ್ಮಿಗಳು ಹೊಡೆದು ಮೂಳೆ ಮುರಿದಿರುವರು, ಮತ್ತು ಅಲ್ಲಿಯ ಹಳ್ಳಿಗರಿಗೆ ಸರ್ಕಾರಿ ನೌಕರರಿಗೆ ಸಹಾಯ ಮಾಡಬೇಡಿ ಎಂದು ಎಚ್ಚರಿಸಿರುವರು ಇವರು ಸಿವಿಲ್ ವ್ಯವಹಾರಗಳಲ್ಲೂ ತಮ್ಮ ತೀರ್ಪನ್ನು ಕೊಡುತ್ತಿರುವರು ಚಿಕ್ಲೀಯಲ್ಲಿ 10 12 ಜನ ಈ ಭೀಕರ ಸಂಘದವರು ಹಳ್ಳಿಯ ಮುಖಂಡರನ್ನು ಕರೆಸಿ ಅಲ್ಲಿಯ ಕೆಲವು ಜಮೀನಿನ ವ್ಯಾಜ್ಯ ಪರಿಹರಿಸಿ ಅಲ್ಲಿಯ ರಾಮೋಷಿಗಳನ್ನು ಗಡೀಪಾರು ಮಾಡಿದರು ಅತ್ಯಂತ ಹೀನ ದುಷ್ಕೃತ್ಯವೆಂದರೆ ನೀರಲಿಯೆಂಬ ಸ್ಥಳದ ದೋಣಿ ನಡೆಸುವನೊಬ್ಬನು ಅವನ ಮನಬಂದಂತೆ ಮದ್ದು ಸುಲಿಯುತ್ತಿದ್ದನೆಂಬುದಕ್ಕಾಗಿ ಅವನ ಅಂಗಾಲ ಚರ್ಮವನ್ನು ಸುಲಿದಿರುವರು ಸರ್ಕಾರದವರು ಈ ದುಷ್ಕರ್ಮಿಗಳ ಮೇಲೆ ತಕ್ಕ ಕಾರ್ಯಕ್ರಮ ಕೈಗೊಂಡಿದ್ದಾರಾದ್ದರಿಂದ ಇವರ ಹಾವಳಿ ಕಡಮೆಯಾಗುತ್ತಿದೆಯೆಂದು ಹೇಳಲಾಗಿದೆ ಈ ಸಂಬಂಧದಲ್ಲಿ ಸಾತಾರಜಿಲ್ಲೆಯ ವಾಲ್ವಾಪುರ ತಾಲೂಕಿನ ಭಿಕ್ವಾಡಿ ಖುರ್ದಾ ಗ್ರಾಮದ ಮೇಲೆ ಸರ್ಕಾರವು 5000 ರೂಪಾಯಿಗಳ ಸಾಮೂಹಿಕದಂಡ ವಿಧಿಸಿದೆ. ಈ ಒಗ್ಗೆ ಶ್ರೀಶಂಕರರಾವ್ ದೇವ್‌ರವರು 'ಸತಾರಾಜಿಲ್ಲೆಯಲ್ಲಿ ಭಯೋತ್ಪಾದಕರ ಚಟುವಟಿಕೆಯನ್ನಡಗಿಸಲು ಸರ್ಕಾರದವರು ಕೈಗೊಂಡಿರುವ ಉಗ್ರೋಪಾಯ ಸರಿಯಲ್ಲ. ದಮನನೀತಿಯಿಂದ, ಸಾಮೂಹಿಕ ದಂಡ, ಸಾಮೂಹಿಕಬಂಧನದಿಂದ ಸರ್ಕಾರ ತನ್ನ ಉದ್ದೇಶ ಸಾಧಿಸಲಾರದು ನಾನು ಸತಾರಾ ಜಿಲ್ಲೆಯಲ್ಲಿ ಓಡಾಡಲು, ಭಾಷಣಮಾಡಲು ಸರ್ಕಾರವು ಅವಕಾಶ ಕಲ್ಪಿಸಿದರೆ ನಾನು ಪರಿಸ್ಥಿತಿಯನ್ನು ಉತ್ತಮಗೊಳಿಸಲು ಯತ್ನಿಸುತ್ತೇನೆ ಎಂದು ಹೇಳಿಕೆ ಹೊರಡಿಸಿದ್ದಾರೆ

ಜಪಾನುಷ್ಠಾನ ಸಮಾಪ್ತಿ ಸಮಾರಂಭ ಹೊಳಗುಂದಿ

ಬಳ್ಳಾರಿ ಡಿ|| ಹಡಗಲಿ ತಾ|| ಹೊಳಗುಂದಿ ಗ್ರಾಮದ ಉಜ್ಜಯಿನಿ ಒಡೆಯರ ಮಠದ ಪಟ್ಟಾಧ್ಯಕ್ಷ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳವರು ಇದೇ ಶ್ರಾವಣ ಶು|| ೬ ಗುರುವಾರ ದಿವಸ ಇಲ್ಲಿಯ ಶ್ರೀ ರೇವಣ ಸಿದ್ಧೇಶ್ವರ ಗುಡ್ಡದ ಒಂದು ಗವಿಯ ಹತ್ತಿರವಿರುವ ಬಿಲ್ವವೃಕ್ಷದ ಬುಡದಲ್ಲಿ ಕೈ|| ಉಜ್ಜಯಿನೀ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ ಭಾವಚಿತ್ರವನ್ನು ಸಾಕ್ಷಿಯಾಗಿಟ್ಟುಕೊಂಡು ಒಂದು ಲಕ್ಷ ಜಪವನ್ನು ೧೫ ದಿವಸಗಳಲ್ಲಿ ಮಾಡಿ ಪೂರ್ತಿಗೊಳಿಸಿದರು ಈ ಕಾಲವು ಮಳೆಗಾಲವಾದರೂ ಶೀತೋಷ್ಣಗಳನ್ನು ಲೆಕ್ಕಿಸದ ಅನುಷ್ಠಾನದಲ್ಲಿ ನಿರತರಾಗಿದ್ದರು ಇದೇ ಮಹಾತ್ಮರ ಧರ್ಮವು. ಇವರ ಅನುಷ್ಠಾನ ಸಮಯದಲ್ಲಿ ಮು|| ರಾ|| ಹಾನುಭೋಗರ ಕರಿವೀರಪ್ಪನವರು ಮತ್ತು ಬುಕ್ಕಸಟ್ಟಿ ಗುರುಸಿದ್ಧಪ್ಪನವರು ಇವರೇ ಮೊದಲಾದವರು ತನುಮನಧನಗಳಿಂದ ತಮ್ಮ ಸೇವೆಯನ್ನು ಸಲ್ಲಿಸಿದರು ಇಂತಹ ಗುರುಮೂರ್ತಿಗಳು ಅಲ್ಲಲ್ಲಿ ಉದಯಿಸಿ ಜಪಾನುಷ್ಠಾನಾದಿಗಳನ್ನು ನೆರವೇರಿಸುತ್ತಾ ಬಂದರೆ, ವೀರಶೈವ ಮತವು ಸುಧಾರಿಸುವದರಲ್ಲಿ ಯಾವ ಸಂದೇಹವೂ ಇರುವುದಿಲ್ಲ ಇಂತಹ ಬುದ್ಧಿಯನ್ನು ಶ್ರೀ ಜಗದಾಚಾರ್ಯರು ಸಕಲ ಗುರುಮೂರ್ತಿಗಳಿಗೂ ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ

ಗುರುಭಕ್ತ

ತಪ್ಪು ತಿದ್ದುಪಡಿ

ಕಳೆದವಾರ ನಮ್ಮ ಪತ್ರಿಕೆಯಲ್ಲಿ ಪ್ರಕಟವಾಗಿರುವ ಬೆಳಗಾಂವಿಯ ವಿಜಯೋತ್ಸವದ ಲೇಖನದಲ್ಲಿ ೧೦ ರೂಪಾಯಿಯೆಂದು ತಪ್ಪು ಬಿದ್ದಿದೆ ವಾಚಕರು ಅದನ್ನು ೧೦ ಸಾವಿರ ರೂಪಾಯಿಗಳೆಂದು ಓದಿಕೊಳ್ಳಬೇಕು

ಸ್ವೀಕಾರ

ಧಾರವಾಡ ಡಿ|| ಗದಗ ಟವನ್ನಿನಲ್ಲಿರುವ ವೇ|| ನಾಲತವಾಡಮಠದ ಅಯ್ಯಪ್ಪನವರ ಪುತ್ರ ಚಿ|| ಸೌ|| ಪಾರ್ವತೆವ್ವನನ್ನು ರೋಣ ತಾ|| ಸೂಡಿಗ್ರಾಮದ ಭಿಕ್ಷಾವತಿಮಠದ ವೇ|| ಶಾಂತಯ್ಯನವರ ಪುತ್ರ ಚಿ|| ಚನ್ನಬಸವಯ್ಯನಿಗೆ ಕೊಟ್ಟು ನಿಶ್ಚಯಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವಧುವಿನವರಿಂದ ತೆಗೆಯಿಸಿದ ೭ ರೂಪಾಯಿಗಳು ವೇ|| ಎರೇಹಂಚಿನಾಳ ಹಿರೇಮಠದ ರುದ್ರಯ್ಯನವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ|| ಹಡಗಲಿ ತಾ|| ಹೊಳಗುಂದಿಗ್ರಾಮದ ಉಜ್ಜಯಿನೀ ಒಡೆಯರಮಠದ ಶ್ರೀ ಸಿದ್ಧಲಿಂಗಶಿವಾಚಾರ್ಯಸ್ವಾಮಿಗಳವರು ಒಂದುಲಕ್ಷ ಜಪವನ್ನು ಮಾಡಿ ಸಮಾಪ್ತಿಗೊಳಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ವೇ|| ಹೊಳಗುಂದಿ ಹಿರೇಮಠದ ಕೊಟ್ರಬಸಯ್ಯನವರು ಹೆಡ್ ಮಾಸ್ಟರ್ ಇವರ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇನೆ

|| ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ||

ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಮಹೋತ್ಸವ, ಬಿಡದಿ

—

ಶ್ರೀ ಜಗದ್ಗುರುಗಳವರು ತಾ|| ೨೭-೮-1945ನೇ ಸೋಮವಾರ ಮಧ್ಯಾಹ್ನ 1½ ಘಂಟೆಗೆ ಮಿತಪರಿವಾರದೊಡನೆ ಬೆಂಗಳೂರು ಡಿ|| ಬಿಡದಿ ಗ್ರಾಮದ ಭಕ್ತರ ಪ್ರಾರ್ಥನೆ ಮೇರೆಗೆ ಕಾರಿನಲ್ಲಿ ದಯಮಾಡಿಸಿದರು. ಬಿಡದಿ ಭಕ್ತಮಂಡಲಿಯವರು ಇಷ್ಟಕಪಾಲದೊಡನೆ ಊರಿನ ಹೊರಭಾಗದಲ್ಲಿ ಮಹಾಸ್ವಾಮಿಯವರ ಆಗಮನವನ್ನು ನಿರೀಕ್ಷಿಸುತ್ತಿದ್ದು ಸನ್ನಿಧಿಯವರು ಆಗಮಿಸಿದ ಕೂಡಲೆ ಫಲಪುಷ್ಪಕಾಣಿಕಾದಿಗಳನ್ನು ಸಮರ್ಪಿಸಿ ಮಂಗಳವಾದ್ಯಗಳು ಘೋರ್ಗರೆಯುತ್ತಿರಲು ಜಗದಾಚಾರ್ಯರ ಜಯ ಜಯಕಾರದೊಡನೆ ಮಹೋತ್ಸವ ಪೂರ್ವಕವಾಗಿ ಪುರಪ್ರವೇಶಗೊಳಿಸಿದರು. ರಾಜಬೀದಿಯಲ್ಲಿ ಅತ್ಯಂತ ವೈಭವದೊಡನೆ ಉತ್ಸವ ನೆರವೇರಿಸಿದನಂತರ ಭವ್ಯವಾದ ಚಪ್ಪರ ಹಾಕಿ ಏರ್ಪಡಿಸಿದ್ದ ಬಿಡಾರಕ್ಕೆ ದಯಮಾಡಿಸಿದರು. ಈ ಮಹೋತ್ಸವಕ್ಕೆ ಸುತ್ತಮುತ್ತಿನ ಗ್ರಾಮಗಳ ಸಹಸ್ರಾರು ಜನರು ನೆರೆದಿದ್ದರು. ಪ್ರತಿದಿನವೂ ಭಕ್ತಮಂಡಲಿಯವರು ಮಹಾಸನ್ನಿಧಿಯವರ ದರ್ಶನಕ್ಕೆ ಬರುತ್ತಿದ್ದಾರೆ. ಇನ್ನು ಒಂದೆರಡು ವಾರಗಳವರೆಗೆ ಮಹಾಸ್ವಾಮಿಯವರ ಮುಕ್ಕಾಂ ಬಿಡದಿ ಗ್ರಾಮದಲ್ಲೇ ಇರುವ ನಿರೀಕ್ಷಣೆ ಇದೆ. ಈ ರೀತಿಯಾಗಿ ಜಗದ್ಗುರುಗಳ ಸೇವೆಯನ್ನು ನಡೆಸಿದ ಬಿಡದಿ ಗ್ರಾಮದ ಭಕ್ತ ಮಂಡಲಿಗೆ ಜಗದಾಚಾರ್ಯರು ಸನ್ಮಂಗಲಗಳನ್ನೀಯಲೆಂದು ಕೋರುವ

ಪ್ರತ್ಯಕ್ಷದರ್ಶಿ

[ನೆಯ ಪುಟದಿಂ ಮುಂದೆ ಮುಂದುವರಿದುದು]

ಹಿಂದಿನ ಸಿಟ್ಟು ಈ ಕೋಪವು ಶಾಂತವಾಗುವುದೆಂದು ಸಮಾಧಾನ ಹೇಳುತ್ತಾನೆ. ಅಕ್ಷಮ್ಯವಾದ ಅಪರಾಧಗಳಿಗೆ ಕಲಿಯುಗದಲ್ಲಿ ಪ್ರತಿ ಶಿಕ್ಷೆಯನ್ನು ಮಾಡುವುದು ತಪ್ಪಲ್ಲ. ಅಪರಾಧಿಯು ನೀತಿತಪ್ಪಿ ನಡೆದಿರುವಾಗ ಪ್ರತಿಶಿಕ್ಷೆಮಾಡುವವನು ಅಪರಾಧಿಗೆ ಶಿಕ್ಷೆಯನ್ನು ಮಾಡುವ ಪ್ರಸಂಗದಲ್ಲಿ ಸೃಷ್ಟಿ ದಾರಿಯನ್ನುಬಿಟ್ಟು ನಡೆಯುವ ಸಂದರ್ಭವುದಗಿದರೂ ತಪ್ಪುಗಾರನಿಗೆ ಶಿಕ್ಷೆಯನ್ನು ಮಾಡಿದವುದನ್ನೇ ಗುರಿಯಾಗಿಟ್ಟುಕೊಂಡಿದ್ದರೆ ಆ ಕೆಲಸದಲ್ಲಿ ಅದು ತಪ್ಪೆಂದೆಣಿಸಲ್ಪಡುವುದಿಲ್ಲವೆಂಬ ಶ್ರೀಕೃಷ್ಣನ ಅಭಿಪ್ರಾಯವು ಗದಾಯುದ್ಧಕ್ಕೆ ಆರಂಭವಾಗುವ ಮೊದಲು ಹೇಳಿದ ಈ ಮಾತುಗಳಿಂದ ಸ್ಪಷ್ಟವಾಗುತ್ತದೆ.

'ಭೀಮಸೇನನು ಸತ್ಯ ಪ್ರತಿಜ್ಞೆ ಮಾಡಿ ದುರ್ಯೋಧನನು ಅಧರ್ಮದಿಂದ ಯುದ್ಧಮಾಡಿ ನಿಶ್ಚಯವಾಗಿ ದುರ್ಯೋಧನನನ್ನು ಕೊಲ್ಲುವನು. ದೇವತೆಗಳು ವಾಯುವಿನಿಂದ ಪ್ರತಿಜ್ಞೆಯನ್ನು ಗದ್ದಲದಿಂದು ನಾವು ಕೇಳಿರುವೆವು. ಆದುದರಿಂದ ಈ ಭೀಮಸೇನನ ಪ್ರತಿಜ್ಞೆಯನ್ನು ಸಾರ್ಥಕವನ್ನಾಗಿ ಪರಿಪಾಲಿಸಲಿ.'

ದುರ್ಯೋಧನನು ಇಷ್ಟು ಕೇಡುಗಳನ್ನು ಮಾಡಿದ ದ್ರೋಹಿಯಾಗಿರುವಾಗ ಆತನು ಅಣ್ಣನೆಂದು ಕ್ಷಮಿಸುವುದು ಭೀಮಸೇನನಿಗೆ ಎಂದೂ ಸಮುಚಿತವಾಗಲಾರದು. ಕಾರ್ಯಾಕಾರ್ಯಗಳ ವಿಚಾರವಿಲ್ಲದ ಗುರುವನ್ನು ಸಹ ಪರಿತ್ಯಜಿಸಬೇಕೆಂದು ನೀತಿಶಾಸ್ತ್ರಜ್ಞರು ಹೇಳುತ್ತಿರುವಾಗ ಭೀಮಸೇನನು ದುರ್ಯೋಧನನಂತಹ ಅಣ್ಣನನ್ನು ಹೊಡೆದು ಹಾಕಿದುದರಲ್ಲಿ ದೋಷವೇನೂ ಇಲ್ಲವೆಂಬುದು ಸ್ಪಷ್ಟವಿದೆ.

ಭೀಮಸೇನನು ಆಚರಿಸಿ ತೋರಿಸಿದ ಈ ನೀತಿಗೆ "ಮುಯ್ಯಿಗೆ ಮುಯ್ಯಿ" "ಶಠಂ ಪ್ರತಿಶಾಠ್ಯಂ" ಎಂದು ಹೇಳುವರು (ಮರಾಠಿಯಲ್ಲಿ ಈ ನೀತಿಗೆ "ಜಶಾಸ ತಸ" ಎಂದೆನ್ನುವರು) ಒಲಬರುತ್ತ ಕಲಿಪ್ರಾಬಲ್ಯದ ಈ ಕಾಲದಲ್ಲಿ 'ನಂರಿಗೆ ನಪ್ಪಾಸೇರು' ಆಗದೆ ಮನುಷ್ಯನು ಬದುಕುವಂತಿಲ್ಲ. ನಮಗೆ ಅನ್ಯಾಯವನ್ನು ಮಾಡಿದವನ ಸಂಗಡ ನಾವು ಹೇಗೆ ಆಚರಿಸಬೇಕೆಂಬೀ ವಿಷಯದಲ್ಲಿ ಕಲಿಯುಗದ ಆದಿಪ್ರವರ್ತಕನು ಭೀಮಸೇನನು. ಸರಿ ಕಲಿಯುಗದಲ್ಲಿ ಬಾಳಬೇಕೆಂದಿದ್ದರೆ ನೀವು ನನ್ನ ಆಚರಣೆಯನ್ನು ಅನುಸರಿಸಿರಿ ಎಂದು ಆತನು ನಮಗೆ ಬೋಧಿಸಿರುವನು. ವಾಯುದೇವರ ಅವತಾರವೆನಿಸಿದ ಭೀಮಸೇನನು ಯುಗಧರ್ಮಗಳನ್ನು ಚೆನ್ನಾಗಿ ಬಲ್ಲವನು. ಧರ್ಮರಾಜನ ನೀತಿಯನ್ನು ಆತನು ಆಚರಿಸಿ ತೋರಿಸಬಹುದಾಗಿತ್ತು. ಆದರೆ ದುರ್ಜನರಿಂದ ಸಜ್ಜನರು ನಾಶಹೊಂದಬಾರದೆಂದೇ ದುರ್ಜನರೊಡನೆ ಕಲಿಯುಗದಲ್ಲಿ ಹೇಗೆ ನಡೆಯಬೇಕೆಂಬುದನ್ನು ತೋರ್ಪಡಿಸಿರುವನು. ಪರರ ಅನ್ಯಾಯವನ್ನು ತಾಳಿಕೊಳ್ಳುವಂತಹ ಸತ್ವವನ್ನೂ, ಧೂರ್ತರಿಗೆ ಮುಯ್ಯಿಗೆ ಮುಯ್ಯಿ ಮುಟ್ಟಿಸುವ ಬಲವನ್ನೂ ಭೀಮಸೇನನು ಸರ್ವರಿಗೂ ದಯಪಾಲಿಸಲಿ!

ಅಮೇರಿಕದಲ್ಲಿರುವ ೨೭ ಸಾವಿರ ನಾಜಿ ಯುದ್ಧಕೈದಿಗಳನ್ನು ಆಗ್ನೇಯ ಅಮೇರಿಕ ಪ್ರದೇಶಗಳಲ್ಲಿ ವ್ಯವಸಾಯ ಮತ್ತು ಕೈಗಾರಿಕೆ ಕೆಲಸಮಾಡಲು ಕಳುಹಿಸಲಾಗುವುದು. ಅದರ ೫೦೦ ಮಾಜಿ ನಾಜಿ ಗಣಿಕೆಲಸಗಾರರನ್ನು ಜರ್ಮನಿಯಲ್ಲಿ ಗಣಿ ಕೆಲಸ ಮಾಡಲು ವಾಪಸು ಕಳುಹಿಸಲಾಗುವುದೆಂದು ಹೇಳಲಾಗುತ್ತಿದೆ.

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಸಟಿ (೭ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶೆ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೨ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೭ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಲಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ)	೩ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೩ ಆಣೆ
ಶ್ರೀರೇಣುಕಾಚಾರ್ಯಶತಕ (೩ನೆಯ ಆವೃತ್ತಿ)	೩ ಆಣೆ
ಶ್ರೀಗುರುತತ್ತ್ವಪದಗಳು (೩ನೆಯ ಆವೃತ್ತಿ)	೩ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೩ ಆಣೆ
ಶಿವಶಕ್ತಿವಿಲಾಸ	೩ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ-ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೩ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಭಾಷಣವು (೧೮೧)	೩
ಸದ್ಬೋಧರತ್ನಾವಳಿ	೮
ಸಿದ್ಧಾಂತಸಾರಾವಳೀ (ಶ್ರೀಲೋಚನಶಿವಾಚಾರ್ಯಕೃತ)	೧೨
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨
ಶಿವಸೂತ್ರಸಿದ್ಧಾಂತದರ್ಪಣ	೧೨
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ೩ನೆಯ ಆವೃತ್ತಿ)	೧।
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಶ್ರೀಕರಭಾಷ್ಯಂ (ಸಂಸ್ಕೃತ)	೧। ರೂ
ಸಚಿತ್ರ ರೇಣುಕವಿಜಯ (೩ನೆಯ ಆವೃತ್ತಿ)	೧॥ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮುದ್ರಿತ ಫೋಟೋಗಳ ಸಹಿತ)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ವ್ಯಾಖ್ಯಾನ ಸಹಿತ)	೩ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೩ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿದ ಪುಸ್ತಕ)	೩ ರೂ
ವೀರಶೈವಸಿದ್ಧಾಂತಸುಧಾಕರ	೩ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	4 A
The Philosophical Aspect of Virasaivism (*English*)	8 A
Speeches by Pandit Shri Kashinatha Shastriji (*English*)	12 A
लिंगधारणचंद्रिका (संस्कृत)	३
वीरशैवरत्न (मराठी)	५
महानारायणोपनिषत् (वीरशैवभाष्य-संस्कृत)	६
सिद्धांतशिखामणि (मूल)	८ आ
नंदिकेश्वरकारिका (संस्कृत)	२ आ

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮ. ಮುದ್ರಿಸಿ ಪ್ರಕಟಿಸಲ್ಪಟ್ಟಿದೆ.

TERED No M 2266 ॥ ಶ್ರೀಜಗದ್ಗುರು ಪಂಚಾಚಾರ್ಯೇಭ್ಯೋ ನಮಃ ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾಃ ಸಂಚಾರಪೀಠಾಧಿಪಾಃ । ಪಂಚಕ್ಲೇಶವಿನಾಶಕಾಃ ಪರತರಶ್ರೀಪಂಚಲಿಂಗೋದ್ಭವಾಃ
ಪಂಚಾಚಾರನಿಯಾಮಕಾಃ ಪರಿಲಸತ್ಪಂಚಾಕ್ಷರೀಬೋಧಕಾಃ ಪಂಚಾಚಾರ್ಯಜಗದ್ಗುರೂತ್ತಮವರಾಃ ಪಾಲಿಪ್ಸ್ವದೀಯೋನಸಂ ॥

...ರಿಗೆ ೨ ರೂ ೮ ಆಣೆ ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೧೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೦ನೇ ಸೆಪ್ಟೆಂಬರ್ ೧೯೪೫ [ಸಂಚಿಕೆ ೧೭

...ರಶೈವಮಾಹೇಶ್ವರಸಂಘದ ಠರಾವುಗಳು

...ಯುತ ಸಿ ಕೆ ಒಡೆಯರ ಬಿ ಎ ಎಲ್ ಎಲ್ ಬಿ, ...ರು ಧಾರವಾಡ ಇವರ ಅಧ್ಯಕ್ಷತೆಯಲ್ಲಿ ತಾರೀಖು ...ರ ೨೫ ನೇ ದಿವಸ ಸಾಯಂಕಾಲ ೬॥ ಘಂಟೆಗೆ ...ಡದಲ್ಲಿ ಕೂಡಿದ ವೀರಶೈವ ಮಾಹೇಶ್ವರ ...ನಸಮಿತಿಯ ಸಾಧಾರಣ ಸಭೆಯಲ್ಲಿ ಪಾಸಾದ ...ವಿಗಳು ಕೆಳಗಿನಂತೆ ಇರುತ್ತವೆ —

... ವೀರಶೈವ ಮಠಗಳ ಆಸ್ತಿಯ ವಾರಸಾ ಹಕ್ಕಿನ ...ಗೊತ್ತುಮಾಡುವಂಥ ಮಸೂದೆಯನ್ನು ಮಿ॥ ...ವಿ ವೀರಭದ್ರಪ್ಪನವರು ತಯಾರಿಸಿ ಸದರ ...ದೆಯನ್ನು ಕಾಯದೆಮಾಡಲು ವಿಚಾರಮಾಡ ...ಹಿಂದೂ ಲಾ ಕೊಡಿಫಿಕೇಶನ್ ಕಮಿಟಿ ಅದವಾ ...ಕಮಿಟಿಗೆ ಕಳಿಸಿದ್ದು ಸದರ ತಯಾರಿಸಿದ ಮಸೂದೆ ... ವಿಚಾರಮಾಡಲಿಕ್ಕೆ ವೀರಶೈವ ಮಾಹೇಶ್ವರ ...ನ ಸಮಿತಿಯ ಸಾಧಾರಣ ಸಭೆಯು ತಾ ...ರಲ್ಲಿ ಕೂಡಿ ವೀರಶೈವ ಮಾಹೇಶ್ವರ ... ಆಸ್ತಿಗಳ ವಾರಸಾ ಹಕ್ಕುಗಳು ಸದರ ಮಠಗಳ ...ರಿಯಿಂದ ಬಂದ ಪದ್ಧತಿಗಳಮೇಲೆ ಮತ್ತು ...ವ ಧರ್ಮಗ್ರಂಥಗಳಮೇಲೆ ಅವಲಂಬಿಸಿರುವದ ...ಮಿ॥ ಹಾಳಭಾವಿಯವರು ತಯಾರಿಸಿದ ಮಸೂ... ಅನಾವಶ್ಯಕವಿರುವದೆಂದೂ ಮತ್ತು ಸದರ ...ದೆಯಲ್ಲಿ ಸೂಚಿಸಿದ ಕಾನೂನುಗಳು ವೀರಶೈವ ...ದ ಪದ್ಧತಿಗೂ ಮತ್ತು ಗ್ರಂಥಗಳಲ್ಲಿರುವ ಸಂಗತಿ... ವಿರುದ್ಧವಿರುತ್ತದೆಂದೂ ಈ ಸಭೆಯು ಠರಾಯಿ...

... ಸದರ ಮಸೂದೆಯಲ್ಲಿ ವಿರಕ್ತ ಮಠಗಳಿಗೆ ... ಅಧಿಕಾರಿಗಳಾಗಬೇಕು ಮತ್ತು ಪಟ್ಟಾಧಿಕಾರಿ ...ಗೆ ಯಾರು ಅಧಿಕಾರಿಗಳಾಗಬೇಕು ಎಂಬುವ ...ಶಾಸ್ತ್ರೋಕ್ತ ವಿಧಿಯಿಂದ ಲಗ್ನವಾಗಿರುವ ಲಿಂಗಾ...ಯಿತದಂಪತಿಗಳಿಂದ ಹುಟ್ಟಿದವನು ಸದಾಚಾರಿಯು ... ಸರ್ವ ಅಂಗಗಳುಳ್ಳ, ಲಿಂಗಾಯತ ವಿವಾಹಿತನು ... ಸದರ ಮಸೂದೆಯ ೬ ಮತ್ತು ೧೧ ನೇ ಕಲ್ಮು... ಸೂಚಿಸಿದ ಕಾನೂನುಗಳು ಲಿಂಗಾಯತ ಧರ್ಮ...ಗೂ ಮತ್ತು ಶಾಸ್ತ್ರಕ್ಕೂ ವಿರೋಧವಿದ್ದು ಸದರ ...ಗಳಲ್ಲಿಯ ಸೂಚನೆಗಳನ್ನು ಈ ಸಭೆಯು ಪೂರ್ಣ...ಸುತ್ತದೆ ಮತ್ತು ಯಾವನಾದರೊಬ್ಬ ಲಿಂಗಾಯತ ... ಬದಲು ಯೋಗ್ಯನಿದ್ದವೆಂದರೆ ವೀರಶೈವ ಮಾಹೇ...ವರ್ಗದವನು ಅಂತಾ ಇರಬೇಕೆಂದು ಮತ್ತು ಆತನೇ ... ಮಠಕ್ಕೂ ಮತ್ತು ಗುರುಸ್ಥಲ ಮಠಕ್ಕೂ ಸಂಪ್ರ... ಪದ್ಧತಿಪ್ರಕಾರ ಮತ್ತು ಧರ್ಮಗ್ರಂಥಗಳ ಪ್ರಕಾರ ...ರಿಯಾಗಲಿಕ್ಕೆ ಯೋಗ್ಯನಿರುತ್ತಾನೆಂದೂ ಈ ...ಯು ಸೂಚಿಸುತ್ತದೆ

ವಿರಕ್ತ ಮಠದ ವಿರಕ್ತ ಸ್ವಾಮಿಗಳನ್ನು ಮತ್ತು ...ಧಿಕಾರಿ ಅಥವಾ ಚರಮೂರ್ತಿಸ್ವಾಮಿಗಳನ್ನು ಇವರನ್ನು ನೇಮಿಸುವವರಿಗೆ ತೆಗೆಯಲಿಕ್ಕೆ ಇರತಕ್ಕಂಥ ಸದರ ಮಸೂದೆಯ ೨೭ ನೇ ಕಲ್ಮಿನಲ್ಲಿ ಸೂಚಿಸಿದ್ದು ಸಂಪ್ರದಾಯಕ್ಕೆ ಮತ್ತು ಧರ್ಮಗ್ರಂಥಗಳಿಗೂ ವಿರುದ್ಧವಿರುತ್ತದೆ ಅಧಿಕಾರ ಮಾಡುವಾಗ್ಗೆ ಯೋಗ್ಯರಾದವರನ್ನು ಆರಿಸಬೇಕೆಂದಿದ್ದು ಮುಂದೆ ಅವರನ್ನು ತೆಗೆಯಬೇಕೆಂಬುವದು ಧರ್ಮಶಾಸ್ತ್ರಗಳ ಮತ್ತು ಸಂಪ್ರದಾಯದ ಪದ್ಧತಿಗಳಿಗೆ ವಿರುದ್ಧವಾಗುತ್ತದೆಂದು ಈ ಸಭೆಯು ಠರಾಯಿಸುತ್ತದೆ

೬ ವಿರಕ್ತ ಮಠಗಳಿಗೆ ನೇಮಿಸಲ್ಪಡುವವರ ೨೧ ವರ್ಷದವರಿರಬೇಕೆಂದು ಮಸೂದೆಯ ೯ನೆಯ ಕಲಮಿನಲ್ಲಿ ಹೇಳಿರುವಾಗ್ಗೆ ಆತನ ಕಟಾಲಿಯಲ್ಲಿನ ವಿರಕ್ತ ಮಠಕ್ಕೆ ನಿಯಮಿಸಿದಲ್ಲಿ ಆತನ ತನ್ನ ಜನಕ-ಪಿರಾರ್ಜಿತದಲ್ಲಿಯ ಹಿಸೆಯ ಹಕ್ಕನ್ನು ಕಳೆದುಕೊಳ್ಳುವದಿಲ್ಲೆಂದು ಮಸೂದೆಯ ೧೯ ನೇ ಕಲ್ಮಿನಲ್ಲಿ ನಮೂದಿಸಿರುವದು ಅನಾವಶ್ಯಕವಿರುತ್ತದೆಂದು ಈ ಸಭೆಯು ಠರಾಯಿಸುತ್ತದೆ

೭ ಮಸೂದೆಯ ಕಲಮು ೪ (ಅ) ಇದರಲ್ಲಿ ಕಾಣಿಸಿದ ಲಿಂಗಾಯತ ಇದರ ವ್ಯಾಖ್ಯೆಯು, ಲಿಂಗಾಯತ ಧರ್ಮದಲ್ಲಿ ಕಾಣಿಸಿದ ನಿಯಮದ ಪ್ರಕಾರ ಗುರುವಿನಿಂದ ಲಿಂಗದೀಕ್ಷೆ ಹೊಂದಿ ಲಿಂಗವನ್ನು ತನ್ನ ದೇಹದ ಮೇಲೆ ಧಾರಣಮಾಡಿಕೊಳ್ಳುವವನು ಮತ್ತು ಷಟ್‌ಸ್ಥಳ ಸಿದ್ಧಾಂತ ತತ್ವವನ್ನು ಅಂಗೀಕರಿಸುವಂಥವನಿಗೆ ಲಿಂಗಾಯತ ಅಂತ ಕರೆಯತಕ್ಕದ್ದೆಂದು ಕಾಣಿಸಿದ್ದು ಕಡೆಯಭಾಗವನ್ನು ಅಂದರೆ "ಷಟ್‌ಸ್ಥಳ ಸಿದ್ಧಾಂತ ತತ್ವವನ್ನು ಅಂಗೀಕರಿಸುವವನು ಎಂಬುವದು ಅನಾವಶ್ಯಕವಿದ್ದು, ಅದನ್ನು ತೆಗೆಯಬೇಕೆಂದೂ ಈ ಸಭೆಯು ಠರಾಯಿಸುತ್ತದೆ

ಇವುಗಳನ್ನು ಮಿ॥ ಎ ಆರ್ ಗೌಡರ ಬಿ ಎಸ್ ಸಿ, ಇವರು ಸೂಚಿಸಿದರು ಮತ್ತು ಮಿ॥ ರುದ್ರಯ್ಯಸ್ವಾಮಿ ಹಿರೇಮಠ ಇವರು ಅನುಮೋದಿಸಿದರು ಪ್ರೆಸಿಡೆಂಟರು ಮತಕ್ಕೆ ಹಾಕಲು, ಸೂಚನೆಗಳು ಸರ್ವಾನುಮತದಿಂದ ಪಾಸಾದವು

೮ ಈ ಸಭೆಯು ಪ್ರೆಸಿಡೆಂಟರಾದ ಮಿ॥ ಸಿ ಕೆ ಒಡೆಯರ ಇವರಿಗೆ ಈ ಠರಾವಿನ ನಕಲುಗಳನ್ನು ಹಿಂದೂ ಲಾ ಕೊಡಿಫಿಕೇಶನ್ ಕಮಿಟಿ ಮದ್ರಾಸ ಮತ್ತು ಅವಶ್ಯ ಕಂಡಲ್ಲಿ ಪ್ರಾಂತಿಕ ಮತ್ತು ಕೇಂದ್ರ ಸರಕಾರಕ್ಕೂ ವಿಚಾರಣೆಗೆ, ಮತ್ತು ವೀರಶೈವ ಮುಖ್ಯ ಮುಖ್ಯ ಮಠಗಳಿಗೆ ಮಾಹಿತಿಯ ಬಗ್ಗೆ ಕಳಿಸಲಿಕ್ಕೆ ಅಧಿಕಾರ ಕೊಟ್ಟಿರುತ್ತದೆಂದು ಈ ಸಭೆಯು ಠರಾಯಿಸುತ್ತದೆ.

ಇದನ್ನು ವೇ॥ ಗುರುಲಿಂಗಶಾಸ್ತ್ರಿಗಳು ಕೊಣ್ಣೂರು ಹಿರೇಮಠ ಗೌರವ ಕಾರ್ಯದರ್ಶಿ ವೀರಶೈವ ಮಾಹೇಶ್ವರ ಸಂಘಟನ ಸಮಿತಿ ಧಾರವಾಡ ಇವರು ಪ್ರಕಟಿಸಿದರು.

ಗೋಕರ್ಣ ಕ್ಷೇತ್ರದಲ್ಲಿ ವೀರಶೈವಮಠ

ಹುಬ್ಬಳ್ಳಿ ಟವನ್ನಿನಲ್ಲಿರುವ ಹನ್ನೆರಡು ಮಠದ ಶ್ರೀ ಚರಮೂರ್ತಿಸ್ವಾಮಿಗಳವರು ಸುಪ್ರಸಿದ್ಧವಾದ ಗೋಕರ್ಣ ಕ್ಷೇತ್ರದಲ್ಲಿ ಒಂದು ಮಠವನ್ನು ಕಟ್ಟಿಸಲು ಪ್ರಾರಂಭಿಸಿರುವ ವಿಷಯವು ಎಲ್ಲರಿಗೂ ತಿಳಿದೇ ಇದೆ ಈ ಮಹಾಕಾರ್ಯಕ್ಕಾಗಿ ಅನೇಕ ಜನರು ಧನಸಹಾಯ ಮಾಡುತ್ತಿದ್ದಾರೆ ಇತ್ತೀಚೆಗೆ ದಿವಾನ್ ಬಹದ್ದೂರ್ ಆರ್ ಎಸ್ ಹುಕ್ಕೇರಿಕರ ರಿಟೈರ್ಡ್ ಕಲೆಕ್ಟರ್ ಮುಂಬಾಯಿ ಇವರ ಈ ಮಹಾಕಾರ್ಯಕ್ಕಾಗಿ ೫೦೦ ರೂಪಾಯಿಗಳನ್ನು ಕಳಿಸಿಕೊಟ್ಟಿದ್ದಾರೆ ಈ ಮಹನೀಯರಿಗೆ ಜಗದಾಚಾರ್ಯರು ಸಕಲೇಷ್ಟಾರ್ಥಸಿದ್ಧಿಯನ್ನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ

ಇದಲ್ಲದೆ, ಹುಬ್ಬಳ್ಳಿ ತಾ ಬೀಡನಾಳ ಗ್ರಾಮದಲ್ಲಿ ರವರು ರಾ ಅಸುಂಡಿ ಚನ್ನಮಲ್ಲಪ್ಪನವರು ಗೋಕರ್ಣದಲ್ಲಿ ಕಟ್ಟಿಸಲ್ಪಡುವ ಮಠದಲ್ಲಿ ಗುರುಗಳ ಶಿವಪೂಜೆಯ ಬಗ್ಗೆ ಒಂದು ಮಂದಿರವನ್ನು ಕಟ್ಟಿಸುವದಕ್ಕೋಸ್ಕರ ೨೦೦೦ ರೂಪಾಯಿಗಳ ದಾನವನ್ನು ಮಾಡಿದ್ದಾರೆ, ಇದಲ್ಲದೆ ಈ ಕೆಳಗೆ ಕಂಡ ಮಹಾಶಯರು, ತಮ್ಮ ಶಕ್ತ್ಯನುಸಾರವಾಗಿ ದ್ರವ್ಯದಾನ ಮಾಡಿದ್ದಾರೆ

೫ ರೂ ವಿಶ್ವನಾಥಗೌಡ ರೇಣುಕೇಗೌಡರ, ಉಗರಗೋಳ, ೨೫ ರೂ ಚನ್ನಯ್ಯ ಹಿರೇಮಠ, ಸವದತ್ತಿ, ೫ ರೂ ಮಡಕವ್ವ, ವೇದಗೋಷ್ಟ ೨೫ ೧-೨-೦ ಎಲ್ಲಮ್ಮನ ಗುಡ್ಡದಲ್ಲಿ ಚಿಲ್ಲರೆ ವಸೂಲಿ ೧೦ ರೂ ಟಿ ಎಮ್ ರುದ್ರಯ್ಯ, ದಾವಣಗೆರೆ ೫ ರೂ ಮಹಾಲಿಂಗಯ್ಯ ಹಿರೇಮಠ, ದಾವಣಗೆರೆ, ೧೦ ರೂ ಫಕೀರಪ್ಪ ಕೋತಿನ ನರೇಗಲ್, ೭ ರೂ ಎ ಬಿ ಹಿರೇಮಠ, ೨ ರೂ ಶಿವಾನಂದಯ್ಯ, ಹಿರೇಮಠ, ಶಿಗ್ಗಾವಿ ೨೫ ರೂ ಮಹರುದ್ರಪ್ಪಾ, ಕೋಳಾಪುರ, ಒಂಕಾಪುರ ೨೫ ರೂ ಫಕೀರಪ್ಪ ಕೋರಿ, ೨೫ ರೂ ಫಕೀರಯ್ಯ ಹಿರೇಮಠ, ೧೦ ರೂ ಕೊಟ್ರಪ್ಪ ಮರಳ, ೫ ರೂ ಚನ್ನಬಸಪ್ಪ ಸೊಪ್ಪಣ್ಣವರ ೨ ರೂ ಪ್ರಭಪ್ಪಗಾಳಿ, ೫ ರೂ. ವೀರಪ್ಪ ಕೋರಿ, ಆಲದಕಟ್ಟಿ, ೫ ರೂ ಕಲ್ಲಪ್ಪ ಬೆಟಗೇರಿ, ಅದರಗುಂಚಿ

ಬೀಡನಾಳಗ್ರಾಮದಿಂದ

೨೫ ರೂ ಚನ್ನಮಲ್ಲಪ್ಪ ಅಸುಂಡಿ; ೧೦ ರೂ. ಗಡಿಗಪ್ಪ ಅಸುಂಡಿ ೧೦ ರೂ ಮಲ್ಲಪ್ಪ ಅಡವಿ, ೧೦ ರೂ ಮುದಕಪ್ಪ, ೧೦ ರೂ ಬಸವನಗೌಡ, ೫ ರೂ ರಾಮಣ್ಣಾ, ೫ ರೂ ಚೆನ್ನಪ್ಪ, ೫ ರೂ ಪರಪ್ಪ, ೫ ರೂ ಶಿವಬಸಪ್ಪ, ೨ ರೂ ಚನ್ನಬಸಪ್ಪ

೫ ರೂ ಭೋರವ್ವ ಮುಧೋಳ, ೧೦ ರೂ ಚನ್ನಬಸಯ್ಯ ಸುಂದರಪಿ ಮಠ, ೫ ರೂ ಪರ್ವತಪ್ಪ, ಬೆಟಗೇರಿ, ಧಾರವಾಡ, ೩೪ ೧೧ ೦ ವೇ॥ ವಿರೂಪಾಕ್ಷಯ್ಯನವರು ಹಿರೇಮಠ, ಧಾರವಾಡ ಇವರು ವಸೂಲಿಮಾಡಿ ಕಳಿಸಿದ್ದು ೪ ೪-೦ ಚಿಲ್ಲರ ವಸೂಲಿ

[೩ನೆಯ ಪುಟವನ್ನು ನೋಡಿ]

ಪಂಚಾಚಾರ್ಯಪ್ರಭಾ.

೧೯೪೫ನೆಯ ಸೆಪ್ಟೆಂಬರ್ ತಾ|| ೧೦ನೇ ಸೋಮವಾರ

ಜಪಾನು ಮಿತ್ರರ ಅಡಳಿತಕ್ಕೊಳಪಟ್ಟಿತು

ಯೂರೋಪುಖಂಡದಲ್ಲಿ ಸಣ್ಣ ದ್ವೀಪವಾಗಿರುವ ಇಂಗ್ಲೆಂಡು ದೇಶವು ತನ್ನ ಪ್ರತಿಭೆಯಿಂದ ಸಮುದ್ರದ ರಾಜನೆನಿಸಿ ಹೇಗೆ ಸುಪ್ರಸಿದ್ಧವಾಗಿದೆಯೋ ಅದರಂತೆಯೇ ಪೆಸಿಫಿಕ್ ಸಾಗರದಲ್ಲಿ ಜಪಾನ್ ದೇಶವು ಅತಿ ಸಣ್ಣದಾಗಿದ್ದಾಗ್ಯೂ ತನ್ನ ಅಸದೃಶವಾದ ಪ್ರಯತ್ನದಿಂದ ಕೇವಲ ೫೦-೬೦ ವರುಷಗಳಲ್ಲೇ ಉನ್ನತಿಯ ಶಿಖರವನ್ನೇರಿ ಪ್ರಪಂಚದಲ್ಲಿ ಎಲ್ಲರ ಗಮನ ಸೆಳೆಯಿಸಿಕೊಂಡಿತು ಅದರ ವಾಣಿಜ್ಯ ಕೈಗಾರಿಕಾದಿ ಶಕ್ತಿಗಳು ಬೆಳೆದ ಹಾಗೆಲ್ಲಾ ರಾಜ್ಯವಿಸ್ತರಣದ ಆಶೆಯೂ ಅದಕ್ಕುಂಟಾಯಿತು ಈ ಆಶೆಯಿಂದ ಅದು ಮೊದಲು ತನ್ನ ಪಕ್ಕದ ರಾಷ್ಟ್ರವಾದ ಚೀಣಾದೇಶದಿಂದ ಕೊರಿಯಾ ಪ್ರಾಂತವನ್ನು ಕಿತ್ತುಕೊಂಡಿತು ಹಿಂದಿನ ಜಾರ್ ಚಕ್ರವರ್ತಿ ಕಾಲದಲ್ಲಿ ರಷ್ಯದ ಮೇಲೆ ಯುದ್ಧ ಹೂಡಿ ಅದರ ವಶದ ಕೆಲವು ಪ್ರದೇಶಗಳನ್ನು ಆಕ್ರಮಿಸಿಕೊಂಡಿತು ಇದಾದ ಕೆಲವು ಕಾಲದ ಮೇಲೆ ಚೀಣದ ಭಾಗವಾದ ಮಾಂಚೂರಿಯದಲ್ಲಿ ಚೀಣಾದ ರಾಜಕೀಯ ಪರಿವಾರವನ್ನು ತನ್ನ ಪಕ್ಷದಿಂದ ಪಟ್ಟಕಟ್ಟಿ ಅಲ್ಲಿಯ ಆಡಳಿತದಲ್ಲೂ ತನ್ನ ಪ್ರಭಾವವನ್ನು ನಡೆಯಿಸಿತು ಕಳೆದ ೧೯೧೪ ನೇ ಇಸವಿಯ ಮಹಾಯುದ್ಧದಲ್ಲಿ ಬ್ರಿಟಿಷರ ಪಕ್ಷವನ್ನು ವಹಿಸಿ ಜರ್ಮನಿಯ ಮೇಲೆ ಯುದ್ಧವನ್ನು ಸಾರಿತು ಆ ಯುದ್ಧದಲ್ಲಾದ ವಿಜಯದಿಂದ ಪೆಸಿಫಿಕ್ ಸಾಗರದಲ್ಲಿಯ ಕೆಲವು ಮುಖ್ಯ ಮುಖ್ಯ ದ್ವೀಪಗಳು ಜಪಾನಿನ ಕೈಸೇರಿದವು ಹೀಗೆ ತಡೆಯಿಲ್ಲದೆ ಉನ್ನತಿಯ ದಾರಿಯಲ್ಲಿ ಅಡಿಯಿಡುತ್ತಿದ್ದ ಜಪಾನು ಪೂರ್ವದೇಶವನ್ನೆಲ್ಲಾ ಜಯಿಸಿ ತನ್ನದೇ ಆದ ಚಕ್ರಾಧಿಪತ್ಯವನ್ನು ಸ್ಥಾಪಿಸಬೇಕೆಂಬ ದುರಾಶೆಯಿಂದ ಮೊದಲು ಚೀಣಾದ ಮೇಲೆ ಯುದ್ಧವನ್ನು ಹೂಡಿತು ಈ ಯುದ್ಧವು ಒಂದೇ ಸಮನಾಗಿ ೮ ವರುಷಗಳ ಕಾಲ ನಡೆದರೂ ದೇಶವತ್ಸಲರೂ, ಸ್ವಾತಂತ್ರ್ಯಪ್ರಿಯರೂ ಆದ ಚೀಣರನ್ನು ಪೂರ್ಣ ಜಯಿಸಲಾಗಲಿಲ್ಲ ಅಷ್ಟರಲ್ಲಿ ಯೂರೋಪಿನಲ್ಲಿ ಜರ್ಮನಿಯು ಮಿತ್ರರಾಷ್ಟ್ರಗಳ ಮೇಲೆ ಯುದ್ಧವನ್ನು ಪ್ರಾರಂಭಿಸಿ ವಿದ್ಯುದ್ವೇಗದಿಂದ ಒಂದು ರಾಜ್ಯವಾದ ಮೇಲೆ ಒಂದು ರಾಜ್ಯದಂತೆ ಯೂರೋಪನ್ನೆಲ್ಲಾ ಜಯಿಸಿ ಜಯಭೇರಿ ಹೊಡೆಯತೊಡಗಿತು ಇದನ್ನು ನೋಡುತ್ತಿದ್ದ ಜಪಾನು ನ್ಯಾಯಾನ್ಯಾಯವನ್ನು ವಿಮರ್ಶಿಸದೆ ಜಯಶಾಲಿಯಾದವನ ಕಡೆ ಸೇರುವದರಿಂದ ತನ್ನ ರಾಜ್ಯತೃಷ್ಣೆಯು ಶಮನವಾಗಬಹುದೆಂದು ಭಾವಿಸಿ, ಇಂಗ್ಲೆಂಡ್, ಅಮೆರಿಕಗಳೊಡನಿದ್ದ ತನ್ನ ಸ್ನೇಹವನ್ನು ದೂರೀಕರಿಸಿ ಇಂಡೋಚೀಣಾ, ಬರ್ಮಾ ಮಲಯಾ ಪ್ರದೇಶಗಳನ್ನೂ ಫಿಲಿಪೈನ್ಸ್ ಜಾವಾ ಸುಮಾತ್ರಾ, ಬೋರ್ನಿಯೋ ಮೊದಲಾದ ದ್ವೀಪಗಳನ್ನೂ ಆಕ್ರಮಿಸಿಕೊಂಡಿತು ಇಷ್ಟರಲ್ಲಿ ರಷ್ಯವು ತಿರುಗಿಬಿದ್ದು ಜರ್ಮನರನ್ನು ಸೋಲಿಸಿ ಹಿಂದಟ್ಟಲು ಪ್ರಾರಂಭಿಸಿತು ಬ್ರಿಟಿಷ್, ಅಮೆರಿಕ, ಭಾರತೀಯ ಸೈನ್ಯಗಳು ಆಫ್ರಿಕದಿಂದ ಜರ್ಮನರನ್ನು ಹಿಂದಕ್ಕಟ್ಟಿ ಇಟಲಿಯ ಮೇಲೆ ದಾಳಿ ಇಟ್ಟವು ಈ ವಿಧವಾದ ಜರ್ಮನಿಯ ಸೋಲನ್ನು ನೋಡಿದ ಕೂಡಲೆ ಜಪಾನು ತನ್ನ ಆಕ್ರಮಣವನ್ನು ನಿಲ್ಲಿಸಿ ಆತ್ಮರಕ್ಷಣೆಯಲ್ಲಿ ತೊಡಗಿತು ಮಿತ್ರಸೈನ್ಯಗಳು ಯೂರೋಪಿನಲ್ಲಿಳಿದು ಜರ್ಮನಿಯನ್ನು ಮುತ್ತಿ ಸೋಲಿಸಿದವು

ಜರ್ಮನಿಯು ಶರಣಾದ ಕೂಡಲೇ ಜಪಾನಿನ ಸೋಲೂ ನಿಶ್ಚಯವಾಯಿತು ಮಿತ್ರರಾಷ್ಟ್ರದವರು ಪೋಟ್ಸ್‌ಡಾಂ ಎಂಬಲ್ಲಿ ಸೇರಿ ಜಪಾನು ಕೂಡಲೆ ಯಾವ ಕರಾರೂ ಇಲ್ಲದೆ ಶರಣಾಗಬೇಕೆಂದೂ ಇಲ್ಲದಿದ್ದರೆ ಅದನ್ನು ನಾಶಮಾಡಲಾಗುವುದೆಂದೂ ಎಚ್ಚರಿಕೆ ಕೊಟ್ಟರು ಆದರೆ ಕರಾರಿಲ್ಲದ ಶರಣಾಗತಿಗೆ ಜಪಾನು ಒಪ್ಪಲಿಲ್ಲ ಇದರಿಂದ ಅಮೇರಿಕವು ಹೊಸದಾಗಿ ತಯಾರಿಸಿದ ಭಯಂಕರ ಅಸ್ತ್ರವಾದ ಅಟಂ ಬಾಂಬನ್ನು ಜಪಾನಿನ ಮೇಲೆ ಪ್ರಯೋಗಿಸಿದರು ಈ ಬಾಂಬಿನ ಪ್ರಯೋಗದಿಂದ ಒಂದೇ ಸಾರಿ ೫೬ ಲಕ್ಷ ಜನರನ್ನು ಕಳೆದುಕೊಂಡ ಜಪಾನು ತನ್ನ ಪ್ರತಿಭಟನೆಯು ನಿಷ್ಪ್ರಯೋಜನವೆಂಬುದನ್ನೂ ಅದರ ಭಯಂಕರ ಪರಿಣಾಮವನ್ನೂ ಅರಿತು ಕೂಡಲೆ ಶರಣಾಗುವುದಾಗಿ ಒಪ್ಪಿಕೊಂಡಿತು ದೈವಾಂಶಸಂಭೂತರೆಂದು ಎಣಿಸಲ್ಪಟ್ಟಿರುವ ಜಪಾನ್ ಚಕ್ರವರ್ತಿಗಳು ರೇಡಿಯೋ ಮೂಲಕ ತಮ್ಮ ಪ್ರಜೆಗಳನ್ನೂ ಸೈನಿಕರನ್ನೂ ಸಂಬೋಧಿಸಿ ಯುದ್ಧವನ್ನು ನಿಲ್ಲಿಸಬೇಕೆಂದೂ ಜಪಾನಿನ ಕಲ್ಯಾಣಕ್ಕಾಗಿಯೇ ಸದ್ಯಃ ಶತ್ರುಗಳಿಗೆ ಶರಣಾಗಬೇಕೆಂದೂ ತಮ್ಮ ಸಂದೇಶವನ್ನು ಕಳಿಸಿದರು

ಶರಣಾಗತಿಯನ್ನು ಒಪ್ಪಿಸಿಕೊಳ್ಳಲು ಪೆಸಿಫಿಕ್ ಕ್ಷೇತ್ರದ ಕಮ್ಯಾಂಡರ್-ಇನ್ ಚೀಫ್ ಜ|| ಮೆಕ್‌ಆರ್ಥರವರು ಜಪಾನಿಗೆ ಹೋಗಬೇಕೆಂದೂ ಅಮೆರಿಕದ ಮಿಸ್ಸೌರಿ ನೌಕೆಯ ಮೇಲೆ ಇದು ನಡೆಯಬೇಕೆಂದೂ ಮಿತ್ರ ಸೈನಿಕರು ಜಪಾನಿನ ತೀರಪ್ರದೇಶವನ್ನೆಲ್ಲಾ ಆಕ್ರಮಿಸಿಕೊಳ್ಳಲು ಅವಕಾಶ ಕೊಡಬೇಕೆಂದೂ ಜಪಾನಿನ ಎಲ್ಲ ಕಮ್ಯಾಂಡರುಗಳೂ ಮಿತ್ರ ಸೈನ್ಯಾಧಿಕಾರಿಗಳ ಆಜ್ಞಾಪಾಲನ ಮಾಡಬೇಕೆಂದೂ ಮಿತ್ರ ಸೈನಿಕರಿಗೆ ಯಾವವಿಧವಾದ ಪ್ರತಿಭಟನೆಯನ್ನೂ ತೋರದೆ ಸ್ನೇಹದಿಂದ ವರ್ತಿಸಬೇಕೆಂದೂ ಕೇಳಲಾಯಿತು ಅದರಂತೆ ನಡೆಯುವದಾಗಿ ಒಪ್ಪಿದ ಮೇಲೆ ಮಿತ್ರಯೋಧರು ಜಪಾನಿನಲ್ಲಿಳಿದು ಎಲ್ಲ ಆಯಕಟ್ಟಿನ ಸ್ಥಳಗಳನ್ನೂ ಆಕ್ರಮಿಸಿಕೊಂಡಿದ್ದಾರೆ ತೀರಪ್ರದೇಶವೆಲ್ಲಾ ಮಿತ್ರರ ವಶವಾಗಿದೆ ಈ ತಿಂಗಳು ೨ನೆಯ ತಾರೀಖಿನ ದಿವಸ ಬೆಳಗ್ಗೆ ೬ ಘಂಟೆಗೆ ಟೋಕಿಯೋ ಬಳಿ ಸಮುದ್ರದಲ್ಲಿ ನಿಂತ ಅಮೆರಿಕದ ಯುದ್ಧ ನೌಕೆಯಾದ ಮಿಸ್ಸೌರಿ ನೌಕೆಯಲ್ಲಿ ಜಪಾನಿ ಶರಣಾಗತಿ ಪತ್ರಕ್ಕೆ ರುಜುವಾಯಿತು ಮೊದಲು ಜಪಾನ್ ವಿದೇಶಾಂಗ ಮಂತ್ರಿ ಶಿಗಾಮಿಟ್ಸುರವರು ರುಜು ಹಾಕಿದರು ಆ ಮೇಲೆ ಜಪಾನಿನ ಇಂಪೀರಿಯಲ್ ಜನರಲ್ ಸ್ಟಾಫಿನ ಮುಖ್ಯಾಧಿಕಾರಿಗಳು ರುಜು ಹಾಕಿದರು ಅನಂತರ ಜ|| ಮೆಕ್ ಆರ್ಥರರೂ ಆದಾದ ಮೇಲೆ, ಅಮೆರಿಕ ರಷ್ಯಾ, ಫ್ರಾನ್ಸ್, ಕೆನಡಾ, ನ್ಯೂಜೀಲೆಂಡ್ ಆಸ್ಟ್ರೇಲಿಯಾ ಮತ್ತು ಚೀಣಾ ಪ್ರತಿನಿಧಿಗಳೂ ರುಜು ಹಾಕಿದರು ಈಗ್ಗೆ ೨ ಸಾವಿರ ವರುಷಗಳಿಂದಲೂ ಸ್ವಾತಂತ್ರ್ಯವನ್ನು ಅನುಭವಿಸುತ್ತ ಅನ್ಯರಿಗೆ ತಲೆಬಾಗುವದೆಂಬುದನ್ನೇ ಅರಿಯದ ಜಪಾನು ಸಾಮ್ರಾಜ್ಯಸ್ಥಾಪನೆಯ ದುರಾಶೆಗೆ ಒಳಗಾಗಿ ತನ್ನ ಸ್ವಾತಂತ್ರ್ಯವನ್ನು ಬಲಿಕೊಟ್ಟು ಪರದಾಸ್ಯಕ್ಕೀಡಾಯಿತು ಇದು ದುರಾಶೆಯ ಫಲವಲ್ಲದೆ ಬೇರೆಯಲ್ಲ ದುರಾಶೆಯು ಅನರ್ಥಕ್ಕೆ ಕಾರಣವೆಂಬುದನ್ನು ಸರ್ವರೂ ಗ್ರಹಿಸಿ ದುರಾಶೆಗೊಳಗಾಗಬಾರದೆಂದೂ, ಇಂತಹ ಬುದ್ಧಿಯನ್ನು ದೇವರು ಸರ್ವರಿಗೂ ಅನುಗ್ರಹಿಸಲೆಂದೂ ಪ್ರಾರ್ಥಿಸುತ್ತೇವೆ

ವರ್ತಮಾನಸಂಗ್ರಹ

ಬರ್ಲಿನ್ನಿನ ಪುನರ್ರಚನೆಗೆ ೨೫ ವರ್ಷ ಬೇಕು !

ಮಿತ್ರ ವಿಮಾನ ದಾಳಿಗಳಿಂದ ಬರ್ಲಿನ್ನಿನ ೧೫ ಲಕ್ಷ ಭವನಗಳ ಪೈಕಿ ೧೦ ಲಕ್ಷಕ್ಕಿಂತ ಹೆಚ್ಚು ಮನೆಗಳು ನಾಶವಾಗಿವೆ ಬರ್ಲಿನ್ನಿನ ಪುನರ್ರಚನೆಗೆ ಕೊನೆಯಪಕ್ಷ ೨೫ ವರ್ಷಗಳಾದರೂ ಬೇಕಾಗುತ್ತದೆಂದು ಅಂದಾಜು ಮಾಡಲಾಗಿದೆ

೨೫ ಸಾವಿರ ಅಡಿ ಎತ್ತರದಲ್ಲಿ ಶಯನ

ಭೂಮಟ್ಟದಿಂದ ೨೫ ಸಾವಿರ ಅಡಿ ಎತ್ತರದಲ್ಲಿ ಹಾರಾಡುತ್ತಾ ೮೦ ಮಂದಿ ಪ್ರಯಾಣಿಕರಿಗೆ ಶಯನಾಸನಗಳನ್ನು ಒದಗಿಸಿಕೊಡುವ ವಿಮಾನ ರಚನೆಗಾಗಿ ಬ್ರಿಟನ್ ಪ್ರಯತ್ನ ಮಾಡುತಿದೆ ಅಷ್ಟು ಎತ್ತರದಲ್ಲಿ ಚಳಿ ಒಹಳವಾಗಿರುತ್ತಾದ್ದರಿಂದ, ವಿಮಾನದಲ್ಲಿ ಹವಾಮಾನ ೮೦೦೦ ಅಡಿ ಎತ್ತರದಲ್ಲಿರುವ ಹವಾಮಾನದೊತನೆ ಹೋಲುವಂತೆ ಶಾಖ ಒದಗಿಸಲಾಗುವುದು ಈ ವಿಮಾನವು ಬಹುಶಃ ಗಂಟೆಗೆ ೩೮೮ ಮೈಲಿ ವೇಗದಿಂದ ಪ್ರಯಾಣ ಮಾಡಬಹುದು

ಜಪಾನಿ ಪಡೆಗಳಿಗೆ, ಪ್ರಜೆಗಳಿಗೆ ಜಪಾನಿ ಸಮ್ರಾಟರ ಸೂಚನೆ

ಜಪಾನಿನ ಚಕ್ರವರ್ತಿಗಳು ‘ ರಾಜನಿರೂಪ ’ ಹೊರಡಿಸಿ ತಿಳಿಸುತ್ತಾ— ಜಪಾನಿ ಪಡೆಗಳು ಶಸ್ತ್ರಾಸ್ತ್ರಗಳನ್ನು ಕೆಳಗಿಡುತ್ತಿವೆ, ಶರಣಾಗತಿಯ ವಿಧಿಗಳನ್ನೆಲ್ಲಾ ವಿಧೇಯತೆಯಿಂದ ಪಾಲಿಸುತ್ತವೆ ಪೋಟ್ಸ್‌ಡಾಂ ಘೋಷಣೆಯುಳ್ಳದೆ ಷರತ್ತಿಲ್ಲದೆ ಶರಣಾಗುವುದಕ್ಕೂ ನಾವು ಅಸ್ತು ಎಂದಿದ್ದೇವೆ ಜಪಾನಿ ಪ್ರಧಾನ ಶಿಬಿರದಲ್ಲಿರುವ ಪಡೆಗಳ ಶಸ್ತ್ರಸಜ್ಜಿತ ಪಡೆಗಳು, ಎಲ್ಲ ಕ್ಷೇತ್ರಗಳಲ್ಲಿರುವ ಜಪಾನಿ ಪಡೆಗಳು ಮಿತ್ರ ಮಹಾ ದಂಡನಾಯಕರು ಮಾಡುವ ಕಟ್ಟಪ್ಪಣೆಗಳಂತೆ ವಿಧೇಯತೆಯಿಂದ ಶಸ್ತ್ರಸನ್ಯಾಸ ಕೈಗೊಳ್ಳತಕ್ಕದ್ದು” ಎಂದು ತಿಳಿಸಿದ್ದಾರೆ

ಪಿತೃದೇವತೆಗಳಿಗೆ ಜಪಾನ್ ದುಃಖಪೂರಿತ ವರದಿ

“ ಮಿಸ್ಸೌರಿ ” ನೌಕೆಯಲ್ಲಿ ಜಪಾನ್ ಪ್ರತಿನಿಧಿಗಳು ಶರಣಾಗತಿಗೆ ಸಹಿ ಹಾಕಿದೊಡನೆಯೇ ಅವರು ಪ್ರಧಾನಿಯೊಡಗೂಡಿ ಅರಮನೆಗೆ ಸಮ್ರಾಟರಿಗೆ ವರದಿ ಮಾಡಲು ಹೋದರು ಜಪಾನಿ ಸಮ್ರಾಟರು ತಾವೇ ಖುದ್ದಾಗಿ ಪಿತೃದೇವತೆಗಳಿಗೆ ಪ್ರಾಚ್ಯದಲ್ಲಿ ಯುದ್ಧ ಮುಗಿದ ವಿಷಯ ಕುರಿತು ವರದಿ ಮಾಡುತ್ತಾರೆ ಎಂದು ಟೋಕಿಯೋ ರೇಡಿಯೋ ತಿಳಿಸಿದೆ ಜಪಾನಿ ಸಮ್ರಾಟರು ಆಗಾಗ್ಗೆ ತಮ್ಮ ಹಿರಿಯರ ಸಮಾಧಿಯ ಬಳಿಗೆ ಹೋಗಿ ಪ್ರಾಮುಖ್ಯ ವಿಷಯಗಳನ್ನು ಕುರಿತು ವರದಿ ಮಾಡುವುದು ಪ್ರಾಚೀನ ಸಂಪ್ರದಾಯವಾಗಿದೆ

ಜಪಾನರ ದುಷ್ಕೃತ್ಯ

ಜಪಾನರು ಮಿತ್ರ ಯುದ್ಧ ಬಂದಿಗಳ ಮೇಲೆ ನಡೆಸಿರುವ ದೌರ್ಜನ್ಯದ ಬಗ್ಗೆ ಅಮೆರಿಕನ್ ಸಂಯುಕ್ತ ಸಂಸ್ಥಾನದ ಸ್ಟೇಟ್ ಸೆಕ್ರೆಟರಿ ಬೈರ್ನ್‌ರವರು ಸ್ವಿಸ್ ಸರ್ಕಾರದ ಮೂಲಕ ಜಪಾನಿಗೆ ಪ್ರತಿಭಟನೆ ಸೂಚಿಸಿದ್ದಾರೆ ಇದುವರೆಗೆ ೨೬೦ ಜಪಾನಿ ಕೃತ್ಯಗಳ ಬಗ್ಗೆ ಪ್ರತಿಭಟನೆ ವ್ಯಕ್ತಪಡಿಸಲಾಗಿದೆ ೧೫೦ ಅಮೆರಿಕನ್ ಸೈನಿಕರನ್ನು ರಕ್ಷಣಾ ಸ್ಥಾನಬಂದರಲ್ಲಿ ನುಗ್ಗಿಸಿ ಅವರ ಮೇಲೆ ಬೆಂಕಿ ಹೊತ್ತಿಸಿದರೆಂದೂ ಆದರೆ ಅದರಿಂದ ಹಲವರು ಪಾರಾಗಿ ಹೊರಕ್ಕೆ ಬಂದಾಗ ಅವರನ್ನು ಹಿಡಿದು ಗುಂಡಿಗೆ ಕೊಟ್ಟದ್ದಲ್ಲದೆ ಕೆಲವರನ್ನು ಜೀವಸಹಿತ ಸುಟ್ಟರೆಂದೂ ಜಪಾನರ ಮೇಲೆ ಆಪಾದನೆ ಹೊರಿಸಲಾಗಿದೆ

ಅಮೆರಿಕನ್ ಸೈನಿಕರಿಗೆ ಸೂಚನೆ

ಜಪಾನೀ ಜನಗಳಲ್ಲಿ ಅಮೆರಿಕನ್ ಅಧಿಕಾರಿಗಳು ಮತ್ತು ಸೈನಿಕರು ಸಭ್ಯತೆಯಿಂದ ನಡೆದುಕೊಳ್ಳಬೇಕು ಜಪಾನಿಯರ ಜನಾಂಗದ ಅಥವಾ ಜಪಾನಿಯರ ಬಗ್ಗೆ ಅಪಮಾನಕರವಾದ ಯಾವ ಮಾತುಗಳನ್ನೂ ಉಪಯೋಗಿಸಬಾರದೆಂದು ಜಪಾನಿನ ಆಕ್ರಮಣ ಸೈನಿಕರಿಗೆ ಅಮೆರಿಕನ್ ಸರ್ಕಾರವು ಆಜ್ಞೆಮಾಡಿದೆ ಅತಿ ಪರಿಚಯವಾಗಲಿ ಅಥವ ನಿಂದಾಸ್ಪದವಾದ ರೀತಿಯಲ್ಲಿ ವರ್ತಿಸದಂತೆ ನೋಡಿಕೊಳ್ಳಬೇಕೆಂದು ಪೆಸಿಫಿಕ್ ನೌಕಾ ಅಧಿಕಾರಿಗಳಿಗೆ ತಿಳಿಸಲಾಗಿದೆ

ಅಮೆರಿಕದವರೊಬ್ಬರ ಭವಿಷ್ಯವಾಣಿ

‘ ಕ್ರಿ ಶ ೩೬೬೦ ರಲ್ಲಿ ಈಗಿರುವ ಪ್ರಪಂಚ ನಾಶವಾಗುತ್ತದೆ ೧೯೯೯ ರಲ್ಲಿ ಇನ್ನೊಂದು ಮಹಾ ಸಂಗ್ರಾಮ ಆಗುತ್ತದೆ ಜೀವಂತನಾಗಿರುವ ಹಿಟ್ಲರ್ ೬ ತಿಂಗಳಲ್ಲಿ ಸಿಕ್ಕಿಬೀಳುತ್ತಾನೆ ” ಎಂದು ಅಮೆರಿಕದ ನ್ಯೂಯಾರ್ಕಿನಲ್ಲಿರುವ ಹೆನ್ರಿ ರಾಬರ್ಟ್ಸ್ ಎಂಬ ಪುಸ್ತಕ ವ್ಯಾಪಾರಿ ಭವಿಷ್ಯ ಹೇಳಿದ್ದಾನೆ ಈತನು ೧೯೪೫ನೆ ಆಗಸ್ಟ್ ೯ ನೇ ತಾ|| ಯುದ್ಧ ಕೊನೆಗಾಣುತ್ತದೆ ಸೆಪ್ಟೆಂಬರ್ ೧ ನೇ ತಾ|| ಜಪಾನ್ ಅಧಿಕೃತವಾಗಿ ಕರಾರು ಪತ್ರಕ್ಕೆ ಮುದ್ರೆಯೊತ್ತುತ್ತದೆ ಎಂದು ೧೯೪೨ ರಲ್ಲಿ ಭವಿಷ್ಯ ಹೇಳಿ ಸಾಕ್ಷಿಗಳ ಸಮಕ್ಷಮ ಬರೆದಿಟ್ಟಿದ್ದ ಪತ್ರವನ್ನು ರುಜುವಾತಾಗಿ ಪ್ರದರ್ಶಿಸಿದ್ದಾನೆ

ಜಪಾನಿಯರ ಆತ್ಮಹತ್ಯ

ಜಪಾನನ್ನು ಆಕ್ರಮಿಸುವ ಮಿತ್ರಸೇನೆಗಳ ಪ್ರವೇಶ ...ದಂತೆಲ್ಲಾ ಜಪಾನಿಯರ ಆತ್ಮಹತ್ಯವೂ ಹೆಚ್ಚುತ್ತಿ...ಂತೆ ಕೈಬಾಂಬನ್ನು ಪ್ರಯೋಗಿಸಿಕೊಂಡು ಇಬ್ಬರು ...ಕರು ಆತ್ಮಹತ್ಯ ಮಾಡಿಕೊಂಡರು ಜನರಲ್ ...ಆರ್ಥರವರು ಬಿಡಾರ ಮಾಡಲಿರುವ ನ್ಯೂಗ್ರಾಂಡ್ ...ಟೆಲಿನಲ್ಲಿ ಇಬ್ಬರು ಸಿವಿಲಿಯನರು ಹೋಟೇಲಿನ ...ಡೆಗೆ ತಮ್ಮ ತಲೆಯನ್ನು ಹೊಡೆದುಕೊಂಡು ಪ್ರಾಣ ...ರು ಓಸಿಮಾ ದ್ವೀಪದ ವಿಹಾರಾ ಜ್ವಾಲಾಮು... ಕುಂಡದಲ್ಲಿ ಅನೇಕ ಜಪಾನಿಯರು ಹಾರಿಕೊಂಡು ...ಬಿಟ್ಟರೆಂದು ಹೇಳಲಾಗಿದೆ

ಎರಡನೆ ಮಹಾಯುದ್ಧ ಕೊನೆಗೊಂಡಿತು

ಜರ್ಮನಿ ಯುದ್ಧ ಮುಗಿದು ನಾಲ್ಕು ತಿಂಗಳಾಯಿತು ಜರ್ಮನಿ ಯುದ್ಧ ಮುಗಿದ ಮೇಲೆ ಜಪಾನಿನ ಯುದ್ಧ ...ಗನೇ ಕೊನೆಗಾಣುವ ಸೂಚನೆಗಳು ಕಂಡರೂ ...ಮ್ಮದಿ ಇರಲಿಲ್ಲ ಈಗ ಜಪಾನಿನ ಯುದ್ಧವೂ ಕೊನೆ ...ಡಿತು ಸಪ್ಟೆಂಬರು ಎರಡನೆ ತಾರೀಖಿನ ದಿನ ಬೆಳ್ಗೆ ...ನು ಪ್ರತಿನಿಧಿಗಳು ಮಿತ್ರ ಪಕ್ಷದವರು ತಯಾರಿಸಿದ ...ು ಪತ್ರಕ್ಕೆ ಮಿಸ್ಸೌರಿ ಎಂಬ ಯುದ್ಧ ಹಡಗಿನಲ್ಲಿ ...ಹಾಕಿದರು ಶಾಂತಿ ಸಂಧಾನವನ್ನು ಒಪ್ಪಲು ಮಿತ್ರ ...ವರಿಂದ ನೇಮಕವಾಗಿರುವ ಸೇನಾನಿ ಜನರಲ್ ...ಆರ್ಥರರವರು ಆ ಸಮಯದಲ್ಲಿ ಹೀಗೆ ಭಾಷಣ ...ಡಿದರು ಈ ಯುದ್ಧದಲ್ಲಿ ತೊಡಗಿದ್ದ ಮಹಾ ...ಗಳ ಪ್ರತಿನಿಧಿಗಳಿಂದ ನಾವು ಇನ್ನು ಮುಂದ ಪ್ರಪಂಚ ...ದಲ್ಲಿ ಶಾಂತಿ ಸ್ಥಾಪಿಸುವ ಸಲುವಾಗಿ ಒಂದು ಒಪ್ಪಂದಕ್ಕೆ ... ಇಲ್ಲಿ ಸೇರಿದ್ದೇವೆ ಈ ಸಮಾರಂಭದ ಆಶಯ ...ವೇನೆಂದರೆ 'ಹಿಂದಿನ ಸಾವ ಸಂಕಟಗಳಿಂದ ಒಳ್ಳೆಯ ...ಜಗತ್ತಿನ ಉದ್ಭವವಾಗಬೇಕು ಮುಂದಿನ ಪ್ರಪಂಚವು ...ಮಾನವತೆಯ ಮಹತ್ತಿಗ ತಕ್ಕುದಾಗಬೇಕು ಜನರಿಗೆ ...ಸ್ವಾತಂತ್ರ್ಯ ಸಹನೆ ವ ... ನ್ಯಾಯವನ್ನು ತರುವಂತಿರ ...ಬೇಕು ಎ ... ವನಾಗಿದ ಎಂದು ಹೇಳಿದರು

ಅಮೇರಿಕದ ಅಧ್ಯಕ್ಷ ಟ್ರೂಮನ್ನರವರ ಭಾಷಣ

ಜಪಾನಿನ ಶರಣಾಗತಿ ಒಪ್ಪಂದಕ್ಕೆ ಪಕ್ಷ ಪ್ರತಿಪಕ್ಷಗಳ ...ದ್ದ ಸ್ವಲ್ಪ ಹೊತ್ತಿನಲ್ಲಿ ಟ್ರೂಮನ್ನರು ಆಕಾಶವಾಣಿ ...ಲಕ ಭಾಷಣಮಾಡುತ್ತ ಯುದ್ಧ ಕೊನೆಗೊಂ... ಇದರಿಂದ ವೈರ ಅಳಿಯಿತೆಂದು ಸಾರಿದಂತಾ... ಆದರೆ ಜಪಾನರು ಪರ್ಲ್‌ಹಾರ್ಬರ್ ಮೇಲೆ ...ದ ದುರ್ಘಟನೆಯ ದಿನವನ್ನು ನಾವು ಮರೆಯ... ಆ ದಿನದಿಂದ ನಮ್ಮ ಶಕ್ತಿ, ಸಾಮರ್ಥ್ಯ, ...ರ್ಯಗಳು ಒಂದುಗೂಡಿ ಜಗತ್ತಿನಲ್ಲಿ ಶಾಂತಿತರಲು ... ದುಡಿಯುವಂತಾಯಿತು ಆ ನಮ್ಮ ಧ್ಯೇಯ ...ಸಲು ಭಗವಂತನೂ ನಮಗೆ ಸಹಾಯವಾದನು ... ಹೇಗೆ ಪರ್ಲ್‌ಹಾರ್ಬರ್ ದುರ್ಘಟನೆಯನ್ನು ಮರೆ...ರೆವೋ ಹಾಗೆಯೇ ಜಪಾನೀಯರೂ ಮಿಸ್ಸೌರಿ ...ನ ಮೇಲಾದ ಒಪ್ಪಂದವನ್ನು ಮರೆಯಲಾರರು ... ಈಗೆ ಒದಗಿರುವ ಜಯ ನ್ಯಾಯವಾದುದು ಈ ...ಜಯದೊಡನೆಯೇ ದೊಡ್ಡ ಜವಾಬ್ದಾರಿಯೂ ತೂಡ ...ಗ್ದೊದಗಿದೆ ಮುಂದೆ ಜಗತ್ತಿನಲ್ಲಿ ಚಿರಶಾಂತಿ ನೆಲಸು... ನೋಡಿಕೊಳ್ಳಬೇಕಾಗಿದ ಎಂದು ತಿಳಿಸಿದರು

...ದಲ್ಲಿ ಕಾಸ್ಮಿಕ್ ರೇಸ್ ಸಂಶೋಧನೆ

...ಪಂಚವೇ ಅಟಾಮಿಕ್ ಶಕ್ತಿಯ ವಿಚಾರದಲ್ಲಿ ...ರೆತಿರುವಾಗ, ರಷ್ಯಾದಲ್ಲಿ ಕಾಸ್ಮಿಕ್ ಕಿರಣವನ್ನು ...ಯೋಗಿಸಲು ರಷ್ಯ ವೈಜ್ಞಾನಿಕರು ಸಂಶೋಧನೆ ...ತ್ತಿದ್ದಾರಂತೆ ಅದರ ಶಕ್ತಿಯನ್ನು ತಹಬಂದಿಗೆ ... ಅದರಿಂದ ಕೈಗಾರಿಕಾ ಬೆಳವಣಿಗೆಗೆ ಉಪಯೋ... ೧೯೩೭ ರಿಂದಲೇ ಮೌಂಟ್ ಎಲ್‌ಬರ್‌ಜ್‌ನಲ್ಲಿ ...ೕಧನೆ ನಡೆಸಲಾಗುತ್ತಿದೆಯಂತೆ ಈ ಕಾಸ್ಮಿಕ್ ...ು ೪ ಇಂಚು ದಪ್ಪವಿರುವ ಸೀಸವನ್ನು ಸಹ ...ಸಬಲ್ಲದಂತೆ. ಸೊವಿಯೆಟ್ ಸರ್ಕಾರದವರು ಈಗ ಡಾ|| ವಾಲ್ಡಿಮೀರ್ ವೆಕ್‌ಸರ್ ಮುಂದಾಳತ್ವದಲ್ಲಿ ವೈಜ್ಞಾನಿಕರನ್ನು ಅಫ್‌ಘಾನಿಸ್ಥಾನಕ್ಕೆ ಉತ್ತರದಲ್ಲಿರುವ ಪಾಮಿರ್ ಬೆಟ್ಟಗಳಿಗೆ ಕಳುಹಿಸಿದ್ದಾರೆ ೧೫ ಸಾವಿರ ಅಡಿ ಎತ್ತರವಿರುವ ಬೆಟ್ಟದಲ್ಲಿ ಈ ಸಂಶೋಧನೆಮಾಡುವರಂತೆ

ಸಂಯುಕ್ತ ರಾಷ್ಟ್ರಗಳಿಗೆ ಆಟಂ ಬಾಂಬ್ ರಹಸ್ಯ

ಆಟಂ ಬಾಂಬಿನ ರಹಸ್ಯವನ್ನು ಸಂಯುಕ್ತ ರಾಷ್ಟ್ರಗಳ ಸಂಸ್ಥೆಗೆ ತಿಳಿಸುವ ವಿಚಾರ ಪರಿಶೀಲಿಸಲ್ಪಡುತ್ತಿದೆ ಎಂದು ಅಮೇರಿಕನ್ ಮಾಜಿ ಸ್ಟೇಟ್ ಸೆಕ್ರೆಟರಿ ಮತ್ತು ಸಂಯುಕ್ತ ರಾಷ್ಟ್ರಗಳ ಸಕ್ಯೂರಿಟಿ ಕೌನ್ಸಿಲಿನಲ್ಲಿ ಅಮೇರಿಕನ್ ಪ್ರಧಾನ ಪ್ರತಿನಿಧಿ ಆಗಿರುವ ಎಡ್ವರ್ಡ್ ಸ್ಟಟಿನಿಯಸ್ ಲಂಡನ್ನಿನಲ್ಲಿ ಪತ್ರಿಕಾಪ್ರತಿನಿಧಿಗಳಿಗೆ ತಿಳಿಸಿದರ ಆಟಂಬಾಂಬ್ ರಹಸ್ಯ ಇಂಗ್ಲೆಂಡ್ ಅಮೇರಿಕಾಗಳಿಬ್ಬರಿಗೆ ಸೇರಿದ್ದೆಂದ ಅ ರು ಹೇಳಿದರು

ಜೋಬು ಕಳ್ಳತನದ ವಿದ್ಯೆಯ ಪ್ರೌಢ ಶಿಕ್ಷಣ ಶಾಲೆ

ಜೋಬು ಕಳ್ಳತನದಲ್ಲಿ ಪ್ರೌಢ ಶಿಕ್ಷಣ ಕೊಡಲ್ಪಡುತ್ತಿದ್ದ ಶಿಕ್ಷಣ ಶಾಲೆಯೊಂದು ಬೊಂಬಾಯಿಯಲ್ಲಿ ಇದ್ದುದು ಪತ್ತೆಯಾಗಿದೆ ಈ 'ಕಾಲೇಜ' ನಲ್ಲಿ ಶಿಕ್ಷಣ ಪಡೆದು ಪದವಿ ಪಡೆದ' ಮೇಲೆ ಬಾಲಕರನ್ನು ಸಾರ್ವಜನಿಕ ಕ್ಷೇತ್ರಗಳಿಗೆ ಕಳುಹಿಸಿ ಬಸ್‌ಗಳಲ್ಲಿ ಟ್ರಾಂಗಳಲ್ಲಿ ಟಿಕೆಟ್ ಆಫೀಸಗಳಲ್ಲಿ ನಾಟಕ ಶಾಲೆಗಳಲ್ಲಿ ಜನರೊ ದನೆ ಅವರು ಬೆರೆಯುವಂತೆ ಮಾಡಿ ಅವರು ಕದ್ದ ಸಾಮಾನುಗಳನ್ನು ಅಂಗಸ್ಥಣದಲ್ಲಿ ಕೈ ಬದಲಾಯಿಸಲು ಏರ್ಪಾಟು ಮಾಡಿದ್ದರು ಬೊಂಬಾಯಿ ... ಯವರು ಒಹ ತನಿಖೆ ಮಾಡಿ ೬ ಮಂದಿ ಬಾಲಕರನ್ನು ದಸ್ತಗಿರಿ ಮಾಡಲಾಗಿ ಅವರಿಂದ ಹೆಚ್ಚು ಅಂಶಗಳು ತಿಳಿದುಬಂದು ೪೨ ಮಂದಿಯನ್ನು ದಸ್ತಗಿರಿ ಮಾಡಲಾಗಿದ ಅವರ ಗುನ್ಹೆಲ್ಲಿ ಮ್ಯಾಜಿಸ್ಟ್ರೇಟರ ಸಮಕ್ಷ ಹಾಜರ್ಪಡಿಸಲಾಗಿ, ಇಲ್ಲೊಂದು ಜೋಬು ಕಳ್ಳತನದ ವಿಶ್ವವಿದ್ಯಾನಿಲಯವೇ ಏರ್ಪಟ್ಟಿದ್ದಂತೆ ಇದ ಎಂದು ಅವರು ಹೇಳಿದರು ಅವರುಗಳನ್ನು ಜಾಮೀನಿನ ಮೇಲೆ ಬಿಡಲು ನಿರಾಕರಿಸಲಾಗಿ ಅಪಾದಿತರು ಗಲಾಟೆ ಮಾಡಿದರು ಅವರನ್ನು ಪೋಲೀಸರು ಕೋರ್ಟಿನಿಂದ ಬಲಾತ್ಕಾರವಾಗಿ ಹೊರಕ್ಕೆ ಎಳೆದುಕೊಂಡು ಹೋದರು

ಸ್ವೀಕಾರ

ಧಾರವಾಡ ಡಿ| ಗದಗ ಬೆಟಗೇರಿ ಗ್ರಾಮದಲ್ಲಿರುವ ಮ|| ರಾ|| ಓದೇಮನೆ ಪಾಟೀಲ ನೀಲಪ್ಪಗೌಡರ ಸಹೋದರ ಮ|ರಾ| ಲಿಂಗನಗೌಡರ ಪುತ್ರಿ ಚಿ ಸೌ ಅನಸೂಯಾದೇವಿಯನ್ನು ನವಲಗುಂದ ತಾಲೂಕು ಕನ್ನೂರು ಗ್ರಾಮದ ಮ| ರಾ| ಲಿಂಗನಗೌಡ ಗೌಡಪ್ಪಗೌಡರ ಇವರ ಪುತ್ರ ಚಿ ಬಸವನಗೌಡನಿಗೆ ಕೊಟ್ಟು ನಿಶ್ಚಯಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವರನ ಕಡೆಯವರು ಸಮರ್ಪಿಸಿದ 2 ರೂ ವಧುವಿನ ಕಡೆಯವರು ಸಮರ್ಪಿಸಿದ 1 ರೂ ಒಟ್ಟು 3 ರೂಪಾಯಿಗಳು ಮ|| ರಾ| ನೀಲಪ್ಪಗೌಡರ ದ್ವಾರಾ ತಲ್ಪಿರುತವೆ

ಧಾರವಾಡ ಡಿ| ಸವಣೂರ ಗ್ರಾಮದಲ್ಲಿರುವ ಮ| ರಾ ವೀರಭದ್ರಪ್ಪ ಬಿಕ್ಕಣ್ಣನವರ ಗೃಹದಲ್ಲಿ ಶ್ರೀ ವರದಶಂಕರಪೂಜೆಯು ನೆರವೇರಿದ ಸಮಯದಲ್ಲಿ ಮ| ರಾ ಮಲ್ಲಪ್ಪನವರು ಪ್ರಭಾಪೋಷಣಕ್ಕೋಸ್ಕರ 1 ರೂಪಾಯಿಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ

ಧಾರವಾಡ ಡಿ| ಕಲಘಟಗಿ ಶ್ರೀಮಾನ್ ಬಸೆಟ್ಟೆಪ್ಪನವರು ವಾಲಿಶೆಟ್ಟರು ತಾ| ೨೦| 8 45 ಗುರುವಾರ ತಮ್ಮ ಸ್ವಗೃಹದಲ್ಲಿ ವೇ|| ಸಿದ್ಧರಾಮೇಶ್ವರಸ್ವಾಮಿ ಹಿರೇಮಠ ಬೆಲವಂತರ ಇವರ ಅಧ್ಯಕ್ಷತೆಯಲ್ಲಿ ಮಾಹೇಶ್ವರ ದಂಪತಿ ಪೂಜೆಯನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 1 ರೂಪಾಯಿಯು ಶೆಟ್ಟರ ಚಿ| ಸಿದ್ಧಪ್ಪನವರ ದ್ವಾರಾ ತಲ್ಪಿರುತ್ತದ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತೇವೆ

[ಗಸಯಪ್ರಟದಿಂದ ಮುಂದುವರಿದುದು]

ವನಹಳ್ಳಿಗ್ರಾಮದಿಂದ

೫ ರೂ ಚನ್ನಬಸಪ್ಪ, ೫ ರೂ ಚನ್ನಮಲ್ಲಯ್ಯ, ೧೦ ರೂ ವೀರಭದ್ರಯ್ಯ, ೨೦-೧೨-೦ ಚಿಲ್ಲರೆ ವಸೂಲಿ ೭ ರೂ ಹೆಬ್ಬಳ್ಳಿ ಜನರಿಂದ

ಹಳ್ಯಾಳಕೆಡಪಟ್ಟಗ್ರಾಮದ ವಸೂಲಿ

೫ ರೂ ಸಂಗಯ್ಯ ಸಾಲಿಮಠ, ೫ ರೂ ಗಿರಿಮಲ್ಲಗೌಡ, ೫ ರೂ ತಿಮ್ಮನಗೌಡ, ೫ ರೂ ಶಂಕರಪ್ಪ ಹವಾಲ್‌ದಾರ ೫ ರೂ ಪ್ರುಂದನಗೌಡ, ೧೦ ರೂ. ಸೋಮನಗೌಡ, ೫ ರೂ ಮರಿಗೌಡ, ೫ ರೂ ಬಸನಗೌಡ, ೨೫ ರೂ ಮುಲ್ಕಿ ಪಾಟೀಲ ಹನುಮಂತಗೌಡ, ೫ ರೂ ಚನ್ನಬಸಯ್ಯ, ೫ ರೂ ಒಸಯ್ಯ, ೩೯-೮-೦ ಚಿಲ್ಲರೆ ವಸೂಲಿ

ಮೇಲ್ಕಂಡ ಮಠದ ಒಗ್ಗೆ ವಾಗ್ದಾನ ಮಾಡಿರುವ ಮಹಾಶಯರು ಹನ್ನೆರಡು ಮಠದ ಶ್ರೀ ಸ್ವಾಮಿಗಳ ಹೆಸರಿಗಾಗಲಿ ಅಥವ ನಮ್ಮ ಹೆಸರಿಗಾಗಲಿ—ಮನಿಯಾರ್ಡರು ಮೂಲಕ ಕಳಿಸಿಕೊಡಬೇಕು

ಗುರುಸಿದ್ಧಸ್ವಾಮಿ ನರೇಂದ್ರಮಠ
ಮನಿಸಿಪಲ್ ಕೌನ್ಸಿಲರ್
ಗೋಕರ್ಣಮಠದ ಕಟ್ಟಡದ ವ್ಯವಸ್ಥಾಪಕರು,
ಹುಬ್ಬಳ್ಳಿ

ಶ್ರೀ ವರದಶಂಕರ ಪೂಜಾಸಮಾರಂಭ
ಸವಣೂರು

ಧಾರವಾಡ ಡಿಸ್ಟ್ರಿಕ್ಟ್ ಸವಣೂರ ಟವನ್‌ನಲ್ಲಿರುವ ಮ ರಾ|| ವೀರಭದ್ರಪ್ಪಾ ಬಿಕ್ಕಣ್ಣನವರ ಇವರು ತಮ್ಮ ಗೃಹದಲ್ಲಿ ಇದೇ ಶ್ರಾವಣ ಶು|| ೧೩ ಮಂಗಳವಾರ ದಿವಸ ಶ್ರೀ ವರದಶಂಕರ ಪೂಜೆಯನ್ನು ಅತಿ ವಿಜೃಂಭಣೆಯಿಂದ ನೆರವೇರಿಸಿದರು ಆ ದಿನಸ ಸವಣೂರು ಸಂಸ್ಥಾನ ಪೈಕಿ ಜೇಕಿನಕಟ್ಟಿ ಗ್ರಾಮದಲ್ಲಿರುವ ಜ್ಯೋತಿಷ, ಸಂಸ್ಕೃತ, ವೈದಿಕ ಪಾಠಶಾಲಾಧ್ಯಾಪಕರೂ ಧರ್ಮಭೂಷಣ ಪದವೀಧರರೂ ಆದ ಪಂ| ಹರೀಶ್ವರಶಾಸ್ತ್ರಿಗಳು ಪಾಠಶಾಲೆಯ ಯಾವತ್ತೂ ವಿದ್ಯಾರ್ಥಿಗಳೊಡನೆ ಆಗಮಿಸಿದ್ದರು ಭವ್ಯಮಂಟಪದಲ್ಲಿ ನೂತನವಾಗಿ ತಯಾರಿಸಲ್ಪಟ್ಟ ರಜತ ಈಶ್ವರಮೂರ್ತಿಗೆ ಮಹಾರುದ್ರಾಭಿಷೇಕ ಮತ್ತು ಅಷ್ಟವಿಧಾರ್ಚನೆಗಳು ಪಂ|| ಹರೀಶ್ವರಶಾಸ್ತ್ರಿಗಳ ವೈದಿಕತ್ವದಲ್ಲಿ ಶಾಸ್ತ್ರೋಕ್ತವಾಗಿ ನೆರವೇರಿದವು ಸದರಿ ಪೂಜೆಯನ್ನು ದಂಪತಿಗಳಾದ ಮಲ್ಲಪ್ಪ ಕುಂ| ನಾ|| ವೀರವ್ವ ಇವರ ಹಸ್ತದಿಂದ ಮಾಡಿಸಲಾಯಿತು ಪೂಜೆಯು ಸಮಾಪ್ತವಾದ ಮೇಲೆ ಶಾಸ್ತ್ರಿಗಳು ಶ್ರೀ ವರದಶಂಕರ ಕಥೆಯನ್ನು ಚಿಕ್ಕ ಬಾಲಕರಿಗೂ ಕೂಡ ತಿಳಿಯುವಂತೆ ಹೇಳಿ ಸರ್ವರನ್ನೂ ಸಂತೋಷಪಡಿಸಿದರು ಕಥಾಶ್ರವಣಕ್ಕೆ ಜನಸಮುದಾಯವು ಅಪಾರವಾಗಿ ನೆರೆದಿದ್ದಿತು ಮಹಾ ಮಂಗಳಾರತಿಯಾದಮೇಲೆ ಪ್ರಸಾದವು ಸರ್ವರಿಗೂ ಹಂಚಲ್ಪಟ್ಟು ಈಶ್ವರಸ್ತೋತ್ರದೊಡನೆ ಪೂಜೆಯು ಸಮಾಪ್ತಿಗೊಂಡಿತು ಈ ಪೂಜಾಕಾಲದಲ್ಲಿ ಮಲ್ಲಪ್ಪನವರ ಕಡೆಯಿಂದ ಪ್ರಭಾಪೋಷಣಕ್ಕೆ ೧ ರೂಪಾಯಿಯು ತಗಯಿಸಲ್ಪಟ್ಟಿತು

ಒರ್ವ ಉತ್ಸವಭಾಗಿ

ಪುರಾಣಶ್ರವಣ

ಧಾರವಾಡ ಜಿಲ್ಹಾ ಕಲಘಟಗಿ ತಾಲೂಕ ಬೆಲವಂತರ ಹಿರೇಮಠ ವೇ| ಸಿದ್ಧರಾಮೇಶ್ವರಸ್ವಾಮಿಯವರು ತಮ್ಮ ಮಠದಲ್ಲಿ ವಾರ್ಷಿಕ ಪದ್ಧತಿಯಂತೆ ಶ್ರಾವಣ ಬಹುಳದಲ್ಲಿ 'ಹೇಮರೆಡ್ಡಿ ಮಲ್ಲಮ್ಮ' ಎಂಬ ಪುರಾಣ ಶ್ರವಣವನ್ನು ನಡೆಸಿ ಸಮಾಪ್ತಿಗೊಳಿಸಿದರು

ಪ್ರತ್ಯಕ್ಷದರ್ಶಿ

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮ ಧಾರಣೆ ಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿ ಗ್ರಂಥವು ಪ್ರಾಣದಂತಿರುವದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವದು. ವೀರಶೈವಮತದಲ್ಲಿ ಸಧ್ಯಕ್ಕೆ ದೊರೆಯತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವದು. ಈ ಗ್ರಂಥವು ಈಗ್ಗೆ ಸುಮಾರು ಐಸಾವಿರ ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು. ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳ ಸರಿಯಾದ ಅರ್ಥವು ಬಯಲಾಗಿಲ್ಲ. ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹು ಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ವವು ಪ್ರಕಾಶಕರಿಗೆ ವೇದ್ಯವಾಗುವುದು. [illegible] ಶ್ರಮವಹಿಸಿ [illegible] ವಿಷಯಗಳ [illegible] ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಸೇರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೭೭೨ ಪುಟಗಳಿಂದ ಕೂಡಿದ್ದು, ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ [illegible] ಶ್ರೀಜಗದ್ಗುರು ರೇಣುಕಾಚಾರ್ಯರ [illegible] ಮನೋಹರವಾದ [illegible] ಗ್ರಂಥವ [illegible] ವೀರಶೈವರೆಲ್ಲರೂ [illegible] ಓದಬೇಕು.

ಬೆಲೆ ೨ ರೂಪಾಯಿ.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅವತಾರಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ	೦—೬—೦
ಶ್ರೀರೇಣುಕಾಚಾರ್ಯರ ಲಿಂಗೋದ್ಭವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦ ಬೆಲೆ	೦—೬—೦
ಸಮ್ಮೇಳನಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ	೦—೪—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ	೦—೪—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೨—೬
ಶ್ರೀಕಾಶೀಕ್ಷೇತ್ರ ವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—೬
ಶ್ರೀಮದುಜ್ಜಯಿನೀ ಸಿಂಹಾಸನಾಧೀಶರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೩—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೨—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	—೧—೬
ಶ್ರೀ ಕಾಶೀ ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೨—೬

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶೆ (೩ನೆಯ ಆವೃತ್ತಿ ಸಂಸ್ಕೃತ)	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೨ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೭ನೆಯ ಆವೃತ್ತಿ)	೩ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೩ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೩ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೩ ಆಣೆ
ಶ್ರೀಗುರುತತ್ವ ಪದಗಳು (೨ನೆಯ ಆವೃತ್ತಿ)	೩ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೩ ಆಣೆ
ಶಿವಶಕ್ತಿವಿಲಾಸ	೩ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕಸಾಮ್ರಾಜ್ಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ-ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೮ ಆಣೆ
ವೀರಶೈವನುಪಾತ್ರರು	೮ ಆಣೆ
ಒಸವಸಿದ್ಧಾಂತದಿವಾಕರ (೩ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು ೨ನೆಯ ಆವೃತ್ತಿ)	೧। ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಶ್ರೀಕರಭಾಷ್ಯಂ (ಆಕ ಸೂ ತ್ರೀ)	೧॥ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧॥ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಸುಂದರವಾದ ಫೋಟೋ [illegible] ಪೃಷ್ಠ)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ [illegible])	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ ಸೂಕ್ಷ್ಮಾಗಮಗಳಿಂದ ಕೂಡಿದ ಗ್ರಂಥ)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೬ ರೂ
A brief life-sketch of Pandit Sri Kashinatha Shastriji (*English*)	**4 As**
The Philosophical Aspect of Virasaivism (*English*)	**8 As**
Speeches by Pandit Shri Kashinatha Shastriji (*English*)	**12 As**
लिंगधारणचंद्रिका (संस्कृत)	३ रु
वीरशैवरत्न (मराठी)	? रु.
महानारायणोपनिषत् (वीरशैवभाष्य–संस्कृत)	? रु
सिद्धांतशिखामणि (मूल)	८ आ
नंदिकेश्वरकारिका (संस्कृत)	२ आ

ಮ್ಯಾನೇಜರ್ — **ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯರಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಕಜಾತಜನಿತಾನ್ ಪಂಚಾಸ್ಯಸೀರಾಧಿಪಾನ್ । ಸಂಚಕ್ಲೇಶವಿನಾಶಕಾನ್ ಪರತರಶ್ರೀಪಂಚಲಿಂಗೋದ್ಭವಾನ್ ॥
ಪಂಚಾಚಾರನಿಯಾಮಕಾನ್ ಪರಿಲಸತ್ಪಂಚಾಕ್ಷರೀಬೋಧಕಾನ್ ಪಂಚಾಚಾರ್ಯಜಗದ್ಗುರೂನ್ ಶರಣದಾನ್ ಪಾಲಿಪ್ಪ ದೀನೋದ್ಧರಂ ॥

ಮುಂಗಡವಾಗಿ ೨ ರೂ ೪ ಆಣೆ ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೬ ಆಣೆ

ಸಂಪುಟ ೧೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೭ನೇ ಸೆಪ್ಟೆಂಬರ್ ೧೯೪೫ [ಸಂಚಿಕೆ ೧೮

ಶ್ರೀ ಮಹಾರುದ್ರಪೂಜಾಸಮಾರಂಭ, ಹುಪ್ರಿ

ಈ ವರ್ಷ ಪಾರ್ಥಿವ ಸಂವತ್ಸರ ಶ್ರಾವಣ ಶು ೧ ರಿಂದ ... ತಾಂ ಇಲಾಖಾ ಓಸಗುಪ್ಪಿ ಶ್ರೀ ನಾಬ್ಬುರಾಣ ... ನ್ನಾರದ ಚರಪಟ್ಟಾಧ್ಯಕ್ಷ ಶ್ರೀ ರ ದ್ರಮ ೧ಿಶಿವಾ ... ರ್ಯರನ್ನು ಮೆಟ್ರಿ ಸಮಸ್ತ ಭ್ಯಪದವರು ಒರಮಾಡಿ ... ಂಡು ಶ್ರೀ ಮಹಾರುದ್ರಪೂಜೆಯನ್ನು ಶ್ರಾವಣಮಾಸ ... ರ್ತಿ ಪ್ರತಿದಿನ ಸಹಸ್ರಬಿಲ್ವಾರ್ಚನೆಯೊಡನೆ ನಡಿಸಿ ... ಂಗಗೊಳಿಸಿದರು ಮಾಸಾಂತ್ಯದಲ್ಲಿ ಲಕ್ಷಬಿಲ್ವಾರ್ಚನೆ ... ಮಾಡಿ ಭಾದ್ರಪದ ಶು| ೧ ದಿನ ೨೦೦ ೬೦೦ ಗಣ ... ತೃಪ್ತಿಪಡಿಸಿ ಭೂರಿದಕ್ಷಿಣೆಯಿತ್ತು ತೃಪ್ತಿಪಡಿಸಿದರು ... ಸಾಯಂಕಾಲ ಪಂಚಾಚಾರ್ಯರ ಭಜನಾಸಂಪದನರ ... ಮನೆ ಬ್ಯಾಂಡು ಮೊದಲಾದ ನಾದ್ಯವೈಭವಗಳಿಂದ ... ತ್ಸವವನ್ನು ಪೂರೈಸಿದರು ಅನಂತರ ಶ್ರೀಮದುಜ್ಜ ... ಯಿನಿ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಮಹತ್ವಗಳನ್ನು ಬೋಧಿಸಿದರು ಮಠೋದ್ಧಾರಕ್ಕಾಗಿ ... ವೆತ್ತಿದ ಪಂಚಾಚಾರ್ಯ ಪ್ರಭಾಪೋಷಣಕ್ಕಾಗಿ ... ರೂಪಾಯಿಗಳು ತೆಗೆಯಿಸಲ್ಪಟ್ಟವು ಶ್ರೀಗಳು ... ರು ಮಾಡಿಸಿದ ಪೂಜಾಸಮಾರಂಭಕ್ಕೆ ಸಂತೋಷ ... ಭಕ್ತಮಂಡಲಿಗೆ ದರ್ಮೋಪದೇಶಮಾಡಿದರು ... ದಿನ ಮತ್ತು ಭಕ್ತರನ್ನು ಕರಿಸಿಕೊಂಡು ತವರಿಗೆ ... ಸ್ವಗ್ರಾಮಕ್ಕೆ ಹೊರಡಬೇಕೆಂದಿರುವಾಗಲೆ ... ರಾಜನು ವಿಶೇಷವಾಗಿ ಮಳೆಗರೆದದ್ದರಿಂದ ... ಮಂಡಲಿಗೆ ಮತ್ತಷ್ಟು ಆನಂದವುಂಟಾಯಿತು

ಸಮಾಜಸೇವಕ ಮೆಟ್ರಿ

ಅಭಿನವರೇಣುಕಮಂದಿರದಲ್ಲಿ ... ಚಹೌಸಿನಪ್ರಾರಂಭೋತ್ಸವ, ದಾವಣಗೆರೆ

... ಶ್ವರನ ಆಜ್ಞೆಯಿಲ್ಲದ ಒಂದು ತೃಣವೂ ಕೂಡ ... ಮವುದಿಲ್ಲ ಕಾರ್ಯಪೂರ್ಣತೆಗೆ ಮಾನವನು ಎಷ್ಟೇ ... ತ್ನಪಟ್ಟರೂ ಈಶ್ವರ ಸಂಕಲ್ಪದ ಮುಂದೆ ನಡೆಯ ... ಮ "ಪ್ರಯತ್ನಾಂತೇ ಪರಮೇಶ್ವರಃ" ಎನ್ನುವ ... ಯನ್ನು ಮನನಮಾಡಬೇಕು ಪ್ರಯತ್ನ ಮತ್ತು ... ನುಗ್ರಹ ಇವೆರಡೂ ಸಮ್ಮಿಲಿತವಾದಾಕ್ಷಣವೇ ... ವನ ಕಾರ್ಯವು ಸುಲಲಿತವಾಗಿ ನೆರವೇರುತ್ತದೆ ... ಯಾಂಸಿ ಬಹುವಿಘ್ನಾನಿ" ಎಂಬ ಆರ್ಯೋಕ್ತಿ ... ಮಂಗಲಕಾರ್ಯಕ್ಕೆ ಅನೇಕ ವಿಘ್ನಗಳುಂಟು ... ಮುಂದಾಳುಗಳು ಧೈರ್ಯದಿಂದ ಅದನ್ನು ಸಾಧಿಸ ... ಇಂತಹ ವಿಘ್ನಗಳ ದವಡೆಯಲ್ಲಿ ಸಿಕ್ಕ ದಾವಣ ... ರಶೈವರು ಈಶ್ವರಾನುಗ್ರಹದಿಂದಲೂ, ತಮ್ಮ ... ದಕ್ಷತೆಯಿಂದಲೂ ಇಲ್ಲಿಯ ಅಭಿನವರೇಣುಕ ... ರದಲ್ಲಿ ಟೀಹೌಸಿನ (ಅತಿಥಿಸತ್ಕಾರಗೃಹದ) ... ೋತ್ಸವವನ್ನು ಅತಿ ವಿಜೃಂಭಣೆಯಿಂದ ಇದೇ ಪಾರ್ಥಿವನಾಮಸಂವತ್ಸರ ಶ್ರಾವಣ ಬ| ೧೨ ಸೋಮವಾರ ತಾ ೩-೯-೪೫ ನೇ ದಿನ ನೆರವೇರಿಸಿದರು ಈ ಮಹೋತ್ಸವಕ್ಕೆ ಪಂಚಉಪಾಚಾರ್ಯರಾದ ಶ್ರೀ ಮಲ್ಲಿಕಾರ್ಜುನಶಿವಾಚಾರ್ಯರು ಬಾಗಳಿ ಶ್ರೀ ಶಿವಯೋಗಿಶಿವಾಚಾರ್ಯರು ನೆಗಳೂರು ಶ್ರೀ ರುದ್ರಮುನಿ ಹಾಲಸ್ವಾಮಿಗಳು ಮಣಕೂರು, ಶ್ರೀ ಬನ್ನಿಹಟ್ಟಿಸ್ವಾಮಿಗಳು, ಶ್ರೀ ಅಜ್ಜಯ್ಯಸ್ವಾಮಿದೇಶಿಕರು ಆಗಮಿಸಿದ್ದರು ಪ್ರಮುಖರು ಕಾರ್ಯಕ್ರಮದಂತೆ ಸೋಮವಾರ ಸಾಯಂಕಾಲ ೭ ಘಂಟೆಗೆ ಉಪಾಚಾರ್ಯರನ್ನು ಮಂಗಲವಾದ್ಯಗಳೊಡನೆ ಬಿಜಯಂಗೈಸಿಕೊಂಡುಬಂದು ಮಂದಿರದ ಆವರಣದಲ್ಲಿ ಮೂರ್ತಮಾಡಿಸಿದರು ಅನಂತರ ಐದು ಜನ ಮುತ್ತೈದೆಯರ ಜಲಪೂರಿತ ಮಂಗಲ ಕಲಶಗಳನ್ನು ಗಂಧಾಕ್ಷತೆಗಳಿಂದ ಪೂಜಿಸಿ ಗೋವು ಉಪಾಚಾರ್ಯರ ಸಹಿತ ಮಂಗಲವಾದ್ಯಗಳು ಮೊಳಗುತ್ತಿರಲು ಟೀಹೌಸಿನ ದ್ವಾರವನ್ನು ಪೂಜಿಸಿದರು ಒಳಿಕ ಶ್ರೀ ಬಾಗಳಿ ಪಟ್ಟಾಧ್ಯಕ್ಷರ ಹಸ್ತದಿಂದ ಉದ್ಘಾಟನವು ಜಗದಾಚಾರ್ಯರ ಜಯಜಯಕಾರದೊಡನೆ ಮಾಡಲ್ಪಟ್ಟಿತು ಅದೇ ಸಮಯದಲ್ಲಿ ಶ್ರೀ ಬಾಗಳಿ ಪಟ್ಟಾಧ್ಯಕ್ಷರಿಂದಲೇ ಎಲೆಕ್ಟ್ರಿಕ್ ಲೈಟಿನ ಪ್ರಾರಂಭೋತ್ಸವವೂ ನೆರವೇರಿತು ಈ ಆನಂದಾತಿಶಯದ ಸನ್ನಿವೇಶದಲ್ಲಿ ಪ್ರತಿಯೊಬ್ಬರೂ ಆನಂದಾಶ್ರುಗಳನ್ನು ಸುರಿಸಿದರು ಶ್ರೀ ಜಗದ್ಗುರು ರೇಣುಕಭಗವತ್ಪಾದರ ಕೃಪಾಶೀರ್ವಾದದಿಂದ ಸ್ವಲ್ಪಮಟ್ಟಿಗಾದರೂ ಕಾರ್ಯವು ಒಂದು ಸ್ವರೂಪಕ್ಕೆ ಬಂದದ್ದಕ್ಕಾಗಿ ಹರ್ಷಗೊಂಡರು ಆಮೇಲೆ ವೇ|| ಪಂ|| ಧರ್ಮರತ್ನ ಉಮಚಗಿ ಶಂಕರಶಾಸ್ತ್ರಿಗಳು "ರೇವಣ ಕಲ್ಪವೃಕ್ಷ" ವಿಷಯದಮೇಲೆಯೂ ಶ್ರೀ ನೆಗಳೂರು ಪಟ್ಟಾಧ್ಯಕ್ಷರು "ಕರ್ತವ್ಯದಕ್ಷತೆ" ಶ್ರೀ ಮಣಕೂರು ಸ್ವಾಮಿಗಳು "ಗುರುಗಳ ಕರ್ತವ್ಯ" ಬನ್ನಿಹಟ್ಟಿ ಶ್ರೀಗಳು "ಸಮಾಜಸೇವೆ" ವೇ|| ವಿರೂಪಾಕ್ಷಶರ್ಮಾ ಆರಾಧ್ಯಮಠ "ರೇಣುಕರಲೀಲೆ" ಇವೇ ಮೊದಲಾದ ವಿಷಯಗಳ ಮೇಲೆ ಸ್ಫೂರ್ತಿದಾಯಕವಾಗಿ ಭಾಷಣಗಳನ್ನು ಮಾಡಿದರು ಸಭಿಕ ಮಹಾಶಯರು ಈ ಸ್ವಾರಸ್ಯವಾದ ಭಾಷಣಗಳನ್ನು ಕೇಳಿ ನಲಿದರು ಆಮೇಲೆ ರಾ|| ರಾ|| ಶ್ರೀ|| ಕರಿಬಸಪ್ಪನವರು ಅಸ್ಖಲಿತವಾಗಿಯೂ ಮನೋಹರವಾಗಿಯೂ, ಇಂಪಾದ ಧ್ವನಿಯಿಂದ ರೇಣುಕ ವಿಜಯದಲ್ಲಿ ಶ್ರೀ ರೇಣುಕಭಗವತ್ಪಾದರ ಸೋಮನಾಥ ಲಿಂಗೋದ್ಭವದ ವರೆಗೂ ಕೆಲವು ಪದ್ಯಗಳನ್ನು ಓದಿದರು ನೆಗಳೂರು ಶ್ರೀಗಳು ಆ ಶ್ಲೋಕಗಳ ಅರ್ಥವನ್ನು ಸಭಾಜನಗಳಿಗೆ ತಿಳಿಸಿ ಮಂಗಲದೊಡನೆ ಸಮಾಪ್ತಿಗೊಳಿಸಿದರು ಅದೇ ಸಮಯದಲ್ಲಿಯೇ ಮಠದಲ್ಲಿ ಪುಸ್ತಕ ಭಂಡಾರವೂ ಕೂಡ ಸ್ಥಾಪಿಸಲ್ಪಟ್ಟಿತು ಅನಂತರ ಕಾರ್ಯತತ್ಪರರಾದ ವೇ|| ಜ ಯಂ ಅನ್ನದಾನಯ್ಯನವರು ಮಠದ ಕಾರ್ಯಕ್ಕಾಗಿ ಉಪಾಚಾರ್ಯರ ಮತ್ತು ಸಾರ್ವಜನಿಕರ ಸಹಾಯವನ್ನು ಕೋರಿ ಸರ್ವರ ಆಭಾರವನ್ನು ಮನ್ನಿಸಿದರು ಆಮೇಲೆ ಶ್ರೀ ಜಗದ್ಗುರು ಪಂಚಾಚಾರ್ಯರ ಮಂಗಲ ಜಯಜಯಕಾರದೊಡನೆ ಸಭೆಯು ನಿರ್ವಿಘ್ನವಾಗಿ ಮುಕ್ತಾಯವಾಯಿತು ಈ ಮಹೋತ್ಸವಕ್ಕೆ ವೇ ಹಿರೇಮಠದ ಷಡಕ್ಷರಪ್ಪಯ್ಯನವರು, ಮಗಾನಹಳ್ಳಿ ಹೊಳೆ ಬಸವಪ್ಪನವರು, ಯಜಮಾನ್ ಬೆಳ್ಳೂಡಿ ವೀರಪ್ಪನವರೇ ಮೊದಲಾದವರು ಆಗಮಿಸಿದ್ದರು ಕಟ್ಟಡವನ್ನು ಪ್ರಾರಂಭಿಸಲು ವೇ|| ಜಿ ಯಂ ಅನ್ನದಾನಯ್ಯನವರು, ಶ್ರೀಮಾನ್ ಮಾಗಾನಹಳ್ಳಿ ನಂಜುಂಡಪ್ಪನವರು ಇವರೇ ಮೊದಲಾದವರ ಸಹಾಯವನ್ನು ಪಡೆದುದಲ್ಲದ ತನು, ಮನ, ಧನಗಳಿಂದ ಗುರುಸೇವೆ ಸಲ್ಲಿಸುತ್ತಿರುವ ಬೆಂಗಳೂರಿನ ಸುಪ್ರಸಿದ್ಧ ವೇ ಎನ್ ರುದ್ರಯ್ಯನವರು, ಶ್ರೀ ಜಿ ಬಿ ಶಿವನಂಜಪ್ಪನವರೇ ಮೊದಲಾದವರಿಂದ ಸಾಧ್ಯವಿರುವ ದ್ರವ್ಯ ಸಹಾಯ ಪಡೆದು ತಮ್ಮ ಸ್ವಂತ ದ್ರವ್ಯವನ್ನು ಸಹ ಈ ಕಟ್ಟಡಕ್ಕೆ ಉಪಯೋಗಿಸಿ ಬಿಲ್ಡಿಂಗನ್ನು ಪೂರೈಸಿರುವರು, ಮತ್ತು ಹುಂಡೇಕಾರ ಗದಿಗೆಪ್ಪನವರ ಧರ್ಮಪತ್ನಿ ಶ್ರೀಮತಿ ಗುರುಬಸವ್ವನವರಿಂದ ಎಲೆಕ್ಟ್ರಿಕ್ ಲೈಟನ್ನು ಸಹ ಹಾಕಿಸಿ ಈ ಬಿಲ್ಡಿಂಗಿಗೆ ಶೋಭೆಯನ್ನುಂಟು ಮಾಡಿದರು ಸರ್ವರಿಗೂ ಜಗದಾಚಾರ್ಯರು ಮಂಗಲವನ್ನೀಯಲೆಂದು ಪ್ರಾರ್ಥಿಸುವ

ಗುರುಭಕ್ತ

ಶ್ರೀ ಜಗದಾಚಾರ್ಯರ ಪಾದಪೂಜಾಸಮಾರಂಭ
ಬಿಡದಿ

ಬೆಂಗಳೂರು ಡಿ|| ಬಿಡದಿ ಗ್ರಾಮದ ಭಕ್ತರ ಪ್ರಾರ್ಥನೆಯ ಮೇರೆಗೆ ಶ್ರೀಮದ್ರಂಭಾಪುರೀ ಜಗದ್ಗುರುಗಳವರು ಸದ್ಯಃ ಬಿಡದಿಯಲ್ಲಿ ಮೊಕ್ಕಾಂ ಮಾಡಿರುವುದು ಸರಿಯಷ್ಟೆ ಸದರಿ ಊರಿನ ಭಕ್ತಮಂಡಲಿಯಲ್ಲೊಬ್ಬರಾದ ಶ್ರೀಯುತ ಬಿ ಸಿ ನಂಜರಾಜಅರಸರವರು ಮಹಾಸ್ವಾಮಿಯವರನ್ನು ತಮ್ಮ ಭವನಕ್ಕೆ ತಾ|| ೧೧-೯-೪೫ ನೇ ಮಂಗಳವಾರ ದಯಮಾಡಿಸಿಕೊಂಡು ಹೋಗಿ ಮಹಾ ಪಾದಪೂಜೆಯನ್ನು ಅತ್ಯಂತ ವೈಭವದಿಂದ ನೆರವೇರಿಸಿ ಭಕ್ತಿಪೂರ್ವಕವಾಗಿ ಕಾಣಿಕೆಯನ್ನು ಸಮರ್ಪಿಸಿ ಶ್ರೀ ಗುರುಕೃಪೆಗೆ ಪಾತ್ರರಾಗಿ ಮಂಗಳಾಶೀರ್ವಾದವನ್ನು ಪಡೆದರು ಇವರ ಗುರುಭಕ್ತಿಯು ಅನ್ಯಾದೃಶವಾದುದು ಇದರಂತೆಯೇ ಬಿಡದಿ "ಆಚಾರ್ಯ ತತ್ವಪ್ರಕಾಶಕ" ಬಿ ಸಿ ರೇವಣ್ಣಶಾಸ್ತ್ರಿಗಳವರು ತಾ|| ೨೦-೯-೪೫ ನೇ ಗುರುವಾರ ಶ್ರೀ ಗುರುಸಾರ್ವಭೌಮರ ಪಾದಪೂಜೆಯನ್ನು ತಮ್ಮ ರೇಣುಕಭವನದಲ್ಲಿ ನಡೆಸಲು ಬಿನ್ನವಿಸಿಕೊಂಡಿದ್ದಾರೆ ಹೀಗೆಯೇ ಬಿಡದಿ ಭಕ್ತಮಂಡಲಿಯವರು ಒಬ್ಬೊಬ್ಬರಾಗಿ ತಮ್ಮ ತಮ್ಮ ನಿವಾಸಗಳಿಗೆ ಪೂಜ್ಯಪಾದರನ್ನು ದಯಮಾಡಿಸಿಕೊಂಡು ಹೋಗಿ ಪೂಜಿಸುವವರಾಗಿದ್ದಾರೆ ಈರೀತಿ ಸದ್ಗುರು ಸೇವೆಯನ್ನು ಸಲ್ಲಿಸುತ್ತಿರುವುದು ಶ್ಲಾಘನೀಯವಾಗಿದೆ ಇವರಿಗೆ ಜಗದಾಚಾರ್ಯರು ಸಮಸ್ತ ಸನ್ಮಂಗಳಗಳನ್ನೀಯಲೆಂದಾಶಿಸುವ

ಓರ್ವ ಗುರುಕಿಂಕರ

ಪಂಚಾಚಾರ್ಯಪ್ರಭಾ.

೧೯೪೫ನೆಯ ಸೆಪ್ಟೆಂಬರ್ ತಾ ೧೭ನೇ ಸೋಮವಾರ

ಏಕಾದಶಧರ್ಮಾಚರಣೆ

ಸತ್ಯಂ ಕ್ಷಮಾ ದಯಾ ಶೌಚಂ ... ಮಾರ್ದವಂ ತಥಾ ।
ತಪಸ್ತ್ಯಾಗಂ ಬ್ರಹ್ಮಚರ್ಯಂ ಸಂತುಷ್ಟಿ ... ।
ಧರ್ಮಾ ಏಕಾದಶ ಪ್ರೋಕ್ತಾ ...

ಸತ್ಯ, ಕ್ಷಮೆ, ದಯೆ ಶೌಚ ಶೀಲ ವ ಮಾರ್ದವ ತಪಸ್ಸು, ತ್ಯಾಗ, ಬ್ರಹ್ಮಚರ್ಯ, ಸಂತೃಪ್ತಿ ಆರ್ಜವ ಎಂಬ ಹನ್ನೊಂದು ಧರ್ಮಗಳು ಲಿಂಗಾಂಗಿಯಾದ ಮಾನವನಿಂದ ಅವಶ್ಯ ಸಂಗ್ರಹಿಸಲ್ಪಡತಕ್ಕವುಗಳಾಗಿವೆ ಈ ಧರ್ಮಗಳನ್ನು ಯಾವನು ಅರ್ಜಿಸಲಾರನೋ ಅವನೇ ನಿಜವಾದ ವೀರಶೈವನು. ಇವಕ್ಕೆ ವಿರುದ್ಧವಾದ ಅಸತ್ಯ ಅಕ್ಷಮೆ, ನಿರ್ದಯೆ, ಮುಂತಾದ ದುರ್ಗುಣಗಳು ಯಾರಲ್ಲಿರುವವೋ ಅವರ ಪವಿತ್ರವಾದ ವೀರಶೈವ ತತ್ವಕ್ಕೆ ವಿರೋಧಿಗಳಾಗುತ್ತಾರೆ ಸತ್ಯ ಕ್ಷಮೆ ಮುಂತಾದ ಸದ್ಗುಣಗಳು ಮಾನವಜನ್ಮಧಾರಿಗಳೆಲ್ಲರಿಗೂ ಆವಶ್ಯಕಗಳಾಗಿದ್ದರೂ ಶಿವಲಿಂಗವನ್ನು ತಮ್ಮ ಶರೀರದಲ್ಲಿ ಎಡಬಿಡದೆ ಧರಿಸಿದ ಲಿಂಗಾಂಗಿಗಳಿಗಂತೂ ಅವಶ್ಯಕಗಳಾದ ಧರ್ಮಗಳಾಗಿವೆ ಸ್ವಸ್ವಾಪದಿರುವುದೇ ಸತ್ಯವು ನಿಂದೆಯನ್ನು ಸಹಿಸಿಕೊಳ್ಳುವುದೇ ಕ್ಷಮೆಯು, ಪರರ ದುಃಖವನ್ನು ಹೋಗಲಾಡಿಸಲಪೇಕ್ಷಿಸುವುದೇ ದಯೆಯು ಅಶುಚಿಪದಾರ್ಥಗಳ ಸಂಬಂಧವನ ಒಡಂಬಡುವುದೇ ಶೌಚವು, ತಾನು ಪ್ರಾರಂಭಿಸಿದ ಶಿವಕಾರ್ಯಾದಿ ಶುಭ ಕಾರ್ಯವನ್ನು ಬಿಡದಿರುವುದೇ ನಿಯಮವು ಮನೋವಾಕ್ಕಾಯಗಳಲ್ಲಿ ಕಾಠಿನ್ಯಸ್ವಭಾವವನ್ನು ಬಿಡುವುದೇ ಮಾರ್ದವವು, ಶಿವಲಿಂಗಪೂಜಾದಿಗಳಿಗೋಸ್ಕರ ಹಸಿವು ತೃಷೆಗಳ ಆಶೆಯನ್ನು ಬಿಟ್ಟು ದೈವಪುರುಷರ ಸೇವೆ ಮಾಡುವುದೇ ತಪಸ್ಸು, ಉತ್ತಮ ಪಾತ್ರದಲ್ಲಿ ದಾನ ಮಾಡುವುದೇ ತ್ಯಾಗವು, ಪರಸ್ತ್ರೀ ಸ್ಮರಣಾದಿಗಳಿಲ್ಲದಿರುವುದೇ ಬ್ರಹ್ಮಚರ್ಯವು ಶಿವನಿಚ್ಛೆಯಿಂದ ಒಂದದ್ದರಲ್ಲಿಯೇ ಸಂತೋಷಗೊಳ್ಳುವುದೇ ಸಂತುಷ್ಟಿಯು ವೃಥಾ ಕಾಲಕ್ಷೇಪಮಾಡದ ವಕ್ರಮಾರ್ಗದಲ್ಲಿ ಪ್ರವೇಶಿಸದಿರುವುದೇ ಆರ್ಜವವು, ಈ ಧರ್ಮಗಳು ದೇವಸಂಬಂಧವಾದ ಧರ್ಮಗಳೆನಿಸುವವು ಇವಕ್ಕೆ ವಿರುದ್ಧಗಳಾದ ಅಸತ್ಯಾದಿ ಧರ್ಮಗಳು ಅಸುರಧರ್ಮಗಳೆನಿಸುವವು ಆಸುರ ಧರ್ಮಗಳು ಯಾವ ಆತ್ಮನಲ್ಲಿ ಸಂಬಂಧಿಸಿಕೊಂಡಿರುವವೋ ಆ ಆತ್ಮನು ಕಲುಷಿತನಾಗುವನಲ್ಲದೆ ಮುಂದೆ ನಾನಾವಿಧಗಳಾದ ಹೀನಜನ್ಮಗಳಲ್ಲಿ ಪ್ರವೇಶಿಸುವನು

ಪ್ರಭುತ್ವವನ್ನು ಮಾಡತಕ್ಕವನಿಗೆ ತನ್ನ ಪ್ರಭುತ್ವದ ಸ್ಥಿರತೆಗಾಗಿ ಅಮಾತ್ಯದುರ್ಗಾದಿ ಸಪ್ತಾಂಗಗಳು ಹೇಗೆ ಆವಶ್ಯಕಗಳಾಗಿವೆಯೋ ಹಾಗೆಯೇ ಶಿವಲಿಂಗಾಂಗಧಾರಕನಾದ ಶಿವಭಕ್ತನಿಗೆ ಸತ್ಯ ಕ್ಷಮಾದಿ ಏಕಾದಶಗುಣಗಳು ಅವಶ್ಯಕಗಳಾಗಿರುತ್ತವೆ ಸಪ್ತಾಂಗಗಳಿಲ್ಲದ ಪ್ರಭುವು ಶತ್ರುರಾಜರಿಂದ ಆಕ್ರಮಿಸಲ್ಪಡುವಂತೆ ಸತ್ಯ ಕ್ಷಮಾದಿ ಸದ್ಗುಣಗಳಿಲ್ಲದ ಶಿವಭಕ್ತನು ಕಾಮಾದಿ ಶತ್ರುಗಳಿಂದ ಅಪಹರಿಸಲ್ಪಡುವನು ಸಪ್ತಾಂಗಗಳನ್ನಿಟ್ಟುಕೊಂಡು ರಾಜ್ಯಭಾರಮಾಡುವ ರಾಜನು ನಿರ್ವಿಘ್ನವಾಗಿ ತನ್ನ ಪ್ರಭುತ್ವವನ್ನು ನಿರ್ವಹಿಸಿ ಜಯಲಕ್ಷ್ಮಿಯನ್ನು ಪಡೆಯುವಂತೆ ಸತ್ಯಕ್ಷಮಾದಿಗಳೆಂಬ ಏಕಾದಶಧರ್ಮಗಳನ್ನು ಆರಾಧಿಸುವವನು ಮೋಕ್ಷಲಕ್ಷ್ಮಿಯನ್ನು ಪಡೆಯುತ್ತಾನೆ. ಇಂತಹ ಮೋಕ್ಷಲಕ್ಷ್ಮಿಯನ್ನು ಪಡೆಯುವುದೇ ಮಾನವನ ಪರಮಪುರುಷಾರ್ಥವಾಗಿರುವುದು

ಈಶ್ವರನಾಜ್ಞೆಯಿಂದ ಭೂಮಿಗವತರಿಸಿದ ಪ್ರತಿಯೊಬ್ಬ ಮತಾಚಾರ್ಯರೂ ಕೂಡ ನಿಷಿದ್ಧಮಾರ್ಗದಿಂದಾಗುವ ದುಃಖವನ್ನೂ ವಿಹಿತಮಾರ್ಗದಿಂದಾಗುವ ಸುಖವನ್ನೂ ಗ್ರಂಥಗಳ ಮೂಲಕ ಬೋಧಿಸಿರುತ್ತಾರೆ. ಅಸತ್ಯ, ಅಕ್ಷಮೆ, ನಿರ್ದಯೆ ಮುಂತಾದವುಗಳೇ ಅಹಿತ ಮಾರ್ಗಗಳು. ಸತ್ಯ, ಕ್ಷಮೆ, ದಯೆ ಮುಂತಾದವುಗಳೇ ಹಿತಮಾರ್ಗಗಳು ಮಾನವನು ಹಿತಮಾರ್ಗವನ್ನು ಬಿಟ್ಟು ಕ್ರೂರವಾದ ಅಹಿತಮಾರ್ಗದಲ್ಲಿ ಪ್ರವೇಶಮಾಡಿದ್ದಾದರೆ ಅವಸಾನದಲ್ಲಿ ದುರ್ಗತಿಯನ್ನು ಹೊಂದಬೇಕಾಗುವದು ಆದ್ದರಿಂದ ಬಾಲ್ಯಾದಾರಭ್ಯ ಪರಮಾತ್ಮಪ್ರೀತಿಸಾಧಕವಾದ ಸತ್ಯ, ಕ್ಷಮೆ, ದಯೆ ಮುಂತಾದ ಗುಣಗಳೇ ವ್ಯವಹಾರದಲ್ಲಿ ಒರುವಂತೆ ಅಭ್ಯಾಸಮಾಡಬೇಕು ಈ ಪರಿಶುದ್ಧಧರ್ಮಗಳಲ್ಲಿ ಯಾವನು ಯಾವಾಗಲೂ ವ್ಯವಹರಿಸುತ್ತಾನೆಯೋ ಅವನು ಲೋಕದಲ್ಲಿ ಮಾನ್ಯನಾಗುವನಲ್ಲದೆ ಅವನ ಜನ್ಮವೂ ಕೃತಾರ್ಥವಾಗುವುದು ಇಂತಹ ಆತ್ಮೋದ್ಧಾರ ಸಾಧಕಗಳಾದ ಧರ್ಮಗಳಲ್ಲಿ ಒಂದನ್ನೂ ಆರ್ಜಿಸದ ಯಾವಾಗಲೂ ಅಸತ್ಯ, ಅಕ್ಷಮೆ, ನಿರ್ದಯೆ ಮುಂತಾದ ದುರ್ಗುಣಗಳಲ್ಲಿಯೇ ವ್ಯವಹರಿಸುತ್ತಿದ್ದರೆ ಇಹದಲ್ಲಿಯೂ ನಿಂದ್ಯನಾಗುವನಲ್ಲದೆ ಪರಕ್ಕೂ ದೂರನಾಗುವನು ಎಲ್ಲಾ ನೀತಿಗಳೂ ಈ ಧರ್ಮಗಳಲ್ಲಿಯೇ ಅಡಕವಾಗಿರುತ್ತವೆ ಇಂತಹ ಪವಿತ್ರವಾದ ಸತ್ಯ, ಕ್ಷಮೆ ಮುಂತಾದ ಧರ್ಮಗಳು ಯಾರಲ್ಲಿ ಪೂರ್ಣವಾಗಿ ನೆಲೆಗೊಂಡಿರುವವೋ ಅವರೇ ಮಹಾತ್ಮರೆಂದೂ ಭಗವತ್ಸ್ವರೂಪರೆಂದೂ ಹೇಳಲ್ಪಡುವರು ಮೂಲಾಧಾರಗಳಾದ ಈ ಧರ್ಮಗಳನ್ನು ಸಂಗ್ರಹಿಸದೆ ಎಷ್ಟು ಜಗದ ತನ ಸೇವೆ ಮಾಡಿದರೂ, ಎಷ್ಟು ದಾನಧರ್ಮಗಳನ್ನು ಮಾಡಿದರೂ, ಎಷ್ಟು ವೈದುಷ್ಯವನ್ನು ಪಡೆದರೂ ಪೆಲ್ಲಾ ಹದಿಯಿಲ್ಲದ ಮನೆಯನ್ನು ಕಟ್ಟಿದಂತೆ ವ್ಯರ್ಥವಾಗುವುವಲ್ಲದೆ ಫಲಕಾರಿಯಾಗುವುದಿಲ್ಲವು ಇವುಗಳಲ್ಲಿ ಒಂದೆರಡು ಧರ್ಮಗಳನ್ನಾದರೂ ಪಡೆದು ಇವುಗಳ ಆಧಾರದಲ್ಲಿ ಅಲ್ಪ ಸ್ವಲ್ಪ ದಾನಧರ್ಮಗಳನ್ನು ಮಾಡಿದರೂ, ಅಲ್ಪ ಸ್ವಲ್ಪ ಪವಿತ್ರಗಳ ಉಪಾಸನೆಗಳನ್ನು ಮಾಡಿದರೂ ಅವೆಲ್ಲವೂ ತಕ್ಕಷ್ಟು ಫಲವನ್ನು ಕೊಟ್ಟೇ ಕೊಡುವುವು ಆದುದರಿಂದ ಆಸ್ತಿಕಪಂಥಾನುಯಾಯಿಗಳಾದ ಮಾನವರು ಸತ್ಯ ಕ್ಷಮೆ, ದಯೆ, ತ್ಯಾಗ ಬ್ರಹ್ಮಚರ್ಯಾದಿ ಧರ್ಮಗಳನ್ನು ಅರ್ಜಿಸಿ ಪರಮೇಶ್ವರ ಕೃಪೆಗೆ ಪಾತ್ರರಾಗಿ ಧನ್ಯಜೀವಿಗಳಾಗಬೇಕೆಂದು ಆಶಿಸುತ್ತೇವೆ

ವರ್ತಮಾನ ಸಂಗ್ರಹ

ಟೋಕಿಯೋದಲ್ಲಿ ೨೦೦ ಚ|| ಮೈಲಿ ಪ್ರದೇಶ ಮಿತ್ರ ಹತೋಟಿಗೆ

ಟೋಕಿಯೋದ ೨೦೦ ಚದರ ಮೈಲಿ ಪ್ರದೇಶವು ಮಿತ್ರರ ಹತೋಟಿಗೆ ಒಳಪಟ್ಟಿದೆ ಯುದ್ಧಾತ್ಪೂರ್ವ ಇಲ್ಲಿನ ಜನಸಂಖ್ಯೆ ೬೦ ಲಕ್ಷ ಇದುವರೆಗೆ ೧೫ ಸಹಸ್ರ ಮಿತ್ರ ಸೈನಿಕರು ಇಲ್ಲಿಗೆ ಆಗಮಿಸಿದ್ದಾರೆ

ಟೋಜೋವಿನ ಹೇಳಿಕೆ

ಈಗ ಸ್ವಾಸ್ಥ್ಯಾಪಾಯದಿಂದ ಪಾರಾಗಿರುವ ಜ|| ಟೋಜೋ ಬಹುಕಾಲಕ್ಕೆ ಮುಂಚೆಯೇ ನಾನು ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ಆಲೋಚಿಸಿದ್ದ ಆದರೆ ಅಮೆರಿಕನ್ ಅಧಿಕಾರಿಗಳು ನನ್ನ ಮನೆ ಸುತ್ತುಗಟ್ಟಿದಾಗ ಆತ್ಮಹತ್ಯೆ ಮಾಡಿಕೊಳ್ಳುವ ಕಾಲ ಬಂದುಬಿಟ್ಟಿತು ಅಮೆರಿಕನ್ನರು ನನಗೆ ಚೆನ್ನಾಗಿ ಚಿಕಿತ್ಸೆ ಮಾಡಿ ಅಂತರರಾಷ್ಟ್ರೀಯ ನಿಯಮಗಳನ್ನು ಪಾಲಿಸಿದ್ದಾರೆ" ಎಂದು ಹೇಳಿದ್ದಾರೆ

ಕತ್ತಿಕಠಾರಿಗಳನ್ನೆಲ್ಲ ಒಪ್ಪಿಸಿಬಿಡಬೇಕು

ಎಲ್ಲ ಜಪಾನಿಯರೂ ವಂಶಪಾರಂಪರ್ಯವಾಗಿ ಒಂದಿರುವ ಖಡ್ಗಧಾರಣೆಯನ್ನು ಬಿಟ್ಟು ಮಿಲಿಟರಿ ಚಿಹ್ನೆಯು ನೈಲ್ಲಾ ಕಿತ್ತುಹಾಕತಕ್ಕದ್ದು, ಎಲ್ಲ ಜಪಾನಿ ಸೈನಿಕರೂ ಕತ್ತಿಕಠಾರಿಗಳನ್ನೂ ಇತರ ಶಸ್ತ್ರಾಸ್ತ್ರಗಳನ್ನೂ ಮಿತ್ರ ಅಧಿಕಾರಿಗಳಿಗೆ ಒಪ್ಪಿಸತಕ್ಕದು ಎಂದು ಮಿತ್ರ ಪ್ರಧಾನ ಸೇನಾನಿ ಜ|| ಮೆಕ್ ಆರ್ಥರ್ ಆಜ್ಞಾಪಿಸಿದ್ದಾರೆ

ಹಿರೋಹಿಟೋಗೆ ಪದಚ್ಯುತಿ!

ಮೆಕ್‌ಆರ್ಥರ ಪ್ರವೇಶದಿಂದ ಜಪಾನಿನಲ್ಲಿ ಕ್ರಾಂತಿಕಾರಕ ಬದಲಾವಣೆಯಾಗುವ ಸಂಭವವಿದೆ ನೂತನ ಚಕ್ರವರ್ತಿಯನ್ನು ನೇಮಿಸಿ ಪ್ರಜಾಪ್ರಭುತ್ವ ಸ್ಥಾಪಿಸಬಹುದು ಜಪಾನ್ ಕೈಗಾರಿಕಾ ಮತ್ತು ರಾಜಕೀಯ ಒಡೆಯರಾದ ಬುಟ್ಟು ಮನೆತನಗಳ ಕುಹಕ ಇನ್ನು ಮುಂದೆ ನಡೆಯಲಾರದು ಎಂತೂ ಜಪಾನ್ ಪ್ರಗತಿ ಮಾರ್ಗದಲ್ಲಿ ಅಡಿಇಡುವುದರಲ್ಲಿ ಸಂಶಯವಿಲ್ಲ ಎಂದು ಹೇಳಲಾಗಿದೆ

ಚೀಣದಲ್ಲಿ ಜಪಾನಿ ಯುದ್ಧ ಪಾತಕಿಗಳ ಬೇಟೆ

ಚೀಣದಲ್ಲಿ ಜಪಾನಿ ಯುದ್ಧ ಪಾತಕಿಗಳ ಬೇಟೆ ಪ್ರಾರಂಭವಾಗಿದೆ ಚೀಣದಲ್ಲಿರುವ ೨೦ ಲಕ್ಷ ಜಪಾನಿ ಸೈನಿಕರನ್ನು ಆದಷ್ಟು ಬೇಗ ಅವರ ಸ್ಥಳಗಳಿಗೆ ಕಳಿಸಲಾಗುತ್ತದೆ, ಅಲ್ಲದೆ ೬೬೫೦೦ ಮಿತ್ರ ಬಂದಿಗಳು ಚೀಣದಲ್ಲಿದ್ದಾರೆ—ಎಂದು ಚೀಣದಲ್ಲಿರುವ ಅಮೆರಿಕನ್ ಪಡೆಗಳ ಸೇನಾನಿ ಲೆ|| ಜ|| ವೆಡೆಮೆಯರ್ ಪ್ರಕಟಿಸಿದ್ದಾರೆ

ಚೀನಾದಲ್ಲಿನ್ನೂ ೭೮ ಸಹಸ್ರ ಶಸ್ತ್ರಸಜ್ಜಿತ ಜಪಾನರಿದ್ದಾರೆ

ಚೀಣದಲ್ಲೂ ಜಪಾನರು ಅಧಿಕೃತವಾಗಿ ಶರಣಾಗತರಾದದ್ದರಿಂದ ಅಲ್ಲಿನ ಸಮಸ್ಯೆ ಪರಿಹಾರವಾದಂತಾಗಲಿಲ್ಲ! ಚೀಣದ ನಾನಾ ಭಾಗಗಳಲ್ಲಿ ಅಲೆದಾಡುತ್ತಿರುವ ಶಸ್ತ್ರಸಜ್ಜಿತರಾದ ೭೮೦೦೦ ಜಪಾನಿ ಸೈನಿಕರನ್ನೊಳಗೊಂಡ ಶತ್ರು ಸೈನ್ಯವಿದೆ ಇದನ್ನು ಶಸ್ತ್ರವಿಹೀನಗೊಳಿಸಲು ಕನಿಷ್ಠಪಕ್ಷ ಮೂರು ತಿಂಗಳಾದರೂ ಬೇಕಾಗುತ್ತೆಂದು ಅಂದಾಜು ಮಾಡಲಾಗಿದೆ ನ್ಯಾನ್‌ಕಿಂಗ್ ಮತ್ತು ಚೆಕಿಯಾಂಗ್‌ಗಳಿಗೆ ಚೀಣೀ ಪಡೆಗಳನ್ನು ತ್ವರಿತವಾಗಿ ಕಳಿಸಲಾಗುತ್ತಿದೆ, ಪ್ರತಿಯೊಂದು ವಿಮಾನದಲ್ಲೂ ಪ್ರತಿದಿನವೂ ಶಸ್ತ್ರಸಜ್ಜಿತರಾದ ೩೦ ಸೈನಿಕರನ್ನು ಆ ನಗರಗಳಿಗೆ ರವಾನಿಸಲಾಗುತ್ತಿದೆ

ಹಿಟ್ಲರ್ ಹ್ಯಾಂಬರ್ಗಿನಲ್ಲಿ ಅವಿತುಕೊಂಡಿದ್ದಾನೆ!

ಹಿಟ್ಲರ್ ಮತ್ತು ಆತನ ಡೆಪ್ಯುಟಿ ಮಾರ್ಟಿನ್ ಬೋರ್ಮನ್ ಹಾಂಬರ್ಗಿನಲ್ಲಿ ಕಂಡುಬಂದರೆಂದೂ, ಎಲ್ಬ್ ಅಳಿವೆಯಲ್ಲಿರುವ ಒಂದು ಸಣ್ಣ ದ್ವೀಪದಲ್ಲಿ ಅವರು ಅವಿತುಕೊಂಡಿದ್ದಾರೆಂದೂ ಅವರು ಕೊಡುವ ಆಜ್ಞೆಗಳನ್ನು ಪಾಲಿಸುತ್ತಾ ಸಾವಿರಾರು ನಾಜಿಗಳು ಜರ್ಮನಿಯಲ್ಲಿ ವೇಷಮರೆಸಿಕೊಂಡು ವರ್ತಿಸುತ್ತಿರುವುದಾಗಿಯೂ ಹೇಳಲಾಗಿದೆ. ನಾಜಿಗಳ ಈ ಗುಪ್ತ ಶಿಬಿರವನ್ನು ಮಿತ್ರರು ಪತ್ತೆ ಹಚ್ಚದಿದ್ದರೆ ವಿಪರೀತ ತೊಂದರೆ ಆಗುವುದಾಗಿ ಅರಿವುಂಟಾಗಿ ಹಿಟ್ಲರನ ಶೋಧನೆಗೆ ಭಗೀರಥ ಪ್ರಯತ್ನಗಳು ಜರುಗುತ್ತಿವೆ.

ಹಿಟ್ಲರನನ್ನು ಪತ್ತೆ ಹಚ್ಚುವ ಕೆಲಸ ನಿಂತೇ ಇಲ್ಲ

ಹಿಟ್ಲರ್ ಮತ್ತು ಆತನ ಡೆಪ್ಯುಟಿ ಮಾರ್ಟಿನ್ ಬೋರ್ಡಿನ ಫ್ಲೆನ್ಸ್‌ಬರ್ಗ್ ಹೋಲ್ ಸ್ಟೀಡನ್ನಿನಲ್ಲಿ ಅಡಗಿಕೊಂಡಿರಬಹುದೆಂದು ಮಿತ್ರ ಮಿಲಿಟರಿ ಅಧಿಕಾರಿಗಳು ಭಾವಿಸಿ, ಆತನ ಪತ್ತೆಗಾಗಿ ಭಗೀರಥ ಪ್ರಯತ್ನ ಮಾಡುತ್ತಿದ್ದಾರೆ ಮೇ ತಿಂಗಳಂತ್ಯದವರೆಗೂ ಯಾವಾಗೆಂದರೆ ಆವಾಗ ಜರ್ಮನಿಯಿಂದ ಪರಾರಿಯಾಗಲು ಹಿಟ್ಲರನಿಗೆ ಪೂರ್ಣ ಅವಕಾಶವಿತ್ತೆಂದು ಬರ್ಲಿನ್ ಪತನದ ಮುನ್ನ ಆತನನ್ನು ಕಾಣುತ್ತಲಿದ್ದ ಒಬ್ಬ ಹೆಂಗಸು ಹೇಳುತ್ತಿದ್ದಾಳೆ ಬರ್ಲಿನ್ ನಗರವನ್ನೇನ್ನೂ ರಷ್ಯನರು ಆಕ್ರಮಿಸಿಕೊಳ್ಳುವ ಒಂದು ವಾರದ ಮುಂಚೆ ನಗರದ ಹೊರಭಾಗದಲ್ಲಿರುವ ಗ್ಯಾಟೋ ವಿಮಾನಾಶ್ರಯದಲ್ಲಿ ಭಾರಿ ಭಾರಿ ವಾಹಕ ವಿಮಾನಗಳು ಜಮಾಯಿಸಿದ್ದುವೆಂದೂ, ಪ್ರತಿದಿನ ಸಂಜೆ ಆ ವಿಮಾನಗಳು ಉತ್ತರಾಭಿಮುಖವಾಗಿ ಹೊರಟು ಮಾರನೆಯ ದಿನ ವಾಪಸು ಬರುತ್ತಿದ್ದವೆಂದೂ ಆಕೆಯ ವರದಿ ಈ ವಿಮಾನಗಳಲ್ಲಿ ದೊಡ್ಡ ದೊಡ್ಡ ಜರ್ಮನ್ ಉದ್ಯೋಗದಾರರೂ ಅವರ ಹೆಂಗಸರೂ ಮಕ್ಕಳೂ ಇರುತ್ತಿದ್ದರಂತೆ ನಾಜಿ ನಾಯಕರಿಗೆಂದು ಮೂರು ವಿಶೇಷ ತರಹೆಯ ವಿಮಾನಗಳು ಸಿದ್ಧವಾಗಿದ್ದುವಂತೆ ಆ ವಿಮಾನಗಳು ಗ್ಯಾಟೋ ಪತನವಾಗುವ ಕಾಲದಲ್ಲಿ ಅದೃಶ್ಯವಾಗಿದ್ದವೆಂದು ಹೇಳಲಾಗಿದೆ.

ಆಟಂ ಶಕ್ತಿಯಿಂದ ರೈಲ್ವೆ ಇನ್‌ಜನ್ ನಡೆಸುವ ಪ್ರಯತ್ನ

ಆಟಂ ಶಕ್ತಿಯಿಂದ ಚಲಿಸುವ ರೈಲ್ವೆ ಇನ್‌ಜನ್ ಒಂದನ್ನು ಇಷ್ಟರಲ್ಲೇ ರಚಿಸುವುದಾಗಿ ಸಂಯುಕ್ತ ಸಂಸ್ಥಾನಗಳ ರೀಸರ್ಚ್ ಡೆವಲಪ್‌ಮೆಂಟ್ ಕಂಪನಿಯ ಚೀಫ್ ಇನ್‌ಜನಿಯರಾದ ಶ್ರೀ ರಾಲ್ಫ್ ಲೂಕಾಸ್ ರವರು ತಿಳಿಸಿರುವರು ಈ ರೈಲ್ವೆ ಇರ್ಜ ರಚನಾ ವಿವರಗಳ ಪೇಟೆಂಟ್ ತೆಗೆದುಕೊಂಡಿರುವುದಾಗಿಯೂ ಉಕ್ಕು ಮತ್ತು ಪಾದರಸಗಳ ಅಟಂ ಶಕ್ತಿಯನ್ನು ಕ್ರೋಢೀಕರಿಸಿ ಅದನ್ನು ಟರ್ಬಿನ್ ಮೂಲಕ ನೂಯಾರ್ಕ್ ಸೆಂಟ್ರಲ್ ರೈಲ್ವೆಯವರಿಗಾಗಿ ಪ್ರಾಯೋಗಿಕವಾಗಿ ರಚಿಸಲಾಗಿರುವ ಇನ್‌ಜನ್ ನಡೆಸುವ ಪರೀಕ್ಷೆ ನಡೆಸಲಿದ್ದಾರೆಂದೂ ಅಲ್ಲದೆ ಇದಕ್ಕೆ ಹಲವು ತಿಂಗಳಕಾಲ ಹಿಡಿಯುವುದೆಂದೂ ತಿಳಿಸಿದ್ದಾರೆ

ಭಾರತದ ಸಮಸ್ಯೆಗೆ ಹೆಚ್ಚು ಗಮನಕೊಡಲಾಗುತ್ತಿದೆ

"ಈವರೆಗೆ ಪರಿಹಾರವಾಗದೆ ಈಗ ಇತ್ಯರ್ಥವಾಗಬೇಕಾಗಿರುವ ಭಾರತ ಪ್ರಜೆಗಳಿಗೆ ಸ್ವರಾಜ್ಯ ಸ್ಥಾಪಿಸಿಕೊಡುವಂಥ ಮಹತ್ಸಮಸ್ಯೆಗಳಿಗೆ ಲೇಬರ್ ಸರ್ಕಾರವು ವಿಶೇಷ ಗಮನಕೊಡುತ್ತಿದೆ" ಎಂದು ಬ್ರಿಟಿಷ್ ಮಹಾಪ್ರಧಾನಿ ಕ್ಲಿಮೆಂಟ್ ಆಟ್ಲಿಯವರು ಬ್ರಿಟಿಷ್ ಕಾರ್ಮಿಕ ಸಮ್ಮೇಳನದಲ್ಲಿ ಭಾಷಣ ಮಾಡುವಾಗ ಹೇಳಿದರು 'ಕೆಲವು ಸಮಸ್ಯೆಗಳು ಪೋಟ್ಸ್‌ಡಾಂ ಸಮ್ಮೇಳನದಲ್ಲಿ ಪರಿಹರಿಸೋಣವು, ಮತ್ತೆ ಕೆಲವು ಈಗ ಲಂಡನ್ನಿನಲ್ಲಿ ನಡೆಯುತ್ತಿರುವ ವಿದೇಶಾಂಗ ಸಚಿವರ ಸಮ್ಮೇಳನದಲ್ಲಿ ಇತ್ಯರ್ಥವಾಗುತ್ತಿವೆ, ಇನ್ನೂ ಹಲವು ಶಾಂತಿ ಸಮ್ಮೇಳನದಲ್ಲಿ ನಿರ್ಧರಿಸಲ್ಪಡಬೇಕು' ಎಂದು ಅವರು ತಿಳಿಸಿದರು

ಭಾರತದ ಸಮಸ್ಯೆ ಬಗ್ಗೆ ಬ್ರಿಟಿಷ್ ಸರ್ಕಾರದ ಭಾವನೆ

ಲಾರ್ಡ್ ವೇವೆಲ್ ಮುಂದಿನವಾರ ಭಾರತಕ್ಕೆ ಬ್ರಾಡ್‌ಕ್ಯಾಸ್ಟ್ ಭಾಷಣ ಮಾಡುವರು ಆಗ ಭಾರತದ ನಾನಾ ಪಕ್ಷಪಂಗಡಗಳವರು ರಾಜ್ಯಾಂಗ ವಿಧಾನದ ಅಂಶಗಳ ಬಗ್ಗೆ ಒಂದು ಒಪ್ಪಂದ ಮಾಡಿಕೊಂಡರೆ ಕ್ರಿಪ್ಸ್ ಯೋಜನೆ ತಕ್ಷಣ ಅನುಷ್ಠಾನದಲ್ಲಿ ಬರುತ್ತದೆಂದು ಅವರು ತಿಳಿಸುವರು," ಎಂದು ಡೈಲಿ ಎಕ್ಸ್‌ಪ್ರೆಸ್ ಪತ್ರಿಕೆ ವಾದಿಸಿದೆ ಭಾರತದ ಪಕ್ಷ ಪಂಗಡಗಳಿಗೆ ಒಪ್ಪಂದ ತೀರ ಅಗತ್ಯವೆಂದು ಪ್ರತಿಪಾದಿಸಲ್ಪಡುವುದಾಗಿ ಅವರ ಹೇಳಿಕೆ. ಸದ್ಯಕ್ಕೇನೂ ಮಾರ್ಪಾಟು ಬೇಡ, ಚುನಾವಣಾ ಫಲಿತಾಂಶ ಗೊತ್ತಾದ ಮೇಲೆ ಮುಂದಿನ ಯೋಜನೆಯೆಂದು ಬ್ರಿಟಿಷ್ ಮಂತ್ರಿಮಂಡಲ ನಿರ್ಧರಿಸುವುದಾಗಿ ಹೇಳಲಾಗಿದೆ. ಅಂದರೆ ಪ್ರಾಂತಗಳಲ್ಲಿ ಗವರ್ನರ್ ಪ್ರಭುತ್ವಗಳು ರದ್ದಾಗದೆಂದೇ ಆಯಿತು ಭಾರತ ಸಮಸ್ಯೆಯ ವಿಚಾರದಲ್ಲಿ ಬ್ರಿಟಿಷ್ ಮಂತ್ರಿವರ್ಗದಲ್ಲಿ ಮೂರು ತಂಡಗಳೇರ್ಪಟಿದ್ದುವೆಂದು ಹೇಳಲಾಗಿದೆ, ಒಂದು ತಂಡದವರು ಆಟ್ಲಿ, ಬೆರ್ವಿ ಮತ್ತು ಪೆಥಿಕ್ ಲಾರೆನ್ಸ್ ಇನ್ನೊಂದು ತಂಡದವರು ಕ್ರಿಪ್ಸ್ ಮತ್ತು ಲಿಸ್ಟೊವೆಲ್ ಮೂರನೆಯ ತಂಡವೆಂದರೆ ವೇವೆಲ್ ಒಬ್ಬರೇ

ಸ್ವೀಕಾರ

ಬಳ್ಳಾರಿ ಡಿ|| ಹೊಸಪೇಟೆ ತಾ|| ಮೆಟ್ರಿ ಗ್ರಾಮದ ಸಮಸ್ತ ದೈವದವರು ಶ್ರಾವಣಮಾಸದ ಪೂಜೆಯನ್ನು ಸಮಾಪ್ತಿಗೊಳಿಸಿದ ಸಮಯದಲ್ಲಿ ಪ್ರಭಾಪೋಷಣ ಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ಸ್ಕೂಲ್ ಮಾಸ್ತರ್ ವೇ|| ಎಚ್ ಎಂ ಮಹದೇವಯ್ಯನವರ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ.

ಪಟ್ಟಾಭಿಷೇಕ ದಿನಾಚರಣೆ

ಶ್ರೀಮನ್ಮಹಾರಾಜರವರ ಪಟ್ಟಾಭಿಷೇಕ ಮಹೋತ್ಸವ ದಿನಾಚರಣೆ ಸಂಬಂಧದಲ್ಲಿ, ಅರಮನೆ ನೌಕರರು 1ನೆಯ ತಾರೀಖಿನ ದಿವಸ ಚಾಮುಂಡಿ ಜಮಖಾನದಲ್ಲಿ ಹುಜೂರ್ ಸೆಕ್ರೆಟರಿ ಶ್ರೀ ಟಿ ರಾಮಯ್ಯನವರ ಅಧ್ಯಕ್ಷತೆಯಲ್ಲಿ ೫ನೇ ವಾರ್ಷಿಕ ಸಮಾರಂಭವನ್ನು ಅತಿ ವೈಭವದಿಂದ ನೆರವೇರಿಸಿದರು ದೇವತಾ ಪ್ರಾರ್ಥನೆ ಮತ್ತು ಆ ಮ. ನಂಜನಗೂಡು ಶ್ರೀಕಂಠಶಾಸ್ತ್ರಿಗಳಿಂದ ವಿರಚಿತವಾದ ಮಂಗಳ ಪದ್ಯಗಳ ಪಠನವಾದ ನಂತರ, ಆ|| ವಿ|| ವೈಣಿಕಪ್ರವೀಣ ಶ್ರೀ ವೆಂಕಟಗಿರಿಯಪ್ಪನವರ ಮತ್ತು ವಿ ದೊರೆಸ್ವಾಮಿ ಅಯ್ಯಂಗಾರ್ಯರ ವೀಣಾವಾದನವು ನಡೆಯಿತು —ಅಧ್ಯಕ್ಷರಾದ ಶ್ರೀ ರಾಮಯ್ಯನವರು ತಮ್ಮ ಭಾಷಣದಲ್ಲಿ ಪ್ರಪಂಚ ಪ್ರಗತಿ ದೃಷ್ಟಿಯಿಂದ ಈ ಸಂವತ್ಸರವು ಅತಿವ ಮುಖ್ಯವಾದುದೆಂದೂ ಮಹಾಸ್ವಾಮಿಯವರಿಗೆ ಪಟ್ಟಾಭಿಷೇಕವಾದಂದಿನಿಂದ ಸಂಸ್ಥಾನವು ಸರ್ವತೋಮುಖವಾಗಿ ಅಭಿವೃದ್ಧಿಗೆ ಬಂದಿರುತ್ತದೆಂದು ತಿಳಿಸಿದರು ಮಹಾಪ್ರಭುಗಳಿಗೆ ಜಿ ಸಿ ಎಸ್ ಐ ಎಂಬ ಬಿರುದು ಒಂದಿರುವುದು ಮತ್ತು ಮಿತ್ರ ಪಕ್ಷದವರಿಗೆ ಜಯ ಲಭಿಸಿರುವುದು ಆನಂದದಾಯಕವಾದುದೆಂದೂ ತಿಳಿಸಿದರು ನಂತರ ಮಹಾಸ್ವಾಮಿಯವರಿಗೆ ರಾಜಭಕ್ತಿಯುತವಾದ ಸಂತೋಷ ಸೂಚನೆಯನ್ನು ಅರ್ಪಿಸುವ ನಿರ್ಣಯವನ್ನು ಮಾಡಲಾಯಿತು ಅನಂತರ ಅಧ್ಯಕ್ಷರು ಆಟಪಾಟಗಳಲ್ಲಿ ಮತ್ತು ಇತರ ಸ್ಪರ್ಧೆಗಳಲ್ಲಿ ಭಾಗವಹಿಸಿದವರಿಗೆ ಬಹುಮಾನಗಳನ್ನು ವಿನಿಯೋಗಿಸಿದರು ಸಂಜೆ ಮೈಸೂರ ಡ್ರಮಾಟಿಕ್ ಯೂನಿಯನ್‌ರವರಿಂದ 'ಪೇಪಲ' ಎಂಬ ನಾಟಕ ಪ್ರದರ್ಶನವು ನಡೆಯಿತು

ಮಲಬದ್ಧತೆ

ಮಲಬದ್ಧತೆಯೆಂಬುದು ಈಗಿನ ಕಾಲದ ತರುಣರಲ್ಲಿ ಸರ್ವಸಾಮಾನ್ಯವಾದ ಒಂದು ವ್ಯಾಧಿಯೆನಿಸಿದೆ ಈ ರೋಗವು ದೇಹದೊಳಗಣ ಸಾರವನ್ನೇ ಕೆಡಿಸಿಬಿಡತಕ್ಕದಾಗಿದೆ

ಈಗ ನಾವು ಪ್ರಕೃತಿಯಲ್ಲಿ ಪರಿಶೀಲಿಸಿ ನೋಡಿದಾಗಲೇ! ಇದರ ಅವಗುಣವೆಷ್ಟೆಂಬುದನ್ನು ಕಂಡುಕೊಳ್ಳಬಹುದು ಕಾಗೆಗಳು ಚಿರಜೀವಿಯೆನಿಸಿಕೊಂಡು ಬಹುಕಾಲ ಬದುಕಿರುವುವು ಕಾಗೆಗಳು ಅಪಾಯವಿಲ್ಲದೆ ಸಾಯುವುದನ್ನು ನಾವು ನೋಡುವುದೇ ಅಪೂರ್ವವು ಇದಕ್ಕೆ ಕಾರಣವೇನು? ಅವು ಆಗಾಗ್ಗೆ ಮಲವನ್ನು ವಿಸರ್ಜಿಸುತ್ತಲೇ ಇರುವುವು ಇದಕ್ಕೆ ಕಾರಣವೇನೆಂದರೆ, ಕಾಗೆಗಳ ದೇಹದಲ್ಲಿ ದೊಡ್ಡಕರುಳುಗಳೇ ಇಲ್ಲ ಮನುಷ್ಯರಿಗೆ ಆ ದೊಡ್ಡಕರುಳುಗಳುಂಟು ಮಲವು ಸಂಗ್ರಹವಾಗಿ ನಿಲ್ಲುವುದು ಈ ದೊಡ್ಡಕರುಳುಗಳಲ್ಲಿಯೇ ಕಾಗೆಗಳಿಗೆ ಅವಿಲ್ಲದುದರಿಂದಲೇ, ಕ್ಷಣಕ್ಷಣಕ್ಕೂ ಅವು ಮಲವನ್ನು ಹೊರಗೆಡಹುತ್ತಲೇ ಇರುವುವು ಒಂದು ಮರದ ಕೆಳಗೆ ನಾವು ಸಂಚರಿಸುವಾಗ ಸ್ವಲ್ಪ ಎಚ್ಚರತಪ್ಪಿದರೆ ತಲೆಯ ಮೇಲೆ ಕಾಗೆಯು ಹೊಲಸುಮಾಡಿ ಹೋಗುವುದು

ಈ ಮಲಬದ್ಧತೆಯಿಂದುಂಟಾಗುವ ಅನೇಕ ವಿಧ ರೋಗಗಳನ್ನು ಪರಿಶೀಲಿಸಿದರೆ ಮಲಶುದ್ಧಿಯು ಆರೋಗ್ಯಕ್ಕೆ ಎಷ್ಟು ಮುಖ್ಯವಾದುದೆಂದು ತಿಳಿಯಬಹುದು ಮಲಸಂಗ್ರಹಸ್ಥಾನವಾದ ದೊಡ್ಡಕರುಳುಗಳು ಯಾವಾಗಲೂ ಶುದ್ಧವಾಗಿರುವಂತೆ ಎಚ್ಚರಿಕೆತೆಗೆದುಕೊಳ್ಳುವುದು ದೀರ್ಘಾಯುಸ್ಸಿಕ್ಕೆ ಕಾರಣವೆಂಬುದು ಯಥಾರ್ಥವು ಯೋಗಾಭ್ಯಾಸನಿಪುಣರಾದ ಯೋಗಿಗಳು ಧಾರಾಳವಾಗಿ ನೀರನ್ನೆಳೆದುಕೊಂಡು ಆಹಾರ ನಾಳಗಳನ್ನೆಲ್ಲ ಚೆನ್ನಾಗಿ ತೊಳೆದು ಶುದ್ಧಮಾಡಬಲ್ಲರು ಮತ್ತು ಶ್ವಾಸದಿಂದ ಗಾಳಿಯನ್ನು ಆ ನಾಳಗಳಲ್ಲಿ ತುಂಬಿಡುವರು

ಕರುಳುಗಳಲ್ಲಿ ಸೇರಿದ ಆಹಾರದ ಚರಟಗಳೆಲ್ಲ ಅಲ್ಲಿಂದ ಹೊರಬೀಳಲು ತಾಮಸವಾಗುವುದೇ ಮಲಬದ್ಧತೆಯೆಂಬುದರ ಅರ್ಥವು ಈ ಮಲಬಂಧದಲ್ಲಿ ಮಲವು ಬಹಳ ಗಟ್ಟಿಯಾಗಿರುವುದು ಅಥವಾ ಸ್ವಲ್ಪ ಗಟ್ಟಿಯಾಗಿಯೂ ಇರುವುದುಂಟು ಹಾಗಿರುವುದು ಒಳ್ಳೇ ಲಕ್ಷಣವಲ್ಲ.

ಮಲಬದ್ಧತೆಗೆ ಸರ್ವಸಾಧಾರಣವಾದ ಕಾರಣವೇನೆಂದರೆ, ಮಲವಿಸರ್ಜನೆಗೆ ಪಾಲುಮಾರಿ ಅದನ್ನು ತಡೆಯುವುದೇ! ಈ ಅಲಕ್ಷ್ಯತೆಗೆ ಈಗಿನ ನವಜೀವನ ಕ್ರಮದಲ್ಲಿ ಜನಗಳಿಗಿರುವ ದುಡಿತವೂ, ಕಾರ್ಯಾತುರವೂ ಮುಖ್ಯಕಾರಣಗಳೆನಿಸಿವೆ ಈಗಿನ ಅನುಭವದಲ್ಲಿ ಪ್ರಾಯಿಕವಾಗಿ ತರುಣಿಯರಲ್ಲಿಯೇ ಈ ಮಲಬದ್ಧತೆಯು ಹೆಚ್ಚಾಗಿ ಕಾಣಬರುತ್ತಿದೆ ಅವರಿಗೆ ಜೀವನದ ದುಡಿತ ವಿಲ್ಲದಿದ್ದರೂ ಅವರು ಲಜ್ಜಾಸ್ವಭಾವವುಳ್ಳವರಾದುದರಿಂದ ಜಲ ಮಲವಿಸರ್ಜನೆಗಳನ್ನು ಆಯಾ ಕಾಲದಲ್ಲಿ ಮಾಡದೆ ಸಮಯನಿರೀಕ್ಷಣೆಗಾಗಿ ತಡೆದಿಡುವರು

ಇದು ಹೊರತು ಮಲಬದ್ಧತೆಗೆ ಇನ್ನೂ ಹಲವು ಕಾರಣಗಳುಂಟು ಕರುಳುಗಳ ಸ್ನಾಯುಗಳು ದುರ್ಬಲವಾಗಿ ಅವು ವಿಸರ್ಜನಕಾರ್ಯವನ್ನು ನಡೆಸದಿರುವುದೊಂದು ಆಹಾರಗಳಲ್ಲಿ ನಿಯಮವೂ ಮಿತಿಯೂ ಇಲ್ಲದಿರುವುದೊಂದು ಇವೆರಡೂ ಈ ಮಲಬಂಧಕ್ಕೆ ಮೂಲವಾಗುವುವು ಕರುಳುಗಳನ್ನು ಬಿಗಿಯುವಂತೆ ಅಲ್ಲಿ ಅತ್ಯಧಿಕವಾಗಿ ಆಹಾರದ ಚರಟಗಳು ಸೇರಿದರಾಗಲಿ, ಅದೇ ಆಹಾರದ ಚರಟವು ಬಹಳ ಸ್ವಲ್ಪವಾಗಿದ್ದರಾಗಲಿ ಮಲಬದ್ಧತೆಗೆ ಕಾರಣವೆನಿಸುವುವು

ಜಠರಕ್ಕೆ ಸಂಬಂಧಪಟ್ಟ, ಸ್ನಾಯುಗಳು, ಡೊಳ್ಳು, ಹೊಟ್ಟೆಯುಳ್ಳವರಿಗೆ ದುರ್ಬಲವಾಗಿರುವುದುಂಟು ಗಂಡಸರಲ್ಲಿ ಈ ದುರ್ಬಲತೆಯೂ, ಹೆಂಗಸರಲ್ಲಿ ಮೇಲೆ ಮೇಲೆ ಪ್ರಸವವಾಗುವುದೂ ಈ ಮಲಬಂದಕ್ಕೆ ಕಾರಣಗಳಾಗುವುವು

ಮಲಬದ್ಧತೆಯುಳ್ಳವರಿಗೆ ಆಗಾಗ ತಲೆಶೂಲೆ, ಮನಸ್ಸಿನಲ್ಲಿ ಉತ್ಸಾಹಹೀನತೆ, ಹಸಿವಾಗದಿರುವುದು, ದಣಿವು, ಮುಂತಾದುವೆಲ್ಲ ಹೆಚ್ಚಾಗಿ ತಲೆದೋರುತ್ತಿರುವುವು. ಅಲ್ಲದೆ ಇಂತಹ ಮಲಬದ್ಧತೆಯುಳ್ಳವರಿಗೆ ಉಸಿರಿನಲ್ಲಿ ಬಹಳ ದುರ್ಗಂಧವಿರುವುದರಿಂದ ಇವರ ಸಮೀಪದಲ್ಲಿ ನಿಲ್ಲುವುದಕ್ಕೆ ಬೇರೆಯವರು ಅಸಹ್ಯಪಡುವರು ಇದರಿಂದ ಉಲ್ಲಾಸವೂ ಸಂತೋಷವೂ ಇಲ್ಲದೆ, ಅವರ ಜೀವನವೇ ಅವರಿಗೆ ಒಂದು ಭಾರವಾಗಿ ತೋರುವುದು

ಜನ್ಮಸಿದ್ಧವಾದ ಮಲಬದ್ಧತೆಯುಳ್ಳವರು, ಮೂಲವ್ಯಾಧಿ, ಕರುಳು ಹಿಡಿದುಕೊಳ್ಳುವುದು ಅಪೆಂಡಿಸೈಟಿಸ್ ಎಂಬ ಜಠರರೋಗ ಈ ಮುಂತಾದ ಕಠಿಣರೋಗಗಳಿಗೆ ಗುರಿಯಾಗುವರಲ್ಲದೆ, ಅವರಿಗೆ ಕರುಳುಗಳಲ್ಲಿ ವ್ರಣಗಳೂ ಉಂಟಾಗುವುವು ಸ್ತ್ರೀಯರಿಗೆ ಋತುಕಾಲದಲ್ಲಿ ಹೊಟ್ಟೆ ಶೂಲೆ ಮುಂತಾದ ನೋವು ಕಾಣಿಸುವದೂ ಈ ಮಲಬದ್ಧತೆಯಿಂದಲೇ

ರೋಗ ಚಿಕಿತ್ಸೆಗಳಿಗಿಂತಲೂ ನಿವಾರಣೋಪಾಯವೇ ಮೇಲೆಂಬ ಪ್ರಸಿದ್ಧವಾದ ನಾಣ್ಣುಡಿಯುಂಟಲ್ಲವೆ? ಅದರಂತೆಯೇ ಈ ಮಲಬದ್ಧತೆಗೆ ಅವಕಾಶ ಕೊಡದಂತೆ ಮೊದಲಿಂದಲೇ ಎಚ್ಚರ ತೆಗೆದುಕೊಳ್ಳುವುದು ಮೇಲು ಮುಖ್ಯವಾಗಿ ಈ ಮಲಬಂಧವೆಂಬುದು ಪ್ರಕೃತಿ ನಿಯಮಗಳಿಗೆ ವಿರೋಧವಾಗಿ ನಡೆಯುವುದರಿಂದಲೇ ಬರುವುದೆಂಬುದು ನಿಜವು ಒಂದೇ ಕ್ರಮವಾದ ಮತ್ತು ಎಲ್ಲಾ ವಿಷಯದಲ್ಲಿಯೂ ಮಿತವಾದ ಆಚರಣೆಯುಳ್ಳವರಿಗೆ ಈ ಮಲಬದ್ಧತೆ ಇರುವದೇ ಇಲ್ಲ ಅಂಥವರು ಯಾವಾಗಲೂ ಆರೋಗ್ಯಕರವಾದ ಮತ್ತು ಉಲ್ಲಾಸವಾದ ಜೀವನಸುಖವನ್ನನುಭವಿಸುವರು

ಆದಲ್ಲದ ಮಲಬದ್ಧತೆ ಇದ್ದಮೇಲೆ ಅದನ್ನು ಗುಣಪಡಿಸುವ ಮಾರ್ಗವೇನೆಂಬುದನ್ನೂ ತಿಳಿದಿರಬೇಕಾದುದವಶ್ಯವಲ್ಲವೆ? ಈ ಮಲಬಂಧವು ಪ್ರಾಯಿಕವಾಗಿ ಅವರವರ ಸಹಜವಾದ ಆಚರಣೆಯ ಮೇಲೆ ಬರತಕ್ಕ ವ್ಯಾಧಿಯಾದುದರಿಂದ ಅದರ ಚಿಕಿತ್ಸೆಗೂ ಪ್ರಕೃತಿ ಮಾರ್ಗದಿಂದಲೇ ಪ್ರಯತ್ನಿಸುವುದು ಉತ್ತಮವು ಪ್ರಾಯಿಕವಾಗಿ ಅದರಿಂದಲೇ ಅದಕ್ಕೆ ಗುಣಕಾಣುವದೂ ನಿಜವೇ. ಇದಕ್ಕಾಗಿ ಮಲಬಂಧವುಳ್ಳವರು ಮೊಟ್ಟಮೊದಲು ತನ್ನ ದಿನಚರ್ಯೆಯನ್ನು ಮಾರ್ಪಡಿಸಿ ತಿದ್ದಿಕೊಳ್ಳಬೇಕು. ಅವನು ತನ್ನ ಶರೀರ ಪ್ರಕೃತಿಗೆ ಸಹಜವಾದ ಕಾರ್ಯಗಳಿಗೆಲ್ಲ, ಕಾಲನಿರ್ಣಯವನ್ನಿಟ್ಟುಕೊಂಡು ಪ್ರತಿದಿನವೂ ಆಯಾ ಕ್ಲೃಪ್ತಘಂಟೆಗಳಲ್ಲಿಯೇ ನಡೆಸಬೇಕು. ತನಗೆ ಇಷ್ಟವೂ ಅವಶ್ಯಕತೆಯೂ ತೋರದಿದ್ದಾಗಲೂ ನಿರ್ಬಂಧ

ಪೂರ್ವಕವಾಗಿ ಅದನ್ನು ಆಗಾಗ ಮಾಡಿಯೇ ತೀರಬೇಕು ಹೀಗೆ ಮಾಡುತ್ತಾ ಬಂದರೆ ಕಾಲಕ್ರಮದಿಂದ ತಾನಾಗಿ ಅದೇ ವಾಡಿಕೆಗೆ ಬರುವುದು

ಪ್ರತಿದಿನವೂ ರಾತ್ರಿ ಮಲಗುವುದಕ್ಕೆ ಮೊದಲೂ ಬೆಳಗ್ಗೆ ಎದ್ದ ಮೇಲೆಯೂ ಒಂದೊಂದು ತಾಲಿ ನೀರನ್ನು ಕುಡಿಯುವ ಅಭ್ಯಾಸವು ಇದಕ್ಕೆ ಬಹಳ ಗುಣಕಾರಿ ಜಠರದಲ್ಲಿ ಉಂಟಾಗಿರುವ ಜಡತೆಯನ್ನು ನೀಗಿಸಿ ಅವನ್ನು ತಕ್ಕ ಕಾರ್ಯದಲ್ಲಿ ಹುರುಪುಗೊಳಿಸುವುದಕ್ಕಾಗಿ ಆ ಭಾಗದ ಸ್ನಾಯುಗಳಿಗೆ ಬಲಕೊಡುವ ವ್ಯಾಯಾಮಗಳನ್ನು ಪ್ರತಿದಿನವೂ ತಪ್ಪದೆ ಮಾಡುತ್ತಾ ಬರಬೇಕು ಇದಕ್ಕಾಗಿ ಹಾಸಿಗೆಯಲ್ಲಿ ಅಂಗತ್ತನಾಗಿ ಮಲಗಿ, ಆ ಮೇಲೆ ಥಟ್ಟನೆ ಮೇಲೇಳುವುದು ತಿರುಗಿ ಮಲಗುವುದು, ತಿರುಗಿ ಮೇಲೇಳುವುದು ಹೀಗೆ ಪುನರಾವರ್ತನೆಮಾಡುವುದರಿಂದ ಜಠರಸ್ನಾಯುಗಳಿಗೆ ಒಳ್ಳೇ ವ್ಯಾಯಾಮವುಂಟಾಗುವುದು ಈ ತರದ ವ್ಯಾಯಾಮವನ್ನು ಪ್ರತಿಯೊಬ್ಬರೂ ಬಹು ಸುಲಭವಾಗಿ ಮಾಡಬಹುದು

ಆಹಾರಕ್ರಮವನ್ನೂ ಸ್ವಲ್ಪಮಟ್ಟಿಗೆ ಬದಲಾಯಿಸಿಕೊಳ್ಳಬೇಕು ಇದಕ್ಕಾಗಿ ಹಸುರು ಸೊಪ್ಪುಗಳನ್ನೂ ಭೇದಿಕಾರಿಗುಣವುಳ್ಳ ಹಣ್ಣುಗಳನ್ನೂ ಆಹಾರದಲ್ಲಿ ಹೆಚ್ಚಾಗಿ ಉಪಯೋಗಿಸುವುದುತ್ತಮವು

ಈಚೀಚೆಗೆ ಔಷಧದ ಅಂಗಡಿಗಳಲ್ಲಿ ಭೇದಿಯ ಔಷಧಿಗಳು ವಿಧವಿಧವಾಗಿ ಮಾರಾಟಕ್ಕಿಡಲ್ಪಟ್ಟಿರುವುವು ಮಲಬಂಧವುಳ್ಳವರು ಅವುಗಳಲ್ಲಿ ಒಂದಾದಮೇಲೆ ಒಂದನು ತೆಗೆದು ಉಪಯೋಗಿಸುತ್ತಲೇ ಇರುವರು ಆದರೇನು? ಅವುಗಳಿಂದೇನೂ ಉಪಯೋಗವಿಲ್ಲದ ಕೊನೆಗೆ ಚಿಕಿತ್ಸೆಗಾಗಿ ವೈದ್ಯರನ್ನು ಹುಡುಕಿಕೊಂಡು ಹೋದವರೆಷ್ಟೋ ಮಂದಿಯುಂಟು ಔಷಧದ ಸಹಾಯವಿಲ್ಲದ ಆಹಾರ ವಿಹಾರಗಳ ಮೂಲಕವೇ ಗುಣಪಡಿಯುವುದೇ ಸರಿಯಾದ ಮಾರ್ಗ

ಮನೋಹರವಾದ ಫೋಟೋಗಳು.

- ಶ್ರೀ ಪಂಚಾಚಾರ್ಯರ ಐಂಥಸ್ತ ಅಮೃತಶಿಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ — ೦—೩—೦
- ಶ್ರೀ ಪಂಚಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು.) ಸೈಜು ೧೪ × ೧೦ ಬೆಲೆ — ೦—೩—೦
- [illegible] ಶಿವಾಚಾರ್ಯರು ಬಂದರವಿದೆ ಇರುವ ಫೋಟೋ ಸೈಜು ೧೪ × ೧೦ ಬೆಲೆ — ೦—೪—೦
- ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ — ೦—೩—೦
- ಶ್ರೀ ಜಗದ್ಗುರು [illegible] ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ — ೦—೧—೬
- ಶ್ರೀ ಪಂಚಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ [illegible] ಫೋಟೋ — ೦—೧—೬
- ಶ್ರೀಕಾಶೀಕ್ಷೇತ್ರದಲ್ಲಿ ಜಮೂನ ಶ್ರೀ ಜಗದ್ಗುರು ವಿಶ್ವಾರಾಧ್ಯರ [illegible] ಪೀಠದ ಫೋಟೋ — ೦—೧—೬
- ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ — ೦—೧—೬
- ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ — ೦—೧—೬
- ಶ್ರೀ [illegible] ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ — ೦—೧—೬
- ಶ್ರೀ [illegible] ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ — ೦—೧—೬
- ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ — ೦—೧—೬
- ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ — ೦—೩—೦
- [illegible] ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ — ೦—೮—೦
- [illegible] ಸುಂದರವಾದ ಫೋಟೋ ೧ಕ್ಕೆ — [illegible]
- [illegible] ಸುಂದರ ಫೋಟೋ ೧ಕ್ಕೆ — ೦—[illegible]—೬
- [illegible] ಸನದ ಅತ್ಯಂತ ಸುಂದರವಾದ ಗೋತ್ರದ ಫೋಟೋ — ೦—[illegible]—೬
- [illegible] ಸನ್ನಿಧಿಯಲ್ಲಿ ಶ್ರೀ ಮನ್ಮಹಾರಾಜರವರು ನಿಂತುಕೊಂಡಿರುವ ಫೋಟೋ — ೦—೧—೬
- [illegible] ಫೋಟೋ — ೦—೧—೬

ಸಪ್ರೋತ್ತಮವಾದ ಮತಗ್ರಂಥಗಳು

- ಗೋತ್ರಸೂತ್ರಪಟ (೬ನೆಯ ಆವೃತ್ತಿ) — ೧ ಆಣೆ
- ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ) — ೧ ಆಣೆ
- ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ) — ೧ ಆಣೆ
- ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ) — ೨ ಆಣೆ
- ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ) — ೨ ಆಣೆ
- ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ) — ೨ ಆಣೆ
- ಬಸವಾದಿಸಿಜತತ್ತ್ವದರ್ಪಣ (೪ನೆಯ ಆವೃತ್ತಿ) — ೨ ಆಣೆ
- ಶ್ರೀರೇಣುಕಾಚಾರ್ಯಶತಕ (೩ನೆಯ ಆವೃತ್ತಿ) — ೩ ಆಣೆ
- ಶ್ರೀಗುರುತತ್ತ್ವಪದಗಳು (೩ನೆಯ ಆವೃತ್ತಿ) — ೩ ಆಣೆ
- ಶ್ರೀರುದ್ರಮುನಿಶಿವಾಚಾರ್ಯಶತಕ — ೩ ಆಣೆ
- ಶಿವಶಕ್ತಿವಿಲಾಸ — ೨ ಆಣೆ
- ಪಂಚಾಚಾರ್ಯಪ್ರಕಾಶ — ೩ ಆಣೆ
- ಪಂಚಾಚಾರ ಪ್ರಕಾಶಿಕಾ — ೩ ಆಣೆ
- ವೀರಶೈವಾಚಾರವಿಧಿ (೩ನೆಯ ಆವೃತ್ತಿ) — ೪ ಆಣೆ
- ಲಿಂಗಧಾರಣವಿಧಿ — ೪ ಆಣೆ
- ವಿವಾಹವಿಧಿ (೩ನೆಯ ಆವೃತ್ತಿ) — ೪ ಆಣೆ
- ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ — ೪ ಆಣೆ
- ಶೈವೋಪನಿಷತ್ಸಂಗ್ರಹಃ (ಸಂಸ್ಕೃತ) — ೪ ಆಣೆ
- ವೀರಶೈವ ಪ್ರಾಯಶ್ಚಿತ್ತವಿಧಿ — ೪ ಆಣೆ
- ವೈದಿಕಮಾಹಾತ್ಮ್ಯರಹಸ್ಯ — ೪ ಆಣೆ
- ಸನ್ಯಾಸಾಶ್ರಮವಿಮರ್ಶತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ) — ೬ ಆಣೆ
- ವೀರಶೈವಾಂತ್ಯೇಷ್ಟಿ-ಶ್ರಾದ್ಧವಿಧಿ — ೬ ಆಣೆ
- ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು) — ೮ ಆಣೆ
- ವೀರಶೈವಮಹಾತ್ಮರು — ೮ ಆಣೆ
- ಒಸವಧ್ವಾಂತದಿವಾಕರ (೩ನೆಯ ಆವೃತ್ತಿ) — ೮ ಆಣೆ
- ಶಿವಾದ್ವೈತಪರಿಭಾಷಾ (ಸಂಸ್ಕೃತ) — ೮ ಆಣೆ
- ಆಗಮಪರಿಜ್ಞಾನ — ೮ ಆಣೆ
- ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು) — ೮ ಆಣೆ
- ಸಮ್ಬೋಧರತ್ನಾವಳಿ — ೮ ಆಣೆ
- ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ) — ೧೨ ಆಣೆ
- ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ — ೧೨ ಆಣೆ
- ಶಿಖಾಸೂತ್ರಸಿದ್ಧಾಂತದರ್ಪಣ — ೧೨ ಆಣೆ
- ವೈದಿಕಶಿವಪೂಜಾವಿಧಿ (ವೈದಿಕ ಸ್ವರಯುಕ್ತಪಾಠ, ೨ನೆಯ ಆವೃತ್ತಿ) — ೧| ರೂ
- ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ) — ೧ ರೂ
- ಕೇನೋಪನಿಷತ್ (ಕನ್ನಡ ಟೀಕಾಸಹಿತ) — ೧ ರೂ
- ಶ್ರೀಕರಭಾಷ್ಯಂ (ಚತುಸ್ಸೂತ್ರೀ) — ೧|| ರೂ
- ಸಚಿತ್ರ ರೇಣುಕವಿಜಯ (೩ನೆಯ ಆವೃತ್ತಿ) — ೧|| ರೂ
- ವೀರಶೈವರತ್ನ (೩ನೆಯ ಆವೃತ್ತಿ, ೪೦ ಮಹನೀಯರ ಫೋಟೋಗಳುಳ್ಳದ್ದು) — ೨ ರೂ
- ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರಸಹಿತ) — ೨ ರೂ
- ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ) — ೨ ರೂ
- ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ ಸೂಕ್ಷ್ಮಾಗಮಗಳಿಂದ ಕೂಡಿರುವುದು) — ೨ ರೂ
- ವೀರಶೈವಸಿದ್ಧಾಂತಸುಧಾಕರ — ೨ ರೂ
- ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ) — ೮ ರೂ
- A brief life-sketch of Pandit Sri Kashinatha Shastriji (*English*) — 4 As
- The Philosophical Aspect of Virasaivism (*English*) — 8 As
- Speeches by Pandit Shri Kashinatha Shastriji (*English*) — 12 As
- लिंगधारणचंद्रिका (संस्कृत) — ३ रु
- वीरशैवरत्न (मराठी) — १ रु
- महानारायणोपनिषत् (वीरशैवभाष्य-संस्कृत) — १ रु
- सिद्धांतशिखामणि (मूल) — ८ आ.
- मंदिकेश्वरकारिका (संस्कृत) — २ आ

ಮ್ಯಾನೇಜರ್ — ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ನ್ಯೂಎಕ್ಸ್‌ಟೆನ್ಷನ್‌ದಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

EGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯರ್ಕ್ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ. ೪ ಆಣೆ ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೧೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೬ನೇ ಸೆಪ್ಟೆಂಬರ್ ೧೯೬೬ [ಸಂಚಿಕೆ ೧೯

ಶ್ರಾವಣಮಹೋತ್ಸವ, ಕುರುಡಿ

ರಾಯಚೂರು ಡಿ॥ ಕುರುಡಿ ಗ್ರಾಮದ ಸಮಸ್ತ ವೀರಶೈವರು ಶ್ರಾವಣಮಹೋತ್ಸವ ನಿಮಿತ್ತವಾಗಿ ಬಿಚ್ಚಾಲಿ ಸಾವಿರದೇವರು ಶ್ರೀ ಷ॥ ಬ್ರ॥ ಚನ್ನವೀರಶಿವಾಚಾರ್ಯಸ್ವಾಮಿಗಳವರನ್ನು ಕುರುಡಿಗೆ ಬರಮಾಡಿಕೊಂಡು ಅಸಾಧಾರಣ ಭಕ್ತಿಯಿಂದ ಸೇವೆ ಸಲ್ಲಿಸಿ ಧನ್ಯರಾದರು. ಪ್ರತಿದಿನವೂ ಉದಯ ೩ ರಿಂದ ೮ ಘಂಟೆಯವರೆಗೆ ಶ್ರೀಗಳವರ ಲಿಂಗಾನುಷ್ಠಾನವೂ, ಮಧ್ಯಾಹ್ನ ೧೨ ಘಂಟೆಗೆ ಗುರುಪಾದಪೂಜೆ ಗಣಸಂತೃಪ್ತಿಯೂ, ಸಾಯಂಕಾಲ ೭ ರಿಂದ ೮ ಘಂಟೆ ವರೆಗೆ ಗೋರಕಲ್ಲು ಮಠದ ವೇ॥ ಚಂಬಸವಶಾಸ್ತ್ರಿಗಳವರಿಂದ ಶ್ರೀಶರಣಬಸವೇಶ್ವರಪುರಾಣಪ್ರವಚನವೂ, ಮತ್ತು ಶ್ರೀಗಳವರಿಂದ ಧರ್ಮೋಪದೇಶವೂ ನಡೆಯುತ್ತಿದ್ದವು. ದರ್ಶನಾರ್ಥಿಗಳಾಗಿ ಬಂದಿದ್ದ ಪಂ॥ ಯೋಗವೀರಶರ್ಮರ ಧಾರ್ಮಿಕ, ಸಾಮಾಜಿಕೋಪನ್ಯಾಸಗಳು ಸುಶ್ರಾವ್ಯವಾಗಿ ಜರುಗಿದವು. ಕಡೆಗೆ ಭಾದ್ರಪದ ಶು॥ ಶುಕ್ರವಾರ ಮಹಾಗಣಾರಾಧನೆಯೂ, ಅದೇ ದಿನ ಸಾಯಂಕಾಲ ೪ ರಿಂದ ೯ ರ ವರೆಗೆ ಪುರಾಣಪ್ರವಚನವೂ ಪಂಡಿತರ ಉಪನ್ಯಾಸಗಳೂ ಜರುಗಿ ಗುರುಸನ್ನಿಧಿಗೆ ಬಹುಮೂಲ್ಯದ ಉಡುಗೊರೆಗಳೂ, ವಿಶಿಷ್ಟ ದಕ್ಷಿಣೆಯೂ ಸಮರ್ಪಿಸಲ್ಪಟ್ಟವು. ಬಳಿಕ ಮಹಾಮಂಗಲಾರತಿಯಾಗಿ ಜಗದಾಚಾರ್ಯರ ಜಯಘೋಷದೊಡನೆ ಕಾರ್ಯಸಮಾಪ್ತಿಗೊಂಡಿತು. ಸಮಾಪ್ತಿ ಮಹೋತ್ಸವಕ್ಕಾಗಿ ರಾಯಚೂರು, ಮಟಮರಿ, ಗೋರಕಲ್ಲು, ಕಲ್ಲೂರು ಮುಂತಾದ ಸುತ್ತಲು ಗ್ರಾಮಗಳಿಂದ ವಿಶೇಷ ಪ್ರಮುಖ ಜನಸಂದಣಿಯು ಆಗಮಿಸಿದ್ದಿತು. ಈ ರೀತಿ ಗುರುಗಳಿಗೆ ಶ್ರದ್ಧಾಪೂರ್ವಕವಾಗಿ ಸೇವೆ ಸಲ್ಲಿಸಿದ ಕುರುಡಿ ವೀರಶೈವಸಮಾಜದವರಿಗೆ ಜಗದಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುವ,

ಗುರುಭಕ್ತ

ಶ್ರೀ ಗಜಾನನಮಹೋತ್ಸವ, ಗುಡಗೇರಿ

ವಿರಜ ಜೂನಿಯರ ಸ್ಟೇಟ್ ಗುಡಗೇರಿ ಗ್ರಾಮದಲ್ಲಿ ಶ್ರೀ ಗಜಾನನಮಹೋತ್ಸವವನ್ನು ಪ್ರತಿ ವರುಷದ ಪದ್ಧತಿಯಂತೆ ಈ ವರ್ಷವೂ ೧೦ ನೆಯ ತಾರೀಖಿನ ದಿವಸ ಅತಿ ವಿಜೃಂಭಣೆಯಿಂದ ನೆರವೇರಿಸಲಾಯಿತು. ಶ್ರೀ ವಿನಾಯಕ ಮೂರ್ತಿಯನ್ನು ಮೆರವಣಿಗೆ ಮಾಡಿ ಇಲ್ಲಿಯ ಎ ವ್ಹಿ ಸ್ಕೂಲಿನಲ್ಲಿ ಪ್ರಾತಃಕಾಲ ಸ್ಥಾಪನೆ ಮಾಡಿ ಪೂಜೆಯಾದ ನಂತರ ಅದೇ ದಿನ ಸಾಯಂಕಾಲ ಶ್ರೀ ಎಸ್ ಕೆ ಕುಲಕರ್ಣಿ ಬಿ.ಎ, ಹೆಡ್‌ಮಾಸ್ತರ ಎ. ವ್ಹಿ ಸ್ಕೂಲ ಗುಡಗೇರಿ ಇವರು ಉಪನ್ಯಾಸಮಾಡಿದರು, ಶ್ರೀ ಪಿ ಎ ಶಿರೂರ ಇವರು ಮಾಯಾದೀಪದ ಸಹಾಯದಿಂದ ಅಮೇರಿಕೆಯಲ್ಲಿಯ ಯಾಂತ್ರಿಕ ಉತ್ಪಾದನೆ ಮತ್ತು ಸುಧಾರಣೆಗಳ ಬಗ್ಗೆ ಉಪನ್ಯಾಸಮಾಡಿದರು.

ತಾ॥ ೧೧-೯-೧೯೬೬ ನೇ ಮಂಗಳವಾರ ಸಾಯಂಕಾಲ ಶ್ರೀ॥ ಬಾಪಟ ಬಿ ಎ, ಬಿ ಟಿ, ಧಾರವಾಡ ಇವರ ಉಪನ್ಯಾಸವಾದ ನಂತರ ರಾತ್ರಿ ಶಾಲೆಯ ವಿದ್ಯಾರ್ಥಿಗಳ ಏಕಾಂಕ ನಾಟಕಗಳು ನಡೆದವು.

ತಾ॥ ೧೨-೯-೧೯೬೬ ನೇ ಬುಧವಾರ ಸಾಯಂಕಾಲ ವಿದ್ಯಾರ್ಥಿಗಳ ವಿನೋದಾವಳಿಗಳು ಹಾಗೂ ವಿದ್ಯಾರ್ಥಿ ವಿದ್ಯಾರ್ಥಿನಿಯರ ಗಾಯನ ಸ್ಪರ್ಧೆ ಮುಗಿದ ನಂತರ ರಾತ್ರಿ ೧೦॥ ಘಂಟೆಯಿಂದ ಶ್ರೀ ಗುರುಬಸವಾರ್ಯ ಕರೂರ ಇವರ ಗಾಯನ ಹಾಗೂ ಬಿ ಪಿ ಪಾಟೀಲ ಜೂನಿಯರ ಬಿ ಎ ಅಳಣಾವರ ಇವರ ಗಾಯನಗಳಾದವು.

ತಾ॥ ೧೩-೯-೧೯೬೬ ನೇ ಗುರುವಾರ ರಾತ್ರಿ ೮ ಘಂಟೆಯಿಂದ ೧೧ ಘಂಟೆಯವರೆಗೆ ಶ್ರೀ ಷ ಬ್ರ॥ ಗುರುಗಂಗಾಧರಶಿವಾಚಾರ್ಯ ಸ್ವಾಮಿಗಳವರು ಬೆಂಗಳೂರು ಇವರು ಧರ್ಮರಹಸ್ಯದ ಬಗ್ಗೆ ಒಳ್ಳೇ ಸ್ಫೂರ್ತಿದಾಯಕ ಪ್ರವಚನ ನಡೆಯಿಸಿದರು.

ತಾ॥ ೧೬-೯-೧೯೬೬ ನೇ ಶುಕ್ರವಾರ ಪ್ರೊ॥ ಮಾಳವಾಡ ಇವರು ಕನ್ನಡ ಸಾಹಿತ್ಯದ ಬಗ್ಗೆ ಮಿ॥ ಮಹಿಷಿ ಇವರು ನಮ್ಮ ಹಳ್ಳಿಗಳ ವಿಷಯದ ಬಗ್ಗೆ ಹಾಗೂ ಜಾಧವ ಇವರ ಯುದ್ಧದ ಪ್ರತ್ಯಕ್ಷ ಅನುಭವದ ಬಗ್ಗೆ ಬಹಳ ಸರಸವಾಗಿ ಭಾಷಣಮಾಡಿದರು. ಈ ರೀತಿ ಈ ಸಾರೆ ಗಜಾನನಮಹೋತ್ಸವವು ಬಹು ಚೆನ್ನಾಗಿ ನೆರವೇರಿತು. ಶ್ರೀ ಗಜಾನನು ಇಲ್ಲಿಯ ದೈವದವರಿಗೆ ಸುಖವನ್ನೀಯಲೆಂದು ಪ್ರಾರ್ಥಿಸುವ,

ಪುಟ್ಟಯ್ಯ, ಹಿರೇಮಠ,
ಅ॥ ಮಾಸ್ತರ, ಎ ವಿ ಸ್ಕೂಲ್, ಗುಡಗೇರಿ

ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಪಾದಪೂಜಾಸಮಾರಂಭ, ಬಿಡದಿ

ಬಿಡದಿ ಗ್ರಾಮದ ಭಕ್ತಮಂಡಲಿಯವರು ಶ್ರೀಜಗದ್ಗುರುಗಳವರನ್ನು ತಮ್ಮ ತಮ್ಮ ಗೃಹಗಳಿಗೆ ಉತ್ಸವಪೂರ್ವಕವಾಗಿ ದಯಮಾಡಿಸಿಕೊಂಡು ಹೋಗಿ ಮಹಾಪಾದಪೂಜೆಯನ್ನು ನಡೆಸುತ್ತಿರುವುದು ಪ್ರಶಂಸನೀಯವಾಗಿದೆ. ತಾ॥ ೧೧-೯-೧೯೬೬ನೇ ಮಂಗಳವಾರ ಶ್ರೀಮಾನ್ ವಿ ಸಿ ನಂಜರಾಜೇ ಅರಸಿನವರೂ, ತಾ॥ ೧೪-೯-೧೯೬೬ನೇ ಬುಧವಾರ ಶ್ರೀಯುತ ಬಿ ಪಿ ಪ್ರಸನ್ನಯ್ಯನವರೂ ಶ್ರೀ ಜಗದಾಚಾರ್ಯರ ಪಾದಪೂಜೆಯನ್ನು ಅತ್ಯಂತ ವೈಭವದಿಂದ ನೆರವೇರಿಸಿದರು. ತಾ॥ ೨೦-೯-೧೯೬೬ ಗುರುವಾರ "ಆಚಾರ್ಯತತ್ವಪ್ರಕಾಶಕ" ಬಿ ಸಿ ರೇವಣ್ಣಶಾಸ್ತ್ರಿಗಳವರು ತಮ್ಮ ಶ್ರೀ ರೇಣುಕಭವನಕ್ಕೆ ಸದ್ಗುರು ಸಾರ್ವಭೌಮರನ್ನು ದಯಮಾಡಿಸಿಕೊಂಡು ಹೋಗಿ ಪಾದಪೂಜೆಯನ್ನು ವೈಭವದಿಂದ ನಡೆಯಿಸಿ ಕಾಣಿಕೆಯನ್ನು ಸಮರ್ಪಿಸಿ ಧನ್ಯರಾದರು. ಈ ಪಾದಪೂಜಾ ಸಮಾರಂಭಕ್ಕೆ ಬೆಂಗಳೂರಿನಿಂದ ಆಸ್ಥಾನ ವಿದ್ವಾನ್ ಶ್ರೀ ಶಿವಕುಮಾರಸ್ವಾಮಿಗಳವರು, ಆಸ್ಥಾನ ವಿದ್ವಾನ್ ವೇ॥ ವಿಶ್ವನಾಥಶಾಸ್ತ್ರಿಗಳವರು, "ಆಚಾರ್ಯಸೇವಾಧುರೀಣ" ಜಿ ಆರ್ ಸಿದ್ದಪ್ಪನವರು ಮೊದಲಾದವರು ಆಗಮಿಸಿದ್ದರಲ್ಲದೆ ಕಾರೋಹಳ್ಳಿ ಮ॥ ರಾ॥ ಯಜಮಾನ್ ಕೋಟಿ ದಪ್ಪನವರೂ ಬಿಲಕೆಂಪನಹಳ್ಳಿ ಗ್ರಾಮದಲ್ಲಿ ಸದ್ಯಃ ವಾಸಿಸುತ್ತಿರುವ ಶ್ರೀಮಾನ್ ಬಸವರಾಜ ಅರಸರವರೂ ಸ್ವಸ್ಥಳ ಪರಸ್ಥಳಗಳ ಸದ್ಭಕ್ತಮಂಡಲಿಯವರೂ ಸನ್ನಿಹಿತರಾಗಿ ಮಹಾಸನ್ನಿಧಿಯವರ ಸೇವೆಯನ್ನು ಸಲ್ಲಿಸಿದರು. ಈ ಸುಸನ್ನಿವೇಶದಲ್ಲಿ ಬೆಂಗಳೂರು ಶ್ರೀಯುತ ಜಿ ಆರ್ ಸಿದ್ದಪ್ಪನವರ ಕುಮಾರಿ ಚಂದ್ರಕಲಾ ಎಂಬ ಬಾಲಿಕೆಯಿಂದ ಸುಶ್ರಾವ್ಯವಾಗಿ ಆಚಾರ್ಯಸ್ತವನವು ಮಾಡಲ್ಪಟ್ಟಿತು. ಈ ರೀತಿ ಶ್ರೀಜಗದ್ಗುರುಸೇವೆಯನ್ನು ಸಲ್ಲಿಸಿದ ಆಚಾರ್ಯತತ್ವಪ್ರಕಾಶಕರಿಗೆ ಶ್ರೀಜಗದಾಚಾರ್ಯರು ಸಮಸ್ತ ಸನ್ಮಂಗಳವನ್ನೀಯಲೆಂದಾಶಿಸುತ್ತೇನೆ. ಇವರಿಗೆ ಕಾಲೋಚಿತವಾಗಿ ಸಹಕರಿಸಿದ ದೇಶದ ಶೆಟ್ಟರ ಚಿಕ್ಕಗಂಗಶೆಟ್ಟರೇ ಮೊದಲಾದವರಿಗೆ ಸದ್ಗುರುವರೇಣ್ಯರು ಸನ್ಮಂಗಳಗಳನ್ನೀಯಲೆಂದಾಶಿಸುತ್ತೇನೆ. ಬಿಡದಿ ಸಾಹುಕಾರ್ ಮ॥ ರಾ॥ ಚನ್ನಶೆಟ್ಟರ ರೇವಣ್ಣನವರು ತಾ॥ ೨೬-೯-೧೯೬೬ ನೇ ಸೋಮವಾರ ಶ್ರೀಜಗದ್ಗುರುಸೇವೆ ಮಾಡುವವರಾಗಿದ್ದಾರೆ.

ಗುರುಕಿಂಕರ

ಶ್ರೀ ಜಗದ್ಗುರು ಪಂಚಾಚಾರ್ಯ ಭಜನೆ ಸಮಾಪ್ತಿ ಲಕ್ಷ್ಮೇಶ್ವರ

ಪ್ರತಿವರ್ಷ ಪದ್ಧತಿಯಂತೆ ಈ ವರ್ಷವೂ ಶ್ರಾವಣ ಮಾಸದಲ್ಲಿ ಲಕ್ಷ್ಮೇಶ್ವರ ಗ್ರಾಮದ ಶ್ರೀ ಜಗದ್ಗುರು ಪಂಚಾಚಾರ್ಯ ಭಜನ ಸಂಘದವರು ಒಂದು ತಿಂಗಳವರೆಗೆ ಅವಿಚ್ಛಿನ್ನವಾಗಿ ಭಜನೆಯನ್ನು ಮಾಡಿ ಇದೇ ತಿಂಗಳು ೧೩ ನೆಯ ತಾರೀಖು ಗುರುವಾರ ದಿವಸ ಸಮಾಪ್ತಿಗೊಳಿಸಿದರು. ಆ ದಿವಸ ೨-೩ ಸಾವಿರ ಜನರಿಗೆ ಅನ್ನಸಂತರ್ಪಣೆಯು ನೆರವೇರಿತು. ಈ ಮಹಾಕಾರ್ಯದಲ್ಲಿ ಗ್ರಾಮದ ಸಮಸ್ತ ಜನರೂ ಭಾಗಿಗಳಾಗಿ ಜಗದಾಚಾರ್ಯರ ಕೃಪೆಗೆ ಪಾತ್ರರಾದರು. ಅಂದು ಸಾಯಂಕಾಲ ೫ ಘಂಟೆಗೆ ಲಿಂಗೋದ್ಭವ ಭಾವಚಿತ್ರವನ್ನು ಪಲ್ಲಕ್ಕಿಯಲ್ಲಿರಿಸಿ ಮಹೋತ್ಸವವು ನಾನಾವಿಧವಾದ ವಾದ್ಯವೈಭವದೊಡನೆ ಹೊರಟು ರಾತ್ರಿ ೧೦॥ ಘಂಟೆಗೆ ಸಮಾಪ್ತಿಗೊಂಡಿತು. ಭಜನ ಸಂಘದವರಿಗೂ ಈ ಗ್ರಾಮದ ಸಕಲ ಭಕ್ತಮಂಡಲಿಗೂ ಶ್ರೀ ಜಗದಾಚಾರ್ಯರು ಆಯುರಾರೋಗ್ಯಭಾಗ್ಯಾದಿಗಳನ್ನೀಯಲೆಂದು ಪ್ರಾರ್ಥಿಸುತ್ತೇನೆ.

ಅಧ್ಯಕ್ಷ-ಫಕೀರಯ್ಯ ಪುರಾಣಿಕಮಠ
ಸೆಕ್ರೆಟರಿ-ರಾಚಯ್ಯ ಹಿರೇಮಠ

ಪಂಚಾಚಾರ್ಯಪ್ರಭಾ.

೧೯೪೫ನೆಯ ಸೆಪ್ಟೆಂಬರ್ ತಾ॥ ೨೪ನೇ ಸೋಮವಾರ

ವರ್ಣಾಶ್ರಮ ವಿಚಾರ

ವೀರಶೈವಮತವು ಅಖಿಲ ವೈದಿಕಮತಗಳಂತೆ ವೈದಿಕಮತವಾಗಿಯೂ, ವರ್ಣಾಶ್ರಮಯುಕ್ತವಾದುದಾಗಿಯೂ, ಸನಾತನವಾಗಿಯೂ ಇರುವುದು ಯಾವ ಮತಗಳು ಶ್ರುತಿ ಸ್ಮೃತಿ ಪುರಾಣಾಗಮಾದಿಗಳಲ್ಲಿ ಉಲ್ಲೇಖಿಸಲ್ಪಟ್ಟಿವೆಯೋ, ಯಾವ ಮತಗಳು ಬ್ರಹ್ಮಸೂತ್ರ ಉಪನಿಷದಾದಿಗಳ ಮೇಲೆ ಭಾಷ್ಯಮೂಲಕ ಆಚಾರ್ಯರಿಂದ ನಿರ್ಣಯಿಸಲ್ಪಟ್ಟಿವೆಯೋ ಅವುಗಳೇ ವೈದಿಕಮತಗಳೆಂದು ಪ್ರಸಿದ್ಧಿಹೊಂದಿವೆ ಮತ್ತು ಹಿಂದಿನ ಮತಸ್ಥಾಪಕರಿರುವಂತೆ ಈ ಮತಕ್ಕೂ ಶ್ರೀ ಜಗದ್ಗುರು ಪಂಚಾಚಾರ್ಯರೇ ಸ್ಥಾಪಕರಾಗಿರುತ್ತಾರೆ ಇದು ಎಲ್ಲಾ ವೈದಿಕಮತೀಯರು ಜಾತಿಧರ್ಮವನ್ನು ಪ್ರಧಾನವಾಗಿಟ್ಟುಕೊಂಡು ಮತಧರ್ಮವನ್ನು ಗೌಣವಾಗಿ ವ್ಯವಹರಿಸುತ್ತಾರೆ ವೀರಶೈವಮತೀಯರಾದರೋ ಮತಧರ್ಮವನ್ನು ಮುಖ್ಯವಾಗಿ ಇಟ್ಟುಕೊಂಡು ವ್ಯವಹರಿಸುತ್ತಾರೆ ಆದುದರಿಂದಲೇ ಎಲ್ಲಾ ವೈದಿಕಮತಸ್ಥರಲ್ಲಿಯೂ ಬ್ರಾಹ್ಮಣಾದಿ ಜಾತಿನಾಮಗಳೇ ಹೆಚ್ಚು ಬಳಕೆಯಲ್ಲಿ ಬಂದಿವೆ ವೀರಶೈವರಲ್ಲಿ ಮಾತ್ರ ಮತಧರ್ಮಗಳನ್ನೇ, ವಿಶೇಷವಾಗಿ ವ್ಯವಹಾರದಲ್ಲಿ ಇಟ್ಟುಕೊಂಡಿರುವದರಿಂದ ಬ್ರಾಹ್ಮಣಾದಿ ಸಕಲ ವರ್ಣದವರನ್ನೂ ವೀರಶೈವರೆಂದ ಕರೆಯುವುದೇ ಬಳಕೆಯಲ್ಲಿ ಬಂದಿದೆ ಜನರು ಯಾವ ವ್ಯವಹಾರವನ್ನು ವಿಶೇಷವಾಗಿ ಮಾಡುತ್ತಾರೋ ತದನುಗುಣವಾದ ನಾಮವು ರೂಢಿಯಲ್ಲಿ ಬರುವದು ಲೋಕಸಮ್ಮತವಾಗಿರುವುದು ಮತಧರ್ಮಗಳನ್ನು ವಿಶೇಷವಾಗಿ ಆಚರಿಸಿದ ಮಾತ್ರದಿಂದ ಜಾತಿಧರ್ಮಗಳು ಇಲ್ಲವೆಂದು ಹೇಳಲು ಆಗುವದಿಲ್ಲವು ಜಾತಿಧರ್ಮಗಳೆಂಬವು ಆಯಾಯ ಜಾತಿಗೆ ಮಾತ್ರ ಸಂಬಂಧಿಸಿರುತ್ತವೆ ಮತಧರ್ಮಗಳು ಸಾಮಾನ್ಯಧರ್ಮಗಳು ಜಾತಿಧರ್ಮಗಳು ವಿಶೇಷಧರ್ಮಗಳು ವಿಶೇಷ ಧರ್ಮಗಳು ಆಯಾಯ ಜಾತಿಗಳಲ್ಲಿ ಮಾತ್ರ ವ್ಯಾಪಿಸಿರುವವು ಸಾಮಾನ್ಯ ಧರ್ಮವು ಎಲ್ಲರಲ್ಲಿಯೂ ವ್ಯಾಪಿಸಿರುವದು ಹೇಗೆಂದರೆ ಮನುಷ್ಯತ್ವವೆಂಬ ಸಾಮಾನ್ಯಧರ್ಮವು ಬ್ರಾಹ್ಮಣಾದಿ ಸಮಸ್ತ ಮಾನವರಲ್ಲಿಯೂ ಅನುಗತವಾಗಿರುವದು. ಬ್ರಾಹ್ಮಣತ್ವಾದಿ ವಿಶೇಷಧರ್ಮಗಳು ಬ್ರಾಹ್ಮಣಾದಿಗಳಲ್ಲಿ ಮಾತ್ರ ಅನುಗತವಾಗುವವು ಕ್ಷತ್ರಿಯತ್ವರೂಪ ವಿಶೇಷಧರ್ಮವು ಕ್ಷತ್ರಿಯರಲ್ಲಿ ಮಾತ್ರ ಅನುಗತವಾಗುವದು ಇದರಂತೆ ವೀರಶೈವವೆಂಬುದು ಮತದ ನಾಮವಾದುದರಿಂದ ಈ ಸಾಮಾನ್ಯ ಧರ್ಮವನ್ನು ಅನುಷ್ಠಿಸುವವರೆಲ್ಲರಲ್ಲಿಯೂ ವೀರಶೈವತ್ವವು ಉಂಟು ಈ ಸಾಮಾನ್ಯ ಧರ್ಮವನ್ನು ಅನುಷ್ಠಿಸುವುದಲ್ಲದ ವಿಶೇಷ ಧರ್ಮವನ್ನು ಅನುಷ್ಠಿಸುವುದರಿಂದ ಇವರು ಗುರುಗಳು ಇವರು ಭಕ್ತರು ಎಂದು ವ್ಯವಹಾರಮಾಡುತ್ತಾರೆ ವೀರಶೈವಮತದಲ್ಲಿ ಅಷ್ಟಾವರಣ ಪಂಚಾಚಾರ ಲಿಂಗಾಂಗಸಾಮರಸ್ಯ ಷಟ್‌ಸ್ಥಲ ಮೊದಲಾದ ಮುಕ್ತಿಸಾಧಕಗಳಾದ ಧರ್ಮಾಚರಣೆಗಳೇ ಸಾಮಾನ್ಯಧರ್ಮಗಳಾಗಿವೆ ಅಧ್ಯಯನ, ಅಧ್ಯಾಪನ, ದಾನ, ಪ್ರತಿಗ್ರಹಣ ಯಜನ, ಯಾಜನ ಮೊದಲಾದವುಗಳೇ ವಿಶೇಷಧರ್ಮಗಳು ಅನಾದಿಯಿಂದ ಗುರುತ್ವವನ್ನು ವಹಿಸಿದವರಿಂದ ಸಾಮಾನ್ಯಧರ್ಮಗಳೂ ವಿಶೇಷ ಧರ್ಮಗಳೂ ಎಲ್ಲವೂ ಅನುಷ್ಠಿಸಲ್ಪಡುತ್ತವೆ ಈ ನೂತನ ನಾಗರಿಕತೆಯಕಾಲದಲ್ಲಿ ಈ ವರ್ಣಾಶ್ರಮ ಧರ್ಮಗಳೆಲ್ಲವೂ ನಶಿಸಿಹೋಗಿರುವವು ಯಾವನು ಬುದ್ಧಿವಂತನೋ ಅವನೇ ಉತ್ತಮನೆಂದೂ ಯಾವನು ದಡ್ಡನೋ ಅವನೇ ಅನುತ್ತಮನೆಂದೂ ತಂಡೋಪತಂಡಗಳಾದ ವಾದಗಳು ಹುಟ್ಟಲಾರಂಭಿಸಿರುವವು ವಜ್ರ, ಕಲ್ಲು ಮುಂತಾದ ಜಡಪದಾರ್ಥಗಳಲ್ಲಿಯೂ ಸಹ ಶಾಸ್ತ್ರಕಾರರು ಬ್ರಾಹ್ಮಣಾದಿಜಾತಿಗಳನ್ನು ಏರ್ಪಡಿಸಿರುತ್ತಾರೆ. ಇನ್ನು ವೇದಮಾರ್ಗಾವಲಂಬಿಗಳಾದ ಮಾನವವರ್ಗದಲ್ಲಿ ಇಲ್ಲವೆಂದು ಹೇಳಲು ಸಾಧ್ಯವಾದೀತೇ? ಇಂತಹ ಆಧುನಿಕಯುಕ್ತಿವಾದಗಳೆಲ್ಲವೂ ವಿತಂಡಾವಾದಗಳಲ್ಲಿ ಸೇರುತ್ತವೆಯೇ ಹೊರತು ಸದ್ವಾದಗಳಲ್ಲಿ ಸೇರುವದಿಲ್ಲ. ಮುಖ್ಯವಾಗಿ ವರ್ಣಾಶ್ರಮ ವ್ಯವಹಾರವು ಎಲ್ಲಿ ಇರುವುದಿಲ್ಲವೋ ಅಲ್ಲಿ ವೇದೋಪನಿಷತ್ತುಗಳ ಸುಳಿವೇ ಇರುವುದಿಲ್ಲವು. ವರ್ಣಾಶ್ರಮಗಳಿಗೂ ವೇದೋಪಜನ್ಯವಾದ ಮುಕ್ತಿಗೂ ಪರಸ್ಪರ ಕಾರ್ಯಕಾರಣಭಾವವು ಇರಬೇಕೆಂಬುವುದೇ ಆರ್ಯಧರ್ಮದ ರಹಸ್ಯವು ಅನಾರ್ಯಧರ್ಮವನ್ನವಲಂಬಿಸದವರು ಮಾತ್ರ ಮನಸ್ವಿಯಾಗಿ ಹೇಗೆ ಹೇಳಿಕೊಂಡರೂ ಹಾಗೆ ಹೇಳಬಹುದಾಗಿದೆ ಅದು ನಿಯತ್ತಮಾರ್ಗವಲ್ಲವು ವರ್ಣಾಶ್ರಮಧರ್ಮದಿಂದೂಡಗೂಡಿದ ವೇದಮಾರ್ಗವೇ ನಿಯತಮಾರ್ಗವು ಯಾವ ಧರ್ಮಾವಲಂಬಿಗಳ ಕೂಟದಲ್ಲಿ ಯಾರು ಜನ್ಮವನ್ನು ಎತ್ತಿರುವರೋ ಆ ಧರ್ಮವನ್ನು ಬಿಡದ ಭಗವಂತನ ಅನುಗ್ರಹವನ್ನು ಪಡೆಯಬೇಕಾದುದೇ ಪ್ರತಿ ಮಾನವನ ಪರಮಧರ್ಮವಾಗಿದೆ ಇದೇ ಅರ್ಥವನ್ನು ಉಪನಿಷತ್ತಿನ ಸಾರವೆನಿಸಿದ ಗೀತೆಯೂ ಸಹ ಹೇಳುವುದು ಹೀಗಿರುವಲ್ಲಿ ಶೈವರಲ್ಲಿ ಅಗ್ರಸ್ಥಾನವನ್ನು ಪಡೆದ, ವೇದಪ್ರತಿಪಾದ್ಯನಾದ ಶಿವನೊಬ್ಬನಿಗೆ ಮರೆಹೊಕ್ಕಿರುವ ವೀರಶೈವಮತದಲ್ಲಿ ವರ್ಣಾಶ್ರಮಧರ್ಮಗಳು ಇಲ್ಲವೆಂಬುದು ಶಶವಿಷಾಣದಂತೆ ಅತಿವಿಥೆ ಯಾವ ಸಂಗತಿಯೇ ಸರಿ ಆದುದರಿಂದ ಸರ್ವರೂ ವೇದಾಗಮೋಕ್ತಗಳಾದ ವರ್ಣಾಶ್ರಮಧರ್ಮಗಳನ್ನು ಅನುಸರಿಸಿ ನಡೆದು ಪರಮಾತ್ಮನ ಕೃಪೆಗೆ ಪಾತ್ರರಾಗಬೇಕು

ಮೈಸೂರಿನ ಆಡಳಿತದ ಮುಖ್ಯ ವಿಷಯಗಳು

ಯುದ್ಧಪ್ರಯತ್ನಗಳು

ಸುಪ್ರಸಿದ್ಧರಾದ ತಮ್ಮ ಪೂರ್ವಜರಂತೆಯೇ ಮಹಾಸ್ವಾಮಿಯವರೂ ಸಹ ಇಂಗ್ಲೆಂಡಿನ ವಿಶ್ವಾಸಿಯಾದ ಮಿತ್ರರಾಗಿರುತ್ತಾರೆ ಮತ್ತು ಯುದ್ಧ ಪ್ರಯತ್ನಗಳಲ್ಲಿ ತೀವ್ರಾಸಕ್ತಿಯನ್ನೇ ವಹಿಸಿರುತ್ತಾರೆ ಮಹಾಸ್ವಾಮಿಯವರೂ ಮತ್ತು ಸರ್ಕಾರದವರೂ ಸುಮಾರು ೫೦ ಲಕ್ಷ ರೂಪಾಯಿಗಳನ್ನು ಯುದ್ಧನಿಧಿಗೆ ಕೊಟ್ಟಿರುತ್ತಾರೆ ಅಲ್ಲದೆ ಮಹಾರಾಜರು 10 ಲಕ್ಷ ರೂಪಾಯಿಗಳನ್ನು ಕೊಟ್ಟಿರುತ್ತಾರೆ ಸರ್ಕಾರದವರು 6.75 ಕೋಟಿ ರೂಪಾಯಿಗಳು ಬೆಲೆಬಾಳುವ ಯುದ್ಧ ಸಾಲಪತ್ರಗಳನು ಕೊಂಡಿರುತ್ತಾರೆ ಮೈಸೂರಿನಿಂದ ನೌಕಾದಳಕ್ಕೆ ಒಂದು ನೌಕೆಯೂ ಒಂದು ವಿಮಾನದಳವೂ ಭಾರತೀಯ ವಿಮಾನದಳಕ್ಕೆ ಒಂದು ವಿಮಾನವೂ ಕೊಡಲ್ಪಟ್ಟಿವೆ

ಮೈಸೂರಿನ ಪದಾತಿ ಸೈನ್ಯದ ಮೊದಲನೆಯ ದಳವನ್ನು ಯುದ್ಧಕ್ಕೆ ಕಳುಹಿಸಲಾಯಿತು ಈಚೆಗೆ ಇನ್ನೊಂದು ತುಕಡಿಯನ್ನು ಯುದ್ಧ ಸೇವೆಗೆ ಕಳುಹಿಸಿದೆ ಸೈನ್ಯದಳಕ್ಕೆ ಹೊಸದಾಗಿ ಜನರನ್ನು ಸೇರಿಸಿ ಒಳ್ಳೆ ಶಿಕ್ಷಣವನ್ನು ಕೊಟ್ಟಿದೆ ಅಲ್ಲದೆ ಮೂರನೆ ಬೆಟಾಲಿಯನ್ ತುಕಡಿಯೊಂದನ್ನು ನಿರ್ಮಿಸಿದೆ ಇಂಡಿಯಾ ಸೈನ್ಯ ಇಲಾಖೆಯವರು ಒಂದು ವಾಹನದಳವನ್ನು ಏರ್ಪಡಿಸಬೇಕೆಂದು ಅಪೇಕ್ಷಿಸಿದಾಗ ಮೈಸೂರು ಸರ್ಕಾರದವರು ಅವರಿಗೆ ಎಲ್ಲಾ ಸಹಾಯಗಳನ್ನೂ ನೀಡಿದರು ಮೈಸೂರು ಯೋಧರ ಬೋರ್ಡಿನವರು ಯೋಧರ ಕುಟುಂಬವರ್ಗದವರ ಯೋಗಕ್ಷೇಮವನ್ನು ಆಸಕ್ತಿಯಿಂದ ನೋಡಿಕೊಳ್ಳುತ್ತಿದ್ದಾರೆ ಭಾರತೀಯ ಸೈನ್ಯದಳಕ್ಕೆ ಜನರನ್ನು ಶೇಖರಿಸುವ ವಿಷಯದಲ್ಲಿ ಮೈಸೂರು ಸರ್ಕಾರದವರು ಇಂಡಿಯಾ ಸರ್ಕಾರದವರೊಡನೆ ಸಂಪೂರ್ಣವಾಗಿ ಸಹಕರಿಸಿರುತ್ತಾರೆ ಸೈನ್ಯದಳದವರ ಉಪಯೋಗಕ್ಕಾಗಿ 14,300 ಎಕರೆಗಳಷ್ಟು ಪ್ರದೇಶವನ್ನು ಬಿಟ್ಟುಕೊಟ್ಟಿದೆ ಮಹಾಸ್ವಾಮಿಯವರಿಗೂ ಮತ್ತು ಸರ್ಕಾರದವರಿಗೂ ಸೇರಿದ ಹಲವಾರು ಕಟ್ಟಡಗಳನ್ನು ಬಿಟ್ಟುಕೊಡಲಾಗಿದೆ ಸಂಸ್ಥಾನದಲ್ಲಿ ೨೬ ಕೈಗಾರಿಕಾ ಸಂಸ್ಥೆಗಳು 8 ಖಾಸಗಿ, 9 ಸರ್ಕಾರಿ, 9 ಸರ್ಕಾರದ ಸಹಾಯದಿಂದ ನಡೆಯುವಂತ ಹಲವು ಯುದ್ಧವಸ್ತುಗಳನ್ನು ತಯಾರಿಸಿ ಒದಗಿಸುತ್ತಿದ್ದುವು. ಸುಮಾರು 11 ಕೋಟಿ ರೂಪಾಯಿಗಳ ಬೆಲೆ ಬಾಳುವ ವಸ್ತುಗಳನ್ನು ಒದಗಿಸಿವೆ ಅರಣ್ಯ ಇಲಾಖೆಯವರು ಬಹಳ ಹೆಚ್ಚಿನ ಪ್ರಮಾಣದಲ್ಲಿ ಮರದ ಸಾಟಾಗಳನ್ನು ೨೦ ಲಕ್ಷ ರೂಪಾಯಿ ಬೆಲೆಬಾಳುವ ಬಿದಿರನ್ನು ಯುದ್ಧ ಇಲಾಖೆಯವರಿಗೆ ಕೊಟ್ಟಿರುತ್ತಾರೆ. ಕೈಗಾರಿಕಾ ಇಲಾಖೆಯವರು ಕಂಬಳಿಗಳನ್ನೂ ಡುಂಗರಿಗಳನ್ನೂ, ಇತರ ಹತ್ತಿಯ ಮತ್ತು ಉಣ್ಣೆಯ ಬಟ್ಟೆಗಳನ್ನೂ ಯುದ್ಧ ಇಲಾಖೆಗೆ ಒದಗಿಸಿರುತ್ತಾರೆ. ಪಾರಿಭಾಷಿಕ ಶಿಕ್ಷಣವನ್ನು ಪಡೆಯುವವರಿಗಾಗಿ ಸಂಸ್ಥಾನದಲ್ಲಿ 12 ಕೇಂದ್ರಗಳನ್ನು ಸ್ಥಾಪಿಸಿದೆ. ಈಗಾಗಲೇ 2,500 ಮಂದಿ ಭೂಜಲವಾಯು ಸೈನ್ಯಗಳಲ್ಲಿಯೂ ಇತರ ಯುದ್ಧವಸ್ತು ರಚನಾಯಂತ್ರಗಳಲ್ಲೂ ನೇಮಕವಾಗಿದ್ದಾರೆ ಕೈಗಾರಿಕೆಗಳನ್ನು ಯುದ್ಧದಿಂದುಂಟಾಗುವ ನಷ್ಟಗಳಿಂದ ರಕ್ಷಿಸಲು ವಿಮೆಮಾಡುವ ಪದ್ಧತಿಯನ್ನು ಮೈಸೂರಿನಲ್ಲೂ ಆಚರಣೆಗೆ ತರಲಾಯಿತು ಸಂಸ್ಥಾನದ ಕಾರ್ಖಾನೆಗಳ ಮೇಲಣ ವಿಮೆಯ ಚಂದಾ 18 ಲಕ್ಷವೆಂದೂ ಇದರ ಪೈಕಿ 10.46 ಲಕ್ಷ ರೂಪಾಯಿಗಳು ವಸೂಲಾಗಿವೆ ಎಂದೂ ತಿಳಿದುಬಂದಿದೆ ರಾಷ್ಟ್ರೀಯ ರಕ್ಷಣಾಬಲ ಸಮಿತಿಗಳು ಸಂಸ್ಥಾನದ ಎಲ್ಲಾ ಊರುಗಳಲ್ಲೂ ಕೆಲಸಮಾಡುತ್ತಿವೆ 1943 ರಲ್ಲಿ ಯುದ್ಧವಸ್ತು ಪ್ರದರ್ಶನವೊಂದನ್ನು ಶ್ರೀಮನ್ಮಹಾರಾಜರು ನೆರವೇರಿಸಿದರು. ಪ್ರದರ್ಶನವನ್ನು ನೋಡಲು 5 ಲಕ್ಷ ಮಂದಿ ಪ್ರೇಕ್ಷಕರು ಬಂದಿದ್ದರು

ಯುದ್ಧನಿಧಿಯ ಸಮಿತಿಯವರು ಬಹಳ ಆಸಕ್ತಿಯಿಂದ ಕೆಲಸಮಾಡುತ್ತಿದ್ದಾರೆ. 1944ನೇ ಇಸವಿ ಏಪ್ರಿಲ್ ತಿಂಗಳಿನಲ್ಲಿ ಬೆಂಗಳೂರಿನಲ್ಲಿ ಭಾರತೀಯ ವೈಮಾನಿಕರ ಮನರಂಜನಾರ್ಥವಾಗಿ ಒಂದು ಕ್ಲಬ್ಬನ್ನು ಸ್ಥಾಪಿಸಲಾಯಿತು ಭಾರತದಲ್ಲಿ ಇಂತಹ ಕ್ಲಬ್ಬುಗಳಲ್ಲಿ ಇದೇ ಮೊದಲನೆಯದೆಂದು ತಿಳಿದುಬಂದಿದೆ. ಶ್ರೀಮನ್ಮಹಾರಾಜರವರು ಈ ಕ್ಲಬ್ಬಿಗೆ 2,000 ರೂಪಾಯಿಗಳನ್ನು ಕೊಟ್ಟಿರುತ್ತಾರೆ ಮೋಲ್ಡಂಡ ಕ್ಲಬ್ಬಿನವರು ಆಗಿಂದಾಗ್ಗೆ ಸೈನ್ಯದಳದವರಿಗಾಗಿ ಸಂತೋಷಕೂಟಗಳನ್ನೇರ್ಪಡಿಸಿರುತ್ತಾರೆ ಕಬ್ಬನ್‌ಪಾರ್ಕಿನಲ್ಲಿ ಕಟ್ಟಲಾಗುವ ಜಯಭವನದ ವೆಚ್ಚವು 30,000 ರೂಪಾಯಿಗಳು ಶ್ರೀಮನ್ಮಹಾರಾಜರವರು ಈ ಭವನದ ಅಸ್ತಿಭಾರ ಶಿಲೆಯನ್ನು ಪ್ರತಿಷ್ಠಿಸಿದರು ಈ ಭವನವು ಭಾರತೀಯ ಸೈನಿಕರ ಮನರಂಜನೆಗಾಗಿ ಏರ್ಪಟ್ಟಿದೆ

ಬೆಲೆಗಳ ಹತೋಟಿ

ನಿತ್ಯಜೀವನಕ್ಕೆ ಬೇಕಾದ ಪದಾರ್ಥಗಳ ಬೆಲೆಯು ವಿಪರೀತವಾಗಿರದಂತೆ ಹಲವು ಕಾರ್ಯಕ್ರಮಗಳನ್ನು ಕೈಗೊಳ್ಳಲಾಯಿತು ಭಾರತದ ಸಾಲಪತ್ರಗಳನ್ನು ಕೊಳ್ಳುವುದು ಮತ್ತು ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟನ್ನು ಮಾರುವುದು ಇವೇ ಮೊದಲಾದ ಮಾರ್ಗದಿಂದ ಇಂಡಿಯಾ ಸರ್ಕಾರದವರು ಬೆಲೆಗಳನ್ನು ಹತೋಟಿಯಲ್ಲಿಡಲು ಕೈಗೊಂಡಿರುವ ಕಾರ್ಯಕ್ರಮಗಳೊಡನೆ ಸಹಕರಿಸಲಾಯಿತು

ತುಟ್ಟಿಭತ್ಯ

ನಿತ್ಯಜೀವನದ ಪದಾರ್ಥಗಳ ಬೆಲೆಯು ಏರಿ ಬಡನೌಕರವರ್ಗದವರುಗಳಿಗೆ ಉಂಟಾದ ತೊಂದರೆಯನ್ನು ನಿವಾರಿಸಲು ತಿಂಗಳಿಗೆ 150 ರೂಪಾಯಿನ ಸಂಬಳವಿರುವ ಸರ್ಕಾರಿ ನೌಕರರಿಗೆಲ್ಲಾ ತುಟ್ಟಿಭತ್ಯವನ್ನು ಕೊಡಲಾಗಿತ್ತು. ಇದಕ್ಕಾಗಿ 30 ಲಕ್ಷ ರೂಪಾಯಿಗಳು ಹೆಚ್ಚು ವೆಚ್ಚವಾಗುವುದಾಗಿದೆ. ರೈಲ್ವೆ ಮತ್ತು ಇತರ ಕೈಗಾರಿಕಾ ಸಂಸ್ಥೆಗಳಲ್ಲಿ ಕೆಲಸ ಮಾಡುವವರಿಗೆ ಪ್ರತ್ಯೇಕವಾದ ದರದಮೇಲೆ ಭತ್ಯವನ್ನು ಕೊಡುತ್ತಿದೆ. ಗ್ರಾಮಾಧಿಕಾರಿಗಳ ಪೋಟಿಗೆ ಸೇಕಡಾ 25 ರಷ್ಟು ಹೆಚ್ಚಿಸಿದೆ ಇದರಿಂದ ಎರಡುವರೆ ಲಕ್ಷ ರೂಪಾಯಿಗಳು ಹೆಚ್ಚಿಗೆ ವೆಚ್ಚವಾಗುವುದಾಗಿದೆ. ಈಚೆಗೆ, ತುಟ್ಟಿಭತ್ಯದ ದರಗಳನ್ನು ಹೆಚ್ಚಿಸಿದುದೂ ಅಲ್ಲದೆ, 300 ರೂಪಾಯಿನವರೆಗೂ ಸಂಬಳ ಬರುವವರೆಗೂ ಸಹ ಭತ್ಯವನ್ನು ಕೊಡಬೇಕೆಂದು ಆಜ್ಞೆ ಮಾಡಿದೆ ಇದರ ಪರಿಣಾಮವಾಗಿ ಸರ್ಕಾರದವರಿಗೆ 84 ಲಕ್ಷ ರೂಪಾಯಿಗಳು ಹೆಚ್ಚಾಗಿ ವೆಚ್ಚವಾಗುವುದಾಗಿದೆ.

ಆಹಾರ ಸರಬರಾಯಿ

ಜನರಿಗೆ ಅವಶ್ಯಕವಾಗಿ ಬೇಕಾದ ಆಹಾರವಸ್ತುಗಳ ಸರಬರಾಯಿಯ ವಿಷಯಕ್ಕೆ ತೀವ್ರವಾದ ಗಮನವನ್ನು ಕೊಡಲಾಗುತ್ತಿದೆ ಅಕ್ಕಿಯ ಅಭಾವವು ಸರ್ಕಾರದವರಿಗೆ ತೀವ್ರವಾದ ಕಳವಳವನ್ನುಂಟುಮಾಡಿತ್ತು. ಸರ್ಕಾರದವರು ಸಕಾಲದಲ್ಲಿ ಆಹಾರವಸ್ತುಗಳ ಶೇಖರಣೆ, ಹಂಚಿಕೆಯ ಮತ್ತು ಬೆಲೆಯ ನಿರ್ಧಾರದ ಬಗ್ಗೆ ಸೂಕ್ತವಾದ ಕಾರ್ಯಕ್ರಮವನ್ನು ಕೈಗೊಂಡರು. ರೈತರೆಲ್ಲರೂ ತಾವು ಬೆಳೆದ ದವಸದಲ್ಲಿ ತಮ್ಮ ಖರ್ಚಿಗಾಗಿ ಉಳಿದುದನ್ನು ಸರ್ಕಾರದವರಿಗೇ ಮಾರಬೇಕೆಂದು ವಿಧಿಸಲಾಯಿತು

ಹಾಗೆ ಮಾಡಿದುದರ ಪರಿಣಾಮವಾಗಿ ಸರ್ಕಾರದವರು 3,32,000 ಪಲ್ಲ ಭತ್ತ, 6,20,000 ಪಲ್ಲರಾಗಿ, 100,000 ಪಲ್ಲ ಇತರ ಬಗೆಯ ಧಾನ್ಯಗಳು — ಇವುಗಳನ್ನು ಜಮಾ ಯಿಸಲಾಯಿತು. ಇದರ ಜತೆಗೆ ಇಂಡಿಯಾ ಸರ್ಕಾರದವರೂ ಸಹ ಉದಾರವಾಗಿ ಧಾನ್ಯಗಳನ್ನು ಕಳುಹಿಸಿಕೊಟ್ಟುದರ ಪರಿಣಾಮವಾಗಿ ಸಂಸ್ಥಾನದಲ್ಲಿ ಆದಷ್ಟು ತೃಪ್ತಿಕರವಾದ ರೀತಿಯಲ್ಲಿ ಆಹಾರ ಸಮಸ್ಯೆಯನ್ನು ಎದುರಿಸುತ್ತಿದೆ.

ಆಹಾರವಸ್ತುಗಳ ಜವಾಬಾವಣೆಯ ಜತೆಗೆ ಆಹಾರದ ಹಂಚಿಕೆಗೆ ನಗರ ಪ್ರದೇಶದಲ್ಲಿ ಆಹಾರ ವಸ್ತುಗಳ ಪಡಿತರವನ್ನು ಆಚರಣೆಗೆ ತರಲಾಯಿತು ಮತ್ತು ಕೆಲವು ಷರತ್ತುಗಳಿಗೊಳಪಡಿಸಿ ವರ್ತಕರಿಗೆ ಈ ಧಾನ್ಯಗಳನ್ನು ಮಾರಲು ಅವಕಾಶ ಕೊಡಲಾಯಿತು ಈ ಸಂಬಂಧದಲ್ಲಿ ಸರ್ಕಾರಿ ಅಧಿಕಾರಿಗಳೂ ಮತ್ತು ಮಹಾಜನರೂ ಸೇರಿರುವ ಸಮಿತಿಗಳನ್ನು ನಗರ, ಜಿಲ್ಲಾ ಮತ್ತು ತಾಲ್ಲೂಕುಗಳಲ್ಲಿ ಸ್ಥಾಪಿಸಿದ

ಶೇಖರಿಸಿದ ಆಹಾರ ವಸ್ತುಗಳ ಬೆಲೆಯನ್ನು ಅವುಗಳ ಅಸಲು ಬೆಲೆ ಮತ್ತು ಅವುಗಳನ್ನು ಸ್ಥಳದಿಂದ ಸ್ಥಳಕ್ಕೆ ಸಾಗಿಸುವ ಬೆಲೆಗೆ ಮಾರುತ್ತಿದೆ ತೀರ ಬಡವರಿಗಾಗಿ ಉಚಿತವಾಗಿ ಆಹಾರ ಸರಬರಾಯಿಯ ಏರ್ಪಾಡು ಅಲ್ಲಲ್ಲಿ ಮಾಡಲಾಗಿದೆ ಮೈಸೂರಿನ ಆಹಾರದ ಸರಬರಾಯಿಯ ಏರ್ಪಾಡನ್ನು ಇಂಡಿಯಾ ಸರ್ಕಾರದ ಸರಬರಾಯಿ ಸಚಿವರಾದ ಸರ್ ಜ್ವಾಲಾ ಪ್ರಸಾದ್ ಶ್ರೀವಸ್ತವರವರು ಬಹಳವಾಗಿ ಮೆಚ್ಚಿಕೊಂಡರು ಸರ್ಕಾರದವರು ಆಹಾರವಸ್ತುಗಳ ಶೇಖರಣೆ ಮತ್ತು ಹಂಚಿಕೆಯ ಬಗ್ಗೆ ಇಷ್ಟು ಉತ್ತಮವಾದ ಏರ್ಪಾಡನ್ನು ಮಾಡದಿದ್ದಲ್ಲಿ ಭಾರತದ ಇತರ ಪ್ರದೇಶಗಳಂತೆಯೇ ಮೈಸೂರಿನಲ್ಲೂ ಜನರು ಬಹಳ ಕಷ್ಟಕ್ಕೆ ಸಿಕ್ಕುತ್ತಿದ್ದರು ಸ್ಟ್ಯಾಂಡರ್ಡ್ ಬಟ್ಟೆಯನ್ನು ಸರ್ಕಾರೀ ಡಿಪ್ಪೋಗಳಲ್ಲೂ, ವರ್ತಕರ ಮೂಲಕವೂ ಮಾರುತ್ತಿದೆ

ಆಹಾರ ವಸ್ತುಗಳು ಮಾತ್ರವೇ ಅಲ್ಲದೆ, ನೂಲು, ಬಟ್ಟೆ, ಔಷಧಗಳು, ಕಾಗದ ಇವೇ ಮೊದಲಾದ ಜೀವನಕ್ಕೆ ಅವಶ್ಯಕವಾದ ಇತರ ಪದಾರ್ಥಗಳ ಬೆಲೆಯನ್ನು ಸಹ ಹತೋಟಿಗೊಳಪಡಿಸಲಾಯಿತು

ಆಹಾರ ವಸ್ತುಗಳ ಬೆಳೆ

ಹೆಚ್ಚು ಆಹಾರವಸ್ತುಗಳನ್ನು ಬೆಳೆಯುವ ಯೋಜನೆಯ ಮೇರೆಗೆ ಎರಡು ಲಕ್ಷ ಎಕರೆಗಳಷ್ಟು ಜಮೀನನ್ನು ರೈತರಿಗೆ ಕೊಡಲಾಗಿದೆ ಇವುಗಳ ಪೈಕಿ ಅರ್ಧದಷ್ಟು ಜಮೀನು ಈಗಾಗಲೇ ಸಾಗಾಗಿದೆ ರೈತರು ಹೆಚ್ಚು ದವಸವನ್ನು ಬೆಳೆಯಲು ಸಹಾಯವಾಗುವಂತೆ ಒಳ್ಳೆಯ ವ್ಯವಸಾಯ ಯಂತ್ರೋಪಕರಣಗಳನ್ನೂ ಒದಗಿಸುತ್ತಿದೆ ಈ ವರ್ಷ 14 ರಿಂದ 15 ಲಕ್ಷ ರೂಪಾಯಿಗಳಷ್ಟು ಬೆಲೆ ಬಾಳುವ ವ್ಯವಸಾಯ ಸಾಮಗ್ರಿಗಳನ್ನು ರೈತರಿಗೆ ಮಾರಲಾಗಿದೆ ಎಂಬುದರಿಂದ ಎಷ್ಟು ಹೆಚ್ಚಿನ ಕೆಲಸವು ನಡೆದಿದೆ ಎನ್ನುವುದು ವ್ಯಕ್ತವಾಗುತ್ತದೆ ಇಂಪೀರಿಯಲ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ಸರ್ಜನರವರ ಸಹಕಾರದಿಂದ ಕಂಪೋಸ್ಟ್ ತಯಾರಿಯ ಯೋಜನೆಯೊಂದನ್ನು ಕೈಗೊಂಡಿದೆ ಹಲವು ಪೌರಸಭೆಗಳು ಕಂಪೋಸ್ಟನ್ನು ತಯಾರಿಸುತ್ತಿವೆ ಜಾನುವಾರುಗಳನ್ನು ಸಾಕುವವರಿಗೆ ಸರ್ಕಾರದವರು ಕೆಲವು ರಿಯಾಯಿತಿಗಳನ್ನು ಕೊಡುವುದಾಗಿ ಸೂಚಿಸಿರುತ್ತಾರೆ.

ಕೈಗಾರಿಕೆ ಮತ್ತು ಶ್ರಮಜೀವಿಗಳು

ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯನ್ನು ಯುದ್ಧ ಮತ್ತು ಯುದ್ಧಾನಂತರದ ಅವಶ್ಯಕತೆಗಳನ್ನು ಮನಸ್ಸಿನಲ್ಲಿಟ್ಟು ಒಡಾಯಿಸಲಾಗಿದೆ. ಹೊಪ್ಸ್ ಮತ್ತು ಸ್ಪ್ರಿಂಗುಗಳನ್ನು ತಯಾರಿಸಲು ಒಂದು ಓಪನ್ ಹಾರ್ತ್ ಫರ್ನೇಸನ್ನೂ, ಅಸಿಟಿಕ್ ಆಸಿಡನ್ನು ತಯಾರಿಸಲು ಒಂದು ಯಂತ್ರವನ್ನೂ, ಒಂದು ಫೆರೋ ಅಲಾಯಿ ಯಂತ್ರವನ್ನೂ ಸ್ಥಾಪಿಸಲಾಯಿತು.

ಸರ್ಕಾರಿ ಪಿಂಗಾಣಿ ಕಾರ್ಖಾನೆಯಲ್ಲಿ ವಿದ್ಯುಚ್ಛಕ್ತಿಯ ಕುಲುಮೆಯನ್ನು ಸ್ಥಾಪಿಸಿದೆ ಏಷ್ಯಾಖಂಡದಲ್ಲಿಯೇ ಇಂತಹ ಕುಲುಮೆ ಇಲ್ಲಿ ಮಾತ್ರವೇ ಇರುವುದು. ಡೈಕ್ರೊಮೇಟು ಫ್ಯಾಕ್ಟರಿಯನ್ನು ಒಡಾಯಿಸಿದುದೂ ಅಲ್ಲದೆ ಶಿವಮೊಗ್ಗದಲ್ಲಿ ಒಂದು ಗಂಧದೆಣ್ಣೆಯ ಕಾರ್ಖಾನೆಯನ್ನು ಸ್ಥಾಪಿಸಲಾಯಿತು. ಮೈಸೂರು ಕೆಮಿಕಲ್ ಕಂಪೆನಿಯಲ್ಲಿ ಅಮೋನಿಯ ಪ್ಲಾಂಟನ್ನು ಒಡಾಯಿಸಲಾಯಿತು. ಸಂಸ್ಥಾನದ ಕೈಗಾರಿಕೆಗಳನ್ನು ಮೆಕ್ಯಾನಿಕಲ್, ಇಂಜನಿಯರಿಂಗು ಮತ್ತು ಗೃಹಕೈಗಾರಿಕೆಗಳೆಂದ ವಿಂಗಡಿಸಿ ಪ್ರತಿಯೊಂದು ಬಗೆಯ ಕೈಗಾರಿಕೆಯ ಬೆಳವಣಿಗೆಯನ್ನೂ ಸಾಧಿಸಲು ಪ್ರತ್ಯೇಕವಾದ ಅಧಿಕಾರಿಗಳನ್ನು ನೇಮಿಸಲಾಗಿದೆ

ಫರ್ಟಿಲೈಸರ್ಸ್ ಮತ್ತು ಮೆಷಿನ್ ಟೂಲ್ಸ್ ನಿಯೋಗದವರು ಬಂದು ಇಲ್ಲಿನ ಅಧಿಕಾರಿಗಳೊಡನೆ ಕೈಗಾರಿಕೆಗಳ ಬೆಳವಣಿಗೆಯ ವಿಷಯವಾಗಿ ಸಮಾಲೋಚನೆ ನಡೆಸಿದರು ಸಮಗ್ರಭಾರತದ ಬೆಳವಣಿಗೆಯ ದೃಷ್ಟಿಯಿಂದ ನೋಡಿದ ಅವರ ಸಲಹೆಗಳನ್ನು ಗಮನದಲ್ಲಿಟ್ಟಿದೆ ರೈಲ್ವೆ ಮತ್ತು ವಿದ್ಯುಚ್ಛಕ್ತಿ ಬಾಬನ್ನು ಬಿಟ್ಟು ಇತರ ಕೈಗಾರಿಕೆಗಳಿಗೆ ಹಾಕಿದ ಬಂಡವಾಳವು 279 80 ಲಕ್ಷದಿಂದ 358 9 ಲಕ್ಷಗಳಷ್ಟು ಹೆಚ್ಚಿದೆ ಶ್ರಮಜೀವಿಗಳು ಸಂಘಗಳನ್ನು ಏರ್ಪಡಿಸಿಕೊಳ್ಳಲು ಅವಕಾಶಕೊಡುವ ಒಂದು ಕಾನೂನು ಜಾರಿಗೆ ಬಂದಿದೆ ಇದರ ಮೇರೆಗೆ ಈಗ 30,000 ಮಂದಿ ಶ್ರಮಜೀವಿಗಳನ್ನೊಳಗೊಂಡ 50 ಸಂಘಗಳಿವೆ ಶ್ರಮಜೀವಿಗಳಿಗೆ ರಜಾ, ಸಂಬಳ, ಪರಿಹಾರ ಪ್ರಾವಿಡೆಂಟ್ ಫಂಡು ಮುಂತಾದ ವಿಷಯಗಳಲ್ಲಿ ನಿರ್ದಿಷ್ಟವಾದ ನಿಬಂಧನೆಗಳನ್ನು ರಚಿಸಿದ ಇಂಡಿಯನ್ ಪೇಮೆಂಟ್ ಆಫ್ ವೇಜಸ್ ಕಾನೂನನ್ನು ಜಾರಿಗೆ ತರುವ ವಿಷಯವು ಪರ್ಯಾಲೋಚನೆಯಲ್ಲಿದೆ

ವ್ಯವಸಾಯ

ಆಹಾರ ವಸ್ತುಗಳನ್ನು ಹೆಚ್ಚಾಗಿ ಬೆಳೆಯಲು ಇಲಾಖೆಯವರು ಹೆಚ್ಚಾಗಿ ಶ್ರಮಿಸುತ್ತಿದ್ದಾರೆ ಹೆಚ್ಚು ಆಹಾರ ವಸ್ತುಗಳನ್ನು ಬೆಳೆಯುವ ಯೋಜನೆಯ ಮೇರೆಗೆ ಕೊಟ್ಟಿರುವ ಜಮೀನುಗಳಲ್ಲಿ ಉತ್ತಮ ರೀತಿಯ ವ್ಯವಸಾಯವನ್ನು ನಡೆಯಿಸಲು ರೈತರಿಗೆ ಬೇಕಾದ ಸಹಾಯ ಮಾಡುತ್ತಿದೆ ಜಾತಿಯ ಬೀಜದ ದವಸವನ್ನೂ ವ್ಯವಸಾಯದ ಸಲಕರಣೆಗಳನ್ನೂ, ಒಳ್ಳೆಯ ಗೊಬ್ಬರಗಳನ್ನೂ ಒದಗಿಸುತ್ತಿದೆ ಅಲ್ಲಲ್ಲಿ ಪ್ರದರ್ಶನದ ತಾಕುಗಳನ್ನು ಏರ್ಪಡಿಸುತ್ತಿದೆ ಆರ್ವಿನ್ ನಾಲಾ ಪ್ರದೇಶದಲ್ಲಿ ವರ್ಜೀನಿಯಾ ಹೊಗೆಸೊಪ್ಪು ಮತ್ತು ಇಂಗ್ಲೀಷ್ ಪತ್ತಿ ಇವುಗಳ ವ್ಯವಸಾಯವನ್ನು ಬಳಕೆಗೆ ತರುತ್ತಿದೆ ಜಾನುವಾರುಗಳ ತಳಿಗಳನ್ನು ಉತ್ತಮಗೊಳಿಸುವ ವಿಷಯಕ್ಕೆ ತೀವ್ರವಾದ ಗಮನವನ್ನು ಕೊಡುತ್ತಿದೆ

ವ್ಯವಸಾಯೋತ್ಪನ್ನಗಳ ಮಾರಾಟದ ವ್ಯವಸ್ಥೆಯನ್ನು ಮಾಡಿದೆ ದಾವಣಗೆರೆಯಲ್ಲಿ 3¼ ಲಕ್ಷ ರೂಪಾಯಿಗಳ ವೆಚ್ಚದಿಂದ ಒಂದು ಮಾರ್ಕೆಟನ್ನು ಕಟ್ಟುತ್ತಿದೆ ತಿಪಟೂರಿನಲ್ಲಿ ಮತ್ತು ಇತರ ಕೆಲವು ಕಡೆಗಳಲ್ಲೂ ಸಹ ಇಂತಹ ಮಾರ್ಕೆಟ್ಟನ್ನು ಸ್ಥಾಪಿಸುವ ವಿಷಯವೂ ಪರ್ಯಾಲೋಚನೆಯಲ್ಲಿದೆ ಕೆಲವು ಮಾರ್ಕೆಟಿಂಗು ಸಹಕಾರ ಸಂಘಗಳು ಬಹಳ ಚೆನ್ನಾಗಿ ಕೆಲಸಮಾಡುತ್ತಿವೆ

ನೀರಾವರಿ

ಕಳೆದ 5 ವರ್ಷಗಳಲ್ಲಿ 36 ಮೇಜರ್ ಕಾಮಗಾರಿಗಳನ್ನು ಮಂಜೂರು ಮಾಡಿದೆ ಇವುಗಳಿಗೆ 95 ಲಕ್ಷ ರೂಪಾಯಿ ವೆಚ್ಚವಾಗುವುದಾಗಿದೆ ಈ ಕಾಮಗಾರಿಗಳ ಪರಿಣಾಮವಾಗಿ ಸುಮಾರು 32,000 ಎಕರೆಗಳ ಪ್ರದೇಶದಲ್ಲಿ ನೀರಾವರಿ ಸಾಗುವಳಿಗೆ ಅನುಕೂಲವಾಗುವುದಾಗಿದೆ ತುಂಗಭದ್ರಾ ಅಣೆಕಟ್ಟನ್ನು ನಿರ್ಮಿಸುವ ವಿಷಯವನ್ನು ಸಹ ಪರ್ಯಾಲೋಚಿಸುತ್ತಿದೆ ನೀರಾವರಿ ಕಾಮಗಾರಿಗಳ ಬಗ್ಗೆ ಕೆಲಸಕಾರ್ಯಗಳು ಇನ್ನೂ ತ್ವರಿತವಾಗಿಯೇ ನಡೆಯಲು ಈ ಇಲಾಖೆಗೇ ಪ್ರತ್ಯೇಕವಾದ ಚೀಫ್ ಇಂಜನಿಯರೊಬ್ಬರನ್ನು ನೇಮಿಸಲಾಗಿದೆ ಇನ್ನು ಮುಂದಿನ 5 ವರ್ಷಗಳಲ್ಲಿ 2 ಕೋಟಿ ರೂಪಾಯಿ ವೆಚ್ಚದಲ್ಲಿ 26 ಕಾಮಗಾರಿಗಳನ್ನು ಕೈಗೊಳ್ಳಬೇಕೆಂದುದ್ದೇಶಿಸಿದೆ ಇದರ ಪರಿಣಾಮವಾಗಿ ಇನ್ನೂ 62,000 ಎಕರೆಗಳಷ್ಟು ಪ್ರದೇಶದಲ್ಲಿ ನೀರಾವರಿ ವ್ಯವಸಾಯವು ನಡೆಯುವುದಾಗಿದೆ ಆರ್ವಿನ್ ನಾಲಾ ಪ್ರದೇಶದಲ್ಲಿ 90,000 ಎಕರೆಗಳಲ್ಲಿ ಸಾಗುವಳಿಯಾಗುತ್ತಿದೆ ಆದರೆ ಆ ಪ್ರದೇಶದಲ್ಲಿ 1,20,000 ಎಕರೆಗಳಲ್ಲಿ ನೀರಾವರಿ ವ್ಯವಸಾಯವು ನಡೆಯಲು ಅವಕಾಶವಿದೆ.

ಸಂಚಾರ ಸೌಕರ್ಯ

ಮಿಲಿಟರಿ ವಾಹನಗಳ ಸಂಚಾರವು ಹೆಚ್ಚಿರುವುದರಿಂದ ರಸ್ತೆಗಳ ದುರಸ್ತಿಯ ಸಮಸ್ಯೆಯು ಈಗ ಸ್ವಲ್ಪ ಪ್ರಬಲವಾಗಿ ತಲೆದೋರಿದೆ. ಸುಮಾರು 278 ಮೈಲಿಗಳಷ್ಟು ರಸ್ತೆಯು ಮಿಲಿಟರಿ ಸಂಚಾರದ ಪ್ರಯುಕ್ತ ನಾದುರಸ್ತಾಗಿದೆ ಇವುಗಳ ದುರಸ್ತಿಗೆ 15 ಲಕ್ಷ ರೂಪಾಯಿಗಳು ಬೇಕೆಂದು ಅಂದಾಜಾಗಿದೆ. ಇದರಲ್ಲಿ ಅರ್ಧವನ್ನು ಇಂಡಿಯಾ ಸರ್ಕಾರದವರು ವಹಿಸಿಕೊಳ್ಳುತ್ತಾರೆ. ಕೆಲವು ಮುಖ್ಯ ರಸ್ತೆಗಳ ರಿಪೇರಿಗೆ 2 ಲಕ್ಷ ರೂಪಾಯಿಗಳನ್ನೂ ಒದಗಿಸುತ್ತದೆ ಮುಖ್ಯವಾದ ಕೆಲವು ರಸ್ತೆಗಳನ್ನು ಸಿಮೆಂಟು ಕಾನ್‌ಕ್ರೀಟ್ ರಸ್ತೆಗಳನ್ನಾಗಿ ಮಾರ್ಪಡಿಸಲು ಐದು ವರ್ಷದ ಯೋಜನೆಯೊಂದನ್ನು ತಾತ್ಕಾಲಿಕವಾಗಿ ಹಾಕಿಕೊಂಡಿದೆ ಈ ವರ್ಷ ಈ ಬಾಬಿನಾಗಿ 15 ಲಕ್ಷ ರೂಪಾಯಿಗಳನ್ನು ಮಂಜೂರುಮಾಡಿದೆ. ಕೇಂದ್ರ ಸರ್ಕಾರದವರು ಸೂಚಿಸಿರುವ ಪ್ರಕಾರ ಸಂಸ್ಥಾನದ ರಸ್ತೆಗಳ ರಿಪೇರಿಯ ವಿಷಯವನ್ನು ಪರ್ಯಾಲೋಚಿಸಲು ಒಂದು ಸಮಿತಿಯು ಏರ್ಪಾಡಾಗಿದೆ

ವಿದ್ಯುಚ್ಛಕ್ತಿ

ಭಾರತದಲ್ಲಿ ಮೊಟ್ಟಮೊದಲು ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡಿದ್ದು ಮೈಸೂರಿನಲ್ಲಿ ಶಿವನಸಮುದ್ರ ಮತ್ತು ಶಿಂಷಾ ಕೇಂದ್ರಗಳಲ್ಲಿ 68,000 ಅಶ್ವಶಕ್ತಿಗಳಷ್ಟು ಶಕ್ತಿಯುತ್ಪತ್ತಿಯಾಗುತ್ತಿದೆ ಸಂಸ್ಥಾನದ ಹಲವಾರು ಕೈಗಾರಿಕೆಗಳಿಗೂ ಮತ್ತು ನಗರಗಳಿಗೂ ಶಕ್ತಿಯ ಅವಶ್ಯಕತೆಯು ಹೆಚ್ಚುಹೆಚ್ಚಾಗಿ ಕಂಡುಬರುತ್ತಿದೆ

ಜೋಗ ಜಲಪಾತದ ಬಳಿ 64,000 ಅಶ್ವಶಕ್ತಿಗಳನ್ನು ಉತ್ಪತ್ತಿಮಾಡುವ ಯೋಜನೆಯು ಮಂಜೂರಾಗಿದೆ. ಇದರ ವೆಚ್ಚ 400 ಲಕ್ಷ ಈ ಕೇಂದ್ರದಲ್ಲಿ ಕ್ರಮೇಣ 1,28,000 ಅಶ್ವಶಕ್ತಿಗಳನ್ನು ತಯಾರಿಸಲು ಅವಕಾಶವಿದೆ ಈ ಯಂತ್ರವನ್ನು ಸ್ಥಾಪಿಸಲು ಇಂಡಿಯಾ ಸರ್ಕಾರದವರು ಬೇಕಾದ ಯಂತ್ರಗಳನ್ನು ಇಂಗ್ಲೆಂಡಿನಿಂದ ತರಿಸಲು ಬಹಳ ಸಹಾಯಮಾಡಿರುತ್ತಾರೆ ಇಲ್ಲಿಯವರೆಗೂ, 125 ಲಕ್ಷ ರೂಪಾಯಿಗಳನ್ನು ವೆಚ್ಚಮಾಡಿದೆ ಈ ಕೇಂದ್ರದಲ್ಲಿ ಶಕ್ತಿಯನ್ನುತ್ಪತ್ತಿಮಾಡಲು ಮೊದಲು ಮಾಡಿದ ಮೇಲೆ ಶಿಂಷಾ ಮತ್ತು ಶಿವನಸಮುದ್ರಗಳ ಮೇಲೆ ಈಗ ಇರುವ ಒತ್ತಡವು ಕಡಿಮೆಯಾಗುವುದು ಸಂಸ್ಥಾನದ ಇತರ ಕೆಲವು ಪ್ರದೇಶಗಳಲ್ಲಿ ವಿದ್ಯುಚ್ಛಕ್ತಿಯನ್ನುತ್ಪತ್ತಿಮಾಡಲು ಸಾಧ್ಯವಿದೆಯೇ ಎನ್ನುವ ವಿಷಯವನ್ನೂ ಸಹ ಪರಿಶೀಲಿಸುತ್ತಿದೆ ಮೇಕೆದಾಟಿನ ಬಳಿ ಶಕ್ತಿಯನ್ನುತ್ಪತ್ತಿಮಾಡುವ ವಿಷಯದಲ್ಲಿ ಪರಿಶೀಲನೆಗಳು ನಡೆದಿವೆ

ಬೆಂಗಳೂರಿನ ಶಕ್ತಿ ಕೇಂದ್ರದ ಯಂತ್ರವನ್ನು 35 ಕಿ ವಾ ಗಳಿಂದ 78 ಕಿ. ವಾ ಗಳಿಗೆ ಮಾರ್ಪಡಿಸಬೇಕೆಂದುದ್ದೇಶಿಸಿದೆ ಇದಕ್ಕಾಗಿ 10 ಲಕ್ಷ ರೂಪಾಯಿಗಳು ವೆಚ್ಚವಾಗುವುದಾಗಿದೆ

ವಿದ್ಯಾಭ್ಯಾಸ

1939-40 ರಲ್ಲಿ ವಿದ್ಯಾಭ್ಯಾಸಕ್ಕಾಗಿ 51 ಲಕ್ಷ ರೂಪಾಯಿಗಳು ವೆಚ್ಚವಾಗುತ್ತಿದ್ದುದು 44-45 ರಲ್ಲಿ 75 55 ಲಕ್ಷ

[ಆನೆಯ ಪುಟವನ್ನು ನೋಡಿ]

ಸ್ವೀಕಾರ

ಧಾರವಾಡ ಜಿ ಲಕ್ಷ್ಮೇಶ್ವರಗ್ರಾಮದ ಶ್ರೀಜಗದ್ಗುರು ಪಂಚಾಚಾರ್ಯ ಭಜನ ಸಂಘದವರು ತಮ್ಮ ಗ್ರಾಮದಲ್ಲಿ ಶ್ರಾವಣಮಾಸ ಮುಗಿಯುವವರೆಗೂ ಶ್ರೀಜಗದಾಚಾರ್ಯರ ಭಜನೆಯನ್ನು ಅವಿಚ್ಛಿನ್ನವಾಗಿ ನೆರವೇರಿಸಿ ಸಮಾಪ್ತಿಗೊಳಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ಸಂಘದ ಸೆಕ್ರೆಟರಿಗಳು ಮತ್ತು ಅಧ್ಯಕ್ಷರದ್ವಾರಾ ತಲ್ಪಿರುತ್ತವೆ.

ರಾಯಚೂರು ಡಿ|| ಕುರುಡಿ ಗ್ರಾಮದ ವೀರಶೈವರು ಶ್ರಾವಣಮಾಸ ಮಹೋತ್ಸವವನ್ನು ಬಹು ವಿಜೃಂಭಣೆಯಿಂದ ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ಮು|| ರಾ|| ಕುರುಡಿ ಮಾಸ್ತರ್ ಗುಂಡಪ್ಪನವರದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಪಂಚಾಚಾರ್ಯಪ್ರಭಾ.

೧೯೪೫ನೆಯ ಸೆಪ್ಟೆಂಬರ್ ತಾ। ೨೪ನೇ ಸೋಮವಾರ

ವರ್ಣಾಶ್ರಮ ವಿಚಾರ

ವೀರಶೈವಮತವು ಅಖಿಲ ವೈದಿಕಮತಗಳಂತೆ ವೈದಿಕಮತವಾಗಿಯೂ, ವರ್ಣಾಶ್ರಮಯುಕ್ತವಾದುದಾಗಿಯೂ, ಸನಾತನವಾಗಿಯೂ ಇರುವುದ [illegible] ಯಾವ ಮತಗಳು ಶ್ರುತಿ ಸ್ಮೃತಿ ಪುರಾಣ [illegible] ಗಳಲ್ಲಿ ಉಲ್ಲೇಖಿಸಲ್ಪಟ್ಟವೆಯೋ, ಯಾವ ಮತಗಳು ಬ್ರಹ್ಮಸೂತ್ರ ಉಪನಿಷದಾದಿಗಳ ಮೇಲೆ ಭಾಷ್ಯದ ಮೂಲಕ ಆಚಾರ್ಯ [illegible] ರಿಂದ ನಿರ್ಣಯಿಸಲ್ಪಟ್ಟವೆಯೋ [illegible] ವೆಂದು ಪ್ರಸಿದ್ಧಿಯಾಗಿವೆ ಮತ್ತು [illegible] ಮೂಲಸ್ಥಾಪಕರಿರುವಂತೆ [illegible] ಪಂಚಾಚಾರ್ಯರೇ [illegible]

[illegible] ಮತೀಯರು [illegible] ಟ್ಟುಕೊಂಡು ಮತದ [illegible] ತ್ತಾರೆ. ವೀರಶೈವಮತಿ [illegible] ಮುಖ್ಯವಾಗಿ [illegible] ರಿಂದಲೇ ಎಲ್ಲಾ ವೈದಿಕಮತ [illegible] ಜಾತಿನಾಮ [illegible] ವರಲ್ಲಿ ಮಾತ್ರ ಮತಧರ್ಮ [illegible] ರಾರದಲ್ಲಿ ಇಟ್ಟುಕೊ [illegible] ಸಕಲ ವರ್ಣದವರನ್ನ [illegible] ಒಂಕೆ [illegible] ವಿಶೇಷವಾಗಿ [illegible] ನಾವು [illegible] ರುವುದು [illegible] ವಿಶೇಷವಾಗಿ ಆಚರಿಸುವ ಮಾತ್ರದಿಂದ ಜಾತಿಧರ್ಮಗಳು ಇಲ್ಲವೆಂದ [illegible] ಆಗುವದಿಲ್ಲವು [illegible] ಜಾತಿಗೆ ಮಾತ್ರ ಸಂಬಂಧಿಸಿರತಕ್ಕ [illegible] ಸಾಮಾನ್ಯಧರ್ಮಗಳು [illegible] ವಿಶೇಷ [illegible]

[illegible] ಲ್ಲಿ ಮಾತ್ರ [illegible] ವೆಂಬ ಸಾಮಾನ್ಯಧರ್ಮ [illegible] ಮಾನವರಲ್ಲಿಯೂ [illegible] ವಿಶೇಷಧರ್ಮ [illegible] ಮಾತ್ರ ಅನುಗತ [illegible] ವಿಶೇಷಧರ್ಮವು ಕ್ಷತ್ರಿಯರಲ್ಲಿ ಮಾತ್ರ [illegible] ಇದರಂತೆ [illegible] ರಿಂದ ಈ ಸಾಮಾನ್ಯ [illegible] ರಲ್ಲಿಯ ಈ ವೀರಶೈವತ್ವವು [illegible] ಧರ್ಮವನ್ನು [illegible] ವಿಶೇಷ ಧರ್ಮವನ್ನು ಅನುಸರಿಸುವುದರಿಂದ ಇವರ [illegible] ಇವರು [illegible] ರು ಎಂದು ವ್ಯವಹಾರಮಾಡುತ್ತಾರೆ. ವೀರಶೈವಮತದಲ್ಲಿ ಅಷ್ಟಾವರಣ ಪಂಚಾಚಾರ ಲಿಂಗಾಂಗಸಾಮರಸ್ಯ ಷಟ್ಸ್ಥಲ ಮೊದಲಾದ ಮುಕ್ತಿಸಾಧಕಗಳಾದ ಧರ್ಮಾಚರಣೆಗಳೇ [illegible] ಗಳಾಗಿವೆ. ಅಧ್ಯಯನ, ಅಧ್ಯಾಪನ ದಾನ ಪ್ರತಿಗ್ರಹಣ ಯಜನ ಯಾಜನ ಮೊದಲಾದವುಗಳೇ ವಿಶೇಷಧರ್ಮಗಳು [illegible] ತ್ವವನ್ನು [illegible] ಸಾಮಾನ್ಯಧರ್ಮಗಳೂ ವಿಶೇಷ ಧರ್ಮಗಳೂ ಎಲ್ಲವೂ ಅನುಸರಿಸಲ್ಪಡುತ್ತವೆ. ಈ ನೂತನ ನಾಗರಿಕತೆಯ ಕಾಲದಲ್ಲಿ ಈ ವರ್ಣಾಶ್ರಮ ಧರ್ಮಗಳೆಲ್ಲವೂ ನಶಿಸಿಹೋಗಿರುವವು. ಯಾವನು ಬುದ್ಧಿವಂತನೋ ಅವನೇ ಉತ್ತಮನೆಂದೂ ಯಾವನು ದಡ್ಡನೋ ಅವನೇ ಅಧಮನೆಂದೂ ತಂಡೋಪತಂಡ [illegible] ವಾದಗಳು ಹುಟ್ಟಲಾರಂಭಿಸಿರುವವು. ವಜ್ರ, ಕಲ್ಲು ಮುಂತಾದ ಜಡಪದಾರ್ಥಗಳಲ್ಲಿಯೂ ಸಹ ಶಾಸ್ತ್ರಕಾರರು ಬ್ರಾಹ್ಮಣಾದಿಜಾತಿಗಳನ್ನು ವಿಂಗಡಿಸಿರುತ್ತಾರೆ. ಇನ್ನು ವೇದಮಾರ್ಗಾವಲಂಬಿಗಳಾದ ಮಾನವವರ್ಗದಲ್ಲಿ ಇಲ್ಲವೆಂದು ಹೇಳಲು ಸಾಧ್ಯವಾದೀತೇ? ಇಂತಹ ಆಧುನಿಕಯುಕ್ತಿವಾದಗಳೆಲ್ಲವೂ ವಿತಂಡಾವಾದಗಳಲ್ಲಿ ಸೇರುತ್ತವೆಯೇ ಹೊರತು ಸದ್ವಾದಗಳಲ್ಲಿ ಸೇರುವದಿಲ್ಲ. ಮುಖ್ಯವಾಗಿ ವರ್ಣಾಶ್ರಮ ವ್ಯವಹಾರವು ಎಲ್ಲಿ ಇರುವುದಿಲ್ಲವೋ ಅಲ್ಲಿ ವೇದೋಪನಿಷತ್ತುಗಳು ಸಹ ಇರುವುದಿಲ್ಲವು. ವರ್ಣಾಶ್ರಮಗಳಿಗೂ ವೇದೋಪಜನ್ಯವಾದ ಮುಕ್ತಿಗೂ ಪರಸ್ಪರ ಕಾರ್ಯಕಾರಣಭಾವವು ಇರಬೇಕೆಂಬುವುದೇ ಆರ್ಯಧರ್ಮದ ರಹಸ್ಯ [illegible] ವನ್ನವಲಂಬಿಸಿದವರು ಮಾತ್ರ ಮನಸ್ಸಿಗೆ ಬಂದಂತೆ ಹೇಗೆ ಬೇಕೋ ಹಾಗೆ ಹೇಳಬಹುದಾಗಿದೆ. ಅದು ಸಿದ್ಧಾಂತವಾಗಲಾರದು. ವರ್ಣಾಶ್ರಮಧರ್ಮದಿಂದ ಕೂಡಿದ ವೇದಮಾರ್ಗ [illegible] ನಿಯತವಾಗಿ [illegible] ಧರ್ಮಾವಲಂಬಿ [illegible] ದಲ್ಲಿ ಯಾರು ಜನವನ್ನು [illegible] ವನ್ನು [illegible] ತನ ಅಸ್ತಿತ್ವವನ್ನು [illegible] [illegible]

[illegible] ಪತ್ರರಾ [illegible]

ಮೈಸೂರಿನ [illegible] ಮುಖ್ಯ [illegible]

ಯುದ್ಧಪ್ರಯತ್ನಗಳು

[illegible] ರೂಪಾಯಿ [illegible] 11 [illegible] ರೂಪಾಯಿ [illegible] ಕೋಟಿ ರೂಪಾಯಿ [illegible] ತ್ತಾರೆ [illegible] ಶಿಕ್ಷಣವನ್ನು [illegible] ಬೇಕೆಂದು [illegible] ಎಲ್ಲಾ ಸಹಾಯವನ್ನೂ ನೀಡಿದರು. ಮೈಸೂರು ಯೋಧರ ಜೋಡಿಸವರು ಯೋಧರ ಕುಟುಂಬವರ್ಗದವರ ಯೋಗಕ್ಷೇಮವನ್ನು ಆಸಕ್ತಿಯಿಂದ ನೋಡಿಕೊಳ್ಳುತ್ತಿದ್ದಾರೆ. ಭಾರತೀಯ [illegible] ಜನರನ್ನು ಸೇರಿಸುವ ವಿಷಯದಲ್ಲಿ ಮೈಸೂರು [illegible] ರವರು ಇಂಡಿಯಾ [illegible] ಸಹಕರಿಸಿರುತ್ತಾರೆ. [illegible] ದವರ [illegible] ಕ್ಕಾಗಿ 11,300 ಎಕರೆಗಳಷ್ಟು ಪ್ರವೇಶವನ್ನು ಬಿಟ್ಟುಕೊಟ್ಟಿದೆ. ಮಹಾಸ್ವಾಮಿಯವರ [illegible] ಸರ್ಕಾರದವರಿಗೂ ಸೇರಿದ ಹಲವಾರು [illegible] ಬಿಟ್ಟುಕೊಡಲಾಗಿದೆ. ಸಂಸ್ಥಾನದಲ್ಲಿ [illegible] ಕೈಗಾರಿಕಾ ಸಂಸ್ಥೆಗಳು 8 ಖಾಸಗಿ, 9 ಸರ್ಕಾರಿ [illegible] ಸರ್ಕಾರದ [illegible] ಯದಿಂದ ನಡೆಯುವಂತ ಹಲವು ಯುದ್ಧವಸ್ತುಗಳನ್ನು ತಯಾರಿಸಿ ಒದಗಿಸುತ್ತಿದ್ದುವು. ಸುಮಾರು 11 ಕೋಟಿ ರೂಪಾಯಿಗಳ ಬೆಲೆ ಬಾಳುವ ವಸ್ತುಗಳನ್ನು ಒದಗಿಸಿವೆ. ಅರಣ್ಯ ಇಲಾಖೆಯವರು ಬಹಳ ಹೆಚ್ಚಿನ ಪ್ರಮಾಣದಲ್ಲಿ ಮರದ ನಾಟಾಗಳನ್ನು 20 ಲಕ್ಷ ರೂಪಾಯಿ ಬೆಲೆಬಾಳುವ ಬಿದಿರನ್ನು ಯುದ್ಧ ಇಲಾಖೆಯವರಿಗೆ ಕೊಟ್ಟಿರುತ್ತಾರೆ. ಕೈಗಾರಿಕಾ ಇಲಾಖೆಯವರು ಕಂಬಳಿಗಳನ್ನೂ, ಡುಂಗರಿಗಳನ್ನೂ, ಇತರ ಹತ್ತಿಯ ಮತ್ತು ಉಣ್ಣೆಯ ಒಟ್ಟೆಗಳನ್ನೂ ಯುದ್ಧ ಇಲಾಖೆಗೆ ಒದಗಿಸಿರುತ್ತಾರೆ. ಪಾರಿಭಾಷಿಕ ಶಿಕ್ಷಣವನ್ನು ಪಡೆಯುವವರಿಗಾಗಿ ಸಂಸ್ಥಾನದಲ್ಲಿ 12 ಕೇಂದ್ರಗಳನ್ನು ಸ್ಥಾಪಿಸಿದೆ. ಈಗಾಗಲೆ [illegible] 500 ಮಂದಿ ಭೂಜಲವಾಯು ಸೈನ್ಯಗಳಲ್ಲಿಯೂ ಇತರ ಯುದ್ಧವಸ್ತು ರಚನಾಯಂತ್ರಗಳಲ್ಲೂ ನೇಮಕವಾಗಿದ್ದಾರೆ. [illegible] ಕೆಗಾರಿಕೆಗಳನ್ನು ಯುದ್ಧದಿಂದುಂಟಾಗುವ ನಷ್ಟಗಳ [illegible] ವಿಮೆಮಾಡುವ ಪದ್ಧತಿಯನ್ನು [illegible] ಆಚರಣೆಗೆ ತರಲಾಯಿತು. ಸಂಸ್ಥಾನದ [illegible] ವೇತನ [illegible] ಚಂದಾ 18 ಲಕ್ಷ [illegible] 10.46 ಲಕ್ಷ ರೂಪಾಯಿಗಳು [illegible] ಎಂದೂ [illegible] ಒಂದಿದ [illegible] ಎಲ್ಲಾ ಊರ [illegible] 1943 ರಲ್ಲಿ ಯುದ್ಧ [illegible] ಶ್ರೀಮನ್ಮಹಾರಾಜರು ಸರವೇರಿ [illegible] ಲಕ್ಷ [illegible] ಪ್ರೇ [illegible] ವಿದ್ದರು.

[illegible] ಸಮಿತಿಯವರು [illegible] 1941ನೇ [illegible] ಜನಧನವಾಗಿ ಒಂದು ಕ್ಲಬ್ಬನ್ನು [illegible] ಭಾರತದಲ್ಲಿ ಇಂತಹ ಕ್ಲಬ್ಬುಗಳಲ್ಲಿ [illegible] ಒಂದಿದ ಶ್ರೀಮನ್ಮಹಾರಾಜರವರ ಈ ಕ್ಲಬ್ಬಿಗೆ [illegible] ರೂಪಾಯಿಗಳನ್ನು [illegible] ಕ್ಲಬ್ಬಿನವರ [illegible] ಸುಖೋಪಕರಣ [illegible] ಕಟ್ಟಲಾಗುವ ಜಯಭಾ [illegible] 000 ರೂಪಾಯಿಗಳು ಶ್ರೀಮನ್ [illegible] ಪ್ರತಿ [illegible] ಈ ಭವನವು [illegible]

ಬೆಲೆಗಳ ಹತೋಟಿ

[illegible] ಬೇಕಾದ ಪದಾರ್ಥಗಳ ಬೆಲೆ [illegible] ಕಾರ್ಯಕ್ರಮ [illegible] ಭಾರತದ [illegible] ಪತ್ರಗಳನ್ನು [illegible] ನ್ಯಾಷನಲ್ ಸೇವಿಂಗ್ [illegible] ಇವೇ ಮೊದಲಾದ [illegible] ಸರ್ಕಾರದವರ ಬೆಲೆಗಳನ್ನು [illegible] ಕಾರ್ಯಕ್ರಮಗಳೊಡ [illegible] ಕೈಗೊಳ್ಳಲಾಯಿತು.

ತುಟ್ಟಿಭತ್ಯ

[illegible] ಜೀವನದ ಪದಾರ್ಥಗಳ ಬೆಲೆಯು ಏರಿ [illegible] ಗೆ ಉಂಟಾದ ತೊಂದರೆಯನ್ನು [illegible] 10 ರೂಪಾಯಿನ ಸಂಬಳ [illegible] ನೌಕರರಿಗೆಲ್ಲಾ ತುಟ್ಟಿಭತ್ಯವನ್ನು ಕೊಡಲಾಗಿತ್ತು. ಇದಕ್ಕಾಗಿ 30 ಲಕ್ಷ ರೂಪಾಯಿಗಳು ಹೆಚ್ಚು [illegible] ವೆಚ್ಚವಾಗುವುದಾಗಿದೆ. ರೈಲ್ವೆ ಮತ್ತು ಇತರ ಕೈಗಾರಿಕಾ ಸಂಸ್ಥೆಗಳಲ್ಲಿ ಕೆಲಸ ಮಾಡುವವರಿಗೆ ಪ್ರತ್ಯೇಕವಾಗಿ [illegible] ಭತ್ಯವನ್ನು ಕೊಡುತ್ತಿದೆ. ಗ್ರಾಮಾಧಿಕಾರಿಗಳ ಫೋಟಗಿಗೆ ಸೇಕಡಾ 25 ರಷ್ಟು ಹೆಚ್ಚಿಸಿದೆ. ಇದರಿಂದ ಎರಡುವರೆ ಲಕ್ಷ ರೂಪಾಯಿಗಳು ಹೆಚ್ಚಿಗೆ [illegible] ವಾಗುವುದಾಗಿದೆ. ಈಚೆಗೆ ತುಟ್ಟಿಭತ್ಯದ [illegible] ಹೆಚ್ಚಿಸಿದೆ. ಅಲ್ಲದೆ 901 ರೂಪಾಯಿ [illegible] ಸಂಬಳ ಬರುವವರಿಗೂ ಸಹ ಭತ್ಯವನ್ನು [illegible] ಬೇಕೆಂದು ಆಜ್ಞೆ ಮಾಡಿದೆ. ಇದರ ಪರಿಣಾಮ [illegible] ರದವರಿಗೆ 21 ಲಕ್ಷ ರೂಪಾಯಿಗಳು ಹೆಚ್ಚು [illegible] ವೆಚ್ಚವಾಗುವುದಾಗಿದೆ.

ಆಹಾರ ಸರಬರಾಯಿ

ಜನರಿಗೆ ಅವಶ್ಯಕವಾಗಿ ಬೇಕಾದ ಆಹಾರವಸ್ತುಗಳ ಸರಬರಾಯಿಯ ವಿಷಯಕ್ಕೆ ತೀವ್ರವಾದ ಗಮನವನ್ನು [illegible] ಮೊದಲಾಗುತ್ತಿದ್ದ ಅಕ್ಕಿಯ ಅಭಾವವು ಸರ್ಕಾರದವರಿಗೆ ತೀವ್ರವಾದ ಕಳವಳವನ್ನುಂಟುಮಾಡಿತ್ತು. ಸರ್ಕಾರದವರು ಸಕಾಲದಲ್ಲಿ ಆಹಾರವಸ್ತುಗಳ ಶೇಖರಣೆ, ಹಂಚಿಕೆಯ ಮತ್ತು ಬೆಲೆಯ ನಿರ್ಧಾರದ ಬಗ್ಗೆ ಸೂಕ್ತವಾದ ಕಾರ್ಯಕ್ರಮವನ್ನು ಕೈಗೊಂಡರು. ರೈತರೆಲ್ಲರೂ ತಾವು ಬೆಳೆದ ದವಸದಲ್ಲಿ ತಮ್ಮ ಖರ್ಚಿಗಾಗಿ ಉಳಿದುದನ್ನು ಸರ್ಕಾರದವರಿಗೇ ಮಾರಬೇಕೆಂದು ವಿಧಿಸಲಾಯಿತು.

...ಗಿ ಮಾಡಿದುದರ ಪರಿಣಾಮವಾಗಿ ಸರ್ಕಾರದವರು ...೨,೦೦೦ ಪಲ್ಲ ಭತ್ತ, ೬,೨೦,೦೦೦ ಪಲ್ಲರಾಗಿ 100,000 ...ಲ್ಲ ಇತರ ಒಗೆಯ ಧಾನ್ಯಗಳು – ಇವುಗಳನ್ನು ಜಮಾ ...ಯಿಸಲಾಯಿತು. ಇದರ ಜತೆಗೆ ಇಂಡಿಯಾ ಸರ್ಕಾರ ...ದವರೂ ಸಹ ಉದಾರವಾಗಿ ಧಾನ್ಯಗಳನ್ನು ಕಳುಹಿಸಿ ...ಟ್ಟುದರ ಪರಿಣಾಮವಾಗಿ ಸಂಸ್ಥಾನದಲ್ಲಿ ಅದನ್ನು ...ಸ್ಥಿರವಾದ ರೀತಿಯಲ್ಲಿ ಆಹಾರ ಸರಬರಾಯನ್ನು ...ಮುರಿಸುತ್ತಿದೆ.

ಆಹಾರವಸ್ತುಗಳ ಜಮಾವಣೆಯು ಜತೆಗೆ ಆಹಾರದ ...ಂಕಿಕೆಗ ನಗರ ಪ್ರದೇಶದಲ್ಲಿ ಆಹಾರ ವಸ್ತುಗಳ ... [illegible] ... ವರ್ತಕರಿಗೆ ಈ ಧಾನ್ಯಗಳನ್ನು ... ಕೊಡಲಾಯಿತು. ಈ ಸಂಬಂಧ ...ಲ್ಲಿ ಸರ್ಕಾರಿ ಅಧಿಕಾರಿಗಳೂ ಮತ್ತು ... [illegible] ... ನಗರ ಜಿಲಾ ಮತ್ತು ...ಲ್ಲೂಕುಗಳಲ್ಲಿ ಸ್ಥಾಪಿಸಿದ.

[illegible] ... ಆಹಾರ ವಸ್ತುಗಳ ... ಆಹಾರ ಸರಬರಾಯಿಯು ಏರ್ಪಾಡು ...ಲ್ಲಲಿ ಮಾಡಲಾಗಿದ. ಮೈಸೂರಿನ ಆಹಾರದ ಸರಬರಾ... [illegible] ... ಪ್ರಸಾದ್ ಶ್ರೀವಸ್ತ ... [illegible] ... ಸರ್ಕಾರದ ...ರು ಆಹಾರವಸ್ತುಗಳ ಶೇಖರಣೆ ಮತ್ತು ಹಂಚಿಕೆಯ ...ಗ್ಗೆ ಇಷ್ಟು ಉತ್ತಮವಾದ ಏರ್ಪಾಡನ್ನು ಮಾಡದಿದ್ದಲ್ಲಿ ...ರತದ ಇತರ ಪ್ರದೇಶಗಳಂತೆಯೇ ಮೈಸೂರಿನಲ್ಲಿ ... [illegible] ... ಸರ್ಕಾರೀ ... [illegible] ...

ಆಹಾರ ವಸ್ತುಗಳು ಮಾತ್ರವೇ ... [illegible] ... ಜೀವನ... [illegible] ... ಟೆಗೊಳಪಡಿಸಲಾಯಿತು.

ಆಹಾರ ವಸ್ತುಗಳ ಬೆಳೆ

...ಹತ್ತು ಅಹಾರವಸ್ತುಗಳನ್ನು ... [illegible] ... ಎರಡು ಲಕ್ಷ ಎಕರೆಗಳು ... [illegible] ... ರೈತರು ... ವಸವನ್ನು ಬೆಳೆಯಲು ಸಹಾಯವಾಗುವಂತೆ ... ವ್ಯವಸಾಯ ಯಂತ್ರೋಪಕರಣಗಳನ್ನೂ ಒದಗಿಸುತ್ತಿ... ವರ್ಷ 14 ರಿಂದ 15 ಲಕ್ಷ ರೂಪಾಯಿಗಳಷ್ಟು ... ವ್ಯವಸಾಯ ಸಾಮುಗ್ರಿಗಳನ್ನ ... [illegible] ... ಎನ್ನುವುದು ವ್ಯಕ್ತವಾಗುತ್ತದೆ. ಇಂಪೀರಿಯಲ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ... [illegible] ... ದರಿಂದ ಕಂಪೋಸ್ಟ್ ತಯಾರಿಯ ಯೋಜನೆಯೊಂದ... ಕೈಗೊಂಡಿದೆ. ಹಲವು ಪೌರಸಭೆಗಳು ... [illegible] ... ತಯಾರಿಸುತ್ತಿವೆ. ಜಾನುವಾರುಗಳನ್ನು ಸಾಕುವ ... [illegible] ...

ಕೈಗಾರಿಕೆ ಮತ್ತು ಶ್ರಮಜೀವಿಗಳು

... [illegible] ... ಉಕ್ಕಿನ ... [illegible] ... ಒದಗಿಸಲು ಗಿದೆ. ಹೂಪ್ಸ್ ... [illegible] ... ಒಂದು ಓಪನ್ ಹಾರ್ತ್ ಪರ್ನೇಸನ್ನೂ, ಅಸಟಿಕ್ ಆಸಿಡ್ಡನ್ನು ತಯಾರಿ... ಒಂದು ಯಂತ್ರವನ್ನೂ, ಒಂದು ಫೆರೋ ಟಲಾಯಿ... ಯಂತ್ರವನ್ನೂ ಸ್ಥಾಪಿಸಲಾಯಿತು.

...ರ್ಕಾರಿ ಪಿಂಗಾಣಿ ಕಾರ್ಖಾನೆಯಲ್ಲಿ ವಿದ್ಯುಚ್ಛಕ್ತಿಯ ...ಲನ್ನು ಸ್ಥಾಪಿಸಿದೆ. ಏಷ್ಯಾಖಂಡದಲ್ಲಿಯೇ ಇಂತಹ ...ದು ಇಲ್ಲಿ ಮಾತ್ರವೇ ಇರುವುದು. ಹೈಡ್ರೋಮೀಟು ...ಕ್ಟರಿಯನ್ನು ಒಡಾಯಿಸಿರುವೂ ಅಲ್ಲದೆ ಶಿವಮೊಗ್ಗ... ಒಂದು ಗಂಧದೆಣ್ಣೆಯ ಕಾರ್ಖಾನೆಯನ್ನು ಸ್ಥಾಪಿಸ...ಯಿತು. ಮೈಸೂರು ಕೆಮಿಕಲ್ ಕಂಪೆನಿಯಲ್ಲಿ ಅಮೋನಿಯ ಪ್ಲಾಂಟನ್ನು ಒಡಾಯಿಸಲಾಯಿತು. ಸಂಸ್ಥಾನದ ಕೈಗಾರಿಕೆಗಳನ್ನು ಮೆಕ್ಯಾನಿಕಲ್, ಇಂಜನಿಯರಿಂಗು ಮತ್ತು ಗೃಹಕೈಗಾರಿಕೆಗಳೆಂದ ವಿಂಗಡಿಸಿ ಪ್ರತಿಯೊಂದು ಬಗೆಯ ಕೈಗಾರಿಕೆಯ ಬೆಳವಣಿಗೆಯನ್ನೂ ಸಾಧಿಸಲು ಪ್ರತ್ಯೇಕವಾದ ಅಧಿಕಾರಿಗಳನ್ನು ನೇಮಿಸಲಾಗಿದೆ.

ಫರ್ಟಿಲೈಸರ್ಸ್ ಮತ್ತು ಮೆಷಿನ್‌ಟೂಲ್ಸ್ ನಿಯೋಗದವರು ಬಂದು ಇಲ್ಲಿನ ಅಧಿಕಾರಿಗಳೊಡನೆ ಕೈಗಾರಿಕೆಗಳ ಬೆಳವಣಿಗೆಯ ವಿಷಯವಾಗಿ ಸಮಾಲೋಚನೆ ನಡೆಸಿದರು. ...ಮಗ್ರಭಾರತದ ಬೆಳವಣಿಗೆಯ ದೃಷ್ಟಿಯಿಂದ ನೋಡಿದ... [illegible] ... ರೈಲ್ವೆ ಮತ್ತು ವಿದ್ಯುಚ್ಛಕ್ತಿ ಬಾಬನ್ನು ಬಿಟ್ಟು ಇತರ ಕೈಗಾರಿಕೆಗಳಿಗೆ ... 7,19.80 ಲಕ್ಷದಿಂದ ... ಲಕ್ಷಗಳಷ್ಟು ... [illegible] ... ಇಂಡಿಯನ್ ... [illegible] ... ಪರ್ಯಾಲೋಚನೆಯಲ್ಲಿದೆ.

ವ್ಯವಸಾಯ

ಆಹಾರ ವಸ್ತುಗಳನ್ನು ಹೆಚ್ಚಾಗಿ ಬೆಳೆಯಲು ಇಲಾಖೆಯವರು ಹೆಚ್ಚಾಗಿ ಶ್ರಮಿಸುತ್ತಿದ್ದಾರೆ. ಹೆಚ್ಚು ಆಹಾರ ... [illegible] ...

... [illegible] ... ಮಾಡುವುದಕ್ಕೆ ... [illegible] ...

... [illegible] ... ಪರ್ಯಾಲೋಚನೆ ... [illegible] ...

ನೀರಾವರಿ

... [illegible] ... ಮಂಜೂರು ಮಾಡಿದೆ. ಇವುಗಳಿಗೆ ... ಲಕ್ಷ ರೂಪಾಯಿ ವೆಚ್ಚವಾಗುವುದಾಗಿದೆ. ಈ ಕಾಮಗಾರಿಗಳ ಪರಿಣಾಮವಾಗಿ ... 000 ಎಕರೆಗಳ ಪ್ರದೇಶದಲ್ಲಿ ನೀರಾವರಿ ... [illegible] ... ಕೋಟಿ ರೂಪಾಯಿ ವೆಚ್ಚದಲ್ಲಿ ... [illegible] ... ಬೇಕೆಂದುದ್ದೇಶಿಸಿದೆ. ಇದರ ಪರಿಣಾಮವಾಗಿ ಇನ್ನೂ 62,000 ಎಕರೆಗಳಷ್ಟು ಪ್ರದೇಶದಲ್ಲಿ ನೀರಾವರಿ ವ್ಯವಸಾಯವು ನಡೆಯುವುದಾಗಿದೆ. ಅಚ್ಚುಕಟ್ಟಿನಲ್ಲಾಗ ಪ್ರದೇಶದಲ್ಲಿ 90,000 ಎಕರೆಗಳಲ್ಲಿ ಸಾಗುವಳಿಯಾಗುತ್ತಿದೆ. ಆದರೆ ಆ ಪ್ರದೇಶದಲ್ಲಿ 1,20,000 ಎಕರೆಗಳಲ್ಲಿ ನೀರಾವರಿ ವ್ಯವಸಾಯವು ನಡೆಯಲು ಅವಕಾಶವಿದೆ.

ಸಂಚಾರ ಸೌಕರ್ಯ

ಮಿಲಿಟರಿ ವಾಹನಗಳ ಸಂಚಾರವು ಹೆಚ್ಚಿರುವುದರಿಂದ ರಸ್ತೆಗಳ ದುರಸ್ತಿಯ ಸಮಸ್ಯೆಯು ಈಗ ಸ್ವಲ್ಪ ಪ್ರಬಲವಾಗಿ ತಲೆದೋರಿದೆ. ಸುಮಾರು 278 ಮೈಲಿಗಳಷ್ಟು ರಸ್ತೆಯು ಮಿಲಿಟರಿ ಸಂಚಾರದ ಪ್ರಯುಕ್ತ ನಾದುರಸ್ತಾಗಿದೆ. ಇವುಗಳ ದುರಸ್ತಿಗೆ 15 ಲಕ್ಷ ರೂಪಾಯಿಗಳು ಬೇಕೆಂದು ಅಂದಾಜಾಗಿದೆ. ಇದರಲ್ಲಿ ಅರ್ಧವನ್ನು ಇಂಡಿಯಾ ಸರ್ಕಾರದವರು ವಹಿಸಿಕೊಳ್ಳುತ್ತಾರೆ. ಕೆಲವು ಮುಖ್ಯ ರಸ್ತೆಗಳ ರಿಪೇರಿಗೆ 2 ಲಕ್ಷ ರೂಪಾಯಿಗಳನ್ನೂ ಒದಗಿಸುತ್ತದೆ. ಮುಖ್ಯವಾದ ಕೆಲವು ರಸ್ತೆಗಳನ್ನು ಸಿಮೆಂಟು ಕಾನ್‌ಕ್ರೀಟ್ ರಸ್ತೆಗಳನ್ನಾಗಿ ಮಾರ್ಪಡಿಸಲು ಐದು ವರ್ಷದ ಯೋಜನೆಯೊಂದನ್ನು ತಾತ್ಕಾಲಿಕವಾಗಿ ಹಾಕಿಕೊಂಡಿದೆ. ಈ ವರ್ಷ ಈ ಬಾಬಿಗಾಗಿ 15 ಲಕ್ಷ ರೂಪಾಯಿಗಳನ್ನು ಮಂಜೂರುಮಾಡಿದೆ. ಕೇಂದ್ರ ಸರ್ಕಾರದವರು ಸೂಚಿಸಿರುವ ಪ್ರಕಾರ ಸಂಸ್ಥಾನದ ರಸ್ತೆಗಳ ರಿಪೇರಿಯ ವಿಷಯವನ್ನು ಪರ್ಯಾಲೋಚಿಸಲು ಒಂದು ಸಮಿತಿಯು ಏರ್ಪಾಡಾಗಿದೆ.

ವಿದ್ಯುಚ್ಛಕ್ತಿ

ಭಾರತದಲ್ಲಿ ಮೊಟ್ಟಮೊದಲು ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡಿದ್ದು ಮೈಸೂರಿನಲ್ಲೇ. ಶಿವನಸಮುದ್ರ ಮತ್ತು ಶಿಂಷಾ ಕೇಂದ್ರಗಳಲ್ಲಿ 66,000 ಅಶ್ವಶಕ್ತಿಗಳಷ್ಟು ಶಕ್ತಿಯುತ್ಪತ್ತಿಯಾಗುತ್ತಿದೆ. ಸಂಸ್ಥಾನದ ಹಲವಾರು ಕೈಗಾರಿಕೆಗಳಿಗೂ ಮತ್ತು ನಗರಗಳಿಗೂ ಶಕ್ತಿಯ ಅವಶ್ಯಕತೆಯು ಹೆಚ್ಚುಹೆಚ್ಚಾಗಿ ಕಂಡುಬರುತ್ತಿದೆ.

ಜೋಗ್ ಜಲಪಾತದ ಬಳಿ 64,000 ಅಶ್ವಶಕ್ತಿಗಳನ್ನು ಉತ್ಪತ್ತಿಮಾಡುವ ಯೋಜನೆಯು ಮಂಜೂರಾಗಿದೆ. ಇದರ ವೆಚ್ಚ 100 ... [illegible] ... ಸರ್ಕಾರದವರು ... [illegible] ... ಇಲ್ಲಿಯವರೆಗೂ 1... ಲಕ್ಷ ರೂಪಾಯಿಗಳನ್ನು ... [illegible] ... ಶಿವನಸಮುದ್ರಗಳ ... [illegible] ... ಯಾಗುವುದು. ಸಂಸ್ಥಾನದ ಇತರ ... [illegible] ... ವಿದ್ಯುಚ್ಛಕ್ತಿಯ ... [illegible] ... ಪರಿಶೀಲನೆಗಳು ನಡೆದಿವೆ.

ಬೆಂಗಳೂರಿನ ಶಕ್ತಿ ಕೇಂದ್ರದ ಯಂತ್ರವನ್ನು ... [illegible] ... ಬೇಕೆಂದುದ್ದೇಶಿಸಿದೆ. ಇದಕ್ಕಾಗಿ ... ಲಕ್ಷ ರೂಪಾಯಿಗಳು ವೆಚ್ಚವಾಗುವುದಾಗಿದೆ.

ವಿದ್ಯಾಭ್ಯಾಸ

19..-10 ರಲ್ಲಿ ... [illegible] ... ಲಕ್ಷ ರೂಪಾಯಿಗಳ ವೆಚ್ಚವಾಗುತ್ತಿದ್ದುದು ... 15 ರಲ್ಲಿ 95 ... ಲಕ್ಷ

ಕಡೆಯ ಪುಟವನ್ನು ನೋಡಿ)

ಸ್ವೀಕಾರ

ಕಾರನಾಡ ... ಲಕ್ಷ್ಮೀಪುರ ಗ್ರಾಮದ ಶ್ರೀ ... ವರು ... [illegible] ... ಶ್ರೀಜಗದ್ಗುರು ... [illegible] ... ನೆರವೇರಿಸಿ ಸವಾಪ್ತಿಗೊಳಿಸಿದ ಸಮಯದಲ್ಲಿ ಪ್ರಭುಪ್ರೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ಸಂಘದ ಸೆಕ್ರೆಟರಿಗಳ ಮತ್ತು ಅಧ್ಯಕ್ಷರದ್ವಾರಾ ತಲ್ಪಿರುತ್ತವೆ.

ರಾಯಚೂರು ಡಿ|| ಕುರುಡಿ ಗ್ರಾಮದ ವೀರಶೆಟ್ಟಿ ವರು ಶ್ರಾವಣಮಾಸ ಮಹೋತ್ಸವವನ್ನು ಬಹು ವಿಜೃಂಭಣೆಯಿಂದ ನೆರವೇರಿಸಿದ ಸಮಯದಲ್ಲಿ ಪ್ರಭುಪ್ರೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ಮ|| ರಾ| ಕುರುಡಿ ಮಾಸ್ತರ್ ಗುಂಡಪ್ಪನವರದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ.

ರೂಪಾಯಿಗಳಿಗೇರಿತು ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಬೆಳವಣಿಗೆಗೆ ವಿಶೇಷ ಗಮನವನ್ನು ಕೊಡಲಾಯಿತು 1941 ರಲ್ಲಿ ಪ್ರಾಥಮಿಕ ವಿದ್ಯಾಭ್ಯಾಸದ ಪಠೋಟಿಯನ್ನು ಸರ್ಕಾರದವರೇ ವಹಿಸಿಕೊಂಡರು 1941 ರಲ್ಲಿ 1,000 ಪ್ರಾಥಮಿಕ ಶಾಲೆಗಳನ್ನು ತೆರಯುವ ನಾಲ್ಕು ವರ್ಷದ ಯೋಜನೆಯೊಂದನ್ನು ಕೈಗೊಳ್ಳಲಾಯಿತು ಆದರೆ ಈ ಯೋಜನೆಯು ೩ ವರ್ಷಕ್ಕೇ ಮುಗಿಯಿತ ಪ್ರಸಕ್ತ ವರ್ಷದಲ್ಲಿ 400 ಶಾಲೆಗಳನ್ನು ಹೊಸದಾಗಿ ತೆರೆಯಲು ಏರ್ಪಾಡಾಗಿದೆ ಸಂಸ್ಥಾನದಲ್ಲಿ 8,000 ಪ್ರಾಥಮಿಕ ಶಾಲೆಗಳಿವೆ ಇವುಗಳಲ್ಲಿ 3,24 000 ಮಂದಿ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರ 1941 ರಿಂದ ಈಚೆಗೆ ವಿದ್ಯಾರ್ಥಿಗಳ ಸಂಖ್ಯೆ 1 60 000 ಮಂದಿಯಷ್ಟು ಹೆಚ್ಚಿದ ಇವರ ಪೈಕಿ 12,000 ಜನ ಬಾಲಕಿಯರು ಈ ಶಾಲೆಗಳಿಗೆ ಸೇರಿದ ಬಾಲಕರನ್ನು ಅವರ ವ್ಯಾಸಂಗ ತರಗತಿಗಳು ಮುಗಿಯುವುದಕ್ಕೆ ಮೊದಲೇ ಅವರನ್ನು ಶಾಲೆಗಳಿಂದ ಬಿಡಿಸಕೂಡದೆಂದು ಒಂದು ಶಾಸನವು ಮಾಡಿವೆ ಸಂಸ್ಥಾನದಲ್ಲಿ 180 ಮಾಧ್ಯಮಿಕ ಶಾಲೆಗಳೂ ಮತ್ತು ೩೪೬ ಅಪ್ಪರ್ ಪ್ರೈಮರಿ ಶಾಲೆಗಳೂ ಇವೆ ಇವುಗಳಲ್ಲ 68,000 ಮಂದಿ ವಿದ್ಯಾರ್ಥಿಗಳಿದ್ದಾರೆ ಕಳದ ವರ್ಷ 16 ಹೊಸ ಹೈಸ್ಕೂಲುಗಳು ಸ್ಥಾಪಿತವಾದುವು ಈ ಸಂಸ್ಥಾನದಲ್ಲ 78 ಹೈಸ್ಕೂಲುಗಳಿವೆ 18,000 ಮಂದಿ ವಿದ್ಯಾರ್ಥಿಗಳಿದ್ದಾರೆ ಇವರ ಪೈಕಿ, 2 600 ಮಂದಿ ವಿದ್ಯಾರ್ಥಿನಿಯರು

ಆಕಾಶವಾಣಿ

ಮೈಸೂರಿನ ಆಕಾಶವಾಣಿಯು ಈಗ ಸರ್ಕಾರದವರ ಆಡಳಿತದಲ್ಲಿ ನಡೆಯುತ್ತಿದೆ ಇದರ ಕಟ್ಟಡಕ್ಕಾಗಿ 1½ ಲಕ್ಷ ರೂಪಾಯಿಗಳು ವೆಚ್ಚವಾಗಿದೆ ಆಕಾಶವಾಣಿಯ ಕಾರ್ಯಕಲಾಪಗಳ ಅವಧಿಯನ್ನು ಹೆಚ್ಚಿಸಲಾಗಿದೆ ಮತ್ತು ಸುಧಾರಿಸಲಾಗಿದೆ ದಿನಕ್ಕೆ ನಾಲ್ಕು ಬಾರಿ ಉರ್ದು ಮತ್ತು ಕನ್ನಡ ಭಾಷೆಗಳಲ್ಲಿ ವಾರ್ತೆಗಳನ್ನು ತಿಳಿಸುತ್ತಿದೆ

ಜನಾರೋಗ್ಯ

ಜನಾರೋಗ್ಯ ಇಲಾಖೆಯನ್ನು ಸಾಂಕ್ರಾಮಿಕ ರೋಗಗಳನ್ನು ಎದುರಿಸಲು ಅನುಕೂಲವಾಗುವಂತೆ ಬಲಗೊಳಿಸಲಾಗಿದೆ ಪ್ಲೇಗ ರೋಗದ ಹತೋಟಿಯ ಸಂಬಂಧದಲ್ಲಿ ವಿಶೇಷರೀತಿಯ ಶಾಸನಗಳನ್ನೂ ರಚಿಸಿದೆ ಅರ್ಸಿಕೆರೆ ಪ್ರದೇಶದಲ್ಲಿ 200 ಗ್ರಾಮಗಳಲ್ಲಿ ಮಲೇರಿಯಾ ನಿವಾರಣಾ ಕಾರ್ಯಗಳನ್ನು ಕೈಗೊಂಡಿದೆ ಬೆಂಗಳೂರು ನಗರದ ಸುತ್ತುಮುತ್ತ 10 ಕೇಂದ್ರಗಳನ್ನು ಸ್ಥಾಪಿಸಿದೆ

ಸಿಂಕೋನಾ ವ್ಯವಸಾಯ ಕ್ರಮವನ್ನು ಬೆಳೆಯಲು ತಕ್ಷಣ ಗಮನ ಕೊಡಲಾಗಿದೆ ನಗರಗಳನ್ನೂ ಮತ್ತು ಮನೆಗಳನ್ನೂ ಆರೋಗ್ಯಕರವಾದ ರೀತಿಯಲ್ಲಿ ಕಟ್ಟಿಸುವ ವಿಷಯದಲ್ಲಿ ಸಲಹೆಕೊಡಲು ಮೇಧಾವಿಗಳ ಸಮಿತಿಯೊಂದನ್ನು ನೇಮಿಸಿದೆ

ವೈದ್ಯಸಹಾಯ

ಸಂಸ್ಥಾನದಲ್ಲಿ ಈಗ 400 ವೈದ್ಯಶಾಲೆಗಳಿವೆ ಅಂದರ 74 ಚದರ ಮೈಲಿ ಅಥವಾ ಸರಿ 18,000 ಮಂದಿ ಪ್ರಜೆಗಳಿಗೆ ಒಂದರಂತೆ ವೈದ್ಯಶಾಲೆಗಳಿದ್ದಂತಾಯಿತು ವರ್ಷಕ್ಕೆ 6 ಲಕ್ಷ ರೂಪಾಯಿಗಳು ಈ ಬಾಬಿಗಾಗಿ ವೆಚ್ಚವಾಗುತ್ತಿದ ಕಳೆದ ಐದು ವರ್ಷಗಳಲ್ಲಿ ಈ ಬಾಬಿನ ವೆಚ್ಚವು 10 ಲಕ್ಷ ರೂಪಾಯಿಗಳು ಹೆಚ್ಚಿದ

ಭಾರತೀಯ ಔಷಧ ಪದ್ಧತಿಗಳಿಗೂ ಸಹ ಉತ್ತೇಜನವು ಲಭಿಸುತ್ತಿದ 1943ನೇ ಇಸವಿ ಡಿಸೆಂಬರ್ ತಿಂಗಳಿನಲ್ಲಿ ಬೆಂಗಳೂರು ನಗರದಲ್ಲಿ ಶ್ರೀ ಜಯಚಾಮರಾಜ ಭಾರತೀಯ ಔಷಧಾಲಯದ ಅಸ್ತಿಭಾರ ಶಿಲೆಯನ್ನು ಮಹಾಸ್ವಾಮಿಯವರು ಪ್ರತಿಷ್ಠಿಸಿದರು ಈ ವೈದ್ಯಶಾಲೆಯ ಕಟ್ಟಡಕ್ಕೆ ಮತ್ತು ಪರಿಶೋಧನಾಲಯಕ್ಕೆ 8 18 ಲಕ್ಷ ರೂಪಾಯಿಗಳು ವೆಚ್ಚವಾಗುತ್ತದೆ ಮಹಾ ಜನರು ಈಗಾಗಲೇ ೩½ ಲಕ್ಷ ರೂಪಾಯಿಗಳನ್ನು ಕೊಟ್ಟಿರುತ್ತಾರೆ ಪ್ರಾಚೀನ ವೈದ್ಯ ಪದ್ಧತಿಗಳ ಮೇರೆಗೆ ಆಧುನಿಕ ರೀತಿಯಲ್ಲಿ ಚಿಕಿತ್ಸೆ ನಡೆಯಿಸಲು ಇದು ಬಹಳ ಮುಖ್ಯವಾದ ಏರ್ಪಾಡಾಗಿದ

ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಒಂದು ರಕ್ತ ನಿಧಿಯನ್ನೇರ್ಪಡಿಸಿದೆ ಸಂಸ್ಥಾನದಲ್ಲಿ ವೈದ್ಯಸಹಾಯವನ್ನು ಹೆಚ್ಚಿಸಲು ಬಹಳ ಮಂದಿ ಉದಾರ ಸಹಾಯವನ್ನು ಮಾಡಿರುತ್ತಾರೆ ಮೈಸೂರು ವಿಶ್ವವಿದ್ಯಾನಿಲಯವು ಎಂ ಬಿ ಬಿ.ಎಸ್ ಡಿಗ್ರಿಯನ್ನು ಯುದ್ಧ ನಿಮಿತ್ತ, ಡಿ ಎ ಎಸ್ ಹುದ್ದೆಗಳಿಗಾಗಿ ಅಂಗೀಕರಿಸಿದೆ ಮೆಡಿಕಲ್ ಡಿಗ್ರಿಗಳನ್ನು ಪಡೆದಿರುವವರು ಸೈನ್ಯದಳಗಳಿಗೆ ಸೇರಿಕೊಳ್ಳಲು ಹಲವು ರಿಯಾಯಿತಿಗಳನ್ನು ಕೊಡಲಾಗಿದೆ ಈಗಾಗಲೇ 90 ಮಂದಿ ಸೈನ್ಯದಳಗಳಿಗೆ ಸೇರಿಕೊಂಡಿರುತ್ತಾರೆ

ಹಣ ಕಾಸು

1940 41 ರಲ್ಲಿ ಸಂಸ್ಥಾನದ ಆದಾಯವು 4 75 ಕೋಟಿ ರೂಪಾಯಿಗಳಾಗಿತ್ತು ಪ್ರಸಕ್ತ ವರ್ಷದಲ್ಲಿ ಇದು 8 ಕೋಟಿಗೇರಿತು ವೆಚ್ಚವೂ ಸಹ ತಕ್ಕಹಾಗೇ ಹೆಚ್ಚುತ್ತಿದ ಹೆಚ್ಚಿನ ಆದಾಯವನ್ನು ಅಭ್ಯುದಯ ಕಾರ್ಯಗಳಿಗಾಗಿ ವಿನಿಯೋಗಿಸುತ್ತಿದೆ ಕೆಲವು ದೊಡ್ಡ ಕಾಮಗಾರಿಗಳನ್ನು ಯುದ್ಧಾನಂತರ ತೆಗೆದುಕೊಳ್ಳಲುದ್ದೇಶಿಸಿದ ಸಂಸ್ಥಾನದ ಆರ್ಥಿಕ ಸ್ಥಿತಿಯು ಯಾವ ರೀತಿಯಲ್ಲಿದ ಎನ್ನುವುದನ್ನು ಪರೀಕ್ಷಿಸಲು ಒಬ್ಬ ಆರ್ಥಿಕ ನಿಪುಣರನ್ನು ನೇಮಿಸಿದೆ

ಮೈಸೂರು ಇನ್‌ಫರ್ಮೇಷನ್ ಬಲೆಟಿನ್

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೭ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೭ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿ ವಿಲಾಸ	೨ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಸಂಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೬ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕಸಾಮ್ರಾಜ್ಯರಹಸ್ಯ	೬ ಆಣೆ
ಸನ್ಯಾಸಾಶ್ರಮವಿಮರ್ಶತತ್ವಸ್ಪಷ್ಟೀಕರಣ (೨ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ-ಶ್ರಾದ್ಧವಿಧಿ	೭ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ, ಚಿಕ್ಕಸೈಜು)	೮ ಆಣೆ
ವೀರಶೈವಮಹಾತ್ಮ್ಯ	೮ ಆಣೆ
ಬಸವಾಂತದಿನಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಯವರ ಭಾಷಣಗಳು (ಕನ್ನಡ)	೮ ಆಣೆ
ಸುಬೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ೨ನೆಯ ಆವೃತ್ತಿ)	೧। ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಶ್ರೀಕರಭಾಷ್ಯಂ (ಸಂಸ್ಕೃತ)	೧॥ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧॥ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ವರ್ಣದ ಫೋಟೋಗಳಿರುವುದು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಪದ್ಯ ವಿವರಣೆಯುಳ್ಳದ್ದು)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ ಸೂಕ್ಷ್ಮಾಗಮಗಳಿಂದ ಕೂಡಿದ ಪುಸ್ತಕ)	೩ ರೂ
ವೀರಶೈವಸಿದ್ಧಾಂತಸುಧಾಕರ	೩ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೬೪ ಪುಟ)	೮ ರೂ
A brief life sketch of Pandit Sri Kashinatha Shastriji (English)	4 As
The Philosophical Aspect of Virasaivism (English)	8 As
Speeches by Pandit Shri Kashinatha Shastriji (English)	12 As
लिंगधारणचन्द्रिका (संस्कृत	३
वीरशैवधर्म (मराठी)	६ आ
महानारायणोपनिषत् (वीरशैवभाष्य–संस्कृत	४ आ
सिद्धान्तशिखामणि (मूल)	८ आ
नंदिकेश्वरकारिका (संस्कृत)	२ आ

ಪ್ರಕಾಶಕರು ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜೀರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀ ಕಾಶೀನಾಥ ಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

.GISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾಸನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ।
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಳದವರಿಗೆ ೨ ರೂ ೪ ಆಣೆ — ಸರಸ್ಥಳದವರಿಗೆ ೩ ರೂ ವಿ. ಪಿ. ಖರ್ಚು ಸೇರಿ ೩ ರೂ ೬ ಆಣೆ

ಸಂಪುಟ ೧೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧ನೇ ಅಕ್ಟೋಬರ್ ೧೯೪೫ [ಸಂಚಿಕೆ ೨೦

ಕಾಶೀಕರ್ನಾಟಕ ಸಂಘದ ವಾರ್ಷಿಕಾಧಿವೇಶನ

ತಾ॥ ೧೬-೯-೪೫ ನೇ ದಿನ ಶ್ರೀ ಜಗದ್ಗುರು ವಿಶ್ವಾ ...ಧ್ಯ ಜ್ಞಾನಸಿಂಹಾಸನ ಮಹಾಮಠದಲ್ಲಿ ಹಿಂದೂ ವಿಶ್ವ...ದ್ಯಾಲಯದಲ್ಲಿ ಸ್ಥಾಪಿತವಾಗಿರುವ ಕರ್ನಾಟಕ ಸಂಘದ ...ರ್ಷಿಕಾಧಿವೇಶನವು ಅತ್ಯಂತ ವೈಭವದಿಂದ ನೆರವೇ...ತು ಸಂಘದ ಅಧ್ಯಕ್ಷರೂ ವಿಶ್ವವಿದ್ಯಾಲಯದಲ್ಲಿ ಅಗ್ರಿ...ಲ್ಚರ್ ಕಾಲೇಜಿನ ಪ್ರಿನ್ಸಿಪಾಲರೂ ಆದ ಡಾ। ಬಾದಾ...ಮಿಯವರು ಇಂಗ್ಲೀಷ್ ಪ್ರೊಫೆಸರರಾದ ಡಾ॥ ಎಂ ...ರ್ ಕುಲಕರ್ಣಿ ಕರ್ನಾಟಕ ಸಂಘದ ಭೂತಪೂರ್ವ ...ಧ್ಯಕ್ಷರಾದ ಡಾ॥ ಗೋಡಬೋಲೆ ಮುಂತಾದವರೊಡನೆ ...ಭವನಕ್ಕೆ ದಯಮಾಡಿಸಿ ಸಿಂಹಾಸನಾರೋಹಣ ...ಮಾಡುತ್ತಲೇ ಸಭಾಕಾರ್ಯಕ್ಕೆ ಆರಂಭವಾಯಿತು ...ಂಗಲಗೀತೆಯಾದಮೇಲೆ ಶ್ರೀ ರೌಡಕುಂದಿ ಸ್ವಾಮಿಗಳು ...ವು ರಚಿಸಿದ್ದ ಬಾಳಿಬೆಳಗಲಿ ನಮ್ಮ ಕರ್ನಾಟಕದ ...ಳೆ ಎಂಬ ಕವಿತೆಯನ್ನು ಓದಿದರು ಆಮೇಲೆ ...ಯನವೂ, ವೈರಾಗಕರ ಶ್ರೀ ಪಂಚಾಕ್ಷರ ಶಿವಾಚಾರ್ಯ...ದ "ಬುಲ್ ಬುಲ್" ವಾದ್ಯ ವಾದನವೂ ಸುಶ್ರಾವ್ಯ...ಗಿ ಜರುಗಿದವು ವಾಯ್ ಎಮ್ ಗಂಗಾಧರಪ್ಪ, ...ಎಸ್ ಸಿ ಇವರು ಕೆ ಎ ಪುಟ್ಟಪ್ಪನವರ ಕಲ್ಕಿ' ...ಬ ಆಖ್ಯಾನವನ್ನು ಹೃದಯದ್ರಾವಕವಾಗಿ ಅಭಿನಯಿ...ದರು ಆಮೇಲೆ ಸಂಘದ ಅಧ್ಯಕ್ಷರಾದ ಶ್ರೀಮಾನ್ ...॥ ಬಾದಾಮಿಯವರು ಪ್ರಾಸ್ತಾವಿಕ ಭಾಷಣ ಮಾಡುತ್ತ ...ಈ ಮಹಾಸಂಸ್ಥಾನ ಮಠದ ಪೂರ್ವಾಚಾರ್ಯರು ...ತ್ಯಂತ ಪ್ರಭಾವ ಶಾಲಿಗಳಾಗಿದ್ದು ಹುಮಾಯೂನ್, ...ಬ್ಬರ್, ಜಹಂಗೀರ್, ಷಹಜಹಾನ್, ಔರಂಗಜೇಬ ...ಮೊದಲಾದ ಮೊಗಲ್ ಚಕ್ರವರ್ತಿಗಳಿಂದ ಭೂದಾನ...ನ್ನು ಪಡೆದಿರುವುದು ಸಕಲ ಹಿಂದುಗಳಿಗೆ ಅಭಿಮಾನಾ...ದವಾದ ವಿಷಯವಾಗಿದೆಯೆಂದೂ ಸದ್ಯಃ ಪೀಠಾರೋ...ಹಣ ಮಾಡಿರುವ ಜಗದ್ಗುರುಗಳವರು ಕರ್ನಾಟಕ ...ಘಕ್ಕೆ ಪೋಷಕರಾಗಿರಲು ಒಪ್ಪಿದುದಕ್ಕಾಗಿ ನನ್ನ ...ಹಾರ್ದಿಕ ಸಂತೋಷವನ್ನು ವ್ಯಕ್ತಪಡಿಸುತ್ತೇನೆಂದೂ ...ಹೇಳಿದರಲ್ಲದೆ ವಿದ್ಯಾರ್ಥಿಗಳನ್ನು ದ್ದೇಶಿಸಿ "ಕನ್ನಡ ...ನುಡಿಯ ರಕ್ಷಣೆಯ ಭಾರವು ನಿಮ್ಮನ್ನೇ ಕೂಡಿದೆ ನೀವೆ...ರೂ ಈ ಜಗದಾಚಾರ್ಯರ ಆಶೀರ್ವಾದವನ್ನು ಪಡೆದು ...ಮ್ಮ ನಾಡನುಡಿ ಸಂಸ್ಕೃತಿಗಳನ್ನು ಅಚ್ಚಳಿಯದಂತೆ ...ಮಾಡಲು ಪ್ರಯತ್ನಿಸುತ್ತೀರೆಂದು ನಂಬಿದ್ದೇನೆ" ಎಂದು ...ಳಿ ಶ್ರೀ ಜಗದ್ಗುರುಗಳವರಿಗೆ ಭಾಷಣ ಮಾಡಲು ...ನ್ನವಿಸಿಕೊಂಡರು

ಆಮೇಲೆ ಶ್ರೀ ೧೦೮ ಜಗದ್ಗುರು ವೀರಭದ್ರ ಶಿವಾ...ಚಾರ್ಯ ಮಹಾಸ್ವಾಮಿಗಳವರು "ಭಾರತೀಯ ಭಾಷೆ...ಗಳೂ, ಕನ್ನಡವೂ" ಎಂಬ ವಿಷಯದ ಮೇಲೆ ವಿಮ...ರ್ಶಾತ್ಮಕವಾಗಿ ಅಪ್ಪಣೆ ಕೊಡಿಸುತ್ತ ಭಾಷೆಯೆಂದರೇನು? ...ದು ಮೊದಲು ಹುಟ್ಟಿದುದೆಲ್ಲಿ ಮತ್ತು ಹೇಗೆ? ಹುಟ್ಟು...ಗ ಒಂದೇ ಇದ್ದಿತೇ ಅಥವಾ ಹಲವು ಬಗೆಯಾಗಿ ...ತೆ? ಎಂಬ ಪ್ರಶ್ನೆಗಳನ್ನೆತ್ತಿ ವೇದಾಧಾರಗಳಿಂದ ವಿವೇ...ಚಿಸುತ್ತ ಸಂಸ್ಕೃತಕ್ಕೂ ಇತರ ಭಾಷೆಗಳಿಗೂ ಇರುವ ಸಂಬಂಧವೇನು? ಆರ್ಯ ದ್ರಾವಿಡ ಭಾಷೆಗಳಲ್ಲಿ ಅನ್ಯೋನ್ಯ ಸಂಬಂಧವಿದೆಯೆ? ಕನ್ನಡವು ಸ್ವತಂತ್ರವಾಗಿ ಹುಟ್ಟಿದುದೇ? ಅಥವಾ ಇತರ ಭಾಷೆಗಳ ಸಮ್ಮಿಶ್ರಣದಿಂದ ಹುಟ್ಟಿದುದೆ? ಕನ್ನಡಕ್ಕೂ ಸಂಸ್ಕೃತಕ್ಕೂ ಇರುವ ಸಂಬಂಧವೇನು? ಎಂಬ ಬಗ್ಗೆ ಸ್ಪಷ್ಟವಾಗಿ ಪ್ರತಿಪಾದಿಸುತ್ತ ಶಬ್ದೋತ್ಪತ್ತಿ ಭಾಷೇತಿಹಾಸಗಳ ವಿಷಯದಲ್ಲಿ ಕೆಲವು ವಿಮರ್ಶಕರಿಂದ ಪ್ರಮಾದಗಳು ಹೇಗೆ ಘಟಿಸಿರುವವೆಂಬುದನ್ನು ಸಪ್ರಮಾಣವಾಗಿ ವಿವರಿಸಿದರು

ಪ್ರಾಸಂಗಿಕವಾಗಿ ಹಿಂದೂಸ್ಥಾನೀ ಸಮಸ್ಯೆಯನ್ನೆತ್ತಿ ಗಾಂಧಿಯವರು ಉದಾತ್ತ ಭಾವನೆಯಿಂದ ಈ ಕಾರ್ಯವನ್ನು ಕೈಕೊಂಡಿದ್ದರೂ ಹಿಂದುಗಳ ಮೇಲೆ ಅನ್ಯಾಯವಾಗುತ್ತಿದೆಯೆಂದೂ ಪ್ರತಿಯೊಬ್ಬನೂ ತನ್ನ ನಾಡನುಡಿ ಸಂಸ್ಕೃತಿಗಳ ಅಭಿವೃದ್ಧಿಗಾಗಿ ಹೆಣಗುತ್ತಿರುವಾಗ ಹಿಂದೀಯರೂ ತಮ್ಮ ಭಾಷಾರಕ್ಷಣೆಗಾಗಿ ಹೆಣಗುತ್ತಿರುವದು ಸರಿಯೆಂದೂ, ನಾವು ಯಾವ ಒಂದೇ ಭಾಷೆಗೆ ಸಂಬಂಧಿಸಿಲ್ಲವಾದರೂ ಕನ್ನಡದ ವಿಷಯದಲ್ಲಿ ನಮಗಿರುವ ಪ್ರೀತ್ಯಭಿಮಾನಗಳು ಅಚ್ಚ ಕನ್ನಡಿಗರಿಗಿರುವದಕ್ಕಿಂತ ಕಡಿಮೆಯಾಗಿಲ್ಲವೆಂದೂ ಹೇಳಿ ಕನ್ನಡ ನಾಡನುಡಿ ಸಂಸ್ಕೃತಿಗಳ ಅಭಿವೃದ್ಧಿಯಾಗಲಿ ಎಂದು ಶುಭಾಶೀರ್ವಾದವನ್ನಿತ್ತರು ಆಮೇಲೆ ಜಗದ್ಗುರು ಪಂಚಾಚಾರ್ಯರ ಜಯಜಯಕಾರದೊಡನೆ ಸಭಾವಿಸರ್ಜನೆಯಾಯಿತು

ಪ್ರತ್ಯಕ್ಷದರ್ಶಿ

ಪುರಾಣ ಸಮಾಪ್ತಿ, ಬೆಳಗಾಂವಿ

ಬೆಳಗಾಂವಿನಲ್ಲಿರುವ ಶ್ರೀ ಜಗದ್ಗುರು ಸಿದ್ಧಲಿಂಗಾಶ್ರಮದಲ್ಲಿ ಪ್ರತಿವರ್ಷದಂತೆ ಈ ವರ್ಷವೂ ಗುರುವರ್ಯ ಶಿವಾಚಾರ್ಯರು ಹಿರೇಮಠ ಸುತ್ತಗಟ್ಟಿ ಇವರ ನೇತೃತ್ವದಲ್ಲಿ, ಹೇಮರಡ್ಡಿ ಮಲ್ಲಮ್ಮನ ಪುರಾಣವು ನಡೆಯಿತು ಪುರಾಣವನ್ನು ವೇ॥ ಪುರಾಣಪಟು ಗುರುಶಾಂತಶಾಸ್ತ್ರಿಗಳು ಹೊಳಗುಂದಿ ಇವರು ಹೇಳುತ್ತಿದ್ದರು ಶಾಸ್ತ್ರಿಗಳ ಅಸ್ಖಲಿತವಾಣಿಯು ಶ್ರೋತೃವೃಂದವನ್ನು ಸಂತೋಷಗೊಳಿಸುತ್ತಿತ್ತು ಈ ರೀತಿಯಾಗಿ ಭಾದ್ರಪದ ಶು॥ ೧೩ ವರೆಗೆ ನಡೆದು ತ್ರಯೋದಶಿ ದಿವಸ ಸಮಾಪ್ತಿಯಾಯಿತು ಆ ದಿವಸ, ಶ್ರೀಶೈಲಪ್ಪಾ, ಕಬ್ಬಿಣ, ಇಟಗೀ ವಕೀಲರು ಕನ್ನಡ ಹೆಣ್ಣುಮಕ್ಕಳ ಶಾಲೆಯ ಮಾಸ್ತರರಾದ, ಸೌ॥ ಗಂಗಮ್ಮನವರು ಮಾತನಾಡಿದರು ಮತ್ತು ಹೇಮರಡ್ಡಿ ಮಲ್ಲಮ್ಮನ ಚರಿತ್ರವನ್ನು ಕುಮಾರಿಯರು ನಾಟಕದಂತೆಮಾಡಿ ತೋರಿಸಿದರು ಅವರಿಗೆ ಸಂತೋಷಪಟ್ಟು, ವೇ॥ ರುದ್ರಯ್ಯನವರು ಹಿರೇಮಠ, ಮತ್ತು ಶ್ರೀ ಲಿಂಗಪ್ಪನವರು ಅಂಕಲಗಿ ಇವರು ಇನಾಮುಗಳನ್ನು ಕೊಟ್ಟರು ಆಮೇಲೆ ಆಶ್ರಮದ ಮಾಲಿಕರಾದ ಸುತ್ತಗಟ್ಟಿ ಸ್ವಾಮಿಗಳು ಭಾಷಣಮಾಡಿದರು ಬಾಲಭಜನಾಸಂಘದ ಬಾಲಕರ ಭಜನೆಯಿಂದ ಆಶ್ರಮಕ್ಕೆ ಬಹಳ ಶೋಭೆಯುಂಟಾಗಿತ್ತು ಅಲ್ಲಮ್ಮನವರು ತೇರದಾಳ ಇವರ ಗಾಯನವಾಯಿತು. ಅನಂತರ ಮಹಾಮಂಗಲವಾಗಿ ಸಭೆಯು ಮುಕ್ತಾಯವಾಯಿತು

ವಿಶ್ವನಾಥ ದುಂಡಯ್ಯ ಹಿರೇಮಠ ಸುತಗಟ್ಟಿ

ಭಾರತ ನೌಕಾದಳದ ವಿಸರ್ಜನೆ

ಭಾರತ ರಾಯಲ್ ನೌಕಾ ಪಡೆಯಲ್ಲಿ ಸೇನಾ ವಿಸರ್ಜನಾ ಕಾರ್ಯ ಈ ತಿಂಗಳಿಂದ ಆರಂಭವಾಗಿದೆ ಎಕ್ಸಿಕ್ಯೂಟಿವ್ ಲೈನಿನಲ್ಲಿರುವ ಸುಮಾರು ೬೩೦ ಮಂದಿ ಅಧಿಕಾರಿಗಳು ಸ್ಪೆಷಲ್ ಬ್ರಾಂಚಿನಲ್ಲಿರುವ ೧೬೪ ಮಂದಿ ಅಧಿಕಾರಿಗಳ ಒರಖಾಸ್ತು ಕೆಲಸ ಮೊದಲು ಕೈಗೊಳ್ಳಲ್ಪಡುತ್ತಲಿದೆ ೧೯೪೬ನೆಯ ಏಪ್ರಿಲ್ ತಿಂಗಳ ವೇಳೆಗೆ ಸುಮಾರು ೯೪೦ ರಿಸರ್ವ್ ಅಧಿಕಾರಿಗಳ ೯೦೦೦ ಸಾಮಾನ್ಯ ನಾವಿಕ ಜನವವರು ನೌಕಾಪಡೆಯಿಂದ ಹೊರಕ್ಕೆ ಒರುತ್ತಾರೆ

ಮಲಯದಲ್ಲಿ ಸ್ವಾತಂತ್ರ್ಯ ಸಂಗ್ರಾಮ

ಮಲೆಯದಲ್ಲಿ ವಾಸವಾಗಿರುವ ಚೀನೀಯರು ಭಾರತೀಯರು ಮತ್ತು ಮಲಯ ನಿವಾಸಿಗಳು ಏಕಪುರಷನಂತೆ ಕೆರಳಿ ಎದ್ದು ಮಲಯಾಕ್ಕೆ ಸ್ವತಂತ್ರ ಸರಕಾರ ಬೇಕೆಂದು ಆಂದೋಲನ ಪ್ರಾರಂಭಿಸಿದ್ದಾರೆ ಇದರ ಪರಿಣಾಮವಾಗಿ ನಾರ್ತ್ ಜೆಹೋರಿನಲ್ಲಿ ಹೊಡೆದಾಟ ಪ್ರಾರಂಭರಂಭವಾಗಿದೆ ಕು ಅವಾನ್ ಎಂಬ ಪೂರ್ವ ತೀರದ ಬಂದರು ಪಟ್ಟಣದಲ್ಲಿ ಜಪಾನಿಯರೊಡನೆ ಹೋರಾಡಿದ ಒಂದು ಪ್ರಜಾಸೈನ್ಯದ ಸಭೆ ನಡೆಯಿತು ಚೀನೀಯರು ಭಾರತೀಯರು ಮತ್ತು ಮಲಯಾ ನಿವಾಸಿಗಳ ಒಂದು ಸಂಯುಕ್ತ ಜನಾಂಗಗಳ ಸರಕಾರ ಮಲಯಾದಲ್ಲಿ ಏರ್ಪಡಬೇಕೆಂದೂ ಮತ್ತು ಪರಕೀಯರಾರಿಗೂ ಮಲಯಾದ ಮೇಲೆ ಅಧಿಕಾರ ನಡೆಸಲು ಅವಕಾಶವಿರಬಾರದೆಂದೂ ನಿರ್ಣಯ ಮಾಡಿದರು ಈ ನಿರ್ಣಯವನ್ನು ಬ್ರಿಟಿಷ್ ಸರಕಾರಕ್ಕೆ ಕಳುಹಿಸಲಾಯಿತು

ತಪ್ಪುತಿಳಿವಳಿಕೆಯಿಂದಲೇ ಬಾಂಕಾಂಗಿನಲ್ಲಿ ದಂಗೆ

ಮಿತ್ರ ವಿಜಯದ ಗೌರವಾರ್ಥವಾಗಿ ಚೀಣೀಯರು ರಾಷ್ಟ್ರಧ್ವಜಾರೋಹಣ ಮಾಡಲು ಪ್ರಯತ್ನಿಸಿದಾಗ ಸಯಾಮಿ ಅಧಿಕಾರಿಗಳು ಅಡ್ಡಿಬರಲಾಗಿ ನಡೆದ ದಂಗೆಗಳಿಗೆ ತಪ್ಪುತಿಳಿವಳಿಕೆಯೇ ಕಾರಣವೆಂದು ಸಯಾಮಿ ಪ್ರಧಾನಿ ಹೇಳಿದ್ದಾರೆ ಅವರೇ ಖುದ್ದಾಗಿ ವಿಚಾರವನ್ನೂ ತನಿಖೆ ಮಾಡುತ್ತಿದ್ದಾರೆ

ಅಟಾಮಿಕ್ ಶಕ್ತಿಯಿಂದ ಆಯುಷ್ಯಾಭಿವೃದ್ಧಿಕಾರ್ಯ

ಜಗನ್ನಾಶಕಶಕ್ತಿಯಾದ ಆಟಂ ಶಕ್ತಿಯನ್ನು, ಪ್ರತಿಯೊಬ್ಬರಿಗೂ ಶತಾಯುವನ್ನು ಉಂಟುಮಾಡಿಕೊಡಲು ಉಪಯೋಗಿಕೊಳ್ಳುವ ವಿಧಾನಗಳ ಸಂಶೋಧನೆಗೆ ಚಿಕಾಗೋ ವಿಶ್ವವಿದ್ಯಾನಿಲಯದವರು ತೊಡಗಿದ್ದಾರೆ

ಪಂಚಾಚಾರ್ಯಪ್ರಭಾ.

೧೯೪೫ನೆಯ ಅಕ್ಟೋಬರ್ ತಾ|| ೧ನೇ ಸೋಮವಾರ

ತತ್ತ್ವಮಸಿಮಹಾವಾಕ್ಯಾರ್ಥ ವಿಚಾರ

ತತ್ತ್ವಮಸಿ ಮಹಾವಾಕ್ಯವು ಲಿಂಗಾಂಗಸಾಮರಸ್ಯವನ್ನು ಬೋಧಿಸುವದು. ಲಿಂಗ ಅಂಗ ಸಾಮರಸ್ಯ ಎಂಬವು ಕ್ರಮದಿಂದ "ತತ್ತ್ವಮಸಿ" ವಾಕ್ಯದಲ್ಲಿರುವ ತತ್-ತ್ವಂ ಅಸಿ ಎಂಬ ಮೂರುಪದಗಳ ಅರ್ಥವನ್ನು ಕೂಡುವವು. 'ಲೀನಂ ಗಚ್ಛತೀತಿ ಲಿಂಗಂ' ಎಂಬ ವ್ಯುತ್ಪತ್ತಿಯಿಂದ ಚರಾಚರಾತ್ಮಕವಾದೀ ಪ್ರಪಂಚವು ಸರ್ವಕರ್ತೃವಾದ ಯಾವ ಬ್ರಹ್ಮವಲ್ಲಿಯೇ ತೋರಿ ಬ್ರಹ್ಮದಲ್ಲಿಯೇ ತಿರೋಹಿತವಾಗುವುದೋ ಅದುವೇ ಲಿಂಗವೆನಿಸಿಕೊಳ್ಳುತ್ತದೆ. ಈ ವಿಷಯದಲ್ಲಿ ಶಿಷ್ಯನು ಗುರುವಿನ ಬಳಿಗೆ ಹೋಗಿ ನಾನಾರೆಂದು ಪ್ರಾರ್ಥಿಸಲು ಗುರುವು ಅತನ ನಿಜಸ್ವರೂಪವನ್ನು ತಿಳಿಯಪಡಿಸುವುದಕ್ಕಾಗಿ ಮಾಡಬೇಕಾದ ಅಂಗಲಿಂಗ ಸಂಸ್ಕಾರರೂಪವಾದ ಶಿವದೀಕ್ಷೆಯನ್ನು ಮಾಡುವುದಕ್ಕಾರಂಭಿಸಿ, ಮೊದಲು ವಿಧ್ಯುಕ್ತವಾಗಿ ವೇಧಾದೀಕ್ಷೆಯನ್ನೂ ಬಳಿಕ ಮಂತ್ರದೀಕ್ಷೆಯನ್ನೂ ಆ ಮೇಲೆ ಕ್ರಿಯಾದೀಕ್ಷೆಯನ್ನೂ ಮಾಡುವನು. ಇಲ್ಲಿ ವೇಧಾದೀಕ್ಷೆಯೆಂದರೆ ಗುರುವು ಹಸ್ತಮಸ್ತಕಸಂಯೋಗವನ್ನು ಮಾಡಿ ಯೋಗಾಂಗವೆಂಬ ಬೇರೊಂದು ಹೆಸರುಳ್ಳ ಕಾರಣಶರೀರದಲ್ಲಿ ವಾಸವಾಗಿರುವ ಜೀವನಿಗೆ ಅತಿ ಸೂಕ್ಷ್ಮವಾದ ಭಾವಲಿಂಗವನ್ನು ಸಂಬಂಧಿಸುವುದೇ ವೇಧಾದೀಕ್ಷೆಯೆನಿಸುತ್ತದೆ. ಭೋಗಾಂಗವೆಂಬ ಬೇರೊಂದು ಹೆಸರುಳ್ಳ ಸೂಕ್ಷ್ಮಶರೀರದಲ್ಲಿ ವಿಹರಿಸುತ್ತಿರುವ ಜೀವನಿಗೆ ಪ್ರಾಣಲಿಂಗವನ್ನು ಸಂಬಂಧಿಸುವುದೇ ಮಂತ್ರದೀಕ್ಷೆಯೆನಿಸುತ್ತದೆ. ತ್ಯಾಗಾಂಗವೆಂಬ ಬೇರೊಂದು ಹೆಸರುಳ್ಳ ಸ್ಥೂಲಶರೀರದಲ್ಲಿ ವಿಹರಿಸುವ ಜೀವನಿಗೆ ಇಷ್ಟಲಿಂಗವನ್ನು ಸಂಯೋಜಿಸುವುದೇ ಕ್ರಿಯಾದೀಕ್ಷೆಯೆನಿಸುತ್ತದೆ. ಹೀಗೆ ಮೂರು ವಿಧವಾದ ದೀಕ್ಷೆಗಳನ್ನು ಮಾಡಿ ಮೂರು ದೇಹಗಳಿಗೆ ಲಿಂಗವನ್ನು ಧರಿಸಿದ ಮೇಲೆ ಕ್ರಮದಿಂದ ಆ ಜೀವನನ್ನು ಆವರಿಸಿರುವ ಅನಾದಿ ಮಲಗಳು ನಷ್ಟವಾಗುವವು.

ತುಷಕಂಬುಕಕಿಂಶಾರುಕಮುಕ್ತಂ ವೀಜಂ ಯಥಾಂಕುರಂ ಜನಯತಿ | ನೈವ ತಥಾಣವಮಾಯಾಕರ್ಮವಿಮುಕ್ತೋ ಭವಾಂಕುರಂ ಹ್ಯಾತ್ಮಾ ||

ಎಂಬ ಪ್ರಮಾಣಾನುಸಾರವಾಗಿ ಕಿಂಶಾರುಕ ತುಷ ಕಂಬುಕ ಎಂದು ಮೂರು ತರದ ಹೊಟ್ಟು ಅಕ್ಕಿಯ ಮೇಲಿರುತ್ತದೆ. ಇವುಗಳಲ್ಲಿ ಬಹುಸೂಕ್ಷ್ಮರೂಪದಿಂದ ಹತ್ತಿರುವ ಹೊಟ್ಟಿಗೆ ಕಂಬುಕವೆಂದು ಹೆಸರು. ಅದರ ಮೇಲೆ ಆವರಿಸಿರುವ ಸ್ವಲ್ಪ ಒರಟಾದ ಹೊಟ್ಟಿಗೆ ತುಷವೆಂದು ಹೆಸರು. ಮೇಲೆ ದಪ್ಪವಾಗಿರುವ ಹೊಟ್ಟಿಗೆ ಕಿಂಶಾರುಕವೆಂದು ಹೆಸರು. ಈ ಮೂರು ಪದರುಗಳು ಅಕ್ಕಿಯನ್ನು ಆವರಿಸಿರುವವರೆಗೂ ಆ ಅಕ್ಕಿಯಲ್ಲಿ ಅಂಕುರಿಸುವ ಶಕ್ತಿಯು ಕಂಡುಬರುತ್ತದೆ. ಅವು ಇಲ್ಲದಿದ್ದರೆ ಅಂಕುರೋತ್ಪತ್ತಿಯಾಗುವದಿಲ್ಲ. ಅದರಂತೆ, ಈ ಆತ್ಮನನ್ನು ಆಣವಮಾಯೀಯ ಕಾರ್ಮಿಕ ಎಂಬ ಮೂರು ಮಲಗಳು ಅನಾದಿಕಾಲದಿಂದ ಆವರಿಸಿರುತ್ತವೆ. ಈ ಮಲಾವೃತವಾದ ಜೀವಾತ್ಮನು ಪುಣ್ಯಪಾಪಾನುಸಾರವಾಗಿ ಅನೇಕ ಜನ್ಮಗಳನ್ನು ಧರಿಸುತ್ತ ಬಂದಿರುವನು. ಎಂದು ಈ ಮೂರು ಮಲಗಳು ನಾಶಹೊಂದುವವೋ ಅಂದೇ ಆತ್ಮನು ಪರಿಶುದ್ಧನಾಗಿ ಆ ಬ್ರಹ್ಮದ ಸ್ವರೂಪವನ್ನೇ ಪಡೆಯುತ್ತಾನೆ. ಮುಂದೆ ಅವನಿಗೆ ಸಂಸಾರಸಂಬಂಧವೇ ಇರುವದಿಲ್ಲ.

ದೀಕ್ಷಾತ್ರಯೇಣ ನಿರ್ದಗ್ಧ್ವಾ ಲಿಂಗತ್ರಯಮುಪಾದಿಶತ್ || ಎಂಬ ಆಗಮಪ್ರಮಾಣಾನುಸಾರವಾಗಿ ವೇಧಾದೀಕ್ಷೆಯಿಂದ ಕಾರಣಶರೀರವೃತ್ತಿಯಾದ ಆಣವಮಲವು ನಾಶವಾಗುತ್ತದೆ. ಮಂತ್ರದೀಕ್ಷೆಯಿಂದ ಸೂಕ್ಷ್ಮಶರೀರವೃತ್ತಿಯಾದ ಮಾಯೀಯ ಮಲವು ನಾಶವಾಗುತ್ತದೆ. ಕ್ರಿಯಾದೀಕ್ಷೆಯಿಂದ ಕಾರ್ಮಿಕಮಲವು ನಾಶವಾಗುತ್ತದೆ. ಹೀಗೆ ಶಿಷ್ಯನ ಆತ್ಮವು ಪರಿಶುದ್ಧಿಗೊಂಡ ಮೇಲೆ ಗುರುವು "ತತ್ತ್ವಮಸಿ" ಎಂಬ ವೇದದ ಮಹಾವಾಕ್ಯಾನುಸಾರದಿಂದ ಲಿಂಗಾಂಗಸಾಮರಸ್ಯವನ್ನು ಉಪದೇಶಮಾಡುವ ರೀತಿಯನ್ನು ಪರಿಶೀಲಿಸಿದರೆ ತತ್ತ್ವಮಸಿ ಮಹಾವಾಕ್ಯಾರ್ಥದ ರಹಸ್ಯವು ಸ್ಪಷ್ಟವಾಗುತ್ತದೆ. ಅಂ ಗಚ್ಛತೀತಿ ಅಂಗಂ ಅಂದರೆ ಪರಮಾತ್ಮನನ್ನು ಸೇರುವ ಸ್ವಭಾವವುಳ್ಳವನಾದುದರಿಂದ ಜೀವನಿಗೆ ಅಂಗವೆಂದು ಹೆಸರು. ಲಿಂಗ ಅಂಗ ಎಂಬ ಶಬ್ದಗಳು ಕ್ರಮದಿಂದ ಬ್ರಹ್ಮ ಜೀವ ಎಂಬ ಅರ್ಥವನ್ನೂ ಸಾಮರಸ್ಯವೆಂಬ ಪದವು ಅಸಿ ಪದವಾಚ್ಯವಾದ ಐಕ್ಯವನ್ನೂ ಬೋಧಿಸುತ್ತವೆ. ಈ ವಿಷಯದಲ್ಲಿ

ಲೀನಂ ಗಚ್ಛತಿ ಯಸ್ಮಿನ್ ... ತಲ್ಲಿಂಗಮಿತಿ ಸನ್ಮಾತ್ರಂ ... | ಅಸಿ ... ಬ್ರಹ್ಮ ಸನ್ಮಾತ್ರಂ ... ತೇ ... ರೂಪೋ ಇತಾ ಜೀವಸಂಸಾರವೃತ್ತಿಭಾಕ್

ಇತ್ಯಾದಿ ಅನಂತಪ್ರಮಾಣಗಳು ಜಾಗರೂಕಗಳಾಗಿರುತ್ತವೆ. ಅಂಗವೆಂದರೆ ಶರೀರವೆಂದರ್ಥವಾಗುವುದಲ್ಲದೆ ಆ ಶರೀರದಲ್ಲಿರುವ ಜೀವವೆಂದು ಅರ್ಥವಾಗದಿರುವುದರಿಂದ ಸ್ಥೂಲವಾದ ಅಂಗಕ್ಕೂ ಸೂಕ್ಷ್ಮವಾದ ಲಿಂಗಕ್ಕೂ ಏಕತೆಯೆಂದು ... ಶಂಕೆಯುತ್ಪನ್ನವಾಗುವುದೆಂದರೆ ಅದು ಸಮಂಜಸವಾದುದಲ್ಲ. ಏಕೆಂದರೆ —

ಯ ಆತ್ಮನಿ ತಿಷ್ಠನ್ ... ಯಸ್ಯಾತ್ಮಾ ಶರೀರಂ |

ಇತ್ಯಾದಿ ಅಂತರ್ಯಾಮಿ ಬ್ರಾಹ್ಮಣದಲ್ಲಿ ಪೃಥಿವಿ ಮೊದಲು ಮಾಡಿಕೊಂಡು ಜೀವಾತ್ಮಪರ್ಯಂತವಾಗಿರುವ ಸಕಲವಸ್ತುಗಳೂ ಲಿಂಗಶಬ್ದವಾಚ್ಯವಾದ ಬ್ರಹ್ಮದ ಶರೀರವಾಗಿರುವುದರಿಂದ ಜೀವನೂ ಸಹ ಪರಮಾತ್ಮನ ಅಂಗವೆಂದು ಸಿದ್ಧವಾಗುವುದು. ಆದುದರಿಂದ 'ತತ್ತ್ವಮಸಿ' ಎಂಬ ಮಹಾವಾಕ್ಯವು ಲಿಂಗಾಂಗಸಾಮರಸ್ಯವನ್ನು ಬೋಧಿಸುವುದೆಂಬುದನ್ನು ತಿಳಿದು ಅದರಂತೆ ಆಚರಿಸಿ ಕೈವಲ್ಯಸುಖವನ್ನು ಅನುಭವಿಸುವುದು ವೀರಶೈವರ ಮುಖ್ಯ ಧರ್ಮವಾಗಿದೆ.

ವರ್ತಮಾನಸಂಗ್ರಹ

ಜ|| ಮೆಕ್ ಆರ್ಥರರಿಗೆ ಪೂರ್ಣಾಧಿಕಾರ ಕೊಡಲಾಗಿದೆ

ಜಪಾನಿನ ಚಕ್ರವರ್ತಿಗಳನ್ನು ಯಾವ ಕಾಲದಲ್ಲಾದರೂ ತೆಗೆದುಹಾಕಲು ಜನರಲ್ ಮೆಕ್ ಆರ್ಥರರಿಗೆ ಅಧಿಕಾರ ಕೊಡಲಾಗಿದೆಯಂತೆ! ಇದೂ ಅಲ್ಲದೆ ತಮ್ಮ ಎಲ್ಲ ಆಜ್ಞೆಗಳನ್ನೂ ಪರಿಪಾಲಿಸಲು ಅವಶ್ಯಕವಿದ್ದಲ್ಲಿ ಬಲ ಉಪಯೋಗಿಸಲು ಅವರಿಗೆ ಸರ್ವಾಧಿಕಾರ ಕೊಡಲಾಗಿದೆಯಂತೆ! "ಜಪಾನಿನ ಸರ್ಕಾರ ಮತ್ತು ಚಕ್ರವರ್ತಿಗಳ ಅಧಿಕಾರ ಮಿತ್ರಪಕ್ಷದ ಸುಪ್ರೀಂ ಕಮ್ಯಾಂಡರ ಅಧೀನದಲ್ಲಿದೆ. ನಿಮ್ಮ ಅಧಿಕಾರ ಚಲಾವಣೆಯನ್ನು ನಿಮಗೆ ತೋರಿದಂತೆ ಚಲಾಯಿಸಬಹುದು" ಎಂದು ಅಧ್ಯಕ್ಷ ಟ್ರೂಮನ್ನರಿಂದ ಜ. ಮೆಕ್ ಆರ್ಥರರಿಗೆ ಸಂದೇಶ ಬಂದಿದೆ.

ಯೂರೋಪಿನಲ್ಲಿ ಆಹಾರ ಪರಿಸ್ಥಿತಿ ಭೀಕರವಾಗಿದೆ

ಯೂರೋಪಿನಲ್ಲಿ ಭೀಕರ ಆಹಾರಕ್ಷಾಮವು ತಲೆದೋರಿ, ಬರುವ ಚಳಿಗಾಲದಲ್ಲಿ ೩೦ ಲಕ್ಷ ಜನರು ಆಹಾರವಿಲ್ಲದೆ ಸಾಯುವ ಪರಿಸ್ಥಿತಿ ಒದಗಿದೆಯೆಂದು ಬ್ರಿಟಿಷ್ ಆಹಾರ ಪ್ರವೀಣರು ತಿಳಿಸಿದ್ದಾರೆ. ಯೂರೋಪಿನ ಜನಗಳಿಗೆ ಆಹಾರ ಒದಗಿಸುವ ಕಾರ್ಯವು ಅಗಾಧವಾಗಿದೆ. ೬೦ ಲಕ್ಷ ಟನ್ ಗೋಧಿ ಮತ್ತು ೧೦ ಲಕ್ಷ ಟನ್ ಸಕ್ಕರೆಯನ್ನು ಹೊರಗಿನಿಂದ ತರಿಸಬೇಕಾಗಿದೆ. ಇಷ್ಟು ಆಹಾರ ಬಂದರೂ ಕೂಡ, ಭೀಕರ ಸ್ಥಿತಿಯನ್ನು ನಿವಾರಿಸಲು ಸಾಧ್ಯವಿಲ್ಲದಂತಾಗಿದೆಯಂತೆ! ಯೂರೋಪು ಹಿಂದಿನ ಸ್ಥಿತಿಗೆ ಬರಬೇಕಾದರೆ ಇನ್ನೂ ೧೦ ವರ್ಷಗಳ ಕಾಲ ಬೇಕಾಗುವುದಂತೆ!

ಅಟಾಮಿಕ್ ಶಕ್ತಿ ವೃದ್ಧಿಪಡಿಸಲು ಸಮಿತಿ ರಚನೆ

ಅಟಾಮಿಕ್ ಶಕ್ತಿಯ ವಿಚಾರದಲ್ಲಿ ಸಂಶೋಧನೆ ಮುಂದುವರಿಸಿ ಇನ್ನೂ ಅಭ್ಯುದಯಗೊಳಿಸುವುದಲ್ಲದೆ ಅದನ್ನು ಹತೋಟಿಯಲ್ಲಿಟ್ಟುಕೊಳ್ಳುವ ಬಗ್ಗೆ ೧೨ ಜನ ಸದಸ್ಯರನ್ನೊಳಗೊಂಡ ಒಂದು ಜಂಟಿ ಸಮಿತಿ ನೇಮಕ ಮಾಡಬೇಕು ಎಂಬ ನಿರ್ಣಯ ಅಮೇರಿಕನ್ ಸೆನೆಟ್ ಸಭೆಯಲ್ಲಿ ಅಂಗೀಕೃತವಾಯಿತು.

ರಷ್ಯನ್ ಪಡೆಗಳ ವಿಸರ್ಜನೆ

ಮುಂಚೂಣಿ ಪ್ರದೇಶದಲ್ಲಿಲ್ಲದ ಇತರ ಕಡೆಗಳಲ್ಲಿರುವ ೩೦ ವರ್ಷಗಳಿಗೆ ಮೇಲ್ಪಟ್ಟ ರಷ್ಯನ್ ಸೈನಿಕರನ್ನು ಈ ವರ್ಷಾಂತ್ಯದೊಳಗಾಗಿ ಸೈನ್ಯದಿಂದ ತೆಗೆಯಲಾಗುತ್ತದೆ. ಯುದ್ಧಾನಂತರ ಪುನರ್‌ರಚನಾ ಉದ್ಯೋಗಗಳಲ್ಲಿ ಈ ರೀತಿ ತೆಗೆಯಲ್ಪಟ್ಟ ಹೆಂಗಸರಿಗೂ ಗಂಡಸರಿಗೂ ಸೇರಿಕೊಳ್ಳಲು ಅವಕಾಶ ಮಾಡಲಾಗುತ್ತದೆ ಎಂದು ರಷ್ಯನ್ ಸಿರೂಪ ತಿಳಿಸಿದೆ.

೯ ಜನ ಫ್ರೆಂಚರ ಅಪಹಾರ

ಇಂಡೋ ಚೀಣದ ರಾಜಧಾನಿಯಲ್ಲೀಗ ಫ್ರೆಂಚ್ ಅಧಿಕಾರ ಪ್ರಾರಂಭವಾಗಿ ಪರಿಸ್ಥಿತಿ ತಹಬಂದಿಗೆ ಬಂದಿದೆ. ಬಂಡಾಯಗಾರರು ೯ ಜನ ಫ್ರೆಂಚರನ್ನು ಅಪಹರಿಸಿಕೊಂಡು ಹೋಗಲಾಗಿದೆ. ಜಪಾನಿ ಹತೋಟಿಯಲ್ಲಿರುವ ಪ್ರದೇಶಗಳಲ್ಲಿ ಈ ಘಟನೆಗಳು ನಡೆಯುತ್ತಿರುವುದು. ಜಪಾನಿ ಸೇನಾಪತಿಗಳನ್ನು ಮಿತ್ರಸೇನಾನಿ ಕರೆಸಿ, ಮಿತ್ರರ ಆಜ್ಞೆಗಳನ್ನು ಸರಿಯಾಗಿ ಪಾಲಿಸದೇ ಇರುವ ಪ್ರಯುಕ್ತ ಆತ್ಮೀಯ ... ತಿಳಿಸಿದ್ದಾರೆ.

ಯುದ್ಧಕ್ಕೆ ಜಪಾನಿ ಚಕ್ರವರ್ತಿಗಳ ವಿರೋಧ

ಜಪಾನಿನ ಚಕ್ರವರ್ತಿಗಳಾದ ಹಿರೋಹಿಟೋರವರು ಅಮೇರಿಕದ ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಯ ಬಾತ್ಮೀದಾರರಿಗೆ ಭೇಟಿಕೊಟ್ಟು ಈ ರೀತಿ ತಿಳಿಸಿದ್ದಾರೆ: "ನಾನು ಯುದ್ಧವನ್ನೇ ವಿರೋಧಿಸುತ್ತೇನೆ. ಜನರಲ್ ಟೋಜೋರವರ ತತ್ತ್ವವನ್ನು ವಿರೋಧಿಸಿದುದಲ್ಲದೆ ಪರ್ಲ್ ಬಂದರಿನಮೇಲೆ ಹೇಡಿಗಳ ಹಾಗೆ ಧಾಳಿಮಾಡಿದುದನ್ನು ಖಂಡಿಸುತ್ತೇನೆ. ಬ್ರಿಟಿಷ್ ದೊರೆಗಳಂತೆಯೇ ತಾವೂ ಜಪಾನಿನಲ್ಲಿ ಪ್ರಜಾಪ್ರಭುತ್ವದ ದೊರೆಗಳಾಗಬೇಕೆಂದು ಆಶಿಸುತ್ತೇನೆ."

ಜಾವಾದಲ್ಲಿ ಗೊಂದಲ

ಜಾವಾದ ರಾಷ್ಟ್ರೀಯ ಪಕ್ಷದವರು ದೊಂಬಿ ಎಬ್ಬಿಸಿದ್ದಾರೆ. ಅದರ ನಾಯಕನಾದ ಡಾ| ಸೋಕಿರ್ನೋರವರು ಸರ್ಕಾರವನ್ನು ತಮ್ಮ ವಶಪಡಿಸಿಕೊಂಡಿದ್ದಾರೆ. ೧೭ ಜನ ಸದಸ್ಯರನ್ನೊಳಗೊಂಡ ಒಂದು ಮಂತ್ರಿಮಂಡಲವನ್ನು ರಚಿಸಿ ತಾವೇ ಸರ್ವಾಧಿಕಾರಿಯಾಗಿದ್ದಾರೆ. ಅಡ್ಮಿರಲ್ ಲಾರ್ಡ್ ಲೂಯಿ ಮೌಂಟ್ ಬ್ಯಾಟನ್‌ರವರು ಇನ್ನೂ ಜಪಾನಿ ಆಡಳಿತಗಳಲ್ಲಿರುವ ಜಾವಾ ಅಧಿಕಾರವನ್ನು ಯಾರಿಗೂ ವಶಪಡಿಸಕೂಡದೆಂದು ಜಪಾನೀಯರಿಗೆ ಆಜ್ಞೆ ಮಾಡಿದ್ದಾರೆ. ಈ ಡಚ್ ಕಾಲೋನಿಯಲ್ಲಿ ಬಲವಾದ ರಾಷ್ಟ್ರೀಯಪಕ್ಷ ತಲೆ ಎತ್ತಿರುವುದರಿಂದ ಪೆಸಿಫಿಕ್ಕಿನಲ್ಲಿ ಬಿಕ್ಕಟ್ಟಿನ ಪರಿಸ್ಥಿತಿ ಒದಗಿದೆ. ಡಾ|| ಸೋಕಿರ್ನೋರವರು ಹಿಂದೆ ಜಪಾನೀಯರು ಜಾವಾವನ್ನು ಆಕ್ರಮಿಸಿದಾಗ್ಗೆ ಅವರಿಗೆ ಸಹಾಯ ಮಾಡಿದ್ದಾರಂತೆ! ನೆದರ್‌ಲೆಂಡ್ ಈಸ್ಟ್ ಇಂಡೀಸ್‌ನ ೭ ಕೋಟಿ ಜನಗಳ ಪೈಕಿ ಶೇಕಡ ೯೦ ರಷ್ಟು ಜನರು ರಾಷ್ಟ್ರೀಯ ಪಕ್ಷಕ್ಕೆ ಸೇರಿದವರೆಂದೂ ತಾವು ಹಾಲೆಂಡಿನಿಂದ ಪ್ರತ್ಯೇಕವಾಗಿ ಸ್ವತಂತ್ರರಾಗಿ ಬಾಳಬೇಕೆಂದೂ ಅದಕ್ಕಾಗಿ ಸಂಯುಕ್ತ ಸಂಸ್ಥಾನಗಳಿಗೆ ತಾವು ಮನವಿಮಾಡಿಕೊಂಡಿರುವುದಾಗಿಯೂ ಅವರು ತಿಳಿಸಿದ್ದಾರೆ.

PRIVILEGES COMMITTEE REPORT

3—7—1944

I

Dear Sir,

Motion for the acceptance of the Report of the Committee of Privileges—

After the discussions were over and after the Law Secretary spoke on this subject and opposed it and raised legal objections the day before yesterday* in the Council, the procedure somehow took an unexpected turn. The President was pleased to read out a long typed statement. Much of it seemed to relate to other matters, and towards the end of it he announced his decision which he seemed to have already recorded in this typed statement beforehand. His decision was that the Report and the discussions thereon would be sent to the Dewan for orders.

2. The President was not pleased to say under what Rule or provision of law he adopted this procedure and in my opinion such a procedure is not contemplated either under the Rules or the Standing Orders. Constitutional procedure required that the whole subject including the legal and constitutional objections raised by the members should have been left to the decision of the House and it should have been allowed to apply its judicial mind and pronounce its verdict in its collective voice. It appears to me that the law confers the privilege of deciding such questions only on the House, and I am constrained to state that this fundamental privilege was not allowed to be exercised by the House. The motion had been moved and discussed to some extent at the last session and before the discussion could proceed further the Leader of the House frankly stated his embarrassment to freely express his views. He also stated his reasons for the said embarrassment. However, he distinctly pointed out (1) that "the recommendations of the Committee had gone much farther than the province of the Committee or the purposes for which it had been constituted" (2) He doubted the competency of the House to add new privileges to those already existing and contended that the question of privileges had been decided by the Mysore Act promulgated under the prerogative of His Highness the Maharaja. (3) He also added that the recommendations were not in order and should not be accepted. These are undisputed facts and are fully supported by the authorised printed proceedings (p. 206). However he suggested a postponement of the subject as it required "much careful consideration" and with the unanimous consent of the House it was postponed to this Session (p. 210).

3. On 1-7-1944 the subject was further discussed with a certain amount of heat in the course of the debate. The Leader of the House again urged his technical objections and the Law Secretary also raised legal objections against the adoption of the Report. I studied the subject in great detail and obtained English Reports from the High Court Library to examine the various legal implications. After giving my careful attention to the subject, I pointed out how momentous questions of legal and constitutional proprieties of compelling importance were involved. I also felt embarrassed to freely express my views for the reasons stated by the Leader of the House at the last session. I spoke with moderation and restraint while explaining the legal and constitutional objections which, I maintain, are of an unanswerable character. I quoted unimpeachable authorities with chapter and verse, in support of my objections and no member of the House refuted them or quoted any authority to the contrary.

4. But all these fundamental questions stand undecided and I wonder why the House was not allowed to decide them. Legal objections and legal defects always affect the validity of the proceedings of any Committee or Meeting. They are incurable, and even the unanimous opinion of all the members cannot validate them. This is a proposition which admits of no difference of opinion, and it is not open to a Law making Body to take a contrary view and try to uphold what is obviously *Ultra vires* and illegal. The supremacy of the Rule of Law must be upheld and nobody should go on, though, throw it into the shade. When even a postponement of the subject required the unanimous consent of the House in the opinion of the Chair (p. 210), how can it be said that the decision of the subject itself can be taken away from the jurisdiction of the House? It was a subject actually in the possession of the House, and I do not think that it was competent for anybody else to deprive the House of its undoubted right to deal with the subject and decide it.

5. It appears to me that the procedure adopted is entirely wrong and unconstitutional, and I request you to revise it and place the whole subject before the House for its decision. I am prepared to fully convince you and the House in the matter. I have a great deal more to say in support of my view.

Yours sincerely,

D. H. CHANDRASEKHARAIAH Esq., (Sd.) P. MAHADEVAYYA
B.A., LL.B.,
President
Mysore Legislative Council,
Public Offices, Bangalore

[2-7-1944 happened to be a Sunday]

II

No 79 L.C. *Mysore Legislative,*
Bangalore Dated the 4th July 1944.

Dear Sir,

Your letter regarding the debate that took place on 1st July 1944 was perused by the President. With reference to the same, I am directed to state that there is no need to re-open the debate as suggested therein. The procedure adopted in closing the debate was perfectly constitutional and in accordance with rules, and any member who felt otherwise was at liberty to raise his objection at the time.

I am to add that the President feels that the insinuations appearing in your letter should have been avoided.

I have the honour to be,
Sir,
Your most obedient servant,
(Sd.) B. K. RAMAKRISHNAIYA,
Secretary,
Mysore Legislative Council

RAJADHARMAPRAVINA
DIWAN BAHADUR P. MAHADEVAYYA
B.A., B.L.
Member Legislative Council Bangalore

III

5—7—1944.

Dear Sir,

My letter was handed to you at 4-35 p.m. on 3—7—1944. I heard nothing about it the whole of yesterday until the rising of the House at 5-40 p.m. But I found the Secretary's reply on my table at about 8-30 in the night when I returned home.

2. The reply shows that the vital question raised in my letter has been misunderstood and I am very sorry to say so. The Secretary says that "there is no need to re-open the debate as suggested therein." I have not at all requested you to re-open the debate and I have made no such suggestion in my letter and I hasten to correct this misapprehension. What I have pointed out is that after the motion was put by the President for "the determination of the Council" under S.O. 22, and was discussed by the members in two successive sessions the Council did not apply its judicial mind to the question as contemplated in the Standing Order, and the Council did not pronounce its decision in its collective voice as it ought to have done. This is the normal procedure laid down by law, and the reply does not state what and on why principle it has been departed from in this particular instance.

3. The right to pronounce its decision on the motion placed before it which was entirely in the possession of the House, constitutes the most fundamental existing privilege which the Law has conferred on the Council, and it was a wonder to me why such a valuable privilege was not exercised by the House on such a momentous question, or why it was not called upon to proceed to give its verdict. This is the issue raised by me and it was upon this issue that I expected to receive some light. But the point has been entirely missed, and the Secretary states that the procedure adopted in closing the debate was constitutional though I have not at all objected to the closing of the debate.

4. I may be permitted to point out with due deference that the function of the President or the Chairman of any Meeting or Legislative Body is to regulate the conduct of Business and to see that discussions and deliberations are carried on in an orderly manner. The President is not the Council and he himself cannot decide what the Council has to determine. The law does not allow him to function as the Legislature. His decision cannot be deemed to be the Council's decision, and even the Speaker of the British House of Commons cannot claim to possess such a power. Such a procedure is not contemplated by the Rules or Standing Orders, and that is why I invited attention to this aspect in part two of my letter. But I am not favoured with an answer.

5. My letter contains no insinuations and I am sorry that you should have thought otherwise. I have only made an honest statement of facts, which is irrefutable, and its logical inference seems to be inescapable. As already pointed out in my letter, the closing of the debate and the President's decision on the Motion were contained in a single document, which was read out as such. The closing remarks on the debate were immediately followed by the President's announcement of his decision. I am painfully constrained to state that, by so doing, the President did the very thing which, in my humble opinion, he ought not to have done according to unimpeachable authorities on the subject

e.g. (1) 10 House of Lords, p. 301,
(2) 80, King's Bench, 235,
(3) 2 King's Bench 375, 368,
(4) 28, L. J. Queen's Bench, 316;
(5) "Law of Meeting", by Blackwell, p. 31.
(6) I. L. R., 46, Madras, 12[?]

6 I have also shown that no President or Chairman can claim to be above law, and that the legality of his actions and methods of procedure can be questioned It they are found to be wrong, they are not binding under the law

(1) Blackwell's "Law of Meetings" p 36
(2) Davar's "Law and Procedure of Meetings" p 167
(3) National Dwellings Society *vs* Sykes
3 Chancery, P 159

7. Again, when a specific Rule framed for the purpose expressly provides, in imperative language that it is for the Council to decide the question, I think the matter must be deemed to be conclusive beyond the shadow of a doubt R 80 (5) of the Rules framed by Government on 6-1-1943 fully supports this proposition and it cannot be reasonably contended to the contrary The decision of the President must therefore be held to be both illegal and *ultra vires*

8 Legal objections and legal defects always affect the validity of the proceedings of any Meeting The proceedings become void and incurable, and they are incapable of ratification even with the unanimous consent of the whole House according to the famous decision in Ashbury Ry Co *vs* Riche 1875 House of Lords p 653, which is followed in —

(1) 1912, 2, Chancery, 183
(2) 1914 Appeal cases, 398
(3) 1917, Appeal cases, 607,
(4) 1923, Clarkson *vs* Davis, 92, L C (P C), 27
(5) 1931, Madras Law Journal, 724 at p. 734.

It will thus be seen that I was not wrong in saying that a Law-making Body should uphold the supremacy of the Rule of Law, and that nobody should do anything to throw it into the shade

I once again request you to revise your action and place the question before the Council for its decision according to Law The imperative provision contained in R. 80 (5) admits of no doubt whatever and if you still entertain any doubt I request you to submit the question for the decision of the Dewan under R 3 of the Legislative Rules

Your sincerely,
(Sd) P MAHADEVAYYA

D H CHANDRASEKHARIAH, Esq
B A, LL B,
President
Legislative Council

N B —The facts stated in Letters I and III stand uncontradicted up to the present moment And the reports published by "The Hindu, Indian Express", and "The Daily Post" of 3—7—1944 fully support the statement of facts made in my Letters

—P M

ಬ್ರಿಟಿಷ್ ಘೋಷಣೆ ಬಗ್ಗೆ ಪೆಥಿಕ್ ಲಾರೆನ್ಸ್‌ರ ಹೇಳಿಕೆ

ಭಾರತದ ಬಗ್ಗೆ ಬ್ರಿಟಿಷ್ ಸರಕಾರದ ಘೋಷಣೆಯನ್ನು ಕುರಿತು ಭಾರತೀಯ ರಾಷ್ಟ್ರೀಯ ಆವರಣದಿಂದ ಅಂದರೆ ಕಾಂಗ್ರೆಸ್ಸಿನಿಂದ ಬಂದಿರುವ ಟೀಕೆಗಳಿಗೆ ಇಂಡಿಯಾ ಸೆಕ್ರೆಟರಿ ಆಫ್ ಸ್ಟೇಟ್ ಲಾರ್ಡ್ ಪೆಥಿಕ್ ಲಾರೆನ್ಸ್‌ರವರು ಉತ್ತರಕೊಡುತ್ತಾ " ನಮ್ಮ ಈ ಘೋಷಣೆಯೇ ಭಾರತದ ಬಿಕ್ಕಟ್ಟಿಗೆ ಪರಿಹಾರವಲ್ಲ ಅಲ್ಲಿನ ಸ್ಥಿತಿಯನ್ನು ನೋಡಿದರೆ ಇದೇ ಪರಿಹಾರವಾಗುವುದಿಲ್ಲವೆಂಬುದು ವ್ಯಕ್ತಪಡುವದು ಆದರೆ ಘೋಷಣೆಯು ಮಾರ್ಗವನ್ನು ತೆರೆಯುವುದು ಆ ಮಾರ್ಗದಲ್ಲಿ ಭಾರತವು ಸ್ವಸ್ತ್ರಭುತ್ವಾಧಿಕಾರ ಹೊಂದಲು ಮುಂದೆ ನುಗ್ಗಿ ಹೋಗಬಹುದು ಅವರು ಈ ಮಾರ್ಗದಲ್ಲಿ ತ್ವರಿತವಾಗಿ ಮುಂದಡಿಯಿಟ್ಟು ಹೋಗಲು ನಾನು ಅವರಿಗೆ ಅಗತ್ಯವಾದಲ್ಲ ಪ್ರೋತ್ಸಾಹವನ್ನೂ ಸಹಾಯವನ್ನೂ ಮಾಡುವೆನು ಸಾಮ್ರಾಜ್ಯದೊಳಗೆ ಸ್ವಸ್ತ್ರಭುತ್ವಾಧಿಕಾರವೆಂದರೆ ಅವರು ಬೇಕೆಂದರೆ ಪ್ರತ್ಯೇಕವಾಗುವ ಅವಕಾಶವಿದೆ ಸಾಮ್ರಾಜ್ಯದೊಳಗಿನ ಯಾವ ಸದಸ್ಯ ರಾಷ್ಟ್ರವೂ ಇನ್ನೊಂದು ಸದಸ್ಯ ರಾಷ್ಟ್ರದೊಡನೆ ಪರಸ್ಪರ ಅನುಮತಿಯ ಮೇಲೆ ಸಂಬಂಧ ಹೊಂದಬಹುದೇ ಹೊರತು ಯಾವ ಒತ್ತಾಯವೂ ಇಲ್ಲ ಭಾರತಕ್ಕೂ ಇದೇ ಅನ್ವಯಿಸುವದು ಭಾರತವು ಸಾಮ್ರಾಜ್ಯದೊಳಗೇ ಉಳಿಯುವದೊಳ್ಳೆಯದೆಂದು ಅದರ ಹಿತದೃಷ್ಟಿಯಲ್ಲಿ ನಾವು ಹೇಳುವೆವು " ಎಂದು ತಿಳಿಸಿದರು

ಹಿರೋಹಿಟೋ ಮೆಕ್‌ಆರ್ಥರ್ ಭೇಟಿ

ಹಿರೋ ಹಿಟೋ—ಮೆಕ್ ಆರ್ಥರ್ ಭೇಟಿ ಆಗುವುದು ಜಪಾನಿ ಪ್ರಜೆಗಳನ್ನು ಸಮಾಧಾನ ಪಡಿಸುವ ನಿಮಿತ್ತವೆಂದೂ, ಪೋಟ್ಸ್‌ಡಾಂ ಘೋಷಣೆಯನ್ನಂಗೀಕರಿಸುವುದರಿಂದ ತೊಂದರೆ ಏನೂ ಇಲ್ಲವೆಂದು ಪ್ರತಿಪಾದಿಸುವ ನಿಮಿತ್ತವೆಂದೂ ಹೇಳಲಾಗಿದೆ ಜಪಾನಿನಲ್ಲಿ ಜನರ ಕಷ್ಟಗಳನ್ನು ಕಡಮೆಮಾಡಲು ಮೆಕ್ ಆರ್ಥರ್ ಹಲವು ನಡವಳಿಕೆಗಳನ್ನು ಕೈಗೊಂಡಿದ್ದಾರೆ. ಜಪಾನಿ ಸೇನೆ ಮತ್ತು ನೌಕಾಖಾತೆಯ ವಶದಲ್ಲಿರುವ ಆಹಾರ ಧಾನ್ಯಗಳು ಮತ್ತು ಬಟ್ಟೆಬರೆಗಳನ್ನು ಜನರಿಗೆ ಒದಗಿಸಿಕೊಡಬೇಕೆಂದು ಆಜ್ಞೆ ಮಾಡಿದ್ದಾರೆ

ಸರ್ವೋತ್ತ[illegible] ಮತಗ್ರಂಥಗಳು

ಗೋತ್ರಸೂತ್ರಪಟ (೭ನೆಯ ಆವೃತ್ತಿ)	[illegible] ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	[illegible] ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೭ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕಪಾಖ್ಯಾಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ–ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕ ಸೈಜು)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಲವರ ಭಾಷಣವು (ತೆಲುಗು)	೮ ಆಣೆ
ಸದ್ಬೋಧರತ್ನಾಕರ	೮ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು, ೨ನೆಯ ಆವೃತ್ತಿ)	೧। ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧॥ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧॥ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಸಹಿತ)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಪಾರಮೇಶ್ವರಾಗಮ-ಸೂಕ್ಷ್ಮಾಗಮಾದಿಗಳ ಶಿವಾದ್ವೈತ)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*)	8 As
Speeches by Pandit Shri Kashinatha Shastriji (*English*)	12 As
लिंगधारणचन्द्रिका (संस्कृत)	३ ०
वीरशैवरत्न (मराठी)	१ रु
महानारायणोपनिषत् (वीरशैवभाष्य-संस्कृत)	१ रु
सिद्धांतशिखामणि (मूल)	८ आ
शैवदिकेश्वरकारिका (संस्कृत)	२ आ

ಪ್ರಾಪ್ತಿಸ್ಥಳ—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

GISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯರ ಪ್ರಸಾದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾಃ ಪಂಚಾಸ್ಯಸೀರಾದಿಪಾಃ ಪಂಚಕ್ಲೇಶವಿನಾಶಕಾಃ ಪರತರಶ್ರೀಪಂಚಲಿಂಗೋದ್ಭವಾಃ ॥
ಪಂಚಾಚಾರನಿಯಾಮಕಾಃ ಸ್ಥಲಸತ್ಕಂಚಾಕ್ಷರೀಬೋಧಕಾಃ ಪಂಚಾಚಾರ್ಯಜಗದ್ಗುರೂತ್ತಮವರಾಃ ಪಾಲಿಸ್ತ್ವದೀಯಂಕಸಂ ।

ಓದುವರಿಗೆ ೩ ರೂ ೪ ಆಣೆ ಸರಸ್ವಓದುವರಿಗೆ ೨ ರೂ ವಿ ಪಿ ಖರ್ಚು ಸೇರಿ ೩ ರೂ ಆಣೆ

ಸಂಪುಟ ೧೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೮ನೇ ಅಕ್ಟೋಬರ್ ೧೯೪೫ [ಸಂಚಿಕೆ ೨೧

ಬ್ರಹ್ಮಚರ್ಯ

ಋತುಕಾಲದಲ್ಲಿ ತನ್ನ ಧರ್ಮಪತ್ನಿಯೊಡನೆ ಶಾಸ್ತ್ರದ …ಶಾನುಸಾರ ಕೇವಲ ಸಂತಾನಾರ್ಥವಾಗಿ ಸಮಾ… ಮಾಡುವ ಪುರುಷನು ಗೃಹಸ್ಥಾಶ್ರಮಿಯಾ…ರೂ ಬ್ರಹ್ಮಚಾರಿಯೆಂದೇ ಭಾವಿಸಲ್ಪಡುವನು ಋತು…ದಲ್ಲಿ ಮಾತ್ರ ಸ್ತ್ರೀಯೊಡನೆ ಸಂಭೋಗಮಾಡುವ …ನವಿರುತ್ತದೆಯೇ ವಿನಾ ಮನಸ್ಸು ಬಂದಂತೆ ಅನ…ಲರೂಪದಿಂದಲ್ಲವೆಂಬುದನ್ನು ನೆನಪಿನಲ್ಲಿಡಬೇಕು …ತುಕಾಲವಾವುದು? ರಜೋದರ್ಶನದ ನಾಲ್ಕನೆಯ …ವೇ ಋತುಕಾಲವಲ್ಲ ಹಚ್ಚಿನ ದಿನಗಳಲ್ಲಿ ಸ್ತ್ರೀ …ಭೋಗವು ನಿಷಿದ್ಧವಿರುತ್ತದೆ ಈ ಬಗ್ಗೆ ಮನುವು …ತಿಯಾಗಿ ಹೇಳುತ್ತಾನೆ—

ಋತುಃ ಸ್ವಾಭಾವಿಕಃ ಸ್ತ್ರೀಣಾಂ ರಾತ್ರಯಃ ಷೋಡಶ …ತಾಃ ಚತುರ್ಭಿರಿತರೈಃ ಸಾರ್ಧಮಹೋಭಿ ಸದ್ವಿ…ತೈಃ ॥ ತಾಸಾಮಾದ್ಯಾಶ್ಚತಸ್ರಸ್ತು ನಿಂದಿತೈಕಾದ…ಯಾ ತ್ರಯೋದಶೀಚ ಶೇಷಾಸ್ತು ಪ್ರಶಸ್ತಾ ದಶ…ಯಃ ।

…ತ್ಪುರುಷರ ದ್ವಾರಾ, ನಿಂದಿತವಾದ ರಜೋದರ್ಶ… ಮೊದಲು ನಾಲ್ಕು ದಿನಗಳ ಸಹಿತ, ೧೬ ರಾತ್ರಿ… ಸ್ತ್ರೀಯರಿಗೆ ಸ್ವಾಭಾವಿಕ ಋತುಕಾಲವೆಂದು ಹೇ…ತ್ತವೆ ಈ ಹದಿನಾರು ದಿನಗಳಲ್ಲಿ ಮೊದಲನೆಯ …ಲ್ಕು ರಾತ್ರಿಗಳು, ಹನ್ನೊಂದು ಹಾಗೂ ಹದಿಮೂರನೇ …ಗಳು ಸ್ತ್ರೀ ಸಹವಾಸಕ್ಕೆ ನಿಷಿದ್ಧ ಉಳಿದ ಹತ್ತು …ಗಳು ಉತ್ತಮ

…ಹತ್ತು ರಾತ್ರಿಗಳಲ್ಲಿ ಪ್ರತಿಪದೆ ಷಷ್ಠಿ, ಅಷ್ಟಮಿ, …ದಶಿ, ದ್ವಾದಶಿ, ಚತುರ್ದಶಿ ಹಾಗೂ ಪೂರ್ಣಿಮಾ …ಲಾದ ತಿಥಿಗಳು ಹಾಗೂ ವ್ಯತೀಪಾತ ಗ್ರಹಣ, …ತ್ರಿ, ಜನ್ಮಾಷ್ಟಮಿ, ಶ್ರಾದ್ಧ ದಿವಸ, ಸಂಕ್ರಾಂತಿ …ಭಾನುವಾರ ಮೊದಲಾದ ದಿನಗಳನ್ನು ಬಿಟ್ಟು …ಳಿದ ದಿನಗಳಲ್ಲಿ ಸ್ತ್ರೀಯಳ ಇಚ್ಛೆಯಿಂದ ಅಥವಾ …ನಾರ್ಥವಾಗಿ ಯಾವನು ತಿಂಗಳಲ್ಲಿ ಎರಡು ಸಾರೆ …ಸ್ತ್ರೀ ಸಂಗವನ್ನು ಮಾಡುತ್ತಾನೋ ಅವನು …ಸ್ಥಾಶ್ರಮಿಯಾಗಿದ್ದರೂ ಬ್ರಹ್ಮಚಾರಿಯೆಂದೇ ತಿಳಿಯ…ತ್ತಾನೆ

…ಪತ್ನಿಯೊಡನೆ ಎಂದಿಗೂ ಸಂಸರ್ಗಮಾಡಬಾರದು …ದ ಅನೇಕತರದ ರೋಗಗಳು ಬರುತ್ತವೆ ಇದ… ಆಶ್ಲೇಷಾ, ಮಘಾ, ಮೂಲ, ಕೃತ್ತಿಕಾ, ಜ್ಯೇಷ್ಠ…, ಉತ್ತರಾಭಾದ್ರಪದ, ಉತ್ತರಫಲ್ಗುನೀ, ಹಾಗೂ …ರಾಷಾಢ ನಕ್ಷತ್ರಗಳಲ್ಲಿ ಸ್ತ್ರೀಸಹವಾಸವು ನಿಷಿದ್ಧವು …ಲಯ, ರಸ್ತೆ, ಸ್ಮಶಾನ, ಔಷಧಾಲಯ, ಬ್ರಾಹ್ಮ… ಮನೆ, ಗುರುವಿನ ಮನೆ ಈ ಸ್ಥಳಗಳಲ್ಲಿಯೂ, …ತ್ರ ಅವಸ್ಥೆಯಲ್ಲಿಯೂ, ಔಷಧಿ ತೆಗೆದುಕೊಂಡಾ… ಹಸಿವಿದ್ದಾಗಲೂ, ಊಟಮಾಡಿದ ತತ್‌ಕ್ಷಣವೂ …ಮೂತ್ರತ್ಯಾಗದ ಅವಸರದಲ್ಲೂ, ವ್ಯಾಯಾಮ…ಯೂ, ದಣಿದಿರುವಾಗಲೂ, ದುಃಖಿತ ಮನಸ್ಸಿ… ಆವೇಗ-ಕ್ರೋಧಗಳಲ್ಲಿಯೂ, ಉಪವಾಸದ ದಿನವೂ ಬೆಳಿಗ್ಗೆ ಸಂಧ್ಯಾಕಾಲಗಳಲ್ಲಿಯೂ ಮಿತ್ರರು ಹಾಗು ಗುರುಜನರ ಹಾಸಿಗೆಗಳ ಮೇಲೂ, ಇತರರ ಎದುರಿಗೂ ಸ್ತ್ರೀಸಹವಾಸ ಮಾಡಬಾರದು ಸ್ತ್ರೀಸಹವಾಸದ ಸಂಬಂಧವಾಗಿ ಗ್ರೀಸ ಸಾಕ್ರೇಟಿಸನಿಗೂ ಅವನ ಶಿಷ್ಯನೊಬ್ಬನಿಗೂ ಈ ರೀತಿ ಸಂಭಾಷಣೆ ನಡೆದಿದೆ

ಶಿಷ್ಯ- ಮನುಷ್ಯನು ಸ್ತ್ರೀಸಹವಾಸವನ್ನು ಎಷ್ಟುಸಾರೆ ಮಾಡಬೇಕು?

ಸಾಕ್ರೇಟೀಸ್- ಇಡೀ ಜೀವನಮಾನದಲ್ಲಿ ಒಂದೇ ಸಾರೆ

ಶಿಷ್ಯ ಅದರಿಂದ ತೃಪ್ತಿಯಾಗದಿದ್ದರೆ?

ಸಾಕ್ರೇಟೀಸ್ ವರ್ಷದಲ್ಲಿ ೨ ಸಾರೆ ಮಾಡಬಹುದು

ಶಿಷ್ಯ ಅದರಿಂದಲೂ ಮನಸ್ಸು ಸಮಾಧಾನವಾಗದಿದ್ದರೆ?

ಸಾಕ್ರೇಟೀಸ್ ತಿಂಗಳಿಗೊಂದಾವರ್ತಿ

ಶಿಷ್ಯ ಅಲ್ಲಿಗೂ ಸಮಾಧಾನವಾಗದಿದ್ದರೆ?

ಸಾಕ್ರೇಟೀಸ್ ಸರಿ ತಿಂಗಳಿಗೆರಡು ಸಾರೆ ಮಾಡಬಹುದು ಪರಂತು ಹೀಗೆ ಮಾಡುವವನಿಗೆ ಮೃತ್ಯುವು ಬೇಗ ಪ್ರಾಪ್ತವಾಗುತ್ತದೆ

ಶಿಷ್ಯ- ಅಷ್ಟರಮೇಲೂ ಆಸೆಯು ಬೆಳೆದರೆ?

ಸಾಕ್ರೇಟೀಸ್- ಮೊದಲು ಹೆಣದಮೇಲೆ ಹೊದಿಸುವ ಬಟ್ಟೆಯನ್ನು ಮನೆಯಲ್ಲಿ ತಂದಿಟ್ಟುಕೊಂಡು ಅನಂತರ ಬೇಕಾದಹಾಗೆ ಸಹವಾಸ ಮಾಡಬಹುದು

ಉಪಯುಕ್ತಪ್ರಮಾಣಗಳಿಂದ ಸಿದ್ಧವಾಗುವುದೇನೆಂದರೆ ಸ್ತ್ರೀಸಹವಾಸವನ್ನು ಕಡಿಮೆಮಾಡಿದಷ್ಟು ಒಳ್ಳೆಯದು ಇದು ಮನುಷ್ಯನ ಪಾರಮಾರ್ಥಿಕತೆಗೆ ಉಪಯೋಗಕರ

ಯಾವ ಸ್ತ್ರೀ ಪುರುಷರು ಸ್ವಂತ ಇಚ್ಛೆಯಿಂದ ಸದಾ ಬ್ರಹ್ಮಚಾರಿಗಳಾಗಿರಲು ಇಚ್ಛೆಪಡುತ್ತಾರೋ, ಅವರಿಗೆ ಅವಶ್ಯವಾಗಿ ಹಾಗೆ ಇರಲು ಅಸ್ಪದಕೊಡಬೇಕು ಕೆಲವರು ಕೃತ್ರಿಮ ಹಾಗೂ ಅಸ್ವಾಭಾವಿಕಸಾಧನಗಳಿಂದ ಸಂತಾನೋತ್ಪಾದನೆಯನ್ನು ತಡೆಯಲಿಚ್ಛಿಸುತ್ತಾರೆ ಇದು ಮಹಾಪಾಪ! ಅಧಿಕ ಸಂತಾನವನ್ನು ಉತ್ಪನ್ನಮಾಡದಿರಲು ಸರ್ವಸುಂದರ ಹಾಗೂ ಧರ್ಮಯುಕ್ತ ಉಪಾಯವೇದರೆ, ದಂಪತಿಗಳು ಸ್ವಂತ ಇಚ್ಛೆಯಿಂದ ಬ್ರಹ್ಮಚರ್ಯದ ಪಾಲನೆಮಾಡುವುದು ಇದರಿಂದ ಇಹ ಹಾಗೂ ಪರಲೋಕಗಳೆರಡರ ಸಾಧನವೂ ಸುಗಮವಾಗುತ್ತದೆ

ಬ್ರಹ್ಮಚರ್ಯದ ಸಾಧನವು

೧ ಬಾಲ್ಯವಿವಾಹವನ್ನು ಸರ್ವಥಾ ತ್ಯಜಿಸುವುದು ಹುಡುಗರಿಗೆ ಕನಿಷ್ಠಪಕ್ಷ ೧೮ ವರ್ಷಕ್ಕೆ ಮುಂಚೆಯೂ, ಹುಡುಗಿಯರಿಗೆ ೧೦ ವರ್ಷಕ್ಕೆ ಮುಂಚೆ ಎಂದಿಗೂ ವಿವಾಹ ಮಾಡಬಾರದು

೨ ವೃದ್ಧವಿವಾಹಕ್ಕೆ ಎಂದಿಗೂ ಅವಕಾಶಕೊಡಬಾರದು

೩ ಧರ್ಮದ ಮೂಲಕ ಬ್ರಹ್ಮಚರ್ಯದ ಶಿಕ್ಷಣವನ್ನು ಕೊಡುವ, ಬ್ರಹ್ಮಚರ್ಯಾಶ್ರಮಗಳನ್ನು ಸ್ಥಾಪಿಸಬೇಕು ಹುಡುಗರು ಕನಿಷ್ಠಪಕ್ಷ ೧೬ ವರ್ಷಗಳು ಗುರುಕುಲದಲ್ಲಿ ವಾಸಿಸಬೇಕೆಂದು ಕಡ್ಡಾಯಮಾಡಬೇಕು

೪ ಹುಡುಗ ಹುಡುಗಿಯರಿಗೆ ಬಹುಬೇಗ ಸಂಬಂಧ ಕಲ್ಪಿಸಬಾರದು

೫ ಬಾಲಕ ಬಾಲಿಕೆಯರಿಗೆ ಸುಂದರವಾದ ಬಟ್ಟೆಗಳನ್ನು ಹಾಗೂ ಆಭರಣಗಳನ್ನು ಧರಿಸಲು ಅವಕಾಶ ಕೊಡಬಾರದು

೬ ಶೃಂಗಾರರಸದ ಯಾವುದೇ ಕಾವ್ಯ, ನಾಟಕ ಅಥವಾ ಉಪನ್ಯಾಸ ಗ್ರಂಥಗಳ ಪ್ರಚಾರವನ್ನು ಯಥಾಸಾಧ್ಯ ನಿಲ್ಲಿಸಬೇಕು ಕಡೇಪಕ್ಷ ಸಣ್ಣ ವಯಸ್ಸಿನ ಬಾಲಕಬಾಲಿಕೆಯರ ಕೈಗೆ ಇಂತಹ ಪುಸ್ತಕಗಳು ಸಿಕ್ಕದಂತೆ ನೋಡಿಕೊಳ್ಳಬೇಕು ಹಾಗೂ ವಿದ್ಯಾರ್ಥಿಗಳಿಗೆ ಸಾಹಿತ್ಯ ದೃಷ್ಟಿಯಿಂದಾದರೂ ಇಂತಹ ಪುಸ್ತಕಗಳನ್ನು ಓದಲಿಕ್ಕೆ ಕೊಡಬಾರದು

೭ ಶೃಂಗಾರರಸಯುಕ್ತ ನಾಟಕ—ಸಿನಿಮಾಗಳನ್ನು ಎಂದಿಗೂ ನೋಡಬಾರದು

೮ ಉತ್ತೇಜಕ ಪದಾರ್ಥಗಳನ್ನು ತಿನ್ನಬಾರದು ಮೆಣಸಿಕಾಯಿ, ಸಾಸಿವೆ, ಬಿಸಿ ಮಸಾಲೆ ಹುಳಿ. ಅಧಿಕ ಸಿಹಿ ಹಾಗೂ ಬಹಳ ಬಿಸಿ ಪದಾರ್ಥಗಳನ್ನು ತಿನ್ನಬಾರದು ಭೋಜನವು ಚೆನ್ನಾಗಿ ಪಕ್ವವಾಗಿದ್ದು ನಿಯಮಿತ ಸಮಯದಲ್ಲಿ ಮಾತ್ರ ತೆಗೆದುಕೊಳ್ಳಲ್ಪಡಬೇಕು ಯಾವುದೇ ತರದ ಮಾದಕವಸ್ತುಗಳನ್ನೂ ತೆಗೆದುಕೊಳ್ಳಬಾರದು

೯ ಯಥಾಸಾಧ್ಯ ಬೆಳಗ್ಗೆ ಮತ್ತು ಸಾಯಂಕಾಲ ಪರಿಶುದ್ಧಗಾಳಿಯಲ್ಲಿ ಸಂಚಾರಮಾಡಬೇಕು

೧೦ ರಾತ್ರಿ ಜಾಗ್ರತೆ ಮಲಗಬೇಕು ಹಾಗೂ ಪ್ರಾತಃಕಾಲ ಬ್ರಾಹ್ಮೀಮುಹೂರ್ತದಲ್ಲಿ ಕಡೇಪಕ್ಷ ಸೂರ್ಯೋದಯಕ್ಕೆ ೧ ಘಂಟೆ ಮುಂಚೆ ಅವಶ್ಯ ಏಳಬೇಕು ಮಲಗುವಾಗ ಮೂತ್ರವಿಸರ್ಜನೆ ಮಾಡಿ ಮಲಗಬೇಕು ರಾತ್ರಿ ಮಲಗುವಾಗಲೂ ಬೆಳಗ್ಗೆ ಏಳುವಾಗಲೂ ಭಗವಚ್ಚಿಂತನೆ ಮಾಡಬೇಕು

೧೧ ಕುಸಂಗತಿಯನ್ನು ಸರ್ವಥಾ ಬಿಡಬೇಕು ಸ್ತ್ರೀಸಂಬಂಧವಾದ ಚರ್ಚೆಯನ್ನು ಎಂದಿಗೂ ಮಾಡಬಾರದು ಅದರಂತೆ ಸ್ತ್ರೀಯೂ ಪುರುಷಚಿಂತನೆಯನ್ನು ಮಾಡಬಾರದು

೧೨ ದಂಪತಿಗಳು ವಿನಾ ಸ್ತ್ರೀ ಪುರುಷರು ಜೊತೆಯಲ್ಲಿ ಕೂಡಲೂಬಾರದು ಏಕಾಂತದಲ್ಲಿ ಮಾತಾಡಲೂ ಬಾರದು

೧೩ ಸ್ತ್ರೀಯರಕಡೆಗೆ ಎಂದಿಗೂ ದೃಷ್ಟಿಯಿಡಬಾರದು ಒಂದುವೇಳೆ ದೃಷ್ಟಿಬಿದ್ದರೆ ಮಾತೃಭಾವನೆ ಇಲ್ಲವೆ ಪರಮಾತ್ಮ ಭಾವನೆಯನ್ನು ತಾಳಬೇಕು. ಅಂತೆಯೇ ಸ್ತ್ರೀಯರೂ ಸಹ ಪುರುಷರ ಕಡೆ ದೃಷ್ಟಿಯಿಡಬಾರದು ದೃಷ್ಟಿಬಿದ್ದರೆ ಪಿತೃಭಾವ ಇಲ್ಲವೆ ಪರಮಾತ್ಮಭಾವದಿಂದ ಕಾಣಬೇಕು

೧೪ ನಿತ್ಯವೂ ಸತ್ಸಂಗ ಮಾಡಬೇಕು ಸದ್ಗ್ರಂಥಗಳ ಅಧ್ಯಯನ ಮಾಡಬೇಕು.

[೬ನೆಯ ಪುಟವನ್ನು ನೋಡಿ]

ಚಂದಾದಾರರಲ್ಲಿ ವಿಜ್ಞಾಪನೆ

ಪ್ರತಿವರ್ಷ ಪದ್ಧತಿಯಂತೆ ನವರಾತ್ರ ಮಹೋತ್ಸವ ನಿಮಿತ್ತವಾಗಿ ಮುಂದಿನವಾರದ (೧೫ನೆಯ ತಾರೀಖಿನ) ಪತ್ರಿಕೆಯು ಪ್ರಕಟವಾಗುವುದಿಲ್ಲ. —ಮ್ಯಾ.

ಪಂಚಾಚಾರ್ಯಪ್ರಭಾ.

೧೯೪೫ನೆಯ ಅಕ್ಟೋಬರ್ ತಾ। ೮ನೇ ಸೋಮವಾರ

ಗುರುವೇ ಆತ್ಮೋದ್ಧಾರಕನು

ಜನನಮರಣರೂಪವಾದ ಚಕ್ರದಲ್ಲಿ ಯಾವನು ಸರಳುತ್ತಿರುವನೋ ಅವನು ಬದ್ಧನೆನಿಸುವನು. ಈ ಚಕ್ರದಿಂದ ಯಾವನು ಬಿಡುಗಡೆಯನ್ನು ಹೊಂದುವನೋ ಅವನು ಮುಕ್ತನೆನಿಸುವನು. ಬಂಧನದಿಂದ ತಪ್ಪಿಸಿಕೊಂಡು ಮೋಕ್ಷವನ್ನು ಪಡೆಯುವುದೇ ಜೀವಾತ್ಮನ ಕರ್ತವ್ಯವಾಗಿರುತ್ತದೆ. ಬಂಧನವೆಂಬುದು ದುಃಖಸಾಧನವಾದುದು. ಮೋಕ್ಷವೆಂಬುದು ಸುಖಸಾಧನವಾದುದು. ಪ್ರತಿಯೊಬ್ಬ ಆತ್ಮನೂ ಸುಖವನ್ನು ಅಪೇಕ್ಷಿಸುತ್ತಾನಲ್ಲದೆ ದುಃಖವನ್ನು ಅಪೇಕ್ಷಿಸುವುದಿಲ್ಲ. ಹೀಗಿದ್ದರೂ ದುಃಖವು ತರಂಗತರಂಗವಾಗಿ ಆತ್ಮನನ್ನು ಆವರಿಸಿ ಅಧೋಗತಿಗಿಳಿಸುವಂತೆ ಮಾಡಿರುತ್ತದೆ.

ಆತ್ಮಾನಂ ರಥಿನಂ ವಿದ್ಧಿ ಶರೀರಂ ರಥಮೇವ ತು । ಬುದ್ಧಿಂ ತು ಸಾರಥಿಂ ವಿದ್ಧಿ ಮನಃ ಪ್ರಗ್ರಹಮೇವ ಚ ॥ ಇಂದ್ರಿಯಾಣಿ ಹಯಾನಾಹುರ್ವಿಷಯಾಂಸ್ತೇಷು ಗೋಚರಾನ್

ಶರೀರವೇ ಒಂದು ರಥವಾಗಿದೆ. ಆ ಶರೀರರೂಪವಾದ ರಥದಲ್ಲಿ ಆತ್ಮನೆಂಬ ಮಹಾರಾಜನು ಕುಳಿತಿರುವನು. ಬುದ್ಧಿಯೇ ಆ ರಥವನ್ನು ಹೂಡಿಸುವ ರಥಿಕನಾಗಿರುವನು. ಚಕ್ಷುರಾದೀಂದ್ರಿಯಗಳೇ ಆ ರಥಕ್ಕೆ ಕಟ್ಟಿದ ಕುದುರೆಗಳಾಗಿವೆ. ಮನಸ್ಸೇ ಕುದುರೆಗಳಿಗೆ ಹಾಕಿದ ಲಗಾಮಾಗಿದೆ. ವಿಷಯಂಗಳೇ ಮಾರ್ಗವಾಗಿವೆ ಎಂದು ಶ್ರುತಿಯು ಸಾರುತ್ತಿರುವುದು. ಸ್ಪರ್ಶ ಶಬ್ದಾದಿ ಬಾಹ್ಯವಿಷಯಗಳಿಗೂ ಚಕ್ಷುರಾದಿ ಇಂದ್ರಿಯಗಳಿಗೂ ಪ್ರತಿನಿತ್ಯವೂ ಸನ್ನಿಕರ್ಷವಿರುವುದರಿಂದಲೂ ಶಬ್ದಾದಿ ವಿಷಯಗಳು ಚಕ್ಷುರಾದೀಂದ್ರಿಯಗಳ ದ್ವಾರಾ ಮನಸ್ಸನ್ನೂ ಆ ಮನಸ್ಸಿನ ದ್ವಾರಾ ಆತ್ಮನನ್ನೂ ಪ್ರವೇಶಿಸಿರುವುದರಿಂದಲೂ ಆತ್ಮನು ಕಿಂಚಿಜ್ಞನೂ ಅಲ್ಪಜ್ಞನೂ ಕಲುಷಿತಾತ್ಮನೂ ಆಗಿದ್ದಾನೆ. ಸರೋವರದಲ್ಲಿರುವ ನೀರು ಸ್ವಭಾವದಿಂದ ಅತಿಸ್ವಚ್ಛವಾಗಿದ್ದರೂ, ಮದಗಜಗಳ ನುಗ್ಗಾಟದಿಂದ ಕಲುಷಿತವಾಗಿ ಪಾನಕ್ಕೆ ಅನರ್ಹವಾಗುವಂತೆ, ವಿಷಯಸಂಬಂಧದಿಂದ ಜೀವಾತ್ಮನು ತನ್ನ ಕಲ್ಯಾಣಗುಣಗಳಿಂದ ಬಿಡಲ್ಪಟ್ಟು ವಿಷಯಾಕಾರನಾಗಿ ಪರಿಣಮಿಸಿರುತ್ತಾನೆ.

ಆತ್ಮನು ಅನಾದಿಕಾಲದಿಂದ ಅನೇಕ ಶರೀರಗಳನ್ನು ಧರಿಸುತ್ತ ಬಂದಿರುವುದರಿಂದ ವಿಷಯಪಂಕದಿಂದ ಕಲುಷಿತನಾಗಿ ಬಹು ಕೀಳುದಶೆಯನ್ನು ಅನುಭವಿಸುತ್ತಲಿರುವನು. ಹೀಗೆ ಜೀವಾತ್ಮನಿಗೆ ವಿಷಯಸಂಬಂಧದೋಷದಿಂದ ಪ್ರಾಪ್ತವಾಗಿರುವ ಕೀಳುದಶೆಯು ತೊಲಗಿ ಎಂದಿನಂತೆ ಲಿಂಗರೂಪಿಯಾದ ಪರಮಾತ್ಮನಲ್ಲಿ ಸಮರಸಭಾವವನ್ನು ಹೊಂದಿ ನಿತ್ಯಾನಂದವನ್ನು ಅನುಭವಿಸುವುದು ದುಸ್ತರವಾಗಿ ಹೋಗಿರುತ್ತದೆ.

ಜೀವಾತ್ಮನೂ ಪರಮಾತ್ಮನೂ ಯಾವಾಗಲೂ ಒಂದೆಡೆಯಲ್ಲಿದ್ದರೂ ಅನಾದಿಕಾಲದಿಂದ ಬಂದಿರುವ ಮಾಯಾವರಣದಿಂದ ಈ ಉಭಯರ ಮೈತ್ರಿಯು ತಪ್ಪಿಹೋಗಿ ಒಬ್ಬರಿಗೊಬ್ಬರ ಅವಲೋಕನಕ್ಕೂ ಕೂಡ ಅವಕಾಶವಿಲ್ಲದಂತಾಗಿ ಸಾಮರಸ್ಯವೇ ತಪ್ಪಿಹೋಗಿರುತ್ತದೆ. ಇದರಿಂದ ಒಬ್ಬನು ಕರ್ಮಾನುಗುಣವಾದ ಸುಖದುಃಖಗಳನ್ನೂ ಮತ್ತೊಬ್ಬನು ಸದಾನಂದವನ್ನೂ ಅನುಭವಿಸುತ್ತಿರುವನು.

ದ್ವಾ ಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ ಪರಿಷಸ್ವಜಾತೇ ।
ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತ್ಯನಶ್ನನ್ನನ್ಯೋಭಿಚಾಕಶೀತಿ ॥

ಎಂಬ ಶ್ರುತಿಯು, ಸಹ ಜೀವಾತ್ಮ ಪರಮಾತ್ಮರ ಲಕ್ಷಣಗಳನ್ನು ತೋರಿಸಿರುತ್ತದೆ. ಜೀವಾತ್ಮ ಪರಮಾತ್ಮರೆಂಬ ಎರಡು ಪಕ್ಷಿಗಳು ದೇಹವೆಂಬ ಒಂದೇ ವೃಕ್ಷವನ್ನಾಶ್ರಯಿಸಿರುವವು. ಈ ಎರಡು ಪಕ್ಷಿಗಳೊಳಗೆ ಜೀವಾತ್ಮನೆಂಬ ಪಕ್ಷಿಯು ತಾನು ಮಾಡಿದ ಪುಣ್ಯಪಾಪ ಕರ್ಮಾನುಗುಣವಾದ ಸುಖದುಃಖಗಳೆಂಬ ಬೀಜಗಳನ್ನು ತಿಂದು ಜೀವಿಸುತ್ತದೆ. ಪರಮಾತ್ಮನೆಂಬ ಪಕ್ಷಿಯು ಇಂಥ ಸುಖದುಃಖಗಳನ್ನನುಭವಿಸದೆ ಸರ್ವತೋಮುಖಿಯಾಗಿ ಪ್ರಕಾಶಿಸಿರುತ್ತದೆ. ಹೀಗೆ ಒಂದಕ್ಕೊಂದು ವಿರುದ್ಧಸ್ವಭಾವವುಳ್ಳವುಗಳಾದುದರಿಂದ ಪರಮಾತ್ಮ ಜೀವಾತ್ಮರುಗಳಿಗೆ ಇರುವ ಸಂಬಂಧವು ತಪ್ಪಿಹೋಗಿ ಒಬ್ಬರಿಗೊಬ್ಬರು ವಿರುದ್ಧಸ್ವಭಾವವುಳ್ಳವರಾಗಿದ್ದಾರೆ. ಪ್ರಪಂಚದಲ್ಲಿ ಯಾವ ವಸ್ತುಗಳು ಸಮಾನಗುಣವುಳ್ಳವುಗಳಾಗಿರುತ್ತವೆಯೋ ಅಂಥವುಗಳ ಸಂಬಂಧವೂ ಏಕತ್ರವಾಸವೂ ಎನ್ನಿಸುವುದು. ಬದ್ಧನಾದ ಜೀವನು ಮಲಾವೃತನಾಗಿ ಜನನಮರಣಗಳಿಂದ ಕೂಡಿರುವನು. ಆದರೆ ಪರಮಾತ್ಮನು ತೇಜೋಮಯನಾಗಿರುವನು. ಇಂಥ ತೇಜೋಮಯನಾದ ಪರಮಾತ್ಮನಲ್ಲಿ ಸೇರುವವರೆಗೂ ಜೀವಾತ್ಮನು ದುಃಖವಿಮುಕ್ತನಾಗುವಂತಿಲ್ಲ. ದುಃಖನಿವೃತ್ತಿಯಾಗುವವರೆಗೂ ಪರಮಾತ್ಮನಲ್ಲಿ ಸೇರುವಂತಿಲ್ಲ. ಇಂಥ ಸನ್ನಿವೇಶವು ತಪ್ಪಬೇಕಾದರೆ ಮಧ್ಯದಲ್ಲಿ ಇದರ ನಿವೃತ್ತಿಯನ್ನು ಒಪ್ಪಿಸುವ ಮಧ್ಯಸ್ಥಗಾರನು ಬೇಕಾಗುವುದು. ಅತನೇ ಗುರುವೆನಿಸಲ್ಪಡುವನು. 'ಗುರುರುಪಾಯಃ' ಎಂದು ಶಿವಸೂತ್ರದಲ್ಲಿ ಹೇಳಿರುವಂತೆ ಜೀವಾತ್ಮ ಪರಮಾತ್ಮರಿಬ್ಬರಿಗೆ ಉಂಟಾಗಿರುವ ವಿರೋಧವನ್ನು ತಪ್ಪಿಸಿ ಪರಸ್ಪರ ಸ್ನೇಹವನ್ನು ಬೆಳೆಯಿಸುವ ಶಕ್ತಿಯು ಗುರುವಿನಲ್ಲಿ ಮಾತ್ರ ಉಂಟೆಂದು ಸಿದ್ಧವಾಗುತ್ತದೆ. ಪ್ರಪಂಚವ್ಯವಹಾರಕ್ಕಾಗಲಿ ಪಾರಮಾರ್ಥಿಕವ್ಯವಹಾರಕ್ಕಾಗಲಿ ಎಲ್ಲಕ್ಕೂ ಗುರುವಿರಬೇಕು. ಉಪದೇಶಕರಿಲ್ಲದ ಯಾವ ಕಾರ್ಯವೂ ಸರಿಹೋಗುವುದಿಲ್ಲ. ವೇದಾಗಮಸಿದ್ಧವಾದ ವೀರಶೈವ ಸಿದ್ಧಾಂತದಲ್ಲಿ ಮೋಕ್ಷಮಾರ್ಗವನ್ನು ಪ್ರವರ್ತಿಸುವವರು ಶ್ರೀ ರೇಣುಕಾದಿ ಪಂಚಾಚಾರ್ಯರೇ ಹೊರತು ಮತ್ತೊಬ್ಬರಿಲ್ಲವೆಂದು ಶಿವಾಗಮಗಳಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿರುವದು. ಪಂಚಾಚಾರ್ಯರ ಸಂಬಂಧವು ಪ್ರತಿಯೊಬ್ಬ ವೀರಶೈವನ ಪ್ರತಿಯೊಂದು ರೋಮರೋಮದಲ್ಲಿಯೂ ಅವಿಚ್ಛಿನ್ನವಾಗಿ ವ್ಯಾಪಿಸಿಕೊಂಡಿರುವದೆಂಬುದಕ್ಕೆ ಅವರು ಧರಿಸಿರುವ ಲಿಂಗ ಭಸ್ಮ ರುದ್ರಾಕ್ಷಾದಿಗಳೇ ಬಲವಾದ ಸಾಕ್ಷಿಗಳಾಗಿವೆ. ಹೀಗೆ ವೀರಶೈವ ಮತದಲ್ಲಿ ತಾವು ಜನ್ಮವೆತ್ತಿದ್ದರೂ ಎದೆಯಮೇಲೆ ಗುರುಗಳು ಅನುಗ್ರಹಿಸಿದ ಲಿಂಗವನ್ನು ಧರಿಸಿದ್ದರೂ ಇತ್ತೀಚೆಗೆ ಕೆಲವರು ಗುರುಗಳ ಮೇಲೆ ಟೀಕೆಯನ್ನು ಮಾಡಲು ಉದ್ಯುಕ್ತರಾಗಿದ್ದಾರೆ. ಇಂಥವರಿಗೆ ದುಃಖ ನಿವೃತ್ತಿಯಾಗಿ ಮೋಕ್ಷಪದವಿಯು ದೊರೆಯುವುದೆಂತು? ಲೋಕದಲ್ಲಿ ಪ್ರತಿಯೊಬ್ಬ ಮತೀಯನೂ ತನ್ನ ಮತಾಚಾರ್ಯರಲ್ಲಿ ಅಸಾಧಾರಣ ಭಕ್ತಿಯನ್ನಿಟ್ಟುಕೊಂಡು ಅವರ ಉಪದೇಶದಂತೆ ನಡೆಯುವುದರಲ್ಲಿ ಒದ್ದಾದರನಾಗಿರುವಲ್ಲಿ ವೀರಶೈವರೆಂದು ಹೇಳಿಸಿಕೊಳ್ಳುವ ಕೆಲವರು ತಮ್ಮ ಮತಾಚಾರ್ಯರನ್ನು ದೂಷಿಸುವುದನ್ನು ನೋಡಿದರೆ ಆಶ್ಚರ್ಯವೆನಿಸುತ್ತದೆ. ಇಂಥವರು ತಮ್ಮ ವಕ್ರಮಾರ್ಗವನ್ನು ಬಿಟ್ಟು ಮುಕ್ತಿಮಾರ್ಗೋಪದೇಶಕರಾದ ತಮ್ಮ ಮತಾಚಾರ್ಯರಲ್ಲಿ ಭಕ್ತಿಯಿಂದ ವರ್ತಿಸಿ ಅವರು ಉಪದೇಶಿಸಿದ ಮಾರ್ಗದಲ್ಲಿ ನಡೆದು ದುಃಖದಾಯಕವಾದ ಬಂಧನದಿಂದ ದೂರರಾಗಬೇಕೆಂದಾಶಿಸುತ್ತೇವೆ.

ರಾಜಧಾನಿಯಲ್ಲಿ ನವರಾತ್ರಮಹೋತ್ಸವ ಪ್ರಾರಂಭ

ಅರಮನೆಯಲ್ಲಿ ಪ್ರತಿವರ್ಷ ಪದ್ಧತಿಯಂತೆ ನಿನ್ನೆಯಿಂದ ನವರಾತ್ರಮಹೋತ್ಸವವು ಪ್ರಾರಂಭವಾಯಿತು. ಮಹಾಪ್ರಭುಗಳವರು ಮಧ್ಯಾಹ್ನ ೧೨ ಘಂಟೆಗೆ ಸರಿಯಾಗಿ ರತ್ನಸಿಂಹಾಸನವನ್ನಾರೋಹಣಮಾಡಿದರು. ಅಗ್ಗೆ ಗೌರವಾರ್ಥವಾಗಿ ೨೧ ತೋಪುಗಳು ಹಾರಿಸಲ್ಪಟ್ಟವು. ಸಾಯಂಕಾಲ ೮ ಘಂಟೆಗೆ ಪದ್ಧತಿ ಪ್ರಕಾರ ಮಹಾಪ್ರಭುಗಳು ಸಿಂಹಾಸನಾರೋಹಣಮಾಡಿದರು. ಕೂಡಲೆ ಅರಮನೆಯು ಲಕ್ಷಾಂತರ ವಿದ್ಯುದ್ದೀಪಗಳಿಂದ ಬೆಳಗಿತು. ಸಚಿವೋಪಸಚಿವರು ರಾಜಬಂಧುಗಳು ಮಹಾಪ್ರಭುಗಳವರಿಗೆ ನಜರನ್ನೊಪ್ಪಿಸಿದರು. ಈ ವರ್ಷ ಯುದ್ಧವು ಶಾಂತವಾದುದರಿಂದ ಪರದೇಶಗಳಿಂದ ಬಹು ಜನರು ಈಗಲೇ ಬರುತ್ತಿರುವರು.

ವರ್ತಮಾನಸಂಗ್ರಹ

ಪಂಚಮಹಾರಾಷ್ಟ್ರಗಳ ಅಧಿವೇಶನ ಮುಕ್ತಾಯ

ಲಂಡನ್ನಿನಲ್ಲಿ ಸೇರಿದ್ದ ವಿದೇಶಾಂಗ ಮಂತ್ರಿಗಳ ಸಮ್ಮೇಳನವು ಒಂದು ತಿಂಗಳು ನಡೆದು ಫಲಕಾರಿಯಾಗದೆ ಕೊನೆಗೊಂಡಿತು. ಬಾಲ್ಕನ್ ರಾಷ್ಟ್ರಗಳ ಶಾಂತಿ ಕೌಲಿನ ವಿಚಾರದಲ್ಲಿ ರಷ್ಯಾಕ್ಕೂ ಮತ್ತು ಇತರ ರಾಷ್ಟ್ರಗಳಿಗೂ ಉಂಟಾದ ಭಿನ್ನಾಭಿಪ್ರಾಯವೇ ಸಮ್ಮೇಳನದ ವಿಫಲತೆಗೆ ಕಾರಣ. ವಿದೇಶಾಂಗ ಮಂತ್ರಿಗಳೆಲ್ಲಾ ಲಂಡನ್ನಿನಿಂದ ಹಿಂತಿರುಗಿದರು. ವಿದೇಶಾಂಗ ಮಂತ್ರಿಗಳ ಸಮ್ಮೇಳನದಲ್ಲಿ ಇತ್ಯರ್ಥವಾಗದಿದ್ದ ಸಮಸ್ಯೆಗಳನ್ನು ಬಗೆಹರಿಸಲು ಬ್ರಿಟಿಷ್ ಪ್ರಧಾನಿ, ಅಧ್ಯಕ್ಷ ಟ್ರೂಮನ್, ಸ್ಟಾಲಿನ್, ಚಿಯಾಂಗ್‌ಕೈಷೇಕ್, ಮತ್ತು ಡಿಗಾಲೆ ಇವರುಗಳ ಸಮ್ಮೇಳನ ನಡೆಯಲಿದೆಯೆಂದು ಹೇಳಲಾಗಿದೆ.

ಅಟ್ಲಿ, ಸ್ಟಾಲಿನ್, ಟ್ರೂಮನ್, ಡಿಗಾಲೆ, ಚಿಯಾಂಗ್ ಭೇಟಿ

ಲಂಡನ್ನಿನಲ್ಲಿ ಸೇರಿದ್ದ ವಿದೇಶಾಂಗ ಮಂತ್ರಿಗಳ ಸಭೆಯಲ್ಲಿ ಹಲವು ಮುಖ್ಯ ವಿಷಯಗಳನ್ನು ಕುರಿತು ಚರ್ಚಿಸಿ ಯಾವ ತೀರ್ಮಾನಕ್ಕೂ ಇದುವರೆಗೆ ಬಂದಿಲ್ಲವಷ್ಟೆ! ಈ ಮುಖ್ಯವಿಷಯಗಳ ಬಗ್ಗೆ ಉಂಟಾಗಿರುವ ಬಿಕ್ಕಟ್ಟು ಪರಿಹಾರವಾಗಬೇಕಾದರೆ ಪಂಚ ಮಹಾರಾಷ್ಟ್ರಗಳ ನಾಯಕರ ಪರಿಶೀಲನೆಯೇ ದಿವ್ಯೌಷಧಿಯೆಂದೂ ಇಷ್ಟರಲ್ಲೇ ಸ್ಟಾಲಿನ್, ಟ್ರೂಮನ್ ಮತ್ತು ಅಟ್ಲಿ ಭೇಟಿ ನಡೆಯುತ್ತೆಂದೂ ಅದಕ್ಕೆ ಫ್ರಾನ್ಸಿನ ಡಿಗಾಲ್ ಮತ್ತು ಚೀಣದ ಜ॥ ಚಿಯಾಂಗ್ ಕೈ ಷೇಕ್‌ರವರನ್ನು ಆಹ್ವಾನಿಸಲಾಗುತ್ತದೆಂದೂ ಗೊತ್ತಾಗಿದೆ. ವಿದೇಶಾಂಗ ಮಂತ್ರಿಗಳು ಅವರವರ ನಾಯಕರಿಗೆ ಪೂರ್ಣ ವರದಿ ಮಾಡಿದ ಮೇಲೆ ಈ ಭೇಟಿ ನಡೆಯುವ ನಿರೀಕ್ಷೆ ಇದೆ.

ಸೆಕ್ರಾನೋರವರೊಡನೆ ಸಂಧಾನ ಪ್ರಯತ್ನ

'ಬ್ರಿಟಿಷ್ ಮಿಲಿಟರಿಯವರೊಡನೆ ಸಹಕರಿಸುವಂತೆ ಅನುಯಾಯಿಗಳಿಗೆ ತಿಳಿಸಿರುವುದರಿಂದ ಮುಂದೆ ಘರ್ಷಣೆಗೆ ಅವಕಾಶವೇ ಇಲ್ಲ. ಸಂಯುಕ್ತ ರಾಷ್ಟ್ರಗಳ ಕೌನ್ಸಿಲಿನ ಮುಂದೆ ಜಾವಾ ಪ್ರಜೆಗಳ ಬೇಡಿಕೆ ಏನೆಂಬುದನ್ನು ವಿವರಿಸುತ್ತೇನೆ' ಹೀಗೆಂದು ಇಂಡೋನೇಷಿಯಾ ನಾಯಕ ಡಾ ಸೆಕ್ರಾನೋ ತಿಳಿಸಿದ್ದಾರೆ. ಜಪಾನರ ಶಸ್ತ್ರಾಸ್ತ್ರಗಳೊಡನೆ ಸಜ್ಜುಗೊಳಿಸಿದ ೩ ಲಕ್ಷ ಸೈನ್ಯಕ್ಕೀಗ ಶಸ್ತ್ರಸನ್ಯಾಸ ಕೊಡಲಾಗಿದೆ. ದೇಶದಲ್ಲಿ ಬಿಸ್ತುವಾರಿ ನೋಡಿಕೊಳ್ಳಲು ಒಂದು ಪಡೆಯನ್ನಿಡಲಾಗಿದೆ. ಈಗಿರುವ ಸರ್ಕಾರ ಜಪಾನಿ ಪರವಾದ ಸರ್ಕಾರವೆಂದು ಹೇಳುತ್ತಿರುವುದಕ್ಕೆ ಬುಡವಿಲ್ಲ. ಜಪಾನಿ ಧ್ಯೇಯಗಳಿಗೂ ಈಗಿರುವ ಸರ್ಕಾರದ ಉದ್ದೇಶಗಳಿಗೂ ಸಂಬಂಧವೇ ಇಲ್ಲ. ಈಗಿರುವ ರಾಷ್ಟ್ರೀಯ ಸಮಿತಿಯಲ್ಲಿ ಎಲ್ಲ ಪಕ್ಷಗಳ ಪ್ರತಿನಿಧಿಗಳೂ ಇದ್ದಾರೆ" ಎಂಬುದಾಗಿ ಡಾ॥ ಸೆಕ್ರಾನೋ ಉತ್ತರ ಕೊಟ್ಟಿದ್ದಾರೆ. ದೇಶದಲ್ಲಿರುವ ನಾನಾ ರಾಜಕೀಯ ಪಕ್ಷಗಳೊಡನೆ ಮೈತ್ರಿ ಬೆಳೆಸುವುದೇ ನಮ್ಮ ಮುಖ್ಯೋದ್ದೇಶ, ನಾವು ರಾಜಕೀಯದಲ್ಲಿ ಭಾಗವಹಿಸುವುದಿಲ್ಲ ಎಂದು ಜ॥ ಸರ್ ಫಿಲಿಪ್ ಕ್ರಿಸ್ಟಿಸನ್ ಮತ್ತೆ ಪ್ರಕಟಿಸಿದ್ದಾರೆ. ಜಾವಾದಲ್ಲಿ ಇನ್ನೂ ಅಶಾಂತಿ ಹರಡಿರುವುದಾಗಿಯೂ ಅರಾಜಕತೆ ಹಬ್ಬಿರುವುದಾಗಿಯೂ ಬ್ರಿಟಿಷ್ ಅಧಿಕಾರಿಯೊಬ್ಬರು ದೂರು ಕೊಟ್ಟಾಗ ಡಾ॥ ಸೆಕ್ರಾನೋರವರು ಅದನ್ನು ಪರಿಶೀಲಿಸುವುದಾಗಿ ತಿಳಿಸಿದರು. ಈಗ ಅನೇಕ ಕಡೆಗಳಲ್ಲಿ ಪರಿಸ್ಥಿತಿ ಹತಬಂದಿಗೆ ಬಂದಿದೆ.

ಫಿನ್‌ಲೆಂಡಿನೊಡನೆ ಒಪ್ಪಂದ

ಫಿನ್‌ಲೆಂಡಿನೊಡನೆ ಶಾಂತಿ ಕೌಲು ಮಾಡಿಕೊಳ್ಳುವ ಬಗ್ಗೆ ಬ್ರಿಟನ್ ಮತ್ತು ರಷ್ಯಗಳಿಗೆ ಒಪ್ಪಂದವಾಗಿದೆ.

ಇಟಲಿ, ರುಮೇನಿಯಾ, ಬಲ್ಗೇರಿಯಾ ಮತ್ತು ಹಂಗೇರಿಗಳೊಡನೆ ಶಾಂತಿ ಕೌಲುಗಳನ್ನು ಮಾಡಿಕೊಳ್ಳುವ ಬಗ್ಗೆ ಎದ್ದಿದ್ದ ಅನೇಕ ಪ್ರಶ್ನೆಗಳನ್ನೂ ಸಹ ಬ್ರಿಟನ್, ರಷ್ಯ ಮತ್ತು ಅಮೆರಿಕನ್ ಸಂಯುಕ್ತ ಸಂಸ್ಥಾನಗಳು ಒಡಂಬಡಿಕೆಯಿಂದ ಇತ್ಯರ್ಥಗೊಳಿಸಿವೆ. ಬ್ರಿಟನ್, ರಷ್ಯ ಮತ್ತು ಅಮೆರಿಕನ್ ಸರ್ಕಾರಗಳ ಮುಖ್ಯಸ್ಥರು ಅಂದರೆ ಅಟ್ಲಿ ಸ್ಟಾಲಿನ್ ಮತ್ತು ಟ್ರೂಮನ್‌ರವರೂ ಈ ಬಗ್ಗೆ ವ್ಯವಹಾರ ನಡೆಸಿದ್ದಾರೆ

ಮಿತ್ರ ನಾಯಕರಲ್ಲಿ ಭಿನ್ನಾಭಿಪ್ರಾಯ

ಪೋಟ್ಸ್‌ಡಾಂ ಘೋಷಣೆಯನ್ನು ಚಾಚೂ ತಪ್ಪದೆ ಅನುಸರಿಸಿ, ಅದರ ಪ್ರಕಾರ ಶಾಂತಿ ಕೌಲಿನ ರಚನೆಯಲ್ಲಿ ಫ್ರಾನ್ಸ್ ಮತ್ತು ಚೀಣದ ವಿದೇಶಾಂಗ ಮಂತ್ರಿಗಳು ಭಾಗವಹಿಸಲು ಅವಕಾಶವಿಲ್ಲ—ಎಂಬುದೇ ರಷ್ಯ ವಿದೇಶಾಂಗ ಮಂತ್ರಿ ಮೊಲಟೋಫರ ವಾದ! ಪೋಟ್ಸ್‌ಡಾಂನಲ್ಲಿ ಆದ ಒಡಂಬಡಿಕೆಯ ಬಗ್ಗೆ ಸ್ಟಾಲಿನ್ನರಿಗೂ, ಅಟ್ಲಿ ಮತ್ತು ಟ್ರೂಮನ್ನರಿಗೂ ಭಿನ್ನ ತಿಳುವಳಿಕೆಯುಂಟಾಗಿದೆ! ಮೊಲಟೋಫರ ವಾದ ಪೋಟ್ಸ್‌ಡಾಂ ಘೋಷಣೆಯ ಮೂಲ ತತ್ವಕ್ಕೇ ವಿರೋಧವಾಗಿದೆ—ಎಂದು ಅಮೆರಿಕನ್ ವಿದೇಶಾಂಗ ಮಂತ್ರಿಯಾದ ಬೈರನ್ಸ್‌ರವರ ಪ್ರತಿವಾದ! ಕಾಮನ್ಸ್ ಸಭೆಯಲ್ಲಿ ಇಷ್ಟರಲ್ಲೇ ಈ ವಿಚಾರ ಕುರಿತು ಪೂರ್ಣ ವರದಿ ಒಪ್ಪಿಸುವುದಾಗಿ ಬ್ರಿಟಿಷ್ ವಿದೇಶಾಂಗ ಮಂತ್ರಿ ಬೆವಿನ್ ಹೇಳಿದ್ದಾರೆ

ನಾಜಿ ಚಳುವಳಿ ಇನ್ನೂ ಉಳಿದಿದೆ

ಎಲ್ಲೋ ಕೆಲವು ಪ್ರಮುಖ ಬ್ರಿಟಿಷ್ ಅಧಿಕಾರಿಗಳಿಗ ಮಾತ್ರ ಗೊತ್ತಿದ್ದ ಹಿಟ್ಲರನ ಗುಪ್ತ ಸಮಾಧಿಯನ್ನು ಪತ್ತೆ ಹಚ್ಚಿ ಸಮಾಧಿಯನ್ನು ಪುಷ್ಪಗಳಿಂದ ಅಲಂಕರಿಸಲಾಗಿದೆ. ಇದರಿಂದ ನಾಜಿ ಚಳುವಳಿಯು ಇನ್ನೂ ಜೀವಂತವಾಗಿದೆ ಎಂಬುದು ಸ್ಪಷ್ಟವಾದಂತಾಯಿತು. ಆದರೂ ಹಿಟ್ಲರನ ಶವವನ್ನು ತೆಗೆದುಕೊಂಡು ಹೋಗದಿರುವುದು ಆಶ್ಚರ್ಯಕರವಾಗಿದೆ

ಭಾರತೀಯರಿಗೆ ಅಮೆರಿಕನ್ ನಾಗರಿಕತ್ವ

ಅಮೆರಿಕದಲ್ಲಿರುವ ಭಾರತೀಯರು ಅಲ್ಲಿನ ನಾಗರಿಕರಾಗಲು ಇರುವ ತೊಂದರೆಯನ್ನು ತಪ್ಪಿಸಲು ತಯಾರಾಗಿರುವ ಇಂಡಿಯನ್ ಇಮಿಗ್ರೇಷನ್ ಬಿಲ್ಲಿಗೆ ಅಧ್ಯಕ್ಷ ಟ್ರೂಮನ್‌ರವರು ಬೆಂಬಲ ಇತ್ತಿದ್ದಾರೆ

ಬೊಂಬಾಯಿ ಗಲಭೆಯ ಪರಿಸ್ಥಿತಿ

ಬೊಂಬಾಯಿ ಕೋಮುವಾರು ಗಲಭೆಯಲ್ಲಿ ಇಲ್ಲಿಯವರೆಗೆ ೩೬ ಮಂದಿ ಮಡಿದು, ೧೭೪ ಮಂದಿ ಗಾಯಗೊಂಡಂತಾಗಿದೆ ೯೦೦ ಮಂದಿವರೆಗೆ ದಸ್ತಗಿರಿಯಾಗಿದೆ ಈಚೆಗೆ ಬಸ್, ಟ್ರಾಂ ಮತ್ತು ಜನರ ಓಡಾಟಗಳು ಸಾಧಾರಣಸ್ಥಿತಿಗೆ ಬರುತ್ತಿವೆ. ಪೂನಾದಿಂದ ಬಂದ ಗವರ್ನರು ಸರ್ ಜಾನ್ ಕಾಲ್‌ವಿಲ್‌ರವರು ಗಲಭೆ ಆದ ಪ್ರದೇಶಗಳಲ್ಲಿ ಪ್ರವಾಸಮಾಡಿದರು. ಅವರು ನಗರದ ಶೆರೀಫರು, ಮೇಯರರು, ಪೋಲೀಸ್ ಮತ್ತು ಮಿಲಿಟರಿ ಅಧಿಕಾರಿಗಳನ್ನು ಒಟ್ಟುಗೂಡಿಸಿಕೊಂಡು ಸಮಾಲೋಚಿಸಿದರು. ಪರಿಸ್ಥಿತಿ ಈಗ ಉತ್ತಮವಾಗಿರುವಂತೆಯೇ ಇದ್ದರೆ ಜಾಗ್ರತೆಯಲ್ಲೇ ಎಲ್ಲಾ ತಹಬಂದಿಗೆ ಬಂದು ಸಮಾಧಾನ ಪರಿಸ್ಥಿತಿ ಏರ್ಪಡಾಗುತ್ತದೆಂದು ಪೋಲೀಸರು ಅಭಿಪ್ರಾಯಪಟ್ಟಿರುವರು

|| ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ||

ಶ್ರೀರುದ್ರಸಮಾಪ್ತಿ ಸಮಾರಂಭ

ಬೆಳಗಾಂವ ಶಹರ ನಿವಾಸಿಗಳಾದ ಶ್ರೀಮಾನ್ ಸಣ್ಣಪ್ಪ ವಿರೂಪಾಕ್ಷಪ್ಪ ವಿರೂಪಾಕ್ಷಿ ಇವರು ಶ್ರೀ|| ಷ|| ಬ್ರ|| ಸುತಗಟ್ಟಿ ಪಟ್ಟದಸ್ವಾಮಿಗಳವರನ್ನು ತಮ್ಮ ಗೃಹಕ್ಕೆ ಬರಮಾಡಿಕೊಂಡು ತಾ|| ೨೬-೯-೪೬ ನೇ ಸೋಮವಾರದಿಂದ ೧೧ ದಿವಸಗಳವರೆಗೆ ಶ್ರೀಗಳವರ ಅನುಷ್ಠಾನ, ಶ್ರೀ ವೀರಭದ್ರದೇವರಿಗೆ ಮಹಾರುದ್ರಾಭಿಷೇಕ, ಪ್ರತಿದಿವಸ ಗಣಾರಾಧನೆಯನ್ನು ಅವಿಚ್ಛಿನ್ನವಾಗಿ ನಡೆಯಿಸಿದರು. ಕಡೆಯದಿವಸ ಶ್ರೀರುದ್ರಸಮಾಪ್ತಿಯು ಒಳ್ಳೇ ವೈಭವದಿಂದ ನಡೆಯಿತು. ಮನೆಯ ಯಜಮಾನಿಯವರಾದ ಶ್ರೀಮತಿ ದಾನಮ್ಮನವರು ಮಹಾಭಕ್ತಿಶಾಲಿನಿಯರಾಗಿರುವರು ಶ್ರೀಮಾನ್ ಸಣ್ಣಪ್ಪನವರು ಚಿಕ್ಕವರಿದ್ದರೂ ಭಕ್ತಿಶಾಲಿಗಳಾಗಿರುವರು. ಮಾತೃಭಕ್ತಿಯಂತೂ ಇವರಲ್ಲಿ ವಿಶೇಷವಾಗಿದೆ. ಈ ಮಹಾಶಯರಿಗೆ ಜಗದ್ಗುರು ಪಂಚಾಚಾರ್ಯರು ಆಯುರಾರೋಗ್ಯಗಳನ್ನು ಕೊಟ್ಟು ರಕ್ಷಿಸಲೆಂದು ಪ್ರಾರ್ಥಿಸುವ

ಶಿವಪುತ್ರ ವಿರೂಪಾಕ್ಷಿ

ಶ್ರೀ ಜಗದ್ಗುರು ಪಂಚಾಚಾರ್ಯ ಭಜನ ಸಮಾಪ್ತಿ, ಚೆಂಚೋಳಿ

ಸಿಡಂ ತಾಲೂಕಾ ಚೆಂಚೋಳಿ ಗ್ರಾಮದ ವೀರಶೈವ ತರುಣ ಸಂಘದವರು ಶ್ರಾವಣಮಾಸಪರ್ಯಂತವಾಗಿ ಶ್ರೀ ಜಗದ್ಗುರು ಪಂಚಾಚಾರ್ಯ ಭಜನೆಯನ್ನು ಅಸಾಧಾರಣ ಭಕ್ತಿಯಿಂದ ನೆರವೇರಿಸಿದರು. ಆ ಮಾಸದಲ್ಲಿ ಪ್ರತಿ ಸೋಮವಾರ ವೀರಶೈವ ಧರ್ಮಸಂಬಂಧವಾಗಿ ಭಾಷಣಗಳು ನಡೆಯುತ್ತಿದ್ದವು. ಭಾದ್ರಪದ ಶು|| ೫ ದಿವಸ ಜಗದಾಚಾರ್ಯರ ಲಿಂಗೋದ್ಭವಮೂರ್ತಿಗೆ ರುದ್ರಾಭಿಷೇಕಾದಿಗಳು ನೆರವೇರಿದಮೇಲೆ, ಗಣಾರಾಧನೆಯಾಯಿತು ಸಾಯಂಕಾಲ ಸಭೆಸೇರಿ ಅನೇಕರು ಅಷ್ಟಾವರಣ, ಷಟ್‌ಸ್ಥಲ, ಶಿವಾದ್ವೈತಸಿದ್ಧಾಂತಾದಿಗಳ ಬಗ್ಗೆ ಭಾಷಣ ಮಾಡಿದರು. ಆಮೇಲೆ ಜಗದಾಚಾರ್ಯರ ಜಯಘೋಷ ಮಾಡಿದ ನಂತರ ಸಭೆಯು ವಿಸರ್ಜಿಸಲ್ಪಟ್ಟಿತು

ಕೊಟ್ರಯ್ಯ ಪರ್ವತಮಠ

ಗೋಕರ್ಣಕ್ಷೇತ್ರದಲ್ಲಿ ಸ್ಥಾಪಿಸಲ್ಪಡಲಿರುವ ಮಠದ ಬಗ್ಗೆ ವಸೂಲಾದ ಹಣ.

ಅಲ್ಲಾಪುರಗ್ರಾಮದಿಂದ

8 ರೂ ಫಕೀರಪ್ಪ ಇಂಗಳಗಿ 10 ರೂ ಬಸವಣ್ಣೆಪ್ಪ ಮ್ಯಾಗೇರಿ, 5 ರೂ ಎಲ್ಲಪ್ಪ ಬೆನಕನಹಳ್ಳಿ, 5 ರೂ ಬಸಪ್ಪ ಗದಗ, 27–7–0 ಚಿಲ್ಲರೆ ವಸೂಲಿ

ಕಡಪಟ್ಟಿಗ್ರಾಮದಿಂದ

5 ರೂ ಗುರುಪಾದಯ್ಯ ಹಿರೇಮಠ, 20 ರೂ ಹಂಪಯ್ಯ ಪೂಜಾರಿ, 5 ರೂ ಲಿಂಗನಗೌಡ ಹೊಸಮನಿ, 5 ರೂ. ಬಸಪ್ಪ ಕನುಡೊಳ್ಳಿ 5 ರೂ ವೀರಪ್ಪ ಕುಬ್ಯಾಳ, 5 ರೂ ಶಿವನಪ್ಪ ಕಮತಗಿ 5 ರೂ ಗಿರೆಪ್ಪ ಚಪ್ಪರದ, 5 ರೂ ಚನ್ನಪ್ಪ ಗಿರಿಮಲ್ಲನವರ, 10 ರೂ ಒದವಣ್ಣ, 5 ರೂ ಬಸಪ್ಪ ಟೊಳ್ಳಿ, 5 ರೂ ಫಕೀರಪ್ಪ ಬೂದಿಹಾಳ, 5 ರೂ ಚನ್ನಪ್ಪ ಗುಡಿಗೇರಿ, 6 10–0 ಚಿಲ್ಲರೆ ವಸೂಲಿ

5 ರೂ ವೀರಯ್ಯ ಕಾಲಪೇಟೆ, ಹುಬ್ಬಳ್ಳಿ, 5 ರೂ ಶಂಕರದೇವರಮಠ ಮಿಸ್ರಿಕೋಟಿ, 5 ರೂ ಸಂಗನಬಸಯ್ಯ ಜಡೆಮಠ ಸಬಸಿ, 5 ರೂ ಜಡಯ್ಯ ಜಡಿಮಠ, 5 ರೂ ಹಂಪಯ್ಯ ಚೌಕಿಮಠ ಹುಬ್ಬಳ್ಳಿ

ಶಿಶುವಿನಹಳ್ಳಿಗ್ರಾಮ

10 ರೂ ಬಸವಣ್ಣಯ್ಯ ಹಿರೇಮಠ, 5 ರೂ ಸಿದ್ಧರಾಮಯ್ಯ ಹಿರೇಮಠ, 10 ರೂ. ಬಸಯ್ಯ ಬಣ್ಣದನೂಲು, 5 ರೂ ಲಿಂಗಯ್ಯ ಬಣ್ಣದನೂಲು, 27 ರೂ. ಚಿಲ್ಲರೆ ವಸೂಲಿ.

ದುಂದೂರುಗ್ರಾಮ

8 ರೂ. ಚಂದ್ರಪ್ಪಗೌಡ ಪಾಟೀಲ, 5 ರೂ. ಚಿಲ್ಲರೆ ವಸೂಲಿ.

ಬೆನ್ನೂರುಗ್ರಾಮ

20 ರೂ ಗೂಳನಗೌಡ ಪಾಟೀಲ, 12 ರೂ. ಚಿಲ್ಲರೆ ವಸೂಲಿ.

105 ರೂ. ಎಲ್. ಜಿ. ಹೋಬಳ ಅಂಡ್ ಸನ್ಸ್ ಹೈದರಾಬಾದು.

ಸೆಕ್ರೆಟರಿ, ಗೋಕರ್ಣ ವೀರಶೈವಮಠ.

[೧ನೆಯಪುಟದಿಂದ ಮುಂದವರಿದುದು]

೧೫. ಶೋಕ ಮಾಡುವುದನ್ನು ಸರ್ವಥಾ ಬಿಡಬೇಕು ಶೃಂಗಾರ ಹಾಗೂ ಅಲಂಕಾರ ರಸಗಳಿಂದ ಕಾಮವಾಸನೆಯು ಜಾಗೃತವಾಗುತ್ತದೆಂಬುದನ್ನು ನೆನಪಿನಲ್ಲಿಡಬೇಕು. ಶೃಂಗಾರ ಮಾಡುವವನು ತಾನೂ ಮುಳುಗುವುದಲ್ಲದೆ ಇತರರನ್ನೂ ಮುಳುಗಿಸುತ್ತಾನೆ

೧೬ ಪುಷ್ಪಮಾಲೆಗಳನ್ನು ಧರಿಸಕೂಡದು. ಗಂಧವನ್ನು ಲೇಪಿಸಬಾರದು ಅಲಂಕಾರ ಮಾಡಿಕೊಳ್ಳಬಾರದು ಜರ್ಬು ಮಾಡುವುದನ್ನು ಬಿಡಬೇಕು. ಕೂದಲು ಬೆಳೆಸಬಾರದು, ಕನ್ನಡಿಯಲ್ಲಿ ಮುಖ ನೋಡಿಕೊಳ್ಳಬಾರದು, ತುಟಿಗಳನ್ನು ಕೆಂಪಗೆ ಮಾಡಲು ತಾಂಬೂಲವನ್ನು ತಿನ್ನಬಾರದು, ಮಧುಸೇವನೆ ಮಾಡಬಾರದು. ಉತ್ತೇಜಕ ಔಷಧಗಳನ್ನು ಸೇವಿಸಬಾರದು

೧೭ ಮೂತ್ರ ಹಾಗೂ ಮಲವಿಸರ್ಜನೆ ಮಾಡಿದ ಮೇಲೆ, ಆಯಾ ಅಂಗಗಳನ್ನು (ಇಂದ್ರಿಯಗಳನ್ನು) ತಣ್ಣೀರಿನಿಂದ ತೊಳೆಯಬೇಕು

೧೮ ಮಲಮೂತ್ರಗಳನ್ನು ಎಂದಿಗೂ ತಡೆಯಬಾರದು ಯಥಾಸಂಭವ ತಣ್ಣೀರಿನಿಂದ ಪ್ರತಿನಿತ್ಯವೂ ಸ್ನಾನ ಮಾಡಬೇಕು

೧೯ ನಿಯಮಿತ ವ್ಯಾಯಾಮ ಮಾಡುವುದಲ್ಲದೆ ಸಾಧ್ಯವಿದ್ದರೆ ಕೆಲವು ಯೋಗಾಸನಗಳ ಹಾಗೂ ಪ್ರಾಣಾಯಾಮದ ಅಭ್ಯಾಸ ಮಾಡಬೇಕು

೨೦ ಕೌಪೀನ ಅಥವಾ ಲಂಗೋಟಿಯನ್ನು ಅವಶ್ಯಕವಾಗಿ ಧರಿಸಲೇಬೇಕು

೨೧ ಭಗವಂತನ ಮೂರ್ತಿಯನ್ನು ಪ್ರೇಮಪೂರ್ವಕ ದರ್ಶನಮಾಡಬೇಕು ಸಾಧು-ಸಂತ ಹಾಗೂ ಮಹಾಪುರುಷರ ಸೇವೆಯನ್ನು ಮನಃಪೂರ್ವಕವಾಗಿ ಮಾಡಬೇಕು

೨೨ ಪ್ರತಿದಿನ ನಿಯಮಿತಕಾಲದಲ್ಲಿ ಪರಮಾತ್ಮನ ಧ್ಯಾನವನ್ನು ಅವಶ್ಯ ಮಾಡಬೇಕು

೨೩ ಯಾವನೂ ವ್ಯಭಿಚಾರಿಯ ವಿಷಯವನ್ನು ಕುರಿತು ಚರ್ಚೆಮಾಡಬಾರದು. ಕೇಳಲೂ ಬಾರದು. ಅಂತಹವನ ಬಳಿ ಕೂಡಲೂ ಬಾರದು

೨೪ ನಿರಂತರ ಭಗವನ್ನಾಮವನ್ನು ಜಪಿಸಬೇಕು. ವಿಶ್ವಾಸದಿಂದ ಮಾಡುವುದಾದರೆ ಬಹು ಉತ್ತಮ. ಕಾಮವಾಸನೆಯು ಜಾಗ್ರತವಾದರೆ ಶಿವನಾಮಜಪವನ್ನು ಜೋರಾಗಿ ಉಚ್ಚರಿಸಬೇಕು ಕಾಮವಾಸನೆಯು ಕೀರ್ತನೆ ಹಾಗೂ ಶಿವನಾಮಜಪದ ಮುಂದೆ ಎಂದಿಗೂ ನಿಲ್ಲಬಾರದು.

೨೫ ಜಗತ್ತಿನಲ್ಲಿ ವೈರಾಗ್ಯಭಾವನೆಯಿಟ್ಟು ಅದರ ಅನಿತ್ಯತೆಯನ್ನು ಮನನಮಾಡಬೇಕು

೨೬ ಸ್ತ್ರೀಯರೂಪದಲ್ಲಿ ಪುರುಷನೂ ಪುರುಷನ ರೂಪದಲ್ಲಿ ಸ್ತ್ರೀಯೂ ಒಬ್ಬರ ಶರೀರದಲ್ಲೊಬ್ಬರು ಮೋಹವೆಣಿಸಲು ಕಲಿಯಬೇಕು ಚರ್ಮದಿಂದ ಮುಚ್ಚಲ್ಪಟ್ಟಿರುವ ಶರೀರದಲ್ಲಿ ಮಾಂಸ, ರಕ್ತ, ಕಫ, ಮೂತ್ರ, ಮೂಳೆ ಮೊದಲಾದ ಎಲ್ಲಾ ಅಪವಿತ್ರ ಪದಾರ್ಥಗಳಿವೆಯೆಂಬುದನ್ನು ಯೋಚಿಸಿ, ಈ ವಿಚಾರದಿಂದ ಪರಸ್ಪರ ರಮಣೀಯತೆಯನ್ನು ನಿವಾರಿಸಬೇಕು

೨೭ ಮಹಾಪುರುಷರ ಮತ್ತು ವೀರ ಬ್ರಹ್ಮಚಾರಿಗಳ ಚರಿತ್ರೆಗಳನ್ನು ಮನನಮಾಡಬೇಕು.

೨೮. ಭಗವತ್ಪ್ರಾಪ್ತಿಯೇ ತನ್ನ ಅಂತಿಮ ಗುರಿಯೆಂಬುದನ್ನು ಸದಾ ಧ್ಯಾನದಲ್ಲಿಡಬೇಕು

ಸ್ವೀಕಾರ

ಬೆಳಗಾಂವ ನಗರದಲ್ಲಿರುವ ಮ|| ರಾ|| ಸಣ್ಣಪ್ಪ ವಿರೂಪಾಕ್ಷಿ ಇವರು ಶ್ರೀ ರುದ್ರಸಮಾಪ್ತಿಯನ್ನು ವೈಭವದಿಂದ ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂ. ಯು ಶ್ರೀ|| ಷ|| ಬ್ರ|| ಸುತಗಟ್ಟಿ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರು ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ವೀರಶೈವಮತದಲ್ಲಿ ಸದ್ಯಃ ದೊರೆಯತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು ಈ ಗ್ರಂಥವು ಈಗ್ಗೆ ಸುಮಾರು **೨ಸಾವಿರ** ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವುದು ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಅದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ ಈ ಕೊರತೆಯನ್ನು ದೂರಮಾಡುವದಕ್ಕಾಗಿ **ಪಂಡಿತ ಶ್ರೀಕಾಶೀನಾಥ ಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ವಾಚಕರಿಗೆ ವೇದ್ಯವಾಗುವುದು ವಾಚಕರ ಅನುಕೂಲ್ಯಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ ಈ ಗ್ರಂಥವು ಒಟ್ಟು ೯೩೩ ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿವೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರು ರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರವಾದ ಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು **ಬೆಲೆ ೨ ರೂಪಾಯಿ**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ X ೧೪ ಬೆಲೆ ೧ಕ್ಕೆ	೦—೬—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು)ಸೈಜು ೧೪ X ೧೦ ಬೆಲೆ	೦—೬—೦
ಪಂಚಾಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ X ೧೦ ಬೆಲೆ	೦—೪—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ X ೧೦ ಬೆಲೆ ೧ಕ್ಕೆ	೦—೪—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೬
ಶ್ರೀ ಶ್ರೀಶೈಲಕ್ಷೇತ್ರ ವಿರಾಜಮಾನ ಶ್ರೀ ಜಗದ್ಗುರು ಪಂಡಿತಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—೬
ಶ್ರೀ ಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀ ರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೬

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೭ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ-ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು)	೮ ಆಣೆ
ವೀರಶೈವಮಹಾತ್ಮ್ಯ	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ) ...	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ) ...	೮ ಆಣೆ
ಆಗಮಪರಿಜ್ಞಾನ ..	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ ...	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು. ೨ನೆಯ ಆವೃತ್ತಿ)	೧। ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಶ್ರೀಕರಭಾಷ್ಯಂ (ಬ್ರಹ್ಮಸೂತ್ರ)	೧॥ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧॥ ರೂ
ವೀರಶೈವರತ್ನ (೫ನೆಯ ಆವೃತ್ತಿ, ೭೦ ಮಹತ್ವದ ಫೋಟೋಗಳಿರುವವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಿಸಲ್ಪಟ್ಟುದು)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಪಾರಮೇಶ್ವರಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ವೀರಶೈವಸಿದ್ಧಾಂತಸುಧಾಕರ ...	೨ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ) ...	೮ ರೂ
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*)	8 As
Speeches by Pandit Shri Kashinatha Shastriji (*English*)	12 As
लिंगधारणचंद्रिका (संस्कृत)	३ रु.
वीरशैवरत्न (मराठी)	१ रु
महानारायणोपनिषत् (वीरशैवभाष्य-संस्कृत)	१ रु.
सिद्धांतशिखामणि (मूल)	८ आ
षट्स्थलेश्वरकारिका (संस्कृत)	२ आ

ಮ್ಯಾನೇಜರು — **ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾ ಪಂಚಾಸ್ಯಪೀಠಾಧಿಪಾ । ಪಂಚಕ್ಲೇಶವಿನಾಶಕಾ ಪರತರಶ್ರೀಪಂಚಲಿಂಗೋದ್ಭವಾ ।
ಪಂಚಾಚಾರನಿಯಾಮಕಾ ಪರಿಲಸತ್ಪಂಚಾಕ್ಷರೀಬೋಧಕಾ । ಪಂಚಾಚಾರ್ಯಜಗದ್ಗುರೂತ್ತಮವರಾಃ ಪಾಲಿಪ್ಪದೀಲೋಕಮಂ ।

ವಾರ್ಷಿಕ ಚಂದಾ ... ಒದವರಿಗೆ ೨ ರೂ ೪ ಆಣೆ ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೮ ಆಣೆ

ಸಂಪುಟ ೧೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೨ನೇ ಅಕ್ಟೋಬರ್ ೧೯೪೫ [ಸಂಚಿಕೆ ೨೩

ವಿಜಯದಶಮಿ ಮಹೋತ್ಸವ

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀಮಜ್ಜಗದ್ಗುರು ಶಿವಾನಂದರಾಜೇಂದ್ರಶಿವಾಚಾರ್ಯಮಹಾಸ್ವಾಮಿಗಳವರ ವಿಜಯದಶಮಿ ಮಹೋತ್ಸವವು ತಾ॥ 10-45 ನೇ ಮಂಗಳವಾರ ಬಿಡದಿ ಗ್ರಾಮದಲ್ಲಿ ಅತ್ಯಂತ ವೈಭವದಿಂದ ನಡೆಯಿತು ಅದಿನ ಪ್ರಾತಃಕಾಲ ಸಾಹುಕಾರ್ ಚನ್ನಶೆಟ್ಟರವರ ರೇವಣ್ಣನವರ ಗೃಹದಲ್ಲಿ ಜಗದಾಚಾರ್ಯರ ಮಹಾಪಾದಪೂಜೆಯನ್ನು ವಿಶೇಷ ವೈಭವದಿಂದ ನಡೆಸಿದ ನಂತರ ಸಾಯಂಕಾಲ ೯ ಗಂಟೆಗೆ ಸರಿಯಾಗಿ ಬಿಡದಿ ಗ್ರಾಮದ ಭಕ್ತಮಂಡಲಿಯವರು ಸಮ್ಮಿಲಿತರಾಗಿ ತಳಿರುತೋರಣ ರಂಭಾಸ್ತಂಭಗಳಿಂದಲಂಕರಿಸಿದ ಬಿಡದಿ ರಾಜಬೀದಿಯಲ್ಲಿ ಸಮಸ್ತ ಬಿರುದಾವಳಿಯಿಂದ ಮಂಗಳವಾದ್ಯಗಳು ಮೊಳಗುತ್ತಿರಲು ಶ್ರೀ ಜಗದ್ಗುರುಗಳವರು ನವರತ್ನ ಸುವರ್ಣಾಭರಣಪರಿಭೂಷಿತರಾಗಿ ಮಹೋತ್ಸವಪೂರ್ವಕ ದಯಮಾಡಿಸಲು ಭಕ್ತವೃಂದವು ಜಯಜಯಕಾರ ಮಾಡುತ್ತಿರಲು ಉತ್ಸವವನ್ನು ನಡೆಯಿಸಿದರು ಮಂದಗಮನದಿಂದ ಸಾಗುತ್ತಿದ್ದ ಮಹೋತ್ಸವವು ತಮ್ಮ ತಮ್ಮ ಮಂದಿರಗಳ ಮುಂಭಾಗಕ್ಕೆ ಆಗಮಿಸಿದ ಕೂಡಲೇ ಭಕ್ತರು ಫಲಪುಷ್ಪಗಳನ್ನು ಸಮರ್ಪಿಸುತ್ತಿದ್ದರು ಈರೀತಿಯಾಗಿ ಮಹೋತ್ಸವವು ಬಿಡದಿ ಗ್ರಾಮಕ್ಕೆ ½ ಮೈಲು ದೂರದಲ್ಲಿದ್ದ ಶಮೀವೃಕ್ಷದ ಬಳಿ ದಯಮಾಡಿಸಿದನಂತರ ತಳಿರುತೋರಣ ರಂಭಾಸ್ತಂಭಗಳಿಂದ ಅಲಂಕರಿಸಿದ ಶಮೀ ಮಂಟಪದಲ್ಲಿ ಏರ್ಪಡಿಸಿದ್ದ ಭದ್ರಾಸನದಲ್ಲಿ ಶ್ರೀ ಜಗದ್ಗುರುಗಳವರು ಮಂಡಿಸಿ ವೈದಿಕರಿಂದ ಶಮೀಪೂಜಾಕಾರ್ಯವನ್ನು ನೆರವೇರಿಸಿ ಶಮೀ ಪತ್ರವನ್ನು ಸ್ವೀಕರಿಸಿ ಸಮಸ್ತ ಭಕ್ತರಿಗೂ ಆಶೀರ್ವದಿಸಿದರು ನಂತರ ರಾತ್ರಿ ದೀಪವೈಭವದೊಡನೆ ತಿರುಗಿಬರುವಾಗ್ಗೆ ತಮ್ಮ ತಮ್ಮ ಭವನಗಳ ಮುಂಭಾಗದಲ್ಲಿ ಸುವಾಸಿನಿಯರು ಗುರುಸಾರ್ವಭೌಮರಿಗೆ ಮಂಗಲನೀರಾಜನವನ್ನು ಬೆಳಗುತ್ತಿದ್ದರು ಈ ಪ್ರಕಾರವಾಗಿ ಉತ್ಸವವು ಮುಂದುವರಿದು ಚಪ್ಪರ ತಳಿರುತೋರಣ ರಂಭಾಸ್ತಂಭಗಳಿಂದಲಂಕೃತವಾದ ಸಾಹುಕಾರ್ ಮ॥ ಚನ್ನಶೆಟ್ಟರವರ ರೇವಣ್ಣನವರ ಮಂದಿರದಲ್ಲೇರ್ಪಡಿಸಿದ್ದ ಸಭಾಭವನವನ್ನು ಪ್ರವೇಶಿಸಿತು. ಅನಂತರ ಜಗದ್ಗುರುಗಳ ಸಮ್ಮುಖದಲ್ಲಿ ಸಭೆಗೂಡಿತು ಸಭೆಯಲ್ಲಿ ಶ್ರೀ ಸದ್ಗುರುಸಾರ್ವಭೌಮರು ತಮ್ಮ ಅಮೃತವಾಣಿಯಿಂದ ವಿಜಯದಶಮಿಯ ಮಹತ್ವವನ್ನು ಪ್ರತಿಪಾದಿಸಿ ಶ್ರೀಮನ್ಮಹಾರಾಜರವರಿಗೆ ಆಯುಸ್ಸನ್ನು ಕೋರಿ ಸರ್ವರಿಗೂ ಶುಭಾಶೀರ್ವಾದವನ್ನು ಅಪ್ಪಣೆಕೊಡಿಸಿದನಂತರ ಆಸ್ಥಾನವಿದ್ವಾನ್ ಪುರಕಥಾಪಂಡಿತ ಶಿವದೇವಶಾಸ್ತ್ರಿಗಳವರ ಭಾಷಣವಾದ ಮೇಲೆ ಭಕ್ತಮಂಡಲಿಯವರು ಶ್ರೀ ಜಗದ್ಗುರು ಸನ್ನಿಧಿಗೆ ಕಾಣಿಕೆಯನ್ನು ಸಮರ್ಪಿಸಿದರು ಅನಂತರ ಶ್ರೀಸನ್ನಿಧಿಯವರು ಆಸ್ಥಾನವಿದ್ವಾಂಸರುಗಳಿಗೆ ವರ್ಷಾಶನವನ್ನೂ ಗುಬ್ಬಿ ರೇವಣಾರಾಧ್ಯರವರಿಗೆ "ವೈದ್ಯರತ್ನ" ಎಂಬ ಪ್ರಶಸ್ತಿಯನ್ನೂ ಸುವರ್ಣಪದಕದೊಡನೆ ದಯಪಾಲಿಸಿ ಸಮಸ್ತ ಭಕ್ತಮಂಡಲಿಗೂ ಫಲಾಶೀರ್ವಾದವನ್ನು ದಯಪಾಲಿಸಿದರು ಒಳಿಕ ಗುರುಸಾರ್ವಭೌಮರಿಗೆ ಮಹಾಮಂಗಲಾರತಿಯನ್ನು ಮಾಡಿ ಜಯಜಯಕಾರದೊಡನೆ ಮಹೋತ್ಸವ ಕಾರ್ಯವು ಪೂರ್ಣಗೊಳಿಸಲ್ಪಟ್ಟಿತು ಈ ವಿಜಯದಶಮಿಯ ಮಹೋತ್ಸವದಲ್ಲಿ ಭಾಗಿಗಳಾದ ಸಮಸ್ತರಿಗೂ ಶ್ರೀ ಜಗದಾಚಾರ್ಯರು ಸಮಸ್ತ ಸನ್ಮಂಗಳಗಳನ್ನುಂಟುಮಾಡಲೆಂದಾಶಿಸುವ

ಆಚಾರ್ಯತತ್ವಪ್ರಕಾಶಕ,
ಬಿ ಸಿ ರೇವಣ್ಣಶಾಸ್ತ್ರಿ

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಏನೆಂಥ ಕಾಲಕ್ಷೇಪ

ಕಳೆದ ಶ್ರಾವಣ ಶುದ್ಧ ೧ ರಿಂದ ಇದೇ ಆಶ್ವಯುಜ ಶುದ್ಧ ೩ ವರೆಗೆ ಕೀರ್ತನಕೇಸರಿ ಕವಿಭೂಷಣೇತ್ಯಾದಿ ಬಿರುದಾಂಕಿತರಾದ ವೇ॥ ಗುಬ್ಬಿ ಶಿವರುದ್ರಶಾಸ್ತ್ರಿಗಳವರು ಕುಂಸಿ, ಹಾರನಹ ತ್ಯಾಜವಳ್ಳಿ, ಚಿನವಳ್ಳಿ, ಬಾಳೇಕೊಪ್ಪ, ಸದಮೊನ್ನ, ಆನಂದಪುರ ಮುಂತಾದ ಗ್ರಾಮಗಳ ಮಹಾಜನರ ಪ್ರಾರ್ಥನೆಯಂತೆ ನಿಯಮಿತ ದಿವಸಗಳಲ್ಲಿ ಆಯಾಯ ಗ್ರಾಮಗಳಿಗೆ ಆಗಮಿಸಿ ಜನತೆಗೆ ಅತ ವಶ್ಯಕವಾದ ಮನೋವಿಕಾಸವನ್ನೂ, ಗುರುಭಕ್ತಿಯನ್ನೂ, ದೇಶಾಭಿಮಾನವನ್ನೂ, ಧರ್ಮನಿರತಿಯನ್ನೂ, ಆತ್ಮಸ್ವಾತಂತ್ರ್ಯವನ್ನೂ, ಧೈರ್ಯಸ್ಥೈರ್ಯಗಳನ್ನೂ ಪ್ರೇಮಾನಂದವನ್ನೂ ಉಂಟುಮಾಡುವ, ಉಜ್ವಲ ಮಹಾತ್ಮರ, ಸಾಧ್ವೀಮಣಿಯರ ಚರಿತ್ರೆಗಳನ್ನು, ಕೀರ್ತನರೂಪವಾಗಿ ಶಾಸ್ತ್ರೀದಾಹರಣೆಗಳಿಂದ ಗಂಭೀರವಾಗಿ ಇಂಪಾದ ಪಕ್ಕವಾದ್ಯಗಳೊಡನೆ ಅನುವಾದ ಮಾಡಿದರು ಈ ಧಾರ್ಮಿಕ ಸಂಕೀರ್ತನೆಗಳ ಪ್ರಭಾವದಿಂದ ಅಲ್ಲಲ್ಲಿ ತಲೆದೋರುತ್ತಿದ್ದ ಹುರುಳಿಲ್ಲದ ಅಶಾಸ್ತ್ರೀಯ ವಿಷಯಪ್ರಚಾರವು ಸ್ತಬ್ಧವಾಗಿ ನಿರ್ನಾಮವೆನಿಸಿತು ಕುಂಸಿ ತಾಲ್ಲೂಕು ಅಮಲ್ದಾರ್ ಸಾಹೇಬರವರಾದ ಟಿ ಚನ್ನಬಸವಪ್ಪನವರು ಕೆಲವು ಸ್ಥಳಗಳಲ್ಲಿ ನಡೆದ ಕೀರ್ತನೆಗಳಿಗೆ ದಯಮಾಡಿಸಿ ಸಭಾಧ್ಯಕ್ಷತೆಯನ್ನು ವಹಿಸಿದ್ದರು ಶ್ರೀಜಗದ್ಗುರು ಪಂಚಾಚಾರ್ಯರು ಸಕಲರಿಗೂ ಸೌಖ್ಯವನ್ನೀಯಲೆಂದು ಹಾರೈಸುವ,

ಧರ್ಮಾಭಿಮಾನಿ

ಶ್ರಾವಣಮಾಸವೂ, ಸತ್ಕಾರ್ಯಕ್ರಮಗಳೂ, ಕೊಟ್ಟೂರು

ಒಬ್ಬಾರಿ ಡಿ॥ ಕೊಟ್ಟೂರು ಕಟ್ಟಿಮನೆ ವೀರಶೈವ ಮಂಡಲಿಯವರು ಪವಿತ್ರವಾದ ಶ್ರಾವಣಮಾಸದಲ್ಲಿ ೪ ೫ ಕಡೆ ನಿತ್ಯಭಜನೆ, ಸಪ್ತಾಹ ಭಜನೆ, ಶ್ರೀರುದ್ರಾಭಿಷೇಕ ಮಹಾಪೂಜಾದಿಗಳನ್ನು ನಡೆಯಿಸಿದರು ಅಕಸ್ಮಾತ್ ಬಂದಂಥ ಸೂರಕೋಡ ವೇ॥ ಚನ್ನಕವಿ ಇವರಿಂದ ೨ ೧೦ ಶಿವಕೀರ್ತನಗಳೂ ನಡೆದವು ಕೇರಬೈಲಿನಲ್ಲಿರುವ ನಂದೀಶ್ವರನ ದೇವಸ್ಥಾನದ ಸಪ್ತಾಹ ಭಜನಾಸಂಘದವರು ಭಜನೆಯನ್ನು ಪೂರ್ತಿಗೊಳಿಸುವಾಗ್ಗೆ ಹಿರೇಮಠದ ಶ್ರೀ ಷ॥ ಬ್ರ॥ ಪಟ್ಟದ ಭೂತಭುಜಂಗಸ್ವಾಮಿಗಳವರನ್ನ ಪಂಚಕಲಶಾದಿಗಳಿಂದ ಅಲಂಕರಿಸಲ್ಪಟ್ಟ ಪಲ್ಲಕ್ಕಿಯಲ್ಲಿ ಮೂರ್ತಮಾಡಿಸಿ ವಾದ್ಯವೈಭವದಿ ದಲೂ, ನಂದಿಧ್ವಜ ಛತ್ರಚಾಮರಾದಿಗಳಿಂದಲೂ ಮುಖ್ಯ ಮುಖ್ಯ ಬೀದಿಗಳಲ್ಲಿ ಉತ್ಸವಮಾಡಿದರು ಮೂರು ದಿವಸಗಳವರೆಗೂ ಅನ್ನಸಂತರ್ಪಣೆ ನಡೆಯಿತು ಇದಲ್ಲದೆ ರಾಮಲಿಂಗನ ದೇವಸ್ಥಾನದ ಪಂಚಾಚಾರ್ಯ ಭಜನಾಸಂಘದವರು ಸದರಿ ಶ್ರೀಗಳವರನ್ನು ಉತ್ಸವ ಪೂರ್ವಕ ಕರೆದುಕೊಂಡುಹೋಗಿ ಅನ್ನಸಂತರ್ಪಣೆಯಿಂದ ಭಜನೆಯನ್ನು ಸಮಾಪ್ತಿಗೊಳಿಸಿದರು ಆ ಕಾಲಕ್ಕೆ ಸದರಿ ಶ್ರೀಗಳವರ ರಜತಪದಕವನ್ನು ಭಜನಾ ಸಂಘಕ್ಕೆ ಆಶೀರ್ವದಿಸಿದರು

ಪ್ರತ್ಯಕ್ಷದರ್ಶಿ

ಶ್ರೀ ದೇವೀಪುರಾಣ ಶ್ರವಣ

ಧಾರವಾಡ ಡಿ। ಗದಗ ಶಹರದ ಚವಡಕಟ್ಟಿಯಲ್ಲಿ ಇದೇ ಆಶ್ವಯುಜ ಶುದ್ಧ ೧ ರಿಂದ ಶ್ರೀ ದೇವೀಪುರಾಣ ಶ್ರವಣವು ಬಹಳ ಭಕ್ತಿಶ್ರದ್ಧೆಗಳಿಂದ ನಡೆಯಿತು ವೇ॥ ವಿರೂಪಾಕ್ಷಯ್ಯ ಭದ್ರಾಪುರ ಇವರು ಪುರಾಣವನ್ನು ಕೇಳುವರೆಲ್ಲರ ಮನಸ್ಸಿನಲ್ಲಿ ಭಕ್ತಿಯುದಯಿಸುವಂತೆ ಬಹಳ ಇಂಪಾಗಿ ಹೇಳಿ ವಿಜಯದಶಮಿದಿವಸದ ವೇಳೆಗೆ ಮುಗಿಸಿದರು ಈ ಪುರಾಣ ಶ್ರವಣಕ್ಕೆ ಅನೇಕ ಜನರು ಸೇರಿ ಶ್ರೀ ದೇವೀಮಹಾತ್ಮ್ಯವನ್ನು ಕೇಳಿ ಧನ್ಯರಾದರು ಇವರೆಲ್ಲರಿಗೂ ದೇವಿಯು ಆಯುರಾರೋಗ್ಯಭಾಗ್ಯಾದಿಗಳನ್ನು ಕೊಟ್ಟು ಕಾಪಾಡಲೆಂದು ಹಾರೈಸುತ್ತೇವೆ

ಗದಗ ವಕ್ಕಲಗೇರಿ ಭಕ್ತಮಂಡಲಿ

ಸ್ವೀಕಾರ

ಶಿವಮೊಗ್ಗೆ ... ಶಿಪಟೂರಿನಲ್ಲಿರುವ ಶ್ರೀಮಾನ್ ದಾವಣಗೆರೆ ಮಾಗಾನಹಳ್ಳಿ ಮಹಾಲಿಂಗಪ್ಪನವರ ಮೊಮ್ಮಗ ಚಿ॥ ಕೊಟ್ರಬಸಪ್ಪನಿಗೆ ಅದೇ ಊರಿನಲ್ಲಿರುವ ಶ್ರೀಮಾನ್ ಅರಳಿ ಚನ್ನವೀರಪ್ಪನವರ ಪುತ್ರಿ ಚಿ। ಸೌ॥ ಶಾರದಾಂಬೆಯನ್ನು ಕೊಟ್ಟು ನಿಶ್ಚಯಿಸಿದ ಕಾಲದಲ್ಲಿ ಪ್ರಭಾಪೋಷಣಕ್ಕಾಗಿ ವರನ ಕಡೆಯಿಂದ ಸಮರ್ಪಿಸಲ್ಪಟ್ಟ 3 ರೂ ಗಳು. ವಧುವಿನ ಕಡೆಯಿಂದ ಸಮರ್ಪಿಸಲ್ಪಟ್ಟ 2 ರೂ ಗಳು ಒಟ್ಟು 5 ರೂ ಗಳು ದಾವಣಗೆರೆ ಮ॥ ರಾ॥ ಬಾದಾಮಿ ಚನ್ನಬಸಪ್ಪನವರ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಪಂಚಾಚಾರ್ಯಪ್ರಭಾ.

೧೯೪೫ನೆಯ ಅಕ್ಟೋಬರ್ ತಾ| ೨೨ನೇ ಸೋಮವಾರ

ರಾಜಧಾನಿಯಲ್ಲಿ ನವರಾತ್ರಮಹೋತ್ಸವ

ಭರತಖಂಡದಲ್ಲಿರುವ ಸನಾತನವ ತಾನುಯಾಯಿಗಳೆಲ್ಲರೂ ನವರಾತ್ರಮಹೋತ್ಸವವನ್ನು ಅಸಾಧಾರಣ ವೈಭವದಿಂದ ನೆರವೇರಿಸುತ್ತಿರುವ ವಿಷಯವು ಸುಪ್ರಸಿದ್ಧವೇ ಆಗಿದೆ ಈ ನಾಡಹಬ್ಬವ ನ್ನು ಎಲ್ಲೆಡೆಯಲ್ಲಿ ಮಾಡುತ್ತಿದ್ದರೂ, ಇದಕ್ಕೆ ಮೈಸೂರ ... ಮಾತೃಸ್ಥಾನವಾಗಿ ಮೆರೆಯುತ್ತಿರುವುದ ... ರತ್ನಸಿಂಹಾಸನಾಧೀಶರಾದ ಮೈಸೂರ ... ರು ಈ ಹಬ್ಬವನ್ನು ಬಹು ಪುರಾತನ ಕಾಲದಿಂದಲೂ ಬಹು ಭಕ್ತಿಯಿಂದಲೂ, ಅಸಾಧಾರಣವಾದ ವೈಭವದಿಂದಲೂ ನೆರವೇರಿಸುತ್ತಿರುವರು ಇಂತಹ ವೈಭವವು ಭರತಖಂಡದ ಯಾವ ಭಾಗದಲ್ಲಿಯೂ ನೆರವೇರುವುದಿಲ್ಲವೆಂದು ಬರೆದರೆ ಅತಿಶಯೋಕ್ತಿಯೆನಿಸದು ಆದುದರಿಂದಲೇ ಪ್ರತಿ ವರ್ಷವೂ ಭರತಖಂಡದ ಮೂಲೆಮೂಲೆಗಳಿಂದ ಲಕ್ಷಾಂತರ ಜನರು ಈ ಹಬ್ಬದ ವೈಭವವನ್ನು ನೋಡುವುದಕ್ಕಾಗಿ ಮೈಸೂರ ರಾಜಧಾನಿಗೆ ಆಗಮಿಸಿ, ಇಲ್ಲಿ ನಡೆಯುತ್ತಿರುವ ಅಭೂತಪೂರ್ವ ವೈಭವಗಳನ್ನು ನೋಡಿ ತಮ್ಮ ನೇತ್ರಗಳನ್ನು ಸಫಲ ಮಾಡಿಕೊಳ್ಳುತ್ತಿರುವರು

ಈ ಹಬ್ಬವು ಮುಖ್ಯವಾಗಿ ದೇವಿಯ ಹಬ್ಬವಾಗಿರುವುದು ಮೈಸೂರು ಅರಮನೆಗೆ ಶ್ರೀ ಚಾಮುಂಡೇಶ್ವರೀದೇವಿಯು ಮುಖ್ಯ ಕುಲದೇವತೆಯಾಗಿರುವುದರಿಂದ ಮೈಸೂರಿನ ಪ್ರಭುಗಳು ಬಹುಕಾಲದಿಂದ ಈ ಹಬ್ಬವನ್ನು ಮಹಾವೈಭವದಿಂದ ನೆರವೇರಿಸುತ್ತ ಬಂದಿರುವರು ನಾಲ್ವಡಿ ಶ್ರೀ ಕೃಷ್ಣರಾಜೇಂದ್ರ ಪ್ರಭುಗಳ ಕಾಲದಲ್ಲಿ ಈ ಹಬ್ಬದ ವೈಭವವು ದಿಗಂತವನ್ನು ವ್ಯಾಪಿಸಿತು ಆ ಧರ್ಮಾತ್ಮರ ಕಾಲದಲ್ಲಿ ಇದರ ವೈಭವವು ನೂರ್ಮಡಿಯಾಯಿತು ಪ್ರತಿವರ್ಷದಂತೆ ಈ ವರ್ಷವೂ ಸಹ ಈ ಮಹೋತ್ಸವವು ವಿಶೇಷ ವೈಭವದಿಂದ ನೆರವೇರಿತು ಪ್ರಪಂಚದ ಘೋರಯುದ್ಧವು ಮುಗಿದು ಶಾಂತವಾತಾವರಣವು ಒದಗಿರುವದರಿಂದ ಹಿಂದೆ ಎಂದೂ ಬರದಿದ್ದಷ್ಟು ಜನರು ಈಸಾರೆ ಈ ಮಹೋತ್ಸವವನ್ನು ನೋಡುವುದಕ್ಕಾಗಿಯೂ ಮಹಾಪ್ರಭುಗಳಾದ ಶ್ರೀ ಜಯಚಾಮರಾಜ ಒಡೆಯರ್ ಬಹದ್ದೂರ್ ರವರ ದರ್ಶನವನ್ನು ಪಡೆಯುವುದಕ್ಕಾಗಿಯೂ ದೂರದೂರ ದೇಶಗಳಿಂದ ಆಗಮಿಸಿದ್ದರು ಯುದ್ಧ ಕಾರಣದಿಂದ ಭಾರತಕ್ಕೆ ಬಂದಿರುವ ಅನೇಕ ಅಮೆರಿಕದ ಸೈನ್ಯಾಧಿಕಾರಿಗಳೂ ಆಹೂತರಾಗಿ ಬಂದಿದ್ದರು

ಪದ್ಧತಿಯಂತೆ ಅಶ್ವಯುಜ ಶುದ್ಧ ಪ್ರತಿಪದೆಯಿಂದ ನವಮಿಯ ವರೆಗೆ ಅರಮನೆಯಲ್ಲಿ ದರ್ಬಾರು ನಡೆಯುತ್ತಿತ್ತು ಶ್ರೀಮನ್ಮಹಾರಾಜರವರು ರತ್ನಸಿಂಹಾಸನವನ್ನಾರೋಹಣಮಾಡುತ್ತಿದ್ದರು ಆಯಾ ದಿನದ ಕಾರ್ಯಕ್ರಮದಂತೆ ಅರಸುಮನೆತನದವರೂ, ಸರಕಾರಿ ಅಧಿಕಾರಿಗಳೂ, ಪ್ರಜಾಪ್ರಮುಖರೂ ಮಹಾಪ್ರಭುಗಳವರಿಗೆ ನಜರನ್ನೊಪ್ಪಿಸುತ್ತಿದರು ಅರಮನೆಯು ಪ್ರತಿ ದಿನವೂ ಲಕ್ಷಗಟ್ಟಲೆ ವಿದ್ಯುದ್ದೀಪಗಳಿಂದ ಬೆಳಗುತ್ತಿತ್ತು ನವಮಿಯ ದಿವಸ ಯೂರೋಪಿಯನ್ ದರ್ಬಾರು ನಡೆಯಿತು ಅಂದಿನ ದಿವಸ ಐರೋಪ್ಯರೂ ಅಮೆರಿಕನರೂ ದರ್ಬಾರಿಗೆ ಬಂದು ಅಲ್ಲಿನ ವೈಭವವನ್ನು ನೋಡಿ ಆನಂದಿಸಿದರು

ವಿಜಯದಶಮಿ ಮಂಗಳವಾರ ದಿವಸ ಮಧ್ಯಾಹ್ನ 4 30 ಘಂಟೆಗೆ ಜಂಬೂಸವಾರಿಯು ಹೊರಟಿತು ಆ ಸಮಯದಲ್ಲಿ ಗೌರವಾರ್ಥವಾಗಿ ೨೧ ತೋಪುಗಳು ಹಾರಿಸಲ್ಪಟ್ಟವು ಮಹಾಪ್ರಭುಗಳು ದಿವ್ಯವಸ್ತ್ರಾಭರಣಗಳನ್ನು ಧರಿಸಿ ಆನೆಯ ಮೇಲೆ ಸುಸಜ್ಜಿತವಾಗಿದ್ದ ಸುವರ್ಣ ಅಂಬಾರಿಯಲ್ಲಿ ಮೂರ್ತಮಾಡಿದರು ದಾರಿಯುದ್ದಕ್ಕೂ ಲಕ್ಷಾಂತರ ಪ್ರಜೆಗಳು ಮಂಗಳಮಹೋತ್ಸವವನ್ನು ನೋಡಿ ಪರಮಾನಂದಭರಿತರಾದರು ಉತ್ಸವವು ಅರಮನೆಯ ಉತ್ತರದ್ವಾರದಿಂದ ಚತುರಂಗ ಬಲಸಹಿತ ನೆಯ ... ಸಮಸ್ತ ರಾಜಬಿರುದಾವಳಿಗಳೊಡನೆಯೂ ಸಮಸ್ತ ವಾದ್ಯಗಳೊಡನೆಯೂ ಹೊರಟು ಸಯ್ಯಾಜಿರಾವ್ ರೋಡು ಹೊಸ ಸಂತೇಪೇಟೆ ಮೂಲಕ ಊರಹೊರಗೆ ನಿರ್ಮಿಸಲ್ಪಟ್ಟಿರುವ ... ಮಂಟಪಕ್ಕೆ ತಲುಪಿತು ಅಲ್ಲಿ ... ಯಥಾವಿಧಿಯಾಗಿ ಶಮೀಪೂಜೆಯನ್ನು ಮುಗಿಸಿ ಅಲ್ಲಿ ನೆರೆದಿದ್ದ ... ಅನುಗ್ರಹಿಸಿ ... ಯನ್ನು ... ತನ್ನು ... ದರು ಮೆರವಣಿಗೆಯು ... ರಾತ್ರಿ ... ಅರಮನೆಗೆ ತಲುಪಿತು

ಸರಿ ... ಪ್ರಜೆಗಳು ದಾರಿಯಲ್ಲೆಲ್ಲಾ ಅಸಂಖ್ಯ ... ಕೂಡಿದರು ರಾತ್ರಿಯುತ್ಸವದ ಮಹಾವೈಭವವನ್ನು ನೋಡಿ ಆನಂದಸಾಗರದಲ್ಲಿ ಮುಳುಗಿತು ಸಕಲ ... ಗುಣಮಂಡಿತರಾದ ನಮ್ಮ ಮಹಾಪ್ರಭುಗಳವರ ಕಾಲದಲ್ಲಿ ಮೈಸೂರು ದೇಶವು ಮೊದಲಿಗಿಂತ ಅಧಿಕವಾದ ಕೀರ್ತಿಯನ್ನು ಪಡೆದು ಮೆರೆಯುವಂತಾಗಲೆಂದು ಶ್ರೀಜಗದೀಶ್ವರನ ಅನುಗ್ರಹದಿಂದ ಇವರ ಧವಲಕೀರ್ತಿಯು ಸರ್ವತ್ರ ಬೆಳಗಲೆಂದೂ, ಆ ಜಗನ್ನಿಯಾಮಕನನ್ನು ಅನನ್ಯ ಸಾಧಾರಣ ಭಕ್ತಿಭಾವದಿಂದ ಭಜಿಸುತ್ತೇವೆ

| ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು |

ತಪೋನುಷ್ಠಾನ, ಶ್ರೀಜಗದ್ಗುರು ರೇಣುಕವಿಜಯಪುರಾಣಪ್ರವಚನೋಪನ್ಯಾಸ ಸಮಾಪ್ತಿ ಮಂಗಳಮಹೋತ್ಸವ, ಹರಲಾಪುರ

ಪರಮ ತಪೋನಿಧಿಗಳೂ ಶಿವಪೂಜಾನಿಷ್ಠರೂ, ವೀರವೈರಾಗ್ಯಮೂರ್ತಿಗಳೂ, ಬ್ರಹ್ಮತೇಜೋಭರಿತರೂ ಆದ ಜರಿಗೊಂಡ ಮಠಂಶಿನ ಮಠಾಧ್ಯಕ್ಷ ಶ್ರೀ| ಷ ಬ್ರ| ಗಂಗಾಧರಶಿವಾಚಾರ್ಯ ಸ್ವಾಮಿಗಳವರು ವೀರಶೈವ ಸಮಾಜೋದ್ಧಾರಕ್ಕಾಗಿ ಅಹೋರಾತ್ರಿ ದುಡಿಯುತ್ತಿರುವುದು ಸರ್ವಶ್ರುತವಷ್ಟೆ! ಈ ಮಹಾತ್ಮರು ಗದಗೇರಿ ತಾಲ್ಲೂಕು ಹರಲಾಪುರಕ್ಕೆ ಎರಡು ಮೈಲಿ ದೂರದಲ್ಲಿರುವ ವಿದ್ಯಾರಣ್ಯದಲ್ಲಿ ತಪೋವನ ಶ್ರೀ ಮುಕ್ತಿಮಂದಿರ ಗುರುಕುಲ ಮಹಾಕ್ಷೇತ್ರಂ ಎಂಬ ಸಂಸ್ಥೆಯನ್ನು ಸ್ಥಾಪಿಸಿ ಈ ಸಂಸ್ಥೆಯ ಮೂಲಕ ಮಾನವನ ಆತ್ಮೋದ್ಧಾರಕ್ಕಾಗಿ ಧರ್ಮಶಿಕ್ಷಣವನ್ನೀಯಬೇಕೆಂಬ ಮಹಾಸಂಕಲ್ಪವುಳ್ಳವರಾಗಿರುವರು ಹಳ್ಳಿಯ ಜನರನ್ನು ಸನ್ಮಾರ್ಗಕ್ಕೆ ತರುವುದೇ ಪ್ರಥಮಕಾರ್ಯ ಈ ಪೂಜ್ಯಪಾದರು ಘೋರಸಂಗ್ರಾಮ ಶಾಂತಿಗಾಗಿಯೂ ವಿಶ್ವಕಲ್ಯಾಣಕ್ಕಾಗಿಯೂ, ಐದು ವರ್ಷಗಳಿಂದಲೂ ಸ್ಥಿರಸಂಕಲ್ಪದಿಂದ ಬರೀ ಹೆಸರುಬೇಳೆಯೇ ಆಹಾರವಾಗಿ ತಪೋನುಷ್ಠಾನದಲ್ಲಿ ತೊಡಗಿದ್ದರು ಕೊನೆಗೆ ಯುದ್ಧಶಾಂತಿಯಾದುದರಿಂದಲೂ ಹಾಗೂ ಶ್ರೀರಂಭಾಪುರೀ ಜಗದ್ಗುರುಗಳವರ ಆಜ್ಞೆಯಾದುದರಿಂದಲೂ ಆ ವ್ರತ ಪೂರ್ತಿಗಾಗಿ ಹರಲಾಪುರಕ್ಕೆ ಆಗಮಿಸಿದರು ಶ್ರೀಯವರ ಅನುಷ್ಠಾನ ಸಮಾಪ್ತಿಯ ಅಂಗವಾಗಿ ಶ್ರೀಯವರ ಸತ್ಸಂಕಲ್ಪದಂತೆ ಸುಣಕಲ್ ಬಿದರಿ ಆರಾಧ್ಯಮಠದ ಆಸ್ಥಾನವಿದ್ವಾನ್ ಪುರಾಣರತ್ನ ವೇ|| ಪಂ|| ವೃಷಭಲಿಂಗಶಾಸ್ತ್ರಿಗಳವರಿಂದ ಶ್ರೀಜಗದ್ಗುರು ರೇಣುಕವಿಜಯ ಪುರಾಣಪ್ರವಚನವು ಶ್ರಾವಣ ಶುದ್ಧ ಪ್ರತಿಪದ (ತಾ|| ೮ ೮ ೧೯೪೫) ಬುಧವಾರದಿಂದ ಪ್ರಾರಂಭಿಸಲ್ಪಟ್ಟಿತು ಪುರಾಣಪ್ರವಚನವು ಬಹು ವಿಜೃಂಭಣೆಯಿಂದಲೇ ಜರುಗುತ್ತಿದ್ದಿತು ಪಂಡಿತರ ಪ್ರವಚನವನ್ನೂ ಶ್ರೀಸ್ವಾಮಿಗಳವರ ಸದುಪದೇಶವನ್ನೂ ಕೇಳಲು ಕುತೂಹಲದಿಂದ ಅನೇಕ ಪುರಗ್ರಾಮಗಳಿಂದ ಸ್ವಮತಪರಮತೀಯ ಮಹಾಜನಗಳು ಆಗಮಿಸುತ್ತಿದ್ದರು ಗುಡಿಗೇರಿ ಮತ್ತು ಲಕ್ಷ್ಮೇಶ್ವರ ತಾಲೂಕ ಅಧಿಕಾರಿಗಳೂ ಇತರ ಆಫೀಸರರೂ ಆಗಮಿಸುತ್ತಿದ್ದುದರಿಂದ ಹರಲಾಪುರದ ಸದ್ಭಕ್ತಮಂಡಳಿಯ ಆನಂದಕ್ಕೆ ಪಾರವೇ ಇರಲಿಲ್ಲ ಪುರಾಣವು ಒಂದೂವರೆ ತಿಂಗಳವರೆವಿಗೂ ಜರುಗಿ ಭಾದ್ರಪದ ಶು|| ೩ ಸೋಮವಾರ ಪುರಾಣ ಸಮಾಪ್ತಿ, ಮಹಾಗಣಾರಾಧನೆ, ಶಿವಂಗಭೂತಗಳಾದ ಸಭಾಕಾರ್ಯಕ್ರಮಗಳು ಬಹು ಅಟ್ಟಹಾಸದಿಂದ ನೆರವೇರಿದವು

ತಾ ೨೪ ೯ ೪೫ ನೇ ಸೋಮವಾರ ಪ್ರಾತಃಕಾಲ ೬ ಘಂಟೆಗೆ ಶ್ರೀ ಜಗದ್ಗುರು ರೇಣುಕಲಿಂಗೋದ್ಭವ ಮೂರ್ತಿಗೆ ಏಕಾದಶರುದ್ರಾಭಿಷೇಕ, ಸಹಸ್ರಬಿಲ್ವಾರ್ಚನೆ ಮಹಾಮಂಗಳಾರತಿಯು ವೇ|| ಪಂ|| ವೃಷಭಲಿಂಗಶಾಸ್ತ್ರಿಗಳವರಿಂದ ವಿಧ್ಯುಕ್ತವಾಗಿ ನೆರವೇರಿತು ಮತ್ತು ಶ್ರೀಗಳವರ ಐದುವರ್ಷದ ಅನುಷ್ಠಾನಸಮಾಪ್ತಿ ಹಾಗೂ ... ಜಗದಾಚಾರ್ಯರ ಮಂಗಲದೊಡನೆ ಸಮಾಪ್ತಿಯಾಯಿತು ತದನಂತರ ಮಧ್ಯಾಹ್ನ ೩ ಘಂಟೆಯಿಂದ ಸುಂದರವಾದ ಎತ್ತುಗಳನ್ನು ಹೂಡಿದ ಪುಷ್ಪಕರಥದಲ್ಲಿ ಶ್ರೀ ಜಗದ್ಗುರು ರೇಣುಕವಿಜಯಪುರಾಣ, ಲಿಂಗೋದ್ಭವಮೂರ್ತಿ ಹಾಗೂ ಪಂಚಕಲಶಯುಕ್ತ ಪಲ್ಲಕ್ಕಿಯಲ್ಲಿ ಶ್ರೀಗಳವರ ಉತ್ಸವವು ಪ್ರಾರಂಭವಾಯಿತು ನೋಡಿದಲ್ಲೆಲ್ಲ ಮಂಗಲವಾದ್ಯಗಳೇ ಮೊಳಗುತ್ತಿದ್ದವು ಬೀದಿಗಳೆಲ್ಲ ತಳಿರುತೋರಣಗಳಿಂದ ಅಲಂಕೃತವಾಗಿದ್ದವು ಈ ವಿಜೃಂಭಣೆಯ ಉತ್ಸವವನ್ನು ನೋಡಿ ಸರ್ವರೂ ಆನಂದಾಶ್ರುಗಳನ್ನು ದುರಿಸಿದರು ಗುಡಿಗೇರಿ, ಲಕ್ಷ್ಮೇಶ್ವರದ ಮಾಮಲೇದಾರ, ಶಿರೇಸ್ತೇದಾರ ಮೊದಲಾದ ಅಧಿಕಾರಿಗಳೂ ಪೋಲೀಸ ಮುಖ್ಯಾಧಿಕಾರಿಗಳೂ ಸಿಬ್ಬಂದಿಸಹಿತ ಆಗಮಿಸಿ ಉತ್ಸವವನ್ನು ನಿರ್ವಿಘ್ನತೆಯಿಂದ ನೆರವೇರಿಸಿದರು ಈ ಮಹೋತ್ಸವಕ್ಕೆ ಬಂಕಾಪುರ, ಚಿಂಚಲಿ, ಎರೆಬೂದೀಹಾಳ, ಲಕ್ಷ್ಮೇಶ್ವರ, ಪಶುಪತಿಹಾಳ, ಸಂಕಲೀಪುರ, ಸುಲ್ತಾನಪುರ, ರೊಟ್ಟಿಗವಾಡ ಗುಂಜಳ ಮೊದಲಾದ ಅನೇಕ ಗ್ರಾಮದಿಂದ ಭಜನಾಮಂಡಳಿಯವರು ಬಂದು ತಮ್ಮ ಸುಶ್ರಾವ್ಯ ಮಂಗಲಪದಗಳಿಂದ ಸರ್ವಜನರನ್ನೂ ಆನಂದಸಾಗರದಲ್ಲಿ ಮುಳುಗಿಸಿದರು ಮಹೋತ್ಸವಕ್ಕೆ ೮ ಸಾವಿರ ಜನರು ಸಮ್ಮಿಲಿತರಾಗಿದ್ದರು ಈ ಮಂಗಲಮಹೋತ್ಸವವು ಗ್ರಾಮದ ಬೀದಿಗಳಲ್ಲೆಲ್ಲ ಮೆರೆಯುತ್ತ ಬರುವಾಗ್ಗೆ ತಮ್ಮ ತಮ್ಮ ಗೃಹದ ಮುಂಭಾಗಕ್ಕೆ ಉತ್ಸವವು ಬಂದಾಕ್ಷಣವೇ ಮಂಗಲಾರತಿಯೊಡನೆ ಲಿಂಗೋದ್ಭವಮೂರ್ತಿಗೂ ಮತ್ತು ಶ್ರೀಗಳವರಿಗೂ ಪೂಮಾಲೆಯನ್ನರ್ಪಿಸಿ ಆಶೀರ್ವಾದವನ್ನು ಪಡೆಯುತ್ತಿದ್ದರು ಈ ಪ್ರಕಾರ ಉತ್ಸವವು ಸಾಯಂಕಾಲ ೬ ಘಂಟೆಗೆ ಸಭಾ ಮಂಟಪವನ್ನು ತಲ್ಪಿ ಶ್ರೀಗಳವರು ಉನ್ನತಾಸನದಲ್ಲಿ ಮಂಡಿಸಿದರು ಆಗ ಶ್ರೀಗಳ ಸಭಾಧ್ಯಕ್ಷತೆಯಲ್ಲಿ ಕಾರ್ಯಕ್ರಮವು ಆರಂಭವಾಯಿತು ಸ್ವಾಗತಾಧ್ಯಕ್ಷರಾದ ಶ್ರೀಮಾನ್ ನಾಮದಾರ ಎಲ್ಲಪ್ಪ ಕೊರಡೂರ ಎಂ ಎಲ್ ಎ ಮಿರಜ ಜೂನಿಯರ್ ಇವರು "ಶ್ರೀಗಳ ಅನುಷ್ಠಾನ" ಈ ವಿಷಯದಲ್ಲಿ ಸ್ಫೂರ್ತಿದಾಯಕವಾದ ಭಾಷಣವನ್ನು ಮಾಡಿದ ಮೇಲೆ ರಾವಸಾಹೇಬ ಮಾಮ್ಲೇದಾರ ಕುಲಕರ್ಣಿ ಬಿ ಎ ಗುಡಿಗೇರಿ ಇವರು "ಸಮಾಜೋದ್ಧಾರ" ಶ್ರೀಮಾನ್ ಜೋಗೆಪ್ಪ ಮಹಾಜನಶೆಟ್ಟಿ ಲಕ್ಷ್ಮೇಶ್ವರ ಇವರು "ಗುರುಗಳ ಕರ್ತವ್ಯ" ವೇ| ವಿರೂಪಾಕ್ಷಶರ್ಮಾ ಸುಣಕಲ್ಲ ಬಿದರಿ ಆರಾಧ್ಯಮಠ ಇವರು 'ಧರ್ಮ' ಶ್ರೀಮಾನ್ ಮಹಾದೇವಪ್ಪ ಕುಂಬಾರ ಮಾಸ್ತರ ಹುಬ್ಬಳ್ಳಿ ಇವರು "ಗುರುದರ್ಶನಫಲ" ಇವೇ ಮೊದಲಾದ ವಿಷಯಗಳಲ್ಲಿ ಭಾಷಣ ಮಾಡಿದನಂತರ ಶ್ರೀ ಸ್ವಾಮಿಗಳು ಮನುಷ್ಯನು ಧರ್ಮನಿಷ್ಠನಾಗಬೇಕು ಧರ್ಮವೇ ಸಮಾಜೋನ್ನತಿಯ ತಳಹದಿ, ಜನ್ಮೋದ್ಧಾರಕೆ ಧಾರ್ಮಿಕ ಶಿಕ್ಷಣವೇ ಅತ್ಯವಶ್ಯಕ ಧರ್ಮಜಾಗ್ರತಿಗಾಗಿಯೇ ಇಲ್ಲಿ ಮುಕ್ತಿಮಂದಿರ ಗುರುಕುಲದ ಸ್ಥಾಪನೆಯ ಕಾರ್ಯವನ್ನು ಕೈಕೊಂಡಿರುವೆವು ಈ ಸತ್ಕಾರ್ಯಕ್ಕೆ ಪ್ರತಿಯೊಬ್ಬರೂ ಸಹಕರಿಸಬೇಕು ಎಂದು ಬಹಳ ರಸಭರಿತವಾಗಿ ಬೋಧಿಸಿದರು. ಆಮೇಲೆ ಶ್ರೀಮಾನ್ ಮಹಾದೇವಪ್ಪ ಕತ್ತಿ ಇವರು ಸರ್ವರ ಆಭಾರವನ್ನು ಮನ್ನಿಸಿದಮೇಲೆ ಜಗದಾಚಾರ್ಯರ ಮಂಗಲದೊಡನೆ ಸಭೆಯು ಮುಕ್ತಾಯವಾಯಿತು

ತಾ|| ೨೫ ೯-೪೫ ನೇ ಮಂಗಳವಾರ ತಾಯಿ ಪಾರ್ವತಿ ಮಹಿಳಾಬಳಗದವರು 'ಸ್ತ್ರೀ ಸುಧಾರಣಾಸಭೆಯನ್ನು' ಲಕ್ಷ್ಮೇಶ್ವರನಿವಾಸಿ ಶ್ರೀಮಂತ ಶಂಕರಗೌಡ್ರು ಬಹದ್ದೂರ ದೇಸಾಯಿ ಇವರ ಧರ್ಮಪತ್ನಿ ಸಾಧ್ವೀಶಿರೋಮಣಿ ಸೌ| ಸಾರ್ವತಮ್ಮನವರ ಅಧ್ಯಕ್ಷತೆಯಲ್ಲಿ ವೈಭವದಿಂದ ನೆರವೇರಿಸಿದರು ಸ್ವಾಗತಾಧ್ಯಕ್ಷತೆಯನ್ನು ವಹಿಸಿದ್ದ

ಸೌ ಗಿರಿಜಮ್ಮನವರು ಶೆಟ್ಟಿ ಲಕ್ಷ್ಮೇಶ್ವರ ಇವರು "ಸ್ತ್ರೀಸುಧಾರಣೆ" ವಿಷಯದಲ್ಲಿ ಅರ್ಥಗರ್ಭಿತವಾದ ಭಾಷಣವನ್ನಿತ್ತರು. ಆಮೇಲೆ ಸೌ|| ಶೀಲಮ್ಮ ಗರ್ಲ್ಸ್‌ಸ್ಕೂಲ ಮಿಸ್ಟ್ರೆಸ್ ಗುಡಿಗೇರಿ ಸೌ|| ಮೀನಾಕ್ಷಮ್ಮ ಹಿರೇಮಠ ಗರ್ಲ್ಸ್‌ಸ್ಕೂಲ ಮಿಸ್ಟ್ರೆಸ್ ಕಳಸ ಕು|| ಕಾಶೀಬಾಯಿ ಚಿಂಚಲಿ ಇವರೇ ಮೊದಲಾದ ಮಹಿಳೆಯರು "ಪಾತಿವ್ರತ್ಯ" ಪತಿಭಕ್ತಿ' ಸ್ತ್ರೀಕರ್ತವ್ಯ ಇತ್ಯಾದಿ ವಿಷಯಗಳಲ್ಲಿ ಉತ್ತಮವಾದ ಭಾಷಣವನ್ನಿತ್ತರು ಅನಂತರ ಗರ್ಲ್ಸ್‌ಸ್ಕೂಲ ಚಿಕ್ಕ ವಿದ್ಯಾರ್ಥಿನಿಯರು ಗುಡಿಗೇರಿ ಇವರು "ಸ್ತ್ರೀಶಿಕ್ಷಣದ ಅವಶ್ಯಕತೆ" ಯ ಬಗ್ಗೆ ಬಹು ಆನಂದದಾಯಕವಾಗಿ ಸಂವಾದವನ್ನು ಮಾಡಿದರು ಆಮೇಲೆ ಸೌ|| ಪಾರ್ವತಮ್ಮನವರು ಸಮ್ಮಿಲಿತವಾದ 5 ಸಾವಿರ ಸ್ತ್ರೀ ಸಮೂಹಕ್ಕೆ "ಮಹಿಳೆಯರ ದಕ್ಷತೆ" ಯ ಬಗ್ಗೆ ಅಮೂಲ್ಯವಾದ ಸಂದೇಶವನ್ನಿತ್ತನಂತರ ಶ್ರೀಗಳು ಜ್ಞಾನಕ್ಕೆ ಸ್ತ್ರೀಪುರುಷರೆಂಬ ಭೇದವಿಲ್ಲ ಸ್ತ್ರೀಯರನ್ನು ಅಕ್ಷರಶತ್ರುವನ್ನಾಗಿ ಮಾಡುವುದು ಸಮಾಜದ ವಿಘಾತವೇ ಸರಿ ಸ್ತ್ರೀಯು ಪತಿಭಕ್ತಿ ಪರಾಯಣೆಯಾಗಬೇಕು ನಮ್ಮ ಮಹಿಳೆಯರು ಆದರ್ಶರಾಗಬೇಕು ಪತಿವ್ರತಾಶಿರೋಮಣಿಗಳಾಗಬೇಕು ಎಂದು ಪ್ರಾಚೀನದ ದಮಯಂತಿ ದ್ರೌಪದಿ ಇತ್ಯಾದಿ ಸಾಧ್ವೀ ಸ್ತ್ರೀಯರ ಉದಾಹರಣೆಗಳ ಮೂಲಕ ಸರ್ವ ಮಹಿಳೆಯರಿಗೂ ಬೋಧಿಸಿದರು ಬಳಿಕ ಆಚಾರ್ಯರ ಮಂಗಲದೊಡನೆ ಸ್ತ್ರೀಸಭೆಯು ಮುಕ್ತಾಯವಾಯಿತು

ತಾ|| ೨೭-೯-೧೯೬೫ನೇ ಬುಧವಾರ ಡಾ|| ಪರಪ್ಪ ಹಳೆಮನಿ ಎಂ ಬಿ ಬಿ ಯಸ್ ಎಲ್ ಆರ್ ಸಿ ಪಿ ಎಂ ಆರ್ ಸಿ ಎಸ್ (ಲಂಡನ್) ಇವರು ಅಧ್ಯಕ್ಷಸ್ಥಾನವನ್ನು ವಹಿಸಿ ಆರೋಗ್ಯಪ್ರಚಾರಕ ಸಭೆಯ ಕಾರ್ಯಕ್ರಮವನ್ನು ಪ್ರಾರಂಭಿಸಿದರು ಪ್ರಥಮದಲ್ಲಿ ಸ್ವಾಗತಾಧ್ಯಕ್ಷರಾದ ಶ್ರೀಮಾನ್ ಸೋಮವಾರ ವೈ ಕೆ ಕೊರಡೂರು ಇವರು ಆರೋಗ್ಯ ವಿಷಯದ ಮೇಲೆ ಭಾಷಣಮಾಡಿದನಂತರ ಡಾ ಡಿ ಎಸ್ ದಾತೆ, ಎಲ್ ಸಿ ಪಿ ಎಸ್ (ಮುಂಬಯಿ) ಡಾ ಎಲ್ ಸಿ ಹಾಲೇವಾಡಿ ಮಠ (ಎಂ ಡಿ ಹೋಮಿಯೋ) ಡಾ| ಜಿ ಸಿ ಹಾಲೇವಾಡೀಮಠ ಶ್ರೀನಿವಾಸ ಕುಲಕರ್ಣಿ ಮಾಸ್ತರ ಗುಡಿಗೇರಿ ಶ್ರೀವಿರೂಪಾಕ್ಷಪ್ಪ ಮುಳುಗುಂದ ಕನ್ನಡ ಸ್ಕೂಲಮಾಸ್ತರ ಇವರೇ ಮೊದಲಾದವರು ಆರೋಗ್ಯ, ಸ್ವಚ್ಛತೆ ಇತ್ಯಾದಿ ವಿಷಯವಾಗಿ ಭಾಷಣಮಾಡಿದನಂತರ ಅಧ್ಯಕ್ಷರಾದ ಡಾ| ಪಿ ಪಿ ಹಳೇಮನಿಯವರು ಒಳ್ಳೇ ಹಾಸ್ಯದಿಂದಲೂ, ಸ್ಫೂರ್ತಿಯಿಂದಲೂ ಹಳ್ಳಿಯಜನರು ಆರೋಗ್ಯದ ಕಡೆಗೆ ಹೆಚ್ಚುಗಮನ ಕೊಡದ ಅನೇಕ ರೋಗಗಳಿಗೀಡಾಗುತ್ತಿರುವುದನ್ನು ವರ್ಣಿಸಿದರು ನಂತರ ಶ್ರೀಗಳು ಅಧ್ಯಕ್ಷರ ಪ್ರಾರ್ಥನೆಯ ಮೇರೆಗೆ ಆರೋಗ್ಯ ಮತ್ತು ಆಚಾರ ಈ ವಿಷಯವನ್ನು ಹೋಲಿಸಿ ಅತ್ಯುತ್ತಮವಾದ ಉಪದೇಶವನ್ನಿತ್ತರು ಬಳಿಕ ರಾಜಾಶೀರ್ವಾದವಾಗಿ ಸಭೆಯು ಮುಕ್ತಾಯವಾಯಿತು ತದನಂತರ ರಾತ್ರಿ 10 ಘಂಟೆಗೆ ಇಲ್ಲಿಯ ನೀತಿಪ್ರಸಾರಕಮಂಡಳಿಯವರು ಶ್ರೀಜಗದ್ಗುರು ಭಗವತ್ಪಾದರ ನವಲೀಲೆಯಲ್ಲೊಂದಾದ "ಗೋರಕ್ಷ-ಗರ್ವಹರಣ" ಎಂಬ ಏಕಾಂಕ ನಾಟಕವನ್ನು ಅಲ್ಪಾವಧಿಯಲ್ಲಿಯೇ ಕಲಿತು 4 ಸಾವಿರದವರೆವಿಗೂ ಸಮ್ಮಿಲಿತವಾದ ಜನಸಮೂಹದಲ್ಲಿ ಬಹು ಹೃದಯಂಗಮವಾಗಿ ಪ್ರದರ್ಶಿಸಿದರು ಇಲ್ಲಿಗೆ ಶ್ರೀಜಗದಾಚಾರ್ಯರ ಕೃಪಾಕಟಾಕ್ಷದಿಂದ ಉತ್ಸವದ ಸರ್ವಕಾರ್ಯಗಳು ನೆರವೇರಿದವು

ಆಸ್ತಿಕಮಹಾಶಯರೇ, ಕಲಿಪ್ರಭಾವದಿಂದ ಸನಾತನ ಧರ್ಮವು ಹ್ರಾಸವಾಗುತ್ತಿದ್ದುದನ್ನು ನೋಡಿ ಧರ್ಮೋದ್ಧಾರ ಕಟಿಬದ್ಧರಾದ ಶ್ರೀಗಳವರ ತತ್ತ್ವೋಪದೇಶಪ್ರಭಾವದಿಂದ ಈ ಭಾಗವೆಲ್ಲ ಧರ್ಮಕ್ರಾಂತಿಗೆ ತವರುಮನೆಯಾಗಿದ ಇಲ್ಲಿಯ ಜನರು ಧರ್ಮಕಾರ್ಯಕ್ಕಾಗಿ ತಮ್ಮ ಸರ್ವಸ್ವವನ್ನೂ ಧಾರೆ ಎರೆಯಲ್ಕು ಸಿದ್ಧರಿರುವರು ಶ್ರೀಗಳವರ ಧರ್ಮೋನ್ನತಿಯ ಪಥವನ್ನು ಮೇಲ್ಪಂಕ್ತಿಯಾಗಿಟ್ಟು ಪ್ರತಿಯೊಬ್ಬ ಪಟ್ಟಚರಾಧಿಕಾರಿಗಳೂ ಧರ್ಮಸುಧಾರಣೆಗೆ ಕಟಿಬದ್ಧರಾದರೆ ವೀರಶೈವರ ಭಾಗ್ಯಕ್ಕೆ ಎಣೆಯೇ ಅಸ್ತು ಅಗಣಿತ ಹಾಗೂ ನೇತ್ರಾನಂದಕರವಾದ ಈ ಮಂಗಲಮಹೋತ್ಸವ ಸಮಾಪ್ತಿಸಮಾರಂಭಕ್ಕೆ ಲಕ್ಷ್ಮೇಶ್ವರ ಮತ್ತು ಹಂದಿಗನೂರು ದೇಸಾಯಿಯವರೂ ಶಿಬ್ಬಾಳ ಮತ್ತು-ಕುಂದಗೋಳ ದೇಶಪಾಂಡೆಯವರೂ

[ಉಳಿದ ಭಾಗವನ್ನು ೫ನೇ ಪುಟದಲ್ಲಿ ನೋಡಿ]

ಕಾಶೀಪೀಠದಲ್ಲಿ

ಜ್ಞಾನಮಂದಿರದ ನಿರ್ಮಾಣ



ಕುರುಡಿ ಶ್ರೀ ವಿರೂಪಾಕ್ಷಗೌಡರ ೧೦೦೮ ರೂ. ದಾನ

ಕಾಶೀ ಜಗದ್ಗುರು ವಿಶ್ವಾರಾಧ್ಯಪೀಠದಲ್ಲಿ ಸದ್ಯಃ ಜ್ಞಾನಮಂದಿರವು ನಿರ್ಮಿತವಾಗಿರುವ ವೃತ್ತಾಂತವು ಪತ್ರಿಕೆಗಳಲ್ಲಿ ಈ ಮುಂಚೆ ಪ್ರಕಟಿಸಲ್ಪಟ್ಟಿತಷ್ಟೆ! ಇದರಿಂದ ವೀರಶೈವ ವಿದ್ವಾಂಸರಿಗೆ ಬೇಕಾಗುವ ಒಂದು ದೊಡ್ಡ ಧರ್ಮಚರಿತ್ರಗ್ರಂಥಪರಿಶೋಧನಾಲಯವು ಸಿದ್ಧವಾಗುವುದಲ್ಲದೆ ಮುಂದೆ ಉತ್ತಮಶ್ರೇಣಿಯ ಪತ್ರಿಕೆಯೂ ಗ್ರಂಥಗಳೂ ಹೊರಡಲಿವೆ ಇವು ಸಮಾಜದಲ್ಲಿ ನವಚೈತನ್ಯವನ್ನುಂಟುಮಾಡುವುದರಲ್ಲಿ ಸಂದೇಹವಿಲ್ಲ ಏಕೆಂದರೆ ಜ್ಞಾನನಿಧಿಗಳೂ ಸದ ಸಮರ್ಥರೂ ಆದ ಶ್ರೀ ೧೦೮ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಆಶ್ರಯದಿಂದ ಈ ಸಂಸ್ಥೆಯು ಪ್ರತಿಷ್ಠಿತವಾಗುತ್ತಿರುವದರಿಂದ ಈವರೆಗೂ ಮೂಲೆಗುಂಪಾಗಿರುವ ಅನೇಕ ಅನರ್ಘ ಗ್ರಂಥರತ್ನಗಳು ಹೊರಬೀಳಲಿವೆ ಈಗಾಗಲೇ ಜ್ಞಾನಮಂದಿರವು ೧೦೦೦ ದಷ್ಟು ಬೆಲೆಬಾಳುವ ವಿವಿಧ ಭಾಷಾ ಮುದ್ರಿತ ಲಿಖಿತ ಗ್ರಂಥಗಳುಳ್ಳದಾಗಿದೆ ಅಖಿಲ ವೀರಶೈವ ಸಮಾಜದಲ್ಲಿದು ಅಭೂತಪೂರ್ವ ಸಂಗತಿಯಾಗಿದ ಈ ಸರಸ್ವತೀನಿವಾಸಕ್ಕಾಗಿಯೇ ಜ್ಞಾನಮಂದಿರವು ನಿರ್ಮಿತವಾಗುತ್ತಿದೆ

ಈ ಮಂದಿರದ ಮಹತ್ವ ವನ್ನರಿತ ಅನೇಕ ಪ್ರಮುಖರೂ ಶ್ರೀಮಂತರೂ ವಿದ್ಯಾಭಿಮಾನಿಗಳೂ ಔದಾರ್ಯದಿಂದ ಮುಂದ ಬಂದು ಸಹಾ ದಕ್ಷಿಣೆಯನ್ನು ಸಮರ್ಪಿಸುತ್ತಿದ್ದಾರ ರಾಯಚೂರ್ ಜಿಲ್ಲಾ ಕುರುಡಿ ಗ್ರಾಮದ ಧರ್ಮಾತ್ಮ ಶ್ರೀ ವಿರೂಪಾಕ್ಷಪ್ಪಗೌಡರು ಒಂದುಸಾವಿರದೆಂಟು ರೂಪಾಯಿಗಳನ್ನು ಇದರ ನಿರ್ಮಾಣಕ್ಕಾಗಿ ಸಮರ್ಪಿಸಿದ್ದಾರೆ ಈ ದಾನದ ಘಟನೆಯು ಅದ್ಭುತವಾಗಿದ ನಿಜಾಂ ಪ್ರಾಂತದಲ್ಲಿ ಪ್ರಸಿದ್ಧವಾದ ಬಿಕ್ಕಾಲಿ ಸಾವಿರದೇವರ ಬೃಹನ್ಮಠದ ಅಧ್ಯಕ್ಷರೂ ಶಿವಯೋಗಸಿಸುಗುಣಸಂಪನ್ನರೂ ಪಂಡಿತರೂ ಆದ ಷ. ಬ್ರ|| ಶ್ರೀ| ಚೆನ್ನವೀರಶಿವಾಚಾರ್ಯಸ್ವಾಮಿಗಳು ತಮಗೆ ಶ್ರೀ ಗೌಡರಿಂದ ಅಂತ್ಯಾವಸ್ಥೆಯಲ್ಲಿ ಗುರುದಕ್ಷಿಣೆಯಾಗಿ ಸಮರ್ಪಣೆಯಾಗುತ್ತಿದ್ದ ಈ ದ್ರವ್ಯವನ್ನು ಜ್ಞಾನಮಂದಿರಕ್ಕಾಗಿ ಸಮರ್ಪಣೆ ಮಾಡಿಸಿ ಶ್ರೀ ವಿಶ್ವಾರಾಧ್ಯರ ಕೃಪೆಗೂ ಲೋಕಪ್ರಶಸ್ತಿಗೂ ಪಾತ್ರರಾಗಿದ್ದಾರ ಈ ಉಭಯ ಗುರುಶಿಷ್ಯರೂ ಧನ್ಯರೇ ಸರಿ!

ಹಿರೇಹಡಗಲಿ ಶಬ್ದಮಣಿಮಠದ ಶ್ರೀ ಸಿದ್ಧಾಂತಿ ಕೊಟ್ರಯ್ಯನವರೂ, ಆಲೂರು ರೈಸ್‌ಮಿಲ್ಲಿನ ಅಧಿಪತಿಗಳಾದ ಶ್ರೀ ಬಸವಲಿಂಗೇಗೌಡ ನಂಜಪ್ಪ ಸೋದರರೂ, ಗುಬ್ಬೂರು ಶ್ರೀ ಸೂಗಣ್ಣನವರೂ ಹಿಂಮೂವುರದ ಶ್ರೀ ದುಗ್ಗಂ ಬಜ್ಜಣ್ಣನವರೂ ತಮ್ಮ ತಮ್ಮ ಮಹಾದಕ್ಷಿಣೆಯನ್ನು ವಾಗ್ದಾನಮಾಡಿಯೂ ಕೆಲವು ಮಟ್ಟಿಗೆ ಸಮರ್ಪಿಸಿಯೂ ಹೆಚ್ಚಿನ ದಕ್ಷಿಣೆ ಸಮರ್ಪಿಸಲೂ ಸಿದ್ಧರಾಗಿದ್ದಾರೆ ಇವರಲ್ಲದೆ ಇನ್ನೂ ಅನೇಕ ನಗರಗಳಿಂದ ಪ್ರಮುಖರು ವಾಗ್ದಾನಮಾಡಿದ್ದಾರೆ ಇವರ ಎಲ್ಲ ವಿವರವೂ ಮುಂದೆ ಬೇಗನೆ ಪ್ರಕಟವಾಗಲಿದೆ

ಜ್ಞಾನಮಂದಿರಕ್ಕಾಗಿ ಒಟ್ಟಿಗೆ ಎಂಟುಸಾವಿರ ವ್ಯಯವಾಗುವುದು ಒಂದುಸಾವಿರದೆಂಟರಿಂದ (೧೦೦೮) ಒಂದುನೂರೆಂಟು (೧೦೮) ರೂ ಗಳನ್ನು ಸಮರ್ಪಿಸುವ ಮಹನೀಯರ ನಾಮಗಳನ್ನು ಶಾಶ್ವತವಾಗಿರಿಸುವದಕ್ಕಾಗಿ ಜ್ಞಾನಮಂದಿರ ಮಹಾದ್ವಾರಶಿಲೆಯಲ್ಲಿ ಬರೆಯಿಸುವದಲ್ಲದೆ ಅವರವರ ದಾನ ತಾರತಮ್ಯವನ್ನನುಸರಿಸಿ ಅವರ ಚಿತ್ರಗಳನ್ನೂ (ಫೋಟೊ) ಕಟ್ಟಲಾಗುವುದು ಎಲ್ಲರಿಗೂ ಕೀರ್ತಿಗೂ ಅವಕಾಶವಿರಬೇಕೆಂಬ ಉದ್ದೇಶದಿಂದ ಮೇಲ್ಕಾಣಿಸಿದಂತೆ ಸಾವಿರಕ್ಕಿಂತ ಹೆಚ್ಚಾಗಲಿ ನೂರಕ್ಕಿಂತ ಕಡಮೆಯಾಗಲಿ ಇರುವ ದಾನವನ್ನು ಸ್ವೀಕರಿಸುವ ಅಭಿಪ್ರಾಯವಿಲ್ಲ ಸರ್ವೋಪಯುಕ್ತವಾದ ಈ ಸದವಕಾಶವನ್ನು ವೀರಶೈವ ಮಹಾಜನರು ತಮ್ಮ ದ್ರವ್ಯದ ವಿನಿಯೋಗದಿಂದ ಸಫಲಗೊಳಿಸಬೇಕು ಶ್ರೀ ಪೀಠದ ಗೋಶಾಲೆಯ ದಕ್ಷಿಣಭಾಗದ ಬೈಲಿನಲ್ಲಿ ಉತ್ತರಮುಖವಾಗಿ ಜ್ಞಾನಮಂದಿರದ ಕಟ್ಟಡವು ನಡೆದಿದೆ ಈಗಾಗಲೇ ಅರ್ಧದ ಮಟ್ಟಿಗೆ ಕೆಲಸವೂ ಆಗಿದೆ ದಾತೃಗಳು ಬಹಳ ಮಟ್ಟಿಗೆ ಸ್ವಯಂಪ್ರೇರಿತರಾಗಿ ಮುಂದೆ ಬಂದಿರುವದರಿಂದ ದ್ರವ್ಯದ ಪೂರ್ತಿಯಾಗುವುದರಲ್ಲಿ ಆಲಸ್ಯವಿಲ್ಲ ಆದುದರಿಂದ ದಾನ ಧರ್ಮ ಪುಣ್ಯ ವಿದ್ಯಾಭಿಮಾನಿಗಳು ಈ ಲೋಕೋಪಕಾರಕವಾದ ಗುರುಕಾರ್ಯದಲ್ಲಿ ಬೇಗನೆ ಭಾಗವಹಿಸಿ ಶಾಶ್ವತಕೀರ್ತಿ ಭಾಜನರಾಗಬೇಕು ಹಣವನ್ನು ಶ್ರೀ ಸನ್ನಿಧಿಯವರ ಹೆಸರಿಗೆ ರವಾನಿಸಬೇಕಾಗಿ ಕೋರುವ

ರಾಮಚಂದ್ರಪ್ರಸಾದ್, ಮೇನೇಜರ್,
ಜಂಗಮವಾಡಿಮಠ, ಬನಾರಸ್ ಸಿಟಿ.

ಕಾಶೀಪೀಠದ ಋಣಪರಿಹಾರನಿಧಿ

ಈ ಬಗ್ಗೆ ವೀರಶೈವ ಮಹಾಜನರು ಸಮರ್ಪಿಸಿದ ಸಾವಿರಾರು ರೂಪಾಯಿಗಳ ವಿವರವನ್ನು ಈ ಮುಂಚೆ 6 8 45 ಪ್ರಭಾ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ ಆಮೇಲೆ ಈವರೆಗೂ ಬಂದಿರುವ ದಾನ ದ್ರವ್ಯವನ್ನು ಇದರೊಡನೆ ಪ್ರಕಟಿಸಿದೆ

೧೦೦	ಶ್ರೀ	ಎಂ ವಿ ಮರುಳಸಿದ್ದಯ್ಯನವರು ಶಿವಮೊಗ್ಗ
೫೧	,,	ಸಿದ್ದಪ್ಪಯ್ಯ ಸಂಗನಬಸಪ್ಪಯ್ಯ ಕೂಡ್ಲಮಠ ಸಿಗ್ಗಲಿ
೨೫	,,	ಚಂದ್ರಬಂಡೆಪ್ಪ ಅಂಡ್ ಸನ್ಸ್ ಉರವ ಕೊಂಡ
೧೦	,,	ಸೋದರಿಯರಪರವಾಗಿ ಕೆ ಎಂ ಶಾರದಮ್ಮ ಬೇಲೂರು
೧೦	,,	ಎ ಎಂ ಶಿವಲಿಂಗಾರಾಧ್ಯರು ತಿಪಟೂರು.
೫	,,	ಟಿ ಹೆಚ್ ಎಂ ನಂಜುಂಡಾರಾಧ್ಯರು ತೋರಣಗಲ್ಲು
೫	,,	ವೀರಪ್ಪ ಚೆನ್ನಪ್ಪ ಶೆಟ್ಟರ ದಾನಪ್ಪನ ನಿಧನಕಾಲದಲ್ಲಿ ಶ್ರೀ ಗುರುಲಿಂಗಯ್ಯ ಹಿರೇಮಠ ದ್ವಾರಾ ಬೆಳಗಾಂ

ಪೀಠಾಭಿಮಾನಿಗಳು ಇನ್ನೂ ಅಧಿಕಾಧಿಕವಾಗಿ ಮಹಾದಾನಗಳನ್ನು ರವಾನಿಸಬೇಕು

ಹಣವನ್ನು ಶ್ರೀಜಗದ್ಗುರು ಮಹಾಸನ್ನಿಧಿಗೆ ನೇರಾಗಿ ಸಮರ್ಪಿಸಬೇಕಾಗಿ ಕೋರುವ,

ರಾಮಚಂದ್ರ ಪ್ರಸಾದ್
ಮೇನೇಜರ್

[೩ನೆಯ ಪುಟದಿಂದ ಮುಂದುವರಿದುದು]

ಶ್ರೀಮಾನ್ ಉಜ್ಜನೀಗೌಡರು ಗುಡಗೇರಿ ಶ್ರೀಮಂತ ಬಸಟ್ಟೆಪ್ಪ ಅಣ್ಣಿಗೆಟ್ಟಿ, ಶ್ರೀಮಂತ ಪಂಚಪ್ಪ ಅಣ್ಣಿಮಾನ್ವಿ, ಲಕ್ಷ್ಮೇಶ್ವರ ಮತ್ತು ಗುಡಗೇರಿಯ ಮಾಮ್ಲೇದಾರ ಸಾಹೇಬರವರು ಹಾಗೂ ಸಿರಸ್ತೇದಾರರವರೂ ಇವರೇ ಮೊದಲಾದ ಪ್ರಮುಖ ಅಧಿಕಾರಿಗಳೂ ಆಗಮಿಸಿದ್ದರು ಈ ಮಹೋತ್ಸವದಲ್ಲಿ ಇಲ್ಲಿಯ ಪ್ರಮುಖರಾದ ಶ್ರೀಮಾನ್ ಕೊರಡೂರು ಕಲ್ಲಪ್ಪ, ಶ್ರೀಮಾನ್ ಕೊರಡೂರು ದೊಡ್ಡಎಲ್ಲಪ್ಪ, ಶ್ರೀಮಾನ್ ಬಂಡಿವಾಡ ಕೆಂಚಪ್ಪ, ಶ್ರೀಮಾನ್ ಕೊಪ್ಪದ ವಿರೂಪಾಕ್ಷಪ್ಪ, ಶ್ರೀಮಾನ್ ಫಕೀರಗೌಡರು, ಶ್ರೀಮಾನ್ ನಾಮದಾರ ಎಲ್ಲಪ್ಪ, ಶ್ರೀಮಾನ್ ಗದಿಗೆಪ್ಪ ಕೊರಡೂರು, ವೇ॥ ಗುರುಸಿದ್ದಯ್ಯನವರು ಸಾಲೀಮಠ, ವೇ॥ ನಾಗಯ್ಯ ಶಿಗ್ಲಿಹಿರೇಮಠ, ವೇ॥ ತೋಟಯ್ಯ ಹೊಸಮಠ, ವೇ॥ ವೀರಯ್ಯ ಸಾಲೀಮಠ ಇವರೇ ಮೊದಲಾದವರು ತನು, ಮನ, ಧನಗಳಿಂದ ಸೇವೆಯನ್ನು ಸಲ್ಲಿಸಿದರು ಧರ್ಮಸೇವೆಯಲ್ಲಿಯೇ ನಿರತರಾದ ಈ ಮಹನೀಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ಆಯುರಾರೋಗ್ಯೈಶ್ವರ್ಯಾಭಿವೃದ್ಧಿಯನ್ನೀಯಲೆಂದು ಹಾರೈಸುತ್ತೇನೆ

ಉತ್ಸವಭಾಗಿ

ವಿರೂಪಾಕ್ಷಶರ್ಮಾ ಆರಾಧ್ಯಮಠ

ನಿಶ್ಚಯಕಾರ್ಯ

ಇದೇ ಪಾರ್ಥಿವನಾಮ ಸಂ। ಆಶ್ವಯುಜ ಶು ೨ ಸೋಮವಾರ (8 10 1945) ದಿವಸ ತಿಪಟೂರಲ್ಲಿರುವ ಶ್ರೀಮಾನ್ ದಾವಣಗೆರೆ ಮಾಗಾನಹಳ್ಳಿ ಮಹಾಲಿಂಗಪ್ಪನವರ ಮೊಮ್ಮಗ ಚಿ॥ ಕೊಟ್ರಬಸಪ್ಪನಿಗೆ ತಿಪಟೂರಲ್ಲಿರುವ ಶ್ರೀಮಾನ್ ಅರಳಿ ಚನ್ನವೀರಪ್ಪನವರ ಪುತ್ರಿ ಚಿ॥ ಸೌ ಶಾರದಾಂಬ ಎಂಬ ಕನ್ಯೆಯನ್ನು ಕೊಟ್ಟು ನಿಶ್ಚಯಿಸಿದ ಕಾರ್ಯದಲ್ಲಿ ದಾವಣಗೆರೆ ಶ್ರೀಜಗದ್ಗುರು ಅಭಿನವರೇಣುಕ ಫಂಡಿಗೆ ವರನ ಕಡೆಯಿಂದ 5 ರೂ ಗಳನ್ನೂ, ಪ್ರಭಾ ಪೋಷಣಕ್ಕೆ ೨ ರೂ ಗಳನ್ನೂ, ಕನ್ಯಾದವರ ಕಡೆಯಿಂದ ಫಂಡಿಗೆ ೧ ರೂ ಗಳನ್ನೂ ಪ್ರಭಾಪೋಷಣಕ್ಕೆ ೨ ರೂ ಗಳನ್ನೂ ದಾವಣಗೆರೆ ಹಿರೇಮಠದ ಪಂಚಾಂಗಕರ್ತೃಗಳಾದ ದಾವಣಗೆರೆ ಹಿರೇಮಠಾಧ್ಯಕ್ಷ ಜ್ಯೋತಿರ್ಭೂಷಣ ವೇ ಬ್ರಂ ಶ್ರೀ। ಸಿದ್ಧಾಂತಿ ಎಚ್ ಎಂ ಶಿವಾನಂದಸ್ವಾಮಿಶಾಸ್ತ್ರಿಗಳು ತೆಗೆಯಿಸಿದರು ನೂತನ ವಧೂವರರಿಗೆ ಶ್ರೀಭಗವತ್ಪಾದರು ಆಯುರಾರೋಗ್ಯೈಶ್ವರ್ಯಾದಿಗಳನ್ನು ಅನುಗ್ರಹಿಸಲೆಂದು ಪ್ರಾರ್ಥಿಸುವ

ಬಾದಾಮಿ ಚನ್ನಬಸಪ್ಪ, ದಾವಣಗೆರೆ

ಧರ್ಮಾತ್ಮ ಶ್ರೀವಿರೂಪಾಕ್ಷಗೌಡರ ಶಿವೈಕ್ಯ

ರಾಯಚೂರು ಜಿಲ್ಲಾ ಕುರುಡಿಗ್ರಾಮ ನಿವಾಸಿಗಳೂ ಧರ್ಮಸದಾಚರಣಪರಾಯಣರೂ ಲೌಕಿಕ ಪರಮಾರ್ಥಗಳೆರಡರಲ್ಲಿ ಜಾಣರೂ ಆದ ಶ್ರೀಮಂತ ವಿರೂಪಾಕ್ಷಗೌಡರು ಇದೇ ಭಾದ್ರಪದ ಶು॥ ೪ ಸೋಮವಾರ ಪ್ರಾತಃಕಾಲ ತಮ್ಮ ಗುರುವರ್ಯರಾದ ಬಿಚ್ಚಾಲಿ ಬೃಹನ್ಮಠಾಧ್ಯಕ್ಷ ಸಾವಿರದೇವರು ಷ॥ ಬ್ರ ಶ್ರೀ ಚೆನ್ನವೀರ ಶಿವಾಚಾರ್ಯರ ಹಸ್ತದಿಂದಲೇ ಮುಕ್ತ್ಯನುಗ್ರಹಾದಿ ವಿಧ್ಯುಕ್ತ ಶಿವಸಂಸ್ಕಾರನ್ನು ಪಡೆಯುತ್ತ ಶಿವೈಕ್ಯವನ್ನು ಹೊಂದಿದರು ಇವರು ಹರಗುರುಜಂಗಮಭಕ್ತರಾದ ಕಾರಣದಿಂದಲೋ ಏನೋ ತಮ್ಮ ಶಿವೈಕ್ಯಸಮಾಚಾರವನ್ನು ಮೊದಲೇ ತಿಳಿದವರ ಇದು ಸಾಧಾರಣವಾದುದಲ್ಲ ತಮ್ಮ ಜೀವಿತದಲ್ಲಿ ಕಡೆಯದಾದ ಈ ಶ್ರಾವಣ ಮಾಸದಲ್ಲಿ ತಮ್ಮ ಗುರುಗಳನ್ನು ಭಕ್ತಿಪೂರ್ವಕವಾಗಿ ಆಹ್ವಾನಿಸಿಕೊಂಡು ಪಾದಪೂಜಾದಿಗಳನ್ನು ಮಾಡುತ್ತ 'ಶ್ರೀಗುರುವರ್ಯ! ಇನ್ನು ಮೇಲೆ ಈ ಶರೀರದ ಅಂತ್ಯವು ಸಮೀಪವಾಗಿದೆ ನಾನು ಭಕ್ತಿಯಿಂದ ಸಮರ್ಪಿಸುವ ಈ ೧೦೦೦ ರೂ ಗಳ ದಕ್ಷಿಣೆಯನ್ನು ಸ್ವೀಕರಿಸಿ ನನ್ನನ್ನುದ್ಧರಿಸಬೇಕು" ಎಂದು ಪ್ರಾರ್ಥಿಸಿ ಶ್ರಾವಣ ಪುರಾಣೋತ್ಸವದ ಸಮಾಪ್ತಿಗಾಗಿಯೂ ತಮ್ಮ ಸಮಾಧಿಗಾಗಿಯೂ ಪ್ರಯತ್ನವನ್ನು ನಡೆಸುತ್ತಿದ್ದರು ಇವರ ಗುರುಗಳಾದ ಬಿಚ್ಚಾಲಿ ಶ್ರೀಸಾವಿರದೇವರು ಶಿಷ್ಯನ ಹೃದಯಪರಿಪಾಕಕ್ಕನುಸಾರವಾಗಿ ಶಿವಜೀವೈಕ್ಯಭಾವವನ್ನು ಬೋಧಿಸುತ್ತ ಸಮಾಧಿಕ್ರಿಯಾ ಐಕ್ಯಸ್ಥಳದ ರಹಸ್ಯವನ್ನನುಗ್ರಹಿಸುತ್ತ 'ಶಿಷ್ಯೋತ್ತಮನೇ! ನಿಮ್ಮ ಭಕ್ತಿಯು ಸಾತ್ತ್ವಿಕವಾಗಿದೆ. ಶಿವಸಾಯುಜ್ಯವು ನಿಮಗೆ ಅವಶ್ಯವಾಗಿ ಲಭಿಸುವುದು ಈ ದ್ರವ್ಯವು ಗುರುವಿಗೆ ಸಮರ್ಪಿತವಾಯಿತು ನೀವು ಸಂತೋಷಿಸಬೇಕು ಈ ದ್ರವ್ಯದ ಸದ್ವಿನಿಯೋಗವು ಶ್ರೀಕಾಶೀಮಹಾಪೀಠದಲ್ಲಿ ಆಗುವುದು ಈಗ ಬಹಳ ಸಮುಚಿತವಾಗಿರುವದರಿಂದ ಅಲ್ಲಿಯ ಶ್ರೀಜಗದ್ಗುರು ಮಹಾಸನ್ನಿಧಿಯ ಅಪ್ಪಣೆ ಪಡೆದು ಸಮರ್ಪಿಸೋಣ" ವೆಂದು ಸಮಾಧಾನ ಮಾಡಿದರು ಈ ಉಭಯ ಗುರುಶಿಷ್ಯರ ತ್ಯಾಗವನ್ನು ನೋಡಿ ಆ ಗ್ರಾಮಸ್ಥರೆಲ್ಲರೂ ಆನಂದಭರಿತರಾಗಿ ಪ್ರಶಂಸಿಸಿದರಲ್ಲದೆ ಕಾಶೀ ಮಹಾಸನ್ನಿಧಿಗೂ ಅರಿಕೆಮಾಡಿಕೊಂಡರು ಆ ಮೇಲೆ 'ಇಂತಹ ಸದ್ಭಕ್ತರ ಕೀರ್ತಿಯು ಶಾಶ್ವತವಾಗಿರುವಂತೆ ಮಾಡುವುದು ಅವಶ್ಯಕವಾಗಿದೆ, ಸದ್ಯಃ ನಮ್ಮ ಮಹಾಪೀಠದಲ್ಲಿ ನಿರ್ಮಿತವಾಗುತ್ತಿರುವ ಜ್ಞಾನ ಮಂದಿರಕ್ಕಾಗಿ ಅವರ ಮಹಾದಾನವನ್ನು ವಿನಿಯೋಗಿಸಿ, ಅವರ ನಾಮವನ್ನು ಶಿಲಾಶಾಸನಸ್ಥವನ್ನಾಗಿ ಮಾಡವಾಗುವುದು' ಎಂದು ಕಾಶೀ ಶ್ರೀಜಗದ್ಗುರು ಮಹಾಸನ್ನಿಧಿಯಿಂದ ಆಶೀರ್ವಾದಪತ್ರಿಕೆ ಬಂದಿತು ಅದೇ ದಿನವೇ ಶ್ರೀವಿರೂಪಾಕ್ಷಪ್ಪಗೌಡರು ಸಾವಿರದೆಂಟು ರೂಪಾಯಿಗಳನ್ನು ಜ್ಞಾನಮಂದಿರಕ್ಕಾಗಿ ತಮ್ಮ ಗುರುಗಳ ದ್ವಾರಾ ಸಮರ್ಪಿಸಿ ಎಲ್ಲರೊಡನೆ ಮಾತಾಡುತ್ತ ತಮ್ಮ ೬೩ ನೆಯ ವರ್ಷದ ವಯಸ್ಸಿನಲ್ಲಿ ಶಿವಸ್ಮರಣಪೂರ್ವಕವಾಗಿ ಶಿವೈಕ್ಯರಾದರು ಇವರ ಕೀರ್ತಿಯು ಚಿರಸ್ಥಾಯಿಯಾಯಿತು

ಓರ್ವ ಗುರುಭಕ್ತ

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ನ್ಯಥಪಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಸ್ಮೃತವಾಗಿರುವುದು ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರು ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುತ್ತದೆ ವೀರಶೈವಮತದಲ್ಲಿ ಸದ್ಯಃ ದೊರೆಯತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವದು ಈ ಗ್ರಂಥವು ಈಗ್ಗೆ ಸುಮಾರು ಒಂದುಸಾವಿರ ವರ್ಷಗಳ ಪೂರ್ವದಲ್ಲಿದ್ದ ಶ್ರೀಶಿವಯೋಗಿಶಿವಾಚಾರ್ಯರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಈ ದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಓದಿನೋಡಿದ ಮೇಲೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ಪಾಠಕರಿಗೆ ವೇದ್ಯವಾಗದಿರದು ಪಾಠಕರ ಅನುಕೂಲಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಕೊಡಲ್ಪಟ್ಟಿವೆ. ಈ ಗ್ರಂಥವು ಒಟ್ಟು ೩೩೦ ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ ಶೈವಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೩ ರೂಪಾಯಿ.**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಭಕ್ತ ಅಗಸ್ತ್ಯರಿಗೆ ರೇಖೆಗಳಿಂದ ಕೂಡಿದ ಫೋಟೋ ಸೈಜು ೩೦×೧೪ ಬೆಲೆ ೧ಕ್ಕೆ	೨—೬—೦
ಶ್ರೀ ರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪×೧೦ ಬೆಲೆ	೦—೬—೦
ಸದ್ಯಃ ಪಟ್ಟಾರೋಹಣಮಾಡಿರತಕ್ಕ ಐದು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೩—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೨—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೬
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—೬
ಶ್ರೀಮದುಜ್ಜಯಿನೀ ಸಿಂಹಾಸನಾಧೀಶರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೩—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ ..	೦—೧—೬
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೬

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ. ೪ ಆಣೆ — ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ. ೪ ಆಣೆ

ಸಂಪುಟ ೧೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೯ನೇ ಅಕ್ಟೋಬರ್ ೧೯೪೫ [ಸಂಚಿಕೆ ೨೪

ವಿಜಯದಶಮೀಮಹೋತ್ಸವ ಕಾಶೀ

ಕಾಶೀ ಜಗದ್ಗುರು ವಿಶ್ವಾರಾಧ್ಯ ಜ್ಞಾನಸಿಂಹಾಸನ ಮಹಾಮಠದಲ್ಲಿ ಪ್ರತಿವರ್ಷ ಪದ್ಧತಿಯಂತೆ ನವರಾತ್ರ್ಯುತ್ಸವವು ಅತ್ಯಂತ ವಿಜೃಂಭಣೆಯಿಂದ ನೆರವೇರಿತು ಪ್ರತಿನಿತ್ಯ ಉದಯಗೀತೆ, ಗಂಗೋದಕಾನಯನ, ವೇದ ಪಠನ, ಭಜನ ಪೂಜನ, ಗಾಯನ, ಸಭಾಕಾರ್ಯಾದಿಗಳು ಸಾಂಗವಾಗಿ ಜರುಗಿದವು. ತಾ॥ ೭-೧೦ ೪೫ ನೇ ದಿನದ ಸಭೆಯಲ್ಲಿ "ದೇವಂದಿದ್ದಾನೆಯೋ ಇಲ್ಲವೋ" ಎಂಬ ವಿಷಯವು ಚರ್ಚಿಸಲ್ಪಟ್ಟಿತು. ವಿದ್ವಾಂಸರೆಲ್ಲರೂ ಚರ್ಚೆಯಲ್ಲಿ ಭಾಗವಹಿಸಿ ಉತ್ಸಾಹದಿಂದ ತಮ್ಮ ತಮ್ಮ ಪಕ್ಷವನ್ನು ಸಿದ್ಧಾಂತಗೊಳಿಸಿದರು ಆಮೇಲೆ ಪ್ರತಿನಿತ್ಯವೂ ನಿಯಮಿತವಾದಂತೆ ಶ್ರೀ॥ ಷ॥ ಬ್ರ॥ ಸಿದ್ಧರಾಮಶಿವಾಚಾರ್ಯರು ರೌಡಕುಂದಿ ಇವರು "ಸ್ತ್ರೀ ಶಿಕ್ಷಣ" ಎಂಬ ವಿಷಯದಮೇಲೆಯೂ, ಶ್ರೀ ಷ॥ ಬ್ರ ಸಿದ್ಧಲಿಂಗ ಶಿವಾಚಾರ್ಯರು ಆಳವಂಡಿ ಇವರು 'ವೀರಶೈವ ಸಿದ್ಧಾಂತ' ಎಂಬ ವಿಷಯದಮೇಲೆಯೂ, ಪಂ॥ ಕಾಶೀನಾಥಶಾಸ್ತ್ರಿಗಳು ಗೊಡಚಿ ಇವರು "ಧರ್ಮ" ಎಂಬ ವಿಷಯದಮೇಲೆಯೂ, ಶ್ರೀ॥ ಷ॥ ಬ್ರ॥ ಗುರುಪಾದ ಶಿವಾಚಾರ್ಯರು ಮುಳ್ಳೂರ, ಇವರು "ಭಕ್ತಿಯೋಗ" ಎಂಬ ವಿಷಯದಮೇಲೆಯೂ, ಶ್ರೀ॥ ಷ॥ ಬ್ರ॥ ಸಂಗಮೇಶ್ವರಶಿವಾಚಾರ್ಯರು ಜತ್ತಿ ಇವರು "ಶಕ್ತಿವೈಶಿಷ್ಟ್ಯ" ಎಂಬ ವಿಷಯದಮೇಲೆಯೂ, ಪಂ॥ ಗುರುಸಿದ್ಧಸ್ವಾಮಿ ಮುದೇನೂರು ಇವರು "ಬ್ರಹ್ಮಚರ್ಯ" ಎಂಬ ವಿಷಯದಮೇಲೆಯೂ, ವೈರಾಗಕರ ಶ್ರೀ॥ ಷ॥ ಬ್ರ॥ ಪಂಚಾಕ್ಷರಶಿವಾಚಾರ್ಯರು "ಆಶ್ರಮ ಚತುಷ್ಟಯ" ಎಂಬ ವಿಷಯದಮೇಲೆಯೂ ತಮ್ಮ ಭಾಷಣವನ್ನು ಮಾಡಿದರು

ಮಹಾನವಮಿಯ ದಿನ ವಿಶೇಷ ಸಭೆಯು ಜರುಗಿತು ಶ್ರೀ ಪಂ॥ ಹರಿಪ್ರಸಾದವ್ಯಾಸಜಿಯವರು ಅಧ್ಯಕ್ಷಸ್ಥಾನವನ್ನಲಂಕರಿಸಿದ್ದರು. ಟೀಕಮಣಿ ಕಾಲೇಜಿನ ವ್ಯಾಕರಣಾಧ್ಯಾಪಕರಾದ ಪಂ॥ ಶ್ರೀ ಜಗದೀಶಚಂದಶಾಸ್ತ್ರೀ ವ್ಯಾಕರಣಾಚಾರ್ಯ ಇವರು ಸಂಸ್ಕೃತ ಭಾಷೆಯಲ್ಲಿ ಶಾರದೋತ್ಸವ ವಿಷಯವಾಗಿ ಸರಸವಾಗಿ ಭಾಷಣ ಮಾಡಿದರು ಮರುದಿನ ವಿಜಯದಶಮಿಯೂ ಶ್ರೀ ಕಾಶೀ ಜಗದ್ಗುರು ಮಹಾಸನ್ನಿಧಿಯವರ ವರ್ಧಂತೀಮಹೋತ್ಸವವೂ ಇದ್ದುದರಿಂದ ವಿಶೇಷ ಕಾರ್ಯಕ್ರಮಗಳನ್ನೇರ್ಪಡಿಸಲಾಗಿತ್ತು ಪ್ರಾತಃಕಾಲ ಏಳು ಘಂಟೆಗೆ ಶ್ರೀ ಜಗದ್ಗುರು ಮಹಾಸ್ವಾಮಿಗಳವರ ಮಂಗಳಸ್ನಾನವೂ ಮಹಾ ಶಿವಾರ್ಚನೆಯೂ ಎಂಟು ಘಂಟೆಯಿಂದ ಶ್ರೀ ಜಗದ್ಗುರು ವಿಶ್ವಾರಾಧ್ಯ ಲಿಂಗೋದ್ಭವ ಮೂರ್ತಿಗೆ ರುದ್ರಾಭಿಷೇಕವೂ, ಜ್ಞಾನಪೀಠದ ಸಮರ್ಚನೆಯೂ ವಿಧ್ಯುಕ್ತವಾಗಿ ಜರುಗಿ ೧೨ ಘಂಟೆಗೆ ಜಂಗಮಸಂತರ್ಪಣೆಯು ಮೋದಕ ಭಕ್ಷ್ಯಭೋಜ್ಯಗಳಿಂದ ಅತ್ಯಂತ ತೃಪ್ತಿಕರವಾಗಿ ನೆರವೇರಿತು ೫ ಘಂಟೆಗೆ ಶ್ರೀ ಜಗದ್ಗುರುಗಳವರು ಶಮೀ ಮಂಟಪಕ್ಕೆ ದಯಮಾಡಿಸಲು ಶಮೀ ಪೂಜೆಯು ಯಥಾಕ್ರಮವಾಗಿ ನಡೆಯಿತು ಆಮೇಲೆ ಶ್ರೀ ಜಗದ್ಗುರು ಮಹಾಸನ್ನಿಧಾನದವರು ಶ್ರೀ ವಿಶ್ವಾರಾಧ್ಯ ದರ್ಶನ ಪುರಸ್ಸರವಾಗಿ ದರ್ಬಾರಹಾಲಿಗೆ ದಯಮಾಡಿಸಿ ಜಯಘೋಷದೊಡನೆ ಸಿಂಹಾಸನವನ್ನಲಂಕರಿಸಿದರು ಶಮೀ ಸಮರ್ಪಣೆ ಕಾಣಿಕಾ ಸಮರ್ಪಣೆಗಳಾಗುತ್ತಲೇ ಸಭಾಕಾರ್ಯಕ್ಕೆ ಪ್ರಾರಂಭವಾಯಿತು ಮೊದಲು ಮಹೋಪಾಧ್ಯಾಯ ವಿದ್ಯಾಸಾಗರೇತ್ಯಾದಿ ಬಿರುದಾಂಕಿತರಾದ ಶ್ರೀ ಗೌರೀನಾಥ ಪಂಡಿತ, ಪಾಠಕ ಇವರು ಕಳಿಸಿದ ಶುಭಸಂದೇಶವನ್ನು ಓದಲಾಯಿತು ಆಮೇಲೆ ರೌಡಕುಂದಿ ಶ್ರೀ॥ ಷ॥ ಬ್ರ॥ ಸಿದ್ಧರಾಮಶಿವಾಚಾರ್ಯರು ಜಗದ್ಗುರುಗಳವರ ವರ್ಧಂತ್ಯುತ್ಸವ ನಿಮಿತ್ತವಾಗಿ ತಾವು ರಚಿಸಿದ "ನೂತನರತ್ನಮಾಲಿಕೆ" ಎಂಬ ಕವಿತೆಯನ್ನೋದಿ ವಿಜಯದಶಮಿಯ ಬಗ್ಗೆ ಭಾಷಣಮಾಡಿದರು. ಆಮೇಲೆ ವೈರಾಗಕರ ಶ್ರೀ ಷ॥ ಬ್ರ॥ ಪಂಚಾಕ್ಷರಶಿವಾಚಾರ್ಯರು 'ವಿದ್ವತ್ಸಂಘ'ದಿಂದ ಪ್ರತಿತಿಂಗಳು ಹೊರಡುವ 'ವಿಪಂಚೀ' ಪತ್ರಿಕೆಯ ಸಚಿತ್ರ ವಿಶೇಷಾಂಕವನ್ನು ಜಗದ್ಗುರು ಸನ್ನಿಧಿಗೆ ಸಮರ್ಪಿಸಿ ವಿಜಯ ದಶಮೀ ಹಾಗೂ ವರ್ಧಂತ್ಯುತ್ಸವಗಳ ಬಗ್ಗೆ ಭಾಷಣಮಾಡಿದರು

ಆಮೇಲೆ ಶ್ರೀಮದಭಿನವವಿಶ್ವಾರಾಧ್ಯ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರು ವಿಜಯದಶಮೀ ವಿಷಯವಾಗಿ ವಿವೇಚನಾತ್ಮಕವಾಗಿ ಅಪ್ಪಣೆ ಕೊಡಿಸುತ್ತ ದುರ್ಗಾಲೀಲಾ ಮತ್ತು ಪಾಂಡವಾದಿಗಳ ಪೌರಾಣಿಕ ಕಥೆಗಳಿಂದ ವಿಜಯದಶಮಿಗೆ ಮಹತ್ವ ಒಂದಿದೆಯೆಂದು ಹೇಳುವದು ಸರಿಯಾದರೂ ಹೆಚ್ಚಿಗೆ ಮಳೆ ಚಳಿ ಬಿಸಿಲುಗಳಿಲ್ಲದೆ ಬೆಳೆಗಳಿಂದ ಸಮೃದ್ಧವಾದ ಹೃದಯಂಗಮವಾದ ಈ ಶರತ್ಕಾಲವು ದಿಗ್ವಿಜಯಕ್ಕೆ ಅನುಕೂಲವಾದ್ದರಿಂದ ಇದೇ ಸಮಯದಲ್ಲಿಯೇ ಹಿಂದಿನ ರಾಜಾಧಿರಾಜರು ಸಂಭ್ರಮದಿಂದ ದಂಡಯಾತ್ರೆ ಹೊರಡುತ್ತಿದ್ದುದು ಈ ಹಬ್ಬದ ಮಹತ್ವಕ್ಕೆ ಕಾರಣವಾಗಿದೆಯೆಂದೂ, ಕನ್ನಡ ರಾಜಧಾನಿಯಾದ ವಿಜಯನಗರದ ಸ್ಥಾಪನೆಯು ಇದೇ ದಿನದಲ್ಲಿಯೇ ಆಗಿದ್ದಿತೆಂದೂ, ಇಂದು ಜರಗುವ ಮೈಸೂರು ಶ್ರೀಮನ್ಮಹಾರಾಜರವರ ಉತ್ಸವವು ಪ್ರೇಕ್ಷಣೀಯವಾದುದೆಂದೂ, ಆಳುವ ಮಹಾಪ್ರಭುಗಳವರಿಗೆ "ಜಯಚಾಮರಾಜ" ರೆಂಬ ನಾಮಕರಣವಾಗಲು ಅವರು ಹಿಂದಿನ ಮಹಾಯುದ್ಧದ ವಿಜಯದಿನದಲ್ಲಿ ಜನಿಸಿದುದೇ ಕಾರಣವೆಂದೂ ಮುಂತಾಗಿ ವಿವರಿಸಿ ಪ್ರಾಸಂಗಿಕವಾಗಿ ಅನೇಕ ವಿಷಯಗಳನ್ನು ಬಹು ಸ್ವಾರಸ್ಯವಾಗಿ ಬೋಧಿಸಿದರಲ್ಲದೆ ತಮ್ಮ ವರ್ಧಂತ್ಯುತ್ಸವದ ಬಗ್ಗೆ ಮಾತೆತ್ತಿ ವಿದ್ಯಾಭಿವೃದ್ಧಿ ಹಾಗೂ ವಿದ್ಯಾರ್ಥಿಗಳ ವಿಷಯದಲ್ಲಿ ತಮಗಿರುವ ಆದರ ವಾತ್ಸಲ್ಯಗಳನ್ನು ವ್ಯಕ್ತಪಡಿಸುತ್ತ ತಮ್ಮ ಮಹಾ ಸಂಸ್ಥಾನದ ವ್ಯವಸ್ಥೆಯ ವಿಷಯವನ್ನು ಸ್ಪಷ್ಟವಾಗಿ ಹೇಳಿ ಸರ್ವರನ್ನು ರೋಮಾಂಚಿತರನ್ನಾಗಿ ಮಾಡಿದರು. ಮಹಾಸನ್ನಿಧಿಯವರ ನಿಸ್ವಾರ್ಥವಾದ ಧ್ಯೇಯಧೋರಣೆಗಳನ್ನರಿತು ಸಭಿಕರೆಲ್ಲರೂ ಆನಂದತುಂದಿಲರಾದರು ಆಮೇಲೆ ಮಹಾಸನ್ನಿಧಾನದಿಂದ ವೇ॥ ಪಂ॥ ಚನ್ನಬಸವ ಶಾಸ್ತ್ರಿಗಳು ಇಟಗೆ ಇವರಿಗೆ "ವ್ಯಾಕರಣರತ್ನ" ಎಂಬ ಪದವಿಯು ಅನುಗ್ರಹೀತವಾಗಿ ಶ್ರೀ ಜಗದ್ಗುರು ಪಂಚಾಚಾರ್ಯ ಜಯ ಜಯಕಾರದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು

ಸಿದ್ಧರಾಮಶಿವಾಚಾರ್ಯ, ರೌಡಕುಂದಿ

ಶ್ರೀ ವಿದ್ಯಾಗಣಪತಿಯ ಪೂಜಾಮಹೋತ್ಸವ

ಬೆಂಗಳೂರು ಸಿಟಿ ಚಿಕ್ಕಪೇಟೆ ಶ್ರೀ ಮಹಂತಿನಮಠದಲ್ಲಿ ತಾ ೨೩-೯-೪೫ ನೇ ಭಾನುವಾರ ಸಾಯಂಕಾಲ ೭ ಘಂಟೆಗೆ ಮೈಸೂರು ಸೀಮೆಯ ಹೈಕೋರ್ಟಿನ ರಿಟೈರ್ಡ್ ಚೀಫ್‌ಜಸ್ಟೀಸರಾದ ರಾಜಧರ್ಮಪ್ರವೀಣ ದಿವಾನ್‌ಬಹದ್ದೂರ್ ಸಿ ಮಹದೇವಯ್ಯನವರ ಅಧ್ಯಕ್ಷತೆಯಲ್ಲಿ ಶ್ರೀ ವಿದ್ಯಾಗಣಪತಿಯ ಮಹೋತ್ಸವವು ಅತಿ ವಿಜೃಂಭಣೆಯಿಂದ ನಡೆಯಿತು ಶ್ರೀ ಮಠದ ಸೆಕ್ರೆಟರಿಯವರಾದ ವೇ॥ ಎನ್ ರುದ್ರಯ್ಯನವರು ವಿದ್ಯಾರ್ಥಿಗಳು ಹೇಗಿರಬೇಕು? ವಿದ್ಯಾಗಣಪತಿಯ ಪೂಜೆಯನ್ನು ಏತಕ್ಕಾಗಿ ಮಾಡಬೇಕು? ಎಂಬ ವಿಷಯವನ್ನು ವಿದ್ಯಾರ್ಥಿಗಳಿಗೆ ಚೆನ್ನಾಗಿ ತಿಳಿಯುವಂತೆ ಬೋಧಿಸಿದರು ಮತ್ತು ಶ್ರೀಮಾನ್ ಓ ಎನ್ ಲಿಂಗಣ್ಣಯ್ಯ ಬಿ ಎ, ಇವರು ವಿದ್ಯಾರ್ಥಿಗಳಿಗೆ "ಹಿತೋಪದೇಶ" ಎಂಬ ವಿಷಯದಮೇಲೆ ಅಮೂಲ್ಯವಾದ ಭಾಷಣವನ್ನು ಮಾಡಿದರು ಶ್ರೀ ವಿದ್ಯಾಗಣಪತಿಯ ಮಹೋತ್ಸವಕ್ಕೆ ಸುಮಾರು ೭೦೦ ಮಂದಿ ವಿದ್ಯಾರ್ಥಿಗಳು ಆಗಮಿಸಿದ್ದರು ಶ್ರೀ ಮಠದಲ್ಲಿ ಹೋದವರ್ಷದಂತೆ ಈ ವರ್ಷವೂ ಕೂಡ ೬೦ ಮಂದಿ ವಿದ್ಯಾರ್ಥಿಗಳು ಅಭ್ಯಾಸವನ್ನು ಮಾಡುತ್ತಾರೆ ಇದಕ್ಕೆ ಅನೇಕ ಮಹನೀಯರು ಚಂದಾಕೊಟ್ಟು ವಿದ್ಯಾರ್ಥಿಗಳಿಗೆ ವಿದ್ಯಾದಾನವನ್ನು ಮಾಡುತ್ತಾರೆ ವಿದ್ಯಾಭಿಮಾನಿಗಳಾದ ಮಾನ್ಯ ಅಧ್ಯಕ್ಷರವರು ಒಂದುನೂರು ರೂಪಾಯಿಗಳನ್ನು ವಿದ್ಯಾರ್ಥಿಗಳ ಉಪಯೋಗಕ್ಕಾಗಿ ದಯಪಾಲಿಸಿರುತ್ತಾರೆ ಇವರು ಎಷ್ಟೇ ತೊಂದರೆ ಬಂದರೂ ನ್ಯಾಯ ಧರ್ಮ ಕರ್ತವ್ಯ ದಕ್ಷತೆಯಿಂದ ಸದಾ ವಿದ್ಯಾರ್ಥಿಗಳಿಗೆ ಸಹಾಯ ಮಾಡುತ್ತಾ ಇಂಥಾ ಕಷ್ಟಕಾಲದಲ್ಲಿಯೂ ತಮ್ಮ ಅಧ್ಯಕ್ಷತೆಯಲ್ಲಿ 'ಬಸಪ್ಪಾ' ಇಂಟರ್‌ಮಿಡಿಯೇಟ್ ಕಾಲೇಜನ್ನು ಸ್ಥಾಪಿಸಿ ನಡೆಸುತ್ತಿರುವುದೇ ಸಾಕ್ಷಿಯಾಗಿದೆ ಅಧ್ಯಕ್ಷರು ತಮ್ಮ ಭಾಷಣದಲ್ಲಿ ವಿದ್ಯಾರ್ಥಿಗಳಿಗೆ ಅನೇಕ ವಿಧವಾದ ಬುದ್ಧಿವಾದಗಳನ್ನು ಹೇಳಿದರು ಅನಂತರ ಸಂಸ್ಥೆಯ ಸೆಕ್ರೆಟರಿಯವರಾದ ವೇ॥ ಎನ್. ರುದ್ರಯ್ಯನವರು ಸಂಸ್ಥೆಗೆ ಮಾಹೆಯಾನ ಚಂದಾಕೊಡುವ ಮಹನೀಯರೆಲ್ಲರಿಗೂ ಸಂಸ್ಥೆಯ ಪರವಾಗಿ ಧನ್ಯವಾದಗಳನ್ನು ಅರ್ಪಿಸಿದರು

ಪ್ರತ್ಯಕ್ಷದರ್ಶಿ

ಸ್ತ್ರೀ ವೈದ್ಯರು

ರಷ್ಯದಲ್ಲಿ ನೂರಕ್ಕೆ ೭೦ ಮಂದಿ ಸ್ತ್ರೀ ವೈದ್ಯರೇ ಇರುವರೆಂದು ಹೇಳಲಾಗಿದೆ.

ಪಂಚಾಚಾರ್ಯಪ್ರಭಾ.

೧೯೪೫ನೆಯ ಅಕ್ಟೋಬರ್ ತಾ|| ೨೯ನೇ ಸೋಮವಾರ

ಭಾರತೀಯರ ಅಧ್ಯಾತ್ಮಶಕ್ತಿ

ಪಾಶ್ಚಾತ್ಯದೇಶಗಳಲ್ಲಿ ಅಧ್ಯಾತ್ಮವಿಚಾರವು ಸಂಪೂರ್ಣವಾಗಿ ಕಂಡುಬರುವುದಿಲ್ಲ. ಅಲ್ಲಿರುವರು ಉಳಿದ ಐಹಿಕಸುಖಸಾಧಕಗಳಾದ ವಿಚಾರಗಳಲ್ಲಿ ಪರಾಕಾಷ್ಠದಶೆಯನ್ನು ಹೊಂದಿರುತ್ತಾರೆ. ಇವರಲ್ಲಿ ರೂಢಮೂಲವಾಗಿ ಬಂದಿರುವ ಕಲಾಕೌಶಲಾದಿ ವಿದ್ಯೆಗಳನ್ನು ನಮ್ಮ ಭಾರತೀಯರು ನೂರಾರು ವರ್ಷಗಳವರೆಗೆ ಕಲಿತರೂ ಇವರಿಗಿರುವಷ್ಟು ಜ್ಞಾನವನ್ನು ಎಂದೂ ಸಂಪಾದಿಸಲಾರರು. ಭಾರತೀಯರು ಇವರ ಅದ್ಭುತ ಕಾರ್ಯಗಳನ್ನು ನೋಡಿ ಆಶ್ಚರ್ಯಪಡಬೇಕಾಗಿದೆ. ಇವರ ಇಹಲೋಕಸುಖಸಾಧನವಾದ ಕಾರ್ಯಕರಣಶಕ್ತಿಗೆ ಸಮಾನವಾದ ಶಕ್ತಿಯನ್ನಾಗಲಿ, ಮೀರಿಸುವ ಶಕ್ತಿಯನ್ನಾಗಲಿ ನಮ್ಮ ಭಾರತೀಯರು ಪಡೆಯುವರೆಂಬುದು ಗಗನಕುಸುಮನ್ಯಾಯ ಮಾನವೇ ಸರಿ! ಈ ವಿಷಯದಲ್ಲಿ ಭಾರತೀಯರು ಪಾಶ್ಚಾತ್ಯರ ಮೇಲ್ಪಂಕ್ತಿಯನ್ನು ಅನುಸರಿಸಬೇಕು. ಇಂಥ ಐಹಿಕಸುಖಗಳನ್ನು ಪಡೆಯುವುದು ಮಾತ್ರವೇ ಮಾನವಜನ್ಮದ ಗುರಿಯಲ್ಲ. ಇವುಗಳೆಲ್ಲವೂ ಜಡಪದಾರ್ಥಗಳನ್ನು ಕುರಿತು ಪ್ರವರ್ತಿಸುವವಲ್ಲದೆ ನಿತ್ಯಪದಾರ್ಥವನ್ನು ದ್ವೇಶಿಸಿ ಪ್ರವರ್ತಿಸುವುವಲ್ಲ. ನಿತ್ಯಪದಾರ್ಥವಿಷಯಕವಾದ ಜ್ಞಾನವನ್ನು ಸಂಪಾದಿಸಬೇಕಾದರೆ ಅಧ್ಯಾತ್ಮಶಕ್ತಿಯನ್ನು ಪಡೆಯಬೇಕು. ಜೀವಾತ್ಮನು ಜಗಚ್ಚಾಲಕನಾದ ಪರಮಾತ್ಮನಂತೆ ನಿತ್ಯನೂ ಅನಂತನೂ ಅನಾದಿಯೂ ಆಗಿದ್ದರೂ ಪಾಪಪುಣ್ಯಗಳಲ್ಲಾಸಕ್ತನಾಗಿ ಜಾಡನ ಜಾಲದಲ್ಲಿ ಶಿಕ್ಕಿಬಿದ್ದ ಹುಳದಂತೆ ಕರ್ಮಬಂಧದಲ್ಲಿ ಶಿಕ್ಕಿಬಿದ್ದು ಅನಂತ ದುಃಖಗಳನ್ನು ಅನುಭವಿಸುತ್ತಿರುವನು.

ಅಶ್ವ ಇವ ರೋಮಾಣಿ ವಿಧೂಯ ಪಾಪಂ ಚಂದ್ರ ಇವ ರಾಹೋರ್ಮುಖಾತ್ ಪ್ರಮುಚ್ಯ ಧೂತ್ವಾ ಶರೀರಂ ಅಕೃತಂ ಕೃತಾತ್ಮಾ ಬ್ರಹ್ಮಲೋಕಮಭಿಸಂಭವಾಮಿ ॥

ಕುದುರೆಗಳು ಕೂದಲನ್ನು ಕೊಡವುವಂತೆ ಪಾಪರಾಶಿಯನ್ನೆಲ್ಲ ಒತ್ತರಿಸಿ ರಾಹುವಿನ ಬಾಯಿಯಿಂದ ತಪ್ಪಿಸಿಕೊಂಡ ಚಂದ್ರನಂತೆ ಜಡವಾದ ಶರೀರಸಂಬಂಧವನ್ನು ಆತ್ಯಂತಿಕವಾಗಿ ತಪ್ಪಿಸಿಕೊಂಡು ಹಾಲಿನಲ್ಲಿ ಹಾಲು ಬೆರೆದಂತೆ ಪರಮಾತ್ಮನ ಅಂಶಭೂತವಾದ ಜೀವನು ಆ ಪರಮಾತ್ಮನಲ್ಲಿಯೇ ಸೇರಿ ನಿತ್ಯಸುಖವನ್ನು ಪಡೆಯುವನು. ಇದನ್ನೇ ಆಮುಷ್ಮಿಕಸುಖವೆಂದು ಹೇಳುತ್ತಾರೆ. ಐಹಿಕಸುಖಕ್ಕೂ, ಆಮುಷ್ಮಿಕಸುಖಕ್ಕೂ ಮೇರುಸರ್ಷಪದಷ್ಟು ವ್ಯತ್ಯಾಸವುಂಟು. ಐಹಿಕಸುಖವು ತಾತ್ಕಾಲಿಕವಾದುದರಿಂದ ಕ್ಷಣಿಕವು. ಆಮುಷ್ಮಿಕಸುಖವು ನಿತ್ಯವಾದುದರಿಂದ ಅವಿನಾಶಿಯು. ಪ್ರತಿಯೊಬ್ಬ ಮನುಷ್ಯನೂ ಹೊರಗಿರುವ ವಸ್ತುಸೌಂದರ್ಯವನ್ನು ನೋಡಿ ಮೋಹಿಸುತ್ತಾನಲ್ಲದೆ ಒಳಗೇನಿದೆಯೆಂಬ ಗುಟ್ಟನ್ನೇ ಅರಿಯನು. ಅದರಲ್ಲಿ ಪಾಶ್ಚಾತ್ಯರಂತೂ ಹೊರಗಿರುವ ಜಡಪದಾರ್ಥಗಳ ರಹಸ್ಯವನ್ನು ಆಮೂಲಾಗ್ರವಾಗಿ ತಿಳಿದು ಕೈವಶಮಾಡಿಕೊಂಡು ಸುಖವಾಗಿ ಪ್ರಪಂಚದಲ್ಲಿ ಜೀವನಯಾತ್ರೆಯನ್ನು ಮಾಡುವದರಲ್ಲಿ ಬಹುಗಟ್ಟಿಗರಾಗಿರುತ್ತಾರೆ. ನಮ್ಮ ಭಾರತೀಯರು ಇವರಲ್ಲಿ ಹಿಂದುಳಿದಿದ್ದರೂ ಆತ್ಮನ ಗುಣಕರ್ಮಸ್ವಭಾವಾದಿಜ್ಞಾನಶಕ್ತಿರೂಪವಾದ ಅಧ್ಯಾತ್ಮಶಕ್ತಿಯನ್ನು ಪಡೆಯುವದರಲ್ಲಿ ಬಲ್ಲಿದವರಾಗಿರುತ್ತಾರೆ. ಈ ವಿಷಯದಲ್ಲಿ ಪಾಶ್ಚಾತ್ಯರು ಭಾರತೀಯರನ್ನು ಜಯಿಸಲಾರರು. ಇತ್ತೀಚೆಗೆ ನಮ್ಮ ಭರತಖಂಡದಲ್ಲಿ ನೆಲೆಯಾಗಿ ನಿಂತಿರುವ ಅಧ್ಯಾತ್ಮಶಕ್ತಿಯನ್ನು ಪಾಶ್ಚಾತ್ಯರು ಹೊಗಳುತ್ತ ಅದನ್ನು ಪ್ರಚಾರಮಾಡಲುದ್ಯುಕ್ತರಾಗಿದ್ದಾರೆ. ಪ್ರತಿಯೊಬ್ಬ ಜೀವನೂ ದುಃಖದಿಂದ ಬಿಡುಗಡೆಯಾಗಬೇಕೆಂದೂ ಸುಖವನ್ನು ಪಡೆಯಬೇಕೆಂದೂ ಹಂಬಲಿಸುತ್ತಾನೆ. ನಾವು ಪ್ರಪಂಚದ ಪದಾರ್ಥಗಳನ್ನು ಹೇಗೆ ಹೇಗೆ ಬಯಸುತ್ತ ಹೋಗುವೆವೋ ಹಾಗೆ ಹಾಗೆ ದುಃಖವು ಹೆಚ್ಚುತ್ತ ಹೋಗುವದು. ಹೇಗೆ ಹೇಗೆ ಎಲ್ಲಾ ಪದಾರ್ಥಗಳಲ್ಲಿಯೂ ಜಿಹಾಸೆಹುಟ್ಟುವುದೋ ಹಾಗೆ ಹಾಗೆ ಸುಖವು ಪ್ರಾಪ್ತಿಯಾಗುವದು. ಇಂಥ ಸುಖವೇ ಪರಮಾನಂದರೂಪವಾದುದು. ಇಂಥ ನಿತ್ಯಸುಖರೂಪವಾದ ಮುಕ್ತಿಯು ವೈರಾಗ್ಯಬುದ್ಧಿಯಿಂದಲೇ ಜನಿಸುವದು. ಸಮುದ್ರೋಪಮಾನವಾದ ವಿಷಯವಸ್ತುಗಳಲ್ಲಿ ಒಂದು ಹನಿಯಷ್ಟು ಇಚ್ಛೆಯಂಕುರಿಸಿದರೂ ಮುಕ್ತಿಯು ದೂರವಾಗುವದು. ಆದುದರಿಂದ ಮೋಕ್ಷಾಪೇಕ್ಷೆಯು ಮೊದಲು ಇಚ್ಛಾರಾಗದ್ವೇಷಾದಿಗಳನ್ನು ತ್ಯಜಿಸಬೇಕು. ಇಂಥ ಶಕ್ತಿಯನ್ನು ಸಂಪಾದಿಸುವುದಕ್ಕಾಗಿ ಭರತಖಂಡದಲ್ಲಿ ಜನ್ಮವೆತ್ತಿದ ಮಹಾಚಾರ್ಯರು ಬ್ರಹ್ಮಚರ್ಯಾದ್ಯಾಶ್ರಮಗಳನ್ನು ಕಲ್ಪಿಸಿರುವರು. ಭಾರತೀಯರು ಪತ್ನೀಪುತ್ರಾದಿಗಳಲ್ಲಿಟ್ಟಿರುವ ವ್ಯಾಮೋಹವನ್ನು ಆಧ್ಯಾತ್ಮಿಕಶಕ್ತಿಬಲದಿಂದ ದೂರಮಾಡುವುದಕ್ಕಾಗಿ ಸನ್ಯಾಸಾಶ್ರಮವನ್ನು ಸ್ವೀಕರಿಸಿ ಕಾಮಕ್ರೋಧಾದಿದುರ್ಗುಣಗಳಿಂದ ದೂರರಾಗಿ ಪರಶಿವನ ಉಪಾಸನೆಯಲ್ಲಿ ಆಸಕ್ತರಾಗಿ ಈ ಮಾಯಿಕವಾದ ಪ್ರಪಂಚವನ್ನು ತ್ಯಜಿಸಿ ಪುನಃ ಬರದಂತೆ ಮಾಡಿಕೊಂಡರು. ಅನಂತಋಷಿಗಳು ನಿರ್ಜನಪ್ರದೇಶದಲ್ಲಿದ್ದು ತರಗೆಲೆಯನ್ನು ತಿಂದು ಜೀವಿಸುತ್ತ ಕಠಿನತರಗಳಾದ ತಪಸ್ಸನ್ನಾಚರಿಸಿದರು. ಅನಂತ ರಾಜಾಧಿರಾಜರು ಧರ್ಮದಿಂದ ರಾಜ್ಯಭಾರಮಾಡಿ ರಾಜಭೋಗವನ್ನೆಲ್ಲಾ ಲೋಷ್ಟದಂತೆ ತ್ಯಜಿಸಿ ಪರಮಾತ್ಮಧ್ಯಾನಾಸಕ್ತರಾದರು. ಇಂಥ ಇತಿಹಾಸಗಳು ನಮ್ಮ ಭರತಖಂಡದಲ್ಲಿ ಅಪರಿಮಿತಗಳಾಗಿರುತ್ತವೆ. ಮುಕ್ತಿಯೇ ಬಹಳ ದೊಡ್ಡದೆಂದು ತೋರಿಸುವುದಕ್ಕಾಗಿ ಮೈತ್ರೇಯ್ಯುಪನಿಷತ್ತಿನಲ್ಲಿ ಒಂದು ದೊಡ್ಡ ಇತಿಹಾಸವು ಉಕ್ತವಾಗಿದೆ.

ಬೃಹದ್ರಥೋ ವೈ ನಾಮ ರಾಜಾ ರಾಜ್ಯೇ ಜ್ಯೇಷ್ಠಂ ಪುತ್ರಂ ನಿಧಾಪಯಿತ್ವೇದಮಶಾಶ್ವತಂ ಮನ್ಯಮಾನಃ ಶರೀರಂ ವೈರಾಗ್ಯಮುಪೇತೋಽರಣ್ಯಂ ನಿರ್ಜಗಾಮ ಸ ತತ್ರ ಪರಮಂ ತಪ ಆಸ್ಥಾಯಾದಿತ್ಯಮೀಕ್ಷಮಾಣ ಊರ್ಧ್ವಬಾಹುಸ್ತಿಷ್ಠತಿ ॥

ಬೃಹದ್ರಥನೆಂಬ ರಾಜನು ತನ್ನ ರಾಜ್ಯದಲ್ಲಿ ಜಿಹಾಸೆಯುಳ್ಳವನಾಗಿ ಪತಿವ್ರತಾ ಸ್ತ್ರೀಯನ್ನೆಲ್ಲಾ ಅಸ್ಥಿರವಾದವುಗಳನ್ನಾಗಿ ಬಗೆದು ರಾಜಭೋಗಗಳನ್ನು ತ್ಯಜಿಸಿ ಅರಣ್ಯವನ್ನು ಪ್ರವೇಶಿಸಿ ಅಲ್ಲಿ ತೀಕ್ಷ್ಣವಾದ ತಪಸ್ಸನ್ನಾಚರಿಸಿದನು. ಶಾಕಾಯನ ಋಷಿಯು ಆತನ ತಪಸ್ಸಿಗೆ ಮೆಚ್ಚಿ ಪ್ರತ್ಯಕ್ಷನಾಗಿ ಆತನ ಇಷ್ಟಾರ್ಥವನ್ನು ಕೇಳಲು ಒಣಗಿದ ನೀರುಳ್ಳ ಭಾವಿಯೊಳಗೆ ಬಿದ್ದಿರುವ ಕಪ್ಪೆಯಂತೆ ಈ ದುಷ್ಟಸಂಸಾರದಲ್ಲಿ ನರಳುತ್ತಲಿದ್ದೇನೆ. ನನ್ನನ್ನು ಉದ್ಧರಿಸು ನೀನೇ ನನಗೆ ಗತಿಯಲ್ಲದೆ ಮತ್ತಾರೂ ಇಲ್ಲವೆಂದು ಕೇಳಲಾಗಿ, ಆತನ ಭಕ್ತಿಗೆ ಮೆಚ್ಚಿ ಶಾಕಾಯನ ಋಷಿಯು ಸರ್ವದುಃಖದಿಂದ ತಪ್ಪಿಸಿ ಮುಕ್ತಿಯನ್ನು ಅನುಗ್ರಹಿಸಿದನು. ಇದನ್ನೆಲ್ಲಾ ಪರಿಶೀಲಿಸಿದರೆ ಕ್ಷಣಿಕವಾದ ಜಗದ್ವ್ಯಾಪಾರಾದಿಗಳಿಂದ ಭೂಯಿಷ್ಠವಾದ ಐಹಿಕ ಸೌಖ್ಯದಲ್ಲಿ ಮಗ್ನನಾಗಿ ದುಃಖಿಯಾಗುವದಕ್ಕಿಂತಲೂ ಪುನಃ ಹುಟ್ಟುಸಾವುಗಳಿಂದೊಡಗೂಡಿದ ಈ ದೇಹಸಂಬಂಧವನ್ನು ಸಂಪೂರ್ಣವಾಗಿ ತೊಲಗಿಸಿಕೊಂಡು ಪರಮಾತ್ಮನಲ್ಲಿ ಬೆರೆತು ನಿತ್ಯಾನಂದದಿಂದಿರುವದೇ ಜೀವಾತ್ಮನ ಪರಮಧ್ಯೇಯವಾಗಿದೆ. ಆದುದರಿಂದ ಭಾರತೀಯರು ವಿಶೇಷವಾಗಿ ಐಹಿಕಸುಖಸಾಧನೆಯಲ್ಲಿ ಪ್ರಯತ್ನಪಡದೆ ಆಧ್ಯಾತ್ಮಿಕಶಕ್ತಿಸಂಪಾದನೆಯಲ್ಲಿಯೇ ತಮ್ಮ ಜೀವಮಾನವನ್ನೆಲ್ಲ ಕಳೆದಿರುತ್ತಾರೆ. ಇದು ಕೇವಲ ಬಾಹ್ಯಸುಖಾಪೇಕ್ಷಿಗಳಿಗೆ ವಿರುದ್ಧವಾಗಿ ಕಂಡರೂ ಜ್ಞಾನಿಗಳಿಗೆ ಮನೋಹರವಾಗಿಯೇ ಕಾಣುವುದರಲ್ಲಿ ಸಂಶಯವಿಲ್ಲ.

ಅಕ್ಕಿ ಸರಬರಾಜು

ಈ ವರ್ಷದ ಅಂತ್ಯದವೇಳೆಗೆ ಬರ್ಮಾದಿಂದ ಭಾರತಕ್ಕೆ ಅಕ್ಕಿ ಸರಬರಾಯಿ ಆಗುವದೆಂದು ಕೇಂದ್ರ ಸರ್ಕಾರದ ಆಹಾರ ಸೆಕ್ರೆಟರಿಗಳು ತಿಳಿಸಿದ್ದಾರೆ.

ಮೋಟರ್‌ಸೈಕಲ್ ಹಮೋಟೆ ಆಜ್ಞೆ

ಮೋಟರ್ ಟ್ರಾನ್ಸ್‌ಪೋರ್ಟ್ ಕಂಟ್ರೋಲರ್‌ರವರ ಅನುಮತಿ ಪಡೆಯದೆ ಯಾರೇ ಆಗಲಿ ಭಾರತ ಸರ್ಕಾರದಿಂದ ಕೊಡಲಾಗುವ ನೂತನ ಮೋಟರ್ ಸೈಕಲ್ಲುಗಳನ್ನು ಕೊಳ್ಳುವದಾಗಲಿ ಮತ್ತು ಮಾರುವದಾಗಲಿ ಮಾಡಕೂಡದೆಂದು ನಿಷೇಧಾಜ್ಞೆಯೊಂದನ್ನು ಹೊರಡಿಸಿದ್ದಾರೆ.

ವರ್ತಮಾನಸಂಗ್ರಹ

ವಿಷವಾಯುವಿನ ನಾಶ

ಜರ್ಮನಿಯಲ್ಲಿ ಕೂಡಿಡಲಾಗಿದ್ದ ೨೦೦ ಸಾವಿರಟನ್ ವಿಷವಾಯುವನ್ನು ಈಗ ಉತ್ತರ ಸಮುದ್ರದಲ್ಲಿ ಮುಳುಗಿಸಿ ನಾಶಮಾಡುವರಂತೆ.

ರಾಯಭಾರಿಗಳೆಲ್ಲರ ವಜಾ

ಹೊರದೇಶಗಳಲ್ಲಿರುವ ಜಪಾನಿನ ಎಲ್ಲ ರಾಯಭಾರಿಗಳನ್ನೂ ಹಿಂದಕ್ಕೆ ಕರೆಸಿಕೊಳ್ಳಬೇಕೆಂದು ಜನರಲ್ ಮೆಕ್‌ಆರ್ಥರ್‌ರವರು ಜಪಾನ್ ಸರ್ಕಾರಕ್ಕೆ ಆಜ್ಞೆಮಾಡಿದ್ದಾರೆ.

ಜಾವಾದಲ್ಲಿ ಡಚ್ಚರ ಕೊಲೆ

ಜಾವಾದಲ್ಲಿ ನಡೆಯುತ್ತಿರುವ ಸ್ವಾತಂತ್ರ್ಯ ಸಮರವಿನ್ನೂ ನಿಂತಿಲ್ಲ. ಬಟೇವಿಯಕ್ಕೂ ಬಾಂಡಿಯಾಂಗಿಗೂ ಮಧ್ಯೆ ಇರುವ ಗುಡ್ಡಗಾಡಿನಲ್ಲಿ ೧೦ ಮಂದಿ ಡಚ್ ಅಧಿಕಾರಿಗಳು ಕೊಲೆ ಮಾಡಲ್ಪಟ್ಟಿರುವದಾಗಿ ಹೇಳಲಾಗಿದೆ.

ಅಮೇರಿಕದಲ್ಲೂ ನಿರುದ್ಯೋಗ

ಈಗ ಮುಕ್ತಾಯಗೊಂಡ ಯುದ್ಧದ ದೆಸೆಯಿಂದ ಕೈಗಾರಿಕೆಗಳಿಗೆ ಮಾತೃಸ್ಥಾನವಾದ ಅಮೇರಿಕದಲ್ಲೂ ನಿರುದ್ಯೋಗಿಗಳ ಸಂಖ್ಯೆಯು ಮಿತಿಮೀರಿದೆಯೆಂದೂ, ಈಗ ಸುಮಾರು ೬೦ ಲಕ್ಷ ಜನರು ನಿರುದ್ಯೋಗಿಗಳಾಗಿದ್ದಾರೆಂದೂ ಹೇಳಲಾಗುತ್ತಿದೆ.

ತಂದೆಯ ಮೇಲೆ ಮಗಳ ದಾವೆ

ಲಾಹೋರಿನ ಸಿನಿಮಾ ನಟಿ ಮನೋರಮೆಯು ತನ್ನ ತಂದೆಯಮೇಲೆಯೇ ಮೊಕದ್ದಮೆ ಹೂಡಿ, ತನಗೆ ಸೇರಿದ ೪೦ ಸಾವಿರ ರೂಪಾಯಿಗಳನ್ನು ತನ್ನ ತಂದೆಯು ಬ್ಯಾಂಕಿನಿಂದ ತೆಗೆಯದಂತೆ ಅಡ್ಡಿಮಾಡಬೇಕೆಂದು ಬೇಡಿದ್ದಾಳೆ.

ಇರಾನ್ ಬಳಿ ರಷ್ಯದ ಚಟುವಟಿಕೆ

ಇರಾನ್ ಟರ್ಕಿ ಗಡಿಯಲ್ಲಿ ರಷ್ಯ ಸೈನಿಕರ ಚಟುವಟಿಕೆ ವಿಶೇಷವಾಗಿರುವದೆಂದು ವದಂತಿ ಹರಡಿದೆ. ಇನ್ನೊಂದು ವರದಿಯಂತೆ ಈಗಾಗಲೇ ಇರಾನ್ ರಾಜಧಾನಿಯಾದ ಅಜೆರ್‌ಬೈಜಾನಲ್ಲಿ ರಷ್ಯ ಸೈನಿಕರು ಬಂದು ಇಳಿದಿದ್ದಾರೆಂದು ಹೇಳಲಾಗುತ್ತಿದೆ.

೨೫೦೦೦೦ ಡಚ್ಚರಿಗೆ ರಕ್ಷಣೆ ಇಲ್ಲ

ಜಾವಾದಲ್ಲಿರುವ ೨೫೦೦೦೦ ಡಚ್ ಮತ್ತು ಯೂರೇಷಿಯನ್ ಪ್ರಜೆಗಳ ರಕ್ಷಣೆ ಬಗ್ಗೆ ಭರವಸೆ ಕೊಡಲು ತನಗೆ ಶಕ್ಯವಿಲ್ಲವೆಂದು ಮಿತ್ರ ಪ್ರಧಾನ ಸೇನಾನಿ ಜನರಲ್ ಸರ್ ಫಿಲಿಪ್ ಕ್ರಿಶ್ಚಿನ್‌ಸನ್‌ರವರಿಗೆ ಇಂಡೋನೇಷಿಯನ್ ಪ್ರಭುತ್ವ ತಿಳಿಸಿದೆ.

ಹಿಂದೂಸ್ಥಾನ್ ವಿಮಾನ ಕಾರ್ಖಾನೆಯನ್ನು ಮೈಸೂರು ಸರ್ಕಾರ ವಹಿಸಿಕೊಳ್ಳುವದೇ

ಬೆಂಗಳೂರಿನಲ್ಲಿರುವ ಹಿಂದೂಸ್ಥಾನ್ ವಿಮಾನ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿರುವ ೩೦ ಸಾವಿರ ಮಂದಿಯನ್ನೂ ಇಟ್ಟುಕೊಂಡು ಅದನ್ನು ಏಷ್ಯಾದಲ್ಲೇ ಅತ್ಯಂತ ದೊಡ್ಡ ವಿಮಾನ ಕಾರ್ಖಾನೆಯನ್ನಾಗಿ ಮಾಡಲು ಯೋಜನೆಯೊಂದು ತಯಾರಾಗಿರುವದೆಂದೂ, ಮೈಸೂರು ಸರ್ಕಾರದವರು ಆ ಕಾರ್ಖಾನೆಯನ್ನು ತಾವೇ ವಹಿಸಿಕೊಳ್ಳುವ ವಿಚಾರದಲ್ಲಿ ಇಂಡಿಯಾ ಸರ್ಕಾರದೊಡನೆ ಮಾತುಕತೆ ನಡೆಸುತ್ತಿದ್ದಾರೆಂದೂ ಅದು ಫಲಕಾರಿಯಾಗುವ ನಿರೀಕ್ಷೆ ಇದೆಯೆಂದೂ ಹೇಳಲಾಗುತ್ತಿದೆ.

ಯುದ್ಧ ಪಾತಕಿಗಳ ವಿಚಾರಣೆ

ಯುರೋಪಿನ ಪ್ರೇಗ್ ಕೋರ್ಟಿನಲ್ಲಿ ನಡೆಯುತ್ತಿರುವ ಯುದ್ಧ ಪಾತಕಿಗಳ ವಿಚಾರಣೆಯು ಸುಮಾರು ೩ ವರುಷಗಳ ಕಾಲ ನಡೆಯಲಿದೆಯೆಂದೂ ಒಂದು ವಾರಕ್ಕೆ ಎರಡು ಮೊಕದ್ದಮೆಗಳಂತೆ ೮ ಸಾವಿರ ಮೊಕದ್ದಮೆಗಳ ವಿಚಾರಣೆಯಾಗಬೇಕಾಗಿದೆಯೆಂದೂ ಹೇಳಲಾಗಿದೆ.

ಜರ್ಮನಿಗಾಗಿರುವ ಸಾವು ನೋವು

೧೯೪೦ನೇ ಅಕ್ಟೋಬರಿನಿಂದ ೧೯೪೫ ನೆಯ ಜನವರಿವರೆಗೆ ಜರ್ಮನಿಯಮೇಲೆ ನಡೆದ ಬಾಂಬು ದಾಳಿಗಳಿಂದ ಒಟ್ಟು ೨ ಲಕ್ಷ ೫೦ ಸಾವಿರ ಜರ್ಮನ್ ನಾಗರಿಕರು ಸತ್ತರೆಂದೂ ೧೯೪೫ನೇ ಫೆಬ್ರವರಿಯಿಂದ ಮೇ ತಿಂಗಳವರೆಗೆ ಸುಮಾರು ಒಂದು ಲಕ್ಷ ಜನರು ಸತ್ತಿರುವದಾಗಿಯೂ ಹೇಳಲಾಗಿದೆ

ಜರ್ಮನಿಯಲ್ಲಿ ಪುರುಷರ ಕೊರತೆ

ಈಗಿನ ಯುದ್ಧದಿಂದ ಜರ್ಮನಿಯಲ್ಲಿ ಕಳೆದ ಆಗಸ್ಟ ತಿಂಗಳವರೆಗೆ ೯೦ ಲಕ್ಷ ಜರ್ಮನ್ ಗಂಡಸರು ಸತ್ತಿರುವರೆಂದೂ ಇದರಿಂದ ಅಲ್ಲಿ ಪುರುಷರಿಗೆ ಕೊರತೆಯುಂಟಾಗಿ ೫೦ ಲಕ್ಷ ಜರ್ಮನ್ ಸ್ತ್ರೀಯರು ಮದುವೆಯಾಗಲು ಗಂಡಸರು ಸಿಕ್ಕದೆ ತೊಂದರೆಯುಂಟಾಗಿದೆಯೆಂದೂ ಪ್ರಕಟವಾಗಿದೆ.

ಭಾರತ ರಾಷ್ಟ್ರೀಯ ಪಡೆಯ ವಿಚಾರಣೆ

ಜರ್ಮನಿಯಲ್ಲಿ ಸುಭಾಷ್ ಬೋಸರಿಂದ ನಿರ್ಮಿತವಾಗಿದ್ದ ಭಾರತ ರಾಷ್ಟ್ರೀಯಪಡೆಯವರು ತಮ್ಮ ಪರ ಕಾಂಗ್ರೆಸ್ ಹೊರತು ಇನ್ಯಾವ ಕೋಮುವಾರು ಪಕ್ಷದವರೂ ವಕಾಲತ್ತು ವಹಿಸಬೇಕಾಗಿಲ್ಲವೆಂದು ತಿಳಿಸಿರುವರಂತೆ ಈ ಪಡೆಯವರ ವಿಚಾರಣೆಯಲ್ಲಿ ಸಾಕ್ಷ್ಯಕೊಡಲು ಜಪಾನಿನಿಂದ ಮೂವರು ಅಧಿಕಾರಿಗಳನ್ನು ಕರೆಸಲಾಗುವವೆಂದು ಹೇಳಲಾಗುತ್ತಿದೆ

ಡಾ|| ಸೆಕ್ರಾನೋ ಬ್ರಿಟಿಷ್ ರಾಯಭಾರಿ ಭೇಟಿ

ಜಾವಾ ಸ್ವಾತಂತ್ರ್ಯ ಚಳುವಳಿಯ ನಾಯಕರಾದ ಡಾ|| ಸೆಕ್ರಾನೋರವರು ಬ್ರಿಟಿಷ್ ರಾಯಭಾರಿಯನ್ನು ಜಾವಾದಲ್ಲಿ ಕಂಡು ಮಾತುಕತೆ ನಡೆಸಿದರೆಂದೂ ಆಗ್ನೆ ಬ್ರಿಟಿಷ್ ಕಮ್ಯಾಂಡರ್ ಮತ್ತು ಸೆಕ್ರಾನೋರವರ ಮಂತ್ರಿಮಂಡಲಿಯ ೧೬ ಜನ ಸದಸ್ಯರು ಹಾಜರಿದ್ದರೆಂದೂ ಹೇಳಲಾಗಿದೆ.

ಜಪಾನಿಗೆ ಹೊಸ ವ್ಯಾಸಂಗ ವಿಧಾನ

ಜಪಾನಿನಲ್ಲಿ ಈಗಿರುವ ವ್ಯಾಸಂಗ ವಿಧಾನವನ್ನು ತೊಡೆದುಹಾಕುವಂಥ ಆಜ್ಞೆಯನ್ನು ಜನರಲ್ ಮೆಕ್-ಆರ್ಥರ್‌ರವರು ಮಾಡಿದ್ದಾರೆ. ಅದರಂತೆ ಮಿಲಿಟರಿ ಶಿಕ್ಷಣ ತಕ್ಷಣ ರದ್ದಾಗಬೇಕು ಅಂತರರಾಷ್ಟ್ರೀಯಶಾಂತಿ, ಪ್ರಜಾಪ್ರತಿನಿಧಿಪ್ರಭುತ್ವ ವಿಧಾನಗಳ ಒಗ್ಗೆ ಪಾಠಪ್ರವಚನಗಳಾಗಬೇಕು ವ್ಯಕ್ತಿಸಾತಂತ್ರ್ಯ, ಪ್ರಜೆಗಳ ಮೂಲಭೂತ ಹಕ್ಕುಬಾಧ್ಯತೆಗಳನ್ನೂ ಜಪಾನಿಗಳಿಗೆ ಕಲಿಸಬೇಕು ಎಂದು ಆಜ್ಞೆ ಮಾಡಿರುತ್ತಾರೆ

ಅಮೆರಿಕೆಯಲ್ಲಿ ಬಲಾತ್ಕಾರವಾದ ಮಿಲಿಟರಿ ಶಿಕ್ಷಣ

ಅಮೆರಿಕದಲ್ಲಿ ೨೦ ವರ್ಷ ವಯಸ್ಸಿನೊಳಗಿರುವ ಯುವಕರೆಲ್ಲರಿಗೂ ಒಂದು ವರ್ಷ ಒತ್ತಾಯದ ಮಿಲಿಟರಿ ಶಿಕ್ಷಣ ಕೊಡಬೇಕೆಂಬ ಸಲಹೆಯನ್ನು ಅಧ್ಯಕ್ಷ ಟ್ರೂಮನ್ನರವರು ಕಾಂಗ್ರೆಸ್ಸಿಗೆ ಕಳುಹಿಸಿದ್ದಾರೆ ತಮ್ಮ ರಾಷ್ಟ್ರವು ಪರಾಕ್ರಮದಲ್ಲಿ ಮುಂದುವರೆದು ಇನ್ನು ಮುಂದೆ ಯಾವ ರಾಷ್ಟ್ರವೂ ಶಾಂತಿಭಂಗಮಾಡದಂತೆ ನೋಡಿಕೊಳ್ಳಲು ಸಿದ್ಧವಾಗಿರುವದಕ್ಕಾಗಿ ಈ ಯೋಜನೆಯೆಂದು ಅಧ್ಯಕ್ಷರು ತಿಳಿಸಿದ್ದಾರೆ.

ಪ್ಯಾಲಸ್ಟೈನ್ ವಿಚಾರದಲ್ಲಿ ಅರಬ್ಬರ ಒಪ್ಪಿಗೆ ಅವಶ್ಯಕ

"ಪ್ಯಾಲಸ್ಟೈನ್ ಪರಿಸ್ಥಿತಿಯಲ್ಲಿ ಅರಬ್ಬರ ಪೂರ್ಣ ಒಪ್ಪಿಗೆ ಪಡೆಯದ ಯಾವ ಬದಲಾವಣೆಯನ್ನೂ ಮಾಡಕೂಡದು ಯೆಹೂದಿಗಳು ವಲಸೆ ಬರಲು ಅವಕಾಶ ಕೊಟ್ಟು ಆ ಮೂಲಕ ಅರಬ್ಬರ ಹಿತಕ್ಕೆ ಧಕ್ಕೆ ತಂದದ್ದೇ ಆದರೆ ಮಧ್ಯಪ್ರಾಚ್ಯದಲ್ಲಿ ಅಶಾಂತಿಯುಂಟಾಗುವದು ಖಂಡಿತ" ಎಂಬದಾಗಿ ಈಜಿಪ್ಟ್, ಇರಾಕ್ ಮತ್ತು ಲೆಬನಾನ್ ಸರ್ಕಾರಗಳು ಅಮೆರಿಕದ ವಿದೇಶಾಂಗ ಮಂತ್ರಿ ಬೈರನ್ಸ್‌ರವರಿಗೆ ತಿಳಿಸಿವೆ

ಪೋಲೀಸ್ ದಫೇದಾರರನ್ನು ಚೂರಿಯಿಂದ ತಿವಿದು ಕೊಂದರು

ಚಿನ ಪಟ್ಟಣದ ರೈಲ್ವೆ ಪೋಲೀಸ್ ದಫೇದಾರ ಶ್ರೀ ಎಸ್. ಎ ಸ್ವಾಮಿಯವರನ್ನು ೨೪ ನೆಯ ತಾರೀಖು ಮಧ್ಯಾಹ್ನ ೨-೪೫ ಗಂಟೆಯ ಸಮಯದಲ್ಲಿ ಮೂರು ಜನ ಮುಸಲ್ಮಾನರು ಚಾಕುವಿನಿಂದ ಹೊಟ್ಟೆಗೆ ತಿವಿದು ತೀವ್ರ ಗಾಯಪಡಿಸಿದರೆಂದೂ ತಕ್ಷಣ ಅವರನ್ನು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆಮಾಡಿದರೂ ಪ್ರಯೋಜನವಾಗದೆ ಮೃತರಾದರೆಂದೂ ತಿಳಿದು ಬರುತ್ತದೆ ಈ ದಫೇದಾರರು ಚನ್ನಪಟ್ಟಣದ ರೈಲ್ವೆ ಕ್ವಾರ್ಟರ್ಸ್‌ನಲ್ಲಿ ಮಧ್ಯಾಹ್ನ ಊಟಮಾಡುತ್ತಾ ಕುಳಿತಿದ್ದಾಗ ಮೂರು ಜನ ಮುಸ್ಲಿಮರು ಬಂದು ಅವರನ್ನು ಹೊರಕ್ಕೆ ಕರೆದು ಚಾಕುವಿನಿಂದ ಹೊಟ್ಟೆಗೆ ತಿವಿದು ಪರಾರಿಯಾದರೆಂದೂ, ರೈಲ್ವೆ ಪೋಲೀಸರು ಅವರಲ್ಲಿ ರಫೂಫ್‌ಖಾನ್ ಎಂಬುವನೊಬ್ಬನನ್ನು ದಸ್ತಗಿರಿ ಮಾಡಿರುವದಾಗಿಯೂ ಹೇಳಲಾಗಿದೆ

ಇಂಡೋನೇಷಿಯನ್ ರಾಷ್ಟ್ರೀಯ ಸೈನ್ಯದ ಸಿದ್ಧತೆ

ಜಾವಾದಲ್ಲಿ ಡಚ್ಚರು ಇಂಡೋನೇಷಿಯನರ ರಾಷ್ಟ್ರೀಯ ಚಳವಳಿಯನ್ನು ಮುರಿಯಲು ಯತ್ನಿಸಿದರೆ ಆಗ ಇಂಡೋನೇಷಿಯನ್ ರಾಷ್ಟ್ರೀಯ ದಳದವರು ಡಚ್ಚರ ವಿರುದ್ಧ ಕಿರುಕುಳ ಯುದ್ಧ ಹೂಡಲು ಸಿದ್ಧತೆ ಮಾಡಿಕೊಳ್ಳುತ್ತಿರುವದಾಗಿ ಹೇಳಲಾಗುತ್ತಿದೆ ಈ ಯೋಜನೆಯಂತೆ ಇಂಡೋನೇಷಿಯನ್ ರಾಷ್ಟ್ರೀಯ ಸೈನ್ಯದವರು ಹಲವು ಗ್ರಾಮಗಳು ಮತ್ತು ಊರುಗಳಿಗೆ ಒಂದೊಂದರಂತೆ—ರಕ್ಷಣಾ ಕೇಂದ್ರಗಳನ್ನು ಏರ್ಪಡಿಸಿ ಆ ಪ್ರದೇಶದಲ್ಲಿ ವಾಸಿಸುವ ಸಂಸಾರದವರಿಗೆ ಊರಿನೊಳಕ್ಕೆ ಬರಬಹುದಾದ ಶತ್ರುಮೋಟಾರು ಮತ್ತು ಲಾರಿಗಳ ಮೇಲೆ ಹಾಕಲು ಪೆಟ್ರೋಲ್ ಬಾಂಬುಗಳನ್ನು ಒದಗಿಸುವದು, ಆ ಪ್ರದೇಶದ ಪ್ರವೇಶಮಾರ್ಗಗಳಲ್ಲಿ ಈ ರಾಷ್ಟ್ರೀಯ ಸೈನಿಕರು ಕಾವಲಿದ್ದು ಮುಂದರಿದುಬರುವ ಶತ್ರುಗಳಿಗೆ ಆದಷ್ಟು ಹಾನಿಯುಂಟುಮಾಡುವದು ಈ ಸೈನಿಕರಿಗೆ ಕತ್ತಿ, ಈಟಿ, ಲಾಠಿ ಮೊದಲಾದ ಆಯುಧಗಳಲ್ಲದೆ ಸಾಧ್ಯವಾದಲ್ಲೆಲ್ಲಾ ತುಪಾಕಿಗಳನ್ನೂ ಒದಗಿಸಲಾಗುವದು ದೇಶಾದ್ಯಂತವೂ ಈ ವಿಧವಾದ ರಕ್ಷಣೆ ಕಲ್ಪಿಸುವದಾಗಿ ಗೊತ್ತಾಗಿದೆ

ಹೂವಿನಹಡಗಲಿಯಲ್ಲಿ 'ನಾಡಹಬ್ಬ' ಸಮಾರಂಭ

ಮೊದಲೇ ಆಹ್ವಾನ ಪತ್ರಿಕೆಗಳನ್ನು ಹಂಚಿದ ಮೇರೆಗೆ ವಿದ್ಯಾರ್ಥಿನಿಲಯದಲ್ಲಿ 'ನಾಡಹಬ್ಬ' ಸಮಾರಂಭವು ತಾರೀಖು ೧೦-೧೦-೪೫ನೆಯ ಬುಧವಾರ ದಿಂದ ಪ್ರಾರಂಭವಾಯಿತು

ನಿಲಯಕ್ಕೆ ಹೋಗುವ ದಾರಿಯುದ್ದಕ್ಕೂ 'ನಾಡಹಬ್ಬ' ಮತ್ತು 'ಸುಸ್ವಾಗತ' ಸೂಚಕ ಬೋರ್ಡುಗಳು ಧ್ವಗ್ಗೋಚರವಾಗುತ್ತಿದ್ದವು ನಿಲಯದ ಮಹಾದ್ವಾರವು ತಳಿರು-ತೋರಣ, ರಂಭಾಸ್ತಂಭಗಳಿಂದ ಶೋಭಿಸುತ್ತಿತ್ತು.

ಅಂದು ಪ್ರಾತಃಕಾಲ ೮ ಘಂಟೆಯಿಂದ ವಿದ್ಯಾರ್ಥಿಗಳಿಂದ ಪ್ರಭಾತಫೇರಿಯಾದನಂತರ ಧ್ವಜಾರೋಹಣಾದಿ ಕಾರ್ಯಕ್ರಮಗಳು ಪದ್ಧತಿಯಂತೆ ನಡೆದವು. ತರುವಾಯ ಸಾಯಂಕಾಲ ೭ ಘಂಟೆಯಿಂದ ನಿಲಯದ ಮುಂಭಾಗದಲ್ಲಿ ಹಾಕಿರುವ ವಿಶಾಲವಾದ ಭವ್ಯಮಂಟಪದಲ್ಲಿ ನಿಲಯದ ಉಪಾಧ್ಯಕ್ಷರಾದ ಶ್ರೀಮಂತ ಸೊಪ್ಪಿನ ಮಲ್ಲಪ್ಪನವರ ಅಧ್ಯಕ್ಷತೆಯಲ್ಲಿ 'ನಾಡಹಬ್ಬ' ಕಾರ್ಯಕ್ರಮಗಳು ನೆರವೇರಿ ನಾಡಹಬ್ಬ ಮಹತ್ವದ ಮೇಲೆ ಬೋರ್ಡು ಪ್ರೌಢಶಾಲೆಯ ಕನ್ನಡ ಪಂಡಿತರಾದ ವಿದ್ವಾನ್ ವೇ|| ಶಿತಿಕಂಠಶಾಸ್ತ್ರಿಗಳವರಿಂದ ಭಾಷಣವಾಗಿ ಕಾರ್ಯದರ್ಶಿಯವರಿಂದ ಆಭಾರವುನ್ನಗೆಯೊಡನೆ ಸಭೆಯು ಉಪಸಂಹೃತವಾಯಿತು

ತಾ|| ೧೧-೧೦-೪೫ ನೆಯ ಗುರುವಾರ ಪ್ರಾತಃಕಾಲ ವಿದ್ಯಾರ್ಥಿಗಳಿಂದ ಪುನಃ ಪ್ರಭಾತಫೇರಿಯೂ ಧ್ವಜವಂದನೆಯೂ ಜರುಗಿ, ಸಾಯಂಕಾಲ ಹ್ಯಾರಡದ ಶ್ರೀ ಸೀತಾರಾಮರಾಯರ ಕವಿ ಲಕ್ಷ್ಮೀಶನ ಕವಿತಾವಾಚನವೂ ಪಂಡಿತರ 'ರಾಜಶೇಖರವಿಲಾಸ' ಪ್ರವಚನವೂ, ಅನಂತರ ಬೆಳಗಾಂವಿ ಶ್ರೀ ಶಾಂತಿನಾಥ ಇಂಗಳೆಯವರ ಸ್ಫೂರ್ತಿದಾಯಕ ಭಾಷಣವೂ ಆಯಿತು ಶುಕ್ರವಾರ ಸಾಯಂಕಾಲ ೭ ಘಂಟೆಗೆ ಧಾರವಾಡ ಶ್ರೀ ಮಲ್ಲಬಾದಿ ವೀರಭದ್ರಪ್ಪನವರ ಸಭಾಧ್ಯಕ್ಷತೆಯಲ್ಲಿ ಬಳ್ಳಾರಿ ಜಿಲ್ಲಾ ಪಬ್ಲಿಸಿಟಿ ಆರ್ಗನೈಜರ್ ಶ್ರೀ ಬಿ ಎರ್ ಪಟೇರ ಎಂ ಎ ಇವರು 'ಕರ್ನಾಟಕ ಗತ ವೈಭವ' ಕುರಿತು ಭಾಷಣ ಮಾಡಿದರು ಶನಿವಾರ ಮುಂಜಾನೆ ೧೦ ಘಂಟೆಗೆ ಶ್ರೀ ಮಲ್ಲಬಾದಿ ವೀರಭದ್ರಪ್ಪನವರು 'ಮೈಲಾರ ಶ್ರೀ ಬಸವಲಿಂಗ ಶರಣರ ಜೀವನ ಚರಿತೆ' ಕುರಿತು ಭಾಷಣ ಮಾಡಿದರು ಸಾಯಂಕಾಲ ಬಳ್ಳಾರಿ ಶ್ರೀ ಕೃಷ್ಣಮೂರ್ತಿರಾಯರ ತ್ಯಾಗರಾಜ ಕೃತಿಗಳೂ ಹರ್ಪನಹಳ್ಳಿ ಶ್ರೀ ಬೀಚಿ ಮತ್ತು ಮಂಡಳಿಯವರ ನಾಟಕಗಳ ಮೇಲೆ ಭಾಷಣವೂ ರಸ ಹಾಸ್ಯ ವಿನೋದಾವಳಿಗಳೂ ಕೊನೆಗೆ ಕರೂರು ಗಾಯನರತ್ನ ವೇ|| ಗುರುಬಸವಾರ್ಯ ಗವಾಯಿಗಳವರ ಸಂಗೀತವೂ ಮುಂತಾದವುಗಳು ಜರುಗಿದವು

ಆದಿತ್ಯವಾರ ಸಾಯಂಕಾಲ ೭ ಘಂಟೆಯಿಂದ ಹರಪನಹಳ್ಳಿ ಶ್ರೀ ಎಲ್ ವೆಂಕೋಬರಾಯರ ಭಾರತ ವಾಚನವೂ ತರುವಾಯ ದಕ್ಷಿಣಾದಿ ಸಂಗೀತವೂ ನಂತರ ರಾತ್ರಿ ೧೨ ಘಂಟೆಗೆ ಹೊಸ ಸೀನರಿ ನೂತನ ಡ್ರೆಸ್ಸುಗಳಿಂದ ನಿಲಯದ ವಿದ್ಯಾರ್ಥಿಗಳಿಂದ 'ದಾನಶೂರಕರ್ಣ' ಎಂಬ ನಾಟಕವೂ ಬಹು ಯಶಸ್ವಿಯಾಗಿ ಜರುಗಿದವು ನಾಟಕಕ್ಕೆ ಜನಸಂದಣಿಯು ವಿಶೇಷವಾಗಿತ್ತು ಕೇವಲ ಎಂಟು ದಿವಸಗಳಲ್ಲಿಯೇ ಕಲಿತು ರಂಗಭೂಮಿಯ ಮೇಲೆ ಯಶಗಳಿಸಿದ ಬಾಲಕರ ಕೌಶಲ್ಯಕ್ಕೆ ಅಧಿಕಾರಿ ವರ್ಗದವರೂ ಪುರಜನರೂ ಪ್ರಶಂಸಿದರು.

ಪ್ರತ್ಯಕ್ಷದರ್ಶಿ.

ದುಃಖವಾರ್ತೆ

ನಿಜಾಮ ಇಲಾಖಾ ಚಿಂಚೋಳಿ ಗ್ರಾಮದ ಶ್ರೀ ಕಿಸನರಾವ್ ಕುಲಕರಣಿ ಇವರು ಪ್ಲೇಗಿನಿಂದ ಮೃತರಾದರೆಂಬ ವಿಷಯವನ್ನು ಬರೆಯಲು ಅತ್ಯಂತ ವಿಷಾದವೆನಿಸುತ್ತದೆ ಇವರು ಶಾಂತಸ್ವಭಾವದವರಾಗಿದ್ದು ಗ್ರಾಮದಲ್ಲಿ ಸರ್ವರ ಪ್ರೀತಿಗೂ ಪಾತ್ರರಾಗಿದ್ದರು ವೈಷ್ಣವ ಮತೀಯರಾಗಿದ್ದರೂ ಸಹ ಶ್ರೀ ಜಗದ್ಗುರು ಪಂಚಾಚಾರ್ಯರಿಗೆ ವೀರಶೈವರಿಗಿಂತಲೂ ಹೆಚ್ಚು ಭಕ್ತಿಯುಳ್ಳವರಾಗಿದ್ದರು ನಮ್ಮ ಗ್ರಾಮದ ವೀರಶೈವ ತರುಣರಲ್ಲಿ ಗುರುಭಕ್ತಿಯ ಬೀಜವನ್ನು ಊರಿದ ಕೀರ್ತಿಯು ಈ ಮಹನೀಯರಿಗೆ ಸಲ್ಲತಕ್ಕದ್ದಾಗಿದೆ ನಮ್ಮಗ್ರಾಮವು ಒಂದು ಮಹಾವ್ಯಕ್ತಿಯನ್ನು ಕಳೆದುಕೊಂಡದ್ದರಿಂದ ಸರ್ವರೂ ದುಃಖಪಡುತ್ತಿರುವರು. ಈಶ್ವರೇಚ್ಛೆಗೆ ಉಪಾಯವಿಲ್ಲ. ಜಗದೀಶ್ವರನು ಮೃತರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಪ್ರಾರ್ಥಿಸುವ.

ಸಿದ್ದಲಿಂಗಯ್ಯ ಮಾಸ್ತರ್, ಚಿಂಚೋಳಿ

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಸ್ಥಾನವಾದಿನ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಿಸಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು. ವೀರಶೈವಮತದಲ್ಲಿ ಸದೃಶ ದೊರೆಯತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು. ಈ ಗ್ರಂಥವು ಈಗ್ಗೆ ಸುಮಾರು **ಹಿಸಾವಿರ** ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವುದು. ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಕೊಡಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡುವದಕ್ಕಾಗಿ **ಪಂಡಿತ ಶ್ರೀಕಾಶೀನಾಥ ಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ವಾಚಕರಿಗೆ ವೇದ್ಯವಾಗುವುದು. ವಾಚಕರ ಅನುಕೂಲಕ್ಕಾಗಿ ಬಹು ಶ್ರಮವಹಿಸಿ ... ವಿಷಯಾನುಕ್ರಮಣಿಕೆಯೂ ಶ್ಲೋಕಸೂಚಿಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೬೩೩ ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ... ರವಾಗಿ ಶ್ರೀಜಗದ್ಗುರು ರೇಣುಕಾಚಾರ್ಯರ ಲೀಲಾಸ್ಥಾನವಾದ ಮನೋಹರ ಫೋಟೋಗಳು ಜೋಡಿಸಲ್ಪಟ್ಟಿರುವದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ... ರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೨ ರೂಪಾಯಿ**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ **ಫೋಟೋ ಸೈಜು** ೨೦ X ೧೪ ಬೆಲೆ ಗಳ್ಗೆ	೦—೬—
ಶ್ರೀ ರೇಣುಕಾಚಾರ್ಯರ ಲಿಂಗೋದ್ಭವ ದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ X ೧೦ ಬೆಲೆ	೦—೬—
ಸದ್ಯ ಸೀಹಾಸನಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ **ಫೋಟೋ ಸೈಜು** ೧೪ X ೧೦ ಬೆಲೆ	೦—೩—
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ X ೧೦ ಬೆಲೆ ಗಳ್ಗೆ	೦—೩—
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ **ಫೋಟೋ**	೦—೧—
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ **ಪಟ್ಟಾಭಿಷೇಕ ಮಾಡುವ ಫೋಟೋ**	೦—೧—
... ಶ್ರೀ ಜಗದ್ಗುರು ... ಸಿಂಹಾಸನಪೀಠದ ಫೋಟೋ	೦—೧—
ಶ್ರೀ ಕಾಶೀ ಜಗದ್ಗುರು ... ಮಹಾಸ್ವಾಮಿಗಳವರ ಫೋಟೋ	೦—೧—
ಶ್ರೀ ಕಾಶೀಜಗದ್ಗುರುಗಳ ... ಜಗದ್ಗುರು ... ಧಾರಣಮಾಡುವ ಫೋಟೋ	೦—೧—
ಶ್ರೀ ಉಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ... ಶಿವಾಚಾರ್ಯರ ಫೋಟೋ	೦—೧—
... ಶಿವ ... ಮಹಾಸ್ವಾಮಿಗಳವರ **ಫೋಟೋ**	೦—೧—
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರ ... ಫೋಟೋ	೦—೧—
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ಗಳ್ಗೆ	೦—೨—
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ಗಳ್ಗೆ	೦—೪—
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ಗಳ್ಗೆ	೦—೧—
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ಗಳ್ಗೆ	೦—೧—
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—
... ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ... ಫೋಟೋ	೦—೧—
... ಶಿವ ... ಜಗದ್ಗುರು ... ಮಹೋತ್ಸವದ **ಫೋಟೋ**	೦—೧—

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶೆ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೭ನೆಯ ಆವೃತ್ತಿ)	೩ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೬ನೆಯ ಆವೃತ್ತಿ)	೩ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವಪದಗಳು (೬ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಪಂಚಾಚಾರ್ಯಪ್ರಕಾಶ	೨ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೯ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೬ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಮಚ್ಛಿವ ಉತ್ತರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹ (ಸಂಸ್ಕೃತ)	೨ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವ ... ರಿಕಿರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಸ್ಥಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆ
ಸದ್ಬೋಧರತ್ನಾಕರ	೮ ಆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆ
ವೈದಿಕಶಿವಪೂಜಾವಿಧಿ (ವೈದಿಕ ... ಯುಕ್ತವಾದುದು ೨ನೆಯ ಆವೃತ್ತಿ)	೧। ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಶ್ರೀಕರಭಾಷ್ಯಂ (...)	೧॥ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧॥ ರೂ
ವೀರಶೈವರತ್ನ (... ನೆಯ ಆವೃತ್ತಿ ೬೦ ಪತ್ತಲದ ಫೋಟೋಗಳಿರ ಪುಟ)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ...)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹ (... ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ವೀರಶೈವಸಿದ್ಧಾಂತಸುಧಾರಕರು	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೦೪ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	4 A[illegible]
The Philosophical Aspect of Virasaivism (*English*)	8 A[illegible]
Speeches by Pandit Shri Kashinatha Shastriji (*English*)	12 A[illegible]
लिंगधारणचन्द्रिका (संस्कृत)	३ [illegible]
वीरशैवधर्म (मराठी	१ [illegible]
महानारायणोपनिषत् (वीरशैवभाष्य–संस्कृत	१ [illegible]
सिद्धान्तशिखामणि (मूल)	८ आ
नन्दिकेश्वरकारिका (संस्कृत)	२ आ

ದೊರೆಯುವ ಸ್ಥಳ: ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ವ್ಯವಸ್ಥಾಪಕ ಸನ್ಯಾಸಿ ... ರವರಿಂದ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಪಂಚಾಚಾರ್ಯ ... ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪ ಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ದವರಿಗೆ ೩ ರೂ. ೪ ಆಣೆ ಪರಸ್ಥಳದವರಿಗ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೧೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೫ನೇ ನವೆಂಬರ್ ೧೯೪೫ [ಸಂಚಿಕೆ ೨೫

ಶ್ರೀಜಗದ್ಗುರುಗಳವರ ಮಹೋತ್ಸವ

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶಿವಾ ನರಾಜೇಂದ್ರ ಶಿವಾಚಾರ್ಯಮಹಾಸ್ವಾಮಿಗಳವರ ಮಹೋತ್ಸವವು ಕೊಳ್ಳೇಗಾಲ ತಾಲ್ಲೂಕು ತಂಜನಾ ದಲ್ಲಿ ತಾ|| 20-10-45 ದಿನಸ ಮಧ್ಯಾಹ್ನ 1 ಗಂಟೆಗೆ ಶೇಷ ವೈಭವದಿಂದ ನಡೆಯಿತು ತಂಜನಾಪುರದ ಭಕ್ತರ ಪ್ರಾರ್ಥನೆಯಂತೆ ಬಡದಿ ಮೊಕ್ಕಾಂನಿಂದ ಶ್ರೀಜಗದ್ಗುರು ಗಳವರು ಪರಿವಾರ ಪರಿವೃತರಾಗಿ ದಯಮಾಡಿಸಲು ಗ್ರಾಮದ ಭಕ್ತರು ಪರಸ್ಥಳಗಳಿಂದ ಆಗಮಿಸಿದ್ದ ಭಕ್ತರೊಡನೆ ಸಮ್ಮಿಲಿತರಾಗಿ ಗ್ರಾಮಪ್ರವೇಶಮಾರ್ಗ ದಲ್ಲಿ ಏರ್ಪಡಿಸಿದ್ದ ಹಸರುವಾಣಿ ಚಪ್ಪರದಲ್ಲಿ ಮಹಾ ಸ್ವಾಮಿಯವರನ್ನು ಎದುರ್ಗೊಂಡು ಫಲಪುಷ್ಪಗಳನ್ನು ಸಮರ್ಪಿಸಿ ಮಂಗಳವಾದ್ಯಗಳು ಮೊಳಗುತ್ತಿರಲು ವಿಶೇಷ ವೈಭವದೊಡನೆ ಮಹೋತ್ಸವವನ್ನು ನಡೆಸಿದರು ತಳಿರು ತೋರಣ ಪತಾಕೆಗಳಿಂದ ಪರಿಶೋಭಿಸುತ್ತಿದ್ದ ಊರಿ ನ ಭಾಗಕ್ಕೆ ಉತ್ಸವವು ಬಂದ ಕೂಡಲೆ ಭಕ್ತರು ತಮ್ಮ ತಮ್ಮ ಮಂದಿರಗಳ ಮುಂಭಾಗಗಳಲ್ಲಿ ಮನೋಹರವಾಗಿ ಹಾಕಿದ್ದ ಚಪ್ಪರಗಳಲ್ಲಿ ಮಹಾಸ್ವಾಮಿಯವರಿಗೆ ಫಲ ಪುಷ್ಪಗಳನ್ನು ಸಮರ್ಪಿಸುತ್ತಿದ್ದರು ಈ ಮಹೋತ್ಸವ ವನ್ನು ಸಂದರ್ಶನಮಾಡಲು ಸಹಸ್ರಾರುಜನರು ನೆರೆದು ಬಹು ಸಂತೋಷವನ್ನು ಜಯರವದೊಡನೆ ತೋರಪಡಿ ಸುತ್ತಿದ್ದರು ಆ ಊರಿನ ಹಾಲುಮತದ ಪೂಜಾರಿ ಬಸಪ್ಪನವರ ಮನೆಯ ಮುಂಭಾಗದಲ್ಲಿ ರಂಭಾಸ್ತಂಭ ಗಳಿಂದ ಅಲಂಕೃತವಾದ ಚಪ್ಪರಕ್ಕೆ ದಯಮಾಡಿಸಲು ಅಲ್ಲಿ ಸೇರಿದ್ದ ಹಾಲುಮತದ ಭಕ್ತಸಮುದಾಯವು ಶ್ರೀ ಜಗದಾಚಾರ್ಯರಿಗೆ ಫಲಪುಷ್ಪ ಕಾಣಿಕೆಯನ್ನು ಸಮರ್ಪಿ ಸಲು ಸದ್ಗುರುಸಾರ್ವಭೌಮರು ಸರ್ವರಿಗೂ ಆಶೀ ರ್ವಾದವನ್ನು ದಯಪಾಲಿಸಿದ ನಂತರ ಉತ್ಸವವು ಮುಂದುವರಿದು ಸುಂದರವಾಗಿ ಅಲಂಕರಿಸಿದ್ದ ಮ|| ರಾ|| ರೇವಣ್ಣನವರ ಭವನವನ್ನು ತಲುಪಿ ಅಲ್ಲಿ ನಯನ ಮನೋಹರವಾಗಿ ಶೃಂಗರಿಸಿದ್ದ ಉನ್ನತಾಸನವನ್ನಲಂ ಕರಿಸಿ ಸರ್ಕಾರಿ ಅಧಿಕಾರಿಗಳಿಗೂ ಸಮಸ್ತರಿಗೂ ಶುಭಾ ಶೀರ್ವಾದವನ್ನು ದಯಪಾಲಿಸಿದರು ಪ್ರಸನ್ನಮಾನ ಸರಾದ ಭಕ್ತರು ಜಯಜಯಕಾರಮಾಡುತ್ತಿರಲು ಈ ಮಹೋತ್ಸವಕಾರ್ಯವು ಸಾಂಗಗೊಳಿಸಲ್ಪ ಟ್ಟಿತು ನಾಳನೆಯದಿನ ಆ ಊರಿನ ವೀರಶೈವ ಭಕ್ತ ಮಂಡಲಿಯು ವಿಶೇಷ ಭಕ್ತಿಯಿಂದ ಒಪ್ಪಿಸಿದ ಕಾಣಿಕೆ ಯನ್ನೂ ಸಮೀಪ ಗ್ರಾಮವಾದ ವಿಭೂತಿಕೆರೆಯ ಭಕ್ತರು ಭಕ್ತಿಪೂರ್ವಕ ಒಪ್ಪಿಸಿದ ಕಾಣಿಕೆಯನ್ನೂ ಸ್ವೀಕರಿಸಿ ಅವರನ್ನನುಗ್ರಹಿಸಿ ತಿರುಗಿ ಬಿಡದಿಗ್ರಾಮಾಭಿಮುಖ ವಾಗಿ ಪ್ರಯಾಣ ಬೆಳಸಲು ಮಧ್ಯಮಾರ್ಗದ ಕೊಳ್ಳೇಗಾಲ ದ ಭಕ್ತರು ಮಹಾಸ್ವಾಮಿಯವರ ಆಗಮನವನ್ನು ಪುರದ ಮಹಾಜನರೊಡನೆ ತಾ|| 22–10–45 ನೇ ಸೋಮವಾರ ತಮ್ಮ ನಗರವನ್ನು ತಳಿರುತೋರಣಪತಾ ಕೆಗಳಿಂದಲಂಕರಿಸಿ ಮಹಾಸ್ವಾಮಿಯವರಿಗೆ ಸುಸ್ವಾಗತ ಒಯುಸಿ ಹಾರತುರಾಯಿಗಳನ್ನು ಸಮರ್ಪಿಸಿ ರಾಜಬೀದಿಯಲ್ಲಿ ಮಂಗಳವಾದ್ಯಗಳು ಭೋರ್ಗರೆಯು ತ್ತಿರಲು ಬಿರುದಾವಳಿಗಳೊಡನೆ ಮಹೋತ್ಸವವನ್ನು ವೈಭವದಿಂದ ನಡೆಸಿದರು ಅಲ್ಲಲ್ಲಿ ಪುರದ ಮಹಾ ಜನರು ಫಲಪುಷ್ಪಗಳನ್ನು ಸಮರ್ಪಿಸಿ ಜಯಜಯಕಾರ ಮಾಡುತ್ತಿದ್ದರು ಕೊಳ್ಳೇಗಾಲದ ಮಹಾಜನರ ಸದ್ವರ್ತನೆಯು ಪ್ರಶಂಸನೀಯವಾದುದು ಈ ರೀತಿ ಉತ್ಸವದೊಡನೆ ಕೊಳ್ಳೇಗಾಲದಿಂದ ಮುಂದಕ್ಕೆ ಪ್ರೆರಮಡುವ ವೇಳೆಯಲ್ಲಿ ಸಮಸ್ತರಿಗೂ ಆಶೀರ್ವಾದ ವನ್ನು ದಯಪಾಲಿಸಿ ಬಿಡದಿ ಮುಕ್ಕಾಮನ್ನು ತಲುಪಿ ದರು ಈ ಪ್ರಕಾರವಾಗಿ ಜಗದಾಚಾರ್ಯರಿಗೆ ಸೇವೆ ಯನ್ನು ಸಲ್ಲಿಸುತ್ತಿರುವ ಸಮಸ್ತರಿಗೂ ಗುರುಸಾರ್ವ ಭೌಮರು ಆಯುರಾರೋಗ್ಯಭಾಗ್ಯಂಗಳನ್ನೀಯಲೆಂದಾ ಶಿಸುವ,

ಆಚಾರ್ಯತತ್ವಪ್ರಕಾಶಕ ಬಿ ಸಿ ರೇವಣ್ಣಶಾಸ್ತ್ರಿ

ಪಾಠಶಾಲಾಪ್ರವೇಶ, ಕೂಪಪ್ರತಿಷ್ಠಾ, ಶಮೀಪೂಜಾಮಹೋತ್ಸವ ಮುಕ್ತಿಮಂದಿರ

ಅಜ್ಞಾನಾಂಧತಮೋ ಹರನ್ ವಿಘಟಯನ್ ದುರ್ವಾದಿ ಘೂಕವ್ರಜಂ ।
ಸತ್ಸಂಕೇತುಪಕಂಪಜಂ ವಿಕಚಯನ್ ಧರ್ಮಪ್ರಕಾಶಂ ದಿಶನ್ ॥
ಅಸ್ತಿಶ್ರೀದಯಭೂಧರಾಗ್ರವಿಲಸತ್ ಸುಜ್ಞಾನಬಿಂಬಃ ಸ್ಥಿತೋ ।
ಜೀಯತೋ ಜಾಗ್ರತ ಮುಕ್ತಿಮಂದಿರಮಹಾಸೌಭಾಗ್ಯ ಸೂರ್ಯೋದಯಃ ॥೧॥

ಸನಾತನ ವೀರಶೈವ ಮತದ ವೈದಿಕಕರ್ಮಗಳೆಲ್ಲವೂ ಗುರುವರ್ಗದವರನ್ನೇ ಅವಲಂಬಿಸಿವೆ ವೀರಶೈವ ಮತ ದಲ್ಲಿ ಗುರುಗಳ ಕರ್ತವ್ಯವು ಬಹಳ ಜವಾಬ್ದಾರಿಯುಳ್ಳ ದ್ದಾಗಿರುತ್ತದೆ ಜನನಾದಿಮರಣಪರ್ಯಂತವಾಗಿ ನಡೆ ಯುತ್ತಿರುವ ಕರ್ಮಗಳನ್ನು ಗುರುಗಳೇ ಮಾಡುತ್ತಿರು ವರು ಚತುರಾಶ್ರಮದವರಿಗೂ ದೀಕ್ಷಾಗುರುವೇ ಶಿಕ್ಷಾ ಮೋಕ್ಷಾದಿಗಳಿಗೆ ಕಾರಣನಾಗುವನು ಈ ಗುರುವಿಗೆ ಮತಸ್ಥಾಪನಾಚಾರ್ಯರು ಅಷ್ಟಾವರಣದಲ್ಲಿ ಪ್ರಥಮ ಸ್ಥಾನವನ್ನು ಕೊಟ್ಟಿರುವರು ಮತದಲ್ಲಿ ವೈದಿಕಕರ್ಮ ಗಳು ಲೋಪಹೊಂದದಂತೆಯೂ ಧರ್ಮಕ್ಕೆ ಆಗುತ್ತಿರುವ ಅನ್ಯಾಯವನ್ನು ರಕ್ಷಿಸುವದಕ್ಕಾಗಿಯೂ ಮತಾಚಾ ರ್ಯರು ಪ್ರತಿಯೊಂದು ಪುರಗ್ರಾಮಗಳಲ್ಲಿಯೂ ಗುರು ಮಠಗಳನ್ನು ಸ್ಥಾಪಿಸಿರುವುದು ಪ್ರತ್ಯಕ್ಷನಿದರ್ಶನದಲ್ಲಿದೆ ಧರ್ಮರಕ್ಷಣೆಯ ಭಾರವನ್ನು ಹೊತ್ತಿರುವ ಗುರುಗಳು ಕಾಲಪ್ರಭಾವದಿಂದ ಅವೈದಿಕಮಾರ್ಗಪ್ರವರ್ತಕರಾ ಗಿಯೂ, ಸ್ವೇಚ್ಛಾಚಾರಿಗಳಾಗಿಯೂ, ಅವಿದ್ಯಾವಂತ ರಾಗಿಯೂ, ಧರ್ಮದ ಸೂಕ್ಷ್ಮತತ್ವವನ್ನರಿಯದೆ ಅಸಂ ಸ್ಕೃತರಾಗಿ ಮತವನ್ನು ಅವನತಿಗೆ ತಂದರು ಇವರ ಕರ್ತವ್ಯಲೋಪವನ್ನು ತಿಳಿದು ಕೆಲಜನ ಪಂಡಿತರೂ, ಪಟ್ಟಾಧಿಕಾರಿಗಳೂ, ಸದ್ಭಕ್ತಮಂಡಳಿಯವರೂ ಗುರುಗಳ ಜಾಗ್ರತಿಗಾಗಿ ತನು, ಮನ, ಧನಗಳನ್ನರ್ಪಿಸಿದರು ಇದ ರಂತೆ ಗುರುವರ್ಗಸಮುದ್ಧರಣದೀಕ್ಷಿತರಾದ ತಪೋನಿಧಿ ಬೇಗಳೂರು ಮಹಾಂತಿನಪುಕಾಧ್ಯಕ್ಷ ಪ|| ಬ್ರ|| ಪ|| ಗಂಗಾಧರಶಿವಾಚಾರ್ಯಸ್ವಾಮಿಗಳವರು ಗುರುವರ್ಗದ ವರ್ಗಳ ಜಾಗ್ರತಿಗೋಸ್ಕರ ಸಂಸ್ಕೃತ ಮತ್ತು ವೈದಿಕ ವಿದ್ಯೆಯ ಶಿಕ್ಷಣಮಂದಿರವನ್ನು ಸ್ಥಾಪಿಸಬೇಕೆಂದು ಸತ್ಸಂಕಲ್ಪಮಾಡಿದಂತೆ ಅವರ ಸದಿಚ್ಛೆಗನುಸಾರವಾಗಿ ಗುರುಭಕ್ತಿನಿರತರೂ, ಧರ್ಮಾಭಿಮಾನಿಗಳೂ ಆದ ಶ್ರೀಮಾನ್ ಕೊರಪೂರು ಕಲ್ಲಪ್ಪನವರು ಅತ್ಯಾನಂದ ದಿಂದ ಹದಿನೆಂಟು ಎಕರೆ ಜಮೀನನ್ನು ದಾನಮಾಡಿ ದರು ಈ ಸ್ಥಳವು ಈಗ "ತಪೋವನ ಶ್ರೀ ಮುಕ್ತಿ ಮಂದಿರ ಗುರುಕುಲ ಎ ೭ ಮಹಾಕ್ಷೇತ್ರಾಭಿಧಾನ ದಿಂದ ಪರಿಶೋಭಿಸುತ್ತಿದೆ ಈ ಮಹಾಕ್ಷೇತ್ರದಲ್ಲಿಯೇ ಗುರುಸೇವಾನಿರತರೂ, ಸುಶೀಲರೂ ಆದ ಪಶುಪತಿಹಾಳ ಶ್ರೀಮಾನ್ ವಡಕಣ್ಣನವರ ಬಸಪ್ಪನವರು ಸಾವಿರಾರು ರೂಪಾಯಿಗಳನ್ನು ಖರ್ಚುಮಾಡಿ ಧಾರ್ಮಿಕಶಿಕ್ಷಣ ಕ್ಕೋಸ್ಕರ ಒಂದು ಭವ್ಯವಾದ ಪಾಠಶಾಲೆಯನ್ನು ಕಟ್ಟಿ ಸಿರುವರು ಈ ಪಾಠಶಾಲೆಯ ಪ್ರವೇಶಮಹೋತ್ಸವವೂ ತದಂಗಭೂತಗಳಾದ ಸುಲ್ತಾನಪುರದ ಸದ್ಭಕ್ತರ ಭಕ್ತಿ ಯಿಂದ ಈ ಕ್ಷೇತ್ರದಲ್ಲಿ ನಿರ್ಮಿತವಾದ ಕೂಪಪ್ರತಿಷ್ಠಾ ಮಹೋತ್ಸವ ಮತ್ತು ಶಮೀಪೂಜಾಸಮಾರಂಭಾದಿಗಳು ಇದೇ ಪಾರ್ಥಿವನಾಮಸಂವತ್ಸರ ಆಶ್ವಯುಜ ಶು|| ೧೦ (ತಾ|| 16-10-45) ನೇ ಮಂಗಳವಾರ ಅತಿ ವಿಜೃಂಭಣೆಯಿಂದ ನೆರವೇರಿದವು

ಮಂಗಳವಾರ ಪ್ರಾತಃಕಾಲ ೮ ಘಂಟೆಗೆ ಸುಮಂಗಲಿ ಯರು ವಾದ್ಯವೈಭವದೊಡನೆ ಜಲಪೂರಿತ ಮಂಗಲ ಕಲಶಗಳನ್ನು ಗಂಧಾಕ್ಷತೆಯಿಂದ ಪೂಜೆಮಾಡಿಕೊಂಡು ಬಂದು ಪಾಠಶಾಲಾ ಮಹಾದ್ವಾರದಲ್ಲಿ ವತ್ಸಸಹಿತ ಗೋವನ್ನು ಪೂಜಿಸಿ ವೇದಘೋಷದೊಡನೆ ಪಾಠಶಾಲಾ ಭ್ಯಂತರವನ್ನು ಪ್ರವೇಶಿಸಿದರು ಅನಂತರ ಧರ್ಮ ಭೂಷಣ ಸುಣಕಲ್ಲ ಬಿದರೆ ಆರಾಧ್ಯಮಠದ ವೇ|| ಪಂ|| ಹರೀಶ್ವರಶಾಸ್ತ್ರಿಗಳವರ ಮತ್ತು ಮುಕ್ತಿಮಂದಿರ ಗುರು ಕುಲಾಧ್ಯಾಪಕರಾದ ವೇ|| ಪಂ|| ಗಂಗಾಧರಶಾಸ್ತ್ರಿಗಳ ಹಾಗೂ ವೇ|| ಸೋಮಶೇಖರಶರ್ಮಾ ಸಾಲಿಕೊಪ್ಪ ಹಿರೇಮಠ ಇವರ ವೈದಿಕತ್ವದಲ್ಲಿ ಸ್ವಸ್ತಿವಾಚನ, ನವ ಗ್ರಹ ಪೂಜಾಕರ್ಮಗಳು ಪಂಚಕಲಶಸ್ಥಾಪನಪೂರ್ವಕ ಸಿಧ್ಯುಕ್ತವಾಗಿ ನೆರವೇರಿದಮೇಲೆ ಕೂಪಪ್ರತಿಷ್ಠಾಂಗ ಭೂತಗಳಾದ ಪುಣ್ಯಾಹವಾಚನ, ಗಂಗಾಪೂಜಾ, ನವಗ್ರ ಹಾದಿ ಪೂಜಾಕರ್ಮಗಳನ್ನು ಮಾಡಿ ಕಾಶಿಯಿಂದ ತಂದ ಗಂಗಾತೀರ್ಥವನ್ನು ಕೂಪದಲ್ಲಿ ಬಿಟ್ಟು ಪರಿಶುದ್ಧಗೊಳಿ ಸಿದರು ಇದಕ್ಕೆ ಶ್ರೀಗಳು "ಕಾಶೀತೀರ್ಥ" ನೆಂಬಭಿ ಧಾನವನ್ನಿತ್ತರು ಆಮೇಲೆ ಅನ್ನಸಂತರ್ಪಣೆಯಾ ಯಿತು

ಅದೇ ದಿವಸ ಸಾಯಂಕಾಲ ಪಶುಪತಿಹಾಳ ಭಕ್ತ ಮಂಡಳಿಯವರು ಶ್ರೀ ಜಗದ್ಗುರು ರೇಣುಕಮೂರ್ತಿ ಯನ್ನೂ ಮತ್ತು ಶ್ರೀ ತಪೋನಿಧಿಗಳನ್ನೂ ಪುಷ್ಪಗಳಿಂ ದಲಂಕೃತವಾದ ರಥದಲ್ಲಿ ತಮ್ಮ ಗ್ರಾಮದಿಂದ ಉತ್ಸವ

[೩ನೆಯ ಪುಟವನ್ನು ನೋಡಿ]

ಪಂಚಾಚಾರ್ಯಪ್ರಭಾ.

೧೯೪೫ನೆಯ ನವೆಂಬರ್ ತಾ|| ೫ನೇ ಸೋಮವಾರ

ಕೇದಾರಪೀಠದ ಹೆಸರಿನಿಂದ ಸಂಚರಿಸುವವರ ಬಗ್ಗೆ ಸೂಚನೆ

ಕೇದಾರಪೀಠದ ಜಗದ್ಗುರುಗಳು ಶಿವಾಧೀನರಾಗಿ ಆರು ತಿಂಗಳುಗಳಾದುವು. ಈವರೆಗೂ ಆ ಪೀಠಕ್ಕೆ ಯಾರೂ ಉತ್ತರಾಧಿಕಾರಿಗಳಾಗಿ ಬಂದಿರುವದಿಲ್ಲ ಆ ಪೀಠದ ಬಗ್ಗೆ ನಡೆದ ಎಲೆಕ್ಷನ್ನು ಸಮರ್ಪಕವಾಗಿಲ್ಲವೆಂದು ಆ ದೇಶದ ಅಧಿಕಾರಿಗಳಲ್ಲಿ ಅರ್ಜಿಗಳು ಬಿದ್ದಿವೆ. ಮುಂದೆ ಈ ವಿಷಯವು ಸಿವಿಲ್ ಕೋರ್ಟಿಗೆ ಹೋಗುವ ಸಂಭವವಿದೆ. ಇದಕ್ಕಾಗಿ ಎಲ್ಲ ಕಡೆಯಿಂದಲೂ ಪ್ರಯತ್ನಗಳು ನಡೆಯಹತ್ತಿವೆ.

ಕೇದಾರಪೀಠದ ಸ್ಥಿತಿಯು ಈ ರೀತಿ ಅನಾಯಕವಾಗಿರುವಾಗ ಈ ಸಮಯದಲ್ಲಿ ಒಬ್ಬಿಬ್ಬರು ನಾವು ಕೇದಾರಪೀಠಾಧಿಪತಿಗಳೆಂದು ಹೇಳಿಕೊಳ್ಳುತ್ತ ಏನೂ ಅರಿಯದ ಹಳ್ಳಿಯ ಮುಗ್ಧಜನರಿಂದ ಕಾಣಿಕಾದಿಗಳನ್ನು ವಸೂಲುಮಾಡುತ್ತಿರುವರೆಂದು ತಿಳಿದುಬರುತ್ತದೆ. ಸದ್ಯಃ ವಿಜಾಪುರಜಿಲ್ಲೆಯಲ್ಲಿ ಒಬ್ಬರು ಒಂದು ದಮಣೆಗಾಡಿ ಕೆಲವು ಜನ ಬಿಲ್ಲೆ ಜವಾನರು ನೊದಲಾದವರನ್ನು ಕಟ್ಟಿಕೊಂಡು, ನಾವು ಕೇದಾರಪೀಠಾಧಿಪತಿಗಳೆಂದು ಸಂಚರಿಸುತ್ತಿರುವರೆಂದು ವಿಜಾಪುರ ಜಿಲ್ಲೆಯಲ್ಲಿರುವ ಒಬ್ಬ ಪಟ್ಟದ ಸ್ವಾಮಿಗಳು ನಮಗೆ ಪತ್ರವನ್ನು ಬರದಿರುತ್ತಾರೆ. ವಿಜಾಪುರ ಜಿಲ್ಲೆಯಲ್ಲೇ ಆಗಲಿ ಅಥವಾ ಇತರ ಜಿಲ್ಲೆಗಳಲ್ಲೇ ಆಗಲಿ ಯಾರಾದರೂ ಕೇದಾರಪೀಠದ ಹೆಸರನ್ನು ಹೇಳಿಕೊಳ್ಳುತ್ತ ಬಂದರೆ, ಆ ಗ್ರಾಮದ ಭಕ್ತಾದಿಗಳೆಲ್ಲರೂ ಸೇರಿ ಅವರಿಗೆ ಸರಿಯಾದ ಬುದ್ಧಿವಾದವನ್ನು ಹೇಳಿ ತಮ್ಮ ಪ್ರಾಂತದಿಂದ ಓಡಿಸಿಬಿಡಬೇಕು ಅಂದರೆ ಅವರಿಗೆ ಬುದ್ಧಿ ಬರುತ್ತದೆ. ಒಂದುವೇಳೆ ಅವರು ಗತಿಸಿದ ಜಗದ್ಗುರುಗಳವರು ಹುಕುಮು ಕೊಟ್ಟಿರುವರೆಂದು ಹೇಳಿದರೆ, ಆ ಹುಕುಮು ಅವರ ಸಂಗಡವೇ ಮೃತವಾಗಿ ಹೋಯಿತೆಂದು ಹೇಳಬೇಕು. ಹುಕುಂ ಕೊಟ್ಟವರು ಮೃತರಾದ ಮೇಲೆ ಆ ಹುಕುಮಿಗೆ ಯಾವ ಬೆಲೆಯೂ ಇರುವದಿಲ್ಲ. ಈ ವಿಧವಾದ ಜನರು ತಮ್ಮ ಸ್ವಾರ್ಥಕ್ಕೋಸ್ಕರ ಇಂತಹ ಸಮಯವನ್ನು ಸಾಧಿಸಿ ದುಡ್ಡನ್ನು ಗಳಿಸಲು ಪ್ರಯತ್ನ ಮಾಡುತ್ತಿರುವರು. ದೇಶಮಧ್ಯದಲ್ಲಿರುವ ಭಕ್ತಾದಿಗಳು, ಇಂಥವರಿಗೆ ಸರಿಯಾದ ಬುದ್ಧಿವಾದವನ್ನು ಹೇಳಿ, ಇನ್ನೊಮ್ಮೆ ಇಂತಹ ಉದ್ಯೋಗಕ್ಕೆ ಇವರು ಎಂದೂ ಹೋಗದಂತೆ ಮಾಡಬೇಕೆಂದು ಸರ್ವರಿಗೂ ಈ ಮೂಲಕ ಸೂಚಿಸುತ್ತೇವೆ.

ಮೊಕದ್ದಮೆ ವಜಾ

ರಾಜಧಾನಿಯ ಬೊಂಬಾಯಿ ಆನಂದಭವನದ ಹಿಂಭಾಗದ ರಸ್ತೆಯ ಮನೆಯೊಂದರಲ್ಲಿ ಕಳೆದ ಆಗಸ್ಟ ೧೩ ನೇ ತಾ|| ಸಿವಿಲ್ ಸಪ್ಲೈ ಇಲಾಖೆಯವರು ರೇಷ್ಮೆ ಪತ್ತೆ ಮಾಡಿ, ಸಾಲಿಗ್ರಾಮದ ಶ್ರೀ ಧನಕೀರ್ತಿ ಎಂಬುವರ ಮೇಲೆ ಮೊಖದ್ದಮೆ ಹೂಡಿದ್ದರು ನಗರದ ನ್ಯಾಯಾಧೀಶರು ನಿರಪರಾಧಿಗಳೆಂದು ಅವರನ್ನು ಖುಲಾಸೆ ಮಾಡಿದರು

ವರ್ತಮಾನ ಸಂಗ್ರಹ

ಬ್ರಿಟನ್ನಿಗೆ ೪೦ ಕೋಟಿ ಡಾಲರುಗಳಷ್ಟು ಸಾಲವನ್ನು ಅಮೆರಿಕ ಕೊಡಬಹುದೆಂದು ನಿರೀಕ್ಷಿಸಲಾಗಿದೆ

ವಿದೇಶಗಳಲ್ಲಿರುವ ಜಪಾನಿನ ರಾಯಭಾರಿ ಕಚೇರಿಗಳನ್ನು ರದ್ದುಮಾಡಬೇಕೆಂದು ಮಾಡಿದ ಆಜ್ಞೆಯನ್ನು ವಾಪಸು ತೆಗೆದುಕೊಳ್ಳಬೇಕೆಂಬ ಮನವಿಯನ್ನು ಜನರಲ್ ಮೆಕ್‌ಆರ್ಥರ್‌ರವರು ನಿರಾಕರಿಸಿದ್ದಾರೆ

ಅಮೆರಿಕಾಕ್ಕೆ ಬ್ರಿಟಿಷ್ ಪ್ರಧಾನಿ

ಬ್ರಿಟಿಷ್ ಪ್ರಧಾನಿ ಮಿ|| ಅಟ್ಲಿಯವರು ವಾಷಿಂಗ್‌ಟನ್ನಿಗೆ ಮುಂದಿನ ಮೂರು ವಾರಗಳೊಳಗಾಗಿ ಭೇಟಿ ಕೊಡಲಿದ್ದಾರೆಂದು ಹೇಳಲಾಗಿದೆ

ಭಾರತ ರಾಷ್ಟ್ರೀಯ ದಳದವರ ಬಿಡುಗಡೆ

ಸುಭಾಷ್ ಚಂದ್ರಬೋಸರ ಭಾರತ ರಾಷ್ಟ್ರೀಯ ಸೈನ್ಯಕ್ಕೆ ಸೇರಿದ್ದ ೧೭೭ ಮಂದಿ ಸೈನಿಕರನ್ನು ಪೆನಾಂಗ್ ಜೈಲಿನಿಂದ ಬಿಡುಗಡೆ ಮಾಡಲಾಗಿದೆ

೨೫ ಮಂದಿ ಕಾಂಗ್ರೆಸ್ ಸ್ಪರ್ಧಿಗಳ ಚುನಾವಣೆ

ಈವರೆಗೆ ಭಾರತದ ನಾನಾ ಭಾಗಗಳಿಂದ ಕೇಂದ್ರ ಶಾಸನ ಸಭೆಗೆ ೨೫ ಮಂದಿ ಕಾಂಗ್ರೆಸ್ ಅಭ್ಯರ್ಥಿಗಳು ಪ್ರತಿಸ್ಪರ್ಧಿಗಳಿಲ್ಲದ ಚುನಾಯಿತರಾಗಿದ್ದಾರೆಂದು ಹೈಕಮ್ಯಾಂಡಿಗೆ ಸುದ್ದಿ ಬಂದಿದೆ

ಅಮೆರಿಕಕ್ಕೆ ೧೦೮೨ ನೌಕೆಗಳ ಪಡೆ ಇದ್ದೇ ಇರಬೇಕು

ಯುದ್ಧಾನಂತರ ಅಮೇರಿಕನ್ ನೌಕಾಪಡೆ ೧೦೮೨ ನೌಕೆಗಳನ್ನು ಹೊಂದಿರಬೇಕು, ಹಲ ಕೆಲವು ಸಮುದ್ರ ಪ್ರದೇಶಗಳ ಮೇಲೆ ಹತೋಟಿ ಇರಲು ಅನುವಾಗುವಂತೆ ಅಗತ್ಯವಾದ ನೆಲೆಗಳನ್ನಿಟ್ಟುಕೊಂಡಿರಬೇಕು. ಎಂಬ ನಿರ್ಣಯವನ್ನು ಅಮೇರಿಕನ್ ಪ್ರತಿನಿಧಿ ಸಭೆ ಒಮ್ಮತ ಸಮ್ಮತದಿಂದ ಮಂಜೂರ್ಮಾಡಿದೆ

ಜಪಾನಿನಲ್ಲಿ ನಾಲ್ಕು ಟನ್ ಅಫೀಮು ಪತ್ತೆ

೧೫ ಲಕ್ಷ ಪೌಂಡು ಬೆಲೆ ಬಾಳುವ ೪ ಟನ್ ಅಫೀಮನ್ನು ಸೆಂಟ್ರಲ್‌ಹೊನಷುನಲ್ಲಿನ ನಾಗುನೂ ಪ್ರದೇಶದಲ್ಲಿ ಅಮೆರಿಕನ್ ಸೇನಾ ಇಲಾಖೆಯವರು ಪತ್ತೆಹಚ್ಚಿದ್ದಾರೆ ಅದೂ ಅಲ್ಲದೆ ೬.೨ ಟನ್ ಕ್ವಿನೈನ್, ೫ ಲಕ್ಷ ಪೌಂಡು ಬೆಲೆಬಾಳುವ ಮಾರ್ಫಿನ್ ಮತ್ತು ೫೦ ಸಾವಿರ ಪೌಂಡು ಕೊಕೇನ್ ಸಹ ಸಿಕ್ಕಿತೆಂದು ಹೇಳಲಾಗಿದೆ

ನಾಜಿಗಳ ವಿಚಾರಣೆಗೆ ೫೦ ಲಕ್ಷ ಪೌಂ ವೆಚ್ಚ

ನವೆಂಬರ್ ೨೦ ನೇ ತಾ|| ನ್ಯೂರೆಂಬರ್ಗಿನಲ್ಲಿ ಆರಂಭವಾಗುವ ಗೋರಿಂಗ್ ಮೊದಲಾದ ನಾಜಿ ಪಾತಕಿಗಳ ವಿಚಾರಣೆಗೆ ಸುಮಾರು ೫೦ ಲಕ್ಷ ಪೌಂ ಹಣ ವೆಚ್ಚವಾಗುತ್ತದೆಂದು (ಅಂದರೆ ಆರೂವರೆ ಕೋಟಿ ರೂ.) ಅಂದಾಜಾಗಿದೆ ಇಷ್ಟು ಹಣವನ್ನು ಜರ್ಮನಿಯೇ ತೆರಬೇಕಾಗಿದೆ ವಿಚಾರಣೆ ನಡೆಯುವ ಪ್ರದೇಶದ ಸುತ್ತ ತೋಪುಗಳೂ ಟ್ಯಾಂಕುಗಳೂ ಪಹರೆ ನಿಲ್ಲಿಸಲ್ಪಡುತ್ತವೆ. ಈ ವಿಚಾರದಲ್ಲಿ ೬ ಕೋಟಿ ಜರ್ಮನ್ ಪ್ರಜೆಗಳ ಪೈಕಿ ಯಾರು ಬೇಕಾದರೂ ಬಂದು ಸಾಕ್ಷಿ ಹೇಳಬಹುದೆಂದು ಜರ್ಮನರಿಗೆ ನಾನಾ ರೀತಿಯಲ್ಲಿ ತಿಳುವಳಿಕೆ ಕೊಡಲಾಗಿದೆ.

ಹಿಟ್ಲರನು ಸತ್ತನೆಂದು ಬ್ರಿಟಿಷ್ ಪತ್ತೆದಾರಿ ಇಲಾಖೆಯ ವರದಿ

ಹಿಟ್ಲರನು ತನ್ನ ಬಾಯಿಗೆ ರಿವಾಲ್ವರ್ ಇಟ್ಟು ಗುಂಡು ಹಾರಿಸಿಕೊಂಡು ಮೃತಪಟ್ಟನೆಂದೂ, ಅವನು ಮದುವೆಯಾಗಿದ್ದನೆಂದು ಹೇಳಲಾಗಿರುವ ಈವಾಬ್ರೌನ್ ಎಂಬವಳು ಹಿಟ್ಲರನ ಭವನದಲ್ಲಿ ವಿಷ ಕುಡಿದು ಸತ್ತಿರುವದಾಗಿಯೂ ಬ್ರಿಟಿಷ್ ಪತ್ತೇದಾರಿ ಇಲಾಖೆಯು ಬರ್ಲಿನ್ನಿನಲ್ಲಿ ಪ್ರಕಟಿಸಿದೆ

ಸ್ಟಾಲಿನ್‌ರವರು ನಿವೃತ್ತರಾಗುವರೆ?

ಈ ಕಳೆದ ಐದು ವರ್ಷಗಳಿಂದ ರಾಷ್ಟ್ರಕ್ಕಾಗಿ ದುಡಿದ ಮಾರ್ಷಲ್ ಸ್ಟಾಲಿನ್‌ರವರು ಹೃದಯವೇದನೆ ಮತ್ತು ಪಿತ್ತಕೋಶ ಸಂಬಂಧವಾದ ಖಾಯಿಲೆಯಿಂದ ನರಳುತ್ತಿರುವರೆಂದು ಪ್ಯಾರಿಸ್ಸಿನಿಂದ ಸುದ್ದಿ ಹರಡಿದೆ. ಮುಂದಿನ ಚಳಿಗಾಲದಿಂದ ಸ್ಟಾಲಿನ್‌ರವರು ಸೋವಿಯಟ್ ಸರ್ಕಾರದ ವ್ಯವಹಾರದಿಂದ ಸಂಪೂರ್ಣ ನಿವೃತ್ತರಾಗುವರೆಂದು ರಷ್ಯಾದ ಪ್ರವೀಣರಾದ ಡೆಲ್‌ಬರಾಸ್‌ರವರು ಅಭಿಪ್ರಾಯಪಟ್ಟಿದ್ದಾರೆಂದು ಹೇಳಲಾಗಿದೆ

ಚೀಣಾ-ರಷ್ಯಾ ಮನಸ್ತಾಪ

ಜಪಾನಿಯರಿಂದ ವಶಪಡಿಸಿಕೊಂಡ ಶಸ್ತ್ರಾಸ್ತ್ರಗಳನ್ನು ಚೀಣೀ ಕಮ್ಯೂನಿಸ್ಟರಿಗೆ ರಷ್ಯ ಸರಬರಾಯಿ ಮಾಡುತ್ತಿದೆಯೆಂದೂ, ಇದರಿಂದ ಚಿಯಾಂಗ್-ಕೈ-ಷೇಕ್ ಸರ್ಕಾರಕ್ಕೂ ರಷ್ಯಾಕ್ಕೂ ಮನಸ್ತಾಪ ಪ್ರಾರಂಭವಾಗಿದೆಯೆಂದೂ ಹೇಳಲಾಗಿದೆ ಚೀಣಾ ಸರ್ಕಾರಕ್ಕೂ ಮತ್ತು ಕಮ್ಯೂನಿಸ್ಟ ಪಕ್ಷದವರಿಗೂ ನಡೆಯುತ್ತಿರುವ ಕದನದಲ್ಲಿ ಚೀಣೀ ಸರ್ಕಾರ ಸೈನಿಕರ ಪೈಕಿ ೧೫ ಸಾವಿರ ಮಂದಿ ಸತ್ತಿದ್ದಾರೆಂದು ವರದಿಯಾಗಿದೆ.

ಸುರಬಾಯಾ ಪರಿಸ್ಥಿತಿ

ಜಾವಾದ್ವೀಪದ ಸುರಬಾಯಾ ರೇವಿನ ಬಳಿ ಇಂಡೋನೇಷಿಯನರಿಗೂ ಬ್ರಿಟಿಷ್ ಭಾರತೀಯ ಪಡೆಗಳಿಗೂ ಕದನವು ನಡೆದು ಅನೇಕ ಸಾವುನೋವುಗಳಾದವು ಅಲ್ಲಿನ ಉಗ್ರಗಾಮಿಗಳನ್ನು ಸಮಾಧಾನಗೊಳಿಸಿ ಪರಿಸ್ಥಿತಿಯನ್ನು ಹತೋಟಿಗೆ ತರಲು ಡಾ|| ಸೆಕಾರ್ನೋರವರು ಮತ್ತು ಅವರ ಮಂತ್ರಿಗಳೂ ವಿಮಾನದಲ್ಲಿ ಅಲ್ಲಿಗೆ ಬಂದರು ಇಂಡೋನೇಷಿಯನರು ಯುದ್ಧ ನಿಲ್ಲಿಸಬೇಕೆಂದು ಡಾ|| ಸಕಾರ್ನೋರವರು ತಮ್ಮ ಪಂಗಡದವರಿಗೆ ಉಪದೇಶಮಾಡಿದಮೇಲೆ ವಾತಾವರಣವು ಸ್ವಲ್ಪ ಶಾಂತವಾಗಿದೆ ಕದನ ನಿಲ್ಲಿಸುವ ಬಗ್ಗೆ ಒಂದು ಒಪ್ಪಂದವಾಗಿದೆ ಅದರಂತೆ 1) ಇಂಡೋನೇಷಿಯನ್ ಸೈನಿಕರೂ ಪೋಲೀಸರೂ ಶಸ್ತ್ರಧರಿಸಿರಲು ಅಭ್ಯಂತರವಿಲ್ಲ 2) ಸುರಬಾಯಾ ರೇವಿನ (ಡಾಕ್) ಜಹಜುಗಳು ನಿಲ್ಲುವ ಪ್ರದೇಶವನ್ನು ಬ್ರಿಟಿಷ್ ಮತ್ತು ಇಂಡೋನೇಷಿಯನ್ ಸೇನೆಗಳು ಸಂಯುಕ್ತವಾಗಿ ರಕ್ಷಿಸುತ್ತವೆ. 3) ಮಿತ್ರ ಬಂದಿಗಳು ನೆಲೆಸಿರುವ ಪ್ರದೇಶ ಪೂರ್ಣವಾಗಿ ಮಿತ್ರ ಸೈನ್ಯಗಳ ಅಧಿಕಾರಕ್ಕೆ ಒಳಪಟ್ಟಿರುತ್ತದೆ 4) ಎರಡು ಕಡೆಗಳವರೂ ತಮ್ಮಲ್ಲಿರುವ ಬಂದಿಗಳನ್ನು ಬಿಡುಗಡೆ ಮಾಡಬೇಕು. 5) ಬ್ರಿಟಿಷ್ ಮತ್ತು ಇಂಡೋನೇಷಿಯನರಿಗೆ ಪರಸ್ಪರ ವ್ಯವಹಾರ ಸೌಕರ್ಯವೇರ್ಪಡಬೇಕು ಈ ಷರತ್ತುಗಳನ್ನು ಒಳಗೊಂಡ ಒಪ್ಪಂದವಾಗಿದೆ ಒಪ್ಪಂದಕ್ಕೆ ಮೇಜರ್ ಜನರಲ್ ಹಾಥಾರನ್ ಮತ್ತು ಡಾ|| ಸೆಕಾರ್ನೋರವರು ಸಹಿ ಮಾಡಿರುತ್ತಾರೆ. ಡಚ್ ಗೌರ್ನರ್‌ಜನರಲ್ ವಾನ್‌ಮೂಕರಿಗೂ ಡಾ|| ಸೆಕಾರ್ನೋರವರಿಗೂ ಸಂಧಾನ ನಡೆಯುತ್ತಿದೆ

ಸುಭಾಷ್ ಬೋಸರ ಮರಣದ ವಿವರ

ಸುಭಾಷ್ ಚಂದ್ರಬೋಸರು ಆಗಸ್ಟ ೧೮ ನೇ ತಾ|| ರಾತ್ರಿ ೯ ಗಂಟೆಗೆ ನಿಧನರಾದರೆಂಬ ಸುದ್ದಿಯು ನಿಜವೆಂದು ಒರ್ವ ಪ್ರತ್ಯಕ್ಷದರ್ಶಿಯು ತಿಳಿಸಿದ್ದಾರೆ. ಜಪಾನ ಶರಣಾಗತವಾಯಿತೆಂಬ ಸುದ್ದಿಯನ್ನು ಕೇಳಿ, ಶ್ರೀ ಸುಭಾಷ್‌ರವರು ಆಗಸ್ಟ ೧೬ ನೇ ತಾ|| ಸಿಂಗಪುರವನ್ನು ಅವರ ಸ್ಟಾಫ್ ಆಫೀಸರ್ ಹಬಿಬುರ್ ರಹಮಾನರೊಡನೆ

ವಿಮಾನದ ಮೂಲಕ ಬಿಟ್ಟರು. ಮಾರನೆಯ ದಿನ ಅವರು ಬ್ಯಾಂಕಾಕಿಗೆ ಬಂದು, ಮತ್ತೊಂದು ವಿಮಾನದಲ್ಲಿ ಇಂಡೋಚೀನಾದಲ್ಲಿರುವ ಟಾಕೋನಿಗೆ ತೆರಳಿ, ರಾತ್ರಿ ಅಲ್ಲಿ ತಂಗಿದ್ದು, ಮಾರನೇ ದಿನ ಬೆಳಗ್ಗೆ ವಿಮಾನದಲ್ಲಿ ಹೊರಟರು. ಟಾಯ್‌ಹೋಕುವಿನಿಂದ ೩೦೦ ಅಡಿ ಎತ್ತರಕ್ಕೆ ಹೋದಾಗ, ವಿಮಾನದಲ್ಲಿ ಆಸ್ಫೋಟನೆಯಾಗಿ ಪ್ರೊಪೆಲರು ಮುರಿದು, ಬೆಂಕಿಹತ್ತಿಕೊಂಡಿತು. ಶ್ರೀ ಬೋಸರ ತಲೆಗೆ ಗಾಯವಾಗಿ, ಉರಿಯುತ್ತಿದ್ದ ಗ್ಯಾಸೋಲೈನಿಂದ ಅವೃತರಾಗಿ ಅವರು ಹೊರಕ್ಕೆ ಬಂದು ತಮ್ಮ ಬಟ್ಟೆಯನ್ನು ಕಳೆಯಲು ಪ್ರಯತ್ನಿಸಿ ಸಾಧ್ಯವಾಗದೇ ಅಷ್ಟರಲ್ಲಿ ಪ್ರಜ್ಞೆತಪ್ಪಿ ಕೆಳಗೆಬಿದ್ದರು. ೧೫ ನಿಮಿಷಗಳ ನಂತರ ಬೋಸರನ್ನು ಮತ್ತು ರಹಮಾನರನ್ನು ಉರಿಯುತ್ತಿದ್ದ ವಿಮಾನದ ಬಳಿಯಿಂದ ಅಂಬ್ಯುಲೆನ್ಸ್‌ನಲ್ಲಿ ಕರೆದೊಯ್ಯಲಾಯಿತು. ಆದರೆ ಬೋಸರು ಮರಣ ಹೊಂದಿದರು. ಬೋಸರ ಕಳೇಬರವನ್ನು ಟೋಕಿಯೋವಿಗೆ ತೆಗೆದುಕೊಂಡು ಹೋಗಲು ಸಾಧ್ಯವಿಲ್ಲದೆ, ೨೨ ನೇ ತಾ|| ಟಾಯ್‌ಹೋಕುವಿನಲ್ಲೇ ಅಂತ್ಯ ಸಂಸ್ಕಾರ ಮಾಡಲಾಯಿತು. ರಹಮಾನರು ಮೂರು ವಾರಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದನಂತರ, ಬೋಸರ ಅಸ್ತಿಗಳನ್ನು ಟೋಕಿಯೋವಿಗೆ ತೆಗೆದುಕೊಂಡು ಹೋದರು. ಸೆಪ್ಟೆಂಬರ್ ೧೪ ನೇ ತಾರೀಖು ರೆಂಕೋಜಿ ಎಂಬ ದೇವಾಲಯದಲ್ಲಿ ಅವರ ಸ್ಮಾರಕ ಪ್ರಾರ್ಥನೆ ನಡೆಸಲಾಯಿತು ಎಂದು ಅವರ ಸಂಗಡ ಪ್ರಯಾಣ ಬೆಳೆಸಿದ್ದವರೊಬ್ಬರು ತಿಳಿಸಿದ್ದಾರೆ.

೪೦ ಸಾವಿರ ಡಚ್‌ರನ್ನು ಭಾರತ ಸೈನಿಕರು ರಕ್ಷಿಸಿದರು

ಜವಾದ ಅನೇಕ ನಿರ್ಬಂಧ ಶಿಬಿರಗಳಲ್ಲಿ ಜಪಾನಿ ಸೈನಿಕರಿಂದ ಬಂಧಿಸಲ್ಪಟ್ಟ ೪೦ ಸಾವಿರ ಡಚ್ ಹೆಂಗಸರು ಮತ್ತು ಮಕ್ಕಳನ್ನು ಭಾರತೀಯ ಸೈನಿಕರು ವಿಮೋಚನೆ ಮಾಡಿದ್ದಾರೆ. ಈ ದ್ವೀಪದ ಇನ್ನೂ ಅನೇಕ ಶಿಬಿರಗಳಲ್ಲಿರುವ ಜನರು ಹೊಟ್ಟೆಗಿಲ್ಲದೆ ನರಳುತ್ತಿದ್ದಾರೆ. ಅವರಿಗೆ ಪರಿಹಾರವನ್ನು ಭಾರತೀಯ ಮತ್ತು ಬ್ರಿಟಿಷ್ ಸೈನಿಕರ ಸಹಾಯದಿಂದ ಕಳುಹಿಸಲಾಗುತ್ತಿದೆ

ಚೀಣಾದ ಅಂತರ್ಯುದ್ಧ

ಚೀಣದ ಉತ್ತರದ ೧೧ ಪ್ರಾಂತಗಳಲ್ಲಿ ಪ್ರಾರಂಭವಾಗಿರುವ ಯಾದವೀ ಕಲಹ ದಿನೇ ದಿನೇ ಉಗ್ರವಾಗುತ್ತಿದೆ. ಚಿಯಾಂಗ್‌ರಿಗೂ ಕಮ್ಯೂನಿಸ್ಟರಿಗೂ ಒಡಂಬಡಿಕೆ ಆಗುವ ಸಂಭವಗಳು ಅತಿ ವಿರಳವಾಗಿದೆ. ಷಾನ್‌ಸಿ ಪ್ರಾಂತದಲ್ಲಿ ೧,೭೦,೦೦೦ ಕಮ್ಯೂನಿಸ್ಟ್ ಸೇನೆ ಯುದ್ಧ ಸಜ್ಜಿತವಾಗಿ ನಿಂತಿರುವುದಾಗಿ ಚಿಯಾಂಗ್ ಸರ್ಕಾರ ಹೇಳಿಕೆ ಹೊರಡಿಸಿದೆ. ಈ ಯುದ್ಧದಲ್ಲಿ ಟ್ಯಾಂಕುಗಳನ್ನು ಉಪಯೋಗಿಸುತ್ತಿರುವ ಕಮ್ಯೂನಿಸ್ಟರು ಇನ್ನು ಮೂರು ಪ್ರಾಂತಗಳನ್ನು ವಶಪಡಿಸಿಕೊಂಡರು ಎಂದು ಹೇಳಲಾಗಿದೆ.

ಚಿಯಾಂಗರಿಗೆ ಅಮೆರಿಕನ್ ನೌಕೆಗಳಿಂದ ಸಹಾಯ

ಕೇಂದ್ರ ಸರ್ಕಾರಕ್ಕೆ ಸೇರಿದ ಸಹಸ್ರಾರು ಜನ ಸೈನಿಕರು ಅಮೆರಿಕನ್ ನೌಕೆಗಳಲ್ಲಿ ಮಂಚೂರಿಯದ ಕಡೆ ಹೊರಟಿದ್ದಾರೆ. ಈ ಸೈನಿಕರನ್ನು ಮಂಚೂರಿಯದ ದಕ್ಷಿಣಾಗ್ರದ ಬಳಿ ಇರುವ ಒಂದು ಪ್ರದೇಶದ ಬಳಿ ಇಳಿಸುವ ನಿರೀಕ್ಷೆ ಇದೆ ಎಂದು ನ್ಯೂಯಾರ್ಕ್ ರೇಡಿಯೋ ವರದಿಮಾಡಿದೆ. ಈ ಪ್ರದೇಶ ಈಗ ಯೆನಾನ್ ಕಮ್ಯೂನಿಸ್ಟ್ ಪಕ್ಷದ ಪಡೆಗಳ ಹತೋಟಿಯಲ್ಲಿದೆ. ಕಮ್ಯೂನಿಸ್ಟರ ವಶದಲ್ಲಿರುವ ಪ್ರದೇಶಗಳಲ್ಲಿ ಅಮೆರಿಕನ್ ನೌಕೆಗಳಲ್ಲಿ ಬಂದು ಚಿಯಾಂಗ್ ಸೈನಿಕರು ಇಳಿದದ್ದೇ ಆದರೆ, ಅವರಮೇಲೆ ಕಮ್ಯೂನಿಸ್ಟ್ ಸೈನಿಕರು ಗುಂಡು ಹಾರಿಸುತ್ತಾರೆ ಎಂಬುದಾಗಿ ಒಬ್ಬ ಕಮ್ಯೂನಿಸ್ಟ್ ವೀಕ್ಷಕರು ಮೊದಲೇ ಎಚ್ಚರಿಕೆ ಕೊಟ್ಟಿರುವರು. ಏತನ್ಮಧ್ಯೆ ಚುಂಕಿಂಗಿನಲ್ಲಿ ಕಮ್ಯೂನಿಸ್ಟ್ ಮುಖಂಡರಿಗೂ ಕೇಂದ್ರ ಸರ್ಕಾರದ ಅಧಿಕಾರಿಗಳಿಗೂ ಸಂಧಾನವು ಕೂಡ ಮುಂದುವರಿಯುತ್ತಿವೆ.

ಜನಗಳಿಗೆ ಎಚ್ಚರಿಕೆ

ಎಲ್ಲಿಯಾದರೂ ಕೆಂಪು ಬಾವುಟ ನೆಟ್ಟಿದ್ದರೆ ಒಡೆಯದ ಸಿಡಿ ಗುಂಡು ಅಥವಾ ಬಾಂಬು ಅಲ್ಲಿದೆ ಎಂದು ಗುರುತು, ಸರ್ವರೂ ಆ ಸ್ಥಳದಿಂದ ೫೦೦ ಅಡಿ ಆಚೆಗೆ ಇರತಕ್ಕದ್ದು. ಸಮೀಪಕ್ಕೆ ಹೋಗಬಾರದು, ಒಡೆಯದ ಸಿಡಿಗುಂಡು, ಬಾಂಬು, ಗ್ರೆನೇಡ್ ಮುಂತಾದುವನ್ನು ಕಂಡೊಡನೆ ಸಮೀಪದ ಪೋಲೀಸ್ ಅಥವಾ ಇತರ ಅಧಿಕಾರಿಗಳಿಗೆ ತಿಳಿಸಿದಲ್ಲಿ ಪ್ರತಿಯೊಂದು ಗುಂಡಿಗೂ ಒಂದು ರೂಪಾಯಿ ಬಹುಮಾನ ಕೊಡಲಾಗುವುದು ಎಂದು ಮಿಲಿಟರಿ ಶಿಕ್ಷಣ ಪ್ರದೇಶಗಳ ಸುತ್ತುಮುತ್ತಿನಲ್ಲಿ ವಾಸವಾಗಿರುವವರಿಗೆ ಎಚ್ಚರಿಕೆ ಕೊಡಲಾಗಿದೆ

ಟ್ರೂಮನ್ನರೊಡನೆ ವಿಜಯಲಕ್ಷ್ಮೀ ಭೇಟಿ

ಭಾರತ ಕಾಂಗ್ರೆಸ್ಸಿನ ಪ್ರಮುಖರಲ್ಲೊಬ್ಬರಾದ ಶ್ರೀಮತಿ ವಿಜಯಲಕ್ಷ್ಮೀ ಪಂಡಿತರು ವಾಷಿಂಗ್ಟನ್ನಿನಲ್ಲಿ ಅಮೆರಿಕನ್ ಸಂಯುಕ್ತಸಂಸ್ಥಾನದ ಅಧ್ಯಕ್ಷರಾದ ಹ್ಯಾರಿ ಎಸ್ ಟ್ರೂಮನ್ನರನ್ನು ಭೇಟಿಮಾಡಿ ೧೫ ನಿಮಿಷ ಸಂಭಾಷಿಸಿದರು. ಈ ಭೇಟಿಯು ಮಹತ್ವವಿದು. ಇದುತನಕ ಅಮೆರಿಕನ್ ಅಧ್ಯಕ್ಷರು ಭಾರತೀಯ ಕಾಂಗ್ರೆಸ್ಸಿನ ಸದಸ್ಯರಿಗೆ ಭೇಟಿ ಕೊಟ್ಟಿರಲಿಲ್ಲ. ಭಾರತೀಯರು ಅಧ್ಯಕ್ಷರನ್ನು ಭೇಟಿ ಮಾಡುವಾಗ್ಗೆ ಅವರನ್ನು ವಾಷಿಂಗ್ಟನ್ನಿನಲ್ಲಿರುವ ಬ್ರಿಟಿಷ್ ಛಾಯಭಾರಿ ಕಛೇರಿಯ ಭಾರತೀಯ ಏಜೆಂಟರೇ ಪರಿಚಯ ಮಾಡಿಸಿಕೊಡುವದು ಪದ್ಧತಿ. ಆದರೆ ಶ್ರೀಮತಿ ವಿಜಯಲಕ್ಷ್ಮೀ ಪಂಡಿತರನ್ನು ಅಮೆರಿಕನ್ ಶಾಸನ ಸಭಾಧ್ಯಕ್ಷರಾದ ಮಿ|| ಎಮಾನ್ಯುಯಲ್ ಸೆಲ್ಲರ್‌ರವರು ಟ್ರೂಮನ್ನರಿಗೆ ಪರಿಚಯ ಮಾಡಿಸಿ ಭೇಟಿಯಲ್ಲಿ ಹಾಜರಿದ್ದರು.

ಕಾಶೀ ಶ್ರೀಜಗದ್ಗುರು ವಿಶ್ವಾರಾಧ್ಯ ಗುರುಕುಲದ ಪರೀಕ್ಷಾಫಲ

ಕಲಕತ್ತಾ ಪರೀಕ್ಷೆ

ವ್ಯಾಕರಣ ಮಧ್ಯಮಾ

೧ ಗುರುಪಾದಶಿವಾಚಾರ್ಯ, ಮುಳ್ಳೂರು

೨ ಸಿದ್ಧಲಿಂಗ ಶಿವಾಚಾರ್ಯ, ಬಳವುಂಡಿ

ಕಾಶೀಪರೀಕ್ಷೆ ಎಲ್‌ಎಲ್.ಬಿ. (ಪ್ರೀವಿಯಸ್)

೩ ವೈ. ಯಂ ಗಂಗಾಧರಪ್ಪ

ಬಿ.ಕಾಂ.

೪ ಮಾಣಿಕ್ಯಪ್ಪಾ ಕೀರ್ತನೆ

ಆಯುರ್ವೇದಾಚಾರ್ಯ (೧ನೆಯ ವರ್ಷ)

೫ ಗುರುಸಿದ್ಧಸ್ವಾಮಿ, ಮುದೇನೂರು

ಎಡ್ಮಿಷನ್

೬ ಸೋಮಶೇಖರಶರ್ಮಾ, ಛಾಯಚೂರು

ಮಹಾಮಂಡಲದ ದರ್ಶನ ಮಧ್ಯಮ ಮತ್ತು ಆಯುರ್ವೇದಾಧ್ಯ

೭ ಕಾಶೀನಾಥಶಾಸ್ತ್ರಿ, ಗೊಡಚಿ

ಮಹಾಮಂಡಲದ ಆಯುರ್ವೇದಾಧ್ಯ

೮ ಸಿದ್ಧರಾಮಶಿವಾಚಾರ್ಯ, ರೌಣಕುಂದಿ

ಸಿಟಿ ಬೇಸಿಕ್ ಹೈ. ೫ನೇ ವರ್ಗ

೯ ಮುಕ್ತೇಶ್ವರ (ಸಾಂಬ) ಪಕಾಪೇ

ಈ ಪ್ರಕಾರವಾಗಿ ಆಯಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುತ್ತಾರೆ

ರಾಮಚಂದ್ರಪ್ರಸಾದ, ವ್ಯವಸ್ಥಾಪಕ,
ಶ್ರೀ ಜ. ವಿ ಜ್ಞಾ. ಮಹಾಸಂಸ್ಥಾನ.

[೧ನೆಯ ಪುಟದಿಂದ ಮುಂದುವರಿದುದು]

ಪೂರ್ವಕ ಶಮೀಮಂಟಪಕ್ಕೆ ಬಿಜಯಂಗೈಸಿಕೊಂಡು ಬಂದರು. ಅಲ್ಲಿ ಶ್ರೀ ಸ್ವಾಮಿಗಳವರು ಶಮೀಪೂಜೆ ಮಾಡಿ ಪಂಡಿತರಿಗೂ ವೈದಿಕರಿಗೂ ಭಕ್ತರಿಗೂ ವಿಜಯದಶಮೀ ಶುಭಾಶೀರ್ವಾದವನ್ನಿತ್ತರಲ್ಲದೆ ಗುರುಭಕ್ತಿನಿರತರಾದ ಹರಲಾಪುರದ ಶ್ರೀಮಾನ್ ಕೊರಡೂರು ಕಲ್ಲಪ್ಪನವರಿಗೆ "ಗುರುಭಕ್ತಿಭೂಷಣ" ಎಂದೂ, ಗುರುಸೇವಾನಿರತರಾದ ಶ್ರೀಮಾನ್ ವಡಕಣ್ಣನವರ ಒಸಪ್ಪನವರಿಗೆ "ಗುರುಸೇವಾಭೂಷಣ" ಎಂದೂ ಪದವಿಯನ್ನಿತ್ತರು. ಆಮೇಲೆ ಸಮಾರಂಭವು ಜಗದಾಚಾರ್ಯರ ಮಂಗಲದೊಡನೆ ಸಮಾಪ್ತಿಗೊಂಡಿತು.

ವಿರೂಪಾಕ್ಷಶರ್ಮ ಆರಾಧ್ಯಮಠ

ಚಿಂಚೋಳಿಗ್ರಾಮದಲ್ಲಿ ವಿರಕ್ತರ ಉಪದ್ರವ

ನಿಜಾಂ ಇಲಾಖಾ ಚಿಂಚೋಳಿಗ್ರಾಮದ ವೀರಶೈವ ತರುಣ ಸಂಘದವರು ಭಾದ್ರಪದಮಾಸದಲ್ಲಿ ಪ್ರಭಾತಫೇರಿಯನ್ನು ಪ್ರಾರಂಭಿಸಿ ಶ್ರೀಜಗದ್ಗುರು ಪಂಚಾಚಾರ್ಯರ ಸ್ತೋತ್ರಗಳನ್ನು ಸುಸ್ವರದಿಂದ ಹಾಡುತ್ತಿದ್ದರು. ಇವರೊಡನೆ ಶ್ರೀಮಲ್ಲಿಕಾರ್ಜುನ ಭಜನಮಂಡಲಿಯವರೂ, ಶ್ರೀ ವೀರಂತೇಶ್ವರ ಭಜನಮಂಡಲಿಯವರೂ ಕೂಡಿ ಸೌಹಾರ್ದದಿಂದ ಭಜನೆಯನ್ನು ಮಾಡುತ್ತಿದ್ದರು. ಹೀಗಿರುತ್ತಿರಲು ಇಲ್ಲಿಯ ವಿರಕ್ತರ ಪ್ರೇರಣೆಯಿಂದ ಬೇರೊಂದು ಭಜನಮಂಡಲಿಯವರು, ವಿರುದ್ಧವಾಗಿ ಭಜನ ಮಾಡುತ್ತಾ ಕುಚೇಷ್ಟೆಯನ್ನು ಮಾಡತೊಡಗಿದರು. ಆದಾಗ್ಯೂ ಆಚಾರ್ಯ ಭಜನಮಂಡಲಿಯವರು, ಶಾಂತರೀತಿಯಿಂದ, ತಾವು ಕೈಗೊಂಡ ಕಾರ್ಯವನ್ನು ಸಮಾಪ್ತಿಗೊಳಿಸಿದರು. ಈ ಸಮಾಪ್ತಿಯ ದಿವಸ ಸಹಸ್ರಾರು ಜನರಿಗೆ ಅನ್ನದಾನವು ಮಾಡಲ್ಪಟ್ಟಿತು. ಆ ದಿವಸ ವಿರಕ್ತ ಪಾರ್ಟಿಯವರು, ಒಬ್ಬ ಹುಂಡಬಂಡ ಪಂಡಿತನ ಅಧ್ಯಕ್ಷತೆಯಲ್ಲಿ ಸಭೆ ಸೇರಿ, ಆಚಾರ್ಯರನ್ನು ದೂಷಿಸಲಿಕ್ಕೆ ಹತ್ತಿದರು. ಅದಕ್ಕೆ ತರುಣ ಸಂಘದ ಅಧ್ಯಕ್ಷರು ಮತ್ತು ಸೆಕ್ರೆಟರಿಗಳು ಶಾಸ್ತ್ರಾಧಾರಗಳನ್ನು ತೋರಿಸಿ ಸಮಾಧಾನ ಹೇಳಿದರು. ಇದಕ್ಕೆಲ್ಲಾ ವಿರಕ್ತರ ಪ್ರೇರಣೆಯೇ ಮೂಲಕಾರಣವಾಗಿದೆ. ಈವಿಧವಾದ ಶಾಸ್ತ್ರ ವಿರುದ್ಧವಾದ ವರ್ತನೆಯಿಂದ ವಿರಕ್ತ ಮಹಾಶಯರು ಯಾವ ಪುರುಷಾರ್ಥವನ್ನು ಗಳಿಸಿಕೊಳ್ಳುವರೋ ತಿಳಿಯದಾಗಿದೆ

ಮತಾಭಿಮಾನಿ

ಸ್ವೀಕಾರ

ಚನ್ನಾಪುರಗ್ರಾಮ ನಿವಾಸಿಗಳಾದ ಮ|| ರಾ|| ಪಾಟೀಲ ನಾಗನಗೌಡರು ಚಿ|| ಗದಿಗಪ್ಪಗೌಡನನ್ನು ದತ್ತಪುತ್ರನನ್ನಾಗಿ ಸ್ವೀಕರಿಸಿದ ಸಮಯದಲ್ಲಿ ಮ|| ರಾ|| ಒಳ್ಳೊಳ್ಳಿ ತೀರ್ಥಪ್ಪನವರು ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ ೭ ರೂ ಗಳು ವೇ|| ಜಿ ವಿ ನಂದಿಕೇಶ್ವರಮಠ ಹುಬ್ಬಳ್ಳಿ ಇವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ|| ಗದಗ ಸಿಟಿಯಲ್ಲಿರುವ ಮ|| ರಾ|| ಪರ್ವತಗೌಡ ಶೇಜಗೌಡರ ಇವರ ಮಾತೃಶ್ರೀಯವರಾದ ನಾಗಮ್ಮನವರು ಇದೇ ಆಶ್ವಯುಜ ೯ ಸೋಮವಾರ ದಿನಸ ತಮ್ಮ ೭೫ನೆಯ ವರ್ಷ ವಯಸ್ಸಿನಲ್ಲಿ ಶಿವಾಧೀನರಾದ ಸಮಯದಲ್ಲಿ ಸದರಿಯವರ ಮೊಮ್ಮಕ್ಕಳಾದ ಮ|| ರಾ|| ಬಸವನಗೌಡ ರಾಮನಗೌಡರ ದಲಾಲಿ ಅಂಗಡಿ ಗದಗ ಇವರು ಪ್ರಭಾಪೋಷಣಕ್ಕೋಸ್ಕರ ೭ ರೂ. ಗಳನ್ನು ಸಮರ್ಪಿಸಿ ಕಳುಹಿಸಿದ್ದಾರೆ.

ಧಾರವಾಡ ಡಿ|| ಸಂಕಲೀಪುರ ಗ್ರಾಮದಲ್ಲಿ ಶ್ರೀಮತಿ ಪರಮ್ಮ ಸೂರಣಗಿ ಇವರೇ ಮೊದಲಾದವರು ಶ್ರೀ|| ಷ|| ಬ್ರ|| ಬೆಂಗಳೂರು ಮಹಂತಿನ ಮಠಾಧ್ಯಕ್ಷರಿಂದ ಶಿವದೀಕ್ಷೆಯನ್ನು ಪಡೆದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ ೧ ರೂಪಾಯಿಯು ವೇ|| ವಿರೂಪಾಕ್ಷ ಶರ್ಮಾ ಬಿದರೆ ಇವರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇನೆ.

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಲಿಂಗಧಾರಣವಿರುವ ಪ್ರಕಾರ, ಈ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವದು. ವೀರಶೈವಮತದಲ್ಲಿ ಸಿಕ್ಕು ದೊರೆಯುತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು. ಈ ಗ್ರಂಥವು ಈಗ್ಗೆ ಸುಮಾರು **೨ಸಾವಿರ** ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು. ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇದುವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿದ್ದಾರೆ. ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿನೋಡಿದಮೇಲೆ ಈ ಅಂತರ ವ್ಯಾಖ್ಯಾನದ ಮಹತ್ತ್ವವು ವಾಚಕರಿಗೆ ವೇದ್ಯವಾಗುವುದು. ವಾಚಕರ ಅನುಕೂಲಕ್ಕಾಗಿ ಬಹುಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೭೨೦ ಪುಟಗಳಿಂದ ಕೂಡಿದ್ದು, ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೨ ರೂಪಾಯಿ**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ **ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ**	೦—೩—೦
ಶ್ರೀರೇಣುಕಾಚಾರ್ಯರ ಅವತಾರದ **ಫೋಟೋ** (ನಾನಾವಿಧಬಣ್ಣಗಳಿಂದ ಮುದ್ರಿತವಾದುದು.) **ಸೈಜು ೧೪×೧೦ ಬೆಲೆ**	೦—೩—೦
ಸಮಸ್ತ ಶಿವಾಚಾರ್ಯರ ಅವತಾರಕ್ಕೆ ಕಾರಣರಾದ ಆಚಾರ್ಯರು ಒಂದರಲ್ಲಿಯೇ ಇರುವ **ಫೋಟೋ ಸೈಜು ೧೪×೧೦ ಬೆಲೆ**	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ **ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ**	೦—೩—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ **ಫೋಟೋ**	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ **ಫೋಟೋ**	೦—೧—೬
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ **ಫೋಟೋ**	೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ **ಫೋಟೋ**	೦—೧—೬
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ **ಫೋಟೋ**	೦—೧—೬
ಶ್ರೀಉಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ **ಫೋಟೋ**	೦—೧—೬
ಶ್ರೀರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ **ಫೋಟೋ**	೦—೧—೬
ಶ್ರೀಉಜ್ಜಯಿನಿ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ **ಫೋಟೋ**	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ **ಫೋಟೋ** (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) **ಚಿಕ್ಕ ಸೈಜು ೧ಕ್ಕೆ**	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) **ದೊಡ್ಡ ಸೈಜು ೧ಕ್ಕೆ**	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ **ಫೋಟೋ ೧ಕ್ಕೆ**	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಶಿಲ್ಪದ ಸುಂದರ **ಫೋಟೋ ೧ಕ್ಕೆ**	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ **ಗೋಪುರದ ಫೋಟೋ**	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ **ಫೋಟೋ**	೦—೧—೬
ಶಿಂಗಳೂರ ಕಾನ್ಫರೆನ್ಸಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ **ಫೋಟೋ**	೦—೧—೬

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೭ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೮ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೬ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ–ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ **ಭಾಷಣಮು** (ತೆಲುಗು)	೮ ಆಣೆ
ಸಪ್ರಶ್ನೋತ್ತರರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿವಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು ೨ನೆಯ ಆವೃತ್ತಿ)	೧| ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಶ್ರೀಕರಭಾಷ್ಯಂ (ಉಪೋದ್ಘಾತ)	೧|| ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧|| ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳುಳ್ಳದ್ದು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರಸಹಿತ)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವದು)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	**4 As**
The Philosophical Aspect of Virasaivism (*English*)	**8 As**
Speeches by Pandit Shri Kashinatha Shastriji (*English*)	**12 As**
लिंगधारणचन्द्रिका (संस्कृत	३ रु.
वीरशैवरत्न (मराठी)	१ रु
महानारायणोपनिषत् (वीरशैवभाष्य संस्कृत	१ रु
सिद्धांतशिखामणि (मूल)	८ आ.
नंदिकेश्वरकारिका (संस्कृत)	२ आ

ಮ್ಯಾನೇಜರ್— **ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No M. 2266 ॥ ಶ್ರೀಜಗದ್ಗುರು ಪಂಚಾಚಾರ್ಯರ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ।

ಸ್ಥಳದವರಿಗೆ ೩ ರೂ. ೪ ಆಣೆ ಪರಸ್ಥಳದವರಿಗೆ ೩ ರೂ ವಿ ಪಿ ಪೋಸ್ಟೇಜ ಸೇರಿ ೩ ರೂ ೪ ಆಣೆ

ಸಂಪುಟ ೧೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೨ನೇ ನವೆಂಬರ್ ೧೯೪೫ [ಸಂಚಿಕೆ ೨೬

॥ ಶ್ರೀಜಗದ್ಗುರು ಪಂಚಾಚಾರ್ಯರ ಪ್ರಸೀದಂತು ॥

ವೈರಾಗ್ಯದರ್ಶನ

(ಲೇ—ವೇ|| ಮಲ್ಲಿಕಾರ್ಜುನಾರಾಧ್ಯ, ರು. ಬೆನ್ನೂರ ಶಿವಪುರ ಮುಖೀನವರು.)

ವಶಿಷ್ಠಮಹರ್ಷಿಯು ಶ್ರೀ ರಾಮಚಂದ್ರನಿಗೆ ಜನಕ ಸಿದ್ಧಿ ಕ್ರಮವನ್ನು ನಿರೂಪಿಸುತ್ತಾನೆ ಎಲೈ ರಘುಕುಲ ತಿಲಕನೇ! ಒಂದು ಸಮಯದಲ್ಲಿ ಜನಕರಾಯನು ಏಕಾಂತದಲ್ಲಿ ಪರಿಪರಿಯಾದ ಲೋಕಗತಿಗಳನ್ನಾಲೋಚಿಸುತ್ತಾ ವ್ಯಾಕುಲನಾಗಿ ಹೇಳದನೆಂತೆನೆ—ಇದೇನು ಕಲ್ಲುಗಳಲ್ಲಿ ಕಲ್ಲಿನಂತೆ ಸಂಸಾರದಲೆಗಳಲ್ಲಿ ಹೊರಳಾಡುತ್ತಿರುವೆನು ಅನಂತವಾದ ಕಾಲದಲ್ಲಿ ಯಾವಮೂ ಒಂದಂಶದೊಳ್ ನಾನು ಜೀವಿಸುವೆನು ಅತ್ಯಲ್ಪವಾದ ಇಂತಾ ಜೀವನಕ್ಕೆ ಆಸೆಪಡುವ ಅಧಮನಾದ ನನ್ನಂ ಧಿಕ್ಕರಿಸಬೇಕು ಈ ಜೀವನಕ್ಕೆ ತಕ್ಕದ್ದಾಗಿರುವ ರಾಜ್ಯವಿದು ಎಷ್ಟುಮಾತ್ರವೆನಿಸುವದು ಇದರಿಂ ನಾನು ದುಃಖವಿಲ್ಲದಿರುವದ್ದರಿಂದ ನನಗಿಂತಲೂ ಕೆಟ್ಟಬುದ್ಧಿಯವನು ಯಾವನೂ ಇಲ್ಲವೆಂದು ತಿಳಿಯುತ್ತೇನೆ ಪರಮಾರ್ಥ ವಿಚಾರದಿಂದಾದ್ಯಂತಗಳಲ್ಲಿ ಅಖಂಡನಾದ ನನಗೆ ಮಧ್ಯಭಾಗದೊಳ್ ಕಾಲಕರ್ಮವಾಸನಾಬಲಗಳಿಂ ಖಂಡನೆಯಾದ್ದರಿಂದ ಚಿತ್ರಪಟದಲ್ಲಿರುವ ಚಂದ್ರನಿಂ ಬಾಲನಂತೆ ಈ ದೇಹದಿಂ ನಾನು ಸಂತೋಷಪಡುತ್ತಾ ಇದನ್ನೇ ನಾನೆಂದು ತಿಳಿದುಕೊಂಡಿರುವೆನು ಯಾವನಿಂ ನಾನಿಂದ್ರಜಾಲರೂಪವಾದ ಪ್ರಪಂಚದೊಳ್ ಮುಗ್ಧನಾಗಿರುವೆನು ಯಾವದು ಸತ್ಯವೋ, ಯಾವದು ಮನೋಹರವೋ, ಯಾವದು ಉತ್ಕೃಷ್ಟವೋ, ಯಾವದು ಕೃತ್ರಿಮವಲ್ಲದ್ದೋ, ಅದೊಂದನ್ನೂ ಕಾಣದೆ ಇಲ್ಲೇನುಕಾರಣ ನನ್ನ ಬುದ್ಧಿಯು ತಗಲಿಕೊಂಡಿರುವುದು ಯಾವದು ಮನದಲ್ಲಿರುವದೋ ಅದು ದೂರದಲ್ಲಿದ್ದರೂ ಸಮೀಪದಲ್ಲೇ ಯಿರುವದಾದ್ದರಿಂದ ಬಾಹ್ಯ ಭಾವನೆಗಳೆಲ್ಲವನ್ನೂ ನಾನು ಬಿಟ್ಟುಬಿಡುವೆನು ಭೋಗಾರ್ಥವಾದ ಪ್ರವೃತ್ತಿಮಾರ್ಗವೆಲ್ಲವೂ ನೀರಿನ ಸುಳಿಯಂತೆ ಕ್ಷಣಿಕವಾಗಿರುವಲ್ಲಿ ಯಾವುದರಿಂ ನನಗೆ ಸುಖವಾದೀತು ಪ್ರತಿವರ್ಷ ಪ್ರತಿಮಾಸ ಪ್ರತಿದಿವಸ ಪ್ರತಿಕ್ಷಣಗಳಲ್ಲಿ ಒದಗುವ ಸುಖಗಳೂ ಆಪದುಃಖಗಳಿಂ ಪೂರ್ಣವಾಗಿರುವವು ದುಃಖಗಳಾದರೋ ಮರಳಿ ಮರಳಿ ಒದಗುತ್ತಿರುವವು ಬ್ರಹ್ಮೇಂದ್ರಾದಿ ಪದವಿಗಳಂ ವಿಚಾರಿಸುವಲ್ಲಿ ಯಾವುದೂ ಉತ್ಕೃಷ್ಟವಾಗಿ ತೋರುವದಿಲ್ಲವಾದ್ದರಿಂದ ಸತ್ಪುರುಷರಿಗೆ ಅವಲಂಬನವಾದ್ದು ಇಲ್ಲಿ ಯಾವುದೂ ಇಲ್ಲ ಎಲ್ಲೈ ಕೆಟ್ಟ ಮನವೇ ರಾಜ್ಯಾಧಿಪತ್ಯಾದಿಗಳಿಂ ದೊಡ್ಡವರೆಂದು ಪ್ರಸಿದ್ಧರಾದವರ ತಲೆಯ ಮೇಲಿರುವವರೂ ಸಹ ಕೆಲವು ದಿನಗಳಲ್ಲಿಯೇ ಬೀಳುವಲ್ಲಿ ಈ ಸ್ವಲ್ಪ ರಾಜ್ಯದಿಂ ನೀನಹಂಕಾರಪಡುವುದಕ್ಕೆ ನಿಮಿತ್ತವೇನಿರುವದು ಹಾ ಆತ್ಮನೇ ನೀನು ಹಗ್ಗವಿಲ್ಲದೆ ಬಂಧವನ್ನೂ ಮಾಲಿನ್ಯವಿಲ್ಲದೆ ಕಳಂಕವನ್ನೂ ಅಚ್ಯುತನಾಗಿ ಮೇಲೆ ಬಿದ್ದರೂ ಸಹ ಒಂದು ದುಃಖವನ್ನೂ ಅನುಭವಿಸುತ್ತೀಯೆ ಸೂರ್ಯನೆದುರಿಗೆ ಕಾಲ ಮೇಘದಂತೆ ಆಕಸ್ಮಿಕವಾದೀ ಮೋಹವು ನನಗೆ ಹ್ಯಾಗೆ ಒಂದಿರುವದು ಬೆದರಿಸಿಯಿಂದುಂಟಾದ ಭೂತದಿಂ ಬಾಲಕನಂತೆ ಸಂಕೇತಸಿದ್ಧವಾದ ಭೋಗಗಳಿಂದಲೂ ಬಂಧಗಳಿಂದಲೂ ನಾನು ದುಃಖಪಡುತ್ತಿರುವೆನು ನನಗೆ ಇವರು ಯಾರು ಇವರಿಗೆ ನಾನು ಯಾರು ಇವರಿಗೂ ನನಗೂ ಸಂಬಂಧವೇನೆಂದು ಯೋಚಿಸುತ್ತಿದ್ದಾಗ್ಯೂ ಇವರೆಲ್ಲಾ ಜರಾಮರಣಭಯ ಚಿಂತೆಗಳಿಗೆ ಕಾರಣವಾದ ಸ್ಥಿತಿಯಂ ನಾನಾಗಿ ಪಡೆದಿರುವೆನು ನೀರಿಗೆ ಗುಳ್ಳೆಗಳಂತೆಯೇ ಇವರು ನನಗೆ ಸಿದ್ಧರಾಗಿರುವರು ಪ್ರಾಚೀನರಾದ ಆ ಮಹಾಪುರುಷರು ಆ ವಿಭವಗಳು ಆ ಭೋಗಗಳು ಆ ಸ್ನೇಹಿತರು ಆ ಬಾಂಧವರೂ ಸಹ ಸ್ಮರಿಸಲು ಯೋಗ್ಯರಾಗಿರುವಲ್ಲಿ ಈಗಿನ ಪದಾರ್ಥಗಳಂ ಹ್ಯಾಗೆ ನಂಬತಕ್ಕದ್ದು ಆ ಧೊರೆಗಳ ಧನಗಳು ಬ್ರಹ್ಮನ ಜಗತ್ತುಗಳು ಅನೇಕ ಸಹಸ್ರ ಬ್ರಹ್ಮರು ಅನೇಕ ಲಕ್ಷ ಇಂದ್ರರೂ ಸಹ ನೀರ್ಗುಳ್ಳೆಗಳಂತೆಯೂ, ಭೂಮಿಯ ಧೂಳಿಗಳಂತೆಯೂ, ಹೋಗಿರುವಲ್ಲಿ ನನ್ನ ವಿಭವವು ಶಾಶ್ವತವೆಂತಲೂ, ದೀರ್ಘಕಾಲ ಬದುಕುವೆನೆಂತಲೂ ಲೌಕಿಕ ವಾ ಪಾರಗಳಲ್ಲಾ ಸಕ್ತನಾದ ನನ್ನಂ ನೋಡಿ ಪ್ರಾಜ್ಞರು ನಗುತ್ತಿರುವರು. ಸಂಸಾರನೆಂಬ ರಾತ್ರಿಯೊಳ್ ಮೋಹವೆಂಬ ಒಡ್ಡಿಯುಳ್ಳದ್ದು ಸ್ಪಷ್ಟವಂತೆ ಈ ದೇಹಭ್ರಮೆ ನನಗುಂಟಾಗಿರುವದು ಇದಂ ನ ವಿಚಾರವನು ಅವನು ನಾನು ದುರಹಂಕಾರ ಪಿಶಾಚಾವೇಶದಿಂ ನಾನು ಭ್ರಮಿಸುತ್ತಿರುವೆನು ನಿಮಿಷ ಕ್ಷಣ ಘಟಿಕಾ ಮುಹೂರ್ತರೂಪವಾದ ಸೂಕ್ಷ್ಮ ಕಾಲಗಳಿಂದಲೇ ಪ್ರಾಣಿಗಳ ಆಯುಸ್ಸು ಕೆಡಿಸಲ್ಪಡುವದು ದೇವಾಧಿಪತಿಗಳೆಲ್ಲರನ್ನೂ ತುಳಿದು ವಿಷ್ಣು ಶರೀರಗಳಂ ಚಂಡಾಡಿದ ರುದ್ರರೂ ಸಹ ಮಹಾಕಾಲನಿಂ ನುಂಗಲ್ಪಡುವರು ಹೀಗಿರುವಲ್ಲಿ ಎಲೋ ಆಸೆಯೇ ನನಗೆ ಜೀವನದಲ್ಲಿ ನಂಬಿಗೆಯನ್ನುಂಟುಮಾಡುತ್ತಾ ನೀನು ಕುಣಿಯುತ್ತೀಯೆ, ಬಂದ ಬಂದ ದಿವಸಗಳೆಲ್ಲವೂ ವ್ಯರ್ಥವಾಗಿ ಸಂದುಪೋದವಲ್ಲದೆ ಶಾಶ್ವತವಾದ ವಸ್ತುವಂ ತೋರುವ ಸುದಿನವಾವುದೂ ನನಗೆ ಬರಲಿಲ್ಲ ಇವು ಸ್ಥಿರವೆಂತಲೂ, ಹಿತವೆಂತಲೂ, ನಂಬಿದ್ದ ವಸ್ತುಗಳೆಲ್ಲವೂ ನಶ್ವರವಾದ್ದರಿಂದ ದೃಶ್ಯವೆಲ್ಲವೂ ನಶ್ವರವೆಂದು ನಿಶ್ಚಯಿಸಿದಾಗ್ಯೂ ಸರೋವರದಲ್ಲಿ ಹಂಸಗಳಂತೆ ಮನದಲ್ಲಿ ಭೋಗಗಳು ತಿರುಗುತ್ತಿರುವುವಲ್ಲವೆ ವೈರಾಗ್ಯ ಉದಯ ಸಲಿಲ್ಲ ಈ ಹೊತ್ತಿಗ ನಾಳೆ ಕೆಟ್ಟವೆಂದು ನಿಶ್ಚಿತವಾದಾಗ್ಯೂ ಕಷ್ಟದಿಂ ಕಷ್ಟವು ದುಃಖದಿಂ ದುಃಖವು ಸಹ ತೆರೆಗಳಂತೆ ಒದಗುತ್ತಿದ್ದಾಗ್ಯೂ, ಮನವೆಂಬ ಹುತ್ತಕ್ಕೆ ಹಾವಾಗಿ ಶರೀರವೃಕ್ಷಕ್ಕೆ ಚಿಗುರುಗಳವ ಆಧಿವ್ಯಾಧಿಗಳು ಕಡೆಯಲಕ್ಷ್ಯವಾಗಿದ್ದಾಗ್ಯೂ ದುಃಖಕರವಾದ ಭೋಗಾಪೇಕ್ಷೆಯೇ ಮರಳಿ ಮರಳಿ ಜನಗಳಂ ಮರುಳುಮಾಡುತ್ತಿರುವುದು ಕ್ರೀಡೆಗೆ ಬಾಲ್ಯವು, ತರುಣಿಯರಿಗೆ ಯೌವನವು ಚಿಂತೆಗಳಿಗೆ ವೃದ್ಧಾಪ್ಯವು ಸಹಕಲ್ಪಿತವಾಗಿರುವದ್ದರಿಂದ ಸ್ವರೂಪ ವಿಚಾರಕ್ಕೆ ಯಾವ ಕಾಲ ಗೊತ್ತಾಗಿರುವದೋ ತಿಳಿಯಲಿಲ್ಲ ರಾಜಸೂಯಾಶ್ವಮೇಧ ಮೊದಲಾದ ಯಜ್ಞಸಹಸ್ರವಂ ಮಾಡಿದರೂ ಮಹಾಕಲ್ಪಕ್ಕೆ ಕ್ಷಣಿಕವೆನಿಸುವ ಸ್ವರ್ಗವೇ ಸಿಗುವುದು ಅದಕೂ ಬಿದರಿಗೆ ದುಂಬೆಗಳಂತೆ ಆಪತ್ತುಗಳೇ ಸಿದ್ಧವಾಗಿರುವದ್ದರಿಂದ ನಿರಪಾಯವಾದ ಸ್ಥಳವು ತ್ರಿಲೋಕಗಳಲ್ಲೂ ಕಾಣಿಸುವುದಿಲ್ಲ ಯಾವದು ಸಾಧುವೆಂತಲೂ, ರಮ್ಯವೆಂತಲೂ, ಸ ಖವೆಂತಲೂ ತಿಳಿಯಲ್ಪಡುವದೋ ಅದರ ತಲೆಯಮೇಲೆ ಅಸಾಧುತ್ವಾದಿ ದೋಷಗಳು ಸಿದ್ಧವಾಗಿರುವವು ಅದ್ದರಿಂ ನಾನು ಯಾವುದನ್ನಾಶ್ರಯಿಸತಕ್ಕದ್ದು ಹುಟ್ಟಿ ಸಾಯುವ ಪ್ರಾಣಿಗಳಿಂದಲೇ ಭೂಮಿಯು ತುಂಬಿರುವದ್ದರಿಂದ ಸಾಧುಗಳಂ ಹುಡುಕಬೇಕಾಗಿರುವುದು ಈ ಸಂಸಾರದೊಳ್ ಸಾರವೇನೆಂದು ವಿಚಾರಿಸುವಲ್ಲಿ ಸಂಪತ್ತುಗಳು ವಿಪತ್ತುಗಳಾಗಿಯೂ, ಮನೋಹರರಾದ ಸ್ತ್ರೀಯರು ಪ್ರಾಣಹರರಾಗಿಯೂ, ಭೋಗಗಳು ರೋಗಗಳಾಗಿಯೂ, ತೋರುವದ್ದರಿಂದ ಇದೆಲ್ಲವೂ ಮನೋಭ್ರಾಂತಿಯೆಂದು ಕಾಣುತ್ತಲಿದೆ ಮನಸ್ಸಿನ ರೂಪಾಂತರದಲ್ಲಿರುವ ಈ ಪ್ರಪಂಚವು ಜಲದಲ್ಲಿ ಬಿಂಬಿಸಿದ ಚಂದ್ರನಂತೆ ನಶ್ವರವಾಗಿರುವಲ್ಲಿ ಇದು ನನ್ನದೆಂಬ ಮಾತು ಹ್ಯಾಗೆ ಉಂಟಾಯಿತು? ಬೆಜ್ಜದ ಸಂಬಂಧದೊಳ್ ಕಾಕತಾಳೀಯನ್ಯಾಯದಿಂದುಂಟಾದ ಈ ಜಗದಲ್ಲಿ ಗ್ರಾಹ್ಯವಿದು ತ್ಯಾಜ್ಯವಿದು ಎಂಬ ಭಾವನೆ ಈ ಕೆಟ್ಟ ಮನದಿಂದಲೇ ಸಿದ್ಧವಾಗಿರುವದು ಇದು ಇಷ್ಟೇ ಸರಿಯೆಂದು ನಿಶ್ಚಯಿಸಲ್ಪಟ್ಟ ಲೋಕವೃತ್ತಿಗಳಲ್ಲಿ ಅಗ್ನಿಜ್ವಾಲೆಗಳೊಳ್ಪೊಕ್ಕ ಬಂದಂತೆ ನಾನು ಬಿದ್ದಿರುವೆನು ಸಕಲ ದುಃಖ ಸಮುದ್ರವಾದ ಸಂಸಾರದೊಳ್ಬಿದ್ದಿರುವ ದೇಹದಲ್ಲಿ ಹ್ಯಾಗೆ ಸುಖವುಂಟಾದೀತು. ಇದರಲ್ಲಿ ಬಿದ್ದಿರುವರಿಗೆ ದುಃಖವೇ ಸುಖವಾಗಿ ತೋರುತ್ತಿರುವದು. ಇದೇ ಪ್ರಕಾರವಾಗಿ ಅಧಮ ಜನರಿಂ ಉತ್ಕೃಷ್ಟನೆಂದು ಹೇಳಲ್ಪಡುವ ನಾನು ಇದುವರೆಗೆ ಶಾಸ್ತ್ರಮೋಕ್ಷಗಳಿಗೆ ಸಮನಾಗಿದ್ದನು ಶಾಸ್ತ್ರಗಳಂ ವಿಚಾರಿಸಿದಾಗ್ಯೂ ಅಜ್ಞನಿಗೆ ಸಮನಾಗಿದ್ದ ನಾನು ಸಿದ್ಧಸಾಧ್ಯರ ವಚನಾಮೃತಪಾನದಿಂ ತತ್ವವಿಚಾರದಲ್ಲಾಸಕ್ತನಾದೆನು ಅನೇಕ ಸಹಸ್ರ ಪ್ರಕಾರವಾಗಿ ಪೊರಮಟ್ಟಿರುವ ಈ ಸಂಸಾರವೃಕ್ಷಕ್ಕೆ ಮನವೇ ಮೂಲವಾಗಿರುವುದು ಅದು ಸಂಕಲ್ಪರೂಪವಾದ್ದರಿಂದ ಅಸಂಕಲ್ಪದ ಮಾರ್ಗದಿಂದಲೇ ಶಾಂತವಾಗತಕ್ಕದ್ದು ಅದಪ್ರಯುಕ್ತ ಮನೋವೃಕ್ಷವೆಲ್ಲವು ಒಣಗಿ ಹೋಗುವಂತೆ ಕಲ್ಪನಾತ್ಯಾಗದಿಂ ಮನಕ್ಕೆ ಶೋಷೆಯನ್ನುಂಟುಮಾಡುವೆನು. ಮನವೆಂಬ ಮರ್ಕಟನ ಚೇಷ್ಟೆಗಳೇಗ ಅನುಭವಕ್ಕೆ ಬಂದದ್ದರಿಂದ ವಿಕಾರಮಾತ್ರದಿಂ ರಮ್ಯವಾದ ಆ ವ್ಯಾಪಾರಗಳಲ್ಲಿ ನಾನು ಆಸಕ್ತನಾಗುವದಿಲ್ಲ ಆಶಾಪಾಶಗಳಂ ಹೇಳಿಕೊಂಡು ಊರ್ಧ್ವಾಧೋಗತಿ ದುಃಖಗಳ ಸಾಧಕವಾದ ಸಂಸಾರದುಃಖಪ್ರವೃತ್ತಿಗಳಿಂ ಶ್ರಮಪಟ್ಟ ನಾನು ಈಗ ವಿಶ್ರಮಿಸಿಕೊಳ್ಳುವೆನ ಆಹಾ! ನಾನು ಕೆಟ್ಟೆನು ನಷ್ಟನಾದೆನು, ಮೃತನಾದೆನೆಂದು ಹೋದ ಪದಾರ್ಥಗಳಂ ಕುರಿತು ಇನ್ನು ಮೇಲೆ ನಾನು ರೋದಿಸುವುದಿಲ್ಲ ಆತ್ಮನಂ ಪ್ರಕಾರಾಂತರದಿಂ ತೋರುತ್ತಾ ನನ್ನಂ ದುಃಖಪಡಿಸುತ್ತಿದ್ದ ಮನವೆಂಬ ಕಳ್ಳನಂ ಈಗ ಕೊಲ್ಲುವೆನು

(ಸಶೇಷ)

ಪಂಚಾಚಾರ್ಯಪ್ರಭಾ.

೧೯೪೫ನೆಯ ನವೆಂಬರ್ ತಾ|| ೧೨ನೇ ಸೋಮವಾರ

ಶಿಖಾಧಾರಣ.

ಮುಖೇ ಮಂತ್ರೋ ಹೃದಿ ಧ್ಯಾನಂ ಮಸ್ತಕೇ ಲಿಂಗಧಾರಣಂ |
ಶಿಖೋಪವೀತಭಸ್ಮಾನಿ ಇತಿ ಬ್ರಾಹ್ಮಣಲಕ್ಷಣಂ ||

ಮುಖದಲ್ಲಿ ಪಂಚಾಕ್ಷರಮಂತ್ರ, ಹೃದಯದಲ್ಲಿ ಪರಶಿವಮೂರ್ತಿಯ ಧ್ಯಾನ, ಉತ್ತಮಾಂಗದಲ್ಲಿ ಇಷ್ಟಲಿಂಗ, ಶಿಖಾಯಜ್ಞೋಪವೀತ ಭಸ್ಮಗಳನು ಯಾರು ಧರಿಸಿರುತ್ತಾರೆಯೋ ಅವರೇ ವೀರಶೈವಬ್ರಾಹ್ಮಣರೆಂದು ಉದ್ಘೋಷಿಸುವ ಗೌತಮಸ್ಮೃತಿಯ ವಾಕ್ಯವನ್ನು ಲಿಂಗಧಾರಣ ಚಂದ್ರಿಕಾಕಾರರು ತಮ್ಮ ಗ್ರಂಥದಲ್ಲಿ ಉದಾಹರಿಸಿರುತ್ತಾರೆ ಈ ಶ್ಲೋಕದಲ್ಲಿ "ಮಸ್ತಕೇ ಲಿಂಗಧಾರಣಂ" ಎಂಬ ಒಂದು ವಾಕ್ಯವಿರುವುದರಿಂದ ಈ ಗೌತಮ ಸ್ಮೃತಿವಾಕ್ಯವು ಕೇವಲ ಲಿಂಗಧಾರಿಯಾದ ಬ್ರಾಹ್ಮಣನನ್ನುದ್ದೇಶಿಸಿ ಹೇಳಿದ ವಾಕ್ಯವಾಗಿರುವುದಲ್ಲದೆ ಲಿಂಗವಿಲ್ಲದ ಬ್ರಾಹ್ಮಣನನ್ನುದ್ದೇಶಿಸಿ ಹೇಳಿದ ವಾಕ್ಯವಲ್ಲವೆಂದು ಸ್ಪಷ್ಟವಾಗುವುದರಿಂದ ವಂಶಾನುಗತವಾಗಿ ವೀರಶೈವರಿಗೆ ಇಷ್ಟಲಿಂಗ, ಮಂತ್ರ, ಭಸ್ಮ, ರುದ್ರಾಕ್ಷ ಇವುಗಳು ಹೇಗೆ ಮುಖ್ಯ ಚಿಹ್ನವಾಗಿರುತ್ತವೆಯೋ ಇವುಗಳ ಜೊತೆಯಲ್ಲಿ ಶಿಖಾಧಾರಣವೂ ಸಹ ಒಂದು ಮುಖ್ಯ ಚಿಹ್ನವಾಗಿರುತ್ತದೆ ಸಂಸ್ಕೃತರಾದ ಬ್ರಹ್ಮಚಾರಿಗಳಿಗೂ ಗೃಹಸ್ಥರಿಗೂ ಶಿಖೆಯು ಇಲ್ಲದಿದ್ದರೆ ಅವರಿಂದ ಮಾಡಲ್ಪಡುವ ಶಿವಲಿಂಗಧಾರಣವೂ, ಗುರುಪೂಜೆಯೂ, ಇತರ ವೈದಿಕಕರ್ಮಗಳೂ ಫಲಿಸುವುದಿಲ್ಲವು ಶಿಖೆಯಿಲ್ಲದುದು ಶೂದ್ರಚಿಹ್ನವಾಗಿದೆ ಶಿಖಾರಹಿತನು ಯಾವ ಮಂಗಲ ಕಾರ್ಯಗಳನ್ನೂ ಮಾಡಲರ್ಹನಲ್ಲವು ಶಿಖೆಯಿಲ್ಲದವನ ಮುಖಾವಲೋಕನವನ್ನು ಸಹ ಮಾಡಲಾಗದೆಂದು ಶಾಸ್ತ್ರವಾಕ್ಯವು ಜಾಗರೂಕವಾಗಿರುತ್ತದೆ ಶಿಖಾರಾಹಿತ್ಯವು ಸರ್ವಸಂಗಪರಿತ್ಯಾಗಮಾಡಿದ ಸನ್ಯಾಸಿಯ ಧರ್ಮವಲ್ಲದೆ ಬ್ರಹ್ಮಚಾರಿ ಗೃಹಸ್ಥಾದಿಗಳ ಧರ್ಮವಲ್ಲವು ಅದರಲ್ಲೂ "ಪ್ರವ್ರಜೇತ್ ಗೃಹಮುತ್ಸೃಜ್ಯ ಶಿಖೀ ಮುಂಡ್ಯಥ ವಾ ಜಟೀ' ಪಲ್ಲಿಯಲ್ಲಿ ಏಕರಾತ್ರಿವಾಸಮಾಡುತ್ತ, ಕೇವಲ ಶಿವಾಶ್ರಮನಿಷೇವಿಯಾಗಿ ಭಿಕ್ಷಾಟನ ವೃತ್ತಿಯಿಂದಲೇ ತನ್ನ ಜೀವಿಕೆಯನ್ನು ನಡೆಯಿಸಿಕೊಳ್ಳುವ ನಿರಾಭಾರಿಯಾದವನಿಗೂ ಸಹ ಶಿಖಾಧಾರಣವು ಇದ್ದರೂ ಇರಬಹುದು, ಇಲ್ಲದಿದ್ದರೂ ಇರಬಹುದು ಜಟಾಧಾರಿಯಾಗಿದ್ದರೂ ಇರಬಹುದು ಎಂದು ಪಾರಮೇಶ್ವರಾಗಮಾದಿ ವಾಕ್ಯಗಳು ಬೋಧಿಸುವದರಿಂದ ಶಿಖಾಧಾರಣವು ಅತಿವರ್ಣಾಶ್ರಮಿಗೂ ಸಹ ದೋಷಾವಹವಲ್ಲವೆಂಬುದು ಸಿದ್ಧವಾಗುವಲ್ಲಿ, ಇನ್ನು ವರ್ಣಾಶ್ರಮಬದ್ಧರಾದ ಬ್ರಹ್ಮಚರ್ಯಾಶ್ರಮಧಾರಿಗಳಿಗೆ ಶಿಖಾಧಾರಣವು ಇಲ್ಲವೆನ್ನುವುದು ಹೇಗೆ? ಇದೇ ಪಾರಮೇಶ್ವರಾಗಮದಲ್ಲಿ —

"ಬ್ರಾಹ್ಮಣಾ ವೀರಶೈವಸ್ಥಾಃ ಶಿಖಾಯಜ್ಞೋಪವೀತಿನಃ"

ಎಂದು ಹೇಳಿರುವುದರಿಂದ ಅಶ್ರೌತರಿಗೆ ಶಿಖಾವಿಚ್ಛೇದವಿದ್ದರೂ ಶ್ರೌತರಾದ ವೀರಶೈವರಿಗೆ ಮಾತ್ರ ಶಿಖಾವಿಚ್ಛೇದವಿಲ್ಲವು ಆದ್ದರಿಂದ ಶ್ರೌತಮಾರ್ಗಾನುವರ್ತಿಗಳು ಶಿಖಾಧಾರಣಪಕ್ಷವನ್ನೇ ಅವಲಂಬಿಸುವುದೇ ಶ್ರೇಷ್ಠ ಧರ್ಮವಾಗಿದೆ.

ಹಲವು ಕಡೆಯಲ್ಲಿ ಕೆಲವರು ಅಶ್ರೌತರ ಬೋಧೆಗೆ ಒಳಪಟ್ಟು ತಮ್ಮ ಮಕ್ಕಳಿಗೆ ಮಂಗಲಕರವಾದ ಶಿವದೀಕ್ಷೆಯನ್ನು ಮಾಡುತ್ತೇವೆಂದು ಕಾರ್ಯವನ್ನಾರಂಭಿಸಿ ಪ್ರಾರಂಭದಲ್ಲಿಯೇ ಸಂಪೂರ್ಣ ಶಿರೋಮುಂಡನವನ್ನು ಮಾಡಿ ವಟುವನ್ನು ಮಂಗಲಕ್ಕೆ ಪ್ರತಿಯಾಗಿ ಅಮಂಗಲನನ್ನಾಗಿ ಮಾಡಿಬಿಡುತ್ತಾರೆ. ಬ್ರಹ್ಮಚರ್ಯಾಶ್ರಮದ್ಯೋತಕವಾದ ಇಂಥ ಬಾಹ್ಯಚಿಹ್ನವನ್ನೇ ತೆಗೆದು ವಟುವನ್ನು ಅಮಂಗಲನನ್ನಾಗಿ ಮಾಡಿದರೆ 'ಪ್ರಥಮಭಕ್ಷಣೇ ಮಕ್ಷಿಕಾಪಾತಃ" ಎಂಬಂತೆ ಆ ವಟುವು ಮುಂದೆ ಕರ್ಮಠನಾಗಿ ಅಭಿವೃದ್ಧಿಯನ್ನು ಹೊಂದುವುದೆಂತು? ಅಂತಹ ಅಮಂಗಲದೀಕ್ಷೆಯಿಂದ ಪ್ರಯೋಜನವೇನು? ದೀಕ್ಷೆಯನ್ನು ಮಾಡುವ ಶ್ರೀಗುರುವೂ ಸಹ ಪೀಠದಲ್ಲಿ ಕುಳಿತುಕೊಳ್ಳುವ ಸಮಯದಲ್ಲಿ "ಬದ್ಧ ಶಿಖಃ" ಜುಟ್ಟನ್ನು ಗಂಟುಹಾಕಿರಬೇಕು ಎಂದು ವೈದಿಕಪ್ರಯೋಗವು ಘಂಟಾಘೋಷವಾಗಿ ಸಾರುತ್ತವೆ. ಕೆಲ ಕಾಲದಿಂದೀಚೆಗೆ ಅನೇಕ ಜನ ಅಶ್ರೌತರು ಈ ಮತದಲ್ಲಿ ಸೇರಿ ಅಶ್ರೌತಮಾರ್ಗದಿಂದಲೇ ಬಂದಿದ್ದರಿಂದ "ಏಕಃ ಪಾಪಾನಿ ಕುರುತೇ ಫಲಂ ಭುಂಕ್ತೇ ಮಹಾಜನಃ" ಎಂಬ ನೀತಿಯಂತೆ ಆ ಅಶ್ರೌತಜನಗಳ ಸಂಪರ್ಕದಿಂದ ವೀರಶೈವಮತವು ಕಳಂಕಿತವಾಗುತ್ತ ಬಂದಿದೆ ಕೆಲ ಮೂರ್ಖರು ತಮ್ಮಲ್ಲಿ ನೆಲೆಗೊಂಡಿರುವ ಇಂಥ ದುರಾಚಾರ ಪದ್ಧತಿಯನ್ನೇ ಸರ್ವತ್ರ ರೂಢಿಗೆ ತರಬೇಕೆಂಬುದ್ದೇಶದಿಂದ ಶಿಖಾಧಾರಣವಿಲ್ಲದಿದ್ದವನು ಯಾವ ಕರ್ಮಕ್ಕೂ ಅರ್ಹನಲ್ಲವೆಂದು ಪಂಡಿತ ಜನಗಳು ಬೋಧಿಸಿದರೆ ಅದನ್ನು ನಿಷೇಧಿಸತೊಡಗುತ್ತಾರೆ ವೀರಶೈವಮತವು ವರ್ಣಾಶ್ರಮಬದ್ಧವಾಗಿದೆಯೆಂದು ಬೋಧಿಸಿದರೆ ಅವರು ಅತಿವರ್ಣಾಶ್ರಮಿಗಳೆಂದು ಹೇಳುವರು. ಗರ್ಭಾದಾನಾದಿ ಕರ್ಮಗಳಲ್ಲಿ ಪಂಚಬ್ರಹ್ಮಕಲಶಸ್ಥಾಪನಪೂರ್ವಕ ಹೋಮಾದಿಗಳನ್ನು ಮಾಡಬೇಕೆಂದು ಬೋಧಿಸಿದರೆ ಇದಕ್ಕೆ ವಿರುದ್ಧವಾಗಿ ಷಡ್ಬ್ರಹ್ಮಕಲಶಸ್ಥಾಪನೆಯನ್ನು ಕಲ್ಪಿಸಿ ಹವನಾದಿಗಳನ್ನು ನಿಷೇಧಿಸುತ್ತಾರೆ ಹೀಗೆ ತಮ್ಮ ಅಶ್ರೌತಮಾರ್ಗವನ್ನು ಸ್ಥಿರಪಡಿಸಲೋಸುಗ ವಿತಂಡವಾದಕ್ಕೆ ಪ್ರಾರಂಭಿಸಿ ತಾವು ಕೆಡುವುದಲ್ಲದೆ ಶುದ್ಧ ಸಂಪ್ರದಾಯದ ಮುಗ್ಧಜನಗಳನ್ನೂ ವಂಚಿಸುತ್ತಿರುವದು ಖೇದಾಸ್ಪದವಾದ ವಿಷಯವಾಗಿದೆ "ಮೂರ್ಖಸ್ಯ ನಾಸ್ತ್ಯೌಷಧಂ' ಎಂಬುಕ್ತಿಯಂತೆ ಇಂಥ ಮೂರ್ಖರಿಗೆ ಯಾವ ಶಾಸ್ತ್ರಪ್ರಮಾಣಗಳನ್ನು ಕೊಟ್ಟರೂ ನಿಷ್ಪ್ರಯೋಜನವೇ ಆಗುತ್ತದೆ ಆದ್ದರಿಂದ ವಂಶಾನುಗತವಾಗಿ ಬಂದ ವೀರಶೈವ ಸದ್ಭಕ್ತ ಮಾಹೇಶ್ವರರು ವೈದಿಕಪಕ್ಷವನ್ನವಲಂಬಿಸಿ ವೀರಶೈವಬ್ರಾಹ್ಮಣನು ಮಂತ್ರ, ಧ್ಯಾನ, ಶಿವಲಿಂಗಧಾರಣ, ಉಪವೀತಧಾರಣ, ಭಸ್ಮಧಾರಣ, ಶಿಖಾಧಾರಣಗಳೆಂಬ ಆರು ಲಕ್ಷಣಗಳಿಂದ ಕೂಡಿರಬೇಕೆಂಬ ಗೌತಮಸ್ಮೃತಿಯ ವಾಕ್ಯದಂತೆ ವರ್ತಿಸಿ ಜಗದೀಶ್ವರನ ಕೃಪೆಗೆ ಪಾತ್ರರಾಗಬೇಕೆಂದಾಶಿಸುತ್ತೇವೆ

ವರ್ತಮಾನಸಂಗ್ರಹ

ಬೊಂಬಾಯಿನಲ್ಲಿ ಆಗಾಖಾನರವರ ವಜ್ರೋತ್ಸವವನ್ನು ೧೯೪೬ ನೇ ಮಾರ್ಚಿ ೨೦ ನೇ ತಾ। ನಡೆಸಲು ಸಿದ್ಧತೆ ನಡೆಯುತ್ತದೆ ಆವರನ್ನು ವಜ್ರದಿಂದ ತೂಗಲು ನಿಧಿ ಶೇಖರಿಸಲಾಗುತ್ತಿದೆ

ಇಂಡೋನೇಷಿಯಾದ ಪರಿಸ್ಥಿತಿಯನ್ನು ಖುದ್ದು ಪರಿಶೀಲಿಸಲು ನೆಹರೂರವರಿಗೆ ಡಾ|| ಸೂಕರ್ನೋರವರಿಂದ ಆಹ್ವಾನ ಬಂದಿತ್ತು ಆದರೆ ಭಾರತದ ಸರ್ಕಾರದವರು ಸಂಚಾರ ಸೌಲಭ್ಯ ಕಲ್ಪಿಸಲು ಅವಕಾಶವಿಲ್ಲವೆಂದು ನೆಹರೂರವರಿಗೆ ತಿಳಿಸಿದ್ದಾರೆ

ಬೆಂಗಳೂರು ವಿಮಾನ ಕಾರ್ಖಾನೆಯಲ್ಲಿದ್ದ ೧೩,೦೦೦ ಕೆಲಸಗಾರರ ಪೈಕಿ ಈಗಾಗಲೆ ೧೫೦೦ ಜನರನ್ನು ಕೆಲಸದಿಂದ ತೆಗೆಯಲಾಗಿದೆಯೆಂದೂ ಸಂದರ್ಭಾನುಸಾರ ಉಳಿದ ನೌಕರರ ಸಂಬಳದಲ್ಲಿಯೂ ಖೋತಾ ಮಾಡಲಾಗುವುದೆಂದೂ ತಿಳಿದುಬರುತ್ತದೆ

ಭಾರತ ಸೈನ್ಯದಿಂದ ೧೦೦೦೦ ಜನಕ್ಕೆ ನಿವೃತ್ತಿ

ಇದೇ ಸೆಪ್ಟೆಂಬರ್ ಅಂತ್ಯದ ವೇಳೆಗೆ ಸುಮಾರು ೧೦,೦೦೦ ಅಧಿಕಾರಿಗಳನ್ನೂ, ಸಿಪಾಯಿಗಳನ್ನೂ ಭಾರತ ಸೈನ್ಯದಿಂದ "ಎ" ದರ್ಜೆಯ ಯೋಜನೆಯ ಪ್ರಕಾರ ನಿವೃತ್ತಿ ಮಾಡಲಾಯಿತೆಂದು ತಿಳಿದುಬರುತ್ತದೆ

ಉಲ್ಲನ್ ಹತೋಟಿ ಆಜ್ಞೆ

ಮೈಸೂರು ಸರ್ಕಾರದವರು ಉಲ್ಲನ್ ಹತೋಟಿ ಆಜ್ಞೆಯನ್ನು ಹೊರಡಿಸಿ ಒಂದು ವರ್ಷಕ್ಕೆ ಒಬ್ಬ ಮನುಷ್ಯನಿಗೆ ಯಾವ ಯಾವ ದರ್ಜೆಯ ಉಣ್ಣೆಯ ಬಟ್ಟೆಯನ್ನು ಎಷ್ಟೆಷ್ಟು ಮಾರಬಹುದೆಂಬುದನ್ನು ನಿಷ್ಕರ್ಷೆ ಮಾಡಿರುವರು.

ತಿಮ್ಮಾರೆಡ್ಡಿಯವರ ಅಪೀಲು ವಜಾ

ತಮ್ಮ ಬಂಧನದ ವಿಚಾರದಲ್ಲಿ ಮೈಸೂರು ಕಾಂಗ್ರೆಸ್ ನಾಯಕರಾದ ಶ್ರೀ ಎನ್. ಸಿ ತಿಮ್ಮಾರೆಡ್ಡಿಯವರು ಮೈಸೂರು ಹೈಕೋರ್ಟಿನಲ್ಲಿ ಅಪೀಲನ್ನು ದಾಖಲು ಮಾಡಿದ್ದರಷ್ಟೆ! ೯ ನೆಯ ತಾ|| ದಿನ ಜಸ್ಟಿಸ್ ವೆಂಕಟರಂಗಯ್ಯಂಗಾರ್ ಮತ್ತು ಜಸ್ಟಿಸ್ ಮೇದಪ್ಪನವರು ತೀರ್ಪಿತ್ತು ಶ್ರೀ ತಿಮ್ಮಾರೆಡ್ಡಿಯವರ ಅಪೀಲು ಅರ್ಜಿಯನ್ನು ವಜಾಮಾಡಿದ್ದಾರೆ.

ಶ್ರೀ ಜಯಚಾಮರಾಜೇಂದ್ರ ವೃತ್ತಿಶಿಕ್ಷಣಶಾಲೆ

ಬೆಂಗಳೂರು ವಿಮಾನ ಕಾರ್ಖಾನೆಯ ಏರ್ ಮಾರ್ಷಲ್ ಮಿ|| ಹಿಗ್ಗಿನ್ಸ್‌ರವರು ಶ್ರೀ ಜಯಚಾಮರಾಜೇಂದ್ರ ವೃತ್ತಿಶಿಕ್ಷಣಶಾಲೆಗೆ ಭೇಟಿಯಿತ್ತು ಅಲ್ಲಿ ನಡೆಯುವ ಕೆಲಸಗಳನ್ನು ನೋಡಿ ಪ್ರಶಂಸಿಸಿದರು. ಇದು ಲಂಡನ್ನಿನ ಸಿಟಿ ಗಿಲ್ಡ್ ಮಾದರಿಯಂತೆಯೇ ಇರುವುದೆಂದು ಹೇಳಿ ಡಾ|| ಸರ್. ಎಂ ವಿಶ್ವೇಶ್ವರಯ್ಯನವರನ್ನು ಕೊಂಡಾಡಿದರು.

ಜೇನು ನೊಣಗಳ ಕಾಟ

ರಾಜಧಾನಿಯ ಓರಿಯಂಟಲ್ ಲೈಬ್ರರಿಯ ಗೋಡೆಯಲ್ಲಿ ಕಟ್ಟಿದ್ದ ಜೇನುಗೂಡೊಂದನ್ನು ಒಂದು ಪಾರಿವಾಳವು ಕುಕ್ಕಿದ್ದರಿಂದ ಜೇನುನೊಣಗಳು ಗೂಡಿನಿಂದ ಹೊರಬಿದ್ದು ಪಕ್ಕದಲ್ಲಿಯೇ ಟಾಂಗಾಗಾಡಿ ನಡೆಸುತ್ತಿದ್ದ ಮನುಷ್ಯನೊಬ್ಬನನ್ನು ಮುತ್ತಿಕೊಂಡು ಆತನನ್ನೂ ಕುದುರೆಯನ್ನೂ ಸಹ ಕಚ್ಚಿ ಗಾಯಪಡಿಸಿದುವು ಸದರಿಯವನನ್ನು ಕೂಡಲೆ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಚಿಕಿತ್ಸೆಗೆ ಒಯ್ಯಲಾಗಿದೆ ಕುದುರೆಗೂ ಚಿಕಿತ್ಸೆ ನಡೆಸುತ್ತಿರುವರು

ಭಾರತದಲ್ಲೆಲ್ಲ ಅತ್ಯಂತ ಭಾರಿ ವಿಮಾನ ನಿಲ್ದಾಣ

ಬೊಂಬಾಯಿಯನ್ನು ಭಾರತದಲ್ಲೆಲ್ಲ ಅತ್ಯಂತ ಭಾರಿ ವಿಮಾನ ನಿಲ್ದಾಣವನ್ನಾಗಿ ಪರಿವರ್ತಿಸಿ, ಆ ಮಾರ್ಗವಾಗಿ ಇಂಗ್ಲೆಂಡ್-ಆಸ್ಟ್ರೇಲಿಯಾ ವಿಮಾನ ಪ್ರಯಾಣ ಸೌಕರ್ಯವನ್ನು ವ್ಯವಸ್ಥಿಸುವ ಆಲೋಚನೆ ನಡೆಯುತ್ತಿದೆ ಬೊಂಬಾಯಿ ಮತ್ತು ದೆಹಲಿಗಳಲ್ಲಿ ಸೂಪರ್ ವಿಮಾನ ನಿಲ್ದಾಣಗಳೇರ್ಪಡುತ್ತವೆ ಇದಲ್ಲದೆ ಇನ್ನೂ ೧೦೦ ವಿಮಾನ ನಿಲ್ದಾಣಗಳನ್ನೇರ್ಪಡಿಸಬೇಕೆಂಬ ಆಲೋಚನೆಯೂ ಇದೆ ಭಾರತ ಸರ್ಕಾರದ ಯುದ್ಧಾನಂತರದ ಯೋಜನೆಗಳಲ್ಲಿ ಇದೂ ಒಂದೆಂದು ಹೇಳಲಾಗಿದೆ

ಜಪಾನ್ ಚಕ್ರವರ್ತಿಗಳ ದಾನ

ಜಪಾನಿನ ಜನಗಳಿಗೆ ಆಹಾರ ಸಾಮಗ್ರಿಗಳನ್ನು ಹೊರಗಿನಿಂದ ತರಿಸಲು ಜಪಾನ್ ಚಕ್ರವರ್ತಿಗಳು ತಮ್ಮ ಲಲಿತ ಕಲಾ ವಸ್ತುಗಳನ್ನೂ ಚಕ್ರವರ್ತಿನಿಯವರು ತಮ್ಮ ಒಡವೆಗಳನ್ನೂ ಸಹ ಕೊಟ್ಟಿದ್ದಾರೆ

ಸುಭಾಷರ ತುಲಾಭಾರ

೧೯೪೫ನೆಯ ಜನವರಿ ತಿಂಗಳಿನಲ್ಲಿ ಸುಭಾಷ್ ಚಂದ್ರಬೋಸರ ಸ್ವರ್ಣ ತುಲಾಭಾರ ಉತ್ಸವವು ನಡೆದು ಅದರಿಂದ ಒದಗಿದ ಚಿನ್ನದಿಂದಲೇ ಆಗ್ನೇಯ ಏಷ್ಯಾದಲ್ಲಿ ರಾಷ್ಟ್ರೀಯ ಬ್ಯಾಂಕನ್ನು ಸ್ಥಾಪಿಸಲಾಯಿತೆಂದು ಜಬ್ಬಲ್ಪುರದಿಂದ ಬಿಡುಗಡೆಯಾಗಿರುವ 'ಫೌಜಿನ ಸಿಪಾಯಿಗಳು ತಿಳಿಸಿದ್ದಾರೆ.

ಹಾಹಾರವರಿಗೆ ಮರಣದಂಡನೆ

ಜರ್ಮನಿಯಿಂದ ಬ್ರಿಟನ್ನಿನ ವಿರುದ್ಧ ಪ್ರಚಾರ ಮಾಡುತ್ತಿದ್ದ ಲಾರ್ಡ್ ಹಾಹಾರವರು ರಾಜದ್ರೋಹ ಮಾಡಿದರೆಂದು ಬ್ರಿಟಿಷ್ ಕೋರ್ಟಿನಲ್ಲಿ ವಿಧಿಸಿದ್ದ ಮರಣ ದಂಡನೆಯ ಮೇಲೆ ಅಪೀಲು ಮಾಡಿದ್ದರು ಅಪೀಲು ಕೋರ್ಟಿನಲ್ಲಿ ಅವರ ಅರ್ಜಿಯು ತಿರಸ್ಕರಿಸಲ್ಪಟ್ಟಿತು

ಮೋಸದ ಆಪಾದನೆ ಮೇಲೆ ರಾಜರಿಗೆ ಶಿಕ್ಷೆ

ಉಪಯೋಗಿಸಲ್ಪಟ್ಟ ೪ ಟಿಕೇಟುಗಳ ಮೇಲೆ ಹಣ ವಾಪಸು ಪಡೆಯಲೆತ್ನಿಸಿದರೆಂದು ಬೈಪುರವಾಡಾ ರಾಜರಾದ ಥಾಕೂರ್ ರಾಜೇಂದ್ರ ಬಹದ್ದೂರ್ ಸಿಂಗರಿಗೆ ರೈಲ್ವೆ ಮ್ಯಾಜಿಸ್ಟ್ರೇಟರು ೩ ತಿಂಗಳ ಸಜಾ ೫೦೦ ರೂ. ಜುಲ್ಮಾನೆ ಶಿಕ್ಷೆ ವಿಧಿಸಿದ್ದಾರೆ

ಜಪಾನ್ ಸರ್ಕಾರದ ಮನವಿ

ಜಪಾನಿನಲ್ಲಿ ಆಹಾರ ಕ್ಷಾಮ ಸಂಭವಿಸುವ ಸೂಚನೆ ಇರುವುದರಿಂದ ಅಲ್ಲಿ ಜಬಟ್ಸು ಎಂಬ ಸುಪ್ರಸಿದ್ಧ ವ್ಯಾಪಾರ ಸಂಸ್ಥೆಗೂ ಮತ್ತು ಇತರ ಐಶ್ವರ್ಯವಂತರಿಗೂ ತಮ್ಮ ಸಂಪತ್ತನ್ನು ರಾಷ್ಟ್ರಕ್ಕಾಗಿ ಕೊಡಿರೆಂದು ಜಪಾನೀ ಮಂತ್ರಿಮಂಡಲ ಮನವಿ ಮಾಡಿದೆ

ಆಜಾದ್ ಫೌಜ್ ವಿಚಾರಣೆಗೆ ಜಪಾನಿ ಸಾಕ್ಷಿಗಳು

ಭಾರತದಲ್ಲೀಗ ನಡೆಯುತ್ತಿರುವ ಆಜಾದ್ ಹಿಂದ್ ಫೌಜಿನವರ ವಿಚಾರಣೆಯಲ್ಲಿ ಸಾಕ್ಷಿ ಹೇಳಲು ಜಪಾನಿನ ಮಾಜಿ ಉಪಸಚಿವರುಗಳಾದ ಮಾಟ್ಸೋ, ಸವಾಕೂರವರ ಜೊತೆಗೆ ಮೇಜರ್-ಜನರಲ್ ಕಟಕೂರ, ಜನರಲ್ ಇಸಾಕುರೋ, ಲೆ|| ಕರ್ನಲ್ ಫೂಜಿವಾರಾರವರೂ, ಎಸ್ ಎ ಅಯ್ಯರ್ ಎಂಬವರೂ ಬರುತ್ತಾರೆ ಇವರೆಲ್ಲ ನವಂಬರ್ ೧೩ನೆಯ ತಾರೀಖಿನ ವೇಳೆಗೆ ಜಪಾನಿನಿಂದ ಪ್ರಯಾಣ ಮಾಡುತ್ತಾರೆಂದು ಹೇಳಲಾಗಿದೆ

ಈವಾಬ್ರೌನಳ ಮಗನ ಪತ್ತೆ ಪ್ರಯತ್ನ

ಹಿಟ್ಲರನು ಮದುವೆಯಾಗಿದ್ದನೆಂದು ಹೇಳಲಾಗಿರುವ ಈವಾಬ್ರೌನಳ ೯ ವರ್ಷ ವಯಸ್ಸಿನ ಮಗನೊಬ್ಬನು ಎಲ್ಲಿದ್ದಾನೋ ಹುಡುಕಬೇಕೆಂದು ರಷ್ಯನರು ಈಗ ಶೋಧನಮಾಡಲು ತೊಡಗಿದ್ದಾರೆ ಈ ಬಾಲಕನು ಈವಾ ಮಗನಾಗಿದ್ದರೂ ಅವನು ಹಿಟ್ಲರ ಮಗನೆಂದು ಹೇಳಲು ಏನೂ ಆಧಾರವಿಲ್ಲವೆಂದು ಹೇಳುತ್ತಿದ್ದಾರೆ ಆ ಹುಡುಗನ ಭಾವಚಿತ್ರವು ಅವರಲ್ಲಿದೆ ಮ್ಯೂನಿಚ್‌ನಲ್ಲಿರಬೇಕೆಂದು ಸಂದೇಹಪಡುತ್ತಿದ್ದಾರೆ.

ಇಂಗ್ಲೆಂಡಿನಲ್ಲಿ ಕ್ರೂರಕೃತ್ಯಗಳು

ಇಂಗ್ಲೆಂಡಿನಲ್ಲಿ ಕ್ರೂರಕೃತ್ಯಗಳು ಅತಿ ಹೆಚ್ಚಾಗುತ್ತಿವೆಯೆಂದು ಸ್ಕಾಟ್‌ಲೆಂಡ್ ಯಾರ್ಡಿನವರು ತಿಳಿಸಿದ್ದಾರೆ ಕಳೆದ ಸೆಪ್ಟೆಂಬರ್ ತಿಂಗಳಿನಲ್ಲಿ ೧೦ ಸಾವಿರ ಕೇಸುಗಳು ವರದಿಯಾಗಿವೆಯಂತೆ! ೧೫ ದಿವಸಗಳಲ್ಲಿ ೬ ಕೊಲೆಗಳು ನಡೆದಿವೆ ಮನೆಗಳಲ್ಲಿ ಕಳ್ಳತನ ಮತ್ತು ಲೂಟಿಗಳು ನಡೆಯುತ್ತಿವೆಯಂತೆ! ಇವಕ್ಕೆ ಪೋಲೀಸ್ ಪಡೆಯವರ ಅಭಾವವೇ ಕಾರಣವೆಂದು ಹೇಳಲಾಗಿದೆ. ಯುದ್ಧದಿಂದ ಹಿಂತಿರುಗಿದ ಸೈನಿಕರು ತಮ್ಮ ಪಿಸ್ತೂಲುಗಳನ್ನೂ ಗುಂಡುಮದ್ದುಗಳನ್ನೂ ಮಾರುತ್ತಿದ್ದಾರಂತೆ!

ಕುರ್ಡಿಸ್ಥಾನದಲ್ಲಿ ದಂಗೆ

ಪ್ರಜಾಪ್ರಭುತ್ವ ಸರ್ಕಾರದ ಸ್ಥಾಪನೆಯಾಗಬೇಕೆಂದು ಕುರ್ಡಿಸ್ಥಾನದವರು ದಂಗೆಯೆದ್ದಿರುವರಂತೆ! ಇವರಿಗೆ ಶಸ್ತ್ರಾಸ್ತ್ರಗಳ ಬೆಂಬಲವೂ ಇರುವುದಂತೆ! ಇವರ ಚಳುವಳಿಯು ಸುವ್ಯವಸ್ಥೆಯಿಂದ ಕೂಡಿದ್ದು ಇರಾಕ್‌ನಿಂದ ಟರ್ಕಿಯವರೆಗೂ ಹರಡಿದೆಯೆಂದೂ, ಇರಾನಿಗೂ ಹರಡುವ ಸಂಭವವಿದೆಯೆಂದೂ ಹೇಳಲಾಗಿದೆ ಇದಕ್ಕಾಗಿ ಕಕೇಷಿಯ ಬಳಿ ಟರ್ಕಿಯವರು ಕೆಲವು ಸೈನ್ಯ ಪಡೆಗಳನ್ನಿಟ್ಟಿರುವರು. ಇದು ರಷ್ಯ ಗಡಿಗೆ ಕೇವಲ ಸಮೀಪವಾಗಿರುವುದರಿಂದ ಟರ್ಕಿ ಮತ್ತು ರಷ್ಯದ ನಡುವೆ ಭಿನ್ನಾಭಿಪ್ರಾಯವುಂಟಾಗಿದೆ ಈ ಕುರ್ಡಿಸ್ಥಾನ್ ಚಳವಳಿಯನ್ನು ಲಂಡನ್ನಿನಲ್ಲಿ ಕುತೂಹಲದಿಂದ ನಿರೀಕ್ಷಿಸುತ್ತಿರಲಾಗಿದೆ.

ಲಿಬಿಯಾದಲ್ಲಿ ದಂಗೆ

ಪಶ್ಚಿಮ ಲಿಬಿಯಾದಲ್ಲಿನ ಟ್ರಿಪೋಲಿಟೇನಿಯಾದಲ್ಲಿ ಯೆಹೂದ್ಯರಿಗೆ ವಿರೋಧವಾಗಿ ಅರಬ್ಬೀಯರು ದಂಗೆಯೆದ್ದಿದ್ದಾರೆ. ತತ್ಪರಿಣಾಮವಾಗಿ ೭೪ ಜನ ಯೆಹೂದಿಯರೂ ಒಬ್ಬ ಅರಬ್ಬೀಯನೂ ಸತ್ತಿದ್ದಾರೆ ದಂಗೆಯನ್ನಡಗಿಸುವ ಸಲುವಾಗಿ ಬ್ರಿಟಿಷರು ಆಡಳಿತವನ್ನು ವಹಿಸಿಕೊಂಡಿರುವರು ಲೂಟಿಮಾಡುವ ಯಾರನ್ನೇ ಆಗಲಿ ಗುಂಡಿನಿಂದ ಹೊಡೆದುಹಾಕಲು ಪೋಲೀಸರಿಗೆ ಆಜ್ಞೆಯನ್ನು ಕೊಡಲಾಗಿದೆ ಕೈರೋವಿನಲ್ಲಿರುವ ಬ್ರಿಟಿಷ್ ವಾರ್ತಾಮಂತ್ರಿಯವರ ವರದಿಯಂತೆ ಟ್ರಿಪೋಲಿಟೇನಿಯಾದಲ್ಲಿ ಕರ್ಫ್ಯೂ ಆಜ್ಞೆಯನ್ನು ಜಾರಿಗೆ ತರಲಾಗಿದೆ ದೊಣ್ಣೆಗಳನ್ನಾಗಲೀ ಶಸ್ತ್ರಾಸ್ತ್ರಗಳನ್ನಾಗಲೀ ಯಾರೂ ಹಿಡಿಯಕೂಡದೆಂದು ನಿಷೇಧಾಜ್ಞೆಯನ್ನು ಕೊಡಲಾಗಿದೆ ಯೆಹೂದಿಯರೂ ಅರಬ್ಬೀಯರೂ ಹಿಂದಿನಿಂದಲೂ ಸ್ನೇಹಪರರಾಗಿಯೇ ಇದ್ದರೆಂದೂ ದಂಗೆಗೆ ಅವಕಾಶವಾಗಿರುವುದು ಇದೇ ಮೊದಲೆಂದೂ ಹೇಳಲಾಗಿದೆ

ಸುರಬಾಯಾ ಆಕ್ರಮಿಸಲು ಬ್ರಿಟಿಷರ ನಿರ್ಧಾರ

ಸುರಬಾಯಾವನ್ನೂ ಪ್ರಮುಖವಾದ ಇತರ ಪ್ರದೇಶಗಳನ್ನೂ ಬ್ರಿಟಿಷ್ ಪಡೆಗಳು ತಮ್ಮಧೀನಪಡಿಸಿಕೊಳ್ಳಲಿವೆಯೆಂದು ಬ್ರಿಟಿಷ್ ಸೇನಾನಿ ಮೇಜರ್-ಜನರಲ್ ಮ್ಯಾನ್‌ಸರ್‌ರವರು ಸುರಬಾಯಾದ ಇಂಡೋನೇಷಿಯನ್ ಗವರ್ನರಿಗೆ ಎಚ್ಚರಿಕೆ ಕೊಟ್ಟಿದ್ದಾರೆ ತತ್ಫಲವಾಗಿ ಸುರಬಾಯಾದಲ್ಲಿ ಉದ್ರಿಕ್ತವಾತಾವರಣ ಏರ್ಪಟ್ಟಿದೆ 'ಡಚ್ ಸೈನಿಕರನೇಕರು ಸುರಬಾಯಾಕ್ಕೆ ಬಂದಿದ್ದಾರೆ, ಅವರನ್ನೆದುರಿಸದಿರಬೇಡಿ' ಎಂದು ಇಂಡೋನೇಷಿಯರ್‌ರಿಗೆ ಇಂಡೋನೇಷಿಯನ್ ರೇಡಿಯೋ ಎಚ್ಚರಿಸಿದ ಈ ವರದಿಯನ್ನು ನಿರಾಕರಿಸುವಂತೆ ಬ್ರಿಟಿಷ್ ಸೇನಾನಿ ಇಂಡೋನೇಷಿಯನ್‌ರಿಗೆ ಆಜ್ಞಾಪಿಸಿದರು ಆದರಿದುವರೆಗೆ ಅವರು ಆಜ್ಞೆ ಪಾಲಿಸಿದರೋ ಇಲ್ಲವೋ ಗೊತ್ತಾಗಿಲ್ಲ ಬ್ರಿಟಿಷ್ ಸೇನೆ ಈ ವರೆಗೆ ಸುರಬಾಯಾ ಬಂದರ್ ಪ್ರದೇಶದಲ್ಲೇ ಇತ್ತು ಈಗ ಆ ಸೇನೆಯು ಬಂದಿಗಳನ್ನು ರಕ್ಷಿಸಲೂ ಜಪಾನಿಗಳನ್ನು ನಿರಾಯುಧಗೊಳಿಸಲೂ ನಗರವನ್ನಾಕ್ರಮಿಸುವುದಾಗಿ ತಿಳಿಸಲಾಗಿದೆ

ಆಟಂ ರಹಸ್ಯವನ್ನು ಹೊರಗೆಡಹ ಬಾರದು

ಶ್ರೀ ಚರ್ಚಿಲ್ಲರು ಕಾಮನ್ಸ್ ಸಭೆಯಲ್ಲಿ ಮಾತನಾಡುತ್ತ "ಒಳಾಡಳಿತ ವಿಚಾರದಲ್ಲಿ ನಮ್ಮಲ್ಲಿ ಅಭಿಪ್ರಾಯಭಿನ್ನತೆಗಳಿದ್ದರೂ ವಿದೇಶಾಂಗ ವ್ಯವಹಾರದಲ್ಲಿ ನಾವೆಲ್ಲ ಒಗ್ಗಟ್ಟಾಗಿದ್ದೇವೆ ರಷ್ಯದೊಡನೆ ಈಗ ಇರುವ ಮೈತ್ರಿಯನ್ನು ಉಳಿಸಿಕೊಂಡು ಅಭಿವೃದ್ಧಿಪಡಿಸಿಕೊಳ್ಳಬೇಕು. ಪ್ರಧಾನಿ ಅಟ್ಲಿಯವರು ತಮ್ಮ ಪಂಗಡದ ಪರವಾಗಿ ಮಾತ್ರವಲ್ಲದೆ ನಮ್ಮೆಲ್ಲ ಪಂಗಡಗಳ ಪರವಾಗಿ ಟ್ರೂಮನ್ನರೊಡನೆ ವ್ಯವಹರಿಸಬೇಕು ಎಲ್ಲ ಜನಾಂಗಗಳ ಪ್ರಯೋಜನಾರ್ಥವಾಗಿ ಆಟಂ ರಹಸ್ಯವನ್ನು ತಮ್ಮ ರಹಸ್ಯವೆಂದೇ ಪರಿಗಣಿಸಬೇಕೆಂಬ ಅವರ ನೀತಿಯನ್ನು ಬ್ರಿಟನ್, ಕೆನಡ ಅಮೆರಿಕಗಳೊಪ್ಪಲೇಬೇಕು ಯುದ್ಧ ನಡೆಯುತ್ತಿದ್ದಾಗ ನಾವು ಅನೇಕ ರಹಸ್ಯಗಳನ್ನು ರಷ್ಯನರಿಗೆ ಬಿಟ್ಟು ಕೊಟ್ಟೆವು ರೇಡಿಯೋ ಲೊಕೇಟರ್ ರಹಸ್ಯವನ್ನೂ ಸಹ ಅವರಿಗೆ ತಿಳಿಸಿದ್ದೇವೆ ಅಮೆರಿಕದ ಶಸ್ತ್ರಾಗಾರಗಳನ್ನು ಪರಿಶೀಲಿಸಲು ರಷ್ಯ ಅಪೇಕ್ಷಿಸುತ್ತಿರುವಾಗ್ಯ ರಷ್ಯನ್ ಶಸ್ತ್ರಾಗಾರಗಳನ್ನು ಪರಿಶೀಲಿಸಲು ಅಮೆರಿಕನರಿಗೆ ಸೌಲಭ್ಯಕೊಡಲು ರಷ್ಯ ನಿರಾಕರಿಸುತ್ತಿದೆ ರಷ್ಯಕ್ಕೆ ಆಟಂ ರಹಸ್ಯ ಬಿಟ್ಟು ಕೊಡಬೇಕಾದಂಥ ನ್ಯಾಯವೇನೂ ಇಲ್ಲ ನಮ್ಮ ಅಳಿವು ಉಳಿವುಗಳಿಗೆ ಇರುವ ಕೊನೆಯ ಅವಕಾಶವೇ ಇದು ನಮ್ಮ ರಕ್ಷಣೆಗೂ ಸಹ ಇದೇ ಕೊನೆಯ ಅವಕಾಶವಾಗಿರಬಹುದು. ಎಂದು ಹೇಳಿದರು

ಆಟಂ ಬಾಂಬಿನ ರಹಸ್ಯವನ್ನು ಯಾವ ದೇಶವೇ ಆಗಲೀ ಗುಪ್ತವಾಗಿಡಕೂಡದೆಂದು ರಷ್ಯಾ ಮಂತ್ರಿಗಳಾದ ಮಾಲಟೋವ್‌ರವರು ಪ್ರತಿಭಟಿಸಿದ್ದಾರೆ.

ರಾಜಧಾನಿಯಲ್ಲಿ ಕಾಲರಾ ತಡೆಯಲು ಎಚ್ಚರಿಕೆ

ಶ್ರೀರಂಗಪಟ್ಟಣದ ಮುನಿಸಿಪಲ್ ಸರಹದ್ದಿನಲ್ಲಿರುವ ಗಂಜಾಂ ಪ್ರದೇಶದಲ್ಲಿ ಕಾಲರಾ ವ್ಯಾಧಿಯು ಪುನಃ ತಲೆದೋರಿರುವುದರಿಂದ ಸದರೀ ವ್ಯಾಧಿಯನ್ನು ತಡೆಗಟ್ಟಲು ಅತ್ಯಾವಶ್ಯಕವಾದ ನಿವಾರಣೋಪಾಯಗಳನ್ನು ಮೈಸೂರು ಮುನಿಸಿಪಲ್ ಹೆಲ್ತ್ ಆಫೀಸರವರು ತೆಗೆದುಕೊಳ್ಳುತ್ತಿದ್ದಾರೆ. ಮಹಾಜನಗಳು ಸಹಕರಿಸಬೇಕಾಗಿ ಕೋರಿದೆ. ಮುಖ್ಯವಾಗಿ ಶ್ರೀರಂಗಪಟ್ಟಣ ಮತ್ತು ಫ್ರೆಂಚ್‌ರಾಕ್ಸ್ ತಾಲ್ಲೂಕುಗಳ ಹಳ್ಳಿಗಳಿಂದ ಈ ವ್ಯಾಧಿಯು ಮೈಸೂರು ಪಟ್ಟಣಕ್ಕೂ ಹರಡಬಹುದಾಗಿದೆ. ಅದಕಾರಣ ಮಹಾಜನಗಳು ಆ ಪ್ರದೇಶಗಳಿಂದ ಬರತಕ್ಕ ಹಾಲು ಮೊಸರು ಬೆಣ್ಣೆ ಮೊದಲಾದ ಪದಾರ್ಥಗಳನ್ನು ಉಪಯೋಗಿಸಬಾರದು ಈ ಪದಾರ್ಥಗಳನ್ನು ರೈಲಿನಲ್ಲಿ ತರಲು ಆಸ್ಪದ ಕೊಡದಂತೆ ರೈಲ್ವೆ ಅಧಿಕಾರಿಗಳಿಗೆ ತಿಳಿಸಿರುತ್ತೆ ಈ ಪದಾರ್ಥಗಳು ಸಿಟಿಯೊಳಕ್ಕೆ ಬಂದರೆ ಅವುಗಳನ್ನು ನಾಶಪಡಿಸಲಾಗುತ್ತದೆ ಈ ಬಗ್ಗೆ ಸದರೀ ಮಾಲೀಕರುಗಳಿಗೆ ಪರಿಹಾರವೇನೂ ಸಿಕ್ಕುವುದಿಲ್ಲ ಮೇಲ್ಕಂಡ ಪ್ರದೇಶಗಳಿಂದ ಬರತಕ್ಕ ತರಕಾರಿ, ಸೊಪ್ಪು, ಹಣ್ಣು ವಗೈರೆ ಪದಾರ್ಥಗಳನ್ನು ಟೋಲ್‌ಗೇಟಿನಲ್ಲೂ ಮತ್ತು ಮಾರ್ಕೆಟ್ಟಿನಲ್ಲಿಯೂ ಬ್ಲೀಚಿಂಗ್ ಪೌಡರ್ ಲೋಷನ್ನಿಂದ ತೊಳೆಸಲು ಏರ್ಪಡಿಸಿರುತ್ತೆ ಮಹಾಜನಗಳು ನಲ್ಲಿ ನೀರಲ್ಲದ ಇತರ ನೀರನ್ನು ಕುಡಿಯಲು ಉಪಯೋಗಿಸಬಾರದು ಹಾಗೆ ಅನಿವಾರ್ಯ ಸಂದರ್ಭದಲ್ಲಿ ಸದರೀ ನೀರನ್ನು ಕುದಿಸಿ ಆರಿಸಿ ಕುಡಿಯಬೇಕು ಬಾವಿಗಳನ್ನೆಲ್ಲಾ ಕ್ಲೋರಿನೇಟ್ ಮಾಡಲು ಸ್ಯಾನಿಟರಿ ಇನ್‌ಸ್ಪೆಕ್ಟರುಗಳಿಗೆ ಆಜ್ಞೆಮಾಡಿರುತ್ತದೆ ಆ ರೀತಿ ಕ್ಲೋರಿನೇಟ್ ಮಾಡಲು ಮಹಾಜನಗಳು ಸಹಕರಿಸಬೇಕಾಗಿ ಕೋರಿದೆ ರಸ್ತೆ ಪಕ್ಕದಲ್ಲಿ ಮಾರಾಟವಾಗಬಹುದಾದ ಕುಯ್ದ ಹಣ್ಣುಗಳನ್ನಾಗಲೀ, ತಿಂಡಿಗಳನ್ನಾಗಲೀ ತಿನ್ನಕೂಡದು ಆಕಸ್ಮಾತ್ತಾಗಿ ಕಾಲರಾ ವ್ಯಾಧಿಯು ಎಲ್ಲಿಯಾದರೂ ತಲೆದೋರಿದಲ್ಲಿ ಕೊಡಲೇ ಹೆಲ್ತ್ ಆಫೀಸಿಗೆ ವರ್ತಮಾನ ಕೊಡುವುದರ ಮೂಲಕ ಮುಂದಿನ ನಡವಳಿಕೆ ಬಗ್ಗೆ ಸಹಕರಿಸಬೇಕು ಎಲ್ಲಾ ಹೋಟೇಲು ಮತ್ತು ರೆಸ್ಟೋರೆಂಟ್ ಮಾಲೀಕರೂ ಸಹ ತಮ್ಮ ತಮ್ಮ ಹೋಟೆಲುಗಳಲ್ಲಿ ಬೈಲಾ ರೂಲ್ಸು ಪ್ರಕಾರ ಗೊತ್ತುಮಾಡಿರುವ ನಿಯಮಗಳನ್ನೆಲ್ಲಾ ಕ್ರಮಬದ್ಧವಾಗಿ ಅನುಸರಿಸುವುದರ ಮೂಲಕ ಈ ವ್ಯಾಧಿಯನ್ನು ತಡೆಗಟ್ಟಲು ಸಹಕರಿಸಬೇಕಾಗಿ ಕೋರಿದೆ ಕಾಲರಾ ತಡೆಗಟ್ಟಲು ಕಾಲರಾ ಇನಾಕ್ಯುಲೇಷನನ್ನು ಮುನಿಸಿಪಲ್ ಆಫೀಸಿನಲ್ಲಿ ಪ್ರತಿ ಸಾಯಂಕಾಲವೂ ಮಾಡುವುದಲ್ಲದೆ, ಎಲ್ಲಾ ಮೊಹಲ್ಲಾ ಆಸ್ಪತ್ರೆಗಳಲ್ಲಿಯೂ ನಡೆಸಲಾಗುತ್ತೆ ಸ್ಪೆಷಲ್‌ಡ್ಯೂಟಿ ಡಾಕ್ಟರ್‌ರವರೂ ಸಹ ಉಚಿತವಾಗಿ ಎಲ್ಲಾ ಕಡೆಯಲ್ಲಿಯೂ ನಡೆಸುತ್ತಾರೆ ಮಹಾಜನಗಳು ಇನಾಕ್ಯುಲೇಷನ್ ಮಾಡಿಸಿಕೊಳ್ಳಬೇಕಾಗಿ ಕೋರಿದೆ.

(ಸಹಿ) ಆರ್ ರಾಮಚಂದ್ರರಾವ್ ಬ್ರಾಂಥೋರೆ,
ಪ್ರೆಸಿಡೆಂಟ್.

ಸ್ವೀಕಾರ

ಧಾರವಾಡ ಡಿ|| ಪರ್ಬಾಪುರ ಗ್ರಾಮದಲ್ಲಿ ನೆರವೇರಿದ ಶ್ರೀ ರೇಣುಕವಿಜಯಪುರಾಣಮಹೋತ್ಸವ ಮತ್ತು ಶ್ರೀ ಮುಕ್ತಿಮಂದಿರದಲ್ಲಿ ನೆರವೇರಿದ ವಿಜಯದಶಮೀ ಮಹೋತ್ಸವ ನೂತನ ಪಾಠಶಾಲಾ ಮಂದಿರದ ಪ್ರವೇಶ ಕೂಪಪ್ರತಿಷ್ಠಾದಿಗಳ ಸಮಯದಲ್ಲಿ ಬೆಂಗಳೂರು ಮಹಂತಿನಮಠಾಧ್ಯಕ್ಷರಾದ ಶ್ರೀ| ಷ|| ಬ್ರ|| ಗಂಗಾಧರಶಿವಾಚಾರ್ಯಸ್ವಾಮಿಗಳವರ ಅಪ್ಪಣೆಯ ಮೇರೆಗೆ ಪ್ರಭಾಪ್ರೋತ್ಸಾಹನೆಗೋಸ್ಕರ ತೆಗೆಯಿಸಿದ 5 ರೂಪಾಯಿಗಳು ವೇ|| ಪಿ ಎಂ ಗಂಗಾಧರಶರ್ಮರವರ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜನದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು. ವೀರಶೈವಮತದಲ್ಲಿ ಸದ್ಯಃ ದೊರೆಯುತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು. ಈ ಗ್ರಂಥವು ಈಗ್ಗೆ ಸುಮಾರು ಎರಡುಸಾವಿರ ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು. ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ವಾಚಕರಿಗೆ ವೇದ್ಯವಾಗುವುದು. ವಾಚಕರ ಅನುಕೂಲಕ್ಕಾಗಿ ಬಹುಶ್ರಮವಹಿಸಿ [illegible] ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೬೬೨ ಪುಟಗಳಿಂದ ಕೂಡಿದ್ದು, [illegible] ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ [illegible] ಶ್ರೀಜಗದ್ಗುರುರೇಣುಕಾಚಾರ್ಯರ [illegible] ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ [illegible] ಸೌಂದರ್ಯವು ವರ್ಣನಾತೀತವಾಗಿದೆ. [illegible] ರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೨ ರೂಪಾಯಿ.**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ **ಫೋಟೋ** ಸೈಜು ೨೦ × ೧೪ ಬೆಲೆ ಒಕ್ಕೆ	೦—೬—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦ ಬೆಲೆ	೦—೬—೦
ಪಂಚ ಪೀಠಾಧೀಶರಾದ ಐವರು ಆಚಾರ್ಯರು ಒಂದರಲ್ಲಿಯೇ ಇರುವ **ಫೋಟೋ** ಸೈಜು ೧೪ × ೧೦ ಬೆಲೆ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ **ಫೋಟೋ** ಸೈಜು ೧೪ × ೧೦ ಬೆಲೆ ಒಕ್ಕೆ	೦—೩—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ **ಫೋಟೋ**	೨—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ **ಪಟ್ಟಾಭಿಷೇಕ ಮಾಡುವ ಫೋಟೋ**	೨—೧—೬
ಶ್ರೀಕಾಶೀಕ್ಷೇತ್ರ ಸಿಂಹಾಸನಾಧೀಶರಾದ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ **ಫೋಟೋ**	೦—೧—೬
[illegible] ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ **ಫೋಟೋ**	೦—೧—೬
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರಿ ಜಗದ್ಗುರುಗಳು ಕಿರೀಟಧಾರಣಮಾಡುವ **ಫೋಟೋ**	೦—೧—೬
[illegible] ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ **ಫೋಟೋ**	೦—೧—೬
[illegible] ಸಿಂಹಾಸನಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ **ಫೋಟೋ**	೦—೧—೬
[illegible] ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ **ಫೋಟೋ**	೦—೧—೬
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕ ಸೈಜು ಒಕ್ಕೆ	೦—೫—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡ ಸೈಜು ಒಕ್ಕೆ	೦—೪—೦
[illegible] ಮಹಾದ್ವಾರದ ಅತ್ಯಂತ ಸುಂದರವಾದ **ಫೋಟೋ** ಒಕ್ಕೆ	೦—೧—೬
[illegible] ಅತ್ಯಂತ ಪ್ರಾಚೀನ ಕಟ್ಟಡದ ಸುಂದರ **ಫೋಟೋ** ಒಕ್ಕೆ	೦—೧—೬
[illegible] ಅತ್ಯಂತ ಸುಂದರವಾದ ಗೋಪುರದ **ಫೋಟೋ** ...	೦—೧—೬
[illegible] ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ **ಫೋಟೋ**	೦—೧—೬
[illegible] ರಂಭಾಪುರಿ ಜಗದ್ಗುರುಗಳ ಪಲ್ಲಕ್ಕಿ ಮಹೋತ್ಸವದ **ಫೋಟೋ**	೦—೧—೬

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೬ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೬ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಳಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ) .	೩ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣಸಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ-ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ- ಚಿಕ್ಕಸೈಜು)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು, ೨ನೆಯ ಆವೃತ್ತಿ)	೧। ರೂ.
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ.
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ.
ಶ್ರೀಕರಭಾಷ್ಯಂ (ಆಕುಸ್ಟ್ರೀ)	೧॥ ರೂ.
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧॥ ರೂ.
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುದು)	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರಸಹಿತ)	೨ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ.
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮುಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ.
A brief life-sketch of Pandit Sri Kashinatha Shastriji (*English*)	**4 As**
The Philosophical Aspect of Virasaivism (*English*) ...	**8 As**
Speeches by Pandit Shri Kashinatha Shastriji (*English*)	**12 As**
लिंगधारणचंद्रिका (संस्कृत)	३ रु.
वीरशैवरत्न (मराठी)	१ रु.
महानारायणोपनिषत् (वीरशैवभाष्य-संस्कृत) ...	१ रु.
सिद्धांतशिखामणि (मूल)	८ आ.
नंदिकेश्वरकारिका (संस्कृत)	२ आ.

ಮ್ಯಾನೇಜರ್— **ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯೇಭ್ಯೋ ನಮಃ ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ. ೪ ಆಣೆ. ಪರಸ್ಥಳದವರಿಗೆ ೩ ರೂ. ವಿ. ಪಿ. ಖರ್ಚು ಸೇರಿ ೩ ರೂ. ೪ ಆಣೆ

ಸಂಪುಟ ೧೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೯ನೇ ನವೆಂಬರ್ ೧೯೪೫ [ಸಂಚಿಕೆ ೨೭

ಶ್ರೀಜಗದ್ಗುರು ವಿಶ್ವಾರಾಧ್ಯಃ ಶರಣಮ್

ಜ್ಞಾನಮಂದಿರದ ನಿಧಿ

ಶ್ರೀ ಕಾಶೀಜಗದ್ಗುರು ವಿಶ್ವಾರಾಧ್ಯಸಿಂಹಾಸನ ಮಹಾ ಮಠದಲ್ಲಿ ಈಗ ಜ್ಞಾನಮಂದಿರವು ನಿರ್ಮಿತವಾಗುತ್ತಿರುವ ಸಮಾಚಾರವು ಪ್ರಸಿದ್ಧವಾಗಿರುವದಷ್ಟೆ! ಈ ಮಹಾ ಗ್ರಂಥಾಲಯದಿಂದ ಮುಂದೆ ಉತ್ತಮಶ್ರೇಣಿಯ ಮಾಸ ಪತ್ರಿಕೆಯೂ ಗ್ರಂಥಗಳೂ ಹೊರಡಲಿವೆ. ಇದರಿಂದ ಸಮಾಜಕ್ಕೆ ದೊಡ್ಡ ಉಪಕಾರವಾಗಲಿದೆ. ೫೦೦ ರಿಂದ ೧೦೦೦ ರೂ. ಗಳ ವರೆಗೆ ಕೊಡುವವರ ನಾಮಗಳೂ ಚಿತ್ರಪಟಗಳೂ ಜ್ಞಾನಮಂದಿರದಲ್ಲಿ ಸ್ಥಾಪಿಸಲ್ಪಡುವುವು. ೧೦೦ ರಿಂದ ಐನೂರರೊಳಗಾಗಿ ಕೊಡುವವರ ನಾಮಗಳು ಎರಡು ಭಾಷೆಯ ಶಿಲಾಶಾಸನದಲ್ಲಿ ಮಾತ್ರ ಉಲ್ಲೇಖಿಸಲ್ಪಡುವುವು. ಈಪ್ರಕಾರವಾಗಿ ಈ ದಾತೃಗಳ ಕೀರ್ತಿಯು ಕಾಶೀಪೀಠದಲ್ಲಿ ಶಾಶ್ವತವಾಗಿಬಿಡುವುದು. (೧೦೦ ರೂ. ಗಳಿಗಿಂತ ಹೆಚ್ಚಾಗಲಿ ೧೦೦ ರೂ. ಗಳಿಗಿಂತ ಕಡಮೆಯಾಗಲಿ ದಾನವನ್ನಂಗೀಕರಿಸುವದಿಲ್ಲ). ಇದರ ಮಹತ್ವವನ್ನರಿತು ಈಗಾಗಲೇ ಈ ಕೆಳಗೆ ಕಂಡ ಮಹನೀಯರು ತಮ್ಮ ತಮ್ಮ ಮಹಾದಾನಗಳನ್ನು ಸಮರ್ಪಿಸಿ ಧನ್ಯರಾಕೃತಾಗಿದ್ದಾರೆ.

೧೦೦ ಶ್ರೀ ವಿರೂಪಾಕ್ಷಪ್ಪಗೌಡರು, ಕುರುಡಿ
೨೫೧ ,, ಕಬ್ಬಿನಮನೆಮಠದ ಸಿದ್ಧಾಂತಿ ಕೊಟ್ರಯ್ಯನವರು, ಹಿರೇಹಡಗಲಿ
೧೦೦ ,, ಎ. ವಿ. ಬಸವಲಿಂಗೇಗೌಡರು ನಂಜಪ್ಪನವರು, ಆಲೂರು
೧೦೦ ,, ಸೂಗನಗೌಡರು, ಗೊಬ್ಬೂರು
೨೦೦ ,, ಒರ್ವ ಗುಪ್ತದಾತೃಗಳು, ಹುಬ್ಬಳ್ಳಿ
೧೦೦ ,, ದುರ್ಗದ ಬಸ್ಸಣ್ಣನವರು, ಹಿಂದೂಪುರ
೧೦೦ ,, ಪುರದಯ್ಯನವರು, ಹಿರೇಮಠ ಮುಳುಗುಂದ

ಇನ್ನೂ ಹುಲಗಿರಿ, ಕರ್ನೂಲ್, ಶಿವಮೂರು, ಸೊಲ್ಲಾಪುರ, ಬೊಂಬಾಯಿ, ರಾಯಚೂರು, ಸಿಕಿಂದ್ರಾಬಾದು ಮುಂತಾದ ನಗರಸ್ಥರಾದ ಉದಾರಚರಿತರು ವಾಗ್ದಾನ ಮಾಡಿದ್ದಾರೆ. ಹಣ ಸೇರಿದ ಮೇಲೆ ಅವರ ನಾಮಗಳನ್ನೂ ಪ್ರಕಟಿಸಲಾಗುವುದು. ಜ್ಞಾನಮಂದಿರದ ಕೆಲಸವು ಅರ್ಧಕ್ಕಿಂತಲೂ ಹೆಚ್ಚಾಗಿ ಮುಗಿಯುತ್ತಿದೆ. ಇಂತಹ ಸದುದ್ಯಮದ ಬಗ್ಗೆ ತಮ್ಮ ತಮ್ಮ ದ್ರವ್ಯವನ್ನು ವಿನಿಯೋಗಮಾಡಲಿರುವ ಭಕ್ತಾತ್ಮರು ಕೂಡಲೇ ಶ್ರೀಜಗದ್ಗುರು..............ಮಹಾಸನ್ನಿಧಿಗೆ ನೇರಾಗಿ ಮನಿಯಾರ್ಡರ್ ಮಾಡಬೇಕಾಗಿ ಕೋರುತ್ತೇನೆ.

ಮೇನೇಜರ್,
ಜಂಗಮವಾಡಿಮಠ, ಬನಾರಸ್ ಸಿಟಿ

ವೈದಿಕ-ಶಾಸ್ತ್ರಿ-ಲೇಖಕರು ಬೇಕು

ಶ್ರೀ ಕಾಶೀಜಗದ್ಗುರು ವಿಶ್ವಾರಾಧ್ಯ ಮಹಾಪೀಠದಲ್ಲಿ ವೇದಾಧ್ಯಾಪನ ನಡೆಸುತ್ತ ಅರ್ಚನೆ ಮಾಡುವುದಕ್ಕೆ ವೈದಿಕಪಂಡಿತರೂ, ಸಿಕಿಂದ್ರಾಬಾದು ಗುರುಕುಲದಲ್ಲಿ ಸಂಸ್ಕೃತ ಪಾಠವನ್ನೂ ತಕ್ಕಮಟ್ಟಿಗೆ ವೇದವನ್ನೂ ಹೇಳುತ್ತ ವ್ಯವಹಾರ ನೋಡುವುದಕ್ಕೆ ಶಾಸ್ತ್ರಿಗಳೂ, ಶ್ರೀ ಮಹಾಸನ್ನಿಧಿಯಲ್ಲಿ ಪತ್ರವ್ಯವಹಾರ ನಡೆಯಿಸಿ ಲೆಕ್ಕಪತ್ರವನ್ನಿಡತಕ್ಕ ಕನ್ನಡ, ಮರಾಠಿ, ಇಂಗ್ಲೀಷು ಬಲ್ಲ ಗುಮಾಸ್ತರೂ, ಜ್ಞಾನಮಂದಿರದ (Library) ಲ್ಲಿ ಪುಸ್ತಕ ಪಾಲನ ಮಾಡತಕ್ಕ ಚನ್ನಾಗಿ ಓದು ಬರಹ ಬಲ್ಲ (Metriculate) ವ್ಯಕ್ತಿಗಳೂ, ಸಂಸ್ಥಾನದ ಅನ್ನಛತ್ರದಲ್ಲಿ ಅಥವಾ ಖಾಸಾ ಸನ್ನಿಧಿಯಲ್ಲಿ ಅಡುಗೆ ಮಾಡುತ್ತ ಸೇವೆಯನ್ನು ಸಲ್ಲಿಸತಕ್ಕ ಆಳುಗಳೂ ಬೇಕಾಗಿದ್ದಾರೆ.

ಇವರಿಗೆಲ್ಲ ವೇತನವನ್ನು ಸರಿಯಾಗಿ ಕೊಡಲಾಗುವುದು. ಇವರು ತಮ್ಮ ತಮ್ಮ ಕಾರ್ಯದಲ್ಲಿ ದಕ್ಷತೆಯುಳ್ಳವರೂ, ಸ್ಥಾಯಿಯಾಗಿ ನಿಲ್ಲತಕ್ಕವರೂ, ಆಗಿರಬೇಕು. ೧೯೪೫ ಡಿಸೆಂಬರ್ ೧೫ನೆಯ ತಾರೀಖಿನೊಳಗಾಗಿ ಅರ್ಜಿಯನ್ನು ಅವಶ್ಯವಾಗಿ ರವಾನಿಸಬೇಕು. ಇಚ್ಛೆಯುಳ್ಳವರು ತಮ್ಮ ವಯಸ್ಸು, ಯೋಗ್ಯತೆ, ಜಾತಿ, ಆರೋಗ್ಯ, ಅನುಭವ, ವಿಳಾಸಗಳೊಂದಿಗೆ ಬರೆಯಬೇಕು. ಆರಿಸಲ್ಪಟ್ಟವರಿಗೆ ಜನವರಿ ೧೫ ನೆಯ ತಾರೀಖಿನೊಳಗೆ ತಿಳಿಸಲಾಗುವುದು.

ಮೇನೇಜರ್
ಜಂಗಮವಾಡಿಮಠ ಬನಾರಸ್ ಸಿಟಿ

ಶಿವಭಜನೋತ್ಸವ

ನಿಜಾಂ ಇಲಾಖಾ ರಾಯಚೂರು ನಗರದಲ್ಲಿ ಭಾದ್ರಪದ ಶುದ್ಧ|| ೯ ದಿವಸ ನರಸಿಂಹನಾರಾಯಣ ಭಜನ ಮಂಡಳಿಯವರು ಒಟ್ಟು ೧೮-೨೦ ಭಜನ ಮೇಳಗಳ ಉತ್ಸವವನ್ನು ಏರ್ಪಡಿಸಿದ್ದರು. ಸಾಮೂಹಿಕ ಭಜನೆಯಾದಮೇಲೆ ಶಿಖರಮಠಾಧ್ಯಕ್ಷರಾದ ಶ್ರೀ ಗುರುಲಿಂಗ ಶಿವಾಚಾರ್ಯಸ್ವಾಮಿಗಳವರನ್ನು ಭಕ್ತಿಯಿಂದ ಬರಮಾಡಿಕೊಂಡು ಉನ್ನತಾಸನದಲ್ಲಿ ಮೂರ್ತಮಾಡಿಸಿ ಭಜನೆಯನ್ನು ಮಾಡಿದರು. ಭಜನೆಯಾದಮೇಲೆ ಶ್ರೀಗಳವರು "ಶಿವಭಜನ ಮಾಹಾತ್ಮ್ಯ, ಶಿವವ್ರತ" ಮೊದಲಾದ ವಿಷಯಗಳ ಮೇಲೆ ಅಮೂಲ್ಯವಾದ ಉಪದೇಶವನ್ನು ಮಾಡಿ ಸರ್ವರನ್ನೂ ಸಂತೋಷಭರಿತರನ್ನಾಗಿ ಮಾಡಿದರು. ಬಳಿಕ ಮಹಾಮಂಗಳಾರತಿಯಾಗಿ ಪರಮಾತ್ಮನ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು. ಈ ಕಾರ್ಯದಲ್ಲಿ ಯಜಮಾನ ಭೀಮಯ್ಯನವರು ಬಹು ಶ್ರದ್ಧೆಯಿಂದ ಕೆಲಸವನ್ನು ಮಾಡಿದರು. ಭಗವಂತನು ಸರ್ವರಿಗೂ ಸುಖವನ್ನೀಯಲಿ.

ಉತ್ಸವದ ಸೆಕ್ರೆಟರಿ
ಚೆಲ್ಲದ ಗುಂಡಣ್ಣ

ಹುಮನಾಬಾದ ಸಮಾಚಾರ

ಈ ಗ್ರಾಮದಲ್ಲಿ ಶ್ರೀ ಶರಣಬಸವೇಶ್ವರ ಪುರಾಣವು ಕಳೆದ ಮಾಸದಲ್ಲಿ ಪ್ರಾರಂಭವಾಗಿ ಸಮಾಪ್ತಿಗೊಂಡಿತು. ಗುರುಭಕ್ತಿಪರಾಯಣರೂ ಸಮಾಜಸೇವಾಧುರೀಣರೂ ಆದ ವೇ|| ಬಂಗಿ ಸಿದ್ಧರಾಮಯ್ಯನವರು ಪುರಾಣವನ್ನು ಬಹು ಮನೋಹರವಾಗಿ ಹೇಳುತ್ತಿದ್ದರು. ಪುರಾಣ ಸಮಾಪ್ತಿಯ ದಿವಸ ವಿಶೇಷ ಅನ್ನಸಂತರ್ಪಣೆಯು ನಡೆಯಿತು. ಈ ಮಹಾಕಾರ್ಯದಲ್ಲಿ ಗುರುಭಕ್ತಿಪರಾಯಣರಾದ ಲಿಂಗಯ್ಯನವರು ವಿಭೂತಿ, ಶರಣಪ್ಪ ಶೆಟ್ಟಿ, ಶಿವಣ್ಣ ಶೆಟ್ಟಿ, ರೇವಣಪ್ಪ ಪರಮಶೆಟ್ಟಿ, ರೇವಣಪ್ಪ ಸುಲೇಗಾಂವ, ರೇವಪ್ಪ ಹೆಮಣೆ, ಗುಂಡಪ್ಪ ನಾವದಗಿ, ಚನ್ನವೀರಪ್ಪ ಭುಸೆಟ್ಟಿ ಮೊದಲಾದವರು ವಿಶೇಷ ಸೇವೆಯನ್ನು ಸಲ್ಲಿಸಿದರು. ಇವರೆಲ್ಲರಿಗೂ ಶ್ರೀ ಜಗದಾಚಾರ್ಯರು ಮಂಗಲಪರಂಪರೆಯನ್ನೀಯಲಿ. ಇಲ್ಲಿರುವ ತಹಸೀಲ್‌ದಾರ ಸಾಹೇಬರವರು ಬಹಳ ದಯಾಳುಗಳಾಗಿದ್ದು ನಾನಾಮುಖವಾಗಿ ರೈತರ ಕಷ್ಟವನ್ನು ನಿವಾರಣೆ ಮಾಡುತ್ತಿರುವದು ಸ್ತೋತ್ರಾರ್ಹವಾಗಿದೆ. ಇವರಂತೆಯೇ ಸರ್ಕಾರಿ ಡಾಕ್ಟರ್ ಸಾಹೇಬರೂ ಸಹ ರೋಗಿಗಳ ವಿಷಯದಲ್ಲಿ ಬಹಳ ದಯೆಯನ್ನು ತೋರಿಸಿ, ಕೆಲಸ ಮಾಡುತ್ತಿರುವರು. ಈ ಉಭಯ ಮಹಾಶಯರಿಗೂ ಜಗದೀಶ್ವರನು ಉತ್ತರೋತ್ತರ, ಉನ್ನತಾಧಿಕಾರಗಳನ್ನು ಅನುಗ್ರಹಿಸಲೆಂದು ಪ್ರಾರ್ಥಿಸುವ

ಸಿದ್ಧರಾಮಯ್ಯ ಬಂಗಿ

ದುಃಖವಾರ್ತೆ

ಕೃಷ್ಣರಾಜನಗರ ನಿವಾಸಿಗಳಾದ ಲೋಕಸೇವಾನಿರತ ಬಿ. ಸಿದ್ಧಲಿಂಗಶೆಟ್ಟರ ಪುತ್ರಿಯವರೂ ಬಿಸಗರಹಳ್ಳಿ ಸಾ|| ಎಡೆಯೂರಪ್ಪನವರ ಧರ್ಮಪತ್ನಿಯವರೂ ಆದ ಸೌ|| ಸಿದ್ಧಲಿಂಗಮ್ಮನವರು ಕಳೆದ ತಿಂಗಳು 31 ನೆಯ ತಾರೀಖಿನ ದಿವಸ ಶಿವಾಧೀನರಾದರೆಂಬ ವಿಷಯವನ್ನು ಬರೆಯಲು ಅತ್ಯಂತ ವಿಷಾದವೆನಿಸುತ್ತದೆ. ಇವರು ಬಹಳ ಚಿಕ್ಕವರಾಗಿದ್ದರೂ ಬಹುಜನರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿದ್ದರು. ದಯೆಯು ಇವರಲ್ಲಿ ಮನೆಮಾಡಿಕೊಂಡಿತ್ತು. ಇವರ ಸ್ಮಶಾನಯಾತ್ರೆಗೆ 3-4 ಸಾವಿರ ಜನರು ಸಮ್ಮಿಳಿತರಾಗಿದ್ದರು. ಈ ಗ್ರಾಮದ ಸೌಭಾಗ್ಯಲಕ್ಷ್ಮಿಯೇ ಹೋಯಿತೆಂದು ಪ್ರತಿಯೊಬ್ಬರೂ ದುಃಖಿಸುತ್ತಿದ್ದರು. ಇವರಿಗೆ ಮೂರು ವರ್ಷದ ಒಂದು ಗಂಡು ಮಗುವೂ ಮೂರು ತಿಂಗಳಿನ ಒಂದು ಹೆಣ್ಣುಮಗುವೂ ಇರುವವು. ಶ್ರೀಜಗದಾಚಾರ್ಯರು ಮೃತರ ಆತ್ಮಕ್ಕೆ ಶಾಂತಿಯನ್ನೂ ಸದರಿಯವರ ಮಕ್ಕಳುಗಳಿಗೆ ಆಯುಷ್ಯಾಭಿವೃದ್ಧಿಯನ್ನೂ ಉಂಟುಮಾಡಲೆಂದು ಪ್ರಾರ್ಥಿಸುವ,

ದುಃಖಿತಾಗ

ಪಂಚಾಚಾರ್ಯಪ್ರಭಾ.

೧೯೪೫ನೆಯ ನವೆಂಬರ್ ತಾ|| ೧೯ನೇ ಸೋಮವಾರ

ಅಜಾದ್ ಹಿಂದ್ ಸರ್ಕಾರ

ಜಪಾನರು ಮಲಯ, ಸಿಂಗಪೂರ್, ಬರ್ಮ ಮೊದಲಾದ ಪ್ರಾಂತಗಳನ್ನು ಆಕ್ರಮಿಸಿದ ಮೇಲೆ ಆ ದೇಶಗಳಲ್ಲಿರುವ ಭಾರತೀಯರು ಜಪಾನರ ಆಶ್ರಯದಲ್ಲಿ ತಾವು ಸ್ವತಂತ್ರರಾಗಬೇಕೆಂಬ ಇಚ್ಛೆಯಿಂದ ಶ್ರೀ ಸುಭಾಷ ಚಂದ್ರಬೋಸರವರ ನೇತೃತ್ವದಲ್ಲಿ ಅಜಾದ್ ಹಿಂದ್ ಎಂಬ ಹೆಸರಿನಿಂದ ಒಂದು ಸರ್ಕಾರವನ್ನು ಸ್ಥಾಪಿಸಿದರು ಆ ಸರ್ಕಾರಕ್ಕೆ ಸುಭಾಷಚಂದ್ರಬೋಸರು ಅಧ್ಯಕ್ಷರಾಗಿಯೂ ರಾಸ್‌ಬಿಹಾರಿ ಬೋಸರವರು ಸುಪ್ರೀಂ ಅಧ್ಯಕ್ಷರಾಗಿಯೂ, ಎಸ್ ಎ ಅಯ್ಯರ್ ಅವರು ಪ್ರಕಟನ ಶಾಖಾಮಂತ್ರಿಗಳಾಗಿಯೂ, ಎ ಸಿ ಚಟರ್ಜಿಯವರು ಹಣಕಾಸಿನ ಮಂತ್ರಿಗಳಾಗಿಯೂ ಡಾ ಲಕ್ಷ್ಮಿಯವರು ಮಹಿಳಾಶಾಖಾಧಿಕಾರಿಣಿಯಾಗಿಯೂ, ಎ ಎಂ ಸಹಾಯರವರು ಕಾರ್ಯದರ್ಶಿಗಳಾಗಿಯೂ, ಎ ಎನ್ ಸರ್ಕಾರರವರು ಲೀಗಲ್ ಅಡ್ವೈಜರ್‌ರಾಗಿಯೂ ನೇಮಿಸಲ್ಪಟ್ಟಿದ್ದರಂತೆ! ಈ ಮಂತ್ರಿವರ್ಗವು ೧೯೪೩ ನೆಯ ಅಕ್ಟೋಬರ್ ೨೧ನೆಯ ತಾರೀಖಿನ ದಿವಸ ರೂಪುಗೊಂಡಿತು ಇವರಲ್ಲದೆ ಸೇನೆಗಳ ಪ್ರತಿನಿಧಿಗಳಾಗಿ ೬ ಜನ ಲೆಫ್ಟಿನೆಂಟ್ ಕರ್ನಲ್ಲುಗಳು, ನಾಗರಿಕರ ಪರವಾಗಿ ೬ ಜನರು ಮಂತ್ರಿಗಳ ಸಭೆಯಲ್ಲಿ ಭಾಗವಹಿಸುತ್ತಿದ್ದರಂತೆ! ಇವರೆಲ್ಲರ ಸಮಾಲೋಚನೆಯಂತೆ ಮೇಲ್ಕಂಡ ಸರ್ಕಾರದ ಕಾರ್ಯಕ್ರಮಗಳು ಸಾಗುತ್ತಿದ್ದವು ಸುಭಾಷ ಚಂದ್ರಬೋಸರು ಮುಖ್ಯಪ್ರಧಾನರಾದ ಮೇಲೆ, ಅವರು ಈ ಸೈನ್ಯದ ಸಹಾಯದಿಂದ ಇಂಫಾಲ್ ಮೊದಲಾದ ಪ್ರಾಂತಗಳ ಮೇಲೆ ಬ್ರಿಟಿಷರಿಗೆ ವಿರುದ್ಧವಾಗಿ ಯುದ್ಧ ಹೂಡಿದರು ಇವರ ಸೈನ್ಯವು ದೊಡ್ಡಾಗಿರಲಿಲ್ಲ ಇಪ್ಪತ್ತು ಸಾವಿರ ಮಾತ್ರವಿದ್ದಿತು ಇಷ್ಟು ಅಲ್ಪ ಜನಸಂಖ್ಯೆಯಿಂದ ಕೂಡಿದ ಈ ಸೈನ್ಯದವರು ಇಡೀ ಜಗತ್ತನ್ನೇ ನಡುಗಿಸಬಲ್ಲ ಬ್ರಿಟಿಷ್ ಸಾಮ್ರಾಜ್ಯದ ಆಧಾರವಾದ ಸೈನ್ಯದ ಮೇಲೆ ಬಿದ್ದು ಕಾದಾಡಲು ಶಕ್ತರಾಗದೆ ಸೋತುಹೋದರು. ಆ ಮೇಲೆ ಬ್ರಿಟಿಷರು ಬರ್ಮದ ಮೇಲೆ ಬಿದ್ದು ಆ ದೇಶವನ್ನು ಗೆದ್ದು ಮೇಲ್ಕಂಡ ಸೈನಿಕರನ್ನೆಲ್ಲ ಸೆರೆಹಿಡಿದರು ಇವರನ್ನೆಲ್ಲಾ ಸೆರೆಹಿಡಿದ ಮೇಲೆ ಇತ್ತೀಚೆಗೆ ಈ ವಿಷಯಗಳೆಲ್ಲಾ ಹೊರಬಿದ್ದಿವೆ ಬ್ರಿಟಿಷರ ವಿರುದ್ಧವಾಗಿ ಈ ರೀತಿ ಯುದ್ಧಮಾಡಿದ ಸೈನ್ಯಾಧಿಕಾರಿಗಳನ್ನೆಲ್ಲಾ ಈಗ ಬ್ರಿಟಿಷ್ ಸರ್ಕಾರದವರು ವಿಚಾರಣೆಗೆ ಗುರಿಮಾಡಿದ್ದಾರೆ ಅವರೆಲ್ಲರ ವಿಚಾರಣೆಯು ಸದ್ಯಃ ಡಿಹಲಿಯಲ್ಲಿ ನಡೆಯುತ್ತಿರುವುದು ಕೇವಲ ದೇಶಾಭಿಮಾನದಿಂದ ಈ ಕಾರ್ಯದಲ್ಲಿ ನಿರತರಾದ ಅವರೆಲ್ಲರಿಗೂ ಕ್ಷಮಾಭಿಕ್ಷೆಯನ್ನು ನೀಡಿ ಅವರನ್ನು ಬಂಧಮುಕ್ತರನ್ನು ಮಾಡಬೇಕೆಂದು ಭಾರತೀಯರೆಲ್ಲರೂ ಬ್ರಿಟಿಷ್ ಸರ್ಕಾರದವರನ್ನು ಏಕಕಂಠದಿಂದ ಪ್ರಾರ್ಥಿಸುತ್ತಿರುವರು. ಬ್ರಿಟಿಷ್ ಸರ್ಕಾರದವರು ಈ ಬಗ್ಗೆ ಯಾವರೀತಿ ಆಚರಿಸುವರೆಂಬುದು ತಿಳಿಯದಾಗಿದೆ. ಮೇಲ್ಕಂಡ ಅಜಾದ್ ಹಿಂದ್ ಸರ್ಕಾರದ ಉದಯಾಸ್ತಗಳು ಯಾವ ರೀತಿಯಾಗಿ ಪರಿಣಮಿಸಿದವೆಂಬುದನ್ನು ಈ ಕೆಳಗೆ ಕೊಟ್ಟಿದೆ.

ಅಜಾದ್ ಹಿಂದ್ ಸರಕಾರದ ಉದಯಾಸ್ತದ ಕಥೆ

೧. ಭಾರತದ ಸ್ವಾತಂತ್ರ್ಯಕ್ಕಾಗಿ ಪೂರ್ವ ಏಷಿಯಾದಲ್ಲಾದ ಪ್ರಯತ್ನವು ಸ್ವಯಂಸ್ಫೂರ್ತಿಯದು ಇದು ಕೆಲವು ಜಪಾನಿಯರ ಪ್ರೇರಣೆಯಿಂದಲೂ, ಇನ್ನು ಕೆಲವು ಜಪಾನರು ಆಂಗ್ಲ-ಅಮೇರಿಕನರ ಮೇಲೆ ಗಳಿಸಿದ ವಿಜಯದಿಂದಲೂ ಉಂಟಾಯಿತು

೨ ಜಪಾನು ಮಲಯವನ್ನು ಗೆದ್ದ ಮೇಲೆ ಅಲ್ಲಿರುವ ೭ ಲಕ್ಷ ಭಾರತೀಯರಿಗೆ ತಾವು ಯಾವ ರೀತಿ ವರ್ತಿಸಬೇಕೆಂಬ ಯೋಚನೆ ಮೊದಲು ಉಂಟಾಯಿತು ಪ್ರಾರಂಭದಲ್ಲಿ ಕೆಲವರು ದೇಶತ್ಯಾಗ ಮಾಡಬೇಕೆಂದು ಹೇಳಿದರು ಆದರೆ ಈಚೆಗೆ ಹಲವು ವರ್ಷಗಳಿಂದ ಬ್ರಿಟಿಷರ ವ್ಯವಹಾರವು ಮಲಯದ ಭಾರತೀಯರಿಗೆ ಬ್ರಿಟಿಷರ ವಿಷಯದಲ್ಲಿ ವಿರೋಧಭಾವನೆಯನ್ನುಂಟುಮಾಡಿತ್ತು ಜೀವನವು ಕಷ್ಟವಾಗುತ್ತಿರುವುದರಿಂದ ಸಂಬಳ ಹೆಚ್ಚಿಸಬೇಕೆಂದು ಕೇಳಿದ ಕೂಲಿಕಾರರಮೇಲೆ ಗುಂಡು ಹಾರಿಸಿದ ವಿಷಯವನ್ನು ಪ್ರಸಿದ್ಧಪಡಿಸುವ ಮೊದಲು ಭಾರತೀಯ ಪತ್ರಿಕಾ ಕರ್ತರು ಅಪ್ಪಣೆ ಪಡೆಯಬೇಕೆಂದೂ ಬ್ರಿಟಿಷ್ ಪತ್ರಿಕೆಗಳಿಗೆ ಈ ನಿಯಂತ್ರಣವಿಲ್ಲವೆಂದೂ ಹೇಳಿದುದರಿಂದ ಈ ವಿರೋಧಭಾವನೆ ಇನ್ನೂ ಹೆಚ್ಚಾಯಿತು ಭಾರತೀಯ ಸೈನ್ಯದಲ್ಲೂ ಮತ್ತು ಅಧಿಕಾರಿ ವರ್ಗದಲ್ಲೂ ಈ ಸೂಂಕು ಹರಡಿತು ಇವರಿಗೆ ಹೆಚ್ಚು ವರ್ಣದ್ವೇಷದ ಅನುಭವ ಒರುತ್ತಿತ್ತು ಸಿಂಗಪೂರದ ಈಜುವ ಕ್ಲಬ್ಬಿನ ಮೆಂಬರಾಗಲು ಭಾರತೀಯ ಅಧಿಕಾರಿಗಳಿಗೆ ನಿಷ್ಪ್ರಯೋಜಕ ನಡೆಸಬೇಕಾಯಿತು. ಆದರೆ ಈಜಲು ನಿರ್ಮಿಸಿದ ಕೊಳದಲ್ಲಿ ಈಜಲ ಇವರಿಗೆ ಅನುಮತಿ ಸಿಗಲಿಲ್ಲ ಇವರಿಗೆ ಸರಿಯಾಗಿ ಒಪ್ಪಿಗೆ ಕೊಡದೆ ಯುದ್ಧಕ್ಷೇತ್ರದಲ್ಲಿ ಬೇಕಾಗುವ ಸಾಮಾನುಗಳನ್ನು ಕೊಡದೆ ಯುದ್ಧಕ್ಕೆ ಕಳುಹಿಸಲಾಗುತ್ತಿತ್ತು ಇದರಿಂದ ಬ್ರಿಟಿಷರಲ್ಲಿ ನಂಬಿಗೆ ನಾಶವಾಗುತ್ತಿರುವದಿಲ್ಲವೆಂಬ ಭಾವನೆ ಸೈನ್ಯದಲ್ಲಿ ಪಸರಿಸಿತ್ತು

೩ ಇದರಿಂದ ಮಲಯದಲ್ಲಿ ಜಪಾನರಿಗೆ ಬ್ರಿಟಿಷರು ಶರಣಾಗತರಾದಮೇಲೆ ಅಲ್ಲಿಯ ಭಾರತೀಯರು ಜಪಾನರಿಗೆ ಸಹಾಯಕರಾದರು ಅವರ ಬೇಲಿನ ಶ್ರಪ್ಪೆಯಿಂದಾಗಲಿ ಅಥವಾ ಪ್ರೇಮದಿಂದಾಗಲಿ ಅಲ್ಲ

೪ ೧೯೪೨ನೇ ಫೆಬ್ರವರಿ ೧೫ಕ್ಕೆ ಸಿಂಗಪೂರು ಕೈಬಿಟ್ಟಿತು. ೧೭ನೇ ಫೆಬ್ರವರಿ ದಿವಸ ಭಾರತೀಯ ಮುಖಂಡರುಗಳನ್ನು ಜಪಾನ್ ಮಿಲಿಟರಿ ಆಫೀಸಿಗೆ ಕರೆಸಲಾಯಿತು.

ಅಲ್ಲಿ ಜಪಾನಿ ಅಧಿಕಾರಿ [illegible] ಈಗ ತೀರಿತು ಹಿಂದೂಸ್ಥಾನವು ಈಗ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಸಂಧಿ ಒದಗಿಬಂದಿದೆ [illegible] ಇದಕ್ಕಾಗಿ ಜಪಾನು ತನ್ನ ಕೈಲಾದ [illegible] ವನ್ನೆಲ್ಲಾ ಮಾಡಲು ಸಿದ್ಧವಿದೆ ಭಾರತೀಯರು [illegible] ಇದರಿಂದ ಬ್ರಿಟಿಷರ ಪ್ರಜೆಗಳಲ್ಲ ಎಂದು ತಿಳಿದಿರುವುದರಿಂದ ಕಾಯಿದೆಯಂತೆ ಹಿಂದೀ ಪ್ರಜೆಗಳು ಶತ್ರು ಪಕ್ಷದವರಾದರೂ ಅವರನ್ನು ಶತ್ರು ಪಕ್ಷದವರೆಂದು ಜಪಾನು ಎಣಿಸುವುದಿಲ್ಲ ಭಾರತದ ಸ್ವಾತಂತ್ರ್ಯಕ್ಕೆ ಹೋರಾಡಲು, ಭಾರತೀಯರೆಲ್ಲ ಸೇರಿ "ಇಂಡಿಯನ್ ಇಂಡಿಪೆಂಡೆನ್ಸ್ ಲೀಗ್" ಎಂಬ ಸಂಸ್ಥೆಯನ್ನು ಸ್ಥಾಪಿಸಬೇಕು ತಮ್ಮ ಕೈಲಾದ ಸಹಾಯವನ್ನೆಲ್ಲಾ ತಾವು ಮಾಡುವುದಾಗಿ ಜಪಾನರು ಆಶ್ವಾಸನವಿತ್ತರು ಇದಲ್ಲದನ್ನೂ ಯೋಚಿಸಿ, ವಿಚಾರ ಮಾಡಿ ಇನ್ನು ಕೆಲವು ದಿವಸಗಳಲ್ಲಿ ಪುನಃ ಅವರನ್ನು ನೋಡುವುದಾಗಿ ಮುಖಂಡರು ಹೇಳಿದರು

೫ ಅನಂತರ ತಾವು ತೀರ್ಮಾನಕ್ಕೆ ಬರುವ ಮೊದಲು ಮಲಯದಲ್ಲಿನ ಭಾರತೀಯ ಸಂಘದ ಅಧ್ಯಕ್ಷರನ್ನೂ ಮತ್ತು ಇತರ ಜಾಗಗಳಲ್ಲಿರತಕ್ಕ ಭಾರತೀಯ ಮುಖಂಡರನ್ನೂ ನೋಡಲು ಇಷ್ಟ ಇದೆ ಎಂದು ಮುಖಂಡರು ತಿಳಿಸಿದರು ಆದರಂತೆ ಮಾರ್ಚಿ ೯ ಮತ್ತು ೧೦ನೇ ತಾರೀಖಿನಲ್ಲಿ ಸಿಂಗಪುರದಲ್ಲಿ ಮುಖಂಡರುಗಳೆಲ್ಲಾ ಸೇರಿದರು. ಇದಕ್ಕೆ ಥೈಲ್ಯಾಂಡಿನ ಪ್ರಮುಖರು ಬಂದಿದ್ದರು ಕೆಲವು ಮುಖಂಡರನ್ನು ಟೋಕಿಯೋವಿಗೆ ಕಳುಹಿಸಬೇಕೆಂದು ತೀರ್ಮಾನವಾಯಿತು ಜಪಾನಿಗೂ ಅಧಿಕೃತ ಮುಖಂಡರು ಬೇಕಾಗಿತ್ತು, ಕೆಲವು ಮುಖಂಡರನ್ನು ಟೋಕಿಯೋಕ್ಕೆ ಕಳುಹಿಸಲಾಯಿತು

೬. ಟೋಕಿಯೋದಲ್ಲಿ ಸಭೆ ಸೇರಿ ೧೯೪೨ನೇ ಮಾರ್ಚಿ ೨೮ ರಿಂದ ೩೦ರ ವರೆಗೆ ಚರ್ಚೆ ನಡೆಯಿತು. ಮಲಯದ ಪ್ರತಿನಿಧಿಗಳಲ್ಲದೆ ಹಾಂಕಾಂಗ್, ಷಾಂಘೈ ಮತ್ತು ಜಪಾನಿನ ಪ್ರತಿನಿಧಿಗಳು ಬಂದಿದ್ದರು ಆದರೆ ಥೈಲ್ಯಾಂಡ್ ಪ್ರತಿನಿಧಿ ಟೋಕಿಯೋಕ್ಕೆ ಬರುತ್ತಿದ್ದ ಮಾರ್ಗದಲ್ಲಿ ಅಪಘಾತಕ್ಕೀಡಾಗಿ ಸತ್ತುದರಿಂದ ಅಲ್ಲಿಯ ಪ್ರತಿನಿಧಿ ಇರಲಿಲ್ಲ.

೭. ಪೂರ್ವ ಏಷ್ಯಾದಲ್ಲಿ ಭಾರತೀಯರು ಸ್ವಾತಂತ್ರ್ಯಕ್ಕಾಗಿ ಹೊಡೆದಾಡಲು ಯೋಗ್ಯ ಕಾಲ ಬಂದಿರುತ್ತದೆಂದು ಸಭೆಯು ತೀರ್ಮಾನಿಸಿತು ಪರಕೀಯರ ನಿರ್ದೇಶನ ಸಹಾಯ ಅಥವಾ ಇನ್ನಾವ ತರಹದ ಹಸ್ತಕ್ಷೇಪವಿಲ್ಲದ ಇರುವ ಸಂಪೂರ್ಣ ಸ್ವಾತಂತ್ರ್ಯವೇ ಈ ಹೋರಾಟದ ಧ್ಯೇಯವೆಂದು ನಿರ್ಧರಿಸಲಾಯಿತು. ಹಿಂದೂಸ್ಥಾನದ ಮೇಲೆ ಉಪಯೋಗಿಸುವುದು ಅಜಾದ್ ಹಿಂದ್ ಫೌಜನ್ನೇ. ಅದೂ ಭಾರತೀಯರ ನೇತೃತ್ವದಲ್ಲೇ ಆಗಬೇಕು ಕೌನ್ಸಿಲ್ ಆಫ್ ಆಕ್ಷನ್ ವಿನಂತಿಯಂತೆ ಜಪಾನು ಅಗತ್ಯವಾದ ಆಕ್ಸರಿ, ಆರ್ಮರಿ ಮತ್ತು ಕಿಟ್ ಇವುಗಳನ್ನು ಕೊಡಬೇಕು ಹಿಂದೂಸ್ಥಾನದ ಮುಂದಿನ ರಾಜ್ಯನೀತಿಯನ್ನು ತಯಾರುಮಾಡುವ ಕೆಲಸವನ್ನು ಭಾರತೀಯರಿಗೇ ಒಪ್ಪಿಸಬೇಕು, ಎಂದು ಪರಿಷತ್ತು ನಿರ್ಣಯಿಸಿತು

೮ ಭಾರತ ಸ್ವಾತಂತ್ರ್ಯದ ಆಂದೋಳನ ಪ್ರಾರಂಭಿಸುವ ಮುನ್ನ ಜೂನ್ ತಿಂಗಳಲ್ಲಿ ಬ್ಯಾಂಕಾಕಿನಲ್ಲಿ ಪೂರ್ವ ಏಷಿಯದಲ್ಲಿನ ಎಲ್ಲಾ ಪ್ರದೇಶದಲ್ಲಿನ ಪ್ರತಿನಿಧಿಗಳ ಸಭೆ ಸೇರಿಸಬೇಕೆಂದು ತೀರ್ಮಾನಿಸಿತು

೯ ಅದರಂತೆ ೧೯೪೨ ನೇ ಜೂನ್ ೫ ರಿಂದ ೨೩ರ ವರೆಗೆ ಬ್ಯಾಂಕಾಕಿನಲ್ಲಿ ಜಪಾನ್, ಮಾಂಚುಕೊ, ಹಾಂಕಾಂಗ್, ಬರ್ಮ, ಬೋರ್ನಿಯಾ, ಜಾವಾ, ಮಲಯಾ, ಥಾಯಿಲಾಂಡ್ ಮತ್ತು ಹಾಂಕಾಂಗಿನಲ್ಲಿನ ಯುದ್ಧಖೈದಿಗಳ ಪ್ರತಿನಿಧಿ ಹೀಗೆ ೧೦೦ ಜನಗಳಿಗಿಂತ ಹೆಚ್ಚು ಜನ ಹಾಜರಿದ್ದರು ಇವರುಗಳು ತೀರ್ಮಾನಿಸಿದಂತೆ ಎಲ್ಲಾ ಕಡೆಯಲ್ಲಿಯೂ ಆಂದೋಳನ ನಡೆಸಲಾಯಿತು. ಶ್ರೀ ಸುಭಾಷ್ ಬೋಸರು ಬಂದು ಜವಾಬ್ದಾರಿ ವಹಿಸುವ ವರೆಗೂ ಈರೀತಿ ನಡೆದಿತ್ತು

೧೯೪೩ ನೇ ಏಪ್ರೆಲ್‌ನಲ್ಲಿ ಎಲ್ಲಾ ಪ್ರದೇಶದ ಪ್ರತಿನಿಧಿಗಳ ಸಭೆ ಸಿಂಗಪುರದಲ್ಲಿ ಸೇರಿತ್ತು ಆಗ ಅಧ್ಯಕ್ಷರು ಶ್ರೀ ಬಾಬು ಅವರು ಈ ಚಳುವಳಿ ನಡೆಸಲು ಅಧಿಕಾರ ಸ್ವೀಕಾರ ಮಾಡುವರೆಂದು ತಿಳಿಸಿದರು ೧೯೪೩ ನೇ ಜುಲೈ ೩ಕ್ಕೆ ಅಧ್ಯಕ್ಷರು ಸಿಂಗಪುರದಲ್ಲಿ ರಾಜೀನಾಮೆ ಇತ್ತರು ಶ್ರೀ ಬಾಬು ಸುಭಾಷರು ಅಧಿಕಾರ ಸ್ವೀಕರಿಸಿದರು ಅಜಾದ್ ಹಿಂದ್ ಫೌಜನ್ನು ಹೊಸತರದಲ್ಲಿ ರಚಿಸಲಾಯಿತು ಜುಲೈ ೮ನೇ ದಿವಸ ಈ ಸೇನೆಯು ನಿರ್ಮಾಣವಾಯಿತು ಇವರ ನೇತೃತ್ವದಲ್ಲಿ ರೆಡ್‌ಕ್ರಾಸ್, ರುಣಿಸಿರಾಣಿ ಮತ್ತು ನಾಗರಿಕದಳಗಳು ರಚಿತವಾದವು ಬಲವಾದ ಮುಖಂಡರು ದೊರೆತದ್ದರಿಂದ ಕೆಲಸಗಳು ಅತಿ ಶೀಘ್ರವಾಗಿ ನಡೆಯಲಾದುವು ಲಷ್ಕರೀ ಶಾಲೆಯೂ ತಯಾರಾಯಿತು ಇಂಡಿಯನ್ ಇಂಡಿಪೆಂಡೆನ್ಸ್‌ಲೀಗಿನ ಕಾರ್ಯಕ್ಕಾಗಿ ಹಣ ಪುಷ್ಕಳವಾಗಿ ಹಿಂದೀಯರಿಂದಲೇ ಬರುತ್ತಿತ್ತು ಸೇನೆಗೆ ಬೇಕಾಗುವ ಸಾಮಾನುಗಳು ಸಹ ಒದಗಲಾದವು ಇದಕ್ಕೆನ್ನೂ ಬೆಂಬಲಕೊಡಲು ತಾತ್ಕಾಲಿಕ ಹಿಂದಿ ಸರ್ಕಾರದ ಸ್ಥಾಪನೆಯು ೧೯೪೩ ನೇ ಅಕ್ಟೋಬರ್ ೨೧ ರಲ್ಲಾಯಿತು ಮತ್ತು ಬಾಬುರವರನ್ನೇ ಅದಕ್ಕೂ ಮುಖಂಡರನ್ನಾಗಿ ನೇಮಿಸಲಾಯಿತು. ಆ ಕಾಲದಲ್ಲಿ ಬ್ರಿಟಿಷರಿಗೆ ವಿರುದ್ಧವಿದ್ದ ಎಲ್ಲಾ ದೇಶಗಳೂ ಇದನ್ನು ಮನ್ನಿಸಿದವು ೨೩ ನೇ ಅಕ್ಟೋಬರ್ ದಿವಸ ಈ ಸಂಸ್ಥೆಯವು ಇಂಗ್ಲೆಂಡು ಮತ್ತು ಅಮೆರಿಕಗಳ ಮೇಲೆ ಯುದ್ಧ ಘೋಷಿಸಿತು ಹಿಂದೂಸ್ಥಾನಕ್ಕೆ ಬಹಳ ಹತ್ತಿರವಿರಬೇಕೆಂಬ ಯೋಚನೆ ೧೯೪೩ರ ಆಕ್ಟೋಬರಿನಲ್ಲಿ ಮಾಡಲಾಯಿತು ಆದರೆ ಬ್ರಹ್ಮದೇಶದಿಂದ ಯುದ್ಧ ಮಾಡುವುದು ಜಪಾನಿಗೆ ಅಸಮ್ಮತ ಆದರೂ ಮಿತ್ರರು ಹಾಂಕಾಂಗ ಕಣಿವೆಯ ಕಡೆ ಬರುವರೆಂಬ ಭೀತಿ ಇತ್ತು ಇದರಿಂದ ಸಮ್ಮತಿಸಿದರು ಆದರೂ ಇಂಫಾಲ್ ಪಡೆದ ನಂತರ ಈ ಅಜಾದ್ ಹಿಂದೀ ಸೈನ್ಯಕ್ಕೆ ಯುದ್ಧಮಾಡಲು ಅವಕಾಶ ಕೊಡಬೇಕೆಂದಿತ್ತು. ಇದಕ್ಕೆ ಶ್ರೀ ಬಾಬುರವರು ವಿರೋಧಿಸಿದ್ದರು. ಅರಕಾನ ಮತ್ತು ಮಣಿಪುರದ ಮುತ್ತಿಗೆಯಲ್ಲಿ ತಾವೂ ಭಾಗ ತೆಗೆದುಕೊಳ್ಳುವೆನೆಂದು ಹಟಹಿಡಿದರು ಮೊದಲನೇದಾಗಿ ೧೯೪೪ ನೇ ಫೆಬ್ರವರಿ ೪ ರಲ್ಲಿ ಹಿಂದೀ ಸೇನೆಯು ಬ್ರಹ್ಮದೇಶದ ಮತ್ತು ಹಿಂದೂಸ್ಥಾನದ ಸರಹದ್ದನ್ನು ಬಿಟ್ಟು ಮುಂದೆ ಹೊರಟಿತು. ಜಪಾನು ಈ ಸೈನ್ಯದ ಜೊತೆಯಲ್ಲಿ ಇಂಫಾಲ್ ಮುತ್ತಿಗೆ ಹಾಕಿತು. ಮಳೆಯಿಂದ ಮತ್ತು ಸಾಮಗ್ರಿಯ ಅಭಾವದಿಂದ ಹಿಂತೆಗೆಯಬೇಕಾಯಿತು. ಆದರೂ ಬ್ರಿಟಿಷ್ ಮತ್ತು ಹಿಂದೀ ಸೇನೆಯ ಪ್ರಥಮ ಸಮಾಗಮದಲ್ಲೇ ಹಿಂದೀ ದೇಶಭಕ್ತರು ಅದ್ಭುತ ಶೌರ್ಯ ತೋರಿಸಿ ಬ್ರಿಟಿಷರನ್ನು ತಾವು ಓಡಿಸಬಲ್ಲೆವೆಂಬುದನ್ನು ಸಿದ್ಧಮಾಡಿದರು ಅನ್ನ ಬಟ್ಟೆ ಮತ್ತು ಸರಿಯಾದ ಸಾಮಗ್ರಿಯಿಲ್ಲದಿದ್ದರೂ ಜಗತ್ತಿನ ಒಂದು ಉತ್ಕೃಷ್ಟ ಸುಸಜ್ಜಿತ ಸೇನೆಯನ್ನು ಹೆದರಿಸಿದರು ಇದರಲ್ಲಿ ಎಷ್ಟೋ ಜನ ಉಪವಾಸ ಮತ್ತು ರೋಗದಿಂದ ಸತ್ತರು ಎರಡನೇ ಸಾರಿ ೧೯೪೫ ರಲ್ಲಿ ಮುತ್ತಿಗೆ ಆರಂಭವಾಯಿತು. ಬ್ರಹ್ಮದೇಶವು ಆಗ ಕೈಬಿಟ್ಟುಹೋಯಿತು. (ಜನವಾಣಿ)

ವರ್ತಮಾನ ಸಂಗ್ರಹ

ಕೆನಡಾ ಯೂನಿಯನ್ ಜಾಕ್ ಧ್ವಜ ಬೇಡವೆಂದಿತು!

ಇನ್ನು ಮೇಲೆ ಯೂನಿಯನ್ ಜಾಕ್ ಧ್ವಜವು ಕೆನಡಾಕ್ಕೆ ಬೇಕಿಲ್ಲವೆಂದೂ, ತನ್ನದೇ ಆದ ಧ್ವಜವನ್ನದು ಸ್ವೀಕರಿಸಿಕೊಳ್ಳಬೇಕೆಂದೂ ಕೆನಡಾ ಪಾರ್ಲಿಮೆಂಟು ನಿರ್ಧರಿಸಿದೆ. ಫ್ರೆಂಚ್ ಕೆನಡಿಯನರು ಯೂನಿಯನ್ ಜಾಕ್ ಧ್ವಜ ಬೇಡವೇಬೇಡವೆಂದು ಹಟ ಹಿಡಿದರು

ಜರ್ಮನ್ ಕಾರ್ಖಾನೆಗಳ ನಾಶ

ಫ್ರಾಂಕ್‌ಫರ್ಟಿನಲ್ಲಿ ೧೪ ಜರ್ಮನ್ ಕಾರ್ಖಾನೆಗಳನ್ನು ಅಮೇರಿಕನ್ ಸಿಪಾಯಿಗಳು ನಾಶಪಡಿಸಿ ಜರ್ಮನಿಯ ಯುದ್ಧ ಶಕ್ತಿಯನ್ನೇ ನೆಲಸಮ ಮಾಡಿದರು ಮುಖ್ಯ ಮುಖ್ಯವಾದ ಭಾಗಗಳನ್ನು ನಾಶಮಾಡಿರುವುದಾದರೂ ಉಳಿದವನ್ನು ಮನೆಗಳ ನಿರ್ಮಾಣಕ್ಕೆ ಉಪಯೋಗಿಸಲಾಗುವುದೆಂದು ಹೇಳಲಾಗಿದೆ

ಡಚ್ ಇಂಡೋನೇಷಿಯನ್ ಸಂಧಾನಗಳು

ಡಚ್ ಗೌರ್ನರಾದ ಡಾ|| ವಾನ್ ಮೂಕ್ ರವರು ಬ್ರಿಟಿಷ್ ಸೇನಾನಿ ಜನರಲ್ ಕ್ರಿಸ್ಟಿಸನ್‌ರವರ ಸಮ್ಮುಖದಲ್ಲಿ ಇಂಡೋನೇಷಿಯನ್ ಮಂತ್ರಿವರ್ಗದವರೊಡನೆ ಸಂಧಾನ ಆರಂಭಿಸಿರುತ್ತಾರೆ ಈಗ ಸುರಬಾಯಾದಲ್ಲಿ ನ್ಯಾಯಸ್ಥಾನಗಳ ಕಟ್ಟಡಗಳನ್ನೂ ಇತರ ಸರ್ಕಾರಿ ಭವನಗಳನ್ನೂ ಬ್ರಿಟಿಷ್ ಮತ್ತು ಭಾರತೀಯ ಪಡೆಗಳು ಆಕ್ರಮಿಸಿಕೊಂಡಿವೆ

ಆಟಂ ಬಾಂಬ್ ಪ್ರಭಾವದ ಪರಿಶೀಲನೆಗೆ ಭಾರತೀಯ ವೈಜ್ಞಾನಿಕರ ಪ್ರಯಾಣ

ಜಪಾನಿನಲ್ಲಿ ಆಟಂ ಬಾಂಬ್ ಪ್ರಯೋಗದಿಂದ ಆದ ಪರಿಣಾಮಗಳನ್ನು ಪರಿಶೀಲಿಸಲು ಡಾ|| ಎಸ್ ಪಾರ್ಥಸಾರಥಿಯವರು ಚುಂಕಿಂಗ್ ಮಾರ್ಗವಾಗಿ ಜಪಾನಿಗೆ ಪ್ರಯಾಣ ಮಾಡಿದ್ದಾರೆ ಇವರೊಡನೆ ಡಾ|| ಎಚ್ ಜೆ ಬಾಬಾರವರೂ ಹೋಗಬೇಕಾಗಿತ್ತು. ಆದರೆ ಅವರು ದೇಶ ಬಿಟ್ಟು ಹೋಗಲು ಸಾಧ್ಯವಾಗಲಿಲ್ಲ. ಡಾ|| ಪಾರ್ಥಸಾರಥಿಯವರು ಟಾಟಾ ವಿಜ್ಞಾನ ಮಂದಿರದಲ್ಲಿ ಕೊಂಚ ಕಾಲ ಕೆಲಸ ಮಾಡುತ್ತಿದ್ದರು

ಚೀಣಾದಲ್ಲಿ ಭೀಕರ ಕದನ

ಚೀಣಾದಲ್ಲಿ ಕಮ್ಯೂನಿಸ್ಟ್ ಪಕ್ಷದವರಿಗೂ ಮತ್ತು ಸರ್ಕಾರದವರಿಗೂ ನಡೆಯುತ್ತಿರುವ ಕದನವು ಈಗ ಭೀಕರವಾಗಿ, ೧೧ ಪ್ರಾಂತ್ಯಗಳಿಗೆ ಹರಡಿದೆ ಸರ್ಕಾರದ ನಾಲ್ಕು ಸೈನ್ಯಗಳು ಚೈನಾದ ಗ್ರೇಟ್‌ವಾಲ್ ಬಳಿಯಲ್ಲೂ, ಷಾನ್‌ಹಾಯ್‌ಕ್ವಾ ಬಳಿಯಲ್ಲೂ ಕದನ ನಡೆಸುತ್ತಿವೆ ಕಮ್ಯೂನಿಸ್ಟರ ದಾಳಿಯಿಂದ ಸಾಟಾಂಗ್ ನಗರದಲ್ಲಿ ೨ ಲಕ್ಷ ಜನರು ಸತ್ತಿದ್ದಾರೆ ಮತ್ತು ಲಕ್ಷಾಂತರ ಜನಗಳು ನಿರಾಶ್ರಿತರಾಗಿದ್ದಾರೆ ಅನೇಕ ನಗರಗಳು ಈಗಾಗಲೇ ಕಮ್ಯೂನಿಸ್ಟರ ಕೈವಶವಾಗುತ್ತಿವೆ.

ಭೂಚರ ಮತ್ತು ಖೇಚರ ಮೋಟಾರು

ಈಗೊಂದು ಹೊಸ ಮೋಟಾರು ತಯಾರಾಗಿದೆ. ಇದೊಂದು ಸಾಧಾರಣ "ಸೆಲೂನ್" ಮೋಟಾರಿನಷ್ಟು ಪ್ರಮಾಣದ್ದು. ಎಡಗಡೆ ಬಲಗಡೆ, ಹಿಂದೆ ಮತ್ತು ಟಾಪಿನಲ್ಲಿ ಕಿಟಕಿಗಳಿವೆ. ಮುಂದಿರುವುದು ಒಂದೇ ಚಕ್ರ. ಹಿಂದಿನ ಚಕ್ರಗಳೆರಡು ಎರಡಕ್ಕೂ ಬೆಲೂನ್ ಟೈರುಗಳು ಕಿತ್ತೆಗೆದು ಮತ್ತೆ ಜೋಡಿಸುವ ರೆಕ್ಕೆಗಳು ಇದಕ್ಕಿವೆ ಇನ್ನೊಂದು ಗೇರ್ ತಿರುಗಿಸಿದರೆ ವಿಮಾನಗಳ ಮುಂಭಾಗದಲ್ಲಿರುವ ಪ್ರೊಪೆಲರ್ ಇದರಲ್ಲೂ ಸುತ್ತಲಾರಂಭಿಸುತ್ತದೆ. ಈ ಮೋಟಾರಿನಲ್ಲಿ ಕುಳಿತು ಹತ್ತಿರದ ವಿಮಾನ ನಿಲ್ದಾಣಕ್ಕೆ ಹೋಗಿ, ರೆಕ್ಕೆಗಳನ್ನು ಜೋಡಿಸಿ, ಪ್ರೊಪೆಲರ್ ತಿರುಗಿಸಿದರೆ ಅಂತರಿಕ್ಷ ಮಾರ್ಗವಾಗಿ ಪ್ರಯಾಣ ಮಾಡಬಹುದು ಇದನ್ನು ಕಂಡುಹಿಡಿದ ಸ್ಯಾನ್‌ಡಯಾಗೋ ಇಂಜನಿಯರ್ ಡೇವಿಡ್ಸ್ ಇದಕ್ಕೆ "ರೋಡ್ ಪ್ಲೇನ್" ಎಂದು ಹೆಸರಿಟ್ಟಿದ್ದಾರೆ

ಆಟಂಬಾಂಬ್ ದಾಳಿಯ ಪರಿಣಾಮ

ಒಂದು ವಾರಕ್ಕೆ ೩ ಅಥವಾ ೪ ಜನರಂತೆ ನಾಗಸಾಕಿಯಲ್ಲಿ ಇನ್ನೂ ಜನರು ಸಾಯುತ್ತಿದ್ದಾರೆ ಈಗಾಗಲೇ ನಗರವು ಆಟಂಬಾಂಬಿನ ಹಾವಳಿಯಿಂದ ಹಾಳುಬಿದ್ದಿರುವುದರ ಜೊತೆಗೆ ಈ ಸಾವಿನ ಹೊರೆ ಬೇರೆ ಮೊದಲು ದಾಳಿಯಲ್ಲಿ ೩೦೦೦೦ ದಿಂದ ೮೦೦೦೦ ಜನ ಸತ್ತರೆಂದು ಜಪಾನಿ ವರದಿ ತಿಳಿಸಿದ್ದಲ್ಲದೆ ಯುದ್ಧ ನಿಂತ ಮೇಲೆ ಮೊದಲು ೬ ವಾರಗಳಲ್ಲೇ ಇನ್ನೂ ೪೦೦೦೦ ಜನ ಸತ್ತರೆಂದು ಅಮೆರಿಕ ಸರ್ಕಾರಿ ವೈದ್ಯಾಧಿಕಾರಿ ಕ್ಯಾ|| ಹರ್ಬಿಲ್ಲ್‌ಹಾಲ್ಟ್ರವರು ತಿಳಿಸಿದ್ದಾರೆ ಅಟಾಮಿಕ್ ವಿಭಜನೆಯಿಂದ ಉಂಟಾಗುವ 'ಗಾಮಾ' ಕಿರಣಗಳಿಂದಲೇ ಇಷ್ಟು ಜನ ಸಾವಿಗೆ ತುತ್ತಾದದ್ದು. ಈ 'ಗಾಮಾ' ಕಿರಣಗಳು ಮೂಳೆಗಳನ್ನೂ ಬಿಡದೆ ಸುಟ್ಟು ರಕ್ತನಾಳಗಳನ್ನೂ ನಾಶಮಾಡಿ ಮನುಷ್ಯನನ್ನು ಸಾವಿಗೆ ಈಡಾಗುವಂತೆ ಮಾಡುತ್ತವೆ ಈ ಕ್ಷಯರೋಗಕ್ಕೆ ಜಪಾನಿ ವಿಜ್ಞಾನಿಗಳು ಇನ್ನೂ ತಕ್ಕ ಚಿಕಿತ್ಸೆಯನ್ನು ಕಂಡುಹಿಡಿಯಲು ಸಮರ್ಥರಾಗಿಲ್ಲ. ಈ ರೀತಿ ಪ್ರಾಣಾಪಾಯಕ್ಕೀಡಾಗುತ್ತಿರುವವರನ್ನು ರಕ್ಷಿಸಲು ಅಮೇರಿಕನ್ನರು ಈಗ ಆಸ್ಪತ್ರೆಗಳನ್ನೇರ್ಪಡಿಸಿ ಚಿಕಿತ್ಸೆ ಮಾಡುತ್ತಿದ್ದಾರೆ ೩ ಲಕ್ಷ ಜನಸಂಖ್ಯೆ ಇದ್ದ ನಾಗಸಾಕಿಯಲ್ಲೀಗ ಕೇವಲ ೨ ಲಕ್ಷ ಜನರಿದ್ದಾರೆ ಜನಾರೋಗ್ಯ ರಕ್ಷಣೆಯು ಮಹತ್ತರ ಸಮಸ್ಯೆಯಾಗಿ ಪರಿಣಮಿಸಿದೆ ಅಮೇರಿಕನ್ನರು ನೈರ್ಮಲ್ಯ ವ್ಯವಸ್ಥೆ ಮಾಡಿ ಈ 'ಕ್ಷಯ' ಹರಡದಂತೆ ತಡೆಗಟ್ಟಲು ಪ್ರಯತ್ನಿಸುತ್ತಿದ್ದಾರೆ

ಇಂಡೋ ಚೀಣಾದಲ್ಲಿ ಮಹಾ ಚುನಾವಣೆ

ಈಗಿನ ರೀತಿಯಲ್ಲೇ ಮಿಗಿಲು ಕಾರ್ಯಾಚರಣೆಗಳು ನಡೆಯುತ್ತಾ ಹೋದಲ್ಲಿ ಇನ್ನು ೪ ತಿಂಗಳುಗಳಲ್ಲಿ ಇಂಡೋ ಚೀಣಾದಲ್ಲಿ ಮಹಾಚುನಾವಣೆ ನಡೆಯುವ ಸಂಭವವಿದೆ ಕೊಚಿನ್‌ಚೀಣಾ ಕಾಂಬೋಡಿಯಾ ಮತ್ತು ಅನಾಂ ಕಾಲನಿಗಳಲ್ಲಿ ಮಹಾಚುನಾವಣೆ ನಡೆಯುತ್ತಿರುವುದು ಇದೇ ಮೊದಲು ಎಂದು ರಾಯಿಟರ್ ಬಾತ್ಮೀದಾರರ ಸುದ್ದಿ

ಶ್ರೀ ಸರಾಫ್ ಬಸಪ್ಪನವರ ನಿಧನ

ಬೆಂಗಳೂರು ಟವನ್ ನಿವಾಸಿಗಳಾದ ಮು|| ರಾ|| ಸರಾಫ್ ಬಸಪ್ಪನವರು ಇದೇ ತಿಂಗಳು ೧೫ ನೆಯ ತಾರೀಖಿನ ದಿವಸ ಮೋಟಾರಿನ ಅಪಘಾತದಿಂದ ಮರಣ ಹೊಂದಿದರೆಂಬ ವಿಷಯವನ್ನು ಬರೆಯಲು ಅತ್ಯಂತ ವಿಷಾದವೆನಿಸುತ್ತದೆ ಇವರು ಅಂದು ಬೆಳಿಗ್ಗೆ ೯ ಘಂಟೆ ಸಮಯದಲ್ಲಿ ತಮ್ಮ ಕಾರಿನಲ್ಲಿ ಬರುತ್ತಿರುವಾಗ್ಗೆ ಕಲಾಸಿಪಾಳ್ಯದ ಚೌಕದ ಬಳಿ ಒಂದು ಲಾರಿಯ ಹೊಡತಕ್ಕೆ ಸಿಕ್ಕಿ ಕಾರು ಉರುಳಿತು. ಇದರಿಂದ ಇವರ ತಲೆ ಒಡೆದು ಮಧ್ಯಾಹ್ನ ೧೨ ೩೦ ಘಂಟೆ ಸಮಯಕ್ಕೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಪ್ರಾಣ ಬಿಟ್ಟರೆಂದು ತಿಳಿದುಬರುತ್ತದೆ. ಇವರು ಮಹಾಗುರುಸೇವಾಭಿಮಾನಿಗಳಾಗಿದ್ದರು. ಇದೇ ವರ್ಷ ಇವರು ಬೆಂಗಳೂರಿನಲ್ಲಿ ಒಂದು ಇಂಟರ್ ಕಾಲೇಜನ್ನು ಸ್ಥಾಪಿಸಲು ೫೦ ಸಾವಿರ ರೂಪಾಯಿಗಳನ್ನು ದಾನ ಮಾಡಿದ್ದರು ಸದರಿ ಕಾಲೇಜು ಇವರ ಹೆಸರಿನಿಂದಲೇ ಸ್ಥಾಪಿತವಾಗಿರುವುದು ಇದಲ್ಲದ ಇವರು ಅನೇಕ ಧರ್ಮಸಂಸ್ಥೆಗಳಿಗೆ ವಿಶೇಷ ದಾನಗಳನ್ನು ಮಾಡಿರುವರು ಇವರು ದೊಡ್ಡ ಶ್ರೀಮಂತರಾಗಿದ್ದರೂ ಅತ್ಯಂತ ನಿಗರ್ವಿಗಳಾಗಿದ್ದು ಸರ್ವರ ಪ್ರೀತಿಗೂ ಪಾತ್ರರಾಗಿದ್ದರು ಇಂತಹ ಧರ್ಮಾತ್ಮರು ಅಕಸ್ಮಾತ್ ಮರಣ ಹೊಂದಿದುದು ವೀರಶೈವ ಸಮಾಜದ ದುರ್ದೈವವೆಂದೇ ಹೇಳಬೇಕಾಗಿದೆ. ಶ್ರೀ ಜಗದಾಚಾರ್ಯರು ಮೃತರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಪ್ರಾರ್ಥಿಸುತ್ತೇವೆ.

|| ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ||

ಅನುಷ್ಠಾನ ಮಹೋತ್ಸವ, ರಾಯಚೂರು

ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲದಲ್ಲಿ ಶಾಸ್ತ್ರಾಭ್ಯಾಸ ಮಾಡುತ್ತಿರುವ ರಾಯಚೂರು ಶಿಖರ ಮಠಾಧ್ಯಕ್ಷರಾದ ಶ್ರೀ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳವರು. ಇಲ್ಲಿಗೆ ಆಗಮಿಸಿ ಅನುಷ್ಠಾನವನ್ನು ಪ್ರಾರಂಭಿಸಿದರು. ರಾಯಚೂರಲ್ಲಿರುವ ಶ್ರೀಮಂತ ಸಕ್ರಪ್ಪಗೌಡರು ಇವರ ಅನುಷ್ಠಾನಕ್ಕಾಗಿ ತಮ್ಮ ತೋಟದಲ್ಲಿರುವ ವಟವೃಕ್ಷದ ಕೆಳಗೆ ಸುಂದರವೂ ಬಂಧುರವೂ ಆದ ಶಿಲಾಮಂದಿರವನ್ನು ನೂತನವಾಗಿ ನಿರ್ಮಿಸಿದರು. ಶ್ರೀಸ್ವಾಮಿಗಳವರು ೪೧ ದಿನಗಳ ವರೆಗೆ ಮೌನದಿಂದ ಅನುಷ್ಠಾನವನ್ನು ಪೂರೈಸಿದರು. ಇವರು ಅನುಷ್ಠಾನಕ್ಕೆ ಕುಳಿತ ೬ ದಿನಗಳ ಮೇಲೆ ಸ್ಥಳ ಪರಸ್ಥಳಗಳಿಂದ ಬಹು ಜನರು ಇವರ ದರ್ಶನಕ್ಕೆ ಬರಲು ಪ್ರಾರಂಭಿಸಿದರು. ರಾಯಚೂರಿನ ವೈಶ್ಯ ಮಹನೀಯರೂ ಮಹಿಳೆಯರೂ ಬಂದು ನಾನಾ ವಿಧವಾಗಿ ಸೇವೆ ಸಲ್ಲಿಸುತ್ತಿದ್ದರು ಭಜನ ಸಂಘದವರು. ತ್ರಿಕಾಲದಲ್ಲಿಯೂ ಭಜನೆಯನ್ನು ಮಾಡುತ್ತಿದ್ದರು. ಒಂದೆ ಜನಗಳು, ಎಲ್ಲಿನೋಡಿದರಲ್ಲಿ ಶಿವಸ್ತೋತ್ರಗಳನ್ನು ಹಾಡುತ್ತಿದ್ದರು. ಜಾತಿಭೇದವಿಲ್ಲದೆ, ಬ್ರಾಹ್ಮಣ, ಕ್ಷತ್ರಿಯ ವೈಶ್ಯ, ಮುಸಲ್ಮಾನ್ ಮೊದಲಾದವರೂ, ಸರ್ಕಾರಿ ಅಧಿಕಾರಿಗಳೂ ಆಗಮಿಸಿ, ದರ್ಶನವನ್ನು ಪಡೆಯುತ್ತಿದ್ದರು. ಇವರ ಅನುಷ್ಠಾನ ಸಮಯದಲ್ಲಿ, ಕಾಶೀಜಗದ್ಗುರುಗಳವರಿಂದ ಆಶೀರ್ವಾದರೂಪ ಸಂದೇಶವೂ ಸಹ ಬಂದಿತು ಆ ಸಮಯದಲ್ಲಿ ಚಿಕ್ಕ ಸೂಗೂರು ಸ್ವಾಮಿಗಳವರು ಆಗಮಿಸಿದ್ದರಿಂದ ಜನಗಳಿಗೆ ಮಹಾನಂದವುಂಟಾಯಿತು ಆ ಸಮಯದಲ್ಲಿ ಅನುಷ್ಠಾನ ಮಂದಿರದ ಮುಂಭಾಗದಲ್ಲಿ ೪ ಜನ ಮಾಹೇಶ್ವರ ವಟುಗಳಿಗೆ ದೀಕ್ಷೋಪನಯನಗಳು ನೆರವೇರಿದವು ರಾಯಚೂರಿನಲ್ಲಿರುವ, ವೀರಶೈವ ಬೋರ್ಡಿಂಗಿಗೆ ೨೫೦೦೦ ರೂಪಾಯಿಗಳನ್ನು ದಾನ ಮಾಡಿ ಮಹಾ ಕೀರ್ತಿಶಾಲಿಗಳಾಗಿರುವ ಶ್ರೀಮಂತ ಯಜಮಾನ ಸಕ್ರಪ್ಪಗೌಡರು ತಮ್ಮ ಉಭಯಕುಟುಂಬದವರೊಡನೆ ಶಿವದೀಕ್ಷೆಯನ್ನು ಹೊಂದಿದರು. ಆ ದಿವಸ ೨೪ ಸಾವಿರ ಜನಗಳಿಗೆ ಅನ್ನ ಸಂತರ್ಪಣೆಯಾಯಿತು. ಬಳಿಕ ಶ್ರೀಗಳವರು 'ಭಕ್ತಿಮಾರ್ಗ' ಎಂಬ ವಿಷಯದ ಮೇಲೆ ಭಾವ ಪೂರ್ಣವಾದ ಉಪದೇಶವನ್ನು ಮಾಡಿ, ಸರ್ವರನ್ನೂ ಸಂತೋಷಭರಿತರನ್ನಾಗಿ ಮಾಡಿದರು ಶ್ರೀಗಳವರು ಚಿಕ್ಕವಯಸ್ಸಿನವರಾದಾಗ್ಯೂ ಇಂತಹ ಅದ್ಭುತ ಶಕ್ತಿಯು ಪ್ರಾಪ್ತವಾಗಿರುವದು ನಮ್ಮಗಳ ಸುದೈವವೆಂದು ಸರ್ವರೂ ಕೊಂಡಾಡಿದರು. ಇವರ ಅನುಷ್ಠಾನ ಸಮಯದಲ್ಲಿ ರಾಯಚೂರಿನ ಅಗರ್ಭ ಶ್ರೀಮಂತರೂ, ರಾಜಮಾನ್ಯರೂ ಆದ ಜನಾಬ್ ನಸರುದ್ದೀನ್ ಬರ್ದೇಸಾಹೇಬರು, ಜಮೀನ್‌ದಾರ ಮಾಲಿ ಪಾಟೀಲ ಶರಣಪ್ಪಗೌಡರು, ರಾಜಾ ಅಂಡ್ ಸನ್ಸ್ ಗುಂಡೋಜೀರಾವ್ ಮೊದಲಾದವರು ವಿಶೇಷವಾದ ಸೇವೆಯನ್ನು ಸಲ್ಲಿಸಿದರು ಈ ಮಹಾಕಾರ್ಯದಲ್ಲಿ ಭಾಗವಹಿಸಿದ ಸರ್ವರಿಗೂ ಶ್ರೀ ಜಗದ್ಗುರು ಪಂಚಾಚಾರ್ಯರು ಆಯುರಾರೋಗ್ಯವನ್ನುಂಟುಮಾಡಲೆಂದು ಪ್ರಾರ್ಥಿಸುವೆ.

ಹುತ್ತನೂರು ಅರಕೇರಿ ಮಠದ
ದಿದ್ದಿ ಬಸವಯ್ಯ, ರಾಯಚೂರು.

ಸ್ವೀಕಾರ

ನಿಜಾಮ ಇಲಾಖಾ ರಾಯಚೂರು ಶಿಖರಮಠಾಧ್ಯಕ್ಷರಾದ ಶ್ರೀ ಗುರುಲಿಂಗಶಿವಾಚಾರ್ಯಸ್ವಾಮಿಗಳವರ ಅನುಷ್ಠಾನ ಮಹೋತ್ಸವವು ಸಮಾಪ್ತಿಗೊಂಡ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 6 ರೂಪಾಯಿಗಳು ಮತ್ತು ಇದೇ ಟವನ್ನಿನಲ್ಲಿರುವ ಶ್ರೀ ಶಿವಾನಂದ ಭಜನ ಸಂಘದವರು ಸಮರ್ಪಿಸಿದ 2 ರೂಪಾಯಿ ಒಟ್ಟು 8 ರೂ. ಗಳು ವೇ|| ಹುತ್ತನೂರು ಅರಕೇರಿಮಠದ ದಿದ್ದಿ ಬಸವಯ್ಯನವರ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರುಗಳಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಹಾರೈಸುತ್ತೇವೆ.

ಸಿದ್ಧಾಂತಶಿಖಾಮಣಿ

ವೀರಶೈವಮತವನ್ನು ಜನಸ್ಥಿರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಬ್ರಹ್ಮಾಕರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು. ವೀರಶೈವಮತದಲ್ಲಿ ಸದ್ಯಃ ದೊರೆಯುತಕ್ಕ ಗ್ರಂಥಗಳಲ್ಲೆಲ್ಲ ಇದು ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು. ಈ ಗ್ರಂಥವು ಈಗ್ಗೆ ಸುಮಾರು **೨ಸಾವಿರ** ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವುದು. ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭವಂತಿರುವುದರಿಂದ ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿದ್ದಾರೆ. ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡುವದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ವವು ಪಾಠಕರಿಗೆ ವೇದ್ಯವಾಗುವುದು. ಪಾಠಕರ ಅನುಕೂಲಕ್ಕಾಗಿ ವಿಷಯಕ್ರಮವಾಗಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೬೩೦ ಪುಟಗಳಿಂದ ಕೂಡಿದ್ದು, ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರು ರೇಣುಕಾಚಾರ್ಯರ ಲೀಲಾತ್ರಯವಾದ ಮನೋಹರವಾದ ಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಶೈವಮತಾವಲಂಬಿಗಳಾದ ಪ್ರತಿಯೊಬ್ಬರೂ ಈ ಅಮೂಲ್ಯಗ್ರಂಥವನ್ನು ಖರೀದಿಮಾಡಿಕೊಳ್ಳುವುದು ಅವಶ್ಯವಾಗಿ ಓದಬೇಕು. **ಬೆಲೆ ೩ ರೂಪಾಯಿ**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಐವತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ X ೧೪ ಬೆಲೆ ೧ಕ್ಕೆ	೦—೬—೦
ಶ್ರೀರೇಣುಕಾಚಾರ್ಯರ ಲಿಂಗೋದ್ಭವದ ಫೋಟೋ (ನಾನಾ ವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ X ೧೦ ಬೆಲೆ	೦—೬—೦
ಶ್ರೀ ೬ ಕಾರ್ಯೋದ್ಧಾರಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ X ೧೦ ಬೆಲೆ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ X ೧೦ ಬೆಲೆ ೧ಕ್ಕೆ	೦—೩—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಲಿಂಗಗರ್ಭದಿಂದ ಅವತರಿಸಿರುವ ಫೋಟೋ	೦—೨—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೬
ಶ್ರೀಶೈಲಕ್ಷೇತ್ರ ಸೂರ್ಯಸಿಂಹಾಸನಾಧೀಶ ಶ್ರೀ ಜಗದ್ಗುರು ಪಂಡಿತಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೧—೬
ಶ್ರೀ ಕಾಶಿ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಕಾಶೀಜಗದ್ಗುರುಗಳು ಶ್ರೀರಂಭಾಪುರಿ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—೬
ಶ್ರೀ ಉಜ್ಜಯಿನೀ ಸಿಂಹಾಸನಾಧೀಶ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಉಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
೨೦ ರೂಪಾಯಿ ಕಂಟ್ರೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೬

ಸರ್ವೋತ್ತಮವಾದ ಮತಗ್ರಂಥಗಳು.

ಗೋತ್ರಸೂತ್ರಪಟ (೨ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೭ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿಶಿವತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಪಂಚಾಚಾರ್ಯಪ್ರಕಾಶ	೨ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೬ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ವಸ್ಪಷ್ಟೀಕರಣ (೨ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ-ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲ ಮಾತ್ರ. ಚಿಕ್ಕಸೈಜು)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿವಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕ ಸ್ವರಯುಕ್ತವಾದುದು ೨ನೆಯ ಆವೃತ್ತಿ)	೧। ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಶ್ರೀಕರಭಾಷ್ಯಂ (ಚತುಸ್ಸೂತ್ರಿ)	೧॥ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧॥ ರೂ
ವೀರಶೈವರತ್ನ (೨ನೆಯ ಆವೃತ್ತಿ, ೩೦ ಹತ್ತುವ ಫೋಟೋಗಳಿರುವುವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರಿಸಲ್ಪಟ್ಟಿದೆ)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೩ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*)	8 As
Speeches by Pandit Shri Kashinatha Shastriji (*English*)	12 As
लिंगधारणचन्द्रिका (संस्कृत)	३ रु
वीरशैवरत्न (मराठी)	१ रु
महानारायणोपनिषद् (वीरशैवभाष्य-संस्कृत)	१ रु
सिद्धांतशिखामणि (मूल)	८ आ
नंदिकेश्वरकारिका (संस्कृत)	२ आ

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯನನಸುಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ

ಸ್ಥಳದವರಿಗೆ ೨ ರೂ ೪ ಆಣೆ

ಪರಸ್ಥಳದವರಿಗೆ ೨ ರೂ ವಿ ಪಿ ಖರ್ಚು ಸೇರಿ ೨ ರೂ ೪ ಆಣೆ

ಸಂಪುಟ ೧೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೬ನೇ ನವೆಂಬರ್ ೧೯೪೫ [ಸಂಚಿಕೆ ೨೮

ಕಾಶೀ ವೀರಶೈವ ವಿದ್ವತ್ಸಂಘದ ವಾರ್ಷಿಕಾಧಿವೇಶನ

ತಾ॥ ೪ ೧೧ ೪೫ ನೇ ದಿನ ಶ್ರೀಮಜ್ಜಗದ್ಗುರು ವಿಶ್ವಾರಾಧ್ಯ ಜ್ಞಾನಸಿಂಹಾಸನ ಸಂಸ್ಥಾನ ಮಠದಲ್ಲಿ ಪದ್ಧತಿಯಂತೆ ವಿದ್ವತ್ಸಂಘದ ವಾರ್ಷಿಕಾಧಿವೇಶನವು ವೈಭವಪೂರ್ವವಾಗಿ ನೆರವೇರಿತು ಭಾಷಣಸ್ಪರ್ಧೆ, ಸಿದ್ಧಾಂತಶಿಖಾಮಣಿಯ ಕಂಠಪಾಠಸ್ಪರ್ಧೆ, ಲೇಖನ ಸ್ಪರ್ಧೆ ಮುಂತಾದ ವಿವಿಧ ಕಾರ್ಯಕ್ರಮಗಳನ್ನೇರ್ಪಡಿಸ ಲಾಗಿತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರೂ ಪ್ರಸಿದ್ಧ ಸಾಹಿತಿಗಳೂ ಆದ ಶ್ರೀಮಾನ್ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಎಮ್ ಎ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು ವಿಶ್ವವಿದ್ಯಾನಿಲಯದ ಪ್ರೊಫೆಸರರು, ವಿದ್ಯಾರ್ಥಿಗಳು, ದಕ್ಷಿಣದೇಶದ ಯಾತ್ರಿಕರು ಮುಂತಾದವರಿಂದ ಸಭಾಭವನವು ತುಂಬಿ ಹೋಗಿದ್ದಿತು ಮೊದಲು ಮಂಗಲಾಚರಣೆ ನಾಟಕ ವರದಿಯನ್ನೋದುವಿಕೆ, ಸ್ಪರ್ಧೆಯಲ್ಲಿ ಜಯಶಾಲಿಗಳಾದ ವಿದ್ವಾಂಸರಿಗೆ ಬಹುಮಾನವಿನಿಯೋಗಗಳಾದನಂತರ ಶ್ರೀಮಾನ್ ಮಾಸ್ತಿಯವರ ಭಾಷಣವು ಆರಂಭ ವಾಯಿತು

ಶ್ರೀಯುತರು ತಮ್ಮ ಅವ್ಯಾಹತವಾದ ವಾಗ್ವೈಖರಿ ಯಿಂದ ಸರ್ವ ಸಭಿಕರ ಮನಸ್ಸನ್ನು ಸೆಳೆಯುತ್ತ, ಪ್ರಾಸಂಗಿಕವಾಗಿ ಶ್ರೀ ಜಗದ್ಗುರು ವೀರಭದ್ರಶಿವಾಚಾರ್ಯ ಮಹಾಸ್ವಾಮಿಗಳವರ ಬಗ್ಗೆ " ವೀರಶೈವ ಸಂಸ್ಕೃತಿಗೂ ಸಾಹಿತ್ಯಾಭಿವೃದ್ಧಿಗೂ ಜೀವನವನ್ನೇ ಧಾರೆಯೆರೆದ ಮಹಾಚಾರ್ಯರಲ್ಲಿ ನನಗೆ ಅತ್ಯಂತ ಪೂಜ್ಯಭಾವನೆ ಯಿದೆ ಎಂದೂ, ಇವರ ಆಧಿಪತ್ಯವಲ್ಲಿ ಶೈವ ವೈಷ್ಣವಾದಿ ಧರ್ಮಗಳು ಪರಸ್ಪರ ಸೌಹಾರ್ದದಿಂದ ಸಹಕರಿಸಿ ತಮ್ಮ ತಮ್ಮ ಧ್ಯೇಯಗಳನ್ನು ಸಾಧಿಸುವಂತೆ, ಲೋಕಕಲ್ಯಾಣ ವಾಗುವಂತೆ, ಅನೇಕ ಮಹತ್ಕಾರ್ಯಗಳಾಗುವದನ್ನು ಕಾಣಲು ನಾನು ಆಶಿಸುತ್ತೇನೆಂದೂ ಮುಂತಾಗಿ ಹೇಳಿ ಮಹಾಸನ್ನಿಧಿಯಲ್ಲಿ ತಮ್ಮ ಹಾರ್ದಿಕ ವಂದನೆಗಳನ್ನು ಸಮರ್ಪಿಸಿದರು ಆಮೇಲೆ ಶ್ರೀ ೧೦೮ ಜಗದ್ಗುರು ಮಹಾಸನ್ನಿಧಾನದವರು ಶ್ರೀಮಾನ್ ಮಾಸ್ತಿಯವರ ಅಮೋಘವಾದ ಸಾಹಿತ್ಯಸೇವೆಗಾಗಿ ಸಂತೋಷವನ್ನು ಪ್ರಕಟಿಸುತ್ತ ಸಾಹಿತ್ಯ ಧರ್ಮದ ಬಗ್ಗೆ ಬಹು ಸ್ವಾರಸ್ಯ ವಾಗಿ ವಿವೇಚನಾತ್ಮಕವಾಗಿ ಉಪದೇಶಿಸಿದರು ಸರ್ವರ ಆಭಾರ ಮನ್ನಿಸುವದಾದ ಮೇಲೆ ಜಯಜಯಕಾರ ದೊಡನೆ ಸಭಾ ವಿಸರ್ಜನೆಯಾಯಿತು

ಆಮೇಲೆ ಮಾನ್ಯ ಮಾಸ್ತಿಯವರು ಮಹಾ ಪೀಠದ ಕೈಲಾಸ ಮಂಟಪ ಜ್ಞಾನಪೀಠ, ಜ್ಞಾನಮಂದಿರದ ಕಟ್ಟಡ, ಶಿಲಾಶಾಸನಾದಿಗಳನ್ನು ನೋಡಿ ಆನಂದೋ ದ್ಗಾರವನ್ನು ತೆಗೆದರಲ್ಲದೆ ಜಗದ್ಗುರು ಮಹಾಸನ್ನಿಧಿಯ ದರ್ಶನಕ್ಕೆ ಬಂದ ಸಂದರ್ಭದಲ್ಲಿ ಪರಿಷತ್ತಿನವರು ಪ್ರಕಟಿ ಸಿದ " ಕನ್ನಡನಾಡಿನ ಚರಿತ್ರೆಗಳು " ಎಂಬ ಪುಸ್ತಕದ ಮೇಲೆ ವಿಚಾರಣೆ ನಡೆಯಿತು ಅದರಲ್ಲಿ ವೀರಶೈವರ ಬಗ್ಗೆ ಬರೆದ ಒಂದು ವಾಕ್ಯ ತಪ್ಪು ತಪ್ಪೆಂದು ಮಾಸ್ತಿಯವರು ಉದ್ಗಾರವನ್ನು ತೆಗೆಯುತ್ತ ತಮ್ಮ ಸೌಜನ್ಯವನ್ನು ಪ್ರಕಟಿಸಿದರು ಮಾನ್ಯರ ಈ ವರ್ತನೆಯು ಕನ್ನಡ ನಾಡಿನ ಹಿರಿಯ ಸಾಹಿತಿಗಳಿಗೆ ಒಪ್ಪುವಂತಹುದೇ ಆಗಿದೆ ವೇದಾಗಮ ಪ್ರತಿಪಾದ್ಯವಾದ ವೀರಶೈವ ಮತದಮೇಲೆ ವೃಥಾ ಆಕ್ಷೇಪಿಸುವದನ್ನು ಬಿಟ್ಟು ಇನ್ನು ಮೇಲಾದರೂ ಮಾನ್ಯರ ಮಾರ್ಗವನ್ನನು ಸರಿಸಿ ಬುದ್ಧಿಗಲಿಯುವದು ಒಳಿತು ಈ ವಿಷಯಗಳಲ್ಲಿ ಸಂದೇಹ ಬಂದಲ್ಲಿ ಅದರ ನಿವಾರಣೆಯ ಬಗ್ಗೆ ಪಂಚಾಚಾರ್ಯರು ಸದಾ ಸಿದ್ಧರೇ ಇದ್ದಾರೆ ಜಗದೀಶ್ವರನ ಅನುಗ್ರಹದಿ ಎಲ್ಲರಿಗೂ ಸದ್ಬುದ್ಧಿಯುಂಟಾಗಿ ಶೈವ ವೈಷ್ಣವಾದಿ ಸಕಲ ಮತಗಳು ಪರಸ್ಪರ ಸ್ನೇಹದಿಂದ ಸಹಕರಿಸುವಂತಾಗಿ ಜಗತ್ಕಲ್ಯಾಣವಾಗಲೆಂದು ಹಾರೈಸುತ್ತೇನೆ

ಪ್ರತ್ಯಕ್ಷದರ್ಶಿ

ಜೋರ್ಡರ್ ಸೆಕೆಂಡರಿ ಶಾಲೆಯ ' ಬೆಳ್ಳಿಹಬ್ಬ ' ಸಮಾರಂಭ, ಹೂವಿನಹಡಗಲಿ

ಇಲ್ಲಿಯ ಜೋರ್ಡರ್ ಸೆಕೆಂಡರಿ ಶಾಲೆಗೆ ೨೫ ವರ್ಷ ಗಳು ತುಂಬಿದುದರಿಂದ ರಜತೋತ್ಸವವು ನೆರವೇರಿಸ ಲ್ಪಟ್ಟಿತು ಶಾಲೆಯ ಮಹಾದ್ವಾರವು ತಳಿರು ತೋರಣ ರಂಭಾಸ್ತಂಭಗಳಿಂದಲೂ ಶಾಲೆಯ ' ಬೆಳ್ಳಿಹಬ್ಬ ' ಮತ್ತು ' ಸುಸ್ವಾಗತ ' ಮೊದಲಾದ ಬೋರ್ಡುಗಳಿಂದಲೂ ಕಂಗೊಳಿಸುತ್ತಿತ್ತು ಮುಂಭಾಗವು ಮನೋಹರ ವಾದ ಪೆಂಡಾಲಿನಿಂದ ಶೋಭಿಸುತ್ತಿತ್ತು

ತಾ॥ ೮ ೧೧ ೪೫ ಗುರುವಾರ ಮುಂಜಾನೆ ೭ ಘಂಟೆಗೆ ಶಾಲೆಯ ಹೊಸ ಮತ್ತು ಹಳೆ ವಿದ್ಯಾರ್ಥಿಗಳಿಂದ ಊರಲ್ಲಿ ಮೆರವಣಿಗೆಯಾಗಿ, ಶಾಲೆಯಲ್ಲಿ ಸಭೆ ಕೂಡಿತು ಸಭೆಗೆ ತಹಶೀಲ್ದಾರರಾದ ಶ್ರೀ ಜಿ ನಾರಾಯಣಶೆಟ್ಟಿ ಯವರು ಅಧ್ಯಕ್ಷರಾದರು ಮೊದಲು ಪ್ರಾರ್ಥನೆಯಾಗಿ ಹಳೆ ವಿದ್ಯಾರ್ಥಿಯಾದ ಶ್ರೀ ಯಸ್ ಮಲ್ಲಪ್ಪ ಬಿ ಎ ಇವರ ಸ್ವಾಗತಪರ ಭಾಷಣವೂ ಶ್ರೀ ಯಸ್ ಗುರು ಲಿಂಗಪ್ಪನವರ ' ಸ್ವಾಗತಾಷ್ಟಕ ' ಪದ್ಯ ಪತ್ರಿಕಾರ್ಪಣವೂ ಆದ ಬಳಿಕ ಮಾನ್ಯ ಅತಿಥಿಗಳಾದ ಹೊಸಪೇಟೆ ಶ್ರೀ ಬಿ ಅನಂತಾಚಾರ್ಯ ಬಿ ಎ, ಬಿ ಯಲ್, ಯಂ ಯಲ್ ಎ, ಇವರ ಬೋಧಪ್ರದ ಭಾಷಣವಾಯಿತು ಆ ಮೇಲೆ ' ಶಾಲೆಯ ಸಂಕ್ಷಿಪ್ತ ಇತಿಹಾಸ ' ಶಾಲೆಯ ರಜತೋತ್ಸವದಲ್ಲಿ ಹಳೆ ಹುಡುಗರಿಗಿರುವ ನಿಕಟ ಸಂಬಂಧ ' ' ಇದರಲ್ಲಿ ಹಳೆ ಹುಡುಗರ ಕರ್ತವ್ಯ ' ' ರಜತೋತ್ಸವವೆಂದರೇನು ' ' ಏತಕ್ಕಾಗಿ ಆಚರಿಸ ಬೇಕು ' ಎಂಬೀ ವಿಷಯಗಳ ಮೇಲೆ ಶ್ರೀಯುತರಾದ ಜೆ ಶಿವನಂಭಟ್ಟರು, ಯಸ್ ಗುರುಲಿಂಗಪ್ಪನವರು, ಜೆ ಸಣ್ಣವೀರಪ್ಪನವರು, ಹೆಚ್ ಆರ್ ವಸುಪಾಲಪ್ಪ ನವರು ಮತ್ತು ಯಸ್ ಮಲ್ಲಪ್ಪನವರು ಮುಂತಾದವರ ಭಾಷಣಗಳಾದವು ತರುವಾಯ ಅಧ್ಯಕ್ಷರ ಸಮಾರೋಪ ಭಾಷಣವಾದ ಮೇಲೆ ಸಭೆಯು ಉಪಸಂಹೃತವಾಯಿತು

೯ ನೇ ತೇದಿ ಶುಕ್ರವಾರ ಮುಂಜಾನೆ ೮ ಘಂಟೆಗೆ ಧ್ವಜಾರೋಹಣ ಶಾರೀರಕ ಸಾಹಸ ಪ್ರದರ್ಶನಗಳಾದ ವೇಲೆ ಮಧ್ಯಾಹ್ನ ೩ ಘಂಟೆಗೆ ಶಾಲೆಯ ಅಂಗಣದಲ್ಲಿ ಹಾಕಿರುವ ವಿಶಾಲವಾದ ಜ್ಯೂಬಿಲಿ ಥಿಯೇಟರಿನಲ್ಲಿ ಸಭೆ ನೆರೆಯಿತು ಸಭೆಗೆ ಎಲ್ಲಾ ಅಧಿಕಾರಿಗಳೂ ಪುರ ಜನರೂ, ಪರಸ್ಥಳದವರೂ ವಿದ್ಯಾರ್ಥಿಗಳೂ ಬಂದಿದ್ದರು ಮ॥ ಆರ್ ಪಿ ಪಾಲ್ ಜಿಲ್ಲಾ ಕಲೆಕ್ಟರ್ ಸಾಹೇಬ ರವರು ಸಭಾಪತಿಸ್ಥಾನವನ್ನಲಂಕರಿಸಿದನಂತರ ಪ್ರಾರ್ಥನೆ ಯಾಯಿತು ಬಳಿಕ ಶ್ರೀ ಕೆ ಗೋವಿಂದರಾವ, ಹೆಡ್ ಮಾಸ್ತರ್ ಬಿ ಎ, ಇವರ ಅಡ್ರೆಸ್ಸು ಸಮರ್ಪಣವೂ, ಕನ್ನಡ ಪಂಡಿತರಾದ ವಿದ್ವಾನ್ ವೇ॥ ಶಿತಿಕಂಠಶಾಸ್ತ್ರಿ ಗಳವರ ' ಐದಲರ ಮಾಲೆ ' ಯ ಅರ್ಪಣವೂ, ವಿದ್ಯಾರ್ಥಿ ಯಸ್ ಯಂ ಕೊಟ್ರಬಸವಯ್ಯನ ಸ್ವಾಗತ ಭಾವ ಣೆಯೂ, ಶ್ರೀ ಜೆ ರಾಮ ಭಟ್ಟರವರ ಶಾಲೆಯ ವರದಿ ಓದುವಿಕೆಯೂ ಬಾಚಿಗೊಂಡನಹಳ್ಳಿ ಶ್ರೀ ಕೆ ಚನ್ನಬಸ ವನಗೌಡರು ಬಿ ಎ, ಇವರ ಹಾಸ್ಟಲಿಗೂ-ಶಾಲೆಗೂ ಇರುವ ಸಂಬಂಧ ದ ವೇಲೆ ಭಾಷಣವೂ ಆದ ಬಳಿಕ ಕಲೆಕ್ಟರವರ ಹಸ್ತದಿಂದ ಪಂದ್ಯಾಟಗಳಲ್ಲಿ ಗೆದ್ದ ವಿದ್ಯಾರ್ಥಿ ಗಳಿಗೆ ಬಹುಮಾನ ಹಂಚುವ ಸಮಾರಂಭವೂ ಜರುಗಿದ ನಂತರ ಕಲೆಕ್ಟರ್ ದೊರೆಗಳ ಸಮಾರೋಪ ಭಾಷಣ ದೊಡನೆ ಸಭೆಯು ಮುಗಿಯಿತು.

ಪ್ರತ್ಯಕ್ಷದರ್ಶಿ

ದುಃಖವಾರ್ತೆ

ಬೆಳಗಾಂವ ನಗರದಲ್ಲಿರುವ ಪಂ॥ ಶ್ರೀಶೈಲನಾಥ ಶಾಸ್ತ್ರಿಗಳ ಪೂಜ್ಯಪಿತೃಗಳಾದ ಗುರುಬಸವಯ್ಯನವರು ತಮ್ಮ ೯೨ನೆಯ ವಯಸ್ಸಿನಲ್ಲಿ ಶಿವಾಧೀನರಾದರು. ಇವರು ತಾವು ಮರಣ ಹೊಂದುವವರೆಗೂ ತ್ರಿಕಾಲದಲ್ಲಿ ಯೂ ಶೀತಜಲಸ್ನಾನಪೂರ್ವಕ ಶಿವಪೂಜೆಯನ್ನು ಮಾಡು ತ್ತಿದ್ದರು ಇವರು ಯಾವಾಗಲೂ ಪಂಚಾಚಾರ್ಯರ ಧ್ಯಾನ ವನ್ನು ಮಾಡುತ್ತಾ ಅವರ ಅದ್ಭುತಲೀಲೆಯನ್ನು ಸರ್ವ ರಿಗೂ ಉಪದೇಶಿಸುತ್ತಿದ್ದರು ಇವರು ಪ್ರಾಣ ಬಿಡುವದ ಕ್ಕಿಂತಲೂ ಎರಡು ದಿವಸ ಮೊದಲು ' ನಾನು ಇಂಥ ದಿವಸ, ಇಷ್ಟು ಹೊತ್ತಿಗೆ, ಲಿಂಗೈಕ್ಯನಾಗುತ್ತೇನೆ, ಆ ಸಮ ಯದಲ್ಲಿ ನನ್ನ ಮಸ್ತಕದಮೇಲೆ ಪಂಚಾಚಾರ್ಯರ ಭಾವ ಚಿತ್ರವನ್ನು ಇಡಬೇಕು ' ಎಂದು ಹೇಳಿ ಗುರುಗಳ ಧ್ಯಾನ ದಲ್ಲಿ ನಿರತರಾಗಿ ಈ ತಿಂಗಳು ೧೦ನೆಯ ತಾರೀಖಿನ ದಿವಸ ಶಿವೈಕ್ಯರಾದರು. ಇವರಿಗೆ ಧರ್ಮಶಾಸ್ತ್ರ ಪ್ರಕಾರ ವಾಗಿ ಕ್ರಿಯಾಸಮಾಧಿಯು ಮಾಡಲ್ಪಟ್ಟಿತು ಮೃತರ ಆತ್ಮಕ್ಕೆ ಜಗದಾಚಾರ್ಯರು ಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇನೆ

ದುಃಖಭಾಗಿ

ಪಂಚಾಚಾರ್ಯಪ್ರಭಾ.

೧೯೪೫ನೆಯ ನವೆಂಬರ್ ತಾ| ೨೬ನೇ ಸೋಮವಾರ

ಬೊಂಬಾಯಿ ಹೈಕೋರ್ಟಿನ ತೀರ್ಪು

ಸಂಸ್ಕೃತವು ಬಾರದಿದ್ದುದಕ್ಕಾಗಿ ದ್ವಾರಕಾಮಠದ ಅಧಿಕಾರವು ರದ್ದಾಯಿತು

ಸಂಸ್ಕೃತಭಾಷೆಯು ಅನಾದಿಕಾಲದಿಂದಲೂ ನಮ್ಮ ಭರತಖಂಡದಲ್ಲಿ ವಿಶೇಷ ಪ್ರಾಶಸ್ತ್ಯವನ್ನು ಪಡೆದು ಮೆರೆಯುತ್ತಿರುವದು ಭಾರತೀಯರ ಧಾರ್ಮಿಕಸಂಪತ್ತೆಲ್ಲವೂ ಈ ಭಾಷೆಯಲ್ಲಿಯೇ ಅಡಗಿರುವದು ಸನಾತನ ಧರ್ಮಾನುಯಾಯಿಗಳಿಗೆಲ್ಲ ಈ ಭಾಷೆಯು ಪ್ರಾಣಸ್ವರೂಪವಾಗಿರುವದು ಭರತಖಂಡದಲ್ಲಿ ಪ್ರಚಾರದಲ್ಲಿರುವ ನೂರಾರು ಭಾಷೆಗಳಿಗೆಲ್ಲ ಸಂಸ್ಕೃತಭಾಷೆಯು ಮಾತೃಸ್ಥಾನವಾಗಿರುವದು ಈ ಭಾಷೆಯನ್ನು ಬಿಟ್ಟರೆ ಯಾವ ಭಾಷೆಗಳೂ [illegible] ಸ್ವತಂತ್ರ ಭಾಷೆಯಾಗಿರುವ ದ್ರಾವಿಡಭಾಷೆಗಳಿಗೆ ಸಹ [illegible] ಕಾರಭೂತವಾಗಿರುವದು ದ್ರಾವಿಡ [illegible] ರುವ, ಕರ್ನಾಟಕ ಆಂಧ್ರ ತಮಿಳು ಮೊದಲಾದ ಭಾಷೆಗಳು ಈ ದೇವಭಾಷೆಯ ಶ್ರೀಮಂತಿಕೆಯನ್ನೇ ಹೊಂದಿರುವವು ಕನ್ಯಾಕುಮಾರಿಯಿಂದ ಹಿಮಾಚಲದವರೆಗಿರುವ ಎಲ್ಲಾ ದೇಶದವರೂ [illegible] ಸಂಸ್ಕೃತಭಾಷಾಮಯವಾಗಿರುವ ಮಂತ್ರಗಳನ್ನು ಉಪಯೋಗಿಸುತ್ತಿರುವರಲ್ಲದೆ ಬೇರೆ ಯಾವ ದೇಶ ಭಾಷೆಯ ಮಂತ್ರಗಳನ್ನೂ ಯಾರೂ ಉಪಯೋಗಿಸುವದಿಲ್ಲವೆಂಬುದು ಜಗತ್ಪ್ರಸಿದ್ಧವಾಗಿದೆ

ಸನಾತನಧರ್ಮದ ಮಠಾಚಾರ್ಯರಿಗಂತೂ ಈ ಭಾಷೆಯ ಜ್ಞಾನವು ಅತ್ಯವಶ್ಯಕವು ಸಂಸ್ಕೃತಭಾಷಾಜ್ಞಾನವಿಲ್ಲದ ಮಠಾಧಿಪತಿಗಳು ಜೀವಚ್ಛವಸ್ವರೂಪರೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು ಏಕೆಂದರೆ ಮಠಾಧಿಪತಿಗಳಿಗೆ ಬೇಕಾಗಿರುವ ಮುಖ್ಯ ನಿಯಮಗಳೆಲ್ಲವೂ ಪ್ರಾಚೀನ ಮಹರ್ಷಿಗಳಿಂದ ಸಂಸ್ಕೃತ ಭಾಷೆಯಲ್ಲಿಯೇ ಬರೆಯಲ್ಪಟ್ಟಿರುವವು ಮಠಾಧಿಪತಿಗಳಾದವರಿಗೆ ಸಂಸ್ಕೃತಭಾಷಾಜ್ಞಾನವಿಲ್ಲದಿದ್ದರೆ ಅವರು ಶಿಷ್ಯಸಮೂಹವನ್ನುದ್ಧರಿಸುವದು ಹೇಗೆಂತು? ಈ ತತ್ತ್ವವನ್ನು ಅನುಸರಿಸಿಯೇ ಪ್ರಾಚೀನಕಾಲದಿಂದಲೂ ದೊಡ್ಡ ದೊಡ್ಡ ಮಠಗಳಲ್ಲಿ ಸಂಸ್ಕೃತಭಾಷೆಯಲ್ಲಿ ಅಸಾಧಾರಣ ಪಾಂಡಿತ್ಯವುಳ್ಳವರನ್ನೇ ಅಧಿಪತಿಗಳನ್ನಾಗಿ ಮಾಡುವ ಸಂಪ್ರದಾಯವು ಬಂದಿರುವದು

ದ್ವಾರಕಾಮಠದ ಶ್ರೀಶಂಕರಾಚಾರ್ಯರ ಪೀಠಕ್ಕೆ ಈಗ್ಗೆ ಕೆಲವು ವರುಷಗಳ ಪೂರ್ವದಲ್ಲಿ ಒಬ್ಬರು ಸಂಸ್ಕೃತ ಭಾಷಾಜ್ಞಾನವಿಲ್ಲದವರು ಅಧಿಪತಿಗಳಾದರು ಇದರಿಂದ ವ್ಯಾಜ್ಯಹುಟ್ಟಿತು. ಈ ವ್ಯಾಜ್ಯವು ಕೊನೆಗೆ ಬೊಂಬಾಯಿ ಹೈಕೋರ್ಟಿಗೆ ಬಂದು ಅಲ್ಲಿ ಕೂಲಂಕಷವಾಗಿ ಚರ್ಚಿಸಲ್ಪಟ್ಟಿತು ಹೈಕೋರ್ಟ್ ಜಡ್ಜರವರು, ಪೀಠದ ವಿಷಯವನ್ನೆಲ್ಲಾ ಆಮೂಲಾಗ್ರವಾಗಿ ವಿಮರ್ಶಿಸಿ ಜಗತ್ಪ್ರಸಿದ್ಧವಾಗಿರುವ ಈ ಗುರುಪೀಠಕ್ಕೆ ಸಂಸ್ಕೃತಭಾಷೆಯ ಜ್ಞಾನವಿಲ್ಲದವರನ್ನು ಅಧಿಕಾರಿಗಳನ್ನಾಗಿ ಮಾಡಿರುವದು ಸರಿಯಾದುದಲ್ಲವೆಂದು ತಮ್ಮ ತೀರ್ಪಿನಲ್ಲಿ ಬರೆದು ಸಂಸ್ಕೃತಭಾಷಾಜ್ಞಾನವಿದ್ದವರೇ ಅಧಿಕಾರಿಗಳಾಗಲು ಅರ್ಹರೆಂದು ತೀರ್ಮಾನಿಸಿದರು ಸಂಸ್ಕೃತಭಾಷಾಜ್ಞಾನವಿಲ್ಲದವರನ್ನು ಆ ಪೀಠದಿಂದ ದೂರಮಾಡಲಿಕ್ಕೆ ಇನ್ನೂ ಕೆಲವು ಕಾರಣಗಳನ್ನು ಕೊಟ್ಟಿರುವರು ಬೊಂಬಾಯಿ ಹೈಕೋರ್ಟಿನವರು ಮೊನ್ನೆ ಮೊನ್ನೆ ಮಾಡಿರುವ ಈ ತೀರ್ಮಾನವು ಅತ್ಯಂತ ಸ್ತೋತ್ರಾರ್ಹವಾಗಿದ್ದು ಇಂಡಿಯಾದೇಶದಲ್ಲಿರುವ ದೊಡ್ಡ ದೊಡ್ಡ ಮಠಗಳ ಉದ್ಧಾರಕ್ಕೆ ಮುಖ್ಯ ಕಾರಣವಾಗಿರುವದೆಂಬ ವಿಷಯವನ್ನು ಅತ್ಯಾನಂದದಿಂದ ಹೇಳಬೇಕಾಗಿದೆ ಈ ತೀರ್ಮಾನವು ಸನಾತನ ವೈದಿಕ ಧರ್ಮಾವಲಂಬಿಗಳೆಲ್ಲರಿಗೂ ಪರಮಾನಂದವನ್ನುಂಟು ಮಾಡಿದೆ ಈ ಹೈಕೋರ್ಟಿನ ತೀರ್ಮಾನದಿಂದ ಅನೇಕ ಮಠಗಳಿಗೆ ಮಹೋಪಕಾರವಾಗುವದರಲ್ಲಿ ಯಾವ ಸಂಶಯವೂ ಇರುವದಿಲ್ಲ ಈ ರೀತಿ ಅತ್ಯುತ್ತಮವಾದ ತೀರ್ಮಾನವನ್ನು ಮಾಡಿ ಸಂಸ್ಕೃತಭಾಷೆಗೆ ಅತ್ಯಂತ ಪೂಜ್ಯತೆಯನ್ನು ಕೊಟ್ಟಿರುವ ಬೊಂಬಾಯಿ ಹೈಕೋರ್ಟಿನವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ

೧೯೩೧ನೆಯ ಇಸವಿಯಲ್ಲಿ ಶ್ರೀ ಜಗದ್ಗುರು ರಂಭಾಪುರೀಪೀಠಕ್ಕೆ ಮೈಸೂರು ಸರಕಾರದವರು ಸ್ವಾಮಿಗಳನ್ನು ಆರಿಸುವದಕ್ಕಾಗಿ ಒಂದು ಕಮಿಟಿಯನ್ನು ಏರ್ಪಡಿಸಿದುದು ಎಲ್ಲರಿಗೂ ಗೊತ್ತಿದ್ದ ವಿಷಯವಾಗಿದೆ ಆ ಸಮಯದಲ್ಲಿ ೫೬ ಜನ ವಟುಗಳು ಆಗಮಿಸಿದ್ದರು ಅವರಲ್ಲಿ ಎಲ್ಲರೂ ಸಂಸ್ಕೃತ ಪಂಡಿತರಾಗಿದ್ದು ಒಬ್ಬರು ಮಾತ್ರ ಎಂ ಎ ಪದವೀಧರರಾಗಿದ್ದರು ಆಗ್ಗೆ ಆ ಕಮಿಟಿಯ ಅಧ್ಯಕ್ಷರಾಗಿದ್ದ ಮುಜರಾಯಿ ಕಮಿಷನರ್ ಸಿ ಎಸ್ ಬಾಲಸುಂದರಂ ಅಯ್ಯರವರು ರಂಭಾಪುರೀಪೀಠವು ವೀರಶೈವದ ತಕ್ಕ ಮೂಲಗುರುಪೀಠವಾಗಿರುವದರಿಂದ ಈ ಮಹಾಪೀಠಕ್ಕೆ ಸಂಸ್ಕೃತದಲ್ಲಿ ಘನವಾದ ಪಾಂಡಿತ್ಯವುಳ್ಳವರೇ ಅಧಿಪತಿಗಳಾಗಬೇಕಲ್ಲದೆ, ಇಂಗ್ಲೀಷ್ ಭಾಷೆಯನ್ನು ಬಲ್ಲವರು ಅಧಿಪತಿಗಳಾಗಲು ಮೈಸೂರು ದರ್ಬಾರ್ ಸರಕಾರದವರು ಎಂದೂ ಒಪ್ಪುವುದಿಲ್ಲವೆಂದು ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿದರು ಆಗ ಕಮಿಟಿಯ ಮೆಂಬರರೆಲ್ಲರೂ ಅಧ್ಯಕ್ಷರ ಅಭಿಪ್ರಾಯವು ಬಹು ನ್ಯಾಯಸಮ್ಮತವಾದುದೆಂದು ನುಡಿದು, ಸಕಲ ಶಾಸ್ತ್ರಪಾರಂಗತರಾದ ಈಗಿನ ಶ್ರೀಜಗದ್ಗುರು ಶಿವಾನಂದ ರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರನ್ನು ಆರಿಸಿ ಆ ಪೀಠದ ಅಧಿಪತಿಗಳನ್ನಾಗಿ ಮಾಡಿದರು ಈ ಪ್ರಕಾರ ಆರಿಸಿದ ಬಳಿಕ, ಆ ಪೀಠವನ್ನಾರೋಹಣಮಾಡಿ ಆ ಪೀಠದ ಪ್ರಕಾಶವು ದಶದಿಕ್ಕುಗಳಲ್ಲಿ ಪಸರಿಸುವಂತೆ ಮಾಡಿದರು ಇದಕ್ಕೆಲ್ಲಾ ಸಂಸ್ಕೃತಭಾಷೆಯ ಅದ್ಭುತ ಪ್ರಭಾವವೇ ಕಾರಣವಲ್ಲದೆ ಮತ್ತಾವುದೂ ಕಾರಣವಲ್ಲವೆಂದು ಸಾರಿ ಹೇಳಬಹುದಾಗಿದೆ ಈ ರೀತಿ ದೇವಭಾಷೆಯೆನಿಸಿರುವ ಸಂಸ್ಕೃತಭಾಷೆಗೆ ಹೈಕೋರ್ಟಿನ ನ್ಯಾಯಾಧೀಶರೂ, ಸಂಸ್ಥಾನಾಧಿಪತಿಗಳೂ ಪೂಜ್ಯತೆಯನ್ನು ಕೊಡುತ್ತಿರುವುದು ಭಾರತೀಯರ ಸುದೈವವೆಂದೇ ಹೇಳಬೇಕಾಗಿದೆ ಜಗನ್ಮಾನ್ಯವಾದ ಗೀರ್ವಾಣವಾಣಿಯು ಪೂರ್ವದಂತೆ ಇನ್ನು ಮುಂದೆಯೂ ಬೆಳಗಿ ತನ್ಮೂಲಕ ಸನಾತನಧರ್ಮವು ಉದ್ಧಾರವಾಗುವಂತಾಗಲೆಂದು ಆ ಜಗನ್ನಿಯಾಮಕನನ್ನು ಪ್ರಾರ್ಥಿಸುತ್ತೇವೆ

ಸಂಸ್ಕೃತವು ಪ್ರಾಚೀನ ಸಂಸ್ಕೃತಿಯ ಭಂಡಾರದ ಬೀಗದಕೈ

ರಾಜಸೇವಾಸಕ್ತ ಶ್ರೀ ಡಿ ವೆಂಕಟರಾಮಯ್ಯನವರು ಮೈಸೂರಿನ ಮಹಾರಾಜ ಕಾಲೇಜಿನ ಸಂಸ್ಕೃತ ಸಂಘದ ಆಶ್ರಯದಲ್ಲಿ ಅಮೋಘವಾದ ಒಂದು ಉಪನ್ಯಾಸವನ್ನು ಮಾಡಿದರು ಪ್ರೊ|| ಲಕ್ಷ್ಮೀನರಸಿಂಹಯ್ಯನವರು ಅಧ್ಯಕ್ಷಾಸನವನ್ನು ಅಲಂಕರಿಸಿದ್ದರು ಶ್ರೀವೆಂಕಟರಾಮಯ್ಯನವರ ಉಪನ್ಯಾಸದ ಕೆಲವು ಮುಖ್ಯಾಂಶಗಳನ್ನು ಮಾತ್ರ ಇಲ್ಲಿ ಸಂಗ್ರಹಿಸಿದೆ

ಸಂಸ್ಕೃತವು ನಮ್ಮ ಪ್ರಾಚೀನ ಸಂಸ್ಕೃತಿಯ ಬಂಡಾರದ ಬೀಗದಕೈ ಪ್ರಪಂಚದ ಜ್ಞಾನಬಂಡಾರಕ್ಕೆ ನಮ್ಮ ದೇಶವು ಎಷ್ಟು ಸಹಾಯವನ್ನು ಸಲಿಸಿದೆ-ಎಂದು ತಿಳಿದು ಬೆಲೆ ಕಟ್ಟಬೇಕಾದರೆ ಸಂಸ್ಕೃತಭಾಷಾಜ್ಞಾನವು ಅತ್ಯಾವಶ್ಯಕ ಆದ್ದರಿಂದಲೇ ಪಶ್ಚಿಮಖಂಡಗಳಲ್ಲಿ ನೆಲಸಿರುವ ಹಲವು ವಿದ್ಯಾಪೀಠಗಳು ಸಂಸ್ಕೃತವ್ಯಾಸಂಗಕ್ಕೆ ಪ್ರಾಮುಖ್ಯವನ್ನು ಕೊಟ್ಟು ವೇದ ಕಾವ್ಯ ನಾಟಕ ನಿರುಕ್ತ ದರ್ಶನ ಮುಂತಾದ ಶಾಸ್ತ್ರಭಾಗಗಳನ್ನು ಮಾತ್ರವೇ ಅಲ್ಲದೆ ಜ್ಞಾನದಾಯಕವಾದ ಪ್ರಾಚೀನ ಕಥೆಗಳನ್ನು ಕೂಡ ವಿಮರ್ಶನಪೂರ್ವಕವಾಗಿ ತಮ್ಮ ಜನರಿಗೆ ವ್ಯಾಸಂಗ ಮಾಡಿಸುತ್ತಿರುವುವು ನಮ್ಮ ಸಂಸ್ಕೃತಿಯ ಸರ್ವಸ್ವವೆಲ್ಲವೂ ವೇದಯುಗದಲ್ಲಿ ಬೇರು ಬಿಟ್ಟಿತೆಯೆಂದರೆ ಅತಿಶಯೋಕ್ತಿಯಲ್ಲ

“ಸಂಸ್ಕೃತ ವಿದ್ವಾಂಸನಿಗೆ ಬೆಲೆ ಎಲ್ಲಿದೆ? ಸರ್ಕಾರದಲ್ಲಾಗಲೀ ಬೇರೆ ಕಡೆಯಲ್ಲಾಗಲೀ ತಕ್ಕ ಪುರಸ್ಕಾರವಿಲ್ಲ ಅದಕ್ಕೆ ಬದಲು ಇಂಜನಿಯರಿಂಗ್, ವೈದ್ಯ, ವಾಣಿಜ್ಯ ಮುಂತಾದ ಕುಶಲವಿದ್ಯೆಗಳಲ್ಲಿ ಪರಿಣತನಾದ[illegible] ಗಣ್ಯತೆಯುಂಟು, ಅನ್ನವಸ್ತ್ರಗಳೂ ಐಶ್ವರ್ಯವೂ ಸಮೃದ್ಧಿಯಾಗಿ ದೊರಕುವುವು” ಹೀಗೆಂದು ಹಲವರು ಅಭಿಪ್ರಾಯಪಡುತ್ತಾರೆ ನಿಜ! ಯಾವ ವಿದ್ಯಾಭ್ಯಾಸಕ್ರಮವೇ ಆಗಲಿ ಮೊದಲು ಅನ್ನ ಬಟ್ಟೆಗಳಿಗೆ ಅಪೋಹ[illegible] ವಿಲ್ಲದಂತೆ ಮಾನದಿಂದ ಬದುಕುವ ದಾರಿಮಾಡಿಕೊಡ[illegible] ಬೇಕಾದುದು ಅತ್ಯಾವಶ್ಯಕ ಯಾರೊಬ್ಬರೂ ಕೇವಲ ಕಾವ್ಯಾಭ್ಯಾಸದಿಂದಲೇ ಜೀವಿಸುವುದು ದುಸ್ತರ! ಆದರೆ ವಿದ್ಯೆ ಕಲಿಯುವುದು ಹೊಟ್ಟೆ ಬಟ್ಟೆಗೆ ಮಾತ್ರವಲ್ಲ, ಅದು ಕೇವಲ ಗೌಣ, ಪರಮಾರ್ಥವಲ್ಲ ವಿದ್ಯೆ ಕಲಿಯುವುದರಿಂದ ಮೊದಲು ಅಶನವಸನಗಳಿಗೆ ವ್ಯಸನವಿಲ್ಲದೆ, ಮುಂದೆ ಪರಮಾರ್ಥಸಾಧನೆಗೆ ಮೆಟ್ಟಿಲಾಗಬೇಕು

ಇತ್ತೀಚೆಗೆ ದೇಶಭಾಷೆಗಳ ವ್ಯಾಸಂಗಕ್ಕೆ ಅಭೂತಪೂರ್ವವಾದ ಉತ್ತೇಜನವು ದೊರೆಯುತ್ತಿರುವುದು ಶುಭಲಕ್ಷಣ! ಕನ್ನಡದಲ್ಲಿ ಹಲವಾರು ಗ್ರಂಥಗಳು ಹಲವಾರು ರೂಪದಲ್ಲಿ ಈಚೆಗೆ ಜನಿಸುತ್ತಿರುವುದು ಮಾತ್ರವಲ್ಲದೆ, ಕನ್ನಡದ ವರ್ತಮಾನ ಪತ್ರಿಕಾಪ್ರಪಂಚವು ಕೂಡ ಪ್ರಬಲವಾದ ರಾಜತಾಂತ್ರಿಕ ಶಸ್ತ್ರವಾಗಿದೆ. ದೇಶಭಾಷೆಗಳ ಭವಿಷ್ಯವು ಬಹಳ ಆಶಾದಾಯಕವಾಗಿದೆ. ಅವು ಇಂಗ್ಲಿಷ್ ಭಾಷೆಗೆ ಯಾವ ವಿಧದಲ್ಲಿಯೂ ಕಡಿಮೆಯಿಲ್ಲದೆ, ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕವಿಷಯಗಳಲ್ಲಿ ಪ್ರಚಲಿತ ವಿಚಾರಗಳನ್ನು ನಿರರ್ಗಳವಾಗಿ ಹೊರಗೆಡಹುವಷ್ಟು ಚೈತನ್ಯಯುತವಾಗಬೇಕು, ಆದರೆ ಅದಕ್ಕಾಗಿ ಸಂಸ್ಕೃತವನ್ನು ಬಲಿಕೊಡಬೇಕೆಂದು ಅರ್ಥವಲ್ಲ ಏಕೆಂದರೆ ಸಂಸ್ಕೃತಮಾತೆಯು ಭರತಖಂಡದ ಎಲ್ಲಾ ದೇಶಭಾಷೆಗಳಿಗೂ ಹಾಲೆರೆದಿರುವಳು, ಎರೆಯುತ್ತಿರುವಳು ಅತ್ಯಂತ ದಕ್ಷಿಣದಲ್ಲಿರುವ ತಮಿಳುಭಾಷೆಯು ಕೂಡ ಸಂಸ್ಕೃತಕ್ಕೆ ಬಹಳಮಟ್ಟಿಗೆ ಋಣಿಯಾಗಿದೆ ಕನ್ನಡ ಸಾಹಿತ್ಯದಲ್ಲಂತೂ ಒಂದಿಲ್ಲ ಒಂದು ಬಗೆಯಿಂದ ಸಂಸ್ಕೃತ ಜೀವಾಳವಿಲ್ಲದ ಗ್ರಂಥವನ್ನು ಕಾಣುವುದು ವಿರಳ ಹೀಗಿರುವಲ್ಲಿ ಸಂಸ್ಕೃತವನ್ನು ಹಳಿಯುವ ಕೆಲವು ಜನ ಕನ್ನಡಿಗರನ್ನೂ ತಮಿಳರನ್ನೂ ಕಂಡು ಶೋಚಿಸಬೇಕಾಗಿದೆ ಸಂಸ್ಕೃತವು ಆರ್ಯಭಾಷೆಯಂತೆ! ಅದು ದ್ರಾವಿಡರ ಸಂಸ್ಕೃತಿಗೆ ಹೊರಗಂತೆ! ಆದಕಾರಣ ಸಂಸ್ಕೃತವನ್ನು ದೂರೀಕರಿಸಬೇಕಂತೆ! ಸಂಸ್ಕೃತ ಪುರಾಣಗಳನ್ನೂ ಧರ್ಮಶಾಸ್ತ್ರಗಳನ್ನೂ ಸುಟ್ಟುಹಾಕಬೇಕಂತೆ! ಇದಕ್ಕಿಂತ ಹೆಚ್ಚಿನ ಅತಿರೇಕದ ಹುಚ್ಚನ್ನು ಊಹಿಸಲಸಾಧ್ಯ!

ಸಂಸ್ಕೃತವು ಯಾವುದೊಂದು ಪಂಗಡದ ಗುತ್ತಿಗೆಯನ್ನೂ ಹೊತ್ತುಕೊಂಡಿಲ್ಲ ಎಲ್ಲ ಪಂಗಡಗಳಿಗೂ ಸೇರಿದ ಸ್ವತ್ತು ಮದರಾಸಿನ ಹೈಕೋರ್ಟ್ ಜಡ್ಜರಾಗಿದ್ದು ಅನಂತರ ವೈಸರಾಯರ ಮಂತ್ರಿಮಂಡಲದಲ್ಲಿದ್ದ ಶ್ರೀಶಂಕರನಾಯರು ಸಂಸ್ಕೃತ ವ್ಯಾಸಂಗವನ್ನು ನಮ್ಮ ದೇಶದ ಎಲ್ಲಾ ಯೂನಿವರ್ಸಿಟಿಗಳಲ್ಲಿಯೂ ನಿರ್ಬಂಧ ಮಾಡಿ ಇಡಿಸಬೇಕೆಂದು ಒತ್ತಾಯಪಡಿಸಿದ್ದರು ಈಗ ಮದರಾಸು ಹೈಕೋರ್ಟಿನಲ್ಲಿ ನ್ಯಾಯಾಧಿಪತಿಗಳಾಗಿರುವ ಜಸ್ಟಿಸ್ ಪನ್ನಾರವರು ಕೂಡ ಅದೇ ರೀತಿ ಒತ್ತಾಯ ಮಾಡಿ ಹೇಳಿರುವರು ಸಂಸ್ಕೃತ ವ್ಯಾಸಂಗವಾಗಲಿ ಮಾತೃಭಾಷಾ ವ್ಯಾಸಂಗವಾಗಲಿ ಪರಸ್ಪರವಾಗಿ ಅಕ್ಕಾಟಕ್ಕೆ ಸಿಕ್ಕಿ ಕುಂದದಂತೆ ಈ ಉಭಯ ಭಾಷೆಗಳ ವ್ಯಾಸಂಗವು ನಿರ್ಬಂಧವಾಗಿಯೂ ಸುಗಮವಾಗಿಯೂ ನಡೆಯುವುದಕ್ಕೆ ತಕ್ಕ ಕಾರ್ಯಕ್ರಮವನ್ನು ಆಲೋಚಿಸಿ ಸೂಚಿಸಲು ದೂರದೃಷ್ಟಿಯುಳ್ಳ ಸಮಿತಿಯೊಂದನ್ನು ಗೊತ್ತುಮಾಡಿದರೆ ಉತ್ತಮ

ಸಂಸ್ಕೃತವನ್ನು ಓದುವವರಿಗೆ ಸ್ವತಂತ್ರವಾದ ವಿಚಾರಶಕ್ತಿಯಿರುವುದಿಲ್ಲವೆಂದು ಕೆಲವರು ಹೇಳುವುದುಂಟು ಈ ಮಾತಿನಲ್ಲಿ ಏನೇನೂ ಹುರುಳಿಲ್ಲ ನಮ್ಮ ಷಡ್ದರ್ಶನಕಾರರ ವಾದಘಟ್ಟಗಳನ್ನೂ ಕಾವ್ಯನಾಟಕಗಳ ಟೀಕಾಕಾರರ ಪ್ರತಿಭೆಯನ್ನೂ ನೋಡಿದವರು ಈ ಮಾತನ್ನು ಹೇಳಲಾರರು ಶಂಕರಾಚಾರ್ಯರು ತಮ್ಮ ಅದ್ವೈತಸಿದ್ಧಾಂತವನ್ನು ಸಾಧಿಸುವುದರಲ್ಲಿ ಸುಪ್ರಸಿದ್ಧನಾದ ಪತಂಜಲಿಯ ಸ್ಫೋಟವಾದವನ್ನು ಖಂಡಿಸಿದರು ತಮಗಿಂತ ಮೂರು ನಾಲ್ಕು ಶತಮಾನಗಳಿಗೆ ಹಿಂದೆಯೇ ಸುಪ್ರಸಿದ್ಧರಾಗಿ ಬೆಳಗಿದ ಶಂಕರಾಚಾರ್ಯರ ಅದ್ವೈತ ಸಿದ್ಧಾಂತ ಪ್ರತಿಪಾದನೆಯನ್ನು ರಾಮಾನುಜಾ

ಚಾರ್ಯರು ಖಂಡಿಸಿ ವಿಶಿಷ್ಟಾದ್ವೈತವನ್ನು ಸಮರ್ಥಿಸಿದರು ಶಂಕರರ ಮತದಲ್ಲಿಯೇ ವಿವರಣ ಮತ್ತು ಭಾಮತಿಗಳೆಂಬ ಭಿನ್ನ ಭಿನ್ನ ಮಾರ್ಗಗಳು ಹುಟ್ಟಿದವು.

ಸಂಸ್ಕೃತಸಾಹಿತ್ಯದ ವ್ಯಾಸಂಗವೇ ಆಗಲಿ, ಇಂಗ್ಲಿಷ ಸಾಹಿತ್ಯದ ವ್ಯಾಸಂಗವೇ ಆಗಲಿ, ಅದರಿಂದ ಎರಡು ಉದ್ದೇಶಗಳನ್ನು ಸಾಧಿಸುವಂತಿರಬೇಕು ಒಂದು ಕಲಾ ದೃಷ್ಟಿಯಿಂದ ದೊರೆಯತಕ್ಕ ನಿಜವಾದ ಆನಂದ, ಮತ್ತೊಂದು ಒಳ್ಳೆಯ ಬಾಳುವೆ ಅಥವಾ ಶೀಲ ಮ್ಯಾಥ್ಯೂ ಆರ್ನಾಲ್ಡ್ ಎಂಬ ಇಂಗ್ಲೀಷ ಕವಿ ಹೇಳುವಂತೆ ನಿಜವಾದ ಕಾವ್ಯದಿಂದ ಜೀವನವಿಮರ್ಶೆಯೂ, ಸೌಂದರ್ಯೋಪಾಸನೆಯ ತೃಪ್ತಿಯೂ ದೊರೆಯುವಂತಿರಬೇಕು ಇದು ಆಳವಾದ ವ್ಯಾಸಂಗದಿಂದ ಆಗಬೇಕೇ ಹೊರತು, ಉಪರಿಪ್ಲವವಾದ ವ್ಯಾಸಂಗದಿಂದ ಆಗತಕ್ಕದ್ದಲ್ಲ ನಿಜವಾದ ವ್ಯಾಸಂಗವನ್ನು ಕೆಳಕ್ಕೆ ತಳ್ಳಿ ಪರೀಕ್ಷೆಗಳಿಗೆ ಮಾತ್ರ ಪ್ರಾಧಾನ್ಯಕೊಡುವ ಪಾಠಕ್ರಮದಿಂದ ಇದು ಆಗತಕ್ಕದ್ದಲ್ಲ ಕಾವ್ಯನಾಟಕಗಳ ವ್ಯಾಸಂಗದಲ್ಲಿ ಆ ಕಾವ್ಯಭಾಷಾ ಸೌಂದರ್ಯ, ಅಲ್ಲಿರುವ ಅಲಂಕಾರಗಳು, ಪಾತ್ರಗಳ ಬಾಯಿಂದ ಕವಿ ಹೊರಡಿಸುವ ಭಾವ ಗಾಂಭೀರ್ಯ ಮುಂತಾದವುಗಳ ಕಡೆಗೆ ಲಕ್ಷ್ಯವು ಕಡಿಮೆಯಾಗುತ್ತಿದೆ

ಅರ್ಥಶಾಸ್ತ್ರ, ಚರಿತ್ರೆ, ಆಧುನಿಕ ವಿಜ್ಞಾನ ಮುಂತಾದವು ಚಿರಂತನ ಸಾಹಿತ್ಯವಲ್ಲ ಹೊಸಹೊಸ ಸಂಗತಿಗಳು ಬೆಳಕಿಗೆ ಬಂದಂತೆಲ್ಲ ಅವು ಬದಲಾಗುವುವು ಹೃದಯವನ್ನು ಕಲಕುವ ಸಾಹಿತ್ಯವಾದರೋ ಸಾರ್ವಕಾಲೀನವಾದುದು ಕಾಳಿದಾಸ, ಷೇಕ್ಸ್‌ಪಿಯರ್, ಮುಂತಾದ ಕವಿಗಳು ಸರ್ವಕಾಲದವರು ಸಂಸ್ಕೃತವು ಇಂತಹ ಸಾಹಿತ್ಯಕ್ಕೆ ಸೇರಿದುದು ಪರೀಕ್ಷೆಯನ್ನೇ ಹೆಗ್ಗುರಿಯಾಗಿಟ್ಟುಕೊಂಡವರಿಗೆ ಈ ಸಾಹಿತ್ಯದ ಸೊಗಸೂ ಉಪಯುಕ್ತತೆಯೂ ಸಿದ್ಧಿಸುವುದಿಲ್ಲ ಶಾಕುಂತಲ, ಉತ್ತರ ರಾಮಚರಿತ್ರ ನಾಟಕಗಳಲ್ಲಾಗಲಿ, ರಾಮಾಯಣ ಮಹಾಭಾರತಗಳಲ್ಲಾಗಲಿ ಇರುವ ಉದಾತ್ತ ಭಾವಗಳನ್ನೂ ಮಾನವಧರ್ಮ, ದೈವೀಧರ್ಮಗಳಲ್ಲಿ ಉಂಟಾಗಿರುವ ತುಮುಲಯುದ್ಧಗಳಿಂದ ಹೊರಡುವ ಜಟಿಲಪ್ರಶ್ನೆಗಳ ಇತ್ಯರ್ಥವನ್ನೂ ಅನುಭವಿಸಿ ಆನಂದಿಸುವವರೇ ಧನ್ಯರು ಆತ್ಮವಿಕಾಸಕ್ಕೆ ಸಹಕಾರಿಯಾದ ಈ ಬಗೆಯ ವ್ಯಾಸಂಗಕ್ಕೆ ವಿದ್ಯಾರ್ಥಿದಶೆಯೇ ಅಂಕುರಾರ್ಪಣವಾಗಿ, ಅದು ಗೃಹಸ್ಥಾಶ್ರಮಧರ್ಮದಲ್ಲಿ ಪೂರವಾಗಿ ಫಲಿಸಲೆಂದು ಕೋರುತ್ತೇನೆ

ವರ್ತಮಾನಸಂಗ್ರಹ

ಕ್ಷಾಮಭೀತಿ

ಗುಜರಾತ್, ಬಿಜಾಪುರ ಮತ್ತು ಸಾತಾರ ಜಿಲ್ಲೆಗಳಲ್ಲಿ ಆಹಾರದ ಅಭಾವ ಉಂಟಾಗಿದ ಗುಜರಾತಿನಲ್ಲಿ ಹೆಚ್ಚು ಪ್ರವಾಹ ಮತ್ತು ಇತರ ಕಡೆಗಳಲ್ಲಿ ಮಳೆ ಇಲ್ಲದ ಈಗ ೮೦ ಸಾವಿರ ಟನ್ ಆಹಾರ ಪದಾರ್ಥ ಈ ಪ್ರಾಂತ್ಯಗಳಿಗೆ ಹೊರಗಿನಿಂದ ಬರಬೇಕಾಗಿದೆಯಂತೆ

ರಂಗೂನಿನ ಸ್ಥಿತಿ

ರಂಗೂನಿನಲ್ಲಿ ಪದಾರ್ಥಗಳ ಬೆಲೆಯು ವಿಪರೀತವಾಗಿ ಏರಿ ಜನಗಳು ತುಂಬಾ ಕಷ್ಟಪಡುತ್ತಿದ್ದಾರೆ ಒಂದು ಬೀಸೆ ಆಲೂಗೆಡ್ಡೆಗೆ ೪ ರೂಪಾಯಿ, ಒಂದು ಕಪ್ ಕಾಫಿಗೆ ೧ ರೂ ಮ್ಯಾಚ್ ಬಾಕ್ಸ್ ಒಂದಕ್ಕೆ ೬ ಆಣೆ ಮತ್ತು ಒಂದು ಜೊತೆ ಷೂಸಿಗೆ ೮೦ ರೂಪಾಯಿ ಆಗಿದೆಯಂತೆ

ರಷ್ಯವನ್ನು ತೃಪ್ತಿಪಡಿಸುವ ಪ್ರಯತ್ನ

ಬ್ರಿಟನ್ ಮತ್ತು ಅಮೆರಿಕದ ಬಗ್ಗೆ ರಷ್ಯಾದ ಮನೋಭಾವನೆಯನ್ನು ಬದಲಾಯಿಸಲು ವಿದೇಶಾಂಗ ಮಂತ್ರಿಗಳಾದ ಬೆವಿನ್ ಮತ್ತು ಬೈರ್ನ್ಸ್‌ರವರನ್ನು ತೆಗೆದು ಹಾಕುವ ವಿಷಯದಲ್ಲಿ ಅಟ್ಲೆ ಟ್ರೂಮನ್ ಸಮ್ಮೇಳನದಲ್ಲಿ ಚರ್ಚಿಸಲಾಯಿತಂತೆ

ಜರ್ಮನ್ ಪ್ರಮುಖರ ವಿಚಾರಣೆ

ಗೋರಿಂಗ್, ಹೆಸ್, ರೇಡರ್ ಮೊದಲಾದ ನಾಜಿ ನಾಯಕರುಗಳ ವಿಚಾರಣೆಯು ನ್ಯೂರೆಂಬರ್ಗಿನಲ್ಲಿ ಬ್ರಿಟನ್, ಅಮೆರಿಕ, ರಷ್ಯ ಮತ್ತು ಫ್ರಾನ್ಸಿನ ೮ ಮಂದಿ ನ್ಯಾಯಾಧೀಶರುಗಳ ಮುಂದೆ ಪ್ರಾರಂಭವಾಗಿದೆ

ಇಂಡೋನೇಷಿಯನ್ ಪರಿಸ್ಥಿತಿ

ಬಟೇವಿಯಾದಲ್ಲಿ ಯೂರೋಪಿಯನ್ ಜನರಿಗೆ ಆಹಾರ ಪದಾರ್ಥ ಕೊಡಕೂಡದೆಂದು ಬಹಿಷ್ಕಾರ ಚಳುವಳಿ ಪ್ರಾರಂಭವಾಗಿರುವುದರಿಂದ ಅಲ್ಲಿನ ಅಂಗಡಿಗಳೆಲ್ಲ ಮುಚ್ಚಲ್ಪಟ್ಟಿವೆಯಂತೆ

ಪರದೇಶಗಳಿಗೆ ಜರ್ಮನರ ರವಾನೆ

ಆಸ್ಟ್ರಿಯ, ಜೆಕೋಸ್ಲವೇಕಿಯಾ, ಹಂಗೇರಿ ಮತ್ತು ಪೋಲೆಂಡಿನಲಿ ವಾಸಿಸಲು ಜರ್ಮನರನ್ನು ಕಳುಹಿಸುವ ಯೋಜನೆ ಮಾಡಲಾಗಿದ ಅದರ ಪ್ರಕಾರ ೬೦ ಲಕ್ಷ ಜರ್ಮನರು ಜರ್ಮನಿಯನ್ನು ಬಿಡಬೇಕಾಗುವುದು

ಜಪಾನಿನಲ್ಲಿ ವಿಮಾನ ಶಿಕ್ಷಣ ರದ್ದು

ಜಪಾನಿನಲ್ಲಿ ವಿಮಾನ ಕಾರ್ಖಾನೆ, ವಿಮಾನ ಸಂಸ್ಥೆಗಳು ಮತ್ತು ವಿಮಾನ ಶಾಲೆಗಳನ್ನು ಡಿಸಂಬರ್ ೩೧ನೇ ತಾ ಒಳಗಾಗಿ ಮುಚ್ಚಬೇಕೆಂದು ಜ|| ಮೆಕ್‌ಆರ್ಥರ್‌ರವರು ಆಜ್ಞೆ ಮಾಡಿದ್ದಾರೆ ವಿಮಾನ ಶಿಕ್ಷಣ, ಮತ್ತು ಅವರ ಸಂಶೋಧನೆಗಳನ್ನು ನಿಷೇಧಿಸಲಾಗಿದ

ಐ. ಎನ್. ಎ ಯೋಧರ ವ್ಯವಸ್ಥೆ

ಭಾರತ ರಾಷ್ಟ್ರೀಯ ಸೈನ್ಯದ ೩೦೦೦೦ ಮಂದಿ ಪೈಕಿ ೨೧೦೦ ಮಂದಿಗಳು ನಿರಪರಾಧಿಗಳೆಂದು ಬಿಡಲ್ಪಟ್ಟಿದ್ದಾರೆ ಅವರಲ್ಲಿ ಕೆಲವರು ಇಂಡಿಯನ್ ಆರ್ಮಿಗೆ ಪುನಃ ಸೇರಿದ್ದಾರೆ ೬ ಸಾವಿರ ಮಂದಿಗೆ ಕ್ಷಮೆ ತೋರಿಸಲಾಗುವುದು ಕೇವಲ ೨೦೦ ಮಂದಿಯನ್ನು ಮಾತ್ರ ವಿಚಾರಣೆಗೆ ಗುರಿಪಡಿಸಲಾಗುವುದೆಂದು ಅಧಿಕೃತ ಪ್ರಕಟಣೆ ಹೊರಟಿದೆ

ಮಿಲಿಟೆರಿ ಅಕಾಡಮಿ

ಭಾರತದಲ್ಲಿ ಸಮರ ಸ್ಮಾರಕ ಸೈನ್ಯಶಾಲೆಯನ್ನು ಸ್ಥಾಪಿಸಲು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಲು ಅಮೆರಿಕ ಮತ್ತು ಬ್ರಿಟನ್ನಿಗೆ ಕಳುಹಿಸಿದ ನಿಯೋಗದವರು ಭಾರತಕ್ಕೆ ಹಿಂತಿರುಗಿದ್ದಾರೆ ಈ ಸಂಸ್ಥೆಯ ವಸತಿ, ಮೆಷಿನರಿ ಲೈಬ್ರರಿ ಮತ್ತು ಇತರ ಬಾಬುಗಳಿಗೆ ಸರಾಸರಿ ೪ ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಕಾಗುವುದು ವರ್ಷಕ್ಕೆ ೬೦೦ ಮಂದಿಯನ್ನು ತರಪೇತು ಮಾಡಲು ೧೩ ಲಕ್ಷ ರೂಪಾಯಿಗಳು ಖರ್ಚಾಗುವುವೆಂದು ನಿಯೋಗದವರು ಅಭಿಪ್ರಾಯ ಪಟ್ಟಿದ್ದಾರೆ

ಭೂಕಂದಾಯದ ಬದಲು ವರಮಾನ ತೆರಿಗೆ

ತಿರುವಾಂಕೂರಿನಲ್ಲಿ ಭೂಕಂದಾಯವನ್ನು ವಜಾ ಮಾಡುವುದನ್ನು ಸರ್ಕಾರದವರು ಆಲೋಚಿಸುತ್ತಿದ್ದಾರೆಂದು ದಿವಾನರಾದ ಸರ್ ಸಿ ಪಿ ರಾಮಸ್ವಾಮಿ ಅಯ್ಯರ್‌ರವರು ಬೊಂಬಾಯಿನಲ್ಲಿ ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದ್ದಾರೆ ಭೂಕಂದಾಯವನ್ನು ವಜಾ ಮಾಡಿ ಅದರ ಬದಲು ಭೂಮಿಯಿಂದ ಬರುವ ವರಮಾನದ ಮೇಲೆ ವರಮಾನ ತೆರಿಗೆಯನ್ನು ಹಾಕಲಾಗುವುದೆಂದು ತಿಳಿಸಿದ್ದಾರೆ ತಿರುವಾಂಕೂರು ಸಂಸ್ಥಾನದ ಒಟ್ಟು ೬| ಕೋಟಿ ರೂ ವರಮಾನದಲ್ಲಿ ಕೇವಲ ೩೦ ಲಕ್ಷ ರೂಗಳು ಮಾತ್ರ ಭೂಕಂದಾಯದಿಂದ ಬರುತ್ತಿದೆ ಈ ನೂತನ ಯೋಜನೆಯಿಂದ ವ್ಯವಸಾಯಗಾರರು ಕೇವಲ ಸ್ವಲ್ಪ ತೆರಿಗೆಯನ್ನು ಮಾತ್ರ ತಮ್ಮ ಭೂಮಿಗಳಿಗೆ ಕೊಡಬೇಕಾಗುವುದೆಂದು ತಿಳಿಸಿದ್ದಾರೆ

ವಿದ್ಯಾರ್ಥಿಗಳ ಮೇಲೆ ಗುಂಡಿನ ಪ್ರಯೋಗ

ಆಜಾದ್ ಹಿಂದ್ ಫೌಜ್ ದಿನಾಚರಣೆ ಸಂಬಂಧದಲ್ಲಿ ಕಲ್ಕತ್ತದ ವೆಲ್ಲಿಂಗ್ಟನ್ ಚೌಕದಲ್ಲಿ ಸಭೆ ನಡೆಯುತ್ತ, ಡಾಲ್‌ಹೌಸಿ ಚೌಕದ ಕಡೆ ಬರುತ್ತಿದ್ದ ೨೦೦೦ ಮಂದಿ ಕಲ್ಕತ್ತ ವಿದ್ಯಾರ್ಥಿಗಳ ಮೇಲೆ ಧರ್ಮತಲಾದ ಬೀದಿಯಲ್ಲಿ ಪೋಲೀಸರು ಲಾಠಿ ಪ್ರಯೋಗಮಾಡಿ ಗುಂಡು ಹಾರಿಸಿದರು ವಿದ್ಯಾರ್ಥಿಗಳು ಹೋಗಲು ಬಯಸಿದ್ದ ಪ್ರದೇಶ ನಿಷೇಧಿಸಲ್ಪಟ್ಟಿರುವ ಪ್ರದೇಶದ ಮಾರ್ಗದಲ್ಲಿದೆಯೆಂದೂ, ಆದ್ದರಿಂದ ಅಲ್ಲಿಗೆ ಅವರು ಮೆರವಣಿಗೆಯಲ್ಲಿ ಹೋಗಲು ಅವಕಾಶ ಕೊಡುವುದಿಲ್ಲವೆಂದೂ ಪೋಲೀಸರು ಹೇಳಿ, ಮೆರವಣಿಗೆಯನ್ನು ಧರ್ಮತಲ ಬೀದಿಯಲ್ಲಿ ಅಡ್ಡಗಟ್ಟಿ ನಿಲ್ಲಿಸಿದರು ಪೋಲೀಸರಿಂದ ತಡೆಗಟ್ಟಲ್ಪಟ್ಟ ವಿದ್ಯಾರ್ಥಿಗಳು ಪೋಲೀಸರನ್ನೆದುರಿಸಿ ಹಾಯಾಗಿ ರಸ್ತೆಯಲ್ಲಿ ಪದ್ಮಾಸನ ಹಾಕಿಕೊಂಡು ಕೂತರು ಸಂಜೆ ೬-೩೦ ಆಯಿತು ಅವರು ಜಾಗಬಿಟ್ಟು ಕದಲಲಿಲ್ಲ. ಮಾರ್ಷಲ್ ಬೋಸ್ ಜಿಂದಾಬಾದ್! ಜೈ ಹಿಂದ್! ಚಲೋ ಚಲೋ ದಿಲ್ಲಿ ಚಲೋ! ಎಂದು ಘೋಷಿಸುತ್ತಾ, ಫೌಜಿನವರ ಬಿಡುಗಡೆಗೆ ಒತ್ತಾಯಪಡಿಸುತ್ತಾ ಕೂತರು. ಈ ಮಧ್ಯೆ ಪೋಲೀಸರು ಲಾಠಿ ಪ್ರಯೋಗ ಮಾಡಿ ಗುಂಪಿನ ಮೇಲೆ ಗುಂಡು ಹಾರಿಸಿದರು ಇದರ ಫಲವಾಗಿ ೧೧ ಮಂದಿ ಮಡಿದು ೧೨೫ ಮಂದಿಗೆ ಗಾಯಗಳಾಗಿವೆ ಧರ್ಮತಲ ರಸ್ತೆಯಲ್ಲಿ ನಡೆದ ಪ್ರಕರಣದಲ್ಲಿ ೧೦ ವರ್ಷದ ಬಾಲಕನೊಬ್ಬನು ಸ್ಥಳದಲ್ಲೂ ಮುಗದೊಬ್ಬನು ಆಸ್ಪತ್ರೆಯಲ್ಲೂ ಮಡಿದು ೬೧ ಮಂದಿ ಗಾಯಗೊಂಡರು ಪೋಲೀಸಿನವರು ವಿದ್ಯಾರ್ಥಿ ಗುಂಪಿನ ಮೇಲೆ ಗುಂಡು ಹಾರಿಸಿದ ಮೇಲೆ, ಧರ್ಮತಲ ಬೀದಿಯಲ್ಲಿ ಜನಸಮೂಹ ಅತ್ಯಧಿಕವಾಯಿತು ಆದರೆ ರಾತ್ರಿ ಹೊತ್ತಿಗೆ ಗುಂಪು ಕೊಂಚ ಕಡಿಮೆಯಾಗಿತ್ತು ಕಲ್ಕತ್ತ ವಿಶ್ವವಿದ್ಯಾನಿಲಯದ ವೈಸ್-ಛಾನ್ಸಲರ್ ಡಾ| ರಾಧಾವಿನೋದಪಾಲ್, ಶರತ್‌ಬೋಸರ ಸಹೋದರರಾದ ಡಾ| ಸುಶೀಲಬೋಸ್, ಹಿಂದೂ ಮಹಾಸಭಾಧ್ಯಕ್ಷ ಡಾ|| ಶ್ಯಾಮಪ್ರಸಾದ ಮುಖರ್ಜಿ ಇವರೆಲ್ಲ ಸ್ಥಳಕ್ಕೆ ಬಂದು ಚದುರ ವಂತೆ ವಿದ್ಯಾರ್ಥಿಗಳಿಗೆ ಬಹಳವಾಗಿ ಉಪದೇಶ ಮಾಡಿದರು ಆದರೆ ಸಂಧಾನಗಳು ಏನೂ ಫಲಿಸಲಿಲ್ಲ ವಿದ್ಯಾರ್ಥಿಗಳೂ ಇತರರೂ ಕೂತಿದ್ದ ಜಾಗ ಬಿಟ್ಟು ಕದಲಲಿಲ್ಲ ರಾತ್ರಿಯೆಲ್ಲ ಅವರು ಅಲ್ಲೇ ಇದ್ದು ಕಾಗದ ಸೊಪ್ಪುಸದೆ ಹೊತ್ತಿಸಿ ಚಳಿ ಕಾಸಿಕೊಳ್ಳುತ್ತಿದ್ದರು ಪೋಲೀಸರೂ ಅಲ್ಲಿದ್ದರ ಗೂರ್ಖಾ ಪೋಲೀಸ್ ಪಡೆಯನ್ನು ಅವರು ಒರಮಾಡಿಕೊಂಡಿದ್ದರು ಬೆಳಗಿನ ಜಾವ ಸುಮಾರು ೪ ೩೦ ರಲ್ಲಿ ಪೋಲೀಸ್ ಗುಂಡಿನೇಟಿನಿಂದ ಮಡಿದವರ ಸ್ಮಾರಕಾರ್ಥವಾಗಿ ಜನರು ಒಂದು ನಿಮಿಷ ಮೌನವ್ರತವನ್ನಾಚರಿಸಿದರು ಗುಂಡಿನೇಟು ಜರುಗಿದ ಮೇಲೆ ಡಾ| ಶ್ಯಾಮಪ್ರಸಾದ ಮುಖರ್ಜಿಯವರೂ ಇತರ ನಾಯಕರೂ ಪೋಲೀಸಿನವರೊಡನೆ ಸಂಧಾನ ನಡೆಸಿದರು ಅನಂತರ ಗುಂಪು ಪೋಲೀಸ್ ಫೌಜನ್ನು ದಾಟಿಕೊಂಡು ಎಸ್ಪ್ಲನೇಡ್ ಮಾರ್ಗವಾಗಿ ಹೊರಟು ಡಾಲ್‌ಹೌಸಿ ಚೌಕವನ್ನು ಬಳಸಿಕೊಂಡು ಕರ್ಪೂರತಲ ಸ್ಥಾನಕ್ಕೆ ಬಂದು ಅಲ್ಲಿಂದ ಚದುರಿತು

ಸ್ವೀಕಾರ

ಬೀರೂರು ಟವನ್ನಿನಲ್ಲಿರುವ ಮ|| ರಾ| ಡಿ ಎಸ್ ಮರುಳಸಿದ್ಧಯ್ಯನವರು ತಮ್ಮ ಮಂಡಿಯಲ್ಲಿ ಆಶ್ವಯುಜ ಬಹುಳ ೩೦ ಭಾನುವಾರ ಮತ್ತು ಸೋಮವಾರ ದಿವಸ ದೀಪಾವಳಿ ಮಹೋತ್ಸವ ನಿಮಿತ್ತವಾಗಿ ಧನಲಕ್ಷ್ಮೀ ಪೂಜೆಯನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸನ್ನಿಧಿಸಿದ ೫ ರೂಪಾಯಿಗಳು ಅಜ್ಜಂಪುರದ ಶೈಮರಿಬಾಯ್ಸ್ ಸ್ಕೂಲ್‌ಮಾಸ್ಟರ್ ವೇ| ಎಂ ಎಸ್ ಮರುಳಸಿದ್ಧಯ್ಯನವರ ದ್ವಾರಾ ತಲ್ಪಿರುತ್ತವೆ

ಈ ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಅಮೆರಿಕನ್ ಕಾಂಗ್ರೆಸಿನಲ್ಲಿ ಆಟ್ಲೀಯವರ ಭಾಷಣ

೧೫ ನೆಯ ತಾರೀಖು ಅಮೆರಿಕನ್ ಕಾಂಗ್ರೆಸಿನ ಸಂಯುಕ್ತ ಅಧಿವೇಶನದಲ್ಲಿ ಬ್ರಿಟಿಷ್ ಮುಖ್ಯ ಮಂತ್ರಿ ಮಿ|| ಆಟ್ಲೀಯವರು ಭಾಷಣ ಮಾಡುತ್ತಾ ಅಟಂ ಬಾಂಬು ಮತ್ತು ಇತರ ಹತ್ಯಾಕಾರಿ ಆಯುಧಗಳನ್ನು ಕುರಿತು ಪ್ರಸ್ತಾಪಿಸಿದರು.

"ಇನ್ನು ಮಿಲಿಟರಿ ಧಾಳಿಗಳಿಗೆ ಪರ್ವತಗಳೂ ನದಿಗಳೂ, ಮತ್ತಿತರ ಅಡಚಣೆಗಳೂ ತಡೆಯಾಗಿ ನಿಲ್ಲುವುದಿಲ್ಲ. ಈ ಆಯುಧಗಳ ಬೆಳವಣಿಗೆಯಿಂದ ಪ್ರಪಂಚದ ಎಲ್ಲ ಭಾಗಗಳಲ್ಲಿಯೂ ಅಪಾಯವಿದೆ. ಈ ಪರಿಸ್ಥಿತಿಯಲ್ಲಿ ಮತ್ತು ಅಟಂಬಾಂಬಿನ ಸಂದರ್ಭದಲ್ಲಿ ನಾನು ಅಧ್ಯಕ್ಷ ಟ್ರೂಮನ್‌ರವರನ್ನು ಭೇಟಿ ಮಾಡಲು ಬಂದೆ. ನಾಗರಿಕತೆಯು ಉಳಿಯಬೇಕಾಗಿದ್ದಲ್ಲಿ ಮತ್ತು ಪ್ರಪಂಚದ ಎಲ್ಲ ಭಾಗದ ಪ್ರಜೆಗಳೂ ಸುರಕ್ಷತೆಯಿಂದಿರಲು ಅವಕಾಶವಾಗಲು ಯಾವ ರೀತಿಯ ಸಮಾಜವು ಏರ್ಪಡಬೇಕೆಂ . ಂಶವನ್ನು ಪರಿಶೀಲಿಸಿ ನಿರ್ಧರಿಸಲು ಎಲ್ಲಾ ರಾಷ್ಟ್ರಗಳನ್ನೂ ಒಟ್ಟುಗೂಡಿಸುವುದಕ್ಕಾಗಿಯೆ ನಾವಿಲ್ಲಿಗೆ ಬಂದುದು.

'ಯುದ್ಧವನ್ನು ನಿಲ್ಲಿಸಲು ಪ್ರಯತ್ನಿಸುವುದರಿಂದಲೇ ಎಲ್ಲವೂ ಆದಂತೆ ಭಾವಿಸಬಾರದು. ಸರಕಾರಗಳಲ್ಲಿ ಆದ ಒಪ್ಪಂದವಾಗುವುದರಿಂದಲೇ ಮಿತ್ರ ರಾಷ್ಟ್ರಗಳು ಒಗ್ಗಟ್ಟಿನ ಸಂಸ್ಥೆಯಾಗಲಾರದು. ಅದಕ್ಕಿಂತ ಹಿರಿದಾಗಿ ಪ್ರಜೆಗಳೆಲ್ಲರೂ ಒಕ್ಕೂಟವಾಗಿ ಕೂಡಬೇಕು" ಎಂದು ಅವರು ಹೇಳಿದರು.

ಮಂಚೂರಿಯ ಬಗ್ಗೆ ರಷ್ಯನರೊಡನೆ ಸಂಧಾನ

ಮಂಚೂರಿಯಾದ ಬಗ್ಗೆ ಸೋವಿಯೆಟ್ ಯೂನಿಯನಿಗೂ ಚೀಣೀ ಸರ್ಕಾರಕ್ಕೂ ಮಾತುಕತೆಗಳು ನಡೆಯುತ್ತಿವೆ ಎಂಬುದಾಗಿ ಚೀಣಾದ ವಿದೇಶಾಂಗ ಉಪ ಮಂತ್ರಿಯು ತಿಳಿಸಿದರು.

ಸಮೆರಾಂಗ್ ಮೇಲೆ ಬ್ರಿಟಿಷ್ ವಿಮಾನ ದಾಳಿ

ಜಾವಾದ ಸಮೆರಾಂಗಿನ ಮೇಲೆ ಬ್ರಿಟಿಷ್ ಆರ್ ಎ ಎಫ್ ವಿಮಾನಗಳು ದಾಳಿ ಮಾಡಿ, ಆರು ಬಾಂಬುಗಳನ್ನು ಸುರಿಸಿದವು. ಇಂಡೋನೇಷಿಯನ್ನರು ಹಠಾತ್ತಾಗಿ ಬ್ರಿಟಿಷ್ ಬ್ರಿಗೇಡಿನ ಮೇಲೆ ದಾಳಿ ಮಾಡಿದುದಕ್ಕಾಗಿ ಈ ಬಾಂಬಿನ ದಾಳಿ ಮಾಡಲಾಯಿತಂತೆ. ಸೌರಬಾಯಾದಲ್ಲಿ ಬ್ರಿಟಿಷ್ ಠಾಣ್ಯಗಳ ಮೇಲೆ ಇಂಡೋನೇಷಿಯನ್ನರು ಷೆಲ್ಲುಗಳನ್ನು ಪ್ರಯೋಗಿಸಿದರು. ಬಟೇವಿಯಾದಲ್ಲೂ ಕದನವು ಪುನಃ ಪ್ರಾರಂಭವಾಗಿದೆ. ಬ್ಯಾಡಾಂಗ್ ಪ್ರದೇಶದಲ್ಲಿ ಪರಿಸ್ಥಿತಿಯು ವಿಷಮಗೊಂಡಿದೆ.

ಭಾರತಕ್ಕೂ ಯುದ್ಧ ದಂಡ ಸಲ್ಲಬೇಕು

ಜಪಾನಿನ ಯುದ್ಧದಲ್ಲಿ ಭಾರತವು ಹೆಚ್ಚು ಸಹಾಯ ಮಾಡಿ ಹುಚ್ಚು ನಷ್ಟ ಹೊಂದಿರುವುದರಿಂದ ಜಪಾನಿನಿಂದ ಬರುವ ಅತ್ಯಂತ ದೊಡ್ಡ ಯುದ್ಧ ದಂಡವು ಭಾರತಕ್ಕೆ ಸಲ್ಲಬೇಕೆಂದು ಭಾರತ ಪ್ರತಿನಿಧಿಗಳಾದ ಸರ್ ಗಿರಿಜಾ ಶಂಕರ್ ಬಾಜ್‌ಪಾಯ್‌ರವರು ವಾಷಿಂಗ್‌ಟನ್ನಿನಲ್ಲಿ ಸೇರಿರುವ ದೂರಪ್ರಾಚ್ಯದ ಕಮಿಷನ್ ಮುಂದೆ ಮೆಮೊರ್ಯಾಂಡಂ ಸಲ್ಲಿಸಿದ್ದಾರೆ.

ಮೃಗಾಲಯದಲ್ಲಿ ಹುಲಿ ಸಿಂಹದ ಕದನ

೧೫ನೇ ತಾರೀಖಿನ ಬೆಳಿಗ್ಗೆ ಸುಮಾರು ೧೧ ಘಂಟೆಯ ಸಮಯದಲ್ಲಿ ರಾಜಧಾನಿಯ ಮೃಗಾಲಯದಲ್ಲಿ ಹೊರಗೆ ಬಿಟ್ಟಿದ್ದ ಒಂದು ಹುಲಿಗೂ ಒಂದು ಹೆಣ್ಣು ಸಿಂಹಕ್ಕೂ ತೀವ್ರತರವಾದ ಕಚ್ಚಾಟ ನಡೆದು ಹುಲಿಯು ಸಿಂಹವನ್ನು ರಕ್ತ ಹೀರಿ ಅದನ್ನು ಕೊಂದಿತು.

ಓಂ

ಆತ್ಮವಿಚಾರದ ಮಂದಿರ, ಮೈಸೂರು

—

ಮುಖ್ಯವಾದ ವಿಷಯ

ಈ ಪ್ರಪಂಚದಲ್ಲಿ ಪ್ರತಿಯೊಬ್ಬರೂ ... ದುಃಖ ವಿಲ್ಲದ ನಿತ್ಯವಾಗಿರತಕ್ಕ ಸುಖವನ್ನೇ ಅಪೇಕ್ಷಿಸುತ್ತಿದ್ದಾರೆ. ಆದರೆ ನಾವು ನೋಡಿದರೆ ಭಿಕ್ಷುಕನಾದಿಯಾಗಿ ಚಕ್ರವರ್ತಿಯ ವರೆಗೆ ದುಃಖವಿಲ್ಲದೆ ಸುಖಿಗಳಾಗಿರುವವರು ಯಾರೂ ಇಲ್ಲ. ಏತಕ್ಕೆಂದರೆ ನಮ್ಮ ದೇಹವು ಮಲ ಮೂತ್ರ ರಕ್ತ ಮಾಂಸ ಮುಂತಾದ ಅತ್ಯಂತ ಅಸಹ್ಯ ಪದಾರ್ಥಗಳಿಂದ ಕೂಡಿರುವುದಲ್ಲದೆ ಈ ಲೋಕದ ಸ್ವಭಾವ ರೋಗಗಳಿಗೆ ತವರುಮನೆಯಾಗಿರುವುದರಿಂದ ಯಾವಾಗಲೂ ನಮ್ಮ ದೇಹದಲ್ಲಿ ಏನಾದರೂ ಒಂದು ರೋಗವು ನಾನಾ ದುಃಖವನ್ನು ಉಂಟುಮಾಡುತ್ತಿರುವುದು. ... ಏನಾದರೂ ... ದಿಂದಲು ಮತ್ತು ಪ್ರಪಂಚದಲ್ಲಿ ನಾವು ನೋಡತಕ್ಕ ವ್ಯವಹಾರಗಳ ಯಾವ ಒಂದರಲ್ಲಾದರೂ ಕಷ್ಟವಿಲ್ಲದ ... ನಮ್ಮ ... ನಮ್ಮ ... ಇದ್ದೇ ಇರುತ್ತದೆ. ಇದಲ್ಲದೆ ಜನ್ಮ ಮರಣಗಳ ... ದಲ್ಲಿಯ ಮರಣವಾಗುವಾಗ ನಿರತಿಶಯವಾದ ದುಃಖವನ್ನು ನಾವು ಅನುಭವಿಸಬೇಕಾಗುತ್ತದೆ. ನಮ್ಮ ಮರಣವಾದನಂತರ ಪಾಪಕರ್ಮಗಳಿಗನುಸಾರವಾಗಿ ನರಕದಲ್ಲಿ ಸಹಿಸಲಶಕ್ಯವಾದ ಶಿಕ್ಷೆಯನ್ನು ನಾವು ಅನುಭವಿಸಿ ಪುನಃ ಗರ್ಭನರಕಕ್ಕೆ ಬಂದು ತಾಯಿಯ ಗರ್ಭದಿಂದ ಹೊರಗೆ ಬರುವಾಗ ಹೇಳಲಶಕ್ಯವಾದ ದುಃಖವನ್ನು ಅನುಭವಿಸಬೇಕಾಗುತ್ತದೆ. ಇದಲ್ಲದೆ ನಮಗೆ ಮುಂದೆ ಮನುಷ್ಯ ಜನ್ಮವೇ ಬರುತ್ತದೆಂಬ ನಂಬಿಕೆಯಿಲ್ಲ. ಏತಕ್ಕೆಂದರೆ ನಮ್ಮ ಕರ್ಮಗಳಿಗನುಸಾರವಾಗಿ ನಾಯಿ ಹಂದಿ ಮುಂತಾದ ಹೀನಜನ್ಮಗಳು ನಮಗೆ ಬರಬಹುದು. ಅಲ್ಲದೆ ನಮ್ಮ ಪ್ರೀತಿಗೆ ವಿಷಯವಾಗಿರುವ ದಂಪತಿ ಮಕ್ಕಳು ... ಇವುಗಳು ಅಶಾಶ್ವತವಾದ್ದರಿಂದ ಅವುಗಳ ವಿಯೋಗಕಾಲದಲ್ಲಿ ನಮಗೆ ಮಹತ್ತಾದ ದುಃಖವುಂಟಾಗುತ್ತದೆ. ಮತ್ತು ನಾವು ವಿಷಯಗಳನ್ನು ಅನುಭವಿಸುವಾಗ ಅವುಗಳು ಒಂದು ಕ್ಷಣ ಸುಖವನ್ನು ಕೊಟ್ಟು ಅಧ್ಯಂತಗಳಲ್ಲಿ ದುಃಖವನ್ನೇ ಕೊಡುತ್ತವೆ. ಇಂತಹ ದುಃಖದಲ್ಲೇ ನಾವು ... ಬಚ್ಚಲಿನ ಕ್ರಿಮಿಗೆ ಬಚ್ಚಲಿನ ದುರ್ಗಂಧವೇ ಹಿತವಾಗಿ ತೋರುವಂತೆ ನಮಗೆ ಬಹುಕಾಲದ ಅಭ್ಯಾಸದಿಂದ ದುಃಖವೇ ನಮಗೆ ಸುಖವಾಗಿ ತೋರುತ್ತದೆ.

ಈ ಲೋಕದಲ್ಲಿ ಆಶ್ಚರ್ಯವಾದದ್ದು ಯಾವುದೆಂದರೆ ಪ್ರತಿಯೊಬ್ಬನೂ ತನಗಿಂತ ಅನ್ಯನಾಗಿರುವ ಪದಾರ್ಥಗಳ ವಿಷಯವನ್ನು ತಿಳಿಯಬೇಕೆಂದು ಕುತೂಹಲಪಡುತ್ತಾನೆಯೇ ಹೊರತು ತನ್ನ ವಿಷಯವನ್ನು ಅಂದರೆ ನಾನು ಯಾರು, ನಾನು ಹುಟ್ಟುವದಕ್ಕೆ (ತಾಯಿಯ ಗರ್ಭಕ್ಕೆ ಬರುವದಕ್ಕೆ) ಮುಂಚೆ ನಾನು ಎಲ್ಲಿದ್ದೆನು, ನಾನು ಸತ್ತನಂತರ (ಈ ದೇಹವನ್ನು ಬಿಟ್ಟನಂತರ) ನಾನು ಎಲ್ಲಿಗೆ ಹೋಗುತ್ತೇನೆ ಎಂಬುದನ್ನು ತಿಳಿಯಲು ಕುತೂಹಲಪಡುವುದೇ ಇಲ್ಲ. ಅಲ್ಲದೆ ಪ್ರತಿಯೊಬ್ಬನೂ ತನಗೆ ವೃದ್ಧಾಪ್ಯ ಬಂದಾಗ ತಾನು ಸುಖವಾಗಿರುವದಕ್ಕೂ, ತಾನು ಅಕಾಲದಲ್ಲಿ ಗತಿಸಿದರೆ ತನ್ನ ಸತೀಪುತ್ರಾದಿಗಳು ಸುಖವಾಗಿರುವದಕ್ಕೂ ತಕ್ಕ ಏರ್ಪಾಡನ್ನು ಮಾಡುವುದಕ್ಕೆ ಯೋಚಿಸುತ್ತಾನೆಯೇ ಹೊರತು ಎಷ್ಟು ವರ್ಷಗಳಾದಾಗ್ಯೂ ತಾನು ಈ ಲೋಕವನ್ನು ಬಿಡುವದು ನಿಶ್ಚಯವಾಗಿದ್ದರೂ ಈ ಲೋಕವನ್ನು ಬಿಟ್ಟನಂತರ ತಾನು ಸುಖವಾಗಿರುವದಕ್ಕೆ ತಕ್ಕ ಏರ್ಪಾಡನ್ನು ಮಾಡಲು ಪ್ರಯತ್ನ ಪಡುವುದೇ ಇಲ್ಲ. ಒಬ್ಬನು ತನ್ನ ದೇಶದಿಂದ ಅನ್ಯದೇಶಕ್ಕೆ ಹೋಗಿ ಅಲ್ಲಿ ಕೆಲವು ಕಾಲ ವಾಸಮಾಡಬೇಕೆಂದು ಇಚ್ಛಿಸಿದರೆ ಪ್ರಯಾಣ ಮತ್ತು ವಾಸದ ಖರ್ಚುಗಳಿಗೆ ಅವಶ್ಯಕವಾದಷ್ಟು ಧನವನ್ನು ತನ್ನ ದೇಶದಿಂದ ತೆಗೆದುಕೊಂಡು ಹೋದರೇನೇ ನಿರಾಯಾಸವಾಗಿ ಪ್ರಯಾಣ ಮಾಡಿ ಅಲ್ಲಿ ಸುಖವಾಗಿ ವಾಸಮಾಡಬಹುದು. ಹಾಗೆ ಮಾಡದೇ ಹೋದರೆ ಅಲ್ಲಿಗೆ ನಡೆದುಕೊಂಡುಹೋಗಿ ಆಯಾಸಪಡಬೇಕಾಗುವದಲ್ಲದೆ ಅಲ್ಲಿ ಉಪವಾಸವನ್ನು ಮಾಡಿ ಪ್ರಾಣವನ್ನೂ ಸಹ ಬಿಡಬೇಕಾಗುತ್ತದೆ. ಅದರಂತೆ, ನಾವು ಈ ಲೋಕದಲ್ಲಿರುವದು ಸ್ಥಿರವಲ್ಲದೆ ಶೀಘ್ರವಾಗಿಯಾಗಲಿ ಅಥವಾ ನಿಧಾನವಾಗಿಯಾಗಲಿ ಯಾವುದೋ ಒಂದು ದಿವಸ ಈ ಲೋಕವನ್ನು ನಾವು ಬಿಡಲೇಬೇಕು. ಈ ಲೋಕವನ್ನು ಬಿಟ್ಟನಂತರ ನಾವು ಸ್ವಲ್ಪವೂ ದುಃಖವಿಲ್ಲದೆ ಯಾವಾಗಲೂ ಸುಖವಾಗಿರಬೇಕಾದರೆ ತಕ್ಕ ಏರ್ಪಾಡನ್ನು ನಾವು ಈ ಲೋಕದಲ್ಲಿಯೇ ಮಾಡಬೇಕಲ್ಲದೆ ಈ ಲೋಕವನ್ನು ಬಿಟ್ಟ ಬಳಿಕ ಮಾಡುವದಕ್ಕಾಗುವದಿಲ್ಲ. "ನಹಿ ಪ್ರಮಾಣಂ ಜಂತೂನಾಂ ಉತ್ತರಕ್ಷಣ ಜೀವಿತೇ" ಎಂಬ ವಚನದ ಪ್ರಕಾರ ಇನ್ನೊಂದು ಕ್ಷಣದವರೆಗೂ ಯಾವ ಪ್ರಾಣಿಯಾದರೂ ಜೀವಿಸುತ್ತದೆ ಎಂಬುವುದು ನಂಬಿಕೆಯಿಲ್ಲವಾದ್ದರಿಂದ ವಿವೇಕಿಗಳಾಗಿರತಕ್ಕವರು ನಿದಾನಮಾಡದೆ ತಾವು ಈ ಲೋಕವನ್ನು ಬಿಟ್ಟನಂತರ ನರಕದುಃಖವಾಗಲಿ ಜನನಮರಣಾದಿ ದುಃಖಗಳಾಗಲಿ ಯಾವದೂ ಇಲ್ಲದ ನಿತ್ಯವಾಗಿರತಕ್ಕ ಸುಖವನ್ನು ಪಡೆಯುವದಕ್ಕೆ ತಕ್ಕ ಏರ್ಪಾಡನ್ನು ಮಾಡತಕ್ಕದ್ದು ಅತ್ಯಾವಶ್ಯಕವಾಗಿದೆ.

ಸರ್ವ ದುಃಖಗಳಿಂದಲೂ ಬಿಡುಗಡೆ ಹೊಂದಿ ನಿತ್ಯವಾದ ಸುಖವನ್ನು ಹೊಂದುವದಕ್ಕೆ ಮೋಕ್ಷವೆಂದು ಹೆಸರು. ಮೋಕ್ಷಕ್ಕೆ ಸ್ವಸ್ವರೂಪಜ್ಞಾನವು ಕಾರಣವಾಗಿದೆ. ಸ್ವಸ್ವರೂಪಜ್ಞಾನಕ್ಕೆ ಈಶ್ವರಾನುಗ್ರಹವು ಕಾರಣವಾಗಿದೆ. ಈಶ್ವರಾನುಗ್ರಹಕ್ಕೆ ಈಶ್ವರ ಪ್ರೀತಿಯಾಗಿ ಮಾಡತಕ್ಕ ಸತ್ಕರ್ಮಗಳು ಮತ್ತು ಈಶ್ವರಭಕ್ತಿ ಕಾರಣವಾಗಿವೆ. ಕರ್ಮ, ಭಕ್ತಿ ಮತ್ತು ಜ್ಞಾನಗಳ ಸ್ವರೂಪವು ಸರ್ವಜ್ಞನಾದ ಈಶ್ವರನಿಂದ ಉಕ್ತವಾದ ವೇದೋಪನಿಷತ್ತುಗಳಲ್ಲಿಯು ಮತ್ತು ಶ್ರೀ ವ್ಯಾಸಮಹರ್ಷಿಗಳಿಂದ ಉಕ್ತವಾದ ಹದಿನೆಂಟು ಪುರಾಣಗಳಲ್ಲಿಯು ಹೇಳಲ್ಪಟ್ಟಿದೆ. ಸತ್ಕರ್ಮನಿರತರು ಮತ್ತು ಈಶ್ವರಭಕ್ತಿಯುತರು ಆದ ನಮ್ಮನ್ನಾಳುತ್ತಿರುವ ಶ್ರೀಮಜ್ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಜಿ ಸಿ ಎಸ್ ಐ ರವರು ಪ್ರಜೆಗಳಲ್ಲಿ ತಮಗಿರುವ ವಾತ್ಸಲ್ಯದಿಂದ ತಮ್ಮಂತೆಯೇ ತಮ್ಮ ಪ್ರಜೆಗಳು ಸತ್ಕರ್ಮನಿರತರು ಮತ್ತು ಈಶ್ವರಭಕ್ತಿಯುತರು ಆಗಿ ಮೋಕ್ಷವನ್ನು ಪಡೆಯಬೇಕೆಂಬ ಇಚ್ಛೆಯಿಂದ ಉಪನಿಷತ್ತುಗಳನ್ನು ಮತ್ತು ಪುರಾಣಗಳನ್ನು ಕನ್ನಡ ಅರ್ಥಾನುವಾದದೊಡನೆ ಪ್ರಕಟಿಸಲು ಏರ್ಪಾಡು ಮಾಡಿರುತ್ತಾರೆ. ಪ್ರಭುಗಳವರ ಉದ್ದೇಶವನ್ನು ನೆರವೇರಿಸಲು ಮೈಸೂರು ವಾಣೀವಿಲಾಸ ರೋಡಿನಲ್ಲಿರುವ ಖ್ಯಾತನಾಮ ಸಾಹುಕಾರ್ ಸಿದ್ಧಲಿಂಗಯ್ಯನವರ ಸಂಸ್ಕೃತಪಾಠಶಾಲೆಯ ಕಟ್ಟಡದಲ್ಲಿ ಇದೇ ತಿಂಗಳು ೨೨ನೇ ತಾರೀಖು ಗುರುವಾರದಿಂದ ಪ್ರತಿನಿತ್ಯವೂ ಸಾಯಂಕಾಲ ೬ ಗಂಟೆಯಿಂದ ೭ ಗಂಟೆವರಿವಿಗೆ ಪುರಾಣಶ್ರವಣವು ಮತ್ತು ೭ ಗಂಟೆಯಿಂದ ೮ ಗಂಟೆವರಿವಿಗೆ ಉಪನಿಷತ್ತುಗಳ ಶ್ರವಣವು ಆತ್ಮವಿಚಾರ ಮಂದಿರದ ಆಶ್ರಯದಲ್ಲಿ ನಡೆಯುತ್ತದೆ. ಮುಮುಕ್ಷುಗಳಾಗಿರತಕ್ಕವರು ಕಾಲಕ್ಕೆ ಸರಿಯಾಗಿ ದಯಮಾಡಿಸಿ ಶ್ರವಣಮಾಡಿ ಕೃತಾರ್ಥರಾಗುವರೆಂದು ನಂಬಿದೆ.

ಎಂ. ಎಲ್. ನಾಗಣ್ಣ

ವ್ಯವಸ್ಥಾಪಕ

ದುಃಖ ಪ್ರದರ್ಶನ

೧೬-೧೧-೧೯೪೫ ರಲ್ಲಿ ಬಸಪ್ಪ ಇಂಟರ್‌ಮಿಡಿಯೇಟ್ ಕಾಲೇಜಿನ ಅಧ್ಯಾಪಕವರ್ಗದವರೂ ವಿದ್ಯಾರ್ಥಿಗಳೂ ಸಭೆಸೇರಿ ೧೪-೧೧-೪೫ ರಲ್ಲಿ ಮೋಟಾರು ಅಪಘಾತದಿಂದ ಆಕಸ್ಮಿಕ ಮರಣಕ್ಕೊಳಗಾದ ಶ್ರೀ ಸರಾಫ್ ಬಸಪ್ಪನವರ ಅಕಾಲ ನಿಧನಕ್ಕಾಗಿ ತಮ್ಮ ಅಪಾರ ಶೋಕವನ್ನು ವ್ಯಕ್ತಪಡಿಸಿದರು. ದಿವಂಗತರ ಆತ್ಮಕ್ಕೆ ಅನಂತಶಾಂತಿ ಲಭಿಸಲೆಂದೂ, ಅವರ ಮನೆತನದವರು ಈ ದುಃಖವನ್ನು ಸಹಿಸಲು ಧೈರ್ಯವನ್ನು ಪಡೆಯಲೆಂದೂ ಭಗವಂತನನ್ನು ಪ್ರಾರ್ಥಿಸಿಕೊಳ್ಳಲಾಯಿತು. ದಿವಂಗತರ ಸ್ಮರಣೆಗಾಗಿ ಆದಿನ ಕಾಲೇಜನ್ನು ಮುಚ್ಚಲಾಗಿತ್ತು.

D S Hanumanthachari

ಪ್ರಿನ್ಸಿಪಾಲ್

ಮೈಸೂರು, ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ಪಂಡಿತ ಶ್ರೀ ... ಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರಶರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೩ ರೂ ೪ ಆಣೆ

ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೧೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೩ನೇ ಡಿಸೆಂಬರ್ ೧೯೪೫ [ಸಂಚಿಕೆ ೨೯

ಪಂಡಿತರು ವೀರಶೈವ ಸಮಾಜೋದ್ಧಾರಕರು

ಲೇ|| ಶ್ರೀ|| ಷ|| ಬ್ರ|| ಸಿದ್ಧಲಿಂಗಶಿವಾಚಾರ್ಯರ ಪ... ...

'ನ ವೀರಶೈವಸದೃಶಮತಮಸ್ತಿ ಜಗತ್ತ್ರಯೇ'

ವೀರಶೈವಮತವು ಪರಮಪವಿತ್ರವಾದುದೆಂದೂ, ಈ ಮತಕ್ಕೆ ಸಮಾನವಾದ ಮತವು ಜಗತ್ತ್ರಯದಲ್ಲಿಲ್ಲವೆಂದೂ ಪಾರಮೇಶ್ವರಾಗಮವು ಸಾರಿರುವದು ಯುಗಯುಗಾದಿಯಿಂದಲೂ ಬಂದ ಪವಿತ್ರವಾದೀಮತವು ಕೆಲವು ಕಾಲದಲ್ಲಿ ಪರಮತೀಯರ ಪ್ರಾಬಲ್ಯದಿಂದ ಹೀನಸ್ಥಿತಿಯೊಳಗಾಗಿತ್ತು ಆದರೆ ವೀರಶೈವಮತದ ಪುಣ್ಯವಿಶೇಷದಿಂದ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಪೌರ್ಣಿಮೆಯ ಚಂದ್ರನಂತೆ ಉದಯಿಸಿ ಸರ್ವೋತ್ತಮವಾದ ವೇದಾಗಮೋಪನಿಷತ್ತುಗಳನ್ನು ಅವಲೋಕಿಸಿ ಈ ಮತದ ಪ್ರಾಶಸ್ತ್ಯವನ್ನು ಪ್ರಕಾಶಕ್ಕೆ ತಂದರು ಈ ಮಹಾಶಯರುಗಳಿಯು ಧೈರ್ಯಸಾಹಸಾದಿಗಳಿಂದ ವೀರಶೈವಸಮಾಜೋನ್ನತಿಗಾಗಿ ಅಹೋರಾತ್ರಿಗಳೆನ್ನದ, ತನುಮನೋಧನಗಳಿಂದ ಸೇವೆಯನ್ನೆಸಗಿ ಪಂಚಪೀಠಗಳನ್ನೂ ಗುರುವರ್ಗವನ್ನೂ ಅತ್ಯಂತ ಪ್ರಕಾಶಕ್ಕೆ ತಂದರು ಪಂಡಿತರಿಗೆ ಸ್ವಮತದಲ್ಲಿಯ ನಾಸ್ತಿಕ ಪಂಥಿಗಳು ಎಷ್ಟೋ ವಿಘ್ನಾದಿಗಳನ್ನು ತಂದೊಡ್ಡಿದರೂ ಅವನ್ನೆಲ್ಲಾ ಲೆಕ್ಕಿಸದ ದುರ್ವಾದಿಗಳನ್ನು ರಸಾತಳಕ್ಕೆ ತುಳಿದರು ನಮ್ಮ ಮತದ ಅಮೂಲ್ಯವಾದ ಸಂಸ್ಕೃತಗ್ರಂಥಗಳನ್ನು ಪರಿಶೋಧಿಸಿ ಕನ್ನಡದಲ್ಲಿ ಮುದ್ರಿಸಿ ಕನ್ನಡಿಯಂತೆ ಸರ್ವರ ಕೈಯಲ್ಲಿ ಕೊಟ್ಟರು ಈಗಿನ ಇನ್ನಿತರ ಪಂಡಿತರು ಮತ್ತು ಮಹಾ ಮಹಾ ಮೇಧಾವಿಗಳು ಧನಪಿಶಾಚಿಯ ಬಲಿಗೆ ಸಿಲ್ಕಿ ಸ್ವಧರ್ಮಕ್ಕೆ ತಿಲಾಂಜಲಿಗಯ್ಯುತ್ತಿರುವರು ಆದರೆ ಈ ವಿದ್ವನ್ಮಣಿಗಳು ಧನದಾಶೆಗೆ ಸೋಲದೆ ನಿಜವಾದ ಧರ್ಮಧ್ವಜವನ್ನು ನೆಲೆಗೊಳಿಸಿದರು ಶ್ರೀಕೃಷ್ಣನು ಮೈತ್ರೀಭಾವದಿಂದ ಅರ್ಜುನನಿಗೆ ಭಗವದ್ಗೀತೆಯನ್ನು ಬೋಧಿಸಿದಂತೆ ಈ ಪಂಡಿತವರ್ಯರು ಮತತತ್ವಗಳನ್ನು ತಮ್ಮ ಪ್ರಭಾಪತ್ರಿಕೆಯಿಂದಲೂ, ಲೇಖಮೂಲಕವಾಗಿಯೂ, ರೇಡಿಯೋಗಳಲ್ಲಿ ಭಾಷಣಮೂಲಕವಾಗಿಯೂ ಬೋಧಿಸಿ ಕಡುವೈರಿಯಾದ ನಾಸ್ತಿಕಜನಾಂಗವನ್ನು ಸಹ ಆಸ್ತಿಕ ಜನಾಂಗವನ್ನಾಗಿ ಮಾರ್ಪಡಿಸಿದರು ಇವರಂತೆ ಪ್ರತಿಯೊಬ್ಬ ಪಂಡಿತರೂ ಉಪಾಚಾರ್ಯರೂ ಧರ್ಮಾಭಿಮಾನಿಗಳೂ, ಸ್ವಧರ್ಮದ ಸಲುವಾಗಿ ಹೋರಾಡಿದರೆ ಈ ಧರ್ಮದ ಪ್ರಕಾಶವು ಶೀಘ್ರದಲ್ಲಿಯೇ ಆಗುವದರಲ್ಲಿ ಯಾವ ಸಂಶಯವೂ ಇಲ್ಲ ಧರ್ಮೋನ್ನತಿಗಾಗಿ ವರ್ಣಿಸಲಿಕ್ಕೆ ಅಸಾಧ್ಯವಾದ ಮಹತ್ಕಾರ್ಯಗಳನ್ನು ಮಾಡಿರುವ ಇಂದಿಗೂ ಮಾಡುತ್ತಿರುವ ಲೋಕಮಾನ್ಯರಾದ ಪಂ| ಶ್ರೀಕಾಶೀನಾಥಶಾಸ್ತ್ರಿಗಳವರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಮೊಹಂಜೋದಾರೋ ಸಂಸ್ಕೃತಿ; ಆರ್ಯದ್ರಾವಿಡವಾದ!

ಸಿಂಧು ತೀರದ ಮೊಹಂಜೋದಾರೋ ಎಂಬಲ್ಲಿ ದೊರೆತ ಪ್ರಾಚೀನ ಅವಶೇಷಗಳು ಆರ್ಯರಿಗಿಂತಲೂ ಭಿನ್ನವಾದ ಸಂಸ್ಕೃತಿಯನ್ನು ಸೂಚಿಸುತ್ತಿರುವವೆಂದು ಕೆಲವು ಆಂಗ್ಲ ವಿದ್ವಾಂಸರು ಬರೆಯುತ್ತಿದ್ದಾರೆ ಇದಲ್ಲಿ ಅಕಾಶಬಾಣವನ್ನೇ ಹೊರತು ಯಾವ ಪ್ರಾಚೀನಾಧಾರವೂ ಸಿಕ್ಕಿಲ್ಲ ಮೊಹಂಜೋದಾರೋದ ಲಿಪಿಯು ಕೂಡ ಈವರೆಗೂ ತಿಳಿದಿಲ್ಲ ತಮ್ಮ ಮನಸ್ಸಿನಲ್ಲಿ ಮೊದಲೇ ಕೆಲವು ವಿಚಿತ್ರ ಕಲ್ಪನೆಗಳನ್ನು ನಿರಾಧಾರವಾಗಿ ನಿಶ್ಚಯಿಸಿಕೊಂಡು ಇದಕ್ಕೆ ಗಂಟು ಹಾಕಲು ಮಾರ್ಷಲ್ ಹರಾಪ್ ಮುಂತಾದವರು ಹವಣಿಸುತ್ತಿದ್ದಾರೆಯೇ ಹೊರತು ಸಿಂಧುತೀರದ ಸಂಸ್ಕೃತಿಯ ಬಗ್ಗೆ ಯಾವ ನಿಶ್ಚಯವೂ ಆಗಿಲ್ಲ

ಇನ್ನು ಆರ್ಯರು ಎಲ್ಲಿಂದಲೋ ಭಾರತವರ್ಷಕ್ಕೆ ಬಂದಿದ್ದಾರೆಂಬ ಅಸತ್ಯವಾರ್ತೆಯನ್ನು ರಾಜನೀತಿಗಾಗಿಯೋ ಅಜ್ಞಾನದಿಂದಲೋ ಆಂಗ್ಲರು ಬರೆಯುತ್ತ ಬಂದಿದ್ದಾರೆ ಇದರ ರಹಸ್ಯವನ್ನರಿಯದೆ ಕುರುಡನಂಬಿಗೆಯಿಂದ ಕೆಲ ಭಾರತೀಯರೂ ಈ ಮಾತನ್ನು ಅನುಸರಿಸುತ್ತಿರುವರೆಂದು ವ್ಯಸನದಿಂದ ಬರೆಯಬೇಕಾಗಿದೆ ಆರ್ಯರು ಇಲ್ಲಿಯೇ ಹುಟ್ಟಿ ಬೆಳೆದವರು ಆಂಧ್ರಕರ್ಣಾಟಕ ಅಂಗವಂಗಗಳಂತೆ ದ್ರಾವಿಡವೂ ಒಂದು ಪ್ರಾಂತದ ಜನಾಂಗದ ಹೆಸರಾಗಿದೆ ಇವರೆಲ್ಲರೂ ಆರ್ಯರಾಗಿದ್ದಾರೆ ವೇದೋಕ್ತಗಳಾದ ಶಿವ ಶಕ್ತಿ ವಿಷ್ಣು ಸೂರ್ಯ ಗಣಪತ್ಯಾದಿ ದೇವತೆಗಳನ್ನು ಪೂಜಿಸತಕ್ಕ ಅಥವಾ ಉಪಾಸನೆ ಮಾಡತಕ್ಕ ಜನರೆಲ್ಲರೂ ಆರ್ಯರಾಗಿದ್ದಾರೆ ಜೈನ ಬೌದ್ಧರ ಸಂತತಿಯೂ ಆರ್ಯರಿಂದಾಗಿದೆ ಆದುದರಿಂದ ಬುದ್ಧಿವಂತರೆಲ್ಲರೂ ಈ ಬಗ್ಗೆ ತಮ್ಮ ಪ್ರತಿಭೆಯಿಂದ ಪರಿಶೀಲನೆ ಮಾಡಬೇಕು ಇಂಗ್ಲೀಷ ಗ್ರಂಥಗಳನ್ನೆಲ್ಲ ಇತಿಹಾಸವೆಂದು ನಂಬುವದರಿಂದ ಪ್ರಯೋಜನವಿಲ್ಲ

ಸದಾಶಿವಮೂರ್ತಿ

ಶ್ರೀ ಕೊಟ್ಟೂರೇಶ್ವರನ ಕಾರ್ತಿಕೋತ್ಸವ ಕೊಟ್ಟೂರು

ಬಳ್ಳಾರಿ ಡಿ|| ಕೊಟ್ಟೂರು ನಗರದಲ್ಲಿ ಅಗಾಧ ಮಹಿಮಶೀಲನಾದ ಶ್ರೀ ಕೊಟ್ಟೂರೇಶ್ವರನ ಕಾರ್ತಿಕೋತ್ಸವವು ಇದೇ ಮಾರ್ಗಶಿರ ಶು|| ೧೩ ಸೋಮವಾರ (17-12-45) ಪದ್ಧತಿ ಪ್ರಕಾರ ಬಹು ವಿಜೃಂಭಣೆಯಿಂದ ನಡೆಯುತ್ತದೆ. ಆ ಕಾಲಕ್ಕೆ ಭಕ್ತರು ಆಗಮಿಸಿ ದರ್ಶನವನ್ನು ಪಡೆದು ಪುನೀತರಾಗಬೇಕೆಂದು ಆಶಿಸುತ್ತೇನೆ.

ಪಿ ಎಂ ಮರುಳಾರಾಧ್ಯ

ದುಃಖವಾರ್ತೆ

ಹುಮನಾಬಾದ ಟವನ್ನಿನಲ್ಲಿರುವ ಮ|| ರಾ|| ಮಡಿವಾಳಪ್ಪಚೆಟ್ಟಿ ಇವರು ಕಳೆದ ಅಶ್ವಯುಜ ಬಹುಳ ೧೨ ಗುರುವಾರ ದಿವಸ ಶಿವಾಧೀನರಾದರೆಂಬ ವಿಷಯವನ್ನು ಬರೆಯಲು ವಿಷಾದವೆನಿಸುತ್ತದೆ ಇವರು ಪೂಜಾಪರರೂ ಸತ್ವಗುಣಶಾಲಿಗಳೂ ಆಗಿದ್ದರು ಮರಣ ಕಾಲದಲ್ಲಿ ಜಂಗಮಾರ್ಚನೆಯನ್ನು ಮಾಡಿಸಿ ಪಾದೋದಕಪ್ರಸಾದಗಳನ್ನು ಸ್ವೀಕರಿಸಿ ಲಿಂಗೈಕ್ಯರಾದರು ಇವರಿಗೆ ೬೩ ವರುಷಗಳಾಗಿದ್ದವು ... ಸಮಾಧಿಸಂಸ್ಕಾರವು ವಿಧ್ಯುಕ್ತವಾಗಿ ನೆರವೇರಿತು ಶ್ರೀ ಜಗದೀಶ್ವರನು ಮೃತರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಪ್ರಾರ್ಥಿಸುವ,

ಸಿದ್ಧರಾಮಯ್ಯಬಂಗಿ

ಪರ್ಷಿಯದ ಪ್ರಾರ್ಥನೆ ರಷ್ಯನ್ ನಿರಾಕರಣೆ

ಉತ್ತರ ಪರ್ಷಿಯಾದಲ್ಲಿ ದಂಗೆಯನ್ನು ಅಡಗಿಸಲು ಪರ್ಷಿಯ ಸರ್ಕಾರದವರು ತಮ್ಮ ಸೈನ್ಯವನ್ನು ರವಾನಿಸಲು ಅನುಮತಿ ಕೊಡಬೇಕೆಂದು ರಷ್ಯಾವನ್ನು ಪ್ರಾರ್ಥಿಸಿದ್ದರು ಅದು ಸಾಧ್ಯವಿಲ್ಲವೆಂದು ರಷ್ಯವು ಉತ್ತರ ಕೊಟ್ಟಿದೆಯೆಂದು ಹೇಳಲಾಗಿದೆ

ಸ್ವೀಕಾರ

ಧಾರವಾಡ ಡಿ|| ರಟ್ಟೆಹಳ್ಳಿ ಗ್ರಾಮದಲ್ಲಿರುವ ಕಬ್ಬಿಣಕಂಥಿ ಮಠದ ವೇ| ಬಸಪ್ಪಯ್ಯನವರ ಪುತ್ರ ಚಿ|| ಚಂದ್ರಶೇಖರ ಸ್ವಾಮಿಗೆ, ಶಿಕಾರಿಪುರ ತಾ|| ಗ್ರಾಮದ ಆರಾಧ್ಯ ಮಠದ ವೇ|| ಬಸಪ್ಪಯ್ಯನವರ ಪುತ್ರಿ ಚಿ|| ಸೌ|| ಪುಟ್ಟಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ವೇ|| ಬಸವರಾಜಶರ್ಮ ಮಾಸೂರು ಹಿರೇಮಠ ಇವರ ದ್ವಾರಾ ತಲ್ಪಿರುತ್ತವೆ

ನಿಜಾಮ ಇಲಾಖಾ ಹುಮನಾಬಾದ ನಗರದಲ್ಲಿರುವ ಮಡಿವಾಳಪ್ಪಚೆಟ್ಟಿ ಇವರು ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂಪಾಯಿಯು ವೇ| ಬಂಗಿ ಸಿದ್ಧರಾಮಯ್ಯನವರ ದ್ವಾರಾ ತಲ್ಪಿರುತ್ತದೆ.

ಧಾರವಾಡ ಡಿ|| ಲಕ್ಷ್ಮೇಶ್ವರ ಗ್ರಾಮದಲ್ಲಿರುವ ಮ|| ರಾ| ದಾನಿ ಮಲ್ಲೇಶಪ್ಪನವರ ಜೇಷ್ಠಪುತ್ರ ಚಿ|| ವೀರಪ್ಪನ ಲಗ್ನದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 1 ರೂಪಾಯಿಯು ವೇ| ಎಸ್ ಜಿ ಗಡ್ಡದ ದೇವರಮಠ ಇವರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಪಂಚಾಚಾರ್ಯಪ್ರಭಾ.

೧೯೪೫ನೆಯ ಡಿಸೆಂಬರ್ ತಾ॥ ೩ನೇ ಸೋಮವಾರ

ವೇದಗಳ ಅನಾದಿತ್ವ

ವೇದಗಳು ನಿತ್ಯವಾದವುಗಳು ಇವುಗಳಿಗೆ ಪರಮೇಶ್ವರನೇ ಜನಕನು "ಶಿವ್ರೋಮ ಏವ ಪಿತರಾ" ನನಗೆ ಪಾರ್ವತೀಪರಮೇಶ್ವರರೇ ತಾಯಿತಂದೆಗಳೆಂದು ವೇದಪುರುಷನು ಉದ್ಘೋಷಿಸಿರುವನು. ಇಂತಹ ಪೂಜ್ಯ ವೇದಗಳನ್ನು ಸೃಷ್ಟಿಯ ಆದಿಯಲ್ಲಿ ಪರಮೇಶ್ವರನು ಋಷಿಗಳಿಗೆ ಬೋಧಿಸಿದನು ಈ ವಿಷಯವು ಋಗ್ವೇದದಲ್ಲಿ ಸ್ಪಷ್ಟನಾಗಿ ಉಕ್ತನಾಗಿರುವದು

ಬೃಹಸ್ಪತೇ ಪ್ರಥಮಂ ವಾಚೋ ಅಗ್ರಂ
ಯತ್ಪ್ರೈರತ ನಾಮಧೇಯಂ ದಧಾನಾಃ ।
ಯದೇಷಾಂ ಶ್ರೇಷ್ಠಂ ಯದರಿಪ್ರಮಾಸೀತ್
ಪ್ರೇಣಾ ತದೇಷಾಂ ನಿಹಿತಂ ಗುಹಾವಿಃ ॥

(ಋಗ್ವೇದ, ಮಂ ೧೦, ಸೂಕ್ತ ೭೧, ಮಂ ೧)

"ಎಲೈ ಸಮಗ್ರ ಬ್ರಹ್ಮಾಂಡದ ಪ್ರಭುವೇ! ನಿನ್ನ ಅನುಗ್ರಹದಿಂದಲೇ ಆದಿಸೃಷ್ಟಿಯಲ್ಲಿ ಋಷಿಗಳು ಗುಹೆಯಲ್ಲಿ ಸುರಕ್ಷಿತನಾಗಿದ್ದ (ಅಪ್ರಕಟವಾಗಿದ್ದ) ಸರ್ವಶ್ರೇಷ್ಠವೂ, ನಿರ್ದೋಷವೂ ಆದ ವೇದವಾಣಿಯನ್ನುಚ್ಚರಿಸಿದರು." ಎಂಬುದು ಈ ಮಂತ್ರದ ಸಂಕ್ಷೇಪಾರ್ಥವಾಗಿರುವುದು ವೇದಗಳು ಯಾವಾಗ ಪ್ರಕಟವಾದವು? ಮೊಟ್ಟಮೊದಲು ಅವುಗಳನ್ನು ಯಾರು ಉಚ್ಚರಿಸಿದರು? ಅವುಗಳ ಪ್ರೇರಕನಾರು? ವೇದಗಳಲ್ಲಿರುವ ವಿಷಯವೇನು? ಅವುಗಳ ಅರ್ಥವನ್ನು ತಿಳಿಯುವುದರಿಂದಾಗುವ ಪ್ರಯೋಜನವಾದರೂ ಯಾವುದು? ಈ ಪ್ರಶ್ನೆಗಳಿಗೆ ಮೇಲಿನ ಮಂತ್ರದಲ್ಲಿ ಸಮರ್ಪಕವಾದ ಉತ್ತರಗಳು ದೊರೆಯುತ್ತವೆ. ಮಾನವ ಸೃಷ್ಟಿಯ ಆರಂಭದಲ್ಲಿ ಸಮಸ್ತ ವಾಙ್ಮಯಗಳಿಗೆ ಮೂಲವಾದ ವೇದವಾಣಿಯು ಪ್ರಕಟವಾಯಿತು. ಆದಿ ಮಹರ್ಷಿಗಳು ಮೊಟ್ಟಮೊದಲು ಅದನ್ನುಚ್ಚರಿಸಿದರು ಭಗವಂತನೇ ಅದರ ಪ್ರೇರಕನು ವೇದವು ಸರ್ವಶ್ರೇಷ್ಠ ಮತ್ತು ನಿರ್ದೋಷವಾದುದು ಅದರಲ್ಲಿ ವರ್ಣಿಸಲ್ಪಟ್ಟಿರುವ ವಿಷಯಗಳೆಲ್ಲವೂ ಈಶ್ವರ ಸೃಷ್ಟಿಯಲ್ಲಿರುವ ಸನಾತನ ಸತ್ಯದ ಭದ್ರವಾದ ತಳಹದಿಯ ಮೇಲೆ ದೃಢವಾಗಿ ನಿಂತಿರುವವು ಮಾನವ ಜಾತಿಯು ಧರ್ಮಪಥದಲ್ಲಿ ನಡೆದು ವಿಶ್ವಕಲ್ಯಾಣವನ್ನು ಸಾಧಿಸಿ ಧನ್ಯವಾಗಲೆಂಬ ಉದ್ದೇಶದಿಂದಲೇ ಭಗವಂತನು ಜಗತ್ತಿಗೆ ವೇದವನ್ನನುಗ್ರಹಿಸಿದನು. ಋಷಿಗಳು ಉಚ್ಚರಿಸುವುದಕ್ಕೆ ಮೊದಲೂ ವೇದವಿತ್ತು, ಆದರೆ ಅದು ಅಪ್ರಕಟನಾಗಿತ್ತು. ಪ್ರತಿಯೊಂದು ಮಾನವ ಸೃಷ್ಟಿಯ ಆರಂಭದಲ್ಲೂ ತಪೋಧನರಾದ ಋಷಿಗಳು ಅದನ್ನು ಪ್ರಕಟಪಡಿಸುವರು. ಪ್ರಳಯ ಸಮಯದಲ್ಲಿ ಅದು ಅಜ್ಞೇಯವಾಗಿರುವುದು. ವೇದಕ್ಕೆ ಚ್ಯುತಿಯಿಲ್ಲ

ಜಗತ್ತಿನಲ್ಲಿ ಲೆಕ್ಕವಿಲ್ಲದಷ್ಟು ಗ್ರಂಥಗಳು ಹುಟ್ಟಿದವು, ಲೆಕ್ಕವಿಲ್ಲದಷ್ಟು ಗ್ರಂಥಗಳು ಹಾಳಾದವು. ಎಷ್ಟೋ ಸಾಮ್ರಾಜ್ಯಗಳು ಹುಟ್ಟಿ ವಿಶ್ವದ ರಂಗಮಂಚದ ಮೇಲೆ ಕ್ಷಣಕಾಲ ತಮ್ಮ ಜೀವನದ ವಿಷಾದಾಂತ ನಾಟಕಗಳನ್ನು ಅಭಿನಯಿಸಿ ಕಣ್ಮರೆಯಾದವು. ಎಷ್ಟೋ ಮತ ಪಂಥಗಳು ಹುಟ್ಟಿ ಹಾಳಾದವು. ಎಷ್ಟೋ ಪಂಥಗಳು ಜೀರ್ಣವಾಗಿ, ಮೃತ್ಯುವನ್ನೆದುರು ನೋಡುತ್ತಿರುವವು. ಆದರೆ ಆದಿ ಯುಗದಿಂದ ಇಂದಿನವರೆಗೆ ಜಗತ್ತಿನಲ್ಲಿ ಕಾಲಕಾಲಗಳ ಪ್ರಾದ ನೂಕುನುಗ್ಗಾಟಗಳಲ್ಲಿ ಸ್ವಲ್ಪವಾದರೂ ವಿಕಾರ ಹೊಂದದೆ ಬದುಕಿರುವ ಸಾಹಿತ್ಯವೆಂದರೆ ವೇದವೊಂದೇ ಒಂದು.

ಆರ್ಯಾವರ್ತದ ನದೀತೀರಗಳಲ್ಲಿ ಭಾರತೀಯ ಮಹರ್ಷಿಗಳು ಈಶ್ವರದತ್ತವಾದ ವೈದಿಕ ಸೂಕ್ತಗಳನ್ನು ಮನನಮಾಡುತ್ತ ಜಗತ್ತಿನಲ್ಲಿ ಜ್ಞಾನಜ್ಯೋತಿಯನ್ನು ಬೆಳಗಿದರು ವಿರಕ್ತರಾಗಿ ಏಕಾಂತವಾಸಿಗಳಾಗಿದ್ದರೂ ಭೂತಮಾತ್ರದ ಹಿತವನ್ನು ಕುರಿತು ಚಿಂತಿಸುವುದರಲ್ಲಿಯೇ ಅವರ ಜೀವನವು ಕಳೆದುಹೋಗುತ್ತಿತ್ತು. ಮಹಾಕವಿ ಕಾಳಿದಾಸನು ಹೇಳಿರುವಂತೆ 'ವನೌಕಸೋಽಪಿ ಲೌಕಿಕಜ್ಞಾಃ" ಎಂಬುದು ನಮ್ಮ ಋಷಿಗಳ ವಿಷಯದಲ್ಲಿ ಅಕ್ಷರಶಃ ಸತ್ಯವಾಗಿತ್ತು. ಸಾರ್ವಭೌಮರೂ ಸಹ ತಮ್ಮ ರಾಜಕೀಯ ಜೀವನದಲ್ಲಿ ಆಗಾಗ ಒದಗುತ್ತಿದ್ದ ಜಟಿಲ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಋಷಿಗಳಿಗೆ ಶರಣುಹೋಗುತ್ತಿದ್ದರು ಹೀಗೆ ಪ್ರಾಚೀನ ಋಷಿಗಳು ವೇದಗಳನ್ನು ಮನನಮಾಡಿ ತಮ್ಮ ಅಂತರ್ದೃಷ್ಟಿಯಿಂದ ಶೋಧಿಸಿ ತೆಗೆದ ಜ್ಞಾನಭಂಡಾರವೇ ವೈದಿಕ ಧರ್ಮವೆಂದು ಲೋಕದಲ್ಲಿ ಪ್ರಸಿದ್ಧವಾಯಿತು

ಸ್ವಾಧ್ಯಾಯಪ್ರವಚನಾಭ್ಯಾಂ ನಪ್ರಮದಿತವ್ಯಂ ।
ಸ್ವಾಧ್ಯಾಯಪ್ರವಚನೇ ಏವೇತಿ ನಾಕೋ ಮೌದ್ಗಲ್ಯಃ
ತದ್ಧಿ ತಪಸ್ತದ್ಧಿ ತಪಃ ।

(ಉಪನಿಷತ್)

ಯನ್ತ್ವಪ್ಯಸ್ಯ ಅಯಂ ಛಂದಶಃ ಸ್ವಾಧ್ಯಾಯಮಧೀತೇ ತೇನ ತೇನ ಹ್ಯವಾಸ್ಯ ಯಜ್ಞಕ್ರತುನೇಷ್ಟಂ ಭವತಿ
ತಸ್ಮಾತ್ ಸ್ವಾಧ್ಯಾಯೋಽಧ್ಯೇತವ್ಯಃ ।

(ಶತಪಥ ಬ್ರಾಹ್ಮಣ)

"ವೇದಗಳನ್ನು ಅಧ್ಯಯನಮಾಡಿ ಲೋಕದಲ್ಲಿ ಪ್ರಚಾರಮಾಡುತ್ತಿರುವುದೇ ಬ್ರಾಹ್ಮಣನ ನಿಜವಾದ ತಪಸ್ಸು ಅಧ್ಯಯನ ಮಾಡಿದಷ್ಟೂ ಮಾನವನಿಗೆ ಯಜ್ಞಫಲವು ದೊರೆಯುತ್ತದೆ ಆದುದರಿಂದ ಅವಶ್ಯವಾಗಿ ವೇದಗಳನ್ನು ಅಧ್ಯಯನಮಾಡಬೇಕು ವೇದಾಧ್ಯಯನವೇ ಲೋಕಪರಲೋಕಗಳ ಕಲ್ಯಾಣಮಾರ್ಗ. ಇದೇ ಮಾನವನ ಪರಮ ಕರ್ತವ್ಯ ಇದೇ ಬ್ರಹ್ಮಸಾಕ್ಷಾತ್ಕಾರದ ಸಾಧನ ಆದುದರಿಂದ ಮನುಷ್ಯನು ಪ್ರಮಾದಪರನಾಗಿ ಎಂದೂ ವೇದಾಧ್ಯಯನವನ್ನು ಬಿಡಬಾರದು ಇದರಿಂದ ನಮ್ಮ ಪ್ರಾಚೀನರು ವೇದಗಳನ್ನು ಯಾವ ದೃಷ್ಟಿಯಿಂದ ನೋಡುತ್ತಿದ್ದರೆಂಬುದು ಸ್ಪಷ್ಟವಾಗುತ್ತದೆ ಆ ಕಾಲದವರು ವೇದಗಳನ್ನು ತಮ್ಮ ಪ್ರಾಣಗಳಿಗಿಂತಲೂ ಅತಿಶಯವಾಗಿ ಕಾಪಾಡುತ್ತ ಬಂದರು ಋಷಿಗಳ ಆದರ್ಶದಂತೆ ಆಮರಣಾಂತ ಬ್ರಹ್ಮಚರ್ಯವ್ರತವನ್ನು ಪಾಲಿಸುತ್ತ ವೇದಗಳನ್ನು ಮನನಮಾಡಿ ಅವುಗಳಲ್ಲಿರುವ ಜ್ಞಾನರಾಶಿಯನ್ನು ಕಂಡುಹಿಡಿಯುವುದರಲ್ಲಿಯೇ ಅವರ ಜೀವಿತಗಳು ಕಳೆದು ಹೋಗುತ್ತಿದ್ದವು ಈ ಕಠಿಣತರವಾದ ಧರ್ಮನಿಷ್ಠೆಯಿಂದಲೇ ಅವರು ವೇದಗಳ ಆಧಾರದಿಂದ ಅನೇಕ ಶಾಸ್ತ್ರಗಳನ್ನು ಬರೆದರು ಅವರ ಪರಿಶ್ರಮದಿಂದ ಭಾರತವು ಜಗತ್ತಿನ ಆದಿಗುರುವೆಂದು ಪ್ರಸಿದ್ಧವಾಯಿತು ಪ್ರಾಚೀನ ವೈದಿಕವಾಙ್ಮಯವನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ವೇದಗಳ ನಿಜವಾದ ರಹಸ್ಯಗಳನ್ನು ತಿಳಿಸುವುದಕ್ಕಾಗಿ ಆ ಕಾಲದ ಋಷಿಗಳೂ, ವಿದ್ವಾಂಸರೂ ಅನೇಕ ಗ್ರಂಥಗಳನ್ನು ಬರೆದಿದ್ದರೆಂದು ತಿಳಿದುಬರುತ್ತದೆ ಆದರೆ ಅವುಗಳಲ್ಲಿ ಬಹುಭಾಗವು ಭಾರತೀಯರ ಅಜಾಗರೂಕತೆಯಿಂದಲೂ, ವಿಧರ್ಮಿಗಳ ಅತ್ಯಾಚಾರಗಳಿಂದಲೂ ಹಾಳಾಗಿಹೋಯಿತು

ಏವಮಿಮೇ ಸರ್ವೇ ವೇದಾ ನಿರ್ಮಿತಾಃ ಸಕಲ್ಪಾಃ, ಸರಹಸ್ಯಾಃ, ಸಬ್ರಾಹ್ಮಣಾಃ, ಸೋಪನಿಷತ್ಕಾಃ, ಸೇತಿಹಾಸಾಃ, ಸಾನ್ವಾಖ್ಯಾತಾಃ, ಸಪುರಾಣಾಃ, ಸಸ್ವರಾಃ, ಸಸಂಸ್ಕಾರಾಃ, ಸನಿರುಕ್ತಾಃ ಸಾನುಶಾಸನಾಃ, ಸಾನುಮಾರ್ಜನಾಃ, ಸವಾಕೋವಾಕ್ಯಾಃ, ತೇಷಾಂ ಯಜ್ಞಮಭಿಪದ್ಯಮಾನಾನಾಂ ಛಿದ್ಯತೇ ನಾಮಧೇಯಂ ॥

(ಗೋಪಥ ಬ್ರಾಹ್ಮಣ, ಅ ೨)

"ಪ್ರತಿಯೊಂದು ವೇದಕ್ಕೂ ಕಲ್ಪ, ರಹಸ್ಯ, ಬ್ರಾಹ್ಮಣ, ಉಪನಿಷತ್, ಇತಿಹಾಸ, ಅನ್ವಾಖ್ಯಾತ, ಪುರಾಣ, ಸ್ವರ, ಸಂಸ್ಕಾರ, ನಿರುಕ್ತ, ಅನುಶಾಸನ, ಅನುಮಾರ್ಜನ, ವಾಕೋವಾಕ್ಯ ಮೊದಲಾದ ಅನೇಕ ಗ್ರಂಥಗಳಿದ್ದವೆಂದು ಅಥರ್ವವೇದದ ಗೋಪಥ ಬ್ರಾಹ್ಮಣದಿಂದ ತಿಳಿದು ಬರುತ್ತದೆ. ಇವುಗಳಲ್ಲಿ ಅನೇಕ ಗ್ರಂಥಗಳು ಈಗ ನಿರ್ನಾಮವಾಗಿ ಹೋಗಿವೆ. ಅನ್ವಾಖ್ಯಾತ, ಅನುಮಾರ್ಜನ ಮತ್ತು ಅನುಶಾಸನ ಗ್ರಂಥಗಳ ಸ್ವರೂಪವಾದರೂ ಏನಿತ್ತೆಂಬುದು ಈ ದಿನ ಕುಲಕ್ರಮವಾಗಿ ವೇದಗಳನ್ನು ಕಾಪಾಡಿಕೊಂಡು ಬಂದಿರುವ ವೈದಿಕರಿಗೂ ಸಹ ಗೊತ್ತಿಲ್ಲ. ಮೇಲಿನ ವಾಕ್ಯದಿಂದ ಆರ್ಷಯುಗದಲ್ಲಿ ವೈದಿಕ ಸಾಹಿತ್ಯವು ಎಷ್ಟು ವಿಶಾಲವಾಗಿ ಬೆಳೆದಿತ್ತೆಂಬುದು ಮನವರಿಕೆಯಾಗುತ್ತದೆ ಅಳಿದುಳಿದಿರುವ ಗ್ರಂಥಗಳನ್ನು ಪರಿಶೀಲಿಸಿದ ನಿಷ್ಪಕ್ಷಪಾತಿಗಳಾದ ಪಾಶ್ಚಾತ್ಯ ಪಂಡಿತರನೇಕರು—"ಈ ವೈದಿಕ ಸಾಹಿತ್ಯದ ವಿಶಾಲ ಜ್ಞಾನಭಂಡಾರದಲ್ಲಿ ಆ ಕಾಲದ ವಿದ್ವಾಂಸರು ಒಂದೊಂದು ಶಬ್ದವನ್ನೂ ಸಹ ಬಹಳ ಎಚ್ಚರಿಕೆಯಿಂದ ತೂಕಮಾಡಿ ಇಟ್ಟಿದ್ದಾರೆ ತಮ್ಮ ಆಧ್ಯಾತ್ಮಿಕ ಜೀವನದ ಸರ್ವಶ್ರೇಷ್ಠ ಅನುಭವವನ್ನೇ ಆತ್ಮಸಾಕ್ಷಿಯಾಗಿ, ಪ್ರಾಮಾಣಿಕಬುದ್ಧಿಯಿಂದ ಅವರು ಜಗತ್ತಿನ ಮುಂದಿಟ್ಟಿದ್ದಾರೆ ಮಾನವನ ಪ್ರತಿಭೆಯು ಅವನ ವ್ಯಕ್ತಿಗತ ಸಂಪತ್ತೆಂಬ ವಿಚಾರವೇ ಭಾರತೀಯರಿಗೆ ಗೊತ್ತಿರಲಿಲ್ಲ. ಈ ವಿಧವಾದ ಅಲ್ಪ ವಿಚಾರವು ಇಂದರೆ ಪುಸ್ತಕಗಳನ್ನು ಬರೆದು ಹಣ ಮತ್ತು ಹೆಸರನ್ನು ಸಂಪಾದಿಸಬೇಕೆಂಬ ಮನೋವೃತ್ತಿಯು ನಮ್ಮ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಹಾಸ್ಯಾಸ್ಪದವಾದ ಸ್ಥಿತಿಯನ್ನು ಮುಟ್ಟಿರುವುದರಿಂದ ಸಾಹಿತ್ಯಕ್ಷೇತ್ರವೇ ಕಲುಷಿತವಾಗುತ್ತಿದೆ" ಎಂದು ತಮ್ಮ ಆಶ್ಚರ್ಯವನ್ನು ಪ್ರಕಟಪಡಿಸಿದ್ದಾರೆ.

ಭಾರತೀಯ ವಿದ್ವಾಂಸರು ಜ್ಞಾನಚರ್ಚೆಯನ್ನು ಜೀವನದ ಸರ್ವೋತ್ತಮ ಯಜ್ಞವೆಂದು ಭಾವಿಸಿದ್ದರು. ವಿದ್ಯೆಯೊಡನೆ ಅವರು ಗಂಟುಹಾಕಿಕೊಂಡಿದ್ದ ಸಂಬಂಧವು ಇಂದಿನ ಯುಗದ ನಮ್ಮ ಕಲ್ಪನೆಗೆ ಸಹ ಬಾರದಷ್ಟು ಪವಿತ್ರವಾಗಿತ್ತು. ವಿದ್ಯಾಧ್ಯಯನವು ಜೀವನದ ಸರ್ವಶ್ರೇಷ್ಠ ಉತ್ತರದಾಯಿತ್ವದ ಪರಮಾವಧಿಯೆಂದೂ, ಅದರಿಂದಲೇ ಮಾನವನು ಋಷಿಋಣದಿಂದ ಮುಕ್ತನಾಗುವನೆಂದೂ ಅವರ ದೃಢವಿಶ್ವಾಸವಾಗಿತ್ತು. ಇತಿಹಾಸಕ್ಕೆ ಅಗಮ್ಯಕಾಲದಿಂದ ಸಾವಿರಾರುವರ್ಷಗಳವರೆಗೆ ಭಾರತೀಯ ವಿದ್ವಾಂಸರು ಈ ವಿಶ್ವಾಸದಿಂದಲೇ ದೇವರನ್ನು ಸಾಕ್ಷಿಯಾಗಿಟ್ಟುಕೊಂಡು ಅಮರಸಾಹಿತ್ಯವನ್ನು ಸೃಷ್ಟಿಸುವುದರಲ್ಲಿ ತೊಡಗಿದರು. ಈ ಮಹಾಪ್ರಯತ್ನದ ಮೂಲದಲ್ಲಿ ಎಷ್ಟೊಂದು ತ್ಯಾಗ, ಎಷ್ಟೊಂದು ಸಂಯಮ ಮತ್ತು ಎಷ್ಟೊಂದು ನಿಷ್ಠೆಯಿತ್ತೆಂಬುದನ್ನು ಆಲೋಚಿಸಿದರೆ, ಪ್ರತಿಯೊಬ್ಬ ಭಾರತೀಯನಿಗೂ ವೇದಗಳು ಪ್ರಕಟವಾದ ಭಾರತದಲ್ಲಿ ತಾನು ಹುಟ್ಟಿರುವುದರ ಬಗ್ಗೆ ನಿಜವಾಗಿಯೂ ಅಭಿಮಾನವುಂಟಾಗದಿರದು.

ಭಾರತೀಯ ದಾರ್ಶನಿಕರು ಬಹುಕಾಲ ವಿಚಾರಮಾಡಿ ವೇದವೊಂದೇ ಎಲ್ಲಾ ಸತ್ಯವಿದ್ಯೆಗಳ ನಿಧಿಯಾಗಿರುವುದರಿಂದ ಅದು ಸ್ವತಃ ಪ್ರಮಾಣವೆಂದೂ, ಉಳಿದ ಗ್ರಂಥಗಳು ಪರತಃ ಪ್ರಮಾಣಗಳೆಂದೂ ಅಂದರೆ ವೇದಕ್ಕೆ ಸಮ್ಮತವಾಗಿದ್ದರೆ ಮಾತ್ರ ಪ್ರಮಾಣವೆಂದೂ, ವೇದವಿರುದ್ಧವಾದ ಗ್ರಂಥಗಳು ಸರ್ವಥಾ ಅಪ್ರಮಾಣವೆಂದೂ ಸಿದ್ಧಾಂತಮಾಡಿದ್ದಾರೆ ವೇದಪ್ರಾಮಾಣ್ಯವನ್ನು ನಿಶ್ಚಯಿಸುವಾಗ ಅವರು ಪ್ರತಿಯೊಂದು ವೇದಮಂತ್ರವನ್ನೂ ಪ್ರಮಾಣಗಳ ಒರೆಗಲ್ಲಿಗೆ ಹಚ್ಚಿನೋಡಿ ಕಡೆಗೆ ಈ ಸಿದ್ಧಾಂತಕ್ಕೆ ಬಂದಿರುವರೆಂದು ಭಾರತದ ದಾರ್ಶನಿಕ ಸಾಹಿತ್ಯವನ್ನು ಅಧ್ಯಯನಮಾಡಿದ ವಿದ್ವಾಂಸರು ಬಲ್ಲರು. ಸಾಧಾರಣವಾಗಿ ಪ್ರತಿಯೊಬ್ಬನೂ ತನ್ನ ವಿದ್ಯೆ ಮತ್ತು ಸಂಸ್ಕಾರಬಲದಿಂದ ಸ್ವಲ್ಪಮಟ್ಟಿಗೆ ವೇದಾರ್ಥವನ್ನು ತಿಳಿದುಕೊಳ್ಳಬಲ್ಲನು ಆದರೆ ಈ ಮಂತ್ರಕ್ಕೆ ಇದೇ ಅರ್ಥವೆಂದು ಸಿದ್ಧಾಂತಪಡಿಸುವ ಅಥವಾ ವೇದಗಳಿಗೆ ಭಾಷ್ಯವನ್ನು ರಚಿಸುವ ಅಧಿಕಾರವು ಋಷಿಯಾದವನಿಗೆ ಮಾತ್ರವಿರುತ್ತದೆಂದು ನಮ್ಮವರು ಹೇಳಿದ್ದಾರೆ

ನಹ್ಯೇಷು ಪ್ರತ್ಯಕ್ಷಮಸ್ತಿ ಅನೃಷೇರತಪಸೋ ವಾ ॥

(ನಿರುಕ್ತ)

"ಯಾವನು ಋಷಿಯಲ್ಲವೋ, ತಪಸ್ವಿಯಲ್ಲವೋ ಅಂಥವನಿಗೆ ವೇದಮಂತ್ರಗಳು ಸಾಕ್ಷಾತ್ಕಾರವಾಗುವುದಿಲ್ಲ" ಎಂದು ಹೇಳಿದ್ದಾರೆ ಏಕೆಂದರೆ, ವೇದಗಳಲ್ಲಿ ಅಧಿಭೂತ ಮತ್ತು ಅಧಿದೈವ ವಿದ್ಯೆಗಳಿರುವಂತೆಯೇ ಅಧ್ಯಾತ್ಮ ವಿದ್ಯೆಯೂ ಇರುತ್ತದೆ. ಈ ಅಧ್ಯಾತ್ಮವಿದ್ಯೆಯೇ ಜಗತ್ತಿನ ಎಲ್ಲಾ ವಿದ್ಯೆಗಳ ಕೇಂದ್ರವೆಂದೂ, ಬಹುಕಾಲದ ಸಾಧನಬಲದಿಂದ ಮಾನವನು ಇದನ್ನು ಸಾಧಿಸಬಹುದೆಂದೂ, ಜೀವನದ ಪರಮ ಲಕ್ಷ್ಯವಾದರೂ ಇದೇ ಆಗಿರುವುದೆಂದೂ, ಈ ವಿದ್ಯೆಯ ಆದರ್ಶದಿಂದಲೇ ಮಾನವ ಸಮಾಜದಲ್ಲಿ ದೈವಗುಣಗಳ ವಿಕಾಸವುಂಟಾಗಿ ವಿಶ್ವಶಾಂತಿಯು ನೆಲಸುವುದೆಂದೂ ನಮ್ಮ ದೇಶದ ಅಧ್ಯಾತ್ಮವಾದಿಗಳ ಸಿದ್ಧಾಂತವಾಗಿರುತ್ತದೆ. ನಮ್ಮ ದೃಷ್ಟಿಯನ್ನು ಆರ್ಯಾವರ್ತದ ಆರ್ಷಯುಗದ ಕಡೆಗೆ ತಿರುಗಿಸಿದರೆ ಎಲ್ಲಾ ಸತ್ಯವಿದ್ಯೆಗಳ ಬೀಜಗಳು ವೇದದಲ್ಲಿರುವವೆಂದೂ, ಅದರ ಒಂದೊಂದು ಶಬ್ದವೂ ಮಹತ್ಪೂರ್ಣವಾದುದೆಂದೂ ಮನವರಿಕೆಯಾಗುತ್ತದೆ

ವೇದಗಳಿಗೆ ಇಂಗ್ಲಿಷ್ ಭಾಷೆಯಲ್ಲಿ ವ್ಯಾಖ್ಯಾನವನ್ನು ಬರೆದು **ಲೋಕವಿಖ್ಯಾತರಾಗಿರುವ ಮ್ಯಾಕ್ಸ್ ಮುಲ್ಲರವರು ವೇದಗಳ ಅನಾದಿತ್ವ ಮತ್ತು ಶ್ರೇಷ್ಠತ್ವದ ಬಗ್ಗೆ ಈ ಕೆಳಗೆ ಕಂಡಂತೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು.**

“ವೇದಗಳಿಗಿಂತ ಮೊದಲು ಜಗತ್ತಿನಲ್ಲಿ ಯಾವುದಾದರೂ ಗ್ರಂಥವಿತ್ತೆಂಬುದಕ್ಕೆ ಇಸುವರೆಗೆ ಪ್ರಮಾಣವು ದೊರೆತಿಲ್ಲ ಆದುದರಿಂದ ವೇದಗಳನ್ನು ಆದಿಸೃಷ್ಟಿಯ ಗ್ರಂಥಗಳೆಂದು ನಾವು ಧಾರಾಳವಾಗಿ ಹೇಳಬಹುದು. ವೇದಗಳಲ್ಲಿರುವ ಭಾಷೆ, ದೇವತಾಶಾಸ್ತ್ರ, ಧರ್ಮ ಮತ್ತು ಆತ್ಮವಿದ್ಯೆಗಳನ್ನು ಮನನಮಾಡಿದರೆ ವೇದಗಳು ಪ್ರಕಟವಾಗಿ ಇಷ್ಟು ವರ್ಷಗಳಾದವೆಂದು ನಿಶ್ಚಯಿಸುವುದು ಕಷ್ಟವಾಗುತ್ತದೆ. ಜಗತ್ತಿನಲ್ಲಿ ಯಾವುದಾದರೂ ಜಾತಿಯು ತನ್ನ ಜೀವನದ ಸ್ಮಾರಕವನ್ನು ಸುರಕ್ಷಿತವಾಗಿಟ್ಟಿದ್ದರೆ ಅದನ್ನು ವೈದಿಕ ಋಷಿಗಳೆಂದು ನಾನು ನಿರ್ಭಯವಾಗಿ ಹೇಳುತ್ತೇನೆ ವೇದದ ಪ್ರತಿಯೊಂದು ಮಂತ್ರವೇ ಅಲ್ಲ; ಪ್ರತಿಯೊಂದು ಶಬ್ದವೂ ಮಾನವನ ಬುದ್ಧಿಗೆ ಪ್ರಾಮಾಣಿಕ ಲೇಖನವಾಗಿದೆ”

ಈ ರೀತಿಯಾಗಿ ಪಾಶ್ಚಾತ್ಯರೂ ಪೌರಸ್ತ್ಯರೂ ವೇದ ಗಳು **ಅನಾದಿಸಂಸಿದ್ಧವಾದವುಗಳೆಂದು** ಅವುಗಳ ಬಗ್ಗೆ ತಮ್ಮ ಪೂಜ್ಯಬುದ್ಧಿಯನ್ನು ವ್ಯಕ್ತಪಡಿಸಿರುವರು ಆದರೆ ಈ **ಕಾಲದಲ್ಲಿ** ಬಸವಪಂಥಿಗಳು ಇಂತಹ ಪವಿತ್ರವೇದಗಳ ಬಗ್ಗೆ ದುರಭಿಪ್ರಾಯವನ್ನು ವ್ಯಕ್ತಪಡಿಸುತ್ತ ನಡೆದಿರುವುದು ಬಹುಜನ್ಮಕೃತಪಾಪದ ಫಲವೆಂದೇ ಹೇಳಬೇಕಾಗಿದೆ. ಯಾರು ವೇದಗಳ ವಿಷಯದಲ್ಲಿ ದುರಭಿಪ್ರಾಯ ಪಡುವರೋ ಅವರಿಗೆ ದುರ್ಗತಿಯು ಸಿದ್ಧ! ಆದುದರಿಂದ ಸರ್ವರೂ **ವೇದಗಳಲ್ಲಿ** ಪೂಜ್ಯಬುದ್ಧಿಯನ್ನಿಟ್ಟು ವರ್ತಿಸಿ ಧನ್ಯರಾಗಬೇಕೆಂದು ಹಾರೈಸುತ್ತೇವೆ.

ಇಂದಿನ ಜಗತ್ತಿನ ಪರಿಸ್ಥಿತಿ

ಇಂಡಿಯಾ

ಜಪಾನರ ಕೈ ಮೇಲಾಗಿ ಬ್ರಿಟಿಷರಿಗೆ ಸೋಲಾಗುತ್ತಿದ್ದಾಗ ಸಿಂಗಪುರ, ಮಲಯ ಪ್ರಾಂತಗಳು ಬ್ರಿಟಿಷರ ಕೈ ಬಿಟ್ಟವು ಆಗ ಬ್ರಿಟಿಷರ ಪರ ಕಾದಾಡುತ್ತಿದ್ದ ಹಿಂದೂಸ್ಥಾನದ ಸೈನ್ಯ ಜಪಾನರಿಗೆ ಕೈಸೆರೆ ಸಿಕ್ಕಿತು ಆ ಸೈನಿಕರು ‘ಸ್ವತಂತ್ರ ಭಾರತ ಸೇನೆ’ ಎಂಬುವ ಹೆಸರಿನಲ್ಲಿ ಒಟ್ಟುಗೂಡಿದರು. ಆ ಸೇನೆಯ ಗುರಿ ಭಾರತ ದೇಶವನ್ನು ಪರಕೀಯರ ಆಡಳಿತದಿಂದ ತಪ್ಪಿಸಿ ಸ್ವತಂತ್ರವಾಗಿರುವಂತೆ ಮಾಡುವುದು ಆದರೆ ಅವರು ಇಂಗ್ಲಿಷರಿಗೆ ಎದುರಾಗಿ ಹೋರಾಡಿ ಅನ್ಯಾಯ ಮಾಡಿದ್ದಾರೆಂದು ಇಂಡಿಯಾ ಸರಕಾರ ದೂರು ಹೊರಿಸಿದೆ ಅದಕ್ಕಾಗಿ ಆ ಸೇನೆಯ ಮುಂದಾಳುಗಳ ವಿಚಾರಣೆ ದೆಹಲಿಯ ಕೆಂಪುಕೋಟೆ ಜೈಲಿನಲ್ಲಿ ನಡೆಯುತ್ತಿದೆ ಬುಲುಭಾಯಿ ದೇಸಾಯಿ, ಜವಾಹರಲಾಲ್ ನೆಹರು, ಅಸಫ್ ಅಲಿ ಮುಂತಾದ ಪ್ರಮುಖರೆಲ್ಲ ಈ ಸೈನಿಕರ ಪರ ವಾದಿಸುತ್ತಿದ್ದಾರೆ

ಜಾವಾ

ಜಾವಾಕ್ಕೆ “ಇಂಡೋನೇಷಿಯ” ಎಂದು ಹೆಸರು ಇಂಡಿಯಾ ಬ್ರಿಟಿಷರಿಗೆ ಸೇರಿರುವಂತೆ ಜಾವಾ ಡಚ್ಚರಿಗೆ ಸೇರಿತ್ತು. ಜಪಾನರು ಯುದ್ಧಕಾಲದಲ್ಲಿ ಅದನ್ನು ಗೆದ್ದರು. ಈಚೆಗೆ ಜಪಾನು ಸೋತಿತು. ಆ ದೇಶ ಅವರ ಕೈ ಬಿಟ್ಟಿತು. ಆಮೇಲೆ ಇಂಡೋನೇಷಿಯನರು ನಾವೀಗ ಸ್ವತಂತ್ರರು ಎಂದರು. ಆದರೆ ಇದುವರೆಗೂ ತೆಪ್ಪಗಿದ್ದ ಡಚ್ಚರು ಇಲ್ಲ ಇಲ್ಲ, ನಿಮ್ಮ ಒಡೆಯರು ನಾವು ಎಂದರು. ಆದರೆ ಅಲ್ಲಿಯ ಜನರು ಒಪ್ಪದೆ ‘ನಮ್ಮ ದೇಶ ನಮ್ಮದು. ನಿಮ್ಮ ಗಂಟುಮೂಟೆ ಕಟ್ಟಿ’ ಎಂದರು. ಅದಕ್ಕೆ ಡಚ್ಚರು ಒಪ್ಪಲಿಲ್ಲ. ಇಂಡೋನೇಷಿಯ ಜನರು ಯುದ್ಧ ಹೂಡಿದರು. ಬ್ರಿಟಿಷರು ಡಚ್ಚರ ಸಹಾಯಕ್ಕೆ ನಿಂತರು ಆದರೆ ಇಂಡೋನೇಷಿಯದ ಜನರು ಎದೆಗುಂದದೆ ಯುದ್ಧ ಮಾಡುತ್ತಿದ್ದಾರೆ. ಜೋರಾಗಿಯೇ ಯುದ್ಧ ನಡೆಯುತ್ತಿದೆ.

ಚೀಣಾ

ಪಾಪ ಚೀಣದ ದುರದೃಷ್ಟ ಕಳೆದಿಲ್ಲ ಆ ಭೂಮಿಯಲ್ಲಿ ಯುದ್ಧದ ಪ್ರಾರಂಭವಾಗಿ ಹತ್ತು ವರ್ಷವಾಯಿತು. ಅಂದಿನಿಂದಲೂ ರಕ್ತದ ಕೋಡಿ ನಿಂತಿಲ್ಲ ಇದುವರೆಗೂ ಜಪಾನರ ಹಾವಳಿ ತಡೆದದ್ದಾಯಿತು. ಜಪಾನರು ಸೋತು ಅದು ತಪ್ಪಿತು ಅನ್ನುವಷ್ಟರಲ್ಲಿ ಮತ್ತೆ ಜಗಳ. ಈ ಜಗಳ ಪರಕೀಯರೊಡನಲ್ಲ ತಮ್ಮ ತಮ್ಮಲ್ಲೆ! ಚೀನದಲ್ಲಿ ಕಮ್ಯುನಿಸ್ಟ್ ಪಕ್ಷ ಒಂದಿದೆ ಆ ಪಕ್ಷಕ್ಕೂ ಸರಕಾರದ ಪಕ್ಷಕ್ಕೂ ಭಿನ್ನಾಭಿಪ್ರಾಯವಿದೆ. ಯುದ್ಧ ನಿಂತ ಮೇಲೆ ಈ ಭಿನ್ನಾಭಿಪ್ರಾಯ ಹೆಚ್ಚಿತು. ಈಗ ಕಮ್ಯುನಿಸ್ಟ್ ಚೀಣರಿಗೂ ಸರಕಾರೀ ಚೀಣರಿಗೂ ಹೊತ್ತಿ ಯುದ್ಧ. ಈ ಅನಿಷ್ಟ ಎಂದಿಗೆ ನಿಂತು ಚೀಣರಿಗೆ ಶಾಂತಿ ಸಿಗುವುದೋ ನೋಡಬೇಕು.

ಜಪಾನು

ಜಪಾನು ಅರ್ಧ ಶತಮಾನಕಾಲ ತನಗೆ ಸರಿಸಮಾನರಿಲ್ಲ ಎಂದು ಮೆರೆಯಿತು. ಆ ಅಹಂಕಾರದಿಂದಲೇ ಯುದ್ಧವನ್ನು ಆರಂಭಿಸಿತು ಮೊದಮೊದಲು ಅದರ ಕೈ ಮೇಲಾಗಿಯೇ ಇತ್ತು ಆದರೆ ಈಶ್ವರನ ಉರಿಗಣ್ಣಿನಂತೆ ನಗರ ನಗರಗಳನ್ನೇ ಕ್ಷಣಮಾತ್ರದಲ್ಲಿ ನಾಶಮಾಡುವ ಅಣುಬಾಂಬಿನ ನಿರ್ಮಾಣದಿಂದ ಅದು ಸೋತುಹೋಯಿತು. ಅಮೆರಿಕದ ಸೇನೆಯು ಜಪಾನನ್ನು ಆಕ್ರಮಿಸಿತು ಅಷ್ಟೇ ಅಲ್ಲ ಜಪಾನರನ್ನು ತುಳಿದುಬಿಟ್ಟಿತು. ಇನ್ನು ಜಪಾನು ತಲೆಯೆತ್ತುವಂತಿಲ್ಲ ಅದರ ಅದೃಷ್ಟ ತಿರೆದರೆ ಜಪಾನು ಉಸಿರಾಡಲು ಒಂದು ಶತಮಾನವಾದರೂ ಬೇಕು

ಅಮೇರಿಕ

ಅಮೇರಿಕನ್ನರು ಯುದ್ಧ ನಿಂತಮೇಲೆ ಪ್ರಪಂಚದಲ್ಲಿ ಶಾಂತಿ ನೆಲಸುವುದು ಎಂದುಕೊಂಡಿದ್ದರಲ್ಲದೆ. ಜತೆಗೆ ಈ ಯುದ್ಧದಿಂದ ಪ್ರಪಂಚದಲ್ಲಿ ತಮ್ಮದೇ ಕೈ ಮೇಲಾಗುವುದರಿಂದ ತಮ್ಮ ವ್ಯಾಪಾರಾದಿಗಳಿಗೆ ಅನುಕೂಲವಾಗುವುದು ಎಂದುಕೊಂಡಿದ್ದರು. ಆದರೆ ಹಾಗಾಗಲಿಲ್ಲ. ಪ್ರಪಂಚದ ಎಲ್ಲಾ ಕಡೆಯೂ ಒಂದಲ್ಲ ಒಂದು ವಿಧದಲ್ಲಿ ಹೋರಾಟ ನಡೆಯುತ್ತಲೇ ಇದೆ. ಇದರಿಂದ ಅಮೆರಿಕನ್ನರಿಗೆ ಶಾಂತಿ ಇಲ್ಲವಾಗಿದೆ ಈಗ ಏನು ಮಾಡುವುದೆಂಬುದು ಅವರಿಗೆ ತೋಚದೆ ಗೊಂದಲದಲ್ಲಿ ಕೈಬಿದ್ದಿದ್ದಾರೆ.

ಬ್ರಿಟನ್

ಬ್ರಿಟಿಷರೂ ಅಮೆರಿಕನ್ನರಂತೆಯೇ ಪ್ರಪಂಚದಲ್ಲಿ ತಾವೇ ತಾವು ಎಂದು ತಿಳಿದುಕೊಂಡಿದ್ದರು ಆದರೀಗ ಅಮೆರಿಕ, ರಷ್ಯಗಳ ಬೆಂಬಲವಿಲ್ಲದೆ ಕಷ್ಟವೆಂಬುದು ಅವರಿಗೆ ಗೊತ್ತಾಗಿದೆ ಜತೆಗೆ ಅಲ್ಲಿ ಕೂಲಿಗಾರ ಸರಕಾರ ಬಂದಮೇಲೆ ಸಾಮ್ರಾಜ್ಯವಾದ ಕಡಮೆಯಾಗಿ ಪ್ರಪಂಚದ ದೊರೆತು ತಪ್ಪುವುದೆಂದು ಜನ ತಿಳಿದಿದ್ದರು, ಹಾಗಾಗಲಿಲ್ಲ. ಇದರಿಂದ ಬ್ರಿಟನ್ನಿನ ಜನರಿಗೂ ನೆಮ್ಮದಿ ಇಲ್ಲವಾಗಿದೆ.

ರಷಿಯಾ

ರಷಿಯಾ ದೇಶವು ದೊಡ್ಡ ರಾಷ್ಟ್ರಗಳಲ್ಲಿ ಒಂದು ಆದರೆ ಯುದ್ಧ ಮುಗಿದ ಮೇಲೆ ಬ್ರಿಟನ್ನು ಅಮೇರಿಕ ಜತೆಯಾಗಿಬಿಟ್ಟವು. ರಷಿಯಾ ಬೇರೆಯಾದಂತೆಯೇ ಆಯಿತು ಜತೆಗೆ ಅಣುಬಾಂಬು ಮಾಡುವುದು ಹೇಗೆ ಎಂಬುದನ್ನು ಬ್ರಿಟನ್ನು-ಅಮೇರಿಕ ರಷಿಯಾಕ್ಕೆ ಹೇಳುವುದಿಲ್ಲ ಎಂದುಬಿಟ್ಟವು ಇದರಿಂದ ರಷಿಯಾಕ್ಕೆ ಅಸೂಯೆಯ ಜೊತೆಗೆ ಸೇಡುತೀರಿಸಿಕೊಳ್ಳುವ ಮನೋಭಾವವೂ ಹುಟ್ಟಿದೆ ಎಂದು ಕಾಣುತ್ತದೆ ಇದೇ ಈಗ ಇರಾನು ಮಂಚೂರಿಯಗಳಲ್ಲಿ ಮೊದಲಾಗಿರುವ ತಿಕ್ಕಾಟಕ್ಕೆ ಕಾರಣವಿರಬಹುದು

ಪ್ಯಾಲಸ್ಟೈನ್

ಪ್ಯಾಲಸ್ಟೈನ್‌ನಲ್ಲಿ ಅರಬ್ಬರಿಗೂ ಯಹೂದ್ಯರಿಗೂ ಜಗಳ ಪ್ಯಾಲಸ್ಟೈನ್ ನಮ್ಮ ದೇಶ, ಆದಿಯಿಂದಲೂ ನಾವಲ್ಲಿದ್ದೇವೆ, ಅನುಭವಿಸಿಕೊಂಡು ಬಂದಿದ್ದೇವೆ, ಅಲ್ಲಿ ನಾವು ಸ್ವತಂತ್ರವಾಗಿರಬೇಕು, ಎನ್ನುತ್ತಾರೆ ಯಹೂದ್ಯರು. ಅದು ಹುಚ್ಚುಮಾತು. ಆ ದೇಶ ನಮ್ಮದು, ನಾವೇ ಅಲ್ಲಿ ಹೆಚ್ಚು ಜನರಿರುವುದು, ಅದು ಹೇಗೆ ಅವರದಾದೀತು? ಎನ್ನುತ್ತಾರೆ ಅರಬ್ಬರು ಹೀಗಾಗಿ ಅಲ್ಲಿ ತಿಕ್ಕಾಟ ಪ್ರಾರಂಭವಾಗಿದೆ.

ವರ್ತಮಾನ ಸಂಗ್ರಹ

ಅಮೆರಿಕನರಿಂದ ಸಾಮಗ್ರಿ ನಾಶ

ಫೆಸಿಫಿಕ್ ದ್ವೀಪಗಳಿಂದ ವಾಪಸಾಗುತ್ತಿರುವ ಅಮೆರಿಕನ್ನರು ಲಕ್ಷಾಂತರ ಡಾಲರುಗಳ ಬೆಲೆ ಬಾಳುವ ಸಾಮಗ್ರಿಗಳನ್ನು ಸುಟ್ಟು ಅಥವಾ ಸಮುದ್ರಕ್ಕೆ ಎಸೆದು ಹೋಗುತ್ತಿದ್ದಾರಂತೆ!

ಇಂಡಿಯ-ಲಂಡನ್ ಟೆಲಿಫೋನ್ ಸಂಬಂಧ

ಲಂಡನ್-ಇಂಡಿಯ ಟೆಲಿಫೋನಿನ ವ್ಯವಸ್ಥೆಯನ್ನು ಡಿಸೆಂಬರ್ ೩ ನೇ ತಾ|| ಪುನಃ ತೆರೆಯಲಾಗುವುದೆಂದು ಪೋಸ್ಟ್ ಮಾಸ್ಟರ್ ಜನರಲ್‌ರವರಿಂದ ಪ್ರಕಟನೆ ಹೊರಟಿದೆ. ೩ ನಿಮಿಷಕ್ಕೆ ೪೫ ರೂಪಾಯಿಗಳಾಗುವುವು.

ಒಂದು ಒಳ್ಳೆಯ ಏರ್ಪಾಡು

ಇಂಡಿಯಾದಲ್ಲಿ ೭ ಲಕ್ಷ ಹಳ್ಳಿಗಳಿವೆ. ಹಳ್ಳಿಗಳವರು ಪ್ರಪಂಚದಲ್ಲಿ ದಿನವೂ ನಡೆಯುವ ವಿಷಯವನ್ನು ತಿಳಿದುಕೊಳ್ಳಬೇಕಾಗಿದೆ. ಜತೆಗೆ ಬಾಳಿನಲ್ಲಿ ಅನುಸರಿಸಬೇಕಾದ ಹಲವು ವಿಷಯಗಳು ಗ್ರಾಮಸ್ಥರಿಗೆ ಅವರಿದ್ದಲ್ಲಿಯೇ ಮುಟ್ಟುವಂತಿರಬೇಕು ಹೀಗಾದಾಗ ನಮ್ಮ ಹಳ್ಳಿಗಳು ಏಳ್ಗೆಗೆ ಬರುತ್ತವೆ. ಈಗ ಇಂಡಿಯಾ ಸರಕಾರವು ಒಂದು ಯೋಜನೆಯನ್ನು ತಯಾರುಮಾಡಿದೆ ಅದರಂತೆ ಪ್ರತಿ ಹಳ್ಳಿಯಲ್ಲಿಯೂ ಒಂದು ರೇಡಿಯೋ ಬರುವುದು ಹೀಗಾದಾಗ ರೇಡಿಯೋ ತಿರುಗಿಸಿದರೆ ಗ್ರಾಮಸ್ಥರು ತಾವು ಕುಳಿತಲ್ಲೇ ಎಲ್ಲ ವಿಷಯವನ್ನೂ ರೇಡಿಯೋ ಮೂಲಕ ತಿಳಿಯಬಹುದು.

ಕೈಗಾರಿಕಾಭಿವೃದ್ಧಿ ಸಮ್ಮೇಳನ

ಸಂಸ್ಥಾನದ ಆರ್ಥಿಕ ಸಮ್ಮೇಳನದ ಕೈಗಾರಿಕಾ ಸಮಿತಿಯು ಕಳೆದ ೨೫ ನೆಯ ತಾರೀಖು ಸಂಜೆ ಶ್ರೀ ಎಂ ಎಸ್. ರಾಮಚಂದ್ರರಾವ್‌ರವರ ಅಧ್ಯಕ್ಷತೆಯಲ್ಲಿ ಸೇರಿ ೬೫ ಲಕ್ಷ ರೂ ಗಳ ವೆಚ್ಚದ ಕೈಗಾರಿಕಾ ಅಭಿವೃದ್ಧಿ ಯೋಜನೆಯೊಂದನ್ನು ಸರ್ಕಾರಕ್ಕೆ ಕಳುಹಿಸಿತು ಈ ಯೋಜನೆ ಮೈಸೂರು ಸರ್ಕಾರದ ಎಲೆಕ್ಟ್ರಿಕ್ ಫ್ಯಾಕ್ಟರಿಯನ್ನು ೩೫ ಲಕ್ಷ ರೂ. ಗಳ ವೆಚ್ಚದಿಂದ ಇನ್ನೂ ಹೆಚ್ಚಿಗೆ ಅಭಿವೃದ್ಧಿಪಡಿಸಿ, ಎಲೆಕ್ಟ್ರಿಕ್ ಮೋಟಾರುಗಳು, ಟ್ರಾನ್ಸ್‌ಫಾರ್ಮರ್ಸ್ ಮೊದಲಾದುವುಗಳನ್ನು ತಯಾರಿಸುವಂತೆಯೂ; ೨೦ ಲಕ್ಷ ರೂ ಗಳ ಖರ್ಚಿನಿಂದ ಸಿಮೆಂಟ್, ಅಸ್‌ಬೆಸ್ಟಾಸ್, ಕಿಯಲಿನ್ ಮೊದಲಾದುವುಗಳನ್ನು ತಯಾರಿಸುವಂತೆಯೂ ಶಿಫಾರಸು ಮಾಡಲಾಯಿತು ಈ ವಿಚಾರದಲ್ಲಿ ಇಂಗ್ಲೆಂಡ್ ಮತ್ತು ಅಮೆರಿಕಾಕ್ಕೆ ಒಂದು ಕೈಗಾರಿಕಾ ನಿಯೋಗವನ್ನು ಮೈಸೂರಿನಿಂದ ಕಳುಹಿಸಬೇಕೆಂದೂ ಸಲಹೆ ಮಾಡಲಾಯಿತು.

ತಂದೆಯ ಬಾಯಲ್ಲಿ ಐವತ್ತು ಮಕ್ಕಳು

ಮಕ್ಕಳನ್ನು ಬಾಯಲ್ಲಿಟ್ಟುಕೊಂಡಿರುವ ತಂದೆಯನ್ನು ಎಲ್ಲಾದರೂ ನೀವು ಕಂಡಿರುವಿರಾ? ಬೆಕ್ಕುಮೀನು ಎಂಬುದಾಗಿ ಒಂದು ಬಗೆಯ ಮೀನವುಂಟು. ಈ ಮೀನವು ಎರಡಡಿ ಉದ್ದ ಬೆಳೆಯುತ್ತದೆ. ಬೆಕ್ಕಿನಂತೆಯೇ ಅವಕ್ಕೆ ಮೀಸೆಯುಂಟು ಅಮೆರಿಕಾ ದೇಶದ ಪೂರ್ವ ತೀರದಲ್ಲಿ ಈ ಮೀನುಗಳು ಸಿಗುತ್ತವೆ. ತಾಯಿಯಾದ ಮೀನವು ತತ್ತಿಯನ್ನು ಹಾಕಿದ ಕೂಡಲೆ ತಂದೆಯಾದ ಮೀನವು ಆ ತತ್ತಿಗಳನ್ನು ಬಾಯೊಳಗಿಟ್ಟುಕೊಂಡು ಬಿಡುತ್ತದೆ. ಅದು ಅರವತ್ತೈದು ದಿನಗಳ ಕಾಲ ಈ ರೀತಿ ಬಾಯಲ್ಲೇ ಇಟ್ಟುಕೊಂಡಿದ್ದು ಅನಂತರ ಮೊಟ್ಟೆ ಒಡೆದು ಮರಿಗಳು ಬೆಳೆದ ಮೇಲೆ ಅವುಗಳನ್ನು ಕಕ್ಕುತ್ತದೆ ಈ ಮರಿಗಳು ಮೂರು ಅಂಗುಲ ಉದ್ದವಾಗುವವರೆಗೂ ತಂದೆಯ ಬಾಯಲ್ಲೇ ಮಲಗಿರುತ್ತವೆ. ಸಾಧಾರಣವಾಗಿ ಐವತ್ತೈದು ಮರಿಗಳಿರುತ್ತವೆ. ಅರವತ್ತೈದು ದಿನಗಳವರೆಗೆ ತಂದೆಯಾದ ಮೀನವು ಹೇಗೆ ಆಹಾರವನ್ನು ತಿನ್ನುವದೋ ಯಾರಿಗೂ ತಿಳಿಯದು ದೇವರ ಲೀಲೆಯು ವಿಚಿತ್ರವಾದುದು

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗತ್ಪ್ರಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ವೀರಶೈವಮತದಲ್ಲಿ ಸದ್ಯಃ ದೊರೆಯುತ್ತಿರುವ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು ಈ ಗ್ರಂಥವು ಈಗ್ಗೆ ಸುಮಾರು ೩ಸಾವಿರ ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ವವು ಪಾಠಕರಿಗೆ ವೇದ್ಯವಾಗುವುದು ವಾಚಕರ ಅನುಕೂಲಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ ಈ ಗ್ರಂಥವು ಒಟ್ಟು ೩೬೨ ಪುಟಗಳಿಂದ ಕೂಡಿದ್ದು, ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಛಾಯಾಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ ಪ್ರತಿನಿತ್ಯ ಪಠನೀಯವಾಗಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು **ಬೆಲೆ ೩ ರೂಪಾಯಿ.**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ **ಫೋಟೋ** ಸೈಜು ೨೦ × ೧೪ ಬೆಲೆ ಗಳ್ಗೆ	೦—೬—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦ ಬೆಲೆ	೦—೬—೦
ಸದ್ಯಃ ಪಟ್ಟಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ **ಫೋಟೋ** ಸೈಜು ೧೪ × ೧೦ ಬೆಲೆ	೦—೪—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ **ಫೋಟೋ** ಸೈಜು ೧೪ × ೧೦ ಬೆಲೆ ಗಳ್ಗೆ	೦—೪—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ **ಫೋಟೋ**	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ **ಫೋಟೋ**	೦—೧—೬
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ **ಫೋಟೋ**	೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರಿ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—೬
ಶ್ರೀಮದುಜ್ಜಯಿನೀ ಸಿಂಹಾಸನಾಧೀಶರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ **ಫೋಟೋ**	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ **ಫೋಟೋ**	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ **ಫೋಟೋ**	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ಗಳ್ಗೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ **ಫೋಟೋ** (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ಗಳ್ಗೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ **ಫೋಟೋ** ಗಳ್ಗೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ಗಳ್ಗೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ **ಫೋಟೋ**	೦—೧—೬
ಮೈಸೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ **ಫೋಟೋ**	೦—೧—೬

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ ...	೨ ಆಣೆ
ಪಂಚಾಚಾರ್ಯಪ್ರಕಾಶ ...	೩ ಆಣೆ
ಪಂಚಾಚಾರ ಪ್ರಕಾಶಿಕಾ ...	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ ...	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ) ..	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ ..	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ-ಶ್ರಾದ್ಧವಿಧಿ ..	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೮ ಆಣೆ
ವೀರಶೈವನ ಹಾಸ್ತ್ರರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ) ..	೮ ಆಣೆ
ಆಗಮಪರಿಜ್ಞಾನ ..	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮುಲು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ದು ೨ನೆಯ ಆವೃತ್ತಿ)	೧। ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ.
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಶ್ರೀಕರಭಾಷ್ಯಂ (ಪಂಚಸ್ತೋತ್ರೀ)	೧।। ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧।। ರೂ
ವೀರಶೈವರತ್ನ (೨ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಟೀಕಾಸಹಿತ) ..	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೩ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೩ ರೂ.
ವೀರಶೈವಸಿದ್ಧಾಂತಸುಧಾಕರ	೩ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ) ..	೮ ರೂ
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*) ..	8 As
Speeches by Pandit Shri Kashinatha Shastriji (*English*)	12 As
लिंगधारणचंद्रिका (संस्कृत)	३ रु
वीरशैवरत्न (मराठी)	१ रु
महानारायणोपनिषत् (वीरशैवभाष्य-संस्कृत)	१ रु.
सिद्धान्तशिखामणि (मूल)	८ आ
नंदिकेश्वरकारिका (संस्कृत)	२ आ

ಸ್ಥಾನೇಜಂ —**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರ ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ।

ಸ್ಥಳದವರಿಗೆ ೩ ರೂ ೪ ಆಣೆ ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ. ೪ ಆಣೆ

ಸಂಪುಟ ೧೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೦ನೇ ಡಿಸೆಂಬರ್ ೧೯೪೫ [ಸಂಚಿಕೆ ೩೦

ಸನಾತನ ಧರ್ಮಬೋಧಕರ ಶುಭಾಗಮನ

ಹುಬ್ಬಳ್ಳಿ ತಾ॥ ಮಲ್ಲಿಗವಾಡ ಗ್ರಾಮಕ್ಕೆ ಸನಾತನ ಧರ್ಮಬೋಧಕರಾದ ಶ್ರೀ ರೇವಣಸಿದ್ಧ ಶಿವಾಚಾರ್ಯ ಪಟ್ಟದಸ್ವಾಮಿಗಳು ಬೃಹನ್ಮಠ ಚಿಕ್ಕಮಣ್ಣೂರು ಇವರು ತಾ॥ ೨೫ ೧೧ ೪೫ನೇ ದಿವಸ ಆಗಮಿಸಿದರು ಈ ಗ್ರಾಮದಲ್ಲಿ ಅನಾಮಧೇಯರಾದ ಕೆಲ ಭಕ್ತರು ಶಾಸ್ತ್ರ ಹೇಳುತ್ತೇವೆಂದೂ, ಕೆಲ ಹಳ್ಳಿಗಳಲ್ಲಿ ಸಾಯಂಕಾಲ ಪುರಾಣ ಹೇಳುತ್ತೇವೆಂದೂ ನಸುಕಿನಲ್ಲಿ ಶಾಸ್ತ್ರ ಹೇಳುತ್ತೇವೆಂದೂ ಪಾಪದ ಭೀತಿಯಿಲ್ಲದೆ ಸ್ತ್ರೀಪುರುಷರಿಗೆ ದುರುಪದೇಶಮಾಡಿ ನಮಸ್ಕಾರಮಾಡಿಸಿಕೊಳ್ಳುವದು, ಕೆಲವರಿಗೆ ಬಲಗಡೆ ರಟ್ಟೆಯಲ್ಲಿ ಲಿಂಗಧಾರಣ ಮಾಡುವದು, ಮನೆಗಳಲ್ಲಿ ಪೂಜೆಯನ್ನು ಮಾಡಲು ಯೋಗ್ಯವಲ್ಲವೆಂದು ಬಿಲ್ವವೃಕ್ಷದ ಬುಡದಲ್ಲಿ ಗುಡಸಲ ಹಾಕಿಸಿ ಅಲ್ಲಿಯೇ ಎಲ್ಲಾ ಜಾತಿ ಜನರಿಗೂ ಒಟ್ಟುಗೂಡಿ ಪೂಜಾ ಮಾಡಿಸುವದು, ಪಂಚಾಕ್ಷರ ಮಂತ್ರವನ್ನು ಕುಣಿಯುತ್ತ ಹಾಡುವುದು ಈ ರೀತಿ ಮಾಡಿ ಅಲ್ಲಿ ವೀರಶೈವ ಧರ್ಮವನ್ನೇ ಹಾಳುಮಾಡುತ್ತಿದ್ದರು ಇದನ್ನು ಶ್ರೀ ಚಿಕ್ಕಮಣ್ಣೂರು ಸ್ವಾಮಿಗಳವರು ನೋಡಿ ಸಹಿಸಲಾರದೆ ಕೆಟ್ಟಲ್ಲಿ ಸುಧಾರಿಸಬೇಕೆಂದು ಇಲ್ಲಿಗೆ ಬಂದು ೫-೬ ಸಭೆಗಳನ್ನು ಮಾಡಿ ಸಮಸ್ತ ಧರ್ಮದವರು ತಮ್ಮ ತಮ್ಮ ಧರ್ಮದಂತೆ ನಡೆದುಕೊಂಡು ಕೃತಾರ್ಥರಾಗಬೇಕೆಂದು ಬಲವಾಗಿ ಬೋಧೆಮಾಡಿ ಅವರವರ ಧರ್ಮದಂತೆ ನಡೆಯಬೇಕೆಂದು ಸುಧಾರಿಸಿ ಪೂರ್ವಪದ್ಧತಿಯಂತೆಯೇ ನಡೆಯುವಂತೆ ನವಜಾಗೃತಿಯನ್ನುಂಟುಮಾಡಿದರು ಇವರ ಬೋಧಾಮೃತವನ್ನು ಪಾನಮಾಡಿ ಎಲ್ಲಾ ಮತದವರೂ ನಮಗೆ ಈ ತರಹದ ಗುರುಗಳು ಪದೇ ಪದೇ ದಯಮಾಡಿಸಿ ಬೋಧನಮಾಡದೆ ಇರುವದರಿಂದ ಡಾಂಭಿಕ ವೇಷಧಾರಿ ಭಕ್ತರು ಸ್ವಕಾರ್ಯಸಾಧನಕ್ಕೆ ಬಿದ್ದು ಪ್ರಾಚೀನ ಗುರುವಂಶದವರಿಗಿಂತಲೂ ನಾವೇ ದೊಡ್ಡ ಗುರುಗಳೆಂದು ಹಳ್ಳಿ ಜನರಿಗೆ ದುರುಪದೇಶಮಾಡಿ ಧರ್ಮಗಳಲ್ಲಿ ಅಶ್ರದ್ಧೆ ಹುಟ್ಟುವಂತೆ ಮಾಡುವದಕ್ಕೆ ಇದೇ ಕಾರಣವಾಯಿತು ಇದರಿಂದ ಸಮಾಜವೇ ಹಾಳಾಗುವ ಪ್ರಸಂಗ ಬರುವದೆಂದು ಪರಸ್ಪರ ಮಾತನಾಡುತ್ತ ಧರ್ಮದ ನಿಜತತ್ವವನ್ನು ಚಿಕ್ಕಮಣ್ಣೂರ ಸ್ವಾಮಿಗಳವರಿಂದ ನಾವು ತಿಳಿದು ಧನ್ಯರಾದವೆಂದು ಹೇಳುತ್ತ ಸ್ವಾಮಿಗಳವರ ಬೋಧೆಗೆ ಒಪ್ಪಿ ಲೋಕಮಾನ್ಯ ಪಂಚಾಚಾರ್ಯ ಪ್ರಭಾಕ್ಕೆ ಚಂದಾದಾರರಾಗಿ ಧರ್ಮಗ್ರಂಥಗಳನ್ನು ತರಿಸಲು ಒಪ್ಪಿ ಆರ್ಡರ್ ಕೊಟ್ಟಿರುವರೆಂದು ಸಂತೋಷದಿಂದ ತಿಳಿಸುವೆ

ಕಾಶಪ್ಪ ಜವಳಿ

ಕನಕಗಿರಿಯ ಸ್ತ್ರೀರತ್ನವು ಕಣ್ಮರೆಯಾಯಿತು

ಈಶನಿರ್ಮಿತವಾದ ಈ ಜಗತ್ತಿನಲ್ಲಿ ಮಾನವನಾದಿಯಾಗಿ ಸಕಲ ಪ್ರಾಣಿಗಳೂ ಸುಖವನ್ನೇ ಬಯಸುವವು. ಆದರೆ ಅದು ಈಶಸಂಕೇತದಂತೆ ದೈವಾಧೀನವಾದುದು ಸರ್ವ ಜೀವನಗಳಲ್ಲಿ ಮಾನವ ಜೀವನವೇ ಶ್ರೇಷ್ಠವಾದುದು ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳನ್ನು ಪಡೆಯುವ ಶಕ್ತಿಯು ಮಾನವನಿಗಲ್ಲದೆ ಇನ್ನಿತರ ಯಾವ ಪ್ರಾಣಿವರ್ಗಕ್ಕೂ ಸಾಧ್ಯವಿಲ್ಲ ಈ ಪುರುಷಾರ್ಥಗಳು ಜ್ಞಾನಿಗಳಿಗೆ ಸಿದ್ಧಿಸುವವಲ್ಲದೆ ಅಜ್ಞಾನಿಗಳಿಗೆಂದಿಗೂ ಸಿದ್ಧಿಸಲಾರವು ಪ್ರತಿಯೊಬ್ಬನೂ ಹಿಂಸಾ ಅನಾಚಾರಾದಿ ಅಧರ್ಮಗಳನ್ನು ಆಚರಿಸದ ಅಹಿಂಸಾ ಸದಾಚಾರಾದಿ ಧರ್ಮಗಳನ್ನು ಆಚರಿಸುತ್ತ ಬಂದರೆ ಅವನು ಈಶಾನುಗ್ರಹಕ್ಕೆ ಪಾತ್ರನಾಗುವನು ಈಗಿನ ವಾತಾವರಣದಲ್ಲಿ ಬಹುಶಃ ಎಲ್ಲಿ ನೋಡಿದರೂ ಜನಗಳು ಧನಸಂಪಾದನೆಯನ್ನು ಮಾಡುವದರಲ್ಲಿ ನಿರತರಾಗಿದ್ದಾರಲ್ಲದೆ ಆತ್ಮೋದ್ಧಾರ ಸಾಧನವಾದ ಧರ್ಮಾನುಷ್ಠಾನಗಳಲ್ಲಿ ಮನಸ್ಸನ್ನು ತೆಗೆದುಹಾಕಿದ್ದಾರೆ ತಾನು ಯಾವದನ್ನು ಮಾಡಿದರೂ ಧರ್ಮಮಾರ್ಗವನ್ನು ಬಿಡಬಾರದು ಧರ್ಮವೇ ಸ್ಥಿರವಾದುದು ಅದಕ್ಕಾಗಿಯೇ ಜ್ಞಾನಿಗಳು ಎಲ್ಲವೂ ಅಸ್ಥಿರವೆಂದೂ ಧರ್ಮವು ಸ್ಥಿರವೆಂದೂ ಸಾರಿದ್ದಾರೆ ಈ ಮಾಯಾಮಯವಾದ ಸಂಸಾರದಲ್ಲಿ ನಂಬಲಿಕ್ಕೆ ಅರ್ಹವಾದ ವಸ್ತುವು ಒಂದೂ ಇಲ್ಲ ಹೆಂಡರು ಮಕ್ಕಳು ಬಂಧು ಬಳಗದವರು ಧನಕನಕಗಳಾದಿಯಾಗಿ ಸಕಲ ಭೋಗಗಳು ಎಲ್ಲವೂ ನಶ್ವರವಾದವುಗಳು ಆಯುಷ್ಯವು ಕಾದ ಕಬ್ಬಿಣದಮೇಲೆ ಬಿದ್ದ ನೀರಿನಂತಿರುವದು "ಜಾತಸ್ಯ ಮರಣಂ ಧ್ರುವಂ" ಹುಟ್ಟಿದವನಿಗೆ ಮರಣವು ಸದಾ ಸಿದ್ಧವಾಗಿರುವದು ಎಲ್ಲಾ ಸಂಗತಿಗಳನ್ನು ಪೂರ್ಣವಾಗಿ ವಿಚಾರಮಾಡಿ ಅಜ್ಞಾನವನ್ನು ಹೊರದೂಡಿ ಜ್ಞಾನಾರ್ಜನೆಯನ್ನು ಮಾಡಿಕೊಂಡು ಶಾಶ್ವತವಾದ ಕೈವಲ್ಯ ಸುಖವನ್ನು ಪಡೆಯುವದು ಮಾನವನ ಪ್ರಥಮ ಕರ್ತವ್ಯವಾಗಿರುವದು ರಾಯಚೂರು ಜಿಲ್ಲಾ ಕನಕಗಿರಿ ಗ್ರಾಮನಿವಾಸಿಗಳಾದ ಭತ್ತದ ಶ್ರೀಯುತ ದೊಡ್ಡಬಸಪ್ಪನವರ ಧರ್ಮಪತ್ನಿಯವರಾದ ಸೌಭಾಗ್ಯವತಿ ಶ್ರೀ ಪಚ್ಚಮ್ಮನವರು ಇದೇ ಕಾರ್ತಿಕ ಶುದ್ಧ ೭ ಸೋಮವಾರ ಕನಕಗಿರಿ ಬೃಹನ್ಮಠದ ಶ್ರೀ॥ ಷ॥ ಬ್ರ॥ ಪಂಚಾಕ್ಷರ ಶಿವಾಚಾರ್ಯರ ಹಸ್ತದಿಂದ ಮುಕ್ತ್ಯನುಗ್ರಹಾದಿ ಶಿವಸಂಸ್ಕಾರವನ್ನು ಪಡೆಯುತ್ತ ಶಿವೈಕ್ಯವನ್ನು ಹೊಂದಿದರು ಈ ಸಾಧ್ವಿಯು ಮಹಾ ಪತಿವ್ರತಾಶಿರೋಮಣಿಯೂ ಪೂಜಾಲೋಲಳೂ ಗುರುಲಿಂಗಜಂಗಮಪ್ರೇಮಿಯೂ ಅತ್ತೆಮಾವಂದಿರ ಸೇವಾತತ್ಪರಳೂ ಪರೋಪಕಾರ ನಿರತಳೂ ಸದ್ಭಕ್ತೆಯುಕ್ತಳೂ ಆಗಿದ್ದಳು ಈ ತಾಯಿಗೆ ೩೪ ವರುಷವಾಗಿದ್ದರೂ ಬಹುಜನಗಳ ಪ್ರೇಮಾದರಗಳಿಗೆ ಪಾತ್ರಳಾಗಿದ್ದಳು ಪ್ರತಿದಿವಸ ಎಷ್ಟು ಜನ ಮಾಹೇಶ್ವರರು ಬಂದರೂ ತೃಪ್ತಿಪಡಿಸಿ ಕಳಿಸುತ್ತಿದ್ದಳು ಅಂತ್ಯಸಮಯದಲ್ಲಿ ತನ್ನ ಗಂಡ ಅತ್ತೆಮಾವಂದಿರು ಮೈದುನ ಮೊದಲಾದವರನ್ನು ಕರೆದು ಈ ರೋಗದಿಂದ ನಾನು ಉಳಿಯುವದಿಲ್ಲ ದಾನಧರ್ಮಾದಿಗಳನ್ನು ಮಾಡಿಸಿರೆಂದು ಹೇಳಿದಳು ಆ ಪ್ರಕಾರ ಸದರಿಯವರು ಗೋಧನದಾನಾದಿಗಳನ್ನೂ ಗ್ರಾಮದ ಪ್ರತಿಯೊಬ್ಬ ಮಾಹೇಶ್ವರರಿಗೆ ೧ ರೂ ಯಂತೆ ದಾನ ಕೊಟ್ಟಿರಲ್ಲದೆ ಶ್ರೀ ವೀರಶೈವ ಧರ್ಮೋದ್ಧಾರಕ್ಕಾಗಿ ಅವತರಿಸಿರುವ ಪಂಚಾಚಾರ್ಯ ಪ್ರಭಾಪೋಷಣಕ್ಕೆ ೫ ರೂಪಾಯಿಗಳನ್ನು ಸಮರ್ಪಿಸಿದರು ಇಂತಹ ಸದ್ಭಕ್ತಳ ಕೀರ್ತಿಯು ಶಾಶ್ವತವಾಗಿ ಇರುವಂತೆ ಮಾಡುವದಕ್ಕಾಗಿ ಶ್ರೀ ಪಂಚಾಕ್ಷರಶಿವಾಚಾರ್ಯರು ಶ್ರೀ ಮರಿಬಸಪ್ಪನವರಿಗೂ ಮೃತರ ಗಂಡಂದಿರಿಗೂ ಬೋಧಿಸಿ ಸದ್ಯಃ ಕಾಶೀ ಜಗದ್ಗುರು ಮಹಾಪೀಠದಲ್ಲಿ ನಿರ್ಮಿತವಾಗುತ್ತಿರುವ ಜ್ಞಾನಮಂದಿರಕ್ಕಾಗಿ ಇವರ ಹೆಸರಿನಿಂದ ೧೦೦ ರೂಪಾಯಿಗಳನ್ನು ಶ್ರೀಗಳವರ ದ್ವಾರಾ ತಲ್ಪುವಂತೆ ಸಮರ್ಪಿಸಿದರು ಇವರ ಅಂತ್ಯ ಕಳೇಬರವನ್ನು ನೋಡುವದಕ್ಕಾಗಿ ಅಸಂಖ್ಯ ಸ್ತ್ರೀಪುರುಷರು ಬಂದಿದ್ದರು ಸರ್ವರೂ ಈ ಊರಿನ ಸೌಭಾಗ್ಯಲಕ್ಷ್ಮಿಯು ತೊಲಗಿಹೋದಳೆಂದು ಕಣ್ಣೀರನ್ನು ಸುರಿಸುತ್ತಿದ್ದರು ಶ್ರೀ ಜಗದ್ಗುರು ರೇಣುಕಾದಿಪಂಚಾಚಾರ್ಯರು ಮೃತಳ ಆತ್ಮಕ್ಕೆ ಶಾಂತಿಯನ್ನೂ ಸದರಿಯವರ ಮಕ್ಕಳಿಗೆ ಆಯುಷ್ಯಾಭಿವೃದ್ಧಿಯನ್ನೂ ಕೊಡಲೆಂದು ಪ್ರಾರ್ಥಿಸುವ,

ವೀರಭದ್ರಪ್ಪ ಬತ್ತದ

ಉದಾರ ದಾನ

ಧಾರವಾಡ ಡಿ॥ ತಿಗ್ಗಾವಿ ತಾಲೂಕು ಕುಂದೂರು ಗ್ರಾಮದ ಪಾಟೀಲ ಶ್ರೀಮಾನ್ ಬಾಕನಗೌಡರು ಮತ್ತು ಶ್ರೀಮಾನ್ ಶೇಖರಗೌಡರು ಬೆಂಗಳೂರು ಮಹಾಂತಿನ ಮಠಾಧ್ಯಕ್ಷರಾದ ಶ್ರೀ॥ಷ॥ಬ್ರ॥ ಗಂಗಾಧರಶಿವಾಚಾರ್ಯ ಸ್ವಾಮಿಗಳವರಿಂದ ಸ್ಥಾಪಿತವಾಗಿರುವ ಮುಕ್ತಿಮಂದಿರ ಗುರುಕುಲಕ್ಕೆ ಅಸಾಧಾರಣವಾದ ಭಕ್ತಿಯಿಂದ ೧೦ ಸಾವಿರ ರೂಪಾಯಿ ಬೆಲೆ ಬಾಳುವ ಭೂಮಿಯನ್ನು ದಾನ ಮಾಡಿರುವರೆಂಬ ವಿಷಯವನ್ನು ತಿಳಿದು ಪರಮಾನಂದವೆನಿಸುತ್ತದೆ ಮೇಲ್ಕಂಡ ಉಭಯಧರ್ಮಾತ್ಮರಿಗೂ ಶ್ರೀಜಗದಾಚಾರ್ಯರು ಆಯುರಾರೋಗ್ಯಭಾಗ್ಯಾದಿ ಸಕಲ ಸಂಪತ್ಸಮೃದ್ಧಿಯನ್ನುಂಟುಮಾಡಲೆಂದು ಹಾರೈಸುತ್ತೇವೆ

ಸ್ವೀಕಾರ

ರಾಯಚೂರು ಡಿ॥ ಕನಕಗಿರಿಯ ಭತ್ತದ ಶ್ರೀಯುತ ದೊಡ್ಡಬಸಪ್ಪನವರ ಧರ್ಮಪತ್ನಿಯವರಾದ ಸೌ॥ ಪಚ್ಚಮ್ಮನವರು ಶಿವಾಧೀನರಾದ ಸಮಯದಲ್ಲಿ ಪ್ರಭಾ ಪೋಷಣಕ್ಕೋಸ್ಕರ ಸಮರ್ಪಿಸಿದ 5 ರೂಪಾಯಿಗಳು ಕನಕಗಿರಿ ಬೃಹನ್ಮಠದ ಶ್ರೀ॥ ಷ॥ ಬ್ರ॥ ಪಂಚಾಕ್ಷರ ಶಿವಾಚಾರ್ಯರ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಯುದ್ಧೋದ್ಯಮದಲ್ಲಿ ಮೈಸೂರು ಸಂಸ್ಥಾನದ ಪಾತ್ರ

ಭರತಖಂಡವು ಯುದ್ಧೋದ್ಯಮದಲ್ಲಿ ವಹಿಸಿದ ಪಾತ್ರದಲ್ಲಿ ಮೈಸೂರಿನ ಭಾಗವೆಷ್ಟೆಂಬುದನ್ನು ಸೂಚಿಸಲು ಕೆಲವು ಮುಖ್ಯ ವಿಷಯಗಳನ್ನು ತಿಳಿಸಬಹುದಾಗಿದೆ. ಶ್ರೀಮನ್ಮಹಾರಾಜರವರ ಉದಾತ್ತ ನೇತೃತ್ವದ ಪರಿಣಾಮವಾಗಿ ನಮ್ಮ ಸಂಸ್ಥಾನವು ಯುದ್ಧೋದ್ಯಮದಲ್ಲಿ ಭರತಖಂಡದ ಯಾವ ಭಾಗಕ್ಕೂ ಹಿಂದೆ ಬೀಳಲಿಲ್ಲ. ನಮ್ಮ ಸಂಸ್ಥಾನವು ಸೈನ್ಯಕ್ಕೂ, ಪಾರಿಭಾಷಿಕ ಸೇವೆಗಳಿಗೂ ಜನರನ್ನೊದಗಿಸಿದೆ. ಮೈಸೂರು ಸೈನ್ಯದ ಕೆಲವು 'ಯೂನಿಟ್' ಗಳು ವಿದೇಶಗಳಲ್ಲಿ ಹೋರಾಡುತ್ತಿವೆ. ಯುದ್ಧಕ್ಕಾಗಿ ಶಸ್ತ್ರಸಾಮಗ್ರಿಗಳನ್ನು ಕೊಂಡುಕೊಳ್ಳುವುದಕ್ಕಾಗಿಯೂ ಮತ್ತು ಕಷ್ಟಸಂಕಟಗಳಿಗೆ ಗುರಿಯಾಗಿರುವವರಿಗೆ ಪರಿಹಾರವನ್ನೊದಗಿಸುವುದಕ್ಕಾಗಿಯೂ ಏರ್ಪಟ್ಟ ಯುದ್ಧ ನಿಧಿಗಳಿಗೆ 60 ಲಕ್ಷ ರೂಪಾಯಿಗಳಿಗಿಂತಲೂ ಹೆಚ್ಚು ಧನವನ್ನೊದಗಿಸಿರುವುದರ ಮೂಲಕ ನಮ್ಮ ಸಂಸ್ಥಾನದ ಹಿರಿಯ ಉದ್ದೇಶ ಮತ್ತು ಔದಾರ್ಯಗಳು ವ್ಯಕ್ತವಾಗಿವೆ.

ಹೀಗೆ ಒದಗಿಸಿದ ಮೊಬಲಗಿನ ಮುಖ್ಯ ಬಾಬ್ತುಗಳು ಯಾವುವೆಂದರೆ —

(1) ಲಂಡನ್ನಿನಲ್ಲಿ ವಿಮಾನದಾಳಿಗೆ ಗುರಿಯಾದವರಿಗೆ ಸಹಾಯಮಾಡುವುದಕ್ಕಾಗಿ 1940 ನೇ ಇಸವಿ ಡಿಸೆಂಬರ್ ತಿಂಗಳಲ್ಲಿ ಲಾರ್ಡ್ ಮೇಯರವರ ನಿಧಿಗೆ ಕೊಟ್ಟ ಹಣ 1,33,333 ರೂಪಾಯಿಗಳು

(2) "ರಾಯಲ್ ಏರ್ ಫೋರ್ಸ್" ವಿಮಾನ ಪಡೆಯಲ್ಲಿ 'ಮೈಸೂರು ಸ್ಕ್ವಾಡ್ರನ್' ವಿಮಾನ ದಳವನ್ನೇರ್ಪಡಿಸುವುದಕ್ಕಾಗಿ ವಿಮಾನಗಳನ್ನು ಕೊಂಡುಕೊಳ್ಳುವುದಕ್ಕೆಂದು 1941 ನೆಯ ಇಸವಿ ಜನವರಿಯಲ್ಲಿ ಕೊಟ್ಟ ಹಣ 6,33,731 ರೂಪಾಯಿಗಳು

(3) ಭಾರತೀಯ ಸೈನಿಕರ ಉಪಯೋಗಕ್ಕಾಗಿ 1941 ನೆಯ ಇಸವಿ ಜೂನ್ ತಿಂಗಳಲ್ಲಿ ಘನಹೊಂದಿದ ವೈಸರಾಯಿಯವರ ಯುದ್ಧೋದ್ದೇಶಗಳ ನಿಧಿಗೆ ಕೊಟ್ಟ ಹಣ 5,00,000 ರೂಪಾಯಿಗಳು

(4) "ಇಂಡಿಯನ್ ಏರ್‌ಫೋರ್ಸ್" ವಿಮಾನ ಸೈನ್ಯದಲ್ಲಿ "ಮೈಸೂರ್" ಎಂಬ ಫೈಟರ್ ವಿಮಾನವೊಂದನ್ನು ಸೇರಿಸುವುದಕ್ಕಾಗಿ ವಿಮಾನವನ್ನು ಕೊಂಡುಕೊಳ್ಳುವುದಕ್ಕೆ ಘನಹೊಂದಿದ ವೈಸರಾಯಿಯವರ ಯುದ್ಧೋದ್ದೇಶಗಳ ನಿಧಿಗೆ 1941 ನೆಯ ಇಸವಿ ಸೆಪ್ಟೆಂಬರ್ ತಿಂಗಳಲ್ಲಿ ಕೊಟ್ಟ ಹಣ 1,00,000 ರೂಪಾಯಿಗಳು

(5) "ರಾಯಲ್ ಇಂಡಿಯನ್ ನೇವಿ" ಎಂಬ ನೌಕಾದಳಕ್ಕೆ ಒಂದು ಹಡಗನ್ನು ಕೊಂಡುಕೊಳ್ಳುವುದಕ್ಕಾಗಿ 1942 ನೆಯ ಇಸವಿ ಜನವರಿ ತಿಂಗಳಲ್ಲಿ ಕೊಟ್ಟ ಹಣ 6,50,000 ರೂಪಾಯಿಗಳು

(6) 1943 ನೆಯ ಇಸವಿ ನವೆಂಬರ್ ತಿಂಗಳಲ್ಲಿ ಘನಹೊಂದಿದ ವೈಸರಾಯಿಯವರ ಯುದ್ಧೋದ್ದೇಶಗಳ ನಿಧಿಗೆ ಕೊಟ್ಟ ಹಣ 10,00,000 ರೂಪಾಯಿಗಳು

(7) 'ರೆಡ್‌ಕ್ರಾಸ್ ವೀಕ್' ಎಂಬ ವಾರದ ಆಚರಣೆಯ ಸಂಬಂಧದಲ್ಲಿ ಘನಹೊಂದಿದ ಸತಿ ಮಾರ್ಕ್ವಿಯೊನೆಸ್ ಆಫ್ ಲಿನ್‌ಲಿತ್‌ಗೋರವರು ಧನಶೇಖರಣೆಗಾಗಿ ಮಾಡಿದ ಕೋರಿಕೆಯನ್ನು ಮನ್ನಿಸಿ ಕೊಟ್ಟ ಮೊಬಲಗು 25,000 ರೂಪಾಯಿಗಳು.

(8) ಸಂಸ್ಥಾನದಲ್ಲಿರುವ ಮಿಲಿಟರಿ ಆಸ್ಪತ್ರೆಗಳ ಮತ್ತು ಸೈನ್ಯಗಳ ಸಹಾಯಾರ್ಥವಾಗಿ ಕೊಟ್ಟ ಮೊಬಲಗು 50,000 ರೂಪಾಯಿಗಳು

(9) 1944 ನೆಯ ಇಸವಿ ನವೆಂಬರ್ ತಿಂಗಳಲ್ಲಿ ಘನಹೊಂದಿದ ವೈಸರಾಯಿಯವರ ಯುದ್ಧೋದ್ದೇಶಗಳ ನಿಧಿಗೆ ಕೊಟ್ಟ ಹಣ 10,00,000 ರೂಪಾಯಿಗಳು.

(10) 1945 ನೆಯ ಇಸವಿ ಫೆಬ್ರವರಿ ತಿಂಗಳಲ್ಲಿ ಘನಹೊಂದಿದ ವೈಸರಾಯಿಯವರ ಯುದ್ಧೋದ್ದೇಶಗಳ ನಿಧಿಗೆ ಕೊಟ್ಟ ಹಣ, 5,00,000 ರೂಪಾಯಿಗಳು.

ಮೈಸೂರು ಸಂಸ್ಥಾನದ ಸಾರ್ವಜನಿಕರು ಈ ವರೆಗೆ "ಮೈಸೂರು ವಾರ್‌ಫಂಡ್" ಎಂಬ ಯುದ್ಧನಿಧಿಗೆ 10 ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಮೊಬಲಗನ್ನು ಕೊಟ್ಟಿರುತ್ತಾರೆ.

ಮೈಸೂರು ಸರ್ಕಾರದವರು ಇಂಡಿಯಾ ಸರ್ಕಾರದವರು ಹೊರಡಿಸಿರುವ 'ರಕ್ಷಣಾ ಸಾಲಪತ್ರಗಳ' ಲ್ಲಿ 8.5 ಕೋಟಿ ರೂಪಾಯಿಗಳಷ್ಟು ಬೆಲೆಬಾಳುವ ಸಾಲಪತ್ರಗಳನ್ನು ಕೊಂಡುಕೊಂಡಿದ್ದಾರೆ.

ಇಂಡಿಯಾ ಸರ್ಕಾರದವರೊಡನೆ ಸಹಕರಿಸಿ ನಮ್ಮ ಸರ್ಕಾರದವರು ಸಂಸ್ಥಾನದಲ್ಲಿ "12 ವರ್ಷಗಳ ನೇಷನಲ್ ಸೇವಿಂಗ್ಸ್ ಸರ್ಟಿಫಿಕೇಟು" ಗಳು ಜನಪ್ರಿಯವಾಗುವಂತೆ ಮಾಡುವುದಕ್ಕಾಗಿ, ಸಣ್ಣ ಪ್ರಮಾಣಗಳಲ್ಲಿ ಹಣವನ್ನು ಕೂಡಿಸುವ ಯೋಜನೆಯನ್ನು ಜಾರಿಗೆ ತಂದಿದ್ದಾರೆ. ಈವರೆಗೆ 13 ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಹಣ ಪೋಸ್ಟಾಫೀಸುಗಳಿಗೆ ಸಂದಾಯವಾಗಿದೆ.

ಯುದ್ಧ ಪ್ರಾರಂಭವಾದಾಗಿನಿಂದ ಯುದ್ಧಕ್ಕಾಗಿ 12 ಕೋಟಿ ರೂಪಾಯಿಗಳ ಮೌಲ್ಯದ ಸಾಮಗ್ರಿಗಳ ತಯಾರಿ ಕೆಲಸ ಸಂಸ್ಥಾನದ ಕೈಗಾರಿಕೋದ್ಯಮಗಳಲ್ಲಿ ನಡೆದಿದೆ. ಯುದ್ಧಕ್ಕೆ ಬೇಕಾದ ಸಾಮಾನುಗಳನ್ನೇ ತಯಾರಿಸುವಂಥ 26 ಉದ್ಯಮಗಳು ಸಂಸ್ಥಾನದಲ್ಲಿ ಕೆಲಸ ನಡೆಸುತ್ತಿವೆ. ಇವುಗಳ ಪೈಕಿ ಸರ್ಕಾರದವರಿಗೆ ಸೇರಿದವು ಒಂಬತ್ತು, ಸರ್ಕಾರದ ಸಹಾಯ ಪಡೆದಿರುವುವು ಒಂಬತ್ತು ಮತ್ತು ಖಾಸಗಿ ಜನರಿಗೆ ಸೇರಿದಂಥವು ಎಂಟು.

ಪಾರೆಸ್ಟ್ ಇಲಾಖೆಯವರು 'ಡಿಫೆನ್ಸ್ ಸರ್ವಿಸ್ಸಿಗೆ' 1,37,190 ಘನ ಅಡಿಗಳ ಊಕದ ದಿಮ್ಮಿಗಳು, 102,112 ಘನ ಅಡಿಗಳ ತೂಕದ ಕಟ್ಟಿಗೆ ಮರಮುಟ್ಟುಗಳು, 10,534 ಪೋಲ್‌ಗಳು 1,60,093 ಗಳುಗಳು ಮತ್ತು 16,381 ಚದರಡಿಗಳ ವಿವಿಧ ಹಲಿಗೆಗಳು ಇವಿಷ್ಟನ್ನೂ ಒದಗಿಸಿದ್ದಾರೆ. ಇವೆಲ್ಲದರ ಮೌಲ್ಯ ಸುಮಾರು 20 ಲಕ್ಷ ರೂಪಾಯಿಗಳು.

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯವರು ಕೈ ಮಗ್ಗಗಳಲ್ಲಿ ನೇದ ಉಣ್ಣೆ ಕಂಬಳಿಗಳನ್ನೂ, ತೆಂಗಿನ ಚಿಪ್ಪಿನಿಂದ ಮಾಡಿದ ಗುಂಡಿಗಳನ್ನೂ ಮತ್ತು ಗುಂಡಿಗಳನ್ನೂ, ಮತ್ತು ಚಿಪ್ಪನ್ನು ಸರಬರಾಯಿ ಮಾಡಿರುತ್ತಾರೆ. ಅಲ್ಲದೆ ಈ ಇಲಾಖೆಯವರು ಅನುಭವಸ್ಥರಾದ ತಮ್ಮ ಕೆಲವರು ಆಫೀಸರುಗಳನ್ನು ಸರಬರಾಯಿ ಇಲಾಖೆಯಲ್ಲಿ ಕೆಲಸ ಮಾಡುವುದಕ್ಕೆ ಕಳುಹಿಸಿಕೊಟ್ಟಿದ್ದಾರೆ.

ಯುದ್ಧದ ಅವಶ್ಯಕತೆಗಳಿಗೆ ತಕ್ಕಂತೆ ರೇಷ್ಮೆ ಕೈಗಾರಿಕೆಯನ್ನು ವ್ಯವಸ್ಥೆಗೊಳಿಸಿ ಅಭಿವೃದ್ಧಿಪಡಿಸಲಾಗಿದೆ. ಇಂಡಿಯಾ ಸರ್ಕಾರದವರ ಸೂಚನೆ ಸಹಕಾರಗಳೊಡನೆ ಯುದ್ಧೋದ್ಯಮಕ್ಕಾಗಿ ಹೆಚ್ಚಿನ ದರ್ಜೆಯ ಫಿಲೇಚರ್ ರೇಷ್ಮೆ ತಯಾರಿಯ ಕೆಲಸವನ್ನು ಕೈಗೊಂಡಿದೆ. ಈಗ ಸುಮಾರು 1,000 'ಬೇಸಿನ್' ಗಳಲ್ಲಿ ಕೆಲಸ ನಡೆಯುತ್ತಿದೆ. ಫಿಲೇಚರುಗಳಲ್ಲಿ ತಯಾರಾಗುವ ರೇಷ್ಮೆಯನ್ನೆಲ್ಲಾ ಇಂಡಿಯಾ ಸರ್ಕಾರಕ್ಕೆ ಕೊಟ್ಟುಬಿಡಲಾಗುತ್ತಿದೆ. ಈವರೆಗೆ 1,98,000 ಪೌಂಡುಗಳ ತೂಕದ 'ಫಿಲೇಚರ್' ರೇಷ್ಮೆಯನ್ನು ಯುದ್ಧೋದ್ಯಮಕ್ಕಾಗಿ ಒದಗಿಸಲಾಗಿದೆ.

ಯುದ್ಧ ಪ್ರಾರಂಭವಾದ ಕೂಡಲೇ ಮೈಸೂರು ಪದಾತಿ ಸೈನ್ಯದ ಮೊದಲನೆಯ 'ಬೆಟ್ಯಾಲಿಯನ್' ಪಡೆಯನ್ನು ಇಂಡಿಯಾ ಸರ್ಕಾರದ ಉಪಯೋಗಕ್ಕೆ ಒಪ್ಪಿಸಲಾಯಿತು. ಆ ಸೈನ್ಯದವರು ಯುದ್ಧದಲ್ಲಿ ಹೋರಾಡಿ, ಈಗ ಶತ್ರುಶಿಬಿರದಲ್ಲಿ ಬಂಧಿತರಾಗಿದ್ದಾರೆ. ಮೇಲೆ ಕಂಡ 'ಬೆಟ್ಯಾಲಿಯನ್ನಿನ' ಜೊತೆಗೆ, ಪದಾತಿ ಸೈನ್ಯದ ಇನ್ನೊಂದು 'ಬೆಟ್ಯಾಲಿಯನ' ನ್ನೂ ಮತ್ತು 'ಗ್ಯಾರಿಸನ್ ಬೆಟ್ಯಾಲಿಯನ್ ಮತ್ತು ಸ್ಟೇಟ್ ಫೋರ್ಸಸ್' ಪಡೆಗೆ ಸೇರಿದ ಕೆಲವು ತಂಡಗಳನ್ನೂ ಇಂಡಿಯಾ ಸರ್ಕಾರದ ವಶಕ್ಕೆ ಕೊಡಲಾಯಿತು.

ಭಾರತೀಯ ಸೈನ್ಯದವರು ನಮ್ಮ ಸಂಸ್ಥಾನದಲ್ಲಿ ನಮ್ಮ ಸಂಸ್ಥಾನದ ಸೈನ್ಯಕ್ಕೆ ಸೇರಿದವರೇ ಹೆಚ್ಚಾಗಿರುವಂಥ ಒಂದು ಜಿ ಪಿ ಟಿ. ಪಡೆಯನ್ನು ತಯಾರಿಸಿದ್ದಾರೆ. ಈ ಪಡೆಯು ಮಧ್ಯಪ್ರಾಚ್ಯದ ಯುದ್ಧದಲ್ಲಿ ಹೆಸರು ಪಡೆದಿದ್ದಾರೆ.

ಭರತಖಂಡದ ಭೂಸೈನ್ಯಕ್ಕೂ ಮತ್ತು ನೌಕಾ ಸೈನ್ಯಕ್ಕೂ ಜನಗಳನ್ನು ಸೇರಿಸುವುದಕ್ಕೆ ಹೆಚ್ಚು ಕೆಲಸ ಮಾಡುವುದಕ್ಕಾಗಿ ಒಂದು ಯೋಜನೆ ಮಂಜೂರಾಗಿದೆ. ಮೈಸೂರಿನಲ್ಲಿ ಒಂದು 'ರಿಕ್ರೂಟಿಂಗ್' ಆಫೀಸನ್ನೂ, ಇತರ ಡಿಸ್ಟ್ರಿಕ್ಟ್ ಕಸಬೆಗಳಲ್ಲಿ ಅದರ ಶಾಖೆಗಳನ್ನೂ ತೆರೆಯಲಾಗಿದೆ.

ಸಂಸ್ಥಾನದಲ್ಲಿ ಮಿಲಿಟರಿ ಕ್ಯಾಂಪ್‌ಗಳನ್ನೂ, ಯುದ್ಧ ಕೈದಿಗಳ ಶಿಬಿರಗಳನ್ನೂ, ಆಸ್ಪತ್ರೆಗಳನ್ನೂ ಇತರ ಕಟ್ಟಡಗಳನ್ನೂ ನಿರ್ಮಿಸುವುದಕ್ಕಾಗಿ ಬೇರೆ ಬೇರೆ ಕಡೆಗಳಲ್ಲಿ ಸೇರಿ 11,300 ಎಕರೆಗಳ ಜಮೀನನ್ನು ದೊರಕಿಸಿಕೊಡಲಾಗಿದೆ. ಶ್ರೀಮನ್ಮಹಾರಾಜರವರಿಗೂ ಮತ್ತು ಮೈಸೂರು ಸರ್ಕಾರದವರಿಗೂ ಸೇರಿದ ಅನೇಕ ಕಟ್ಟಡಗಳನ್ನು ಮಿಲಿಟರಿ ಅಧಿಕಾರಿಗಳ ವಶಕ್ಕೆ ಒಪ್ಪಿಸಲಾಗಿದೆ. ಅಖಿಲ ಭಾರತ ಪಾರಿಭಾಷಿಕ ಶಿಕ್ಷಣ ಯೋಜನೆಯಲ್ಲಿ ಮೈಸೂರು ಸಂಸ್ಥಾನವೂ ತನ್ನ ಭಾಗದ ಕೆಲಸವನ್ನು ಮಾಡಿದೆ. ಈ ಯೋಜನೆಯ ಮೇರೆಗೆ ಸಂಸ್ಥಾನದ ನಾನಾ ಸಂಸ್ಥೆಗಳಲ್ಲಿ ಈವರೆಗೆ 2,500 ವಿದ್ಯಾರ್ಥಿಗಳು ಶಿಕ್ಷಣ ಪಡೆದಿದ್ದಾರೆ.

ಸಂಸ್ಥಾನದ ವೈದ್ಯ ಇಲಾಖೆಯ ಕೆಲವರು ಆಫೀಸರುಗಳೂ ಸೇರಿ, ಒಟ್ಟು 90 ಮಂದಿ ವೈದ್ಯರುಗಳು 'ಇಂಡಿಯನ್ ಮೆಡಿಕಲ್ ಸರ್ವಿಸ್ಸಿಗೆ' ಸೇರಿ ಕೆಲಸ ಮಾಡುತ್ತಿದ್ದಾರೆ. ಅಲ್ಲದೆ ನಾಲ್ಕು ಮಂದಿ ಮಹಿಳೆಯರು 'ಆಕ್ಸಿಲಿಯರಿ ನರ್ಸಿಂಗ್ ಸರ್ವಿಸ್ಸಿಗೆ ಸೇರಿರುತ್ತಾರೆ.

ಮೈಸೂರು ಸಂಸ್ಥಾನದ ಸ್ತ್ರೀಯರು ನಡೆಸಿರುವ ಪ್ರಶಂಸಾರ್ಹವಾದ ಕೆಲಸವನ್ನು ತಿಳಿಸದಿದ್ದರೆ ನಮ್ಮ ಸಂಸ್ಥಾನದ ಯುದ್ಧೋದ್ಯಮದ ಸಂಪೂರ್ಣ ಅರಿವಾಗುವಂತಿಲ್ಲ. 'ಮೈಸೂರು ಯುದ್ಧ ನಿಧಿ' ಗೆ ಸೇರಿದ 'ಮಹಿಳೆಯರ ಆಕ್ಸಿಲಿಯರಿ' ಸಮಿತಿಯವರು ಆಸ್ಪತ್ರೆಯ ಸಾಮಾನುಗಳು, ಶಸ್ತ್ರವೈದ್ಯದ ಸಲಕರಣೆಗಳು ಮತ್ತು ಯೋಧರಿಗೆ ಬೇಕಾದ ಸೌಕರ್ಯದ ವಸ್ತುಗಳು–ಇವುಗಳೆಲ್ಲಾ ಸೇರಿ 150,000 ಸಾಮಾನುಗಳನ್ನು ಕಳೆದ ನಾಲ್ಕು ವರ್ಷಗಳಲ್ಲಿ ಯುದ್ಧರಂಗಕ್ಕೆ ಕಳುಹಿಸಿಕೊಟ್ಟಿದ್ದಾರೆ. ಅಲ್ಲದೆ ಬೆಂಗಳೂರಿನ ಪಕ್ಕದಲ್ಲಿರುವ ಒಂದು ಮಿಲಿಟರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವ ಸೈನಿಕರಿಗೆ ಸೌಕರ್ಯದ ವಸ್ತುಗಳನ್ನು ಒದಗಿಸುವ ಮೂಲಕವೂ, ಯುದ್ಧೋದ್ಯಮಕ್ಕೆ ನೆರವಾಗುವುದಕ್ಕಾಗಿ ಸಂತೋಷ ಸಮಾರಂಭಗಳನ್ನು ನಡೆಯಿಸುವ ಮೂಲಕವೂ ಸಹ ಸಮಿತಿಯವರು ಯುದ್ಧಕ್ಕೆ ಸಹಾಯ ಮಾಡಿದ್ದಾರೆ. 'ಮಿಲಿಟರಿ' ಪಡೆಗಳಲ್ಲಿ ಕೆಲಸ ಮಾಡುವವರು ಪುರಜನರೊಡನೆ ಆಗಾಗ್ಗೆ ಮಿಳಿತವಾಗುವಂತೆ ಮಾಡುವುದಕ್ಕಾಗಿ ಕೆಲವರು ಪ್ರಮುಖ ಮಹಿಳಾ ಸಮಿತಿಯವರು ಆಗಾಗ್ಗೆ ಸಂತೋಷ ಕೂಟಗಳನ್ನು ಏರ್ಪಡಿಸಿದ್ದರು. ರಾಷ್ಟ್ರೀಯ ರಕ್ಷಣಾಬಲದ ಕೆಲಸವನ್ನು ನಡೆಯಿಸುವುದಕ್ಕಾಗಿ ಒಂದು ಸಂಸ್ಥೆಯನ್ನು ಏರ್ಪಡಿಸಲಾಗಿದೆ. ಈ ಸಂಸ್ಥೆಯ ಶಾಖೆಗಳು ಈಗ ಸಂಸ್ಥಾನದಲ್ಲೆಲ್ಲಾ ಇವೆ. ಈ ಸಂಸ್ಥೆಯ ಕೆಲಸಗಳನ್ನು ಕಾಲಸ್ಥಿತಿಗೆ ಹೊಂದಿಸಿಕೊಂಡು ಕೆಲಸ ಮಾಡುತ್ತಿರಲಾಗಿದೆ. 2,500 ಕ್ಕಿಂತ ಹೆಚ್ಚು ಮಂದಿ ಪ್ರಮುಖ ಖಾಸಗಿ ಮಹನೀಯರು ಈ ಸಂಸ್ಥೆಯ ಕೆಲಸಗಳಲ್ಲಿ ಆಸಕ್ತಿವಹಿಸಿ ಸೇವೆ ಸಲ್ಲಿಸುತ್ತಿದ್ದಾರೆ.

ಬೆಂಗಳೂರಿನಲ್ಲಿ 1943 ನೆಯ ಇಸವಿ ಜೂನ್ ತಿಂಗಳಲ್ಲಿ ನಡೆದ "ವಾರ್ ಸರ್ವಿಸಸ್ ಎಗ್ಜಿಬಿಷನ್" ಪ್ರದರ್ಶನದ ಪ್ರಾರಂಭೋತ್ಸವವನ್ನು ಶ್ರೀಮನ್ಮಹಾರಾಜರವರು ನೆರವೇರಿಸಿದರು. ಈ ಪ್ರದರ್ಶನವನ್ನೇರ್ಪಡಿಸಿದವರು ಯುದ್ಧೋದ್ಯಮಕ್ಕೆ ಮಾಡಿದ ದೊಡ್ಡ ಸೇವೆಯನ್ನು ಮಹಾಸ್ವಾಮಿಯವರು ಪ್ರಶಂಸಿಸಿದರು. ಸೈನ್ಯಶಾಖೆಯವರು ಈ ಪ್ರದರ್ಶನದಲ್ಲಿ ತೋರಿಸಿದ ಯುದ್ಧಸಾಮಗ್ರಿ ಸರಂಜಾಮುಗಳನ್ನು ನೋಡುವುದಕ್ಕೆ ಪ್ರದರ್ಶನ ನಡೆದ ಎಂಟು ದಿನಗಳಲ್ಲಿ 500,000 ಕ್ಕಿಂತ ಹೆಚ್ಚು ಮಂದಿ ಪ್ರೇಕ್ಷಕರು ಬಂದಿದ್ದರು. ಘನಹೊಂದಿದ ವೈಸರಾಯಿಯವರು 1943 ನೆಯ ಇಸವಿ ಆಗಸ್ಟ್ ತಿಂಗಳಿನಲ್ಲಿ ಮೈಸೂರು ನಗರಕ್ಕೆ ದಯಮಾಡಿಸಿದ್ದರು. ಆಗ ಅವರು ಎಗ್ಜಿಬಿಷನ್ ಕಟ್ಟಡದಲ್ಲಿ ನಡೆಸಿದ "ಯುದ್ಧಕ್ಕೆ ಸಂಬಂಧಪಟ್ಟ ಕೈಗಾರಿಕೆಗಳ ಪ್ರದರ್ಶನ" ವನ್ನು ಕಂಡು ಸಂತೋಷಿಸಿದರು. ದಿವಾನರವರೂ, ಕೈಗಾರಿಕೆಗಳ ಮತ್ತು ಸರಬರಾಯಿಯ ಇಲಾಖೆಯ ಸಚಿವರೂ ವೈಸರಾಯಿಯವರಿಗೆ ಪ್ರದರ್ಶನವನ್ನೆಲ್ಲಾ ತೋರಿಸಿದರು. ಮತ್ತು ನಮ್ಮ ಸಂಸ್ಥಾನದಿಂದ ಯುದ್ಧಕ್ಕೆ ಒದಗಿಸುವ ವಸ್ತುಗಳ ಮಾದರಿಗಳನ್ನು ಅವರಿಗೆ ತೋರಿಸಿದರು. ಆ ಪ್ರದರ್ಶನದಲ್ಲಿ ತಾವು ಕಂಡ ಒಟ್ಟೆಯ ಲೋಹದ, ಮತ್ತು ರಸಾಯನಿಕ ಕೈಗಾರಿಕೆ ವಸ್ತುಗಳನ್ನೆಲ್ಲಾ ಕಂಡು ಬಹಳ ಮೆಚ್ಚುಗೆಯಾಗಿ ವೈಸ್ರಾಯರು "ನೀವು ನಿಮ್ಮ ಸಂಸ್ಥಾನದಲ್ಲಿ ಬಹಳ ಸ್ವಾವಲಂಬಿಗಳಾಗಿ ಇಷ್ಟು ಕೈಗಾರಿಕೆಗಳನ್ನು ನಡೆಯಿಸುವುದು ಶ್ಲಾಘನೀಯ" ಎಂದರು.

ಬೆಂಗಳೂರಿನ ಕಬ್ಬನ್ ಪಾರ್ಕಿನಲ್ಲಿ 1944 ನೆಯ ಇಸವಿ ಏಪ್ರಿಲ್ 25 ನೆಯ ತಾರೀಖಿನ ದಿನ ಮೈಸೂರು ಸಂಸ್ಥಾನದ ದಿವಾನರವರು ಭಾರತೀಯ ವಿಮಾನ ದಳದವರ

ಸೌಕರ್ಯಕ್ಕಾಗಿ "ವೆಲ್‌ಫೇರ್ ಕ್ಲಬ್" ಎಂಬ ಹೆಸರಿನ ಮಂದಿರದ ಪ್ರಾರಂಭೋತ್ಸವವನ್ನು ನೆರವೇರಿಸಿದಾಗ ಒಂದು ನೂತನ ವಿಧದಲ್ಲಿ ಯುದ್ಧೋದ್ಯಮಕ್ಕೆ ನೆರವಾದಂತಾಯಿತು. ಪ್ರಾಯಶಃ ಇಂಥ "ಕ್ಲಬ್" ಭರತಖಂಡದಲ್ಲಿ ಸ್ಥಾಪಿತವಾದುದು ಇದೇ ಮೊದಲು. ಈ "ಕ್ಲಬ್ಬು" ಸ್ಥಾಪಿತವಾದುದಕ್ಕೆ ಶ್ರೀಮನ್ಮಹಾರಾಜರವರ ಆಪ್ತ ಕಾರ್ಯದರ್ಶಿಗಳಾದ ಅಮಾತ್ಯ ಶಿರೋಮಣಿ ಟಿ ತಂಬೂಚೆಟ್ಟಿ, ಓ. ಬಿ. ಇ., ಅವರ ಧರ್ಮಪತ್ನಿ ಮಿಸೆಸ್. ತಂಬೂಚೆಟ್ಟಿಯವರ ಶ್ರದ್ಧೋತ್ಸಾಹಗಳೇ ಮುಖ್ಯ ಕಾರಣ ಇವರಿಗೆ ಯುದ್ಧೋದ್ಯಮಗಳಿಗೆ ಸಂಬಂಧಪಟ್ಟ ವಿಚಾರಗಳಲ್ಲಿ ಬಹಳ ಆಸಕ್ತಿ. ದಿನವೂ ಬಹಳ ಗಂಟೆಗಳ ಕಾಲ ಕಷ್ಟಕರವಾದ ಕೆಲಸಮಾಡುವ ಸೈನಿಕರಿಗೆ ಅನುಕೂಲಗಳನ್ನೂ, ಸಂತೋಷಗಳನ್ನೂ ಒದಗಿಸುವ ಒಂದು ಫಲಾಹಾರ ಮಂದಿರ, "ಲೌಂಜ್", ಆಟಗಳನ್ನಾಡುವ ಕೋಣೆ, ಒಂದು ಪುಸ್ತಕ ಭಂಡಾರ ಮತ್ತು ಇಳಿದುಕೊಳ್ಳುವುದಕ್ಕೆ ಕೋಣೆಗಳು ಇವೆಲ್ಲಾ ಆ 'ಕ್ಲಬ್ಬಿ'ನಲ್ಲಿವೆ ಇದರ ವಿಷಯವಾಗಿ ಶ್ರೀಮನ್ಮಹಾರಾಜರವರು ಬಹಳ ಆಸಕ್ತಿಯನ್ನು ಪ್ರದರ್ಶಿಸಿ 2000 ರೂಪಾಯಿಗಳ ಧನಸಹಾಯ ಮಾಡಿದರು. ಇತ್ತೀಚಿಗೆ ತಾವು ಅಪ್ಪಣೆಕೊಡಿಸಿದ ಭಾಷಣವೊಂದರಲ್ಲಿ ಮಹಾಸ್ವಾಮಿಯವರು ಈ 'ಕ್ಲಬ್ಬಿ'ನ ವಿಚಾರವಾಗಿ ಹೀಗೆ ಹೇಳಿದ್ದಾರೆ:—

'ಸೈನಿಕರು ಮನೆಮಾರುಗಳನ್ನೂ ಸ್ನೇಹಿತರನ್ನೂ ಬಿಟ್ಟು ಬಂದು ಬಹು ದಿನಗಳಾಗಿರುತ್ತದೆ ಆದುದರಿಂದ ಅವರಿಗೆ ಆದಷ್ಟು ಬೇಜಾರು ಕಡಿಮೆಯಾಗುವಂತೆ ಏರ್ಪಾಟುಮಾಡುವುದು ಪ್ರತಿಯೊಬ್ಬರಿಗೂ ಸೇರಿದ ಕರ್ತವ್ಯ ಹೀಗಿರುವುದರಿಂದ ಮೊನ್ನೆ ಪ್ರಾರಂಭಿಸಿದ 'ಕ್ಯಾಂಟೀನ್" ಬಹಳ ಸಹಕಾರಿಯಾದುದು ಅವನ್ನು ಏರ್ಪಡಿಸಲು ಕೆಲಸ ಮಾಡಿದವರಿಗೆ ಧನ್ಯವಾದಗಳು' 1944 ನೆಯ ಇಸವಿ ಜೂನ್ 19 ನೆಯ ತಾರೀಖಿನ ದಿನ ಬೆಂಗಳೂರಿನ ಕಬ್ಬನ್‌ಪಾರ್ಕಿನಲ್ಲಿರುವ "ಶ್ರೀ ಜಯಚಾಮರಾಜೇಂದ್ರ ವಿಕ್ಟರಿಹಾಲ್" ಎಂಬ ವಿಜಯ ಮಂದಿರದ ಶಂಕುಸ್ಥಾಪನೆಯನ್ನು ಮಹಾಸ್ವಾಮಿಯವರು ತಮ್ಮ ಅಮೃತ ಹಸ್ತದಿಂದ ನೆರವೇರಿಸಿದರು ಸದ್ಯಕ್ಕೆ ಈ ಕಟ್ಟಡದಲ್ಲಿ ಒಂದು ಕ್ಯಾಂಟೀನನ್ನೂ ಒಂದು ವಿಹಾರಮಂದಿರವನ್ನೂ ಏರ್ಪಡಿಸಲಾಗುವುದು ಸಂಸ್ಥಾನದ ಮುನ್ನಡೆಯನ್ನೂ, ಯುದ್ಧೋದ್ಯಮ ಇಲ್ಲಿ ಮುಂದುವರಿದಿರುವುವನ್ನೂ ಪ್ರಶಂಸಿಸಿ ಇತ್ತೀಚಿಗೆ ಎಚ್. ಆರ್. ಎಚ್. ಡ್ಯೂಕ್ ಆಫ್ ಗ್ಲಾಸ್ಟರ್‌ರವರು ಹೇಳಿರುವ ಮೆಚ್ಚಿಕೆಯ ಮಾತುಗಳು ಮನನೀಯವಾಗಿವೆ —

"ಪ್ರಖ್ಯಾತವೂ, ಸುಂದರವೂ ಆದ ತಮ್ಮ ಸಂಸ್ಥಾನದ ವಿಚಾರವಾಗಿಯೂ, ಅದರ ಪ್ರಾಕೃತಿಕ ಸಂಪತ್ತು, ಪ್ರಗತಿಪರ ಮನೋಭಾವ, ಅದರ ವಿದ್ಯಾಭ್ಯಾಸ, ನಗರ ನಿರ್ಮಾಣಕಲೆ, ನೀರಾವರಿ, ಕೈಗಾರಿಕೆ ಮತ್ತು ಜಂಗಲುಗಳ ಅಭಿವೃದ್ಧಿ—ಇವೆಲ್ಲದರ ವಿಚಾರವಾಗಿಯೂ ಬಹಳ ಸ್ವಾರಸ್ಯವಾದ ಸಂಗತಿಗಳನ್ನು ಕೇಳಿದ್ದೆನು. ಈಗಲಾದರೋ ಮೈಸೂರಿನ ಯುದ್ಧೋದ್ಯಮವೂ ಸಹ ಶ್ಲಾಘನೀಯವಾಗಿದೆಯೆಂದು ತಿಳಿದಂತಾಯಿತು ಸಂಸ್ಥಾನದ ಅಶ್ವಸೈನ್ಯ, ಪದಾತಿ ಸೈನ್ಯಗಳವರು ಸಾಲುಗಟ್ಟಿ ಹೋಗುವುದನ್ನೂ, ಕವಾತು ಮಾಡುವುದನ್ನೂ ನೋಡಿದೆ. ಈ ಸೈನ್ಯಗಳು ಘನವಾಗಿವೆ, ಮತ್ತು ವಿದೇಶಗಳಿಗೆ ಹೋಗಿ ಯುದ್ಧಮಾಡಿ, ಕೀರ್ತಿ ಪಡೆದ ಇತರ ಭಾರತೀಯ ಪಡೆಗಳಿಗೆ ಸರಿಸಾಟಿಯಾಗಿವೆ ಯುದ್ಧೋದ್ಯಮಕ್ಕಾಗಿ ಮಹಾಸ್ವಾಮಿಯವರೂ, ಅವರ ಸರ್ಕಾರದವರೂ ಅಮಿತ ಸಹಾಯ ಮಾಡಿರುವುದು ಅಭಿನಂದನೀಯ ಈ ಸಹಾಯದಲ್ಲಿ ವಸ್ತು ಸಾಮಗ್ರಿಗಳ ಸಹಾಯವೊಂದೇ ಅಲ್ಲದೆ ಧನಸಹಾಯವೂ ಸೇರಿದೆ. ಮೈಸೂರು ಸಂಸ್ಥಾನವು ನೌಕಾಸೈನ್ಯಕ್ಕೆ ಒಂದು ಹಡಗನ್ನೂ, ವಿಮಾನ ಸೈನ್ಯಕ್ಕೆ ಒಂದು ವಿಮಾನ ಪಡೆಯನ್ನೂ ಒದಗಿಸಿ ಸಹಾಯ ಮಾಡಿದೆ ವೀರಭೂಮಿಯಾದ ಮೈಸೂರೂ, ಅದರ ರಾಜರೂ ಈ ರೀತಿ ವಿಷಮಸನ್ನಿವೇಶದಲ್ಲಿ ಸಹಾಯಕ್ಕೆ ಬರುವುದು ಅವರ ಚರಿತ್ರೆಗೆ ಸಹಜವೇ ಆಗಿದೆ ಭರತಖಂಡದ ರಾಜರುಗಳು ಈ ರೀತಿ ಸಹಾಯಮಾಡುತ್ತಿರುವುದರಿಂದ ನಮ್ಮ ಪಕ್ಷವು ಗೆದ್ದೇಗೆಲ್ಲುವುದರಲ್ಲಿ ಸಂದೇಹವಿಲ್ಲವೆಂಬುದು ಅತ್ಯಂತ ಉತ್ಸಾಹಜನಕವಾದ ವಿಷಯ"

ವೈ. ಇ. ೦.

ಹಣದ ಸ್ವರೂಪ

ಜನರು ಹಣ ಅಗ್ಗವಾಯಿತು, ಧಾನ್ಯ ದುಬಾರಿಯಾಗಿದೆ ಎಂದು ಹೇಳುವುದನ್ನು ನಾವು ನಿತ್ಯವೂ ಕೇಳುತ್ತಿದ್ದೇವೆ. ಹಣ ಅಗ್ಗ ಎಂದರೇನು? ಅದಕ್ಕೆ ಬೆಲೆಯುಂಟೆ? ಅದು ಅಗ್ಗವಾಗುವುದು, ತಗ್ಗಾಗುವುದು ಹೇಗೆ? ಎಂದು ಕೇಳಬಹುದು. ನಿಜ. ಹಣಕ್ಕೆ ಬೆಲೆ ಇದೆ. ದವಸ, ಬಟ್ಟೆ, ಉಪ್ಪು, ಸೀಮೆಯೆಣ್ಣೆ ಇವುಗಳಂತೆ ಇದರ ಬೆಲೆ ಏರುವುದು, ಇಳಿಯುವುದು ಹೇಗೆ ಎಂಬುದನ್ನು ಹೇಳುತ್ತೇನೆ.

ಹಣ ಎಂದರೆ ಒಂದು ಪದಾರ್ಥ. ಇದರಿಂದ ಉಳಿದ ಎಲ್ಲ ವಸ್ತುಗಳ ಬೆಲೆಯನ್ನು ಇಷ್ಟೇ ಎಂದು ಹೇಳುತ್ತೇವೆ ಅಂದರೆ ಇದು ಒಂದು ಬಗೆಯ ಅಳತೆಯ ಸಾಧನ, ಅಥವಾ ಪಂಡ ಎಂದು ಹೇಳಬಹುದು. ಬಟ್ಟೆ ಅಳೆಯುವ ಗಜಗಡ್ಡಿಯಂತೆ, ದವಸವನ್ನು ಅಳೆಯುವ ಸೇರು ಪಾವಿನಂತೆ, ಹಣವು ಉಳಿದೆಲ್ಲ ವಸ್ತುಗಳ ಬೆಲೆಯನ್ನು ಕಂಡುಹಿಡಿಯುವ ಮಧ್ಯಸ್ತಿಕೆಯ ಪದಾರ್ಥವಾಗಿದೆ.

ಇಂದು ಹಣವಿಲ್ಲದೆ ನಮ್ಮ ಜೀವನ ಸಾಗುವಂತಿಲ್ಲ. ಜೀವನಕ್ಕೆ ಬೇಕಾದ ಉಪ್ಪು, ಸೀಮೆಯೆಣ್ಣೆ, ಬಟ್ಟೆ, ಇತರ ಪದಾರ್ಥಗಳನ್ನು ಕೊಳ್ಳುವುದಕ್ಕೆ ಹಣ ಬಂಡಿ ಎತ್ತು ಕೊಳ್ಳುವುದಕ್ಕೆ ಹಣ. ಸಾಮಾನು ಸಾಗಿಸುವುದಕ್ಕೆ ಹಣ ದಾನಧರ್ಮ ಮಾಡುವುದಕ್ಕೆ ಹಣ ಸಾಲ, ಆಸ್ತಿ, ಲೆಕ್ಕಮಾಡುವುದಕ್ಕೆ ಹಣ ಸಾಗುವಳಿ ಮಾಡುವುದಕ್ಕೆ ಹಣ ಅಂತು ಇಂದಿನ ಜೀವನದಲ್ಲಿ ಹಣವಿಲ್ಲದಿದ್ದರೆ ಬೇರೆ ದಾರಿಯೇ ಇಲ್ಲ ಹಣವೇ ನಮ್ಮ ಜೀವನದ ಅಡಿಗಲ್ಲು

ಆದರೆ ಹಿಂದೆ ಹೀಗಿರಲಿಲ್ಲ. ಜನರು ರಾಗಿ ಕೊಟ್ಟು ಬಟ್ಟೆ ತೆಗೆದುಕೊಳ್ಳುತ್ತಿದ್ದರು ಭತ್ತ ಕೊಟ್ಟು ಸೀಮೆಯೆಣ್ಣೆ, ಉಪ್ಪು, ಮೆಣಸು, ಜೀರಿಗೆ ಮುಂತಾದುವನ್ನು ಪಡೆಯುತ್ತಿದ್ದರು. ತಮ್ಮ ತಮ್ಮಲ್ಲಿದ್ದ ಪದಾರ್ಥಗಳನ್ನು ಕೊಟ್ಟು ತಮಗೆ ಬೇಕಾದ ವಸ್ತುಗಳನ್ನು ಅದಲು ಬದಲು ಮಾಡಿಕೊಳ್ಳುತ್ತಿದ್ದರು. ನಾವು ನಾಗರಿಕರಾದಂತೆಲ್ಲಾ, ಈ ಕೆಲಸ ಕಷ್ಟವಾಗಿ ಕಂಡಿತು. ಆದುದರಿಂದ ಎಲ್ಲರಿಗೂ ಬೇಕಾದ, ಎಲ್ಲ ಪದಾರ್ಥಗಳನ್ನೂ ಒಂದರಿಂದಲೇ ಅಳೆಯಬಹುದಾದ, ಒಂದು ಪದಾರ್ಥವನ್ನು ಕಂಡುಹಿಡಿಯಬೇಕಾಯಿತು. ಇದೇ ಹಣ.

ಹಣ ಎಂದರೆ ಬರೀ ಬೆಳ್ಳಿ ಬಂಗಾರ ಎಂದು ತಿಳಿಯಬಾರದು ಯಾವುದರಿಂದ ಉಳಿದೆಲ್ಲ ಪದಾರ್ಥಗಳ ಬೆಲೆಯನ್ನು ಕಂಡುಹಿಡಿಯುತ್ತೇವೆಯೋ ಅದೇ ಹಣ ಬಿಲ್ಲು, ಕವಡೆ, ಮಣಿ, ಚರ್ಮ, ದವಸ—ಇವೆಲ್ಲ ಒಂದೊಂದು ಕಡೆ ಹಣದಂತೆ ಉಪಯೋಗದಲ್ಲಿದ್ದುವು. ಇವನ್ನು ಕೊಟ್ಟು ಜನರು ತಮತಮಗೆ ಬೇಕಾದುವನ್ನು ಕೊಳ್ಳುತ್ತಿದ್ದರು. ಆದರೆ, ಇವುಗಳ ಗುಣ, ಗಾತ್ರ, ಉಪಯೋಗ—ಮುಂತಾದುವುಗಳಲ್ಲಿ ತೊಂದರೆ ಉಂಟಾಯಿತು. ಇವುಗಳ ನಿವಾರಣೆಗಾಗಿ ಲೋಹವನ್ನು ಹಣವನ್ನಾಗಿ ಆರಿಸಲಾಯಿತು. ಅದರಲ್ಲೂ ಬೆಳ್ಳಿ ಬಂಗಾರ ಎಲ್ಲರಿಗೂ ಬೇಕಾಗಿ, ಎಲ್ಲೆಲ್ಲಿಯೂ ಅಗತ್ಯವಾಗಿದ್ದುದರಿಂದ, ಅದು ಹಣವಾಯಿತು. ಇವರಲ್ಲಿ ಜನರ ಮೋಹ, ಗೌರವ, ಬೆಲೆ, ಎಂದಿಗೂ ಕಡಿಮೆಯಾಗುವುದಿಲ್ಲವೆಂಬ ನಂಬಿಕೆ ಜನರಲ್ಲಿ ಹುಟ್ಟಿತು.

ಹಣದ ಯೋಗ್ಯತೆ ಒಂದೇ ರೀತಿ ಇರುವುದಕ್ಕಾಗಿ, ಅದರ ತೂಕ, ಬಣ್ಣ, ಗಾತ್ರ, ಬೆಲೆ ಎಲ್ಲವೂ ನಿಗದಿಯಾದುವು. ಜನರು ಅವನ್ನು ಬದಲಾಯಿಸದೇ ಇರದಂತೆ, ಅವನ್ನು ಮುದ್ರೆ ಒತ್ತಿ, ನಾಣ್ಯವನ್ನಾಗಿ ಮಾಡಲಾಯಿತು. ಹೀಗೆ ನಾಣ್ಯಮಾಡುವುದಕ್ಕೆ ಒಂದು ಶಾಸನವನ್ನು ಸರ್ಕಾರದವರು ಮಾಡಿದ್ದಾರೆ. ಈ ನಿಯಮದಂತೆ ದೇಶದ ನಾಣ್ಯವು ಬೆಳ್ಳಿಯದೇ, ಚಿನ್ನದ್ದೇ ಅಥವಾ ಕಾಗದದ್ದೇ ಎಂಬುವನ್ನು ತೀರ್ಮಾನಿಸಲ್ಪಾಗಿದೆ. ಇವು ಮೂರೂ ಎಲ್ಲ ದೇಶಗಳಲ್ಲಿವೆ. ಇವುಗಳ ಪ್ರಮಾಣ, ಸಂಬಂಧ. ಎಲ್ಲವನ್ನೂ ನಾಣ್ಯಶಾಸನವು ತೀರ್ಮಾನಮಾಡಿದೆ.

ಒಂದೊಂದು ದೇಶದ ನಾಣ್ಯಕ್ಕೆ ಒಂದೊಂದು ಹೆಸರಿದೆ. ಫ್ರಾನ್ಸಿನಲ್ಲಿ ಫ್ರಾಂಕು, ಅಮೇರಿಕಾದಲ್ಲಿ ಡಾಲರ್, ರಷ್ಯಾದಲ್ಲಿ ರೂಬಲ್, ಚೀಣಾದಲ್ಲಿ ತೆಯಿಲು, ಜಪಾನಿನಲ್ಲಿ ಎನ್ನು, ಜರ್ಮನಿಯಲ್ಲಿ ಮಾರ್ಕು, ಇಂಗ್ಲೆಂಡಿನಲ್ಲಿ ಪೌಂಡು, ನಮ್ಮ ದೇಶದಲ್ಲಿ ರೂಪಾಯಿ—ಹೀಗೆ ಬೇರೆ ಬೇರೆ ಕಡೆಗಳಲ್ಲಿ ಬೇರೆ ಬೇರೆ ಹೆಸರಿನ ನಾಣ್ಯಗಳಿವೆ. ಒಂದು ದೇಶದ ನಾಣ್ಯ ಇನ್ನೊಂದು ದೇಶದಲ್ಲಿ ಚಲಾವಣೆಯಾಗುವುದಿಲ್ಲ.

—ಡಿ ಕೃಷ್ಣಯ್ಯಂಗಾರ್.

ವಿಚಿತ್ರ ಸೃಷ್ಟಿ

ಪರಂಗಿ ಸೀಮೆಯಲ್ಲಿ ಚಳಿಗಾಲದಲ್ಲಿ ವಿಪರೀತ ಚಳಿ. ನೀರೆಲ್ಲ ಗಡ್ಡೆಕಟ್ಟಿಕೊಂಡುಬಿಟ್ಟಿರುತ್ತದೆ. ನದಿಗಳು ಹೆಪ್ಪುಗಟ್ಟಿಕೊಂಡಿರುತ್ತವೆ. ಸಮುದ್ರ ಕೂಡ ಅಷ್ಟೆ ಮಂಜು ಬಂದು ಸುರಿಯುತ್ತದೆ!

ಇಂಥ ಕಾಲದಲ್ಲಿ ಮನುಷ್ಯನಿಗೆ ವಿಧಿಯಿಲ್ಲ, ಓಡಾಡಲೇಬೇಕು. ಆದರೆ ಪ್ರಾಣಿಗಳು ಹಾಗಲ್ಲ, ಹಾಯಾಗಿ ನಿದ್ದೆ ಮಾಡಿಬಿಡುತ್ತವೆ.

ಆ ದೇಶದಲ್ಲಿ ಒಂದು ಜಾತಿಯ ಕರಿಯ ಕರಡಿ ಉಂಟು. ಚಳಿಗಾಲದಲ್ಲಿ ಆ ಕರಡಿಗಳು ಮೂರೂವರೆ ನಾಲ್ಕು ತಿಂಗಳ ಕಾಲ ಒಂದೇ ಸಮನೆ ನಿದ್ದೆ ಮಾಡುತ್ತವೆ. ಅವಕ್ಕೆ ಎಚ್ಚರವೇ ಆಗುವುದಿಲ್ಲ.

ಹೆಣ್ಣುಕರಡಿಗಳು ಈ ರೀತಿ ಕುಂಭಕರ್ಣ ನಿದ್ರೆ ಮಾಡುತ್ತಿರುವಾಗಲೇ ಮರಿಗಳು ಹುಟ್ಟುತ್ತವೆ. ಹುಟ್ಟು ಬುದ್ಧಿಯಿಂದ ತಾಯ ಮೊಲೆಗಳಿರುವ ತಾವನ್ನು ಕಂಡುಹಿಡಿದುಕೊಂಡು ಆತಂಕವಿಲ್ಲದೆ ಹಾಲು ಕುಡಿಯುತ್ತಿರುತ್ತವೆ. ಮರಿಗಳು ತನ್ನ ಎದೆಗೆ ಅವಚಿಕೊಂಡು ಹಾಲನ್ನು ಕುಡಿಯುತ್ತಿದ್ದರೂ ತಾಯಿಗೆ ಅದರ ಅರಿವೇ ಇರುವುದಿಲ್ಲ.

ಚಳಿಗಾಲ ಕಳೆದು ತಾಯಿಯು ಎಳೆ ಬೇಸಿಗೆಯಲ್ಲಿ ಏಳುವ ವೇಳೆಗೆ ಮರಿಗಳಾಗಲೇ ಬಲಿತುಕೊಂಡು ಬಿಟ್ಟಿರುತ್ತವೆ. ತಾಯ ಬೆನ್ನಮೇಲೆ ಹತ್ತುವುದು, ದುಮುಕುವುದು, ಓಡಾಡುವುದು, ಉರುಳುವುದು ಮುಂತಾದುದನ್ನೆಲ್ಲ ಕಲಿತಿರುತ್ತವೆ. ಆದರೆ ಕಲಿಯುವುದಕ್ಕೆ ಇನ್ನೂ ಬೇಕಾದಷ್ಟಿರುತ್ತವೆ. ಅವುಗಳನ್ನು ತಾಯಿ ಕರಡಿ ಹೇಳಿಕೊಡುತ್ತದೆ.

ಈ ರೀತಿ ಪಾಠಕಲಿಸುವ ಕಾಲದಲ್ಲಿ ಒಂದೊಂದು ಸಲ ತಾಯಿಗೆ ತುಂಬ ಕೋಪಬಂದು ಮಕ್ಕಳನ್ನು ತನ್ನ ಪಂಜದಿಂದ ಬಲವಾಗಿ ಚುಚ್ಚುವದಂತೆ! ಆ ಹೊಡೆತಕ್ಕೆ ಮರಿಗಳು ಹತ್ತಾರು ಅಡಿಗಳ ದೂರ ಉರುಳಿಕೊಂಡು ಹೋಗುವುವಂತೆ! ಆದರೂ ಮರಿಗಳು ಮೊಂಡತನ ಮಾಡದೆ ಚುರುಕಿನಿಂದ ಕಲಿಯುತ್ತವಂತೆ!

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು. ವೀರಶೈವಮತದಲ್ಲಿ ಸಧ್ಯಃ ದೊರೆಯುತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು. ಈ ಗ್ರಂಥವು ಈಗ್ಗೆ ಸುಮಾರು ೩ಸಾವಿರ ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು. ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭವಾಗಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿದ್ದಾರೆ. ಅವರ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥ ಶಾಸ್ತ್ರಿಗಳವ**ರು ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ವವು ವಾಚಕರಿಗೆ ವೇದ್ಯವಾಗುವುದು. ವಾಚಕರ ಅನುಕೂಲಕ್ಕಾಗಿ ಅನುಕ್ರಮವಾಗಿ ಪ್ರತಿಪಾದಿಸುವ ವಿಷಯಾನುಕ್ರಮಣಿಕೆಯೂ ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೩೩೩ ಪುಟಗಳಿಂದ ಕೂಡಿದ್ದು, ಸಮಾಪ್ತಿಯ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಮಾಪ್ತಿ ಸ್ಥಾನವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲಿಂಗೋದ್ಭವ ಮನೋಹರವಾದಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಪುಸ್ತಕದ ಸೌಂದರ್ಯವು ವರ್ಣನಾತೀತವಾಗಿದೆ. ವೀರಶೈವರು ತಮ್ಮಲ್ಲಿರತಕ್ಕ ಈ ಅಮೂಲ್ಯಗ್ರಂಥವನ್ನು ಕೊಂಡುಕೊಂಡು ಅವಶ್ಯವಾಗಿ ಓದಬೇಕು. **ಬೆಲೆ ೨ ರೂಪಾಯಿ.**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಬತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ X ೧೪ ಬೆಲೆ ೧ಕ್ಕೆ	೨—೮—೦
ಶ್ರೀರೇಣುಕಾಚಾರ್ಯರ ಲಿಂಗೋದ್ಭವದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದ) ಸೈಜು ೧೪ X ೧೦ ಬೆಲೆ	೦—೮—೦
ಸದ್ಯಃ ಪಟ್ಟಾಭಿಷೇಕಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ X ೧೦ ಬೆಲೆ	೦—೬—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ X ೧೦ ಬೆಲೆ ೧ಕ್ಕೆ	೦—೬—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೬
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾ ಸ್ವಾಮಿಗಳವರ ಫೋಟೋ	೦—೧—೬
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—೬
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೨—೦
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ತೆಪ್ಪದ ಸುಂದರ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀ ರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
ಶಿಂಗಳ ಮಠ ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೬

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೭ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶೆ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೭ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೭ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ವಪದಗಳು (೭ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಪಂಚಾಚಾರ್ಯಪ್ರಕಾಶ	೨ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ-ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ.
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದ ೨ನೆಯ ಆವೃತ್ತಿ)	೧। ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧॥ ರೂ.
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧॥ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೨ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ.
ಶಿವಾಗಮಸಂಗ್ರಹಃ (ಚಂದ್ರಜ್ಞಾನ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ.
A brief life-sketch of Pandit Sri Kashinatha Shastriji (*English*)	**4 As**
The Philosophical Aspect of Virasaivism (*English*)	**8 As.**
Speeches by Pandit Shri Kashinatha Shastriji (*English*)	**12 As**
लिंगधारणचन्द्रिका (संस्कृत)	१ रु.
वीरशैवरत्न (मराठी)	१ रु
महानारायणोपनिषत् (वीरशैवभाष्य-संस्कृत)	१ रु.
सिद्धांतशिखामणि (मूल)	८ आ.
नंदिकेश्वरकारिका (संस्कृत)	२ आ.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No M. 2266 ॥ ಶ್ರೀಜಗದ್ಗುರು ಪಂಚಾಚಾರ್ಯರ್ ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀ ಲೋಕಮಂ ॥

ಸ್ಥಳದವರಿಗೆ ೨ ರೂ ೪ ಆಣೆ
ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೧೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೭ನೇ ಡಿಸೆಂಬರ್ ೧೯೪೫ [ಸಂಚಿಕೆ ೩೧

। ಶ್ರೀಜಗದ್ಗುರು ಪಂಚಾಚಾರ್ಯೇಭ್ಯೋ ನಮಃ ।

ವೈರಾಗ್ಯದರ್ಪಣ

ಲೇ—ವೇ॥ ಮಲ್ಲಿಕಾರ್ಜುನಶಾಸ್ತ್ರಿ, ಚಾಮರಾಜನಗರದ ಮುಡೇಸಂರ)

(ಹಿಂದಿನಿಂದ ಮುಂದುವರಿದುದು)

ಮನವೆಂಬ ಮುಕ್ತಾಫಲಕ್ಕೀಗ ಛಿದ್ರವಾದ್ದರಿಂದ ಶಮಾದಿ ಗುಣಗಳಂ ಸೇರಿಸುವುದಕ್ಕದು ಯೋಗ್ಯವಾಗಿರುವುದು ಮನವೆಂಬ ಮಂಜಿನ ಮಳೆಯು ವಿವೇಕಸೂರ್ಯನಿಂದೀಗ ಶುಷ್ಕವಾದ್ದರಿಂದ ವಿಚಾರಮಾರ್ಗದೊಳಾತ್ಮನೆಂಬ ಮಣಿಯು ಪಡೆದ ನಾನು ಸಮಸ್ತವಾದ ಆಶೆಗಳಂ ಬಿಟ್ಟು ಶರತ್ಕಾಲದ ಮೇಘದಂತೆ ನಿರ್ಮಲನಾಗಿ ಸುಖದಿಂ ನಿಲ್ಲುವೆನು ಎಲೈ ವಿವೇಕವೇ ನಿನಗೆ ನಮಸ್ಕಾರವಾಗಲಿ ಮನವೆಂಬ ಪ್ರಬಲತರವಾದ ಶತ್ರುವಂ ಜಯಿಸಿ ನಾನೀಗ ವನು ಇದು ನನ್ನದೆಂಬ ಬುದ್ಧಿಯನ್ನೀಗ ಬಿಟ್ಟು ಶಾಂತಿಯನ್ನು ಪೊಂದುವೆನು ಎಂದು ಜನಕರಾಯನು ಯೋಚಿಸುತ್ತಿರುವಲ್ಲಿ ದ್ವಾರಪಾಲನು ಒಂದು ವಿಜ್ಞಾಪಿಸಿದನದೆಂತೆನೆ—ಭುಜಾಗ್ರದೋಳ್ ವಿಶ್ರಮಿಸಿಕೊಳ್ಳುವ ಭೂಮಿಯುಳ್ಳ ಮಹಾಪ್ರಭುವೇ ಕುಸುಮ ಕರ್ಪೂರ ಕುಂಕುಮೋದಕಗಳ ಕುಂಭಗಳಂ ಪಿಡಿದಿರುವ ಕುಂಭಸ್ತನಿಯರು ಸ್ನಾನಭೂಮಿಯಲ್ಲಿ ಸಿದ್ಧರಾಗಿರುವರು ಕಮಲಕಲ್ಹಾರಪರಿಮಳದಿಂ ಬಂದ ತುಂಬಿಗಳಿಂ ತುಂಬಿರುವ ಸರೋವರದ ದಡಗಳು ಸ್ನಾನಕಾಲಕ್ಕೆ ಒರತಕ್ಕ ಅಧಿಕಾರಿಗಳ ಛತ್ರಚಾಮರವಾಹನಗಳಿಂ ತುಂಬಿರುವವು ದೇವತಾಗೃಹವು ಗಂಧಪುಷ್ಪನೈವೇದ್ಯಾದಿ ಪದಾರ್ಥಗಳಿಂ ಪೂರ್ಣವಾದ ಪಾತ್ರೆಗಳಿಂ ಸಾಂದ್ರವಾಗಿರುವುದು ನಿತ್ಯನೈಮಿತ್ತಿಕದಾನಪಾತ್ರರಾದ ಭೂಸುರರು ಪವಿತ್ರಪಾಣಿಗಳಾಗಿ ಸ್ವಾಮಿಯ ಆಗಮನವನ್ನೇ ನಿರೀಕ್ಷಿಸುತ್ತಿರುವರು ಸರಸನೀತಳವಾದ ಭೋಜನಭೂಮಿಗಳು ಚಾಮರಧಾರಿಗಳಾದ ನಿತಂಬಿನಿಯರಿಂದಾವರಿಸಲ್ಪಟ್ಟಿರುವವು ಮಹಾತ್ಮರಾದವರು ಕಾಲಪ್ರಾಪ್ತವಾದ ಕರ್ಮವನ್ನತಿಕ್ರಮಿಸಲಾರರಾದ್ದರಿಂದ ಮಧ್ಯಾಹ್ನೋಚಿತವಾದ ರಾಜಾಚಾರಗಳಂ ನಡೆಯಿಸತಕ್ಕದ್ದು ಸ್ವಾಮಿಗೆ ಧರ್ಮವಾಗಿರುವುದು ಎಂದು ದ್ವಾರಪಾಲನು ವಿಜ್ಞಾಪನೆಯಂ ಮಾಡುತ್ತಿದ್ದಾಗ್ಯೂ ಆ ರಾಜೇಂದ್ರನು ಸಂಸಾರರೀತಿಯನ್ನೇ ಚಿಂತಿಸುತ್ತಿದ್ದನು ಅದೆಂತೆನೆ—ಸುಖಸ್ಥಿತಿಯೆನಿಸುವ ಈ ನನ್ನ ರಾಜ್ಯವಸ್ತುಮಾತ್ರದ್ದು ಕ್ಷಣಭಂಗುರುವಾದ ಈ ರಾಜ್ಯದಿಂದನಗೆ ಪ್ರಯೋಜನವೇನು ? ನನಗೆ ಅಸದ್ರೂಪವಾದ ಕರ್ಮಗಳಂ ಸಾಕಾಗಿರುವುದು ಮಾಯಾವಿಲಾಸರೂಪವಾದೀ ಭೋಗಗಳೆಲ್ಲವನ್ನೂ ಬಿಟ್ಟು ಅಲೆಯಡಗಿದ ಸಮುದ್ರದಂತೆ ಏಕಾಂತದಲ್ಲೀ ಇರುವೆನು ಎಲೈ ಚಿತ್ತವೇ ಜರಾಮರಣ ಜನ್ಮದುಃಖಗಳ ಶಾಂತಿಗೋಸುಗ ಭೋಗ ಸುಖ ಗ್ರಹಣ ಚಾತುರ್ಯವಂ ಸಾಕುಮಾಡು ಯಾವ ದಶೆಗಳಲ್ಲಿ ನೀನು ಸುಖವನ್ನೆಣಿಸುತ್ತೀಯೋ ಅವುಗಳಲ್ಲೇ ನಿನಗೆ ದುಃಖವುಂಟಾಗುವುದು ಮರಳಿ ಮರಳಿ ನಿನ್ನಾವೃತ್ತಿ ಪ್ರವರ್ತಿಸಿದರೂ ನಿನಗೆ ತೃಪ್ತಿಯಾಗಲಿಲ್ಲ ಆದ್ದರಿಂದೀ ಭೋಗಚಿಂತೆಯಂ ತ್ಯಜಿಸಿ ಯಾತರಿಂ ಅಖಂಡತೃಪ್ತಿಯಾಗುವುದೋ ಅದಂ ಭಜಿಸೆಂದು ಅಂತರಂಗದಲ್ಲೇ ನುಡಿಯುತ್ತಾ ಮೌನವಂ ವಹಿಸಿ ಚಿತ್ರಲಿಖಿತ ಪ್ರತಿಮೆಯಂತಿದ್ದನು ಸಮಯಾಸಮಯಗಳಂ ತಿಳಿದ ಆ ದ್ವಾರಪಾಲನು ಆ ರೀತಿಯಂ ನೋಡಿ ಭಯ ಗೌರವಗಳಿಂ ನಿಯಂತ್ರಿತನಾಗಿ ಮರುಮಾತಾಡದೆ ಸುಮ್ಮನಿದ್ದನು ಆ ಪರಿಯಿಂ ಒಂದು ಕ್ಷಣವಿದ್ದ ಆ ರಾಜನು ಕರ್ಮಾಸಕ್ತಿಯಿಂದಾಗಲೀ ಕರ್ತೃದಿಂದಾಗಲೀ ಆಗತಕ್ಕದ್ದೇನು ? ಪುಟ್ಟಿದ್ದೆಲ್ಲವೂ ನಶ್ವರನಾಗಿಯೇ ಇರುವದು ಕರ್ಮದಿಂದಲೂ ಕರ್ಮತ್ಯಾಗದಿಂದಲೂ ಯಾವದು ಪ್ರಾಪ್ತವಾಗುವುದೋ ಅದು ಅಸತ್ಯವೆನಿಸುವುದು ಕ್ರಿಯೆಯೆಂಬುದು ದೇಹದಲ್ಲಿ ಕಾಣುತ್ತದಲ್ಲದೆ ಆತ್ಮನಲ್ಲಿ ಕಾಣುವುದಿಲ್ಲ ಆತ್ಮನು ಸ್ವಭಾವತ ಪ್ರೇರಕನಾದಾಗ್ಯೂ ಅಭಿಮಾನದಿಂದಲೇ ದುಃಖಪಡುತ್ತಿರುವನು ಆ ದೋಷವಂ ಬಿಟ್ಟು ಸಮಭಾವದಿಂದ ಶುದ್ಧನಾಗಿರುವ ಆತ್ಮನಿಗೆ ಕರ್ಮ ನಡೆದದ್ದರಿಂದಲೂ ಇಲ್ಲದ್ದರಿಂದಲೂ ಹಾನಿ ಇಲ್ಲದಿರುವದು ಕರ್ಮಸಂಬಂಧಕ್ಕೆ ಇಚ್ಛೆಯೇ ಕಾರಣವಾದ್ದರಿಂದ ನಿಷ್ಕಾಮನು ಕರ್ಮಾಸಕ್ತನಿಗೆ ಅವರ ಸಂಬಂಧವಾಗಲಾರದು ಒಂದದ್ದನ್ನು ಉಪೇಕ್ಷಿಸದ ಬಾರದ್ದನ್ನಪೇಕ್ಷಿಸದ ಸ್ವಸ್ವರೂಪದಲ್ಲಿ ನಿಂತಿರುವ ನನಗೆ ಯಾವದು ಇರುವುದೋ ಅದೇ ಇರಲಿ ಸ್ವತಃ ಪರಿಪೂರ್ಣನಾದ್ದರಿಂದ ನಿರಪೇಕ್ಷನಾದ ಆತ್ಮನಿಗೆ ಗ್ರಾಹ್ಯಾಗ್ರಾಹ್ಯಗಳಿಲ್ಲದಿದ್ದಾಗ್ಯೂ ಪ್ರಾಜ್ಞರು ಕರ್ಮವಂ ಬಿಡಲಾರರಾದ್ದರಿಂ ಪ್ರಕೃತೋಚಿತವಾದ ಕರ್ಮವಂ ಮಾಡುವೆನು ಮನವು ನಿಷ್ಕಾಮವಾಗಿರುವಲ್ಲಿ ಶರೀರಚಲನೆಮಾತ್ರದಿಂದೇನಾದೀತು ? ಕರ್ತೃವೆಂತಲೂ ಭೋಕ್ತೃವೆಂತಲೂ ಅಭಿಮಾನಿಸುವ ಮನವು ಶಾಂತವಾಗಿರುವಲ್ಲಿ ಕರ್ಮದಿಂದುಂಟಾದ ಫಲವು ಸಂಭವಿಸಲಾರದು ಕರ್ಮಗಳಲ್ಲಿ ಪುರುಷನಿಗೆ ಹ್ಯಾಗೆ ನಿಶ್ಚಯವಿರುವದೋ ಹಾಗೆ ಕರ್ಮಾನುಬಂಧ ಮೊದಲಾದದ್ದಾಗುವುದು ಪುರುಷನು ತನ್ನ ನಿಶ್ಚಯಾನುಸಾರವಾಗಿಯೇ ಅದನ್ನನುಭವಿಸುವನು ಈಗ ನನ್ನ ಬುದ್ಧಿಯು ಕರ್ತೃತ್ವ ಭೋಕ್ತೃತ್ವ ಮೊದಲಾದ ಜಾಡ್ಯಗಳಿಲ್ಲದ ಪರಮಪದದೋಳ್ ನಿಂದಿರುವುದರಿಂದ ಸೂರ್ಯನಂತೆ ಸಾಕ್ಷಿಭಾವದಿಂದಲೇ ನಾನು ಕರ್ಮಗಳಂ ನಡೆಸುವೆನೆಂದು ನಿಶ್ಚಯಿಸಿ ಕುಳಿತಿದ್ದ ಸ್ಥಳದಿಂದೆದ್ದು ಇಷ್ಟಾನಿಷ್ಟವಾಸನೆಗಳಿಲ್ಲದೆ ಪ್ರಕೃತೋಚಿತವಾದ ಕರ್ಮಗಳಂ ಮಾಡಿದನು ಹೀಗೆ ದಿನಚರಿವ್ಯಾಪಾರಗಳನ್ನೆರವೇರಿಸಿದ ಆ ಮಹಾನುಭಾವನು ಆ ವಿಚಾರದಿಂದಲೇ ರಾತ್ರಿಯಂ ಕಳೆದು ಬೆಳಗಿನ ಜಾವದೊಳ್ಮನವಂ ಬೋಧಿಸಿದನದೆಂತೆನೆ—ಎಲೈ ಮನವೇ ಇಷ್ಟವೆಂತಲೂ, ಅನಿಷ್ಟವೆಂತಲೂ, ಸುಖವೆಂತಲೂ, ದುಃಖವೆಂತಲೂ, ಒಳ್ಳೆಯದೆಂತಲೂ, ಕೆಟ್ಟದ್ದೆಂತಲೂ ಭೇದವಂ ಕಲ್ಪಿಸಿಕೊಂಡು ಹ್ಯಾಗೆ ಹ್ಯಾಗೆ ನೀನು ಸಂಕಲ್ಪಿಸುವೆಯೋ ಹಾಗೆ ಹಾಗೆ ಸಂಸಾರವುಂಟಾಗುವುದು ಅದರ ಚಿಂತೆಯಿಂ ಜಲದಿಂ ತರುಸಸ್ಯಾದಿಗಳಂತೆ ಆ ಸಂಸಾರವು ವೃದ್ಧಿಯಾಗುವುದು ಬಳಿಕ ಫಲರೂಪಗಳಾದ ಭೋಗಗಳಪೇಕ್ಷೆಯಿಂದ ನಿನಗೆ ವ್ಯಥೆಗಳುಂಟಾಗುವುವು ಆದ್ದರಿಂ ನೀನು ಶಾಂತವಾಗುವುದೇ ಉತ್ತಮವು ಇಲ್ಲವೆ ನಿನಗೆ ಸಂಸಾರವಲ್ಲೇ ಆಸಕ್ತಿಯಿದ್ದರೆ ಇದರಲ್ಲಿ ಯಾವಯಾವದು ನಿನಗೆ ಸುಖವೆಂದು ತೋರುವದೋ ವಿವೇಕದಿಂದದರ ಗುಣದೋಷಗಳಂ ವಿಚಾರಿಸಿ ಗುಣಗಳನ್ನೇ ಪರಿಗ್ರಹಿಸುವಲ್ಲಿ ಅವೇ ನಿನಗೆ ನಿಸ್ಸಾರವೆಂದು ನಿಶ್ಚಯವಾಗುವುದು ಸಮಸ್ತವೂ ಹೀಗೆ ಇರ ಪರಿ ದಿದರಲ್ಲಿ ನೀನು ದೃಷ್ಟಿಯನ್ನಿಡಬೇಡ ಅಥವಾ ಇದನ್ನಭಿಮಾನಿಸದ ಸ್ವೇಚ್ಛೆಯಿಂ ವಿಹರಿಸುತ್ತಿರು

ಪೂರ್ವದಲ್ಲಿಲ್ಲದ ಈ ದೃಶ್ಯವು ನಿನ್ನಿಂದಲೇ ಉಂಟಾಗಿ ನಿನ್ನನ್ನೇ ದುಃಖಪಡಿಸುವುದರಿಂದ ಇದರ ಗುಣಾವಗುಣಗಳಲ್ಲಿ ಚಿಂತಿಸದ ಇದು ಹಾಳಾಗುತ್ತಿದ್ದರೂ ನೋಡದಿರು ನನ್ನಿಂದುಂಟಾದದಂ ನಾನು ನೋಡದಿರುವದು ಹ್ಯಾಗೆಂದರೆ—ಪ್ರಿಯವೆಂದಭಿಮಾನಿಸದ ಅಪ್ರಿಯವೆಂದು ದ್ವೇಷಿಸದೆ ಸಾಕ್ಷಿಭಾವದಿಂ ನೋಡುತ್ತಿರು ಭ್ರಾಂತಿಸಿದ್ಧವಾದ ಈ ದೃಶ್ಯವು ವಸ್ತುತಃ ಇಲ್ಲದ್ದರಿಂದ ಇದಕ್ಕೂ ನಿನಗೂ ಸಂಬಂಧವೇನು ? ದೃಶ್ಯವು ಸತ್ತಾಗುವಲ್ಲಿ ನಾನು ಸತ್ತೂ ದೃಶ್ಯವಸತ್ತಾಗುವಲ್ಲಿ ನಾನು ಅಸತ್ತೂ ನನಗೆ ಸತ್ತಾಸಾಮ್ಯದಿಂ ಸಂಬಂಧವಾಗಿರುವುದೆಂಬ ಈ ಮಾತೆ ಅಪೂರ್ವವಾಗಿರುವುದ ನಾನು ಸತ್ತು ಈ ದೃಶ್ಯವಸತ್ತೆನ್ನುವೆಯಾದರೆ ಮರ್ತ್ಯಜೀವಸ್ವರೂಪರಾದ ನಿಮಿಗೆ ಸಂಬಂಧವೆಂತು ಯೋಗ್ಯವಾದೀತು, ನಾನು ಸತ್ತು ಈ ದೃಶ್ಯವೂ ಸತ್ತೆಂಬ ಪಕ್ಷದಲ್ಲಿ ದೃಶ್ಯವು ಸರ್ವದಾ ಇರತಕ್ಕದ್ದಾದ್ದರಿಂದ ಅದರ ನಾಶೋದಯಗಳಿಂ ನೀನು ದುಃಖಹರ್ಷಗಳಂ ಪಡೆಯುವುದಕ್ಕೆ ಕಾರಣವಿಲ್ಲ ಕೊಳ್ಳಿಯ ಚಕ್ರದಂತೀ ದೃಶ್ಯವು ತಾನೇ ಪ್ರಕಾಶಿಸುವುದಾದರೆ ಅದರ ಮೋಹದಿಂ ನೀನು ಮೂಢನಾಗಬೇಡ ಈ ದೃಶ್ಯಕ್ಕೆ ಪೂರ್ಣಭಾವವಂ ಕೊಡುವ ಶಕ್ತಿಯಿಲ್ಲದ್ದರಿಂದ ಇದಕ್ಕೆ ನೀನು ಚಪಲಪಡದ ಧೈರ್ಯವಂ ಪಡೆಯತಕ್ಕದ್ದು ಎಂದು ಚಿತ್ತವಂ ಬೋಧಿಸುತ ವಿಚಾರಪರನಾಗಿದ್ದ ಆ ಮಹಾತ್ಮನು ಲೋಕಾನುಸಾರವಾಗಿ ಸಕಲ ಕಾರ್ಯಗಳಂ ಮಾಡುತ್ತಿದ್ದನು ವಿವೇಕವಿಚಾರಾಭ್ಯಾಸಬಲದಿಂದವನ ಬುದ್ಧಿಯು ಕಾರ್ಯಗಳಲ್ಲಾಸಕ್ತವಾಗಿದ್ದರೂ ಆತ್ಮನಿಷ್ಠವಾದ್ದರಿಂದ ಸ್ಥಿರವಾಗಿದ್ದುದು ಸ್ಥೂಲಸೂಕ್ಷ್ಮಶರೀರಾಭಿಮಾನವಿಲ್ಲದ್ದರಿಂದವನ ಮನವು ಶೋಕಸಂತೋಷಕಾಲಗಳಲ್ಲಿ ಸಂಕೋಚವಿಕಾಸಗಳಿಲ್ಲದೆ ಸುಷುಪ್ತದಂತಿದ್ದುದು ಅದು ಮೊದಲಾಗಿ ಆ ರಾಜರ್ಷಿಯು ಇಷ್ಟವೆಂದಭಿಮಾನಿಸದೆ ಅನಿಷ್ಟವೆಂದು ತ್ಯಜಿಸದೆ ಸರ್ವವಿಷಯಗಳಲ್ಲೂ ಸಾಕ್ಷಿಭಾವದಿಂದಿದ್ದನು ಆಕಾಶದಲ್ಲಿ ಧೂಳಿಯಂತೆ ಅವನಲ್ಲಿ ರಾಗಾದಿಗಳ ಪ್ರಸಕ್ತಿಯಾಗಲಿಲ್ಲ. ಅದರಿಂ ಭೇದಜ್ಞಾನವಿಲ್ಲದ ಆ ಮಹಾತ್ಮನ ಹೃದಯದೋಳ್ ಅಖಂಡಪ್ರಕಾಶನಾದ ಜ್ಞಾನಸೂರ್ಯನು ಪ್ರಕಾಶಿಸಿದನು ಆಗ ಅವನಿಗೆ ಯಾವ ಪದಾರ್ಥವೂ ಗೋಚರವಾಗಲಿಲ್ಲ ಇಂತು ಸಮದೃಷ್ಟಿಯಿಂ ಸಕಲ ಕಾರ್ಯಗಳಂ ನೆರವೇರಿಸುತ್ತಾ ಗೋಚರವಾದುದೆಲ್ಲವೂ ನಿಲ್ಲತಕ್ಕದ್ದಲ್ಲವೆಂತಲೂ, ಮರಳಿ ಬಾರದೆ ಇರತಕ್ಕದ್ದಲ್ಲವೆಂತಲೂ, ನಿಶ್ಚಯಜ್ಞಾನದಿಂ ಲಾಭಾಲಾಭಗಳಲ್ಲಿ ಹರ್ಷಶೋಕಗಳಿಗೆ ಒಳಗಾಗದ ಜೀವನ್ಮುಕ್ತನೆಂತಲೂ, ಜ್ಞಾನವೃದ್ಧನೆಂತಲೂ, ಪ್ರಸಿದ್ಧನಾಗಿ ರಾಜ್ಯಭಾರವಂ ಮಾಡುತ್ತಿದ್ದನು.

(ಸಶೇಷ)

ಯುದ್ಧದಲ್ಲಿ ಭಾರತದ ಪೋಸ್ಟ್ ಇಲಾಖೆಯ ಮುಖ್ಯಕಾರ್ಯಗಳು

ಹಿಂದಿನ ಎಲ್ಲಾ ಯುದ್ಧಗಳಿಗಿಂತಲೂ, ಈ ಯುದ್ಧದಲ್ಲಿ ಅಂಚೆ ಮತ್ತು ವಾಹನ ಸೌಕರ್ಯಗಳಿಗೆ ವಿಶೇಷ ಪ್ರಾಮುಖ್ಯತೆಯಿದ್ದಿತು ಈ ಮಹಾಯುದ್ಧದಲ್ಲಿ ಮಿತ್ರ ಪಕ್ಷದವರು ತಮ್ಮಲ್ಲಿದ್ದ ಸೈನ್ಯಗಳು, ಸಾಮಾನು ಸರಂಜಾಮುಗಳು, ಮತ್ತು ವಾಹನ ಸೌಕರ್ಯಗಳು ಇವುಗಳನ್ನೆಲ್ಲಾ ಸಮನ್ವಯಗೊಳಿಸಿ ಇವುಗಳಿಂದ ಅದಷ್ಟು ಹೆಚ್ಚಿನ ಅನುಕೂಲವನ್ನು ಹೊಂದಬೇಕಾಯಿತು ಆದರೆ ಇವುಗಳನ್ನೆಲ್ಲಾ ಬೇಕುಬೇಕಾದ ಸ್ಥಳಗಳಿಗೆ ಶೀಘ್ರವಾಗಿ ಒಯ್ಯುವ ಕೆಲಸಕ್ಕೆ ಅಂಚೆ ಇಲಾಖೆಯ ಕೆಲಸ ಕೇವಲ ಅತ್ಯಾವಶ್ಯಕ ಈ ಇಲಾಖೆಯ ಕೆಲಸ ದೊಡ್ಡ ಪ್ರಮಾಣದಲ್ಲೂ, ಸುಸೂತ್ರವಾಗಿಯೂ ಪದ್ಧತಿಯಿಂದಲೂ ಶೀಘ್ರವಾಗಿಯೂ ನಡೆಯಬೇಕಾದುದು ಒತ್ತಟ್ಟ ರಾಷ್ಟ್ರದ ಎಲ್ಲಾ ಸಾಧನ ಸಂಪತ್ತುಗಳನ್ನೂ ಒದಗಮಾಡಿಕೊಳ್ಳುವುದು, ಕಳುಹಿಸಿಕೊಡುವುದು, ಅವುಗಳ ವಿಷಯವಾಗಿ ಸಮಾಚಾರ ಕೊಡುವುದು, ಈ ಎಲ್ಲ ಕೆಲಸಗಳಿಗೂ "ಪೋಸ್ಟ್, ಟೆಲಿಗ್ರಾಫ್ ಟೆಲಿಫೋನ್ ಮತ್ತು ವೈರ್‌ಲೆಸ್ ಈ ಸಾಧನೋಪಾಯಗಳ ಉಪಯೋಗ ಅನಿವಾರ್ಯ ಪಶ್ಚಿಮಾಭಿಮುಖದಲ್ಲಿ ಗಳಿಸಿದ ಯುದ್ಧ ವಿಜಯದಲ್ಲಿ ಭರತಖಂಡದ ಪಾತ್ರದಲ್ಲಿ ಅಂಚೆ ಮತ್ತು ವಾಹನ ಸೌಕರ್ಯಗಳನ್ನು ಯುದ್ಧದ ಕೆಲಸಗಳಿಗೆ ಹೊಂದಿಸಿಕೊಂಡು ಉಪಯೋಗಿಸಿಕೊಂಡದಕ್ಕೆ ವಿಶೇಷ ಸ್ಥಾನವಿದೆ

1939 ನೆಯ ಇಸವಿ ಸೆಪ್ಟೆಂಬರ್ ೩ ನೆಯ ತಾರೀಖಿನ ದಿನ ಭರತಖಂಡವು ಜರ್ಮನಿಯೊಡನ ಯುದ್ಧಕ್ಕಿಳಿದಂತಾಯಿತು ಈ ಯುದ್ಧ ಘೋಷಣೆಯಿಂದ ಭರತಖಂಡದ "ಪೋಸ್ಟಲ್ ಮತ್ತು ಟೆಲಿಗ್ರಾಫ್ ಇಲಾಖೆಗಳ ಮೇಲೆ ವಿಶೇಷ ಪರಿಣಾಮವಾಯಿತ ಯುದ್ಧ ಪ್ರಾರಂಭಿಸುವುದಕ್ಕೆ ಸ್ವಲ್ಪ ಹಿಂದಿನಿಂದಲೇ ಬ್ರಿಟನ್ ಮತ್ತು ಫ್ರಾನ್ಸು ಈ ದೇಶಗಳಿಗೂ ಮತ್ತು ಜರ್ಮನಿಗೂ ಇದ್ದ ಸಂಬಂಧ ಸ್ವಲ್ಪ ಬಿಗಡಾಯಿಸಿಕೊಂಡೇ ಇದ್ದಿತು ಯುದ್ಧ ಘೋಷಣೆಯಾಗಬಹುದೆಂದು 'ಪೋಸ್ಟಲ್ ಮತ್ತು ಟೆಲಿಗ್ರಾಫ್" ಇಲಾಖೆಯವರು ಊಹಿಸಿ ಅದಕ್ಕೆ ಸಿದ್ಧರಾಗಿಯೇ ಇದ್ದರು ಆದುದರಿಂದ ಯುದ್ಧಘೋಷಣೆಯಾದಕೂಡಲೇ ಜರ್ಮನಿಗೆ ಹೋಗುವ ಮತ್ತು ಅಲ್ಲಿಂದ ಬರುವ ವರ್ತಮಾನಗಳ ಮೇಲೆಲ್ಲಾ ಸರ್ಕಾರದಲಸ್ಸಿಟ್ಟು ಕ್ರಮೇಣ ಈ ಭಾಗದಲ್ಲಿ ಜರ್ಮನಿಯೊಡನೆ ಯಾವ ಸಂಬಂಧವೂ ಇಲ್ಲದಂತೆಯೂ ಮಾಡಿದರು ಅಲ್ಲದೆ "ಸೆನ್ಸಾರ್' ಆಗದ ಯಾವ ಕಾಗದ ಪತ್ರಗಳೂ ಹೋಗಿ ಬರದಂತೆಯೂ ತಡೆಮಾಡಿದರು ಕಾಗದಗಳನ್ನು "ಸೆನ್ಸಾರ್' ಮಾಡುವುದಕ್ಕಾಗಿ ಅವು ನೇರವಾಗಿ ವಿಳಾಸದ ಸ್ಥಳಕ್ಕೆ ಹೋಗದೆ "ಸೆನ್ಸಾರ್" ಕಛೇರಿಗೆ ಹೋಗಿ, ಬಳಸಿಕೊಂಡು ಸ್ವಸ್ಥಾನಕ್ಕೆ ಹೋಗುವಂತೆ ಏರ್ಪಾಡನ್ನು ಮಾಡಬೇಕಾಯಿತು ಆದರೆ ಹೀಗೆ ಬಳಸಿಕೊಂಡು ಹೋಗುವುದು ಆದಷ್ಟು ಕಡಿಮೆಯಾಗಿರುವಂತೆಯೂ ಮತ್ತು ಅದರಿಂದ ಆದಷ್ಟು ಕಡಿಮೆ ತೊಂದರೆಯಾಗುವಂತೆಯೂ ಏರ್ಪಾಡು ಮಾಡಲಾಯಿತು.

ಇಷ್ಟೇ ಅಲ್ಲದೆ ಇಲಾಖೆಯ ಕೆಲಸಗಳು ಸುಲಭವಾಗಿ ನಡೆಯುವುದಕ್ಕೆ ಇತರ ತೊಂದರೆಗಳೂ ಉಂಟಾದುವು ಉದಾಹರಣೆಗಾಗಿ ವಿಶೇಷ ಪರ್ಯಾಲೋಚನೆ ನಡೆಯಿಸಿ ಏರ್ಪಡಿಸಿದ್ದ "ಎಂಪೈರ್ ಏರ್ ಮೇಲ್" ಸರ್ವಿಸ್ಸನ್ನು ನಿಲ್ಲಿಸಿಬಿಡಬೇಕಾಯಿತು ಇದರ ಕೆಲಸ ದಿನದಿನಕ್ಕೆ ಚೆನ್ನಾಗಿ ನಡೆಯುತ್ತ ಬಂದಿದ್ದಿತು ಅಲ್ಲದೆ ವಿಮಾನಗಳಲ್ಲಿ ಕಳುಹಿಸುವ ಅಂಚೆಗೆ ಹೆಚ್ಚು ಸ್ಟಾಂಪು ಹಾಸಲನ್ನು ವಿಧಿಸಬೇಕಾಯಿತು. ಇದರಿಂದ ವರಮಾನ ಸ್ವಲ್ಪ ಕಡಿಮೆಯಾಯಿತು ಅಲ್ಲದೆ ನೌಕಾಸೌಕರ್ಯಕ್ಕೆ ಅಡ್ಡಿ ಬಂದುದರಿಂದಲೂ, ವ್ಯಾಪಾರ ವಾಣಿಜ್ಯ ಕ್ಷೇತ್ರಗಳಿಗೂ ಯುದ್ಧದ ಬೇಗೆ ತಟ್ಟಿದುದರಿಂದಲೂ, ವಿಶೇಷ ಹಾನಿಯುಂಟಾಯಿತು ಮೂರನೆಯದಾಗಿ ಯುದ್ಧ ಪ್ರಾರಂಭವಾದಮೇಲೆ ಜನರು ಪೋಸ್ಟಾಫೀಸಿನ ಸೇವಿಂಗ್ಸ್ ಬ್ಯಾಂಕಿನಲ್ಲಿಟ್ಟಿದ್ದ ಹಣವನ್ನು ವಾಪಸು ತೆಗೆದುಕೊಳ್ಳುವುದೂ ಜಾಸ್ತಿಯಾಯಿತು ಆದರೆ ಈ ಪರಿಸ್ಥಿತಿಗಳೇರ್ಪಡಬಹುದೆಂಬುದಾಗಿ ಮೊದಲೇ ಆಲೋಚನೆ ಮಾಡಿದ್ದುದರಿಂದ ಅವುಗಳಿಗೆ ತಕ್ಕಂತೆ ಮುಂಜಾಗರೂಕತೆಯ ಏರ್ಪಾಡುಗಳನ್ನು ಮಾಡಿಕೊಂಡಿರಲಾಗಿದ್ದಿತು

ಟೆಲಿಗ್ರಾಫ್" ಇಲಾಖೆಯಲ್ಲಿ, ವರ್ತಮಾನ ಕಳುಹಿಸುವುದು ಕೆಲವು ಕಡೆ ಬಹಳ ಹೆಚ್ಚಾಯಿತು, ವಿದೇಶಗಳಿಗೆ ಕಳುಹಿಸುವ "ಟೆಲಿಫೋನ್' ಗಳನ್ನು "ಸೆನ್ಸಾರ್" ಮಾಡುವುದು ಕಷ್ಟವಾದುದರಿಂದ, ಆ ರೀತಿ "ಟೆಲಿಫೋನ್' ಕಳುಹಿಸುವುದನ್ನೇ ನಿಲ್ಲಿಸಿಬಿಡಬೇಕಾಯಿತು ಆದರೆ ಇದಕ್ಕೆ ಬದಲಾಗಿ ಒಳದೇಶದಲ್ಲಿ "ಟ್ರಂಕ್ ಟೆಲಿಫೋನ್' ಉಪಯೋಗವನ್ನು ಬಳಕೆಗೆ ತರಲಾಯಿತು ಇದರ ಉಪಯೋಗ ಬಹಳ ಹೆಚ್ಚಾಯಿತು "ಭಾರತೀಯ ನೌಕಾ" ಅಧಿಕಾರಿಗಳು ಹಡಗುಗಳಿಗೆ ಕಳುಹಿಸುವ "ಟೆಲಿಫೋನ್" ಗಳ ವಿಚಾರದಲ್ಲಿ ಪೂರ್ಣ ಮೇಲ್ವಿಚಾರಣೆಯನ್ನು ವಹಿಸಿಕೊಂಡರು ಖಾಸಗಿ ಜನರ ಎಲ್ಲಾ "ಟ್ರಾನ್ಸ್ಮಿಟರ್ ಲೈಸೆನ್ಸು" ಗಳನ್ನೂ ರದ್ದುಪಡಿಸಲಾಯಿತು ಈ ಎಲ್ಲ ಮುಂಜಾಗರೂಕತೆಯ ಕ್ರಮಗಳನ್ನೂ ಅನುಸರಿಸಿದ ಪ್ರಯುಕ್ತ ಯುದ್ಧದ ಪರಿಸ್ಥಿತಿಯಲ್ಲೂ ವಿಶೇಷ ಗಲಿಬಿಲಿಯಾಗದೆ ಬದಲಾವಣೆಗಳೆಲ್ಲಾ ಕ್ರಮೇಣ ಜಾರಿಗೆ ಬಂದಂತೆಯೇ ಆಯಿತು

ಹೀಗಾಗಿ 'ಪೋಸ್ಟಲ್, ಟೆಲಿಗ್ರಾಫ್ ಮತ್ತು ಟೆಲಿಫೋನ್' ಕೆಲಸಗಳು ವಿಶೇಷ ಹೆಚ್ಚುವ ಸ್ಥಿತಿಗೆ ಅಂಚೆ ಇಲಾಖೆಯವರು ಏರ್ಪಾಡುಗಳನ್ನು ಮಾಡಬೇಕಾಗಿದ್ದಿತು ಹಿಟ್ಲರನ ಪ್ರಥಮ ಪ್ರಯತ್ನದಲ್ಲೇ ಅತನ ಪ್ರಭಾವ ವಿಸ್ಮಯದ ಹೆಬ್ಬಾಗಿಲನ್ನು ಮುಟ್ಟಿತು ಪರಿಸ್ಥಿತಿ ಹೀಗಿರುವಾಗ ಅನುಕೂಲ ಸಂದರ್ಭವನ್ನು ನೋಡಿಕೊಂಡು ಜಪಾನ್ ಭರತಖಂಡದ ಗಡಿಯವರೆಗೂ ತನ್ನ ರಾಜ್ಯವನ್ನು ವಿಸ್ತರಿಸಿತು ಹೀಗಾಗಿ ಭರತಖಂಡವು ಒಂದು ದೊಡ್ಡ ಶಸ್ತ್ರಾಗಾರವಾಗಿ ಇಕ್ಕಡೆಯ ರಣಕ್ಷೇತ್ರಗಳಿಗೂ ವಾಹನ ಸಲಕರಣೆಗಳನ್ನೊದಗಿಸಬೇಕಾಯಿತು ಆಫ್ರಿಕಾ ಮತ್ತು ದೂರಪ್ರಾಚ್ಯದ ಸ್ಥಿತಿಗಳಿಗೆ ಭರತಖಂಡವು ವಿಶೇಷ ಗಮನ ಕೊಡಬೇಕಾಗಿ ಬಂದಿತು ಇಂಥ ಸಮಯದಲ್ಲಿ ಸಮುದ್ರಗಳ "ಯು" ಬೋಟ್ ಗಳ ಹಾವಳಿ ಮಿತಿಮೀರಿತು ಬ್ರಿಟನ್, ಅಮೇರಿಕಾಗಳಿಂದ ಸಾಮಾನು ಬರುವುದು ತುಂಡುಬಿದ್ದಿತು ಮಿಂಚಿನ ವೇಗದಲ್ಲೋ ಎಂಬಂತೆ ಭರತಖಂಡದ ಅಂಚೆ ಮತ್ತು ಟೆಲಿಗ್ರಾಫ್ ಇಲಾಖೆಯ ಕೆಲಸ ವಿಪರೀತ ಪ್ರಾಮುಖ್ಯವಾಗಿ, ಯುದ್ಧದ ಗತಿ ಈ ಇಲಾಖೆಗಳ ಕೆಲಸದ ಮೇಲೆ ಬಹಳಮಟ್ಟಿಗೆ ಅವಲಂಬಿಸುವಂತಾಯಿತು

ಆಫ್ರಿಕಾದಲ್ಲಿ ಯುದ್ಧ ನಡೆಯುತ್ತಿದ್ದಾಗ ಈ ಇಲಾಖೆಗಳವರು ಅಲ್ಲಿ ಬಹು ಬೇಗನೆ ಅಂಚೆ ಏರ್ಪಾಡುಗಳನ್ನು ಮಾಡಿದರು ಕೆಲವು ಕಡೆ ಕೆಲವು ದಿನಗಳ ಅವಧಿಯೊಳಗಾಗಿ "ಬೇಸ್ ಪೋಸ್ಟಾಫೀಸು" ಗಳನ್ನು ಸ್ಥಾಪಿಸಬೇಕಾಯಿತು. ಕೆಲವು ಗಂಟೆಗಳೊಳಗಾಗಿ 'ಟೆಲಿಗ್ರಾಫ್ ಸ್ಟೇಷನ್" ಗಳನ್ನೂ, ತಂತಿಗಳನ್ನೂ, 'ವೈರ್‌ಲೆಸ್' ಕಳುಹಿಸುವ ಮತ್ತು ಬರಮಾಡಿಕೊಳ್ಳುವ 'ಸ್ಟೇಷನ್" ಗಳನ್ನೂ ಸ್ಥಾಪಿಸಬೇಕಾಯಿತು. ಇದಕ್ಕಾಗಿ ಸುಶಿಕ್ಷಿತರಾದ ಕೆಲಸಗಾರರನ್ನು ಅಲ್ಲಿಗೆ ಕಳುಹಿಸಬೇಕಾಯಿತು "ರಾಯಲ್ ಸಿಗ್ನಲ್ಸ್" ಮತ್ತು "ಇಂಡಿಯನ್ ಸಿಗ್ನಲ್ ಕೋರ್"—ಇವರುಗಳ ಸಹಾಯವನ್ನು ಪಡೆದು ಭರತಖಂಡದ ಪೋಸ್ಟ್ ಮತ್ತು ಟೆಲಿಗ್ರಾಫ್ ಇಲಾಖೆಯವರು ತಮ್ಮ ಪಾಲಿನ ಕೆಲಸವನ್ನು ದಕ್ಷತೆಯಿಂದ ನೆರವೇರಿಸಿದರು ಆದರೆ ಅವರು ಸಾಧಿಸಿದ ಕೆಲಸ ಬಹಳ ಕಷ್ಟಕರವಾದ ಕೆಲಸವಾಗಿದ್ದಿತೆಂಬುದನ್ನು ಮರೆಯಲಾಗುವುದಿಲ್ಲ.

ಅಭಿವೃದ್ಧಿಕಾರ್ಯಗಳನ್ನು ಸ್ವಲ್ಪ ಸ್ವಲ್ಪವಾಗಿ ಪ್ರಾರಂಭಿಸಲಾಯಿತು. ಆದರೆ "ವಿಜಯೋತ್ಸವದ ದಿನ" ದ ಹೊತ್ತಿಗೆ "32 ಬೇಸ್ ಪೋಸ್ಟಾಫೀಸು' ಗಳೂ, 200 "ಫೀಲ್ಡ್ ಪೋಸ್ಟಾಫೀಸು" ಗಳೂ ಬೊಂಬಾಯಿಯಲ್ಲಿ ಒಂದು "ಬೇಸ್ ಪೋಸ್ಟಲ್ ಡಿಪೋ" ವೂ, ಕರಾಚಿಯಲ್ಲಿ ಒಂದು 'ಏರ್ ಪೋಸ್ಟ್ ಡಿಪೋ" ವೂ ಮತ್ತು ಕಲ್ಕತ್ತಾದಲ್ಲಿ ಒಂದು "ಏರ್ ಮೇಲ್ ಸೆಕ್ಷನ್ನೂ" ಇದ್ದುವು. 3,500 ಕ್ಕಿಂತ ಹೆಚ್ಚು ಮಂದಿ ನುರಿತ ಕೆಲಸಗಾರರನ್ನೂ, ಮತ್ತು 60 ಮಂದಿ ಕಮಿಷನ್ಡ್ ಆಫೀಸರುಗಳನ್ನೂ ವಿದೇಶಗಳಿಗೆ ಕಳುಹಿಸಲಾಯಿತು ಹಂಗಾಮಿಯಾಗಿ 12,000 ಮಂದಿ ಕೆಲಸಗಾರರನ್ನು ನೇಮಕಮಾಡಿಕೊಳ್ಳಲಾಯಿತು. "ಟೆಲಿಗ್ರಾಫ್" ಇಲಾಖೆಯಲ್ಲಿ 21 ಮಂದಿ ಆಫೀಸರುಗಳನ್ನೂ ಮತ್ತು 443 ಮಂದಿ ಇತರ ಕೆಲಸಗಾರರನ್ನು ವಿದೇಶಗಳಿಗೆ ಕಳುಹಿಸಲಾಯಿತು. "ಪಿ ಮತ್ತು ಟಿ ಡಿಫೆನ್ಸ್ ಕೋರ್" ದಳಕ್ಕೆ ಈ ವರೆಗೆ 26,000 ಕೆಲಸಗಾರರನ್ನೂ, 174 ಮಂದಿ ಆಫೀಸರುಗಳನ್ನು ನೇಮಕಮಾಡಿಕೊಳ್ಳಲಾಗಿದೆ ನೇಮಕವಾದ ಜನರು ಕೆಲಸಕ್ಕೆ ಹೊಸಬರಾದರೂ ಸಹ ಇಲಾಖೆಯವರು ವರ್ಷಕ್ಕೆ 1 575 ಮಿಲಿಯನ್ "ಆರ್ಟಿಕಲು" ಗಳನ್ನು ಸಂಬಂಧದಲ್ಲಿ ಕೆಲಸ ನಡೆಯಿಸಿದರು 100 000 ಆರ್ಟಿಕಲುಗಳಿಗೆ ಸರಾಸರಿ ಒಂದೇ ಒಂದು "ದೂರು ಮಾತ್ರ ಬಂದಿತ್ತೆಂದರೆ ಕೆಲಸ ಎಷ್ಟು ಸಮರ್ಪಕವಾಗಿದ್ದಿತೆಂದು ತಿಳಿಯುವುದು ಭರತಖಂಡದ ನಾನಾ ಪ್ರದೇಶಗಳಿಗೆ ಅಂಚೆ ತಂತಿ ಹಾಕುವ ಕೆಲಸವೂ ಮತ್ತು 'ಡಿಫೆನ್ಸ್' ಶಾಖೆಗೆ ಬೇಕಾದ ತಂತಿಗಳನ್ನು ಹಾಕುವ ಕೆಲಸವೂ ಸೇರಿ 16 ಕೋಟಿ ರೂಪಾಯಿಗಳ ಮೌಲ್ಯದ ಕೆಲಸವನ್ನು ಈ ಕೆಲಸಗಾರರೇ ನೆರವೇರಿಸಿದರು ಇದಕ್ಕಾಗಿ ಉಪಯೋಗಿಸಿದ ತಂತಿಗಳ ಲೈನು 110,000 ಮೈಲಿಗಳ ಉದ್ದವಾದುದು. ಹೊಸದಾಗಿ ಏರ್ಪಡಿಸಿದ ತಂತಿ ಸಾಲುಗಳ ಉದ್ದ 10,000 ಸಾವಿರ ಮೈಲಿಗಳು ಈ ಎಲ್ಲ ಏರ್ಪಾಡುಗಳಿಂದ ಅನೇಕ ವರ್ತಮಾನಗಳನ್ನು ಒಂದೇ ಜೊತೆ ತಂತಿಸಾಲುಗಳ ಮೇಲೆ ಕಳುಹಿಸುವುದಕ್ಕೂ, ಹಲವಾರು ಪಟ್ಟಣಗಳಿಗೆ ಸಂಬಂಧವಿರುವಂತೆ ಮಾಡುವುದಕ್ಕೂ ಸಾಧ್ಯವಾಯಿತು ದೂರವಾಗಿ 80 ಟೆಲಿಫೋನ್ ಲೈನುಗಳನ್ನೂ, 250 ಟೆಲಿಗ್ರಾಫ್ ಲೈನುಗಳನ್ನೂ ಹಾಕಲಾಯಿತು ಭರತಖಂಡದಲ್ಲೆಲ್ಲಾ ಹೊಸ ಟ್ರಂಕು ಲೈನುಗಳನ್ನು ಹಾಕಲಾಯಿತು ಇದಕ್ಕಾಗಿ 4,500 ಮೈಲಿ 'ಪೋಸ್ಟು' ಲೈನುಗಳನ್ನೂ, 43,000 ಮೈಲಿಗಳ ಲೈನನ್ನೂ, 67,000 ಮೈಲಿಗಳ ತಂತಿ ಲೈನನ್ನೂ ಹಾಕಲಾಯಿತು

ಯುದ್ಧ ಪ್ರಾರಂಭಿಸಿದ ಕೂಡಲೆ ಇಲಾಖೆಯವರು ಹೆಚ್ಚು ಸೌಕರ್ಯಗಳನ್ನು ಕಲ್ಪಿಸದಿದ್ದರೆ ಕೆಲಸಗಳನ್ನು ಮಾಡುವುದು ಸಾಧ್ಯವಿಲ್ಲವೆಂದು ತಿಳಿದರು ಅಲ್ಲದೆ ಯುದ್ಧವು ಮುಂದುವರಿದಂತೆಲ್ಲಾ ಅಂಚೆ ಸೌಕರ್ಯಗಳ ಆವಶ್ಯಕತೆ ಹೆಚ್ಚು ಹೆಚ್ಚಾಗುತ್ತ ಬಂದಿತು ಮೊಟ್ಟಮೊದಲು ಒಂದು ಯೋಜನೆಯನ್ನು 1942-43 ರಲ್ಲಿ ತಯಾರಿಸಿದರು ಇದರ ಪ್ರಕಾರ "ಟೆಲಿಕಮ್ಯೂನಿಕೇಷನ್" ವಿಧಾನಗಳನ್ನು ಅಭಿವೃದ್ಧಿ ಪಡಿಸುವುದಕ್ಕೆ 1 ಕೋಟಿ ರೂಪಾಯಿಗಳ ಖರ್ಚು ತಗಲುವುದೆಂದು ಅಂದಾಜಾಯಿತು ಆದರೆ "ಡಿಫೆನ್ಸ್" ಇಲಾಖೆಯ ಆವಶ್ಯಕತೆಗಳೂ ಹೆಚ್ಚಾಗುತ್ತ ಬಂದುದರಿಂದ, ಈ ಮೊದಲನೆಯ ಯೋಜನೆಯನ್ನು ತಿದ್ದುಪಾಟು ಮಾಡಬೇಕಾಯಿತು

ಇದಾದ ಮೇಲೆ 'ಡಿಫೆನ್ಸ್' ಇಲಾಖೆಯವರ ಕೆಲಸಕ್ಕೆ ಬೇಕಾದ "ಟೆಲಿಕಮ್ಯೂನಿಕೇಷನ್" ಗಳನ್ನು ಏರ್ಪಡಿಸುವ ಮತ್ತು ಅದರ ಜೊತೆಗೆ "ಸಿವಿಲ್ ಸರ್ಕ್ಯೂಟ್" ಗಳನ್ನು ಎರಡರಷ್ಟು ಹೆಚ್ಚಿಸುವ ಯೋಜನೆಯೊಂದು ತಯಾರಾಯಿತು. ಹೊಸದಾಗಿ ಒಂದು "ಟೆಲಿಕಮ್ಯೂನಿಕೇಷನ್ ಬೋರ್ಡ್" ಎಂಬ ಸಮಿತಿ ರಚಿತವಾಯಿತು. ಈ ಸಮಿತಿಗೆ ಪೋಸ್ಟ್ ಮತ್ತು ಟೆಲಿಗ್ರಾಫ್ ಇಲಾಖೆಯ ಡೈರೆಕ್ಟರ್ ಜನರಲ್ ರವರು ಚೇರ್ಮನ್ನರಾದರು ಇವರಿಗೆ ಅನಿರ್ಬಂಧಿತ ಅಧಿಕಾರಗಳು ಕೊಡಲ್ಪಟ್ಟುವು. ಮೇಲೆ ಕಂಡ ಯೋಜನೆಯನ್ನು ಜಾರಿಗೆ ತರುವುದಕ್ಕೆ ಈ ಬೋರ್ಡಿನವರು ಒಂದು ಶಾಖೆಯನ್ನೇರ್ಪಡಿಸಿದರು. ಇದಕ್ಕಾಗಿ 10,000 ಮೈಲಿಗಳಷ್ಟು ಲೈನುಗಳನ್ನು ಹಾಕಬೇಕಾಗಿದ್ದಿತು. 1942 ನೆಯ ಇಸವಿಯ ಪ್ರಾರಂಭದ ವೇಳೆಗೆ 16 ಕೋಟಿ ರೂಪಾಯಿಗಳ ಮೌಲ್ಯದ ಯೋಜನೆಯೊಂದು ತಯಾರಾಗಿದ್ದಿತು ಯೋಜನೆ ಈಗಿರುವ ಮೇರೆಗೆ ಭರತಖಂಡದ ಮುಖ್ಯ ನಗರಗಳಿಗೆ ಸಂಬಂಧವನ್ನುಂಟುಮಾಡುವುದಲ್ಲದೆ ದೊಡ್ಡ ನಗರಗಳಿಂದ ಸಣ್ಣ ಸಣ್ಣ ಊರುಗಳಿಗೆ ನೇರ ಸಂಬಂಧಗಳಿರುವಂತೆಯೂ ಏರ್ಪಡಿಸಬೇಕಾಗಿದೆ. ಇದರಲ್ಲಿ ಬಹುಮಟ್ಟಿನ ಭಾಗದ ಕೆಲಸವೂ ನಡೆದಿದೆ

ಭರತಖಂಡಕ್ಕೆ ಬರುವ ಸಮುದ್ರ ಮಾರ್ಗಗಳಿಗೆ ಯುದ್ಧದ ದೆಸೆಯಿಂದ ಅಪಾಯವುಂಟಾಯಿತಷ್ಟೆ. ತತ್ಫಲವಾಗಿ ವಿದೇಶಗಳಿಂದ ಬರುವ ಸಾಮಾನುಗಳು

ನಿಂತುಹೋದುವು. ಇದರಿಂದ ಇಲಾಖೆಗೂ, ಸೈನ್ಯಶಾಖೆಗೂ ಬೇಕಾದ ಸಾಮಾನುಗಳನ್ನು ಇಲ್ಲೇ ತಯಾರಿಸಿಕೊಳ್ಳಬೇಕಾಯಿತು. ಅಲಿಪೂರ್ ವರ್ಕ್‌ಷಾಪಿನಲ್ಲೂ ಬೊಂಬಾಯಿ ಟೆಲಿಫೋನ್ ವರ್ಕ್‌ಷಾಪಿನಲ್ಲೂ ಹೆಚ್ಚು ಕೆಲಸ ನಡೆಯುವುದಕ್ಕೆ ಏರ್ಪಾಡಾಯಿತು. ಜಬ್ಬಲ್‌ಪುರದಲ್ಲಿ ಹೊಸದಾಗಿ ಒಂದು ದೊಡ್ಡ ವರ್ಕ್‌ಷಾಪನ್ನು ತೆರೆಯಲಾಯಿತು. ಇದಲ್ಲದೆ ಖಾಸಗಿ ಜನರಿಗೆ 91 ವರ್ಕ್‌ಷಾಪುಗಳಲ್ಲೂ ಕೆಲಸ ನಡೆಯುವುದಕ್ಕೆ ಏರ್ಪಾಡಾಯಿತು.

ಭರತಖಂಡದಲ್ಲಿ "ಟೆಲಿಕಮ್ಯೂನಿಕೇಷನ್" ಗೆ ಬೇಕಾದ ಎಲ್ಲಾ 'ಲೈನಿನ' ಸಾಮಾಗ್ರಿಗಳೂ ಮತ್ತು ಇತರ ವಸ್ತುಗಳಲ್ಲಿ ಹೆಚ್ಚು ಭಾಗವೂ ಈಗ ಇಲ್ಲೇ ತಯಾರಾಗುತ್ತಿದೆ. ಈ ಅಭಿವೃದ್ಧಿ ಯೋಜನೆಯಲ್ಲಿ 'ಟೆಲಿಫೋನ್ ಎಕ್ಸ್‌ಚೇಂಜು' ಗಳನ್ನು ಹೆಚ್ಚಿಸುವುದೂ ಸೇರಿದೆ. ಈ ಕೆಲಸಕ್ಕೆ 20,000 ಹೊಸ ಯಂತ್ರಗಳು ಬೇಕಾಗುತ್ತವೆ. ಡೆಲ್ಲಿ, ಲಾಹೋರ್, ಪೂನಾ ಮೊದಲಾದ ಭಾರಿ ನಗರಗಳಲ್ಲಿ 'ಟೆಲಿಫೋನ್ ಎಕ್ಸ್‌ಚೇಂಜು' ಗಳಲ್ಲಿ ಕೆಲಸ ಬಹಳ ಹೆಚ್ಚಾಗಿದೆ. ಇದರಿಂದ ಆ 'ಸ್ಟೇಷನ್ನು' ಗಳಲ್ಲಿ ಅನುಕೂಲಗಳನ್ನು ಹೆಚ್ಚಿಸಬೇಕಾಗಿದೆ. ಯುದ್ಧದ ದೆಸೆಯಿಂದ 'ಟೆಲಿಗ್ರಾಫ್' ಆಫೀಸುಗಳಲ್ಲೂ ಕೆಲಸ ಹೆಚ್ಚಾಗಿದೆ ಈ ಆಫೀಸುಗಳಿಗೆ ಬೇಕಾದ ಯಂತ್ರಸಾಮಗ್ರಿಗಳನ್ನೊದಗಿಸುವ ಕೆಲಸ ಪಿ ಮತ್ತು ಟಿ ಇಲಾಖೆಯವರಿಂದ ನಡೆಸಲ್ಪಡುವ ವರ್ಕ್‌ಷಾಪುಗಳಲ್ಲಿ ನಡೆಯುತ್ತದೆ.

ಭರತಖಂಡದಲ್ಲೂ, ವಿದೇಶದಲ್ಲೂ ಸೇವೆ ಸಲ್ಲಿಸುತ್ತಿರುವ ಸೈನಿಕರಿಗೆ ಎಷ್ಟೋ ರಿಯಾಯಿತಿಗಳನ್ನು ಕೊಡಲಾಯಿತು. ಇದರಿಂದ ವರಮಾನ ಬಹಳ ಕಡಮೆಯಾಯಿತು. "ಏರ್ ಗ್ರಾಫ್" ಮತ್ತು "ಏರ್ ಲೆಟರ್ಸ್" ಎಂಬೆರಡು ವಿಮಾನದ ಅಂಚೆ ಏರ್ಪಾಡುಗಳಿಂದ ವಿದೇಶಗಳಿಗೆ ಶೀಘ್ರವಾಗಿ ಕಾಗದ ಕಳುಹಿಸುವುದಕ್ಕೂ ಮತ್ತು ಅದೇ ಸಮಯದಲ್ಲಿ "ಏರ್‌ಮೇಲ್" ಕಾಗದಗಳ ಪ್ರಮಾಣ ಮಿತಿಮೀರದಂತಿರುವಂತೆಯೂ ಏರ್ಪಡಿಸಲಾಯಿತು

ಸೈನ್ಯಗಳಲ್ಲಿ ಕೆಲಸದಲ್ಲಿರುವವರು ಬ್ರಿಟನ್ನಿಗೆ ಯಾವ ಸುಂಕಗಳೂ ಇಲ್ಲದೆಯೂ ಮತ್ತು ನಿರ್ಬಂಧಗಳಿಲ್ಲದೆಯೂ "ಪಾರ್ಸಲು" ಗಳನ್ನು ಕಳುಹಿಸಿಕೊಡುವುದಕ್ಕೆ ಅನುಕೂಲ ಮಾಡಿಕೊಡಲಾಯಿತು ಯೂರೋಪಿನಲ್ಲಿ ಸೆರೆಸಿಕ್ಕಿದವರು ಪತ್ರವ್ಯವಹಾರ ನಡೆಸುವುದಕ್ಕೂ ವಿಶೇಷ ರೀತಿಯ ಏರ್ಪಾಡುಗಳನ್ನು ಮಾಡಲಾಯಿತು

ಮಿತ್ರಪಕ್ಷದ ಜಯಕ್ಕೆ ಈ ಇಲಾಖೆಯವರಿಂದ ಬೇರೆ ವಿಧದಲ್ಲೂ ಸಹ ಸಹಾಯವಾಯಿತು. ಈ ಇಲಾಖೆಯ ಖರ್ಚು ಕಳೆದು ಉಳಿದ ಹಣವನ್ನೆಲ್ಲಾ "ಜನರಲ್ ರೆವೆನ್ಯೂ" ಬಾಬಿಗೆ ಕೊಟ್ಟುಬಿಡಲಾಯಿತು ಈ ಸಾಲಿನಲ್ಲಿ ಹೀಗೆ ಕೊಟ್ಟ ಮೊಬಲಗು 9 ಕೋಟಿ ರೂಪಾಯಿಗಳು ಬೆಲೆಗಳು ವಿಪರೀತ ಹೆಚ್ಚದಿರುವಂತೆ ತಡೆಯುವುದಕ್ಕೆ ನಡೆಯಿಸಿದ ಪ್ರಯತ್ನಕ್ಕೆ ಪ್ರತಿಯೊಂದು ಪೋಸ್ಟಾಫೀಸೂ ಸಹಾಯವೆಸಗಿತು. ಇದರಿಂದ "ಡಿಫೆನ್ಸ್" ಬಾಬಿನಲ್ಲಿ ಉಳಿತಾಯ ಹೆಚ್ಚಾಯಿತು.

"ಡಿಫೆನ್ಸ್ ಸೇವಿಂಗ್ಸ್ ಬ್ಯಾಂಕ್" ಲೆಕ್ಕಗಳ ಸಂಖ್ಯೆಯೂ ಹೆಚ್ಚಿತು ಉದಾಹರಣೆಗೆ, 1943-44 ನೆಯ ಸಾಲಿನ ಪ್ರಾರಂಭದಲ್ಲಿ ಈ ಲೆಕ್ಕಗಳ ಸಂಖ್ಯೆ 94,000 ಇದ್ದುದು ಆ ಸಾಲಿನ ಕೊನೆಯಲ್ಲಿ 2,308,000 ರಷ್ಟಾಯಿತು. ಈ ಬಾಬಿನಲ್ಲಿ ಒಟ್ಟು ಆಖೈರು ಶಿಲ್ಕು 40 6 ಲಕ್ಷ ರೂಪಾಯಿಗಳಿದ್ದುದು 3·5 ಕೋಟಿ ರೂಪಾಯಿಗಳಾಗಿದ್ದಿತು. 1940 ರಲ್ಲಿ ಸರ್ ಗುರುನಾಥ ಬೇವೂರ್ ರವರು ಈ ಇಲಾಖೆಯಲ್ಲಿ ಒಂದು "ಯುದ್ಧೋದ್ದೇಶಗಳ ನಿಧಿ" ಯನ್ನು ಏರ್ಪಡಿಸಿದರು. ಈ ನಿಧಿಯಿಂದ ಕೊಟ್ಟ ಹಣದಿಂದ ಮೂರು ಏರೋಪ್ಲೇನ್‌ಗಳನ್ನೂ, ಮೂರು "ಆಮೆನಿಟೀಸ್" ಲಾರಿಗಳನ್ನೂ ಐದು "ಆಂಬ್ಯುಲೆನ್ಸ್" ಕಾರುಗಳನ್ನೂ ಮಿತ್ರಪಕ್ಷದವರ ಉಪಯೋಗಕ್ಕಾಗಿ ಕೊಂಡುಕೊಳ್ಳಲಾಯಿತು ಇದಲ್ಲದೆ ಬೇರೆ ಯುದ್ಧ ನಿಧಿಗಳಿಗೆ 56,000 ರೂಪಾಯಿಗಳ ಚಂದಾ ಹಣವನ್ನೂ ಕೊಡಲಾಯಿತು.

ಪ್ಯ ಇ ಬು.

ವರ್ತಮಾನಸಂಗ್ರಹ

ಜಾವಾಕ್ಕೆ ಸುಮಾತ್ರ ಬೆಂಬಲ

ಸುಮಾತ್ರಾ ಜನರು ಷರೀರ್‌ರವರ ಸರ್ಕಾರಕ್ಕೆ ಪೂರ್ಣ ಬೆಂಬಲ ಕೊಡುವುದಾಗಿ ಸುಮಾತ್ರದ ಮುಖಂಡರಾದ ಡಾ|| ಅಮೀರ್‌ರವರು ಇಂಡೋನೇಷಿಯನ್ ಪ್ರಧಾನಿ ಡಾ|| ಷರೀರ್ ಮತ್ತು ಡಾ|| ಸೋಕರ್ನೋರವರಿಗೆ ಭರವಸೆಕೊಟ್ಟಿದ್ದಾರೆ.

ಮಿತ್ರ ಅಧಿಕಾರಿಗಳಿಗೆ ಷರೀರರ ಎಚ್ಚರಿಕೆ

ಮಿತ್ರ ಮಿಲಿಟರಿ ಅಧಿಕಾರಿಗಳು ಜಾವಾದಲ್ಲಿ ಏನಾದರೂ ಭಾರಿ ಮಿಲಿಟರಿ ಕಾರ್ಯಕ್ರಮ ಆರಂಭಿಸಿದರೆ ಅದನ್ನು ಇಂಡೋನೇಷಿಯನ್ನರು ತಮ್ಮ ಸಾಮರ್ಥ್ಯವಿರುವಷ್ಟುಮಟ್ಟಿಗೂ ಎದುರಿಸುತ್ತಾರೆ ಎಂದು ಇಂಡೋನೇಷಿಯನ್ ಪ್ರಧಾನಿ ಡಾ|| ಷೆರೀರ್ ಎಚ್ಚರಿಸಿದ್ದಾರೆ ಸಿಂಗಪುರ ಸಮ್ಮೇಳನದಲ್ಲಿ ಮಿತ್ರ ಅಧಿಕಾರಿಗಳು ಏನು ನಿರ್ಧಾರ ಮಾಡಿದರೆಂಬ ಬಗ್ಗೆ ಸ್ಪಷ್ಟ ಪ್ರಕಟನೆ ಆಗಬೇಕೆಂದೂ ಬಲಪ್ರಯೋಗದ ಬೆದರಿಕೆ ಹಾಕಿದರೆ ಶಾಂತಯುತವಾದ ಸಂಧಾನ ಸಾಧ್ಯವಿಲ್ಲವೆಂದೂ ತಿಳಿಸಿದ್ದಾರೆ

ಪರ್ಷಿಯದ ಬಗ್ಗೆ ರಷ್ಯ-ಬ್ರಿಟನ್ ಭಿನ್ನತೆ

ರಷ್ಯ ಪರ್ಷಿಯದಿಂದ ತನ್ನ ಸೇನೆಯನ್ನು ವಾಪಸು ಕರೆಸಿಕೊಳ್ಳಲು ನಿರಾಕರಿಸುತ್ತಿರಲಾಗಿ ಬ್ರಿಟನ್ ಸಹ ತನ್ನ ಸೇನೆಯನ್ನು ವಾಪಸು ಕರೆಸಿಕೊಳ್ಳುವುದಿಲ್ಲವೆಂದು ಹಠ ಹಿಡಿದಿದೆ ಪರ್ಷಿಯಾಕ್ಕೂ ಅಗ್ರ ರಾಜ್ಯತ್ರಯಗಳಿಗೂ ಆದ ಒಪ್ಪಂದದ ಪ್ರಕಾರ ಮುಂದಿನ ವರ್ಷ ಮಾರ್ಚಿ ತಿಂಗಳವರೆಗೆ ಪರ್ಷಿಯದಲ್ಲಿ ತನ್ನ ಸೇನೆಯನ್ನಿಟ್ಟುಕೊಂಡಿರುವ ಅಧಿಕಾರ ರಷ್ಯಕ್ಕಿರುವುದಾಗಿ ಅಮೇರಿಕನ್ ವಿದೇಶಾಂಗ ಸಚಿವ ಇಲಾಖೆಯ ಒಬ್ಬ ಅಧಿಕಾರಿ ತಿಳಿಸಿದ್ದಾರೆ ಈ ವರ್ಷಾಂತ್ಯದೊಳಗೆ ಪರ್ಷಿಯದಿಂದ ಹೊರಗಿನ ಸೇನೆಗಳೆಲ್ಲವೂ ವಾಪಸಾಗುವ ವಿಚಾರವಾಗಿ ಬ್ರಿಟನ್ ರಷ್ಯದೊಡನೆ ಚರ್ಚಿಸಬೇಕೆಂದಿದೆ ಎಂದು ಅಮೇರಿಕನ್ ವಿದೇಶಾಂಗ ಸಚಿವ ಬ್ಯೆರ್ನೆಸ್ ಪ್ರಕಟಿಸಿದ್ದಾರೆ

ಮೈಸೂರಿಗೆ ಹೊರಗಿನಿಂದ ತರಿಸಿಕೊಳ್ಳುವ ಆಹಾರ ವಸ್ತುಗಳ ಪ್ರಮಾಣ

ಸಂಸ್ಥಾನದಲ್ಲಿ ಮಳೆ ಬೆಳೆ ಸರಿಯಾಗಿ ಆಗದೆ ಇರುವುದರಿಂದ ೧೮೦ ಸಾವಿರ ಪಲ್ಲಾ ಭತ್ತ ೨೬೦ ಸಾವಿರ ಪಲ್ಲ ಅಕ್ಕಿ, ೮೫೦ ಸಾವಿರ ಪಲ್ಲಾ ರಾಗಿ ಮತ್ತು ೧೧೦ ಸಾವಿರ ಪಲ್ಲಾ ಜೋಳ ಮತ್ತು ೭೫ ಸಾವಿರ ಪಲ್ಲ ಇತರ ಧಾನ್ಯಗಳ ಕೊರತೆಯುಂಟಾಗಿದೆಯೆಂದು ಗೊತ್ತಾಗಿದೆ. ಬರುವ ಸುಗ್ಗಿಯಲ್ಲಿ ೮೮೦ ಸಾವಿರ ಪಲ್ಲ ಭತ್ತ, ೯೦ ಸಾವಿರ ಪಲ್ಲ ರಾಗಿ, ೨೫ ಸಾವಿರ ಪಲ್ಲ ಜೋಳ ಮತ್ತು ೨ ಸಾವಿರ ಪಲ್ಲ ಇತರ ಧಾನ್ಯಗಳು ಆಹಾರ ಧಾನ್ಯ ಶೇಖರಣೆ ಆಜ್ಞೆಯ ಪ್ರಕಾರ ದೊರೆಯಲಿದೆಯೆಂದು ಭಾವಿಸಲಾಗಿದೆ. ೧೯೪೫-೪೬ ನೇ ಸಾಲಿನಲ್ಲಿ ಕೊಡಗಿನಿಂದ ೧೯ ಸಾವಿರ ಟನ್ ಅಕ್ಕಿಯೂ ಹೈದರಾಬಾದಿನಿಂದ ೨೦ ಸಾವಿರ ಟನ್ ರಾಗಿ ಜೋಳ ಮುಂತಾದ ಧಾನ್ಯವೂ ಬೆಲೂಚಿಸ್ತಾನದಿಂದ ೧೦ ಸಾವಿರ ಟನ್ ರಾಗಿ ಜೋಳವೂ ಸಂಸ್ಥಾನಕ್ಕೆ ಬರಲಿದೆ ಇದೇ ಸಾಲಿನಲ್ಲಿ ೧೬ ಸಾವಿರ ಟನ್ ಗೋಧಿ ಪರದೇಶಗಳಿಂದ ದೊರೆಯುತ್ತದೆ. ಪಂಜಾಬಿನಿಂದ ೪ ಸಾವಿರ ಟನ್ ರವೆ, ಹಿಟ್ಟು ಮುಂತಾದುವು ಬರಲಿವೆ. ಹೊರಗಡೆ ಅಧಿಕ ಬೆಲೆಗೆ ಪದಾರ್ಥವನ್ನು ಕೊಂಡು ಮಾರುವುದರಿಂದ ಸುಮಾರು ೮೦ ಲಕ್ಷರೂ ನಷ್ಟವಾಗಬಹುದೆಂದು ಅಂದಾಜು ಮಾಡಲಾಗಿದೆಯೆಂದು ಹೇಳಲಾಗಿದೆ.

ಶ್ರೀ ವಿಜಯಪಂಚಾಚಾರ್ಯ ಭಜನಸಂಘ ಸ್ಥಾಪನೆ ಹೊಳೇಹನಸವಾಡಿ.

ಶಿವಮೊಗ್ಗ ತಾಲೂಕು ಹೊಳೇಹನಸವಾಡಿಗ್ರಾಮದಲ್ಲಿ ಕಳೆದ ವಿಜಯದಶಮಿಯ ದಿವಸ ಮೇಲ್ಕಂಡ ಭಜನಸಂಘವು ಹಿರೇಕಲ್ಲುಮಠದ ವೇ|| ಶಿವಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಸ್ಥಾಪಿಸಲ್ಪಟ್ಟಿತು ಆ ಊರಿನ ವೀರಶೈವರಿಗೆ ಶ್ರೀಜಗದ್ಗುರು ಪಂಚಾಚಾರ್ಯರ ಸ್ವರೂಪವೇ ಗೊತ್ತಿರಲಿಲ್ಲ ವೇ|| ಶಿವಪ್ಪಯ್ಯನವರ ಪುತ್ರರಾದ ವೇ|| ಚನ್ನಾರಾಧ್ಯರೆಂಬವರು ಸಾಗರದಲ್ಲಿ ಶ್ರೀ|| ಷ|| ಬ್ರ|| ಪಂ|| ಸಾಲೂರು ಹಿರೇಮಠದ ಶ್ರೀ ಚನ್ನವೀರಶಿವಾಚಾರ್ಯಸ್ವಾಮಿಗಳವರ ವೈದಿಕಪಾಠಶಾಲೆಯಲ್ಲಿ ಅಭ್ಯಾಸಮಾಡುತ್ತಿರುವವರನ್ನು ಸದರಿ ಗ್ರಾಮದವರು ಕರೆಯಿಸಿಕೊಂಡು ಶ್ರೀ ನಂದೀಶ್ವರದೇವರಿಗೆ ಶ್ರೀ ರುದ್ರಾಭಿಷೇಕವನ್ನು ಮಾಡಿಸಿದರು. ಅದೇ ದಿವಸ ಉತ್ಸವಕ್ಕೆ ಊರಿನವರೆಲ್ಲರೂ ಹಿರೇಕಲ್ಲುಮಠಕ್ಕೆ ಸೇರಿ ವಿರಕ್ತರ ಫೋಟೋವನ್ನು ಉತ್ಸವಕ್ಕಾಗಿ ತೆಗೆದುಕೊಂಡರು ಆಗ್ಗೆ ಪುರೋಹಿತ ವೇ|| ಚನ್ನಾರಾಧ್ಯರು ಇದು ಸರಿಯಲ್ಲವೆಂದು ಹೇಳಿದರು ಇದಕ್ಕೆ ಊರಿನವರಿಗೂ ಮತ್ತು ತಂದೆಯವರಾದ ವೇ|| ಶಿವಪ್ಪಯ್ಯನವರಿಗೂ ಪುರೋಹಿತರಿಗೂ ವಾದವಿವಾದಗಳು ಬಹಳಹೊತ್ತಿನ ವರೆಗೂ ನಡೆದವು. ವೇ| ಚನ್ನಾರಾಧ್ಯರು ಶ್ರೀ ಪಂಚಾಚಾರ್ಯರೇ ನಮ್ಮ ಮಠಸ್ಥಾಪನಾಚಾರ್ಯರೆಂಬ ಬಗ್ಗೆ ಅನೇಕ ಆಧಾರಗಳನ್ನು ತೋರಿಸಿ ಸಭಿಕರ ಮನಸೊಪ್ಪಿಸಿದರು ಆಗ್ಗೆ ಸರ್ವರೂ ಮಠದಿಂದ ಶ್ರೀ ಪಂಚಾಚಾರ್ಯರ ಬಜನೆಯನ್ನು ಮಾಡುತ್ತ ನಂದೀಶ್ವರ ದೇವಾಲಯಕ್ಕೆ ಹೋಗಿ ಮಂಗಳಾರತಿಮಾಡಿ ಭಜನೆಯನ್ನು ಮುಕ್ತಾಯ ಮಾಡಿದರು ಪಂಚಾಚಾರ್ಯರ ಭಜನೆ ಮತ್ತು ಜಯಂತಿಯ ಬಗ್ಗೆ ಅನೇಕ ವಿಷಯಗಳನ್ನು ಹೇಳಿ ಸಭಿಕರನ್ನು ಆನಂದಗೊಳಿಸಿದರು. ಆಮೇಲೆ ಶ್ರೀಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು

ಎಚ್. ಬಿ ಚನ್ನಬಸಪ್ಪಗೌಡ, ಗುಳ್ಳೆಹಳ್ಳಿ.

ಸಂತರ್ಪಣಾಸಮಾರಂಭ, ಕೊಟ್ಟೂರು

ಬಳ್ಳಾರಿ ಡಿ|| ಕೊಟ್ಟೂರು ಗ್ರಾಮದಲ್ಲಿರುವ ಹನಸಿ ಗಂಗಮ್ಮನು ತಾ|| 23–11–45 ಶುಕ್ರವಾರ ದಿವಸ ಶ್ರೀ|| ಷ|| ಬ್ರ|| ಚಿದುರಗೊಳ್ಳದ ಚರಪಟ್ಟಾಧ್ಯಕ್ಷರನ್ನು ಇದೇ ಗ್ರಾಮದ ಬೃಹನ್ಮಠದ ಶ್ರೀ|| ಷ|| ಬ್ರ|| ಭೂತಭುಜಂಗಸ್ವಾಮಿಗಳವರನ್ನೂ ದಯಮಾಡಿಸಿಕೊಂಡು ಉದಯ 10 ಘಂಟೆಗೆ ಇಲ್ಲಿಯ ದಾರುಕಾತ್ರಮದಲ್ಲಿರುವ ಶ್ರೀಜಗದ್ಗುರು ಗುರುಸಿದ್ಧಸ್ವಾಮಿಗಳ ಗದ್ದುಗೆಗೂ, ಶ್ರೀ ಮರುಳಸಿದ್ಧಸ್ವಾಮಿಗಳ ಗದ್ದುಗೆಗೂ ರುದ್ರಾಭಿಷೇಕವನ್ನು ಮಾಡಿಸಿ ಮಧ್ಯಾಹ್ನ ಭಕ್ತಮಾಹೇಶ್ವರಸಂತರ್ಪಣೆ ನಡೆಸಿದಳು ಪ್ರತಿವರ್ಷವೂ ವಿಶೇಷ ಭಕ್ತಿಯಿಂದ ಸೇವೆಯನ್ನು ಮಾಡುತ್ತಿರುವ ಗಂಗಮ್ಮನಿಗೆ ಗಂಗಾಧರನು ಕಲ್ಯಾಣವನ್ನೀಯಲಿ. ಪಿ ಯಂ. ಮರುಳಾರಾಧ್ಯ.

ಸ್ವೀಕಾರ

ಬಳ್ಳಾರಿ: ಡಿ|| ಕೊಟ್ಟೂರಲ್ಲಿರುವ ಹನಸಿ ಗಂಗಮ್ಮನು ಗಣಾರಾಧನೆಯನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂಪಾಯಿಯು ವೇ|| ಪಿ. ಎಂ. ಮರುಳಸಿದ್ಧಯ್ಯನವರ ದ್ವಾರಾ ತಲ್ಪಿರುತ್ತದೆ.

ಸಾಗರ ತಾಲೂಕು ಹೊಸಮನೆಗ್ರಾಮದಲ್ಲಿರುವ ಮ|| ರಾ|| ಸಿದ್ಧಪ್ಪಗೌಡರ ಪುತ್ರ ಚಿ|| ಚಂದ್ರಶೇಖರನ ಚೌಲಕರ್ಮವು ಶ್ರೀ|| ಷ|| ಬ್ರ|| ಸಾಲೂರು ಹಿರೇಮಠದ ಚನ್ನವೀರಶಿವಾಚಾರ್ಯಸ್ವಾಮಿಗಳವರ ಗುರುತ್ವದಲ್ಲಿ ನೆರವೇರಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂಪಾಯಿಯು ಮ|| ರಾ|| ಗುಳ್ಳೇಹಳ್ಳಿ, ಮ|| ರಾ|| ಎಚ್. ಬಿ. ಚನ್ನಬಸಪ್ಪಗೌಡರ ದ್ವಾರಾ ತಲ್ಪಿರುತ್ತವೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಹಣದ ಸ್ವರೂಪ

ನಮ್ಮ ದೇಶದ ರೂಪಾಯಿ ಇನ್ನೊಂದು ದೇಶದಲ್ಲಿ ಚಲಾವಣೆಯಾಗುವುದಿಲ್ಲ ಇಲ್ಲಿರುವ ಹಣವೆಂದರೆ, ರೂಪಾಯಿ, ಅರ್ಧರೂಪಾಯಿ, ನಾಲ್ಕಾಣೆ ಎರಡಾಣೆ ನಿಕ್ಕಲ್, ಒಂದಾಣೆ, ಅರೆಕಾಸು ಮೂರುಕಾಸು, ಇವುಗಳೆಲ್ಲವೂ ಸರ್ಕಾರದ ಟಂಕಸಾಲೆಯಲ್ಲಿ ತಯಾರಾಗುತ್ತಿವೆ ಇವುಗಳ ಒಡೆತನವೆಲ್ಲಾ, ಇಂಗ್ಲೆಂಡಿನ ಸರ್ಕಾರಕ್ಕೆ ಸೇರಿದೆ ಈ ನಾಣ್ಯದ ಜೊತೆಗೆ ನೋಟುಗಳನ್ನು ಅಚ್ಚು ಹಾಕಿಸಿ ಚಲಾವಣೆಯಲ್ಲಿ ತಂದಿದ್ದಾರೆ ಚಲಾವಣೆಯಲ್ಲಿರುವ ರೂಪಾಯಿ ನಾಣ್ಯಕ್ಕೆ ಸರಿಹೊಂದುವಂತೆ, ಇಷ್ಟೇ ರೂಪಾಯಿನ ನೋಟುಗಳಿರಬೇಕೆಂದು ನಿಯಮವಿದೆ ಇವಕ್ಕಿಂತ ಹೆಚ್ಚಿನ ನೋಟನ್ನು ಚಲಾವಣೆಯಲ್ಲಿ ತರಬೇಕಾದರೆ ಹೆಚ್ಚಾಗಿ ಅಚ್ಚು ಹಾಕಿಸಿರುವ ನೋಟಿನ ಬೆಲೆಗೆ ತಕ್ಕಹಾಗೆ ಬೆಳ್ಳಿಯಾಗಲಿ ಅಥವಾ ಚಿನ್ನವಾಗಲಿ ಸರ್ಕಾರದ ಬೊಕ್ಕಸದಲ್ಲಿ ಜಂಗಾವಲಾಗಿ ಇಡಬೇಕೆಂಬ ನಿಯಮವಾಗಿದೆ

ನೋಟನ್ನು ಸಮಯ ಬಿದ್ದಾಗ ನಾಣ್ಯವನ್ನಾಗಿ ಮಾರ್ಪಡಿಸುವುದಕ್ಕೆ ಅನುಕೂಲವಾಗುವಂತೆ ನೋಟಿನ ನಿಧಿಯೊಂದು, ಚಿನ್ನದ ಪ್ರಮಾಣನಿಧಿ ಇನ್ನೊಂದು ಹೀಗೆ ಎರಡು ನಿಧಿಯನ್ನು ಇಂಗ್ಲೆಂಡಿನ ಸರ್ಕಾರ ಏರ್ಪಡಿಸಿತ್ತು ಒಂದು ರೂಪಾಯಿಗೆ ಹದಿನೆಂಟು ಪೆನ್ನಿ ಒಂದು ಪೌಂಡಿಗೆ ೧೩ ೧/೩ ರೂ ನಮ್ಮ ದೇಶದ ಒಳವ್ಯಾಪಾರವೆಲ್ಲಾ ರೂಪಾಯಿ ಲೆಕ್ಕದಲ್ಲಿ ನಡೆಯುತ್ತದೆ ಹೊರವ್ಯಾಪಾರವೆಲ್ಲಾ ಇಂಗ್ಲೆಂಡಿನ ನಾಣ್ಯವಾದ ಪೌಂಡಿನ ಲೆಕ್ಕದಲ್ಲಿ ನಡಯಬೇಕು ಚಿನ್ನದ ಬೆಲೆ ಹೇಗೇ ಇರಲಿ ಇಂಡಿಯಾಕ್ಕೂ ಇತರ ದೇಶಗಳಿಗೂ ಎಷ್ಟೇ ವ್ಯಾಪಾರ ನಡೆಯಲಿ, ವ್ಯಾಪಾರದ ಬೆಲೆಯೆಲ್ಲಾ ಪೌಂಡಿನ ಲೆಕ್ಕದಲ್ಲಿ ತೀರ್ಮಾನವಾಗಬೇಕು ಅಂದರೆ ನಮ್ಮ ದೇಶದ ವ್ಯಾಪಾರದ ಲಾಭ ನಷ್ಟವೆಲ್ಲಾ ಇಂಗ್ಲೆಂಡಿನ ಪೌಂಡಿನ ಬೆಲೆಯ ಏರಿಳಿತದ ಮೇಲೆ ನಿಂತಿದೆ

ಇಂದು ನಮ್ಮ ದೇಶದಲ್ಲಿ ಪದಾರ್ಥಗಳ ಬೆಲೆ ಏರಿದೆ ಪದಾರ್ಥಗಳೂ ದೊರೆಯುತ್ತಿಲ್ಲ ವ್ಯಾಪಾರದ ಸೌಕರ್ಯ ಕಡಿಮೆಯಾಗಿದೆ ಹೊರಗಿನಿಂದ ಬರುತ್ತಿದ್ದ ವಸ್ತುಗಳು ಬರುತ್ತಿಲ್ಲ ಇಲ್ಲಿದ್ದ ಪದಾರ್ಥಗಳನ್ನು ಕೊಳ್ಳುವುದಕ್ಕೆ ಹೆಚ್ಚು ಹಣ ಬೇಕಾಯಿತು ಹಿಂದೆ ಚಲಾವಣೆಯಲ್ಲಿದ್ದ ಹಣಕ್ಕಿಂತ, ಈಗ ಚಲಾವಣೆಯಲ್ಲಿರುವ ಹಣ ಮಿತಿಮೀರಿ ಹೆಚ್ಚಿದೆ ಈ ಎಲ್ಲ ಕಾರಣಗಳಿಂದ ಹಣ ಅಗ್ಗವಾಗಿದೆ ಪದಾರ್ಥಗಳು ತಗ್ಗಾಗಿವೆ ಎಂದು ಹೇಳುವರು ಇದನ್ನು ಉದಾಹರಣೆಯ ಮೂಲಕ ವಿವರಿಸುತ್ತೇನೆ

ಒಂದು ಸೇರು ರಾಗಿ ಒಂದು ಥಾನು ಬಟ್ಟೆ, ಇಪ್ಪತ್ತು ರೂಪಾಯಿ ಇರುವ ಒಂದು ಹಣದ ಚೀಲ ಈ ಮೂರೂ ಇವೆ ಎಂದು ಇಟ್ಟುಕೊಳ್ಳೋಣ ರಾಗಿ ಬಟ್ಟೆ ಎರಡೂ ಪದಾರ್ಥ ದುಡ್ಡಿನ ಚೀಲ ಹಣ ರಾಗಿ ಬಟ್ಟೆ ಎರಡೂ ಹೆಚ್ಚಾಗಿವೆ ಅಥವಾ ಚೀಲ ರಾಗಿ ಥಾನು ಬಟ್ಟೆ ಆಗಿ, ದುಡ್ಡು ಇದ್ದಂತೆಯೇ ಇದೆ ಆಗ ಪದಾರ್ಥ ಅಗ್ಗವಾಗುವುದು ಒಂದು ರೂಪಾಯಿಗೆ ಮೊದಲು ಕೊಳ್ಳುತ್ತಿದ್ದ ಪದಾರ್ಥಕ್ಕಿಂತ ಎರಡರಷ್ಟು ಈಗ ಬರುವುದು ಕಡಿಮೆ ಹಣಕ್ಕೆ ಹೆಚ್ಚಿನ ಸಾಮಾನು ದೊರೆಯುವುದು ರಾಗಿ, ಬಟ್ಟೆ ಇದ್ದಂತೆಯೇ ಇದ್ದು ಚೀಲದಲ್ಲಿ ಹಣ ಮಾತ್ರ ನಲವತ್ತು ರೂಪಾಯಾದರೆ, ಹೆಚ್ಚು ಹಣಕ್ಕೆ ಕಡಿಮೆ ಸಾಮಾನು ಬರುವುದು ಅಥವಾ ಪದಾರ್ಥ ಬಹು ತಗ್ಗಾಗಿದೆ ಎಂದು ಹೇಳುವರು ಈಗಾಗಿರುವುದು ಹೀಗೆಯೇ.

ಈಗ್ಗೆ ಆರೇಳು ವರ್ಷಕ್ಕೆ ಮುಂಚೆ, ನಮ್ಮ ದೇಶದಲ್ಲಿ ಸುಮಾರು ಇನ್ನೂರು ಕೋಟಿ ರೂಪಾಯಿ ನಷ್ಟು ನೋಟು ಚಲಾವಣೆಯಲ್ಲಿತ್ತು ಈಗ ಸುಮಾರು ಅದಕ್ಕೆ ಐದರಷ್ಟು ಅಂದರೆ ಒಂದು ಸಾವಿರ ಕೋಟಿ ರೂಪಾಯಿನ ನೋಟು ಚಲಾವಣೆಯಲ್ಲಿದೆ ಆದರೆ ಇಲ್ಲಿಯ ಪದಾರ್ಥಗಳು ಹಿಂದೆ ಇದ್ದಂತೆಯೇ ಇವೆ ಕೆಲವು ಕಡೆ ಹಿಂದೆ ಇದ್ದುದಕ್ಕಿಂತ ಕಡಿಮೆಯಾಗಿದೆ. ಯಾವಾಗ ಹಣ ಹೆಚ್ಚಿ, ಪದಾರ್ಥ ಕಡಿಮೆಯಾಗುವುದೋ, ಆಗ ಹೆಚ್ಚು ಹಣಕ್ಕೆ ಸ್ವಲ್ಪವೇ ಸಾಮಾನು ಬರುವುದು.

ಸಾಮಾನುಗಳ ಸರಬರಾಜನ್ನು ಸರಿಯಾಗಿಡದೆ, ಚಾಲ್ತಿ ಹಣದ ಮೊತ್ತವನ್ನು ಸರ್ಕಾರವು ಏಕೆ ಹೆಚ್ಚಿಸಿತು ಎಂದು ನೀವು ಕೇಳಬಹುದು ಯುದ್ಧದ ದೆಸೆಯಿಂದ ಹೊರಗಿನಿಂದ ಸಾಮಾನುಗಳು ಇಲ್ಲಿಗೆ ಬರುತ್ತಿರಲಿಲ್ಲ ಇಲ್ಲಿಯ ಕೈಗಾರಿಕೆಗಳೂ ಕೂಡ ಯುದ್ಧಕ್ಕೆ ಬೇಕಾದ ಸಾಮಾನನ್ನು ತಯಾರು ಮಾಡುವ ಕೆಲಸದಲ್ಲಿ ತೊಡಗಿದುವು ಇಲ್ಲಿಯೇ ದೊರೆಯಬಹುದಾದ ವಸ್ತುಗಳನ್ನು ಸರ್ಕಾರವು ಕೊಳ್ಳಬೇಕಾಯಿತು ಅವಕ್ಕೆಲ್ಲಾ ಬಹಳ ಹಣವನ್ನು ಕೊಡಬೇಕಾಯಿತು ಸಾಲವಾಗಿ ಕೊಳ್ಳುವಂತಿರಲಿಲ್ಲ ಈ ಎಲ್ಲ ಕಾರಣಗಳಿಂದ ಅನಿವಾರ್ಯವಾಗಿ ಸರ್ಕಾರವು ಹೆಚ್ಚು ಬೆಲೆಯ ನೋಟನ್ನು ಅಚ್ಚು ಹಾಕಿಸಿ, ಚಲಾವಣೆಯಲ್ಲಿ ತರಬೇಕಾಯಿತು ಹೀಗೆ ಅನೇಕ ದೇಶಗಳು ಮಾಡಿವೆ ಶಾಂತಿಕಾಲ ಬಂದಮೇಲೆ, ಚಲಾವಣೆಯಲ್ಲಿರುವ ನೋಟುಗಳನ್ನು ಹಿಂದಕ್ಕೆ ಸರ್ಕಾರವೇ ತೆಗೆದುಕೊಳ್ಳುತ್ತದೆ ಆಗ ಸಾಮಾನು ಹೆಚ್ಚಿ, ಹಣವು ಕಡಿಮೆಯಾದರೆ ಪದಾರ್ಥಗಳ ಬೆಲೆ ತಾನಾಗಿಯೇ ಇಳಿಯುತ್ತದೆ ಅದು ಹೇಗೆ ಎಂಬುದನ್ನು ಮುಂದಿನ ಲೇಖನದಲ್ಲಿ ವಿವರಿಸುತ್ತೇನೆ

—ಬಿ ಕೃಷ್ಣಯ್ಯಂಗಾರ್

ಲಿಂಗೋದ್ಭವ ಲಾಕೆಟ್ಸ್

ಜಗದಾಚಾರ್ಯರ ಲಿಂಗೋದ್ಭವ ಲಾಕೆಟ್ಟು ಮತ್ತು ಕೋಟಿನ ಗುಂಡಿಗಳನ್ನು ಶುದ್ಧವಾದ ಬೆಳ್ಳಿಯಲ್ಲಿ ಬಹು ಸುಂದರವಾಗಿ ತಯಾರು ಮಾಡಿಸಿದ್ದೇವೆ.

ಲಾಕೆಟ್ಟುಗಳು ದೊಡ್ಡವರಿಗೆ ಕೋಟಿನ ಮೇಲೆ ಹಾಕಿಕೊಳ್ಳುವಂತೆಯೂ, ಮಕ್ಕಳಿಗೆ ಕೊರಳಿನಲ್ಲಿ ಧರಿಸುವಂತೆಯೂ ತಯಾರಿಸಲ್ಪಟ್ಟಿವೆ ರಟ್ಟೆಯಲ್ಲಿ ಕಟ್ಟಿಕೊಳ್ಳುವಂತೆಯೂ ಸಹ ತಯಾರಿಸಲ್ಪಟ್ಟಿವೆ ಗುರುಭಕ್ತರೆಲ್ಲರೂ ಇವುಗಳನ್ನು ತರಿಸಿ ತಮ್ಮ ಶರೀರದ ಮೇಲೆ ಧರಿಸಿಕೊಂಡು ಪ್ರತಿದಿವಸವೂ ಆ ಮಂಗಲಮೂರ್ತಿಯ ದರ್ಶನ ಸ್ಪರ್ಶನಾದಿಗಳಿಂದ ಧನ್ಯರಾಗಬೇಕೆಂದು ಕೋರಿಕೆ.

ಬೆಳ್ಳಿ ಲಾಕೆಟ್ ೧ ಕ್ಕೆ ೧ ರೂ.
ಬೆಳ್ಳಿ ಕೋಟಿನ ಗುಂಡಿ ೧ ಕ್ಕೆ ೧ ರೂ.
ರಟ್ಟೆಯಲ್ಲಿ ಕಟ್ಟುವ ಮೂರ್ತಿ ೧ ಕ್ಕೆ ೧ ರೂ.

೬ ಕ್ಕಿಂತಲೂ ಕಡಿಮೆಯಾಗಿ ವಿ ಪಿ ಕಳಿಸುವದಿಲ್ಲ

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ	೦—೬—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು)ಸೈಜು ೧೪ × ೧೦ ಬೆಲೆ	೦—೬—೦
ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ	೦—೩—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೬
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—೬
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೨—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೨—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ ..	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ಪಿಂಚಿಸುತ್ತಿರುವ ಫೋಟೋ	೨—೧—೬
ಬೆಂಗಳೂರು ಪೇಟೆ ಪೆನ್ಷನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೬

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರು, ಗಲ್ಲಾಪೇಟೆ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ೪ ಆಣೆ — ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೧೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೪ನೇ ಡಿಸೆಂಬರ್ ೧೯೪೫ [ಸಂಚಿಕೆ ೩೨

ಲಿಂಗೋದ್ಭವ ಲಾಕೆಟ್ಸ್

ಜಗದಾಚಾರ್ಯರ ಲಿಂಗೋದ್ಭವ ಲಾಕೆಟ್ಸು ಮತ್ತು ಕೋಟಿನ ಗುಂಡಿಗಳನ್ನು ಶುದ್ಧವಾದ ಬೆಳ್ಳಿಯಲ್ಲಿ ಬಹು ಸುಂದರವಾಗಿ ತಯಾರು ಮಾಡಿಸಿದ್ದೇವೆ.

ಲಾಕೆಟ್ಟುಗಳು ದೊಡ್ಡವರಿಗ ಕೋಟಿನ ಮೇಲೆ ಹಾಕಿಕೊಳ್ಳುವಂತೆಯೂ, ಮಕ್ಕಳಿಗೆ ಕೊರಳಿನಲ್ಲಿ ಧರಿಸುವಂತೆಯೂ ತಯಾರಿಸಲ್ಪಟ್ಟಿವೆ. ರಟ್ಟೆಯಲ್ಲಿ ಕಟ್ಟಿಕೊಳ್ಳುವಂತೆಯೂ ಸಹ ತಯಾರಿಸಲ್ಪಟ್ಟಿವೆ ಗುರುಭಕ್ತರೆಲ್ಲರೂ ಇವುಗಳನ್ನು ತರಿಸಿ ತಮ್ಮ ಶರೀರದ ಮೇಲೆ ಧರಿಸಿಕೊಂಡು ಪ್ರತಿದಿವಸವೂ ಆ ಮಂಗಲಮೂರ್ತಿಯ ದರ್ಶನ ಸ್ಪರ್ಶನಾದಿಗಳಿಂದ ಧನ್ಯರಾಗಬೇಕೆಂದು ಕೋರಿಕೆ

ಬೆಳ್ಳಿ ಲಾಕೆಟ್ ೧ಕ್ಕೆ ೧ ರೂ.
ಬೆಳ್ಳಿ ಕೋಟಿನ ಗುಂಡಿ ೧ಕ್ಕೆ ೧ ರೂ.
ರಟ್ಟೆಯಲ್ಲಿ ಕಟ್ಟುವ ಮೂರ್ತಿ ೧ಕ್ಕೆ ೧ ರೂ.

೬ ಕ್ಕಿಂತಲೂ ಕಡಿಮೆಯಾಗಿ ವಿ ಪಿ ಕಳಿಸುವದಿಲ್ಲ

ಮ್ಯಾನೇಜರು —
ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಗೋಕರ್ಣಕ್ಷೇತ್ರದಲ್ಲಿ ರುದ್ರಪೂಜಾ ಸಮಾರಂಭ

ಹುಬ್ಬಳ್ಳಿಯಲ್ಲಿರುವ ಶ್ರೀ ಹನ್ನೆರಡುಮಠದ ಚರಮೂರ್ತಿಸ್ವಾಮಿಗಳವರು ಗೋಕರ್ಣಕ್ಷೇತ್ರದಲ್ಲಿ ಮಠವನ್ನು ಕಟ್ಟಿಸುವ ಅಮೋಘ ಕಾರ್ಯವನ್ನು ಕೈಕೊಂಡಿದ್ದು ಈ ಕಾರ್ಯವು ನಿರ್ವಿಘ್ನವಾಗಿ ಸಾಗಲೆಂದು ಮಠಸ್ಥಾಪನೆ ಮಾಡುವ ಸ್ಥಾನದಲ್ಲಿ ಆದಿಯಾಗಿ ಏಕಾದಶ ರುದ್ರಪೂಜೆಯನ್ನು ರಾಜಪ್ರಜರ ಚಿರಶಾಂತಿಯ ಒಗ್ಗೆ ಮಾಡಿದ ಸಂಕಲ್ಪವಿದ್ದು ಬರುವ ಮಾಘ ಶು॥ ೩೦ ಆದಿತ್ಯವಾರ ಪ್ರಾತಃಕಾಲ (ತಾ॥ ೩-೩-೪೬) ಸಮಯಕ್ಕೆ ನೆರವೇರಿಸಬೇಕೆಂದು ಘನಸಂಕಲ್ಪವನ್ನು ಮಾಡಿದ್ದಾರೆ ಈ ಪವಿತ್ರ ಕಾರ್ಯಕ್ಕಾಗಿ ಧನಸಹಾಯ ಮಾಡತಕ್ಕ ಮಹಾಶಯರು ಕೂಡಲೇ ಕೆಳಗೆ ಕಾಣಿಸಿದ ವ್ಯವಸ್ಥಾಪಕರ ಹೆಸರಿನಿಂದ ತಮ್ಮ ದೇಣಿಗಿ ಹಣವನ್ನು ಕಳಿಸಿ ಪುಣ್ಯಭಾಜನರಾಗಬೇಕಾಗಿ ಆಶಿಸುತ್ತೇವೆ

ರುದ್ರಪೂಜಾಸಮಿತಿ ಸದಸ್ಯರು.

ಶ್ರೀ॥ ಬಾಲಲೀಲಾ ಸಂಗನೇಶ್ವರಸ್ವಾಮಿಗಳು ಸಾಂಬಯ್ಯನಮಠ ಹೂಲಿ
ಶ್ರೀ॥ ಪಟ್ಟಾಧ್ಯಕ್ಷರು ಮಾಲಗಾಂವ
ಶ್ರೀ॥ ಪಟ್ಟಾಧ್ಯಕ್ಷರು ಆರಳೆಲೆಮಠ ಬಂಕಾಪುರ
ಶ್ರೀ॥ ಪಟ್ಟಾಧ್ಯಕ್ಷರು ಸತ್ತಿಗೇರಿ
ಶ್ರೀ॥ ಪಟ್ಟಾಧ್ಯಕ್ಷರು ನೆಗಳೂರು

ಹಣ ಕಳಿಸಿಕೊಡತಕ್ಕ ವಿಳಾಸ

ಗುರುಸಿದ್ಧಸ್ವಾಮಿ ನರೇಂದ್ರಮಠ,
ಮುನ್ಸಿಪಲ್ ಕೌನ್ಸಿಲರ್ ಬೆಳಗಾಂವ ಗಲ್ಲಿ, ಹುಬ್ಬಳ್ಳಿ

ದುಃಖವಾರ್ತೆ

ನೈಜಾಂ ಇಲಾಖಾ ರಾಯಚೂರು ಜಿಲ್ಲಾ ಲಿಂಗಸೂಗೂರು ತಾಲೂಕು ಪೈಕಿ ಮಸಿಗಿ, ನೀರಲಕೆರೆ, ಹಿರಿಯಮಠದ ವೇ॥ ಗುರುಶಾಂತಯ್ಯನವರು ಸದಾಚಾರಸಂಪನ್ನರೂ, ಕುಶಲಮತಿಗಳೂ, ಶಾಸ್ತ್ರವಿಚಾರಪರರೂ, ಆಗಿದ್ದರಲ್ಲದೆ ರಾಜಕೀಯವಿಷಯದಲ್ಲಿಕೂಡ ಒಳ್ಳೇ ಪಟುಮತಿಗಳೂ ಆಗಿದ್ದರು ಮುದಕಿನಹಾಳ ದೇಶಾಯಿಯವರು ಸಂಸ್ಥಾನದಲ್ಲಿ ೧೪ ವರ್ಷ ಅಮ್ ಮುಕ್ತಿಯಾರ ಕೆಲಸ ಮಾಡಿ ಸಂಸ್ಥಾನವನ್ನು ಒಳ್ಳೆ ಸುಧಾರಣೆಯಲ್ಲಿ ತಂದರು ಕೇದಾರಪೀಠದ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳು ಈ ಪ್ರಾಂತದಲ್ಲಿ ಸಂಚರಿಸುತ್ತಿದ್ದಾಗ್ಗೆ ಜನರಿಂದ ಕಾಣಿಕಾರೂಪ ಧನಸಹಾಯವನ್ನು ಹೇರಳವಾಗಿ ಮಾಡಿಸಿದರು ಮತ್ತು ಮುದಕಿನಹಾಳು, ಮಸಿಗಿ, ಮುದಗಲ್ಲ ಜಾಲಿಹಳ್ಳಿ ಮೊದಲಾದ ಪ್ರಮುಖ ಗ್ರಾಮಗಳಲ್ಲಿ ಅಡ್ಡಪಲ್ಲಕ್ಕಿ ಉತ್ಸವಗಳನ್ನು ೭೨ ಬಿರುದಾವಳಿಗಳೊಡನೆ ಮಾಡಿಸಿದರು ಕೆಲಕಾಲ ಮಸಿಗಿ ಗ್ರಾಮದಲ್ಲಿ ಕೇದಾರಸಂಸ್ಥಾನದಿಂದ ಶಾಸ್ತ್ರಿಗಳನ್ನಿಟ್ಟು ಪಾಠಶಾಲೆ ನಡೆಸಿದರು ಮಸಿಗಿಯಲ್ಲಿ 'ವೀರಶೈವಧರ್ಮಸುಧಾರಕ ಸಂಘ" ವನ್ನು ಸದರೀ ಗ್ರಾಮದ ಬಸಪ್ಪಶಾಸ್ತ್ರಿಗಳವರಿಂದಲೂ ಕೆಲ ಭಕ್ತರಿಂದಲೂ, ಸ್ಥಾಪಿಸಿಕೊಂಡು ಪ್ರವಚನರೂಪವಾಗಿ ಧರ್ಮಕಾರ್ಯವನ್ನು ನಡೆಸುತ್ತಿದ್ದರು ಮತ್ತು ಹಳ್ಳಿಗಳಿಗೆ ಹೋಗಿ ಸದ್ಬೋಧೆಮಾಡಿ ಲಿಂಗಭಸ್ಮಧಾರಣವಿಷಯದಲ್ಲಿ ಶ್ರದ್ಧೆಹುಟ್ಟಿಸಿ ಗೋಸಂರಕ್ಷಣವಿಷಯದ ಬಗ್ಗೆ ಒಳ್ಳೇ ಸುಧಾರಣೆಮಾಡುತ್ತಿದ್ದರು ಹೀಗೆ ಅನಂತಧಾರ್ಮಿಕ ಮತ್ತು ರಾಜಕೀಯ ಕಾರ್ಯಗಳನ್ನು ಬಹು ದಕ್ಷತೆಯಿಂದ ಮಾಡಿದರು ಈ ರೀತಿ ಸದ್ಗುಣಿಗಳಾದ ಗುರುಶಾಂತಯ್ಯನವರು ಒಂದು ದಿನ ಅನಾರೋಗ್ಯದಿಂದಿದ್ದು ಕಾರ್ತಿಕ ಶು॥ ೧೫ನೇ ದಿವಸ ಸಾಯಂಕಾಲ ೬ ಘಂಟೆಗೆ ಶಿವಾರ್ಚನೆ ತೀರಿಸಿ ಪಾದೋದಕ ಪ್ರಸಾದಗಳನ್ನು ಸ್ವೀಕರಿಸಿ ಶಿವಧ್ಯಾನಮಾಡುತ್ತಾ ಶಿವನಲ್ಲಿ ಲೀನರಾದರು. ಇವರಿಗೆ ಸುಮಾರು ಐವತ್ತೇಳು ವರ್ಷಗಳಾಗಿದ್ದುವು ಇವರ ಆತ್ಮಕ್ಕೆ ಶಿವನು ಶಾಂತಿಯನ್ನೀಯಲಿ

ಓರ್ವ ದುಃಖಭಾಗಿ

ಶ್ರೀ ಹಸುಗೋಡು ಪಟ್ಟದಸ್ವಾಮಿಗಳವರ ನಿಧನ

ಬಳ್ಳಾರಿ ಪ್ರಾಂತದಲ್ಲಿ ಅತ್ಯಂತ ಪ್ರಸಿದ್ಧರಾಗಿದ್ದ ಶ್ರೀ ಹಸುಗೋಡು ಪಟ್ಟದಸ್ವಾಮಿಗಳವರು ಇದೇ ತಿಂಗಳು ೧೯ ನೆಯ ತಾರೀಖಿನ ದಿವಸ ಹರಪನಹಳ್ಳಿ ತಾ॥ ಚಿಕ್ಕಹಳ್ಳಿ ಗ್ರಾಮದಲ್ಲಿ ಶಿವಾಧೀನರಾದರೆಂಬ ವಿಷಯವನ್ನು ತಿಳಿಸಲು ಅತ್ಯಂತ ವಿಷಾದವೆನಿಸುತ್ತದೆ ಇವರು ಕಾಶೀಕ್ಷೇತ್ರದಲ್ಲಿ ಅಭ್ಯಾಸಮಾಡಿ ದೊಡ್ಡ ಪಂಡಿತರಾಗಿದ್ದರು ಇವರ ಶಾಂತಸ್ವಭಾವವನ್ನೂ ನಿಷ್ಠೆಯನ್ನೂ ಕಂಡು ಈ ಪ್ರಾಂತದ ಜನರೆಲ್ಲರೂ ಇವರಲ್ಲಿ ಅಸಾಧಾರಣ ಭಕ್ತಿಯನ್ನು ವಹಿಸಿದ್ದರು ಈ ಕಾಲದಲ್ಲಿ ಇಂತಹ ಗುರುಮೂರ್ತಿಗಳು ದೊರೆಯುವುದು ಬಹಳ ದುರ್ಲಭವೆಂದು ಬರೆವರೆ ಅತಿಶಯೋಕ್ತಿಯಾಗಲಿಕ್ಕಿಲ್ಲ ಜಗದಾಚಾರ್ಯರು ಮೃತರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಪ್ರಾರ್ಥಿಸುವ,

ದುಃಖಭಾಗಿ

ಕಾಶೀಪೀಠದ ಉದ್ಧಾರ

ಶ್ರೀ ಜಗದ್ಗುರು ಕಾಶೀಪೀಠದ ದೊಡ್ಡ ಆಸ್ತಿಯುಳ್ಳವೂ ಋಣಬಾಧೆಯಿಂದ ಇವರೆಗೆ ರಿಸೀವರರ ಸ್ವಾಧೀನದಲ್ಲಿತ್ತು. ಈಗ ಹೈಕೋರ್ಟಿನ ಆರ್ಡರಿನ ಮೇರೆಗೆ ರಿಸೀವರರನ್ನು ತೆಗೆದುಹಾಕಿ ಪೀಠಾಧಿಪತಿಗಳ ಸ್ವಾಧೀನಕ್ಕೆ ಒಂದಿರುವವೆಂಬ ವಿಷಯವನ್ನು ತಿಳಿದು ಪರಮಾನಂದವೆನಿಸುತ್ತದೆ

ಸ್ವೀಕಾರ

ರಾಯಚೂರು ಡಿ॥ ಮಸಗಿ ಗ್ರಾಮದ ಹಿರಿಯಮಠದ ವೇ॥ ಗುರುಶಾಂತಯ್ಯನವರು ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ಶ್ರೀ॥ ಷ॥ ಬ್ರ॥ ಮಸಿಗಿ ಪಟ್ಟದ ಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ

ಸೊಲ್ಲಾಪುರ ನಗರದಲ್ಲಿರುವ ಮ॥ ರಾ॥ ಅಮರಪ್ಪ ರೋಡಗಿ ಇವರಿಗೆ ಚಿ॥ ಸೌ॥ ಕಲಾವತೀಬಾಯಿಯನ್ನು ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಶ್ರೀ॥ ಷ॥ ಬ್ರ॥ ಜೈನಾಪುರ ಚರಮೂರ್ತಿಸ್ವಾಮಿಗಳ ಸೂಚನೆಯ ಮೇರೆಗೆ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂಪಾಯಿಯು ವರನ ಗುರುಗಳಾದ ವೇ॥ ವಿಶ್ವನಾಥಯ್ಯ ಬೆಂಬಳಗಿ ಇವರ ದ್ವಾರಾ ತಲ್ಪಿರುತ್ತದೆ

ಧಾರವಾಡ ಡಿ॥ ನಾಗವಂದದ ಹಂಚಿನ ಮ॥ ರಾ॥ ತಿರಕಪ್ಪನವರ ಪುತ್ರ ಚಿ॥ ಒನಶೆಟ್ಟೆಪ್ಪನಿಗೆ ತಿಕಾರಿಪುರ ಗ್ರಾಮದ ಮ॥ ರಾ॥ ಹಂಹರದ ಗುರುಸಿದ್ಧಪ್ಪನವರ ಪುತ್ರಿ ಚಿ॥ ಸೌ॥ ಶಿವಲಿಂಗಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂಪಾಯಿಯು ವೇ॥ ಮಾಸೂರು ಹಿರೇಮಠದ ಚನ್ನವೀರಶಾಸ್ತ್ರಿಗಳ ದ್ವಾರಾ ತಲ್ಪಿರುತ್ತದೆ.

ಬ್ರಿಟಿಷರ ಮತ್ತು ಅವರ ಮಿತ್ರಮಂಡಲಿಯವರ ವಿಜಯಕ್ಕೋಸ್ಕರ ಘನತನ್ನು ಹೊಂದಿದ ವೈಸ್‌ರಾಯವರ ಅಪೇಕ್ಷೆಯಂತೆ ತಾ|| 29-3-942 ರಲ್ಲಿ ಏರ್ಪಡಿಸಿದ್ದ ರಾಷ್ಟ್ರೀಯ ಪ್ರಾರ್ಥನೆಯ ದಿನಾಚರಣೆಯ ಸಂಬಂಧವಾಗಿ ಮೈಸೂರು ಸಂಸ್ಥಾನದ ದಿವಾನ್‌ರವರಾದ ರಾಜಮಂತ್ರಪ್ರವೀಣ ಶ್ರೀ|| **ಎನ್. ಮಾಧವರಾಯರವರು ಅಧ್ಯಕ್ಷತೆ** ವಹಿಸಿದ್ದ ಗೈ ಬೆಂಗಳೂರು ಶ್ರೀ ಮಹಾಂತಿನ ಮಠದಲ್ಲಿ ನಡೆದ ಸಾರ್ವಜನಿಕ ಮಹಾಸಭೆಯಲ್ಲಿ, ಸ್ವಾಗತ ಸಮಿತಿಯ ಅಧ್ಯಕ್ಷರಾದ ನಿವೃತ್ತ ಶ್ರೇಷ್ಠ ನ್ಯಾಯಾಧಿಶ ರಾಜಧರ್ಮಪ್ರವೀಣ ದಿವಾನ್ ಬಹದ್ದೂರ್ **ಶ್ರೀ|| ಪಿ. ಮಹಾದೇವಯ್ಯನವರು** ಮಾಡಿದ

ಸ್ವಾಗತ ಭಾಷಣ

———

[ಇಂಗ್ಲಿಷ್ ಭಾಷೆಯ ಕನ್ನಡ ಅನುವಾದ]

ಶ್ರೀ ಸ್ವಾಮಿಜಿಯವರೇ ಮಾನ್ಯ ಅಧ್ಯಕ್ಷರೇ

ಮಹಿಳೆಯರೇ, ಮಹಾಶಯರೇ!

ಮೈಸೂರು ಸಂಸ್ಥಾನದ ದಿವಾನರವರು ತಮಗಿದ್ದ ಅನೇಕ ಕಾರ್ಯಗೌರವಗಳ ಮಧ್ಯೆ ಅವಕಾಶಮಾಡಿಕೊಂಡು ನನ್ನ ಪ್ರಾರ್ಥನೆಯನ್ನು ಮನ್ನಿಸಿ ಈ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಲು ಸಮ್ಮತಿಸಿದುದಕ್ಕಾಗಿ ನನ್ನ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಅರ್ಪಿಸಬೇಕಾಗಿದೆ ಯುದ್ಧವು ಭರತಖಂಡದ ಎಲ್ಲೆಕಟ್ಟಿನೊಳಕ್ಕೆ ಬಹಳ ರಭಸದಿಂದ ನುಗ್ಗಿಬರುವ ಈ ವಿಷಮ ಸಮಯದಲ್ಲಿ ಸ್ವದೇಶಾಭಿಮಾನಿಯಾದ ಪ್ರತಿಯೊಬ್ಬ ಭಾರತೀಯನೂ ನೇರವಾಗಿಯಾಗಲೀ ಬೇರೆಯಾಗಿಯಾಗಲೀ ಯುದ್ಧಪ್ರಯತ್ನಗಳಿಗೆ ಸಹಾಯ ಮಾಡಿ, ಬ್ರಿಟಿಷರೂ ಅವರ ಮಿತ್ರಮಂಡಲಿಯವರೂ ಘಾತುಕರಾದ ಶತ್ರುಗಳನ್ನು ನಿಗ್ರಹಿಸಿ ಬೇಗನೆ ಜಯವನ್ನು ಪಡೆಯುವುದಕ್ಕೆ ನೆರವಾಗುವುದು ಆತನ ಪ್ರಧಾನ ಕರ್ತವ್ಯವಾಗಿರುವುದು ಈಗ ನಡೆಯುತ್ತಿರುವ ಜಗದ್ಗುರು ಶ್ರೀ ರೇಣುಕಾಚಾರ್ಯ ಪೂಜ್ಯಪಾದರ ಜಯಂತ್ಯುತ್ಸವದ ಸಮಯದಲ್ಲಿ ಬ್ರಿಟಿಷರಿಗೂ ಅವರ ಮಿತ್ರಮಂಡಲಿಯವರಿಗೂ ಜಯವನ್ನು ಕೋರಿ ಪ್ರಾರ್ಥನೆಯನ್ನು ಸಲ್ಲಿಸುವ ಈ ಸಮಾರಂಭವನ್ನು ಏರ್ಪಡಿಸಿದುದು ಸಂತೋಷಕರವಾದ ಸಂಗತಿಯಾಗಿದೆ ಜಗದ್ಗುರು ಶ್ರೀ ರೇಣುಕಾಚಾರ್ಯರ ಶುಭನಾಮವು ವಿರೋಧಿಗಳ ಮೇಲೆ ವಿಜಯದ ಪರ್ಯಾಯಶಬ್ದವಾಗಿದೆ ಪವಿತ್ರರಾದ ಶ್ರೀ ಆಚಾರ್ಯರು ವೀರಶೈವ ಮತಸ್ಥಾಪಕರಲ್ಲಿ ಸುಪ್ರಸಿದ್ಧ ಶ್ರೀ ಪಂಚಾಚಾರ್ಯರಲ್ಲಿ ಒಬ್ಬರಾಗಿದ್ದಾರೆ ಮದರಾಸ್ ಸರ್ಕಾರದ ಸಿವಿಲ್ ಸರ್ವೀಸಿನಲ್ಲಿ ಕೆಲಸಮಾಡುತ್ತಿದ್ದ ಸುಪ್ರಸಿದ್ಧ ತೆಲಗು ಪಂಡಿತರಾದ ದಿವಂಗತ ಶ್ರೀ ಸಿ. ಪಿ. ಬ್ರೌನ್ ಅವರು ಪ್ರೊ|| ಎಚ್ ಎಚ್ ವಿಲ್ಸನ್‌ರವರ ಕೋರಿಕೆಯಂತೆ ಈ ವೀರಶೈವ ಸಿದ್ಧಾಂತದ ವಿಷಯವಾಗಿ ಹೆಚ್ಚು ಪರಿಶ್ರಮವನ್ನು ಪಡೆದು ಮದರಾಸ್ ಜರ್ನಲ್ ಆಫ್ ಲಿಟರೇಚರ್ ಅಂಡ್ ಸೈನ್ಸ್ (Madras Journal of Literature and Science Vol XI) ಎಂಬ ಗ್ರಂಥದ ಹನ್ನೊಂದನೆಯ ಸಂಪುಟದಲ್ಲಿ ಒಂದು ಲೇಖನವನ್ನು ಪ್ರಕಟಮಾಡಿದರು ಈ ಪ್ರಬಂಧದಲ್ಲಿ ಆ ಪ್ರಖ್ಯಾತ ವಿದ್ವನ್ಮಣಿಗಳು ಶ್ರೀ ರೇಣುಕಾಚಾರ್ಯರ ಮತ್ತು ಇತರ ಆಚಾರ್ಯರ ಜೀವನ ಚರಿತ್ರೆಯ ವಿಷಯವನ್ನು ಹೇಳಿರುವುದಲ್ಲದೆ ವೀರಶೈವ ತತ್ವಸಿದ್ಧಾಂತದ ಕೆಲವು ಸ್ವರೂಪಗಳನ್ನು ಪ್ರಾಚೀನ ಗ್ರೀಕರ ತತ್ವಸಿದ್ಧಾಂತದೊಡನೆ ಹೋಲಿಸಿರುತ್ತಾರೆ ಬ್ರಹ್ಮಸೂತ್ರಗಳ ಮೇಲೆ ವೀರಶೈವ ಸಿದ್ಧಾಂತ ಪರವಾಗಿ ಶ್ರೀಪತಿ ಪಂಡಿತರಿಂದ ರಚಿಸಲ್ಪಟ್ಟಿರುವ 'ಶ್ರೀಕರಭಾಷ್ಯ' ವೆಂಬ ಮಹಾಗ್ರಂಥಕ್ಕೆ ನನ್ನ ಮಿತ್ರರಾದ ರಾಜಚರಿತ ವಿಶಾರದ ರಾವ್‌ಬಹದ್ದೂರ್ ಶ್ರೀಮಾನ್ ಸಿ ಹಯವದನರಾವ್, ಬಿ ಎ, ಬಿ ಎಲ್ ರವರು ದೀರ್ಘ ಪ್ರಸ್ತಾವನೆಯನ್ನು ಬರೆದಿದ್ದಾರೆ ವಿಮರ್ಶಾತ್ಮಕವಾದ ಈ ವ್ಯಾಖ್ಯಾನವು ಪಾಶ್ಚಾತ್ಯ ಮತ್ತು ಪೌರಸ್ತ್ಯ ದೇಶಗಳ ಸುಪ್ರಸಿದ್ಧ ಪಂಡಿತರಾದ ಪ್ರೊ|| ಬ್ಯಾರಡೇಲ್ ಕೀತ್ ಮೊದಲಾದ ಮಹನೀಯರ ಮೆಚ್ಚುಗೆಯನ್ನು ಪಡೆದಿದೆ ಈ ಮಹಾಗ್ರಂಥದಲ್ಲಿ ರೇಣುಕಾಚಾರ್ಯರ ಜ್ಞಾನಭಂಡಾರದ ಆಳ ನೀಳಗಳನ್ನು ಸಹ ನೋಡಬಹುದು ಕಡೂರು ಜಿಲ್ಲೆಯಲ್ಲಿರುವ ಶ್ರೀ ರೇಣುಕಾಚಾರ್ಯರ ಪೀಠವಾದ ಶ್ರೀ ಬಾಳೆಹೊನ್ನೂರು ಸಂಸ್ಥಾನದ ಮತ್ತು ವೀರಶೈವಮತ ಸಿದ್ಧಾಂತದ ವಿಷಯಗಳು ಮೈಸೂರು ಸರ್ಕಾರದವರು ಪ್ರಕಟಿಸಿರುವ 1901 ನೆಯ ಜನಗಣತಿಯ ವರದಿಯಲ್ಲಿ (The Mysore Census Report 1901) ಮುದ್ರಿತವಾಗಿವೆ

II ಅತ್ಯಂತ ಪ್ರಾಚೀನವಾದ ಸಿದ್ಧಾಂತಶಿಖಾಮಣಿ ಎಂಬ ಮತಗ್ರಂಥದಲ್ಲಿ ಶ್ರೀ ರೇಣುಕಾಚಾರ್ಯರು ಪ್ರಸಿದ್ಧ ಮಹರ್ಷಿಗಳಾದ ಪೂಜ್ಯ ಅಗಸ್ತ್ಯರಿಗೆ ವೀರಶೈವ ಮತ ಸಿದ್ಧಾಂತ ತತ್ವಗಳನ್ನು ಉಪದೇಶಮಾಡಿದರೆಂದು ತಿಳಿದುಬರುತ್ತದೆ ಅಷ್ಟೇ ಅಲ್ಲದೆ ಶ್ರೀ ರೇಣುಕಾಚಾರ್ಯರು ಚಂದ್ರಮೌಳೀಶ್ವರ ಲಿಂಗವನ್ನು ಸುಪ್ರಖ್ಯಾತರಾದ ಶ್ರೀ ಶಂಕರಾಚಾರ್ಯರಿಗೆ ಅನುಗ್ರಹಿಸಿದ್ದರೆಂಬ ವಿಷಯಕ್ಕೆ ಅನೇಕ ಪ್ರಮಾಣಗಳು ದೊರೆತಿವೆ ಅವುಗಳಲ್ಲಿ ಮುಖ್ಯವಾದವುಗಳನ್ನು ಈ ಕೆಳಗೆ ಹೇಳಲಾಗಿದೆ —

1 ಶ್ರೀ ಶೃಂಗೇರಿಮಠದ ಪುಸ್ತಕ ಭಂಡಾರದಲ್ಲಿ 'ಗುರುವಂಶಕಾವ್ಯ' ಎಂಬ ಗುರುಪರಂಪರೆಯ ಚರಿತ್ರೆಗಳನ್ನು ಒಳಗೊಂಡ ಗ್ರಂಥ

2 ಶಿವತತ್ವರತ್ನಾಕರ ವೆಂಬ ಮಹಾಗ್ರಂಥಕ್ಕೆ ಇಂಡಿಯಾ ಸರ್ಕಾರದ ಪ್ರಾಚೀನ ವಸ್ತು ಶೋಧಕರಾದ ರಾವ್‌ಬಹದ್ದೂರ್ ಶ್ರೀಮಾನ್ ಎಚ್ ಕೃಷ್ಣಶಾಸ್ತ್ರೀ ಬಿ ಎ ಅವರು ಬರೆದಿರುವ ಪ್ರಸ್ತಾವನೆ

3 ಮದರಾಸ್ ಸರ್ಕಾರದ ಕನ್ನಡ ಸೀನಿಯರ್ ಟ್ರಾನ್ಸ್‌ಲೇಟರಾದ ಶ್ರೀಮಾನ್ ವಿ ರಾಮಾರಾವ್ ಎಂ ಎ ಎಲ್ ಎಲ್ ಬಿ ಅವರು ಮತ್ತು ಮದರಾಸ್ ಸರ್ಕಾರದ ಪ್ರಾಚೀನ ಪುಸ್ತಕ ಭಂಡಾರದ ವಿದ್ವಾನ್ ಪಿ ಸುಂದರಶಾಸ್ತ್ರಿಯವರೂ ಹೊಸದಾಗಿ ಪ್ರಕಟಮಾಡಿರುವ ಅವರ ಪ್ರಸ್ತಾವನೆ [illegible]

4 ಶ್ರೀ ಶಿವತತ್ವರತ್ನಾಕರದ [illegible] ಬರೆದಿರುವ ವಿದ್ಯಾರಣ್ಯ [illegible] ಗ್ರಂಥಗಳ [illegible]

5 ಮೈಸೂರು ಸರ್ಕಾರದವರ ಪ್ರಕಟಿಸಿರುವ [illegible] ಗ್ರಂಥದಲ್ಲಿ [illegible] ಚಂದ್ರಮೌಳೀಶ್ವರ ಲಿಂಗವು ಈಗಲೂ ಶ್ರೀ ಶೃಂಗೇರಿ ಮಠದಲ್ಲಿ ಅತ್ಯಂತ ಪೂಜ್ಯಸ್ಥಾನವನ್ನು ಹೊಂದಿರುವುದಲ್ಲದೆ ಅದಕ್ಕೆ ಪ್ರತಿದಿನವೂ ಪೂಜಾಪುರಸ್ಕಾರಗಳು ನಡೆಯುತ್ತಿವೆ

III ಭರತಖಂಡದಲ್ಲಿ ವೀರಶೈವರ ಒಟ್ಟು ಜನಸಂಖ್ಯೆ [illegible] ಲಕ್ಷ "ಕಾಶೀಕಾಂಡ" ಶ್ರೀಶೈಲಕಾಂಡ ಮತ್ತು ಪಾಶುಪತತಂತ್ರ ಮೊದಲಾದ ಗ್ರಂಥಗಳಲ್ಲಿ ಅಗಸ್ತ್ಯ ಗೌತಮ, ದಧೀಚಿ, ದೂರ್ವಾಸ, ವ್ಯಾಸ ವಾಮದೇವ ಕಶ್ಯಪ ಮತ್ತು ಉಪಮನ್ಯು ಮೊದಲಾದ ಸುಪ್ರಸಿದ್ಧ ಮಹರ್ಷಿಗಳು ವೀರಶೈವ ಸಿದ್ಧಾಂತದ ತತ್ವರಹಸ್ಯಗಳನ್ನು ತಿಳಿದು ಆಚರಿಸುತ್ತಿದ್ದರೆಂಬುದು ಗೊತ್ತಾಗುತ್ತದೆ ನಳ, ಕಕುತ್ಸ ಮತ್ತು ಪುರೂರವಸ್ಸು ಎಂಬ ಚಕ್ರವರ್ತಿಗಳು ವೀರಶೈವ ಮತದ ಪರಮ ಭಕ್ತರಾಗಿದ್ದರೆಂದು ತಿಳಿದುಬರುತ್ತದೆ ತಮ್ಮ ಮತವು ವೇದದಷ್ಟೇ ಪ್ರಾಚೀನವಾದುದೆಂದು ವೀರಶೈವರು ನಂಬುತ್ತಾರೆ ಗತಿಸಿದ ಕಾಶಿಯ ಮಹಾಮಹೋಪಾಧ್ಯಾಯ ಶ್ರೀ ಶಿವಕುಮಾರ ಪಂಡಿತರಿಂದ ವ್ಯಾಖ್ಯಾನ ಬರೆಯಲ್ಪಟ್ಟಿರುವ "ಲಿಂಗಧಾರಣ ಚಂದ್ರಿಕೆ" ಎಂಬ ಗ್ರಂಥವು ಲಿಂಗಧಾರಣ ವಿಷಯದಲ್ಲಿ ಪರಮ ಪ್ರಮಾಣವೆಂದು ವೀರಶೈವರ ಅಭಿಪ್ರಾಯವಾಗಿದೆ ಮೈಸೂರು ಸಂಸ್ಥಾನದ ಸುಪ್ರಸಿದ್ಧ ಆಸ್ಥಾನ ವಿದ್ವಾಂಸರಾದ ವೇದಶಿಖಾಮಣಿ ರಾಮಾನುಜಾಚಾರ್ಯರು 'ಶಿವಾದ್ವೈತಮಂಜರಿ' ಎಂಬ ಪ್ರಾಚೀನ ವೀರಶೈವ ಸಿದ್ಧಾಂತ ಗ್ರಂಥಕ್ಕೆ ಬರೆದಿರುವ ವ್ಯಾಖ್ಯಾನವು ಈ ಸಂದರ್ಭದಲ್ಲಿ ಗಮನಾರ್ಹವಾಗಿದೆ ಈ ಗ್ರಂಥವನ್ನು ಪ್ರಚುರಪಡಿಸುವ ಸಲುವಾಗಿ 'ಪಂಚಾಚಾರ್ಯಪ್ರಭಾ' ಪತ್ರಿಕೆಯ ಸಂಪಾದಕರಾದ ಪಂಡಿತ ಶ್ರೀ ಕಾಶೀನಾಥ ಶಾಸ್ತ್ರಿಗಳು ಈ ಗ್ರಂಥವನ್ನು ಕನ್ನಡಕ್ಕೆ ಪರಿವರ್ತನೆ ಮಾಡಿಸಿದರು ಮತ್ತು ಇದು ಕೀರ್ತಿಶೇಷರಾದ ನಾಲ್ವಡಿ ಶ್ರೀ ಕೃಷ್ಣರಾಜ ಒಡೆಯರವರಿಗೆ ಸಮರ್ಪಿಸಲ್ಪಟ್ಟಿದೆ ಶೈವಮತವು ಪ್ರಾಚೀನಕಾಲದಲ್ಲಿ ಬಹಳ ದೂರ ವ್ಯಾಪಿಸಿತ್ತೆಂಬುದೂ, ಭರತಖಂಡದ ವಿವಿಧ ಭಾಗಗಳಲ್ಲಿ ಪಂಚಾಚಾರ್ಯರು ಈ ಮತವನ್ನು ಪ್ರಚುರಪಡಿಸಿದರೆಂಬುದೂ ಅನೇಕ ರಾಜರು ಈ ಮತಾನುಯಾಯಿಗಳಾಗಿದ್ದು ಗೌರವಿಸುತ್ತಿದ್ದರೆಂಬುದೂ ಇತಿಹಾಸ ಪ್ರಸಿದ್ಧವಾದ ವಿಷಯಗಳಾಗಿವೆ ನೂತನ ಸಂಶೋಧನೆಗಳಿಂದ ಈ ವಿದ್ಯಮಾನಗಳು ಸ್ಥಿರಪಟ್ಟಿವೆ ಮಹಮ್ಮದೀಯರ ಪ್ರಥಮ ಆಕ್ರಮಣಕಾಲದಲ್ಲಿ ಭರತಖಂಡದಲ್ಲಿ ಒಂದುಕೋಟಿ ಇಪ್ಪತ್ತು ಲಕ್ಷ ಲಿಂಗಗಳು ಇದ್ದವೆಂದು ಐತಿಹಾಸಿಕ ಪ್ರಮಾಣಗಳಿಂದ ಗೊತ್ತಾಗುತ್ತದೆ ಕ್ರೈಸ್ತಮತವು ಅಭಿವೃದ್ಧಿಯಾಗುವುದಕ್ಕೆ ಮೊದಲೇ ಬಹಳ ದೂರದೇಶಗಳಲ್ಲಿಯೂ ಸಹ ಶೈವಮತವು ತನ್ನ ಪ್ರಭಾವವನ್ನು ಬೀರಿತ್ತೆಂದೂ, ಯೂರೋಪ್, ಆಫ್ರಿಕ ಮತ್ತು ಅಮೇರಿಕ ದೇಶಗಳಲ್ಲಿಯೂ ಸಹ ಶೈವ ದೇವಾಲಯಗಳು ಕಟ್ಟಲ್ಪಟ್ಟಿದ್ದವೆಂದೂ ಖಚಿತವಾದ ಆಧಾರಗಳಿಂದ ಗೊತ್ತಾಗುತ್ತದೆ ನಿರ್ಮಾಲ್ಯ ರತ್ನಾಕರ ವೆಂಬ ಪುಸ್ತಕದಲ್ಲಿ ಶ್ರೀ ಬಾಬು ಬೆಚೂಸಿಂಹರೆಂಬ ಪಂಡಿತರು ಅಫ್ಘನಿಸ್ಥಾನ್, ಚಿತ್ರಾಲ್, ಕಾಬೂಲ್, ಬುಲಖ, ಬೊಖಾರ, ಮೆಕ್ಕಾ, ಬೇಬಿಲಾನ್, ಈಜಿಪ್ಟ್, ಗ್ರೀಸ್, ಇಟಲಿ, ಗ್ಲಾಸ್ಗೋ, ಬ್ರೆಜಿಲ್ ಮುಂತಾದ ದೇಶಗಳಲ್ಲಿ ಶೈವಧರ್ಮವು ಪ್ರಚುರವಾಗಿತ್ತೆಂದು ತಿಳಿಸಿರುತ್ತಾರೆ ಜಾವಾ, ಬೋರ್ನಿಯೋ, ಅಸ್ಸಾಂ ಮುಂತಾದ ದೇಶಗಳಲ್ಲಿ ಈಗ ಸಿಕ್ಕಿರತಕ್ಕ ಆಧಾರಗಳಿಂದ ಆ ದೇಶಗಳಲ್ಲಿಯೂ ಸಹ ಶೈವಮತವು ಪ್ರಚಾರದಲ್ಲಿತ್ತೆಂದು ಕಂಡುಬರುತ್ತದೆ ನೇಪಾಳ, ಕಾಶ್ಮೀರ, ಕಾಶಿ, ಉಜ್ಜಯಿನಿ, ಚೋಳ ಇತ್ಯಾದಿ ದೇಶಗಳ ರಾಜರುಗಳು ವೀರಶೈವಮತದ ಅನನ್ಯ ಭಕ್ತರಾಗಿದ್ದರೆಂದು ಪ್ರಾಚೀನ ಶಾಸನಗಳಿಂದ ತಿಳಿದುಬರುತ್ತದೆ ಬೊಂಬಾಯಿ ಪ್ರಾಂತದ ರಾಯಲ್ ಏಷಿಯಾಟಿಕ್ ಸೊಸೈಟಿಯ ಹನ್ನೊಂದನೆಯ ರಿಪೋರ್ಟಿನಲ್ಲಿ ಕ್ರಿ ಶ ಹತ್ತನೇ ಶತಮಾನದಲ್ಲೂ ಸಹ ಆ ಪ್ರಾಂತದ ಅನೇಕ ರಾಜರು ವೀರಶೈವಮತಕ್ಕೆ ಬಹಳ ಗೌರವವನ್ನು ಕೊಡುತ್ತಿದ್ದರೆಂಬುದನ್ನು ಸೂಚಿಸುವ ಶಾಸನಗಳಿವೆ ಮತ್ತು ದಕ್ಷಿಣದೇಶದಲ್ಲಿ ಕ್ರಿ ಶ ಆರನೆಯ ಶತಮಾನದಲ್ಲಿ 'ಅತ್ಯಂತಕಾಮ' 'ರಾಜಸಿಂಹ', "ಗುಣಭರ" ಮೊದಲಾದ ಪಲ್ಲವರಾಜರು ವೀರಶೈವರಾಗಿದ್ದರೆಂಬುದನ್ನು ತಿಳಿಸುವ ಶಾಸನಗಳಿವೆ ತಮ್ಮೆಲ್ಲರಿಗೂ ತಿಳಿದಿರುವಂತೆ ನಮ್ಮ ಮೈಸೂರು ರಾಜಮನೆತನದವರೂ ಸಹ ಕ್ರಿ ಶ 1399 ರಿಂದ 1605 ರ ವರೆಗೆ ವೀರಶೈವ ಮತಾನುಯಾಯಿಗಳಾಗಿದ್ದರು ಕೊಡಗಿನ ಮತ್ತು ನಗರ ರಾಜ್ಯದ ರಾಜರೂ ಸಹ ವೀರಶೈವರಾಗಿದ್ದರು

IV (a) ಕಾಶಿಯಲ್ಲಿರುವ ಪ್ರಸಿದ್ಧವಾದ ಜಂಗಮವಾಡಿ ಮಠವು ಪಂಚಾಚಾರ್ಯರ ಇನ್ನೊಂದು ಪ್ರಾಚೀನ ಪೀಠವಾಗಿದೆ ಇದನ್ನು ಶ್ರೀ ವಿಶ್ವಾರಾಧ್ಯರು ಸ್ಥಾಪಿಸಿದರು ಇದಕ್ಕೆ ಹಿಂದೂರಾಜರಲ್ಲದೆ ಸುಪ್ರಸಿದ್ಧರಾದ ಹುಮಾಯೂನ್, ಅಕ್ಬರ್ ಜಹಂಗೀರ್, ಔರಂಗಜೇಬ್, ಮಹಮ್ಮದ್‌ಷಹ ಮೊದಲಾದ ಮೊಗಲ್ ಚಕ್ರವರ್ತಿಗಳೂ ಸಹ ಭೂದಾನಮಾಡಿರುತ್ತಾರೆ ಈಗ ಕಾಶಿಯ ವಿಶ್ವವಿದ್ಯಾನಿಲಯವು ಕಟ್ಟಲ್ಪಟ್ಟಿರುವ ನಿವೇಶನವು ಹಿಂದೆ ಶ್ರೀ ಜಂಗಮವಾಡಿ ಸಂಸ್ಥಾನಕ್ಕೆ ಸೇರಿತ್ತು. ಸಂಸ್ಥಾನಾಧಿಪತಿಗಳಾದ ಶ್ರೀ ಸ್ವಾಮಿಗಳವರು ಅದನ್ನು ವಿಶ್ವವಿದ್ಯಾನಿಲಯಕ್ಕೆ ಕೊಟ್ಟಿರುತ್ತಾರೆ

(b) ಹಿಮಾಲಯದ ತಪ್ಪಲು ಪ್ರದೇಶದಲ್ಲಿರುವ ಶ್ರೀ ಕೇದಾರ ಪೀಠವು ಪಂಚಾಚಾರ್ಯರ ಮತ್ತೊಂದು ಪವಿತ್ರ ಪೀಠವಾಗಿದೆ ಇದನ್ನು ಶ್ರೀ ಏಕೋರಾಮಶಿವಾಚಾರ್ಯರು ಸ್ಥಾಪಿಸಿದರು ಮಹಾಭಾರತದಲ್ಲಿ ಪ್ರಸಿದ್ಧನಾಗಿರುವ ಜನಮೇಜಯರಾಯನು ಈ ಮಠದ ಆನಂದಲಿಂಗ ಜಂಗಮರಿಗೆ ದತ್ತಿಯನ್ನು ಬಿಟ್ಟಿದ್ದನೆಂದು ತಾಮ್ರಶಾಸನದಿಂದ ಗೊತ್ತಾಗುತ್ತದೆ ಮತ್ತು ಈ ದತ್ತಿಯ ತಾಮ್ರಶಾಸನದಲ್ಲಿರುವಂತೆ ಈಗಲೂ ಸಹ ಅಲ್ಲಿ ಕಂಡುಬರುವ 14೦ ಗ್ರಾಮಗಳು ಶ್ರೀಮಠದ ಅನುಭವದಲ್ಲಿವೆ ಟೆಹರಿ (Tehri) ಸಂಸ್ಥಾನದ ರಾಜರು ಈ ಮಠದ ಶಿಷ್ಯರು ಉದಯಪುರ ಕಾಶ್ಮೀರ, ನೇಪಾಳ ಮತ್ತು ಇತರ ಹಿಮಾಲಯದ ಸಂಸ್ಥಾನಗಳ ರಾಜರುಗಳು ಈ ಮಠಕ್ಕೆ ವರ್ಷ ವರ್ಷವೂ ಕಾಣಿಕೆಗಳನ್ನು ಒಪ್ಪಿಸುತ್ತಿದ್ದಾರೆ ಶ್ರೀಮಠದ ಪವಿತ್ರತೆ ಮತ್ತು ಗೌರವಗಳನ್ನು ಮನ್ನಿಸಿ ಬ್ರಿಟಿಷ್ ಸರ್ಕಾರದವರೂ ಕೂಡ ಈ ಸಂಸ್ಥಾನದ ಶ್ರೀಗಳವರು ಎಪ್ಪತ್ತೆರಡು ಬಿರುದಾವಳಿಗಳೊಡನೆ ಭರತಖಂಡದಲ್ಲೆಲ್ಲಾ ಸಂಚಾರ ಮಾಡಬಹುದೆಂದು ರಹದಾರಿ ಕೊಟ್ಟಿರುತ್ತಾರೆ ಕೀರ್ತಿಶೇಷರಾದ ಶ್ರೀಮನ್ನಾಲ್ವಡಿ ಕೃಷ್ಣರಾಜ ಒಡೆಯ

ರವರು ಕೈಲಾಸ ಪರ್ವತದಿಂದ ಹಿಂತಿರುಗಿ ದಯಮಾಡು ವಾಗ ಮೂರು ದಿನಗಳು ಈ ಮಠದಲ್ಲಿ ಬಿಡಾರಮಾಡಿ ದಿವ್ಯವಾದ ಪೂಜೆಯನ್ನು ನಡೆಯಿಸಿದರು

V ಈಗ ಶ್ರೀ ಮಹಾಂತಿನ ಮಠದ ಅಧ್ಯಕ್ಷರಾದ ನಮ್ಮ ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳವರ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಲಪೇಕ್ಷಿಸುತ್ತೇನೆ ಶ್ರೀಗಳವರು ವೀರಶೈವ ವೈದಿಕವೃಂದದಲ್ಲಿ ಉಚ್ಚಸ್ಥಾನವನ್ನು ಅಲಂಕರಿಸಿದ್ದಾರೆ ಇವರು ವೀರಶೈವ ಸಮಾಜದ ಭಕ್ತಿಪೂಜ್ಯತೆಗಳನ್ನು ಪಡೆದ ಸುಪ್ರಸಿದ್ಧ ವ್ಯಕ್ತಿಗಳಾಗಿದ್ದಾರೆ ಶ್ರೀ ರೇಣುಕಾಚಾರ್ಯರಿಂದ ಸ್ಥಾಪಿತವಾದ ಶ್ರೀ ಬಾಳೆಹೊನ್ನೂರು ಮಹಾಸಂಸ್ಥಾನದ ಜಗದ್ಗುರುಗಳ ಪ್ರಿಯಶಿಷ್ಯರಾಗಿದ್ದಾರೆ ಇವರು ಘನ ವಿದ್ವಾಂಸರು ಈ ಮಠಕ್ಕೆ ಮಾತ್ರವಲ್ಲದೆ ವಿಭೂತಿಪುರದ ಶ್ರೀ ಮಠಕ್ಕೂ ಮತ್ತು ಅದರ ಶಾಖೆಗಳಿಗೂ ಇವರು ಪಟ್ಟಾಧಿಕಾರಿಗಳಾಗಿದ್ದಾರೆ ಇವರ ಸಂಯಮ ಮತ್ತು ತಪಸ್ಸುಗಳು ಅತ್ಯದ್ಭುತವಾಗಿವೆ ಇವರ ದರ್ಶನಮಾಡಿದವರೆಲ್ಲರೂ ಇವರ ಮಹಿಮೆಯನ್ನು ನೋಡಿ ಆಶ್ಚರ್ಯಯುತರಾಗಿದ್ದಾರೆ ಸನ್ಮಾರ್ಗಪ್ರವರ್ತನೆಯೇ ಇವರ ಉಪದೇಶ ಮತ್ತು ಅನುಷ್ಠಾನ. ಇವರು ಯಾವಾಗಲೂ ನೈತಿಕ ಮಾರ್ಗಕ್ಕೆ ಬೆಲೆಕೊಟ್ಟು ಸಾಮಾನ್ಯವಾಗಿ ಮಾನವನ ಆತ್ಮವು ಯಾವ ಸದ್ಗುಣಗಳನ್ನು ಕಂಡರೆ ಆನಂದಿಸುವುದೋ ಅಂತಹ ಉದಾತ್ತ ಗುಣಗಳಿಗೆ ಆಕರರಾಗಿ ಜನಗಳನ್ನು ತಮ್ಮ ಸದುಪದೇಶ ಮತ್ತು ಸದನುಷ್ಠಾನಗಳಿಂದ ಉಚ್ಚಧ್ಯೇಯದ ಕಡೆ ತಿರುಗಿಸುತ್ತಾರೆ

ಇವರ ಧ್ಯಾನ ಮತ್ತು ಸಂಯಮದ ಪ್ರಭಾವವು ನಮ್ಮ ದೇಶದಲ್ಲಿ ಮಾತ್ರವಲ್ಲದ, ಧಾರವಾಡ, ಬೆಳಗಾಂವ ಮುಂತಾದ ಪ್ರಾಂತಗಳಲ್ಲಿಯೂ ಸಹ ಹರಡಿದೆ ಬ್ರಿಟಿಷರು ಮತ್ತು ಅವರ ಮಿತ್ರರಿಗೆ ಶೀಘ್ರವಾಗಿ ಜಯವಾಗಲೆಂದು ವಿಶೇಷ ಪೂಜಾದಿಗಳನ್ನು ನಡೆಸಲು ಶ್ರೀ ಸ್ವಾಮಿಗಳವರನ್ನು ಅರಿಸಿಕೆರೆ ಕಾರ್ಯಕರ್ತರು ವಿಜ್ಞಾಪಿಸಿದ್ದರಿಂದ 16 ನೆಯ ತಾರೀಖಿನಿಂದ ಶ್ರೀಗಳವರು ಪ್ರತಿದಿನವೂ ಸಪ್ತಶತಿ ಜಪ, ಪಂಚಬ್ರಹ್ಮ ಹೋಮ, ಮತ್ತು ಮೃತ್ಯುಂಜಯ ಜಪಾದಿಗಳನ್ನು ನಡೆಯಿಸುತ್ತಿದ್ದಾರೆ 7 ನೆಯ ತಾರೀಖಿನ ದಿನ ಶ್ರೀ ರುದ್ರ ಹೋಮವು ನಡೆಯಿಸಲ್ಪಟ್ಟಿತು ಈ ದಿನ ಪೂಜೆಗಳೆಲ್ಲವೂ ಪೂರ್ತಿಯಾದವು ಶ್ರೀ ಸ್ವಾಮಿಗಳವರು ಹನ್ನೊಂದು ದಿವಸಗಳಲ್ಲಿ ಐದೂವರೆ ಲಕ್ಷ ಜಪವನ್ನು ಮುಗಿಯಿಸಿದ್ದಾರೆ ಎಂಟುಸಾವಿರ ಮಂದಿ ಒಡವರಿಗೆ ಅನ್ನದಾನದ ಏರ್ಪಾಡಾಗಿದೆ ಆ ಸಮಯದಲ್ಲಿ ಸಿಂಗರಿಸಲ್ಪಟ್ಟ ರಾಜಬೀದಿಗಳಲ್ಲಿ ಜನ ಮತ್ತು ವಾಹನಗಳ ಗುಂಪನ್ನು ನಿಲ್ಲಿಸಲು ಪೌರಸಭೆಯನ್ನು ಪ್ರಾರ್ಥಿಸಲಾಗಿದೆ

VI ನಾವು ಜೀವಿಸುತ್ತಿರುವ ಈ ಆಧುನಿಕ ಯುಗದಲ್ಲಿ ಐಹಿಕಸುಖಾಪೇಕ್ಷೆಯೇ ಜನಗಳ ಮನಸ್ಸಿನಲ್ಲಿ ಆಧಿಪತ್ಯಮಾಡುತ್ತಿದ್ದರೂ, ಭಾರತವು ಪ್ರಪಂಚದಲ್ಲೆಲ್ಲಾ ಅತ್ಯಂತ ಆಧ್ಯಾತ್ಮಿಕ ದೇಶವೆಂತಲೂ ಭಾರತವೇ ನೈತಿಕ ಕ್ಷೇತ್ರಗಳಲ್ಲಿ ಎಲ್ಲ ಜನಾಂಗಗಳ ಮುಂದಾಳಾಗುವುದೆಂತಲೂ ನಂಬುವ ಜನರು ಈಗಲೂ ಅನೇಕರಿರುವರು ಭಾರತದ ಆಧ್ಯಾತ್ಮಿಕ ಜೀವನವನ್ನು ರಾಜಕೀಯ ಚಳವಳಿಯ ಬಿರುಗಾಳಿಗಳು ಈಗ ಸದ್ಯದಲ್ಲಿ ಮರೆಮಾಚಿದ್ದರೂ ಸಹ ಆಧ್ಯಾತ್ಮಿಕ ಜೀವನವು ನಂದಿಹೋಗದೆ ಇನ್ನೂ ಜೀವಂತವಾಗಿಯೇ ಇರುವುದೆಂದು ವಿಚಾರಜ್ಞರು ಅಭಿಪ್ರಾಯಪಡುತ್ತಾರೆ ಈಗಿನ ಯಾವ ವಿಶ್ವವಿದ್ಯಾನಿಲಯಗಳಲ್ಲಿಯೂ ಬೋಧಿಸಲಿಕ್ಕೆ ಸಾಧ್ಯವಾಗದಿರುವ ಅಮೂಲ್ಯವಾದ ಜ್ಞಾನಜ್ಯೋತಿಯ ಬೆಳಕನ್ನು ವಿಶ್ವದಲ್ಲಿ ಹರಡುವ ಮಹತ್‌ಶಕ್ತಿಯುಳ್ಳ ಋಷಿಗಳು ಈಗಲೂ ಇಂಡಿಯಾ ದೇಶದಲ್ಲಿರುವರೆಂತಲೂ ವಿಚಾರಜ್ಞರು ಅಭಿಪ್ರಾಯಪಡುತ್ತಾರೆ ಈಗಿನ ಕಾಲದಲ್ಲಿ ವಿದ್ಯಾವಂತರಾದ ನಾಸ್ತಿಕರಿದ್ದಾಗ್ಯೂ ಆತ್ಮಸ್ವರೂಪವನ್ನು ತಿಳಿಯಲು ಧ್ಯಾನವೊಂದೇ ಅತ್ಯುತ್ತಮವಾದ ಸಾಧನವೆಂಬುದನ್ನು ಆಧ್ಯಾತ್ಮಿಕ ಪ್ರಪಂಚವು ಒಪ್ಪುತ್ತದೆ ಆದರೆ ಸರಿಯಾದ ಆತ್ಮಜ್ಞಾನವನ್ನು ಪಡೆಯುವುದು ಕಷ್ಟಸಾಧ್ಯವೆಂಬುದರಲ್ಲಿ ಸಂಶಯವಿಲ್ಲ "ನಾಲ್ಕುಸಾವಿರ ತತ್ತ್ವಶಾಸ್ತ್ರಗ್ರಂಥಗಳೂ ಕೂಡ ಆತ್ಮಸ್ವರೂಪವು ಹೇಗಿರುವುದೆಂಬುದನ್ನು ಬೋಧಿಸಲಾರವು' ಎಂದು ಸುಪ್ರಸಿದ್ಧ ತತ್ತ್ವಶಾಸ್ತ್ರವೇತ್ತನಾದ ವಾಲ್ಟೇರ್ (Voltaıre) ಮಹಾಶಯನು ಸಾರಿ ಹೇಳಿರುತ್ತಾನೆ.

VII ಪಾಶ್ಚಾತ್ಯದೇಶಗಳಲ್ಲಿ ಧ್ಯಾನವೆಂಬುದೊಂದು ಕಣ್ಮರೆಯಾದ ಕಲೆಯಾಗಿರುವುದೆಂಬ ಭಾವನೆಯಿರುವುದಾದರೂ ಪ್ರಪಂಚದ ಸುಪ್ರಸಿದ್ಧರಾದ ಅನೇಕ ವ್ಯಕ್ತಿಗಳು ಈ ಧ್ಯಾನಮಾರ್ಗದಿಂದ ಆವೇಶವನ್ನು ಪಡೆದರೆಂದು ಹೇಳಿದರೆ ನಿಮಗೆ ಆಶ್ಚರ್ಯವಾಗಬಹುದು ಕಾರಾಗೃಹದಲ್ಲಿ ಧ್ಯಾನಸಾಧನೆಮಾಡಿ "ನನ್ನನ್ನು ನಾನು ನೋಡಿದೆ" ಎಂಬುದಾಗಿ ಜಗತ್ಪ್ರಸಿದ್ಧ ವೃತ್ತಪತ್ರಿಕಾ ಸಂಪಾದಕನಾದ ವಿಲಿಯಂ ಟಿ ಸ್ಟೆಡ್ (William T Stead) ಎಂಬುವನು ಹೇಳಿರುವನು ಪ್ರಪಂಚದ ಸುಪ್ರಸಿದ್ಧ ಸಂಶೋಧಕರಲ್ಲೊಬ್ಬನಾದ ಥಾಮಸ್ ಎ ಎಡಿಸನ್ (Thomas A Edison) ಎಂಬವನು ಈ ಧ್ಯಾನಸಾಧನೆಯಿಂದ ಅನೇಕ ಜಟಿಲ ಸಮಸ್ಯೆಗಳನ್ನೂ ಬಗೆಹರಿಸಿಕೊಳ್ಳುತ್ತಿದ್ದನೆಂದು ಗೊತ್ತಾಗಿದೆ ಇಂಗ್ಲೆಂಡ್ ದೇಶದ ರಾಜಕವಿಯಾದ ಲಾರ್ಡ್ ಟೆನಿಸನ್ (Lord Tennyson) ಎಂಬುವನು ಧ್ಯಾನಮಾರ್ಗವನ್ನು ಹೊಗಳುತ್ತ "ನೀನು ನಿನ್ನ ಆತ್ಮಗುಹೆಯನ್ನು ಪ್ರವೇಶಮಾಡಿದರೆ, ಅಂತರಾತ್ಮನ ದಿವ್ಯವಾಣಿಯನ್ನು ಕೇಳಿ ಆನಂದವನ್ನು ಪಡೆಯುವೆ' ಎಂದು ಹೇಳಿರುವನು ಸುಪ್ರಸಿದ್ಧ ಗಣಿತಶಾಸ್ತ್ರಜ್ಞನೂ ಮತ್ತು ಜ್ಯೋತಿಷ್ಯನೂ ಆದ ಸರ್ ಐಸಾಕ್ ನ್ಯೂಟನ್ (Sır Isac Newton) ಎಂಬ ಮೇಧಾವಿಯು ಒಂದಾನೊಂದು ಪ್ರಾತಃಕಾಲ ಬಹಳಹೊತ್ತಿನವರೆಗೂ ಅರ್ಧನಗ್ನನಾಗಿ ಧ್ಯಾನಮಗ್ನನಾಗಿದ್ದುದನ್ನು ಅನೇಕರು ನೋಡಿರುವುದು ಸರ್ವವಿದಿತವಾಗಿದೆ ಇಂಡಿಯ ಮತ್ತು ಈಜಿಪ್ಟ ದೇಶಗಳಲ್ಲಿ ಬ್ರಿಟಿಷ್ ಸೈನ್ಯಾಧಿಕಾರಿಯಾಗಿದ್ದ ಫೀಲ್ಡ್ ಮಾರ್ಷಲ್ ಲಾರ್ಡ್ ಕಿಚನರ್ (Field Marshal Lord Kitchener) ಅವರು ತಮ್ಮ ದೀರ್ಘಕಾಲದ ಅಧಿಕಾರಾವಧಿಯಲ್ಲಿ ಪ್ರಾಚೀನಧ್ಯಾನ ಮಾರ್ಗವನ್ನು ಗುಪ್ತವಾಗಿ ಅಭ್ಯಾಸಮಾಡಿ ಅಸುವಾನ್' (Assuan) ಪಟ್ಟಣದ ಹತ್ತಿರ ನೈಲ್‌ನದಿಯಲ್ಲಿ ಅವರ ಹೆಸರಿನಿಂದ ಕರೆಯಲ್ಪಟ್ಟಿರುವ ದ್ವೀಪವೊಂದರಲ್ಲಿ ಧ್ಯಾನಾಭ್ಯಾಸಮಾಡುತ್ತಿದ್ದರೆಂಬ ವಿಷಯವು ಈಚೆಗೆ ಪ್ರಕಾಶಕ್ಕೆ ಬಂದಿದೆ ಸರಿಯಾದ ಧ್ಯಾನಸಾಧನದಿಂದ ಆತ್ಮಜ್ಞಾನ ಮತ್ತು ಚಿತ್ತಸಂಯಮಗಳು ಲಭ್ಯವಾಗುತ್ತವೆ ಸಾಮಾನ್ಯ ಮನುಷ್ಯರಲ್ಲಿ ಮನಸ್ಸಿನ ಬೆಳಕು ಅನಿರ್ದಿಷ್ಟವಾಗಿ ಚದುರಿಹೋಗಿರುವುದು ಆದರೆ ಒಂದು ನಿರ್ದಿಷ್ಟವಾದ ಸಾಧನಾಶಕ್ತಿಯಿಂದ ಮನಸ್ಸಿನ ಅಂತಹ ಬೆಳಕನ್ನು ಕೇಂದ್ರೀಕರಿಸಿದರೆ ಜಾಜ್ವಲ್ಯಮಾನವಾದ ಜ್ಯೋತಿರ್ಗೋಳವು ಯಾವ ಪದಾರ್ಥದ ಮೇಲಾಗಲಿ ಆ ಜ್ಯೋತಿಯ ಕಿರಣವನ್ನು ಬಿಟ್ಟುದಾದರೆ ಆ ಪದಾರ್ಥವನ್ನು ಸಮಗ್ರವಾಗಿ ನೋಡಬಹುದಲ್ಲದೆ, ಅದರಿಂದ ಉಪಯುಕ್ತವಾದ ವಿಷಯಗಳನ್ನೂ ತಿಳಿದುಕೊಳ್ಳಬಹುದು ನೆಲದಮೇಲೆ ಅನೇಕ ದಿವಸಗಳಿಂದ ಬಿದ್ದಿರುವ ಕಾಗದದ ಚೂರು ಯಾರ ಮನಸ್ಸಿನಲ್ಲಿಯೂ ಯಾವ ಕೌತುಕವನ್ನೂ ಹುಟ್ಟಿಸುವುದಿಲ್ಲ ಆದರೆ ಸೂರ್ಯಕಿರಣಗಳ ಶಾಖವನ್ನು ಕೇಂದ್ರೀಕರಿಸಿ ಸುಡುವ ಶಕ್ತಿಯನ್ನು ನಿದರ್ಶಿಸುವ ಲೆನ್ಸ್ (Lens) ಎಂಬ ಉಪಕರಣದ ಸಹಾಯದಿಂದ ಆ ಕಾಗದವನ್ನು ನಾವು ಸುಟ್ಟಾಗ ಅದರ ಪ್ರಭಾವವು ಗೋಚರವಾಗುತ್ತದೆ ಅದರಂತೆಯೇ ಮಾನವನ ಮನಸ್ಸಿನಲ್ಲಿಯೂ ಆಕರ್ಷಕ ಮತ್ತು ನಿರೋಧಕ ಗುಣಗಳಿರುವುವು ಆದರ ಆಕರ್ಷಣ ಕ್ರಿಯೆಯು ಅಗೋಚರವಾಗಿ ಮನುಷ್ಯನ ಅಂತರಾತ್ಮನಲ್ಲಿ ಒಂದೇ ಸಮನಾಗಿ ಸಾಗುತ್ತಲೇ ಇರುವುದು ನಮಗೆ ಅದು ಅಗೋಚರವಾದರೂ ನಿಶ್ಶಬ್ದವಾಗಿಯೂ ಗುಪ್ತವಾಗಿಯೂ ಅದರ ಪ್ರಭಾವವು ಎಡೆಬಿಡದೆ ನಡೆಯುತ್ತಲೇ ಇರುವುದು ಪ್ರಕೃತಿಯು ಆತ್ಮಶಕ್ತಿಗೆ ಅಧೀನವಾಗಿರುವ ವಿಷಯವನ್ನು ನಿದರ್ಶನಪೂರ್ವಕವಾಗಿ ಒಬ್ಬ ಯೋಗಿಯು ತೋರಿಸಿದಾಗ ಅದನ್ನು ಆಶ್ಚರ್ಯಕರವಾದ ಪವಾಡವೆನ್ನುವರು ಅಥವಾ ಮಹಿಮಾಶಾಲಿಯಾದ ಸುಪ್ರಸಿದ್ಧ ಏಸುಕ್ರಿಸ್ತನಂತಹ ಮಹನೀಯನೊಬ್ಬನು ಅನೇಕರ ಹೃದಯಪರಿವರ್ತನೆಮಾಡಿದರೆ ಆಗ ನಾವು ಚಿತ್ತ ಸಂಯಮದಲ್ಲಿ ಅಡಗಿರುವ ಶಕ್ತಿಯು ಎಷ್ಟು ಮಹತ್ತರವಾದುದೆಂಬುದನ್ನು ಮಸಕುಮಸಕಾಗಿ ಅರಿಯುವೆವು ಒಂದು ದೈವಿಕೋದ್ದೇಶವು ಇಡೀ ವಿಶ್ವದಲ್ಲೆಲ್ಲಾ ಅಡಗಿರುವುದೆಂದು ವಿಜ್ಞಾನಿಗಳು ಹೇಳುತ್ತಾರೆ ಯಾವನು ಶುದ್ಧಧ್ಯಾನವನ್ನು ಅಭ್ಯಾಸಿಸಿ ಕಲಿಯುವನೋ ಅಂತಹವನು ಆ ದೈವಿಕೋದ್ದೇಶದ ಜೊತೆಗೆ ಬೆರೆತು ಮಿಳಿತನಾಗುವನು ಅನಂತರ ಆ ದೈವಿಕೋದ್ದೇಶವು ಆ ಧ್ಯಾನಿಯನ್ನು ಅಜ್ಞಾನಿಗಳಾದ ಮಾನವರ ಉದ್ಧಾರಕ್ಕಾಗಿ ಪವಿತ್ರವಾದ ಸಲಕರಣೆಯನ್ನಾಗಿ ಭಾವಿಸಿ ಉಪಯೋಗಿಸಿಕೊಳ್ಳುವುದು ಇಡೀ ವಿಶ್ವವು ಭಗವಂತನ ಚಿತ್ತದ ಒಂದು ಲೀಲೆಯೆಂಬ ಸಿದ್ಧಾಂತಕ್ಕೆ ಚತುರರಾದ ವಿಜ್ಞಾನಿಗಳು ಬಂದಿರುತ್ತಾರೆ.

VIII ಮನುಷ್ಯನು ಸಹಜವಾಗಿ ಆಧ್ಯಾತ್ಮಿಕವ್ಯಕ್ತಿಯೆಂಬುದನ್ನು ಶಾಸ್ತ್ರಜ್ಞರೆಲ್ಲರೂ ಒಪ್ಪುತ್ತಾರೆ ದೈವಸೃಷ್ಟಿಯ ಮಹದದ್ಭುತ ಕೌತುಕಗಳಲ್ಲಿ ಮಾನವನ ಆಂತರಿಕ ಮನಸ್ಸು ಒಂದಾಗಿದೆ ಎನ್ನುವುದನ್ನು ಸಹ ಒಪ್ಪುತ್ತಾರೆ ಪರಮಾತ್ಮನೆಂಬ ರತ್ನಭಾಂಡಾರವು ನಮ್ಮ ಹೃದಯದಲ್ಲಿಯೇ ಹುದುಗಿರುವುದೆಂದು ಜ್ಞಾನಿಗಳ ಅಭಿಪ್ರಾಯ ಮಾನವನಲ್ಲಿರುವ ದೇವತ್ವಕ್ಕೆ ನಿದರ್ಶನ ಬೇಕೆಂದರೆ ನಿನ್ನ ಹೃದಯದಲ್ಲಿ ನೆಲೆಸಿರುವ ಅಂತರಾತ್ಮನ ನುಡಿಗಳನ್ನು ಆಲಿಸಬೇಕು ದೃಷ್ಟಿಗೆ ಅಗೋಚರನಾಗಿ, ಧ್ಯಾನಚಿಂತನೆಗಳಿಗೆ ಆಧಾರಭೂತನಾದ ಅಂತರಾತ್ಮನು ಮನುಷ್ಯನ ದಿನಚರ್ಯೆಯ ಕ್ರಿಯೆ ಪ್ರತಿಕ್ರಿಯೆಗಳನ್ನು ನಿರ್ದೇಶಿಸುವನು ಮತ್ತು ಮಾನವನಿಗೆ ಏಕಾಂತದಲ್ಲಿ ಗೋಚರನಾಗುವನು. ಮನುಷ್ಯನ ಚಿತ್ತದಲ್ಲಿ ಪದೇ ಪದೇ ಮೂಡುವ ಭಾವನೆಗಳೂ ಅವನ ಹೃದಯದಲ್ಲಿ ತುಂಬಿರುವ ಚಿಂತನೆಗಳೂ ಅಗೋಚರವಾದ ಅವನ ಅಧಿಕಾರಿಗಳು ಮತ್ತು ಅವುಗಳೇ ಆತನ ಆತ್ಮಸ್ವರೂಪವಾಗಿ ಪರಿಣಮಿಸುತ್ತವೆ ಮನಸ್ಸಿನ ಭಾವನೆಯು ಮನುಷ್ಯನ ಮೇಲೂ ಪ್ರಕೃತಿಯ ಮೇಲೂ ತನ್ನ ಪ್ರಭಾವವನ್ನು ಬೀರಬಲ್ಲುದೆಂದು ಹೇಳುತ್ತಾರೆ ಇಡೀ ಪ್ರಕೃತಿಯು ಒಂದು ಒತ್ತಡಿಕಿದ ಶಕ್ತಿಯೆಂದೂ, ಎಲ್ಲ ಮನುಷ್ಯರೂ ಈ ಶಕ್ತಿಯ ಚೈತನ್ಯ ಚಲನಸ್ವರೂಪವೆಂದೂ, ಅತ್ಯಂತ ಸೂಕ್ಷ್ಮಸಾಧನ ಸಲಕರಣೆಗಳ ಮೂಲಕ ಮಾನವನ ಭಾವನೆಗಳನ್ನು ಚಿತ್ರದಂತೆ ಕಾಗದದ ಮೇಲೆ ರೂಪಿಸಬಹುದೆಂದೂ ವಿಜ್ಞಾನಿಗಳು ಹೇಳುತ್ತಾರೆ ಅಷ್ಟಲ್ಲದೆ ಮನುಷ್ಯನ ಮನಸ್ಸಿನಲ್ಲಿ ಆಕರ್ಷಣವಿದ್ಯುತ್ಕಣಗಳಿರುವುವೆಂದೂ, ಭಾವನೆಗಳ ಭಾವಚಿತ್ರಗಳನ್ನು (Photographs) ಫೋಟೋ ತೆಗೆಯಬಹುದೆಂದೂ, ಮತ್ತು ವಿದ್ಯುದಾವೇಗ ಕಣಗಳಿಂದ ಕೂಡಿದ ಮನುಷ್ಯನ ಬುದ್ಧಿಶಕ್ತಿಯನ್ನು ಬೆಳಕಿನ ಕಿರಣಗಳನ್ನಾಗಿ ಮಾರ್ಪಡಿಸಬಹುದೆಂದೂ ವಿಜ್ಞಾನಿಗಳು ಪ್ರಯೋಗಗಳ ಮೂಲಕ ತೋರಿಸಿರುತ್ತಾರೆ ಈ ಆತ್ಮನಿರ್ದೇಶಕ ವಿಜ್ಞಾನವು ಐದುಸಾವಿರ ವರ್ಷಗಳ ಹಿಂದೆಯೇ ನಮ್ಮ ಭರತಖಂಡದಲ್ಲಿ ಪ್ರಚಲಿತವಾಗಿತ್ತೆಂಬುದು ಸರ್ವವಿದಿತವಾಗಿದೆ 'ಅನಂತ' (Infinite) ದ ರಹಸ್ಯಮಯ ಅನಿರ್ವಚನೀಯ ಗರ್ಭದಿಂದ ಮನುಷ್ಯನು ಹೊರಹೊಮ್ಮುತ್ತಾನೆ ಇವನಲ್ಲಿ ಅಪ್ರಕಟಿತ ಮಾನಸಿಕ ಶಕ್ತಿಯೂ ಆಧ್ಯಾತ್ಮಿಕ ಬುದ್ಧಿಸಂಪತ್ತೂ ಇವೆ ಆಧ್ಯಾತ್ಮಿಕ ಕಲೆಯಲ್ಲಿ ನುರಿತ ಭರತಖಂಡವು ಮಾನವನಲ್ಲಿ ಅಡಗಿರತಕ್ಕ ಈ ಶಕ್ತಿಗಳನ್ನು ಅಭಿವೃದ್ಧಿಗೊಳಿಸಿ, ಅವುಗಳ ಸಂಪೂರ್ಣ ಉಪಯೋಗವನ್ನು ಪಡೆಯುವ ಮಾರ್ಗವನ್ನು ತಿಳಿದುಕೊಂಡಿರುತ್ತದೆ ಕ್ರಮವಾದ ಧ್ಯಾನದಿಂದ ಸ್ವಲ್ಪಕಾಲವಾದರೂ ಬಾಹ್ಯಪ್ರಪಂಚವನ್ನು ಮರೆತು ಸಮಾಧಿಯೋಗದಿಂದ ಆಂತರಿಕ ಪ್ರಪಂಚಕ್ಕೆ ಮನಸ್ಸನ್ನು ತಿರುಗಿಸಿದರೆ ಮಾತ್ರ ಶಾಂತಿಯು ದೊರಕುತ್ತದೆ ಈ ಶಾಂತಿಯೇ ಜ್ಞಾನದ ಚಿಹ್ನೆ ಶುದ್ಧ ಧ್ಯಾನವು ಮನುಷ್ಯನಲ್ಲಿ ಅಡಗಿರುವ ಆತ್ಮಶಕ್ತಿಯನ್ನು ವಿಕಾಸಗೊಳಿಸುವುದಲ್ಲದೆ ಅವನ ಎಲ್ಲಾ ಕಾರ್ಯಗಳಿಗೂ ಅತ್ಯಂತ ಸ್ಫೂರ್ತಿಯನ್ನು ಕೊಡುತ್ತದೆ ಧ್ಯಾನವು ಬಹಳ ಶಕ್ತಿಯುತವಾದುದು ಇದೇ ಮಾನವನ ಅಂತರಂಗ ತತ್ತ್ವವಾಗಿದೆ ಈ ತತ್ತ್ವವನ್ನೇ ನಂಬಿ ಆಲಿವರ್ ಕ್ರಾಮ್‌ವೆಲ್ (Oliver Cromwell), ಮಾರ್ಕಸ್ ಅರೇಲಿಯಸ್ (Marcus Aurelius), ಅಶೋಕ, ಅಕ್ಬರ್, ಶಿವಾಜಿ ಮುಂತಾದ ಜಗತ್ ಪ್ರಖ್ಯಾತ ಮಹನೀಯರು ತಮ್ಮ ಧ್ಯೇಯವನ್ನು ಸಾಧಿಸಿರುತ್ತಾರೆ ಆದುದರಿಂದ ಎಲ್ಲ ಕಾಲಗಳಲ್ಲಿಯೂ, ಎಲ್ಲ ದೇಶಗಳಲ್ಲಿಯೂ, ಧ್ಯಾನ ಮತ್ತು ತಪಸ್ಸುಗಳು ಶಾಂತಿಗೂ, ಜಯಕ್ಕೂ ಬಹು ಮುಖ್ಯಸಾಧನಗಳೆಂದು ಪರಿಗಣಿತವಾಗಿವೆ ಪ್ರಾಮಾಣಿಕ ಹೃದಯದ ಅಂತರಾಳದಿಂದ ಹೊರಟ ಪ್ರಾರ್ಥನೆಗಳು ಮೇಲಕ್ಕೆ ಭಗವತ್ಸಾನ್ನಿಧ್ಯಕ್ಕೆ ಹಾರಿ ಕಾಮಿತಾರ್ಥವನ್ನು ಖಂಡಿತವಾಗಿಯೂ ತರುವುವೆಂದು ನಾನು ಮನಃಪೂರ್ವಕವಾಗಿ ನಂಬಿರುತ್ತೇನೆ

ಇಂತಹ ಧ್ಯಾನಮಾರ್ಗದಲ್ಲಿ ಪ್ರವೀಣರಾದ ಶ್ರೀ

ಗಂಗಾಧರ ಶಿವಾಚಾರ್ಯಸ್ವಾಮಿಗಳವರು [illegible] ದಿವಸಗಳ [illegible] ಪ್ರವಚನಗಳನ್ನು ನಡೆಸಿ [illegible] ತರದ ಸಹಾಯ ಮಾಡಿರುತ್ತಾರೆ [illegible] ದಾನದ ಫಲವಾಗಿ [illegible] ಮಿತ್ರಮಂಡಲಿಯವರಿಗೂ [illegible] ಸಂಪತ್ತೇನ ಇಂತಹ ಸಹಾಯ [illegible] ಸ್ವಾಮಿಗಳವರಿಗೆ [illegible] ವರ್ಣಕವಾದ ಕೃತಜ್ಞತೆಯನ್ನು [illegible] ಸೇರಿರುವ ಸಹಸ್ರರು [illegible] ಅವರ ವಿತ್ರರಿಗೂ [illegible] ಸಾರ್ವಜನಿಕರಿಗೆ [illegible] ನಾನ ವಿಜ್ಞಾಪಿಸುತ್ತಿನ

[illegible]

ಪಿ ಮಹದೇವಯ್ಯ

ವರ್ತಮಾನಸಂಗ್ರಹ

ಕ್ಯಾ|| ಲಕ್ಷ್ಮಿಯವರನ್ನು ಭಾರತಕ್ಕೆ ಕಳಿಸುವರು

[illegible]

ಡಚ್ ಪ್ರಧಾನಿ ಮತ್ತು ಅಟ್ಲಿ ಭೇಟಿ

[illegible]

ಸಹಿಸಿ [illegible] ಚರ್ಚಿಸ ತ್ತಾರೆಂದು ಹೇಳಲಾಗಿದೆ

ಪ್ರಿನ್ಸ್ ಕೋನೋಯ್‌ರವರ ಆತ್ಮಹತ್ಯೆ

ಜಪಾನಿನ ಮಾಜಿ ಮುಖ್ಯ ಮಂತ್ರಿ ಪ್ರಿನ್ಸ್ ಕೋನೋಯ್‌ರವರು ವಿಷ ಸೇವನೆ ಮಾಡಿ ಆತ್ಮಹತ್ಯೆ ಮಾಡಿಕೊಂಡರು ಸೆರೆಗಿರಿಯಾಗಿ ಅಮೇರಿಕೆಯಿಂದ [illegible] ರಿಸಲ್ಪಡುವ ಅವಮಾನವನ್ನು ಸಹಿಸಲು ಸಾಧ್ಯವಿಲ್ಲವೆಂದು ಅವರು ಸಾಯುವ ಮುನ್ನ ತಮ್ಮ ಮಗನಿಗೆ [illegible] ವರತೆ

ಸತಿ ರೂಸ್ವೆಲ್ಟರಿಗೆ ಅಧಿಕಾರಸ್ಥಾನ

ಇಂಗ್ಲೆಂಡಿನಲ್ಲಿ ರಚಿಸಲಾಗಿರುವ ವಿಶ್ವಸಮ್ಮೇಳನಕ್ಕೆ ಸತಿ ರೂಸ್ವೆಲ್ಟರನ್ನು ಅಮೇರಿಕನ್ ಪ್ರತಿನಿಧಿಯಾಗಿ ಕಳುಹಿಸ ತಕ್ಕದ್ದೆಂದು ಅಮೇರಿಕನ್ ಸೆನಟರ್ ಒಕ್ಲೇಯವರು ಸೂಚಿಸಿದ್ದಾರೆ ವಿಶ್ವಐಕ್ಯೀಕರಣಕ್ಕಾಗಿ ಸದಾ ರೂಸ್ವೆಲ್ಟರೊಡನೆ ದುಡಿದು ಸಹಾಯ ಮಾಡಿದ ಸತಿ ರೂಸ್ವೆಲ್ಟರಿಗೆ ಒಂದು ಅಧಿಕಾರ [illegible] ಕೊಡಬೇಕೆಂದೂ ಹೈಡ್‌ಪಾರ್ಕ್ ಎಸ್ಟೇಟಿನಲ್ಲಿ ವಿಶ್ವಸಭೆಯ ಕಚೇರಿ ಸ್ಥಾಪನೆಯಾಗುವಂತೆ ಮಾಡಬೇಕೆಂದೂ ಅವರು ಸಲಹೆ ಇತ್ತಿದ್ದಾರೆ

ಯೆಹೂದಿಗಳಿಗೆ ಆರ್ಥಿಕ ಅಷ್ಟ ದಿಗ್ಬಂಧನ

ಪ್ಯಾಲಸ್ಟೈನ್ ಯಹೂದಿಗಳಿಗೆ ಪೂರ್ಣ ಆರ್ಥಿಕ ಅಷ್ಟದಿಗ್ಬಂಧನ ಉಂಟಾಗುವಂತೆ ಮಾಡಲು ಅರಬ್ ಲೀಗಿನ ಸದಸ್ಯರು ಯೋಜನೆಗಳನ್ನು ತಯಾರಿಸಿದ್ದಾರೆ [illegible] ಘೋಷಿಸಿದ ಈ ಬಹಿಷ್ಕಾರ ಮತ್ತು [illegible] ಅಸಹಕಾರ ಜನವರಿ ಒಂದನೆಯ ತಾರೀಕಿನಿಂದ [illegible] ಈ ಸಲ ಈ ಯೋಜನೆ [illegible] ಪ್ರದರ್ಶನ ನಡೆಯುವುದಿಲ್ಲ ಪ್ಯಾಲಸ್ಟೈನಿನಲ್ಲಿ [illegible] ಆರ್ಥಿಕ ಪ್ರಾಬಲ್ಯತೆಯನ್ನು ನಾಶಮಾಡಿ [illegible] ಪ್ಯಾಲಸ್ಟೈನಿಗೆ ಯೆಹೂದಿಗಳು [illegible] ತಡೆಗಟ್ಟುವುದೇ ಈ ಯೋಜನೆಗಳ [illegible] ಎಂದು ಹೇಳಲಾಗಿದೆ

ಜಾವಾದಲ್ಲಿ ಡಚ್ ಸೈನ್ಯದ ಆಕ್ರಮಣ

ಜಾವಾದಲ್ಲಿ ಇದೇ ಮೊದಲನೆಯ ಬಾರಿ ಡಚ್ ಪಡೆಗಳು ದಾಳಿಯನ್ನಾರಂಭಿಸಿ, ಬಟೇವಿಯದ ಬಳಿ ಇರುವ ಪ್ರಾಸ್ಸೆರ್‌ಮಂಜ್ ನಗರವನ್ನಾಕ್ರಮಿಸಿಕೊಂಡು ಅಲ್ಲಿ ದೊರೆತ ಶಸ್ತ್ರಾಸ್ತ್ರಗಳನ್ನೂ ಮದ್ದು ಗುಂಡುಗಳನ್ನೂ ವಾಹನಾದಿಗಳನ್ನೂ ವಶಪಡಿಸಿಕೊಂಡಿವೆ, ಎಂಬ ಅಧಿಕೃತ ಪ್ರಥಮ ವರದಿ ಮಿತ್ರ ಪ್ರಧಾನ ಕಛೇರಿಯಿಂದ ಹೊರಬಿದ್ದಿದೆ

ಬೆಂಗಳೂರು ವಿಮಾನ ಕಾರ್ಖಾನೆ ಆಡಳಿತ

ಬೆಂಗಳೂರಿನಲ್ಲಿರುವ ಹಿಂದೂಸ್ಥಾನ್ ವಿಮಾನ ಕಾರ್ಖಾನೆಯನ್ನು ಇಂಡಿಯಾ ಸರ್ಕಾರದ ಸಪ್ಲೈಸ್ ಇಲಾಖೆಯವರು ಮೂರು ವರ್ಷಗಳ ನಂತರ ಅಮೇರಿಕದ ವಿಮಾನ ದಳದವರಿಂದ ಹಿಂದಕ್ಕೆ ಪಡೆಸಿಕೊಂಡಿದ್ದಾರೆ ಜಪಾನು ಯುದ್ಧಕ್ಕೆ ಪ್ರವೇಶ ಮಾಡಿದನಂತರ ಅಮೇರಿಕದವರು ಕಾರ್ಖಾನೆಯನ್ನು ತಮ್ಮ ಆಡಳಿತಕ್ಕೆ ತೆಗೆದುಕೊಂಡಿದ್ದರು ಈಗ ಇಂಡಿಯಾ ಸರಕಾರದ ಪ್ರತಿನಿಧಿ ಹೆಮ್ಮಿಂಗ್ಸ್‌ರವರು ಅಮೇರಿಕದ ಪ್ರತಿನಿಧಿ ಕರ್ನಲ್ ಲಿನ್‌ರವರಿಂದ ಆಡಳಿತಾಧಿಕಾರವನ್ನು ವಹಿಸಿಕೊಂಡರು ಈ ತಿಂಗಳ ಅಂತ್ಯದೊಳಗಾಗಿ ೮೫೦೦ ಜನರನ್ನು ಕಾರ್ಖಾನೆಯಿಂದ ವಿಸರ್ಜನೆ ಮಾಡುವರೆಂದು ಹೇಳಲಾಗಿದೆ

ಒಂದು ಇಲಿ ಹಿಡಿದರೆ ೩ ಪೈ ಬಹುಮಾನ

ಈಗಾಗಲೇ ರಾಜಧಾನಿಯ ಪೌರಸಭೆಯ ಆರೋಗ್ಯ ಶಾಖೆಯು ನಡೆಸುತ್ತಿರುವ ಪ್ರಯತ್ನಗಳ ಜೊತೆ ಸಾರ್ವಜನಿಕರಿಂದಲೂ ಸಜೀವ ಇಲಿಗಳನ್ನು ತರಿಸಿಕೊಂಡು ಅಂತಹ ಪ್ರತಿಯೊಂದು ಇಲಿ ಹಿಡಿದು ತಂದದ್ದಕ್ಕೂ ೩ ಪೈ ಬಹುಮಾನ ಕೊಡಬೇಕೆಂದು ಹೆಲ್ತ್ ಕಮಿಟಿಯು ಶಿಫಾರ್ಸು ಮಾಡಿದೆಯೆಂದು ಗೊತ್ತಾಗಿದೆ

ಸಿದ್ಧಾಂತಶಿಖಾಮಣಿ

[illegible] ಶ್ರೀಶಿವಯೋಗಿಶಿವಾಚಾರ್ಯ [illegible] ಪಂಡಿತ ಶ್ರೀಕಾಶೀನಾಥ ಶಾಸ್ತ್ರಿಗಳವರು [illegible] ಶ್ಲೋಕ [illegible] ಈ ಗ್ರಂಥದಲ್ಲಿ [illegible] ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರು ಪಂಚಾಚಾರ್ಯರ ಚಿತ್ತಾಕರ್ಷಕವಾದ ಮನೋಹರವಾದ ಚಿತ್ರಗಳು ಜೋಡಿಸಲ್ಪಟ್ಟಿರುವದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೨ ರೂಪಾಯಿ.**

ಮನೋಹರವಾದ ಫೋಟೋಗಳು.

- [illegible] ಅದ್ಭುತ [illegible] ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ ೦—೬—೦
- ಶ್ರೀ [illegible] (ನಾನಾ ಬಣ್ಣಗಳಿಂದ ಮುದ್ರಿತವಾದುದ) ಸೈಜು ೧೪ × ೧೦ ಬೆಲೆ ೦—೬—೦
- [illegible] ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ ೦—೩—೦
- [illegible] ಪಂಚಾಚಾರ್ಯರ [illegible] ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ ೦—೩—೦
- ಶ್ರೀ [illegible] ಮುನೀಶ್ವರ ಶಿವಾಚಾರ್ಯರು [illegible] ಅವತರಿಸುವ ಫೋಟೋ ೦—೧—೬
- [illegible] ಪಂಚಾಚಾರ್ಯರ [illegible] ಶಿವ [illegible] ಉಪದೇಶ ಮಾಡುವ ಫೋಟೋ ೦—೧—೬
- ಶ್ರೀ ಶ್ರೀಶೈಲ ತ್ರಿವಿರಾಜಮಾನ ಶ್ರೀ ಜಗದ್ಗುರು [illegible] ಮೂಲಭವನದ ಫೋಟೋ ೦—೧—೬
- ಶ್ರೀ [illegible] ಜಗದ್ಗುರು [illegible] ಆಚಾರ್ಯ [illegible] ಸ್ವಾಮಿಗಳವರ ಫೋಟೋ ೦—೧—೬
- ಶ್ರೀ [illegible] ಜಗದ್ಗುರು [illegible] ಮಾಡುವ ಫೋಟೋ ೦—೧—೬
- ಶ್ರೀ [illegible] ಸಿಂಹಾಸನಾಧಿಪತಿ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೧—೬
- [illegible] ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ ೦—೧—೬
- ಶ್ರೀ [illegible] ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೦—೧—೬
- ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ ೦—೧—೦
- [illegible] ಶ್ರೀ [illegible] ಫೋಟೋ (ನಾನಾ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ ೦—೪—೦
- ಶ್ರೀ ಜಗದ್ಗುರು ಉಜ್ಜಯಿನೀ ಪೀಠದ [illegible] ಅತ್ಯಂತ ಸುಂದರವಾದ ಫೋಟೋ ೧ಕ್ಕೆ ೦—೧—೬
- ಶ್ರೀ ಜಗದ್ಗುರು ಉಜ್ಜಯಿನೀ [illegible] ಅತ್ಯಂತ [illegible] ಸುಂದರ ಫೋಟೋ ೧ಕ್ಕೆ ೦—೧—೬
- ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ ೦—೧—೬
- ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ ೦—೧—೦
- ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ ೦—೧—೦

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲಾಯಿತು

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ।
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ೪ ಆಣೆ ಪರಸ್ಥಳದವರಿಗೆ ೩ ರೂ ವಿ. ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೧೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೩೧ನೇ ಡಿಸೆಂಬರ್ ೧೯೪೫ [ಸಂಚಿಕೆ ೩೩

ಶ್ರೀ ಕಾಶೀ ಜಗದ್ಗುರು ವಿಶ್ವಾರಾಧ್ಯಪೀಠದ ವಿಜಯ

ಶ್ರೀ ಕಾಶೀ ಜಗದ್ಗುರು ವಿಶ್ವಾರಾಧ್ಯ ಜ್ಞಾನಸಿಂಹಾಸನ ಸಂಸ್ಥಾನ ಜಂಗಮವಾಡಿಮಠದ ಆಸ್ತಿಯೆಲ್ಲವೂ ಹೈಕೋರ್ಟಿನ ನಿರ್ಣಯದಂತೆ ಸದ್ಯಃ ಶ್ರೀ ೧೦೮ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಸ್ವಾಧೀನವಾಗಿ ಪೂರ್ವದಲ್ಲಿ ನಿಯುಕ್ತರಾದ ರಿಸೀವರ್ ಕೈಯಿಂದ ಬಿಡುಗಡೆಯಾಯಿತೆಂಬ ಮಹಾನಂದ ಸಮಾಚಾರವನ್ನು ಅಖಿಲ ವೀರಶೈವ ಸಮಾಜಕ್ಕೆ ನಿವೇದಿಸಲು ಸಂತೋಷವಾಗುತ್ತದೆ

ಯಾವ ದಿನ ಯಾವ ಸಮಯದಲ್ಲಿ ಅಲಹಾಬಾದ್ ಹೈಕೋರ್ಟಿನ ನ್ಯಾಯಾಧೀಶರ ನಿರ್ಣಯವು ಪ್ರಕಟಿಸಲ್ಪಟ್ಟಿತೋ ಅದೇ ಸಮಯದಲ್ಲಿ ಇತ್ತ ಶ್ರೀ ಜಗದ್ಗುರು ವಿಶ್ವಾರಾಧ್ಯಮೂರ್ತಿಗೆ ಏಕಾದಶ ರುದ್ರಾಭಿಷೇಕವೂ ಶ್ರೀ ಜಗದ್ಗುರು ಮಹಾಸನ್ನಿಧಿಯವರ ಶಿವಾರ್ಚನೆಯೂ ಸರ್ವ ಭಕ್ತಮಾಹೇಶ್ವರ ಗಣಾರಾಧನೆಯೂ ವೈಭವದಿಂದ ನಡೆಯುತ್ತಿತ್ತು

ಇಪ್ಪತ್ತು ವರ್ಷಗಳಿಂದಲೂ ದೊಡ್ಡ ಗಂಡಾಂತರದಂತಿದ್ದ ಬ್ಯಾಂಕ್ ಸಂಬಂಧವಾದ ಋಣ ಸಮಸ್ಯೆಯು ಈಗ ತೃಪ್ತಿಕರವಾಗಿ ಪರಿಹಾರ ಹೊಂದಿರುವುದು ಶ್ರೀ ವಿಶ್ವಾರಾಧ್ಯ ಭಗವತ್ಪಾದರ ವಿಜಯವೇ ಆಗಿದೆ ಇದು ಪರ್ಯಾಯದಿಂದ ಗುರುಧರ್ಮದ ವಿಜಯವೂ ಆಹುದು

ಈಗಿನ ಶ್ರೀ ಜಗದ್ಗುರು ಮಹಾಸನ್ನಿಧಿಯವರು ತಮಗೆ ಅಧಿಕಾರವಾದ ೧೪ ತಿಂಗಳುಗಳ ಸ್ವಲ್ಪಕಾಲದಲ್ಲಿ ನಿರ್ವಹಿಸುತ್ತ ಬಂದ ಸತತ ಪರಿಶ್ರಮವೂ ಅಸಾಧಾರಣ ಪ್ರತಿಭಾವಿನಿಯೋಗವೂ ಈ ಪೀಠದ ಚರಿತ್ರೆಯಲ್ಲಿ ಅಪೂರ್ವವಾಗಿದೆಯೆಂದು ಅತ್ಯಾನಂದದಿಂದ ನಿವೇದಿಸಬೇಕಾಗಿದೆ ವಿದ್ಯಾರ್ಥಿಗಳ ಭೋಜನಾದಿ ಸುವ್ಯವಸ್ಥೆಯೂ ಗ್ರಂಥ ಪತ್ರಿಕಾ ಸೌಕರ್ಯವೂ, ಜ್ಞಾನಮಂದಿರ ನಿರ್ಮಾಣವೂ ಪೂರ್ಣವಾಗುತ್ತ ಬಂದಿವೆ ಮುಂದೆ ಧರ್ಮಗ್ರಂಥ ಪರಿಶೀಲನೆ ಪ್ರಕಟನೆಯಾಗಲಿದೆ ಪ್ರಸಿದ್ಧ ವಿದ್ವಾಂಸರನೇಕರು ಧಾರ್ಮಿಕ ಶಾಸ್ತ್ರೀಯ ವಿಷಯಗಳ ಬಗ್ಗೆ ಮಹಾಸನ್ನಿಧಿಯವರ ಪರಿಶೀಲನೆಯನ್ನಪೇಕ್ಷಿಸುತ್ತಿದ್ದಾರೆ. ಮಹಾಪೀಠದ ಕೀರ್ತಿ ಇಂದು ಸರ್ವತ್ರ ಪ್ರಸರಿಸುತ್ತಲಿದೆ

ಇಪ್ಪತ್ತೈದು ವರ್ಷಗಳಿಂದ ಸೇವೆಯನ್ನು ಸಲ್ಲಿಸುತ್ತ ಅನೇಕ ದೊಡ್ಡ ಸಮಸ್ಯೆಗಳನ್ನನುಭವಿಸಿದ ನನಗೆ ಈ ಅಭ್ಯುದಯ ಸಂಧಿಯು ಪರಮಾಹ್ಲಾದವನ್ನುಂಟುಮಾಡುತ್ತಿದೆ ಮಹಾಪೀಠದ ಉನ್ನತಿಗಾಗಿ ದಕ್ಷಿಣೆಗಳನ್ನು ಸಮರ್ಪಿಸುತ್ತ ವಾತ್ಸಲ್ಯವನ್ನೂ ಕಾಯಸೇವೆಯನ್ನೂ ನಿರ್ವಹಿಸುವ ಶ್ರೀ ವಿಶ್ವಾರಾಧ್ಯ ಪೀಠ ಪರಿವಾರಕ್ಕೆ ಕೃತಜ್ಞತೆಯನ್ನು ಪ್ರಕಟಿಸಿ ಈ ವಿಜಯಾಭಿನಂದನವನ್ನು ಸಮರ್ಪಿಸುತ್ತೇನೆ

ರಾಮಚಂದ್ರಪ್ರಸಾದ
ಮ್ಯಾನೇಜರ್ ಜಂಗಮವಾಡಿಮಠ ಕಾಶೀ

ಜ್ಞಾನಮಂದಿರ ನಿಧಿ

ಶ್ರೀ ಮಹಾಪೀಠದಲ್ಲಿ ನಿರ್ಮಿತವಾಗುತ್ತಿರುವ ಜ್ಞಾನಮಂದಿರಕ್ಕಾಗಿ ಈವರೆಗೆ ಧನ ಸಮರ್ಪಣೆ ಮಾಡಿದ ಮಹನೀಯರ ವಿವರ —

೧೦೦೮ ರೂ ವಿರೂಪಾಕ್ಷಪ್ಪಗೌಡರು ಮಟಮರಿ, ೫೦೦ ರೂ ಓರ್ವ ಗುಪ್ತದಾತೃಗಳು ಹುಬ್ಬಳ್ಳಿ, ೫೦೦ ರೂ ಮಲ್ಲಪ್ಪ ಕಾಶಪ್ಪ ವಡಕರ್ ಸೊಲ್ಲಾಪುರ, ೨೫೧ ರೂ ಗಂಗಾರಾಂ ಗೋವಿಂದಪ್ಪ ಕಸಬಕರ್ ಸೇಲೂ, ೨೦೦ ರೂ ಎ ಎಂ ಶಿವಲಿಂಗಾರಾಧ್ಯರು ತಿಪಟೂರು, ೧೫೧ ರೂ ಸಿದ್ಧಾಂತಿ ಶಬ್ದಮಣಿಮಠದ ಕೊಟ್ರಯ್ಯನವರು ಹಿರೆಹಡಗಲಿ, ೧೧೧ ರೂ ವಜ್ರಗಿರಿ ಬಸಣ್ಣನವರು ಯಮ್ಮಿಗನೂರು, ೧೦೦ ರೂ ಬಸವಲಿಂಗೇಗೌಡ ನಂಜಪ್ಪ ಸೋದರರು ಆಲೂರು, ೧೦೦ ರೂ ಸೂಗನಗೌಡರು ಗೂಬ್ಬೂರು, ೧೦೦ ರೂ ದುರ್ಗದ ಬಜ್ಜಣ್ಣನವರು ಹಿಂದೂಪುರ, ೧೦೮ ರೂ ಪುರದಯ್ಯನವರು ಹಿರೇಮಠ ಮುಳಗುಂದ, ೧೦೮ ರೂ ಮರುಳಸಿದ್ಧಪ್ಪನವರು ಸಿಂದಗಿ ತಿಪಟೂರು, ೧೦೮ ರೂ ಮಳೇಮಠದ ಮಲ್ಲಿಕಾರ್ಜುನಾರಾಧ್ಯರು ತಿಪಟೂರು, ೧೦೮ ರೂ ಎಸ್ ವೀರಪ್ಪಶಾಸ್ತ್ರಿಗಳು ಶಿಕಾರಿಪುರ, ೧೦೮ ರೂ ಡಾ ಎಂ ಸಿ ನಂಜಪ್ಪನವರು ಎಲ್ ಎಂ ಪಿ ಜಾಲೂರು, ೧೦೮ ರೂ ಷ॥ ಬ್ರ॥ ಶ್ರೀ ಮುರಿಗೇಂದ್ರ ಶಿವಾಚಾರ್ಯರು ಕೊಣ್ಣೂರೂ, ೧೦೮ ರೂ ಭತ್ತದ ಪಚ್ಚಮ್ಮನವರು ಕನಕಗಿರಿ, ೧೦೮ ರೂ ಯಸ್ ರುದ್ರಯ್ಯನವರು ಬೆಂಗಳೂರು, ೧೦೮ ರೂ ಟಿ ಸಿದ್ಧಬಸಪ್ಪನವರು ದೊಡ್ಡಬಳ್ಳಾಪುರ

ಇನ್ನೂ ಅನೇಕ ದಾತೃಗಳು ಹಣ ಕಳುಹಿಸತಕ್ಕವರಾಗಿದ್ದಾರೆ ಆಮೇಲೆ ಅವರ ನಾಮಗಳನ್ನೂ ಪ್ರಕಟಿಸಲಾಗುವದು ಸಮಾಜಕ್ಕೆ ಲಾಭಪ್ರದವೂ ಆತ್ಮಕ್ಕೆ ಪುಣ್ಯಕೀರ್ತಿಕರವೂ ಆದ ಈ ಕಾರ್ಯಕ್ಕೆ ಎಲ್ಲರಿಂದಲೂ ಪುಷ್ಕಲವಾಗಿ ಕಾಣಿಕೆ ದೊರೆಯಬೇಕಾಗಿದೆ

ಮ್ಯಾನೇಜರ್ ಜಂಗಮವಾಡೀಮಠ ಕಾಶೀ

ಉಪಾಧ್ಯಾಯರ ಸಂಘ ಮತ್ತು ಪೋಷಕ ಬೋಧಕ ಸಂಘದ ವಾರ್ಷಿಕೋತ್ಸವ ಬಿಡದಿ

ಕ್ಲೋಸ್‌ಪೇಟೆ ತಾ॥ ಬಿಡದಿ ಸೆಂಟರಿನ ಮೇಲ್ಕಂಡ ಸಂಘದ ವಾರ್ಷಿಕೋತ್ಸವವು ತಾ॥ 17-12-45 ನೆಯ ಸೋಮವಾರ ದಿವಸ ಬಿಡದಿ ಮಿಡಲ್‌ಸ್ಕೂಲ್ ಆವರಣದಲ್ಲಿ ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀಮಾನ್ ಎಂ ಎಸ್ ರಾಜಗೋಪಾಲರಾವ್, ಎಂ ಎ. ಆನರ್ಸ್, ರವರ ಅಧ್ಯಕ್ಷತೆಯಲ್ಲಿ, ವಿಶೇಷ ವೈಭವದೊಡನೆ ನೆರವೇರಿತು ಸದರಿ ಸಭೆಯಲ್ಲಿ ಬಿಡದಿ ಗ್ರಾಮದ ಶ್ರೀಯುತ ಬಿ. ಸಿ ರೇವಣ್ಣಶಾಸ್ತ್ರಿಗಳವರು ವಿದ್ಯಾಭ್ಯಾಸದ ವಿಷಯವಾಗಿ ಈ ಕೆಳಗೆ ಕಂಡಂತೆ ಅಮೂಲ್ಯವಾದ ಭಾಷಣವನ್ನು ಮಾಡಿದರು ಈ ಭಾಷಣದ ವಿಷಯವು ಸರ್ವರಿಗೂ ಉಪಯೋಗಕರವಾಗಿರುವದರಿಂದ ಇಲ್ಲಿ ಪ್ರಕಟಿಸಲಾಗಿದೆ.

ವಿದ್ಯೆಯ ಮಹತ್ವ

ವಿದ್ಯಾ ನಾಮ ನರಸ್ಯ ರೂಪಮಧಿಕಂ ಪ್ರಚ್ಛನ್ನಗುಪ್ತಂ ಧನಂ ।
ವಿದ್ಯಾ ಭೋಗಕರೀ ಯಶಸ್ಸುಖಕರೀ ವಿದ್ಯಾ ಗುರೂಣಾಂಗುರುಃ ॥
ವಿದ್ಯಾ ಬಂಧುಜನೋ ವಿದೇಶಗಮನೇ ವಿದ್ಯಾ ಪರಾದೈವತಾ ।
ವಿದ್ಯಾ ರಾಜಸು ಪೂಜ್ಯತೇ ನ ಹಿ ಧನಂ ವಿದ್ಯಾವಿಹೀನಃ ಪಶುಃ ॥

ಈರೀತಿಯಾಗಿ ಒಬ್ಬ ನೀತಿಕಾರನು ಹೇಳಿದ್ದಾನೆ. ವಿಮರ್ಶಾತ್ಮಕ ದೃಷ್ಟಿಯಿಂದ ವಿದ್ಯೆಯು ಸರ್ವಶ್ರೇಷ್ಠವೆಂದು ವ್ಯಕ್ತಪಡುತ್ತದೆ ವಿದ್ಯೆಯುಳ್ಳದ ನರನು ಪಶುವಿಗಿಂತಲೂ ಕಡೆಯಾಗಬೇಕಾಗುತ್ತದೆ ಭಗವಂತನು ಚರಾಚರಾತ್ಮಕವಾದೀ ಜಗತ್ತನ್ನು ಸೃಜಿಸಿ ಪರಿಪಾಲಿಸುತ್ತಿರುವನೆಂದು ಸಕಲ ಶಾಸ್ತ್ರಗಳು ಉದ್ಘೋಷಿಸುತ್ತಿರುವವು ಪರಮಾತ್ಮನು ಜಗದಾದಿಯಲ್ಲಿ ಪಂಚಭೂತಗಳನ್ನು ನಿರ್ಮಿಸಿ ತನಂತರ ಅಂಡಜ, ಪಿಂಡಜ, ಸ್ವೇದಜ, ಉದ್ಭಿಜ್ಜಗಳೆಂಬ ನಾಲ್ಕುಪರಿಯಾದ ಸೃಷ್ಟಿಯನ್ನು ರಚಿಸಿರುವನು ಕ್ರಿಮಿ, ಕೀಟ, ಪಶು, ಪಕ್ಷಿ ಮಾನವರೂಪ ಪ್ರಾಣಿವರ್ಗದಲ್ಲಿ ಮನುಷ್ಯನು ಶ್ರೇಷ್ಠನಾಗಿರುವನು ಮನುಷ್ಯವರ್ಗದಲ್ಲಿ ವಿದ್ಯಾವಿರಾಜಿತನಾದ ಮಾನವನೇ ಶ್ರೇಷ್ಠನು. ಇವನಿಗೆ ಪಂಚ ಜ್ಞಾನೇಂದ್ರಿಯಗಳು ಪಂಚ ಕರ್ಮೇಂದ್ರಿಯಗಳೂ ಮನೋಬುದ್ಧಿ ಚಿತ್ತ ಅಹಂಕಾರಾದಿ ಅಂತಃಕರಣ ಚತುಷ್ಟಯವೂ ಸರಿಯಾದ ರೀತಿಯಲ್ಲಿ ರಚಿಸಲ್ಪಟ್ಟಿರುವುವು ಮನುಷ್ಯೇತರ ಪ್ರಾಣಿಗಳಿಗೆ ಇಂದ್ರಿಯಗಳಲ್ಲಿ ಲೋಪವಿರುತ್ತದೆ ಕರುಣಾಮಯನಾದ ಪರಮಾತ್ಮನು ನರರ ಉಪಭೋಗಕ್ಕಾಗಿ ಈ ಜಗತ್ತನ್ನು ನಿರ್ಮಿಸಿರುವನೆಂದು ಹೇಳಲು ಯಾವ ಸಂಶಯವೂ ಇರುವುದಿಲ್ಲ. ಮಾನವರ ಉದ್ಧಾರಕ್ಕಾಗಿ ವೇದಾಗಮಾದಿ ಸಮಸ್ತ ವಿದ್ಯೆಯನ್ನೂ ಜಗನ್ನಿಯಾಮಕನು ಗುರುರೂಪದಿಂದ ಬೋಧಿಸಿದ್ದಾನೆ. ವಿದ್ಯೆಯು ಲೌಕಿಕವಿದ್ಯೆಯೆಂದೂ ಪಾರಮಾರ್ಥಿಕವಿದ್ಯೆಯೆಂದೂ ಎರಡು ಬಗೆಯಾಗಿರುತ್ತದೆ ಲೌಕಿಕವಿದ್ಯೆಗೆ ದೊರೆಯೂ ಪಾರಮಾರ್ಥಿಕವಿದ್ಯೆಗೆ ಗುರುವೂ ಆಧಾರವಾಗಿರುತ್ತಾರೆ ದೊರೆಯು ಶಸ್ತ್ರದಿಂದಲೂ ಗುರುವು ಶಾಸ್ತ್ರದಿಂದಲೂ ಮಾನವರ ಮೇಲೆ ಅಧಿಕಾರ ನಡೆಸುತ್ತಿದ್ದಾರೆ. ತೀರಗಳಿಂದ ಕೂಡಿದ ನದೀ ಪ್ರವಾಹವು ಸುಮುಖವಾಗಿ ಸಾಗರವನ್ನು ಸೇರುವಂತೆ ಗುರು ದೊರೆಗಳೆಂಬ ತೀರಗಳನ್ನು ಹೊಂದಿದ ಜನಪ್ರವಾಹವು ಶಾಂತಿಸಾಗರವನ್ನು ಸೇರಬೇಕಾಗಿದೆ. ವಿದ್ಯೆಯ ಮಹತ್ವವನ್ನರಿತ ಯದುವಂಶ ಸಂಭವರಾದ ನಮ್ಮ ದೊರೆಗಳು ತಮ್ಮ ವಂಶಪರಂಪರೆಯಿಂದಲೂ ಪ್ರಜೆಗಳ ಪುರೋಭಿವೃದ್ಧಿಗಾಗಿ ನಮ್ಮ ಮೈಸೂರುದೇಶ ಮಧ್ಯದಲ್ಲಿ ಅನೇಕ ಶಾಲೆಗಳನ್ನೂ ದೊಡ್ಡ ದೊಡ್ಡ ನಗರಗಳಲ್ಲಿ ಹೈಸ್ಕೂಲ್ ಕಾಲೇಜುಗಳನ್ನೂ ಏರ್ಪಡಿಸಿ ಒಳ್ಳೆಯ ವಿದ್ಯಾಧಿಕಾರಿಗಳನ್ನು ನೇಮಿಸಿರುವುದು ಪ್ರಜೆಗಳಾದ ನಮ್ಮ ಸುದೈವವೆಂದೇ ಭಾವಿಸಬೇಕಾಗಿದೆ.

[ಪನೆಯ ಪುಟವನ್ನು ನೋಡಿ]

ಯೂರೋಪಿನ ಬಂಧವಿಮೋಚನೆಯಲ್ಲಿ ಭಾರತೀಯ ಸೈನ್ಯದ ಪಾತ್ರ

ಯೂರೋಪಿನ ಬಂಧ ವಿಮೋಚನೆಯಲ್ಲಿ ಭಾರತೀಯ ಸೈನ್ಯದ ಪಡೆಗಳು ಯಶಸ್ವಿಯಾಗಿ ಕೆಲಸಮಾಡಿದವು ಇಟಾಲಿಯನರೊಡನೆ ಅವರು ಒಟ್ಟು ಕಷ್ಟಪಟ್ಟು [illegible] ದರು [illegible] ಪ್ರಶಂಸೆಯ [illegible] ಶ್ಲಾಘನೆ ಕಡಮೆಯಲ್ಲವೆಂದು [illegible] ಯುದ್ಧದಲ್ಲಿ ಭಾರತೀಯ ಸೈನಿಕರು ಇತರ ಕೆಲವು ಶಕ್ತಿಗಳನ್ನೂ ಗುಣಗಳನ್ನೂ ಪ್ರದರ್ಶಿಸಿದರು [illegible] ಪ್ರದೇಶಗಳಲ್ಲಿ [illegible] ಅವರು [illegible] ಮೂಂದು [illegible] ಕಠಿಣ [illegible] ನಿರ್ವಹಿಸಿದರು

[illegible] ಎಂಟನೆಯ [illegible]

ಭಾರತೀಯ ಸೈನ್ಯ [illegible] ವಿಜಯ [illegible] ಪರಾಕ್ರಮ [illegible]

ಮೆ ಜರ್ [illegible] ದಕ್ಷಿಣ [illegible] ನಾಲ್ಕನೆಯ ಎಂಟನೆಯ ಮತ್ತು ಹತ್ತನೆಯ [illegible] ಪ್ರದೇಶ [illegible] ದೂರ ಯೂರೋಪಿನಲ್ಲಿ ದಂಡಯಾತ್ರೆ ನಡೆಯಿತು ಹಲವಾರು ಸ್ವಾಭಾವಿಕ ಎಡರು ತೊಡರುಗಳನ್ನು ದಾಟಿ, ಕೃತ್ರಿಮ ಅಡ್ಡಿ ಆತಂಕಗಳನ್ನು ಒತ್ತರಿಸಿ, ವಿಜಯಶಾಲಿಗಳಾಗಿ ಕೀರ್ತಿಗಳಿಸಿದರು

ಇಟಲಿಯಲ್ಲಿ ಶತ್ರುಗಳನ್ನು ಸದೆಬಡಿಯುವ ಕೆಲಸದಲ್ಲಿ ನಿರತರಾಗಿದ್ದಾಗ್ಗೆ ಮಿತ್ರಪಕ್ಷದ ಸೈನ್ಯಪಡೆಗಳವರಲ್ಲಿ ನೆಲಸಿದ ಸ್ನೇಹಭಾವವು ಆ ಕೆಲವು ತಿಂಗಳುಗಳಲ್ಲೇ ಬಲಿಯಿತು ಕೆನಡಾ ದೇಶೀಯರೂ ಭಾರತೀಯರೂ ಏಕೀಕರಿಸಿ ಕೆಲಸಮಾಡಿದ್ದಾಗ್ಗೆ ಅವರಲ್ಲಿ ಬೆಳೆದ ವಿಶ್ವಾಸ ಆದರ್ಶವಾದುದು 'ಜವಾ', ಟಾಮಿ', 'ಯಾಂಕ್' ಮತ್ತು "ಜಾಕ್' ಇವರುಗಳಲ್ಲಿ ಕಾಣಬರುತ್ತಿದ್ದ ಸ್ನೇಹಪರತೆಯನ್ನು ನೋಡಿ ತಿಳಿಯಬೇಕಲ್ಲದೆ ಮಾತುಗಳಿಂದ ತಿಳಿಸುವುದು ಸಾಧ್ಯವಿಲ್ಲ

ನ್ಯೂಜಿಲೆಂಡ್‌ನವರಿಗಂತೂ ಭಾರತೀಯರಲ್ಲಿ ಪರಮ ಸ್ನೇಹ ಭಾರತೀಯ ಸೈನಿಕರು ಸಾಹಸಕ್ಕೆ ಎಂಬುದು ಅವರ ದೃಢವಾದ ಭಾವನೆ ಭಾರತೀಯರ ಸೈನ್ಯಪಡೆಯನ್ನು ಕಂಡರಿತ 'ಯಾಂಕ್' ಯೋಧರು, 'ಭಾರತೀಯರು ಬೆಂಬಲವಾಗಿರುವಾಗ ಇನ್ನೇನು ಯೋಚನೆಗೆ ಕಾರಣವಿಲ್ಲ" ಎನ್ನುವರು ದಕ್ಷಿಣ ಆಫ್ರಿಕಾದಲ್ಲಿ ಹೊಗಳಿದರು ಫ್ರೆಂಚ್ ಸೈನ್ಯಗಳು ತಮ್ಮ ದೇಶವನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಇಟಲಿ ದೇಶದಿಂದ ಹೊರಟು ಹೋಗುವಾಗ್ಗೆ ತಮ್ಮ ಸ್ಥಾನವನ್ನು ಭರತಖಂಡದ 8ನೆಯ ಸೈನ್ಯಕ್ಕೆ ಒಪ್ಪಿಸಿ ಹೋದರು. ರಕ್ತಮಯವಾದ "ಕ್ಯಾಸ್ಸಿನೋ" ಯುದ್ಧಕ್ಷೇತ್ರದಲ್ಲಿ ಭಾರತೀಯರಿಗೂ, ಪೋಲರಿಗೂ ದೃಢವಿಶ್ವಾಸವುಂಟಾಯಿತು

ಇಟಲಿಯ ಭಾರತೀಯ ಸೈನಿಕರಿಗೆ ಕೀರ್ತಿಯೂ ಲಭಿಸಿತು. ತೊಂದರೆ ಸಂಕಟಗಳೂ ಸನ್ನಿಹಿತವಾದುವು ಒಳ್ಳೆ [illegible]ಂದು ವರ್ಷದೊಳಗಾಗಿ ಭಾರತೀಯರಿಗೆ ಮೂರು ವಿಕ್ಟೋರಿಯಾ ಕ್ರಾಸ್ ಪ್ರಶಸ್ತಿಗಳು ಲಭಿಸಿದವು ರಸ್[illegible]ೋ ರಣಕ್ಷೇತ್ರದಲ್ಲಿ ಪಂಜಾಬಿನ 3ನೆಯ ರೆಜಿಮೆಂಟಿನ ಇಪ್ಪತ್ತು ವರ್ಷ ವಯಸ್ಸಿನ ಗುಜರಾತ್ ಯುವಕ ಕಮಲರಾಮ್ ವಿ ಸಿ ಅವನು ನಡೆಸಿದ ಕೆಲಸ ಭಾರತ ದೇಶದ ಮಿಲಿಟರಿ ಚರಿತ್ರೆಯಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡತಕ್ಕದಾದಂಥ ವಿಚಾರ, ಸಿಟ್ಟಾಡಿಕಾಸ್ಟೆಲ್ಲೋವಿಗೆ ಸಮೀಪದಲ್ಲಿ ಜರುಗಿದ ಒಂದು ಯುದ್ಧದಲ್ಲಿ 6 ನೆಯ ಮರಾಠ ಲೈಟ್ ಇನ್‌ಫೆಂಟ್ರಿ ದಳಕ್ಕೆ ಸೇರಿದ ಮರಾಠಾ ನಾಯಕ್ ದಿವಂಗತ ಯಶವಂತ್ ಘಾಡ್ಗೆ, ವಿಸಿ, ಆತನು ತೋರಿಸಿದ ದೃಢಚಿತ್ತ ಮತ್ತು ಧೈರ್ಯ ಇವು ಭಾರತೀಯ ಸೈನಿಕರ ಕೀರ್ತಿ ಕಲಶ

ಭಾರತೀಯ ಸೈನ್ಯಗಳ ವಿಜಯ ಪರಂಪರೆಯಿಂದ ಎಂಟನೆಯ ಭಾರತೀಯ ಡಿವಿಜನ್ ಸೈನ್ಯವು ಕ್ರಮವಾಗಿ 1943 ನೆಯ ಇಸವಿ ಅಕ್ಟೋಬರ್ 19 ನೆಯ ತಾರೀಖಿನ ವೇಳೆಗೆ ಯುದ್ಧಕ್ಕಿಳಿಯಿತು ಆ ತಿಂಗಳ ಕೊನೆಯೊಳಗಾಗಿ ಟ್ರಿಗ್ನೋ ನದಿಯನ್ನು ದಾಟಿ, ನವೆಂಬರ್ ತಿಂಗಳ ಕೊನೆಗಾಗಿ ಆ ಸೈನ್ಯವು 2000 ಅಡಿಗಳ ಎತ್ತರದ ಪ್ರದೇಶದಿಂದ ಜರ್ಮನ್ ಸ್ನೈಪರ್, ಸೈನ್ಯಗಳು ಗುಂಡಿನ ಮಳೆಗರೆಯುತ್ತಿರುವುದನ್ನೂ ಲೆಕ್ಕಿಸದೆ, ಟ್ರಿಗ್ನೋ ನದಿಯನ್ನು ದಾಟುವ ಹೆಚ್ಚು ಸಾಹಸಕರವಾದ ಕೆಲಸವನ್ನು ಸಾಧಿಸಿತು ಮುಂದೆ ಆ ಸೈನ್ಯದವರು ಸಾಂಗ್ರೋ ನದಿಯನ್ನು ದಾಟಿದರು ಒಂದು ಬ್ರಿಗೇಡಿನವರು ಬೆಟ್ಟದ ಮೇಲಿದ್ದ ಶತ್ರುಗಳನ್ನು ತರುಬಿ ಕೊಂಡು ಇರ್[illegible] ಸೈನ್ಯದ ಮುಖ್ಯ ವಿಭಾಗದವರು ಟ್ಯಾಂಕ್ [illegible] ಸಹ ಯದೂಡನೆ 1943 ನೆಯ ಇಸವಿ ನವೆಂಬರ್ [illegible] ತಾರೀಖಿನ ದಿನ ಶ್ವಾಗ ಪಾರಂಭಿಸಿದರು [illegible] ಸ್ಯಾಂಗ್ರೋ' ನದಿಯನ್ನು ದಾಟಿ, ಮನ್ನಗೋನಾ ಎಂಬ ಗ್ರಾಮದಲ್ಲಿ ಮನೆ ಮನೆಗಳಲ್ಲಿ ಅವಿತಿದ್ದ ಪ್ರತಿಯೊಬ್ಬ ಶತ್ರುವನ್ನೂ ಕೈಸೆರೆ ಹಿಡಿದರು ಲ್ಯಾನ್ಸಿಯಾನೋ' ವನ್ನು ವಶಪಡಿಸಿ [illegible] ಜರ್ಮನ್ ವ್ಯೂಹವನ್ನು ಭೇದಿಸಿ, ಈ 'ಭಾರತೀಯ ಡಿವಿಜನ್ ಸೈನ್ಯವು ಮೋರೋ ನದಿಯನ್ನು ದಾಟಬೇಕಾಯಿತು ಅಲ್ಲಿ ಶತ್ರುವು ಯುದ್ಧಕ್ಕೆ ನಿಂತನು ಡಿವಿಜನಿನ ಇಂಜನಿಯರುಗಳು 'ಅಸಾಧ್ಯ ಸೇತುವೆ' ಯನ್ನು ಕಟ್ಟಿದಮೇಲೆ ಟ್ಯಾಂಕುಗಳೂ ಪದಾತಿ ಸೈನ್ಯವೂ ದಾಟಿಹೋಗಿ ಯುದ್ಧ ಮಾಡಿ ಜಯಶೀಲವಾದುದು ಚಳಿಗಾಲದಲ್ಲಿ ಈ ಸೈನ್ಯವು ಆರ್ಟೋನಾ ಪ್ರಾಂತ್ಯದಲ್ಲಿದ್ದಿತು

ಈ ಮಧ್ಯೆ 1943 ನೆಯ ಇಸವಿ ಡಿಸೆಂಬರ್ 8 ನೆಯ ತಾರೀಖಿನ ದಿನ ನಾಲ್ಕನೆಯ ಭಾರತೀಯ ಡಿವಿಜನ್ ಯುದ್ಧರಂಗಕ್ಕಿಳಿಯಿತು 'ಆರ್ಟೋನಾ' ಮತ್ತು 'ವೆಯಿಲ್ಲಾ' ರಣಕ್ಷೇತ್ರಗಳಲ್ಲಿ ಸ್ವಲ್ಪ ಕಾಲವಿದ್ದ ತರುವಾಯ 1944 ನೆಯ ಇಸವಿ ಫೆಬ್ರವರಿ ಮಧ್ಯಭಾಗದಲ್ಲಿ ಈ ಸೈನ್ಯವನ್ನು 'ಕೆಸ್ಸಿನೋ' ಕ್ಷೇತ್ರಕ್ಕೆ ಕಳುಹಿಸಲಾಯಿತು ಅಮೆರಿಕನ್ ಪಡೆಗಳ ಎರಡನೆಯ ಮತ್ತು ಮೂರನೆಯ ದಾಳಿಗಳಲ್ಲಿ ಸಹಕರಿಸಿ, ಈ 'ಘರ್ಷಣೆಯ ನಾಲ್ಕನೆಯ ಸೈನ್ಯ'ವು ಕೆಸ್ಸಿನೋವನ್ನು ಮಿತ್ರಪಕ್ಷದವರು ದಾಟುವುದಕ್ಕೆ ಸಹಾಯಮಾಡಿ ಮತ್ತೊಮ್ಮೆ ಯಶಸ್ವಿಗಳಾದರು ಫೆಬ್ರವರಿ 14 ನೆಯ ತಾರೀಖಿನಿಂದ ಹಿಡಿದು 1944 ನೆಯ ಇಸವಿ ಕೊನೆಯವರೆಗೆ ಈ ಯುದ್ಧದ ಕೆಲವು ಅತ್ಯಂತ ಭೀಕರ ಕಾಳಗಗಳನ್ನು ಈ ಡಿವಿಜನ್ನಿನವರು ನಡೆಯಿಸಿದರು. ಈ ಕಾಳಗದಲ್ಲಿ 593 ನೆಯ ಸ್ಥಾನವನ್ನು ಭೇದಿಸಿದುದು, 444 ನೆಯ ಮತ್ತು 450 ನೆಯ ಸ್ಥಾನಗಳಿಗಾಗಿ ಭಯಂಕರವಾಗಿ ಕಾದಿದುದು, 435 ನೆಯ ಸ್ಥಾನವನ್ನು ಉಳಿಸಿಕೊಂಡುದು, 'ಹ್ಯಾಂಗ್ ಮೆನ್ಸ್ ಹಿಲ್" ಸ್ಥಾನವನ್ನು ಅಪಾಯಗಳಿಗೆ ಎದೆಗೊಟ್ಟು, ಆಕ್ರಮಿಸಿದುದು—ಇವೆಲ್ಲಾ ಆ ಕಾಳಗಗಳಲ್ಲಿ ನಡೆದ ಮುಖ್ಯಘಟನೆಗಳು 1944 ನೆಯ ಇಸವಿ ಏಪ್ರಿಲ್ ತಿಂಗಳಲ್ಲಿ ಮೇಲೆ ತಿಳಿಸಿದ ಮೂರು ಮುಖ್ಯ ಸೈನ್ಯಗಳ ಪೈಕಿ ಮೊದಲನೆಯದಾದ ಹತ್ತನೆಯ ಭಾರತೀಯ ಡಿವಿಜನ್ ಸೈನ್ಯವು (ಇದನ್ನು 1941 ನೆಯ ಇಸವಿ ಫೆಬ್ರವರಿ ತಿಂಗಳಲ್ಲಿ ಅಹಮದ್ ನಗರದಲ್ಲಿ ಸೇರಿಸಲಾಯಿತು.) ಏಡ್ರಿಯಾಟಿಕ್ ಸಕ್ಟಾರ್ ಪ್ರದೇಶದಲ್ಲಿ ಕೆನಡಿಯನ್ ಸೈನ್ಯ ಪಡೆಗಳ ಸಹಾಯಕ್ಕೆ ನಿಂತಿತು ಈ ಸೈನ್ಯವು ಇರಾಕ್, ಪರ್ಶಿಯ, ಸಿರಿಯ ಮತ್ತು ಪಶ್ಚಿಮದ ಮರಳು ಕಾಡುಗಳಲ್ಲಿ ಯುದ್ಧ ಮಾಡಿ ಪಳಗಿದ್ದಿತು. ಆಗ ಚಳಿಗಾಲವಾಗಿದ್ದುದರಿಂದ ಮೊದಲು ಕೆಲವು ವಾರಗಳವರೆಗೆ ಈ ಡಿವಿಜನ್ನಿನವರು 'ಗಸ್ತಿ'ನ ಕೆಲಸವನ್ನು ಮಾಡಬೇಕಾಯಿತು

ಮೇ ತಿಂಗಳಲ್ಲಿ 'ಕೆಸ್ಸಿನೋ' ವನ್ನು ದಾಟಬೇಕೆಂಬ ಸಾಹಸ ಪ್ರಾರಂಭವಾದಾಗ 'ಎಂಟನೆಯ ಭಾರತೀಯ ಡಿವಿಜನ್' ಸೈನ್ಯಕ್ಕೆ ಬಹಳ ಮುಖ್ಯವಾದ—ಎಂದರೆ ಕೆಸ್ಸಿನೋವಿಗೆ ದಕ್ಷಿಣದಲ್ಲಿರುವ ರಪಿಡೋ ನದಿಯನ್ನು ದಾಟುವ ಕೆಲಸವನ್ನು ವಹಿಸಲಾಯಿತು 1944 ನೆಯ ಇಸವಿ ಮೇ 11 ನೆಯ ತಾರೀಖಿನ ದಿನ ರಾತ್ರಿ ಗುಂಡಿನ ಮಳೆಯಿಂದ ಪ್ರಾರಂಭಿಸಿ ಈ ಸೈನ್ಯದ, ಮೆಷಿನ್‌ಗನ್, ಪಡೆ ಇಂಜನಿಯರುಗಳು ಮತ್ತು ಸ್ಯಾಪರ್ಸ್‌ಮೈನರ್ಸ್ ಇವರೆಲ್ಲರೂ ತಮ್ಮ ಸರ್ವಶಕ್ತಿಯನ್ನೂ ವಿಚಕ್ಷಣೆಯಿಂದ ಕೇಂದ್ರೀಕರಿಸಿ ಒಂದು ಸ್ಮರಣೀಯವಾದಂಥ ಯುದ್ಧವನ್ನು ನಡೆಯಿಸಿದರು ಜಗತ್ತಿಗೆ ಆಶ್ಚರ್ಯವಾಗುವಂಥ ರೀತಿಯಲ್ಲಿ 8 ನೆಯ ಭಾರತೀಯ ಸೈನ್ಯದವರು ತಮಗೆ ವಹಿಸಿದ್ದ ಕೆಲಸವನ್ನು ಸಾಧಿಸಿದರು ಅವರ ಹೆಸರನ್ನು ವರ್ತಮಾನ ಪತ್ರಿಕೆಗಳಲ್ಲೆಲ್ಲಾ ಸಾರಲಾಯಿತು. ಆಗ ಕೆಸ್ಸಿನೋ ಪತನವಾಯಿತು ರೋಂ ಪತನವಾದ ನಂತರ ಮೇಲೆ ಹೇಳಿದ ಮೂರು ಭಾರತೀಯ ಡಿವಿಜನ್ ಸೈನ್ಯಗಳಿಗೆ ಬೇರೆ ಕರ್ತವ್ಯಗಳನ್ನು ವಹಿಸಲಾಯಿತು ಹತ್ತನೆಯ ಸೈನ್ಯದವರು ಏಡ್ರಿಯಾಟಿಕ್ ಪ್ರದೇಶವನ್ನು ಬಿಟ್ಟು ಹೊರಟು 1944 ನೆಯ ಇಸವಿ ಜೂನ್ ಕೊನೆಯ ವೇಳೆಗೆ ಪೆರುಜಿಯಾ—ಟೈಬರ್ ಪ್ರದೇಶಕ್ಕೆ ಬಂದರು ಜುಲೈ ಆಖೈರಿನ ವೇಳೆಗೆ ಎಂಟನೆಯ ಸೈನ್ಯದವರು ಫ್ರೆಂಚರಿಂದ ಸರ್ಟಾಲ್ಡೋ—ಪೆರುಜಿಯಾ ಪ್ರದೇಶದ ಹತೋಟಿಯನ್ನು ವಹಿಸಿಕೊಂಡರು. ನಾಲ್ಕನೆಯ ಸೈನ್ಯದವರು ಪೆಸಸ್ಕಾರಾ ಮತ್ತು ಚಿಯಿಟಿ ಪ್ರಾಂತಗಳಲ್ಲಿ ಶತ್ರುಗಳನ್ನು ನಿರ್ಮೂಲಮಾಡಿದ ನಂತರ, ಟೈಬರ್ ನದಿಯ ಮೇಲುದಡದಲ್ಲೂ ಮತ್ತು ಆರ್ನೋ ಬಯಲಿನಲ್ಲೂ ಹಬ್ಬಿರುವ ಚಾಚೆ ಪ್ರಾಂತ್ಯವನ್ನಾಕ್ರಮಿಸಿಕೊಳ್ಳುವುದಕ್ಕೆ ಪ್ರಾರಂಭಿಸಿದರು ಆ ಸಮಯದಲ್ಲಿ ಎಂಟನೆಯ ಸೈನ್ಯದವರು ಆರ್ನೋ ನದಿಯನ್ನೂ ದಾಟಿ ಫ್ಲಾರೆನ್ಸ್ ನಗರವನ್ನು ಹೊಕ್ಕು ಹಲವಾರು ಯುದ್ಧಗಳನ್ನು ಮಾಡಿ ಸೀವ್ ನದಿಯ ಬಯಲನ್ನು ಪ್ರವೇಶಿಸಿದರು ಹತ್ತನೆಯ ಸೈನ್ಯದವರು ಕ್ರಮ ಕ್ರಮವಾಗಿ ಮುಂದುವರಿದು, ಚಾಚೆ ಪ್ರಾಂತದ ಬೆಟ್ಟಕಾಡುಗಳಲ್ಲಿ ಶತ್ರುಗಳನ್ನು ನಿರ್ಮೂಲಮಾಡಿ ಟೈಬರ್ ಸಮೀಪಕ್ಕೆ ಬಂದರು ಇದೇ ವೇಳೆಗೆ ನಾಲ್ಕನೆಯ ಸೈನ್ಯದವರು ಶತ್ರುಗಳಿಗೆ ಪತ್ತೆಯಿಲ್ಲದಂತೆ ಮುಂದುವರಿಯುತ್ತಾ, ಎಂಟನೆಯ ಸೈನ್ಯದವರು ಶತ್ರುಗಳ ಗಾಥಿಕ್‌ವ್ಯೂಹವನ್ನು ಭೇದಿಸುವ ಪ್ರಯತ್ನದಲ್ಲಿ ಏಡ್ರಿಯಾಟಿಕ್ ಬಳಿ ಅವರನ್ನು ಜೊತೆಗೂಡುವುದಕ್ಕಾಗಿ ಹೋದರು

ಇಟಾಲಿಯನ್ ಸೈನ್ಯಗಳ ಹಿಂಬದಿಯಲ್ಲಿ ಗುಪ್ತವಾಗಿಯೂ ಚುರುಕಾಗಿಯೂ ನಡೆದು ನಾಲ್ಕನೆಯ ಭಾರತೀಯ ಡಿವಿಜನ್ನಿನವರು ಕಾಂಗ್ಲಿ ಬಳಿ ಗಾಥಿಕ್ ವ್ಯೂಹದ ಮೇಲೆ ಮೊದಲನೆಯ ಸಲ ದಾಳಿಮಾಡಿದರು ಅರ್ಬನೋ ವಶವಾಯಿತು 1944 ನೆಯ ಇಸವಿ ಆಗಸ್ಟ್ 9 ನೆಯ ತಾರೀಖು ನಡುರಾತ್ರಿಯಲ್ಲಿ ಫೋಗ್ಲಿಯಾ ನದಿಯನ್ನು ಸಮೀಪಿಸಲಾಯಿತು ಒಂದು ಪೆಟ್ರೋಲಿನವರು ತಂದ ಸಮಾಚಾರವನ್ನು ಜಾಗ್ರತೆ ಉಪಯೋಗಿಸಿಕೊಂಡು ಈ ಡಿವಿಜನ್ನಿನವರು, ಗಾಥಿಕ್ ವ್ಯೂಹವನ್ನು ಭೇದಿಸಿ 2000 ಅಡಿಗಳ ದೂರ ನುಗ್ಗಿದರು ಅಲ್ಲಿಂದ ಆ ಡಿವಿಜನ್ನು ವಾಯುವ್ಯಕ್ಕೆ ನುಗ್ಗಿ ಮರೇನೋ ನದಿಯನ್ನು ದಾಟಿ ಸ್ಯಾನ್‌ಮೇರಿನೋ ಕೋಟೆಯನ್ನು ಹಿಡಿದರು. ಗಾಥಿಕ್ ವ್ಯೂಹ ಭೇದನದಲ್ಲಿ ಇತರ ಎರಡು ಭಾರತೀಯ ಡಿವಿಜನ್‌ಗಳವರೂ ಕೆಲಸ ಮಾಡಿದರು 5 ನೆಯ ಸೈನ್ಯದ ನೇತೃತ್ವದಲ್ಲಿ ಎಂಟನೆಯ ಭಾರತೀಯ ಡಿವಿಜನ್ನಿನವರು ಗಿಯೋವಿ ಶಿಖರದ ಕಡೆಗೆ ಹೋಗಿ ಇನ್ನೊಂದು ನದಿಯನ್ನು - ಎಂದರೆ ಸೀವ್ ನದಿಯನ್ನು ದಾಟಿ ವೆಟ್ರಾಕ ಶಿಖರವನ್ನು ಹಿಡಿದು, ಪ್ಯಾವೀನಾ ಮಾರ್ಟಿ, ಎಂಬ ಕೋಟೆಯನ್ನೂ ವಶಪಡಿಸಿಕೊಂಡರು ಎಂಟನೆಯ ಡಿವಿಜನ್ ಸೈನ್ಯದವರು ಗಾಥಿಕ್ ವ್ಯೂಹವನ್ನು ಭೇದಿಸುವುದಕ್ಕೆ 'ಜ್ಯೂನಿಯರ್ ಕಮ್ಯಾಂಡರುಗಳ' ವಿಚಕ್ಷಣೆ ಮತ್ತು ಧೈರ್ಯೋತ್ಸಾಹಗಳೂ ಮತ್ತು ಫಿರಂಗಿ ಸೈನ್ಯ, ಟ್ಯಾಂಕುಗಳು ಮತ್ತು ಪದಾತಿ ಸೈನ್ಯದವರು ಸಮಾಲೋ,

ಚನೆಯಿಂದ ಏಕೀಭವಿಸಿ ಕೆಲಸ ಸಾಧಿಸಿದದೂ ಕಾರಣ.

'ಬೊಲೋಣಾ' ವಿಭ ಪಕ್ಷದಲ್ಲಿರುವ ಬೆಟ್ಟಗಳಲ್ಲಿ ದ್ದಾಗ್ಗೆ ಈ ಡಿವಿಜನ್ನಿನವರು ಪಶ್ಚಿಮದ ಕಡೆ 'ಸರ್ಚಿಯೋ' ಬಯಲಿನಲ್ಲಿ ಪರಿಸ್ಥಿತಿಯನ್ನು ಪದಕ್ಕೆ ತರಬೇಕಾಯಿತು. ಅತಿತ್ವರೆಯಿಂದ ಮುನ್ನುಗ್ಗಿ ಈ ಡಿವಿಜನ್ನಿನವರೂ ಧಾಳಿ ಪ್ರಾರಂಭಿಸಿದರು ಈ ದಾಳಿ ವಿಚಾರವಾಗಿ ಲೆಫ್ಟಿನೆಂಟ್ ಜನರಲ್ ಮಾರ್ಕ್‌ಕ್ಲಾರ್ಕ್‌ರವರು ಎಂಟನೆಯ ಭಾರತೀಯ ಡಿವಿಜನ್ನಿನ ಹೆಚ್ಚು ಭಾಗವನ್ನು ನಾವು ಅಲ್ಲಿಗೆ ಕಳುಹಿಸಿದೆವು ಆ ಡಿವಿಜನ್ನಿನವರು ಜರ್ಮನರ ಮುನ್ನೋಟವನ್ನು ತಡೆಗಟ್ಟಿದರು ಎಂದಿದ್ದಾರೆ ಈ ಮಧ್ಯೆ ಹತ್ತನೆಯ ಭಾರತೀಯ ಡಿವಿಜನ್ನಿನವರು ಆಮೇಲೆ 'ಪೀಟ್ರೋಲುಂಗಾ' ಮತ್ತು ಅಪ್ಪಡಿಕಿಟೇನಿಯಾಗಳ ಕಡೆ ನುಗ್ಗಿದರು ಎಮ್. ಪಿಲ್ಲಿಟೋ ಮಿತ್ರವಶವಾಯಿತು ಇದೇ ಡಿವಿಜನ್ನಿನವರು 1945 ರ ಪ್ರಾರಂಭದಲ್ಲಿ ಏಡ್ರಿಯಾಟಿಕ್ ಪ್ರದೇಶಕ್ಕೆ ನುಗ್ಗುವುದಕ್ಕೆ ಮುಂಚೆ ಈಶಾನ್ಯಕ್ಕೆ ತಿರುಗಿ 'ಫಾನ್ಜೆಟೋ' ವನ್ನು ವಶಪಡಿಸಿಕೊಂಡರು.

ಸಾರಾಂಶವೇನೆಂದರೆ, ಯೂರೋಪಿನ ರಣಾಂಗಣಗಳಲ್ಲಿ ಭಾರತೀಯ ಯೋಧನ ಕೀರ್ತಿ ಹಬ್ಬಿತು ಇಟಲಿಯಲ್ಲಿ ಮಿತ್ರ ಸೈನ್ಯಗಳ ಸೇನಾಧಿಪತಿಗಳಾಗಿದ್ದ ಲೆಫ್ಟಿನೆಂಟ್ ಜನರಲ್ ಮಾರ್ಕ್‌ಸ್‌ರವರ ಮಾತುಗಳು ಗಮನಾರ್ಹವಾಗಿವೆ ಯುದ್ಧದಲ್ಲಿ ಭಾರತೀಯ ಯೋಧರು ಸಾಧಿಸಿದ ಸಾಹಸಗಳು ಗಮನಿಸತಕ್ಕುವು ಆ ಯೋಧರು ಶತ್ರುವು ಅನುಕೂಲವಾದ ರಕ್ಷಣಾಕ್ಷೇತ್ರವನ್ನಾಕ್ರಮಿಸಿಕೊಂಡಿದ್ದಾಗ್ಗೆ ಮತ್ತು ಆ ಸ್ಥಾನವನ್ನು ಉಳಿಸಿಕೊಳ್ಳುವ ದೃಢಮನಸ್ಸಿನಿಂದಿದ್ದಾಗ್ಗೆ, ಛಲದಿಂದ ಯುದ್ಧಮಾಡಿ ವಿಜಯಿಗಳಾದರು. ಯಾವುದೇ ಅಡ್ಡಿ ಆತಂಕಗಳಾಗಲಿ ಅವರನ್ನು ಹಿಂತಿರುಗಿಸಲಾಗಲಿಲ್ಲ ಎದೆಗುಂದಿಸಲಿಲ್ಲ ಅವರಿಗೆ ದೊರೆತಿರುವ ಯುದ್ಧಪ್ರಶಸ್ತಿಗಳೇ ಅವರ ಧೈರ್ಯಕ್ಕೆ ಸಾಕ್ಷಿ. ಕೆಸ್ಸಿನೋ ಪತನ, ರೋಂ ಆಕ್ರಮಣ, ಅನ್ಜೋ-ಒಯಲನ್ನು ವಶಮಾಡಿಕೊಂಡುದು, ಫ್ಲಾರೆನ್ಸನ್ನು ಶತ್ರುಗಳಿಂದ ಬಿಡಿಸಿದುದು, ಮತ್ತು ಗಾಥಿಕ್ ವ್ಯೂಹವನ್ನು ಭೇದಿಸಿದುದು—ಇವುಗಳ ಸಂಬಂಧದಲ್ಲಿ ನಾಲ್ಕನೆಯ ಮತ್ತು ಹತ್ತನೆಯ ಭಾರತೀಯ ಡಿವಿಜನ್‌ಗಳು ಜ್ಞಾಪಕಕ್ಕೆ ಬರುತ್ತಲೇ ಇರುತ್ತವೆ ಈ ಮೂರು ಭಾರತೀಯ ಡಿವಿಜನ್ನುಗಳ ಧೈರ್ಯಶಾಲಿಗಳಾದ ಯೋಧರುಗಳಿಗೆ ನನ್ನ ಅಭಿನಂದನೆಗಳು," ಭಾರತೀಯ ಯೋಧರುಗಳು ಸಲ್ಲಿಸಿದ ಅಮೌಲ್ಯ ಸೇವೆ ಈ ಮಾತುಗಳಿಂದ ವ್ಯಕ್ತಪಡುತ್ತದೆ

ಮೈ ಇ ಬ.

ವರ್ತಮಾನ ಸಂಗ್ರಹ

ಸಾಮ್ರಾಟರ ಕ್ರಿಸ್‌ಮಸ್ ಶುಭಾಶಯ

"ಈಗ ಆರು ವರ್ಷಗಳಿಂದ ಯುದ್ಧ ಆಗುತ್ತಿತ್ತು ಆ ಕಾಲದಲ್ಲಿ ನಾವು ಎಷ್ಟೋ ಕಷ್ಟನಷ್ಟಗಳನ್ನು ಅನುಭವಿಸಿದೆವು. ಜಗತ್ತಿನ ಶಾಂತಿ ಸಾಧಿತವಾಗುತ್ತದೆಂಬ ಆಸೆಯಿಂದ ಇದ್ದು ಅವೆಲ್ಲವನ್ನೂ ಅನುಭವಿಸಿದೆವು ಈಗ ಯುದ್ಧ ಮುಗಿದಿದೆ. ನಮ್ಮ ಸಾಮ್ರಾಜ್ಯದ ಜನ ಈ ಯುದ್ಧಕ್ಕಾಗಿ ತ್ಯಾಗಮಾಡಿರುವಷ್ಟು ಬೇರೆ ಯಾರೂ ಮಾಡಿಲ್ಲ ವಿಜಯವನ್ನು ಸಾಧಿಸಿದ್ದೇವೆ ಹಿಂದೆ ನಾವು ಕನಸು ಕಾಣುತ್ತಿದ್ದುದೆಲ್ಲ ಮುಂದೆ ಫಲಿಸಲೆಂದೇ ಭಗವಂತನಲ್ಲಿ ನಮ್ಮ ಅನನ್ಯ ಪ್ರಾರ್ಥನೆ" ಎಂದು ಸಾಮ್ರಾಟರು ಕ್ರಿಸ್ಮಸ್ ಸಂದೇಶದಲ್ಲಿ ಅರುಹಿದ್ದಾರೆ

ಭಾರತೀಯರಿಗೆ ಲಾ|| ಲಾರೆನ್ಸ್‌ರು ಸಂದೇಶ ಕಳಿಸುವರು

ಇಂಡಿಯಾದ ಸ್ಟೇಟ್ ಸೆಕ್ರೆಟರಿ ಲಾರ್ಡ್ ಲಾರೆನ್ಸ್‌ರವರು ಜನವರಿ ಒಂದನೆಯ ತಾ|| ರಾತ್ರಿ ಸುಮಾರು ೬-೪೫ ಗಂಟೆಗೆ ಲಂಡನ್ನಿನಿಂದ ಭಾರತೀಯರಿಗೆ ವೈಯ್ಯಕ್ತಿಕ ಸಂದೇಶವನ್ನು ಬ್ರಾಡ್‌ಕ್ಯಾಸ್ಟ್ ಮಾಡುತ್ತಾರೆ ಎಂದು ಅಧಿಕೃತವಾಗಿ ಗೊತ್ತಾಗಿದೆ ಈರೀತಿ ಇಂಡಿಯದ ಸ್ಟೇಟ್ ಸೆಕ್ರೆಟರಿಗಳು ವೈಯ್ಯಕ್ತಿಕವಾಗಿ ಭಾರತೀಯರಿಗೆ ಸಂದೇಶ ಬ್ರಾಡ್‌ಕ್ಯಾಸ್ಟ್ ಮಾಡುವುದು ಇದೇ ಮೊದಲನೆಯ ಬಾರಿ ಎಂದು ಹೇಳಲಾಗಿದೆ

ಕ್ಯಾಪ್ಟನ್ ಲಕ್ಷ್ಮಿ

ಭಾರತ ರಾಷ್ಟ್ರೀಯ ಸೈನ್ಯದಲ್ಲಿ ಹೆಂಗಸರ ಒಂದು ಪಡೆಯಿತ್ತು ಆ ದಳದ ನಾಯಕಿ ಕ್ಯಾಪ್ಟನ್ ಲಕ್ಷ್ಮಿ. ಈಕೆಯನ್ನು ಬರ್ಮ್ಮದ ದಕ್ಷಿಣ ಭಾಗದಲ್ಲಿ ನಿರ್ಬಂಧದಲ್ಲಿಟ್ಟಿದ್ದರು ಈಕೆ ಅಲ್ಲಿದ್ದುಕೊಂಡು, ಬಡಮಹಿಳೆಯರಿಗೆ ಔಷಧೋಪಚಾರ ಸಲ್ಲಿಸುತ್ತಿದ್ದಳು ಈಚೆಗೆ ಈಕೆಯನ್ನು ಭಾರತಕ್ಕೆ ಕಳುಹಿಸುತ್ತಾರೆಂದು ಸುದ್ದಿಯಿದೆ.

ಜಪಾನರಿಗೆ ಮಿತ್ರರಿಂದ ಶಸ್ತ್ರಾಸ್ತ್ರಗಳ ಸಹಾಯ

ಇಂಡೋನೇಷಿಯನ್ನರ ಪ್ರತಿಭಟನೆ ಉಗ್ರವಾಗುತ್ತಿರುವುದನ್ನು ಸದೆಬಡಿಯುವ ಸಲುವಾಗಿ ಮೆಡಾನಿನಲ್ಲಿ ಬ್ರಿಟಿಷ್ ಅಧಿಕಾರಿಗಳು ಒಂದು ಜಪಾನಿ ದಳಕ್ಕೆ ಮತ್ತೆ ಶಸ್ತ್ರಾಸ್ತ್ರಗಳನ್ನು ಕೊಟ್ಟು ಇಂಡೋನೇಷಿಯನ್ನರ ಮೇಲೆ ಯುದ್ಧಕ್ಕೆ ದೂಡುವ ಸಲುವಾಗಿ ಸಜ್ಜುಗೊಳಿಸುತ್ತಿದ್ದಾರೆಂದು ತಿಳಿದು ಬಂದಿದೆ

ಜಪಾನು ಮಹಿಳೆಯರಿಗೆ ಓಟು

ಜಪಾನು ಮಹಿಳೆಯರು ಓಟು ಚಲಾಯಿಸುವ ಹಕ್ಕನ್ನು ಇದೀಗ ಪಡೆಯುತ್ತಿದ್ದಾರೆ ಅವರಿಗೆ ಆ ಅಧಿಕಾರ ಕೊಡುವ ಮಸೂದೆ ಪಾರ್ಲಿಮೆಂಟಿನಿಂದ ಒಪ್ಪಿಗೆ ಪಡೆದಿದೆ ಈ ಸುಧಾರಣೆಯ ಪರವಾಗಿ ಅಲ್ಲಿನ ಜನಸಂಖ್ಯೆಯ ಮೂರು ಭಾಗ ಜನರು ಬೆಂಬಲ ಇತ್ತರು ಈ ಸುಧಾರಣೆ ೧೯೪೬ ನೆಯ ಜನವರಿಯಲ್ಲಿ ಪ್ರಾರಂಭವಾಗುವುದು

ಷರೀರ್‌ರವರನ್ನು ಹೊಡೆದರು

ಡಿಸಂಬರ್ ೨೬ ನೆಯ ತಾರೀಕು ಬೆಳಗ್ಗೆ ಇಂಡೋನೇಷಿಯನ್ ಪ್ರಧಾನಿ ಡಾ|| ಸುಲ್ತಾನ್ ಷರೀರ್‌ರವರನ್ನು ಹಲವರು ಸುತ್ತುಗಟ್ಟಿ ಹೊಡೆದರು ಕೆಲವರು ಗುಂಡು ಹಾರಿಸಿದರು. ಬಟೇವಿಯ ಪಂಚೆಂಗ್ ರಸ್ತೆಯಲ್ಲಿ ಅವರ ಕಾರನ್ನು ಬಲಾತ್ಕಾರದಿಂದ ನಿಲ್ಲಿಸಿದರು. ೩ ಜನ ಗಂಡಸರೂ ಒಬ್ಬ ಹೆಂಗಸೂ ಈ ಕೃತ್ಯವೆಸಗಿದರು ಆಮೇಲೆ ಅವರು ಕಾರಿನಲ್ಲಿದ್ದ ಪರ ರಾಲೆಂಬಿಡ ತಿಳಿಯುವ ಆ ರೀತಿ ಮಾಡಿದ ಹಾಗೆ ಹೇಳಲಾಗಿದೆ

ಭಾರತದಿಂದ ಬ್ರಿಟಿಷ್ ಸೇನೆ ವಾಪಸಾಗಬೇಕೆಂಬ ಸಲಹೆ

ಭಾರತ, ಚೀಣಾ, ಇಂಡೋನೇಷಿಯಾ ಮೊದಲಾದ ದೂರಪ್ರಾಚ್ಯರಾಷ್ಟ್ರಗಳಿಂದ ಬ್ರಿಟಿಷ್ ಮತ್ತು ಅಮೇರಿಕನ್ ಸೇನೆಗಳು ಅತಿ ಸ್ವಕಾಲದಲ್ಲಿ ವಾಪಸಾಗುವುದಾದರೆ, ಇರಾನ್ ಮತ್ತು ಬಾಲ್ಕನ್ ರಾಷ್ಟ್ರಗಳಿಂದ ತನ್ನ ಸೇನೆಗಳನ್ನು ರಷ್ಯ ವಾಪಸು ಕರೆಸಿಕೊಳ್ಳಲು ಸಿದ್ಧವಾಗಿದೆಯೆಂದು ಮೊಲಟೋವ್‌ರು ಸೂಚಿಸಿದರು ಆ ಸಲಹೆಯನ್ನಂಗೀಕರಿಸಲು ಬೈರನ್ಸ್ ಸಿದ್ಧವಾಗಿದ್ದರೂ ಬೆವಿನ್‌ರವರು ಅದನ್ನು ತೀವ್ರವಾಗಿ ವಿರೋಧಿಸಿದರೆಂದು ಗೊತ್ತಾಗಿದೆ ರಷ್ಯನರು ಮಾತ್ರ ಸಲಹೆಯನ್ನು ಒತ್ತಾಯಪಡಿಸುತ್ತಿದ್ದಾರೆ.

ಸೇನಾಶಾಸನಕ್ಕೆ ತಿದ್ದುಪಡಿ

ಈಗಿರುವ ಸೇನಾಶಾಸನದ ಪ್ರಕಾರ ಸಮ್ರಾಟರ ಮೇಲೆ ಯುದ್ಧಹೂಡಿದ ಮತ್ತು ಕೊಲೆಕೃತ್ಯಗಳನ್ನೆಸಗಿದ ಅಪಾದನೆಗಳಿಗೆ ಕೋರ್ಟು-ಮಾರ್ಷಲ್‌ಗಳು ವಿಧಿಸಬಹುದಾದ ತೀರ ಕಡಮೆಶಿಕ್ಷೆಯೆಂದರೆ ಜೀವಾವಧಿ ಗಡೀಪಾರು ಶಿಕ್ಷೆಯೇ ಈ ಶಿಕ್ಷೆ ಉಗ್ರವಾಗಿದೆಯೆಂದು ಕೋರ್ಟ್ ಮಾರ್ಷಲ್ ಅಭಿಪ್ರಾಯಪಟ್ಟರೆ ಆ ಶಿಕ್ಷೆಯನ್ನು ಕಡಮೆಮಾಡುವಂತೆ ಪ್ರಧಾನ ಸೇನಾನಿಗೆ ಶಿಫಾರಸುಮಾಡಬಹುದು ಕೋರ್ಟ್ ಮಾರ್ಷಲ್ ವಿಧಿಸುವ ಮರಣದಂಡನೆ ಅಥವಾ ಜೀವಾವಧಿ ಗಡೀಪಾರು ಶಿಕ್ಷೆಯನ್ನು ತೀರ ಕಡಮೆ ಶಿಕ್ಷೆಗೆ ಇಳಿಸುವ ಅಧಿಕಾರ ಪ್ರಧಾನ ಸೇನಾನಿಗೆ ಇರುವಂತೆ, ಸೇನಾ ಶಾಸನದ ೯೯ ನೆಯ ವಿಧಿಯನ್ನು ತಿದ್ದುಪಾಟು ಮಾಡಿ ಆರ್ಡಿನೆನ್ಸ್ ಪ್ರಕಟವಾಗಿದೆ. ಈ ತಿದ್ದುಪಡಿ ಪ್ರಕಾರ ಶಿಕ್ಷೆ ವಿಧಿಸಲ್ಪಟ್ಟಿರುವವರಿಗೆ ಕಾರಾಗಾರವಾಸ ಅಥವಾ ಕೆಲಸದಿಂದ ವಜಾ ಆಗುವ ಶಿಕ್ಷೆಯನ್ನು ಪ್ರಧಾನ ಸೇನಾನಿ ವಿಧಿಸಲಧಿಕಾರ ದೊರೆತಿದೆ

ತುರ್ಕಿಗೆ ರಷ್ಯ ಕೃತಜ್ಞವಾಗಿರಬೇಕು

ತುರ್ಕಿಗೆ ಸೇರಿರುವ ಕಾರ್ಸ್ ಮತ್ತು ಅದರ ನೆರೆಯ ಪ್ರಾಂತವಾದ ಅರ್ಡಹಾಗಳು ರಷ್ಯಕ್ಕೆ ವಾಪಸಾಗಬೇಕೆಂದು ರಷ್ಯ ಪತ್ರಿಕೆಗಳು ಈಗೆರಡು ಮೂರು ತಿಂಗಳುಗಳಿಂದ ವಾದಿಸುತ್ತಿವೆ. ತುರ್ಕಿಯ ಸ್ವಾತಂತ್ರ್ಯ ಯುದ್ಧ ಕಾಲದಲ್ಲಿ ಪೂರ್ವ ತುರ್ಕಿಯ ಪ್ರಧಾನ ಸೇನಾನಿಯಾಗಿದ್ದ ಜನರಲ್ ಖಾಸಿಂ ಖರಬ್ ಫಕೀರ್ ಎಂಬುವರು ಶಾಸನ ಸಭೆಯಲ್ಲಿ ಭಾಷಣ ಮಾಡುತ್ತಾ ರಷ್ಯದ ಈ ಕೋರಿಕೆಗೆ ಈ ರೀತಿ ಉತ್ತರವಿತ್ತರು "ನಾವೀಪ್ರದೇಶಗಳನ್ನು ಬಲಪ್ರಯೋಗ ಮಾಡಿ ಕಿತ್ತುಕೊಳ್ಳಲಿಲ್ಲ ರಷ್ಯನರಿಂದ ಅವನ್ನು ಕಸುಕೊಳ್ಳಲಿಲ್ಲ ನಾವು ಅಲ್ಲಿಗೆ ಪ್ರವೇಶಿಸಿದಾಗ ರಷ್ಯನರು ಅವರ ಭೂಮಿಗೆ ವಾಪಸು ಹೊರಟು ಹೋಗಿದ್ದರು. ಅಲ್ಲಿದ್ದ ಆರ್ಮೇನಿಯನ್‌ರು ಅಲ್ಲಿದ್ದ ತುರ್ಕಿ ಪ್ರಜೆಗಳ ಪೈಕಿ ಅರ್ಧ ಮಂದಿಯನ್ನು ಸಂಹರಿಸಿದ್ದರು ರಷ್ಯ-ತುರ್ಕಿಗಳಿಗಿದ್ದ ಸ್ನೇಹದಿಂದ ರಷ್ಯಕ್ಕೆ ಪ್ರಯೋಜನವಾಗದೆ ಇಲ್ಲ ರಷ್ಯನ್ ಕ್ರಾಂತಿಗೆ ನಮ್ಮಿಂದಲೂ ಸಹಾಯವಾಗಿದೆ ಆಗೇನಾದರೂ ನಾವು ರಷ್ಯದೊಡನೆ ಯುದ್ಧಕ್ಕಿಳಿದಿದ್ದರೆ ಇಂದಿನ ಪರಿಸ್ಥಿತಿಯೇ ಬೇರೆಯಾಗುತ್ತಿತ್ತು" ಎಂದು ಹೇಳಿದರು

ಗಾಜಿನ ಬಟ್ಟೆ

ಹಳೆಯ ಗಾಜನ್ನು ಕರಗಿಸಿ, ಸಣ್ಣ ಎಳೆಗಳಾಗಿ ಎಳೆದು, ನೇದು ಬಟ್ಟೆ ಮಾಡುವುದನ್ನು ವಿಲಾಯಿತಿಯವರು ಕಂಡುಹಿಡಿದಿದ್ದಾರೆ ಈ ಎಳೆ ಕೂದಲಿಗಿಂತ ಸಣ್ಣ! ಆರು ಎಳೆಗಳನ್ನು ಕೂಡಿಸಿದರೆ ಒಂದು ಕೂದಲಷ್ಟಾಗುವುದು. ಈ ಗಾಜಿನ ಬಟ್ಟೆ ಬೆಚ್ಚಗೆ ಇರುವುದಂತೆ! ಅದನ್ನು ಒಗೆಯುವುದೂ ಅತಿ ಸುಲಭವಂತೆ! ಸುಮ್ಮನೆ ನೀರಲ್ಲದ್ದಿ ಹಿಂಡಿದರೆ ಆಯಿತು ಗೆದ್ದಲು ಈ ಬಟ್ಟೆಯನ್ನು ಮುಟ್ಟಲಾರದು ಇಲಿ ಕಡಿಯಲಾರದು!

ಗೆದ್ದಲು ಹುಳುವಿನಿಂದ ರಕ್ಷಣೆ

ಗೆದ್ದಲು ಹುಳವು ಕಣ್ಣಿಗೆ ಬೀಳದಂತೆ ಕೆಲಸ ಮಾಡುತ್ತದೆ ಮರಮುಟ್ಟನ್ನು ಪೂರ್ತಿ ಪೊಳ್ಳುಮಾಡುವ ತನಕ ಇವು ಕಣ್ಣಿಗೆ ಬೀಳುವುದೇ ಕಡಮೆ ಗೆದ್ದಲು ಹಾವಳಿಯಿಂದ ಪ್ರತಿವರ್ಷ ಎಷ್ಟೋ ಸಾಮಾನುಗಳು ನಾಶವಾಗುತ್ತಿವೆ ಈ ಹಾವಳಿಯನ್ನು ತಪ್ಪಿಸಲು ಬೊಂಬಾಯಿಯ ಒಂದು ಕಂಪನಿಯವರು "ಆಸ್ಕು" ಎಂಬ ದ್ರಾವಕವನ್ನು ತಯಾರಿಸಿದ್ದಾರೆ ಇದನ್ನು ಕಂಡುಹಿಡಿದವರು ಶ್ರೀಯುತ ಕಾಮೇಶಂ ಎಂಬ ಭಾರತೀಯರು ಅವರ ಈ ತಯಾರಿಕೆಯ ಉಪಯೋಗದಿಂದ ರೈಲ್ವೆಕಂಬಿ ಕೆಳಗೆ ಅಡ್ಡಲಾಗಿ ಹಾಕುವ ಸ್ಲೀಪರುಗಳು, ಟೆಲಿಗ್ರಾಫ್ ತಂತಿ ಕಂಬಗಳು, ದೋಣಿಗಳು ಎಷ್ಟೋ ಲಕ್ಷ ರೂಪಾಯಿ ಬೆಲೆಬಾಳುವ ಮರಮುಟ್ಟಿನ ಸಾಮಾನುಗಳು ಹಾಳಾಗದೆ ಉಳಿದಿವೆಯಂತೆ

ಶಿವಗಂಗೆಯ ಜಾತ್ರೆ

ಬೆಂಗಳೂರು ಜಿಲ್ಲೆಯ ನೆಲಮಂಗಲ ತಾಲ್ಲೂಕು ಶಿವಗಂಗೆಯಲ್ಲಿ ಹೆಸರಾದ ಒಂದು ಬೆಟ್ಟವಿದೆ. ಬೆಟ್ಟದ ಆಕಾರ ಪೂರ್ವದಿಂದ ನೋಡಿದರೆ ಗಣೇಶನಂತೆ, ಉತ್ತರದ ಕಡೆಯಿಂದ ಸರ್ಪದಂತೆ, ದಕ್ಷಿಣದ ಕಡೆಯಿಂದ ಲಿಂಗದಂತೆ ಕಾಣುತ್ತದೆ ಈ ಸ್ಥಳಕ್ಕೆ ದಕ್ಷಿಣ ಕಾಶಿ ಎಂಬ ಹೆಸರುಬಂದಿದೆ. ಬೆಟ್ಟದ ನೆತ್ತಿಯ ಮೇಲೆ ಎರಡು ಕಂಬಗಳಿವೆ ಒಂದರ ತಳದಿಂದ ಮಕರಸಂಕ್ರಾಂತಿಯ ದಿನ ನೀರು ಜಿನುಗಿ ಬರುತ್ತದಂತೆ! ಆ ಪವಿತ್ರವಾದ ಜಲವನ್ನು ಪೂಜಾರಿಗಳು ಪಾತ್ರೆಯಲ್ಲಿ ಶೇಖರಿಸಿ ಅರ್ಧವನ್ನು ಗಂಗಾಧರೇಶ್ವರ ದೇವರಿಗೆ ಅಭಿಷೇಕ ಮಾಡಿ ಉಳಿದರ್ಧವನ್ನು ಅರಮನೆಗೆ ಕಳುಹಿಸಿಕೊಡುವ ಪದ್ಧತಿ ನಡೆದುಬಂದಿದೆಯೆಂದು ಹೇಳುತ್ತಾರೆ ಈ ಸ್ಥಳದಲ್ಲಿ ಮಕರ ಸಂಕ್ರಮಣದ ಜಾತ್ರೆ ಜನವರಿ ೧೪ ನೆಯ ತಾರೀಖಿನಿಂದ ೧೫ ದಿನಗಳು ನಡೆಯುತ್ತದೆ ಯುದ್ಧದ ಏಸೆಯಿಂದ ಮೂರು ನಾಲ್ಕು ವರ್ಷ ಜಾತ್ರೆಯನ್ನು ನಿಲ್ಲಿಸಲಾಗಿತ್ತು. ಈ ಸಲ ವಿಜೃಂಭಣೆಯಿಂದ ನಡೆಯಲು ಏರ್ಪಾಟಾಗಿದೆ

[ಗಿಂದು ಪುಟದಿಂದ ಮುಂದುವರಿದುದು]

ಪೋಷಕರ ಕರ್ತವ್ಯ

ಇಂತಹ ಆದೋಷವಾದ ವಿದ್ಯೆಯ ಮಹತ್ವವನ್ನರಿಯದೆ ಬಾಲಕರ ಮಾತಾಪಿತೃಗಳು ಅಥವಾ ಪೋಷಕರು ಮಕ್ಕಳ ಸೌಕರ್ಯಕ್ಕೆಂದು ವಿಶೇಷ ಶ್ರಮಪಟ್ಟು ಹಣವನ್ನು ಕೂಡಿಡಲು ಪ್ರಯತ್ನಿಸುವರೇ ಹೊರತು ವಿದ್ಯೆಯನ್ನು ಕಲಿಸಲು ಆಶಿಸುವುದಿಲ್ಲ. ಇದು ಅವರ ಅಜ್ಞಾನವೆಂದೇ ಹೇಳಬೇಕಾಗಿದೆ. ಓದು ನೀತಿಕಾರರು ಈ ವಿಷಯದಲ್ಲಿ ಈರೀತಿ ಹೇಳಿದ್ದಾರೆ. ಮಕ್ಕಳಿಗೆ ಹಣ ... ವಿದ್ಯೆಗಳ ... ಕೊಂಡ ... ಧನಮುರಲ ... ಚಿಕ್ಕಂದಿನ ವಿದ್ಯ ... ಚೂದಾರತ್ನ ಈ ನೀತಿ ವಾಕ್ಯವು ಅಕ್ಷರಶಃ ನಿಜವಾದುದು. ಏಕೆಂದರೆ ವಿದ್ಯಾವಿಹೀನರು ... ಯಾದ ಸಂಪತ್ತನ್ನು ... ವನ್ನು ದುರುಪಯೋಗಮಾಡಿ ತಾವು ಕೆಡುವುದಲ್ಲದೆ ತಮ್ಮ ವಂಶಕ್ಕೂ ದೇಶಕ್ಕೂ ಕಳಂಕವನ್ನುಂಟುಮಾಡುವುದನ್ನು ನಾವು ನೋಡುವವರಾಗಿದ್ದೇವೆ. ಆದುದರಿಂದ ಬಾಲಕರ ಪೋಷಕರು ಈ ... ವಿಷಯದಲ್ಲಿ ... ಯುತು

೧) ಬಾಲಕರ ಸ್ಕೂಲ್ ... ಸರಿಯಾಗಿ ... ಮುಂತಾದ ... ಬೇಕಾದ ... ಪುಸ್ತಕ ... ಬಾಲಕರ ... ಕೊಡಬೇಕು

೨) ಬಾಲಕರ ... ರಕ್ಕೊಂದು ಸಲ ... ಹೋಗಿ ಉಪಾಧ್ಯಾಯರೊಡನೆ ... ವಿದ್ಯಾಭ್ಯಾಸಕ್ಕೆ ಬೇಕಾದ ಸೌಕರ್ಯವನ್ನೊದಗಿಸಿ ಕೊಡಬೇಕು

೩) ತಮ್ಮ ಬಾಲಕರು ... ಸಹವಾಸಕ್ಕೆ ಹೋಗದಂತೆಯೂ ... ನಡೆಸಿ ವಿದ್ಯಾಭ್ಯಾಸಕ್ಕೆ ಕುಂದು ತರುತ್ತೊದಂತೆಯೂ ... ಎಚ್ಚರಿಕೆಯಿಂದ ನೋಡಿಕೊಳ್ಳುವುದು ಪೋಷಕರ ಮುಖ್ಯ ಕರ್ತವ್ಯವಾಗಿರುತ್ತದೆ

ಉಪಾಧ್ಯಾಯರ ಕರ್ತವ್ಯ

ಪ್ರಾಚೀನಕಾಲದ ವಿದ್ಯಾಭ್ಯಾಸಕ್ಕೂ ಈಗಿನಕಾಲದ ವಿದ್ಯಾಭ್ಯಾಸಕ್ಕೂ ಬಹಳ ವ್ಯತ್ಯಾಸವಿದೆ. ಆಗಿನ ಕಾಲದಲ್ಲಿ ... ಜಾತ್ರಿಯರಿಂದಲೋ ಅದನ್ನು ... ಸ್ವಾಮಿಗಳಿಂದಲೋ ಎಲ್ಲೆಲ್ಲಿ ಒಂದೊಂದು ಗುರುಕುಲಗಳು ಸ್ಥಾಪಿಸಲ್ಪಟ್ಟು ... ದಕ್ಷನಾದ ಅಧ್ಯಾಪಕನಿರುತ್ತಿದ್ದು ... ತಕ್ಕ ... ಪ್ರದೇಶದ ಬಾಲಕರ ವಿದ್ಯಾಭ್ಯಾಸವು ನಡೆಯುತ್ತಿದ್ದಿತು. ಇದರಿಂದ ಬಾಲಕರಿಗೆ ಗುರುವಿನ ಸಹವಾಸ ಯಾವಾಗಲೂ ಇರುತ್ತಿದ್ದಿತು. ಆಗಿನ ಉಪಾಧ್ಯಾಯರುಗಳೂ ಬಾಲಕರ ಪುರೋಭಿವೃದ್ಧಿಯ ಜವಾಬ್ದಾರಿಯನ್ನು ವಹಿಸಿ ಅಭ್ಯಾಸಮಾಡಿಸಿ ಅನಂತರ ಅವರ ಪೋಷಕರಿಗೆ ಆ ಬಾಲಕರನ್ನು ಒಪ್ಪಿಸಿ ಬಹುಮಾನವನ್ನು ಪಡೆಯುತ್ತಿದ್ದರು. ಇದರಿಂದ ವಿದ್ಯಾರ್ಥಿಗಳು ಕೆಡುವುದಕ್ಕೆ ಅವಕಾಶವೇ ಇರಲಿಲ್ಲ. ಒಂದು ದಿನ ಕೆಲವಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದವರ ಸಂಖ್ಯೆಯು ಕಡಿಮೆಯಾಗಿದ್ದುದರಿಂದ ಈ ಕ್ರಮವು ಅನುಕೂಲವಾಗಿದ್ದಿತು. ಈಗಲಾದರೋ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚಾಗಿದ್ದು ವಿದ್ಯಾಪ್ರಸಾರವೂ ಹೆಚ್ಚುತ್ತಿರುವುದರಿಂದ ಸಹಸ್ರಾರು ಸ್ಕೂಲುಗಳೂ ಹೈಸ್ಕೂಲ್ ಕಾಲೇಜುಗಳೇರ್ಪಟ್ಟು ವಿಶೇಷ ಮಂದಿ ಉಪಾಧ್ಯಾಯರುಗಳಿಂದ ಶಾಸ್ತ್ರಪ್ರವಚನಗಳು ನಡೆಯಬೇಕಾಗಿದೆ. ಇವರಿಗೆ ಒಂದೇ ಸ್ಕೂಲಿನಲ್ಲಿ ಬೋಧಿಸಬೇಕೆಂಬ ನಿರ್ಬಂಧವಿಲ್ಲ. ಒಂದು ಊರಿನ ಪಾಠಶಾಲೆಯಿಂದ ಮತ್ತೊಂದು ಗ್ರಾಮದ ಶಾಲೆಗೆ ಬದಲಾವಣೆಗಳುಂಟು. ಈಗಿನ ಕಾಲದಲ್ಲಿ ಒಬ್ಬ ವಿದ್ಯಾರ್ಥಿಯ ಅಭ್ಯಾಸವು ಮುಗಿಯಬೇಕಾದರೆ ನೂರಾರು ಮಂದಿ ವಿದ್ಯಾಗುರುಗಳಾಗಬೇಕಾಗುತ್ತದೆ. ಇವರಲ್ಲಿ ಯಾರಾದರೊಬ್ಬರು ಅಶ್ರದ್ಧೆಯಿಂದ ಪಾಠಹೇಳಿದರೆ ಅವರ ಪಾಲಿಗೆ ದೊರೆತ ವಿದ್ಯಾರ್ಥಿಗಳ ಪುರೋಭಿವೃದ್ಧಿಯೇ ಹಾಳಾಗುತ್ತದೆ. ಪೂರ್ವಕಾಲದ ವಿದ್ಯಾಭ್ಯಾಸದಲ್ಲಿ ಓರ್ವ ಸೋಮಾರಿಯಾದ ಗುರುವಿನಿಂದ ಹತ್ತಾರು ಮಂದಿ ವಿದ್ಯಾರ್ಥಿಗಳಿಗೆ ಮಾತ್ರ ಕೆಡುಕಾಗುತ್ತಿದ್ದಿತು. ಈಗಿನ ಕ್ರಮದಲ್ಲಿ ಒಬ್ಬ ಉಪಾಧ್ಯಾಯನ ಅಶ್ರದ್ಧೆಯಿಂದ ನೂರಾರು ಮಂದಿ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ. ಆದಕಾರಣ ಉಪಾಧ್ಯಾಯರು ತಮ್ಮ ಉದ್ಯೋಗವು ತುಂಬಾ ಜವಾಬ್ದಾರಿಯಾದುದೆಂಬುದನ್ನು ಮರೆಯದೆ ಶ್ರದ್ಧೆಯಿಂದ ಪಾಠ ಹೇಳುವುದು ಅವರ ಮುಖ್ಯ ಧ್ಯೇಯವಾಗಿರಬೇಕೆಂದಾಶಿಸುತ್ತೇನೆ.

ಸದ್ಯಃ ನಮ್ಮನ್ನಾಳುತ್ತಿರುವ ಶ್ರೀಮಜ್ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಜಿ ಸಿ ಎಸ್ ಐ ಮಹಾಪ್ರಭುಗಳವರು ತಮ್ಮ ಪ್ರಜೆಗಳಮೇಲಿಟ್ಟಿರತಕ್ಕ ವಾತ್ಸಲ್ಯವು ಅಮೋಘವಾದುದಾಗಿದೆ. ಪ್ರಜೆಗಳು ವಿದ್ಯಾವಂತರಾಗಿ ಸುಖಿಗಳಾಗಲೆಂಬ ಸದುದ್ದೇಶದಿಂದ ವಿದ್ಯಾಭ್ಯಾಸಕ್ಕೆ ಹೆಚ್ಚು ಪ್ರೋತ್ಸಾಹಕೊಡುತ್ತಿದ್ದಾರೆ. ತಮ್ಮಂತೆಯೇ ತಮ್ಮ ಪ್ರಜೆಗಳು ಸತ್ಕರ್ಮನಿರತರೂ ದೈವಭಕ್ತಿಯುತರೂ ಆಗಲೆಂಬ ಸದಿಚ್ಛೆಯಿಂದ ಉಪನಿಷತ್ತುಗಳನ್ನೂ ಮತ್ತು ಪುರಾಣಗಳನ್ನೂ ಕನ್ನಡ ಅರ್ಥಾನುವಾದದೊಡನೆ ಪ್ರಕಟಿಸಲು ಏರ್ಪಡಿಸಿರುತ್ತಾರೆ. ವಿದ್ಯಾಭ್ಯಾಸದ ಸುಧಾರಣೆಗಾಗಿ ಒಂದು ಕಮಿಟಿಯನ್ನೇರ್ಪಡಿಸಿ ಸರ್ವ ಮತದವರಿಗೂ ಸಹಾಯಮಾಡಿರುತ್ತಾರೆ. ಉಪಾಧ್ಯಾಯರುಗಳು ಕ್ರಮವಾಗಿ ಬೋಧಿಸುತ್ತಾರೆಯೋ ಇಲ್ಲವೋ ಎಂಬುವನ್ನು ಪರೀಕ್ಷಿಸುವುದಕ್ಕಾಗಿ ವರಿಷ್ಠಾಧಿಕಾರಿಗಳನ್ನು ನೇಮಿಸಿರುತ್ತಾರೆ. ವಿದ್ಯಾಭ್ಯಾಸದ ಇಲಾಖೆಯ ಮುಖ್ಯಾಧಿಕಾರಿಗಳು ಸಂಸ್ಥಾನದ ಎಲ್ಲಾ ಸ್ಕೂಲುಗಳಲ್ಲಿಯೂ ಸಂಚರಿಸಿ ಸ್ಕೂಲಿಗೆ ಬೇಕಾದ ಸೌಕರ್ಯಗಳನ್ನೊದಗಿಸುತ್ತಿರುವುದು ನಮ್ಮ ಭಾಗ್ಯೋದಯವೆಂದೆ ಭಾವಿಸಬೇಕಾಗಿದೆ. ಈ ದಿವಸದ ಸಭಾಧ್ಯಕ್ಷತೆಯನ್ನು ವಹಿಸಿ ಇಲ್ಲಿಯ ಕಾರ್ಯಕಲಾಪಗಳು ಸಾಂಗವಾಗಿ ನಡೆಯುವಂತೆ ನಮಗೆ ಉತ್ತೇಜನವನ್ನು ಕೊಟ್ಟಿರುವ ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀಮಾನ್ ಎಂ ಎಸ್ ರಾಜಗೋಪಾಲರಾವ್ ಎಂ ಎ ಮಹೋದಯರಿಗೆ ನಾವು ಎಷ್ಟು ಧನ್ಯವಾದಗಳನ್ನರ್ಪಿಸಿದರೂ ಸಾಲದಾಗಿದೆ. ಈ ಮಹಾಶಯರು ನಮ್ಮ ಗ್ರಾಮದ ಸ್ಕೂಲುಗಳಿಗಿರತಕ್ಕ ಕುಂದುಕೊರತೆಗಳನ್ನು ಪರಿಶೀಲಿಸಿ ಸಾಕಷ್ಟು ಸಹಾಯವನ್ನು ನೀಡಬೇಕೆಂದು ಕೋರಿ ಶ್ರೀಮನ್ಮಹಾರಾಜರವರ ಜಯ ಜಯಕಾರದೊಡನೆ ನನ್ನ ಭಾಷಣವನ್ನು ವಿರಮಿಸುತ್ತೇನೆ

ಲಿಂಗೋದ್ಭವ ಲಾಕೆಟ್ಸ್

ಒಡಬಾಲ್ ... ಲಿಂಗೋದ್ಭವ ಲಾಕೆಟ್ಟು ಮತ್ತು ಕೋಟಿನ ಗುಂಡಿಗಳನ್ನು ಶುದ್ಧವಾದ ಬೆಳ್ಳಿಯಲ್ಲಿ ಬಹು ಸುಂದರವಾಗಿ ತಯಾರು ಮಾಡಿಸಿದ್ದೇನೆ

ಲಾಕೆಟ್ಟುಗಳು ದೊಡ್ಡವರಿಗೆ ಕೋಟಿನ ಮೇಲೆ ಹಾಕಿಕೊಳ್ಳುವಂತೆಯೂ ಮಕ್ಕಳಿಗೆ ... [illegible] ... ಶಿವಭಕ್ತರೆಲ್ಲರೂ ... ದಿನ ... ಕೋರಿಕೆ

ಬೆಳ್ಳಿ ಲಾಕೆಟ್ ೧ಕ್ಕೆ ೧ ರೂ

ಬೆಳ್ಳಿ ಕೋಟಿನ ಗುಂಡಿ ೧ ಕ್ಕೆ ೧ ರೂ

ರೆಟ್ಟೆಯಲ್ಲಿ ಕಟ್ಟುವ ಮೂರ್ತಿ ೧ ಕ್ಕೆ ೧ ರೂ.

೬ ಕ್ಕಿಂತಲೂ ಕಡಿಮೆಯಾಗಿ ವಿ ಪಿ ಕಳುಹಿಸಲಿಲ್ಲ

ಮನೋಹರವಾದ ಫೋಟೋಗಳು

ಶ್ರೀ ರೇಣುಕಾಚಾರ್ಯರ ... ಕಾಣಿಸುವ ಫೋಟೋ ಸೈಜು ... ಬೆಲೆ ೧ಕ್ಕೆ	೦—೬—
ಶ್ರೀ ... ರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ X ೧೦ ಬೆಲೆ	೦—೬—
... ಐದು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ X ೧೦ ಬೆಲೆ	೦—೩—
... ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ X ೧೦ ಬೆಲೆ ೧ಕ್ಕೆ	೦—೩—
ಶ್ರೀ ... ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೧—
... ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೨—
ಶ್ರೀ ... ಶ್ರೀ ಜಗದ್ಗುರು ... ಮೂಲಧರ್ಮಪೀಠದ ಫೋಟೋ	೦—೧—
ಶ್ರೀ ... ಜಗದ್ಗುರು ... ಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೧—
ಶ್ರೀ ... ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—
ಶ್ರೀ ... ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—
ಶ್ರೀ ... ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—
ಶ್ರೀ ... ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೩—
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—
ಶ್ರೀ ಜಗದ್ಗುರು ... ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೧—
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೧—
ಶ್ರೀ ಜಗದ್ಗುರು ... ಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—
... ಶ್ರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—
... ರಂಭಾಪುರೀ ಜಗದ್ಗುರುಗಳ ... ಮಹೋತ್ಸವದ ಫೋಟೋ	೨—೦—

ಪ್ರಾಪ್ತಿಸ್ಥಳ:— **ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು